1931

KARNATAKA
STATE
ARCHIVES

KARNATAKA STATE ARCHIVES

KARNATAKA STATE ARCHIVES

KARNATAKA STATE ARCHIVES

KARNATAKA STATE ARCHIVES

ROLL NO: 159

ROLLNO: 159.

ROLL NO: 159

ROLL NO: 159

FILE No:

ARS. 10. APP. 82

PRIVATE PAPERS OF RETD., GENERAL K.M. CARIYAPPA

'ಕೊಡಗು' ಕನ್ನಡ ವಾರಪತ್ರಿಕೆ

20.2.1930 ರಂದು

FILE No:

ARS. 10. APP. 82

PRIVATE PAPERS OF RETD., GENERAL K.M. CARIYAPPA

'ಕೊಡಗು ಕನ್ನಡ ವಾರಪತ್ರಿಕೆ

20.2.1930 ರಿಂದ

FILE No:

ARS. 10. APP. 82

PRIVATE PAPERS OF

RETD., GENERAL K.M.

CARIYAPPA

'ಕೊಡಗು' ಕನ್ನಡ ವಾರಪತ್ರಿಕೆ

20.2.1930 ರಿಂದ

FILE No:

ARS. 10. APP. 82

PRIVATE PAPERS OF
RETD., GENERAL K. M.
CARIYAPPA

'ಕೊಡಗು' ಕನ್ನಡ ವಾರಪತ್ರಿಕೆ
20.2.1930 ರಿಂದ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ದಿ ಕೂರ್ಗ್ ಕೋ ಆಪರೇಟಿವ್ ಸೊಸೈಟೀಸ್
ಬ್ಯಾಂಕ್ ಪ್ರಕಾರ ಬದಲಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	23,160
ಜಮೂಬಂದ ಠೇವಣಾತಿ —	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು, ಟ್ರೆಜರರ್
ಪೋದಂಡ ಅಪ್ಪಯ್ಯನವರು ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್. ನವರು.

ಸೆಕ್ರೆಟರಿ

ಸಿ. ಯನ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.,
ತಾರೀಕು 1 7-1930

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.
ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52-6 ಗಿರಿಗಾಂವ, ಮುಂಬಯಿ.

---

12 bore Victor Cartridges Rs. 10/- Per 100

Mahomedally-Noorbhoy.
ARMS & AMMUNITION MART.
431 Abdul Rehman Street,
52 14 BOMBAY. 3.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಹದಿನೈದನೇ ಸಾರಿಯ ತ್ರೈವಾರ್ಷಿಕ ಆದಾಯದ ಹಂಚಿಕೆಯು ಇದೇ ಡಿಸೆಂಬರ್ 31ನೇ ತಾರೀಕಿನಲ್ಲಿ ಕೊಡಲ್ಪಡುತ್ತೆ.

ಕಳೆದ ಮೂರು ಸಾರಿ ಅಂದಾಜು ಮಾಡಲ್ಪಟ್ಟಾಗ ಇದ್ದ ಉಳಿತಾಯದ ವಿವರ

1921ರಲ್ಲಿ 21½ ಲಕ್ಷ ರೂಪಾಯಿಗಳು.
1924ರಲ್ಲಿ 53½ „ „
1927ರಲ್ಲಿ 78 „ „

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1921ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ. || 1927ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 25 ರೂ.
1924ರಲ್ಲಿ „ „ „ 22½ „

ಈ ವರ್ಷದಲ್ಲಿ ದಾಖಲಾಗುವ ಪಾಲಿಸಿಗಳಿಗೂ ಸಹ 1930ನೇ ಇಸವಿ ಡಿಸೆಂಬರ್ 31ನೇ ತಾರೀಕಿನಲ್ಲಿ ಆದಾಯದ ಹಂಚಿಕೆಯು ಕೊಡಲ್ಪಡುತ್ತೆ.

ಆದುದರಿಂದ ನೀವು ಓರಿಯಂಟಲ್ ಕಂಪೆನಿಯ ಪಾಲಿಸಿದಾರರಾಗುವುದರಲ್ಲಿ ಹೇರಳ ಲಾಭವುಂಟು.

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಓರಿಯಂಟಲ್ ಬಿಲ್ಡಿಂಗ್ಸ್, ಎಂ. ವಿ. ಮುತ್ತುಕೃಷ್ಣ ನಾಯುಡು,
ಸೌತ್ ಪೆರೇಡ್, ಬೆಂಗಳೂರು. OR ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

52-51 ಕೆ. ಪಿ. ಚಿಣ್ಣಪ್ಪ,
ಮಡಿಕೇರಿ. ಏಜೆಂಟ್,

ಮಲೇರಿಯೂನ

ಮಲೇರಿಯೂನವು ಮಲೆಜ್ವರ ಚಳಿಜ್ವರ ಉರಿಜ್ವರ ದಾಹಜ್ವರ. ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ ಗೆಡ್ಡೆಯನ್ನೂ ಸಂಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ

ಕ್ರಯ 8 ಟಿನ್ನಿಗೆ 1-8-0 ½ ಡಜನಿಗೆ 8-8-0 1 ಡಜನಿಗೆ 16-8-0

ಪಿತ್ತ, ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡಸ್.

ಪಿತ್ತಜ್ವರ, ಕೈಕಾಲು ಬಚ್ಚಲು, ರಕ್ತ ಇಲ್ಲದೆ ಬೆಳ್ಳಗೆ ಕಾಣುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಗೊಂಬೆ ಮತ್ತು ಶರೀರ ತಲೆನೋವು, ತಲೆ ತಿರುಗುವದು, ಅಜೀರ್ಣದ ಹೊಟ್ಟೆ ಉರಿ, ಎದೆ ಸುಡುವದು ನಾಲಿಗೆ ಒಣಗುವದು ಮಲಮೂತ್ರಕ್ಕೆ ಕಟ್ಟು ಪಿತ್ತ ಕಾರುವದು, ನಿದ್ರೆ ಇಲ್ಲದೆ ಸಂಕಟವಾಗುವದು ಇತ್ಯಾದಿ ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3-8-0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸ ಅಮಂಗ

ಶರೀರದಲ್ಲಿ ಬೀಳುವ ಬೊಕ್ಕೆ ತುರು ಬೊಬ್ಬೆಗಳು ಬೇಗ ಗುಣವಾಗದ ವ್ರಣಗಳು, ವಿವಿಧ ಬಗೆಯ ಚರ್ಮ ರೋಗಗಳು ಅತೀ ಶೀಘ್ರದಲ್ಲಿ ಗುಣಪಟ್ಟು ರಕ್ತ ಸಂಪೂರ್ಣ ಶುಚಿಯಾಗಿ ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ಬಲವುಳ್ಳ ಮದ್ದು ಕಂಪೌಂಡು ಸಿರಪು ಸರ್ಸ ಅಮಂಗ ಎಂಬುದು ಬಾಟ್ಲಿಗೆ ರೂಪಾಯಿ 3-4-0

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನೋವ.

ತಿಂಗಳು ಗಟ್ಟಲೆಯ ಅಕ್ರಮ, ಹೊಟ್ಟೆನೋವು ಕೈಕಾಲುಗಳ ಸೆಳತ, ಕೋಶದ ಬಲಹೀನತೆ ವಾಯುಗಳ ಉಪದ್ರ, ರಕ್ತವು ಬೇಕಾದಷ್ಟು ಹಂಗಿಲ್ಲದೆ ನಿಂತು ಬಿಡುವದು ಅಲ್ಲದೆ ಸಮಯಕ್ಕೆ ಸ್ರಾವಿಸುವದು ಬಣ್ಣ ವಾಸನೆಯಲ್ಲಿ ಕೆಡಕು ಇತ್ಯಾದಿ ಗರ್ಭಕೋಶದ ಎಲ್ಲಾ ಅವಸ್ಥೆಯ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನೋವ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3-8-0.

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕೃಶ ತೋರಿ ಸೊಂಟಕ್ಕೆ ಬಲ ಇಲ್ಲದೆ ಇರುವದು ಹಾಲಿನ ಬಣ್ಣದ ಮೂತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ ಬಾಳುವಿಕೆಯನ್ನೂ ಕುಂದಿಸಿಬಿಡುವ ಈ ಆಪತ್ತುಗಳನ್ನು ಬೇಬಿಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1-1-0

ಶುದ್ಧ ಟಿಕ್ಚರುಗಳೂ ಹೋಮಿಯೋಪಥಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ ಅವುಗಳ ನಾನಾ ಬಗೆಯ ಸಾಮಾನುಗಳೂ ಬಿಸಿಲಿಗೆ ಇಡತಕ್ಕ ಒಳ್ಳೇ ತರದ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಬೆಲೆಗೆ ದೊರಲ್ಪಡುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ.—ಮಲೇರಿಯೂನ ಕಂಪೆನಿ,
52-15 ಹಂಪನಕಟ್ಟೆ, ಹಾಗರ್ಬೈಲ್, ನಂಬರು 14, ಮಂಗಳೂರು.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ಮೇದಪ್ಪನವರು.
ಮರೆನಾಡು—ಮೆ. ಕೇಕಡ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು.
(ಖಾದಿಭಂಡಾರ.)
ಸಾಪ್ಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
ರುತ್ತು, ಅರಮಣಮಾಡ ಪಿ ಕಾರ್ಯಪ್ಪನವರು,
ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚಟ್ಟೋಳಂಡ ಮೊಣ್ಣಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

Printed & published by K. P. Chinnappa at "Kodagu" Press, Mercara for "Kodagu" Ltd.

"KODAGU" OFFICE, MERCARA.

ಕೊಡಗು.

ಶಕ್ತೀನ ಭೂತದಯಯಾ ವಿದ್ಯಾ ನೀತಿ ಪ್ರಸಾರಕಾಃ । ಐಕಮತ್ಯೇನ ದೇಶಾನಾಂ ಸುಸಿರಾ ರಾಜ್ಯ ಸಂಪದಾ॥

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಕೋಟೆರ ಪಿ. ಚಿಣ್ಣಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦	ಮಡಿಕೇರಿ, ಸನ್ ೧೯೩೧ನೇ ಇಸವಿ ಫೆಬ್ರುವರಿ ತಾರೀಕು ೨೦ನೇ ಶುಕ್ರವಾರ.	ಸಂಚಿಕೆ ೩೧

Telegrams — "Precious"

V. Subramaniaier Jeweller,

Telephone — 3145

DIAMOND MERCHANT, GOLD & SILVERSMITH.

Deals in all:—

SPORTS CUPS in all prices

MEADALS in up to date patterns

CASKETS in elegant styles

Nos. 2 & 3, Kuppumuthu St.
TIRUVATESWARANPET,

Post Box 423, Triplicane P. O.,

MADRAS.

Deals in all:—

GEM SET JEWELS set with Diamonds Rubies etc. . .

GOLD ARTICLES of all patterns . .

SILVER WARE in latest style . .

52–14



ಕಾರ್ಡು ಬರೆದರೆ ಇಗಿನ ಕ್ಯಾಟಲಾಗ ಪುಕ್ಕಟೆಯಾಗಿ ಕಳುಹಿಸಲ್ಪಡುವುದು

ಕೋವಿಗಳು, ಕತ್ತಿಗಳು, ಬಚ್ಚೆಗಳು, ತೋಟೆಗಳು, ಕೇಪುಗಳು, ಮತ್ತು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24–19 210 Abdul Rehman Street, BOMBAY.

ಕಟುಕಷಾಯ ಮಲೇರಿಯಜ್ವರಕೆ:—ಇದು ... ಗುಣವಾಗದಿರುವ ಮಲೇರಿಯ ಜ್ವರ ... ಬರುವ ಜ್ವರ 3—4 ದಿನಕ್ಕೊಂದು ... ಬರುವ ಜ್ವರ ... ಮತ್ತು ... ದೋಷದಿಂದ ಬರುವ ಜ್ವರಗಳಿಗೆ ... ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಜೀವನಾಶಕ ಕಷಾಯ

ಜೀವನಾಶಕ:—ಇದು ... ಮೂತ್ರ ... ಹೋಗುವದು ಮೂತ್ರ ... ಉರಿ ಮೂತ್ರ ... ಉರಿ ಮೂತ್ರನಾಳದಲ್ಲಿ ... ಹೊಯ್ಯುವಾಗ ಉರಿಯುವುದು ಮೂತ್ರನಾಳದಿಂದ ಕೀವು ಬರುವುದು, ... ಹೋಗುವುದು ... ಮೂತ್ರ ... ಉರಿ ... ಮೂತ್ರ ... ಔಷಧಿ ... ಬಾಟ್ಲಿ 1 3 6ಕ್ಕೆ ರೂ 1—4—0 3—8—0 6—12—0

ರೋಮನಾಶಿನಿ:— ... ರೋಮವು ... 1ಕ್ಕೆ 6 ಆಣೆ 3 ... 1, 1 ... 3—4—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ... ಕೂದಲನ್ನು ... ಕೂದಲನ್ನು ... ಹೊಸ ಕೂದಲನ್ನು ಹುಟ್ಟಿಸುತ್ತದೆ ... ಸೀಸೆಗೆ ರೂ 1, 3 ಸೀಸೆಗೆ 2—10—0 ... 5—8—0

52–41 ... ವಿಳಾಸ—ಮನೋಲ್ಲಾಸಿನಿ ಕಂಪನಿ,
9. ಮಂಗಳೂರು.

ಬಾಲಾರ್ಕಮಧು.

ನಿಮ್ಮ ಮಕ್ಕಳ ... ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ ಮಕ್ಕಳು ರೋಗ



... ಎಷ್ಟೇ ... ವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿಯೂ ಬಲವೂ ಬರುವದು ... ಆರೋಗ್ಯವೂ, ... ಇದು ಮಧುರವಾಗಿದೆ ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ ಸೀಸೆ 1ಕ್ಕೆ 12 ಆಣೆ ... 9 ಆಣೆ.

ಆರ್ಡರ್ ಜೊತೆಯಲ್ಲಿ ... ತಕ್ಕಷ್ಟು ... ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲ.

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶೀಮೊಗ್ಗಾ.
(ಮೈಸೂರು ಸೀಮೆ.)

52–6

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಕೋಓಪರೇಟಿವ್ ಸೊಸೈಟೀಸ್
ಆಕ್ಟು ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	23,160
ಜಮೂಬಂದ ಠೇವಣಾತಿ —	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ಪ್ರಕಾರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್,
ಕೋದಂಡ ಅಪ್ಪಯ್ಯನವರು, ಮನೆಯಪ್ಪಂಡ ಬೆಳ್ಯಪ್ಪನವರು.
ರಾವ್ ಬಹದ್ದೂರ್.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು ಬಿ.ಎ., ಬಿ.ಎಲ್.
ತಾರೀಕು 1-7-1930.

ಸಣ್ಣ ಹುಡುಗರ ಸಲುವಾಗಿ

ಜೋಂಗರೆ

ಇವರ

ಬಾಲಾಮೃತ.

ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಜೋಂಗರೆ ಕಂಪೆನಿ,
52-6 ಗಿರಿಗಾಂವ, ಮುಂಬಯಿ.



12 bore Victor Cartridges Rs. 10/- Per 100

Mahomedally-Noorbhoy.
ARMS & AMMUNITION MART.
431 Abdul Rehman Street.
52-14 BOMBAY. 3.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯು

ಹತ್ತೊಂಬತ್ತನೇ ಸಾಲಿಯ ತ್ರೈವಾರ್ಷಿಕ ಆದಾಯದ ಹಂಚಿಕೆಯು ಇದೇ ಡಿಸೆಂಬರ್ 31ನೇ ತಾರೀಕಿನಲ್ಲಿ ಕೊಡಲ್ಪಡುತ್ತೆ.

ಕಳೆದ ಮೂರು ಸಾರಿ ಅಂದಾಜು ಮಾಡಲ್ಪಟ್ಟಾಗ ಇದ್ದ ಉಳಿತಾಯದ ವಿವರ
1921ರಲ್ಲಿ 21½ ಲಕ್ಷ ರೂಪಾಯಿಗಳು.
1924ರಲ್ಲಿ 53½ „ „
1927ರಲ್ಲಿ 78 „ „

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1921ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ.
1924ರಲ್ಲಿ „ „ „ 22½ „
1927ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 25 ರೂ.

ಈ ವರ್ಷದಲ್ಲಿ ದಾಖಲಾಗುವ ಪಾಲಿಸಿಗಳಿಗೂ ಸಹ 1930ನೇ ಇಸವಿ ಡಿಸೆಂಬರ್ 31ನೇ ತಾರೀಕಿನಲ್ಲಿ ಆದಾಯದ ಹಂಚಿಕೆಯು ಕೊಡಲ್ಪಡುತ್ತೆ.

ಆದುದರಿಂದ ನೀವು ಓರಿಯಂಟಲ್ ಕಂಪೆನಿಯ ಪಾಲಿಸಿದಾರರಾಗುವುದರಲ್ಲಿ ಹೇರಳ ಲಾಭವುಂಟು.

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೆರೇಡ್, ಬೆಂಗಳೂರು.

ಎಂ. ವಿ. ಮುತ್ತುಕೃಷ್ಣ ನಾಯುಡು,
ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

OR

ಕೆ. ಪಿ. ಚಿಣ್ಣಪ್ಪ,
ಏಜೆಂಟ್,
ಮಡಿಕೇರಿ.
52-51

ಮಲೇರಿಯಾನವು ಮಲೆಜ್ವರ ಚಳಿಜ್ವರ, ಉರಿಜ್ವರ, ದಾಹಜ್ವರ, ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ, ಗೆಡ್ಡೆಯನ್ನೂ ಸಂಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ.
ಕ್ರಯ 8 ಔನ್ಸಿಗೆ 1-8-0, ½ ಡಜನಿಗೆ 8-9-0, 1 ಡಜನಿಗೆ 16-8-0

ಪಿತ್ತ, ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡಸ್.

ಪಿತ್ತಜ್ವರ, ಕೈಕಾಲು ಬಚ್ಚಲು, ರಕ್ತ ಇಲ್ಲದೆ ಬೆಳ್ಳಗೆ ಕಾಣುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು, ಗೊಂಬೆ ಮತ್ತು ಶರೀರ, ತಲೆಶೂಲೆ, ತಲೆ ತಿರುಗುವದು, ಅತೀದಾಹ, ಹೊಟ್ಟೆ ಉರಿ, ಎದೆ ಸುಡುವದು ನಾಲಿಗೆ ಒಣಗುವದು ಮಲಮೂತ್ರಕ್ಕೆ ಘೋರ ಪಿತ್ತ ಕಾರುವುದು, ನಿದ್ರೆ ಇಲ್ಲದೆ ಸಂಕಟವಾಗುವುದು ಇತ್ಯಾದಿ ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3-8-0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ್ಲ

ಶರೀರದಲ್ಲಿ ಬೀಳುವ ಬೊಕ್ಕೆ, ಕುರು, ಬೊಕ್ಕೆಗಳು, ಬೇಗ ಗುಣವಾಗದ ಘೋರ ವ್ರಣಗಳು, ವಿವಿಧ ಬಗೆಯ ಚರ್ಮ ರೋಗಗಳು ಅತಿ ಶೀಘ್ರದಲ್ಲಿ ಗುಣಪಟ್ಟು ರಕ್ತ ಸಂಪೂರ್ಣ ಶುಚಿಯಾಗಿ ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ಬಲವುಳ್ಳ ಮದ್ದು ಕಂಪೌಂಡು ಸಿರಪ್ ಸರ್ಸಪರಿಲ್ಲ ಎಂಬುದೇ ಬಾಟ್ಲಿಗೆ ರೂಪಾಯಿ 3-4-0

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನೋನ.

ತಿಂಗಳು ಗಟ್ಟಲೆಯ ಅಶ್ರಮ, ಹೊಟ್ಟೆನೋವು, ಕೈಕಾಲುಗಳ ಸೆಳೆತ, ಕೋಶದ ಬಲಹೀನತೆ, ವಾಯುಗಳ ಉಪದ್ರ, ರಕ್ತವು ಬೇಕಾದಷ್ಟು ಹರಿಯದೆ ನಿಂತು ಬರುವದು ಅಲ್ಲದೆ ಸಮಯಕ್ಕೆ ಸ್ರಾವಿಸುವದು ಬಸ್ಸಾವಸಾನೆಯಲ್ಲಿ ಕೆಡಕು ಇತ್ಯಾದಿ ಗರ್ಭಕೋಶದ ಎಲ್ಲಾ ಅವಸ್ಥೆಯ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನೋನ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ. 3-8-0.

ಮಕ್ಕಳ ದೇಹದ ಪುಷ್ಟಿಗೆ-ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಸಣ್ಣ ತೋರಿ ಸೊಂಟಕ್ಕೆ ಬಲ ಇಲ್ಲದೆ ಇರುವದು. ಜೇಡಿನ ಬಣ್ಣದ ಮೂತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ ಬಾಳುವಿಕೆಯನ್ನೂ ಕುಂದಿಸಿಬಿಡುವ ಈ ಆಪತ್ತುಗಳನ್ನು ಬೇಬಿಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1-4-0

ಶುದ್ಧ ಟಿಂಕ್ಚರುಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ ಅವುಗಳ ನಾನಾ ಬಗೆಯ ಸಾಮಾನುಗಳೂ, ಬಿಸಲಿಗೆ ಇಡತಕ್ಕ ಒಳ್ಳೇ ತರದ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಕ್ರಯದಿಗೆ ದೊರಕುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ:—ಮಲೇರಿಯಾನ ಕಂಪೆನಿ,
ಹಂಪನಕಟ್ಟೆ, ಇಗರ್ಜಿಬಳಿ, ನಂಬರು 14, ಮಂಗಳೂರು.
52-15

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು.
ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ಮೇದಪ್ಪನವರು.
ಮರೆನಾಡು—ಮೆ. ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು. (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಮಡಿಕೇರಿ & ಕಿತಿಮತ್ತಿ—ಮೆ. ಜೆ. ಮಾದಪ್ಪಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚಟ್ಟೋಳಂಡ ಬೋಜಪ್ಪಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

Printed & published by K. P. Chinnappa at "Kodagu" Press, Mercara for "Kodagu" Ltd.

"KODAGU" OFFICE MERCARA.
It not delivered please return to

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾ ನೀತಿ ಪ್ರಸುತ ಶಾಃ | ಏಕ ಮತ್ಯೇನ ದೇಶಾನಾಂ ಸುಸಿರಾ ರಾಜ್ಯ ಸಂಪದಾಃ |

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಕೋಟೆರ ಪಿ. ಚಿಣ್ಣಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦	ಮಡಿಕೇರಿ, ಸನ್ ೧೯೩೧ನೇ ಇಸವಿ ಫೆಬ್ರವರಿ ತಾರೀಕು ೨೦ನೇ ಶುಕ್ರವಾರ.	ಸಂಚಿಕೆ ೫೧

Telegrams — "Precious"

V. Subramaniaier Jeweller,

Telephone — 3145

DIAMOND MERCHANT, GOLD & SILVERSMITH.

Deals in all.—
SPORTS CUPS in all prices
MEADALS in up to date patterns
CASKETS in elegant styles

Nos. 2 & 3, Kuppumuthu St
TIRUVATESWARANPET,
Post Box 423, Triplicane P. O.
MADRAS.

Deals in all:—
GEM SET JEWELS set with Diamonds Rubies etc.
GOLD ARTICLES of all patterns
SILVER WARE in latest style

52-14



ಕೋವಿಗಳು, ಕತ್ತಿಗಳು, ಬಚೆಗಳು, ತೋಟೆಗಳು, ಕೇಶ್ರಗಳು, ಮದ್ದು ಮತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—19 210 Abdul Rehman Street, BOMBAY.

ಕಾರ್ಡ್ ಬರೆದರೆ ಉಗಿನ
ಕ ಟಲಾಗ ವಪ್ಯಯಾಗಿ
ಕಳುಹಿಸಲ್ಪಡುವುದು

ಕಟುಕಷಾಯ ಮತಿಜ್ವರಕೆ:—ಇದು ಇಂಜಕ್ಷನ್ ಮತ್ತು ಕ್ವಿನೇನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ದಿನ ಬರುವ ಜ್ವರ 3—4 ದಿನಕಾಲ್ಕಂದು ಸಾರಿ ಬರುವ ಜ್ವರ ಚಳಿಗೆ ಬರುವ ಜ್ವರ ಮತ್ತು ಜ್ವರಗೆಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಹನಿಹನಿಯಾಗಿ ಹೋಗುವದು ಮೂತ್ರ ಕೋಶದ ಉರಿ ಮೂತ್ರ ಹಿಂದಗಳ ಉರಿ ಮೂತ್ರನಾಳದಲ್ಲಿ ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹುಡಿ ತೋರುವದು, ಆಗಾಗ್ಗೆ ಮೂತ್ರ ಬರುವದು ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಮೂತ್ರ ನಾಳದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ ನಾಳದಲ್ಲಿ ಹುಣ್ಣು ನೋವು ಇವುಗಳಿಗೆ ಖರೆಯ ಔಷಧ ಬೆಲೆ ಬಾಟ್ಲಿ 1 3 6ಕ್ಕೆ ರೂ 1—4—0 3—8—0 6—?—0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ.—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ ಕಿವಿಯಿಂದ ಕೀವು ಸೋರುವದು ನಿದ್ರೆ ಬಾರದಿರುವುದು ಮನಸ್ಸಿನ ಚಂಚಲತೆ ... ಮೋಹ, ಅಪಸ್ಮಾರ ನಿದ್ರೆ ಬಾರದಿರುವದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಸಂಪೂರ್ಣ ಗುಣಪಡಿಸುತ್ತದೆ ಉದುರಿ ಹೋದ ಕೂದಲನ್ನು ಪುನಃ ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಿಕ ನರೆ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ದೊಡ್ಡ ಸೀಸೆಗೆ ... 5—8—0

52—41 ಕಾಲಾಗು ಪಟ್ಟಿ ನೋಡಿರಿ,

ವಿಳಾಸ—ಮನೋಲ್ಲಾಸಿನಿ ಕಂಪೆನಿ,
೨. ಮಂಗಳೂರು.

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ ಮಕ್ಕಳು ರೋಗಿಷ್ಠರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿಯೂ ಬಲವೂ ಬರುವದು ದಿನ ದಿನಕ್ಕೆ ಆರೋಗ್ಯವೂ, ತೂಕವೂ ಹೆಚ್ಚುವದು ಇದು ಮಧುರವಾಗಿದೆ ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ ಸೀಸೆ 1ಕ್ಕೆ 12 ಆಣೆ ಟ. ಖ 9 ಆಣೆ



ಆರ್ಡರ್ ಜೊತೆಯಲ್ಲಿ ಅಡ್ವಾನ್ಸು ಹಣವನ್ನು ಕಳುಹಿಸಿ ಕೊಡತಕ್ಕದ್ದು ಅಡ್ವಾನ್ಸ್ ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲ.

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿಮೊಗ್ಗಾ,
(ಮೈಸೂರು ಸೀಮೆ)

52-0

ಮ್ಮ ದೇಶದಲ್ಲಿ ಕೇಂದ್ರ ಪ್ರಭುತ್ವವೊಂದೇ ಸ್ವತಂತ್ರ ಪ್ರಭುತ್ವವಾಗಿದೆ. ರಾಷ್ಟ್ರ ಪ್ರಭುತ್ವಗಳು ಅದನ್ನು ಅನುಸರಿಸಿ ನಡೆಯಲು ನೌಕರರಾಗಿರುವುದರಿಂದ ನಿಜವಾಗಿ ನಾವೆಲ್ಲರೂ ಒಂದೇ ಸ್ವತಂತ್ರ ಪ್ರಭುತ್ವಕ್ಕೇ ಅಧೀನರಾಗಿರುತ್ತೇವೆ. ಫೆಡರಲ್ ವಿಧಾನದಲ್ಲಿ ನಮ್ಮ ಮೇಲೆ ಎರಡು ಸ್ವತಂತ್ರ ಪ್ರಭುತ್ವಗಳೇರ್ಪಡುವುವು. ಕೆಲವು ವಿಷಯಗಳಲ್ಲಿ ನಾವು ರಾಷ್ಟ್ರ ಪ್ರಭುತ್ವಕ್ಕೂ, ಮತ್ತೆ ಕೆಲವು ವಿಷಯಗಳಲ್ಲಿ ಕೇಂದ್ರ ಪ್ರಭುತ್ವಕ್ಕೂ ಅಧೀನರಾದವರಾಗುವೆವು.

3. ಪ್ರಸ್ತುತದಲ್ಲಿ ಕೇಂದ್ರ ಪ್ರಭುತ್ವದವರೇನಾದರೊಂದು ವಿಷಯದಲ್ಲಿ ಶಾಸನವನ್ನು ಮಾಡಿದರೆ ಆ ವಿಷಯವು ರಾಷ್ಟ್ರ ಪ್ರಭುತ್ವಕ್ಕೆ ಸಂಬಂಧಿಸಿದುದಲ್ಲವೆಂದು ಅನುಮಾನ ಪಡುವವರು ಆ ಶಾಸನವು ಕ್ರಮವಾಗಿಲ್ಲವೆಂದೂ, ಅದನ್ನು ಮಾಡಲು ಕೇಂದ್ರ ಪ್ರಭುತ್ವಕ್ಕೆ ಅಧಿಕಾರವಿಲ್ಲವೆಂದೂ ವಾದಿಸಲು ಮಾರ್ಗವಿಲ್ಲ. ಕೇಂದ್ರ ಪ್ರಭುತ್ವದವರು ಮಾಡುವ ಶಾಸನಗಳೆಲ್ಲವೂ ಕ್ರಮವಾಗಿರುತ್ತವೆಂದೇ ನಾವು ತಿಳಿದುಕೊಳ್ಳಬೇಕಾಗುತ್ತದೆ. ಅವುಗಳೆಲ್ಲವನ್ನೂ ನಾವು ಅನುಸರಿಸಿ ನಡೆದುಕೊಳ್ಳಬೇಕು. ಫೆಡರಲ್ ವಿಧಾನದಿಂದ ಇವೆಲ್ಲವೂ ಬದಲಾಗುವುದು. ರಾಷ್ಟ್ರ ವಿಷಯಗಳಲ್ಲಿ ಕೇಂದ್ರ ಪ್ರಭುತ್ವದವರು ಯಾವುದಾದರೊಂದು ಶಾಸನವನ್ನು ಮಾಡಿದರೆಂದು ನಮಗೆ ತೋರಿದಾಗ ಅದು ಕ್ರಮವಾದ ಶಾಸನವಲ್ಲವೆಂದು ನಾವು ಅದನ್ನು ಉಲ್ಲಂಘಿಸಬಹುದು. ಹಾಗೆಯೇ ರಾಷ್ಟ್ರ ಪ್ರಭುತ್ವದವರು ಕೇಂದ್ರ ವಿಷಯವಾಗಿ ಯಾವುದಾದರೂ ಶಾಸನವನ್ನು ಮಾಡಿದಲ್ಲಿ ಅದು ಅಕ್ರಮವೆಂದು ನಾವು ಅದನ್ನು ಉಲ್ಲಂಘಿಸಬಹುದು. ದೇಶದಲ್ಲಿ ಸ್ವತಂತ್ರ ಪ್ರಭುತ್ವಗಳು ಎರಡು ಇರುವುದರಿಂದ ಇಂತಹ ಸಂಶಯಕ್ಕೂ, ವಿಮರ್ಶನಕ್ಕೂ ಅವಕಾಶವಾಗುವುದು.

4. ಕೇಂದ್ರ ಪ್ರಭುತ್ವದವರಾಗಲಿ, ರಾಷ್ಟ್ರ ಪ್ರಭುತ್ವದವರಾಗಲಿ ಮಾಡಿದ ಶಾಸನಗಳು ಅಕ್ರಮವೆಂದು ಯಾರಿಗಾದರೂ ತೋರಿದ ವೇಳೆ ಅಷ್ಟು ಮಾತ್ರಕ್ಕೇ ಅವನ್ನು ಉಲ್ಲಂಘಿಸಬಹುದೋ? ಅವು ವಾಸ್ತವ್ಯವಾಗಿ ಅಕ್ರಮವಾದವುಗಳೇ? ಎಂದು ನಿರ್ಧರಿಸುವ ಅಧಿಕಾರವು ಯಾರಿಗಾದರೂ ಇರುವುದೇ ಎಂಬ ಸಂಶಯವು ಕೆಲವರಿಗೆ ಹುಟ್ಟಬಹುದು. ಈ ಕಾರಣದಿಂದಲೇ ಫೆಡರಲ್ ವಿಧಾನದಿಂದ ನಮ್ಮ ದೇಶದಲ್ಲಿ ದೊಡ್ಡ ನ್ಯಾಯಸ್ಥಾನವೊಂದು ಏರ್ಪಾಡಾಗಬೇಕಾಗಿರುತ್ತದೆ. ಪ್ರಭುತ್ವದವರು ಮಾಡುವ ಶಾಸನಗಳು ಕ್ರಮವಾಗಿವೆಯೇ ಎಂಬ ಚರ್ಚೆಯನ್ನು ಪರಿಷ್ಕರಿಸುವುದೇ ಆ ನ್ಯಾಯಸ್ಥಾನದ ಮುಖ್ಯ ಧರ್ಮವು. ಸದ್ಯದಲ್ಲಿ ಅಂತಹ ನ್ಯಾಯಸ್ಥಾನವು ನಮ್ಮ ದೇಶದಲ್ಲಿಲ್ಲ. ಏಕೈಕ ವಿಧಾನದಲ್ಲಿ ಅಂಥಾದ್ದರಕ್ಕೆ ಅವಕಾಶವೂ ಸಹ ಇಲ್ಲ.

ಆದಕಾರಣ (1) ರಾಷ್ಟ್ರ ವಿಷಯಗಳಿಂತಹವೆಂದೂ ಕೇಂದ್ರ ವಿಷಯಗಳು ಇಂತಹವೆಂದೂ ಸ್ಪಷ್ಟವಾಗಿ ವಿಭಾಗಿಸಲ್ಪಡಬೇಕು. (2) ರಾಷ್ಟ್ರ ವಿಷಯಗಳಲ್ಲಿ ಕೇಂದ್ರ ಪ್ರಭುತ್ವಕ್ಕೆಷ್ಟು ಮಾತ್ರವೂ ಅಧೀನವಾಗಿಲ್ಲದೆ ರಾಷ್ಟ್ರ ಪ್ರಭುತ್ವವು ಸಂಪೂರ್ಣ ಸ್ವಾತಂತ್ರ್ಯವುಳ್ಳುದಾಗಿರಬೇಕು. (3) ಶಾಸನಗಳು ಕ್ರಮವಾಗಿವೆಯೇ ಇಲ್ಲವೇ ಎಂಬ ಚರ್ಚೆಯು ಹುಟ್ಟಿದ ವೇಳೆ ಅಂತಹ ಚರ್ಚೆಯನ್ನು ಪರಿಷ್ಕರಿಸಲು ಉನ್ನತ ನ್ಯಾಯಸ್ಥಾನವೊಂದಿರಬೇಕು. ಈ ಮೂರು ಫೆಡರಲ್ ವಿಧಾನಕ್ಕೆ ಮುಖ್ಯ ಲಕ್ಷಣವೆಂದು ಸ್ಪಷ್ಟವಾಗುತ್ತದೆ.

ಫೆಡರಲ್ ವಿಧಾನವನ್ನು ಬಯಸಲು ಕಾರಣಗಳು.

ಪ್ರಬಲವಾದ ರಾಜಕೀಯಾಂದೋಲನವು ಹಲವು ವರ್ಷಗಳಿಂದಲೂ ನಮ್ಮ ದೇಶದಲ್ಲಿ ನಡೆಯುತ್ತಿದ್ದರೂ, ಈಗ ವಿಶೇಷವಾಗಿ ಚರ್ಚಿಸಲ್ಪಟ್ಟ ಈ ಫೆಡರಲ್ ವಿಧಾನವು ಇಷ್ಟು ಪ್ರಾಮುಖ್ಯತೆಯನ್ನು ಹೊಂದಲು ಕಾರಣವೇನು? ಇದರಿಂದಾಗುವ ಪ್ರಯೋಜನಗಳೇನು? ಎಂದು ಕೇಳಬಹುದು. ಅವರಿಗೆ ಸಮಾಧಾನ ಹೇಳಬೇಕಾಗಿದೆ.

ನಾವು ಈಗ ಕೋರುತ್ತಿರುವುದು ಸ್ವರಾಜ್ಯವು. ಸ್ವರಾಜ್ಯವೆಂದರೆ ಪ್ರಜೆಗಳಿಗೆ ಅಧೀನವಾದ ರಾಜ್ಯವು. ಅಂತಹ ಪ್ರಜೆಗಳಿಂದಲೇ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ದೇಶವನ್ನು ಪಾಲಿಸುವರು. ರಾಷ್ಟ್ರ ಪ್ರಭುತ್ವದ ಗೌರ್ನರೂ, ಕೇಂದ್ರ ಪ್ರಭುತ್ವದ ಗೌರ್ನರ್ ಜನರಲ್ಲರೂ ಇಂಗ್ಲಂಡಿನ ಒಡೆಯರೂ ನಿಜವಾದ ಅಧಿಕಾರವು ಅವರ ಕೈಯ್ಯಲ್ಲಿಲ್ಲದೆ ಅವರ ಮಂತ್ರಿಗಳಲ್ಲಿರುವುದು. ಆ ಮಂತ್ರಿಗಳೆಲ್ಲರೂ ಪ್ರಜಾಪ್ರತಿನಿಧಿಗಳಾಗಿರುವರು. ಅಂದರೆ ಪರಿಪಾಲನಾಧಿಕಾರವೆಲ್ಲವೂ ಪ್ರಜೆಗಳಿಂದಾರಿಸಲ್ಪಟ್ಟ ಪ್ರತಿನಿಧಿಗಳಲ್ಲಿರುವುದು ಸ್ವರಾಜ್ಯದ ಪ್ರಧಾನ ಲಕ್ಷಣವಿದಿಯೇ.

ಆದರೆ ಇಂತಹ ಪರಿಪೂರ್ಣ ಸ್ವರಾಜ್ಯಕ್ಕೆ ಇನ್ನೂ ನಾವು ಅರ್ಹರಲ್ಲವೆಂದೂ, ಸಮರ್ಥರಾದ ಪ್ರತಿನಿಧಿಗಳನ್ನು ಆರಿಸಿಕೊಳ್ಳಲು ಬೇಕಾದ ತಿಳುವಳಿಕೆಯೂ ಸಾಮಾನ್ಯ ಪ್ರಜೆಗಳಿಗಿಲ್ಲವೆಂದೂ, ಪಕ್ಷಪಾತ ಬುದ್ಧಿಯಿಲ್ಲದೆ ಶಕ್ತಿ ಸಾಮರ್ಥ್ಯದಿಂದ ದೇಶವನ್ನಾಳಲು ಪಾಲಿಸಬಲ್ಲ ಪ್ರತಿನಿಧಿಗಳು ಸದ್ಯದಲ್ಲಿ ದೇಶದಲ್ಲಿಲ್ಲವೆಂದೂ ಕೆಲವರ ಅಭಿಪ್ರಾಯವಾಗಿದೆ. ಪರಿಪಾಲನಾಧಿಕಾರವನ್ನೆಲ್ಲಾ ವಹಿಸಬಲ್ಲೆವೆನ್ನುವವರಿಗೂ, ಎಷ್ಟು ಮಾತ್ರಕ್ಕೂ ಪ್ರಜಾಪ್ರತಿನಿಧಿಗಳು ಅದನ್ನು ವಹಿಸಲಾರರೆಂದು ವಾದಿಸುವವರಿಗೂ ಸಾಮರಸ್ಯವು ಕುದುರುವುದು ಹೇಗೆ? ಆ ಎರಡು ಪಕ್ಷದವರಿಗೂ ಸ್ವಲ್ಪ ರಾಜಿ ಕುದುರದ ಹೊರತು ದೇಶದಲ್ಲಿ ರಾಜಕೀಯಾಂದೋಳನವೂ, ಅದರಿಂದುಂಟಾಗುವ ಕಷ್ಟನಷ್ಟಗಳೂ ನಿವಾರಣೆಯಾಗುವುದಿಲ್ಲ. ಫೆಡರಲ್ ವಿಧಾನದಿಂದ ಅಂತಹ ರಾಜಿಯು ಕುದುರುವುದೆಂದು ಕೆಲವರ ಅಭಿಪ್ರಾಯವು. ಇದರ ಮೂಲಕ ಪ್ರಜೆಗಳಲ್ಲಿ ಕೊಂಚ ಶಾಂತಿಯುಂಟಾಗುವುದೆಂದು ಇವರ ನಂಬಿಕೆ.

ಸ್ವರಾಜ್ಯ ಬೇಕೆನ್ನುವವರನ್ನು ಫೆಡರಲ್ ವಿಧಾನವು ಹೇಗೆ ತೃಪ್ತಿಪಡಿಸಬಲ್ಲದು ಎಂಬ ಸಂಶಯವು ಕೆಲವರಿಗುಂಟಾಗಬಹುದು. ತೃಪ್ತಿಪಡಿಸಬಹುದೆಂದು ಕೋರುವವರು ಈ ಕೆಳಗಿನ ಪ್ರಕಾರ ವಾದಿಸುವರು—ದೇಶವೆಲ್ಲವನ್ನು ಪಾಲಿಸುವುದು ಸಾಮಾನ್ಯವಲ್ಲವು. ದೇಶರಕ್ಷಣೆ, ಸೈನ್ಯದೇಖರೇಖು, ವಿದೇಶದೊಡನೆ ವ್ಯವಹಾರ ನಡೆಸುವುದು ಮೊದಲಾದ ಕೇಂದ್ರ ವಿಷಯಗಳನ್ನು ಚೆನ್ನಾಗಿ ನಿರ್ವಹಿಸಲು ತಕ್ಕ ಸಮರ್ಥರು ದೇಶದಲ್ಲಿಲ್ಲ. ಈ ಕೆಲಸಗಳನ್ನು ನಿರ್ವಹಿಸಲು ತಕ್ಕ ಅನುಭವವಿರಬೇಕು. ಆದ ಕಾರಣ ಕೇಂದ್ರ ವಿಷಯದಲ್ಲಿ ಪ್ರಜಾಪ್ರಭುತ್ವವು ಈಗಿನ ಸ್ಥಿತಿಯಲ್ಲೇ ಇರತಕ್ಕದ್ದು ಯೋಗ್ಯವು. ಅಲ್ಲಿ ನಿರಂಕುಶಾಧಿಕಾರ ವಿರತಕ್ಕದ್ದು. ರಾಷ್ಟ್ರ ವಿಷಯವು ಹಾಗಲ್ಲ. ಅವು ಅಷ್ಟು ಕ್ಲಿಷ್ಟವಾದವೂ ಅಲ್ಲ. ಆ ವಿಷಯಗಳನ್ನು ಸಮರ್ಥಿಸಿಕೊಳ್ಳುವಲ್ಲಿ [illegible] ಬಹಳ ಅನುಭವ ವಿಶೇಷ [illegible] ದ, [illegible] ದೆ. ಆದ ಕಾರಣ ರಾಷ್ಟ್ರ ಪ್ರಭುತ್ವಗಳನ್ನು [illegible] ಪ್ರಭುತ್ವದಿಂದ ಬಿಡುಗಡೆ ಮಾಡಿ [illegible] ರಾಷ್ಟ್ರಕ್ಕೂ ಪ್ರಜಾಪ್ರತಿನಿಧಿಗಳಿಂದೊಡಗೂಡಿದ ಸ್ವತಂತ್ರ ಪ್ರಭುತ್ವವನ್ನು ಸ್ಥಾಪಿಸಬಹುದು. ಇದನ್ನು ನಿರ್ವಹಿಸುವಲ್ಲಿ ಪ್ರಜೆಗಳು ತಮ್ಮ ವಿವೇಕವನ್ನೂ, ಸಾಮರ್ಥ್ಯವನ್ನೂ ಪ್ರದರ್ಶಿಸಿದಲ್ಲಿ ಕಾಲಕ್ರಮೇಣ ಕೇಂದ್ರ ಪ್ರಭುತ್ವವು ಕೂಡ ಪ್ರಜೆಗಳ ಅಧೀನಪಡಿಸಲ್ಪಡುವುದು.

ಫೆಡರಲ್ ವಿಧಾನವಿದ್ದರೂ ರಾಷ್ಟ್ರಗಳಿಗೆ ಸ್ವಾತಂತ್ರ್ಯವಿರುವುದಿಲ್ಲ. ರಾಷ್ಟ್ರ ವಿಷಯದಲ್ಲಿ ಸ್ವರಾಜ್ಯ ಸ್ಥಾಪನೆಯಾದ ಹೊರತು ದೇಶದಲ್ಲಿ ಶಾಂತಿಯು ನೆಲಸುವುದಿಲ್ಲ. ಈಗಿನಂತೆಯೇ ಏಕೈಕ ವಿಧಾನದಿಂದ ರಾಷ್ಟ್ರಗಳಲ್ಲಿ ಸ್ವರಾಜ್ಯವನ್ನು ಸ್ಥಾಪಿಸಲಾಗುವುದಿಲ್ಲವೇ? ಹಾಗೆ ಮಾಡಲು ಅವಕಾಶವಿಲ್ಲವೆಂದೇ ಹೇಳಬೇಕಾಗುತ್ತದೆ. ಪ್ರಜಾಪ್ರತಿನಿಧಿಗಳಿಂದ ಕೂಡಿದ ರಾಷ್ಟ್ರಪ್ರಭುತ್ವವು ನಿರಂಕುಶಾಧಿಕಾರವುಳ್ಳ ಕೇಂದ್ರ ಪ್ರಭುತ್ವಕ್ಕೆ ಅಧೀನವಾಗಿರುವಂತೆ ಮಾಡಿದಲ್ಲಿ ಈ ಎರಡು ಪ್ರಭುತ್ವಗಳಿಗೂ ಯಾವಾಗಲೂ ಕಲಹವುಂಟಾಗುವುದು. ಅವುಗಳ ದೃಷ್ಟಿಯು ಬೇರೆ ಬೇರೆಯಾಗಿರುವುದೇ ಇದಕ್ಕೆ ಕಾರಣವು. ಪ್ರಜಾಪ್ರತಿನಿಧಿಗಳಿಂದ ರಾಷ್ಟ್ರ ಪ್ರಭುತ್ವಗಳು ನಿರಂಕುಶಾಧಿಕಾರಿಯಾದ ಕೇಂದ್ರ ಪ್ರಭುತ್ವಕ್ಕೆ ಯಾವಾಗಲೂ ಅಧೀನವಾಗುವುದಿಲ್ಲ. ಅಧೀನವಾಗಿರುವಂತೆ ಪ್ರಭುತ್ವ ಪಟ್ಟಿಯಲ್ಲಿ ಅಸಾಧ್ಯವಾಗಿರುವುದರಿಂದ ಪ್ರಜಾ ಸ್ವಾಮ್ಯಕವಾದ ರಾಷ್ಟ್ರ ಪ್ರಭುತ್ವಗಳನ್ನು ಕೇಂದ್ರ ಪ್ರಭುತ್ವಗಳೊಡನೆ ಸಂಬಂಧವಿಲ್ಲದಂತೆ ಸ್ವತಂತ್ರಾಧಿಕಾರವುಳ್ಳದ್ದಾಗಿ ಮಾಡುವುದೇ ಒಳ್ಳೆಯದು. ಇದೇ ಫೆಡರಲ್ ವಿಧಾನವು.

ರಾಷ್ಟ್ರಗಳಲ್ಲೇ ಅಲ್ಲದೆ ಕೇಂದ್ರದಲ್ಲೂ ಕೂಡ ಪ್ರಜಾಪ್ರಭುತ್ವವನ್ನು ನಿರ್ವಹಿಸಲು ನಮ್ಮ ದೇಶದವರಿಗೆ ಸಾಮರ್ಥ್ಯವಿದೆ ಎಂದು ನಂಬಿಕೆಯುಳ್ಳವರು ಮೇಲಿನ ವಾದವನ್ನು ಅಂಗೀಕರಿಸದೆ ಇರಬಹುದು. ಅಂತಹ ನಂಬಿಕೆ ಇಲ್ಲದವರು ನಮ್ಮಲ್ಲಿ ಅನೇಕರಿರುತ್ತಾರೆ. [illegible] ಅಂತಹ ನಂಬಿಕೆಯಿಲ್ಲದ [illegible] ಅದರಿಂದ ಅವರೆಲ್ಲರಿಗೂ ಫೆಡರಲ್ ವಿಧಾನವು ಸಮ್ಮತವಾಗಿರುತ್ತದೆ. [illegible] 'ಸರ್ವಜ್ಞ [illegible]' ಮೊದಲು ರಾಷ್ಟ್ರ ಪ್ರಭುತ್ವದಲ್ಲಿ ಸ್ವರಾಜ್ಯ ಸಂಪಾದನವು [illegible] ಫೆಡರಲ್ ವಿಧಾನವು [illegible] ಬೇಕು.

2. ಫೆಡರಲ್ ವಿಧಾನವು [illegible] ಕೆ [illegible] ದ [illegible] ಈ ವಿಧಾನದ ಮೂಲಕ ಸ್ವದೇಶ ಸಂಸ್ಥಾನಗಳಿಗೂ, ಬ್ರಿಟಿಷ್ ಇಂಡಿಯಕ್ಕೂ ಇರುವ ಸಂಬಂಧವು [illegible] ಪಡುವುದೆಂದೂ ಭರತಖಂಡದಲ್ಲೆಲ್ಲಾ ಕ್ರಮೇಣ ಒಂದೇ ಪ್ರಭುತ್ವವು ಸ್ಥಾಪಿಸಲ್ಪಡ [illegible] ಅವಕಾಶವಾಗುವುದೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಸ್ವದೇಶ ಸಂಸ್ಥಾನಾಧಿಪತಿಗಳು ತಮಗೂ ಆಂಗ್ಲೇಯ ಪಾಲಕರಿಗೂ ಇರುವ ಸಂಬಂಧವನ್ನು ಬಲಪಡಿಸಿಕೊಳ್ಳಬಹುದೆಂದರೆ ಮಾತ್ರ ಫೆಡರಲ್ ವಿಧಾನವನ್ನು ಅಂಗೀಕರಿಸುವವರಾಗಿರುತ್ತಾರೆ.

ಮೈಸೂರು, ಹೈದರಾಬಾದು, ಬರೋಡಾ ಮೊದಲಾದ ಸಂಸ್ಥಾನಗಳು ಮದ್ರಾಸು ಬೊಂಬಾಯಿ ಮೊದಲಾದ ರಾಷ್ಟ್ರ (ಪ್ರಾವಿನ್ಸ್) ಗಳಂತೆ ನಮ್ಮ ಮಾತೃದೇಶವಾದ ಭರತಖಂಡದಲ್ಲಿ ಭಾಗಗಳಾಗಿದ್ದರೂ ರಾಜಕೀಯ ವಿಷಯಗಳಲ್ಲಿ ಸಂಸ್ಥಾನಾಧಿಪತಿಗಳೂ, ಆಂಗ್ಲೇಯ ರಾಷ್ಟ್ರದಲ್ಲಿರುವವರುಗಳೂ ಒಂದು ಕಡೆ ಸೇರಿ ತಮ್ಮ ಕಷ್ಟ ಸುಖಗಳನ್ನು ಕುರಿತು ಆಲೋಚಿಸಲು ಈಗ ಅವಕಾಶವಿರುವುದಿಲ್ಲ. ನಾವು ಕೋರುವುದು ರಾಷ್ಟ್ರಗಳ ಕ್ಷೇಮ ಮಾತ್ರವೇ ಅಲ್ಲ. ಒಟ್ಟು ಭರತಖಂಡದ ಶ್ರೇಯಸ್ಸನ್ನೇ ಕೋರುತ್ತಿದ್ದೇವೆ. ಅದೇ ಪ್ರಕಾರ ಸ್ವದೇಶ ಸಂಸ್ಥಾನಗಳಲ್ಲಿರುವವರು ಕೂಡ ಒಟ್ಟು ದೇಶದ ಕ್ಷೇಮವನ್ನು ಕೋರಬೇಕಾಗಿದೆ. ಆಂಗ್ಲೇಯ ರಾಷ್ಟ್ರಗಳ ಐಕ್ಯಮತವೇ ನಮ್ಮ ಆದರ್ಶವಾಗಿರುವುದರಿಂದ ಸಂಸ್ಥಾನಗಳೊಡನೆ ಸಂಬಂಧವಿಡಲು ನಮಗೆ ಅಪೇಕ್ಷೆ ಇಲ್ಲವಾಗಿದೆ. ಸಂಸ್ಥಾನಗಳ ಅಭಿವೃದ್ಧಿಯನ್ನು ಮಾತ್ರ ಅವರು ಕೋರುವವರಾದ ದರಿಂದ ರಾಷ್ಟ್ರದವರೊಡನೆ ಅವರಿಗೆ ಸಂಬಂಧ ಬೆಳಸುವ ಅಪೇಕ್ಷೆ ತಪ್ಪಿ ಹೋಗಿರುವುದು. ಈ ವರೆಗೆ ಅವರೂ, ರಾಷ್ಟ್ರದವರೂ ಭಿನ್ನಾಭಿಪ್ರಾಯದಿಂದ ನಡೆಯುತ್ತಿದ್ದರು. ಇನ್ನು ಮುಂದೆ ಉಭಯತರೂ ಒಬ್ಬರನ್ನೊಬ್ಬರು ಚೆನ್ನಾಗಿ ತಿಳಿದು ವರ್ತಿಸಬೇಕಾಗಿದೆ. ಈ ಭಾವವನ್ನು ಬಲಪಡಿಸಲು ಫೆಡರಲ್ ವಿಧಾನಕ್ಕಿಂತ ಬೇರೆ ಸಾಧನವಿಲ್ಲವು.

(ವೈ ನಷ್ಟಿರ್)

ಕೊಡಗರು ಯಾತಕ್ಕೆ ಕೊಡಗಿನ ಹೆಂಗಸರನ್ನೇ ಮದುವೆಯಾಗಬೇಕು?

(ಯು. ಎ. ಪೊನ್ನಯ್ಯನವರಿಂದ)

ಅಯ್ಯಾ,

ಮಹನೀಯರೆ, ನನಗೆ ತಿಳಿದ ಮಟ್ಟಿಗೆ ಬಾಗಮಂಡಲ ನಾಡಿನ ಕೊಡಗರ ಪೈಕಿ ಕೆಲವು ಜನರು ಬೇರೆ ಜಾತಿ ಹೆಂಗಸರನ್ನು ಮದುವೆ ಮಾಡಿಕೊಂಡಿದ್ದರಿಂದ ಅವರನ್ನು ಬಹಿಷ್ಕಾರ ಇಟ್ಟಿರುವುದನ್ನು ನಾನು ನೋಡಿರುವೆನು. ಅಂಥವರು ಊರಿಗೆ ಬಂದರೆ ಅವರನ್ನು ಮನೆಯೊಳಗೆ ಸೇರಿಸುವುದಿಲ್ಲ, ಮತ್ತು ಅವರ ಸಂಗಡ ಊಟ ಮಾಡುವುದಿಲ್ಲ. ಹೀಗಿರುವುದು ಯಾತಕೋಸ್ಕರ ಮತ್ತು ಯಾವ ಕಾರಣದಿಂದ ಎಂಬುದು ನನಗೆ ಚೆನ್ನಾಗಿ ತಿಳಿಯಬೇಕಾಗಿದೆ.

ಬೇರೆ ಜಾತಿ ಹೆಂಗಸರನ್ನು ಮದುವೆ ಮಾಡಿದುದರಿಂದ ಮತ್ತು ಬೇರೆ ಜಾತಿಗೆ ಸೇರಿದುದಕ್ಕೆ ಅವರನ್ನು ಬಹಿಷ್ಕರಿಸುವುದು ಕೇವಲ ತಿಳಿಗೇಡಿತನವಾಗಿದೆ ಎಂದು ನನ್ನ ಮನಸ್ಸಿಗೆ ಕಂಡು ಬರುತ್ತದೆ. ಹೀಗೆ ಮಾಡುವುದರಿಂದ ಇತರ ಜನಾಂಗಕ್ಕೆ ಕೆಡುಕೇ ಹೊರತು ಒಳ್ಳೆಯದಿಲ್ಲ.

ಹೇಗೆಂದು ತಿಳಿಯಬೇಕಾದರೆ—ಈಗ ಹಿಂದೂಸ್ಥಾನದಲ್ಲಿ 1930 ರಿಂದ ಸ್ವರಾಜ್ಯದ ಹೋರಾಟವು ಜೋರಾದದ್ದು ಎಲ್ಲರಿಗೂ ಗೊತ್ತೇ ಇದೆ. ಇದರ ಹಿಂದೂಸ್ಥಾನದಲ್ಲಿ [illegible] ಜನರು ಜೈಲಿಗೆ ಹೋಗಿರುತ್ತಾರೆ. ಪಂಡಿತ ಮೋತಿಲಾಲ್ ಮತ್ತು ಮಹಮ್ಮದ್ ಅಲಿಯವರು ಸ್ವರಾಜ್ಯದ ಹೋರಾಟದಲ್ಲಿಯೇ ತಮ್ಮ ಜೀವವನ್ನು ಬೇಗನೆ ಕಳಕೊಂಡರು. ಹೀಗಿರುವಾಗ್ಯೆ ಹಿಂದೂಸ್ಥಾನಕ್ಕೆ ಸ್ವರಾಜ್ಯ ಬೇಕಾದ ನಾವುಗಳು ಮುಂತಾದ ಜನಾಂಗಗಳಲ್ಲಿ ಪರಸ್ಪರ ಪ್ರೀತಿ, ಸ್ನೇಹಭಾವ ಮೊದಲಾದುವುಗಳನ್ನು ಬೆಳಸಿ ಜಾತಿಭೇದವನ್ನು ಹೋಗಲಾಡಿಸಿ ಒಗ್ಗಟ್ಟಿನಿಂದ ಇದ್ದರೆ ಮಾತ್ರ ಸ್ವರಾಜ್ಯವು ಬೇಗನೆ ಕೈಗೂಡುವುದು.

ಹಿಂದೂಸ್ಥಾನದಲ್ಲಿ ನೂರಾರು ಭಾಷೆಗಳ, ನೂರಾರು ಜಾತಿಗಳು ಇರುವುದರಿಂದಲೂ, ಹಿಂದು ಮುಸಲ್ಮಾನರಲ್ಲಿ ಜಗಳಗಳೂ ಜಗಳವಿರುವುದರಿಂದಲೂ ನಮಗೆ ಪೂರ್ಣ ಸ್ವಾತಂತ್ರ್ಯವು ಬೇಗನೆ ಸಿಕ್ಕುವುದು ಕಷ್ಟವಾಗಿದೆ.

ನಮ್ಮಲ್ಲಿರುವ ಅನೇಕ ಕುಂದು ಕೊರತೆಗಳನ್ನು ಮೇಯೋ ಎಂಬವಳು 'ಮದರ್ ಆಫ್ ಇಂಡಿಯಾ' ಎಂಬ ಪುಸ್ತಕದಲ್ಲಿ ಬರೆದಿರುತ್ತಾಳೆ. ಇದಕ್ಕೆಲ್ಲಾ ನಾವೇ ಕಾರಣರಲ್ಲವೇ?

ಇದಲ್ಲದೆ ಸೈಮನ್ ಕಮಿಶನ್ ರಿಪೋರ್ಟಿನಲ್ಲಿ ಬರೆಯಲ್ಪಟ್ಟಿರುವುದೇನೆಂದರೆ—ಹಿಂದೂಸ್ಥಾನವು ಪೂರ್ಣ ಸ್ವಾತಂತ್ರ್ಯವನ್ನು ಪಡೆಯಲಿಕ್ಕೆ ಯೋಗ್ಯತೆಯಿಲ್ಲ. ಅವರಲ್ಲಿ ಪರಸ್ಪರ ಒಗ್ಗಟ್ಟಿಲ್ಲ, ಮತ್ತು ಹಿಂದೂಸ್ಥಾನದಲ್ಲಿ ನೂರಾರು ಭಾಷೆಗಳು, ಜಾತಿಗಳಿವೆ. ಒಂದು ವೇಳೆ ಸ್ವರಾಜ್ಯವನ್ನು ಕೊಟ್ಟರೂ ಅದನ್ನು ಸರಿಯಾಗಿ ಇಟ್ಟುಕೊಳ್ಳಲಿಕ್ಕಿಲ್ಲ.

ಆಂಗ್ಲ ಮುಖಂಡರು ಸೈಮನ್ ರಿಪೋರ್ಟನ್ನು ಈಗ ತಾನೆ ನಡೆದ ರೌಂಡ್ ಟೇಬಲ್ ಕಾನ್ಫರೆನ್ಸಿನ ಸಂಧರ್ಭದಲ್ಲಿ ಇಟ್ಟಿದ್ದರು. ಅದರ ಸಹಾಯದಿಂದ ಅವರು [illegible] ಪೂರ್ಣ ಸ್ವರಾಜ್ಯವನ್ನು ಕೊಡದ ಪರಿಣಾಮಗಳನ್ನು [illegible] ಮಾಡುತ್ತಾರೆ.

ಆದುದರಿಂದ ನಾವು ಪರಸ್ಪರ ಮದುವೆ ಮಾಡಿಕೊಂಡು [illegible] ಜಾತಿ ಭೇದವನ್ನು ಹೋಗಲಾಡಿಸಿ ಒಂದೇ ದೇವರನ್ನು ಪೂಜಿಸುತ್ತಾ, ಹಿಂದೂಸ್ಥಾನ ಎಂಬ ಕನ್ನೆ ಮಾತೆಯ ಒಗ್ಗಟ್ಟಿನಿಂದಲೂ, ಪರಸ್ಪರ ಪ್ರೀತಿಯಿಂದಲೂ, ಸ್ನೇಹಭಾವದಿಂದಲೂ ನಡೆದರೆ ನಮಗೆ ಬೇಗನೆ ಸ್ವರಾಜ್ಯವನ್ನು ಪಡೆದು, ದೇಶವನ್ನು ಅತ್ಯಂತ ಉನ್ನತ ಸ್ಥಿತಿಗೆ ತರುವೆವೆಂದು ನಂಬುತ್ತೇನೆ.

ಕಿತ್ತಳೆ ಹಣ್ಣು.

(ಅ. ಚೋಪ್ಪಯ್ಯನವರಿಂದ)

ಕೊಡಗಿನ ಹಣ್ಣೆ | ಕೊಡಗಿನ ಕಣ್ಣೆ |
ಕೋಟುವೆನಿನಗಾನಂದ || ಕಾಡೊಳು ಬೆಳೆವೆ |
ನಾಡೊಳು ಮೆರವೆ | ಬೀರುವೆ ಜನಕಾನಂದ ||

ನೋಡಲು ಚಂದ | ತಿಂದರೆ ನಿಜಾಂದ |
ಸುರಿಯೆ ನಿನ್ನಯ ಆನಂದ || ವಿಶ್ವಾಣಾಸಿ ಮಕ್ಕಳ |
ರಾಣಿಸಿ ಮೋಜಿನ | ರಾಜಿಪ ರಸಕೆ ಶಾಂತ ||

ಮುದ್ದಾಗಿ ಮುದ್ದೆ | ಮುದ್ದಿನ ಹಣ್ಣೆ |
ಸಿದ್ಧಿದೆ ನಿನ್ನೊಳು ಚರವಿನಾ || ಮಾತೆಯ ಸೇನ
ನೀತಿಲಿ ಸೈಯ್ಯೆ | ಭಂಗ ಸುವೆ ಶಾಂತಿಯ ನಾಟಿ ||
ಪ್ರಾಣದ ತೆತ್ತ | ದನ್ನವ ತಂದು |
ಮೆರಿಸುವೆ ನಾಡಿನ ಕ್ಯಾತಿ || ಮಾತೆಯ ನಾಮ
ಖ್ಯಾತಿಲಿ ಮೆರಿಸುವೆ | ನಗರ ನಗರದಿ ನಿ ತುಂಬಿ,

ನೀನೇ ಧನ್ಯೆ | ನೀನೇ ಮಾನ್ಯೆ |
ನೀನೇ ಮಾತೆಯ ಮನೋಹರಳೆ ||

ಕೊಡಗಿನ ಸತ್ಯಾಗ್ರಹ ಚಳವಳದ ವರ್ತಮಾನ.

ವೀರಾಜಪೇಟೆ, ಮಡಿಕೇರಿಯಲ್ಲಿ ಸೇಂದಿ, ಸಾರಾಯಿ ಅಂಗಡಿಗಳ ಮಾರಾಟ.

ಹನ್ನೊಂದು ಸತ್ಯಾಗ್ರಹಿಗಳಿಗೆ ಐದರಿಂದ ಆರು ತಿಂಗಳ ವರೆಗೆ ಸಜ.

ಮಡಿಕೇರಿ, ವೀರಾಜಪೇಟೆಯಲ್ಲಿ ಪ್ರಚಂಡ ಮೀಟಿಂಗು.

ಸತ್ಯಾಗ್ರಹಿಗಳ ಪ್ರಚಾರ ಕೆಲಸವು ಬಹಳ ಬಿರುಸಿನಿಂದ ನಡೆದವು.

70,000 ರೂಪಾಯಿ ಹರಾಜಿನಲ್ಲಿ ಕಡಿಮೆ.

ಮಡಿಕೇರಿಯಲ್ಲಿ 61 ಸತ್ಯಾಗ್ರಹಿಗಳ ದಸ್ತಗಿರಿ.

61 ಸತ್ಯಾಗ್ರಹಿಗಳು ಬೆಳಿಗ್ಯೆ 10 ಘಂಟೆಗೆ ಮೆರವಣಿಗೆ ಹೊರಟು ಚೌಕಿ ಬಳಿ ಮೀಟಿಂಗು ಮಾಡಿದರು. ಸೇಂದಿ ಸಾರಾಯಿ ಈ ದಿನ ಕೋಟೆಯಲ್ಲಿ ಹರಾಜು ಆಗುವುದರಿಂದ ಹಸ್ತಪತ್ರಿಕೆ ಸಮೇತ ಅಪ್ಪೀಲು ಮಾಡಲಿಕ್ಕಾಗಿ ಮೀಟಿಂಗಿನಿಂದ ಹೊರಟು ಕೋಟೆಯ ಮೂರು ಬಾಗಿಲುಗಳಲ್ಲಿ ಸಾಲು ನಿಂತು ಕಠಿಣ ತರದ ಪಿಕೆಟಿಂಗ್ ಮಾಡಲಿಕ್ಕೆ ಸಜ್ಜಾದರು. 11 ಘಂಟೆಯಿಂದ ಈ ತರದ ಪಿಕೆಟಿಂಗು 1 ಘಂಟೆಯ ವರೆಗೆ ನಡೆಯಿತು. ಸತ್ಯಾಗ್ರಹಿಗಳು ಕೆಲವರು ರಸ್ತೆಯಲ್ಲಿ ಮಲಗಿ ಅಡ್ಡಗಟ್ಟಿ ಹರಾಜು ಕೂಗಲಿಕ್ಕೆ ಹೋಗುವವರನ್ನು ಬೇಡಿ ತಡೆದರು. ಇದನ್ನು ನೋಡಿ ಪೊಲೀಸಿನವರು ಈ ಕೆಳಗಿನ 61 ಸತ್ಯಾಗ್ರಹಿಗಳನ್ನು ಮಧ್ಯಾಹ್ನ 1 ಘಂಟೆಗೆ ದಸ್ತಗಿರಿ ಮಾಡಿದರು.

ಮಿ. ಗಳಾದ 1. ಅಜ್ಜಮಾಡ ಮಾದಪ್ಪನವರು,
,, 2. ಐನಂಡ ಪಿ. ಕಾರ್ಯಪ್ಪನವರು,
3 ಶ್ರೀಮತಿ ಕೋಟೆರ ಸಿ. ಅಕ್ಕಮ್ಮನವರು,
4. ,, ಒಳ್ಯಾಟಂಡ ಎಂ ಮುದ್ದವ್ವನವರು,
5. ,, ಮುಕ್ಕಾಟಿರ ಬೋಜವ್ವನವರು,
6 ,, ಅಪ್ಪಂಡೆರಂಡ ಕಾಳವ್ವನವರು,
ಮಿ. ಗಳಾದ 7 ಪಿ. ಆರ್. ತಮ್ಮಯ್ಯನವರು,
,, 8. ಅಜ್ಜಮಾಡ ಮುದ್ದಪ್ಪನವರು,
,, 9. ಕೊಳ್ಳಿಮಾಡ ಐಯ್ಯಮ್ಮನವರು,
,, 10 ಮುಕ್ಕಾಟಿರ ಮುತ್ತಣ್ಣನವರು,
,, 11. ಪುಲಿಯಂಡ ಸುಬ್ಬಯ್ಯನವರು,
,, 12. ಪುಟ್ಟಿಚಂಡ ಪೊಣ್ಣಪ್ಪನವರು,
,, 13. ಮನೆಯಪಂಡ ಮಾದಪ್ಪನವರು,
,, 14. ,, ತಿಮ್ಮಯ್ಯನವರು,
,, 15 ಮಾಚೆಟ್ಟಿರ ಮುದ್ದಪ್ಪನವರು,
,, 16. ಕೇಕಿರ ಸುಬ್ಬಯ್ಯನವರು,
,, 17 ಪಂದಿಕಂಡ ಮೇದಪ್ಪನವರು,
,, 18. ನೆರವಂಡ ಪೊನ್ನಪ್ಪನವರು,
,, 19 ಕೈಬಿಲಿರ ಮಾಚಯ್ಯನವರು,
,, 20. ಕೋಚನ ಅಪ್ಪಯ್ಯನವರು,
,, 21. ಚೆಂಬಾರಂಡ ಮಾದಪ್ಪನವರು,
,, 22. ಮುಕ್ಕಾಟಿರ ಪೂವಯ್ಯನವರು, ಹರಿಹರ
,, 23 ಬ್ರಾಹ್ಮಣ ತಿಮ್ಮಯ್ಯನವರು,
,, 24 ಕುಂಞಂಗಡ ಬೋಪಯ್ಯನವರು,
,, 25. ಕೋದಿಯಂಗಡ ಕಾರ್ಯಪ್ಪನವರು,
,, 26. ಕೆ. ಎಂ. ಸುಬ್ರಾಯನವರು,
,, 27. ಅಮ್ಮತ್ತಿರ ರಾಮಯ್ಯನವರು,
,, 28. ಮಳ್ಳಂಡ ಚಂಗಪ್ಪನವರು,
,, 29. ಮಲಚಿರ ಚಿಣ್ಣಪ್ಪನವರು,
,, 30. ಮುಲ್ಲಂಡ ಪೂವಯ್ಯನವರು,
,, 31. ಮಲಚಿರ ಐಯ್ಯಪ್ಪನವರು,
,, 32. ಕಾಳಿಮಾಡ ಮಾಚಯ್ಯನವರು,
,, 33. ಕಡಿಯಂಗಡ ಸುಬ್ಬಯ್ಯನವರು,
,, 34. ಕೀತಿರ ಕುಟ್ಟಪ್ಪನವರು,
,, 35. ಯಸ್. ಆರ್. ನಾರಾಯಣನವರು,
,, 36. ಪೂಜಾರಿರ ರಾಮಪ್ಪನವರು,
,, 37. ಎಚ್. ಬಿ. ತಮ್ಮಯ್ಯನವರು,
,, 38 ಬಿದರೂರು ಪೂವಯ್ಯನವರು,
,, 39. ಚೋಂದಿರ ಮುದ್ದಯ್ಯನವರು,
,, 40. ಮಲ್ಲಂಗಡ ಚಂಗಪ್ಪನವರು,
,, 41. ಮಲಚಿರ ಪೂವಯ್ಯನವರು,
,, 42. ಅಜ್ಜಿಕುಟ್ಟಿರ ಮುದ್ದಪ್ಪನವರು,
,, 43 ಅಪ್ಪಂಡೆರಂಡ ಮುದ್ದಪ್ಪನವರು,
,, 44 ಅಪ್ಪಂಡೆರಂಡ ಬಿದ್ದಯ್ಯನವರು,
,, 45. ಮಲಚಿರ ಚಂಗಪ್ಪನವರು,
,, 46. ಕೀತಮಾಡ ಪೂವಯ್ಯನವರು,
,, 47. ಬೈರೆಟ್ಟಿರ ಚಂಗಪ್ಪನವರು,
,, 48. ಅಲ್ಲುಮಾಡ ಚಿಟ್ಟಿಯಪ್ಪನವರು,
,, 49. ಚಕ್ಕೆರ ಮಾಚಯ್ಯನವರು,
,, 50 ಕೊಡ್ಡಿಯಂಗಡ ಕುಶಾಲಪ್ಪನವರು,
,, 51. ಚೊಟ್ಟಂಗಡ ಗಣಪತಿಯವರು,
,, 52. ಚೆಟ್ಟಂಡ ನಾಣಯ್ಯನವರು,
,, 53. ಚೆಟ್ಟಂಡ ಸಂಜಪ್ಪನವರು,
,, 54. ಸೋಮೆಯಂಡ ಅಪ್ಪಯ್ಯನವರು,
,, 55. ಚೊಟ್ಟೆಕಾಳಪಂಡ ಅಪ್ಪಣ್ಣನವರು,
,, 56. ಪೆಮ್ಮಂಡ ದೇವಯ್ಯನವರು,
,, 57. ಅಜ್ಜಿಕುಟ್ಟಿರ ಸಂಜಪ್ಪನವರು,
,, 58. ತಾತಪಂಡ ಪೂವಯ್ಯನವರು,
,, 59. ಚೆಂಬ ಪಂಡ ಕುಶಾಲಪ್ಪನವರು,
,, 60 ಐಯ್ಯಮಾಡ ಬೆಳ್ಯಪ್ಪನವರು,
,, 61 ಗಣಪತಿ ನವರು,

ಸೂಚನೆ:— ಈ ದಿನ ದಸ್ತಗಿರಿಯಾದ ಮೇಲ್ಕಂಡ 61 ಜನ ಸತ್ಯಾಗ್ರಹಿಗಳನ್ನು ಸಾಯಂಕಾಲ ೬ ಗಂಟೆಗೆ ಬಿಟ್ಟಿರುತ್ತಾರೆ.

ವೀರಾಜಪೇಟೆ ಮತ್ತು ಮಡಿಕೇರಿ ಹರಾಜಿನ ಫಲಿತಾಂಶ.

ಕಳೆದ ವರ್ಷ ಒಟ್ಟು ಸೇಂದಿಯಲ್ಲಿ ಉತ್ಪತ್ತಿ	ರೂ.	61,000
ಈ ವರ್ಷ ,, ,, ,,	,,	35,000
ಕಳೆದ ವರ್ಷ ಸಾರಾಯಿಯಲ್ಲಿ ಉತ್ಪತ್ತಿ	,,	92,000
ಈ ವರ್ಷ ,, ,,	,,	57,000

ಸೋಮವಾರಪೇಟೆಯಲ್ಲಿರುವ ಸೇಂದಿ ಅಂಗಡಿಗಳು ಹರಾಜಿಗೆ ಬಾಕಿ ಇರುತ್ತೆ. ಇದರಲ್ಲಿ 10,000 ರೂ ಕಳೆದ ವರ್ಷ ಬಂತು. ಈ ವರ್ಷ ಎಷ್ಟು ಆಗುತ್ತದೋ ನೋಡಬೇಕಾಗಿದೆ.

ಈ ತಾ. 19ರಲ್ಲಿ ಸ್ವರಾಜ್ಯಕ್ಕಾಗಿ ಹೋರಾಡಿದವರಿಗೆ 5ರಿಂದ 6 ತಿಂಗಳುಗಳ ವರೆಗೆ ಜೈಲಾದವರ ಹೆಸರು

1 ಮಿ. ಕಾಳಿಮಂಗಡ ಚಿಣ್ಣಪ್ಪನವರು
2. ,, ಅಜ್ಜಿಕುಟ್ಟಿರ ಚಿಂಣಪ್ಪನವರು,
3 ,, ಪೊನ್ನಿಮಾಡ ಮಾಚಯ್ಯನವರು,
4 ,, ಅಜ್ಜಿಕುಟ್ಟಿರ ತಮ್ಮಯ್ಯನವರು
5. ,, ಚಕ್ಕೆರ ಪೊನ್ನಯ್ಯನವರು
6 ,, ಅರೇಮಾಡ ಅಪ್ಪಣ್ಣನವರು,
7. ,, ಕಣೇಮಾಡ ಸಂಜಪ್ಪನವರು,
8 ,, ತೀತಮಾಡ ಭೀಮಯ್ಯನವರು,
9. ,, ಕಣೇಮಾಡ ಐಯ್ಯಣ್ಣನವರು,
10 ,, ನಣ್ಣುವಂಡ ಸಂಜಪ್ಪನವರು,
11 ,, ಮಾಚಿಮಾಡ ಕುಶಾಲಪ್ಪನವರು,
12. ,, ಕಣೇಮಾಡ ಮೇದಪ್ಪನವರು.

ಸತ್ಯಾಗ್ರಹ ಚಳವಳದ ವರ್ತಮಾನ.

ಕುಂಜಿಲಗೇರಿ.

ಕಳೆದ ತಾರೀಕು 14 ರಲ್ಲಿ ಕುಂಜಿಲಗೇರಿ ಬೆಳ್ಳುಮಾಡು ಗ್ರಾಮಸ್ಥರ ಮೀಟಿಂಗ್ ನಡೆಯಿತು. ಮೆ. ಗಳಾದ ಐ. ಪಿ. ಕಾರ್ಯಪ್ಪನವರು, ಬಿದ್ದಂಡ ಸುಬ್ಬಯ್ಯನವರು, ಕಾಳತಂಡ ಗಣಪ್ಪಯ್ಯನವರು ಮತ್ತು ನಾಯಡ ಬೆಳ್ಯಪ್ಪನವರು ಈಗಿನ ಚಳವಳ ಕುರಿತು ಮತ್ತು ಸೇಂದಿ, ಸಾರಾಯಿ, ಖಾದಿ ಪ್ರಚಾರದ ವಿಷಯ ಮಾತಾಡಿದರು. ಅಲ್ಲದೆ ಗ್ರಾಮಸ್ಥರೆಲ್ಲರೂ ಇನ್ನು ಮುಂದಕ್ಕೆ ಸೇಂದಿ ಇಳಿಸಲಿಕ್ಕೆ ಕೊಡುವುದಿಲ್ಲವಾಗಿ ಪ್ರತಿಜ್ಞೆ ಮಾಡಿದರು. ಮೀಟಿಂಗಿಗೆ ಮುನ್ನೂರು ಜನರಿಗಿಂತ ಹೆಚ್ಚಾಗಿ ಜನರು ಕೂಡಿದ್ದರು.

ಪೇರೂರು

ಶ್ರೀಮಂಗಲ ನಾಡಿನ ಪೇರ್ಮಾಡು ದೇವಸ್ಥಾನದಲ್ಲಿ ಸಾಯಂಕಾಲ ಮೂರು ಗಂಟೆಗೆ ಪ್ರಚಾರ ಮೀಟಿಂಗ್ ನಡೆಯಿತು. ಸತ್ಯಾಗ್ರಹಿಗಳ ಮೆರವಣಿಗೆಯು ಜನರ ಸಮೇತ ದೇವಸ್ಥಾನಕ್ಕೆ ಬಂತು. ಸಾವಿರಕ್ಕಿಂತ ಹೆಚ್ಚಾಗಿ ಜನರು ನೆರೆದಿದ್ದರು. ಈಗಿನ ಚಳವಳ ಕುರಿತು ಶ್ರೀಮತಿ ಸಿ. ಸಿ. ಅಕ್ಕಮ್ಮನವರೂ, ಅಜ್ಜಮಾಡ ಮಾದಪ್ಪನವರೂ, ಮೆ. ಪುಟ್ಟಿಚಂಡ ಪೊಣ್ಣಪ್ಪನವರೂ ಮಾತಾಡಿದರು. ಜನರು ಬಹಳ ಉತ್ಸಾಹದಿಂದ ಕೇಳಿದ್ದಲ್ಲದೆ ಚಳವಳಕ್ಕೆ ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದರು.

ಇರುವು

ಸತ್ಯಾಗ್ರಹಿಗಳ ಮತ್ತು ಪಬ್ಲಿಕ್ ಜನರ ದೊಡ್ಡ ಮೆರವಣಿಗೆಯು ನಡೆದು ಮಹಾಸಭೆಯು ನಡೆಯಿತು. ಜನರ ಉತ್ಸಾಹವೂ ಪ್ರೇಕ್ಷಕರಿಗೆ ಆನಂದವನ್ನುಂಟು ಮಾಡುತ್ತಿತ್ತು. ಮೀಟಿಂಗಿಗೆ ಬಾಳ್ಯಗ ಬಂದ ಜನರೆಲ್ಲರೂ ದಯಮಾಡಿಸಿದ್ದರು. ಮಹಾಸಂಖ್ಯೆಯಲ್ಲಿ ಸಾರ್ವಜನಿಕರು ನೆರೆದಿದ್ದರು. ಶ್ರೀಮತಿ ಕೆ. ಸಿ. ಅಕ್ಕಮ್ಮನವರೂ, ಮೆ. ಗಳಾದ ಅಜ್ಜಮಾಡ ಮಾದಪ್ಪನವರೂ, ಪುಟ್ಟಿಚಂಡ ಪೊಣ್ಣಪ್ಪನವರೂ, ಕೊಳ್ಳಿಮಾಡ ಐಯ್ಯಮ್ಮನವರೂ, ಈಗಿನ ಚಳವಳ ಕುರಿತು ಮಾತಾಡಿದರು. ಸಭಿಕರೆಲ್ಲರೂ ನಿಶಾ ನಿಷೇಧಕ್ಕೂ, ಖಾದಿ ಪ್ರಚಾರಕ್ಕೂ ಉತ್ತೇಜನ ಕೊಡುವುದಾಗಿ ವಾಗ್ದಾನ ಮಾಡಿದರು.

ಪಾರಾಣೆ

ಪಾರಾಣೆಯಲ್ಲಿ ಕಳೆದ ತಾ. 16ರಲ್ಲಿ ದೊಡ್ಡ ಮೀಟಿಂಗು ನಡೆಯಿತು. ಈಗಿನ ಚಳವಳವನ್ನು ಕುರಿತು ಸ್ವಾರಸ್ಯವಾಗಿ ಮೆ. ಗಳಾದ ಬಿದ್ದಂಡ ಬೋಪಯ್ಯನವರೂ, ಸುಬ್ಬಯ್ಯನವರೂ, ನಾಯಡ ಬೆಳ್ಯಪ್ಪನವರೂ ಮತ್ತು ಐ. ಪಿ. ಕಾರ್ಯಪ್ಪನವರೂ ಮಾತಾಡಿದರು. ಜನರು ಉತ್ಸಾಹಭರಿತರಾಗಿದ್ದಲ್ಲದೆ ಚಳವಳಕ್ಕೆ ಉತ್ತೇಜನ ಮಾಡುವುದಾಗಿ ವಾಗ್ದಾನ ಕೊಟ್ಟರು.

ಸೋಮವಾರಪೇಟೆ.

ಸತ್ಯಾಗ್ರಹಿಗಳ ಪೈಕಿ ಮೆ. ಮನೆಯಪಂಡ ಮಾದಪ್ಪನವರು ಮತ್ತು ಕೆಲವರು ಗ್ರಾಮಗಳಲ್ಲಿ ನುಗ್ಗಿ ಪ್ರಚಾರ ಕೆಲಸವನ್ನು ಬಹಳ ಬಿರುಸಾಗಿ ನಡೆಸಿದ್ದಾರೆ. ಅಲ್ಲದೆ ಅನೇಕ ಮೀಟಿಂಗುಗಳನ್ನು ನಡೆಸಿದ್ದಾರೆ.

ಶ್ರೀಮಂಗಲ

ಸತ್ಯಾಗ್ರಹಿಗಳ ಪೈಕಿ ಮೆ. ಕೊಳ್ಳಿಮಾಡ ಐಯ್ಯಮ್ಮನವರ ಸಂಗಡವೊಂದು ಶ್ರೀಮಂಗಲ ಪ್ರಾಂತ್ಯದಲ್ಲಿ ಪ್ರಚಾರ ಕೆಲಸ ಮಾಡಿದ್ದಲ್ಲದೆ ಸಭೆಗಳನ್ನು ನಡೆಸಿದರು. ಬಹಳ ಜನರ ಸಹಾನುಭೂತಿಯಿಂದ ಕಳುಹಿಸಿದರು.

ವೀರಾಜಪೇಟೆ

ತಾ 18ರಲ್ಲಿ ವೀರಾಜಪೇಟೆಯಲ್ಲಿ ದಕ್ಷಿಣ ಕೊಡಗಿನ ಸೇಂದಿ ಅಂಗಡಿಗಳ ಹರಾಜು ನಡೆಯಿತು. ದಕ್ಷಿಣ ಕೊಡಗಿನ ಎಲ್ಲಾ ಸತ್ಯಾಗ್ರಹಿಗಳೂ ಸೇರಿ 84 ಜನರು ಬೆಳಿಗ್ಗೆ ನಗರ ಸಂಕೀರ್ತನೆಯೂ, ಮಧ್ಯಾಹ್ನ 12 ಗಂಟೆಗೆ ಸುಮಾರು ಎರಡು ಸಾವಿರ ಜನರ ಭಾರಿ ಮೀಟಿಂಗೂ, ಮೆರವಣಿಗೆಯೂ ನಡೆಯಿತು. ಕೂಡಲೇ ಸತ್ಯಾಗ್ರಹಿಗಳು ಮೆರವಣಿಗೆಯಿಂದ ಹೊರಟು ಹರಾಜು ಸ್ಥಳಕ್ಕೆ ತಲುಪಿದರು. ಸತ್ಯಾಗ್ರಹಿಗಳು ಕೈಯಲ್ಲಿ ನಿಶಾ ನಿಷೇಧಿಸುವ ವಿಷಯದಲ್ಲಿ ತಯಾರಿಸಿದ ಬೋರ್ಡುಗಳೊಡನೆ ಹರಾಜು ಸ್ಥಳದಲ್ಲಿ ಕೂಡಿ ಪಿಕೆಟಿಂಗ್ ನಡೆಸಿದರು. ದಕ್ಷಿಣ ಕೊಡಗಿನ ಸೇಂದಿ ಅಂಗಡಿಗಳು ಕಳೆದ ವರ್ಷ 33,000 ರೂಪಾಯಿಗೆ ಹರಾಜಾಗಿದ್ದು ಈ ವರ್ಷ ಬರೀ 1 ... ರೂಪಾಯಿಗೆ ಮಾತ್ರ ಹರಾಜಾದವು. ಶ್ರೀಮಂಗಲ ಅಂಗಡಿಯನ್ನು ಯಾರೂ ಕೂಗಲಿಲ್ಲ. ಆದರಾಕೆಯೇ ಕಿಗ್ಗಟ್ಟು ನಾಡಿನ ಅಂಗಡಿಗಳು ಕೇವಲ ಕಪ್ಪು ಜಡದಂತಾಗಿ ಹೋಯಿತು.

ಮಾನಾರ್ಪಡು.

ತಾ 19ರಲ್ಲಿ ವೀರಾಜಪೇಟೆಯಿಂದ ಮಾನಾರ್ಪಡಿಗಾಗಿ ಮಡಿಕೇರಿಗೆ 45 ಸತ್ಯಾಗ್ರಹಿಗಳು ಅಲ್ಲಿಯಿಂದ ಜಯಘೋಷ ಮಾಡುತ್ತಾ ಹೊರಟು ಮಾನಾರ್ಪಡಿನಲ್ಲಿ ದೊಡ್ಡ ಮೀಟಿಂಗು ಮಧ್ಯಾಹ್ನ ನಡೆಸಿದರು. ಮೀಟಿಂಗಿನಲ್ಲಿ ಶ್ರೀಮತಿ ಕೆ. ಸಿ. ಅಕ್ಕಮ್ಮನವರೂ, ಮೆ. ಅಜ್ಜಮಾಡ ಮಾದಪ್ಪನವರೂ, ಮೆ. ಸೋಮೆಯಂಡ ಅಪ್ಪಯ್ಯನವರೂ, ಬಿದರೂರು ಪೂವಯ್ಯನವರೂ ಈಗಿನ ಚಳವಳ ಕುರಿತು ಮಾತಾಡಿದರು.

ವರ್ತಮಾನ ಸಂಗ್ರಹ.

ಒಳದೇಶ.

ಸುಂಟಿಕೊಪ್ಪಲು ಕಡೆ ದನಗಳಿಗೆ ದೊಡ್ಡ ರೋಗ ತಲೆದೋರಿದೆ ಎಂದು ತಿಳಿಯುತ್ತೇವೆ.

ಸಹಕಾರ ಸಂಘಗಳ ತನಿಖೆಗಾಗಿ ಮದ್ರಾಸಿಗೆ ಹೋಗಿದ್ದ ಕೋಆಪರೇಟಿವ್ ಇನ್‌ಸ್ಪೆಕ್ಟರುಗಳಿಬ್ಬರು ತರಬೇತಿ ತೀರಿಸಿ ಹಿಂದಕ್ಕೆ ಬಂದಿರುತ್ತಾರೆ.

ಕೊಡಗು ಸತ್ಯಾಗ್ರಹ ಮಂಡಳಿಯವರು ಕಳೆದ ವಾರ ಕುಂಜಿಲಗೇರಿ, ಪಾರಾಣೆ, ಪೈತಾಡಿ, ಹೆರ್ಮಾಡು, ಇರುವು, ಸೋಮವಾರಪೇಟೆ ವೀರಾಜಪೇಟೆ, ಮಾನಾರ್ಪಡು, ಮತ್ತು ಮಡಿಕೇರಿಯಲ್ಲಿ ಪ್ರಚಾರ ಮೀಟಿಂಗು ಮಾಡಿರುತ್ತಾರೆ.

ತಾರೀಕು 19 ರಲ್ಲಿ ವೀರಾಜಪೇಟೆ ಸಬ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಗೋಣಿಕೊಪ್ಪಲಲ್ಲಿ ಸಾರಾಯಿ ಕುಡಿಯಲಿಕ್ಕೆ ಹೋಗುತ್ತಿದ್ದವರನ್ನು ತಡೆದರೆಂಬ ಅಪರಾಧದ ಮೇಲೆ ಈ ಮೊದಲೇ ದಸ್ತಗಿರಿಯಾಗಿದ್ದ ಹನ್ನೊಂದು ಜನ ಸತ್ಯಾಗ್ರಹಿಗಳ ವಿಚಾರಣೆಯು ನಡೆದು ತಾ. 19ರಲ್ಲಿ ಐದರಿಂದ ಆರು ತಿಂಗಳ ವರೆಗೆ ಸಜೆಯಾಗಿದೆ.

ಕಳೆದ ತಾರೀಕು 19 ರಲ್ಲಿ ದಕ್ಷಿಣ ಕೊಡಗಿನ ಸೇಂದಿ ಅಂಗಡಿಗಳು ವೀರಾಜಪೇಟೆಯಲ್ಲಿ ಕೊಡಗು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಂದ ಹರಾಜು ಮಾಡಲ್ಪಟ್ಟು ಕಳೆದ ವರ್ಷಕ್ಕಿಂತ ಸುಮಾರು ಇಪ್ಪತ್ತು ಸಾವಿರ ರೂಪಾಯಿ ಕಡಿಮೆ ಹರಾಜಿಗೆ ಹೋಯಿತೆಂದು ತಿಳಿಯುತ್ತೇವೆ.

ಕೊಡಗು ನ್ಯಾಯವಿಧಾಯಕ ಸಭೆಯು ಮೀಟಿಂಗೆಂದು ಬರುವ ಮಾರ್ಚ್ ತಿಂಗಳ 13ನೇ ತಾರೀಕಿನಲ್ಲಿ ಆಗುತ್ತದೆಂಬುದಾಗಿ ಗಜೆಟಿನಲ್ಲಿ ಪ್ರಕಟಣೆಯಾಗಿದೆ. ಅದೇ ದಿನ ಬಜೆಟ್ಟಿನ ಮೇಲಿನ ಸಾಮಾನ್ಯ ಭಾಷಣವೂ, ತಾ. 14 ಮತ್ತು 16 ರಲ್ಲಿ ಬಜೆಟ್ಟಿನ ವಿವಿಧ ವಿಷಯಗಳಲ್ಲಿ ಚರ್ಚೆಯೂ ನಡೆಯುತ್ತೆ. ಅಲ್ಲದೆ ಮಾರ್ಚ್ 7 ರೊಳಗೆ ಠರಾವುಗಳನ್ನು ಕಳುಹಿಸಬೇಕೆಂದೂ ಸಹ ಪ್ರಕಟಣೆಯಾಗಿದೆ.

ಫೆಡರೇಶನ್ನಿನ ಕಳೆದ ತಾರೀಕು 7–2–31 ರ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗಿನಲ್ಲಿ ಯೆಡೆನಾಲ್ಕು ನಾಡು ಯೂನಿಯನ್ ಸರಿಯಾಗಿ ಕೆಲಸ ಮಾಡುವುದಿಲ್ಲವೆಂಬುದಾಗಿ ನಮೂದಿದೆ. ಇದಕ್ಕೆ ಬದಲು ಅಮ್ಮತ್ತಿ, ಕಡಿಯತ್ತನಾಡು ಮುತ್ತು ಯೆಡೆನಾಲ್ಕುನಾಡು ಯೂನಿಯನ್ ಎಂದು ಓದಿಕೊಳ್ಳತಕ್ಕದೆಂದೂ ಈ ಯೂನಿಯನ್‌ಗಳ ಕೆಲಸವು ಕಳೆದ ಜೂನ್ ಅಂತ್ಯದ ವರೆಗೆ ಮಾತ್ರ ಸರಿ ಇರಲಿಲ್ಲವೆಂದೂ ಫೆಡರೇಶನಿನವರು ತಿಳಿಸಿರುತ್ತಾರೆ.

ಸತ್ಯಾಗ್ರಹಿಗಳು ಒಂದೆರಡು ವಾರಗಳಿಂದ ರಿಮಾಂಡಿನಲ್ಲಿದ್ದು ಮೇಜಿಸ್ಟ್ರೇಟರ ಮುಂದೆ ಹಾಜರ್ಮಾಡಲ್ಪಟ್ಟರು. ಪೋಲೀಸು ಕಡೆ ವಿಚಾರವು ಸಾಕ್ಷಿಯರ ಕ್ರೋಸ್ ಏನೂ ಪ್ರತಿಬಂಧವಿಲ್ಲದೆ ನಡೆಯಿತು. ಸತ್ಯಾಗ್ರಹಿಗಳು ವಿಚಾರದಲ್ಲಿ ಭಾಗ ತೆಗೆದುಕೊಳ್ಳಲಿಲ್ಲ. ಬ್ರಿಟಿಷ್ ನ್ಯಾಯಕೋರ್ಟುಗಳಲ್ಲಿ ವಿಶ್ವಾಸವಿಲ್ಲದಿರುವುದರಿಂದ ವಿಚಾರದಲ್ಲಿ ಯಾವ ಭಾಗ ತೆಗೆದುಕೊಳ್ಳುವುದಿಲ್ಲವಾಗಿ ಹೇಳಿದರು. ಮೇಜಿಸ್ಟ್ರೇಟರು ಎರಡು ಮೂರು ಚಾರ್ಜುಗಳನ್ನು ಹೇಳಿ ಒಟ್ಟಾರೆ ಐದರಿಂದ ಆರು ತಿಂಗಳ ವರೆಗೆ ಸಜೆ ಮಾಡಿದರೆಂದು ತಿಳಿಯುತ್ತೇವೆ.

ವೀರರಾಜಪೇಟೆ ಹೈಸ್ಕೂಲಿನ ವಾರ್ಷಿಕೋತ್ಸವವು ಈ ದಿನ ಆಗುವುದೆಂದೂ, ಈ ಸಮಾರಂಭದಲ್ಲಿ ಮೈಸೂರಿನ ಕಾಲೇಜಿನಲ್ಲಿ ಪ್ರೊಫೆಸರಾದ ಡಾಕ್ಟರ್ ಬಿ. ಎನ್. ಜೇಕೋಬ ಎಂ. ಎ. ಪಿ. ಹೆಚ್. ಡಿ. ಯವರು ಅಧ್ಯಕ್ಷರಾಗಿರುವರೆಂದೂ ಬೆಳಿಗ್ಗೆ 8–30 ರಿಂದ 12 ಗಂಟೆಯ ವರೆಗೆ ಸ್ಪೋರ್ಟ್ಸ್ ಸಾಯಂಕಾಲ 3ರಿಂದ 3. 5 ಗಂಟೆಯ ವರೆಗೆ ಪ್ರಾರ್ಥನೆ. 3. 5ರಿಂದ 3. 20ರ ವರೆಗೆ ಶಾಲಾ ರಿಪೋರ್ಟು ಓದುವುದು 3. 20ರಿಂದ 3. 30 ರ ವರೆಗೆ ಡಿಬೇಟಿಂಗ್ ಸೊಸೈಟಿಯ ರಿಪೋರ್ಟು ಓದುವುದು, 3. 30ರಿಂದ 4ರ ವರೆಗೆ ಇನಾಮುಗಳನ್ನು ಹಂಚುವುದು, 4ರಿಂದ 4. 30 ರ ವರೆಗೆ ಅಧ್ಯಕ್ಷರ ಭಾಷಣ, 4. 30 ರಿಂದ 6 ಗಂಟೆಯ ವರೆಗೆ ಇಂಗ್ಲಿಷ್ ನಾಟಕ 6 ಗಂಟೆಯಿಂದ 7–30 ರ ವರೆಗೆ ಕನ್ನಡ ನಾಟಕ (ಚಂದ್ರಹಾಸ) 7–30 ರಿಂದ 7–35 ರ ವರೆಗೆ ನಾಟಕದ ಒಳ್ಳೆ ಅಭಿನಯಕಾರರಿಗೆ ಇನಾಮು ಕೊಡುವುದು 7–35 ರಿಂದ 7–45 ರ ವರೆಗೆ ಅಧ್ಯಕ್ಷರಿಗೆ ವಂದನೆ ಸಮರ್ಪಿಸಲಾಗುವುದೆಂದೂ ವೀರರಾಜಪೇಟೆಯ ಹೆಡ್‌ಮಾಸ್ಟರು ಮತ್ತು ಸ್ಟಾಫ್ ತಿಳಿಸಿರುತ್ತಾರೆ.

ಹಿಂದೂದೇಶ.

ಸೂರತ್ತಿನ ಹಿಂದೂ ಪತ್ರಿಕೆಯಿಂದ 2,000 ರೂ. ಸೆಕ್ಯೂರಿಟಿಯನ್ನು ಸರಕಾರದರು ಕೇಳಿರುತ್ತಾರೆ.

ಕೇರಳ ಪ್ರಾಂತ್ಯದಲ್ಲಿ ಈ ವರೆಗೆ 525 ಜನರು ಕಾಂಗ್ರೆಸ್ ಚಳವಳಿಕ್ಕಾಗಿ ಶಿಕ್ಷಿಸಲ್ಪಟ್ಟಿರುವರು.

ಬೊಂಬಾಯಿ ಮತ್ತು ಸೂರತಿನಲ್ಲಿ ಪುನಃ ಉಪ್ಪಿನ ಕಾಯಿದೆ ಭಂಗವು ಸುರುವಾಗಿ ಅನೇಕರು ದಸ್ತಗಿರಿ ಮಾಡಲ್ಪಟ್ಟಿರುವರು.

ಸೆಕ್ಷನ್ 144 ನ್ನು ವಿರೋಧಿಸಿದ್ದಕ್ಕಾಗಿ ಪಶ್ಚಿಮ ಗೋದಾವರಿಯ ಎರಡು ಸ್ತ್ರೀಯರಿಗೆ ನಾಲ್ಕು ನಾಲ್ಕು ತಿಂಗಳ ಸಾದಾ ಸಜೆಯಾಗಿದೆ.

ಅಸೆಂಬ್ಲಿ ಅಧ್ಯಕ್ಷರಾದ ವಿಠಲಭಾಯಿ ಪಟೇಲರು ಯ ರೋಪಿನ ವಿಯನ್ನಾ ನಗರಕ್ಕೆ ಚಿಕಿತ್ಸೆಗಾಗಿ ಈ ತಾರೀಕು 24 ರಲ್ಲಿ ಬೊಂಬಾಯಿಯಿಂದ ಹೊರಡುವರು.

ಆಂಧ್ರದೇಶದ ಲೀಡರಾಗಿರುವ ಶ್ರೀ ಕೊಂಡವೆಂಕಟಪ್ಪಯ್ಯನವರನ್ನು ಕಳೆದ ತಾರೀಕು 17 ರಲ್ಲಿ ಕಣ್ಣಾನೂರು ಜೈಲಿನಿಂದ ಬಿಡುಗಡೆ ಮಾಡಿರುವರು.

ಹಿಂದೂಸ್ಥಾನ ಸರಕಾರವು ಈಗಾಗಲೇ ಇಪ್ಪತ್ತು ಮೂರು ಕೋಟಿ ಎಂಭತ್ತು ಲಕ್ಷ ರೂಪಾಯಿ ಸಾಲಗಳನ್ನು ತೆಗೆಯಲು ಏರ್ಪಾಡು ಮಾಡಿದ್ದಾರೆ.

ಇಂಡಿಯಾದ ರೈಲ್ವೆ ಬಜೆಟ್ಟಿನಲ್ಲಿ ಈ ವರ್ಷಕ್ಕೆ ಐದು ಕೋಟಿ ಹನ್ನೆರಡು ಲಕ್ಷ ರೂಪಾಯಿ ಕಡಿಮೆಯಾಗಿದೆಯೆಂದು ಅಸೆಂಬ್ಲಿಯಲ್ಲಿ ರೈಲ್ವೆ ಮೆಂಬರು ತಿಳಿಸಿರುತ್ತಾರೆ.

ನೇಪಾಳ ದೇಶದ ಒಂದು ಮನೆಯಲ್ಲಿ ಹತ್ತು ಜನರನ್ನು ರಾತ್ರಿ ಯಾರೋ ಸುಗ್ಗಿ ಕೊಂದು, ಬಟ್ಟೆ ಮನೆಯನ್ನು ಲೂಟಿ ಮಾಡಿರುತ್ತಾರೆ. ಲೂಟಿಯಾದ ನಂತರ ಮನೆಗೆ ಬೆಂಕಿ ಕೊಟ್ಟಿದ್ದಾರೆ.

ಕಾಂಗ್ರೆಸ್ ಬಹಿಷ್ಕಾರ ಚಳವಳಿಯ ಪರಿಣಾಮದಿಂದ ಕಳೆದ ಸಂವತ್ಸರದಲ್ಲಿ ಶೇಕಡ 48 ರಷ್ಟು ಪರದೇಶೀ ಬಟ್ಟೆ ಹಿಂದೂದೇಶಕ್ಕೆ ಬಂದದ್ದು ಕಡಿಮೆಯಾಗಿದೆಯೆಂದು ಬೊಂಬಾಯಿ ವರ್ತಕರ ಸಂಘದಿಂದ ತಿಳಿಯುತ್ತೇವೆ.

ರಾಯಲ್ ಸರ್ಕಸ್ಸಿನವರು ಕಲಕತ್ತೆಯಲ್ಲಿ ಆಟವಾಡುತ್ತಿದ್ದಾಗ ಅರವತ್ತು ಅಡಿ ಅಂತರದ ಮೋಟಾರು ನೆಗೆದಾಟವನ್ನು ಪ್ರದರ್ಶಿಸುತ್ತಿದ್ದ ಜ್ಯೋತಿಷ್ ಚಂದ್ರ ಮುಕರ್ಜಿ ಎಂಬಾತನು ಆಕಸ್ಮಿಕ ಮೋಟಾರಿನಿಂದ ಬಿದ್ದು ಪ್ರಾಣ ಕಳಕೊಂಡನು.

ಅಮೃತಸರದ ಸೋಹನಲಾಲ ಎಂಬ ವಿದೇಶೀ ಜವುಳಿ ವ್ಯಾಪಾರಿಯು ರಾತ್ರಿ ತನ್ನ ಮನೆಗೆ ಹೋಗುತ್ತಿದ್ದಾಗ ಸೈಕಲಿನಲ್ಲಿ ಹೋಗುತ್ತಿದ್ದ ಯುವಕನೊಬ್ಬನು ಪಿಸ್ತೋಲಿನಿಂದ ಗುಂಡು ಹಾರಿಸಿ ಗಾಯಪಡಿಸಿರುವನು. ಯುವಕನು ಪತ್ತೆಯಾಗಿರುವುದಿಲ್ಲ.

ದಿವಂಗತ ಪಂಡಿತ ಮೋತಿಲಾಲರು ದಾನವಾಗಿ ಕೊಟ್ಟ ಸ್ವರಾಜ್ಯ ಭವನಕ್ಕೆ ಟ್ರಸ್ಟಿಗಳಾಗಿ ಪಂಡಿತ ಜವಾಹಿರಲಾಲ, ಸಿ. ರಾಜಗೋಪಾಲಚಾರ್ಯ, ಡಾಕ್ಟರ್ ಅನ್ಸಾರಿ, ಸೇನಗುಪ್ತ ಬಜಾಜರನ್ನು ಮಹಾತ್ಮ ಗಾಂಧಿಯವರು ನೇಮಿಸಿದ್ದಾರೆ.

ಇಂಗ್ಲೆಂಡಿನ ಲೇಬರ್ ಪಾರ್ಟಿಯ ಪತ್ರಿಕೆಯಾದ ಡೇಲಿ ಹೆರಾಲ್ಡ್, ಮಹಾತ್ಮ ಗಾಂಧಿಯವರಿಗೂ, ವೈಸರಾಯರಿಗೂ ಹೇಗಾದರೂ ಮಾಡಿ ರಾಜಿಯಾಗ ಬೇಕೆಂದು ಅಪ್ಪೀಲು ಮಾಡಿದ್ದಾರೆ. ರಾಜಿಯಾಗದಿದ್ದರೆ ನಿಮ್ಮಿಬ್ಬರಿಂದಲೇ ಎಲ್ಲಾ ಕಡಕು ಆಗಬಹುದೆಂದು ಅಪ್ಪೀಲು ಮಾಡಿದ್ದಾರೆ.

ಮಲಬಾರಿಗೆ ಸೇರಿದ ಕಿಬ್ಬಾನಿಂಗು ಎಂಬಲ್ಲಿ ನಿದ್ದೆಮಾಡುತ್ತಿದ್ದ ಐದು ವರ್ಷದ ಒಂದು ಹುಡುಗಿಯನ್ನು ಒಂದು ಹುಲಿಯು ಎತ್ತಿಕೊಂಡು ಹೋಯಿತು. ಹುಲಿಯು ಮಗುವನ್ನು ಕಾಡಿನ ಮಧ್ಯದಲ್ಲಿ ಹಾಕಿತ್ತು. ಹುಡುಗಿಯನ್ನು ಹುಡುಕಿ ಸಿಕ್ಕಿದ ಮೇಲೆ ಆಸ್ಪತ್ರೆಗೆ ತಂದರು. ಕೂಡಲೇ ಹುಡುಗಿಯು ಮೃತಪಟ್ಟಳು.

ಸೂರತ್ತಿನ ವಾನರಸೇನ (ಚಿಕ್ಕ ಮಕ್ಕಳ ಸ್ವಯಂಸೇವಕರು) ವಿದೇಶೀ ಜವುಳಿಯನ್ನು ಮಾರತಕ್ಕದ್ದಾಗಿಯೂ ಏಳು ದಿನಗಳೊಳಗೆ ಅದನ್ನು ಮೂಟೆ ಕಟ್ಟಬೇಕಾಗಿಯೂ ವ್ಯಾಪಾರಸ್ಥರಿಗೆ ನೋಟೀಸು ಕೊಟ್ಟರು. ವ್ಯಾಪಾರಸ್ಥರು ಪರ್ವ ಮಾಡಲಿಲ್ಲ. ಕೂಡಲೇ 400 ಮಕ್ಕಳ ಸೈನ್ಯವು ಹೊರಟು ಅಂಗಡಿಗಳ ಮುಂದೆ ಉಪವಾಸ ಕೈಕೊಂಡರು. ಮೂವತ್ತು ಸಾಹುಕಾರರು ಆ ಮಕ್ಕಳ ಕೋರಿಕೆಯನ್ನು ನೆರವೇರಿಸಿ ಜವುಳಿಯನ್ನು ಮೂಟೆ ಕಟ್ಟಿಟ್ಟರು.

ಭಾಗತ್‌ಸಿಂಗ್ ಮತ್ತು ಇನ್ನಿಬ್ಬರು ಪ್ರೀವಿ ಕೌನ್ಸಿಲಿನಲ್ಲಿ ಫೈಲ್ ಮಾಡಿದ ಮೊಕದ್ದಮೆಯು ಡಿಸ್‌ಮಿಸಾಗಿದೆ. ಅವರ ಮೇಲೆ ಮರಣ ದಂಡನೆಯು ಖಾಯಮ್ ಆಗಿದೆ. ಇವರನ್ನುಳಿಸಿ ಜನ್ಮಾಂತರ ಸಜ ಮಾಡಬೇಕೆಂದು ಹಿಂದೀ ಮುಖಂಡರು ಸರಕಾರವನ್ನು ಕೇಳಿಕೊಂಡಿರುವರು. ಪಂಡಿತ ಮದನಮೋಹನ ಮಾಳವೀಯರು ಪ್ರತ್ಯೇಕವಾಗಿ ಒಂದು ಅಪ್ಪೀಲನ್ನು ವೈಸರಾಯರಿಗೆ ಬರೆದಿರುವರು. ಕಳೆದ ಉಪವಾರ ಇವರುಗಳನ್ನು ತೂಗ ಹಾಕಿದರೆಂಬ ವರ್ತಮಾನವು ಹೇಗೋ ಹಬ್ಬಿ ಲಾಹೋರಿನಲ್ಲಿ ಗಲಭೆ ಹುಟ್ಟಿದೆ.

ಮುಸಲ್ಮಾನ ಪಂಗಡದ ಲೀಡರಾದ ಬೊಂಬಾಯಿಯ ಪ್ರಖ್ಯಾತ ಲಾಯರಾದ ಈಗ ಇಂಗ್ಲೆಂಡಿನಲ್ಲಿರುವ ಮಿ ಜಿನ್ನಾರವರು ಬ್ರಿಟಿಷ್ ಜನರಿಗೆ ಎಚ್ಚರಿಕೆ ಕೊಟ್ಟಿರುವರು. ಏನೆಂದರೆ, ಬಹು ಜನ ಭಾರತ ಪುತ್ರರು ಗುಲಾಮಗಿರಿಯನ್ನು ತಪ್ಪಿಸಲು ಪ್ರಾಣವನ್ನು ಕೊಟ್ಟಿರುವರು. ಕೋಟ್ಯಾಂತರ ಜನರು ಪ್ರಾಣಗಳನ್ನು ಕೊಡಲಿಕ್ಕೆ ಸಿದ್ಧರಿದ್ದಾರೆ. ಮೋತಿಲಾಲರಂತವರು ಇದಕೋಸ್ಕರ ಪ್ರಾಣ ಕೊಟ್ಟಿರುವಾಗ ನಮ್ಮದೇನು ಹೆಚ್ಚು. ಕೆಟ್ಟ ಮೇಲೆ ಬುದ್ಧಿ ಬರುವುದು. ಆದ್ದರಿಂದ ಬ್ರಿಟಿಷರವರು ಒಡನೇ ಇಂಡಿಯಾಕ್ಕೆ ಸ್ವರಾಜ್ಯ ಕೊಡುವುದು ಒಳ್ಳೇದು ಎಂಬುದಾಗಿ ಹೇಳಿರುವರು.

ಮದ್ರಾಸಿನಲ್ಲಿ ಪಿಕೆಟಿಂಗ್ ಕೆಲವು ಬೀದಿಗಳಲ್ಲಿ ಜೋರಾಗಿ ನಡೆಯುತ್ತಲಿದೆ. ಸತ್ಯಾಗ್ರಹಿಗಳು ಪಿಕೆಟಿಂಗಿಗೆ ನಿಂತ ಕೂಡಲೇ ಪೋಲೀಸರ ಲಾಠೀ ಪ್ರಹಾರವಾಗುತ್ತೆ. ಪ್ರಹಾರದಿಂದ ಬೀಳಿಸಿದನಂತರ ಕಾನ್‌ಸ್ಟೇಬಲುಗಳು ನಾಯಿಗಳನ್ನು ಎಳಕೊಂಡು ಹೋಗುವ ರೀತಿ ಎಳಕೊಂಡು ಒಂದು ಬೀದಿಯ ಮೂಲೆಗೆ ಹಾಕುತ್ತಾರೆ. ಈ ನೋಟವು ಮನ ಕರಗುವಂತಾವುಗಳಾಗಿರುತ್ತೆ. ಪೋಲೀಸಿನವರ ಈ ಕೃತ್ಯಕ್ಕೆ ವಿರೋಧಿಸಿ ಮದ್ರಾಸಿನ ಪಟ್ಟೆ ವ್ಯಾಪಾರಿಗಳು ಅಂಗಡಿಯವರು 8 ದಿನಗಳ ವರೆಗೆ ಅಂಗಡಿಯನ್ನು ಮುಚ್ಚುವಂತೆ ಏರ್ಪಾಡು ಮಾಡಿರುವರು. ಡಾಕ್ಟರ್ ಯು. ರಾಮರಾಯರ ಮುಂದಾಳುತನದಲ್ಲಿ ಲಾಠಿ ಪೆಟ್ಟಿನಿಂದ ನರಳುವವರನ್ನು ಚಿಕಿತ್ಸೆ ಮಾಡಲಿಕ್ಕಾಗಿ ಒಂದು ಆಸ್ಪತ್ರೆಯನ್ನು ತೆರೆದಿರುವರು. ಇದಕ್ಕೆ ಅನೇಕ ಮಹನೀಯರು ಸಾವಿರಾರು ರೂಪಾಯಿಗಳ ಧನ ಸಹಾಯ ಮಾಡಿರುತ್ತಾರೆ.

ಮಹಾತ್ಮ ಗಾಂಧಿಯವರು ಕಳೆದ ತಾರೀಕು 17 ರಲ್ಲಿ ಡೆಲ್ಲಿಗೆ ಹೋಗಿ ವೈಸರಾಯರ ಭೇಟಿಮಾಡಿದ್ದಾರೆ. ಸಾಯಂಕಾಲ 2½ ಗಂಟೆಗಿಂದ ಆರು ಗಂಟೆ ಹತ್ತು ನಿಮಿಷದ ವರೆಗೆ ಗಾಂಧಿಯವರೂ, ವೈಸರಾಯರೂ, ಮಾತಾಡಿದ್ದಾರೆ. ಉಭಯ ಕಡೆಯವರೂ, ಯಾವ್ಯಾವ ತರದಲ್ಲಿ ಅಲ್ಪ ಸ್ವಲ್ಪ ಬಿಟ್ಟುಕೊಟ್ಟು ರಾಜಿಗೆ ಬರಬಹುದೆಂದು ದಸ್ಸೀ ಚರ್ಚೆಮಾಡಿರುತ್ತಾರೆ. ಒಟ್ಟಾರೆ ಹೇಳುವುದಾದರೆ ಇವರಿಬ್ಬರ ಸಂಭಾಷಣೆಯಿಂದ ರಾಜಿಯಾಗ ಬಹುದೆಂಬುದಾಗಿ ಎಲ್ಲರೂ ಭಾವಿಸಿದ್ದಾರೆ. ಪುನಃ 18 ರಲ್ಲು ಸಂಭಾಷಣೆ ನಡೆಯುತ್ತೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರನ್ನೆಲ್ಲಾ ಮಹಾತ್ಮರು ಡೆಲ್ಲಿಗೆ ಬರಮಾಡಿಸಿದ್ದಾರೆ. ಮಧ್ಯವರ್ತಿಯವರಾಗಿ ಆಡಿರುವ ಡಾಕ್ಟರ್ ಸಪ್ರು, ಶ್ರೀನಿವಾಸ ಶಾಸ್ತ್ರಿ ಜಯಕರ್‌ರವರು ಆಗಾಗ್ಗೆ ಮಹಾತ್ಮರನ್ನೂ ವೈಸರಾಯರನ್ನು ಭೇಟಿ ಮಾಡುತ್ತಲೇ ಇದ್ದಾರೆ. ವೈಸರಾಯರ ಭವನಕ್ಕೆ ಮಹಾತ್ಮರು ತೆರಳಿದಾಗ ಅಲ್ಲಿಯ ನೌಕರರೆಲ್ಲರೂ ಎರಡು ಕೈ ಜೋಡಿಸಿ, ಬಹಳ ವಿನಯದಿಂದಲೂ, ಕುತೂಹಲದಿಂದಲೂ ನಮಸ್ಕರಿಸಿದರೆಂದೂ, ಸೆಕ್ರೆಟರಿಯ ಆಫೀಸಿನಲ್ಲಿರುವ ಎಲ್ಲಾ ಇಲಾಖೆದಾರರೂ ಬಹಳ ಕುತೂಹಲದಿಂದಿರುವರೆಂದೂ ತಿಳಿಯಬರುತ್ತೆ.

ಪಂಡಿತ ಮೋತಿಲಾಲರ ಶ್ರಾದ್ಧ ದಿನವು ಕಳೆದ ತಾರೀಕು 15 ರಲ್ಲಿ ಹಿಂದೂದೇಶದ ಎಲ್ಲಾ ಕಡೆಗಳಲ್ಲಿಯೂ ಮಹಾತ್ಮರ ಆಜ್ಞೆಯಂತೆ ನಡೆಯಲ್ಪಟ್ಟಿತು. ಎಲ್ಲಾ ಪಟ್ಟಣಗಳಲ್ಲಿಯೂ ಮೀಟಿಂಗುಗಳೂ, ಪ್ರಾರ್ಥನೆಯೂ, ಹರತಾಳವೂ ನಡೆಯಿತು. ಮೀಟಿಂಗಿನಲ್ಲಿ ಸೇರಿದ ಮಹನೀಯರೆಲ್ಲರೂ ಈ ಕೆಳಗಿನ ಪ್ರತಿಜ್ಞೆಯನ್ನು ಓದಿ ಅದರಂತೆ ನಡೆಯುವುದಾಗಿ ಒಪ್ಪಿದ್ದಾರೆ.

ಪ್ರತಿಜ್ಞೆಯು.

"ನನಗೆ ಅತ್ಯಂತ ಪ್ರಿಯರಾದ ಪರಲೋಕವಾಸಿ, ಪಂಡಿತ ಮೋತಿಲಾಲ ನೆಹರೂರವರು ನಿಸ್ಸೀಮ ಸ್ವಾರ್ಥತ್ಯಾಗವನ್ನು ಮಾಡಿ ಶ್ರೇಷ್ಠ ತರದ ದೇಶಸೇವೆಯನ್ನು ಮಾಡಿದ್ದಕ್ಕಾಗಿ ನಮಗೆಲ್ಲರಿಗೂ ಅವರಲ್ಲಿ ಅತ್ಯಂತ ಆದರವೂ ಕೃತಜ್ಞತೆಯೂ ಇರುತ್ತದೆ. ಇದನ್ನು ವ್ಯಕ್ತಪಡಿಸಲು ನಾವು ಈ ಸಭೆಯಲ್ಲಿ ನಿರ್ಧರಿಸುವುದೇನೆಂದರೆ—ಸಂಪೂರ್ಣ ಸ್ವರಾಜ್ಯವು ಹಿಂದೂಸ್ಥಾನಕ್ಕೆ ಆದಷ್ಟು ಬೇಗನೇ ದೊರೆಯಬೇಕೆಂಬ ಉದ್ದೇಶದಿಂದ ನಾವು ಈ ವರೆಗೆ ಮಾಡಿದ ಪ್ರಯತ್ನಕ್ಕಿಂತ ಇನ್ನು ಹೆಚ್ಚಿನ ಪ್ರಯತ್ನವನ್ನು ಇನ್ನು ಮೇಲೆ ಮಾಡುವೆವು. ಹೇಗೂ ಮೊದಲಿಗಿಂತ ಹೆಚ್ಚು ಉತ್ಸಾಹದಿಂದ ರಾಷ್ಟ್ರಕಾರ್ಯವನ್ನು ಕೈಕೊಳ್ಳುವೆವು.

ಪರದೇಶಿ ಬಟ್ಟೆ ವ್ಯಾಪಾರವನ್ನು ಕಳೆದ ವರ್ಷಕ್ಕೂ, ಈ ವರ್ಷಕ್ಕೂ ಹೋಲಿಸಿದರೆ ಈ ಕೆಳಗಿನ ಅಂಕೆಯಿಂದ ತಿಳಿಯುತ್ತೆ.

ಅಂಕೆಗಳೆಲ್ಲ ಲಕ್ಷ ಗಜಗಳು

	1929	1930
ಬೊಂಬಾಯಿ	450	70
ಬಂಗಾಳ	560	150
ಮದರಾಸು	160	50
ಸಿಂಧ್	65	70
ಬರ್ಮ	80	85
ಒಟ್ಟು	1315	425

ಅಂದರೆ ಒಂಭತ್ತು ಕೋಟಿ ಇಪ್ಪತ್ತು ಲಕ್ಷ ಗಜ ಬಟ್ಟೆ ಬಹಿಷ್ಕಾರ ಚಳವಳಿಯಿಂದ ನಷ್ಟವಾಯಿತು. ಇಪ್ಪತ್ತೆರಡು ಕೋಟಿ ರೂಪಾಯಿಯ ಬಟ್ಟೆ ಭಾರತೀಯರಿಗೆ ಉಳಿಯಿತು.

ವಿದೇಶ.

ಐರ್ಲೆಂಡ್ ದೇಶದಲ್ಲಿ 35 ರಿಂದ 40 ವಯಸ್ಸಿನ ಅವಿವಾಹಿತೆಯರು ಶೇಕಡ ಅರವತ್ತರಷ್ಟಿರುವರು.

ಇಂಗ್ಲೆಂಡಿನಲ್ಲಿ ಪರಿಶುದ್ಧಳಾದ ಕನ್ಯೆಯು ದೊರೆಯುವುದೇ ಕಷ್ಟವೆಂದು ತಿಳಿಸಿ "ಪಾತಿವ್ರತ್ಯದ ಅಸ್ತಮಯ" ಎಂಬ ಗ್ರಂಥವು ಪ್ರಕಟವಾಗಿದೆ.

ಬ್ರೆಜಿಲ್ ದೇಶದ ಸಾಲನ್‌ವಾಸ ಗ್ರಾಮದಲ್ಲಿ ವಾಸಿಸುತ್ತಿರುವ ಸನೋರಾ ಹೆನ್‌ಸೆನ್ ಎಂಬಾಕೆಯು ಒಂದು ಸಾರಿ ಗರ್ಭ ಧರಿಸಿ ಆರು ಮಂದಿ ಮಕ್ಕಳನ್ನು ಹೆತ್ತಿರುವಳು.

ಬ್ರಿಟನ್ ದೇಶದಲ್ಲಿ ಒಬ್ಬ ಮನುಷ್ಯನು ವರ್ಷಕ್ಕೆ ಸರಾಸರಿ 912 ಸಿಗರೆಟುಗಳನ್ನು ಸೇದುತ್ತಿರುವನು. ಅಮೇರಿಕಾದಲ್ಲಿ ಸರಾಸರಿ 1003 ಸಿಗರೇಟು ಸೇದುತ್ತಿರುವರು.

ಸ್ವೀಡನ್ನಿನ ರಾಜಕುಮಾರನೊಬ್ಬನು ಒಬ್ಬ ಗುಮಾಸ್ತೆಯ ಮಗಳನ್ನು ಮದುವೆ ಮಾಡುವುದಾಗಿ ತೀರ್ಮಾನ ಮಾಡಿರುವನು. ಆದರೆ ಅವನ ತಂದೆಯು ಇದಕ್ಕೆ ಒಪ್ಪಿರುವುದಿಲ್ಲ.

ಕೆನಡಾದಲ್ಲಿರುವ ಎಡ್ವರ್ಡ್ ದ್ವೀಪದಲ್ಲಿ ರೈತರು ಕರಿಯ ನರಿಗಳನ್ನು ಸಾಕುತ್ತಾರೆ. ಇವರ ಮಾರಾಟದಿಂದ ವರ್ಷಕ್ಕೆ 70 000 ಪೌನುಗಳನ್ನು ಸಂಪಾದಿಸುತ್ತಿರುವರು. ಒಂದೊಂದು ತೊಗಲಿಗೆ ಇಪ್ಪತ್ತು ಪೌನು ಬೆಲೆ ಇದೆಯಂತೆ.

ಈಜಿಪ್ಟ್ ದೇಶದಲ್ಲಿ 4600 ವರ್ಷದ ಸಮಾಧಿಗಳು ಅಗೆಯಲ್ಪಡಲಾಗ್ಯೆ ಅದರಲ್ಲಿ ದೊರೆತ ಬಟ್ಟಲುಗಳ ಒಳಗಿದ್ದ ಪರಿಮಳ ಪದಾರ್ಥಗಳು ಸುವಾಸನೆಯನ್ನು ಕಳಕೊಳ್ಳದೆ ಪರಿಮಳಿಸುತ್ತಿದ್ದವಂತೆ.

ಸ್ಪೇಯಿನ್ ದೇಶದಲ್ಲಿ ಪ್ರಜಾಧಿಪತ್ಯದ ಸರಕಾರಕ್ಕಾಗಿ ಬಹಳ ಗಲಾಟೆಗಳಾಗ ತಕ್ಕ ಇದೆ. ರಾಜನ ರಾಜತ್ವವು ಉಳಿಯುವ ಹಾಗೆ ಕಾಣುವುದಿಲ್ಲ. ಈ ಹೊತ್ತು ನಾಳೆಯಾಗಿ ರಾಜನನ್ನು ನೀಗಿ ಪ್ರಜೆಗಳ ಸರಕಾರವು ಆಗುವಂತೆ ತಿಳಿಬರುತ್ತೆ.

ಅಮೇರಿಕಾದವರು ತಮ್ಮ ಭವಿಷ್ಯತ್ತನ್ನು ತಿಳಿಯಲು ಬಹಳ ಖರ್ಚು ಮಾಡುತ್ತಿರುವರು. ಮುಖ ನೋಡಿ ಹೇಳುವುದಕ್ಕೂ, ಅಂಗೈ ನೋಡಿ ಹೇಳುವುದಕ್ಕೂ ವಾಲ್‌ಸ್ಟ್ರೀಟ್ ಎಂಬ ರಸ್ತೆಯಲ್ಲಿ ಅನೇಕ ಆಫೀಸುಗಳಿವೆ. ಈ ಆಫೀಸುಗಳಿಗೆ ವರ್ಷಕ್ಕೆ ಎರಡು ಕೋಟಿ ಐವತ್ತು ಲಕ್ಷ ಪೌನು ಉತ್ಪನ್ನ ಇದೆಯಂತೆ.

ಬೆಕೋಲೆ ಎಂಬ ಗ್ರಾಮದಲ್ಲಿ ವಿಲಿಯಮ್ಸ್‌ವಾರ್ ಎಂಬ ಎಪ್ಪತ್ತು ವರ್ಷದ ಯುವಕನು ಯಾವದೋ ರೋಗಕಾರಣದಿಂದ 15 ವರ್ಷ ಬಿದ್ದುಕೊಂಡಿದ್ದು ಈ ನಡುವೆ ಎದ್ದು ಆಶ್ಚರ್ಯಪಟ್ಟಿರುವನು. ಈ ಮಧ್ಯೆ ನಡೆದು ನಿಂತ ಯುದ್ಧ ಯೂರೋಪು ಯುದ್ಧವು ಎಷ್ಟು ಮಟ್ಟಿಗೆ ಆಗಿರುವುದೆಂದು ಎಳಸಿಲೇ ತನ್ನ ಕುಟುಂಬದವರನ್ನು ಕೇಳಿದನಂತೆ.

ಹಣದ ಅಭಾವದಿಂದ ಇಂಗ್ಲೆಂಡಿನ ಕೇಬಿನೆಟ್ ಮಂತ್ರಿಗಳು ತಮ್ಮ ಸಂಬಳದಲ್ಲಿ ಶೇಕಡ ಹತ್ತರಷ್ಟನ್ನು ಸರಕಾರಕ್ಕೆ ಬಿಟ್ಟುಕೊಡುವುದಾಗಿ ತೀರ್ಮಾನ ಮಾಡಿರುವರು. ಹೀಗೆಯೇ ಎಲ್ಲಾ ಇಲಾಖೆಗಳಲ್ಲಿಯೂ ಬಲವಾದ ಸಿಬ್ಬಂದಿ ಕೋತವನ್ನು ಮಾಡಲಿಕ್ಕಿರುವರು. ಹೀಗೆಯೇ ನ್ಯೂಜೀಲೆಂಡಿನ ಮಂತ್ರಿಮಂಡಳಿಯವರು ಸಹ ತಮ್ಮ ಸಂಬಳದಲ್ಲಿ ಶೇಕಡ 10 ರಷ್ಟು ಕಡಿಮೆ ತೆಗೆದುಕೊಳ್ಳುವುದಾಗಿ ಒಪ್ಪಿರುವರು.

ಹಾ! ಭಾರತಸ ಮುಕ್ತೀ!!

(ಕುವರಂ ವಿದ್ಯಾವತಿ ದೇಶಪಾಂಡೆ)

ಮರಣಾ ಭಲಾ ಹೈ ಜೋ ಅಪನೇ ಲಿಯೇ ಜಿಯೆ।
ಜೀತಾ ಹೈ ವಹ್ ಜೋ ಮರಚುಕಾ ಸ್ವದೇಶ ಕೆಲಿಯೆ॥

ಒಬ್ಬ ಹಿಂದೀ ಕವಿಯು ಮೇಲಿನ ಕಂದವನ್ನು ಬರೆದಾಗಿಯೇ ಬರೆದಿರುತ್ತಾನೆ. ತಾತ್ಪರ್ಯ — ಯಾರು ತನಗಾಗಿ ಎಂದರೆ ತನ್ನ ಸ್ವಾರ್ಥಕ್ಕಾಗಿ ಜೀವಿಸುವರೋ ಅವರು ಮೃತ್ಯುವೇ ಸರಿಯೆಂದೂ, ಮತ್ತು ಯಾರು ತಮ್ಮ ಪ್ರಾಣೇಶ್ವರಿ ಜನನೀ ಜನ್ಮಭೂಮಿಗಾಗಿ ಮೃತ್ಯುವನ್ನು ಆಲಿಂಗಿಸಿರುವರೋ ಅವರು ಸತ್ತು ಹೋಗಿದ್ದರೂ, ಅಮರರಾಗಿದ್ದಾರೆ.

ಈ ಪ್ರಕಾರವಾಗಿ ಜೀವಿಸುವ ಮಹಾನುಭಾವರು ಈ ಪರಿವರ್ತನೆ ಶಾಲೆಯಾದ ಸಂಸಾರದಲ್ಲಿ ಬಹಳ ವಿರಳರಾಗಿರುವರು. ಅವರಲ್ಲಿಯೂ ಪಾರತಂತ್ರ್ಯ ಬಂಧನದೊಳಗೆ ಸಿಲುಕಿರುವ ನಮ್ಮ ಭಾರತ ಮಾತೆಯ ಪುತ್ರರಲ್ಲಿಯಂತೂ, 'ಪದ್ಮಪತ್ರಮಿವಾಂಭಸಾ' ದಂತೆ ಇರುವ ಸೇವಕರು ಅಲ್ಪರು. ಅವರ ತತ್ವಗಳಲ್ಲಿ ಶ್ರೀಯುತ ದಿವಂಗತ ಭಾರತಮಾತೆಯ ಅಮೂಲ್ಯ ಮುಕ್ತಾಮಣಿಯಾದ ಮತ್ತು ಭಾರತೀಯ ಜನತೆಯ ಕಣ್ಮಣಿಯಾದ, ತ್ಯಾಗಮೂರ್ತಿಗಳಾದ ಮೋತಿಲಾಲ ನೆಹರೂರವರು ನಾಮವೂ ಅಗ್ರಗಾಮಿಯಾಗಿರುವುದು.

ಈ ಸ್ವರ್ಗೀಯ ಮೂರ್ತಿಯಲ್ಲಿ ಸದ್ಗುಣಗಳ ಭಂಡಾರವೇ ತುಂಬಿ ತುಳುಕುತ್ತಿತ್ತು. ಈ ಕರ್ತವ್ಯ ವಿಮೂಢ ಸಂಸಾರಕ್ಕೆ ಕರ್ಮಶೀಲತೆಯ ಮಾರ್ಗವನ್ನು ಪ್ರಚಾರ ಮಾಡುವುದಕ್ಕಾಗಿಯೇ ಈಶ್ವರನಿಂದ ಕಳಿಸಲ್ಪಟ್ಟ ಪ್ರತಿನಿಧಿಯೆಂದು ತೋರಲ್ಪಡುತ್ತಿತ್ತು. ಈ ಸಂಸಾರದಲ್ಲಿ ಇಂತಹ ಮಹಾಶಯರ ಪ್ರಾದುರ್ಭಾವವೇ ಅಸಂಭವವು. ಯಾವ ಮನುಷ್ಯನು ತಾನೇ ತಿಂಗಳು 50 ಸಾವಿರಗಳಿಗಿಂತ ಹೆಚ್ಚಿನ ಸಂಪಾದನೆಯನ್ನು ತಿರಸ್ಕರಿಸಲು ಅಂಗೀಕಾರ ಮಾಡಿಯಾನು. ಅದು ದೇಶಸೇವೆಯೆಂಬ ಪವಿತ್ರ ದೀಕ್ಷೆಯಿಂದ ವಿಭೂಷಿತನಾಗುವುದಕ್ಕೆ. ಯಾವ ಮಹೋದಯನು ಗಾಳಿ ಸವಾರಿಯಲ್ಲಿಯೂ ಸಹ ಪರಿಚಾರಕರಿಂದ ಕೂಡಿ ಎಲ್ಲಿಯಾದರೂ ತನ್ನ ಆರೋಗ್ಯಕ್ಕೆ ಕುಂದಾದೀತೆಂದು ಯೋಚಿಸುತ್ತಿದ್ದನೋ, ಅದೇ ಮಹಾಪುರುಷನು ತನ್ನ ಜನನಿಯ ಉದ್ಧಾರಕ್ಕಾಗಿ ರೋಗಗ್ರಸ್ತನಾದರೂ ಒಬ್ಬ ಸೇವಕನು 10 ಕ್ಕೆ ಹೆಚ್ಚು ಜನರಿಂದ ಸೇವೆಯನ್ನು ತೆಗೆದುಕೊಳ್ಳಲು ಸ್ವೀಕಾರ ಮಾಡಲಿಲ್ಲ. ಯಾವನು ತನ್ನ ಬಟ್ಟೆಗಳನ್ನು ಫ್ರಾನ್ಸ್ ದೇಶದ ಲಾಂಡ್ರಿಯಿಂದ ಒಗೆಸಲು ಅಸಂತುಷ್ಟನಾಗಿ ಪ್ಯಾರಿಸಿನಿಂದ ಒಗೆಸುತ್ತಿದ್ದನೋ ಅದೇ ಕೃಶಕಾಯವು ತನ್ನ ಮನೆಯಲ್ಲಿಯೇ ಒಗೆಯಲ್ಪಡಲು ತಯಾರಾದನು. ಆ ಪವಿತ್ರಾತ್ಮನ ವೈಭವನ್ನೇನೆ, ತನ್ನ ಅರ್ಧಾಂಗಿ ಮತ್ತು ಪ್ರಿಯ ಪುತ್ರ ಜವಾಹರರ ಮೋಹದ ದೆಸೆಯಿಂದ ವಿಲಾಯತಿಯಲ್ಲಿಯೇ ನಿವಾಸಿಸಲು ಸಿದ್ಧನಾದನೋ ಅದೇ ಮಹಾತ್ಮನು 'ಆನಂದಭವನ'ವನ್ನು ಭಾರತದ ಸೇವೆಗಾಗಿ ಭಾರತ ಮಾತೆಯ ಮಡಿಲಲ್ಲಿ ಇಟ್ಟುಬಿಟ್ಟನು. ಅಲ್ಲದೆ ಹೋದರೆ ಇದೇ ಪುತ್ರನು ತನ್ನ ಪಿತನ ಮನೆಯ ಪ್ರತ್ಯೇಕ ಪಾಲನ್ನು ತನ್ನ ಸಂಚಿತವಾದ ದ್ರವ್ಯದಿಂದ ಹೇರಳವಾಗಿ ತುಂಬಿಸಬಹುದಿತ್ತು. ರಾಷ್ಟ್ರಪತಿಯು ವಿಲಾಯತಿಯಿಂದ ಬಂದ ನಂತರ ತನ್ನ ಪಿತನನ್ನು ಕುರಿತು ಹೀಗೆಂದು ಹೇಳಿದನು — ತಂದೆಯೇ ವಿದೇಶೀಯರ ಶಾಸನದಿಂದ ನನ್ನ ಜೀವನವು ನಿಸ್ಸಾರವಾಗಿ ಬಿಟ್ಟಿದೆ. ನನ್ನ ಹೀನ ದುಃಖಿತರಾದ ಕೃಷಿಕ ಬಂಧುಗಳ ಸೇವೆಯನ್ನು ಮಾಡಲು ನನ್ನ ಜೀವನವು ತಳಮಳಿಸುತ್ತಿದೆ. ನನಗೆ ಈ ವಕೀಲಗಿರಿಯಿಂದ "ಆನಂದವಿಲ್ಲ" ಅದನ್ನು ಕೇಳಿ ಈ ರಾಜರ್ಷಿಯು ಹರ್ಷಿತನಾಗಿ ಹಾಗೆಯೇ ಮಾಡಲು ಅನುಮತಿಯನ್ನಿತ್ತನು. ಈ ದೇಶಸೇವಕನು ತನ್ನ ಪರಿವಾರವೆಲ್ಲವನ್ನೂ ಭಾರತ ಮಾತೆಯ ಸೇವೆಗಾಗಿ ಸಮರ್ಪಿಸಿಬಿಟ್ಟನು. ಇದಕ್ಕಿಂತಲೂ ದೊಡ್ಡದಾದ ತ್ಯಾಗವನ್ನು ಇನ್ನಾರು ಮಾಡಬಲ್ಲರು. ಈ ನಿರ್ಮೋಹಿಯು ತನ್ನ ದಿವ್ಯ ದೇಹವನ್ನು ಭಾರತ ಮಾತೆಯ ಸೇವೆಗಾಗಿಯೇ ವಿನಿಯೋಗಿಸಿದನು. ತನ್ನ ವಾಸದ ಮನೆಯಾದ ಆನಂದ ಭವನವನ್ನೂ ಕೂಡ ತನ್ನ ತ್ಯಾಗದ ಅಪೂರ್ವ ಪರಿಚಯವನ್ನು ಕೊಡುವುದಕ್ಕಾಗಿಯೋ, ಸ್ವರಾಜ್ಯ ಭವನವೆಂಬ ನಾಮದಿಂದ ದೇಶಕ್ಕೆ ದಾನವನ್ನಿತ್ತನು. ಈ ಪವಿತ್ರಾತ್ಮನು ತನಗಾಗಿ ಏನನ್ನೂ ಇಟ್ಟುಕೊಳ್ಳಲಿಲ್ಲ. ತನ್ನ ಪತ್ನಿ, ಪುತ್ರ, ಪುತ್ರಿ, ಸೊಸೆ ದನಕರು, ವಾಸಕ್ಕೆಂದು ಬಿಟ್ಟಿರುವ ಒಂದು ಮನೆಯನ್ನೂ ಸಹ ದೇಶಕ್ಕಾಗಿ ತನ್ನ ಮಾತೃಭೂಮಿಯ ಉದ್ಧಾರಕ್ಕಾಗಿ ಅರ್ಪಿಸಿದನು. ದೇಶಸೇವೆಯ ಮುಂದೆ ತನ್ನ ಸುಖ ಭೋಗಗಳನ್ನು ತುಚ್ಛವೆಂದೆಣಿಸಿದನು.

ಈ ಮುತ್ಸುವು ತ್ಯಾಗದಿಂದ ಅಲಂಕೃತವಾಗಿದ್ದರೂ ಮತ್ತೆ ಅನೇಕ ಸದ್ಗುಣಗಳಿಂದ ಸುಶೋಭಿಸುತ್ತಿದ್ದನು. ಈ ಭಾರತೀಗ್ರಣಿಯು ನಿರ್ಮೋಹಿಯ ಅವತಾರವೇ ಆಗಿದ್ದನು. ಈ ಭಾರತದ ಅಭಿಮಾನ ಸ್ವರೂಪನು ತನ್ನ ಮೃತ್ಯುವಿಗಿಂತ ಒಂದೆರಡು ದಿವಸಗಳ ಹಿಂದೆ ಮಹಾತ್ಮ ಗಾಂಧಿಯವರ ಕಿವಿಯಲ್ಲಿ ಹೀಗೆಂದು ಹೇಳಿದ್ದರಂತೆ. ನೀವು ದಯವಿಟ್ಟು ತನ್ನ ಮಾತೃಭೂಮಿಗಾಗಿ ಹುಟ್ಟಿದ್ದೀರಿ. ನನ್ನ ಮೊಮ್ಮಗನ ವಿವಾಹದಲ್ಲಿ ಅತಿಥಿ ಸ್ವಾಗತಕ್ಕೆ ತಕ್ಕದ ಬಂಧುಗಳ ಪರಿವಾರದ ಹಿತಾರ್ಥಕ್ಕಾಗಿ ಬಂದು ಹಣವನ್ನು ಕೇಳಿದರೆ ಬಹಳ ಉತ್ಸವವಾದೀತೆಂದು. ತನ್ನ ಮೃತ್ಯುವಿನ ಸಮೀಪ ತಿಳಿದಿದ್ದರೂ ಈ ನಿರ್ಮೋಹಿಯು ತನ್ನ ಪರಿವಾರದ ಎಳ್ಳಷ್ಟೂ ಚಿಂತೆಯನ್ನು ಮಾಡದೆ ದೇಶದ ಚಿಂತೆ ಕಲ್ಯಾಣಕ್ಕಾಗಿ ಯತ್ನಿಸಿದನು.

ಇಂತಹ ಮಹಾಶಯರನ್ನು ಕಳೆದುಕೊಂಡಂತಹ ಭಾರತೀಯರೆಷ್ಟು ಹತಭಾಗ್ಯರು. ಹುಟ್ಟಿದವನು ಮೃತ್ಯುಗೀಡಾಗುವನೆಂಬ ಮಾತು ನಿಶ್ಚಯವಾದರೂ, ಈ ಪ್ರಕಾರವಾದ ಆಧಾರಸ್ತಂಭದ ಮೃತ್ಯುವಿನಿಂದ ಇಡೀ ಭಾರತವು ಹಾಹಾಕಾರವೆಬ್ಬಿಸಿಂತಿರುವುದರಲ್ಲಿ ನಿಶ್ಚಯವು. ಆದರೂ ಇಂತಹ ಪರಿಸ್ಥಿತಿಯಲ್ಲಿ ನಮ್ಮನ್ನು ಅನಾಥರನ್ನಾಗಿ ಮಾಡಿದುದು ಉಚಿತವಾಗಲಿಲ್ಲ.

ಅನಾಥ ಭಾರತೀಯ ಸಂತಮಹಾಸಭೆಯು ಈ ಅದ್ವಿತೀಯ ರಾಜನೀತಿಜ್ಞರ ವಿರಹದಿಂದ ಬಂದೊದಗಿರುವ ಕಷ್ಟವನ್ನು ಸಹಿಸಲಿಕ್ಕಿಲ್ಲ. ಇವರ ಸ್ವರ್ಗಾರೋಹಣದಿಂದ 'ದೈವೋಪಿ ದುರ್ಬಲಘಾತಕಃ' ಎಂಬ ದೇವವಾಣಿಯು ಮನುಷ್ಯರ ಹೃದಯ ಕಪಾಟದಲ್ಲಿ ನಾಟುತ್ತದೆ. 'ಛಿದ್ರೇಷ್ವನರ್ಥಾ ಬಹುಲೀ ಭವಂತಿ" ಎಂಬಂತೆ ನಮ್ಮ ಹಣೆಯಲ್ಲಿ ಯಾವ ಯಾವ ಆಘಾತಗಳನ್ನು ಸಹಿಸುವಂತೆ ಬರೆದಿರುತ್ತಾನೋ ಏನೋ ಗೊತ್ತಿಲ್ಲ. ನಾವು ಈ ಪರತಂತ್ರದಲ್ಲಿ ಬಿದ್ದಿದ್ದಾಗಲೂ, ಮಾನಸಿಕ ಬಲವನ್ನು ಪ್ರಧಾನಿಸುವ ಮಹಾಮಹಿಮರುಗಳನ್ನು ಅವಲೋಕಿಸುವುದರಿಂದಲೂ ಅವರ ಸುಭಾಷಿತಪೂರ್ಣವಾದ ಉಪದೇಶಗಳಿಂದ ನಮ್ಮ ಮನಸ್ಸು ಶಾಂತಿಯುಕ್ತವಾಗಿ ಸದೃಢವಾದ ಹೃದಯವು ದೇಶಪ್ರೇಮವೆಂಬ ಮಳೆಯಿಂದ ಅಭಿಷಿಕ್ತವಾಗುತ್ತಿತ್ತು. ಈ ಹತಭಾಗ್ಯ ಭಾರತವು ಇನ್ನೆಷ್ಟು ಹೀನಸ್ಥಿತಿಯನ್ನು ಹೊಂದಬೇಕಾಗಿರುವದೋ, ಯಾವಾಗ ಹತಭಾಗ್ಯ ಭಾರತಮಾತೆಯ ಭಾಗ್ಯೋದಯದ ದಿನದ ನಿಶ್ಚಯವು ಆಗುವುದಕ್ಕೆ ಇನ್ನೆರಡೇ ದಿನಗಳ ಅವಧಿಯಿರುವಾಗ ಅವಳಿಗೆ ಎರಡು ದಿನಗಳ ಹಿಂದೆಯೇ ಅಮೂಲ್ಯವಾದ ಈ ರತ್ನವನ್ನು ತನ್ನ ಕಿರೀಟದಿಂದ ಬೀಳುವಂತೆ ಮಾಡಿ ಅಮೂಲ್ಯವಾದ ಒಂದು ರತ್ನವನ್ನು ಕಳೆದುಕೊಂಡಳು. ಈ ದೇಶಭಕ್ತನು ತನ್ನ ಗರೀಬ ಬಂಧು ಭಗಿನಿಯರ ಹಿತಕ್ಕಾಗಿ ಯಾವ ಯಾವ ಮಾತುಗಳನ್ನು ಯೋಚಿಸಿದ್ದನೋ, ಆದರೆ ದುರ್ದೈವವು ತನ್ನ ಬಲೆಯನ್ನು ಅವನ ಮೇಲೆ ಬೀಸಿತು.

ಪ್ರತಿ ಒಂದು ದಿನವೂ ಪ್ರತ್ಯೇಕ ದೇಶಪ್ರೇಮಿ ಭಾರತೀಯ ಪೂಜೆಯ ದೃಷ್ಟಿಯು ಅತೀ ಕಳವಳದಿಂದ ಸಮಾಚಾರ ಪತ್ರಗಳ ಮೇಲೆ ಬೀಳುತ್ತಿತ್ತು. ಅವರ ಆರೋಗ್ಯವಾರ್ತೆಯನ್ನು ಓದಿದ ಕೂಡಲೇ ಶರೀರವು ಆನಂದದಿಂದ ರೋಮಾಂಚಿತವಾಗುತ್ತಿತ್ತು. ಮತ್ತು ಅವರ ಸ್ವಾಸ್ಥ್ಯಹೀನತೆಯ ವರ್ತಮಾನವನ್ನು ಕೇಳಿದ ಕೂಡಲೇ ಹೃದಯವು ದುಃಖದಿಂದ ಕಂಪಿತವಾಗುತ್ತಿತ್ತು. ಮತ್ತು ಅವರ ಹೃದಯವು "ಹೇ ಸರ್ವವ್ಯಾಪಕ ನಾರಾಯಣ! ನಮ್ಮ ತ್ಯಾಗಮೂರ್ತಿ ಮೋತಿಲಾಲರನ್ನು ಬಹಳ ದಿನಗಳವರೆಗಾದರೂ ಜೀವಿತರನ್ನಾಗಿ ಇಡು!" ಎಂದು ಕಲ್ಪಿಸುತ್ತಿತ್ತು. ಆದರೆ ವಿಧಿಯ ವಿಧಾನವನ್ನೆಂತು ವರ್ಣಿಸಲಾಪೆನು. ಪೆಟ್ಟಿಯಾಗಿರುವ ಮೋಜಿನ ಮೆಂಬರುಗಳ ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗ್ ಆಗುವ ಮೊದಲೇ ಅವರಿಗೆ ಕಾಲನ ಅಧೀನವಾಗಬೇಕಾಗಿತ್ತು.

ಸರ್ವ ಪ್ರಿಯನು ಈಶ್ವರನ ಪ್ರಿಯನಾಗುವುದರಲ್ಲಿ ಸಂದೇಹವೇನು?

ಲೋಕ ಪ್ರಿಯನಂತೆ ಭಾಗ್ಯಶಾಲಿಯು, ದೀರ್ಘ ಪರಿಶ್ರಮವನ್ನು ಸಹಿಸಿ ದಯಾಮಯನಾದ ಪರಮಾತ್ಮನು ಅವರಿಗೆ, ತನ್ನಲ್ಲಿ ಸದಾ ವಿಶ್ರಾಂತಿಯನ್ನು ಕೊಡುವುದಕ್ಕಾಗಿ ಕರೆದನು.

ಅವರ ಮೃತ್ಯುವಿನ ಸಮಯದಲ್ಲಿ ದೇವರ್ಷಿಯಾದ ಗಾಂಧಿಯವರ ಕಥನಾಂತೆಯಾದರೆ ನಾವೆಷ್ಟು ಭಾಗ್ಯಶಾಲಿಗಳು. ಅವರು ಹೇಳಿದುದೇನೆಂದರೆ — ಮೋತಿಲಾಲರು ಇನ್ನೂ ಸತ್ತಿರುವುದಿಲ್ಲ. ಅವರು ಬೇಗನೆ ತನ್ನ ಆಜ್ಞಾ ತಂಗಿರುವ ಕಷ್ಟವನ್ನು ನಿವಾರಿಸಲು ಹಿಂತಿರುಗುವರೆಂದು ಹಾಗಾದರೆ ಬಡವರ ಅನಿಷ್ಟ ತಪನವು ಪುನಃ ಹಿಂದಿರುಗುವುದು. ಪುನಃ ಭಾರತ ಭೂಮಿಯಲ್ಲಿ ಜಯಘೋಷಗಳ ನಿನಾದವು ಕೇಳಿಸಲ್ಪಡುವುದು.

ಆ ಮಹನೀಯನ ಸ್ವರ್ಗವಾಸವು ನಿಶ್ಚಯವಾದರೆ ಅವರು ತನ್ನ ಪ್ರಿಯ ಪುತ್ರ ಭಾರತ ಪ್ರಜೆಯ ಮೇಲೆ ತನ್ನ ಆಶೀರ್ವಾದದ ಮಳೆಯನ್ನು ಸುರಿಸುತ್ತಾ ಇರಲಿ. ಹೇ ಜಗದೀಶ್ವರ! ಪ್ರತ್ಯೇಕ ಭಾರತವಾಸಿಯು ಅವರ ಅಂತಿಮ ಇಚ್ಛೆಯಂತೆ ನಡೆದು, ಅವರ ಸ್ವರ್ಗಸ್ಥಿತ ಆತ್ಮಕ್ಕೆ ಶಾಂತಿಯನ್ನು ಪ್ರದಾನಿಸಲಿ!

COORG FOREST DEPARTMENT

Sale of Bamboos.

The right to cut and remove bamboos for a period of one year from 1—4—1931 to 31—3—1932 from a block of about 1912 acres in Dubare Reserve lying between Maldare Guddige road, Maldare-Dubare road, Bettadi line and Eastern line will be sold by publice auction on 17th March 1931 at Fraserpet (Inspection Bungalow) at 2 P M For further particulars please apply to the Chief Forest Officer Coorg.

H G Hicks
Chief Forest Officer.

3—1

ದಿವಂಗತ ಭಾರತ ಬಂಧುಸ್ತವ.

ಅಕಟಾ! ಪಂಡಿತ ಮೋತಿಲಾಲನೇ ಪೋದವೆ!
ಸ್ವರ್ಗವ ಸೇರಿದನೇ! ॥ಪ॥

ಸ ಜಯುತ ದಶರಥನಂತೆ ವಿರಾಜಿಸಿ ಸುರಪ
ಸಹಾಯಕೆ ಸಾರಿದನೇ! ॥ ಅ. ಪ ॥

ರಘುಪತಿರಾಮನ ಸುಗುಣಾರಾಮನ ಪೋಲ್ವ
ಸುಪುತ್ರನನಗಲಿದನೇ! ।
ಜಗದಭಿರಾಮಕುಮಾರ ಜವಾಹಿರಲಾಲನ
ಬಾಲನ ತೊಲಗಿದನೇ! ॥ ೧ ॥

ಪರದೇಶೀಯರ ಆಳಿಕೆ ರಾಜ್ಯದೆ ಬಾಳಲಾಗದೆಂದ್ಮೈದಿದನೇ! ।
ಪರರಡಿಯಲ್ಲಿ ಮಹಾತ್ಮರ ಕಷ್ಟವ ನೋಡಲಾಗ
ದೆಂದಗಲಿದನೇ! ॥ ೨ ॥

ಭಾರತಭೂಮಿಯ ಸೇವೆಗಾಗಿ ಸರ್ವಸ್ವವನ್ನೀಯುತ
ಪ್ರಿಯ ಸುತನ।
ಭಾರತಮಾತೆಯ ಪದತಲಕರ್ಪಿಸಿ ಸೆರೆಯನವನು
ಬಿಗಿದ್ಯನ ॥ ೩ ॥

ಧರ್ಮನ ಧರ್ಮದ ಭೀಮನ ಧೈರ್ಯವ,
ವಿಜಯನ ಶೌರ್ಯವ ನಾಚಿಸುವ।
ಕರ್ಮವೀರವರ ಭಾರತ ಭೀಷ್ಮನು ದೇಹವ
ನೀಗಿದನೆ! ದೇವ! ॥ ೪ ॥

ಸ್ವಾರ್ಥಭೂಮಿಯಲಿ ಧರ್ಮದರ್ಥವಿಂದೆಸೆದವನು
ನವಸುರಪತಿಯಂತೆ।
ಕರ್ಣ, ದಧೀಚಿ, ಶಿವಾಜಿಗಳಂತೆ ವಿರಾಜಿಸಿದನು
ಶಿಬಿನೃಪನಂತೆ ॥ ೫ ॥

ಭಾವಿಸ್ವರಾಜ್ಯದ ಮಂತ್ರಿಯಾಗಿ ಮೇಲಾಗಿ ರಾಜನೀತಿಜ್ಞನಾಗಿ
ಜೀವಿಸುವಾಸೆಯ ಬಯಸದೆ ನಡೆದನೆ! ರಾಜಯೋಗಿ
ಸರ್ವತ್ಯಾಗಿ ॥೬॥

ಬಾಲತಿಲಕ, ಜಯತೀಬಲರಾಯ, ಜನರಂಜನದಾಸರ
ಪಥವಿಡಿದು।
ಶ್ರೀಶೈಲನ ಸಾಯುಜ್ಯಕೆ ಪೋದನೆ!
ಮೋತಿಲಾಲ 'ಭಾರತಬಂಧು'! ॥೭॥

ಪಿ. ಲಕ್ಷ್ಮೀನಾರಾಯಣ
ಪೊಣ್ಣಂಪೇಟೆ.

ಹಿಂದೂಸ್ಥಾನದ ಸಂಗಡ ಬ್ರಿಟಿಷರ ವ್ಯಾಪಾರವು ಹೇಗೆ ನಡೆದಿದೆ.

1918 ರಿಂದ 1928 ರ ವರೆಗೆ ಇಂಗ್ಲೆಂಡವು ನಮ್ಮ ದೇಶಕ್ಕೆ ವರ್ಷಕ್ಕೆ 165 ಕೋಟಿ ರೂಪಾಯಿ ಸರಕುಗಳನ್ನು ಕಳುಹಿಸುತ್ತಿತ್ತು. ಕಳೆದ ವರ್ಷ ಈ ವ್ಯಾಪಾರವು 127 ಕೋಟಿ ರೂಪಾಯಿಗೆ ಇಳಿಯಿತು. ಈ ವರ್ಷವಂತೂ ಹೇಳಲಿಕ್ಕೆ ಬೇಡ 100 ಕ್ಕೆ 60 ಕ್ಕಿಂತಲೂ ಕಡಿಮೆಯಾಗಿದೆ. ಮಹಾಯುದ್ಧದ ಸಮಯದಲ್ಲಿ ನಮ್ಮ ಆಮದು ಮಾಲಿನ ಎರಡು ಮೂರಾಂಶ ಮಾಲು ಇಂಗ್ಲೆಂಡ್ ದೇಶದಿಂದ ಬರುತ್ತಿತ್ತು. ಬೇರೆ ಎಲ್ಲಾ ದೇಶಗಳು ಕೂಡಿ ಒಂದು ಮೂರಾಂಶ ಬರುತ್ತಿತ್ತು. ಆದರೆ 28—29 ನೇ ವರ್ಷದಲ್ಲಿ ಅದು ಒಂದು ಎರಡಾಂಶಕ್ಕೆ ಬಂತು. ಈ ವರ್ಷದಲ್ಲಿ ಅರ್ಧಕ್ಕಿಂತಲೂ ಈ ವ್ಯಾಪಾರವು ಕಡಿಮೆಯಾಗಿದೆ. ವಿಲಾಯಿತಿಯಿಂದ ಬರುವ ಮಾಲಿನಲ್ಲಿ 100 ಕ್ಕೆ ೫೦ ರಷ್ಟು ಆಮದೆಯು ಇರುತ್ತದೆ. ಇದರ ವ್ಯಾಪಾರವು ಈ ವರ್ಷದಲ್ಲಿ ಹೇಗೆ ನಡೆದಿದೆಂಬುದು ಕೆಳಗೆ ಕೊಟ್ಟ ಲೆಖ್ಖದಿಂದ ಗೊತ್ತಾಗುವುದು. 1930

ಜನವರಿ	3,500,000
ಫೆಬ್ರವರಿ	3,000,000
ಮಾರ್ಚ	8,400 000
ಏಪ್ರಿಲ್	3000,000
ಮೇ	2,500 000
ಜೂನ್	1,500,000
ಜುಲೈ	1,230 000
ಆಗಸ್ಟ	780 000
ಸೆಪ್ಟಂಬರ್	370 000

ಜುಲೈ, ಆಗಸ್ಟ, ಸಪ್ಟಂಬರ್ ತಿಂಗಳಲ್ಲಿ 3 ಕೋಟಿ 45 ಲಕ್ಷ ರೂಪಾಯಿಯ ಮಾಲು ಇಂಗ್ಲೆಂಡಿನಿಂದ ಬಂತೆಂದು ರಾಯಲ್ ಎಕನಾಮಿಕ್ ಸೊಸೈಟಿಯವರು ತಿಳಿಸುತ್ತಾರೆ. ಕಳೆದ ವರ್ಷದ ಇದೇ ಮೂರು ತಿಂಗಳಲ್ಲಿ 10 ಕೋಟಿ 35ಲಕ್ಷ ರೂಪಾಯಿಯ ಸರಕು ನಮ್ಮ ದೇಶದಲ್ಲಿ ಬಂದಿತ್ತು. ಇದರ ಮೇಲಿಂದ ಇಂಗ್ಲೆಂಡ್ ದೇಶದ ವ್ಯಾಪಾರವು ಹೇಗೆ ಬೆಳೆಯುತ್ತಾ ನಡೆದಿದೆ ಎಂಬುದು ಗೊತ್ತಾಗುವದು॥ ಇನ್ನು ಜನರು ಸಾಕಷ್ಟು ಸ್ವದೇಶಿ ವ್ರತವನ್ನು ಸ್ವೀಕರಿಸಿಲ್ಲ. ಎಲ್ಲರೂ ಸ್ವದೇಶೀ ಬಟ್ಟೆಗಳನ್ನೇ ಉಪಯೋಗಿಸುವ ನಿರ್ಧಾರ ಮಾಡಿದರೆ ಬರುವ ಮೇ ತಿಂಗಳಷ್ಟರಲ್ಲಿ ಇಂಗ್ಲೆಂಡಿನ ವ್ಯಾಪಾರವು ಎಷ್ಟು ಉಳಿದೀತೆಂಬುದು ಮೇಲಿನ ಲೆಖ್ಖದಿಂದ ಎಲ್ಲರಿಗೂ ಸಹಜವಾಗಿ ತಿಳಿಯುವುದು. ನಾವು ಲಕ್ಷ್ಯದಲ್ಲಿಡತಕ್ಕ ಮತ್ತೊಂದು ಸಂಗತಿಯೇನೆಂದರೆ—ಯಾವ ಪ್ರಮಾಣದಿಂದ ವಿಲಾಯತಿ ಬಟ್ಟೆಯ ವ್ಯಾಪಾರವು ಕಡಿಮೆಯಾಗಿದೆಯೋ ಅದೇ ಪ್ರಮಾಣದಿಂದ ಸ್ವದೇಶೀ ಅರಿವೆಯು ಹೆಚ್ಚಾಗಿದೆ

ತಾ. 20-2-31 ರಲ್ಲಿ ಡಿಲ್ಲಿಯಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಜನರು ನೆರೆದಿದ್ದ ಸಭೆಯಲ್ಲಿ ಮಹಾತ್ಮ ಗಾಂಧಿಯವರು ಮಾಡಿದ ಭಾಷಣ.

ಮುಸಲ್ಮಾನರ ಹಬ್ಬದ ದಿನವಾದ್ದರಿಂದ ಮುಸಲ್ಮಾನರಿಗೆ ಹಬ್ಬದ ಸಂಬಂಧವಾದ ಸಂತೋಷಸೂಚಕವಾದ ಮಾತುಗಳನ್ನಾಡಿ ಹೇಳಿದ್ದೇನಂದರೆ—ಇಂಥಾ ದೊಡ್ಡ ಸಮೂಹದಲ್ಲಿ ನನ್ನ ಮನಸ್ಸು ಮೊದಲಾಗಿ ಮೌಲಾನಾ ಮಹಮ್ಮದಲ್ಲಿಯವರ ಕಡೆಗೆ ಹೋಗುತ್ತದೆ. ಅವರ ಮರಣದಿಂದ ನನಗೆ ತುಂಬಾ ನೋವಾಗಿದೆ. ನಾನು ದಕ್ಷಿಣ ಆಫ್ರಿಕಾದಿಂದ ಹಿಂತಿರುಗಿ ಬಂದಂದಿನಿಂದ ಡಿಲ್ಲಿಯನ್ನು ಮೌಲನಾ ಮಹಮ್ಮದಲ್ಲಿಯವರ, ಸ್ವಾಮಿಶ್ರದ್ಧಾನಂದರ ಮತ್ತು ಹಕೀಮ್ ಅಜಮಲ್‌ಖಾನರ ಡಿಲ್ಲಿಯೆಂತ ನಾನು ಎಣಿಸಿದ್ದೆ. ಈಗಲೂ ಸಹ ಆ ಮೂರು ದೇಹ ಸಹಿತ ಇಲ್ಲಿ ಹಾಜರಿಲ್ಲದಿದ್ದರೂ ಅವರು ಅದೃಶ್ಯರಾಗಿ ಇಲ್ಲಿ ಇದ್ದಾರೆಂತಲೇ ಆಗುತ್ತದೆ. ಈಗಿನಂಥ ಬಿಕ್ಕಟ್ಟಿನ ಸಮಯದಲ್ಲಿ ಪಂಡಿತ ಮೋತಿಲಾಲರನ್ನು ಕಳೆದುಕೊಂಡದ್ದಕ್ಕೆ ನನಗೆ ಅಷ್ಟೇ ವ್ಯಸನವಿದೆ. ಪಂಡಿತ ಮೋತಿಲಾಲರು ಈಗ ತಾನೇ ತೀರಿ ಹೋದದ್ದು ಅವರ ಮರಣಕ್ಕಾಗಿ ಸುರಿಸಿದ ನಮ್ಮ ಕಣ್ಣೀರು ಇನ್ನೂ ಆರಿರುವುದಿಲ್ಲ. ನಾನು ವೈಸರಾಯರ ಸಂಗಡ ನಡಿಸುತ್ತಿರುವ ಸಂಭಾಷಣೆಯ ಕುರಿತು ಏನನ್ನಾದರೂ ನನ್ನಿಂದ ತಿಳಿಯಬೇಕೆಂತ ನಿಮಗೆಲ್ಲಾ ಕುತೂಹಲವಿದೆಯೆಂತ ನನಗೆ ಗೊತ್ತಿದೆ. ವೈಸರಾಯರಿಗೂ, ನನಗೂ ಆದ ಸಂಭಾಷಣೆ ಏನೆಂತ ಸಮುದಾಯಕ್ಕೆ ತಿಳಿಸಲು ಸಾಧ್ಯವಿಲ್ಲ. ಯಾಕೆಂದರೆ—ಅದನ್ನು ಪ್ರಕಟಿಸಬಾರದೆಂಬ ಕಟ್ಟಿಗೆ ಬದ್ಧನಾಗಿದ್ದೇನೆ. ಅಲ್ಲದೆ ಅದನ್ನು ಪ್ರಕಟಿಸುವುದರಿಂದ ನಮಗೆ ಏನೂ ಸಹಾಯವಾಗುವುದಿಲ್ಲ. ಆದರೆ ಈ ಸಂಭಾಷಣೆಗಳು ತುಂಬಾ ಸ್ನೇಹ ಭಾವದಿಂದಲೂ, ಅನ್ಯೋನ್ಯತೆಯಿಂದಲೂ ನಡೆಯುತ್ತಿವೆಯೆಂತ ಮಾತ್ರ ಹೇಳಬಲ್ಲೆನು. ಫಲಿತಾಂಶವೇನಾಗುವುದೆಂತ ನಾನು ಹೇಳಲಾರೆ. ಫಲಿತಾಂಶವು ದೇವರ ಕೈಯಲ್ಲಿದೆ. ದೇವರ ಇಚ್ಛೆಯಿದ್ದಂತೆಯೇ ಆದೀತಷ್ಟೆ. ನಿಮ್ಮ ಕರ್ತವ್ಯವೇನೆಂದರೆ—ಹಿಂದೂಸ್ಥಾನವು ನಿಮ್ಮಿಂದ ನಿರೀಕ್ಷಿಸುತ್ತಿರುವ ಕೆಲಸವನ್ನು ಮಾಡುತ್ತಲೇ ಇರಬೇಕು.

ಡಿಲ್ಲಿಯವರೇ ಆದ ಡಾಕ್ಟರ್ ಅನ್ಸಾರಿಯವರು ಡಿಲ್ಲಿಯವರು ಈ ಹೋರಾಟದಲ್ಲಿ ತೆಗೆದುಕೊಂಡ ಭಾಗವನ್ನು ಶ್ಲಾಘಿಸಿದರು. ನಾನಾದರೆ ಒಟ್ಟು ಹಿಂದೂಸ್ಥಾನದಲ್ಲಿ ನಡಿಸಿದ ತ್ಯಾಗದ ಕಾರ್ಯಗಳಿಗೆ ಸಾಕ್ಷಿಯಾಗಿದ್ದೇನೆ. ಡಿಲ್ಲಿಯು ಬೇರೆ ಪ್ರಾಂತ್ಯಗಳಿಗಿಂತ ಹಿಂದೆ ಬೀಳುವುದಿಲ್ಲವೆಂತ ಹೇಳುತ್ತೇನೆ. ಅದಕ್ಕಾಗಿ ನಿಮಗೆ ನನ್ನ ಧನ್ಯವಾದಗಳಿವೆ. ಇಲ್ಲಿಯೂ, ಬೇರೆ ಕಡೆಗಳಲ್ಲಿಯೂ ಸ್ತ್ರೀಯರು ನಡಿಸಿರುವ ಕಾರ್ಯವು ವರ್ಣಿಸಲು ಅಸಾಧ್ಯವಾದದ್ದಾಗಿದೆ. ಈಗಿನ ಚಳವಳವನ್ನು ಚರಿತ್ರಕಾರರು ವಿವರಿಸುವಾಗ ಹೆಂಗಸರು ಮಾಡಿರುವ ತ್ಯಾಗಕ್ಕೆ ಮೊದಲನೇ ಸ್ಥಾನ ದೊರಕುತ್ತದೆ. ಹೆಂಗಸರಂತೆಯೇ ಮಕ್ಕಳ ವಿಷಯದಲ್ಲೂ ಹೇಳಬಹುದು. ಮಕ್ಕಳಲ್ಲಿ ಉಂಟಾದ ಅದ್ಭುತ ಜಾಗೃತಿಯಿಂದ ಈ ಹೋರಾಟದಲ್ಲಿ ದೇವರು ನಮ್ಮ ಸಂಗಡ ಇದ್ದಾನೆಂಬ ನನ್ನ ನಂಬಿಕೆಗೆ ಇನ್ನಷ್ಟು ಹೆಚ್ಚು ಬಲ ಬಂದಿದೆ. ಮಕ್ಕಳನ್ನು ಇಂಥಾ ಕೆಲಸಕ್ಕೆ ಸಂಘಟಿಸಿರಲಿಲ್ಲ, ತಯಾರಿಸಿರಲಿಲ್ಲ. ಇವರು ಇಷ್ಟರ ಮಟ್ಟಿಗೆ ಕೆಲಸ ಹೇಗೆ ಮಾಡಿದರೆಂತ ನನಗೆ ತಿಳಿಯುವದಿಲ್ಲ. ಈ ಸಂಬಂಧವಾಗಿ ನಾನು ಪ್ರಶ್ನಿಸಿದ ಇತರರಿಗೂ ಸಹ ಇವರನ್ನು ತಯಾರಿಸಿದವರು ಯಾರೆಂತ ತಿಳಿಯಲಿಲ್ಲ. ದೇವರೇ ಅವರ ಮುಂದಾಳಾಗಿರಬೇಕು. ಆದರೆ ಈ ಪವಿತ್ರವಾದ ಯುದ್ಧದಲ್ಲಿ ನೀವು ಮಾಡಿರುವ ತ್ಯಾಗವು ಅತಿ ಸ್ವಲ್ಪವಾಗಿದೆ ಎಂಬುದನ್ನು ನೆನಪಿನಲ್ಲಿಡಬೇಕಾಗಿದೆ. ಈಗ ಮಾಡಿದ ತ್ಯಾಗದಿಂದ ಹೆಮ್ಮೆಪಡಬೇಡಿ. ನಮಗೆ ಹಿಂದೂಸ್ಥಾನಕ್ಕೆ ಬೇಕಾದದ್ದು ಪೂರ್ಣ ಸ್ವರಾಜ್ಯ. ಆ ಧ್ಯೇಯವನ್ನು ಸಂಪಾದಿಸಲು ಹಿಂದೂಸ್ಥಾನವು ಇನ್ನೆಷ್ಟು ತ್ಯಾಗ ಮಾಡಬೇಕಾದೀತೆಂತ ಯಾರಿಂದ ಹೇಳಲು ಸಾಧ್ಯ? ಜನರು ಇನ್ನಷ್ಟು ತ್ಯಾಗಮಾಡಬೇಕಾದ, ಕಷ್ಟಕ್ಕೆ ಒಳಗಾಗಬೇಕಾದ ಅವಶ್ಯಬೀಳದಂತೆ ಶಾಂತಿ ಸ್ಥಾಪಿತವಾಗಲು ಮನುಷ್ಯ ಯತ್ನದಿಂದ ಸಾಧ್ಯವಿದ್ದಷ್ಟು ಪ್ರಯತ್ನ ಮಾಡುತ್ತಿದ್ದೇನೆಂತ ನಾನು ಭರವಸೆ ಕೊಡುತ್ತೇನೆ. ಆದರೆ ಎಲ್ಲವೂ ದೇವರ ಕೈಯ್ಯಲ್ಲಿದೆ. ರಾಜಿ ತೀರ್ಮಾನಕ್ಕೆ ಬರಬೇಕೆಂತ ಅವನ ಇಚ್ಛೆ ಇಲ್ಲದಿದ್ದರೆ ಜನರು ಇನ್ನೂ ಹೆಚ್ಚಿನ ಕಷ್ಟ ಸಹಿಸಲು ತಯಾರಾಗಬೇಕೆಂತ ನಾನು ಹೇಳಬೇಕಾಗಿದೆ. ಸ್ವಾತಂತ್ರ್ಯಕ್ಕಾಗಿ ಬೇರೆ ಜನಾಂಗಗಳು ಮಾಡಿರುವ ತ್ಯಾಗವನ್ನು ಹೋಲಿಸಿದರೆ ನಾವು ಮಾಡಿರುವ ತ್ಯಾಗವು ಏನೂ ಇಲ್ಲ. ಬೇರೆ ಜನಾಂಗಗಳಷ್ಟು ನಾವು ಕಷ್ಟಕ್ಕೆ ಗುರಿಯಾಗದೆ ಇರಲು ಒಂದು ಕಾರಣವಿದೆ. ಅದು ಹಗಲು ಬೆಳಕಿನಂತೆ ನನಗೆ ಸ್ಪಷ್ಟವಾಗಿದೆ. ಅದು ಯಾವುದೆಂದರೆ—ನಾವು ಪೂರ್ಣ ಸ್ವರಾಜ್ಯವನ್ನು ಪಡೆಯಲು ಪ್ರತಿಜ್ಞೆ ಮಾಡಿಕೊಂಡಾಗಲೇ ಈ ಧ್ಯೇಯವನ್ನು ಕೈಗೂಡಿಸಿಕೊಳ್ಳುವದಕ್ಕಾಗಿ ನಾವು ಮಾಡುವ ಕೆಲಸಗಳೆಲ್ಲವೂ ಸತ್ಯವನ್ನೂ, ಅಹಿಂಸೆಯನ್ನೂ ಅನುಸರಿಸಿ ಇರಬೇಕೆಂತಲೂ ಪ್ರತಿಜ್ಞೆ ಮಾಡಿಕೊಂಡಿರುತ್ತೇವೆ. ಒಟ್ಟು ಹಿಂದೂಸ್ಥಾನವು ಮುಖ್ಯವಾಗಿ ಗ್ರಾಮವಾಸಿಗಳು ಮಾಡಿರುವ ಕೆಲಸಗಳನ್ನು ನೋಡಿದರೆ ನಾವು ಸತ್ಯ ಮತ್ತು ಅಹಿಂಸೆಯ ಪ್ರಮಾಣವನ್ನು ಹೆಚ್ಚಿನ ಮಟ್ಟಿಗೆ ನಡಿಸಿದ್ದೇವೆಂತಲೇ ನನಗೆ ತೋರುತ್ತದೆ. ಆದರೆ ನಾನು ಮೋಸ ಹೋಗಲಾರೆನು, ನೀವು ಮೋಸ ಹೋಗಬಾರದು. ನಾವು ಸತ್ಯವನ್ನೂ, ಅಹಿಂಸೆಯನ್ನೂ ಅನುಸರಿಸಿದ್ದೇವೆ. ಆದರೆ ಅವನ್ನು ನಮ್ಮ ಧರ್ಮವಾಗಿ ಮಾಡಿಕೊಂಡಿರುವುದಿಲ್ಲ. ಕೆಲವರಿಗೆ ಅವು ಈಗಿನ ಕಾರ್ಯಕ್ರಮದ ರೀತಿಯಾಗಿವೆಯಷ್ಟೆ. ಆದರೆ ಕಾರ್ಯಕ್ರಮದ ರೀತಿಯಾಗಿರುವಷ್ಟು ಕಾಲ ನೀವು ಹಿಂಸಾಮಾರ್ಗದಲ್ಲಿ ನಡೆಯಬಾರದು, ಯೋಚಿಸಲೂ ಸಹ ಬಾರದು. ಅಸತ್ಯ ಅಥವಾ ಹಿಂಸೆಯ ಯೋಚನೆ ಮಾಡಿದರೇನೇ ನಿಮ್ಮ ಪ್ರಮಾಣಕ್ಕೆ ವಿರೋಧವಾಯಿತು. ಅಹಮದಾಬಾದ್ ಕಾಂಗ್ರೆಸ್ಸಿನಲ್ಲಿ ಹಕೀಮ್ ಅಜ್ಮಲ್‌ಖಾನ್ ಮತ್ತು ಡಾಕ್ಟರ್ ಅನ್ಸಾರಿಯವರಂಥ ಮುಖಂಡರ ಸಮಕ್ಷಮದಲ್ಲಿ ಈ ವಿಷಯ ಚೆನ್ನಾಗಿ ಚರ್ಚಿಸಲ್ಪಟ್ಟು, ನಾವು ಸತ್ಯವನ್ನೂ, ಅಹಿಂಸೆಯನ್ನೂ ಮನಸ್ಸಿನಲ್ಲಿಯೂ, ಮಾತಿನಲ್ಲಿಯೂ, ಕಾರ್ಯದಲ್ಲಿಯೂ ಅನುಸರಿಸುತ್ತೇವೆಂತ ನಿರ್ಣಯಿಸಿಕೊಂಡಿರುವಷ್ಟು ಕಾಲ ಆ ನಿರ್ಣಯಕ್ಕೆ ಅತಿ ಸ್ವಲ್ಪವಾಗಿಯಾದರೂ, ವಿರೋಧಿಸಿದರೆ ನಾವು ವಿಶ್ವಾಸ ಘಾತಕ ಮಾಡಿದಂತೆಯೇ ಸರಿ ಎಂತ ತೀರ್ಮಾನ ಮಾಡಿಕೊಂಡದ್ದು ನಿಮಗೆ ಜ್ಞಾಪಕವಿರಬಹುದು.

ಹಿಂದೀಯರು ಸ್ವರಾಜ್ಯಕ್ಕೆ ಅರ್ಹರಲ್ಲವೆಂತ ಹೇಳಿದರೆ ನಾನು ಸಹಿಸಿಕೊಂಡೇನು, ಆದರೆ ನನ್ನ ದೇಶದವರು ಅಸತ್ಯವಂತರು ಅಪ್ರಮಾಣಿಕರು ಎಂಬ ಹೇಳಿಕೆಯು ನಿಜವಾದರೆ ಅಂಥಾ ಹೇಳಿಕೆಯನ್ನು ಒಂದು ನಿಮಿಷವಾದರೂ ಸಹಿಸಲಾರೆನು. ದೇವರನ್ನು ನಂಬಿದವರು ದೇವರಿಗೆ ವಿರೋಧವಾಗಿ ನಡಿದರೆ ವಿಶ್ವಾಸ ಘಾತಕರಾದರೆ ಅದಕ್ಕಿಂತ ದೊಡ್ಡ ಹಾನಿಯಿಲ್ಲ. ಅಂಥವರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ. ಅವರು ಗುಲಾಮಗಿರಿಗೂ, ಇನ್ನೂ ಕೀಳು ಪದವಿಗೂ ಅರ್ಹರಷ್ಟೆ. ಆದ್ದರಿಂದಲೇ ಸತ್ಯ ಅಹಿಂಸೆಯ ನೀತಿಯನ್ನು ಬಿಟ್ಟು ಬೇರೆಯದನ್ನು ಅನುಸರಿಸಬಹುದೆಂತಲೂ ಆದರೆ ಈ ನೀತಿಯನ್ನು ಅನುಸರಿಸಿರುವಷ್ಟು ಕಾಲ ನಿಮ್ಮನ್ನೂ ವಂಚಿಸಿಕೊಳ್ಳಬೇಡಿ, ಪ್ರಪಂಚವನ್ನೂ ವಂಚಿಸಬೇಡಿ ಎಂತ ನಾನು ಯಾವಾಗಲೂ ಪತ್ರಿ ಹೇಳುತ್ತಿರುವನಾಗಿದೆ. ಪರದೇಶೀ ಒಟ್ಟೆ ಮಾರಾಟವನ್ನು ಪಿಕೆಟ್ ಮಾಡುವುದರಲ್ಲಿ ನಮ್ಮ ಜನರು ಕೆಲವು ಮಟ್ಟಿಗೆ ಅತ್ಯಾಚಾರ ನಡಿಸಿದರೆಂತ ನಾನು ಕೇಳಿದಾಗ ನನಗೆ ತುಂಬಾ ನೋವಾಯಿತು. ಆದರೆ ಈ ಹೇಳಿಕೆಯ ನಿಜತ್ವವನ್ನು ಖಚಿತಮಾಡಿಕೊಂಡು ಹಿಡಿಯಲು ಇನ್ನೂ ಆಗಲಿಲ್ಲ. ಆದರೆ 1921—22 ರಲ್ಲಿ ಇಂಥಾ ಅತ್ಯಾಚಾರದ ಉಪಶಮನಕ್ಕಾಗಿ ಈ ಚಳವಳವನ್ನೇ ನಿಲ್ಲಿಸಿಬಿಟ್ಟೆ ಎಂತ ನಿಮಗೆ ಗೊತ್ತಿರಬಹುದು. ಆದರೆ ಅಂಥಾ ಉಪಶಮನವನ್ನು ಈಗ ಮಾಡುವುದು ಸಾಧ್ಯವಿಲ್ಲ. ಆದರೆ ಅತ್ಯಾಚಾರಗಳು ನಡಿಯುವುದು ಹಾಗಿದ್ದರೆ ಅಂಥಲ್ಲೆಲ್ಲಾ ಅವು ನಿಲ್ಲಲೇ ಬೇಕೆಂತ ಖಂಡಿತವಾಗಿಯೂ ಹೇಳುತ್ತೇನೆ.

ಪರದೇಶೀ ಬಟ್ಟೆ ವ್ಯಾಪಾರಿಗಳು ಅವರ ವ್ಯಾಪಾರವನ್ನು ನಡಿಸಿದರೂ ಚಿಂತೆಯಿಲ್ಲ. ಕುಡಿಯುವವರು ಕುಡಿಯುತ್ತಿದ್ದರೂ ಚಿಂತೆಯಿಲ್ಲ. ನಾವು ಪಿಕೆಟ್ ಮಾಡುವುದರಲ್ಲಿ ಅತ್ಯಾಚಾರ ನಡಿಸಬಾರದು. ಇನ್ನೊಂದು ಅಪಾಯವಿದೆಯೆಂತ ನಾನು ನಿಮಗೆ ಎಚ್ಚರಿಸಬೇಕಾಗಿದೆ. ಇಂಥಾ ಅತ್ಯಾಚಾರಗಳಿಗೆ ನಾವು ಇಳಿದರೆ ಸ್ವರಾಜ್ಯ ಬಂದಾಗ ನಮ್ಮನ್ನು ನಾವೇ ನಾಶಮಾಡಿಕೊಳ್ಳಲು ಅವಕಾಶವಾದೀತು. ಯಾಕೆಂದರೆ—ಆಗ ಪುಂಡುಗಳನ್ನು ನಿಲ್ಲಿಸಿ ಶಾಂತಿ ಸ್ಥಾಪನೆ ಮಾಡಲು ಮೆಶೀನ್‌ಗನ್ ಇಟ್ಟುಕೊಂಡ ಮಾರಣೀಯ ಪನೊಬ್ಬನು ಆಗ ಇರುವುದಿಲ್ಲ. ಆಗ ಅಣ್ಣ ತಮ್ಮಂದಿಯರೊಡ ನಾವು ನಾವೇ ಹೊಡದಾಡಿಕೊಳ್ಳಬೇಕಾಗುತ್ತದೆ. ಅಣ್ಣ ತಮ್ಮಂದಿಯರೊಳಗಿನ ಹೋರಾಟದಿಂದ ಎಲ್ಲರೂ ನಾಶವಾಗುವುದರಲ್ಲಿ ಸಂಶಯವಿಲ್ಲ. ಅತ್ಯಾಚಾರ ನಡಿಸದೆ ಪಿಕೆಟ್ ಮಾಡಲು ಸಾಧ್ಯವಿಲ್ಲವೆಂತ ನಿಮ್ಮ ಮನಸಿನಲ್ಲಿ ಸ್ವಲ್ಪವಾದರೂ ಸಂಶಯವಿದ್ದರೆ ಪಿಕೆಟ್ ಮಾಡುವುದೇ ಬೇಡ. ಈ ಕಾರ್ಯಗಳಲ್ಲಿ ನಾನು ನಿಪುಣನೆಂಬುದನ್ನು ನೀವು ನೆನಪಿನಲ್ಲಿಡಬೇಕು. ಈ ಮುಂಚೆ ಸ್ವಲ್ಪವೂ ಹಿಂಸೆ ಮಾಡದೆ ತುಂಬಾ ಪಿಕೆಟ್ ಮಾಡಿದ್ದೇವೆ. ಅತ್ಯಾಚಾರವನ್ನು ಮಾಡದಿದ್ದರೆ ನಮ್ಮ ಕೆಲಸ ನಿಂತುಹೋದೀತೆಂತ ಹೆದರಬೇಡ. ಸ್ವಲ್ಪವೂ ಬೇಸರ ಪಡಬೇಡಿ. ಹಿಡಿದ ದಾರಿಯನ್ನು ಬಿಡಬೇಡಿ. ಎನ್ನುವವನಿಗೆ ಬೇರೆ ಸಲಹೆಗಳಿರಬೇಕೆಂತ ನಂಬಿಕೊಳ್ಳಿ. ಆದರೆ ಆ ಸಂಗತಿ ಈ ದಿನ ಮಾತಾಡುವುದಿಲ್ಲ.

ನನಗೆ ಫಿರ್ಯಾದುಗಳು ಬಂದಿವೆ. ತನಿಖೆ ಮಾಡುತ್ತಲಿದ್ದೇನೆ. ನಾವು ತಪ್ಪು ಮಾಡಿರಬಹುದು. ನಾನು ಹೇಳಿದ್ದನ್ನು ಚೆನ್ನಾಗಿ ಮನಸಿಗೆ ತೆಗೆದುಕೊಂಡು ಏನೂ ತಪ್ಪು ಮಾಡಿದ್ದರೆ ಅದನ್ನು ತಿದ್ದಿಕೊಳ್ಳಬೇಕೆಂತ ನಾನು ಎಲ್ಲಾ ಕಾಂಗ್ರೆಸ್ ಕೆಲಸಗಾರರನ್ನು ಕೇಳಿಕೊಳ್ಳುತ್ತೇನೆ. ಎಲ್ಲಾ ಅತ್ಯಾಚಾರಗಳನ್ನು ಸಂಪೂರ್ಣವಾಗಿ ಬಿಟ್ಟು ಬಿಡಬೇಕೆಂತ ವಿನಂತಿ ಮಾಡಿಕೊಳ್ಳುತ್ತೇನೆ. ಅತ್ಯಾಚಾರಗಳೆಂದರೆ ಏನೆಂತ ತಿಳಿಯಲು ಅಪೇಕ್ಷೆ ಇರಬಹುದು. ತಿಳಿಯಬೇಕೆಂತ ಇರುವವರು ನನ್ನಲ್ಲಿಗೆ ಬಂದರೆ ತಿಳಿಸುತ್ತೇನೆ.

ಪರದೇಶೀ ಬಟ್ಟೆ ವ್ಯಾಪಾರಿಗಳಿಗೆ ಒಂದು ಮಾತು. ಕೆಲವು ತಿಂಗಳ ಮಟ್ಟಿಗೆ ಮಾತ್ರ ಪರದೇಶೀ ಬಟ್ಟೆ ವ್ಯಾಪಾರ ನಿಲ್ಲಿಸಿದ್ದರಿಂದ ನಿಮ್ಮ ಕೆಲಸವಾಯಿತೆಂತ ತಿಳಿದುಕೊಂಡು ನಿಮ್ಮನ್ನು ವಂಚಿಸಿಕೊಳ್ಳಬೇಡಿ. ದೇಶವನ್ನೂ ವಂಚಿಸಬೇಡಿ. ಈ ಪರದೇಶೀ ಬಟ್ಟೆ ವ್ಯಾಪಾರವು ಶಾಶ್ವತವಾಗಿ ನಿಲ್ಲಬೇಕು. ಯಾಕೆಂದರೆ—ಆ ಮೂಲಕವೇ ನಮ್ಮ ದೇಶದ ಕೋಟ್ಯಾಂತರ ಜನರ ಕ್ಷೇಮವನ್ನು ಕಾಪಾಡಲು ಸಾಧ್ಯವಿರುವುದು. ಪರದೇಶೀ ಬಟ್ಟೆಯನ್ನು ಸಂಪೂರ್ಣವಾಗಿ ಬಹಿಷ್ಕರಿಸುವುದೇ ವ್ಯಾಪಾರಿಗಳ ಧರ್ಮವೆಂತ ನಾನು ವಿನಯದಿಂದ ಅವರಿಗೆ ತಿಳಿಸುತ್ತೇನೆ. ಅವರು ತ್ಯಾಗಮಾಡಲೇ ಬೇಕು. ಆದರೆ ನನ್ನ ದಾಯದ ಬೇರೆ ಜನರು ಮಾಡುತ್ತಿರುವ ತ್ಯಾಗವನ್ನು ನೋಡಿದರೆ ಇವರ ತ್ಯಾಗವು ಯಾವ ಲೆಖ್ಖದ್ದು?

ಡಿಲ್ಲಿ ನಿವಾಸಿಗಳೇ, ಸಾವಿರ ಗಟ್ಟಲೆಯಲ್ಲಿ ನೀವು ಇಲ್ಲಿ ನೆರೆದದ್ದು ನನ್ನನ್ನು ಗೌರವಿಸಲಿಕ್ಕಾಗಿ ಎಂತ ಹೆಮ್ಮೆ ಪಡುವುದಿಲ್ಲ. ಪೂರ್ಣ ಸ್ವರಾಜ್ಯವನ್ನು ಪಡೆಯಲು ನೀವು ದೃಢನಿಶ್ಚಯ ಮಾಡಿದ್ದೀರಿ ಎಂಬುದನ್ನು ಪ್ರಪಂಚಕ್ಕೆ ತಿಳಿಸಲಿಕ್ಕಾಗಿ ನೀವು ನೆರೆದಿದ್ದೀರಿ. ವೈಸರಾಯರ ಸಂಗಡ ನಾನು ನಡಿಸುವ ಸಂಭಾಷಣೆಯು ನಿಮ್ಮನ್ನು ಕದಲಿಸದಿರಲಿ. ಅದನ್ನು ಯೋಚನೆಗೆ ತೆಗೆದುಕೊಳ್ಳದೇನೇ ನಿಮ್ಮ ಕೆಲಸ ಮಾಡುತ್ತಿರಿ. ಫಲಿತಾಂಶವು ನನ್ನ ಕೈಯ್ಯಲ್ಲಾಗಲೀ, ಡಾಕ್ಟರ್ ಅನ್ಸಾರಿಯವರ ಕೈಯ್ಯಲ್ಲಾಗಲೀ, ಪಂಡಿತ ಮದನ ಮೋಹನ ಮಾಳವೀಯರ ಕೈಯ್ಯಲ್ಲಾಗಲೀ, ಇಲ್ಲ, ನಿಮ್ಮ ಕೈಯ್ಯಲ್ಲೇ ಇದೆ. ನಾನು ಒಂದೇ ಯಂತ್ರವಾಗಿದ್ದೇನೆ. ನಿಮ್ಮ ನಮ್ಮ ದಾಯಭಾರಿಯಾಗಿ ನಾನು ಕೆಲಸ ಮಾಡುತ್ತಿರುವದಾಗಿದೆ. ನೀವು ಏನು ಮಾಡುತ್ತೀರಿ, ಏನು ಮಾಡುವುದಿಲ್ಲ ಎಂಬುದರ ಮೇಲೆ ಎಲ್ಲವನ್ನು ಹೊಂದಿದೆ. ಸತ್ಯ ಮತ್ತು ಅಹಿಂಸೆಯ ಪ್ರತಿಜ್ಞೆಯನ್ನು ನಡಿಸಿಕೊಳ್ಳಲು ನಿಮಗೆ ದೇವರು ಶಕ್ತಿ ಕೊಡಲಿ.

ಚರಕ.

ರಾಷ್ಟ್ರೀಯ ಸಾಂಪತ್ತಿಕ ಸುಧಾರಣೆಯಲ್ಲಿ ಚರಕ ಮತ್ತು ಖಾದಿಯ ಪ್ರಾಮುಖ್ಯತೆಯನ್ನು ಮಹಾತ್ಮಾಜಿ ಮತ್ತು ಇನ್ನೂ ಅನೇಕರು ಕಳೆದ 10 ವರ್ಷದಿಂದ ಎಷ್ಟೋ ಸಾರಿ ಉಪನ್ಯಾಸ ಮಾಡಿರುವುದಾದರೂ, ಅದೇ ವಿಷಯವನ್ನು ಇನ್ನಷ್ಟು ಸಾರಿ ಪತ್ರಿಕ ಮೂಲಕವಾಗಿ ಬೋಧಿಸಿದರೆ ಅದು ನಿಷ್ಪ್ರಯೋಜನವಾಗದು. ಏಕೆಂದರೆ—ಹಳ್ಳಿ ಊರುಗಳಲ್ಲಿ ವ್ಯವಸಾಯದ ಕೆಲಸವೆಲ್ಲವೂ ಮುಗಿದು ಕಾಲಕ್ಷೇಪ ಮಾಡುತ್ತಿರುವ ರೈತಾವಳಿ ಜನರಿಗೆ ಸುಲಭವಾಗಿ ಸಾಧಿಸುವಂಥ ಗೃಹಕೈಗಾರಿಕೆ ನೂಲುವುದೊಂದೇ:—

ನೂಲುವುದರ ವಿಷಯವಾಗಿ ಕೆಲವು ಜನರಿಗೆ ಸ್ವಲ್ಪ ತಪ್ಪಭಿಪ್ರಾಯವಿದೆ. ನೂಲುವುದರಿಂದ ಹೊಟ್ಟೆ ತುಂಬುವುದಿಲ್ಲ, ಅದರಿಂದ ಹೆಚ್ಚಿನ ಆದಾಯವಿಲ್ಲವೆಂದು ಹೇಳಿ ಅನೇಕರು, ಸುಮ್ಮನೆ ಕೂತು ಕಾಲ ಕಳೆಯುತ್ತಿರುವರು. ನೂಲುವುದನ್ನೇ ಒಬ್ಬನ ಜೀವನ ಅಥವಾ ಮುಖ್ಯ ಕಸಬನ್ನಾಗಿ ಮಾಡಿಕೊಳ್ಳುವುದಕ್ಕೆ ಯಾರೂ ಹೇಳುವುದಿಲ್ಲ. ಇತರ ಹೆಚ್ಚಿನ ಆದಾಯದ ಕೈಗಾರಿಕೆಯನ್ನಾಗಲಿ, ವ್ಯಾಪಾರವನ್ನಾಗಲಿ, ಸರಕಾರಿ ಉದ್ಯೋಗವನ್ನಾಗಲಿ ಬಿಟ್ಟು ಬಿಟ್ಟು ನೂಲಬೇಕೆಂದು ಯಾರೂ ಬೋಧಿಸುವುದಿಲ್ಲ, ಆದರೆ ವ್ಯವಸಾಯಗಾರರಿಗೆ ಆರು ತಿಂಗಳು ಮಾತ್ರ ಕೆಲಸವಿದ್ದು ಬಾಕಿ ಆರು ತಿಂಗಳು ನಿಷ್ಪ್ರಯೋಜನವಾಗಿ ಕಳೆದು ಹೋಗುತ್ತಿದೆಯೆಂದು ಹೊಸದಾಗಿ ಹೇಳಬೇಕಿಲ್ಲ. ಒಂದು ದೇಶದಲ್ಲಿ ಶೇಕಡ 75 ರಷ್ಟು ವ್ಯವಸಾಯಗಾರರಿದ್ದು ಅವರೆಲ್ಲರೂ ಆರು ತಿಂಗಳು ನಿರುದ್ಯೋಗಿಗಳಾಗಿದ್ದರೆ ದೇಶದ ಸಾಂಪತ್ತಿಕ ಸ್ಥಿತಿಯು ಎಂದೂ ಅಭಿವೃದ್ಧಿಗೊಳ್ಳುವುದಿಲ್ಲ.

ಚರಕದಿಂದ ಬರತಕ್ಕ ಆದಾಯವು ಎಷ್ಟೇ ಅಲ್ಪವಾದರೂ ಅದು ಅಷ್ಟರ ಮಟ್ಟಿಗಾದರೂ ದೇಶದ ಬಡತನವನ್ನು ನೀಗಬಲ್ಲುದೆಂದೇ ಮಹಾತ್ಮಾಜಿಯವರು ಚರಕವನ್ನು ಪ್ರಚಾರಕ್ಕೆ ತಂದರು.

ಹಿಂದೂದೇಶದ ಜನರಲ್ಲಿ ಮುಕ್ಕಾಲು ಪಾಲು ಜನರು ರೈತರಾಗಿದ್ದು, ಇವರೆಲ್ಲರೂ ತಮ್ಮ ಆರು ತಿಂಗಳು ಸಮಯವನ್ನು ವ್ಯರ್ಥವಾಗಿ ಕಳೆದು ಬಿಡುವುದೇ ಹಿಂದೂದೇಶದ ಬಡತನಕ್ಕೆ ಒಂದು ಮುಖ್ಯ ಕಾರಣವಾಗಿದೆ. ಈ ಆರು ತಿಂಗಳ ಸಮಯವನ್ನು ವ್ಯರ್ಥವಾಗಿ ಕಳೆದು ಬಿಡುವುದಕ್ಕೆ ರೈತರಿಗೆ ಸಂತೋಷವಾಗಿಯೂ ಮನಸಿಲ್ಲ. ಆದರೆ, ಬೇರೆ ಯಾವ ಕೆಲಸವನ್ನೂ ಮಾಡುವುದಕ್ಕೆ ನಿವೃತ್ತಿಯಿಲ್ಲದಿರುವುದರಿಂದ ಸಮಯವು ವ್ಯರ್ಥವಾಗಿ ಕಳೆದು ಹೋಗುತ್ತಿದೆ. (It is the forced idleness) ಈ ಸಮಯವನ್ನು ವಿನಿಯೋಗಿಸುವುದಕ್ಕೆ ಏನಾದರೂ ಒಂದೆರಡು ಉಪವೃತ್ತಿಗಳನ್ನು ಕಂಡು ಹಿಡಿಯುವುದು ಅವಶ್ಯವಿದೆ. ಆದರೆ ವ್ಯವಸಾಯಗಾರರು ಕೆಲಸ ಹುಡುಕಿಕೊಂಡು ಇತರ ಕಡೆಗೆ ಹೋಗುವುದಕ್ಕಾಗುವುದಿಲ್ಲ. ಮಾತ್ರ ಮನೆ ಬಾಗಿಲಿನಲ್ಲಿ ಏನಾದರೂ ಕೆಲಸ ಮಾಡುವುದಕ್ಕೆ ದೊರೆತರೆ ಅದನ್ನು ಮಾಡಬಹುದು. ಇಂಥಾ ಕೆಲಸವೇನಾದರ ಸುಲಭವಾಗಿ ಸಾಧಿಸುವದಿದ್ದರೆ ಅದು ನೂಲುವುದೇ. ಏಕೆಂದರೆ

1 ಕಾರ್ಯತಃ ಈ ಕೆಲಸವು ಬಹು ಸುಲಭ.

2. ಇದಕ್ಕೆ ಹೆಚ್ಚು ಹಣ ಬೇಡ. ಇದಕ್ಕೆ ಬೇಕಾದ ಸಾಮಾನುಗಳೆಲ್ಲವೂ ತಯಾರಿಯ ಊರು, ನಾಡು, ದೇಶಗಳಲ್ಲಿಯೇ ದೊರೆಯುವುದು.

3· ಇದಕ್ಕೆ ವಿಶೇಷವಾದ ಮೆದುಳು ಶಕ್ತಿಯಾಗಲಿ, ಚುರುಕಾಗಲಿ ಅವಶ್ಯವಿಲ್ಲ.

4 ಇದಕ್ಕೆ ವಿಶೇಷವಾದ ರಟ್ಟೆಶಕ್ತಿ ಅವಶ್ಯವಿಲ್ಲ. ಇದನ್ನು ಚಿಕ್ಕ ಚಿಕ್ಕ ಮಕ್ಕಳೂ, ಹಣ್ಣಣ್ಣು ಮುದುಕರೂ ಮಾಡಬಹುದು.

5. ಈ ಕೆಲಸವನ್ನು ಒಂದು ವರ್ಷದ ಎಲ್ಲಾ ಸಮಯಗಳಲ್ಲಿ ಮಾಡಬಹುದು.

6. ಇದು ಯಾವ ಮತಾಚಾರಕ್ಕೂ, ಜಾತಿ ಪದ್ಧತಿಗೂ ವಿರೋಧವಾದುದಲ್ಲ.

(4ನೇ ಪುಟದಲ್ಲಿ ಮುಂದುವರಿದಿದೆ.)

ಕೊಡಗು.

೧೯೩೧ನೇ ಇಸವಿ

೨೩ ನೇ ಶುಕ್ರವಾರ.

ಯೂರೋಪಿಯನ್ ನಿವಾಸಿಗಳ ಪ್ರಯೋಜನಕ್ಕಾಗಿ ಆ ವರು ಇದ್ದಾರೆಂದು ಹೇಳುವುದಾದರೆ ಅದು ನಿಜವಲ್ಲ. ಏ ಕೆಂದರೆ—ಇತರ ಹಿಂದೀ ಡಾಕ್ಟರುಗಳಿಂದ ಚಿಕಿತ್ಸೆ ಮಾಡಿಕೊ ಳ್ಳಲು ಯೂರೋಪಿಯನ್ ಜನಾಂಗದವರು ಹಿಂಜರಿದಿರುವು ದಿಲ್ಲ.

ಎಕ್ಸ್‌ರೇ ಮುಖಾಂತರ ಕಾಯಿಲೆಗಳನ್ನು ಕಂಡು ಹಿಡಿದು ದಿನೇ ದಿನೇ ಹೊಸ ಶೋಧನೆಗಳಿಂದ ಹಿಂದೂದೇಶದ ಇತರ ಆಸ್ಪತ್ರೆಗಳು ಕೆಲಸ ಮಾಡುತ್ತಿರುವ ಸಮಯದಲ್ಲಿ ನಮ್ಮ —

1929—30ಕ್ಕೆ

	ಚಿಕಿತ್ಸೆ ಹೊಂದಲ್ಪಟ್ಟ ಕಾಯಿಲಸ್ಥರ ಸಂಖ್ಯೆ.	ಖರ್ಚಾಗುವ ಹಣ.	
...ತ್ರೆ.	29639	51679—0—0	
ಆಸ್ಪತ್ರೆ.	40875	26121—0—0	
...ತ್ರೆಯ ವಾರ್ಡಿ ...ಲ್ಲಿದ್ದು ಚಿಕಿತ್ಸೆ ...ಹೊಂದುವವರು.		ಊಟ ಮತ್ತು ಬಟ್ಟೆ ಖರ್ಚು.	ಔಷಧಿ ಖರ್ಚು.
	1857	6510—0—0	5062—0—0
	1971	6417—0—0	4792—0—0

...ನುಗಳು ಒಟ್ಟಾರೆ ಈ ವರ್ಷದಲ್ಲಿ 2522 ಆಗಿವೆ ...4 ಮೈನರ್ ಆಪರೇಶನುಗಳೂ, 358 ಮೇಜರ್ ...ಳೂ ಆಗಿವೆ.

...ಅಂಕೆಯನ್ನು ನೋಡಿದರೆ ಮಡಿಕೇರಿ ಆಸ್ಪತ್ರೆ ...ಲಸ್ಥರ ಸಂಖ್ಯೆ ಬಹಳ ಕಡಿಮೆ ಇದ್ದರೂ ಹಣ ...ಷ್ಟು ಏತಕ್ಕಾಗಿ ಖರ್ಚು ಮಾಡುತ್ತಾರೆಂಬುದು ...ವೀರರಾಜಪೇಟೆ ಮತ್ತು ಮಡಿಕೇರಿ ಆಸ್ಪ ...ವಶ್ಯವಿದೆ. ಅದು ಔಷಧಿ ಮತ್ತು ಇತರ ಖರ್ಚಿನ ವಿಷಯ ವಾಗಿದೆ. ವೀರರಾಜಪೇಟೆಯಲ್ಲಿ ಕಾಯಿಲಸ್ಥರ ಸಂಖ್ಯೆ ಹೆ ಚ್ಚಾಗಿದ್ದರೂ ಮಡಿಕೇರಿ ಮುನ್ಸಿಪಲ್ಲಿಟಿ ಭಾವನೆಯಿಂದ ಕಾಯಿಲಸ್ಥರ ಸಂಖ್ಯೆಗನುಗುಣವಾಗಿ ಸರಾಸರಿ ಖರ್ಚು ಮಾಡ ದೆ ಮಡಿಕೇರಿಯಲ್ಲಿ ಎಲ್ಲಾ ಬಾಬಿನಲ್ಲಿಯೂ ಏತಕ್ಕಾಗಿ ಹೆ ಚ್ಚು ಖರ್ಚು ಮಾಡುತ್ತಾರೆಂಬುದು ತಿಳಿಯುವುದಿಲ್ಲ. ಇ ನ್ನಾದರೂ ವೀರರಾಜಪೇಟೆಯಲ್ಲಿ ಮಾತ್ರವಲ್ಲ, ಕೊಡಗಿನ ಮಿ ಕ್ಕ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡು ಆಸ್ಪತ್ರೆಗಳಲ್ಲಿಯೂ ಸಹ ಕಾಯಿಲಸ್ಥರ ಸಂಖ್ಯೆಗನುಗುಣವಾಗಿ ಎಲ್ಲಾ ಬಾಬಿನ ಖರ್ಚ ನ್ನು ನಮ್ಮ ಸರಕಾರದವರು ಮಾಡುವ ಏರ್ಪಾಡು ಮಾಡುವ ರಾಗಿ ನಂಬುತ್ತೇವೆ. ಅಲ್ಲದೆ ದೇಶಾಭಿಮಾನಿಗಳೆಲ್ಲರೂ ಈ ವಿಧದ ನ್ಯೂನತೆಗಳನ್ನು ಕೊಡಗಿನ ಮುಖ್ಯಾಧಿಕಾರಿಯಾದ ಚೀ ಫ್ ಕಮಿಶನರವರ ಅವಗಾಹನಕ್ಕೆ ತಂದು ಅನಾವಶ್ಯ ಖರ್ಚ ನ್ನು ಕಡಿಮೆ ಮಾಡಲಿಕ್ಕೂ, ಖರ್ಚಾಗುವ ಹಣವು ಜನರ ಪ್ರ ಯೋಜನಕ್ಕಾಗಿ ನ್ಯಾಯವಾಗಿ ವಿನಿಯೋಗಿಸಲ್ಪಡಲಿಕ್ಕೂ ತ ಕ್ಕ ಚಳವಳ ನಡೆಸುವರೆಂದು ನಂಬುತ್ತೇವೆ.

ಮಲೇರಿಯಾ.

...ರಿಕ್ಕೂ ಇಷ್ಟು ದೊಡ್ಡ ಸಂಬಳದವರು ...ರೂಪಾಯಿ ಖರ್ಚುಮಾಡಿ ಈ ದೇಶ ...ಯಿಲೆಯಿಂದ ಪಾರಾಗಲಿಕ್ಕೆ ಮೈಸೂ... ಇತರ ಕಡೆಗೆ ಎಷ್ಟು ಕಾಯಿಲಸ್ಥ ...ತ್ತು ಅವರು ಏತಕ್ಕಾಗಿ ಹೋಗುತ್ತಾ... ...ಸ್ಪದವಾದ ವಿಷಯವಾಗಿದೆ. ನಮ್ಮ ...ಕೊಡಗಿಗೆ ಬಂದಂದಿನಿಂದ ಆಸ್ಪತ್ರೆಗಳ ಮತ್ತು ಆಫೀಸು ಕೆಲಸವಲ್ಲದೆ ಎಷ್ಟು ...ಲನ್ನು ನೋಡಿದರು ...

...ಡನೆ ನಡೆಸಿದ ಸಂಭಾಷಣೆಗಳನ್ನು ರೌಂಡ್ ಟೇಬಲ್ ಕಾನ್ಫ ರೆನ್ಸಿನ ಪ್ರತಿನಿಧಿಗಳಾದ ಡಾಕ್ಟರ್ ಸಪ್ರೂರವರೇ ಮೊದಲಾದ ಎಂಟು ಜನರನ್ನು ಕರಸಿಕೊಂಡು ವೈಸರಾಯರು ವಿವರಿಸಿದರು. ರಾಜಿ ಸಂಬಂಧವಾಗಿ ವೈಸರಾಯರು ಮಾಡಬೇಕೆಂದಿರುವ ಕಾರ್ಯಗಳಿಗೆ ಈ ರೌಂಡ್ ಟೇಬಲ್ ಸಭಿಕರು ಸಂಪೂರ್ಣ ಒ ಪ್ಪಿಗೆ ಕೊಟ್ಟಿರುವರಂತೆ. ವೈಸರಾಯರು ಮಹಾತ್ಮರನ್ನು ಕೂಡಲೇ ಪುನಹ ಕರೆಸಿಕೊಳ್ಳುತ್ತಾರೆಂತಲೂ ಅವರ ಸಂಭಾಷ ಣೆಗಳು ತೀರಿದ ನಂತರ ಮಹಾತ್ಮರ ಸಂಗಡ ರೌಂಡ್ ಟೇಬ...

Supplement to this Day's issue

1931

ಲೇ ನನಗೆ ತೋರುತ್ತದೆ ಆದರೆ ನಾನು ವೋಸ ಹೋಗ ಲಾರೆನು, ನೀವು ಮೋಸ ಹೋಗಬಾರದು ನಾವು ಸತ್ಯವನ್ನೂ, ಅಹಿಂಸೆಯನ್ನೂ ಅನುಸರಿಸಿದ್ದೇವೆ ಆದರೆ ಅವನ್ನು ನಮ್ಮ ಧರ್ಮವಾಗಿ ಮಾಡಿಕೊಂಡಿರುವುದಿಲ್ಲ ಕಲಕರಿಗೆ ಅವು ಈಗಿನ ಕಾರ್ಯ ಕ್ರಮದ ರೀತಿಯಾಗಿದೆಯಷ್ಟೆ ಆದರೆ ಕಾರ್ಯ ಕ್ರಮದ ರೀತಿಯಾಗಿರುವಷ್ಟು ಕಾಲ ನೀವು ಹಿಂಸಾ ಮಾರ್ಗದಲ್ಲಿ ನಡೆಯಬಾರದು, ಯೋಚನೆಯನ್ನು ಸಹ ಬಾರದು ಅಸತ್ಯ ಅಥವಾ ಹಿಂಸೆಯ ಯೋಚನೆ ಮಾಡಿದರೇನೇ ನಿಮ್ಮ ಪ ಮಾಣಕ್ಕೆ ವಿರೋಧವಾಯಿತು ಅಹಮದಾಬಾದ್ ಕಾಂ

ಗ್ರೆಸಿಗಳ ಧರ್ಮವೆಂತ ನಾನು ವಿನಯ ತ್ತೇನೆ. ಅವರು ತ್ಯಾಗವಾಡಲೇ ದಾಯದ ಬೇರೆ ಜನರು ಮಾಡುತ್ತಿರ ದರೆ ಇವರ ತ್ಯಾಗವು ಯಾವ ಲೆಕ್ಕ

ಡಿಲ್ಲಿ ನಿವಾಸಿಗಳೇ, ಸಾವಿರ ಗ ರದಷ್ಟು ನನ್ನನ್ನು ಗೌರವಿಸಲಿಕ್ಕಾಗಿ ದಿಲ್ಲಿ ಪೂರ್ಣ ಸ್ವರಾಜ್ಯವನ್ನು ನಿಶ್ಚಯ ಮಾಡಿದ್ದೀರಿ ಎಂಬದನ್ನು ಗಿ ವೀನ ನೆಗೆ ... ಮೆ ಸರಾಯ

... ಹೇಳುತ್ತಿರು ವರಾಗಿದೆ ಪರದೇಶೀ ಒಟ್ಟೆ ಮಾರಾಟವನ್ನು ಪಿಕೆಟ್ ಮಾಡುವುದರಲ್ಲಿ ನಮ್ಮ ಜನರು ಕೆಲವು ಮಟ್ಟಿಗೆ ಅತ್ಯಾಚಾರ ನಡಿಸಿದಂತ ನಾನು ಕೇಳಿದಾಗ ನನಗೆ ತುಂಬಾ ನೋವಾಯಿತು ಆದರೆ ಈ ಹೇಳಿಕೆಯ ನಿಜತ್ವವನ್ನು ಅಜಮಾಯಿಷ ಮಾಡಿ ತಿಳಿಯಲು ಇನ್ನೂ ಆಗಲಿಲ್ಲ ಆದರೆ 1921—22 ರಲ್ಲಿ ಇಂಥಾ ಅತ್ಯಾಚಾರದ ಉಪಶಮನಕ್ಕಾಗಿ ಈ ಚಳವಳವನ್ನೇ ನಿಲ್ಲಿಸಿಬಿಟ್ಟೆ ಎಂತ ನಿಮಗೆ ಗೊತ್ತಿರುವದು ಆದರೆ ಅಂಥಾ ಉಪಶಮನವನ್ನು ಈಗ ಮಾಡುವುದು ಸಾಧ್ಯವಿಲ್ಲ ಆದರ ಅತ್ಯಾಚಾರಗಳು ನಡಿಯುವುದು ಹಾದಾದರೆ ಅಂಥಲ್ಲೆಲ್ಲಾ ಅವು ನಿಲ್ಲರೇ ಬೇಕಂತ ಖಂಡಿತವಾಗಿಯೂ ಹೇಳುತ್ತೇನೆ

ಪರದೇಶೀ ಬಟ್ಟೆ ವ್ಯಾಪಾರಿಗಳು ಅವರ ವ್ಯಾಪಾರವನ್ನು ನಡಿಸಿದರೂ ಚಿಂತೆಯಿಲ್ಲ ಕುಡಿಯುವವರು ಕುಡಿಯುತ್ತಿದ್ದರೂ ಚಿಂತೆಯಿಲ್ಲ ನಾವು ಪಿಕೆಟ್ ಮಾಡುವುದರಲ್ಲಿ ಅತ್ಯಾಚಾರ ನಡಿಸಬಾರದು ಇನ್ನೊಂದು ಅಪಾಯವಿದೆಯೆಂತ ನಾನ ನಿಮಗೆ ಎಚ್ಚರಿಸಬೇಕಾಗಿದೆ ಇಂಥಾ ಅತ್ಯಾಚಾರಗಳಿಗೆ ನಾವು ಇಳಿದರೆ ಸ್ವರಾಜ್ಯ ಒಂದಾಗ ನಮ್ಮನ್ನು ನಾವೇ ನಾಶಮಾಡಿಕೊಳ್ಳಲು ಅವಕಾಶವಾದೀತು ಯಾಕೆಂದರೆ—

... ಕಾಲಕ್ಕೇ ರುವ ರೈತಾವಳಿ ಜನರಿಗೆ ಸುಲಭವಾಗಿ ಸಾಧ್ಯ ರಕೆ ನೂಲುವುದೊಂದೆ—

ನೂಲುವುದರ ವಿಷಯವಾಗಿ ಕೆಲವು ಜನ ಪ್ರಭಿಪ್ರಾಯವಿದೆ ನೂಲುವುದರಿಂದ ಹೊಟ್ಟೆಲ್ಲ ಆದರಿಂದ ಹೆಚ್ಚಿನ ಆದಾಯವಿಲ್ಲವೆಂದು ಹೇ ಸುಮ್ಮನೆ ಕೂತು ಕಾಲ ಕಳೆಯುತ್ತಿರುವವ ನ್ನೇ ಒಪ್ಪಿನ ಜೀವನ ಅಥವಾ ಪಟ್ಟು ಕಸಬು ಕೊಳ್ಳುವುದಕ್ಕೆ ಯಾರೂ ಹೇಳ ವುದಿಲ್ಲ ಇತ ದಾಯದ ಕೈಗಾರಿಕೆಯನ್ನಾಗಲಿ ವ್ಯಾಪಾರವ ಕಾರಿ ಉದ್ಯೋಗವನ್ನಾಗಲಿ ಬಿಟ್ಟು ಬಿಟ್ಟು ನೂ ಯಾರೂ ಬೋಧಿಸುವುದಿಲ್ಲ, ಆದರೆ ವ್ಯವಸಾಯ ಉ ತಿಂಗಳು ಮಾತ್ರ ಕೆಲಸವಿದ್ದು ಬಾಕಿ ಆರು ಪ್ರಯೋಜನವಾಗಿ ಕಳೆದು ಹೋಗುತ್ತಿದೆಯೆ ವಾಗಿ ಹೇಳಬೇಕಿಲ್ಲ ಒಂದು ದೇಶದಲ್ಲಿ ಶೇಕ ವ್ಯವಸಾಯಗಾರರಿದ್ದು ಅವರೆಲ್ಲರೂ ಆರು ತಿಂ ಗಳುಗಳಾಗಿದ್ದರೆ ದೇಶದ ಸಾಂಪತ್ತಿಕ ಸ್ಥಿತಿಯು ಭಿವೃದ್ಧಿಗೊಳ್ಳುವುದಿಲ್ಲ.

... ತ್ಯಾಗಗಳನ್ನು ಸಂಪೂರ್ಣವಾಗಿ ಬಿಟ್ಟು ಬಿಡಬೇಕೆಂತ ವಿನಂತಿ ಮಾಡಿಕೊಳ್ಳುತ್ತೇನೆ. ಅತ್ಯಾಚಾರಗಳೆಂದರೆ ಏನೆಂತ ತಿಳಿಯಲು ಅಪೇಕ್ಷೆ ಇರಬಹುದು ತಿಳಿಯಬೇಕಂತ ಇರುವವರು ನನ್ನಲ್ಲಿಗೆ ಬಂದರೆ ತಿಳಿಸುತ್ತೇನೆ

ಪರದೇಶೀ ಬಟ್ಟೆ ವ್ಯಾಪಾರಿಗಳಿಗೆ ಒಂದು ಮಾತು ಕೆಲವು ತಿಂಗಳ ಮಟ್ಟಿಗೆ ಮಾತ್ರ ಪರದೇಶೀ ಒಟ್ಟೆ ವ್ಯಾಪಾರ ನಿಲ್ಲಿಸಿದ್ದರಿಂದ ನಿಮ್ಮ ಕೆಲಸವಾಯಿತೆಂತ ತಿಳಿದುಕೊಂಡು ನಿಮ್ಮನ್ನು ವಂಚಿಸಿಕೊಳ್ಳಬೇಡಿ ದೇಶವನ್ನೂ ವಂಚಿಸಬೇಡಿ ಪರದೇಶೀ ಒಟ್ಟೆ ವ್ಯಾಪಾರವು ಶಾಶ್ವತವಾಗಿ ನಿಲ್ಲಬೇಕು

ಸಾಮಾನುಗಳೆಲ್ಲವೂ ಆಯಾಯ ಊರು ಯೇ ದೊರೆಯುವುದು

3 ಇದಕ್ಕೆ ವಿಶೇಷವಾದ ಮೆದುಳ ಚುರುಕಾಗಲಿ ಅವಶ್ಯವಿಲ್ಲ

4 ಇದಕ್ಕ ವಿಶೇಷವಾದ ರಟ್ಟೆಶಕ್ತಿ ದನ್ನು ಚಿಕ್ಕ ಚಿಕ್ಕ ಮಕ್ಕಳೂ, ಹೆಣ್ಣಾಣ್ಣು ಡಬಹುದು

5 ಈ ಕಲಸವನ್ನು ಒಂದು ವರ್ಷದ ಲ್ಲೂ ಮಾಡಬಹುದು.

ಕೊಡಗು.

ಸ. ೧೯೩೧ನೇ ಇಸವಿ

ಫೆಬ್ರವರಿ ತಾ. ೨೭ ನೇ ಶುಕ್ರವಾರ.

ಕೊಡಗಿನ ವೈದ್ಯಾ ಇಲಾಖೆ.

ಕೊಡಗಿನಲ್ಲಿ ಪ್ರಾಂತೀಯ ಸರಕಾರದವರಿಂದ ನಡೆಸಲ್ಪಡುವ ಎರಡು ಆಸ್ಪತ್ರೆಗಳೂ, ಎಂಟು ಡಿಸ್ಟ್ರಿಕ್ಟ್ ಬೋರ್ಡ್ ಆಸ್ಪತ್ರೆಗಳೂ ಇವೆ. ಒಟ್ಟಾರೆ ಈ ಆಸ್ಪತ್ರೆಗಳಿಗಾಗಿ ವರ್ಷಂಪ್ರತಿ ಸರಾಸರಿ ಒಂದು ಲಕ್ಷ ಹತ್ತು ಸಾವಿರ ರೂಪಾಯಿ ಖರ್ಚಾಗುತ್ತಾ ಇದೆ. ಸರಕಾರದವರು ಇಷ್ಟು ಹಣ ಖರ್ಚು ಮಾಡಿದರೂ ಖರ್ಚು ಮಾಡುವ ಹಣಕ್ಕೆ ಸರಿಯಾಗಿ ಪ್ರಯೋಜನ ಸಿಕ್ಕುವುದಿಲ್ಲವೆಂಬುದಾಗಿ ದೇಶದವರು ಹೇಳುವ ದೂರು ನ್ಯಾಯ ಸಮ್ಮತವಾಗಿದೆ.

ಕೊಡಗಿನ ಸರಕಾರದಲ್ಲಿ ಯಾವದೊಂದೂ ಕ್ರಮಕ್ಕೂ, ನ್ಯಾಯಕ್ಕೂ ಸರಿಯಾಗಿಲ್ಲವೆಂದು ನಾವು ಆಗಿಂದಾಗ್ಗೆ ಹೇಳುತ್ತಾ ಇದ್ದೇವೆ. ಮಡಿಕೇರಿ ಮತ್ತು ವೀರಾಜಪೇಟೆಯ ಆಸ್ಪತ್ರೆಗಳಲ್ಲಿ ಆಗುತ್ತಿರುವ ಖರ್ಚು, ಖಾಯಿಲಸ್ಥರ ಸಂಖ್ಯೆ, ವಗೈರೆ ವಿಚಾರಗಳನ್ನು ಈ ಕೆಳಗಿನ ಪಟ್ಟಿಯಿಂದ ನೋಡಿದರೆ ಎಲ್ಲಾ ವಿಷಯವೂ ವೇದ್ಯವಾಗುತ್ತೆ.

1929—30ಕ್ಕೆ

	ಚಿಕಿತ್ಸೆ ಹೊಂದಲ್ಪಟ್ಟ ಖಾಯಿಲಸ್ಥರ ಸಂಖ್ಯೆ.	ಖರ್ಚಾಗುವ ಹಣ.
ಮಡಿಕೇರಿ ಆಸ್ಪತ್ರೆ.	29639	51679—0—0
ವೀರಾಜಪೇಟೆ ಆಸ್ಪತ್ರೆ.	40875	26121—0—0

	ಆಸ್ಪತ್ರೆಯ ವಾರ್ಡಿನಲ್ಲಿಟ್ಟು ಚಿಕಿತ್ಸೆ ಹೊಂದುವವರು.	ಊಟ ಮತ್ತು ಬಟ್ಟೆ ಖರ್ಚು.	ಔಷಧಿ ಖರ್ಚು.
ಮಡಿಕೇರಿ.	1857	6510—0—0	5062—0—0
ವೀರಾಜಪೇಟೆ.	1971	6417—0—0	4792—0—0

ಆಪರೇಶನುಗಳು ಒಟ್ಟಾರೆ ಈ ವರ್ಷದಲ್ಲಿ 2522 ಆಗಿವೆ. ಈ ಪೈಕಿ 2164 ಮೈನರ್ ಆಪರೇಶನುಗಳೂ, 358 ಮೇಜರ್ ಆಪರೇಶನುಗಳೂ ಆಗಿವೆ.

ಮೇಲಿನ ಅಂಕೆಯನ್ನು ನೋಡಿದರೆ ಮಡಿಕೇರಿ ಆಸ್ಪತ್ರೆಯಲ್ಲಿ ಖಾಯಿಲಸ್ಥರ ಸಂಖ್ಯೆ ಬಹಳ ಕಡಿಮೆ ಇದ್ದರೂ ಹಣ ಮಾತ್ರ ಎರಡರಷ್ಟು ಏತಕ್ಕಾಗಿ ಖರ್ಚು ಮಾಡುತ್ತಾರೆಂಬುದು ತಿಳಿಯುವುದಿಲ್ಲ. ವೀರಾಜಪೇಟೆ ಮತ್ತು ಮಡಿಕೇರಿ ಆಸ್ಪತ್ರೆಗಳ ಸ್ಥಿತಿಯನ್ನು ಹೋಲಿಸಿದರೆ ವೀರಾಜಪೇಟೆಯ ಸ್ಥಿತಿಯೇ ಎಷ್ಟೋ ಉತ್ತಮವಾಗಿದೆ. ಕೊಡಗಿನ ಚೀಫ್ ಕಮಿಶನರು ಸಹ ಕಳೆದ ತಿಂಗಳಲ್ಲಿ ವೀರಾಜಪೇಟೆ ಆಸ್ಪತ್ರೆಗೆ ದಯಮಾಡಿಸಿದ್ದರು. ಅವರಿಗೆ ಈ ವಿಷಯ ಚೆನ್ನಾಗಿ ತಿಳಿದಿರಬಹುದಾಗಿ ನಂಬ ಬೇಕಾಗಿದೆ.

ಮಡಿಕೇರಿ ಆಸ್ಪತ್ರೆಯಲ್ಲಿರುವ ಖರ್ಚನ್ನು ಕೂಡಲೇ ಕಡಿಮೆ ಮಾಡಿ ಉಳಿಕೆಯಾಗುವ ಹಣದಿಂದ ಮಡಿಕೇರಿ ಮತ್ತು ವೀರಾಜಪೇಟೆಗೆ ಇಬ್ಬರು ಲೇಡೀ ಡಾಕ್ಟರುಗಳನ್ನು ಇಡುವುದು ಎಷ್ಟು ಅವಶ್ಯವೆಂದು ನಾವು ಹೇಳಲಾರೆವು. ಏನಾದರೂ ಸ್ತ್ರೀಯರು ತಮ್ಮ ತರೀಂದ ಕಷ್ಟ ಮತ್ತು ವೇದನೆಗಳನ್ನು ಇನ್ನೊಬ್ಬ ಸ್ತ್ರೀಗೆ ಮನಬಿಟ್ಟು ಹೇಳುವ ಹಾಗೆ ಪುರುಷನಿಗೆ ಎಂದೂ ಹೇಳಲಿಕ್ಕಿಲ್ಲ. ಅಲ್ಲದೆ ಸ್ತ್ರೀಯಾಗಿ ಇರುವ ಡಾಕ್ಟರಳು ತಾನು ಸದರಿ ವರ್ಗಕ್ಕೆ ಸೇರಿದವಳಾದ್ದರಿಂದ ಕ್ಷಣದಲ್ಲಿಯೇ ತನ್ನ ಸಹವರ್ಗದ ಕಷ್ಟವನ್ನು ಕಂಡು ಹಿಡಿಯಬಲ್ಲಳು.

ಕೊಡಗಿನ ಒಡೆ ಸರಕಾರದಲ್ಲಿ ತಿಂಗಳಿಗೆ ಸಾವಿರಾರು ರೂಪಾಯಿ ಸಂಬಳ ಸಲ್ಲುವ ಸಿವಿಲ್ ಸರ್ಜನ್ನರನ್ನಿಟ್ಟದ್ದು ದೇಶಕ್ಕೆ ತುಂಬಾ ನಷ್ಟವಾಗಿರುತ್ತೆ. ಇವರಾದರೂ ಮಾಡುವದೇನು ? ತುಂಬಾ ಪರೀಕ್ಷೆ ಪಾಸಾಗಿದ್ದರೂ ಜನರಿಗೆ ಇವರಿಂದ ಹೆಚ್ಚಿನ ಪ್ರಯೋಜನವಾಗುವಂತಿಲ್ಲ. ತನ್ನ ತಾಬೆಯಲ್ಲಿರುವ ಆಸ್ಪತ್ರೆಗಳನ್ನು ಸಂದರ್ಶಿಸುವುದಕ್ಕೂ, ಆಫೀಸು ಕೆಲಸವನ್ನು ನೋಡಿಕೊಂಡಿರಲಿಕ್ಕೂ ಇಷ್ಟು ದೊಡ್ಡ ಸಂಬಳದವರು ಏಕೇ ? ಸಾವಿರಾರು ರೂಪಾಯಿ ಖರ್ಚುಮಾಡಿ ಈ ದೇಶದಿಂದ ಹೇಗಾದರೂ ಖಾಯಿಲೆಯಿಂದ ಪಾರಾಗಲಿಕ್ಕೆ ಮೈಸೂರು, ಬೆಂಗಳೂರು ಮತ್ತು ಇತರ ಕಡೆಗೆ ಎಷ್ಟು ಖಾಯಿಲಸ್ಥರು ಹೋಗುತ್ತಾರೆ ಮತ್ತು ಅವರು ಏತಕ್ಕಾಗಿ ಹೋಗುತ್ತಾರೆಂಬುದೂ ಸಹ ಚರ್ಚಾಸ್ಪದವಾದ ವಿಷಯವಾಗಿದೆ. ನವ ಸಿವಿಲ್ ಸರ್ಜನ್ನರು ಕೊಡಗಿಗೆ ಬಂದಂದಿನಿಂದ ಆಸ್ಪತ್ರೆಗಳನ್ನು ಸಂದರ್ಶಿಸಿದ್ದು ಮತ್ತು ಆಫೀಸು ಕೆಲಸವಲ್ಲದೆ ಎಷ್ಟು ಮೇಜರ್ ಆಪರೇಶನುಗಳನ್ನು ಮಾಡಿದರು ಮತ್ತು ಯಾವ ಯಾವ ತರದ ಜನ ಮೆಚ್ಚುಗೆ ತಕ್ಕ ಚಿಕಿತ್ಸೆಯನ್ನು ಮಾಡಿದರೆಂಬುದನ್ನು ಕೊಡಗಿನ ಮುಖ್ಯಾಧಿಕಾರಿಯಾದ ಚೀಫ್ ಕಮಿಶನರು ಕೇಳಿದರೆ ಎಲ್ಲವೂ ಪರಿಷ್ಕಾರವಾಗಿ ತಿಳಿಯುವುದು.

ಯೂರೋಪಿಯನ್ ನಿವಾಸಿಗಳ ಪ್ರಯೋಜನಕ್ಕಾಗಿ ಇವರು ಇದ್ದಾರೆಂದು ಹೇಳುವುದಾದರೆ ಅದು ನಿಜವಲ್ಲ. ಏಕೆಂದರೆ—ಇತರ ಹಿಂದೀ ಡಾಕ್ಟರುಗಳಿಂದ ಚಿಕಿತ್ಸೆ ಮಾಡಿಕೊಳ್ಳಲು ಯೂರೋಪಿಯನ್ ಜನಾಂಗದವರು ಹಿಂಜರಿದಿರುವುದಿಲ್ಲ.

ಎಕ್ಸ್‌ರೇ ಮೂಲಕ ಖಾಯಿಲೆಗಳನ್ನು ಕಂಡು ಹಿಡಿದು ದಿನೇ ದಿನೇ ಹೊಸ ಶೋಧನೆಗಳಿಂದ ಹಿಂದೂದೇಶದ ಇತರ ಆಸ್ಪತ್ರೆಗಳು ಕೆಲಸ ಮಾಡುತ್ತಿರುವ ಸಮಯದಲ್ಲಿ ನಮ್ಮ ಆಸ್ಪತ್ರೆಯವರು ಮಲಗಿದ್ದೇನು ? ಬಹಳ ಕ್ರಯಕೊಟ್ಟು ತಂದ ಎಕ್ಸ್‌ರೇ ಯಂತ್ರವನ್ನು ಉಪಯೋಗಿಸಲಿಕ್ಕೆ ತಿಳಿಯದೆ ಮಣ್ಣು ಹಿಡಿಸಿ ಕಡೆಗಾಲಕ್ಕೆ ಬಹಳ ಕಡಿಮೆ ಕ್ರಯಕ್ಕೆ ಯಾರಿಗೋ ಮಾರಿದರು. ಇಂಥಾ ಕೆಲಸಕ್ಕಾಗಿ ನಮ್ಮ ಸರಕಾರದಿಂದ ಇಷ್ಟು ಸಂಬಳದ ಸಿವಿಲ್ ಸರ್ಜನ್ನರನ್ನಿಡ ಬೇಕೋ ಎಂಬುದಕ್ಕೆ ಸರಕಾರದವರೇ ಉತ್ತರ ಕೊಡಬೇಕಾಗಿದೆ. ಹೊರಗಿನ ಎಲ್ಲಾ ಮೆಡಿಕಲ್ ಸಂಸ್ಥೆಗಳು ಹಿಂದೀ ಮೆಡಿಕಲ್ ಡಿಗ್ರಿಗಳು ಯೂರೋಪಿಯನ್ ಡಿಗ್ರಿಗಳಿಗೆ ಯಾವ ವಿಧದಲ್ಲೂ ಕಡಿಮೆ ಇಲ್ಲವೆಂದು ಸಾರುತ್ತಿರುವಾಗ ಕಡಿಮೆ ಸಂಬಳದಲ್ಲಿ ಒಬ್ಬ ಮೆಡಿಕಲ್ ಯಂ. ಬಿ ಬಿ ಯಸ್. ನ್ನು ಸುಮಾರು ಮುನ್ನೂರು ರೂಪಾಯಿಗಳಿಂದ ಐದು ನೂರು ರೂಪಾಯಿಗಳ ವರೆಗೆ ಸಂಬಳ ಕೊಟ್ಟು ಸಿವಿಲ್ ಸರ್ಜನ್ನರಾಗಿ ಇಟ್ಟರೆ ಸಾಲದೇ. ಇಂಗ್ಲೆಂಡಿನ ಲಂಡನ್ ಮೊದಲಾದ ಮುಖ್ಯ ಪಟ್ಟಣಗಳಲ್ಲಿಯೂ ಜನರು ಇಂಗ್ಲಿಷ್ ವೈದ್ಯರಿಗಿಂತ ಇಂಡಿಯನ್ ವೈದ್ಯರೇ ಕಾರ್ಯ ನಿಪುಣರೆಂದು ತಿಳಿದು ಅವರಿಂದಲೇ ಚಿಕಿತ್ಸೆ ಮಾಡುತ್ತಿರುವ ಈ ಸಮಯದಲ್ಲಿ ನಮ್ಮಲ್ಲಿ ಮಾತ್ರ ಇನ್ನೂ ಇಂಥಾವರನ್ನಿಟ್ಟುಕೊಂಡು ಈ ರೀತಿ ಹಣ ವ್ಯಯ ಮಾಡುವದು ಯಾಕ್ಕಾಗಿ ಎಂಬುದಕ್ಕೆ ನಮ್ಮ ಸರಕಾರದವರು ತಕ್ಕ ಸಮಜಾಯಿಸಿಕೆ ಕೊಡಬೇಕಾಗಿದೆ.

ಇನ್ನೊಂದು ವಿಷಯವನ್ನು ಇಲ್ಲಿ ಹೇಳುವುದು ಅತ್ಯಾವಶ್ಯವಿದೆ. ಅದು ಔಷಧಿ ಮತ್ತು ಇತರ ಖರ್ಚಿನ ವಿಷಯವಾಗಿದೆ. ವೀರಾಜಪೇಟೆಯಲ್ಲಿ ಖಾಯಿಲಸ್ಥರ ಸಂಖ್ಯೆ ಹೆಚ್ಚಾಗಿದ್ದರೂ ಮಡಿಕೇರಿ ಮುಖ್ಯ ಪಟ್ಟಣವೆಂಬ ಭಾವನೆಯಿಂದ ಖಾಯಿಲಸ್ಥರ ಸಂಖ್ಯೆಗನುಗುಣವಾಗಿ ಸರಾಸರಿ ಖರ್ಚು ಮಾಡದೆ ಮಡಿಕೇರಿಯಲ್ಲಿ ಎಲ್ಲಾ ಬಾಬಿನಲ್ಲಿಯೂ ಏತಕ್ಕಾಗಿ ಹೆಚ್ಚು ಖರ್ಚು ಮಾಡುತ್ತಾರೆಂಬುದು ತಿಳಿಯುವುದಿಲ್ಲ. ಇನ್ನಾದರೂ ವೀರಾಜಪೇಟೆಯಲ್ಲಿ ಮಾತ್ರವಲ್ಲ, ಕೊಡಗಿನ ಮಿಕ್ಕ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡ್ ಆಸ್ಪತ್ರೆಗಳಲ್ಲಿಯೂ ಸಹ ಖಾಯಿಲಸ್ಥರ ಸಂಖ್ಯೆಗನುಗುಣವಾಗಿ ಎಲ್ಲಾ ಬಾಬಿನ ಖರ್ಚನ್ನು ನಮ್ಮ ಸರಕಾರದವರು ಮಾಡುವ ಏರ್ಪಾಡು ಮಾಡುವರಾಗಿ ನಂಬುತ್ತೇವೆ. ಅಲ್ಲದೆ ದೇಶಾಭಿಮಾನಿಗಳೆಲ್ಲರೂ ಈ ವಿಧದ ನ್ಯೂನತೆಗಳನ್ನು ಕೊಡಗಿನ ಮುಖ್ಯಾಧಿಕಾರಿಯಾದ ಚೀಫ್ ಕಮಿಶನರವರ ಅವಗಾಹನಕ್ಕೆ ತಂದು ಅನಾವಶ್ಯ ಖರ್ಚನ್ನು ಕಡಿಮೆ ಮಾಡಲಿಕ್ಕೂ, ಖರ್ಚಾಗುವ ಹಣವು ಜನರ ಪ್ರಯೋಜನಕ್ಕಾಗಿ ನ್ಯಾಯವಾಗಿ ವಿನಿಯೋಗಿಸಲ್ಪಡಲಿಕ್ಕೂ ತಕ್ಕ ಚಳವಳ ನಡೆಸುವರೆಂದು ನಂಬುತ್ತೇವೆ.

ಮಲೇರಿಯಾ.

ಇದೇ ಸಂಚಿಕೆಯಲ್ಲಿ ಮಲೇರಿಯಾ ನಿವಾರಣೆ ವಿಷಯದಲ್ಲಿ ಬರೆದು ಬಂದ ಒಂದು ಲೇಖನವನ್ನು ಪ್ರಕಟಿಸಿದ್ದೇವೆ. ಮಲೇರಿಯಾ ನಿವಾರಣೆಗೆ ಪ್ರಯತ್ನಪಡುವ ಎಲ್ಲಾ ದೇಶಾಭಿಮಾನಿಗಳೂ, ಸರಕಾರದವರೂ ಈ ಲೇಖನವನ್ನು ಓದುವುದು ಬಹಳ ಅವಶ್ಯ ಕಾಣುತ್ತೆ. ಮಲೇರಿಯಾದಿಂದ ಬಹಳವಾಗಿ ಸಂಕಟ ಪಡುತ್ತಿದ್ದ ಇಟಲಿ ದೇಶವು ಹೇಗೆ ಪಾರಾಯಿತೆಂದು ಇದರಲ್ಲಿ ನಮೂದಿದೆ.

ಕೊಡಗಿನ ಸಹಕಾರ ಇಲಾಖೆಯ ಮೂಲಕ ಮಲೇರಿಯಾವನ್ನು ಬಹಳ ಸುಲಭದಲ್ಲಿ ನಿವಾರಣೆ ಮಾಡಬಹುದು. ಸರಕಾರದವರು ಈ ವಿಷಯದಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರವರಿಗೆ ಉತ್ತೇಜನ ಕೊಟ್ಟು ನಿವಾರಣೆಯ ಕೆಲಸವನ್ನು ಕೈಕೊಳ್ಳುವರೆಂದು ನಂಬುತ್ತೇವೆ.

ಡಿಲ್ಲಿ ಸಂಭಾಷಣೆಗಳು.

ಮಹಾತ್ಮ ಗಾಂಧಿಯವರಿಗೂ, ವೈಸ್‌ರಾಯರಿಗೂ ನಡೆಯುತ್ತಿರುವ ರಾಜಿ ಸಂಭಾಷಣೆಗಳ ಫಲಿತಾಂಶವೇನಾಗುತ್ತದೆಯೆಂತ ಯಾರಿಗೂ ಹೇಳಲು ಸಾಧ್ಯವಿಲ್ಲದಿದ್ದರೂ ತಾ. 24 ರಲ್ಲಿ ಡಿಲ್ಲಿಯಿಂದ ಬಂದ ವರ್ತಮಾನಗಳಿಂದ ಫಲಕಾರಿಯಾಗಬಹುದೆಂಬ ಸೂಚನೆಗಳಿವೆ. ವೈಸರಾಯರು ಮಹಾತ್ಮರೊಡನೆ ನಡೆಸಿದ ಸಂಭಾಷಣೆಗಳನ್ನು ರೌಂಡ್ ಟೇಬಲ್ ಕಾನ್‌ಫರೆನ್ಸಿನ ಪ್ರತಿನಿಧಿಗಳಾದ ಡಾಕ್ಟರ್ ಸಪ್ರೂರವರೇ ಮೊದಲಾದ ಎಂಟು ಜನರನ್ನು ಕರೆಸಿಕೊಂಡು ವೈಸರಾಯರು ವಿವರಿಸಿದರು. ರಾಜಿ ಸಂಬಂಧವಾಗಿ ವೈಸರಾಯರು ಮಾಡಬೇಕೆಂದಿರುವ ಕಾರ್ಯಗಳಿಗೆ ಈ ರೌಂಡ ಟೇಬಲ್ ಸಭಿಕರು ಸಂಪೂರ್ಣ ಒಪ್ಪಿಗೆ ಕೊಟ್ಟಿರುವರಂತೆ. ವೈಸರಾಯರು ಮಹಾತ್ಮರನ್ನು ಕೂಡಲೇ ಪುನಹ ಕರೆಸಿಕೊಳ್ಳುತ್ತಾರೆಂತಲೂ ಅವರ ಸಂಭಾಷಣೆಗಳು ತೀರಿದ ನಂತರ ಮಹಾತ್ಮರ ಸಂಗಡ ರೌಂಡ್ ಟೇಬಲ್ ಪ್ರತಿನಿಧಿಗಳನ್ನು ಸಹ ಕರೆಸಿಕೊಂಡು, ಮುಂದಿನ ಕಾರ್ಯವನ್ನು ಕುರಿತು ಚರ್ಚಿಸುವರಂತೆ. ಹೇಗೂ ಒಂದು ವಾರದೊಳಗೆ ಯಾವುದಾದರೂ ಒಂದು ತೀರ್ಮಾನಕ್ಕೆ ಬರಬಹುದೆಂತ ಊಹಿಸಲಾಗಿದೆ.

ಕಾಂಗ್ರೆಸ್ ಸದಸ್ಯರೊ ಸಹ ರಾಜಿ ಸಂಭಾಷಣೆಗಳು ಸುಲಭವಾಗಿ ನಡೆಯುವಂತೆ ವೈಸರಾಯರೊಂದಿಗೆ ರಾಜಿ ಮಾಡಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವನ್ನು ಮಹಾತ್ಮ ಗಾಂಧಿಯವರಿಗೆ ಕೊಟ್ಟಿರುತ್ತಾರೆ. ವೈಸರಾಯರಲ್ಲಿ ಚರ್ಚಿಸುವಾಗ ಕಾಂಗ್ರೆಸಿನ ಶರತ್ತುಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಮಾಡಿಕೊಳ್ಳಬೇಕಾದರೂ ಸಹ ವರ್ಕಿಂಗ್ ಕಮಿಟಿಯನ್ನು ಕೇಳಬೇಕಾದ ಆವಶ್ಯಕತೆ ಇದರಿಂದ ತಪ್ಪಿರುತ್ತೆ. ರಾಜಿ ಸಂಭಾಷಣೆಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡಿಕೊಳ್ಳಬೇಕಾದ ಆವಶ್ಯಕತೆ ಬಿದ್ದೇ ಬೀಳುತ್ತದೆ. ಮಹಾತ್ಮರಲ್ಲಿ ಹಿಂದೂಸ್ಥಾನವು ಆಧಾರವಾಗಿದೆಯೆಂಬ ಮಾತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮಹಾತ್ಮರಿಗೆ ಕೊಟ್ಟ ಸಂಪೂರ್ಣ ಸ್ವಾತಂತ್ರ್ಯದಿಂದ ಪ್ರತ್ಯಕ್ಷವಾಯಿತು. ಕಾಂಗ್ರೆಸಿನ ಅಧ್ಯಕ್ಷರಾದ ಪಂಡಿತ ಜವಾಹರ್ ಲಾಲರು ಸಹ ತಾವು ಗಾಂಧಿಯವರಿಂದ ಉಪದೇಶನ್ನು ಪಡೆದ ಶಿಪಾಯಿಗಳೆಂತಲೂ, ಗಾಂಧಿಜೀಯವರು ಹೇಳಿದ ಕೆಲಸ ಮಾಡಲು ತಯಾರಾಗಿದ್ದಾರೆಂತಲೂ ಹೇಳಿದ್ದಾರೆ.

ಮುಸಲ್ಮಾನರ ಪರವಾಗಿ ಕೋಮುವಾರು ಹಕ್ಕುಗಳನ್ನು ಕೇಳುವ ಸರ್ ಮಹಮ್ಮದಶಫಿ ಮುಂತಾದವರು ಮಹಾತ್ಮರನ್ನು ಕರೆಸಿಕೊಂಡು ಹಿಂದೂ ಮುಸಲ್ಮಾನ್ ಒಗ್ಗಟ್ಟಿಗಾಗಿ ಕೆಲಸ ಮಾಡಬೇಕೆಂತ ಕೇಳಿಕೊಂಡಿರುತ್ತಾರೆ. ಇದರಿಂದಲೂ ಹಿಂದೂಸ್ಥಾನದಲ್ಲಿ ಮಹಾತ್ಮಜೀಯವರಿಗೆ ಇರುವ ಅಸಾಧಾರಣ ಪದವಿಯು ಸ್ಪಷ್ಟವಾಗುತ್ತದೆ. ಹೀಗಿರುತ್ತಾ ಮಹಾತ್ಮಾಜೀಯವರನ್ನು ಬಿಟ್ಟು ಮಾಡಿಕೊಳ್ಳುವ ಯಾವ ರಾಜಕೀಯ ರಚನೆಯೂ ಹಿಂದೀಯರಿಗೆ ಒಪ್ಪಿಗೆಯಾಗತಕ್ಕದ್ದಲ್ಲವೆಂತ ಬ್ರಿಟಿಷ್ ಜನಾಂಗವು ತಿಳಿದುಕೊಳ್ಳಬಹುದು. ರೌಂಡ್ ಟೇಬಲ್ ಕಾನ್‌ಫರೆನ್ಸಿನ ಪ್ರತಿನಿಧಿಗಳು ಸಹ ಕಾಂಗ್ರೆಸ್ಸನ್ನು ಅಂದರೆ ಗಾಂಧಿಜೀಯವರನ್ನು ಸೇರಿಸಿಕೊಳ್ಳದೆ ಕಾನ್‌ಫರೆನ್ಸಿನ ಕಾರ್ಯವನ್ನು ಮುಂದರಿಸಿದರೆ ಪ್ರಯೋಜನವಿಲ್ಲವೆಂತ ವೈಸರಾಯರಿಗೆ ತಿಳಿಸಿರುತ್ತಾರೆ. ಮಹಾತ್ಮಾಜೀಯವರಿಗೆ ಇರುವ ಈ ಶಕ್ತಿಯನ್ನು ತಿಳಿದೇ ವೈಸರಾಯರು ಮಹಾತ್ಮರ ಸಂಗಡ ದೀರ್ಘಕಾಲ ಸಂಭಾಷಣೆ ನಡಿಸುತ್ತಿರುವುದಾಗಿದೆ. "ರಾಜದ್ರೋಹಿ ಫಕೀರನಾದ ಗಾಂಧಿಯು ವೈಸರಾಯರ ಅರಮನೆಗೆ ಸಂಗಮಾಸನದಲ್ಲಿ ಸಂಭಾಷಣೆ ನಡಿಸಲು ಹೋಗುವುದರಿಂದ ಗಾಬರಿಗೂ, ಅಸಹ್ಯತೆಗೂ ಎಡೆಯಾಗಿದೆ" ಯೆಂತ ವೈಸರಾಯರ ಪಾರ್ಟಿಗೆ ಸೇರಿದ ಮಿ ಚರ್ಚಿಲರು ಹೇಳುತ್ತಿದ್ದರೂ ಹಿಂದೀ ಜನಾಂಗವನ್ನು ಸಂಪೂರ್ಣವಾಗಿ ಅರಿತುಕೊಂಡ ಲಾರ್ಡ್ ಇರ್ವಿನರು ಧೈರ್ಯಗುಂದದೆ ಮನಃಪೂರ್ತಿಯಾಗಿ ರಾಜಿ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯವಾಗಿದೆ.

ಈ ಚಳವಳದಲ್ಲಿ ಪೋಲೀಸಿನವರು ನಡಿಸುತ್ತಿರುವ ಅತ್ಯಾಚಾರಗಳ ಕುರಿತು ವಿಚಾರಣೆಯಾಗಬೇಕೆಂಬ ಮಹಾತ್ಮರ ಶರತ್ತನ್ನು ಕೆಲವು ಮಟ್ಟಿಗೆ ವೈಸರಾಯರು ಒಪ್ಪುವಂತೆ ತಿಳಿದು ಬಂದಿದೆ. ಪೋಲೀಸಿನವರ ಎಲ್ಲಾ ಕೃತ್ಯಗಳ ಕುರಿತಲ್ಲದಿದ್ದರೂ ಕೆಲವು ಕಡೆಗಳಲ್ಲಿ ಮಾತ್ರ ನಡಿಸಿದ ಅತ್ಯಾಚಾರಗಳ ಕುರಿತು ಮಾಪರು ಜಡ್ಜಿಯರಿಂದ ತನಿಖಿ ನಡಿಸುವಂತೆ ವರ್ತಮಾನಗಳಿವೆ. ಅತ್ಯಾಚಾರ ನಡಿಸಿದ ಪೋಲೀಸ್ ಅಧಿಕಾರಿಗಳಿಗೆ ಶಿಕ್ಷೆ ಮಾಡಿಸಬೇಕೆಂತ ಮಹಾತ್ಮರು ಕೇಳುವುದೆಂತ ಕೆಲವು ಅಧಿಕಾರಿಗಳು ಗಾಬರಿಗೊಂಡಿದ್ದರೂ ಮಹಾತ್ಮರ ಉದ್ದೇಶವದೇನೂ ಅಲ್ಲ. ಈ ಚಳವಳದಲ್ಲಿ ಕಾಂಗ್ರೆಸ್ ಪಕ್ಷದವರ ಮೇಲೆ ಅಲ್ಲಲ್ಲಿ ಮಾಡುವ ಆಕ್ಷೇಪಕ್ಕೆ ಎಡೆಯಿಲ್ಲವೆಂತಲೂ, ಆಕ್ಷೇಪಕರವಾದ ವರ್ತನೆಯೇನಾದರೂ ಇದ್ದರೆ ಸರಕಾರದ ಅಧಿಕಾರಿಗಳದ್ದೇ ಆಗಿದೆಯೆಂತಲೂ ತೋರಿಸಬೇಕಾದದ್ದೇ ಮಹಾತ್ಮರ ಉದ್ದೇಶವಿರಬಹುದು.

ಈ ಕಾಂಗ್ರೆಸ್ ಶರತ್ತಿಗೆ ವೈಸರಾಯರು ಒಪ್ಪಿದರೆ ಇತರ ಶರತ್ತುಗಳನ್ನು ಸ್ವಲ್ಪ ಹೆಚ್ಚು ಕಡಿಮೆಯಲ್ಲಿ ಸರಕಾರವು ಒಪ್ಪಿಕೊಳ್ಳಬಹುದೆಂತಲೂ ಹೇಳ ಬಹುದು. ಶೀಘ್ರವಲ್ಲೇ ರಾಜಿಯಾಗಿ ಹಿಂದೂಸ್ಥಾನದ ಗೌರವಕ್ಕೆ ಕೊರತೆ ಇಲ್ಲದಂಥ ತೀರ್ಮಾನಗಳಾಗಲಿ ಎಂತ ಪ್ರಾರ್ಥಿಸುತ್ತೇವೆ.

ಅಬ್ಕಾರಿ ಉತ್ಪತ್ತಿ.

ಕಳೆದ ವಾರ ಆದ ಹರಾಜಿನಿಂದ ಅಬ್ಕಾರಿ ಉತ್ಪತ್ತಿಯು ಶೇಕಡ 40ರಷ್ಟು ಕಳೆದ ವರ್ಷದ ಉತ್ಪತ್ತಿಗಿಂತ ಕಡಿಮೆಯಾಗಬಹುದೆಂದು ಅಂದಾಜು ಮಾಡಬಹುದು. ಈ ಉತ್ಪತ್ತಿಯು ಹಿಂದೂದೇಶದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಬಹಳ ಮಟ್ಟಿಗೆ ಕಡಿಮೆಯಾದ್ದರಿಂದ ಸರ್ಕಾರದ ಮುಂದಿನ ಖರ್ಚನ್ನು ಹೇಗೆ ಸಂಪಾದಿಸುವುದೆಂಬ ಪ್ರಶ್ನೆಯು ಎಲ್ಲಾ ಸರ್ಕಾರದವರು ಪರ್ಯಾಲೋಚಿಸುತ್ತಲಿದ್ದಾರೆ.

ನಮ್ಮ ದೇಶದ ಸ್ಥಿತಿಯಲ್ಲಿ ರೈತನು ಬಹಳ ಬಡವನು. ಅವನಿಗೆ ಕಂದಾಯ ಕಟ್ಟಲಿಕ್ಕೆ ಗತಿ ಇಲ್ಲದಂತಾಗಿದೆ. ಪುನಃ ಹೆಚ್ಚು ಭೂ ಕಂದಾಯ ಹಾಕುವುದನ್ನು ಸ್ವಪ್ನದಲ್ಲಿಯೂ ಯೋಚಿಸ ಕೂಡದು. ಆದರೆ ಕಾಫಿ ಕಂದಾಯವನ್ನು ಮಾತ್ರ ಉತ್ಪತ್ತಿಗೆ ಸರಿಯಾಗಿ ಹೆಚ್ಚಿಸ ಬಹುದು. ಅಲ್ಲದೆ ಈಗಿರುವ ತಲೆಭಾರದ ಸರ್ಕಾರವನ್ನು ಕೂಡಲೇ ಕಡಿಮೆ ಮಾಡಿ ಗಜೆಟೆಡ್ ಉದ್ಯೋಗಸ್ಥರ ಸಂಬಳವನ್ನು ಕಡಿಮೆ ಮಾಡಿದರೆ ನಮ್ಮ ಸರ್ಕಾರವು ಖಂಡಿತವಾಗಿಯೂ ದೇಶೀಯರ ಪ್ರೀತಿಗೆ ಪಾತ್ರರಾಗುವುದರಲ್ಲಿ ಸಂದೇಹವಿಲ್ಲ. ಸಿಬ್ಬಂದಿ ಖೋತಿಯಾಗುವುದೆಂದು ವದಂತಿ ಇದ್ದರೂ ಅಂಥಾ ಖೋತೆಯು ಬಡ ನೌಕರರ ಮೇಲೆ ಬೀಳಲಿಕ್ಕಿಲ್ಲವೆಂದು ನಂಬುತ್ತೇವೆ.

ನಮ್ಮ ದೇಶವು ಪ್ರತ್ಯೇಕವಾಗಿಯೇ ಇರಬೇಕೆಂದು ಬಹುಮತ ಜನರು ಅಭಿಪ್ರಾಯ ಪಟ್ಟಿರುವಾಗ್ಯೂ, ಉತ್ಪತ್ತಿಗೆ ಸರಿಯಾದ ಖರ್ಚನ್ನು ಮಾಡುವಂತೆ ಸರ್ಕಾರದವರಿಗೆ ಸೂಚನೆ ಕೊಡುವುದು ಅತ್ಯಾವಶ್ಯಕವಿದೆ. ಅದರಲ್ಲಿಯೂ ನಮ್ಮ ಗವಿಟಿಡ್ ಉದ್ಯೋಗಸ್ಥರುಗಳು ಯಾವಾಗಲೂ ಸ್ವದೇಶ ಪ್ರಿಯರಾಗಿ ದೇಶವನ್ನು ಪ್ರತ್ಯೇಕವಾಗಿ ಇಟ್ಟುಕೊಂಡಿರಬೇಕೆಂದೇ ಹೇಳುವವರಾಗಿರುವಾಗ ದೇಶದ ಸ್ಥಿತಿಗನುಸಾರವಾಗಿ ವಾತ್ಸಲ್ಯದಿಂದ ತಮ್ಮ ಸಂಬಳವನ್ನು ಇಂಗ್ಲೆಂಡಿನ ಮತ್ತು ನ್ಯೂಜಿಲೇಂಡಿನ ಮಂತ್ರಿ ಮಂಡಳವು ಮಾಡಿದಂತೆ ಶೇಕಡ 20%ರಷ್ಟಾದರೂ ಇಳಿಸಲಿಕ್ಕೆ ತಾವಾಗಿ ಒಪ್ಪಿಕೊಂಡು ದೇಶಕ್ಕೆ ಉದಾರಗುಣವನ್ನು ತೋರಿಸುವರೆಂದು ನಂಬುತ್ತೇವೆ

ಚರಕ.

(2ನೇ ಪುಟದಿಂದ ಮುಂದುವರಿದದ್ದು)

7 ಬರಗಾಲವನ್ನು ಇದಿರಿಸುವುದಕ್ಕೆ ಇದು ಅತ್ಯುತ್ತಮವಾದ ದಾರಿ.

8 ಮನುಷ್ಯನಿಗೆ ಊಟದ ಖರ್ಚು ಕಳೆದ ನಂತರ ಬಟ್ಟೆಯ ಖರ್ಚೇ ಹೆಚ್ಚು. ಈ ಬಟ್ಟೆಯ ಖರ್ಚನ್ನು ಕಡಮೆ ಮಾಡಿಕೊಳ್ಳುವುದಕ್ಕೆ ನೂಲುವುದೇ ಒಳ್ಳೆಯ ಉಪಾಯ. ಇಷ್ಟು ಪ್ರಯೋಜನಗಳಿದ್ದರೂ ಇದರ ಆದಾಯವು ಬಹು ಕಡಿಮೆಯೆಂದು ಹೇಳುವವರು ಕೆಲವರಿದ್ದಾರೆ. 500 ಅಥವಾ 1000 ಬಟ್ಟಿ ಭೂಮಿಗಾರರಿಗೆ, 10 ಅಥವಾ 20 ಎಕ್ರೆ ಕಾಫಿ ತೋಟ ಇರುವವರಿಗೆ ನೂಲುವುದರ ಆದಾಯವು ಅತ್ಯಲ್ಪವಾಗಿ ತೋರುವುದು. ಆದರೆ ನೂರು ಬಟ್ಟಿ ಭೂಮಿಗೆ ಕಡಿಮೆ ಇರುವವರು ಶೇಕಡ 50 ರಷ್ಟು ಇದ್ದಾರೆ. ಇವರಿಗೆ ದಿನಕ್ಕೆ 4 ಆಣೆಯಿಂದ ಕಡಿಮೆ ಪಕ್ಷ 1½ ಆಣೆಯಷ್ಟು ಸಂಪಾದನೆಯಾದರೆ 4—5 ಜನರಿರುವ ಒಂದು ಕುಟುಂಬದವರ ಸಂಪಾದನೆಯು ಒಂದು ರೂಪಾಯಿ ಕಡಿಮೆ ಪಕ್ಷ ½ ರೂಪಾಯಿಯಾದರೂ ಆಗುವುದು. ಊರು ಪಟೇಲನು ಸರಕಾರದ 3—4 ರೂಪಾಯಿ ಸಂಬಳಕ್ಕಾಗಿ ಎಷ್ಟೋ ದುಡಿಯುತ್ತಾನೆ. ಮನೆಯಲ್ಲೇ ಕೂತುಕೊಂಡ, ಯಾರ ಹಂಗೂ ಇಲ್ಲದೆ ತಿಂಗಳಿಗೆ 4—5 ರೂಪಾಯಿ ಸಂಪಾದನೆ ಮಾಡಬಹುದಾದ ನೂಲುವ ಕೆಲಸವು ಅತ್ಯಂತ ಕಷ್ಟವಿರುವ ಅಥವಾ ಮರ್ಯಾದೆ ಇಲ್ಲದ ಕೆಲಸವೇನೂ ಅಲ್ಲ.

ಚರಕದಿಂದ ನೂಲುವುದು ಏನೂ ಗತಿ ಇಲ್ಲದವರಿಂದೂ, ಕಾಸಿಗೆ ಕಾಲು ಗಂಟು ಹಾಕುವ ಜಿಪುಣರಿಂದೂ ಕೆಲವು ಮಂದಮತಿಗಳು ಭಾವಿಸಬಹುದು. ಆದರೆ ನೂಲುವುದರಿಂದ ಪ್ರತಿಯೊಬ್ಬನೂ ತನ್ನ ಉದರ ಪೋಷಣೆಯನ್ನು ಮಾಡಿಕೊಳ್ಳುವುದು ಮಾತ್ರವೇ ಅಲ್ಲದೆ, ದೊಡ್ಡ ರಾಷ್ಟ್ರ ಸೇವೆಯನ್ನೇ ಮಾಡಿದಂತಾಗುವುದು.—ರಾಷ್ಟ್ರೀಯ ಸಂಪತ್ತನ್ನು ಹೆಚ್ಚಿಸಿದಂತಾಗುವುದು. ಹಿಂದೂದೇಶದ ಜನರ ಸರಾಸರಿ ಸಂಪಾದನೆಯನ್ನು ಇತರ ದೇಶದ ಜನರ ಸರಾಸರಿ ಉತ್ಪತ್ತಿಯೊಡನೆ ಹೋಲಿಸಿದರೆ, ಯಾವನಿಗಾದರೂ ಹೃದಯ ದ್ರಾವಕವಾಗದಿರದು. ಯು ಎಸ್. ಅಮೇರಿಕದಲ್ಲಿ ಒಬ್ಬನ ಒಂದು ವರ್ಷದ ಸರಾಸರಿ ಉತ್ಪತ್ತಿಯು 1080 ರೂ. ಹಾಗೆಯೇ ಆಸ್ಟ್ರೇಲಿಯ 810 ರೂ. ಇಂಗ್ಲೆಂಡ್ 750 ರೂ. ಫ್ರಾನ್ಸ್ 510 ರೂ. ಜಪಾನು 90 ರೂ. ಹಿಂದೂದೇಶದಲ್ಲಿ ಒಬ್ಬನ ಒಂದು ವರ್ಷದ ಸರಾಸರಿ ಉತ್ಪತ್ತಿ ಬರೀ 36 ರೂ. ಅಂದರೆ ಒಬ್ಬನ ಒಂದು ದಿವಸದ ಸರಾಸರಿ ಉತ್ಪತ್ತಿ 0—1—7 ದೇಶಾಭಿಮಾನವುಳ್ಳಂತ ಯಾವನಾದರೂ ಇದನ್ನು ನೋಡಿ ನಾಚಿಕೆಗೊಳ್ಳಬೇಕು. ರಾಷ್ಟ್ರೀಯ ಸಂಪತ್ತನ್ನು ಹೆಚ್ಚಿಸುವುದಕ್ಕೆ ಪ್ರಯತ್ನಿಸಬೇಕು. ಒಬ್ಬ ನೂಲುವುದರಿಂದ ಪ್ರತಿಯೊಬ್ಬನೂ ದಿನಕ್ಕೆ 0—1—6 ಯಷ್ಟು ಸಂಪಾದಿಸಿದರೆ ರಾಷ್ಟ್ರೀಯ ಸಂಪತ್ತನ್ನು ಎರಡರಷ್ಟು ಹೆಚ್ಚಿಸಿದಂತಾಗುವುದು. ಇದರಿಂದ ಪರದೇಶೀಯರು ಹಿಂದೂದೇಶದಿಂದ ಸೆಳೆಕೊಳ್ಳತಕ್ಕಂತ 60 ಕೋಟಿ ರೂಪಾಯಿಯು ನಮ್ಮ ದೇಶದಲ್ಲಿಯೇ ಉಳಿಯುವುದು. ನಮ್ಮ ಮೈಯನ್ನು ಮುಚ್ಚಿಕೊಳ್ಳುವುದಕ್ಕೆ ಬೇಕಾದಷ್ಟು ಬಟ್ಟೆಯನ್ನಾದರೂ ನಾವು ಸ್ವತಃ ತಯಾರಿಸಲಿಕ್ಕೆ ಕಲಿಯದೆ, ಪರಾಧೀನತೆಯಲ್ಲಿರುವುದು ಅತ್ಯಂತ ಹೇಯವಾದ ಸಂಗತಿ. ಭಾರತ ಮಾತೆಯ ಮೈಯನ್ನು ಮುಚ್ಚಿ ಅವಳ ಮಾನವನ್ನು ಕಾಪಾಡುವುದಕ್ಕೆ ಭಾರತೀಯರಿಗೆ ಅಸಾಧ್ಯವಾದರೆ, ಭಾರತೀಯರನ್ನು ಲಜ್ಜಾಹೀನರೂ, ನೀಚರೂಗಳೂ ಮತ್ತಾರು ಇರಲಾರರು. ಆದುದರಿಂದ ಯಾವನು ತನ್ನ ವಿರಾಮ ಕಾಲದಲ್ಲಿ ನೂಲುವುದಿಲ್ಲವೋ, ಯಾವನು ಸೋಮಾರಿಯಾಗಿ ತನ್ನ ಕಾಲವನ್ನು ಕಳೆದು ಬಿಡುವನೋ ಅವನು ಮನುಷ್ಯನಾಗಿ ಭರತಖಂಡದಲ್ಲಿ ಹುಟ್ಟಿದ್ದು ವ್ಯರ್ಥ.

ದೇಶಾಭಿಮಾನಿಗಳಾದವರೆಲ್ಲರೂ ರಾಷ್ಟ್ರೀಯ ಸಂಪತ್ತನ್ನು ಹೆಚ್ಚಿಸುವುದಕ್ಕೂ, ಮೈ ಬಟ್ಟೆಗೋಸ್ಕರವಾಗಿ ಹಿಂದೀಯರ ಪರಾಧೀನತೆಯನ್ನು ತಪ್ಪಿಸುವುದಕ್ಕೂ ನೂಲುವುದು ಅವಶ್ಯವಿದೆ. ನೂಲುವುದಕ್ಕೆ ಅನುಕೂಲವಿಲ್ಲದವರು ಸ್ವಚ್ಛ ಖಾದಿಯನ್ನಾದರೂ ಉಟ್ಟು ನೂಲುವ ಕೈಗಾರಿಕೆಯನ್ನು ಪ್ರೋತ್ಸಾಹಿಸುವುದು ಅವಶ್ಯವಿದೆ.

ಇನ್ನು ಹತ್ತಿಯು ಬಟ್ಟೆಯಾಗುವ ವರೆಗೆ ನಡೆಯಬೇಕಾದ ಕೆಲಸವೆಲ್ಲವನ್ನು ತಿಳಿಸಬೇಕಾಗಿದೆ.

"ಭಾರತಿ"

(ಮುಂದುವರಿಯುವುದು)

ವೀರರಾಜಪೇಟೆ ಹೈಸ್ಕೂಲಿನ ವಾರ್ಷಿಕೋತ್ಸವ.

(ಹಾಜರಿದ್ದವರಿಂದ)

ವೀರರಾಜಪೇಟೆಯ ಗವರ್ನಮೆಂಟ್ ಹೈಸ್ಕೂಲಿನ ವಾರ್ಷಿಕೋತ್ಸವವು ಈ ತಿಂಗಳು 20ನೇ ತಾರೀಖಿನಲ್ಲಿ ಮೈಸೂರು ವಿಶ್ವ ವಿದ್ಯಾಲಯದ ಉಪಾಧ್ಯಾಯ ಶಿಕ್ಷಣ ಶಾಖೆಯ ಪ್ರಧಾನ ಅಧ್ಯಾಪಕರಾಗಿರುವ ಮಿ ಡಾಕ್ಟರ್ ಜೇಕಬ್ ಯಂ ಎ ಪಿ ಹೆಚ್ ಡಿ ಯವರ ಅಧ್ಯಕ್ಷತೆಯಲ್ಲಿ ಬಹಳ ಸೊಗಸಾಗಿ ನಡೆಯಿತು. ಕಾರ್ಯಕ್ರಮವು ಹಬ್ಬದ ಮೇರೆ ಬೆಳಿಗ್ಗೆ ಎಂಟು ಘಂಟೆಗೆ ಆಟ ಓಟಗಳ ಸ್ಪರ್ಧೆಯು ಪ್ರಾರಂಭವಾಯಿತು. ಈ ಸ್ಪರ್ಧೆಯಲ್ಲಿ 33 ಬೇರೆ ಬೇರೆ ವಿಷಯಗಳಿದ್ದುವು. ಬಾಲಕರಿಗೂ, ಬಾಲಕಿಯರಿಗೂ, ಯುವಕರಿಗೂ ತಕ್ಕ ಓಟಗಳಿದ್ದುದಲ್ಲದೆ 10—15 ವರ್ಷಗಳ ಒಳಗಿನ ವಯಸ್ಸಿನವರಿಗೂ ಓಟಗಳಿದ್ದುವು. ಎಲ್ಲಾ ಆಟಗಳಿಗೂ ಓಟಗಳಿಗೂ ಬಾಲಕರೂ, ಯುವಕರೂ ಬಹಳ ಉತ್ಸಾಹದಿಂದ ಉಮೇದ್ವಾರರಾಗಿ ಬಂದಿದ್ದರು. ಈ ವರ್ಷದಲ್ಲಿ ಇಟ್ಟ ವಿಷಯಗಳೆಲ್ಲ ಎಂದಿನಂತೆ ಸಾಮಾನ್ಯ ವಿಷಯಗಳಲ್ಲದೆ, ಗಳ ಹಿಡಿದುಕೊಂಡು ಹಾರುವುದೂ, ಕುಸ್ತಿಮಾಡುವುದೂ ಹೊಸ ವಿಷಯಗಳಾಗಿದ್ದುವು. ಬಾಲಕರ ಆಟ ಓಟಗಳನ್ನು ನೋಡುವದಕ್ಕೆ ವಿದ್ಯಾರ್ಥಿಗಳ ತಂದೆ ತಾಯಿಗಳೂ, ಮುಖ್ಯ ಉದ್ಯೋಗಸ್ಥರೂ ಎಲ್ಲರೂ ಬಂದುದರಿಂದ ಮೈದಾನವೆಲ್ಲಾ ಅವರ ಮಾತುಗಳಿಂದಲೂ, ನಗುವಿನಿಂದಲೂ, ಉತ್ಸಾಹ ಪ್ರದರ್ಶನದಿಂದಲೂ ಒಂದು ಹೊಸ ಕಳೆಯಿಂದ ತುಂಬಿದಂತಿತ್ತು. ಈ ಆಟ ಓಟಗಳು ಸುಮಾರು 1 ಘಂಟೆಗೆ ಮುಗಿದವು.

ತಿರುಗಿ ಮಧ್ಯಾಹ್ನ 3 ಘಂಟೆಗೆ ಶಾಲಾ ಉಪಾಧ್ಯಾಯರೂ ಮಕ್ಕಳ ಮಾತಾಪಿತೃಗಳೂ, ಮುಖ್ಯ ಮುಖ್ಯ ಉದ್ಯೋಗಸ್ಥರೂ, ಇತರ ಸದ್ಗೃಹಸ್ಥರೂ ಶಾಲೆಯ ಹಾಲ್‌ನಲ್ಲಿ ತುಂಬಾ ನೆರೆದಿದ್ದರು. ಉತ್ಸವಕ್ಕೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ಜೇಕಬರವರು 3 ಘಂಟೆಗೆ ಸರಿಯಾಗಿ ಶಾಲೆಗೆ ಬಂದರು. ದೇವರ ಪ್ರಾರ್ಥನೆಯ ನಂತರ ಪ್ರಥಮ ಸಹಾಯಕೋಪಾಧ್ಯಾಯರಾದ ಮಿ ಪಿ ಯಂ ಉತ್ತಪ್ಪನವರು ಶಾಲಾ ವರದಿಯನ್ನು ಓದಿದರು. ಶಾಲಾ ವರದಿಯು ಶಾಲೆಯ ವಿವಿಧ ಶಾಖೆಗಳಲ್ಲಿ ವಿದ್ಯಾರ್ಥಿಗಳ ಅಭ್ಯುದಯವನ್ನೂ ಶಾಲೆಯಲ್ಲಿ ಇದ್ದ ಒದಗಿಬಂದ ಅನೇಕ ಕೊರತೆಗಳನ್ನೂ ಒಳಗೊಂಡಿದ್ದುದಲ್ಲದೆ ಶಾಲೆಗೆ ಅವಶ್ಯಕವಾಗಿರುವ ಕಟ್ಟಡಗಳ ಮತ್ತು ಉಪಾಧ್ಯಾಯರ ಕೊರತೆಯನ್ನು ಕಾಣಿಸಿತ್ತು. ಇದಾದ ನಂತರ ಶಾಲೆಯ ಕಾರ್ಯದರ್ಶಿಯವರು ಶಾಲೆಯ ಸಂಘದ ವರದಿಯನ್ನು ಸಭೆಯ ಮುಂದಿಟ್ಟರು. ಇದರಲ್ಲಿ ಆ ಸಂಘವು ವರ್ಷದಲ್ಲಿ ನಡೆಸಿದ ಕೆಲಸದ ವಿವರವೂ ಮತ್ತು ಅಧ್ಯಕ್ಷರ ಹೆಸರುಗಳೂ ಇದ್ದುವು. ಇದಾದ ಮೇಲೆ ಶಾಲೆಯ ವಿವಿಧ ಶಾಖೆಗಳ ಮುಂದೆ ಬಂದ ವಿದ್ಯಾರ್ಥಿಗಳ ಬಹುಮಾನ ಹಂಚುವುದು ಪ್ರಾರಂಭವಾಯಿತು. ಬಹುಮಾನಗಳು ಬಹು ಸಂಖ್ಯಾತವಾಗಿಯೂ, ಚೆನ್ನಾಗಿ ಆರಿಸಲ್ಪಟ್ಟವಾಗಿಯೂ ಇದ್ದವು. ಆ ಬಹುಮಾನಗಳನ್ನು ತೆಗೆದುಕೊಂಡ ಉಪಾಧ್ಯಾಯರಿಗೂ, ಅಧ್ಯಕ್ಷರಿಗೂ ಕೈ ಸೋತು ಹೋಗುವುದೋ ಎಂಬ ಹಾಗೆ ನಮಗೆ ತೋರಿತು. ಆ ಓಟಗಳಲ್ಲಿ ಬಹುಮಾನ ಹೊಂದಿದವರ ಮುಖ್ಯರಾಗಿ ಮಿ ಪಿ ಯಂ ಉತ್ತಯ್ಯನವರೂ ಮತ್ತು ಎಸ್. ಪಿ ಅಪ್ಪಯ್ಯನವರು. ಸಂಗೀತದಲ್ಲೂ, ಭಾಷಣ ಕೊಡುವದರಲ್ಲೂ ಮತ್ತು ಚಿತ್ರಪಟವನ್ನು ತಯಾರಿಸುವದರಲ್ಲಿ ಪ್ರವೀಣತೆಯನ್ನು ತೋರಿದವರಿಗೂ ಬಹುಮಾನಗಳಿದ್ದುವು. ಬೇರೆ ಬೇರೆ ಕ್ಲಾಸಿನ ವಿದ್ಯಾರ್ಥಿಗಳಿಗೆ ಸಹಪಂಕ್ತಿತ್ವಕ್ಕೂ, ತೋಟಗಾರಿಕೆಗೂ ಬಹುಮಾನಗಳಿದ್ದುವು.

ನಾಲ್ಕನೆಯ ವಿಷಯವು ಅಧ್ಯಕ್ಷರ ಭಾಷಣವಾಗಿತ್ತು. ಆ ಭಾಷಣವು ದೀರ್ಘವಾಗಿಯೂ, ಬೋಧಪ್ರದವಾಗಿಯೂ, ಮನೋರಂಜಕವಾಗಿಯೂ ಇದ್ದಿತು. ಅವರ ಭಾಷಣದ ಸಾರಾಂಶವು ಹೀಗಿದ್ದಿತು. 'ವಿದ್ಯಾರ್ಥಿಗಳ ಶಾರೀರಕ ಬೆಳವಣಿಗೆಯಲ್ಲಿ ಈ ಶಾಲೆಯ ಅಧಿಕಾರಿಗಳು ಇಷ್ಟು ಶ್ರದ್ಧೆಯನ್ನು ತೋರಿಸಿದ್ದುದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ. ಈಗಿನ ಕಾಲದಲ್ಲಿ ಬಾಲಕ ಬಾಲಕಿಯರು ತಮ್ಮ ಮನಸ್ಸಿನ ಅಭಿವೃದ್ಧಿಯನ್ನು ಆಟದ ಮೈದಾನಗಳಲ್ಲಿ ಬೆಳೆಸಬೇಕಲ್ಲದೆ ಪುಸ್ತಕಗಳನ್ನು ಬಾಯಿಂದ ಬಾಯಿಪಾಠ ಮಾಡುವುದರಿಂದಲ್ಲ. ಎರಡನೆ, ಬಾಲಕರು ತಾವು ಸ್ವತಃ ಆಲೋಚನೆ ಮಾಡುವ ಶಕ್ತಿಯನ್ನು ವೃದ್ಧಿಪಡಿಸಬೇಕಲ್ಲದೆ ಉಪಾಧ್ಯಾಯರು ಹೇಳಿದುದು ವೇದವಾಕ್ಯವೆಂದು ತಿಳಿದು ಅದನ್ನು ಕಲಿತು ಒಪ್ಪಿಸಿ ಬಿಡುವುದು ವಿದ್ಯೆಯಲ್ಲ. 3ನೇ, ಆ ವಿದ್ಯೆಯನ್ನು ಕಲಿಯುವುದರಿಂದ ತಮ್ಮ ಮಕ್ಕಳಿಗೆ ಏನು ಪ್ರಯೋಜನವೆಂದು ಪ್ರತಿಯೊಬ್ಬ ತಂದೆ ತಾಯಿಯು ಆಲೋಚನೆ ಮಾಡಬೇಕು. ವಿದ್ಯಾರ್ಥಿಗಳಿಗೆ ಯಾವಾಗಲೂ ಸ್ವಪಾದನೆಯ ಮಾರ್ಗವನ್ನು ಅವಲಂಬಿಸುವಂತೆ ತಂದೆ ತಾಯಿಗಳೂ, ಉಪಾಧ್ಯಾಯರೂ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು. ಕೊಡಗಿನಲ್ಲಿ ಚಿಕ್ಕ ಚಿಕ್ಕ ಹುಡುಗರೂ ಹುಡುಗಿಯರೂ ಒಳ್ಳೆ ಮೊಟ್ಟೆಗಳನ್ನು ಆರಿಸಿ ಒಳ್ಳೆ ಕೋಳಿಗಳನ್ನು ತಯಾರಿಸಿ ಅವುಗಳು ಇಟ್ಟ ಸೊಗಸಾದ ಮೊಟ್ಟೆಗಳನ್ನು ಮಾರಿ ಎಷ್ಟೋ ದೊಡ್ಡ ಸಂಪಾದನೆಯನ್ನು ಮಾಡಬಹುದು. ತಿರುವಾಂಕೂರಿನ ಒಂದು ಊರಿನಲ್ಲಿ ಈ ರೀತಿಯಾಗಿ ಮಾಡಿ ಮೊದಲು ಎಂಟು ಕಾಸಿಗೆ ಮಾರುತ್ತಿದ್ದ ಮೊಟ್ಟೆಯನ್ನು ಈಗ ಎರಡುವರೆ ಆಣೆಗೆ ಮಾರುತ್ತಾರೆ. ಜೇನಿನ ಸಂಗ್ರಹವನ್ನು ವಿದ್ಯಾರ್ಥಿಗಳು ತಮ್ಮ ಉಪವ್ಯಾಸಂಗವನ್ನಾಗಿ ಮಾಡಿಕೊಳ್ಳಬಹುದು. ನಾಲ್ಕನೆ ವಿದ್ಯಾರ್ಥಿಗಳು ಕೆಲಸ ಮಾಡುವದು ಮರ್ಯಾದೆಗೆ ಕೊರತೆಯೆಂದು ತಿಳಿಯಬಾರದು. ಅಮೇರಿಕದಲ್ಲಿ ಪ್ರತಿಯೊಬ್ಬ ಐಶ್ವರ್ಯವಂತನು ತನ್ನ ಮಕ್ಕಳನ್ನು ಬಡವರ ಮಕ್ಕಳಂತೆ ತಯಾರು ಮಾಡುತ್ತಾನೆ. ಅಲ್ಲಿನ ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಗಳ ಸಂಪಾದನೆಯ ಮೇಲೆ ತಾವು ಆಶ್ರಯಿಸಿಕೊಂಡಿರುವದಿಲ್ಲ. ತಮ್ಮ ಜೀವನಕ್ಕಾಗಿ ಎಂಥಾ ಹೀನ ವೃತ್ತಿಯನ್ನಾದರೂ ಕೈಕೊಳ್ಳಲು ಸಿದ್ಧರಾಗಿರುವರು. ಚೈನ ದೇಶದಲ್ಲಿ ಈಗ ಒಂದು ದೊಡ್ಡ ವಿಶ್ವವಿದ್ಯಾಲಯದ ಅಧ್ಯಕ್ಷರಾಗಿರುವವರು ಅಲ್ಲಿ ಊಟಕ್ಕೆ ಚಟ್ಟಿ ತರುವವರಾಗಿದ್ದರು. ನನಗೆ ಹುಲ್ಲು ಕೊಯ್ಯುವ ಕೆಲಸವನ್ನು ಕೊಟ್ಟಿದ್ದರು"

ಅಧ್ಯಕ್ಷರ ಭಾಷಣದ ನಂತರ ಇಂಗ್ಲೀಷಿನಲ್ಲಿ 'Mid summer Nights' Drama" ಎಂಬ ನಾಟಕವನ್ನೂ ಕನ್ನಡದಲ್ಲಿ 'ಚಂದ್ರಹಾಸ" ನಾಟಕವನ್ನು ಅಭಿನಯಿಸಿದರು. ಈ ಎರಡು ನಾಟಕಗಳನ್ನೂ ವಿದ್ಯಾರ್ಥಿಗಳು ಚೆನ್ನಾಗಿ ಅಭಿನಯಿಸಿ ತೋರಿಸಿದರು. ಇವುಗಳ ಕೊನೆಯಲ್ಲಿ ಚೆನ್ನಾಗಿ ಅಭಿನಯಿಸಿದ ಇಬ್ಬರು ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಿದರು. ಅನಂತರ ಶಾಲೆಯ ಮುಖ್ಯೋಪಾಧ್ಯಾಯರು ಅಧ್ಯಕ್ಷರಿಗೂ, ಅತಿಥಿಗಳಿಗೂ ವಂದನೆಗಳನ್ನರ್ಪಿಸಿ ತಂದೆ ತಾಯಿಗಳಿಗೆ ಈಗಿನ ಕಾಲದ ವಿದ್ಯಾರ್ಥಿಗಳಿಗೂ, ಹಿಂದಿನ ಕಾಲದ ವಿದ್ಯಾರ್ಥಿಗಳಿಗೂ ಬಹು ತಾರತಮ್ಯವಿದೆಯೆಂದೂ, ದೇಶವೇ ಜಾಗ್ರತಿ ಸ್ಥಿತಿಯಲ್ಲಿರುವಾಗ ಈಗಿನ ವಿದ್ಯಾರ್ಥಿಗಳು ತಮ್ಮ ಭವನಗಳಲ್ಲಿ ಜೋರಿಯಾಗಿದ್ದರೆ ಅದನ್ನು ತಪ್ಪೆಂದು ತಿಳಿಯಬಾರದೆಂದೂ ಹೇಳಿದರು. ಮಂಗಳದೊಡನೆ ಅಂದಿನ ಕಾರ್ಯಕ್ರಮವು ಸಮಾಪ್ತವಾಯಿತು

ಮಹಾತ್ಮ ಗಾಂಧಿಯವರು ಮುಸ್ಲಿಮ್ ಲೀಗಿನ ಕೌನ್ಸಿಲಿನಲ್ಲಿ ತಾ. ೨೨ ರಲ್ಲಿ ಮಾಡಿದ ಭಾಷಣ.

ಮೌಲ್ವಿ ಮಹಮ್ಮದ್ ಯಾಕೂಬರು ಮಹಾತ್ಮ ಗಾಂಧಿಯವರು ಬಂದದ್ದರಿಂದ 21 ಕೋಟಿ ಹಿಂದೀಯರು ಬಂದಂತಾಯಿತು ಎಂತ ಸ್ವಾಗತವನ್ನಿತ್ತರು

ಮಹಾತ್ಮರ ಭಾಷಣ—ಮೌಲ್ವಿ ಮಹಮ್ಮದ್ ಯಾಕೂಬರು ನಾನು ಬಂದದ್ದರಿಂದ 21 ಕೋಟಿ ಹಿಂದೀಯರು ಬಂದಂತಾಯಿತು ಎಂತ ಹೇಳಿದರು. ಮಾನನೀಯರೇ, ನಾನು ಬನಿಯಾ (ವೈಶ್ಯ) ಜಾತಿಯವನು. ನನ್ನ ಆಶೆಗೆ ಮಿತಿಯಿಲ್ಲ. ಯಾವಾಗಲೂ ನನ್ನ ಮನಃಪೂರ್ತಿ ಅಭಿಲಾಷೆಯೇನೆಂದರೆ ಬರೀ 21 ಕೋಟಿ ಹಿಂದೀಯರ ಪರವಾಗಿ ಮಾತ್ರವಲ್ಲ, ಒಟ್ಟು 30 ಕೋಟಿ ಜನರ ಪರವಾಗಿ ನಾನು ಮಾತಾಡುವ ಅರ್ಹತೆ ಬರಬೇಕೆಂತ. ಈ ದಿನ ನನಗೆ ಆ ಅರ್ಹತೆ ಇದೆಯೆಂತ ನೀವು ಒಪ್ಪಲಾರಿರಿ. ನನ್ನ ಬಾಲ್ಯಾವಸ್ಥೆ, ಯೌವನದಲ್ಲಿ ಸಹ ಹಿಂದೂ ಮುಸಲ್ಮಾನ್ ಐಕ್ಯತೆಯನ್ನು ಸಾಧಿಸುವ ಉದ್ದೇಶದಿಂದಲೇ ನನಗೆ ಕರಬೇತು ದೊರೆತಿದೆಯೆಂತ ನಿಮಗೆ ಖರವಾಗಿ ಹೇಳುತ್ತೇನೆ. ಈಗ ಮುದಿ ಪ್ರಾಯದಲ್ಲಿ ಹಿಂದೂ ಮುಸಲ್ಮಾನ್ ಒಗ್ಗಟ್ಟು ಸಾಧನೆಯ ಅಭಿಪ್ರಾಯ ಹುಟ್ಟಿದ್ದೆಂತ ಯಾರೂ ತಿರಸ್ಕರಿಸಬಾರದು. ಒಟ್ಟು ಹಿಂದೂಸ್ಥಾನದ ಸರವಾಗಿ ಮಾತಾಡುವ ಅರ್ಹತೆಯನ್ನು ದೇವರು ನನಗೆ ಕೊಡತಕ್ಕದ್ದೆಂತ ನನ್ನ ಅಂತರಾತ್ಮವು ಹೇಳುತ್ತದೆ. ಆ ಧ್ಯೇಯಕ್ಕಾಗಿ ಹೋರಾಡುತ್ತಾ ನಾನು ಸತ್ತರೂ ನನ್ನ ಅಂತರಾತ್ಮಕ್ಕೆ ಶಾಂತಿ ದೊರೆತೀತ.

ಸ್ವರಾಜ್ಯ ಸಂಗದ ನೀತಿ ನಡೆಸುವ ಪಲಿತಾಂಶವು ನಿಃಪ್ರಯೋಜನಕವೆಂತ ಹೇಳಬಾರದು. ಆದರೆ ಕಾಂಗ್ರೆಸಿನವರು ರೌಂಡ್ ಟೇಬಲ್ ಕಾನ್ಫರೆನ್ಸಿನಲ್ಲಿ ಭಾಗ ತೆಗೆದುಕೊಳ್ಳಬೇಕೆಂತ ಬೇರೆ ಇಷ್ಟೆಯಾದರೆ, ಸರಕಾರಕ್ಕೂ, ಕಾಂಗ್ರೆಸಿಗೂ ರಾಜಿಯಾದರೆ ... ಮುಸಲ್ಮಾನ್ ಒಗ್ಗಟ್ಟಿನ ಕೆಲಸವೇ ನಮ್ಮ ಮೊದಲೇ ಕರ್ತವ್ಯವಾಗಿರುತ್ತದೆ. ಇದು ಅಧಿಕಾರದ ಪ್ರಶ್ನೆಯನ್ನು ಹೊಂದಿರವುದಿಲ್ಲ, ಪ್ರೀತಿ ವಿಶ್ವಾಸವನ್ನು ಹೊಂದಿದೆಯೆಂತ ನಂಬಿಕೆಯುಳ್ಳ. ಸರ್ ಸೈಯದ್ ಅಹಮ್ಮದರು ಹೇಳುವ ಪ್ರಕಾರ ಹಿಂದೂ ಮುಸಲ್ಮಾನರು ಹಿಂದೂಸ್ಥಾನದ ಎರಡು ಕಣ್ಣುಗಳಾದರೆ ಜಗಳಕ್ಕಾಗಲೀ ಅಪನಂಬಿಕೆಗಾಗಲೀ ಎಡೆಯೇ ಇಲ್ಲ. ಒಂದು ಕಣ್ಣಿಗಿಂತ ಒಂದು ಕಣ್ಣು ಶ್ರೇಷ್ಠವೆಂತ ಯಾರೂ ಹೇಳಲು ಸಾಧ್ಯವಿಲ್ಲ. ಇಬ್ಬರು ಸಹೋದರರು ಬೇರೆ ಬೇರೆ ಮತದ ಅನುಯಾಯಿಗಳಾದರೂ ಐಕ್ಯಮತ್ಯದಿಂದಲೂ, ಶಾಂತಿಯಿಂದಲೂ ಜೀವಿಸುವುದು ಅಸಾಧ್ಯವಲ್ಲ. ನಾನಾದರೋ ನಿಮ್ಮ ಹೃದಯದ ಕೀಲಿಯು ಕದವನ್ನು ಕಿಂಚಿ ತೆರೆದಿಟ್ಟರೆ ನಾನು ಒಳಗೆ ಪ್ರವೇಶಿಸಿಕೊಂಡೇನು. ಹಿಂದೂ ಮುಸಲ್ಮಾನ್ ಒಗ್ಗಟ್ಟಾಗದೆ ಈ ದೇಶಕ್ಕೆ ಸ್ವಾತಂತ್ರ್ಯವಿಲ್ಲವೆಂತ ನಾನು ನಂಬಿದವನಾಗಿದ್ದೇನೆ. ಇಂಥಾ ಪರಿಷತ್ತುಗಳಿಗೆ ನನ್ನನ್ನು ಕರೆಯುತ್ತಾ ಇರುವಿರೆಂತ ನಂಬುತ್ತೇನೆ. ಇಂದದ್ದಕ್ಕೆ ನೀವು ವಿಷಾದ ಪಡಬೇಕಾಗಲಾರದು.

ಈ ಸಭೆಗೆ ಬರುವಾಗ ಮಹಾತ್ಮಜೀಯವರ ಸಂಗಡ ಶ್ರೀ ಸರೋಜಿನಿನಾಯುಡುರವರೂ, ಪಂಡಿತ ಜವಾಹಿರ್‌ಲಾಲರೂ ಇದ್ದರು. ಪಂಡಿತ ಜವಾಹಿರ್‌ಲಾಲರು ಈ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಹೇಳಿದ್ದೇನೆಂದರೆ—

"ಮಹಾತ್ಮಜೀಯವರು ನಮ್ಮನ್ನ ತಿಪಾಯಿಗಳನ್ನಾಗಿ ತಯಾರಿಸಿದ್ದಾರೆ. ಅವರ ಆಜ್ಞೆಯನ್ನು ಪರಿಪಾಲಿಸಲು ಸಿದ್ಧರಾಗಿದ್ದೇವೆ. ಈ ವರ್ಷದ ಅಂತ್ಯದೊಳಗೆ ನಮಗೆ ಜಯವಾಗುವದು ಖಂಡಿತವೆಂತ ನಂಬಿಕೆಯಿದೆ."

ಮುಖ್ಯ ವರ್ತಮಾನಗಳು

ಮಹಾತ್ಮ ಗಾಂಧಿಯವರಿಗೂ, ವೈಸರಾಯರಿಗೂ ಆಗುತ್ತಿರುವ ರಾಜಿ ವಿಷಯದ ಸಂಭಾಷಣಗಳು.

ಕಾಂಗ್ರೆಸಿನ ವರ್ಕಿಂಗ್ ಕಮಿಟಿಯವರು ರಾಜಿ ಸಂಧಾನದ ವಿಷಯದಲ್ಲಿ ಮಹಾತ್ಮರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟರು.

ಕೊಡಗಿನ ಸತ್ಯಾಗ್ರಹ ಚಳವಳ.

ವೀರರಾಜಪೇಟೆಯಲ್ಲಿ ಕಳೆದ ತಾ. ೨೦ ರಲ್ಲು ಸಂಪೂರ್ಣ ಹರತಾಳ.

ಮಡಿಕೇರಿ ಮತ್ತು ವೀರರಾಜಪೇಟೆಯಲ್ಲಿ ಸತ್ಯಾಗ್ರಹಿಗಳನ್ನು ಅಭಿನಂದಿಸಲು ಪ್ರಚಂಡ ಮೀಟಿಂಗುಗಳು.

ದಿವಂಗತ ಮೋತಿಲಾಲರ ಆಖೈರ್ ವಾಣಿ.

ಸ್ವತಂತ್ರ ಭಾರತಿಯ ಮಡಿಲಲ್ಲಿ ಸಾಯುವೆನು.

"ಸ್ವರಾಜ್ಯ ಭವನ" ದಲ್ಲೇ ಭಾರತೀಯ ಹಸೇ ಬರಹವನ್ನು ನಿಶ್ಚಯಿಸಿ. ನಾನಿರುವಾಗಲೇ ನಿಶ್ಚಯವಾಗಲಿ. ನನ್ನ ಮಾತೃ ಭೂಮಿಯ ಬಂಧ ವಿಮೋಚನೆಯು ಗೌರವಯುಕ್ತವಾಗಿ ಆಗುವ ಸತ್ಯಾಸ್ವದಲ್ಲಿ ನಾನು ಸಾಯಲೇ ಬೇಕಾದರೆ ಸ್ವತಂತ್ರಳಾದ ಭಾರತ ಮಾತೆಯ ಮಡಿಲಲ್ಲಿ ಸಾಯಲೆಳಸುವೆನು. ಗುಲಾಮ ದೇಶದಲ್ಲಲ್ಲ. ಸ್ವತಂತ್ರ ದೇಶದಲ್ಲಿ ಶಾಶ್ವತ ವಿದ್ರಾಸುಖವನ್ನಪೇಕ್ಷಿಸುವೆನು.

ಪಂಡಿತ ಮೋತಿಲಾಲಜಿ.

ಸತ್ಯಾಗ್ರಹ ಚಳವಳದ ವರ್ತಮಾನ.

ಕಳೆದ ತಾರೀಕು 20 ರಲ್ಲು 61 ಸತ್ಯಾಗ್ರಹಿಗಳನ್ನು ಮಡಿಕೇರಿಯಲ್ಲಿ ದಸ್ತಗಿರಿ ಮಾಡಿದ್ದಕ್ಕಾಗಿ ವೀರರಾಜಪೇಟೆಯ ವರ್ತಕರು ಎಲ್ಲಾ ಅಂಗಡಿಗಳನ್ನು ಮುಚ್ಚಿ ಹರತಾಳವನ್ನು ಕೈಕೊಂಡರು.

ಸತ್ಯಾಗ್ರಹಿಗಳ ಪೈಕಿ ಒಂದೊಂದು ತಿಂಗಳ ಸಜೆಯನ್ನು ಅನುಭವಿಸಿದ ಮ. ನಾಲ್ಲಂಗಳ ಮಂದೆಯ್ಯನವರನ್ನೂ, ಕೈವಿಳಿರ ಅಪ್ಪಣ್ಣನವರನ್ನೂ ನಿನ್ನೆ ದಿನ ಜೈಲಿನಿಂದ ಬಿಡುಗಡೆ ಮಾಡುವರು.

ಮಡಿಕೇರಿ.

ಕಳೆದ ತಾರೀಕು 20 ರಲ್ಲು ಮಡಿಕೇರಿ ಮಾರ್ಕೆಟ್ ಒಳಿ ಮ. ಯಂ. ಯಂ ಸಿದ್ದೀಕ್‌ರವರ ಅಧ್ಯಕ್ಷತೆಯಲ್ಲಿ ಮಡಿಕೇರಿ ಪಬ್ಲಿಕ್ ಜನರು ದಸ್ತಗಿರಿಯಾದ 61 ಸತ್ಯಾಗ್ರಹಿಗಳನ್ನು ಅಭಿನಂದಿಸಲು ಪ್ರಚಂಡ ಮೀಟಿಂಗೊಂದು ನಡೆದಿತ್ತು. ಸತ್ಯಾಗ್ರಹಿಗಳೂ, ಪಬ್ಲಿಕ್ ಜನರೂ ಸ್ಟೇಶನಿನ್ನಿಂದ ಮೆರವಣಿಗೆಯಲ್ಲಿ ಒಂದರು ಅಧ್ಯಕ್ಷರೂ, ಮ. ಗಳಾದ ಕೆ. ಪಿ. ಚಿನ್ನಪ್ಪನವರೂ, ಐ ಪಿ. ಕಾರ್ಯಪ್ಪನವರೂ, ಅಜ್ಜಮಾಡ ಮಾದಪ್ಪನವರೂ, ಶ್ರೀಮತೀ ಕೆ. ಸಿ. ಅಕ್ಕಮ್ಮನವರೂ ಈಗಿನ ಚಳವಳ ಕುರಿತು ಮಾತಾಡಿದ ನಂತರ ಈ ಕೆಳಗಿನ ಠರಾವು ಸರ್ವ ಸಮ್ಮತದಿಂದ ಮಂಜೂರಾಯಿತು.

1. ಕೊಡಗಿನ ಸತ್ಯಾಗ್ರಹಿಗಳು ಈ ವರೆಗೆ ಮಹಾ ಕಷ್ಟದಿಂದ ಮಳೆ ಬಿಸಿಲೆನ್ನದೆ ಶಾಂತ ರೀತಿಯಿಂದ ನಾನಾ ಅಂಗಡಿಗಳ ಪಿಕೆಟಿಂಗ್ ಸಗ್ಯರೆ ನಿಷಾ ನಿಷೇಧದ ಕೆಲಸಕ್ಕೆ, ಖಾದಿ ಪ್ರಚಾರಕ್ಕೂ ಕೆಲಸ ಮಾಡಿದ್ದಕ್ಕೆ ಈ ಮೀಟಿಂಗ್ ಅವರಿಗೆ ಅಭಿನಂದಿಸುತ್ತದೆ.

2. ಈ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಇಂಗ್ಲಿಷ್ ಮತ್ತು ಕನ್ನಡ ಪತ್ರಿಕೆಗಳಿಗೆ ಕಳುಹಿಸುವಂತೆ ಮೆ. ಕೆ. ಪಿ ಚಿನ್ನಪ್ಪನವರಿಗೆ ಅಧಿಕಾರ ಕೊಡುತ್ತದೆ.

ಸೋಮವಾರಪೇಟೆ.

ಸೋಮವಾರಪೇಟೆಯಲ್ಲಿ ಸೇಂದಿ ಅಂಗಡಿಗಳ ಹರಾಜ ಕಳೆದ ಸೋಮವಾರ ನಡೆದು ಸುಮಾರು 1400 ರೂಪಾಯಿಗಳು ಕಳೆದ ವರ್ಷಕ್ಕಿಂತ ಕಡಿಮೆ ಉತ್ಪತ್ತಿ ಆಗಿದೆಯೆಂದು ತಿಳಿಯುತ್ತೇವೆ. ತಾಲೋಕಿನಲ್ಲಿ ಹರಾಜಿಗಿಟ್ಟದ್ದನ್ನು, ಸತ್ಯಾಗ್ರಹಿಗಳ ಪಿಕೆಟಿಂಗನ್ನು ತಪ್ಪಿಸಲು ಇನ್ಸ್‌ಪೆಕ್ಟರ್ ಬಂಗಲೆಯಲ್ಲಿ ಗುಟ್ಟಾಗಿ ಹರಾಜಿಗಿಟ್ಟರು. ಸತ್ಯಾಗ್ರಹಿಗಳು ಅಲ್ಲಿಗೆ ಹೋಗದಂತೆ ಬಿಲಶ್ಚಿ ದಾರಿಯಲ್ಲಿಯೂ ಪೊಲೀಸರು ಅಡ್ಡಗಟ್ಟಿ ನಿಂತಿದ್ದರು. ಅಲ್ಲಿ ದೊಡ್ಡ ಮೀಟಿಂಗ್ ನಡೆದು ಮ. ಅಜ್ಜಮಾಡ ಮಾದಪ್ಪನವರೂ ಮತ್ತು ಶ್ರೀಮತೀ ಕೆ ಸಿ. ಅಕ್ಕಮ್ಮನವರೂ, ಬಿನ ಕಾರು ಮಾದೈಯ್ಯನವರೂ ಜನರನ್ನು ಸೇಂದಿ ಅಂಗಡಿ ಹರಾಜಿನಲ್ಲಿ ಯಾರೂ ತಗೆಯಬಾರದೆಂದೂ, ನಿಷಾಸೇವನೆಯನ್ನು ತ್ಯಜಿಸಬೇಕೆಂದೂ ಅಪ್ಪೀಲು ಮಾಡಿಕೊಂಡರು.

ವೀರರಾಜಪೇಟೆ.

ಕಳೆದ ತಾರೀಕು 25 ರಲ್ಲಿ ವೀರರಾಜಪೇಟೆಯಲ್ಲಿ ಪಬ್ಲಿಕ್ ಜನರ ಪ್ರಚಂಡ ಮೀಟಿಂಗೊಂದು ನಡೆಯಿತು. ಸುಮಾರು ಎರಡು ಸಾವಿರ ಜನರು ಹಾಜರಿದ್ದರು. ಸತ್ಯಾಗ್ರಹಿಗಳ ಪೈಕಿ ಮ. ಗಳಾದ ನಾಯಡ ಚೆಟ್ಟಪ್ಪನವರೂ, ಅಜ್ಜಮಾಡ ಮಾದಪ್ಪನವರೂ, ಐ ಪಿ ಕಾರ್ಯಪ್ಪನವರೂ ಮಡಿಕೇರಿಯಲ್ಲಿ ದಸ್ತಗಿರಿ ದಿನ ಪೊಲೀಸಿನವರು ಕೊಟ್ಟ ಹಿಂಸೆ ಕುರಿತು ಮಾತಾಡಿದರಲ್ಲದೆ ಈ ಚಳವಳಕ್ಕೆ ಸಹಾಯ ಮಾಡಬೇಕೆಂದು ಅಪ್ಪೀಲು ಮಾಡಿಕೊಂಡರು.

ಅನಂತರ ಪಬ್ಲಿಕ್ ಜನರ ಪೈಕಿ ಮ. ಕೆ ಪಿ. ಚಿನ್ನಪ್ಪನವರು ಸತ್ಯಾಗ್ರಹಿಗಳ ಕೆಲಸಕ್ಕೆ ವಂದಿಸಿ ಶಾಂತ ರೀತಿಯ ಪಿಕೆಟಿಂಗ್ ಕೆಲಸವನ್ನು ಮುಂದರಿಸಬೇಕೆಂತಲೂ, ಮಹಾತ್ಮ ಗಾಂಧಿಯವರೂ ಸಹ ಶಾಂತ ರೀತಿಯ ಪಿಕೆಟಿಂಗನ್ನೇ ಮಾಡಬೇಕೆಂದು ಹೇಳಿರುವರೆಂದೂ ವಗೈರೆಯಾಗಿ ಈಗಿನ ರಾಜಿ ಒಪ್ಪಂದದ ಕುರಿತು ಸತ್ಯಾಗ್ರಹಿಗಳು ಈ ವರೆಗೆ ಮಾಡಿದ ಕೆಲಸ ಕುರಿತು ಅಭಿವಂದಿಸುವ ಠರಾವು ತಂದನನ್ನು ಮ. ಕೂತಂಡ ಗಣಪತ್ಯಯವರು ಅನುಮೋದಿಸಿದ ನಂತರ ಸರ್ವರೂ ಒಪ್ಪಿದರು. ಮೀಟಿಂಗ್ ಆ ವೇಳೆ ಬರಖಾಸ್ತಾಯಿತು.

ವರ್ತಮಾನ ಸಂಗ್ರಹ.

ಒಳದೇಶ.

ಸಿದ್ದಾಪುರದ ಪ್ರಯಾಣಿಕರ ಬಂಗ್ಲೆಯು ತಾತ್ಕಾಲಕ್ಕೆ ಅಲ್ಲಿ ಪ್ಲೇಗು ಇರುವುದರಿಂದ ಮುಚ್ಚಲ್ಪಟ್ಟಿದೆ ಎಂದು ಎಗ್ಸಿಕ್ಯೂಟಿವ್ ಇಂಜೀನೀಯರು ತಿಳಿಸುತ್ತಾರೆ.

ಜ್ಯುಡಿಸಿಯಲ್ ಶಿರಸ್ತೆದಾರರಾಗಿದ್ದ ಮೆ. ಕೇದಂಡ ಕಾಳಪ್ಪನವರನ್ನು ಕೆಲಸದಿಂದ ನಿವೃತ್ತಿ ಪಡಿಸುವುದಾಗಿಯೂ, ಅವರ ಬದಲಿಗೆ ಮೆ. ಕೂಡಂಡ ಸುಬ್ಬಯ್ಯನವರನ್ನು ನೇಮಕ ಮಾಡುವುದಾಗಿಯೂ ವರ್ತಮಾನ.

ಬರುವ ಮಾರ್ಚಿ ತಾ. 4 ನೇ ಬುಧವಾರ ಹಗಲು 12 ಘಂಟೆಗೆ ಪೊನ್ನಂಪೇಟೆ ಕೋ-ಆಪರೇಟಿವ್ ಸ್ಟೋರಿನ ಬರುವ ವಿಶೇಷ ಜನರಲ್ ಮೀಟಿಂಗಿ. ಸದರಿ ಆಫೀಸಿನಲ್ಲಿ ಆಗುವುದರಿಂದ ಸರ್ವರೂ ದಯಮಾಡಿಸಬೇಕಾಗಿ ಸೆಕ್ರೆಟರಿಯವರು ತಿಳಿಸುತ್ತಾರೆ.

ಅಜ್ಜಿಗ್ರಾಮದ ಮೆ ಗಳಾದ ಕರ್ತಚ್ಚಿರ ಸುಬ್ಬಪ್ಪ ಮತ್ತು ಚಂಗಪ್ಪನವರಿಗೆ ಕಳೆದ ತಾ. 21 ರಲ್ಲು ಸಾಯಂಕಾಲ ಆಕಸ್ಮಾತ್ತಾಗಿ ಬೆಂಕಿ ಬಿದ್ದು ಬೆಂಕಿ ಹೋದಷ್ಟು ಲ್ಲವ ಸುತ್ತ ಮುತ್ತಲಿನ ಕೊಟ್ಟಿಗೆ ವಗೈರೆ ಸಹ ಬೆಂದು ಹೋಗಿ ಪೂರಾ ನಷ್ಟವಾಗಿದೆ.

'ಕೊಡಗು' ಪತ್ರಿಕೆಯನ್ನು ಪೋಸ್ಟು ಮಾಡಲು ಪೋಸ್ಟಲ್ ನಿಯಮಗಳನ್ನು ಕೂಡಲು ಅತ್ತಿ ಇಲ್ಲವೆಂದು ಚೀಫ್ ಕಮಿಶನರವರ ಆಫೀಸಿನಿಂದ ಬಂದ ಹುಕುಂ ಮೇರೆಗೆ ಸರಕಾರವಾಗಿ ಪೋಸ್ಟಲ್ ಅಧಿಕಾರಿಗಳು ಇನ್ನು ಮುಂದೆ ರಿಯಾಯಿತಿಯಿಂದ ಪತ್ರಿಕೆ ಕಳುಹಿಸುವುದಿಲ್ಲ. ಕಳೆದ ವಾರದಿಂದ ಪತ್ರಿಕೆಗಳನ್ನು ಒಂದಾಣೆ ಸ್ಟ್ಯಾಂಪು ಮೂಲಕ ಕಳುಹಿಸಲಾಗಿದೆ.

'ಕೊಡಗು' ಕಂಪೆನಿಯ ಮತ್ತು ಏಜನ್ಸಿಯ ಸಂಘದ ಬಾಕಿ ಹಣ ವಸೂಲಾತಿಗೆ ಮೆ. ಅಮ್ಮಂಡ ಸುಬ್ಬಯ್ಯನವರನ್ನು ದಕ್ಷಿಣ ಕೊಡಗು ತಾಲೋಕಿಗೆ ನೇಮಕ ಮಾಡಿರುವುದರಿಂದ ಎಲ್ಲಾ ಮೆಂಬರುಗಳೂ ಅವರವರ ಪತ್ರಿಕೆಯ ಮತ್ತು ಸಂಘದ ಬಾಕಿ ಹಣವನ್ನು ಅವರಿಗೆ ಪಾವತಿ ಮಾಡಬೇಕಾಗಿ ಕೋರಲಾಗಿದೆ.

ಮೆ. ಕೊಕಂಡೆರ ಮಾದಪ್ಪನವರು ತನ್ನ ಮುನಿಸಿಪಲ್ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವುದರಿಂದ ಅವರ ವಾರ್ಡಿಗೆ ಹೊಸ ಮೆಂಬರನ್ನು ಚುನಾಯಿಸಬೇಕಾಗಿರುವುದರಿಂದ ಈ ತಾ. 28 ರೊಳಗೆ ಉಮೇದ್ವಾರರು ಅರ್ಜಿ ಕಳುಹಿಸಬೇಕೆಂದೂ, ಚುನಾವಣೆಯು ಮಾರ್ಚಿ ತಾ. 31 ಕ್ಕೆ ಆಗುವುದೆಂದೂ ಮುನ್ಸಿಪಲ್ ಪ್ರೆಸಿಡೆಂಟರು ತಿಳಿಸಿರುತ್ತಾರೆ.

1912 ನೇ ಇಸವಿಯ ಪರಸ್ಪರ ಸಹಾಯಕ ಸಂಘಗಳ ಆಕ್ಟಿನ ಮೇರೆ ರಿಜಿಸ್ಟರ್ ಮಾಡಲ್ಪಟ್ಟಿರುವ ಕೂಟಿಗೆಹಳ್ಳಿ, ದೇವನೂರು ಮತ್ತು ಮುರುವಂಡ ದವಸ ಭಂಡಾರಗಳನ್ನು ಸದರಿ ಆಕ್ಟಿನ 39 ನೇ ಸೆಕ್ಷನ್ ಮೇರೆ ರದ್ದುಮಾಡಿ ಸದರಿ ಆಕ್ಟಿನ 42 (1) ನೇ ಸೆಕ್ಷನ್ ಮೇರೆ ಪೊನ್ನಂಪೇಟೆ ಸರ್ಕಲಿನ ಪರಸ್ಪರ ಸಹಾಯಕ ಸಂಘಗಳ ಇನ್ಸ್‌ಪೆಕ್ಟರ್ ಮೆ. ಬೆಳ್ಳಿಚೆಟ್ಟಿರ ಚಂಗಪ್ಪನವರನ್ನು ಸದರಿ ಸಂಘಗಳ ಲಿಕ್ವಿಡೇಟರಾಗಿ ನೇಮಿಸಿರುತ್ತಾರೆಂದು ರಿಜಿಸ್ಟ್ರಾರವರು ತಿಳಿಸಿರುತ್ತಾರೆ.

ಮಡಿಕೇರಿ ಹೈ ಸ್ಕೂಲಿನಲ್ಲಿ ಶಿಶು ಪ್ರದರ್ಶನ ಮತ್ತು ಆರೋಗ್ಯ ವಿಚಾರದ ಪ್ರದರ್ಶನವು ಈ ಮಾರ್ಚಿ ತಾ. 14 ಮತ್ತು 15 ರಲ್ಲು ರೆಡ್ ಕ್ರಾಸ್ ಸಂಘದವರು ಮಾಡುತ್ತಾರೆ. ತಾ. 15 ರಲ್ಲಿ ಶಿಶು ಪ್ರದರ್ಶನವಾಗುವುದರಿಂದ ಎಲ್ಲಾ ತಾಯಂದಿಯರು ತಮ್ಮ ತಮ್ಮ ಮಕ್ಕಳನ್ನು ಪ್ರದರ್ಶಿಸಿ ಬಹುಮಾನವನ್ನು ಪಡೆಯಲು ಉದ್ಯುಕ್ತರಾಗಬೇಕೆಂದೂ, ಮನೆ ಮಾರು ಹಿತ್ತಲುಗಳನ್ನು ಸ್ವತಃ ಕೆಲಸ ಮಾಡಿ ಶುಚಿಯಾಗಿಟ್ಟುಕೊಂಡವರಿಗೆ ಇನಾಮುಗಳು ಕೊಡಲಾಗುವುದೆಂದೂ ರೆಡ್ ಕ್ರಾಸ್ ಸಂಘದ ಸೆಕ್ರೆಟರಿಯವರು ತಿಳಿಸುತ್ತಾರೆ.

ಕಳೆದ ತಾ 20ರಲ್ಲು ಮಡಿಕೇರಿಯಲ್ಲು ದಸ್ತಗಿರಿಯಾದ 61 ಸತ್ಯಾಗ್ರಹಿಗಳು ಉಪವಾಸದಿಂದಿದ್ದು ಬಿಡುಗಡೆಯಾಗಿ ಅವರ ಶಿಬಿರಕ್ಕೆ ಸ್ಟೇಶನ್ನಿನಿಂದ ವಾಪಸು ಹೋಗುವಾಗ್ಯೆ ಮೆ. ಕೋಚನ ದೊಡ್ಡಯ್ಯನವರು ಅವರೆಲ್ಲರಿಗೂ ತೃಪ್ತಿಯಾಗುವ ಹಾಗೆ ಒಂದು ಟೀ ಪಾರ್ಟಿಯನ್ನು ಕೊಟ್ಟರೆಂತಲೂ ಅದೇ ಉದ್ದೇಶ ಮೇಲ್ಮಂಡ ಸತ್ಯಾಗ್ರಹಿಗಳಿಗೆ ಮಹದೇವಪೇಟೆಯಲ್ಲಿ ವ್ಯಾಪಾರ ಅಂಗಡಿ ಇಟ್ಟುಕೊಂಡಿರುವ ಮೆ. ಕೆ ಸುಬ್ರಾಯರು ಒಂದು ದಿನದ ಫ್ರೂಟ್ ಊಟದ ಖರ್ಚು ಉಚಿತವಾಗಿ ಕೊಟ್ಟಿರುವರೆಂತಲೂ ತಿಳಿಸಲು ಸಂತೋಷ ಪಡುತ್ತೇವೆ. ದೇಶಾಭಿಮಾನಿಗಳೆಲ್ಲರೂ ಹೀಗೆಯೇ ಅವರನ್ನು ಪ್ರೋತ್ಸಾಹಿಸಬೇಕೆಂದು ಒಬ್ಬರು ಬರೆದಿರುತ್ತಾರೆ.

ಮೈಸೂರು ವಿದ್ವಾನ್ ಮೆ. ಶ್ರೀಕಂಠ ಶಾಸ್ತ್ರಿಯವರ ಮಗ 15 ವರ್ಷ ಪ್ರಾಯದ ಮೆ. ವೆಂಕಟರಾಮಯ್ಯನೆಂಬವನು ಕಳೆದ ತಾ 23 ರಲ್ಲು ಒಮ್ಮಕ್ಕಾರದ ಸಂಘದ ಹಾಲಿನಲ್ಲಿ 'ರುಕ್ಮಿಣೀ ಕಲ್ಯಾಣ' ವೆಂಬ ಹರಿಕಥೆಯನ್ನು ಬಹು ಸ್ವಾರಸ್ಯವಾಗಿ ಮಾಡಿ ಅಲ್ಲಿ ನೆರೆದಿದ್ದ ಅಂದಾಜು 200 ಜನರ ಮನಸ್ಸಿಗೆ ಆನಂದವನ್ನುಂಟುಮಾಡಿದನು. ಇವನು ಮತ್ತು ಇವನ ತಂದೆ ಅಣ್ಣಂದಿರು ಸಹ ಈ ತಾ 28 ರಿಂದ ಮಾರ್ಚಿ ತಾ. 6 ರ ವರೆಗೆ ಸಪ್ತ ಹರಿಕಥೆಗಳನ್ನು ಮೇಲ್ಕಂಡ ಸಂಘದ ಹಾಲಿನಲ್ಲಿ ಮಾಡಲು ಏರ್ಪಾಡು ಮಾಡಿರುವುದರಿಂದ ಎಲ್ಲಾ ಮಹನೀಯರೂ ಎಡೆಬಿಡದೆ 7 ದಿನಗಳ ವರೆಗೂ ಬಂದು ಪ್ರೋತ್ಸಾಹಿಸಿ ತಮ್ಮ ಕೈಯಲ್ಲಾದ ಸಹಾಯ ಮಾಡಬೇಕಾಗಿ ಮ. ಬಿ ರಾಮಣ್ಣನವರು ಮೊದಲಾದ ಮಾನ್ಯರು ತಿಳಿಸುತ್ತಾರೆ.

ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗು ಕಳೆದ ತಾ 22 ರಲ್ಲು ನಡೆದು ಈ ಕೆಳಗಿನ ಮಹನೀಯರನ್ನು ಮುಂದಿನ ವರ್ಷದ ಡೈರೆಕ್ಟರುಗಳನ್ನಾಗಿ ನೇಮಿಸಲಾಗಿದೆ,

ಬಿಡು ಮೆಂಬರುಗಳ ಪರವಾಗಿ —1. ರಾವ್‌ಬಹದ್ದೂರ್ ಪಟ್ಟಮಾಡ ದೇವಯ್ಯನವರು, 2. ರಾವ್‌ಬಹದ್ದೂರ್ ಕೋದಂಡ ಅಪ್ಪಯ್ಯನವರು, 3 ಮೆ ಗಳಾದ ಕೋಟೆರ ಪಿ. ಬೆಳ್ಳಿಯಪ್ಪನವರು, 4 ಸಿ. ಎನ್. ವೆಂಕಪ್ಪಯ್ಯನವರು, 5. ಐಚೆಟ್ಟಿರ ಸುಬ್ಬಯ್ಯನವರು.

ಸೊಸೈಟಿಗಳ ಪರವಾಗಿ —1 ಮೆ. ಗಳಾದ ಮನೆಯಪಂಡ ಬೆಳ್ಳಪ್ಪನವರು, 2 ಐನಂಡ ಕಾರ್ಯಪ್ಪನವರು, 3 ಪುಕ್ಕೇರ ಉದ್ದಯ್ಯನವರು, 4 ಅಮ್ಮತಂಡ ಬೋಪಣ್ಣನವರು, 5. ರಾವ್‌ಬಹದ್ದೂರ್ ಕೋಡಿಮಣಿಯಂಡ ಸುಬ್ಬಯ್ಯನವರು, 6 ಪಾಂಡಂಡ ಚಂಗಪ್ಪನವರು, 7. ಮುಂಡಂಡ ದೇವಯ್ಯನವರು, 8 ಸಣ್ಣೇರ ಮುಂಡ ಸೋಮಯ್ಯನವರು, 9. ಡಬ್ಲ್ಯು. ಯಸ್. ರಾಮಸುಬ್ಬಯ್ಯನವರು, 10 ಬಿದ್ದಂಡ ಸುಬ್ಬಯ್ಯನವರು.

ಬ್ಯಾಂಕಿನ ಪ್ರೆಸಿಡೆಂಟರಾಗಿ ರಾವ್‌ಬಹದ್ದೂರ್ ಕೋದಂಡ ಅಪ್ಪಯ್ಯನವರನ್ನೆ ನೇಮಿಸಲಾಯಿತು. ಗೌರವ ಸೆಕ್ರೆಟರಿ ಮತ್ತು ಟ್ರೆಜರರ ನೇಮಕವು ಇನ್ನೊಂದು ಡೈರೆಕ್ಟರುಗಳ ಮೀಟಿಂಗಿಗೆ ಮುಂದಾಕಲಾಗಿದೆ. ಮೀಟಿಂಗಿನ ತಪಶೀಲು ವಿವರವು ಬರುವ ವಾರ ಪ್ರಕಟಿಸಲಾಗುವುದು.

ಮೈಸೂರಿನ ಮೆ. ಯಂ ಯಸ್ ಸಿದ್ದಪ್ಪ ಅಂಡ್ ಬ್ರದರ್ಸ್‌ರವರು 1931ನೇ ಸಂವತ್ಸರದ ಅನೇಕ ದೇವತೆಗಳ ಚಿತ್ರಗಳಿರುವ ಶೀಟ್ ಕ್ಯಾಲೆಂಡರ್ ನಮ್ಮ ಚಂದಾದಾರರಿಗೆಲ್ಲ ಹಂಚಬೇಕಾಗಿ ಕಳುಹಿಸಿದ ಮೇರೆ ಈ ದಿನ ಪತ್ರಿಕೆಯಲ್ಲು ಎಲ್ಲರಿಗೂ ಹಂಚಲಾಗಿದೆ

ಹಿಂದುಸ್ಥಾನ.

ಬೆಳಗಾಂವಿನಲ್ಲಿ ಕೆಲವು ಮಂದಿ ಸ್ತ್ರೀಯರು 144 ನೇ ಸೆಕ್ಷನನ್ನು ವಿರೋಧಿಸಿದಕ್ಕಾಗಿ ಶಿಕ್ಷೆಗೆ ಒಳಗಾಗಿರುವರು.

ಪಂಡಿತ ಮೋತಿಲಾಲ್ ನೆಹರುರವರ ಅಳಿಯ ಡಾ. ಎಸ್. ಪಂಡಿತರನ್ನು ಜೈಲಿನಿಂದ ಬಿಡುಗಡೆ ಮಾಡುವರು.

ಸರದೇಶೀ ಬಟ್ಟೆ ಮಾರುವುದಿಲ್ಲವೆಂಬನಾಗಿ ಬೊಂಬಾಯಿನ ವರ್ತಕ ಮಂಡಲಿಯವರು ಮುಚ್ಚಳಿಕೆಗೆ ರುಜು ಮಾಡಿದ್ದಾರೆ.

ಲಕ್ನೌ ನಲ್ಲಿ ಘೋರಿಸ್ಸಿ ಸತ್ಯಾಗ್ರಹವು ನಡೆಯುತ್ತಾ ಇದೆ. ಪೈಕ ಫಾರೆಸ್ಟಿನೊಳಗೆ ನುಗ್ಗಿ ಪ್ರತಿ ದಿನವೂ ಗಾಂಧಿ ಗಾನ ನುಡಿ ಹಾಡುತ್ತಿರುವರು.

ಬೊಂಬಾಯಿಯಲ್ಲಿ ರಾಷ್ಟ್ರೀಯ ಬಾವುಟಕ್ಕೆ ವಂದನೆ ಮಾಡುವ ಸಮಾರಂಭದಲ್ಲಿ 400 ಜನರು ಕಳೆದ ತಾ. 22 ರಲ್ಲಿ ದಸ್ತಗಿರಿ ಮಾಡಲ್ಪಟ್ಟಿರುವರು.

ವೈಸರಾಯರಾದ ಲಾರ್ಡ್ ಇರ್ವಿನ್ನರು ಮಾರ್ಚಿ ತಾ. 12 ರಿಂದ 15 ರ ವರೆಗೆ ಜೈಪುರಕ್ಕೆ ಹೋಗಿ ಅಲ್ಲಿಯ ಯುವಕ ಮಹಾರಾಜರನ್ನು ಸಿಂಹಾಸನಕ್ಕೇರಿಸಲಿಕ್ಕಿರುವರು

ಬಿಜಾಪುರದ ಕ್ರಾಂತಿ ಪತ್ರಿಕೆಯ ಸಂಪಾದಕರಿಗೆ ಮೂರು ತಿಂಗಳ ಕಠಿಣ ಸಜವೂ, 200 ರೂ. ಜುಲ್ಮಾನೆಯೂ ಪ್ರೆಸ್ ಆರ್ಡಿನೇನ್ಸ್ ಮೇರೆ ಆಗಿರುತ್ತೆ.

ಕಲಕತ್ತದಲ್ಲಿ ಹೆಂಪು ನಾರಿನ ಸ್ಟಾಕು ಇದ್ದ ಒಂದು ಮನೆಗೆ ಬೆಂಕಿ ಬಿದ್ದು ಮನೆ ಮತ್ತು ನಾರು ಸುಟ್ಟು ಬೂದಿಯಾಗಿ ಲಕ್ಷ ಗಟ್ಲೆ ರೂಪಾಯಿ ನಷ್ಟವಾಗಿದೆ.

ಇಂಡಿಯಾದ ಮುಂದಿನ ವೈಸರಾಯರಾದ ಲಾರ್ಡ್ ವೆಲ್ಲಿಂಗ್‌ಡನ್‌ರವರಿಗೆ ಅರ್ಲ್ ಆಫ್ ವೆಲ್ಲಿಂಗ್‌ಡನ್ ಎಂಬ ಟೈಟಲ್ ದೊರಕಿದ್ದು ಗಜೆಟಾಗಿರುತ್ತೆ.

ಬೊಂಬಾಯಿ ಮತ್ತು ಯುನೈಟೆಡ್ ಪ್ರಾಂತ್ಯದಲ್ಲಿ ಅಬ್ಕಾರಿ ಉತ್ಪತ್ತಿಯಿಂದ ಸುಮಾರು ಒಂದು ಕೋಟಿ ರೂ. ವರೆಗೆ ಸರ್ಕಾರಕ್ಕೆ ಹಣವು ಕಡಿಮೆಯಾಗಿದೆ.

ಬೆಂಗಳೂರಿನ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಗಾಂಧಿ ಟೊಪ್ಪಿ ಹಾಕಿದ ಒಬ್ಬ ಹುಡುಗನಿಗೆ ಆಕ್ಷೇಪಿಸಿದ ಕಾರಣಕ್ಕಾಗಿ ಇಡೀ ಕಾಲೇಜು ಮಕ್ಕಳು ಶಾಲೆಗೆ ಹೋಗದೆ ಬಹಿಷ್ಕಾರ ಹಿಡಿದಿರುವರು

ಗುಜರಾತಿನ ಬೋರ್‌ಸಾದ್ ತಾಲೋಕಿನಲ್ಲಿ ಸ್ತ್ರೀಯರ ಮೇಲೆ ಪೋಲೀಸಿನವರಿಂದ ಆದ ಹಿಂಸೆಯನ್ನು ಕುರಿತು ವಿಚಾರಣೆ ಮಾಡಲಿಕ್ಕಾಗಿ ಬೊಂಬಾಯಿ ಸರ್ಕಾರದವರು ಕೂಡಲೇ ಏರ್ಪಾಟು ಮಾಡುವುದರಲ್ಲಿದ್ದಾರೆ.

ಕರಾಚಿಯಲ್ಲಿ ಸತ್ಯಾಗ್ರಹಿಗಳ ವಿಚಾರವು ಕೋರ್ಟಿನಲ್ಲಿ ನಡೆಯುತ್ತಿದ್ದಾಗ್ಯೂ ನಾಲ್ಕು ಸ್ತ್ರೀಯರು ಉಪ್ಪು ಮಾರುತ್ತ ಇದ್ದರು ಈ ತಕ್ಸೀರಿಗಾಗಿ ಇವರಿಗೆ ನಾಲ್ಕು ನಾಲ್ಕು ತಿಂಗಳ ಕಠಿಣ ಸಜ ವಿಧಿಸಿದ್ದಾರೆ.

ಡೆಲ್ಲಿಯಲ್ಲಿ ವೈಸರಾಯರಿಗೂ, ಮಹಾತ್ಮ ಗಾಂಧಿಯವರಿಗೂ ರಾಜಿ ಪಂಚಾಯಿತಿ ನಡೆಯುತ್ತಾ ಇದೆ ಏಳೆಂಟು ದಿವಸಗಳೊಳಗೆ ರಾಜಿಯಾಗಬಹುದೆಂದು ಎಲ್ಲರೂ ಯೋಚಿಸಿದ್ದಾರೆ ಕಾಂಗ್ರೆಸಿನವರು ತಮ್ಮ ಎಲ್ಲಾ ಅಧಿಕಾರವನ್ನು ಮಹಾತ್ಮ ಗಾಂಧಿಯವರಿಗೆ ಕೊಟ್ಟಿರುತ್ತಾರೆ

ಮಹಾತ್ಮ ಗಾಂಧಿಯವರ ರಾಜಿ ಶರತುಗಳಲ್ಲೊಂದಾದ ಪೋಲೀಸು ಅತ್ಯಾಚಾರಕ್ಕೆ ತನಿಖೆ ಮಾಡುವುದಕ್ಕೆ ಸರ್ಕಾರದವರು ಒಪ್ಪಿಕೊಳ್ಳಬೇಕೆಂಬುವುದಕ್ಕನುಗುಣವಾಗಿ ತನಿಖೆ ಮಾಡಲು ಮೂರು ಜಡ್ಜಿಗಳನ್ನು ಸರ್ಕಾರದವರು ನೇಮಿಸುವುದಾಗಿ ವರ್ತಮಾನವಿದೆ

ಗುಜರಾತಿನ ವಿದ್ಯಾ ಪೀಠದಲ್ಲಿ ಪ್ರೊಫೆಸರಾಗಿರುವ ಕುಮಾರಪ್ಪನವರಿಗೆ ಸೆಕ್ಯೂರಿಟಿ ಸೆಕ್ಷನ್ ಮೇರೆ ಒಂದು ವರ್ಷ ಸಾದಾ ಸಜ ಮಾಡಿರುತ್ತಾರೆ. ಇವರು ಮೊದಲು 'ಯಂಗ್ ಇಂಡಿಯಾ' ಪತ್ರಿಕೆಗೆ ಬಹಳ ಉಚಿತ ಲೇಖನಗಳನ್ನು ಬರೆಯುತ್ತಿದ್ದರು

ಸೆಂಟ್ರಲ್ ಪ್ರಾವಿನ್ಸಿನ 14 ನೇ ವಾರ್ ಕೌನ್ಸಿಲ್ ಪ್ರೆಸಿಡೆಂಟರಾದ ಮೆ. ಕಾಳಿಚರನ್ ಶ್ರಾಫ್‌ರವರು ಖಾನೇಸು ಮಾರಿಯನ್ನು ಬಹಿಷ್ಕಾರ ಮಾಡಿದ್ದಕ್ಕಾಗಿ ಮೇಜಿಸ್ಟ್ರೇಟರು ಒಂದು ವರ್ಷ ಕಠಿಣ ಸಜ ಮತ್ತು ಐದು ನೂರು ರೂಪಾಯಿ ಜುಲ್ಮಾನೆ ಮಾಡಿರುವರು.

ಕಲಕತ್ತದ ಹೂಗ್ಲಿ ನದಿಯಲ್ಲಿ ಮುಳುಗುತ್ತಿದ್ದ ಒಬ್ಬ ಹೆಂಗಸಿನ ಪ್ರಾಣವನ್ನುಳಿಸಲು ಹೋದ, ಡೆಪ್ಯುಟಿ ಇಂಜಿನೀಯರಾದ ಮುಖರ್ಜಿ ಎಂಬವರು ತನ್ನ ಪ್ರಾಣವನ್ನು ಸಹ ಕಳೆದ ತಾರೀಕು 25 ರಲ್ಲಿ ಕಳಕೊಂಡಿರುವರು. ಹೆಂಗಸಿನ ಶವವು ಸಿಕ್ಕಿದೆ. ಇಂಜಿನೀಯರ ಶವವು ಇನ್ನೂ ಸಿಕ್ಕಿರುವುದಿಲ್ಲ.

ಮದ್ರಾಸಿನಲ್ಲಿ ಪಿಕೆಟಿಂಗ್ ಕೆಲಸವು ಚೆನ್ನಾಗಿ ನಡೆಯುತ್ತಾ ಇದೆ. ಪೋಲೀಸಿನವರು ಲಾಠೀ ಪ್ರಹಾರವನ್ನು ಬಿಟ್ಟಿರುತ್ತಾರೆ. ಆದರೆ ಸತ್ಯಾಗ್ರಹಿಗಳು ಎಂಬುದಾಗಿ ತಿಳಿದವರನ್ನೆಲ್ಲಾ ದಸ್ತಗಿರಿ ಮಾಡಲು ಪಟ್ಟಣವೆಲ್ಲಾ ಪೋಲೀಸಿನವರು ಹುಡುಕಾಡುವುದಕ್ಕೆ ಪ್ರಾರಂಭಿಸಿದ್ದಾರೆ. ಇಲ್ಲಿ ಕಳೆದ ತಾರೀಕು 25 ರಲ್ಲಿ 14 ಜನ ಗಂಡಸರೂ, 3 ಸ್ತ್ರೀಯರೂ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಮದ್ರಾಸಿನಲ್ಲಿ ಬಹಳ ವಿಶೇಷ ಸಂಗತಿಯೊಂದಾಗಿದೆ ಕಾಂಗ್ರೆಸ್ ಆಸ್ಪತ್ರೆಯಲ್ಲಿದ್ದ ನಾಲ್ಕು ಕಾಯಿಲಸ್ಥರ ಬಿಟ್ಟು ಬಾಕಿ ಇರುವ ಕಾಯಿಲಸ್ಥರನ್ನು ಪೋಲೀಸಿನವರು ಹಿಡಿದುಕೊಂಡು ಹೋಗಿರುತ್ತಾರೆ. ಇಂಡಿಯಾ ದೇಶದಲ್ಲಿ ಈ ವರೆಗೆ ಯಾವ ಕಾಂಗ್ರೆಸ್ ಆಸ್ಪತ್ರೆಗಳನ್ನೂ ಪೋಲೀಸಿನವರು ಹೊಕ್ಕು ಈ ರೀತಿ ಮಾಡಿರುವುದಿಲ್ಲ. ಹೀಗೆ ಮಾಡಿದ್ದು ಎಲ್ಲಾ ರಾಷ್ಟ್ರಕೂಟದ ನೀತಿಗೆ ವಿರೋಧವೆಂದು ಡಾಕ್ಟರ್ ಯು. ರಾಮರಾಯರು ಬರೆದಿರುತ್ತಾರೆ.

ಪೆಶಾವರದಲ್ಲಿ ಹಬಿಬ್‌ನೂರ್ ಎಂಬವನು ಚಾರ್‌ಸಾದ ಅಸಿಸ್ಟೆಂಟ್ ಕಮಿಶನರ್ ಕೆಪ್ಟನ್ ಬಾರ್ನ್ಸ್ ಎಂಬವನನ್ನು ಕೊಂದನೆಂಬ ಆರೋಪಣೆಯ ಮೇರೆ ಸೆಶ್ಶನ್ ಜಡ್ಜಿಯವರ ಕೋರ್ಟಿನಲ್ಲಿ ಒಂದು ದಿನ ವಿಚಾರಣೆ ನಡೆದು ಗಲ್ಲಿಕ್ಕೆ ಹಾಕುವಂತೆ ತೀರ್ಮಾನ ಮಾಡಿ ಮಾರಣೆ ದಿನವೇ ಗಲ್ಲಿಕ್ಕೇರಿಸಿದರು ಸರ್ಕಾರದ ಈ ಕೃತ್ಯವನ್ನು ಖಂಡಿಸಿ ಅಸೆಂಬ್ಲಿಯಲ್ಲಿ ಚರ್ಚೆಯು ಜೋರಾಗಿ ನಡೆಯಿತು ಮತ್ತು ಈ ಸರ್ಕಾರದ ಮೇಲೆ ವಿಶ್ವಾಸವಿಲ್ಲವೆಂಬ ಠರಾವು ಮಂಜೂರಾಯಿತು

ಬೊಂಬಾಯಿ ಕಾರ್ಪೋರೇಶನ್ನಿನಲ್ಲಿ ವೈಸರಾಯರಿಗೆ ಸ್ವಾಗತ ಕೊಡುವ ವಿಷಯವನ್ನು ಚರ್ಚಿಸಲಿಕ್ಕಾಗಿ ಒಂದು ಮೀಟಿಂಗು ಕಳೆದ ತಾ. 23ರಲ್ಲಿ ನಡೆಯಿತು. 20 ಸ್ತ್ರೀ ಸತ್ಯಾಗ್ರಹಿಗಳು ಯಾರೂ ಮೀಟಿಂಗಿಗೆ ಹೋಗಬಾರದೆಂದೂ, ವೈಸರಾಯರಿಗೆ ಸ್ವಾಗತ ಕೊಡಕೂಡದೆಂದೂ ಮೀಟಿಂಗು ಹಾಲ್‌ನ ಮುಂದುಗಡೆ ಅಡ್ಡ ಕಟ್ಟಿದರು. ಪೋಲೀಸರು ಕೂಡಲೇ ಬಂದ, ಇವರನ್ನು ನೂಕಿದರು ಒಬ್ಬ ಸ್ತ್ರೀ ಬಿದ್ದು ಸ್ಮೃತಿ ತಪ್ಪಿದಳು ಎಲ್ಲರನ್ನೂ ಪೋಲೀಸರು ದಸ್ತಗಿರಿ ಮಾಡಿ ಲಾಕಪ್ಪಿಗೊಯ್ದಿದ್ದರು

ವಿ ದೇ ಶ.

ಗ್ಲೇಸ್ಗೋ ಪಟ್ಟಣದಲ್ಲಿ 20 ಲಕ್ಷ ಪವುನ್ ಭಂಡವಾಳದ ಬಟ್ಟೆ ಕಂಪೆನಿಯೊಂದು ಮೋಸದ ಕಂಪೆನಿಯೆಂಬದಾಗಿ ಅದರ ಅಧಿಕಾರಿಗಳನ್ನೆಲ್ಲಾ ಖೈದು ಮಾಡಿರುವರು.

ಕಾನ್‌ಸ್ಟೆಂಟಿನೋಪಲಿನಲ್ಲಿ ಎಣ್ಣೆಯ ಕೆರೆಯೊಂದನ್ನು ಕಟ್ಟಲು ರಷ್ಯದ ಸೋವಿಯಟ್ ಸರಕಾರವು ಒಪ್ಪಿಕೊಂಡಿರುವರು. ಇದಕ್ಕೆ ಆರು ಲಕ್ಷ ಟರ್ಕಿ ಪೌನುಗಳು ಖರ್ಚಾಗುತ್ತೆ

ಇಂಗ್ಲೆಂಡಿನ ಕನ್‌ಸರ್‌ವೇಟಿವ್ ಪಂಗಡದ ಚರ್ಚಿಲ್‌ಪಂಗಡದವರು ಇಂಡ್ಯಾಕ್ಕೆ ಮಾರ್ಪಾಡು ಕೊಡಕೂಡದೆಂದೂ, ದಬ್ಬಾಳಿಕೆಯಿಂದ ಚಳವಳವನ್ನು ನಿಲಿಸಬೇಕೆಂದೂ ಅಲ್ಲಿ ಯಾವಾಗಲೂ ಮೀಟಿಂಗು ಮಾಡುತ್ತಲಿರುವರು.

ಅಲ್ ಬೇನಿಯಾದ ರಾಜನನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದ ಇಬ್ಬರು ರಾತ್ರಿ ಮೇಲಿಂದ ಹಾಕುತ್ತಾ ಇದ್ದು, ರಾಜನು ಕಾರಿಗೆ ಹತ್ತುವಾಗ ಗುಂಡು ಹೊಡೆದರು. ರಾಜನ ಪರಿವಾರದವನೊಬ್ಬನು ಮೃತ ಪಟ್ಟಿದ್ದಾನೆ ರಾಜನಿಗೇನೂ ಆಗಿರುವುದಿಲ್ಲ.

ಜರ್ಮನಿಯ ಪೋಲೀಸರು ಹೊಸದೊಂದು ಉಪಾಯವನ್ನು ಕಂಡು ಹಿಡಿದಿರುವರು ರಾಜಕೀಯ ಸಭೆಗಳಲ್ಲಿ ಗಲಾಟೆಯಾಗಿ ಪಾತ್ರೆಗಳೇ ಆಯುಧಗಳಾಗಿರುವುದರಿಂದ ಇನ್ನು ಮುಂದೆ ಅಂತಹ ಸಭೆಗಳಲ್ಲಿ ಕೇವಲ ಕಾಗದದಿಂದ ಮಾಡಿದ ಒಂದು ಜಾತಿಯ ಪಾತ್ರೆಯಲ್ಲಿ ಹೆಂಡ ಕುಡಿಯುವ ಏರ್ಪಾಡನ್ನು ಮಾಡುತ್ತಿದ್ದಾರೆ.

ಇಂಗ್ಲೆಂಡಿನಲ್ಲಿ ಈಗಾಗಲೇ ದೋಣಿಯ ಆಕಾರದಂತಿರುವ ವಿಮಾನವು ತಯಾರಿಸಲ್ಪಟ್ಟಿದೆ. ಇದು ವರೆಗೆ ಯಾರೂ ಇಂಥಾದ್ದನ್ನು ತಯಾರು ಮಾಡಿರುವುದಿಲ್ಲ ಇದಕ್ಕೆ 2400 ಕುದುರೆಗಳ ಶಕ್ತಿ ಇದ್ದು ಗಂಟೆಗೆ 139 ಮೈಲು ಹಾರುವುದಾಗಿದೆ. ಇದರಲ್ಲಿ ಒಂದುವರೆ ಟನ್ ಸಾಮಾನುಗಳೂ, ಹದಿನೈದು ಜನರೂ ಹಿಡಿಯುತ್ತೆ.

ವೀರತ್ತಿನ ನ್ಯಕ್ತಿಯ ತಾಳ್ಮೆ.

ಶಾಶ್ವತ ಮುಖಮುದ್ರೆ.

ಎಚ್. ಎನ್. ಬ್ರೈಯಿಲ್ಸ್‌ಫರ್ಡ್‌ರು ವಿಲಾಯಿತಿಯಿಂದ ಹಿಂದೂಸ್ಥಾನಕ್ಕೆ, ಬಂದರು ಯರವಾಡದಲ್ಲಿ ಗಾಂಧಿಜೀಯವರನ್ನು ಕಂಡರು; ನೈನಿ ಸೆರೆಮನೆಯಲ್ಲಿ ನೆಹರೂಗಳನ್ನು ಕಂಡರು, ಪಠಾಣ ಜಮಖರರ ಸಂಘಕ್ಕೆ ದಾಳಿ ಮಾಡಿದರು ಅವರು ಗುಜರಾತಿನಲ್ಲೂ ಮತ್ತು ಇತರ ಸಂಗ್ರಾಮ ರಂಗಗಳಲ್ಲೂ ಸಂಚಾರ ಮಾಡಿ, ತಮ್ಮ ಅನುಭವನನ್ನು ಕುರಿತು 'ನ್ಯೂಲೀಡರ್' ಎಂಬ ಪತ್ರಿಕೆಯಲ್ಲಿ ಒಂದೇ ಸಮನೆ ಬರೆಯುತ್ತಿದ್ದಾರೆ ವೀರತ್ತಿನಲ್ಲಿ ಅವರು ಕಂಡದ್ದನ್ನು ಅವರ ಬಾಯಿಯಿಂದಲೇ ಕೇಳಿ.—

"ವೀರತ್ತಿನಲ್ಲಿ ನಾನು ಒಬ್ಬ ವ್ಯಕ್ತಿಯನ್ನು ಕಂಡೆ ಆತನ ಮುಖ ಮುದ್ರೆಯು ನನ್ನೆದೆಯಲ್ಲಿ ಶಾಶ್ವತವಾಗಿ ನಿಂತು ಹೋಗಿದೆ. ಮರೆಯುವುದೆಂತು? ಆ ಊರಲ್ಲೊಂದು ಸಭೆ ಸೇರಿತ್ತು. ಆ ವ್ಯಕ್ತಿಯು ಆ ಸಭೆಯಲ್ಲಿ ಉಪನ್ಯಾಸ ಮಾಡುತ್ತಿದ್ದನು. ಪೋಲೀಸರು ಆ ಸಭೆಯನ್ನು ಬಂದೂಕುಗಳನ್ನು ಬಾರುಮಾಡಿ ಗುಂಡುಗಳನ್ನು ಹಾರಿಸಿ ಚದರಿಸಿದರು. ಉಪನ್ಯಾಸಕನು ಶಾಂತಿಸ್ಥಾಪನೆಗಾಗಿ ಶಕ್ತಿಮೀರಿ ಹೆಣಗಾಡುತ್ತಿದ್ದನು. ಪೋಲೀಸರು ಅವನನ್ನು ಬಂಧಿಸಿದರು. ಲಾಠಿಗಳಿಂದ ಅವನ ಮೈ ಮೂಳೆ ಮುರಿದರು. ಅವನನ್ನು ಬಂಧಿಸಿದ ಮೇಲೆ ಅವನ ತೋಳಿಗೆ ಗುರಿಯಿಟ್ಟು ಬಂದೂಕು ಹಾರಿಸಿದರು. ಆ ಬಡಪಾಯಿಯು ಈ ಹಿಂಸೆ ತಾಳಲಾರದೆ ನೆಲಕ್ಕುರುಳಿದನು. ಪೋಲೀಸರು ಅವನನ್ನು ಒದ್ದರು. ೫ ಘಂಟೆಗಳ ಅನಂತರ ಅವನಿಗೆ ಸಾಮಾನ್ಯವಾದ ಔಷದೋಪಚಾರ ಮಾಡಿದರು. ಗುಂಡುತಾಗಿದ ತೋಳನ್ನು ಕತ್ತರಿಸಬೇಕಾಯಿತು. ಶಸ್ತ್ರ ಚಿಕಿತ್ಸೆಯಾದ ಮಾರಣೆಯ ದಿನವೇ ಆಸ್ಪತ್ರೆಯಿಂದ ಅವನನ್ನು ಸೆರೆಮನೆಗೆ ಒಯ್ದರು ಈ ಕಥೆಯನ್ನೆಲ್ಲ ಆತನು ನನಗೆ ಶಾಂತವಾಗಿ, ಸಮಾಧಾನವಾಗಿ, ಹೇಳಿದನು. ಹೇಳುತ್ತಿದ್ದಾಗ ಅವನಲ್ಲಿ ರೋಷವಾಗಲಿ, ಆವೇಷವಾಗಲಿ, ದ್ವೇಷಭಾವವಾಗಲಿ ಏನೇನೂ ಕಾಣಬರಲಿಲ್ಲ. ಅವನು ಹೇಳಿದ್ದನ್ನೆಲ್ಲ ಸ್ವತಂತ್ರ ವಿಚಾರಣೆಯ ಒರೆಗಲ್ಲಿಗೆ ಹಚ್ಚಿ ನೋಡಿದೆನು, ಎಲ್ಲವೂ ನಿಜವಾಗುತ್ತ ಅವನ ಮುಖ ಹಾಗಿರಲಿ, ದೇಹವೆಲ್ಲ ವಿಜಯಶ್ರೀಯಿಂದ ಹೊಳೆಯುತ್ತಿತ್ತು. ಸೆರೆಮನೆಯಲ್ಲೂ ಸಹ ಈತನು ಸಂಗಡಿಗರೊಂದಿಗೆ ಸಂತೋಷದಿಂದ ಕಾಲ ಹಾಕುತ್ತಿದ್ದನಂತೆ! ಆ ಸೆರೆಮನೆಯಲ್ಲಿದ್ದ ಸತ್ಯಾಗ್ರಹಿಗಳೆಲ್ಲ

"ಭಾರತವು ಈಗ ಸ್ವತಂತ್ರವಾಯಿತು. ನಮ್ಮ ಸ್ವಾಮಿ ಮಹಾತ್ಮರ ಆಜ್ಞೆಯನ್ನು ಪಾಲಿಸಿದೆವು. ಸಿಟ್ಟಾಗದೆ ಗುಂಡಿನೇಟನ್ನು ಸಹಿಸಿದೆವು"

ಎಂದು ತಮ್ಮ ತಮ್ಮೊಳಗೇ ಅಂದುಕೊಂಡು ಆನಂದ ಪಡುತ್ತಿದ್ದರು.

ಗುಜರಾತಿನ ಕಲೆಕ್ಟರ ದರ್ಬಾರು.

ಕಂದಾಯದ ವಸೂಲಿ ಕಷ್ಟವಾಯಿತು. ರೈತರು ದಬ್ಬಾಳಿಕೆಗೆ ಹೆದರಲಿಲ್ಲ. ದಿಕ್ಕು ತೋರದೆ ಸೂರತ್ತಿನ ಕಲೆಕ್ಟರು ಕೊಂಚ ಜಾಣನೆಂದು ತೋರುತ್ತದೆ. ಒಂದು ದರ್ಬಾರ್ ನಡಿಸಿ, ರೈತರನ್ನೆಲ್ಲ ಕರೆಸಿ, ಅಲ್ಲಿ ಸಲಿಗೆಯಿಂದ, ಮುಗುಳು ನಗೆಯಿಂದ ಸಂಭಾಷಣೆ ನಡೆಸಿದರು. ಅದನ್ನು ಕೊಂಚ ಕೇಳಿ:—

ಕ—ಇನ್ನೇನು ನಿಮ್ಮ ಗಾಂಧಿಯನ್ನೂ, ನಿಮ್ಮ ಸರದಾರರನ್ನೂ ಸೆರೆಮನೆಯಿಂದ ಬಿಟ್ಟು ಬಿಟ್ಟರು. ನಿಮಗೆ ಸ್ವರಾಜ್ಯ ಬಂದು ಹೋಯಿತಲ್ಲ. ಇನ್ನು ನೀವು ಕಂದಾಯ ಕೊಡ ಬಹುದಷ್ಟೆ

ರೈತರು—(ಅಲ್ಲಲ್ಲಿ ಪಿಸ್‌ಪಿಸ್ ಮಾತಿನಿಂದ)

ಕ—ಸಂಕೋಚವೇಕೆ? ದೂರವಾಗಿ ನಿಲ್ಲುವಿರೇಕೆ? ನಾನೂ ನಿಮ್ಮೊಳಗೆ ಒಬ್ಬನಾಗಿ ನಿಮ್ಮ ಹಿತಚಿಂತಕನಲ್ಲವೆ?

ರೈ—(ಒಬ್ಬ ಮುಂದೆ ಬಂದು) ಅದೆಲ್ಲ ಸರಿ ಸ್ವಾಮಿ. ಸತ್ಯವೂ ದಸ್ತಗಿರಿಗಳಾಗುತ್ತಲೇ ಇವೆ. ನಮ್ಮವರು ಮತ್ತು ಬಂಧುಗಳು ಸೆರೆಮನೆಗಳಲ್ಲಿ ನರಳುತ್ತಲೇ ಇದ್ದಾರೆ. ಸ್ವರಾಜ್ಯ, ಕೊನೆಗಾಣಲೇ ಇಲ್ಲ; ಸ್ವರಾಜ್ಯ ಬಂತೆಂದು ತಾವು ಅಷ್ಟಣೆ ಕೊಡಿಸುವಿರಲ್ಲಾ?

ಕ—(ಕಕಮಕವಾಯಿತು. ಆ ಮೇಲೆ ಯೋಚನೆ ಮಾಡಿ) ಹೌದಪ್ಪ, ಸರಕಾರದವರು ಶಾಂತಿ ಸ್ಥಾಪನೆಗೆ, ಸ್ನೇಹ ಬಾಂಧವ್ಯಕ್ಕೆ ಮೊದಲು ಮಾಡಿದ್ದಾರೆ. ಹೆಜ್ಜೆ ಹೆಜ್ಜೆಯಾಗಿ ತಾನೇ ಮುಂದುವರಿಯಬೇಕು? ನೀವೂ ಸರಕಾರದ ಗೌರವ ಪ್ರತಿಷ್ಠೆಗಳನ್ನು ಕಾಪಾಡ ಬೇಡವೇ? ಕಂದಾಯ ಕೊಟ್ಟು ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಬೆಳೆಸಬೇಕು.

ರೈ—(ಏಕ ಕಂಠದಿಂದ) ನೀವು ಹೇಳುವುದೆಲ್ಲ ಸರಿ ಮಹಾಸ್ವಾಮಿ! ಗಾಂಧೀ ಮಹಾರಾಜರ ಆಜ್ಞೆಯಾದರೆ ಈ ಕ್ಷಣ ಕಂದಾಯ ಸಲ್ಲಿಸಿ ಬಿಡುತ್ತೇವೆ. ಇಲ್ಲವಾದರೆ ಇಲ್ಲ ಇದು ನಮ್ಮ ವ್ರತ

ಈ ಸುದ್ದಿಯನ್ನು ಗಾಂಧಿಜೀಯವರಿಗೆ ತಿಳಿಸಲು ಅವರು ನಗುತ್ತ "ಹೇಗೆ ಉತ್ತರ ಕೊಡಬೇಕೆಂಬುದು ನಮ್ಮ ರೈತರಿಗೆ ಗೊತ್ತು" ಅಂದರಂತೆ!!

ಗುಜರಾತಿನ ಸ್ತ್ರೀಯರು.

ಗುಜರಾತಿನಲ್ಲಿ ಸ್ತ್ರೀಯರು ಸತ್ಯಾಗ್ರಹದಲ್ಲಿ ಭಾಗಿಗಳಾಗಿರುವರಷ್ಟೆ. ಆ ಭಾಗವನ್ನು ಅವರು ಹೇಗೆ ನಿರ್ವಹಿಸುತ್ತಿರುವರೆಂಬುದನ್ನು ಕಣ್ಣಾರೆ ನೋಡಲು ಶ್ರೀಮತಿ ಮೀರಾಬಾಯಿಯು (ಮಿಸ್ ಸ್ಲೇಡ್) ಒಬ್ಬಿಬ್ಬರೊಡನೆ ಆ ಜಿಲ್ಲೆಗಳಲ್ಲೆಲ್ಲ ಸಂಚಾರ ಮಾಡಿ, ಅನುಭವ ಪತ್ರಗಳನ್ನು ಬರೆದಿರುವಳು ಅವುಗಳಲೊಂದು ಸಂದರ್ಭ ಸಂಭಾಷಣಾವಿದು:—

"ನೂರು ಮಂದಿ ಹೆಂಗಸರು ಬರೇ ಹಳ್ಳಿಗಾಡಿನವರು ಮನೆಮಾರು ಬಿಟ್ಟು ಸತ್ಯಾಗ್ರಹಿಗಳಾಗಿ ಕಾಡು ಬೀಡುಗಳಲ್ಲಿ ಕಷ್ಟ ಪಡುತ್ತಿರುವುದನ್ನು ಕಂಡೆ. ಅವರೊಂದಿಗೆ ಸುಮಾರು ಎರಡು ಘಂಟೆಗಳ ಕಾಲ ಕಳೆದೆ. ಅವರಿಗೂ, ನನಗೂ ಆದ ಸಂಭಾಷಣವಿದು:

ನಾನು—ಮನೆ ಬಾಗಿಲು ಬಿಟ್ಟು ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಹೀಗೆ ಕಷ್ಟ ಪಡುತ್ತಿದ್ದೀರಲ್ಲ? ಹೀಗೆ ಎಷ್ಟು ಕಾಲವಿರಬಲ್ಲಿರಿ?

ಅವರು—ಭಾರತ ಮಾತೆಯು ಎಷ್ಟು ಕಾಲ ದಾಸ್ಯದಲ್ಲಿರುವಳೋ ಅಷ್ಟು ಕಾಲವೂ ಬಾಪೂಜೀ, ಸರದಾರಜೀಯಂತಹವರು ಕಾರಾಗೃಹದಲ್ಲಿರುವುದಂತೆ ನಾವು ಈ ಗುಡಿಸಲುಗಳಲ್ಲಿ ಇರಲಾರೆವೆ?

ನಾನು—ಸೆರೆಮನೆಯಲ್ಲಿರುವವರನ್ನು ಇಂದಲ್ಲ, ನಾಳೆ ಬಿಡುತ್ತಾರೆ. ಭೂಮಿ ಕಾಣಿ ಮುಟ್ಟುಗೋಲು ಹಾಕಿ ನಿಮ್ಮ ಇದ್ದಬದ್ದುದನ್ನೆಲ್ಲ ಸರಕಾರದವರು ಹರಾಜು ಹಾಕಿದ ಮೇಲೆ ನಿಮಗೇನೂ ಸಿಕ್ಕುವ ಹಾಗಿಲ್ಲವಲ್ಲ.

ಅವರು—ಹಾಳಾಗಿ ಹೋಗಲಿ ಬಿಡಿ ತಾಯಿ, ಊರಲ್ಲಿದ್ದು ಆ ಪೋಲೀಸರ ಹಿಂಸೆ ತಡೆಯುವುದಕ್ಕಿಂತ ವನವಾಸವೇ ಮೇಲಾಗಿದೆ.

ನಾನು—ಎಷ್ಟು ಕಾಲ ಹೀಗೆ ವನವಾಸ?

ಒಬ್ಬ ಮುದುಕಿ—ಪೂರ್ಣ ಸ್ವಾತಂತ್ರ್ಯ ಸಿಕ್ಕುವ ವರೆಗೆ ಸರದಾರರು ಬಂದು ನೀವೆಲ್ಲ ಮನೆಗಳಿಗೆ ಹಿಂತಿರುಗಿ ಅನ್ನುವ ವರೆಗೆ.

ನಾನು—ಇದಕ್ಕಿಂತ ಇನ್ನೂ ಹೆಚ್ಚು ಕಷ್ಟ ಬರಬಹುದು ವರ್ಷಗಟ್ಲೆ ಈ ಸಂಗ್ರಾಮ ನಡೆಯಬಹುದು.

ಒಬ್ಬಳು—(ವಯಸ್ಸಿನಲ್ಲಿ ಬಹಳ ಚಿಕ್ಕವಳು) ಕೈಲೊಂದು ಕೂಸು ಬೇರೆ. ಅದಕ್ಕೂ ೭—೮ ತಿಂಗಳಿರಬಹುದು. ಮೈಮೇಲೆ ಬಿದ್ದಿದ್ದ ಲಾಠಿಯ ಪೆಟ್ಟುಗಳನ್ನು ನಗೆ ಮುಖದಿಂದ ತೋರಿಸುತ್ತ ಇಲ್ಲ ತಾಯಿ, ವರ್ಷಗಟ್ಲೆ ನಡೆಯುವ ಹಾಗಿಲ್ಲ. ಬಾಪೂಜೀಯವರು ಬೇಗ ಈ ಯುದ್ಧವನ್ನು ಮುಗಿಸುತ್ತಾರೆ.

ನಾನು—ಮುಗಿಸದಿದ್ದರೆ?

ಅವಳು—ಮುಗಿಸದಿದ್ದರೆ ದೇವರಿದ್ದಾನೆ, ನಾವಿದ್ದೇವೆ.

ವಿ. ಕ.

ರೌಂಡ್ ಟೇಬಲ್ ಕಾನ್‌ಫರೆನ್ಸಿನವರು ತೀರ್ಮಾನ ಮಾಡಿರುವ ಫೆಡರಲ್ ವಿಧಾನದ ಲಕ್ಷಣವು.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಇದೊಂದು ಭಾವವೂತ್ರವೇ? ಅದವಾ ಸ್ವದೇಶ ಸಂಸ್ಥಾನಗಳು, ರಾಷ್ಟ್ರಗಳಿಗೂ ಇರುವ ಸಂಬಂಧವನ್ನು ಬಲಪಡಿಸುವುದರಿಂದ ಲಾಭವೇನಾದರುಂಟೇ? ಯಾವ ಸಂಬಂಧವೂ ಇಲ್ಲದೆ ನೂರು, ನೂರೈವತ್ತು ವರ್ಷಗಳಿಂದಲೂ ಕಾಲಕ್ಷೇಪ ಮಾಡುತ್ತಿಲ್ಲವೇ? ಈಗ ಬಂದು ಸಂಬಂಧವನ್ನು ಕಲ್ಪಿಸಿಕೊಳ್ಳುವುದೇತಕೆಂದು ಕಲವರು ಕೇಳಬಹುದು. ಸಂಸ್ಥಾನಗಳೂ ಬ್ರಿಟಿಷ್ ಇಂಡಿಯಾದಲ್ಲಿರುವ ರಾಷ್ಟ್ರಗಳೂ, ರಾಜಕೀಯ ವಿಷಯಗಳಲ್ಲಿ ಬೇರೆ ಬೇರೆಯಾಗಿರುವುದರಿಂದ ಅನೇಕ ನಷ್ಟ ಸಂಭವಿಸುತ್ತದೆ. ಬ್ರಿಟಿಷ್ ಇಂಡಿಯಾ ಪ್ರಭುತ್ವದವರು ದೇಶರಕ್ಷಣೆಗೆಂದು ದೊಡ್ಡ ಸೇನೆಯನ್ನು ಏರ್ಪಡಿಸಿ ಅದಕ್ಕಾಗಿ ವರ್ಷಂಪ್ರತಿ 60 ಕೋಟಿ ರೂಪಾಯಿ ಖರ್ಚುಗಟ್ಟಿರುವರು. ಈ ಸೈನ್ಯದ ಮೂಲಕ ಬ್ರಿಟಿಷ್ ಇಂಡಿಯಾದಲ್ಲಿರುವ ರಾಷ್ಟ್ರಗಳಲ್ಲದೆ ಸ್ವದೇಶಿ ಸಂಸ್ಥಾನಗಳು ಕೂಡ ರಕ್ಷಿಸಲ್ಪಡುತ್ತವೆ. ಆದರೆ ಇದಕ್ಕಾಗಿ ಬೇಕಾದ ದ್ರವ್ಯವನ್ನು ರಾಷ್ಟ್ರಗಳ ಪ್ರಜೆಗಳೇ ಕೊಡುತ್ತಿರುವರಲ್ಲದೆ ಸಂಸ್ಥಾನಾಧೀಶ್ವರರು ಒಂದು ಕಾಸನ್ನೂ ಕೊಡುತ್ತಿಲ್ಲ. ವಿದೇಶ ವಸ್ತುಗಳ ಮೇಲೆ ಬ್ರಿಟಿಷ್ ಇಂಡಿಯಾ ಪ್ರಭುತ್ವದವರು ಸುಂಕವನ್ನು ವಿಧಿಸಿ ಅನೇಕ ಕೋಟಿ ಹಣವನ್ನು ಸಂಪಾದಿಸುತ್ತಿರುವರು. ಈ ವಸ್ತುಗಳಲ್ಲಿ ಕೆಲವು ಭಾಗವು ಸ್ವದೇಶ ಸಂಸ್ಥಾನಗಳಿಗೆ ಹೋಗುತ್ತಿದ್ದರೂ ಸುಂಕದಿಂದ ಬರುವ ಆದಾಯದಲ್ಲಿ ಸಂಸ್ಥಾನಾಧಿಪತಿಗಳಿಗೇನೂ ದೊರಕುತ್ತಿಲ್ಲ. ಹೀಗೆಯೇ ಕೆಲವು ಸಂದರ್ಭಗಳಲ್ಲಿ ರಾಷ್ಟ್ರಗಳವರಿಗೂ, ಮತ್ತೆ ಕೆಲವು ಸಂದರ್ಭದಲ್ಲಿ ಸಂಸ್ಥಾನಗಳಿಗೂ ನಷ್ಟವಾಗುತ್ತಿರುವುದು. ಇದಕ್ಕೆ ಕಾರಣವು ದೇಶವೆಲ್ಲವೂ ಒಂದೇ ಪರಿಪಾಲನ ವಿಧಾನಕ್ಕೆ ಒಳಪಡದಿರುವುದೇ ಆಗಿದೆ.

ಇಂತಹ ನಷ್ಟಗಳನ್ನು ತಪ್ಪಿಸಲಿಕ್ಕೂ, ಸಂಸ್ಥಾನಗಳೂ, ರಾಷ್ಟ್ರಗಳೂ ಒಂದು ಮಾತೃದೇಶದ ಭಾಗಗಳೆಂದೂ, ಅವುಗಳ ಪ್ರಜೆಗಳು ಸಹೋದರ ಭಾವದಿಂದ ನಡೆಯಬೇಕೆಂದೂ ಭಾವಿಸುವವರ ಕೋರಿಕೆಯು ಸಫಲವಾಗಲಿಕ್ಕೂ ದೇಶಕ್ಕೆಲ್ಲ ಒಂದೇ ಪರಿಪಾಲನ ವಿಧಾನವಿರುವಂತೆಯೂ ಆ ವಿಧಾನದಿಂದ ಸಂಸ್ಥಾನಗಳೂ, ರಾಷ್ಟ್ರಗಳೂ ಸೇರುವುದು ಅತ್ಯಾವಶ್ಯಕವು. ಯಾವ ವಿಧಾನವಿದ್ದರೆ ಈ ಸಂಬಂಧವೇರ್ಪಡುವುದು ಎಂದು ಆಲೋಚಿಸಿದಲ್ಲಿ ಫೆಡರಲ್ ವಿಧಾನವೊಂದೇ ಇದಕ್ಕನುಗುಣವಾದುದೆಂದು ತೋರುತ್ತದೆ.

ಸ್ವದೇಶ ಸಂಸ್ಥಾನಗಳಲ್ಲಿ ಒಂದೊಂದಕ್ಕೆ ಈಗ ವಿಶೇಷ ಸ್ವಾತಂತ್ರ್ಯವುಂಟಾಗಿದೆ. ಅವುಗಳ ಪ್ರಜೆಗಳು ಆಯಾ ದೊರೆಗಳು ಮಾಡುತ್ತಿರುವ ಶಾಸನಗಳಿಗೆ ಬದ್ಧರಾಗಿರುತ್ತಾರಲ್ಲದೆ, ಸಂಸ್ಥಾನಗಳಿಗೆ ಕಾವಲಾಗಿರುವ ಬ್ರಿಟಿಷ್ ಪ್ರಭುತ್ವದವರು ಮಾಡುವ ಶಾಸನಗಳಿಗೆ ಬದ್ಧರಾಗಿಲ್ಲವು. ಪ್ರತಿ ಸಂಸ್ಥಾನಾಧೀಶ್ವರರೂ (ಯಾವುದೋ ಕೆಲವು ವಿಷಯಗಳ ವಿನಹ) ರಾಜಕೀಯ ವಿಷಯಗಳಲ್ಲೆಲ್ಲ ಸ್ವಾತಂತ್ರ್ಯವನ್ನನುಭವಿಸುತ್ತಿರುವರು. ಇಷ್ಟ ಬಂದಂತೆ ಕಂದಾಯವನ್ನು ವಿಧಿಸಲಿಕ್ಕೂ, ಸಿವಿಲ್ ಕ್ರಿಮಿನಲ್ ಶಾಸನಗಳಲ್ಲಿ ಮನಸ್ಸಿಗೆ ತೋಚಿದಂತೆ ಬದಲಾವಣೆ ಮಾಡಲಿಕ್ಕೂ, ಬ್ಯಾಂಕುಗಳ, ವರ್ತಕತನವು, ವಿದ್ಯೆ, ಭೂಮಿಶಿಸ್ತು ವ್ಯವಸಾಯ ವಿಷಯಗಳಲ್ಲಿ ಯಥೇಷ್ಟವಾಗಿ ವ್ಯವಹರಿಸಲಿಕ್ಕೂ ಸಂಸ್ಥಾನಾಧೀಶ್ವರರುಗಳಿಗೆ ಈಗ ಅಧಿಕಾರವಿರುತ್ತದೆ. ಈ ಸಂಸ್ಥಾನಗಳು ಬ್ರಿಟಿಷ್ ಇಂಡಿಯಾ ರಾಷ್ಟ್ರಗಳ ಕೂಡ ಮತ್ತೊಂದು ಪರಿಪಾಲನಕ್ಕೆ ಅಧೀನವಾಗಬೇಕೆಂದರೆ, ಆ ಪರಿಪಾಲನವು ಸಂಪೂರ್ಣಾಧಿಕಾರವುಳ್ಳ ಏಕೈಕ ಪ್ರಭುತ್ವವಾಗಿರಲು ಅವಕಾಶವಿಲ್ಲವು. ಕೆಲವು ವರ್ಷಗಳಿಂದ ಸ್ವಾತಂತ್ರ್ಯವನ್ನನುಭವಿಸುತ್ತಿರುವ ಸಂಸ್ಥಾನಗಳು ತಮ್ಮ ಅಧಿಕಾರವೆಲ್ಲವನ್ನೂ ಬಿಟ್ಟುಕೊಟ್ಟು ಏಕೈಕ ಪ್ರಭುತ್ವದ ಕೈಕೆಳಗೆ ಸಾಮಾನ್ಯ ರಾಷ್ಟ್ರವಾಗಿ ಬದಲಾಯಿಸಲ್ಪಡಲು ಅಂಗೀಕರಿಸುವುದಿಲ್ಲ. ಪ್ರಧಾನಗಳಾದ ದೇಶಕ್ಕೆಲ್ಲಾ ಅತ್ಯಾವಶ್ಯಕವಾದ ಕಲವು ವಿಷಯದಲ್ಲಿ ಮಾತ್ರ ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಸಂಸ್ಥಾನಾಧೀಶರೊಪ್ಪುವುದಿಲ್ಲ. ಆದರೆ ಅನೇಕ ವಿಷಯಗಳಲ್ಲಿ ಅವರ ಸ್ವತಂತ್ರರಾಗಬೇಕೆಂದೇ ಅವರು ಕೋರುವರು. ಇಂತಹ ಸಂದರ್ಭದಲ್ಲಿ ದೇಶದ ಮೇಲೆಲ್ಲ ಅಧಿಕಾರವನ್ನು ನಡೆಯಿಸುವ ಕೇಂದ್ರ ಪ್ರಭುತ್ವವು ಪರಿಮಿತಾಧಿಕಾರವುಳ್ಳದ್ದಾಗಿರಬೇಕಾಗಿದೆ. ಕೇಂದ್ರ ಪ್ರಭುತ್ವವು ಪರಿಮಿತಾಧಿಕಾರವುಳ್ಳದ್ದಾಗಿರುವುದು, ರಾಷ್ಟ್ರಗಳು ಸ್ವತಂತ್ರವನ್ನನುಭವಿಸುವುದೂ ಫೆಡರಲ್ ವಿಧಾನದ ಮುಖ್ಯ ಲಕ್ಷಣಗಳೆಂದು ನಾವು ಈ ವರೆಗೆ ತಿಳಿದಿರುತ್ತೇವೆ. ಆದರೆ ಸ್ವತಂತ್ರ್ಯಾಭಿಮಾನವುಳ್ಳವರಾಗಿಯೂ, ಸದ್ಯದಲ್ಲಿ ವಿಸ್ತಾರವಾಗಿ ಸ್ವಾತಂತ್ರ್ಯವನ್ನನುಭವಿಸುವವರಾಗಿಯೂ ಇರುವ ಸಂಸ್ಥಾನಾಧೀಶರು ಫೆಡರಲ್ ಪ್ರಭುತ್ವಕ್ಕೆ ಅಧೀನರಾಗಿರುವರೇ ಹೊರತು ಏಕೈಕ ಪ್ರಭುತ್ವಕ್ಕೆ ಅಧೀನರಾಗಿ ತಮ್ಮ ಸ್ವಾತಂತ್ರ್ಯವನ್ನೆಲ್ಲ ಕಳೆದುಕೊಳ್ಳಲಾರರು.

3. ಫೆಡರಲ್ ವಿಧಾನವು ಈಗ ಪ್ರಾಮುಖ್ಯತೆಯನ್ನು ಹೊಂದಲು ಮತ್ತೊಂದು ಕಾರಣವಿದೆ. ನಮ್ಮ ದೇಶದಲ್ಲಿ ಮಹಮ್ಮದೀಯರೊಳಗೆ ಅನೇಕರು ಈ ವಿಧಾನದಿಂದ ತಮಗೆ ಬಹಳ ಲಾಭವಾಗುತ್ತದೆಂದು ದೃಢವಾಗಿ ನಂಬಿಕೊಂಡಿರುತ್ತಾರೆ. ಆದುಕಾರಣ ಮಹಮ್ಮದೀಯ ನಾಯಕರು ಈ ವಿಧಾನವನ್ನೇ ತಾವು ಅಂಗೀಕರಿಸುತ್ತೇವೆಂದೂ, ಇದಕ್ಕೆ ಬದಲಾಗಿ ಏಕೈಕ ವಿಧಾನವನ್ನು ತಾವೆಂದಿಗೂ ಸಮ್ಮತಿಸುವುದಿಲ್ಲವೆಂದೂ ಹೇಳುತ್ತಿರುವರು. ಫೆಡರಲ್ ವಿಧಾನದಿಂದ ಮಹಮ್ಮದೀಯರಿಗೆ ಉಂಟಾಗುವ ಲಾಭವೇನಿರುವುದು?

ಸ್ವರಾಜ್ಯವೆಂದರೆ ಪ್ರಜಾ ಪರಿಪಾಲನವೆಂದು ಎಲ್ಲರಿಗೂ ತಿಳಿದೇ ಇರುತ್ತದೆ. ಪ್ರಜಾ ಪರಿಪಾಲನವೆಂದರೆ ಪ್ರಜೆಗಳೆಲ್ಲರೂ ಬಹುಮತದಿಂದ ವಿಷಯಗಳನ್ನು ನಿರ್ಧರಿಸುವುದೆಂದರ್ಥ. ನಮ್ಮ ದೇಶದ ಪ್ರಜೆಗಳಲ್ಲಿ ಹಿಂದುಗಳು ಬಹು ಸಂಖ್ಯಾತರಾಗಿಯೂ, ಮಹಮ್ಮದೀಯರು ಅಲ್ಪ ಸಂಖ್ಯಾತರಾಗಿಯೂ ಇರುತ್ತಾರೆ. ಆದುದರಿಂದ ಕೇಂದ್ರ ಪ್ರಭುತ್ವದಲ್ಲೂ, ಕೇಂದ್ರ ಶಾಸನ ಸಭೆಯಲ್ಲೂ ಹಿಂದುಗಳ ಸಂಖ್ಯೆಯು ಅಧಿಕವಾಗಿಯೂ, ಮಹಮ್ಮದೀಯರ ಸಂಖ್ಯೆಯು ಅಲ್ಪವಾಗಿಯೂ ಇರುವುದು ತಪ್ಪುವುದಿಲ್ಲ. ಸ್ವರಾಜ್ಯ ಸ್ಥಾಪನವಾದ ನಂತರ ಈಗಿನಂತೆಯೇ ಕೇಂದ್ರ ಪ್ರಭುತ್ವವು ರಾಷ್ಟ್ರ ಪ್ರಭುತ್ವದ ಮೇಲೆ ಸಂಪೂರ್ಣಾಧಿಕಾರವುಳ್ಳದ್ದಾಗಿರುವುದರಿಂದ ಸ್ವರಾಜವೆಂದರೆ ಅಧಿಕ ಸಂಖ್ಯಾತರಾದ ಹಿಂದುಗಳ ರಾಜ್ಯವೆಂದೇ ಹೇಳಬೇಕಾಗಿದೆ. ಮಹಮ್ಮದೀಯರೆಲ್ಲರೂ ಹಿಂದುಗಳಿಗೆ ಅಧೀನರಾಗುವರು. ಈ ಸನ್ನಿವೇಶದಿಂದ ತಮ್ಮನ್ನು ಕಾಪಾಡುವುದಕ್ಕೆ ಒಂದು ಉಪಾಯವನ್ನು ಮಹಮ್ಮದೀಯರ ನಾಯಕರು ಕಂಡುಹಿಡಿದಿರುವರು. ಕೇಂದ್ರ ಪ್ರಭುತ್ವಕ್ಕೆ ಯಾವುದೋ ಕೆಲವು ವಿಷಯಗಳಲ್ಲಿ ಮಾತ್ರ ಅಧಿಕಾರ ಕೊಡಲ್ಪಟ್ಟು ಉಳಿದ ವಿಷಯಗಳಲ್ಲೆಲ್ಲ ರಾಷ್ಟ್ರಗಳಿಗೆ ಸ್ವತಂತ್ರಾಧಿಕಾರ ಕೊಡಲ್ಪಡುವುದೇ ಈ ಉಪಾಯವು. ಈ ಉಪಾಯವು ಅವರಿಗೆ ಅನುಕೂಲಿಸುವುದು ಹೇಗೆ?

ಒಟ್ಟಿನ ಮೇಲೆ ದೇಶದಲ್ಲೆಲ್ಲ ಮಹಮ್ಮದೀಯರ ಸಂಖ್ಯೆಯು ಅಲ್ಪವಾಗಿದ್ದರೂ, ಬಂಗಾಳ, ಪಂಜಾಬು, ಸಿಂಧು ರಾಷ್ಟ್ರಗಳಲ್ಲಿ ಅವರ ಸಂಖ್ಯೆಯು ಹಿಂದುಗಳ ಸಂಖ್ಯೆಗಳಿಗಿಂತ ಹೆಚ್ಚಾಗಿಯೇ ಇದೆ. ಈ ರಾಷ್ಟ್ರಗಳಲ್ಲಿ ಸ್ವರಾಜ್ಯವೆಂದರೆ ಮಹಮ್ಮದೀಯ ರಾಜ್ಯವೆಂದೇ ಹೇಳಬೇಕಾಗಿದೆ. ಈ ರಾಷ್ಟ್ರಗಳ ಪ್ರಭುತ್ವಗಳಲ್ಲೂ, ಶಾಸನ ಸಭೆಗಳಲ್ಲೂ ಅವರೇ ಬಹು ಸಂಖ್ಯೆಯುಳ್ಳವರು. ಆದುದರಿಂದ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಉಂಟಾದರೆ ಈ ಮೂರು ರಾಷ್ಟ್ರಗಳ ಮಹಮ್ಮದೀಯರು ಅಸ್ವಾತಂತ್ರ್ಯವನ್ನು ಅನುಭವಿಸುವವರಾಗುವರು. ದೇಶವೆಲ್ಲವನ್ನೂ ಪಾಲಿಸುತ್ತಿರುವ ಕೇಂದ್ರ ಪ್ರಭುತ್ವದಲ್ಲಿ ನಾವೆಂದೂ ಬಹು ಸಂಖ್ಯಾತರಾಗಿರುವಂತಾದರೂ ಕೆಲವು ರಾಷ್ಟ್ರಗಳಲ್ಲಾದರೂ ತಮ್ಮ ಅಧಿಕಾರವನ್ನು ಪೂರ್ತಿಯಾಗಿ ನಡೆಯಿಸಲು ಅವರು ಉತ್ಸಾಹಪಡುತ್ತಿರುವರು. ಅವರ ಇಷ್ಟವು ನೆರವೇರಬೇಕಾದಲ್ಲಿ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಇರಬೇಕು. ಹಾಗಲ್ಲದೆ ಈಗಿನಂತೆಯೇ ರಾಷ್ಟ್ರಗಳು ಕೇಂದ್ರ ಪ್ರಭುತ್ವಕ್ಕೆ ಅಧೀನವಾಗಿರುವವಾದರೆ ಬಂಗಾಳ ಮತ್ತು ಪಂಜಾಬು ರಾಷ್ಟ್ರಗಳು ಇತರ ರಾಷ್ಟ್ರಗಳಂತೆ ಹಿಂದೂ ಬಾಹುಳ್ಯವಿರುವ ಕೇಂದ್ರ ಪ್ರಭುತ್ವಕ್ಕೆ ರಾಷ್ಟ್ರಗಳಲ್ಲಿರುವವರು ಬಹು ಸಂಖ್ಯಾತರಾಗಿರುವ ಪ್ರಯುಕ್ತ ಅವರೇ ರಕ್ಷಿಸುವ ಲಾಭವು ಅವರು ಹೊಂದದಂತಾಗುವುದು. ಈ ಕಾರಣಗಳಿಂದ ಮಹಮ್ಮದೀಯರನೇಕರು ರಾಷ್ಟ್ರ ಸ್ವಾತಂತ್ರ್ಯಕ್ಕೆ ಮೂಲ ಸೂತ್ರವಾದ ಫೆಡರಲ್ ವಿಧಾನವನ್ನು ಕೋರುತ್ತಿರುವರು.

ಮೇಲೆ ಹೇಳಿದ ಮೂರು ಕಾರಣಗಳಿಂದ ಫೆಡರಲ್ ವಿಧಾನವು ಈಗ ಎಷ್ಟೋ ಪ್ರಾಮುಖ್ಯತೆಯನ್ನು ಹೊಂದಿ ರೌಂಡ್ ಟೇಬಲ್ ಕಾನ್‌ಫರೆನ್ಸಿನಲ್ಲಿ ಚರ್ಚಿಸಲ್ಪಟ್ಟ ವಿಷಯಗಳೆಲ್ಲ ಮುಖ್ಯವಾಗಿದ್ದಿತು. ಪ್ರಜಾ ಪರಿಪಾಲನದಲ್ಲಿ ಕೇಂದ್ರವನ್ನು ಸ್ಥಾಪಿಸಲು ಯುಕ್ತವಲ್ಲವೆಂದು ನಂಬಿರುವವರೂ, ಸಂಸ್ಥಾನಾದೀಶ್ವರರೂ ಮಹಮ್ಮದೀಯರೂ ಈ ವಿಧಾನದ ಮೇಲಿನ ವಿಚಾರದಲ್ಲಿ ಬಹು ಉತ್ಸಾಹವನ್ನು ತೋರಿಸುತ್ತಿರುವರು. ಈ ವಿಧಾನವನ್ನು ಆಚರಣೆಯಲ್ಲಿ ತರಲು ನಾವೆಷ್ಟು ಕಷ್ಟವನ್ನು ಅನುಭವಿಸಬೇಕಾಗಿದೆಯೋ, ಅವುಗಳನ್ನು ನಿವಾರಣೆಗೊಳಿಸಲು ಎಷ್ಟು ಮಾರ್ಗಗಳಿರುತ್ತವೋ ನಾವು ಅವುಗಳನ್ನು ವಿಮರ್ಶಿಸಬೇಕಾಗಿದೆ.

ಮೈ ಸ್ವಾರ್.

ಸೂಚನೆ.

ಫೆಡರೇಶನ್ ಆಫೀಸು,
ಮಡಿಕೇರಿ, ತಾ 23—2—'31.

ಸುಪರ್‌ವೈಸರ್ ಕೆ. ಕೋವೈಯ್ಯನವರ ಸರ್ವಿಸನ್ನು 1931ನೇ ಇಸವಿ ಫೆಬ್ರವರಿ ತಾ 24ರಿಂದ 3 ತಿಂಗಳ ವರೆಗೆ ನಾಲ್ಕುನಾಡು ಸೊಸೈಟಿಗೆ ಕೊಟ್ಟಿದ್ದರಿಂದ ಸುಪರ್‌ವೈಸರ ಈ ಕೆಳಗಿನ ನೇಮಕವು ಮತ್ತು ವರ್ಗಾವರ್ಗಿಯು ಇನ್ನೊಂದು ಹುಕುಂ ಕೊಡುವ ವರೆಗೆ ಮಾಡಲ್ಪಟ್ಟಿದೆ.

2 ಸುಪರ್‌ವೈಸರು ಪಿ ಕುಶಾಲಪ್ಪನವರು ನಾಪೋಕ್ಲು ನಾಡು

3. „ ಟಿ ಮುತ್ತಪ್ಪನವರು, ಭಾಗಮಂಡಲನಾಡು.

4. „ ಬಿ ದೇವಯ್ಯನವರು ಮಡಿಕೇರಿನಾಡು.

5. „ ಎ ಪೊನ್ನಪ್ಪನವರು, ವೀರಾಜಪೇಟೆನಾಡು, ಮತ್ತು ಅಮ್ಮತ್ತಿನಾಡು.

6. „ ಯು. ಮಾಲಿಂಗಪ್ಪನವರು, (ಹಂಗಾಮಿಯಾಗಿ) ಫ್ರೇಜರ್‌ಪೇಟೆನಾಡ.

7. „ ಜಿ. ಮಾದಯ್ಯನವರು, (ಹಂಗಾಮಿಯಾಗಿ) ಶ್ರೀಮಂಗಲನಾಡು.

ಪಿ. ದೇವಯ್ಯ,
(ಫೆಡರೇಶನ್ ಪ್ರೆಸಿಡೆಂಟ್.)

ನೋಟೀಸು.

ಕೊಡಗು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಆಫೀಸು.
ಮಡಿಕೇರಿ ತಾ 20 ನೇ ಫೆಬ್ರವರಿ 1931 ನೇ ಇಸವಿ

ಇದರಿಂದ ಸಮಸ್ತ ಜನರಿಗೂ ತಿಳಿಯ ಪಡಿಸುವುದೇನಂದರೆ—ಸರಕಾರ ಸ್ವಾಧೀನಕ್ಕೆ ಬಂದಿರುವ ಇದರ ಕೆಳಗೆ ನಮೂದಿಸಿದಂಥ ಕೋವಿಗಳನ್ನು ಮಡಿಕೇರಿಯಲ್ಲಿ ನನ್ನ ಆಫೀಸು ಮುಂದೆ ಮಾರ್ಚ್ ತಾ 27 ನೇ ಶುಕ್ರವಾರ 2 ಗಂಟೆ ಸಮಯಕ್ಕೆ ಹರಾಜು ಮಾಡಲ್ಪಡುವುದು

49 ಒಂಟಿ ಕೊಳವಿನ ಕೇಪು ಕೋವಿಗಳು.
8 ಜೋಡು ಕೊಳವಿನ ಕೇಪು ಕೋವಿಗಳು.
1. ಒಂಟಿ ಕೊಳವಿನ ಕೇಪು ಕೋವಿಯ ನಳಿಗೆ.
2. ಒಂಟಿ ಕೊಳವಿನ ತೋಟದ ಕೋವಿಗಳು.
3. ಜೋಡು ಕೊಳವಿನ ತೋಟದ ಕೋವಿಗಳು.

ಕೆ. ಚಂಗಪ್ಪ
2—1 ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್.

ಕಂದನ ಚಿತ್ತಳೆ.

ಬಿಕ್ಕಿಲ ಮರದಲ್ಲಿ
ಸುತ್ತಲು ತೂಗುವ
ಚಿತ್ತಳೆ ಹಣ್ಣಿಟ್ಟಿದು ಯಾರಮ್ಮ ||

ನೋಡಲು ಚಂದವ
ಹಿಡಿಯಲು ಅಂದವ
ಬಿಡವದ ಕಿತ್ತುದು ಯಾರಮ್ಮ ||

ಚಿತ್ತಳೆ ಹಣ್ಣಿಗೆ
ರಕ್ತದ ಬಣ್ಣವ
ಚಿತ್ರದಲುಡಿಸಿದು ಯಾರಮ್ಮ ||

ಚಿತ್ತಳೆ ಹಣ್ಣನು
ಚಿಕ್ಕೇ ಎಳೆವರು
ಚಿತ್ತಳೆ ಎಂದದ ಕರೆದವರ್ಯಾರಮ್ಮ ||

ಕೊನೆಯದೆ ಅದರೊಳು
ಸರಿಯಾಗಿ ಸಕ್ಕರೆ
ಮರೆಯದೆ ಇಟ್ಟುದು ಯಾರಮ್ಮ ||

ಸಕ್ಕರೆ ಹುಳಿಯನು
ಅಕ್ಕರೆಯಿಂದಲೆ
ಪಕ್ಕದೊಳಿರಿಸಿದು ಯಾರಮ್ಮ ||

" ಮಕ್ಕಳ ಕಾಟವ
ಪಕ್ಕನೆ ಅಡಗಿಸೆ
ತಕ್ಕುದ ಮಾಡಿಯ ನಮ್ಮಪ್ಪ || "

ತಾತನೆ ಮಾಡ್ದನೆ
ಮುತ್ತಿನ ಚಿತ್ತಳೆ
ಎತ್ತಹೋಗಿಯು ತಾತಮ್ಮ ||

" ಬರುವನು ತಾತನು
ಬರದಿಂದ ಕೂಗಲು
ಮರೆಯನು ನಿನ್ನವನೆಂದಿಗೂ " ||

ಚಿತ್ತಳೆ ಮಾಡುತ
ತಾತನು ಬರುವನು
ಚಿತ್ತಳೆ ಚಿತ್ತಳೇ ಚಿತ್ತಳೆಯೂ ||

ಅ. ಬೊ.

COORG DISTRICT MAGISTRATE'S OFFICE.

Notification.

Mercara, dated the 14th February 1931.

Tenders are invited for the supply of on dugout boat of hebbalsu of 32 feet by 2 feet inches for Bethri ferry. The boat must be we balanced and executed properly and should b ready for delivery by the 30th April 1931. The will not be accepted unless they are passed b the undersigned or any officer authorised by hi in that behalf. The boat should be delivere at the Bethri ferry.

The tender should specify the price at whic the boat would be delivered at the ferry and addressed to the District Magistrate of Coor the cover being sealed and registered, and supe scribed with words, "Tender for the supply o boat for the Bethri ferry." Tenders should reach this Office on or before the 16th March 1931 accompanied by a remittance of Rs. 25/

The right of accepting or rejecting any tender without assigning any reason whatsoever is reserved.

K. CHENGAPPA,
18—2—1931. (District Magistrate.)

ಮಲೇರಿಯಾ.

(ಬರೆದು ಬಂದದ್ದು.)

ಮಲೇರಿಯಾ ಕಾಯಿಲವು ವಾಡಿಕೆಯಾಗಿ ಹೆಚ್ಚು ಮಳೆಯಾಗುತ್ತಿರುವ ಗುಡ್ಡ, ಬೆಟ್ಟ ಪ್ರದೇಶಗಳಲ್ಲಿಯೂ, ಜೌಗು ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಲ್ಲಿಯೂ ಕಾಣುತ್ತೆ. ಈ ರೋಗವು ಸೊಳ್ಳೆ ಕಡಿತದಿಂದ ಉದ್ಭವವಾಗುತ್ತದೆಂದು ಎಲ್ಲರಿಗೂ ತಿಳಿದಿದೆ. ಸೊಳ್ಳೆಗಳು ಹರಿಯುವ ನೀರಿನಲ್ಲಿ ಮೊಟ್ಟೆ ಹಾಕಿ ಉದ್ಭವವಾಗುವುದು ಕೇವಲ ಅಪೂರ್ವ. ಅದರ ಬದಲಾಗಿ ಜೌಗು ನೆಲದಲ್ಲಿಯೂ ಕೆರೆ, ಕೊಳ, ಕಟ್ಟೆಗಳಲ್ಲಿಯೂ, ಮಳೆ ಹೊಡೆದ ನೀರು ಅಲ್ಲಲ್ಲಿಯೇ ಅನೇಕ ದಿನಗಳ ವರೆಗೆ ನಿಲ್ಲುವ ಸ್ಥಳಗಳಲ್ಲಿಯೂ ಮೊಟ್ಟೆ ಹಾಕಿ ಲಕ್ಷೋಪ ಲಕ್ಷ ಸೊಳ್ಳೆಗಳು ಉದ್ಭವವಾಗುತ್ತವೆ. ಕೊಡಗಿನ ಪ್ರತಿ ಕುಟುಂಬದಲ್ಲಿಯೂ ಮಲೇರಿಯಾ ರೋಗದಿಂದ ಪೀಡಿತರಾಗದ ಜನರು ಕೇವಲ ಕಡಿಮೆ. ವರ್ಷಕ್ಕೆ ಸಾವಿರಾರು ರೂಪಾಯಿ ಡಾಕ್ಟರಿಗೂ, ಔಷಧಿಗಳಿಗೂ, ಮಂಕೆ, ಒಲಿ ಮುಂತಾದ್ದಕ್ಕೆ ಖರ್ಚು ಮಾಡುವ ಜನರೂ ಬಹಳ ಇದ್ದಾರೆ. ಎಲ್ಲಿ ನೋಡಿದರೂ ಕೊಡಗಿನ ಜನರ ಮುಖದಲ್ಲಿ ಕಾಂತಿ ಇಲ್ಲ. ರಕ್ತ ಇಲ್ಲ. ಶೇಕಡ 75 % ರಷ್ಟು ಜನರು ಜ್ವರದ ಗೆಡ್ಡೆ ಇರುವವರೇ. ಈ ಮಹಾ ಮಾರಿಯನ್ನು ನಾಶ ಮಾಡಿದ ವಿನಹ ಕೊಡಗಿನ ಜನರಿಗೆ ಉಳಿಗಾಲವಿಲ್ಲ.

ಮಲೇರಿಯಾ ನಿವಾರಣೆ.

ಮಲೇರಿಯಾ ರೋಗದಿಂದ ಸಾಯುತ್ತಿರುವ ಜನರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ ಇನ್ನು ಒಂದೆರಡು ಶತಮಾನಗಳಲ್ಲಿ ಕೊಡಗು ನಿರ್ಜನ ಪ್ರದೇಶವಾಗುವುದರಲ್ಲಿ ಸಂದೇಹವಿಲ್ಲ. ಪ್ರತಿ ತಿಂಗಳ ಕೊಡಗು ಗಜೆಟಿನಲ್ಲಿ ಪ್ರಕಟನೆಯಾಗುತ್ತಿರುವ ಪಟ್ಟಿ ಪ್ರಕಾರ ಜನನಕ್ಕಿಂತ ಮರಣವೇ ಹೆಚ್ಚು ಕಾಣುತ್ತದೆ. ಅಲ್ಲದೆ ಶೇಕಡ 90 ರಷ್ಟು ಜನರು ಮಲೇರಿಯಾ ಕಾಯಿಲೆಯಿಂದಲೇ ಸತ್ತವರಾಗಿರುತ್ತಾರೆ. ಈ ಕಾರಣದಿಂದ ಮಲೇರಿಯಾ ನಿವಾರಣೆಯ ವಿಷಯದಲ್ಲಿ ಸರಕಾರವೂ, ಪ್ರಜೆಗಳೂ ಬಹಳವಾಗಿ ಆಲೋಚಿಸ ಬೇಕಾದ ಸಂಗತಿಯಾಗಿದೆ.

ಸರಕಾರದವರು ಈಗಾಗಲೇ ಎರಡು ಸಬ್ ಅಸಿಸ್ಟೆಂಟ್ ಸರ್ಜಿಯನ್ನರುಗಳನ್ನು ಈ ರೋಗ ನಿವಾರಣೆ ವಿಷಯ ತರಬೇತು ಮಾಡಿಸಿ ಕೆಲಸ ಮಾಡಿಸುತ್ತಲಿರುವರು. ಸರಕಾರದವರು ಎಷ್ಟೇ ಮಾಡಲಿ ಪ್ರಜೆಗಳು ಇದರ ನಿವಾರಣೆ ವಿಷಯ ಸರಕಾರದವರೊಡನೆ ಸಹಕರಿಸಿ ಕೆಲಸ ಮಾಡಿದ ವಿನಹ ಈ ರೋಗ ಬಾಧೆಯಿಂದ ಪಾರಾಗುವುದು ಕಷ್ಟವಾಗಿದೆ. ಈ ರೋಗವನ್ನು ಯಾವ ರೀತಿಯಲ್ಲಿ ನಿವಾರಣೆ ಮಾಡುವುದು ಎಂಬುದನ್ನು ಅನೇಕ ವರ್ಷಗಳಿಂದ ದೊಡ್ಡ ದೊಡ್ಡ ಡಾಕ್ಟರುಗಳು ಶೋಧನೆ ಮಾಡುತ್ತಲೇ ಇದ್ದಾರೆ. ಭೂಲೋಕದ ಅನೇಕ ಮಲೇರಿಯಾ ಕಾಯಿಲವಿರುವ ಪ್ರಾಂತ್ಯಗಳೂ ಸಹ ಇದರ ನಿವಾರಣೆ ಬಗ್ಗೆ ತಕ್ಕ ಕೆಲಸಗಳನ್ನು ಮಾಡಲಿಕ್ಕೆ ಪ್ರಾರಂಭಿಸಿರುತ್ತವೆ. ಇವುಗಳಲ್ಲಿ ನಮ್ಮ ದೇಶವನ್ನು ಹೋಲುವಂತ ದೇಶವಾವುದು ಎಂಬುದನ್ನು ನೋಡಿ ಅಂಥಾ ದೇಶದವರು ಇದರ ನಿವಾರಣೆ ಬಗ್ಗೆ ಯಾವ ಕೆಲಸಗಳನ್ನು ಮಾಡಿದ್ದಾರೆಂಬುದನ್ನು ತಿಳಿದು ನಾವೂ ಸಹ ಅವರಂತೆ ಮಾಡುವುದು ಉತ್ತಮವಾಗಿ ಕಾಣುತ್ತೆ. ಮಲೇರಿಯಾ ರೋಗ ನಿವಾರಣೆಗೆ ಇಟಲೀ ದೇಶದ ಜನರು ಅನೇಕ ವರ್ಷಗಳಿಂದ ಬಹಳ ಕೆಲಸ ಮಾಡಿ ಜಯ ಹೊಂದಿರುತ್ತಾರೆ. ಅವರು ಯಾವ ರೀತಿ ಕೆಲಸ ಮಾಡಿರುತ್ತಾರೆಂಬುದು ಈ ಕೆಳಗೆ ವಿವರಿಸಲ್ಪಟ್ಟಿದೆ. 1870ರಲ್ಲಿ ಇಟಲೀ ದೇಶದ ಸರಕಾರವು ದೇಶದಲ್ಲಿ ಮಲೇರಿಯಾ ರೋಗದ ಹಾವಳಿಯು ಎಷ್ಟರ ಮಟ್ಟಿಗೆ ಇದೆಯೆಂಬುದನ್ನು ಸಂಶೋಧನೆ ಮಾಡಿದರು. ಆ ಶೋಧನೆಯಲ್ಲಿ ದೇಶದ ಮೂರರಲ್ಲಿ ಒಂದು ಭಾಗವು ಮಲೇರಿಯಾದಿಂದ ತುಂಬಿರುವುದೂ ಮತ್ತು ಐದರಲ್ಲಿ ಒಂದು ಭಾಗವು ಜನರ ವಾಸಕ್ಕೆ ಸಹ ಯೋಗ್ಯವಾಗಿರಲಿಲ್ಲವೆಂದೂ ಕಂಡು ಬಂತು. ಜನರು ಮತ್ತು ಸರಕಾರವು ಇದರ ನಿವಾರಣೆಯು ಒಂದು ರಾಷ್ಟ್ರೀಯ ಕೆಲಸವೆಂದೇ ಭಾವಿಸಿ ಕಳೆದ ಐವತ್ತು ವರ್ಷದಿಂದ ಕೆಲಸ ಮಾಡಿದರು. ಮಲೇರಿಯಾ ನಿವಾರಣೆ ಬಗ್ಗೆ ಮೊಟ್ಟ ಮೊದಲು ಸರಕಾರದ ಒತ್ತಾಸೆ ಮತ್ತು ಸಹಾಯದಿಂದ ಒಂದು ದೊಡ್ಡ ಕಂಪೆನಿಯನ್ನು ಮಾಡಿದರು. ಈ ಕಂಪೆನಿಯವರು ನಿರ್ಜನ ಪ್ರದೇಶದಲ್ಲಿ ಅಂದರೆ ತಗ್ಗು ಮತ್ತು ಜೌಗು ಭೂಮಿಗಳಲ್ಲಿ ನೀರನ್ನು ಎತ್ತಿ ತೆಗೆಯುವ ಪಂಪುಗಳನ್ನು ಅನೇಕ ಕಡೆ ಶುರು ಮಾಡಿದರು. ಅಲ್ಲದೆ ನೆಲವನ್ನು ಒಣಗಿಸಲು ಕಾಲುವೆಗಳನ್ನೂ, ಜನರಿಗೆ ತಿರುಗಾಡಲಿಕ್ಕೆ ರಸ್ತೆಗಳನ್ನೂ, ರೈಲ್ ರಸ್ತೆಗಳನ್ನೂ ಮಾಡಿದರು. ಈ ರೀತಿ ಪ್ರಥಮ ವರ್ಷ ಸುಮಾರು ನಾಲ್ಕು ಲಕ್ಷ ಎಕರೆ ವಿಸ್ತೀರ್ಣವನ್ನು ಸರಿಪಡಿಸಿದರು. ಹೀಗೆಯೇ ರೋಮ್ ನಗರದ ಬಳಿ ಇದ್ದ ಜೌಗು ಪ್ರದೇಶಗಳನ್ನು ಒಣಗಿಸುವುದರಲ್ಲಿಯೂ ದೊಡ್ಡ ದೊಡ್ಡ ಕಾಡುಗಳನ್ನು ಕಡಿದು ಸರಿಮಾಡುವುದರಲ್ಲಿಯೂ ಬಹಳ ಕೆಲಸ ಮಾಡಿದರು. ಇಂಥಾ ಕೆಲಸಗಳಲ್ಲಿ ಇಂಜನೀಯರುಗಳು ಮತ್ತು ಅವರಿಗ ಬೇಕಾಗುವ ಸಿಬ್ಬಂದಿಗಳು ಬಹಳ ಬೇಕಾದವು. ಈ ತರದ ಕೆಲಸಗಳಿಂದ ಆ ದೇಶದಲ್ಲಿ ಮಲೇರಿಯಾ ರೋಗವು ಬಹಳವಾಗಿ ನಿವಾರಣೆಯಾದುದಲ್ಲದೆ ನಿರ್ಜನ ಪ್ರದೇಶಗಳಲ್ಲಿ ಜನರು ವಾಸ ಮಾಡಲಿಕ್ಕೆ ತೊಡಗಿ ಅನೇಕ ಹೊಸ ಪಟ್ಟಣಗಳು ತಲೆದೋರಿದವು. ಮಲೇರಿಯಾ ರೋಗದಲ್ಲಿ ಆ ದೇಶದಲ್ಲಿ ಈ ಕೆಳಗೆ ಕಾಣಿಸಿದ ರೀತಿ ಮರಣಗಳು ಆಗುತ್ತಿದ್ದುವು.

1887 ರಲ್ಲಿ	21,000	ಮರಣಗಳು (ಮಲೇರಿಯಾದಿಂದ
1891 ,,	18,000	,, ,,
1900 ,,	16,000	,, ,,
1901 ,,	8 000	,, ,,

ಈಚೆಗೆ ಮರಣವು ಬಹಳ ಕಡಿಮೆಯಾಗುತ್ತಾ ಬರುತ್ತಿದೆ. ಇದರ ನಿವಾರಣೆಯಿಂದ ಉತ್ತರ ಇಟಲೀ ದೇಶದ ಮೂರು ಮಿಲಿಯ ಎಕರೆ ಇರುವ ಪ್ರದೇಶದಲ್ಲಿ ಶೇಕಡ 65ರಷ್ಟು ಜನ ಸಂಖ್ಯೆಯು ಹೆಚ್ಚಿದೆ. ವ್ಯವಸಾಯಗಾರರಿಗೆ ಬೇಕಾಗುವ ದನಕರುಗಳ ಸಂಖ್ಯೆಯು ಶೇಕಡ 125ರಷ್ಟು ಹೆಚ್ಚಾಗಿದೆ. ಈ ಮೊದಲು 80,000 ದನಕರುಗಳಿದ್ದು 1,85,000ಕ್ಕೆ ಹೆಚ್ಚಿವೆ. ವ್ಯವಸಾಯದ ಉತ್ಪತ್ತಿಯು 138 ಮಿಲಿಯ ಲೈರಿನಿಂದ (ಲೈರ್ 0—10—0 ಅಣೆ) 1048 ಮಿಲಿಯ ಲೈರಿಗೆ ಏರಿದೆ. ಇದಕ್ಕೆ ಅಲ್ಲಿ ಹಣವು ವಿಪರೀತ ಬೇಕಾಗಿತ್ತು. ನಾಲ್ಕು ಲಕ್ಷ ಎಕರೆ ವಿರಿಯಾದ ಪೆರಾರಾ ಎಂಬ ಜಾಗಕ್ಕೆ ಒಂದು ಕೋಟಿ ಹತ್ತು ಲಕ್ಷ ರೂಪಾಯಿಗಳು ಖರ್ಚಾದವು. ಈ ಹಣವೆಲ್ಲ ಇಂಜೀನೀಯರಿಂಗ್ ಡಿಪಾರ್ಟ್‌ಮೆಂಟಿನ ಕೆಲಸಕ್ಕೆ ಖರ್ಚಾದುವು. ಅಲ್ಲಿ ಮಲೇರಿಯಾ ನಿವಾರಣೆಯ ಕೆಲಸವೆಂದರೆ ಪ್ರತಿಯೊಬ್ಬನೂ ತನ್ನ ದಿನ ಚರ್ಯೆಯ ಕೆಲಸವೆಂದೇ ತಿಳಿದಿದ್ದಾನೆ. ಒಂದು ಸಲ ಮಾಡಿ ಪೂರೈಸಿದ ಪಂಪಿಂಗ್ ಕೆಲಸ, ಕಾಲುವೆ, ರಸ್ತೆ ವಗೈರೆಗಳನ್ನು ಯಾವಾಗಲೂ ನೋಡುತ್ತಾ ದುರುಸ್ತು ಪಡಿಸುತ್ತಾ ಇದ್ದಾರೆ. ಸರಕಾರದವರು ಸಹ ತಮ್ಮ ಬಜೆಟ್ಟಿನಲ್ಲಿ ಪ್ರತಿ ವರ್ಷವೂ ಇಂತಿಷ್ಟೇ ಹಣವನ್ನು ಮಲೇರಿಯಾ ನಿವಾರಣೆಗೆ ಇಟ್ಟಿರುತ್ತಾರೆ. ಇಟಲೀ ದೇಶದವರು ಇಂಥಾ ಮಲೇರಿಯಾ ನಿವಾರಣೆಗೆ ಡಾಕ್ಟರುಗಳಾಗಲೀ, ಹಕೀಮುಗಳಾಗಲೀ ಅಥವಾ ಇತರ ಔಷದೋಪಚಾರ ಮಾಡುವವರಿಂದಾಗಲೀ ಪ್ರಯೋಜನವಿಲ್ಲವೆಂದೂ ಇಂಜನೀಯರುಗಳೂ ಮತ್ತು ಅವರ ಸಿಬ್ಬಂದಿಯೇ ಬಹಳ ಅವಶ್ಯವೆಂದು ಅವರ ಅನುಭವದಿಂದ ತಿಳಿದಿರುತ್ತಾರೆ. ಸರಕಾರದವರೂ ಸಹ ಬಹಳ ಹಣ ಖರ್ಚು ಮಾಡಿ ಜನರನ್ನು ಪಾರು ಮಾಡಿರುತ್ತಾರೆ. 1886 ರಿಂದ 1921ರ ವರೆಗೆ ಮೂವತ್ತೊಂದು ಕೋಟಿ ರೂ.ಗಳನ್ನು ಖರ್ಚು ಮಾಡಿರುತ್ತಾರೆ. ಅಂದರೆ ವರ್ಷಕ್ಕೆ ಸರಾಸರಿ ಐವತ್ತಾರು ಲಕ್ಷ ರೂಗಳು ಸರಕಾರಕ್ಕೆ ಖರ್ಚಾಗುತ್ತೆ. ಈ ವಿಷಯದಲ್ಲಿ ಸಹಾಯ ಮಾಡಲು ಅನೇಕ ದೊಡ್ಡ ಜಮೀನುದಾರರು ಮತ್ತು ರೈತರು ಹಣ ಸಹಾಯ ಮಾಡಿರುತ್ತಾರೆ. ಒಟ್ಟು ಖರ್ಚಾದ ಹಣದಲ್ಲಿ ಶೇಕಡ 50%ರಷ್ಟು ಮಧ್ಯವರ್ತಿ ಸರಕಾರವೂ, ಶೇಕಡ 10%ರಷ್ಟು ಪ್ರಾಂತೀಕ ಸರಕಾರವೂ, 30%ರಷ್ಟು ಜಮೀನುದಾರರೂ ಉಳಿಕೆ 10%ನ್ನು ಗ್ರಾಮದ ರೈತರೂ ತೆತ್ತಿದ್ದಾರೆ. ಹೀಗೆ ಹಣ ಖರ್ಚು ಮಾಡಿದ ದೆಸೆಯಿಂದ ಇಟಲಿಯ ಈಗಿನ ಜನರ ಆರೋಗ್ಯ ಸ್ಥಿತಿಯು ಬಹಳ ಉತ್ತಮ ಸ್ಥಿತಿಯಲ್ಲಿದೆ. ದೇಶವಲ್ಲ ದೃಢಕಾಯರಾಗಿ ಆರೋಗ್ಯದಿಂದ ತುಂಬಿದ ಪ್ರಜೆಗಳು ಎಲ್ಲೆಲ್ಲಿಯೂ ಕಾಣುತ್ತಿದೆ. ಸರಕಾರಕ್ಕೆ ಇದರಷ್ಟು ಲಾಭವು ಮತ್ತೇನಿದೆ?

ಕೊಡಗು ದೇಶಕ್ಕೂ ಇಟಲೀ ದೇಶಕ್ಕೂ ಹೋಲಿಕೆಯೇನು?

ಇಟಲಿ ದೇಶದಲ್ಲಿ ಮುಖ್ಯವಾದ ಬೆಳೆ ಭತ್ತ, ಬೆಟ್ಟದ ಸೀಮೆ. ಕೊಡಗು ದೇಶಕ್ಕೂ ಅದಕ್ಕೂ ಈ ಕಾರಣದಿಂದ ಪ್ರಕೃತಿ ಸ್ಥಿತಿಯು ಹೋಲುತ್ತದೆ ಮತ್ತು ಅಲ್ಲಿಯಂತೆಯೇ ನಮ್ಮ ದೇಶದ ಅನೇಕ ಮೂಲೆಗಳು ನಿರ್ಜನ ಪ್ರದೇಶಗಳಾಗಿವೆ. ಈಗ ಕಾಣುತ್ತಿರುವ ಫಾರೆಸ್ಟುಗಳಲ್ಲಿ ಅಂದರೆ ತಿತ್ತಿಮತಿ, ವಗೈರೆ ಬಾಗಗಳಲ್ಲಿ ಅನೇಕಾನೇಕ ದೊಡ್ಡ ದೊಡ್ಡ ಗದ್ದೆ ಕೋವುಗಳು ಪಾಳು ಬಿದ್ದಿರುವುದೇ ಸಾಕ್ಷಿ. ಈ ಪ್ರದೇಶಗಳಲ್ಲಿ ಒಂದಾನೊಂದು ಸಮಯದಲ್ಲಿ ಜನ ಭರಿತವಾಗಿತ್ತೆಂದು ಈ ಗದ್ದೆ ಕೋವುಗಳನ್ನು ನೋಡುದರಿಂದಲೂ ಜೀರ್ಣವಾದ ದೇವಸ್ಥಾನ ದೊಡ್ಡ ದೊಡ್ಡ ಕೆರೆಗಳು ಮತ್ತು ಮನೆಗಳು ಕಾಣುತ್ತಿರುವುದರಿಂದಲೂ ತಿಳಿಯುತ್ತೆ. ಕೆಲವು ವರ್ಷಗಳ ಹಿಂದೆ ದೇಶದಲ್ಲಿ ಪಾಳು ಬಿದ್ದಿದ್ದ ಭೂಮಿಗಳೂ, ಕೆರೆ ಕಟ್ಟೆಗಳೂ, ಕಡಿಮೆ ಇತ್ತು. ಆದರೆ ಈಗ ಅನೇಕ ಕೆರೆ ಕಟ್ಟೆಗಳೂ ಮತ್ತು ಭೂಮಿಗಳು ಪಾಳು ಬಿದ್ದಿರುವುದರಿಂದ ನಂಜರಾಯಪಟ್ಣ ತಾಲೋಕು ಮತ್ತು ತಿತಿಮತಿ ಕಡೆ ಗ್ರಾಮಗಳೆಲ್ಲವೂ ನಿರ್ಜನ ಪ್ರದೇಶವಾಗಿ ಫಾರೆಸ್ಟಾಗಿವೆ.

ಕೊಡಗಿನಲ್ಲಿ ಇದಕ್ಕಾಗಿ ನಿವಾರಣೆ ಹೇಗೆ?

ಈ ಮಹಾಮಾರಿಯನ್ನು ನಿವಾರಣೆ ಮಾಡಬೇಕಾದರೆ, ಕೊಡಗಿನ ಸಂಸ್ಥಾನವು ಮಧ್ಯವರ್ತಿ ಸರಕಾರದ ಸಹಾಯದಿಂದ ವರ್ಷ ವರ್ಷಕ್ಕೆ ಇಂತಿಷ್ಟೇ ಹಣ ಖರ್ಚು ಮಾಡುತ್ತೇವೆಂದು ದೃಢಮಾಡಬೇಕು. ಅಲ್ಪ ಸ್ವಲ್ಪ ಹಣ ಖರ್ಚು ಮಾಡಿದರೆ ಯಾವ ಪ್ರಯೋಜನಕ್ಕೂ ಬರಲಾರದು. ಈ ಮೊದಲು ಅನೇಕ ಗ್ರಾಮಸ್ಥರು ರಿಸರ್ವ್ ಫಾರೆಸ್ಟಿನಲ್ಲಿ ಪಾಳು ಭೂಮಿಗೆ ದರಕಾಸ್ತು ಮಾಡಿದ ಸಮಯದಲ್ಲಿ ಸರಕಾರವು ಹೆಚ್ಚೇನು ಸಹಾಯ ಮಾಡಿರುವುದಿಲ್ಲ. ಇಟಲಿ ದೇಶದವರು ಮಾಡಿದ ರೀತಿ ಸರಕಾರದವರೇ ಮುಂದೆ ನಿಂತು ಇಂಥಾ ಪಾಳು ಭೂಮಿಗಳನ್ನು ವೃದ್ಧಿಮಾಡಿ ರೈತರಿಗೆ ಕೊಟ್ಟ ಪಕ್ಷದಲ್ಲಿ ಹಾಳು ಬಿದ್ದ ಈ ಗ್ರಾಮಗಳು ಊರಾಗಿ ಪಟ್ಟಣವಾಗಿ ಸರಕಾರಕ್ಕೆ ದೊಡ್ಡ ಆದಾಯವಾಗುವುದರಲ್ಲಿ ಸಂದೇಹವಿಲ್ಲ. ಈಗಾಗಲೇ ನಂಜರಾಜಪಟ್ಣ ತಾಲೋಕಿನ ರೀಜನರೇಶನ್ ಏರಿಯಾದಲ್ಲಿ ನಡೆಯುತ್ತಿರುವ ಕೆಲಸಗಳು ಶ್ಲಾಘನೀಯವಾದದ್ದಾಗಿದೆ. ಅಂಥ ಸ್ಥಳಗಳಲ್ಲಿ ಸರಕಾರದವರು ಎಷ್ಟು ಹಣವನ್ನು ಖರ್ಚುಮಾಡಿದರೂ ಸಾಲದ್ದಾಗಿದೆ.

ಗ್ರಾಮಗಳಲ್ಲಿ ಮಲೇರಿಯಾ ನಿವಾರಣೆಗೆ ಬಹಳ ಸುಲಭವಾಗಿದೆ. ಪ್ರತಿ ಗ್ರಾಮಗಳಲ್ಲಿಯೂ ಸಹಕಾರ ಸಂಘವಿರುವುದರಿಂದ ಆ ಮೂಲಕ ಅನೇಕ ಕೆಲಸಗಳನ್ನು ಮಾಡಬಹುದು. ದಕ್ಷಿಣ ಕೊಡಗಿನ ಎಲ್ಲಾ ಗ್ರಾಮಸ್ಥರೂ ಸರಕಾರದ ಅಲ್ಪ ಸ್ವಲ್ಪ ಸಹಾಯದಿಂದ ಮಲೇರಿಯಾ ನಿವಾರಣೆಗಿರುವ ಸಾಧನವನ್ನು ಬೇಗನೆ ಕೈ ಕೊಳ್ಳಬಹುದು. (1) ನೀರು ನಿಲ್ಲುತ್ತಿರುವ ಕೆರೆ, ಕೊಳ, ಕಟ್ಟೆ, ತೋಡುಗಳನ್ನು ಶುಚಿಯಾಗಿಡುವುದು. (2) ಅವಶ್ಯವಿಲ್ಲದಿರುವ ಪಾಳು ಕೆರೆ, ಕೊಳಗಳನ್ನು ಮುಚ್ಚುವುದು. (3) ಮನೆ ಹಿತ್ತಲುಗಳನ್ನು ಅಂಗಳಗಳನ್ನು ಚೆನ್ನಾಗಿಡುವುದು. ಮತ್ತು ಮನೆಯ 1 ಫರ್ಲಾಂಗ್ ಸುತ್ತು ಮುತ್ತು ಜಾಗಗಳಲ್ಲಿ ಎಲ್ಲಿಯೂ ನೀರು ನಿಲ್ಲದಂತೆ ನೋಡಿಕೊಳ್ಳುವುದು. (4) ತೋಡು ಮತ್ತು ಕಾಲುವೆಗಳಲ್ಲಿ ಯಾವಾಗಲೂ ನೀರು ಸರಾಗವಾಗಿ ಹರಿಯುವಂತೆ ಶುದ್ಧ ಮಾಡುವುದು. (5) ನೀರು ನಿಲ್ಲುವ ಎಲ್ಲಾ ಗದ್ದೆಗಳಲ್ಲಿ ಬನಿ ತೆಗೆದು ಗದ್ದೆಯು ಚೆನ್ನಾಗಿ ಒಣಗುವಂತೆ ಮಾಡುವುದು. ಒಂದು ಸಲ ತೆಗೆದ ಬಗೆಯನ್ನು ಆಗಿಂದಾಗ್ಯೆ ರಿಪೇರಿ ಮಾಡಿಕೊಳ್ಳುವುದು. ನಮ್ಮ ಹಿಂದಿನ ಕಾಲದಲ್ಲಿ ಮಲೇರಿಯಾ ರೋಗವು ಹೆಚ್ಚಿಲ್ಲದೆ ಜನ ಸಂಖ್ಯೆಯು ಹೆಚ್ಚಿದ್ದ ಕಾರಣವು ಅವರು ಗದ್ದೆ ತೋಡು ಕೆರೆ ಕಟ್ಟೆಗಳನ್ನು ಆಗಾಗ್ಗೆ ನೀರು ನಿಲ್ಲದಂತೆ ಮಾಡುತ್ತಿದ್ದುದರಿಂದಲೇ. ಈ ಮೇಲೆ ಕಾಣಿಸಿದ ಕೆಲಸಗಳನ್ನು ಸಹಕಾರ ಸಂಘಗಳ ಮೂಲಕ ಮತ್ತು ಗ್ರಾಮ ಪಂಚಾಯಿತಿ ಮೂಲಕ ಮಾಡಿಕೊಳ್ಳಲು ಬಹಳ ಅನುಕೂಲಗಳಿವೆ. ತಮಗೆ ತಾವೇ ಸಹಾಯ ಮಾಡಿಕೊಳ್ಳುವುದೇ ಸಹಕಾರದ ಮುಖ್ಯೋದ್ದೇಶವಾದ್ದರಿಂದ ಗ್ರಾಮಸ್ಥರೆಲ್ಲರೂ ತಮ್ಮ ಮತ್ತು ತಮ್ಮ ಸಂಸಾರದ ಆರೋಗ್ಯದ ವಿಷಯಕ್ಕೆ ಯಾರೂ ಹಿಂದೆ ಬೀಳಲಿಕ್ಕಿಲ್ಲವಾಗಿ ನಂಬಬೇಕಾಗಿದೆ. ಪಾಳು ಕೆರೆಗಳನ್ನು ಮುಚ್ಚಲಿಕ್ಕೂ, ಸಮುದಾಯದ ಕೆರೆ ರಿಪೇರಿಗಳಿಗೂ ಸರಕಾರದ ಸಹಾಯವು ಅತ್ಯಾವಶ್ಯಕವಾಗಿರುತ್ತೆ.

ಉತ್ತರ ಕೊಡಗಿನಲ್ಲಿ ಈ ಮಲೇರಿಯಾ ನಿವಾರಣೆಯ ಕೆಲಸವು ಹೆಚ್ಚಾಗಿ ಸರಕಾರದವರಿಂದಲೇ ಆಗ ಬೇಕಾಗಿದೆ. ಉತ್ತರ ಕೊಡಗು ಮಲೇರಿಯಾದ ತವರು ಮನೆಯಾಗಿದೆ. ಹೆಚ್ಚಾಗಿ ಪ್ರತಿಯೊಬ್ಬರ ಮನೆಯ ಸುತ್ತ ಮುತ್ತಲೂ ನೋಡಲಿಕ್ಕೆ ಹೇಯವಾಗಿರುತ್ತೆ. ಈ ನವನಾಗರೀಕತನದ ಕಾಲದಲ್ಲಿ ಇಂಥಾ ದುಸ್ಥಿತಿಯಲ್ಲಿರುವ ಜನರು ಇರುವುದನ್ನು ನೋಡಿದರೆ ಆಶ್ಚರ್ಯವಾಗುತ್ತೆ. ಶಿರಂಗಾಲ, ಹೆಬ್ಬಾಲೆ, ತೊರೆನೂರು ವಗೈರೆ ಕಣ್ವೆ ಹೋಬಳಿಯ ಗ್ರಾಮಗಳೂ, ಐಗೂರು ಕೊಡಗರಳ್ಳಿ, ಕಾಲೂರು ವಗೈರೆ ಮಡಿಕೇರಿ ತಾಲೋಕಿನ ಅನೇಕ ಗ್ರಾಮಗಳನ್ನು ಮಳೆಗಾಲದಲ್ಲಿ ಕಮಿಶನರವರು ಮತ್ತು ಸಿವಿಲ್ ಸರ್ಜನರವರಂಥ ಅಧಿಕಾರಿಗಳು ಹೋಗಿ ನೋಡಲೇ ಬೇಕಾಗಿದೆ ಉ. ಕೊಡಗಿನ ಜನರಿಗೆ ವತ್ತಾಯದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮೊದಲಾಗಿ ಕಲಿಸಬೇಕು ಪಂಚಾಯತಿ ಪದ್ಧತಿಯನ್ನು ಜಾರಿಗೆ ತಂದು ಮನೆ ಹಿತ್ತಲುಗಳನ್ನು ಚೆನ್ನಾಗಿಡಲು ಕಲಿಸಬೇಕು. ಪಾಳು ಬಿದ್ದಿರುವ ಭೂಮಿಯನ್ನು ಸಾಗುವಳಿಗೆ ತರಬೇಕು ಮತ್ತು ಎಲ್ಲಾ ಕೆರೆ ಕಟ್ಟೆಗಳನ್ನು ದುರುಸ್ತು ಮಾಡಬೇಕು ಇಲ್ಲವೇ ಅವಶ್ಯವಿಲ್ಲದಿರುವುಗಳನ್ನು ಮುಚ್ಚಬೇಕು.

ಈ ಕೆಲಸಗಳನ್ನು ಸಾಧಿಸಬೇಕಾದರೆ ಹಣ ಬೇಕಾಗಿದೆ. ಹಣವನ್ನು ಕಂಡು ಹಿಡಿಯುವುದು ಸರಕಾರದ ಕೆಲಸವಾಗಿದೆ. ಎಲ್ಲಾ ಚೀಫ್ ಕಮಿಶನರುಗಳು ಮತ್ತು ಇತರ ಉದ್ಯೋಗಸ್ಥರೂ ಈ ನಿವಾರಣೆ ಬಗ್ಗೆ ಬಹಳ ಕುತೂಹಲವುಳ್ಳವರಾಗಿದ್ದಾರೆ. ಮಲೇರಿಯಾ ಕಮಿಟಿ ರಿಪೋರ್ಟಿನಲ್ಲಿ ಬಂದಿರುವ ಶಿಫಾರಸ್ಸುಗಳನ್ನು ಆದಷ್ಟು ಮಟ್ಟಿಗೆ ಜಾರಿಗೆ ತಂದು ದೇಶ ಪ್ರಜೆಗಳು ಈ ಮಲೇರಿಯಾದಿಂದ ಸಾಯುತ್ತಿರುವುದನ್ನು ತಪ್ಪಿಸುವುದು ಸರಕಾರದ ಕೆಲಸವಾಗಿದೆ. ಅಲ್ಲದೆ ಈಗ ತಾನೇ ಸಹಕಾರ ಸಂಘದ ಹೊಸ ರಿಜಿಸ್ಟ್ರಾರರಾಗಿ ಏರ್ಪಟ್ಟಿರುವ ಮೆ. ಯಂ. ಪಿ. ಮುದ್ದಣ್ಣನವರು ಇದರ ನಿವಾರಣೆಯಲ್ಲಿ ಬಹಳ ಕುತೂಹಲವುಳ್ಳವರಾಗಿರತ್ತಾರೆ. ಈ ವಿಷಯ ಮತ್ತು ಅನೇಕ ವಿಷಯಗಳನ್ನು ಚರ್ಚಿಸಲಿಕ್ಕಾಗಿ ಸಹಕಾರಿಗಳ ಕಾನಫರೆನ್ಸು ಒಂದನ್ನು ಮಾಡಿ ಇದರ ನಿವಾರಣೆಯನ್ನು ಸಹಕಾರ ಸಂಘಗಳ ಮೂಲಕ ಎಷ್ಟರ ಮಟ್ಟಿಗೆ ಮಾಡಬಹುದೆಂಬುದನ್ನು ಕಂಡು ಹಿಡಿಯುವುದು ಎಷ್ಟು ಅವಶ್ಯಕವೆಂದು ಹೇಳಬೇಕಾಗಿಲ್ಲ.

ಸಹಕಾರದಿಂದ ಆಗದ ಕೆಲಸವು ಯಾವುದೂ ಇಲ್ಲ. ಇದನ್ನು ಚೆನ್ನಾಗಿ ಉಪಯೋಗಿಸಿದರೆ ಕೋರಿದ ಎಲ್ಲಾ ಕೆಲಸವೂ ನೆರವೇರುತ್ತೆ. ಆದ್ದರಿಂದಲೇ ಇದನ್ನು ಕಾಮಧೇನು ಕಲ್ಪವೃಕ್ಷಕ್ಕೆ ಹೋಲಿಸುವುದಾಗಿದೆ. ಸಹಕಾರಿಗಳು ಸಹ ಈ ಮಲೇರಿಯಾ ನಿವಾರಣೆಗೆ ತಕ್ಕ ಸಾಧನೋಪಾಯಗಳನ್ನು ಕಂಡು ಹಿಡಿದು ತಮ್ಮ ತಮ್ಮ ಸಂಘಗಳಲ್ಲಿ ಕೆಲಸ ಮಾಡಿ ದೇಶಾಭಿವೃದ್ಧಿಗೆ ಸಹಾಯ ಮಾಡಬೇಕಾಗಿದೆ.

ಪ್ರತ್ಯೇಕ ವಾರ್ತೆ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಸೋಮೇಶ್ವರ ದೇವಸ್ಥಾನ

ನಾಪೋಕ್ಲುನಾಡು ಕುಂಜಿಲ ಗ್ರಾಮದ ಪರಂಗೇಯಲ್ಲು ಈಗ ಅನೇಕ ವರ್ಷಗಳಿಂದ 4—5 ನಾರಿ ರಿಪೇರಿ ಮಾಡಿದಾಗ್ಯೂ ನ್ಯಾಯವಾಗಿ ಕೆಲಸ ಜರಗದೆ ಬಾಕಿ ಇದ್ದ ಸೋಮೇಶ್ವರ ದೇವಸ್ಥಾನವನ್ನು ಈ ವರ್ಷ ಜೀರ್ಣೋದ್ಧಾರ ಮಾಡಿ ತಾರೀಕು 15—2—31ರ ಶಿವರಾತ್ರಿ ದಿನ ಊರವರೆಲ್ಲ ಸೇರಿ ದುಡಿಕೊಟ್ಟು ಪಾಟ, ಬೊಳಕಾಟ್, ಪಂಚಾಕ್ಷರಿ ಮತ್ತು ಶತಾಕ್ಷರಿ ಭಜನೆಯಿಂದ ಇಡೀ ರಾತ್ರಿ ಜಾಗರ ಮಾಡಿದರು. ರಾತ್ರಿ ಬಂದವರಿಗೆಲ್ಲಾ ಪಾಯಸ ಮಂಡಲ

...ಕ್ಕಿ ಮುತ್ತಪ್ಪನವರು ಮಾಡುವರಿಗ್ಯೆ ಒಂದು ದಿನ ಅಕ್ಕಿ ಖಂಡ 10 ... ಇವರು ಈ ವೊದೇ ಮಾಡಿದರಿಗ್ಯೆ ಇ (40 ಸೇರು) ಅಕ್ಕಿ ... ಮೇರೆ ಸರ್ಕಾರ ... ಮೆ ಉ. ಮಾಡ್ಯೆ

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ಜನರಿಗೂ ತಿಳಿಯ ಪಡಿಸುವುದೇನಂದರೆ:—

ನನ್ನ ಬಾಪ್ತು ಈ ಕೆಳಗಿನ ಚಹರೆಯುಳ್ಳ 2 ಗಾಡಿ ಎತ್ತುಗಳು ಪರಾರಿಯಾಗಿರುವುದರಿಂದ ಯಾರಾದರೂ ಹಿಡಿದು ಕೊಟ್ಟವರಿಗೆ ಒಳ್ಳೆ ಬಹುಮಾನವು ಕೊಡಲ್ಪಡುತ್ತೆ.

ಚಹರೆ- ಕೆಂಪು ವರ್ಣದ 4 ಇಂಚಿನ ಕೋಡುಗಳುಳ್ಳ, ಒಂದು ಕೋಡು ಸ್ವಲ್ಪ ಒಳಗಾಗಿಕೊಂಡಿರುವ ಮತ್ತು ಬೆನ್ನ... [illegible]

ಪ್ರಸಿದ ಪತ್ರಿಕೆ.

ಈ ಕೆಳಗೆ ನಮೂದಿಸಿರುವ ಮುತ್ತಪ್ಪ ತಂಬಾಕಿನ್ ಮೇನೇಜರು ಸರ್ವರಿಗೂ ತಿಳಿಯಪಡಿಸುವದೇನೆಂದರೆ.—

ಮುತ್ತಪ್ಪ ತಂಬಾಕಿನಲ್ಲಿ ಈ ಕೆಳಗೆ ಕಂಡ ಪ್ರತಿ ಪೂಜೆಗೆ ಳಿಗೆ ಕೆಳಗಿನ ಪಟ್ಟಿ ಮೇರೆ ಚಾಟು ... ಇಲ್ಲಿಗೆ ಬರಲು ಆನಾಸೂರಿಂದ ತಳಿಪರಂಬು ಸ್ಟೇಷನಿಗೆ ರೈಲಿನಲ್ಲು ಬಂದರೆ ದೇವಸ್ಥಾನದ ಬಸ್ಸು ಜನರನ್ನು ತಾರು ಇರುತ್ತೆ. ... [illegible]

[illegible]

ಪಿನ್ 1ಕ್ಕೆ	3	14	0
... ಕ್ಯಾಪ್			
... ಪಿನ್ 1ಕ್ಕೆ	4	2	0
...ಪ್ ಆನಿಕ			
ಪಿನ್ 1ಕ್ಕೆ	5	8	0
1ಕ್ಕೆ	10	8	0
...6 0, & 20	10	0	
...8 0, & 3	12	0	
... 6	12	0	

ಸೈಲಿನರು 1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಅಲಾರಂ ರ್‍ಯಾಂಡ್ ಇದಕ್ಕೆ ಮಾತ್ರ			
ಯಡಿ ಟೈಂಪೀಸ್ 1ಕ್ಕೆ	13	4	0
ಖಾತ್ರಿಯಾದ ಒಂದೋಬಸ್ತಿ, ಆದ ಪಾಕೆಟ್ ವಾಚ್ 1ಕ್ಕೆ	5	10	0
ಡಿಟೋ ನಮೂನೆಯಲ್ಲಿ ಎಲ್ಲಾ ಪಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ಏಕಲ್ ಕೇಸ್ ಸಿಲಿಂಡರ್ ಮುಮೆಂಟ್ ಸಾಧಾರಣ ತರಹ			



ವಾದ ಟೇಬಲು ಕ್ಲಾಕ್ ... ಸ್ 1ಕ್ಕೆ 3—6—0 ... ಕಿಂಗ್ ... ಶಾಯಿವಾ!!

[illegible]

ಮಲೇರಿಯಾ.

(ಬರೆದು ಬಂದದ್ದು.)

ಮಲೇರಿಯಾ ಕಾಯಿಲವು ವಾಡಿಕೆಯಾಗಿ ಹೆಚ್ಚು ಮಳೆಯಾಗುತ್ತಿರುವ ಗುಡ್ಡ, ಬೆಟ್ಟ ಪ್ರದೇಶಗಳಲ್ಲಿಯೂ, ಜೌಗು ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಲ್ಲಿಯೂ ಕಾಣುತ್ತೆ. ಈ ರೋಗವು ಸೊಳ್ಳೆ ಕಡಿತದಿಂದ ಉದ್ಭವವಾಗುತ್ತದೆಂದು ಎಲ್ಲರಿಗೂ ತಿಳಿದಿದೆ. ಸೊಳ್ಳೆಗಳು ಹರಿಯುವ ನೀರಿನಲ್ಲಿ

1887 ರಲ್ಲಿ	21,000	ಮರಣಗಳು (ಮಲೇರಿಯಾದಿಂದ	
1891 „	18,000	„	„
1900 „	16,000	„	„
1901 „	8,000	„	„

ಈಚೆಗೆ ಮರಣವು ಬಹಳ ಕಡಿಮೆಯಾಗುತ್ತಾ ಬರುತ್ತಿದೆ. ಇದರ ನಿವಾರಣೆಯಿಂದ ಉತ್ತರ ಇಟಲೀ ದೇಶದ ಮೂರು ಮಿಲಿಯ ಎಕರೆ ಇರುವ ಪ್ರದೇಶದಲ್ಲಿ ಶೇಕಡ 65ರಷ್ಟು ಜನ ಸಂಖ್ಯೆಯು ಹೆಚ್ಚಿದೆ ವ್ಯವಸಾಯಗಾರರಿಗೆ ಬೇಕಾಗುವ ದನ

ರುವುದರಿಂದ ಆ ಮೂಲದ ದಕ್ಷಿಣ ಕೊಡಗಿನ ಸ್ವಲ್ಪ ಸಹಾಯದಿಂದ ವನ್ನು ಬೇಗನೆ ಕೈ ಕೊರುವ ಕೆರೆ, ಕೊಳ, ಕಟ್ಟೆದು. (2) ಅವಶ್ಯವಿಲ್ಲ ಚ್ಚುವುದು. (3) ಮಗಿಡುವುದು. ಮತ್ತು

...ಗಾಡಿ ರಸ್ತೆಗಳನ್ನು, ರೈಲ್ ರಸ್ತೆಗಳನ್ನು ಮಾಡಿದರು. ಈ ರೀತಿ ಪ್ರಥಮ ವರ್ಷ ಸುಮಾರು ನಾಲ್ಕು ಲಕ್ಷ ಎಕರೆ ವಿಸ್ತೀರ್ಣವನ್ನು ಸಂಪಾದಿಸಿದರು. ಹೀಗೆಯೇ ರೋಮ್ ನಗರದ ಬಳಿ ಇದ್ದ ಜೌಗು ಪ್ರದೇಶಗಳನ್ನು ಒಣಗಿಸುವುದರಲ್ಲಿಯೂ ದೊಡ್ಡ ದೊಡ್ಡ ಕಾಡುಗಳನ್ನು ಕಡಿದು ಸರಿಪಡಿಸುವುದರಲ್ಲಿಯೂ ಬಹಳ ಕೆಲಸ ಮಾಡಿದರು. ಇಂಥಾ ಕೆಲಸಗಳಲ್ಲಿ ಇಂಜಿನೀಯರುಗಳು ಮತ್ತು ಅವರಿಗೆ ಬೇಕಾಗುವ ಸಿಬ್ಬಂದಿಗಳು ಬಹಳ ಬೇಕಾದವು. ಈ ತರದ ಕೆಲಸಗಳಿಂದ ಆ ದೇಶದಲ್ಲಿ ಮಲೇರಿಯಾ ರೋಗವು ಬಹಳವಾಗಿ ನಿವಾರಣೆಯಾದುದಲ್ಲದೆ ನಿರ್ಜನ ಪ್ರದೇಶಗಳಲ್ಲಿ ಜನರು ವಾಸ ಮಾಡುವಿಕೆಗೆ ಕೊಡಗಿ ಅನೇಕ ಹೊಸ ಪಟ್ಟಗಳು ತಲೆದೋರಿದವು. ...ಲೇರಿಯಾ ರೋಗ...

ನೀಕ ಗ್ರಾಮಸ್ಥರು ರಿಸರ್ವ್ ಫಾರೆಸ್ಟಿನಲ್ಲಿ ಪಾಳು ಭೂಮಿಗೆ ದರಖಾಸ್ತು ಮಾಡಿದ ಸಮಯದಲ್ಲಿ ಸರಕಾರವು ಹೆಚ್ಚೇನು ಸಹಾಯ ಮಾಡಿರುವುದಿಲ್ಲ. ಇಟಲಿ ದೇಶದವರು ಮಾಡಿದ ರೀತಿ ಸರಕಾರದವರೇ ಮುಂದೆ ನಿಂತು ಇಂಥಾ ಪಾಳು ಭೂಮಿಗಳನ್ನು ವೃದ್ಧಿಮಾಡಿ ರೈತರಿಗೆ ಕೊಟ್ಟ ಪಕ್ಷದಲ್ಲಿ ಹಾಳು ಬಿದ್ದ ಈ ಗ್ರಾಮಗಳು ಊರಾಗಿ ಪಟ್ಟವಾಗಿ ಸರಕಾರಕ್ಕೆ ದೊಡ್ಡ ಆದಾಯವಾಗುವುದರಲ್ಲಿ ಸಂದೇಹವಿಲ್ಲ. ಈಗಾಗಲೇ ನಂಜರಾಜಪಟ್ಟಣ ತಾಲೋಕಿನ ರೀಜನರೇಶನ್ ವಿಭಾಗದಲ್ಲಿ ಮಾಡುತ್ತಿರುವ ಕೆಲಸಗಳು ಶ್ಲಾಘನೀಯವಾದದ್ದಾಗಿದೆ, ಅದಾಗ್ಯೂ ಸ್ಥಳಗಳಲ್ಲಿ ಸರಕಾರದವರು ಎಷ್ಟು ಹಣವನ್ನು ...

ಪತ್ರ

ಬಾತ್ಮಿದಾರರು ಪಡೆ ಕರ್ತರು ಜವಾಬ್ದಾರರಲ್ಲ.

ಸೋಮೇ

ನಾಪೋಕ್ಲುನಾಡು ಯಲ್ಲು ಈಗ ಅನೇಕ ವರ್ಷ ಡಿದಂತೆ ಸ್ಥಾಯಿಯಾಗಿ ಸೋಮೇಶ್ವರ ದೇವಸ್ಥಾ

...ಉದಯದಿಂದ ನಂಜಯ್ಯನವರ ಪತ್ನಿ ಮುತ್ತಮ್ಮನವರು ನಿತ್ಯ ಅನ್ನದ ಬಗ್ಗೆ ಅಕ್ಕಿ ಅಳತೆ ಮಾಡುವಾಗ್ಗೆ ಒಂದು ...ಅಕ್ಕಿಯನ್ನು ಧರ್ಮಾರ್ಥವಾಗಿ ಇರುವ ಅಕ್ಕಿ ಖಂಡ 10 ...ನ್ನು ಈ ನೆವೂರಾಧನೆಗೆ ಕೊಟ್ಟರು. ಇವರು ಈ ಮೊ... ನಡೆದ ಕಕ್ಕಬೆ ಸ್ಕೂಲಿನ, ಸ್ಕೂಲ್ ಡೇ ಮಾಡಿದಾಗ್ಯೆ ಇ...ದಾನದ ಅಕ್ಕಿಯಿಂದ ಅರ್ಧ ಬಟ್ಟಿ (40 ಸೇರು) ಅಕ್ಕಿ...ನ್ನು ಉಚಿತವಾಗಿ ಕೊಟ್ಟರು. ಈ ಮೇರೆ ಸರ್ವರೂ ...ದಾ ಧರ್ಮಕ್ಕಾಗಿ ತೀಕಂಸಬೇಕಾಗಿ ಮೆ. ಉ. ನಂಜೈಯ್ಯನವರು ಬೋಧಿಸಿದರು.

ಈ ದೇವಸ್ಥಾನಕ್ಕೆ ಪೂರ್ವದಲ್ಲಿ ಜೋಡಿ ಹಣವೂ, ಮ... ನಿತ್ಯ ನೈವೇದ್ಯಕ್ಕೆ ಭೂಮಿಯೂ ಇತ್ತು. ಈ ದೇವಸ್ಥಾನವು ಹೀನಸ್ಥಿತಿಗೆ ಬಂದದ್ದರಿಂದ ಸರ್ಕಾರದವರು ಪುನ...ರ್ದ್ದಾರ ಮಾಡುವ ವರೆಗೆ ಸರ್ಕಾರಕ್ಕೆ ಕೊಡಬೇಕಾಗಿ ...ಡಿ ಸ್ಟೇಟ್ಮೆಂಟ್ ಮಾಡಿದನ್ನು ಈಗ ಕೊಡಿಸಿಕೊಡಬೇಕಾಗಿ ಗ್ರಾಮಸ್ಥರು ಬಹುಕಾಲದಿ ಕಾಲದಲ್ಲು ಅರ್ಜಿ ನಡ...ಮಾಡಿಕೊಂಡಿರುತ್ತಾರೆ. ಇದಕ್ಕೆ ಸರ್ಕಾರದವರು ಖಾತೆ...ವಾಗಿ ಪೂರ್ವದಲ್ಲು ಇದ್ದ ರಿವಾಜಿಯನ್ನು ಈಗ ಕೊಡದೆ ...ರದಾಗಿ ಊರವರು ಪೂರಾ ಒರವಸೆಯುಳ್ಳ ಇದ್ದಾರೆ.

ಹಾಜರಿದ್ದವ.

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ಜನರಿಗೂ ತಿಳಿಯ ಪಡಿಸುವುದೇನಂದರೆ:—

ನನ್ನ ಬಾಪ್ತು ಈ ಕೆಳಗಿನ ಚಹರೆಯುಳ್ಳ 2 ಗಾಡಿ ಎತ್ತುಗಳು ಪರಾರಿಯಾಗಿರುವುದರಿಂದ ಯಾರಾದರೂ ಪತ್ತೆ ಹಚ್ಚಿ ಕೊಟ್ಟವರಿಗೆ ಒಳ್ಳೆ ಬಹುಮಾನವು ಕೊಡಲ್ಪಡುತ್ತೆ.

ಚಹರೆ:- ಕೆಂಪು ವರ್ಣದ 4 ಇಂಚಿನ ಕೋಡುಗಳುಳ್ಳ, ಒಂದು ಕೋಡು ಸ್ವಲ್ಪ ಒಳಬಾಗಿಕೊಂಡಿರುವ ಮತ್ತು ಬೆನ್ನಿನ ಹಿಂಭಾಗದಲ್ಲಿ ಸ್ವಲ್ಪ ಬಿಳಿ ಹಾಗಿರುವ 1 ಎತ್ತು, ಮತ್ತು ಬೂದು ಬಣ್ಣದ 6 ಇಂಚಿನ ಕೋಡುಗಳಾಗಿ ಒಳಬಾಗಿಕೊಂಡಿರುವ, ಬಲಕಾಲಿನ ಹಮ್ಮುಗಳು ಸ್ವಲ್ಪ ಕುಳ್ಳದ ಹಾಗಿರುವ, ಬಲಕಾಲಿನ ತೊಡೆಯ ಮೇಲೆ ಒಂದು ಸಣ್ಣ ಬಿಳೇ ಪಟ್ಟೆ ಇರುವ ಇನ್ನೊಂದು ಎತ್ತು.

ಮಿಸೆಸ್ ಸಿ. ಇ. ಮೇರಿಂಗ್,
ಕಣ್ಣಂಬಾಡಿ ಎಸ್ಟೇಟ್,
ತಿತ್ತಿಮತಿ.

3—3

ಆಸ್ತಿ ಮಾರಾಟ.

ಸುಸಮಯ ಕಳಕೊಳ್ಳಬೇಡಿ.

ಅಮ್ಮತ್ತಿ, ಸಿದ್ದಾಪುರ ನಾಡು ನಲುವತೊಕ್ಲು ಗ್ರಾಮದಲ್ಲಿ 5 21 ಎಕರೆ ಕಾಫಿ ತೋಟ ಮತ್ತು ಅದಕ್ಕೆ ಸೇರಿದ 12 52 ಎಕರೆ ಬಾಣೆ ಹಿತ್ಲು ಗದ್ದೆ ಮತ್ತು ಅಬಾಯದ 12. 38 ಎಕರೆ ಪೈರಿ ನದು ಸಹ ಮಾರಾಟಕ್ಕಿದೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿ.

ಎ. ಕೆ. ಕೃಷ್ಣಯ್ಯ.
ಬಿ. ಎ. ಯಲ್, ಯಲ್. ಬಿ.
ವೀರಾಜಪೇಟೆ.

4—3

ಪ್ರಸಿದ್ಧ ಪತ್ರಿಕೆ.

ಈ ಕೆಳಗೆ ನಮೂದಿಸಿರುವ ಮುತ್ತಪ್ಪ ತಂಬ್ರಾನ್ ಮೇನೇಜರು ಸರ್ವರಿಗೂ ತಿಳಿಯಪಡಿಸುವದೇನೆಂದರೆ:—

ಮುತ್ತಪ್ಪ ತಂಬ್ರಾನಲ್ಲಿ ಈ ಕೆಳಗೆ ಕಂಡ ಪ್ರತಿ ಪೂಜೆಗಳಿಗೆ ಕೆಳಗಿನ ಪಟ್ಟಿ ಮೇರೆ ಚಾರ್ಜು ಬೀಳುತ್ತೆ. ಇಲ್ಲಿಗೆ ಬರಲು ಕಣ್ಣಾನೂರಿಂದ ತಳಿಪರಂಬು ಸ್ಟೇಷನಿಗೆ ರೈಲಿನಲ್ಲಿ ಬಂದರೆ ದೇವಸ್ಥಾನದ ಬಸ್ಸು ಜನರನ್ನು ಕಾದು ಇರುತ್ತೆ. ಟಿಕ್ಕೆಟ್ಟಿಗೆ 0—6—0 ಆಣೆ ಚಾರ್ಜು ಬೀಳುತ್ತೆ. ಇಲ್ಲಿಗೆ ಬರಲು ಸಾಧ್ಯವಿಲ್ಲದವರು ಕೆಳಗಿನ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ಹಣ ರವಾನಿಸಿದರೆ ನ್ಯಾಯವಾಗಿ ಪೂಜೆ ಮಾಡಿಸಿ ಪ್ರಸಾಧ ಕಳುಹಿಸಲಾಗುತ್ತೆ. ಬೇರೆ ಅನೇಕರು ಈ ದೇವರ ಹೆಸರು ಹೇಳಿಕೊಂಡು ಬಂದು ಪೂಜೆಗಿರುವ ಹಣ ಹರಕೆ ವಗೈರೆ ಕೇಳುವಾಗ ಕೊಡಬಾರದು. ಅಂಥವರು ಹರಿಕೆ ತಲುಪದೆ ಮೋಸ ಮಾಡುತ್ತಾರೆ.

ತಿರುವಪನೆ	13—4—0
ಜೋಡುಬೆಳಕ್ಕಾಟ	2—8—0
ಒತ್ತೆ ಬೆಳಕ್ಕಾಟ	1—4—0
ಜೋಡು ಪೈಂಗುತ್ತಿ	0—8—0
ನೈವೇದ್ಯ	2—0—0

ಪಿ. ಯಂ. ಕುಂಞರಾಮನ್,
ಮೇನೇಜರ್
ಪರಸನಕಡು ಮುತ್ತಪ್ಪ ದೇವಸ್ಥಾನ,
ಪೋಸ್ಟು ಆಫೀಸು ಪರಸನಕಡು,
Via ತಳಿಪರಂಬು.

12—8

NEW BEAUTY!!
For the new Ford.
New Body lines and colours.
Rustless steel for Exposed metal parts
Fully Enclosed silent six brake system.
Four Houdaille Hydraulic double-acting shock absorbers Triplex shatter-proof glass windshield.
Quick acceleration ease of cantrol.
55 to 65 miles an hour. Smoothness, balance and security at all speeds unusual number of ball bearings.
40 different kinds of steel.
Typical Ford Economy, reliability and long life
Good Dealer service after you buy the Car.
A Wonderful Hill climber!!!
Easy instalment terms if you prefer.
For Demonstration & other particulars.
Please apply to:—
S. Sunder Rau,
Sole Ford Dealer for coorg.
MERARA.

24—21

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕವೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ಪಾಪ ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೂ ಸರಿಯಾಗಿ ಮುಟ್ಟಾಗದಿರುವಿಕೆ, ಮುಟ್ಟಾಗುವ ಸಮಯದಲ್ಲಿ ಕೈಕಾಲು ಸೆಳೆಯುವಿಕೆ, ದುಸ್ವಪ್ನ ಬೀಳುವಿಕೆ, ಹೊಟ್ಟೆ ಶೂಲೆ ಬಿಳುಪು-ಕೆಂಪು ಹೋಗಿ ಗರ್ಭ ಪತನವಾಗುವಿಕೆ, ವಾಂತಿ, ಸರ್ಪಶಾಪ, ಪಿಶಾಚಬಾಧೆಯಿಂದ ನರಳುವಿಕೆ, ದಿನ ತುಂಬದೆ ಹಡೆದಿರುವ ದಿನವೆ ಹಲವು ರೋಗದಿಂದ ಸತ್ತು ಹೋಗುವಿಕೆ, ಇವೇ ಮೊದಲಾದವುಗಳು ಸಂತಾನ ಭಂಗಕ್ಕೆ ಕಾರಣಗಳು. ಚಿಕ್ಕ ಮಕ್ಕಳಿಗೆ ೧೨ ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂಧುರೋಗ, ಮುಟ್ಟುದೋಷ ಕಾಮಾಲೆ, ಗೃಹಪೀಡೆ, ದೃಷ್ಟಿದೋಷ, ಮುಟುಕಿನ್ಯಾಳ, ವಿಶೇಷ ಅಳೋಣ, ಹೊಟ್ಟೆಯೊಳಗಿಂದ ಬೇನೆ, ಭಯದಿಂದ ಜ್ವರಬೀಳ್ಳೆ, ಕ್ಷೀಣ ಹೊಂದುವಿಕೆ ಮೊದಲಾದವುಗಳಿಂದ ಕಾಡುತ್ತಿರುವವು. ಗರ್ಭರಕ್ಷಣೆಯ ವಿಷಯದಲ್ಲಿ ಸಹಾಯ ರಕ್ಷಣೆಯ ವಿಷಯದಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ, ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧು ಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ. ಇದನ್ನು ತಂದು ಧರಿಸಿದರೆ ಹುಟ್ಟುವ ಮಕ್ಕಳಿಗಾಗುವ ಸಂತಾನ ಭಂಗವೂ ಚಿಕ್ಕ ಮಕ್ಕಳಿಗೆ ಬರುವ ಬಾಲಗ್ರಹವೂ ಖಂಡಿತವಾಗಿ ಪರಿಹಾರವಾಗುತ್ತದೆ. ಹೆಣ್ಣು ಮಕ್ಕಳಿಗೆ ಸಂತಾನ ದೋಷದಿಂದ ೩ ರೂಪಾಯಿ, ಚಿಕ್ಕ ಮಕ್ಕಳಿಗೆ ೧ಕ್ಕೆ ೨-೮-೦ ಪೋ. ಖ. ಬೇರೆ. ಸ್ಪೇಶಲ್ ವಾ ಜಾಗ್ರತ ಗುಣ ಕೊಡುವ ತಾಯಿತಕ್ಕೆ ಪೋ. ಖ. ಸೇರಿ ೫ ರೂ. ಆಗತಕ್ಕ ವಿಚಾರಗಳನ್ನು ಸ್ಪಷ್ಟ ಬರೆಯಿರಿ. ಈ ತಾಯಿತ ಧರಿಸಿ ಕೊಂಡು ಗುಣವಿಲ್ಲದವರಿಗೆ 100 ರೂ ಬಹುಮಾನ ಒಂದು ಸಲ ತರಿಸಿ ಅನುಭವ ಪಡೆಯಿರಿ.

ಸ್ವತಃ ಸಂತೋಷ ಮೂಲಕ ಮಾದರಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯ ಪ್ರಕೃತಿಯನ್ನು ನಾನಾಂಶಿತ ವೈದ್ಯ ಡಾಕ್ಟರರಿಗೂ ತೋರಿಸಲು ಗುಣಹೊಂದದಿರಲು ತಮ್ಮ ಆಶ್ಚರ್ಯಕರವಾದ ತಾಯಿತವನ್ನು ನನ್ನ ಹೆಂಡತಿಯು ಕಟ್ಟಿದಾಗ್ಯೆ 3 ವಾರಗಳ ಪರ್ಯಂತರ ದರಿಸಿದ ಪ್ರಕೃತಿ ಮೊದಲಿನಂತೆ ಯಾವತ್ತು ರೋಗಗಳು ನಾಶವಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುವದನ್ನು ತಿಳಿಸಲು ಅತಿ ಸಂತೋಷವಾಗುತ್ತೆ.

ತಮ್ಮ ಸಿ. ಕೆ. ರಾವ್‌ಸಾಹೇಬ, ಸುಬಾನು ಹೌಸ್,
ಪ್ರಲ್ಹಾದ ಎಸ್ಟೇಟ್, ಮುಂಬೈ.

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಹಂಚಗಟ್ಟಿ,
ಮು. ಪೋ. ಚಿಕ್ಕೋಡಿ, ಜಿ. ಬೆಳಗಾಂವ.

52—17

ಎಂ. ಎಸ್. ಶಿವಪ್ಪ ಬ್ರದರ್ಸ್.
[illegible] ವ್ಯಾಪಾರಿಗಳು, ಮೈಸೂರು.

ಶ್ಯಾಫರ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟೆನ್‌ಪೆನ್‌ಗಳು.

... ಸ್ಟಾಂಡರ್ಡ್ ಫೌಂಟನ್‌ಪೆನ್ 1ಕ್ಕೆ	ರೂ. 3	0	0
„ ಬಿಗ್ ಬ್ಯಾರಲ್ ಪೆನ್ 1ಕ್ಕೆ	3	3	0
„ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0
„ ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0
„ ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರೌನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0
ಬಿಗ್ ಸ್ವಾಟ್ ಫೌಂಟನ್‌ಪೆನ್ 1ಕ್ಕೆ	10	8	0
...ಪಾರ್ಕರ್ ಪೆನ್ 1ಕ್ಕೆ	14 6 0, & 20	10	0
...ಬ್ಲ್ಯಾಕ್‌ಬರ್ಡ್ ಫೌಂಟನ್‌ಪೆನ್ 1ಕ್ಕೆ	3 8 0, & 3	12	0
...ಸ್ವಾನ್ ಫೌಂಟನ್ ಪೆನ್ 1ಕ್ಕೆ	6 4 0, & 6	12	0
...ಆನ್ಡರ್‌ಸನ್ ಫೌಂಟನ್ ಪೆನ್ 1ಕ್ಕೆ	8 2 0, & 8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ವಿಗಲಿಯೂ ಅಲಾರಂ ಟೈಂಪೀಸ 1ಕ್ಕೆ	6 9 0, & 6 15		0
ವಿಗಲಿಯೂ ಸಣ್ಣ ನೈವಿನ ಅಲಾರಂ ಟೈಂಪೀಸ್ 1ಕ್ಕೆ	7	2	0
ವಿಗಲಿಯೂ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಯಲು 1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13	14	0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್ 1ಕ್ಕೆ	5	10	0
ಡಿಟೋ ನಮೂನೆಯಲ್ಲಿ ಎಟ್ಟು ಹಾದ್ದ ಕಂಪೆನಿಯು ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮೂಮೆಂಟ್ ಸಾಧಾರಣ ತರದ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12	8	0



ಈ ಚಿತ್ರದಲ್ಲಿರುವ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅಲಾಯಿದಾ!!

ಮಣಿಯಾರ್ಡರ್ ರವಾನಿಸುವ ವಿಳಾಸ —ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್,
ವಾಚ್ಮೇಕರ್ಸ್ ಅಂಡ್ ವ್ಯಾಪಾರಿಗಳು, ಮೈಸೂರು.

52—34

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ ...	50,000
ವಸೂಲಾದ ಶೇರ್ ಮೊಬಲಗು ...	23.160
ಜಮೊಬಂದ ಠೇವಣಾತಿ ...	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ವರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟು ಮಾಡಿಸುತ್ತಾರೆ

ಪ್ರಸಿಡೆಂಟರು,	ಟ್ರೆಜರರ್
ಕೋದಂಡ ಅಪ್ಪಯ್ಯನವರು,	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1–7–1930.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.
ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52–8 ಗಿರಿಗಾಂವ, ಮುಂಬಯಿ.



12 bore Victor Cartridges Rs 10/- Per 100
Mahomedally-Noorbhoy.
ARMS & AMMUNITION MART.
321 Abdul Rehman Street.
52 16 **BOMBAY. 3**

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ
ಓರಿಯಂಟಲ್ ಜೀವವಿಮೆ ಕಂಪೆನಿಯ
ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲೆಲ್ಲಾ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯ ಈಗಿನ ಸ್ಥಿತಿಯಿಂದ ಸಷ್ಟಪಡುತ್ತದೆ.

ಹೊಸ ಕೆಲಸ.	ಪ್ರೀಮಿಯಂ ವರವೂನ
೧೯೨೭—೪೬೮ ಲಕ್ಷ ರೂಪಾಯಿಗಳು.	೧೯೨೭—೧.೨೨ ಲಕ್ಷ ರೂಪಾಯಿಗಳು.
೧೯೨೮—೫೮೫ ಲಕ್ಷ "	೧೯೨೮—೧೪೦ ಲಕ್ಷ
೧೯೨೯—೬೫೦ ಲಕ್ಷ "	೧೯೨೯—೧೬೧ ಲಕ್ಷ

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು.
ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗ
೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳಿಗೆ ೨೨॥ ರೂಪಾಯಿಗಳು.
೧೯೨೭ " " " " ೨೫ "
ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದಲ್ಲಿ ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭವುಂಟು
ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ
ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.
ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್. ಬೊಂಬಾಯಿ.
ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು:—

ಓರಿಯಂಟಲ್ ಬಿಲ್ಡಿಂಗ್ಸ್,	**ಯಂ. ವಿ. ಮುತ್ತುಕೃಷ್ಣ ನಾಯುಡು,**
ಸೌತ್ ಪೇರೇಡ್, ಬೆಂಗಳೂರು.	**ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.**

OR

52–1 **ಕೆ. ಪಿ. ಚಿನ್ನಪ್ಪ,**
ಮಡಿಕೇರಿ. ಏಜೆಂಟ್,

ಮಲಜ್ವರಕ್ಕೆ ಮಲೇರಿಯಹಾರ

ಮಲೇರಿಯಹಾರವು ಮಲಜ್ವರ ಚಳಿಜ್ವರ, ಉರಿಜ್ವರ, ದಾಹಜ್ವರ ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ ಗೆಡ್ಡೆಯನ್ನೂ ಸಂಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ

ಕ್ರಯ 8 ಔನ್ಸಿಗೆ 1–8–0, ½ ಡಜನಿಗೆ 8–8–0 1 ಡಜನಿಗೆ 16–8–0

ಪಿತ್ತ ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡಸ್.

ಪಿತ್ತಜ್ವರ ಕೈಕಾಲು ಬಚ್ಚಲು, ರಕ್ತ ಇಲ್ಲದೆ ಬೆಳ್ಳಗೆ ಕಾಣುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು, ಗೊಂಟ ಮತ್ತು ಶರೀರ, ತಲೆಶೂಲೆ, ತಲೆ ತಿರುಗುವದು, ಆಹಾರದ ತರುವಾಯ ಹೊಟ್ಟೆ ಉರಿ ಎದೆ ಸುಡುವದು ನಾಲಿಗೆ ಒಣಗುವದು, ಮಲಮೂತ್ರಕ್ಕೆ ಭಂಗ ಪಿತ್ತ ಕಾರುವದು, ನಿದ್ರೆ ಇಲ್ಲದೆ ಸಂಕಟವಾಗುವುದು ಇತ್ಯಾದಿ ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3–6–0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ

ಶರೀರದಲ್ಲಿ ಏಳುವ ಬೊಕ್ಕೆ, ಕುರು, ಬೆಚ್ಚುಗಳು, ವೇಗ ಗುಣವಾಗದ ಹುಣ್ಣು ವ್ರಣಗಳು ವಿವಿಧ ಬಗೆಯ ಚರ್ಮ ರೋಗಗಳು ಆತಿ ಶೀಘ್ರದಲ್ಲಿ ಗುಣಪಡಿಸು ಪತ್ತ ಸಂಪೂರ್ಣ ಶುಚಿಮಾಡಿ ದೇಹದಲ್ಲಿ ಶುದ್ಧ ರಕ್ತವ ತುಂಬಿ ಆರೋಗ್ಯ ಕೊಡತಕ್ಕ ಬಲವುಳ್ಳ ಮದ್ದು ಕಂಪೌಂಡು ಸಿರಪು ಸರ್ಸಪರಿಲ ಎಂಬುದೇ ಬಾಟ್ಲಿಗೆ ರೂಪಾಯಿ 3–8–0.

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನೋಮ.

ತಿಂಗಳು ಗಟ್ಟಿಯ ಅಕ್ರಮ ಹೊಟ್ಟೆನೋವು ಕೈಕಾಲುಗಳ ಸೆಳತ, ಕೋಶದ ಬಲಹೀನತೆ ವಾಯುಗಳ ಉಪದ್ರ, ರಕ್ತವು ಬೇಕಾದಷ್ಟು ಹೋಗದೆ ನಿಂತು ಬಿಡುವದು ಅಲ್ಲದೆ ಸದ ಹೆಚ್ಚು ಸ್ರಾವಿಸುವದು ಬಿಳಿಸೆರಗು ಮೈಲಿ ಕೆಸೆಲು ಇತ್ಯಾದಿ ಗರ್ಭಕೋಶದ ಎಲ್ಲಾ ಅವಸ್ಥೆಯ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನೋಮ ಸಂದೇಹವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3–8–0.

ಮಕ್ಕಳ ದೇಹದ ಪುಷ್ಟಿಗೆ–ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣ ತೋರಿ, ಸೊಂಟಕ್ಕೆ ಬಲ ಇಲ್ಲದೆ ಇರುವದು ಜೀಡಿನ ಬಣ್ಣದ ಮೂತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ, ಬಾಳುವಿಕೆಯನ್ನೂ ಕುಂದಿಸಿಬಿಡುವ ಈ ಆಪತ್ತುಗಳನ್ನು ಬೇಬಿಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1–1–0

ಶುದ್ಧ ಟಿಕ್ಚರುಗಳು ಮದ್ದುಗಳೂ ಸೀಮೆ ಮದ್ದುಗಳೂ ನಮ್ಮಲ್ಲಿ ದೊರೆಯುತ್ತವೆ

ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ, ಅವುಗಳ ನಾನಾ ಬಗೆಯ ಸಾಮಾನುಗಳೂ, ಬಿಸಲಿಗೆ ಇಡತಕ್ಕ ಒಳ್ಳೇ ತರದ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಕ್ರಯಕ್ಕೆ ಮಾರಲ್ಪಡುತ್ತವೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ.—**ಮಲೇರಿಯಹರ ಕಂಪೆನಿ,**
52–17 ಹಂಪನಕಟ್ಟೆ, ಕಾಗರ್ಜಿಬಳಿ, ನಂ ೮ 11, ಮಂಗಳೂರು.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ಮೇದಪ್ಪನವರು
ಮರನಾಡು—ಮೆ. ಕೀಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೇಪಂಡ ಸೋಮಯ್ಯನವರು, (ಪಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಚ್ಚಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಚಮ್ಮಾಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮ್ಮಯ್ಯನವರು,
ರುದ್ರಗುಪ್ಪೆ, ಅರಮಣಮಾಡ ಪಿ ಕಾರ್ಯಪ್ಪನವರು,
ಮಡಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮೊಣ್ಣಯ್ಯನವರು.

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ನಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

Printed & published by K. P. Chinnappa at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ಶೀಲ ಪ್ರಯುಕ್ತಯಾ | ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಕೋಟೆರ ಹಿ. ಚಿಣ್ಣಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦ ‖ ಮಡಿಕೇರಿ, ಸನ್ ೧೯೩೧ನೇ ಇಸವಿ ಮಾರ್ಚಿ ತಾರೀಕು ೬ ನೇ ಶುಕ್ರವಾರ. ‖ ಸಂಚಿಕೆ ೩೩

Telegrams :— "Precious"

V. Subramaniajer
Jeweller.

Telephone — 3135

DIAMOND MERCHANT, GOLD & SILVERSMITH.

Deals in all :—
SPORTS CUPS in all prices
MEADALS in up-to-date patterns
CASKETS in elegant styles

Nos. 2 & 3. Kuppumuthu St.,
TIRUVATESWARANPET,
Post Box 423, Triplicane P. O.,
MADRAS.

Deals in all :—
GEM-SET JEWELS, set with Diamonds, Rubies etc.,
GOLD ARTICLES of all patterns
SILVER WARE in latest style

52–16



ಕಾಡತೂಸು ಒರಿದರೆ ಇಗಿನ
ಕಾಟಿಯಾಗಿ ... ಕಳುಹಿಸಲ್ಪಡುವುದು.

ಕೋವಿಗಳು, ಕತ್ತಿಗಳು, ಬಚೆಗಳು, ತೋಟೆಗಳು, ಕೀಪ್ತಿಗಳು, ಮತ್ತು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India.
34–21 210 Abdul Rehman Street BOMBAY.

ಬಾಲಾರ್ಕಮಧು.

ನಿಮ್ಮ ಮಕ್ಕಳ ಆರೋಗ್ಯವನ್ನು ನೋಡಬೇಕಾದರೆ ಅವಶ್ಯಕ ... ಬಾಲಾರ್ಕ ಮಧುವನ್ನು ಕೊಡಿರಿ. ಮಕ್ಕಳು ...



... ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿ ... ಬರುವದು. ದಿನ ದಿನಕ್ಕೆ ಆರೋಗ್ಯವೂ, ... ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಆನಂದದಿಂದ ... ಸೀಸೆ 1 ಕ್ಕೆ 12 ಆಣೆ. ... 8 ಆಣೆ.

ಆರ್ಡರ್ ಜೊತೆಯಲ್ಲಿ ಅಡ್ವಾನ್ಸು ಮೊಬಲಗು ಕಳುಹಿಸಿ ಕೊಡಿರಿ ... ಅಡ್ವಾನ್ಸ್ ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲ.

52–8

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶೀಮೊಗ್ಗಾ,
(ಮೈಸೂರು ಸೀಮೆ.)

ಕಟುಕಷಾಯ ಮಹೆದ್ವರಕ:—ಇದು ... ಬರುವ ಜ್ವರ, 3—1 ... ಬರುವ ಜ್ವರ ... ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ. 1—5—0; 3ಕ್ಕೆ ರೂ. 1—...—0; 6ಕ್ಕೆ ರೂ. 7—8—0; 12ಕ್ಕೆ ರೂ. 14



ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ... ರೂ. 1—4—0; 3—8—0; 5—12—0

ರೋಮನಾಶಿನಿ:— ... 3—4—0

ಮನೋಲ್ಲಾಸಿನಿ ಸ್ವರ:— ... 2—10—0. ... 5—4—0

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9. ಮಂಗಳೂರು.

52–13

ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗು.

ಈ ಬ್ಯಾಂಕಿನ ಜನರಲ್ ಮೀಟಿಂಗು ಕಳೆದ ತಾ 22ರಲ್ಲಿ ಮಡಿಕೇರಿಯಲ್ಲಿ ಬಿಡಿಜನ್ಹಾರರ ಸಂಘದ ಹಾಲಿನಲ್ಲಿ ಮಧ್ಯಾಹ್ನ 2 ಗಂಟೆಗೆ ನಡೆಯಿತು.

ಸೊಸೈಟಿಗಳ ಪರವಾಗಿ 168 ಡೆಲಿಗೇಟರುಗಳೂ, 24 ಬಿಡಿ ಮೆಂಬರುಗಳೂ, ಹಾಜರಿದ್ದರಲ್ಲದೆ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರಾದ ಮೆ. ಯಂ. ಯಸ್, ಸುಂದರಣ್ಣನವರೂ, ರಿಟಯರ್ಡ್ ರಿಜಿಸ್ಟ್ರಾರಾದ ಮೆ. ಕೆ. ಎನ್. ಸುಬ್ಬಾಯರವರೂ, 4 ಕೋ-ಆಪರೇಟಿವ್ ಇನ್ಸ್‌ಪೆಕ್ಟರುಗಳೂ ಮತ್ತು ಎಲ್ಲಾ ಸುಪರ್ ವೈಜರುಗಳೂ ಹಾಜರಿದ್ದರು.

ಬ್ಯಾಂಕಿನ ಅಧ್ಯಕ್ಷರಾದ ರಾವ್‌ಬಹದ್ದೂರ್ ಕೋದಂಡ ಅಪ್ಪಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

1. ಮೀಟಿಂಗ್ ಪ್ರಾರಂಭವಾದ ಕೂಡಲೇ ಬಿಡಿ ಮೆಂಬರುಗಳು ಸೊಸೈಟಿಗಳ ಪರವಾಗಿ ಡೈರೆಕ್ಟರುಗಳಾಗಿ ನಿಲ್ಲಬಹುದೋ ಎಂಬ ಸಂಶಯವು ಸಭೆಯ ಮುಂದೆ ಇಡಲಾಯಿತು. ಚರ್ಚೆಯಾಗುತ್ತಿರುವಾಗ ಈ ಮೊದಲ ಬಿಡಿ ಮೆಂಬರುಗಳು ಸಂಘಗಳ ಪರ ಪ್ರತಿನಿಧಿಗಳಾಗಿ ಸ್ಪರ್ಧಿಸುವಾಗಲ ಪರವಾಗಿಯೂ, ನಿಲ್ಲುತ್ತಿದ್ದುದ್ದರಿಂದಲೇ ಆ ಕ್ರಮವನ್ನು ಈಗಲೂ ಅನುಸರಿಸಲಾಗುತ್ತದೆಯೆಂತ ಅಧ್ಯಕ್ಷರು ತೀರ್ಮಾನಿಸಿದರು.

2. ಡೈರೆಕ್ಟರುಗಳ ರಿಪೋರ್ಟು ಮತ್ತು ರಿಜಿಸ್ಟ್ರಾರವರ ಆಡಿಟ್ ರಿಪೋರ್ಟು ಸಹ ಪ್ರಿಂಟಾಗಿ ಈ ಮೊದಲೇ ಎಲ್ಲರಿಗೂ ಕಳುಹಿಸಿದ್ದರಿಂದ ಅದನ್ನು ಪುನಹ ಓದುವ ಅವಶ್ಯಕತೆ ಇಲ್ಲವೆಂತ ಸೂಚಿಸಿದ್ದರಿಂದ ಅದನ್ನು ಓದಿದಂತೆ ಅಂಗೀಕರಿಸಲಾಯಿತು.

ರಿಜಿಸ್ಟ್ರಾರವರ ಆಡಿಟ್ ರಿಪೋರ್ಟಿನಲ್ಲಿ ನಮೂದಿಸಿರುವ ಲಾಭ ಹಂಚುವಿಕೆಯ ವಿಷಯದ ಸಲಹೆಗಳನ್ನು ಚರ್ಚಿಸಲಾಯಿತು. ಶೇಕಡ 6½ ರ ದರದಲ್ಲಿ ಲಾಭ ಹಂಚಬೇಕೆಂತ ಒಮ್ಮತದಿಂದ ತೀರ್ಮಾನವಾಯಿತು. ರಿಜಿಸ್ಟ್ರಾರವರ ಲಾಭದ ವಿಲೆವಾರಿಯ ಇತರ ಸಲಹೆಗಳನ್ನು ಮಂಜೂರು ಮಾಡಿದರು.

ರಿಜಿಸ್ಟ್ರಾರವರ ಶಿಫಾರಸು ಮೇರೆಗೆ ಗುಮಾಸ್ತ ಮೆ. ಬಲ್ಯಂಡ ಪೂವಯ್ಯನವರಿಗೆ 100 ರೂ. ಬೋನಸ್ ಕೊಡುವ ವಿಷಯ ಒಮ್ಮತದಿಂದ ಮಂಜೂರು ಮಾಡಲಾಯಿತು.

ಡೈರೆಕ್ಟರುಗಳ ರಿಪೋರ್ಟಿನ ಮೇಲೆ ಕೆಲವು ಸವಾಲ್ ಜವಾಬುಗಳು ನಡೆದನಂತರ ರಿಪೋರ್ಟು ಮಂಜೂರು ಮಾಡಲಾಯಿತು.

3. ಬಿಡಿ ಮೆಂಬರುಗಳ ಪರವಾಗಿ ಈ ಕೆಳಗಿನ ಮಹನೀಯರನ್ನು ಚುನಾಯಿಸಬಹುದೆಂತ ಸೂಚಿಸಲಾಯಿತು. 1. ರಾವ್‌ಬಹದ್ದೂರ್ ಕೋದಂಡ ಅಪ್ಪಯ್ಯನವರು, 2. ಪಟ್ಟಮಾಡ ದೇವಯ್ಯನವರು, 3 ಮೆ. ಗಳಾದ ಕೆ. ಪಿ. ಚೆಂಗಪ್ಪನವರು, 4 ಸಿ. ಎನ್. ವೆಂಕಪ್ಪಯ್ಯನವರು, 5. ಐಚೆಟ್ಟಿರ ಸುಬ್ಬಯ್ಯನವರು, 6. ಅಪ್ಪಾರಂಡ ಚಂಗಪ್ಪನವರು, 7. ಪುಚ್ಚಿಮಾಡ ನಾಣಯ್ಯನವರು, 8. ಪಟ್ಟಮಾಡ ಚಿಣ್ಣಪ್ಪನವರು, 9 ರಾವ್‌ಬಹದ್ದೂರ್ ಕೋಡಿಮಣಿಯಂಡ ಸುಬ್ಬಯ್ಯನವರು, 10, ಒಲ್ಲಚಂಡ ಬೆಳ್ಯಪ್ಪನವರು, 11 ಕೊಂಗೆಟ್ಟಿರ ಅಪ್ಪಯ್ಯನವರು, 12. ಕೂಡಂಡೀರ ದೇವಯ್ಯನವರು.

ಮೆ. ಕೆ. ಪಿ. ಅಪ್ಪಯ್ಯನವರು ತಾನು ಡೈರೆಕ್ಟರಾಗಿ ನಿಲ್ಲಲು ಇಷ್ಟ ಪಡುವುದಿಲ್ಲವೆಂತ ಹೇಳಿದರು.

ಬಿಡಿ ಮೆಂಬರುಗಳ ಪರವಾಗಿ 5 ಡೈರೆಕ್ಟರುಗಳು ಮಾತ್ರ ಬೇಕಾದ್ದರಿಂದ ಓಟಿಗೆ ಹಾಕಲಾಗಿ 1. ರಾವ್‌ಬಹದ್ದೂರ್ ಪಟ್ಟಮಾಡ ದೇವಯ್ಯನವರು, 2. ರಾವ್‌ಬಹದ್ದೂರ್ ಕೋದಂಡ ಅಪ್ಪಯ್ಯನವರು, 3 ಮೆ. ಗಳಾದ ಕೋಟೆರ ಚಂಗಪ್ಪನವರೂ, 4 ಸಿ. ಎನ್. ವೆಂಕಪ್ಪಯ್ಯನವರೂ ಮತ್ತು 5. ಐಚೆಟ್ಟಿರ ಸುಬ್ಬಯ್ಯನವರೂ ಅಧಿಕ ಸಂಖ್ಯೆ ಓಟು ಪಡೆದದ್ದರಿಂದ ಚುನಾಯಿತರಾದರು.

4 ಸೊಸೈಟಿಗಳ ಪರವಾಗಿ ಡೈರೆಕ್ಟರುಗಳನ್ನಾಗಿ ಈ ಕೆಳಗಿನ ಮಹನೀಯರನ್ನು ಚುನಾಯಿಸಬಹುದೆಂತ ಸೂಚಿಸಲಾಯಿತು. ಮೆ. ಗಳಾದ 1, ಮನೆಯಪಂಡ ಬೆಳ್ಯಪ್ಪನವರು, 2 ಐನಂಡ ಕಾರ್‍ಯಪ್ಪನವರು, 3 ಪುತ್ತಮನೆ ಮುದ್ದಯ್ಯನವರು, 4 ಯಸ್. ಯನ್. ರಾಮಸೆಟ್ಟಿ, 5 ಕೋಡಿರ ತಮ್ಮಯ್ಯನವರು, 6. ಸಿ. ಹೆಚ್. ಬಿ ಕಾಳೇಗೌಡರು, 7. ಮಾಚಂಡ ಮುತ್ತಣ್ಣನವರು 8. ಕುಂಚೆಟ್ಟಿರ ಸುಬ್ಬಯ್ಯನವರು 9. ಪಟ್ಟಮಾಡ ಕುಂಞಪ್ಪನವರು, 10. ಮುಂಜಾಂದಿರ ದೇವಯ್ಯನವರು 11 ಚೆಕ್ಕೆರ ಪೆಮ್ಮಯ್ಯನವರು, 12 ಬಿದ್ದಂಡ ಯಂ ಸುಬ್ಬನವರು 13. ಕೊಂಗಂಡ ಗಣಪಯ್ಯನವರು 14. ಚೆಪ್ಪುಡೀರ ಪೊನ್ನಪ್ಪನವರು 15 ಅಪ್ಪಾರಂಡ ಚಂಗಪ್ಪನವರು, 16 ನಡಿಕೇರಿಯಂಡ ಸೋಮಯ್ಯನವರು 17. ಚೆಪ್ಪುಡೀರ ಪೂವಯ್ಯನವರು. 18 ರಾ ಬಾ, ಕೋಡಿಮಣಿಯಂಡ ಸುಬ್ಬಯ್ಯನವರು 19. ಕೊಡಂದೇರ ದೇವಯ್ಯನವರು 20. ಪಾಂಡಂಡ ಚಂಗಪ್ಪನವರು 21. ಯಸ್. ಒಸ್ಸನವರು, 22. ನಾಪನೆರಂಡ ಮೊಣ್ಣಪ್ಪನವರು. 23 ಕೊಟ್ಟುಕತ್ತಿರ ದೇವಯ್ಯನವರು, 24 ನೆಲ್ಲಮಕ್ಕಡ ದೇವಯ್ಯನವರು 25. ಪಂದ್ಯಂಡ ಬೆಳ್ಯಪ್ಪನವರು, 26. ಕೊಳ್ಳಿಮಾಡ ಕರುಂಬಯ್ಯನವರು, 27. ಅಜ್ಜಮಾಡ ನಾಣಪ್ಪನವರು, 28. ತೆಕ್ಕಡ ಅನಂದಯ್ಯನವರು, 29, ಚಿಟ್ಯಾರಂಡ ಮಾಚಯ್ಯನವರು, 30. ಯಸ್. ಶಂಕರಯ್ಯನವರು, 31. ಮಡೆಯಂಡ ದೇವಯ್ಯನವರು, 32. ಅಮ್ಮಟಂಡ ದೇವಯ್ಯನವರು ಮತ್ತು 33. ಕುಟ್ಟಾಳೆ ಪೊನ್ನಪ್ಪನವರು.

ಸೊಸೈಟಿಗಳ ಪರವಾಗಿ 10. ಡೈರೆಕ್ಟರುಗಳು ಮಾತ್ರ ಬೇಕಾದ್ದರಿಂದ ಓಟಿಗೆ ಹಾಕಲಾಗಿ ಈ ಕೆಳಗಿನ ಮಹನೀಯರಿಗೆ ಹೆಚ್ಚಿನ ಓಟ್ ಸಿಕ್ಕಿದೆಯೆಂತ ತಿಳಿಸಲಾಯಿತು. ಮೆ. ಗಳಾದ 1 ಮನೆಯಪಂಡ ಬೆಳ್ಯಪ್ಪನವರು, 2, ಐನಂಡ ಕಾರ್‍ಯಪ್ಪನವರು, 3. ಪುತ್ತಮನೆ ಮುದ್ದಯ್ಯನವರು, 4 ಅಪ್ಪಾರಂಡ ಚಂಗಪ್ಪನವರು, 5. ರಾ. ಬಾ. ಕೋಡಿಮಣಿಯಂಡ ಸುಬ್ಬಯ್ಯನವರು, 6 ಪಾಂಡಂಡ ಚಂಗಪ್ಪನವರು, 7. ಮುಂಜಾಂದಿರ ದೇವಯ್ಯನವರು 8. ನಡಿಕೇರಿಯಂಡ ಸೋಮಯ್ಯನವರು, 9. ಯಸ್. ಯನ್. ರಾಮಸೆಟ್ಟಿ ಮತ್ತು 10. ಬಿದ್ದಂಡ ಯಂ, ಸುಬ್ಬಯ್ಯನವರು.

5. ಮೆ. ಗಳಾದ ಪಂದ್ಯಂಡ ಬೆಳ್ಯಪ್ಪನವರು ಮತ್ತು ಕೊಳ್ಳಿಮಾಡ ಕರುಂಬಯ್ಯನವರು ಮೀಟಿಂಗಿನಲ್ಲಿ ಹಾಜರಿಲ್ಲದ್ದರಿಂದ ಅವರಿಬ್ಬರಿಗೆ ದೊರೆತ ಓಟನ್ನು ಎಣಿಸದೆ ಇದ್ದದ್ದರಿಂದ ಸಭೆಯವರು ಅವರ ಒಡಲಿಗೆ ಬೇರೆಯವರಿಗೆ ಓಟು ಕೊಡುತ್ತಿದ್ದರಿಂದ ಕಾರಣ ಚುನಾವಣೆ ಕ್ರಮವಾಗಿಲ್ಲವೆಂತ ಆಕ್ಷೇಪಣೆ ತರಲಾಯಿತು. ಇವರಿಬ್ಬರ ಹೆಸರನ್ನು ಸೂಚಿಸಿದಾಗ ಇವರು ಸಂಘಗಳ ಪ್ರತಿನಿಧಿಗಳಾಗಿ ಬಂದಿದ್ದವರಲ್ಲವೆಂತಲೂ, ಇವರ ಅನುಮತಿ ಇಲ್ಲದೆ ಆರಿಸುವುದು ಯುಕ್ತವಲ್ಲವೆಂತಲೂ, ಓಟು ಎಣಿಸುವವರಿಗೆ ತೋರಿದ್ದರಿಂದ ಅವರ ಓಟನ್ನು ಎಣಿಸದ್ದಾಗಿದೆ ಎಂತಲೂ, ಇದು ಅಕ್ರಮವಾಯಿತೆಂತಲೂ ಹೊಸದಾಗಿ ಚುನಾವಣೆಯಾಗಬೇಕೆಂತ ಸೆಕ್ರೆಟರಿಯವರು ತಿಳಿಸಿದ ಮೇರೆ ಮೆ. ಗಳಾದ 1. ಮನೆಯಪಂಡ ಬೆಳ್ಯಪ್ಪನವರು, 2. ಐನಂಡ ಕಾರ್‍ಯಪ್ಪನವರು, 3. ಪುತ್ತಮನೆ ಮುದ್ದಯ್ಯನವರು, 4. ಅಪ್ಪಾರಂಡ ಚಂಗಪ್ಪನವರು, 5. ರಾ ಬಾ ಕೋಡಿಮಣಿಯಂಡ ಸುಬ್ಬಯ್ಯನವರು, 6 ಪಾಂಡಂಡ ಚಂಗಪ್ಪನವರು, 7. ಮುಂಜಾಂದಿರ ದೇವಯ್ಯನವರು, 8. ನಡಿಕೇರಿಯಂಡ ಸೋಮಯ್ಯನವರು, 9. ಯಸ್. ಯನ್. ರಾಮಸೆಟ್ಟಿ ಮತ್ತು 10 ಬಿದ್ದಂಡ ಸುಬ್ಬಯ್ಯನವರು. ಈ ಮೇಲ್ಕಂಡ 10 ಜನರ ಹೆಸರನ್ನು ಡೈರೆಕ್ಟರುಗಳನ್ನಾಗಿ ಚುನಾಯಿಸಬಹುದೆಂತ ಸೂಚಿಸಿದ್ದನ್ನು ಸಭೆ ಸಮ್ಮತದಿಂದ ಮಂಜೂರು ಮಾಡಲಾಯಿತು.

6. ರಾವ್ ಬಹದ್ದೂರ್ ಕೋದಂಡ ಅಪ್ಪಯ್ಯನವರನ್ನು ಪ್ರೆಸಿಡೆಂಟರನ್ನಾಗಿ ನೇಮಿಸಬೇಕೆಂತ ರಾವ್ ಬಹದ್ದೂರ್ ಪಟ್ಟಮಾಡ ದೇವಯ್ಯನವರು ಸೂಚಿಸಿದ್ದನ್ನು ಸರ್ವಸಮ್ಮತದಿಂದ ಮಂಜೂರು ಮಾಡಲಾಯಿತು.

7. ಸೆಕ್ರೆಟರಿ ಮತ್ತು ಟ್ರೆಜರರನ್ನು ಈ ಮಹಾ ಸಭೆಯಲ್ಲಿಯೇ ಚುನಾಯಿಸಬೇಕೆಂತ ಸೂಚಿಸಿದ್ದಕ್ಕೆ ಬೈಲಾ ಪ್ರಕಾರ ಡೈರೆಕ್ಟರುಗಳ ಮೀಟಿಂಗಿನಲ್ಲಿ ನೇಮಕ ಮಾಡಬೇಕಾದ್ದರಿಂದ ಈ ಮಹಾ ಸಭೆಯಲ್ಲಿ ಅದನ್ನು ಬಾಕಿ ಮಾಡಿ ಮುಂದಿನ ಡೈರೆಕ್ಟರುಗಳ ಮೀಟಿಂಗಿನಲ್ಲಿ ನೇಮಕ ಮಾಡುವಂತೆ ತೀರ್ಮಾನವಾಯಿತು.

ಅನಂತರ ಅರ್ಧ ಘಂಟೆ ಕಾಲ ಟೀ ತೆಗೆದುಕೊಳ್ಳಲಿಕ್ಕಾಗಿ ವಿರಾಮ ಕೊಡಲಾಯಿತು.

8. ಬೈಲಾ 47 (6)ನೇ ಕ್ಲಾಸ್ "ಉಳಿದ ಹಣದ ಸ್ಥಿತಿ ಶೇಕಡ 5ರಷ್ಟು ಸೆಂಟ್ರಲ್ ಬ್ಯಾಂಕಿನ ಕಟ್ಟಡದ ಬಗ್ಗೆ ಶೇಖರಿಸಿಡಬಹುದಾಗಿಯೂ" ಎಂತ ಸೇರಿಸಿಕೊಂಡು ಬೈಲಾದ 47 (6) ನೇ ಕ್ಲಾಸನ್ನು 47 (7)ನೇ ಕ್ಲಾಸಾಗಿ ಮಾಡಿಕೊಳ್ಳುವಂತೆ ತಿದ್ದಬೇಕೆಂತ ಸೂಚಿಸಿದ್ದನ್ನು ದೀರ್ಘ ಚರ್ಚೆ ನಡೆದು ಸರ್ವಸಮ್ಮತದಿಂದ ಮಂಜೂರು ಮಾಡಲಾಯಿತು.

9 ಸೆಂಟ್ರಲ್ ಬ್ಯಾಂಕು ಸೊಸೈಟಿಗಳಿಂದ ಹೊಂದಿಕೊಳ್ಳುವ ಸಾಲದ ಬಡ್ಡಿಯ ದರವನ್ನು ಮತ್ತು ಪೆನಲ್ಟಿಯನ್ನು ಕಮ್ಮಿ ಮಾಡಬೇಕೆಂತ ಸೂಚಿಸಿದ್ದನ್ನು ಚರ್ಚೆಯಿಂದ ತತ್ಕಾಲಕ್ಕೆ ಕಮ್ಮಿ ಮಾಡಲು ಆಗುವುದಿಲ್ಲವೆಂತ ತೀರ್ಮಾನವಾಯಿತು.

10. ಬ್ಯಾಂಕಿನ ಆಫೀಸನ್ನು ಹಾಗಾಯಿಯಾಗಿ ಮೇರಾ ಪೇಟೆಯಲ್ಲಿ ಇಡುವ ವಿಷಯ ಮತ್ತು ಸಾಲದ ಹಣ ಮರುವಾಯಿಗೆ ಹೆಚ್ಚಿನ ಕಂತು ಕೊಡಬೇಕೆಂಬ ವಿಷಯ ಸಹ ಚರ್ಚೆಗೆ ಬಂದಾಗ ರವಾಪ್ಪ ಕಳುಹಿಸಿದ ಸಮ್ಮಂಧ ಪಟ್ಟ ಸೊಸೈಟಿಗಳ ಡೆಲಿಗೇಟರುಗಳಿಂದ ವಾಪಸು ತೆಗೆದುಕೊಳ್ಳಲಾಯಿತು.

11 ಅಧ್ಯಕ್ಷರಾದ ರಾವ್ ಬಹದ್ದೂರ್ ಕೆ ಅಪ್ಪಯ್ಯನವರು ತನ್ನನ್ನು ಪುನಃ ಅಧ್ಯಕ್ಷರಾಗಿ ಚುನಾಯಿಸಿದ್ದಕ್ಕೆ ವಂದಿಸಿ ಭಾಷಣ ಮಾಡಿದರು.

12. ಈ ಮಹಾ ಸಭೆಗೆ ಈಗಿನ ರಿಜಿಸ್ಟ್ರಾರರಾದ ಮೆ. ಯಂ. ಯಸ್ ಸುಂದರಣ್ಣನವರು ದಯಮಾಡಿ ಮೀಟಿಂಗು ತೀರುವವರೆಗೂ ಹಾಜರಿದ್ದು ತಕ್ಕ ಸಲಹೆಗಳನ್ನು ಕೊಟ್ಟು ಮೀಟಿಂಗನ್ನು ಸಾಂಗವಾಗಿ ನಡಿಸಿದ್ದಕ್ಕೆ ಅವರಿಗೆ ವಂದನೆಗಳನ್ನು ಅರ್ಪಿಸಿದರು.

ರಿಟಯರ್ಡ್ ರಿಜಿಸ್ಟ್ರಾರರಾದ ಮೆ. ಕೆ. ಎನ್. ಸುಬ್ಬಾಯರು ಸಹ ಮೀಟಿಂಗಿಗೆ ದಯ ಮಾಡಿಸಿದ್ದರಿಂದ ಅವರಿಗೂ ಸಹ ವಂದಿಸಿದರ.

ಸೆಕ್ರೆಟರಿಯವರು ಶ್ರದ್ಧೆಯಿಂದ ಬ್ಯಾಂಕಿನ ಕೆಲಸವನ್ನು ಗೌರವಾರ್ಥವಾಗಿ ಈ ವರೆಗೂ ನಡಿಸುತ್ತಾ ಬಂದದ್ದರಿಂದ ಅವರ ಕೆಲಸಗಳ ವಿಷಯ ಕುರಿತು ಅಭಿವಂದಿಸಿದರು.

ಕೆಲಸದಿಂದ ನಿವೃತ್ತರಾದ ಡೈರೆಕ್ಟರುಗಳಿಗೂ, ಮತ್ತು ಈಗ ಹೊಸದಾಗಿ ನೇಮಕವಾದ ಡೈರೆಕ್ಟರುಗಳಿಗೂ ವಂದಿಸಿ ಮಹಾಸಭೆಯು ಸಾಯಂಕಾಲ 8 ಗಂಟೆಗೆ ಮುಗಿಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು.)

ವಿಮರ್ಶೆ

ಹುಕ್‌ವರ್ಮ್ ವರದಿ

ಹುಕ್‌ವರ್ಮ್ (ಕೊಕ್ಕೆಹುಳ) ಹುಳದಿಂದ ರೋಗವು ಹೇಗೆ ಬರುವುದೆಂಬ ವಿಷಯಕ್ಕೂ, ಅದರ ನಿವಾರಣೆ ಬಗ್ಗೆ ಸಾಧನೋಪಾಯ, ಉಪಚಾರ ಮತ್ತು ಶೋಧನೆಮಾಡಿದ ಫಲಗಳ ವಗ್ಗೈರೆ ತಪಶೀಲಾದ ಸರಕಾರದ 1930ಕ್ಕೆ ಅಂತ್ಯವಾದ ರಿಪೋರ್ಟು ನಮ್ಮ ಕೈ ಸೇರಿದೆ. ಸ್ಥಳ ದೊರೆತ ಹಾಗೆ ಇದರ ವಿಷಯದಲ್ಲಿ ಟೀಕಿಸುತ್ತೇವೆ. ಇದನ್ನು ಕಳುಹಿಸಿದ್ದಕ್ಕೆ ಸರಕಾರಕ್ಕೆ ನಾವು ವಂದಿಸುತ್ತೇವೆ.

ಆನೆಯ ಕಣ್ಣು.

ಗವರ್ನಮೆಂಟು ವೆಟರನರೀ ಅಸಿಸ್ಟೆಂಟ್ ಸರ್ಜಿಯನ್ನರಾದ ಮೆ. ಅಜ್ಜಮಾಡ ಬೋಪ್ಪಯ್ಯನವರು, ಇಂಡಿಯನ್ ವೆಟರನರೀ ಸರ್ಜಿಯನರಿಗೆ ಆನೆಯ ಕಣ್ಣುಗಳ ವಿಷಯ ಬರೆದಂತಹ ಲೇಖನದ, ಪ್ರತಿ ಒಂದನ್ನು ನಮಗೆ ಕಳುಹಿಸಿದ್ದಾರೆ. ಆನೆಯ ಕಣ್ಣುಗಳು ಹೇಗಿರುತ್ತೆ. ಕಣ್ಣುಗಳಿಲ್ಲದೆ ಆನೆಗಳು ಜೀವಿಸಬಹುದೋ? ಅವುಗಳಲ್ಲಿ ಏನೇನು ವಿಶೇಷವಿದೆ ಎಂಬದನ್ನು ಬಹಳ ನವೀನ ಶೋಧನೆಯಿಂದ ವಿವರಿಸಿದ್ದಾರೆ. ಈ ಶೋಧನೆಯಿಂದ ಆನೆಗಳನ್ನು ಸಾಕುವ ವಿಚಾರದಲ್ಲಿ ಮೆ. ಬೋಪ್ಪಯ್ಯನವರಿಗಿರುವ ಅನುಭವವೂ ಶಿಕ್ಷಣ ಕ್ರಮವೂ ತಿಳಿಯುತ್ತೆ. ಈ ಶೋಧನೆಯನ್ನು ಪಶುವೈದ್ಯರೇ ಅಲ್ಲ ಇತರ ಎಲ್ಲಾ ಮಹಾನುಭಾವರೂ ಓದತಕ್ಕದ್ದಾಗಿದೆ.

ವಿಮರ್ಶೆ.

ಆರೋಗ್ಯ ಚಂದ್ರಿಕೆ.

ಮದ್ರಾಸಿನ ಪ್ರಸಿದ್ಧ ಡಾಕ್ಟರಾದ, ಡಾಕ್ಟರ್ ಯು. ರಾಮರಾಯರ ಆಶ್ರಯದಲ್ಲಿ ಪ್ರತಿಮಾಸವು ಹೊರಡುವ ಈ ಪತ್ರಿಕೆಯನ್ನು ದಕ್ಷಿಣದಲ್ಲಿ ತಿಳಿಯದವರಿಲ್ಲ. ಇಂಥಾದೊಂದು ಪತ್ರಿಕೆಯನ್ನು ಪ್ರತಿಮಾಸದಲ್ಲಿಯೂ, ಎಲ್ಲಾ ಮನೆಗಳಿಗೆ ತರಿಸಿಕೊಂಡರೆ, ಡಾಕ್ಟರುಗಳ ಸಹಾಯವಿಲ್ಲದೆಯೂ, ಏನೊಂದು ಖರ್ಚಿಲ್ಲದೆಯೂ ತಮ್ಮ ತಮ್ಮ ಮನೆಗಳಲ್ಲಿ ಸಂಸಾರಗಳ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ನಮಗೆ ಕಳುಹಿಸಿದ ಈ ಸಂಚಿಕೆಯಲ್ಲಿ ಆರೋಗ್ಯದ ವಿಷಯ ಈ ಕೆಳಗಿನ ಪ್ರಾಮುಖ್ಯವಾದ ಲೇಖನಗಳು ಪ್ರಕಟಣೆಯಾಗಿದೆ.

1 ಬೆಟ್ಟಗಳ ಮೇಲಿನ ಹಿಂದೂ ದೇವಾಲಯಗಳೂ, ಜನರ ಆರೋಗ್ಯವೂ,

2 ಆರೋಗ್ಯದೆಶೆ ಮತ್ತು ವ್ಯಾಧಿಗಳಲ್ಲಿ ಭೀತಿ ಮತ್ತು ನಂಬಿಕೆಯಿಂದಾಗುವ ಪರಿಣಾಮಗಳು.

3 ಆರೋಗ್ಯ ವಿಧಿಗನುಸಾರವಾದ ಸ್ನಾನ ಕ್ರಮ.

4 ಜನರು ಹಲ್ಲುನೋವಿನಿಂದ ಬಾಧೆಪಡುವುದೇಕೆ?

5 ಮನಸ್ಸಿನ ಆರೋಗ್ಯ ಸ್ಥಿತಿ.

6. ನಗುವುದರ ಗುಣವಗ್ಗೈರೆ ಅನೇಕ ಆರೋಗ್ಯ ಸೂತ್ರಗಳು.

ಕಳೆದ ಎಂಟು ವರ್ಷದಿಂದ ಈ ಪತ್ರಿಕೆಯು ಜನರ ಸೇವೆಯನ್ನು ಆತ್ಯಾದರದಿಂದ ಮಾಡುತ್ತಾ ಇದೆ. ಒಂದು ಸಂಚಿಕೆಯನ್ನೋದಿದರೆ ಈ ಪತ್ರಿಕೆಯ ಯೋಗ್ಯತೆಯು ತಿಳಿಯಲಾಗುವುದು.

COORG FOREST DEPARTMENT.

Sale of Bamboos.

The right to cut and remove bamboos for a period of one year from 1—4—1931 to 31—3—1932 from a block of about 1942 acres in Dubare Reserve lying between Maldare—Gaddige road, Maldare—Dubare road, Bettada line and Eastern line will be sold by publice auction on 17th March 1931 at Frascipet (Inspection Bungalow) at 2 P. M. For further particulars please apply to the Chief Forest Officer, Coorg.

H G Hicks.
Chief Forest Officer.

1—2

ನೋಟೀಸು.

ಕೊಡಗು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಆಫೀಸು.
ಮಡಿಕೇರಿ ತಾ 20 ನೇ ಫೆಬ್ರವರಿ 1931 ನೇ ಇಸವಿ

ಇದರಿಂದ ಸಮಸ್ತ ಜನರಿಗೂ ತಿಳಿಯ ಪಡಿಸುವುದೇನಂದರೆ:—ಸರಕಾರ ಸ್ವಾಧೀನಕ್ಕೆ ಬಂದಿರುವ ಇದರ ಕೆಳಗೆ ನಮೂದಿಸಿದಂಥ ಕೋವಿಗಳನ್ನು ಮಡಿಕೇರಿಯಲ್ಲಿ ನನ್ನ ಆಫೀಸು ಮುಂದೆ ಮಾರ್ಚಿ ತಾ 27 ನೇ ಶುಕ್ರವಾರ 2 ಗಂಟೆ ಸಮಯಕ್ಕೆ ಹರಾಜು ಮಾಡಲ್ಪಡುವುದು.

49 ಒಂಟಿ ಕೊಳವಿನ ಕೇಪು ಕೋವಿಗಳು.
8 ಜೋಡು ಕೊಳವಿನ ಕೇಪು ಕೋವಿಗಳು.
1. ಒಂಟಿ ಕೊಳವಿನ ಕೇಪು ಕೋವಿಯ ನಳಿಗೆ.
2 ಒಂಟಿ ಕೊಳವಿನ ತೋಟದ ಕೋವಿಗಳು.
3. ಜೋಡು ಕೊಳವಿನ ತೋಟದ ಕೋವಿಗಳು.

ಕೆ. ಚಂಗಪ್ಪ
ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್,

2—2

ಕೊಡಗು.

೧೯೩೦ನೇ ಇಸವಿ

ಮಾರ್ಚ ೨೮ ನೇ ಶುಕ್ರವಾರ.

ಲಾಠಿ ಚಾರ್ಜುಗಳು ಮತ್ತು ಕೊಡಗು ದೇಶದ ಉದಾಹರಣೆಯು.

ಬೆಂಗಳೂರಿನಲ್ಲಿ ದಿನಂಪ್ರತಿ ಹೊರಡುವ 'ಡೇಯಿಲಿ ಪೋಸ್ಟ್' ಪತ್ರಿಕೆಯ ಕಳೆದ ತಾ. ೨೬ರ ಸಂಚಿಕೆಯಲ್ಲಿ ಮೇಲೆ ವಿಷಯದಲ್ಲಿ ಶಿರೋಲೇಖನ ಒಂದು ಬರೆಯಲ್ಪಟ್ಟಿದೆ. ತರ್ಜುಮೆಯನ್ನು ಇದೇ ಸಂಚಿಕೆಯ ಬೇರೊಂದು ಕಡೆ ಕೊಡುತ್ತೇವೆ.

'ಡೇಯಿಲಿ ಪೋಸ್ಟ್' ಪತ್ರಿಕೆಯ ಸಂಪಾದಕರು ಬರೆದ ಭಾವಾರ್ಥವೇ ನಮ್ಮ ಅಭಿಪ್ರಾಯ. ಹಿಂದಿನ ಕಳೆದ ಒಂದು ವರ್ಷದಿಂದ ಕಾಂಗ್ರೆಸಿನವರು ಅಹಿಂಸಾತ್ಮಕ ರೂಪದ ಕಾಯಿದೆ ಭಂಗದ ಕೆಲಸದಲ್ಲಿ ಅನೇಕ ಸ್ಥಳೀಕ ಸರ್ಕಾರದವರು ತಮ್ಮ ಬುದ್ಧಿಶಕ್ತಿಯನ್ನು ದೀರ್ಘಾಲೋಚನೆಯಿಂದ ಉಪಯೋಗ ಮಾಡಲಿಲ್ಲವೆಂಬುದಕ್ಕೆ ಮುಂಬಾಯಿ, ಮದ್ರಾಸು, ಬಂಗಾಳ ಮೊದಲಾದ ಪ್ರಾಂತ್ಯಗಳಲ್ಲಿ ಆದ ಲಾಠಿ ಚಾರ್ಜುಗಳೇ ಸಾಕ್ಷಿಯಾಗಿದೆ. ಜವಾಬ್ದಾರಿಯ ಪ್ರಾಂತ್ಯಗಳ ಎಕ್ಸಿಕ್ಯೂಟಿವ್ ಆಫೀಸರುಗಳು ಈ ಚಳವಳಿಯನ್ನು ಹೇಗಾದರೂ ನಿಲ್ಲಿಸಬೇಕೆಂಬ ಭಾವನೆಯಿಂದ ಅವಿವೇಕವಾಗಿ ವರ್ತಿಸಿ ಸರ್ಕಾರದ ನೀತಿಗೂ, ತತ್ವಕ್ಕೂ ಕಳಂಕ ತರುತ್ತಿರುತ್ತಾರೆ.

'ಡೇಯಿಲಿ ಪೋಸ್ಟ್' ಪತ್ರಿಕಾ ಕರ್ತರು ಕೊಡಗಿನ ಆದರ್ಶದ ಉದಾಹರಣೆಯನ್ನು ತೆಗೆದುಕೊಂಡು ಅಧಿಕಾರಿಗಳು ಇಟ್ಟುಕೊಂಡ ತಾಳ್ಮೆಯನ್ನು ಶ್ಲಾಘಿಸಿದ್ದಾರೆ. ಅಧಿಕಾರಿಗಳು ಮುಂದಾಲೋಚನೆ ಇಲ್ಲದೆ ವರ್ತಿಸಿದ್ದಲ್ಲಿ ಇಷ್ಟು ಶಾಂತಿ ಇರುವ ಈ ದೇಶದಲ್ಲಿ ಎಷ್ಟೊಂದು ಗಲಾಟೆಗೂ, ಪರಸ್ಪರ ದ್ವೇಷತ್ವಕ್ಕೂ ಎಡೆಯಾಗುತ್ತಿತ್ತೆಂದು ನಾವು ಹೇಳಬೇಕಾಗಿಲ್ಲ.

ಆದರೆ ನಮ್ಮ ಈ ದೇಶದಲ್ಲಿ ಪ್ರಥಮದಲ್ಲಿ ಮುಂದಾಳುಗಳಾಗಿದ್ದ ನಾಲ್ಕು ಲೀಡರುಗಳು ನಿಷಾ ನಿಷೇಧ ಮತ್ತು ಖಾದಿ ಪ್ರಚಾರದಲ್ಲಿ ಮಾಡಿದ ಕೆಲಸಕ್ಕಾಗಿ ಅವರ ಮೇಲೆ ಚಾರ್ಜು ಮಾಡಿ ಜೈಲಿಗೆ ಕಳುಹಿಸಿದ್ದು, ಯಾವಾಗಲೂ ನಿಜವನ್ನೇ ಬರೆಯುತ್ತಿದ್ದ 'ಕೊಡಗು' ಪತ್ರಿಕೆಯನ್ನು ನಿಲ್ಲಿಸಿದ್ದೂ ಈ ದೇಶದ ಜನರಲ್ಲಿ ಸರ್ಕಾರದ ಮೇಲಿನ ನಂಬಿಕೆಯನ್ನು ಎಷ್ಟರಮಟ್ಟಿಗೆ ಕಡಿಮೆ ಮಾಡಿದೆಯೆಂದು ನಾವು ಹೇಳಬೇಕಾಗಿಲ್ಲ. ಸ್ಥಳೀಯ ಸರ್ಕಾರದವರು ಸ್ವಂತ ಅಭಿಪ್ರಾಯದಿಂದಲೇ ವರ್ತಿಸಿದ್ದಲ್ಲಿ ದೇಶದಲ್ಲಿ ಇಷ್ಟೊಂದು ಗಲಿಬಿಲಿಗೂ, ಸರ್ಕಾರದ ಮೇಲಿನ ಅವಿಶ್ವಾಸಕ್ಕೂ ಆಸ್ಪದವಿರುತ್ತಿರಲಿಲ್ಲ.

ಕೊಡಗಿನ ಮುಖ್ಯ ಅಧಿಕಾರಿಗಳು ಕಳೆದ ಆರೇಳು ವರ್ಷದಿಂದ ಹೆಚ್ಚಾಗಿ ತಮ್ಮ ತಾಬೆದಾರರ ಹೇಳಿಕೆಯಂತೆ ನಡೆಯುತ್ತಿದ್ದುದು ನಮ್ಮ ಅನುಭವಕ್ಕೆ ಬಂದಿದೆ. ತಾಬೆದಾರರಾದರೋ, ಒಂದೊಂದು ತರಹದ ಅಭಿಪ್ರಾಯಕ್ಕೆ ಕಟ್ಟುಬಿದ್ದವರಾಗಿ, ಮುಖ್ಯವಾಗಿ ದೇಶಾಭಿಮಾನಿಗಳಾಗಿ ಖಾದಿ ಹಾಕುವವರೂ, ನಿಷಾ ನಿಷೇಧಕ್ಕೆ ಕೆಲಸ ಮಾಡುವವರೂ ಎಷ್ಟೇ ಬುದ್ಧಿವಂತರು ನ್ಯಾಯಶೀಲಿಗಳಾಗಲಿ ಅವರನ್ನು ಮುಖ್ಯ ಅಧಿಕಾರಿಗಳ ದೃಷ್ಟಿಯಲ್ಲಿ ಕಪ್ಪಗೆ ಮಾಡುತ್ತಿದ್ದುದೂ ನಮ್ಮ ತಿಳುವಳಿಕೆಗೆ ಬಂದಿದೆ. ಹೀಗೆ ಬರೆದ ಮಾತ್ರಕ್ಕೆ ಸರ್ಕಾರದವರು ತಮ್ಮ ತಾಬೆದಾರರ ಸಲಹೆಯನ್ನು ಕೇಳಬಾರದೆಂದೂ, ದೇಶಾಭಿಮಾನಿಗಳಾಗಿ ಖಾದಿ ಹಾಕುವವರನ್ನು ಪ್ರೋತ್ಸಾಹಿಸಬೇಕೆಂದೂ ಹೇಳುವುದಲ್ಲ. ಯಾವ ಮುಖ್ಯ ಅಧಿಕಾರಿಯೇ ಆಗಲಿ ದೇಶದ ಎಲ್ಲಾ ಜನರ ಅಭಿಪ್ರಾಯ ತಿಳಿಯಲು ಪ್ರಯತ್ನಪಟ್ಟು ಜನರಿಗೆ ನ್ಯಾಯ ಸಿಕ್ಕುವಂತೆ ವರ್ತಿಸಬೇಕೆಂಬುದಾಗಿಯೇ ನಾವು ಆಗಾಗ್ಯೆ ಹೇಳುವುದಾಗಿದೆ. ಅಧಿಕಾರಿಗಳ ಪ್ರೀತಿಗೆ ಪಾತ್ರರಾಗಬೇಕೆಂಬ ಭಾವನೆಯಿಂದ ರಾಷ್ಟ್ರೀಯತ್ವವನ್ನು ನಾಶ ಮಾಡಬೇಕೆಂದು ದಾರಿ ತಪ್ಪಿದ ಹುಡುಗರಿಗೆ ಖಾದಿ ಟೊಪ್ಪಿ ಹಾಕಲು ನಮ್ಮವರು ಇಂಥ ಪಡಿಸಿರುವುದೂ ಮತ್ತು ಶಾಂತ ರೀತಿಯಿಂದ ಪಿಕೆಟ್ಟಿಂಗ್ ಮಾಡುತ್ತಿರುವ ಸತ್ಯಾಗ್ರಹಿಗಳ ವಿಷಯದಲ್ಲಿ ಬೇರೆ ಬೇರೆ ಚಿಕ್ಕ ದೊಡ್ಡ ಆರೋಪಣೆ ಹೊರಿಸುತ್ತಿರುವುದೂ, ಸರ್ಕಾರದ ಪರವಾಗಿ ನಟಿಸುತ್ತಿರುವ ಕೆಲವರು ಆಚರಿಸತಕ್ಕ ಕೆಲಸಗಳಾಗಿವೆ.

ಆದರೆ ಅಂಥವರು ಸ್ವಾರ್ಥವನ್ನು ಸಾಧಿಸಿ ತಮಗೂ ತಮ್ಮ ಮಕ್ಕಳಿಗೂ ಸರ್ಕಾರದ ನೌಕರಿಯನ್ನು ಒದಗಿಸಿಕೊಳ್ಳಲು ಮಾಡುತ್ತಿದ್ದಂಥ ಕಾರ್ಯಗಳು ಮತ್ತು ಹೇಳಿಕೆಗಳು ಎಷ್ಟರಮಟ್ಟಿಗೆ ಸಮರ್ಪಕವೂ, ನ್ಯಾಯ ಸಮ್ಮತವೂ, ಆಗಿರುವುದೆಂದು ನಮ್ಮ ಸರ್ಕಾರವು ಒಡನೆ ಅನುಭವದಿಂದ ತಿಳಿಯುವ ಕಾಲವೂ ಸಮೀಪಿಸಿದೆ. ಕ್ರಮೇಣ ದೇಶವನ್ನು ವಂಚಿಸುವವರು ರಾಜಭ್ರಷ್ಟತೆಗಾರರನ್ನು ವಂಚಿಸುವುದರಲ್ಲಿ ಸಂದೇಹವೇನಿದೆ? ಅಲ್ಲದೆ ಖಾದಿಯನ್ನು ಧರಿಸಿ, ದೇಶದ ಕ್ಷೇಮದಲ್ಲೇ ಮಗ್ನರಾಗಿರುವವರನ್ನು ತಮ್ಮ ನಿಜವಾದ ಸ್ನೇಹಿತರೆಂದು ನಮ್ಮ ಸರ್ಕಾರವು ತಿಳಿಯುವ ಕಾಲವೂ ದೂರವಿರಲಾರದು.

ಕೊನೆಯಲ್ಲಿ ಪೊಲೀಸು ಆಫೀಸರುಗಳ ವಿಷಯ ಸ್ವಲ್ಪ ಮಟ್ಟಿಗೆ ಟೀಕಿಸುವುದೂ ಅವಶ್ಯವಿದೆ. ಸತ್ಯಾಗ್ರಹಿಗಳ ವಿಷಯದಲ್ಲಿ ಈಚೆಗೆ ಒಂದೆರಡು ಸ್ಥಳಗಳಲ್ಲಿ ಅಂದರೆ— ಭಾಗಮಂಡಲ ಮತ್ತು ಗೋಣಿಕೊಪ್ಪಲುಗಳಲ್ಲಿ ಪೊಲೀಸು ಆಫೀಸರುಗಳು ಮೇಲಾಧಿಕಾರಿಗಳ ಹುಕುಮನ್ನು ಪಾಲಿಸಿದಂತೆ ಕಾಣುವುದಿಲ್ಲ. ಇತರ ಕಡೆಗಳಲ್ಲಿ ಇಲಾಖೆಯವರು ಚೆನ್ನಾಗಿ ಮುಂದಾಲೋಚನೆಯಿಂದ ಕೆಲಸ ಮಾಡಿರುತ್ತಾರೆ. ಭಾಗಮಂಡಲದಲ್ಲಿ ಸಬ್ ಇನ್ಸ್‌ಪೆಕ್ಟರೂ, ಮತ್ತು ಸರ್ಕಲ್ ಇನ್ಸ್‌ಪೆಕ್ಟರೂ, ಗೋಣಿಕೊಪ್ಪಲಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರೂ ಮಾಡಿದ ಕೆಲಸವೂ ಜನರನ್ನು ಬಹಳ ಮರುಕಗೊಳಿಸಿದೆ. ಗೋಣಿಕೊಪ್ಪಲಲ್ಲಿ ಸತ್ಯಾಗ್ರಹಿಗಳ ಲೀಡರುಗಳೂ ಮತ್ತು ಪಬ್ಲಿಕ್ ಮಂದಿಗಳೂ ಜನಸೇವಾ ನಿರತರನ್ನು ಸಮಾಧಾನ ಪಡಿಸದಿದ್ದರೆ ಏನೇನು ವಿಪರೀತವಾಗಿ, ಕೊಡಗಿನ ಆಡಳಿತದ ಹೆಸರು ಬಾಧಿತವಾಗಿಯೂ ಕೆಡುತ್ತಿತ್ತು.

ಇನ್ನು ಮುಂದೆ ಮುಖ್ಯ ಅಧಿಕಾರಿಗಳು ಮುಂದಾಲೋಚನೆಯಿಂದ ... ಈ ದೇಶದ ಶಾಂತಿಯನ್ನು ಸಮಾಧಾನವನ್ನು ಕಾಪಾಡಿ ನ್ಯಾಯ ಪಾಲನೆಯನ್ನು ಸಮರ್ಪಕವಾಗಿ ನಡೆಸುವರೆಂದು ನಂಬುತ್ತೇವೆ.

ರಿಟ್ರೆಂಚ್‌ಮೆಂಟ್ ಮತ್ತು ಉದ್ಯೋಗಸ್ಥರಿಗೆ ಎಕ್ಸ್‌ಟೆನ್‌ಶನ್.

ನಾವು ಈ ಮೊದಲೇ ರಿಟ್ರೆಂಚ್‌ಮೆಂಟಿನ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಸೂಚಿಸಿದ್ದೇವೆ. ಸಣ್ಣ ದೇಶವನ್ನು ಪ್ರತ್ಯೇಕವಾಗಿಟ್ಟುಕೊಂಡು ಆಳಬೇಕೆಂಬುದಾಗಿಯೇ ಬಹು ಮತ ಜನರ ಅಭಿಪ್ರಾಯವಾಗಿರುವಾಗ ಸರ್ಕಾರದವರೂ, ಪ್ರಜಾ ಪ್ರತಿನಿಧಿಗಳೂ ಮತ್ತು ವಿದ್ಯಾವಂತರೂ ಎಲ್ಲ ತತ್ವ ಉತ್ಪತ್ತಿಗೆ ಸರಿಯಾಗಿ ಖರ್ಚನ್ನು ಹೊಂದಿಸಲು ಸರ್ಕಾರದವರಿಗೆ ತಕ್ಕ ಸಲಹೆಗಳನ್ನು ಕೊಡುವರೆಂದು ನಂಬುತ್ತೇವೆ. ಸರ್ಕಾರದವರು ಈ ವಿಚಾರದಲ್ಲಿ ಏನು ಮಾಡುತ್ತಿರುವರೋ ತಿಳಿಯದು.

1. ಗೆಜೆಟೆಡ್ ಉದ್ಯೋಗಸ್ಥರ ಸಂಖ್ಯೆಗಳನ್ನು ಆದಷ್ಟು ಬೇಗನೆ ಕಡಿಮೆ ಮಾಡಿಯೇ ತೀರಬೇಕು. 2 ರಿಟೈಯರ್ ಆಗುವ ಉದ್ಯೋಗಸ್ಥರುಗಳ ಸ್ಥಳಗಳು ಭರ್ತಿ ಮಾಡಲ್ಪಡಕೂಡದು. 3 ಯಾವ ಉದ್ಯೋಗಸ್ಥನಿಗೂ 30 ವರ್ಷ ಸರ್ವೀಸಾದ ನಂತರ ಎಕ್ಸ್‌ಟೆನ್‌ಶನ್ ಕೊಡಕೂಡದು. 4 ಸಾಧ್ಯವಾದರೆ 25 ವರ್ಷ ಸರ್ವೀಸಾದವರನ್ನು ಪೂರಾ ಪೆಂಶನ್ ಕೊಟ್ಟು ಕಳುಹಿಸಬೇಕು. 5 1914 ನೇ ಇಸವಿಗೆ ಮೊದಲು ಆ ಸಮಯ ಡಿಪಾರ್ಟ್‌ಮೆಂಟುಗಳ ಖರ್ಚು ಯಾವ ರೀತಿಯಲ್ಲಿತ್ತೋ ಅದೇ ಸ್ಥಿತಿಗೆ ಹಿಂದಕ್ಕೆ ಹೋಗಬೇಕು. 6 ಈ ಸಲಹೆಗಳನ್ನು ವಿಮರ್ಶಿಸಲು ಒಡನೆ ಒಂದು ಕಮಿಟಿಯು ನೇಮಕವಾಗಬೇಕು.

ಈ ಮೇಲಿನ ಕೆಲಸಗಳನ್ನು ನಮ್ಮ ಸರ್ಕಾರವು ಒಡನೇ ಕೈಕೊಳ್ಳುವರೆಂದೂ, ಉತ್ಪತ್ತಿಗೆ ಸರಿಯಾಗಿ ಖರ್ಚನ್ನು ಸರಿಪಡಿಸಿ ಅನಾವಶ್ಯವಾದ ವ್ಯಯವನ್ನು ತೆಗೆದು ಹಾಕುವರೆಂದು ನಂಬುತ್ತೇವೆ. ಸ್ವಾಭಾವಿಕವಾಗಿ ಅನುಕೂಲವನ್ನು ತೆಗೆದುಕೊಳ್ಳುವಾಗ ಎಷ್ಟು ರಿಡಕ್ಷನಿಗೆ ಒಳಪಡುವ ಯಾವ ಉದ್ಯೋಗಸ್ಥನ ಸಂಬಳವನ್ನು ಕಡಿಮೆ ಮಾಡುವಾಗಲೂ ನ್ಯಾಯ ಪಾಲನೆಯೂ, ಸಮದೃಷ್ಟಿಯೂ ಇರತಕ್ಕದ್ದನ್ನು ಅನುಸರಿಸಿ ನಡೆಯಬೇಕೆಂಬುದೇ ನಮ್ಮ ಅಭಿಪ್ರಾಯ.

ಎಕ್ಸ್‌ಟೆನ್‌ಶನ್ ವಿಷಯದಲ್ಲಿ ಕೆಲವು ಟೀಕೆಗಳನ್ನು ಮಾಡುವುದೂ ಅತ್ಯಾವಶ್ಯ. ಈಗಾಗಲೇ ಅನೇಕ ಉದ್ಯೋಗಸ್ಥರು ತಮ್ಮ ಸರ್ವೀಸು ತೀರಿದರೂ ಪುನಃ ಎಕ್ಸ್‌ಟೆನ್‌ಶನಿಗೆ ಬರೆಯುತ್ತಾರೆಂದು ತಿಳಿಯುತ್ತೇವೆ. ಕಳೆದ ಮೂವತ್ತು ವರ್ಷಗಳಿಂದ ಕೆಲಸ ಮಾಡಿ ಇನ್ನು ಮುಂದೆ ಕೆಲಸ ಮಾಡಲು ನಿಶ್ಶಕ್ತರಾಗಿರುವವರಿಗೆ ಯಾವ ಕಾರಣದಿಂದ ಅವಧಿ ಹೆಚ್ಚಿಸುತ್ತಾರೋ ತಿಳಿಯುವುದಿಲ್ಲ. ನಿವೃತ್ತಿ ಸಮಯವು ಬಂದ ಕೂಡಲೇ ಅಧಿಕಾರಿ ತಾನಾಗಿ ನಿವೃತ್ತಿ ಹೊಂದಲು ಇಷ್ಟಪಡುವವರನ್ನು ಕೂಡಲೇ ಕಳುಹಿಸಿಬಿಡುವುದು ಬಹಳ ಒಳ್ಳೆಯದು. ಹೀಗೆ ಮಾಡುವದರಿಂದ ರಿಟೈರ್ ಆದ ನಂತರ ತಾನು ಕಷ್ಟಪಟ್ಟು ಗಳಿಸಿದ ಪೆಂಶನನ್ನು ಕೆಲವು ಕಾಲ ಅನುಭವಿಸಲು ಅನುಕೂಲ ಕೊಟ್ಟಂತಾಗುವುದು.

ಈಗಾಗಲೇ ಒಬ್ಬಿಬ್ಬ ಉದ್ಯೋಗಸ್ಥನಿಗೆ ಅವಧಿ ಹೆಚ್ಚಿಸಿದ್ದಾರೆಂಬುದಾಗಿ ತಿಳಿಯುತ್ತೇವೆ. ಇದು ನಿಜವಾದರೆ ಇಂಥಾ ಪದ್ಧತಿಯನ್ನು ಎಷ್ಟು ಖಂಡಿಸಿದರೂ ಸಾಲದು. ಸರಕಾರ ನೌಕರಿಯಲ್ಲಿ ಒಬ್ಬಿಬ್ಬರನ್ನು ಸರಕಾರವು ಈ ರೀತಿಯಲ್ಲಿ ಪ್ರೋತ್ಸಾಹಿಸುವುದು ಎಂದೂ ಒಳ್ಳೆಯದಲ್ಲ. ಮೇಲಧಿಕಾರಿಗಳು ಇಷ್ಟಾನುಸಾರ ರೀತಿ ಹೀಗೆ ಒಬ್ಬಿಬ್ಬರಿಗೆ ಅವಧಿ ಹೆಚ್ಚಿಸಿದರೆ ಪ್ರತಿ ಒಬ್ಬನೂ ಹೀಗೆಯೇ ಅವಧಿಗೆ ಬರಕೊಂಡೇ ಇರುತ್ತಾನೆ. ಅಲ್ಲದೆ ಒಬ್ಬನಿಗೆ ಮಾತ್ರ ಕೊಟ್ಟು ಇನ್ನೊಬ್ಬನಿಗೆ ಕೊಡದಿರುವ ಕಾರಣವು ಚೆನ್ನಾಗಿರುವುದಿಲ್ಲ. ಆದ್ದರಿಂದ ಸರಕಾರದವರು ಸರ್ವೀಸಾದ ನಂತರ ಯಾವ ಉದ್ಯೋಗಸ್ಥನಿಗೂ ಅವಧಿಯನ್ನು ಹೆಚ್ಚಿಸದೆ ನ್ಯಾಯವನ್ನು ಎಲ್ಲರಿಗೂ ಏಕರೀತಿಯಾಗಿ ಮಾಡುವರೆಂದು ನಂಬುತ್ತೇವೆ.

ಖಾದಿ ಪ್ರಚಾರ.

ಈ ವಿಷಯದಲ್ಲಿ ಬರೆದು ಬಂದ ಲೇಖನವೊಂದನ್ನು ಈ ಸಂಚಿಕೆಯ ಬೇರೊಂದು ಕಡೆ ಪ್ರಕಟಿಸಿದ್ದೇವೆ. ಖಾದಿ ಬಟ್ಟೆ ಎಂಬ ಹೆಸರಿನಿಂದ ಮಿಲ್ ಖಾದಿಯನ್ನು ಅನೇಕ ವರ್ತಕರು ಮಾರಾಟಕ್ಕೆ ಇಟ್ಟಿರುವುದಾಗಿಯೂ, ಇದರಿಂದ ಖಾದಿ ಪ್ರೇಮಿಗಳು ವಂಚಿಸಲ್ಪಡುತ್ತಿರುವರೆಂದೂ ನಮ್ಮ ತಿಳುವಳಿಕೆಗೆ ಬಂದಿದೆ. ದಯಮಾಡಿ ವರ್ತಕರು ಇನ್ನು ಮುಂದಕ್ಕಾದರೂ, ಕಾಂಗ್ರೆಸಿನವರು ಸರ್ಟಿಫೈ ಮಾಡಿದ ಖಾದಿ ಮಾರಾಟದವರಿಂದಲೇ ಬಟ್ಟೆಗಳನ್ನು ತಂದು ತಮ್ಮ ಗಿರಾಕಿಗಳಿಗೆ ಕೊಡಬೇಕಾಗಿ ಅಪೇಕ್ಷಿಸುತ್ತೇವೆ. ಖಾದಿ ಬಟ್ಟೆ ಕೊಂಡುಕೊಳ್ಳುವವರು ಸಹ ಈ ಬಗೆಯಲ್ಲಿ ಮೋಸ ಹೋಗದಂತೆ ಕಾಂಗ್ರೆಸ್ ಸರ್ಟಿಫೈ ಮಾಡಿದ ಖಾದಿಯನ್ನೇ ಧರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಗಜೆಟೆಡ್ ಉದ್ಯೋಗಸ್ಥರ ಪ್ರಯಾಣ

ಗಜೆಟೆಡ್ ಉದ್ಯೋಗಸ್ಥರು ವಾಡಿಕೆಯಾಗಿ ತಿಂಗಳಿಗೆ ಸರಾಸರಿ ಇಪ್ಪತ್ತರಿಂದ ಇಪ್ಪತ್ತೈದು ದಿನಗಳ ವರೆಗೆ ಸರ್ಕ್ಯೂಟಿನಲ್ಲಿದ್ದು ಅನೇಕ ಸ್ಥಳಗಳನ್ನು ಸಂದರ್ಶಿಸಿ ತಮ್ಮ ತಾಬೆದಾರರ ಕೆಲಸದ ಮೇಲು ಉಸ್ತುವಾರಿ ನೋಡುವುದು ವಾಡಿಕೆಯಾಗಿದೆ. ಈಗ ಮೋಟಾರ್ ಕಾರ್ ಆದ ನಂತರ ದೂರದ ಸ್ಥಳಗಳಲ್ಲಿ ಪ್ರಯಾಣ ಮಾಡುವುದಕ್ಕೂ ಆಗಾಗ್ಗೆ ಕ್ಯಾಂಪಿನಿಂದ ಹೆಡ್ಕ್ವಾರ್ಟರ್ಸಿಗೆ ಬಂದು ಹೋಗಲಿಕ್ಕೂ ಬಹಳ ಅನುಕೂಲವಾಗಿದೆ. ಇಂಥಾ ಪ್ರಯಾಣಕ್ಕೆ ಮೈಲೇಜು ಮತ್ತು ದಿನ ಭತ್ಯವೂ ಸಿಕ್ಕುತ್ತೆ.

ಆದರೆ ಅನೇಕ ಸಂದರ್ಭಗಳಲ್ಲಿ ಇಂಥಾ ಪ್ರಯಾಣವೂ ಹೊಂದಿಕೊಳ್ಳುವ ಭತ್ಯೆಯೂ ಸರಿಯಾಗಿರುತ್ತದೆಯೆ ಮತ್ತು ಕೊಡಗು ಕಮಿಶನರರು ಇಂಥಾದ್ದನ್ನು ಚೆನ್ನಾಗಿ ಪರೀಕ್ಷಿಸುತ್ತಾರೋ ಎಂಬುದು ಸಂಶಯಾಸ್ಪದವಾಗಿದೆ. ಅಲ್ಲದೆ ಈ ಆಫೀಸರುಗಳು ತಮ್ಮ ಮುಂದಿನ ಪ್ರಯಾಣದ ಪ್ರೋಗ್ರಾಮನ್ನು ಕಮಿಶನರವರಿಗೆ ಆಗಿಂದಾಗ್ಯೆ ಕಳುಹಿಸಿಕೊಡುತ್ತಾರೋ ಎಂಬುದು ಸಹ ತಿಳಿಯುವುದಿಲ್ಲ.

ಪ್ರಯಾಣದ ಭತ್ಯ ಸಿಕ್ಕುವುದೆಂತಾದರೆ ಯಾರಿಗಾದರೂ ಯಾವ ಮೂಲೆಯಲ್ಲಾದರೂ ಅಲ್ಪ ಸ್ವಲ್ಪ ಕೆಲಸವಿದ್ದರೆ ಇರಬಹುದು. ಒಂದೇ ಒಂದೆರಡು ರೂಪಾಯಿ ಕೆಲಸಕ್ಕೆ ನೂರಾರು ರೂಪಾಯಿ ಖರ್ಚುಮಾಡಲೂ ಬಹುದು. ಇಂಥಾದ್ದನ್ನು ನಿಲ್ಲಿಸಲು ತಿಂಗಳಿಗೆ ಇಂತಿಷ್ಟೇ ಹಣವೆಂದು ಮೊಕ್ತವಾಗಿ ಕೊಟ್ಟರೆ ಪ್ರಯಾಣ ಮಾಡುವ ಆಫೀಸರುಗಳು ಒಂದೊಂದು ಸ್ಥಳದಲ್ಲಿ ಕೆಲವು ದಿನಗಳವರೆಗೂ ಇದ್ದು ಎಲ್ಲಾ ಕೆಲಸವನ್ನು ಚೆನ್ನಾಗಿ ಮಾಡುವ ಅನುಕೂಲತೆಯುಂಟಾಗುತ್ತೆ. ಅಲ್ಲದೆ ಮೈಲೇಜು ವಗೈರೆ ಅನಾವಶ್ಯವಾಗಿ ಕೊಡುವ ಆವಶ್ಯಕತೆ ಇರುವುದಿಲ್ಲ. ಫಾರೆಸ್ಟ್ ಆಫೀಸರುಗಳು ಸಹ ಮೋಟಾರಿನಲ್ಲಿ ಬಹಳ ದೂರಕ್ಕೆ ಹೋಗುತ್ತಾರೆ. ಕಾಡಿನೊಳಗೆ ನುಗ್ಗುವಾಗ ಅಥವಾ ಮೋಟಾರ್ ಹೋಗದ ಜಾಗದಲ್ಲಿ ಏನು ಮಾಡುತ್ತಾರೋ ತಿಳಿಯುವುದಿಲ್ಲ. ಕೊಡಗಿನಂತ ಬೆಟ್ಟ ಪ್ರದೇಶಗಳಲ್ಲಿ ಕುದುರೆಗಳನ್ನಿಟ್ಟುಕೊಂಡರೆ ಕೆಲಸವು ಎಷ್ಟು ಚೆನ್ನಾಗಿ ನಡೆಯಬಹುದೆಂಬುದನ್ನು ನಾವು ಹೇಳಬೇಕಾಗಿಲ್ಲ.

ಅಲ್ಲದೆ ಕಾಡಿನೊಳಕ್ಕೆ ಅಥವಾ ಇತರ ಜಾಗಕ್ಕೆ ಹೋಗಿ ಕೆಲಸಗಳನ್ನು ನೋಡಬೇಕೆಂಬ ಲವಲವಿಕೆಯೂ ಹುಟ್ಟುತ್ತೆ. ಹೇಗೂ ಮೋಟಾರು ಬಂದಂದಿನಿಂದ ಗಜೆಟೆಡ್ ಉದ್ಯೋಗಸ್ಥರಿಗೆ ಮತ್ತಷ್ಟು ಅನುಕೂಲವಾಯಿತ್ತೆಂದರೆ ತಪ್ಪಾಗಲಾರದು. ಖರ್ಚು ಕಡಿಮೆ ಮಾಡಬೇಕೆಂದು ಇದೀಗ ಆಲೋಚನೆ ಮಾಡುತ್ತಿರುವಾಗ ನಮ್ಮ ಸರಕಾರವು ಈ ಭತ್ಯದ ವಿಷಯದಲ್ಲಿ ಏನು ಮಾಡುತ್ತಾರೆಂಬುದನ್ನು ನೋಡಬೇಕಾಗಿದೆ.

ಕೆಲವು ಆಫೀಸರುಗಳ ಒಟ್ಟಿಗೆ ಒಂದೇ ಜಾಗದಲ್ಲಿ ಆಗಾಗ್ಗೆ ಮೊಕ್ಕಾಂ ಮಾಡುತ್ತಿರುವ ವಿಷಯಗಳು ನಮ್ಮ ತಿಳುವಳಿಕೆಗೆ ಬಂದಿದೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕ್ಯಾಂಪು ಮಾಡುವ ಜಾಗದಲ್ಲಿ ಅನೇಕಾವೃತ್ತಿ ಡಿಪ್ಯುಟಿ ಸುಪರಿಂಟೆಂಡೆಂಟರೂ ಮತ್ತು ಡಿಪ್ಯುಟಿ ಡೈರೆಕ್ಟರವರೂ ಆಗಾಗ್ಗೆ ಕ್ಯಾಂಪು ಮಾಡುತ್ತಲಿರುವರು. ಇದರ ಅರ್ಥವು ತಿಳಿಯುವುದಿಲ್ಲ. ಈ ಆಫೀಸರುಗಳ ಕೆಲಸವು ಬೇರೆಯಾಗಿದೆ. ಹೀಗಿದ್ದರೂ ಒಟ್ಟಿಗೆ ಆಗಾಗ್ಗೆ ಕ್ಯಾಂಪು ಮಾಡುತ್ತಿರುವುದು ಏತಕ್ಕೋ ತಿಳಿಯದು. ಕಮಿಶನರು ಯಾವ್ಯಾವ ಕಾರಣದಿಂದ ಏತಕ್ಕಾಗಿ ಒಟ್ಟಿಗೆ ಕ್ಯಾಂಪು ಮಾಡುವ ಸಂದರ್ಭವಾಗಿದೆ ಯೆಂದು ಭತ್ಯ ಬಿಲ್ಲು ಮಂಜೂರ್ಮಾಡುವಾಗ ಎಂದಾದರೂ ಪ್ರಶ್ನೆ ಮಾಡಿರುತ್ತಾರೋ? ಮಾಡದಿದ್ದರೆ ದೇಶದ ರೈತನ ಕ್ಷೇಮವನ್ನು ಮುಂದಿಟ್ಟುಕೊಂಡು ಅನಾವಶ್ಯವಾಗಿ ಸರ್ಕ್ಯೂಟಿನಿಂದ ಖರ್ಚಾಗುವ ಹಣವನ್ನು ನಿಲ್ಲಿಸಬೇಕಾಗಿ ಕೋರುತ್ತೇವೆ.

ರಾಜಿ ತೀರ್ಮಾನ.

ವೈಸರಾಯರಾದ ಲಾರ್ಡ್ ಇರ್ವಿನರಿಗೂ, ಮಹಾತ್ಮ ಗಾಂಧಿಯವರಿಗೂ ರಾಜಿಯಾಯಿತು. ರಾಜಿ ಕರಾರುಗಳು ಇನ್ನೂ ಪ್ರಕಟವಾಗಿಲ್ಲ. ರಾಜಿ ಕರಾರುಗಳನ್ನು ಬ್ರಿಟಿಷ್ ಸರ್ಕಾರದ ಒಪ್ಪಿಗೆ ಬಗ್ಗೆ ಲಂಡನ್ನಿಗೆ ತಂತಿ ಮೂಲಕ ಕಳುಹಿಸಲ್ಪಟ್ಟಿದೆ. ಉತ್ತರ ಬಂದನಂತರ ಪ್ರಕಟಿಸಲಾಗುತ್ತದೆಯೆಂತ ಡಿಲ್ಲಿಯಿಂದ 4ನೇ ತಾರೀಕಿನ ವರ್ತಮಾನ ಬಂದಿದೆ.

ಮಹಾತ್ಮ ಗಾಂಧಿಯವರಿಗೂ, ಲಾರ್ಡ್ ಇರ್ವಿನರಿಗೂ ನಡೆಯುತ್ತಿದ್ದ ಸಂಭಾಷಣೆಯು ಫಲಕಾರಿಯಾಗುವುದಿಲ್ಲವೆಂತ ಸಂಶಯವು ಡಿಲ್ಲಿಯಲ್ಲಿ ಆದಿತ್ಯವಾರ ದಿನ ಹುಟ್ಟಿತ್ತು. ಅನಂತರದ ವರ್ತಮಾನಗಳಿಂದ ರಾಜಿಯಾಗುವ ಗುರುತುಗಳು ಕಂಡು ಬಂತು. ತಾ. 2ರಲ್ಲೂ, 3ರಲ್ಲೂ ಸಂಭಾಷಣೆಗಳು ನಡೆದವು. ತಾ. 3ರಲ್ಲಿ ಹಗಲು ಸಂಭಾಷಣೆ ನಡೆದು ಅನಂತರ ರಾತ್ರಿ ಸಹ ಮುಂದರಿಸಿ ರಾತ್ರಿ 1½ ಗಂಟೆಗೆ ಒಪ್ಪಂದಕ್ಕೆ ಬಂತು. ಕೂಡಲೇ ಡಿಲ್ಲಿಯಲ್ಲೆಲ್ಲಾ ವರ್ತಮಾನವು ಹಬ್ಬಿತು. ಮಹಾತ್ಮಜೀಯವರು ವಾಸವಿರುವ ಡಾಕ್ಟರ್ ಅನ್ಸಾರಿಯವರ ಮನೆ ಮುಂದೆ ರಾತ್ರಿ ಮೂರು ಗಂಟೆಗೇನೇ ಜನರು ಸೇರಿದು ಜಯಘೋಷ ಪ್ರಾರಂಭಿಸಿದರು. ಮಹಾತ್ಮಜೀಯವರು 3 ಗಂಟೆಗೆ ಮಲಗಿ 4 ಗಂಟೆಗೆ ಎಂದಿನಂತೆ ಎದ್ದು ತಮ್ಮ ಪ್ರಾರ್ಥನೆಯನ್ನು ನಡೆಸಿ ಬೆಳಗಾಗುತ್ತಲೇ ಎಂದಿನಂತೆ ತಿರುಗಾಡಲಿಕ್ಕೆ ಹೊರಟರು. ಇವರೊಳಗಾದ ಒಪ್ಪಂದಕ್ಕೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಂಪೂರ್ಣ ಒಪ್ಪಿಗೆಯು ದೊರೆತ ಕೂಡಲೇ ಮಹಾತ್ಮ ಗಾಂಧಿಯವರು ವೈಸರಾಯರಲ್ಲಿಗೆ 12 ಗಂಟೆಗೆ ಹೋಗಿ 5 ನಿಮಿಷದಲ್ಲೇ ಉಭಯತರ ಸಮ್ಮತಿಯಾಯಿತು. ಡಿಲ್ಲಿಯಲ್ಲಿ ಮಳೆ ಸುರಿಯುತ್ತಲೂ, ಮೋಡ ಕವಿದುಕೊಂಡು ಇದ್ದದ್ದು ಈ ಆಖೈರ್ ಒಪ್ಪಂದವಾದಾಗ ಸೊಗಸಾದ ಬಿಸಿಲು ಬಂತು. ದೇವಸ್ಥಾನಗಳಲ್ಲಿ ಪೂಜೆಯಾಗುವ ಗಂಟೆ ಧ್ವನಿಯೂ ಕೇಳುತ್ತಿತ್ತು.

ರಾಜಿ ಕರಾರುಗಳು ಖಂಡಿತವಾಗಿ ತಿಳಿದಿಲ್ಲವಾದರೂ ಈ ಕೆಳಗಿನ ಕೆಲವು ಕರಾರುಗಳು ಎಂತ ಊಹಿಸಲಾಗಿದೆ—ಸಮುದ್ರ ತೀರದಲ್ಲಿರುವ ಜನರು ಉಪ್ಪು ತಯಾರಿಸಬಹುದು. ಮಾರಲೂಬಹುದು. ಬಿಹಾರ್ ಮುಂತಾದ ಪ್ರಾಂತ್ಯಗಳಲ್ಲಿ ಇಟ್ಟಿರುವ ಹೆಚ್ಚಿನ ಪೋಲೀಸಿನವರನ್ನು ತೆಗೆದು ಬಿಡುತ್ತಾರೆ. ಅಂಥಾ ಸ್ಥಳಗಳಲ್ಲಿ ದಂಡನೆ ರೂಪದಲ್ಲಿ ವಿಧಿಸಿದ ಕಂದಾಯ ಕೊಡದೆ ಬಾಕಿ ಇದ್ದದ್ದನ್ನು ಬಿಟ್ಟು ಬಿಡುತ್ತಾರೆ. ಹಿಂಸೆ ಮಾಡದ ಎಲ್ಲಾ ರಾಜಕೀಯ ಖೈದಿಗಳನ್ನು ಕೂಡಲೇ ಬಿಟ್ಟು ಬಿಡುತ್ತಾರೆ. ನಿಷಾ ಪದಾರ್ಥಗಳ ಅಂಗಡಿಗಳ ಮುಂದೆ ಮತ್ತು ಪರದೇಶೀ ಬಟ್ಟೆ ಅಂಗಡಿಗಳ ಮುಂದೆ ಶಾಂತತೆಯಿಂದ ಪಿಕೆಟ್ ಮಾಡಲು ಬಿಡುತ್ತಾರೆ. ಮುಟ್ಟುಗೋಲು ಹಾಕಿದ ಮತ್ತು ಹರಾಜು ಮಾಡಿದ ಆಸ್ತಿಗಳನ್ನು ಬಿಟ್ಟುಕೊಡುತ್ತಾರೆ. ಪೋಲೀಸು ಅತ್ಯಾಚಾರಗಳ ವಿಷಯ ತನಿಖೆಯಲ್ಲಿ ಪೋಲೀಸಿನವರ ಮೇಲೆ ಕಾಂಗ್ರೆಸಿನವರೂ, ಕಾಂಗ್ರೆಸಿನವರ ಮೇಲೆ ಪೋಲೀಸಿನವರೂ ಆಕ್ಷೇಪ ಮಾಡುತ್ತಾ ಹೋದರೆ ಮುಂದಿನ ರಾಜಕೀಯ ರಚನೆಯನ್ನು ನಿರ್ಣಯಿಸಿ ಕೊಳ್ಳುವ ಅಡ್ಡಿ ಬರುತ್ತದ್ದಾರಿಂದ ಈ ಕರಾರನ್ನು ಗಾಂಧಿಜೀಯವರು ಒತ್ತಾಯ ಪಡಿಸಲಿಲ್ಲ. ಕಾಂಗ್ರೆಸಿನವರು ಬಹಿಷ್ಕಾರ ಭಂಗದ ಚಳವಳವನ್ನು ಕೂಡಲೇ ನಿಲ್ಲಿಸಬೇಕು.

ಈ ರಾಜಿ ತೀರ್ಮಾನವಾಗಬೇಕಾದರೆ ಮಹಾತ್ಮ ಗಾಂಧಿಯವರು 15 ದಿನಗಳಲ್ಲಿ ವೈಸರಾಯರ ಮನೆಗೆ 8 ಸಾರಿ ಹೋಗಿ ಒಟ್ಟಿಗೆ 24 ಗಂಟೆ ಸಮಯ ಸಂಭಾಷಣೆ ನಡಿಸಿದ್ದಾರೆ. ವೈಸರಾಯರಲ್ಲಿ ಸಂಭಾಷಣೆ ನಡಿಸಲು ತೆಗೆದುಕೊಂಡದ್ದಕ್ಕಿಂತ ಹೆಚ್ಚಿನ ಸಮಯ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯ ಚರ್ಚೆಯಲ್ಲಿ ಕಳೆದಿದ್ದಾರೆ. ಗಾಂಧಿಜೀಯವರ ಆರೋಗ್ಯವು ಚೆನ್ನಾಗಿಲ್ಲದಿರುವಾಗ ಪ್ರಪಂಚದಲ್ಲೆಲ್ಲಾ ಎಂದೂ ಯಾರೂ ತೋರಿಸದ ದೇಹಶ್ರಮವನ್ನೂ, ಸಹಿಸಿಕೊಳ್ಳುವ ಶಕ್ತಿಯನ್ನೂ ಪ್ರದರ್ಶಿಸಿರುತ್ತಾರೆಂತ ಡಿಲ್ಲಿ ಮುಖ್ಯಸ್ಥರೆಲ್ಲಾ ಒಪ್ಪುತ್ತಿದ್ದಾರೆ.

ವೈಸರಾಯರ ಮನೆಯಿಂದ ಒಪ್ಪಂದವಾಗಿ ರಾತ್ರಿ 1½ ಗಂಟೆಗೆ ಬಂದ ನಂತರ ತಾನು ಕಾಂಗ್ರೆಸಿಗಾಗಿ ನೂಲಬೇಕಾದಷ್ಟು ನೂಲು ನೂತೇ 3 ಗಂಟೆಗೆ ಮಲಗಿ ಪುನಃ 4 ಗಂಟೆಗೆ ಎದ್ದರು.

ಕಲ್ಕತ್ತಾದ 'ಸ್ಟೇಟ್ಸ್ ಮ್ಯಾನ್' ಎಂಬ ಇಂಗ್ಲಿಷ್ ಜನರ ಪತ್ರಿಕೆಯು ಈ ರಾಜಿಯು ಈ ಶತಮಾನದ ಎರಡನೇ ಭಾಗದಲ್ಲಿ ಆದಂಥ ಅತ್ಯಂತ ಮಹತ್ವದ ವಿಷಯವೆಂತಲೂ ಜರ್ಮನ್ ಮಹಾ ಯುದ್ಧವು ತೀರಿದ 1918ನೇ ಇಸವಿ ನವಂಬರ್ ತಾ. 11ರಷ್ಟೇ ಮಹತ್ವದ ದಿನವೆಂತಲೂ ಬರೆದಿದೆ. ಮಹಾತ್ಮ ಗಾಂಧಿ ಮತ್ತು ಲಾರ್ಡ್ ಇರ್ವಿನರು ಹೊರಗಿನವರು ಆಡಿಕೊಳ್ಳುವ ಮಾತುಗಳಿಗೆ ಕಿವಿಗೊಡದೆ ಗಾಂಭೀರ್ಯದಿಂದ ಚರ್ಚೆ ನಡಿಸಿ ತೀರ್ಮಾನಕ್ಕೆ ಬಂದರೆಂತಲೂ, ಗಾಂಧಿಜೀಯವರು ರೌಂಡ್ ಟೇಬಲ್ ಕಾನ್ಫರೆನ್ಸಿನ ಕೆಲಸದಲ್ಲಿ ಭಾಗಿಯಾಗಿ ಎರಡು ಜನಾಂಗಗಳೊಳಗೆ ಈ ವರೆಗೆ ಆದ ಹೋರಾಟದಿಂದ ಉಂಟಾದ ಯಾವ ಕ್ಲೇಶಗಳು ಇಲ್ಲದಂತೆ ಮಾಡಲಿ ಎಂತಲೂ ಈ ಪತ್ರಿಕೆಯು ಬರೆದಿದೆ.

ಉಪ್ಪಿನ ಹಕ್ಕನ್ನು ಬಡವರಿಗೆ ಕೊಡಿಸುವುದು ಮಹಾತ್ಮಜೀಯವರಿಗೆ ಬಹಳ ಮುಖ್ಯವಾಗಿತ್ತು. ಈ ವಿಷಯದಲ್ಲಿ ಸರಕಾರದ ಆರ್ಥಿಕ ಮಂತ್ರಿ ಸರ್ ಜಾರ್ಜ್ ಶುಸ್ಟರವರಿಗೂ ಗಾಂಧಿಜೀಯವರಿಗೂ ಸಂಭಾಷಣೆ ನಡೆದು ಒಪ್ಪಂದಕ್ಕೆ ಬಂದದ್ದಾಗಿದೆ. ಇವರೊಳಗೆ ಆದ ಒಪ್ಪಂದವನ್ನು ಬರೆದು ವೈಸರಾಯರಿಗೆ ಕೊಟ್ಟರು.

ಮುಟ್ಟುಗೋಲು ಹಾಕಿದ ಆಸ್ತಿಗಳನ್ನು ಸಂಬಂಧಪಟ್ಟವರಿಗೆ ಬಿಟ್ಟುಕೊಡಬೇಕೆಂಬ ಕರಾರಿನ ವಿಷಯದಲ್ಲಿ ಸರದಾರ್ ವಲ್ಲಭಭಾಯಿಯವರು ಬಹಳ ನಿಗದಲ್ಲಿದ್ದರು. ಈ ಕರಾರು ಸಹ ಮಂಜೂರಾದದ್ದು ಬಹಳ ತೃಪ್ತಿಕರ.

ಕಾಂಗ್ರೆಸ್ ಪ್ರತಿನಿಧಿಗಳೂ ಸೇರಿ ನಡಿಸಲಿಕ್ಕಿರುವ ಹೊಸ ರೌಂಡ್ ಟೇಬಲ್ ಕಾನ್ಫರೆನ್ಸ್ ಯಾವಾಗ ನಡಿಯತಕ್ಕದ್ದು, ಅದರ ಕಾರ್ಯಕ್ರಮವೇನು ಎ ಬ ಇತ್ಯಾದಿ ಸಂಗತಿಗಳು ಇನ್ನೂ ನಿಣ ಯವಾಗಿಲ್ಲ. ಮಹಾತ್ಮ ಗಾಂಧಿಯವರ ಮುಂದಿನ ಕಾರ್ಯಕ್ರಮವು ಗೊತ್ತಾಗಲಿಲ್ಲ. ಈಗ ರಾಜಿಯಾಗಿರುವದರಿಂದ ಸಬರ್ಮತಿ ಆಶ್ರಮಕ್ಕೆ ಹೋಗಬಹುದೆಂತ ಊಹಿಸಲಾಗಿದೆ.

ಈಗ ಆಗಿರುವ ರಾಜಿಯು ತಂಗಾಮಿಯಾಗಿದೆ. ರೌಂಡ್ ಟೇಬಲ್ ಕಾನ್ಫರನ್ಸಿನಲ್ಲಿ ಕಾಂಗ್ರೆಸಿನವರೂ ಸೇರಿ ಮಾಡಿಕೊಳ್ಳುವ ತೀರ್ಮಾನವನ್ನು ಪಾರ್ಲಿಮೆಂಟೂ ಹಿಂದುದೇಶವೂ ಒಪ್ಪಿಕೊಂಡರೆ ಖಾಯಂ ರಾಜಿಯಾಯಿತು. ಆ ವರೆಗೆ ಚಳವಳವನ್ನು ಕಾಂಗ್ರೆಸಿನವರೂ ದಬ್ಬಾಳಿಕೆಯನ್ನು ಸರಕಾರವೂ ನಡಿಸಬಾರದೆಂಬುದೇ ಈಗಿನ ತಂಗಾಮಿ ರಾಜಿಯಾಗಿದೆ.

"ನೊಣ ಐ"

(ಹಿತಚಿಂತಕರಿಂದ)

ಒಂದೇ ಕಡೆಯಲ್ಲಿ ತಾವರೆಯೂ ಅಮೇಧ್ಯವೂ ಇದ್ದರೂ ಒಂದೇ ವರ್ಗಕ್ಕೆ ಸೇರಿದ ನೊಣವು ಅಮೇಧ್ಯಕ್ಕೂ ಜೇನು ಹುಳವು ತಾವರೆಗೂ ಹೋಗುವದು ಅವುಗಳ ಜನ್ಮ ಗುಣ. ಲೋಕಪಾವನದ 11—3—31 ರ ಸಂಚಿಕೆಯಲ್ಲಿ 'ಪಿ ಮೊಣ್ಣಪ್ಪ' ಎಂಬ ಹೆಸರಿನಿಂದ ಸತ್ಯಾಗ್ರಹಿಗಳ ವಿಷಯ ಒಂದು ಲೇಖನವನ್ನು ಬರೆದಿದ್ದರು ಅದಕ್ಕೆ ಜವಾಬು ಬರೆಯುವದು ಉಚಿತವಾದರೂ ಅವರ ಅಭಿಪ್ರಾಯ ಎಷ್ಟರ ಮಟ್ಟಿನದು ಎಂಬದ್ದನ್ನು ತಿಳಿಸಲು ಬರೆಯಬೇಕಾಯಿತು.

ಮ. ರಾ. ಪಿ. ಮೊಣ್ಣಪ್ಪನವರೂ ನನ್ನಂತೆಯೇ ಒರಿಸಾ ಡಗು ಮತ್ತು "ಲೋಕಪಾವನ"ಗಳನ್ನು ಮಾತ್ರ ಓದುವವರಾಗಿರಬೇಕು. ಅದಲ್ಲವಾದರೆ ಅವರು ಆ ರೀತಿಯದ ಅಭಿಪ್ರಾಯಪಡುತ್ತಿದ್ದಿಲ್ಲ. ಹಿಂದೂದೇಶದ ರಾಜಕೀಯ ಚಳವಳದ ಮುಂದಾಳುಗಳನ್ನು ಸೆರೆಹಿಡಿಯುವದಕ್ಕೆ ಮೊದಲು ಅದೆಷ್ಟೋ ಸಾವಿರ ಸತ್ಯಾಗ್ರಹಿಗಳನ್ನು ಸೆರೆಹಿಡಿದಿದ್ದು ಸುಮಾರು 70000 ಜನ ಸತ್ಯಾಗ್ರಹಿಗಳು ಜೈಲಿನಲ್ಲಿರುವಾಗ ಒರೆ 30-40 ಜನರನ್ನು ಮಾತ್ರ ಜೈಲಿನಿಂದ ಬಿಟ್ಟದ್ದು ತಿಳಿಯಬಹುತ್ತಿತ್ತು. ಸತ್ಯಾಗ್ರಹಿಗಳನ್ನು ಸೆರೆಮನೆಗಟ್ಟುವದು ಪೋಲೀಸು ಮತ್ತು ಮೇಜಿಸ್ಟ್ರೇಟರ ಕೆಲಸ. ಹಾಗೆ ಮ. ಐ ಪಿ. ಕಾರ್ಯಪ್ಪನವರನ್ನೇ ಸೆರೆಮನೆಗೆ ಅಟ್ಟಬೇಕೆಂದು ನಿಮಗೆ ಆಶೆ ಇದ್ದರೆ ನೀವೇ ಒಬ್ಬ ಪೋಲೀಸು ಆಫೀಸರಾಗಿ ಬಂದು ಬಿಟ್ಟರೆ ಕಾರ್ಯಪ್ಪನವರ ಮೇಲಿನ ನಿಮ್ಮ ಸೇಡನ್ನು ತೀರಿಸಿ ಹಾಲನ್ನ ಉಣ್ಣಬಹುದಲ್ಲ.

ಮ. ಐ ಪಿ ಕಾರ್ಯಪ್ಪನವರು ಸುಮಾರು 20 ವರ್ಷ ಸರಕಾರಿ ನೌಕರಿಯಲ್ಲಿದ್ದು ತನಗೆ ತಿಂಗಳು ಗಟ್ಟಲೆ ಸಿಕ್ಕುತ್ತಿದ್ದ ಸಂಬಳವನ್ನೂ ಬಿಟ್ಟು 25—30 ಸಾವಿರ ರೂಪಾಯಿ ವರಮಾನವಿರುವ ಆಸ್ತಿಯನ್ನು ಆಳುಗಳ ಕೃಪೆಗೆ ಒಟ್ಟು ಸರಕಾರದ ಕೋಪ ತಾಪಗಳಿಗೆ ಬೆದರದೆ ಸತ್ಯಾಗ್ರಹಕ್ಕೆ ಸೇರಿ ದೇಶಕ್ಕಾಗಿ ಕಷ್ಟಪಡುತ್ತಿರುವ ಕಾರ್ಯಪ್ಪನವರು ಮತ್ತು ಇತರ ಸತ್ಯಾಗ್ರಹಿಗಳು ದೇಶದ್ರೋಹಿ ಆಗಲೀ ಅಥವಾ ಮ. ರಾ. ಪಿ ಮೊಣ್ಣಪ್ಪನವರೊಬ್ಬರೇ ಕೊಟ್ಟ ಹಣವನ್ನೇ ಆಗಲೀ ಅವರು ಅವರ ಮನಸ್ಸೋ ಇಷ್ಟ ಖರ್ಚುಮಾಡುವಲ್ಲಿ ಯಾವ ಅಭ್ಯಂತರವೂ ಇಲ್ಲ. ಈ ವಿಷಯ ಶ್ರೀಯುತ ಬಿದ್ದಂಡ ಸುಬ್ಬಯ್ಯನವರು ಹಿಂದೊಮ್ಮೆ ವಿವರವಾಗಿ ಬರೆದಿದ್ದರು.

ಮ. ಕಾರ್ಯಪ್ಪನವರು ಅನ್ಯರ ಮಕ್ಕಳನ್ನು ಜೈಲಿಗೆ ಕಳುಹಿಸಲು ನೋಡಿ ತಾವು ತಲೆತಪ್ಪಿಸಿಕೊಳ್ಳುತ್ತಿದ್ದಾರೆಂದು ಹೇಳುತ್ತೀರಲ್ಲ. ನಿಮ್ಮ ಅದೇ ಬಾಯಲ್ಲಿ ಕಾರ್ಯಪ್ಪನವರನ್ನು ಜೈಲಿಗೆ ಕಳುಹಿಸಲು ಯತ್ನಿಸುತ್ತೀರಲ್ಲ. ಹಾಗಾದರೆ ಕಾರ್ಯಪ್ಪನವರು ನಿಮಗೆ ಅನ್ಯರಲ್ಲವೇ. ನೀವೇಕೆ ಒಂದು ಪಂಗಡ ಮಾಡಿಕೊಂಡು ನೀವು ಹೇಳುವ ಕಾರ್ಯಪ್ಪನವರಿಗಿಂತ ಮೊದಲು ಜೈಲಿಗೆ ಹೋಗಬಾರದು.

ಜೈಲಿಗೆ ಹೋಗುವದಕ್ಕೆ, ಲಾಠಿ ಪೆಟ್ಟಿಗೆ ಮುಖಂಡರೂ ಸತ್ಯಾಗ್ರಹಿಗಳೂ ಇರಲಿ. ಅವರ ಹೋರಾಟದಿಂದ ದೊರೆಯುವ ಹೆಚ್ಚಿನ ಮಾರ್ಪಾಡಿನ ಕೌನ್ಸಿಲುಗಳಿಗೆ ಮೆಂಬರಾಗಲು ಓಟರುಗಳಿಗೆ ಭರವಸೆಯ ಸುರಿಮಳೆಯ ಹಸ್ತಪತ್ರಿಕೆಗಳಿಗೆ ಪತ್ರಿಕೆಯನ್ನು ಕಯಾರಿಸುವ ಸೈಮನ್ ಕಮಿಷನಿಗೂ, ರೌಂಡಟೇಬಲ್ ಕಾನ್ಫರೆನ್ಸಿಗೂ ಇಂಡಿಯಾದ ಕಾಂಗ್ರೆಸು ಮುಖಂಡರಲ್ಲವೇ ಕಾರಣಭೂತರು. ಕಾನ್ಫರೆನ್ಸಿಗೆ ಹೋಗಿ ಪ್ರತಿಷ್ಠಾಂಶ ಉಂಡು, ಸೈಮನ್ನಿಗೆ ಬೇಟಿಕೊಟ್ಟು ಪದವಿ ಉದ್ಯೋಗಪಡೆದವರಾರು. ನಾದ ಮುರಿಯುವವರು ಮುರಿದುಕೊಂಡೆ ಬೆಂಕಿಕಾಯಿಸುವವರು ಕಾಯಿಸಿಕೊಂಡೇ ಎಂದು ಏಕೆ ಬರೆಯುವದಿಲ್ಲ. ಯರವ, ಕುರುಬ, ಹೊಲೆಯ, ಜಟ್ಟಿ ಆದಿಯಾಗಿ ಅದೆಷ್ಟೋ ಕುಡುಕರು ಕುಡಿಯುವ ಆತುರದಿಂದ ಸತ್ಯಾಗ್ರಹಿಗಳನ್ನು ಒದೆದು ಒಡಿದು ನುಗ್ಗುತ್ತಿರುವ "ಕುಡುಕ" ಪಿಶಾಚಿಗಳು ಯೋಗ್ಯರು. ಅಹಿಂಸಾವಾದಿ ನ್ಯಾಯಮೂರ್ತಿಗಳು ತಮ್ಮಿಂದ ಹೊಗಳಿಸಲ್ಪಡಲಯೋಗ್ಯರು. ಅಹಿಂಸಾಪರಮೋಧರ್ಮವೆಂಬ ಸತ್ಯಾಗ್ರಹಿಗಳು ತಮ್ಮ ಮಂದಿ ಅಪರಾಧಿಗಳು ಎಂಬದೊಂದೇ ನೀವು ಹೇಳುವಂತೆ ಮುಂದಿನ ಚರಿತ್ರೆ ಬರೆಯುವಾಗ ನಿಮ್ಮ ದ ಅಕ್ಷರಗಳಿಂದ ಬರೆಸಲು ಯೋಗ್ಯವಾದವು.

ಗಡಂಗ ಪಿಕೆಟ್ ಮಾಡುವಾಗ ಸತ್ಯಾಗ್ರಹಿಗಳನ್ನು ... ಸ್ಸು ಮಾಡುವಾಗ ಶ್ರೀಮತಿ ಅಕ್ಕಮ್ಮನವರು ತಲೆ ತಪ್ಪಿಸಿ ... ಡು ಹೋಗಿ ಮುಖ ತೋರಿಸಿಕೊಂಡಿರುತ್ತಾರೆಂದು ... ಹೆಂಗಸಾದ ಶ್ರೀಮತಿ ಅಕ್ಕಮ್ಮನವರು ಪಿಕೆಟ್ ಮಾ... ತಮ್ಮಂಥ ಗಂಡು ಕ್ಷತ್ರಿಯ ವೀರರು ಅಡಿಗೆ ಕೋಣೆ... ತಲೆ ತಪ್ಪಿಸಿಕೊಂಡು ಇರುವ ಕಲಿಯುಗದ ಉತ್ತರ ... ರಿಂದ ಬರೆಯುವುದಕ್ಕೆ ಧೈರ್ಯ ಪಡುವುದಿಲ್ಲ. ... ಸತ್ಯಾಗ್ರಹಿಗಳಿಗೆ ಕರ್ಚಿಗಿಲ್ಲವೆಂಬುವುದಕ್ಕೆ ನೀವೇ ... ಪಡಬೇಕು. ಅದಕ್ಕೆ ಅನ್ಯರನ್ನು ದೂರಲು ಕಾರ...

15—20 ಸತ್ಯಾಗ್ರಹಿಗಳ ಸಿಬಿರ ಇರುವಲ್ಲಿ ಸತ್ಯಾ... ದ ಒಬ್ಬ ಮುಖಂಡರು ಶ್ರೀ ಕೃಷ್ಣನಂತೆ ಎಲ್ಲಲ್ಲೂ ... ಸಮಯದಲ್ಲಿ ಇರಬೇಕೆನ್ನುವ ಈ ಎಲ್ಲಾ ಸಿಬಿ... ಮುಂದಾಳುಗಳು ನಡದುಕೊಂಡೇ ಹೋಗಬೇಕೆನ್ನುವ ... ಬಾತ್ತಿಗೆ ಜವಾಬು ಬರೆದ ನನಗೆ ಅಪಮಾನವೆನಿಸುತ್ತದೆ.

ಮಹಾತ್ಮಜೀಯವರು (ದೇವರು ಅವರಿಗೆ ದೀ... ಯುಷ್ಯವನ್ನೂ, ಅವರು ಕೈಕೊಂಡ ಕಾರ್ಯದಲ್ಲಿ ಬ... ಕೈಗೊಡಲಿ) ಇಂಡಿಯಾದ ಹೆಂಗಸರಿಗೆ ಹೇಳಿದ ಸಂಗ... ತ್ರ ಕೇಳಿ ಅಕ್ಕಮ್ಮನವರನ್ನು ಹುರಿದುಂಬಿಸಿದಿರಿ. ಅದರ... ಯಲ್ಲೇ ಗಂಡು ಕಲಿಗಳಿಗೂ ಹೇಳಿದ ಮಾತನ್ನು ತಿಳಿ... ಲಿಸದೆ ತಾವೇಕೆ ಪರದೆ ಹಿಂದೆ ನಿಂತಿದ್ದೀರಿ—ಒಬ್ಬ... ಸ್ತ್ರೀ ಮುಖಂಡರು ಹೇಳಿದಂತೆ ಬ.... .... — ಕೋ... ಯೋ—ಗಂಡಸರ ಸುದ್ದಿ ಹೇಳಿದರೆ ತಾವೇನು ಮಾಡಿ... ಬ ಪ್ರಶ್ನೆಗೆ ತನ್ನಷ್ಟಕ್ಕೆ ತಾನೇ ಹೊರಟು ಅದಕ್ಕೆ ... ತಾವೇ ಕೊಡಬೇಕಾಗುತ್ತದೆ. ಇಂಡಿಯಾ ದೇಶದ... ಗ್ಲಂಡಿನ ಅಕ್ಕನ ಮಕ್ಕಳು ಯಾರೂ ಇಲ್ಲ. ಅಥವಾ... ರೂ ಇಂಗ್ಲೆಂಡಿನಲ್ಲಿ ಮರ್ಮಕತ್ತಾಯ ಸಂಪಾದ... ಲ್ಲ. ದಯಮಾಡಿ ಈ ಧರ್ಮ ಯುದ್ಧದಲ್ಲಿ ತಾವು... ವ ಂದಾಳಾಗಿ ಮುಂದಾಗಿ ಜೈಲಿಗೆ ಹೋಗಿ—ಸ... ತಿ ತಕ್ಕಿಗಳಿಗೆ ನಿರತ್ನವೂ ಇರಬೇಡಿ—

ಅವರನ್ನು, ಇವರನ್ನು ದೂಷಿಸಿಕೊಂಡು ಕಾ... ವುದು ಈಗಿನ ಈ ಗಲಾಟೆಯಲ್ಲಿ ಅತ್ಯಾವಶ್ಯವೆಂಬದ... ನೇಕರಂತೆ ತಾವೂ ಅರಿತುಕೊಂಡಿರುವಂತೆ ಕಾಣುತ್ತ...

ಲಾಠಿ ಚಾರ್ಜ್ ಮತ್ತು ಕೊಡಗಿ... ಉದಾಹರಣೆ.

ಈಗ ಕೆಲವು ದಿನಗಳಿಂದ ಬರುವ ತಂತಿ ವರ್ತ... ಳಿಂದ ಹೆಚ್ಚು ಸಿಟ್ಟಿಗೂ ವ್ಯಾಕುಲಕ್ಕೂ ಕಾರಣ ಮಾಡಿದ ಯುಕ್ತರಾದ ಪಿಕೆಟರುಗಳನ್ನು ಲಾಠಿಯಿಂದ ಹೊಡೆಯು... ತಿಯನ್ನು ಬಿಟ್ಟು ದಯಾಯುಕ್ತವಾದ ದಸ್ತಗಿರಿಯ ಕ... ನ್ನು ಅನುಸರಿಸುವಂತೆ ಕಂಡು ಬರುತ್ತದೆ. ಈ ಬದ... ಮು ಮುಖ್ಯವಾಗಿ ಬೊಂಬಾಯಿ, ಮದ್ರಾಸು, ಕರಾಚಿ... ಕಂಡು ಬಂದಿದೆ. ಮೊನ್ನೆ ಬೊಂಬಾಯಿಯಲ್ಲಿ ನಡೆದ ಡಾಫು ನುದನೆಯ ದಿನ ಮೊದಲು ರೂಢಿಯಿದ್ದಂತೆ ಲಾಠಿ ಚಾರ್ಜ ಮಾಡದೆ 400 ಸ್ವಯಂಸೇವಕರನ್ನು ದಸ್ತಗಿರಿ 178 ಜನರಿಗೆ ಸಜೆ ವಿಧಿಸಿ ಬಾಕಿಯವರನ್ನು ಬಿಟ್ಟಾರು ದ್ದಾರೆ. ಲಾಠಿ ಚಾರ್ಜು ಇಲ್ಲದೆ ಎಲ್ಲವೂ ಶಾಂತಿಯಿಂದಲೇ ನಡೆಯಿತು. ಲಾಠಿ ಚಾರ್ಜು ಅವಶ್ಯವಿಲ್ಲದೆ ಕಾನೂನು ಪರಿಪಾಲನೆ ಬೇರೆ ರೀತಿಯಿಂದ ಮಾಡಲು ... ಎಂಬ ಪ್ರಶ್ನೆಯು ಹುಟ್ಟುತ್ತದೆ. ಇಂಥಾ ... ಇಂಡಿಯಾ ಸರಕಾರವು ಸ್ಥಳೀಯ ಸರಕಾರಗಳಿಗೆ ಸ್ವತಂತ್ರ್ಯವನ್ನು ಕೊಟ್ಟಿತು. ಇದರಂತೆ ಒಂದೊಂದು ... ಒಂದೊಂದು ವಿಧವಾಗಿದೆ. ಕೆಲವು ಕಲೆಕ್ಟರುಗಳೂ ... ರುಗಳೂ ಲಾಠಿ ಚಾರ್ಜಿಲ್ಲದೆ ಕಾನೂನು ರಕ್ಷಣೆ ಮಾಡು... ಕ್ಕೆ ಎಡೆಯಿಲ್ಲದಂತೆ ವರ್ತಿಸಿದ್ದಾರೆ.

ಇಂಥಾ ಒಂದು ಉದಾಹರಣೆಯು ಕೊಡಗಿನ ಪ್ರಸಕ್ತರು ರೆಸಿಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಕೊಡಗಿನ ಚೀಫ್ ಕಮಿಶನರಾಗಿದ್ದಾರೆ. ಈ ದೇಶದ ... ನೂನು ಭಂಗದ ಚಳುವಳವು ಮುಖ್ಯವಾಗಿ ನಿಷಾನಿಷೇಧ, ಸ್ವದೇಶಿ ಈ ಎರಡು ಬಾಬುಗಳಲ್ಲಿ ತಕ್ಕಷ್ಟು ಬಿ... ಯೇ ನಡೆಯುತ್ತಿತ್ತು. ಅನೇಕ ಕಡೆಗಳಲ್ಲಿ ಪೋಲಿ... ಕರ್ತವ್ಯವು ಮಾಡಬೇಕಾಗಿ ಬಂತು. ... ಒಂದು ... ಚಾರ್ಜು ಸಹ ಆದದ್ದು ನಮಗೆ ತಿಳಿದು ಬಂದಿಲ್ಲ. ದಸ್ತಗಿರಿಗಳಾದವು ಆದರೆ ಲಾಠಿ ಚಾರ್ಜು ಇಲ್ಲ... ನ್ನೆ ತಾನೆ 4 ಮಹಿಳೆಯರು ಸಮೇತ 70 ಸತ್ಯಾಗ್ರಹಿ... ಲಟ ಮಾಡಿದ್ದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟರು. ... ಯ ಅಂಗಡಿಗಳ ಹರಾಜಿನ ಸಂಬಂಧವಾದ ಪಿಕೆಟ್ ... ದ್ದಾಗಿದೆ. ಹರಾಜಿನ ಸ್ಥಳಕ್ಕೆ ಕೊಂಡುಕೊಳ್ಳುವವರು ... ಗದಂತೆ ಸ್ವಯಂಸೇವಕರು ದಾರಿಗೆ ಅಡ್ಡಲಾಗಿ ಮಲಗು... ಮುಂದರಿಸಿದರು. ಪೋಲೀಸಿನವರು ತಮ್ಮ ಕರ್ತವ್ಯ ... ಮಾಡಬೇಕಾಗಿ ಬಂತು ಆದರೆ ಲಾಠಿ ಚಾರ್ಜು ಮಾ... ಲ್ಲ. ದಸ್ತಗಿರಿ ಮಾಡಿ ಎಲ್ಲವೂ ಶಾಂತ ರೀತಿಯಿಂದ ... ರಾಕಲೂ ಅಧಿಕಾರಿಗಳಿಗೂ ದಸ್ತಗಿರಿಯಾದ ಸತ್ಯಾಗ್ರ... ಗಳಿ ಇತರರಿಗೂ ಸಹ ಮನಸ್ತಾಪವೇನೂ ಬೆಳೆಯ... ಹರಾಜಾದ ನಂತರ ಸತ್ಯಾಗ್ರಹಿಗಳನ್ನು ಬಿಟ್ಟರು. ... ಮೆರವಣಿಗೆ ಹೋಗಿ ಸಂತೆ ಸ್ಥಳದಲ್ಲಿ ಪಬ್ಲಿಕ್ ಮೀ... ಮಾಡಿದರು.

...ಂದರ್ಭದಲ್ಲಿ ಬಲವಾದ ಹೋರಾಟಕ್ಕೆ ಎಡೆಮಾ.ತ್ತ್ರಿಯನ್ನು ಹಿಡಿದಿದ್ದಾರೆ. ರಕ್ತ ಪಾತವೂ, ಬಹಳ ...ಆಗುತ್ತಿತ್ತು. ಇದರ ಬದಲು ಜನರಿಗೆ, ಸರ ...ಇದ್ದ ಅನ್ಯೋನ್ಯತೆ ಏನೇನೂ ಕಡಿಮೆಯಾಗಲಿಲ್ಲ. ...ವರೂ, ಪೋಲೀಸಿನವರೂ ತಮ್ಮ ಕರ್ತವ್ಯವೆಂತ ಸಂ...ಕಾರ್ಯಗಳನ್ನು ಮಾಡಿದರು. ಆದರೆ ಜನರಿಗೆ ಸರ...ಮೇಲೆ ದ್ವೇಷ ಹುಟ್ಟುವಂತೆ ಮಾಡಲಿಲ್ಲ. ಈ ತರ...ಂತವಾಗಲು ಚೀಫ್ ಕಮಿಶನರ ಕಾರ್ಯದಕ್ಷತೆ ...ಹಾನುಭೂತಿಯ ತಿಳುವಳಿಕೆಯೇ ಕಾರಣವೆಂದೂ ...ಗಿದೆ. ಎಲ್ಲರನ್ನೂ ತಿಳಿ ರೆ ಎಲ್ಲರನ್ನೂ ಮನ್ನಿಸಿ ದಂತೆ ಎಂಬ ಫ್ರೆಂಚ್ ಗಾದೆಯೊಂದು ಇದೆ. ಜೇಕೆಂತಲೇ ಶಾಸನೋಲ್ಲಂಘನ ಮಾಡಿದವರಿಗೆ ಶಿಕ್ಷೆ ಮಾಡಬಾರದೆಂತ ನಾವು ಹೇಳುವುದಿಲ್ಲ. ಕಾಂಗ್ರೆಸ್ ಸ್ವಯಂಸೇವಕರೂ ಹಾಗೆನ್ನು ವದಿಲ್ಲ. ಆದರೆ ಅನಾವಶ್ಯವಾದ ದ್ವೇಷ ತಿರಸ್ಕಾರಗಳನ್ನು ಒಳ್ಳೇ ಗುಣ ಕಾರ್ಯ ಕುಶಲತೆ ತಿಳುವಳಿಕೆಯಿಂದ ಇಲ್ಲದಾತೆ ...ಕೊಳ್ಳಬಹುದು. ಈ ಗುಣಗಳು ಚೀಫ್ ಕಮಿಶನರಲ್ಲಿ ತುಂಬಾ ಇದೆಯೆಂತ ತಿಳಿಯುತ್ತದೆ. ಸಾಮಾನ್ಯ ಪ್ರಸಂಗದ ತಿಳುವಳಿಕೆಯಿಂದ ಪ್ರಪಂಚವನ್ನೇ ಸ್ನೇಹಿತನನ್ನಾಗಿ ಮಾಡಿಕೊಳ್ಳಬಹುದೆಂಬ ನಾಣ್ನುಡಿ ನಿಜವಾದದ್ದು.

"ಬೆಂಗಳೂರು ಡೆಯಿಲಿ ಪೋಸ್ಟ್"

ಮುಖ್ಯ ವರ್ತಮಾನಗಳು.

ಮಹಾತ್ಮ ಗಾಂಧಿಯವರಿಗೂ, ವೈಸರಾಯರಿಗೂ ಹದಿನೈದು ಗಂಟೆಯ ಕಾಲ ಸಂಭಾಷಣೆ ನಡೆದು ರಾಜಿ ಒಪ್ಪಂದವಾಗಿದೆ.

ಹಿಂದೂದೇಶದಲ್ಲೆಲ್ಲಾ ಒಟ್ಟಾರೆ ಭೂಲೋಕಕ್ಕೆಲ್ಲಾ ಈ ರಾಜಿ ಶರತ್ತುಗಳು ಸಂತೋಷವನ್ನುಂಟುಮಾಡಿದೆ.

ರಾಜಿ ಪಂಚಾಯಿತಿ ತಪಸೀಲ್ ಕೂಡಲೇ ಪ್ರಕಟನೆಯಾಗುತ್ತೆ.

ಸಮುದ್ರ ಕರಾವಳಿಯಲ್ಲಿರುವ ಜನರಿಗೆ ಉಪ್ಪು ಮಾಡಿ ಮಾರುವ ಸ್ವಾತಂತ್ರ್ಯವು ಸಿಕ್ಕಿದೆ. ಪುನಃ ರೌಂಡ್ ಟೇಬಲ್ ಕಾನ್ಫರೆನ್ಸ್ ಇಂಡಿಯಾದಲ್ಲಿ ಕಾಂಗ್ರೆಸಿನವರೊಡನೆ ನಡೆಯುತ್ತೆ.

ಸರ್ಕಾರದವರು ಜಪ್ತಿಮಾಡಿದ ಗುಜರಾತಿನ ರೈತರ ಭೂಮಿ ಆಸ್ತಿಗಳು ಹಿಂದಕ್ಕೆ ಕೊಡಲ್ಪಡುತ್ತೆ.

ವೈಸರಾಯರೂ, ಗಾಂಧಿಜೀಯವರೂ ಒಪ್ಪಂದಕ್ಕೆ ತಾ. ೪ ರಲ್ಲಿ ರುಜು ಮಾಡಿದರು.

ಹಿಂದೂದೇಶದಲ್ಲಿರುವ ಪರದೇಶೀ ಬಟ್ಟೆಗಳೆಲ್ಲವನ್ನು ಹೊರಗಣ ದೇಶಕ್ಕೆ ಕಳುಹಿಸುವ ಏರ್ಪಾಡು ಮಾಡಿ ಹಿಂದೂದೇಶದಲ್ಲಿ ಆದ ಬಟ್ಟೆಗಳನ್ನೇ ಇಲ್ಲಿ ಉಪಯೋಗಿಸುವಂತೆ ಏರ್ಪಾಡು ನಡೆಯುತ್ತಾ ಇದೆ.

ಎಲ್ಲಾ ರಾಜಕೀಯ ಕೈದಿಗಳೂ, ಸತ್ಯಾಗ್ರಹ ಚಳವಳದಲ್ಲಿ ಸೇರಿ ಜೈಲಾದವರೂ ಈ ದಿನ ಬಿಡಲ್ಪಟ್ಟರು.

ಅನೇಕ ಕಡೆಗಳಲ್ಲಿ ಸೇಂದಿ ಮರಗಳೊಡನೆ ಯುದ್ಧ.

ದಕ್ಷಿಣ ಕೊಡಗಿನ ಮುಕ್ಕಾಲು ಗ್ರಾಮಗಳಲ್ಲಿ ಸೇಂದಿ ಕಟ್ಟುವುದು ನಿಂತು ಹೋಯಿತು.

ಇಬ್ಬರು ಸತ್ಯಾಗ್ರಹಿಗಳನ್ನು ಮೊನ್ನೆತಾನೇ ಜೈಲಿನಿಂದ ಬಿಟ್ಟರು.

ಗ್ರಾಮಗಳಲ್ಲಿ ಪ್ರಚಾರ ಕೆಲಸವು ರಭಸದಿಂದ ನಡೆದಿದೆ.

ಮಡಿಕೇರಿಯಲ್ಲಿ ೧೪ ಜನ ಕೈದಿಯಾಗಿದ್ದ ಸತ್ಯಾಗ್ರಹಿಗಳು ಈ ದಿನ ಬಿಡಲ್ಪಟ್ಟರು.

ಇವರನ್ನು ಜೈಲಿನಿಂದ ಮೆರವಣಿಗೆ ಮಾಡಿ ಕರೆದುಕೊಂಡು ಹೋಗಿ ಮಾರ್ಕೆಟ್ ಬಳಿ ಅಭಿನಂದಿಸಲು ಪಬ್ಲಿಕ್ ಮೀಟಿಂಗು.

ವೀರರಾಜಪೇಟೆಯಲ್ಲಿ ರಾಜಿ ಒಪ್ಪಂದದ ವಿಷಯ ತಿಳಿದ ಕೂಡಲೇ ಪಬ್ಲಿಕ್ ಜನರ ಮತ್ತು ಸತ್ಯಾಗ್ರಹಿಗಳ ಮೆರವಣಿಗೆ.

ಇದೇ ತಾರೀಕು ೧೧ ರಲ್ಲಿ ಕೊಡಗಿನ ಸತ್ಯಾಗ್ರಹ ಮಂಡಳಿಯವರಿಗೆ ಪಬ್ಲಿಕಿನವರು ಸುಸ್ವಾಗತ ಮತ್ತು ಮಾನ್ಯಪತ್ರ ಒಪ್ಪಿಸುವ ಏರ್ಪಾಡು ಮತ್ತು ಈ ಬಾಬಿನ ವಿನಂತಿ.

ಗ್ರಾಮಗಳಲ್ಲಿ ಪ್ರಚಾರ ಕೆಲಸ.

ಗ್ರಾಮಾಂತರಗಳಲ್ಲಿ ಸತ್ಯಾಗ್ರಹಿಗಳು ಗ್ರಾಮಕ್ಕೆ 2 ...ಮನೆ ಮನೆ ತಿರುಗಿ ಸೇಂದಿ ಕಟ್ಟಿಸುವುದನ್ನು ನಿಲ್ಲಿಸ ...ಪ್ರಚಾರ ಕೆಲಸದಲ್ಲಿ ಅನೇಕರು ಕೆಲಸ ಮಾಡುತ್ತಿರುವರು. ಕೊಡಗಿನ ಎಲ್ಲಾ ಗ್ರಾಮಸ್ಥರೂ ಸೇಂದಿಯನ್ನು ಏಪ್ರಿಲ್‌ನಿಂದ ಸಂಪೂರ್ಣವಾಗಿ ನಿಲ್ಲಿಸಲು ಮಾಗ... ...ವರಲ್ಲದೆ ಆಗಾಗ್ಗೆ ಗ್ರಾಮಸ್ಥರೇ ತಕ್ಕ ಏರ್ಪಾಡ... ...ಲಿರುವರು. ಸತ್ಯಾಗ್ರಹಿಗಳ ಸೇವೆಯನ್ನು ಅಪೇಕ್ಷಿ... ...ಚಾರಣೆ ಗ್ರಾಮಸ್ಥರ ಅಪ್ಪಣೆಯಂತೆ ಇಬ್ಬರು ಸತ್ಯಾಗ್ರ...ಹಿಗಳು ಆ ಗ್ರಾಮದ ಮನೆಗಳನ್ನು ಸುತ್ತಿ ಈ ಪ್ರಚಾರ ...ಗಿರುವರು.

...ಡಂಗ ಪಿಕೆಟಿಂಗಿನಲ್ಲಿ ಜೈಲಿಗೆ ಹೋದ ಕೈಬಿಲಿರ ಅ...ವರು ಮತ್ತು ಮಲ್ಲೆಂಗಡ ಮಂದೈಯ್ಯನವರು ಈ ಇ... ಸತ್ಯಾಗ್ರಹಿಗಳು ತಮ್ಮ ಅವಧಿಯ ಸಜೆಯನ್ನು ಅನುಭವಿಸಿ ...ತರಾಗಿ ಬಂದರು. ದೇಶಸೇವಾ ನಿರತರಾದ ಇವರನ್ನು ದೇಶೀಯರ ಕುಡುಕತನವನ್ನು ನಿಲ್ಲಿಸಲು ಜೈಲ... ...ನ್ನು ಕೈಕೊಂಡರಾಗಿದ್ದು ಕೂಡ ಕೊಡಗಿನ ಎಲ್ಲಾ ಭಾಗ...ದಲ್ಲಿಯೂ ಸಂಪೂರ್ಣವಾಗಿ ಸೇಂದಿ ಸಾರಾಯಿ ನಿಲ್ಲದ ...ದು ಶೋಚನೀಯ. ಈ ಸತ್ಯಾಗ್ರಹಿಗಳು ಪುನಃ ಕೆಲಸದಲ್ಲಿ ಸೇರುವರು.

ಗೋಣಿಕೊಪ್ಪಲು

1—3—31ರಲ್ಲಿ ಗೋಣಿಕೊಪ್ಪಲಿನಲ್ಲಿ ದೊಡ್ಡದಾದ ಒಂದು ಮೀಟಿಂಗ ನಡೆಯಲಾಯಿತು. ಮೆ ಗಳಾದ ಅಜ್ಜಮಾಡ ಮಂದಪ್ಪನವರೂ, ಬಿದ್ದಮಾಡ ಮಾದೈಯ್ಯನವರೂ ಮುಂತಾದವರು ಪ್ರಚಾರ, ಸರಾಯಿ ನಿಷೇಧ ವಿಷಯ ವಿಷದವಾಗಿ ಭಾಷಣ ಮಾಡಿದರು.

ಬಿಳುಗುಂದ.

೭—3—31ರಲ್ಲಿ ಬಿಳುಗುಂದ ಗ್ರಾಮಸ್ಥರು ಸೇರಿ ಸೇಂದಿ ಸಾರಾಯಿ ಎನ್ನು ಈ ವರ್ಷದಿಂದ ನಿಲ್ಲಿಸುವ, ಹಾಗೆ ... ಗ್ರಾಮಕ್ಕೆ 4 ಜನ ಯುವಕರನ್ನು ನೇಮಕ ಮಾಡಿದ್ದು ... ಸತ್ಯಾಗ್ರಹಿಗಳ ಸಹಾಯವಾಗಿ ದ್ರವ್ಯ ಸಹಾಯಕ್ಕೂ ... ತಕ್ಕ ಏರ್ಪಾಡು ಮಾಡಿರುವರು.

ಮಡಿಕೇರಿ

ತಾ 3—3—31ರಲ್ಲಿ ಬೆಳಿಗ್ಗೆರು ಗ್ರಾಮಸ್ಥರು ಸೇರಿದಲ್ಲಿ ಮೆ. ಗಳಾದ ಅಜ್ಜಮಾಡ ಮಾದಪ್ಪನವರು ಮತ್ತು ಕೊಳ್ಳಿಮಾಡ ಐಯ್ಯಪ್ಪನವರು ಈಗಿನ ಹೋರಾಟದ ವಿಷಯ ಮಾತಾಡಿದ್ದಲ್ಲದೆ ಚಂದಾ ವಸೂಲಾತಿಗಾಗಿ ಏರ್ಪಾಡು ಮಾಡಲಾಗಿದೆ.

ಶ್ರೀಮಂಗಲ.

ಈ ತಾ. 1ರಂದು ತಾವಳಗೇರಿ ಗ್ರಾಮದಲ್ಲಿ 15 ಜನ ಸತ್ಯಾಗ್ರಹಿಗಳು ಸೇರಿ ಗ್ರಾಮದಲ್ಲಿ ರಾಷ್ಟ್ರೀಯ ಧ್ವಜಾರೋಪಣ ನಡಿಸಿ 'ಕೊಡಗು' ಪತ್ರಿಕೆಯನ್ನು ಓದುವುದೂ, ಗ್ರಾಮಸ್ಥರೆಲ್ಲರನ್ನೂ ಖಾದಿ ಒಟ್ಟೆ ತೊಂಡುಕೊಳ್ಳುವಂತೆಯೂ, ಸೇಂದಿ ಕಟ್ಟಬಾರದಾಗಿಯೂ, ಸಾರಾಯಿ ಕುಡಿಯುವುದಾಗಲೀ, ತರಿಸುವುದಾಗಲೀ ಕಂಡವರಿಗೆ ದಂಡ ಮಾಡುವುದಲ್ಲದೆ ಬಹಿಷ್ಕಾರ ಹಾಕಬೇಕೆಂಬದಾಗಿಯೂ ಸಹ ತೀರ್ಮಾನಿಸಿರುತ್ತಾರೆ. ಬೇರೆ ಗ್ರಾಮಗಳಿಗೆ ಹೋಗಿ ಪ್ರಚಾರ ನಡಿಸಲು ಏರ್ಪಾಡು ಮಾಡಲಾಗಿದೆ.

ತಾ. 27—2—31ರಲ್ಲಿ ಶ್ರೀಮಂಗಲನಾಡಿನ ತಾವಳಗೇರಿ, ಪೆಟ್ಟಿಗೇರಿ ಗ್ರಾಮಸ್ಥರು ಸೇರಿ ಒಂದು ಮೀಟಿಂಗು ಮಾಡಿದಲ್ಲಿ ಇನ್ನು ಮುಂದೆ ಗ್ರಾಮಸ್ಥರ್ಯಾರೂ ಬೈನೆ ಮರ ಕಟ್ಟುವದಾಗಲೀ, ಸಾರಾಯಿ ಅಂಗಡಿಯಿಂದ ಗ್ರಾಮಸ್ಥರ್ಯಾರೂ ಖಂಡಿತವಾಗಿಯೂ ಸಾರಾಯಿ ಕುಡಿಯುವುದನ್ನೂ, ತರಿಸುವುದನ್ನೂ ಯಾರಾದರೂ ಕಂಡರೆ ಅಂಥವರನ್ನು ಖಂಡಿತವಾಗಿ ಬಹಿಷ್ಕಾರವನ್ನು ಹಾಕುವುದಾಗಿಯೂ ಮತ್ತು ಇನ್ನು ಮುಂದೆ ಶುಭಾಶೋಭಾನಗಳಲ್ಲಿ ಮಧು ಮಾಂಸವನ್ನು ಕೊಡಿಸಬಾರದಾಗಿಯೂ, ಬಾಳಿಕೆ ಹೋಗುವ ವಧುವಿಗೆ ಮೂರಾಳಿನ ಮೆರೆಗಿಂತ ಹೆಚ್ಚು ಕೊಡಬಾರದೆಂದೂ ಸಹ ತೀರ್ಮಾನಿಸಿಕೊಂಡಿರುತ್ತಾರೆ. ಈ ಮೇಲಿನ ಶರತ್ತಿಗೆ ತಪ್ಪಿ ನಡೆವವರನ್ನು ಬಹಿಷ್ಕಾರ ಹಾಕುವುದಲ್ಲದೆ ಬೇರೆ ನಾಡಿನವರಿಗೂ ಸಹ ತಿಳಿಸುವುದಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಇತ್ತೀಚೆ ಕಾಸನೂರು ಗ್ರಾಮಸ್ಥರೂ ಸಹ ತೀರ್ಮಾನಿಸಿಕೊಂಡಿರುತ್ತಾರೆ. ಅಲ್ಲದೆ ತಾವಳಗೇರಿ ಗ್ರಾಮದಲ್ಲಿ 15 ಜನ ಸತ್ಯಾಗ್ರಹಿಗಳು ಸೇರಿ ವಾರಕ್ಕೊಂದು ದಿನ ಬೆಳಿಗ್ಗೆ 8 ಗಂಟೆಗೆ ರಾಷ್ಟ್ರೀಯ ಧ್ವಜಾರೋಹಣ ಮಾಡಿ ಗೀತೆಯನ್ನು ಹಾಡಿ 'ಕೊಡಗು' ಪತ್ರಿಕೆ ಓದುವುದೂ, ಎಲ್ಲವರೂ ಬೇರೆ ಗ್ರಾಮಗಳಲ್ಲಿಂತಕ್ಕ ಸೇಂದಿ ಇಳಿಸುವುದನ್ನು ನಿಲ್ಲಿಸಲಿಕ್ಕಾಗಿ ಪ್ರಚಾರ ಕೆಲಸ ನಡಸುವುದೇ ಮೊದಲಾದ ಕೆಲಸಗಳನ್ನು ಕೈಕೊಂಡಿರುತ್ತಾರೆ.

ಸೋಮವಾರಪೇಟೆ,

ಸತ್ಯಾಗ್ರಹ ಶಿಬಿರದ ಅಧಿಪತಿ ಮೆ. ಮನೆಯಪಂಡ ಮಾದಪ್ಪನವರು ಇತರ ಸತ್ಯಾಗ್ರಹಿಗಳೊಡನೆ ಗ್ರಾಮಗಳಿಗೆ ಸುತ್ತಿ ಅನೇಕರನ್ನು ಸೇಂದಿ ಕಟ್ಟಿಸದಂತೆ ಪ್ರೋತ್ಸಾಹಿಸಿದ್ದಾರೆ. ಗ್ರಾಮನಿವಾಸಿಗಳೆಲ್ಲರೂ ಬಹಳ ಪ್ರೋತ್ಸಾಹ ಕೊಟ್ಟಿರುವರೆಂದು ವರ್ತಮಾನ.

ಕಡಿಯತ್ತನಾಡು.

ಬಾವಲಿ, ಕೊಣಂಜಗೇರಿ, ಕೈಕಾಡು ಮತ್ತು ಕಿರುಂದಾಡು ಗ್ರಾಮಗಳಲ್ಲಿರುವ ಬೈನೆ ಮರಗಳ ಕೈಗಳನ್ನು ಪೂರ್ತಿಯಾಗಿ ಅಲ್ಲಿಯ ಸತ್ಯಾಗ್ರಹಿಗಳೂ, ಮಾಲೀಕರೂ ಕಡಿದು ಕಡಿಸಿರುವರು. ಸತ್ಯಾಗ್ರಹಿ ಮೆ ಕಾರಿರ ಐಯ್ಯಣ್ಣನವರು ಬಲಮುರಿಗೆ ಹೋಗಿ ಅಲ್ಲಿ ಮೆ. ಬೆಳ್ಳಚೆಟ್ಟಿರ ಮಂದಣ್ಣನವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿಸಿದಲ್ಲಿ ಗ್ರಾಮದವರು ಇನ್ನು ಮುಂದಕ್ಕೆ ಸೇಂದಿಯನ್ನು ಕಟ್ಟಿಸಲಿಕ್ಕೆ ಬೈನೆ ಮರಗಳನ್ನು ಕೊಡುವುದಿಲ್ಲವಾಗಿ ವಾಗ್ದಾನ ಮಾಡಿ ಕೂಡಲೇ ಗ್ರಾಮದಲ್ಲಿದ್ದ ಸೇಂದಿಯನ್ನು ನಿಲ್ಲಿಸಿದರೆಂದು ಒಬ್ಬರು ಬರೆದಿರುತ್ತಾರೆ.

ನಾಪೋಕ್ಲು.

ಅನೇಕರು ಸೇಂದಿ ಕಟ್ಟಲಿಕ್ಕೆ ಬಿಡಬಾರದೆಂದು ಮೀಟಿಂಗ್ ಮಾಡುತ್ತಾ ಇದ್ದರೂ ನಾಪೋಕ್ಲು ಮತ್ತು ಕೊಳಕೇರಿ ಗ್ರಾಮಸ್ಥರು ಇನ್ನು ಸೇಂದಿ ನಿಲ್ಲಿಸುವ ಏರ್ಪಾಡು ಮಾಡಲಿಲ್ಲವೆಂದೂ ಸತ್ಯಾಗ್ರಹಿಗಳು ಒಡನೇ ಅಲ್ಲಿಗೆ ಪ್ರಚಾರ ಕೆಲಸವನ್ನು ಹೋಗಿ ಮಾಡಬೇಕೆಂತಲೂ ಅಲ್ಲಿಯವರೊಬ್ಬರು ಬರೆದಿರುತ್ತಾರೆ.

---

14 ಸತ್ಯಾಗ್ರಹಿಗಳನ್ನು ಬಿಟ್ಟದ್ದು.

ಮಡಿಕೇರಿ ಜೈಲಿನಲ್ಲಿದ್ದ 14 ಸತ್ಯಾಗ್ರಹಿಗಳಾದ ಮೆ. ಅಜ್ಜಿಕುಟ್ಟಿರ ಚಿಣ್ಣಪ್ಪನವರು, ತಮ್ಮಯ್ಯನವರು, ಕಾಳೆಯಂಗಡ ಚಿಣ್ಣಪ್ಪನವರು, ಪೊನ್ನಿಮಾಡ ಪೂಚೈಯ್ಯನವರು, ಕಡೇಮಾಡ ನಾಣಪ್ಪನವರು, ಮೇದೆಯ್ಯನವರು, ಐಯ್ಯಣ್ಣನವರು, ಚಕ್ಕೆರ ಪೊಣ್ಣೈಯ್ಯನವರು, ಮಾಚಿಮಾಡ ಕುಶಾಲಪ್ಪನವರು, ಸಣ್ಣುವಂಡ ಸುಬ್ಬಪ್ಪನವರು, ತೀತಮಾಡ ಭೀಮೈಯ್ಯನವರು, ಮಂಡೇಪಂಡ ಕಾರ್‍ಯಪ್ಪನವರು, ಬಿ. ಜಿ. ಗಣಪೈಯ್ಯನವರು, ಅಲೇಮಾಡ ಅಪ್ಪಣ್ಣನವರು. ಈ ದಿನ ಜೈಲಿನಿಂದ ಗಾಂಧಿಗೂ ಮತ್ತು ವೈಸರಾಯರಿಗೂ ಆದ ಕರಾರಿನನುಗುಣವಾಗಿ ಬಿಡಲ್ಪಟ್ಟಿರುವರು. ಇವರು ಬಿಡಲ್ಪಟ್ಟ ಕೂಡಲೇ ಇವರನ್ನು ಸತ್ಯಾಗ್ರಹಿಗಳು ಮತ್ತು ಪಬ್ಲಿಕ್ ಜನರು ಕೋಟೆಯ ಬಾಗಿಲಿನಿಂದ ಮೆರವಣಿಗೆಯ ಮೂಲಕ ಜಯ ಘೋಷದೊಡನೆ ಕರೆದುಕೊಂಡು ಹೋಗಿ ಮಾರ್ಕೆಟ್ ಬಳಿ ಅಭಿನಂದಿಸಲು ಮೆ. ಮುಂ ... ರವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿದರು. ಮೀಟಿಂಗಿನಲ್ಲಿ ಅಧ್ಯಕ್ಷರೂ, ಮೆಗಳಾದ ಕೆ. ಪಿ. ಚಿಣ್ಣಪ್ಪನವರು, ಪಾಂಡಂಡ ಮುತ್ತಣ್ಣನವರೂ, ಅಜ್ಜಮಾಡ ಮಾದಪ್ಪನವರೂ, ಅಜ್ಜಿಕುಟ್ಟಿರ ಚಿಣ್ಣಪ್ಪನವರು, ಕಾಳೆಯಂಗಡ ಚಿಣ್ಣಪ್ಪನವರೂ ಮಾತಾಡಿದರು.

ವೀರರಾಜಪೇಟೆಯಲ್ಲಿ ಸತ್ಯಾಗ್ರಹಿಗಳು ಮತ್ತು ಪಬ್ಲಿಕ್ ಜನರು ರಾಜಿವರ್ತಮಾನವನ್ನು ಕೇಳಿದ ಕೂಡಲೇ ಮೆರವಣಿಗೆಯಂತ ಮೀಟಿಂಗೊಂದನ್ನು ಕಳೆದ ತಾ. 5 ರಲ್ಲಿ ಮಾಡಿದರು.

ಕೊಡಗು ಸತ್ಯಾಗ್ರಹ ಮಂಡಳಿಯವರ ಕೆಲಸವನ್ನು ಅಭಿನಂದಿಸಲು ಮತ್ತು ಅವರಿಗೆ ಮಾನ್ಯಪತ್ರಿಗಳನ್ನೊಪ್ಪಿಸಲು ಈ ತಾರೀಕು 11 ನೇ ದಿನ ಬುಧವಾರ ವೀರರಾಜಪೇಟೆಯಲ್ಲಿ ದೇಶೀಯ ಎಲ್ಲಾ ಜನರ ಮಹಾಸಭೆಯು ಸೇರುತ್ತೆ. ಎಲ್ಲರೂ ಆ ವಿಶೇಷ ಕಾರ್ಯಕ್ಕೆ ದಯಮಾಡಿಸಬೇಕಾಗಿದೆ.

ಕೊಡಗಿನ ಸತ್ಯಾಗ್ರಹಿಗಳಲ್ಲಿ ವಿನಂತಿ.

ಕಾಂಗ್ರೆಸಿನವರು ಖಾಯಿದೆ ಭಂಗದ ಎಲ್ಲಾ ಚಳವಳವನ್ನು ನಿಲ್ಲಿಸಬೇಕೆಂದು ತೀರ್ಮಾನಿಸಿದ ತಂತಿ ವರ್ತಮಾನವನ್ನು ನಮಗೆ ಕಳುಹಿಸಿರುತ್ತಾರೆ. ಆದ್ದರಿಂದ ಎಲ್ಲರೂ ಖಾಯಿದೆ ಭಂಗದ ಎಲ್ಲಾ ಚಳವಳವನ್ನು ನಿಲ್ಲಿಸಬೇಕೆಂದು ಈ ಮೂಲಕ ಕೋರಲಾಗಿದೆ. (ಸಂ.)

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಕೌನ್ಸಿಲು ವಿೂಟಿಂಗು ಈ ತಾ 13ರಲ್ಲು ನಡೆಯುತ್ತೆ.

ಬಲಮುರಿ ಮಹಾದೇವರ ವಾರ್ಷಿಕೋತ್ಸವವು ಈ ತಾರೀಕು 10 ರಲ್ಲಿ ನಡೆಯುತ್ತೆ.

ಖಾಲಿ ಬಿದ್ದಿರುವ ಸ್ಥಳಕ್ಕಾಗಿ ಮಡಿಕೇರಿ ಮುನಿಸಿಪಲ್ ಚುನಾವಣೆಯು ಈ ತಾರೀಕು 21 ರಲ್ಲಿ ಆಗುತ್ತೆ. ಕಳೆದ ವಾರ ತಾರೀಕು 31 ರಲ್ಲಿ ಆಗುತ್ತದೆಂಬುದಾಗಿ ಬರೆದದ್ದು ಪ್ರಿಂಟಿಂಗ್ ತಪ್ಪಾಗಿದೆ.

ಮಡಿಕೇರಿ ಮುನ್ಸಿಪಾಲಿಟಿಯಲ್ಲಿ ಕೊಡಗರ ಸರವಾಗಿ ಖಾಲಿಯಾಗಿರುವ ಒಂದು ಸ್ಥಳಕ್ಕೆ ಮೆ. ಪಾಲೇಕಂಡ ಮುತ್ತಣ್ಣನವರೂ, ಕೋದಂಡ ಮೆ. ಪೂವಯ್ಯನವರ ಮಗ ಬೆಳ್ಯಪ್ಪನವರೂ ನಿಂತಿರುವರು.

ಮೆ. ಕರವಂಡ ಚಂಗಪ್ಪನವರು ದಕ್ಷಿಣ ಕೊಡಗಿನ ಸುಭೇದಾರರಾಗಿಯೂ, ಮೆ. ಪಾಲೇಕಂಡ ಚಂಗಪ್ಪನವರು ಟ್ರೆಜರೀ ಆಫೀಸರು ಮತ್ತು ಮಡಿಕೇರಿ ಸಬ್ ಮೇಜಿಸ್ಟ್ರೇಟರಾಗಿ ವರ್ಗ ಮಾಡಲ್ಪಡುತ್ತಾರೆಂದು ವರ್ತಮಾನ.

ಕಳೆದ ವಾರ ಸೋಮವಾರಪೇಟೆಯಲ್ಲಿ ಶನಿವಾರಸಂತೆ ಮತ್ತು ಕೊಡ್ಲಿಪೇಟೆ ಸಾರಾಯಿ ಅಂಗಡಿಗಳು ಮಾಮೂಲಿಗಿಂತ ಕಳೆದ ವರ್ಷಕ್ಕಿಂತ ಸುಮಾರು ನಾನೂರು ರೂಪಾಯಿ ಹೆಚ್ಚಾಗಿ ಹರಾಜಿನಲ್ಲಿ ಅಂಗಡಿಗಳು ಕೂಗಲ್ಪಟ್ಟವು ಎಂಬುದಾಗಿ ವರ್ತಮಾನ.

ಮಡಿಕೇರಿ ನಾಪು ಮದೆಗ್ರಾಮದ ಪಟೇಲ ಮನೆಯವರ ಐನ್ ಮನೆಗೆ ಕಳೆದ ತಾ. 1 ನೇ ದಿನ ಮಧ್ಯ ರಾತ್ರಿಯಲ್ಲಿ ಆಕಸ್ಮಿಕವಾಗಿ ಬೆಂಕಿ ಬಿದ್ದು ಪೂರ ಬೆಂದು ಹೋಗಿರುವುದಾಗಿಯೂ, ಸುಮಾರು 3,000 ರೂಪಾಯಿಗಳ ವರೆಗೆ ನಷ್ಟವಾಗಿದೆಂತಲೂ ತಿಳಿಸಲು ವ್ಯಸನ ಪಡುತ್ತೇವೆ.

ಪೊನ್ನಂಪೇಟೆಯಲ್ಲಿ ಒಂದೆರಡು ಕಾಫಿ ಹೋಟೆಲುಗಳು ಇವೆ. ಇಲ್ಲಿಯ ತಿಂಡಿ ತೀರ್ಥಗಳು ಮನುಷ್ಯರು ತಿನ್ನಲಿಕ್ಕೆ ಆರೋಗ್ಯವಾಗಿದೆಯೆಂದೂ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಜನರ ಆರೋಗ್ಯವನ್ನು ಕೆಡಿಸಿಕೊಳ್ಳದ ರೀತಿ ಈ ಹೋಟೆಲ್‌ಗಳನ್ನು ಸಂದರ್ಶಿಸಿ ತಕ್ಕ ಏರ್ಪಾಡು ಮಾಡಬೇಕೆಂದೂ ಒಬ್ಬರು ಬರೆಯುತ್ತಾರೆ.

ಸಬ್ ಅಸಿಸ್ಟೆಂಟ್ ಸರ್ಜನ್ನರು ಮೆ. ಗಳಿಂದ ಪಾಲೇಟಿರ ಮುತ್ತಣ್ಣನವರನ್ನು ಸಾಪೋಕ್ಲಿಗೂ, ರಾಮಸ್ವಾಮಿ ಐಯ್ಯರವರನ್ನು ಮಡಿಕೇರಿಗೂ, ನಾಯಕರವರನ್ನು ಫ್ರೇಜರ್ ಪೇಟೆಗೂ, ಪಿ. ಯಂ. ಗಣಪತಿಯವರನ್ನು ಶನಿವಾರಸಂತೆ ಹೊಸ ಆಸ್ಪತ್ರೆಗೂ ಮತ್ತು ಪಾಲೆಟ್ಟಿರ ಯಂ. ಗಣಪತಿಯವರನ್ನು ಹೊಸದಾಗಿ ಮಡಿಕೇರಿಗೂ ವರ್ಗಾವರ್ಗ ಆಗಿದೆಯೆಂದು ತಿಳಿಯುತ್ತೇವೆ.

ಮಡಿಕೇರಿ ಕೊಡಗು ಜಮೀನ್ದಾರರ ಸಂಘದ ಮಾ 'ನಲ್ಲಿ ಮೈಸೂರ್ ವಿದ್ವಾನ್ ಶ್ರೀಕಂಠ ಶಾಸ್ತ್ರಿಗಳವರು ಮತ್ತು ಅವರ ಮಗ 15 ವರ್ಷ ಪ್ರಾಯದ ಸೀತಾರಾಮಯ್ಯನೆಂಬವನು ಸಹ ಹರಿಕಥೆಯನ್ನು ಬಹಳ ಮನೋಹರವಾಗಿಯೂ ಸ್ವಾರಸ್ಯವಾಗಿಯೂ ಕಳೆದ ಒಂದು ವಾರದಿಂದ ಅಭಿನಯಿಸಲ್ಪಟ್ಟು ನಡೆಸುವ ಮಾಡಿದ್ದಾರೆ. ಮಡಿಕೇರಿ ನಿವಾಸಿಗಳು ಹರಿಕಥೆಗೆ ಇಷ್ಟು ಪ್ರೋತ್ಸಾಹ ಕೊಟ್ಟದ್ದು ಇದೇ ಮೊದಲು. ಹಾಲ್‌ನಲ್ಲಿ ಜಾಗವಿಲ್ಲದೆ ಪ್ರೇಕ್ಷಕರಿಗೆ ಬಹಳ ತೊಂದರೆಯಾಗಿತ್ತು.

ಕಳೆದ 37 ವರ್ಷಗಳಿಂದ ಜೀರ್ಣದಲ್ಲಿದ್ದ ನಲ್ಲಚ ಇಗ್ಗುತಪ್ಪ ದೇವರ ದೇವಾಲಯವನ್ನು ಕಳೆದ ವರ್ಷ ಗ್ರಾಮಸ್ಥರು ಬ್ರಹ್ಮಕಲಶ ವಸ್ತ್ರೈರೆ ಮಾಡಿಸಿದ್ದರ ಪ್ರತಿ ಫಲವಾಗಿ ಕಳೆದ ಬುಧವಾರ ಇದರ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತೆಂದೂ ಬಂಡಾರಕ್ಕೆ 150—0—0 ರೂಪಾಯಿಯೂ ಮಾಲುಗಳು 97—10—9 ಪೈಯೂ ಬಿದ್ದಿರುವುದಾಗಿ ಒಬ್ಬರು ತಿಳಿಸಿರುತ್ತಾರೆ. ಅದೇ ದಿನ ಪಾಡಿ ದೇವಸ್ಥಾನದಲ್ಲಿಯೂ ನಸು ಮಾಮಲು ಮೇರೆ ಕಲಾಡಿಚ್ಚ ಹಬ್ಬವು ಬಹಳ ವಿಜೃಂಭಣೆಯಿಂದ ನಡೆದಿದೆ.

ಪೊನ್ನಂಪೇಟೆಯಲ್ಲಿ ಎಷ್ಟೋ ವರ್ಷಗಳಿಂದ ಸಂಬಗೆಯಂಗಡಿ ವ್ಯಾಪಾರ ಮಾಡುತ್ತಿದ್ದ ಚೆಂಬುಕುಟ್ಟಿಯವರು ಶಿವರಾತ್ರಿಗೆ ಇರ್ಪು ಜಾತ್ರೆಗೆ ಹೋದವರು ಆ ಕಡೆಯಿಂದಲೇ ಇಲ್ಲಿಯ ಅನೇಕರಿಂದ ಬಹಳ ಸಾಲವಾಗಿ ವ್ಯಾಪಾರ ಮಾಡಲು ಹಣಪಡಕೊಂಡು ಪರಾರಿಯಾಗಿದ್ದಾರೆಂತ ತಿಳಿಯುತ್ತೇವೆ.

ಪೊನ್ನಂಪೇಟೆಯಲ್ಲಿ ಭತ್ತದ ಕ್ರಯವು ಗಾಡಿಗೆ ಒಂದೇ 40 ರೂಪಾಯಿ ಇರುವುದರಿಂದ 100 ರಲ್ಲಿ 95 ಮಂದಿ ಕಂದಾಯ ಕಟ್ಟಲಿಲ್ಲವೆಂತಲೂ, ಒಂದೆರಡು ಕಂತುಗಳು ಹೆಚ್ಚಾಗಿ ಕೊಡದಿದ್ದಲ್ಲಿ ಅನೇಕ ತರದ ಕಷ್ಟ ನಷ್ಟಗಳಿಗೆ ಜನರು ಗುರಿಯಾಗುತ್ತಾರೆಂದೂ ಒಬ್ಬರು ತಿಳಿಸಿರುತ್ತಾರೆ.

ಕೊಡಗಿನ ಜನ ಸಂಖ್ಯೆಯು ಈ ಖಾನೇಸುಮಾರಿಯಲ್ಲಿ ಕಡಿಮೆಯಾಗಿ ಇದರ ತಪಶೀಲ್ ಕೊಡಲಾಗಿದೆ.

ಜನರ ಸಂಖ್ಯೆ.

	ಪುರುಷರು	ಸ್ತ್ರೀಯರು	ಜುಮ್ಲ.
1901	803,49	80,607	16,09,56
1911	97,279	77,692	17,49,76
1921	89,500	74,337	16,38,38
1931	90,434	72,655	16 30,89

ಒಟ್ಟಾರೆ ಕಳೆದ ಖಾನೇಸುಮಾರಿಗಿಂತ 749 ಜನರು ಕಡಿಮೆಯಾಗಿದ್ದಾರೆ.

ಹಿಂದೂದೇಶ.

ಸಿಬ್ಬಂದಿ ಕೋತೆಯನ್ನು ಮಾಡಬೇಕೆಂದು ಎಲ್ಲಾ ಸರಕಾರದವರೂ ಏರ್ಪಾಡು ಮಾಡುತ್ತಲಿರುವರು.

ಬಂಗಾಳದಲ್ಲಿ ಈ ಖಾನೇಸುಮಾರಿಯಲ್ಲಿ ನೂರಕ್ಕೆ ಸರಾಸರಿ ಏಳು ಜನರಂತೆ ಜನ ಸಂಖ್ಯೆ ಹೆಚ್ಚಿದೆಯೆಂದು ತಿಳಿಯಬರುತ್ತೆ.

ಮೌಲಾನಾ ಶೌಕತ್ತಾಲಿಯವರು ಇದೇ ತಾ. 6 ರಲ್ಲಿ ಕರಾಚಿಗೆ ಬಂದು ಅದೇ ದಿನ ಮಹಾತ್ಮರ ಭೇಟಿಗಾಗಿ ಡೆಲ್ಲಿ ಪಟ್ಟಣಕ್ಕೆ ಹೊರಡುವರು.

ಬೊಂಬಾಯಿಯ ವಾರ್ ಕೌನ್ಸಿಲು ಮೆಂಬರುಗಳಿಗೆ ಆರಾರು ತಿಂಗಳ ಕಠಿಣ ಸಜೆ ಉಪ್ಪು ಮಾಡುವುದಕ್ಕೆ ಪ್ರಯತ್ನಪಟ್ಟದ್ದಕ್ಕಾಗಿ ವಿಧಿಸಲಾಗಿದೆ.

ಈ ವರ್ಷದಲ್ಲಿ ಹಿಂದೂಸ್ಥಾನ ಸರಕಾರಕ್ಕೆ ಒಟ್ಟಾರೆ ಆದಾಯದಲ್ಲಿ ಹದಿನೆಂಟು ಕೋಟಿ ರೂಪಾಯಿ ಕಡಿಮೆಯಾಗುವುದಾಗಿ ಅಂದಾಜು ಮಾಡಲಾಗಿದೆ.

ಪ್ರತಾಪ ಘಡದಲ್ಲಿ ರೈತರು ಸಭೆ ನಡೆಸಿಕೊಂಡಿರುವಾಗ ಪೋಲೀಸರು ಗುಂಡು ಹಾರಿಸಿ ಎಷ್ಟೋ ಜನರನ್ನು ಗಾಯಪಡಿಸಿದ್ದಾರೆಂಬ ದುಃಖವಾರ್ತೆಯು ಬಂದಿದೆ.

ಮದ್ರಾಸ್ ಆಧಿಪತ್ಯದಲ್ಲಿ ಈ ಖಾನೇಸುಮಾರಿಯಲ್ಲಿ ಜನ ಸಂಖ್ಯೆಯು 46,731,850. ಈ ಪೈಕಿ 20,8?4,022 ಗಂಡಸರೂ 21,441,326 ಹೆಂಗಸರೂ ಆಗಿದ್ದಾರೆ.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಜೈಲಿನಿಂದ ಬಿಡುಗಡೆ ಮಾಡಲ್ಪಟ್ಟಿರುವರು. ಅವರಿಗೆ ಬೊಂಬಾಯಿ ಜನರು ಸುಸ್ವಾಗತವನ್ನೀಡಿದರು.

ಕಳೆದ ವಾರ ನಡೆದ ಖಾನೇಸುಮಾರಿಯಲ್ಲಿ ಬೊಂಬಾಯಿ ಪಟ್ಟಣದಲ್ಲಿ ಹತ್ತು ವರ್ಷಗಳಿಂದ ಸುಮಾರು ಹತ್ತು ಲಕ್ಷಕ್ಕೆ ಮೀರಿ ಜನ ಸಂಖ್ಯೆ ಹೆಚ್ಚಾಗಿದೆಯೆಂದು ತಿಳಿದು ಬಂದಿದೆ.

ಹೊಸ ಡಿಲ್ಲಿ ಪಟ್ಟಣಕ್ಕೆ ಒಟ್ಟಾರೆ ಹದಿನಾಲ್ಕು ಕೋಟಿ ರೂ ಖರ್ಚಾಗಿದೆ. ರಚನೆ ಮಾಡಿದ ಇಬ್ಬರು ಯೂರೋಪಿಯನ್ನರಿಗೆ ಮೂವತ್ತೊಂಬತ್ತು ಲಕ್ಷ ರೂ ಸಂಬಳವು ಕೊಡಲ್ಪಟ್ಟಿದೆ.

ಇಂಡಿಯಾ ಸರಕಾರದ ಸಾಂಪತ್ತಿಕ ಮಂತ್ರಿಗಳು ತಂದ ಆದಾಯ ವೆಚ್ಚದ ಅಂದಾಜು ಪಟ್ಟಿಯಲ್ಲಿ ಈ ವರ್ಷ ಮೂವತ್ತು ನೂರು ಕೋಟಿ ರೂ. ನಷ್ಟವಾಗುವುದೆಂದು ಊಹಿಸಿದ್ದಾರೆ.

ಭಗತ್‌ಸಿಂಗ್ ಮೊದಲಾದವರನ್ನು ಗಲ್ಲಿಕ್ಕೆ ಹಾಕುವ ಪ್ರಾಣವನ್ನುಳಿಸಬೇಕೆಂದು 11,000 ಜನರು ರುಜು ಮಾಡಿದ ಅರ್ಜಿಯೊಂದನ್ನು ವೈಸ್‌ರಾಯರಿಗೆ ಬನಾರಸ್ ಪಟ್ಟಣದವರು ಕಳುಹಿಸಿರುವರು.

ಹಿಂದೂದೇಶದ ಅನೇಕ ಪಟ್ಟಣಗಳಲ್ಲಿ ಕಾಂಗ್ರೆಸ್ ಅನುಕೂಲದ ದೆಸೆಯಿಂದ ಖಾನೇಸುಮಾರಿಯನ್ನು ತೆಗೆಯುವುದಕ್ಕೆ ಆಗಿರುವುದಿಲ್ಲ. ಈ ಸಂದರ್ಭದಲ್ಲಿ ನಾಲವರಾರು ಜನರಿಗೆ ಶಿಕ್ಷೆಯಾಗಿದೆ.

ಹುಬ್ಬಳ್ಳಿಯಲ್ಲಿ ಸುಮಾರು 5000 ರೈತರು ಮೆ. ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ವಿೂಟಿಂಗು ಮಾಡಿ ಈ ವರ್ಷ ಸರಕಾರದವರು ಕಂದಾಯವನ್ನೆಲ್ಲಾ ಮಾಫಿಮಾಡಬೇಕೆಂದು ಠರಾವು ಮಾಡಿರುವರು.

ಮದ್ರಾಸಿನಲ್ಲಿ ಪಿಕೆಟಿಂಗ್ ಕೆಲಸವೂ, ದಸ್ತಗಿರಿಗಳೂ ಜೋರಾಗಿ ನಡೆಯುತ್ತಿದೆ. ದಿನಕ್ಕೆ ಇಪ್ಪತ್ತು, ಮೂವತ್ತು ಜನರು ದಸ್ತಗಿರಿ ಮಾಡಲ್ಪಡುವರು. ಇವರಲ್ಲಿ ಸ್ತ್ರೀಯರನೇಕರಿದ್ದಾರೆ. ಶಾಂತಿ ಪ್ರಧಾನದ ಬದಲು ಈಗ ದಸ್ತಗಿರಿ ಮಾತ್ರವಾಗಿದೆ.

ಒಸ್ಸೂರಿನಲ್ಲಿ ತಯಾರಾಗುವ ಸಿಗರೇಟುಗಳ ಮೇಲೆ 1000ಕ್ಕೆ 1—0—0 ರೂಪಾಯಿ ಸುಂಕವೂ, ಪರದೇಶದಿಂದ ಬರುವ ಸಿಗರೇಟುಗಳಿಗೆ 1000ಕ್ಕೆ 2—0—0 ರೂ. ಸುಂಕವೂ ಹಾಕಬೇಕೆಂಬ ಒಸ್ಸೂರ್ ಕೌನ್ಸಿಲಿನಲ್ಲಿ ಮಂಜೂರಾಗಿದೆ.

ಕರಾಚಿಯ ಕಾಂಗ್ರೆಸ್ ಸಮಾರಂಭದಲ್ಲಿ ಸ್ವದೇಶೀ ಪ್ರದರ್ಶನವು ನಡೆಯುತ್ತೆ. ಕೈ ಮಗ್ಗದ ಖಾದಿ ಬಟ್ಟೆಯೂ, ಸ್ವದೇಶೀ ಸಾಮಾನುಗಳೂ ಮಾತ್ರ ಪ್ರದರ್ಶಿಸಲ್ಪಡುತ್ತವೆ. ಪಕ್ಷ ಯಾ ವಂತರಾಗಿರುವವರು ಕೂಡಲು ಒಂದೊಂದು ಸೀಟಿನ ಬೆಲೆಯನ್ನು 250 ರೂ. ಯಿಂದ 5000 ರೂ. ವರೆಗೆ ವಿಧಿಸಿದ್ದಾರೆ.

ಪಂಡಿತ ಜವಾಹಿರ್‌ಲಾಲರು ತಮ್ಮ ಡಿಲ್ಲಿಯ ಭಾಷಣದಲ್ಲಿ ಹೀಗೆಂದು ಹೇಳಿರುವರು. ಮಹಾತ್ಮರ ಸ್ವರಾಜ್ಯವೆಂದರೆ ಬಡವರ ಸ್ವತಂತ್ರ. ಅವರ ಹೊಟ್ಟೆ ತುಂಬ ಅನ್ನ, ಮೈ ತುಂಬ ಬಟ್ಟೆ. ಇದಕ್ಕೆ ಖಾದಿಯೇ ಸರ್ವೋತ್ತಮವಾದ ದಾರಿ. ಆದ್ದರಿಂದ ಎಲ್ಲರೂ ಖಾದಿಯನ್ನೇ ಧರಿಸಬೇಕೆಂದು ಹೇಳಿರುವರು.

ವಿದೇಶ.

ಅಮೆರಿಕಾದ ಕೂಬಾ ಪ್ರಾಂತ್ಯದಲ್ಲಿ ಅಧ್ಯಕ್ಷರ ಮನೆಯ ಮೇಲೆ ಶಾಲಾ ವಿದ್ಯಾರ್ಥಿಗಳು ಬಾಂಬನ್ನು ಬಿಸಾಡಿದರು. ಈ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿರುತ್ತಾರೆ.

ಇಂಗ್ಲೆಂಡಿನ ವಿದ್ಯಾಖಾತೆಯ ಮಂತ್ರಿಯಾದ ಸರ್ ಟ್ರೆವಿಲಿಯನ್‌ರವರು ತಮ್ಮ ಪದವಿಗೆ ರಾಜೀನಾಮೆ ಮಾಡಿದ್ದರಿಂದ ಅವರ ಬದಲಿಗೆ ಮೆ. ಲೀಸ್ಮಿತ್‌ರವರು ನೇಮಿಸಲ್ಪಟ್ಟಿರುವರು.

ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಅನೇಕ ಪಂಗಡಗಳಿಕ್ಕಿರುವವು. ಲೇಬರ್ ಸಂಗಡದಲ್ಲಿಯೂ, ಐಕ್ಯಮತ್ಯವಿರವುದಿಲ್ಲ. ಹೀಗೆಯೇ ಲಿಬರಲ್ ಮತ್ತು ಕನ್‌ಸರ್ವೇಟಿವ್ ಸಂಗಡದ ಗತಿಯೂ ಆಗಿದೆ.

ಕನ್‌ಸರ್‌ವೇಟಿವ್ ಪಕ್ಷದ ಚರ್ಚಿಲ್ಲರು ಇಂಡ್ಯಾದ ರಾಜ್ಯ ಚಳವಳದ ವಿಷಯದಲ್ಲಿ ಪ್ರಬಲವಾದ ಚಳವಳವನ್ನು ಹೂಡಬೇಕೆಂದೂ, ಹೋದಲೆಲ್ಲಾ ಮಹಾತ್ಮರನ್ನು ಬೈಯ್ದು ಇಂಡ್ಯವನ್ನು ದಬ್ಬಾಳಿಕೆಯಿಂದ ಆಳಬೇಕೆಂದೂ ಕೂಗುತ್ತಿರುವುದೂ ಇವರ ಸ್ವಭಾವವಾಗಿರುತ್ತೆ.

ಜೇತೀಯರಲ್ಲಿ ವಿನಂತಿ.

ಮಹಾತ್ಮರ ಸಂದೇಶವನ್ನು ಪಾಲಿಸಲು ಜೈಲಿಗೆ ಕೊಡಗಿನ ಕಡುಗಲಿಗಳೂ, ದೇಶ ಭಕ್ತರೂ ಆದ ಸ್ವಾಮಿಗಳಾದ ಪಂದ್ಯಂಡ ಬೆಳ್ಯಪ್ಪನವರೂ, ಕೊಳ್ಳಿಮಾಡ ಕರುಂಬಯ್ಯನವರೂ, ಅಬ್ದುಲ್ ಗಫೂರ್ ಖಾನ್ ಕ್ಯಾಯವರೂ, ಎಚ್. ಕೃಷ್ಣಯ್ಯನವರೇ ಮೊದಲಾದ ಕೊಡಗಿನ ಎಲ್ಲಾ ಸತ್ಯಾಗ್ರಹಿಗಳನ್ನು ಅಭಿನಂದಿಸಿ ಸ್ವರಾಜ್ಯ ಹೋರಾಟದಲ್ಲಿ ಅವರು ಮಾಡಿದ ಮಹಾ ಪವಿತ್ರ ಕೆಲಸಕ್ಕಾಗಿ ಮಾನ್ಯ ಪತ್ರಗಳನ್ನು ಒಪ್ಪಿಸಲು ಇದೇ ತಾ. 11ನೇ ಬುಧವಾರ ಮಧ್ಯಾಹ್ನ 1 ಗಂಟೆಗೆ ವೀರಾಜಪೇಟೆಯಲ್ಲಿ ರೀಡಿಂಗ್ ರೂಮಿನ ಬಳಿ ಕೊಡಗಿನ ಪಬ್ಲಿಕ್ ಮಹಾಜನರ ವಿಶೇಷ ಸಭೆ ಸೇರುತ್ತೆ. ಇಷ್ಟು ಪವಿತ್ರವಾದ ದಿನವು ಭಾರತ ಭೂಮಿಯ ಮತ್ತು ಕೊಡಗಿನ ಚರಿತ್ರೆಯಲ್ಲಿ ಆದದ್ದು ಇದೇ ಮೊದಲಾಗಿರುವುದರಿಂದ ದೇಶದ ಎಲ್ಲಾ ಬಾಲಕ ಬಾಲಿಕೆಯರೂ, ಮಹಿಳೆಯರೂ, ಮಹನೀಯರೂ ದಯಮಾಡಿಸಿ ಕೊಡಗಿನ ಸ್ವತಂತ್ರ್ಯೋದ್ಧಾರಕರಿಗೆ ಉಚಿತ ಸನ್ಮಾನಗಳನ್ನು ಕೊಡಬೇಕೆಂದು ಪ್ರಾರ್ಥಿಸುವ.

ಮಡಿಕೇರಿ, ತಮಗಳ ಸೇವಕ,

ತಾ. 1—3—1931 **ಕೆ. ಪಿ. ಚಿಣ್ಣಪ್ಪ.**

ಕೊಡಗಿನಲ್ಲಿ ಖಾದಿ ಪ್ರಚಾರ.

(ಬರೆದು ಬಂದದ್ದು.)

ಮಹಾತ್ಮಜೀಯವರು ಪರದೇಶದ ವಸ್ತುಗಳನ್ನು ಬಹಿಷ್ಕರಿಸಬೇಕೆಂದು ಜಾಹೀರಾತು ಹಡಿಸಿದ ಕೂಡಲೇ ನಮ್ಮ ಈ ಚಿಕ್ಕ ದೇಶದಲ್ಲು ಸಹ ಸಾಧ್ಯವಾದಷ್ಟು ಪರದೇಶ ಸಾಮಾನುಗಳ ಬಹಿಷ್ಕಾರವು ಹೊಡಗಿದೆ. ಹೆಚ್ಚಾಗಿ ಪರದೇಶದವರ ಬಟ್ಟೆಯೇ ಹೆಚ್ಚಿನದು, ಈ ಬಟ್ಟೆ ಬಹಿಷ್ಕಾರದ ಫಲಿತಾಂಶವಾಗಿ ಖಾದಿಯು ದಿನೆ ದಿನೇ ಎಲ್ಲಾ ಕಡೆಗಳಲ್ಲು ಪ್ರಚಾರವಾಗುತ್ತಲಿದೆ. ಇದರಲ್ಲು ಕಿಗ್ಗಟ್ಟುನಾಡಿನಲ್ಲಿ ಉಪಯೋಗಿಸುವಷ್ಟು ಕೊಡಗು ದೇಶದ ಯಾವ ಭಾಗದಲ್ಲೂ ಕಾಣೆ. ಮೊನ್ನೆ ತಾನೇ ಆದ ಮುಗುಟಗೇರಿ ಇರ್ಪು ಜಾತ್ರೆಗೆ ಕನಿಷ್ಠ ಪಕ್ಷ ಶೇಕಡ 75 ರಷ್ಟು ಜನರು ಖಾದಿಯನ್ನೇ ತೊಟ್ಟಿದ್ದರು. ಗಂಡಸರಿಗಿಂತ ಹೆಂಗಸರೇ ಇದರಲ್ಲಿ ಮುಂದಾಗಿದ್ದರು. ಆದರೆ ಚೆನ್ನಾಗಿ ಬಟ್ಟೆಯನ್ನು ಪರೀಕ್ಷಿಸಿದಲ್ಲಿ ಹೆಚ್ಚಿನ ಜನರು ಉಪಯೋಗಿಸಿದ ಖಾದಿ ಬಟ್ಟೆಯು ಮಿಲ್ ಖಾದಿಯಾಗಿತ್ತು. ಇದಕ್ಕೆ ಕಾರಣವೇನೆಂದು ಕೆಲವರನ್ನು ವಿಚಾರಿಸಿದಲ್ಲಿ ವ್ಯಾಪಾರಸ್ಥರು ಖಾದಿ ಬೇಕೆಂದರೆ ಮೋಸ ಮಾಡಿ ಕಮ್ಮಿ ಕ್ರಯವಿರತಕ್ಕ ಮಿಲ್ ಖಾದಿಯನ್ನು ಶುದ್ಧ ಖಾದಿಯೆಂದು ಮಾರುತ್ತಲಿದ್ದಾರೆಂದೂ, ಶುದ್ಧ ಖಾದಿಗೂ, ಮಿಲ್ ಖಾದಿಗೂ, ಇರುವ ವ್ಯತ್ಯಾಸವೇನೆಂದು ನಮಗೆ ತಿಳಿಯುವುದಿಲ್ಲ. ಖಾದಿ ಬಟ್ಟೆಯ ಮೇಲೆ ಏನೋ ಇಂಗ್ಲೀಷ್‌ನಲ್ಲಿಯೂ, ತಮಿಳಿನಲ್ಲಿಯೂ, ಬರೆದ ಚೀಟಿ ಇರುತ್ತದೆ. ಈ ಚೀಟಿಯು ಕಾಂಗ್ರೆಸ್ ಪಕ್ಷದವರು ಜನರಿಗೆ ಹೇಳಿ ಕೊಟ್ಟ ಮೇರೆ ಕಾಂಗ್ರೆಸಿನವರ ಶುದ್ಧ ಖಾದಿಯ ಸರ್ಟಿಫಿಕೇಟೆಂದು ನಾವು ತಿಳಿದು ಕೊಳ್ಳುತ್ತೇವೆಂದರು. ಹೀಗಾಗಿ ಎಲ್ಲಿ ನೋಡಿದರೂ ನಮ್ಮ ಕಡೆ ಖಾದಿ ಧರಿಸುವವರೇ. ಆದರೆ ಶುದ್ಧ ಖಾದಿಯನ್ನು ಪರೀಕ್ಷಿಸಿ ಧರಿಸುವವರು ಬಹಳ ಕಮ್ಮಿ ಇದ್ದಾರೆ. ಇದಕ್ಕೆ ಕಾರಣಭೂತರು ದೇಶದ ಆರ್ಥಿಕ ಸ್ಥಿತಿಯ ಮೇಲೆ ದೃಷ್ಟಿ ಇಲ್ಲದ ಬಟ್ಟೆ ವ್ಯಾಪಾರಿಯರೇ ಕಾರಣಭೂತರು. ಮುಕ್ಕಿ ಸಂತೆಯಲ್ಲಿ ಗೋಣಿಕೊಪ್ಪಲಲ್ಲಿ ಮುಖ್ಯಾಲು ವೀರಾಜಪೇಟೆಯ ಬಟ್ಟೆ ವ್ಯಾಪಾರಿಗಳು ಖಾದಿ ಧರಿಸಿ ಅಂಗಡಿ ಮುಂದೆ ಕೂತು ಮಿಲ್ ಖಾದಿಯನ್ನು ಮೋಸ ಮಾಡಿ ಜನರಲ್ಲಿ ಮಾರಿದರು. ಹೀಗೆ ಮೋಸ ಮಾಡುವ ವ್ಯಾಪಾರಸ್ಥರಿಗೆ ಮಹಾತ್ಮಜೀಯವರು ಮಾಡಿದ ಭಾಷಣದಲ್ಲಿ "ಮೋಸ ಮಾಡಿ ದೇಶವನ್ನು ವಂಚಿಸಬೇಡಿ. ಪರದೇಶೀ ಬಟ್ಟೆ ವ್ಯಾಪಾರವು ಶಾಶ್ವತವಾಗಿ ನಿಲ್ಲಬೇಕು. ಪರದೇಶೀ ಬಟ್ಟೆಯನ್ನು ಸಂಪೂರ್ಣವಾಗಿ ಬಹಿಷ್ಕರಿಸುವುದೇ ವ್ಯಾಪಾರಿಗಳ ಧರ್ಮವೆಂತ ಹೇಳಿರುತ್ತಾರೆ." ಹೀಗಿರುವಲ್ಲಿ ನಮ್ಮ ದೇಶದ ವ್ಯಾಪಾರಿಗಳು ಪರದೇಶೀಯ

ಗಳನ್ನು ಮಾರಾಟ ಮಾಡುವದನ್ನು ಬಿಡಲಿಲ್ಲ. ಆದರೆ ಜನರನ್ನು ಮೋಸಗೊಳಿಸಿ ಮಿಲ್ ಖಾದಿಯನ್ನು ಶುದ್ಧ ಖಾದಿಯೆಂದು ಮಾರುತ್ತಲೇ ಇರುವರು. ಹೀಗಾಗಿ ಖಾದಿ ಪ್ರಚಾರವು ಯಾವ ದೃಷ್ಟಿಯಿಂದ ಪ್ರಚಾರಕ್ಕೆ ತಂದರೋ ಆಂಧಾದ್ದನ್ನು ಮುಳುಗಿಸತಕ್ಕ ಮೋಸವು ಪ್ರಾರಂಭವಾಗಿದೆ. ಹೀಗೆ ಈ ಮಿಲ್ ಖಾದಿಯನ್ನು ಉಪಯೋಗಿಸುವವರು ಸಹ ಕಾಂಗ್ರೆಸ್ಸಿನವರ ಹಿತಚಿಂತಕರೆಂದು ತೋರಿಸುವದಲ್ಲದೆ ಸ್ವದೇಶೀ ಬಟ್ಟೆಯನ್ನು ಚೆನ್ನಾಗಿ ಉಪಯೋಗಿಸುವುದಲ್ಲ. ಸಮಯವು ಮೀರಲಿಲ್ಲ. ಇನ್ನಾದರೂ ಬಡ ಸತ್ಯಾಗ್ರಹಿಗಳು ಬಡ ಜನರ ಉದ್ಧಾರಕ್ಕಾಗಿ ಮಿಲ್ ಖಾದಿಯನ್ನು ಮಾರದಂತೆಯೂ, ಪರದೇಶದ ಬಟ್ಟೆಗಳಿಗೆ ಪಿಕೆಟಿಂಗ್ ನಡೆಸಿದ ರೀತಿ ಪರದೇಶೀ ಬಟ್ಟೆ ಬಹಿಷ್ಕಾರದ ಕೆಲಸವನ್ನು ಕೈಕೊಂಡು ಶುದ್ಧ ಖಾದಿಯ ಪ್ರಚಾರಕ್ಕೆ ತಕ್ಕ ಪ್ರೋತ್ಸಾಹ ಕೊಡಬೇಕೆಂದು ವಿನಂತಿ.

ಸ್ತ್ರೀಯರ ಮೇಲೆ ಅತ್ಯಾಚಾರ
ಬೋರಸಾದಿನ ೧೫೪ ಹೆಂಗಸರಿಗೆ ಗಾಯಗಳಾಗಿವೆ.
'ಸರ್ವೆಂಟ್ಸ್ ಅಫ್ ಇಂಡಿಯಾ ಸೊಸೈಟಿ'ಯವರ ವಿಚಾರಣೆ.

ಶ್ರೀಯುತರುಗಳಾದ ಆರ್. ಆರ್. ಬಖಲೆ, ಕರಂದೀಕರ್, ಜಿ. ಚಿಟಲಿಯಾ ಇವರು ಮೂವರೂ ಸ್ಥಳಕ್ಕೆ ಹೋಗಿ, ವಿಚಾರಣೆ ನಡೆಸಿ, ವರದಿಯನ್ನು ಪ್ರಕಟಿಸಿರುವರು. ಅವರ ಸಿದ್ಧಾಂತದ ಸಂಗ್ರಹವನ್ನಿಲ್ಲಿ ಕೊಡಲಾಗಿದೆ.

"ಬೋರಸಾದಿನಲ್ಲಿ ಪೋಲೀಸ ಕೃತ್ಯವು ಇತ್ತೀಚಿನ ಭಾರತೀಯ ಚರಿತ್ರೆಯಲ್ಲಿ ಘೋರವಾದುದು. ಅಸಹ್ಯಕರವಾದುದು. ಜನತೆಯ ದೃಷ್ಟಿಯಲ್ಲಿ ಬ್ರಿಟಿಷ್ ಸರಕಾರವು ಬಹಳ ಸಣ್ಣಗಾಯಿತು. ಅದರ ಗೌರವ ಹಾನಿಯಾಯಿತು."

೧. ೧೫–೧–೩೧ ನೇ ದಿನ ಪೋಲೀಸಿನವರು ಹೆಂಗಸರ ಮೇಲೆ ನಡೆಸಿದ ಅತ್ಯಾಚಾರವನ್ನು ಪ್ರತಿಭಟಿಸಲಿಕ್ಕಾಗಿ ೨೧–೧–೩೧ ರಲ್ಲಿ ಬೋರಸಾದಿನ ಸ್ತ್ರೀಯರೆಲ್ಲ ಮೆರವಣಿಗೆ ಹೂಡಿದರು.

೨. ಬೋರಸಾದಿನ ಸ್ತ್ರೀಯರೆಲ್ಲ ೮ ಗುಂಪುಗಳಾಗಿ ಬಂದು ೬ ಧರ್ಮಶಾಲೆಗಳಲ್ಲಿ ತಂಗಿದರು.

೩. ಮೆರವಣಿಗೆಯ ಗುಂಪು ೧,೪೦೦ ಕ್ಕೆ ಮೀರಲಿಲ್ಲ.

೪. ೨೧ ನೇ ತಾರೀಕು ಬೆಳಗ್ಗೆ ಹೊರಗಿನಿಂದ (ಬೋರಸಾದು ನಗರ) ಜನರು ಬಂದರೇ ಹೊರತು ಅವಕ್ಕೆ ಮೇಲು ಬರಲಿಲ್ಲ.

೫. ಹೆಂಗಸರ ಮೆರವಣಿಗೆಯ ಒಳ ಕೊಂಚ ದೂರದಲ್ಲಿ ೨೫–೩೦ ಮಂದಿ ಗಂಡಸರಿದ್ದರು ಅಷ್ಟೆ.

೬. ಮೆರವಣಿಗೆಯು ಸಂಪೂರ್ಣವಾಗಿ ಸ್ತ್ರೀ ಮರಣೀ ಆಗಿತ್ತು.

೭. ಬೋರಸಾದ್ ಪಿಂಜಾರ ಪೋಲೀಸಿನವರು ನೀರಿನ ವ್ಯವಸ್ಥೆ ಮಾಡಿದ್ದರು. ಕುಡಿಯುವ ಕುಡಿಕೆ ಮಡಿಕೆಗಳನ್ನು ಪೋಲೀಸಿನವರು ಪುಡಿ ಪುಡಿ ಮಾಡಿದರು. ಜಲಾಶಯದಿಂದ ನೀರನ್ನು ತಿರುಗಿಸಿಬಿಟ್ಟರು.

೮. ಪೋಲೀಸಿನವರು ಮಧ್ಯಾಹ್ನ ೧೧ ರಿಂದ ೧೨ ರವರೆಗೆ ಅಂಗಡೀಬೀದಿಗೆ ಹೋಗಿ ಬಲವಂತಮಾಡಿ ಅಂಗಡಿ ಬಾಗಿಲುಗಳನ್ನು ಮುಚ್ಚಿಸಿದರು. ಈ ಪ್ರಯತ್ನದಲ್ಲಿ ಅನೇಕ ವರ್ತಕರನ್ನೂ, ಕೊಳ್ಳುವವರನ್ನೂ ನಿಮೆಟ್ಟಿದರು.

೯. ಪೋಲೀಸಿನವರು 'ಲೈಬ್ರರಿ' ಒಳಹೊಕ್ಕು ಅಲ್ಲಿ ಕೂತು ಓದುತ್ತಿದ್ದವರನ್ನೂ ಲೈಬ್ರೇರಿಯನ್ನರನ್ನೂ ಸಹ ಹೊಡೆದರು.

೧೦. ಸರ್ಕಾರದ ಪ್ರಕಟನೆಯಲ್ಲಿ ಪೆಟ್ಟು ಬಿದ್ದವರಲ್ಲಿ ಕೆಲವು ಗಂಡಸರ ಹೆಸರುಗಳಿವೆ. ಅವರೊಬ್ಬರೂ ಮೆರವಣಿಗೆಯಲ್ಲಿರಲಿಲ್ಲ. ಹೊರಗೆ ಅಲ್ಲಿ ಇಲ್ಲಿ ಪೆಟ್ಟು ತಿಂದವರು. ಮೆರವಣಿಗೆಯಲ್ಲಿ ಪೆಟ್ಟುಬಿದ್ದ ಹೆಂಗಸರೊಂದಿಗೆ ಗಂಡಸರ ಹೆಸರುಗಳನ್ನು ಬೇಕಾಗಿ ಜನರ ಕಣ್ಣಿಗೆ ಮಣ್ಣು ತೂರಲು, ಗೊಂದಲ ಉಂಟುಮಾಡಲು ಸೇರಿಸಿದ್ದಾರೆ. ಪೋಲೀಸಿನವರು ಹೆಂಗಸರ ಮೇಲೆ ಬಿದ್ದು ತೋರಿಸಿದ ಕ್ರೂರ ವರ್ತನೆಯಿಂದ ಅವರನ್ನು ಸಂರಕ್ಷಿಸಬೇಕೆಂಬುದೇ ಇದರ ಉದ್ದೇಶ.

೧೧. ಮೊಟ್ಟ ಮೊದಲು ಗಂಡಸರ ಮೇಲೆ ಎರಡು ಸಾರೆ ಲಾಠೀ ಪ್ರಹಾರಗಳಾದವು. ಏನಾದರೂ ಮಾಡಿ ಮೆರವಣಿಗೆಯನ್ನು ಹೊಡೆದಟ್ಟುವುದೇ ಪೋಲೀಸರ ಪರಮೋದ್ದೇಶ್ಯವಾಗಿತ್ತು. ಮೆರವಣಿಗೆಗಾರರಲ್ಲಿ ಭಯವನ್ನು, ಭ್ರಾಂತಿಯನ್ನೂ ಹುಟ್ಟಿಸಿ, ಹೆದರಿಸಿ, ಚದರಿಸುವ ನೆಪಕ್ಕಾಗಿ ಪರುಗವಂತೆ ಸಿಕ್ಕಿದವರ ಮೇಲೆ ಬಿದ್ದು, ನಿರಪರಾಧಿಗಳನ್ನು ಹಿಂಸೆಗೊಳಿಸಿದರು. ಇಲ್ಲವಾದರೆ ಪೋಲೀಸರ ನಡತೆಯು ಅರ್ಥವೇ ಆಗುವುದಿಲ್ಲ.

೧೨. ನಾಲ್ಕು ಕಡೆ, ನಾಲ್ಕು ಮೆರವಣಿಗೆಗಳ ಮೇಲೆ ನಾಲ್ಕು ಸಲ ಪೋಲೀಸು ಲಾಠೀ ಪ್ರಹಾರವಾಯಿತು. ಮೆರವಣಿಗೆಯ ನಾಯಕರ ಮೇಲೂ, ರಾಷ್ಟ್ರಧ್ವಜಗಳನ್ನು ಹಿಡಿದಿದ್ದವರ ಮೇಲೂ ಲಾಠೀ ಪ್ರಹಾರಗಳು ಬಹಳ ಘೋರವಾಗಿದ್ದವು. ಲಾಠೀ ಪ್ರಹಾರಗಳಲ್ಲಿ ಅನೇಕ ಹೆಂಗಸರಿಗೆ ಗಾಯಗಳಾದವು. ಕೆಲವರಿಗೆ ಪ್ರಜ್ಞೆ ತಪ್ಪಿತು. ಅನೇಕ ಹೆಂಗಸರನ್ನು ಪೋಲಿಸರು ಒದ್ದರು. ಎಷ್ಟೋ ಹೆಂಗಸರ ಜುಟ್ಟು ಹಿಡಿದೆಳೆದಾಡಿದರು. ಕೆಲವರಿಗೆ ಸ್ಮೃತಿ ತಪ್ಪಿತು.

೧೪. ಗಾಯಪಟ್ಟವರಿಗೆ ಅಧಿಕಾರಿಗಳು ಚಿಕಿತ್ಸೆ ಕೊಡಲಿಲ್ಲ. ನೀರನ್ನು ಸಹ ಕೊಡಲಿಲ್ಲ. ದಕ್ಷಿಣ ಮಾಡಿ ಚಿಕಿತ್ಸೆ ಪಡೆದವರಿಗೆ ಮಾತ್ರ ಸಹಾಯವಿತ್ತರು. ಆಸ್ಪತ್ರೆಯಲ್ಲಿ ಸಹ ಅವರನ್ನು ಕೇಳುವವರೇ ದಿಕ್ಕಿಲ್ಲ.

೧೫. ಮೆರವಣಿಗೆಗೆ ಯಾವ ಸಂಬಂಧವೂ ಇಲ್ಲದೆ ಇದ್ದ ಒಬ್ಬ ಸ್ನೇಹಿತರ ಮನೆಯೊಳಕ್ಕೆ ನುಗ್ಗಿ, ಪೋಲೀಸಿನವರು ಇಬ್ಬರು ಹೆಂಗಸರನ್ನು ಲಾಠಿಗಳಿಂದ ಹೊಡೆದರು.

೧೬. ೧೫೪ ಹೆಂಗಸರಿಗೆ ಗಾಯಗಳಾಗಿವೆ. ೧೩ ಮಂದಿ ಗಂಡಸರಿಗೆ ಪೆಟ್ಟು ಬಿದ್ದಿದೆ. ಮೆರವಣಿಗೆಯ ಗುಂಪು ಸುತ್ತುಮುತ್ತ ಇದ್ದವರೊಂದಿಗೆ ಪೆಟ್ಟುತಿಂದು ಹೆಂಗಸರ ಗಂಡಸರ ಲೆಕ್ಕವನ್ನು ಕೆಳಕಡಾವಾರು ವಿಂಗಡಿಸಲಾಗಿದೆ. ೧೩೩ ಹೆಂಗಸರು, ೧೨ ಗಂಡಸರು ಗಾಯಪಟ್ಟ ಹೆಂಗಸರಲ್ಲಿ ೧೧೧ ಮಂದಿಗೆ ಪಾಲ್ಗೊಳ್ಳುವ ಪಡೆದಿದ್ದೇವೆ (೬೮೭) ನಾವು ಕಣ್ಣಾರೆ ೨೮ (೫೬೧) ಹೆಂಗಸರ ಗಾಯಗಳನ್ನು ಕಂಡೆವು. ೩೧೯ ಮಂದಿ ಹೆಂಗಸರು ಹೊಡೆತ ತಿಂದ ಮೇಲೆ ಕೆಲವು ದಿನ ಬಹಳ ನೋವಾಯಿತು. ಆದರು ೧೯೬ ಮಂದಿ ಅನೇಕ ದಿನ ಜ್ವರ ಬಂತೆಂದು ಹೇಳಿದರು. ೧೨೧ ಮಂದಿ ಸರ್ಕಾರದಲ್ಲಿ ದೂರಿತ್ತರು. ಆದರೂ ೯೬ ಮಂದಿ ನಮ್ಮನ್ನು ಹೊಡೆಯುತ್ತಿರುವಾಗ ನಮಗೆ ಸ್ಮೃತಿ ತಪ್ಪಿತು ಎಂದು ಹೇಳಿದರು!

೧೭. ಮೆರವಣಿಗೆಗಾರರನ್ನು ಹೊಡೆದಟ್ಟಬೇಕೆಂದು ಬೋರಸಾದಿನ ಪೋಲೀಸರು ಮೊದಲೇ ಸಂಕಲ್ಪ ಮಾಡಿದ್ದರು. ಸರ್ಕಾರದ ಸೂಚನೆಗಳ ಲಕ್ಷ್ಯಕೊಡದೆ ಅವರು ಹೆಂಗಸರ ಮೇಲೆ ಬಿದ್ದು ಕರುಣಾ ಲೇಶವೂ ಇಲ್ಲದೆ ಹೊಡೆದರು. ನಾಚಿಕೆ ಹೇಸಿಕೆ ಇಲ್ಲದೆ ಕ್ರೂರ ಮೃಗಗಳಂತೆ ವರ್ತಿಸಿದರು.

೧೮. ಪೆಟ್ಟು ತಿಂದ ಹೆಂಗಸರಿಗೂ, ಗಂಡಸರಿಗೂ ಇರುವ ಸಂಖ್ಯಾ ವ್ಯತ್ಯಾಸವನ್ನೂ, ಗಂಡಸರಿಗೆಲ್ಲ ಮೆರವಣಿಗೆಯಿಂದ ಹೊರಗೇ ಪೆಟ್ಟು ಬಿತ್ತೆಂಬುದನ್ನೂ ಗಮನಿಸಿದರೆ — ಗಂಡಸರನ್ನು ಚದರಿಸುವಾಗ ಹೆಂಗಸರಿಗೆ ಗಾಯವಾಯಿತೆಂಬ ಮಾತನ್ನು ನಂಬುವುದಸಾಧ್ಯ.

೧೯. ಕೈರಾ ಜಿಲ್ಲಾ ಮ್ಯಾಜಿಸ್ಟ್ರೇಟರು 'ಕೈರಾ ಗೆಜೆಟ್' ನಲ್ಲೂ ಸರಕಾರದವರು ಎರಡು ಪ್ರಕಟನೆಗಳಲ್ಲೂ ಈ ವಿಚಾರ ಬರೆದಿದ್ದಾರೆ. ಒಂದಕ್ಕೊಂದಕ್ಕೆ ಸಂಬಂಧವಿಲ್ಲ. ಪರಸ್ಪರ ವಿರೋಧವಾಗಿವೆ.

೨೦. ಮೇಲಿನ ಪ್ರಕಟಣೆಗಳಲ್ಲಿ ಮೆರವಣಿಗೆಯ ಕಾರಣ, ಮೆರವಣಿಗೆಯ ಗುಂಪು ಕಲ್ಲು ಎಸೆದದ್ದು, ಮಣ್ಣು ತೂರುವುದು, ಪೋಲೀಸರಿಗಾದ ಪೆಟ್ಟು, ಪೋಲೀಸು ಬಲ ಮುಂತಾದ ಎಲ್ಲ ವಿಚಾರಗಳಲ್ಲೂ ಪರಸ್ಪರ ವಿರೋಧವಿದೆ. ಒಂದಾದರೂ ಸಮಂಜಸವಾಗಿಲ್ಲ.

೨೧. ಈ ವರ್ಣನೆಗಳು ಬೋರಸಾದಿನಲ್ಲಿ ನಡೆದ ವಿಚಾರವಾಗಿ ಸತ್ಯಚಿತ್ರವನ್ನು ಕೊಡುವುದಿಲ್ಲ. ಅವಕ್ಕೆ ಬದಲಾಗಿ ಸ್ಪಷ್ಟವಾಗಿ ಎಸಗಿದ ಕ್ರೂರ ಕೃತ್ಯ ನಡೆಸಿದ ಪೋಲೀಸಿನವರ ದುಷ್ಕಾರ್ಯಗಳನ್ನು ಮುಚ್ಚಿ ಅಧಿಕಾರ ಸಂರಕ್ಷಣೆಯನ್ನವರಿಗೆ ದೊರಕಿಸುವ ಪ್ರಯತ್ನ ಮಾಡಿವೆ.

೨೨. ಬೋರಸಾದಿನ ಜನರು ಆಯುಧಪಾಣಿಗಳಾಗಿದ್ದರೆಂಬುದು ಕಟ್ಟು ಕಥೆ. ಇದನ್ನು ಆ ವೇಳೆ ಕಟ್ಟಿ, ಪೋಲೀಸಿನವರ ಮಾನವುಳಿಸಲು, ರಕ್ಷಿಸಲು ಪ್ರಯತ್ನಪಡುತ್ತಿದ್ದಾರೆ. ಮೆರವಣಿಗೆಗಾರರು ಹಿಂಸಾಪ್ರವೃತ್ತಿಯುಳ್ಳವರಾಗಿದ್ದರೆಂದು ತೋರಿಸಲು ಹೂಡಿದ ಯುಕ್ತಿಯಿದು.

೨೩. ೨೨–೧–೩೧ರಲ್ಲಿ ಮೆರವಣಿಗೆ ಕೂಡದೆಂದು ಹೊರಡಿಸಿದ ಆಜ್ಞೆಯೇ ಅದ ವರೆಗೆ ಯಾವ ಆಜ್ಞೆಯೂ ಇರಲಿಲ್ಲವೆಂಬುದನ್ನು ಸ್ಥಾಪಿಸುತ್ತದೆ.

೨೪. ಕಲ್ಲುಗಳನ್ನಾರೂ ಬೀರಲಿಲ್ಲ. ಮಣ್ಣನ್ನು ಯಾರೂ ತೂರಲಿಲ್ಲ. ಪೋಲೀಸರ ಮೇಲೆ ಯಾರೂ ಕಲ್ಲೆಸೆಯಲಿಲ್ಲ.

೨೫. ಒಬ್ಬ ಪೋಲೀಸಿನವನಿಗೂ ಗಾಯವಾಗಲಿಲ್ಲ.

೨೬. ಕೆಲವು ಹೆಂಗಸರು ಕಲ್ಲುಗಳನ್ನು ಹೊತ್ತಿದ್ದರೆಂಬುದು ಶುದ್ಧ ಸುಳ್ಳು.

೨೭. ಪರಿಸ್ಥಿತಿಯು ಭಯಂಕರವಾಗಿರಲಿಲ್ಲ. ಪೋಲೀಸಿನವರ ವರ್ತನೆಯಿಂದ ಭಯಕ್ಕೆ ಕಾರಣವಾಯಿತು. ಪೋಲೀಸಿನವರು ಉಪಕರಿಸಲು ಅವಕಾಶ ಕೊಡದೆ, ಅವಸರದ ಆತುರಗಳಿಂದ ಮೊದಲೇ ತಲೆ ಕೆಳಗಿಳಿಸಿ ಯುಕ್ತಿಕೆ ಸಾಕಿದ್ದಂತೆ ಅನಾಯುತ ನಡೆಸಿದರು.

೨೮. ಪೋಲೀಸಿನವರ ನಡತೆಯು.—ಅವರು ಕುಡಿದಿರಲಿ, ಕುಡಿದಿರದಿರಲಿ—ಕೇಡುಕರನ್ನು ಸಹ ಊಹಿಸಲಾಗದ ಅಪಮಾನದಿಂದ ತಲೆ ತಗ್ಗಿಸತಕ್ಕದ್ದಾಗಿದೆ.

೨೯. ನಮ್ಮ ಅಭಿಪ್ರಾಯದಲ್ಲಿ ಬೋರಸಾದಿನ ಕೃತ್ಯವು ಇತ್ತೀಚಿನ ಭಾರತೀಯ ಚರಿತ್ರೆಯಲ್ಲಿ ಘೋರವಾದುದು. ಅಸಹ್ಯಕರವಾದದು. ಜನತೆಯ ದೃಷ್ಟಿಯಲ್ಲಿ ಬ್ರಿಟಿಷ್ ಸರಕಾರವು ಬಹಳ ಸಣ್ಣಗಾಯಿತು. ಅದರ ಗೌರವ ಹಾನಿಯಾಯಿತು.

"ಏ. ಕ."

ಕೌನ್ಸಿಲ್ ಪ್ರಶ್ನೆಗಳು.

ಕೌನ್ಸಿಲು ಮೆಂಬರಾದ ಮ. ಕೊಂಗಂಡ ಗಣಪತಿಯವರು ಕಳೆದ 25—2—31 ನೇ ತಾರೀಕಿನಲ್ಲಿ ಕೌನ್ಸಿಲಿಗೆ ಕಳುಹಿಸಿದ ಪ್ರಶ್ನೆಗಳ ನಕಲುಗಳನ್ನು ನಮಗೆ ಕಳುಹಿಸಿದ್ದನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೇಳಿಕೊಂಡ ಮೇರೆ ದೇಶೀಯರ ತಿಳುವಳಿಕೆಗೋಸ್ಕರ ಪ್ರಕಟಣೆ ಮಾಡಲಾಗಿದೆ.

ಸರಕಾರದವರು ದಯಮಾಡಿ ಈ ಕೆಳಗಿನ ಪ್ರಶ್ನೆಗಳಿಗೆ ಜವಾಬು ಕೊಡುವರೋ ?

ಖೂನಿ ಮೊಕದ್ದಮೆಗಳು.

1 (1) ಕಳೆದ ಮೂರು ವರ್ಷಗಳಿಂದ ರಿಪೋರ್ಟಾದ ಕೊಲೆ ಮೊಕದ್ದಮೆಗಳೆಷ್ಟು ?

(2) ಇವುಗಳಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಯಿತು ?

(3) ಪತ್ತೆಯಾಗದ ಮೊಕದ್ದಮೆಗಳೆಷ್ಟು ?

(4) ರುಜುವಾತಿಲ್ಲದೆ ಖುಲಾಸಾದ ಮೊಕದ್ದಮೆಗಳೆಷ್ಟು ?

2 (1) ಸಿದ್ದಾಪುರದ ಬಳಿ ಇರುವ ಭುವನ ಹಳ್ಳಿಯ ಕೊಲೆ ಮೊಕದ್ದಮೆಯಲ್ಲಿ ಎಷ್ಟು ಪೋಲೀಸು ಆಫೀಸರುಗಳು ವಿಚಾರದ ಚಾರ್ಜಿನಲ್ಲಿದ್ದರು ?

(2) ಈ ಕೊಲೆಗಳಾದ ನಂತರ ಅಲ್ಲಿಯ ಸಬ್ ಇನ್ಸ್‌ಪೆಕ್ಟರು ರಜ ತೆಗೆದುಕೊಂಡು ಹೋದದ್ದು ನಿಜವೋ ?

(3) ಅವರ ಖಾಸ ಸಹೋದರನೋ ಇವರಿಗೆ ಮೆಡಿಕಲ್ ಆಫೀಸರನಾಗಿ ಸರ್ಟಿಫಿಕೇಟ್ ಕೊಟ್ಟದ್ದು ?

(4) ಸಿದ್ದಾಪುರ ಸಬ್ ಇನ್ಸ್‌ಪೆಕ್ಟರ ಇನ್ನೊಬ್ಬ ಖಾಸ ಸಹೋದರನೋ ಅಲ್ಲಿ ಸರ್ಕಲ್ ಇನ್ಸ್‌ಪೆಕ್ಟರಾಗಿರುವುದು ?

(5) ಇವೆಲ್ಲವೂ ಡಿಪ್ಯುಟಿ ಸುಪರಿಂಟೆಂಡೆಂಟರ ಅವಗಾಹನೆಗೆ ಬರಲಿಲ್ಲವೋ ?

ಈ ಕೆಳಗಿನವುಗಳನ್ನು ಅವರು ತನಿಖಿ ಮಾಡಿದ್ದಾರೋ ?

(a) ಕೊಲೆಪಾತಕವಾದ ಈ ಮನೆಯಲ್ಲಿ ಒಬ್ಬನೇ ಇದ್ದ ಗಂಡಸೊಬ್ಬನು ಒಂದು ದಿನಕ್ಕೆ ಮುಂದಾಗಿ ಮನೆಯಿಂದ ಕಳುಹಿಸಲ್ಪಟ್ಟದ್ದೋ ?

(b) ಹಾಗಾದರೆ ಏತಕ್ಕಾಗಿ —

(c) ಈ ಕೊಲೆಪಾತಕವಾದ ಮನೆಯ ಹತ್ತಿರ ಇಬ್ಬರು ಮಾಪಿಳ್ಳೆ ವ್ಯಾಪಾರಗಾರರು ವಾಸವಿದ್ದಾರೋ ?

(d) ಆ ರಾತ್ರಿ ಅವರೆಲ್ಲಿದ್ದರು ?

(e) ಅವರು ಗೈರಹಾಜರಾಗಿದ್ದರೆ ಯಾವ ಕಾರಣದಿಂದ ?

(f) ಮನೆಯೊಳಗಿದ್ದ ಹಾರೆಗೋಲಿನಿಂದಲೋ ಕೊಲೆ ಮಾಡಿದ್ದೋ ?

(g) ಹಾಗಾದರೆ ಇದು ಹೇಗೆ ಸಿಕ್ಕಿತು.

(h) ಮನೆಯಲ್ಲಿ ಕ್ರೂರ ಸ್ವಭಾವದ ಒಂದು ನಾಯಿ ಇದ್ದು ಆ ದಿನ ಮಾತ್ರ ಇಲ್ಲದೆ ಹೋಗಿತ್ತೋ ?

ರಿಟೈರಾಗಲಿಕ್ಕಿರುವ ಉದ್ಯೋಗಸ್ಥರು.

1 ಕೊಡಗಿನ ಎಲ್ಲಾ ಇಲಾಖೆಗಳಲ್ಲಿ ಒಟ್ಟಾಗಿ ಮೂವತ್ತು ವರ್ಷ ಸರ್ವೀಸು ಮಾಡಿ ಐವತ್ತೈದು ವರ್ಷ ವಯಸ್ಸಾದ ಉದ್ಯೋಗಸ್ಥರ ಸಂಖ್ಯೆಯೆಷ್ಟು ?

2 ಕೆಲವು ಉದ್ಯೋಗಸ್ಥರು ಎಕ್ಸ್‌ಟೆನ್‌ಶನ್ ಬೇಕೆಂದು ಅರ್ಜಿ ಬರಕೊಂಡಿದ್ದುಂಟೋ ? ಹಾಗಾದರೆ ಎಷ್ಟು ಜನರು ?

ಮಲೇರಿಯಾ ಆಫೀಸರುಗಳು.

1 ಮಲೇರಿಯಾ ಆಫೀಸರಿಗೆ ಗೊತ್ತು ಮಾಡಿರುವ ಕೆಲಸಗಳಾವವು

2 ಅವರಿಗೆ ಪ್ರಯಾಣಕ್ಕಾಗಿ ಎಷ್ಟು ಹಣ ಖರ್ಚಾಗಿದೆ

3 ಈ ಆಫೀಸರುಗಳ ಮೇಲ್ವಿಚಾರಣೆ ನಡಿಸುವವರಾರು ?

4 ಇವರು ಯಾವಾಗಲೂ ಮಡಿಕೇರಿ ಮತ್ತು ವೀರಾಜಪೇಟೆಯಲ್ಲಿಯೇ ಏತಕ್ಕಾಗಿ ಉಳಿಯುವುದು ?

5 ಹೆಡ್ ಕ್ವಾರ್ಟರ್ಸ್‌ಗೆ ಇವರು ಯಾವಾಗಲೂ ಹಿಂತಿರುಗುವುದು ಏತಕ್ಕಾಗಿ ?

6. ಇವರನ್ನು ಗ್ರಾಮಗಳ ಕಡೆಗೆ ಕೆಲಸಕ್ಕೆ ಬಿಡಲು ಸರಕಾರದವರು ವಿಚಾರಿಸು ಮಾಡಿರುವರೋ ?

7. ಒಟ್ಟಾರೆ ಇವರಿಗಾಗಿ ಖರ್ಚು ಆದ ಪ್ರಯಾಣ ಭತ್ಯವೆಷ್ಟು ?

ಶಾಲಾ ಅಧಿಕಾರಿಗಳು.

5. (1) ಸಂಬಂಧಪಟ್ಟ ಅಧಿಕಾರಿಗಳು ವೀರಾಜಪೇಟೆ ಹೈ ಸ್ಕೂಲಿಗೆ ಹುಡುಗಿಯರನ್ನು ಸೇರಿಸಬಾರದೆಂಬುದಾಗಿ ಹುಕುಂ ಮಾಡಿದ್ದುಂಟೋ ?

(2) ಮಾಡಿದ್ದರೆ ಕಾರಣವೇನು ?

6 (1) ಶಾಲಾ ಇನ್ಸ್‌ಪೆಕ್ಟರು ಮತ್ತು ಸಬ್ ಅಸಿಸ್ಟೆಂಟರು ಶಾಲೆಗಳಲ್ಲಿ ಮಕ್ಕಳು ಖಾದಿ ಟೋಪಿ ಹಾಕಬಾರದೆಂಬುದಾಗಿ ಸರ್ಕ್ಯುಲರ್ ಮಾಡಿದ್ದುಂಟೋ ?

(2) ಮಾಡಿದ್ದರೆ ಯಾವ ಕಾರಣದಿಂದ

(3) ಕಮಿಶನರು ವೀರಾಜಪೇಟೆಯಲ್ಲಿ ಪಬ್ಲಿಕ್ ಮೀಟಿಂಗು ಮಾಡಿ ಶಾಲೆಯಲ್ಲಿ ಮಕ್ಕಳು ಖಾದಿ ಟೋಪಿ ಹಾಕುವುದರಲ್ಲಿ ಸರಕಾರದವರಿಗೆ ಏನೂ ಆಕ್ಷೇಪಣೆ ಇಲ್ಲವೆಂದು ಹೇಳಿದ್ದು ಸರ್ಕಾರದವರ ಅವಗಾಹನೆಗೆ ಬಂದಿದೆಯೋ ?

(4) ಹಾಗಾದರೆ ಶಾಲಾ ಅಧಿಕಾರಿಗಳು ಈ ಹುಕುಮನ್ನು ಇನ್ನೂ ಏತಕ್ಕಾಗಿ ತೆಗೆದು ಹಾಕಲಿಲ್ಲ

7. (1) ಶಾಲಾ ಇನ್ಸ್‌ಪೆಕ್ಟರು 1929 1930ರಲ್ಲಿ ಎಷ್ಟು ಶಾಲೆಗಳನ್ನು ಸಂದರ್ಶಿಸಿದ್ದಾರೆ ?

(2) ಇವರಿಗೆ ಪಾಠ ಹೇಳುವ ವಿಷಯದಲ್ಲಿ ಏನಾದರೂ ಅನುಭವ ಇದೆಯೋ ?

(3) ಇವರನ್ನು ಒಂದು ವರ್ಷದಲ್ಲಿ ಬೆಂಗಳೂರಲ್ಲಿ ತರಬೇತು ಮಾಡಿದ್ದುಂಟೋ ?

(4) ಮಾಡಿದ್ದರೆ ಯಾವ ಖರ್ಚಿನಲ್ಲಿ

(5) ಇವರಿಗೆ ಮೊದಲಿದ್ದವರು 1928—1929ರಲ್ಲಿ ಎಷ್ಟು ಶಾಲೆಗಳನ್ನು ಸಂದರ್ಶಿಸಿದರು.

8. (1) ವೀರರಾಜಪೇಟೆ ಹೈಸ್ಕೂಲಿಗೆ ಒತ್ತಾಗಿ ಬೋರ್ಡಿಂಗ್ ಮನೆ ಕಟ್ಟಿಸಲು ಸರಕಾರದವರು ಏರ್ಪಾಡು ಮಾಡಿದ್ದಾರೋ ?

(2) 1930ನೇ ಇಸವಿಗೆ ಮೊದಲು ಈ ಕಟ್ಟಡದ ಕೆಲಸ ಪ್ರಾರಂಭಿಸುವುದಕ್ಕಾಗಿ 8000 ರೂಪಾಯಿ ಮಂಜೂರ್ ಮಾಡಿದ್ದುಂಟೋ ?

(3) ಮಾಡಿದ್ದರೆ ಕೆಲಸ ಕೈಕೊಳ್ಳದಿರಲು ಕಾರಣವೇನು?

(4) ಈ ವರ್ಷ ಏನಾದರೂ ಈ ಕೆಲಸಕ್ಕೆ ಹಣ ಮಂಜೂರಾಗಿದೆಯೋ ?

(5) ಮಾಡದಿದ್ದರೆ ಕಾರಣವೇನು ?

9. (1) ಶಾಲಾ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರು 1929 1930ರಲ್ಲಿ ಎಷ್ಟು ಡಿಸ್ಟ್ರಿಕ್ಟ್ ಬೋರ್ಡು ಶಾಲೆಗಳನ್ನು ಇನ್ಸ್‌ಪೆಕ್ಷನ್ ಮಾಡಿದರು.

(2) ಎಷ್ಟು ಶಾಲೆಗಳನ್ನು ಮಾಡಿರುವುದಿಲ್ಲ.

(3) ಮಾಡದಿದ್ದರೆ ಮಾಡದಿರಲು ಕಾರಣವೇನು ?

(4) ಒಂದೇ ವರ್ಷದಲ್ಲಿ ಎರಡು ಸಲ ಪ್ರತ್ಯೇಕ ಸ್ಥಳಗಳಿಗೆ ವರ್ಗ ಮಾಡಲ್ಪಟ್ಟ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು?

ಆಸ್ಪತ್ರೆ.

10. (1) ಕೊಡಗಿನ ಸಿವಿಲ್ ಸರ್ಜಿಯನ್ನರು 1927, 1928, 1929, 1930ರಲ್ಲಿ ಮೇಜರ್ ಓಪರೇಶನುಗಳನ್ನು ಎಷ್ಟು ಮಾಡಿದ್ದಾರೆ.

(2) ವೀರರಾಜಪೇಟೆಯಲ್ಲಿ ಇದೇ ವರ್ಷಗಳಲ್ಲಿ ಎಷ್ಟು ಆಗಿವೆ.

ರಿಟ್ರೆಂಚ್‌ಮೆಂಟ್.

11. (1) ಈಗಿನ ಹಣದ ಅಭಾವಕ್ಕಾಗಿ ಸರಕಾರದವರು ಸಿಬ್ಬಂದಿಯ ಕೋತಿ ಮಾಡಲಿಕ್ಕೆ ಆಲೋಚಿಸಿರುವರೋ ?

(2) ಹಾಗಾದರೆ ಅಂಥಾ ಸಲಹೆಗಳನ್ನು ಕೌನ್ಸಿಲಿನ ಮುಂದಿಡುವರೋ ?

ಐದು ವರ್ಷಕ್ಕಿಂತ ಹೆಚ್ಚಾಗಿ ಒಂದೇ ಸ್ಥಳದಲ್ಲಿರುವ ಉದ್ಯೋಗಸ್ಥರು.

12. (1) ಸರಕಾರ ಎಲ್ಲಾ ಇಲಾಖೆಗಳಲ್ಲಿ ಒಂದೇ ಒಂದು ಸ್ಥಳದಲ್ಲಿ ವರ್ಗವಾಗದೆ ಐದು ವರ್ಷಕ್ಕಿಂತ ಹೆಚ್ಚಾಗಿರುವ ಉದ್ಯೋಗಸ್ಥರು ಮತ್ತು ಕ್ಲಾರ್ಕುಗಳು ಎಷ್ಟಿದ್ದಾರೆ?

(2) ಅವರನ್ನು ಐದು ವರ್ಷದನಂತರ ವರ್ಗಮಾಡದಿರಲು ಕಾರಣವೇನು?

ಸತ್ಯಾಗ್ರಹ,

13. (1) ಕಳೆದ ಆರು ತಿಂಗಳಿಂದ ಶಿಕ್ಷೆಗಳಿಗೊಳಪಟ್ಟ ಸತ್ಯಾಗ್ರಹಿಗಳೆಷ್ಟು.

(2) ಯಾವ್ಯಾವ ತಕ್ಸೀರಿಗಾಗಿ ಎಷ್ಟು ತಿಂಗಳ ಸಜೆ ಅವರ ಹೆಸರುಗಳು ಪ್ರತ್ಯೇಕವಾಗಿ.

(3) ದಕ್ಷಿಣ ಕೊಡಗಿನ ಪೋಲೀಸು ಇನ್ಸ್‌ಪೆಕ್ಟರು ಗೋಣಿಕೊಪ್ಪಲಲ್ಲಿ ಸತ್ಯಾಗ್ರಹಿಗಳಿಗೆ ಹೊಡೆದದ್ದು ಸರಕಾರದ ಅವಗಾಹನೆಗೆ ಬಂದಿದೆಯೋ?

(4) ಪಬ್ಲಿಕ್ ಜನರು ಇಂಥಾ ಕೃತ್ಯಕ್ಕೆ ವಿರೋಧಿಸಿದ್ದು ಸರಕಾರದ ಅವಗಾಹನೆಗೆ ಬಂದಿದೆಯೋ?

ಫಾರೆಸ್ಟು ಡಿಪಾರ್ಟ್‌ಮೆಂಟ್.

14. (1) ಕಳೆದ ವರ್ಷ ಕಡಿದು ಮಾರಾಟ ಮಾಡಿದ ಗಂಧದ ಪರಿಮಾಣವೆಷ್ಟು?

(2) ಈ ವರ್ಷ ಕಡಿದು ಮಾರಲು ಏರ್ಪಾಡು ಮಾಡಿದೆಷ್ಟು?

(3) ಕಳೆದ ವರ್ಷ ಗಂಧದಲ್ಲಿಯೂ, ಇತರ ಫಾರೆಸ್ಟು ಉತ್ಪತ್ತಿಯಲ್ಲಿಯೂ, ಸಿಕ್ಕಿದ ಹಣವೆಷ್ಟು ಪ್ರತ್ಯೇಕವಾಗಿ,

15. (1) ಫಾರೆಸ್ಟು ದೊಡ್ಡ ಕೆಲಸಗಾರರಲ್ಲಿ ಕೋತಿ ಮಾಡಲು ಏರ್ಪಾಡು ಮಾಡಿದ್ದಾರೋ?

(2) ಮಾಡಿದ್ದರೆ ಯಾವ ತಾರೀಕಿನಿಂದ.

16. ದವಸ ಧಾನ್ಯಗಳಿಗೆ ರೈತರು ಕಂದಾಯ ಕಟ್ಟುವುದು.

(1) ಈ ವರ್ಷ ಕ್ರಯವಿಲ್ಲದಿರೋಣದರಿಂದ ರೈತರಿಗೆ ಕಂದಾಯ ಕಟ್ಟಲು ಬಹಳ ತೊಂದರೆಯಾಗಿರುವುದು ಸರಕಾರದ ಅವಗಾಹನೆಗೆ ಬಂದಿದೆಯೋ?

(2) ಬಂದಿದ್ದರೆ ಈ ವರ್ಷ ಫೈನ್ಸ್ ಚಾರ್ಜುಗಳನ್ನು ತೆಗೆದು ಹಾಕುವರೋ ?

ಶನಿವಾರ ಸಂತೆ ಆಸ್ಪತ್ರೆ.

17. (1) ಶನಿವಾರ ಸಂತೆಯಲ್ಲಿ ಆಸ್ಪತ್ರೆ ತೆರೆಯುವುದು ಯಾವಾಗ?

(2) ಏತಕ್ಕಾಗಿ ಈ ವರೆಗೆ ತೆರೆಯಲಿಲ್ಲ.

ಬೆಳ್ಳುಮಾಡು ಸೇತುವೆ.

18. (1) ಬೆಳ್ಳುಮಾಡು ಸೇತುವೆಯ ಕೆಲಸವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಈ ವರ್ಷ ಕೈಕೊಳ್ಳುವರೋ ?

(2) ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಈ ಕೆಲಸಕ್ಕೆ ಹಣವೆಷ್ಟು ಮಂಜೂರಾಗಿದೆ.

ಕೌನ್ಸಿಲು ಮೆಂಬರಾದ ಮೆ|| ಕೋದಂಡ ಉತ್ತಯ್ಯನವರು ಕಳುಹಿಸಿದ ಪ್ರಶ್ನೆಗಳು.

1 ಸರಕಾರದ ಮೆಂಬರುಗಳು ಈ ಕೆಳಗಿನ ಪ್ರಶ್ನೆಗೆ ದಯಮಾಡಿ ಜವಾಬು ಕೊಡುವರೋ ?

(1) ಮಡಿಕೇರಿ ಕಾನ್‌ವೆಂಟ್ ಹೈಸ್ಕೂಲಿನಲ್ಲಿ ಗಂಡಸು ಟೀಚರುಗಳು ಎಷ್ಟಿದ್ದಾರೆ ?

(2) ಅವರ ಅರ್ಹತೆಯೇನು.

(3) ಅವರು ಯಾವ ವಿಷಯಗಳಲ್ಲಿ ಪಾಠ ಹೇಳುವರು.

(4) ಅವರ ಸಂಬಳವೇನು.

(5) ಪುರುಷ ಉಪಾಧ್ಯಾಯರನ್ನು ನೇಮಕ ಮಾಡಲು ಕಾರಣ ವೇನು ?

(6) ಅರ್ಹತೆಯುಳ್ಳ ಸ್ತ್ರೀ ಉಪಾಧ್ಯಾಯರುಗಳನ್ನು ಏಕೆ ನೇಮಕ ಮಾಡಲಿಲ್ಲ.

(7) ಸ್ತ್ರೀ ಉಪಾಧ್ಯಾಯರುಗಳ ದರಖಾಸ್ತುಗಳಿಗೆ ಎಂದಾರೂ ಕೇಳಿದ್ದಾರೋ ?

(8) ಮಾಡಿದ್ದರೆ, ಎಲ್ಲಿ ಯಾವಾಗ.

(9) ಅವರ ಅರ್ಹತೆಯೇನು ?

(10) ಈ ಉದ್ಯೋಗವು ಖಾಯಂ ಅಥವಾ ಹಂಗಾಮಿಯೋ ?

(11) ಉಪಾಧ್ಯಾಯರ ಪೈಕಿ ಸ್ತ್ರೀ ಗ್ರ್ಯಾಜುಯೇಟರುಗಳೆಷ್ಟು.

(12) ಅಧಿಕಾರಸ್ಥರು ಕನ್ನಡ ಮತ್ತು ಸಂಸ್ಕೃತ ಪಾಠ ಹೇಳಲಿಕ್ಕೆ ಒಬ್ಬ ಪಂಡಿತರನ್ನು ದೊರಕಿಸಲು ಪ್ರಯತ್ನ ಪಟ್ಟರೇ?

(13) ಕೇಳಿದ್ದರೆ ಇನ್ನಾದರೂ ಮಾಡುವರೊ ?

(14) ಬೋರ್ಡರುಗಳ ಸಂಖ್ಯೆ ಎಷ್ಟು ?

(15) ಎಷ್ಟು ಮಕ್ಕಳಿಗೆ ಜಾಗ ಇದೆ

(19) ಜಾಗ ಇಲ್ಲದೆ ಹಿಂದಕ್ಕೆ ಕಳುಹಿಸಿದ್ದ ಸಂದರ್ಭವುಂಟೋ ?

(17) ಹಾಗಾದರೆ ಅಂಥಾ ತಿರಸ್ಕರಿಸಲ್ಪಟ್ಟ ಅರ್ಜಿಗಳೆಷ್ಟು ?

1. (18) ಪುನಃ ಹಾಸ್ಟೆಲನ್ನು ವಿಸ್ತರಿಸಿ ಕಟ್ಟಲು ಏರ್ಪಾಡಾಗಿದೆಯೋ ?

(19) ವಸ್ತುಗಳ ಕ್ರಯ ಕಡಿಮೆಯಾದ್ದರಿಂದ ಬೋರ್ಡಿಂಗ್ ಚಾರ್ಜು ಕಡಿಮೆ ಮಾಡುವ ಏರ್ಪಾಡುಂಟೋ ?

ಲೇಡೀ ಡಾಕ್ಟರುಗಳು.

2. (1) ಕೊಡಗಿನಲ್ಲಿ ಜಾಗರಿಗೆ ಲೇಡಿ ಡಾಕ್ಟರುಗಳಿಂದ ಅಪ್ಲಿಕೇಶನುಗಳು ಬಂದಿವೆಯೋ ?

(2) ಮೆಡಿಕಲ್ ಓದಲಿಕ್ಕೆ ಕೊಡಗಿನಿಂದ ಯಾರಾದರೂ, ಸ್ತ್ರೀಯರಿಗೆ ಸ್ಕಾಲರ್ ಶಿಪ್ ಕೊಟ್ಟದುಂಟೋ ?

(1) ಇಂಥಾವರಿಂದ ಕೊಡಗಿನಲ್ಲಿಯೇ ಕೆಲಸ ಮಾಡಬೇಕೆಂದು ಬಾಂಡು ತೆಗೆದು ಕೊಳ್ಳಲಿಲ್ಲವೋ ?

(4) ಡಿಗ್ರಿ ತೆಗೆದು ಕಾಲೇಜಿನಿಂದ ಬಂದವರು ಯಾರಾದರೂ, ಇದ್ದಾರೋ ?

(5) ಹಾಗಿದ್ದರೆ ಅಂಥಾವರನ್ನು ಕೊಡಗಿನಲ್ಲಿ ಏಕೆ ನೇಮಕ ಮಾಡಲಿಲ್ಲ,

(6) ಕೊಡಗಿನ ಸ್ತ್ರೀಯರುಗಳು ಪುರುಷರಿಂದ ಪರೀಕ್ಷೆ ಮಾಡಿಸಿಕೊಳ್ಳಲು ಹಿಂಜರಿಯುವುದಿಲ್ಲವಾಗಿ ಸಿವಿಲ್ ಸರ್ಜಿಯನ್ನರು ಅಭಿಪ್ರಾಯ ಕೊಟ್ಟದುಂಟೋ ?

(7) ಹೀಗೆ ಹೇಳಿದ್ದರೆ ಅವರು ಯಾವ ಆಧಾರದಿಂದ ಹೇಳಿದ್ದು

(8) ಹೀಗೆ ಹೇಳಿದ್ದು ಎಷ್ಟರ ಮಟ್ಟಿಗೆ ನಿಜವೆಂಥು ಸರಕಾರದವರು ವಿಚಾರಿಸುವರೋ ?

(9) ಸಿವಿಲ್ ಸರ್ಜಿಯನ್ನರು ಹೇಳಿದ ವಿಷಯವಾಗಿ ಪಬ್ಲಿಕ್ ಜನರ ಅಭಿಪ್ರಾಯ ತೆಗೆದು ಕೊಳ್ಳುವರೋ ?

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ವೀರರಾಜಪೇಟೆ ಹೈಸ್ಕೂಲು.

ಅಯ್ಯಾ, ಸಂಪಾದಕರೆ,

ಈ ಶಾಲೆಯು ದುರಾದೃಷ್ಟವನ್ನು ಹೇಳಿ ಪೂರೈಸಲಾರದು. ಕೊಡಗಿನ ವಿದ್ಯಾರ್ಥಿಗಳ ಪೈಕಿ ಹೆಚ್ಚಿನವರು ದಕ್ಷಿಣ ಕೊಡಗಿನವರಾದರೂ, ದಕ್ಷಿಣ ಕೊಡಗಿನಲ್ಲಿ ಹೈಸ್ಕೂಲು ಆಗಿ ಎ. ವರ್ಷಗಳಿತ್ತಾದವು? 1916 ರಲ್ಲಿ ಫೋರ್ತ್ ಫಾರಂ ತೆರೆದರು - 1923 ರಲ್ಲಿ ಬೇರೆ ಎರಡು ಕ್ಲಾಸುಗಳನ್ನು ತೆರೆದು ಮಡಿಕೇರಿ ಹೈಸ್ಕೂಲಿನ ಆಡಳಿತದ ಕೈ ಕೆಳಗಿದ್ದು ಅಲ್ಲಿಗೆ ಬೇಡದನ್ನು ಇಲ್ಲಿಗೆ ಕೊಡುತ್ತಿದ್ದರೆಂಬಂತೆ ಬಲ ತಾಯಿಯ ಉಪಚಾರ ಸಿಕ್ಕುತ್ತಿತ್ತು. ಒಬ್ಬ ಹೈಸ್ಕೂಲಿನ ಹೆಡ್ ಮಾಸ್ಟರೇ ಸ್ಥಾಪಿಸಿ ಕೊಂಡರು. ಆಡಳಿತವು ಬೇರೆ ಬೇರೆಯಾದಲ್ಲಿಂದ ಸಾಧಾರಣ ಕೆಲಸ ಚೆನ್ನಾಗಿ ನಡೆಯುತ್ತಿದೆ

ಆದರೇನು? ಸಂಬಳವನ್ನು ನೋಡಿದರೆ ಹೆಚ್ಚು ಸರ್ವೀಸ್ ಆಗಿ ಅನುಭವಸ್ಥರು ತೀರ ಮಡಿಕೇರಿ ಹೈಸ್ಕೂಲಿನಲ್ಲಿದ್ದಾರೆ. ಅಲ್ಲಿ ಏಳು ಎಲ್. ಟಿ. ಪಾಸಾದ ಉಪಾಧ್ಯಾಯರಿರುವಾಗ ಇಲ್ಲಿ ನಾಲ್ಕು ಮಾತ್ರವಂತೆ. ಇಲ್ಲಿ ಲೆಕ್ಕ ಸುರುಮಾಡಲು ಕೌನ್ಸಿಲಿನಲ್ಲಿ ಹೋರಾಡಿದರೂ, 7 ವರ್ಷಗಳ ಮೇಲೆ ಬಂಕು ಆಟದ ಮೈದಾನ 12 ವರ್ಷಗಳ ಮೇಲೆ ಸಿಕ್ಕಿದರೂ, ಹಾಸು ಮಾತ್ರ ಆಡ ಒಹುದಾದಷ್ಟು ದೊಡ್ಡದಾಗಿದೆ,

ಈ ಶಾಲೆಯ ಒಂದನೇ ಅವಶ್ಯಕತೆ ಬೋರ್ಡಿಂಗು ಇದಕ್ಕೆ ಮೊದಲಿನ ಕೌನ್ಸಿಲು ಮೆಂಬರು ಎಷ್ಟು ಒದ್ದಾಡಿದರೂ ಸಾಧ್ಯವಾಗಲಿಲ್ಲ 8000 ರೂಪಾಯಿಗಳನ್ನು ಮಂಜೂರ್ ಮಾಡಿದರೂ, ಖರ್ಚುಮಾಡಲೇ ಇಲ್ಲ. ಸಾಹುಕಾರ ಕೃಷ್ಣಯ್ಯನವರ ಮನೆಯನ್ನು ತೆಗೆದು ಕೊಳ್ಳಿ ಎಂದು ಎಷ್ಟು ಹೇಳಿದರೂ, ಕೆಲವು ಕೌನ್ಸಿಲು ಮೆಂಬರುಗಳು, ಸರಕಾರ ನ್ಯಾಯರೂ, ಕೇಳದೆ ಹಣವು ಹೋಯಿತು. ಕೊಂಡು ಕೊಂಡ ಈಗಿನ ಮನೆಯ ಮಾಲೀಕರಾದ ಸ್ವಾಮಿಗಳಿಗೆ ಏನಾದರೂ, ಒಂದು ವಿಧ ಲಾಭ ಬಂದು ಬಿಡುತ್ತದೆಂಬ ಭಯ ಅದನ್ನು ಕೊಂಡು ಕೊಳ್ಳಿ ಎಂದು ಹೇಳುವವರಿಗೆ ಏನಾದರು ಕಮಿಶನ್ ಸಿಕ್ಕುತ್ತೋ? ಎಂಬ ಹೊಟ್ಟೆಕಿಚ್ಚಿನಿಂದ ಹೀಗಾಯಿತು. ಮೂರು ವರ್ಷಗಳೊಳಗೆ ಕಟ್ಟಡವಾಗುತ್ತದೆಂದು ಕಮಿಶನರು ಹೇಳಿದ್ದರಂತೆ. ಈ ವರ್ಷ ದಕ್ಷಿಣ ಕೊಡಗಿನ ಚುನಾಯಿತ ಮೆಂಬರರೇ ಕಟ್ಟಡಕ್ಕೆ ಹಣವಿಡಲು ಒಪ್ಪಲಿಲ್ಲವೆಂದು ಕೊಡಗು ಪೇಪರಿನಲ್ಲಿದ್ದದನ್ನು ಒಬ್ಬ ಮೆಂಬರು ಒಪ್ಪಿಕೊಂಡರೂ, ವಾರ್ಷಿಕೋತ್ಸವದಲ್ಲಿ ಇನ್ನೊಬ್ಬ ಮೆಂಬರು ಅದು ಸುಳ್ಳು ಎಂದು ಹೇಳಿದ್ದನ್ನು ಕೇಳಿದೆನು, ಒಬ್ಬರು ಒಪ್ಪಿಕೊಂಡದ್ದರಿಂದ ಸುಳ್ಳು ಎಂದು ಹೇಳಿದ ಮೆಂಬರರೇ ಸುಳ್ಳು ಹೇಳಿದರೆಂದು ಭಾವಿಸ ಬೇಕಾಗಿದೆ. ಸರಕಾರದ ಉತ್ಪತ್ತಿ ಕಡಿಮೆಯಾಗುತ್ತ ಬರುವುದನ್ನು ಕಂಡು ಸಹ 8000 ಕ್ಕೆ ಹಳೆ ಕಟ್ಟಡ ಬೇಡ 80,000 ರೂಪಾಯಿಗಳಿಗೆ ಹೊಸ ಕಟ್ಟಡ ಒಳ್ಳೆಯದೆಂದು ಹೇಳಿದ ಬುದ್ಧಿವಂತರು ಈಗೇನೆನ್ನುತ್ತಾರೆ?

ಒಂದು ದೇಶದ ಜನ ಸಂಖ್ಯೆಯ ಅರ್ಧದಷ್ಟು ಹೆಂಗಸರಿರುವಾಗ ಈಗ ಕೊಡಗಿನ ಶಾಲೆಗಳಲ್ಲಿ ಎಷ್ಟು ಹುಡುಗಿಯರಿದ್ದಾರೆ. ಅವರಿಗೆಷ್ಟು ಖರ್ಚಾಗುತಿದೆ ಎಂದು ನೀವು ತಿಳಿಸಿ ಕೊಟ್ಟರೆ ಒಳ್ಳೆಯದು. ವೀರರಾಜಪೇಟೆ ಹೈಸ್ಕೂಲಿಗೆ ಹುಡುಗಿಯರನ್ನು ಸೇರಿಸಿಕೊಳ್ಳುವುದಿಲ್ಲವೆಂದೂ, ಅದು ತನ್ನ ಆರ್ಡರೆಂದೂ, ಹುಡುಗಿಯರಿಗೆ ಬೇರೆ ಶಾಲೆಗಳಿಲ್ಲವೆಂದು ಗೊತ್ತಿರುವ ಹೆಡ್ ಮಾಸ್ಟರೇ ಹೇಳಲು ಕಾರಣವೇನು.

ಅಲ್ಲದೆ ಈ ವರ್ಷದ ಬೋರ್ಡು ಪರೀಕ್ಷೆಯ ಏರ್ಪಾಡು ಇನ್ನು ಏನೆಂದು ತೋರುವುದಿಲ್ಲ ಕೆಲವರು ಪ್ರೈಮರಿ ಪರೀಕ್ಷೆ ಇಲ್ಲವೆಂದು ಹೇಳುತ್ತಾರೆ. ಅಲ್ಲದೆ ಇವರಿಗೆಲ್ಲಾ ಆಯಾ ಹೈಯರ್ ಎಲಿಮೆಂಟರಿ ಶಾಲೆಗಳಲ್ಲೂ, ಮಡಿಕೇರಿ ಹೈಸ್ಕೂಲಿನಲ್ಲಿಯೂ, ಬೇರೆ ಬೇರೆ ಪರೀಕ್ಷೆಯಂತೆ ಹೀಗಾದರೆ ಎಲ್ಲಾ ಕಡೆಯಲ್ಲೂ, ಒಂದೇ ತರದ ಪರೀಕ್ಷೆ ಇಲ್ಲದಿರುವುದು ಸರಿಯೋ? ಇದರಿಂದ ಉಪಾಧ್ಯಾಯರುಗಳು ಇದುವರೆಗೆ ತೆಗೆದುಕೊಳ್ಳುತ್ತಿದ್ದಂತೆ ತೊಂದರೆ ತೆಗೆದು ಕೊಳ್ಳುವರೋ ಎಂಬ ಸಂಶಯ. ಅಲ್ಲದೆ ವೀರರಾಜಪೇಟೆಯಲ್ಲಿ ಸ್ಥಳಸಂಕೋಚವಾದುದರಿಂದ ಪರೀಕ್ಷೆಯು ಕಠಿಣವಾಗಿರುವುದಂತೆ. ಹಾಗಾದರೆ ವೀರರಾಜಪೇಟೆ ಮ ಪ್ರೈಮರಿ ವಿದ್ಯಾರ್ಥಿಗಳನ್ನು ಹೀಗೆ ಕಠಿಣ ಶಿಕ್ಷೆಗೆ ಗುರಿಪಡಿಸಲು ಕಾರಣವೇನು.

ಇ ನೆಂಡ್ಲ ನೋಡುವಾಗ ವೀರರಾಜಪೇಟೆ ಶಾಲೆಗೆ ಸರಿಯಾದ ಉತ್ತೇಜನ ಕೊಟ್ಟರೆ ಮಡಿಕೇರಿ ಬಾಲಕ ಬಾಲಕೀಯರ ಹೈಸ್ಕೂಲುಗಳ ಸಂಖ್ಯೆ ಕಡಿಮೆಯಾಗಿ ತೊಂದರೆಯಾಗಬಹುದೆಂದು ಇನ್ಸ್‌ಪೆಕ್ಟರವರಿಗೆ ಯಾರಾದರೂ, ಚಾಡಿ ಹೇಳಿ ಹೀಗಾಯಿತೋ? ಎಂದು ಸಹ ಊಹಿಸಬೇಕಾಗಿದೆ. ಇದ ಕಾರಣ ದಕ್ಷಿಣ ಕೊಡಗಿನ ಮಹನೀಯರೆಲ್ಲರೂ, ನಿಶ್ಚಯಿಂದ ಎಚ್ಚೆತ್ತು ನೀವು ಓಟು ಕೊಟ್ಟು ಚುನಾಯಿಸಿದ ಕೌನ್ಸಿಲು ಮೆಂಬರರನ್ನು ಶಾಲಾ ಅಧಿಕಾರಿಗಳನ್ನೂ, ಸಾಧ್ಯವಾದರೆ ಕೌನ್ಸಿಲು ಮೀಟಿಂಗಿಗೆ ಬರುವ ಚೀಫ್ ಕಮಿಶನರವರನ್ನು ಕಂಡು ಈ ವಿಷಯವನ್ನು ಸರಿಪಡಿಸಿಕೊಳ್ಳುವುದು ಒಳ್ಳೆಯದು. ವೀರರಾಜಪೇಟೆಯಲ್ಲಿ ಅನೇಕರು ದಕ್ಷಿಣ ಕೊಡಗಿಗೆ ಸೇರಿದ ಉಪಾಧ್ಯಾಯರೇ ಇದ್ದರೂ, ಸಹ ತನಗೆ ಕಡಿಮೆ ಮಕ್ಕಳನ್ನು ಸಿಕ್ಕಿದರೆ ಒಳ್ಳೆಯವರನ್ನು ಚುನಾಯಿಸಿ ಕೊಳ್ಳಬಹುದೆಂದು ಅವರು ಸಂತೋಷ ಪಡುತ್ತಾರೆ. ಆದುದರಿಂದ ನೀವು ಎಚ್ಚೆತ್ತುಕೊಳ್ಳದಿದ್ದರೆ ಯಾರಿಂದಲೂ, ಸಹಾಯ ಸಿಕ್ಕುವಂತಿಲ್ಲ. ಹೀಗೆ ಮಾಡದಿದ್ದರೆ ನೀವೆಲ್ಲರು ಮುಂದಿನ ಜನಾಂಗದವರ ಅಭಿವೃದ್ಧಿಯನ್ನು ಮುಂದುವರಿಸಿದಂತಾಗುವುದಿಲ್ಲ.

ಅಲ್ಲದೆ ಸಂಪಾದಕರೆ, ನೀವು ಮಡಿಕೇರಿ ಸಬ್ ಜಡ್ಜಿಯವರ ಮತ್ತು ವೀರರಾಜಪೇಟೆಯ ಮುನ್ಸಿಫ್ ಕೋರ್ಟುಗಳನ್ನು ಹೋಲಿಸಿದಂತೆ ಮಡಿಕೇರಿ ಮತ್ತು ವೀರರಾಜಪೇಟೆಯ ಹೈಸ್ಕೂಲುಗಳ ಉಪಾಧ್ಯಾಯರು, ವಿದ್ಯಾರ್ಥಿಯರು, ವಿದ್ಯಾರ್ಥಿನಿಯರು, ಖರ್ಚು, ಸ್ಥಳ, ವರ್ಗ್ಗಗಳನ್ನು ಹೋಲಿಸಿ ಬರೆದರೆ ನಮಗೆಲ್ಲರಿಗೂ, ಉಪಕಾರ ಮಾಡಿದಂತಾಗುವುದು.

ಮಕ್ಕಳ ತಂದೆ.

ಮಟ್ಟಿಪ್ಪರು ನೇಶಲ್ ಸ್ಕೂಲಿನ ಹರಿಕಥೆ.

ಶಿವರಾತ್ರಿಯ ದಿನ ನಮ್ಮ ಶಾಲೆಯಲ್ಲಿ ಮತ್ತು ಮಕ್ಕಳು ನಾವು ಸಹ ಸೇರಿ ನಮ್ಮ ದಿನ ಹರಿಕಥೆ ಶ್ರವಣವನ್ನು ಮಾಡಿ ಮಾರನೇ ದಿನ 16 ನೇ ಸೋಮವಾರ ದಿನ ಮುಂಜಾನೆ ಎಲ್ಲ ಲಕ್ಷ್ಮಣ ತೀರ್ಥದಲ್ಲಿ ಸ್ನಾನ ಜಪ ತಪಗಳನ್ನು ಮಾಡಿ ಮಹಾತ್ಮ ಗಾಂಧಿಜೀಯವರ ಹೆಸರನ್ನು ... ಬಾವುಟವನ್ನು ಹಿಡಿದುಕೊಂಡು ಧ್ವಜಾ ಗೀತೆಯ ... ತ್ತಾ ನಮ್ಮ ಶಾಲೆಯ ಸರಿಗೆ ಬಂದು ಅವನ್ನು ಆ ... ತಮಾಡಿ ಇನ್ನು ಎಂಟು ದಿವಕ್ಕೆ ಮಂಡಾರ್ತಿ ಈ ... ರಂದನೆಯನ್ನು ಮಾಡ ಬೇಕೆಂದು ಊರವರೆಲ್ಲರು ... ವರು ಮತ್ತೆ ಇನ್ನು ನೇಂದಿ ಸರಾಸು ಮುಂ ... ಸೇವನೆಯನ್ನು ಮತ್ತು ಪರದೇಶೀ ಬಟ್ಟೆ ಬಹಿಷ್ಕಾ ... ರದ್ದಕ್ಕೆ ಎಲ್ಲರು ಏಕಮನಸ್ಸಿನಿಂದ ಒಪ್ಪಿ ಸ್ವೀಕರಿಸಿದರೂ ...ತೆ

ಸಿ ಯಂ ಪೊಣ್ಣಪ್ಪ

...ಳ ಶ್ರೀಮಂಗಲ ಶಾಲೆಯ ವಾರ್ಷಿಕೋತ್ಸವ

...ಳ ಶ್ರೀಮಂಗಲ ಶಾಲೆಯ ಪ್ರಥಮ ವಾರ್ಷಿಕೋ... ...ಳೆದ ತಾ 20 ನೇ ಶುಕ್ರವಾರ ದಿನ ಒಹು ವಿಜೃಂಭ... ...ನಡೆಯಿತು ಮಿಸ್ಟರ್ ಡಿ.ಮಿ.ನೆಸ್ ಬಿಚ್ ... ...ವರೂ, ಬಿ ಯಸ್ ಒಕ್ಕಲೀರವರೂ, ಮಿಸ್ಟರ್, ...ರವರೂ ಸಾಧಾರಣ 200 ಜನ ನೆರೆದಿದ್ದರು ...ಹ್ನ 8 30 ರಿಂದ 11. 30 ರ ವರೆಗೆ ಆಟ ಓಟಗಳ ಸ್ಪ... ...ನಡೆಯಲಾಯಿತು. ಅಪರಾಹ್ನ 3 ರಿಂದ ಅಲ್ಲಿನ ...ಸ್ಟರಾಗಿರುವ ಮ ಶ್ರೀ. ಸುಂಡೇಪಂಡ ಅಯ್ಯಪ್ಪನವ... ...ವಂದಿಯನ್ನು ಸ್ಪಷ್ಟವಾಗಿ ಓದಿದರು ಅನಂತರ ಬಾ... ...ಜದ ವಿದ್ಯಾರ್ಥಿಗಳ ಕೂಟದ ವರದಿಯನ್ನು ಸಕ್ರೆಟರಿ ... ಇದನಂತರ ಮ ಶ್ರೀ, ಕೆ. ಪಿ ಅಪ್ಪಯ್ಯನವರು ಒಂ... ...ಷಣವನ್ನು ಮಾಡಿದರು ಅನಂತರ ಗೆದ್ದವರಿಗೆ ಸಾ... ...60, 70 ರೂಪಾಯಿಯ ಇನಾಮುಗಳನ್ನು ಹಂಚಿದ... ... ಈ ಶಾಲೆಯಲ್ಲಿ ಇಂಥಾ ಬೆಲೆಯ ಇನಾಮುಗಳನ್ನು ...ದ್ದು ನೋಡಿದರೆ ಆಶ್ಚರ್ಯವೇ ಸರಿ ಪಬ್ಲಿಕ್ ಒಸರ ...ವ್ವಲ. ಓಟದಲ್ಲಿ 3 ವರ್ಷ ಗೆಲ್ಲುವ ಹುಡುಗಿಗೆ 1 ಬೆಳ್ಳಿ ...ವನ್ನು ಮ ರಾ. ಶ್ರೀ ಕೆ ಪಿ ಮುದ್ದಪ್ಪನವರು ಕೊಟ್ಟದ್ದಲ್ಲ ... ಯಸ್ ಒಕ್ಕಲೀರವರೂ ಸಹ ಒಂದು ಇನಾಮು ಕೊ... ...ಟ್ಟಿದ್ದಾರೆ ಇದಾದ ಮೇಲೆ ಆ ಸಣ್ಣ ಮಕ್ಕಳು ಉಪಾ... ...ಧ್ಯಾಯರಾದ ಅಯ್ಯಪ್ಪನವರ ಜೊತೆಯಲ್ಲಿ ಇಂಗ್ಲೀಷ್ ಡ್ರಾಮ ... ಜೂಲಿಯಸ್ ಸೀಸರನ ವಿಷಯ ಆಡಿದ್ದು ನೋಡಿದರೆ ... ಆಶ್ಚರ್ಯವಾಗುತ್ತೆ ಇವರನ್ನು ಟ್ರೇನಿಂಗ್ ಮಾಡಿ... ...ಉಪಾಧ್ಯಾಯರಿಗೆ ನಾವು ಎಷ್ಟು ವಂದನೆ ಮಾಡಿದರು ಸ್ವ... ...ಲ್ಪ. ಇದಾದ ವೇಳೆ ದಾತ ವತ್ಸನ ಕಥೆಯ ಕನ್ನಡ ಡ್ರಾ... ...ವನ್ನು ಸಹ ಸ್ವಾರಸ್ಯವಾದ ಸಂಗೀತಗಳಿಂದಲೂ ತಮ... ...ಮಾತುಗಳಿಂದಲೂ ಶ್ರೀಮಂಗಲ ಶಾಲೆಯ ಮಕ್ಕಳು ಆ... ...ದ್ದು ನೋಡಿದರೆ ಆಶ್ಚರ್ಯವೂ ಆನಂದವೂ ಉಂಟಾಗು... ... 2 ಡ್ರಾಮವು ಮುಗಿದ ಮೇಲೆ ಅಧ್ಯಕ್ಷರಾಗಿದ್ದ ಮಿ...

ನೆಸ್ ಮಲ್ಲಿನ್ಸ್ ಬಿ. ಎ ಯವರು ಇಂಗ್ಲೀಷ್ ಡ್ರಾಮವನ್ನು ಪ್ರಸಹ ತೋರಿಸಿ ಬೇಕೆಂಬದಾಗಿ ಹಿ ಮಕ್ಕಳನ್ನು ಕೇಳಿಕೊಂಡ ಮೇಲೆ ಪುನಹ ತೋರಿಸಿದರು. ಅನಂತರ ಡ್ರಾಮದಲ್ಲಿ ಚೆನ್ನಾಗಿ ಆಡಿದ ಹುಡುಗರಿಗೆ ಮಿ ನೆಸ್ ಮಲ್ಲಿನ್ಸ್ ರವರು 5 ರೂ, ಇನಾಮುಗಳನ್ನು ಮಿ.ಸಸ್ ಪಾರ್ಸನ್ಸ್ ರವರ 5 ರೂ, ಒಹು ಮಾನವನ್ನೂ, ಬಿ. ಯಸ್ ಒಕ್ಕಲೀರವರ 5 ರೂ, ಇ ನಾಮು ಗ... ಮಿಸ್ಟರ್ ಅಪ್ಪನ ನವರು ಚೆನ್ನಾಗಿ ಪೂ... ಟ್ ವ ಮಿದ ಮಂಡೇಪಂಡ ಗಣಪತ್ರಿಯವರಿಗೆ ಕೆಲವು ಇ ನಾಮ ಗಳನ್ನು ಕೊಟ್ಟು ಬಹು ತಮಾಷೆಯಿಂದ ಹುಡುಗರ ನ್ನು ಕುಣಿಸಿ ಪಾರ್ಟಿ ಮುಗಿ... ಕೆರಳದ ಸಂಗತಿಗೆ ನಾನು ಅಲ್ಲಿನ ಉಪಾಧ್ಯಾಯರನ್ನು ಎಷ್ಟು ಹೊಗಳಿದರೂ, ಕೆಲಂ ಹವೇ ಇನ್ನು ನಂಗ ಶಾಲೆಯನ್ನು ವಿದ್ಯೆಯಲ್ಲಿಯೂ, ಆಟ ಓಟದಲ್ಲಿಯೂ, ನಾಟಕದಲ್ಲಿಯೂ, ಪ್ರತಿ ಒಂದು ಬಾಬ ನಲ್ಲಿ ಮುಂದಕ್ಕೆ ತಂದದ್ದಕ್ಕೆ ನಾನು ಪುನಹ ಅವರನ್ನು ವಂದಿ ಸುತ್ತೇನೆ

ಹಾಜರಿದ್ದವ

ಆಸ್ತಿ ಮಾರಾಟಿ.

ಸುಸಮಯ ಕಳಕೊಳ್ಳಬೇಡಿ.

ಅಮ್ಮತ್ತಿ ಸಿದ್ದಾಪುರ ರಸ್ತೆ ಸಮೀಪದಲ್ಲಿ ಗದ್ದೆ ... ಕಾಫಿ ತೋಟ ಮತ್ತು ಅಧಿಕ ಸೇರಿದ 12 5 ಎಕರೆ ... ಮತ್ತು ಅಲಾಯಿದ 12 38 ಎಕರೆ ಮಾರಾಟಕ್ಕೆ ಇದೆ ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎ ಕೆ. ಕೃಷ್ಣಯ್ಯ.
ಬಿ ಎ ಯಲ್, ಯಲ್. ಬಿ
4—4 ವೀರಾಜಪೇಟೆ

ಪ್ರಸಿದ್ದ ಪತ್ರಿಕೆ.

ಈ ಕೆಳಗೆ ನಮೂದಿಸಿರುವ ಮುತ್ತಪ್ಪ ತಂಬ್ರಾನ್ ಮೇನೇಜರು ಸರ್ವರಿಗೂ ತಿಳಿಯಪಡಿಸುವದೇನೆಂದರೆ—

ಮುತ್ತಪ್ಪ ತಂಬ್ರಾನಲ್ಲಿ ಈ ಕೆಳಗೆ ಕಂಡ ಪ್ರತಿ ಪೂಜೆಗಳಿಗೆ ಕೆಳಗಿನ ರಟ್ಟೆ ಮೇರೆ ಚಾರ್ಜು ಬೀಳುತ್ತೆ ಇಲ್ಲಿಗೆ ಬರಲು ಕನ್ನಾನೂರಿಂದ ತಳಿಪರಂಬು ಸ್ಟೇಷನಿಗೆ ರೈಲಿನಲ್ಲು ಬಂದರೆ ದೇವಸ್ಥಾನದ ಒನ್ನಾ ಒಸರನ್ನು ಕಾಣು ಇರುತ್ತೆ. ಒ... ಟ್ಟನಿಗೆ 0—6—0 ಆಣೆ ಚಾರ್ಜ್ ಬೀಳುತ್ತೆ ಇಲ್ಲಿಗೆ ಬರಲು ಸಾಧ್ಯವಿಲ್ಲದವರು ಕೆಳಗಿನ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ಹಣ ರವಾನಿಸಿದರೆ ನ್ಯಾಯವಾಗಿ ಪೂಜೆ ಮಾಡಿಸಿ ಪ್ರಸಾದ ಕಳುಹಿಸಲಾಗುತ್ತೆ ಬೇರೆ ಆಪೀಸರು ಈ ದೇವರ ಹೆಸರು ಹೇಳಿಕೊಂಡು ಬಂದು ಪೂಜೆಗಿರುವ ಹಣ ಹರಿಕೆ ಮ ಗೈರೆ ಕೇಳುವಾಗ ಕೊಡಬಾರದು. ಆಂಥವರು ಹರಿಕೆ ತಲುಪಿಸದೆ ಮೋಸ ಮಾಡುತ್ತಾರೆ

ತಿರೋಪನೆ	13—4—0
ಜೋಡುಬೊಳ್ಳಾಟ	2—8—0
ಒತ್ತೆ ಬೊಳ್ಳಾ	1—4—0
ಜೇಪು ಪೈಂಗುತ್ತಿ	0—8—0
ಪ್ರತ್ಯಂಬಿಯ	2—0—0

ಪಿ. ಯಂ. ಕುಂಞರಾಮನ್,
ಮೇನೇಜರ್
ಪರಸಿನಕಡು ಮುತ್ತಪ್ಪ ದೇವಸ್ಥಾನ,
ಪೋಸ್ಟು ಆಫೀಸು ಪರಸಿನಕಡು,
12—9 Via ತಳಿಪರಂಬು.

...ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕವೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಪ್ರತಿ ತಿಂಗಳಿನಲ್ಲಿ ಸರಿಯಾಗಿ ಮುಟ್ಟಾಗದಿರುವಿಕೆ ಮುಟ್ಟಾಗುವ ಸಮಯದಲ್ಲಿ ಕೈಕಾಲು ಹರಿಯುವಿಕೆ ದುಸ್ವಪ್ನ ಬೀಳುವಿಕೆ ಹೊಟ್ಟೆ ಕಡಿ ಬಿಳುಪು—ಕೆಂಪು ಹೋಗಿ ಗರ್ಭ ಪತನವಾಗುವಿಕೆ ... ಸಂತಾನ ಭಂಗಕ್ಕೆ ಕಾರಣಗಳು ಚಿಕ್ಕ ಮಕ್ಕಳಿಗೆ ... ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ... ಗ್ರಹಪೀಡೆ ದೃಷ್ಟಿದೋಷ ... ಗರ್ಭರಕ್ಷಾಕರ ವಿಧಿಯಲ್ಲಿ ... ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ... ಮಂತ್ರದ ಯಂತ್ರವನ್ನು ... ಹೆಚ್ಚು ಮಕ್ಕಳಿಗಾಗುವ ಸಂತಾನ ಭಂಗವೂ ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ... ಚಿಕ್ಕಮಕ್ಕಳಿಗೆ ... ಕ್ರೀಶಲ್ ಮಾ ಜಾಗ್ರತ ಗುಣ ಕೊಡುವ ತಾಯಿತಕ್ಕೆ ... ಕಾರಣಗಳನ್ನು ಸ್ಪಷ್ಟ ಬರೆಯಿರಿ ಈ ತಾಯಿತ ಧರಿಸಿದ್ದರಿಂದ ಗುಣವಿಲ್ಲದವರಿಗೆ 100 ರೂ ಬಹುಮಾನ ಒಂದು ಸಲ ತರಿಸಿ ಅನುಭವ ತಿಳಿಯಿರಿ

ಸ್ಥಳ ಸಂಕೋಚ ಮೂಲಕ ಮಾದರಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯ ಪ್ರಕೃತಿಯನ್ನು ... ಆಶ್ಚರ್ಯಕರವಾದ ತಾಯಿತ ನನ್ನ ನನ್ನ ಹೆಂಡತಿಯು ... ಗ್ರಹಸ್ಥಿತಿಯಲ್ಲಿರುತ್ತಾಳೆಂಬುವುದನ್ನು ತಿಳಿಸಲು ಅತಿ ಸಂತೋಷವೆನಿಸುತ್ತೆ ... ಸಿ ಕೆ. ರಾಮಸಾಹೇಬ ... ಪ್ರಹ್ಲಾದ ಎಸ್ಟೇಟ್ ಮುಂಬೈ

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಕಿ, ಹಂಚಿಗಟ್ಟಿ,
ಮು. ಪೋ. ಅಥಣಿ, ಜಿ. ಬೆಳಗಾಂವ.

52—18

ಎಂ. ಎಸ್. ಸಿದ್ದಪ್ಪ ಬ್ರದರ್ಸ್.
ಜನರಲ್ ಮರ್ಚೆಂಟ್ ವ್ಯಾಪಾರಿಗಳು, ಮೈಸೂರು.

ಸ್ಯಾರಂಟೀ ಭಂಗಾರದ ನಿಬ್ಬು ಳ್ಳ ಕಿವಿ ಹಾತ್ರಿಯೂ ಬಂದೋಬಸ್ತೂ ಆದ ಫೌಂಟೇನ್ ಪೆನ್‌ಗಳು.

... ವಂಡರ್ ಫೌಂಟನ್‌ಪೆನ್ 1ಕ್ಕೆ ರೂ	3	0	0	
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0	
„ „ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0	
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಸಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0	
„ „ ಮೊಸಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	?	0	
„ ಸೆಲ್ಫ್ ಫಿಲ್ಲಿಂಗ್ ಮೂರಲ್ ಅಥವ ಬ್ರವುನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0	
...ಗ್ ಸ್ಪಾಟ್ ಫೌಂಟನ್‌ಪೆನ್ 1ಕ್ಕೆ	10	8	0	
...ರ್ಕರ್ ಪೆನ್ 1ಕ್ಕೆ	14 6 0, & 20 10 0			
...ಕೆಂಡರ್ ಫೌಂಟನ್‌ಪೆನ್ 1ಕ್ಕೆ	3 8 0, & 3 12 0			
...ನ್ಸ್ ಫೌಂಟನ್ ಪೆನ್ 1ಕ್ಕೆ	6 4 0, & 6 12 0			
...ಟರ್‌ಮನ್ ಫೌಂಟನ್ ಪೆನ್ 1ಕ್ಕೆ	8 ? 0, & 8 10 0			

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0	
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0	
... ಅಲಾರಾಂ ಟೈಂಪೀಸ್ 1ಕ್ಕೆ	6 ? 0 & 6 15 0			
... ಅಲಾರಂ ಟೈಂಪೀಸ್ 1ಕ್ಕೆ	7	?	0	
... ಅಲಾರಂ ಸಣ್ಣ ಟೈಂಪೀಸ್ ... ಸ್ಟೈಲಿನದು 1ಕ್ಕೆ	8	10	0	
ಏಂಜಲ್ಸ್ ಅಲಾರಂ ಟೈಂಪೀಸ್ 1ಕ್ಕೆ	9	6	0	
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ದೊಡ್ಡ ಟೈಂಪೀಸ್ 1ಕ್ಕೆ	13	4	0	
ಗ್ಯಾರಂಟಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್ 1ಕ್ಕೆ	5	10	0	
ಡಿಟೋ ನಮೂನೆಯಲ್ಲಿ ಎಬ್ಬಾ ಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0	
ನಿಕ್ಕಲ್ ಕೇಸ್ ಸಿಲೆಂಡರ್ ಮೂವ್‌ಮೆಂಟ್ ಸಾಧಾರಣ ತರದ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12 8 0			



ಇಲ್ಲಿ ನಮೂದಿಸಿರುವ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅಲಾಯಿದಾ.

ಮನಿಯಾರ್ಡರ್ ರವಾನಿಸುವ ವಿಳಾಸ —ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಜನರಲ್ ಮರ್ಚೆಂಟ್ಸ್ ವ್ಯಾಪಾರಿಗಳು, ಮೈಸೂರು.

52—35

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಎಂಟ್ಪ್ಲಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	23,160
ಒಟ್ಟು ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಗೋಲ್ಡ ಸರ್ಟಿಫೈಡ್ ಆಡಿಟರ್‌ಗಳಿಂದ ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೇಟೋಳಿರ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.,
ತಾರೀಖು 1- 7 -1930

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ
ಓರಿಯಂಟಲ್ ಜೀವವಿಮೆ ಕಂಪೆನಿಯು

ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲೆಲ್ಲಾ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯು ಈಗಿನ ಸ್ಥಿತಿಯಿಂದ ಸಷ್ಟವಾ[illegible]

ಹೊಸ ಕೆಲಸ.	ಪ್ರೀಮಿಯಂ ವರಮಾನ
೧೯೨೭—೪೭೮ ಲಕ್ಷ ರೂಪಾಯಿಗಳು.	೧೯೨೭—೧೨೨ ಲಕ್ಷ ರೂಪಾಯಿಗಳು
೧೯೨೮—೫೮೫ ಲಕ್ಷ „	೧೯೨೮—೧೪೦ ಲಕ್ಷ
೧೯೨೯—೬೫೦ ಲಕ್ಷ „	೧೯೨೯—೧೬೧ ಲಕ್ಷ

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು
ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು
೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳಿಗೆ ೨೨|| ರೂಪಾಯಿಗಳು.
೧೯೨೭ „ „ „ „ ೨೫ „

ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದಲ್ಲಿ ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭವು.
ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.
ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು:—

ಓರಿಯಂಟಲ್ ಬಿಲ್ಡಿಂಗ್ಸ್, OR **ಯಂ. ವಿ. ಮುತ್ತುಕೃಷ್ಣ ನಾಯುಡು,**
ಸೌತ್ ಪರೇಡ್, ಬೆಂಗಳೂರು. **ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.**

52—2 **ಕೆ. ಪಿ. ಚಿಣ್ಣಪ್ಪ,**
ಮಡಿಕೇರಿ. **ಏಜೆಂಟ್,**

ಚಿಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತಂ
ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52-9 ಗಿರಿಗಾಂವ, ಮುಂಬಯಿ.

ಮಲೇರಿಯಾವನ್ನು ಮಲೆಜ್ವರ ಚಳಿಜ್ವರ ಉರಿಜ್ವರ ಮಾ[illegible] ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ, ಗೆಡ್ಡೆಯನ್ನು ಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ
ಕ್ರಯ 8 ಔನ್ಸಿಗೆ 1—8—0, ½ ಡಜನಿಗೆ 8—8—0, 1 ಡ. 16—8—0

ಪಿತ್ತ, ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡಿಸ್

ಪಿತ್ತಜ್ವರ ಕೈಕಾಲು ಬತ್ತಲು, ರಕ್ತ ಇಲ್ಲದೆ ಬೆಳ್ಳಗೆ [illegible] ಶರೀರ ರುಚಿ ಕೆಟ್ಟಿರುವ ನಾಲಿಗೆ ಅರಸಿನ ಬಣ್ಣ ಕಾಣುವ ಕಣ್ಣು ಗೊಂಟೆ ಮತ್ತು ಶರೀರ ತಲೆತಿರುಗು, ತಲೆ ತಿರುಗುವದು ಅಜೀರ್ಣ ಹೊಟ್ಟೆ ಉಬ್ಬು ಎದೆ ಸುಡುವದು ನಾಲಿಗೆ ಒಣಗುವದು ಮುಂತಾದ್ದಕ್ಕೆ ಭಂಗ ಪಿತ್ತ ಕಾರುವುದು ನಿದ್ರೆ ಇಲ್ಲದೆ ಸಂಕಟವಾಗುವುದು ಇತ್ಯಾ. ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3—8—0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ್ಲಾ.

ಶರೀರದಲ್ಲಿ ಬೀಳುವ ಬೊಕ್ಕೆ, ಕುರ, ಮೊಡವೆಗಳು, ಬೇಗ ಗುಣವಾಗದ ಹುಣ್ಣು ವ್ರಣಗಳು ವಿವಿಧ ಬಗೆಯ ಚರ್ಮ ರೋಗಗಳು ಅತಿ ಶೀಘ್ರದಲ್ಲಿ ಗುಣಪಟ್ಟು ರಕ್ತ ಸಂಪೂರ್ಣ ಶುಚಿಯಾಗಿ ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ಬಲವುಳ್ಳ ಮದ್ದು ಕಂಪೌಂಡು ಸಿರಪು ಸರ್ಸಪರಿಲ್ಲಾ ಎಂಬುದೇ ಬಾಟ್ಲಿಗೆ ರೂಪಾಯಿ 3—8—0

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನೋಸ.

ತಿಂಗಳು ಗಟ್ಟಲೆಯ ಅಕ್ರಮ ಹೊಟ್ಟೆನೋವು ಕೈಕಾಲುಗಳ ಸೆಳೆತ ಹೊಟ್ಟೆಯ ಬುಡದ ನಾಡಿಗಳ ಉಪದ್ರ, ರಕ್ತವು ಬೇಕಾದಷ್ಟು ಹರಿಯದೆ ನಿಂತು ಬರುವದು ಅಲ್ಲದೆ ಸಮಯಕ್ಕೆ ಸ್ರಾವಿಸುವದು ಬಿಳಿ ಸೆರಗು ಬೀಳುವದು ಇತ್ಯಾದಿ ಗರ್ಭಕೋಶದ ಎಲ್ಲಾ ಅವಸ್ಥೆ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನೋಸ ಶೀಘ್ರದಲ್ಲಿ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3—8—0

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕೆಂಪು ಕೈಕಾಲು ಕ್ಷೀಣ ತೋರಿ ಸೊಂಟಕ್ಕೆ ಬಲ ಇಲ್ಲದೆ ಇರುವದು ಜೇಡಿನ ಬಣ್ಣದ ಮೂತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ, ಬಾಳುವಿಕೆಯನ್ನೂ ಕುಂದಿಸಬಹುವ ಈ ಆಪತ್ತುಗಳನ್ನು ಬೇಬಿಟೋನ್ ಆಶ್ಚರ್ಯವಿಂದ ಗುಣ ಪಡಿಸುವದು. ಕ್ರಯ ಬಾಟ್ಲಿಗೆ [illegible]

ಎಲ್ಲಾ ಟೆಸ್ಟ್ ಮಾಡಲ್ಪಟ್ಟ ಬೇರೆ ಬೇರೆ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ ಅವುಗಳ ನಾನಾ ಬಗೆಯ ಸಾಮಾನುಗಳೂ ಬಿಸಲಿಗೆ ಇಡತಕ್ಕ ಬಣ್ಣದ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಬೆಲೆಗೆ ದೊರಲ್ಪಡುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ.—ಮಲೇರಿಯಾನ ಕಂಪೆನಿ,
52—18 ಹಂಪನಕಟ್ಟೆ, [illegible] ನಂಬರು 14, ಮಂಗಳೂರು.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಉತ್ತರ ಕೊಡಗಿಗೆ ಮೆ. ನಾಲೇಂಗಡ ಕಾರ್ಯಪ್ಪನವರು,
ದಕ್ಷಿಣ ಕೊಡಗಿಗೆ ಮೆ. ಅಜ್ಜಿಕುಟ್ಟಿರ ಮೋಡಪ್ಪನವರು
ಮರೆನಾಡು—ಮೆ. ಕೀಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೀಪಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಒಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂತ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು.
ಮಡಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರಿ ಸಂಘಗಳ ಪ್ರತಿಯೊಬ್ಬ ಮೆಂಬರನ್ನೂ ಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾನ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾನಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ದೊರೆಯುತ್ತವೆ.

ಮೇನೇಜರ್,
"ಕೊಡಗು" ಮಡಿಕೇರಿ.



12 bore Victor Cartridges Rs 10/- Per 100
Mahomedally-Noorbhoy,
ARMS & AMMUNITION MART
321 Abdul Rehman Street.
52 17 **BOMBAY. 2.**

Printed & published by K. P. Chinnappa at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ವೀಕ್ಷಿ ಪ್ರಯತ್ನ ಸಾ | ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಕೋಟೆರ ಪಿ. ಚಿಣ್ಣಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦	ಮಡಿಕೇರಿ, ಸನ್ ೧೯೩೧ನೇ ಇಸವಿ ಮಾರ್ಚಿ ತಾರೀಕು ೧೩ ನೇ ಶುಕ್ರವಾರ.	ಸಂಚಿಕೆ ೩೮

Telegrams — "Precious"

V. Subramaniier
Jeweller,

Telephone — 7145

DIAMOND MERCHANT, GOLD & SILVERSMITH.

Deals in all:—
SPORTS CUPS in all prices
MEADALS in up to date patterns
CASKETS in elegant style

Nos. 2 & 3, Kuppumuthu St.,
IRUVATESWARANPET,
Post Box 423, Triplicane P. O.,
MADRAS.

Deals in all:—
GEM-SET JEWELS, set with Diamonds Rubies etc.,
GOLD ARTICLES of all patterns
SILVER WARE in latest style

52—17



ಕೋವಿಗಳು, ಕತ್ತಿಗಳು, ಬಚೀಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

ಕಾರ್ಡು ಬರೆದರೆ ಈಗಿನ ಕ್ಯಾಟಲಾಗ್ ವಾಪೀಯಾಗಿ ಕಳುಹಿಸಲ್ಪಡುವದು

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.
24—22

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ. ಮಕ್ಕಳು ...



ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿಯು ಬಲವೂ ಬರುವದು. ದಿನ ದಿನಕ್ಕೆ ಆರೋಗ್ಯವೂ, ಸೌಂದರ್ಯವೂ ಹೆಚ್ಚುವದು. ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ. ಸೀಸೆ 1 ಕ್ಕೆ 12 ಆಣೆ ಟ. ಪ. 9 ಆಣೆ.

ಆರ್ಡರ್ ಜೊತೆಯಲ್ಲಿ ಅಡ್ರೆಸ್ಸನ್ನು ಸ್ಪಷ್ಟವಾಗಿ ಬರೆದು ಕಳುಹಿಸಬೇಕು. ಅಡ್ರೆಸ್ ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲ.

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ.
(ಮೈಸೂರು ಸಂಸ್ಥಾನ)

52—9

ಕಟುಕಷಾಯ ಮಾರ್ಪೆಜ್ವರಕೆ:—ಇದು ಆಯುರ್ವೇದ ಮತ್ತು ಕ್ವಿನೈನು ಸೇರಿಸಿದ ಗುಣದಾಯಕ ಮಲೆ ಜ್ವರ ದಿನ ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಪ್ಲೀಹ ದೋಷದಿಂದ ಬರುವ ಜ್ವರಗಳಿಗೆ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14

ಮೂತ್ರ ಪ್ರಕೃತಿ
ಕಟು ಕಷಾಯ

ಚಂದನಾಸವ.—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಹನಿ ಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂದಿನ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವುದು ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ ಮೂತ್ರ ನಾಳದಲ್ಲಿ ಬರುತ್ತಿರುವ ಕೀವು ಇವುಗಳಿಗೆ ಖಂಡಿತ ಔಷಧಿ ಬೆಲೆ ಬಾಟ್ಲಿ 1 3, 6ಕ್ಕೆ ರೂ 1—4—0 3—8—0 6—12—0

ರೋಮನಾಶಿನಿ:—ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ಕೂದಲಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆ ತಿರುಗುವುದು, ತಲೆಯುರಿ, ಕಣ್ಣುರಿ ... ಕಣ್ಣು ನೋವು, ಅಕಾಲದಲ್ಲಿ ಕೂದಲು ಬಿಳಿದಾಗುವದು ನೆನಪು ಶಕ್ತಿ ಕುಂದಿಹೋಗುವುದು ಇವೆಲ್ಲವೂ ಖಂಡಿತ ಗುಣವಾಗುತ್ತದೆ ... ಕೂದಲು ... ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ... ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ... ಸೀಸೆಗೆ ರೂ 2, ... ಸೀಸೆಗಳಿಗೆ 5—8—0

ವಿಳಾಸ—ಮನೋಲ್ಲಾಸಿನಿ ಕಂಪೆನಿ,
೪. ಮಂಗಳೂರು.

52—44

ಹಿಂದೀ ಸ್ವಾತಂತ್ರ್ಯಕೀ ಜೈ! ಭಾರತ ಮಾತಾಕೀ ಜೈ !!

ಕೊಡಗಿನ ಮಹಾ ಜನರು ತಾರೀಕು ೧೧—೩—೧೯೩೧ರಲ್ಲಿ ದಕ್ಷಿಣ ಕೊಡಗಿನ ಮುಖ್ಯ ಪಟ್ಟಣವಾದ ವೀರರಾಜೇಂದ್ರಪೇಟೆಯಲ್ಲಿ ಮಹಾ ಸಭೆ ಮಾಡಿ ಹಿಂದೀ ರಾಷ್ಟ್ರೀಯ ಚಳವಳದಲ್ಲಿ ಸ್ವತಂತ್ರ ಸಾಧನೆಗಾಗಿ

ಕೊಡಗಿನ ಸತ್ಯಾಗ್ರಹ ಮಂಡಳಿಯವರಾದ

ಶ್ರೀಮಾನ್ 1. ಪಂದ್ಯಂಡ ಬೆಳ್ಯಪ್ಪನವರು, 2. ಕೊಳ್ಳಿಮಾಡ ಕರುಂಬೈಯ್ಯನವರು, 3. ಅಬ್ದುಲ್ ಗಫೂರ್‌ಖಾನ್ ಕೈಶ್ಗಿಯವರು, 4. ಹೆಚ್. ಆರ್. ಕೃಷ್ಣೈಯ್ಯನವರು, 5. ಅಜ್ಜಿಕಟ್ಟಿರ ಚಿಣ್ಣಪ್ಪನವರು, 6 ಅಜ್ಜಿಕುಟ್ಟಿರ ತಮ್ಮೈಯ್ಯನವರು, 7 ಕಾಳೇಂಗಡ ಚಿಣ್ಣಪ್ಪನವರು, 8. ಕೈಬಿಲಿರ ಅಪ್ಪಣ್ಣನವರು, 9. ಮಲ್ಲೆಂಗಡ ಮಂದಯ್ಯನವರು, 10, ಪೊನ್ನಿಮಾಡ ಮಾಚೈಯ್ಯನವರು, 11. ಕಡೇಮಾಡ ಸಂಜಪ್ಪನವರು, 12. ಮೇದೈಯ್ಯನವರು, 13. ಐಯ್ಯಣ್ಣನವರು, 14. ಚೆಕ್ಕೆರ ಪೊಂನ್ನೈಯ್ಯನವರು, 15. ಮಾಚಮಾಡ ಕುಶಾಲಪ್ಪನವರು, 16. ಸಣ್ಣುವಂಡ ಸಂಜಪ್ಪನವರು 17 ತೀತಮಾಡ ಭೀಮೈಯ್ಯನವರು. 18 ಮಂಡೇಪಂಡ ಕಾರ್ಯಪ್ಪನವರು, 19 ಬಿ. ಜಿ. ಗಣಪೈಯ್ಯನವರು, 20. ಅಲೆಮಾಡ ಅಪ್ಪಣ್ಣನವರು, 21. ಅಜ್ಜಮಾಡ ಮಾದಪ್ಪನವರು, 22 ಐನಂಡ ಪಿ. ಕಾರ್ಯಪ್ಪನವರು, 23. ಶ್ರೀಮತಿ ಕೋಟೆರ ಸಿ. ಅಕ್ಕಮ್ಮನವರು, 24 ಬಲ್ಲಾಟಂಡ ಯಂ ಮುದ್ದಪ್ಪನವರು, 25. ಮುಕ್ಕಾಟಿರ ಬೋಜಮ್ಮನವರು, 26 ಗಾಡಿಮಂಡ ಮೇದಕ್ಕನವರು, 27. ಬೋಜಮ್ಮನವರು, 28 ಅಪ್ಪಂಡೆರಂಡ ಕಾಳಮ್ಮನವರು, 29. ಶ್ರೀಮಾನ್ ಬ್ರಾಂ. ಮಕ್ಕಿ ಕೃಷ್ಣೈಯ್ಯನವರ , 30 ಚೊಟ್ಟೆಕಾಳಪಂಡ ಅಪ್ಪಣ್ಣನವರು, 31. ಅಜ್ಜಮಾಡ ಮುದ್ದಪ್ಪನವರು, 32 ಎ. ಆರ್. ತಮ್ಮೈಯ್ಯನವರು, 33. ಪುಲಿಯಂಡ ಸುಬ್ಬೈಯ್ಯನವರು, 34. ಕೀಕಿರ ಸುಬ್ಬೈಯ್ಯನವರು, 35. ಚೆಯ್ಯಂಡ ಗಣಪತಿಯವರು, 36 ಮಳವಂಡ ಚಂಗಪ್ಪನವರು, 37 ಗೋಡೇಂಗಡ ಕಾರ್ಯಪ್ಪನವರು, 38. ಕಾತಂಡ ಪೂವೈಯ್ಯನವರು, 39 ಕೈಬಿಲಿರ ಮಾಚೈಯ್ಯನವರು, 40. ಪುಟ್ಟಿಚಂಡ ಪೊಣ್ಣಪ್ಪನವರು, 41. ಕಡಿಯಂಗಡ ಸುಬ್ಬೈಯ್ಯನವರು, 42 ಕುಂಞಂಗಡ ಬೋಪೈಯ್ಯನವರು 43 ಕಾಟಿಮಾಡ ಮಾದಪ್ಪನವರು, 44. ಚಿರಿಯಪಂಡ ಕುಶಾಲಪ್ಪನವರು. 45. ಚೋಕಿರ ಮಾಗಪ್ಪನವರ , 46 ಐಯ್ಯಮಾಡ ಬೆಳ್ಯಪ್ಪನವರು, 47. ಮಲಚ್ಚಿರ ಚಿಟ್ಯಪ್ಪನವರು, 48 ಮಾಚೆಟ್ಟಿರ ಮುದ್ದಪ್ಪನವರು, 49 ಪೂಜಾರಿ ರಾಮಪ್ಪನವರು, 50, ಅಮ್ಮತ್ತಿರ ರಾಮೈಯ್ಯನವರು, 51. ಮಲ್ಲಂಡ ಮಾದೈಯ್ಯನವರು, 52. ಸುಳ್ಳಿಮಾಡ ಕಾರ್ಯಪ್ಪನವರು, 53 ಮಲ್ಲೇಂಗಡ ಚಂಗಪ್ಪನವರು, 54 ಅಜ್ಜಿಕುಟ್ಟಿರ ಸಂಜಪ್ಪನವರು, 55. ಮಲಚ್ಚಿರ ಚಂಗಪ್ಪನವರು, 56. ಮಾಕಳೇರ ಕುಶಾಲಪ್ಪನವರು, 57. ಬ್ರಾಂ. ಗಣಪೈಯ್ಯನವರು, 58. ಕರ್ತಮಾಡ ತಿಮ್ಮೈಯ್ಯನವರು, 59. ಹೆಚ್. ತಮ್ಮೈಯ್ಯನವರು, 60 ಚೊಟ್ಟಂಗಡ ಗಣಪತಿಯವರು, 61. ನೆರವಂಡ ಪೆಮ್ಮೈಯ್ಯನವರು, 62 ನೆರವಂಡ ಪೊನ್ನಪ್ಪನವರು, 63 ತೀತಿರ ಕುಟ್ಟಪ್ಪನವರು, 64 ಮಲಚ್ಚಿರ ಐಯ್ಯಮ್ಮನವರ , 65. ಮನೆಯಪಂಡ ಮಾದಪ್ಪನವರು, 66. ಮುಕ್ಕಾಟಿರ ಮುತ್ತಣ್ಣನವರು, 67. ಬೈರೆಟ್ಟಿರ ಚಂಗಪ್ಪನವರು, 68. ಚೆಂಬಾಂಡ ಮಾದಪ್ಪನವರು, 69 ಪಂದಿಕಂಡ ನೇದಪ್ಪನವರು, 70 ಅಲ್ಲಮಾಡ ಚಿಟ್ಯಪ್ಪನವರು, 71. ಪೆಮ್ಮಂಡ ದೇವೈಯ್ಯನವರು, 72. ಅಪ್ಪಂಡೆರಂಡ ಬಿದ್ದಪ್ಪನವರು, 73 ತೀತಮಾಡ ಮಾದೈಯ್ಯನವರು, 74 ಕೋಚನ ಅಪ್ಪೈಯ್ಯನವರು, 75. ಮುಚ್ಚಿಯಂಡ ಐಯ್ಯಪ್ಪನವರು, 76 ಬೊಜ್ಜಂಗಡ ಕಾರ್ಯಪ್ಪನವರು, 77 ಚೆಕ್ಕೆರ ಮಾಚೈಯ್ಯನವರು, 78 ಪೋರಂಗಡ ಚಿಟ್ಟಿಪ್ಪನವರು. 79 ತೀತಮಾಡ ಸೋಮೈಯ್ಯನವರು, 80. ಕಾಳಿಮಾಡ ಮಾಚೈಯ್ಯನವರು, 81. ಮಚ್ಚಮಾಡ ಪೂವೈಯ್ಯನವರು, 82 ಬ್ರಾಂ ಈಶ್ವರೈಯ್ಯನವರು, 83. ಮುಕ್ಕಾಟಿರ ಪೂವೈಯ್ಯನವರು, 84 ಮುಕ್ಕಾಟಿರ ಬೋಪೈಯ್ಯನವರು, 85. ಮುತ್ತಂಡ ಪೊನ್ನಪ್ಪನವರು, 86 ಚೆಟ್ಟಂಡ ಸಂಜಪ್ಪನವರು, 87. ನಾಣೈಯ್ಯನವರು, 88. ಕೆ. ಯಂ. ಸುಬ್ರಾಯನವರು, 89 ಪೂಜಾರಿ ಮುತ್ತಪ್ಪನವರು, 90 ನಾಯಡ ಬೆಳ್ಯಪ್ಪನವರ , 91 ಸೋಮೆಯಂಡ ಅಚ್ಚೈಯ್ಯನವರು, 92. ಕಾಡಿರ ಐಯ್ಯಣ್ಣನವರು, 93 ಹೊಟ್ಟೇಂಗಡ ಕುಶಾಲಪ್ಪನವರು, 94 ಚೆಂದಿರ ಮುದ್ದಪ್ಪನವರು, 95 ಬಿದರೂರು ಮಾದೈಯ್ಯನವರ , 96 ಕೋದೆಯಂಗಡ ಕಾರ್ಯಪ್ಪನವರು 97. ಬಿ ನಾರಾಯಣರವರು, 98. ಕೊಳ್ಳಿಮಾಡ ಐಯ್ಯಮ್ಮನವರು, ಮತ್ತು 99 ತೀತಿಮಾಡ ಚಂಗಪ್ಪನವರು ಮಾಡಿದ ದೇಶಸೇವೆಗೆ ಅಭಿನಂದಿಸಿ ಒಪ್ಪಿಸಿದ

ಬಿನ್ನಹ ಪತ್ರ

ಕೊಡಗಿನ ಸತ್ಯಾಗ್ರಹ ಮಂಡಳಿಯ ಕಡುಗಲಿಗಳಾದ

ದೇಶಭಕ್ತರೇ, ವೀರ ರಮಣಿಯರೇ,

ಇದು ವರೆಗೆ ಆದ ಭೂಲೋಕದ ಚರಿತ್ರೆಯಲ್ಲಿ ಎಂದೂ ಕಂಡು ಕೇಳದ ಸತ್ಯಾಗ್ರಹ ಯುದ್ಧದಲ್ಲಿ ಭಾರತಮಾತೆಯ ಸುಪುತ್ರನೂ, ಸತ್ಯಾಗ್ರಹದ ಮೂಲ ಪುರುಷನೂ, ಶಾಂತಿ ಪ್ರಿಯನೂ, ಕಲಿಯುಗದ ಮಹಾ ಋಷಿಯೂ, ಮಹಾತ್ಮರಲ್ಲಿ ಮಹಾತ್ಮನೂ ಆದ ಮೋಹನ್‌ದಾಸ್ ಕರಮಚಂದ್ ಗಾಂಧಿಯವರ ದಿವ್ಯ ಸಂದೇಶವನ್ನು ಪಾಲಿಸಲು ತೊಡಗಿ, ಕಳೆದ ಒಂದು ವರ್ಷದಿಂದ ವಿಶ್ರಾಂತಿ ಇಲ್ಲದೆ ಕೆಲಸ ಮಾಡಿ ಜೈಲ್ ವಾಸವನ್ನೂ, ಅನೇಕ ಕಷ್ಟ ಸಂಕಟಗಳನ್ನೂ ಸಹಿಸಿ ಭಾರತಮಾತೆಯ ಬಂಧ ವಿಮೋಚನೆಗಾಗಿ ಕೆಲಸ ಮಾಡಿದ ನಿಮಗಳಿಗೆ ಶಾಂತಿ ಸ್ಥಾಪನೆಯಾದ ಈ ಸಮಯದಲ್ಲಿ ಸುಸ್ವಾಗತವನ್ನೀಯುತ್ತೇವೆ.

ಒಂದು ವರ್ಷದಿಂದ ನಡೆಯುತ್ತಿರುವ ಭಾರತಭೂಮಿಯ ಈ ಶಾಂತಿ ಯುದ್ಧವನ್ನು ಭೂಲೋಕವೆಲ್ಲವೂ ಕುತೂಹಲದಿಂದ ನೋಡುತ್ತಿತ್ತು. ಇದರಲ್ಲಿ ಭಾರತೀಯರು ಎಷ್ಟರ ಮಟ್ಟಿಗೆ ಜಯಶೀಲರಾಗುತ್ತಾರೆಂತ ತಿಳಿಯಲು ಆತುರವಿತ್ತು. ಆದದ್ದೇನು! ಪ್ರಾಣಕ್ಕಿಂತಲೂ ಶ್ರೇಷ್ಠವಾದ ಸ್ವತಂತ್ರವನ್ನು ಸಾಧಿಸಬೇಕೆಂಬ ಛಲವು ಭಾರತೀಯನಾದ ಪ್ರತಿಯೊಬ್ಬನಲ್ಲೂ ಬೇರೂರಿತು. ಮಹಾತ್ಮ ಗಾಂಧಿಯವರ ಮಾತು ದಿವ್ಯವಾಣಿಯಾಯಿತು. ಹಿಂದೀ ಲಲನಾಮಣಿಯರು, ರಾಷ್ಟ್ರವೀರರು ಎಚ್ಚರಗೊಂಡರು. ಎಲ್ಲರೂ ಏಕ ಕಂಠದಿಂದ **ವಂದೇ ಮಾತರಂ, ಹಿಂದೀ ಸ್ವಾತಂತ್ರ್ಯಕೀ ಜೈ, ಭಾರತ ಮಾತಕೀ ಜೈ** ಎಂಬ ಜಯಘೋಷದಿಂದ ಶಾಂತಿ ಯುದ್ಧಕ್ಕೆ ಸನ್ನದ್ಧರಾದರು. ಹಿಂದೂ ದೇಶದಲ್ಲಿ ಎಷ್ಟೊಂದು ಜನರು, ವೀರ ರಮಣಿಯರು, ಬಾಲಕ ಬಾಲಿಕೆಯರು, ಎಳೆ ಮಕ್ಕಳು, ವೃದ್ಧ ಪಿತಾಮಹರು ಪ್ರಾಣವನ್ನು ಬಲಿದಾನ ಮಾಡಲಿಲ್ಲ! ಈ ಪ್ರಚಂಡ ಚಳವಳದಲ್ಲಿ ತಾವೆಲ್ಲರೂ ದುಡಿಯಲುದ್ಯುಕ್ತರಾಗಿ ಕೊಡಗಿನಲ್ಲಿ ಎಷ್ಟೊಂದು ಸಭೆ ಕೂಡಿಸಲಿಲ್ಲ! ಎಷ್ಟೊಂದು ಕಷ್ಟ ಸಹಿಸಲಿಲ್ಲ! ತನು ಮನ ಧನವನ್ನೂ, ಪತ್ನಿ ಪುತ್ರರನ್ನೂ, ಸಂಸಾರಸ್ವರಸದ ತ್ಯಾಗ ಮಾಡಿದಿರಿ ಮರಣಕ್ಕೆ ಅಂಜದೆ ಮೃತ್ಯುವನ್ನು ಎದುರಿಸಿದಿರಿ! ಪೋಲೀಸರ ಲಾಠೀ ಚಾರ್ಜಿಗಾಗಲಿ, ಸರಕಾರದ ಯಾವ ಹಿಂಸೆಗಾಗಲಿ ಹೆದರಲಿಲ್ಲ! ನಿಮ್ಮನ್ನು ಗೇಲಿ ಮಾಡಿದವರೆಷ್ಟು ಜನ! ಅಪಹಾಸ್ಯ ಪಡಿಸಿದವರೆಷ್ಟು! ನಿಮ್ಮ ಮೇಲೆ ಆರೋಪಣೆ ಹೊರಿಸಿ ನಿಮ್ಮ ಚಳವಳವನ್ನು ಮೂಲೆಗೊತ್ತಿಸಲು ಏನೆಲ್ಲಾ ನಡೆಯಿತು! ಆದರೂ ನೀವು ಹಿಡಿದ ಕಾರ್ಯವನ್ನು ಸಾಧಿಸಿದಿರಿ.

ಸತ್ಯವೇ ಜಯ, ಅಹಿಂಸಾ ಪರಮೋ ಧರ್ಮ ವೆಂಬ ಮಹಾತ್ಮರ ದಿವ್ಯವಾಣಿ ಪ್ರಕಾರ ನೀವು ಯಾವುದನ್ನೂ ಲೆಕ್ಕಿಸದೆ ಹೋದಿರಿ. ಹಿಡಿದ ಕೆಲಸವನ್ನು ಧೈರ್ಯದಿಂದ ಕೊನೆಗಾಣಿಸಿದಿರಿ. **ನೀವೇ ಕೊಡಗಿನ ಸುಪುತ್ರ ಸುಪುತ್ರಿಯರು, ಸ್ವತಂತ್ರ ಸಾಧಕರು.** ನಿಮ್ಮನ್ನು ಯಾವ ರೀತಿಯಿಂದ ಸತ್ಕರಿಸಿ ಮನ್ನಿಸುವುದೆಂದು ನಮಗೆ ತಿಳಿಯುವುದಿಲ್ಲ.

ಸರಕಾರದ ಬಹುಮಾನದಂತೆ ನಿಮಗೆ ಜಹಗೀರ್, ಉಂಬಳಿ, ಪಿಂಚಿನ್ ನಮಗೆ ಕೊಡಲು ಸಾಮರ್ಥ್ಯವಿಲ್ಲ. ನೀವು ಇನ್ನು ಮುಂದಕ್ಕೆ ದೇಶಕ್ಕಾಗಿ ಮಾಡುವ ಕೆಲಸಕ್ಕೆ ಎಲ್ಲಾ ವಿಧದಲ್ಲಿಯೂ ಸಹಾನುಭೂತಿಯನ್ನು ಕೊಡುವುದೂ, ನಿಮ್ಮ ಸಂದೇಶವನ್ನು ಆಹ್ಲಾದದಿಂದ ಪಾಲಿಸುವುದೂ ನಾವು ನಿಮಗೆ ಕೊಡತಕ್ಕ ಬಹುಮಾನ. ಇನ್ನೀ ಭಾರತಮಾತೆಯ ಬಂಧನ ವಿಮುಕ್ತತೆಗೆ ತಾವು ಮುಂದಕ್ಕೆ ಬಂದಿರಿ. ಪ್ರಾಣ ಕೊಡಲು ಸಿದ್ಧರಾದಿರಿ. ಭಾರತಮಾತೆಯ ಮಕ್ಕಳೆಂದ **ಕೊಡಗಿನವರು ದೇಶದ್ರೋಹಿಗಳಲ್ಲ, ಭಾರತ ವೀರ ಪುತ್ರರ ಮತ್ತು ಪುತ್ರಿಯರ ಸರಿ ಸಮಾನರು** ಎಂದು ಪ್ರಪಂಚಕ್ಕೆ ಸಾರಿದಿರಿ.

ಈ ಭೂಲೋಕದ ಶಾಂತಿವೀರನೂ, ಮಹಾತ್ಮನೂ, ಬಡ ಜನೋದ್ಧಾರಕನೂ ಆದ **ಗಾಂಧಿ ಮಹಾತ್ಮರ** ದಿವ್ಯಾಮೃತವಾಣಿಯಾದ ಸ್ವದೇಶೀ, ನಿಶಾ ನಿಷೇಧವನ್ನು ಪಾಲಿಸುವೆವೆಂದೂ, ಕೊಡಗಿನಲ್ಲಿ ಖಾದಿ ಪ್ರಚಾರವೂ, ನಿಶಾನಿಷೇಧವೂ ಅತಿ ಭರದಿಂದ ನಡೆದು ಎಲ್ಲರನ್ನು ಖಾದಿ ಪ್ರಿಯರಾಗಿಯೂ, ನಿಶಾನಿಷೇಧಿಯಾಗಿಯೂ ಮಾಡಲಿಕ್ಕೆ ನಾವೆಲ್ಲರೂ ನಿಮಗೆ ಒತ್ತಾಸೆಯಾಗುವೆವು ಎಂಬಲೂ ಭರವಸೆ ಕೊಡುತ್ತೇವೆ. **ಇದೇ ನಾವು ನಿಮಗೆ ಕೊಡತಕ್ಕ ಮಾನಪತ್ರ, ಇದೇ ದೇಶದ ಜಹಗೀರ್, ಉಂಬಳಿ.**

ಭಾರತಮಾತೆಯ ಬಂಧನವನ್ನು ನೀಗಿಸಿ ಪೂರ್ಣ ಸ್ವಾತಂತ್ರ್ಯ ಸಾಧನೆಗೆ ಆ ಜಗದೇಕ ಶಾಂತಿವೀರನಾದ ಮಹಾತ್ಮ ಗಾಂಧಿಯವರಿಗೆ ಜಗದೀಶ್ವರನು ಆಯುರಾರೋಗ್ಯವನ್ನೀಯಲಿ. ಕೊಡಗು ದೇಶದಲ್ಲಿ ಅವರ ಸಂದೇಶವನ್ನು ಪಾಲಿಸಲಿಕ್ಕೆ ಹೊಂಟ ಸ್ವತಂತ್ರೋದ್ಧಾರಕರೆಂದ ಕೊಡಗಿಗೆ ಆಧಾರಸ್ತಂಭವಾಗಿರುವ ನಿಮಗೆಲ್ಲರಿಗೂ ಭಗವಂತನು ಆಯುರಾರೋಗ್ಯ ಐಶ್ವರ್ಯವನ್ನು ದಯಪಾಲಿಸಲಿ.

ವಂದೇ ಮಾತರಂ,

ಕೊಡಗು ಮಹಾ ಜನರ ಪರವಾಗಿ,

ಅಧ್ಯಕ್ಷರು.

'ಕೊಡಗು' ಪ್ರೆಸ್, ಮಡಿಕೇರಿ

ಕೊಡಗು.

ಸ ೧೯೩೧ನೇ ಇಸವಿ
ಮಾರ್ಚ ತಾ ೧೩ ನೇ ಶುಕ್ರವಾರ.

[illegible]ಡಗಿನ ವಿದ್ಯಾ ಇಲಾಖೆ.

[illegible]ಡಗಿನಲ್ಲಿ ಮೂರು ಹೈಸ್ಕೂಲುಗಳೂ, ಆರು ಪ್ರೈ[illegible] ಶಾಲೆಗಳೂ, ಎಂಭತ್ತಾರು ಡಿಸ್ಟ್ರಿಕ್ಟ್ ಬೋರ್ಡ[illegible], ಮೂರು ಮುನಿಸಿಪಲ್ ಶಾಲೆಗಳೂ, ಎ[illegible]ಡೆಡ್ ಶಾಲೆಗಳೂ ಒಟ್ಟಾರೆ ನೂರಮೂರು ಶಾಲೆಗಳ[illegible]ರ್ಷಂಪ್ರತಿ ಮಕ್ಕಳ ಸಂಖ್ಯೆಯು ಹೆಚ್ಚುತ್ತಲೇ ಇದೆ [illegible], ಶಾಲೆಗಳಲ್ಲಿ ಸ್ಥಳವಿಲ್ಲವೆಂದೂ ಇಲಾಖೆಯವರು [illegible]ರ್ಷಿಕ ವರದಿಯಲ್ಲಿ ಬರೆಯುತ್ತಿರುವರು. ದೇಶದ [illegible] ಬಡತನವಿರಲಿ, ತಂದೆ ತಾಯಿಗಳು ತಮ್ಮ ಮಕ್ಕಳ[illegible]ಗಾದರೂ ಮಾಡಿ ವಿದ್ಯಾವಂತರನ್ನಾಗಿಯೂ, ಸುಶಿಕ್ಷಿ[illegible]ಗಿಯೂ ಮಾಡಬೇಕೆಂಬ ಉತ್ಸಾಹಪಟ್ಟು ಬೆಳೆಯುತ್ತಾ[illegible]ದು ದೇಶದ ಅಭಿವೃದ್ಧಿಯ ಶುಭಸೂಚನೆಯೇ ಸರಿ. ಆ[illegible]ಗ ಕೊಡಲ್ಪಡುವ ವಿದ್ಯೆಯು ದೇಶದ ಮುಂದಿನ ಜ[illegible]ವನ್ನು ಸುಶಿಕ್ಷಿತರನ್ನಾಗಿ ಮಾಡಿ ಮುಂದಿನ ಜೀವನ[illegible] ತನಗೂ, ತನ್ನ ಸಂಸಾರಕ್ಕೂ, ತನ್ನ ದೇಶಕ್ಕೂ ಪ್ರ[illegible]ನವನ್ನುಂಟು ಮಾಡುವ ಬದಲು ದೇಶದ ರಾಷ್ಟ್ರೀಯ[illegible], ಸ್ವದೇಶಾಭಿಮಾನವನ್ನೂ ನಾಶಮಾಡಿ ಸರಕಾರದ ನ[illegible]ಕರಿಕೆಯನ್ನುಂಟು ಮಾಡುವುದಾಗಿ ಮಾತ್ರ ಇದೆ. [illegible]ಂಥಾ ಸ್ಥಿತಿಯು ಕೊಡಗಿನಲ್ಲಿ ಮಾತ್ರವಲ್ಲ ಇ[illegible]ದೂಸ್ಥಾನದಲ್ಲೇ ಇದೆ. ಪ್ರಜಾ ಜವಾಬ್ದಾರಿ ಸರ[illegible]ಕ್ಕದ್ದಲ್ಲದೆ ಜನರಿಗೊಪ್ಪುವ ವಿದ್ಯೆಯು ಸಿಕ್ಕುವುದು[illegible]

[illegible]ದ್ಯೆಯೇ ನಮ್ಮ ಮುಂದಣ ಜನಾಂಗದ ಅಭಿವೃದ್ಧಿಯ [illegible]ಯವಾಗಿದೆ. ಕುಂಬಾರನು ಮಣ್ಣನ್ನು ಕಡು ಹದ[illegible]ಕಾದ ಪಾತ್ರಗಳನ್ನು ಹೇಗೆ ಮಾಡಬಲ್ಲನೋ, ಹಾ[illegible] ಮಕ್ಕಳ ಮನಸ್ಸನ್ನು ಉಪಾಧ್ಯಾಯನು ಯಾವ ರೀತಿ[illegible]ದರೂ ತಿರುಗಿಸಬಲ್ಲನು. ಹಾಗಾದರೆ ಅಂಥಾ ಉ[illegible]ಯರು ಮಕ್ಕಳಿಗೆ ತನ್ನ ಡಿಯಿಂದಲೂ ನಡೆ, ನುಡಿ, ಆ[illegible]ಲ್ಲಿ ಮಾದರಿಯಾಗಿರಬೇಕು. ಮಾತ್ರವಲ್ಲ, ತನ್ನ [illegible] ಮಕ್ಕಳು ಎಳೆ ಭಾವನೆಯಿಂದ, ದೇಶಾಭಿಮಾನ[illegible]ಕ್ಕಳನ್ನು ತುರಿದುಂಬಿಸುವ ಮತ್ತು ವಿದ್ಯೆ ಮುಗಿಸಿ [illegible] ತನ್ನ ಮುಂದಿನ ಜೀವನವನ್ನು ಸ್ವಸಹಾಯ ಮತ್ತು [illegible]ನದಿಂದ ನಡೆಸಲು ಉತ್ತೇಜನ ಕೊಡುವಂಥ ಉ[illegible]ಯರುಗಳು ಬೇಕಾಗಿವೆ.

[illegible]ಮ್ಮ ವಿದ್ಯಾ ಇಲಾಖೆಯವರ ಮತ್ತು ಉಪಾಧ್ಯಾಯ[illegible]ತಿಯೇ ಬೇರೆಯಾಗಿದೆ. ದೇಶಾಭಿಮಾನವನ್ನೂ, ರಾ[illegible]ತ್ವವನ್ನೂ ಮೂಲೋತ್ಪಾಟನ ಮಾಡಿ, ಸ್ವಾಭಿಮಾನವ[illegible]ಕೊಳ್ಳುವ ವಿದ್ಯೆಯನ್ನೇ ಹೆಚ್ಚಾಗಿ ಕೊಡುತ್ತಾರೆಯೆಂ[illegible]ಗಲಾರದು. ಈ ಸ್ಥಿತಿಗೆ ಸರಕಾರದ ನೀತಿಯೇ [illegible] ಜವಾಬ್ದಾರಿಯೇ ಹೊರತು ಉಪಾಧ್ಯಾಯರುಗಳಲ್ಲ[illegible]ವೃತ್ತೇವೆ. ಕೊಡಗಿನಲ್ಲಿ ಪಠ್ಯ ಪುಸ್ತಕಗಳನ್ನು ಬ[illegible] ಒಂದು ಕಮಿಟಿಯಾಗಿ ವಿದ್ಯೆಯನ್ನು ನಮ್ಮ ದೇಶದ[illegible]ಗೂ, ಜನಾಂಗದ ಏಳಿಗೆಗೂ ಸರಿಯಾದ ರೀತಿಯಲ್ಲಿ[illegible]ದ ದಿನವನ್ನು ಎದುರು ನೋಡುತ್ತೇವೆ.

[illegible]ದ್ಯೆ ಇಲಾಖೆಯನ್ನು ಕ್ರಮಕ್ಕೆ ತರುವ ಮುಖ್ಯ ಅಧಿ[illegible]ರಾದರೂ ಬೆಂಗಳೂರಿನಲ್ಲಿ ವಾಸ ಇದ್ದು ಮೇಲ್ವಿ[illegible] ನೋಡುವರು. ಈ ಉದ್ಯೋಗವು ಇಂಗ್ಲಿಷ್ ಜ[illegible]ರ್ವ ಮಾಡಲ್ಪಟ್ಟಿದೆಯೆಂಬ ಭಾವನೆಯಿಂದ ಸಿಸ್ಟಿ[illegible]ಗಿ ಕಾಲೇಜಿನಿಂದ ಬಂದು ಯಾವ ಅನುಭವವೂ ಇ[illegible]ವನ್ನು ತಂದು ಒಂದು ವರ್ಷ ತಂದೇತ. ಕೆಲವು [illegible]ಲೆಗಳ ಮೇಲು ಉಸ್ತುವಾರಿ ನೋಡಲು ಇರುವು[illegible] ಇದು ಎಷ್ಟರ ಮಟ್ಟಿಗೆ ನ್ಯಾಯ ಸಮ್ಮತವಾಗಿ[illegible] ಇವರನ್ನು ಕುರಿತು ಅಧಿಕಾರಿಗಳೇ ಯೋಗ್ಯ ವಿಚಾ[illegible]ಡಬೇಕಾಗಿದೆ. ಅವರಾದರೂ ಮಾಡುವುದೇನು? [illegible]ಬೇರೆಯವರ ಹೇಳಿಕೆಗೆ ಒಳಪಡುವುದೂ ಅಥವಾ ಎಲ್ಲ[illegible]ದವರಂತೆ ನಟಿಸುವವನೂ ಅಲ್ಲದೆ ಮತ್ತೇನು ಮಾಡುವ[illegible] ಈಗಿನ ಜನರ ರಾಷ್ಟ್ರೀಯ ಪರಿಸ್ಥಿತಿಯೇನು, ಆವು [illegible]ಲೆಗಳಲ್ಲಿ ಎಷ್ಟರ ಮಟ್ಟಿಗೆ ಮುಂದುವರಿಯುವಂತೆ[illegible]ಕು, ಭೂಲೋಕದ ಅವಸ್ಥೆ ಹೇಗಿದೆ, ತಾನು ವಿದ್ಯೆ [illegible]ಂಗ್ಲೆಂಡ್ ದೇಶದ ಸ್ಥಿತಿ ಹೇಗಿದೆ ಎಂಬುವನ್ನು ಇ[illegible]ಂಥ ಮಟ್ಟಿಗೆ ವಿಚಾರಿಸಿದ್ದವರೆ ಶಾಲೆಗಳಲ್ಲಿ ಮಕ್ಕ[illegible] ಟೊಪ್ಪಿಯನ್ನು ಧರಿಸಕೂಡದು ಎಂಬುವುದಕ್ಕೆ ಆಜ್ಞೆ[illegible]ದ ಜನರ ಮನಸ್ಸಿನಲ್ಲಿ ಅಶಾಂತತೆಯನ್ನುಂಟು[illegible]ರಿಲ್ಲ.

ಕೊಡಗು ಕೌನ್ಸಿಲಿನಲ್ಲಿ ಇಂಥಾ ಉದ್ಯೋಗದ ಅವಶ್ಯಕತೆಯೇ ಇಲ್ಲವೆಂದೂ, ಇವರಿಗೆ ಕೊಡುವ ಸಂಬಳವು ದೇಶಕ್ಕೆ ದೊಡ್ಡ ನಷ್ಟವೆಂದೂ ಅನೇಕಾವೃತ್ತಿ ಚರ್ಚೆಯಾಯಿತು. ಇನ್ನಾದರೂ ಹಣದ ಅಭಾವದಿಂದ ಕೂಡಿದ ಈ ದೇಶದಲ್ಲಿ ನಮ್ಮ ಸರ್ಕಾರವು ಈ ಉದ್ಯೋಗವನ್ನು ತೆಗೆದು ಹಾಕಿ ಉಳಿಕೆಯಾದ ಹಣವನ್ನು ಇತರ ಅವಶ್ಯವಿರುವ ವಿಷಯಗಳಿಗೆ ಉಪಯೋಗಿಸುವುದು ಎಷ್ಟು ಒಳ್ಳೆಯದೆಂದು ನಾವು ಹೇಳಬಹುದು.

ಡಿಸ್ಟ್ರಿಕ್ಟ್ ಬೋರ್ಡ ಶಾಲೆಗಳ ಸ್ಥಿತಿಯೂ ಚೆನ್ನಾಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಈ ಶಾಲೆಯ ಮೇಲ್ವಿಚಾರಕರಾದ ಸಬ್ ಅಸಿಸ್ಟೆಂಟರೂ ಸಹ ಪರ ಭಾಷಾ, ಪರ ವೇಷಾದಿಂದ ಅಂಗ್ಲೇಯರನ್ನು ಅನುಕರಿಸುವಂತೆ ನಟಿಸುವುದು ವಾಡಿಕೆಯಾಗಿದೆ. ಕನ್ನಡ ಶಾಲೆಗಳಲ್ಲಿ ಕನ್ನಡ ಕಲಿತ ಉಪಾಧ್ಯಾಯರೊಂದಿಗೆ ಇವರು ಯಾವ ರೀತಿ ಸುಳಿತವಾಗಿ ಉಪಾಧ್ಯಾಯರುಗಳಿಗೆ ಆದರ್ಶ ಪ್ರಾಯರು. ಎಂತ ಗೌರವಗಳುವುದಿಲ್ಲ. ರಾಷ್ಟ್ರೀಯತ್ವವನ್ನು ಮುರಿದು ಗೆಳೆತ್ತಲು ಒಡ ಸೆಕ್ಷನ್ ಖಾದಿ ಕಡಿಮೆಯಾದ ಬಾದಿ ಟೊಪ್ಪಿ ಹಾಕುವುದನ್ನು ಮನ್ನಿಸಲು. ಒಹಳ ತೊಂದರೆ ಕೆದಕಿಕೊಂಡು ಜನರಲ್ಲಿ ಬಹಳ ಅತೃಪ್ತಿಯನ್ನುಂಟು ಮಾಡಿರುತ್ತಾರೆ. ಇಂಥಾ ಉದ್ಯೋಗಸ್ಥರು ತಮ್ಮ ಮೇಲಾಧಿಕಾರಿಗಳಿಗೆ ಕೊಡುವ ಸಲಹೆಯು ಎಷ್ಟರ ಮಟ್ಟಿಗೆ ಬ್ರಿಟಿಷ್ ರಾಜ್ಯದ ಹಿತಕ್ಕೆ ಒಳ್ಳೆಯದು ಎಂಬುವುದನ್ನು ಸರ್ಕಾರ ದಯದು ತಿಳಿಯುವ ಕಾಲವು ದೂರವಾಗಿಲ್ಲವೆಂದು ಮತ್ತೊಮ್ಮೆ ಹೇಳಬೇಕಾಗಿದೆ.

ಹೈಸ್ಕೂಲುಗಳ ಸ್ಥಿತಿಯನ್ನು ತೆಗೆದುಕೊಂಡರೆ ಮಡಿಕೇರಿ ಹುಡುಗಿಯರ ಶಾಲೆಗೂ, ಸಂಸ್ಕೃತ ಹೈಸ್ಕೂಲಿಗೂ ಕೊಡಲ್ಪಡುತ್ತಿರುವ ಉತ್ತೇಜನವು ದಕ್ಷಿಣ ಕೊಡಗಿನ ಮುಖ್ಯಸ್ಥಳವಾದ ವೀರರಾಜಪೇಟೆಯ ಹೈಸ್ಕೂಲಿಗೆ ಕೊಡಲ್ಪಡುತ್ತಿಲ್ಲ. ವೀರರಾಜಪೇಟೆಯಲ್ಲಿ ಮಕ್ಕಳ ಸಂಖ್ಯೆಯು 450 ಇದೆ. ಮಡಿಕೇರಿಯಲ್ಲಿ 356 ಮಾತ್ರವಿದೆ. ಆದರೂ ಮಕ್ಕಳ ಸಂಖ್ಯೆಗನುಗುಣವಾಗಿ ಖರ್ಚು ಮಾಡಲ್ಪಡುತ್ತಿಲ್ಲ. ವೀರರಾಜಪೇಟೆಗೆ ಯಾವಾಗಲೂ, ಮಲತಾಯಿಯ ಉಪಚಾರ ಕೊಡುವುದನ್ನೂ ಹುಡುಗಿಯರನ್ನು ಹೈಸ್ಕೂಲಿಗೆ ಸೇರಿಸ ಕೂಡದು ಎಂದು ಒದಾಗಿ ಮಾಡಿದ ಹುಕುಂನನ್ನು ನೋಡಿದರೆ ಮಡಿಕೇರಿ ಕಾನ್ವೆಂಟನ್ನು ಪ್ರೋತ್ಸಾಹಿಸಲಿಕ್ಕಾಗಿ ಈ ರೀತಿ ಮಾಡಿದ್ದು ಎಂಬುದಾಗಿ ಬರೆದರೆ ತಪ್ಪಾಗಲಾರದು. ಕೊಡಗಿನ ಜನರಿಗೆ ಹುಡುಗರೂ, ಹುಡುಗಿಯರೂ, ಒಟ್ಟಿಗೆ ವಿದ್ಯೆ ಕಲಿಯಲು ಆಕ್ಷೇಪಣೆಯೇ ಇರುವುದಿಲ್ಲ. ಅಲ್ಲದೆ, ಕಾನ್ವೆಂಟು ವಿದ್ಯೆಯ ಮೇಲೆ ಯಾವ ವಿಶ್ವಾಸವೂ ಇಲ್ಲದ ಜನರನ್ನೇ ಕುರುಹಾಗ ಈ ತರದ ಹುಕುಂ ದೇಶದವರಿಗೆ ಅತ್ಯಾಶ್ಚರ್ಯವನ್ನುಂಟು ಮಾಡಿದೆ.

ಇನಾದರೂ ಅಧಿಕಾರಿಗಳು ಇಂಥ ಸ್ವೇಚ್ಛೆಯ ಹುಕುಂಗಳನ್ನು ತೆಗೆದು ಹಾಕುವರೆಂದು ನಂಬುತ್ತೇವೆ. ಶಾಲಾಧಿಕಾರಿಗಳಿಗೆ ಯೋಗ್ಯ ರೀತಿಯಲ್ಲಿ ಸಲಹೆ ಕೊಡಲು ಒಂದು ಕಮಿಟಿಯು ಕೊಡಗಿನಲ್ಲಿಲ್ಲದಿರುವುದೇ ಇಂಥಾ ಸ್ವೇಚ್ಛೆಯ ವರ್ತನೆಗೆ ಕಾರಣವೆಂದು ನಾವು ಹೇಳಬೇಕಾಗಿಲ್ಲ. ಆದ್ದರಿಂದ ಇನ್ನು ಮುಂದಕ್ಕಾದರೂ, ಮದ್ರಾಸಿನಲ್ಲಿರುವ ರೀತಿ ಡಿಸ್ಟ್ರಿಕ್ಟ್ ಎಡ್ಯುಕೇಶನ್ ಕೌನ್ಸಿಲೊಂದನ್ನು ಮಾಡಿದರೆ, ಎಷ್ಟೊಂದು ಉತ್ತಮವಾಗುತ್ತದೆಂದು ನಾವು ಹೇಳಬೇಕಾಗಿಲ್ಲ.

ರಾಜಿ ಕರತ್ತುಗಳು.

ಕಾಂಗ್ರೆಸಿನವರಿಗೂ, ಸರ್ಕಾರಕ್ಕೂ ಆದ ರಾಜಿಯ ಕರತ್ತುಗಳನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಇದರ ಮೇಲೆ ಮಹಾತ್ಮ ಗಾಂಧಿಯವರ ಟೀಕೆಯೂ ಪ್ರಕಟವಾಗಿದೆ. ಈಗ ಆದ ರಾಜಿಯು ಪರ್ಮನೆಂಟ್ ರಾಜಿಯಲ್ಲ. ಎಲ್ಲಾ ಯುದ್ಧಗಳಲ್ಲಿ ಒಂದು ಪಕ್ಷವು ಸೋತರೇ ಅಥವಾ ಎರಡು ಪಕ್ಷದವರಿಗೂ ಯುದ್ಧವು ಸಾಕೆಂತಾದರೆ ರಾಜಿ ಕರತ್ತುಗಳನ್ನು ಉಭಯ ಪಕ್ಷದವರೂ ಸೇರಿ ನಿಶ್ಚೈಸಿಕೊಳ್ಳಲಿಕ್ಕಾಗಿ ಹೋರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಪದ್ಧತಿ ಇದೆ. ಕಳೆದ ಘೋರ ಯುದ್ಧವು 1918 ನೇ ಇಸವಿ ನವಂಬರ್ ತಾ. 11ರಲ್ಲಿ ತಾತ್ಕಾಲಿಕವಾಗಿಯೇ ನಿಲ್ಲಿಸಲ್ಪಟ್ಟಿದ್ದು ಅನಂತರ ಯುದ್ಧಕ್ಕೆ ಸೇರಿದ ಎಲ್ಲಾ ಜನಾಂಗಗಳ ಪ್ರತಿನಿಧಿಗಳೂ ಸೇರಿ ಚರ್ಚಿಸಿ ಅನೇಕ ತಿಂಗಳುಗಳ ಮೇಲೆ ಪರ್ಮನೆಂಟ್ ತೀರ್ಮಾನವಾದದ್ದು. ಹಾಗೆಯೇ ಹಿಂದೀಯರಿಗೂ, ಸರ್ಕಾರಕ್ಕೂ ನಡೆಯುತ್ತಿರುವ ಹೋರಾಟವನ್ನು ಖಾಯಮಾಗಿ ನಿಲ್ಲಿಸುವ ಬಗ್ಗೆ ಹಿಂದೀಯರು ಕೇಳುವ ಸ್ವರಾಜ್ಯವನ್ನು ಯಾವ ರೂಪದಲ್ಲಿ ಎಷ್ಟರ ಮಟ್ಟಿಗೆ ಕೊಡುವುದೆಂಬವನ್ನು ನಿಶ್ಚೈಸಿಕೊಳ್ಳಲಿಕ್ಕಾಗಿ ಈಗಿನ ಯುದ್ಧವು ತಾತ್ಕಾಲಿಕ ರಾಜಿಯಾಗಿರುವದಾಗಿದೆ.

ರಾಜಿಯೆಂದರೆ ಸಾಧಾರಣವಾಗಿ ಉಭಯ ಪಕ್ಷದವರೂ ತಮ್ಮ ತಮ್ಮ ಹಟವನ್ನು ಬಿಟ್ಟು ಮಧ್ಯ ತೀರದಲ್ಲಿ ತೀರ್ಪು ಮಾಡಿಕೊಳ್ಳುವುದಾಗಿದೆ. ಈಗಿನ ರಾಜಿಯಲ್ಲಿಯೂ ಸರ್ಕಾರವೂ, ಕಾಂಗ್ರೆಸ್ಸೂ ಕೆಲವು ಮಟ್ಟಿಗೆ ಸೋತಿವೆ. ರೌಂಡ್ ಟೇಬಲ್ ಕಾನ್ಫರೆನ್ಸಿನಲ್ಲಿ ನಿಶ್ಚೈಸಲ್ಪಟ್ಟ ರಾಜಕೀಯ ಹಕ್ಕುಗಳಿಗಿಂತ ಮುಂದರಿಸಲಾಗುವುದಿಲ್ಲ, ಅಲ್ಲಿ ಹಾಕಿದ ಹದ್ದಿನೊಳಗೆ ಕಲಮುಗಳನ್ನು ಮಾತ್ರ ಇನ್ನು ಮೇಲೆ ನಿರ್ಣಯಿಸಿಕೊಳ್ಳಬಹುದೆಂತ ಬ್ರಿಟಿಷ್ ಮಂತ್ರಿಯವರು ಹೇಳಿದ್ದರು. ಈಗಿನ ರಾಜಿಯಲ್ಲಿ ಹಿಂದೂಸ್ಥಾನಕ್ಕೆ ಯಾವ ತರಹ ಸ್ವರಾಜ್ಯವಿರಬೇಕೆಂಬುವುದನ್ನು ಪುನಃ ಚರ್ಚಿಸಿ ನಿಶ್ಚೈಸಿಕೊಳ್ಳಬಹುದೆಂತಾಗಿದೆ. ಅಲ್ಲದೆ ರೌಂಡ್ ಟೇಬಲ್ ಕಾನ್ಫರೆನ್ಸಿನ ತೀರ್ಮಾನದಲ್ಲಿ ಭದ್ರತೆಗಳು ಇಡಲ್ಪಟ್ಟಿವೆ. ಆದರೆ ಆ ಭದ್ರತೆಗಳು ಬ್ರಿಟಿಷರ ಪ್ರಯೋಜನಕ್ಕಾಗಿ ನಿರ್ಧರಿಸಲ್ಪಟ್ಟಿದ್ದವು. ಈಗಲೂ ಭದ್ರತೆಗಳು ಬೇಕೆಂತ ಒಪ್ಪಿಕೊಳ್ಳಲಾಗಿದೆ. ಆದರೆ ಭದ್ರತೆಗಳು ಹಿಂದೂಸ್ಥಾನಕ್ಕೆ ಅವಶ್ಯವಾದವುಗಳಾಗಿರಬೇಕೆಂದು ಬರೆದಿದೆ. ಇದರಲ್ಲಿ ಬಹಳ ಅರ್ಥವಿದೆ. ಯಾವ ಭದ್ರತೆಗಳನ್ನು ಇಟ್ಟುಕೊಳ್ಳಬೇಕಾದರೂ ಹಿಂದೂಸ್ಥಾನಕ್ಕೆ ಅವಶ್ಯವಿರುವವು ಎಂತ ಒಪ್ಪಿಸಿದರೆ ಮಾತ್ರ ಇಟ್ಟುಕೊಳ್ಳಬಹುದಷ್ಟೆ. ಈ ರಾಜಿ ಕರತ್ತುಗಳ ಮೇಲೆ ಟೀಕಿಸುವಾಗ ಮಹಾತ್ಮ ಗಾಂಧಿ, ಪಂಡಿತ ಜವಾಹಿರ್‌ಲಾಲ್ ನೆಹರು ಮುಂತಾದ ಮುಖಂಡರು ಹಿಂದೂಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯವೇ ಸಿಕ್ಕಬೇಕೆಂತ ಕಾಂಗ್ರೆಸ್ ಮುಖಂಡರು ಮುಂದಿನ ಚರ್ಚೆಯಲ್ಲಿ ವಾದಿಸಲು ಅನುಕೂಲವಿದೆಯೆಂತ ವಿವರಿಸಿರುತ್ತಾರೆ. ಇದರಲ್ಲೇ ಕಾಂಗ್ರೆಸಿನ ಮುಖ್ಯ ಜಯವಿರುವುದಾಗಿದೆ.

ಕಾಂಗ್ರೆಸಿನವರು ಮುಂದಿನ ರಾಜಕೀಯ ಚರ್ಚೆಯಲ್ಲಿ ಸೇರಬೇಕೆಂದರೆ ಏನೇನು ಆಗ ಬೇಕೆಂತ ವಿಶ್ಲೇಷಿಸುವುದರಲ್ಲಿ ಎಲ್ಲಾ ಸವಿನಯ ಕಾಯಿದೆಭಂಗ ಖೈದಿಗಳನ್ನು ಬಿಡಬೇಕೆಂತ ಒಪ್ಪಂದವಾದರೂ, ಹಿಂಸಾಯುಕ್ತವಾದ ರಾಜಕೀಯ ಕ್ರಿಯೆಗಳಿಗೆ ಗುರಿಯಾದವರನ್ನು ಸಹ ಬಿಡಿಸಿಕೊಳ್ಳ ಬೇಕೆಂತ ಅಭಿಪ್ರಾಯವಿರುವ ಬಲವಾದ ಒಂದು ಪಾರ್ಟಿಯಿದೆ. ಈಗ ಒಪ್ಪಂದವಾಗಿರುವ ಕರತ್ತುಗಳನ್ನು ನಡೆಸಿ ಕೊಟ್ಟರೆ ಇತರ ಖೈದಿಗಳನ್ನು ಸಹ ಬಿಡುವರೆಂತ ಮುಖಂಡರು ಹೇಳುತ್ತಿದ್ದಾರೆ. ಕಾಂಗ್ರೆಸ್ಸಿನ ಚಳವಳಿಯ ಖೈದಿಗಳನ್ನು ಬಿಡಬೇಕೆಂತ ಮಾತ್ರ ಕಾಂಗ್ರೆಸ್ಸಿನವರು ಕೇಳುವುದರಲ್ಲಿ ನ್ಯಾಯವಿದೆ. ಅದು ಮುಂಚೂರಾಗಿರುವದರಿಂದ ತಪ್ಪದಲ್ಲೇ ಇತರ ಖೈದಿಗಳನ್ನು ಸಹ ಬಿಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ನೆರವೂ ತೃಪ್ತರಾಗಬಹುದು. ದೇಶದ ಅಭಿಪ್ರಾಯಕ್ಕನುಗುಣವಾಗಿ ಸರಕಾರವು ಇತರ ಖೈದಿಗಳನ್ನು ಸಹ ಬಿಟ್ಟರೆ ಸರಕಾರದ ಘನತೆ ಬಡಲಾದದ್ದು ನಿದರ್ಶನವಾದೀತು.

ಈ ಚಳವಳಿಯ ಸಂಬಂಧವಾಗಿ ಆದರೆ ಕಂದಾಯ ಕೊಡದ ಚಳವಳಿಯಿಂದ ಸಹ ಕೃಷಿಕರು ಕಳೆದುಕೊಂಡ ಭೂಮಿ, ಚರ ಸೊತ್ತುಗಳು ನಿರಾದವರ ಸ್ವಾಧೀನ ಇದ್ದರೆ ಬಿಟ್ಟುಕೊಡಲು ಒಪ್ಪುತ್ತಾರೆ. ಭೂಮಿಯು ಮಾರಾಟವಾಗಿದ್ದರೆ ಸರಕಾರದವರು ಬಿಡಿಸಿ ಕೊಡದಿದ್ದರೂ ಕೆಲವು ಹಾಗಾರ ಮುಖಂಡರು ಅವನ್ನು ಕೊಂಡು ಕೊಂಡು ಮೊದಲಿನ ಹಕ್ಕುದಾರರಿಗೆ ಬಿಟ್ಟುಕೊಡಲು ಒಪ್ಪಿರುತ್ತಾರೆ. ಹಾಗೆ ಕೊಡಿಸಲು ಸರಕಾರವೂ ಕಾಂಗ್ರೆಸಿನವರೂ ಸಹಾಯ ಮಾಡಬೇಕು. ಕೃಷಿಕರಿಗೆ ಉಂಟಾದ ಎಲ್ಲಾ ನಷ್ಟಗಳೂ ವಾಪಸು ಸಿಕ್ಕದಿದ್ದರೂ, ಇಷ್ಟಾದರೂ ಅದನ್ನು ತೃಪ್ತಿಕರವೇ.

ಉಪ್ಪಿನ ಕಾನೂನನ್ನು ರದ್ದು ಮಾಡದಿದ್ದರೂ ಉಪ್ಪು ದೊರಕುವ ಸ್ಥಳಗಳಲ್ಲಿ ಉಪ್ಪನ್ನು ಶೇಖರಿಸಿಕೊಳ್ಳಬಹುದೆಂತಲೂ, ಗ್ರಾಮದೊಳಗೆ ಮಾರಾಟ ಮಾಡಿಕೊಳ್ಳಬಹುದೆಂತಲೂ ಮಾಡಿದ್ದರಿಂದ ಕಾಂಗ್ರೆಸಿಗೆ ನೈತಿಕ ಜಯವಾಗಿದೆ. ಪರದೇಶಿ ಬಟ್ಟೆ ಮತ್ತು ನಿಶಾ ಪದಾರ್ಥಗಳ ಅಂಗಡಿಗಳನ್ನು ಪಿಕೆಟ್ ಮಾಡುವುದು ಶಾಂತಿಯುಕ್ತವಾಗಿರಬೇಕೆಂತಲೂ, ಸಾಧಾರಣ ಕಾನೂನಿಗೆ ವಿರೋಧವಿರಬಾರದೆಂತಲೂ ಇದೆ. ಆದರೂ ಪಿಕೆಟ್ ಮಾಡುವ ಸ್ವತಂತ್ರ ಸಿಕ್ಕಿದ್ದರಿಂದ ಮಹಾತ್ಮರ ಕಾರ್ಯಕ್ಕೆ ಸಹಾಯವಾಗಿದೆ. ಪಿಕೆಟ್ ಮಾಡುವ ಸತ್ಯಾಗ್ರಹಿಗಳು ಮಹಾತ್ಮರ ಬೋಧನೆಯನ್ನು ಅನುಸರಿಸಿದ್ದರೆ ಈ ತರದ ಪಿಕೆಟಿಂಗಿನಿಂದಲೇ ತುಂಬಾ ಪ್ರಯೋಜನ ಮಾಡಿಕೊಳ್ಳಬಹುದು.

ಸರಕಾರದವರು ಈಗಿನ ದಬ್ಬಾಳಿಕೆಯ ಕಾನೂನನ್ನೂ, ವರ್ತನೆಯನ್ನೂ ಬಿಟ್ಟುಬಿಡಬೇಕೆಂತ ತೀರ್ಮಾನವಾಗಿದೆ. ಆದರೆ ಈ ವರೆಗೆ ಪೋಲೀಸಿನವರು ನಡಿಸಿದ ದಬ್ಬಾಳಿಕೆಯ ಬಗ್ಗೆ ತನಿಖೆ ನಡೆಯಬೇಕೆಂಬ ಮಹಾತ್ಮರ ಕರತ್ತನ್ನು ಬಿಟ್ಟುಬಿಟ್ಟದ್ದರಿಂದ ಅನೇಕರಿಗೆ ತೃಪ್ತಿಯಿಲ್ಲ. ಇದರ ಮೇಲೆ ಬಂದಿರುವ ಆಕ್ಷೇಪಗಳು ಬಹಳ ಕಠಿಣ ತರವಾಗಿವೆ. ಸರಕಾರದ ಮೇಲಧಿಕಾರಿಗಳು ಇವರನ್ನು ಶಿಕ್ಷೆ ಕೊಡದೇ ಬಿಡುತ್ತಾರೆ ಆದ್ದರಿಂದ ತನಿಖೆಯು ಅವಶ್ಯವಿತ್ತು. ಆದರೆ ಪ್ರಕಟವಾದ ಕರತ್ತುಗಳಿಗಿಂತ ಹೆಚ್ಚಾಗಿ ಪ್ರಕಟವಾಗದೆ ಇರುವ ಮಾತುಗಳು ತುಂಬಾ ಇರಬಹುದಾದ್ದರಿಂದಲೋ, ಬೇರೆ ಕಾರಣಗಳಿಂದಲೋ ಮುಖಂಡರಾದ ಮಹಾತ್ಮ ಗಾಂಧಿಯವರ, ವರ್ಕಿಂಗ್ ಕಮಿಟಿಯವರೂ ಮಾಡಿದ ತೀರ್ಮಾನಕ್ಕೆ ದೇಶವು ತಲೆಬಗ್ಗಿಸಿ ಮುಂದಿನ ಕಾರ್ಯಗಳಲ್ಲಿ ಮುಂದುವರಿಯಬೇಕು.

ಇನ್ನು ನಡೆಯಲಿಕ್ಕಿರುವ ಚರ್ಚೆಗಳಲ್ಲಿ ಹಿಂದೂಸ್ಥಾನದಲ್ಲಿ ಖಾಯಂ ಶಾಂತಿ ಸ್ಥಾಪನೆಯಾಗಬೇಕೆಂತ ಹಾರೈಸುತ್ತೇವೆ. ಇನ್ನು ಮುಂದೆ ಆಗುವ ತೀರ್ಮಾನವು ತೃಪ್ತಿಕರವಾಗದಿದ್ದರೆ ಈಗ ನಡೆಯುತ್ತಿದ್ದ ಚಳವಳಿಯು ಇನ್ನೂ ಅತಿ ಉಗ್ರವಾಗಿ ನಡೆಯ ಬೇಕಾದೀತು. ಆದ್ದರಿಂದ ದೇಶದಲ್ಲಿ ಮಹಾತ್ಮರ ಆಜ್ಞೆಗಳನ್ನು ಜಾಗರೂಕತೆಯಿಂದ ನಡೆಸುತ್ತಾ ಅವಶ್ಯ ಬಿದ್ದಾಗ ಮುಂದಿನ ಹೋರಾಟವನ್ನು ನಡಸಲು ತಯಾರಾಗಿಯೂ ಇರಬೇಕಾಗಿದೆ.

ವೀರರಾಜೇಂದ್ರಪೇಟೆಯಲ್ಲಿ ಕೊಡಗು ಸತ್ಯಾಗ್ರಹ ಲೀಡರುಗಳಿಗೆ ಸ್ವಾಗತ. ತಾರೀಕು. ೧೧—೧—೧೯೩೧

(ಹಾಜರಿದ್ದವರಿಂದ.)

ತಾರೀಕು 11—1—1931 ರಲ್ಲಿ ವೀರರಾಜೇಂದ್ರಪೇಟೆಯಲ್ಲಿ ಸೇರಿದಂಥ ಜನರು ಕೊಡಗಿನಲ್ಲಿ ಇನ್ಯಾವ ಸಂದರ್ಭದಲ್ಲಿಯೂ ಈ ಮೊದಲು ಸೇರಲಿಲ್ಲ. ಜನರು ಹತ್ತು ಸಾವಿರಕ್ಕಿಂತ ಹೆಚ್ಚಾಗಿದ್ದರು. ಎಲ್ಲಾ ಅಂಗಡಿಯವರು ತೋರಣ ಬಗ್ಗೆರೆ ಕಟ್ಟಿ ಅಂಗಡಿಗಳನ್ನು ಶೃಂಗರಿಸಿದ್ದರು.

ನೋಟೀಸಿನಲ್ಲಿ ಕೊಟ್ಟ ಕಾರ್ಯಕ್ರಮ ಪಟ್ಟಿ ಪ್ರಕಾರ ಸತ್ಯಾಗ್ರಹಿಗಳ ಶಿಬಿರದಿಂದ ವಾದ್ಯದೊಡನೆ ಮಡಿಕೇರಿಯಲಿ ಜೈಲ್‌ವಾಸವನ್ನು ಅನುಭವಿಸಿದ ಹದಿನಾರು ಸತ್ಯಾಗ್ರಹಿಗಳನ್ನು ಎದುರುಗೊಂಡು ಸ್ವಾಗತವನ್ನು ಕೊಡಲಿಕ್ಕಾಗಿ ಸರೀ 10 ಗಂಟೆಗೆ ಹೊರಟರು. ಎರಡು ನೂರಕ್ಕಿಂತ ಹೆಚ್ಚಾಗಿ ಸ್ತ್ರೀಯರು ಮೆರವಣಿಗೆಯಲ್ಲಿದ್ದರು. ಮೆ. ಗಳಾದ ಸಿ. ಯಸ್. ಉತ್ತಯ್ಯನವರೂ, ಬದ್ದಂಡ ಸುಬ್ಬಯ್ಯನವರೂ, ಕೆ. ಸಿ ಚಿಣ್ಣಪ್ಪನವರೂ, ಪುಲಿಯಂಡ ಗಣಪತಿಯವರೂ, ಮಾಳೇಟಿರ ಸೋಮಯ್ಯನವರೂ, ವಗೈರೆರು ಮೆರವಣಿಗೆಯ ಮುಂದೆ ಹೋಗುತ್ತಿದ್ದರು. ಸತ್ಯಾಗ್ರಹಿಗಳ ಬಿಳೀ ಉಡುಪು ಜನರ ಸಾಲು ನೋಡಲಿಕ್ಕೆ ಪ್ರೇಕ್ಷಕರಿಗೆ ಬಹಳ ಆನಂದವನ್ನುಂಟು ಮಾಡುತ್ತಿತ್ತು. ಎಲ್ಲರೂ ಆಗಾಗ್ಗೆ ಜಯಘೋಷ ಮಾಡುತ್ತಿದ್ದರು. ಹತ್ತುವರೆ ಘಂಟೆಗೆ ಮೆರವಣಿಗೆಯಿಂದ ಚಿಕ್ಕ ಪೇಟೆಯ ಬಳಿ ಮೆ. ದೋನಾತಲೆಯೋಬೋರವರ ಮನೆ ಬಳಿ ಈ ಹದಿನಾರು ಸತ್ಯಾಗ್ರಹಿಗಳಿಗೆ ಸುಸ್ವಾಗತಕೊಟ್ಟು ಹೂಮಾಲೆಗಳನ್ನು ಹಾಕಿ ವಾದ್ಯದೊಡನೆ ಅವರನ್ನು ಕರೆದುಕೊಂಡು ಬಂದ. ಕಣ್ಣಾನೂರು ಜೈಲಿನಲ್ಲಿದ್ದ ನಾಲ್ವರು ಲೀಡರುಗಳು ಬರುವ ಹಾದಿಯಾದ ಅರ್ಜಿ ಸೇತುವೆ ಬಳಿಗೆ ಮೆರವಣಿಗೆ ಹೊರಡಲಾಯಿತು. ಜನರ ಸಾಲುಗಳ ಉದ್ದವು ಸುಮಾರು ನಾಲ್ಕು ಫರ್ಲಾಂಗಿಗಿಂತ ಹೆಚ್ಚಾಗಿತ್ತು. ಉತ್ಸಾಹವು ವರ್ಣಿಸಲಸದಳವಾಗಿತ್ತು. ಅರ್ಜಿ ಸೇತುವೆ ಬಳಿಗೆ ಸರಿ 11 ಗಂಟೆಗೆ ತಲಪಿದರು. ಬಸ್ ಬರಲು ಅರ್ಧ ಗಂಟೆ ತಡವಾಯಿತು. ಜನರಲ್ಲಿ ಅನೇಕರು ಬಸ್ಸು ಸಿಕ್ಕುವ ತನಕ ಈ ನಾಲ್ಕು ಲೀಡರುಗಳನ್ನು ತಾನು ಮುಂದೆ, ತಾನು ಮುಂದೆ ಕಾಣುವುದೇ ಎಂಬುದಕ್ಕೆ ಓಡಿದರು.

ಜನರನ್ನು ಶಾಂತಪಡಿಸಲಿಕ್ಕಾಗಿ ಸಭೆಯ ಕೋರಿಕೆ ಮೇರೆ ಮೆಗಳಾದ ಕೆ. ಪಿ. ಚಿಣ್ಣಪ್ಪನವರೂ, ಐ. ಪಿ. ಕಾರ್ಯಪ್ಪನವರೂ ಅರ್ಧ ಗಂಟೆಯ ವರೆಗೆ ಈಗಿನ ಚಳವಳ ಮತ್ತು ರಾಜಿ ಒಪ್ಪಂದ ಕುರಿತು ಭಾಷಣ ಮಾಡಿದರು.

12. ಗಂಟೆಗೆ ಮೆ. ಗಳಾದ ಪಿ. ಡಿ. ಬೆಳ್ಯಪ್ಪನವರು, ಕೆ. ಸಿ. ಕರುಂಬೈಯ್ಯನವರು, ಅಬ್ದುಲ್ ಗಫೂರ್‌ಖಾನ್ ಖೈಸ್ಸೀಯವರು, ಎಚ್. ಅರ್. ಕೃಷ್ಣೈಯ್ಯನವರು ಬಂದರು. ಜನರೆಲ್ಲರೂ ತಮ್ಮನ್ನು ತಾವೇ ಮರೆತರು. ತಾನು ಮುಂದೆ, ತಾನು ಮುಂದೆ ಎಂಬುದಾಗಿ ಹೋಗಿ ಅವರ ಮೇಲೆ ಬಿದ್ದು ಅಪ್ಪಿಕೊಳ್ಳಲು ಸುರು ಮಾಡಿದರು. ಸುಮಾರು ಕಾಲು ಗಂಟೆಯ ವರೆಗೆ ಜನರನ್ನು ತಡೆಯುವುದು ಬಹಳ ಕಷ್ಟವಾಯಿತು. ಉಸಿರು ಕಟ್ಟಿ ಬಿದ್ದು ಯಾರಾದರೂ ಪ್ರಾಣಬಿಡುತ್ತಾರೋ ಎಂಬುದಾಗಿ ಅನೇಕರಿಗೆ ಘೋರ ಗಾಬರಿಯಾಯಿತು. ಕಡೆಗೆ ಹೇಗೋ ಸ್ವಲ್ಪ ಶಾಂತಿಯಾಯಿತು. ಲೀಡರುಗಳ ಜಯಘೋಷದಿಂದ ಹೂವಿನ ಹಾರಗಳನ್ನು ಹಾಕಿ ಅವರನ್ನು ಎಲ್ಲರಿಗೂ ಕಾಣುವಂತೆ ಎತ್ತಿ ಹಿಡಿದುಕೊಂಡಿದ್ದರು. ಪುನಃ ಅರ್ಜಿ ಸೇತುವೆಯಿಂದ ಮೆರವಣಿಗೆಯು ಹಿಂದಕ್ಕೆ ಹೊರಟು ಸತ್ಯಾಗ್ರಹಿಗಳ ಶಿಬಿರಕ್ಕೆ ಒಂದು ಗಂಟೆಗೆ ತಲಪಿದರು. ದಾರಿಯುದ್ದಕ್ಕೂ ಹೂವಿನ ಹಾರಗಳನ್ನು ಹಾಕುವುದೂ, ಗಂಧ ಪನ್ನೀರುಗಳನ್ನು ಅವರ ಮೇಲೆ ಚಿಮುಕಿಸುವುದೂ ಬಹಳವಾಗಿತ್ತು.

1 ಗಂಟೆಯಿಂದ 2 ಗಂಟೆಯ ವರೆಗೆ ಊಟ ಉಪಚಾರವಾಯಿತು. ಸತ್ಯಾಗ್ರಹಿಗಳ ಮಧ್ಯಾಹ್ನದ ಊಟದ ಏರ್ಪಾಡನ್ನು ಮೆ. ಕೋದಂಡ ಉತ್ತಯ್ಯನವರು, ಅವರ ಪತ್ನಿ ಅಕ್ಕಮ್ಮನವರು, ಬಹಳ ತೊಂದರೆ ತೆಗೆದುಕೊಂಡು ಏರ್ಪಡಿಸಿದ್ದರು. ಸರಿ ಎರಡು ಗಂಟೆಗೆ ಕಚೇರಿ ಹಿಂಬಾಗದಲ್ಲಿರುವ ಮೈದಾನಕ್ಕೆ ಮೆರವಣಿಗೆಯಿಂದ ಬಂದರು. ಮೀಟಿಂಗ್ ಜಾಗದಲ್ಲಿ ಸುಮಾರು ಆರು ಸಾವಿರಕ್ಕಿಂತ ಹೆಚ್ಚಾಗಿ ಮನುಷ್ಯರೂ ನಾನೂರಕ್ಕಿಂತ ಹೆಚ್ಚಾಗಿ ಸ್ತ್ರೀಯರೂ ಕುಳಿತಿದ್ದರು.

ಮಹೋತ್ಸವದ ಕಾರ್ಯ ಪ್ರಾರಂಭ.

ಮೆ. ಕೆ. ಪಿ. ಚಿಣ್ಣಪ್ಪನವರು ಸಭಿಕರನ್ನು ಸಂಬೋಧಿಸಿ ಎಲ್ಲರೂ ಈ ದಿನದ ಮಹೋತ್ಸವಕ್ಕೆ ದಯಮಾಡಿಸಿದಕ್ಕಾಗಿ ವಂದನೆಯನ್ನು ಅರ್ಪಿಸಿ ಶಾಂತಚಿತ್ತರಾಗಿ ಈ ದಿನದ ಕಾರ್ಯವನ್ನು ಮುಂದರಿಸಲು ಸಹಾಯ ಮಾಡಬೇಕೆಂದು ಅಪ್ಪೀಲು ಮಾಡಿಕೊಂಡರು. ಆ ಮೇಲೆ ಅವರು ರಾಷ್ಟ್ರೀಯ ಧ್ವಜಾರೋಹಣ ಮಾಡಬೇಕೆಂದೂ, ಧ್ವಜದ ಮಹತ್ವವೇನೆಂಬುದನ್ನು ವಿವರಿಸಬೇಕೆಂಬ ದನ್ನೂ ಮೆ. ಹೆಚ್. ಆರ್. ಕೃಷ್ಣೈಯ್ಯನವರನ್ನು ಕೇಳಿಕೊಂಡರು. ಅವರು ಹಾಗೆಯೇ ರಾಷ್ಟ್ರೀಯ ಧ್ವಜದ ಮೂರು ರಂಗುಗಳನ್ನೂ, ಮಹತ್ವವನ್ನೂ ವಿವರಿಸಿ ಧ್ವಜವನ್ನು ಹಾರಿಸಿದನಂತರ ರಾಷ್ಟ್ರೀಯ ಗೀತೆಯನ್ನು ನಾಟಕ ಮಂಡಳಿಯ ನಾಲ್ಕು ಬಾಲಕರು ಬಹಳ ಗಂಭೀರವಾಗಿಯೂ, ಮನೋಹರವಾಗಿಯೂ ಹಾಡಿದರು.

ಅಧ್ಯಕ್ಷರ ಚುನಾವಣೆ.

ಈ ದಿನದ ಸಭೆಯ ಅಧ್ಯಕ್ಷಸ್ಥಾನಕ್ಕೆ ಮೆ. ಬದ್ದಂಡ ಸುಬ್ಬಯ್ಯನವರನ್ನು ಮಾಡಬೇಕೆಂದು ಮೆ. ಕೆ. ಪಿ. ಚಿಣ್ಣಪ್ಪನವರು ಕೇಳಿಕೊಂಡ ಮೇರೆ ಎಲ್ಲರೂ ಅನುಮೋದಿಸಿದ ನಂತರ ಮೆ. ಸುಬ್ಬಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿ ಸಭಿಕರನ್ನು ವಂದಿಸಿ ಬಿನ್ನಹ ಪತ್ರವನ್ನು ಓದಿದರು.

ಬಿನ್ನಹ ಪತ್ರವನ್ನು ಓದುವಾಗ ಜನರು ಎಷ್ಟೊಂದು ಕುತೂಹಲದಿಂದ ಕೇಳಿದರೆಂಬುದನ್ನು ಹೇಳಲಿಕ್ಕಾಗುವುದಿಲ್ಲ. ಓದಿ ಆದ ನಂತರ ಸತ್ಯಾಗ್ರಹದಲ್ಲಿ ಈ ವರೆಗೆ ಕೆಲಸಮಾಡಿದ 99 ಜನರ ಹೆಸರುಗಳನ್ನು ಓದಿ ಅವರಿಗೆಲ್ಲರಿಗೂ ಒಂದೊಂದು ಬಿನ್ನಹ ಪತ್ರವನ್ನು ಒಪ್ಪಿಸಿದ್ದಲ್ಲದೆ ಹೂಮಾಲೆಗಳನ್ನು ಹಾಕಿದರು.

ಸತ್ಯಾಗ್ರಹಿಗಳ ಪರವಾಗಿ ಮೆ. ಪಂದ್ಯಂಡ ಬೆಳ್ಯಪ್ಪನವರೂ ಬಿನ್ನಹ ಪತ್ರಿಕೆಗೆ ಕೊಟ್ಟ ಜವಾಬು:

ಪ್ರಿಯ ಸಹೋದರಿಯರೆ ಮತ್ತು ಸಹೋದರರೇ,

ಈ ಅದ್ವಿತೀಯ ಜನಸ್ತೋಮವು ಕೊಡಗಿನ ಸತ್ಯಾಗ್ರಹ ಮಂಡಳಿಯವರ ಮೇಲೆ ಈ ದಿನ ತೋರಿಸಿರುವ ಪ್ರೀತಿಯಿಂದ ನನಗುಂಟಾಗಿರುವ ಅತ್ಯಾನಂದದ ದೆಸೆಯಿಂದ ನನಗೆ ಮಾತೇ ಹೊರ ಬರುವುದಿಲ್ಲ. ನಿಮ್ಮೆಲ್ಲರ ಮಧ್ಯದಿಂದ ತಪ್ಪಿಸಿಕೊಂಡು ಹೋಗಿ ಆರು ತಿಂಗಳು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ನಾನು ಈಗ ಕೆಲವು ಮಾತುಗಳನ್ನಾದರೂ ಆಡದೆ ಹೋದರೆ ನಿಮಗೆ ಆಶಾಭಂಗವು ಟಾಗಬಹುದೆಂಬ ಕಾರಣ ನನ್ನ ಕೃತಜ್ಞತೆಯನ್ನು ನಿಮಗೆ ಸ್ವಲ್ಪ ಶಬ್ದಗಳಿಂದಾದರೂ ತಿಳಿಸಬೇಕಾಗಿದೆ. ನನ್ನ ಜೀವಮಾನ ಕಾಲದಲ್ಲಿ ಕೊಡಗಿನಲ್ಲಿ ಇಷ್ಟು ದೊಡ್ಡ ಮಹಾ ಸಭೆಯು ಸೇರಿದ್ದು ಈ ಮೊದಲು ನೋಡಿರಲಿಲ್ಲ. ಅದಂಲ್ಲದೆ ಕೊಡಗಿನ ಮಹಿಳೆಯರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ರಾಜಕೀಯ ಸಭೆಗಳಲ್ಲಿ ಸೇರಿದ್ದು ಇದೇ ಪ್ರಥಮ. ಇದರಿಂದಲೂ, ಜಾತಿ ಮತ, ಪಾರ್ಟಿ ಪಂಗಡ ಭೇದವೇನೂ ಇಲ್ಲದೆ ಸಾವಿರಗಟ್ಟಲೆಯಲ್ಲಿ ಇಲ್ಲಿ ಸೇರಿರುವ ಜನಸ್ತೋಮದಿಂದಲೂ ನಮ್ಮ ಪ್ರಾಂತ್ಯದಲ್ಲಿಯೂ ಜನರು ರಾಜ್ಯಾಡಳಿತೆಯ ವಿಷಯದಲ್ಲಿ ಎಷ್ಟರ ಮಟ್ಟಿಗೆ ಎಚ್ಚರಗೊಂಡಿರುವರೆಂಬುದು ವಿಷದವಾಗುತ್ತದೆ.

ದೇಶದ ಜನರು ದೇಶದ ಸೇವೆ ಮಾಡಿದ್ದಕ್ಕೆ ಹೀಗೆ ಬಿನ್ನಹ ಪತ್ರ ಅರ್ಪಿಸುವುದು ಇದೇ ಪ್ರಥಮವೆಂದು ತೋರುತ್ತದೆ. ಚಿನ್ನದ ಗಿಲಿಟಿನಿಂದ ಮಾತ್ರವಲ್ಲ, ಚಿನ್ನದ ಅಕ್ಷರಗಳಿಂದಲೇ ಬರೆಯಲ್ಪಡ ಬೇಕಾದಷ್ಟು ಮಹತ್ವದ ನಿಮ್ಮ ಈ ಬಿನ್ನಹ ಪತ್ರಕ್ಕಾಗಿ ನಾನು ಸತ್ಯಾಗ್ರಹ ಮಂಡಳಿಯ ಪರವಾಗಿ ನಿಮ್ಮನ್ನು ತುಂಬಾ ವಂದಿಸುತ್ತೇನೆ. ಆದರೆ ನಾವು ಮಾಡಿರುವ ಅಲ್ಪ ದೇಶ ಸೇವೆಯು ನಿಮ್ಮ ಇಷ್ಟು ದೊಡ್ಡ ಬಹುಮಾನಕ್ಕೆ ತಕ್ಕದಾದದ್ದು ಎಂದು ನಾನು ಹೇಳಲಾರೆನು. ಅದಲ್ಲದೆ ನಾವು ಸತ್ಯಾಗ್ರಹಿಗಳು ಮಾಡಿರುವ ಕೆಲಸವೆಲ್ಲವೂ ನಿಮ್ಮೆಲ್ಲರ ಸಹಾಯದಿಂದಲೇ ಆಗಿದೆ. ತಂದೆ ತಾಯಿಗಳಾದ ನೀವು ನಿಮ್ಮ ಮಕ್ಕಳನ್ನೂ, ಒಂದು ಬಳಗದವರನ್ನೂ ಈ ಅಹಿಂಸಾತತ್ವದ ಯುದ್ಧಕ್ಕೆ ಕಳುಹಿಸಿದರಿಂದಲೇ ನಮ್ಮ ಸ್ಥೈರ್ಯವು ಇಷ್ಟು ದೊಡ್ಡದ್ದಾಗಿದೆ. ಅದರಲ್ಲದೆ ನಮ್ಮ ಮಹಿಳೆಯರ ಉತ್ತೇಜನವೇ ಹೆಚ್ಚಾದದ್ದೆಂದು ಹೇಳಿದರೆ ತಪ್ಪಾಗಲಾರದು. ನೀವು ಸತ್ಯಾಗ್ರಹ ಯುದ್ಧದ ಖರ್ಚಿನ ಬಗ್ಗೆ ನೀಡಿದ ಉದಾರ ದ್ರವ್ಯ ಸಹಾಯವನ್ನು ಎಂದೂ ಮರೆಯತಕ್ಕಂಥದ್ದಲ್ಲ. ಪಿಕೆಟಿಂಗಿಗೆ ಕೊಟ್ಟಂಥ ಎಲ್ಲಾ ತರದ ಉತ್ತೇಜನವು ನಿಮ್ಮದಾಗಿದೆ. ನಾವು ಒರೇ ನಿಮ್ಮ ಸೇವಕರಂತೆ ದೇಶದ ಏಳಿಗೆಗಾಗಿ ಅಲ್ಪ ಸ್ವಲ್ಪ ಕಾರ್ಯವನ್ನು ಪವಿತ್ರ ಮಾಡಿರುತ್ತೇವೆ. ಅದಕಾರಣ ಈ ಬಿನ್ನಹ ಪತ್ರವು ಹೆಚ್ಚಾಗಿ ನಿಮಗೇನೇ ಸಲ್ಲತಕ್ಕದ್ದಾಗಿದೆಯಲ್ಲದೆ ನಮಗಲ್ಲ. ಆದರೂ ನೀವು ನಿಮ್ಮ ಮಕ್ಕಳಂತೆ ನಮ್ಮ ಮೇಲೆ ಸುರಿಸಿರುವ ಅಪಾರವಾದ ಪ್ರೀತಿಯನ್ನು ನಾವು ಬಹು ಆನಂದದಿಂದಲೂ, ಕೃತಜ್ಞತಾಪೂರ್ವಕವಾಗಿಯೂ ಸ್ವೀಕರಿಸುತ್ತೇವೆ.

'ಶಾಂತಿಯು ಸ್ಥಾಪನೆಯಾದ ಈ ಕಾಲದಲ್ಲಿ' ಎಂದು ಬಿನ್ನಹ ಪತ್ರದಲ್ಲಿ ಸೂಚನೆ ಇದೆ ಆದರೆ ಶಾಂತಿಯು ಇನ್ನೂ ಖಾಯಂ ಸ್ಥಾಪಿತವಾಗಿದೆಯೆಂದೂ ಈಗ ಹೇಳಲಾಗುವುದಿಲ್ಲ. ನಾವು ಆರು ತಿಂಗಳ ವರೆಗೆ ಗಳಿಯಂತೆ ಪಂಜರದೊಳಗಿದ್ದ ಕಾರಣ ದೇಶದ ಸಮಾಚಾರವನ್ನು ಚೆನ್ನಾಗಿ ತಿಳಿಯದವನಾಗಿರುತ್ತೇನೆ. ವೈಸರಾಯರ ಮತ್ತು ಮಹಾತ್ಮ ಗಾಂಧಿಯವರ ಒಪ್ಪಂದದ ಮೇರೆ ಕಾಂಗ್ರೆಸಿನವರೂ, ಸರ್ಕಾರದವರೂ ಹಿಂದೂ ದೇಶದ ಮುಂದಿನ ರಾಜಕೀಯ ರಚನೆಯನ್ನು ಶಾಂತರೀತಿಯಲ್ಲಿ ಚರ್ಚಿಸಿ ತೀರ್ಮಾನಿಸುವ ಬಗ್ಗೆ ಸತ್ಯಾಗ್ರಹ ಯುದ್ಧವು ತತ್ಕಾಲಕ್ಕೆ ನಿಲ್ಲಿಸಲ್ಪಟ್ಟಿರುವದಾಗಿದೆ. ಬರುವ 2ನೇ ರೌಂಡ್ ಟೇಬಲ್ ಕಾನ್‌ಫರೆನ್ಸಿನಲ್ಲಿ ಕಾಂಗ್ರೆಸಿನವರಿಗೆ ಒಪ್ಪಿಗೆಯಾಗುವಂಥ ರಚನೆಯು ದೊರೆಯದೆ ಹೋದರೆ ಶಾಸನ ಭಂಗದ ಚಳವಳಿವು ಪುನಃ ನಡೆಸಲ್ಪಡಬಹುದು. ಅದಕಾರಣ ಈಗಿನದು ಒರೇ ತಾತ್ಕಾಲಿಕ ಶಾಂತಿಯಾಗಿದೆ. ಲಾರ್ಡ್ ಇರ್ವಿನ್‌ರವರ ಹೃದಯದಲ್ಲಿ ಬದಲಾವಣೆಯಾಗಿದೆಯೆಂದು ನಂಬಿಯೇ ಮಹಾತ್ಮರು ರಾಜಿ ಸಂಧಾನಕ್ಕೆ ಒಪ್ಪಿದ್ದಾಗಿದೆ. ವೈಸರಾಯರ ಹೃದಯದಲ್ಲಿಯಂತೆಯೇ ಅವರ ತಾಬೆದಾರಿ ಉದ್ಯೋಗಸ್ಥರೆಲ್ಲರ ಹೃದಯದಲ್ಲೂ ಬದಲಾವಣೆಗಳಾದರೆ ಈಗಿನ ತಾತ್ಕಾಲಿಕ ಶಾಂತಿಯನ್ನು ಖಾಯಂ ಮಾಡಲು ತುಂಬಾ ಸಹಾಯವಾಗುವುದು. ಈ ವಿಷಯಕ್ಕೆ ನಮ್ಮ ದೇಶದ ಸರ್ಕಾರಿ ಉದ್ಯೋಗಸ್ಥರು ತುಂಬಾ ನಿಗಕೊಡಬಹುದಾಗಿ ನಂಬುತ್ತೇನೆ. ನಮ್ಮ ನಾಲ್ವರ ದಸ್ತಗಿರಿಯಾಗುವ ವರೆಗೆ ಇಲ್ಲಿಯ ಉದ್ಯೋಗಸ್ಥರ ವರ್ತನೆಯು ಗಡಿಪಿನ ನಂತರದ ವರ್ತಮಾನ ನಾನು ಇನ್ನೂ ತಿಳಿಯೆನು. ದೇಶೀಯ ಉದ್ಯೋಗಸ್ಥರು ದೇಶಕ್ಕೆ ಸ್ವಾತಂತ್ರ್ಯ ... ತವುಗಳ ಬಹುಮಾನವೆಂಬುದನ್ನು ಮರೆಯಬಾರದಾಗಿ ಕೊಳ್ಳುತ್ತೇನೆ.

ಈ ಪ್ರಚಂಡ ಚಳವಳದಲ್ಲಿ ಭಾಗಿಗಳಾದವರು ... ವಾಗಿ ಮಹಿಳೆಯರು ಮತ್ತು ಬಾಲಕ ಬಾಲಕಿಯರ ಕಷ್ಟಗಳು ಬಿನ್ನಹ ಪತ್ರದಲ್ಲಿ ಚೆನ್ನಾಗಿ ವಿವರಿಸಲ್ಪಟ್ಟ ... ಸಮಯದಲ್ಲಿ ಸ್ವಾರ್ಥತ್ಯಾಗ ಮಾಡಿ ಕಷ್ಟಪಟ್ಟ ... ನ್ನ ಎಷ್ಟು ಶ್ಲಾಘಿಸಿದರೂ ಸ್ವಲ್ಪವೇ. ಈ ಸಂದರ್ಭ ... ಬಂಧಿಖಾನೆ ವಾಸದ ಕಷ್ಟ ಸುಖದ ವಿಷಯ ಸ್ವಲ್ಪ ... ಕೇಳಬಿದ್ದರೂ ಸಮಯ ಸಂಕೋಚದಿಂದ ಅದಕ್ಕೆ ... ದ್ದಾಗಿದ್ದೇ. ಹೇಗೂ, ನಾವು ನಾಲ್ವರು ಜೈಲವಾಸ ... ಸಂತೋಷದಿಂದ ಕಳೆದೆವೆಂಬುದಕ್ಕೆ ನಮ್ಮ ಬಳ್ಳೇ ... ವೇ ನಿದರ್ಶನವಾಗಿದೆ.

ನಾವು ದಸ್ತಗಿರಿ ಮಾಡಲ್ಪಟ್ಟಾಗ ನಮ್ಮ ದೇಶ ... ತೋರಿಸಿದ ಅದ್ಭುತ ಉತ್ಸಾಹವನ್ನು ನೋಡಿಯೂ, ನ... ಶದ ಜನರ ಗುಣವನ್ನು ತಿಳಿದವನಾಗಿಯೂ, ಮುಂದಿ... ಚಳವಳದಲ್ಲಿ ಅಹಿಂಸಾತತ್ವವನ್ನು ಮೀರೆಗೆಯುತ್ತಾ... ಎಂಬ ಭೀತಿಯು ನನಗಿತ್ತು. ಆದರೆ ಇಲ್ಲಿಯ ಸತ್ಯಾ... ಳು ಮಹಾತ್ಮರ ಈ ಮೂಲ ಮಂತ್ರವನ್ನು ಚೆನ್ನಾಗಿ ... ಹಿಡಿದು ಎಲ್ಲರಿಗೂ ತೃಪ್ತಿಯನ್ನುಂಟುಮಾಡುವ ... ಗಿದೆ. ಭಾರತ ಭೂಮಿಯ ಎಲ್ಲಾ ಕಡೆಗಳಲ್ಲೂ ... ಹಿಗಳು ಅಹಿಂಸಾತತ್ವವನ್ನು ಎಡೆಬಿಡದೆ ಅನುಸರಿ... ದ್ದರಿಂದಲೇ ಮಹಾತ್ಮರು ಈ ಚಳವಳಕ್ಕೆ ತತ್ಕಾಲ ... ತಿರುವದಾಗಿದೆ.

ಮೆ. ಬೆಳ್ಯಪ್ಪನವರ ಭಾಷಣವು ಗಂಭೀರವಾಗಿಯೂ ... ಕಲಿಸ್ಕೆ ಬಹಳ ಮನೋಹರವಾಗಿದ್ದುದರಿಂದ ಜನರು ಬ... ತೂಹಲದಿಂದ ಕೇಳಿದರು. ಅವರ ಭಾಷಣವಾದ ... ಮೆ. ಕೊಳ್ಳಿಮಾಡ ಕರುಂಬಯ್ಯನವರು ಸಭಿಕರಿಗೆ ... ಈಗಿನ ಚಳವಳ ಕುರಿತು ಭಾಷಣ ಮಾಡಿದರು. ... ತಮ್ಮ ಅನುಭವದ ವಿಷಯದಲ್ಲಿಯೂ, ಕ್ಲಾಸ್ ವಾ... ಗಡದ ಮತ್ತು ಉಪವಾಸದ ... ವಿಷಯದಲ್ಲಿಯೂ, ... ವಾಗಿ ಭಾಷಣ ಮಾಡಿದರು. ಮೆ. ಅಬ್ದುಲ್‌ಗಫೂರ್ ... ರವರ ಭಾಷಣವು ಆಗಾಗ್ಗೆ ಜನರನ್ನು ವಿಶೇಷ ನಗುವಿ... ಮಾಡುತ್ತಿತ್ತು. ಅವರು ಭಾಷಣ ಸುರು ಮಾಡುವಾಗ ... ನ. ದೇವರ ಖಾಜಿ ಇದ್ದುದರಿಂದ ರಾಜನಿಗಿಂತ ದೊಡ್ಡವನು ... ದೇವರಿಗೆ ಮಾತ್ರ ಹೆದರುವೆನೆಂದೂ, ಇಲ್ಲಿಯ ಸರಕಾರ... ನು ನಿರಪರಾಧಿಯಾಗಿದ್ದರೂ ತನ್ನನ್ನು ಜೈಲಿಗೆ ಕಳು... ರಿಂದಲೂ, ತನಗೆ ಜೈಲೇ ಆಗಲೀ, ಸ್ವರ್ಗವೇ ಆಗಲೀ ... ವೂ ಒಂದೇ ಎಂಬರ್ಥದಿಂದ ಭಾಷಣಮಾಡಿದರು. ... ಹೆಚ್ಚು ವಿದ್ಯೆ ಕಲಿತ ಯುವಕರೂ, ವಿದ್ಯಾರ್ಥಿಯರೂ ... ಮುಂದಕ್ಕೆ ಬರಬೇಕೆಂದೂ, ಬೇರೆ ದೇಶಗಳಲ್ಲಿ ಅವ... ಧಾಕೆಲಸದಲ್ಲಿ ಮಾರ್ಗದರ್ಶಕರೆಂದೂ ಎಂಬುದಾಗಿ ... ಕವಾದ ಅಪ್ಪೀಲನ್ನು ಮಾಡಿದರು.

ಶ್ರೀಮತೀ, ಕೆ. ಸಿ. ಅಕ್ಕಮ್ಮನವರು ಸಭಿಕರನ್ನು ... ಎಲ್ಲಾ ಜನರ ಮನಸ್ಸು ಕರಗುವಂತೆ ಅನೇಕ ... ಯಿಂದ ಎಲ್ಲರೂ ಖಾದಿ ಬಟ್ಟೆಯನ್ನೇ ಧರಿಸಬೇಕೆಂ... ದೇಶ ಸೇವೆಯನ್ನು ಪೂರ್ತಿಯಾಗಿ ಬಿಡಬೇಕೆಂದೂ ... ದ ಸಹೋದರರುಗಳು ನೆಂದಿಯನ್ನಿಳಿಸಲು ಕೊಡ... ವೂ, ಸಾಗಾರಿ ಅಂಗಡಿಗಳನ್ನು ಇಡಕೂಡದೆಂದೂ ... ಅಂಗಡಿಗಳನ್ನು ಶಾಂತರೀತಿಯಿಂದ ಪಿಕೆಟಿಂಗ್ ... ಸಹಾಯ ಮಾಡಬೇಕೆಂದು ಜನರಲ್ಲಿ ಅಪ್ಪೀಲು ಮಾಡಿದರು.

ಇದಾದ ನಂತರ ಮೆ. ಐ. ಪಿ. ಕಾರ್ಯಪ್ಪನವರ... ದ ಒಂದು ವರ್ಷದಿಂದೀಚೆಗೆ ಆದ ಹಿಂದೀ ಸತ್ಯಾಗ್ರಹ ... ಳದ ವಿಷಯದಲ್ಲಿ ಭಾಷಣವಾದ ನಂತರ ಈ ಕೆಳಗಿನ ... ಗಳು ಮಂಜೂರಾದವು.

1. ಹಿಂದೀ ರಾಷ್ಟ್ರೀಯ ಕಾಂಗ್ರೆಸಿನವರು ಮಹಾತ್ಮ ಗಾಂಧಿಯವರನ್ನು ಮುಂದಿಟ್ಟುಕೊಂಡು ಸದ್ಯಕ್ಕೆ ಸ... ದೊಡನೆ ರಾಜಿ ಒಪ್ಪಂದ ಮಾಡಿದ್ದು ಈ ಸಭೆಗೆ ಸ... ನವಾಗುತ್ತದೆ. ಈ ರಠಾವನ್ನು ಮೆ. ಕೆ. ಪಿ. ಚಿಣ್ಣ... ರು ತುಂಬ ರಾಜಿ ಶರತ್ತಿನ ವಿಷಯ ಮಾತಾಡಿದರು. ... ಮೆ. ಬಿದ್ದಂಡ ಕಾರ್ಯಪ್ಪನವರು ಅನುಮೋದಿಸಿದ ನ... ಸರ್ವ ಸಮ್ಮತದಿಂದ ಮಂಜೂರಾಯಿತು.

2. ಶಾಂತಿಮಯ ಸತ್ಯಾಗ್ರಹದಿಂದಲೇ ರಾಷ್ಟ್ರ... ವಿಮುಕ್ತಿ ದೊರೆಯುವುದೆಂದು ಈ ಸಭೆಗೆ ನಂಬಿಕೆ ... ಎಂಬ ರಠಾವನ್ನು ಮೆ. ಬಮ್ಮಡ ಮಾದಪ್ಪನವರು ... ಶಾಂತಿಮಯ ಚಳವಳದ ವಿಷಯವನ್ನು ಅಮೂಲಾಗ್ರ ವಿವರಿಸಿದರು. ಇದನ್ನು ಮೆ. ಪಿ. ಡಿ. ಬೆಳ್ಯಪ್ಪನವರು ಅನುಮೋದಿಸಿದ ನಂತರ ಸರ್ವ ಸಮ್ಮತದಿಂದ ಮಂಜೂರಾಯಿತು.

3. ಮುಂಬಾಯಿಯ ಕಾಂಗ್ರೆಸಿನವರು ಪೂರ್ಣ ಸಮ... ಮಾಡಿದ್ದಲ್ಲಿ ಸಂಪೂರ್ಣ ಸ್ವರಾಜ್ಯವನ್ನು ಇದೇ ವರ್ಷ... ದ ದೊರಕಿಸಲು ಯತ್ನಿಸಲಿಕ್ಕೆ ಈ ಸಭೆಯು ಸಿದ್ಧವಾಗಿ... ದೆ. ಈ ಠರಾವನ್ನು ಮೆ. ಐ. ಪಿ. ಕಾರ್ಯಪ್ಪನವರು ... ವರೆಗೆ ಆದ ಕೆಲಸಗಳನ್ನು ವಿವರಿಸಿದರು. ಇದನ್ನು ಮೆ. ... ಆರ್. ಕೃಷ್ಣೈಯ್ಯನವರೂ ಮತ್ತು ನಾಯಡ ಬೆಳ್ಯಪ್ಪನ...

ಪರ್ವ ಸನ್ಮತದಿಂದ ಮಂಜೂರಾ

...ಗುರದಲ್ಲಿ ವೀರರಂತೆ ತೋರಿಸಿದ ಸ್ತ್ರೀಯರನ್ನೂ, ಸ್ವಯಂ ಸೇವಕರನ್ನೂ ಈ ಸಭೆಯು ಅಭಿನಂದಿಸುತ್ತದೆ ಎಂಬ ...ಸ್. ಉತ್ತಯ್ಯನವರು ತಂದು ಕೂ...ದಲ್ಲಿಯೂ, ಈ ಚಳವಳದಲ್ಲಿ ಸ್ತ್ರೀ...ರೂ ನೊಡಿದ ಚಳವಳವನ್ನು ಚೆನ್ನಾಗಿ ...ಮ್ಮಡ ಮಾಡಪ್ಪನವರು ಅನುಮೋದಿ...ದ ಮಂಜೂರಾಯಿತು.

...ಲ್ಲಿ ಸತ್ಯಾಗ್ರಹ ಚಳವಳದಲ್ಲಿ ಕೂಡಿ ...ಭವಿಸಿದ ಶ್ರೀ ಕೋದಂಡ ಪೂವಯ್ಯ ...ಮ್ಮನವರು ಪುಟ್ಟಿಚಂಡ ತಿಮ್ಮಪ್ಪನ ...ಅಭಿನಂದಿಸುತ್ತದೆಂಬ ಠರಾವನ್ನು ಮ. ... ತಂದದ್ದು ಸರ್ವಸಮ್ಮತದಿಂದ ಮಂ...

...ಲ್ಲಾ ವಿಷಯಗಳಲ್ಲಿಯೂ ನೂತನಾದ ...ಕಾರ್ಯಗಳಿಸಬದ್ಧ್ಯಕ್ಷರಾದರು. ...ಡುವುದಕ್ಕೆ ಮೊದಲು ಮ. ಕೆ. ಪಿ. ... ...ಯಿ ಕೊಡಗಿನ ಪರವಾಗಿ ಪ . ಯಂ ...ರು. ಕಳುಹಿಸಿದ ತಂತಿಯನ್ನು ಎಲ್ಲರಿಗೂ ...ರ್ಯಕ್ಕೆ ಅಭಿನಂದಿಸಿದರ ... ಮಾಡಿದ ಎಲ್ಲಾ ... ...ದಗಳನ್ನ ಹೇಳಿದ... ... ಎಲ್ಲಾ ...ದ ಮಹಿಳೆಯರಿಗೆ, ಮಹನಿ ... ...ಸಿದರು. ನಾಟಕ ಮಂಡ ... ...ಬಾಲಕರನ್ನು ರಾಷ್ಟ್ರೀಯ ಗೀತೆ ಹಾಡ... ...ದ್ದಕ್ಕೆ ಅವರಿಗೂ ವಂದಿಸಿದ ನಂತರ, ...ಯ್ಯನವರ ಮತ್ತು ಇತರರ ರಾಷ್ಟ್ರೀಯ ...ಮುಕ್ತಾಯವಾಯಿತು.

...ತ್ಯಾಗ್ರಹದ ಶಿಬಿರದಲ್ಲಿ ಕೊಡಗು ಸತ್ಯಾ...ರಿಗೆ ಮ. ಪುಟ್ಟಿಚಂಡ ಮುದ್ದಪ್ಪನವರು ...ಯನ್ನು ಕೊಟ್ಟರು. ಕಂದಿ ತೀರ್ಥ ಫಲಾ...ವಾಗಿ ಹಂಚಲ್ಪಟ್ಟ ನಂತರ ಮ. ಎ. ಪಿ. ...ಸತ್ಯಾಗ್ರಹ ಮಂಡಳಿಯ ಪರವಾಗಿ ಮ. ...ಯ್ಯನವರಿಗೂ ಆಂಡ ಪತ್ನಿಯವರಿಗೂ ... ಮುದ್ದಪ್ಪನವರಿಗೂ, ಅವರು ಕೊಟ್ಟ ಊ...ಕ್ಕೆ ಉಚಿತ ರೀತಿಯಲ್ಲಿ ವಂದಿಸಿದರು. ಸ...ಯ ಅಧ್ಯಕ್ಷರಾದ ಮ. ಅಜ್ಜಮಾಡ ಮಾ... ಪಿ ಚೆಣ್ಣಪ್ಪನವರು ಸತ್ಯಾಗ್ರಹ ಮಂಡ...ಮಾಡಿದ ವಿಶೇಷ ಕೆಲಸ ಮತ್ತು ಸಹಾಯ... ಬಹಳವಾಗಿ ಅಭಿನಂದಿಸಿದರು. ಮ.. ಪಂ...ನವರೂ ಸಹ ಮ. ಮಾದಪ್ಪನವರು ಹೇಳಿದ್ದ... "ಕೊಡಗು" ಪತ್ರಿಕೆಯನ್ನು ಈ ವರೆಗೆ ...ರು ಗೌರವ ಸಂಪಾದಕರಾಗಿ ಯಾವ ರಿಯಾ...ಡೆ ನಡೆಸಿದ್ದಕ್ಕಾಗಿಯೂ, ತಾನು ಜೈಲಿಗೆ ...ಮೊದಲೇ ಇವರು ಎಡಿಟರ್ ಕೆಲಸವನ್ನು ತೆ... ...ತ್ರಿಕೆಯನ್ನು ನಡಸಬೇಕಾಗಿ ತೀರ್ಮಾನ ಮಾ...ದರು ಒಪ್ಪಿ ಶ್ರದ್ಧೆಯಿಂದ ನಡಿಸಿದ್ದಕ್ಕೆ ಅವ... ಅಭಿನಂದಿಸಬೇಕೆಂದು ಹೇಳಿದರು.

...ಗಳಿಗೆ ಒಂದು ವಾರದ ಮಟ್ಟಿಗೆ ರಜ ಕೊ... ...ದ್ಯಕ್ಕೆ ಕಳುಹಿಸುವ ಏರ್ಪಾಡನ್ನು ಮ. ಬೆ... ...ಮಾಡಿದರು.

...ದಿನ ಬೆಳಿಗ್ಗೆ ಒಂಭತ್ತು ಗಂಟೆಗೆ ವೀರರಾಜಪೇಟೆ ...ಗೆಯಿಂದ ರಾಷ್ಟ್ರೀಯ ಧ್ವಜಾರೋಹಣ...

...ರ ಬೆಳ್ಯಪ್ಪನವರು ಬಿನ್ನಹ ಪತ್ರಕ್ಕೆ ಕೊಟ್ಟ ...ಮುಂದುವರದದ್ದು)

...ಗಳಿಗೆ ಎಲ್ಲ ವಿಧದಲ್ಲಿಯೂ ಸಹಾಯ ಮ... ...ಶವನ್ನು ಪಾಲಿಸ ಬೇಕೆಂದು ನೀವು ಕೊಟ್ಟ ...ತ ಹೆಚ್ಚಿನ ಪ್ರಸಂಗ ಬೇಕಾಗಿಲ್ಲ. ... ಹೆಚ್ಚಿನ ಬಹುಮಾನ ಬೇಕಾಗಿಲ್ಲ. ಇದ... ...ದಿನ ಯಥೇಚ್ಛವಾಗಿ ತೋರಿಸಿರುತ್ತೀರಿ. ...ನರು ಬಹು ರಾಜಭಕ್ತರೆಂದು ಹಲವರು ಹೇ... ಮೊದಲು ನಾನು ಕೇಳಿರುತ್ತೇನೆ. ಆದರೆ ...ತ ಹತ್ತರಷ್ಟು ಯೂ ನೂರರಷ್ಟು ಹೆಚ್ಚು ದೇಶ... ಕಳೆದ 6 ತಿಂಗಳಿಂದ ನೀವು ಪ್ರದರ್ಶಿಸಿ... ಸಹಜವಾಗಿ ಅಲ್ಪ ಸೇವೆ ಮಾಡಿದವರಿಗೆ ನೀವು ...ಷ ಬಹುಮಾನದಿಂದಲೇ ನಿಮಗೆ ದೇಶದ ಪ್ರೇ... ಮಟ್ಟಿಗೆ ಇದೆಯೆಂಬುದು ಪ್ರತ್ಯಕ್ಷವಾಗುತ್ತದೆ. ...ಡಗಿನ ರಾಜಕೀಯ ಕೈದಿಗಳಿಗೆ ಈ ದಿನ ತ... ...ಯೂ, ಸತ್ಯಾಗ್ರಹ ಮಂಡಳಿಯವರಿಗೆ ಅರ್ಪಿಸಿ... ...ಯ ಮತ್ತು ಬಹು ಅಮೂಲ್ಯವಾದ ಬಿನ್ನಹ... ...ನಾನು ನಮ್ಮ ಮಂಡಳಿಯ ಪರವಾಗಿ ಮ... ...ಗೆ ವಂದಿಸುತ್ತೇನೆ. ಹಿಂದೀಯರ ಮುಖ್ಯ ...ಜ್ಯವು ಅವರಿಗೆ ಬೇಗನೆ ದೊರೆತು ಮಹಾತ್ಮರ ...ಯ ಪ್ರಯತ್ನಗಳಿಂದ ಈಗ ತತ್ಕಾಲ ... ...ತಿಯು ಶಾಶ್ವತ ವಾಗಿ ಸ್ಥಾಪಿಸಲ್ಪಡುವಂತೆ ...ನುಗ್ರಹಿಸಲೆಂದು ಪ್ರಾರ್ಥಿಸುವ.

ಮುಖ್ಯ ವರ್ತಮಾನಗಳು.

ಕೊಡಗಿನ ದೇಶ ಭಕ್ತರಾದ ಸತ್ಯಾಗ್ರಹ ಮುಖಂಡರಿಗೂ, ಮಂಡಳಿಯವರಿಗೂ ಸ್ವಾಗತ.

ಕೊಡಗಿನ ಚರಿತ್ರೆಯಲ್ಲಿ ಇದು ವರೆಗೆ ಎಂದೂ ಕಾಣದಂಥ ಜನಸ್ತೋಮ.

೧೦,೦೦೦ ಸಾವಿರಕ್ಕಿಂತ ಹೆಚ್ಚಾಗಿ ಜನರು ನೆರೆದಿದ್ದರು.

ಮೆರವಣಿಗೆಯು ಳ ಘೋಷಣೆಗಳ ಉದ್ಘವಿತ್ತು.

ಸಾರ್ವಜನಿಕ ಕೆಲಸದ ಮುಂದಾಳುಗಳಿಗೆ ಬಿನ್ನಹಪತ್ರ ಒಪ್ಪಿಸಿದ್ದು ಈ ದೇಶದ ಚರಿತ್ರೆಯಲ್ಲಿ ಇದೇ ಮೊದಲು.

ನಾನೂರಕ್ಕಿಂತ ಹೆಚ್ಚಾಗಿ ಮಹಿಳೆಯರು ನೆರೆದಿದ್ದರು.

ಸತ್ಯಾಗ್ರಹ ಮುಂದಾಳುಗಳ ಗಂಭೀರವಾದ ಭಾಷಣ.

ಮಹಾತ್ಮ ಗಾಂಧಿಯವರ ಮತ್ತು ವೈಸರಾಯರ ರಾಜಿ ಶರತ್ತುಗಳು.

ಎಲ್ಲಾ ಸತ್ಯಾಗ್ರಹ ಕೈದಿಗಳೂ ಬಿಡುಗಡೆಯಾದರು.

ವರ್ತಮಾನ ಸಂಗ್ರಹ.

ಒಳ ದೇಶ.

ಈ ವರ್ಷದ ಕೂಡಗಿ ಕರಗ ತಾ 17 ನೇ ಮಂಗಳವಾರ ವನ್ನೂ ಮತ್ತು 21 ನೇ ಶುಕ್ರವಾರವೂ ಆಗತ್ತ ಎಂಬುದಾಗಿ ವರ್ತಮಾನ

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲು ಮೀಟಿಂಗು ನಿಮಿತ್ತ ಚೀಫ್ ಕಮಿಷನರವರು ಮಡಿಕೇರಿಗೆ ದಯಮಾಡಿಸಿರುವರು.

ಹೊಸ ಕಮಿಷನರಾದ ಮೆ. ಕ್ರೇವನವರು ನಿನ್ನೆ ದಿನ ಮಡಿಕೇರಿಗೆ ಬಂದಿರುವರೆಂದು ತಿಳಿದಿರುತ್ತೇವೆ.

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ 28 ನೇ ಶನಿವಾರ ಬೆಳಗ್ಗೆ 11 ಗಂಟೆಗೆ ಬಹುಜನಾಶ್ರಯದ ಸಂಘದ ಹಾಲ್‌ನಲ್ಲಿ ನಡೆ ಯಲಿಕ್ಕಿದೆ.

ಮಡಿಕೇರಿ ಮುನಿಸಿಪಾಲಿಟಿ ವೈಸ್ ಪ್ರೆಸಿಡೆಂಟರಾಗಿದ್ದ ಮೆ. ಖಾನ್ ಬಹದ್ದೂರ್ ಇದೇ ತಾರೀಕು 9 ರಲ್ಲಿ ಪ್ರ... ಸ್ಥಳದಲ್ಲಿ ಶಿವಾಧೀನರಾದರೆಂದು ತಿಳಿಯುತ್ತೇವೆ.

ಕೊಡಗು ಸತ್ಯಾಗ್ರಹ ಮಂಡಳಿಯವರ ಕಳೆದ ವಾರ ಅನೇಕ ಕಡೆಗಳಲ್ಲಿ ಪ್ರಚಾರ ಕೆಲಸ ಮಾಡುತ್ತಿದ್ದಾರೆ. ಇದೇ ತಾರೀಕು 12 ರಿಂದ ಒಂದು ವಾರದ ವರೆಗೆ ಎಲ್ಲರೂ ಭಗಂಡೆಯಲ್ಲಿ ಹೋಗಿರುವರು.

ಕಿಗ್ಗಟ್ಟುನಾಡ ತಾಲೋಕಿನವರು ಕೊಡಗು ಸತ್ಯಾಗ್ರಹ ಮಂಡಳಿಯವರಿಗೆಲ್ಲಾ ಉಚಿತ ರೀತಿಯ ಸ್ವಾಗತವನ್ನು ಕೊಡಲು ಇದೇ ತಾ 13ಕ್ಕೆ ಪೊನ್ನಂಪೇಟೆಯಲ್ಲಿ ಏರ್ಪಾಡು ಮಾಡಿರುತ್ತಾರೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಇದೇ ತಾರೀಕು 14,15ರಲ್ಲಿ ಮಕ್ಕಳ ಪ್ರದರ್ಶನವು ನಡೆಯಿತು. ಈ ಪ್ರದರ್ಶನದ ಆಖೈರ್ ದಿನದಲ್ಲಿ ಕೊಡಗಿನ ಚೀಫ್ ಕಮಿಷನರವರ ಪತ್ನಿಯವರು ಅಧ್ಯಕ್ಷರಾಗಿದ್ದು ಇನಾಮು ಹಂಚಲಿಕ್ಕಿರುವರು.

ಪ್ರೈಮರಿ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಯು ನಿಮಿತ್ತ ನಿನ್ನೆ ದಿನ ಶಾಲಾ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಶಾಲೆಗಳ ಮುಖ್ಯ ಉಪಾಧ್ಯಾಯರುಗಳ ಮೀಟಿಂಗೊಂದು ಮಡಿಕೇರಿ ಹೈಸ್ಕೂಲಿನಲ್ಲಿ ನಡೆದಿದೆಯೆಂದು ತಿಳಿಯುತ್ತೇವೆ.

ಮೈಸೂರು ಆಸೆಂಬ್ಲಿ ಮೆಂಬರಾದ ಮತ್ತು ಕೊಡಗಿನ ಕಾಫಿ ಪ್ಲಾಂಟರಾದ ಶ್ರೀಮತಿ ಡಿ. ಸಾಕಮ್ಮನವರು ಇದೇ ತಾ 21ರಲ್ಲಿ ಆಗುವ ಧಾರವಾಡದ ವನಿತಾ ಸೇವಾಸಮಾಜದ ವಾರ್ಷಿಕ ಕಾನ್‌ಫರೆನ್ಸಿನಲ್ಲಿ ಅಧ್ಯಕ್ಷ ಸ್ಥಾನವನ್ನು ವಹಿಸಲಿಕ್ಕಿರುವರು.

ಇದೇ ತಾ 11ರಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚಾಗಿ ಕೊಡಗು ದೇಶದ ಎಲ್ಲಾ ಕಡೆಯಿಂದಲೂ ಜನರು ವೀರರಾಜೇಂದ್ರಪೇಟೆಯಲ್ಲಿ ಸೇರಿ ಕೊಡಗಿನ ಸತ್ಯಾಗ್ರಹ ಮಂಡಳಿಯವರಿಗೂ, ಜೈಲಿಗೆ ಹೋದ ವೀರರುಗಳಿಗೂ ಸ್ವಾಗತವನ್ನು ಬಿನ್ನಹ ಪತ್ರವನ್ನು ಕೊಟ್ಟರು.

ಮಹಾತ್ಮ ಗಾಂಧಿಯವರಿಗೂ, ವೈಸರಾಯಿ ಇರ್ವಿನ್‌ರವರಿಗೂ ಆದ ರಾಜಿ ಸಂಧಾನದ ನಿಮಿತ್ತ ಕೊಡಗಿನಲ್ಲಿಯೂ ಮತ್ತು ಬೆಂಗಳೂರು ಸಿವಿಲ್ ಮತ್ತು ಮಿಲಿಟರೀ ಸ್ಟೇಶನ್ನಿನಲ್ಲಿರುವ ಎಲ್ಲಾ ಸತ್ಯಾಗ್ರಹೀ ಕೈದಿಗಳನ್ನು ಇದೇ ತಾರೀಕು 6 ರಲ್ಲಿ ಬಿಟ್ಟಿರುವುದಾಗಿ ಕೊಡಗು ಕಮಿಷನರವರು ತಿಳಿಸಿರುತ್ತಾರೆ.

ಕೊಡಗಿನ ಪ್ರಸಿದ್ಧ ನೇತ ಪಕ್ಕರಾದ ಶ್ರೀ ಪಂದ್ಯಂಡ ಬೆಳ್ಯಪ್ಪನವರ, ಕೆ. ಸಿ ಕಾರ್ಯಪ್ಪಯ್ಯನವರು ವಗೈರರು ಇದೇ ತಾ. 14 ನೇ ಸಾಯಂಕಾಲಕ್ಕೆ ಮಡಿಕೇರಿಗೆ ಬರಲಿಕ್ಕಿರು... ರು. ಕೊಡಗಿನ ರಾಜಕೀಯ ಚಳವಳಿ ಕುರಿತ ಸಾಯಂಕಾಲ 6 ಗಂಟೆಗೆ ಬಹುಜನಾಶ್ರಯ ಸಂಘದ ಹಾಲಿನಲ್ಲಿ ಭಾಷಣ ನಡೆಸಬೇಕೆಂದು ಅವರುಗಳನ್ನು ಅನೇಕರು ಕೇಳಿಕೊಂಡಿರುವರು.

ಟ್ರೆಜರೀ ಆಫೀಸರಾಗಿದ್ದ ಮೆ. ಕರನಂಡ ಚಂಗಪ್ಪನವರನ್ನು ಉತ್ತರ ಕೊಡಗಿನ ಸುಪೇರ್‌ವೈಸರಾಗಿಯೂ ಉತ್ತರ ಕೊಡಗಿನ ಸುಪೇರ್‌ವೈಸರಾಗಿರುವ ಮೆ. ಕೋದಿರ ಉತ್ತಪ್ಪನವರನ್ನು ದಕ್ಷಿಣ ಕೊಡಗಿಗೂ, ದಕ್ಷಿಣ ಕೊಡಗಿನ ಸುಪೇರ್‌ವೈಸರಾಗಿರುವ ಮೆ. ಪಾಲೇಕಂಡ ಚಂಗಪ್ಪನವರನ್ನು ಟ್ರೆಜರಿ ಆಫೀಸರ್ ಮತ್ತು ಮಡಿಕೇರಿ ಸಬ್‌ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಧಾರವಾಡದ ಮುನ್ಸೀಫ್ ಚೀಫ್ ಆಫೀಸರಾಗಿರುವ ಮೆ. ಕೊಂಗೆಟ್ಟಿರ ಕಾಳಪ್ಪನವರು ಕೊಡಗಿಗೆ ಬಂದು ವಾಪಸ್ ಹೋಗುವಾಗ ಅವರ ಪಾವ್ತು 1100 ರೂಪಾಯಿಯು ಮದ್ರಾಸಿನ ನಂಬ್ರ $\frac{9}{67}$ 193781 ರಿಂದ $\frac{9}{67}$ 193791 ರ ವರೆಗಿನ ಹಾದುಹೋದ ರೂಪಾಯಿಯ ಹತ್ತು ನೋಟುಗಳನ್ನು ಮತ್ತು ನಂಬ್ರ ಗೊತ್ತಿಲ್ಲದ ಬಾಕಿ ನೋಟನ್ನು ಒಟ್ಟು 11 ನೋಟುಗಳನ್ನು ಕಳೆದುಕೊಂಡಿರುವುದರಿಂದ ಇದನ್ನು ಪತ್ತೆ ಹಚ್ಚಿದವರಿಗೆ 100 ರೂಪಾಯಿ ಬಹುಮಾನ ಕೊಡುವ ಗುತ್ತೆ ಎಂಬುದಾಗಿ ತಿಳಿಸುತ್ತಾರೆ

ಈ ಕೆಳಗಿನ ರೀತಿ ಪಾರುಪತ್ಯಗಾರರುಗಳ ವರ್ಗಾವರ್ಗ ಆಗಿದೆಯೆಂದು ತಿಳಿಯುತ್ತೇವೆ. ಮೆ. ಗಳಿಬೀಡು ... ಹೇಮಂಡ ಅಪ್ಪಚ್ಚನವರು ಕುಮಾರಸಂತೆಗೂ, ಶೇಷಗಿರಿರಾಯರು ಮಡಿಕೇರಿ ಟ್ರೆಜರಿ ಆಫೀಸಿಗೂ, ಮೆ. ಪಾಲೇಕಂಡ ಪೂವಣ್ಣನವರು ಸೋಮವಾರಪೇಟೆಗೂ, ಮೆ. ಸಣ್ಣುವಂಡ ಉತ್ತಯ್ಯನವರು ಅಮ್ಮತ್ತಿಗೂ, ಮೆ. ನರಸಿಮ್ಹ ಮೂರ್ತಿಯವರು ವೀರರಾಜಪೇಟೆಗೂ, ಮೆ. ಒಲ್ಲಟ್ಟಿರಾಮಂಡ ಚಂಗಪ್ಪನವರು ನಾಪೋಕ್ಲಿಗೂ, ಮೆ. ಗುಂಡುರಾಯರು ಶ್ರೀಮಂಗಲಕ್ಕೂ, ಮೆ. ಶ್ರೀನಿವಾಸರಾಯರು ಮಡಿಕೇರಿಗೂ, ಮೆ. ಬಲ್ಲಚಂಡ ಅಪ್ಪಯ್ಯನವರು ಫ್ರೇಜರ್‌ಪೇಟೆಗೂ ಮತ್ತು ಮೆ. ಮುಂಡಂಡ ವಿಮ್ಮಪ್ಪನವರು ಮಡಿಕೇರಿ ಜಮಾಬಂದಿ ... ಗೂ ವರ್ಗಾಯಿಸಲ್ಪಟ್ಟಿರುವರು.

ಇದೇ ತಾ. 25 ರಿಂದ ಮದ್ರಾಸಿನ ವ್ಯವಸಾಯ ಇಲಾಖೆಯ ಪ್ರದರ್ಶನದ ಮೋಟಾರು ಗಾಡಿಯು ವ್ಯವಸಾಯಗಾರರಿಗೆ ಪ್ರಯೋಜನವಾಗುವಂತ ಅನೇಕ ವಿಷಯಗಳನ್ನು ಪ್ರತ್ಯಕ್ಷ ತೋರಿಸಲು ಈ ಕೆಳಗಿನ ಜಾಗಗಳಲ್ಲಿ ಇರುತ್ತದೆಂದೂ, ಈ ಸಂದರ್ಭವನ್ನು ಚೆನ್ನಾಗಿ ಉಪಯೋಗಿಸಿಕೊಂಡು ಎಲ್ಲರೂ ದಯವಿಟ್ಟು ಪ್ರದರ್ಶನವನ್ನು ನೋಡಬೇಕೆಂದೂ ಕೊಡಗು ಡಿಸ್ಟ್ರಿಕ್ಟ್ ಡೈರೆಕ್ಟರು ಪ್ರೋಗ್ರಾಮ್ ಕಳುಹಿಸುತ್ತಾರೆ.

25—3—31ನೇ ಬುಧವಾರ ವೀರರಾಜಪೇಟೆಯ ಟ್ರಾವೆಲರ್ಸ್ ಬಂಗಲೆಯ ಬಳಿ ಸಾಯಂಕಾಲ 2 ಗಂಟೆಯಿಂದ 8 ಗಂಟೆಯ ವರೆಗೆ -

26—3—31 ಮರ್ಕಾರಾ ಪಾಂಡಾಣೆ ಮುಂದಿನ ಬಳಿ 2 ಗಂಟೆಯಿಂದ 7 ಗಂಟೆಯ ವರೆಗೆ—

27—3—31 ಮಡಿಕೇರಿ ರಾಜಾಸೀಟಿನಲ್ಲಿ ಇಡೀ ದಿನ.

28—3—31 ಹೆಬ್ಬಾಲೆ ಫ್ರೇಜರ್‌ಪೇಟೆ 11 ಗಂಟೆಯಿಂದ 7 ಗಂಟೆಯ ವರೆಗೆ—

29—3—31 ಗೋಣಿಕೊಪ್ಪಲು 2 ಗಂಟೆಯಿಂದ 7 ಗಂಟೆಯ ವರೆಗೆ—

ಹೊರದೇಶ.

ಸೆಂಟ್ರಲ್ ಪ್ರಾಂತ್ಯದ ಮಂತ್ರಿಗಳ ಸಂಬಳವು 4,500 ರಿಂದ 2250 ರೂಪಾಯಿಗಳಿಗೆ ಇಳಿಸಲ್ಪಟ್ಟಿದೆ.

ವೈಸರಾಯರು ಬೊಂಬಾಯಿಗೆ ಬರುವಾಗ ಅವರಿಗೂ, ಮಹಾತ್ಮ ಗಾಂಧಿಯವರಿಗೂ ಏಕಾಂತಿಯ ಮಾತುಕತೆ ನಡೆಸಬೇಕೆಂದು ಏರ್ಪಾಡು ನಡೆಯುತ್ತಾ ಇದೆ.

ಮದ್ರಾಸಿನಲ್ಲಿ ಅನೇಕ ಸ್ತ್ರೀಯರು ಪುನಃ ಪರದೇಶೀ ಅಂಗಡಿಗಳ ಮುಂದೆ ನಿಂತು ಪಿಕೆಟಿಂಗ್ ಮಾಡುತ್ತಿರುವರು. ಪೋಲೀಸರನ್ನು ನಮ್ಮ ಸ್ಥಳಗಳಲ್ಲಿ ಕಾಣುವುದಿಲ್ಲ.

ಬಂಗಾಳದಲ್ಲಿ ಪರದೇಶೀ ಬಟ್ಟೆ ವ್ಯಾಪಾರವು ಪೂರ್ಣವಾಗಿ ನಿಂತು ಹೋಗಿದೆ. ಕಳೆದ ವರ್ಷ ಲಕ್ಷ ಸಂಖ್ಯೆಯಲ್ಲಿ ಮೂಟೆಗಳು ಬಂದದ್ದು. ಈ ವರ್ಷ 300ಕ್ಕಿಂತ ಹೆಚ್ಚು ಬರಲಿಲ್ಲ.

ಗಾಂಧಿ ವೈಸರಾಯರ ಸಂಧಿ ಶರತ್ತಿಗನುಗುಣವಾಗಿ ಸತ್ಯಾಗ್ರಹ ಯುದ್ಧದಲ್ಲಿ ಭಾಗಿಗಳಾಗಿ ಜೈಲುವಾಸವನ್ನು ಅನುಭವಿಸುತ್ತಿದ್ದಂತ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿರುವರು.

ಬೊಂಬಾಯಿಯ ಪ್ರಸಿದ್ಧ ಲಾಯರಾಗಿ ಒಂದು ವರ್ಷದಿಂದ ಸತ್ಯಾಗ್ರಹ ಸಮರದಲ್ಲಿ ಕೆಲಸ ಮಾಡಿ ಜೈಲಿಗೆ ಹೋಗಿದ್ದ ಶ್ರೀಯುತ್ ಮುನ್ಶಿಯವರು ಪುನಃ ತನ್ನ ಲಾಯರುತನವನ್ನು ಕೈಕೊಂಡಿರುವರು.

ಮುಂದಿನ ವೈಸರಾಯರಾದ ಲಾರ್ಡ್ ವೆಲ್ಲಿಂಗ್‍ಡನ್‌ರವರು ತಾನು ಇಂಡಿಯಾದಲ್ಲಿ ಸಮಾಧಾನವನ್ನೂ ವಿಶ್ವಾಸವನ್ನೂ ಸ್ಥಾಪನೆ ಮಾಡುವೆನೆಂಬುದಾಗಿ ತನ್ನ ಒಂದಾನೊಂದು ಭಾಷಣದಲ್ಲಿ ಲಂಡನ್ನಿನಲ್ಲಿ ಹೇಳಿರುವರು

ಮದ್ರಾಸು ಕೌನ್ಸಿಲಿನಲ್ಲಿ ಇದೇ ತಾರೀಖು 13 ರಲ್ಲಿ ಮಹಾತ್ಮಾಜೀ ಮತ್ತು ವೈಸರಾಯರಿಗೆ ರಾಜಿ ಸಂಧಾನದ ಕುರಿತು ತೆಗೆದುಕೊಂಡ ತಾಳ್ಮೆಗೂ, ಶ್ರದ್ಧೆಗೂ ಅಭಿವಂದಿಸುವ ಠರಾವು ಚರ್ಚೆಯಾಗಲಿಕ್ಕಿರುವುದು.

ಆಂಧ್ರಕೇಸರಿಯಾದ ಸ್ವರಾಜ್ಯ ಪತ್ರಿಕೆಯ ಸಂಪಾದಕರಾದ ಶ್ರೀಯುತ್ ಪ್ರಕಾಶಂರವರು ಇದೇ ತಾರೀಖು 11 ರಲ್ಲು ಕಣ್ಣಾನೂರು ಜೈಲಿನಿಂದ ಮದ್ರಾಸಿಗೆ ಬಂದಿರುವರು. ಅವರಿಗೆ ಮದ್ರಾಸು ಪಟ್ಟದಲ್ಲಿ ಪಟ್ಟಣಿಗರೆಲ್ಲರೂ ಸುಸ್ವಾಗತವನ್ನಿತ್ತಿರುವರು.

ಮದರಾಸಿನ ವಿಕ್ಟೋರಿಯಾ ಹಾಸ್ಟೆಲಿನಲ್ಲಿ ಹಾಸ್ಟೆಲ್ ನಿವಾಸಿಗಳೆಲ್ಲರೂ ಚಂದಾ ಎತ್ತಿ ಸಿದ್ಧಿಗೊಳಿಸಿದ ದಿವಂಗತ ಮೋತಿಲಾಲರ ತೈಲ ಚಿತ್ರದ ಅನಾವರಣವು ಹಿಂದೂ ಪತ್ರಿಕೆಯ ಸಂಪಾದಕರಾದ ಶ್ರೀ. ಎ ರಂಗಸ್ವಾಮಿ ಅಯ್ಯಂಗಾರರವರಿಂದ ಇದೇ ತಾರೀಖು 7 ರಲ್ಲಿ ನಡೆಯಿತು.

ಇಂಗ್ಲೆಂಡಿನ ಕನ್‍ಸರ್‌ವೇಟಿವ್ ಪಂಗಡದ ಲೀಡರಾದ ಬಾಲ್ಡ್‍ವಿನ್‌ರವರು ಇಂಡ್ಯಾದಲ್ಲಾಗುವ ರೌಂಡ್ ಟೇಬಲ್ ಕಾನ್‍ಫರೆನ್ಸಿನಲ್ಲಿ ಸಹಕರಿಸಲಾಗುವುದಿಲ್ಲವೆಂಬುದಾಗಿ ಹೇಳಿರುವದರಿಂದ ಇಂಡ್ಯಾ ಮತ್ತು ಇಂಗ್ಲೆಂಡಿನಲ್ಲಿ ಕೆಲವು ಮಟ್ಟಿಗೆ ಆಶ್ಚರ್ಯಕ್ಕೂ, ಗಲಭೆಗೂ ಕಾರಣವಾಗಿದೆ

ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಇಂಡ್ಯಾ ಸರಕಾರದ ಮಿಲಿಟೆರಿ ಮತ್ತು ಇತರ ಖರ್ಚು ಕಡಿಮೆ ಮಾಡಬೇಕೆಂದು ತಂದ ಠರಾವು ಮಂಜೂರಾಯಿತು. ಠರಾವು ತಂದವರು ಮಿಲಿಟೆರಿಗಾಗಿ ಖರ್ಚಿನ ವಿಷಯ ಬಹಳ ಚೆನ್ನಾಗಿ ವಿವರಿಸಿ, ಅದನ್ನು ಅರ್ಧಕ್ಕರ್ಧ ಕಡಿಮೆ ಮಾಡಬೇಕೆಂದು ಹೇಳಿದರು.

ಮಂಗಳ ಗಿರಿಯಲ್ಲಿ ರಥೋತ್ಸವವೊಂದು ನಡೆಯಿತು ರಥಕ್ಕೆ ಮಹಾತ್ಮ ಗಾಂಧಿಯವರ ಫೋಟೋವನ್ನು ತೂಗಹಾಕಿದ್ದನ್ನು ಪೋಲೀಸರು ತೆಗೆದ ಕಾರಣದಿಂದ ಜನರು ರಥವನ್ನು ಎಳೆಯಲಿಲ್ಲ. ದೇವಸ್ಥಾನಾಧಿಕಾರಿಗಳು ಎಷ್ಟೇ ಪ್ರಯತ್ನಪಡಲಿ ಯಾರೂ ರಥವನ್ನೆಳೆಯಲಿಕ್ಕೆ ಬರಲಿಲ್ಲ. ರಥೋತ್ಸವವು ನಿಂತೇ ಹೋಯಿತು.

ವಾಯುವ್ಯ ಪ್ರಾಂತ್ಯದಲ್ಲಿರುವ ಉತ್ ಮನ್ ಜಾಯಿ ಎಂಬಲ್ಲಿ ಮೋತಿಲಾಲ ನೆಹರು ಮಹಮ್ಮದಾಲಿಯವರ ಸ್ಮಾರಕ ವಿಷಯ ಮೀಟಿಗೊಂದನ್ನು ಕಳೆದ ತಾ. 21 ರಲ್ಲಿ ಮಾಡುತ್ತಿರುವ ವೇಳೆಯಲ್ಲಿ ಬ್ರಿಟಿಷ್ ಸೈನಿಕರು ಸುಗ್ಗಿ ಅನೇಕರನ್ನು ಚಾರ್ಜುಮಾಡಿ ಗುಂಡು ಹೊಡೆದು ನಾಲ್ಕು ಜನರು ಸತ್ತಿರುವರೆಂದೂ, ನೂರು ಜನರಿಗೆ ಗಾಯವಾಗಿದೆಯೆಂದೂ ತಿಳಿಯುತ್ತೇವೆ

ಮಹಾತ್ಮಾಜೀಯವರು ಎರಡನೇ ಕಾನ್‍ಫರೆನ್ಸಿಗೆ ಇಂಗ್ಲೆಂಡಿಗೆ ಹೋದರೆ ಅವರ ತೇಜಸ್ಸಿನಿಂದಲೂ, ಗಂಭೀರ ಸ್ವಭಾವ, ಸರಳ ಹೃದಯ ಮನುಷ್ಯನನ್ನು ತಿಳಿಯದ ಗುಣ ವಗೈರೆಯಿಂದ ಇಂಗ್ಲೆಂಡಿನ ಎಂಥಾ ವಿರೋಧಿಗಳನ್ನಾದರೂ, ಗಾಂಧಿಯವರು ತನ್ನ ಅಭಿಪ್ರಾಯದಂತೆ ಎಳೆಯಲು ಶಕ್ತರೆಂದೂ ಸಂಪೂರ್ಣ ಶಾಂತಿಯು ನೆಲೆಗೊಳ್ಳುವುದೆಂದೂ ಇಂಗ್ಲೆಂಡಿನ ಅನೇಕ ಮಹನೀಯರು ಅಭಿಪ್ರಾಯ ಪಟ್ಟಿದ್ದಾರೆ.

ಪಂಡಿತ ಜವಾಹರಲಾಲ ನೆಹರುರವರು ತಾನು ಮಾಡಿದ ಅಲ್ಲಹಾಬಾದಿನ ಭಾಷಣದಲ್ಲಿ ಈಗಿನ ರಾಜಿ ಸಂಧಾನದ ವಿಷಯದಲ್ಲಿ ಹೀಗೆಂದು ಹೇಳಿರುವರು. ನಾನು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಮತ್ತು ಮಹಾತ್ಮಾಜೀಯವರ ತೀರ್ಮಾನದಂತೆ ನಡೆಕೊಳ್ಳುವೆನೆಂದೂ, ಮಹಾತ್ಮರೊಬ್ಬರೇ ಡೆಲ್ಲಿಯಲ್ಲಾಗುವ ಕಾನ್‍ಫರೆನ್ಸಿಗೆ ಹೋದರೆ ತನಗೆ ಸಮ್ಮತವೆಂದೂ, ರಾಜಿಯಾಗುವ ಫಲಿತಾಂಶವು ಹೇಗಾಗುತ್ತದೋ ಎಂಬುದನ್ನು ಹೇಳಲಿಕ್ಕಾಗುವುದಿಲ್ಲವೆಂದೂ, ರಾಜಿ ಶರತ್ತುಗಳನ್ನು ಚರ್ಚಿಸುವಾಗ ಲಾಹೋರ್ ಕಾಂಗ್ರೆಸ್ ತೀರ್ಮಾನಕ್ಕನುಗುಣವಾಗಿ ಸ್ವತಂತ್ರ ಸಂಪಾದನೆ ಮಾಡುವುದೇ ಕಾಂಗ್ರೆಸ್ಸಿನ ಧ್ಯೇಯವೆಂತಲೂ ಹೇಳಿರುವರು

ಗುಜರಾತಿನ ಮುಖ್ಯ ಪಟ್ಟಣವಾದ ಅಹಮ್ಮದಾಬಾದಿಗೆ ಮಹಾತ್ಮಾಜೀಯವರು ಇದೇ ತಾ 10ರಲ್ಲಿ ಹೋಗಿರುವರು. ಒಂದು ಲಕ್ಷಕ್ಕಿಂತ ಹೆಚ್ಚಾಗಿ ಜನರು ಸೇರಿ ಸ್ವಾಗತವನ್ನಿತ್ತರು. ಜನರ ಉತ್ಸಾಹವು ವಿಪರೀತವಾಗಿ ಸಮೂಹವನ್ನು ತಡೆಯುವುದೇ ಕಷ್ಟವಾಗಿತ್ತು. ಮಹಾತ್ಮರನ್ನು ಆಗ್ರಾಸನಕ್ಕೆ ತರುವುದು ಬಹಳ ಕಷ್ಟವಾಯಿತು. ಹೇಗೂ ವಾಲಂಟೀಯರುಗಳ ಸಹಾಯದಿಂದ ಒಂದರು. ಸಭಿಕರನ್ನು ಕುರಿತು ಸಂಬೋಧಿಸಿ ತುಂಬಾ ಮಾತಾಡಲು ಅನುಕೂಲವಾಗಲಿಲ್ಲ ಎಪ್ಪತ್ತು ಸಾವಿರ ರೂಪಾಯಿಯ ಒಂದು ಚೀಲವನ್ನು ಒಂದು ಚಿನ್ನದ ತಕಲಿಯನ್ನು ಗಾಂಧಿಜೀಯವರಿಗೆ ಜನರು ಅರ್ಪಿಸಿದರು. ಈಗಿನ ರಾಜಿ ಸಂಧಾನದ ವಿಷಯದಲ್ಲಿ ಮಹಾತ್ಮರು ಹೀಗೆಂದು ಹೇಳಿರುವರು ಈಗಿನ ಸಂಧಾನವನ್ನು ಒಂದು ಸಣ್ಣ ಮಗು ಸಹ ತಿಳಿಯಬಹುದಾದಷ್ಟು ಸುಲಭವಾಗಿದೆ. ರಾಜಿಯ ಶರತ್ತುಗಳೇ ತೀರ್ಮಾನವಾಗಲಿಲ್ಲ ಇನ್ನು ಮುಂದಕ್ಕೆ ಚರ್ಚಿಸಿ ರಾಜಿಗೆ ಬರಲಿಕ್ಕಿರುವ ಪ್ರಥಮ ಸಾಧನ ಶಾಂತಿಮಯ ಕಾನೂನುಭಂಗದಿಂದ ಸ್ವರಾಜ್ಯ ಸಾಧನೆಗೆ ಒಂದು ವರ್ಷ ಕೆಲಸ ಮಾಡಿಯಾಯಿತು. ಈ ಸಂಧಾನದ ಶರತ್ತುಗಳು ಜಯದಿಂದ ಪರಿಣಮಿಸಲು ಎಲ್ಲರೂ ಸಹಾಯ ಮಾಡಬೇಕು ಎಲ್ಲರೂ ಕೋಮುವಾರು ವ್ಯತ್ಯಾಸಗಳನ್ನು ನಿಲ್ಲಿಸಿ ಶಾಂತವಾಗಿರುವುದಕ್ಕೂ ಕುಟುಕತನವನ್ನು ನಿವಾರಣೆಮಾಡಲಿಕ್ಕೂ, ವಿದೇಶಿ ಬಟ್ಟೆ ಬಹಿಷ್ಕಾರ ಮಾಡಲಿಕ್ಕೂ, ಖಾದಿ ಪ್ರಚಾರಕ್ಕೂ ಕೆಲಸ ಮಾಡಿದರೆ ಸ್ವರಾಜ್ಯವು ಕ್ಷಣದಲ್ಲಿಯೇ ಲಭಿಸುವುದೆಂದು ಹೇಳಿದರು.

ವಿ ದೇ ಶ.

ಇಂಡ್ಯಾದ ಅಂಡರ್ ಸೆಕ್ರಟರಿ ಆಫ್ ಸ್ಟೇಟಾಗಿದ್ದ ಲಾರ್ಡ್ ರಸ್ಸೆಲ್‌ರವರು ಇದೇ ತಾ. 3 ರಲ್ಲು ಕಾಲವಾದರು.

ಮೋರಿಷಸ್ ಎಂಬಲ್ಲಿ ಬಿರುಗಾಳಿ ಎದ್ದು ಹತ್ತು ಸಾವಿರ ಜನರಿಗೆ ಮನೆಗಳಿಲ್ಲದಂತಾಗಿದೆ ಅಲ್ಲಿಯ ಸರಕಾರದವರು ಇವರ ಸಹಾಯಕ್ಕೆ ತಕ್ಕ ಏರ್ಪಾಡು ಮಾಡುವುದರಲ್ಲಿದ್ದಾರೆ.

ಇಂಗ್ಲೆಂಡಿನಲ್ಲಿ ಪೆಟ್ರೋಲಿಗೆ ಪ್ರತಿ ಗೇಲನ್ ಮೇಲೆ ಎರಡು ಪೆನ್ನಿಯನ್ನು, ಟೈರುಗಳ ಮೇಲೆ ಶೇಕಡ 7 ರನ್ನು ಕ್ರಯ ಇಳಿಸಿದ್ದು ಮೋಟಾರ್ ಮಾಲೀಕರಿಗೆ ತುಂಬಾ ಸಂತೋಷವನ್ನುಂಟು ಮಾಡಿದೆ.

ಯೂರೋಪಿನ ಬಾಲ್ಕನ್ ಸಂಸ್ಥಾನದಲ್ಲಿ ಭೂಕಂಪವಾಗಿ ಹದಿನಾಲ್ಕು ಗ್ರಾಮಗಳೇ ನಾಶವಾಗಿವೆ. ಎಂಟು ಸಾವಿರ ಮನೆಗಳು ನಾಶವಾಗಿವೆ ಸಾವಿರ ಕುಟುಂಬಕ್ಕಿಂತ ಹೆಚ್ಚಾಗಿ ಮನೆ ಇಲ್ಲದಂತಾಗಿದೆ.

ಕನ್‍ಸರ್‌ವೇಟಿವ್ ಪಂಗಡವು ಇಂಡಿಯದಲ್ಲಾಗುವ ರೌಂಡ್ ಟೇಬಲ್ ಕಾನ್‍ಫರೆನ್ಸಿನಲ್ಲಿ ಸಹಕರಿಸುವುದಿಲ್ಲವಾಗಿ ತೀರ್ಮಾನ ಮಾಡಿದ ಪ್ರಕಾರ ಆ ಪಂಗಡದ ಲೀಡರಾದ ಬಾಲ್ಡ್‍ವಿನ್‌ರವರು ಸ್ಟೇಟ್‍ಮೆಂಟ್ ಪ್ರಕಟಿಸಿರುವರು,

ಅಮೆರಿಕಾದ ಸಂಯುಕ್ತ ಸಂಸ್ಥಾನದ ಬಜೆಟ್ಟಿನಲ್ಲಿ ಆದಾಯಕ್ಕಿಂತ ವ್ಯಯವು ಐದುನೂರು ಮಿಲಿಯ ಡಾಲರುಗಳು ಹೆಚ್ಚಾಗಿವೆ ರಾಮರಾಜ್ಯದಂತ ಐಶ್ವರ್ಯದಿಂದ ತುಂಬಿ ತುಳುಕುತ್ತಿರುವ ಈ ರಾಜ್ಯದಲ್ಲಿ ಹೀಗೆ ಆದದ್ದು ಪ್ರಪಂಚಕ್ಕೆ ಆಶ್ಚರ್ಯವನ್ನುಂಟು ಮಾಡಿದೆ

ಇಂಗ್ಲೆಂಡಿನ ಆಕ್ಸ್‌ಫರ್ಡ್‌ನಲ್ಲಿ ಕಾಲೇಜು ಕ್ಲಾಸಿನಲ್ಲಿ ಓದುತ್ತಿರುವ ಯುವಕ ಮತ್ತು ಯುವತಿಯರ ಒಂದು ಮೀಟಿಂಗ್ ಆಗಿ ಸಂಗಾತಿಗಳಾಗಿದ್ದು ಓದುತ್ತಿರುವ ಯುವಕ ಯುವತಿಯರು ಮದುವೆಯಾದರಾಗಲಿ ಇದ್ದು ಹುಟ್ಟಿಗೆ ವಾಸಿಸುತ್ತಿರುವುದು ಒಳ್ಳೇಯದೆಂದೂ, ರಷ್ಯದೇಶದಲ್ಲಿ ಆಗುತ್ತಿರುವ ಪದ್ಧತಿಗನುಗುಣವಾಗಿ ನಡೆಯಬೇಕೆಂದೂ, ಒಂಟಿಯಾಗಿ ಬೇಸರಿಕೆಯಿಂದ ಇರುವುದರ ಬದಲಿಗೆ ಈ ತರದ ಸಂಗಾತಿ ಮದುವೆಯು ಬಹಳ ಒಳ್ಳೆಯದೆಂದೂ ಚರ್ಚಿಸಿರುವರು.

ಲೆಜಿಸ್‌ಲೇಟಿವ್ ಕೌನ್ಸಿಲ್ ಮೀಟಿಂಗು.

ಮೀಟಿಂಗಿನಲ್ಲಿ 20 ಪ್ರಶ್ನೆಗಳಿಗೆ ಜವಾಬು ಕೊಡಲ್ಪಟ್ಟವು

1. ರಾಜಿ ಸಂಧಾನದ ವಿಷಯದಲ್ಲಿ ಕೊಡಗು ಕೌನ್ಸಿಲಿನ ಅಭಿವಂದನೆಗಳನ್ನು ಚೀಫ್ ಕಮಿಶನರರ ಮೂಲಕ ವೈಸರಾಯರಿಗೆ ಕಳುಹಿಸುವ ಠರಾವು ಮಂಜೂರಾಯಿತು

2. ದಿವಂಗತ ಮೋತಿಲಾಲರ ಮರಣ ಕುರಿತು ಸಂತಾಪ ಠರಾವನ್ನು ಎಲ್ಲರೂ, ಎದ್ದು ನಿಂತು ಮಂಜೂರು ಮಾಡಿ ಠರಾವನ್ನು ಜವಾಹಿರ್‌ಲಾಲರಿಗೆ ಕಳುಹಿಸಲು ಮಂಜೂರಾಯಿತು.

3. ಬಜೆಟ್ಟಿನ ಮೇಲೆ ಮೆಂಬರುಗಳು ತಮ್ಮ ಟೀಕೆಯನ್ನು ಮಾಡಿದರು ಅನೇಕರು ದೇಶಕ್ಕೆ ಹೆಚ್ಚೇನು ಒಳ್ಳೆ ಕೆಲಸ ಮಾಡದ ಕಮಿಶನರರನ್ನು ಹೊಗಳುವುದರಲ್ಲಿ ತಮ್ಮ ಟೀಕೆಗಳನ್ನು ತೀರಿಸಿದರು.

4 ಬಜೆಟ್ಟಿನಲ್ಲಿ ಎರಡು ಲಕ್ಷ ಇಪ್ಪತ್ತೈದು ಸಾವಿರ ರೂಪಾಯಿ ಕಡಿಮೆ.

5. ರಿಜರ್ವ್ ಆಗಿದ್ದ 6,27,000 ರೂಪಾಯಿಗಳಲ್ಲಿ ಈಗ 3,40,000 ರೂ. ಇರುವುದೆಂದು ಫೈನಾನ್ಸ್ ಮೆಂಬರು ಹೇಳಿದರು.

ಕೊಡಗನ್ನು ಬೇರೆ ಪ್ರಾಂತ್ಯದ ಸಂಗಡ ಸೇರಿಸಬೇಡವೇ ?

(ಬರೆದು ಬಂದದ್ದು)

ಕೊಡಗನ್ನು ಪ್ರತ್ಯೇಕವಾಗಿಯೇ ಇರಿಸಬೇಕೆಂದು ವಾದಿಸುವವರು ಅದು ಈಗಿದ್ದ ಸ್ಥಿತಿಯಲ್ಲಿಯೇ ಇದ್ದರೆ ಅಧಿಕಾರವನ್ನು ತಮ್ಮ ಕೈವಶ ಪಡಿಸಿಕೊಂಡು ದೇಶವನ್ನು ಉತ್ತಮ ಸ್ಥಿತಿಗೆ ತರಬಹುದಾಗುತ್ತದೆಂಬ ತಪ್ಪಭಿಪ್ರಾಯವನ್ನಿಟ್ಟುಕೊಂಡು ಹಾಗೆ ವಾದಿಸುದಾಗಿದೆ. ಸ್ವರಾಜ್ಯ ನಿರ್ಧರಿಸಿದ ಕೂಡಲೇ ಅಧಿಕಾರವು ಜನತೆಯವರ ಕೈಗೆ ಹೋಗುವುದೆಂಬ ವಿಷಯವನ್ನು ತಿಳಿದುಕೊಂಡರೆ ಅವರ ಅಭಿಪ್ರಾಯವು ಕೂಡಲೇ ಬದಲಾಗುವುದು.

ಓಟ್ ಕೊಡುವ ಹಕ್ಕು ಸ್ವರಾಜ್ಯ ಸಂಖ್ಯಾತ ಜನರನ್ನು ಅನುಸರಿಸುವುದೇ ಸ ಆಸ್ತಿಯ ಹಕ್ಕುದಾರಿಕೆಗಳನುಸಾರವಾ ಸ್ಕ ಇಲ್ಲದೆ ನೂರಾರು ಪ್ರಾಣಗಳಿಗಿಂತ ನ್ನ ನೂರು ಬಟ್ಟೆ-ಭೂಮಿಗೆ ಅಥವ ಪ ಯಕ್ಕೆ ಇದೆ ' ಎಂದು ಹೇಳುವ ದಾ ರುವುದಿಲ್ಲ. ಹುಚ್ಚನಾಗಿಲ್ಲದೆ ಹದಿ ಲ್ಪಟ್ಟ ಪ್ರಾಯವುಳ್ಳ ಪ್ರತಿಯೊಬ್ಬ ಗಂ ಟ್ ಕೊಡುವ ಹಕ್ಕನ್ನು ಳ್ಳವರಾಗಿರಬೇ ಯವು ಈಗಲೇ ಕೈಗೂಡುವುದೆಂದು ಡರು ಆ ಹಕ್ಕು ಒಂದು ದೇಶದ ಹಿ ತವನ್ನು ಕಾಪಾಡಲು ಅನುಕೂಲವಾಗು ವುದೆಂಬುದರಲ್ಲಿ ಸಂಶಯವಿಲ್ಲ ಎಂ ಗಿರುವ ವ್ಯವಸ್ಥೆಯು ತಪ್ಪಿ, ಕೊಡಗಿನ ಯು ಜನ ಮಟ್ಟಿಗೆ ಓಟರ್ಸ್ ಆಗುವ ಹಾಗೆಂದರೆ ಅರ್ಥವೇನು ? 40 ಸಾ 120 ಸಾವಿರ ಕೊಡಗೇತರರು ಸಮಾ ದು, ಪ್ರತ್ಯೇಕ ಈ ಭಾಗಕ್ಕೆ ನಿಂಗಡಣ ಕೊಡುವರು ? ಕೊಡಗಿನಲ್ಲಿರುವ ಕೂ ವು ಕೂಲಿಯವರೆಂಬುದೇನೋ ನಿಜ ವೇ ತಿಂಗಳಿಂದ ಜನವರಿ ತಿಂಗಳವರೆಗ ರು ನಾಲ್ಕು ತಿಂಗಳ ಮಟ್ಟಿಗೆ ಊರಿಗೆ ತಯಾರಿಯಿಂದ ತೆಗೆದು ಹಾಕುವುದು ಗೆದು ಹಾಕಿದರೂ ಉಳಿಯುವ ಕೊಡ ರಡೂವರೆ ಸಾವಿರಕ್ಕೆ ಕಡಿಮೆ ಇಲ್ಲದೆ ಇ

(ಮುಂದುವರಿಯುವುದು.

ವಿ ಜ್ಞಾಪ ನೆ.

'ಕೊಡಗು ಬಂಧು ಭಗಿನಿಯರಿಗೆ,

ಮ. ರಾ ಬೆಳ್ಯಪ್ಪನವರೂ, ಇತರ ಷ ಸತ್ಯಾಗ್ರಹಿಗಳೂ ಈ ಅಹಿಂಸಾ ಯ ತ್ಯಾಗ ಮಾಡಿ ದೇಶ ಸೇವೆ ಮಾಡಿದ್ದಾ ಸ್ವಾತಂತ್ರ್ಯ ಯುದ್ಧದಲ್ಲಿ ಕೊಡಗು ಹಿ ಕೊಡಗಿಗೂ, ಕರ್ನಾಟಕಕ್ಕೂ, ಬಹಳ ಮಾಡತಕ್ಕ ಸಂಗತಿಯಾಗಿದೆ. ಈ ಯು ವ ಜಯವು ಪ್ರತಿಯೊಬ್ಬ ಸತ್ಯಾಗ್ರಹಿ ಚಿಕ್ಕವನಾಗಲೀ—ಶ್ರಮದ ಫಲವಾಗಿದೆ ಬಂದ ಮತ್ತು ಹೋಗದಿರುವ ಎಲ್ಲಾ ಸ ಭಿವಂದನೆಗಳನ್ನು ಅರ್ಪಿಸುತ್ತೇನೆ. ಮತ ಗೆ ಆರೋಗ್ಯವನ್ನೂ, ಶಕ್ತಿಯನ್ನೂ ಕೊಟ ಲೂ ಹೆಚ್ಚಾಗಿ ದೇಶ ಸೇವೆ ಮಾಡಲು ಅ ಕಿಸಿ ಕೊಡಲೆಂದು ಪ್ರಾರ್ಥಿಸುತ್ತೇನೆ

ಕೆ

ಜಿ,

ಸತ್ಯಾಗ್ರಹ ವರ್ತಮಾ

ತಾ 5—3—31 ರಲ್ಲು ಬಿಟ್ಟಂಗಾಲ ಮದಲ್ಲಿ ಸತ್ಯಾಗ್ರಹಿಗಳಾದ ಐನಂಡ ಕಾ ಯದ ಬೆಳ್ಯಪ್ಪನವರು, ಸೋಮೆಯಂಡ ಅ ಲಚಿರ ಚಿಟ್ಟಿಯಪ್ಪನವರು, ಮಂಡೇಟ್ಟಿರ ಚ ಡ್ಡಾಂಗ ಭೀಮಯ್ಯನವರು, ತಮ್ಮಯ್ಯನ ವರು ಮತ್ತು ಮಂಡೇಟ್ಟಿರ ಮುತ್ತಣ್ಣನ ಮನೆ ಮನೆ ತಿರುಗಿ ಸೇಂದಿ ಸಾರಾಯಿ ನಿಷೆ ತತ್ವಗಳನ್ನು ಬೋಧಿಸಿ ಮುಂದಕ್ಕೆ ಸೇಂದಿ ನ್ನು ಕೊಡುವುದಿಲ್ಲವಾಗಿ ಭಾಷೆಯನ್ನ

6—3—31ರಲ್ಲು ಮಡಿಕೇರಿ ಸತ್ಯಾಗ್ರ

8—3—31ರಲ್ಲು ಸಿದ್ಧಾಪುರದಲ್ಲಿ ಸ ನಣಿಗೆ ಮತ್ತು ಮೀಟಿಂಗು ಮಾಡಿ ಸೇಂದಿ ಷೇಧ, ಖಾದಿ ಪ್ರಚಾರದ ವಿಷಯವಾಗಿ ಚೆ ಚ್ಚೆಯ್ಯನವರು, ಚೆಂಬಾಂಡ ಮಂದಪ್ಪನವ ಕಂಡ ಮೇದಪ್ಪನವರು ಮಾತಾಡಿದರು.

9—3—31 ರಲ್ಲು ಈ ಮೊದಲೇ ಏನ ತೆ ಕಣ್ಣಂಗಾಲ ಬೈರಿ ಎಡೆ, ಹಾಲುಗ ಖಾದಿ ಪ್ರಚಾರ, ನಿಷಾ ನಿಷೇಧದ ಮೀಟಿಂ ತು. ಬೈರಂಬಡ ಗ್ರಾಮದ ದೇವ ಪತ್ನಿಯವರ ಮನೆಗೆ ಊರವರು ಸಮೇತ ಷೇಧದ ತತ್ವವನ್ನು ಬೋಧಿಸಿದ ನಂತರ ಮುಂದಕ್ಕೆ ಸೇಂದಿ ಇಳಿಸಲು ತನ್ನ ತೋಟದ ದಿಲ್ಲವಾಗಿ ಒಪ್ಪಿದರು,

ತಾ. 10—3—31 ರಲ್ಲು ಗುಹ್ಯ ಗ್ರಾ ಮೂರ್ತಿ ದೇವರ ಹಬ್ಬಕ್ಕೆ ಸೋಮೆಯಂಡ ಮೊದಲಾದ 3 ಜನ ಸತ್ಯಾಗ್ರಹಿಗಳು ಹೋ ನ ಡಳವಳಿವನ್ನು ಕುರಿತು ಜನರಿಗೆ ಬೋಧಿ ವ್ಯ ಹಿಡಿದಿದ್ದ ಪಿಸ್ತು ಮೂರ್ತಿ ದೇವರು ಸೇಂದಿಯೊಗಲೀ, ಸಾರಾಯಿಯನ್ನಾಗಲೀ ಉ ಕೊಡಿಸ ಬಾರದೆಂದು ಅಪ್ಪಣೆಯನ್ನು ಕೊಟ

ಮಹಾತ್ಮ ಗಾಂಧಿಯವರು ರಾಜಿ ಸಂಧಾನದ ಫಲಿತಾಂಶದ ಕುರಿತು 15 ಪತ್ರಿಕಾ ಬಾತ್ಮಿದಾರರಿಗೆ ಮಾಡಿದ ಭಾಷಣ.

ನಾನು ಮೊದಲಾಗಿ ಹೇಳುವುದೇನಂದರೆ—ಈಗ ಆಗಿರುವ ತೀರ್ಮಾನವು ವೈಸ್‌ರಾಯರ ಅಪರಿಮಿತವಾದ ಸಮಾಧಾನ ಮತ್ತು ಅಷ್ಟೇ ಅಪರಿಮಿತವಾದ ಕಾರ್ಯ ಕುಶಲತೆ ಮತ್ತು ಎಂದೂ ಕಡಿಮೆಯಾಗದ ಮರ್ಯಾದೆಯ ವರ್ತನೆ ಇವುಗಳಿಲ್ಲದಿದ್ದರೆ—ಈ ತೀರ್ಮಾನವು ಅಸಾಧ್ಯವಾಗುತ್ತಿತ್ತು. ನನ್ನ ತಿಳುವಳಿಕೆಯಿಂದ ಅಲ್ಲದಿದ್ದರೂ ನಾನ ಅನೇಕ ಸಾರಿ ವೈಸ್‌ರಾಯರಿಗೆ ಸಿಟ್ಟು ಬರುವದಕ್ಕೆ ಕಾರಣ ಕೊಟ್ಟಿರಬಹುದು. ಅವರ ಸಮಾಧಾನಕೆಯು ಸೋಲುವಂತೆ ನಾನು ವರ್ತಿಸಿರಬಹುದು. ಆದರೆ ಅವರು ಸಿಟ್ಟಾದದ್ದಾಗಲೀ ಸಮಾಧಾನ ಗುಣವನ್ನು ಕಳಕೊಂಡದ್ದಾಗಲೀ ನನಗೆ ನೆನಪು ಬರುವುದಿಲ್ಲ. ಈ ಜಾಗರೂಕತೆಯಿಂದ ಮಾಡಬೇಕಾದ ಸಂಭಾಷಣೆಗಳಲ್ಲಿ ಅವರು ಸಂಪೂರ್ಣವಾಗಿ ಎದೆ ಬಿಚ್ಚಿ ಮಾತಾಡಿದರು. ನ್ಯಾಯವಿದ್ದರೆ ರಾಜಿಯಾಗಲೇ ಬೇಕೆಂತ ನಿಶ್ಚಯಿಸಿದ್ದರೆಂತ ನಾನು ನಂಬುತ್ತೇನೆ.

ಈ ಸಂವಾದವನ್ನು ಭಯದಿಂದ ನಡುಗುತ್ತಾ ಪ್ರಾರಂಭಿಸಿದನೆಂತ ಹೇಳ ಬೇಕಾಗಿದೆ. ಅದರ ಕಾರಣವಿಂದ ತಿಳಿಸೆನು. ಆದರೆ ಪ್ರಾರಂಭದಿಂದಲೇ ನನ್ನ ಹೆದರಿಕೆಗಳನ್ನೆಲ್ಲಾ ದೂರ ಮಾಡಿ ನನ್ನ ಮನಸಿಗೆ ಸಮಾಧಾನ ಉಂಟು ಮಾಡಿದರು. ನನ್ನನ್ನು ಸಂಭಾಷಣೆಗೆ ಕರೆಸಿಕೊಳ್ಳಬೇಕೆಂತ ನಾನು ಅವರಿಗೆ ಪತ್ರ ಬರೆದಾಗ ರಾಜಿ ತೀರ್ಮಾನಕ್ಕೆ ಬರುವ ಈ ತಯಾರಿಯಲ್ಲಿ ನಾನು ಬೇರೆಯವರಿಗಿಂತ ಹಿಂದೆ ಬೀಳ ಬಾರದೆಂತ ನಿಶ್ಚಯಿಸಿದ್ದೆ. ಇದನ್ನು ಯಾರಿಂದಲೂ ಅಲ್ಲವೆಂತ ಹೇಳಲು ಸಾಧ್ಯವಿಲ್ಲ. ರಾಜಿಯಾದದ್ದಕ್ಕೂ ಮತ್ತು ಅದರಿಂದ ರಾಜಿಯಾಗದೆ ಇದ್ದಿದ್ದರೆ ನೂರರಷ್ಟು ಹೆಚ್ಚಾಗುತ್ತಿದ್ದ ದೇಶದವರ ಕಷ್ಟಗಳು ಕಮ್ಮಿಯಾಗಿರುವುದಕ್ಕೂ, (ಹಾಗೆ ಕಮ್ಮಿಯೇ ಆಗುತ್ತದೆಂತಲೂ ಊಹಿಸುತ್ತೇನೆ.) ಸಿಕ್ಕಿದ್ದಕ್ಕೂ ನಾನು ಪರಮಾತ್ಮನನ್ನು ವಂದಿಸುತ್ತೇನೆ.

"ಜಯ"ವೆಂಬ ಮಾತಿಲ್ಲ

ಇಂಥಾ ರಾಜಿ ತೀರ್ಮಾನದಲ್ಲಿ ಯಾವ ಭಾಗಕ್ಕೆ ಜಯವಾಯಿತೆಂತ ಹೇಳುವುದಕ್ಕೆ ಸಾಧ್ಯವೂ ಇಲ್ಲ. ಹೇಳುವುದು ಬುದ್ಧಿವಂತಿಕೆಯೂ ಅಲ್ಲ. ಜಯವೇನಾದರೂ ಇದ್ದರೆ ಅದು ಉಭಯಪಕ್ಷರಿಗೂ ಸೇರಿದೆ. ಕಾಂಗ್ರೆಸಿನವರು ಜಯ ಸಿಕ್ಕಬೇಕೆಂತ ಹೋರಾಟ ಮಾಡಲಿಲ್ಲ. ಸ್ವಾಭಾವಿಕವಾಗಿಯೇ ಕಾಂಗ್ರೆಸಿನವರು ಸಾಧಿಸ ಬೇಕಾದ ಧ್ಯೇಯವೊಂದು ಇದೆ. ಆ ಧ್ಯೇಯವು ಕೈಗೂಡದೆ ಕಾಂಗ್ರೆಸಿಗೆ ಜಯವಿಲ್ಲ. ಆದ್ದರಿಂದ ನನ್ನ ದೇಶಬಾಂಧವರಿಗೂ, ಸಹೋದರಿಯರಿಗೂ ವಿಜ್ಞಾಪಿಸಿಕೊಳ್ಳುವುದೇನಂದರೆ ರಾಜಿ ಶರತ್ತಿನಲ್ಲಿ ಸಂತೋಷದಿಂದ ಉಬ್ಬಲು ಏನಾದರೂ ಕಾರಣವಿದ್ದರೂ ಸಹ ಉಬ್ಬದೆ ದೇವರ ಮುಂದೆ ನಮ್ಮ ಭಾವವನ್ನು ತಗ್ಗಿಸಿ ನಮ್ಮ ಧ್ಯೇಯ ಸಾಧನೆಗಾಗಿ ಕಷ್ಟ ಸಹಿಸುವುದರಲ್ಲಾಗಲೀ ಸಮಾಧಾನದಿಂದ ಸಂಧಾನ ನಡಸುವುದರಲ್ಲಾಗಲೀ ಶಕ್ತಿಯನ್ನೂ, ಜ್ಞಾನವನ್ನೂ ಕೊಡಬೇಕೆಂತ ಪ್ರಾರ್ಥಿಸಿಕೊಳ್ಳಬೇಕು. ಕಳೆದ 12 ತಿಂಗಳುಗಳ ಹೋರಾಟದಲ್ಲಿಯೂ, ಕಷ್ಟ ಸಹನೆಯಲ್ಲಿಯೂ ಭಾಗ ತೆಗೆದುಕೊಂಡ ಲಕ್ಷಗಟ್ಟಲೆ ಜನರು ಮುಂದೆ ನಡಿಯಲಿಕ್ಕಿರುವ ಚರ್ಚೆಯಲ್ಲಿಯೂ, ರಚನಾ ಕೆಲಸದಲ್ಲಿಯೂ ಈಗಿನ ಚರಿತ್ರೆಯ ವೀರತನವೆನ್ನುವ ಈ ಒಂದು ಪರ್ವದಲ್ಲಿ ತೋರಿಸಿರುವ ಅದೇ ಜಾಗ್ರತೆಯನ್ನೂ, ಅದೇ ಅನ್ಯೋನ್ಯತೆಯನ್ನೂ, ಸಂಯಮವನ್ನೂ, ಅದೇ ಬುದ್ಧಿವಂತಿಕೆಯನ್ನೂ ತೋರಿಸಿಯಾರೆಂತ ನಂಬುತ್ತೇನೆ.

ಈ ರಾಜಿಯಿಂದ ಉತ್ಸಾಹವು ಇರುವುದರ ರಾಜಿಯಿಂದ ಅಲಾಭ ಗಳಾದರೂ ಇರಬಹುದು, ಇರುವುದರ ಎಂತಲೂ ನನಗೆ ಗೊತ್ತಿದೆ. ವೀರತನದಿಂದ ಕಷ್ಟವನ್ನು ಸಹಿಸುವುದು ಅವರ ಉಸಿರಿನಂತೆ ಆ ರೀತಿ ಸ್ವಭಾವ ಮತ್ತು ಅವಶ್ಯವಾಗಿದೆ. ವೀರತನದಲ್ಲಿ ಸಂತೋಷಪಟ್ಟಷ್ಟು ಬೇರೆ ಇನ್ನಾವುದರಲ್ಲೂ ಸಂತೋಷ ಪಡುವದಿಲ್ಲ. ಸಹಿಸಲಾರದ ಕಷ್ಟಗಳನ್ನು ಎಷ್ಟೋ ಕಾಲದವರೆಗಾದರೂ ಅನುಭವಿಸಲು ತಯಾರಾಗಿದ್ದಾರೆ, ಕಷ್ಟವನ್ನನುಭವಿಸುವುದು ಇಲ್ಲದೆ ಹೋದಾಗ ಅವರ ಕಸವೇ ಇಲ್ಲವಾಗುತ್ತದೆ. ತಮ್ಮ ಧ್ಯೇಯವು ದೃಷ್ಟಿಯಿಂದ ಮರೆಯಾಗಿ ಬಹು ದೂರ ಹೋದಂತಾಗುತ್ತದೆ. ಅವರಿಗೆ ತಡೆಯಿರಿ, ನೋಡಿರಿ, ಪ್ರಾರ್ಥಿಸಿರಿ ಮತ್ತು ಆಶಿಸಿರಿ ಎಂಬ ಮಾತ್ರ ಹೇಳಬೇಕಷ್ಟೆ. ಕಷ್ಟಕ್ಕೂ [illegible] ಮಿತಿ ಇದೆ. ಕಷ್ಟ ಸಹನೆಯು ಬುದ್ಧಿವಂತಿಕೆಯಿಂದಲೂ, ಬುದ್ಧಿ ಶೂನ್ಯತೆಯಿಂದಲೂ ಕೂಡಿದ್ದಾಗಬಹುದು. ಮಿತಿಗೆ ಮೀರಿದಾಗ ಕಷ್ಟಸಹನೆಯು ಬುದ್ಧಿ ಶೂನ್ಯತೆಯಾಗುತ್ತದೆ. ಎದುರಿಯು ನಿಮ್ಮ ಶರತ್ತಿಗನುಗುಣವಾಗಿ ಚರ್ಚೆಗೆ ಅನುಕೂಲ ಕೊಟ್ಟ ಮೇಲೂ, ಕಷ್ಟವನ್ನು ಅನುಭವಿಸುತ್ತಾ ಹೋಗುವುದು ಅತ್ಯಂತ ಬುದ್ಧಿ ಶೂನ್ಯತೆಯಾಗುತ್ತದೆ. ನಿಜವಾದ ಕದವು ತೆರೆದಾಗ ಅದನ್ನು ಉಪಯೋಗಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ನನ್ನ ನಮ್ರ ಅಭಿಪ್ರಾಯದಲ್ಲಿ ಈ ರಾಜಿಯಿಂದ ನಿಜವಾದ ಕದವು ತೆರೆದಿದೆ

ಫೆಡರೇಶನ್ ಜವಾಬ್ದಾರಿ ಮತ್ತು ಭದ್ರತೆಗಳು.

ಈ ರಾಜಿಯು ತಾತ್ಕಾಲಿಕವಾಗಿರಬೇಕಾದುದು ತಾತ್ಕಾಲಿಕವಾಗಿದೆ. ಈಗ ಆದ ರಾಜಿಯು ಶಾಶ್ವತವಾಗಬೇಕಾದರೆ ಇನ್ನೂ ಅನೇಕ ಸಂಗತಿಗಳು ನಡೆಯಬೇಕು. [illegible] ತಿಳಿಸಿರುವ [illegible] ಭಾಗವು ರಾಜಿಯ ಶರತ್ತುಗಳಾಗಿವೆ. ಇದು ಸ್ವಭಾವಿಕವಾಗಿ ಹೀಗಾಗಲೇ ಬೇಕು. ಕಾನ್ಫರೆನ್ಸಿನಲ್ಲಿ ಕಾಂಗ್ರೆಸಿನ ಸಹಕಾರ ಬೇಕಾದರೆ ಅನೇಕ ಸಂಗತಿಗಳಾಗಬೇಕು, ಇವುಗಳನೆಲ್ಲಾ ಹೇಳುವುದು ಅನವಶ್ಯಕ. ಕಳೆದ ಹೋದ ವರುಷಗಳಿಗೆ [illegible] ಮುಖ್ಯ ವಿಷಯವೇನೆಂದರೆ, ಕಾಂಗ್ರೆಸಿನ ಧ್ಯೇಯವು ಅದನ್ನು. ಕಾಂಗ್ರೆಸಿನ ಧ್ಯೇಯವು ಸಂಪೂರ್ಣ ಸ್ವರಾಜ್ಯ ಇದನ್ನು ಸಂಪೂರ್ಣ ಸ್ವಾತಂತ್ರ್ಯವೆಂತ ಇಂಗ್ಲೀಷಿಗೆ ತರ್ಜುಮೆ ಮಾಡಲಾಗುತ್ತದೆ. [illegible] ಪೂರ್ಣ ಸ್ವರಾಜ್ಯವನ್ನು ಸ್ಥಾಪಿಸಿಕೊಳ್ಳುವುದು ಜನ್ಮ ಸಿದ್ಧ ಹಕ್ಕಾಗಿದೆ. ಪೂರ್ಣ ಸ್ವರಾಜ್ಯ [illegible] ಹಕ್ಕುಗಳಿಂದ [illegible] ತೃಪ್ತಿಯಾಗಬಹುದು. ರಾಜಿ ಶರತ್ತುಗಳಲ್ಲಿ ಆ ಮಾತು [illegible].

ಆ ಮಾತುಗಳನ್ನು ಜಾಗರೂಕತೆಯಿಂದ ಓದಿ ನೋಡಿದರೆ [illegible] ಫೆಡರೇಶನ್ [illegible] ಕರ್ತವ್ಯ [illegible], ಅಥವಾ [illegible] ದೇಶಕ್ಕಾಗಿ [illegible] ಒಂದು ಸನ್ನಿವೇಶದಲ್ಲಿ ಇದು. ಒಂದೇ ಸಂಗತಿ [illegible] ಅಥವಾ ಉದ್ದೇಶ [illegible] ಹಿಂದೂಸ್ಥಾನದ ಹಿತಕ್ಕಾಗಿ ಭದ್ರತೆಗಳೆಂದರೆ [illegible] ಸೈನ್ಯ, [illegible] ಹಕ್ಕುಗಳನ್ನು ನಮ್ಮ [illegible]. ಈ ಮಾತಿನ ಒಂದು ಪಾರ್ಟಿ ಒಂದು ಅರ್ಥ ಕೊಡಬಹುದು, ಇನ್ನೊಂದು ಪಾರ್ಟಿ ಇನ್ನೊಂದು ಅರ್ಥ ಕೊಡಬಹುದು. ಈ ಮಾತುಗಳಿಗೆ ಅಡಕವಾಗಿ ಎರಡು ಪಾರ್ಟಿಯವರೂ ತಮ ತಮಗೆ ಯುಕ್ತ ತೋರಿದಂತೆ ಕೆಲಸ ಮಾಡಬಹುದು. ಕಾನ್ಫರೆನ್ಸಿನ ಚರ್ಚೆಗಳಲ್ಲಿ ಕಾಂಗ್ರೆಸ್ ಭಾಗಿಯಾಗಲು ಒಪ್ಪಿದ್ದಾದರೂ, ಯಾಕೆಂದರೆ—ಫೆಡರೇಶನ್ ಸಂಬಂಧವನ್ನು [illegible] ಜವಾಬ್ದಾರಿಗೆ ಒಳಪಡಿಸಿಕೊಳ್ಳುವುದು, ಭದ್ರತೆಗಳೆಂದರೆ—ಅವುಗಳಿಂದ ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಉನ್ನತಿಗೆ ಸಹಾಯವಾಗುವ [illegible] ಗಳನ್ನಾಗಿ ಮಾಡಿಕೊಳ್ಳಲಿಕ್ಕೆ ಕಾಂಗ್ರೆಸ್ ಪ್ರಯತ್ನಿಸುತ್ತದೆ.

ಕಾನ್ಫರೆನ್ಸಿನಲ್ಲಿ ಈ ತೀರ್ಮಾನಗಳಿಗೆ ಒಪ್ಪಿಗೆ ದೊರೆತರೆ ಫಲಿತಾಂಶವಾಗಿ ಸಿಕ್ಕುವಂಥಾದ್ದು ಸಂಪೂರ್ಣ ಸ್ವಾತಂತ್ರ್ಯವೇ. ಆದರೆ ಈ ಕೆಲಸವನ್ನು ಸಾಧಿಸಿಕೊಳ್ಳುವುದು ಕಷ್ಟ ಸಾಧ್ಯವೆಂತ ನನಗೆ ಗೊತ್ತಿದೆ. ದಾರಿಯಲ್ಲಿ ಅನೇಕ ಬಂಡೆಗಳಿವೆ, ಹಳ್ಳಗಳಿವೆ. ಆದರೆ ಕಾಂಗ್ರೆಸಿನವರು ಕೈಕೊಳ್ಳಬೇಕೆಂತ ಹೇಳುತ್ತಿರುವ ಕೆಲಸವನ್ನು ಸಂಪೂರ್ಣ ಧೈರ್ಯದಿಂದಲೂ, ಸ್ವಶಕ್ತಿಯಲ್ಲಿ ನಂಬಿಗೆಯಿಂದಲೂ ನಡಸಿದರೆ ಫಲಿತಾಂಶದ ವಿಷಯದಲ್ಲಿ ನನಗೆ ಸಂಶಯವೇ ಇಲ್ಲ. ಆದ್ದರಿಂದ ಈ 1 ದೇಶದ ಅನುಭವದಿಂದ ಗಾಂಭೀರ್ಯವಾದ, ನೋಡಲು ಯೋಗ್ಯವಾದಂಥಾ ರಚನೆಯನ್ನು ತಯಾರಿಸಿಕೊಳ್ಳುವುದು, ಅಥವಾ ಸ್ವಶಕ್ತಿಯಲ್ಲಿ ನಂಬಿಕೆಯಿಲ್ಲದೆಯೂ, ಧೈರ್ಯವಿಲ್ಲದೆಯೂ ದೊರೆತ ಅವಕಾಶವನ್ನು ಕಳಕೊಳ್ಳುವುದು ಕಾಂಗ್ರೆಸಿನ ಕೈಯಲ್ಲಿದೆ. ಆದ ಕಾಂಗ್ರೆಸಿನವರಿಗೆ ಇತರ ಪಾರ್ಟಿಗಳ ಹಿಂದೂ ರಾಜರುಗಳ ಮತ್ತು ಮುಖ್ಯವಾಗಿ ಇಂಗ್ಲಿಷ್ ಜನರ ಸಹಾಯವೂ ಬೇಕಾಗಿದೆ.

ಈ ಸಂದರ್ಭದಲ್ಲಿ ನಾನು ಬೇರೆ ಪಾರ್ಟಿಗಳಿಗೆ [illegible] ಮಾಡಿಕೊಳ್ಳಬೇಕಾಗಿಲ್ಲ. ಯಾಕೆಂದರೆ—[illegible] ದೇಶಕ್ಕೆ ಸ್ವಾತಂತ್ರ್ಯ ಪಡೆಯಬೇಕೆಂಬ [illegible] ಕಾಂಗ್ರೆಸಿನ ಹಾಗೇ ಇದೆ. ಇದು [illegible] ರಾಜರುಗಳ [illegible] ಫೆಡರೇಶನ್ [illegible] ಅರ್ಥಮಾಡಿಕೊಂಡರು. ಆದರೆ ಫೆಡರಲ್ [illegible] ಹಿಂದೂಸ್ಥಾನದಲ್ಲಿ ಸಮಾನ ಪಕ್ಷದಾರರುಗಳು [illegible] ಒಪ್ಪುವುದಾದರೆ [illegible] ಕೇಳಿಕೊಳ್ಳುತ್ತೇನೆ [illegible] ಇವುಗಳು [illegible] ಅನುಭವ [illegible] ಇದ್ದರೂ [illegible] ಮನೋಭಾವವನ್ನು [illegible] ರಾಜರುಗಳಿಗೆ [illegible] ಇಲ್ಲ. ಅಂಥಾ ವಿಜ್ಞಾಪನೆಗಳು [illegible] ಕಾಂಗ್ರೆಸಿಗೆ ಕಷ್ಟವಾಗುತ್ತದೆ. ಕಾಂಗ್ರೆಸ್ [illegible] ಬ್ರಿಟಿಷ್ [illegible] ಅಥವಾ ಪ್ರತಿಸ್ಪರ್ಧಿಯಾಗಿ [illegible] ಮುತ್ತಿಸುತ್ತದೆ. ದೇಶೀಯ ರಾಜರುಗಳ ಒಳ ಆಡಳಿತದ ವಿಷಯದಲ್ಲಿ ಕಾಂಗ್ರೆಸಿನವರು ಬುದ್ಧಿವಂತಿಕೆಯಿಂದಲೂ, ತುಂಬಾ ತಾಳ್ಮೆಯಿಂದಲೂ ಕೈ ಹಾಕದೆ ಇದ್ದರು. ರಾಜರುಗಳ ಮನಸು ನೋಯಿಸಬಾರದೆಂತಲೂ, ಅವಶ್ಯ ಬಿದ್ದಾಗ ಅವರು ಕಾಂಗ್ರೆಸಿನ ಮಾತಿಗೆ ಕಿವಿ ಕೊಡುವಂತೆ ಮಾಡಬೇಕೆಂತಲೂ ಈ ವರೆಗೆ ನಡೆದದ್ದಾಗಿದೆ. ಅಂಥಾ ಕಾಲ ಈಗ ಬಂದಿದೆಯೆಂತ ನಾನು ನಂಬುತ್ತೇನೆ. ಆದ್ದರಿಂದ ರಾಜರುಗಳ ಪ್ರಜೆಗಳ ಪರವಾಗಿ ಕಾಂಗ್ರೆಸಿನವರು ಮಾಡುವ ವಿಜ್ಞಾಪನೆಗೆ ಕಿವಿ ಕೊಡದೆ ಇರಲಾರರೆಂತ ನಂಬುತ್ತೇನೆ.

ಇಂಗ್ಲೀಷರಿಗೂ ಒಂದು ವಿಜ್ಞಾಪನೆ ಮಾಡುತ್ತೇನೆ. ಕೂಟ ಮತ್ತು ಚರ್ಚೆಗಳಿಂದ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರಕಬೇಕಾದರೆ ಇಂಗ್ಲೀಷರ ಸ್ನೇಹ ಭಾವವೂ, ಸಹಾಯವೂ ಬೇಕಾಗಿದೆ. ಹಿಂದೂಸ್ಥಾನವು ಧ್ಯೇಯವನ್ನು ಪಡೆಯಲು ಬಿಟ್ಟುಕೊಡಬೇಕಾದದ್ದರ ಅರ್ಥವನ್ನು ನಮ್ಮ ಲಂಡನ್ ಕಾನ್ಫರೆನ್ಸಿನಲ್ಲಿ ಬಿಟ್ಟು ಕೊಟ್ಟಿರುವುದಿಲ್ಲ. ಹಿಂದೂಸ್ಥಾನಕ್ಕೆ ಸಹಾಯ ಮಾಡುವುದಾದರೆ ಯಾವ ಸ್ವಾತಂತ್ರ್ಯದ ಪ್ರಕಾಶವನ್ನು ಅನುಭವಿಸಲು ಅವರು ಜೀವನವನ್ನಿದರಿಂದ ಕಳಕೊಳ್ಳಲು ಕಷ್ಟಪಟ್ಟರೋ, ಅಂಥಾ ಸ್ವಾತಂತ್ರ್ಯವೇ ಹಿಂದೂಸ್ಥಾನಕ್ಕೆ ಸಿಕ್ಕುವಂತೆ ಮಾಡಬೇಕು. ಹಿಂದೂಸ್ಥಾನವು ತಪ್ಪುಗಳನ್ನು ಮಾಡಿದಾಗ ಹೇಳಲು ಬಿಡಲು ನಮ್ಮ ಅವರ ರಾಜನೀತಿ ಪಟುಗಳು ಹಿಂಜರಿಯಬಾರದು. ತಪ್ಪು ಮಾಡಲು, ಪಾಪದ ಕೆಲಸ ಮಾಡಲು ನಮಗೆ ಸ್ವಾತಂತ್ರ್ಯವಿಲ್ಲದಿದ್ದರೆ ಅದು ಸ್ವಾತಂತ್ರ್ಯವಲ್ಲ.

ತಪ್ಪು ಮಾಡಲು ದೇವರು ಸ್ವಾತಂತ್ರ್ಯ ಕೊಟ್ಟಿರುವಾಗ ಒಂದು ಜನಾಂಗವು ಇನ್ನೊಂದು ಜನಾಂಗಕ್ಕೆ ತಪ್ಪು ಮಾಡುವ ಸ್ವಾತಂತ್ರ್ಯವು ಕೊಡುವುದಿಲ್ಲವೆನ್ನುವುದು ಹೇಗೆ? ಕಾಂಗ್ರೆಸಿನವರು ಕಾನ್ಫರೆನ್ಸಿಗೆ ಬರಬೇಕೆಂದಿದ್ದರಿಂದ ಕಾಂಗ್ರೆಸಿನ ಪೂರ್ಣ ಸ್ವಾತಂತ್ರ್ಯ ವಿಷಯ ಇತರ ಎಲ್ಲಾ ಸಂದರ್ಭಗಳನ್ನು ಚರ್ಚಿಸಲು ಅವಕಾಶವಿರುವುದೆಂತಲೇ ಬಂದಿದೆ. ಹಿಂದೂಸ್ಥಾನವಿಲ್ಲದೆ ಸರ್ಕಾರ [illegible] ಹಾಗೆ ಮಾಡಬೇಕಾಗಿ [illegible] ಕಾಂಗ್ರೆಸ್ ಒಪ್ಪುತ್ತಿಲ್ಲ.

ಅವರೇ ಕಾಲ ದೇಶದ ಜನಗೂ ಸಹಾಯ ಕೊಡಬೇಕೆಂತ ವಿಜ್ಞಾಪಿಸಿಕೊಂಡೆ. ಸರಕಾರದ ಪೋಲೀಸ್ ಮತ್ತು ಇತರ ಅಧಿಕಾರಿಗಳು ಜನರ ಸೇವಕರೆಂತಲೂ ಯಜಮಾನರಲ್ಲವೆಂತಲೂ ತಿಳಿದು ನಡೆಯಬೇಕೆಂದು ಕೇಳಿಕೊಂಡರು.

ಸತ್ಯಾಗ್ರಹ ಖೈದಿಗಳನ್ನು ಬಿಡುವಾಗ ಅವರಷ್ಟೇ ದೇಶಭಕ್ತರೂ, ತ್ಯಾಗ ಬುದ್ಧಿ ಇರುವ ಹಿಂಸಾಯುಕ್ತವಾದ ಅಕ್ಕರೆಯ [illegible] ಗಳಿಗೆ ಗುರಿಯಾದ ರಾಜಕೀಯ ಖೈದಿಗಳನ್ನು ಬಿಡಬೇಕಾದದ್ದು ಯುಕ್ತ. ಸತ್ಯಾಗ್ರಹಿಗಳ ಬದಲಿಗೆ ಅವರನ್ನೇ ಬಿಟ್ಟಿದ್ದರೆ ಆಗಬಹುದಿತ್ತೆಂತ ಹೇಳಲೂ ತಯಾರಾದ್ದೇನೆ. ಆದರೆ ಹಾಗೆ ಕೇಳುವುದು ನನಗೆ ನ್ಯಾಯ ತೋರಲಿಲ್ಲ. ಆದರೂ ನಾನು ವರ್ಕಿಂಗ್ ಕಮಿಟಿಯೂ ನಮ್ಮ ಅವರ ಬಿಡುಗಡೆಗೆ ಪ್ರಯತ್ನ ಮಾಡಿದ್ದೇವೆ. ಕಾಂಗ್ರೆಸಿನವರು ನಮ್ಮ ಕರೆಸಲು ತಯಾರಾಗಿದ್ದರೆ ರಾಜಿ ಶರತ್ತುಗಳನ್ನು ನಡಿಸಿಕೊಡುವುದು ಕಾಂಗ್ರೆಸಿನ ಕರ್ತವ್ಯವಾಗಿದೆ. ಹಾಗೆ ವರ್ತಿಸಿದರೆ ಎಲ್ಲಾ ಖೈದಿಗಳ ಬಿಡುಗಡೆಯಾಗುವುದನ್ನು ನಾವು ನೋಡುವುದು ಅಸಾಧ್ಯವಲ್ಲ. ಹಿಂಸೆಯಿಂದ ಸ್ವಾತಂತ್ರ್ಯ ಸಂಪಾದಿಸಬಹುದೆಂಬ ಒಂದು ಪಕ್ಷ ಗುಂಪು ಇದೆ. ಇವರು ನಮ್ಮ ತಾತ್ಕಾಲಿಕ ಕಾರ್ಯಸಾಧನೆಗಾಗಿಯಾದರೂ ಹಿಂಸಾಮಾರ್ಗವನ್ನು ಬಿಡಬೇಕೆಂತ ಕೇಳಿಕೊಳ್ಳುತ್ತೇನೆ. ಹಿಂಸೆಗೆ ಎಷ್ಟು ಬಲವಿದೆಯೆಂತ ಅವರಿಗೆ ಈಗಾಗಲೇ ಗೊತ್ತಾಗಿರಬಹುದು. ಒಟ್ಟು ಜನತೆಯಲ್ಲಿ ಜಾಗೃತಿಯುಂಟಾದದ್ದು ಅಹಿಂಸೆಯಿಂದ ಎಂತ ಅವರು ಒಪ್ಪಲೇಬೇಕು. ಕಾಂಗ್ರೆಸಿನ ಅಥವಾ ನನಗೋಸ್ಕರವೂ ಅಹಿಂಸಾ ಮತ್ತು ಸತ್ಯವಿಧಾನದಲ್ಲಿ ಇನ್ನು ಸ್ವಲ್ಪ ಮಟ್ಟಿಗೆ ಕೆಲಸ ಮಾಡಲು ಅವಕಾಶ ಕೊಡಬೇಕೆಂತ ಕೇಳಿಕೊಳ್ಳುತ್ತೇನೆ. ದಂಡಯಾತ್ರೆಗೆ ಹೊರಟು ಇನ್ನೂ ಒಂದು ವರ್ಷವಾಯಿತಷ್ಟೆ. ಒಂದು ಜನಾಂಗದ ಜೀವನದಲ್ಲಿ ಒಂದು ವರ್ಷವೆಂದರೆ ಒಂದು ಕ್ಷಣದಂತೆ. ಆದ್ದರಿಂದ ಅವರು ಇನ್ನು ಕೊಂಚ ಕಡೆಯಲಿ. ಅವರ ಜೀವಗಳನ್ನು ದೇಶೋದ್ಧಾರಕ್ಕೆ ಉಪಯೋಗವಾಗುವಂತೆ [illegible] ಗುರಿಯಾದವನ್ನು ನಮ್ಮ ಬಿಡಿಸಲು ಕಾಂಗ್ರೆಸ್ ಪ್ರಯತ್ನಿಸುತ್ತದೆ.

ರಾಜಿ ಶರತ್ತುಗಳನ್ನು ನಡಿಸಿಕೊಡಲು ಸರ್ವ ಪ್ರಯತ್ನ ಮಾಡುತ್ತೇನೆಂತ ಲಾರ್ಡ್ ಇರ್ವಿನ್‌ರವರಿಗೆ ಭಾಷೆ ಕೊಟ್ಟಿದ್ದೇನೆ. ಹಾಗೆ ನಡೆದರೇನೇ ನಮ್ಮ ಅಂತಿಮ ಧ್ಯೇಯವು ಕೈಗೂಡಲು ಸಾಧ್ಯ.

ಸರಕಾರವು ಪ್ರಕಟಿಸಿದ ರಾಜಿ ಶರತ್ತುಗಳು.

1 ವೈಸ್‌ರಾಯರುಗಳು, ಮಿ. ಗಾಂಧಿಯವರುಗಳು ಆದ ಸಂಭಾಷಣೆಯಿಂದ ಸವಿನಯ ಕಾಯಿದೆ ಭಂಗ ನಿಲ್ಲಿಸಲ್ಪಡುವುದು ಮತ್ತು ಸರಕಾರವು ಕೆಲವು ಕಾರ್ಯಗಳನ್ನು ನಡೆಸಬೇಕೆಂತಲೂ ಗೊತ್ತಾಗಿದೆ.

1 [illegible] ವಿಷಯದಲ್ಲಿ ಲಂಡನ್ ಕಾನ್ಫರೆನ್ಸಿನಲ್ಲಿ [illegible] ವಚನವನ್ನು [illegible] ನಡೆಸಬೇಕೆಂತ ಒಪ್ಪಲಾ [illegible] ಆ ತೀರ್ಮಾನದ ಪ್ರಕಾರ ಫೆಡರೇಶನ್ ಮುಖ್ಯ ಆಧಾರ [illegible] ಹಿಂದೂಸ್ಥಾನಕ್ಕೆ [illegible]

ಷ್ಯ ಅಂಶವಾಗಿದೆ. ಆದರಂತೆಯೇ ಹಿಂದೂಸ್ಥಾನದ ಕ್ಷೇಮಾರ್ಥಕ್ಕಾಗಿ ಕೆಲವು ಭದ್ರತೆಗಳು ಇರಬೇಕೆಂಬುದೂ ಮುಖ್ಯ ಅಂಶವಾಗಿದೆ.

3. ಕಾನ್‍ಫರೆನ್ಸಿನ ಮುಂದಿನ ಚರ್ಚೆಯಲ್ಲಿ ಕಾಂಗ್ರೆಸ್‍ನವರು ಭಾಗಿಗಳಾಗಬೇಕು.

4. ಕಾನೂನು ಭಂಗದ ಸಂಬಂಧದ ಚಳವಳಿಗಳ ಸಂಬಂಧವಾಗಿಯೇ ಈ ರಾಜಿಯಾಗಿರುವುದು.

5. ಕಾನೂನುಭಂಗವೆಂದರೆ ಯಾವ ಕಾನೂನನ್ನೇ ಆಗಲಿ ಬೇಕೆಂತಲೇ ವಿರೋಧಿಸುವುದು, ಕಂದಾಯ ಕೊಡದಿರುವ ಚಳವಳಿ, ಅಧಿಕಾರಿಗಳನ್ನು ಕೆಲಸದಿಂದ ಬಿಡಿ ಎಂತ ಬೋಧಿಸುವುದು—ಇವೇ ಮುಂತಾದ ಚಳವಳವನ್ನು ನಿಲ್ಲಿಸಬೇಕು.

6. ಸ್ವದೇಶೀ ಕೈಗಾರಿಕೆಗೆ ಸಹಾಯ ಮಾಡುವ ಬಗ್ಗೆ ಬೋಧನೆ ಪ್ರಕಟಣೆ ಮುಂತಾದ್ದನ್ನು ಮಾಡಬಹುದು. ಈ ಚಳವಳದಲ್ಲಿ ಬಟ್ಟೆ ವಿನಹ ಇತರ ಸಾಮಾನುಗಳನ್ನು ಬ್ರಿಟಿಷರದ್ದು ಮಾತ್ರ ಬಹಿಷ್ಕರಿಸಿದ್ದಾಗಿದೆ. ರಾಜಕೀಯ ಸುಧಾರಣೆಯನ್ನು ಪಡೆಯಲು ಮತ್ತ್ಯಾಯಕ್ಕಾಗಿಯೇ ಈ ಬಹಿಷ್ಕಾರವನ್ನು ನಡೆಸಿದ್ದು. ಈಗ ರಾಜಕೀಯ ಸುಧಾರಣೆಯ ಚರ್ಚೆ ನಡೆಯಲು ಸಹಾಯವಾಗುವ ಬಗ್ಗೆ ಇಂಥಾ ಬಹಿಷ್ಕಾರವನ್ನು ನಿಲ್ಲಿಸ ಬೇಕು.

7. ಪರದೇಶೀ ವಸ್ತುಗಳ ಮತ್ತು ನಿಷಾ ಪದಾರ್ಥಗಳ ಮಾರಾಟವನ್ನು ನಿಲ್ಲಿಸಲು ಪಿಕೆಟ್ ಮಾಡುವುದು ಸಾಧಾರಣ ಕಾನೂನಿಗೆ ವಿರೋಧವಿಲ್ಲದಂತೆ ನಡಸ ಬೇಕು. ಪಿಕೆಟಿನಲ್ಲಿ ಜುಲುಂ, ತಡೆ, ಬೆದರಿಕೆ ಮುಂತಾದ್ದು ಇರಕೂಡದು. ಇದ್ದಲ್ಲಿ ಪಿಕೆಟಿಂಗ್ ನಿಲ್ಲಿಸಿಯೇ ಬಿಡಬೇಕು.

8. ಪೋಲೀಸ್ ಅತ್ಯಾಚಾರದ ವಿಷಯದಲ್ಲಿ ಗಾಂಧಿಯವರು ವಿಚಾರವಾಗ ಬೇಕೆಂತ ಹೇಳಿದರೂ, ಇನ್ನು ಮುಂದೆ ನಡಿಯಲಿಕ್ಕಿರುವ ಶಾಂತಿ ಯುಕ್ತವಾದ ಚರ್ಚೆಗೆ ಇದು ಸಹಾಯವಾಗಲಾರದ್ದರಿಂದ ಮ. ಗಾಂಧಿಯವರು ಇದನ್ನು ಮತ್ತಾಯ ಪಡಿಸಲಿಲ್ಲ.

9. ಕಾನೂನು ಭಂಗದ ಚಳವಳ ನಿಂತಕೂಡಲೇ ಸರಕಾರದವರು ಮಾಡಬೇಕಾದ ಕಾರ್ಯಗಳು ಈ ಕೆಳಗೆ ಕೊಟ್ಟಿದೆ.

10. ಕೋಲೆಸಾತಕದ ಸಂಬಂಧದ ವಿನಹ ಇತರ ಆರ್ಡಿನೆನ್ಸ್‍ಗಳನ್ನು ರದ್ದು ಪಡಿಸಬೇಕು.

11. ಯಾವ ಸಂಸ್ಥೆಯನ್ನಾದರೂ, ಕಾನೂನಿಗೆ ವಿರೋಧವೆಂತ ಮಾಡುವ ಇಸ್ತಿಹಾರನ್ನು ರದ್ದುಮಾಡಲಾಗುವುದು.

12. ಈ ಚಳವಳದ ಸಂಬಂಧವಾದ ನಿಜವಾದ ಹಿಂಸೆಯಿಲ್ಲದ ಎಲ್ಲಾ ತಕ್ಸೀರುಗಳ ಕುರಿತು ನಡಿಯುವ ಕ್ರಿಮಿನಲ್ ಮೊಕದ್ದಮ್ಮೆಗಳನ್ನು ನಿಲ್ಲಿಸಲಾಗುವುದು. ಆರಾಯರುಗಳನ್ನು ಅವರ ಕೆಲಸದಿಂದ ವಜ ಮಾಡುವ ವಿಚಾರಣೆ ನಿಲ್ಲಿಸಲಾಗುವುದು. ಕೆಲಸ ಬಿಟ್ಟ ಪೋಲೀಸ್ ಮತ್ತು ಮಿಲಿಟರಿ ಕೆಲಸಗಾರರ ಮೇಲಿನ ಮೊಕದ್ದಮ್ಮೆಗಳನ್ನು ನಿಲ್ಲಿಸಲಾಗುವುದು.

13. ಹಿಂಸಾಯುಕ್ತವಾದ ತಕ್ಸೀರಲ್ಲದೆ ಇತರ ಕಾನೂನುಭಂಗದ ಚಳವಳಕ್ಕಾಗಿ ಶಿಕ್ಷೆಯಾದ ಎಲ್ಲಾ ಖೈದಿಗಳನ್ನು ಬಿಡಲಾಗುವುದು.

14. ವಸೂಲಾಗದ ಜುಲುಮಾನೆಯನ್ನು ವಜ ಮಾಡಲಾಗುವುದು—ವಸೂಲಾದ ಜುಲುಮಾನೆಯನ್ನು ವಾಪಸು ಕೊಡಲಾಗುವುದಿಲ್ಲ.

15. ಈ ಚಳವಳಕ್ಕಾಗಿ ನೇಮಿಸಿಕೊಂಡ ಹೆಚ್ಚಿನ ಪೋಲೀಸನ್ನು ವಜ ಮಾಡಲಾಗುವುದು.

16. ಸರಕಾರವು ಸ್ವಾಧೀನ ಪಡಿಸಿಕೊಂಡ ಚರಸೊತ್ತನ್ನು ಕಂದಾಯ ಕೊಡದ ಚಳವಳಕ್ಕಾಗಿ ಜಪ್ತಿಯಾದ ಚರ ಸೊತ್ತುಗಳನ್ನು ವಾಪಸ್ಸು ಕೊಡಲಾಗುವುದು. ಹರಾಜಾದ ಸೊತ್ತನ್ನು ವಾಪಸು ಕೊಡಿಸಲಾಗುವುದಿಲ್ಲ.

17. ಮುಟ್ಟುಗೋಲು ಹಾಕಿದ ಸ್ಥಿರ ಸೊತ್ತುಗಳನ್ನು ಬಿಟ್ಟುಕೊಡಲಾಗುವುದು. ಹರಾಜಾದ ಸೊತ್ತನ್ನು ವಾಪಸು ಕೊಡಿಸಲಾಗುವುದಿಲ್ಲ.

18. ಯಾವದಾದರೂ, ಸೊತ್ತುಗಳನ್ನು ಸರಕಾರವು ವಹಿಸಿಕೊಳ್ಳುವುದರಲ್ಲಿ ಕಾನೂನಿಗೆ ವಿರೋಧವಾದ ವರ್ತನೆಯೂ ಇದ್ದರೆ ಅಂಥಾದ್ದನ್ನು ವಜ ಮಾಡಿಸಲಾಗುವುದು.

19. ರಾಜಿನಾಮೆ ಕೊಟ್ಟ ಸ್ಥಳಗಳಿಗೆ ಬೇರೆಯವರನ್ನು ನೇಮಿಸಿಕೊಂಡಿದ್ದರೆ ಅಂಥಾ ಸ್ಥಳಗಳಿಗೆ ಮೊದಲಿನವರನ್ನು ನಯಿಸಲಾಗುವುದಿಲ್ಲ. ಇತರ ಸಂದರ್ಭಗಳಲ್ಲಿ ರಾಜಿನಾಮೆ ಕೊಟ್ಟವರು ಪುನಃ ಕೆಲಸಕ್ಕೆ ಸೇರಲು ಅಪೇಕ್ಷಿಸಿದರೆ ಯೋಚಿಸಲಾಗುವುದು.

20. ಉಪ್ಪಿನ ಕಾನೂನನ್ನು ಈಗಿನ ಆರ್ಥಿಕ ಸ್ಥಿತಿಯಲ್ಲಿ ರದ್ದು ಮಾಡಲಾಗುವುದಿಲ್ಲ. ಆದರೆ ಉಪ್ಪು ದೊರೆಯುವ ಅಥವಾ ಮಾಡಿಕೊಳ್ಳ ಬಹುದಾದ ಸ್ಥಳಗಳ ಬಡವರ ಸಹಾಯಕ್ಕಾಗಿ ಉಪ್ಪು ಮಾಡಿಕೊಳ್ಳಲು ಅಡ್ಡಿ ಇಲ್ಲ. ಆ ಊರುಗಳೊಳಗೆ ಮಾರಿಕೊಳ್ಳಲೂ ಬಹುದು. ಆದರೆ ವ್ಯಾಪಾರಕ್ಕಾಗಿ ಹೊರಗೆ ಮಾರಾಟ ಮಾಡಕೂಡದು.

21. ಈ ರಾಜಿಯ ಶರತ್ತುಗಳನ್ನು ಕಾಂಗ್ರೆಸ್‍ನವರು ನಡಿಸದಿದ್ದರೆ ಸರಕಾರವು ಆವಶ್ಯ ಬಿದ್ದ ಕಾರ್ಯಗಳನ್ನು ಮಾಡಿಕೊಳ್ಳ ಬಹುದು.

COORG FOREST DEPARTMENT.

Sale of Bamboos.

The right to cut and remove bamboos for a period of one year from 1—4—1931 to 31—3—1932 from a block of about 1942 acres in Dubare Reserve lying between Maldare - Gaddige road, Maldare—Dubare road, Bettada line and Eastern line will be sold by public auction on 17th March 1931 at Fraserpet (Inspection Bungalow) at 2 P. M. For further particulars please apply to the Chief Forest Officer, Coorg.

H. G Hicks.

3—3 Chief Forest Officer.

ವಿದ್ಯೆಯ ಅಂಗಗಳು ಮತ್ತು ಅವುಗಳ ಸ್ಥಾನ.

ಶಿಷ್ಯ.

(30ನೇ ಸಂಚಿಕೆಯಿಂದ ಮುಂದುವರದದ್ದು.)

ಆಚಾರ್ಯಃ ಪೂರ್ವರೂಪಂ

ಅಂತೇವಾಸ್ಯುತ್ತರ ರೂಪಂ

ವಿದ್ಯೆಗೆ ಉಪಾಧ್ಯಾಯ ಅಥವ ಗುರುವು ಪೂರ್ವ ರೂಪು ಅಂತೆವಾಸಿ ಅಂದರೆ ಶಿಷ್ಯನು ಉತ್ತರ ರೂಪು. ಇವರಿಬ್ಬರೂ ಹಣ್ಣಿನ ಎರಡು ಹೋಳುಗಳಂತೆ ಸೇರದುದಲ್ಲದೆ ವಿದ್ಯೆಯ ಅಂಗವು ಪೂರ್ಣವಾಗುವುದಿಲ್ಲ.

ಪ್ರಾಚೀನ ಕಾಲದ ಶಿಷ್ಯರು ಗುರುವಿನ "ಅಂತೇವಾಸಿ" ಅಂದರೆ—ಸಮೀಪದಲ್ಲಿ ವಾಸಿಸುತ್ತಿದ್ದರೆಂದು ಅರ್ಥ. ಗುರುವಿನ ಸಮೀಪದಲ್ಲಿ ವಾಸಿಸುತ್ತಿದ್ದುದರಿಂದಲೇ ಅವರಿಗೆ ಅಂತೆವಾಸಿ ಎಂಬ ಹೆಸರಾಯಿತು. ಅವರಲ್ಲಿ ಒಂದು ವಿಧವಾದ ಯೋಗ್ಯತೆಯೂ, ಅರ್ಹತೆಯೂ, ವಿದ್ಯೆಯನ್ನು ಕಲಿಯ ಬೇಕೆಂಬ ಉತ್ಕಟವಾದ ಆಕಾಂಕ್ಷೆಯೂ ಅವರಿಗೆ ಇದ್ದ ಹೊರತು ಗುರುಗಳು ಅವರನ್ನು ತಮ್ಮ ಅರಣ್ಯ ಪರ್ಣಶಾಲೆಗೆ ಸೇರಿಸಿಕೊಂಡು ಅವನಿಗೆ ವಿದ್ಯಾಭ್ಯಾಸ ಮಾಡಿಸುತ್ತಿರಲಿಲ್ಲ. ವರ ರುಚಿ ಮಹಾನು ನಿಯ ಕಥೆಯನ್ನ ಎಲ್ಲರೂ ಕೇಳಿದ್ದೇವೆ ಆತನಿಗೆ 30 ವಯಸ್ಸು ಆದಾಗ ಹೆಂಡತಿಯ ಪ್ರೇರಣೆಯಿಂದ ವಿದ್ಯಾರ್ಜನೆಯನ್ನು ಮಾಡಬೇಕೆಂಬ ಆಸೆಯುಂಟಾಯಿತು. ಗುರುವು ಅವನನ್ನು ಕುರಿತು ನಿನಗೆ ಬಹಳ ವಯಸ್ಸಾಗಿದೆಯಲ್ಲ, ವಿದ್ಯೆಯನ್ನು ಕಲಿಯುವ ಶಕ್ತಿಯೂ ಅದಕ್ಕೆ ಆವಶ್ಯಕವಾದ ಏಕಾಗ್ರತೆಯೂ ನಿನ್ನಲ್ಲಿರುವುವೇ ಎಂದು ಕೇಳಲು ವರ ರುಚಿಯು ಪರೀಕ್ಷೆ ಮಾಡಬಹುದೆಂದನು. ಆಗ ಗುರುವು ಅವನ ಕೈಯಲ್ಲಿ ತುದಿಯವರೆಗೆ ಎಣ್ಣೆಯಿಂದ ತುಂಬಿದ ಬಟ್ಟಲನ್ನು ಕೊಟ್ಟು ಇದನ್ನು ಎದುರು ಬೀದಿಯ ಕೊನೆಯ ಮನೆಯಲ್ಲಿರುವ ನನ್ನ ಸ್ನೇಹಿತನಿಗೆ ಕೊಟ್ಟು ಬಾ ಎಂದನು. ವರ ರುಚಿಯು ಹೊರಟ ಕೂಡಲೇ ಅವನ ಎದುರಿಗೆ ಬರುವಂತೆ ಗಾಯಕಿಯರನ್ನು ನರ್ತಕಿಯರನ್ನು ವಾದ್ಯ ವೇಶ್ಯೆಯರನ್ನು ಕಳುಹಿಸಿದನು. ಅವರು ವಾದ್ಯವನ್ನು ನುಡಿಸುತ್ತಾ ಹಾಡುತ್ತಾ ಎದುರಿಗೆ ಬಂದರು ಆದರೆ ವರ ರುಚಿಯು ಎಣ್ಣೆಯ ಬಟ್ಟಲಿನ ಮೇಲೆ ನೆಟ್ಟ ದೃಷ್ಟಿಯುಳ್ಳವನಾಗಿ ಆ ವಾದ್ಯಗಳ ಕಡೆ ನೋಡದೆ ಗಾನದ ಕಡೆ ಕಿವಿಗೊಡದೆ ತನ್ನ ದಾರಿಯನ್ನು ತಾನು ಹಿಡಿದನು. ಬಟ್ಟಲಿನ ಮೇಲೆ ಇಟ್ಟಿದ್ದ ನೋಟವನ್ನು ಅವನು ಸ್ವಲ್ಪ ಮಟ್ಟಿಗೆ ಮೇಲಕ್ಕೆ ತಿರುಗಿಸಿದ್ದರೂ, ಎಣ್ಣೆಯು ಕೆಳಕ್ಕೆ ಬಿದ್ದು ಹೋಗುತ್ತಿದ್ದಿತು. ಗುರುವು ಇವನ ಏಕಾಗ್ರತೆಗೆ ಮೆಚ್ಚಿ ಇವನನ್ನು ಶಿಷ್ಯ ಪದವಿಗೆ ಅರ್ಹನೆಂದು ತೆಗೆದುಕೊಂಡನು.

ಪ್ರಾಚೀನ ಗುರುಗಳು ಒಬ್ಬ ವಿದ್ಯಾರ್ಥಿಗೆ ವಿದ್ಯಾ ದಾನವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಅವನ ಅರ್ಹತೆ ಮತ್ತು ಯೋಗ್ಯತೆಗಳ ಕಡೆಗೆ ಸ್ವಲ್ಪ ಗಮನವನ್ನು ಕೊಡುತ್ತಿದ್ದರು ಈಗ ವಿಶ್ವ ವಿದ್ಯಾಲಯಗಳಲ್ಲಿಯೂ, ಹೈಸ್ಕೂಲುಗಳಲ್ಲಿಯೂ, ಪರೀಕ್ಷೆ ಮಾಡಿ ಹೇಗೆ ಬಿ. ಎ. ಎಂ. ಎ. ಎಸ್. ಎಸ್. ಎಲ್. ಸಿ. ಮುಂತಾದ ಗುರುತುಗಳನ್ನು ಕೊಡುತ್ತಾರೋ ಹಾಗೆಯೇ ಅಂದಿನ ಗುರುಗಳು ಶಿಷ್ಯನಿಗೆ ನ್ಯಾಯ ರತ್ನ, ವಿಮರ್ಶಾ ಪ್ರವೀಣ, ಸಾಹಿತ್ಯ ಶಿರೋಮಣಿ ಮೊದಲಾದ ಬಿರುದನ್ನು ಕೊಡುವುದರ ಮೊದಲು ಅವನನ್ನು ಸತ್ಯಾ ಸದಾಚಾರ ಮುಂತಾದ ಪರೀಕ್ಷೆಯ ಒರೆಗಲ್ಲಿಗೆ ಹಚ್ಚುತ್ತಿದ್ದರು ಉಪನಿಷತ್ತುಗಳಲ್ಲಿ ಒಬ್ಬ ವಿದ್ಯಾರ್ಥಿಯ ಕಥೆಯಿದೆ. ಅವನು ಗುರುಗಳ ಬಳಿಗೆ ವಿದ್ಯಾರ್ಜನೆಗಾಗಿ ಹೋದಾಗ ಗುರುಗಳು ನನ್ನ ತಂದೆಯ ಹೆಸರೇನಯ್ಯಾ ಎಂಬುದಾಗಿ ಕೇಳಿದರಂತೆ. ಶಿಷ್ಯನು ತಂದೆಯ ಹೆಸರು ಗೊತ್ತಿಲ್ಲ; ತಂದೆ ಯಾರೋ ತಿಳಿಯದು; ನಾನು ವೇಶ್ಯಾ ಪುತ್ರ ಎಂಬುದಾಗಿ ಹೇಳಿದನಂತೆ. ಗುರುವು ಕೂಡಲೇ ನೀನು ವೇಶ್ಯಾ ಪುತ್ರನಾದರೂ, ಚಿಂತೆಯಿಲ್ಲ. ನೀನು ನಿಜವನ್ನು ಹೇಳಿದೆ. ಆದುದರಿಂದ ನನ್ನ ಬಳಿ ವಿದ್ಯಾರ್ಜನೆಯನ್ನು ಮಾಡಲು ನಿನಗೆ ಅರ್ಹತೆಯುಂಟು ಎಂಬದಾಗಿ ಹೇಳಿ ಉಳಿದ ಶಿಷ್ಯರೊಂದಿಗೆ ಅವನನ್ನು ತಮ್ಮ ಆಶ್ರಮಕ್ಕೆ ಸೇರಿಸಿಕೊಂಡರು. ಪ್ರಾಚೀನ ಗುರುಗಳು ವಿದ್ಯಾರ್ಥಿಗಳನ್ನು ಸತ್ಯದಲ್ಲಿ ಪರೀಕ್ಷೆ ಮಾಡುತ್ತಿದ್ದ ಮೊದರಿಯೊಂದನ್ನು ತಿಳಿಸಲು ಈ ಕಥೆಯನ್ನು ಹೇಳಿದೆ.

ಯಾವ ವಿದ್ಯೆಯನ್ನು ಕಲಿಯಬೇಕಾದರೂ, ಗುರುವಿಗೆ ವಿಧೇಯನಾಗಿ ಅವರ ಪೂರ್ಣವಾದ ಕೃಪೆಯಿಂದ ಕಲಿತ ಹೊರತು ಅದು ನಮಗೆ ದೊರಕುವುದಿಲ್ಲ. ಇದು ತಪಸ್ಸಿಗಿಂತ ನಿಶ್ಚಯ; ಹಿಂದಿನ ವಿದ್ಯಕಸ್ಸು ನಿಶ್ಚಯವಾಗಿ ಅನ್ವಯಿಸುತ್ತದೆ. ವಿದ್ಯೆಯು ತಪಸು; ಪವಿತ್ರವಾದುದು ಎಂಬ ಭಾವನೆಯು ಶಿಷ್ಯನಲ್ಲಿ ಉಂಟಾದ ಹೊರತು ವಿದ್ಯೆಯನ್ನು ಚೆನ್ನಾಗಿ ಕಲಿಯಲು ಸಾಧ್ಯವಾಗುವುದಿಲ್ಲ. ಅಂಥ ಪೂಜ್ಯ ಭಾವನೆಯು ಉಂಟಾಗುವ ಮೊದಲು ವಿದ್ಯೆಯನ್ನು ಕಲಿಸತಕ್ಕ ಗುರುವಿನಲ್ಲಿ ಪೂಜ್ಯ ಭಾವವೂ, ಅವನ ವಿಷಯದಲ್ಲಿ ಗೌರವವೂ, ಭಕ್ತಿಯೂ ಉಂಟಾಗ ಬೇಕು. ಈ ಭಕ್ತಿಯು ಪ್ರಾಚೀನ ಶಿಷ್ಯರಲ್ಲಿ ವಿಧೇಯತೆಯಾಗಿ ಪರಿಣಮಿಸಿ ಅವರು ಗುರುವಿಗೆ ಬಟ್ಟೆಗಳನ್ನು ಒಗೆದುಕೊಡುವುದು; ಅವರ ಪೂಜೆಗೆ ಆವಶ್ಯಕವಾದ ಹವಿಸ್ಸು ಸಮಿತ್ತು ಮುಂತಾದವುಗಳನ್ನು ತಂದು ಕೊಡುವುದು ಇವೇ ಆದಿಯಾದ ಕೆಲಸಗಳನ್ನು ಮಾಡಿಕೊಡುತ್ತಿದ್ದರು. ಇದರಿಂದ ಗುರು ಶಿಷ್ಯರ ಸಂಬಂಧವು ಪರಸ್ಪರ ಹೆಚ್ಚು ನಿಕಟವಾಗಿ ಬೆಳೆದು ಒಬ್ಬರ ಮಹಿಮೆಯನ್ನೂ, ಯೋಗ್ಯತೆಯನ್ನೂ ತಿಳಿಯಲು ಮತ್ತೊಬ್ಬರಿಗೆ ಅವಕಾಶವಾಗುತ್ತಿದ್ದಿತು. ದ್ರವ್ಯ ರೂಪವಾದ ಪ್ರತಿ ಫಲವನ್ನು ಕೊಡಲು ಶಿಷ್ಯರಿಗೆ ಶಕ್ತಿಯಿಲ್ಲದುದರಿಂದಲೂ, ಅನೇಕ ವೇಳೆ ವಿದ್ಯಾದಾನಕ್ಕೆ ಪ್ರತಿ ಫಲವನ್ನು ದ್ರವ್ಯ ರೂಪವಾಗಿ ತೆಗೆದುಕೊಳ್ಳುವುದು ಪಾಪಕರವೆಂದೂ ಗುರು ಶಿಷ್ಯರಿಗೆ ತಿಳಿದಿದ್ದುದರಿಂದ ಅವರು ಸಂತೋಷದಿಂದ ಈ ಬಗೆಯ ಸೇವೆಯನ್ನು ಮಾಡುತ್ತಿದ್ದರು.

ಶಿಷ್ಯರು "ವಿದ್ಯಾ ತುರಾಣಾಂನಸುಖಂನನಿದ್ರಾ" ಎಂಬ ನಿಯಮಕ್ಕೆ ಅನುಸಾರವಾಗಿದ್ದರು. ವಿದ್ಯೆ ಒಂದಕ್ಕೆ ಅಲ್ಲ. ಯಾವ ಕೆಲಸವನ್ನು ಮಾಡಿಬೇಕಾದರೂ ಹಿಡಿದು ಸಾಧಿಸ ಬೇಕಾದರೆ, ಸುಖ ಮತ್ತು ನಿದ್ರೆಯ ಕಡೆಗೆ ಲಕ್ಷ್ಯವನ್ನು ಕೊಡಕೂಡದು ಲೌಕಿಕ ವ್ಯವಹಾರದ ಕರ್ತವ್ಯಗಳಿಗೇ ಈ ರೀತಿ ಇರುವಾಗ ವಿದ್ಯೆಯಂತಹ ಆಧ್ಯಾತ್ಮಿಕ ಕಲೆಗೆ ಅದು ಬಹಳ ಆವಶ್ಯಕವಾದ ಮತ್ತು ಅನಿವಾರ್ಯವಾದ ನಿಯಮವೆಂಬುದನ್ನು ಯಾರೂ ಮರೆಯ ಬಾರದು. ಉಪನಿಷತ್ತುಗಳಲ್ಲಿ ಒಂದು ಕಥೆಯುಂಟು "ಒಂದು ದಿವಸ ಗುರುವಿನ ಬಳಿಗೆ ವಿದ್ಯಾರ್ಥಿಯೊಬ್ಬನು ವಿದ್ಯಾರ್ಜನೆಗಾಗಿ ಬಂದನಂತೆ. ಗುರುವು ಹೆಂಡತಿಯನ್ನು ಕುರಿತು ಈ ಶಿಷ್ಯನಿಗೆ ನಿತ್ಯ ಬೇವಿನ ತುಪ್ಪದಲ್ಲಿ ಕಲಸಿದ ಅನ್ನವನ್ನು ಹಾಕುತ್ತಾ ಇರು. ಯಾವ ದಿವಸ ಅವನಿಗೆ ಅದು ಕಹಿಯಾಗಿ ತೋರಿ, ಅನ್ನವು ಕಹಿಯಾಗಿದ್ದಿತೆಂದು ಅವನು ಹೇಳುತ್ತಾನೋ, ಅಂದು ನನಗೆ ತಿಳಿಸು ಎಂಬುದಾಗಿ ಹೇಳಿದರು. ಗುರು ಪತ್ನಿಯು ಅದರಂತೆ ಶಿಷ್ಯನಿಗೆ ಬೇವಿನ ಅನ್ನವನ್ನು ಹಾಕುತ್ತಾ ಬಂದಳು. ಶಿಷ್ಯನಿಗೆ ವಿದ್ಯಾರ್ಜನೆಯ ಮೇಲೆ ಮನಸ್ಸು ಇದ್ದುದರಿಂದಲೂ, ಅವನು ಯಾವಾಗಲೂ ವಿದ್ಯೆಯನ್ನೇ ಕುರಿತು ಯೋಚಿಸುತ್ತಿದುದರಿಂದಲೂ ಅವನಿಗೆ ಅನ್ನವು ಕಹಿಯಾಗಿರುವುದೆಂಬ ಅಂಶವೇ ತಿಳಿಯಲಿಲ್ಲ. ಕೆಲವು ವರ್ಷಗಳು ಕಳೆದ ನಂತರ, ಅವನಿಗೆ ಪೂರ್ಣವಾಗಿ ವಿದ್ಯೆಯು ಸ್ವಾಧೀನವಾದ ಕೂಡಲೆ, ಒಂದು ದಿವಸ ಅವನು ಗುರು ಪತ್ನಿಯನ್ನು ಕುರಿತು ಅಮ್ಮಾ, ಅನ್ನ ಈ ದಿನ ಯಾಕೋ ಕಹಿಯಾಗಿದೆಯಲ್ಲ ಎಂಬುದಾಗಿ ಕೇಳಿದನಂತೆ. ಗುರುವು ಅಂದಿನಿಂದ ನಿನಗೆ ವಿದ್ಯೆಯು ಬಂದಿತು ಎಂದು ಹೇಳಿದನಂತೆ.

ಯಾವ ಸುಸತ್ಕಾರ್ಯವನ್ನು ಸಾಧಿಸ ಬೇಕಾದರೂ, ಸಹಿಷ್ಣುತ್ವವೂ, ಕಷ್ಟಸಹಿಷ್ಣುತೆಯೂ, ಅವಶ್ಯಕ. ಈ ತತ್ವವನ್ನು ಆರ್ಯ ಗುರುಗಳೂ, ಶಿಷ್ಯರೂ ಬಿಡದೆ ಆಚರಿಸಿದರು.

(ಮುಂದುವರಿಯುವುದು)

SALES AND SERVICE

NEW BEAUTY!!

For the new Ford.

New Body lines and colours.

Rustless steel for Exposed metal parts
Fully Enclosed. silent six brake system.
Four Houdaille Hydraulic double-acting shock absorbers Triplex shatter-proof glass windshield.
Quick acceleration ease of cantrol.
55 to 65 miles an hour. Smoothness, balance and security at all speeds
unusual number of ball bearings,
40 different kinds of steel.
Typical Ford Ecomony, reliability and long life

Good Daler service after you buy the Car.

A Wonderful Hill climber!!!

Easy instalment terms if you prefer.
For Demonstration & other particulars.

Please apply to:—

S. Sunder Rau,

Sole Ford Dealer for coorg,
24—21 **MERARA.**

...ಗು ಮಾತೆಗೆ ಮಂಗಳಂ.

(ಅ. ಬೋಪಯ್ಯನವರಿಂದ)

ಜಯ ಜಯ ಕೊಡುಮಲೇ ಜಯ |
...ಶಾಕರೆ ಮಂಗಳಂ |
ಮಲೆಯಿಂದ ಬೆಟ್ಟ ನುಡಿಯೊಳ |
ಮೆರೆವಳೆ ಮಂಗಳಂ || ೧ ||
...ದೇಶಕೆ ನಿನ್ನ ಕೋಶಕೆ |
...ಗೆ ಮಂಗಳ ಮಂಗಳಂ |
ಕಾಫಿಗೆ ನಿನ್ನ ಭತ್ತಕ್ಕೆ |
ಹಣ್ಣುಗಳ ಮಂಗಳಂ || ೨ ||
ಕಸಿಕೆಗ ಕಾವೇರ್‍ಯಮ್ಮಗೆ
...ತಿಗೂ ಮಂಗಳ |
...ಲಕ್ಷ್ಮಣ ತೀರ್ಥವೆರಡಕು |
...ಗಳಾಕರ ಮಂಗಳಂ || ೩ ||
...ಗ್ಗುಗೆ ನಿನ್ನ ಸೋಮಗೆ |
...ಯ ಮೋಳಿಗೆ ಮಂಗಳಂ |
ಬೊಮ್ಮಗೆ ನಿನ್ನ ಹನುಮಗೆ |
...ಗಿರಿಗೂ ಮಂಗಳಂ || ೪ ||
ತಕ್ಕಗೆ ನಿನ್ನ ಜಂಗಗೆ |
...ಕ್ಕಾಟಿಗೂ ಮಂಗಳಂ |
...ಬೊಳ್ಳಿಗೆ ಮಾತಬುಡುವಗೆ |
...ಂಡಿಪಂಡಗೆ ಮಂಗಳಂ || ೫ ||
ಮಾಕೆಗೆ ನಿನ್ನ ಗಂಗೆಗ |
...ಣ್ಣಕಗೂ ಮಂಗಳಂ |
...ಡಗು ಮಾತೆಯ ಹಿತವ ಕೋರುವ |
...ಕಲ ಜನರಿಗೆ ಮಂಗಳಂ || ೬ ||
...ಡವ ಧರ್ಮವ ಕಾದು ಸಲಹುವ |
...ಯ ದೇಶಕ್ಕೆ ಮಂಗಳಂ |
...ಡವ ಗುಣವನು ಇತ್ತು ಕಾಯುವ |
...ತ್ಯಮಾತೆಗೆ ಮಂಗಳಂ || ೭ ||

ಕೃಟರಿ ವರ್ಷ ಓದಿ, ಅನಂತರ ಉಪನ್ಯಾಸಗಳನ್ನು ಮ. ಮುಷ್ಟ ರಂಡ ಚೀಯಣ್ಣನವರು ಭಕ್ತಿಮಾರ್ಗದ ವಿಷಯವೂ, ಮ. ಪುಗ್ಗೇರ ಸೋಮಯ್ಯನವರು ಪ್ರಾಣಾರಕ್ಷಣೆ ವಿಷಯವೂ, ಹೈಸ್ಕೂಲ್ ಮಾಸ್ತರು ಮ. ನಡಿಕೇರಿಯಂಡ ಸುಬ್ಬಯ್ಯನವರ ಬಿ. ಎ. ಯವರ ಕೃಷಿಯ ವಿಷಯವೂ, ಮ. ಕೇಲಪಂಡ ಕಾರ್ಯಪ್ಪನವರು ಗ್ರಾಮಾಭಿವೃದ್ಧಿ ಮುಂತಾದ ಸಂಗತಿಗಳನ್ನು ಬಹು ಸ್ವಾರಸ್ಯವಾಗಿ ಜನರ ಮನ ಒಪ್ಪುವಂತೆ ಉಚಿತವಾದ ಭಾಷಣಗಳನ್ನು ಮಾಡಿದರು. ಚರ್ಚೆ ಸರಸ್ವತಿ ಮೇಳದವರು ಮ. ಪುಗ್ಗೇರ ಜೋಯಪ್ಪನವರೂ, ಲಕ್ಷ್ಮೀ ಮೇಳದವರು ಮ. ಪುಗ್ಗೇರ ಮಂದಣ್ಣನವರೂ ಚರ್ಚಿಸಿದರು. ಮ. ಪುಗ್ಗೇರ ಮಾಸ್ತರ್ ಕರುಂಬಯ್ಯನವರು, ಮಾತಾಪಿತೃಗಳ ಸೇವೆ ಪತಿವ್ರತಾ ಧರ್ಮದ ವಿಷಯ ಕಥಾರೂಪವಾಗಿ ವಿವರಿಸಿದರು. ಭಗವತೀ ದೇವಸ್ಥಾನದಲ್ಲಿ ಭೋಜನವಾದ ನಂತರ ಆಟ ಓಟಗಳನ್ನು ಮಾಡಿಸಿ ಗೆದ್ದವರಿಗೆ ಅಧ್ಯಕ್ಷರ ಮೂಲಕ ಇನಾಮುಗಳು ಹಂಚಲ್ಪಟ್ಟವು. ಜನಾವಣೆ ಮತ್ತು ದಾನವೃಗಳಿಗೆ ಸಮಯ ಸಾಲದ್ದರಿಂದ ಮುಂದರಿಸಿ ಇಡಲಾಯಿತು. ಅಧ್ಯಕ್ಷರು ಜನರಿಗೆ ಉಪಯೋಗಕರವಾಗಿರುವ ಅನೇಕ ವಿಧದ ಭಾಷಣಗಳನ್ನು ಮಾಡಿದರು. ಅನಂತರ ಅಧ್ಯಕ್ಷರಿಗೂ, ಮತ್ತು ನೆರೆದವರಿಗೂ ವಂದನೆಗಳನ್ನು ಅರ್ಪಿಸಲಾಯಿತು. ಈಗ ಇರುವ ಪ್ರೆಸಿಡೆಂಟ್ ಪುಗ್ಗೇರ ಯಂ. ಕರುಂಬಯ್ಯನವರಿಗೂ, ಸೆಕ್ರೆಟರಿ ಪುಗ್ಗೇರ ಸುಬ್ಬಯ್ಯನವರಿಗೂ ಕಮಿಟಿ ಮೆಂಬರುಗಳು ...ಸುಬ್ಬಯ್ಯನವರು, ಪುಗ್ಗೇರ ಕುಶಾಲಪ್ಪನವರು, ಪುಗ್ಗೇರ ಐಯ್ಯಪ್ಪನವರ, ಮುಕ್ಕಾಟೀರ ಕಾರ್ಯಪ್ಪನವರು, ಐಚಂಡ ಐಯ್ಯಪ್ಪನವರೂ ಮತ್ತು ಮೇಸ್ತ್ರಿಂಜರ್ ಮೆಂಬರಾಗಿರುವ ಪುಗ್ಗೇರ ಜೋಯಪ್ಪನವರಿಗೂ ಮತ್ತು ಪುಗ್ಗೇರ ಬದ್ದಪ್ಪನವರಿಗೂ ಸಂಘದವರು ಉತ್ಸಾಹಭರಿತವಾದ ಮಾತುಗಳನ್ನಾಡಿ ಮಂಗಳದಿಂದ ಸಭೆಯು ಭರಖಾಸ್ತಾಯಿತು.

ಸೆಕ್ರೆಟರಿ

ಪ್ರಸಿದ್ಧ ಪತ್ರಿಕೆ.

ಈ ಕೆಳಗೆ ನಮೂದಿಸಿರುವ ಮುತ್ತಪ್ಪ ಕಂಪ್ನಾನ್ ಮೇನೇಜರು ಸರ್ವರಿಗೂ ತಿಳಿಯಪಡಿಸುವದೇನೆಂದರೆ.—

ಮುತ್ತಪ್ಪ ದೇವಸ್ಥಾನದಲ್ಲಿ ಈ ಕೆಳಗೆ ಕಂಡ ಪ್ರತಿ ಪೂಜೆಗಳಿಗೆ ಕಳಗಿನ ಪಟ್ಟಿ ಮೇರ ಚಾರ್ಜು ಇರುತ್ತೆ. ಇಲ್ಲಿಗೆ ಬರಲು ಕನ್ನಾನೂರಿಂದ ತಳಿಪರಂಬು ಸ್ಟೇಷನಿಗೆ ರೈಲಿನಲ್ಲು ಬಂದರೆ ದೇವಸ್ಥಾನದ ಬಸ್ಸು ಜನರನ್ನು ಕಾದು ಇರುತ್ತೆ. ಬಸ್ಸಿಗೆ 0—6—0 ಬಸ್ ಚಾರ್ಜು ಬೀಳುತ್ತೆ. ಇಲ್ಲಿಗೆ ಬರಲು ಸಾಧ್ಯವಿಲ್ಲದವರು ಕೆಳಗಿನ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ಹಣ ರವಾನಿಸಿದರೆ ನ್ಯಾಯವಾಗಿ ಪೂಜೆ ಮಾಡಿಸಿ ಪ್ರಸಾದ ಕಳುಹಿಸಲಾಗುತ್ತೆ. ಬೇರೆ ಅನೇಕರು ಈ ದೇವರ ಹೆಸರು ಹೇಳಿಕೊಂಡು ಬಂದು ಪೂಜೆಗಿರುವ ಹಣ ಹರಕೆ ವಸ್ತುರ ಕೇಳುವಾಗ ಕೊಡಬಾರದು. ಅಂಥವರು ಹರಿಕೆ ತಲುಪದೆ ಮೋಸ ಮಾಡುತ್ತಾರೆ.

ತಿರೋವನೆ	13—4—0
ಬೋ... ಬೆಳ್ಳಾಟ	2—8—0
ಒತ್ತೆ ಬೆಳ್ಳಾಟ	1—1—0
ಜೋಡು ಪ್ಯರಿಗುತ್ತಿ	0—8—0
ಮೃತ್ಯುಂಜಯ	2—0—0

ಪಿ. ಯಂ. ಕುಂಞರಾಮನ್,
ಮೇನೇಜರ್
ಪರಸಿನಕಡು ಮುತ್ತಪ್ಪ ದೇವಸ್ಥಾನ,
ಪೋಸ್ಟು ಆಫೀಸು ಪರಸಿನಕಡು,
Via ತಳಿಪರಂಬು

12—9

ಪತ್ರವ್ಯವಹಾರ.

[ವರದಿಗಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಜವಾಬ್ದಾರರಲ್ಲ. ಸಂ.]

ದೇವಣಗೇರಿ ಅಂಚಲ ಭಜನೆ ಕ್ಲಬ್.

...ದೇ ಮಾರ್ಚ ತಾರೀಕು 1ನೇ ಆದಿತ್ಯವಾರ ದಿನ ಅಂ... ಪಿ. ಕೆ. ಕುಶಾಲಪ್ಪ ಅವರು ಬಿ. ಎ. ಯಲ್. ...ಟಿ. ಯವರ ಅಧ್ಯಕ್ಷತೆಯಲ್ಲಿ ಇದರ ಒನರಲ್ ಮೀ... ನಡೆಯಿತು. ಪುರುಷರು ಮತ್ತು ಮಹಿಳೆಯರು ...400 ಕ್ಕಿಂತ ಹೆಚ್ಚು ಜನರು ನೆರೆದಿದ್ದರು. ದಕ್ಷಿಣ ...ಸ್ಕೂಲ್‌ಗಳ ಸುಪರ್‌ವೈಜರು ಯಸ್. ಸಿ. ಚಿಣ್ಣಪ್ಪ ...ವರು ದಯಮಾಡಿಸಿದ್ದರು. ಈ ಸಂಘಕ್ಕೆ ಉಚಿತಾರ್ಥವಾ... ...ದಲಿಕ್ಕೆ 'ಕೊಡಗು' ಪತ್ರಿಕೆಯನ್ನು ಮ. ರಾ. ಶ್ರೀ ಪುಗ್ಗೇ... ...ಯ್ಯನವರೂ, 'ಲೋಕಪಾವನ' ಪತ್ರಿಕೆಯನ್ನು ಮ... ...ಮಾಸ್ತರು ಪುಗ್ಗೇರ ಮುತ್ತಣ್ಣನವರೂ ಕೊಟ್ಟಿರು... ಮೀಟಿಂಗು ಪ್ರಾರಂಭದಲ್ಲಿ ಭಜನೆ ಆದ ನಂತರ ಸ...

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಣೆಯೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳಲು ಸರಿಯಾಗಿ ಮುಟ್ಟಾಗದಿರುವಿಕೆ ಮುಟ್ಟಾಗುವ ಸಮಯದಲ್ಲಿ ಕೈಕಾಲು ಸೆಳೆಯುವಿಕೆ, ಮುಸ್ತಕ ಬೇಗುವಿಕೆ, ಹೊಟ್ಟೆ ಕಾವಿ ಬಿಳುಪು—ಕೆಂಪು ಹೋಗಿ ಗರ್ಭ ಪತನವಾಗುವಿಕೆ, ವಾಂತಿ, ಸನ್ನಿಪಾತ ಪಿತ್ತವಾಧೆಯಿಂದ ನರಳುವಿಕೆ, ದಿನ ತುಂಬದೆ ಹಡಿಯೋಣವೆಂದರೆ ಹಲವು... ಇವೇ ಮೊದಲಾದವುಗಳು ಸಂತಾನ ಭಂಗಕ್ಕೆ ಕಾರಣಗಳು. ಚಿಕ್ಕ ಮಕ್ಕಳಿಗೆ ೧೨ ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ ಮುಟ್ಟುದೋಷ ಕಾಮಿನಿ, ಗ್ರಹಬಾಧೆ, ದೃಷ್ಟಿದೋಷ, ಮುಟಕಿಬ್ಯಾನಿ, ವಿಶೇಷ ಅಳೋಣ ಹೊಟ್ಟೆಯೊಳಗಿಂದ ವಿಪರೀತ ಭಯದಿಂದ ಜ್ವರಪೀಡೆ ಕ್ಷೀಣ ಹೊಂದುವಿಕೆ ಮೊದಲಾದವುಗಳಿಂದ ಕಾಡುತ್ತಿರುವವು. ಗರ್ಭರಕ್ಷಕರ ವಿಧಿಯಲ್ಲಿ ಸೂರ್ಯ ರಕ್ಷಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ, ಹೇಳಿದ ಪ್ರಕಾರ ಶಾಸ್ತ್ರೋಕ್ತವಾಗಿ ವಿಶೇಷ ಗೃಹಣ ಕಾಲದಲ್ಲಿ ಸಾಧು ಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ. ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನ ಭಂಗವೂ ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಯಾವತ್ತೂ ಪರಿಹಾರವಾಗುತ್ತದೆ. ಹೆಣ್ಣು ಮಕ್ಕಳಿಗೆ ಸಂತಾನ ದಶೆಯಿಂದ ೩ ರೂಪಾಯಿ, ಚಿಕ್ಕಮಕ್ಕಳಿಗೆ ೧ಕ್ಕೆ ೨—೮—೦ ಪೋ. ಖ ಬೇರೆ. ಸ್ಪೆಶಲ್ ಸಾ ಜಾಗ್ರತ ಗುಣ ಕೊಡುವ ತಾಯಿತಕ್ಕೆ ಪೋ. ಖ ಸೇರಿ ೫ ರೂ. ಆಗತಕ್ಕ ವಿಕಾರಗಳನ್ನು ಸ್ಪಷ್ಟ ಬರೆಯಿರಿ. ಈ ತಾಯಿತ ಧರಿಸಿದಾಗ್ಯೂ ಗುಣವಿಲ್ಲದವರಿಗೆ 100 ರೂ ಬಹುಮಾನ. ಒಂದು ಸಲ ತರಿಸಿ ಅನುಭವ ತಿಳಿಯಿರಿ.

ಸ್ಥಳ ಸಂಕೋಚ ಮೂಲಕ ಮಾದರಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯ ಪ್ರಕೃತಿಯನ್ನು ನಾನಾರೀತಿ ವೈದ್ಯ ಡಾಕ್ಟರರಿಗೂ ತೋರಿಸಲು ಗುಣಹೊಂದದಿರಲು ತಮ್ಮ ಆಶ್ಚರ್ಯಕರವಾದ ತಾಯಿತವನ್ನು ನನ್ನ ಹೆಂಡತಿಯು ಈವಾಗ್ಗೆ ೩ ತಾರಗಳ ವರೆ ಧರಿಸಿದ ತತ್ರನಃ ಮೈಯೊಳಗಿನ ಮಾಮಕ ತಾಯಿತಗಳು ನಾಶವಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುವದನ್ನು ತಿಳಿಸಲು ಅತಿ ಸಂತೋಷಪಡುತ್ತೇನೆ.

ತಮ್ಮ ಸಿ. ಕೆ. ರಾಮ್‌ನಾಥೆಟ್, ಸುದಾಮ ಹೌಸ್,
ಪ್ರಲ್ಹಾದ ಎಸ್ಟೇಟ್, ಮುಂಬೈ.

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,
ಮು. ಪೋ. ಅಥಣಿ, ಜಿ. ಬೆಳಗಾಂವ.

52—19

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಕ್ಯಾರೆಟ್ ಬಂಗಾರದ ನಿಬ್ಬು ಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟನ್‌ಪೆನ್‌ಗಳು.

...ವಂಡರ್ ಫೌಂಟನ್‌ಪೆನ್	1ಕ್ಕೆ	ರೂ. 3 0 0
„ „ ಬಿಗ್ ಬ್ಯಾರಲ್ ಪೆನ್	1ಕ್ಕೆ	3 3 0
„ „ ಸ್ಕ್ರೂ ಕ್ಯಾಪ್ ಪೆನ್	1ಕ್ಕೆ	3 8 0
„ „ ಬಿಗ್ ಬ್ಯಾರಲ್ ಸ್ಕ್ರೂ ಕ್ಯಾಪ್, ಮೊಡಲ್ ಕಲರ್ ಫೌಂಟನ್‌ಪೆನ್	1ಕ್ಕೆ	3 11 0
„ „ ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್	1ಕ್ಕೆ	4 2 0
„ „ ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ...ಬ್ರವುನ್ ಕಲರ್ ಫೌಂಟನ್‌ಪೆನ್	1ಕ್ಕೆ	5 8 0
...ಗ್ ಸ್ವಿಫ್ಟ್ ಫೌಂಟನ್‌ಪೆನ್	1ಕ್ಕೆ	10 8 0
...ಪಾರ್ಕರ್ ಪೆನ್	1ಕ್ಕೆ	14 6 0, & 20 10 0
...ಬ್ಲ್ಯಾಕ್‌ಬರ್ಡ್ ಫೌಂಟನ್‌ಪೆನ್	1ಕ್ಕೆ	3 8 0, & 3 12 0
...ಸ್ವಾನ್ ಫೌಂಟನ್ ಪೆನ್	1ಕ್ಕೆ	6 4 0, & 6 12 0
...ವಾಟರ್‌ಮನ್ ಫೌಂಟನ್ ಪೆನ್	1ಕ್ಕೆ	8 ? 0, & 8 10 0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್	1ಕ್ಕೆ	3 6 0
ಜರ್ಮನ್ ಮೇಡ್ ಸಣ್ಣ ಟೈಂಪೀಸ್	1ಕ್ಕೆ	2 2 0
ಲಿಗಲಿಯೂ ಅಲಾರಾಂ ಟೈಂಪೀಸ್	1ಕ್ಕೆ	6 9 0, & 6 15 0
ಲಿಗಲಿಯೂ ಸಣ್ಣಸೈಜಿನ ಅಲಾರಾಂ ಟೈಂಪೀಸ್	1ಕ್ಕೆ	7 2 0
ಲಿಗಲಿಯೂ ಅಲಾರಾಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು	1ಕ್ಕೆ	8 10 0
ಬಿಗ್‌ಬೆನ್ ಅಲಾರಾಂ ಟೈಂಪೀಸ್	1ಕ್ಕೆ	9 6 0
ಬಿಗ್‌ಬೆನ್ ಅಲಾರಾಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್	1ಕ್ಕೆ	13 4 0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್	1ಕ್ಕೆ	5 10 0
ಡಿಟೋ ನಮೂನೆಯಲ್ಲಿ ಎಬ್ಬಹಾರ್ಡ್ ಕಂಪೆನಿಯ ಪಾಕೆಟ್ ವಾಚ್	1ಕ್ಕೆ	12 4 0
ನಿಕ್ಕಲ್ ಕೇಸ್ ಸಿಲಿಂಡರ್ ಮೂವ್‌ಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್	1ಕ್ಕೆ	5 4 0, 7 8 0, 10 0 0 & 12 8 0

ಇಲ್ಲಿ ನಮೂದಿಸಿರುವ ನಮೂನೆ ಅಂದವಾದ ಟೇಬಲ್ ಕ್ಲಾಕ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅ...

ಆರ್ಡರ್ ರವಾನಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—36

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	23,160
ಜಮೆಬಂದ ಠೇವಣಾತಿ	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಹೇರಳವಾಗಿ ಸಾಲಕೊಡಲಾಗಿತ್ತು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧಿಸುತ್ತಾರೆ.

ಪ್ರೆಸಿಡೆಂಟರು,	ಟ್ರಜರರ್
ಚೇರಂಡ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್	ನವರು.

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1-7-1930.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ
ಓರಿಯಂಟಲ್ ಜೀವವಿಮೆ ಕಂಪೆನಿಯ

ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯ ಈಗಿನ ಸ್ಥಿತಿಯಿಂದ ಸ್ಪಷ್ಟ.

ಹೊಸ ಕೆಲಸ.	ಪ್ರೀಮಿಯಂ ವರಮಾನ
೧೯೨೭—೪೬೮ ಲಕ್ಷ ರೂಪಾಯಿಗಳು.	೧೯೨೭—೧೭೨ ಲಕ್ಷ ರೂಪಾಯಿಗಳು.
೧೯೨೮—೫೮೫ ಲಕ್ಷ "	೧೯೨೮—೧೪೦ ಲಕ್ಷ "
೧೯೨೯—೬೫೦ ಲಕ್ಷ "	೧೯೨೯—೧೬೧ ಲಕ್ಷ "

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು.
ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು
೧೯೨೮ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳಿಗೆ ೨೨॥ ರೂಪಾಯಿಗಳು.
೧೯೨೭ " " " " ೨೫ "
ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದ್ದು ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭ;
ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.
ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು:—

ಓರಿಯಂಟಲ್ ಬಿಲ್ಡಿಂಗ್ಸ್,	**ಯಂ. ವಿ. ಮುತ್ತುಕೃಷ್ಣ ನಾಯುಡು,**
ಸೌತ್ ಪರೇಡ್, ಬೆಂಗಳೂರು.	**ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.**

OR

52-3 **ಕೆ. ಸಿ. ಚಿಣ್ಣಪ್ಪ,**
ಮಡಿಕೇರಿ. ಏಜೆಂಟ್,

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.

ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52-10 ಗಿರಿಗಾಂವ, ಮುಂಬಯಿ.

ಮಲೇರಿಯಾ ಜ್ವರ, ಚಳಿಜ್ವರ, ಉಬ್ಬಸ ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ, ಗೆಡ್ಡೆ ಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ
ಕ್ರಯ 8 ಔನ್ಸಿಗೆ 1-8-0, 1 ಡಜನಿಗೆ 8-8-0 16-8-0

ಪಿತ್ತ ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡಿಯ

ಪಿತ್ತಜ್ವರ, ಕೈಕಾಲು ಬಳ್ಳಲು ರಕ್ತ ಇಲ್ಲದೆ ಬಿಳ್ಳಗೆ ಇರುವ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಣ್ಣು ಮೊಗ ಮತ್ತು ಶರೀರ ಪಲಿಶಿತ, ತಲೆ ತಿರುಗುವದು, ಹೊಟ್ಟೆ ಉರಿ ವಿತೆ ಸುಡುವದು, ನಾಲಿಗೆ ಒಣಗುವದು ಮುಂತಾದುದಕ್ಕೆ ಘಂಟೆ ಪಿತ್ತ ಕಾರುವದು ನಿದ್ರೆ ಇಲ್ಲದೆ ಸಂಕಟವಾಗುವುದು ಈ ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3-8-0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ್ಲ.

ಶರೀರದಲ್ಲಿ ಬರುವ ಬೊಕ್ಕೆ, ಕುರು, ಇತ್ಯಾದಿ ರಕ್ತ ದೋಷ ಗುಣವಾಗದ ಘಾಯ ವ್ರಣಗಳು, ವಿವಿಧ ಬಗೆಯ ಚರ್ಮ ರೋಗ ಅತಿ ಶೀಘ್ರದಲ್ಲಿ ಗುಣಪಡಿಸಿ ರಕ್ತ ಸಂಚಾರ ಶುದ್ಧ ರಕ್ತ ತುಂಬಿ ಆರೋಗ್ಯ ಕೊಡತಕ್ಕ ಬಲಕ್ಕೆ ಕಂಪೌಂಡು ಸಿರಪ್ ಸಸ್ಸ ಅವಗೆ ಎಂಬುದೇ ಬಾಟ್ಲಿಗೆ ರೂಪಾಯಿ 3-4-0

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನೋವ.

ತಿಂಗಳು ಗಟ್ಟಿಯ ಅಕ್ರಮ, ಹೊಟ್ಟೆನೋವು ಕೈಕಾಲುಗಳ ಸೆಳತ, ಕೋಶದ ಬಲಹೀನತೆ ನಾಳಗಳ ಉಪದ್ರವ, ರಕ್ತ ಬೀಳುವದು ಹರಿಯುವ ನಂತು ಬರುವದು ಅಲ್ಲದೆ ನಮಯಕ್ಕೆ ಇದ್ದಾಗುವದು ಬಂಜೆತನವಲ್ಲದೆ ಕೆಡುಕು ಇತ್ಯಾದಿ ಗರ್ಭಕೋಶದ ಎಲ್ಲಾ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನೋವ ತಪ್ಪದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 1-8-0

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣ ಕೋಲಿ ಸೊಂಟಕ್ಕೆ ಬಲ ಇಲ್ಲದೆ ಇರುವದು, ಜೀರ್ಣ ಮತ್ತು ಬಗೆ ಬಗೆ ಶರದ ಮಲ ಇದ್ದಾದಿ ರೋಗಗಳು ಕಂಡು ಬೇಯುವುದಿಲ್ಲ, ಬಾಲಾವಸ್ಥೆಯಲ್ಲಿ ಕುಂದಿಸುವ ಈ ಅವಸ್ಥೆಗಳನ್ನು ಟೋನ್ ಅಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1-4-0

ಶುದ್ಧ ಟೆಕ್ಸ್ ಮದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.
ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ, ಅವುಗಳ ನಾನಾ ಬಗೆಯ ಸಾಮಾನುಗಳೂ, ಬಿಸಲಿಗೆ ಇತರಕ್ಕೆ ಒಳ್ಳೇ ತರದ ಕನ್ನಡಕಗಳು ನಮ್ಮಲ್ಲಿ ನ್ಯಾಯವಾದ ಬೆಲೆಗೆ ದೊರೆಯುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ.—ಮಲೇರಿಯೂನ ಕಂಪೆನಿ,
52-19 ಹಂಪನಕಟ್ಟೆ, ಇಗರ್ಜಿಬೆಳಿ, ನಂಬರು 14, ಮಂಗಳೂರು

12 bore Victor Cartridges Rs. 10/- Per 100
Mahomedally-Noorbhoy.
ARMS & AMMUNITION MART
321 Abdul Rehman Street.
52-16 BOMBAY 3.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು,

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ದೇವಪ್ಪನವರು.
ಮಡಿಕೇರಿಗೆ—ಮೆ. ಕೇಕಡ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಐಮ್ಮುಡ ಮಾದಪ್ಪನವರು,
ಅಮ್ಮತ್ತಿ-ಸಿದ್ದಾಪುರ—ಮೆ. ಬಿನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯನವರು
ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮ್ಯಾನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನೊಳಗೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾನ ಬರೆದು ರಿಜಿಸ್ಟ್ರಾರ್‌ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮ್ಯಾನೇಜರ್,
"ಕೊಡಗು" ಮಡಿಕೇರಿ.

Printed & published by K P Chinnappa at "Kodagu" Press Mercara for "Kodagu" Ltd.

If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯತ್ನತಃ । ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ಸಂಪಾದಕ—ಕೋಟೇರ ಪಿ. ಚಿಣ್ಣಪ್ಪ

ವಾರ್ಷಿಕ ಚಂದಾ ರೂ. ೩—೮—೦.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦ | ಮಡಿಕೇರಿ, ಸನ್ ೧೯೪೧ನೇ ಇಸವಿ ಮಾರ್ಚ್ ತಾರೀಕು ೨೦ ನೇ ಶುಕ್ರವಾರ. | ಸಂಚಿಕೆ ೩೩

Telegrams — "Precious"

V. Subramaniyer Jeweller,

Telephone — 3145.

DIAMOND MERCHANT. GOLD & SILVERSMITH.

Deals in all :—
SPORTS CUPS in all prices - -
MEADALS in up to date patterns
CASKETS in elegant styles - -

Nos. 2 & 3, Kuppumuthu St.,
TIRUVATESWARANPET,
Post Box 423, Triplicane P. O.,
MADRAS.

Deals in all :—
GEM-SET JEWELS, set with Diamonds, Rubies etc., - - -
GOLD ARTICLES of all patterns -
SILVER WARE in latest style - -

52—18



ಕಾರ್ಡು ಬರೆದರೆ ಈಗಿನ
ಕ್ಯಾಟಲಾಗು ಮಾಫಿಯಾಗಿ
ಕಳುಹಿಸಲ್ಪಡುವುದು

ಕೋವಿಗಳು, ಕತ್ತಿಗಳು, ಬಚೀಗಳು, ತೋಟಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24—23

ಬಾಲಾರ್ಕಮದು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕ ಮಧುವನ್ನು ಕೊಡಿರಿ ಮಕ್ಕಳು ಶಕ್ತಿರೋಗ



ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿಯೂ, ಬಲವೂ ಬರುವದು ದಿನ ದಿನಕ್ಕೆ ಆರೋಗ್ಯವೂ, ಸೊಕ್ಕೂ ಉಂಟಾಗುವದು ಇದು ಮಧುರವಾಗಿದೆ ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ ಶೀಸೆ 1 ಕ್ಕೆ 12 ಆಣೆ. ಡಿ. ಪಿ 9 ಆಣೆ

ಆರ್ಡರ್ ಜೊತೆಯಲ್ಲಿ ಅಡ್ವಾನ್ಸು ಮುಂಬಲಗು ಕಳುಹಿಸಿ ಕೊಡತಕ್ಕದ್ದು ಅಡ್ವಾನ್ಸ್ ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲಾ

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿಮೊಗ್ಗಾ,
(ಮೈಸೂರ್ಸಂಸ್ಥಾನ)

52—10

ಜ್ವರಕಷಾಯ ಮತ್ತು ಚೂರ್ಣ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದಾಗ್ಯೂ ಗುಣವಾಗದಿರುವ ಮಲೇರಿಯ ಜ್ವರ ದಿನಾ ಬರುವ ಜ್ವರ ಮತ್ತು ಸ್ವರದಲ್ಲಿ ದೋಷದಿಂದ ಬರುವ ಜ್ವರಗಳಿಗೆ ಪಾಳ್ಯ ಬರುವ ಜ್ವರ 3—4 ದಿವಸದಲ್ಲಿಯೂ ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಗುಣ ಕೊಡುತ್ತದೆ. ಶೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14

ರಕ್ತ ಕಷಾಯ

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರ ಹಿಂದಿಗೆ ಉರಿ, ಮೂತ್ರನಾಳದಲ್ಲಿ ತುರಿ, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರ ನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು, ಹುಡಿ ಹೋಗುವದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ ನಾಳದಲ್ಲಿ ಬೊಬ್ಬೆ ನೋವು ಇವುಗಳಿಗೆ ಪರಮ ಔಷಧಿ ಬಾಟ್ಲು 1 3, 6ಕ್ಕೆ ರೂ 1—4—0 3—8—0 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವದು, ತಲೆನೀರು, ಕಣ್ಣುರಿ, ಕಿವಿಯಿಂದ ಕೀವು ಸೋರುವದು ಕಿವುಡು ಕಣ್ಣು ನೋವು ಅಪಸ್ಮಾರ ಹತ್ತಿರ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ಇವುಗಳೆಲ್ಲ ತಂಪಿನ ಗುಣವಾಗುತ್ತದೆ ಉದುರುತ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನು ಹೊಳಪನ್ನು ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ. 1, 3 ಸೀಸೆಗೆ 2—10—0 ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಅಂಚೆಗಾಗು ಖರ್ಚು ಬೇರೆಯಾಗಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
7. ಮಂಗಳೂರು.

52—45

ಕೊಡಗು ಕೌನ್ಸಿಲ್ ಮೀಟಿಂಗ್.

ಕೌನ್ಸಿಲ್ ಮೀಟಿಂಗಿಗೆ ಎಲ್ಲಾ ಮೆಂಬರುಗಳೂ ಹಾಜರಿದ್ದರು. ಹೊಸ ಮೆಂಬರುಗಳಾದ ಮೆ. ಬಿ. ಶ್ರೀಪತಿರಾಯರ, ಮೆ. ಎಡ್ಮಂಡ್ಸ್ (ಶಾಲಾ ಇನ್ಸ್‌ಪೆಕ್ಟರ) ಮತ್ತು ನಿಕ್ಲ್‌ರವರ ಪ್ರಮಾಣವಾದನಂತರ ಸೆಕ್ರೆಟರಿಯವರು ಕಳೆದ ಮೀಟಿಂಗಿನಲ್ಲಿ ಮಂಜೂರಾದ ಠರಾವುಗಳಿಗೆ ಚೀಫ್ ಕಮಿಶನರವರು ಮಾಡಿದ ಹುಕುಂನ್ನು ಮುಂದಿಡಲಾಯಿತು.

ಅವರ ಹುಕುಂ.

(1) ಗ್ರಾಮಗಳಿಂದ ಗ್ರಾಮಕ್ಕೆ ಕಡಿಯಿಸಿದ ಮರವನ್ನಾಗಲೀ, ಸೌದೆಯನ್ನಾಗಲೀ ರಹದಾರಿ ಇಲ್ಲದೆ ಸಾಗಿಸಬಹುದೆಂಬುದನ್ನೂ, ಬಾಣೆ ಜಾಗಗಳಲ್ಲಿ ಸರ್ಕಾರದ ಮಂಜೂರಾತಿ ಇಲ್ಲದೆ ಕಟ್ಟಡ ಕಟ್ಟಿಸಬಹುದೆಂಬ ಠರಾವುಗಳನ್ನು ಚೀಫ್ ಕಮಿಶನರವರು ಅಂಗೀಕಾರ ಮಾಡಿರುತ್ತಾರೆ. ಜಮ್ಮದ ಬಾಣೆ ಜಾಗಗಳಲ್ಲಿ ಭೂಮಿ ಮಾಡಿದರೆ ಭೂಮಿಯನ್ನು ಜಮ್ಮವಾಗಿಟ್ಟುಕೊಳ್ಳಲಿಕ್ಕೆ ಆಗುವುದಿಲ್ಲವೆಂಬುದನ್ನೂ, (2) ಮಣ್ಣಿನ ಪರೀಕ್ಷೆಗಾಗಿ ಲೇಬೋರೇಟರಿ ಮಾಡಲಿಕ್ಕಾಗುವುದಿಲ್ಲವೆಂಬುದಾಗಿಯೂ ಚೀಫ್ ಕಮಿಶನರವರು ಹುಕುಂ ಮಾಡಿರುವರು.

ಪ್ರಶ್ನೆಗಳ ಚರ್ಚೆಗೆ ಮೊದಲು ಈಗಿನ ರಾಜಿ ಸಂಧಾನ ಕುರಿತು ವೈಸರಾಯರಿಗೆ ಅಭಿನಂದಿಸುವ ಠರಾವೂ, (2) ಪಂಡಿತ ಮೋತಿಲಾಲರ ಮರಣ ಕುರಿತು ವ್ಯಸನಕರವಾದ ಠರಾವುಗಳನ್ನು ಮೆ. ಬಿ. ಶ್ರೀಪತಿರಾಯರು ತಂದದ್ದು ಸರ್ವ ಸಮ್ಮತದಿಂದ ಮಂಜೂರಾಯಿತು.

ಅನಂತರ ಸುಮಾರು 35 ಪ್ರಶ್ನೆಗಳಿಗೆ ಜವಾಬು ಕೊಡಲಾಯಿತು. ಅನೇಕ ಪ್ರಶ್ನೆಗಳಿಗೆ ಸಮರ್ಪಕವಾದ ಜವಾಬು ದೊರೆಯಲಿಲ್ಲ. ಇಗಾದನಂತರ ಮೆಂಬರುಗಳು ಬಜೆಟ್ಟಿನ ಮೇಲೆ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದನಂತರ ಬಜೆಟ್ ಠರಾವುಗಳು ಚರ್ಚೆಯಾಯಿತು.

ಕಮಿಶನರವರು ತನ್ನ ಬಜೆಟ್ಟನ್ನು ಮುಂದಿಟ್ಟು ಹೇಳಿದ್ದೇನಂದರೆ —ಕಳೆದ ವರ್ಷದ ಹಾಗೆ ಈ ವರ್ಷದ ಸ್ಥಿತಿಯಿಲ್ಲ. ಅಬ್ಕಾರಿ ಉತ್ಪತ್ತಿಯು ಕಳೆದ ವರ್ಷಕ್ಕಿಂತ 59,000 ಕಡಿಮೆಯಾಗಿದೆ. ಫಾರೆಸ್ಟಿನಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ 2,56,000 ರೂ. ಕಡಿಮೆಯಾಗಿದೆ. ಈಗಿನ ರಾಜಕೀಯ ಸ್ಥಿತಿಯಿಂದಲ್ಲ, ಭೂಲೋಕದ ಆರ್ಥಿಕ ಸ್ಥಿತಿಯು ಕೆಡುತ್ತಾ ಬರುವುದರಿಂದ ಹೀಗೆ ಆದದ್ದೆಂದು ಹೇಳಬಹುದು.

ಗಂಧದಲ್ಲಿ ಕ್ರಯ ಸಿಕ್ಕಿದ್ದು ಕಡಿಮೆ ಮಾತ್ರ, 150 ಟನ್ ಗಂಧವು ಮಾರಾಟವಾಗಿಲ್ಲ. ಶಿಲ್ಕು ಇದ್ದ 6,77,000 ರೂ.ಗಳಲ್ಲಿ ಈಗ 3,46,000 ರೂ. ಮಾತ್ರವಿದೆ. ಈ ಸ್ಥಿತಿಯು ಇದ್ದ ಹಾಗೆ ಇರಲಿಕ್ಕಿಲ್ಲ. ಬರುವ ವರ್ಷಕ್ಕೆ ಚೆನ್ನಾಗಿ ಆಗಬಹುದು. ಒಟ್ಟು ಅಂದಾಜು ಮಾಡಿದ 13,56,000 ಉತ್ಪತ್ತಿಯಲ್ಲಿ 2,15,000 ರೂ. ಬಜೆಟ್ಟಿನಲ್ಲಿ ಕಡಿಮೆಯಾಗಬಹುದು. ಇದನ್ನು ಸರಿಪಡಿಸಲು ಖರ್ಚು ಬಹಳ ಕಡಿಮೆ ಮಾಡಬೇಕಾಗಿದೆ. ಇನ್ಯಾವುದರಲ್ಲಿ ಉತ್ಪತ್ತಿ ಹೆಚ್ಚು ಆಗಬಹುದೆಂಬುದನ್ನು ಸಹ ನೋಡಬೇಕಾಗಿದೆ. ಫಾರೆಸ್ಟಿನಲ್ಲಿ 50,000 ರೂ. ಖರ್ಚು ಕಡಿಮೆ ಮಾಡಿದ್ದೇವೆ. ಪ್ರಯಾಣದ ಭತ್ಯದಲ್ಲಿ ಶೇಕಡ 10 ರಷ್ಟು ಕಡಿಮೆ ಮಾಡಿದ್ದೇವೆ ವ್ಯವಸಾಯ ಇಲಾಖೆಗಾಗಲೀ, ಹೊಸ ಸೇತುವೆ, ಹಾಸ್ಪಿಟಲ್ ವಗೈರೆ ಕಟ್ಟಿಸಲಿಕ್ಕೆ ಹಣವಿಡಲು ಆಗಲಿಲ್ಲ. ಇರುವ ರಸ್ತೆಯನ್ನು ಚೆನ್ನಾಗಿಡಬೇಕಾಗಿದೆ. ಅವುಗಳಿಗೆ ಖರ್ಚು ಮಾಡದೆ ನಿವೃತ್ತಿ ಇಲ್ಲ. ಪಿ. ಡಬ್ಲ್ಯು. ಡಿಪಾರ್ಟ್‌ಮೆಂಟಿನಲ್ಲಿ ಒಬ್ಬ ಸಬ್ ಡಿವಿಜನಲ್ ಆಫೀಸರನ್ನು ವಜಾ ಮಾಡಲಿಕ್ಕೆ ಏರ್ಪಾಡು ಮಾಡಿದ್ದೇವೆ. ಆದರೆ ಕೋರ್ಟಿ ರಿಪೇರಿಗೆ ಒಬ್ಬನನ್ನು ನೇಮಕ ಮಾಡಬೇಕಾಯಿತು. ಹಣದ ಅಭಾವದಿಂದ ಬೇರೆ ಕೆಲಸಕ್ಕೆ ಹಣವಿಡಲು ಆಗುವುದಿಲ್ಲವೆಂಬುದಾಗಿ ಹೇಳಿದರು.

ಠರಾವುಗಳು—ಲ್ಯಾಂಡ್ ರೆವಿನ್ಯು ಕಲಂ 5ರಲ್ಲಿರುವ 82,700 ರೂ. ಪೈಕಿ 100 ರೂ. ಕಡಿಮೆ ಮಾಡಬೇಕೆಂಬುದಾಗಿ ಮೆ. ಕೊಂಗಂಡ ಗಣಪತ್ತಿಯವರು ಠರಾವು ತಂದರು. ಜಮ್ಮ ಭೂಮಿ ಇರುವವರ ಜೀವನಾಂಶ ಪಾಲನ್ನು ಬೇರೊಬ್ಬ ಕುಟುಂಬಸ್ಥರಿಗೆ ರಿಲೀಸ್ ಮಾಡಿಕೊಡುವುದರಲ್ಲಿ ಅನೇಕ ತರದ ಹುಕುಂಗಳನ್ನು ಒಂದಕ್ಕೊಂದು ಸರಿಯಿಲ್ಲದೆ ಮಾಡುವುದನ್ನು ಮನ್ನಪಡಿಸಲಿಕ್ಕಾಗಿ ಈ ಠರಾವು ತಂದಿದ್ದೇನೆ ಎಂಬುದಾಗಿ ಹೇಳಿದರು. ಮೆ. ಸಿ. ಯಸ್. ಉತ್ತಯ್ಯನವರು ಈ ಠರಾವನ್ನು ಅನುಮೋದಿಸಿದರು. ಅದಕ್ಕೆ ಸರಕಾರ ಪರ ಮೆಂಬರರಾದ ಡಿ. ಮೇಜಿಸ್ಟ್ರೇಟರು ಅದು ಆಯಾಯ ಕುಟುಂಬಸ್ಥರಿಗೆ ವ್ಯಾಪಿಸಿದೆಯಲ್ಲದೆ ಸರಕಾರವು ಆಭಾದ್ಯಕ್ಕೆ ಕೈ ಹಾಕುವರಲ್ಲವೆಂಬುದಾಗಿಯೂ, ಎಲ್ಲಾ ಕುಟುಂಬಸ್ಥರು ಇಂಥಾದ್ದಕ್ಕೆ ಒಪ್ಪಬೇಕೆಂತಲೂ, ಒಪ್ಪದೆ ತಕರಾರು ಬಂದರೆ ಅಂಥಾದ್ದನ್ನು ಸರಕಾರದವರು ಕೇಳಬೇಕೆಂದೂ ವಗೈರೆಯಾಗಿ ಹೇಳಿದ ನಂತರ ಮೆ. ಗಣಪತಿಯವರು ಠರಾವನ್ನು ವಾಪಸು ತೆಗೆದುಕೊಂಡರು.

(2) ಅಬ್ಕಾರಿ ನಂಬ್ರ 6ರಲ್ಲಿರುವ 12,000 ರೂಪಾಯಿಗಳಲ್ಲಿ ಒಂದು ರೂಪಾಯಿ ಕಡಿಮೆ ಮಾಡಬೇಕೆಂದು ಮೆ. ಬಿ. ಶ್ರೀಪತಿರಾಯರು ಠರಾವು ತಂದು ನಿಷಾವನ್ನು ನಿಷೇಧಿಸುವುದೇ ಸರಕಾರದ ನೀತಿಯಾಗಿರಬೇಕೆಂದೂ, ಹೆಂಡದಿಂದ ಬೆಲ್ಲ ಮಾಡುವ ಕೈಗಾರಿಕೆಯನ್ನು ಪ್ರೋತ್ಸಾಹಿಸಬೇಕೆಂದೂ, ಮದ್ರಾಸ್ ಸರಕಾರದವರು ಈ ಕೆಲಸಕ್ಕಾಗಿ ಲಕ್ಷಾಂತರ ರೂ. ಖರ್ಚು ಮಾಡುವಾಗ ನಮ್ಮ ಸರಕಾರದವರು ಏನೂ ಮಾಡದಿರುವುದು ಸರಿಯಲ್ಲವೆಂದೂ, ಅಂಗಡಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಬದಲು ನಮ್ಮ ಸರಕಾರವು ಹೆಚ್ಚಿಸುತ್ತಾ ಬರುತ್ತಿರುವುದು ಸರಿಯಲ್ಲವೆಂದೂ, ಮೊದಲಿನ ಕಮಿಶನರಾಗಿದ್ದ ಟಾಸ್ಕರ್‌ರವರು ಬೆಲ್ಲ ಮಾಡಲು ಪ್ರೋತ್ಸಾಹ ಕೊಡಲು ಏರ್ಪಾಡು ಮಾಡಿದ್ದು ಈಗ ಏನಾಯಿತೆಂದು ತಿಳಿಯುವುದಿಲ್ಲವಾಗಿಯೂ ಹೇಳಿದರು.

ಕಮಿಶನರವರು ಹೇಳಿದ್ದೇನೆಂದರೆ—ಇಂಥಾ ವಿಸ್ತಾರವುಳ್ಳ ಪ್ರಶ್ನೆಗೆ ಸಮರ್ಪಕವಾದ ಜವಾಬು ಈಗ ಕೊಡಲಾಗುವುದಿಲ್ಲ. ನಿಷಾನಿಷೇಧ ಮಾಡುವುದು ಒಳ್ಳೇದೇ. ಆದರೆ ಅಬ್ಕಾರಿ ಉತ್ಪತ್ತಿಯ ಬದಲು ಬೇರೆ ಉತ್ಪತ್ತಿಯನ್ನು ಕಂಡು ಹಿಡಿಯಬೇಕಾಗಿದೆ. ಬೇಗನೆ ಒಂದು ಕಮಿಟಿ ಮಾಡಿ ಈ ವಿಷಯ ತನಿಖೆ ಮಾಡುತ್ತೇನೆ. 1927ರಲ್ಲಿ ಹೆಂಡದಿಂದ ಬೆಲ್ಲ ಮಾಡಲಿಕ್ಕೆ ಎರಡು ಲೈಸೆನ್ಸುಗಳು ಕೊಡಲ್ಪಟ್ಟಿತ್ತು. ಈಚೆಗೆ ಯಾರೂ ಅರ್ಜಿ ಹಾಕಿರುವುದಿಲ್ಲ. ಮೆ. ಬಲ್ಲಚಂಡ ಬೆಳ್ಯಪ್ಪನವರು ಕುಡಿಯುವವರನ್ನು ನಿಲ್ಲಿಸಲು ಪ್ರೋತ್ಸಾಹಿಸಲು ಯಾರೂ ಅಪೇಕ್ಷಿಸುವುದಿಲ್ಲವಾಗಿಯೂ, ಸರಕಾರದವರು ತೆರೆದ ಹೊಸ ಅಂಗಡಿಗಳನ್ನು ಮುಚ್ಚಬೇಕೆಂತಲೂ ಮದ್ಯ ನಿಷೇಧ ಪ್ರಚಾರಕ್ಕೆ ಹಣ ಖರ್ಚು ಮಾಡುವುದು ವ್ಯರ್ಥವೆಂತಲೂ ಹೇಳಿದರು.

ಮೆ. ಪಾಲೇಕಂಡ ಅಯ್ಯಮ್ಮನವರು ಅಮೇರಿಕಾದಲ್ಲಿ ಸಹ ಮದ್ಯ ನಿಷೇಧವು ಸಾಧ್ಯವಾಗಲಿಲ್ಲವೆಂದೂ, ಜನರಲ್ಲಿ ತಿಳುವಳಿಕೆ ಹೆಚ್ಚು ಮಾಡಿದ್ದಲ್ಲದೆ ಮದ್ಯ ನಿಷೇಧವು ಸಾಧ್ಯವಿಲ್ಲವೆಂತಲೂ ಹೇಳಿದರು

ಸರಕಾರ ಮೆಂಬರರ ಬರವಸೆ ಮೇರೆ ಮೆ. ಶ್ರೀಪತಿರಾಯರು ತನ್ನ ಠರಾವನ್ನು ವಾಪಸು ತೆಗೆದುಕೊಂಡರು.

ಠರಾವು 3—6 ಎ ಅಬ್ಕಾರಿಯಲ್ಲಿ ಒಂದು ರೂ. ಕಡಿಮೆ ಮಾಡಬೇಕೆಂಬ ಠರಾವನ್ನು ಮೆ. ಪಿ. ಬಿ. ಐಯ್ಯಮ್ಮನವರು ತಂದು ಈ ಠರಾವಿನ ಉದ್ದೇಶವು ಹರಾಜಾದ ಅಂಗಡಿಗಳನ್ನು ಪುನಃ ಹರಾಜಿಗೆ ತರುವುದಕ್ಕಾಗಿ ಚರ್ಚಿಸಲು ತಂದಿದ್ದೇನೆಂದೂ, ಕಾಂಗ್ರೆಸ್ ಚಳವಳದ ದೆಸೆಯಿಂದ ಪಿಕೆಟಿಂಗ್ ಮಾಡಿದ್ದಕ್ಕಾಗಿ ಈ ವರ್ಷ ಉತ್ಪತ್ತಿಯು ಬಹಳ ಕಡಿಮೆಯಾಯಿತೆಂದೂ, ಈಗ ರಾಜಿಯಾಗಿರುವುದರಿಂದ ಮೊದಲು ಪಡಕೊಂಡವರು ಬಹಳ ಲಾಭ ಸಂಪಾದಿಸುವರೆಂದೂ, ಆದ್ದರಿಂದ ಪುನಃ ಹರಾಜು ಮಾಡಿದರೆ ಸರಕಾರದ ಉತ್ಪತ್ತಿಯು ಹೆಚ್ಚಬಹುದೆಂದೂ ಹೇಳಿದರು.

ಕಮಿಶನರವರು ಮೇಲೆ ತಂದ ಸೂಚನೆಯನ್ನು ನಾವೂ ಆಲೋಚಿಸಿದ್ದೇವೆ. ನೇರಿ ಉತ್ಪತ್ತಿಯು ಹೆಚ್ಚಾಗುವುದು ಕಾಣುವುದಿಲ್ಲ. ಕಾಂಗ್ರೆಸ್ ಸತ್ಯಾಗ್ರಹಿಗಳ ಕೆಲಸದಿಂದ ಅನೇಕ ಗ್ರಾಮಗಳಲ್ಲಿ ಬೈನೆ ಮರದ ಕೈ ಕಡಿದು ಬಿಟ್ಟು ಬಹಳ ತೊಂದರೆಯಾಗಿದೆಯೆಂದೂ, ಜನರ ಕೈಯಲ್ಲಿ ಹಣವಿಲ್ಲದ್ದರಿಂದ ಟಿವಾಜಿಟ್ಟುಕಟ್ಟಲು ಸಹ ತೊಂದರೆಯಾಗಿದೆಯೆಂದೂ, ಆದ್ದರಿಂದ ಪುನಃ ಹರಾಜಿಗೆ ತರುವುದು ಪ್ರಯೋಜನವಿಲ್ಲವೆಂದೂ ಹೇಳಿದರು. ಮೆ. ಪಿ. ಬಿ. ಐಯ್ಯಮ್ಮನವರು ಠರಾವನ್ನು ವಾಪಸು ತೆಗೆದುಕೊಂಡರು.

ಠರಾವು 4—6 ಎ. ಅಬ್ಕಾರಿ 10235 ರೂ. ಉತ್ಪತ್ತಿಯಲ್ಲಿ ಒಂದು ರೂ ಕಡಿಮೆ ಮಾಡಬೇಕು. ಈ ಠರಾವಿನ ಉದ್ದೇಶವು ಸರ್ಕಾರದವರು ವರ್ಷಂಪ್ರತಿ ಸಾರಾಯಿ ಅಂಗಡಿಗಳ ಸಂಖ್ಯೆಯನ್ನು ಹೆಚ್ಚು ಮಾಡುತ್ತಿರುವುದನ್ನು ಮನ್ನಪಡಿಸುವುದಾಗಿ ಬೇಡವಾದ ಸ್ಥಳಗಳಲ್ಲಿ ಅಂಗಡಿಗಳನ್ನು ತೆರೆಯ ಕೂಡದೆಂದೂ, ಗ್ರಾಮಸ್ಥರು ಈ ಮಾರಿಯ ದೆಸೆಯಿಂದ ಬಹಳ ಗರೀಬರಾಗಿ ಬಿಟ್ಟಿದ್ದಾರೆಂದೂ, ಮದ್ರಾಸಿನಲ್ಲಿ ಕುಡುಕತನವನ್ನು ಕಡಿಮೆ ಮಾಡಲು ಸರ್ಕಾರದವರು ತೆಗೆದುಕೊಳ್ಳುತ್ತಿರುವ ತೊಂದರೆಯಂತೆ ನಮ್ಮ ಸರ್ಕಾರವು ಏನೂ ಮಾಡಲಿಲ್ಲವೆಂದೂ, ಅಬ್ಕಾರಿ ಕಮಿಟಿಯು ನಾಲ್ಕು ಅಂಗಡಿಗಳನ್ನು ಹೆಚ್ಚಿಸಬೇಕೆಂದು ಕಮಿಶನರವರು ಹೇಳುವ ಜವಾಬು ನ್ಯಾಯ ಸಮರ್ಪಕವಲ್ಲವೆಂದೂ, ಕಳೆದ ವರ್ಷ ತೆರೆದ ಹೊಸ ನಾಲ್ಕು ಅಂಗಡಿಗಳನ್ನು ಮುಚ್ಚಬೇಕೆಂದೂ ಮೆ. ಯಸ್. ಸೋಮಯ್ಯನವರು ಹೇಳಿದರು.

ಕಮಿಶನರವರು 1926—27ರಲ್ಲಿ 2 ಜನ ಮಾತ್ರ ಎಕ್ಸೈಸ್ ಸಬ್ ಇನ್ಸ್‌ಪೆಕ್ಟರಿದ್ದರೆಂದೂ, 28ರಲ್ಲಿ 3 ಆಯಿತೆಂದೂ, 29ರಲ್ಲಿ 4 ಆಗಿತ್ತು, 30ರಲ್ಲಿ ಒಬ್ಬ ಹೊಸ ಇನ್ಸ್‌ಪೆಕ್ಟರನ್ನು ನೇಮಕ ಮಾಡಬೇಕಾಯಿತೆಂದೂ, ಹೀಗೆ ಸಿಬ್ಬಂದಿ ಹೆಚ್ಚಿದ್ದರಿಂದ ಕಳ್ಳತನದ ಸಾರಾಯಿ ಮಾಡುವುದು ಕಡಿಮೆಯಾಗಿ ಉತ್ಪತ್ತಿ ಹೆಚ್ಚಾಯಿತೆಂದೂ ಹೇಳಿದರು. ಹೇಗೂ ಈ ವಿಷಯ ಪರ್ಯಾಲೋಚಿಸುತ್ತೇನೆಂಬುದಾಗಿ ಹೇಳಿದ್ದರಿಂದ ಠರಾವನ್ನು ಮೆ. ಸೋಮಯ್ಯನವರು ವಾಪಸು ತೆಗೆದುಕೊಂಡರು

ಫಾರೆಸ್ಟು ಮೆಂಬರಾದ ಕನ್‌ಸರ್ವೇಟರವರು, ಫಾರೆಸ್ಟು ವಿಷಯ ಯಾರೂ ಏನೂ ಹೇಳಕೂಡದೆಂಬ ಭಾವನೆಯಿಂದ ಫಾರೆಸ್ಟು ಪಾಲಿಸಿಯನ್ನೂ, ತತ್ವವನ್ನೂ ಈ ವಿಷಯ ಚರ್ಚೆಗೆ ಬರುವುದಕ್ಕೆ ಮೊದಲೇ ವಿವರಿಸಿದರು.

ಠರಾವು 5—ಫಾರೆಸ್ಟ್ ಖರ್ಚಿಗೆ ಮಡಗಿದ 2,55,900 ರೂಪಾಯಿಯಲ್ಲಿ 100 ರೂ. ಕಡಿಮೆ ಮಾಡಬೇಕೆಂಬ ಠರಾವನ್ನು ಮೆ. ಕೊಂಗಂಡ ಗಣಪತ್ತಿಯವರು ತಂದರು. ಫಾರೆಸ್ಟಿನ ಸಾಮಾನ್ಯ ಆಡಳಿತದ ವಿಷಯ ಚರ್ಚೆ ಮಾಡಲಿಕ್ಕಾಗಿ ಈ ಠರಾವನ್ನು ತಂದದ್ದೆಂದು ಹೇಳಿ ಫಾರೆಸ್ಟು ಡಿಪಾರ್ಟ್‌ಮೆಂಟಿನ ದುಂದುಗಾರಿಕೆ ವಿಷಯ ಹೇಳಿದರು.

ಫಾರೆಸ್ಟು ಮೆಂಬರು ಠರಾವು ತಂದವರ ಸೂಚನೆಯು ಸರಿಯಲ್ಲವೆಂದೂ, ಅವರು ಹೇಳುವುದು ತನಗೆ ತಿಳಿಯಲಿಲ್ಲವೆಂದೂ, ಡಿಪಾರ್ಟ್‌ಮೆಂಟಿನವರು ಸತ್ತ ಗಂಧವನ್ನು ಕಡಿಯುತ್ತೇವೆಂದೂ, ಜೀವವಿರುವ ಮರಗಳನ್ನು ಕಡಿಯುವುದಿಲ್ಲವೆಂದೂ ವಗೈರೆಯಾಗಿ ಹೇಳಿದರು. ಮೆ. ಗಣಪತ್ತಿಯವರು ತನ್ನ ಠರಾವನ್ನು ವಾಪಸು ತೆಗೆದುಕೊಂಡರು.

ಠರಾವು ೬—ಫಾರೆಸ್ಟು ಬಜೆಟ್ಟಿನ 2,55,900 ರೂ.ಗಳಲ್ಲಿ 100 ರೂ. ಕಡಿಮೆ ಮಾಡಬೇಕೆಂಬ ಠರಾವನ್ನು ಮೆ. ಪ್ಟಚ್ಚಮಾಡ ನಾಣಯ್ಯನವರು ತಂದು ಈ ಠರಾವಿನ ಉದ್ದೇಶವು ಡಿಪಾರ್ಟ್‌ಮೆಂಟಿನಲ್ಲಿ ಸಿಬ್ಬಂದಿ ಜಾಸ್ತಿ ಮಾಡುವುದಕ್ಕೇನೇ ಆಗಿದೆ ಎಂದೂ, ಗಂಧದ ಉತ್ಪತ್ತಿ ಬಿಟ್ಟರೆ ಡಿಪಾರ್ಟ್‌ಮೆಂಟಿನಲ್ಲಿ ಸಿಕ್ಕುವ ಹಣವು ಖರ್ಚಿಗೆ ಸಾಕಾಗುವುದಿಲ್ಲವೆಂದೂ, ಎಕ್ಸ್‌ಟ್ರಾ ಅಸಿಸ್ಟೆಂಟ್ ಕನ್‌ಸರ್ವೇಟರುಗಳನ್ನು ತೆಗೆದು ಹಾಕಿ ಇಬ್ಬರು ರೇಂಜರುಗಳನ್ನು 300 ರೂ. ಸಂಬಳದಲ್ಲಿ ಮಡಗುವುದು ಒಳ್ಳೆಯದೆಂದೂ ಸೂಚಿಸಿದರು.

ಮೆ. ತಿರುವಂಗಡಂ ಪಿಳ್ಳೆಯವರು ಸರ್ಕಾರದವರು ನಡೆಸುವ ಕ್ರಮವು ಒಳ್ಳೆಯದೆಂದೂ, ಫಾರೆಸ್ಟು ಡಿಪಾರ್ಟ್‌ಮೆಂಟಿನಲ್ಲಿ ತುಂಬಾ ಖರ್ಚು ಮಾಡಿದರೇನೇ ಉತ್ಪತ್ತಿ ಬರುವುದೆಂದೂ ಹೇಳಿ ಸರ್ಕಾರದ ತತ್ವವು ಒಳ್ಳೆಯದೆಂದು ಹೇಳಿದರು.

ಫಾರೆಸ್ಟು ಮೆಂಬರನು ಮೆ. ಪಿಳ್ಳೆಯವರು ಬಹಳ ಚೆನ್ನಾಗಿ ಹೇಳಿದರೆಂದೂ, ಅದೇ ಬಹಳ ಒಳ್ಳೆಯ ಅಭಿಪ್ರಾಯವಾದ್ದರಿಂದ ತಾನು ಮೆ. ನಾಣಯ್ಯನವರ ಠರಾವಿಗೆ ವಿರೋಧಿಸುತ್ತೇನೆಂದೂ ಹೇಳಿದರು.

ಮೆ. ಬಲ್ಲಚಂಡ ಬೆಳ್ಯಪ್ಪನವರು ಮೆ. ಪಿಳ್ಳೆಯವರ ಭಾಷಣಕ್ಕೆ ತಾನು ವ್ಯಸನ ಪಡುತ್ತೇನೆಂದೂ, ಅವರ ಯೋಚನೆಯು ಸಮರ್ಪಕವಾಗಿಲ್ಲವೆಂದೂ, ಇಷ್ಟು ಆಫೀಸರುಗಳು ಇಲ್ಲಿಗೆ ಬೇಡವೆಂದೂ, ರಿಟ್ರೆಂಚ್‌ಮೆಂಟ್ ಕೂಡಲೇ ಆಗಬೇಕೆಂದೂ ಹೇಳಿದರು.

ಮೆ. ನಾಣಯ್ಯನವರ ಠರಾವು ಮಂಜೂರಾಯಿತು.

ಠರಾವು 7:—8 ಎ ಫಾರೆಸ್ಟಿನ 1,08,240 ರೂ. ಬಜೆಟ್ಟಿನಲ್ಲಿ 26,000 ರೂ. ಕಡಿಮೆ ಮಾಡಬೇಕೆಂದು ಮೆ. ಬಿ. ಶ್ರೀಪತಿರಾಯರು ಠರಾವು ತಂದು ಸರಕಾರದವರು ಗಂಧದ ವಿಷಯದಲ್ಲಿ ಮಾಡುತ್ತಿರುವ ಅಕ್ರಮಗಳನ್ನು 1925ರಿಂದ ಈ ವರೆಗೆ ಕೌನ್ಸಿಲಿನಲ್ಲಿ ತಂದ ಠರಾವಿಗನುಸಾರವಾಗಿ ಅವರು ಕೊಟ್ಟ ಜವಾಬನ್ನು ಕುರಿತು ಸ್ವಾರಸ್ಯವಾಗಿ ವಿವರಿಸಿದ್ದಲ್ಲದೆ 1925ರಲ್ಲಿ ಫಾರೆಸ್ಟ್ ಮೆಂಬರು ಒಣಗಿದ ಗಂಧದ ಮರವೇ ಇಲ್ಲವೆಂದು ಹೇಳಿದರು. ಈಗ ಹೇಗೆ ಸತ್ತ ಮರವು 8,000 ಟನ್ ಆಗಿದೆಯೆಂದು ತಿಳಿಯುವುದಿಲ್ಲ. ಆದ್ದರಿಂದ ಫಾರೆಸ್ಟ್ ಮೆಂಬರು ಹೇಳಿದ್ದು ಯಾವುದೂ ನ್ಯಾಯವಾಗಿಲ್ಲ. ಗಂಧದ ವಿಷಯದಲ್ಲಿ ಇವರ ಪಾಲಿಸಿ ಮನ್ನ ತಿದ್ದಿದ್ದಲ್ಲದೆ ದೇಶಕ್ಕೆ ಹಿತವಾಗಿ ಪ್ರಯೋಜನವಾಗುವುದಿಲ್ಲವೆಂಬುದಾಗಿ ಭಾಷಣ ಮಾಡಿದರು.

ಫಾರೆಸ್ಟ್ ಮೆಂಬರನು ಮೆ. ಶ್ರೀಪತಿರಾಯರ ಯಾವ ಪ್ರಶ್ನೆಗೂ ಸರಿಯಾದ ಉತ್ತರ ಕೊಡಲು ಶಕ್ತರಾಗಲಿಲ್ಲ.

ಮೆ. ಸಿ. ಯಸ್. ಉತ್ತಯ್ಯನವರು ಶ್ರೀಪತಿರಾಯರ ಠರಾವನ್ನು ಅನುಮೋದಿಸಿ ಸರ್ಕಾರದ ಗಂಧದ ಪಾಲಿಸಿಯನ್ನು ಖಂಡಿಸಿ ರೈತರಿಗೆ ಗಂಧ ಬೆಳೆಸಲು ಉತ್ತೇಜನ ಕೊಡಬೇಕೆಂದೂ, ಈ ಬಾಬಿನಲ್ಲಿ ಮೈಸೂರು ಸರ್ಕಾರದವರ ನೀತಿಯನ್ನು ಅನುಸರಿಸಬೇಕೆಂದೂ ಹೇಳಿದರು.

ಮೆ. ಬಲ್ಲಚಂಡ ಬೆಳ್ಯಪ್ಪನವರು ಮೆ. ಬಿ. ಶ್ರೀಪತಿರಾಯರ ಠರಾವಿಗೆ ಅನುಕೂಲವಾಗಿ ಮಾತಾಡಿದರು. ಠರಾವು ಮಂಜೂರಾಯಿತು.

ಠರಾವು 8:—8. ಬಿ. ಫಾರೆಸ್ಟ್ ಬಜೆಟ್ಟಿನಲ್ಲಿರುವ 1,27,210ರಲ್ಲಿ 100 ರೂ ಕಡಿಮೆ ಮಾಡಬೇಕು (1) ಎಕ್ಸ್‌ಟ್ರಾ ಅಸಿಸ್ಟೆಂಟ್ ಕನ್‌ಸರ್ವೇಟರನ್ನು ತೆಗೆದು ಹಾಕಬೇಕು. (2) ಪಾರ್ಸ್ಟ್ ವೆಟರಿನರೀ ಅಸಿಸ್ಟೆಂಟರನ್ನು ತೆಗೆದು ಹಾಕಿ ವ್ಯವಸಾಯ ಇಲಾಖೆಗೆ ಸೇರಿಕೆ ಮಾಡಬೇಕು (3) ಫಾರೆಸ್ಟ್ ರೇಂಜರುಗಳ ಸಂಖ್ಯೆ ಎಷ್ಟು? ಮದ್ರಾಸು ಸರ್ಕಾರಕ್ಕೆ 2,500 ರೂ. ವೇತನಕ್ಕಾಗಿ ಕೊಡುವದೆಂಬ ವಿಷಯದಲ್ಲಿ ಮೆ. ಬಿ. ಶ್ರೀಪತಿರಾಯರು ಠರಾವು ತಂದು ಚರ್ಚೆಯಿಂದ ಸರ್ಕಾರ ಪರ ಮೆಂಬರಿನ ಭರವಸೆಯಿಂದ ಠರಾವನ್ನು ಹಿಂದಕ್ಕೆ ತೆಗೆದುಕೊಂಡರು.

ಠರಾವು 9:—ನೀರಾವರಿ ಕೆಲಸಕ್ಕಾಗಿಟ್ಟಿರುವ 9,500 ರೂ. ಗಳನ್ನು 10,000ಕ್ಕೆ ಏರಿಸಬೇಕು. ಈ ಹಣವನ್ನು ಜನರಲ್ ಅಡ್‌ಮಿನಿಸ್ಟ್ರೇಶನ್ ಬಜೆಟ್ಟಿನಿಂದ ಭರ್ತಿ ಮಾಡಬೇಕೆಂದೂ, ಸರ್ಕಾರದವರು ಗದ್ದೆಗಳಿಗೆ ನೀರು ಸರಬರಾಯಿ ಕೆಲಸಕ್ಕೆ ಹೆಚ್ಚು ಉತ್ತೇಜನ ಕೊಡಬೇಕೆಂತ ಮೆ. ಚೆಪ್ಪುಡಿರ ಪೂವಯ್ಯನವರು ಠರಾವು ತಂದದ್ದು ಓಟಿಗೆ ಹಾಕಲಾಗಿ ಸರ್ಕಾರ ಪರ ಮತ್ತು ಜನರ ಪರ ಮೆಂಬರುಗಳ ಓಟು ಸರಿಯಾಯಿತು ಅಧ್ಯಕ್ಷರು ಸರ್ಕಾರ ಪರ ಓಟು ಮಾಡಿದ್ದರಿಂದ ಠರಾವು ಮಂಜೂರಾಗಲಿಲ್ಲ.

ಠರಾವು 10—22. ಜನರಲ್ ಅಡ್‌ಮಿನಿಸ್ಟ್ರೇಶನ್ 137000 ಬಜೆಟ್ಟಿನಿಂದ 100 ರೂ. ಕಡಿಮೆ ಮಾಡಬೇಕು. ಈ ಠರಾವು ಸಿಬ್ಬಂದಿ ಜಾಸ್ತಿ ಕಮಿಟಿ ನೇಮಕ ಮಾಡಬೇಕೆಂಬ ಉದ್ದೇಶದಿಂದ ತಂದದ್ದಾಗಿದೆಯೆಂಬ ಠರಾವನ್ನು ಮೆ. ಕೊಂಗಂಡ ಗಣಪತ್ತಿಯವರು ತಂದದ್ದನ್ನು ಸರ್ಕಾರದವರು ಅಂಥಾ ಕಮಿಟಿಯನ್ನು ಮಾಡುತ್ತೇವೆಂಬುದಾಗಿ ಒಪ್ಪಿಕೊಂಡದ್ದರಿಂದ ಠರಾವನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು.

ಠರಾವು 11.—22. ಬಿ. ಜನರಲ್ ಅಡ್‌ಮಿನಿಸ್ಟ್ರೇಶನ್ 7,130 ರೂ. ಯಲ್ಲಿ 1. ರೂ. ಕಡಿಮೆ ಮಾಡಬೇಕೆಂಬ ಠರಾವ

(4ನೇ ಪುಟದಲ್ಲಿ ಮುಂದುವರಿದಿದೆ.)

ಕೊಡಗು.

೨೯ ಗಳಿಗೆ ...

ಮಾರ್ಚ ತಾ. ೨೦ ... ಗುರುವಾರ.

ಕೊಡಗಿನ ಸತ್ಯಾಗ್ರಹಿಗಳಿಗೆ ಬಿನ್ನಹ ಪತ್ರ.

ಕೊಡಗು ದೇಶದ ಜನರು ರಾಜಕೀಯ ಚಳವಳದಲ್ಲಿ ಎಷ್ಟರ ಮಟ್ಟಿಗೆ ಮುಂದುವರಿದಿದ್ದಾರೆಂದೂ, ಸತ್ಯಾಗ್ರಹದಿಂದಲಾದ ಸ್ವತಂತ್ರ ಚಳವಳವು ಎಷ್ಟರ ಮಟ್ಟಿಗೆ ದೇಶದ ಜನರನ್ನು ಹುರಿದುಂಬಿಸಿದೆಂಬುದೂ ಕಳೆದ ತಾ. 11ರಲ್ಲಿ ವೀರಾಜಪೇಟೆಯಲ್ಲಿ ಸತ್ಯಾಗ್ರಹ ಮಂಡಳಿಯವರಿಗೆ ದೇಶೀಯರು ಕೊಟ್ಟ ಸ್ವಾಗತದಿಂದಲೂ, ಬಿನ್ನಹ ಪತ್ರದಿಂದಲೂ ಸ್ವತಂತ್ರದ ಶತ್ರುಗಳಾಗಿ ಈ ಚಳವಳವನ್ನು ಗೇಲಿ ಮಾಡುತ್ತಿದ್ದ ಸಂಧಿಗರಿಗಾದರೂ ತಿಳಿಯದೆ ಇರದು.

ಕಳೆದ ಸುಮಾರು ಒಂದು ವರ್ಷದಿಂದ ಈ ದೇಶದಲ್ಲಿ ಆಗುತ್ತಿದ್ದಂತ ಸತ್ಯಾಗ್ರಹ ಕಾರ್ಯಕ್ರಮದ ವಿಷಯದಲ್ಲಿ ಟೀಕೆಯನ್ನು ಮುಂದಿನ ಚರಿತ್ರಕಾರರೇ ಒಪ್ಪಬೇಕು. ದೇಶದ ಸಾಮಾನ್ಯ ಜನರೆಲ್ಲರೂ ಕೊಟ್ಟ ಸಹಾನುಭೂತಿಯು ಬಹು ವಿಶೇಷವಾಗಿದೆ. ಐಶ್ವರ್ಯವಂತರ ಪೈಕಿ ಅನೇಕರೂ ಸಹಾಯ ಮಾಡಿರುತ್ತಾರೆ.

ಸತ್ಯಾಗ್ರಹಿಗಳಿಗೆ ಕೊಟ್ಟ ಬಿನ್ನಹ ಪತ್ರದಲ್ಲಿ ದೇಶೀಯರು "ಕೊಡಗು ದೇಶದ ಜನರು ದೇಶ ದ್ರೋಹಿಗಳಲ್ಲ, ಹಿಂದೀ ಇತರ ಸಹೋದರ ಸಹೋದರಿಯರ ಸಂಸರ್ಗವನ್ನು ಎಂದೂ ಪ್ರಪಂಚಕ್ಕೆ ಸಾರಿದಿರಿ" ಎಂಬುದಾಗಿ ಬರೆಯಲ್ಪಟ್ಟಿದೆ. ಇದು ಎಷ್ಟರ ಮಟ್ಟಿಗೆ ನಿಜವೆಂಬುದನ್ನು ನಾವು ಹೇಳಬೇಕಾಗಿಲ್ಲ. ನಮ್ಮ ದೇಶವನ್ನು ಬ್ರಿಟಿಷರಿಗೆ ಬಿಟ್ಟು ಕೊಟ್ಟ ಕಾಲದಲ್ಲಿ ದೇಶದವರು ಮಾಡಿಕೊಂಡ ತಪ್ಪನ್ನು ತಿಳಿದು ದೇಶದ ಸ್ವಾತಂತ್ರ್ಯವನ್ನು ಪುನಃ ಪಡೆಯಲು ದೇಶದವರು ಕೆಲಸ ಮಾಡಲು ತಯಾರಿದ್ದಾರೆಂತ ದೇಶದವರು ಸಿದ್ಧರಾಗಿದರು.

ಸತ್ಯಾಗ್ರಹ ಮಂಡಳಿಯ ಪರವಾಗಿ ಮಿ. ಬೆಳ್ಯಪ್ಪನವರು ಕೊಟ್ಟ ಉತ್ತರದಲ್ಲಿಯೂ ಸಹ ಕೊಡಗಿನವರು ರಾಜಭಕ್ತರೆಂದು ಪ್ರಸಿದ್ಧಿಗೊಂಡವರು ಈಗ ದೇಶಭಕ್ತರೆಂದೆನ್ನಿಸಿಕೊಂಡಿದ್ದಾರೆಂದು ಹೇಳಿದ್ದಾರೆ. ಇದು ಸಹ ಯಥಾರ್ಥವೇ ಆಗಿದೆ. ಮೊದಲು ಶಾಂತಿ ಪ್ರಿಯರಾಗಿ ಎಷ್ಟೇ ರಾಜಭಕ್ತರಾಗಿದ್ದರೂ ಸ್ವತಂತ್ರ ಸಂಗ್ರಾಮದಲ್ಲಿ ಕೊಡಗಿನ ಸ್ತ್ರೀ, ಪುರುಷರೂ ಸಹ ಭಾಗಿಗಳಾಗಿದ್ದು ಕೊಡಗಿನ ಉನ್ನತಿಯನ್ನು ಹಿಂದೀ ಜನರ ಮುಂದೆ ಒಂದೆರಡು ಅಂಗುಲ ಏರಿಸಿದ್ದಾರೆಂಬುದಾಗಿ ನಾವು ಹೇಳುತ್ತೇವೆ.

ಕೊಡಗಿನಲ್ಲಿ ಇದುವರೆಗೂ ಎಂದೂ ಕಂಡಿರದ ಕೇಳದ ಇಂಥಾ ಜನಸಮೂಹವೂ, ಹತ್ತು ಸಾವಿರಕ್ಕಿಂತ ಹೆಚ್ಚಾಗಿ ಸ್ತ್ರೀ ಪುರುಷರು ಮೆರವಣಿಗೆಯಲ್ಲಿ ಭಾಗ ತೆಗೆದುಕೊಂಡದ್ದೂ, ಪಬ್ಲಿಕಿನವರು ಬಿನ್ನಹ ಪತ್ರ ಒಪ್ಪಿಸಿದ್ದೂ ನೋಡಿದರೆ ಜನರಲ್ಲಿ ಎಷ್ಟರಮಟ್ಟಿಗೆ ಉತ್ಸಾಹವೂ, ರಾಷ್ಟ್ರ ಪ್ರೇಮವೂ, ದೇಶ ಪ್ರೇಮವೂ ಉಕ್ಕಿ ಬರುತ್ತಿದೆ ಎಂಬುದನ್ನು, ಇಂಥಾ ಸ್ವಭಾವಿಕ ದೇಶ ಪ್ರೇಮವನ್ನು ನೋಡುವ ಸರ್ಕಾರವೂ ಸಹ ಬಹಳ ಕಲಿಯಬೇಕಿದೆ.

ದಬ್ಬಾಳಿಕೆಯಿಂದ ಯಾವ ಸರ್ಕಾರವೂ ಸ್ಥಿರ ರಾಜ್ಯಸಂಪಾದನೆಯನ್ನು ಹೊಂದಿದ್ದು ಪ್ರಪಂಚದ ಚರಿತ್ರೆಯಲ್ಲಿಲ್ಲ. ಜನರಿಂದ ಸ್ವಭಾವವಾಗಿ ಉಕ್ಕಿ ಬರುತ್ತಿರುವ ರಾಷ್ಟ್ರೀಯತ್ವವೆಂಬ ಮರದ ಚಿಗುರನ್ನು ತತ್ಕಾಲ ಎಷ್ಟೇ ಕತ್ತರಿಸಿದರೂ, ಅದು ಯಾವನಾದರೊಂದು ದಿನ ದೊಡ್ಡ ಮರವಾಗಿ ಬೆಳೆದು ದಬ್ಬಾಳಿಕೆಯಿಂದ ಕೂಡಿದ ರಾಜ್ಯವನ್ನೇ ನಾಶಮಾಡಿದ್ದು ಚರಿತ್ರೆಯಿಂದ ತಿಳಿಯುತ್ತೆ. ಕಳೆದ ವರ್ಷದಿಂದೀಚೆಗೆ ಆದ ಹಿಂದೂದೇಶದ ದಬ್ಬಾಳಿಕೆಯನ್ನು ಇನ್ನೂ ಸರ್ಕಾರವು ಮುಂದುವರಿಸಿದ ಪಕ್ಷ ಖಂಡಿತವಾಗಿಯೂ ಬ್ರಿಟಿಷ್ ಸರ್ಕಾರವು ಹಿಂದೂದೇಶದಲ್ಲಿ ಚಿರಕಾಲ ನಿಲ್ಲುತ್ತಿರಲಿಲ್ಲ. ಹೇಗೂ ಜಗದೀಶ್ವರನ ಕೃಪೆಯಿಂದ ಮಹಾತ್ಮ ಗಾಂಧಿಯವರಿಗೂ, ವೈಸರಾಯರಿಗೂ ಆದ ಸಂಧಾನದಿಂದ ಇಂಡಿಯಕ್ಕೆ ಖಾಯಂ ಶಾಂತಿ ಸ್ಥಾಪನೆಯಾಗಲೆಂದು ಬಯಸುತ್ತೇವೆ.

ಸತ್ಯಾಗ್ರಹ ಮಂಡಳಿಯವರ ಕೆಲಸಕ್ಕೆ ದೇಶದ ಸಹಾನುಭೂತಿಯು ಪೂರ್ತಿಯಾಗಿದೆಯೆಂಬುದಕ್ಕೆ ತಾರೀಕು 11 ರ ಸ್ವಾಗತವೂ, ಬಿನ್ನಹ ಪತ್ರವೂ ಸಾಕ್ಷಿಯಾಗಿದೆ. ಇನ್ನು ಮುಂದಕ್ಕೂ ಮಂಡಳಿಯವರು ಮಹಾತ್ಮ ಗಾಂಧಿಯವರು ಹೇಳಿದ ಮಾತುಗಳಿಗೆ ಬದ್ಧರಾಗಿ ನಡೆದುಕೊಳ್ಳಲ್ಪಟ್ಟು, ಸತ್ಯಾಗ್ರಹದ ಪೂರ್ಣ ಶ್ರೇಷ್ಠತೆಯನ್ನು ಜನರನ್ನು ಮನಸ್ಸಿಗೆ ತೆಗೆದುಕೊಂಡು ಕೊಡಗು ದೇಶದಲ್ಲಿ ದೇಶಸೇವೆಯನ್ನು, ಪ್ರವೀಣತೆಯನ್ನು ಧರಿಸುವುದನ್ನು ಬಾಳ ನಡೆಸಲು ಕೊಡಗಿನ ಸತ್ಯಾಗ್ರಹ ಮಂಡಳಿಯವರು ಕೆಲಸ ಮಾಡುವರೆಂದು ನಂಬುತ್ತೇವೆ.

ದೇಶೀಯ ಮಹನೀಯರೂ ಸಹ ಇದು ವರೆಗೆ ಮಾಡಿದಂತೆ, ಎಲ್ಲಾ ವಿಧದಲ್ಲಿಯೂ ಸಹಾನುಭೂತಿಯನ್ನು ತೋರಿಸಿ, ಸತ್ಯಾಗ್ರಹಿಗಳ ಕೆಲಸಕ್ಕೆ ಸಹಾಯ ಮಾಡಿದರೆ, ಅವರು ಅವರಿಗೇನೇ ಸಹಾಯ ಮಾಡಿದಂತಾಗುವುದರಲ್ಲಿ ಸಂದೇಹವಿಲ್ಲ. ಹಿಂದೂದೇಶದ ಈ ಇಕ್ಕಟ್ಟಿನ ಸ್ವತಂತ್ರ ಸಂಗ್ರಾಮದ ಸಮಯದಲ್ಲಿ ಪ್ರತಿಯೊಬ್ಬ ಹಿಂದೀಯನು ಅವನ ಕರ್ತವ್ಯವನ್ನು ಮಾಡಬೇಕೆಂದು ಹಿಂದೂದೇಶದ ಕಮಗಳಿಗಳು ಸಾರುತ್ತಿರುವ ಈ ಸಮಯದಲ್ಲಿ ಕೊಡಗಿನ ಜನರೂ ಸಹ ಎಚ್ಚತ್ತು ತಮ್ಮ ಕರ್ತವ್ಯವನ್ನು ಮಾಡಿದರೆ ನಮಗೆ ಮಾತ್ರವಲ್ಲ, ಇಡೀ ಹಿಂದೂದೇಶದ ಸ್ವತಂತ್ರ ಸಾಧನೆಗೆ ಸಹಾಯ ಮಾಡಿದಂತಾಗುವುದು.

ಕೊಡಗಿನ ಮುಂದಿನ ರಾಜಕೀಯ ಪರಿಸ್ಥಿತಿ.

ಹಿಂದೂದೇಶದ ರಾಜಕೀಯ ಪರಿಸ್ಥಿತಿಯು ಕಾಂಗ್ರೆಸಿನ ಪಕ್ಷವಾಗಿ ಮಹಾತ್ಮ ಗಾಂಧಿಯವರಿಂದ ಬೇಗನೇ ವ್ಯವಸ್ಥೆಯಾಗಲಿಕ್ಕಿದೆ. ಮುಂದಿನ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸುವಾಗ ಕಾಂಗ್ರೆಸಿನವರ ಅಭಿಪ್ರಾಯವೇ ಮುಖ್ಯಾಭಿಪ್ರಾಯವಾಗುವುದರಲ್ಲಿ ಸಂದೇಹವಿಲ್ಲ.

ಇಂಥಾ ಸಮಯದಲ್ಲಿ ಕೊಡಗು ದೇಶೀಯರೂ ಎದ್ದೇಳಬೇಕಾಗಿದೆ. ಕೊಡಗು ದೇಶಕ್ಕೆ ಸಂಪೂರ್ಣವಾದ ಪ್ರಜಾ ಜವಾಬ್ದಾರಿ ಸರಕಾರವು ಬೇಡವೆಂದು ಯಾರೂ ಹೇಳುವುದಿಲ್ಲ. ಪ್ರಜಾ ಜವಾಬ್ದಾರಿ ಸರಕಾರವನ್ನು ನಡೆಸಲು ಕಷ್ಟವಿದೆಯೆಂದೂ, ಈ ಕಾರಣದಿಂದ ಇತರ ದೊಡ್ಡ ಪ್ರಾಂತ್ಯಗಳಿಗೆ ಸೇರಿಕೊಳ್ಳುವುದು ಉತ್ತಮವೆಂದೂ ಕೆಲವು ಜನರ ಅಭಿಪ್ರಾಯವೂ ಇದೆ.

ಹಿಂದೂದೇಶದಲ್ಲಿ ಕೊಡಗನ್ನು ಹೋಲುವಂತ ಅಥವಾ ಇದಕ್ಕಿಂತ ಚಿಕ್ಕದಾದ ಅನೇಕ ದೇಶಗಳಿವೆ. ಆ ರಾಜ್ಯಗಳು ತಮ್ಮ ರಾಜ್ಯವನ್ನು ತಮ್ಮ ಉತ್ಪತ್ತಿಗನುಸಾರವಾಗಿ ಖರ್ಚು ಸರಿಪಡಿಸಿಕೊಂಡು ಆಳುತ್ತಿರುವಾಗ ನಮ್ಮ ದೇಶವು ಸಹ ಉತ್ಪತ್ತಿಗೆ ಸರಿಯಾಗಿ ಖರ್ಚು ಮಾಡಿಕೊಂಡು ಏತಕ್ಕಾಗಿ ಆಳಬಾರದೆಂಬುದು ತಿಳಿಯುವುದಿಲ್ಲ. ಜವಾಬ್ದಾರಿಯನ್ನು ಒಂದು ಸಲ ಹೊತ್ತ ನಂತರ ಪ್ರಜಾ ಮುಖಂಡರಿಗೆ ಯಾವ್ಯಾವ ರೀತಿಯಲ್ಲಿ ರಾಜ್ಯಭಾರವನ್ನು ನಡೆಸಬೇಕೆಂಬುದು ಚೆನ್ನಾಗಿ ವೇದ್ಯವಾಗುತ್ತೆ.

ಇಷ್ಟು ಸಣ್ಣ ರಾಜ್ಯದಲ್ಲಿ ಬಹುಮತದಿಂದಿರುವ ಆಡಳಿತದಲ್ಲಿ ಹೆಚ್ಚು ಶ್ರದ್ಧೆ ವಹಿಸಿ ಖಾಯಂ ಜಮೀನುದಾರರಾಗಿರುವ ಒಂದು ಕೋಮಿನವರಿಂದ ಇತರ ಜನರಿಗೆ ತೊಂದರೆ ಬರಬಹುದೋ ಎಂಬುದಾಗಿ ಕೆಲವರು ಯೋಚಿಸುತ್ತಾರೆ. ಅವರು ಈ ರೀತಿ ಯೋಚಿಸುವುದು ಸಹಜವಾದರೂ, ಸ್ವರಾಜ್ಯ ಸರಕಾರದಲ್ಲಿ 18 ವಯಸ್ಸು ಪ್ರಾಯಕ್ಕೆ ಮೀರಿದ ಪ್ರತಿಯೊಬ್ಬನಿಗೂ ಓಟು ಇರುವುದರಿಂದ, ಇಂಥಾ ನ್ಯೂನತೆಗಳನ್ನು ಸುಲಭವಾಗಿ ತಪ್ಪಿಸಿಕೊಳ್ಳಬಹುದು. ಅಲ್ಲದೆ ಡಿಕ್ಲೇರೇಶನ್ ಆಫ್ ರೈಟ್ಸನ್ನು ಬರೆಯುವಾಗ ಖಾಯಂ ಹಕ್ಕು ಮೈನಾರಿಟೀ ಹಕ್ಕು ಭಾಧ್ಯತೆಗಳನ್ನು ಚೆನ್ನಾಗಿ ವ್ಯವಸ್ಥೆಪಡಿಸಬಹುದು.

ಹಿಂದೀ ರಾಜಕೀಯ ಚಳವಳದಲ್ಲಿ ಕೊಡಗು ದೇಶವು ಅದರ ಪಾಲಿಕೆಯನ್ನು ಸರಿಯಾಗಿ ಮಾಡಿರುವುದರಿಂದ, ಕೊಡಗಿನ ಸ್ಥಿತಿಯನ್ನು ಕಾಂಗ್ರೆಸು ಮುಖಂಡರ ಮುಂದಿಟ್ಟು, ಮೇಜರ್ ಪ್ರಾಂತ್ಯಕ್ಕೆ ಕೊಡಲ್ಪಡುವ ಎಲ್ಲಾ ಮಾರ್ಪಾಡನ್ನು ನಮ್ಮ ಪ್ರಾಂತ್ಯದ ಆದಾಯ ವೆಚ್ಚಕ್ಕೆ ಸರಿಯಾಗಿ ನಾವೇ ನಡೆಸಲಿಕ್ಕೆ ಕೊಡುವಂತೆ ಕೇಳುವುದು ಅತ್ಯಾವಶ್ಯವಾಗಿದೆ. ಇಂಥಾ ಸಂದರ್ಭವನ್ನು ಕಳಕೊಳ್ಳದೆ, ಕೊಡಗು ದೇಶದ ಎಲ್ಲಾ ರಾಜಕೀಯಾಭಿಪ್ರಾಯದ ಸಂಸ್ಥೆಗಳು ಮುಂದಕ್ಕೆ ಬಂದು ಕೊಡಗು ದೇಶೀಯರು ಸಂಪೂರ್ಣ ಪ್ರಜಾ ಜವಾಬ್ದಾರಿ ಸರಕಾರಕ್ಕೆ ಅರ್ಹರು ಎಂಬುದನ್ನು ಕೃತಪಡಿಸಲು, ತಡ ಮಾಡುವುದಿಲ್ಲವಾಗಿ ನಂಬುತ್ತೇವೆ.

ಕೌನ್ಸಿಲ್ ಅಧಿವೇಶನ.

ಕೌನ್ಸಿಲಿನಲ್ಲಿ ಬಜೆಟ್ ಚರ್ಚೆಯಾಯಿತು. 1930—31 ನೇ ಇಸವಿಯ ಆದಾಯದಲ್ಲಿ ಅಂದಾಜು ಮಾಡಲ್ಪಟ್ಟ ಉತ್ಪತ್ತಿ ಹರಿಸ್ಸಿದೆ. ಕಾಲು ಲಕ್ಷದಲ್ಲಿ ಎರಡು ಲಕ್ಷದ ಎಂಬತ್ತು ಸಾವಿರ ರೂಪಾಯಿ ಕಡಿಮೆಯಾಗಬಹುದೆಂತ ಅಂದಾಜು ಮಾಡಲಾಗಿದೆ. ಭೂಮಿ ಕಂದಾಯದಲ್ಲಿ ಸುಮಾರು 17,000 ರೂ ಹೆಚ್ಚಾಗಿದೆ. ಫಾರೆಸ್ಟಿನಲ್ಲಿ 2½ ಲಕ್ಷ ಕಡಿಮೆಯಾಗಿದೆ. ಎಕ್ಸೈಸಿನಲ್ಲಿ 59 ಸಾವಿರ ರೂ. ಕಡಿಮೆಯಾಗಿದೆ. ಈ ಸಂಖ್ಯೆಗಳು ಸೆಪ್ಟಂಬರ್ ಅಕ್ಟೋಬರ್ ತಿಂಗಳ ವರೆಗಿನ ಅನುಭವದಿಂದ ತಯಾರಿಸಿರುವದಾಗಿದೆ. ಮಾರ್ಚ ತಿಂಗಳ ಆಖೈರಿನ ನಂತರ ನಿಜವಾದ ಆದಾಯ ಖರ್ಚಿನ ಲೆಕ್ಕ ಸಿಕ್ಕಬೇಕಷ್ಟೆ. ಅರ್ಧ ವರ್ಷದ ಅನುಭವದ ಮೇಲೆ ಬದಲಾಯಿಸಿಕೊಂಡ ಸಂಖ್ಯೆಗಳು ಈ ವರೆಗೂ ಸರಿ ಬಂದಿರಲಿಲ್ಲ. ಈ ವರ್ಷ ಏನಾಗುತ್ತದೋ ನೋಡಬೇಕಷ್ಟೆ.

ಫಾರೆಸ್ಟ್ ಇಲಾಖೆಯಲ್ಲಿ ಉತ್ಪತ್ತಿಯು 2½ ಲಕ್ಷ ರೂ ಕಡಿಮೆಯಾದರೂ ಖರ್ಚು ಬರೀ 32 ಸಾವಿರ ರೂಪಾಯಿ ಮಾತ್ರ ಕಡಿಮೆ ಮಾಡಿರುವದಾಗಿದೆ. ಈಗಲಾದರೂ ಈ ಇಲಾಖೆಯ ದೊಡ್ಡ ಖರ್ಚಿನ ಕಡೆಗೆ ಸರ್ಕಾರದ ದೃಷ್ಟಿ ಬಿದ್ದೀತೆಂದೇ ಎಣಿಸಬೇಕಾಗಿದೆ. ಯುದ್ಧ ಕಾಲದಲ್ಲಿ ಮಹಾಯುದ್ಧದಲ್ಲಿ ಚಿನ್ನವೇ ಅಗೆದು ತೆಗೆಯುವಷ್ಟು ಪ್ರಯೋಜನ ಮಾಡಿಕೊಳ್ಳಬಹುದೆಂತ ಇಂಡಿಯಾ ಸರಕಾರವನ್ನು ನಂಬಿಸಿ 6—7 ಲಕ್ಷದ ವರೆಗೆ ಗಂಧವನ್ನು ಮಾರಿ ಉತ್ಪತ್ತಿ ತೋರಿಸಿ ಹೆಚ್ಚಿಸಿಕೊಂಡ ಸಿಬ್ಬಂದಿಯನ್ನು ಇನ್ನೂ ಇಳಿಸಬೇಕಾದದ್ದು ಇಳಿಸಲಿಲ್ಲವೆಂದರೆ ನಾಚಿಕೆ ಕೇಡೇ ಸರಿ. ಬಜೆಟ್ಟಿನ ಗುಟ್ಟುಗಳು ಕೌನ್ಸಿಲಿನ ಮೂಲಕ ಜನರ ಪ್ರತಿನಿಧಿಗಳಿಗೆ ತಿಳಿಯಲಿಕ್ಕೆ ಶುರುವಾದಂದಿನಿಂದಲೂ ಈ ವರೆಗೂ ಈ ಇಲಾಖೆಯ ಖರ್ಚನ್ನು ಈ ಇಲಾಖೆಯ ಗಂಧದ ಉತ್ಪತ್ತಿ ವಿನಹ ಇತರ ಉತ್ಪತ್ತಿಗಳಿಂದಲೇ ಮಾಡಿಕೊಳ್ಳಬೇಕೆಂಬ ಜನರ ವಾದಕ್ಕೆ ಕಿವಿ ಕೊಟ್ಟಿದ್ದರೆ ಗಂಧದ ಉತ್ಪತ್ತಿಯಿಂದ ದೇಶಕ್ಕೆ ಪ್ರಯೋಜನಕರವಾದ ಎಷ್ಟೋ ಖರ್ಚುಗಳನ್ನು ವಹಿಸಿಕೊಂಡು ಸರ್ಕಾರಕ್ಕೆ ಹೆಚ್ಚು ಉತ್ಪತ್ತಿ ದೊರೆಯುವ ರೀತಿ ಮಾಡಿಕೊಳ್ಳಬಹುದಿತ್ತು. ದಕ್ಷಿಣ ಕೊಡಗಿನಲ್ಲಾಗಲೀ, ಉತ್ತರ ಕೊಡಗಿನಲ್ಲಾಗಲೀ ಯಾವುದಾದರೂ ನಾಲೆ ಕೆಲಸಕ್ಕೆ ಈ ಗಂಧ ಉತ್ಪತ್ತಿಯನ್ನು ಹಾಕಿದ್ದರೆ ಸರ್ಕಾರಕ್ಕೆ ಆ ಹಣದ ಮೇಲೆ ಬಡ್ಡಿಯಾದರೂ ಬರುತ್ತಿತ್ತು. ಸರ್ಕಾರವು ಹಿಡಿದ ಹಟವನ್ನು ಬಿಡದೆ ಮಾಡಿದ ದುಂದುಗಾರಿಕೆಯನ್ನು ಯೋಚಿಸಿದರೆ ಯಾವ ರೈತನಿಗಾದರೂ ಕಣ್ಣು ನೀರು ಬರದೆ ಇರದು.

ಎಕ್ಸೈಸ್ ಇಲಾಖೆಯಲ್ಲು 59,000 ರೂ. ಉತ್ಪತ್ತಿ ಕಡಿಮೆಯಾಗಲು ಪಿಕೆಟಿಂಗ್ ಮಾತ್ರವಲ್ಲದೆ ಆರ್ಥಿಕ ಸ್ಥಿತಿಯು ಕಾರಣವಾಗಿದೆಯೆಂತ ಕಮಿಶನರವರು ಹೇಳಿದರು. ಎರಡನೇ ಕಾರಣವು ಕೆಲವು ಮಟ್ಟಿಗೆ ನಿಜವಾದರೂ ಕೊಡಗಿನಲ್ಲಿ ಎಕ್ಸೈಸ್ ಉತ್ಪತ್ತಿ ಕಡಿಮೆಯಾಗಲು ಸತ್ಯಾಗ್ರಹಿಗಳ ಪಿಕೆಟಿಂಗೇ ಮುಖ್ಯ ಕಾರಣವೆಂತ ನಮ್ಮ ಅಭಿಪ್ರಾಯ. ಸರಕಾರದ ಉತ್ಪತ್ತಿಯು 59,000 ರೂ. ಕಡಿಮೆಯಾದರೆ ವ್ಯಾಪಾರಿಗಳ ಲಾಭ ಇದರ ಅರ್ಧವಾದರೂ ಇರಬಹುದು. ಹೇಗೂ ಸುಮಾರು 1 ವರ್ಷ ಸತ್ಯಾಗ್ರಹಿಗಳು ಗ್ರಾಮಗಳಲ್ಲಿ ಮಾಡಿದ ಬೋಧನೆಯಿಂದಲೂ, ಅಂಗಡಿಗಳ ಮುಂದೆ ಪಿಕೆಟ್ ಮಾಡಿದ್ದರಿಂದಲೂ ಮುಕ್ಕಾಲು ಲಕ್ಷ ರೂ. ದೇಶದ ರೈತರಲ್ಲೇ ಉಳಿಯಿತೆಂಬುದನ್ನು ದೇಶದವರು ತಿಳಿದುಕೊಂಡರೆ ಈ ಸತ್ಯಾಗ್ರಹಿಗಳ ಊಟೋಪಚಾರಕ್ಕೆ ಸಹಾಯ ಕೊಟ್ಟವರಿಗೂ ಇವರ ಬೋಧನೆಗೆ ಕಿವಿ ಕೊಟ್ಟವರಿಗೂ ತುಂಬಾ ತೃಪ್ತಿಯಾಗದಿರದು. ಇವರ ಕೆಲಸದಿಂದ ಸರಕಾರದ ಖರ್ಚಿಗೆ ಸ್ವಲ್ಪ ತೊಂದರೆಯಾಗಿರಬಹುದಾದರೂ ಇವರ ಕೆಲಸದಿಂದ ದೇಶಕ್ಕೆ ಆದ ಆರ್ಥಿಕ ಪ್ರಯೋಜನ ಮುಖ್ಯ. ಅದಕ್ಕಿಂತಲೂ ಹೆಚ್ಚಾದ 75 ಸಾವಿರ ರೂ. ಕ್ರಯದ ನಿಶಾ ಸೇವನೆ ಮಾಡಿ ಕೆಡುತ್ತಿದ್ದ ಜನರಿಗೆ ಆದ ನೈತಿಕ ಪ್ರಯೋಜನವೂ ಬಹಳ ಮುಖ್ಯವಾದ ಸಹಾಯವೆಂತ ಸರಕಾರವೂ ಸಹ ಒಪ್ಪಬೇಕಾದ ವಿಷಯವಾಗಿದೆ.

ಮುಂದಿನ ವರ್ಷದ ಬಜೆಟ್ಟಿನಲ್ಲಿ ಎಕ್ಸೈಸ್ ಉತ್ಪತ್ತಿಯು ಕಳೆದ ವರ್ಷದ ಅಂದಾಜಿಗಿಂತ 67,000 ರೂ. ಕಡಿಮೆ ಅಂದಾಜು ಮಾಡಲಾಗಿದೆ. ಸಾರಾಯಿ, ಸೇಂದಿ ಅಂಗಡಿಗಳು ಹರಾಜಾದ ನಂತರ ಕಾಂಗ್ರೆಸಿಗೂ, ಸರಕಾರಕ್ಕೂ ರಾಜಿಯಾದದ್ದರಿಂದ ಇನ್ನು ಮೇಲೆ ಪಿಕೆಟ್ ನಿಂತು ಕುಡುಕತನವು ಹಿಂದಿನ ವರ್ಷಗಳಂತೆಯೇ ಇರಬಹುದು ಎಂತ ಒಪ್ಪಿ ಮೆಂಬರು ಊಹಿಸಿ ಅಂಗಡಿಗಳನ್ನು ಪುನಃ ಹರಾಜು ಮಾಡಬೇಕೆಂತ ಹವಾಲು ತಂದಿದ್ದರು. ಈ ಮೆಂಬರು ಊಹಿಸಿದ ರೀತಿ ದೇಶದಲ್ಲಿ ಕುಡುಕತನವು ಹೆಚ್ಚದಂತೆ ನೋಡಿಕೊಳ್ಳುವುದು ಜನರ ಕೈಯಲ್ಲಿದೆ. ಸತ್ಯಾಗ್ರಹಿಗಳು ಪಿಕೆಟ್ ಮಾಡಬಾರದೆಂತ ರಾಜಿ ಶರತ್ತಿಲ್ಲ. ಬೇರೆ ಕಡೆಗಳಲ್ಲಿ ಈಗಲೂ ಪಿಕೆಟ್ ನಡೆಯುತ್ತಲೇ ಇದೆ. ಈ ದೇಶದ ಸತ್ಯಾಗ್ರಹಿಗಳು ವಾರಕ್ಕೊಂದು ದಿನ (ಸಂತೆ ದಿನ) ಪಿಕೆಟ್ ಮಾಡುತ್ತಾರೆಂತ ತಿಳಿಯುತ್ತೇವೆ. ಹೀಗೆ ಪಿಕೆಟ್ ಮಾಡುವುದೂ ಅಲ್ಲದೆ ಸ್ವಯಂ ಸೇವಕರು ಗ್ರಾಮಗಳೊಳಗೆ ಬೋಧಿಸುವ ಕೆಲಸವನ್ನೂ ಮಾಡಲು ನಿಶ್ಚೈಸಿರುತ್ತಾರೆ. ಗ್ರಾಮವಾಸಿಗಳು ಸ್ವಯಂ ಸೇವಕರಿಗೆ ಸಹಾಯಕೊಟ್ಟು ಈಗ ಉಂಟಾಗಿರುವ ಉತ್ಸಾಹವು ಕಡಿಮೆಯಾಗಲು ಬಿಡಬಾರದೆಂತ ವಿಜ್ಞಾಪಿಸಿಕೊಳ್ಳುತ್ತೇವೆ. ಸರಕಾರವು ಈಗ ಮಾಡಿರುವ ಅಂದಾಜು ಕಡ ಹೆಚ್ಚಾಯಿತೆಂತ ತೋರಿಸ ಬೇಕಾದದ್ದು ದೇಶದವರ ಕರ್ತವ್ಯ.

ದೇಶದ ಬಹಳ ಉಪಯುಕ್ತವಾದ ಬಾಬಿಗೂ ಖರ್ಚಿಗೆ ಹಣವಿಲ್ಲ. ಇರುವ ಆಡಳಿತವು ನಡೆಯುತ್ತಾ ಹೋಗುವಂತೆ ಆದಾಯ ವೆಚ್ಚದ ಪಟ್ಟಿಯನ್ನು ತಯಾರಿಸುವುದೇ ಕಷ್ಟಸಾಧ್ಯವಾಗಿದೆ. ಹಿಂದೂಸ್ಥಾನದ ಇತರ ಕಡೆಗಳಂತೆ ಇಲ್ಲಿಯೂ ಸರ್ಕಾರದ ಆಡಳಿತದ ಖರ್ಚನ್ನು ಕಡಿಮೆ ಮಾಡಲು ಸಲಹೆ ಕೊಡಲು ಒಂದು ಕಮಿಟಿಯು ನೇಮಕವಾಗಲು ನಿಶ್ಚಯವಾಗಿದೆಯಂತೆ, ಸರ್ಕಾರದ ಉತ್ಪತ್ತಿಯನ್ನು ಹೆಚ್ಚಿಸಲು ದಾರಿ ಇದೆಯೋ ಎಂತ ನೋಡುವುದೂ ಈ ಕಮಿಟಿಯ ಕೆಲಸವೆಂತಲೂ ತಿಳಿಯುತ್ತೇವೆ. ಈ ಕಮಿಟಿಯು ದೇಶದಲ್ಲಿ ಸ್ವರಾಜ್ಯ ಸರ್ಕಾರ ನಡೆಸಲು ಸಾಧ್ಯವಾಗುವಂತೆ ಉತ್ಪತ್ತಿಗೆ ತಕ್ಕಂತೆ ಖರ್ಚಾಗುವ ಆಡಳಿತ ರಚನೆಯನ್ನು ತಯಾರಿಸಬೇಕೆಂತ ಅಪೇಕ್ಷಿಸುತ್ತೇವೆ.

ಗೇಣಿಮಲೆಗಳ ಕಂದಾಯ ಮಾಫಿ.

ಇಲಾಚಿ ವ್ಯವಸಾಯಗಾರರಿಗೆ ಚೀಫ್ ಕಮಿಶನರವರು ಕೊಟ್ಟ ರಿಯಾಯಿತಿಗಳು ಕೆಳಗೆ ಪ್ರಕಟಿಸಿರುತ್ತೇವೆ. ಚೀಫ್ ಕಮಿಶನರವರು ಇಲಾಚಿ ವ್ಯವಸಾಯಗಾರರ ಕಷ್ಟಗಳನ್ನು ತಿಳಿದು ಮಾಡಿದ ಸಹಾಯಕ್ಕೆ ಇಲಾಚಿ ಮಲೆಗಾರರು ಕೃತಜ್ಞರಾಗಿರುತ್ತಾರೆ. ಇಲಾಚಿ ಮಲೆಗಳ ಸಂಬಂಧವಾಗಿ ಇನ್ನೂ ಕೆಲವು ಸುಧಾರಣೆಗಳು ಆಗಲಿಕ್ಕಿವೆ. ಸಂಬಂಧ ಪಟ್ಟವರ ಸಲಹೆಗಳನ್ನು ತೆಗೆದುಕೊಂಡು ಮಾಡಬೇಕಾದ ಬದಲಾವಣೆಗಳನ್ನೆಲ್ಲಾ ಮಾಡಿಯಾರೆಂತ ನಂಬುತ್ತೇವೆ.

ಕೊಡಗು ಕೌನ್ಸಿಲ್ ಮೀಟಿಂಗು.

(೭ನೇ ಪುಟದಿಂದ ಮುಂದುವರಿದದ್ದು.)

ನ್ನು ಮೆ. ಬಿ. ಬೆಳ್ಯಪ್ಪನವರು ತಂದು ಈ ವಿಷಯ ಕೌನ್ಸಿಲ್ ರಿಪೋರ್ಟನ್ನು ಸಿಬ್ಬಂದಿ ಕಮಿಟಿಯ ಕಾರಣದಿಂದ ತೆಗೆದುಹಾಕಬೇಕೆಂಬದಕ್ಕಾಗಿ ತಂದಿದ್ದೇನೆಂದು ಹೇಳಿದರು. ಸರ್ಕಾರ ಮೆಂಬರನ ಭಾಷಣವಾದನಂತರ ವಾಪಸು ತೆಗೆದುಕೊಂಡರು.

ಠರಾವು 12.—22 ಇ. ಜನರಲ್ ಅಡ್‌ಮಿನಿಸ್ಟ್ರೇಶನ್ 1,01,770 ರೂಪಾಯಿಗಳಿಂದ ಒಂದು ರೂಪಾಯಿ ಕಡಿಮೆ ಮಾಡಬೇಕೆಂದೂ, ಈ ಠರಾವು ಚಿಕ್ಕ ಉದ್ಯೋಗಸ್ಥರ ನೇಮಕ ಮತ್ತು ವರ್ಗಾವರ್ಗಿಯ ವಿಷಯ ಚರ್ಚೆಮಾಡಲಿಕ್ಕೂ, ಸಧ್ಯದಲ್ಲಿ ಆರ್ಥಿಕ ಸ್ಥಿತಿಯು ಕೆಟ್ಟು ಹೋದದ್ದರಿಂದ ಅದರ ನಿವಾರಣೆ ಬಗ್ಗೆ ಚರ್ಚೆ ಮಾಡಲಿಕ್ಕೂ ತಂದದ್ದೆಂದು ಮೆ. ಬಿ. ಶ್ರೀಪತಿರಾಯರು ಸೂಚಿಸಿ, ಠರಾವನ್ನು ಚೆನ್ನಾಗಿ ವಿವರಿಸಿದ ನಂತರ ಸರಕಾರ ಮೆಂಬರ ಜವಾಬು ಆಯಿತು. ಠರಾವನ್ನು ಮೆ. ಶ್ರೀಪತಿರಾಯರು ವಾಪ್ಸು ತೆಗೆದುಕೊಂಡರು.

ಠರಾವು 13:—22 ಇ, ಜನರಲ್ ಅಡ್ಮಿನಿಸ್ಟ್ರೇಶನ್ನ ಬಡ್ಜೆಟ್ 1,01,770, ರೂಪಾಯಿಯಿಂದ ಒಂದು ರೂಪಾಯಿ ಕಡಿಮೆ ಮಾಡಬೇಕೆಂದೂ, ಈ ಠರಾವು, ಉದ್ಯೋಗಸ್ಥರಿಗೆ ಸರ್ವೀಸಾದ ನಂತರ ಎಕ್ಸ್‌ಟೆನ್‌ಶನ್ ಕೊಡುವುದನ್ನು ಮನ್ನಿಸುವ ಉದ್ದೇಶದಿಂದ ತಂದದ್ದೆಂತಲೂ, ಮೆ. ಬಿ. ಬೆಳ್ಯಪ್ಪನವರು ಹೇಳಿದರು. ಇದಕ್ಕೆ ಒತ್ತಾಸೆಯಾಗಿ ಮೆ. ಪುಚ್ಚಿಮಾಡ ನಾಣ್ಯಯ್ಯನವರು ಮಾತಾಡಿದರು. ಮೆ. ತಿರುವಂಗಡ ಪಿಳ್ಳಿಯವರು, ಸರಕಾರವು ಇಂಥಾ ವಿಷಯದಲ್ಲಿ ತಿಳುವಳಿಕೆಯುಳ್ಳವರೆಂತಲೂ, ಇಂಥಾ ವಿಷಯಗಳನ್ನು ಕೌನ್ಸಿಲಿನಲ್ಲಿ ತಂದರೆ, ಕೌನ್ಸಿಲಿನ ಸ್ಥಿತಿಯು ಗ್ರಾಮ ಸಭೆಗಳಂತೆ ಆಗುವುದೆಂದೂ, ಕಮಿಶನರವರ ಹೇಳಿಕೆಗೆ ಒಳಪಡಬೇಕೆಂದೂ ವಿಸ್ತಾರವಾಗಿ ಹೇಳಿದರು; ಅದಕ್ಕೆ ಮೆ. ಬಿ. ಎ. ಬೆಳ್ಯಪ್ಪನವರು, ಮೆ. ತಿರುವಂಗಡ ಪಿಳ್ಳೆಯವರ ತಿಳಿಗೇಡಿತನಕ್ಕೆ ಬಹಳ ವ್ಯಸನಪಡಬೇಕೆಂತಲೂ, ತನ್ನ ಜನರನ ಹೇಳಿಕೆಯನ್ನು ಅವರು ಹೇಳುತ್ತಾರೆಂತಲೂ, ಈ ತರದ ಚರ್ಚೆಯಿಂದಲೇ ಈ ಮೀಟಿಂಗು ಗ್ರಾಮ ಸಭೆಯಾಗುವುದೆಂದೂ ಹೇಳಿದರು.

ಕಮಿಶನರರು, ತನಗೆ ಆಡಳಿತದ ವಿಷಯದಲ್ಲಿ ಏನು ಮಾಡಬೇಕೆಂಬುದು ಗೊತ್ತಿದೆಯೆಂತಲೂ, ನ್ಯಾಯ ರೀತಿ ಮಾಡಿದ್ದೇನೆಂತಲೂ, ಈಗಾಗಲೇ ಒಬ್ಬರಿಗೆ ಮಾತ್ರ ಅವಧಿ ಹೆಚ್ಚಿಸಿದ್ದೆಂತಲೂ ವಿಸ್ತಾರವಾಗಿ ಹೇಳಿದ ನಂತರ ಠರಾವು ವಾಪ್ಸು ತೆಗೆಯಲಾಯಿತು.

ಠರಾವು 14:—22 ಇ, ಜನರಲ್ ಎಡ್ಮಿನಿಸ್ಟ್ರೇಶನ್ನಿನ ಬಡ್ಜೆಟ್ 1,01,770 ರೂ, ಯಲ್ಲಿ 1—0—0 ಕಡಿಮೆ ಮಾಡಬೇಕೆಂದೂ, ಈ ಠರಾವು ರೈತರಿಗೆ ಕಂದಾಯ ಕಟ್ಟುವಾಗ ಕಂತನ್ನು ಹೆಚ್ಚು ಮಾಡಿ ಕೊಡಬೇಕೆಂಬ ಉದ್ದೇಶವನ್ನು ಚರ್ಚೆಮಾಡಲಿಕ್ಕೆ ತಂದದ್ದೆಂದೂ, ರೈತರಿಗಿರುವ ಹಣದ ಅಭಾವವನ್ನು ಮೆ. ಬಿ. ಎ. ಬೆಳ್ಯಪ್ಪನವರು ವಿವರಿಸಿದರು.

ಅದಕ್ಕೆ ಸರಕಾರ ಪರ ಮೆಂಬರಾದ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ಈ ವಿಷಯ ಆಯಾಯ ವಾರುಪತ್ಯಗಾರರಿಗೆ ಉಚಿತ ರೀತಿಯಲ್ಲಿ ನಡೆಯಲು ಹುಕುಂ ಮಾಡಿದ್ದೇನೆಂದೂ, ಅವಧಿ ಹೆಚ್ಚಿಸಲು ಸಾಧ್ಯವಿಲ್ಲವೆಂದೂ ಅವಧಿ ಕೊಡಬೇಕಾದ ಸಂದರ್ಭಗಳಲ್ಲಿ ಖಂಡಿತವಾಗಿ ಅವಧಿ ಕೊಡುತ್ತೇನೆಂದು ಹೇಳಿದರು.

ಠರಾವನ್ನು ಮೆ. ಬೆಳ್ಯಪ್ಪನವರು ವಾಪಸು ತೆಗೆದುಕೊಂಡರು,

ಠರಾವು 15:—24, ೩. ಬಡ್ಜೆಟ್ಟಿನ 32,045 ರೂ, ಯಲ್ಲಿ 1—0—0 ರೂ ಕಡಿಮೆ ಮಾಡಬೇಕೆಂದೂ, ವೀರಾಜಪೇಟೆಯ ಮುನಸೀಫರ ನೇಮಕದ ವಿಷಯದಲ್ಲಿ ಚರ್ಚೆ ಮಾಡಲಿಕ್ಕೆ ತಂದಿದ್ದನ್ನು ಮೆ. ಬಿ. ಎ ಬೆಳ್ಯಪ್ಪನವರು ಚರ್ಚೆ ಮಾಡದೇನೇ ವಾಪಸು ತೆಗೆದುಕೊಂಡರು.

ಠರಾವು 16:—24, ಡಿ ಯಲ್ಲಿರುವ 15,480 ರೂಪಾಯಿಗಳಲ್ಲಿ 1/ ರೂ. ಕಡಿಮೆ ಮಾಡಬೇಕೆಂದೂ, ಈ ಠರಾವು ಶನಿವಾರ ಸಂತೆಯಲ್ಲಿ ಬೆಂಚು ಕೋರ್ಟು ಮಾಡಬೇಕೆಂಬುದನ್ನು ಚರ್ಚಿಸಲು ತಂದದ್ದೆಂದೂ ಮೆ. ಪಾಂಡಂಡ ಚಂಗಪ್ಪನವರು ಹೇಳಿದರು. ಅಲ್ಲದೆ ಶನಿವಾರಸಂತೆ ಹೋಬಳಿಯವರಿಗೆ ಚಿಲ್ಲರೆ ಮೊಕದ್ದಮೆಗೆ ಸೋಮವಾರಪೇಟೆಗೆ ಹೋಗುವುದು ಕಷ್ಟವೆಂತಲೂ, ಆದ್ದರಿಂದ ಶನಿವಾರಸಂತೆಯಲ್ಲಿ ಒಂದು ಬೆಂಚು ಕೋರ್ಟು ಮಾಡುವುದು ಅನುಕೂಲವೆಂತಲೂ ಹೇಳಿದರು.

ಕಮಿಶನರವರು ಶನಿವಾರಸಂತೆ ಹೋಬಳಿಯಿಂದ ವರ್ಷಕ್ಕೆ ಸರಾಸರಿ 44, 45 ಕೇಸುಗಳು ಮಾತ್ರ ಸೋಮವಾರಪೇಟೆಗೆ ಹೋಗುವುದರಿಂದ ಬೆಂಚು ಕೋರ್ಟಿನ ಅವಶ್ಯಕತೆ ಕಾಣುವುದಿಲ್ಲವೆಂದು ಹೇಳಿದರಿಂದ ಠರಾವು ವಾಪಸು ತೆಗೆಯಲ್ಪಟ್ಟಿತು.

ಠರಾವು 17:—25. ಜೈಲ್ ಬಡ್ಜೆಟ್ 12,400 ರೂ ಗಳಲ್ಲಿ 100 ರೂ. ಕಡಿಮೆ ಮಾಡಬೇಕೆಂದೂ, ಮಡಿಕೇರಿಯಲ್ಲಿಯೇ ಎಲ್ಲಾ ಕೈದಿಗಳನ್ನಿಟ್ಟುಕೊಳ್ಳಲು ಏರ್ಪಾಡು ಮಾಡಬೇಕೆಂದೂ, ಹೀಗೆ ಮಾಡಿದರೆ ಜೈಲಿಗೆ ಉತ್ಪತ್ತಿ ಹೆಚ್ಚಾಗುತ್ತದೆಂದೂ ಮೆ. ಕೊಂಗಂಡ ಗಣಪತ್ತಿಯವರು ಠರಾವು ತಂದರು.

ಕಮಿಶನರವರು ಇದು ಸಾಧ್ಯವಿಲ್ಲವೆಂದು ಜವಾಬು ಕೊಟ್ಟನಂತರ ಠರಾವನ್ನು ವಾಪಸು ತೆಗೆದುಕೊಳ್ಳಲಾಯಿತು,

ಠರಾವು 18—26 ಪೋಲೀಸ್ ಬಡ್ಜೆಟಿನ 98,300 ರೂಪಾಯಿಗಳಲ್ಲಿ 100/ರೂ. ಕಡಿಮೆ ಮಾಡಬೇಕೆಂದೂ, ಈಗಿನ ಪೋಲೀಸು ಆಡಳಿತ ಕ್ರಮವು ಸರಿ ಇಲ್ಲವೆಂದೂ ತಂದ ಠರಾವನ್ನು ಚರ್ಚೆಮಾಡದೇನೇ ಮೆ. ಕೊಂಗಂಡ ಗಣಪತ್ತಿಯವರು ವಾಪ್ಸು ತೆಗೆದುಕೊಂಡರು.

ಠರಾವು 19—ಪೋಲೀಸು ಬಡ್ಜೆಟ್ 98,300 ರೂಪಾಯಿಗಳಲ್ಲಿ ಒಂದು ರೂಪಾಯಿ ಕಡಿಮೆ ಮಾಡಬೇಕೆಂದೂ, ಪೋಲೀಸು ಡಿಪಾರ್ಟುಮೆಂಟಿನ ಸ್ಥಿತಿಯು ಸರಿಯಾಗಿಲ್ಲವಾದ್ದರಿಂದ ಇದಕ್ಕೆ ತಕ್ಕ ಸಾಧನೋಪಾಯಗಳನ್ನು ಕಲ್ಪಿಸಬೇಕೆಂದೂ, ಮೆ. ಪಿ. ಬಿ. ಐಯ್ಯಮ್ಮನವರು ಠರಾವು ತಂದು ಪೋಲೀಸು ಸಿಬ್ಬಂದಿಗಳನ್ನು ಹೆಚ್ಚಿಸಬೇಕೆಂದೂ ಸೂಚಿಸಿದರು.

ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ಕಳೆದ ಆರೇಳು ವರ್ಷದ ಮೊಕದ್ದಮೆಗಳ ಸಂಖ್ಯೆಯನ್ನು ವಿವರಿಸಿ ಹೇಳಿ ಪೋಲೀಸು ಡಿಪಾರ್ಟುಮೆಂಟಿನ ಕೆಲಸವು ಚೆನ್ನಾಗಿದೆಯೆಂದೂ, ಠರಾವು ತಂದವರು ಹೇಳಿದಂತೆ ಸ್ಥಿತಿಯು ಕೆಟ್ಟು ಹೋಗಿಲ್ಲವೆಂದೂ, ಹಣದ ಅಭಾವದಿಂದ ಸಿಬ್ಬಂದಿಯನ್ನು ಹೆಚ್ಚಿಸಲಾಗುವುದಿಲ್ಲವೆಂದೂ, ಪಬ್ಲಿಕ್ ಮಹಾ ಜನರೆಲ್ಲರೂ ಡಿಪಾರ್ಟುಮೆಂಟಿನವರೊಡನೆ ಚೆನ್ನಾಗಿ ಸಹಕರಿಸದೆ ಹೋದರೆ ಕೇಸುಗಳ ಪತ್ತೆಯು ಬಹಳ ಕಷ್ಟವೆಂದೂ ಮಾತಾಡಿದ ನಂತರ ಮೆ. ಐಯ್ಯಮ್ಮನವರು ಠರಾವನ್ನು ವಾಪ್ಸು ತೆಗೆದುಕೊಂಡರು.

ಠರಾವು 20—31 ವಿದ್ಯಾ ಇಲಾಖೆಯ ಬಡ್ಜೆಟಿನ 1,65,000 ರೂಪಾಯಿಗಳಲ್ಲಿ 100 ರೂ. ಕಡಿಮೆ ಮಾಡಬೇಕೆಂದೂ, ವೀರಾಜಪೇಟೆ ಹೈಸ್ಕೂಲಿನಲ್ಲಿ ಹುಡುಗಿಯರನ್ನು ಸೇರಿಸಲಾಗುವುದಿಲ್ಲವೆಂಬುದಾಗಿ ಶಾಲಾಧಿಕಾರಿಗಳು ಮಾಡಿದ ಹುಕುಂನ್ನು ಖಂಡಿಸಲಿಕ್ಕಾಗಿ ಈ ಠರಾವು ತಂದದ್ದೆಂದು ಮೆ. ಕೊಂಗಂಡ ಗಣಪತ್ತಿಯವರು ಸೂಚಿಸಿದರು. ಇಂಥಾ ಠರಾವು ತರಲು ಕಾರಣವೇನೆಂದೂ, ಇದು ಬಹಳ ವಿಶೇಷವೆಂದೂ, ಮಡಿಕೇರಿ ಕಾನ್‌ವೆಂಟನ್ನು ಪ್ರೋತ್ಸಾಹಿಸಲು ಈ ಠರಾವು ತಂದದ್ದೇನೋ ಎಂಬುದಾಗಿ ಮೆ. ಗಣಪತ್ತಿಯವರು ಮಾತಾಡಿದರು. ಹೈಸ್ಕೂಲಿನಲ್ಲಿ ಸ್ಥಳದ ಅಭಾವಕ್ಕಾಗಿ ಈ ತರದ ಹುಕ್ಕುಂ ಮಾಡಿದ್ದೇನೆಂದೂ, ಇದು ಹುಡುಗಿಯರಿಗೆ ಮಾತ್ರವಲ್ಲ, ಚುರುಕಿಲ್ಲದ ಹುಡುಗ ಮತ್ತು ಹುಡುಗಿಯರಿಗೆ ವ್ಯಾಪಿಸುವುದೆಂದೂ ಶಾಲಾ ಇನ್ಸ್‌ಪೆಕ್ಟರು ಹೇಳಿದರು.

ಇದಕ್ಕೆ ಜವಾಬಾಗಿ ಮೆ. ಸಿ ಯಮ್ ಉತ್ತಯ್ಯನವರು ಹೇಳಿದ್ದೇನೆಂದರೆ—ವೀರಾಜಪೇಟೆ ಹೈಸ್ಕೂಲ್ ಎಷ್ಟು ವ್ಯಾಪ್ತಿಗೆ ಬರುತ್ತಾ ಇದೆಯೆಂದು ನಾನು ಹೇಳಲಾರೆ. ಮಡಿಕೇರಿ ಕಾನ್‌ವೆಂಟಿಗೆ ವಿದ್ಯಾರ್ಥಿಗಳನ್ನು ಕಳುಹಿಸಲಿಕ್ಕೆ ಅನುಕೂಲಸ್ಥರಿಗೆ ಮಾತ್ರ ಆಗುತ್ತೆ. ಗರೀಬರಿಗೆ ಸಾಧ್ಯವಿಲ್ಲ.

ಸ್ತ್ರೀಯರ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವ ಬದಲು ಈ ರೀತಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಅಡಚಣೆ ತರುವುದು ನಾಚಿಕೆಗೇಡಿನ ಸಂಗತಿ. ಹೆಡ್ ಮಾಸ್ಟರವರು ಶಾಲಾ ವಾರ್ಷಿಕೋತ್ಸವದಲ್ಲಿ ಇನ್ನು ಮುಂದಕ್ಕೆ ಹುಡುಗಿಯರನ್ನು ಸೇರಿಸಿಕೊಳ್ಳಲಿಕ್ಕಾಗುವುದಿಲ್ಲವೆಂಬುದಾಗಿ ಕಂಠೋಕ್ತವಾಗಿ ಹೇಳಿದ್ದಾರೆ. ಇಂಥಾ ಆರ್ಡರ್ ಪಬ್ಲಿಕ್ ಜನರಿಗೆ ಬಹಳ ಅತೃಪ್ತಿಯನ್ನುಂಟು ಮಾಡಿದೆ ಎಂಬದಾಗಿ ಹೇಳಿದನ್ನು ಓಟಿಗೆ ಹಾಕಲಾಗಿ ಮಂಜೂರಾಯಿತು.

ಠರಾವು 21—ವಿದ್ಯಾ ಬಡ್ಜೆಟ್ಟಿನಲ್ಲಿ 1,65,000 ರೂ. ಯನ್ನು 5000 ರೂ. ಹೆಚ್ಚು ಮಾಡಬೇಕೆಂದೂ, ಅರ್ಹತೆಯುಳ್ಳ ಒಬ್ಬ ಅಸಿಸ್ಟೆಂಟ್ ಇನ್ಸ್‌ಪೆಕ್ಟರನ್ನೂ, ಇವರ ಕೈಕೆಳಗೆ ಇಬ್ಬರು ಸಬ್ ಅಸಿಸ್ಟೆಂಟರನ್ನೂ ಮತ್ತು ಡಿಗ್ರಿ ಪಡೆದ ಟೀಚರುಗಳನ್ನು ಪ್ರೈಮರಿ ಶಾಲೆಯ ಹೆಡ್ ಮಾಸ್ಟರಾಗಿ ಮಾಡಬೇಕೆಂದೂ ಮೆ. ಚೆಪ್ಪುಡಿರ ಪೂವಯ್ಯನವರು ತಂದ ಠರಾವು ಓಟಿಗೆ ಹಾಕಲಾಗಿ ಯಾರೂ ಓಟು ಮಾಡದ್ದರಿಂದ ಬಿದ್ದು ಹೋಯಿತು.

ಠರಾವು 22—ವಿದ್ಯಾ ಬಡ್ಜೆಟ್ಟಿನ 1,65 000 ರೂಪಾಯಿಯಲ್ಲಿ ಹತ್ತು ಸಾವಿರ ರೂ. ಹೆಚ್ಚು ಮಾಡಬೇಕೆಂದೂ, ಇದು ಪೊನ್ನಂಪೇಟೆ ಸ್ಕೂಲನ್ನೂ, ಬೋರ್ಡಿಂಗನ್ನೂ ಅಭಿವೃದ್ಧಿಪಡಿಸಲಿಕ್ಕಾಗಿರುವ ಸೂಚನೆಯೆಂದೂ, ಮೆ. ಚೆಪ್ಪುಡಿರ ಪೂವಯ್ಯನವರು ಸೂಚಿಸಿದ್ದನ್ನು ಚರ್ಚೆಯಾದ ನಂತರ ವಾಪಸು ತೆಗೆದುಕೊಂಡರು

ಠರಾವು 23—ಮೆಡಿಕಲ್ ಬಡ್ಜೆಟ್ಟಿನ 98,100 ರೂಪಾಯಿಯಲ್ಲಿ 100 ರೂ. ಕಡಿಮೆ ಮಾಡಬೇಕೆಂದೂ ಈ ಠರಾವು ಕೊಡಗಿನಲ್ಲಿ ಲೇಡಿ ಡಾಕ್ಟರುಗಳನ್ನು ನೇಮಕಮಾಡಬೇಕೆಂಬ ಉದ್ದೇಶದಿಂದ ತಂದದ್ದೆಂತಲೂ ಮೆ. ಚೆಪ್ಪುಡಿರ ಪೂವಯ್ಯನವರು ತಂದದ್ದನ್ನು ಸರಕಾರದವರು ಒಪ್ಪಿಕೊಂಡದ್ದರಿಂದ ವಿರೋಧ ಓಟು ಬರಲಿಲ್ಲ.

ಠರಾವು 24—ಲೇಡಿ ಡಾಕ್ಟರುಗಳನ್ನು ಮಡಿಕೇರಿ ಮತ್ತು ವೀರಾಜಪೇಟೆಯಲ್ಲಿ ನೇಮಕಮಾಡಬೇಕೆಂಬ ಠರಾವನ್ನು ಮೆ. ನಡಿಕೇರಿಯಂಡ ಸೋಮಯ್ಯನವರು ತಂದದ್ದನ್ನು 23 ನೇ ಠರಾವು ಮಂಜೂರಾದ್ದರಿಂದ ವಾಪಸು ತೆಗೆದುಕೊಂಡರು.

ಠರಾವು 25—ಆರೋಗ್ಯ ಇಲಾಖೆಯ ಕೆಲಸಗಳನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಪಡಿಸಬೇಕೆಂಬ ಠರಾವನ್ನು ಮೆ. ಸಿ. ಯಸ್. ಪೂವಯ್ಯನವರು ತಂದದ್ದನ್ನು ಸರ್ಕಾರ ಮೆಂಬರನ ಭರವಸೆಯಿಂದ ಚರ್ಚೆಯಾಗಿ ವಾಪಸು ತೆಗೆದುಕೊಂಡರು

ಠರಾವು 26—ಮಲೇರಿಯಾ ವಿಷಯದಲ್ಲಿ ಸರ್ಕಾರದವರು ನಡಿಸುವ ಕೆಲಸ ಕುರಿತು ಮತ್ತು ಅದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಪಡಿಸಲು ಮೆ. ಶ್ರೀಪತಿರಾಯರು ಠರಾವು ತಂದರು. ಕಮಿಶನರವರ ಜವಾಬು ಆದನಂತರ ಠರಾವನ್ನು ವಾಪಸು ತೆಗೆದುಕೊಂಡರು,

ಠರಾವು 27—ಕೊಡಗಿನ ವ್ಯವಸಾಯ ಇಲಾಖೆಯನ್ನು ರೈತರಿಗೆ ಪ್ರಯೋಜನವಾಗುವಂತ ರೀತಿಯಲ್ಲಿ ವ್ಯವಸ್ಥೆ ಪಡಿಸಲು ಏರ್ಪಾಡು ಮಾಡಬೇಕೆಂಬ ಠರಾವನ್ನು ಮೆ. ಬಿ. ಶ್ರೀಪತಿರಾಯರು ತಂದು ಒಂದು ದೊಡ್ಡ ಸ್ಕೀಮನ್ನು ಸರ್ಕಾರದ ಮುಂದಿಟ್ಟರು. ಹಣದ ಅಭಾವದಿಂದ ಇದನ್ನು ನಡೆಸಲು ಸಧ್ಯಕ್ಕೆ ತೊಂದರೆ ಎಂದು ಸರ್ಕಾರದ ಪರ ಮೆಂಬರರು ಹೇಳಿದ್ದರಿಂದ ವಾಪಸು ತೆಗೆದುಕೊಳ್ಳಲಾಯಿತು.

ಠರಾವು—28. ಸೀರಂ ಸ್ಪೆಷಲ್ಟೀಸಿಯಸ್ ಡಾಕು ಹಾಕುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಮೆ. ಪುಚ್ಚಿಮಾಡ ನಾಣ್ಯಯ್ಯನವರು ತಂದ ಠರಾವನ್ನು ಒಳ್ಳೆಯದೆಂದು ಸರ್ಕಾರದರು ಒಪ್ಪಿಕೊಂಡರು. ಆದರೆ ಹಣದ ಅಭಾವದಿಂದ ಸಧ್ಯಕ್ಕೆ ಜಾರಿ ಮಾಡಲಿಕ್ಕಾಗುವುದಿಲ್ಲವೆಂದು ಹೇಳಿದರ ಮೇರೆ ಠರಾವನ್ನು ವಾಪಸು ತೆಗೆದುಕೊಂಡರು.

ಠರಾವು—29. ಉತ್ತರ ಕೊಡಗಿನ ಗ್ರಾಮಗಳಲ್ಲಿ ಕುಡಿಯುವ ನೀರನ್ನು ಒದಗಿಸಲು ಬಾವಿಯನ್ನು ತೆಗೆಯಿಸಲಿಕ್ಕಾಗಿ ಐದು ಸಾವಿರ ರೂ. ಕೊಡಿಸಬೇಕೆಂದು ಮೆ. ಪಾಂಡಂಡ ಚಂಗಪ್ಪನವರು ತಂದ ಠರಾವನ್ನು ಸರ್ಕಾರದವರು ಅಂಗೀಕಾರ ಮಾಡಿಕೊಂಡರು. ಈ ಹಣವನ್ನು ಡಿಸ್ಟ್ರಿಕ್ಟ ಬೋರ್ಡಿಗೆ ಕೊಡುವ ಹಾಗೂ ರೆವಿನ್ಯು ಅಧಿಕಾರಿಗಳು ಖರ್ಚು ಮಾಡುವ ಹಾಗೂ ಏರ್ಪಾಡಾಯಿತು

ಠರಾವು—30. ಕೊಟ್ಟೋಳಿ ಸೇತುವೆಗೆ 5000 ರೂ. ವೀರಾಜಪೇಟೆ ಹಾಸ್ಪೀಲಿಗೆ 10,000 ರೂ. ಮಂಜೂರು ಮಾಡಬೇಕೆಂದು ಮೆ. ಕೊಂಗಂಡ ಗಣಪತ್ತಿಯವರು ತಂದ ಠರಾವನ್ನು ಹಣದ ಅಭಾವವೆಂದು ಸರ್ಕಾರ ಪರ ಮೆಂಬರು ಜವಾಬು ಕೊಟ್ಟನಂತರ ವಾಪಸು ತೆಗೆದುಕೊಳ್ಳಲಾಯಿತು.

ಠರಾವು—31. ಕೊಡಗಿನಲ್ಲಿ ರಸ್ತೆಗಳ ಸ್ಥಿತಿಯು ಚೆನ್ನಾಗಿಲ್ಲವೆಂದೂ, ಮುಖ್ಯವಾಗಿ ಮಡಿಕೇರಿ—ಭಾಗಮಂಡ್ಲ ಮಡಿಕೇರಿ—ಸುಬ್ರಮಣ್ಯ.—ನಾಪೋಕ್ಲು ರಸ್ತೆಯು ಚೆನ್ನಾಗಿಲ್ಲವೆಂದೂ, ಇದನ್ನು ಸರಿಪಡಿಸಬೇಕೆಂದೂ, ಮೆ. ಬಿ. ಶ್ರೀಪತಿರಾಯರು ತಂದ ಠರಾವನ್ನು ಸರ್ಕಾರದವರು ಇದನ್ನು ಸರಿಪಡಿಸುವುದಾಗಿ ಭರವಸೆ ಕೊಟ್ಟಮೇರೆ ಅವರು ತನ್ನ ಠರಾವನ್ನು ವಾಪಸು ತೆಗೆದುಕೊಂಡರು.

ಇದು ಆದ ನಂತರ 1926ರ ಕೌನ್ಸಿಲಿನಲ್ಲಿ ಮಂಜೂರಾದ ತೂಕ ಮತ್ತು ಅಳತೆಯ ಮಸೋದೆಯನ್ನು ಕಮಿಶನರವರು ಸಭೆಯ ಮುಂದಿಟ್ಟದ್ದು ಸರ್ವ ಸಮ್ಮತದಿಂದ ಕಾನೂನಿನ ರೂಪದಲ್ಲಿ ಮಂಜೂರಾಯಿತು.

ಸರಿಸನೂಪ್ಪಿಯಲ್ಲಿ ಬರುವ ವರ್ಷದ ಆರ್ಥಿಕ ಸ್ಥಿತಿಯು ಉತ್ತಮವಾಗಬಹುದೆಂದು ಅಧ್ಯಕ್ಷರು ಹೇಳಿದ ನಂತರ ಸಭೆಯು ಮುಕ್ತಾಯವಾಯಿತು.

ದಿ ಕ್ರಿಸ್ಟಿನ್ ರಬ್ಬರ್ ಸ್ಟಾಂಪ್ ಕಂಪೆನಿ.

ಮಂಗಳೂರು, ದ. ಕನ್ನಡ.

ಯಾವತರ್‍ಹ ಬಗೆಯ ರಬ್ಬರು ಮೊಹರುಗಳು ಕನ್ನಡಿಯ ಸೈನ್ ಬೋರ್ಡು, ಹಾಪ್ ಟೋನ್ ಬ್ಲಾಕ್ ಇತ್ಯಾದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಬಾಳಿಕೆಗೆ ಬರುವಂತೆ ತಯಾರಿ ಕೊಡಲಾಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿಕೊಳ್ಳಿರಿ.

12—1

COORG FOREST DEPARTMENT, DIRECTION DIVISION.

Timber Sale.

At 2 P. M. on Tuesday the 14th April 1931 the following quantities of timber will be sold at Fraserpet by public auction by the Divisional Forest Officer, North Coorg. For further particulars apply to the Chief Forest Officer, Coorg, Mercara:—

Fraserpet:—Honne 1131 c. ft., Matti 445 c. ft., Biti 178 c. ft., Teak poles 362 c. ft.

Somwarpet:—Teak 586 c. ft., Honne 128 c. ft., Nandi 591 c. ft., Matti 657 c. ft., Arasinatega 180 c. ft., Bilwara 90 c. ft., Neralu 175 c. ft., Udi 2 c. ft., Uluve 100 c. ft.

3—1

ಡಿಲ್ಲಿ ಮಹಾಸಭೆಯಲ್ಲಿ ಮಹಾತ್ಮರ ಉಪನ್ಯಾಸ.

ತಾ. 9ರಲ್ಲಿ ಡಿಲ್ಲಿಯಲ್ಲಿ ಕ್ವೀನ್ಸ್ ಉದ್ಯಾನದೊಳಗೆ ನಡೆದ ಬಹಿರಂಗ ಸಭೆಯಲ್ಲಿ ಮಹಾತ್ಮ ಗಾಂಧಿಯವರು ಸಂಧಾನ ಒಡಂಬಡಿಕೆಯ ವಿಚಾರವಾಗಿ ಮಾಡಿದ ಭಾಷಣ—

"ನಾನು ಕರಾಚಿಯಲ್ಲಿ ಜರಗುವ ಕಾಂಗ್ರೆಸ್ ಮಹಾಸಭೆಯೊಳಗೆ ಗಾಂಧಿ ಇರ್ವಿನ್ನರ ಒಡಂಬಡಿಕೆಯನ್ನು ಅನುಮೋದಿಸಬೇಕು' ಎಂಬ ತೀರ್ಮಾನವನ್ನು ನಾನು ಉಪಪಾದಿಸುವೆನು. ಆ ತೀರ್ಮಾನವನ್ನು ಮಹಾ ಸಭೆಯವರು ತಿರಸ್ಕರಿಸುವುದಾದರೆ ಈಗಿರುವ ಭಾರತ ಕಾಂಗ್ರೆಸ್ ಕಾರ್ಯ ಸಂಘದವರ ಮೇಲೆ ಅವಿಶ್ವಾಸ ತೀರ್ಮಾನವನ್ನು ಆ ಸಭೆಯಲ್ಲಿ ಬೇರೆ ಯಾರಾದರೊಬ್ಬರು ಉಪಪಾದಿಸುವರು. ಅದು ಅನುಮೋದಿಸಲ್ಪಟ್ಟರೆ ಅವರು ಬೇರೊಂದು ಕಾರ್ಯನಿರ್ವಾಹಕ ಸಂಘವನ್ನು ಏರ್ಪಡಿಸುವರು.

ನಾನು ಲಾರ್ಡ್ ಇರ್ವಿನ್ನರೊಡನೆ ವ್ಯಕ್ತಿಪರವಾಗಿಯೇ ಮಾತುಕತೆಯ ಭಾರವನ್ನು ನಡಿಸಿದ-ಮಾತು ನಿಜವಾದರೂ, ನಾನು ಪ್ರತಿಕ್ಷಣದಲ್ಲೂ ಕಾಂಗ್ರೆಸ್ ಕಾರ್ಯ ಸಂಘದವರಿಗೆ ಎಲ್ಲಾ ಸಂಗತಿಗಳನ್ನೂ ತಿಳಿಸುತ್ತಲೇ ಇದ್ದೆನು. ಅಲ್ಲದೆ ಈಗ ನಡೆದ ಒಡಂಬಡಿಕೆಯನ್ನು ಕಾರ್ಯ ಸಂಘದ ಸಭ್ಯರೆಲ್ಲರೂ ಅನುಮೋದಿಸಿಯೇ ಇರುತ್ತಾರೆ.

ಕಾರ್ಯ ಸಂಘದ ಮೆಂಬರುಗಳನ್ನೆಲ್ಲ ಅನೇಕಗಳಿಂದಲೂ, ಅಸಮರ್ಥರಿಂದಲೂ, ದುರ್ಬಲರಿಂದಲೂ, ಯುವಜನರು ಭಾವಿಸಿದರೆ ಕಾಂಗ್ರೆಸ್ಸಿನ ಪರಿಪಾಲನ ಭಾರವನ್ನು ಭಾರತಭಾಗ್ಯ ವಿಧಾನವನ್ನು ಕೂಡ ಅವರೇ ವಹಿಸಬೇಕಾಗುತ್ತದೆ. ಆಗಲು ಕೂಡ ಅವರಿಗೆ ವಿವೇಕವೂ ಧೈರ್ಯವೂ, ಶಾಂತವಾಗಿ ಆಲೋಚಿಸುವ ಸ್ಥಿಮಿತವು ಮೊದಲಾದುವುಗಳು ಅವಶ್ಯಕವಾಗಿಯೇ ಇರುವವು. ಅಂಥಾ ಯುವಕರೇ ಈಗಿನ ರಾಜ್ಯಭಾರವನ್ನು ಬರುಗಿಸಿದ್ದರೆ ಈಗ ಕಾರ್ಯ ಸಂಘದವರು ಉಪಯೋಗಿಸಿದ ಸದುಪಾಯಕ್ಕಿಂತಲೂ ಅಧಿಕವಾದ ಸದುಪಾಯವನ್ನು ಪಯೋಗಿಸಬೇಕಾಗುತ್ತಿದ್ದಿತು. ಈಗ ಹೊಂದಿರುವುದರ ಒಪ್ಪಿಗೂ ಕಾರ್ಯ ಸಂಘದವರು ಸಂಪೂರ್ಣಾಂಗೀಕರಿಂದಿಲೇ ನಾನು ಪಡೆದಿರುತ್ತೇನೆ.

ದೌರ್ಜನ್ಯಕ್ಕಾಗಿ ಶಿಕ್ಷಿಸಲ್ಪಟ್ಟಿರುವವರ ಬಿಡುಗಡೆ.

ದೌರ್ಜನ್ಯವನ್ನು ನಡೆಸಿದುದರಿಂದ ಶಿಕ್ಷಿಸಲ್ಪಟ್ಟಿರುವವರ ಬಿಡುಗಡೆಯನ್ನು ಕೂಡ ಕಾಂಗ್ರೆಸ್ಸು ಕಾರ್ಯ ಸಂಘದವರು ಆಲೋಚಿಸದೆ ಇಲ್ಲ. ಅಹಿಂಸಾ ಸತ್ಯನಿರತಿಗೆ ಭಂಗವು ಬಾರದಂತೆ ನ್ಯಾಯವಾಗಿ ಹೊಂದಬಹುದಾದುದನ್ನೆಲ್ಲ ಹೊಂದಲು ಕಾರ್ಯ ಸಂಘದವರು ಪ್ರಯತ್ನಿಸಿದರು. ಈ ಒಡಂಬಡಿಕೆಯ ಷರತ್ತುಗಳನ್ನೆಲ್ಲ ದೇಶೀಯರೆಲ್ಲರೂ ಸರಿಯಾಗಿ ನೆರವೇರಿಸಿದರೆ ದೌರ್ಜನ್ಯಕ್ಕಾಗಿ ಶಿಕ್ಷಿಸಲ್ಪಟ್ಟವರಲ್ಲದೆ ನಾಡಿಯವರು ಕೂಡ ಬಿಡುಗಡೆ ಮಾಡಲ್ಪಡುವರು. ಯಾರಿಗೂ ಕೂಡ ಕಾಂಗ್ರೆಸ್ಸಿನ ಮಾಸ ಶಿಕ್ಷೆಯು ವಿಧಿಸಲ್ಪಡಕೂಡದೆಂದು ನಾನು ಅಪೇಕ್ಷಿಸುತ್ತೇನಲ್ಲದೆ ಅಕ್ಕರು ಮೊದಲಾದವರನ್ನು ಸಹ ಬಿಡುವಂತೆ ಮಾಡಬೇಕೆಂದೇ ನಾನು ಕೋರಿದೆನು.

ದೌರ್ಜನ್ಯದಿಂದುಂಟಾಗುವ ವಿಪತ್ತುಗಳು.

ಅಹಿಂಸಾ ಸಾಧನವನ್ನು ಬಿಟ್ಟು ಖಡ್ಗ ಸಾಧನವನ್ನವಲಂಬಿಸುವುದರಿಂದ ಕಾರ್ಯ ಸಿದ್ಧಿಯಾಗುವುದಿಲ್ಲವೆಂದು ಕಾಂಗ್ರೆಸ್ಸಿನವರು ನಂಬಿದ್ದರೆ ಅನೇಕ ಭಗತಸಿಂಗರು ಹೊರಡಬಹುದಿತ್ತು. ಆದರೆ ಅದು ನನಗೆ ಸಮ್ಮತವಿಲ್ಲವು. ಅಹಿಂಸಾವಿಧಾನವನ್ನು ನಾವು ಅವಲಂಬಿಸಿದರೆ ನಮ್ಮ ದೇಶೀಯರಲ್ಲಿ ಒಬ್ಬರಾದರೂ ಮರಣದಂಡನೆಯಿಂದ ಪ್ರಾಣ ನೀಡಬೇಕಾದ ಅವಶ್ಯಕತೆಯಿಂದಿಗೂ ಉಂಟಾಗದು.

ನೀವು ಖಡ್ಗ ಸಾಧನವನ್ನು ಅವಲಂಬಿಸಲು ಕೋರಿದರೆ ಅದು ಆಂಗ್ಲೇಯರನ್ನು ಮಾತ್ರವೇ ಬಾಧಿಸದು. ಅದರ ಮೇಲೆ ಅದರಿಂದ ಅಪ್ರತಿಹತವೂ ಅನಿವಾರ್ಯವೂ ಆಗುವವು. ಇದಕ್ಕೆ ಚರಿತ್ರೆಯಲ್ಲಿ ಸಾವಿರಾರು ನಿದರ್ಶನಗಳಿವೆ. ನೀವು ಸಶಸ್ತ್ರ ಸಾಧನದಿಂದ ಮರಣ ಶಿಕ್ಷೆ ವಿಧಿಸಲ್ಪಟ್ಟವರನ್ನು ಕೂಡ ಈ ಕಾರಾಗೃಹದಿಂದ ಬಿಡಿಸಿದರೆ ಅದನ್ನು ಸಂಪೂರ್ಣವಾಗಿ ಅನುಮೋದಿಸಬೇಕಾಗುವುದು. 6 ತಿಂಗಳ ವರೆಗೆ ಅದನ್ನು ಸರಿಯಾಗಿ ನೆರವೇರಿಸಿದ ಅನಂತರ ನೀವು ನನ್ನನ್ನು ಪುನಃ ಕೇಳಿದರೆ ನಿಮಗೆ ನಾನು ಸಾವಧಾನವನ್ನು ಕೊಡುತ್ತೇನೆ.

ವಿದೇಶ ವಸ್ತ್ರ ಬಹಿಷ್ಕರಣ.

ವಿದೇಶ ವಸ್ತ್ರಗಳ ಅಂಗಡಿಯ ಮುಂದೆಯೂ, ಸಾರಾಯಿ ಅಂಗಡಿಗಳ ಮುಂದೆಯೂ ಪಿಕೆಟಿಂಗು ಮಾಡುವಲ್ಲಿ ಬೆದರಿಸಿದರೆ, ನಿರ್ಬಂಧ ಪಡಿಸಿದರೆ, ಒಲವಂತ ಪಡಿಸಿದರೆ ಈ ಕಾರ್ಯಗಳನ್ನೆಲ್ಲ ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಆಜ್ಞಾಪಿಸಲ್ಪಡುವುದು. ಇತರ ದೇಶಗಳ ಪದಾರ್ಥಗಳನ್ನು ಮಾತ್ರ ಬಹಿಷ್ಕರಿಸಬೇಕಲ್ಲದೆ ಬ್ರಿಟಿಷ ಪದಾರ್ಥಗಳನ್ನು ಮಾತ್ರ ಪ್ರತ್ಯೇಕವಾಗಿ ಬಹಿಷ್ಕರಿಸ ಕೂಡದೆಂದು ವಿಧಿಸಲ್ಪಡುವುದು. ಈ 12 ತಿಂಗಳುಗಳಲ್ಲಿ 'ರಾಜಕೀಯ ಸಾಧನವಾಗಿ ಬ್ರಿಟಿಷ ಪದಾರ್ಥಗಳು ಬಹಿಷ್ಕರಿಸಲ್ಪಟ್ಟವು. ಅದರಿಂದ ಒಳ್ಳೇ ಫಲವನ್ನು ಹೊಂದಿತು. ಪರಸ್ಪರ ಸ್ನೇಹಭಾವದಿಂದ ನಾವು ಸಂಧಿ ರಾಜ್ಯ ಭಾವವನ್ನು ಪಡೆಸಲಿಚ್ಛಿಸಿದ್ದರೆ ಅದನ್ನು ಈಗ ಬಿಟ್ಟು ಬಿಡಲೇ ಬೇಕಾಗಿದ್ದಿತು. 'ವಿದೇಶ ವಸ್ತ್ರ ಬಹಿಷ್ಕಾರವು ಜಾತೀಯತೆಗೆ ಅವಶ್ಯವಾಗಿರುವುದಲ್ಲದೆ ಪ್ರತ್ಯೇಕ ರಾಜಕೀಯ ಸಾಧನವಲ್ಲವಾದ ಪ್ರಯುಕ್ತ ಅದನ್ನು ನಾವು ಬಿಡಕೂಡದು. 33 ಕೋಟಿ ಭಾರತೀಯರಿಗೆ ಅನ್ನ ವಸ್ತ್ರವನ್ನು ಒದಗಿಸುವುದಕ್ಕಾಗಿ ವಿದೇಶ ವಸ್ತ್ರಗಳನ್ನು ಬಹಿಷ್ಕರಿಸುವುದೇ ನಮಗೆ ಮುಖ್ಯಸಾಧನವಾಗಿರುತ್ತದೆ. ವಿದೇಶ ವಸ್ತ್ರ ಮತ್ತು ಮದ್ಯ ಬಹಿಷ್ಕಾರವು ಸಫಲವಾದಲ್ಲಿ ಪ್ರಪಂಚದಲ್ಲೆಲ್ಲ ಅತ್ಯದ್ಭುತವಾದ ನೈತಿಕ ಫಲವು ಖಂಡಿತವಾಗಿ ಲಭ್ಯವಾಗುವುದು.

ಹಿಂದೂ ಮಹಮ್ಮದೀಯ ಮೈತ್ರಿಯಿಲ್ಲದೆ ಸಾಂಘಿಕ ಸಮ್ಮೇಳನವಾಗದು.

ಮೌಲಾನಾ ಗೌಕತಾಲಿಯವರು ನೆನ್ನೆಯ ಬೆಳಿಗ್ಗೆ ದಿಲ್ಲಿ ಪಟ್ಟಣಕ್ಕೆ ಬಂದರಾದರೂ ಅವರು ಈ ಸಭೆಗೆ ಬಾರದಿರುವುದು ಬಹಳ ಸಂತಾಪಕರವಾಗಿದೆ. ಶೌಕತಾಲಿಯವರು ಪುನಃ ಕಾಂಗ್ರೆಸ್ಸಿಗೆ ಸೇರುವಂತೆ ನಾನು ನನ್ನ ಶಕ್ತಿಯನ್ನೆಲ್ಲ ಉಪಯೋಗಿಸಿದೆನು. ಮೌಲಾನಾ ಮಹಮ್ಮದಾಲಿ ನನಗೂ ಇರುವ ಭೇದ ವಿಶೇಷದಂತಾದ ಅಣ್ಣ ತಮ್ಮಂದಿರಿಗಿರುವ ಭೇದದಂತೆಯೇ ಇರುವುದು. ಹೇಗಾದರೂ ನಾನು ಅನುಸರಿಸುತ್ತಿರುವ ಪದ್ಧತಿಯಿಂದಲೇ ಶೌಕತಾಲಿಯವರು ಕೂಡ ದೇಶ ಸೇವೆಯನ್ನು ಮಾಡಬೇಕೆಂದು ನಾನು ಅಪೇಕ್ಷಿಸುತ್ತೇನೆ. ನಾವು ನಮ್ಮ ದೇಶದಲ್ಲಿ ಸರ್ವ ಸಂಘ ಸಮ್ಮೇಳನವನ್ನು ಮಾಡುವದಾದರೆ ಹೊರದಲ್ಲಿ ನಾವು ರೌಂಡ್ ಟೇಬಲು ಸಭೆಗೆ ಹೋಗುವುದು ನಿಷ್ಪ್ರಯೋಜನವಾಗುವುದು. ಆ ಸಮ್ಮೇಳನವು ರೌಂಡು ಟೇಬಲು ಸಭೆಯಲ್ಲಿಪ್ಪು ಮಾತ್ರಕ್ಕಾಗಿ ಜರಗಬಾರದು. ಪರಸ್ಪರ ವಿಶ್ವಾಸವಿಲ್ಲದಿದ್ದರೆ ಸಮ್ಮೇಳನವು ಕೂಡುವುದಿಲ್ಲವಾದುದರಿಂದ ಅದು ದೇಶದಲ್ಲೇ ಕೂಡಬೇಕಲ್ಲದೆ ಕಾಂಗ್ರೆಸ್ಸಿನಲ್ಲವು. ನೀವೆಲ್ಲರೂ ಸಾಂಘಿಕ ಸಮ್ಮೇಳನವನ್ನು ಮನಃಪೂರ್ವಕವಾಗಿ ಕೋರುತ್ತೀರಿ ಎಂದು ಸರ್ವ ವಿಧದಿಂದಲೂ ನನಗೆ ತೋರ್ಪಡಿಸಬೇಕು. ನಾನು ಕೂಡ ಶಕ್ತಿಯಿರುವವರೆಗೂ ಪ್ರಯತ್ನಿಸುತ್ತೇನೆಂದು ಪ್ರಮಾಣ ಮಾಡುತ್ತೇನೆ. 'ಗಾಂಧಿ-ಇರ್ವಿನ್ ಒಡಂಬಡಿಕೆಗಾಗಿ ಬೇಡಲು ನೀವು ಹೇಗೆ ಪ್ರತಿಕ್ಷಿಸಿದೀರೋ ಹಾಗೆ ಹಿಂದೂ ಮಹಮ್ಮದೀಯ ಸಂಧಿಗಳು ಕೂಡ ನೀವೇ ಪ್ರಯತ್ನಿಸಬೇಕು' ಎಂದು ಒಬ್ಬರು ನನಗೊಂದು ಕಾಗದವನ್ನು ಈ ಬೆಳಿಗ್ಗೆ ಬರೆದಿರುತ್ತಾರೆ. ನಾನು ಖಂಡಿತವಾಗಿಯೂ ಹಾಗೆಯೇ ಮಾಡುತ್ತೇನೆ. ನಾನು ಪ್ರತಿ ಮಹಮ್ಮದೀಯ ನಾಯಕನಿಗೂ ಕೂಡ ಸಾದಾ ಶ್ವಾಸಕನಾಗಿ ಹಿಂದೂ ಮಹಮ್ಮದೀಯ ಸ್ನೇಹವನ್ನುಂಟುಮಾಡುವಲ್ಲಿ ಸಹಾಯಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಒಬ್ಬ ಮನುಷ್ಯನು ಮಾಡಲು ಸಾಧ್ಯವಾದ ಕೆಲಸಗಳನ್ನೆಲ್ಲ ನಾನು ವಿಧಿಯಾಗಿ ಮಾಡುವೆನು. ಆದರೆ ಒಬ್ಬ ವ್ಯಕ್ತಿಗೆ ಇಂತಹ ಮಹಾಕಾರ್ಯವು ಎಂದಿಗೂ ಸಾಧ್ಯವಲ್ಲವು. ಅಂತಹ ಶಕ್ತಿಯನ್ನು ಮನುಷ್ಯನಿಗೆ ಕೊಟ್ಟಲ್ಲಿ ಅಹಂಭಾವದವನು ಆತ್ಮವಿನಾಶವನ್ನು ಮಾಡಿಕೊಳ್ಳುವನೆಂದು ತಿಳಿದೇ ಭಗವಂತನು ಅಂತಹ ಶಕ್ತಿಯನ್ನು ಮನುಷ್ಯನಿಗೆ ಕೊಡಲಿಲ್ಲವು.

ಚಿಕ್ಕಮಕ್ಕಳ ಸಹಾಯವನ್ನು ಕೂಡ ನಾನು ಪ್ರೀತಿಯಿಂದ ಸ್ವೀಕರಿಸಿದೆನು.

ಸ್ತ್ರೀಯರನ್ನು ಪ್ರಶಂಸಿಸಿದುದು.

ಈ 12 ತಿಂಗಳುಗಳಲ್ಲಿ ಅಪಾರ ಸೇವೆಯನ್ನು ಮಾಡುತ್ತಿರುವ ಸಹೋದರಿಯರ ಸಹಾಯವನ್ನು ನಾನು ಮುಖ್ಯವಾಗಿ ಅಪೇಕ್ಷಿಸಿದೆನು. 12 ವರ್ಷಗಳಲ್ಲಿ ಆಗದ ಕಾರ್ಯವನ್ನು ಅವರು 12 ತಿಂಗಳುಗಳಲ್ಲಿ ನೆರವೇರಿಸಿದರು. ಅವರು ತಮಗಿರುವ ಸತ್ಯಾಗ್ರಹ ಶಕ್ತಿಯನ್ನು ಬಹಳ ಚೆನ್ನಾಗಿ ಪ್ರದರ್ಶಿಸಿದರು. ಅಲ್ಲದೆ ಸಾಂಘಿಕ ಸಮ್ಮೇಳನವನ್ನು ನಿರ್ವಹಿಸುವುದರಲ್ಲಿ ಕೂಡ ಅವರು ಅದೇ ಸಹಾಯವನ್ನು ಮಾಡಬೇಕಾಗಿ ಕೋರುತ್ತೇನೆ. "ಇನ್ನು ಅವರು (ಪುರುಷರು) ಕಲಹ ಮಾಡುತ್ತಿದ್ದರೆ ನಾವು ಅಡಿಗೆ ಮಾಡುತ್ತೇವೆ ಮತ್ತಾವ ಕಾರ್ಯವನ್ನಾದರೂ ಮಾಡುತ್ತೇವೆ. ನಿಮ್ಮ ಕೂಡ ನಾವು ನಿರಶನ ವ್ರತವನ್ನು ಹಿಡಿಯುತ್ತೇವೆ" ಎಂದು ಸ್ತ್ರೀಯರು ಪುರುಷರೊಡನೆ ಸ್ಪಷ್ಟವಾಗಿ ತಿಳಿಸಬೇಕೆಂದು ಕೋರುತ್ತೇನೆ. ನೀವು ಈ ರೀತಿಯಾಗಿ ನನಗೆ ಸಹಾಯ ಮಾಡುತ್ತೀರೆಂದು ವಾಗ್ದಾನವಿತ್ತರೆ ನನಗೆ ನೀವು ಪ್ರಬಲತಮವಾದ ಶಕ್ತಿಯನ್ನುಂಟುಮಾಡಿದವರಾಗುತ್ತೀರಿ.

ಶಾಸನ ಸಭ್ಯರು—ಪ್ರಭುತ್ವೋದ್ಯೋಗವು.

ಶಾಸನ ಸಭೆಯಲ್ಲಿ ಪ್ರಾತಿನಿಧ್ಯವನ್ನೂ, ಪ್ರಭುತ್ವೋದ್ಯೋಗವನ್ನೂ ಕುರಿತು ಹಿಂದೂಗಳಿಗೂ ಮಹಮ್ಮದೀಯರಿಗೂ ಭಿನ್ನಾಭಿಪ್ರಾಯವಿರುವುದು. ಈ ವಿಷಯವಾಗಿ 1921ರಲ್ಲಿ ಕಾಟ್ಟ ಸಲಹೆಯನ್ನು ಈಗ ಪುನಃ ತಿಳಿಸಲಪೇಕ್ಷಿಸುತ್ತೇನೆ.

"ನಿಮಗೆ ಬೇಕಾದುದನ್ನೆಲ್ಲ ತೆಗೆದುಕೊಳ್ಳಿ. ಉಳಿದುದರಲ್ಲೇ ನಾವು ತೃಪ್ತಿಪಡುತ್ತೇವೆ" ಎಂದು ಧೈರ್ಯದಿಂದ ಒಂದು ಪಕ್ಷದವರು ಮತ್ತೊಂದು ಪಕ್ಷದವರಿಗೆ ಹೇಳುವಂತಾದಲ್ಲಿ ಈ ವಿಷಯ ಸ್ಥಿತಿಯೆಲ್ಲವೂ ಕ್ಷಣಮಾತ್ರದಲ್ಲೇ ಕರಗಿ ಹೋಗುವುದು. ಹಿಂದುಗಳು ಅಧಿಕಸಂಖ್ಯಾಕರಾಗಿರುವುದರಿಂದಲೇ ಈ ವಿಷಯದಲ್ಲಿ ಅವರೇ ಮಾರ್ಗದರ್ಶಿಗಳಾಗಬೇಕು ಇದಕ್ಕೆ ಬೇಕಾಗಿರುವುದು ಧೈರ್ಯ. ಆದುದರಿಂದ ಹಿಂದುಗಳು ಧೀರತ್ವವನ್ನು ವಹಿಸಿ ಕೊಡುವಂಥ ಪದ್ಧತಿಯನ್ನು ಬಿಡಬೇಕಾಗಿ ಅಪೇಕ್ಷಿಸುತ್ತೇನೆ. ಕಳೆದ 12 ತಿಂಗಳುಗಳಿಂದಲೂ ನಾವು ಎಲ್ಲ ಶಾಸನಗಳನ್ನು ಧಿಕ್ಕರಿಸುತ್ತಿದ್ದರೂ ಲಗಿಸಲಾರದೆ ಹೋದರು. ಮಹಮ್ಮದೀಯರೂ, ಇತರ ಚಿಕ್ಕ ಸಂಘದವರೂ ಶಾಸನ ಸಭೆಗಳಲ್ಲಿ ಎಲ್ಲ ಸ್ಥಾನಗಳನ್ನೂ ವಶಪಡಿಸಿಕೊಂಡರೂ ಕೂಡ ಹಿಂದುಗಳಿಗೆ ಯಾವ ನಷ್ಟವೂ ಸಂಭವಿಸುವುದಿಲ್ಲ.

"ನಾವು ಭಾರತನಾತೆಗೆ ಅಲ್ಪ ಸೇವಕರಾಗಿರಲು ಇಚ್ಛಿಸುತ್ತೇವೆ. ನಮಗೆ ಯಾವ ಅಧಿಕಾರವೂ ಅವಶ್ಯವಿಲ್ಲ. ಜಾತೀಯ ಸೇವೆಯಲ್ಲಿ ನಾವು ಎಲ್ಲಿಯ ವರೆಗೂ ಸ್ಪರ್ಧಿಸಬಹುದು" ಎಂಬ ಈ ಸೂಚನೆಯನ್ನು ಹಿಂದುಗಳು ನಮ್ಮ ತಿಳಿದಿದ್ದರೆ ಅವರು ನನ್ನನ್ನು ಬಿಟ್ಟು ಬಿಡಬೇಕು. ಹಾಗಲ್ಲದಿದ್ದರೆ ಅವರು ಮಹಾ ಸಮ್ಮೇಳನವನ್ನು ಏರ್ಪಡಿಸುವುದೇನೂ ತಮಗೆ ಬೇಕಿಲ್ಲವೆಂದು ಅವರು ಹೇಳಬೇಕು.

ನೀವು ಹೀಗೆ ಮಾಡಿದರೆ ಭಾರತದೇಶವನ್ನು ಉದ್ಧರಿಸುವವರಾಗುವಿರಿ. ಅಲ್ಲದೆ ಪೂರ್ಣ ಸ್ವರಾಜ್ಯವನ್ನು ಪಡೆಯುವವರಾಗುವಿರಿ. ನೀವು ಈ ಗಾಂಧಿ—ಇರ್ವಿನ್ ಒಡಂಬಡಿಕೆಯನ್ನು ಸರಿಯಾಗಿ ನೆರವೇರಿಸಬೇಕು. ಭಾರತೀಯರ ಜೊತೆ ಸಾಮ್ರಾಜ್ಯವನ್ನು ಯಾವ ದೇಶದವನು ಕೂಡ ಧೈರ್ಯದಿಂದ ಹೋರಾಡುವಂತಾಗಬಾರದು. ನಮ್ಮ ಮಾತೇ ಪಕ್ಕವಾಗಿ ರಬೇಕು. ಈ ಸತ್ಯವನ್ನು ನೀವೆಲ್ಲರೂ ಗೌರವಿಸಬೇಕೆಂದು ಕೋರುತ್ತೇನೆ.

"ಮೈಸೂರು ಸ್ಟಾರ"

ದೇಶೀಯರಲ್ಲಿ ವಿನಂತಿ.

ಮಹಾತ್ಮ ಗಾಂಧಿಯವರಿಗೂ, ವೈಸರಾಯರಿಗೂ ಉಂಟಾಗಿರುವ ಒಪ್ಪಂದದ ಮೇರೆ ಹಿಂದೀ ರಾಷ್ಟ್ರೀಯ ಕಾಂಗ್ರೆಸಿನವರು ಮಾಡಿರುವ ತೀರ್ಮಾನವನ್ನನುಸರಿಸಿ ಕೊಡಗಿನ ಸತ್ಯಾಗ್ರಹ ಮಂಡಳಿಯವರು ಶಾಸನಭಂಗದ ಚಳವಳವನ್ನು ಬಾಕಿ ಮಾಡಿರುವರು. ಆದರೆ ಕಾಂಗ್ರೆಸಿನ ತೀರ್ಮಾನದಂತೆಯೇ ಗ್ರಾಮ ಸಂಘಟನೆಯ ಕೆಲಸವನ್ನು ಮುಂದುವರಿಸಲು ನಿರ್ಧರಿಸಿ ಇನ್ನು ಮುಂದೆ ಪೇಟೆಗಳಲ್ಲಿ ಮಾತ್ರ ಸೇಂದಿ, ಸಾರಾಯಿ ಅಂಗಡಿಗಳನ್ನು ಶಾಂತ ರೀತಿಯಿಂದ ಪಿಕೆಟ್ ಮಾಡುವಂತೆಯೂ, ಬೇರೆ ದಿನಗಳಲ್ಲಿ ಗ್ರಾಮಗಳಲ್ಲಿ ಸಂಚರಿಸಿ ಸಿಪಾನ ನಿಷೇಧ, ಖಾದಿ ಪ್ರಚಾರ, ಚರಕದ ಉಪಯೋಗ ಮುಂತಾದ ಕೆಲಸಗಳನ್ನು ಮಾಡುವಂತೆಯೂ ನಿಶ್ಚಯಿಸಲಾಗಿದೆ. ಈ ಕೆಲಸವು ಈ ತಾ. 25ರಲ್ಲಿ ಪ್ರಾರಂಭಿಸಲಾಗುವುದು. ಈ ಕೆಳಗಿನ ಮೇರೆ ಶಿಬಿರಗಳು ಏರ್ಪಡಿಸಲ್ಪಟ್ಟಿವೆ. ಆಯಾಯ ಸ್ಥಳೀಕರು ಆಯಾಯ ಶಿಬಿರದ ಅಧಿಪತಿಗಳಿಗೆ ಮಾತ್ರ ದ್ರವ್ಯ ಸಹಾಯ ಮಾಡಿ ಕ್ರಿಯಾರೂಪ ರೀತಿಯನ್ನು ಪಡೆಕೊಳ್ಳತಕ್ಕದ್ದು. ಶಿಬಿರ ಅಧಿಪತಿಗಳ ಪಟ್ಟಿ—1. ಸೋಮವಾರಪೇಟೆ—ಮೆ॥ ಸುಬ್ಬಯ್ಯ ಮಾದಪ್ಪನವರು, 2. ಫ್ರೇಜರ್‌ಪೇಟೆ—ಮೆ॥ ಮಂಡೇಪಂಡ ಕಾರ್ಯಪ್ಪನವರು, 3 ಮಡಿಕೇರಿ—ಮೆ॥ ಚೆಕ್ಕೆರ ಪೊಣ್ಣಪ್ಪನವರ, 4. ಮೂರ್ನಾಡು—ಮೆ॥ ಅಜ್ಜಮಾಡ ಮಾದಪ್ಪನವರು, 5. ನಾಪೋಕ್ಲು—ಮೆ॥ ಐನಂಡ ಕಾರ್ಯಪ್ಪನವರು, 6. ಸಿದ್ದಾಪುರ—ಮೆ॥ ಪುಟ್ಟಿಚಂಡ ಪೊಣ್ಣಪ್ಪನವರು, 7. ಅಮ್ಮತ್ತಿ—ಮೆ॥ ಪುಲಿಯಂಡ ಸುಬ್ಬಯ್ಯನವರು, 8 ವೀರಾಜಪೇಟೆ—ಮೆ॥ ಕಾಳೇಂಗಡ ಚಂಗಪ್ಪನವರು ಮತ್ತು ವಿ. ಆರ್. ತಮ್ಮಯ್ಯನವರು, 9 ಗೋಣಿಕೊಪ್ಪಲು—ಮೆ॥ ಮುಕ್ಕಾಟಿರ ಮುತ್ತಣ್ಣನವರು, 10. ತಿತಿಮತಿ—ಮೆ॥ ಅಜ್ಜಿಕುಟ್ಟಿರ ಚಿಣ್ಣಪ್ಪನವರು, 11. ಪೊನ್ನಂಪೇಟೆ—ಮೆ॥ ಆಲೆಮಾಡ ಅಪ್ಪಣ್ಣನವರು, 12 ಹುದಿಕೇರಿ—ಮೆ॥ ಪೂಣಿಮಾಡ ಮಾಚ್ಚಯ್ಯನವರು ಮತ್ತು 13. ಶ್ರೀಮಂಗಲ—ಮೆ॥ ಕೊಳ್ಳೀರ ಮಾಡ ಬಯ್ಯಮ್ಮನವರು ಪಿ. ಪಿ ಎ. ಬೆಳ್ಳಿಯಪ್ಪನವರು ಮತ್ತು ಮೆ॥ ಕೆ. ಸಿ. ಕರುಂಬಯ್ಯನವರು ಕರಾಚಿ ಕಾಂಗ್ರೆಸಿಗೆ ಹೋಗಿ ಹಿಂತಿರುಗಿ ಬರುವ ವರೆಗೆ ಮೆ॥ ಹೆಚ್. ಆರ್. ಕೃಷ್ಣಯ್ಯನವರು ಎಲ್ಲಾ ಶಿಬಿರಗಳ ಮೇಲು ಉಸ್ತುವಾರಿ ನೋಡಿಕೊಳ್ಳುವರು.

ದೇಶದ ಮಹಿಳೆಯರೂ, ಮಹನೀಯರೂ ಇದುವರೆಗೆ ಸತ್ಯಾಗ್ರಹ ಚಳವಳಿಕ್ಕೆ ಮಾಡಿದ ಎಲ್ಲಾ ತರಹದ ಸಹಾಯಕ್ಕೆ ತುಂಬಾ ವಂದಿಸುತ್ತೇವೆ. ಇನ್ನು ಮುಂದಕ್ಕೂ ಹಾಗೆಯೇ ಉದಾರ ಬುದ್ಧಿಯಿಂದಲೂ, ದೇಶ ಭಕ್ತಿಯಿಂದಲೂ ಸಹಾಯ ಮಾಡುತ್ತಾ ಬರುವರಾಗಿ ಅತಿ ವಿನಯದಿಂದ ಕೋರಲಾಗಿದೆ.

ತಾ. 20—3—1931 ಸತ್ಯಾಗ್ರಹ ಮಂಡಳಿ.

ಇಲಾಚಿ ಮಲೆಗಳ ಕಂದಾಯದ ಸಂಬಂಧವಾಗಿ ಚೀಫ್ ಕಮಿಷನರರವರು ಮಾಡಿದ ಹುಕುಂ.

1. 1930—31ನೇ ಸಾಲಿನ ಕಂದಾಯದಲ್ಲಿ ಶೇಕಡ 75 ರಷ್ಟು ಮಾಫಿ ಬಿಡಲಾಗಿದೆ.

2. ಮಾರ್ಚಿ 31ರ ವಳಗೆ ಮಲೆಗಳನ್ನು ವಾಪಸು ಸರಕಾರಕ್ಕೆ ಬಿಟ್ಟು ಬಿಡುವವರಿಗೆ ಹಿಂದಿನ ಬಾಕಿ ಪೂರ್ತಿ ಮಾಫಿ ಬಿಡಲಾಗುತ್ತದೆ. ಇತರರು ಈ ವರ್ಷದಿಂದಲೇ ಪ್ರಾರಂಭಿಸಿ ನಾಲ್ಕು ಕಂತುಗಳಲ್ಲಿ ಕೊಡಬೇಕು. 20 ರೂ. ಗಿಂತ ಕಡಿಮೆಯಾದರೆ ಎರಡು ಕಂತುಗಳು. ಮಾತ್ರ ಮೇಲಿನ ರಿಯಾಯಿತಿಗಳು ಜಮ್ಮ ಮತ್ತು ಶಾಫಿ ಸಾಗುವಳಿ ಮಲೆಗಳಿಗೂ ವ್ಯಾಪಿಸುತ್ತದೆ.

ದೇಶೀಯರಲ್ಲಿ ವಿಜ್ಞಾಪನೆ.

ಈ ತಾ. 11ರಲ್ಲಿ ವೀರರಾಜಪೇಟೆಯಲ್ಲಿ ಕೊಡಗಿನ ಸತ್ಯಾಗ್ರಹ ಮಂಡಳಿಯವರಿಗೆ ಪಬ್ಲಿಕಿನವರು ಅರ್ಪಿಸಿದ ಬಿನ್ನಹ ಪತ್ರದಲ್ಲಿ ಕೈ ತಪ್ಪಿನಿಂದ ಕೆಲವು ಸತ್ಯಾಗ್ರಹಿಗಳ ಹೆಸರುಗಳು ಬಿಟ್ಟು ಹೋಗಿದೆಯೆಂದು ಇತ್ತಲಾಗಿ ತಿಳಿಯ ಬಂತು. ಅವುಗಳನ್ನು ಆಜಮಾಯಿಸಿ ಬೇಗನೆ ಸರಿಪಡಿಸಲಾಗುವುದೆಂದು ಈ ಮೂಲಕ ತಿಳಿಯ ಪಡಿಸುತ್ತೇನೆ.

ಬಿದ್ದಂಡ ಸುಬ್ಬಯ್ಯ.

ತಾ. 20—3—'31. (ಅಧ್ಯಕ್ಷ)

ವರ್ತಮಾನ ಸಂಗ್ರಹ.

ಒಳದೇಶ.

ಬೆಟ್ಟಕ್ಕೆಲ್ಲ ಬೆಂಕಿ ಬಿದ್ದು ದಾಹಲ್ ಮಳೆ ಇಲ್ಲದರಿಂದ ರೈತರ ದನಗಳಿಗೆ ಘೋರ ಮುಸ್ಕಿಲಾಗಿರುತ್ತೆ.

ಈ ವಾರದಿಂದ ಭತ್ತಕ್ಕೆ ಸ್ವಲ್ಪ ಧಾರಣೆ ಹೆಚ್ಚಾಗಿದೆ. ಮಡಿಕೇರಿಯಲ್ಲಿ ಗಾಡಿ 1ಕ್ಕೆ 45ರಿಂದ 50ರ ವರೆಗೆ ಧಾರಣೆ ಇದೆ.

ಸುಂಟಿಕೊಪ್ಪ ಶಾಲೆಯ ವಾರ್ಷಿಕೋತ್ಸವವು ಈ ತಾ. 28ರಲ್ಲಿ ನಡೆಯುವದೆಂದು ಸದರಿ ಶಾಲೆಯ ಹೆಡ್ ಮಾಸ್ಟರು ತಿಳಿಸಿರುವರು.

ಕೊಡಗು ಓರಿಯಂಟಲ್ ಏಜೆನ್ಸಿ ಆಫೀಸನ್ನು ಮೆ. ಕೆ. ಪಿ. ಚಿಣ್ಣಪ್ಪನವರು ಅವರ ಸ್ವಂತ ಮನೆಯಿಂದ ಮಡಿಕೇರಿ ಚಾಕಿಗೆ ವರ್ಗ ಮಾಡಿರುವರೆಂದೂ, ಪ್ರೀಮಿಯಂ ಕಟ್ಟುವವರು ಆಫೀಸಿನಲ್ಲಿ ಕಟ್ಟಬೇಕೆಂತಲೂ ಅವರು ತಿಳಿಸುತ್ತಾರೆ.

ಮದ್ರಾಸ್ ಸಿವಿಲ್ ಜುಡಿಸಿಯಲ್ ಟೆಸ್ಟ್ ಪರೀಕ್ಷೆಯಲ್ಲಿ ಮೆ. ಗಳಾದ ಮಕ್ಕಿ ಕೃಷ್ಣಯ್ಯನವರು, ಮನೆಯಪಂಡ ಐಯ್ಯಪ್ಪನವರು, ಚೆಟ್ರಂಡ ಗಣಪತಿಯವರು, ನಡಿಕೇರಿಯಂಡ ಮಂದಣ್ಣನವರು,

ಎಕೌಂಟ್ ಟೆಸ್ಟ್ ಪರೀಕ್ಷೆಯಲ್ಲಿ ಮೆ. ಗಳಾದ ಪುಲಿಯಂಡ ಅಪ್ಪಚ್ಚನವರು ಫಾರೆಸ್ಟ್ ಆಫೀಸು, ಬ್ರಿ. ಅ...ರವರು ಕಮಿಷನರ ಆಫೀಸು, ಚೇನಂಡ ಮಂದಣ್ಣನವರು ವೀರರಾಜಪೇಟೆ ಸ್ಕೂಲ್ ಆಫೀಸು.

ಕ್ರಿಮಿನಲ್ ಜುಡಿಸಿಯಲ್ ಟೆಸ್ಟ್ ಪರೀಕ್ಷೆಯಲ್ಲಿ ಮೆ. ಗಳಾದ ಕಳಿಯಂಡ ಮುತ್ತಣ್ಣನವರು ಪೋಲೀಸ್ ಸಬ್ ಇನ್‌ಸ್ಪೆಕ್ಟರ್, ಗುಡ್ಡಂಡ ಕಾರ್ಯಪ್ಪನವರು ಅಬ್ಕಾರಿ ಇನ್‌ಸ್ಪೆಕ್ಟರ್, ಬ...ಡ ಅಪ್ಪಯ್ಯನವರು ಬಿ. ಎ. ಫ್ರೇಜರ್‌ಪೇಟೆ ಪಾರುಪತ್ಯಗಾರರು, ಚೇಂದ್ರಿಮಾಡ ಗಣಪತಿಯವರು ಮತ್ತು ಅಂಯಂಡ ಕ. ಶಾಲಪ್ಪನವರು ಡಿ. ಮೆ. ಆಫೀಸು, ಪಾಸಾಗಿದ್ದಾರೆಂದು ತಿಳಿಯುತ್ತೇವೆ.

ಗೇಣಿ ಪಟೆಗಳ ಕಂದಾಯ ರಿಮಿಶನ್ ಸಂಬಂಧ ಇದೇ ತಾ. 18ರಲ್ಲು ಚೀಫ್ ಕಮಿಶನರವರು ಕೆಲವು ಜನರ ಡೆಪ್ಯುಟೇಶನ್ನೊಂದನ್ನು ಬರ ಮಾಡಿಕೊಂಡು ಅದಕ್ಕೆ ತಕ್ಕ ರಿಯಾಯಿತಿ ಕೊಡಲಾಗಿದೆ. ಅದರ ತಪಶೀಲ್ ಇನ್ನೊಂದು ಕಡೆ ಕೊಟ್ಟಿದೆ.

ಓರಿಯಂಟಲ್ ಲೈಫ್ ಅಸ್ಸೂರೆನ್ಸ್ ಕಂಪೆನಿಯಲ್ಲು 1930ನೇ ಇಸವಿಯಲ್ಲಿ 26,481 ಹೊಸ ಪೋಲಿಸಿಗಳು ತೆಗೆದುಕೊಳ್ಳಲಾಗಿದೆಯೆಂತಲೂ ಇಷ್ಟು ಪೋಲಿಸಿಗಳಿಂದ 54403896 ರೂಪಾಯಿ ಇನ್ಶೂರ್ ಮಾಡಲಾಗಿದೆಯೆಂತಲೂ ಕಂಪೆನಿಯ ಬ್ರಾಂಚ್ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ನಾಪೋಕ್ಲುನಾಡು ನಾಪೋಕ್ಲು ಗ್ರಾಮದ ಭಗವತಿ ದೇವರ ಹಬ್ಬವು ಈ ಮೊದಲು ಮೇ ತಾ. 16ಕ್ಕೆ ಪ್ರಾರಂಭಿಸಿ 22ಕ್ಕೆ ಅಂತ್ಯವಾಗುತ್ತಿದ್ದದ್ದು, ಈ ವರ್ಷದಿಂದ ಮಾರ್ಚಿ 22 ರಿಂದ ಪ್ರಾರಂಭವಾಗುವದೆಂದೂ, ಅಲ್ಲದೆ ಪಟ್ಟಣಿ ಹಬ್ಬವು ತಾ. 26ನೇ ಗುರುವಾರ ನಡೆಯುತ್ತದೆಂದೂ ತಿಳಿಸಿರುತ್ತಾರೆ.

ಕೈಕೇರಿ ಗ್ರಾಮದ ಪಂಚಮರು ಕೂಡಿ ಬಿಟ್ಟಂಗಾಲದಲ್ಲಿ ಇದೇ ತಾ. 17ರಲ್ಲಿ ಭಾಗವತ ಆಟವನ್ನು ಬಹಳ ಚೆನ್ನಾಗಿ ಆಡಿದರೆಂದೂ, ಸುಮಾರು 2,000 ಜನರು ಈ ಆಟ ನೋಡಲಿಕ್ಕೆ ನೆರೆದಿದ್ದರೆಂದೂ ಇಂಥಾದ್ದನ್ನು ಮುಂದುವರಿದ ಪಂಗಡದವರು ಪ್ರೋತ್ಸಾಹಿಸಬೇಕೆಂತಲೂ ಒಬ್ಬರು ಬರೆದಿರುತ್ತಾರೆ.

ಕರಾಚಿಯಲ್ಲಿ ತಾ. 29ರಲ್ಲಿ ನಡೆಯಲಿಕ್ಕಿರುವ ಕಾಂಗ್ರೆಸ್ಸಿಗೆ ಮೆ. ಗಳಾದ ಪಂದ್ಯಂಡ ಬೆಳ್ಳಿಯಪ್ಪನವರೂ, ಕೊಳ್ಳಿಮಾಡ ಕರುಂಬಯ್ಯನವರೂ ಡೆಲಿಗೇಟರುಗಳಾಗಿಯೂ ಮತ್ತು ಕೋಟೆರ ಚಿಣ್ಣಪ್ಪನವರೂ, ಅವರ ಪತ್ನಿ ಶ್ರೀಮತಿ ಅಕ್ಕವ್ವನವರೂ ವಿಜಿಟರುಗಳಾಗಿಯೂ ಈ ತಾ. 22ರಲ್ಲು ಹೊರಟಿದ್ದಾರಾಗಿ ತಿಳಿಯುತ್ತೇವೆ.

ಕಳೆದ ತಾ 16ರಲ್ಲು ಶ್ರೀಮಂಗಲನಾಡಿನ ಮಹನೀಯರು ಮತ್ತು ಮಹಿಳೆಯರು ಸತ್ಯಾಗ್ರಹ ಮಂಡಳಿಯವರಿಗೆ ಉಚಿತ ಸ್ವಾಗತ ಕೊಟ್ಟರು. ಸುಮಾರು 3,000 ಜನರು ಖಾದಿ ಉಡುಪಿನಿಂದ ನೆರೆದಿದ್ದರೆಂತಲೂ ಈ ಪೈಕಿ 500 ಕ್ಕಿಂತ ಹೆಚ್ಚಾಗಿ ಸ್ತ್ರೀಯರು ನೆರೆದಿದ್ದರೆಂತಲೂ ತಿಳಿಯುತ್ತೇವೆ. ಕರ್ತಮಾಡ ಬೋಪ್ಪಯ್ಯನವರು ಅಧ್ಯಕ್ಷರಾಗಿದ್ದರು.

ತಾ. 10—3—31ರಲ್ಲು ಕಕ್ಕಬೆ ಸ್ಕೂಲಿಗಾಗಿ ಏರ್ಪಾಡಾದ "ಕೋಆಪರೇಶನ್ ಯೂನಿಯನ್ ಸೊಸೈಟಿ"ಯವರ ಮೀಟಿಂಗೊಂದು ನಡೆಯಿತು. ಡಿ. ಬೋರ್ಡ್ ವೈಸ್ ಪ್ರೆಸಿಡೆಂಟರು ನಾಪೋಕ್ಲು ನಾಡಿನ ಶಾಲೆ ಮತ್ತು ಗ್ರಾಮ ರಸ್ತೆಯನ್ನು ಕಾಹಲ್ ವರೆಗೆ ನೋಡಿರುವದಿಲ್ಲ. ಈ ಮಾಸೆ ಅಯ್ಯರಿಗೆ ಮಾತ್ರ ಪರ್ವಾವಧಿಯು ಇರುತ್ತದೆ. ಈ ಪ್ರಾಂತ್ಯವನ್ನು ಮುಂದಿನ ಬಜೆಟ್ಟಿಗಿಂತ ಮುಂದಾಗಿ ನೋಡುವದಾಗಿ ಒಂದು ಬಾತ್ಮಿ.

ಫ್ರೇಜರ್‌ಪೇಟೆ ಹೋಬಳಿ ತೊರೆನೂರು ಗ್ರಾಮದ ಬಸವೇಶ್ವರ ದೇವಸ್ಥಾನದ ಸಮೀಪ ಶ್ರೀ ಕಾವೇರಿ ಪುಣ್ಯ ನದೀತೀರದಲ್ಲಿರುವ ಬಿಲ್ವ ವೃಕ್ಷದಡಿಯಲ್ಲಿ ತಾ. 2—3—1931ರಲ್ಲಿ ಸುತ್ತುಮುತ್ತಲಿನ ಗ್ರಾಮಗಳ ಇಸ್ಲಾಮ ವೀರಶೈವ ಮಠಗಳಿಗೆ ವಿಧಿವತ್ತಾಗಿ ಶ್ರೀ ಮಸ್ಲಿ ರಾಜನ ಶ್ರೀ ಗುರು ಬಿಳಿಗ್ಗೋಡು ಸ್ವಾಮಿಗಳ, ಮಲ್ಲಾಪುರ ಮಠಾಧ್ಯಕ್ಷರು ಪಟ್ಟದ ಸ್ವಾಮಿಗಳ ಚನ್ನಾಪುರ ಮಠದ ಸ್ವಾಮಿಗಳ ಸನ್ನಿಧಿಯಲ್ಲಿ ಶಿವದೀಕ್ಷೋಪನಯನ ಸಂಸ್ಕಾರವೂ, ಮಾಹೇಶ್ವರ ಪೂಜೆ, ಗಣಾರಾಧನೆ ಮತ್ತು ಸ್ವಾಮಿಗಳ ಉತ್ಸವವೂ ಬಹಳ ವಿಜೃಂಭಣೆಯಿಂದ ನಡೆಯಿತು.

ಕಳೆದ ನವಂಬರು 22ರಲ್ಲಿ ವೀರಭಗನಿ ಕೋದಂಡ ಶ್ರೀಮತಿ ಸೀತ ಪೂವಯ್ಯನವರಿಗೆ ಬಟ್ಟೆ ಅಂಗಡಿ ಪಿಕೆಟಿಂಗ್ ಮಾಡಿದ್ದಕ್ಕಾಗಿ 4 ತಿಂಗಳ ಸಜೆ ಆಗಿ ಯರವಾಡ ಜೈಲಿನಲ್ಲಿದ್ದವರನ್ನು ಇದೇ ತಾ. 7ರಲ್ಲು ಬಿಡಲ್ಪಟ್ಟರು. ಪ್ರಬೋಧಿನಿ ಕೊಡಗರು ಶ್ರೀಮತಿಯವರಿಗೆ ಇದೇ ತಾ. 15 ರಲ್ಲಿ ಕನ್ನಡೀ ಮನೆಯಲ್ಲಿ ಮಾತಂಡ ಶ್ರೀ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸುಸ್ವಾಗತವನ್ನು ಕೊಟ್ಟರು ಅನೇಕ ಮಹನೀಯರು ಈ ಸಮಾರಂಭದಲ್ಲಿ ಹಾಜರಿದ್ದರು. ಕೊಡಗು ಸಂಘದ ಸೆಕ್ರೆಟರಿಯವರು ದೇಶಕ್ಕಾಗಿ ಇವರು ಮಾಡಿದ ಸಹಾಸ ಕೆಲಸಗಳನ್ನು ಸಾಂಗವಾಗಿ ವಿವರಿಸಿದರು. ಅಲ್ಲದೆ ಅವರನ್ನೇ ಮುಂದಿನ ವರ್ಷದ ಕೊಡಗು ಸಂಘದ ಪ್ರೆಸಿಡೆಂಟರನ್ನಾಗಿ ಚುನಾಯಿಸಿ ಸುಸ್ವಾಗತವನ್ನೀಡಿದರು. ಸ್ವಾಗತಕ್ಕೆ ಉಚಿತ ರೀತಿಯಲ್ಲಿ ಶ್ರೀಮತಿಯವರು ಜವಾಬನ್ನು ಕೊಟ್ಟನಂತರ ತಿಂಡಿ ಪೇರ್ಯಗಳು ಹಂಚಲ್ಪಟ್ಟು ಮೀಟಿಂಗ್ ಮುಕ್ತಾಯವಾಯಿತಾಗಿ ತಿಳಿಸಿರುತ್ತಾರೆ.

ಹಿಂದೂದೇಶ.

ಮಹಾತ್ಮ ಗಾಂಧಿಯವರ ಕಾರ್ಯಗಳು.

ಮಹಾತ್ಮ ಗಾಂಧಿಯವರು ಗುಜರಾತ್ ಪ್ರಾಂತ್ಯದಲ್ಲಿ ಸುತ್ತಿ ಕೆಲಸಗಾರರನ್ನೂ, ರೈತರನ್ನೂ ಕಂಡು ಸಂಭಾಷಿಸಿ ಬೊಂಬಾಯಿಗೆ ತಾ. 16ರಲ್ಲಿ ಒಂದು ಗಿರಣಿ ಕೆಲಸಗಾರರ ಸಭೆಯಲ್ಲಿ ಭಾಷಣ ಮಾಡಿದ್ದಲ್ಲದೆ ತಾ. 17ರಲ್ಲಿ ಸುಮಾರು 5 ಲಕ್ಷ ಜನರ ಸಾರ್ವಜನಿಕ ಸಭೆಯಲ್ಲಿ ಪಂಡಿತ ಜವಾಹಿರ್ ಲಾಲರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಿದರು. ಅದೇ ದಿನ ಮೌಲಾನಾ ಶೌಕತ್ ಅಲಿಯವರ ಸಂಗಡ ಹಿಂದೂ ಮುಸ್ಲಿಮ್ ಒಗ್ಗಟ್ಟಿನ ಕುರಿತು ಸಂಭಾಷಣೆ ನಡೆಸಿದರು. ಮೌಲಾನಾ ಶೌಕತ್ ಅಲಿಯವರು ಮಹಾತ್ಮ ಗಾಂಧಿಯವರ, ಹಿಂದೂ ಮುಸ್ಲಿಮ್ ತಕರಾರುಗಳನ್ನು ತೀರಿಸಲು ಮಾಡಿದ ಪೂರ್ಣ ಪ್ರಯತ್ನ ವಿಡುತ್ತಾರೆಂತ ಸಮಾಧಾನವಾಗಿದೆಯೆಂತಲೂ, ಡಿಲ್ಲಿಗೆ ಹೋಗಿ ಇತರ ಮುಸ್ಲಿಮ್ ಮುಖಂಡರೊಡನೆ ಸೇರಿ ಮುಸಲ್ಮಾನರಿಗೆ ಬೇಕಾದ ರಿಯಾಯಿತಿಗಳನ್ನು ಮಹಾತ್ಮರಿಗೆ ಬರೆದು ಕೊಡುವದಾಗಿಯೂ, ಅದಕ್ಕೆ ಸರಿಯಾದ ಜವಾಬು ದೊರೆತರೆ ಕಾಂಗ್ರೆಸಿಗೆ ಹೋಗುವವರಾಗಿಯೂ ತಿಳಿಸಿರುತ್ತಾರೆ. ಸುಭಾಸ್ ಚಂದ್ರಬೋಸರವರಿಗೆ ರಾಜಿ ಶರತ್ತುಗಳು ತೃಪ್ತಿ ಇಲ್ಲದೆ ಮಹಾತ್ಮ ಗಾಂಧಿಯವರೊಡನೆ ಖುದ್ದಾಗಿ ಮಾತನಾಡಿ ರಾಜಿ ಸಂಭಾಷಣೆಯ ವಿಷಯವೆಲ್ಲಾ ತಿಳಿದುಕೊಳ್ಳಲಿಕ್ಕಾಗಿ ಬೊಂಬಾಯಿಗೆ ಬಂದಿದ್ದರು ಸಂಭಾಷಣವಾದರೂ ಇವರಿಗೆ ಇನ್ನೂ ತೃಪ್ತಿಯಾದಂತೆ ಕಾಣುವುದಿಲ್ಲ. ಮಹಾತ್ಮರು ಡಿಲ್ಲಿಗೆ ಪ್ರಯಾಣ ಮಾಡುವಾಗ ರೈಲ್‌ನಲ್ಲಿ ಸಂಭಾಷಣೆಯನ್ನು ಮುಂದರಿಸಿ ಕಲ್ಕತ್ತಾಕ್ಕೆ ಹೋದ ನಂತರ ತನ್ನ ಮುಂದಿನ ಕಾರ್ಯವನ್ನು ನಿಶ್ಚೈಸುವದಾಗಿ ತಿಳಿಯ ಬಂದಿದೆ.

ಮಿಲ್ ಮಾಲೀಕರ ಸಂಗಡ ಮಹಾತ್ಮರು ಸಂಭಾಷಿಸಿ ಸರದೇಶಿ ಬಟ್ಟೆಯನ್ನೆಲ್ಲಾ ಪರದೇಶಕ್ಕೆ ಕಳುಹಿಸುವ ಏರ್ಪಾಡು ಮಾಡುತ್ತಲಿದ್ದಾರೆ.

ತಾ 18ರಲ್ಲಿ ಬೊಂಬಾಯಿಯಿಂದ ಡಿಲ್ಲಿಗೆ ಸರದಾರ ವಲ್ಲಭಬಾಯಿ ಪಟೇಲ್, ಜಮ್ನಾಲಾಲ್ ಬಜಾಜ್, ಪಂಡಿತ ಜವಾಹಿರ್‌ಲಾಲ್ ನೆಹರೂ, ಮಹದೇವ ದೇಸಾಯಿ ಮತ್ತು ಸುಭಾಸ್‌ಚಂದ್ರಬೋಸ್ ಸಹ ಪ್ರಯಾಣ ಮಾಡಿರುತ್ತಾರೆ.

ಮಹಾತ್ಮರ ಬೊಂಬಾಯಿಯ ಭಾಷಣದ ಸಾರಾಂಶವೇನೆಂದರೆ—ನಿಜವಾದ ಸತ್ಯಾಗ್ರಹಿಯು ಯುದ್ಧಕ್ಕೆ ತಯಾರಿರುವಂತೆಯೇ ಅನುಕೂಲ ದೊರೆತಾಗ ರಾಜಿಗೂ ತಯಾರಿರಬೇಕು. ನಿಜವಾದ ಸತ್ಯಾಗ್ರಹಿಯಂತೆ ಅವಕಾಶ ದೊರೆತಾಗ ತತ್ಕಾಲಿಕ ರಾಜಿ ಮಾಡಿಕೊಂಡಿರತಕ್ಕೇನೆ ಮುಂದಿನ ರಾಜಿಚರ್ಚೆಯಲ್ಲಿ ಕಾಂಗ್ರೆಸಿನವರು ಪೂರ್ಣ ಸ್ವಾತಂತ್ರ್ಯವನ್ನು ಕೇಳುವ ಹಕ್ಕಿದೆ ನಿಜವಾದ ಸ್ವಾತಂತ್ರ್ಯದ ತಿರುಳು ಸಿಕ್ಕದಿದ್ದರೆ ಕಾಂಗ್ರೆಸಿನ ಹೋರಾಟವು ಇನ್ನೂ ರಭಸದಿಂದ ನಡೆಯಬೇಕು. ಪರದೇಶೀ ಬಟ್ಟೆ, ನಿಷಾ ಪದಾರ್ಥಗಳನ್ನು ಬಹಿಷ್ಕರಿಸಿ ಖಾದಿ ಮಾತ್ರ ತೊಡಬೇಕೆಂತ ಕೇಳಿಕೊಂಡರು

ಕರಾಚಿ ಕಾಂಗ್ರೆಸ್ಸಿನಲ್ಲಿ ಪಂಡಿತ ಜವಾಹಿರ್‌ಲಾಲ್ ನೆಹರೂರವರು ಯುವಕ ಸಮ್ಮೇಳನದ ಅಧ್ಯಕ್ಷರಾಗಲು ಒಪ್ಪಿರುತ್ತಾರೆ. ಮಿ|| ಸಾಂಬಮೂರ್ತಿಯವರು ಹಿಂದೂಸ್ಥಾನೀ ಸೇವಾದಳದ ಪರಿಷತ್ತಿನ ಅಧ್ಯಕ್ಷರಾಗಲು ಒಪ್ಪಿರುತ್ತಾರೆ.

ಲಾರ್ಡ್ ಇರ್ವಿನರ ಸ್ಮಾರಕವನ್ನು ಸ್ಥಾಪಿಸಲು ಡಿಲ್ಲಿಯಲ್ಲಿ ಒಂದು ಕಮಿಟಿಯು ನೇಮಕವಾಗಿದೆ.

ರಾಜಕೀಯ ಖೈದಿಗಳನ್ನು ಬಿಡಲಿಲ್ಲವೆಂತ ಪ್ರಾಂತ್ಯಗಳಿಂದ ದೂರುಗಳು ಬರುತ್ತಿರುವದಾಗಿಯೂ, ಲಾರ್ಡ್ ಇರ್ವಿನರ ಮನೋಭಾವವು ಜಿಲ್ಲಾ ಅಧಿಕಾರಿಗಳ ವರೆಗೆ ಇನ್ನೂ ಹಬ್ಬಿಲ್ಲವಾಗಿಯೂ ಇಂಡಿಯಾ ಸರಕಾರವು ಖೈದಿಗಳನ್ನು ... ತಪ್ಪಿನಿಂದ ಆಗುವಷ್ಟು ಪ್ರಯತ್ನ ಮಾಡಿರುತ್ತಾರಾಗಿಯೂ, ಬದಲೀ ಹಕ್ಕಾಗಿ ಶಿಕ್ಷೆ ಹೊಂದಿದವರನ್ನು ಬಿಡುವ ಇರಾದೆಯುಳ್ಳವರಲ್ಲವೆಂತಲೂ ಪತ್ರಿಕಾ ಸಂಪಾದಕರೊಬ್ಬರಿಗೆ ಅಭಿಪ್ರಾಯ ಕೊಟ್ಟಿರುತ್ತಾರೆ

ಶ್ರೀ. ವಿ. ಜೆ. ಪಟೇಲರು ಎಸೆಂಬ್ಲಿಯ ಅಧ್ಯಕ್ಷರಾಗಿದ್ದವರು ಇಟಲಿಯಲ್ಲಿರುತ್ತಾರೆ. ಆರೋಗ್ಯ ತಕ್ಕ ಮಟ್ಟಿಗೆ ಸ್ವಸ್ಥವಾಗಿದೆ ಈಗ ಆಗಲಿಕ್ಕಿರುವ ರೌಂಡ್ ಟೇಬಲ್ ಕಾನ್ಫರೆನ್ಸಿನಿಂದ ಹಿಂದೂಸ್ಥಾನಕ್ಕೆ ಸಾಮಂತ ಸ್ವರಾಜ್ಯ ಸಿಕ್ಕುವ ನಂಬಿಕೆ ತನಗಿಲ್ಲವೆಂತ ಹೇಳುತ್ತಾರೆ.

ಈ ವಾರ ಪಾರ್ಲಿಮೆಂಟಿನಲ್ಲಿ ನಡೆದ ಹಿಂದೂಸ್ಥಾನದ ಚರ್ಚೆಯಲ್ಲಿ ಹಿಂದೂಸ್ಥಾನದಲ್ಲಿ ರೌಂಡ್‌ಟೇಬಲ್ ಕಾನ್ಫರೆನ್ಸ್ ನಡೆಸಲು ಸಾಧ್ಯವಿಲ್ಲವೆಂತಲೂ, ಜೂನ್ ತಿಂಗಳಲ್ಲಿ ರೌಂಡ್ ಟೇಬಲ್ ಕಾನ್‌ಫರೆನ್ಸಿನ ಫೆಡರಲ್ ಕಮಿಟಿಯ ಮೀಟಿಂಗ್ ಆಗುತ್ತದೆಯೆಂದೂ, ಅಕ್ಟೋಬರ್ ತಿಂಗಳಲ್ಲಿ ರೌಂಡ್ ಟೇಬಲ್ ಕಾನ್‌ಫರೆನ್ಸ್ ಆಗುತ್ತದೆಯೆಂದೂ, ಕಾಂಗ್ರೆಸಿನವರಿಗೆ ವೈಸರಾಯರ ಮೂಲಕ ಆಮಂತ್ರಣ ಕಳುಹಿಸಲಾಗಿದೆಯೆಂತಲೂ ಇಂಡಿಯಾ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಬರ್ಮಾ ದೇಶವನ್ನು ಹಿಂದೂಸ್ಥಾನದಿಂದ ಬೇರ್ಪಡಿಸಬೇಕೆಂಬ ಸರ್ಕಾರದ ಮತಲಬಿಗೆ ಬರ್ಮಾ ದೇಶದವರ ವಿರೋಧವಿದೆ. ವಿಷಯವೋ ಎಂಬದಕ್ಕೆ ಆ ದೇಶದ ಸರ್ವ ಜನರ ಅಭಿಪ್ರಾಯ ತೆಗೆಯಬೇಕೆಂತ ಬರ್ಮಾದ ಪ್ರತಿನಿಧಿಯು ತಂದ ಠರಾವು ಮತದಿಂದ ಮಂಜೂರಾಯಿತು

ಶ್ರೀಗುರು ಸಿದ್ಧಾರೂಢ ಸ್ವಾಮಿ ಪ್ರಸನ್ನಃ

(ಕೊಡಗು.)

ಚಿದಂಬರ ಮಠಾಧೀಶಾ | ಸಿದ್ಧಾರೂಢಯತೀಶ್ವರಃ
ಶಿಷ್ಯಪ್ರಶಿಷ್ಯ ರೂಪೇಣ | ಬೋಧಕಂ ಗುರುಮಾಶ್ರಯೆ

ಶ್ರೀ ಗುರುನಾಥ ಆರೂಢ ಸ್ವಾಮಿಯವರ ಆಶೀರ್ವಾದದ ಮೇರೆ.

ಶ್ರೀ ಮನ್ನಿತ್ಯ ನಿರ್ಗುಣ ನಿರಾಲಂಬ ನಿರ್ವಿಕಾರ ನಿರಂಜನ ನಿರಘ ನಿರ್ದ್ವಂದ್ವ ನಿಷ್ಕಲ ನಿಗಮಾತೀತ ತ್ರಿಕಬನ... ವಾರಿಧಿ ಸಚ್ಚಿದಂಬರ ಶ್ರೀ ಗುರು ಸಿದ್ಧಾರೂಢ ಸ್ವಾಮಿಗಳ ಶಿಷ್ಯರಾದ ಶ್ರೀ ಶಿವಪುತ್ರಪ್ಪ ಸ್ವಾಮಿಗಳವರ ಮೂಲಕ.

ಕೊಡಗು ಭಾಗಮಂಡ್ಲನಾಡು ಕೊಳಗದಾಳು ಚೇರಂಬಾಣೆ ಸಿದ್ಧಾಶ್ರಮದಲ್ಲಿರುವ ಶ್ರೀ ಸಿದ್ಧಾರೂಢ ಸ್ವಾಮಿಯವರ ಶಿಷ್ಯ ಕಾರ್ಯದರ್ಶಿಯಾದ ನಾದವಾನಂದ ಸ್ವಾಮಿಯವರು ಮತ್ತು ಭಕ್ತ ಮಂಡಲಿ ಸಹಿತ ಸಪ್ತಾಹ ಪ್ರಾರಂಭ ಮಾಡುವರು.

ಸನ್ 1931 ನೇ ಇಸವಿ ಎಪ್ರಿಲ್ ತಾರೀಕು 1 ನೇ ... ವಾರ ದಿವ ಬೆಳಿಗ್ಯೆ 3 ಗಂಟೆಗೆ ಸಪ್ತಾಹ ಪ್ರಾರಂಭವಾಗಿ ಸಿದ್ಧ ಪಾರಾಯಣ, ಬ್ರಹ್ಮ ಜಿಜ್ಞಾಸೆ, ಅಹೋರಾತ್ರಿ ಭಜನೆ ಕೀರ್ತನೆ ಈ ಪ್ರಕಾರ ನಡೆದು ಎಪ್ರಿಲ್ ತಿಂಗಳು 8 ನೇ ಬುಧವಾರ ದಿನ ಪ್ರಾತಃಕಾಲ ಸಪ್ತಾಹ ಸಮಾಪ್ತಿ ಆಗುತ್ತೆ ... ದ್ದುದರಿಂದ ತಾವುಗಳೆಲ್ಲರೂ ಬಂದು ಈ ಕಾರ್ಯವನ್ನು ನೆರವೇರಿಸಿ ಆಶೀರ್ವಾದ ತೆಗೆದುಕೊಂಡು ಹೋಗಬೇಕಾಗಿ ಕೋರುತ್ತೇವೆ.

ಇತಿ ಆಶೀರ್ವಾದಗಳು.

ನಾದವಾನಂದ.

||ಓಂ ನಮಃ ಶಿವಾಯ||

ಶಾಂತಿಃ ಶಾಂತಿಃ ಶಾಂತಿಃ

ಒಬ್ಬ ಗುಮಾಸ್ತನು ಬೇಕಾಗಿದೆ.

ಕೊಡಗು ಉಪಾಧ್ಯಾಯರ ಸಹಕಾರ ಸ್ಟೋರ್ಸಿಗೆ ಒಬ್ಬ ಅಸಿಸ್ಟೆಂಟ್ ಗುಮಾಸ್ತನು ಬೇಕಾಗಿದೆ ಪ್ರಥಮತಃ ತಿಂಗಳಿಗೆ 15/—ರೂಪಾಯಿ ಸಂಬಳ ಕೊಡಲಾಗುವದು. ನಂತರ, ಯುಕ್ತ ರೀತಿ ಹೆಚ್ಚಿಸಲ್ಪಡುವುದು. ಅರ್ಜಿದಾರರು ಸ್ಕೂಲ್ ಫೈನಲ್ ತರಗತಿ ವರೆಗೆ ಓದಿದ್ದು ಒಳ್ಳೆ ನಡತೆಯವರಾಗಿರಬೇಕು ಅಪೇಕ್ಷೆಯುಳ್ಳವರು ಎಪ್ರಿಲ್ 1 ರ ಒಳಗೆ ಅರ್ಜಿಯನ್ನು ಕಳುಹಿಸತಕ್ಕದ್ದು.

(Sd.) ಪಿ. ಸಿ. ಅಚ್ಚಯ್ಯ
ಪ್ರೆಸಿಡೆಂಟರು.

Rubber Stamps of every design
and
Glass sign boards. Half tone Blocks.
Monogram seals. Marble slabs. ring
stores etc. etc., to suit. every pocket and
taste.

The Crown Rubber Stamp Co.,
12—1 **Mangalore, S. K.**

...ದ್ಯೆಯ ಅಂಗಗಳು ಮತ್ತು ಅವುಗಳ ಸ್ಥಾನ
ಶಿಷ್ಯ.

(...ಳೆದ ಸಂಚಿಕೆಯಿಂದ ಮುಂದುವರಿದದ್ದು.)

...ವಿದ್ಯೆಯೂ, ಅರ್ಹತೆಯಿಲ್ಲದವರಿಗೆ ಬರುವುದಿಲ್ಲ. ...ಗುರುಗಳು ಶಿಷ್ಯರಲ್ಲಿ ನೋಡುತ್ತಿದ್ದ ಅರ್ಹತೆಯ... ...ರ ಕಷ್ಟ ಸಹಿಷ್ಣುತೆ ಒಂದು. ಜೇಮ್ಸ್ ಅಲನ್ ಎಂ... ...ಗ್ರಂಥಕಾರರು, ಯಾವ ವಿಷಯದಲ್ಲಿ ಜಯವ... ...ಬೇಕಾದರೂ, ಕಷ್ಟ ಸಹಿಷ್ಣುತೆಯು ಅವಶ್ಯಕವೆಂ... ...ದ್ದಾರೆ. ಸ್ಮೈಲ್ಸ್ ಎಂಬುವರು, ಉದ್ಯೋಗದಲ್ಲಿ ಸಾಹಿತ್ಯದಲ್ಲಿಯಾಗಲಿ, ರಾಜಕೀಯ ಧಾರ್ಮಿಕ... ...ಲ್ಲಿಯಾಗಲಿ, ಉನ್ನತಿಯನ್ನು ಮಹಾತ್ಮ್ಯವನ್ನು ...ಕಾದರೆ, ದೇಹದಂಡನೆಯು ಅವಶ್ಯಕವೆಂಬುದಾಗಿ ...ರೆ. ಆದಕಾರಣ ಪೂರ್ವದ ಗುರುಗಳು, ತಮ್ಮ ಶಿಷ್ಯ... ...ದಂಡನೆಯನ್ನು ಚೆನ್ನಾಗಿ ಅಭ್ಯಾಸ ಮಾಡಿಸುತ್ತಿದ್ದ... ದೇಹದಂಡನೆಗೆ ದೊಡ್ಡವನು, ಚಿಕ್ಕವನು, ಸಿರಿವಂತ ಎನ್ನುವ ಭೇದವಿರಲಿಲ್ಲ. ದ್ರುಪದರಾಜನು ಬಡ... ...ರ ಪುತ್ರರಾದ ದ್ರೋಣಾಚಾರ್ಯರೊಂದಿಗೆ, ಧನುರ್ವಿ... ಶಾಸ್ತ್ರಾಭ್ಯಾಸವನ್ನೂ ಮಾಡಿದರು. ಆಗ ದ್ರೋ... ...ರೊಂದಿಗೆ ರಾಜನೂ ಕಾಡಿಗೆ ಹೋಗಿ ಹೋಮಕ್ಕೆ ಸಮಿತ್ತುದರ್ಭೆ ಮುಂತಾದುವುಗಳನ್ನು, ಪೂಜೆಗೆ ಹೂವು ತುಳಸಿ ಮುಂತಾದುವುಗಳನ್ನೂ ತರುತ್ತಿದ್ದ... ...ನು ಧೊರೆಯ ಮಗನೆಂದಾಗಲಿ, ಅದನ್ನು ಮಾಡ ...ಕೆಲಸವಲ್ಲವೆಂದಾಗಲಿ ಅವನು ಹಿಂದೆಗೆಯಲಿಲ್ಲ.

...ವಿಶ್ವಾಮಿತ್ರ ಋಷಿಗಳು ಶ್ರೀರಾಮನನ್ನೂ, ಲಕ್ಷ್ಮಣನನ್ನೂ ...ಂಡನೆಯ ಮಯ್ಯನಲ್ಲಿಯೇ ಕಾಡಿಗೆ ಕರೆದು... ...ಹೋದರಷ್ಟೆ. ಅಲ್ಲಿ ಶ್ರೀರಾಮ ಲಕ್ಷ್ಮಣರು, ...ಕ್ಷತ್ರರಂತೆ ಕಂದ ಮೂಲಗಳನ್ನು ತಿಂದು, ಕಾಡಿನಲ್ಲಿ ...ರಾಕ್ಷಸ ಸಂಹಾರವನ್ನು ಮಾಡಿ ವಿಶ್ವಾಮಿತ್ರ... ...ಯಿಂದ ಅನೇಕ ಅಸ್ತ್ರಗಳನ್ನು ಕಲಿತುಕೊಂಡರು. ಕಾ... ...ಕಂದ ಮೂಲಗಳನ್ನೂ, ಗೆಡ್ಡೆ ಗೆಣಸುಗಳನ್ನೂ ತಿಂದು ...ಲು ಅವರು ಹಿಂದೆಗೆದಿದ್ದರೆ ಆ ಅಸ್ತ್ರಗಳನ್ನೆಲ್ಲಾ ಕಲಿ... ...ರಲ್ಲಿ ಅವರು ಶಕ್ತರಾಗುತ್ತಿದ್ದರೆ?

...ಗಿನ ಶಿಷ್ಯರುಗಳಾದ ನಮಗೆ, ಕಷ್ಟ ಸಹಿಷ್ಣುತೆ ಎಂದ... ...ನೆ ಗೊತ್ತೇ ಇಲ್ಲ. ನಿತ್ಯ ... ಲೋಟ ಕಾಫಿ ಇಲ್ಲದಿ... ...ಶಾಲೆಗೇ ಹೋಗುವುದಕ್ಕೆ ಆಗುವುದಿಲ್ಲ. ಅರ್ಧ ಮೈಲಿ... ...ದ ನಡೆಯಲಾರೆವು. ಬೈಸಿಕಲ್ಲು, ಟೋಂಗ ಮೋ... ...ಬೇಕು. ಪುಸ್ತಕವನ್ನು ಹೊರಲಿಕ್ಕೆ ಒಬ್ಬ ಸೇವಕ ಬೇ... ...ಸಂಧ್ಯಾಕಾಲ ಡ್ರಿಲ್ ತರಗತಿಗೆ, ಉಪಾಧ್ಯಾಯರು ವಿ... ...ಗಳನ್ನು ಒಟ್ಟರಿಸಬೇಕು. ಇಂತಹವರಿಗೆ ನಿಜ... ...ಆರೋಗ್ಯ ಹೇಗೆ ತಾನೇ ದೊರೆತೀತು.

...ಹಿಂದಿನ ಗುರುಗಳೂ, ಶಿಷ್ಯರೂ ಪ್ರಕೃತಿಯ ತೊಟ್ಟಿಲಲ್ಲಿ ...ದರಿಂದ ಅವರು ಆರೋಗ್ಯ ದೃಢಕಾಯರಾಗಿದ್ದರು. ...ಶರೀರ ಮಾದ್ಯಂ ಖಲುಧರ್ಮ ಸಾಧನಂ" ಎಂಬಂತೆ ರೋಗ ...ಗಿದ್ದರೆ ಅಲ್ಪವೇ, ತಪಸ್ಸನ್ನು ಮಾಡುವುದಕ್ಕೆ, ರಾಜ್ಯ ...ವುದಕ್ಕೆ, ಧರ್ಮ ಪ್ರಚಾರಕ್ಕೆ ಶಕ್ತಿ ಉಂಟಾಗ ವುದು. ...ಈ ನಾಗರೀಕತೆಯ ಜೀವನದಲ್ಲಿ ಸಿಲುಕಿ, ಶೀಘ್ರ ತಗೆದು ...ದ ಸೀಕ, ಮಂಗಳಾರತಿ ತಗೆದುಕೊಂಡರೆ ಉಷ್ಣವೆನ್ನು... ...ಂಥಾ ಕಾರಣದಿಂದ, ಮಹತ್ಕಾರ್ಯಗಳು ಸಾಧಿಸಲ್ಪಡು... ...ವೇ? ಮಹತ್ಕಾರ್ಯಗಳ ಸಾಧನೆಯ ಮಾತಿರಲಿ, ನಮ್ಮ ...ದಲ್ಲಿಯೇ ನಮ್ಮ ಮನದಲ್ಲಿ ಬಿತ್ತಲ್ಪಡಬೇಕು ... ...ವನ್ನು ಬಿಡದೆ ಸಾಧಿಸಲು, ನಮಗೆ ಶಕ್ತಿಯನ್ನು ಕೊ... ...ದಲ್ಲಿ ಕಷ್ಟ ಸಹಿಷ್ಣುತೆಯ ನವೀನವಾದ ಪಾರಶಾಲೆ ...ತಿರಿಸುವದಿಲ್ಲವೆಂಬುದನ್ನು, ಮುಖ್ಯವಾಗಿ ಇಂದಿನ ಸಿರಿ... ...ಪ್ಪಾಸಕದಲ್ಲಿ ಟ್ಟುಕೊಳ್ಳಬೇಕು.

ಹಿಂದೆ ಗುರು ಶಿಷ್ಯರ ಸಂಬಂಧವು ಬಹಳ ನಿಕಟವಾಗಿದ್ದ... ...ಗುರುವು ಶಿಷ್ಯರೇ ತನ್ನ ಧನವೆಂದು ತಿಳಿದಿದ್ದನು. ಆ ...ನ್ನು ಸಂರಕ್ಷಿಸಿ ಅವರಿಗೆ ಅನ್ನ ಬಟ್ಟೆಯನ್ನು ಕೊಟ್ಟು ...ವುದಕ್ಕಾಗಿ ಅವನು ದೇವರನ್ನು

"ಅನ್ನ ದಾನವನ್ನೂ, ಅಕಳುಗಳನ್ನೂ, ವಸ್ತ್ರ ಪ್ರಾವರಣ... ...ಶಿರೋ ವಸ್ತ್ರವನ್ನೂ ಯಾವಾಗಲೂ ನನಗೆ ಪೂರೈ... ನನಗೆ ವಿಪುಲವಾದ ಉಣ್ಣೆಯುಳ್ಳ ಪಶುಗಳ ಸಹಿತವಾ... ...ಯನ್ನು ಸಂಪಾದಿಸಿ ಕೊಡು. ಬ್ರಹ್ಮಚಾರಿಗಳು ಬರ... ...ಬ್ರಹ್ಮಚಾರಿಗಳು ಬಲಿಷ್ಠರಾಗಲಿ, ಬ್ರಹ್ಮಚಾರಿಗಳು ಹ... ...ಲಿ; ಬ್ರಹ್ಮಚಾರಿಗಳು ಇಂದ್ರಿಯ ದಮನವುಳ್ಳವರಾಗಲಿ; ...ಚಾರಿಗಳು ಶಾಂತಿಯುಕ್ತರಾಗಲಿ" ಎಂದು ಪ್ರಾರ್ಥಿಸ... ...ನು.

...ಗುರು ಶಿಷ್ಯ ಸಂಬಂಧವು ಎಷ್ಟರ ಮಟ್ಟಿಗೆ ನಿಕಟ... ...ದ್ದಿತೆಂದನ್ನು ತೋರಿಸುವುದಕ್ಕೆ ಕೃತಿಯ ಉಪನಿಷತ್ತಿ... ...ಈ ಕೆಳಗಿನ ವಾಕ್ಯಗಳಿಗೆ—

"ಓಂ ಸಹನಾವವತು ಸಹನೌಭುನಕ್ತು || ಸಹ ವೀರ್ಯಂ ...ವಹೈ || ತೇಜಸ್ವಿನಾವಧೀತ ಮಸ್ತುಮಾ ವಿದ್ವಿಷಾವಹೈ|| ...ಶಾಂತಿಃ ಶಾಂತಿಃ ಶಾಂತಿಃ ||

...ದೇವರು ಗುರು ಶಿಷ್ಯರಾದ ನಮ್ಮಿಬ್ಬರನ್ನು ಕಾಪಾಡಲಿ ...ಬ್ಬರಿಗೂ ಕೂಡಿ ಉಪಭೋಗಗಳನ್ನೀಯಲಿ || ಇಬ್ಬರೂ ಕೂಡಿ ವೀರ್ಯವನ್ನು ದೊರಕಿಸುವಾ || ನಮ್ಮ ಅಧ್ಯಯನವು ತೇಜಸ್ವಿಯಾದದ್ದಾಗಲಿ || ನಮ್ಮೊಳಗೆ ಹಗೆತನವಿಲ್ಲದಿರಲಿ ||

ಗುರು ಶಿಷ್ಯರು ತಾವು ಒಬ್ಬರೆಂಬ ಏಕಭಾವನೆಯಿಂದ ಪವಿತ್ರವಾದ ಮನಸ್ಸಿನಿಂದ ಈ ರೀತಿ ಒಂದಾಗಿ ಪ್ರಾರ್ಥಿಸು ವಾಗ ಆರೋಗ್ಯಯುಕ್ತವಾದ ಅಧ್ಯಾತ್ಮಿಕ ವಿಷಯಕರವಾದ ವಾತಾವರಣವು ಸೃಷ್ಟಿಸಲಾಗಿ ಶಿಕ್ಷಣದ ಪವಿತ್ರಕವಾದ ಪ್ರಚಾರಕ್ಕೆ ಅನುಕೂಲವಾಗುವುದು. ವಿದ್ಯಾ ಪ್ರವಚನಕ್ಕೂ ವಿದ್ಯಾ ಅಧ್ಯಯನಕ್ಕೂ, ಈ ತರದ ವಾತಾವರಣವು ಬಹಳ ಆವಶ್ಯಕವಾದುದು. ಗುರುವು ತಾನೇನೋ ಮಹಾ ವಿದ್ವಾಂಸ ಶಿಷ್ಯನಿಗೆ ಏನೂ ತಿಳುವಳಿಕೆ ಇಲ್ಲವೆಂಬ ಭಾವನೆಯಿಂದ ವರ್ತಿಸಕೂಡದು. ಶಿಷ್ಯನೆಂದರೆ ಹೂವಿನ ಮೊಗ್ಗಿನಂತೆ. ಅದನ್ನು ಅರಳಿಸುವುದು ಗುರುವಿನ ಕೆಲಸ. ಶಿಷ್ಯನಲ್ಲಿ ಇಲ್ಲದುದನ್ನು ಅಲ್ಲಿ ತುಂಬಲು ಗುರುವಿಗೆ ಸಾಧ್ಯವಿಲ್ಲ. ಆದರೆ ಶಿಷ್ಯನೊಂದಿಗೆ ಏಕತ್ವವನ್ನು ಪಡೆದು ಅವನ ಕಷ್ಟದೊಂದಿಗೆ ಸಹಾನುಭೂತಿಯನ್ನು ತೋರಿಸಿ ಅವನ ಕಷ್ಟಗಳನ್ನು ಶಾಂತಿಯಿಂದ ತಿದ್ದಿದ್ದರೆ ಆ ಮೊಗ್ಗನ್ನು ಅರಳಿಸುವ ಸಂದರ್ಭವುಂಟು. ಈ ಅವಕಾಶವನ್ನು ಕಲ್ಪಿಸಿಕೊಳ್ಳಲು ಗುರು ಶಿಷ್ಯರ ನಿಕಟ ಸಂಬಂಧವು ಆವಶ್ಯಕವಾಗಿದೆ.

ಪ್ರಕೃತಿಯೊಂದಿಗೆ ಗುರುವಿನ ಜೊತೆ ಮತ್ತು ನಗರದ ನಾಗರಿಕತೆಯಿಂದ ಸ್ವಲ್ಪ ದೂರವಾಗಿ ವಿದ್ಯಾಭ್ಯಾಸವನ್ನು ಪ್ರಾರಂಭಿಸುವುದರಿಂದ, ... ವಿದ್ಯಾರ್ಥಿ ಚಿತ್ತ ... ... ಇಲ್ಲ ... ... ನ್ನು ಸಂಪಾದಿಸುವನು. ವಿದ್ಯಾರ್ಥಿಗೆ ... "ತ್ರೈಲೋಕ್ಯವನಪ್ಪಿನ್ನ ...ದ" ಭಕ್ತಿ ಇರುವುದು. ... ...ಲ್ಲದಿದ್ದರೆ ಗುರುವಿನ ಕಷ್ಟದ ಪೂರ್ಣ ಫಲವು ಶಿಷ್ಯರಿಗೆ ದೊರೆಯುವುದಿಲ್ಲ. ಇದಕ್ಕೆ ಒಂದು ಚಿಕ ಸುಗಿತ ಉದಾಹರಣೆಯನ್ನು ನಿನ್ನ ಜ್ಞಾಪಕಕ್ಕೆ ತರಲಿಚ್ಛಿಸುತ್ತೇನೆ. ದ್ರೋಣಾಚಾರ್ಯರ ಬಳಿ ಪಾಂಡವರೂ ಕೌರವರೂ ಬಿಲ್ಲಿನ ಅಭ್ಯಾಸವನ್ನು ಮಾಡಿ ಪೂರೈಸಿದ ಮೇಲೆ ಒಂದು ದಿನ ಅವರ ವಿದ್ಯೆಯ ಪರೀಕ್ಷೆ ಮಾಡಿದರು. ಮಧ್ಯಾಹ್ನದ ... ಒಂದು ಮರದ ಮೇಲೆ ಒಂದು ಚಿಕ್ಕ ಹಕ್ಕಿಯನ್ನು ಕಟ್ಟಿ ಅದನ್ನು ಹೊಡೆಯಬೇಕೆಂದು ಎಲ್ಲರನ್ನೂ ಬಿಟ್ಟರು. ಅವರ ಪೈಕಿ ಅರ್ಜುನನೊಬ್ಬನೇ ಮಾತ್ರ ಆ ಹಕ್ಕಿಯನ್ನು ಹೊಡೆದನು. ಅನಂತರ ಕಾರಣವನ್ನು ವಿಚಾರಿಸಿದುದರಲ್ಲಿ ಆ ಹಕ್ಕಿಯನ್ನೇ ಏಕಾಗ್ರತೆಯಿಂದ ನೋಡುವ ಶಕ್ತಿ ಅರ್ಜುನನಿಗೆ ಇದ್ದಿತೆಂಬುದೂ, ಅದರಿಂದ ಹಕ್ಕಿಗೆ ಗುರಿ ಇಡುವಾಗ ಅದರ ಕಣ್ಣು ಮಾತ್ರವೇ ತನಗೆ ಕಾಣುತ್ತಿದ್ದಿತೆಂದು ಅವನು ಹೇಳಿದನು. ಅರ್ಜುನನು ಹಕ್ಕಿಯನ್ನು ಹೊಡೆಯಲು ಸಾಧ್ಯವಾದುದು ಅವನ ಏಕಾಗ್ರತೆಯ ಫಲವೆಂದು ದ್ರೋಣಾಚಾರ್ಯರು ಉಳಿದ ಶಿಷ್ಯರಿಗೆ ತಿಳಿಸಿದರು.

ವಿದ್ಯಾಭ್ಯಾಸವು ಪ್ರಾಚೀನ ಕಾಲದ್ದಾಗಲೀ ಅಥವಾ ಇಂದಿನದಾಗಲೀ ಶಿಷ್ಯರಲ್ಲಿ ಈ ಕೆಳಗಿನ ಗುಣಗಳಿದ್ದ ಹೊರತು ಅದರಿಂದ ಅವರಿಗೆ ಪ್ರಯೋಜನವೂ, ದೇಶದ ಏಳಿಗೆಯೂ ಉಂಟಾಗುವುದಿಲ್ಲ.

1. ಗುರು ಶಿಷ್ಯರ ನಿಕಟ ಸಂಬಂಧ.—ಇದು ಗುರು ಶಿಷ್ಯರು ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚು ಕಾಲ ಒಂದೇ ಕಡೆಯಲ್ಲಿರುವುದರಿಂದ ಉಂಟಾಗುತ್ತದೆ

2. ಕಷ್ಟಸಹಿಷ್ಣುತೆ—ಬಾಲ್ಯದಿಂದ ಹುಡುಗರೂ, ಶಿಷ್ಯರೂ ದೇಹವನ್ನು ದಂಡಿಸುವುದನ್ನು ಕಲಿಯುವುದರಿಂದ ಇದು ಸಾಧ್ಯವಾಗುತ್ತದೆ

3. ಪ್ರಕೃತಿಯ ಸಮೀಪ ಸಂಬಂಧ,—ಇದು ಸಾಧ್ಯವಾದ ಮಟ್ಟಿಗೆ ಉಪಾಧ್ಯಾಯರು ಬಾಲಕರನ್ನು ಹೊರಗಿನ ಪರಿಶುದ್ಧ ವಾತಾವರಣಕ್ಕೆ ಕರೆದುಕೊಂಡು ಹೋಗಿ ವೃಕ್ಷಗಳ, ನದಿಯ, ಬೆಟ್ಟದ ಬುಡಗಳಲ್ಲಿ ಪಾಠಗಳನ್ನು ಹೇಳುವುದರಿಂದ ಸಾಧ್ಯವಾಗುತ್ತದೆ.

4 ಗುರುವು ಭಕ್ತಿ:—ಗುರು ಶಿಷ್ಯರ ಎದುರಿಗೂ, ಅವರು ಎದುರಿಗೆ ಇಲ್ಲದಿರುವಾಗಲೂ, ಅನುಕರಣೀಯವಾದ ಮೇಲು ಪಂಕ್ತಿಗೆ ಯೋಗ್ಯವಾದ ಆಚರಣೆಯನ್ನು ನಡೆಸುವುದರಿಂದ ಉಂಟಾಗುತ್ತದೆ

(ಮುಂದುವರಿಯುವುದು.)

ಕೊಡಗನ್ನು ಬೇರೆ ಪ್ರಾಂತ್ಯದ ಸಂಗಡ ಸೇರಿಸಬೇಡವೇ?

(ಬರೆದು ಬಂದದ್ದು)

(ಕಳೆದ ವಾರದಿಂದ ಮುಂದುವರಿದದ್ದು)

ಬ್ರಿಟಿಷ್ ಹಿಂದೂಸ್ಥಾನದಲ್ಲಿಲ್ಲ ಓಟರ್ಸ್ ಅರ್ಹತೆಯು ಒಂದು ರೀತಿಯಲ್ಲಿದ್ದು ಕೊಡಗಿನ ಕೊಡಗರು ಕೊಡಗೇತರು ... ಮೇಲೆ ಸವಾರಿ ಮಾಡಲು ಅನುಕೂಲವಾಗುವಂತೆ ಕೊಡಗಿನ ಓಟರ್ಸ್ ಅರ್ಹತೆಯನ್ನು ಬದಲಾಯಿಸುವುದು ಸಾಧ್ಯವೇ?

ಕೊಡಗಿನ ನಾವು ನಮ್ಮ ಜನರ ಮೇಲ್ಮೆಯನ್ನು ಯೋಚಿಸಿ ಅದಕ್ಕನುಸಾರವಾಗಿ ಕೆಲಸ ಮಾಡಬಹುದೆಂಬುದು ಅತಿ ಶ್ರೇಷ್ಠವಾದ ... ಮತ್ತು ಪ್ರೀತಿಕರವಾದ ಅಂಶ. ಆದರೆ ಈ ಅಂಶ ಯು ನಿಜವಾಗಿಯೂ ಕೈಗೂಡುವುದಕ್ಕೆ ಯಾವ ದಾರಿಯೂ ಇಲ್ಲವಾಗಿದೆ. ಈಗಿದ್ದ ರೀತಿಯಲ್ಲಿ ರಾಜ್ಯದ ಆಳಿಕೆಯನ್ನು ನಡೆಸಿಕೊಂಡು ಹೋಗುವುದಕ್ಕಾಗಿ ಸರಕಾರಿ ನೌಕರರ ಸಂಬಳವನ್ನು ಎಷ್ಟು ಕಡಿಮೆ ಮಾಡಿದರೂ, ಮುಂದಿನ ದಿವ್ಯ ಕೌನ್ಸಿಲನ್ನು ಅತಿ ಕಷ್ಟದಿಂದ ನಡೆಸಿಕೊಂಡು ಹೋಗುವುದು ಸಾಧ್ಯವಾದರೂ ಕೊಡಗಿನ ಜನಕ್ಕೆ ಹೆಚ್ಚಿನ ಯಾವ ಮಟ್ಟಿನ ಪ್ರಯೋಜನವನ್ನು ನಮ್ಮ ದೇಶಕ್ಕೆ ಕೊಡಲಾಗುವುದಿಲ್ಲ. ಕಾಫಿಗೆ ಏರಲಿಗೆ ಹೆಚ್ಚು ರೂಪಾಯಿ ಕಂದಾಯ ಹಾಕಿದರೂ ಅದು ಸ್ಥಿರವಾದ ಉತ್ಪತ್ತಿಯಲ್ಲ. ದಕ್ಷಿಣ ಕೊಡಗಿನಲ್ಲಿ ಒಂದು ಕಾಲದಲ್ಲಿದ್ದ ಕಾಫಿ ತೋಟಗಳನ್ನು ಈಗಿರುವ ಅದೇ ಸ್ಥಳದ ಲಂತಾನವನ್ನು ನೋಡಿದರೆ ಆ ಮಾತ, ಜಾಗರಾಗ ವೃಷ. ಕಳೆದ ಅನೇಕ ವರ್ಷಗಳಿಂದಲೂ ಕಸುಮಸಭೆಗಳಲ್ಲಿ ಕೆಲಸ ಮಾಡುತ್ತಿರುವ ಕೊಡಗಿನ ಮುಂದಾಳುಗಳ ಮಂತ್ರಿಗಳಾದರೆ ಅವರ ಪ್ರಾಮಾಣಿಕ ಜನದ ವಿಷಯದಲ್ಲಿ ದೇಶವು ಎಳ್ಳಷ್ಟು ಸಂಶಯ ಪಡಬೇಕಾಗಿಲ್ಲ. ಆದರೆ ಅವರೇ ಮಂತ್ರಿಗಳಾಗುವರೆಂಬ ವಿಷಯದಲ್ಲಿ ಯಾವ ಭರವಸೆಯಿದೆ. ಮಾತ್ರ ಮುಂದಿನ ಸಾವಿರಾರು ವರ್ಷಗಳಲ್ಲಿ ಅವರೇ ಇರುವರೆ? ಅವರಾದರೂ ಐಕ್ಯಮತರಾಗುವ ಎಷ್ಟು ಶಕ್ತಿದ ಕೂಡಲೇ ಎಂತಹ ಸಾಧುವೂ ಕೂಡಲೇ ರಾಕ್ಷಸನಾಗುವನು. ಹಾಗಿರುವಾಗ ನಾಟಕ ಕಡಿಮೆ ಮಾಡಲ್ಪಟ್ಟ ಮಂತ್ರಿಗಳೂ ಉದ್ಯೋಗಸ್ಥರೂ ತಮ್ಮ ರಾಮ ಕೃಷ್ಣನ ಕುದುರೆಯಂತೆ ಪ್ರಜೆಗಳ ಗದ್ದೆಗಳನ್ನು ನಷ ಮಾಡಿ ಭಾವನೆಯಿಂದ ತರಿದು ಹಿನ್ನವೆಂಬ ವಿಷಯದಲ್ಲಿ ಯಾವ ಸಂಶಯವಿದ್ದಾವು. ... ಕೊಡಗಿಗಾಗಿ ಯೋಚಿಸುವ ಮಹಾಶಯಗಳು ಇದಕ್ಕೆ ಸಮಾಧಾನವಾಗುವವು. ಈ ವಿಷಯವು ಮುಂದಿನ ಲೇಖನದಲ್ಲಿ

ಕೊಡಗಿನ ... ಜನರು ಬೇರೆ ವಿಷಯಕ್ಕೆ ಪಾಲವಾಗಿ ಕೊಡಗಿಗೆ ಜಮ್ಮ ಕಂದಾಯ ಕಡಿಮೆಯಾಗಿರುವುದನ್ನೂ, ಕತ್ತಿ ಕೋವಿಗಳಿಗೆ ಲೈಸನ್ಸ್ ಇಲ್ಲದಿರುವುದನ್ನೂ ಹಿಡಿದುಕೊಂಡು ಎಳೆದಾಡುತ್ತಿರುವರು. ಸ್ವರಾಜ್ಯ ವ್ಯವಸ್ಥೆಯಲ್ಲಿ ಲೈಸನ್ಸ್ ವಿಷಯವೇ ತೆಗೆದು ಹಾಕಲ್ಪಟ್ಟು ಪ್ರತಿಯೊಬ್ಬನೂ, ಆಯುಧ ಧಾರಣೆಯಾಗಿರುವಂತಾಗುವನು. ಇನ್ನು ಕಂದಾಯದ ವಿಷಯ ಕಂದಾಯವೇ ಆದಾಯವೆಂಬುದು ಹಿಂದೂಸ್ಥಾನದವರ ವಾದವಾಗಿದೆ. ಮನೆ ಕಂದಾಯ, ಭೂ ಕಂದಾಯ, ಮುಂತಾದ(Direct Taxes) ಕಂದಾಯಗಳನ್ನು ತೆಗೆದು ಹಾಕಿ ರಾಜ್ಯದಾಳಿಕೆಯನ್ನು ಸ್ಟೇಟ್ಸ್, ಪೋಸ್ಟ್, ಟೆಲಿಗ್ರಾಫ್, ಮದ್ಯಗಳು, ಸರಕಾರಿ ನಾಟಕ ಸಿನಿಮಾ ಮುಂತಾದ ವಿನೋದ ಕಲಾಕೂಟಗಳು, ಸರಕಾರಿ ಈ... ... ರಿಜಿಸ್ಟ್ರೇಶನ್, ಕಸ್ಟಮ್ಸ್ (Such Like Indirect Taxes) ಮುಂತಾದುವುಗಳಿಂದಲೇ ನಡೆಸಬೇಕೆಂದು ವ್ಯವಸ್ಥೆಯನ್ನಾದರೂ ಚಿಸಲಾಗಿದೆ. ಜನರ ಪ್ರತಿನಿಧಿಗಳು ಅವುಗಳನ್ನು ನಾಲ್ಕಾರು ವರ್ಷಗಳಲ್ಲೇ ಜಾರಿಗೆ ತರಬಹುದು. ಆ ವ್ಯವಸ್ಥೆಯು ಕೊಡಗಿನ ಹೊರಗೆ ಸಾಧ್ಯವೇ ಹೊರತು ಕೊಡಗಿನ ಜನರ ಕಡಿಗೆ ಒಂದು ರಾಸಿನ ಪ್ರಯೋಜನ ಪಡೆಯುವುದಕ್ಕೆ ಆ ಒಂದು ಕಾನೂನನ್ನು ಅವರುಗಳ ನಡೆಸುವ ಖರ್ಚಿಗಾಗಿ ಅರ್ಧ ಕಾಸಿನಷ್ಟು ಆದರೂ ಒದಗಿಸುವರೆ ಕಾಸನ್ನು ಕಂದಾಯವಾಗಿ ಕೊಟ್ಟೇ ತೀರಬೇಕು. ಕೊನೆಗೆ ಹೊರಗಿನ ಜನರ ಸುಖಕ್ಕಾಗಿ ಕೊಡಗಿನವರ ಕಣ್ಣೀರು ಮಿಡಿಯುತ್ತಿರುವುದು ನ್ಯಾಯ ಹಣೆಯ ಬರಹವೇ?

ಹಿಂದೂಸ್ಥಾನದ ಅಭಿವೃದ್ಧಿಗಾಗಿ ಐರೋಪ್ಯರ ಮಿಲಿಯನ್ನುಗಳನ್ನು ಪರದೇಶಗಳಿಂದ ಸಾಲ ತೆಗೆದು ಕೊಳ್ಳುವರು. ಕೊಡಗು ಯಾವ ಧ್ಯೇಯದ ಮೇಲೆ ಮತ್ತು ಯಾತಕ್ಕಾಗಿ ಅಂತಹ ಸಾಲ ತೆಗೆದ ... ... ಕಂದಾಯ ಕೊಡಲು ಜನರು ತಕ್ಕವರಾಗಿದ್ದಾರೆಂದೇನು? ಈ ವಿಷಯವೂ, ಮುಂದಿನ ಲೇಖನದಲ್ಲಿ.

(ಮುಂದುವರಿಯುವುದು.)

Divisional Forest Office, South Coorg,
Mercara, the 9th March 1931.

NOTICE.

It is hereby notified for general information that in accordance with Rule 17 (b) of the rules regulating the General Provident Fund, the balance amount about Rs 1314/ and odd at the credit of the deceased subscriber Chenanda M. Ponnappa, Account No. 20 (late Forester of the Coorg Forest Department) will be distributed in equal shares among the following members left behind by the deceased.—

(1) Chenanda Ponnavva, widow of late Forester.

Minor	(2)	do	Chengappa, aged about	17 yrs,
childern	(3)	do	Puvayya, do.	15 ,,
of the	(4)	do.	Devakka, do	10 ,,
deceased	(5)	do.	Nanaya, do	9 ,,

2 Should there be any objection to such distribution either from the members of the deceased's family or any other person such objection should be submitted in writing so as to reach the undersigned by 7-4-1931. Objections received after this date will not be considered.

(Sd A R Brand
(Divisional Forest Officer.)

1—1

ಪ್ರಸಿದ್ಧ ಪತ್ರಿಕೆ.

ಈ ಕೆಳಗೆ ನಮೂದಿಸಿರುವ ಮುತ್ತಪ್ಪ ತಂಬ್ರಾನ್ ಮೇನೇಜರು ಸರ್ವರಿಗೂ ತಿಳಿಯಪಡಿಸುವದೇನೆಂದರೆ.—

ಮುತ್ತಪ್ಪ ತಂಬ್ರಾನಲ್ಲಿ ಈ ಕೆಳಗೆ ಕಂಡ ಪ್ರತಿ ಪೂಜೆಗಳಿಗೆ ಕೆಳಗಿನ ಪಟ್ಟಿ ಮೇರೆ ಚಾರ್ಜು ಬೀಳುತ್ತೆ. ಇಲ್ಲಿಗೆ ಬರಲು ಕನ್ನಾನೂರಿಂದ ತಳಿಪರಂಬು ಸ್ಟೇಷನಿಗೆ ರೈಲಿನಲ್ಲು ಬಂದರೆ ದೇವಸ್ಥಾನದ ಬಸ್ಸು ಜನರನ್ನು ಕಾದು ಇರುತ್ತೆ. ಬಸ್ಸಿಗೆ 0—6—0 ಆಣೆ ಚಾರ್ಜು ಬೀಳುತ್ತೆ. ಇಲ್ಲಿಗೆ ಬರಲು ಸಾಧ್ಯವಿಲ್ಲದವರು ಕೆಳಗಿನ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ಹಣ ರವಾನಿಸಿದರೆ ನ್ಯಾಯವಾಗಿ ಪೂಜೆ ಮಾಡಿಸಿ ಪ್ರಸಾದ ಕಳುಹಿಸಲಾಗುತ್ತೆ. ಬೇರೆ ಅನೇಕರು ಈ ದೇವರ ಹೆಸರು ಹೇಳಿಕೊಂಡು ಬಂದು ಪೂಜೆಗಿರುವ ಹಣ ಹರಿಕೆ ವಗೈರೆ ಕೇಳುವಾಗ ಕೊಡಬಾರದು, ಅಂಥವರು ಹರಿಕೆ ತಲಪಿಸದೆ ಮೋಸ ಮಾಡುತ್ತಾರೆ.

ತಿರೋಪನೆ	13—4—0
ಜೋಡುಬೋಳ್ಳಾಟ	2—8—0
ಒತ್ತೆ ಬೋಳ್ಳಾಟ	1—4—0
ಜೋಡು ಪೈಂಗುತ್ತಿ	0—8—0
ಮೃತ್ಯುಂಜಯ	2—0—0

ಪಿ. ಯಂ. ಕುಂಞರಾಮನ್,
ಮೇನೇಜರ್
ಪರಸಿನಕಡು ಮುತ್ತಪ್ಪ ದೇವಸ್ಥಾನ,
ಪೋಸ್ಟು ಆಫೀಸು ಪರಸಿನಕಡು,
12—10 Via ತಳಿಪರಂಬು.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಗಾಂಧಿ ಟೊಪ್ಪಿ.

ಕೆಲವು ತಿಂಗಳಿಗೆ ಹಿಂದೆ ಶಾಲೆಯ ವಿದ್ಯಾರ್ಥಿಗಳು ಗಾಂಧಿ ಟೊಪ್ಪಿಯನ್ನು ಧರಿಸಿಕೊಂಡು ಶಾಲೆಗೆ ಹೋದಾಗ ಅಂಥಾ ವಿದ್ಯಾರ್ಥಿಗಳನ್ನು ಶಾಲೆಯಿಂದ ಹೆ. ಮಾಸ್ಟರವರು ಹೊರಗೆ ಕಳುಹಿಸಿದ್ದರಿಂದಲೂ ಮತ್ತು ಇನ್ನು ಮುಂದಕ್ಕೆ ಗಾಂಧಿ ಟೊಪ್ಪಿಯನ್ನು ಯಾರೂ ಧರಿಸ ಕೂಡದೆಂದೂ ಹೇಳಿದ ವಿಷಯಗಳನ್ನು ತಿಳಿದೆನು. ಮತ್ತು ಒಂದು ಮೀಟಿಂಗಿನಲ್ಲಿ ಮೆ. ಕೆ. ಪಿ ಚೆಣ್ಣಪ್ಪನವರು ಕೊಡಗು ಕಮಿಶನರನ್ನು ಕಲವು ಪ್ರಶ್ನೆಗಳನ್ನು ಕೇಳಿದ್ದರ ಪೈಕಿ ಗಾಂಧಿ ಬಟ್ಟೆ ಮತ್ತು ಟೊಪ್ಪಿಯ ವಿಷಯ ಒಂದಾಗಿತ್ತು. ಅದಕ್ಕೆ ಕಮಿಶನರವರು ಧರಿಸ ಕೂಡದೆಂದು ಆರ್ಡರು ಇಲ್ಲವೆಂದು ಹೇಳಿದ್ದು ವಾಚಕ ಮಹಾಶಯರಿಗೆ ತಿಳಿದಿರಬಹುದು. ಹಾಗೆ ಹೇಳಿದಾಗ್ಯೂ ಕೊಡಗಿನ ಕೆಲವು ಹಳ್ಳಿ ಶಾಲೆಗಳಲ್ಲಿಯೂ ಇದೇ ರೀತಿಯಿಂದ ಖಾನೂನುಗಳನ್ನು ಬಳಕೆಗೆ ತೆಗೆದುಕೊಂಡು ಮಕ್ಕಳಿಗೆ ತೊಂದರೆಗಳನ್ನು ಕೊಡುತ್ತಾ ಬಂದಿದ್ದಾರೆಂದೂ ಸಹ ತಿಳಿಯ ಬಂದಿದೆ. ಗಾಂಧಿ ಟೊಪ್ಪಿ, ಬಟ್ಟೆಗಳನ್ನು ಧರಿಸುವುದಕ್ಕೆ ಯಾವುದೊಂದು ಅಡಚಣೆ ಇಲ್ಲವೆಂದು ಇಂಡಿಯಾ ಸರ್ಕಾರವೇ ತಿಳಿಸುತ್ತಿರುತ್ತಾರೆ. ಹಾಗೆಯೇ ಪ್ರತಿ ಒಂದು ಪ್ರಾವಿನ್ಸಿನಲ್ಲಿ ಎಲ್ಲರೂ ಅಂದರೆ ವಿದ್ಯಾರ್ಥಿಗಳು ಮತ್ತು ಸರ್ಕಾರಿ ನೌಕರರು ಕೂಡ ಧರಿಸಿಕೊಂಡು ಶಾಂತ ರೀತಿಯಿಂದ ಹೋಗುತ್ತಿರುವುದು ನಮ್ಮ ಪುಟ್ಟ ದೇಶದ ಕೊಡಗಿನ ಅಧಿಕಾರಿಗಳ ಗಮನಕ್ಕೆ ಇನ್ನೂ ಹಿಡಿದುಕೊಳ್ಳದಿರುವುದನ್ನು ನೋಡಿದರೆ ಬಹು ವ್ಯಸನವೂ, ನಾಚಿಕೆಯೂ ಉಂಟಾಗಿದೆ. ಈ ತರಹದ ಅಲ್ಪ ಹೆದರಿಕೆಯು ಮತ್ತು ಬಂಧನ ನಮ್ಮ ದೇಶದ ವಿದ್ಯಾರ್ಥಿಗಳಲ್ಲಿಯೂ, ಸರ್ಕಾರಿ ನೌಕರರಲ್ಲಿಯೂ ತೋರಿಸಿ ನಮಗೆ ಬಲ್ಲದೇ ಹೊರತು ಅನ್ಯ ದೇಶದಲ್ಲಿ ಈ ತರಹದ ಹೆದರಿಕೆ, ಖಾನೂನುಗಳು ಎಂದಿಗೂ ಯಾರಲ್ಲಿಯೂ ಇಲ್ಲ. ಅದೆಲ್ಲ ಕಳೆದು ಬಿದ್ದು ಹೋಗಿ ಕೆಲವು ವರ್ಷಗಳಾದವು. ನಮ್ಮ ದೇಶದಲ್ಲಿ ಅನ್ಯೋನ್ಯ ಪ್ರೀತಿ ಮತ್ತು ಒಗ್ಗಟ್ಟು (union) ಇಲ್ಲದೆ ಇರುವುದೇ ಇದಕ್ಕೆ ಕಾರಣವೆಂದು ತಿಳಿಯಬೇಕು. ಮತ್ತು ಪ್ರತಿ ಒಬ್ಬರಲ್ಲಿಯೂ ಆತ್ಮದಲ್ಲೇ ಅಡಗಿಕೊಂಡಂತಕ್ಕಂಥ ಹೆದರಿಕೆ ಎಂಬ ಪಿಶಾಚಿಯು ಇನ್ನೂ ಹೋಗಿಲ್ಲ. ಆ ಪಿಶಾಚಿಯು ಹೋಗಬೇಕಾದ ಮಧ್ಯದಲ್ಲಿ ಎಷ್ಟು ವರ್ಷ ಕಳೆಯಬೇಕೆಂದು ಹೇಳಲು ಸಾಧ್ಯವಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಇದು ಬೇರೆ ಪ್ರಾಂತ್ಯಕ್ಕೆ ಸೇರದಿದ್ದ ಪಕ್ಷದಲ್ಲಿ ಈ ಅತ್ಯದ್ಭುತವು ಬಾಧಕವಾಗಿಯೂ ಎಷ್ಟು ಸದರಾಗಿ ರೀತಿಯಲ್ಲಿ ಉತ್ತೀರ್ಣತೆಯನ್ನು ಹೊಂದಿದರೂ ಕೂಡ ಹೋಗುವಂತಿಲ್ಲ. ಖಾದಿ ಟೊಪ್ಪಿಯು ಮತ್ತು ಬಟ್ಟೆಯು ಅಧಿಕಾರಿಗಳಿಗೆ ಒಂದು ಪಕ್ಷ ಹೆದರಿಕೆಯನ್ನು ಮತ್ತು ಶತ್ರುತ್ವವನ್ನು ತೋರಿಸಬಹುದು. ಇದು ಒಂದು ಪಕ್ಷ ಸರಿಯಾಗಿರಬಹುದು. ಆದರೆ ನಮ್ಮ ದೇಶದ ವಿದ್ಯಾರ್ಥಿಗಳು ಮತ್ತು ಸರ್ಕಾರಿ ನೌಕರರು ಪರಂಗಿಯವರ ಉಡುಪನ್ನು ಧರಿಸುವುದು ನಮಗೆ ಎಂದರೆ ಹಿಂದೀಯರಿಗೆ ಬಹಳ ಪರಿಹಾಸ್ಯವನ್ನೂ, ಕುಂದನ್ನೂ ಉಂಟು ಮಾಡುವುದಲ್ಲದೆ ಭರತಮಾತೆಗೆ ಕಲ್ಯಾಣವನ್ನು ಉಂಟುಮಾಡುತ್ತಾಗುವುದಿಲ್ಲ. ಅನ್ಯರ ಉಡುಪನ್ನು ಧರಿಸುವಂಥವರನ್ನು ಕೂಡ ಶಾಲೆಯ ಅಧಿಕಾರಿಗಳು ಹೊರಗೆ ಹಾಕಬಹುದಾಗಿತ್ತು. ಅಂಥವರನ್ನು ಕಂಡರೆ ಶಾಸ್ತ್ರಿಸುತ್ತಾರೆ, ಉತ್ಸಾಹವನ್ನು ಕೊಡುತ್ತಾರೆ. ಇದು ನಮ್ಮ ದೇಶಕ್ಕೂ, ಮತಕ್ಕೂ ಯಾವದೊಂದು ಕಲ್ಯಾಣವನ್ನು ಉಂಟು ಮಾಡುವುದಿಲ್ಲವಲ್ಲದೆ ದುರ್ಗತಿಗೆ ಬೆಚ್ಚಿನ ಅವಕಾಶವನ್ನು ಕೊಟ್ಟಂತೆ ಆಗುತ್ತೆ. ಈ ತರಹದ ವಿದ್ಯಾರ್ಥಿಗಳು ದೇಶಕ್ಕೂ, ಮತಕ್ಕೂ, ಕುಲಕ್ಕೂ ಕೂಡ ಭ್ರಷ್ಟರಾಗುತ್ತಾರಲ್ಲದೆ ಹೆಚ್ಚಿನ ಗುಲಾಮಗಿರಿಯನ್ನು ದೇಶದಲ್ಲಿ ಹರಡುತ್ತಾರೆ. ನಮ್ಮ ದೇಶದಲ್ಲಿ ಮುಖ್ಯ ಅಧಿಕಾರಿಗಳಾಗಿ ನಮ್ಮ ಸ್ವದೇಶೀಯರೇ ಪ್ರಿಯರೆಂದು ಇರಬೇಕಾಗಿಲ್ಲದ್ದುಕೊಂಡು ಈ ತರಹದ ಅನ್ಯಾಯಗಳನ್ನು ಮಾಡುವುದು ಯಾವ ನ್ಯಾಯ. ವಿದ್ಯಾರ್ಥಿಗಳಿಗೆ ಪಾಠ ಹೇಳತಕ್ಕವರು ಗುರುವಿಗೆ ಸಮಾನವೆಂದು ಹಿಂದೂ ಧರ್ಮ ಶಾಸ್ತ್ರದಲ್ಲಿಯೂ ಕೂಡ ಹೇಳಿದೆ. ಹೀಗೆ ಇರುವಾಗ ವಿದ್ಯಾರ್ಥಿಗಳ ಸ್ವತಂತ್ರಕ್ಕೆ ಕುಂದುಕವನ್ನುಂಟುಮಾಡಿ ಉಪಾಧ್ಯಾಯರುಗಳ ಹೇಡಿತನವನ್ನೂ, ಗುಲಾಮತ್ವವನ್ನೂ ವಿದ್ಯಾರ್ಥಿಗಳ ಆತ್ಮಕ್ಕೆ ಹೊಕ್ಕಿಸುವಂತವರನ್ನು ನಿಜವಾದ ಗುರುವೆಂದು ಊಹಿಸಬಹುದೇ; ಅಂಥವರನ್ನು ಸಾಜವಾದ ಮಾತಿನಿಂದ ದೇಶ ದ್ರೋಹಿ, ಕುಲದ್ರೋಹಿಗಳೆಂದು ಹೇಳುವುದು ಉತ್ತಮವಲ್ಲವೇ. ಪ್ರಪಂಚದಲ್ಲಿ ಪ್ರತಿಯೊಂದು ಜೀವರಾಶಿಗಳಿಗೂ ಕೂಡ, ವೃಕ್ಷಗಳಿಗೂ ಕೂಡ ಅದರ ದಕ್ಷಿಸುಸಾರವಾದ ಸ್ವತಂತ್ರವನ್ನು ಕೊಟ್ಟು ಜಗದೀಶ್ವರನು ಸೃಷ್ಟಿಸಿರುತ್ತಾನೆ; ಇದು ಒಂದು ಪ್ರಕೃತಿಯಾಗಿದೆ. ಹಾಗೆಯೇ ನಮ್ಮಂಥ ನರ ಮನುಷ್ಯರಿಗೂ ಕೂಡ ಇವುಗಳಿಗೆಲ್ಲಾ ಇರುವುದಕ್ಕಿಂತಲೂ ಹೆಚ್ಚಾದ ಸ್ವತಂತ್ರವು ಇದ್ದೇ ತೀರಬೇಕು ಎಂದು ಎಷ್ಟು ಹೇಳಿದರೂ ಸಾಲದು. ಒಬ್ಬನ ಸ್ವಪ್ರಯೋಜನವನ್ನು ನೋಡಿ ಹತ್ತು ಜನರನ್ನು ದಂಡಿಸಿ ಅವನ ಮುಂದಿನ ಜೀವನಕ್ಕೆಲ್ಲಾ ಕುಂದುಕವನ್ನು ತಂದು ತಾನೊಬ್ಬನೇ ಸುಖಿಯಾಗಿರಬೇಕೆಂದು ಹೇಳುವಂಥಾವರನ್ನು ವಿದ್ಯಾವಂತರೆನ್ನಬಹುದೇ? ಶ್ರೇಷ್ಠರೆಂದು ಅವರಿಗೆ ಕೃತಜ್ಞತೆಯನ್ನು ತೋರಿಸಬಹುದೇ? ಎಂದಿಗೂ ಆಗಲಾರದು. ಅಂಥವರು ಒಂದಲ್ಲೊಂದು ಕಾಲಕ್ಕಾದರೂ ಗೌರವದ ದಾರಿಯನ್ನು ಅವಲಂಭಿಸಿಯೇ ತೀರಬೇಕು. ಮತ್ತು ತಂದೆ ತಾಯಿಗಳೂ ಕೂಡ ವಿದ್ಯಾರ್ಥಿಗಳ ವಿಷಯದಲ್ಲಿ ಅವರ ಸ್ವತಂತ್ರದಲ್ಲಿ ಭಾಗಿಗಳಾಗಿರ ತಕ್ಕದ್ದು ಅವರ ಧರ್ಮವಾಗಿದೆ. "ಮೆ" ಲಾಲಜಿಯವರು ಅವರ ಅಮೂಲ್ಯವಾದ "India's will to freedom" ಎಂಬ ಗ್ರಂಥದಲ್ಲಿ What India needs. ಎಂಬ ಅಧ್ಯಾಯದಲ್ಲಿ ಕೆಲವು ಅಂಶಗಳನ್ನು ಲೇಖನ ಮಾಡಿರುತ್ತಾರೆ. ಅದರಲ್ಲಿ ಕೆಲವು ಇದಕ್ಕೆ ಸಮಂಧ ಪಟ್ಟಂತಾದ್ದನ್ನು ಮಾತ್ರ ಇಲ್ಲಿ ವಾಚಕ ಮಹಾಶಯರ ಮುಂದೆ ಇಡಲಾಗಿದೆ. ಅದು ಏನೆಂದರೆ—

Teachers who will teach their Pupils how to think and differ and who will not expect them to accept what they say as gospel truth

Parents who will love and educate but not command.

Young Indian (students) who will care more for manhood, honour and selfrespect than material gains, who will seek opportunities of serving and suffering, who will cultivate the faculty of introspection of generosity in Judging others of resourcefulness and initiative at some risk.

Educationists who will be less of pedagogues and experts and more of human beings.

Public men who will think more of truth than of titles, honours or jigeers.

ಈ ಮೇಲ್ಕಂಡ ಅಂಶಗಳು ಈ ಲೇಖನಕ್ಕೆ ಸಮಂದವಾಗಿರುವುದರಿಂದ ಇದಕ್ಕೆ ಸಮ್ಮಂಧ ಪಟ್ಟವರೆಲ್ಲರೂ, ತಂದೆ ತಾಯಿಗಳೂ, ಉಪಾಧ್ಯಾಯರುಗಳೂ, ಯುವಕ, ಯುವತಿಯರೂ, ವಿದ್ಯಾವಂತರೂ, ದೇಶಾಭಿಮಾನಿಗಳೂ ಸಹ ಅದಷ್ಟು ದೇಶದ ಕಲ್ಯಾಣವನ್ನು ಉದ್ಧಾರ ಮಾಡಬೇಕಾದಂಥ ಧರ್ಮವು ಅವರವರ ಸ್ವಾಧೀನದಲ್ಲಿ ಇದೆಯೇ ಹೊರತು ಅನ್ಯರ ಸ್ವಾಧೀನದಲ್ಲಿಲ್ಲವೆಂದು ಸ್ಪಷ್ಟವಾಗಿ ತಿಳಿಯ ತಕ್ಕದ್ದು. ಆದರೆ ಪ್ರತಿ ಒಬ್ಬರ ಆತ್ಮದಲ್ಲಿ ಹೆದರಿಕೆ ಎಂಬ ಪಿಶಾಚಿಯು, ಆಶಾಂಕ್ಷೆಯು, ಸ್ವಾಭಿಲಾಷೆಯು ತುಂಬಿಕೊಂಡಿರುವುದನ್ನು ಅದನ್ನು ತೆಗೆದು ಹಾಕಿ ದೂರ ಮಾಡಿ ಧೈರ್ಯವನ್ನು ಆತ್ಮಕ್ಕೆ ತಂದುಕೊಂಡು ಅಸ್ವಾರ್ಥತೆಯು ಪ್ರೇಮವನ್ನು ಸಕಲ ಜೀವಜಂತುಗಳಲ್ಲಿಯೂ, ನಾವುಗಳು ಜನ್ಮವೆತ್ತಿದ ಭಾರತ ಮಾತೆಯ ಮೇಲೆಯೂ, ಆತ್ಮ ಶುದ್ಧಿಯನ್ನು ಇಟ್ಟುಕೊಂಡು ಪೂರ್ಣ ಭಕ್ತಿಯಿಂದ ಕೆಲಸವನ್ನು ಮಾಡಬೇಕಾದ ಕರ್ತವ್ಯವು, ಪ್ರತಿಯೊಬ್ಬ ಭಾರತ ಮಾತೆಯ ತರುಣರಲ್ಲಿಯೂ, ತರುಣಿಯರಲ್ಲಿಯೂ, ವೃದ್ಧರಲ್ಲಿಯೂ, ಕೂಡಿದೆ. ಖಾದಿ ಬಟ್ಟೆಯನ್ನು ಶಾಲಾ ವಿದ್ಯಾರ್ಥಿಗಳೂ, ಪ್ರತಿಯೊಬ್ಬರೂ ಧರಿಸಿ ದೇಶದ ಮತ್ತು ಮಹಾತ್ಮಾಜೀಯವರ ಮನ ಸಂತೋಷವನ್ನುಂಟು ಮಾಡುವುದಲ್ಲದೆ ಅವರು ಹೇಳಿದ ಹೊಸದಾಗಿ ದರಿದ್ರ ನಾರಾಯಣನವರ ದರಿದ್ರತೆಯನ್ನು ಹೋಗಲಾಡಿಸಿ ಸ್ವತಂತ್ರವನ್ನು ಸ್ಥಾಪಿಸಿ ಭಾರತವರ್ಷದಲ್ಲಿ ಶಾಂತಿಯನ್ನು ನೆಲೆಗೊಳಿಸುವ ಪ್ರಯತ್ನವನ್ನು ಮಾಡಬೇಕು. ಬೇರೆ ಪ್ರಾಂತ್ಯಗಳಲ್ಲಿ ಸಕಲ ಇಲಾಖೆಯಲ್ಲಿರುವ ಅನೇಕ ಉದ್ಯೋಗಸ್ಥರು, ಸಹ ಖಾದಿ ಬಟ್ಟೆಗಳನ್ನು ಧರಿಸುವುದಲ್ಲದೆ ಖಾದಿ ಪ್ರಚಾರದಲ್ಲಿಯೂ ಕೂಡ ಅನೇಕರು ಭಾಗಿಗಳಾಗಿರುತ್ತಾರೆ. ಅಲ್ಲಿ ವಿದ್ಯಾರ್ಥಿಗಳ ಜನ ಸಂಖ್ಯೆಯೇ ಹೆಚ್ಚಾಗಿದೆ.

ಅದುದರಿಂದ ನಮ್ಮ ಮೂಲ ನಿವಾಸಿಗಳಾದ ಕೊಡವರೂ, ಪ್ರತಿ ಯೊಬ್ಬರೂ ಖಾದಿ ಪ್ರಚಾರಕ್ಕೆ ಉತ್ತೇಜನವನ್ನು ಕೊಡಬೇಕು. ಅದರಲ್ಲಿ ವಿದ್ಯಾರ್ಥಿಗಳು ಮೂಲ ಧರ್ಮದವರಾಗಿರುವುದರಿಂದ ಪ್ರತಿ ಹುಡುಗರೂ, ಹುಡುಗಿಯರೂ ಖಾದಿ ಬಟ್ಟೆಯನ್ನು ಧರಿಸುವುದಲ್ಲದೆ ವಿಶ್ರಾಂತಿ ಸಮಯವನ್ನು ಪ್ರಚಾರದಲ್ಲಿ ಪ್ರಯೋಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ವಿದ್ಯಾರ್ಥಿಗಳು ಅದರಲ್ಲಿ ಪ್ರೇಮವನ್ನು ಸ್ಥಾಪಿಸಿ ಒಗ್ಗಟ್ಟನ್ನು ಬೆಳೆಸುವುದು ಮೇಲು. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬುದನ್ನು ಸಣ್ಣ ಹುಡುಗರಾಗಿರುವಾಗಲೇ ಓದಿದ್ದೇವೆ. ಅದನ್ನು ಮಾತ್ರ ಆತ್ಮಕ್ಕೆ ತಂದುಕೊಂಡು ಕೆಲಸ ಮಾಡಬೇಕು. ನಮ್ಮ ಮಕ್ಕಳನ್ನು ನಾವು ಪ್ರೀತಿಸದಿದ್ದರೆ ಅನ್ಯರು ಪ್ರೀತಿಸಲಾರರು. ಅವರು ಮೋಹಿಸದಿದ್ದ ಮಾತ್ರ ಅವರನ್ನು ನಾವು ದೂಷಣೆ ಮಾಡುವುದು ನ್ಯಾಯವಲ್ಲ. ದುಡಿಯುವ ವಿದ್ಯಾರ್ಥಿಗಳಾದಂಥವರು ಮುಂದಿನ ಬಾಳ್ವೆಯಿಂದ ದೇಶದ ಕಲ್ಯಾಣವನ್ನು ಸ್ಥಾಪಿಸಿ ಸ್ವತಂತ್ರವನ್ನು ಪಡೆಯುವುದು ನಿಮ್ಮ ಸ್ವಾಧೀನದಲ್ಲಿದೆ. ಅಲ್ಲದೆ ಅನ್ಯರಲ್ಲಿ. ನೀವುಗಳು ಬಾಲಕರಾಗಿರುವುದರಿಂದ ಬಾಲಕನಾದಂಥ ಅಭಿಮನ್ಯುವಿನ ಚರಿತ್ರೆಯನ್ನು ಜ್ಞಾಪಕಕ್ಕೆ ತಂದುಕೊಂಡು ನೀವು ಹ್ಯಾಗೆ ತಂದೆ ತಾಯಿಗಳ ಮಾತನ್ನು ಉಲ್ಲಂಘಿಸಿ ಶತ್ರುಗಳನ್ನು ಜೈಸಿ ಸ್ವತಂತ್ರವನ್ನು ಸ್ಥಾಪಿಸಬೇಕೆಂದು ಹಿಡಿದು ರಣರಂಗದಲ್ಲಿ ಅನೇಕರನ್ನು ಕೊಂದು ಮೋಸದ ತನ್ನ ಶತ್ರುಗಳ ಕೈಯಿಂದ ಮೃತನಾದನು. ಅವನು ಕೂಡ ಕ್ಷತ್ರಿಯ ಕುಲದಲ್ಲಿ ಜನಿಸಿದವನು. ನಾವುಗಳೂ ಕೂಡ ಅದೇ ಕ್ಷತ್ರಿಯರಾಗಿದ್ದೇವೆ. ಅದರಿಂದ ಪ್ರಯೋಜನವಿಲ್ಲ, ಪ್ರಯೋಜನವಿಲ್ಲವೆಂದು ನಮ್ಮನ್ನೆ ಕುಂತರೆ ಆಗುವುದಿಲ್ಲ. ಅದೇ ತರಹದ ಧೈರ್ಯ ಶಕ್ತಿಯೂ ಕೂಡ ಎಲ್ಲರಲ್ಲಿ ಇದೆ. ಅದನ್ನು ನಮ್ಮ ಆತ್ಮಕ್ಕೆ ತಂದುಕೊಂಡು ಕೆಲಸ ಮಾಡಿದ ಪಕ್ಷದಲ್ಲಿ ಅಭಿಮನ್ಯುವಿನ ಹಾಗೆ ನಾವೂ ಕೂಡ ಜೈಸಬಹುದು. ವಿದ್ಯಾರ್ಥಿಗಳಾದ ನೀವು ಹೆಚ್ಚಿನ ಭಾರವನ್ನು ತೆಗೆದುಕೊಂಡು ದೇಶ ಸ್ವತಂತ್ರವನ್ನು ಸ್ಥಾಪಿಸುವ ಹಕ್ಕು ನಿಮ್ಮಲ್ಲಿದೆ. ಸರ್ವರಿಗೂ ಆ ಜಗತ್ಕರ್ತನು ಮಂಗಳವನ್ನೀಯಲಿ.

ಕೆ ಜಿ ಪಿ.

ಕೆಲವು ಸಹಕಾರ ಸೊಸೈಟಿಗಳಲ್ಲಿ ಕಂಡು ಬರುವ ನ್ಯೂನತೆಗಳು

ಸಹಕಾರವೆಂಬ ಮೂಲ ಮಂತ್ರವು ಪರಸ್ಪರ ಸಹಾಯ, ಸ್ವಾವಲಂಬನ, ಮಿತವ್ಯಯವೆಂಬ ಮೂರು ಯೋಗಾಭ್ಯಾಸದಿಂದ ಕೂಡಿ ಮೆಂಬರುಗಳ ಸಾಂಪತ್ತಿಕ ಸ್ಥಿತಿ, ಸುವ್ಯವಸ್ಥಿತ ವ್ಯವಹಾರ ಮತ್ತು ಸುಗಮನ ಜೀವನವನ್ನು ಸರಿಗೊಳಿಸುವುದಲ್ಲದೆ, ಈ ಸುಖ ಜೀವನದಿಂದ ಮೆಂಬರಿನ ವರ್ಗ ಕೇಷವು ಕಡಿಮೆಯಾಗುತ್ತಾ ಜನ್ಮಾಂತರದಲ್ಲು ಮುಕ್ತಿಗೆ ಸಾಧನವಾದ ದಾರಿಯನ್ನು ಪಡೆಯತಕ್ಕಂತಾದ್ದು.

ಮೇಲ್ಕಂಡವುಗಳನ್ನು ಮೂಲ ಮಂತ್ರವಾಗಿ ಇಟ್ಟುಕೊಳ್ಳುವುದರ ಬದಲು ಕೆಲವು ಮೆಂಬರುಗಳು ತಮ್ಮ ಹಳ್ಳಿಗಳಿಗೆ ಸಂಘವು ಸ್ಥಾಪನೆಯಾಗಿ ಈಗಾಗಲೇ 10—12 ವರ್ಷಗಳಾದರೂ ಅಹಾಂಭಾವ, ಸ್ವಾಭಿಮಾನ, ಸ್ವಾರ್ಥತೆಯನ್ನು ಬಿಡುವುದು ಇನ್ನೂ ಬಿಟ್ಟು ಬಂದದ್ದು ಕಾಣುವದಿಲ್ಲ.

ಅಧಿಕಾರವನ್ನು ಆಡಳಿತ ಮಂಡಳಿಯಲ್ಲು ಒಬ್ಬ ಯಾ ಇಬ್ಬರ ಕೈಯ್ಯಲ್ಲಿ ಇಟ್ಟುಕೊಂಡು ಮನಬಂದಂತೆ ವರ್ತಿಸುವುದು ಅನೇಕ ಕಡೆ ಕಂಡುಬರುವದು. ಇಂಥಾ ವರ್ತನೆಯು ಸಹಕಾರದ ಯಾವ ಗ್ರಂಥದಲ್ಲು ಕಂಡು ಬರುವುದಿಲ್ಲ.

ಅಭಿಮಾನವು ತನ್ನ ಗುಣ ನೀತಿ ನಡತೆ ಇವುಗಳು ಚೆನ್ನಾಗಿ ಇದ್ದರೆ ತನಗೆ ತಾನೇ ಬಂದೆ ಬರುತ್ತೆ. ಅದಕ್ಕಾಗಿ ತಾನು ಪ್ರಯತ್ನ ಪಡುವದು ಅಗತ್ಯವಿಲ್ಲ. ಅಧಿಕಾರವೆಂಬ ಅಭಿಮಾನ ಗೌರವ ವಗೈರೆ ಬರುವದಾದರೆ ಅವುಗಳ ಜೊತೆಯಲ್ಲು ನಿಂದನೆಗಳು ತಗಲಿಕೊಂಡೆ ಇರುತ್ತವೆ. ಅಧಿಕಾರಪ್ರಿಯ ಕೂಡಲೆ ನಿಂದನೆಗಳು ಕಲ್ಲಿನ ಮಳೆಗಳಾಗಿ ಮೇಲಿಂದ ಬೀಳುವದು ಅನೇಕರು ಯಾವಾಗಲೂ ಕಾಣೇ ಕಾಣುವರು.

ಮಹಾಸಭೆಗೆ ಪೂರ್ತಿ ಅಧಿಕಾರವಿದ್ದರೂ ಮೆಂಬರುಗಳ ಬೆಕ್ಕಿನ ಮರಿಗಳಂತೆ ಸುಮ್ಮನೆ ಕುಳಿತ್ತೇ ಕುಳಿತ್ತಿರುವರು. ಇವರಲ್ಲಿಂದಲೂ ಹೆಚ್ಚಿನ ಸಹಕಾರವು ಆಡಳಿತ ಮಂಡಳಿಯಲ್ಲು ಇದ್ದರೆ ಮೆಂಬರುಗಳಿಗೆ ಎಂದು ಕಡೆಯಿಂದಲೂ ಕಷ್ಟವಾಗಿದೆ.

ಮೆಂಬರುಗಳು ಉತ್ಸಾಹಭರಿತರಾಗಿ ಸಂಘದ ಮೀಟಿಂಗುಗಳಿಗೆ ಬರುವದೂ ಬಹಳ ವಿರಳ. ಬದಲಾಗಿ ಉದಾಸೀನರಾಗಿ ಮನ ಬಂದಂತೆ ಗಂಟೆ ವೇಳ್ಯ ವಗೈರೆಗೆ ಗಮನವಿಡದೆ ಹಾಜರಾಗುವರು. ಬಾಕಿದಾರರು ಹಾಜರಿರುವದು ಬಹಳ ಅಪರೂಪ.

ಸಹಕಾರ ತತ್ವಗಳನ್ನು ಓದಿಯಾಗಲೀ ಕೇಳಿಯಾಗಲೀ ಕಲಿತುಕೊಳ್ಳಬೇಕೆಂಬ ಕುತೂಹಲ ಕಾಣಬರುವುದಿಲ್ಲ. ಪತ್ರಿಕೆಗಳು, ಹಸ್ತಪತ್ರಗಳು ಕೊಟ್ಟರೂ ಅವುಗಳು ಸೆಕ್ರಟೆರಿಯ ಕಿತಾಬುಗಳ ಒಳಗೆ ಎಲ್ಲಿಯೋ ಒಂದು ಕಡೆ ಬಿದ್ದಿರುವವು. ಸೆಕ್ರೆಟರಿಗಳು ಪತ್ತೆನೇ ಇಲ್ಲ. ಗಿಕ್ಕಲಿಲ್ಲವೆಂದು ಹೇಳುವ

ಹೆಚ್ಚು. ಒಂದು ಪಕ್ಷ ಸಿಕ್ಕಿದ್ದರೂ ಎಲ್ಲಿಯೋ ಒಂದು ಸ್ಥಿರವಾಗಿ ಹೇಳವರು.

ಟಿ ಗಿಗೆ ಮುಂದಾಗಿ ಬಾಕಿದಾರರ ಪಟ್ಟಿಯೊಂದ ಯೋಚಿಸಬೇಕೆಂದು ನೋಟೀಸ್ ಕೊಟ್ಟರೂ ಅದರ ಗ ಇಲ್ಲವೇ ಇಲ್ಲ.

ಲವು ಸೆಕ್ರೆಟರಿಗಳು ಪೂರ ಆಡಳಿತ ಮಂಡಳಿಯವರ ಸಿಲ್ಲ ಹಾಕುವವರಿದ್ದಾರೆ. ಒದರಿಾವಣೆಗೆ ಅವ ಲ್ಲ. ಇತರ ಮೆಂಬರುಗಳು ತಂಬೇತಿಗೆ ಬಾರದಿರುವ ನಾ.

ಮೆಂಬರುಗಳನ್ನು ಸ್ವಾಧೀನಮಾಡಿಕೊಂಡು ಸೆಕ್ರೆಟರಿ ಕೆಲ ಪಾರಂಪರ್ಯವಾಗಿ ಮಾಡಬೇಕೆಂಬುವವರು ಕೆಲವಲು ಸಹಕಾರಿಯ ವಿಷಯ ಇತರ ಚಾಲ್ತಿ ಕಲಸಗ ಯ ನ್ಯಾಯವಾಗಿ ಇಲ್ಲೇಕೆಂತ ಕಸಗೆ ನೋಡ್ಯ ಇ ಮೆಂಬರುಗಳು ಕೇಳುವನ್ನು ತಿಳುವಳಿಕೆಯೂ ಇಲ್ಲ. ಉಗಳಿಗೆ ಜವಾಬು ಸಿಕ್ಕುವದೇ ಕಷ್ಟ.

ಸಹಕಾರಿ ಮೆಂಬರುಗಳು ಈಗ ತಮಗೆ ಇರತಕ್ಕಷ್ಟು ತಿ ವಳಿ ಇದ್ದರೆ ಸಾಕು. ಹೆಚ್ಚಿನ ತತ್ವಗಳನ್ನೂ, ಇತರ ವಿಷ ಗಳನ್ನು ತಿಳಿಯುವದು ಅವಶ್ಯವಿಲ್ಲ. ಕೆಲವುಲ್ಲ ಒಪ್ಪಿ ತಿಳಿದರೆ ಸಾಕು, ತಾವೆಲ್ಲರೂ ತಿಳಿಯುವ ಅಗತ್ಯವಿಲ್ಲ ನ ಗಣಿಾಟಿಗಳು ಇರುವದು ಕೊಂದರೆ. ಬೇಕಾದಷ್ಟು ಸಿಕ್ಕಬೇಕು. ಮನಒರುವಾಗ ಕಟ್ಟಬೇಕು ಎಂಬ ದೇ ಶ ಮನಸ್ಸು.

ಲಗೆಯ ಖರ್ಚು ಬಂದರೆ ಸಂಘವು, ಬಡವನು ಹಣ ಇ ದು ಸರ್ವ ಸಾಧಾರಣದ ಮತ ಪಡಕೊಂಡ ಸಾ ಉತ್ಪತ್ತಿ ಬರುವ ಕೆಲಸಕ್ಕೇನೆ ಖರ್ಚ ಮಾಡಬೇಕೆಂ ದರೆ ಮಾತೇ ಇಲ್ಲ.

ಒಂದೊಂದು ಸಂಘವನ್ನು ಹುಡುಕಿ ವಜ ಮಾಡುವದಕ್ಕಂ ಟಿ ಮೆಂಬರನನ್ನೇ ಸಂಘದ ತತ್ವಕ್ಕೆ ವಿರೋಧವಾ ಗಿ ನಡೆಯುವದಾಗಿ ಕಂಡು ಬಂದರೆ ಹೊರಪಡಿಸುವದು ಉ ತ್ತಮ ದುರಭ್ಯಾಸ, ಉದಾಸೀನ, ಹೆಚ್ಚಿದಾತೆ ಸಾಲ ವ ರುಣಾವತಿ ನ್ಯಾಯವಾಗಿ ಆಗದೆಯೂ, ಉತ್ಪತ್ತಿ ಕವಿ್ಯಯಾಗಿ ಯೂ ಪಡಕೊಂಡ ಸಾಲವನ್ನು ಉದ್ದಿಷ್ಟಕ್ಕೆ ಖರ್ಚ ಮಾಡ ದೆ ಇರುವದಾ ಕಂಡು ಒರುವದು

ಮೆಂಬರುಗಳು, ಸಂಘವು ತನ್ನದು ಮತ್ತು ಹಣವು ತನ್ನ ದು, ನ್ಯಾಯವಾಗಿ ಪಡಕೊಳ್ಳುವದೂ ಮತ್ತು ಮರುಪಾವತಿ ಮಾಡುವದೂ ಬಹಳ ಸುಲಭ ಉಪಾಯುಕ್ತಿಗಳಿಂದ ಕೂಡಿದೆ ಯೆಂದು ತಿಳಿದುಕೊಂಡೇ ಇಲ್ಲ. ಸಾಲ ಪಡಕೊಳ್ಳುವದು ಒಂದೇ ಕೆಲಸ, ಮತ್ತೆ ತಲೆ ತಪ್ಪಿಸಿಕೊಂಡರೆ ಡಿಕ್ರಿಯಾದ ನಂ ತರ ಮೆಲ್ಲ ಮೆಲ್ಲನೆ ಬರುವರು

ಕೆಲವು ಮೆಂಬರುಗಳು ಸಂಘವನ್ನು ಪಾರಗಾಣಿಸುವ ಭಾವಿಸಿಕೊಂಡಿದ್ದಾರೆ ಹಾಗಾದರೆ ಇವರ ಜೀವನವೇನು? ಆತ್ಮಪ್ರೇಯೇನು? ಎಂಬುದು ತಿಳಿಯುವದಿಲ್ಲ. ಕಲ ಕೆ ಲವು ವರ್ಷ ಸಂಘಕ್ಕೆ ಪಡಿಸಿ ಸಂದಾಯಿಸಗುವ ಧನಿಗ ಪುನಹ ಸಾಲ ಕೊಡುವದು, ಸಂಘದಲ್ಲಿ ಇ ಕೊಳ್ಳುವದು ಸಂಘದ ಭದ್ರತೆಗೆ ತೊಂದರೆ

ಕೆಲವು ಸಂಘಗಳಲ್ಲಿ ಆಡಳಿತ ಮಂಡಳಿಯವರು ಒದ ಲಾವಣೆ ಆಗುವದೇ ಇಲ್ಲ ಬೇರೆ ಮೆಂಬರುಗಳು ತಮಗೆ ರಾಗುವದೇ ಇಲ್ಲ. ಸಂಘಗಳ ಒಂಡವಾಳವೆಷ್ಟು? ಸಾಲ ನೆ ... ಬ್ಬ ... ಆಡಳಿತ ಮಂಡಳಿ ... ದ್ಯ ... ಎಂದು ಕೇಳಿದರ ... ಇಲ್ಲ.

ಆಡಳಿತ ಮಂಡಳಿಯವರು ಸಾಲ ಪಡಕೊಳ್ಳುವದರಲ್ಲಿ ಮೆಂಬರುಗಳಿಗೆ ಹೊರಗೆ ತಗಲ ... ದು ... ಸೆಕ್ರೆ ಟರಿ ಸಹ ಹಣ ಬಂದರೆ ... ತೆಗೆದುಕೊಳ್ಳುವದೇ ಕಷ್ಟ. ಪುಸ್ತಕ ... ದಾಖಲು ಮಾಡದೆ ಇರುವದು ಕಂಡು ಒರುತ್ತೆ ಸೆ ಕ್ರೆಟರಿಯ ಮೇಲೆ ಆಡಳಿತ ಮಂಡಳಿಯ ಬಿಗಿ ಬಹಳ ಸಡಿಲ

ದೈವಾನುಗ್ರಹದಿಂದ ಹೊರಗಿನಿಂದ ಈ ಸಂಘದ ವ್ಯವಸ್ಥೆ ಯಲ್ಲಿಯೂ ಇರುವದೇ ವಿಶ್ವಾಸದ ಶುಭ ಸೂಚನೆಯಾಗಿದೆ. ಜಂಟಿ ಕ್ರಯ, ವಿಕ್ರಯದ ಸಾಲವು ಸ್ಥಾಪನೆಯಾಗದೆ ಮೆಂಬ ರುಗಳಿಗೆ ತಮ್ಮ ಪೂರ ಉತ್ಪತ್ತಿಯ ಪ್ರತಿಫಲವನ್ನು ಪಡೆ ಯುವದಕ್ಕೆ ಅನುಕೂಲವೇ ಇಲ್ಲ

ಸಹಕಾರ ಸಂಘವು ವ್ಯವಸಾಯದ ಅವಳಿ ಮಕ್ಕಳಂತೆ ವೆ. ಈಗಿನ ಸಮೂಹವು ವ್ಯವಸಾಯವು ಹೆಚ್ಚಿನ ಉತ್ಪತ್ತಿ ಯನ್ನು ಕೊಡಲಾರದು. ಉಳುವದಿಯು, ಸುಧಾರಿತ ಬೀಜವು ಮತ್ತು ಗೊಬ್ಬರವು ವ್ಯವಸಾಯದ ಬೋಧನೆಯೂ ಸರಿಯಾ ಗಿ ಗ್ರಾಮಾಂತರಗಳಲ್ಲಿ ಸಾಗಬೇಕಾಗಿದೆ.

ಒಬ್ಬೇ ಊರಿನಲ್ಲಿ ನಾನಾ ತರದ ಮಣ್ಣುಗಳು ಇವೆ ಮಣ್ಣನ್ನು ನೋಡದೆ ಒಬ್ಬನು ಒಂದು ತರದ ವ್ಯವಸಾಯ ನ್ನು ಕೈಕೊಂಡ ಮಣ್ಣಿನ ಸ್ವಭಾವದ ಮೇಲೆ ಅದರೆ ಇ ನ್ನೊಂದು ತರ ಅದೇ ವ್ಯವಸಾಯ ಮಣ್ಣಿಗೆ ವಿರೋಧವಾ ದಲ್ಲಿ ಹಾಳಾಗಿ ಹೋಗುವದು ಕಂಡು ಒರುತ್ತೆ. ಅನೇಕ ವ್ಯವಸಾಯಗಾರರು ಹೀಗೆ ಹಣ ಖರ್ಚ ಮಾಡಿ ಸಾಲಗಾ ರರಾಗಿದ್ದಾರೆ

ಸಹ ... ಚಾಲುವಾರುಗಳ ಪೋಷಣೆ ... ಇದಕ್ಕೆ ತಕ್ಕ ಬೋಧನೆ ಯು ಶಾಳೆಗಳಲ್ಲಿ ... ಇಲ್ಲ

ಕೃಷಿಗಳ ಪರೀಕ್ಷೆಯ ಕ್ಷೇತ್ರಗಳು ಸರಕಾರದಿಂದ ಸ್ಥಾಪಿತವಾ ... ಗಳಿಂದ ಸ್ವತಹ ಬೋಧನೆ ಯ ... ಬೇಕಾಗಿದೆ.

ಸಹಕಾರ ಸಂಘವೆಂದ ಮೆಂಬರುಗಳ ಶಾಖೆಯಿಂದ ಮೆಂ ಬರಿಗೆ ಆದಿ ಕ ಸ್ಥಿತಿ, ಸಮಾಜ ನೀತಿ, ವೇದಾಂತ, ವಿದ್ಯೆ, ಧ ರ್ಮ, ಸಹಾಯ ... ಪರಸ್ಪರ ಸ್ನೇಹ ಮುಂತಾದವುಗಳನ್ನು ಕಲಿತುಕೊಳ್ಳುವದಕ್ಕೆ ಸುಲಭವಾದ ದಾರಿಯಾಗಿದೆ.

ಯಾವದರೂ ಒಂದು ದೇಶವೂ ಜನಾಂಗ ಮುಂ ದುವರಿಯಬೇಕಾದರೆ ಅದು ಸಹಕಾರದಿಂದ ಅಲ್ಲದೆ ಬೇರೆ ಯಾವ ದರಿಂದಲೂ ಅಲ್ಲವೆಂದ ಅನುಭವಗಳು ಹೇಳುವ ಮಾತಾಗಿದೆ ಹಾಗಾದ ಮೃಗ ... ಇರುವ ಮನುಷ್ಯ ರೂಪವ ನ್ನು ... ಮನುಷ್ಯನನ್ನಾಗಿ ಸಹಕಾರದ ಸಂಘ ವೇ ಮಾಡುವದು. ಆತ್ಮಾಭಿಮಾನ, ಸ್ವಾಭಿಮಾನ, ಸ್ವಾರ್ಥ ತ್ಯಾಗ ಸಹಕಾರಿಗಳು ಒಡಬೇಕು ಬಡಬೇಕು, ಬಿಡಬೇಕು.

ಒಬ್ಬ ಸಹಕಾರಿಯಿಂದ

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕವೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಪ್ರತಿ ತಿಂಗಳಿನಲು ಸರಿಯಾಗಿ ಮುಟ್ಟಾಗದಿರುವಿಕೆ ಮುಟ್ಟಾಗುವ ಸಮಯದಲು ಕೈಕಾಲು ಹರಿಯುವಿಕೆ ಮುಚ್ಚಿಟ್ಟ ಬೀಳುವಿಕೆ, ... ಬಿಳುಪು ... ಹೋಗಿ ಗರ್ಭ ಪತನವಾಗುವಿಕೆ ... ಸಂತಾನ ಭಂಗಕ್ಕೆ ಕಾರಣಗಳು ... ಮಕ್ಕಳಿಗೆ ... ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ... ಭಯದಿಂದ ಜ್ವರಬೀಳ್ಳ ... ಅನೇಕ ಗ್ರಂಥಗಳಲ್ಲಿ ... ಮಂತ್ರದ ಯಂತ್ರವನ್ನು ತಯಾರಿಸಿ ... ತಾಯಿತದಲ್ಲಿ ... ಧರಿಸಿದರೆ ... ಮಕ್ಕಳಿಗೆ ... ಬಾಲಗ್ರಹದ ... ಪರಿಹಾರವಾಗುತ್ತದೆ ... ಸಂತಾನ ... ಕ್ಷೇಶಲ್ ... ರೋಗಿಗಳ ಪರಿಸ್ಥಿತಿಯನ್ನು ಸ್ಪಷ್ಟ ಬರೆಯಿರಿ. ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ 100 ರೂ ಬಹುಮಾನ ... ಅನುಭವ ತಕೊಳ್ಳಿರಿ

ಸ್ಥಳ ಸಂಕೋಚ ಮೂಲಕ ಮಾದರಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯ ಪ್ರಕೃತಿಯನ್ನು ... ನನ್ನ ಹೆಂಡತಿಯು ... ತಾಯಿತವನ್ನು ... ಸಂತೋಷಪಡಿಸುತ್ತೆ ... ಪ್ರಹ್ಲಾದ ಎಸ್ಟೇಟ್ ಮುಂಬೈ

ತಾಯಿತ ಸಿಗುವ ವಿಳಾಸ:—ಸಿದ್ದಾಂತಿ ಬಿ. ಸಿ., ಹಂಚಗಟ್ಟಿ, ಮಾ. ಪೋ. ಅಥಣಿ, ಜಿ. ಬೆಳಗಾಂವ.

52—20

ರಬ್ಬರ್ ಮೋಹರುಗಳು.

ನೀವು ಅಪೇಕ್ಷಿಸುವ ಯಾವತ್ತೂ ಮಾದರಿಯಲ್ಲಿ ತಯಾರಿಸಿ ಕೊಡಲಾಗುವವು.

ನೋಟ್ಟಂಡ ಸಾರನ್ನಗಳ್ಲದೆ ಕನ್ನಡ ... ಬೋರ್ಡುಗಳು ಫೋಟೋ ಬ್ಲಾಕ್ ... ಮೋಹರು ಚಾದ್ರಕಾರ ... ಪಟಿಗಗಳು, ... ಅಂದವಾದ ಸಣ್ಣ ಕಲ್ಲುಗಳು ಇತ್ಯಾದಿ

ದಿ ಕ್ಯಾಪಿಟಲ್ ರಬ್ಬರ್ ಸ್ಟಾಂಪ್ ಕಂಪೆನಿ,

12—1 ಮಂಗಳೂರು, ದ ಕನ್ನಡ.

ಎಂ. ಎಸ್. ಶಿದ್ದಪ್ಪ ...

ಹಾರ್ಮೋನಿಯಂ ವ್ಯಾಪಾರಿಗಳು, ... ಮೈಸೂರು.

4 ಕ್ಯಾರೆಟ್ ಭಂಗಾರದ ನಿಬ್ಬು ... ಖಾತ್ರಿಯೂ ಬಂದೋಬಸ್ತೂ ಆದ ಫೌಂಟನ್ ಪೆನ್‌ಗಳು.

ಮಂಡರ್ ಫೌಂಟನ್ ಪೆನ್ 1ಕ್ಕೆ	ರೂ 3	0 0
,, ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3 0
,, ಸ್ಕ್ರ್ಯೂ ಕ್ಯಾಪ್ ಪೆನ್ 1ಕ್ಕೆ	3	8 0
,, ಬಿಗ್ ಬ್ಯಾರೆಲ್ ಸ್ಕ್ರ್ಯೂ ಕ್ಯಾಪ್ ಮೂಡಲ್ ಕಲರ್ ಫೌಂಟನ್ ಪೆನ್ 1ಕ್ಕೆ	3	14 0
,, ಮೂಡಲ್ ಕಲರ್ ಸ್ಕ್ರ್ಯೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4	2 0
,, ಸೆಲ್ಫ್ ಫಿಲ್ಲಿಂಗ್ ಪಾಂಡಲ್ ಅಥವ ಬ್ರವುನ್ ಕಲರ್ ಫೌಂಟನ್ ಪೆನ್ 1ಕ್ಕೆ	5	8 0
... ಸ್ವಾನ್ ಫೌಂಟನ್ ಪೆನ್ 1ಕ್ಕೆ	10	8 0
... ರ್ ಪೆನ್ 1ಕ್ಕೆ	14 6 0, & 20	10 0
... ವಾಟರ್ಮನ್ ಫೌಂಟನ್ ಪೆನ್ 1ಕ್ಕೆ	3 8 0, & 3	12 0
... ನ್ ಫೌಂಟನ್ ಪೆನ್ 1ಕ್ಕೆ	6 4 0, & 6	12 0
... ರ್‌ನುಸ್ ಫೌಂಟನ್ ಪೆನ್ 1ಕ್ಕೆ	8 2 0, & 8	10 0

ಟೈಂಪೀಸ್‌ಗಳು.

... ಟೈಂಪೀಸ್	1ಕ್ಕೆ	3 6 0
ಜರ್ಮನ್ ಮೇಡ್ ಸಣ್ಣ ಟೈಂಪೀಸ್	1ಕ್ಕೆ	2 2 0
... ಆಕಾರದ ಟೈಂಪೀಸ	1ಕ್ಕೆ	6 9 0, & 6 15 0
... ಆಕಾರದ ಟೈಂಪೀಸ್	1ಕ್ಕೆ	7 2 0
... ಆಕಾರದ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು	1ಕ್ಕೆ	8 10 0
... ಆಕಾರದ ಟೈಂಪೀಸ್	1ಕ್ಕೆ	9 6 0
... ಆಕಾರದ ಸ್ಟ್ಯಾಂಡ್ ಇರತಕ್ಕ ... ಯಾದ ಟೈಂಪೀಸ್	1ಕ್ಕೆ	13 4 0
... ಪಾಕೆಟ್ ವಾಚ್	1ಕ್ಕೆ	5 10 0
... ಪಾಕೆಟ್ ವಾಚ್	1ಕ್ಕೆ	12 ... 0
... ಕೇಸ ... ಸಾಧಾರಣ ತರದ ... ವಾಚ್	1ಕ್ಕೆ	5 4 0, 7 8 0, 10 0 0 & 12 8 0



ಇಲ್ಲಿ ... ಹರಿಯ ನಮೂನೆ ಅಂದ ವಾದ ಟೈಂಪೀಸ್ 1ಕ್ಕೆ 3—6—0 ಪಾ. ಕಿಂಗ್ ಪೋಸ್ಟೇಜು ಉ ಚಾಮಯಿತ.

ಕೆಟಲಾಗ್‌ಗೆ ಬರಿಯಬೇಕಾದ ವಿಳಾಸ.—ಎಂ. ಎಸ್. ಶಿದ್ದಪ್ಪ ... ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—37

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	23,160
ಜಮೂಬಂದ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1930.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52—11 ಗಿರಿಗಾಂವ, ಮುಂಬಯಿ.



12 bore Victor Cartridges Rs. 10/- Per 100

Mahomedally-Noorbhoy.

ARMS & AMMUNITION MART.

321 Abdul Rehman Street.

52 19 BOMBAY 3

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯು

ಅಭಿವೃದ್ಧಿಯೋ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲೆಲ್ಲಾ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯು ಈಗಿನ ಸ್ಥಿತಿಯಿಂದ ಸ್ಪಷ್ಟಪಡುತ್ತದೆ.

ಹೊಸ ಕೆಲಸ.	ಪ್ರೀಮಿಯಂ ವರಮಾನ
೧೯೨೭—೪೭೮ ಲಕ್ಷ ರೂಪಾಯಿಗಳು.	೧೯೨೭—೧೨೨ ಲಕ್ಷ ರೂಪಾಯಿಗಳು.
೧೯೨೮—೫೮೫ ಲಕ್ಷ ,,	೧೯೨೮—೧೪೦ ಲಕ್ಷ ,,
೧೯೨೯—೬೫೦ ಲಕ್ಷ ,,	೧೯೨೯—೧೬೧ ಲಕ್ಷ ,,

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು.

ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು
೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳಿಗೆ ೨೨|| ರೂಪಾಯಿಗಳು.
೧೯೨೭ ,, ,, ,, ,, ೨೫ ,,

ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದಲ್ಲಿ ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭವುಂಟು.

ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಓರಿಯಂಟಲ್ ಬಿಲ್ಡಿಂಗ್ಸ್, **ಸೌತ್ ಪೆರೇಡ್, ಬೆಂಗಳೂರು.**

ಯಂ. ವಿ. ಮುತ್ತುಕೃಷ್ಣ ನಾಯುಡು, **ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.**

OR

ಕೆ. ಪಿ. ಚಿಣ್ಣಪ್ಪ, **ಏಜೆಂಟ್,** **ಮಡಿಕೇರಿ.**

52—4

ಮಲೇರಿಯಾವನ್ನು ಮಬ್ಬಿಜ್ವರ ಚಳಿಜ್ವರ ಉರಿಜ್ವರ, ದಾಹ; ಮಾಯಿದೆ ಕಟ್ಟು ಬರುವ ಎಲ್ಲಾ ವಿಧದ ಜ್ವರಗಳನ್ನೂ, ಗೆಡ್ಡೆಯನ್ನೂ ಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ

ಕ್ರಯ 8 ಔನ್ಸಿಗೆ 1—8—0, ½ ಡಜನಿಗೆ 8—8—0, 1 ಡಜನ್ 16—8—0

ಪಿತ್ತ, ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡಸ್.

ಪಿತ್ತಜ್ವರ ಕೈಕಾಲು ಬಚ್ಚಲು, ರಕ್ತ ಇಲ್ಲದೆ ಬೆಳ್ಳಗೆ ಕಾಣುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಗೊಂಬೆ ಮತ್ತು ಶರೀರ ತಲೆತಿರಿತ, ತಲೆ ತಿರುಗುವದು, ಆಹಾರದ ಹೊಟ್ಟೆ ಉರಿ ಎದೆ ಸುಡುವದು ನಾಲಿಗೆ ಒಣಗುವದು, ಮಲಮೂತ್ರಕ್ಕೆ ಭಂಗ ಪಿತ್ತ ಕಾರುವುದು ನವೆ, ಇಲ್ಲದೆ ಸಂಕಟವಾಗುವುದು ಇತ್ಯಾದಿ ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ್ಲ.

ಶರೀರದಲ್ಲಿ ಬೀಳುವ ಬೊಕ್ಕೆ, ತುರಿ, ಮಚ್ಚೆಗಳು, ಬೇಗ ಗುಣವಾಗದ ಘಾಯ ವ್ರಣಗಳು, ವಿವಿಧ ಬಗೆಯ ಚರ್ಮ ರೋಗಗಳು ಅತಿ ಶೀಘ್ರದಲ್ಲಿ ಗುಣಪಟ್ಟು ರಕ್ತ ಸಂಪೂರ್ಣ ಶುಚಿಯಾಗಿ ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ಬಲವುಳ್ಳ ಮದ್ದು ಕಂಪೌಂಡು ಸಿರಪು ಸರ್ಸಪರಿಲ್ಲ ಎಂಬುದೇ. ಬಾಟ್ಲಿಗೆ ರೂಪಾಯಿ 3—4—0.

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬರ್ನೋಮ.

ತಿಂಗಳು ಗಟ್ಟಲೆಯ ಅತ್ಯಂತ ಹೊಟ್ಟೆನೋವು. ಕೈಕಾಲುಗಳ ಸೆಳತ, ಕೋಶದ ಬಲಹೀನತೆ ನಾರುಗಳ ಉರಿತ, ರಕ್ತವು ಬೇಕಾದಷ್ಟು ಹರಿಯದೆ ನಿಂತು ಬಿಡುವದು ಅಲ್ಲದೆ ಸಮಯಕ್ಕೆ ಸ್ರಾವಿಸುವದು ಬಣ್ಣ ವಾಸನೆಯಲ್ಲಿ ಕೆಡಕು ಇತ್ಯಾದಿ ಗರ್ಭಕೋಶದ ಎಲ್ಲಾ ಅವಸ್ಥೆಯ ರೋಗಗಳನ್ನು ಕಂಪೌಂಡು ಸಿರಪ್ ವಿಬರ್ನೋಮ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3—8—0.

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣ ತೋರಿ ಸೊಂಟಕ್ಕೆ ಬಲ ಇಲ್ಲದೆ ಇರುವದು. ಜೀರ್ಣ ಬಿಕ್ಕಟ್ಟು ಮೂತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನು, ಬಾಳುವಿಕೆಯನ್ನು ಕುಂದಿಸಿಬಿಡುವ ಈ ಆಪತ್ತುಗಳನ್ನು ಬೇಬಿಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1—4—0.

ಶುದ್ಧ ಟೆಸ್ಟ್ಯಮದ್ದುಗಳೂ ಹೋಮಿಯೋಪಥಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ, ಅವುಗಳ ನಾನಾ ಬಗೆಯ ಸಾಮಾನುಗಳೂ, ಬಿಸಲಿಗೆ ಇಡತಕ್ಕ ಒಳ್ಳೇ ತರದ ಕನ್ನಡಕಗಳು ನಮ್ಮಲ್ಲಿ ನ್ಯಾಯವಾದ ಕ್ರಯದಿಗೆ ಮಾರಲ್ಪಡುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ:—ಮಲೇರಿಯಾನ ಕಂಪೆನಿ,

52—20 ಹಂಪನಕಟ್ಟೆ, ಇಗರ್ಜಿಬಳಿ, ನಂಬರು 14, ಮಂಗಳೂರು.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,

ಉತ್ತರ ಕೊಡಗಿಗೆ ಮೆ, ಪಾಲೇಂಗಡ ಕಾರ್ಯಪ್ಪನವರು,
,, ಮೆ. ಚಾರಿರ ಮಾಚೈಯ್ಯನವರು,
ದಕ್ಷಿಣ ಕೊಡಗಿಗೆ ಮೆ. ಅಣ್ಣಾರಂಡ ಮೇದಪ್ಪನವರು,
,, ಮೆ. ಅಮ್ಮಂಡ ಸುಬ್ಬಯ್ಯನವರು.
ಮಲೆನಾಡು—ಮೆ. ಕೀಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕುಂಡೀರಂಡ ಸೋಮಯ್ಯನವರು, (ಖಾದಿಭಂಡಾರ.)
ಸಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಟ್ಟಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಚಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಚನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
,, ಮೆ. ಕಣ್ಣುವಂಡ ಬೋಪ್ಪಯ್ಯನವರು ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,
ಮಡಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು.

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಟ್ಟಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಕ್ಯಾಶ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

Printed & published by K. P. Chinnappa at "Kodagu" Press Mercara for "Kodagu" Ltd.

If not delivered please return to
"KODAGU" OFFICE MERCARA.

ಕೊಡಗು.

ಶಕ್ತ್ಯೇನ ಭೂತದಯಯಾ, ವಿದ್ಯಾ ನೀತಿ ಪ್ರಸಾರತಃ । ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦ | ಮಡಿಕೇರಿ, ಸನ್ ೧೯೩೧ನೇ ಇಸವಿ ಮಾರ್ಚಿ ತಾರೀಕು ೨೭ ನೇ ಶುಕ್ರವಾರ. | ಸಂಚಿಕೆ ೩೬

Telegrams, Precious

V. Subramaniajee Jeweller,

Telephone — 3145

DIAMOND MERCHANT, GOLD & SILVERSMITH.

Deals in all —
SPORTS CUPS in all prices
MEDALS in up to date patterns
CASKETS in elegant styles

Nos. 2 & 3, Kuppumuthu St.,
TIRUVATESWARANPET,
Post Box 423, Triplicane P. O.,
MADRAS.

Deals in all —
GEM SET JEWELS set with Diamonds Rubies etc
GOLD ARTICLES of all patterns
SILVER WARE in latest style

52—19



ಕಾರ್ಡು ಬರೆದರೆ ಈಗಿನ
ಕ್ಯಾಟಲಾಗು ಪುಕಟೆಯಾಗಿ
ಕಳುಹಿಸಲ್ಪಡುವದು

ಕೋವಿಗಳು, ಕತ್ತಿಗಳು, ಬಟೀಗಳು, ತೋಟೆಗಳು, ಕೇಪುಗಳು, ಮತ್ತು ಇತರ ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
21 Abdul Rehman Street BOMBAY.

24—24

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ ಮಕ್ಕಳು ರೋಗ



ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿಯೂ ಬಲವೂ ಬರುವದು ದಿನ ದಿನಕ್ಕೆ ಆರೋಗ್ಯವೂ ತೂಕವೂ ಹೆಚ್ಚುವದು ಇದು ಮಧುರವಾಗಿದೆ ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ ಶೀಸೆ 1 ಕ್ಕೆ 12 ಆಣೆ ಟಿ ಪಿ 9 ಆಣೆ.

ಆರ್ಡರ್ ಕೊಡುವಲ್ಲಿ ಅಡ್ರೆಸ್ಸನ್ನು ಸ್ಪಷ್ಟವಾಗಿ ಬರೆದು ಕಳುಹಿಸಿ ಕೊಡ ತಕ್ಕದ್ದು ಅಡ್ರೆಸ್ ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲ

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿಮೊಗ್ಗಾ,
(ಮೈಸೂರು ಸೀಮೆ)

52—11

ಕಟುಕಸ್ತೂರಿಯ ಮಲೇರಿಯಾ ಜ್ವರಕ್ಕೆ — ಇದು ಇಂದಿನವರೆಗೆ ಮತ್ತು ಕ್ವೈನೈನು ಸಹ [illegible] ಗುಣವಾಗದಿರುವ ಮಲೇರಿಯಾ ಜ್ವರ [illegible] ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ [illegible] ಗುಣ ಕೊಡುತ್ತದೆ ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14



ಚಂದನಾಸವ — ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ [illegible] ತೋರುವದು, ಮೂತ್ರಕೋಶದ ಉರಿ ಮೂತ್ರ, ಹಿಂದಗಳ ಉರಿ ಮೂತ್ರನಾಳದಲ್ಲಿ ಹುಣ್ಣು ಮೂತ್ರ ಹೊಯ್ಯುವಾಗ ಉರಿಯುವದು ಮೂತ್ರ ನಾಳದಿಂದ ಕೀವು ಬರುವದು, [illegible] ಧಾತು ಹೋಗುವದು, ಆಗಾಗ್ಗೆ ಮೂತ್ರ ಬರುವದು ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ದೇಹದಲ್ಲಿ ಉರಿ [illegible] ಸ್ವಪ್ನಾವಸ್ಥೆ, ಮೂತ್ರ ನಾಳದಲ್ಲಿ [illegible] ನೋವು ಇವುಗಳಿಗೆ ಪರಮ ಔಷಧಿ ಬೆಲೆ [illegible] 1 ? ಸೀಸೆಗೆ ರೂ 1—4—0 3—8—0, 6—12—0

ರೋಮನಾಶಿನಿ.— ಈ ಪುಡಿಯನ್ನು [illegible] ಕಲಸಿ [illegible] ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ [illegible] ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ: — ತಲೆನೋವು ಕಡಿಮೆಯಾಗುವದು, ತಲೆ ತಂಪು, ಕಣ್ಣಿನ [illegible] ಕೀವಿನಿಂದ ಕೀವು ಸೋರುವದು [illegible] [illegible] ನೋವು, ಅಪಸ್ಮಾರ ನಿದ್ರೆ ಬಾರದಿರುವದು ನೆನಪು ಶಕ್ತಿ ಕುಂದಿರುವ ಗುಣಮ ಇವುಗಳೆಲ್ಲ ಚಂದಾಗಿ ಗುಣವಾಗುತ್ತದೆ [illegible] ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನು ಹೊಳಪನ್ನು ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಉದ್ದ ಸ್ವರೂಪದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 [illegible] ದೊಡ್ಡ ಸೀಸೆಗೆ ರೂ 2, [illegible] ಸೀಸೆಗಳಿಗೆ 5—8—0

ಕೆಟಲಾಗು ಮರೆ ನೋಡಿರಿ

ವಿಳಾಸ — ಮನೋಲ್ಲಾಸಿನಿ ಕಂಪೆನಿ,
7. ಮಂಗಳೂರು.

52—46

ಕೊಡಗು.

ಸನ್ ೧೯೩೧ನೇ ಇಸವಿ

ಮಾರ್ಚ ತಾ. ೨೭ ನೇ ಶುಕ್ರವಾರ.

"ಶಾಂತಿ ವಾತಾವರಣ."

ಮಹಾತ್ಮ ಗಾಂಧಿಯವರಿಗೂ, ವೈಸ್‌ರಾಯರಿಗೂ ರಾಜಿಯಾದನಂತರ ಮುಂದಿನ ರಾಜಕೀಯ ರಚನೆಯನ್ನು ತಯಾರಿಸಲು ಅನುಕೂಲವಾಗುವಂತೆ ಶಾಂತಿ ವಾತಾವರಣವುಂಟಾಗುವ ಬಗ್ಗೆ ರಾಜಕೀಯ ಖೈದಿಗಳನ್ನು ಬಿಡಬೇಕು ಎಂಬದೊಂದು ಶರತ್ತು ಇರ್ವಿನ್‌—ಗಾಂಧಿ ಕವಲಿನಲ್ಲಿತ್ತು. ಈ ಶರತ್ತನ್ನು ಕೆಲವು ಮಟ್ಟಿಗೆ ಸರಕಾರವು ನಡಿಸಿದರೂ, ಸಹ ಅನೇಕ ಪ್ರಾಂತ್ಯಗಳಲ್ಲಿ ಈ ಚಳವಳಿಗೆ ಸೇರಿದ, ಹಿಂಸೆ ನಡಿಸದ ಖೈದಿಗಳನ್ನೇ ಇನ್ನೂ ಬಿಟ್ಟಿರುವುದಿಲ್ಲವೆಂತ ಮಹಾತ್ಮ ಗಾಂಧಿಯವರಿಗೆ ಪುಕಾರುಗಳು ಬರುತ್ತಲಿವೆ. ಅದಕ್ಕಿಂತಲೂ ಹೆಚ್ಚಾಗಿ ಸುಬಾಸ್ ಚಂದ್ರ ಬೋಸರೂ ಮತ್ತು ಯುವಕ ಪಾರ್ಟಿಯ ಕೆಲವರೂ ಸಹ ಬಂಗಾಳದಲ್ಲಿ ವಿಚಾರವಿಲ್ಲದೆ ಬಂಧಿಖಾನೆಯಲ್ಲಿಟ್ಟಿರುವ ನೂರಾರು ಜನರನ್ನೂ, ಭಗತಸಿಂಗ್ ಮೊದಲಾದ ಲಾಹೋರಿನ ಫಾಶಿ ಶಿಕ್ಷೆಗೆ ಗುರಿ ಮಾಡಲ್ಪಟ್ಟಿರುವವರನ್ನೂ, ಸಾಮ್ಯವಾದ ಅಂದರೆ ರಷ್ಯಿಯಾದ ಕಮ್ಯೂನಿಸಮ್ ಎಂಬ ರಾಜ್ಯ ಪದ್ಧತಿಯನ್ನು ಅನುಸರಿಸುತ್ತಾರೆಂಬ ತಕ್ಸೀರಿಗೆ ಗುರಿಮಾಡಲ್ಪಟ್ಟಿರುವ ಮೀರಟ್ ಖೈದಿಗಳನ್ನೂ ಸಹ ಜೈಲಿನಿಂದ ಬಿಡದೆ ವಾತಾವರಣವು ಶಾಂತಿ ಯುಕ್ತವಾಗಲಾರದೆಂದೂ, ಇವರನ್ನೂ ಬಿಡಬೇಕೆಂಬ ಶರತ್ತಿಲ್ಲದೆ ರಾಜಿ ಮಾಡಿಕೊಂಡದ್ದು ಮಹಾತ್ಮ ಜೀಯವರ ತಪ್ಪೆಂತಲೂ ವಾದಿಸುತ್ತಾರೆ.

ಹಿಂಸಾಯುಕ್ತವಾದ ತಕ್ಸೀರುಗಳಿಗೆ ಗುರಿಯಾದವರು ಜೈಲಿನಿಂದ ಬಿಡಲ್ಪಟ್ಟರೆ ಬಿಟ್ಟನಂತರ ಹಿಂಸೆ ನಡಿಸಲಾರರೆಂಬ ಭರವಸೆ ಕೊಡಲು ತನ್ನಿಂದ ಸಾಧ್ಯವಿಲ್ಲದ್ದರಿಂದ ಅವರನ್ನು ಬಿಡಬೇಕೆಂಬ ಶರತ್ತು ರಾಜಿಗೆ ಸೇರಿಸದಿದ್ದರೂ, ಅವರನ್ನು ಬಿಡಿಸಲು ತಾನು ಪ್ರಯತ್ನಿಸಿರುತ್ತೇನೆಂತಲೂ, ರಾಜಿಶರತ್ತುಗಳನ್ನೂ ಕಾಂಗ್ರೆಸಿನವರು ನಡಿಸದರೆ ಹಿಂಸಾಯುಕ್ತವಾದ ಖೈದಿಗಳನ್ನೂ, ಮೀರಟ್ ಕೈದಿಗಳನ್ನೂ, ಭಗತಸಿಂಗ್ ಮುಂತಾದವರನ್ನೂ ಸಹ ಬಿಡಿಸುವುದು ಕಷ್ಟವಾಗಲಾರದೆಂದೂ ಮಹಾತ್ಮ ಜೀಯವರು ಒಂದು ಮೀಟಿಂಗಿನಲ್ಲಿ ಹೇಳಿದ್ದರು. ಈ ವಾಗ್ದಾನದಿಂದ ಸುಬಾಸ್ ಚಂದ್ರ ಬೋಸರಿಗೆ ತೃಪ್ತಿಯಾಗದಿದ್ದರೂ ಅನೇಕರಿಗೆ ತೃಪ್ತಿಯಾಗಿತ್ತು. ಮೇಲಿನ ಮಾತನ್ನು ಹೇಳುವಾಗಲೇ ಗಾಂಧೀಜಿಯವರು ಭಗತಸಿಂಗ್ ಮೊದಲಾದವರನ್ನು ಬಿಡಿಸುವ ಭರವಸೆ ಬಲವಾದ್ದಲ್ಲವೆಂತ ಎಚ್ಚರಿಸಿದ್ದರು. ಆದರೂ ಅವರನ್ನು ಬಿಡಿಸುವ ವಿಷಯದಲ್ಲಿ ಮಹಾತ್ಮಾಜೀಯವರು ಮೌನಾಗಿರಬಹುದೆಂತಲೂ, ಅವರು ಮಾತಾಡಿರುವಾಗ ಮುಂದಿನ ಸ್ವರಾಜ್ಯ ರಚನೆಯ ಚರ್ಚೆಯಾಗುವ ವರೆಗಾದರೂ ಭಗತಸಿಂಗ್ ಮುಂತಾದವರನ್ನು ಗಲ್ಲಿಗೇರಿಸಲಾರರೆಂಬ ಆಶೆ ಇತ್ತು. ಆದರೆ ಕಳೆದ ವಾರದಲ್ಲಿ ಈ ಖೈದಿಗಳ ಮೇಲೆ ದಯ ತೋರಿಸಲು ಬರಕೊಂಡ ಅರ್ಜಿಯನ್ನು ವೈಸ್‌ರಾಯರು ತಿರಸ್ಕರಿಸಿರುವರಾಗಿಯೂ, ಅವರ ತಂದೆ ತಾಯಿ ಮುಂತಾದ ಸಂಬಂಧಿಕರು ಅವರನ್ನು 23 ನೇ ತಾರೀಕಿನ ಒಳಗೆ ನೋಡಿಕೊಳ್ಳಬೇಕಾಗಿಯೂ ಜೈಲ್ ಅಧಿಕಾರಿಗಳು ತಿಳಿಸಿದ್ದಾರೆಂಬ ವರ್ತಮಾನ ಹೊರಬಿದ್ದ ಕೂಡಲೇ ದೇಶದಲ್ಲೆಲ್ಲಾ ಮನಸು ಅಲ್ಲೋಲ ಕಲ್ಲೋಲವಾಗಿದೆ. ಕರಾಚಿ ಕಾಂಗ್ರೆಸ್ ನಡೆಯಬೇಕಾದ ಈ ಸಮಯದಲ್ಲಿ ಸಂಬಂಧ ಪಟ್ಟ ಅಧಿಕಾರಿಗಳು ಈ ರೀತಿ ವರ್ತಿಸುವುದು ಬಹಳ ವ್ಯಸನಕರವಾದ ಸಂಗತಿಯಾಗಿದೆ. ಕರಾಚಿಯಲ್ಲಿ ಅಧ್ಯಕ್ಷರನ್ನು ಮೆರವಣಿಗೆ ಮಾಡಿಸುವುದನ್ನು ನಿಲ್ಲಿಸಬೇಕೆಂತ ಮಹಾತ್ಮಜೀಯವರು ತಂತೀ ಮೂಲಕ ಕರಾಚಿಗೆ ತಿಳಿಸಿದರು. ಕರಾಚಿಯಲ್ಲಿ ಸಂತೋಷ ಸೂಚಕದ ಎಲ್ಲಾ ಏರ್ಪಾಡುಗಳನ್ನು ನಿಲ್ಲಿಸಲಾಗಿದೆ. ಕಾಂಗ್ರೆಸ್ಸೇ ನಡಿಯುತ್ತದೋ, ಇಲ್ಲವೋ ಎಂಬ ಸಂಶಯವಿದೆಯೆಂತ ಕರಾಚಿಯಿಂದ ವರ್ತಮಾನ ಸಹ ಬಂದಿದೆ. ಈಗಾಗಲೇ ತಯಾರಾಗಿರುವ ಸ್ವಾಗತಾಧ್ಯಕ್ಷರ ಮತ್ತು ಅಧ್ಯಕ್ಷರ ಭಾಷಣಗಳು ತಯಾರಾಗಿದ್ದರೂ ಈ ಮೇಲಿನ ದೇಶ ಭಕ್ತರನ್ನು ಗಲ್ಲಿಗೇರಿಸಲ್ಪಟ್ಟರೆ ಭಾಷಣಗಳೇ ಬದಲಾಗಬೇಕಾಗುತ್ತದೆಯೆಂತಲೂ ಹಿಂದೀಯರ ಕೋರಿಕೆಯನ್ನು ಗಣಿಸದೇ ಈ ದೇಶ ಭಕ್ತರನ್ನು ಈಗಲೇ ತೂಗಿದರೆ ಸರಕಾರದ ಮನಸು ಬದಲಾಗಿಲ್ಲವೆಂಬುದು ಪ್ರತ್ಯಕ್ಷವಾದ್ದರಿಂದ ಇಂಥಾ ಸರಕಾರದೊಡನೆ ಸಹಕರಿಸುವುದು ಸಾಧ್ಯವಿಲ್ಲವೆಂತ ಕಾಂಗ್ರೆಸ್ ಮುಂದಾಳುಗಳೇ ಯೋಚಿಸುತ್ತಿದ್ದಾರೆಂತಲೂ ತಿಳಿದು ಬಂದಿವೆ. ಆದ್ದರಿಂದ ಈ ಖೈದಿಗಳನ್ನು ಕಾಂಗ್ರೆಸಿಗೆ ಮುಂದೆ ತೂಗಿದರೆ ಅಥವ ಅನಂತರವಾದರೂ ಶೀಘ್ರವಲ್ಲೇ ತೂಗುತ್ತಾರೆಂತ ತಿಳಿದರೆ ಕಾಂಗ್ರೆಸಿನಲ್ಲೇ ಸರಕಾರದೊಡನೆ ಸಹಕಾರ ಬೇಡವೆಂತ ತೀರ್ಮಾನವಾಗುವ ಸಂಭವವಿದೆ. ಉತ್ತರ ಹಿಂದೂಸ್ಥಾನದಲ್ಲಿ ಈ ದೇಶ ಭಕ್ತ ಖೈದಿಗಳ ಮೇಲೆ ತುಂಬಾ ಗೌರವವಿದೆ. ಅಂಥವರನ್ನು ಸರಕಾರವು ಕೊಂದರೆ ಉತ್ತರ ಹಿಂದೂಸ್ಥಾನದ ಯುವಕರನ್ನು, ಕೊಲೆಪಾತಕದಲ್ಲಿ ನಂಬಿಕೆ ಇರುವವರನ್ನು ಸಿಟ್ಟಿಗೆಬ್ಬಿಸಿದಂತಾಗುತ್ತದೆ. ದೇಶದಲ್ಲಿ ಸ್ಥಾಪಿತವಾಗಬೇಕಾದ ಶಾಂತಿಯು ತಪ್ಪಿ ಕ್ರಾಂತಿಯೇ ಪ್ರಾರಂಭವಾಗುವ ಸಂಭವವಿದೆ. ಈಗಲಾದರೂ ವೈಸರಾಯರು ಈ ವರೆಗೆ ತೋರಿಸಿದ ಧಾರಾಳ ಮನಸ್ಸನ್ನು ಇನ್ನೂ ತೋರಿಸಿ ಇವರ ಜೀವ ಉಳಿಸಬೇಕೆಂತ ಒಟ್ಟು ಹಿಂದೂಸ್ಥಾನದ ಅಭಿಲಾಷೆಯಾಗಿದೆ.

ಇವರನ್ನು ಬಿಡಲು ಅಡ್ಡಿಯಾವದೆಂದರೆ—ಸರಕಾರದ ಗೌರವವೇ. ಜನರ ಚಳವಳಿಕ್ಕೆ ಬೆದರಿ ಈ ಖೈದಿಗಳ ಜೀವ ಉಳಿಸಿದರು ಎಂಬ ಅಭಿಪ್ರಾಯ ಜನರಲ್ಲಿ ಹುಟ್ಟಿ ಜನರ ದೃಷ್ಟಿಯಲ್ಲಿ ಸರಕಾರದ ತೂಕ ಕಡಿಮೆಯಾದೀತೆಂಬವೇ ಭಯವಿರಬೇಕಷ್ಟೆ. ಅಹಿಂಸಾವಾದಿಗಳಾದ ಮಹಾತ್ಮ ಗಾಂಧಿಯವರು ಜನರ ಮುಂದಾಳಾಗಿರುವದರಿಂದ ಈ ಖೈದಿಗಳ ಬಿಡುಗಡೆಯನ್ನು ರಾಜಿಯ ಶರತ್ತಾಗಬೇಕೆಂತ ವಾದಿಸಲಿಲ್ಲವಷ್ಟೆ. ಐರ್ಲ್ಯಾಂಡಿಗೆ ಸ್ವರಾಜ್ಯ ಕೊಡುವ ಮುಂದೆ ಐರ್ಲ್ಯಾಂಡಿಗೂ, ಇಂಗ್ಲೆಂಡಿನ ಸರಕಾರಕ್ಕೂ ರಾಜಿಯಾಗುವ ಹಿಂಸಾಯುಕ್ತರಾದ ಖೈದಿಗಳನ್ನು ಬಿಡುವುದಿಲ್ಲವೆನ್ನಲಿಲ್ಲ. ಐರ್ಲ್ಯಾಂಡಿನವರ ಚಳವಳವೇ ಹಿಂಸಾಯುಕ್ತವಾಗಿತ್ತು. ಶತ್ರುಗಳನ್ನು ಸಾಧ್ಯವಿದ್ದಲ್ಲೆಲ್ಲಾ ಕೊಲ್ಲುವುದೇ ಅವರ ಚಳವಳದ ರೀತಿಯಾಗಿತ್ತು. ಆದರೂ ಅಲ್ಲಿ ಎಲ್ಲಾ ಖೈದಿಯರನ್ನೂ ಬಿಟ್ಟರು. ಭಗತ್‌ಸಿಂಗ್ ಮುಂತಾದವರು ಕೊಲೆಪಾತಕ ಮಾಡಿದರೋ, ಇಲ್ಲವೋ ನಮಗೆ ತಿಳಿಯದು. ಆದರೆ ಅವರು ಮಾಡಿರುವ ಕೃತ್ಯಗಳಂತೂ ತಮ್ಮ ದೇಶದ ಮೇಲೆ ಇರುವ ಪ್ರೇಮಕ್ಕಾಗಿ, ತಮ್ಮ ಮಾತೃಭೂಮಿಯನ್ನು ಗುಲಾಮಗಿರಿಯಿಂದ ತಪ್ಪಿಸಬೇಕೆಂಬ ಆಶೆಗಾಗಿಯೇ ಇವರು ವರ್ತಿಸಿದರೆಂಬುದನ್ನು ಸರಕಾರವೂ ಒಪ್ಪುತ್ತದೆ. ಹಾಗಾದರೆ ಮಾತೃಭೂಮಿಗೆ ಸ್ವಾತಂತ್ರ್ಯ ಕೊಡುವ ಯೋಚನೆ ಮಾಡುವ ಈ ಸಮಯದಲ್ಲಿ ಮಾತೃಭೂಮಿಯ ಪ್ರೀತಿಯಿಂದ ಕೆಲಸ ಮಾಡಿದವರನ್ನು ತೂಗುವುದು ಯುಕ್ತವಲ್ಲ.

ದೇಶದ ಅನೇಕ ಕಡೆಗಳಲ್ಲಿ ಪ್ರಪಂಚವೇ ಅಸಹ್ಯ ಪಡುವಂಥ ವರ್ತನೆಯನ್ನು ಪೋಲೀಸ್ ಅಧಿಕಾರಿಗಳು ಪ್ರದರ್ಶಿಸಿದರು. ಅಂಥಾ ಆರೋಪಗಳ ಕುರಿತು ನಿಷ್ಪಕ್ಷ ತನಿಖೆಯಾಗಬೇಕೆಂತ ಮಹಾತ್ಮರು ಕೇಳುತ್ತಿದ್ದವರು ತಮ್ಮ ಧಾರಾಳ ಬುದ್ಧಿಯನ್ನು ತೋರಿಸಿ ಅಂಥಾ ತನಿಖೆ ಬೇಡವೆಂತ ಮಹಾತ್ಮರು ಒಪ್ಪಿಕೊಂಡರು. ಈ ದೇಶಭಕ್ತರ ಜೀವವನ್ನು ಉಳಿಸಬೇಕೆಂಬ ಒಟ್ಟು ಹಿಂದೂಸ್ಥಾನದ ಕೋರಿಕೆಯನ್ನು ನೆರವೇರಿಸಿ ಕೊಡುವುದು ಸರಕಾರಕ್ಕೆ ಸಾಧ್ಯವಾಗದಿದ್ದರೆ ಮುಂದಿನ ಚರ್ಚೆಯಲ್ಲಿ ಸರಕಾರವು ಹಿಂದೂಸ್ಥಾನದ ಸ್ವರಾಜ್ಯದ ಅಭಿಲಾಷೆಗೆ ಸಹಾನುಭೂತಿ ತೋರಿಸೀತೆಂಬ ಭರವಸೆಯೇ ಇಲ್ಲವಾಗುತ್ತದೆ.

ಈ ಖೈದಿಗಳನ್ನು ತೂಗಲು ತೀರ್ಮಾನ ಕೊಟ್ಟ ಕೋರ್ಟು, ಅವರ ವಿಚಾರಕ್ಕಾಗಿಯೇ ಹೊರಡಿಸಿದ್ದ ಆರ್ಡಿನೇನ್ಸ್ ಮೇರೆ ನೇಮಕವಾಗಿದ್ದ ಕೋರ್ಟು. ಆ ಕೋರ್ಟಿನ ತೀರ್ಮಾನದ ಮೇರೆ ತೂಗದೆ ಸರಕಾರವು ಬಾಕಿ ಮಾಡಿದ್ದರಿಂದ ಇವರನ್ನು ತೂಗಬೇಕಾದರೆ ಅದೇ ಕೋರ್ಟಿನವರು ಪುನಃ ಹುಕುಂ ಕೊಡುವ ಅವಶ್ಯವಿದೆಯೆಂತಲೂ, ಈಗ ಸದರಿ ಆರ್ಡಿನೇನ್ಸ್ ರದ್ದಾಗಿರುವದರಿಂದಲೂ ಆ ಕೋರ್ಟು ಈಗ ಇಲ್ಲದ್ದರಿಂದ ಇವರನ್ನು ತೂಗುವುದು ಖಾನೂನಿಗೆ ವಿರೋಧವಾಗುತ್ತದೆಯೆಂತ ಲಾಹೋರ್ ಹೈ ಕೋರ್ಟಿನಲ್ಲಿ ಯಾರೋ ವಾದಿಸುತ್ತಾರೆ. ಈ ವಾದವು ಸಫಲವಾಗಲಿಲ್ಲ. ಅದರ ಮೇಲೆ ಪ್ರಿವಿ ಕೌನ್ಸಿಲಿಗೆ ಅಪ್ಪೀಲು ಮಾಡಲು ಅನುಮತಿ ಕೇಳುತ್ತಿದ್ದಾರೆ. ಅದರ ಫಲಿತಾಂಶವೇನಾಗುತ್ತದೋ ತಿಳಿಯದು.

ಹೈ ಕೋರ್ಟಿನ ಈ ವಾದ ನಡಿಯುತ್ತಿರುವಾಗ್ಯೆ ಈ ಖೈದಿಗಳು ಮಾಫಿ ಕೇಳಿಕೊಂಡರೇ ಎಂತ ಜಡ್ಜಿಯವರು ಕೇಳಿದಾಗ ಇವರು ಕೇಳಲಿಲ್ಲವೆಂತಲೂ, ತಮ್ಮನ್ನು ತೂಗುವ ಬದಲಿಗೆ ಗುಂಡಿನಿಂದ ಕೊಲ್ಲಬೇಕೆಂತ ಮಾತ್ರ ಕೇಳಿದ್ದಾರೆಂತ ಕೋರ್ಟಿನಲ್ಲಿ ತಿಳಿಸಿದರು. ಇದರಿಂದ ಏನು ತಿಳಿಯುತ್ತದೆಯೆಂದರೆ ಈ 4 ಜನ ಖೈದಿಗಳು ತಮ್ಮ ಜೀವ ಉಳಿಸಿಕೊಳ್ಳಬೇಕೆಂಬ ಆಶೆ ಅಥವ ಕುತೂಹಲದಲ್ಲಿಲ್ಲ. ಆದರೆ ಇಂಥಾ ವಿಪರೀತ ದೇಶಭಕ್ತಿ ಇರುವವರನ್ನು ಕೊಲ್ಲಬಾರದೆಂತ ದೇಶವೇ ಹೋರಾಡುವುದಾಗಿದೆ. ಈ ದೊಡ್ಡ ಉದ್ದೇಶದ ದೇಶದ ಕೋರಿಕೆಯು ಇನ್ನಾದರೂ ನೆರವೇರಿಸಲ್ಪಡಲಿ ಎಂತ ದೇವರನ್ನು ಪ್ರಾರ್ಥಿಸುತ್ತೇವೆ.

ಮೇಲ್ಕಂಡ ಲೇಖನವನ್ನು ಬರೆದ ನಂತರ ಭಗತಸಿಂಗ ಮುಂತಾದ 4 ಜನರನ್ನು ತಾ. 23ನೇ ಸಾಯಂಕಾಲ ಗಲ್ಲಿಗೇರಿಸಿದರೆಂಬ ವಿಷಾದಕರವಾದ ವರ್ತಮಾನ ಬಂದಿದೆ. ಇದಕ್ಕಾಗಿ ದೇಶವೆಲ್ಲಾ ಅಸಮಾಧಾನವನ್ನು ಸೂಚಿಸುತ್ತಿದ್ದಾರೆ. ಈ ವಿಷಯವಾಗಿ ಮಹಾತ್ಮ ಗಾಂಧಿಯವರು ಮತ್ತು ಪಂಡಿತ ಜವಾಹಿರ್‌ಲಾಲ್ ಮತ್ತು ಸರದಾರ್ ವಲ್ಲಭಭಾಯಿ ಪಟೇಲರು ಕೊಟ್ಟ ಅಭಿಪ್ರಾಯಗಳನ್ನು ಇದರ ಕೆಳಗೆ ಪ್ರಕಟಿಸಿದ್ದೇವೆ.

ಮಹಾತ್ಮ ಗಾಂಧಿಯವರ ಅಭಿಪ್ರಾಯ.

ಇಂಥಾ ಯುವಕ ಮತ್ತು ಇವರ ಜೊತೆಗಾರರನ್ನು ತೂಗಿದ್ದರಿಂದ ಇವರಿಗೆ ಅಮರತ್ವ ದೊರಕಿತು. ಸಾವಿರಾರು ಜನರಿಗೆ ಕೇವಲ ಸ್ವಂತ ಜನರನ್ನು ಕಳಕೊಂಡಷ್ಟು ವ್ಯಸನವಿದೆ. ಈ ಯುವಕ ದೇಶ ಭಕ್ತರಿಗೆ ಕೊಡುವ ಮರ್ಯಾದೆಯಲ್ಲಿ ನಾನು ಭಾಗಿಯಾಗುತ್ತಾ ಇವರ ಮೇಲ್ಪಂಕ್ತಿಯನ್ನು ಅನುಸರಿಸಬಾರದೆಂತ ಯುವಕರಿಗೆ ಎಚ್ಚರಿಸುತ್ತೇನೆ. ಅವರ ತ್ಯಾಗದ ಶಕ್ತಿಯನ್ನೂ, ಅವರ ಉದ್ಯೋಗ ಶೀಲತೆಯನ್ನೂ ಮುಂದಾಲೋಚನೆಗೆ ಎಡೆ ಕೊಡದ ಧೈರ್ಯವನ್ನೂ ಅನುಕರಿಸಬಹುದಾದರೂ ಈ ಶಕ್ತಿಗಳನ್ನು ಅವರು ಉಪಯೋಗಿಸಿದ ತರದಲ್ಲಿ ನಾವು ಉಪಯೋಗಿಸಬಾರದು. ಈ ದೇಶದ ಬಿಡುಗಡೆಯು ಖೂನಿಗಳ ಮೂಲಕ ಆಗಬಾರದು.

ಕೊಲೆಪಾತಕದ ದಾರಿ ಹಿಡಿದವರನ್ನು ತಮ್ಮ ಕಡೆಗೆ ತಿರುಗಿಸಿಕೊಳ್ಳುವ ಒಳ್ಳೆ ಅವಕಾಶವನ್ನು ಸರಕಾರವು ಕಳಕೊಂಡಿತೆಂತ ಪಶ್ಚಾತ್ತಾಪ ಪಡುತ್ತೇನೆ. ಈಗ ರಾಜಿಯಾಗಿರುವದರಿಂದ ಗಲ್ಲಿಗೇರಿಸುವದನ್ನು ಬಹುಕಾಲ ಮುಂದಕ್ಕೆ ಇಡಬೇಕಾದದ್ದು ಸರ್ಕಾರದ ಸ್ಪಷ್ಟ ಕರ್ತವ್ಯವಾಗಿತ್ತು. ರಾಜಿಯು ಹಿಡಿದು ಹೋಗುವಂತೆ ಮಾಡಿದ್ದಾರೆ. ಜನತೆಯ ಅಭಿಪ್ರಾಯವನ್ನು ತೃಣೀಕರಿಸಿ ತಮ್ಮಲ್ಲಿರುವ ಪಶು ಬಲವನ್ನು ಪ್ರದರ್ಶಿಸಿದ್ದಾರೆ. ಈ ಪಶು ಬಲವನ್ನು ಮತ್ತೂ ಮತ್ತೂ ಉಪಯೋಗಿಸುವುದರಿಂದ ಎಷ್ಟೇ ಸವಿ ಮಾತುಗಳನ್ನಾಡಿದರೂ ತಮಗಿರುವ ಅಧಿಕಾರವನ್ನು ಬಿಟ್ಟು ಕೊಡುವ ಅಭಿಪ್ರಾಯವಿಲ್ಲವೆಂತ ಕುರುಹು ತೋರುತ್ತದೆ. ಆದರೆ ದೇಶದ ಕರ್ತವ್ಯವೇನೋ ಸ್ಪಷ್ಟವಾಗಿದೆ. ಕಾಂಗ್ರೆಸಿನವರು ಮಾಡಿಕೊಂಡ ದಾರಿಯನ್ನು ಬಿಡಬಾರದು. ಎಷ್ಟೇ ಕೋಪೋದ್ರೇಕಕ್ಕೆ ಕಾರಣ ಕೊಟ್ಟರೂ ರಾಜಿಯನ್ನು ಕಾಂಗ್ರೆಸ್ ಒಪ್ಪಿಕೊಳ್ಳಬೇಕೆಂತಲೂ, ಈಗ ಆಗಿರುವ ಹಂಗಾಮಿ ರಾಜಿಯಿಂದ ಸಿಕ್ಕಬೇಕಾದ ಸ್ವಾತಂತ್ರ್ಯ ಸಿಕ್ಕುತ್ತದೋ, ಇಲ್ಲವೋ ಎಂತ ಅಜಮಾಯಿಸಬೇಕೆಂತಲೂ ನನ್ನ ಅಭಿಪ್ರಾಯವಾಗಿದೆ. ನಾವು ಸಿಟ್ಟಿಗೆದ್ದು ತಪ್ಪಿಸಿಕೊಂಡವರನ್ನು ಸಿಕೊಳ್ಳಬಾರದು. ಫಾಶಿ ಶಿಕ್ಷೆಯನ್ನು ತಪ್ಪಿಸುವುದು ರಾಜಿ ಶರತ್ತಲ್ಲವೆಂತ ನೆನಪಿನಲ್ಲಿಡಬೇಕು. ಸರ್ಕಾರವು ಪುಂಡಾಟಿಕೆ ಮಾಡಿತೆಂತ ಹೇಳಬಹುದಾದರೂ ರಾಜಿ ಶರತ್ತಿಗೆ ವಿರೋಧ ಮಾಡಿದ್ದೆಂತ ಹೇಳಲು ಸಾಧ್ಯವಿಲ್ಲ.

ಸರ್ಕಾರವು ಮಾಡಿದ ಈ ದೊಡ್ಡ ತಪ್ಪಿನಿಂದ ಯಾವ ಸ್ವಾತಂತ್ರ್ಯ ಸಂಪಾದನೆಗಾಗಿ ಈ ಭಗತ್‌ಸಿಂಗ್ ಮುಂತಾದವರು ಮೃತ ಪಟ್ಟರೋ, ಆ ಸ್ವಾತಂತ್ರ್ಯವನ್ನು ಪಡೆಯಲು ನಮಗೆ ಶಕ್ತಿ ಹೆಚ್ಚಿದೆ ಎಂತ ನನ್ನ ಮನಃಪೂರ್ವಕ ಅಭಿಪ್ರಾಯವಾಗಿದೆ. ಈಗ ದೊರಕಿದ ಅವಕಾಶವನ್ನು ಕೋಪದಿಂದ ಏನಾದರೂ ಮಾಡಿಕೊಳ್ಳಬಾರದು. ದೇಶ ತುಂಬಾ ಹರತಾಳವಾಗುವುದರಲ್ಲಿ ಸಂಶಯವಿಲ್ಲ. ಮೌನವಾದ ಮತ್ತು ಗಂಭೀರವಾದ ಮೆರವಣಿಗೆಗಳಿಗಿಂತ ಮೃತರಿಗೆ ಬೇರೆ ತರಹದ ಗೌರವವಿಲ್ಲ. ಈ ಘಟನೆಯನ್ನು ಆತ್ಮ ಶುದ್ಧಿಗೂ, ದೇಶ ಸೇವೆಗೆ ದೃಢ ಸಂಕಲ್ಪ ಮಾಡಲಿಕ್ಕೂ ಉಪಯೋಗಿಸಬೇಕು.

ಪಂಡಿತ ಜವಾಹಿರ್‌ಲಾಲ್

ಭಗತಸಿಂಗ್ ಮುಂತಾದವರ ಫಾಶಿ ಶಿಕ್ಷೆಯು ಮಜವಾಗಲು ಏನಾದರೂ ಅಡ್ಡಿಯಾದೀತೋ ಎಂಬ ಭಯದಿಂದ ಕೆಲವು ದಿವಸಗಳಿಂದ ಸಂಪೂರ್ಣ ಶಾಂತಿಯನ್ನು ಧರಿಸಿದ್ದೆನು. ಮೈಯೊಡೆಯುವಂತಾಗುತ್ತಿದ್ದರೂ ಮೌನವಾಗಿದ್ದೆನು. ಈಗ ಎಲ್ಲಾ ಆಗಿ ಹೋಯಿತು. ನಮಗೆ ಅಷ್ಟೊಂದು ಪ್ರಿಯನಾದ ಮತ್ತು ಹಿಂದೂಸ್ಥಾನದ ಯುವಕರಿಗೆ ತ್ಯಾಗದಲ್ಲಿಯೂ, ಧೈರ್ಯದಲ್ಲಿಯೂ ಆದರ್ಶ ಪ್ರಾಯನಾದವನನ್ನು ನಾವೆಲ್ಲರು ಸೇರಿಯೂ ಉಳಿಸಲಾಗಲಿಲ್ಲ. ಹಿಂದೂಸ್ಥಾನದ ಪ್ರಿಯ ಪುತ್ರರನ್ನು ಸಹ ಗಲ್ಲಿನಿಂದ ತಪ್ಪಿಸಲಿಕ್ಕೆ ಈಗ ಹಿಂದೂಸ್ಥಾನಕ್ಕೆ ಶಕ್ತಿ ಇಲ್ಲ. ಎಲ್ಲೆಲ್ಲಿಯೂ ಹರತಾಳವೂ, ವ್ಯಸನಸೂಚಕ ಮೆರವಣಿಗೆಗಳೂ ಆಗುತ್ತವೆ. ನಮ್ಮ ಅಸಹಾಯಕ್ಕಾಗಿ ಎಲ್ಲೆಲ್ಲಿಯೂ ವ್ಯಸನ ಪ್ರದರ್ಶನವಾಗುತ್ತದೆ. ಸತ್ತವನಿಗೆ ಗೌರವವೂ ಬಂತು ಇಂಗ್ಲೆಂಡ್ ನಮ್ಮೊಂದಿಗೆ ರಾಜಿ ಶರತ್ತು ಮಾತನಾಡುವಾಗ್ಯೆ ನಾವು ಮರೆಯದಂತೆ ಭಗತ್‌ಸಿಂಗನ ಶವವು ನಮ್ಮ ಮಧ್ಯೆ ಇರುತ್ತದೆ.

ವಲ್ಲಭಭಾಯಿ ಪಟೇಲ್.

ಇಂಗ್ಲಿಷ್ ಖಾನೂನಿನ ಹೆಮ್ಮೆ ಏನೆಂದರೆ—ಪಾಟಿ ಸವಾಲಿಗೆ ಒಳಗಾಗದ ರುಜುವಾತಿನಿಂದ ಯಾರಿಗೂ ಶಿಕ್ಷಿಸಬಾರದೆಂತ ಆದರೂ ಈಗ ಕೃತ್ಯ ನಡೆದು ಎಷ್ಟೋ ದಿನದ ನಂತರ ದೊರೆತ ಮತ್ತು ಪಾಟಿ ಸವಾಲಿಗೆ ಒಳಗಾಗದ ರುಜುವಾತಿನಿಂದ ಕೆಲವರನ್ನು ತೂಗಿ ಬಿಟ್ಟರು. ಹಟ ತೋರಿಸಿದ್ದಕ್ಕೆ ತೊಂದರೆ ಕೊಡಬಹುದಿತ್ತು. ತೂಗಲು ಕಾರಣವಿರಲಿಲ್ಲ. ಸರಕಾರದವರು ಲಾಯಬಟ್ಟು ಕೊಡಬೇಕಿತ್ತು. ಅದೂ ಮಾಡದೆ ಕೊಂದೇ ಬಿಟ್ಟರು.

ಕಾಂಗ್ರೆಸ್.

(ಮಹಾತ್ಮ ಗಾಂಧಿಯವರ ಲೇಖನ)

ಇಂದಿನಿಂದ ಕೆಲವು ದಿನಗಳೊಳಗೆ ಕಾಂಗ್ರೆಸ್ ಸಭೆಯು ಸೇರುತ್ತದೆ. ಅಷ್ಟರೊಳಗೆ ಚದರಿ ಹೋಗಿದ್ದ ಸಂಸ್ಥೆಗಳನ್ನು ಒಟ್ಟುಗೂಡಿಸಲು ಆಗಲಾರದು. ಅರ್ಧ ಜೈಲಿನಲ್ಲಿಯೇ ಇರುವ ಪ್ರತಿನಿಧಿಗಳು ಚೇತರಿಸಿಕೊಳ್ಳಲು ಸಮಯ ಸಾಲದು. ಆದರೆ ಇದು ವರೆಗೆ ಎಂದೂ ಇಲ್ಲದ ಗೌರವದೊಡನೆ ಕೂಡುತ್ತದೆ. ಹತ್ತು ಸಾವಿರ ಗಟ್ಟಿಯಲ್ಲಿ ಗಂಡಸರು, ಹೆಂಗಸರು, ಮಕ್ಕಳು ಕಷ್ಟಪಟ್ಟರೆಂಬ ತಿಳುವಳಿಕೆಯಿಂದಲೂ, ಇತಿಹಾಸದಲ್ಲಿ ಎಂದೂ ಕಾಣದ ಪ್ರತೀಕಾರ ಮಾಡದ ಕಷ್ಟ ಸಹನೆಯನ್ನು ಅನುಭವಿಸಿದ್ದರಿಂದ ಹುಟ್ಟಿದ ಶಕ್ತಿಯಿಂದಲೂ ಕೂಡುವದಾಗಿದೆ.

ಆದರೆ ಸಹಿಸಿದ ಕಷ್ಟಗಳನ್ನು ಯೋಚಿಸುತ್ತಾ ಕೂಡ್ರುವದು, ಕಷ್ಟಗಳನ್ನು ಉತ್ಪ್ರೇಕ್ಷಿಸುವುದೂ ಅಥವಾ ಹೆಮ್ಮೆಯಿಂದ ಉಬ್ಬುವದೂ ತಪ್ಪು. ನಿಜವಾದ ಕಷ್ಟ ಸಹನೆಗೆ ತನಗೆ ತಾನೇ ತಿಳಿಯದು. ಕಷ್ಟವನ್ನು ಎಣಿಸುತ್ತಾ ಕೂಡ್ರುವುದರಲ್ಲಿ ಅರ್ಥವಿಲ್ಲ. ನಿಜವಾದ ಕಷ್ಟ ಸಹನೆಯು ಒಂದು ವಿಶೇಷವಾದ ಸಂತೋಷವನ್ನು ಕೊಡುತ್ತದೆ. ಈ ಸಂತೋಷವು ಬೇರೆ ಎಲ್ಲಾ ಸಂತೋಷಗಳನ್ನು ಮೀರಿಸುತ್ತದೆ. ಕಳೆದ 12 ತಿಂಗಳುಗಳಿಂದ ಶೇಖರಿಸಿದ ಮೂಲಧನದಿಂದ ಜೀವಿಸಲು ಪ್ರಾರಂಭಿಸಿದರೆ ಆತ್ಮಹತ್ಯ ಮಾಡಿಕೊಂಡ ತಪ್ಪಿಗೆ ಗುರಿಯಾಗುತ್ತೇವೆ. ಅವಶ್ಯವಿಲ್ಲದ ಕಷ್ಟ ಸಹನೆಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಕಾದರೂ ಕಷ್ಟ ಸಹನೆಗೆ ನಾವು ಯಾವಾಗಲೂ ತಯಾರಾಗಿರಬೇಕು. ಸರಿಯಾದ ದಾರಿಯಲ್ಲಿ ಹೋಗುವವನಿಗೆ ಎಷ್ಟೇ ಕಷ್ಟಗಳು ಬಂದೊದಗುತ್ತವೆ. ದೇಶಭಕ್ತ ಸಾಧಾರಕನ ಇನ್ನು ಹೆಚ್ಚಾಗಿ ಸತ್ಯಾಗ್ರಹಿಯ ಗೌರವವೇ ಇದು.

ಈ ರಾಜಿ ಒಪ್ಪಂದವು ಹುಂಬನಿಯದಾದರೂ ದೇವರ ಕೃಪೆಯಿಂದಲೇ ಆದದ್ದಾಗಿದೆ. ರಾಜಿ ಸಂಭಾಷಣೆಗೆ ಸಮಯದಲ್ಲಿ ಅನೇಕ ವೇಳೆ ರಾಜಿಯಾಗುವ ಸಂಭವವಿಲ್ಲವೆಂತಾಗುತ್ತು. ರಾಜಿ ಪ್ರಯತ್ನವು ನಿಷ್ಫಲವಾಗಿದ್ದಿದ್ದರೆ ಪಡಬೇಕಾಗಿದ್ದ ಕಷ್ಟಗಳು 10ರಷ್ಟು ಹೆಚ್ಚುತ್ತಿದ್ದವೆಂಬುದರಲ್ಲಿ ಸಂಶಯವಿಲ್ಲ. ಆದರೂ ಗೌರವಯುಕ್ತವಾದ ಶಾಂತಿಯು ಸಾಧ್ಯವಾಗದಿದ್ದಿದ್ದರೆ ಎಷ್ಟೇ ಕಷ್ಟವನ್ನಾದರೂ ಸಹಿಸಲು ಜನಾಂಗವು ತಯಾರಾಗಬೇಕೆಂತ ನಾನು ಹೇಳಬೇಕಾಗುತ್ತಿತ್ತು. ನಮ್ಮ ಧ್ಯೇಯವನ್ನು ಪಡೆಯಬೇಕಾದರೆ ಇನ್ನು ಹೆಚ್ಚಿನ ತರವಾದ ಕಷ್ಟ ಪಡಬೇಕಾಗಲಾರದೆಂತ ಹೇಳಲು ಸಾಧ್ಯವಿಲ್ಲ. ನಾವು ಪಡೆಯಲಿಕ್ಕಿರುವ ಧ್ಯೇಯವನ್ನು ನೋಡಿದರೆ ನಾವು ಪಟ್ಟ ಕಷ್ಟವು ಸ್ವಲ್ಪವಾಗಿದೆ. ಸಂಪೂರ್ಣ ತಿಳುವಳಿಕೆಯಿಂದ ಜನಾಂಗವೆಲ್ಲವೂ ಕೂಡಿ ಇನ್ನು ಅಸ್ಪೃಶ್ಯತೆಯನ್ನು ಬಿಟ್ಟಿರುವುದಿಲ್ಲ. ನಮ್ಮೊಳಗೆ ಇರುವ ಅನ್ಯೋನ್ಯ ಅಪನಂಬಿಕೆಯನ್ನು ಬಿಟ್ಟಿರುವುದಿಲ್ಲ. ಐಶ್ವರ್ಯವಂತರಲ್ಲಿ ಜಾಗ್ರತಿ ಉಂಟಾಗಿದೆಯಾದರೂ ಅವರು ಬಡವರ ಕಷ್ಟಗಳನ್ನು ತಮ್ಮ ಕಷ್ಟಗಳಾಗಿ ಎಣಿಸಿರುವುದಿಲ್ಲ. ಅವರ ಜೀವನವು ಬಡವರ ಜೀವನಕ್ಕೆ ಹೋಲಿಸುವಂತಿಲ್ಲ. ನಿಶಾ ಪದಾರ್ಥಗಳ ಸೇವನೆಯನ್ನು ಬಿಡುವುದರಲ್ಲಿ ತುಂಬಾ ಮುಂದರಿಸಿದ್ದರೂ ಇನ್ನು ಬಹಳ ಮಾಡಲಿಕ್ಕೆ ಇದೆ. ಅಲ್ಲದೆ ಮುಂದರಿಸಿ ಹೋದಷ್ಟಾದರೂ ಜಯವೆಂದೆಂತ ಹೇಳಲಾಗುವುದಿಲ್ಲ. ಕುಡುಕನು ಜನ ಅಭಿಪ್ರಾಯಕ್ಕೆ ಒಳಗಾಗಿದ್ದಾನೆ. ತನ್ನ ಕುಡುಕತನದ ಗುಣವನ್ನು ಖಂಡಿತವಾಗಿ ಬಿಟ್ಟಿರುವುದಿಲ್ಲ. ಅದು ಕೆಡಕೆಂತ ತಿಳಿದಿದ್ದರೂ ಅದನ್ನು ವಿಷದಂತೆ ದೂರ ಮಾಡಬೇಕೆಂತ ಅವನಿಗೆ ಇನ್ನು ಕಲಿಸಲಿಲ್ಲ. ಕಲಿಸುವುದು ಎಂಬ ಮಾತನ್ನು ಬೇಕೆಂತಲೇ ಉಪಯೋಗಿಸಿರುವುದಾಗಿದೆ. ಕೆಲಸಗಾರರು ನಿಶಾ ಅಂಗಡಿಗಳ ಮೇಲೆ ಗಮನ ಕೊಟ್ಟರೇ ಹೊರತು ಕುಡುಕನ ಹೃದಯವನ್ನು ಮುಟ್ಟಲು ಪ್ರಯತ್ನಿಸಲೇ ಇಲ್ಲ. ನಾವು ಪರದೇಶೀ ಬಟ್ಟೆ ಮತ್ತು ಧಳಿ ಬಟ್ಟೆಯ ಮೋಹವನ್ನು ಬಿಟ್ಟಿರುವುದಿಲ್ಲ. ಪರದೇಶೀ ಬಟ್ಟೆ ವ್ಯಾಪಾರಿಗಳು ತಾವು ತಮ್ಮ ವ್ಯಾಪಾರದಿಂದ ಜನಾಂಗಕ್ಕೆ ಮಾಡುತ್ತಿರುವ ಕೇಡನ್ನು ತಿಳಿದುಕೊಂಡಿರುವದಿಲ್ಲ. ಅನೇಕರು ವ್ಯಕ್ತಿ ಸ್ವಾತಂತ್ರ್ಯದ ವಾದವನ್ನು ಹೂಡುತ್ತಾರೆ. ಇವು ಇನ್ನೂ ಬೇರೆ ಕಂದಕಗಳಿಂದ ನಮ್ಮನ್ನು ಬಿಡಿಸಿಕೊಳ್ಳಲು ಇನ್ನೂ ಎಷ್ಟೊಂದು ಇದೆಯೆಂತ ಗೊತ್ತಾಗುತ್ತದೆ. ಆದ್ದರಿಂದ ಪೂರ್ಣ ಸ್ವಾತಂತ್ರ್ಯದ ವಾತಾವರಣವನ್ನೂ ನಮ್ಮನ್ನು ಆವರಿಸಿಕೊಂಡಿರದೆ ಇರುವದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ ಚರ್ಚೆ ಸಂವಾದಗಳ ರೀತಿಯಿಂದ ಎಷ್ಟು ಸಿಕ್ಕೀತೆಂತ ಹೇಳಲಿಕ್ಕಾಗುವದಿಲ್ಲ. ಹೇಗೂ ಇಷ್ಟು ಹೇಳಬಹುದು. ಆರ್ಗ್ಯುಮೆಂಟ್ (ವಾದ) ನಿಂದ ಎದುರು ಪಾರ್ಟಿಯನ್ನು ಒಪ್ಪಿಸಲು ಸಾಧ್ಯವಿಲ್ಲವೆಂದು ಖಂಡಿತ ಹೇಳಬಹುದು. ನಮ್ಮ ಶಕ್ತಿಯನ್ನು ಎಷ್ಟರ ಮಟ್ಟಿಗೆ ಹೆಚ್ಚಿಸಿಕೊಳ್ಳುತ್ತೇವೋ ಅಷ್ಟರ ಮಟ್ಟಿಗೆ ಬ್ರಿಟಿಷರನ್ನು ಒಪ್ಪಿಸಬಹುದು. ಆತ್ಮ ಶುದ್ಧಿಯಿಂದ ನಮ್ಮ ಬಲವನ್ನು ಹೆಚ್ಚಿಸಿಕೊಳ್ಳಬೇಕೆಂತ ಜನಾಂಗವು ನಿಶ್ಚೈಸಿರುವದರಿಂದ ನಾನು ಹೇಳಿದ ನಮ್ಮಲ್ಲಿನ ಕೇಡುಗಳನ್ನು ಈಗ ನಮಗೆ ದೊರೆತಿರುವ ವಿಶ್ರಾಂತಿಯ ದಿವಸಗಳಲ್ಲಿ ಕಳಕೊಳ್ಳದಿದ್ದರೆ ನಾವು ಎಂದೂ ಎಣಿಸಿದ ಕಷ್ಟಗಳನ್ನು ಇನ್ನೂ ಪಡೆಯಬೇಕಾಗುತ್ತದೆ. ಆದ್ದರಿಂದ ನಮ್ರ ಭಾವದಿಂದ ನಮ್ಮಲ್ಲಿರು ಎಲ್ಲಾ ಗುಣಗಳನ್ನು ಬಿಡುತ್ತೇವೆಂಬ ದೃಢ ಸಂಕಲ್ಪದಿಂದ ಕಾಂಗ್ರೆಸಿಗೆ ಹೋಗಬೇಕು. ಕಾನ್ಫರೆನ್ಸ್‌ಗಳಿಗೆ ಹೆಚ್ಚಿನ ಬೆಲೆ ಕೊಡಬಾರದು. ಈ 12 ತಿಂಗಳುಗಳ ಅನುಭವದಿಂದ ಸ್ವರಾಜ್ಯವು ಹೊರಗಿನಿಂದ ಬರುವದಿಲ್ಲ ಒಳಗಿನಿಂದಲೇ ನಮ್ಮ ಒಳಗಿನ ಪ್ರಯತ್ನದಿಂದಲೇ ಸ್ವರಾಜ್ಯವು ದೊರೆಕೀತೆಂತ ಸ್ಪಷ್ಟವಾಗಿದೆ.

ಬಲವಾದ ವಾಗ್ದಂಡನೆ.

("ಯಂಗ್ ಇಂಡಿಯಾ")

ಪಿಕೆಟ್ ಮಾಡುವುದು ಸಂಪೂರ್ಣವಾಗಿ ಅಹಿಂಸಾಯುಕ್ತವಾಗಿರಬೇಕೆಂಬ ಒಪ್ಪಂದವಾದ ಮೇಲೆ ಪರದೇಶೀ ಬಟ್ಟೆ ವ್ಯಾಪಾರಿಗಳು ತಮ್ಮ ವ್ಯಾಪಾರವು ನಿರಾತಂಕವಾಗಿ ನಡೆದೀತೆಂತ ನಂಬಿಕೊಂಡಿರುತ್ತಾರೆ. ಅಂಥಾ ಭಯವೇನೂ ಇಲ್ಲ. ಗಾಂಧಿಜೀಯವರು ತನ್ನಲ್ಲಿರುವ ನೈತಿಕ ಶಕ್ತಿಯನ್ನೆಲ್ಲಾ ವ್ಯಾಪಾರಿಗಳ ಮೇಲೆ ಉಪಯೋಗಿಸುತ್ತಿದ್ದಾರೆ. ವ್ಯಾಪಾರಿಗಳು ಒಪ್ಪುವುದು ಸ್ವಲ್ಪ ಹೆಚ್ಚು ಕಡಿಮೆ ಕಾಲದ ಮೇಲೆ ಹಿಡಿಯಬಹುದು. ನವಸಾರಿ ಬಟ್ಟೆ ವ್ಯಾಪಾರಿಗಳಿಗೆ ಇದ ಅನುಭವವನ್ನು ವಿವರಿಸುತ್ತೇನೆ—ಅವರು ಇನ್ನೂ ತಮ್ಮ ವ್ಯಾಪಾರವನ್ನು ಮಾಡುತ್ತಲೇ ಇದ್ದಾರೆ. ಬಟ್ಟೆ ಮೂಟೆಗಳಿಗೆ ಸೀಲ್ ಹಾಕಲಿಲ್ಲರು. ಆದರೆ ಜನರ ಮನಸು ಸಮಾಧಾನಕ್ಕಾಗಿ ಗಾಂಧಿಜೀಯವರು ನವಸಾರಿಗೆ ಬಂದಾಗ ಒಂದು ವಿಜ್ಞಾಪನಾ ಪತ್ರವನ್ನು, ಉಚಿತ ಧನವನ್ನೂ ಕೊಡಲು ಏರ್ಪಡಿಸಿದರು. ಗಾಂಧಿಜೀಯವರ ಅನುಮತಿಯನ್ನು ಮುಂದಾಗಿಯೇ ಪಡೆದಿರಲಿಲ್ಲ. ನವಸಾರಿಗೆ ತಲುಪುವಷ್ಟರಲ್ಲಿ ಪಬ್ಲಿಕ್ ಮೀಟಿಂಗ್ ನಡೆಯುತ್ತದೆಯೆಂದೂ, ಗಾಂಧಿಜೀಯವರಿಗೆ ವಿಜ್ಞಾಪನಾ ಪತ್ರ ಮತ್ತು ಹಣ ಕೊಡಲಾಗುತ್ತದೆಯೆಂದೂ, ಗಾಂಧಿಜೀಯವರು ಭಾಷಣ ಮಾಡಬೇಕೆಂದೂ ಏರ್ಪಡಾಗಿತ್ತು. ಮೊದಲಿನ ಮಾತುಗಳೂ, ಕೆಲಸಗಳೂ ಎಲ್ಲಾ ತೀರಿದ ನಂತರ ಗಾಂಧಿಜೀಯವರು ಬಲವಾದ, ಛೇದಿಸುವಂತ ಧ್ವನಿಯಲ್ಲಿ ಈ ಕೆಳಗಿನಂತೆ ಮಾತನಾಡಿದರು.—

ಈ ಕಾರ್ಯವು ಬೇಕಾಗಿರಲಿಲ್ಲವೆಂತ ನನಗೆ ತೋರುತ್ತದೆ. ಪರದೇಶೀ ಬಟ್ಟೆ ವ್ಯಾಪಾರ ಮಾಡುವ ವರ್ತಕರ ಕೂಟವು ನನಗಾಗಲೀ, ನಿರಾಶ್ರಿತರಿಗಾಗಲೀ ಬಿನ್ನಹ ಪತ್ರವನ್ನು ಒಪ್ಪಿಸುವ ಯೋಚನೆ ಮಾಡಬಾರದಿತ್ತು. ಒಪ್ಪಿಸಲೇ ಬೇಕಾಗಿದ್ದರೆ ಒಪ್ಪಿಸುವ ಮುಂಚೆ ಇನ್ನು ಮುಂದೆ ಪರದೇಶೀ ಬಟ್ಟೆ ವ್ಯಾಪಾರ ಮಾಡುವುದಿಲ್ಲವೆಂತ ಭಾಷೆ ಕೊಟ್ಟು ಈಗ ಇರುವ ಮಾಲನ್ನು ಸುಟ್ಟಿದ್ದೇವೆಂತಾಗಲೀ, ಸೀಲ್ ಮಾಡಿಟ್ಟಿದ್ದೇವೆಂತಾಗಲೀ ತಿಳಿಸಬೇಕು. ಈ ವ್ಯಾಪಾರವು ಸಂಪೂರ್ಣವಾಗಿ ನಾಶವಾಗಬೇಕೆಂತ ನಿತ್ಯವೂ ಪ್ರಾರ್ಥಿಸುತ್ತಿರುವ ನಾವು ಆ ವ್ಯಾಪಾರದವರಿಂದ ಬಿನ್ನಹ ಪತ್ರವನ್ನಾಗಲೀ, ಹಣವನ್ನಾಗಲೀ ಹೇಗೆ ಸ್ವೀಕರಿಸುವುದು? ಆದ್ದರಿಂದ ನನ್ನ ಈ ಸ್ನೇಹಿತರೊಡನೆ ಬಿನ್ನಹ ಪತ್ರವನ್ನೂ, ಹಣವನ್ನೂ ವಾಪಸು ತೆಗೆದುಕೊಂಡು ಹೋಗಿ ಎಂತ ಹೇಳಿಯೇನು. ಬಿನ್ನಹ ಪತ್ರದಲ್ಲಿ ವ್ಯಾಪಾರಿಗಳ ಸಂಘದ ವಿಷಯವೇ ಇಲ್ಲ. ಊರವರೆಲ್ಲರೂ ಕೂಡಿ ಕೊಟ್ಟದ್ದೋ ಎಂಬಂತೆ ಬಿನ್ನಹ ಪತ್ರವಿದೆ ಇದು. ಪ್ರಮಾಣಿಕತೆಯ ರೀತಿಯಲ್ಲ. ಸತ್ಯಾಗ್ರಹದಲ್ಲಿ ಇದ್ದದ್ದು ಇದ್ದಂತೆಯೇ ತೋರಬೇಕು. ಜನರು ನನಗೆ ಕೊಟ್ಟ "ಮಹಾತ್ಮ" ಎಂಬ ಬಿರುದನ್ನೇ ನಾನು ಒಪ್ಪಿಕೊಳ್ಳುವುದಿಲ್ಲ ಯಾಕೆಂದರೆ—ನಾನು ಆ ಗೌರವಕ್ಕೆ ಅರ್ಹನಲ್ಲ. ಆದರೆ ನನಗೆ ನಾನು ಒಂದು ಬಿರುದು ಕೊಟ್ಟುಕೊಂಡಿರುತ್ತೇನೆ. ಅದು ಯಾವದೆಂದರೆ—"ಸತ್ಯಾಗ್ರಹಿ" ಎಂಬ ಬಿರುದು. ಈ ಬಿರುದಿನಿಂದ ನನಗೆ ಗೌರವವಿದೆ. ಆ ಬಿರುದಿಗೆ ತಕ್ಕಂತೆ ನಾನು ವರ್ತಿಸಬೇಕು. ಅವಶ್ಯವಿದ್ದಾಗ ಕಹಿಯಾದರೂ ಸತ್ಯವನ್ನು ಆಡಲೇ ಬೇಕಾಗುತ್ತದೆ. ಈ ಬಿನ್ನಹ ಪತ್ರವನ್ನೂ, ಹಣವನ್ನೂ ಅಂಗೀಕರಿಸುವುದು ನನಗೂ ಕಹಿ—ಕೊಡುವುದು. ನಿಮಗೂ ಕಹಿ. ನಿಮ್ಮನ್ನು ಒಪ್ಪಿಸಿಕೊಳ್ಳಲು ಸಾಧ್ಯವಿಲ್ಲದಿದ್ದರೆ ವಾಪಸು ತೆಗೆದುಕೊಂಡು ಹೋಗಿ ಎಂತ ಹೇಳಬೇಕಾಗುತ್ತದೆ. ನನ್ನ ಜೀವಮಾನದಲ್ಲಿ ನನ್ನ ಸಹೋದರ, ಹೆಂಡತಿಯ ಮೇಲೆ ಸಹ ಸತ್ಯಾಗ್ರಹ ನಡಿಸುವ ಅವಶ್ಯಕತೆ ಬಿದ್ದಿತ್ತು. ಈ ದಿನದ ಕೆಲಸವು ಹೊಸದಲ್ಲ. ನಾನು ಸಹಕರಿಸದ ಸರಕಾರದ ಬಿರುದನ್ನೂ, ನಿಶಾ ವ್ಯಾಪಾರಿಯ ಹಣದ ಸಹಾಯವನ್ನೂ ನಿರಾಕರಿಸುವಂತೆ ನಿಮ್ಮ ವಿಜ್ಞಾಪನಾ ಪತ್ರವನ್ನೂ, ಹಣವನ್ನೂ ನಿರಾಕರಿಸಬೇಕಾಗಿದೆ. ನಿಮ್ಮ ವಿಜ್ಞಾಪನಾ ಪತ್ರವನ್ನು ಅಂಗೀಕರಿಸಿದರೆ ನಾನು ಕೈಕೊಂಡ ಕಾರ್ಯಕ್ಕೆ ದ್ರೋಹ ಮಾಡಿದಂತಾಗುತ್ತದೆ. ನಿಮಗೆ ತುಂಬಾ ನೋವಾದೀತಾದ್ದರಿಂದ ನಿಮಗಾಗಿ ಈ ಬಿನ್ನಹ ಪತ್ರವನ್ನೂ, ಹಣವನ್ನೂ ನನ್ನಲ್ಲಿ ಇಟ್ಟಿರುತ್ತೇನೆ. ನಾನು ಹೇಳಿದ್ದನ್ನು ಮನಸಿಗೆ ತೆಗೆದುಕೊಂಡು ನನ್ನ ಶರತ್ತಿಗೆ ಒಳಪಟ್ಟು ಒಪ್ಪಿಸುತ್ತೀರೋ, ಅಥವಾ ಪರದೇಶೀ ಬಟ್ಟೆ ವ್ಯಾಪಾರವನ್ನು ಬಿಡಲಾಗದ್ದರಿಂದ ವಾಪಸು ತೆಗೆದುಕೊಂಡು ಹೋಗುತ್ತೀರೋ ಎಂತ ನೀವೇ ನಿಶ್ಚೈಸಿ.

ಪಿಕೆಟ್ ಮಾಡುವ ಕೆಲವು ನಿಯಮಗಳು.

ಪರದೇಶೀ ಬಟ್ಟೆ ಮತ್ತು ನಿಶಾ ಪದಾರ್ಥಗಳ ಅಂಗಡಿಗಳ ಪಿಕೆಟ್ ಮಾಡುವುದರ ಉದ್ದೇಶವು ಕೊಂಡುಕೊಳ್ಳುವವರ ಮತ್ತು ನಿಶಾ ಸೇವನೆ ಮಾಡುವವರನ್ನು ತಪ್ಪಿಸುವುದೇ ಆಗಿದೆಯೆಂತ ನೆನಪಿನಲ್ಲಿಡಬೇಕು. ನೈತಿಕ ಮತ್ತು ಆರ್ಥಿಕ ಸುಧಾರಣೆಯೇ ನಮ್ಮ ಅಭಿಲಾಷೆ. ರಾಜಕೀಯ ಫಲಿತಾಂಶವು ಎರಡನೆಯದಾಗಿದೆ. ಲಂಕಾಶೈರಿನಿಂದ ಬಟ್ಟೆ ಕಳುಹಿಸುವುದನ್ನು ನಿಲ್ಲಿಸಿದರೂ, ನಿಶಾ ಪದಾರ್ಥಗಳ ಉತ್ಪತ್ತಿಯನ್ನು ಸರಕಾರದವರು ನಿಶಾ ಸೇವನೆಯನ್ನು ತಪ್ಪಿಸಲಿಕ್ಕೆ ಮಾತ್ರ ಉಪಯೋಗಿಸಿದರೂ ಸಹ ಪಿಕೆಟ್ ಮುಂತಾದ ಕೆಲಸಗಳನ್ನು ಮಾಡುತ್ತಲೇ ಇರುತ್ತೇವೆ. ಈ ಕೆಳಗಿನ ನಿಯಮಗಳನ್ನು ಮೇಲಿನ ಅರ್ಥದಿಂದ ಓದಬೇಕು.

(1) ಅಂಗಡಿಗಳ ಮುಂದೆ ಪಿಕೆಟ್ ಮಾಡುವಾಗ ನಿಮ್ಮ ದೃಷ್ಟಿಯು ಕೊಂಡುಕೊಳ್ಳುವವನ ಮೇಲೆಯೇ ನೆಟ್ಟಿರಬೇಕು.

(2) ಕೊಂಡುಕೊಳ್ಳುವವನಿಗಾಗಲೀ, ಮಾರುವವನಿಗಾಗಲೀ ನೀವು ಮರ್ಯಾದೆ ತಪ್ಪಿ ಇರಬಾರದು.

(3) ಗುಂಪು ಕೂಡಿಸಿಕೊಳ್ಳಬಾರದು. ನಾಲು ಗಟ್ಟಿ ತಡೆ ಮಾಡಬಾರದು.

(4) ನೀವು ಮೌನವಾಗಿಯೇ ಪ್ರಯತ್ನಿಸಬೇಕು.

(5) ಕೊಂಡುಕೊಳ್ಳುವವನನ್ನಾಗಲೀ ಮಾರುವವನನ್ನಾಗಲೀ ನಿಮ್ಮ ನಮ್ರತೆಯಿಂದ ಬದಲಾಯಿಸಲು ಪ್ರಯತ್ನಿಸಬೇಕೇ ಹೊರತು, ನಿಮ್ಮ ಸಂಖ್ಯೆಯಿಂದ ಬೆದರಿಸಬಾರದು.

(6) ರಸ್ತೆಯಲ್ಲಿ ಓಡಿಯಾಡುವವರಿಗೆ ಅಡ್ಡಿ ಮಾಡಬಾರದು

(7) ಛೀ ಛೀ ಎಂತ ಅಥವಾ ಬೇರೆ ವಿಧದ ನಾಚಿಕೆಯನ್ನು ಸೂಚಿಸುವ ಶಬ್ದವನ್ನು ಉಪಯೋಗಿಸಬಾರದು.

(8) ಕೊಂಡುಕೊಳ್ಳುವ ಪ್ರತಿಯೊಬ್ಬನ ಹೆಸರು, ವಿಳಾಸ ನಿಮಗೆ ತಿಳಿದಿದ್ದು ಅಂಥವನ ಮನೆಗೆ ಹೋಗಿ ಅವನ ಹೃದಯವನ್ನೇ ಬದಲಾಯಿಸಬೇಕು. ಇದರಿಂದ ಪಿಕೆಟ್ ಮಾಡುವವರನ್ನು ಬದಲಾಯಿಸುತ್ತಿರಬಾರದೆಂತಾಯಿತು.

(9) ಕೊಂಡುಕೊಳ್ಳುವವರ ಮತ್ತು ಮಾರುವವರ ಕಷ್ಟಗಳನ್ನು ನೀವು ತಿಳಿದುಕೊಳ್ಳಲು ಪ್ರಯತ್ನಿಸಿ ಅಂಥಾ ಕಷ್ಟಗಳನ್ನು ನಿವಾರಿಸಬೇಕು. ಇದು ಸಾಧ್ಯವಿಲ್ಲದಿದ್ದರೆ ನಿಮ್ಮ ಮೇಲಾಧಿಕಾರಿಗಳಿಗೆ ತಿಳಿಸಬೇಕು.

(10) ಪರದೇಶೀ ಬಟ್ಟೆ ಅಂಗಡಿಯನ್ನು ಪಿಕೆಟ್ ಮಾಡುವುದಾದರೆ ನಿಮ್ಮಲ್ಲಿ ಸ್ವಲ್ಪ ಖಾದಿ ಅಥವಾ ಖಾದಿಯ ಮಾದರಿಗಳಾದರೂ ಇದ್ದು ಅವುಗಳ ಕ್ರಯ ತಿಳಿದಿರಬೇಕು. ಸಮೀಪದ ಖಾದಿ ಅಂಗಡಿ ತಿಳಿದಿದ್ದು, ಕೊಂಡುಕೊಳ್ಳುವವರನ್ನು ಅಲ್ಲಿಗೆ ಕರೆದುಕೊಂಡು ಹೋಗುವಂತಿರಬೇಕು. ಕೊಂಡುಕೊಳ್ಳುವವರನ್ನು ಮಿಲ್ಲಿನ ಅಪೇಕ್ಷಿಸದೆ ಮಿಲ್ ಬಟ್ಟೆಯೇ ಬೇಕೆಂತ ಹೇಳುವುದಾದರೆ ಸ್ವದೇಶೀ ಮಿಲ್ ಬಟ್ಟೆ ಮಾರುವ ಅಂಗಡಿಗಳಿಗೆ ಕರೆದುಕೊಂಡು ಹೋಗಬೇಕು

(11) ಸಂಬಂಧ ಪಟ್ಟ ಲೇಖನಗಳು ನಿಮ್ಮಲ್ಲಿದ್ದು ಕೊಂಡುಕೊಳ್ಳುವವರಲ್ಲಿ ಅವನ್ನು ಹಂಚಬೇಕು

(12) ಮೆರವಣಿಗೆ, ಮ್ಯಾಜಿಕ್ ಲ್ಯಾಂಟರ್ನ್ ಸಹಿತ ಅಥವಾ ಇಲ್ಲದೆ ಉಪನ್ಯಾಸ, ಭಜನೆ, ಕೂಟ ಮುಂತಾದ್ದನ್ನು ಸೇರಬೇಕು ಅಥವಾ ಕೂಡಿಸಬೇಕು.

(13) ನಿಮ್ಮ ದಿನದ ಕೆಲಸವನ್ನು ಜಾಗರೂಕತೆಯಿಂದ ಡೈರಿಯಲ್ಲಿ ಬರೆದಿಡಬೇಕು.

(14) ನಿಮ್ಮ ಪ್ರಯತ್ನವು ಸಫಲವಾಗುವುದಿಲ್ಲವೆಂತ ಕಂಡರೂ ಧೈರ್ಯಗುಂದಬಾರದು. ಕಾರ್ಯಕ್ಕೆ ತಕ್ಕ ಪ್ರತಿಫಲವಿದೆಯೆಂಬ ನಿಯಮವನ್ನು ನಂಬಿ. ಯಾವ ಒಳ್ಳೇ ಯೋಚನೆ, ಮಾತು, ಅಥವಾ ಕಾರ್ಯವಾದರೂ ಫಲವಿಲ್ಲದೆ ಹೋಗುವುದಿಲ್ಲವೆಂತ ತಿಳಿದಿರಬೇಕು. ಒಳ್ಳೇ ಯೋಚನೆ ಮಾತು, ಕಾರ್ಯ ನಮ್ಮದು; ಪ್ರತಿ ಫಲ ಕೊಡುವುದು ದೇವರ ಕೈಯ್ಯಲ್ಲಿದೆ.

(ಬೇರೆ ನಿಯಮಗಳು ಇದ್ದರೆ ನನಗೆ ಕಳುಹಿಸಿ ಕೊಡಿ.)

ಯಂ. ಕೆ. ಗಾಂಧಿ.

ಶ್ರೀಮತಿ ಡಿ. ಸಾಕಮ್ಮನವರಿಗೆ ಮೈಸೂರು ಪುರನಿವಾಸಿಗಳಾದ ಭಗಿನೀ ಸೇವಾ ಸಮಾಜದವರು ಒಪ್ಪಿಸಿದ ಅಭಿನಂದನ ಪತ್ರಿಕೆ.

ಪ್ರಿಯ ಭಗಿನಿ,

ತಾವು ಶ್ರೀಮಂತರಾಗಿಯೂ, ಗುಣಾಢ್ಯರಾಗಿಯೂ ಇದ್ದುಕೊಂಡು ಬಡ ಜನಗಳಿಗೆ ಆಧಾರಗಳಾಗಿರುವಿರಿ. ನಮ್ಮ ಜನಾಂಗದ ಏಳಿಗೆಗಾಗಿ ಅಪಾರ ದ್ರವ್ಯವನ್ನು ಕಟ್ಟು ಸಹಾಯ ಮಾಡುತ್ತಿರಿ. ದೇಶೋನ್ನತಿ ಕಾರ್ಯಗಳಿಗೆ ಸಹಾಯ ಮಾಡಲು ಯಾವಾಗಲೂ ಸಿದ್ಧರಾಗಿರುವಿರಿ.

ಸ್ತ್ರೀಯರು, ಬಾಲಕರು ಮುಂತಾದವರುಗಳ ವಿದ್ಯಾವೃದ್ಧಿಗಾಗಿ ಬಹಳ ಉಪಕಾರವನ್ನು ಮಾಡುತ್ತಿರುವಿರಿ. ಅಲ್ಲದೆ ಗ್ರಾಮಗಳಲ್ಲಿ ಅಲ್ಲಲ್ಲಿ ರೋಗಿಗಳೂ, ಅರ್ಥರೂ ಮುಂತಾದವರ ಅನುಕೂಲಕ್ಕಾಗಿ ವೈದ್ಯ ಶಾಲೆಗಳನ್ನು ಏರ್ಪಡಿಸುವ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುತ್ತಿರುವಿರಿ.

ತಾವು ಅಗರ್ಭ ಶ್ರೀಮಂತರಾಗಿಯೂ, ದೊಡ್ಡ ಜಮೀನ್ದಾರರಾಗಿಯೂ ಇದ್ದಾಗ್ಯೂ ಸಹ ಇತರ ಬಡವರು, ಇತರ ಭಾಗ್ಯವಂತರು ಎಂಬದಾಗಿ ವ್ಯತ್ಯಾಸವನ್ನಿಡದೆ ಸರ್ವರಲ್ಲಿಯೂ ಏಕರೀತಿಯಿಂದ ಅಭಿಮಾನವನ್ನಿಟ್ಟು ಎಲ್ಲರ ಕ

ಷ್ಟ ಸುಖಗಳನ್ನು ಅರಿತು ಉಪಕಾರ ಮಾಡುತ್ತಿರುವುದನ್ನು ತಿಳಿದು ಘನ ಸರ್ಕಾರದವರು ತಮ್ಮನ್ನು ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರಾಗಿ ಚುನಾಯಿಸಿರುವರು. ಹೀಗೆ ಸ್ತ್ರೀಯರನ್ನು ಚುನಾಯಿಸಿರುವುದು ಇದೇ ಮೊದಲು. ಹೀಗೆ ತಮ್ಮನ್ನು ಚುನಾಯಿಸಿರುವುದರಿಂದ ನಮ್ಮ ಸ್ತ್ರೀ ಜನಾಂಗಕ್ಕೆ ಒಂದು ಭೂಷಣವಾಗಿರುವುದು.

ನಿಮ್ಮ ಸಾಧಾರಣ ನಡವಳಿಕೆಗಳು ಸರ್ವರಿಗೂ ಆಶ್ಚರ್ಯವನ್ನುಂಟು ಮಾಡುವುದಲ್ಲದೆ ನಮ್ಮಂಥ ಸ್ತ್ರೀಯರಿಗೆ ಆದರ್ಶಪ್ರಾಯವಾಗಿರುವುದು

ಹೀಗೆ ತಮ್ಮಂಥವರನ್ನು ಪ್ರಜಾ ಪ್ರತಿನಿಧಿ ಸಭೆಗೆ ಸದಸ್ಯರನ್ನಾಗಿ ಚುನಾಯಿಸಿರುವುದು ನಮಗೆಲ್ಲಾ ಬಹಳ ಆನಂದವನ್ನುಂಟು ಮಾಡಿರುವುದು

ತಾವು ಇದೇ ರೀತಿಯಾಗಿ ಸಾರ್ವಜನಿಕ ಕೆಲಸ ಕಾರ್ಯಗಳನ್ನು ಬಹಳ ಕಾಲ ನಿರ್ವಹಿಸುವಂತೆ ತಮಗೆ ಆಯುರಾರೋಗ್ಯೈಶ್ವರ್ಯಾದಿಗಳನ್ನು ಇತೋಪ್ಯತಿಶಯವಾಗಿ ಶ್ರೀ ರಾಮಚಂದ್ರನು ಅನುಗ್ರಹಿಸಲೆಂದು ಭಗವಂತನನ್ನು ಅನವರತವೂ ಪ್ರಾರ್ಥಿಸುವ,

ಶ್ರೀಮತಿ ಡಿ. ಸಾಕಮ್ಮನವರು ಅಭಿನಂದನ ಪತ್ರಿಕೆಗಿತ್ತ ಉತ್ತರ.

ಪ್ರಿಯ ಭಗಿನಿಯರೆ,

ತಾವು ನನ್ನನ್ನು ಇಲ್ಲಿಗೆ ಆಹ್ವಾನಿಸಿ ನನಗೆ ಅಭಿನಂದನ ಪತ್ರಿಕೆಯನ್ನು ಕೊಟ್ಟದ್ದಕ್ಕಾಗಿ ನಾನು ತಮಗೆ ಚಿರಕಾಲವೂ ಕೃತಜ್ಞಳಾಗಿರುತ್ತೇನೆ. ತಮ್ಮ ಅಭಿನಂದನ ಪತ್ರಿಕೆಯಲ್ಲಿ ಸೂಚಿಸಿರುವ ಯಾವ ಮಹತ್ಕಾರ್ಯವನ್ನೂ ನಾನು ಮಾಡಿಲ್ಲ. ನನ್ನಲ್ಲಿರುವ ಗುಣ ಕೌಶಲ್ಯಗಳು ಎಷ್ಟೋ ಅಲ್ಪವಾಗಿದ್ದರೂ, ತಾವು ಅದನ್ನು ಈ ರೀತಿ ಸತ್ಕರಿಸಿ ಮನ್ನಿಸಿರುವುದು ನನ್ನ ಪುಣ್ಯೋದಯವೆಂದೂ, ತಾವು ನನ್ನಲ್ಲಿ ಇಟ್ಟಿರುವ ಅನಂತ ವಿಶ್ವಾಸ ಪ್ರೀತಿ ಇವುಗಳ ಪರಿಣಾಮ ಫಲವೆಂದೂ ನಂಬಿರುತ್ತೇನೆ

ನಮ್ಮ ದೇಶದಲ್ಲಿ ಸ್ತ್ರೀಯರಿಗೆ ರಾಜಕೀಯ ಪ್ರಾತಿನಿಧ್ಯ ದೊರೆತದ್ದು ಇದೇ ಮೊದಲು ಘನ ಸರ್ಕಾರದವರು ಸ್ತ್ರೀಯರ ಪರವಾಗಿ ನನ್ನನ್ನು ಪ್ರತಿನಿಧಿಯಾಗಿ ಆರಿಸಿದ್ದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ನಮ್ಮ ದೇಶದ ಮಹಿಳೆಯರ ಕ್ಷೇಮವನ್ನು ಕಾಪಾಡಿಕೊಳ್ಳುವ ಉದ್ದೇಶಕ್ಕಾಗಿ ನನ್ನನ್ನು ಪ್ರಜಾ ಪ್ರತಿನಿಧಿ ಸಭೆಗೆ ನೇಮಿಸಿಕೊಂಡಿರುವುದಾಗಿದೆ ಇಂಥಾ ದೊಡ್ಡ ಭಾರವನ್ನು ವಹಿಸಲು ನನಗೆ ಶಕ್ತಿ ಇದೆ ಎಂಬ ನಂಬಿಕೆ ನನಗಾದರೂ ಇಲ್ಲ. ಆದರೆ ನಿಮ್ಮೆಲ್ಲರ ಸಹಾಯದಿಂದ ನನ್ನ ಕೈಲಾಗುವಷ್ಟು ಕೆಲಸ ಮಾಡಬೇಕೆಂಬ ಕುತೂಹಲವಿದೆ ಎಂದು ಮಾತ್ರ ಭರವಸೆ ಕೊಡುತ್ತೇನೆ

ಸ್ತ್ರೀ ಸಮಾಜದ ಏಳಿಗೆಗಾಗಿ ತಾವು ಒಮ್ಮನಸಿನಿಂದ ಕೆಲಸ ಮಾಡಿದಲ್ಲದೆ ನಮಗೆ ಬೇರೆ ಮಾರ್ಗವಿಲ್ಲ. ತಾವೆಲ್ಲರೂ ಭಗಿನಿ ಸೇವಾ ಸಮಾಜದಲ್ಲಿ ಹಗಲಿರುಳೂ ಅವಿಚ್ಛಿನ್ನವಾಗಿ ಶ್ರಮಪಡುತ್ತಿರುವುದು ನಮ್ಮ ಇಡಿ ಸಮಾಜದ ಒಟ್ಟಿನಲ್ಲಿ ನಮ್ಮ ದೇಶದ ಪುಣ್ಯೋದಯವೆಂದೆನ್ನಬೇಕು. ಇಂತಹ ಸಂಸ್ಥೆಗಳು ದೇಶೋದ್ಧಾರಕ್ಕೆ ಅತ್ಯಾವಶ್ಯಕ. ಪೂನಾ ಮತ್ತು ಬೊಂಬಾಯಿ ಪಟ್ಟಣಗಳಲ್ಲಿ ಇಂಥಹ ಸಂಸ್ಥೆಗಳು ಹೇರಳವಾಗಿ ಸ್ಥಾಪಿಸಲ್ಪಟ್ಟು ಸಮಾಜದೇಳಿಗೆಗೆ ಕಾರಣಭೂತವಾಗಿವೆ. ಪೂನಾ ಸೇವಾಸದನ ಸಂಸ್ಥೆಯವರು ಮಾಡುತ್ತಿರುವ ಕಾರ್ಯವು ಪ್ರಶಂಸನೀಯವಾದುದು. ಅವರ ಮೇಲ್ಪಂಕ್ತಿಯಂತೆ ನಮ್ಮಲ್ಲಿ ತಾವೂ ನಡೆಯುವುದು ಒಳ್ಳೆಯದು. ಭಗಿನಿಯರೆ! ನಿಮ್ಮ ಸೇವೆ ಮಾಡಲು ನಾನು ಸದಾ ಸಿದ್ಧಳಾಗಿರುವೆನು ನಿಮ್ಮ ಸಮಾಜದಂತ ಸಂಸ್ಥೆಗಳಿಂದ ಸಲಹೆಗಳು ಸಿಕ್ಕಬೇಕೆಂಬುದೇ ನನ್ನ ಆಶೆ. ದೇಶದ ಯಾವ ಕಡೆಯಿಂದಲಾದರೂ ಯಾರಾದರೆ ಸಭೆಯ ಮುಂದೆ ಇಡಬೇಕಾದ ವಿಷಯಗಳನ್ನು ಕಳುಹಿಸಿ ಕೊಡಬಹುದೆಂತ ವಿಜ್ಞಾಪಿಸಿಕೊಳ್ಳುತ್ತೇನೆ. ತಾವು ಈ ದಿನ ನನಗೆ ತೋರಿಸಿದ ಪ್ರೀತಿ ವಿಶ್ವಾಸಗಳಿಗೆ ಮತ್ತೊಮ್ಮೆ ತಮಗೆ ನನ್ನ ಹೃತ್ಪೂರ್ವಕ ವಂದನೆಗಳು

ಭಗಿನಿ ಸೇವಾ ಸಮಾಜದಲ್ಲಿ ಪಾರಿತೋಷಕಗಳನ್ನು ಹಂಚುವ ಸಮಯದಲ್ಲಿ ಶ್ರೀಮತಿ ಡಿ. ಸಾಕಮ್ಮನವರು ಮಾಡಿದ ಭಾಷಣ.

ಮಾನ್ಯ ಸಹೋದರಿಯರೇ,

ಈ ದಿನ ಪಾರಿತೋಷಕಗಳನ್ನು ಕೊಡುವ ಈ ಮಹೋತ್ಸವದಲ್ಲಿ ಭಾಗಿಯಾಗಲು ನನ್ನನ್ನು ಬರ ಮಾಡಿದ್ದೀರಿ. ಇದಕ್ಕಾಗಿ ನಾನು ಭಗಿನಿ ಸೇವಾ ಸಮಾಜದ ಕಾರ್ಯ ನಿರ್ವಾಹಕ ಮಂಡಲಿಯವರಿಗೂ, ಕಾರ್ಯದರ್ಶಿಯವರಾದ ಶ್ರೀಮತಿ ಅಮೃತಬಾಯಿಯವರಿಗೂ ನನ್ನ ವಂದನೆಗಳನ್ನು ಸಮರ್ಪಿಸುವೆನು. ಈ ದೊಡ್ಡ ಗೌರವವನ್ನು ನನಗೆ ದೊರಕಿಸಿದ್ದಕ್ಕಾಗಿ ನಾನು ತುಂಬಾ ಕೃತಜ್ಞಳಾಗಿರುವೆನು. ನನ್ನ ಅರ್ಹತೆಗಿಂತಲೂ ತಮ್ಮ ಅಭಿಮಾನವೇ ಅದಕ್ಕೆ ಕಾರಣವಾಗಿದೆ ನನ್ನಲ್ಲಿರುವ ಯಾವ ಅರ್ಹತೆಗಾಗಿ ಈ ಸನ್ಮಾನವು ದೊರೆಯಿತೆಂಬುದು ತೋರದೆ ನನಗೆ ಆಶ್ಚರ್ಯವಾಗಿದೆ.

ಈಗಿನದೊಂದು ಸಮಯಾಗ, ಎಲ್ಲಿ ನೋಡಿದರೂ ಹೊಸ ಹುರುಪೊಂದು ಕಂಗೊಳಿಸುತ್ತಿದೆ. ಇದರ ಫಲಿತಾಂಶವಾಗಿ ನಮ್ಮ ದೇಶಕ್ಕೆ ಸೌಭಾಗ್ಯ ದೆಸೆಯು ಲಭಿಸುವುದೇನೋ ಖಂಡಿತವಾದ ಮಾತು. ಆದರೂ ಉತ್ಸಾಹವು ಕಾರ್ಯರೂಪಕ್ಕಿಳಿಯಬೇಕು. ದೇಶದ ಸಂಪತ್ತು ಅಭಿವೃದ್ಧಿಯಾಗಬೇಕು ನಮ್ಮ ದೇಶದ ಸಾಧನ ಸಂಪತ್ತುಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಈಗ ನಮ್ಮ ಕೈಬಿಟ್ಟು ಹೋಗಿರುವ ಅನೇಕ ಕೈಗಾರಿಕೆಗಳನ್ನೂ, ಕುಶಲ ವೃತ್ತಿಗಳನ್ನೂ ಮತ್ತೆ ನೆಲೆಗೊಳಿಸುವುದಕ್ಕೂ ಹೊಸ ಕೈಗಾರಿಕೆಗಳನ್ನೂ, ಕುಶಲ ವೃತ್ತಿಗಳನ್ನೂ ಪ್ರಾರಂಭಿಸುವುದಕ್ಕೂ ಇದೇ ದಾರಿ

ಹಿಂದಿನ ಕುಶಲ ವಿದ್ಯೆಗಳನ್ನು ಮತ್ತೆ ನೆಲೆಗೊಳಿಸುವುದಕ್ಕೂ, ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೂ, ಈಗಿರುವ ಕುಶಲ ವಿದ್ಯೆಗಳನ್ನು ಅಭಿವೃದ್ಧಿಪಡಿಸುವುದಕ್ಕೂ ವಸ್ತು ಪ್ರದರ್ಶನಗಳಿಂದ ಬಹಳ ಸಹಾಯವಾಗುತ್ತದೆ. ಆದಕಾರಣ ದೇಶದ ಸಂಪದಭಿವೃದ್ಧಿಗೆ ಪ್ರದರ್ಶನಗಳು ಸಾಧಕವಾಗುತ್ತವೆ. ಈ ದೃಷ್ಟಿಯಿಂದ ಪ್ರದರ್ಶನಗಳಿಗೆ ಬಹು ವಿಶೇಷವಾಗಿ ಮಹತ್ವ ಉಂಟು.

ಪ್ರದರ್ಶನಗಳು ಜನರಲ್ಲಿ ಸ್ಪರ್ಧೆಯನ್ನು ಹುಟ್ಟಿಸಿ ಬುದ್ಧಿಯನ್ನು ಸೂಕ್ಷ್ಮಗೊಳಿಸುತ್ತವೆ. ಉತ್ತಮವಾದ ವಸ್ತುಗಳನ್ನು ಮಾತ್ರವೇ ಪ್ರದರ್ಶನಗಳಲ್ಲಿ ಸ್ವೀಕರಿಸುವರೆಂಬುದು ಜನಗಳಿಗೆ ಗೊತ್ತುಂಟು. ಇತರರು ಕಳುಹಿಸಿದ ವಸ್ತುಗಳಿಗಿಂತಲೂ ಚೆನ್ನಾಗಿರುವ ವಸ್ತುಗಳನ್ನು ರಚಿಸಿ ಕಳುಹಿಸಿದವರಿಗೆ ಮಾತ್ರವೇ ಬಹುಮಾನಗಳು ಬರುವುದೆಂಬುದನ್ನು ಜನರು ಬಲ್ಲರು. ಆದಕಾರಣ ಜನರು ಅತ್ಯುತ್ತಮವಾದ ವಸ್ತುಗಳನ್ನು ರಚಿಸಿ ಕಳುಹಿಸಲು ಪ್ರಯತ್ನಿಸುತ್ತಾರೆ. ಇದರಿಂದ ಅವರ ಬುದ್ಧಿಯು ಸೂಕ್ಷ್ಮವಾಗುತ್ತದೆ ಕೌಶಲವು ಹೆಚ್ಚುತ್ತದೆ ದೇಶಕ್ಕೆ ಒಳ್ಳೆಯ ವಸ್ತುಗಳು ದೊರೆತು ಉಪಕಾರವಾಗುತ್ತದೆ. ಪ್ರದರ್ಶನಗಳಿಗೆ ಹೋಗಿ ಅಲ್ಲಿರುವ ವಸ್ತುಗಳನ್ನು ನೋಡಿಕೊಂಡು ಬರುವವರ ದೃಷ್ಟಿಯಿಂದಲೂ ದೇಶಕ್ಕೆ ಲಾಭ ಉಂಟು. ಕುಶಲ ವೃತ್ತಿಯವರು ಅವುಗಳನ್ನು ನೋಡಿ ತಮ್ಮ ಜಾಣತನವನ್ನು ಇನ್ನೂ ಹೆಚ್ಚಿಸಿಕೊಳ್ಳಲು ಅನುಕೂಲವಾಗುತ್ತವೆ. ಬಹುಮಾನವು ದೊರೆತವರನ್ನೂ, ಅವರು ರಚಿಸಿರುವ ವಸ್ತುಗಳನ್ನೂ ನೋಡಿದ ಇತರರಿಗೂ ತಾವು ಅವುಗಳನ್ನು ರಚಿಸಲು ಆಸಕ್ತಿಯು ಹುಟ್ಟುತ್ತದೆ ಇದೆಲ್ಲದರ ಫಲಿತಾಂಶವಾಗಿ ಕುಶಲ ವೃತ್ತಿಯವರಾದ ಹಳಬರು ಇನ್ನೂ ಹೆಚ್ಚು ಹೆಚ್ಚಾಗಿ ಬುದ್ಧಿಯನ್ನು ವ್ಯಯಮಾಡಿ ಉತ್ತಮವಾದ ವಸ್ತುಗಳನ್ನು ರಚಿಸುತ್ತಾರೆ. ಹೊಸಬರು ವಸ್ತುಗಳನ್ನು ರಚಿಸುವುದಕ್ಕೆ ಪ್ರಾರಂಭಿಸುವುದರಿಂದ ಕುಶಲ ವೃತ್ತಿಯವರ ಸಂಖ್ಯೆಯು ಹೆಚ್ಚುತ್ತದೆ. ಅವರ ಸಂಖ್ಯೆಯು ಹೆಚ್ಚಿದಷ್ಟೂ ದೇಶದ ಸಂಪತ್ತು ಅಭಿವೃದ್ಧಿಯಾಗಿ ಸಮಾಜವು ಮುಂದುವರಿಯುವುದು ತಿಳಿದೇ ಇದೆ.

ಪ್ರದರ್ಶನಗಳಿಂದ ವಸ್ತು ರಚನೆಯ ಕೌಶಲದ ಮಟ್ಟವು ಬೇಗ ಹೆಚ್ಚುವುದಕ್ಕೂ ವಿಶೇಷ ಸಹಾಯವಾಗುತ್ತದೆ. ಒಂದು ವರ್ಷ ಪ್ರದರ್ಶನಕ್ಕೆ ಬಂದ ವಸ್ತುಗಳಿಗಿಂತಲೂ ಉತ್ತಮವಾದ ವಸ್ತುಗಳು ರಚಿಸಲ್ಪಟ್ಟಲ್ಲಿ ಮಾತ್ರವೇ ಮುಂದಣ ವರ್ಷ ಬಹುಮಾನಗಳು ಲಭಿಸುವುದು ಆದರ ಮುಂದಿನ ವರ್ಷ ಇನ್ನೂ ಉತ್ತಮವಾದ ವಸ್ತುಗಳು ಬರಬೇಕಾಗುವುದು. ಇದಲ್ಲದೆ ಸ್ಪರ್ಧೆಗಾರರ ಸಂಖ್ಯೆಯು ವರ್ಷ ವರ್ಷವೂ ಹೆಚ್ಚುತ್ತಾ ಹೋಗುವುದು. ಆದಕಾರಣ ವಸ್ತು ರಚನೆಯ ಕೌಶಲವು ವರ್ಷವು ಹೆಚ್ಚುತ್ತ ಬಂದು ಕೆಲವು ಕಾಲದಲ್ಲೇ ಅತ್ಯುತ್ತಮವಾದ ವಸ್ತುಗಳು ರಚಿಸಲ್ಪಡುವುವು. ಇದರ ಫಲಿತಾಂಶವಾಗಿ ಈಗ ಪರದೇಶದಿಂದ ಬರುತ್ತಿರುವ ವಸ್ತುಗಳಿಗಿಂತಲೂ ವಿಶೇಷ ನಾಜೂಕಾದ ಸಾಮಾನುಗಳು ಸ್ಥಳದಲ್ಲೇ ರಚಿಸಲ್ಪಡುವುದು ಅದರಿಂದ ನಮ್ಮ ದೇಶದ ಸಂಪತ್ತು ಬಹಳವಾಗಿ ಅಭಿವೃದ್ಧಿಯಾಗುವುದು

ಪಾಶ್ಚಾತ್ಯ ದೇಶಗಳ ಜನರು ಈ ಮರ್ಮವನ್ನು ಅರಿತುಕೊಂಡಿರುವುದರಿಂದ ಅಲ್ಲಿ ಪ್ರದರ್ಶನಗಳಿಗೆ ಬಹಳ ಬೆಲೆಯುಂಟು. ಅಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರವೇ ಅಲ್ಲದೆ ಸಣ್ಣಪುಟ್ಟ ಹಳ್ಳಿಗಳಲ್ಲಿ ಕೂಡ ಪದೇ ಪದೇ ಪ್ರದರ್ಶನಗಳು ನಡೆಯುತ್ತವೆ. ನಮ್ಮ ದೇಶದ ಪ್ರದರ್ಶನಗಳು ಅಷ್ಟು ಹೆಚ್ಚಾಗಿ ನಡೆಯುತ್ತಿಲ್ಲ ಮೈಸೂರು, ಬೆಂಗಳೂರು, ನಗರಗಳಲ್ಲಿ ಮಾತ್ರವೇ ಅಲ್ಲದೆ ಡಿಸ್ಟ್ರಿಕ್ಟುಗಳಲ್ಲಿಯೂ, ತಾಲೋಕುಗಳಲ್ಲಿಯೂ, ಗ್ರಾಮಗಳಲ್ಲಿಯೂ, ಪ್ರದರ್ಶನಗಳು ಇನ್ನೂ ಹೆಚ್ಚಾಗಿ ನಡೆಯುತ್ತಾ ಹೋದರೆ ವಿಶೇಷ ಪ್ರಯೋಜನ ಉಂಟು. ಇಲ್ಲಿ ಇಷ್ಟು ಉತ್ತಮ ರೀತಿಯಲ್ಲಿ ಪ್ರದರ್ಶನವನ್ನು ನಡೆಸಿದುದಕ್ಕಾಗಿ ಭಗಿನಿ ಸೇವಾ ಸಮಾಜದವರಿಗೆ ಅಭಿನಂದನಗಳನ್ನು ಸಮರ್ಪಿಸುವೆನು. ಕುಶಲ ವಿದ್ಯೆಗಳಲ್ಲಿ ಹೆಚ್ಚು ಮುಂದುವರಿದಿಲ್ಲದ ನಮ್ಮ ದೇಶದಲ್ಲಿ ಅಲ್ಪ ಸ್ವಲ್ಪವಾಗಿ ಅವನ್ನು ಅಭಿವೃದ್ಧಿಪಡಿಸಿದರೂ ಅದು ಅಮೋಘವಾದ ದೇಶ ಸೇವೆಯೇ ಸರಿ ಹೀಗಿರುವಲ್ಲಿ ಇಷ್ಟು ಉತ್ತಮ ರೀತಿಯಲ್ಲಿ ಯಶಸ್ವಿಯಾಗಿ ಪ್ರದರ್ಶನವನ್ನು ನಡಯಿಸಿ ಕುಶಲ ವಿದ್ಯೆಗಳಿಗೆ ಪ್ರೋತ್ಸಾಹವನ್ನು ಕೊಟ್ಟಿರುವುದು ದೊಡ್ಡದೊಂದು ದೇಶ ಸೇವೆಯೇ ಸರಿ.

ಈ ದಿನ ಬಹುಮಾನಗಳನ್ನು ಪಡೆದಿರುವವರಿಗೊಂದು ಬಿನ್ನಹ ಅವರು ಈಗ ಸಾಧಿಸಿರುವಷ್ಟು ಫಲದಿಂದಲೇ ತೃಪ್ತರಾಗ ಕೂಡದು ಇನ್ನೂ ಹೆಚ್ಚು ಹೆಚ್ಚು ನಾಜೂಕಾಗಿ ಸಾಮಾನುಗಳನ್ನು ರಚಿಸಿ ಖ್ಯಾತಿಯನ್ನು ಪಡೆಯುತ್ತಾ ಬರಬೇಕು. ಈಗ ಬಹುಮಾನವನ್ನು ಪಡೆದಿರುವವರಿಗೂ ನನ್ನದೊಂದು ಸಲಹೆಯುಂಟು. ಅವರು ಉತ್ಸಾಹಿಗಳಾಗಿ ತಮ್ಮ ಬುದ್ಧಿ ಶಕ್ತಿಯ ಬಲದಿಂದ ಹೊಸ ಹೊಸದಾಗಿ ಹೆಚ್ಚು ನಾಜೂಕಿನ ಸಾಮಾನುಗಳನ್ನು ರಚಿಸಿ ಮುಂದೆ ನಡೆಯಬಹುದಾದ ಪ್ರದರ್ಶನಗಳಲ್ಲಿ ಬಹುಮಾನಗಳನ್ನು ಪಡೆಯಬೇಕು ಎಲ್ಲರೂ ಸೇರಿ ದೇಶದ ಕುಶಲ ವಿದ್ಯೆಗಳನ್ನು ಹೆಚ್ಚಿಸಿ ಅಭಿವೃದ್ಧಿಪಡಿಸಬೇಕು ಸೋದರಿಯರೆ ನನ್ನ ಭಾಷಣವನ್ನು ಇನ್ನು ಬೆಳೆಸುವುದಿಲ್ಲ ಇಲ್ಲಿ ಪಾರಿತೋಷಕಗಳನ್ನು ವಿನಿಯೋಗ ಮಾಡಲು ನನ್ನ ಆಧಾರದಿಂದ ಬರಮಾಡಿ ಗೌರವವನ್ನು ತೋರಿಸಿದಕ್ಕಾಗಿ ಮತ್ತೊಮ್ಮೆ ನನ್ನ ವಂದನೆಗಳನ್ನು ಸಮರ್ಪಿಸುವೆನು ಭಗಿನಿ ಸೇವಾ ಸಮಾಜವು ದಿನ ದಿನವೂ ವೃದ್ಧಿಹೊಂದಿ ಸೇವೆ[illegible] ಮಾಡುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಪ್ರಾ[illegible]ವೆನು.

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.

ಮಂಗಳೂರು, ದ. ಕನ್ನಡ.

ಯಾವತ್ತೂ ಬಗೆಯ ರಬ್ಬರು ಮೊಹರುಗಳು, ಡಿಯ ಸೈನ್ ಬೋರ್ಡು, ಹಾಫ್ ಟೋನ್ ಬ್ಲಾಕ್ [illegible] ದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಬಾಳಿಕೆಗೆ [illegible] ತಯಾರಿಸಿ ಕೊಡಲಾಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಿ

12—2

ವರ್ತಮಾನ ಸಂಗ್ರಹ.

ಒಳದೇಶ.

ತಾ 23, 24ರಲ್ಲಿ ಕೆಲವು ಕಡೆಗಳಲ್ಲಿ ಅಲ್ಪ ಸ್ವಲ್ಪ [illegible]ಯಾಗಿದೆ

ಶಿಶು ಪ್ರದರ್ಶನವು ಪೊನ್ನಂಪೇಟೆಯಲ್ಲು ತಾ. [illegible]ರಲ್ಲಿ ನಡೆಯುವುದು.

ತಾ 6—4—31 ರಿಂದ 15—5—31ರ ವರೆಗೆ [illegible] ಹೈಸ್ಕೂಲು ಬೇಸಿಗೆ ರಜಕ್ಕಾಗಿ ಮುಚ್ಚಲ್ಪಡುತ್ತದೆ

ಈ ಮೊದಲು ಕಮಿಶನರಾಗಿದ್ದ ಮಿ. ಪ್ರೀಸ್ಟ್[illegible] ಹೊಸ ಕಮಿಶನರಾದ ಮೆಕ್ಕೆಯವರಿಗೆ ಚಾರ್ಜ[illegible] ತಾ. 20ರನ್ನೇ ಹೊರಟು ಹೋದರು.

ಮಡಿಕೇರಿ ಮುನಿಸಿಪಾಲಿಟಿಯಲ್ಲಿ ಮಿ. ಕೊಡಂದೇರ ದಪ್ಪನವರು ರಾಜಿನಾಮೆ ಕೊಟ್ಟ ಸ್ಥಳಕ್ಕೆ ಮಿ. ಪಾಲೇಮುತ್ತಣ್ಣನವರು ಎದುರಾಳಿಲ್ಲದೆ ಚುನಾಯಿತರಾದರು.

ತಾ. 18 ಮತ್ತು 19ರಲ್ಲಿ ಇಂಡಿಯನ್ನರಿಗೂ, ಯೂರೋಪಿಯನರಿಗೂ ಮಡಿಕೇರಿಯಲ್ಲಿ ಕ್ರಿಕೇಟ್ ಮೇಚ್ ನಡೆದು ಇಂಡಿಯನರೇ ಒಂದು ಇನ್ನಿಂಗ್ಸಿನಿಂದ ಜಯಿಸಿದರು

ಮಡಿಕೇರಿ ಮಹದೇವಪೇಟೆಯಲ್ಲಿ ಒಂದು ತಿಂಗಳಿನಿಂದ ಇಲಿಗಳು ಸಾಯುತ್ತಲಿದ್ದು ಈಗ ಪ್ಲೇಗು ರೋಗವು ತೋರಿದೆ ಎಂದೂ, ಈ ವಾರ ಒಂದೆರಡು ಮರಣವು [illegible]ಸಿದೆ ಎಂದೂ ವರ್ತಮಾನ.

ತಾ. 24ರಲ್ಲಿ ಮಡಿಕೇರಿಯಲ್ಲಿ ಕೆಲವು ಸುಂಕದ [illegible]ಳು ಪುನಃ ಹರಾಜಾಗುತ್ತದೆಯೆಂತ ಇದ್ದದ್ದು ಹರಾಜಾಗಲಿಲ್ಲ. ಕಾರಣವೇನೋ ತಿಳಿಯಲಿಲ್ಲ. ಬಹಳ ದೂರದಿಂದ ಹರಾಜಿಗೆ ಬಂದವರೆಲ್ಲಾ ಆಶಾ ಭಂಗ ಪಟ್ಟವರಾಗಿ ಹಿಂತಿರುಗಿ ಹೋದರು.

ಕೆಂಪಡತಂಡ ಸುಬ್ಬೈಯ್ಯನವರನ್ನು ಕೊಂದ ಖಟ[illegible]ಸಿನಲ್ಲಿ ಮೂವರ ಅಪರಾಧಿಗಳ ಮೇಲೆ ಖೂನಿ ಕೇಸ್ [illegible] ಕೋರ್ಟಿನಲ್ಲಿ 2ನೇ ತಾರೀಕಿನಿಂದ 10ನೇ ತಾರೀಕಿನ [illegible] ವಿಚಾರ ನಡೆದು ಪಂಚಾಯಿತರು ತಪ್ಪಿತಸ್ಥರೆಂದೂ [illegible] ಒಪ್ಪಿಯರು. ಅಪರಾಧಿಗಳನ್ನು ತಾ 18ರಲ್ಲಿ ಕುಲಾಸ [illegible] ಡಿದರು

ಈ ತಾ. 29ರಲ್ಲು ಕುರುಳಿ ಅಂಬಲದ ವಾಚನಾಲಯ ಮತ್ತು ಪುಸ್ತಕ ಭಂಡಾರದ ಯುಗಾದಿ ಪಂದ್ಯಾಟವೂ ಲಿಚ್ಚರದ ತಡೆ ಮತ್ತು ನಿವಾರಣೆ' 'ಪಶು ಪಾಲನೆ [illegible] ಗಳ ಪುನರುದ್ಧಾರ ವಿಷಯ ಉಪನ್ಯಾಸಗಳೂ ರಾವ್ ಬಹದ್ದೂರ್ ಕೆ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ [illegible] ಗಂಟೆ ಮೇಲೆ ನಡೆಯುತ್ತೆಯಾಗಿ ತಿಳಿಯುತ್ತೇವೆ.

ಮದ್ರಾಸ್ ವ್ಯವಸಾಯ ಇಲಾಖೆಯ ಪ್ರದರ್ಶನ ಮೋಟಾರ್ ಲಾರಿಯು ಮಡಿಕೇರಿಯಲ್ಲಿ ಈ ತಾ [illegible]ಯೂ, ತಾ. 28 ರಲ್ಲಿ ಪೊನ್ನಂಪೇಟೆಯಲ್ಲಿಯೂ, ತಾ [illegible] ತು 30ರಲ್ಲಿ ವೀರಾಜಪೇಟೆ ಮತ್ತು ಗೋಣಿಕೊಪ್ಪ[illegible]ಯೂ, ಪ್ರದರ್ಶಿಸಲ್ಪಡುತ್ತದೆಯೆಂತ ಡಿಪ್ಯುಟಿ ಡೈರೆಕ್ಟ[illegible]ಳಿಸಿರುತ್ತಾರೆ. ಈ ಮೊದಲು ಪ್ರಕಟಿಸಿದ ಕಾರ್ಯಕ್ರಮವನ್ನು ಮೇಲ್ಕಂಡ ರೀತಿ ಬದಲಾಯಿಸಿರುತ್ತಾರೆ.

ಈ ತಾರೀಕು 23 ರಲ್ಲು ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರಾದ ಮಿ. ಪಾಂಡಂಡ ಚಂಗಪ್ಪನವ[illegible] ನಾಲ್ಕುನಾಡು ಪ್ರಾಂತ್ಯದ ಸೇತುವೆ, ಕಕ್ಕಬೆ[illegible] ಲುಗಳನ್ನು ಮತ್ತು ರಸ್ತೆಗಳನ್ನೂ ನೋಡಿಕೊಂಡು ಬ[illegible]ತ್ತಾರೆಯಾಗಿಯೂ ಮತ್ತು ಈ ವಾರದಲ್ಲು ಹೆಬ್ಬಾಲೆ, [illegible] ನೂರು ಮತ್ತು ಗೋಣಿಕೊಪ್ಪ ಮುಂತಾದ ಕಡೆಗಳಿಗೆ [illegible]ಗಿ ಅಲ್ಲಿಯಣ ಸ್ಕೂಲ್ ಮತ್ತು ರಸ್ತೆಗಳನ್ನು ನೋಡ[illegible]ಯಾಗಿ ತಿಳಿಸಿರುತ್ತಾರೆ.

ಮಹಾತ್ಮ ಗಾಂಧಿಯವರ ಆಜ್ಞೆಯಂತೆ ಜೈಲಿನಿಂದ ವಾಪಸು ಬಂದ ಕೊಡಗಿನ ಸತ್ಯಾಗ್ರಹಿಗಳು ಮಿ. ಗಳಾಸ ದ್ಯಂಡ ಬೆಳ್ಯಪ್ಪನವರು, ಕೊಳ್ಳಿ ಮಾಡ ಕರುಂಬೈಯ್ಯನ ಅಬ್ದುಲ್ ಗಫೂರ್‌ಖಾನ್ ಶೈಕ್ಗಿಯವರು, ಹೆಚ್. ರ[illegible]ಷ್ಣಯ್ಯನವರು ಮತ್ತು ಇನ್ನೂ ಅನೇಕ ಸ್ತ್ರೀ ಪುರುಷ

ಸತ್ಯಾಗ್ರಹಿಗಳು ಹಿಂದೆ ಬಿದ್ದಿರುವ ನಮ್ಮ ಕೊಡಗು ದೇಶವನ್ನು ಭರತಖಂಡದ ಇತರ ಜನರಂತೆ ಅಹಿಂಸಾ ಯುದ್ಧದಲ್ಲಿ ಮುಂದಕ್ಕೆ ತರುವ ನಿರ್ವಾಹದಿಂದ ಹಗಲಿರುಳು ಸ್ವಾರ್ಥತ್ಯಾಗ ಮಾಡಿ ಪ್ರಯತ್ನ ಪಟ್ಟದ್ದಕ್ಕೂ ಮತ್ತು ಪಡುವದಕ್ಕೂ ಅಭಿವಂದನೆಗಳನ್ನು ಅರ್ಪಿಸಲಿಕ್ಕಾಗಿ ಪೇರೂರು ಗ್ರಾಮಸ್ಥರು ಪೇರೂರು ಇಗ್ಗುತಪ್ಪ ದೇವರ ದೇವಸ್ಥಾನದಲ್ಲಿ ಸೇರಿ, ಪೂಜೆ ಪ್ರಾರ್ಥನೆ ವಗೈರೆ ತೀರಿಸಿದನಂತರ ಬಿ. ಯಂ. ಕೃಷ್ಣಯ್ಯನವರು ಪರದೇಶೀ ಬಟ್ಟೆಯ ಬಹಿಷ್ಕಾರ, ಸ್ವದೇಶೀ ಬಟ್ಟೆ ಧರಿಸುವಿಕೆ, ಮಾದಕ ನಿಷೇಧ ವಗೈರೆಯಾಗಿ ಅರ್ಧಗಂಟೆ ವರೆಗೆ ಉಪನ್ಯಾಸ ಮಾಡಿದ್ದಲ್ಲದೆ ಜೈಲಿಗೆ ಹೋಗಿ ಬಂದ ಮತ್ತು ಹೋಗದಿರುವ ಎಲ್ಲಾ ಸತ್ಯಾಗ್ರಹಿಗಳಿಗೂ ದೇವರು ಆಯುರಾರೋಗ್ಯವನ್ನೂ, ಶಕ್ತಿಯನ್ನೂ ಕೊಟ್ಟು, ಇನ್ನು ಮುಂದೆ ಇದಕ್ಕಿಂತಲೂ ಹೆಚ್ಚಾಗಿ ದೇಶ ಸೇವೆ ಮಾಡಲು ಅವಕಾಶವನ್ನು ಕೊಡಲೆಂದೂ, ಇನ್ನು ಮುಂದೆ ನಡೆಯಲಿಕ್ಕಿರುವ ಕಾರ್ಯವು ದೇವರು ತೋರಿದರೆ ಇಲ್ಲಿದ ರೀತಿ ನಡಿಸಿ ಕೊಡಲೆಂದೂ ದೇವರನ್ನು ಪ್ರಾರ್ಥಿಸಿ ಭೋಜನಾದಿಗಳನ್ನು ತೀರಿಸಿ ಗ್ರಾಮಸ್ಥರು ಜಯಘೋಷದಿಂದ ತೆರಳಿದರು ಎಂಬದಾಗಿ ಒಬ್ಬರ ಬಾತ್ಮಿ.

ಹಿಂದೂದೇಶ.

ಬರುವ ವರ್ಷದ ಕಾಂಗ್ರೆಸನ್ನು ಮಹಾರಾಷ್ಟ್ರದವರು ಶೋಲಾಪುರಕ್ಕೆ ಕರೆಯಬೇಕೆಂತ ತೀರ್ಮಾನಿಸಿರುತ್ತಾರೆ.

ದಿಲ್ಲಿಯಲ್ಲಿ ರೌಂಡ್ ಟೇಬಲ್ ಕಾನ್ಫರೆನ್ಸಿನ ಅನೇಕ ಪ್ರತಿನಿಧಿಗಳನ್ನೂ, ಗಾಂಧಿಜೀಯವರನ್ನೂ ವೈಸರಾಯರು ಕರೆಸಿಕೊಂಡು ಸಂಭಾಷಿಸಿದರು.

ಹಿಂದೂ ಮುಸಲ್ಮಾನರೊಳಗಿನ ರಾಜಕೀಯ ಹಕ್ಕುಗಳ ಕುರಿತು ಒಗ್ಗಟ್ಟಾಗುವ ಬಗ್ಗೆ ದಿಲ್ಲಿಯಲ್ಲಿ ನಡೆದ ಸಂಭಾಷಣೆಗಳಿಂದ ಇನ್ನೂ ಅಖೈರ್ ತೀರ್ಮಾನವಾಗಲಿಲ್ಲ.

ಸ್ತ್ರೀಯರಿಗೂ ಓಟು ಕೊಡಬೇಕಾಗುವಂಥ ಕೇಳಿಕೆಯು ಕರಾಚಿಯ ಕಾಂಗ್ರೆಸ್ಸಿನಲ್ಲಿ ಬರಲೆಂದು ಬೊಂಬಾಯಿಯ ಸುಶಿಕ್ಷಿತ ಸ್ತ್ರೀಯರು ಗಾಂಧಿಜೀಯವರಿಗೆ ತಂತಿ ಕಳುಹಿಸಿರುವರು.

"ಗಡಿ ಪ್ರಾಂತ್ಯದ ಗಾಂಧಿ" ಎಂದು ಹೆಸರಾಗಿರುವ ಖಾನ್ ಅಬ್ದುಲ್ ಗಫರ್ ಖಾನರನ್ನು ಬಿಡುಗಡೆ ಮಾಡಿದರು. ಕಾಂಗ್ರೆಸ್ ಕಾರ್ಯಕ್ಕಾಗಿ ಇವರೊಡನೆ ಒಂದು ಲಕ್ಷ ಅನುಯಾಯಿಗಳ ಬಲವಿದೆಯಂತೆ.

ದಿನದಿಂದ ದಿನಕ್ಕೆ ಅಮೇರಿಕಾನರಿಗೆ ಗಾಂಧಿಜೀಯವರ ವಿಷಯವಾಗಿ ಆದರವು ಹೆಚ್ಚುತ್ತಿದೆ. ನೂರಾರು ಪತ್ರಿಕಾ ಪ್ರತಿನಿಧಿಗಳೂ, ಇತರ ಶ್ರೀಮಂತರೂ ನಮ್ಮ ದೇಶಕ್ಕೆ ಬಂದಿರುತ್ತಾರೆ. ಎಲ್ಲರೂ ಮೊದಲಾಗಿ ಗಾಂಧಿಜೀಯವರನ್ನು ಕಂಡು ಮಾತಾಡುವರು.

ಹಿಂದೂಸ್ಥಾನದ ಆರ್ಥಿಕ ಪರದಾಸ್ಯತೆಗೆ ಪರದೇಶೀ ಬ್ಯಾಂಕುಗಳೂ, ಜೀವವಿಮೆ ಕಂಪೆನಿಗಳೂ ಇವಕ್ಕೆ ಹಿಂದಿಯರೇ ಕೊಡುವ ಸಹಾಯವು ಕಾರಣವೆಂತಲೂ ಇನ್ನು ಮೇಲೆ ಈ ಬಾಬುಗಳಲ್ಲಿ ಸ್ವದೇಶೀ ಸಂಸ್ಥೆಗಳಿಗೇನೇ ಉತ್ತೇಜನ ಕೊಡಬೇಕೆಂತ ಪಂಡಿತ ಜವಾಹರ್ ಲಾಲರು ಒಂದು ಲೇಖನವನ್ನು "ಹಿಂದೂ" ಪತ್ರಿಕೆಗೆ ಬರೆದಿರುತ್ತಾರೆ.

ದಿಲ್ಲಿಯಲ್ಲಿ ಸಂಸ್ಥಾನಧಿಪರೆಲ್ಲ ಕೂಡಿ ವೈಸರಾಯರಿಗೆ ಔತಣ ಸತ್ಕಾರ ಮಾಡಿದರು. ವೈಸರಾಯರು ಭಾಷಣ ಮಾಡುತ್ತಾ, ಮಹಾತ್ಮ ಗಾಂಧಿಯವರ ಪ್ರಾಮಾಣಿಕತೆ, ವಿಶುದ್ಧತೆ, ದೇಶಭಕ್ತಿಗಳನ್ನು ಬಹಳವಾಗಿ ಕೊಂಡಾಡಿರುತ್ತಾರೆ. ಹಿಂದೂದೇಶದ ಪ್ರಗತಿಗೆ ತನ್ನಿಂದ ಸಾಧ್ಯವಿರುವ ಸಹಾಯಗಳನ್ನೆಲ್ಲ ನೀಡಲಿರುವೆನೆಂಬ ಆಶ್ವಾಸನೆ ಕೊಟ್ಟಿರುತ್ತಾರೆ.

ಕಳೆದ ವಾರ, ಮದ್ರಾಸಿನ ಪೀಪಲ್ಸ್ ಪಾರ್ಕ್ ಮೃಗಾಲಯದಿಂದ ಒಂದು ಹುಲಿಯು ಹೇಗೋ ತಪ್ಪಿಸಿ ಗೂಡಿನಿಂದ ಹೊರಗೆ ಬಂದು, ಕಾವಲುಗಾರನ ಮೇಲೆ ಬಾಂಗವಲವಾಗದೆ, ಒಂದು ದನದ ಮೇಲೆ ನೆಗೆದು ಹಾನಿಗಾರಂಭಿಸಲು, ಮೃಗಾಲಯದ ಸಾರ್ಜಂಟನು ಗುಂಡಿಕ್ಕಿ ಅದನ್ನು ಕೊಂದನು. ಜನರಿಗೂ ಅಲ್ಲಿ ಇಲ್ಲವಾದ ಕಾರಣ ಅನಾಹುತಗಳು ನಡೆಯಲಿಲ್ಲ.

ಶತಮಾನಗಳ ಆಯುಸ್ಸುಳ್ಳ ಒಂದು ಜಾತಿಯ ಮನುಷ್ಯರು ಹಿಮಾಲಯ ಪ್ರಾಂತ್ಯದಲ್ಲಿ ಸುಮಾರು ೬೦೦ ಮಂದಿ ಇರುವರೆಂದೂ, ಅವರನ್ನು ಮಿಸ್ ಕೊಸ್ಲಿಬೆಟ್ ಎಂಬ ಅಮೇರಿಕಾನ ಮಹಿಳೆಯು ೧೦ ವರ್ಷಗಳ ಕೆಳಗೆ ಕಂಡಿದ್ದಳೆಂದೂ, ಅವರ ಶೋಧನೆಗಾಗಿ ಅಮೇರಿಕದಿಂದ ಈರ್ವರು ಬಂದಿರುವರು. ಈ ಪಂಗಡದವರು ಅಷ್ಟು ದೀರ್ಘಾಯುಷ್ಯವನ್ನು ಪಡೆದ ವಿಧಾನ ಮತ್ತು ಅವರ ಆಹಾರ, ವ್ಯವಹಾರ ನಡತೆ ಇವುಗಳನ್ನು ತಿಳಿದುಕೊಳ್ಳುವುದೇ ಉದ್ದೇಶವಂತೆ.

ಮಹಾತ್ಮ ಗಾಂಧಿ, ಜವಾಹಿರ್‌ಲಾಲ್ ನೆಹರು, ಸರದಾರ್ ಪಟೇಲ್ ಮುಂತಾದವರು ೨೫ರಲ್ಲಿ ಕರಾಚಿಗೆ ತಲುಪಿದರು. ಮಹಾತ್ಮಜೀಯವರು ತಲುಪುವ ಸಮಯವು ಯಾರಿಗೂ ತಿಳಿಯಲ್ಲವಾದರೂ ಸ್ಟೇಷನಿನಲ್ಲೇ ತುಂಬಾ ಗುಂಪು ಸೇರಿತ್ತು. ಮಹಾತ್ಮಜೀಯವರಿಗೆ ಎಂದಿನಂತೆಯೇ ಉತ್ಸಾಹ ಪೂರ್ವಕವಾದ ಸ್ವಾಗತ ದೊರೆಯಿತು. ಯುವಕ ಸಂಗದವರು 'ಗಾಂಧಿಯನ್ನು ಎಳೆದು ಹಾಕಿ' ಎಂತ ಕೂಗುತ್ತಲೂ ಜನರನ್ನು ಸಿಟ್ಟಿಗೆಬ್ಬಿಸಿದ್ದರೂ ಸಹ ಸೆನ್‌ಗುಪ್ತ, ಡಾಕ್ಟರ್ ಸತ್ಯಪಾಲ್ ಮುಂತಾದವರ ಶಾಂತಿಯಿಂದ ವರ್ತಿಸಬೇಕೆಂಬ ಭಾಷಣಗಳನ್ನು ಕೇಳಿ ಜನರಿಗೆ ಸಮಾಧಾನವಾಗಿದೆ.

ಆಸ್ಟ್ರೇಲಿಯಾ ಮತ್ತು ಜರ್ಮನಿ ದೇಶದವರು ಕಳೆದ ಯುದ್ಧದ ನಂತರ ಆದ ರಾಜಿ ಶರತ್ತಿಗೆ ವಿರೋಧವಾಗಿ ತಮ್ಮೊಳಗೆ ವ್ಯಾಪಾರ ಸಂಬಂಧವಾದ ಒಂದು ಒಪ್ಪಂದವನ್ನು ಗುಟ್ಟಾಗಿ ಮಾಡಿಕೊಂಡಿದ್ದರೆಂಬ ಕಾರಣದಿಂದ ಯುರೋಪಿನ ಶಾಂತಿ ಭಂಗವಾದೀತೋ ಎಂಬ ಸಂಶಯಕ್ಕೆ ಕಾರಣವಿದೆ.

ಪರದೇಶೀ ಬಟ್ಟೆ ಬಹಿಷ್ಕಾರವನ್ನು ಇನ್ನು ಮೇಲೆ ಸಹ ಬಲವಾಗಿ ನಡೆಸುವ ಯೋಚನೆಯನ್ನು ಕಾಂಗ್ರೆಸಿನವರು ಮಾಡುತ್ತಾರೆಂಬ ವರ್ತಮಾನದಿಂದ ಬ್ರಿಟನ್ನಿನ ಉದ್ಯಮಿಗಳಿಗೆ ಗಾಬರಿ ಹುಟ್ಟಿದೆ.

ಲಾಹೋರ್ ಕಾನ್ಸ್ಪಿರೆಸಿ ಕೇಸಿನಲ್ಲಿ ಮರಣ ಶಿಕ್ಷೆಗೆ ಗುರಿ ಮಾಡಲ್ಪಟ್ಟಿದ್ದ ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ ಎಂಬವರು ತಾರೀಕು 23 ನೇ ಸಾಯಂಕಾಲ ಲಾಹೋರ್ ಜೈಲಿನಲ್ಲಿ ಗಲ್ಲಿಗೇರಿಸಲ್ಪಟ್ಟರು. ಇವರ ದೇಹಗಳನ್ನು ಸಟ್ಲೆಜ್ ನದೀ ತೀರದಲ್ಲಿ ದಹನ ಮಾಡಿದರು. ತೂಗಿದ ಸ್ಥಳದಿಂದ 60 ಮೈಲು ದೂರ ಅಲ್ಲಿ ದೇಹಗಳನ್ನು ಸಾಗಿಸಿ ಸುಡಿಸಿದರೆಂತ ಭಗತ್‌ಸಿಂಗರ ತಂದೆ ಲಾಹೋರ್ ಮೀಟಿಂಗಿನಲ್ಲಿ ಹೇಳಿದರು.

ತಾರೀಕು 24 ರಲ್ಲಿ ಮೃತರ ದೇಹದ ಭಸ್ಮವನ್ನು ಲಾಹೋರಿನಲ್ಲಿ ಮೆರವಣಿಗೆ ಮಾಡಿದರು. 50,000 ಜನರು ಸೇರಿದರು. ಕಪ್ಪು ಬಟ್ಟೆ ಧರಿಸಿದ್ದ ಜನರ ಈ ಮೆರವಣಿಗೆಯು ಎರಡು ಮೈಲು ಉದ್ದವಾಗಿತ್ತು. ಮೆರವಣಿಗೆಯಲ್ಲಿ ಭಗತ್‌ಸಿಂಗನ ತಂದೆ ತಾಯಿಗಳೂ ರಾಜಗುರು, ಸುಖದೇವನ ತಾಯಿಯವರೂ ಇದ್ದರು. ... ಯೋರಿಪಿಯನ್ ಮಹಿಳೆಯು ಹಿಂದೂ ದುಸ್ತಿನಲ್ಲಿದ್ದವಳು ಭಗತ್‌ಸಿಂಗನ ತಾಯಿಯ ಕಾಲಿಗೆ ನಮಸ್ಕರಿಸಿದಳು. ದೇಹ ಭಸ್ಮದ ಮೇಲೆ ಹೂವು, ಪನ್ನೀರಿನ ಮಳೆ ಸುರಿಸಿದರು.

ಸಾವಿಗೆ ಹಾಕಲ್ಪಟ್ಟ ಈ ದೇಶಭಕ್ತರೇ ಮೊದಲಾದವರು ಸರಕಾರದ ಅಧಿಕಾರಿಗಳನು ಕೊಲ್ಲುವುದೇ ಮುಂತಾದ ಕೆಲಸಗಳನ್ನು ಮಾಡಿ ಸರಕಾರದ ಮೇಲೆ ಯುದ್ಧ ನಡೆಸುವ ವಿಚಾರ ಮಾಡಿದ್ದರೆಂಬ ತಕ್ಸೀರಿಗೆ ಗುರಿ ಮಾಡಲ್ಪಟ್ಟರು. ಭಗತ್‌ಸಿಂಗರು ಪೋಲೀಸ್ ಸುಪರಿಂಟೆಂಡೆಂಟ್ ಸಾಂಡರ್ಸ್ ಎಂಬವನನ್ನು ಕೊಂದವನೆಂತಲೂ ಆಪಾದನೆ ಇತ್ತು. ಈ ಕೇಸಿನ ಕೈದಿಗಳು ಕಾರಣಾಂತರಗಳಿಂದ ಉಪವಾಸ ಕೈಗೊಂಡೂ ಮತ್ತು ಬೇರೆ ಕಾರಣಗಳಿಂದಲೂ ಕೋರ್ಟಿಗೆ ಹೋಗಲು ನಿರಾಕಾರ ಮಾಡಿದ್ದರಿಂದ ಅಪರಾಧಿಗಳ ಗೈರುಹಾಜರಿನಲ್ಲೇ ವಿಚಾರ ನಡೆಯಬಹುದೆಂತ ಒಂದು ಆರ್ಡಿನೇನ್ಸ್ ಹೊರಡಿಸಿ ಅದರ ಮೇರೆ ನೇಮಕವಾದ ಕೋರ್ಟಿನವರ ತೀರ್ಮಾನದ ಮೇರೆ ತೂಗಿದ್ದಾಗಿದೆ. ಆರ್ಡಿನೇನ್ಸ್ ಮೇರೆ ನೇಮಕವಾದ ಕೋರ್ಟಿನ ಮುಂದೆಯೂ ಅಪರಾಧಿಗಳು ಕೆಲವು ಹಾಜರಾದರು. ಅದರೆ ಕೋರ್ಟಿನಲ್ಲಿ ಸಹ ಅಪರಾಧಿಗಳಿಗೆ ಕೋಳ ಹಾಕಿದ್ದರಿಂದ ಕೋರ್ಟಿಗೆ ಬರಲು ನಿರಾಕರ ಮಾಡಿದರು. ಜಡ್ಜಿಯರ ಪೈಕಿ ಒಬ್ಬರು ಪೋಲೀಸಿನವರು ಅಪರಾಧಿಯರಿಗೆ ಕೋಳ ಹಾಕಿದ್ದನ್ನು ಆಕ್ಷೇಪಿಸಿದರು.

ಇವರನ್ನು ತೂಗಿದ ವರ್ತಮಾನ ಕೇಳಿದನಂತರ ತಾ. 24ರಲ್ಲಿ ಲೆಜಿಸ್ಲೆಟಿವ್ ಎಸೆಂಬ್ಲಿ ಮೀಟಿಂಗಿನಲ್ಲಿದ್ದ ರಾಷ್ಟ್ರೀಯ ಪಕ್ಷದವರು ಮೀಟಿಂಗಿನಿಂದ ಹೊರಟು ಹೋದರು.

ದೇಶದಲ್ಲೆಲ್ಲಾ ಮೆರವಣಿಗೆಗಳೂ, ಮೀಟಿಂಗುಗಳೂ ಹರತಾಳಗಳೂ ನಡೆಯುತ್ತಲಿವೆ.

ಈ ಸಮಯದಲ್ಲಿ ಈ ಅನಾಹುತ ಮಾಡಿ ಕಾಂಗ್ರೆಸಿನವರೊಳಗೆ ಒಡಕು ತರಲು ಅಧಿಕಾರಿಗಳು ಮಾಡಿದ ವಿಚಾರವೆಂದೂ, ಅಂಥಾ ಉಪಾಯಕ್ಕೆ ಜನರು ಒಳಗಾಗಬಾರದೆಂದೂ ಮಹಾತ್ಮ ಗಾಂಧಿಯವರ ಮುಂದಾಳುತನದಲ್ಲಿ ನಂಬಿಗೆ ನೂಚಿಸಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂತ ಸೆನ್‌ಗುಪ್ತರು ಅಭಿಪ್ರಾಯ ಪಟ್ಟಿರುತ್ತಾರೆ.

ಇವರನ್ನು ತೂಗಿದ ವರ್ತಮಾನ ಕೇಳಿದ ಕೂಡಲೇ ಮೌನವಾದ ಮತ್ತು ಕಪ್ಪು ಬಟ್ಟೆ ಧರಿಸಿದ ಕಪ್ಪು ಬಾವುಟ ಹಿಡಿದ ಮೆರವಣಿಗೆಯೊಂದು ಹೊರಟಿತು. ಊರಲ್ಲೆಲ್ಲಾ ಹರತಾಳವಾಯಿತು. ರಾಷ್ಟ್ರೀಯ ಬಾವುಟೆಯನ್ನು ವ್ಯಸನ ಪ್ರದರ್ಶನಕ್ಕಾಗಿ ಧ್ವಜ ಸ್ತಂಭದ ಅರ್ಧದಲ್ಲಿ ಹಾರಿಸಲ್ಪಟ್ಟಿತು. ಅಧ್ಯಕ್ಷರಾದ ಪಟೇಲರನ್ನು 24 ಕುದುರೆ ಕಟ್ಟಿದ ಗಾಡಿಯಲ್ಲಿ ಮೆರವಣಿಗೆ ಮಾಡಬೇಕೆಂತಿದ್ದದ್ದನ್ನು ಬಿಟ್ಟಿದ್ದಾರೆ.

ಕಾನ್‌ಪುರದಲ್ಲಿ ಇವರ ಸಾವಿಗಾಗಿ ಮೆರವಣಿಗೆ ವಗೈರೆ ನಡೆಯುತ್ತಿದ್ದ ಮಧ್ಯೆ ಹಿಂದೂ ಮುಸ್ಲಿಮ್ ದಂಗೆ ಪ್ರಾರಂಭವಾಗಿ 19 ಜನರು ಮೃತರಾಗಿದ್ದಾರೆಂತಲೂ, 50 ಜನರಿಗೆ ಘಾಯವಾಗಿದೆಯೆಂತಲೂ ವರ್ತಮಾನ ಬಂದಿದೆ.

Rubber Stamps of every design
and
Glass sign boards Half tone Blocks
Monogram seals Marble slabs ring
stores etc etc to suit every pocket and taste.

The Crown Rubber Stamp Co ,

12-2 **Mangalore, S. K.**

COORG FOREST DEPARTMENT, DIRECTION DIVISION.

Timber Sale.

At 2 P. M. on Tuesday the 14th April 1931 the following quantities of timber will be sold at Fraserpet by public auction by the Divisional Forest Officer, North Coorg. For further particulars apply to the Chief Forest Officer, Coorg, Mercara:—

Fraserpet.—Honne 1131 c. ft., Matti 445 c. ft. Biti 178 c. ft., Teak poles 362 c. ft.

Somwarpet.—Teak 586 c. ft., Honne 128 c. ft., Nandi 581 c. ft., Matti 667 c. ft., Arasinatega 180 c. ft., Bilwara 90 c. ft., Neralu 175 c. ft., Udi 2 c. ft., Uluve 100 c. ft.

3-2

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಚಾಮೈಲ್ ಮಾಪಿಳ್ಳೆಯವರ ಸ್ವಂತ ಶಾಲೆ

ಡಿಸ್ಟ್ರಿಕ್ಟ್ ಬೋರ್ಡಿನವರಲ್ಲಿ ವಿನಂತಿ.

ನಮ್ಮ ಊರಲ್ಲಿ 3 ವರ್ಷಗಳಿಂದ ನಾವು ಒಂದು ಸ್ವಂತ ಶಾಲೆ ಯನ್ನು ಸ್ಥಾಪನೆ ಮಾಡಿ ಗ್ರಾಂಟ್ ಕೊಡಬೇಕೆಂತ ನಾವು ಕೇಳಿಕೊಂಡಾಗ್ಯೂ ಕೊಡದೆ ಒಂದೊಂದು ಉದಾಹರಣೆಗಳಿಂದ ಹಿಂದಕ್ಕೆ ಕಳುಹಿಸಿ ಬರುವುದು ಬಹು ವ್ಯಸನಕರವಾದ ಸಂಗತಿಯಾಗಿದೆ. ಶಾಲಾ ಇನ್ಸ್‌ಪೆಕ್ಟರು, ಡಿ. ಬಿ. ಮೆಂಬರು ಸಹ ಬಂದು ಅಜಮಾಯಿಸಿ ಮಾಡಿಗಳಲ್ಲಿ ದ್ವೀಪಕ್ಕೆ ಸಮಾನವಾಗಿರುವ ನಿಮ್ಮ ಊರಿಗೆ ಖಂಡಿತ ಸಹಾಯ ಮಾಡಬೇಕೆಂದು ಹೇಳಿರುವ ಹೇಳಿಕೆಯೋ ನರಿ ಇದು ನಮ್ಮ ದುರಾದೃಷ್ಟವೆಂದು ಭಾವಿಸಬೇಕಾಗಿದೆ. ಇದೂ ಅಲ್ಲದೆ ಈ ಕೆಲಸಗಳಿಗೆ ಡಿಸ್ಟ್ರಿಕ್ಟ್ ಬೋರ್ಡಿನವರು ಎಷ್ಟೋ ಸಾವಿರ ರೂಪಾಯಿ ಖರ್ಚ ಮಾಡುತ್ತಿರುವಾಗ್ಯೂ ವಿದ್ಯೆಯಲ್ಲಿ ಹಿಂದುಳಿದ ಮತ್ತು ಕೇವಲ ಗರೀಬರಾದ ನಮಗೆ ಇದೊಂದು ಸಣ್ಣ ಸಹಾಯ ಮಾಡಲು ಮನಸ್ಸು ಬಾರದಿರುವದು ನಮ್ಮ ದುರ್ದೈವ, ದುರಾದೃಷ್ಟ. ಆದರೆ ಇನ್ನೊಂದು ಬಜೆಟ್ ಮೀಟಿಂಗಿನಲ್ಲಿ ನಿಮ್ಮ ಸಂಗತಿ ಆಲೋಚನೆ ಮಾಡಲಾಗುವದೆಂಬದಾಗಿ ನಂ. $\frac{455}{28\text{-}6\text{-}30}$ ರ ಎಂಡೋರ್ಸ್‌ಮೆಂಟ್ ದೊರೆತಿರುತ್ತೆ.

ಬಜೆಟ್ ಮೀಟಿಂಗ್ ಸಮೀಪಿಸಿದ್ದಾಗಿ ಕಾಣುತ್ತೆ. ಈ ವರ್ಷ ತಾವಾದರೂ ನಮಗೆ ಸಹಾಯ ಮಾಡಿ ಗರೀಬರೈತರನ್ನು ಪಾಲನೆ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಕೆ. ಯಂ. ಮೂಸ.

ಕಕ್ಕಬೆ ಸ್ಕೂಲ್.

"ಕಾರೆಮೇನಸ್ ಯೂನಿಯನ್ ಸೊಸೈಟಿ ಕಕ್ಕಬೆ" ಎಂಬ ಒಂದು ಸಂಘವು 1919 ನೇ ಇಸವಿ ಆರಂಭದಿಂದ ಕಕ್ಕಬೆ ಸ್ಕೂಲ್ ವಿದ್ಯಾರ್ಥಿಗಳ ಉನ್ನತ ಸ್ಥಿತಿಗಾಗಿ ಕೆಲಸ ಮಾಡುತ್ತಿದ್ದು ಅಲ್ಲದೆ, ಎರಡಾಂತಸ್ತಿನ ಈ ಶಾಲೆಯ ಕಟ್ಟಡವನ್ನು ಬಡಾಯಿಸಿದ್ದಾಯಿತು. ಮೊದಲನೇ ಸರ್ತಿ ಬಡಾಯಿಸಿದಾಗ ಡಿ. ಬೋರ್ಡಿನವರು ಅರ್ಧ ಹಣ ಕೊಟ್ಟಿರುತ್ತಾರೆ. ಈಗ ಎರಡನೇ ಸರ್ತಿ 1,500 ರೂಪಾಯಿ ಖರ್ಚ ಮಾಡಿ ಗ್ರಾಮಸ್ಥರೇ ಕಟ್ಟಿಸಿದ 3 ಅಂಕಣದ ಕಟ್ಟಡಕ್ಕೆ ಡಿ. ಬೋರ್ಡಿನವರು ಯಾವದೊಂದು ಸಹಾಯವೂ ಕೊಟ್ಟಿರುವುದಿಲ್ಲ. ಈ ಹೊಸ ಕಟ್ಟಡಕ್ಕೆ ಗ್ರಾಮಸ್ಥರು ಕಳೆದ ವರ್ಷವೇ ಹುಲ್ಲು ಹಾಕಿ ಪೂರೈಸಿ ಡಿ. ಬೋರ್ಡಿಗೆ ವಹಿಸಿ ಕೊಟ್ಟು 5ನೇ ಸ್ಟೇಂಡಾರ್ಡು ಸಹ ಇಟ್ಟಿರುತ್ತಾರೆ. ಈ ವರ್ಷ 6 ನೇ ಸ್ಟೇಂಡಾರ್ಡಿಗೆ ಬೇಕಾದ ಯುವಕರು ಸಹ ಇರುತ್ತಾರೆ.

ಈ ಪ್ರಾಂತ್ಯವು ಈ ಕೊಡಗು ದೇಶದ ಕರಿಕೆ, ಬಸ್ ಓಡದ ಮೂಲೆ ಪ್ರದೇಶವಾಗಿರುತ್ತೆ. ಹೀಗಿರುತ್ತ ಈ ಪ್ರಾಂತ್ಯದ ರೈತರಿಗೆ ವಿದ್ಯೆ ಕಮ್ಮಿಯಾಗಿ ನಡೆಸಾಗಬೇಕಾಗಿದೆಯೇ ತಿಳಿಯದ ರೈತರ ಮಕ್ಕಳಿಗೆ ನಡೆಸುವವರು. ವಿದ್ಯೆ ಕಲಿಸುವುದು ಮುಖ್ಯ ಕೆಲಸವಾಗಿರುತ್ತೆ. ಬೇರೆ ಪ್ರಾಂತ್ಯಗಳಲ್ಲಿ ಕಡ್ಡಾಯದ ವಿದ್ಯೆ ಸಹ ಕೊಡುವುದಾಗಿ ತಿಳಿಯುತ್ತೆ. ಹೀಗಿರುವಲ್ಲಿ ವಿದ್ಯೆಯ ಅಭಿರುಚಿಯಿರುವ ಈ ಮೂಲೆ ಪ್ರಾಂತ್ಯದವರು, ಬಿಕ್ಕಟ್ಟಿನಿಂದ 1,500 ರೂಪಾಯಿ ಖರ್ಚಿನಿಂದ ಕಟ್ಟಿಸಿದ ಹೊಸ ಕಟ್ಟಡವನ್ನು ಹಾಗೆ ಹಾಕದೆ ಬೀಳಿಸುವುದಕ್ಕಿಂತ ದೇಶದ ಬೇರೆ ಪ್ರಾಂತ್ಯದಲ್ಲಿ ಹೊಸದಾಗಿ ಕಟ್ಟುವ ಕೆಲಸವನ್ನು ನಿಲ್ಲಿಸಿ, ಕಟ್ಟಿದ ಕಟ್ಟಡಕ್ಕೆ ಹುಂಚು ಹಾಕಿ 6 ನೇ ತರಗತಿ ತೆರೆಯುವಂತೆ ಮಾಡಿಕೊಡಬೇಕಾಗಿ ಡಿ. ಬೋರ್ಡಿನವರನ್ನು ಕೇಳಿಕೊಳ್ಳಬೇಕಾಗಿ ನೆನೆಸುವವರು ಡಿ. ಬೋರ್ಡು ಪ್ರೆಸಿಡೆಂಟರವರಿಗೆ ಬರೆದಿರುತ್ತಾರೆ. ಡಿ. ಬೋರ್ಡಿನವರು ಹಣ ಇಲ್ಲವೆಂದು ಹೇ

ಲು ಈಗ ಸಂದರ್ಭವು ಕಂಡು ಬರುವುದಿಲ್ಲ ಯಾಕಂದರೆ—ಕಳೆದ ವರ್ಷವೇ 40,000 ರೂಪಾಯಿಗಳನ್ನು ಬಡ್ಡಿಗೆ ಬ್ಯಾಂಕಿನಲ್ಲಿ ಇಟ್ಟಿರುವುದಾಗಿ ಪತ್ರಿಕೆಗಳಿಂದ ತಿಳಿದು ಬಂದಿರುವುದರಿಂದ ಈ ಮೊಳೆ ಪ್ರದೇಶದ ಕೆಲಸವನ್ನು ಪೂರೈಸಿ ಕೊಡುವಂತೆ ವಿನಂತಿ.—

ಉದಿಯಂಡ ಮಾಚ್ಚಯ್ಯ,
ಪ್ರೆಸಿಡೆಂಟ್.

ಖಾದಿ ಬಟ್ಟೆ ವ್ಯಾಪಾರ.

ಸ್ವಾಮಿ, ಎಡಿಟರವರೇ

ಇತ್ತೀಚೆಗೆ ಕೊಡಗಿನಲ್ಲಿ ಅನೇಕ ಬಟ್ಟೆ ವ್ಯಾಪಾರಸ್ಥರು ಕೊಡಗಿನಲ್ಲಿ ಹುಟ್ಟಿದ ಸ್ವದೇಶಾಭಿಮಾನವನ್ನು ಕೆಡಿಸಲಿಕ್ಕೋ, ಎಂಬ ಹಾಗೆ ಪರದೇಶದ ಮಿಲ್ಲ್ ಖಾದಿಯನ್ನು ತರಿಸಿ ಶುದ್ಧ ಖಾದಿ ಎಂತ ತೋರಿಸಿ ಮಾರಾಟ ಮಾಡುತ್ತಾ, ಶುದ್ಧ ಖಾದಿಯನ್ನು ಉಡಲು ಕುತೂಹಲದಿಂದ ಬರುವ ಗಿರಾಕಿಗಳನ್ನು ಗುಂಡಿಗೆ ಬೀಳಿಸುತ್ತಿರುವುದು ಕಾಣ ಬರುತ್ತದೆ. ಈ ವ್ಯಾಪಾರವು ದಿನೇ ದಿನೇ ಹೆಚ್ಚುತ್ತಲಿದೆ. ತಿಳಿಯದ ಜನರು ಇದು ಶುದ್ಧ ಖಾದಿ ಎಂದು ತೆಗಯುತ್ತಲಿರುವರು. ಇದರಿಂದ ಪರದೇಶಿ ಬಟ್ಟೆಗಳನ್ನು ಮಾರಾಟ ಮಾಡುವಷ್ಟೇ ಕೆಡಕನ್ನು ಈ ವ್ಯಾಪಾರಿಗಳು ಮಾಡುವುದಲ್ಲದೆ ಜನರನ್ನು ಮೋಸ ಪಡಿಸಿ ನಾಶಕ್ಕೂ ಗುರಿಯಾಗುವರು. ಯಾವ ವಿಧದಲ್ಲಿಯಾದರೂ ಹಣವೇ ಇವರಿಗೆ ಬೇಕಲ್ಲದೆ, ದೇಶಾಭಿಮಾನವು ಇವರಲ್ಲಿ ಇಲ್ಲವೆಂದು ಚೆನ್ನಾಗಿ ಗೊತ್ತಾಗುತ್ತದೆ. ಸತ್ಯಾಗ್ರಹಿಗಳು ಇವರನ್ನು ನಾನಾ ವಿಧದಲ್ಲಿ ಹೀಗೆ ಮಾಡ ಬಾರದೆಂದು ಕೇಳಿಕೊಂಡರೂ ಈ ವರೆಗೆ ಪ್ರಯೋಜನವಾಗಲಿಲ್ಲ. ಹೀಗಾದರೆ ದೇಶದ ಸ್ಥಿತಿಯು ಏನಾದೀತು ಎಂಬುದು ಗೊತ್ತಾಗುವುದಿಲ್ಲ. ಇದನ್ನು ತಡೆ ಮಾಡಲು ಬೇರೆ ಯಾವ ಕಾರಣವೂ ಕಾಣುವುದಿಲ್ಲ. ವಿಶೇಷವಾಗಿ ಜವಳಿ ವ್ಯಾಪಾರಿಗಳು ಕೊಡಗಿಗೆ ಪರ ಜಿಲ್ಲೆಯವರಾದರೂ ತಾವುಗಳು ಹಿಂದೂಸ್ಥಾನದವರು ಎಂಬುದನ್ನು ಮರೆತಂತೆ ಕಾಣುತ್ತದೆ. ಹೀಗಿಲ್ಲದ ಪಕ್ಷ ಇವರು ಪರದೇಶೀ ಬಟ್ಟೆಯನ್ನು ಒಳ್ಳೆ ಕಮ್ಮಿ ಧಾರಣೆಯಿಂದ ತಂದು ಶುದ್ಧ ಖಾದಿ ಎಂದು ಮಾರಲಿಕ್ಕಿಲ್ಲ. ಈ ವ್ಯಾಪಾರವನ್ನು ನಿಲ್ಲಿಸಲು ತಕ್ಕ ಏರ್ಪಾಡನ್ನು ಸತ್ಯಾಗ್ರಹ ಮಂಡಳಿಯವರು ಕೂಡಲೇ ಮಾಡದ ಪಕ್ಷ ಕೊಡಗಿನಲ್ಲಿ ಸತ್ಯಾಗ್ರಹಿಗಳು ಹುಟ್ಟಿಸಿದ ರಾಷ್ಟ್ರೀಯ ಪ್ರೇಮವೂ ಮಹಾತ್ಮರ ತತ್ವ ಬೋಧನೆಯೂ ವ್ಯರ್ಥವಾಗುತ್ತೆ. ಇಂಥಾ ಜವಳಿ ಅಂಗಡಿಗಳನ್ನು ಕೂಡಲೇ ಪಿಕೆಟಿಂಗ್ ಕೆಲಸಕ್ಕೆ ಪ್ರಾರಂಭ ಮಾಡಿ ಇದನ್ನು ನಿಲ್ಲಿಸ ತಕ್ಕದ್ದೇ ಈ ದೇಶ ಭಕ್ತರ ಕರ್ತವ್ಯವಾಗಿದೆ. ಹೀಗೆ ಪಿಕೆಟ್ ಮಾಡಲು ಶುರು ಮಾಡಿದರೆ ಮಿಲ್ಲ್ ಖಾದಿ ಪ್ರಚಾರವನ್ನು ನಿಲ್ಲಿಸಿದ ಹಾಗಾಗುವುದು ಮಾತ್ರವೇ ಅಲ್ಲದೆ, ಪರದೇಶೀ ಬಟ್ಟೆಯ ವ್ಯಾಪಾರವನ್ನು ಸಹ ನಿಲ್ಲಿಸಿದ ಹಾಗೆ ಆಗುತ್ತೆ. ಜವಳಿ ವ್ಯಾಪಾರಿಗಳು ಒಗ್ಗಟ್ಟಾಗಿ ಎಲ್ಲರೂ ಶುದ್ಧ ಖಾದಿಯನ್ನೇ ತರಿಸಿಕೊಂಡು ಈ ವರೆಗೆ ವ್ಯಾಪಾರ ಮಾಡಿದ್ದ ಪಕ್ಷ ಕೊಡಗಿನಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾದ ಖಾದಿ ಬಟ್ಟೆಯನ್ನು ಪ್ರಚಾರ ಪಡಿಸ ಬಹುದಿತ್ತು. ಯಾರಿಗೂ ನಷ್ಟಕ್ಕೆ ಕಾರಣವಿರುತ್ತಿರಲಿಲ್ಲ. ಈ ವಿಷಯವನ್ನು ಸತ್ಯಾಗ್ರಹ ಮುಂದಾಳುಗಳು ಕೂಡಲೇ ಯೋಚಿಸಿ ತಕ್ಕ ಕಾರ್ಯವನ್ನು ಕೈಕೊಂಡು ದೇಶವನ್ನು ಉದ್ಧಾರ ಮಾಡಬೇಕಾಗಿ ನಂಬುತ್ತೇವೆ.

ದೇಶಭಕ್ತ

ಸತ್ಯಾಗ್ರಹಿಗಳಿಗೆ ಆಮಂತ್ರಣ.

ಅಯ್ಯಾ,

ಸತ್ಯಾಗ್ರಹ ಮಂಡಲದ ಮುಖಂಡರಾದ ಕಣ್ಣನೂರು ಜೈಲಿನಲ್ಲಿ ಆರು ತಿಂಗಳು ಜೈಲುವಾಸವನ್ನು ಮಾಡಿ ಬಂದ ಮ. ರಾ. ಶ್ರೀ ಯಚ್. ಆರ್. ಕೃಷ್ಣಯ್ಯನವರೂ, ಕೆ. ಸಿ. ಕರುಂಬೈಯ್ಯನವರೂ, ಪೊನ್ನಂಪೇಟೆನಾಡು ಬೆಸಗೂರು ಗ್ರಾಮಸ್ಥರ ಆಮಂತ್ರಣದ ಮೇರೆ ತಾ. 19—3—31 ರಲ್ಲು ಬೆಳಿಗ್ಗೆ 11 ಗಂಟೆಗೆ ಗ್ರಾಮಕ್ಕೆ ಬಂದರು. ಗ್ರಾಮಸ್ಥರೆಲ್ಲರೂ ಅವರ ದುರ್ಗಿ ದೇವಸ್ಥಾನದಲ್ಲಿ ಸೇರಿ ವಾದ್ಯ, ಸ್ವರಾಜ್ಯಭಾವುಟ, ಮಹಾತ್ಮರ ಫೋಟ ಪಲ್ಲಕ್ಕಿ[illegible]ದಿಂದೊಡಗೂಡಿ ಜಯಘೋಷ ಮಾಡುತ್ತಾ ಗ್ರಾಮದ ಕೇರಿ ಹೊಳೆ ಹತ್ತಿರ ಬಂದರು. ಸತ್ಯಾಗ್ರಹಿಗಳಾದ ಕೆಚ್ಚೆಟ್ಟಿರ[illegible] ಐಯ್ಯಮ್ಮನವರೂ, ಚೊಟ್ಟೆಕಾಳಪಂಡ ಅಪ್ಪಣ್ಣನವರೂ, ಮಳಾಂಡ ಚಂಗಪ್ಪನವರೂ ಕೋದೇಂಗಡ ಕಾರ್ಯಪ್ಪನವರೂ ಅಲ್ಲದೆ ಇದೇ ಗ್ರಾಮಸ್ಥರಾದ ಮಡಿಕೇರಿ ಜೈಲಿನಿಂದ ಬಿಡಲ್ಪಟ್ಟ ಪೊನ್ನಿಮಾಡ ಮಾಚಯ್ಯನವರೂ, ಸಹ ಬಂದಿದ್ದರು. ಸದರಿ ಸ್ಥಳದಲ್ಲಿ ಎಲ್ಲರಿಗೂ ಹೂವಿನ ಮಾಲೆಯನ್ನು ಹಾಕಿ ಜಯಘೋಷದೊಡನೆ ಗ್ರಾಮದ ಮಹಾದೇವರ ದೇವಸ್ಥಾನಕ್ಕೆ ಹೋಗುವಾಗ ದಾರಿಯಲ್ಲಿ ಪೊನ್ನಿಮಾಡ ಮನೆಯವರು ಸತ್ಯಾಗ್ರಹಿಗಳೆಲ್ಲರಿಗೂ ಹೂವಿನ ಮಾಲೆಯನ್ನು ಹಾಕಿದ್ದಲ್ಲದೆ ಎಳನೀರು, ಬಾಳೆಹಣ್ಣು ಮೊದಲಾದ ತಿಂಡಿ ತೀರ್ಥಗಳಿಂದ ಸತ್ಕರಿಸಿದರು. ಅಲ್ಲಿಂದ ದೇವಸ್ಥಾನಕ್ಕೆ ಹೋಗಿ ದೇವರ ಪೂಜೆ ತೀರಿಸಿ ಮಂಗಳಾರತಿ ಪ್ರಸಾದಗಳನ್ನು ಸ್ವೀಕರಿಸಿ ಅಲ್ಲಿಂದ ದುರ್ಗಿ ದೇವಸ್ಥಾನಕ್ಕೆ ಬಂದು ಅಲ್ಲಿ ಪೂಜೆ ಆದ ನಂತರ ಊಟ ಉಪಚಾರಗಳನ್ನು ತೀರಿಸಿಕೊಂಡು ಊರು ಮಂದಾದ ಸೋಲೇಂಗಟ್ಟಿ ಎಂಬಲ್ಲಿಗೆ ಹೋಗಿ ಮ. ರಾ. ಶ್ರೀ ಅರಮಣಮಾಡ ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ನಡೆಯಿತು. ಮ. ರಾ. ಶ್ರೀ. ಕೆ. ಸಿ. ಕರುಂಬೈಯ್ಯನವರೂ, ಹೆಚ್. ಆರ್ ಕೃಷ್ಣಯ್ಯನವರೂ ಮತ್ತು ಪೊನ್ನಿಮಾಡ ಮಾಚಯ್ಯನವರೂ ಈಗಿನ ರಾಜಕೀಯ ಪರಿಸ್ಥಿತಿಯನ್ನೂ ರಾಜಿಸಂಧಾನ ವಿವರವನ್ನೂ ಮತ್ತು ಖಾದಿ, ನಿಶಾ ನಿಷೇಧ, ಬಾವುಟ, ಒಗ್ಗಟ್ಟು ಇತ್ಯಾದಿಗಳನ್ನು ಕುರಿತು ಜನರ ಮನಸ್ಸಿಗೆ ಒಪ್ಪುವಂತೆ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು. ಮತ್ತು ಕರುಂಬೈಯ್ಯನವರು ಹೆಚ್ಚಿನದಾಗಿ ಜೈಲುವಾಸದ ವಿಷಯವನ್ನು ಮತ್ತು ಈ ಊರಿನಿಂದ ನಾಲ್ಕು ಜನ ಸತ್ಯಾಗ್ರಹಿಗಳು ಒಂದು ಒಂದು ವರ್ಷದಿಂದ ಕೆಲಸ ಮಾಡಿದ್ದಲ್ಲದೆ ಇವರ ಪೈಕಿ 2 ಜನರು ಜೈಲುವಾಸವನ್ನು ಮಾಡಿದರು. ಇದಕ್ಕಾಗಿ ಊರವರಾದ ನಿಮಗೆ ಎಷ್ಟು ವಂದಿಸಿದರೂ ಸ್ವಲ್ಪವೇ ಎಂಬದಾಗಿ ಮನಂತಾದ ಭಾಷಣಗಳನ್ನು ಮಾಡಿದರು. ಗ್ರಾಮದ ಪರವಾಗಿ ಮ. ರಾ. ಶ್ರೀ ಅರಮಣಮಾಡ ಸಂಜಪ್ಪನವರ, ಸತ್ಯಾಗ್ರಹಿಗಳ ಸ್ವಾರ್ಥತ್ಯಾಗದ ಕೆಲಸಕ್ಕೆ ಬಹಳ ಕೊಂಡಾಡಿ ಈಗ ನಡೆಸುತ್ತಿರುವ ಶಾಂತಿಮಯ ಯುದ್ಧಕ್ಕೆ ಗ್ರಾಮದವರು ಎಲ್ಲಾ ತರದ ಸಹಾಯವನ್ನು ಕೊಡುವದಲ್ಲದೆ ನಿಶಾ ನಿಷೇಧಕ್ಕೂ, ಖಾದಿ ಪ್ರಚಾರಕ್ಕೂ ತುಂಬಾ ಸಹಾಯವನ್ನು ಕೊಡುತ್ತೇವೆಯೆಂಬದಾಗಿ ವಚನ ಕೊಟ್ಟ ನಂತರ ಅಧ್ಯಕ್ಷರಿಗೆ ವಂದನೆಯಿಂದ ಸಭೆಯು ಬರಕಾಸ್ತಾಯಿತು.

ಅರಮಣಮಾಡ ಕುಟ್ಟಪ್ಪ

ಆತ್ಮವಂಚನೆ, ನಗೆಗೆ ಎಡೆ.

ಇದು ವರೆಗೆ 'ಪುರಾತನ ಪದ್ಧತಿ' ವೆಂಬ ದುಷ್ಟ ಪಿಶಾಚಿಯ ಮಾಯಾಪಾಶಕ್ಕೆ ಬದ್ಧರಾಗಿದ್ದು, ಈಗ ತಾನೇ ನಿದ್ರೆಯಿಂದೆಚ್ಚತ್ತು ತಮ್ಮ ಉನ್ನತಿಗೆ ನಾಶಕಾರಕವಾದ ಪದ್ಧತಿಗಳನ್ನು ಮೂಲೆಗೊತ್ತಲು ಬದ್ಧಕಂಕಣರಾದ ಹಲವು ಮಹನೀಯರು ಈ ವಿಷಯದಲ್ಲಿ ತೆಗೆದುಕೊಳ್ಳುವ ಶ್ರಮವನ್ನು ನಾವು ವೃತ್ತಾಂತ ಪತ್ರಿಕೆಗಳಿಂದ ತಿಳಿಯುತ್ತೇವೆ. ಈ ನವೀನ ಜ್ಞಾನೋದಯಕ್ಕನುಸಾರವಾದ ಪದ್ಧತಿ ಸಂಸ್ಕಾರದಿಂದ ಅನೇಕರು ಲಾಭವನ್ನು ಪಡೆದಿರುತ್ತಾರೆ. ಇಂಥಾ ವಾತಾವರಣದ ಪ್ರಸರಣವು ನಾಪೋಕ್ಲು ಗ್ರಾಮಕ್ಕೂ ವ್ಯಾಪಿಸಲು ಕೆಲವು ಮುಖಂಡರು ತಾವೂ ಸಹ ಸಮಾಜ ಸುಧಾರಣೆಯಿಂದ ಸೌಖ್ಯ ಹೊಂದಬೇಕೆಂದು ನಿರ್ಧಾರಮಾಡಿ, ಊರವರೆಲ್ಲರೂ ಒಂದು ದಿವಸ ತಮ್ಮ ಊರಂಬಲದಲ್ಲಿ ಸೇರಬೇಕೆಂದು ನೋಟೀಸು ಮಾಡಿದರು. ಅದಕ್ಕನುಸಾರವಾಗಿ ಊರವರೆಲ್ಲರೂ ಅಂಬಲದಲ್ಲಿ ನೆರೆದು ಕಾರ್ಯಕ್ರಮದ ಪಟ್ಟಿಯಲ್ಲಿದ್ದ ವಿಷಯಗಳೊಂದೊಂದನ್ನೇ ಚರ್ಚಿಸಿ ನೆರೆದವರೆಲ್ಲರೂ ಸೈನ್ ಹಾಕಿದ ನಂತರ ಈ ಕೆಳಗಿನ ಕರಾರುಗಳನ್ನೊಳಗೊಂಡ ಒಂದು ಮಹಜರು ಮಾಡಲ್ಪಟ್ಟಿತು.

ಕರಾರುಗಳು (1) ನಮ್ಮ ಸಾಮಾಜಿಕ ಕರ್ತವ್ಯಕ್ಕೆ ಕುಂದು ಕೊರತೆಗಳನ್ನು ತರುವ ಹಂದಿ ಮಾಂಸ ಮೊದಲಾದ ಪದಾರ್ಥಗಳನ್ನು ಇನ್ನು ಮುಂದೆ ಶುಭಾಶುಭಗಳಿಗೆ ಸೇರಿಸಕೂಡದು ಮತ್ತು ಅವುಗಳನ್ನು ಸಾಕ ಕೂಡದು. (2) ನೈತಿಕ ಮಾರ್ಗಕ್ಕೆ ಭಂಗ ತರುವಂಥ ನಿಶಾ ಪಾನಗಳಿಗೆ ಬಹಿಷ್ಕಾರ ಹಾಕಬೇಕು. (3) ಮಹಾತ್ಮರ ಸಂದೇಶವನ್ನು ಪಾಲಿಸಲು ಯಾರೂ ತಮ್ಮ ಹಿತ್ತಲುಗಳಲ್ಲಿರುವ ಬೈನೆ ಮರಗಳನ್ನು ಸೇಂದಿ ಇಳಿಸಲು ಕೊಡಕೂಡದು. (4) ಲಗ್ನ ಸಮಾರಂಭದ ಖರ್ಚು ಮಿತಿ ಮಾಡಬೇಕು. (5) ವಿತರ ಮ ಮಾಡಲು ಪ್ರ[illegible]ತ್ನ ಪಡಬೇಕು. ಮತ್ತು (6) ಮದುವೆ ಕೆಲಸವನ್ನು ಸಾಧ್ಯವಿದ್ದರೆ ಒಂದೇ ದಿವಸದಲ್ಲಿ ತೀರಿಸಿ ಬಿಡಬೇಕು.

ಒಪ್ಪಂದವಾದ ಮರು ದಿವಸವೇ ತಾವು ನಿರ್ಧರಿಸಿದ ವಿಷಯಗಳನ್ನು ಕಾರ್ಯರೂಪಕ್ಕೆ ತರಲು ಅನೇಕರು ತಮ್ಮಲ್ಲಿದ್ದ ಹಂದಿ ಕೋಳಿಗಳನ್ನು ಒಂದೊಂದಾಗಿ ನಾಶ ಮಾಡಲಾರಂಭಿಸಿದರು, ಬೈನೆ ಮರ ಕಟ್ಟಲು ಅಟಂಕ ಮಾಡಿದರು, ತಾವು ಪಾಪ ನಿವೃತ್ತರಾದೆವೆಂದು ಹಿಗ್ಗುತ್ತಿದ್ದರು. ಸಾಧಾರಣ ಒಂದೇ ಮಾಸದಲ್ಲಿ 120 ಹಂದಿ ಮತ್ತು ಸಾಧಾರಣ 150 ಕೋಳಿಗಳು ತಮ್ಮ ಅಂತಿಮ ಕಾಲವನ್ನು ಕಂಡವು.

ಆದರೆ "ಒರುತ್ತ ಒರುತ್ತಾ ರಾಯನ ಕುದುರೆ ಕತ್ತೆ" ಎಂಬಂತೆ ಅವರ ವರ್ತನೆಯು ವಿಕೃತಿಯನ್ನು ಹೊಂದಿತು. ಹಲವರು ಹಂದಿ ಸಾಕಲು ಶುರು ಮಾಡಿದರು, ಕೋಳಿಗಳನ್ನು ಪರ ಊರಗಳಿಂದ ಬೆಲೆಗೆ ಕೊಂಡುಕೊಂಡರು, ಬೈನೆ ಮರ ಕಟ್ಟಲು ಬಿಲ್ಲವರಿಗೆ ಆಹ್ವಾನ ಪತ್ರ ಕಳುಹಿಸಿದರು. ಅಕ್ಕಟ! ತಾವು ಮಾಡಿದ ಒಪ್ಪಂದವನ್ನು "ತಿಪ್ಪೆಗಸಮಿಂ" ಎನ್ನಲು ತೊಡಗಿದರು. ಮಹಜರು ಮಾಡಲು ವಿಶ್ವಪ್ರಯತ್ನಪಟ್ಟ ಮನೆಯವರೇ ತಮ್ಮ ಈಗ ತಾನೇ ಕಳೆದ ಮದುವೆಗೆ ಮಾಂಸಾಹಾರವನ್ನು ಕಲ್ಪಿಸಿದ್ದರು. ಇದನ್ನು ಕಂಡ ಪರ ಗ್ರಾಮದವರು ನಿಮ್ಮ ಊರ ಹಿಡುಕಟ್ಟು ಏನಾಯಿತು? ಎಂದು ಹಲವರನ್ನು ಕೇಳಿದರು. ನಾವೇಕೆ ಮಾಡಬೇಕು, ನಾಪೋಕ್ಲಿನವರಂತೆ ಮಾಡುವುದಕ್ಕೋ ಎಂದು ಜನರು ಸಾಮಾನ್ಯವಾಗಿ ಆಡುತ್ತಾರೆ. ಅಹಂತ. ಹೋಗಲಿ! ದಿಗಂತ ವಿಶ್ರಾಂತವಾದ ಕೀರ್ತಿಗೆ ಮಂಟಪ ಪ್ರಾಯನಾದ ಮಹಾತ್ಮ ಗಾಂಧಿಯು ಯಾವುದನ್ನು 'ಸಕಲ ಪಾಪದ ಕೂಪ ಭೂತ ಪಿಶಾಚಿ' ಎಂದಿರುವನೋ ಅದೇ ನಿಶಾ ವೇಶ್ಯಾ ಸ್ತ್ರೀಯು ನಾಪೋಕ್ಲಿನವರ ಲಾಲನೆ ಪಾಲನೆಯಲ್ಲಿ ಆನಂದ ಮಯಳಾಗಿರುವಳು. ಇಂಥಾ ಆತ್ಮ ವಂಚನೆಯೂ, ನಿದ್ರಾವಸ್ಥೆಯೂ ಅಪಹಾಸ್ಯಕ್ಕೆ ಎಡೆಯಾಗಿದೆ. ಗುರುದ್ರೋಹವೂ ಬೇರೊಂದಿದೆಯೇ?

ನಾಪೋಕ್ಲಿನವರನ್ನು ಅಲ್ಲಗಳೆಯುವುದು ಈ ಬಾತ್ಮೀದಾರನ ಉದ್ದೇಶವಲ್ಲ, ತಾವು ಮಾಡಿರುವ ಕೃತ್ಯಗಳ ಪಶ್ಚಾತ್ತಾಪವನ್ನು ಈ ಬಾತ್ಮಿ ಓದಿ ಪಡುವರೋ ಎಂಬುದ[illegible]ದ ನನ್ನ ಕೋರಿಕೆ. ಹಾಗಿದ್ದರೆ ಇಂದಿನಿಂದಲೇ ಸಮ್ಯಕ್ಕಾದ ರೀತಿಯಲ್ಲಿ ನಡೆದು ನಿಮ್ಮ ಜನ್ಮವನ್ನು ಪಾವನ ಪಡಿಸಿಕೊಳ್ಳುವರಾಗಿ ಕೋರುವ.

'ಊರವ'

ಸೋಮವಾರಪೇಟೆ ಬಿಸಿಲೆಘಾಟ್ ರೋಡ್.

1. ಸೋಮವಾರಪೇಟೆಯಿಂದ ಬೆಟ್ಟದಳ್ಳಿ ಗ್ರಾಮದ [illegible]ಕ್ಕನಳ್ಳಿ ಹೊಲ ಎಂಬ ಸ್ಥಳಕ್ಕೆ ಒಂದು ಗಾಡಿ ರಸ್ತೆಯು ಸಾಧಾರಣವಾಗಿರುತ್ತದೆ. ಈ ರಸ್ತೆಯು 9½ ಮೈಲು ದೂರವಿರುತ್ತದೆ. ಈ ರಸ್ತೆಯನ್ನು ವರ್ಷಂಪ್ರತಿ ಡಿಸ್ಟ್ರಿಕ್ಟ್ ಬೋರ್ಡಿನಿಂದ ರಿಪೇರಿ ಮಾಡಿಸುತ್ತಾ ಇರುವದಾಗಿರುತ್ತದೆ. ಈ ರಸ್ತೆಯು ಯಾವ ರಸ್ತೆಗೂ ಕೂಡಿಸದ್ದರಿಂದ ಯಾವ ಪ್ರಯೋಜನವೂ ಇರುವದಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನಿಂದ ಹಣ ನಷ್ಟವಲ್ಲದೆ ವರ್ಷಂಪ್ರತಿಯೂ ಅನಾವಶ್ಯಕವಾಗಿ ಹಣ ವ್ಯಯ ಮಾಡುವದೆಂದೇ ಹೇಳಬಹುದು.

2. ಜಕ್ಕನಳ್ಳಿ ರಸ್ತೆಯು 7 ಮೈಲು 3 ಫರ್ಲಾಂಗಿನಿಂದ [illegible]ದಳ್ಳಿ ಗ್ರಾಮಸ್ಥರು ಸಾಧಾರಣವಾಗಿ 5—5 ಅಡಿ ಅಗಲದ ಒಂದು ಗ್ರಾಮ ರಸ್ತೆಯನ್ನು ಮಾಡಿಸಿರುತ್ತಾರೆ. ಈ ರಸ್ತೆಯನ್ನು ಗ್ರಾಮಸ್ಥರೇ ಸ್ವಂತ ಖರ್ಚಿನಿಂದ ಮಾಡಿರುತ್ತಾರೆ. ಈ ರಸ್ತೆಯು ಒಂದೂವರೆ ಮೈಲು ದೂರ ಇರಬಹುದು. [illegible]ಗೆ ಸ್ವಲ್ಪ ಹಣವನ್ನು ಡಿ. ಬೋರ್ಡಿನಿಂದ ಕೊಡುತ್ತಾ ಇರುತ್ತಾರೆ. ಈಗಲೂ ರಿಪೇರಿಯಲ್ಲಿ ಇರುತ್ತದೆ.

3. ಸುಮಾರು 20 ವರ್ಷಗಳ ಹಿಂದೆ ಜಕ್ಕನಳ್ಳಿ ರಸ್ತೆ 7 ಮೈಲು 3 ಫರ್ಲಾಂಗಿನಿಂದ ಬಿಸಿಲೆ ಘಾಟಿ ರಸ್ತೆಗೆ ಕೂಡಿಸಬೇಕೆಂದು ಸರಕಾರದವರು ಸುಮಾರು 200 ರೂಪಾಯಿ ಖರ್ಚುಮಾಡಿ ಕಾಡು ಕಡಿದು ಅಳತೆ ಮಾಡಿ ಯಾವ ಕಾರಣದಿಂದಲೋ ನಿಲ್ಲಿಸಿರುತ್ತಾರೆ. ಪುನಃ 15 ವರ್ಷಗಳ ಹಿಂದೆ ಈ ರಸ್ತೆಯನ್ನು ಬಿಸಿಲೆ ಘಾಟಿ ರಸ್ತೆಗೆ ಸೇರಿಸಿ ಕೊಡಬೇಕೆಂದು ಕೇಳಿದ್ದಾಗಿರುತ್ತದೆ. ಈ ಗ್ರಾಮರಸ್ತೆಯಾಗಿ ಮಾಡಿದಲ್ಲಿ [illegible]ದಳಿಂದ ಗಾಡಿ ರಸ್ತೆ ಮಾಡಿಸಬಹುದು ಈಗ ಸರಕಾರದಲ್ಲು [illegible] ಇರುವುದಿಲ್ಲವೆಂದು 60/ ರೂಪಾಯಿ ಮಂಜೂರು ಮಾಡಿದ ಮೇರೆ ಗ್ರಾಮಸ್ಥರು 4—5 ಅಡಿ ಅಗಲದಲ್ಲಿ ಒಂದು ಗ್ರಾಮ ರಸ್ತೆಯನ್ನು ಮಾಡಿದ್ದಾಗಿರುತ್ತದೆ. ನಮ್ಮ ಸರಹದ್ದಿನಾಚೆ ಇರುವ ಮೈಸೂರು ಸೀಮೆ ಗ್ರಾಮಸ್ಥರು ಸಹ ಗಾಡಿ ರಸ್ತೆಯಾಗ ಬಹುದೆಂದು ತಮಗಳ ಸ್ವಂತ ಖರ್ಚಿನಿಂದ 4—5 ಅಡಿ ಅಗಲದಲ್ಲಿ ಒಂದು ಗ್ರಾಮ ರಸ್ತೆಯನ್ನು ಮಾಡಿಸಿದರು. ಈಚೆಗೆ ಸರಕಾರವು ಈ ರಸ್ತೆಯ ಮಧ್ಯ ಒಂದು ದೊಡ್ಡ ಹೊಳೆ ಇದ್ದದ್ದನ್ನು ಸುಮಾರು 75/ ರೂಪಾಯಿ ಖರ್ಚಿನಿಂದ [illegible] ರಸ್ತೆಯನ್ನು ಕ್ರಮ ಪಡಿಸಿದರು. ಈಚೆಗೆ ಯುದ್ಧದ ವಾತಾವರಣದಿಂದಲೂ, ಈ ರಸ್ತೆಯ ಭೂಮಿಯು ಸರಕಾರಕ್ಕೆ ಬಿಟ್ಟುಹೋದದ್ದರಿಂದಲೂ ರಸ್ತೆಯನ್ನು ಗಾಡಿ ರಸ್ತೆ ಮಾಡಲು ಯ[illegible] ರಿಪೇರಿ ಮಾಡಲು ಬಿಟ್ಟದ್ದಾಗಿರುತ್ತದೆ.

4. ಈ ನಾಡಿನ ಡಿ. ಬೋರ್ಡ್ ಮೆಂಬರುಗಳ [illegible]ಳಿಕೆ ಮೇರೆ ಕಮಿಶನರವರು ಈ ರಸ್ತೆಯನ್ನು ನೋಡುವ ವಿಷಯ ನಾಡು ಕಚೇರಿಗೆ ತಿಳುಹಿಸುತ್ತಾರೆ. ಈ ರಸ್ತೆಯಲ್ಲದೆ ಸೋಮವಾರಪೇಟೆಯಿಂದ ಆಲೆಕಟ್ಟೆ, ತೋಳೂರು ಶೆಟ್ಟಳ್ಳಿ, ಕೂತಿಗಾಗಿ ಮೈಸೂರು ಸೀಮೆ ಬಿಸಿಲೆಘಾಟ್ ರಸ್ತೆ ಕೂಡಿಸಬೇಕೆಂದು ಕೆಲವು ಪ್ರಜೆಗಳ ಕೋರಿಕೆಯಾಗಿರುತ್ತದೆ. ಈ ಎರಡು ರಸ್ತೆಯನ್ನು ಕೊಡಗು ಸರಹದ್ದು ವರೆಗೆ ಪರೀಕ್ಷಿಸುತ್ತಾರೆ.

ಸೋಮವಾರಪೇಟೆಯಿಂದ ಜಕ್ಕನಳ್ಳಿ ರಸ್ತೆಯು 7 ಮೈಲು, ಮೂರು ಫರ್ಲಾಂಗಿನಿಂದ ಕುಂದಳ್ಳಿಗೆ ಒಂದೂವರೆ ಮೈಲು, ಕುಂದಳ್ಳಿಯಿಂದ ಸರಹದ್ದಿಗೆ ಒಂದು ಮೈಲು 2 ಫರ್ಲಾಂಗ್ ಜುಮ್ಲ 2 ಮೈಲು 6 ಫರ್ಲಾಂಗ್ ಮಾತ್ರ ಸರಹದ್ದಿಗೆ ಇರುತ್ತದೆ. ಸರಹದ್ದಿನ ವರೆಗೆ ಸುಮಾರು 4—5 ಅಡಿ ಅಗಲ ಗ್ರಾಮ ರಸ್ತೆ ಇರುತ್ತದೆ. ಕೊಡಗು ಸರಹದ್ದಿನಿಂದ ಸುಮಾರು ಅರ್ಧ ಮೈಲು ದೂರಕ್ಕೆ ಈಗಲೂ ಗಾಡಿಗಳು ಬರುತ್ತಾ ಇರುತ್ತವೆ. ಈ ರಸ್ತೆಯಲ್ಲಿ ಕೊಡಗಿನಲ್ಲಿ ಒಂದು ಸಾಧಾರಣ ಹೊಳೆಯೂ, ಮೈಸೂರು ಪ್ರಾಂತ್ಯದಲ್ಲಿ ಒಂದು ಸಾಧಾರಣ ಹೊಳೆಯೂ ಇರುತ್ತದೆ. ಈ ಎರಡು ಹೊಳೆಗಳಿಗೂ ಕಲ್ಲು ಕಟ್ಟಡದಿಂದ ಕಟ್ಟೆ ಮಾಡಿದರೆ ಗಾಡಿಗಳು ಬರಲು ಸಾಕಾಗಿರುತ್ತದೆ. ಮೈಸೂರು ಸೀಮೆಯ ಹಿಜ್ಜಳ್ಳಿ ಮತ್ತು ಕಲ್ಲಳ್ಳಿ ಗ್ರಾಮಸ್ಥರು ಪಟೇಲ್ ದೊಡ್ಡಗೌಡರು ಸಹ ಸ್ವಂತ ಖರ್ಚಿನಿಂದ ಗಾಡಿ ಬರುವ ಹಾಗೆ ಮಾಡಲು ಅಭಿಪ್ರಾಯ ಪಡುತ್ತಾರೆ. ಈ ರಸ್ತೆಯಿಂದ ಯಡೂರು ಅಭಿಮಠ, ತಾಳ್ತಾರೆ ಶೆಟ್ಟಳ್ಳಿ, ಹರಗ, ಬೆಟ್ಟದಳ್ಳಿ, ನಾಂತಕೊತ್ತನಳ್ಳಿ, ಕುಮರಳ್ಳಿ, ಕುಂದಳ್ಳಿ ಗ್ರಾಮಸ್ಥರಿಗೆ ಕೂಡ ಪ್ರಯೋಜನ ಇರುವುದಲ್ಲದೆ ಈ ನಾಡಿನ ಮಧ್ಯವಾಗಿ ಈ ನಾಡಿಗೇನೇ ಪ್ರಯೋಜನ ಇರುತ್ತದೆ.

5. ಸೋಮವಾರಪೇಟೆಯಿಂದ ಆಲೆಕಟ್ಟೆ, ತೋಳೂರುಶೆಟ್ಟಳ್ಳಿ, ಕೂತಿಗಾಗಿ ಬಿಸಿಲೆಘಾಟ್ ರಸ್ತೆಗೆ ಕೂಡಿಸಲು ಸೋಮವಾರಪೇಟೆಯಿಂದ ಆಲೆಕಟ್ಟೆಗೆ ಸುಮಾರು ಎರಡು ಮೈಲು ಗಾಡಿ ರಸ್ತೆ ಇರುತ್ತದೆ. ಆಲೆಕಟ್ಟೆಯಿಂದ ಕೂತಿಗೆ ವರೆಗೆ [illegible] ಮೈಲು ಗ್ರಾಮ ರಸ್ತೆ ಇರುತ್ತದೆ. ಕೂತಿಯಿಂದ

ಒಂದುವರೆ ಮೈಲು ಯಾವ ರಸ್ತೆಯೂ ಇರುವುದಿಲ್ಲ. ...ಾಗಿ ರಸ್ತೆಯನ್ನು ಮಾಡಬೇಕಾಗಿರುತ್ತದೆ. ಕೊಡು ...ಹದ್ದಿನಿಂದ ಮೈಸೂರು ತಂಬಲಗೇರಿ ಗ್ರಾಮದ ಗಾ...ವ ಸ್ಥಳಕ್ಕೆ ಸುಮಾರು ಒಂದುವರೆ ಮೈಲು ದೂರ ಇ...ದು. ಇಲ್ಲಿಯೂ ಹೊಸ ರಸ್ತೆಯನ್ನೇ ಮಾಡಬೇಕಾ...ದೆ ಈ ರಸ್ತೆಯ ಮಧ್ಯೆ ಕೊಡಗಿನಲ್ಲು ಒಂದು ಹೊ... ಮೈಸೂರು ಪ್ರಾಂತ್ಯದಲ್ಲಿ ಒಂದು ದೊಡ್ಡ ಹೊಳೆಯೂ ...ದೆ. ಮೈಸೂರು ಪ್ರಾಂತ್ಯದ ದೊಡ್ಡ ಹೊಳೆಗೆ ಸೇತು...ವೆ ಖರ್ಚು ಬಹಳ ಹೇರಳವಾಗಿರುತ್ತದೆ. ಈ ರಸ್ತೆ ...ಕಲಕಂದೂರು, ದೊಡ್ಡ ತೋಳೂರು. ತೋಳೂರು ಸೆಟ್ಟ...ತಿ ಗ್ರಾಮಸ್ಥರಿಗೆ ಪ್ರಯೋಜನವಾಗುವದಾಗಿರುತ್ತದೆ ... ಈ ರಸ್ತೆಯು ನಾಡಿನ ಒಂದು ಮೂಲೆಯಾಗಿರುವದ ...ನಾಡಿನವರಿಗೆ ಹೆಚ್ಚು ಪ್ರಯೋಜನ ದೊರೆಯಲಾರದು. ... ಈ ಎರಡು ರಸ್ತೆಗಳನ್ನು ಕೊಡಗಿನ ಸರಹದ್ದಿನ ವರೆ...ಲಿಸಿದರೆ ನಾಲಡು ಬಿಸಿಲೆಘಾಟ್ ರಸ್ತೆಯು ಕೂ...ದರಿಗೆ ಪರಿಶೀಲಿಸಿ ಯಾವ ರಸ್ತೆಯು ಕಮ್ಮಿ ಖರ್ಚಿನಿಂ...ತ್ತದೆ, ಯಾವ ರಸ್ತೆಯು ಹೆಚ್ಚು ಪ್ರಜೆಗಳಿಗೆ ಪ್ರಯೋ... ಯಾವ ರಸ್ತೆಯಲ್ಲು ಸುಂಕದ ಕಟ್ಟೆ ಇಟ್ಟಲ್ಲು ಸರ... ಉತ್ಪತ್ತಿ ಇರುತ್ತದೆ ಎಂಬದನ್ನು ಘನ ಸರಕಾರವೂ ...ರ್ಜು ಮಹನೀಯರುಗಳೂ ಪರಿಶೀಲಿಸಿ ಮಂಜೂರು ...ಬೇಕಾಗಿರುತ್ತದೆ.

7. ಚಿಕ್ಕನಳ್ಳಿ ರಸ್ತೆಯು 7 ಮೈಲು 3 ಫರ್ಲಾಂಗಿನಿಂದ ...ಗಾಗಿ ಬಿಸಿಲೆಘಾಟ್ ರಸ್ತೆಗೆ ಕೂಡಿಸಿದರ ಸರಕಾರವು ... ವರೆಗೆ ರಸ್ತೆ ಮಾಡಿಸಿದ ಪ್ರಯೋಜನವು ...ಂದಳ್ಳಿ ...ದ ಗ್ರಾಮ ರಸ್ತೆಗೆ ಡಿ. ಬೋರ್ಡಿನಿಂದ ರಿಪೇರಿ ಹಣ ...ವದರ ವಿಷಯವೂ ಸರಕಾರಕ್ಕೆ ಸಾರ್ಥಕವಾದುದಲ್ಲದೆ ...ದೊಡ್ಡ ರಸ್ತೆಯಾಗಿ ಇಂಜಿನಿಯರ್ ಇಲಾಖೆಗೆ ಸೇರಿ ಡಿ ...ರ್ಡಿನಿಂದ ರಿಪೇರಿಗೆ ಕೊಡುವ ಹಣ ಉಳಿಯುವದಾಗಿಯು ... ಮೈಸೂರು ಸೀಮೆಯವರು ಸ್ವತಃ ಗಾಡಿ ರಸ್ತೆ ಮಾ...ಡಿಸುವದರಿಂದ ಮೈಸೂರು ಸರಕಾರಕ್ಕೆ ಲಾಭವು ಇ...ದೆ. ಈ ರಸ್ತೆಯನ್ನು ಗಾಡಿ ರಸ್ತೆಯಾಗಿ ಮಾಡದೆ ...ದಲ್ಲಿ ಹಿಂದಿನ ವ್ಯಯವಲ್ಲದೆ ಮುಂದೆಯೂ ರಿಪೇರಿಗಾ...ನಾವಶ್ಯಕ ಹಣ ಖರ್ಚು ಮಾಡಬೇಕಾಗಿರುತ್ತದೆ ಈ ... ರಸ್ತೆಗಳನ್ನು ಕ್ರಮವಾಗಿ ಪರಿಶೀಲಿಸಿ ಚುಂವಳ್ಳಿಗಾಗಿ ... ರಸ್ತೆಯನ್ನು ಮಾಡಿಸಲು ಮಂಜೂರು ಮಾಡಬೇಕಾಗಿ ಕೋ...ವ.

ಗ್ರಾಮಸ್ಥ.

ರಬ್ಬರ್ ಮೋಹರುಗಳು.

...ವು ಅಪೇಕ್ಷಿಸುವ ಯಾವತ್ತೂ ಮಾದರಿಯಲ್ಲಿ ತಯಾರಿಸಿ ಕೊಡಲಾಗುವವು.

ಮೇಲ್ಕಂಡ ಸಾಮಾನುಗಳಲ್ಲದೆ ಕನ್ನಡಿಯ ಸ್ಟ್ಯಾನ್...ರ್ಗಳು ಹಾಫ್ ಟೋನ್ ಬ್ಲಾಕ್ ಮನೋಗ್ರಮ್ ...ಹರು, ಚಂದ್ರಕಾಂತ ಶಿಲೆಯ ಹಲಿಗೆಗಳು, ಉಂಗುರಗ...ಳಿಗೆ ಬಹು ಅಂದವಾದ ಸಣ್ಣ ಕಲ್ಲುಗಳು ಇತ್ಯಾದಿ.

ದಿ ಕ್ರೈನ್ ರಬ್ಬರ್ ಸ್ಟಾಂಪ್ ಕಂಪೆನಿ,

12—2 ಮಂಗಳೂರು, ದ. ಕನ್ನಡ.

ಪ್ರಸಿದ್ಧ ಪತ್ರಿಕೆ.

ಈ ಕೆಳಗೆ ಸಹಿ ಮಾಡಿರುವ ಮುತ್ತಪ್ಪ ಕಂಬ್ಲಾನ್ ಮೇನೇಜರು ಸರ್ವರಿಗೂ ತಿಳಿಯಪಡಿಸುವದೇನೆಂದರೆ.—

ಮುತ್ತಪ್ಪ ಕಂಬ್ಲಾನಲ್ಲಿ ಈ ಕೆಳಗೆ ಕಂಡ ಪ್ರತಿ ಪೂಜೆಗಳಿಗೆ ಕೆಳಗಿನ ಪಟ್ಟಿ ಮೇರೆ ಚಾರ್ಜು ಬೀಳುತ್ತೆ. ಇಲ್ಲಿಗೆ ಬರಲು ಕನ್ನಾನೂರಿಂದ ತಳಿಪರಂಬು ಸ್ಟೇಷನಿಗೆ ರೈಲಿನಲ್ಲು ಬಂದರೆ ದೇವಸ್ಥಾನದ ಬಸ್ಸು ಜನರನ್ನು ಕಾದು ಇರುತ್ತೆ. ಬಸ್ಸಿಗೆ 0—6—0 ಆಣೆ ಚಾರ್ಜು ಬೀಳುತ್ತೆ. ಇಲ್ಲಿಗೆ ಬರಲು ಸಾಧ್ಯವಿಲ್ಲದವರು ಕೆಳಗಿನ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ಹಣ ರವಾನಿಸಿದರೆ ನ್ಯಾಯವಾಗಿ ಪೂಜೆ ಮಾಡಿಸಿ ಪ್ರಸಾದ ಕಳುಹಿಸಲಾಗುತ್ತೆ. ಬೇರೆ ಅನೇಕರು ಈ ದೇವರ ಹೆಸರು ಹೇಳಿಕೊಂಡು ಬಂದು ಪೂಜೆಗಿರುವ ಹಣ ಹುಸಿಕೆ ವಗೈರೆ ಕೇಳುವಾಗ ಕೊಡಬಾರದು. ಅಂಥವರು ಹರಿಕೆ ತಲುಪಿಸದೆ ಮೋಸ ಮಾಡುತ್ತಾರೆ

ತಿರುವಪನೆ	13—4—0
ಜೋಡುಬೊಳ್ಳಾಟ	2—8—0
ಒತ್ತೆ ಬೊಳ್ಳಾಟ	1—4—0
ಜೋಡು ಪೈಂಗುತ್ತಿ	0—8—0
ಮೃತ್ಯುಂಜಯ	2—0—0

ಪಿ. ಯಂ. ಕುಂಞರಾಮನ್,

ಮೇನೇಜರ್

ಪರಸನಕಡು ಮುತ್ತಪ್ಪ ದೇವಸ್ಥಾನ,

ಪೋಸ್ಟು ಆಫೀಸು ಪರಸನಕಡು,

12—11 Via ತಳಿಪರಂಬು

NEW BEAUTY!!

For the new Ford.

New Body lines and colours.

Rustless steel for Exposed metal parts
Fully Enclosed. silent six brake system.
Four Houdaille Hydraulic double-acting shock absorbers Triplex shatter-proof glass windshield
Quick acceleration ease of cantrol.
55 to 65 miles an hour. Smoothness, balance and security at all speeds
unusual number of ball bearings.
40 different kinds of steel
Typical Ford Economy, reliability and long life

Good Dealer service after you buy the Car.

A Wonderful Hill climber!!!

Easy instalment terms if you prefer.
For Demonstration & other particulars.

Please apply to:—

S. Sunder Rau,

Sole Ford Dealer for coorg,

24—23 MERARA.

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕವೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ, ಮುಟ್ಟಾಗುವ ಸಮಯದೊಳು ಕೈಕಾಲು ಬಿಯುವಿಕೆ ದುಸ್ವಪ್ನ ಬೀಳುವಿಕೆ ಹೊಟ್ಟೆ ಶೂಲೆ ಬಿಳುಪು—ಕೆಂಪು ಹೋಗಿ ಗರ್ಭ ಪತನವಾಗುವಿಕೆ, ಗ್ರಾಂತಿ ಸರ್ಪಶಾಪ, ಪಿಶಾಚಬಾಧೆಯಿಂದ ನರಳುವಿಕೆ ದಿನ ತುಂಬದೆ ಹಡಿಯೋಣವೇ ವರೆ ಹರಿವಳಿಯುವಿಕೆ ಇವೇ ಮೊದಲಾದವುಗಳು ಸಂತಾನ ಭಂಗಕ್ಕೆ ಕಾರಣಗಳು ಚಿಕ್ಕ ಮಕ್ಕಳಿಗೆ ೧೬ ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂಧುರೋಗ ಮುಟ್ಟುದೋಷ ಕಾಮಿಲಿ, ಗೃಹಪೀಡೆ, ದೃಷ್ಟಿದೋಷ ಮುಟಕಿಬ್ಯಾನಿ ವಿಷಸ ಅಳೋಣ ಹೊಟ್ಟೆಯೊಳಗಿಂದ ವಿಳೋಣ ಭಯದಿಂದ ಜ್ವರಪೀಡೆ, ಕ್ಷೀಣ ಹೊಂದುವಿಕೆ ಮೊದಲಾದವುಗಳಿಂದ ಸಾಯುತ್ತಿರುವವು, ಗರ್ಭರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ, ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧು ಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇವನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನ ಭಂಗವೂ ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಯಾವತ್ತೂ ಪರಿಹಾರವಾಗುತ್ತದೆ ಹೆಣ್ಣು ಮಕ್ಕಳಿಗೆ ಸಂತಾನ ದಕೆಯಿಂದ ೩ ರೂಪಾಯಿ. ಚಿಕ್ಕಮಕ್ಕಳಿಗೆ ೧ಕ್ಕೆ ೧—೮—೦ ಪೋ ಖ ಬೇರೆ. ಕ್ಷೇಶಲ್ ವಾ ಜಾಗ್ರತೆ ಗುಣ ಕೊಡುವ ತಾಯಿತಕ್ಕೆ ಪೋ ಖ ಸೇರಿ ೫ ರೂ. ಆಗಕಕ್ಕೆ ವಿಕಾರಗಳನ್ನು ಸ್ಪಷ್ಟ ಬರೆಯಿರಿ ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ 100 ರೂ ಬಹುಮಾನ ಒಂದು ಸಲ ತರಿಸಿ ಅನುಭವ ಕಳೆಯಿರಿ

ಸ್ಥಳ ಸಂಕೋಚ ಮೂಲಕ ಮಾದರಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯು ಪ್ರಕೃತಿಯನ್ನು ನಾನಾ ಪ್ರಸಿದ್ಧ ವೈದ್ಯ ಡಾಕ್ಟರರಿಗೂ ತೋರಿಸಲು ಗುಣವೇ ಆಗದಿರಲು ತಮ್ಮ ಆಶ್ಚರ್ಯಕರವಾದ ತಾಯಿತವನ್ನು ನನ್ನ ಹೆಂಡತಿಯು ಈವಾಗ್ಯೆ ೩ ವಾರಗಳ ವರೆ ಧರಿಸಿದ ಮಾತ್ರದಿ ಮೈಯೊಳಗಿನ ಮಾವತ್ತು ತಾಯಿತಗಳು ನಾಶವಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುವುದನ್ನು ತಿಳಿಸಲು ಅತಿ ಸಂತೋಷಪಡುತ್ತ ತಮ್ಮ ಸಿ. ಕೆ. ರಾವ್ ಸಾಹೇಬ, ಸುದಾಮ ಹೌಸ್, ಪ್ರಲ್ಹಾದ ಎಸ್ಟೇಟ್ ಮುಂಬೈ

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52—21 **ಮು. ಪೋ. ಅಥಣಿ, ಜಿ. ಬೆಳಗಾಂವ.**

ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

...ರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟನ್ ಪೆನ್‌ಗಳು.

...ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ. 3	0	0
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
„ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0
„ ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0
„ ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರವುನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0
...ಸ್ಪೈಟ್ ಫೌಂಟನ್‌ಪೆನ್ 1ಕ್ಕೆ	10	8	0
... ಪೆನ್ 1ಕ್ಕೆ 14 6 0, &	20	10	0
...ರ್ಡ್ ಫೌಂಟನ್‌ಪೆನ್ 1ಕ್ಕೆ 3 8 0, &	3	12	0
... ಫೌಂಟನ್ ಪೆನ್ 1ಕ್ಕೆ 6 4 0, &	6	12	0
...ಗುನ್ ಫೌಂಟನ್ ಪೆನ್ 1ಕ್ಕೆ 8 2 0, &	8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ಲಿಗಲಿಯೂ ಅಲಾರಂ ಟೈಂಪೀಸ 1ಕ್ಕೆ 6 9 0, &	6	15	0
ಲಿಗಲಿಯೂ ಸಣ್ಣ ಸೈಜಿನ ಅಲಾರಂ ಟೈಂಪೀಸ್ 1ಕ್ಕೆ	7	2	0
ಲಿಗಲಿಯೂ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇದ್ದಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13	4	0
ಖಾತ್ರಿಯೂ ಬಂದೋಬಸ್ತೂ, ಆದ ಪಾಕೆಟ್ ವಾಚ್ 1ಕ್ಕೆ	5	10	0
ಡಿಟೋ ನಮೂನೆಯಲ್ಲಿ ಎಬ್ರಹಾರ್ಡ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮೂವ್ಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 &	12	8	0



ಇಲ್ಲಿ ನಮೂದಿಸಿದ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅಲಾಯಿದಾ.

ಮಣಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್,

52—38 **ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.**

ಕನ್ನಡಿಗ.

ಸಂ ೧೯೩೧ನೇ ಇಸವಿ

ಏಪ್ರಿಲ್ ತಾ. ೩ ೧೯೩೧.

ಕಾಂಗ್ರೆಸ್ ತೀರ್ಮಾನಗಳು.

ಈ ಲೇಖನವನ್ನು ಬರೆಯುವ ಸಮಯದಲ್ಲಿ ವಿಷಯ ನಿಯಾಮಕ ಸಭೆಯಲ್ಲಿ ಮಂಜೂರಾದ ಠರಾವುಗಳೆಲ್ಲಾ ಮಹಾ ಸಭೆಯಲ್ಲಿ ಮಂಜೂರಾದ ವರ್ತಮಾನ ಬಂದಿರುವುದಿಲ್ಲ. ಆ ದರೂ ವಿಷಯ ನಿಯಾಮಕ ಸಭೆಯಲ್ಲಿ ವಿಶೇಷ ವಿರೋಧವಿಲ್ಲ ದೆ ಇರ್ವಿನ್, ಗಾಂಧಿಯ ರಾಜಿಯು ಅಂಗೀಕಾರವಾಗಿರುವುದ ರಿಂದ ಮಹಾಸಭೆಯಲ್ಲಿ ಸಹ ಮಂಜೂರಾಗಬಹುದೆಂತ ಖಂಡಿತ ವಾಗಿಯೂ ಊಹಿಸಬಹುದು. ಇರ್ವಿನ್—ಗಾಂಧಿ ಒಪ್ಪಂದ ದ ಶರತ್ತುಗಳನ್ನು ಯುವಕ ಪಾರ್ಟಿಯವರು ಒಪ್ಪಿಕೊಳ್ಳಲಿಕ್ಕಿ ಲ್ಲವೆಂತ ಭಗತ್‌ಸಿಂಗರನ್ನು ತೂಗುವ ಮುಂಚೆಯೇ ಭಯವಿ ತ್ತು. ಇದರಲ್ಲೂ ಭಗತ್‌ಸಿಂಗ್ ಮುಂತಾದವರು ಗಲ್ಲಿಗೇರಿ ಸಲ್ಪಟ್ಟ ನಂತರ ಮಹಾತ್ಮಜೀಯವರ ರಾಜಿಯನ್ನು ಕಾಂಗ್ರೆ ಸಿನ ವಿಷಯ ನಿಯಾಮಕ ಒಪ್ಪಿಕೊಳ್ಳಲಾರದೋ ಎಂಬ ಭಯವಿತ್ತು. ಈ ವಿರೋಧ ಪಕ್ಷದ ಮುಂದಾಳುವಾದ ಸುಭಾಸ್‌ಚಂದ್ರ ಬೋಸರು ಕಾಂಗ್ರೆಸ್ ವಿಷಯ ನಿಯಾಮಕ ಸಭೆಯಲ್ಲಿ ತ ನ್ನ ಪಾರ್ಟಿಯವರು ಗಾಂಧಿಜೀಯವರ ರಾಜಿಯನ್ನು ವಿರೋಧ ಸುವುದಿಲ್ಲವೆಂತಲೂ, ಗಾಂಧಿಜೀಯವರ ಮುಂದಾಳುತನದಲ್ಲಿ ಯೇ ಪೂರ್ಣ ಸ್ವಾತಂತ್ರ್ಯವನ್ನು ಸಾಧಿಸಲು ತಾವು ಪಡೆದ ಬೇಕೆಂತಲೂ ಹೇಳಿದ್ದರಿಂದ ಮಹಾತ್ಮಜೀಯವರ ರಾಜಿಯ ನ್ನು ಒಟ್ಟು ಕಾಂಗ್ರೆಸಿನವರು ಒಮ್ಮತಸ್ಸಿನಿಂದ ಒಪ್ಪಿಕೊಂಡಂ ತಾಯಿತು.

ಈ ವಾರದಲ್ಲೇ ಕರಾಚಿಯಲ್ಲಿ ನಡೆದ ನವಜವಾನ್ ಸಭೆ ಯಲ್ಲಿ ಸುಭಾಸ್‌ಚಂದ್ರ ಬೋಸರೇ ಅಧ್ಯಕ್ಷರಾಗಿದ್ದರು. ಅ ಲ್ಲಿ ಇರ್ವಿನ್—ಗಾಂಧಿ ರಾಜಿಯು ನಿರಾಕರಿಸಲ್ಪಟ್ಟಿತು. ಅ ಧ್ಯಕ್ಷರ ಕೋರಿಕೆ ಮೇರೆ ಪೂಜ್ಯ ಮದನಮೋಹನ ಮಾಳವೀ ಯರು ಭಾಷಣ ಕೊಡಲು ಎದ್ದು ನಿಂತಾಗ ಯುವಕ ಪಾರ್ಟಿ ಯ ಕೆಲವರು ಅವರನ್ನು ಮಾತಾಡಲು ಬಿಡಲೇ ಇಲ್ಲ. ಈ ಸ ಭೆಯು ಗಲಭೆಯಲ್ಲೇ ಅಂತ್ಯವಾಯಿತು. ಇದರಿಂದ ಯುವಕ ಪಾರ್ಟಿಯ ಮನೋಭಾವವು ಹೇಗಿದೆಯೆಂತ ತಿಳಿಯುತ್ತದೆ. ಆದರೂ ಅವರ ಮುಂದಾಳುಗಳು ಕಾಂಗ್ರೆಸಿನಲ್ಲಿ ಒಡಕು ತ ಬಾರದೆಂಬ ದೊಡ್ಡ ಧ್ಯೇಯಕ್ಕಾಗಿ ಗಾಂಧಿ—ಇರ್ವಿನ್ ರಾಜಿ ಯನ್ನು ನಿರಾಕರಿಸಲು ಹೋಗಲಿಲ್ಲ. ಇವರ ಈ ದೊಡ್ಡ ಬುದ್ಧಿ ಕಾರ್ಯದಿಂದ ಮಹಾತ್ಮಜೀಯವರಿಗೆ ಸಂಪೂರ್ಣ ಜಯವಾಯಿತು. ಇವರ ಬಲ ಇನ್ನಷ್ಟು ಹೆಚ್ಚಿತು.

ಇರ್ವಿನ್—ಗಾಂಧಿ ರಾಜಿಯನ್ನು ಕಾಂಗ್ರೆಸ್ ಅಂಗೀ ಕರಿಸುತ್ತಾದರೂ ಕಾಂಗ್ರೆಸಿನ ಧ್ಯೇಯವು ಪೂರ್ಣ ಸ್ವರಾಜ್ಯ ಅಥವಾ ಪೂರ್ಣ ಸ್ವಾತಂತ್ರ್ಯವೇ ಎಂಬುದನ್ನು ಕಾಂಗ್ರೆಸಿನ ಠರಾವು ಸೂಚಿಸುತ್ತದೆ. ಹೀಗೆ ನಿರ್ಣಯಿಸಿಕೊಂಡರೆ ಮುಂದಿನ ರಾಜಿಯಲ್ಲಿ ಕಾಂಗ್ರೆಸ್ ಸೇರಿ ಪ್ರಯೋಜನವೇನೆಂ ತ ಕೆಲವರಿಗೆ ಸಂಶಯ ಬಂದಿತು. ರೌಂಡ್ ಟೇಬಲ್ ಕಾನ್‌ಫರೆನ್ಸಿನಲ್ಲಿ ಈ ಮೊದಲು ಹಾಕಿಕೊಂಡ ಪದ್ಧತಿಯೊಳಗೆ ಮುಂದಿನ ರಾಜಕೀಯ ರಚನೆಯಾಗಬೇಕೆಂತ ಮಂತ್ರಿಯವರು ಹೇಳಿದರು. ಈಗ ಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸಿನ ಧ್ಯೇಯವೆಂತ ಪುನಃ ನಿರ್ಣಯವಾದ ಮೇಲೂ ಸಹ ಕಾಂಗ್ರೆ ಸಿನವರು ರೌಂಡ್ ಟೇಬಲ್ ಕಾನ್‌ಫರೆನ್ಸಿಗೆ ಹೋಗಬೇಕೆಂತ ಸಂಕಲ್ಪ ಮಾಡಿಕೊಳ್ಳುತ್ತಾರಾದರೆ ಈಗ ಆದ ರಾಜಿಯಿಂದ ಕಾಂಗ್ರೆಸಿಗೆ ಜಯವಾದಂತೆಯೇ ಆಯಿತು. ವೈಸರಾಯ ರೊಂದಿಗೆ ರಾಜಿ ಮಾಡಿಕೊಳ್ಳುವಾಗಲೂ ರೌಂಡ್ ಟೇಬ ಲ್ ಕಾನ್‌ಫರೆನ್ಸಿಗೆ ಹೋದರೆ ಪೂರ್ಣ ಸ್ವಾತಂತ್ರ್ಯವನ್ನೇ ಬೇಡಲು ಕಾಂಗ್ರೆಸ್ ಪ್ರತಿನಿಧಿಗಳು ಪ್ರಯತ್ನಿಸಬೇಕಾಗು ವೆಯೆಂತ ಇರ್ವಿನರಿಗೆ ಮಹಾತ್ಮಜೀಯವರು ತಿಳಿಸಿರಲೇ ಬೇಕು. ಈ ವಾದಕ್ಕೆ ಎಡೆ ದೊರಕುತ್ತದೆ ಎಂಬ ಭರವಸೆ ಸಿಕ್ಕಿದ್ದರಿಂದಲೇ ಮಹಾತ್ಮಜೀಯವರು ರಾಜಿಗೆ ಒಪ್ಪಿದ್ದು.

ಕಾಂಗ್ರೆಸಿನ ಧ್ಯೇಯವು ಪೂರ್ಣ ಸ್ವಾತಂತ್ರ್ಯವೇ ಆದ ರೂ ಕೆಲವು ಭದ್ರತೆಗಳನ್ನು ಕೆಲವು ಕಾಲದ ವರೆಗೆ ಇಟ್ಟು ಕೊಳ್ಳಲು ಕಾಂಗ್ರೆಸಿನ ಪ್ರತಿನಿಧಿಗಳಿಗೆ ಠರಾವಿನಲ್ಲಿ ಅಧಿಕಾರ ವಿದೆ. ಹೀಗೆ ಒಪ್ಪಿಕೊಂಡದ್ದರಿಂದ ಕಾಂಗ್ರೆಸಿನ ಪೂರ್ಣ ಸ್ವಾ ತಂತ್ರ್ಯದ ಧ್ಯೇಯದ ಬೆಲೆ ಕಡಿಮೆಯಾಯಿತೆಂತ ಇನ್ನು ಕೆಲ ವರ ವಾದ. ಠರಾವಿನಲ್ಲೇ ಹೇಳಿರುವಂತೆ ಸೈನ್ಯದ ಮೇಲೂ, ಪರರಾಜ್ಯ ನೀತಿಯ ಮೇಲೂ, ವ್ಯಾಪಾರ ಸಂಬಂಧದ ಭದ್ರತೆಗ ಳ ಮೇಲೂ ಪೂರ್ತಿ ಹಕ್ಕು ಇಟ್ಟುಕೊಳ್ಳುವಂತೆಯೂ, ಬ್ರಿಟಿ ಷ್ ಸಾಮ್ರಾಜ್ಯವನ್ನು ಬೇಕಾದಾಗ ಬಿಟ್ಟು ಹೋಗುವ ಹಕ್ಕು ಇಟ್ಟುಕೊಳ್ಳುವಂತೆಯೂ ಹೋರಾಡುತ್ತಾರಾದ್ದರಿಂದ ಪೂ ರ್ಣ ಸ್ವಾತಂತ್ರ್ಯಕ್ಕೆ ಸೇರಿದಂತೆಯೇ ಆಯಿತು. ಕಾಂ ಗ್ರೆಸಿನ ಅಧ್ಯಕ್ಷರಾದ ಸರದಾರ್ ವಲ್ಲಭ ಭಾಯಿ ಪಟೇಲರು ಹೇಳಿರುವ ಮೇರೆ ಗುಲಾಮಗಿರಿಯಲ್ಲಿದ್ದ ಜನಾಂಗಕ್ಕೆ ಸ್ವಾ ತಂತ್ರ್ಯ ದೊರಕುವ ಸಮಯದಲ್ಲಿ ಕೆಲವು ಕಾಲದ ವರೆಗಾದ ರೂ ಬ್ರಿಟಿಷ್ ಜನಾಂಗದ ಸಹಾಯ ಬೇಕಾಗಿದೆ. ಅಷ್ಟು ಕಾಲ ಕೆಲವು ಭದ್ರತೆಗಳಿರಲು ಕಾಂಗ್ರೆಸಿನವರು ಒಪ್ಪಿಕೊಂಡರೆ ಕಾಂಗ್ರೆಸಿನ ಧ್ಯೇಯವನ್ನು ಬಿಟ್ಟುಕೊಟ್ಟಂತಾಗಲಿಲ್ಲ.

ಇನ್ನು ಮುಂದಾಗಲಿಕ್ಕಿರುವ ರೌಂಡ್ ಟೇಬಲ್ ಕಾನ್‌ಫ ರೆನ್ಸಿನಲ್ಲಿ ಕಾಂಗ್ರೆಸಿನವರು ಕೇಳಿದ್ದೆಲ್ಲಾ ಸಿಕ್ಕಿತೆಂಬ ಭರವಸೆ ಏನಿದೆಯೆಂತ ಇನ್ನು ಕೆಲವರಿಗೆ ಸಂಶಯ ಹುಟ್ಟುತ್ತದೆ. ಇ ವರು ಕೇಳಿದ್ದೆಲ್ಲಾ ಸಿಕ್ಕಲೇ ಬೇಕೆಂತ ಹೋಗುವುದಾದರೆ ರಾ ಜಿ ಮಾತಿಗಾಗಿ ಹೋಗಲೇ ಬೇಡ. ಕಾಂಗ್ರೆಸಿನವರು ಬ್ರಿಟಿ ಷ್ ಸರಕಾರಕ್ಕೂ, ಬ್ರಿಟಿಷ್ ಪಾರ್ಲಿಮೆಂಟಿನ ಬೇರೆ ಪಾರ್ಟಿ ಯವರಿಗೂ ಹಿಂದುಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯ ಸರಕಾರ ನಡೆಸಲು ಶಕ್ತಿ ಇದೆಯೆಂತ ಪಕ್ಕಾ ತೃಪ್ತಿ ಪಡಿಸಿದರೆ ಅವರೂ ಒಪ್ಪಬಹುದು. ಅಥವಾ ಬ್ರಿಟಿಷ್ ಸರಕಾರವೂ, ಜನಾಂಗ ವೂ ಕಾಂಗ್ರೆಸಿನವರು ಕೇಳಿದ್ದೆಲ್ಲಾ ಕೊಟ್ಟರೆ ಹಿಂದುಸ್ಥಾನ ಕ್ಕೆ ಕೇಡಿದೆಯೆಂತ ಕಾಂಗ್ರೆಸಿನವರಿಗೆ ಒಪ್ಪಿಸಿದರೆ ತತ್ಕಾಲಕ್ಕೆ ಕೆ ಲವು ಬಾಬುಗಳಲ್ಲಿ ಪೂರ್ತಿ ಹಕ್ಕು ಇಲ್ಲದಿದ್ದರೂ ಆಗಬಹು ದೆಂತ ಕಾಂಗ್ರೆಸಿನವರೂ ಒಪ್ಪಬಹುದು. ಹೀಗೆಯೇ ರಾಜಿ ಯಾಗುವುದು. ಈ ರೀತಿ ಸ್ವಲ್ಪ ಹೆಚ್ಚು ಕಡಿಮೆ ಮಾಡಿ ತ ಮಗೆ ಬೇಕಾದ ಸ್ವರಾಜ್ಯ ರಚನೆಗೆ ಕಾಂಗ್ರೆಸಿನ ಪ್ರತಿನಿಧಿಗಳು ಒಪ್ಪಿ ಕೊಳ್ಳಬಹುದೆಂತ ಠರಾವಿನಲ್ಲೇ ಇದೆ. ಅದ್ದರಿಂದ ಬ್ರಿಟಿಷ್ ಪಾ ರ್ಲಿಮೆಂಟಿನವರು ದೂರದೃಷ್ಟಿಯಿಂದ ಲಾರ್ಡ್ ಇರ್ವಿನ್‌ರಂತ ವರ ಸಲಹೆಗಳನ್ನು ಅಂಗೀಕರಿಸಿ ಪೂರ್ಣ ಸ್ವಾತಂತ್ರ್ಯದ ಕಿರು ಳು ಇರುವ ಸ್ವರಾಜ್ಯ ರಚನೆಗೆ ಒಪ್ಪಿಕೊಂಡರೆ ಎರಡು ಜನಾಂ ಗಗಳೊಳಗೆ ಸ್ನೇಹ ಬೆಳೆದು ಪ್ರಪಂಚದಲ್ಲಿ ಶಾಂತಿಯುಂಟಾದೀ ತು. ಇಂಥಾ ನ್ಯಾಯವಾದ ಕೋರಿಕೆಗಳನ್ನು ಬ್ರಿಟಿಷ್ ಜನಾಂ ಗದವರು ಒಪ್ಪಿಕೊಳ್ಳದಿದ್ದರೆ ಹಿಂದುಸ್ಥಾನದ ಹೋರಾಟವು ಇ ನ್ನೊಂದಾವರ್ತಿ ಪ್ರಚಂಡ ರೂಪದಲ್ಲಿ ಪ್ರಾರಂಭವಾಗಿ ಹಿಂ ದೂಸ್ಥಾನವು ಬ್ರಿಟಿಷ್ ಸಾಮ್ರಾಜ್ಯದೊಳಗಿಂದ ಎಂದೆಂದಿಗೂ ಬೇರಾಗುವ ಸಂಭವವಿದೆಯೆಂತ ಲಾರ್ಡ್ ಇರ್ವಿನರೇ ಹೇಳಿರು ತ್ತಾರೆ. ಐದು ವರ್ಷಗಳಿಂದ ಹಿಂದೂಸ್ಥಾನದ ಮನೋಭಾ ವವನ್ನು ಚೆನ್ನಾಗಿ ಅರಿತ ಈ ಇಂಗ್ಲಿಷ್ ಸದ್ಗೃಹಸ್ಥರು ಕೊ ಟ್ಟ ಎಚ್ಚರಿಕೆಯನ್ನು ಬ್ರಿಟಿಷ್ ಜನಾಂಗವು ತಿಳಿದುಕೊಂಡು ಹಿಂದೀಯರ ಕೋರಿಕೆಯನ್ನು ನೆರವೇರಿಸಿಕೊಟ್ಟರೆಂತ ಆಶಿ ಸುವ.

ಆದರೆ ಹಿಂದೀಯರೊಳಗೆ ಅವರ ಕೋರಿಕೆಯಲ್ಲಿ ಒಗ್ಗ ಟ್ಟಿದೆಯೆಂತ ನಮ್ಮ ತೋರಿಸ ಬೇಕಾದ್ದೂ ಅಲ್ಲದೆ ಆಚರಿಸಬೇಕು. ಖಾನ್‌ಪುರದಲ್ಲಿ ಆದಂಥ ಜಾತಿ ಜಗಳಗಳು ಆಗುತ್ತಾ ಇದ್ದರೆ ಪೂರ್ಣ ಸ್ವಾತಂತ್ರ್ಯದ ಧ್ಯೇಯದಲ್ಲಿ ಒಗ್ಗಟ್ಟಿದೆಯೆಂತ ತೋ ರಿಸುವುದೂ, ಪೂರ್ಣ ಸ್ವಾತಂತ್ರ್ಯದ ಸರಕಾರವನ್ನು ನಡೆಸ ವುದೂ ಕಷ್ಟವಾದೀತು. ಅದ್ದರಿಂದಲೇ ಹಿಂದೂ ಮುಸಲ್ಮಾ ನರೊಳಗಿರುವ ವ್ಯತ್ಯಾಸಗಳು ತೀರ್ಮಾನವಾದ ಹೊರತು ರೌಂ ಡ್ ಟೇಬಲ್ ಕಾನ್‌ಫರೆನ್ಸಿಗೆ ಹೋಗುವುದೇ ಪ್ರಯೋಜನವಿ ಲ್ಲವೆಂತ ಮಹಾತ್ಮರು ಹೇಳಿರುವುದಾಗಿದೆ. ಜಾತಿ ಜಗಳಗ ಳು ಇರುವ ಜನಾಂಗಗಳು ಸ್ವಾತಂತ್ರ್ಯಕ್ಕೆ ಅರ್ಹ ರಲ್ಲವೆಂತ ವಾದಿಸುವವರು ಚರಿತ್ರೆಯನ್ನು ತಿಳಿದವರಲ್ಲ. ಇಂಗ್ಲೆಂಡಿನ ಲ್ಲಿ ಪ್ರೊಟೆಸ್ಟೆಂಟರಿಗೂ, ರೋಮನ್ ಕೆಥೋಲಿಕರಿಗೂ ಜಗಳವಿ ದ್ದಾಗ ಅವರನ್ನು ಮುಸಲ್ಮಾನ್ ರಾಜರು ಆಳಬೇಕೆಂತ ಬ್ರಿಟಿ ಷರು ವಾದಿಸಲಿಲ್ಲ. ಆದರೆ ಮಹಾತ್ಮಜೀಯವರು ಪೂರ್ಣ ಸ್ವಾತಂತ್ರ್ಯ ಸಿಕ್ಕಲಿಕ್ಕಾಗಿಯೇ ಹಿಂದೂ ಮುಸಲ್ಮಾನ್ ಜಗ ಳಗಳು ನಿಲ್ಲಬೇಕೆಂತ ಹೇಳುವುದಲ್ಲ. ಹಿಂದುಸ್ಥಾನದಲ್ಲಿ ರುವ ಎಲ್ಲಾ ಧರ್ಮದ ಜನರಿಗೂ ತಮ್ಮ ಜೀವ ಮತ್ತು ಆಸ್ತಿ ಯ ಭದ್ರತೆ ಇದೆಯೆಂತ ಭರವಸೆ ಹುಟ್ಟಿಸಲೇ ಬೇಕೆಂತ ಮಹಾ ತ್ಮರು ಹೇಳಿರುವ ಸಾರಾಂಶ. ಖಾನ್‌ಪುರದ ದಂಗೆಯಲ್ಲಿ ಬಾಬು ಗಣೇಶ ಶಂಕರ ವಿದ್ಯಾರ್ಥಿಯಂಥ ಕಾಂಗ್ರೆಸ್ ಮು ಖಂಡರು ಶಾಂತಿ ಸ್ಥಾಪನೆಗಾಗಿ ಮಡಿದದ್ದನ್ನು ಶ್ಲಾಘಿಸಿ ಹಿಂ ದೂ ಮುಸಲ್ಮಾನ್ ಒಗ್ಗಟ್ಟಿಗಾಗಿ ಸರ್ವರೂ ಪ್ರಯತ್ನಿಸಬೇ ಕೆಂತ ಕಾಂಗ್ರೆಸ್ಸಿನಲ್ಲಿ ಠರಾವು ಪಾಸಾಯಿತು.

ಕಾಂಗ್ರೆಸಿನಲ್ಲಿ ರಚನಾತ್ಮಕ ಕಾರ್ಯಗಳಾದ ಖಾದಿ ಹುಟ್ಟುವಳಿ ಮತ್ತು ಪ್ರಚಾರ, ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ ಈ ವಿಷಯದ ಠರಾವುಗಳೂ ಪಾಸಾದವು. ಮುಂ ದಿನ ರಾಜಿ ಪಂಚಾಯತಿಯಲ್ಲಿ ಹಿಂದೀಯರ ಕೋರಿಕೆಯು ನೆರವೇರದಿದ್ದರೆ ಪುನಃ ಹೋರಾಟಕ್ಕೆ ತಯಾರಿರುವಂತೆ ಕೆಲಸ ಗಳು ನಡೆಯುತ್ತಿರಬೇಕೆಂಬ ಅಭಿಪ್ರಾಯವು ಕಾಂಗ್ರೆಸ್ ಕಾರ್ಯಾಂ ಶದಲ್ಲಿ ತುಂಬಿರುವಂತೆ ತೋರಿ ಬರುತ್ತದೆ.

ಇರ್ವಿನ್-ಗಾಂಧಿ ರಾಜಿಯನ್ನು ಅಂಗೀ ಕರಿಸುವ ಠರಾವಿನ ಮೇಲೆ ಶ್ರೀಯುತ ಸೆನ್‌ಗುಪ್ತರು ಮಾಡಿದ ಭಾಷಣದ ಸಾರಾಂಶ.

ಠರಾವನ್ನು ವಿರೋಧಿಸಿದ ಮಿ. ಜಮ್ನಾದಾಸ್ ಮೆಹ ತಾ ಮುಂತಾದವರಿಗೆ ದೇಶವು ಗುಲಾಮಗಿರಿಯಲ್ಲಿದ್ದದ್ದರಿಂದ ಹುಟ್ಟಿದ ಕೀಳು ಮನೋಭಾವವು ಹೋಗಿರುವದಿಲ್ಲ. ಅಹಿಂ ಸಾ ಮಾರ್ಗದಿಂದ ಸ್ವರಾಜ್ಯವನ್ನು ಪಡೆಯುವುದು ಸಾಧ್ಯವಿ ಲ್ಲವೆಂತ ಇವರು ಯೋಚಿಸುತ್ತಾರೆ. ಆದರೆ ಮಹಾತ್ಮ ಗಾಂಧಿಯವರ ಮುಂದಾಳುತನದಲ್ಲಿ ನಡೆದ ಚಳವಳಿಯು ಹಿಂದುಸ್ಥಾನದ ಜನಾಂಗದ ಬೆಂಬಲವಿರುವ ಚಳವಳಿ ಬ್ರಿ ಟಿಷ್ ಸರಕಾರವನ್ನು ತಲೆಕೆಳಗೆ ಮಾಡಲು ಸಾಧ್ಯವಿದೆಯೆಂ ತ ನಿದರ್ಶನವಾಗಿದೆ. ಮಹಾತ್ಮ ಗಾಂಧಿಯವರು ಮನಸ್ಸಿನ ಮಾತುಗಳಿಂದ ವಾದದಿಂದ ಸ್ವಾತಂತ್ರ್ಯವನ್ನು ಪಡೆಯ ಬಹುದೆಂತ ನಂಬಿರುತ್ತಾರೆಂತ ಹೇಳಿದರು. ಮಹಾತ್ಮಜೀಯವರು ಹಾ ಗೇನೂ ನಂಬಿರುವದಿಲ್ಲ. ರಾಜಿಯಲ್ಲಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕದಿದ್ದರೆ ಪುನಃ ಜನಾಂಗವೆಲ್ಲಾ ಹೋರಾಟ ವನ್ನು ಇನ್ನುಮುಂದಿನ ಕೈಕೊಳ್ಳಲು ತಯಾರಿದೆ. ಯುದ್ಧ ದಿಂದ ಸ್ವಾತಂತ್ರ್ಯವನ್ನು ಪಡೆಯುತ್ತಾರೆ. ಈ ರಾಜಿ ಯಲ್ಲಿ ಬ್ರಿಟನಿಗೂ ಇಂಡಿಯಾಕ್ಕೂ ಇದ್ದ ಯಜಮಾನ ಸೇವಕ ಸಂಬಂಧವು ಹೊರಟು ಹೋಗಿ ಸರಿಸಮಾನತ್ವವು ಬರು ತ್ತದೆ.

ಬ್ರಿಟಿಷ್ ಸಂಬಂಧವನ್ನೇ ಕೂಡಲೆ ತಪ್ಪಿಸಿಕೊಳ್ಳಬೇಕೆಂ ಬುವವರು ಕಾಲ ಕಳೆದನಂತರ ಅವಶ್ಯವಿದ್ದರೆ ಬ್ರಿಟನನೊಂದಿಗಿನ ಸಂಬಂಧ ದ ಕವಲನ್ನು ಮಾಡಿಕೊಳ್ಳಬಹುದೆನ್ನುತ್ತಾರೆ. ಜನಾಂಗದ ಬಲದಿಂದ ಮಹಾತ್ಮಜೀ ಇಂದು ನಡೆಸುವ ಹೋರಾಟದಿಂದ ಇಂಗ್ಲೆಂಡು ಇಂಡಿಯಾವನ್ನು ತನ್ನ ಪ್ರಯೋಜನಕ್ಕೆ ಉಪಯೋ ಗಿಸುವುದನ್ನು ತಪ್ಪಿಸಿಕೊಂಡರೆ ಆ ವೇಳೆ ಬೇಕಾದಾಗ ಬ್ರಿಟನಿ ನ ಸಾಮ್ರಾಜ್ಯದ ಸಂಬಂಧವನ್ನು ತಪ್ಪಿಸಿಕೊಳ್ಳಬಹುದು.

ಈ ಠರಾವಿನಿಂದ ಕಾಂಗ್ರೆಸ್ಸಿನ ಪ್ರತಿನಿಧಿಗಳು ರೌಂಡ್ ಟೇಬಲ್ ಕಾನ್‌ಫರೆನ್ಸಿಗೆ ಹೋಗಲೇ ಬೇಕೆಂತ ಇಲ್ಲ. ಕಾಂ ಗ್ರೆಸ ಪ್ರತಿನಿಧಿಗಳ ಹೋಗಬಾರದೆನ್ನುವದಕ್ಕೆ ಕಾರಣ ಸಂಭವಿಸಬಹುದು. ರಾಜಿ ಶರತ್ತು ಮೇಲೆ ಒಟ್ಟು ಪ್ರತಿ ನ್ಯಾದರೂ ಸರಕಾರವು ಬಿಡದೆ ಹೋದರೆ ಕಾಂಗ್ರೆಸ್ ಕಾನ್ ಫರೆನ್ಸಿಗೆ ಹೋಗುವದಿಲ್ಲ. ನಾವು ಮಾಡುವ ಸ್ವದೇಶಿ ಪ್ರಚಾರ ಪವನೇಶಿ ಒಟ್ಟಿ ಬಹಿಷ್ಕಾರದ ಸ್ವಾತಂತ್ರ್ಯ ಇತ್ಯಾದಿ ಕೆಲಸ ಗಳನ್ನು ಸರಕಾರವು ವಿರೋಧಿಸಿದರೆ ಕಾಂಗ್ರೆಸ್ ಕಾನ್‌ಫರೆನ್ಸಿ ಗೆ ಹೋಗುವದಿಲ್ಲ. ಹಿಂದೂ ಮುಸಲ್ಮಾನ್ ವ್ಯತ್ಯಾಸಗಳ ನ್ನು ತೀರಿಸಿಕೊಳ್ಳದೆ ಕಾನ್‌ಫರೆನ್ಸಿಗೆ ಹೋಗಿ ಪ್ರಯೋಜನವಿ ಲ್ಲ. ಹೇಗೂ ರಾಜಿ ಶರತ್ತುಗಳನ್ನೆಲ್ಲಾ ನಾವು ನಡೆಸ ಬೇಕಾದ್ದು ನಮ್ಮ ಕರ್ತವ್ಯ.

ಹಿಂದುಸ್ಥಾನದಲ್ಲಿ ಬ್ರಿಟಿಷ್ ಸರಕಾರ ಸ್ಥಾಪಿತವಾದಂದಿನಿಂ ದ ವರೆಗೆ ಮಹಾ ಶಕ್ತಿಶಾಲಿಯಾದ ಬ್ರಿಟಿಷ್ ಸರಕಾರವು ಜನಾಂಗ ದ ಪ್ರತಿನಿಧಿಯೊಂದಿಗೆ ಸರಿಸಮಾನತ್ವದಲ್ಲಿ ಮಾತಾಡಿದ್ದು ಇದೇ ಮೊದಲು. ಈ ಕೃಶ ಶರೀರದ ಮನುಷ್ಯನ (ಮಹಾತ್ಮಜೀ) ಹಿಂದೆ ಒಟ್ಟು ಜನಾಂಗದ ಬೆಂಬಲವಿದೆಯೆಂತ ಸರಕಾರಕ್ಕೆ ಈ ಗ ತಿಳಿದಿದೆ. ಆ ಬೆಂಬಲವಿದೆಯೆಂಬ ಧೈರ್ಯದಿಂದಲೇ ಮಹಾ ತ್ಮಜೀಯವರು ರಾಜಿ ಪಂಚಾಯಿತಿಗೆಗೆ ಒಪ್ಪಿದರು. ಈ ರಾಜಿ ಯನ್ನು ಮಹಾತ್ಮಜೀಯವರಿಗೆ ಕೊಟ್ಟ ಹಿಂದು ಸ್ಥಾನಕ್ಕಾದ ಘೋರ ಯುದ್ಧ ಮಾಡಿದರೂ ರಾಜಿ ಮಾಡ ಬೇಕಾಯಿತು ಎಂಬಲೇ ತೀರಿಸೀತು. ಗೌರವಯುಕ್ತವಾದ ರಾಜಿ ಅತ್ಯುತ್ತಮ ಪುರುಷನಾದ ಮಹಾತ್ಮಜೀಯವರು ರಾಜಿ ಮಾಡಿ ಕೊಂಡದ್ದನ್ನು ನಂಬಿದ ಜನಾಂಗ ಗೌರವಕ್ಕೆ ಹಾನಿ ಬರದಂತೆ ಪಾಲಿಸುವುದು.

ಕಾಂಗ್ರೆಸಿನಲ್ಲಿ ತೀರ್ಮಾನವಾದ ಇನ್ನು ಕೆಲವು ಠರಾವುಗಳು.

(1) ಕಳೆದ ಖಾನೂನು ಭಂಗದ ಚಳವಳದಲ್ಲಿ ಸತ್ತ ಜನ ಪೆಟ್ಟು, ಸಂಗೀನಿನ ಚುಚ್ಚು ತಿಂದ ಜಾಕಿಪಟ್ಟು, ಮನೆ ಮಾರು ಬಿಟ್ಟು ಹೋಗಿ ಎಕೆ, ನೊಕ್ಕು ಕಳಕೊಳ್ಳುವಿಕೆ ಮತ್ತು ಕಷ್ಟಗಳನ್ನು ಅನುಭವಿಸಿದ ಸತ್ಯಾಗ್ರಹಿಗಳನ್ನು ಕಾಂಗ್ರೆಸ್ ವಂದಿಸುತ್ತದೆ. ಮುಖ್ಯವಾಗಿ ಹೆಂಗಸರು ಸಾವಿರ ಗಟ್ಟಲೆ ಯಲ್ಲಿ ಮುಂದೆ ಬಂದು ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗ ತೆಗೆದುಕೊಂಡದ್ದಕ್ಕೆ ಅವರನ್ನು ಅಭಿನಂದಿಸಿ ಮುಂದಿನ ರಾಜ ಕೀಯ ರಚನೆಯಲ್ಲಿ ಹೆಂಗಸರಿಗೂ ಗಂಡಸರಿಗೂ ಸ್ವಾತಂತ್ರ್ಯ ಮಾಡುವ ಓಟಿನ ಹಕ್ಕನ್ನು ಕಾಂಗ್ರೆಸ್ ಒಪ್ಪಿಕೊಳ್ಳುವುದೆ ವೆಂತ ಸನ್ಮತಿಯಿಂದ ಮಹಿಳೆಯರಿಗೆ ಭರವಸೆ ಕೊಡುತ್ತದೆ.

(2) ಕಳೆದ 12 ತಿಂಗಳುಗಳಿಂದ ಸಂಪೂರ್ಣ ವಾಗಿ ಸೇವನೆಯನ್ನು ಬಿಡುವ ಪ್ರಯತ್ನವು ಕೆಲವು ಮಟ್ಟಿಗೆ ಫಲ ಕಾರಿಯಾದದ್ದಕ್ಕೆ ಕಾಂಗ್ರೆಸ್ ಸಂತೋಷಪಡುತ್ತದೆ. ಇನ್ನು ಮೇಲೆ ಮದ್ಯಪಾನ ಸೇವನೆಯನ್ನು ಪೂರ್ತಿಯಾಗಿ ನಿಲ್ಲಿಸಲು ಎಲ್ಲಾ ಕಾಂಗ್ರೆಸ್ ಸಂಸ್ಥೆಗಳು ಇನ್ನುಮುಂದೆಯೂ ಪ್ರಯತ್ನಿಸಬೇ ಕೆಂತ ವನ್ನು ದೇಹವನ್ನು ಹಾಳುಮಾಡುವ ಕುಟುಂಬಗಳನ್ನು ನಾಶ ಮಾಡುವ ನಿಷಾ ಸೇವನೆಯ ಜನರನ್ನು ನಿಲ್ಲಿಸಲು ಮಹಿಳೆಯರು ಹೆಚ್ಚಾಗಿ ಪ್ರಯತ್ನಿಸಬೇಕೆಂತ ಕಾಂಗ್ರೆಸ್ ಕೇಳಿಕೊಳ್ಳುತ್ತದೆ.

(4ನೇ ಪುಟದಲ್ಲಿ ಮುಂದರಿದಿದೆ.)

ಕರಾಚಿ ಕಾಂಗ್ರೆಸ್.

[illegible] ಕಮಿಟಿ (ವಿಷಯ ನಿರ್ಧಾರಕ ಸಮಿತಿ) ಯಲ್ಲಿ [illegible]ವಾದ ಠರಾವುಗಳು

(1) ಪಂಡಿತ ಮೋತೀಲಾಲ್ ನೆಹರು, ಮೌಲಾನಾ ಮಹಮದ ಆಲಿ, ಮಜರುಲ್ ಹಕ್, ದೇಶಬಂಧು [illegible] ಮತ್ತು [illegible]ಟದಲ್ಲಿ ಮಡಿದ ಇತರ ಅನಾಮಧೇಯ [illegible] ಮತ್ತು ಸ್ತ್ರೀಯರ ಮರಣಕ್ಕಾಗಿ ಕಾಂಗ್ರೆಸ್ಸು ವಿಷಾದ [illegible]

(2) ಯಾವ ವಿಧದ ರಾಜಕೀಯ ಹಿಂಸೆಯನ್ನೂ ಕಾಂಗ್ರೆಸ್ಸು [illegible]ರೋಧಿಸುತ್ತಾದರೂ ಗತಿಸಿದ ಸರದಾರ ಭಗತಸಿಂಗ್ [illegible] ಜೊತೆಗಾರರಾದ ಸುಖದೇವ ಮತ್ತು ರಾಜಗುರು ಇವರ [illegible]ರ್ಯವನ್ನೂ, ತ್ಯಾಗವನ್ನೂ ಕಾಂಗ್ರೆಸ್ ಶ್ಲಾಘಿಸುತ್ತ [illegible]ವರ ಮರಣಕ್ಕೆ ಇವರ ಕುಟುಂಬದೊಡನೆ ಕಾಂಗ್ರೆಸ್ [illegible]ತ್ತದೆ.

[illegible]ವರನ್ನು ಗಲ್ಲಿಗೇರಿಸಿದ್ದು ಬೇಕೆಂತಲೇ ಮಾಡಿದ್ದು [illegible]ಲೂ, ದೇಶವೆಲ್ಲಾ ಇವರ ಜೀವವನ್ನು ಉಳಿಸಬೇಕೆಂ[illegible] ಕೋರಿಕೆಯನ್ನು ಉದ್ದೇಶ ಪೂರ್ವಕವಾಗಿಯೇ [illegible] ಬೇಕೆಂತ ಮಾಡಿದ್ದಾಗಿಯೆಂತಲೂ ಕಾಂಗ್ರೆಸ್ [illegible] ಪಡುತ್ತದೆ. ಈ ಸಂದರ್ಭದಲ್ಲಿ ಅವಶ್ಯವಿಲ್ಲದ [illegible] [illegible]ಸಾಂಗಗಳೊಳಗೆ ಅನ್ಯೋನ್ಯತೆಯನ್ನು ಹೆಚ್ಚಿಸಲಿಕ್ಕೆ [illegible] ದಿಕ್ಕು ತೋರದೆ ಹಿಂಸಾ ಮಾರ್ಗವನ್ನು ಹಿಡಿಯುವ [illegible] ಶಾಂತಿ ಮಾರ್ಗಕ್ಕೆ ತಿರುಗಿಸಲಿಕ್ಕೆ ದೊರೆತ ಅವಕಾಶ[illegible] ಸರಕಾರವು ಕಳಕೊಂಡಿತೆಂತ ಕಾಂಗ್ರೆಸ್ ಅಭಿಪ್ರಾಯ[illegible]ದೆ.

(3) ಕಾಂಗ್ರೆಸಿಗೂ, ಸರಕಾರಕ್ಕೂ ಆದ ರಾಜಿಯು [illegible] ಬ್ರಿಟನಿಗೂ, ಹಿಂದೂಸ್ಥಾನಕ್ಕೂ ಸ್ನೇಹ ಬೆಳಸಲಿ[illegible] ಆದದ್ದಾಗಿದ್ದರೆ, ಗ್ರೇಟ್ ಬ್ರಿಟನಿಗೆ ಹಿಂದೂಸ್ಥಾನದ [illegible] ಇರುವ ಅಧಿಕಾರವನ್ನು ಬಿಟ್ಟು ಕೊಡುವುದನ್ನು ಸಹ[illegible]ಗಿ ರಾಜಿಯಾದದ್ದಾಗಿದ್ದರೆ ಸರಕಾರವು ಎಲ್ಲಾ ರಾ[illegible] ಬಂದಿಗಳನ್ನು ವಿಚಾರವಿಲ್ಲದೆ ಬಂದೀಖಾನೆಯಲ್ಲಿರು[illegible] [illegible] ರಾಜಿಗೆ ಒಳಪಡದಿದ್ದರೂ ಸಹ ಬಿಡಬೇಕು. [illegible] [illegible]ಯಕ್ಕಾಗಿಯೇ ಹಿಂದೀಯರಿಗೆ ಮಾಡಿರುವ ಅಡಚಣೆಗ[illegible] ತೆಗೆದು ಹಾಕಬೇಕು.

ಈ ಠರಾವನ್ನು ಅಂಗೀಕರಿಸಿದರೆ ಭಗತಸಿಂಗ್ ಮುಂತಾ[illegible] ದವರನ್ನು ಗಲ್ಲಿಗೇರಿಸಿದ್ದರಿಂದ ಈಚೆಗೆ ಉಂಟಾದ [illegible] [illegible] ಮಾಡಲು ಸಹಾಯವಾದೀತೆಂತ ಸಂಭವಕ್ಕೆ ಕಾಂಗ್ರೆಸ್ ಎಚ್ಚರಿಸುತ್ತದೆ.

(4) ಕಾನ್‌ಪುರದಲ್ಲಿ ಆಗುತ್ತಿರುವ [illegible] [illegible] ಅದರಿಂದ ಉಂಟಾದ ತುಂಬಾ ಮರಣಕ್ಕೂ, [illegible] ಜೆಚ್ಚಾದ ಘಾಯ ಪಟ್ಟವರಿಗೂ ಕಾಂಗ್ರೆಸ್ ವಿಷಾ[illegible] [illegible]ತ್ತದೆ ಸತ್ತವರ ಮತ್ತು ಘಾಯ ಪಟ್ಟವರ ಕುಟುಂಬ[illegible] ದವರಿಗೆ ಕಾಂಗ್ರೆಸ್ ಸಹಾನುಭೂತಿ ಸೂಚಿಸುತ್ತದೆ.

[illegible] ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯ ಅಧ್ಯ[illegible]ವಾದ ಮತ್ತು ಕೋಮುವಾರು ದ್ವೇಷವಿಲ್ಲದ್ದರಿಂದ ಎಲ್ಲಾ [illegible]ಯವರ ಪ್ರೀತಿಗೆ ಪಾತ್ರರಾಗಿದ್ದ ಗಣೇಶ ಶಂಕರ ವಿದ್ಯಾ[illegible] [illegible]ರು ಸತ್ತುದರಿಂದ ಪರ್ಣವಾಸಕ್ಕೆ ಕಾಂಗ್ರೆಸ್ ತುಂಬಾ [illegible] ವ್ಯಸನ ಪಡುತ್ತದೆ. ಪಾತ್ರರ ಕುಟುಂಬಕ್ಕೆ ಸಮಾಧಾನ [illegible] [illegible] ಕಾಂಗ್ರೆಸಿನ ಮುಂದಾಳುಗಳಲ್ಲಿ [illegible] [illegible]ವರು ಅಪಾಯದಲ್ಲಿರುವವರ ಜೀವ ಉಳಿಸಲಿಕ್ಕಾಗಿಯೂ, ಶಾಂತಿ ಸ್ಥಾಪನೆಗಾಗಿಯೂ ಪ್ರಯತ್ನಿಸುತ್ತಾ ಮಡಿದ್ದಕ್ಕೆ ಕಾಂಗ್ರೆಸ್ ಹೆಮ್ಮೆ ಪಡುತ್ತದೆ. ಮತ್ತು ಇವರ ಗಂಭೀರವಾದ ಬಲಿದಾನವನ್ನು ಇನ್ನು ಮುಂದೆ ಬರುವ ಶಾಂತಿ [illegible] [illegible]ಪನೆಗಾಗಿ ಉಪಯೋಗಿಸಬೇಕೆಂತ ಕಾಂಗ್ರೆಸ್ ಆಪೇಕ್ಷಿ[illegible]ಸುತ್ತದೆ. ಆ ಬಗ್ಗೆ ಒಂದು ಕಮಿಟಿಯನ್ನು ನೇಮಿಸುತ್ತದೆ.

(5) ಕಾಂಗ್ರೆಸಿನ ವರ್ಕಿಂಗ್ ಕಮಿಟಿಗೂ, ಸರಕಾರಕ್ಕೂ [illegible] ತಾತ್ಕಾಲಿಕ ರಾಜಿಯನ್ನು ಕಾಂಗ್ರೆಸು ಅವಗಾಹನೆಗೆ [illegible] [illegible]ಕೊಂಡು ಅದನ್ನು ಅಂಗೀಕರಿಸುತ್ತದೆ. ಆದರೆ ಕಾಂಗ್ರೆ[illegible] [illegible] ಧ್ಯೇಯವಾದ ಪೂರ್ಣ ಸ್ವರಾಜ್ಯವನ್ನು ಬಿಟ್ಟು ಕೊಟ್ಟಿ[illegible] [illegible]ಲ್ಲವೆಂತ ಕಾಂಗ್ರೆಸ್ ಸ್ಪಷ್ಟ ಪಡಿಸುತ್ತದೆ.

[illegible] ರೌಂಡ್ ಟೇಬಲ್ ಕಾನ್‌ಫರೆನ್ಸಿನಲ್ಲಿ ಬ್ರಿಟಿಷ್ ಸರ[illegible] [illegible]ಂದಿಗೆ ಕಾಂಗ್ರೆಸ್ ಕಲೆತು ಚರ್ಚಿಸಲು ಅವಕಾಶ ದೊ[illegible] [illegible] ಧ್ಯೇಯವನ್ನು ಸಂಪಾದಿಸಲಿಕ್ಕಾಗಿಯೇ ಕಾಂಗ್ರೆಸ್ ಪ್ರತಿನಿ[illegible]ಗಳು ಪ್ರಯತ್ನಿಸುತ್ತಾರೆ. ಮುಖ್ಯವಾಗಿ ಸೈನ್ಯದ ಮೇಲೆ ಅಧಿ[illegible] [illegible]ರ ಪರ ರಾಜರ ಸಂಬಂಧ ಆರ್ಥಿಕ ಜವಾಬ್ದಾರಿ ವ್ಯಾಪಾ[illegible] ಸ್ವಾತಂತ್ರ್ಯ ಸರಕಾರವು ವಹಿಸಿಕೊಂಡಿರುವ ಆರ್ಥಿಕ ಜ[illegible]ವಾಬ್ದಾರಿಗಳನ್ನು ಅಜಮಾಯಿಸಿ ಇಂಗ್ಲೆಂಡಿಗೂ, ಇಂಡಿಯಾ[illegible] [illegible] ಬೇಕಾದನ್ನು ಹೊರಿಸುವುದು ಬ್ರಿಟನ [illegible] ಇಂಡಿಯಾಕ್ಕೂ ಇರುವ ಪಾಲುದಾರಿಕೆಯನ್ನು [illegible] [illegible] ಬಿಡುವ ಸ್ವಾತಂತ್ರ್ಯವನ್ನು ಸಹ ಪಡೆಯಲು ಕಾಂಗ್ರೆ[illegible] ಪ್ರತಿನಿಧಿಗಳು ಪ್ರಯತ್ನಿಸುತ್ತಾರೆ. ಇದರ ಹಿಂದೂಸ್ಥಾ[illegible] [illegible] ಅವಶ್ಯವಿರುವುದೆಂತ ನಿದರ್ಶನವಾದ ಒಂದೇಬಿಸ್ತುಗಳ [illegible] ಒಪ್ಪುವ ಅಧಿಕಾರ ಪ್ರತಿನಿಧಿಗಳಿಗೆ ಇರುತ್ತದೆ.

ಕಾನ್‌ಫರೆನ್ಸಿನ ಪರವಾಗಿ ಪ್ರತಿನಿಧಿಯಾಗಿ ಮಹಾತ್ಮಾ ಗಾಂಧಿಯವರನ್ನು ಆರಿಸುತ್ತದೆ. ಮತ್ತು ಇವರ ಜೊತೆಗೆ [illegible] [illegible]ಕಿಂಗ್ ಕಮಿಟಿಯವರು ಇವರ ಮುಂದಾಳ ತನದಲ್ಲಿ ಕೆಲಸ ಮಾಡಲು ಬೇರೆ ಪ್ರತಿನಿಧಿಗಳನ್ನು ಆರಿಸಿಕೊಳ್ಳಬಹುದು.

ಗಾಂಧಿ—ಇರ್ವಿನ್ ರಾಜಿಯ ಸಂಬಂಧವಾದ ಠರಾವಿನ ಮೇಲೆ ಮಹಾತ್ಮ ಗಾಂಧಿಯವರು ಮಾಡಿದ ಭಾಷಣದ ಸಾರಾಂಶ.

ಈ ಠರಾವಿನ ಮೇಲೆ ಕೆಲವು ತಿದ್ದುಪಾಟುಗಳು ಬಂದಿವೆ. [illegible] ಅಂಥವುಗಳನ್ನು ವಹಿಸ್ತಾಯ ಪಡಿಸದೇ ಇ[illegible] ನನಗೆ ಪಾತ್ರರಾದ ಮುಖಂಡರು ಬಹಳ ದಿವಸಗಳಿಂದ ಯೋಚಿಸಿ ಎಲ್ಲರಿಗೂ ಒಪ್ಪಿಗೆಯಾಗುವಂತೆ ಠರಾವನ್ನು ತಯಾರಿಸಿದ್ದಾರೆ. ಮಹಾತ್ಮರು ತಯಾರಿಸಿದ ಠರಾವೆಂತ ಯಾರೂ ಒಪ್ಪಿಕೊಳ್ಳಬೇಕಾಗಿಲ್ಲ. ಠರಾವಿನ ಹೊರಗಿನ ಬೇರೆ ವಿಷಯಗಳಿಂದ ಠರಾವಿನ ಮೇಲೆ ಅಭಿಪ್ರಾಯ ಕೊಡಬೇಡಿ. ರಾಜಿಗೆ ಒಳಪಟ್ಟ ಎಲ್ಲಾ ಬಂದಿಗಳನ್ನು ಇನ್ನೂ ಬಿಡಲಿಲ್ಲವೆಂಬ ಕಾರಣದಿಂದ ಠರಾವನ್ನು ವಿರೋಧಿಸಬೇಡಿ. ಅವರನ್ನು ಬಿಡಿಸುವುದು ವರ್ಕಿಂಗ್ ಕಮಿಟಿಯ ಕೆಲಸವಾಗಿದೆ.

ರಾಜಿ ಮಾಡಿಕೊಂಡದ್ದರಿಂದ ಕಾಂಗ್ರೆಸಿನ ಗೌರವ ಕಡಿಮೆಯಾಗಲಿಲ್ಲ. ಕಾಂಗ್ರೆಸು ರಾಜಿ ಶರತ್ತನ್ನು ನಡೆಸಿದರೆ ಕಾಂಗ್ರೆಸಿನ ಬಲವು ಹೆಚ್ಚುತ್ತದೆ. ಒಬ್ಬರ ಪೂರ್ಣ ಸ್ವರಾಜ್ಯದ ಧ್ಯೇಯವು ಠರಾವಿನಲ್ಲಿದೆ. ಬ್ರಿಟನಿನೊಡನೆ ಸಮಾನ [illegible] [illegible] ಇರಲು ಠರಾವಿನಲ್ಲಿ [illegible] ಬೇಕಾದಾಗ ಬಿಟ್ಟು ಹೋಗುವ ಹಕ್ಕು [illegible]. ಈ ವರೆಗೆ ಬ್ರಿಟನಿಗೂ, ಇಂಡಿಯಾಕ್ಕೂ ಇದ್ದ ಯಜಮಾನ ಆಳಿನ ಸಂಬಂಧವು ಇನ್ನು ಮೇಲೆ ತಪ್ಪಿ ಸ್ನೇಹಿತರುಗಳಿಗೆ ಇರುವ ಸಂಬಂಧವುಂಟಾಗುತ್ತದೆ. [illegible] ಹಕ್ಕು ಇರುವುದರಿಂದ ಪೂರ್ಣ ಸ್ವಾತಂತ್ರ್ಯವೇ ಇರುತ್ತದೆಂತ ಮಹಾತ್ಮರು [illegible]ದರು.

ಕಾಂಗ್ರೆಸಿನವರು ಕಾನ್‌ಫರೆನ್ಸಿಗೆ ಹೋಗದೆ ಇರುವಂಥ ವಿಷಯಗಳು ಬಂದರೆ ಆಮಂತ್ರಣವನ್ನು ನಿರಾಕರಿಸುವ [illegible] ಠರಾವಿನಲ್ಲಿದೆ. ರಾಜಿ ಶರತ್ತನ್ನು [illegible] [illegible] ದೆ ಇರುವುದು [illegible] ತಿಂದದ್ದರೆ ಕಾಂಗ್ರೆಸಿನವರು ಕಾನ್‌ಫರೆನ್ಸಿಗೆ ಹೋಗಿ ಪ್ರಯೋಜನವಿಲ್ಲ. ರಾಜಿ [illegible] ಪಂಚಾಯಿತಿ ನಡೆಸಲು ಸ್ವಾತಂತ್ರ್ಯವಿದ್ದರೂ ಪೂರ್ಣ ಸ್ವಾತಂತ್ರ್ಯಕ್ಕೆ ಸೈನ್ಯ, ವ್ಯಾಪಾರ ಮುಂತಾದ [illegible] ಪೂರ್ತಿ ಹಕ್ಕು ಪಡೆಯಲಿಕ್ಕಾಗಿ ಪ್ರತಿನಿಧಿಗಳಿಗೆ ತಾಕೀತಿ [illegible] ಇದೆ. ಸರ್ಕಾರವು ವಹಿಸಿಕೊಂಡಿರುವ ಆರ್ಥಿಕ [illegible] ಜವಾಬ್ದಾರಿಗಳಿಗೆ ಎಷ್ಟರ ಮಟ್ಟಿಗೆ ಹಿಂದೂಸ್ಥಾನವು ಜವಾಬ್ದಾರಿ [illegible] ಎಂಬುದನ್ನು ಅಜಮಾಯಿಸುವಂತೆ ಕೇಳುವ ಹಕ್ಕು ಇದೆ.

ಹಿಂದೂಸ್ಥಾನದ ಹಿತಕ್ಕಾಗಿ ಕೆಲವು ಭದ್ರತೆಗಳನ್ನು ಇಟ್ಟುಕೊಳ್ಳಲು ಒಪ್ಪಬಹುದೆಂತ ಇದೆ. ಇದನ್ನು [illegible] ಪ್ರತಿನಿಧಿಗಳು ಒಪ್ಪಿಕೊಳ್ಳುವ ಭದ್ರತೆಗಳು ಕಾಂಗ್ರೆಸಿನ ಎಲ್ಲಾ ಪ್ರತಿನಿಧಿಗಳು [illegible] ಸಂಪೂರ್ಣ ಸ್ವಾತಂತ್ರ್ಯ ಧ್ಯೇಯಕ್ಕೆ ಒಪ್ಪಿಗೆಯಾಗ[illegible]. [illegible] ಒಪ್ಪಿ ಪಟ್ಟಾರೆಂಬ ಇನ್ನೊಂದು ಭೀತಿ ಇದೆ. ಆದರೆ ಇಂಥಾ ಭೀತಿಗಳನ್ನೆಲ್ಲಾ ಹೋಗಲಾಡಿಸಿ [illegible] ಕಾಂಗ್ರೆಸಿನ ಪ್ರತಿನಿಧಿಗಳು ಬಲವಾದವರಾಗಬೇಕು.

ರೌಂಡ್ ಟೇಬಲ್ ಕಾನ್‌ಫರೆನ್ಸಿನ ತೀರ್ಮಾನವನ್ನು ಸ್ಪೆಷಲ್ ಕಾಂಗ್ರೆಸಿನಲ್ಲಿ ಒಪ್ಪಿಕೊಳ್ಳಬೇಕು ಎಂಬ ಒಡಂಬಾಡಿಕೆಯಾಗಬೇಕೆಂತ ಸೂಚನೆ ಇದೆ. ಇದು ಯುಕ್ತವಲ್ಲ. ನಿಮ್ಮ ಮುಂದಾಳುಗಳಲ್ಲಿ ನಿಮಗೆ ನಂಬಿಕೆ ಇರಬೇಕು. ಇಂಗ್ಲೆಂಡಿಗೆ ಹೋಗುವುದು ಒಬ್ಬ ಸರ್ಕಾರದವರೊಡನೆ ಚರ್ಚಿಸ[illegible] [illegible] ಮಾತ್ರವಲ್ಲ. ಇಂಗ್ಲೆಂಡಿನ ಬೇರೆ ಪಾರ್ಟಿ ಮುಖಂಡರೊಡನೆ ಸಹ ಚರ್ಚಿಸಬೇಕು. ಆ ಬಗ್ಗೆ ಹೋಗುವವರು ಮಾಡಿಕೊಳ್ಳುವ ಒಪ್ಪಿಗೆಯು ಈ ದೇಶಕ್ಕೆ ಸಮ್ಮತವಾಗುತ್ತೆಂಬ ಭರವಸೆ ಇಲ್ಲದಿದ್ದರೆ ಅವರು ಯಾವ ತರದ ಮಧ್ಯಸ್ಥಿಕೆಗೂ [illegible]ರಲು ಸಾಧ್ಯವಿಲ್ಲ. ಕಾಂಗ್ರೆಸಿನ ಪ್ರತಿನಿಧಿಗಳು ಕಾಂಗ್ರೆಸಿನ ಮತವನ್ನು ಉಲ್ಲಂಘಿಸಿದರೆ ಅವರು ಒಪ್ಪಿಗೆಯನ್ನು ನಿರಾಕರಿಸುವ ಸ್ವಾತಂತ್ರ್ಯವು ಕಾಂಗ್ರೆಸಿಗೆ ಯಾವಾಗಲೂ ಇದ್ದೇ ಇದೆ.

ಈ ಭಾಷಣವಾದನಂತರ ಠರಾವಿನ ಬದಲಾವಣೆಗೆ ಬಂದ ಸೂಚನೆಗಳೆಲ್ಲಾ ವಾಪಸು ತೆಗೆದುಕೊಳ್ಳಲಾದವು.

ಗಾಂಧಿ—ಇರ್ವಿನ್ ಸ್ನೇಹ[illegible]ಗೆ ಮಾರಿಕೊಂಡ ರಾಜಿಗೆ ವಿರೋಧಿಸುವವರ ಪಕ್ಷದ ಮುಖಂಡರಾದ ಸುಭಾಸ್ ಚಂದ್ರ ಬೋಸರು ಹೀಗೆಂತ ಹೇಳಿದರು.—ಕಾಂಗ್ರೆಸಿನ ಎಡ ಪಕ್ಷದವರಿಗೆ (ಅಂದರೆ ಕಾಂಗ್ರೆಸಿಗಿಂತಲೂ ಮುಂದರಿಸಿ ಹೋಗುವವರು) ರಾಜಿ ಶರತ್ತುಗಳು ವಿಶೇಷ ತೃಪ್ತಿಕರವಾಗಿಲ್ಲದಿದ್ದರೂ ದೇಶದ ಹಿತವನ್ನು ಯೋಚಿಸಿ ಈ ಠರಾವಿಗಾಗಿ ಕಾಂಗ್ರೆಸಿನಲ್ಲಿ [illegible] ತಂದಾರೆಂತ ನಿಶ್ಚಯಿಸಿದ್ದೇವೆ.

ಕಾಂಗ್ರೆಸ್ ಕೂಡುವ ಸಮಯದಲ್ಲೇ ದೇಶದ ಅಭಿಪ್ರಾಯಕ್ಕೆ ವಿರೋಧವಾಗಿ ಭಗತಸಿಂಗ್ ಮುಂತಾದವರನ್ನು ತೂಗಿದ್ದರಿಂದ ದೇಶದ ಮನೋಭಾವವು ಎಂಥಾದ್ದೆಂತ ಗೊತ್ತಾಯಿತು. ಆದರೆ ಅದಕ್ಕಾಗಿ ನಾವು ಸುಗಡವಾದರೆ ಸರ್ಕಾರ[illegible] [illegible] ಬೇಕೆನಿಸಿ [illegible] ದೇಶದವರೆಲ್ಲಾ ತಾವಾಗಿಕೊಟ್ಟ ಕಲವರ ಜೀವವನ್ನು ಉಳಿಸಿಕೊಡಬೇಕೆಂ[illegible] ಬೇಳಿದರೂ ಒಪ್ಪದ ಸರಕಾರವು ತನ್ನ ಹಠವನ್ನು ಸಾಧಿಸಿದ[illegible] [illegible] ಬಿಟ್ಟುಕೊಡದಾಗಿದೆಂತಲೂ, ಹಿಂದೂಸ್ಥಾನವನ್ನು ಹಿಂದೀಯರಿಗೆ ಬಿಟ್ಟುಕೊಡಲಾರದೆಂತಲೂ ನಮ್ಮ ಅಭಿಪ್ರಾಯವಾಗಿದೆ. ಆದ್ದರಿಂದ ಶೀಘ್ರದಲ್ಲೇ ಕಾಂಗ್ರೆಸ್ ಹೋರಾಟವನ್ನು ಪುನಃ ಪ್ರಾರಂಭಿಸಬೇಕಾದೀತೆಂತ ನಮಗೆ ತೋರುತ್ತದೆ. ಆದ್ದರಿಂದ ನಮ್ಮೆಲ್ಲರಿಗೆ ಬಲಪಡಿಸಿಕೊಳ್ಳದೆ ಮುಂದಿನ ಹೋರಾಟಕ್ಕೆ ತಯಾರಾಗಬೇಕು.

ಹಿಂದೂಸ್ಥಾನದ ಪೂರ್ಣ ಸ್ವಾತಂತ್ರ್ಯದ ಹೋರಾಟದಲ್ಲಿ ಕಾಂಗ್ರೆಸಿನೊಳಗೆ ಭಿನ್ನಾಭಿಪ್ರಾಯವಿಲ್ಲವೆಂತಲೂ, ಮಹಾತ್ಮಾ ಗಾಂಧಿಯವರ ಮುಂದಾಳುತನದಲ್ಲಿ ಹೋರಾಡಲು ತಯಾರಾಗಿದ್ದೇವೆಂತಲೂ ಆಳರಸರಿಗೆ ತೋರಿಸುವುದು ಅತ್ಯಾವಶ್ಯವಾಗಿದೆ. ಸುಭಾಸ್ ಚಂದ್ರಬೋಸರು ಈ ಹೇಳಿಕೆಯಾದನಂತರ ಜಮ್ನಾದಾಸ್ ಮೆಹತಾರವರು ಮಾತ್ರ ಠರಾವಿಗೆ ವಿರೋಧವಾಗಿ ಮಾತನಾಡಿದರು.

ಠರಾವನ್ನು ಓಟಿಗೆ ಹಾಕಲಾಗಿ ಮೂವರು ಮಾತ್ರ ವಿರೋಧಿಸಿ ಠರಾವು ಮಂಜೂರಾಯಿತು.

ವೈಸರಾಯರಾದ ಲಾರ್ಡ್ ಇರ್ವಿನರು ಚೆಮ್ಸ್‌ಫರ್ಡ್ ಕ್ಲಬ್ಬಿನಲ್ಲಿ ಮಾಡಿದ ಭಾಷಣದ ಸಾರಾಂಶ.

ಒಂದೇ ಗಾಡಿಗೆ ಕಟ್ಟಿದ ಬ್ರಿಟಿಷ್ ಮತ್ತು ಹಿಂದೀ ಕುದುರೆಗಳು ಒಗ್ಗಟ್ಟಿನಿಂದ ಗಾಡಿಯನ್ನು ಎಳೆಯುವಂತೆ ಮಾಡುವುದೇ ವೈಸರಾಯರ ಕೆಲಸ. ಒಂದೊಂದು ಒಂದೊಂದು ಕಡೆ [illegible] ಎರಡು ರಾಷ್ಟ್ರಗಳಿಗೂ ಹಾನಿಯೇ. ಈಗ ಎರಡು [illegible] ಈ ಒಗ್ಗಟ್ಟಿಗ[illegible] ಸಮಯ[illegible] [illegible] ಗಳು, [illegible]ಗಳೇ ಆಗುವ ವಿವಾದ [illegible] ಕೆಲಸದಿಂದ [illegible] ಸೈಮನ್ ಕಮಿಷನ್ ನೇ[illegible] [illegible] ರಾಜ್ಯಗಳಿಗೂ ಕೇ[illegible] [illegible] 1929ನೇ ನವಂಬರಿನಲ್ಲಿ ವೈಸರಾಯರು [illegible] ಪತ್ರ ಹೊರಡಿಸಿದಾಗ ಇಂಗ್ಲೆಂಡಿನ ಕಲವರು ಹಿಂದೂಸ್ಥಾನಕ್ಕೆ [illegible] ಸ್ವರಾಜ್ಯ ಆಸೆ ಹುಟ್ಟಿಸಿದವರು [illegible] [illegible] ಆದರಿಂದ ಹಿಂದೀಯರಿಗೆ [illegible]?

[illegible] ಇಂಗ್ಲೆಂಡಿನಲ್ಲಿ ಅನೇಕರಿಗೆ [illegible] ಗಲಿಬಿಲಿಯಾಯಿತು. ಈ ರೀತಿ ಆಗಾಗ [illegible] ಬೆಳೆಯುವುದನ್ನು [illegible] ನಿಜವಾದ ಕಾರಣವನ್ನು ಕಂಡು ಹಿಡಿಯಬೇಕು. [illegible] ಬಲವಾಗಿ ಆಳಿ [illegible] ಇಂಗ್ಲೆಂಡಿಗೆ ಸಿಕ್ಕದಂತೆ [illegible] ಇಂಗ್ಲೆಂಡನ್ನು [illegible] ಇವರು ಹಿಂದೂಸ್ಥಾನದ ನಿಜವಾದ ಸ್ಥಿತಿಯನ್ನು ತಿಳಿದವರಲ್ಲ.

ಹಿಂದೂಸ್ಥಾನದ ಜಾಗೃತಿಯು ಎರಡು ರೂಪವನ್ನು ತಾಳಿದೆ. [illegible] ತಾವೇ ಆಳಿಕೊಳ್ಳಬೇಕೆಂದೂ, ಮತ್ತು ಹಿಂದೂಸ್ಥಾನದ ಕೈಗಾರಿಕೆಗಳನ್ನು ಹೆಚ್ಚಿಸಿಕೊಂಡು ಹಿಂದೂಸ್ಥಾನದ ಸುಖಾಭಿವೃದ್ಧಿಯನ್ನು ಹೆಚ್ಚಿಸಿಕೊಳ್ಳಬೇಕೆಂತಲೂ. ಇಂಗ್ಲೆಂಡಿನ ಚರಿತ್ರೆಯನ್ನು ಈಚೆಗೆ [illegible] [illegible] ನೋಡಿದರೆ ಯಾವ ದೇಶದವರೇ ಆಗಲೀ ಸ್ವರಾಜ್ಯಕ್ಕೆ ಹೋರಾಡುವುದಕ್ಕೆ ಅಡ್ಡಿ ಮಾಡಲಾರರು. ಇಂಗ್ಲೆಂಡಿನ ಸಾಮಾನನ್ನೇ ಕೊಂಡುಕೊಳ್ಳಬೇಕೆಂತ ಹೇಳುವ ಮುಖ್ಯವಾಗಿ ಹೀಗೆನ್ನುವ ಕನ್ಸರ್ವೇಟಿವ್ ಪಾರ್ಟಿಯವರು ಹಿಂದೂಸ್ಥಾನದ ಸ್ವದೇಶೀ ಚಳವಳವನ್ನು ರಾಜದ್ರೋಹವೆಂತ ಹೇಳುವುದು ಆಶ್ಚರ್ಯಕರವಾಗಿದೆ. ಅನ್ಯೋನ್ಯ ಸ್ನೇಹವಿದ್ದರೆ ವ್ಯಾಪಾರ ಬೆಳೆಯುತ್ತದ್ದರಿಂದ ಹಿಂದೂಸ್ಥಾನದ ರಾಜಕೀಯ ಪ್ರಶ್ನೆಯನ್ನು ತೃಪ್ತಿಕರವಾಗಿ ತೀರಿಸಿದರೆ ವ್ಯಾಪಾರಕ್ಕೆ ಸಹಾಯವಾದೀತು. ಈಗಿನ ರಾಜಕೀಯ ಪರಿಸ್ಥಿತಿಗೆ ಬೇರೆ ಉಪಶಮನವೇ ಬೇಕು. ಇಲ್ಲವಾದರೆ ಸಮುದ್ರದ ನೆರೆಯನ್ನು ನಿಲ್ಲಿಸಲಿಕ್ಕೆ ಹೇಳಿದಂತೆ ಆದೀತಷ್ಟೆ. ಬೇರೆ ಉಪಾಯವೇ ರೌಂಡ್ ಟೇಬಲ್ ಕಾನ್‌ಫರೆನ್ಸ್.

ಬ್ರಿಟಿಷ್ ಸರಕಾರಕ್ಕೂ ಬೇಗನೆ ರಾಜಿಯಾಗಬೇಕೆಂತ ಇದೆ. ಆದರೆ ಇಷ್ಟು ದೊಡ್ಡ ಕಾರ್ಯ ಥಕ್ಕನೆ ಆಗುವಂಥಾದ್ದಲ್ಲ. ಮಿ. ಗಾಂಧಿಯವರು ಶಾಂತಿ ಸ್ಥಾಪನೆಗೆ ತನ್ನಿಂದಾಗುವಷ್ಟು ಪ್ರಯತ್ನಿಸುತ್ತಾರೆಂತ ನನಗೆ ಗೊತ್ತದೆ. ಪ್ರತಿಯೊಬ್ಬನು ಈಗ ಆದ ತಾತ್ಕಾಲಿಕ ರಾಜಿಯನ್ನು ಶಾಶ್ವತವಾಗಿ ಮಾಡಿಕೊಳ್ಳಲು ತನ್ನಿಂದಾಗುವಷ್ಟು ಪ್ರಯತ್ನಿಸಬೇಕು.

ಭದ್ರತೆಗಳ ವಿಷಯ ಮಾತಾಡುವಾಗ ಇಂಗ್ಲೆಂಡಿನ ಕ್ಷೇಮ ಬೇರೆ, ಇಂಡಿಯಾದ ಕ್ಷೇಮ ಬೇರೆ ಎಂತ ಹೇಳುವುದು ಆಶ್ಚರ್ಯ. ಇನ್ನು ವರ್ಷದಿಂದ ಈ ಎರಡು ರಾಷ್ಟ್ರಗಳು [illegible] [illegible] ಪರಕ [illegible] ಹಿಂದೀ ದೇಶದ ಭದ್ರತೆ, ಕೀರ್ತಿ, ಮಾನ, ಸ್ನೇಹ, ಇವು ಹಿಂದೀಯರಿಗೆ ಸಂಬಂಧ ಪಡುವುವೇ. ಆದರ ಇಂಗ್ಲೆಂಡು ಅಧಿಕಾರವನ್ನು ದೇಶೀಯರಿಗೆ ಕೊಡುವಾಗ ಕಡಿಮೆ ಸುಬ್ಬೆಯ [illegible] ಕ್ಷೇಮದ ಭದ್ರತೆ ಮಾಡಿಕೊಟ್ಟೇ [illegible] ಇಂಗ್ಲೆಂಡ್ ತನ್ನ ಕರ್ತವ್ಯವನ್ನು ಮಾಡಿದಂತಾಗಲಿಲ್ಲ. ಇಂಗ್ಲಿಷ್ ವ್ಯಾಪಾರಿಗಳಿಗೆ ಕೇಡಾಗದಂತೆ ನೋಡಿಕೊಂಡರೇನೇ ಹಿಂದೂಸ್ಥಾನದ ಬಳಿ [illegible] ಬೇಕಾದ ಹಣವು ಇಂಗ್ಲೆಂಡಿನಿಂದ ದೊರತೀತು. ರೌಂಡ್ ಟೇಬಲ್ ಕಾನ್‌ಫರೆನ್ಸಿನ ತೀರ್ಮಾನಗಳು ತೃಪ್ತಿ ಇಲ್ಲವೆಂತ ಹೇಳುವವರು ಬ್ರಿಟಿಷ್ ಸರ್ಕಾರಕ್ಕೆ ತೃಪ್ತಿಯಾಗುವ ಕಾರಣ ಕೊಡಬೇಕು.

ಐದು ವರ್ಷಗಳ ಹಿಂದೆ ಹಿಂದೂ ಮುಸ್ಲಿಮ್ ಒಗ್ಗಟ್ಟಿಗೆ ಪ್ರಯತ್ನಿಸಬೇಕೆಂತ ಇಲ್ಲಿಯೇ ಕೇಳಿಕೊಂಡೆ. ಖಾನ್‌ಪುರದ ಹೊಡೆದಾಟದ ಗುಲ್ಲು ಕಿವಿಗೆ ಕೇಳಿಸುತ್ತಿರುವಾಗ ಈಗಲೂ ಅದೇ ಕೋರಿಕೆಯನ್ನು ಮಾಡುತ್ತೇನೆ. ಈ ಮನಸ್ತಾ[illegible]

(೩ನೇ ಪುಟದಲ್ಲಿ ಮುಂದುವರಿದಿದೆ.)

ಪವನ್ನು ಹೋಗಲಾಡಿಸಲು ಸರಕಾರದಿಂದ ಸಾಧ್ಯವಿಲ್ಲ. ಆಯಾಯ ಕೋಮಿನವರು ಶಾಂತಿ ತಾಳ್ಮೆಯನ್ನು ವಹಿಸಿ ಜಗಳಗಳನ್ನು ನಿಲ್ಲಿಸಿಕೊಳ್ಳಬೇಕು. ನಾನು ಎಲ್ಲಿಯೇ ಇದ್ದರೂ ಈ ಮನಸ್ತಾಪಕ್ಕೆ ಎಡೆ ಇಲ್ಲದ ರೀತಿ ತೀರ್ಮಾನಗಳಾದವು ಎಂತ ವರ್ತಮಾನ ಕೇಳಿದರೆ ನನಗೆ ತುಂಬಾ ಸಂತೋಷವಾದೀತು.

ಭಗತ್‌ಸಿಂಗ್ ಮೊದಲಾದವರನ್ನು ತೂಗಿದ್ದಕ್ಕೆ ಸರಕಾರವನ್ನು ದೂರುತ್ತಾರೆ. ಅದರ ಜವಾಬ್ದಾರಿಯನ್ನು ಪೂರ್ತಿ ನಾನು ವಹಿಸಿಕೊಳ್ಳುತ್ತೇನೆ. ಮ. ಗಾಂಧಿಯವರು ಅವರ ಜೀವ ಉಳಿಸಲು ತನ್ನಿಂದಾದಷ್ಟು ವಾದಿಸಿದರು. ಅಹಿಂಸಾ ವಾದಿಯಾದ ಗಾಂಧಿಯವರು ವಾದಿಸಿದ್ದು ನನಗೆ ಆಶ್ಚರ್ಯವಾಯಿತು. ಆದರೆ ರಾಜಕೀಯ ಅನುಕೂಲಕ್ಕಾಗಿ ಶಿಕ್ಷೆಗೆ ಅರ್ಹರಾದವರನ್ನು ಬಿಡುವುದು ಯುಕ್ತವಾಗಿ ನನಗೆ ತೋರಲಿಲ್ಲ. ಕಾಂಗ್ರೆಸ್ ಕೂಡುವ ಮುಂಚೆ ತೂಗ ಬಾರದಿತ್ತು ಎನ್ನುತ್ತಾರೆ. ಹಾಗೆ ಮಾಡಿದ್ದರೆ ಕಾಂಗ್ರೆಸಿನವರೇ ಸರಕಾರವು ಸೀದಾ ಇರಲಿಲ್ಲವೆಂತ ದೂರುತ್ತಿದ್ದರು.

ಇಂಗ್ಲೆಂಡಿನವರು ಸೋಲುವಿಕೆಯನ್ನು ಪ್ರದರ್ಶಿಸುತ್ತಾರೆ ಎಂತ ಹೇಳುವವರು ಇದ್ದಾರೆ. ಇವರು ಹಿಂದೂಸ್ಥಾನದ ಈಗಿನ ಸ್ಥಿತಿಯನ್ನು ತಿಳಿದವರಲ್ಲ. ಈಗ ಕೈಕೊಂಡ ಕ್ರಮವನ್ನು ಕೈಕೊಳ್ಳದಿದ್ದರೆ ಹಿಂದೂಸ್ಥಾನವು ಬ್ರಿಟಿಷ್ ಸಾಮ್ರಾಜ್ಯದಿಂದ ಶೀಘ್ರದಲ್ಲೇ ಬೇರ್ಪಡುತ್ತಿತ್ತು. ಯಾರು ಏನು ಹೇಳಿದರೂ ನಮ್ಮ ಕೆಲಸದ ಜಯದಲ್ಲಿ ನಂಬಿ ನಾವು ಕೆಲಸ ಮಾಡಬೇಕು. ಬ್ರಿಟನಿನಲ್ಲಿಯೂ ರಾಜಕಾರ್ಯ ಪಟುಗಳಿದ್ದಾರೆ. ಹಿಂದೂಸ್ಥಾನದಲ್ಲೂ ದೇಶಭಕ್ತಿ, ನಿಜವಾದ ತಿಳುವಳಿಕೆ ಉಳ್ಳವರಿದ್ದಾರೆ ಎಂತ ನನಗೆ ನಂಬಿಕೆ ಇದೆ.

ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ನಾನು ಇಂಡಿಯಾವನ್ನು ಬಿಟ್ಟು ಹೋಗಲು ಬೇಸರವಿದೆ. ಆದರೆ ಹಿಂದೂಸ್ಥಾನದ ನಿಜವಾದ ಸ್ನೇಹಿತನು ನಿಮ್ಮ ವೈಸರಾಯರಾಗಿ ಬರುವದರಿಂದ ಬೇಸರ ಕಡಿಮೆಯಾಗುತ್ತದೆ. ನನ್ನಿಂದ ಸಾಧ್ಯವಿದ್ದಷ್ಟು ನಾನು ಮಾಡಿದ್ದೇನೆ. ಇನ್ನು ಮುಂದೆ ದೊರಕುವ ಅವಕಾಶಗಳನ್ನು ನಹ ಹಿಂದೂಸ್ಥಾನದ ನಿಜವಾದ ಹಿತಕ್ಕೆ ಉಪಯೋಗಿಸುತ್ತೇನೆ.

ಕಾಂಗ್ರೆಸಿನಲ್ಲಿ ತೀರ್ಮಾನವಾದ ಇನ್ನು ಕೆಲವು ತೀರ್ಮಾನಗಳು.

(2ನೇ ಪುಟದಿಂದ ಮುಂದುವರಿದದ್ದು.)

(3) ಹತ್ತು ವರ್ಷಗಳಲ್ಲಿ ಅನೇಕ ಗ್ರಾಮಗಳ ಅನುಭವದಿಂದ ಏನು ನಿರ್ಧರವಾಗಿದೆಯೆಂದರೆ—ಹಿಂದೂಸ್ಥಾನದ ಸಮುದಾಯದ ಬಡತನಕ್ಕೆ ಮುಖ್ಯ ಕಾರಣವ್ಯಾವದೆಂದರೆ—ರೈತರಿಗೆ ಸಮಯವಿರುವಾಗ ಮಾಡಲು ಎರಡನೇ ಕಸಬು ಇಲ್ಲದಿರುವಿಕೆಯೇ. ಅಂಥಾ ಎರಡು ಕಸಬು ಸರ್ವರಿಗೂ ದೊರಕುವಂಥಾದ್ದು ಕೈನೂಲಿನ ಕಸಬು.

ಕೈನೂಲು ಚರಕವನ್ನೂ ಮತ್ತು ಆ ಮೂಲಕ ಖದ್ದರನ್ನೂ ಬಿಟ್ಟು ಪರದೇಶೀ ಅಥವಾ ಗಿರಣಿ ಬಟ್ಟೆಯನ್ನು ಉಪಯೋಗಿಸಲು ಪ್ರಾರಂಭಿಸಿದ್ದರಿಂದ ಗ್ರಾಮಾಂತರಗಳಿಗೆ ಅಧಿಕ ನಷ್ಟ ಉಂಟಾಗಿದೆ. ಈ ಕಷ್ಟವನ್ನು ಪರದೇಶೀ ಬಟ್ಟೆ ಬಹಿಷ್ಕಾರ ಮತ್ತು ಖದ್ದರ್ ಮತ್ತು ಅವಶ್ಯವಿದ್ದಷ್ಟು ಸ್ವದೇಶೀ ಕಾರಖಾನೆ ಬಟ್ಟೆ ಉಪಯೋಗದಿಂದಲೇ ನಿವಾರಿಸಿಕೊಳ್ಳಬೇಕು.

ಆದ್ದರಿಂದ ಖದ್ದರ್ ಬಟ್ಟೆಯನ್ನೇ ಉಪಯೋಗಿಸಬೇಕೆಂತ ಸಮುದಾಯವನ್ನು ಕಾಂಗ್ರೆಸ್ ಕೇಳಿಕೊಳ್ಳುತ್ತದೆ. ಕಾರ್ಖಾನೆಗಳ್ಲಿ ಗ್ರಾಮಸ್ಥರಿಗೆ ಕೇಡು ಮಾಡುವ ಪರದೇಶೀ ಬಟ್ಟೆ ಮತ್ತು ನೂಲಿನ ವ್ಯಾಪಾರವನ್ನು ಬಿಡಬೇಕೆಂತ ವ್ಯಾಪಾರಿಗಳನ್ನು ಕೇಳಿಕೊಳ್ಳುತ್ತದೆ. ಎಲ್ಲಾ ಕಾಂಗ್ರೆಸ್ ಸಂಸ್ಥೆಗಳು ಖದ್ದರ್ ಪ್ರಚಾರದ ಮೂಲಕ ಪರದೇಶೀ ಬಟ್ಟೆ ಬಹಿಷ್ಕಾರವನ್ನು ಮಾಡಬೇಕೆಂತ ಕೇಳಿಕೊಳ್ಳುತ್ತದೆ.

ದೇಶೀ ರಾಜ್ಯಗಳು ತಮ್ಮ ರಾಜ್ಯಗಳೊಳಗೆ ಪರದೇಶೀ ಬಟ್ಟೆಯನ್ನು ಬರಗೊಡದೆ ದೇಶದ ಅಭಿವೃದ್ಧಿಗೆ ಸಹಾಯ ಮಾಡಬೇಕೆಂತ ಕೇಳಿಕೊಳ್ಳುತ್ತದೆ.

ಸ್ವದೇಶೀ ಗಿರಣಿ ಮಾಲೀಕರು ತಾವೇ ಖದ್ದರ್ ಧರಿಸಿ ಖದ್ದರಿಗೆ ನೈತಿಕ ಪ್ರೋತ್ಸಾಹ ಕೊಡಬೇಕೆಂತಲೂ, ಖದ್ದರಿಗೆ ಸ್ಪರ್ಧೆಯಾಗುವಂಥ ಬಟ್ಟೆ ಮಾಡದೆಯೂ, ತಮ್ಮ ಮಾಲಿಗೆ ಆದಷ್ಟು ಕಡಿಮೆ ಕ್ರಯವಿಟ್ಟೂ, ಪರದೇಶೀ ನೂಲು ಮತ್ತು ರೇಷ್ಮೆಯನ್ನು ತಾವು ಉಪಯೋಗಿಸದೆಯೂ, ಪರದೇಶೀ ಬಟ್ಟೆ ವ್ಯಾಪಾರಿಗಳಲ್ಲಿರುವ ಪರದೇಶೀ ಬಟ್ಟೆಯನ್ನು ಕೊಂಡುಕೊಂಡು, ಅದರ ಬದಲಿಗೆ ಸ್ವದೇಶೀ ಬಟ್ಟೆ ಕೊಟ್ಟು ಪರದೇಶೀ ಬಟ್ಟೆಯನ್ನು ದೂರ ದೇಶಗಳಿಗೆ ಕಳುಹಿಸಿಯೂ, ಗಿರಣಿ ಕೆಲಸಗಾರರ ಅನುಕೂಲಗಳನ್ನು ಹೆಚ್ಚಿಸಿಯೂ, ಕಾಂಗ್ರೆಸಿನ ರಚನಾತ್ಮಕ ಕೆಲಸಕ್ಕೆ ಸಹಾಯ ಮಾಡಬೇಕಾಗಿ ಕಾಂಗ್ರೆಸು ಕೇಳಿಕೊಳ್ಳುತ್ತದೆ.

ಪರದೇಶೀ ಬಟ್ಟೆ ವ್ಯಾಪಾರ ಮಾಡುವ ಪರದೇಶೀಯರು ತಮ್ಮ ವ್ಯಾಪಾರವನ್ನು ನಿಲ್ಲಿಸಿ ಸಹಾಯ ಮಾಡಬೇಕೆಂತ ಕಾಂಗ್ರೆಸು ಕೇಳಿಕೊಳ್ಳುತ್ತದೆ.

Rubber Stamps of every design
and
Glass sign boards. Half tone Blocks.
Monogram seals. Marble slabs ring
stones etc etc. to suit, every pocket and taste.

The Crown Rubber Stamp Co,
12—3 **Mangalore, S. K.**

ಸನ್ ೧೯೩೧ನೇ ಇಸವಿ ಏಪ್ರಿಲ್ ತಾರೀಕು ೨ರಲ್ಲು ಶನಿವಾರಸಂತೆ ಹೋಬಳಿ ಶನಿವಾರಸಂತೆಯಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಲೋಕಲ್‌ಫಂಡು ಆಸ್ಪತ್ರೆಯನ್ನು ಕೊಡಗು ಕಮಿಶನರ್ ಸಾಹೇಬರವರು ತೆರೆಯುವಾಗ ಹೋಬಳಿಯವರು ಮಾಡಿಕೊಂಡ ವಿಜ್ಞಾಪನೆ.

ಅಧ್ಯಕ್ಷರೇ ಮತ್ತು ಮಹನೀಯರೇ,

ಈ ದಿನ ಇಲ್ಲಿ ಆಸ್ಪತ್ರೆಯನ್ನು ತೆರೆಯಲಿಕ್ಕಾಗಿ ನಮ್ಮ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾಗಿರುವ ಹಜರತ್ ಕಮಿಶನರ್ ಸಾಹೇಬರವರನ್ನು ಇಲ್ಲಿಗೆ ಬರಮಾಡಿಕೊಳ್ಳುವ ಸುಯೋಗವನ್ನು ನಮಗಳಿಗೆ ದೊರಕಿಸಿಕೊಟ್ಟ ಭಗವಂತನನ್ನು ವಂದಿಸುತ್ತೇವೆ. ಈ ಕಮಿಶನರ್ ಸಾಹೇಬರವರು ನಮ್ಮ ಕೊಡಗು ದೇಶಕ್ಕೆ ಹೊಸಬರಾಗಿದ್ದಾರಲ್ಲದೆ ನಮ್ಮ ಹೋಬಳಿಗೂ ಹೊಸಬರೇ. ಆದಾಗ್ಯೂ ನಮ್ಮ ಕೋರಿಕೆಯನ್ನು ಅಂಗೀಕರಿಸಿ ಈ ದಿನ ಇಲ್ಲಿಗೆ ದಯಮಾಡಿದ್ದಕ್ಕೆ ನಾವು ಅವರಿಗೆ ತುಂಬಾ ಕೃತಜ್ಞರಾಗಿದ್ದೇವೆ.

ಈ ಹೋಬಳಿಯವರ ಪರವಾಗಿ ಈ ದಿನ ಇಲ್ಲಿ ಈ ಆಸ್ಪತ್ರೆಯನ್ನು ತೆರೆಯುವ ಸಮಾರಂಭವನ್ನು ಮಾಡಬೇಕೆಂತ ಹಜರತ್ ಕಮಿಶನರ್ ಸಾಹೇಬರವರನ್ನು ಬಹು ವಿಜ್ಞಾಪಿಸಿಕೊಳ್ಳುವ ಮೊದಲು ನಾನು ಕೆಲವು ವಿಷಯಗಳನ್ನು ಸೂಚಿಸಬೇಕಾಗಿರುತ್ತದೆ.

ಈ ಶನಿವಾರಸಂತೆ ಹೋಬಳಿಯು ಮೊದಲು ಏಳು ಸಾವಿರ ಸೀಮೆ ತಾಲೋಕು ಎಂತ ಒಂದು ಪ್ರತ್ಯೇಕ ತಾಲೋಕೇ ಆಗಿತ್ತು. ಈ ಹೋಬಳಿಯವರು ಬಹು ದಿನಗಳಿಂದಲೂ ಇಲ್ಲಿ ಒಂದು ಆಸ್ಪತ್ರೆಯನ್ನು ಏರ್ಪಡಿಸಿ ಕೊಡಬೇಕೆಂತ ಸರಕಾರದವರನ್ನು ಮತ್ತು ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಕೇಳುತ್ತಾ ಬಂದರು. ಸುಮಾರು ಐವತ್ತು ವರ್ಷದ ಹೋರಾಟದಿಂದ ಕೊನೆಗೆ ಈಗ ಈ ಹೋಬಳಿಯ ಸುಯೋಗವು ಪ್ರಾರಂಭವಾಯಿತೆಂತ ತಿಳಿಯುತ್ತೇನೆ. ಇಲ್ಲಿಯ ಜನರಿಗೆ ವೈದ್ಯಕೀಯ ಸಹಾಯವಿಲ್ಲದ್ದರಿಂದ ಊರಾಗ್ರಾಯ ದೆಸೆಯಲ್ಲಿದ್ದ ಅನೇಕ ಕುಟುಂಬಗಳೇ ನಾಶವಾಗಿ ಬಿಟ್ಟವು ಮತ್ತು ಹಲವು ಗ್ರಾಮಗಳಿಗೆ ಗ್ರಾಮಗಳೇ ನಿರ್ನಾಮವಾದವು ಎಂತ ಹೇಳಲು ಅತ್ಯಂತ ವ್ಯಸನಪಡಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ಸಂಗತಿಯನ್ನು ತೋರಿಸಬೇಕಾಗಿದೆ. ಈ ನಮ್ಮ ಹೋಬಳಿಯ ಜನರು ಈ ದೇಶದ ಇತರ ಹೋಬಳಿಯ ಜನರಂತೆ ಸರಕಾರದವರಿಂದ ನ್ಯಾಯವಾಗಿ ಹೊಂದಬೇಕಾದ ಪ್ರಯೋಜನಗಳನ್ನು ಹೊಂದುತ್ತಾ ಇಲ್ಲ. ಇವರುಗಳು ವಿದ್ಯೆಯಲ್ಲಿಯೂ, ಐಶ್ವರ್ಯದಲ್ಲಿಯೂ ಕೇವಲ ಹಿಂದು ಬಿದ್ದಿರುವುದೇ ಇವಕ್ಕೆ ಕಾರಣವೆಂತ ಹೇಳುತ್ತೇನೆ. ಅವಿದ್ಯಾವಂತರಾದ ಬಡ ಪ್ರಜೆಗಳು ತಮ್ಮ ಹಾಲು ಹಲಾಲುಗಳನ್ನು ತಕ್ಕ ರೀತಿಯಲ್ಲಿ ಸರಕಾರದವರಲ್ಲಿ ಹೇಳಿಕೊಳ್ಳಲು ಅಸಾಧ್ಯವಾಗಿದೆ. ಪ್ರಜೆಗಳಿಂದ ಒತ್ತಾಯವಿಲ್ಲದೆ ಇರುವ ಸಂದರ್ಭದಲ್ಲಿ ಸರಕಾರದವರು ಸಹ ಪ್ರಜೆಗಳು ತೃಪ್ತರಾಗಿದ್ದಾರೆಂಬ ತಪ್ಪು ಭಾವನೆಗೆ ಒಳಗಾಗಬಹುದು. ಇತ್ಯಾದಿ ಅನೇಕ ಕಾರಣಗಳಿಂದ ಈ ಹೋಬಳಿಯ ಜನರು ವಿದ್ಯೆಯಲ್ಲಿಯೂ, ಐಶ್ವರ್ಯದಲ್ಲಿಯೂ ದಿನೇ ದಿನೇ ಕ್ಷೀಣವಾಗುತ್ತಾ ಇದ್ದಾರಲ್ಲದೆ ಜನ ಸಂಖ್ಯೆಯಲ್ಲಿಯೂ ಕುಂದಿ ಹೋಗುತ್ತಾ ಇದ್ದಾರೆಂತ ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದು. ಜಾಗ್ರತೆ ಪರಿಶೀಲಿಸಿ ನೋಡಿದರೆ ನಾನು ಹೇಳುವುದು ವಾಸ್ತವವೆಂಬುದು ಯಾರಿಗಾದರೂ ಕಂಡು ಬರಬಹುದು.

ಇಂಥ ಸನ್ನಿವೇಶಗಳಲ್ಲಿ ಹಿಂದೆ ಬಿದ್ದಿರುವ ಮತ್ತು ವಿದ್ಯೆ ಇಲ್ಲದೆ ಇರುವ ಬಡ ರೈತಾಪಿ ಜನಗಳನ್ನು ಸರಕಾರದವರೇ ಮುಂದಕ್ಕೆ ತರಲು ಪ್ರಯತ್ನಪಟ್ಟು ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಈ ಭಾಗದಲ್ಲಿ ಸರಕಾರದವರು ಸ್ವಲ್ಪವೂ ತಡಮಾಡ ಬಾರದು. ಪ್ರಜೆಗಳೇ ಸರಕಾರದ ಬೆನ್ನು ಮೂಳೆಯೆಂಬುದನ್ನು ಅರಿತು ಬೇರೆ ಕೆಲವು ಸರಕಾರದವರು ಅಂಥ ದುಸ್ಥಿತಿಯಲ್ಲಿರುವ ರೈತರ ಸ್ಥಿತಿಗಳನ್ನು ಸುಧಾರಿಸಲು ಮುಂದೆ ಬಂದಿದ್ದಾರೆ. ಸರಕಾರವು ತನ್ನ ಪ್ರಜೆಗಳಿಗೆ ಅವಶ್ಯವಾಗಿ ಬೇಕಾಗಿರುವುದೇನೆಂಬುದನ್ನು ಕಂಡು ಹಿಡಿದು, ಅಂಥ ಅನುಕೂಲಗಳನ್ನು ಮಾಡಿಗರಂತಿರುವ ಪ್ರಜೆಗಳು ತಾವಾಗಿ ಪ್ರಾರ್ಥಿಸಿಕೊಳ್ಳದೇ ಇದ್ದರೂ, ಸರಕಾರದವರೇ ಒದಗಿಸಿಕೊಡಬೇಕಾದದ್ದು ಸರಕಾರ[illegible] ಕರ್ತವ್ಯವಾಗಿರುತ್ತದೆ. ಈ ರೀತಿಯಲ್ಲಿ ಸಹಾಯ ಮಾಡಲು ನಮ್ಮ ಸರಕಾರದವರು ಮನಸ್ಸು ಮಾಡದೆ ಇರುವಲ್ಲಿ ಈ ಹೋಬಳಿಯ ಜನರು ದಕ್ಷಿಣ ಕೊಡಗಿನ ರೈತರ ಅಂತಸ್ತಿಗೆ ಬರುವ ಸಂಭವವೇ ಇಲ್ಲ.

ಈ ವಿಷಯಗಳನ್ನು ನಾನು ಡಿಸ್ಟ್ರಿಕ್ಟ್ ಬೋರ್ಡಿನ ಮೂಲಕವೂ, ಲೆಜಿಸ್ಲೇಟೀವ್ ಕೌನ್ಸಿಲ್ ಮೂಲಕವೂ ಸಗಿ ಭೇಟಿಗಳಿಂದಲೂ ಸರಕಾರದವರ ಗಮನಕ್ಕೆ ವರ್ಷಗಳಿಂದಲೂ ತರುತ್ತಾ ಇದ್ದೇನೆ. ಆದರೆ ಕೆಲವಕ್ಕೆ ಪ್ರಯೋಜನ ಸಿಕ್ಕಿದೆಯೆಂತ ಒಪ್ಪಿಕೊಳ್ಳುತ್ತೇನೆ. ಆದಾಗ್ಯೂ ಇನ್ನೂ ಅನೇಕ ಉಳಿದಿರುತ್ತವೆ.

ಈ ಆಸ್ಪತ್ರೆಯು ಇಲ್ಲಿಗೆ ಈಗ್ಯೆ ಎರಡು ವರ್ಷದ ಹಿಂದೆಯೇ ಬರಬೇಕಾಗಿತ್ತು. ಇಲ್ಲಿನ ರೈತರ ಗರೀಬಿತನದಲೂ, ಮೂಢತನದಿಂದಲೂ ಹಿಂದೆ ಬಿದ್ದು ಹೋದ ಶನಿವಾರಸಂತೆಗೂ ಆಸ್ಪತ್ರೆಯೊಂದನ್ನು ಜಾಗ್ರತೆ ಸ್ಥಾಪಿಸಬೇಕೆಂತ ಮರ್ಕೇರಿಯ ಕಮಿಟಿಯವರು ಸುಮಾರು ಹತ್ತು ವರ್ಷದ ಹಿಂದೆಯೇ ಶಿಫಾರಸು ಮಾಡಿದ್ದಾರೆ. ಡಿಸ್ಟ್ರಿಕ್ಟ್ ಬೋರ್ಡಿನವರು ಸಹ ಮೂರ್ನಾಡಿಗೂ, ಶನಿವಾರಸಂತೆಗೂ ಮೂರು ವರ್ಷಗಳ ಮುಂಚೆಯೇ ಒಂದೊಂದು ಆಸ್ಪತ್ರೆಯನ್ನು ಮಂಜೂರು ಮಾಡಿದರು. ಆದರೆ ಮೂರ್ನಾಡಿನವರು ವಿದ್ಯಾವಂತರೂ, ಬುದ್ಧಿವಂತರೂ, ದೂರ ದೃಷ್ಟಿಯುಳ್ಳವರೂ ಆದ್ದರಿಂದ ಈ ಸಂದರ್ಭವನ್ನು ತಾವು ಮುಂದಾಗಿ ಉಪಯೋಗಿಸಿಕೊಂಡು ಆಸ್ಪತ್ರೆಯನ್ನು ತೆರೆದು ಎರಡು ವರ್ಷಗಳಿಂದಲೂ ಅದರ ಪ್ರಯೋಜನವನ್ನನುಭವಿಸುತ್ತಿದ್ದಾರೆ. ಶನಿವಾರಸಂತೆಯಲ್ಲಿ ಆಸ್ಪತ್ರೆ ತೆರೆಯುವ ಮೊದಲು ಕೆಲವು ಹಣವನ್ನು ಇಲ್ಲಿನವರು ಕೊಡಬೇಕೆಂತ ಡಿಸ್ಟ್ರಿಕ್ಟ್ ಬೋರ್ಡಿನವರು ಕೆಲವು ಕಾಲ ನಿರೀಕ್ಷಿಸಿದರು. ಮೇಲೆ ಉದಹರಿಸಿದಂತೆ ಇಲ್ಲಿನ ರೈತರ ಗರೀಬ ಸ್ಥಿತಿಯ[illegible]ದನ್ನು ಪೂರ್ತಿಯಾಗಿ ನಡಿಸಿಕೊಡಲು ಸಾಧ್ಯವಾಗದ ಸಾವಕಾಶಕ್ಕೆ ಇದೂ ಕಾರಣವೇ. ಅಂತೂ ಡಿಸ್ಟ್ರಿಕ್ಟ್ ಬೋರ್ಡಿನವರು ಹಣದ ವಿಷಯ ಒತ್ತಾಯ ಮಾಡದೆ ಬಹಳ ದಯೆಯಿಂದ ಈಗ ಈ ದಿನ ಇಲ್ಲಿ ಆಸ್ಪತ್ರೆಯನ್ನು ತೆರೆಯಲು ಏರ್ಪಡಿಸಿ ಕೊಟ್ಟಿರುವರು. ಇದಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡಿನವರ ಉದಾರತ್ವವನ್ನು ಕೊಂಡಾಡಬೇಕಾಗಿದೆ.

ಮನುಷ್ಯನಿಗೆ "ಆರೋಗ್ಯವೇ ಭಾಗ್ಯವು". ಆರೋಗ್ಯವಿಲ್ಲದೆ ಇದ್ದರೆ ಇನ್ಯಾವ ಐಶ್ವರ್ಯವಿದ್ದರೂ ಅದರಿಂದ ಅವನು ಸೌಖ್ಯ ಪಡಲಾರನು. ಈ ಅಭಿಪ್ರಾಯವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಲಕ್ಷ್ಯಕ್ಕೆ ತಂದುಕೊಂಡು ನಮ್ಮಿಂದ ಹಣ ಬರಮಾಡಿಕೊಳ್ಳುವ ಅಭಿಪ್ರಾಯವನ್ನು ದೂರ ಮಾಡಿದರೆಂತ ತಿಳಿಯುತ್ತೇನೆ.

ನಮ್ಮ ಹೋಬಳಿಯವರು ಇನ್ನು ಈ ಆಸ್ಪತ್ರೆಯನ್ನು ಸರಿಯಾಗಿ ಉಪಯೋಗಿಸಿಕೊಂಡು ಶರೀರಾರೋಗ್ಯಕ್ಕೂ ಸರ್ವಲಕ್ಕೂ ಅಗತ್ಯವಾದ ಇತರ ಸೌಲಭ್ಯಗಳನ್ನು ಪಡೆಯಲು ಪ್ರಯತ್ನಿಸಬೇಕೆಂತ ನಾನು ಕೇಳಿಕೊಳ್ಳುತ್ತೇನೆ.

ಆಸ್ಪತ್ರೆಯನ್ನು ಇಲ್ಲಿಗೆ ಬರಮಾಡಿಕೊಳ್ಳಲು ನಮಗೆ ತುಂಬಾ ಸಹಾಯ ಮಾಡಿದ ನಮ್ಮ ಸಿವಿಲ್ ಸರ್ಜನ್ ಸಾಹೇಬರನ್ನು ನಾವು ಇಲ್ಲಿ ವಂದಿಸದೇ ಇದ್ದರೆ ನಾವು ಸಹ ಕರ್ತವ್ಯವನ್ನು ಮಾಡಿದಂತೆ ಆಗುವುದಿಲ್ಲ. ಮತ್ತು ಇವರು ನಮಗೆ ಈಗನಿಂದಲೇ ಒಬ್ಬರು ಬುದ್ಧಿವಂತರಾದ ಡಾಕ್ಟರನ್ನು ಕೊಟ್ಟು ಸಹಾಯ ಮಾಡಿದ್ದಾರೆ. ಈ ಡಾಕ್ಟರ್ ಮಿ. [illegible]ದಿಕುತ್ತಿರ ಗಣಪತಿಯವರು ಇವರು ಇದ್ದ ಕಡೆಗಳಲ್ಲಿ ತುಂಬಾ ಮೆಹನತ್ತಿನಿಂದ ಕೆಲಸ ಮಾಡಿ ಪ್ರಜಾಮನ್ನಣೆಗೆ ಪಾತ್ರರಾಗಿದ್ದಾರೆಂತ ನಾನು ಕೇಳಿದ್ದೇನೆ.

ನಮ್ಮ ಆಹ್ವಾನವನ್ನು ದಯವಿಟ್ಟು ಅಂಗೀಕರಿಸಿ ಇಲ್ಲಿಗೆ ದಯಮಾಡಿಸಿ ಆಸ್ಪತ್ರೆಯನ್ನು ತೆರೆಯುವ ಸಮಾರಂಭದ ಭಾಗಿಗಳಾದ ನಮ್ಮ ಕಮಿಷನರ್ ಸಾಹೇಬರನ್ನೂ, ಸಿವಿಲ್ ಸರ್ಜನ್ ಸಾಹೇಬರನ್ನೂ ನಾನು ನಮ್ಮ ಹೋಬಳಿಯ ಪರವಾಗಿ ವಂದಿಸಿ ಅನೇಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಆಸ್ಪತ್ರೆಯನ್ನು ತೆರೆಯುವ ಮಹೋತ್ಸವವನ್ನು ನಡೆಸಬೇಕೆಂತ ನಮ್ಮ ಹಜರತ್ ಕಮಿಷನರ್ ಸಾಹೇಬರವರನ್ನು ವಿಜ್ಞಾಪಿಸಿ ನನ್ನ ಈ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

COORG FOREST DEPARTMENT, DIRECTION DIVISION.

Timber Sale.

At 2 P. M. on Tuesday the 14th April 1931 the following quantities of timber will be sold at Fraserpet by public auction by the Divisional Forest Officer, North Coorg. For further particulars apply to the Chief Forest Officer, Coorg, Mercara :—

Fraserpet.—Honne 1131 c. ft., Matti 445 c. ft., Bilu 178 c. ft., Teak poles 362 c. ft.

Somwarpet :—Teak 586 c. ft., Honne 128 c. ft., Nandi 581 c. ft., Matti 687 c. ft., Arasinatega 180 c. ft., Bilwara 90 c. ft., Neralu 175 c. ft., Udi 2 c. ft., Uluve 100 c. ft.

3—3

ವರ್ತಮಾನ ಸಂಗ್ರಹ.

ಒಳದೇಶ.

ಈ ತಾ. 28 ರಲ್ಲಿ ಪೊನ್ನಂಪೇಟೆಯಲ್ಲಿ ಶಿಶು ಪ್ರದರ್ಶನ ನಡೆಯಿತು.

ಭತ್ತದ ಧಾರಣೆ ಪುನಃ ಇಳಿಯ ತೊಡಗಿದೆ. ಅಮ್ಮತ್ತಿಯಲ್ಲಿ ಗಾಡಿ 1ಕ್ಕೆ 46 ರೂ. ಬೆಲೆ ಇದೆ.

ಶನಿವಾರಸಂತೆಯಲ್ಲಿ ಒಂದು ಹೊಸ ಆಸ್ಪತ್ರೆಯು ತಾ. ... ಲ್ಲಿ ಕೊಡಗು ಕಮಿಷನರವರಿಂದ ತೆರೆಯಲ್ಪಟ್ಟಿತು.

ಹಿಂದೂಸ್ಥಾನದ ಸೇವಾದಳದ ಸೈನಿಕರಾಗಿದ್ದ ಅಜ್ಜಿಕುಟ್ಟಿ ... ವೈಯ್ಯನವರು ವಾಪ್ಸು ಹುಬ್ಬಳ್ಳಿಗೆ ಹೊರಟುಹೋದರು.

ಕಾವಾಡಿ ಗ್ರಾಮದ ಮುಂಡ್ಯಾಟಿರ ತಿಮ್ಮಯ್ಯನವರು ಜೈಲಿನಿಂದ ಮದ್ರಾಸಿಗೆ ಕಳುಹಿಸಲ್ಪಟ್ಟವರು. ಈ ತಾ. 23 ರಲ್ಲಿಯೇ ಬಿಡುಗಡೆಯಾದರು.

ಪಾರುಪತ್ಯಗಾರರಾದ ಶ್ರೀಯುತ ನರಸಿಂಹಮೂರ್ತಿ ಯವರು ಅಮ್ಮತ್ತಿಯಿಂದ ವರ್ಗವಾಗಿ ಹೋಗುವ ದಿನ ಅವರನ್ನು ಅಮ್ಮತ್ತಿಯವರು ಸತ್ಕರಿಸಿದರು.

ಈ ದಿನ ಪೊನ್ನಂಪೇಟೆ ಕುಶಾಲಪುರದಲ್ಲಿ ಈ ತಿಂಗಳ ಆದಿತ್ಯವಾರ ಕಾಂಗ್ರೆಸು ವಾರದ ರಾಷ್ಟ್ರೀಯ ಧ್ವಜಾರೋಹಣ ವಂದನೆಯು ಮಿಸೆಸ್ ಪಿ. ಜಿ. ಸುಬ್ಬಯ್ಯನವರಿಂದ ನಡೆಸಲ್ಪಟ್ಟಿತು.

ದಕ್ಷಿಣ ಕೊಡಗಿನ ಬಾಳೆಲೆಯಲ್ಲಿಯ ಬ್ರಾಹ್ಮಣ ಗೋಕುಲದಾಸರು ಈಗ ಪೊನ್ನಂಪೇಟೆಯ ಸುತ್ತು ಒಳ್ಳೆ ನೈತಿಕವಾದ ಹರಿಕಥೆಗಳನ್ನು ಮಾಡುತ್ತಿರುವದರಿಂದ ಜನರು ಕೇಳಿ ತೃಪ್ತಿ ಹೊಂದುತ್ತಿರುವರು.

ಕೋ-ಆಪರೇಟಿವ್ ಫೆಡರೇಶನ್ ಆಫೀಸು ಈ ವರೆಗೆ ಕೊಡಗು ಜಮೀನ್ದಾರರ ಸಂಘದ ಕಟ್ಟಡದಲ್ಲಿದ್ದದ್ದು ತಾ. ...-31 ರಿಂದ ಸಬ್ ರೇಜಿಸ್ಟ್ರೇಟರ ಕೋರ್ಟು ಇದ್ದ ಸರ್ಕಾರ ಕಟ್ಟಡಕ್ಕೆ ವರ್ಗವಾಗಿದೆ.

ಕೊಡಗು ಎತಲೆಟಿಕ್ ಅಸೋಸಿಯೇಷನಿನ ಟೆನ್ನಿಸ್ ಮತ್ತು ಕ್ರಿಕೆಟ್ ಆಟವು ಈ ವಾರದಿಂದ ನಡೆಯುತ್ತಿದೆ. ಕಾಸ್ಮೋಪಾಲಿಟನ್ ಕ್ಲಬಿನವರು ಟೀಚರ್ಸ್ ಟೀಮಿನವರನ್ನು ಸೋಲಿಸಿರುವರು, ಆಟವು ಇನ್ನೂ ಮುಂದುವರಿಯುತ್ತಿದೆ.

ವೈಸರಾಯರಾದ ಲಾರ್ಡ್ ಇರ್ವಿನ್ ರವರು ಅಮ್ಮತ್ತಿಗಾಗಿ ದಾಟುವಾಗ ಅಮ್ಮತ್ತಿ ಸ್ಕೂಲು ಮಕ್ಕಳು ತೋರಿಸಿದ ರಾಜಭಕ್ತಿ ಮತ್ತು ಸುಸ್ವಾಗತಕ್ಕೆ ಮೆಚ್ಚಿ ವೈಸರಾಯರಿಂದ ಒಂದು ಸರ್ಟಿಫಿಕೇಟು ಕಮಿಷನರವರ ಮೂಲಕ ಶಾಲೆಗೆ ಬಂದಿದೆ.

29—3—31 ರಲ್ಲಿ ಭಗತ್‌ಸಿಂಗ್, ರಾಜಗುರು, ಸುಖದೇವ್ ಮೊದಲಾದವರನ್ನು ಗಲ್ಲಿಗೇರಿಸಿದ್ದಕ್ಕೆ ಸರ್ಕಾರವನ್ನು ನಿಂದಿಸುವ ಮೀಟಿಂಗು ಗೋಣಿಕೊಪ್ಪಲಿನಲ್ಲಿ ಸತ್ಯಾಗ್ರಹಿಗಳಿಂದ ನಡಿಸಲ್ಪಟ್ಟಿತು. ಮಿ. ಅಬ್ದುಲ್ ಗಫೂರ್‌ಖಾನ್ ಕೈಲಾಯವರು ಈ ಉದ್ದಿಶ್ಯ ಭಾಷಣ ಮಾಡಿದರು.

ಧಾರವಾಡದಲ್ಲಿ ತಾ. ೨೧—೩—೩೧ನೇ ದಿವಸ ಒಲ್ಲಿಯ ವನಿತಾ ಸೇವಾ ಸಮಾಜದ ೩ನೇಯ ವಾರ್ಷಿಕೋತ್ಸವವು ಶ್ರೀಮತಿ ಡಿ. ಸಾಕಮ್ಮ, ಸೋಮವಾರಪೇಟೆ, ಕೊಡಗು, ಮೈಸೂರು ಪ್ರಾತಿನಿಧಿಕ ಸದಸ್ಯೆ, ಇವರ ಅಧ್ಯಕ್ಷತೆಯಲ್ಲಿ ಮುನಿಸಿಪಾಲಿಟಿ ನಗರ ಭವನದಲ್ಲಿ ಆಯಿತು.

೭ ವರ್ಷಕೊಮ್ಮೆ ನಡಿಯುವ ಮಡಿಕೇರಿನಾಡು ಕಾಟಕೇರಿ ಗ್ರಾಮದ ಅಪ್ಪಂಗ್ರಿಯಪ್ಪ ಮತ್ತು ಒಡ್ರಕಾಳಿ ದೇವರ ಹಬ್ಬವು (ಕೊಂಬಾಟ್) ಇದೇ ತಾ. 4ರಿಂದ ನಡೆಯಾಗುವುದು. ಇದರ ದೊಡ್ಡ ಹಬ್ಬವು ತಾ. 11ರಿಂದ 13ರ ವರೆಗೆ ಬಹು ವಿಜೃಂಭಣೆಯಿಂದ ನಡೆಯುತ್ತದೆಂದು ಇದಕ್ಕೆ ಸಂಬಂಧಪಟ್ಟವರು ಬಿಟ್ಟರು ತಿಳಿಸಿರುತ್ತಾರೆ.

ಮದ್ರಾಸಿನ ಅಗ್ರಿಕಲ್ಚರಲ್ ಇಲಾಖೆಯವರು ತಾ. 26 ರಲ್ಲಿ ಹೆಬ್ಬಾಲೆಯಲ್ಲೂ, 27 ರಲ್ಲಿ ಮಡಿಕೇರಿಯಲ್ಲೂ, 28 ರಲ್ಲಿ ಪೊನ್ನಂಪೇಟೆಯಲ್ಲೂ ಮತ್ತು 29 ರಲ್ಲಿ ಗೋಣಿಕೊಪ್ಪಲು ಮತ್ತು ವೀರಾಜಪೇಟೆಯಲ್ಲಿ ಹೋಟೆಲರು ಒಂದಿಗೆ ವ್ಯವಸಾಯದ ಕ್ರಮ, ಗೊಬ್ಬರ, ಬೀಜದ ಧಾನ್ಯಗಳು, ... ನದ ಜೊತೆಗೆ ಮುಂತಾದ್ದನ್ನು ತೋರಿಸುವ ಪ್ರದರ್ಶನ ಮಾಡಿದರು.

ಕೊಡಗಿನ ಆಡಳಿತದಲ್ಲಿ ಖರ್ಚನ್ನು ಕಮ್ಮಿ ಮಾಡುವದಕ್ಕೂ ಮತ್ತು ಸರಕಾರದ ಉತ್ಪತ್ತಿಯನ್ನು ಯಾವ ವಿಧದಲ್ಲಿ ಹೆಚ್ಚಿಸಬಹುದೆಂಬದನ್ನು ಕಂಡು ಹಿಡಿಯಲಿಕ್ಕೂ ಒಂದು ರಿಟ್ರೆಂಚ್‌ಮೆಂಟ್ ಕಮಿಟಿ ನೇಮಿಸಲಾಗುತ್ತದೆಯೆಂತಲೂ, ಅದಕ್ಕೆ ಉದ್ಯೋಗಸ್ಥರಲ್ಲದ ಮೆಂಬರುಗಳಾಗಿ ಮಿ. ಬಿ. ಶ್ರೀಪತಿ ರಾಯರನ್ನ, ಮಿ. ಪಲ್ಲಂಡ ಬೆಳ್ಯಪ್ಪನವರೂ ಆರಿಸಲ್ಪಟ್ಟಿರುವ ರಾಗಿ ವರ್ತಮಾನವಿದೆ.

ಕೊಡಗಿನ ಅನೇಕ ಬಟ್ಟೆ ವ್ಯಾಪಾರಿಗಳು ಶ್ರೀ ರಾಮುಲಿಂಗ ಚಪ್ಪುಡಾವಾಲಾ, ಕಾದರ್ ಆಲಿಯ ಮತ್ತು ಯಂ. ಸಂಜಪ್ಪ ಶೆಟ್ಟಿಯವರ್ & ಸನ್ಸ್ ಖದ್ದರ್ ಸ್ಟೋರ್, ತಿರುಪೂರು ಎಂಬ ... ಚರಕದ ಮತ್ತು ಮಹಾತ್ಮ ಗಾಂಧಿ ಮುಂತಾದ ... ಇರುವ ಲೇಬಲುಗಳುಳ್ಳ ಬಟ್ಟೆಯನ್ನು ಅಗ್ಗವಾಗಿ ಮಾರುತ್ತಿರುವರು. ಈ ವಿಚಾರದಲ್ಲಿ ನ್ಯಾಯವಾದ ಖದ್ದರ್ ವ್ಯಾಪಾರಿಗಳೋ ಎಂಬದನ್ನು ಪತ್ರಿಕೆಯ ಮೂಲಕ ಯಾರಾದರೂ ಮಹನೀಯರು ತಿಳಿಸಿಕೊಡಬೇಕಾಗಿ ಖದ್ದು ಬಳಕೆದಾರರು ಕೇಳಿರುತ್ತಾರೆ.

ತಾ. 28-3-1931 ರಲ್ಲಿ ನಡೆದ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನಲ್ಲಿ 1 ಅವಂದೂರು ಸೊಸೈಟಿಗೆ ರೂ. 500, 2. ಮೂರ್ನಾಡು ಟೌನ್ ಸೊಸೈಟಿಗೆ ರೂ 400, 3 ನಾಪೋಕ್ಲುನಾಡು ಕೋ-ಆಪರೇಟಿವ್ ಸ್ಟೋರ್ಸಿಗೆ ರೂ. 1000, 4. ಸಿದ್ದಾಪುರ ಸೊಸೈಟಿಗೆ ರೂ. 200, 5 ಅಮ್ಮತ್ತಿ ಟೌನ್ ಸೊಸೈಟಿಗೆ ರೂ 500, 6 ಹೊಸೂರು ಸೊಸೈಟಿಗೆ ರೂ 500, 7 ಬಿಟ್ಟಂಗಾಲ ಸೊಸೈಟಿಗೆ ರೂ. 500, 8. ಕಾಲೂರು ಸೊಸೈಟಿಗೆ ರೂ. 300, 9. ಪೊನ್ನಂಪೇಟೆ ಸ್ಟೋರ್ಸ್‌ಗೆ ರೂ. 1000 ಮತ್ತು 10. ಗೋಣಿಕೊಪ್ಪಲು ಟೌನ್ ಸೊಸೈಟಿಗೆ ರೂ. 1000. ಸಾಲ ಮಂಜೂರಾಗಿದೆಯಲ್ಲದೆ ಮಿ ಸಿ. ಯಸ್. ವೆಂಕಪ್ಪಯ್ಯನವರನ್ನು ಬ್ಯಾಂಕಿನ ಗೌರವ ಕಾರ್ಯದರ್ಶಿಯಾಗಿಯೂ, ಮಿ ಯಂ. ಯಂ. ಬೆಳ್ಯಪ್ಪನವರನ್ನು ಟ್ರೆಜರರಾಗಿಯೂ ನೇಮಿಸಲಾಗಿದೆ. ಸ್ಥಳ ಸಂಕೋಚದಿಂದ ಸದರಿ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಬರುವ ವಾರ ಪ್ರಕಟಿಸಲಾಗುವದು.

ಹಿಂದೂದೇಶ.

ಇಂಗ್ಲೆಂಡಿನಿಂದ ಕರಾಚಿಗೆ 5 ದಿನಗಳಲ್ಲೇ ಟಪ್ಪಾಲು ವಿಮಾನ ಬಂದು ಮುಟ್ಟುವಂತೆ ವ್ಯವಸ್ಥೆಯಾಗುತ್ತಿದೆ.

ಪರದೇಶದಿಂದ ಬರುವ ಸುಂಕಕ್ಕೆ ಮಣ ಒಂದರ ನಾಲ್ಕಾಣೆ ಸುಂಕ ಹಾಕಬೇಕೆಂತ ಎಸೆಂಬ್ಲಿಯಲ್ಲಿ ಖಾನೂನು ಮಂಜೂರಾಗಿದೆ.

ಕರಾಚಿಯಲ್ಲಿ ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಸಭೆಯೊಂದಾಗಿ ಕೌನ್ಸಿಲ್ ಚುನಾವಣೆಯು ಒಗ್ಗಟ್ಟಿನಿಂದಲೇ ನಡಿಯ ಬೇಕೆಂತ ಠರಾವು ಮಂಜೂರಾಗಿದೆ.

'ನ್ಯಾಡಸ್ಟನ್ ರೋಡ್' ಎಂಬ ಹೆಸರಿನ ಮಾರ್ಗವನ್ನು ಮುಂದೆ ಮಹಮ್ಮದಾಲಿ ರೋಡ್" ಎಂದು ಕರೆಯಬೇಕಾಗಿ ಬೊಂಬಾಯಿ ಕಾರ್ಪೋರೇಶನಿನಲ್ಲಿ ಠರಾವಾಗಿದೆ.

ಮಹಾರಾಷ್ಟ್ರದವರು ಖಾದಿ ಪ್ರಚಾರ ಮತ್ತು ಮದ್ಯಪಾನ ನಿಷೇಧ ಕಾರ್ಯಗಳಿಗಾಗಿ ಒಂದು ಲಕ್ಷ ರೂಪಾಯಿಗಳ ನಿಧಿಯನ್ನು ಕೂಡಿಸಬೇಕೆಂದು ನಿಶ್ಚೈಸಿರುವರು.

ವೈಸರಾಯ (ಲಾರ್ಡ್ ಇರ್ವಿನ್) ರ ಸ್ಮಾರಕ ಒಂದನ್ನು ಅವರ ಪ್ರತಿಮೆ ಮೂಲಕ ಏರ್ಪಡಿಸಲು ಭೀಕಾನೀರ್ ಮಹಾರಾಜರ ಅಧ್ಯಕ್ಷತೆಯಲ್ಲೊಂದು ಮಂಡಲಿಯ ರಚನೆಯಾಗಿದೆ.

ಖಾನ್‌ಪುರದ ಹಿಂದೂ ಮುಸಲ್ಮಾನ್ ದಂಗೆಯಲ್ಲಿ ಸುಮಾರು 300 ಜನರು ಪ್ರಾಣ ಹೋಗಿದ್ದಾರೆಂದೂ, 600 ಜನರಿಗಿಂತ ಹೆಚ್ಚಾಗಿ ಗಾಯಪಟ್ಟಿರುವರೆಂದೂ ವರ್ತಮಾನವಿದೆ. ಈಗ ದಂಗೆಯು ಶಾಂತವಾಗಿದೆ.

ಸ್ವದೇಶೀ ಅರಿವೆಗೆ ಪ್ರೋತ್ಸಾಹವು ಏರುತ್ತಿರುವ ಪ್ರಯುಕ್ತ ಅಹಮ್ಮದಾಬಾದಿನಲ್ಲಿ 10 ಹೊಸ ಗಿರಣಿಗಳು ತಲೆಯೆತ್ತಿವೆ. ಇನ್ನು 6 ಗಿರಣಿಗಳನ್ನು ಪ್ರಾರಂಭಿಸಲು ಸಿದ್ಧತೆಗಳು ನಡೆಯುತ್ತಿರುವುವು.

ಕಲ್ಕತ್ತದಲ್ಲಿ ಲೆಫ್ಟಿನೆಂಟ್ ಕರ್ನಲ್ ಸಿಂಪ್ಸನ್ನನ್ನು ಕೊಂದ ದಿನೇಶಗುಪ್ತನಿಗೂ, ಚಿತಗಾಂಗಿನಲ್ಲಿ ಇನ್ಸ್‌ಪೆಕ್ಟರ್ ತಾರಿಣೀ ಮುಖರ್ಜಿಯವರನ್ನು ಕೊಂದ ರಾಮಕೃಷ್ಣ ಬಿಶ್ವಾಸನಿಗೂ ಹೈ ಕೋರ್ಟಿನಲ್ಲಿ ಫಾಸಿ ಶಿಕ್ಷೆಯು ಸಮರ್ಥಿಸಲಾಯಿತು.

ಭಗತ್‌ಸಿಂಗ್ ಮೊದಲಾದವರ ಫಾಸಿಗಾಗಿ ಮನನೊಂದು, ನಿಷೇಧ ಸೂಚಕವೆಂದು ಮದರಾಸಿನ ಮಲಬಾರ್ ಸ್ಪೆಶಲ್ ಪೊಲೀಸು ಜಮೆದಾರರಾದ ಶ್ರೀ ಟಿ. ಪಿ. ಕುಮಾರನ್ ನಾಯರ್ ಎಂಬವರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟು ತಮ್ಮ ಊರಿಗೆ ಹೊರಟು ಹೋದರು.

ಕಾಂಗ್ರೆಸಿನಲ್ಲಿ ಸ್ವರಾಜ್ಯದಿಂದ ಸಾಧಾರಣ ಜನರಿಗೆ ಆಗತಕ್ಕ ಪ್ರಯೋಜನಗಳನ್ನು ವಿವರಿಸುವ ಒಂದು ಠರಾವು ಚರ್ಚೆಗೆ ಬಂದಿದೆ. ಅದರಲ್ಲಿ ಸ್ವರಾಜ್ಯ ಸರಕಾರದಲ್ಲಿ ಸಾಧಾರಣವಾಗಿ ಸರಕಾರಿ ಉದ್ಯೋಗಸ್ಥರಿಗೆ 500 ರೂ. ಗಿಂತ ಹೆಚ್ಚಿನ ಸಂಬಳವಿರಕೂಡದೆಂತ ಸೂಚಿಸಲ್ಪಟ್ಟಿದೆ.

ಕಾಂಗ್ರೆಸ್ ಮಹಾಸಭೆಯಲ್ಲಿ ಭಗತ್‌ಸಿಂಗ್ ಮುಂತಾದವರ ಕುರಿತು ಠರಾವು ಚರ್ಚಿಸಲ್ಪಟ್ಟಾಗ ಭಗತ್‌ಸಿಂಗರ ತಂದೆ ಕೃಷ್ಣಸಿಂಗರು ಸಭೆಯ ಮುಂದೆ ಬಂದು ಅಹಿಂಸಾ ಮಾರ್ಗವನ್ನು ಬಿಡಬೇಡಿ ಎಂತ ಬೋಧಿಸಿದರು. ಸುಖದೇವ್ ಎಂಬವರ ತಾಯಿ ಸಹ ಸಭೆಯ ಮುಂದೆ ಬಂದು ದರ್ಶನ ಕೊಟ್ಟರು

ಕಳೆದ ತಾ. 20ರಲ್ಲಿ ಸುಮಾರು 100 ಮಂದಿ ಅಮೇರಿಕಾದವರು ಡಿಲ್ಲಿಯಲ್ಲಿ ಮಹಾತ್ಮ ಗಾಂಧಿಯವರನ್ನು ಕಾಣಲಿಕ್ಕೆ ಬಂದವರು ವಿನೋದಕ್ಕಾಗಿಯೋ, ವೈಶಿಷ್ಟ್ಯಕ್ಕಾಗಿಯೋ ಗಾಂಧಿ ಟೊಪ್ಪಿಯನ್ನು ಧರಿಸಿದ್ದರು. ಕಾಲವರಿತು ತಮ್ಮ ಜೀವಮಾನವಧಿ ಈ ಟೊಪ್ಪಿಯನ್ನು ಧರಿಸುವೆವಾಗಿ ಅವೇಶದಿಂದ ನುಡಿದು ಬಿಟ್ಟರು.

ಟೆಕ್ಕಾರೆಂಟೀನೋ ದೇಶದ ಮಿಸ್ ಪಿ. ಎ. ಪೋಕರ್ ಎಂಬ ... ಯು 2 ವರ್ಷಗಳ ಕೆಳಗೆ ಕಾಲ್ನಡೆಯಾಗಿ ಭೂಸಂಚಾರಕ್ಕೆ ಹೊರಟಿದ್ದು, ಇಷ್ಟರೊಳಗಾಗಿ 6,40,000 ಮೈಲುಗಳನ್ನು ಕ್ರಮಿಸಿ ಹಲವು ದೇಶಗಳನ್ನು ನೋಡಿಕೊಂಡು ಮದರಾಸಿಗೆ ಬಂದಿರುತ್ತಾಳೆ. ಪ್ರತಿಯೊಂದು ದೇಶದಲ್ಲಿನ ಪ್ರಮುಖ ನಗರಗಳನ್ನು ಮಾತ್ರ ಇವಳು ಎರಡು ದಿನ ಉಳಕೊಂಡು ನೋಡುವಳು.

ಉತ್ಕಲ ಕರದ ರಾಟೆಯನ್ನು ಕಂಡುಹಿಡಿದವರಿಗೆ ಒಂದು ಲಕ್ಷ ರೂಪಾಯಿಗಳ ಬಹುಮಾನ ಕೊಡಲಾಗುವುದಾಗಿ ಗಾಂಧಿ ಮಹಾತ್ಮರು ಕಳೆದ ವರ್ಷ ಪ್ರಕಟಿಸಿದ್ದು, ಆ ರಾಟೆಯು ಯಾವ ರೀತಿಯಲ್ಲಿರಬೇಕೆಂದು ತಿಳಿಸಿದ್ದರಷ್ಟೆ. ಈ ತನಕ ದೇಶದ ಇಪ್ಪತ್ತು ಭಾಗಗಳಿಂದ ಅಂಥಾ ರಾಟೆಗಳು ಬಂದರೂ ಆ ಪಕ್ಕಕ್ಕೆ ಒಂದಿವೊಂದರೂ ಆ "ರಾಟೆಯ ಕಮಿಟಿ"ಗೆ ಯೊಪ್ಪಿಗೆ ತೃಪ್ತಿಕರವಾಗಿ ತೋರಿ ಬಂದುದಿಲ್ಲ.

ಕಳೆದ ತಾ. 27ರ ರಾತ್ರೆ, ಮದ್ರಾಸಿನ ಎಗ್ಮೋರ್ ರೈಲ್ವೇ ನಿಲ್ದಾಣದಿಂದ ಕಪ್ತನ್ ಹೆರ್ರಿ ಡರ್ಬಿ ಎಂಬ ಐರೋಪ್ಯನು ಒಬ್ಬ ರಿಕ್ಷಾ (ಮನುಷ್ಯರು ಎಳೆಯುವ ಗಾಡಿ) ವಾಲಾನನ್ನು ಕರೆದು ಕುಳಿತು ಮನಸ್ಸಿಗೆ ಬಂದ ಸಂಚಾರ ಮಾಡಿ, ಹೊಟೇಲುಗಳ ಮಧ್ಯೆ ಪಯಣಿಸಿ ನೋಡಿದಂತಾಗಿ, ಮಧ್ಯ ರಾತ್ರಿ ಮರಳಿ ಆ ರಿಕ್ಷಾ ಗಾಡಿಯವನಿಗೆ ಒಂದು ರೂಪಾಯಿ ಕೊಟ್ಟನು. ಆ ರಿಕ್ಷಾದವನು ಹೆಚ್ಚಿಗೆ ಹಣಕ್ಕಾಗಿ ಗೊಣಗುಟ್ಟಿದನು. ಐರೋಪ್ಯನಿಗೆ ರೇಗಿತು. ಕಿಸೆಯಿಂದ ರಿವಾಲ್ವರನ್ನು ತೆಗೆದು ರಿಕ್ಷಾದವನನ್ನು ಗದರಿಸಿ ಹೆದರಿಸುವಾಗ ಆ ರಿವಾಲ್ವರಿನಿಂದ ಗುಂಡು ಹಾರಿ ರಿಕ್ಷಾದವನ ಎದೆಯನ್ನು ಭೇದಿಸಿ ಕೊಂದೇ ಬಿಟ್ಟಿತು! ಕೆಲವು ಜನರು ಕೂಡಿದರು. ಪೊಲೀಸರಿಗೆ ಕರೆಯು ಹೋಗಿ ಅವರೂ ಬಂದರು. ಐರೋಪ್ಯನನ್ನೇ ಸೆರೆ ಹಿಡಿದಿರುವರಂತೆ! ಆ ಐರೋಪ್ಯನು ಸ್ಕಾಟ್‌ಲೇಂಡಿನವನಾಗಿದ್ದು ಬಂಗಾರದ ಗಣಿಗಳ ಧನಿಯಂತೆ.

ಖಾನ್‌ಪುರದ ದಂಗೆಯಲ್ಲಿ ಸಂಯುಕ್ತಪ್ರಾಂತ್ಯದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ, ಹಿಂದೂ ಮುಸಲ್ಮಾನ್ ಒಗ್ಗಟ್ಟಿಗಾಗಿ ಕೆಲಸ ಮಾಡುತ್ತಿದ್ದವರೂ "ಪ್ರತಾಪ" ಎಂಬ ರಾಷ್ಟ್ರೀಯ ಪತ್ರಿಕೆಯ ಸಂಪಾದಕರೂ ಆದ ಗಣೇಶ ಶಂಕರ ವಿದ್ಯಾರ್ಥಿಯೆಂಬವರು ಕೊಲ್ಲಲ್ಪಟ್ಟಿದ್ದಾರೆ. ಆಪಾಯಕ್ಕೆ ಗುರಿಯಾಗಿದ್ದ ನೂರಾರು ಮುಸಲ್ಮಾನರನ್ನು ಅಪಾಯದಿಂದ ತಪ್ಪಿಸಿದರು. ಭ್ರಾಂತಿ ಪಟ್ಟ ಮುಸಲ್ಮಾನರನ್ನು ತಾವು ಆಸ್ಪತ್ರೆಗೆ ಹೊತ್ತು ಸಾಗಿಸಿದರು. ಸಿಟ್ಟಿದ್ದ ಮುಸಲ್ಮಾನ್ ಜನರಿಗೆ ಬೋಧಿಸಿ ಶಾಂತಪಡಿಸುವಾಗ ಸನ್ಯಾಸದರೂ ಹುಚ್ಚಿ ಕೊಲ್ಲ ಎಂತ ಎಡಿಯುತ್ತಿರುವಾಗ ಹಾಗೆಯೇ ಹುಚ್ಚಿ ಕೊಂದು ಸುಡುಗ್ಗ ಒಂದು ಮನೆಗೆ ಎಸೆದರು. ಮೂರು ದಿನದ ಮೇಲೆ ಇವರ ಶವವು ಸಿಕ್ಕಿ ಮರ್ಯಾದೆ ಪೂರ್ವಕವಾಗಿ ದಹನವಾಯಿತು. ... ಸಂಗಡ ... ಮುಸಲ್ಮಾನ್ ಸ್ವಯಂ ಸೇವಕರ ಪೈಕಿ ಒಬ್ಬರು ಸತ್ತರು. ಇನ್ನೊಬ್ಬರಿಗೆ ಗಾಯವಾಗಿದೆ.

COORG FOREST DEPARTMENT.

Mercara the 24th March 1931.

NOTICE.

It is hereby notified for the information of those gent malegars who took up the leases of gent males during and after 1924 and up to and including 1927 that payment of arrears of assessment by the aforesaid holders of cardamom males will be excused if they resign their males absolutely by 20th April 1931

All malegars who do not wish to resign are required to pay up the arrears in full They may pay the arrears in four equal yearly instalments as follows if the arrears exceed Rs 20/—

I. by 20th April 1931.
II. „ 31st January 1932.
III. „ „ „ 1933.
IV. „ „ „ 1934

Where the arrears are Rs 20/—or less the full amount must be paid up in two equaul instalments as follows —

I. by 20th April 1931.
II „ 31st Janury 1932.

All resignation applications must reach the undersigned on or before the 20th April 1931 without fail Any resignation received after that date will be ignored.

H. G. Hicks.
3—1 Cheif Forest Officer.

ನೋಟೀಸು.

ಈ ಮೂಲಕ ಗೇಣಿ ಮಲೆಗಾರರಿಗೆ ತಿಳಿಯಪಡಿಸುವುದೇನಂದರೆ—1924ನೇ ಇಸವಿಯಿಂದ 1929ನೇ ಇಸವಿಯ ವರೆಗೆ ಗೇಣಿ ಮಲೆಗಳನ್ನು ಪಡಕೊಂಡು ಗೇಣಿ ಕಂದಾಯ ಕೊಡದೆ ಬಾಕಿ ಇರುವಂಥಾವರು ಇದೇ ಬರುವ ಏಪ್ರಿಲ್ ತಾರೀಕು 20 ರ ಒಳಗೆ ಕಂದಾಯ ಬಾಕಿ ಇರುವ ಮಲೆಗಳನ್ನು ರಾಜಿನಾಮೆ ಕೊಟ್ಟು ಬಿಡತಕ್ಕದು. ಆ ಮಲೆಗಳ ಬಾಕಿ ಕಂದಾಯವು ಮಾಫಿ ಮಾಡಲ್ಪಡುವುದು. ರಾಜಿನಾಮೆ ಕೊಡದೆ ಇಟ್ಟುಕೊಳ್ಳುವಂಥ ಮಲೆಗಳ ಬಾಕಿ ಕಂದಾಯವು 20 ರೂಪಾಯಿಗಿಂತ ಹೆಚ್ಚಿದ್ದರೆ ಅಂಥಾ ಕಂದಾಯವನ್ನು ನಾಲ್ಕು ಕಂತುಗಳಿಂದ ನಾಲ್ಕು ವರ್ಷಗಳಲ್ಲಿ ಕೊಟ್ಟು ಪಾವತಿ ಮಾಡಬೇಕು. ಅಂಥಾ ಕಂದಾಯವು 20 ರೂಪಾಯಿಗಿಂತ ಕಮ್ಮಿ ಇದ್ದರೆ ಎರಡು ಕಂತುಗಳಿಂದ ಎರಡು ವರ್ಷಗಳಲ್ಲಿ ತೀರಿಸಬೇಕು. ಎಲ್ಲಾ ರಾಜಿನಾಮೆ ಅರ್ಜಿಗಳು ಇದೇ ಏಪ್ರಿಲ್ ತಾರೀಖು 20 ರ ಒಳಗೆ ಚೀಫ್ ಫಾರೆಸ್ಟ್ ಆಫೀಸರವರಿಗೆ ತಪ್ಪದೆ ತಲುಪತಕ್ಕದು. ಸದರಿ ತಾರೀಖಿನ ನಂತರ ಬಂದ ಅರ್ಜಿಗಳು ತಿರಸ್ಕರಿಸಲ್ಪಡುವುವು.

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.

ಮಂಗಳೂರು, ದ. ಕನ್ನಡ.

ಯಾವತ್ತೂ ಬಗೆಯ ರಬ್ಬರು ಮೋಹರುಗಳು ಕನ್ನಡಿಯ ಸೈನ್ ಬೋರ್ಡು, ಹಾಪ್ ಟೋನ್ ಬ್ಲಾಕ್ ಇತ್ಯಾದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಬಾಳಿಕೆಗೆ ಬರುವಂತೆ ತಯಾರಿಸಿ ಕೊಡಲಾಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಿರಿ.
12—2

ವಿದ್ಯೆ.

(35ನೇ ಸಂಚಿಕೆಯಿಂದ ಮುಂದುವರಿದದ್ದು)

ನಾವು ಹಿಂದೆ ಒಂದು ಲೇಖನದಲ್ಲಿ ಹೇಳಿದಂತೆ ಇಂಗ್ಲಿಷರು ಹಿಂದೂದೇಶಕ್ಕೆ ಬರುವುದಕ್ಕೆ ಮುಂಚೆ, ಬಂದ ಮೇಲೂ 19ನೇ ಶತಮಾನದ ಅರ್ಧದ ವರೆಗೆ ಹಿಂದೂದೇಶದಲ್ಲಿ ಸಾರ್ವಜನಿಕ ವಿದ್ಯಾಭ್ಯಾಸವು ಪ್ರಚಾರದಲ್ಲಿದ್ದಿತು. ಆರ್ಯರ ಕಾಲದ ವಿದ್ಯಾ ನಿಯಮಗಳನ್ನು ಅಲ್ಲಿಯವರೆಗೆ ಅನುಸರಿಸುತ್ತಿದ್ದ ನಮ್ಮ ಪೂರ್ವಿಕರ ಮೇಲ್ಪಂಕ್ತಿಯು ಕಾಳಿದಾಸ ಮಹಾ ಕವಿಯು ಈ ಕೆಳಗಿನ ಶ್ಲೋಕವೇ ಆಗಿದ್ದಿತು.

> ಶೈಶವೇ ಭ್ಯಸ್ತ ವಿದ್ಯಾನಾಂ
> ಯೌವ್ವನೇ ವಿಷಯೈಷಿಣಾಂ
> ವಾರ್ಧಕೇ ಮುನಿವೃತ್ತೀನಾಂ
> ಯೋಗೇನಾಂತೆ ತನುತ್ಯಜಾಂ.

ಬಾಲ್ಯದಲ್ಲಿ ವಿದ್ಯೆಯನ್ನು ಕಲಿಯುವುದು, ಯೌವ್ವನದಲ್ಲಿ ವಿವಾಹಿತರಾಗಿ ಗೃಹಸ್ಥಾಶ್ರಮ ಧರ್ಮವನ್ನು ಪಾಲಿಸುವುದು; ಮುಪ್ಪಿನಲ್ಲಿ ಸಂಸಾರ ಪಾಶದಿಂದಲೂ, ಪ್ರಾಪಂಚಿಕ ವ್ಯವಹಾರ ಲೋಭ ಮೋಹಗಳಿಂದಲೂ ದೂರವಾಗಿ, ಶಾಂತವಾದ ಅರಣ್ಯಗಳಲ್ಲಿ ಋಷಿಗಳ ಜೊತೆಯನ್ನು ಸೇರಿ ಭಗವಧ್ಯಾನ ಮಾಡುವುದು, ಕೊನೆಯಲ್ಲಿ ಯೋಗ ಶಕ್ತಿಯಿಂದ ದೇಹತ್ಯಾಗ ಮಾಡುವುದು ಇದು ಸಾಮಾನ್ಯವಾಗಿ ಹಿಂದಿನ ಕ್ಷತ್ರಿಯ ಮತ್ತು ಬ್ರಾಹ್ಮಣರ ಧರ್ಮವಾಗಿತ್ತು.

ವಿದ್ಯಾರ್ಥಿಗಳು ಗುರುವಿನ ಬಳಿ, ಏಕಾಗ್ರವಾದ ಮನೋವೃತ್ತಿಯಿಂದ ಬೇರೆ ಕಡೆಗೆ ಲಕ್ಷ್ಯವು ಚಲಿತವಾಗಲು ಅವಕಾಶವಿಲ್ಲದಂತೆ ಹನ್ನೆರಡು ವರ್ಷಕಾಲ ವಿದ್ಯೆಯನ್ನು ಕಲಿಯುತ್ತಿದ್ದರು. ಅನಂತರ ದೇಶದ ಮೇಲೆಲ್ಲಾ ಪ್ರವಾಸ ಹೊರಟು ಸಮಯ ಬಂದ ಕಡೆಗಳಲ್ಲೆಲ್ಲಾ ತಮ್ಮ ವಿದ್ವತ್ತಿನಿಂದ ಇತರರನ್ನು ವಾಗ್ವಾದಗಳಲ್ಲಿ ಸೋಲಿಸುತ್ತಾ ಸಾರ್ವಜನಿಕ ಸಭೆಯಲ್ಲಿ ಉಪನ್ಯಾಸ ಮಾಡುತ್ತಾ ದೇಶಾಟನವನ್ನು ಮುಗಿಸಿಕೊಂಡು ಬರುತ್ತಿದ್ದರು. ಕಾಲಕ್ರಮದಲ್ಲಿ ಗೃಹಸ್ಥರಾಗಿರುವುದಕ್ಕೂ, ಇಲ್ಲವೆ ಸನ್ಯಾಸಿಗಳೇ ಆಗಿರುವುದಕ್ಕೂ ಅಥವಾ ರಾಜಕಾರಣ, ಪೌರೋಹಿತ್ಯ, ವಿದ್ಯಾದಾನ ಮುಂತಾದವುಗಳಲ್ಲಿ ತೊಡಗುವುದಕ್ಕೂ, ಬಾಲ್ಯದ ಈ ವಿದ್ಯೆಯು ಅವಶ್ಯಕವೆಂಬುದನ್ನು ಅವರು ಚೆನ್ನಾಗಿ ಮನಗಂಡಿದ್ದರು. ಗುರುಗಳ ಬಳಿ 12 ವರ್ಷ ಸೇವೆ ಮಾಡಿ ಪ್ರಪಂಚದ ವ್ಯವಹಾರವನ್ನು ಚೆನ್ನಾಗಿ ತಿಳಿದು ಜೀವನದ ಕಲಹದಲ್ಲಿ ಕಷ್ಟ ಮತ್ತು ತಾಪತ್ರಯಗಳಿಗೆ ಎದೆಗೊಟ್ಟು ಹೋರಾಡುವ ಶಕ್ತಿಯು ಬರುವ ವರೆಗೆ ಅವರು ಗೃಹಸ್ಥರಾಗುತ್ತಿರಲಿಲ್ಲ. ದೇಶಾಟನವು ದೊಡ್ಡ ವಿದ್ಯಾರ್ಜನೆಯ ಉಪಾಯವೆಂದು ಅವರಿಗೆ ಗೊತ್ತಿದ್ದುದರಿಂದ ಅವರು ವಿವಾಹಿತರಾಗುವುದಕ್ಕಿಂತ ಮುಂಚಿತವಾಗಿ ದೇಶಾಟನೆಗೆ ಹೋಗುತ್ತಿದ್ದರು. ಈಗಲೂ "ಕಾಶಿ ಯಾತ್ರೆ" ಎಂಬುದು ನಮ್ಮಲ್ಲಿ ವಿವಾಹ ಕಾಲದಲ್ಲಿ ಪ್ರಚಾರದಲ್ಲಿರುವ ಒಂದು ಪದ್ಧತಿಯಾಗಿದೆ.

ಆ ಕಾಲದ ಈಗಿನ ಯಾವುದಾದರೂ ಒಂದು ವಿದ್ಯೆಯಲ್ಲಿಯೂ, ಕೆಲವರು ಅನೇಕ ವಿದ್ಯೆಗಳಲ್ಲಿಯೂ, ಒಬ್ಬಿಬ್ಬರು ಎಲ್ಲಾ ವಿದ್ಯೆಗಳಲ್ಲಿಯೂ ಪ್ರವೀಣರಾಗುತ್ತಿದ್ದರು.

'ಪಂಚಾಂಗ ವ್ಯಾಕರಣದ ವೃತ್ತಿ ಭೇದಮಪ್ಪ ಛಂದೋವೃತ್ತಿಯೊಳಂ, ಶಬ್ದಾಲಂಕಾರ ನಿಮಿತ್ತಮಪ್ಪಲಂಕಾರದೊಳಂ, ವ್ಯಾಸ ವಾಲ್ಮೀಕಿ ಕವಿಪ್ರಭೃತಿ ವಿರಚಿತಂಗಳಪ್ಪ ಮಹಾಕಾವ್ಯಂಗಳೊಳಂ, ನಾಂದೀ ಪ್ರರೋಚನ ಪ್ರಸ್ತಾವನಾ ನಿರ್ವೃತಿ ಸಂಧಿ ಪ್ರವೇಶ ವಿಷ್ಕಂಭಕ ಚೂಲಿಕಾ ಪತಾಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ, ಪದಿನೆಂಟು ಧರ್ಮ ಶಾಸ್ತ್ರಂಗಳೊಳಂ, ನಾಲ್ಕು ವೇದದೊಳಂ, ಆರಂಗದೊಳಂ, ಅಯ್ದು ತೆರದ ಮಂತ್ರಗಳೊಳಂ, ಮೂರು ದರ್ಶನಂಗಳೊಳಂ, ನಾರದಾದಿ ಪ್ರಣೀತ ಗಾಂಧರ್ವ ವಿದ್ಯಾ ವಿಶೇಷಂಗಳೊಳಂ, ಪ್ರತ್ಯಕ್ಷಾನ ಮಾನ ಪ್ರಮಾಣ ಗಳೊಳಂ, ಭರತ ಪ್ರಣೀತ ನೃತ್ಯ ಶಾಸ್ತ್ರಂಗಳೊಳಂ, ಗಜಾಗಮ, ಅಶ್ವಾಗಮ, ನಕ್ಷತ್ರಾದಿಗಳ ಲಕ್ಷಣ ಶಕುನಮುಂತಾದ ವಿರಚಿತಂಗಳಪ್ಪ ಸ್ತ್ರೀ ಪುರುಷಾದಿ ಪುರಾಣ ಪುರುಷ ಚರಿತಂಗಳಪ್ಪ ಹಸ್ತಿಶಾಸ್ತ್ರಂಗಳೊಳಂ, ಚಿತ್ರಕರ್ಮ ಪತ್ರಚ್ಛೇದಗೃಹಗಣಿತ ರತ್ನ ಪರೀಕ್ಷೆಗಳೊಳಂ ದಾರುಕರ್ಮ ವಾಸ್ತು ವಿದ್ಯಾ ಪೂರ್ವಯಂತ್ರ ಮಿಶ್ರ ಪ್ರಯೋಗ ಶಾಪ ಮಾನ ಪುರಾಣ ಭೂಭೇದ ರತಿ ತಂತ್ರೇಂದ್ರಜಾಲ ವಿವಿಧ ವಿದ್ಯೆಗಳೊಳಂ, ಅನೇಕಾಕ್ಷರ ಸ್ವರೂಪಂಗಳೊಳಂ, ಚಾಪಚಕ್ರಪಾತ ಶುಕ್ರನಾಮ ಶಕ್ತಿತೋಮರ ಮುಸಲ ಮುದ್ಗರ ಭಿಂಡಿವಾಳ, ಮುದ್ಗರ ಗದಾದಿ ವಿವಿಧಾಯುಧಂಗಳೊಳಂ'

ಈಗಿನ ಶಿಕ್ಷಣ ಪಂಡಿತರಿಗೆ, ಒಂದೇ ವಿಷಯದ ಮೇಲೆ ವಿಸ್ತಾರ ಕಾಲ ವ್ಯಾಸಂಗ ಮಾಡಿ ಅಧಿಕಾರ ಯುಕ್ತರಾದ ವಾಗ್ಮಿಯಿಂದ ನೂತನವಾಡುವ ಸಾಮರ್ಥ್ಯವು ಹೇಗೆ ಅವಶ್ಯಕವೆಂದು ತಿಳಿದಿದೆಯೋ ಹಾಗೆಯೇ ನಮ್ಮ ಹಿಂದಿನ ಗುರುಗಳಿಗೂ ತಿಳಿದಿದ್ದಿತು. ಅವರು ಶಿಷ್ಯರಿಗೆ ಅವರವರ ಶಾಸ್ತ್ರದಲ್ಲಿ ಪೂರ್ಣ ಪಾಂಡಿತ್ಯ ಬರುವ ವರೆಗೆ ಹೇಳಿಕೊಟ್ಟು ಅನಂತರ ಅವರನ್ನು ಹೊರಕ್ಕೆ ಕಳುಹಿಸುತ್ತಿದ್ದರು.

ತಮ್ಮ ತಮ್ಮ ಶಾಸ್ತ್ರಗಳಲ್ಲಿ ಶಿಷ್ಯರು ಪೂರ್ಣವಾಗಿ ಪಾರಂಗತರಾಗಿ ಹೊರಗೆ ಹೋಗುವಾಗ ಗುರುಗಳು ಅವರಿಗೆ ಈ ಸಂದೇಶವನ್ನು ಕೊಡುತ್ತಿದ್ದರು.

"ಸತ್ಯಂವದ; ಧರ್ಮಂಚರ, ಸ್ವಾಧ್ಯಾಯಾನ್ಮಾ ಪ್ರಮದಃ, ಸತ್ಯಾನ್ನ ಪ್ರಮದಿತವ್ಯಂ, ಧರ್ಮಾನ್ನ ಪ್ರಮದಿತವ್ಯಂ, ಕುಶಲಾನ್ನ ಪ್ರಮದಿತವ್ಯಂ, ಭೂತ್ಯೈನ ಪ್ರಮದಿತವ್ಯಂ; ಸ್ವಾಧ್ಯಾಯ ಪ್ರವಚನಾಭ್ಯಾಂನ ಪ್ರಮದಿತವ್ಯಂ"

"ಸತ್ಯವನ್ನೇ ನುಡಿ, ಧರ್ಮವನ್ನಾಚರಿಸು; ಅಧ್ಯಯನ ಮಾಡುವುದನ್ನು ತಪ್ಪಬೇಡ. ಸತ್ಯದಿಂದ ನಡೆಯುವುದನ್ನು ತಪ್ಪಬೇಡ; ಧರ್ಮದಿಂದ ನಡೆಯುವುದನ್ನು ತಪ್ಪಬೇಡ, ನಿನ್ನ ಕಲ್ಯಾಣವನ್ನು ನೋಡಿಕೊಳ್ಳುವುದನ್ನು ತಪ್ಪಬೇಡ, ಐಶ್ವರ್ಯ ಸಂಪಾದನೆಯ ಕಾರ್ಯದಲ್ಲಿ ತಪ್ಪಬೇಡ. ಅಧ್ಯಯನ ಅಧ್ಯಾಪನಗಳಲ್ಲಿ ತಪ್ಪಬೇಡ."

ಪೂರ್ವದ ಗುರುಗಳು ಶಿಷ್ಯರನ್ನು ಸನ್ಯಾಸಿಗಳಾಗಿ ಬಿಡಿರೆಂದು ಹೇಳುತ್ತಿರಲಿಲ್ಲವೆಂಬುದು ಈ ಮೇಲಿನ ವಾಕ್ಯಗಳಿಂದ ಗೊತ್ತಾಗುತ್ತದೆ. ಸೃಷ್ಟಿಯ ಮಾಯೆಯ ರೂಪವಾದ ಈ ಪ್ರಪಂಚದಲ್ಲಿ ಮನುಷ್ಯನು ಚೆನ್ನಾಗಿ ಬದುಕಿ ಬಾಳಿ ಧರ್ಮಾರ್ಥಮೋಕ್ಷಗಳನ್ನು ಸಂಪಾದಿಸಬೇಕೆಂಬುದೇ ಅವರ ಉದ್ದೇಶವಾಗಿತ್ತು. ಆದುದರಿಂದಲೇ ಗುರುಗಳು ಶಿಷ್ಯರಿಗೆ ವಿದ್ಯಾಭ್ಯಾಸವು ಮುಗಿದ ಕೂಡಲೇ ನೀನು ಪ್ರಪಂಚವು ನಶ್ವರವೆಂದು ತಿಳಿದು ತಪಸ್ಸನ್ನು ಮಾಡಲು ಕಾಡಿಗೆ ಓಡಿಹೋಗೆಂದು ಹೇಳಲಿಲ್ಲ. ಅವರು ಶಿಷ್ಯರಿಗೆ 'ಐಶ್ವರ್ಯ ಸಂಪಾದನೆಯ ಮಾರ್ಗದಲ್ಲಿ ತಪ್ಪಬೇಡ; ಗೃಹಸ್ಥಾಶ್ರಮ ಕರ್ತವ್ಯಗಳಲ್ಲಿ ತಪ್ಪಬೇಡ, ನಿನ್ನ ಕಲ್ಯಾಣವನ್ನು ಮಾಡಿಕೊಳ್ಳುವುದರಲ್ಲಿ ತಪ್ಪಬೇಡ" ಎಂಬುದಾಗಿ ಉಪದೇಶವನ್ನು ಕೊಟ್ಟರು.

ಗುರುಗಳ ಮುಂದೆ ಹೇಳುವ ಉಪದೇಶವನ್ನು ಕೇಳಿ 'ದೇವ ಪಿತೃ ಕಾರ್ಯಾನ ಪ್ರಮದಿತವ್ಯಂ; ಮಾತೃ ದೇವೋ ಭವ, ಪಿತೃದೇವೋ ಭವ, ಆಚಾರ್ಯ ದೇವೋ ಭವ, ಅತಿಥಿ ದೇವೋ ಭವ; ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ ನೋ ಇತರಾಣಿ, ಯಾನ್ಯಸ್ಮಾಕಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ ನೋ ಇತರಾಣಿ'

"ದೇವ ಪಿತೃ ಕಾರ್ಯ ಮಾಡುವದನ್ನು ತಪ್ಪಬೇಡ. ತಾಯಿಯನ್ನು ದೇವತೆಯೆಂದು ಭಾವಿಸು; ತಂದೆ ನಿನ್ನ ದೇವರೆಂದು ಭಾವಿಸು, ಆಚಾರ್ಯನನ್ನು ದೇವತೆಯೆಂದು ಭಾವಿಸು, ಅತಿಥಿಯು ದೇವತೆಯೆಂದು ಭಾವಿಸು, ಪವಿತ್ರವಾದ ಕರ್ಮಗಳನ್ನು ಮಾತ್ರ ಮಾಡು, ಉಳಿದವುಗಳನ್ನು ಬಿಟ್ಟು ಬಿಡು. ನಮ್ಮ ಒಳ್ಳೆಯ ಆಚರಣೆಯಲ್ಲಿ ಮಾತ್ರ ವಿಶ್ವಾಸವಿಟ್ಟು ಅವುಗಳನ್ನು ಅನುಸರಿಸು, ಉಳಿದವುಗಳನ್ನು ಬಿಟ್ಟು ಬಿಡು.

ಗುರುಗಳು ಇಷ್ಟು ಹೇಳುತ್ತಿದ್ದರಲ್ಲದೆ, ತಾವೇ ಸಕಲ ಶಾಸ್ತ್ರ ಪ್ರವೀಣರೂ ತಮಗಿಂತಲೂ ಹೆಚ್ಚು ಯೋಗ್ಯರೇ ಇಲ್ಲವೆಂದು ತಿಳಿದಿರಲಿಲ್ಲ. ಶಿಷ್ಯರಲ್ಲಿ ಕೂಡ ಅವರು ತಮ್ಮ ಹೆಮ್ಮೆಯನ್ನು ತೋರಿಸಿಕೊಳ್ಳುತ್ತಿರಲಿಲ್ಲ. ಅವರಿಗೆ ಈ ರೀತಿ ಉಪದೇಶ ಮಾಡುತ್ತಿದ್ದರು.

"ನಮಗಿಂತಲೂ ಶ್ರೇಷ್ಠರಾದ ಬ್ರಾಹ್ಮಣರ ಬಳಿ ಕುಳಿತು, ಅವರಲ್ಲಿ ಪೂರ್ಣ ವಿಶ್ವಾಸವಿಡತಕ್ಕದ್ದು.

ಯಾವ ಕೆಲಸವನ್ನು ಮಾಡುವುದಕ್ಕೂ, ತನ್ನಲ್ಲಿ ತನಗೆ ನಂಬಿಕೆಯು ಅವಶ್ಯಕವಾದುದು, ಇದಕ್ಕೇ ಇಂಗ್ಲಿಷಿನಲ್ಲಿ (Self Reliance) ಎಂಬುದಾಗಿ ಹೇಳುವುದು. ಪ್ರತಿಯೊಬ್ಬ ಶಿಷ್ಯನಿಗೂ, ಬಾಲಕನಿಗೂ, ತಾನು ಈ ಮಹತ್ತಾದ ಸೃಷ್ಟಿಯ ಒಂದು ಭಾಗ, ನಾನು ಈಶ್ವರನ ತೇಜಸ್ಸಿನ ಒಂದು ಕಣ. ಆ ಕಣದಲ್ಲಿ ಯಾವ ಶಕ್ತಿ ಅಡಗಿದೆಯೋ ಅದೇ ಶಕ್ತಿಯು ನನ್ನಲ್ಲಿಯೂ ಅಡಗಿದೆ. ನಾನು ಬೇಕಾದ ಕೆಲಸವನ್ನು ಮಾಡಬಲ್ಲೆ; ನಾನು ಈಶ್ವರನ ಪ್ರತಿರೂಪ ಎಂಬ ನಂಬಿಕೆಯು ಹುಟ್ಟಬೇಕು. ಈ ನಂಬಿಕೆಯು ಗುರುಗಳಲ್ಲಿಯೂ, ಶಿಷ್ಯರಲ್ಲಿಯೂ ಬೆಳೆಯುವುದಕ್ಕಾಗಿ ಪ್ರಾಚೀನ ಗುರುಗಳು ಈ ವಾಕ್ಯಗಳನ್ನು ಅರ್ಥದೊಂದಿಗೆ ಪ್ರತಿನಿತ್ಯವೂ ಹೇಳಿಕೊಳ್ಳುತ್ತಿದ್ದರು.

"ಅಹಂವೃಕ್ಷಸ್ಯರೇರಿವಾ, ಕೀರ್ತಿಃ ಪೃಷ್ಠಂಗಿರೇರಿವ; ಊರ್ಧ್ವಪವಿತ್ರೋ ವಾಜಿನೀವಸ್ವಮೃತಮಸ್ಮಿ, ದ್ರವಿಣಗುಂ ಸುವರ್ಚಸಂ, ಸುಮೇಧಾ ಅಮೃತೋಕ್ಷಿತಃ"

"ನಾನು ಸಂಸಾರ ವೃಕ್ಷದ ಪ್ರೇರಕನು; ನನ್ನ ಕೀರ್ತಿಯು ಪರ್ವತದ ಮೇಲ್ಭಾಗದಂತೆ ಇರುವುದು, ನಾನು ಸೂರ್ಯನಂತೆ ಅತ್ಯಂತ ಪವಿತ್ರನು; ನಾನು ಒಳ್ಳೆಯ ಅಮೃತರೂಪವನ್ನು, ನಾನು ತೇಜಃ ಪುಂಜವಾದ ಶಕ್ತಿಯು, ನಾನು ಅಮೃತದಲ್ಲಿ ಮಿಂದು ಶುದ್ಧವಾದ ಸುಬುದ್ಧಿಯುಳ್ಳವನು

ಗುರುಗಳ ಸತ್ಯತ್ವದಲ್ಲಿ ಪ್ರತ್ಯಕ್ಷ ಮಹಿಮೆಯ ವ್ಯಾಸಂಗ ಮಾಡಿದ ಶಿಷ್ಯರು ಈ ವಿಧವಾದ ಆತ್ಮ ಬಲದಿಂದ ಪ್ರೇರಿತರಾಗಿ ಪ್ರಪಂಚಕ್ಕೆ ಹೋಗಿ ಉತ್ತಮರಾದ ಗೃಹಸ್ಥರೂ, ಶಿಕ್ಷಕರೂ, ರಾಜರುಗಳೂ, ಮಂತ್ರಿಗಳೂ ಆಗಿ ತಮಗೂ ತಮಗೆ ವಿದ್ಯೆಯನ್ನು ಹೇಳಿಕೊಟ್ಟ ಗುರುಗಳಿಗೂ ಕೀರ್ತಿಯನ್ನೂ, ಯಶಸ್ಸನ್ನೂ ತರುತ್ತಿದ್ದರು.

(ಮುಂದುವರಿಯುವುದು)

ವೀರಪ್ರಲಾಪ.

(ಬಿಂದೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ)

ಧಗಧಗಿಸುತ್ತಿದೆ! ಭಾರತ ಹೃದಯವೆ ದುಃಖಾನಲ ಸ್ಪರ್ಶದಿ

ಭಗತಸಿಂಗ ಶುಕದೇವ ರಾಜಗುರು ಯೋಧರವರ ಸ್ಮರಿಸಿ ||

ಧರಣಿ ಕೃತ್ತಿಕಾ ಕಾಲ ಸಂಧಿಯಲಿ ಪರಜನರಿವರನು ಕೊಂದು,

ಧರಣಿಯ ಕಳವಳಗೊಳಿಸುವ ಕಾರ್ಯವನಧಿಕಾರಿಗಳೆಸಗಿದರು! ||

ಪರಹೃದಯಂಗಳ ಕಲ್ಲಾಗಿಸಿದ ಸ್ವಜನಮನಂಗಳ ಬೆಂಕಿ
ನರಕೇಸರಿಗಳ ನರಗಳ ಕೊಂದರು! ಪ್ರಾಣವ ತೆಗೆದರು ದಂಡ! ||

ಅಖಂಡ ಬ್ರಹ್ಮಾಂಡವ ಬಿಂಡಿಸುತಿದೆ! ಭಂತಖಂಡ ಪ್ರದ್ಯುಮ್ನ

ಅಕಟಾ! ಕೇಳುವರಿಲ್ಲೆಂದೆನಿಸುತಿದೆ! ಪಂಜರಾಟವ ಧರಿಸಿದೆ! ||

ರಾಷ್ಟ್ರೋದ್ಧಾರದ ಯಜ್ಞ ಕುಂಡದಲಿ ರುಂಡಂಗಳ ನೀಡಿದ,

ರಾಷ್ಟ್ರ ಮುಖಂಡರು ನವಶಾರ್ದೂಲರು ಪ್ರಚಂಡ ಹಿತಸುತರು ||

ಭೂಗರ್ಭವ ಭೇದಿಸಿ ಜ್ವಾಲಾಮುಖಿ ನಭೋಮಂಡಲಕೇರಿದ

ತ್ಯಾಗವೀರ ಧುರಂಧರರು ಪೋದರು! ಸಂದರು ಮಹಾಸಂತೆ ||

ಉಜ್ವಲ ರಾಷ್ಟ್ರಪ್ರೇಮದ ಸ್ವರಾಜ್ಯ ರಣಕಣದೊಳು ವಿಜಯಿಸಿದ

ನಿರ್ಜರ ದೇಹವ ತೊರೆದರು! ಸಡೆದರು! ವೀರಸ್ವರ್ಗದಲಿ ಯುವರು! ||

ಜಗಗೊಳಿಪರು ಜನದೇಹವನುಳಿದರು! ಕೀರ್ತಿ ಕಾರ್ಯಂ ಕಾಣಿದ

ಜಗತ್ ಪ್ರಸಿದ್ಧರು ಭಗತಸಿಂಗ ಶುಕದೇವ ರಾಜಗುರು ಜನರು ||

ಯೋಧವರ ವಿಮಲಾತ್ಮ ಶಕ್ತಿಯದು ಭಾರತ ಭುವಿಯ ಬೆಳಗಲಿ

ಶ್ರೀಧರನೊಲಿದೀ ಬಂಧುಗಳಾತ್ಮಕೆ ಪರಮ ಶಾಂತಿಯನು ರುಣಿಸಲಿ! ||

ಪತ್ರವ್ಯವಹಾರ.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕರ್ತರು ಜವಾಬ್ದಾರರಲ್ಲ. ಸಂ.

ನಾಲ್ಕುನಾಡಿನ ಸ್ಥಿತಿ.

ಅಯ್ಯಾ,

ನಮ್ಮ ಈ ನಾಲ್ಕುನಾಡು ಅಂದರೆ ಈಗಿನ ನಾಪೋಕ್ಲು ನಾಡಿನ ಸ್ಥಿತಿಯನ್ನು ವರ್ಣಿಸಿದರೆ ಸರಕಾರದ ಗೋಚರಕ್ಕೆ ಬರುತ್ತದೋ ಏನೋ, ಹ್ಯಾಗೂ ಈಗ ಸ್ವಲ್ಪ ವರ್ಣಿಸಬೇಕಾಗಿದೆ. ಈಗಿನ ಕಾಲದಲ್ಲಿ ವ್ಯಾಪಾರಕ್ಕೂ, ವ್ಯಾಪಾರದಿಂದ ರೈತರಿಗೂ ರಸ್ತೆಯ ಪ್ರಯೋಜನವು ಎಲ್ಲರಿಗೂ ತಿಳಿದೇ ಇದೆ. ಹಾಗಿರುವಾಗ ನಮ್ಮ ನಾಡಿಗಾಗಿ ಎಷ್ಟು ರಸ್ತೆಗಳಿವೆ. ಅವುಗಳ ಸ್ಥಿತಿ ಹ್ಯಾಗಿವೆ, ಆದುದರಿಂದ ರೈತರಿಗೆ ಸಿಕ್ಕುವ ಅನುಕೂಲಗಳೆಷ್ಟು ಎಂಬುದನ್ನು ಪರ್ಯಾಲೋಚಿಸಬೇಕಾಗಿದೆ. 1ನೇ ರಸ್ತೆಯು ಮಡಿಕೇರಿಯಿಂದ ಬೆಟ್ಟಗೇರಿ ಮತ್ತು ಮೂರ್ನಾಡು ಸ್ಟೇಷನಾಗಿ ಒಂದು ನಾಪೋಕ್ಲಿಗಾಗಿ ಆರಮನೆ ವರೆಗೆ, ಇನ್ನೊಂದು ವೀರರಾಜಪೇಟೆಯಿಂದ ಅಂದರೆ ಕದನೂರಿನಿಂದ ಆರಮನೆಗೆ ಈ ಎರಡು ರಸ್ತೆಗಳೇ ಇಲ್ಲಿ ಒಳ್ಳೆಯವು ಇದ್ದ 2 ನೇರದಲ್ಲಿ ಈ ನಾಡಿನಲ್ಲಿ ಸಾಧಾರಣ ಬೇಸಿಗೆ ವೈಲಿ. ಇವುಗಳು ಎಷ್ಟರ ಮಟ್ಟಿಗೆ ಚೆನ್ನಾಗಿವೆ. ಹಸ ಪ್ರೊವಿನ್ಸಿಯಲ್ ರೋಡಂತೆ. ಬಸ್ಸು ನಡೆಸಲಿಕ್ಕಾಗುವುದಿಲ್ಲ. ಆರು ಮೊದಲೇ ಬರಕೂಡದು, ಮಳೆಗಾಲದಲ್ಲಿ ಗಾಡಿ ನಡೆಯುವುದು ಕಷ್ಟ. ಹೀಗೆಂದರೆ ರೈತರಿಗೆ ಎಷ್ಟು ಅನುಕೂಲ ವ್ಯಾಪಾರಕ್ಕೆ ಎಷ್ಟು ಬಾಧೆ. ಹೀಗಾಗಲು ಕಾರಣವೇನು? ಈ ಪಕ್ಕಂತ್ಯದವರು ಕಂದಾಯ ಕೊಡುವುದಿಲ್ಲವೇ? ಇಲ್ಲವೇ ಈ ಪಕ್ಕಂತ್ಯದವರಿಗೆ ಈ ಅನುಕೂಲಗಳು ಕೊಡಲು ಯೋಗ್ಯರಲ್ಲ ಎಂದು ಕಂಡಾಯಿತಲ್ಲ ಏನಾದರೂ ರಿಯಾಯಿತಿ ಉಂಟೆ. ಸಂ ಈ ಪಕ್ಕಂತ್ಯವು ಹೆಚ್ಚಾಗಿ ಮಳೆ ಪ್ರಾಂತ್ಯ. ವರ್ಷ ಮಳೆಗಾಲಂಗಳಲ್ಲಿ ರಿಯಾಯಿತಿ ಉಂಟಂತೆ ಕಷ್ಟಾಗಿಯೇ ಇಗಿರಬಹುದಲ್ಲವೇ? ಈ ರಿಯಾಯಿತಿ ಮುಂದೆ ಕೊಡುತ್ತೇವೆಂಬವನ್ನು ಸರಕಾರವು ತಿಳಿದೇ ಈ ಪ್ರಾಂತ್ಯದ ಹೀಗೆ ಮಾಡಿರಬಹುದೆಂದು ನಂಬುವ.

ನಾಡಿನೊಳಗಿರುವ ಲೋಕಲ್ ಫಂಡ್ (Village Communication) ರಸ್ತೆಯನ್ನು ಸ್ವಲ್ಪ ವಿವರಿಸುವ. ಬೇರೆ ಕಡೆಗಿಂತ ಹೆಚ್ಚಾಗಿ ಈ ರಸ್ತೆಗಳೇ ಬಹಳ ಇರುವುದು ಸುಮಾರು 72 ಮೈಲುಗಳ ವರೆಗೆ ವಿ. ಸಿ. ರಸ್ತೆಗಳಿವೆ. ಇವುಗಳಲ್ಲಿ ಮುಖ್ಯವಾದವುಗಳಿಗೆ ಮೈಲಿಗೆ 20 ರೂ. ರಿಪೇರಿಗೆ ಕೊಡುತ್ತಾರೆ. ಮೊದಲೇ ಇದು ಕಾಡು ಪ್ರದೇಶ ಈ 20 ರೂ. ಕಾಡು ಕಡಿಯಲಿಕ್ಕೇ ಸಾಲದು. ಹಾಗಿರುವಾಗ ಈ 20 ರಿಂದ ಒರೇ ಕಾಡು ಕಡಿದು ರಸ್ತೆ ಸರಿಮಾಡಿಕೊಂಡು ...

[illegible] ಬರುವ ರೋಗಿಗಳನ್ನು ಸರಿಯಾಗಿ ... ಇದರಿಂದ ಎಷ್ಟು ಕೆಲಸವಾಗುವುದು. ... ವುಟ್ಟುವಾದದ್ದಾಗಿ ಕಡಗಿಸಿ ... ಶಕ್ತಿಗೆ ಒಳಪಡುವುದೊಂದು ... ಭಂಗವು ... ಹೋಗುವದೊಂದು ... ಸಿಕ್ಕುತ್ತದೆ ... ಅರ್ಥ ಪೂರೈಸಿ 4—5 ವರ್ಷಗಳಾದರೂ ಇನ್ನೂ ... ಹೊಂದಿಲ್ಲ. ... 11 ವರ್ಷ ಹಿಡಿಯುತ್ತದೆ ... ಇದಕ್ಕೆ 4—5 ವರ್ಷಗಳೂ ಪೂರೈಸಲಿಲ್ಲ. ಇದು ಹೇಸ್ಟಿಂಗ್ಸ್ ನದಿಯ (Haug Bridge) ಕೂಗಾಡುವ ... [illegible]

[illegible] ... 2ನೇ ... ಇಲ್ಲೂ ... ಉದಾಹರಣ 6 ... ಆ ಮೇಲೆ 12 ಮೈಲಿ ... ಡಿ. ಬೋರ್ಡು ... [illegible]

ಭಕ್ತರಿಕ್ಕೆ ಧಾರಣೆ ... ನಾಲ್ಕು ... ಈಗ ಒಂದು ... 1 ತಿಂಗಳೊಳಗೆ ಸಾಧಾರಣ ... [illegible]

ನ ದೇಶಕ್ಕೆ ಕಳುಹಿಸುವ ... ಅಲ್ಲಿಂದ ... ಗಳನ್ನು ... ಎಂದರೆ ಈಗ ... ನೋಡಿದಂತೆ ನಮ್ಮ ಸ್ಥಿತಿ ... 2 ತಿಂಗಳ ಮಟ್ಟಿಗೆ ನಮ್ಮನ್ನು ಬಿಟ್ಟು ... ಈ ಕಡೆಯ ... ಈ ವಂಗ ... ತಡೆಯಬೇಕು ... ಶರೀರದ ಎಲ್ಲಾ ಭಾಗಗಳಿಗೆ ಏಕ ರೀತಿಯ ರಕ್ತ ಚಲನೆಯುಂಟಾಗುವಂತೆ ಈ ಕಡುಯ ... ಕಾಲ ವಿಳಂಬ ಮಾಡಿದರೆ ಕಡೆಯಿಂದ ಸಂಪೂರ್ಣ ತೊಂದರೆಗೆ ಬೀಳಬಹುದು

ಪಿ ರಾಜಯ್ಯ

ರಬ್ಬರ್ ಮೋಹರುಗಳು.

ನೀವು ಅಪೇಕ್ಷಿಸುವ ಯಾವತ್ತೂ ಮಾದರಿಯಲ್ಲಿ ತಯಾರಿಸಿ ಕೊಡಲಾಗುತ್ತವೆ.

ಮೇಲ್ಕಂಡ ... ಗಳಲ್ಲದೆ ... ಡೇಟಿಂಗ್ ಸ್ಟಾಂಪ್ ... ವಗೈರೆ ... ಕಲ್ಲುಗಳು ಸಿಕ್ಕುವವು.

ದಿ ಕಸ್ಬಿನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ,
ಮಂಗಳೂರು, ದ. ಕನ್ನಡ

12—3

ಪ್ರಸಿದ್ಧ ಪತ್ರಿಕೆ.

ಈ ಕೆಳಗೆ ನಮೂದಿಸಿರುವ ಮುತ್ತಪ್ಪ ತಂಬಾಕ್ ... ಸರ್ಕಾರ ತಿಳಿಯಪಡಿಸುವದೇನಂದರೆ—

ಮುತ್ತಪ್ಪ ತಂಬಾಕಿನಲ್ಲಿ ಈ ಕೆಳಗೆ ಕಂಡ ಪ್ರತಿ ಪೂಜೆಗೆ ... [illegible] ... ದೇವಸ್ಥಾನದ ... 0—6—0 ... ಪೂಜೆ ಮಾಡಿ ... ಈ ದೇವರ ಹೆಸರು ... ಪೂಜೆಗಾಗುವ ಹಣ ... ಸದ ... [illegible]

[illegible]	13—1—0
[illegible]	2—8—0
[illegible]	1—4—0
[illegible]	0—— —)
[illegible]	2—0—0

[illegible] ಕುಂಭಾರವಾಡ,
[illegible]
... ದೇವಸ್ಥಾನ,
... ಪರದೇಶಕರ

1—12 [illegible]

ಮಕ್ಕಳನ್ನು ಪಡೆಯಬೇಕು, ಮಕ್ಕಳು ... ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ... ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ... ಗರ್ಭ ... ಮಕ್ಕಳು ಹುಟ್ಟಿ ... [illegible] ... ತೀರ ಶಬ್ದ ಜಾಗ್ರತೆ ಗುಣ ಕೊಡುವ ತಾಯಿತಕ್ಕೆ ... 100 ರೂ ... ಒಂದು ಸಲ ತರಿಸಿ ಅನುಭವ ತಿಳಿಯಿರಿ

ಸ್ಥಳ ಸಂಕೋಚದ ಮೂಲಕ ಮಾದರಿಗಾಗಿ ಬಹುಮಾನ ಪತ್ರ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯು ... ನಿಮ್ಮ ... ತಾಯಿತ ... [illegible]

ಪ್ರಲ್ಹಾದ ಎಸ್. ... ಮುಂಬೈ

ತಾಯಿತ ಸಿಗುವ ವಿಳಾಸ.—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,
ಮು. ಪೋ. ಅಥಣಿ, ಜಿ. ಬೆಳಗಾಂವ.

12—22

ಎಂ. ಎಸ್. ಶಿದ್ಧಪ್ಪ ಬ್ರದರ್ಸ್.
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಕಸ್ಟಮ್ ... ನಿಬ್ ... ಜಾತಿಯ ... ಫೌಂಟೆನ್ ಪೆನ್‌ಗಳು.

[illegible] ಫೌಂಟನ್ ಪೆನ್ 1ಕ್ಕೆ	3	0	0	
„ „ ಬಿಗ್ ... ಪೆನ್ 1ಕ್ಕೆ	3	3	0	
„ „ ... ಪೆನ್ 1ಕ್ಕೆ	3	8	0	
„ ಎಗ್ ... ಸ್ಕ್ರೂ ಕ್ಯಾಪ್ ಮಾಡಲ್ ಕಲರ್ ಫೌಂಟೆನ್ ಪೆನ 1ಕ್ಕೆ	3	14	0	
„ „ ಮಾರ್ಬಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟೆನ್ ಪೆನ್ 1ಕ್ಕೆ	4	2	0	
„ ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ ಬ್ರೌನ್ ಕಲರ್ ಫೌಂಟನ್ ಪೆನ್ 1ಕ್ಕೆ	5	8	0	
... ಗ್ ಸ್ವಾನ್ ಫೌಂಟನ್ ಪೆನ್ 1ಕ್ಕೆ	10	8	0	
... ಪೆನ್ 1ಕ್ಕೆ 1... 6 0, &	10	10	0	
... ಫೌಂಟನ್ ಪೆನ್ 1ಕ್ಕೆ ... 0 &	3	12	0	
... ಫೌಂಟನ್ ಪೆನ್ 1ಕ್ಕೆ ... 0, &	6	14	0	
... ಫೌಂಟನ್ ಪೆನ್ 1ಕ್ಕೆ 8 2 ... &	8	10	0	

... ಗಳು.

... ಟೈಂಪೀಸ್ 1ಕ್ಕೆ	3	6	0
... ಟೈಂಪೀಸ್ 1ಕ್ಕೆ	2	2	
... ಟೈಂಪೀಸ 1ಕ್ಕೆ 6 9 ... &	6	15	0
... ಟೈಂಪೀಸ್ 1ಕ್ಕೆ	7	2	0
... ಟೈಂಪೀಸ್ ... ವೈಲಿನದ 1ಕ್ಕೆ	8	10	0
... ಟೈಂಪೀಸ್ 1ಕ್ಕೆ	9	6	0
... ಟೈಂಪೀಸ 1ಕ್ಕೆ	13	4	0
... ವಾಚ್ ... 1ಕ್ಕೆ	5	10	0
... ಪಾಕೆಟ್ ವಾಚ್ 1ಕ್ಕೆ	12	4	0
... ವಾಚ್ 1ಕ್ಕೆ 5 1 0, 7 8 0, 11 0 0 &	12	8	0



[illegible] ... 1ಕ್ಕೆ 3—6— ... ಸಿಕ್ಕುವುದು.

... ವಿಳಾಸ—ಎಂ. ಎಸ್. ... ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

	ರೂ.
ಶೇರ್ ಬಂಡವಾಳ	— 50,000
ವಸೂಲಾದ ಶೇರ್ ಮೊಬಲಗು	— 23,160
ಜಮೊಬಂದ ಠೇವಣಾತಿ	— 2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ಗವರ್ನಮೆಂಟಿನ ಕೋ ಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ

ಪ್ರೆಸಿಡೆಂಟರು — ಕೋದಂಡ ಅಪ್ಪಯ್ಯನವರು ರಾವ್ ಬಹದ್ದೂರ್

ಟ್ರೆಜರರ್ — ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ — ಎ ಯನ್. ವೆಂಕಪ್ಪಯ್ಯನವರು ಬಿ.ಎ., ಬಿ.ಎಲ್.

ತಾರೀಖು 1-7-1930

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯು

ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲೆಲ್ಲಾ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯ ಈಗಿನ ಸ್ಥಿತಿಯಿಂದ ಸ್ಪಷ್ಟವಾ

ಹೊಸ ಕೆಲಸ	ಪ್ರೀಮಿಯಂ ವರಮಾನ
೧೯೨೬—೪೭೬ ಲಕ್ಷ ರೂಪಾಯಿಗಳು	೧೯೨೬—೧೨೨ ಲಕ್ಷ ರೂಪಾಯಿಗಳು
೧೯೨೮—೫೮೫ ಲಕ್ಷ "	೧೯೨೮—೧೪೦ ಲಕ್ಷ "
೧೯೨೯—೬೫೦ ಲಕ್ಷ "	೧೯೨೯—೧೬೧ ಲಕ್ಷ "

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು

ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು

೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳಿಗೆ ೨೨|| ರೂಪಾಯಿಗಳು.

೧೯೨೬ " " " " ೨೫ "

ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದಲ್ಲಿ ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭವುಂ

ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಯಂ. ವಿ. ಮುತ್ತುಕೃಷ್ಣ ನಾಯುಡು, ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

OR

ಕೆ. ಪಿ. ಚಿಣ್ಣಪ್ಪ, ಏಜೆಂಟ್, ಮಡಿಕೇರಿ.

52-6

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು ಕೊಡುವುದರಿಂದ ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕೆಂಪೆನಿ,

52-13 ಗಿರಿಗಾಂವ, ಮುಂಬಯಿ.



ಮಲೇರಿಯಾನವು ಮಲೇರ್ಯ ಚಳಿಜ್ವರ ಉರಿಜ್ವರ ದಿನ ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ ಗೆದ್ದು ಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ

ಕ್ರಯ 8 ಟಿನ್ನಿಗೆ 1-8-0 ½ ಡಜನಿಗೆ 8-8-0 1 ಡ. 16-8-0

ಪಿತ್ತ ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡಸ್

ಪಿತ್ತಜ್ವರ ಕೈಕಾಲು ಬಚ್ಚಲು ರಕ್ತ ಇಲ್ಲದೆ ಬೆಳ್ಳಗೆ ಕಾಣುವುದು, ರುಚಿ ಕೆಟ್ಟಿರುವ ನಾಲಿಗೆ ಅರಸಿನ ಬಣ್ಣ ಕಾಣುವ ಕಣ್ಣು ಗೊಂಬೆ ಮತ್ತು ಶರೀರ ತಲೆಶಿಡಿತ ಎದೆ ತಿರುಗುವದು ಅಥವಾ ಹೊಟ್ಟೆ ಉರಿ ಎದೆ ಸುಡುವದು ನಾಲಿಗೆ ಒಣಗುವದು ಮೂತ್ರಕ್ಕೆ ಭಂಗ ಪಿತ್ತ ಕಾರುವುದು ನಿದ್ರೆ ಇಲ್ಲದೆ ಸಂಕಟವಾಗುವುದು ಇತ್ಯಾದಿ ರೋಗಗಳನ್ನು ಕಂಪೌಂಡ್ ಸಿರಪ್ ನಿಂದಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3-8-0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ್ಲಾ.

ಶರೀರದಲ್ಲಿ ಏಳುವ ಬೊಕ್ಕೆ, ಕುರು ಬಿಸ್ತಿಗಳು ವಿಷ ಗುಣಾಗಗಳ ಹುಣ್ಣು ವ್ರಣಗಳು ವಿವಿಧ ಬಗೆಯ ಚರ್ಮ ರೋಗಗಳು ಅತಿ ಶೀಘ್ರದಲ್ಲಿ ಗುಣಪಟ್ಟು ರಕ್ತ ಸಂಪೂರ್ಣ ಶುದ್ಧವಾಗಿ ದೇಹವನ್ನು ಪುಷ್ಟ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ಬಲಿಷ್ಠ ಮ. ಕಂಪೌಂಡು ಸಿರಪು ಸರ್ಸಪರಿಲ್ಲ ಎಂಬುದು ಬಾಟ್ಲಿಗೆ ರೂಪಾಯಿ 3-4-0

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನೋವ.

ತಿಂಗಳು ಗಟ್ಟಲೆಯ ಅಕ್ರಮ, ಹೊಟ್ಟೆನೋವು ಕೈಕಾಲುಗಳ ಸೆಳತ, ಕೋರಣ ಬಲಹೀನತೆ ವಾಯುಗಳ ಉಪದ್ರ, ರಕ್ತವು ಬೇಕಾದಷ್ಟು ಹರಿಯದೆ ನಿಂತು ಬಿಡುವದು ಅಲ್ಲದೆ ಸಮಯಕ್ಕೆ ಸ್ರಾವಿಸುವದು ಬಣ್ಣ ವಾಸನೆಯಲ್ಲಿ ಕೆಡತು ಇತ್ಯಾದಿ ಗರ್ಭಕೋಶದ ಎಲ್ಲಾ ಅವಸ್ಥೆ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನೋವ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3-8-0

ಮಕ್ಕಳ ದೇಹದ ಪುಷ್ಟಿಗೆ-ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣ ತೋರಿ ಸೊಂಟಕ್ಕೆ ಬಲ ಇಲ್ಲದೆ ಇರುವದು ಜ್ವರ ಬಣ್ಣ ಮೂತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ ಬಾಳುವಿಕೆಯನ್ನೂ ಕುಂದಿಸಿಬಿಡುವ ಈ ಆಪತ್ತುಗಳನ್ನು ಬೇಬಿಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1-4-0

ಶುದ್ಧ ಬಿಶ್ಯಸಿದ್ಧ ಗಳೂ ಹೋಮ್ಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

ಪರೀಕ್ಷಿಸಿ ಕೊಡುವ ದೃಷ್ಟಿ ಚಕ್ರಗಳೂ ಆಪರೇಷನ್ ನಾನಾ ಬಗೆಯ ಸಾಮಾನುಗಳೂ ಬಿಸಲಿಗೆ ಇರತಕ್ಕ ಒಳ್ಳೇ ತರದ ಕನ್ನಡಕಗಳು ನಮ್ಮಲ್ಲಿ ನ್ಯಾಯವಾದ ಕ್ರಯಕ್ಕೆ ದೊರಕಲ್ಪಡುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ —ಮಲೇರಿಯಾನ ಕಂಪೆನಿ,

ಹಂಪನಕಟ್ಟೆ, ಇಗಜಿ ಬಳಿ, ನಂಬರು 14, ಮಂಗಳೂರು

52-22

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಉತ್ತರ ಕೊಡಗಿಗೆ ಮೆ., ಪಾಲೇಂಗಡ ಕ......ಪ್ಪನವರು,

" ಮೆ ಚಾರಿಂದ ಪೊನ್ನಯ್ಯನವರು.

ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ಮೇದಪ್ಪನವರು,

" ಮೆ ಅಮ್ಮಂಡ ಸುಬ್ಬಯ್ಯನವರು.

ಮರೆನಾಡು—ಮೆ ಕೇಕಡ ಅಪ್ಪಯ್ಯನವರು.

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ. ಮುಂಡೇಪಂಡ ಸೋಮಯ್ಯನವರು, (ಖಾದಿಭಂಡಾರ)

ನಾಪೋಕ್ಲು—ಎಮ್ ಆರ್. ವೆಂಕಪ್ಪಯ್ಯನವರು

ಶ್ರೀಮಂಗಲನಾಡು—ಮೆ. ಅಜ್ಜಮಾಡ ವಾದಪ್ಪನವರು.

ಗೋಣಿಕೊಪ್ಪಲು—ಮೆ ಐಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ ಜಿ ಮುದ್ದಯ್ಯನವರು

" ಮೆ ಸಣ್ಣುವಂಡ ಬೋಪಯ್ಯನವರು ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ ಪಿ. ಮಾದಯ್ಯನವರು

ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಪೊನ್ನಯ್ಯನವರು

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿ

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ ದಾವೆ ಬರೆದು ರಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,

'ಕೊಡಗು' ಮಡಿಕೇರಿ



12 bore Victor Cartridges Rs. 10/- Per 100

Mahomedally-Noorbhoy.

ARMS & AMMUNITION MART.

221 Abdul Rehman Street.

52 21 BOMBAY 3.

Printed & published by P. I Belliappa at "Kodagu" Press Mercara for "Kodagu" Ltd.

Reg. No. M. 5 If not delivered please return to "KODAGU" OFFICE MERCARA.

ಕೊಡಗು.

ಶಕ್ತ್ಯೇನ ಭೂತದಯಯಾ ವಿದ್ಯಾವೃತ್ತಿ ಪ್ರಯುಕ್ತತಾ । ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩—೮—೦.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦	ಮಡಿಕೇರಿ, ಸನ್ ೧೯೩೧ನೇ ಇಸವಿ ಏಪ್ರಿಲ್ ತಾರೀಕು ೧೦ ನೇ ಶುಕ್ರವಾರ.	ಸಂಚಿಕೆ ೩೮

Telegrams — "Precious"

V. Subramaniyer Jeweller,

Telephone — 3145

DIAMOND MERCHANT, GOLD & SILVERSMITH

Deals in all —
SPORTS CUPS in all prices
MEDALS in up to date patterns
CASKETS in elegant styles

Nos 2 & 3, Kuppumuthu St,
TIRUVATESWARANPET,
Post Box 423, Triplicane P. O.,
MADRAS.

Deals in all —
GEM SET JEWELS, set with Diamonds Rubies etc,
GOLD ARTICLES of all patterns
SILVER WARE in latest style

52—21



ಕೋವಿಗಳು, ಕತ್ತಿಗಳು, ಬಚೀಗಳು, ತೋಟಗಳು, ... ಮತ್ತು ... ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced Firm in India,
21 Abdul Rehman Street BOMBAY.

54—2

ಬಾಲಾರ್ಕಮದು.

ನಿಮ್ಮ ಮಕ್ಕಳ ... ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ ಮಕ್ಕಳ ರೋಗ



... ಬರುವ ... ಆರೋಗ್ಯವೂ ... ಇದು ಮಧುರವಾಗಿದೆ ಚಿಕ್ಕ ಮಕ್ಕಳು ಆನಂದದಿಂದ ... ೧ಕ್ಕೆ ೨ ಆಣೆ ... ೯ ಆಣೆ

ಆರ್ಡರ್ ... ಕಳುಹಿಸಿ ... ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲಾ

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶೀಮೊಗ್ಗಾ,
(ಮೈಸೂರು ಸಿಮ)

52-13

ಕಟುಕಷಾಯ ಮಲೆಜ್ವರಕ್ಕೆ — ... ಗುಣವಾಗದಿರುವ ... ಜ್ವರ ... ಬರುವ ಜ್ವರ 3—4 ದಿವಸಕ್ಕೊಂದು ... 12ಕ್ಕೆ ರೂ 14 ... ಗುಣವಾಗುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ ... 8—0

ಚಂದನಾಸವ — ಇದು ಪ್ರಮೇಹ ಮೂತ್ರ ಕೃಚ್ಛ್ರ ... ಮೂತ್ರ ... ಹೋಗುವದು ... ಮೂತ್ರನಾಳದಲ್ಲಿ ... ಮೂತ್ರ ನಾಳದಿಂದ ... ಹೋಗುವದು ... ಮೂತ್ರ ತಡೆಯಲಿಕ್ಕೆ ಸಾಮರ್ಥ್ಯ ... ಬೆಲೆ ... 1 3 6ಕ್ಕೆ ರೂ 1—4—0 3—8—0 6—12—0

ರೋಮನಾಶಿನಿ:— ಈ ಪುಡಿಯನ್ನು ... ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ... ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:— ತಲೆನೋವು, ... ಕಡಿಮೆಯಾಗುವದು ... ಇತರವೆಲ್ಲ ... ಗುಣಮಾಡುತ್ತದೆ ... ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ... ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ವಿಳಾಸ— ಮನೋಲ್ಲಾಸಿನಿ ಕಂಪೆನಿ,
೨. ಮಾಗಡಿರೋಡು.
ಬೆಂಗಳೂರು ಸಿಟಿ

52—48

ಕೊಡಗು.

೯-೧೯೩೧ನೇ ಇಸವಿ

ಏಪ್ರಿಲ್ ತಾ. ೧೦ ನೇ ಶುಕ್ರವಾರ.

ಹಿಂದೂ ಮುಸಲ್ಮಾನ್ ಒಗ್ಗಟ್ಟು.

ಕಾಂಗ್ರೆಸಿನಲ್ಲಿ ರಾಜಿ ತೀರ್ಮಾನಕ್ಕೆ ಬಲ ದೊರಕಿದನಂತರ ಹಿಂದೂ ಮುಸಲ್ಮಾನರೊಳಗೆ ರಾಜಕೀಯ ಹಕ್ಕುಗಳ ವಿಷಯದಲ್ಲಿರುವ ಮತಭೇದವನ್ನು ತೀರಿಸಲಿಕ್ಕೆ ಮಹಾತ್ಮ ಗಾಂಧಿ, ಸರದಾರ್ ವಲ್ಲಭಭಾಯಿ ಪಟೇಲ್ ಮತ್ತು ಸೇಟ್ ಜಮ್ನಲಾಲ್ ಬಜಾಜರು ಸಹ ಕಾಂಗ್ರೆಸಿನ ಪರವಾಗಿ ಮುಸಲ್ಮಾನ್ ಮುಖಂಡರೊಡನೆ ಮಾತನಾಡಲು ಡಿಲ್ಲಿಗೆ ಹೋದರು. ಅಲ್ಲಿ ನಡಿಯುತ್ತಿದ್ದ 'ಸರ್ವ ಪಕ್ಷ ಮುಸಲ್ಮಾನ್ ಪರಿಷತ್ತಿ'ನಿಂದ ಇಬ್ಬರು ಮೂವರು ಮುಸಲ್ಮಾನ್ ಮುಖಂಡರು ಕಾಂಗ್ರೆಸ್ ಪ್ರತಿನಿಧಿಗಳೊಡನೆ ಸಂಭಾಷಿಸಲು ಕಳುಹಿಸಬೇಕೆಂತ ಕೇಳಿದ್ದಕ್ಕೆ ವರ್ಕಿಂಗ್ ಕಮಿಟಿಯವರೆಲ್ಲರೂ ಬಂದರು. ಅವರೊಳಗೂ ಒಗ್ಗಟ್ಟಿರಲಿಲ್ಲ. ವೈಸ್‌ರಾಯರು ಸಹ ಕೆಲವು ಮುಸಲ್ಮಾನ್ ಮುಖಂಡರನ್ನು ಕರೆಸಿಕೊಂಡು ಮಾತನಾಡಿದರು. ಆದರೂ ಈ ವರೆಗೂ ಯಾವ ತೀರ್ಮಾನಕ್ಕೂ ಬರಲಿಲ್ಲವೆಂಬ ವರ್ತಮಾನವು ಬಹಳ ವಿಷಾದಕರವಾಗಿದೆ.

ಮುಸಲ್ಮಾನರೆಲ್ಲರೂ ಒಗ್ಗಟ್ಟಿನಿಂದ ಕೇಳುವ ಶರತ್ತುಗಳನ್ನು ತಾನು ಅಂಗೀಕರಿಸುತ್ತೇನೆಂತ ಮಹಾತ್ಮರು ಹೇಳಿದರೂ ಅವರೊಳಗೆ ಒಗ್ಗಟ್ಟಾಗಲು ಇನ್ನೂ ಸಾಧ್ಯವಾಗಿಲ್ಲ. ಮಹಾತ್ಮರನ್ನು ಕೆಲವು ಮುಸಲ್ಮಾನರು ಆಕ್ಷೇಪಿಸುತ್ತಿರುವುದಕ್ಕೆ ಜವಾಬಾಗಿ ಮಹಾತ್ಮರು ತನ್ನ ಅಭಿಪ್ರಾಯವನ್ನು ಪ್ರಕಟಿಸಿರುತ್ತಾರೆ. ರಾಷ್ಟ್ರೀಯ ಮುಸಲ್ಮಾನರು ಪ್ರತ್ಯೇಕ ಚುನಾವಣೆಯಿರಬಾರದೆಂತ ಹೇಳುವಾಗ್ಯೂ ಇನ್ನೂ ಕೆಲವರು ಅದಿಲ್ಲದ ರಾಜಕೀಯ ರಚನೆಯನ್ನು ತಾವು ಒಪ್ಪುವುದೇ ಇಲ್ಲವೆನ್ನುತ್ತಾರೆ. ಮಹಾತ್ಮರು ಹೇಳುವುದೇನೆಂದರೆ—ಪ್ರತ್ಯೇಕ ಚುನಾವಣೆಯ ಏರ್ಪಾಡಿದ್ದರೆ ರಾಷ್ಟ್ರೀಯತ್ವದ ಬೆಳವಣಿಗೆಗೆ ಅಡಚಣೆಯಿದೆ. ಆದರೂ ಮುಸಲ್ಮಾನರೆಲ್ಲರೂ ಅದು ಇರಲೇ ಬೇಕೆಂತ ಹೇಳಿದರೆ ಅದನ್ನು ಅಂಗೀಕರಿಸಿಕೊಳ್ಳಲೇ ಬೇಕಾಗುತ್ತದೆ. ಒಳ್ಳೇ ಪ್ರಮಾಣಿಕರು, ಇಸ್ಲಾಮ್ ಧರ್ಮದ ನಿಜವಾದ ಭಕ್ತರು ಎಂತ ಮೌಲನಾ ಶೌಕತ್ ಅಲ್ಲಿಯವರಿಂದ ಸರ್ಟಿಫಿಕೇಟ್ ಪಡೆದ ರಾಷ್ಟ್ರೀಯ ಮತದ ಮುಸಲ್ಮಾನರು ಪ್ರತ್ಯೇಕ ಚುನಾವಣೆಯಿಂದ ಮುಸಲ್ಮಾನರಿಗೆ ಹಾನಿಯಿದೆ ಎಂತ ಹೇಳುವಾಗ್ಯೂ ಅವರ ಮಾತನ್ನು ನಿರಾಕರಿಸುವುದು ಹೇಗೆ ಎಂತ ಮುಂತಾಗಿ ಮಹಾತ್ಮಜೀಯವರು ವಿವರಿಸಿರುತ್ತಾರೆ.

ಡಿಲ್ಲಿಯಲ್ಲಿ ನಡೆದ 'ಮುಸ್ಲಿಮ್ ಸರ್ವ ಪಕ್ಷ'ದ ಪರಿಷತ್ತಿನ ಸಭೆಗೆ ವಾಯುವ್ಯ ಪ್ರಾಂತ್ಯದ ಗಡಿಯ ಮುಸಲ್ಮಾನರು ಸೇರಲಿಲ್ಲ. ಜಮಿಯತ್ ಉಲ್ ಉಲೇಮಾದವರು ಸಹ ಸೇರಲಿಲ್ಲ. ರಾಷ್ಟ್ರೀಯ ಅಭಿಪ್ರಾಯವಿರುವ ಮುಸಲ್ಮಾನರಿಗೆ ಅದರಲ್ಲಿ ಎಡೆಯೇ ಇಲ್ಲ. ಇಂಥಾ ಸಭೆಯಲ್ಲಿ ಪಾಸಾದ ಕೆಲವು ಠರಾವುಗಳೂ, ನಡೆದ ಕೆಲವು ಭಾಷಣಗಳೂ ಬಹಳ ವ್ಯಸನವನ್ನುಂಟುಮಾಡುವಂಥವಾಗಿವೆ. "ಕಾಂಗ್ರೆಸಿನ ಅಹಿಂಸಾ ತತ್ವವು ತನಗಿಂತ ಬಲವಾದ ಸರಕಾರದ ಮೇಲೆ ಉಪಯೋಗಿಸುವ ಮೋಸದ ಉಪಾಯವೆಂತಲೂ ಮುಸಲ್ಮಾನರೊಡನೆ ಹೋರಾಟ ಸುರುವಾದಾಗ ಆ ತತ್ವವನ್ನು ಬಿಟ್ಟೇ ಬಿಡುತ್ತಾರೆಂತಲೂ ಬಂದು ಠರಾವು—ಖಾನ್‌ಪುರ ಮುಂತಾದ ಸ್ಥಳಗಳಲ್ಲಿ ಹಿಂದುಗಳು ಬೇಕೆಂತಲೇ ಮುಸಲ್ಮಾನರ ಮೇಲೆ ಬಿದ್ದರೆಂತಲೂ ಮುಸಲ್ಮಾನ್ ಹೆಂಗಸರು ಮಕ್ಕಳನ್ನು ಹಿಂದುಗಳು ಕೊಂದದ್ದಕ್ಕೆ ವ್ಯಸನ ಪಡುತ್ತೇವೆಂತಲೂ ಇನ್ನೊಂದು ಠರಾವು. ಪೂರಾಗಿ ಯಾರು ಕಾರಣರೆಂಬುದನ್ನು ವಿಚಾರಮಾಡದೆ ಕಂಡು ಹಿಡಿಯುವ ಮುಂಚೆ ಹಿಂದುಗಳೇ ಮೇಲೆ ಬಿದ್ದರೆಂತ ಹೇಳಿದ್ದು ಯಾವ ನ್ಯಾಯಶೀಲ ಮನುಷ್ಯನಿಗೂ ಯುಕ್ತ ತೋರಲಾರದು. ಅಲ್ಲದೆ ಹಿಂದೂ ಹೆಂಗಸರೂ, ಮಕ್ಕಳೂ ಸಹ ಕೊಲ್ಲಲ್ಪಡಲಿಲ್ಲವೇ? ಹಿಂದುಗಳ ದೇವಸ್ಥಾನ, ಮನೆ ಮಾರುಗಳು ಸಹ ಬೆಂಕಿಯಿಂದ ಸುಡಲ್ಪಡಲಿಲ್ಲವೇ? ಲೂಟಿಯಾಗಲಿಲ್ಲವೇ? ಆ ಒಗ್ಗೆ ವಿಷಾದವನ್ನು ತೋರಿಸುವ ಒಂದು ಮಾತಾದರೂ ಠರಾವಿನಲ್ಲಾಗಲೀ, ಭಾಷಣಗಳಲ್ಲಾಗಲೀ ಇಲ್ಲ. ಖಾನ್‌ಪುರದಲ್ಲಿ ಹಿಂದುಗಳು ಹೆಚ್ಚಾಗಿರುವ ಭಾಗಗಳಲ್ಲಿ ಮುಸಲ್ಮಾನರ ಮನೆ ಮಠಿದಿಗಳು ನಾಶಪಡಿಸಲ್ಪಟ್ಟಿವೆ. ಮುಸಲ್ಮಾನರು ಹೆಚ್ಚಾಗಿರುವಲ್ಲಿ ಹಿಂದುಗಳ ಮನೆ ಮಂದಿರಗಳು ಉಳಿಯಲಿಲ್ಲ. ಅದ್ದರಿಂದ ಹಾನಿಯು ಅನ್ಯೋನ್ಯವಾಗಿದೆ ಯೆಂಬುದು ಸ್ಪಷ್ಟ. ಇಂಥಾ ಕೊಲೆಪಾತಕಗಳೂ, ಕೆಡಕುಗಳೂ ಇನ್ನು ಮೇಲೆ ನಡೆಯಬಾರದೆಂತಾದರೆ ಈ ತರದ ಠರಾವುಗಳನ್ನು ಮಂಜೂರ್ ಮಾಡಿಕೊಂಡದರಾಗಲೀ ಸಿಟ್ಟಿನಿಂದ ಮಾತನಾಡಿದ್ದರಿಂದಾಗಲೀ ಪ್ರಯೋಜನವಿಲ್ಲ. ಅದರಿಂದ ಇನ್ನೂ ಹೆಚ್ಚಿನ ಕೇಡೇ ಸರಿ.

ಭಗತ್‌ಸಿಂಗ್‌ರ ಹುತಾತ್ಮತೆಗಾಗಿ ಅಂಗಡಿ ಮುಚ್ಚದ ಮುಸಲ್ಮಾನರ ಅಂಗಡಿಗಳಿಗೆ ಕಲ್ಲೆಸೆದದ್ದೇ ದಂಗೆಗೆ ಕಾರಣವೆಂತ ಪತ್ರಿಕೆಗಳಿಂದ ತಿಳಿಯ ಬರುತ್ತದೆ. ಇದು ನಿಜವಾದರೆ ಬರೇ ಕಲ್ಲೆಸೆದದ್ದಕ್ಕಾಗಿ ಹೊಡೆದಾಟವನ್ನೂ, ಕೊಲೆಪಾತಕತನವನ್ನೂ ಯಾರು ಪ್ರಾರಂಭಿಸಿದರೆಂತ ಕಂಡು ಹಿಡಿಯಬೇಕಾದದ್ದು ಮುಖ್ಯ ಕೆಲಸವಾಗಿದೆ. ಕಾಂಗ್ರೆಸಿನ ಮುಖಂಡರಾದಂಥ ಗಣೇಶ ಶಂಕರ ವಿದ್ಯಾರ್ಥಿಯಂಥವರು ಶಾಂತಿಗೆ ಪ್ರಯತ್ನಿಸಿದರೆಂತ ಮುಸಲ್ಮಾನರೇ ಒಪ್ಪುತ್ತಿರುವಾಗ ಸಿಟ್ಟಿದ್ದ ಹಿಂದೂ ಕೂಟವು ನಡಿಸಿದ ಅತ್ಯಾಚಾರಕ್ಕೆ ಕಾಂಗ್ರೆಸನ್ನು ದೂರುವುದು ಯುಕ್ತವಲ್ಲ.

ಕಾಂಗ್ರೆಸಿಗೆ ಹೆದರಿಕೊಂಡು ಸರಕಾರವು ವರ್ತಿಸಿದರೆ ದೇಶಕ್ಕೆ ಹಾನಿಯೇ ಸರಿ ಎಂತ ಸರಕಾರಕ್ಕೆ ಎಚ್ಚರ ಕೊಡುವ ಠರಾವು ಇನ್ನೊಂದು. ಇದೆಲ್ಲಾ ನೋಡುವಾಗ 'ಹಿಂದು" ಪತ್ರಿಕೆಯ ಡಿಲ್ಲಿ ಬಾತ್ಮಿದಾರರು ಬರೆಯುವ ಮೇರೆ ಉತ್ತರ ಹಿಂದೂಸ್ಥಾನದಲ್ಲಿ ಐ. ಸಿ ಯಸ್. ಗವರ್ನರುಗಳೂ, ಆಫೀಸರುಗಳೂ ದೇಶಕ್ಕೆ ಹೆಚ್ಚಿನ ಸ್ವಾತಂತ್ರ್ಯ ಬರದ ರೀತಿ ಮುಸಲ್ಮಾನರಿಂದ ಈ ತರದ ಅಭಿಪ್ರಾಯಗಳನ್ನು ಕೇಳಿಸುತ್ತಿರುವುದೇ ನಿಜವೋ ಎಂಬಂತೆ ತೋರುತ್ತದೆ.

ವಾಯುವ್ಯ ಪ್ರಾಂತ್ಯದ ಗಾಂಧಿ ಎಂತ ಹೆಸರು ಪಡೆದ ಖಾನ್ ಅಬ್ದುಲ್ ಗಫೂರ್‌ಖಾನ್ ಎಂಬವರು ಮಹಾತ್ಮರ ಬೋಧನೆಯನ್ನು ಮುಸಲ್ಮಾನರು ಅಂಗೀಕರಿಸಬೇಕೆಂತಲೂ, ಮಸೀದಿ ಮುಂದೆ ಸಂಗೀತ ಮುಂತಾದ ಚಿಕ್ಕ ವಿಷಯಗಳಿಗಾಗಿ ಹೋರಾಡಬಾರದೆಂತಲೂ, ಪರದೇಶೀಯರ ಅಧೀನದಿಂದ ತಪ್ಪಿಸಿಕೊಳ್ಳುವುದೇ ಮುಖ್ಯ ಧ್ಯೇಯವಾಗಿರಬೇಕೆಂತಲೂ ಬುದ್ಧಿವಾದ ಕೊಡುತ್ತಿರುವಾಗ್ಯೂ ಮೌಲಾನಾ ಶೌಕತ್ ಅಲ್ಲಿಯವರ ಸಂಗಡದವರು ಕಾಂಗ್ರೆಸನ್ನು ದೂರುವುದು ಎಷ್ಟೊಂದು ವ್ಯಸನಕರ. ಡಿಲ್ಲಿಯಲ್ಲಿ ನಡೆದ ಮುಸಲ್ಮಾನ್ ಸಭೆಯಲ್ಲಿ ಸರಕಾರಿ ಅಧಿಕಾರ ಹೊಂದಿದವರೂ ಮತ್ತು ಹಾಲಿ ಅಧಿಕಾರದಲ್ಲಿರುವವರ ಸಂಬಂಧಿಕರೂ ಪ್ರಮುಖರಾಗಿದ್ದರು. ಆದ್ದರಿಂದ ದೇಶಭಕ್ತ ಮುಸಲ್ಮಾನರು ಇಂಥಾ ಸಭೆಯ ತೀರ್ಮಾನಗಳನ್ನು ತಿರಸ್ಕರಿಸಿ ಸ್ವರಾಜ್ಯ ಸಂಪಾದನೆಗೆ ಸಹಾಯ ಮಾಡುವರೆಂತ ಆಶಿಸುತ್ತೇವೆ.

ಅಹಿಂಸಾ ರೀತಿಯಿಂದ ಸ್ವರಾಜ್ಯವನ್ನು ಪಡೆಯುವಾಗ ಕಡಿಮೆ ಸಂಖ್ಯೆಯವರಾದರೂ ಬಲವಾದ ವಿರೋಧವಿದ್ದರೆ ಸ್ವರಾಜ್ಯವನ್ನು ಸ್ಥಾಪಿಸುವ ಕೆಲಸವನ್ನು ನಿಲ್ಲಿಸಬೇಕಾಗುತ್ತದೆಯೆಂತಲೂ ಸ್ವರಾಜ್ಯವನ್ನು ಸ್ಥಾಪಿಸುವ ಧ್ಯೇಯ ಮಾತ್ರ ಇಟ್ಟುಕೊಂಡು ಜಾತಿಗಳೊಳಗೆ ಇರುವ ವ್ಯತ್ಯಾಸವನ್ನು ಹೋಗಲಾಡಿಸಿ ಒಗ್ಗಟ್ಟು ಸ್ಥಾಪನೆಗಾಗಿಯೇ ಬೇರೆ ಉಪಾಯವನ್ನು ಹೂಡಬೇಕಾಗುತ್ತದೆಯೆಂತ ಮಹಾತ್ಮ ಗಾಂಧಿಯವರ ಅಭಿಪ್ರಾಯದಲ್ಲಿ ತಿಳಿಸಿರುತ್ತಾರೆ. ಸಂಪೂರ್ಣ ಸ್ವಾತಂತ್ರ್ಯವನ್ನೇ ಸ್ಥಾಪಿಸಬೇಕೆಂತ ಹೇಳುತ್ತಿದ್ದ ಮೌಲಾನಾ ಶೌಕತ್ ಅಲ್ಲಿ ಮತ್ತು ಹಸರತ್ ಮೋಹನಿ ಮುಂತಾದವರು ಈಗ ಸಂಪೂರ್ಣ ಸ್ವಾತಂತ್ರ್ಯ ಹೋಗಿ ಮಧ್ಯವರ್ತಿ ಸರಕಾರದಲ್ಲಿ ಕೆಲವು ಮಟ್ಟಿಗಾದರೂ ಪ್ರಜಾ ಪ್ರತಿನಿಧಿಗಳಿಗೆ ಜವಾಬ್ದಾರಿ ಕೊಡಲು ಸಹ ವಿರೋಧವಿದೆಯೆಂತ ಅಭಿಪ್ರಾಯ ಕೊಡುವುದು ಎಂಥಾ ವ್ಯಸನಕರ! ಹೆಚ್ಚಿನ ಮುಸಲ್ಮಾನರ ಅಭಿಪ್ರಾಯವು ಇದೇ ತರದ್ದಾದರೆ ಮಹಾತ್ಮ ಗಾಂಧಿಯವರು ಸ್ವರಾಜ್ಯ ಸ್ಥಾಪನೆಯ ಚಳವಳವನ್ನು ನಿಲ್ಲಿಸಿಯೇ ಬಿಟ್ಟಾರೋ ಎಂಬ ಭಯವು ಮೇಲ್ಕಂಡ ಅಭಿಪ್ರಾಯದಿಂದ ತೋರಿಬರುತ್ತಿದೆ. ಹಿಂದೂಸ್ಥಾನಕ್ಕೆ ಇಂಥಾ ದುರ್ಭಾಗ್ಯದ ಸ್ಥಿತಿಯು ಬಂದೊದಗಲಾರದೆಂತ ನಂಬುತ್ತೇವೆ.

ಖಾನ್‌ಪುರದಲ್ಲಿ ಈಗ ತಾನೇ ಆದ ದಂಗೆಯಿಂದ ಆ ಪ್ರಾಂತ್ಯದ ಮುಸಲ್ಮಾನರ ಮನಸು ಪೂರ್ತಿ ಕಟ್ಟು ಹೋಗಿರುವುದರಿಂದ ಇನ್ನೂ ಒಂದು ತಿಂಗಳ ವರೆಗೆ ಈ ಒಗ್ಗಟ್ಟಿನ ಕೆಲಸಕ್ಕಾಗಿ ತೊಂದರೆ ತೆಗೆದುಕೊಂಡು ಪ್ರಯೋಜನವಿಲ್ಲವೆಂತಲೂ, ಹಿಂದೂಸ್ಥಾನದ ಅಧಿಕಾರಿಗಳ ಬೆಂಬಲ ದೂರಕದೆ ಇರುವ ಲಂಡನಿನಲ್ಲಿ ಈ ಹಿಂದೂ ಮುಸಲ್ಮಾನ್ ವ್ಯತ್ಯಾಸಗಳ ಚರ್ಚೆ ನಡಿಸಿ ತೀರ್ಮಾನಕ್ಕೆ ಬರುವುದು ಸುಲಭವೆಂತಲೂ ಮಹಾತ್ಮ ಗಾಂಧಿಯವರೂ, ವೈಸರಾಯರೂ ಸಹ ಪಟ್ಟಿರುತ್ತಾರೆಂತ ವರ್ತಮಾನಗಳಿವೆ. ಕಾಂಗ್ರೆಸ್ಸಿನ ಅಧಿಪತಿಯವರು ಹೇಳಿದ ಮೇರೆ ಹಿಂದೂ ಮುಸಲ್ಮಾನ್ ವ್ಯತ್ಯಾಸಗಳು ತೀರದೆ ರೌಂಡ್ ಟೇಬಲ್ ಕಾನ್‌ಫರೆನ್ಸಿಗೆ ಹೋಗುವುದೇ ಇಲ್ಲವೆಂಬ ಅಭಿಪ್ರಾಯವನ್ನು ಬಿಟ್ಟು ಹೋಗಿ ಈ ಜಾತಿ ಜಗಳಗಳನ್ನು ತೀರಿಸಲು ಪ್ರಯತ್ನ ಯೋಚನೆ ಮಾಡಿರುವುದು ಯುಕ್ತವೇ.

ಡಿಲ್ಲಿಯಲ್ಲಿ ನಡೆದ ಮುಸ್ಲಿಂ ಸರ್ವಪಕ್ಷದ ಸಭೆಯಲ್ಲಿ ಮೇಲೆ ವಿವರಿಸಿದ ರೀತಿ ಹಾನಿಕರವಾದ ಠರಾವುಗಳೂ ಭಾಷಣಗಳೂ ಆದರೂ ರೌಂಡ್‌ಟೇಬಲ್ ಕಾನ್‌ಫರೆನ್ಸಿನಲ್ಲಿ ತಂದ ಠರಾವು ಯಾವ ಇತ್ಯರ್ಥಕ್ಕೂ ಬರದೆ ಕಾನ್‌ಫರೆನ್ಸ್ ನಿಷ್ಫಲವಾಯಿತು. ಈ ಠರಾವಿಗೆ ತುಂಬಾ ಮತಭೇದವಿದ್ದುದರಿಂದಲೂ, ಸಭೆಯಲ್ಲಿ ಬಹು ಜನರು ಮಾತ್ರ ಇದ್ದುದರಿಂದಲೂ ಠರಾವನ್ನು ಓಟಿಗೆ ಇಡಲು ಕಾರಣ ಕಾನ್‌ಫರೆನ್ಸು ಈ ರೀತಿ ಆದ್ದರಿಂದ ಅದನ್ನು ನೋಡಿಯಾದರೂ ಈ ಕಾನ್‌ಫರೆನ್ಸು ಹಿಂದೀ ಮುಸಲ್ಮಾನರ ನಿಜವಾದ ಅಭಿಪ್ರಾಯವನ್ನು ತೋರಿಸುವಂಥಾದ್ದಲ್ಲವೆಂತ ಪ್ರಪಂಚವು ತಿಳಿಯಲು ಅನುಕೂಲವಾಯಿತು. ಇನ್ನಾದರೂ ಮುಸಲ್ಮಾನ್ ಮುಖಂಡರು ತಾವು ಸಣ್ಣ ಜಗಳಗಳೂ, ಕೆಟ್ಟ ಅಭಿಪ್ರಾಯಗಳೂ ಬೇಕಿಲ್ಲ ಹಿಂದೂಗಳೊಡನೆ ಒಗ್ಗಟ್ಟಿರಬೇಕೆಂತ ತಿಳಿದುಕೊಂಡು ಮುಸಲ್ಮಾನರೆಲ್ಲರೂ ಒಗ್ಗಟ್ಟಿನಿಂದ ತಮ್ಮ ಜನಾಂಗಕ್ಕೂ, ಹಿಂದೂಸ್ಥಾನಕ್ಕೂ ಗೌರವ ಬರುವ ರೀತಿಯಲ್ಲಿ ವರ್ತಿಸಲು ದೇವರು ಬುದ್ಧಿ ಕೊಡಲಿ ಎಂತ ಪ್ರಾರ್ಥಿಸುತ್ತೇವೆ.

ಅಖಿಲಭಾರತ ಸಹಕಾರಿ ಸಂಸ್ಥೆಗಳ ಪರಿಷತ್ತಿನಲ್ಲಿ ಸರ್ ಲಲ್ಲೂಭಾಯಿ ಸಮಲ್ದಾಸರು ಮಾಡಿದ ಭಾಷಣದಿಂದ.

ನಮ್ಮ ಮುಖ್ಯ ಕರ್ತವ್ಯವಿರುವುದೇ ಮೂಲ ಸಹಕಾರ ಮುಖ್ಯವಾಗಿ ಗ್ರಾಮ ಸಂಘಗಳ ಮೆಂಬರುಗಳಿಗೆ ಸಹಕಾರ ತತ್ವಗಳನ್ನು ಕಲಿಸಿಕೊಟ್ಟು ಅವುಗಳನ್ನು ತಮ್ಮ ಸಂಘದ ಕೆಲಸಗಳಿಗೆ ತರುವಂತೆ ಮಾಡುವುದು. ಅಂಥಾ ಮೆಂಬರುಗಳ ಕಮಿಟಿ ಮೆಂಬರುಗಳ ತರಬೇತು ಸಭೆಗಳನ್ನು ಮಾಡುವುದರಿಂದ ಆಗುವುದಿಲ್ಲ. ಮನಸಿಗೆ ನಾಟುವಂಥ ಸಂಭಾಷಣೆಗಳಿಂದ ಈ ಕೆಲಸವಾಗಬೇಕು. ಆದಕ್ಕೆ ಸ್ಥಳದಲ್ಲೇ ಇರುವ ಸೂಪರ್‌ವೈಸರುಗಾರರು ಬೇಕು. ಎಲ್ಲಾ ಪ್ರಾಂತ್ಯಗಳ ಅನುಭವದಿಂದ ಅಂಥ ತರಬೇತು ಕೊಡಲು ಒಳ್ಳೇ ಸೂಪರ್‌ವೈಜರನಿಗಿಂತ ಬೇರೆ ಉಪಾಧ್ಯಾಯನಿಲ್ಲವೆಂತ ತಿಳಿದು ಬಂದಿದೆ. ಸೆಂಟ್ರಲ್ ಬ್ಯಾಂಕ್ ಇನ್ಸ್‌ಪೆಕ್ಟರ ಮತ್ತು ಆಡಿಟರ ಕೆಲಸವೂ ಇಂಥಾ ಸೂಪರ್‌ವೈಜರ ಕೆಲಸವೂ ಪ್ರತ್ಯೇಕ ಪ್ರತ್ಯೇಕವಾಗಿದೆ. ಸೂಪರ್‌ವೈಜರ ಕೆಲಸ ತಿಳುವಳಿಕೆ ಕೊಡುವುದೇ ಆಗಿದೆ. ಆದುದರಿಂದ ಸ್ಥಳೀಯ ಮೇಲ್ವಿಚಾರಣೆಯ ಯೂನಿಯನ್‌ಗಳು ಬಹು ಮುಖ್ಯವಾದ ಸಂಸ್ಥೆಗಳಾಗಿವೆ. ಸೂಪರ್‌ವೈಜರುಗಳು ಸಹಕಾರ ತತ್ವವನ್ನು ತಿಳಿದವರಾಗಿ ಸಹಕಾರಿ ಸಂಸ್ಥೆಗಳನ್ನು ನಡಿಸುವ ಅನುಭವವುಳ್ಳವರಾಗಿರಬೇಕು. ಇದಕ್ಕಾಗಿ ಸಹಕಾರ ವಿಷಯಗಳನ್ನು ವಿವರಿಸುವ ಪುಸ್ತಕಗಳೂ, ಲೇಖನಗಳೂ ಸ್ಥಳೀಯ ಭಾಷೆಯಲ್ಲಿ ತುಂಬಾ ಹೊರಡಬೇಕು. ಯೂನಿಯ ಸಂಘಗಳು ಸೂಪರ್‌ವೈಜರ ಸಂಬಳಕ್ಕೆ ಹಣ ಸಹಾಯ ಮಾಡುತ್ತವೆ. ಸೂಪರ್‌ವೈಜರು ಸಂಘಗಳ ಪ್ರತಿನಿಧಿಗಳ ಜೊತೆ ಕೆಲಸ ಮಾಡಬೇಕು. ಮೂಲ ಸಂಘಗಳು ತಾವೇ ಕಾರ್ಯನಡಿಸಲು ಸಾಧ್ಯವಿಲ್ಲ. ಯೂನಿಯನ್ನ ಮೂಲಕ ಮೂಲ ಸಂಘಗಳಿಗೆ ಪ್ರಮಾಣದ ಸಂಬಂಧ ಉಂಟಾಗುತ್ತವೆ. ಯೂನಿಯನ್‌ಗಳು ಮೂಲ ಸಂಘಗಳ ವ್ಯವಹಾರದ ಮುಖ್ಯ ಸಂಸ್ಥೆಯಾಗಿದೆ. ಈ ಯೂನಿಯನ್‌ಗಳ ಪ್ರತಿನಿಧಿಗಳಿಂದ ಕೂಡಿದ್ದೇ ಫೆಡರೇಶನ್. ಫೆಡರೇಶನಿಗೆ ಬಲ ಯೂನಿಯನ್‌ಗಳಿಂದ. ಈ ರೀತಿ ಕಲೆತು ಕೆಲಸ ಮಾಡಿದರೆ ಈಗ ರಿಜಿಸ್ಟ್ರಾರವರು ನಡಿಸುತ್ತಿರುವ ಅಧಿಕಾರಗಳನ್ನು ಸಹಕಾರಿಗಳು ವಹಿಸಿಕೊಳ್ಳಲು ಸಾಧ್ಯವಿದೆ.

ಹೀಗಾಗಬೇಕಾದದ್ದು ಸ್ವಾಭಾವಿಕ. ಹಿಂದೂಸ್ಥಾನದಲ್ಲಿ ರಿಜಿಸ್ಟ್ರಾರವರಿಗೆ ಇರುವ ಹೆಚ್ಚಿನ ಕೆಲಸಗಳನ್ನು ಬೇರೆ ದೇಶಗಳಲ್ಲಿ ರಾಷ್ಟ್ರೀಯ ಫೆಡರೇಶನುಗಳು ನಡಿಸುತ್ತವೆ. ಹಿಂದೂಸ್ಥಾನದಲ್ಲಿ ರಿಜಿಸ್ಟ್ರಾರು ಖಾನೂನ್ ಮೇರೆಗೆ ಮಾಡಬೇಕಾದ ಕೆಲಸಗಳನ್ನು ಮಾಡಬೇಕಾದ್ದಲ್ಲದೆ ಸಹಕಾರ ಪಥದರ್ಶಕರಾಗಿ ಮೇಲ್ವಿಚಾರಕರೂ ಆಗಿದ್ದಾರೆ. ಸಹಕಾರಿ ಸಂಸ್ಥೆಗಳು ಚೆನ್ನಾಗಿ ಬೆಳೆದಿರುವ ಯಾವ ಬೇರೆ ರಾಜ್ಯದಲ್ಲೂ ರಿಜಿಸ್ಟ್ರಾರರಿಗೆ ಈ ಅಧಿಕಾರವಿಲ್ಲ. ರಿಜಿಸ್ಟ್ರಾರರ ಅಧಿಕಾರಗಳನ್ನು ಉದ್ಯೋಗಸ್ಥರಲ್ಲದ ಸಹಕಾರಿಗಳಿಗೆ ಬಿಟ್ಟುಕೊಡಬೇಕೆಂತ ಕೇಳುವುದು ಒಪ್ಪತಕ್ಕ ಸಹಕಾರಿಯ ಅಭಿಪ್ರಾಯದ ದೃಷ್ಟಿಯಿಂದ ಎಂತ ಕೆಲವು ಸರಕಾರದ ಇಲಾಖೆಗಳು ತಿಳಿಯುತ್ತಾರೆ. ಇದು ನಿಜವಲ್ಲ. ಈ ಕೋರಿಕೆಯು ಸಹಕಾರಿ ಫೆಡರೇಶನ್‌ದಿಂದ ಹೊರಡುತ್ತದೆ. ಫೆಡರೇಶನ್ ಇಷ್ಟು ಸಹಕಾರಿ ಚಳವಳದ ಬೆಳವಣಿಗೆಗೆ ಜವಾಬ್ದಾರಿಯುಳ್ಳ ಸಂಸ್ಥೆಯಾಗಿದೆ. ಸಹಕಾರಿ ಚಳವಳವನ್ನು ಬೆಳಸುವ ಕೆಲಸದಲ್ಲಿ ಫೆಡರೇಶನನ್ನು ಸೇರಿಸಿಕೊಳ್ಳದಿದ್ದರೆ ಫೆಡರೇಶನಿಗೆ ಸ್ವಬುದ್ಧಿ, ಹೊಸ ಅಭಿಪ್ರಾಯಗಳು, ಧೈರ್ಯ, ಮುಂದಾಲೋಚನೆ

(೪ನೇ ಪುಟದಲ್ಲಿ ಮುಂದುವರಿದಿದೆ.)

...ತ್ಮಗಾಂಧಿಯವರು ಕರಾಚಿಯಲ್ಲಿ ...ಡಿದ ಒಂದು ಭಾಷಣದಿಂದ.

...ಸಿಂಗ್ ಮುಂತಾದವರನ್ನು ತೂಗಿ ಸರಕಾರವು ...ಕೋಪೋದ್ರೇಕಕ್ಕೆ ಕಾರಣ ಕೊಟ್ಟಿದೆ. ನನ್ನ ...ಮತ್ತು ಪತ್ರವ್ಯವಹಾರದಿಂದ ಇವರ ಜೀವ ಉ... ಎಂಬ ಆಶೆ ನನಗೂ ಹುಟ್ಟಿದ್ದರಿಂದ ನನಗೂ ಒ... ...ಆಯಿತು. ಇವರನ್ನು ಉಳಿಸಲಿಕ್ಕೆ ಆಗದಿದ್ದುದ್ದ... ...ವಕರಿಗೆ ನನ್ನ ಮೇಲೆ ಸಿಟ್ಟು ಬಂದದ್ದಕ್ಕೆ ನನಗೆ ಆಶ್ಚರ್ಯ... ...ದರೆ ಅವರ ಮೇಲೆ ಸಿಟ್ಟಾಗಲು ನನಗೆ ಕಾರಣವಿ... ...ಕೆಂದರೆ—ಇಂಥವರದ್ದು ನನ್ನ ಅನುಭವದಲ್ಲಿ ...ದಲನೆಯದ್ದಲ್ಲ. ಜನಾಂಗದ ಸೇವೆ ಮಾಡುತ್ತೇ...ಗೆ ಜನಾಂಗದ ಮೇಲೆ ಸಿಟ್ಟಾಗಬಾರದು. ನಾ... ನನ್ನ ಧರ್ಮವೇ ಅಹಿಂಸೆಯಾಗಿರುವದರಿಂದ ಯಾ... ...ನಾನು ಸಿಟ್ಟಾಗ ಕೂಡದು. ನಿಜವಾದ ಸೇ... ...ಂಸೆಯೇ ತನ್ನ ಧರ್ಮವಾಗಿ ಮಾಡಿಕೊಳ್ಳದಿದ್ದ ...ಯುವಜನರ ಮೇಲೆ ಸಿಟ್ಟಾಗಬಾರದು. ಅವನಿಗೆ ...ಬಾರದು. ಆದರೆ ಸಿಟ್ಟಾಗದೆ ಇರಲು ಸಾಧ್ಯವಿಲ್ಲ...ಂಥವನು ಜನಾಂಗದ ಸೇವೆಯನ್ನು ಬಿಟ್ಟು ಬಿಡಬೇ... ...ನಾಂಗದ ಸೇವೆಯನ್ನು ನಾನು ಬಿಡಲೊಲ್ಲೆನು. ಆ... ನಾನು ಸಿಟ್ಟಾಗಲಾರೆನು. ಅವರಿಗೆ ಏನು ಒ... ನಾನು ಹೇಳಿದ್ದು. ಆದರೆ ಆ ಯುವಕರು ಹು...ಲ್ಲೇ ಮುಂಚೆಯಿಂದಲೇ ನಾನು [illegible] ...ಕರ ಸೇವೆ ಮಾಡುತ್ತಿದ್ದೇನೆ. ಯುವಕರು ತಿಳಿ...ದೆ ಸೇವೆಯ ಪ್ರತಿಜ್ಞೆ ಮಾಡಿಕೊಂಡಿದ್ದರಿಂದ ...ಯನ್ನು ಜನಾಂಗಕ್ಕೆ ಒತ್ತೆ ಕಟ್ಟಿ ಬಿಟ್ಟಿರುತ್ತೇನೆ ...ಯನ್ನು ಕತ್ತರಿಸಿ ಹಾಕುವುದು ಪ್ರಪಂಚದಲ್ಲಿ ಅತಿ ...ಕಲಸವಾಗಿದೆ. ಅದಕ್ಕೆ ಏನೂ ತಯಾರಿಯೂ ಬೇ...ಟನೆಯೂ ಬೇಡ. ಹೊರಗಿನ ಸಹಾಯವನ್ನು ನಾ...ನೂ ಕೋರಿರುವುದಿಲ್ಲ. ನನ್ನನ್ನು ಕಾಪಾಡಿಕೊಳ್ಳ...ಚನೆ ಮಾಡುವುದು ನಿರರ್ಥಕ ಯಾಕೆಂದರೆ—ಸರವ...ನೇ ಕಾಯುವನೆಂತ ನನಗೆ ಗೊತ್ತಿದೆ. ...ನ ಯುವಕರು ತಮ್ಮ ಅತೃಪ್ತಿಯನ್ನು ಸೂಚಿ... ನನಗೆ ಕೋಪವಾಗಲಿಲ್ಲ. ಅವರು ಯಾವ ಕೆ... ...ಅವನನ್ನು ತೋರಿಸದ್ದರಿಂದ ನನಗೆ ಸಂತೋಷವಾಯಿ... ...ವರು ನನ್ನ ಮೇಲೆ ಕೈ ಮಾಡಬಹುದಿತ್ತು, ಹಾಗೆ ಮಾ... ...ನನ್ನ ರಕ್ಷಕರಿಗೆ ನನ್ನನ್ನು ಕಾರಿಗೆ ಬಿಟ್ಟರು. ಅವರ ...ಡಿದಾಗ ದಕ್ಷಿಣ ಆಫ್ರಿಕಾದ ನನ್ನ ಅನುಭವವು ಅಂ...ನನ್ನನ್ನು ಮುತ್ತಿಗೆ ಹಾಕಿ ಹೊಡೆದ ಅನುಭವವೇ ಆಗು...ವುದೆಂತ ನನಗೆ ತೋರಿತ್ತು.

ಆದರೆ ಭೀತಿಗೆ ಕಾರಣವೇನೂ ಇರಲಿಲ್ಲ. ಯುವಕ... "ಹಿಂತಿರುಗು ಗಾಂಧಿ" 'ಗಾಂಧಿ ತತ್ವವನ್ನು ತಳ್ಳಿ' ಎಂ... ...ಕೂಗುತ್ತಿದ್ದರು. ಭಗತ್‌ಸಿಂಗನನ್ನು ಉಳಿಸಲು ... ಸಾಧ್ಯವಿದ್ದಷ್ಟು ನಾನು ಮಾಡಲಿಲ್ಲವೆಂತ ಅಥವ ನಾ... ...ಹಿಂಸಾ ವಾದಿಯಾದ್ದರಿಂದ ನಾನು ಅವರನ್ನು ಅಲ್ಲಿಗೆ ...ನೆಂತ ಅವರು ಯೋಚಿಸಿದ್ದರಿಂದ ಅವರು ಹಾಗೆ ಮಾಡುವ... ಅವರಿಗೆ ಇತ್ತು. ನನ್ನನ್ನಾಗಲೀ, ಬೇರೆ ಯಾರನ್ನಾಗ... ...ಡಿಸುವ ಯೋಚನೆ ಅವರಿಗೆ ಇರಲಿಲ್ಲ. ಎಲ್ಲರನ್ನೂ ...ದಿಯಲು ಬಿಟ್ಟರು. ಒಬ್ಬ ಬಾಲಕನು ನನಗೆ ಕಪ್ಪು ...ಯ ಹೂವುಗಳನ್ನು ಒಪ್ಪಿಸಿದ. ಅವುಗಳನ್ನು ... ಮೇಲೆ ಎಸೆದು ನನ್ನನ್ನು ಅವಮಾನಪಡಿಸಬಹುದಿತ್ತು. ...ದರೆ ಅಂಥಾ ಉದ್ದೇಶವೇನೂ ಅವನಿಗೆ ಇರಲಿಲ್ಲ. ನನಗೆ ...ಯ ಹೂವುಗಳನ್ನು ಕೊಡುತ್ತಾ ಸಾಧಾರಣ...ವಾಗಿ ನಾನ್ ಅವುಗಳ ವಿಷಯ ಮನಸ್ಸಿಗೆ ತೆಗೆದು ... ...ಪ್ರಿಯ ಸಹೋದರಿಯರಿಂದ ಒಂದಾಗ ಸಹ ... ...ನನ್ನ ಮನೋಭಾವವಾಗಿರುತ್ತದೆ. ಕೆಲವು ... ...ಯಾಕೆ ಹೂವುಗಳನ್ನು ಹಾಳು ಮಾಡುತ್ತೀರೆಂತ ... ...ಬಹುದೂ ಇದೆ. ಆದರೆ ಈ ಹೂವುಗಳನ್ನು ನಾನು ಅಂ...ಕೊಂಡು ಭದ್ರವಾಗಿ ಇಟ್ಟಿದ್ದೇನೆ. ಅವುಗಳನ್ನು ಏ... ...ಮಾಡುತ್ತೇನೆಂಬುದನ್ನು ನಿಮಗೆ ತಿಳಿಸುತ್ತೇನೆ. ಯು... ...ನನ್ನಲ್ಲಿಗೆ ಬಂದು ತಾವು ಸಿಟ್ಟಾಗಬಾರದಿತ್ತೆಂತಲೂ, ನನ್ನ ... ಅವರಿಗಿದ್ದ ಅನುಮಾನಗಳು ನಿಷ್ಕಾರಣವಾದದ್ದಲ್ಲವೆಂತ ...ಹೂವುಗಳನ್ನು ವಾಪಸು ಕೊಡಬೇಕೆಂತಲೂ ಕೇಳಿದರೆ ...ಷದಿಂದ ವಾಪಸು ಕೊಡುತ್ತೇನೆ. ಅವರು ಹಾಗೆ ...ದ್ದರೆ ಹೂವುಗಳನ್ನು [illegible] ...ತ ನೆನಪಿನಂತೆ ಇಟ್ಟಿರಬೇಕೆಂತ ನಿಶ್ಚಯಿಸುತ್ತೇನೆ.

...ಹಾತ್ಮರು ಎಷ್ಟೇ ದೊಡ್ಡವರಿದ್ದರೂ ಇವರು ಹಿಂ...ನಕ್ಕೆ ಕೇಡು ಮಾಡುತ್ತಿದ್ದಾರೆಂತ ಈ ಯುವಕರು ಪ್ರ...ಸಾರಬೇಕೆಂತ ಇದ್ದರು. ನಾನು ದೇಶಕ್ಕೆ ದ್ರೋ...ಡುತ್ತಿದ್ದೇನೆಂತ ಅವರಿಗೆ ತೋರಿದರೆ ನಾನು ಮಾಡುವ ... ಬಹಿರಂಗಪಡಿಸಲು ಅವರಿಗೆ ಹಕ್ಕಿದೆ. ನನ್ನ ರೀತಿ ನೀವು ತಿಳಿಯಬೇಕಾಗಿದೆ. ಈ ಯುವಕರನ್ನು ಪ್ರೀ...ಲೇ ನನ್ನ ಕಡೆಗೆ ತಿರುಗಿಸಿಕೊಳ್ಳಬೇಕಾಗಿರುವುದರಿಂದ ...ಬೇರೆ ದಾರಿಯಿಲ್ಲ. ಖಡ್ಗವನ್ನು ಹಿಡಿದ ವೀರ... ...ವಿರೋಧಿಸುವವರಿಗೆ ಪ್ರೀತಿಯಿಂದ ಸೋಲುವುದೇ ಕೊ... ...ಬೇರೆ ಏನೂ ನನ್ನಲ್ಲಿಲ್ಲ. ಅಂಥಾ ಪ್ರೀತಿಯಿಂದ ಹಾ... ...ಕೊಟ್ಟರೇ ಅವರನ್ನು ನನ್ನ ಸಮೀಪಕ್ಕೆ ಕರೆಕೊಳ್ಳಲು ...ದೆಯಷ್ಟೆ. ಮನುಷ್ಯರೊಳಗೆ ಅನ್ಯೋನ್ಯ, ಪಾಶವೀಯ ಶತ್ರುತ್ವವಿದ್ದೀತೆಂತ ನನಗೆ ಯೋಚಿಸಲೇ ಸಾಧ್ಯವಿಲ್ಲ. ನನಗೆ ಪುನರ್ಜನ್ಮದಲ್ಲಿ ನಂಬಿಕೆ ಇರುವದರಿಂದ ಈ ಜನ್ಮದಲ್ಲಲ್ಲದಿದ್ದರೂ, ಬೇರೆ ಒಂದು ಜನ್ಮದಲ್ಲಾದರೂ ಸಮಸ್ತ ಮನುಷ್ಯ ಜಾತಿಯನ್ನು ಪ್ರೀತಿಯಿಂದ ಅಪ್ಪಿಕೊಳ್ಳುವೆನೆಂಬ ನಿರೀಕ್ಷಣೆಯಲ್ಲಿದ್ದೇನೆ.

ಈ ಚಿಕ್ಕ ಕೃತ್ಯದ ಮೇಲೆ ಇಷ್ಟೊಂದು ಯಾಕೆ ಪ್ರಸಂಗ ಮಾಡಿದೆನೆಂದರೆ—ಈ ಯುವಕರ ಮೇಲೆ ನೀವು ಕೆಟ್ಟ ಅಭಿಪ್ರಾಯ ಮಾಡಬಾರದೆಂಬುದಕ್ಕೆ. ನನ್ನನ್ನು ಕಾಪಾಡಲು ಕುತೂಹಲ ಪಡಬೇಡಿ. ಸರ್ವರನ್ನೂ ಕಾಪಾಡಲು ದೇವರು ಇದ್ದೇ ಇದ್ದಾನೆ. ನನ್ನ ಕಾಲ ಬಂದಾಗ ಯಾವನಿಂದಲೂ ಪ್ರಪಂಚದ ಅತ್ಯಂತ ಪ್ರಖ್ಯಾತ ವೈದ್ಯನಿಂದಲೂ ಸಹ ನನಗೂ, ಮೃತ್ಯುವಿಗೂ ಮಧ್ಯೆ ಬರಲು ಸಾಧ್ಯವಿಲ್ಲವೆಂತ ನೀವು ನಂಬಬಹುದು.

ಯುವಕರಿಗೆ ಒಂದು ಬುದ್ಧಿ ಮಾತು. ನನ್ನ ಸೇವೆ ಬೇಕಾದರೆ ನನ್ನನ್ನು ದೂರ ಮಾಡಬೇಡಿ. ನನ್ನಲ್ಲಿಗೆ ಬಂದು ನನ್ನಿಂದಲೇ ತಿಳಿಯ ಬೇಕಾದ್ದೆಲ್ಲವನ್ನೂ ತಿಳಿದುಕೊಳ್ಳಿ. ಕೊಲೆ ಪಾತಕ, ಕಳ್ಳ ಅಥವಾ ದರೋಡೆ ಮಾಡುವವನಾದರೂ ಶಿಕ್ಷಿಸುವುದು ನನ್ನ ಧರ್ಮಕ್ಕೆ ವಿರೋಧವೆಂತ ತಿಳಿಯಿರಿ. ಆದ್ದರಿಂದ ಭಗತ್‌ಸಿಂಗನನ್ನು ಉಳಿಸಬೇಕೆಂತ ನನಗಿರಲಿಲ್ಲವೆಂಬ ಸಂಶಯಕ್ಕೆ ಕಾರಣವೇ ಇಲ್ಲ. ಆದರೆ ಭಗತ್‌ಸಿಂಗನ ತಪ್ಪನ್ನು ನೀವು ತಿಳಿಯಬೇಕು. ಭಗತ್‌ಸಿಂಗ್ ಮತ್ತು ಅವನ ಜೊತೆಗಾರರೊಡನೆ ಸಂಭಾಷಿಸಲು ನನಗೆ ಅವಕಾಶ ದೊರೆತಿದ್ದರೆ ಅವರು ಹಿಡಿದ ದಾರಿಯು ತಪ್ಪೆಂತಲೂ, ವಿಪ್ಲವೋದ್ಯಮ [illegible] ಜನವಾದದ್ದೆಂತಲೂ ಅವರಿಗೆ ಹೇಳುತ್ತಿದ್ದೆ. ಕತ್ತಿಯ ಹಿಂಸೆ... ರಾದ ಕೋಟ್ಯಂತರ ಬಡಜನರು, ಕಿವುಡ ಮೂಗರು, ಕುಂಟು ಕುರುಡರಿಗೆ ಬೇಕಾದ ಸ್ವರಾಜ್ಯವನ್ನು ಖಡ್ಗದಿಂದ ಪಡೆಯಲು ಸಾಧ್ಯವಿಲ್ಲವೆಂತ ನಾನು ಪ್ರಕಟಿಸಬೇಕಾಗಿದೆ. ದೇವರ ಮುಂದೆ ಪ್ರಮಾಣ ಮಾಡಿ ಹಿಂಸಾಮಾರ್ಗದಿಂದ ಸ್ವರಾಜ್ಯ ದೊರಕುವುದಿಲ್ಲವೆಂತಲೂ, ಹಿಂಸಾಮಾರ್ಗದಿಂದ ಕ್ಷೋಭೆ ಉಂಟಾಗುತ್ತದೆಯೆಂತಲೂ ನಾನು ತಿಳಿಸಬೇಕಾಗಿದೆ. ಮಗನಿಗೆ ಬುದ್ಧಿ ಹೇಳುವ ತಂದೆಗೆ ಇರುವ ಅಧಿಕಾರದಿಂದ ಈ ಯುವಕರಿಗೆ ಹಿಂಸೆಯಿಂದ ಪೂರ್ಣ ಹಾನಿಯೇ ಉಂಟಾಗುತ್ತದೆಯೆಂತ ತಿಳಿಸುತ್ತೇನೆ. ಯಾಕೆಂತ ಕೇಳಿ. ಈ ಕಳೆದ ಹೋರಾಟದಲ್ಲಿ ತಮಗೆ ಗೌರವವನ್ನು ಸಂಪಾದಿಸಿಕೊಂಡ ಸ್ತ್ರೀಯರೂ, ಮಕ್ಕಳೂ, ಹಿಂಸಾಮಾರ್ಗವನ್ನು ನಾವು ಅವಲಂಬಿಸಿದ್ದರೆ ಅವರು ಗೌರವವನ್ನು ಪಡೆಯಲು ಸಾಧ್ಯವಾಗುತ್ತಿತ್ತೋ? ಅವರು ಈ ದಿನ ಇಲ್ಲಿ ಇರುತ್ತಿದ್ದರೋ? ಪ್ರಪಂಚದಲ್ಲೆಲ್ಲಾ ಅತಿ ವಿನಯದಿಂದ ಕೂಡಿದವರೆನ್ನಿಸಿಕೊಂಡ ನಮ್ಮ ಮಹಿಳೆಯರು, ತಮ್ಮ ಬಿಳೀ ಸೀರೆಯೆಲ್ಲಾ ರಕ್ತದಿಂದ ನೆನೆದು ಹೋಗುವ ವರೆಗೂ ದೊಣ್ಣೆ ಪೆಟ್ಟು ತಿಂದ ಗಂಗಾಬೆನ್ ಎಂಬಂಥ ಸಾಧ್ವೀಮಣಿಗಳಿಂದವರು ಮಾಡಿದಂಥ ಅಪಾರ ಸೇವೆಯನ್ನು ನಾವು ಹಿಂಸಾಮಾರ್ಗವನ್ನು ಹಿಡಿದಿದ್ದರೆ ಮಾಡಲು ಸಾಧ್ಯವಿತ್ತೋ? ಅವರೂ ಮತ್ತು ಅವರ ಸಹೋದರಿಯರೂ ತಮ್ಮ ಬಾಯಿಯಲ್ಲಿ ದೇವರ ನಾಮವನ್ನು ಉಚ್ಚರಿಸುತ್ತಾ ತಮ್ಮನ್ನು ಹಿಂಸಿಸುವವರಿಗೆ ಬೆದರದೆಯೂ, ಲಾಠಿ ಪ್ರಹಾರಗಳಿಗೆ [illegible] ಎದೆ ಕೊಟ್ಟರು. ನಮ್ಮ ಮಕ್ಕಳು, ವಾನರ ಸೇನೆಯವರು, ತಮ್ಮ ಆಟಗಳನ್ನು, ಗಾಳಿಪಟಗಳನ್ನು, ಪಟಾಕಿಗಳನ್ನೂ ಬಿಟ್ಟು ಕೆಲಸ ಮಾಡಿದರು. ಈ ಸಾವಿರಾರು ಬಾಲಕರನ್ನು ಹಿಂಸಾಯುಕ್ತವಾದ ಸೈನ್ಯದಲ್ಲಿ ಸೈನಿಕರಾಗಿ ಸೇರಿಸಿಕೊಳ್ಳಲು ಸಾಧ್ಯವಿತ್ತೇ? ಕೋಟಿಗಟ್ಟಲೆ ಜನರನ್ನೂ ಸ್ತ್ರೀಯರನ್ನೂ, ಬಾಲಕರನ್ನೂ ಸಿಪಾಯಿಗಳಾಗಿ ಸೇರಿಸಿಕೊಳ್ಳಲು ಸಾಧ್ಯವಾದದ್ದೇ ನಾವು ಅಹಿಂಸಾ ರೀತಿಯನ್ನು ಕೈಕೊಂಡದ್ದರಿಂದ. ಯುವಕರು ತಾಳ್ಮೆಯನ್ನೂ, ಆತ್ಮ ಸಂಯಮವನ್ನೂ ತಾಳಬೇಕೆಂತ ಕೇಳಿಕೊಳ್ಳುತ್ತೇನೆ. ಸಿಟ್ಟಿನಿಂದ ನಾವು ಮುಂದರಿಸಿ ಹೋಗುವುದಿಲ್ಲ. ಇಂಗ್ಲಿಷರನ್ನು ನಮ್ಮ ಶತ್ರುಗಳನ್ನಾಗಿ ಭಾವಿಸಬೇಕಾಗಿಲ್ಲ. ಅವರ ಮೇಲೆ ಸತ್ಯಾಗ್ರಹವನ್ನು ಉಪಯೋಗಿಸಿದ್ದೇನೆ ಆದರೆ ಅವರನ್ನು ನಮ್ಮ ಶತ್ರುಗಳನ್ನಾಗಿ ಭಾವಿಸಲಿಲ್ಲ. ಅವರ ಮನಸ್ಸನ್ನು ತಿರುಗಿಸಬೇಕೆಂತ ಇದ್ದೇನೆ. ಇದಕ್ಕೆ ಪ್ರೀತಿಯೊಂದೇ ದಾರಿ. ಪುಂಡತನದಿಂದ ಕೂಡಿದ ಗದ್ದಲಗಳಿಂದ ನಮಗೆ ಸಹಾಯವಿಲ್ಲ. ಅದರಿಂದ ಭಗತ್‌ಸಿಂಗನನ್ನು ಪುನಃ ಜೀವಕ್ಕೆ ತರಲು ಸಾಧ್ಯವಿದೆಯೋ? ಸ್ವರಾಜ್ಯದ ಬರುವಿಕೆಯನ್ನು ದೂರ ಮಾಡಬಹುದಷ್ಟೆ. ಸರಕಾರವು ಕೋಪೋದ್ರೇಕಕ್ಕೆ ಬೇಕಾದಷ್ಟು ಕಾರಣ ಕೊಟ್ಟಿದೆಯೆಂತ ನಾನು ಒಪ್ಪುತ್ತೇನೆ. ಆದರೆ ಯುವಕರು ಮನಃಪೂರ್ತಿಯಾಗಿ ಅಹಿಂಸಾಯುಕ್ತವಾದ ಹೋರಾಟದಲ್ಲಿ ಸೇರಬೇಕೆಂತ ಬೇಡಿಕೊಳ್ಳುತ್ತೇನೆ. ಅಹಿಂಸೆಯನ್ನು ನಲವತ್ತು ವರ್ಷಗಳಿಂದ ಉಪಯೋಗಿಸಿದ ನನ್ನ ಅನುಭವದಲ್ಲಿ ಭರವಸೆ ಇಡಬೇಕೆಂತ ಕೇಳಿಕೊಳ್ಳುತ್ತೇನೆ.

ಅವರು ಒಪ್ಪದಿದ್ದರೆ ಅವರು ಗಾಂಧಿಯನ್ನು ಕೊಲ್ಲಬಹುದು, ಆದರೆ ಗಾಂಧಿ ತತ್ವವನ್ನು ಕೊಲ್ಲಲಾರರು. ಸತ್ಯವನ್ನು ಕೊಲ್ಲಬಹುದಾದರೆ ಗಾಂಧಿ ತತ್ವವನ್ನು ಕೊಲ್ಲಬಹುದು. ಅಹಿಂಸೆಯನ್ನು ಕೊಲ್ಲಬಹುದಾದರೆ ಗಾಂಧಿ ತತ್ವವನ್ನು ಕೊಲ್ಲಬಹುದು. ಗಾಂಧಿ ತತ್ವವೇನು, ಸತ್ಯದಿಂದಲೂ, ಅಹಿಂಸೆಯಿಂದಲೂ ಸ್ವರಾಜ್ಯವನ್ನು ಪಡೆಯುವುದೇ ಗಾಂಧಿ ತತ್ವ. ಸತ್ಯ ಮತ್ತು ಅಹಿಂಸಾ ಮಾರ್ಗದಿಂದ ಪಡೆದ ಸ್ವರಾಜ್ಯವನ್ನು ಬೇಡವೆನ್ನುತ್ತೀರೋ? ಹಿಂದೂ ದೇಶದ ಕೆಲಸಗಾರರು ಮಾಡಿದ ಅದ್ಭುತ ಕಾರ್ಯವನ್ನು ಕೆಡಿಸಬೇಡಿ ಎಂತ ಕೇಳಿಕೊಳ್ಳುತ್ತೇನೆ. ರೈತರಿಗೂ, ಕಾರ್ಮಿಕರಿಗೂ, ಕೂಲಿಗರಿಗೂ—ಇವರೆಲ್ಲರೂ ಬಲಕೇ ಇಲ್ಲಿ ಕೆಲಸ ಮಾಡಿದವರು—ಕುರುಡರಿಗೂ, ಕುಂಟರಿಗೂ, ಕಿವುಡು ಮೂಕರಿಗೂ, ಅಸ್ಪೃಶ್ಯರಿಗೂ, ಬಡಬಗ್ಗರಿಗೂ ಬೇಕಾದ ಸ್ವರಾಜ್ಯವು ಶೀಘ್ರದಲ್ಲೇ ದೊರಕಲಿ ಎಂತ [illegible] ಕೆಲಸ ಮಾಡಿ ಕಾಂಗ್ರೆಸ್ ನಗರವನ್ನು ಕಟ್ಟಿದರು.

ಕಾನ್‌ಪುರದಲ್ಲಿ ನಡೆದ ರಕ್ತಪಾತದ ವಿಷಯ ಕೆಲವು ಮಾತು ಹೇಳಬೇಕಾಗಿದೆ. ಆ ದಂಗೆಯು ಹೇಗೆ ಸಾಧ್ಯವಾಯಿತೆಂದರೆ ಪರಸ್ಪರ ಅನ್ಯೋನ್ಯ ಹಿಂಸೆಯನ್ನೇ ಮನಸ್ಸಿನಲ್ಲಿ ಬೆಳೆಸಿಕೊಂಡದ್ದರಿಂದ. ಅದು ಗೋಡೆಯ ಮೇಲೆ ಬರೆದಿಟ್ಟಂತೆಯೇ ಸರಿ. ಕೆಲವು ಪಟ್ಟಣ ಅಹಿಂಸೆಯಿಂದ ವರ್ತಿಸಲು ಸಾಧ್ಯವೆಂತ ನಿದರ್ಶನವಾದರೂ, ನಮ್ಮ ಹೃದಯದೊಳಗೆ ಹಿಂಸೆಯನ್ನು ಬೆಳೆಸಿಕೊಂಡಿದ್ದೇವೆ. [illegible] ತಕ್ಕೀರು ಮಾಡಿದ್ದೇವೆ. ಭಗತ್‌ಸಿಂಗನ ಆತ್ಮತ್ಯಾಗದಿಂದ ಕಾನಪುರದ ಹಿಂದುಗಳಿಗೆ ಹುಚ್ಚು ಹಿಡಿಯಿತೆಂತಲೂ, ಭಗತ್‌ಸಿಂಗರನ್ನು ಗೌರವಿಸಲಿಕ್ಕಾಗಿ ಅಂಗಡಿ ಮುಚ್ಚದ ಮುಸಲ್ಮಾನರ ಮೇಲೆ ಬಿದ್ದರೆಂತಲೂ ಪತ್ರಿಕೆಗಳು ಹೇಳುತ್ತವೆ. ಆ ವೇಳೆ [illegible] ತೀರಿದೆ. [illegible] ಗವರ್ಣರು [illegible] ನಡೆಯುತ್ತಿರುವುದನ್ನು [illegible] ಗೌರವವೂ ಆದೀತೆ? ಬದಲು ಹಿಂಸೆ ಎಲ್ಲ [illegible] ನನ್ನ [illegible] ಕೇಳಿದ್ದೇನೆ. ಅವರು ನಾನು ಹೀಗೆ ಹೇಳುವುದು ಏನೆಲ್ಲಾ ಅತ್ಯಾಚಾರ ನಡೆದಿದ್ದೇವೆ? ಹೆಂಗಸರನ್ನು ಅವರ ಮಾನ ಕೆಡಿಸಿದ್ದೇವೆ. ಮಕ್ಕಳನ್ನು ಕೊಂದಿದ್ದೇವೆ. [illegible] ಮಕ್ಕಳನ್ನೂ ಹಿಂದೂಗಳಾದರೂ [illegible] ಯಾವ ಮುಸಲ್ಮಾನನಾದರೂ ವ್ಯಕ್ತಿಗಳು [illegible] ಧರ್ಮವಾಗಿರಲಿ [illegible] ನನಗೆ ಗೊತ್ತಿಲ್ಲ. ಹಿಂದುಗಳಿಗೆ [illegible] ಒಪ್ಪಬೇಕು [illegible] ಅವರು ಒಂದೇ [illegible] ಮಕ್ಕಳಾಗಿದ್ದರು. ಈ ರಕ್ತಪಾತದ [illegible] ನನಗೆ [illegible] ನಾಚಿಕೆಯಾಗಿದೆ. ಇಂಥಾ ಕಾರ್ಯಗಳನ್ನು ಎಂದೂ ನನಗೆ ಸಹಿಸಲಸಾಧ್ಯ. [illegible] ತಿಳಿಸಬೇಕೆಂತ ಇದ್ದೇನೆ. ಹಿಂದು ಮುಸಲ್ಮಾನರ ಅನ್ಯೋನ್ಯ ಕಾಲೆಗೆ ಈ [illegible] ನಾವು ಅಹಿಂಸಾವಾದಿಗಳಾಗಿಯೇ ಇದ್ದೇವೆಂತ ಹೇಗೆ ಹೇಳುವುದು? ಈ ಹಿಂಸೆಯ [illegible] ಹುಟ್ಟುತ್ತಿದ್ದರೆ [illegible] ನಾನು ನನ್ನ ಜನಾಂಗವೇ ಅಹಿಂಸಾ ಯುಕ್ತವಾದದ್ದೆಂತ ಹೇಗೆ ನಂಬಲಿ? ಹಾಗೆ ನಂಬಿದರೆ ನನಗೆ ನಾನೇ ವಂಚನೆ ಮಾಡಿಕೊಂಡಂತಾಗುತ್ತದೆ. ನನ್ನ ಸೃಷ್ಟಿಕರ್ತನನ್ನು ವಂಚಿಸಿದಂತಾಗುತ್ತದೆ. ನನ್ನ ಸತ್ಯ ವ್ರತ್ಯವೂ ಕೆಡದಾಗ, ಬದಲಾಗ ನಡೆಯುತ್ತಿರುವಾಗ್ಗೆ ನಾನೂ ಏನೂ ತಿಳಿಯದವನಂತೆ ಇರಲು ಹೇಗೆ ಸಾಧ್ಯವಾದೀತು? ಜೀವವನ್ನಿಟ್ಟುಕೊಳ್ಳುವುದು ಅಸಾಧ್ಯವೆಂತ ತೋರಿದಾಗ ಈ ಕೊಲೆ ಪಾತಕವನ್ನು ನೋಡುತ್ತಿರುವುದಕ್ಕಿಂತ ಉಪವಾಸ ಮಾಡಿ ಪ್ರಾಣತ್ಯಾಗ ಮಾಡಲು ಧೈರ್ಯ ಬರಬೇಕೆಂತ ನಿರೀಕ್ಷಿಸುತ್ತೇನೆ. ಚೆನ್ನಾಗಿ ತಿಳಿದು ದೇವರ ಹೆಸರನ್ನು ಹೇಳಿ ಮಾಡಿದ ಪ್ರತಿಜ್ಞೆಗಳಿಗೆ ವಿರೋಧವಾಗಿ ವರ್ತಿಸುವುದನ್ನು ನಾನು ಸಹಿಸಲಾರೆನೆಂತ ಇಷ್ಟರಲ್ಲೇ ನಿಮಗೆ ತಿಳಿದಿರಬಹುದು. ವ್ಯಾಪಾರಿಗಳೂ ಮತ್ತು ಇತರರೂ ಮಾಡಿದ ಪ್ರತಿಜ್ಞೆಗೆ ವಿರೋಧವಾಗಿ ವರ್ತಿಸಿದ್ದನ್ನು ನೋಡುವುದಕ್ಕಿಂತ ಕಾಂಗ್ರೆಸ್ಸಿಗೆ ಸೇರಿದವರೆನ್ನಿಸಿಕೊಂಡು ಕಾಂಗ್ರೆಸ್ ಪ್ರತಿಜ್ಞೆ ಮಾಡಿಯೂ, ಅದನ್ನು ವಿರೋಧವಾಗಿ ಮನಸ್ಸಿನಿಂದಾಗಲೀ, ಬಹಿರಂಗದಲ್ಲಾಗಲೀ ವರ್ತಿಸುವುದನ್ನು ನೋಡುವುದಕ್ಕಿಂಥ ಸಾಯುವುದೇ ಲೇಸು. ಈ ತರಹದ ವಿರೋಧ ವರ್ತನೆಯನ್ನು ನಾನು ಸಮಾಧಾನದಿಂದ ನೋಡುತ್ತಿದ್ದರೆ ಪ್ರಪಂಚದ ಮುಂದೆಯೂ, ದೇವರ ಮುಂದೆಯೂ ಹೇಗೆ ಮುಖ ತೋರಿಸಲಿ? ನೀನು ಸುಳ್ಳು, ಮೋಸ, ಕಪಟಯುಕ್ತ ಜೀವನವನ್ನು ಮಾಡುತ್ತಿದ್ದೀ ಎಂತ ದೇವರು ಹೇಳಿಯಾನು. ನನ್ನನ್ನು, ಪ್ರಪಂಚವನ್ನು ವಂಚಿಸಿದಾತ. ಸತ್ಯದಿಂದಲೂ, ಅಹಿಂಸೆಯಿಂದಲೂ ಸ್ವರಾಜ್ಯವನ್ನು ಸಂಪಾದಿಸಲಿಕ್ಕಾಗಿಯೇ ನನ್ನ ಜೀವನದ ಪ್ರತಿಯೊಂದು ನಿಮಿಷವನ್ನು ಅರ್ಪಿಸಿರುತ್ತೇನೆ.

ಈ ತರದ ವರ್ತನೆಯು ಅನೇಕ ವರ್ಷಗಳಿಂದ ನಡೆಯುತ್ತಿದೆ ಯಾದರೂ ನಾನು ಏನು ಮಾಡಲಿಲ್ಲವೆಂತ ನೀವು ಹೇಳಿರಿ ಎಂತ ನನಗೆ ಗೊತ್ತಿದೆ. ನನ್ನ ತಪಶ್ಚರ್ಯೆಗಳು ಏನೂ ಬಾಹ್ಯ ವರ್ತನೆಯಲ್ಲ. ನನ್ನ ಮನಸ್ಸಾಕ್ಷಿಯು ಈತನನ್ನು ಬೇಕೆಂತ ಹೇಳಿದಾಗ ಅದನ್ನು ಪ್ರಕಟಿಸಿದೆ. ಕೆಲವು ದಿನಗಳಿಂದ ನನ್ನೊಳಗೆ ಆಗುತ್ತಿರುವ ಯೋಚನೆಗಳನ್ನು ನಿಮಗೆ ತಿಳಿಸುವುದಾಗಿದೆ. ನನಗೆ ಸುಮ್ಮನೆ ಗಲಿಬಿಲಿಯಾದ್ದರಿಂದಲಾಗಲೀ, ಇದ್ದದ್ದನ್ನು ಒಪ್ಪಿಕೊಳ್ಳಲಿಕ್ಕೆ ಧೈರ್ಯವಿಲ್ಲವೆಂತಾಗಲೀ ಅಂತಿಮ ತಪಶ್ಚರ್ಯೆಯು ಬರಲಾರದು. ನನ್ನ ಸೃಷ್ಟಿಕರ್ತನಿಗೆ ಸತ್ಯವಂತನಾಗಬೇಕ, ಜೀವವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲವೆಂತ [illegible] ನನ್ನಲ್ಲಿ ತೋರಿಬಂದಿದೆಯೆಂತಾಗುವುದು. ನನ್ನ ದೇಶವು ಜನರಿಗೆ ಆದರ್ಶವಾಗಿಲ್ಲವೆಂತಾದ ಮೇಲೆ, ನಿಜವಾದ ದಾರಿಯನ್ನು ಕಂಡು ಹಿಡಿಯಲು ನನ್ನ ನೇತೃತ್ವ ಶಕ್ತಿಯಿಂತಾದ ಮೇಲೆ ಮನಃಪೂರ್ತಿಯಾಗಿ ದೇಹವನ್ನು ಅರ್ಪಿಸುವುದಕ್ಕಿಂತ ಬೇರೆ ಪ್ರಾಯಶ್ಚಿತ್ತವೇನಿದೆ?

ಅಖಿಲಭಾರತ ಸಹಕಾರಿ ಸಂಸ್ಥೆಗಳ ಪರಿಷತ್ತಿನಲ್ಲಿ ಸರ್ ಲಲ್ಲೂಭಾಯಿ ಸಮಲ್‌ದಾಸರು ಮಾಡಿದ ಭಾಷಣದಿಂದ.

(2ನೇ ಪುಟದಿಂದ ಮುಂದುವರಿದದ್ದು.)

ಜನೆ ಮುಂತಾದ ಗುಣಗಳಿರುವ ಸಹಕಾರಿಗಳು ಸೇರಲಾರರು. ಯಾಕಂದರೆ—ಅಂಥಾ ಜನರು ತಮ್ಮ ಧ್ಯೇಯವನ್ನೂ, ಕಾರ್ಯಕ್ರಮವನ್ನೂ ಎಷ್ಟೇ ಶಕ್ತಿ ಇರುವವನಾದರೂ ಒಬ್ಬ ಅಧಿಕಾರಿಯು ನಿರ್ಣಯಿಸಲಿಕ್ಕೆ ಒಪ್ಪಲಾರರು. ಇಂಥಾ ಅಧಿಕಾರಿಗಳು ಚಳವಳಕ್ಕೆ ಸೇರಿದವರಲ್ಲ. ಇಲಾಖೆಗೆ ಹೊಸಬರು. ಬೇರೆ ಇಲಾಖೆಗೆ ವರ್ಗವಾಗಿ ಹೋಗುವ ಸಂಭವವಿದೆ. ಸಹಕಾರದಲ್ಲಿ ಏನೂ ಅನುಭವವಿಲ್ಲದ ಐ. ಸಿ. ಯಸ್. ಮತ್ತು ಇತರ ಅಧಿಕಾರಿಗಳನ್ನು ನೇಮಿಸುವ ವಿಷಯದಲ್ಲಿ ಟೀಕಿಸಲು ಇದು ಸಮಯವಲ್ಲ. ಅನೇಕ ಪ್ರಾಂತ್ಯಗಳಲ್ಲಿ ಹೊಸ ಸಹಕಾರಿಗಳು ಯಾಕೆ ಮುಂದೆ ಬರುವುದಿಲ್ಲವೆಂತಲೂ, ಚಳವಳಕ್ಕೆ ಹೊಸ ಕಳೆ ಯಾಕೆ ಕೂಡುವುದಿಲ್ಲವೆಂತಲೂ ರಾಷ್ಟ್ರಸೇವೆಯ ಕುತೂಹಲವಿರುವ ಯುವಕರು ಯಾಕೆ ಸೇರುವುದಿಲ್ಲವೆಂತಲೂ, ರಿಜಿಸ್ಟ್ರಾರರುಗಳು ವಿಷಾದಿಸುತ್ತಾರೆ. ಇದಕ್ಕೆ ಕಾರಣ ಒಟ್ಟು ಚಳವಳವೇ ಒಬ್ಬ ರಿಜಿಸ್ಟ್ರಾರನನ್ನು ಅನುಸರಿಸಿ ಸುತ್ತಿಕೊಂಡಿರುವದರಿಂದ. ಈ ಚಳವಳವು ಯುವಕರ ಅಧೀನದಲ್ಲಿರಬೇಕು. ಈಗ 12 ತಿಂಗಳ ಅನುಭವದಿಂದ ಯುವಕರು ರಾಷ್ಟ್ರಕ್ಕಾಗಿ, ಬಡ ಸಹೋದರರಿಗಾಗಿ ಕೆಲಸ ಮಾಡಲಿಕ್ಕೂ, ತ್ಯಾಗ ಮಾಡಲಿಕ್ಕೂ ತಯಾರಿಲ್ಲವೆಂತ ಯಾರೂ ಹೇಳುವಹಾಗಿಲ್ಲ. ರಾಜಕೀಯ ಸುಧಾರಣೆಯು ಸಂಘಗಳನ್ನು ಬುದ್ಧಿವಂತಿಕೆಯಿಂದ, ಧರ್ಮ ರೀತಿಯಿಂದ ಸುಧಾರಿಸಿಕೊಳ್ಳುವ ಕಾರ್ಯಕ್ಕೆ ಪೀಠಿಕೆಯಾಗಿರಬೇಕಷ್ಟೆ. ಈ ಚಳವ ಉದ್ದೇಶ ಗದ್ದೆಗಳಲ್ಲೂ, ಕಾರ್ಖಾನೆಗಳಲ್ಲೂ ಕೆಲಸ ಮಾಡುವ ಕೋಟ್ಯಾಂತರ ಜನರಿಗೆ ಸುಖ ಸಂತೋಷವನ್ನುಂಟುಮಾಡುವುದೇ ಆಗಿದೆ. ಸಹಕಾರ ಚಳವಳದಿಂದ ಪ್ರತಿಯೊಬ್ಬ ಮನುಷ್ಯನ ಗೌರವವು ಹೆಚ್ಚಿ ಎಲ್ಲರ ಸಂಸಮಾನತ್ವಕ್ಕೆ ಬರುತ್ತಾನೆ. ನಮ್ಮ ಆರ್ಥಿಕ ರಚನೆಯೇ ಸಹಕಾರ ಸುಖಕ್ಕಾಗಿ ಆಗಬೇಕು. ಹಿಂದೂಸ್ಥಾನಕ್ಕೆ ಸಹಕಾರಿ ಚಳವಳವನ್ನು ಯುಕ್ತರೀತಿಯಿಂದ ಹಬ್ಬಿಸಿ ಅದರ ಮೇಲ್ವಿಚಾರವು ಜನಪ್ರಿಯವಾದಂಥ ಫೆಡರೇಶನ್‌ಗಳಿಗೆ ಕೊಡಬೇಕೆಂತ ಕೇಳಿಕೊಳ್ಳುತ್ತೇನೆ. ನಮ್ಮ ದೇಶದ ಸಂಸ್ಕೃತಿಗೆ ತಕ್ಕಂತ ಶಾಶ್ವತವಾದ ನಾಗರೀಕತೆ ಬೆಳೆಸಲು ಸಹಕಾರವೊಂದೇ ದಾರಿ ಎಂತ ನಾನು ನಂಬುತ್ತೇನೆ.

1931—1932 ರ ಡಿಸ್ಟ್ರಿಕ್ಟ ಬೋರ್ಡಿನ ಬಡ್ಜೆಟ್ ಮೀಟಿಂಗ್.

ಡಿಸ್ಟ್ರಿಕ್ಟ ಬೋರ್ಡಿನ ಬಡ್ಜೆಟ್ ಮೀಟಿಂಗು (1931—32) ಕಳೆದ ಮಾರ್ಚ ತಿಂಗಳು 31ನೆ ತಾರೀಕಿನ ದಿನ ಮಡಿಕೇರಿ ಕೌನ್ಸಿಲ್ ಹಾಲಿನಲ್ಲಿ ಕಮಿಶನರ್ ಸಾಹೇಬರವರ ಅಧ್ಯಕ್ಷತೆಯಲ್ಲಿ ನಡೆಯಿತು. ಎಲ್ಲಾ ಡಿ. ಬಿ ಮೆಂಬರುಗಳೂ ಹಾಜರಿದ್ದರು 1931—32 ರ ಡಿ. ಬಿ. ಬಡ್ಜೆಟ್ ಚರ್ಚಿಸಿದಲ್ಲಿ ಉತ್ಪತ್ತಿ ಈ ವರ್ಷದ್ದು 1,58,265/ ಆಗಿದೆ. ಈ ವರ್ಷದ ಖರ್ಚು 1,78,650 ಆಗುತ್ತೆ. ಆದರೆ ಕಳೆದ ವರ್ಷದ ಕೆಲವು ಕೆಲಸಗಳು ಈಗ ಅರ್ಧ ತೀರಿ ಅರ್ಧ ಮುಂದುವರಿಯುವದರಿಂದ ಕಳೆದ ವರ್ಷ ಸ್ಯಾಂಕ್ಷನ್ ಮಾಡಿದ ಹಣ 13,480/ ಇರುವುದರಿಂದ ಇದನ್ನು ಬಿಟ್ಟು ಬಾಕಿ ಈ ವರ್ಷದ ಬಡ್ಜೆಟ್ 6915/ ರೂಪಾಯಿ ಉತ್ಪತ್ತಿಗಿಂತ ಖರ್ಚು ಜಾಸ್ತಿಯಾಗಿದೆ. ಈ ಬಾಬಿನಲ್ಲಿ ವಿದ್ಯಾ ಇಲಾಖೆಗೂ, ಗ್ರಾಮಗಳ ಒಳಗೆ ತೆಗೆದುಕೊಂಡು ಹೋಗುವ ವಿಲೇಜ್ ಕಮ್ಯೂನಿಕೇಶನ್ ರೋಡುಗಳು ಕಳೆದ ಮೂರು ವರ್ಷಗಳಿಂದ ತುಂಬಾ ಹಣ ಖರ್ಚು ಮಾಡುತ್ತಲಿದ್ದಾರೆ. ಈ ವರ್ಷವೂ, ಇವೆರಡಕ್ಕೆ ಜಾಸ್ತಿ ಹಣ ಸ್ಯಾಂಕ್ಷನ್ ಮಾಡಿದ್ದಾರೆ. ಈ ವಿಷಯದಲ್ಲಿ ಬೋರ್ಡಿನವರಿಗೆ ಪ್ರಜೆಗಳು ವಂದಿಸಲು ಸಂತೋಷ ಪಡುತ್ತಾರೆ. ಕಳೆದ ವರ್ಷ ಪ್ರೊವಿನ್ಸಿಯಲ್ ಗವರ್ನಮೆಂಟಿನಿಂದ 23,000/ ರೂ. ಬೋರ್ಡಿಗೆ ಸಿಕ್ಕಿದೆ ಈ ವರ್ಷದಲ್ಲಿ ಪ್ರೋವಿನ್ಸಿಯಲ್ ಗವರ್ನಮೆಂಟಿನಿಂದ ಏನೂ ಯಾವಾಗಲೂ ಸಿಕ್ಕುವ ಗ್ರ್ಯಾಂಟಲ್ಲದೆ ಎಕ್ಸ್‌ಟ್ರಾ ಗ್ರ್ಯಾಂಟು ಏನೂ ಕಾಣುವುದಿಲ್ಲ. ಆದರೆ ಕಳೆದ ಕೌನ್ಸಿಲ್ ಬಡ್ಜೆಟ್ ಮೀಟಿಂಗಿನಲ್ಲಿ ಕುಡಿಯುವ ನೀರಿನ ಕಷ್ಟ ನಿವಾರಣೆ ಬಗ್ಗೆ ಹಳ್ಳಿ ಗ್ರಾಮಸ್ಥರಿಗೆ ರೆವಿನ್ಯೂ ಇಲಾಖೆ ಮೂಲಕ ಒಳ್ಳೇ ಕುಡಿಯುವ ನೀರಿಗೋಸ್ಕರ ಪ್ರತಿ ವರ್ಷವೂ 5,000/ ರೂ. ಕುಡಿಯುವ ನೀರಿಗೆ ಪ್ರತ್ಯೇಕವಾಗಿ ಹೆಚ್ಚಿನ ಗ್ರ್ಯಾಂಟು ಪ್ರೊವಿನ್ಸಿಯಲ್ ಗವರ್ನಮೆಂಟಿನಿಂದ ಕೊಡಬೇಕೆಂದು ಮೆ. ಪಾಲೆಕಂಡ ತಿಂಗಪ್ಪನವರು ತಂದ ಠರಾವನ್ನು ಫೈನಾನ್ಸ್ ಮೆಂಬರು ಒಪ್ಪಿಕೊಂಡದ್ದಕ್ಕೆ ಪ್ರಕೃತ ಸರಕಾರಕ್ಕೆ ವಂದಿಸ ಬೇಕಾಗಿದೆ. ಮೇಲ್ಕಂಡ ವಿದ್ಯಾ ಇಲಾಖೆಗೂ, ಗ್ರಾಮಗಳ ರಸ್ತೆಗಳ, ಪ್ರೋತ್ಸಾಹಿಸುವ ಹಾಗೆ ಬೋರ್ಡಿನವರು ಕುಡಿಯುವ ನೀರಿಗೂ ತುಂಬಾ ನಿಗಾ ಕೊಟ್ಟು, ಎಲ್ಲೆಲ್ಲಿ ತುಂಬಾ ನೀರಿನ ತೊಂದರೆಯೋ, ಅಲ್ಲಲ್ಲಿ ಹೊಸ ಬಾವಿ ತೋಡಿಸುವುದಕ್ಕೆ ಪ್ರಯತ್ನಿಸ ಬೇಕೆಂದು ಕೋರಿಕೆ.

ಕಳೆದ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಪಾಸಾದ ಠರಾವುಗಳು:—

2. ಕೊಟ್ಟಮುಡಿ ದೋಣಿ ಕಂಟ್ರಾಕ್ಟಿಗೆ 37-8-0 ರೂ ಹೊಳೆಯಲ್ಲಿ ನೀರಿಲ್ಲದೆ ದೋಣಿ ಬಿಡಲು ಸಾಧ್ಯವಾಗದ್ದರಿಂದ ಕಂಟ್ರಾಕ್ಟು ಹಣದಲ್ಲಿ ಮಾಫು ಮಾಡಿದೆ.

3. ಗ್ರಾಮಗಳ ರಸ್ತೆಗಳನ್ನು ಕೋ-ಆಪರೇಟಿವ್ ಯೂನಿಯನ್ ಸೊಸೈಟಿಗಳ ಮೂಲಕ ಮಾಡಿಸ ಬೇಕೆಂದು ಠರಾವು ಪಾಸಾಯಿತು.

4. ಪೊನ್ನಂಪೇಟೆ ಬೀದಿಗೆ ಒಂದು ಹೆಚ್ಚಿನ ದೀಪ ಕೊಡಬೇಕೆಂದು ಪಾಸಾಯಿತು.

5 ಬೇತರಿ ಹೊಳೆ ದೋಣಿ ಕಂಟ್ರಾಕ್ಟದಾರನಿಗೆ ದೋಣಿ ಸರಿಯಿಲ್ಲದೆ ಕಂಟ್ರಾಕ್ಟ ಹಣ ನಷ್ಟವಾಯಿತೆಂದು 320 ರೂಪಾಯಿ ಮಾಫಿ ಕೊಡಲಾಯಿತು.

ಕೊಡಗು ದೇಶಕ್ಕೆ ಒಬ್ಬನೇ ಸ್ಯಾನಿಟರಿ ಇನ್ಸ್‌ಪೆಕ್ಟರ್ ಕೆಲಸ ನೋಡಲಿಕ್ಕೆ ಸಾಲದೆಂದೂ, ಇನ್ನೊಬ್ಬನನ್ನು ನೇಮಿಸಬೇಕೆಂದೂ ಲೋಕಲ್ ಫಂಡಿನಲ್ಲಿ ಹಣ ಜಮೆಯಾಗುವ ವರೆಗೆ ನಿಲ್ಲಿಸಬೇಕೆಂದು ತೀರ್ಮಾನವಾಯಿತು.

7. ಕಣಿವೆ ಹೋಬಳಿ ತೊರೆನೂರು ಸ್ಕೂಲಿಗೆ ಈಗಿನ ಸ್ಥಳದಿಂದ ಬೇರೆ ಕಡೆ ಬೇರೆ ಒಳ್ಳೇ ಸ್ಥಳದಲ್ಲಿ ಕಟ್ಟಲಿಕ್ಕೆ 763ರೂ ಕೊಡಲು ತೀರ್ಮಾನವಾಯಿತ.

8. ಭಾಗಮಂಡಲ ಆಯುರ್ವೇದಿಕ್ ಡಾಕ್ಟರಿಗೆ ಈಗ ತಿಂಗಳು 5 ರೂಪಾಯಿ ಬಡ್ತಿಯಂತೆ (1) 50 ರೂಪಾಯಿ ವರೆಗೆ ಬಡ್ತಿ ಕೊಡುವ ಹಾಗೂ (50—5—100): (2) ಕಂಪೌಂಡರ ಸಂಬಳ 14—2—25ರ ವರೆಗೆ ಬಡ್ತಿ ಕೊಡುವ ಹಾಗೂ (3) ಒಬ್ಬ ಜವಾನನನ್ನು ಮಾಹೆಯಾನ 8 ರೂಪಾಯಿ ಸಂಬಳದಲ್ಲಿ ನೇಮಿಸುವ ಹಾಗೂ ತೀರ್ಮಾನವಾಯಿತು.

9. ಶನಿವಾರಸಂತೆ ಮಾರ್ಕೆಟ್ ಕಂಟ್ರಾಕ್ಟದಾರನಿಗೆ ಪ್ಲೇಗು ಗಲಾಟೆಯಿಂದ ಮಾರ್ಕೆಟ್ ಫೀಸ್ ನಷ್ಟವಾಯಿತೆಂದು 150—0—0 ರೂಪಾಯಿ ಮಾಫಿ ಕೊಡಲಾಯಿತು.

10. ಭಾಗಮಂಡಲನಾಡು ಬಾಡಗ ಗ್ರಾಮಸ್ಥರಿಗೆ ಅವರ ಸ್ವಂತ ಖರ್ಚಿನಿಂದ 350 ರೂ ವರೆಗೆ ಖರ್ಚು ಮಾಡಿ ಬಾಡಗ ರೋಡು ಮಾಡಿದ್ದರಿಂದ ಅವರ ಅರ್ಜಿಯಂತೆ 175 ರೂ. ಬೋರ್ಡಿನಿಂದ ಕೊಡಲು ಮಂಜೂರಾಯಿತು. ಮತ್ತು ಈ ರೋಡನ್ನು ಬೋರ್ಡಿಗೆ ತೆಗೆದುಕೊಳ್ಳುವ ಹಾಗೆ ಮಂಜೂರಾಯಿತು.

11. ಎಡೆಹಳ್ಳಿ ಟೋಲ್ ಗೇಟ್ ಕಂಟ್ರಾಕ್ಟದಾರನಿಗೆ ಪ್ಲೇಗು ಗಲಾಟೆಯಿಂದ ನಷ್ಟವಾಯಿತೆಂದು 30 ರೂ. ರಿಮಿಶನ್ ಕೊಡಲು ಮಂಜೂರಾಯಿತ.

12. ಮಾದಾಪುರದಿಂದ ಸೂರ್ಲಬ್ಬಿನಾಡಿಗೆ ಹೋಗುವ ರಸ್ತೆಯನ್ನು ಮಾದಾಪುರ 12/4 ರ ಮೈಲಿನಿಂದ ಗರ್ವಾಲೆ ಶ್ರೀಮಂಗಲದ ವರೆಗೆ ಈ ವರ್ಷ ಗಾಡಿ ರಸ್ತೆ ಮಾಡಲು ಹಣ ಕೇಳಿದ್ದಲ್ಲಿ ರಸ್ತೆ ಮಾಡಿಸಬಹುದು., ಅಂದಾಜು ಖರ್ಚು ಹಣ ಎಷ್ಟು ಬೇಕೆಂದು ಎಸ್ಟಿಮೇಟ್ ಮಾಡಬೇಕೆಂದು ತೀರ್ಮಾನಿಸಲಾಯಿತು.

13. ನಾಲ್ಕುನಾಡು ಬಲ್ಲಮಾವಟಿಯಿಂದ ಪೇರೂರು ಗ್ರಾಮಕ್ಕೆ ಗಾಡಿ ರಸ್ತೆ ಮಾಡಲು ಮಂಜೂರಾಯಿತು.

14 ಮದೆ ಗ್ರಾಮದಿಂದ ಬೆಟ್ಟತ್ತೂರು ಗ್ರಾಮಕ್ಕೆ ರಸ್ತೆ ಮಾಡಲು ಹಣ ಕೇಳಿದ್ದಲ್ಲಿ ಮೊದಲು ಅಂದಾಜು ಹಣ ಎಷ್ಟುಬೇಕೆಂದು ನೋಡಿ ಮಂಜೂರು ಮಾಡುವುದೆಂದು ತೀರ್ಮಾನವಾಯಿತು.

15. ಬೇತರಿ ಹೊಳೆಗೆ ಒಂದು ದೋಣಿ ಕ್ರಯಕ್ಕೆ ತೆಗೆಯಲು 600/ರೂ. ಮಂಜೂರಾಯಿತು.

16. ಮೈತಾಡಿ ಗ್ರಾಮದಲ್ಲಿ ಪಾಠಶಾಲೆಗಳ ಸ್ಕೂಲಿಗೆ 10 ರೂ ಗ್ರ್ಯಾಂಟು ತಿಂಗಳುವಾರು ಸಿಕ್ಕಿತು

17. ಮಡಿಕೇರಿ ಹೈಯರ್ ಎಲಿಮೆಂಟರಿ ಸ್ಕೂಲಿಗೆ ಎರಡು ಟ್ರೈನಿಂಗ್ ಆದ ಎಸ್, ಎಸ್, ಎಲ್. ಸಿ. ಪರೀಕ್ಷೆ ಪಾಸಾದ ಮಾಸ್ಟರನ್ನು ಕೊಡಬೇಕೆಂದು ಕೇಳಿದ್ದಲ್ಲಿ ಸ್ಕೂಲ್ ಸಬ್ ಇನ್ಸ್‌ಪೆಕ್ಟರು ಇಲ್ಲದ್ದರಿಂದ ಅವರ ಅಭಿಪ್ರಾಯ ಕೇಳಿದ ಮೇಲೆ ತೀರ್ಮಾನಿಸ ಬಹುದೆಂದು ಮುಂದಿನ ಮೀಟಿಂಗಿಗೆ ಇಡಲಾಯಿತ.,

18. ಬೀರುಗ ಗ್ರಾಮದ ಸ್ಕೂಲನ್ನು ಬೋರ್ಡಿಗೆ ತೆಗೆದುಕೊಳ್ಳಬೇಕೆಂದು ಕೇಳಿದ್ದಲ್ಲಿ ಸ್ಕೂಲ್ ಇನ್ಸ್‌ಪೆಕ್ಟರವರ ಅಭಿಪ್ರಾಯ ಕೇಳುವುದಕ್ಕಾಗಿ ಮುಂದಿನ ಮೀಟಿಂಗಿಗೆ ಇಡಲಾಯಿತು.

19. ಕಣಿವೆ ಹೋಬಳಿ ಹೆಬ್ಬಾಲೆ ಗ್ರಾಮಕ್ಕೆ ವಾಟರ್‌ಕೊಂಡ ದಾವಖಾನೆ ಆಸ್ಪತ್ರೆ ತೆರೆಯುವ ಏರ್ಪಾಡು ಮಾಡಿದೆ ಎಂತ ಬೋರ್ಡಿನ ಪತ್ರ ಓದಲಾಯಿತು.

20. ಅಮ್ಮತ್ತಿ ಗೋಣಿಕೊಪ್ಪ, ಬಿಟ್ಟಂಗಾಲ ಹತ್ತಿರ ರಸ್ತೆಗೆ ಸಣ್ಣ ಸೇತುವೆ ಕಟ್ಟಲು ಅಂದಾಜು ಹಣ ಎಷ್ಟೆಂದು ಕೇಳಿ ತೀರ್ಮಾನಿಸ ಬಹುದೆಂದು ನಿಶ್ಚೈಸಿದೆ.

21 ಚನ್ನಯನಕೋಟೆ ಪಂಚಮರಿಗೆ ಕುಡಿಯುವ ನೀರಿಗೆ ಬಾವಿ ತೆಗೆಯಲು ಅಂದಾಜು ಹಣ ಎಷ್ಟೆಂದು ತಿಳಿದ ಕೂಡಲೇ ತೆಗೆಯ ಬಹುದೆಂದು ನಿಶ್ಚೈಸಿದೆ.

33. ಅಮ್ಮತ್ತಿ ಸ್ಕೂಲಿಗೆ VIII ನೇ ತರಗತಿ ತೆರೆಯಲು ಸ್ಕೂಲ್ ಇನ್ಸ್‌ಪೆಕ್ಟರ ಅಭಿಪ್ರಾಯ ಕೇಳಲು ತೀರ್ಮಾನಿಸಿದೆ

34 ನಾಪೋಕ್ಲು—ಭಾಗಮಂಡಲ ರೋಡು ಕೆಲಸ ಡಿ. ಪಿ. ಡಬ್ಲ್ಯು. ವರವರ ಕೈಕೆಳಗೆ ಕೊಡಬೇಕೆಂದು ಕೇಳಿದ್ದಲ್ಲಿ ಹಿಂದಿನ ಆಚರಣೆಯನ್ನೇ ನಡೆಸುವೆನೆಂದು ತೀರ್ಮಾನಿಸಿದೆ.

35. ಸೋಮವಾರಪೇಟೆ ಕೊಡ್ಲಿಪೇಟೆ ಮತ್ತು ಚೆಂಬು ಸ್ಕೂಲಿಗೆ ಒಬ್ಬೊಬ್ಬ ಮಾಸ್ಟರನ್ನು ನೇಮಕವಾಯಿತು.

36ಮಡಿಕೇರಿನಾಡ: ಕಡಗದಾಳದಿಂದ ಕಗ್ಗೋಡ್ಲಿಗೆ ಹೋಗುವ ರಸ್ತೆ, ಅರುವತ್ತೊಕ್ಲು ಗ್ರಾಮಕ್ಕೆ ಪಬ್ಲಿಕ್ ರಸ್ತೆಯಿಂದ ಹೋಗುವ ರಸ್ತೆ, ಮತ್ತು ಮೂರ್ನಾಡಿನಿಂದ ಬಲಮುರಿ ಗ್ರಾಮಕ್ಕೆ ಹೋಗುವ ರಸ್ತೆಯ ಒಳ್ಳೇತೋಡಿನ ಸಮೀಪ ಸಣ್ಣ ಸೇತುವೆ ಕಟ್ಟಿಸಲಿಕ್ಕೆ ಹಣ ಮಂಜೂರಾಯಿತು.

37. ನಾಪೋಕ್ಲುನಾಡು ಕಕ್ಕಬೆ ಸ್ಕೂಲಿನ ಹೊಸ ಕಟ್ಟಡಕ್ಕೆ ಹಂಚು ಹಾಕಿಸಲಿಕ್ಕೆ 300 ರೂ. ಮಂಜೂರಾಯಿತ..

39. ಅಮ್ಮತ್ತಿನಾಡಿನ ಮತ್ತು ಸಂಪಾಜೆನಾಡಿನ ಡಿ. ಪಿ. ಡಬ್ಲ್ಯು. ಇಲಾಖೆಯ ಮೂಲಕ ತೆಗೆಯ ಬೇಕಾದ ನೀರಿನ ಬಾವಿಗಳನ್ನು ರೆವಿನ್ಯೂ ಇಲಾಖೆಯ ಮೂಲಕ ತೆಗೆಸುವ ಹಾಗೆ ತೀರ್ಮಾನವಾಯಿತು.

39. ವೀರಾಜಪೇಟೆಯಿಂದ ತೋರಂಬೆ ಹೋಗುವ ಪೆಟ್ಟೋಳಿ ಹೊಳೆ, ಸ್ಕೂಲಿಗೆ ಬರುವ ಹುಡುಗರಿಗೂ, ಪ್ರಯಾಣಿಕರಿಗೂ ಮಳೆಗಾಲದಲ್ಲಿ ತಿರುಗಾಡಲು ಅಪಾಯವೆಂದು ಒಳ್ಳೇ ಮರದ ಭದ್ರವಾದ ಪಾಲ ಹಾಕಿಸುವ ಹಾಗೆ ರೂ. ಮಂಜೂರಾಯಿತು.

ನೋಟೀಸು.

ಫೆಡರೇಶನ್ ಆಫೀಸು,
ಮಡಿಕೇರಿ, ತಾ. 7—8—31.

ಯೂನಿಯನ್ ಪ್ರೆಸಿಡೆಂಟರು ಮತ್ತು ಕಮಿಟಿ ಮೆಂಬರುಗಳಿಗೆ,

ಈ ಮೊದಲೇ ತಿಳಿಸಿದ ಮೇರೆ ಈ ಫೆಡರೇಶನ್ ವಾರ್ಷಿಕ ಜನರಲ್ ಮೀಟಿಂಗು ಈ ತಾರೀಕ್ 18 ಶನಿವಾರ ಮಧ್ಯಾಹ್ನ 2 ಗಂಟೆಗೆ ಫೆಡರೇಶನ್ ಆಫೀಸಿನಲ್ಲಿ ನಡೆಯುವುದರಿಂದ ನಿಮ್ಮ ಕೂಟದ ಪ್ರೆಸಿಡೆಂಟರು ಮತ್ತು ಒಬ್ಬ ಕಮಿಟಿ ಮೆಂಬರು ಸಹ ಡೆಲಿಗೇಟರುಗಳಾಗಿ ಬರಬೇಕಾಗಿ ಕೇಳಿಕೊಳ್ಳುತ್ತೇವೆ.

ಸಿ. ದೇವಯ್ಯ,
(ಫೆಡರೇಶನ್ ಪ್ರೆಸಿಡೆಂಟರು.)

COORG FOREST DEPARTMENT

Mercara, the 24th March 1931.

NOTICE.

It is hereby notified for the information of those gem malegars who took up the leases of gem males during and after 1924 and up to and including 1927 that payment of arrears of assessment by the aforesaid holders of cardamom males will be excused if they resign their males absolutely by 20th April 1931.

All malegars who do not wish to resign are required to pay up the arrears in full. They may pay the arrears in four equal yearly instalments as follows if the arrears exceed Rs. 20/—

I by 20th April 1931.
II. „ 31st January 1932.
III. „ „ „ 1933.
IV. „ „ „ 1934

Where the arrears are Rs 20/—or less the full amount must be paid up in two equal instalments as follows:—

I. by 20th April 1931.
II. „ 31st Januarý 1932.

All resignation applications must reach the undersigned on or before the 20th April 193 without fail. Any resignation received afte that date will be ignored.

H. G. HICKS.
3—2 Cheif Forest Office

ನೋಟೀಸು.

ಈ ಮೂಲಕ ಗೇಣ್ ಮಲೆಗಾರರಿಗೆ ತಿಳಿಯಪಡಿಸುವುದೇನಂದರೆ—1924ನೇ ಇಸವಿಯಿಂದ 1929ನೇ ಇಸವಿಯ ವರೆಗೆ ಗೇಣ್ ಮಲೆಗಳನ್ನು ಪಡಕೊಂಡು ಗೇಣ್ ಕಂದಾಯ ಕೊಡದೆ ಬಾಕಿ ಇರುವಂಥಾವರು ಇದೇ ಬರುವ ಏಪ್ರಿಲ್ ತಾರೀಕು 20 ರ ವಳಗೆ ಕಂದಾಯ ಬಾಕಿ ಇರುವ ಮಲೆಗಳನ್ನು ರಾಜಿನಾಮೆಯಿಂದ ಬಿಡಬಹುದು. ಆ ಮಲೆಗಳ ಬಾಕಿ ಕಂದಾಯವು ಮಾಫಿ ಮಾಡಲ್ಪಡುವುದು. ರಾಜಿನಾಮೆ ಕೊಡದೆ ಇಟ್ಟುಕೊಳ್ಳುವಂಥ ಮಲೆಗಳ ಬಾಕಿ ಕಂದಾಯವು 20 ರೂಪಾಯಿಗಿಂತ ಮೀರಿದ್ದರೆ ಆಂಥಾ ಕಂದಾಯವನ್ನು ನಾಲ್ಕು ಕಂತುಗಳಿಂದ ನಾಲ್ಕು ವರ್ಷಗಳಲ್ಲಿ ಕೊಟ್ಟು ಪಾವತಿ ಮಾಡಬೇಕು. ಆಂಥಾ ಕಂದಾಯವು 20 ರೂಪಾಯಿಗಿಂತ ಕಡಿಮೆ ಇದ್ದರೆ ಎರಡು ಕಂತುಗಳಿಂದ ಎರಡು ವರ್ಷಗಳಲ್ಲಿ ತೀರಿಸಬೇಕು. ಎಲ್ಲಾ ರಾಜಿನಾಮೆ ಅರ್ಜಿಗಳು ಇದೇ ಏಪ್ರಿಲ್ ತಾರೀಕು 20 ರ ವಳಗೆ ಚೀಫ್ ಫಾರೆಸ್ಟ್ ಆಫೀಸರಿಗೆ ತಪ್ಪದೆ ತಲುಪ ತಕ್ಕದು. ಸದರಿ ತಾರೀಕಿನ ನಂತರ ಬಂದ ಅರ್ಜಿಗಳು ತಿರಸ್ಕರಿಸಲ್ಪಡುವುವು.

Rubber Stamps of every design
and
Glass sign boards. Half tone Blocks.
Monogram seals. Marble slabs. ring
stones etc. etc. to suit. every pocket an
taste.

The Crown Rubber Stamp Co.,
12—4 **Mangalore, S. K**

ವರ್ತಮಾನ ಸಂಗ್ರಹ.

ಒಳದೇಶ.

—1931 ನೇ ಶನಿವಾರ ದಿವಸ ವೀರರಾಜಪೇಟೆ ... ನಡಿಯುತ್ತದೆ

...ಟಿರ ಗಣಪತಿಯ್ಯನವರು ತಾ. 7 ರಲ್ಲು ಪ್ರಾ... ಸಲು ಪ್ರಸಾಧಿಸುತ್ತೇವೆ.

...ಬ್ಯಾಂಕಿನ ಡೈರೆಕ್ಟರುಗಳ ಎಲೆಕ್ಷನು ತಾ 25 ... ಬೆಳಿಗ್ಗೆ 11 ಗಂಟೆಗೆ ಕೊಡಗು ಜಮೀನ್ದಾ... ರನಲ್ಲು ನಡಿಯುತ್ತೆ.

... 26, 27 ರಲ್ಲಿ ನಾಪೋಕ್ಲು ಗ್ರಾಮದ ... ಹಬ್ಬ ನಡೆಯಿತು. ಆ ಸಮಯದಲ್ಲಿ ಸತ್ಯಾ... ಪ್ರಚಾರ ಕೆಲಸವನ್ನು ಮಾಡಿದರು

—31 ರಲ್ಲಿ ಮಕ್ಕಾರು ದೇವಸ್ಥಾನದ ಉತ್ಸವ ... ದನ, ಕೃಷಿ, ಉತ್ಪತ್ತಿ ಮುಂತಾದ್ದರ ಪ್ರದ... ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಪ್ರದರ್ಶನ

...ಕಾಫಿ ಪ್ಲಾಂಟರುಗಳ ಸಹಕಾರಿ ಸಂಘದ ... ಗೆಂದು ಮೇ, ತಾ 2 ನೇ ಶನಿವಾರ ಮ... ಗೆ ಮಡಿಕೇರಿ ಮುನಿಸಿಪಲ್ ಹಾಲ್‌ನಲ್ಲಿ ಸ... ಸದರಿ ಸೊಸೈಟಿಯ ಸೆಕ್ರೆಟರಿಯವರು ತಿಳಿಸಿ

...ಲನಾಡು ಹರಿಹರ ಶಾಲೆ ಪ್ರಥಮ ವಾರ್ಷಿ... ಳಿದ ಮಾರ್ಚಿ ತಿಂಗಳು 26 ನೇ ಗುರುವಾರ ರ... ಮ. ರಾ. ಶಿ ಮುಕ್ಕಾಟಿರ ಕೆ ಮುತ್ತಪ್ಪ... ಹೊಸ ಕಟ್ಟಡದ ಪ್ರವೇಶವು ಸದರಿ ದಿನವೇ ... ಪಂಚಾಯತದಾರರು ನಾಡಿನ ಪರವಾಗಿ ಎಮ್. ... ಗೆ ಒಂದು ಬಿನ್ನಹ ಪತ್ರವನ್ನು ಒಪ್ಪಿಸಿದರು. ... ಂದ ಸ್ಕೂಲಿನ ವಾರ್ಷಿಕೋತ್ಸವವು ತಾ ... ನಡೆಯಿತು ಮ. ಕೇಳಪಂಡ ಕಾರ್ಯಪ್ಪನ ... ಯವಾಗಿಯೂ, ಮ. ಬಿ. ಎನ್. ಕೃಷ್ಣಯ್ಯನ ... ಷಯವಾಗಿಯೂ, ಮ. ಯನ್. ಸಿ ಸುಬ್ಬಯ್ಯ ... ಗ್ರಾಮಾಭಿವೃದ್ಧಿ ವಿಷಯವಾಗಿಯೂ ಉಪನ್ಯಾಸ ... ರು.

...ಕಾಂಗ್ರೆಸಿಗೆ ಕೊಡಗಿನ ಪ್ರತಿನಿಧಿಗಳಾಗಿ ಹೋಗಿ ... ಬೆಳ್ಯಪ್ಪನವರು, ಮತ್ತು ಮ. ಕೆ ಸಿ ಕರುಂಬೈ ... ರು ತಾ. 8 ರಲ್ಲು ಕೊಡಗಿಗೆ ವಾಪಸು ಬಂದು ತಲುಪಿ ... ದ್ದಾರೆ. ಅದೇ ದಿನ ವೀರರಾಜಪೇಟೆಯಲ್ಲಿ ನಡೆ... ಸಭೆಯಲ್ಲಿ ಕರಾಚಿ ಕಾಂಗ್ರೆಸಿನ ಮಹತ್ವ' ವ... ಭಾಷಣ ಮಾಡಿದರು.

...ಮಡಿಕೇರಿ ಭಾಗಮಂಡ್ಲ ರಸ್ತೆಯ 18 ನೇ ಮೈಲು 4ನೆ ... ಬಳಿ ಇರುವ ಸೇತುವೆ ಬಹಳ ಅಪಾಯ ಸ್ಥಿತಿಯ... ದರಿಂದ ಅದರ ಮೇಲೆ ಗಾಡಿ, ಕಾರ್ ವಗೈರ ಯಾವ ... ವಾಹನಗಳನ್ನೂ ತೆಗೆದುಕೊಂಡು ಹೋಗ ಕೂಡದೆಂತ ... ಗೆ ... ವ ಬಗ್ಗೆ ಎಗ್ಜಿಕ್ಯೂಟಿವ್ ಇಂಜೀನಿಯರ್ ... ಕಟು ಪ್ರಕಟಿಸಿರುತ್ತಾರೆ.

...ಶನಿವಾರಸಂತೆ ಆಸ್ಪತ್ರೆಯನ್ನು ತೆರೆದ ಸಮಾರಂಭದಲ್ಲಿ ... ಸು 500 ಜನರು ಹಾಜರಿದ್ದರು ಈ ಆಸ್ಪತ್ರೆಯನ್ನು ... ಲು ಮನಸು ಮಾಡಿದ ಕಮಿಶನರಾಗಿದ್ದ ಮೆ ಟಾಸ್ಕರ ... , ... ಗೆ ಕೆಲಸವನ್ನು ನಡಿಸಿದ ಇತರ ಆಫಿಸರುಗಳ ... ವಂದಿಸಿ ಸ್ವಾಗತ ಕಮಿಟಿಯ ಅಧ್ಯಕ್ಷರಾದ ರೆ. ... ಡಿ. ರಾಮೇಗೌಡರು ಒಂದು ಪತ್ರ ಬರೆದಿರುವರು.

ಮ. ಪಿ ಬಿ ಬೆಳ್ಯಪ್ಪನವರು ಮತ್ತು ಕೆ ಸಿ ಕರುಂಬೈ... ವರು ಕರಾಚಿ ಕಾಂಗ್ರೆಸ್ ಮಹಾಸಭೆಯನ್ನು ಮುಗಿಸಿ ... ವಾಪಸು ಬರುತ್ತಿದ್ದಾಗ್ಗೆ ಬೊಂಬಾಯಿಯಲ್ಲಿ ಅಲ್ಲಿ... ಸಂಘದವರು ಇವರ್ಬ್ಬರಿಗೆ ಒಂದು ಟೀ ಪಾರ್ಟಿ ... ಕೊಟ್ಟರಂತಲೂ, ಬೊಂಬಾಯಿಯಲ್ಲಿರುವ ಕೊಡವರ ... ಕೊಡಗಿನ ಸತ್ಯಾಗ್ರಹ ಮಂಡಳಿಗಾಗಿ 10 ... ಗಳನ್ನು ಇವರಿಗೆ ಒಪ್ಪಿಸಿದರೆಂತಲೂ, ಸದರಿ ಸಂಘ... ದವರು ಬರೆದಿರುವ ಪತ್ರವನ್ನು ವಿವರವಾಗಿ ಬರುವ ... ಪ್ರಕಟಿಸಲಾಗುವುದು.

...ಕೇರಿ ಒಳ ಆಪೆ ಪೋರ್ಕ ತೋಡು ಎಂಬಲ್ಲಿ ... ಧವಾಗಿ ಒಂದು ವಾರ ನಲ್ಲಿಥ ಮುತ್ತಣ್ಣನವರ ... ರಾಮಾಯಣವನ್ನು ಹರಿಕಥಾ ರೂಪವಾಗಿ ಶ್ರವ... ರು. ಜನಸ್ತೋಮವು ನೆರೆಯುತ್ತಿತ್ತು. ... ಯೂ ಮೈಸೂರಿನ ಕೃಷ್ಣದಾಸರು ಒಂದು ವಾ... ರು. ಇವೆರಡು ಕಡೆಗಳಲ್ಲಿಯೂ ನೆರೆದಿದ್ದ ... ಗ್ರಹಿಗಳು ನಿಷಾನಿಷೇಧ, ಖಾದಿ ಪ್ರಚಾರ ಕುರಿ... ಕೊಟ್ಟರು.

...—4—31 ರಲ್ಲಿ ಪೊನ್ನಂಪೇಟೆ ಶಾರದಾಶ್ರಮದ ... ಕೃಷ್ಣ ಪರಮಹಂಸರ ಮತ್ತು ಶ್ರೀ ಸ್ವಾಮಿ ವಿವೇಕ ... ಉತ್ಸವಗಳು ನಡೆಯುತ್ತವೆ ಬೆಂಗಳೂರು ... ಕಾಲೇಜ್ ಪ್ರೊಫೆಸರಾದ ಶ್ರೀಮಾನ್ ಬಿ ಎಂ ಶ್ರೀ ... (ಎಂ. ಎ. ಬಿ ಎಲ್ .) ಅಧ್ಯಕ್ಷಸ್ಥಾನವನ್ನು ... ರುತ್ತಾರೆ. ಮೈಸೂರು ಶಾರದವಿಲಾಸ ಹೈ... ಮಾಸ್ತರಾದ ಶ್ರೀಮಾನ್ ಎಂ. ಎಸ್ ರಾ... ... ಇವರು ಉಪನ್ಯಾಸ ಕೊಡುತ್ತಾರೆ.

ಕೊಡಗು ಎಕ್ಲೆಟಿಕ್ ಎಸೋಸಿಯೇಶನಿನವರು ನಡಿಸಿದ ಟೆನ್ನಿಸ್ ಟೋರ್ನಮೆಂಟ್ ತಾ 8ರಲ್ಲಿ ಮುಗಿಯಿತು ಡಬ್ಬಲ್ಸ್ ಮತ್ತು ಸಿಂಗಲ್ಸ್ ಎರಡರಲ್ಲೂ ಡಾಕ್ಟರ್ ನಾಪಲಿಟನ್ ಕೃಷ್ಣನವರೇ ಗೆದ್ದರು. ಸಿಂಗಲ್ಸ್ ಹೇಂಡಿ ಕ್ಯಾಪ್ ಕಪ್ ಎಂ. ಸಿ. ಕೃಷ್ಣನವರು ಗೆದ್ದರು. ಕಪ್ಪುಗಳನ್ನು ಪೈನಾನ್ಸಿನ ಎಕ್ಸ್ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆ ಚನ್ನಿರ ಕಾಳಪ್ಪನವರು ಗೆದ್ದವರಿಗೆ ಕೊಟ್ಟರು. ಡಬ್ಬಲ್ಸ್‌ನಲ್ಲಿ ಗೆದ್ದವರಿಗೆ ಖಾಯಂವಾಗಿ ಕೊಟ್ಟ ಕಪ್ ಮೆ ಕೆ. ಯಸ್. ಅಪ್ಪಯ್ಯನವರೂ, ಸಿಂಗಲ್ಸ್ ಕಪ್ ಮೆ ಕೆ. ಪಿ ತಿಮ್ಮಯ್ಯನವರೂ ಕೊಟ್ಟರು.

ಸತ್ಯಾಗ್ರಹ ಸಮಾಚಾರ.

ಫ್ರೇಜರ್‌ಪೇಟೆ ಶಿಬಿರದವರು ತಾ. 28ರಲ್ಲಿ ಹೆಬ್ಬಾಲೆ ಗ್ರಾಮಕ್ಕೆ ಹೋಗಿ ಬೋಧನೆ ಕೊಟ್ಟರು.

ಸೋಮವಾರಪೇಟೆ ಶಿಬಿರದವರು ಸಹ ಗ್ರಾಮಾಂತರಗಳಲ್ಲಿ ಬೋಧಿಸುತ್ತಿದ್ದಾರೆ ತಮ್ಮ ಬೈಸಮರಗಳಿಂದ ತಾವೇ ಸೇಂದಿ ಇಳಿಸುವುದೆಂಬ ಒಂದು ಕೆಟ್ಟ ಅಭಿಪ್ರಾಯದಿಂದ ಆಗುತ್ತಿರುವ ಕೇಡನ್ನು ಜನರಿಗೆ ಬೋಧಿಸಿದ್ದಾರೆ. ಮುಂಚ್ಚೆ ಳಿಕೆಗೆ ಲೈಸನ್ ತೆಗೆದುಕೊಳ್ಳುವವರೂ ಇದ್ದಾರೆ.

ವೀರರಾಜಪೇಟೆಯ ಸತ್ಯಾಗ್ರಹಿಗಳು ಬೆಂಬೆಳೆಯೂರು, ದೇವಣಗೇರಿ, ಕುಂದುಗೇರಿ, ಮುಗ್ಗುಲ ಗ್ರಾಮಗಳಲ್ಲಿ ತಾ 30—3—31ರ ವರೆಗೆ ಮನೆ ಮನೆಸುತ್ತಿ, ಮೀಟಿಂಗು ಮಾಡಿಯೂ ಜನರಿಗೆ ನಿಷಾನಿಷೇಧ ಖಾದಿ ಪ್ರಚಾರ ಕುರಿತು ಬೋಧಿಸಿದರು ಜನರು ಸೇಂದಿ ಕಳ್ಳುಳ್ಳ ಮರಗಳನ್ನು ಕೊಡುವದಿಲ್ಲವೆಂತಲೂ, ಮದುವೆ ಮುಂತಾದ ಕಾರ್ಯಗಳಲ್ಲಿ ನಿಷಾವನ್ನು ಉಪಯೋಗಿಸುವುದಿಲ್ಲವಾಗಿಯೂ ಕಟ್ಟಳೆ ಮಾಡಿಕೊಂಡರು.

ಮೂರ್ನಾಡಿನಲ್ಲಿ ತಾ 25—3—31ರಲ್ಲು ಹೊಸತಾಗಿ ಸತ್ಯಾಗ್ರಹ ಶಿಬಿರವು ತೆರೆಯಲ್ಪಟ್ಟಿದೆ. ಇಲ್ಲಿನ ಸತ್ಯಾಗ್ರಹಿಗಳು ತಾ. 24—3—31ರಲ್ಲಿ ಕಣ್ಣಂಗಾಲ ಗ್ರಾಮದಲ್ಲಿ ನಡೆದ ಊರು ದೇವರ ಹಬ್ಬದಲ್ಲಿ ಜನರಿಗೆ ಬೋಧಿಸಿದರು. ತಾ 27—3—31ರಲ್ಲಿ ಐಕೊಳ ಗ್ರಾಮದಲ್ಲಿಯೂ, ತಾ 28ರಲ್ಲಿ ಮೂರ್ನಾಡಿನಲ್ಲಿಯೂ, ತಾ 29ರಲ್ಲಿ ಕಾಂತೂರು ಗ್ರಾಮದಲ್ಲಿಯೂ, ತಾ 30 ಮತ್ತು 1ರಲ್ಲಿ ಕಿಗ್ಗಾಲು ಗ್ರಾಮದಲ್ಲಿಯೂ, ತಾ. 2ರಲ್ಲಿ ಹೊದವಾಡ ಗ್ರಾಮದಲ್ಲಿಯೂ ಪ್ರಚಾರ ಕೆಲಸ ಮಾಡಿ ಜನರಿಂದ ಸೇಂದಿ ಕುಯಿಸದೆ ತರುವುದಕ್ಕೂ, ನಿಷಾ ಸೇವನೆಯನ್ನು ಮಾಡುವುದಿಲ್ಲವೆಂಬುದಕ್ಕೂ, ಸ್ವದೇಶೀ ವಸ್ತ್ರವನ್ನೇ ಉಪಯೋಗಿಸುತ್ತೇವೆಂಬುದಕ್ಕೂ ಮುಚ್ಚಳಿಕೆ ಮಾಡಿಸಿರುತ್ತಾರೆ.

ಹಿಂದೂದೇಶ.

ಮಹಾತ್ಮ ಗಾಂಧಿಯವರ ಶಿಷ್ಯಳಾದ ಮೀರಾಬಾಯಿ (ಮಿಸ್ ಸ್ಲೇಡ್) ಎಂಬ ಮಹಿಳೆಯವರಿಗ ಕರಾಚಿಯಲ್ಲಿ ಸಿಡುಬು ರೋಗ ತಗಲಿ ಆಸ್ಪತ್ರೆಯಲ್ಲಿದ್ದಾರೆ.

ಪರರಾಜರ ಮೇಲೆ ದ್ವೇಷ ಹುಟ್ಟುವಂಥ ಲೇಖನಗಳನ್ನು ಬರೆದು ಪ್ರಕಟಿಸುವವರಿಗೆ ಶಿಕ್ಷೆ ವಿಧಿಸುವ ಬಗ್ಗೆ ಒಂದು ಹೊಸ ಆರ್ಡಿನೆನ್ಸನ್ನು ವೈಸ್‌ರಾಯರು ತಾರೀಖು 6 ರಲ್ಲಿ ಹೊರಡಿಸಿದ್ದಾರೆ

ರಾಷ್ಟ್ರೀಯ ಧ್ವಜದ (ಭಾವುಟ) ವನ್ನು ಎಲ್ಲರಿಗೂ ಒಪ್ಪಿಗೆಯಾಗುವಂತೆ ಯಾವ ರೀತಿ ಬದಲಾಯಿಸಿಕೊಳ್ಳಬೇಕೆಂಬುದನ್ನು ನಿರ್ಣಯಿಸಲಿಕ್ಕೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಒಂದು ಉಪಕಮಿಟಿಯನ್ನು ನೇಮಿಸಿರುತ್ತಾರೆ.

ಲಾರ್ಡ್ ಇರ್ವಿನರು ಬೊಂಬಾಯಿಗೆ ತಾರೀಖು 16 ರಲ್ಲಿ ಬಂದು 17 ರಲ್ಲಿ ಇಂಗ್ಲೆಂಡಿಗೆ ಪ್ರಯಾಣ ಮಾಡುತ್ತಾರೆ. ತಾ. 16 ರಲ್ಲಿ ಹೊಸ ವೈಸ್‌ರಾಯರಾದ ಲಾರ್ಡ್ ವಿಲ್ಲಿಂಗ್‌ಡನ್ ಬೊಂಬಾಯಿಗೆ ಬಂದು ಚಾರ್ಜು ತೆಗೆದುಕೊಳ್ಳುತ್ತಾರೆ.

ಮಹಾತ್ಮ ಗಾಂಧಿಯವರು ತಾ. 8 ರಲ್ಲಿ ದಿಲ್ಲಿಯಿಂದ ಅಮೃತಸರಕ್ಕೆ ಹೋಗಿರುತ್ತಾರೆ. ಅಮೃತಸರದ ಜನರೆಲ್ಲಾ ಮಹಾತ್ಮರ ದರ್ಶನಕ್ಕೆ ಹೋದರು. ಅಸಾಧಾರಣ ಉತ್ಸಾಹವಿತ್ತು. ಮಹಾತ್ಮರ ಸಂಗಡ ಪಂಡಿತ ಮದನಮೋಹನ ಮಾಳವೀಯರೂ, ಬಾದ್ಶಾ ಖಾನ್ ಅಬ್ದುಲ್ ಗಫಾರ್ ಖಾನ್ ಹಾಗೂ ಮಹದೇವ ದೇಸಾಯಿಯವರೂ ಸಹ ಇದ್ದಾರೆ.

ಬಂಗಾಳದ ಮಿದ್ನಾಪುರ ಎಂಬ ಊರಿನಲ್ಲಿ ಆ ಜಿಲ್ಲೆಯ ಕಲೆಕ್ಟರಾದ ಜೇಮ್ಸ್ ಪೆಡ್ಡೀ ಎಂಬವರಿಗೆ ತಾ. 7 ರಲ್ಲಿ ಯಾರೋ ಗುಂಡು ಹೊಡೆದು ಅಪಾಯ ಸ್ಥಿತಿಯಲ್ಲಿದ್ದಾರೆ. ಆ ಊರಿನ ಶಾಲೆಯಲ್ಲಿ ನಡೆಯುತ್ತಿದ್ದ ಒಂದು ಪ್ರದರ್ಶನವನ್ನು ನೋಡಲಿಕ್ಕೆ ಹೋಗಿದ್ದಾಗ ಶಾಲೆಯ ಕೊಠಡಿಯೊಳಗೇನೇ ಗುಂಡು ಹಾರಿಸಿದ್ದಾಗಿದೆ

ಎರಡನೇ ರೌಂಡ್ ಟೇಬಲ್ ಕಾನ್ಫರೆನ್ಸು ಲಂಡನಿನಲ್ಲಿ ನಡೆಯುವುದು. ಕಾಂಗ್ರೆಸ್ ಪರವಾಗಿ ಮಹಾತ್ಮ ಗಾಂಧಿಯವರೇ ಪ್ರತಿನಿಧಿಗಳಾಗಿ ಹೋಗತಕ್ಕದೆಂದು ಕಾಂಗ್ರೆಸ್ಸಿನ ಕಾರ್ಯಕಾರೀ ಮಂಡಳಿಯು ನಿಶ್ಚೈಸಿದೆ. ಗಾಂಧಿಜೀಯವರ ಜತೆಯಲ್ಲಿ ಬೇರೆ 20 ಮಂದಿ ಧುರೀಣರೂ ಹೋಗುವರಾದರೂ ಪ್ರತ್ಯಕ್ಷವಾಗಿ ಅವರು ಕಾನ್ಫರೆನ್ಸಿನಲ್ಲಿ ಭಾಗವಹಿಸುವುದಿಲ್ಲ.

ತಾರೀಖು 7 ರಲ್ಲಿ ಬೊಂಬಾಯಿಯಲ್ಲಿ ರಾಷ್ಟ್ರೀಯ ಮನೋಭಾವದ ಕಾಂಗ್ರೆಸ್ ಸದಸ್ಯರಾದ ಮುಸಲ್ಮಾನ ಜಾತಿಯ ಮೌಲಾನಾ ಅಬುಲ್ ಕಲಾಂ ಎಂಬವರು ಇಸ್ಲಾಮ್ ಧರ್ಮದ ವಿಷಯವಾಗಿಯೂ, ಇಸ್ಲಾಮ್ ಧರ್ಮಕ್ಕೆ ಸಲ್ಲತಕ್ಕದಾದ ಕಷ್ಟದಿಂದ ಹಾನಿಯನ್ನೂ ಕುರಿತು ಬೋಧನೆ ಕೊಡುತ್ತಿದ್ದಾಗ ಖಿಲಾಫತ್ ಪಂಗಡಕ್ಕೆ ಸೇರಿದ ಕೆಲವು ಪುಂಡರು ಮೀಟಿಂಗಿಗೆ ಅಡಚಣೆ ಮಾಡಲಿಕ್ಕೆ ಪ್ರಾರಂಭಿಸಿ ಕಲ್ಲೆಸೆದದ್ದು ಅಲ್ಲದೆ ಕಾಂಗ್ರೆಸಿನ ಸ್ವಯಂ ಸೇವಕನಾದ ಒಬ್ಬ ಪಠಾನ್ ಯುವಕನನ್ನು ಕತ್ತಿಯಿಂದ ತಿವಿದರು. ಗಲಭೆಯಾಗಿ 9 ಜನರಿಗೆ ಘಾಯ ಸಹ ಆಯಿತು. ಚುಚ್ಚಲ್ಪಟ್ಟ ಯುವಕನು ಕಾಂಗ್ರೆಸ್ ಆಸ್ಪತ್ರೆಯಲ್ಲಿ ಸತ್ತು ಹೋದನು.

ಕಾನ್‌ಪುರದಲ್ಲಿ ಶಾಂತಿಯು ಸ್ಥಾಪನೆಯಾಗಿದೆ. ಎರಡು ಜಾತಿಯ ಮುಖಂಡರು ಸೇರಿ ಜನರಿಗೆ ಬೋಧಿಸಿದ್ದರಿಂದ ಜನರಿಗೆ ಸಮಾಧಾನವಾಗಿದೆ. ಸರದಾರ ವಲ್ಲಭಭಾಯಿ ಪಟೇಲರು, ಮೌಲಾನಾ ಅಬುಲ್‌ಕಲಾಂ ಆಜಾದ್ ಮತ್ತು ಸೇಟ್ ಜಮ್ನಾಲಾಲ್ ಬಜಾಜರೂ ಸಹ ಕಾನ್‌ಪುರಕ್ಕೆ ಹೋಗಿ ಅಲ್ಲಿನ ಕಷ್ಟಗಳನ್ನು ಕಣ್ಣಾರೆ ನೋಡಿದರು. ಎರಡು ಧರ್ಮದ ನಿರಪರಾಧಿಗಳಾದ ಹೆಂಗಸರು, ಮಕ್ಕಳು, ಗಂಡಸರು ಸತ್ತಿದ್ದಾರೆಂತಲೂ, ಈ ಅನ್ಯಾಯವನ್ನು ನೋಡುವುದರಿಂದ ಪ್ರತೀಕಾರ ಮಾಡಬೇಕೆಂತ ಮುಖಂಡರು ಬೋಧಿಸಬಾರದೆಂತಲೂ, ಕಾನ್‌ಪುರದ ವರ್ತಮಾನವನ್ನು ಉತ್ತರವಾಗಿ ಬೇರೆ ಕಡೆಗಳಲ್ಲಿ ಹಾಗೆ ಜಾತಿ ದಂಗೆಗಳಾಗದಂತೆ ಪ್ರಯತ್ನ ಮಾಡಬೇಕೆಂತಲೂ ಕೇಳಿಕೊಂಡಿದ್ದಾರೆ ಅಲ್ಲದೆ ಸರಕಾರದ ಅಧಿಕಾರಿಗಳು ಪ್ರಾರಂಭದಲ್ಲೇ ತಮ್ಮ ಕೆಲಸವನ್ನು ಮಾಡದ್ದರಿಂದ ದಂಗೆಯು ಭೀಕರ ಸ್ವರೂಪ ತಾಳಿದ್ದೆಂತಲೂ, ಕೆಲವು ಅಧಿಕಾರಿಗಳಿಗೆ ಪುಕಾರು ಹೇಳಿದಾಗ ತಮಗೆ ಪುಕಾರು ಬಂದಿದೆಯಾಗಿಯೂ ಕಾಂಗ್ರೆಸಿಗೆ ಹೇಳಿ ಎಂತ ಉತ್ತರ ಸಿಕ್ಕಿತೆಂತಲೂ ತಿಳಿಸಿರುತ್ತಾರೆ. ಹೈಕೋರ್ಟು ಜಡ್ಜಿಯರಿಂದ ನಿಷ್ಪಕ್ಷಪಾತ ತನಿಖೆ ನಡಿಸಬೇಕೆಂತ ಪ್ರಿಯಂತ ಹಿಂದೂ ಮುಸಲ್ಮಾನರ ಮುಖಂಡರು ಪ್ರಯತ್ನಿಸುತ್ತಿದ್ದಾರೆ

ಇಂಡಿಯನ್ ಚೇಂಬರ್ಸ್ ಫೆಡರೇಶನ್ ಎಂಬ ವ್ಯಾಪಾರಿಗಳ ಕೂಟಗಳ ಸಂಸ್ಥೆಯ ಪರಿಷತ್ತನ್ನು ತಾ 7ರಲ್ಲಿ ದಿಲ್ಲಿಯಲ್ಲಿ ಮಹಾತ್ಮ ಗಾಂಧಿಯವರು ತೆರೆದರು. ಈ ಸಭೆಗೆ ಇಂಡಿಯಾ ಸರ್ಕಾರದ ಆರ್ಥಿಕ ಮಂತ್ರಿ ಮತ್ತು ಇತರ ಕೆಲವು ಮಂತ್ರಿಗಳು ದಯ ಮಾಡಿಸಿದ್ದರು. ಮಹಾತ್ಮ ಗಾಂಧಿಯವರು ತಮ್ಮ ಭಾಷಣವನ್ನು ಹಿಂದೀಯಲ್ಲೇ ಮಾಡಿದರು. ಭಾಷಣದ ಸಾರಾಂಶವೇನೆಂದರೆ—ಸ್ವತಂತ್ರರಾಗಿರಲಿ, ಗುಲಾಮರಾಗಿರಲಿ ಯಾವ ಜನಾಂಗವೇ ಆಗಲಿ ತಮ್ಮ ಸಭೆಗಳಲ್ಲಿ ತಮ್ಮ ಭಾಷೆಯನ್ನು ಬಿಟ್ಟು ಪರರ ಭಾಷೆಯನ್ನಾಡುವುದಿಲ್ಲ. ನೀವು ವ್ಯಾಪಾರಿಗಳು; ನೀವು ಹಿಂದೀಯಲ್ಲೇ ಚರ್ಚೆಗಳನ್ನು ಮಾಡುವುದು ನಿಮ್ಮ ಧರ್ಮವಾಗಿದೆ ಸ್ವರಾಜ್ಯದಲ್ಲಿ ಇಂಗ್ಲೀಷರು ತಮಗೆ ತೊಂದರೆ ಕೊಡಬೇಕೆಂತ ಯೋಚಿಸಬೇಕಾಗಿಲ್ಲ. ಸ್ವರಾಜ್ಯವೆಂದರೆ ಹಿಂದೂ ರಾಜ್ಯವಾದೀತೆಂತ ಕೆಲವರು ಹೇಳುತ್ತಾರೆ. ಹಿಂದೂ ರಾಜ್ಯವಾದರೆ ಅದನ್ನು ಬಿಡಿಸಲು ನಾನೇ ಹೊರಡುತ್ತೇನೆ. ಸ್ವರಾಜ್ಯವಾದರೆ ಧರ್ಮದ ರಾಜ್ಯ. ಯಾವ ಬಿಕ್ಕ ಜಾತಿಯವರೂ ಸಹ ಸುಖ ಸಂತೋಷವಿರಬೇಕು. ಹಿಂದೀಯರು ಇಂಗ್ಲೀಷರ ಸಂಸ್ಕೃತಿಯನ್ನು ಅಂಗೀಕರಿಸಲು ಸಾಧ್ಯವಿಲ್ಲ. ಹಿಂದೀಯರ ಸಂಸ್ಕೃತಿಯು ಇಂಗ್ಲೀಷರ ಸಂಸ್ಕೃತಿಗಿಂತ ಮೇಲೆಂತ ವಾದಿಸುವುದಿಲ್ಲ ಕಾಂಗ್ರೆಸ್ ಬಡವರ ಸಂರಕ್ಷಕ ಸಂಸ್ಥೆ. ವ್ಯಾಪಾರಿಗಳನ್ನು ಹಾಳು ಮಾಡುವುದಿಲ್ಲ. ಹಿಂದೂಸ್ಥಾನದ ವ್ಯಾಪಾರವನ್ನು ಹೆಚ್ಚಿಸಬೇಕೆಂತ ಕಾಂಗ್ರೆಸಿನ ಅಭಿಪ್ರಾಯ. ವ್ಯಾಪಾರಿಗಳು ಕಾಂಗ್ರೆಸಿಗೆ ತುಂಬಾ ಸಹಾಯ ಮಾಡಿದ್ದಾರೆ ತ್ಯಾಗ ಮಾಡಿ ಈಗ ಅಲ್ಲದೂ ವ್ಯಾಪಾರಿಗಳು ಕಾಂಗ್ರೆಸನ್ನು ತಮ್ಮ ಸಂಸ್ಥೆಯನ್ನಾಗಿ ಮಾಡಿಕೊಳ್ಳಬಹುದು. ಕಾಂಗ್ರೆಸ್ ಬಡವ, ಬಲ್ಲಿದ ಸಾಹುಕಾರ ಸಹ ಸೇರಿದ ಸಂಸ್ಥೆಯಾಗಿದೆ. ದೊಡ್ಡವರಿಗೂ ರಾಜರಿಗೂ ಕಾಂಗ್ರೆಸ್ ಏನು ಹೇಳುತ್ತದೆಯೆಂದರೆ—'ನೀವು ಈ ವರೆಗೆ ಬಡವರ ಹಗಲ್ದೋಚಿದ್ದಿರಿ. ಇನ್ನಾದರೂ ಇಳಿಯಿರಿ ಬಡವರನ್ನು ಕಾಪಾಡುವವರಾಗಿರಿ. ಇಂಗ್ಲೀಷರೂ ಸಹ ಬಡವರ ನಿಜವಾದ ಸೇವಕರಾಗಲಿ ಸ್ನೇಹಿತರಾಗುವುದಾದರೆ ಅವರಿಗೆ ಸ್ವಾಗತವನ್ನೀಯುತ್ತೇವೆ. ಯಜಮಾನರಾಗಿರಲು ಒಪ್ಪುವದಿಲ್ಲ.'

ಅದೇ ದಿನ ಸದರಿ ಸಂಸ್ಥೆಯ ಅಧ್ಯಕ್ಷರು ಗಾಂಧಿಜೀಯವರಿಗೆ ಗಾರ್ಡನ್ ಪಾರ್ಟಿ ಕೊಟ್ಟರು. ಅಲ್ಲಿ ಇಂಡಿಯಾ ಸರಕಾರದ ಆರ್ಥಿಕ ಮಂತ್ರಿಗಳೊಡನೆ ಒಂದು ಗಂಟೆಯವರೆಗ ಮಾತನಾಡುತ್ತಿದ್ದರು ಹಳೇ ಐ ಸಿ ಯಸ್. ಸ್ನೇಹಿತರ ಸಂಗಡಲೂ ಮಾತಾಡಿದರು.

ದಿ ಕ್ರಿಶ್ಚಿಯನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ.

ಮಂಗಳೂರು, ದ ಕನ್ನಡ.

ಯಾವತರ್ಹ ಬಗೆಯ ರಬ್ಬರು ಮೋಹರುಗಳು ಕನ್ನಡಿಯ ಸೈನ್ ಬೋರ್ಡು, ಹಾಪ್ ಟೋನ್ ಬ್ಲಾಕ್ ಇತ್ಯಾದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಚಾಳಿಕೆಗೆ ಒಮ್ಮತೆ ಕಡಿಮೆಗೆ ಕೊಡಲಾಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಿರಿ.

12—4

ಭಗತ್‌ಸಿಂಗರು ಅತ್ಯಂತ ಆನಂದದಿಂದ ಗಲ್ಲಿಗೇರಿದರು.

೨೩ನೇ ತಾ. ಮಧ್ಯಾಹ್ನ ೩ ಗಂಟೆಯಿಂದ ಲಾಹೋರ್ ತುರಂಗದಲ್ಲಿ ಒಳ್ಳೇ ಶಾಂತತೆಯಿದ್ದಿತು. ತುರಂಗದ ಅಧಿಕಾರಿಗಳು ಬರುವರೆಂದು ಎಲ್ಲ ಕಡೆಯಲ್ಲಿಯೂ ಸ್ವಚ್ಛವಾಗಿರುವಂತೆ ಅಧಿಕಾರಿಗಳು ದಕ್ಷರಾಗಿದ್ದರು. ಭಗತ್‌ಸಿಂಗ ಪ್ರಭೃತಿಗಳು ತಮ್ಮ ಕೊನೆಯು ಸಮೀಪಿಸಿದುದನ್ನು ಕೇಳಿ ಅತ್ಯಂತ ಹರ್ಷಿತರಾಗಿದ್ದರು. ಮೇಜಿಸ್ಟ್ರೇಟರು, ತುರಂಗಗಳ ಮೇಲಧಿಕಾರಿಗಳು ತುರಂಗದಲ್ಲಿ ಹೋಗಿ ಈ ಪ್ರಭೃತಿಗಳನ್ನು ನೋಡಿದ ಕೂಡಲೇ ಭಗತ್‌ಸಿಂಗರು ಮೇಜಿಸ್ಟ್ರೇಟರನ್ನುದ್ದೇಶಿಸಿ ಹೀಗೆ ನುಡಿದರು. "ಮೇಜಿಸ್ಟ್ರೇಟರೇ, ನಿಜವಾಗಿಯೂ ನೀವು ಸುದೈವಿಗಳು. ದೇಶದ ಸ್ವಾತಂತ್ರ್ಯಕ್ಕಾಗಿ ಸೈನಿಕರು ಮರಣವನ್ನು ಹೇಗೆ ಅಪ್ಪಿಕೊಳ್ಳುವರೆಂಬುದನ್ನು ಈವತ್ತು ನಿಮ್ಮ ನಿದರ್ಶನಕ್ಕೆ ತಂದು ಕೊಡುವೆವು." ಈ ಮಾತು ಕೇಳಿ ಮೇಜಿಸ್ಟ್ರೇಟರು ದಿಗಿಲು ಬಿದ್ದು ನಿಂತರು. ಕೋಣೆಯಿಂದ ಹೊರಗೆ ತೆಗೆದ ಕೂಡಲೇ ಇವರನ್ನು ಗಲ್ಲಿಗೇರಿಸುವರೆಂದು ಎಲ್ಲ ಕೈದಿಗಳಿಗೂ ಗೊತ್ತಿದ್ದುದರಿಂದ ಎಲ್ಲರೂ 'ಭಗತ್‌ಸಿಂಗ ಝಿಂದಾಬಾದ್' ಎಂದು ಜಯಘೋಷ ಮಾಡ ಹತ್ತಿದರು.

ಕ್ರಾಂತಿಯು ಚಿರಾಯುವಾಗಲಿ, ಸಾಮ್ರಾಜ್ಯವು ನಷ್ಟವಾಗಲಿ, ಕೂಲಿಕಾರ ಪಕ್ಷಕ್ಕೆ ಜಯವಾಗಲಿ ಎಂದು ಜಯಘೋಷ ಮಾಡುತ್ತಾ ಕೋಣೆಯಿಂದ ಇವರು ಹೊರಬಿದ್ದು ಫಾಶೀ ಗೇಟಿನ ಹತ್ತಿರ ಬಂದರು. ಮೂವರನ್ನು ಹಲಗೆಯ ಮೇಲೆ ನಿಲ್ಲಿಸಿದರು. ಭಗತ್‌ಸಿಂಗರ ಬಲಕ್ಕೆ ರಾಜಗುರು ಮತ್ತು ಎಡಕ್ಕೆ ಸುಖದೇವರು ನಿಂತಿದ್ದರು. ಅವರ ಕುತ್ತಿಗೆಗೆ ಹಗ್ಗಗಳನ್ನು ಸಡಿಲಾಗಿ ಕಟ್ಟಿದ್ದರು. ಪ್ರಿಯನು ಹೆಂಡತಿಯನ್ನು ಮುದ್ದಾಡುವ ರೀತಿಯಲ್ಲಿ ಅವರು ಈ ಹಗ್ಗವನ್ನು ಚುಂಬಿಸಿದರು. ಅವರು ನಕ್ಕು ತಮ್ಮೊಳಗೆ ಮಾತಾಡಿದರು. ಒಬ್ಬರನ್ನೊಬ್ಬರು ಅಪ್ಪಿಕೊಂಡರು. 'ಕೆಲವು ಹೊತ್ತಿನಲ್ಲಿಯೇ ನಾವು ಚಂದ್ರಶೇಖರ ಆಝಾದ, ಭಗವತೀ ಚರಣ, ಯತೀಂದ್ರನಾಥ ದಾಸರಿದ್ದೆಡೆಗೆ ಹೋಗಿ ಸಭೆ ಕೂಡಿಸುವೆವು' ರಾಜಗುರು ಮಾತಾಡಿದರು. ಎಲ್ಲರೂ ಜಯಘೋಷ ಮಾಡುತ್ತಿರಲು ಅವರ ದಂಡಗಳು ಬಿಂಗಡಿಸಲ್ಪಟ್ಟವು. ಒಂದೇ ಸೆಕೆಂಡಿನಲ್ಲಿ ಭಗತ್‌ಸಿಂಗರು ಪರಂಧಾಮವನ್ನೈದಿದರು. ಉಳಿದಿಬ್ಬರಿಗೆ ಎರಡು ಮೂರು ಸೆಕೆಂಡು ಹಿಡಿದವು. ೪೦ ಮಿನಿಟುಗಳ ನಂತರ ಶವಗಳನ್ನು ಸ್ಮಶಾನಭೂಮಿಗೆ ಒಯ್ದರು. ಶವಗಳನ್ನು ಚೆನ್ನಾಗಿ ಸುಡಲಿಲ್ಲ! ಕತ್ತಲೆಯಲ್ಲಿದ್ದು ಬಿಟ್ಟುದನ್ನೆಲ್ಲ ನದಿಯಲ್ಲಿ ಚೆಲ್ಲಿ ಮನೆಗೆ ಹೋದರು. ಮರುದಿನ ಕೆಲವರು ಹೋಗಿ ಸುಡದೇ ಇದ್ದ ಭಾಗವನ್ನು ತೆಗೆದುಕೊಂಡು ಒಂದು ಒಳ್ಳೆ ಮೆರವಣಿಗೆ ಮಾಡಿ ಅದಕ್ಕೆ ಅಗ್ನಿ ಸಂಸ್ಕಾರ ಮಾಡಿದರು. ಆ ಕಾಲಕ್ಕೆ ಕೂಡಿದ ಜನ ಸಮೂಹದ ಕಣ್ಣೊಳಗಿಂದ ಅಶ್ರುಧಾರೆಗಳು ಒಂದೇ ಸಮನೆ ಸುರಿಯುತ್ತಿದ್ದವು. ಅನೇಕರು ಮೂರ್ಛಿತರಾಗಿದ್ದರು.

"ಕರ್ಮವೀರ"

ಖಾದಿಯ ಹಾಡು.

(ಕದು—ಧೀರನೆ ಶೂರನೆ) ಎಂಬಂತೆ

ಪರದೇಶದ ಬಟ್ಟೆಯು ಬಿಡು ಬಿಡು ಸುಡು ಸುಡು |
ದೇಶಬಂಧು ||ಪ|| ದಯವಿಡು ದೇಶಬಂಧು ||

ಸ್ವರ್ಣಧಣಿಯೂ ಸ್ವರ್ಣವನೆಲ್ಲವ |
ಪೂರ್ಣವಿದೇಶೀ ವಸ್ತ್ರಕೆ ಕೊಡುವಾ |
ಕರ್ಣ ಕಠೋರ ವಿಚಾರವ ನುಡು ನುಡು |
ದೇಶಬಂಧು ||೧||

ಪರದೇಶಿಗಳಾ ವಸನಕ್ಕೀಯುವ |
ಭರತಖಂಡದಾ ಜೀವನ ಧನವಾ |
ಪರಮ ಸ್ವದೇಶೀ ಖಾದಿಗೆ ಕೊಡು ಕೊಡು |
ದೇಶಬಂಧು ||೨||

ಸಾವಿರ ಗಟ್ಟಲೆಯಲಿ ಭಾರತದಲಿ
ಸಾವರು ಕೂಳಿಲ್ಲದೆ ಹಸಿವಿಂದಲಿ |
ಜೀವನ ಮಾರ್ಗದ ಬಟ್ಟೆಯ ಕೊಡು ಕೊಡು |
ದೇಶಬಂಧು ||೩||

ಮಾನಿನಿಯರು ಹಲವರು ಚಿತ್ತಲೆಯಲಿ |
ಕಾನನದೊಳಗಿರುವರು ಹಲವೆಡೆ ಹಲ |
ಮಾನದ ಹಾದಿಯ ಖಾದಿಯ ಕೊಡು ಕೊಡು. |
ದೇಶಬಂಧು ||೪||

ಚರಕವ ತಿರುಗಿಸಿ ಬಟ್ಟೆಯನೊದಗಿಸಿ |
ಪರದೇಶೀ ವ್ಯಾಪಾರವ ನಿಲ್ಲಿಸಿ |
ಧರೆಗೆ ಸ್ವರಾಜ್ಯದ ಖಾದಿಯ ಕೊಡು ಕೊಡು |
ದೇಶಬಂಧು ||೫||

ಭಾರತ ಸ್ವಾತಂತ್ರ್ಯದ ಮಿತ್ರನು |
ಧೀರ ಮಹಾತ್ಮನು ಸಾರಿದ ನುಡಿಯನು |
ಮೀರದೆ ಮನ್ನಿಸಿ ಖಾದಿಯ ತೊಡು ತೊಡು ||
ದೇಶಬಂಧು ||೬||

ಪುಂಡೂರು ಲಕ್ಷ್ಮೀ ನಾರಾಯಣ ಪುಣಿಂಚತ್ತಾಯ.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 28-3-31 ರಲ್ಲಿ ನಡೆಯಿತು. 12 ಡೈರೆಕ್ಟರುಗಳು ಹಾಜರಿದ್ದರಲ್ಲದೆ ಕೋ-ಆಪರೇಟಿವ್ ರಿಜಿಸ್ಟ್ರಾರವರೂ ಸಹ ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ ಜನವರಿ ಮತ್ತು ಫೆಬ್ರವರಿ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) ಆನಂದಪುರ ಸೊಸೈಟಿಗೆ ರೂ 500 (2) ಮೂರ್ನಾಡು ಟೌನ್ ಸೊಸೈಟಿಗೆ ರೂ 400 (3) ಪಾಡಿನಾಲ್ಕುನಾಡು ಕೋ-ಆಪರೇಟಿವ್ ಸ್ಟೋರ್ಸಿಗೆ ರೂ. 1000 (4) [illegible]ಡ್ತ ಸೊಸೈಟಿಗೆ ರೂ 200 (5) ಅಮ್ಮತ್ತಿ ಟೌನ್ ಸೊಸೈಟಿಗೆ ರೂ. 500 (6) ಹೊಸೂರು ಸೊಸೈಟಿಗೆ ರೂ 500. (7) ಬೆಟ್ಟತ್ತೂರು ಸೊಸೈಟಿಗೆ ರೂ. 500 (8) ಬಲಂಬೇರಿ ಸೊಸೈಟಿಗೆ ರೂ 300 (9) ಪೊನ್ನಂಪೇಟೆ ಸ್ಟೋರ್ಸ್ಸಿಗೆ ರೂ. 1000 ಮತ್ತು (10) ಗೋಣಿಕೊಪ್ಪಲು ಟೌನ್ ಸೊಸೈಟಿಗೆ ರೂ. 1000.

4. ಈ ಕೆಳಗಿನ ಸೊಸೈಟಿಗಳಿಗೆ ಕಾರಣಾಂತರಗಳಿಂದ ಸಾಲಗಳು ಮಂಜೂರಾಗಲಿಲ್ಲ.

(1) ಹುದಿಕೇರಿ ಟೌನ್ ಸೊಸೈಟಿ, (2) ಕೊಡಗು ವಿದ್ಯಾಶಾಲಾ ಉಪಾಧ್ಯಾಯರ ಸೊಸೈಟಿ (3) ನಂದಿಗುಂದ ಸೊಸೈಟಿ (4) ಮಡಿಕೇರಿ ಟೌನ್ ಸೊಸೈಟಿ (5) ಹಾಕತ್ತೂರು ಸೊಸೈಟಿ ಮತ್ತು (6) ಗಾಳಿಬೀಡು ಸೊಸೈಟಿ

5. ಮೆ. ಸಿ. ಎನ್ ವೆಂಕಪ್ಪಯ್ಯನವರು ಬ್ಯಾಂಕಿನ ಗೌರವ ಕಾರ್ಯದರ್ಶಿಯಾಗಿಯೂ (ಸೆಕ್ರೆಟರಿ) ಮೆ. ಮನೆಯಪಂಡ ಮುಂ ಬೆಳ್ಯಪ್ಪನವರು ಟ್ರೆಜರರಾಗಿಯೂ ಎರಡನೆ ತಡವೆ ಚುನಾಯಿಸಲಾಯಿತು.

6 ಜನರಲ್ ಮೀಟಿಂಗಿಗೆ ಬಂದ ಡೆಲಿಗೇಟರುಗಳಿಗೆ ಕೊಟ್ಟ ತಿಂಡಿ ತೀರ್ಥಗಳಿಗೆ ಈ ಮೊದಲೇ [illegible] ಮಾಡಿದ ಮೊಬಲಗಿಗಿಂತ ಹೆಚ್ಚಿಗೆ ಖರ್ಚಾದ ಮೊಬಲಗನ್ನು ಕಾಮನ್ ಗುಡ್ ಫಂಡಿನಿಂದ ಕೊಡುವಂತೆ ತೀರ್ಮಾನವಾಯಿತು.

7 ಈರಳೆ ಸೊಸೈಟಿ, ತೂಚಮಕೇರಿ ಸೊಸೈಟಿ, ಚೇಲಾವರ ಸೊಸೈಟಿ, ಹೊದವಾಡ ಸೊಸೈಟಿ ಮತ್ತು ಕುಂದ ಸೊಸೈಟಿಯವರು ತಮ್ಮ ಈ ವರ್ಷದ ಕಂತಿನ ಮೊಬಲಗು ಸೆಂಟ್ರಲ್ ಬ್ಯಾಂಕಿಗೆ ವಾಪಾತಿ ಮಾಡಲು ವಾಯಿದೆ ಕೊಡಬೇಕಾಗಿ ಬರೆಕೊಂಡ ಅರ್ಜಿ ಓದಲಾಯಿತು.

ಮೇಲ್ಕಂಡ ಅರ್ಜಿಗಳನ್ನು ಫೆಡರೇಶನ್ ಆಫೀಸಿಗೆ ಅವರ ಇರಾದೆ ಬಗ್ಗೆ ಕಳುಹಿಸಬೇಕಾಗಿ ತೀರ್ಮಾನವಾಯಿತು.

8 ಕೆಲವು ಸೊಸೈಟಿಗಳು ಸುಪರ್‌ವಿಜನ್ ಫಂಡು ಹಣ ಕಳುಹಿಸದೆ ಇರುವುದರಿಂದ ಆ ವಿಷಯ ಫೆಡರೇಶನ್ನಿನವರು ಬರೆಕೊಂಡ ಲೆಟ್ರು ಓದಲಾಯಿತು..

ಬ್ಯಾಂಕಿನಿಂದ ಸೊಸೈಟಿಗಳಿಗೆ ತಾ. 22—10-30 ರಲ್ಲಿ ಕಳುಹಿಸಿದ ಸರ್ಕ್ಯುಲಾರ್ ಮೇರೆ ನಡಕೊಳ್ಳುವಂತೆ ಕೇಳಿಕೊಳ್ಳಬೇಕೆಂತ ತೀರ್ಮಾನವಾಯಿತು.

9. ಅಮ್ಮತ್ತಿ ಟೌನ್ ಸೊಸೈಟಿಯವರು ತಾ 5—2—31 ರಲ್ಲಿ ಹೊಂದಿಕೊಂಡ 500 ರೂಪಾಯಿ ಸಾಲಕ್ಕೆ ತಿಂಗಳ ಕಂತು ಕೊಟ್ಟದ್ದರಿಂದ ಅದಕ್ಕೆ 3 ತಿಂಗಳ ಕಂತು ಕೊಡಬೇಕಾಗಿ ಬರೆಕೊಂಡ ಅರ್ಜಿ ಓದಲಾಯಿತು.

ಮೇಲ್ಕಂಡ ಹಣಕ್ಕೆ ತಿಂಗಳ ಕಂತನ್ನು ಬದಲಾಯಿಸಿ 3 ತಿಂಗಳ ಕಂತನ್ನು ಕೊಡಬಹುದಾಗಿ ತೀರ್ಮಾನವಾಯಿತು.

10. ತಾ 18-4-31ರಲ್ಲು ಆಗುವ ಫೆಡರೇಶನ್ ಜನರಲ್ ಮೀಟಿಂಗಿಗೆ ಮೆ. ಗಳಾದ ಐಚೆಟ್ಟಿರ ಸುಬ್ಬಯ್ಯನವರನ್ನೂ ಮತ್ತು ಪಾಂಡಂಡ ಚಂಗಪ್ಪನವರನ್ನೂ ಡೆಲಿಗೇಟರುಗಳಾಗಿ ಹೋಗುವಂತೆ ತೀರ್ಮಾನವಾಯಿತು.

11. ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗಿಗೆ ಬಂದ ಸುಪರ್‌ವೈಜರುಗಳಿಗೂ ಮತ್ತು ಯೂನಿಯನ್ ಪ್ರೆಸಿಡೆಂಟರುಗಳಿಗೂ ಬ್ಯಾಂಕಿನಿಂದ ಪ್ರಯಾಣದ ಭತ್ಯ ಕೊಡಲಾಗುವುದಿಲ್ಲವೆಂತಲೂ, ಫೆಡರೇಶನಿನವರು ಕೊಡಬೇಕಾದದ್ದೆಂತಲೂ ತೀರ್ಮಾನವಾಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು.)

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಡಿಸ್ಟ್ರಿಕ್ಟ್ ಬೋರ್ಡು.

ಕಳೆದ ಕೌನ್ಸಿಲಿನ ಬಜೆಟ್ ಮೀಟಿಂಗಿನಲ್ಲಿ ಮೆ. ಪಾಂಡಂಡ ಚಂಗಪ್ಪನವರು ರೈತರಿಗೆ ಕುಡಿಯುವ ಒಳ್ಳೆ ನೀರಿನ ಬಾವಿಗಳನ್ನು ತೋಡಿಸಲಿಕ್ಕಾಗಿ ಪ್ರತಿ ವರ್ಷವೂ ಐದು ಸಾವಿರ ರೂಪಾಯಿಗಳನ್ನು ಪ್ರೊವಿನ್ಸಿಯಲ್ ಗವರ್ನಮೆಂಟಿನಿಂದ ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡಬೇಕೆಂದೂ, ಈ ಹಣವನ್ನು ಪ್ರತ್ಯೇಕವಾಗಿ ಒಳ್ಳೆ ನೀರಿನ ಸಂಬಂಧಕ್ಕಾಯಿಗೆಂದೇ ಅದರಲ್ಲೂ ಉತ್ತರ ಕೊಡಗಿನ ರೈತರಿಗೆ ಕುಡಿಯುವ ನೀರಿಗೆ ಬಹಳ ತಾಪತ್ರೆಯೊದ್ದರಿಂದ ರೆವಿನ್ಯೂ ಇಲಾಖೆಯ … ಬಾವಿಗಳನ್ನು ತೋಡಿಸಿಕೊಡಬೇಕೆಂದೂ ಕೇಳಿಕೊ… ಸರ್ಕಾರವು ಈ ಠರಾವನ್ನು ಒಪ್ಪಿಕೊಂಡರೆಂದು ಪ… ಮೂಲಕ ತಿಳಿಯುತ್ತೇವೆ ಈ ಹಣವನ್ನು ಡಿ… ಬೋರ್ಡಿನ ಅಧಿಕಾರಿಗಳೇ ಎಲ್ಲೆಲ್ಲಿ ಕುಡಿಯುವ ನೀ… ವಶ್ಯಕತೆ, ಬಹಳ ಇದೆಯೆಂದು ರೆವಿನ್ಯೂ ಅಧಿಕಾರಿಗಳ … ವೂ, ಅಭಿಪ್ರಾಯವೂ ತೆಗೆದುಕೊಂಡು ಬಾವಿಗಳ … ಸಮೃದ್ಧಿಕ್ಕೆ ನಿಶ್ಚಯಿಸಿ ರೈತರ ಕಷ್ಟವನ್ನು ನಿವಾರಿಸಿಕೊ… ದು ಘನ ಸರ್ಕಾರದವರಲ್ಲಿಯೂ, ಡಿಸ್ಟ್ರಿಕ್ಟ್ ಬೋ… ನಲ್ಲಿಯೂ ಉತ್ತರ ಕೊಡಗಿನ ರೈತರ ಪರವಾಗಿ … ವ ಕೊಡಗಿನ ಬಹಳ ಕಡೆಯಲ್ಲಿಯೂ, ದಕ್ಷಿಣ ಕೊ… ಲವು ಸ್ಥಳಗಳಲ್ಲಿಯೂ ಈ ಕುಡಿಯುವ ನೀರು ಇ… ಷ್ಟು ಸಂಬಂಧ ಗ್ರಾಮ ಗ್ರಾಮವನ್ನೇ ಅಗಲಿ … ದ್ದಾರೆ

ಕೊಡಗು ಹಜರತ್ ಚೀಫ್ ಕಮಿಶನರ್ ಸಾಹೇಬರವರಲ್ಲಿ ವಿನಂತಿ!

ಪಾಡಿನಾಲ್ಕು ನಾಡೆಂಬದ್ದು ಪೂರ್ವದಲ್ಲಿ … ಸ ಮಾಡುತ್ತಿತ್ತೋ ಎಂಬದ್ದು ನಾನರಿಯೆನು. ಆ … ಪಾಪ ಮಾಡದಿದ್ದರೆ ಈಗಿನ ನವನಾಗರಿಕತೆಯ … ಇಷ್ಟು ಹಿಂದುಳಿಯಲು ಕಾರಣವೇನು? ಕೊಡಗಿ… ಈಗ ಕೂಡಗನ್ನಾಳುವವರು ಪಾಡಿನಾಲ್ಕುನಾಡಿನ … ಳುತ್ತಾರೆ. ಆದರೆ ಡಿ. ಮೆ. ಸಾಹೇಬರು ಪಾ… ನಾಡಿನವರು. ಅವರು ಯೋಚಿಸಿದರೆ ನರ್ಸವೂ … ವೇಂದ್ರ ಲೋಕದಿಂದ ಬಿಳಿ ಆನೆಯನ್ನೇ ತರಬಹು… ಮೇಲಾಧಿಕಾರಿಗಳಾದ ತಮ್ಮಲ್ಲಿ ಹೇಳಬಹುದು. ಧಾರಾಳ ನೋಡಿದರೆ ಈ ಡಿ. ಮೆ. ಸಾಹೇಬರವರು ಈ ಪಾಡಿನಾಲ್ಕು ನಾಡಿನವರೇ ಆದದರಿಂದ ತ… ಗೆ ತಾನೇ ಹ್ಯಾಗೆ ಶಿಫಾರಸ್ ಮಾಡುವದೆಂಬಂತೆ ತನ… ಗೆ ತಾನೇ ಶಿಫಾರಸ್ ಮಾಡಲು ಹಿಂಜರಿಗಿದ್ದರಿಂದ ಪಾಪದ ಪಾಡಿನಾಲ್ಕು ನಾಡಿನ ಪಾಡು ಹೀಗಾಗಿದೆ ಗಾಗಿದೆಯೆಂದು ತಾವು ಸವಾಲ್ ಮಾಡಬಹುದು. ಕಾಲದ ಚಳವಳದಲ್ಲಿ ತಾವು ಈ ದೇಶದ ಆಳ್ವಿಕೆಗೆ … ನಿಂದ ಇದು ವರೆಗೆ ಈ ನಮ್ಮ ಕೊಡಗಿನ ಎಲ್ಲಾ … ನೋಡಿರುತ್ತೀರೆಂದೂ 700 ಮೈಲ್ ಈ ಮೊದಲೇ … ತ್ತೀರೆಂದು ಪತ್ರಿಕೆಯಲ್ಲಿ ನೋಡಿರುತ್ತೇನೆ.

ಹಾಗಿದ್ದ ಪಕ್ಷಕ್ಕೆ ಈ ಲೇಖಕನು ಒತ್ತಿ ಹೇ… ಳ್ಳಿಲ್ಲ. ಕೊಡಗಿನಲ್ಲಿ ಮಡಿಕೇರಿ—ನಾಪೋಕ್ಲು … ಅರಮನೆಯಿಂದ ವೀರರಾಜೇಂದ್ರಪೇಟೆಗೆ ಹೋಗುವ … ಸ್ಥಿತಿ ಗತಿ ಹ್ಯಾಗಿದೆ. ಕೊಡಗಿನ ಎಲ್ಲ ಭಾಗಕ್ಕಾಗಿ ಲಾರಿ ಓಡುತ್ತೆ. ಈ ಪಾಪಿ ನಾಡಾದ ಪಾಡಿನಾಲ್ಕು ಮಧ್ಯಕ್ಕಾಗಿ ಮೇಲ್ಕಂಡ ರಸ್ತೆಯಲ್ಲಿ ಓಡುತ್ತೇನು?

ನಾಪೋಕ್ಲಿನಲ್ಲಿ ಬಡ ರೈತರಿಗಾಗಿ ಬಹತರ … ಲಾಡಿಸಲು ಒಂದು ಸ್ಟೋರ್ ಸೊಸೈಟಿ ತೆರೆದು … ಮಾಡಿದ ಸೊಸೈಟಿಗೆ ಬೇರೆ ದೇಶದಿಂದ ಸಾಮಾನು ತ… ತ್ತಲು ಲಾರಿಗೆ ಲೈಸನ್ಸ್ ಕೇಳಿದ್ದಕ್ಕೆ ಗರೀಬ ರೈತರ … ತಿಳಿದ ಡಿ. ಮೆ. ಸಾಹೇಬರವರು ಕೊಟ್ಟ ಲೈಸನ್ಸ್ ರದ್ದು ಮಾಡಿದ್ದರಿಂದ ಸರಕಾರಿ ಕಂದಾಯ ಕಟ್ಟಲೂ ಬ್ಯಾಂಕಿನ ಸಾಲ ಮರುಪಾವತಿ ಮಾಡಲೂ, ಸಹುಕಾರರ ಸಾಲ ಮರುಪಾವತಿ ಮಾಡಲು ಮುಸ್ಕಿಲಾ… ಲಾರಿಗೆ ಲೈಸನ್ಸ್ ಇರುವಾಗ್ಯೆ 580 ಭಟ್ಟಿ ಒತ್ತ … ಳುಹಿಸಲ್ಪಟ್ಟಿತು. ಈ ನಿರೀಕ್ಷಣೆಯಿಂದ ಒಂದು ಬಟ್ಟಿಗಿಂತ ಹೆಚ್ಚಾಗಿ ರೈತರ ಭತ್ತವು ಸ್ಟೋರಿಗೆ ಕೊ… ರೆಯಾಗಿ ತಿಳಿಯುತ್ತೆ. ಲೈಸನ್ಸ್ ರದ್ದು ಮಾಡಿದ್ದ… ಲ್ಕಂಡ ಮರುಪಾವತಿ ಮತ್ತು ಸರಕಾರಿ ಕಂದಾಯ … ಟ್ಟಬೇಕೆಂಬದು ತಾವೇ ಯೋಚಿಸಬೇಕಾದ ಕಾ… ದುತ್ತೆ.

ಇತ್ತಲಾಗಿ ಕಕ್ಕಬೆ ಸ್ಕೂಲಿಗೆ ಹಂಚು ಹಾಕ… ಡಿ ಬೋರ್ಡಿನವರು 300/ರೂಪಾಯಿ ಮಂಜೂರ್ … ದುತ್ತಾರೆ ಈ ಹಂಚು ತರುವರೆ ಲಾರಿಗೆ ಲೈಸನ್ಸ್ ಇ… ರೆ 1,000 ಸಾವಿರ ಹಂಚಿಗೆ 80 ರೂಪಾಯಿಯಲ್ಲು ಕಕ್ಕೆ … ಲಿವರ ಕೊಡುತ್ತಾರೆ ಲಾರಿಗೆ ಲೈಸನ್ಸ್ ಇಲ್ಲದ್ದರಿಂದ … ಲ್ಲು ತರುವದಾದರೆ ಕಕ್ಕಬೆಗೆ 1000 ಹಂಚಿಗೆ 120 ರೂ… ಕೇಳುತ್ತಾರೆ. ಹಾಗಾದರೆ ನಾವು ಪಾಪಿಗಳಲ್ಲವೋ?

ಈ ಮೇಲ್ಕಂಡ ಕಾರಣಗಳನ್ನೆಲ್ಲ ಘನಚಿತ್ತಕ್ಕೆ … ಮಡಿಕೇರಿಯಿಂದ ನಾಲ್ಕುನಾಡು ಅರಮನೆ, ಅರಮನೆ… ವೀರರಾಜೇಂದ್ರಪೇಟೆಗೆ ಕೊಡಗಿನ ಎಲ್ಲಾ ಭಾಗಕ್ಕೆ … ನ್ಸ್ ಕೊಟ್ಟಂತೆ ನಮಗೂ ಲೈಸನ್ಸ್ ಕೊಡುವಂತೆ … ಶ್ಯಂಗಾಗಿ ಪಾಡಿನಾಲ್ಕುನಾಡು ಸಹಕಾರಿ ಯ… ಕೋಟಿಪವರೂ, ನಾಪೋಕ್ಲು ಸ್ಟೋರಿನವರೂ "ಕೋ… ಶನ್ ಯೂನಿಯನ್ ಸೊಸೈಟಿ ಕಕ್ಕಬೆ ಸ್ಕೂಲ್ ನ… ಕೇಳಿಕೊಂಡಿರುತ್ತಾರೆಯಾಗಿ ತಿಳಿಯುತ್ತೆ. ಒಪ್ಪೆ ಮತ್ತ… ಗಿ ಅತಿ ವಿನಂತಿ.

ಪ್ರೆಸಿಡೆಂಟ್,
ಕಾರ್ಪೊರೇಶನ್ ಯೂನಿಯನ್ ಸೊ…

ಸರ್ಕಾರದವರ ಸಹಾಯ, ಲೀಜನರೇಶನ್
ವಿಸ್ತರಣ ಗೋಳು.

ಜಗ್ ಪತ್ರಿಕೆಯ ಎಡಿಟರವರೇ—[illegible] ಈ ಪತ್ರವನ್ನು ತಮ್ಮ ಪತ್ರಿಕೆಯಲ್ಲಿ ಕೊಡಗು ಚೀಫ್ ಕಮಿಷನರ್ ಸಾಹೇಬರವರ, ಕೊಡಗು ಕಮಿಷನರ್ ಮತ್ತು ... ಸಾಹೇಬರವರ ಜಾಹಿರಾತಿಗೆ ತರುವಿರಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ.

[illegible]

ನ. ? ಈ ಸಮ್ಮಂಧ ಸರಕಾರದವರು ಎಷ್ಟು ದಡಿದರು, ತಪ್ಪಾಗದಂತ...

[illegible]

ಇಲ್ಲಿಯುವ

ರಬ್ಬರ್ ಮೋಹರುಗಳು.

ನೀವು ಅಪೇಕ್ಷಿಸುವ ಯಾವತ್ತು ಮಾದರಿಯಲ್ಲಿ
ತಯಾರಿಸಿ ಕೊಡಲಾಗುವವು.

[illegible]

ದಿ ಕ್ರೆಸೆಂಟ್ ರಬ್ಬರ್ ಸ್ಟಾಂಪ್ ಕಂಪೆನಿ,
12—4 ಮಂಗಳೂರು, ದ ಕನ್ನಡ.

Ford SALES AND SERVICE

NEW BEAUTY!!
For the new Ford.
New Body lines and colours.

Rustless steel for Exposed metal parts
Fully Enclosed, silent six brake system.
Four Houdaille Hydraulic double-acting shock absorbers Triplex shatter-proof glass windshield.
Quick acceleration ease of cantrol
55 to 65 miles an hour Smoothness, balance and security at all speeds unusual number of ball bearings.
40 different kinds of steel
Typical Ford Ecomony, reliability and long life

Good Dealer servic after you buy the Car.
A Wonderful Hill climber!!!
Easy instalment terms if you prefer.
For Demonstration & other particulars.
Please apply to:—

S. Sunder Rau,
Sole Ford Dealer for coorg,
24—24 MERARA.

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕವೆಂಬ ಮಂತ್ರ ಯಂತ್ರದ ತಾಯಿತ.

[illegible]

ಸ್ವಳ ಸಂಕೇತದ ಮೂಲಕ ಮಾದರಿಗಾಗಿ ಬಯಸುವ ಪತ್ರಿಕೆ ಒಂದೇ ಕೊಟ್ಟಿದೆ.

[illegible]

52—23 ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,
ಮು. ಪೋ. ಅಥಣಿ, ಜಿ. ಬೆಳಗಾಂವ.

ಎಂ. ಎಸ್. ಶಿದ್ದಪ್ಪ ಬ್ರದರ್ಸ್
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[illegible] ಬಂಗಾರದ ನಿಬ್ಬು ಹಾಕಿದ [illegible] ಆದ ಫೌಂಟೆನ್‌ಪೆನ್‌ಗಳು.

[illegible] ಫೌಂಟೆನ್‌ಪೆನ್ 1ಕ್ಕೆ	ರೂ	3	0	0
,, ಬಿಗ್ ಬ್ಯಾರೆಲ್ ಪೆನ್ 1ಕ್ಕೆ		3	3	0
,, ಸ್ಕ್ರ್ಯೂ ಕ್ಯಾಪ್ ಪೆನ್ 1ಕ್ಕೆ		3	8	0
,, ಬಿಗ್ ಬ್ಯಾರೆಲ್ ಸ್ಕ್ರ್ಯೂ ಕ್ಯಾಪ್ ಮೊಡಲ್ ಕಲರ್ ಫೌಂಟೆನ್‌ಪೆನ್ 1ಕ್ಕೆ		3	14	0
,, ಮೊಡಲ್ ಕಲರ್ ಸ್ಕ್ರ್ಯೂ ಕ್ಯಾಪ್ ಫೌಂಟೆನ್‌ಪೆನ್ 1ಕ್ಕೆ		4	2	0
,, ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರೌನ್ ಕಲರ್ ಫೌಂಟೆನ್‌ಪೆನ್ 1ಕ್ಕೆ		5	8	0
[illegible] ಫೌಂಟೆನ್‌ಪೆನ್ 1ಕ್ಕೆ		10	8	0
[illegible] ಪೆನ್ 1ಕ್ಕೆ		14 0 0, & 20	10	0
[illegible] ಫೌಂಟೆನ್‌ಪೆನ್ 1ಕ್ಕೆ		3 8 0, & 3	12	0
[illegible] ಫೌಂಟೆನ್ ಪೆನ್ 1ಕ್ಕೆ		6 4 0, & 6	12	0
[illegible] ಫೌಂಟೆನ್ ಪೆನ್ 1ಕ್ಕೆ		8 [illegible], & 8	10	0

ಟೈಂಪೀಸುಗಳು.

[illegible] ಸಣ್ಣ ಟೈಂಪೀಸ್	1ಕ್ಕೆ	3	6	0
[illegible] ಸಣ್ಣ ಟೈಂಪೀಸ್	1ಕ್ಕೆ	2	2	0
[illegible] ಟೈಂಪೀಸ್	1ಕ್ಕೆ	6 9 [illegible], & 6	15	0
[illegible] ಟೈಂಪೀಸ್	1ಕ್ಕೆ	7	2	0
[illegible] ಟೈಂಪೀಸ್ [illegible]	1ಕ್ಕೆ	8	10	0
[illegible] ಟೈಂಪೀಸ್	1ಕ್ಕೆ	9	6	0
[illegible] ಟೈಂಪೀಸ್	1ಕ್ಕೆ	13	1	0
[illegible] ವಾಚ್	1ಕ್ಕೆ	5	10	0
[illegible] ಪಾಕೆಟ್ ವಾಚ್	1ಕ್ಕೆ	12	4	0
[illegible] ವಾಚ್ 1ಕ್ಕೆ	5 4 0, 7 8 0, 10 0 0 & 12	8	0	

ಇಲ್ಲಿ ನಮೂನೆ [illegible] ಆದ [illegible] 1ಕ್ಕೆ 3—6—0 [illegible] ಸಿಗುತ್ತಾ [illegible]

[illegible] ದೊರೆಯುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
52—40 ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	23,160
ಜಮೊಬಂದ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೪ರ ಬಡ್ಡಿ ದೊರೆಯುತ್ತೆ.

ಸರ್ಕಾರ್ಕ್ಕೊಂದಾಪರೇಟಿವ್ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1–7–1930.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು ಕೊಡುವುದರಿಂದ ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52–14 ಗಿರಿಗಾಂವ, ಮುಂಬಯಿ.



12 bore Victor Cartridges Rs. 10/- Per 100

Mahomedally-Noorbhoy.

ARMS & AMMUNITION MART.

321 Abdul Rehman Street.
BOMBAY 3.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲೆಲ್ಲಾ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯು ಈಗಿನ ಸ್ಥಿತಿಯಿಂದ ಸ್ಪಷ್ಟ...

ಹೊಸ ಕೆಲಸ.	ಪ್ರೀಮಿಯಂ ವರಮಾನ
೧೯೨೭—೪೬.೮ ಲಕ್ಷ ರೂಪಾಯಿಗಳು.	೧೯೨೭—೧.೨೨ ಲಕ್ಷ ರೂಪಾಯಿಗಳು.
೧೯೨೮—೫೮.೫ ಲಕ್ಷ "	೧೯೨೮—೧೪೦ ಲಕ್ಷ "
೧೯೨೯—೭.೫೦ ಲಕ್ಷ "	೧೯೨೯—೧೬೧ ಲಕ್ಷ "

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು.

ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು

೧೯೨೪ ಒಂದು ವರ್ಷಕ್ಕೆ ೧೦೨೦ ... ರೂಪಾಯಿಗಳು.

೧೯೨೭ " " " ೨೫ "

ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದ್ದು ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭವು...

ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು:—

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

OR

ಎಂ. ವಿ. ಮುತ್ತುಕೃಷ್ಣ ನಾಯುಡ, ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

52–7

ಕೆ. ಸಿ. ಚಿಣ್ಣಪ್ಪ, ಏಜೆಂಟ್,

ಮಡಿಕೇರಿ.

ಮಲೇರಿಯೂನವು ಮಲೆಜ್ವರ, ಚಳಿಜ್ವರ, ಉರಿಜ್ವರ ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ, ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ.

ಕ್ರಯ ೩ ಔನ್ಸಿಗೆ 1–8–0, ಡಜನಿಗೆ 8–8– 16–8–0.

ಪಿತ್ತ, ರೋಗಕ್ಕೆ ಕಂಪೌಂಡು ಸಿರಪ್ ಕಾ...

ಪಿತ್ತಜ್ವರ, ಕೈಕಾಲು ಬಚ್ಚಲು, ರಕ್ತ ಇಲ್ಲದೆ ಬೆಳ್ಳಗಿರುವ ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ... ಗೊಂಡೆ ಮತ್ತು ಶರೀರ, ತಲೆತಿರುಗುವುದು, ತಲೆ ತಿರುಗುವುದು, ಹೊಟ್ಟೆ ಉರಿ, ಎದೆ ಸುಡುವದು, ನಾಲಿಗೆ ಒಣಗುವದು, ಮಲಮೂತ್ರಕ್ಕೆ ಭಂಗ, ಪಿತ್ತ ಕಾರುವದು, ನಿದ್ರೆ ಇಲ್ಲದೆ ಸಂಕಟವಾಗುವದು ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ. ಕ್ರಯ ಬಾಟ್ಲಿಗೆ 3–8–0.

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ.

ಶರೀರದಲ್ಲಿ ಬೀಳುವ ಬೊಕ್ಕೆ, ಕುರು, ಬೊಬ್ಬೆಗಳು, ಬೇಗ ಗುಣವಾಗದ ಹಳೆಯ ವ್ರಣಗಳು, ವಿವಿಧ ಬಗೆಯ ಚರ್ಮ ರೋಗ ಅತಿ ಶೀಘ್ರದಲ್ಲಿ ಗುಣಪಟ್ಟು ರಕ್ತ ಸಂಪೂರ್ಣ ಶುಚಿಯಾಗಿ, ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ಬಲವುಳ್ಳ ಕಂಪೌಂಡು ಸಿರಪ್ ಸರ್ಸಪರಿಲ ಎಂಬುದೇ. ಬಾಟ್ಲಿಗೆ ರೂಪಾಯಿ 3–4–0.

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನೋವ.

ತಿಂಗಳು ಗಟ್ಟಲೆಯ ಅತ್ರವು, ಹೊಟ್ಟೆನೋವು, ಕೈಕಾಲುಗಳ ಸೆಳತ, ಶರೀರದ ಬಲಹೀನತೆ, ವಾಯುಗಳ ಉಪದ್ರ, ರಕ್ತವು ಹರಿಯುವ ನಿಂತು ಬಿಡುವದು. ಅಲ್ಲದೆ ಸಮಯಕ್ಕೆ ಸ್ರಾವಿಸುವದು. ಬಹುಬಾಣಂತನದಲ್ಲಿ ಕೆಡತು ಇತ್ಯಾದಿ ಗರ್ಭಕೋಶದ ಎಲ್ಲಾ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನೋವ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ. ಕ್ರಯ ಬಾಟ್ಲಿಗೆ ರೂ. 3–8–0.

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣತೋರಿ, ಸೊಂಟಕ್ಕೆ ಬಲ ಇಲ್ಲದೆ ಇರುವದು. ಮೂತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ, ಬಾಳುವಿಕೆಯನ್ನೂ ಕುಂದಿಸಿಬಿಡುವ ಈ ಆಪತ್ತುಗಳನ್ನು ಬೇಬಿಟೋನ್ ಆಶ್ಚರ್ಯದಿಂದ ಗುಣ ಪಡಿಸುವದು. ಕ್ರಯ ಬಾಟ್ಲಿಗೆ 1–4–0.

ಶುದ್ಧ ಟಿಂಕ್ಚರ್ ಮದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ, ಆಸ್ಪತ್ರೆಗಳ ನಾನಾ ಬಗೆಯ ಸಾಮಾನುಗಳೂ, ಬಿಸಲಿಗೆ ಇಡತಕ್ಕ ಒಳ್ಳೇ ತರದ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಕ್ರಯಕ್ಕೆ ದೊರಕುತ್ತದೆ.

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ:—ಮಲೇರಿಯೂನ ಕಂಪೆನಿ,
ಹಂಪನಕಟ್ಟೆ, ಇಗರ್ಜಿಬಳಿ, ನಂಬರು 14, ಮಂಗಳೂರು.

52–23

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸಹ್ಯ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳ,

ಉತ್ತರ ಕೊಡಗಿಗೆ ಮೆ, ಪಾಲೇಂಗಡ ಕಾರ್ಯಪ್ಪನವರು,
" ಮೆ. ಚಾರಿರ ಮಾದಯ್ಯನವರು,
ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ಮೇದಪ್ಪನವರು,
" ಮೆ. ಅಮ್ಮಂಡ ಸುಬ್ಬಯ್ಯನವರು.
ನುರನಾಡು—ಮೆ. ಕೀಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಬಾದಿಭಂಡಾರ.)
ನಾಪೋಕ್ಲು—ಎನ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ದನಂಡ ಮಾಚಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
" ಮೆ. ಸಣ್ಣುವಂಡ ಬೋಪಯ್ಯನವರು,
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಮಡಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೊಣ್ಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸ...

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರ್ನು ಇತರೇಕಾರದ ಅಮಿತ ಜವಾಬ್ದಾರಿ ಪರಸ್ಪರ ಸಹಾಯ ಧನದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರ್ ಆಫೀಸಿಗೆ ಕಳುಹಿಸುವಾಗ ಅದು ಸರಿಯಾಗಿ ಬರೆಯಲ್ಪಡದೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಪಡಿಸುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಪಿಸಿದ ಹಾಗೆ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಜಾರ್ನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

Printed & published by P. I. Belliappa at "Kodagu" Press Mercara for "Kodagu" Ltd.

"KODAGU" OFFICE MERCARA.

ಕೊಡಗು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಚಂದಾ ರೂ. ೩—೮—೦.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೧೦ | ಮಡಿಕೇರಿ, ಸನ್ ೧೯೩೧ನೇ ಇಸವಿ ಏಪ್ರಿಲ್ ತಾರೀಕು ೧೭ ನೇ ಶುಕ್ರವಾರ. | ಸಂಚಿಕೆ ೪೯

V. Subramaniam & Co.
Jewellers.
DIAMOND MERCHANT, GOLD & SILVERSMITH.

Telegrams "Precious"

Deals in all –
SPORTS CUPS in all prices
MEDALS in up to date patterns
CASKETS in elegant styles

Nos 2 & 3 Kuppumuthu St
TRUVATESWARANPET
Post Box 543, Triplicane P.O.,
MADRAS.

Deals in all.
GEM SET JEWELS set with Diamonds Rubies etc
GOLD ARTICLES of all patterns
SILVER WARE in latest style.

52–22



GOOLAMHUSAIN ... SON
... of Firearms and Ammunition
Largest Importers of Firearms in India,
Cheapest priced firm in India,
210 Abdul Rehman ... BOMBAY.

54–3

ಬಾಲಾರ್ಕಮಧು.

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.

52 14

49

ಕೊಡಗು.

ಸಂ ೧೯೩೧ನೇ ಇಸವಿ

ಏಪ್ರಿಲ್ ತಾ. ೧೬ ನೇ ಶುಕ್ರವಾರ.

ಸ್ವರಾಜ್ಯ ಸರಕಾರದ ಸ್ವರೂಪ.

ಕಾಂಗ್ರೆಸಿನವರು ಸ್ವರಾಜ್ಯ ಪಡೆಯಲು ಹೋರಾಡುತ್ತಿದ್ದಾರೆ. ಈ ಹೋರಾಟದಲ್ಲಿ ಸರ್ವ ಜನರೂ ಭಾಗಿಗಳಾಗಬೇಕೆಂತ ಕಾಂಗ್ರೆಸಿನವರು ಕೋರಿಕೊಂಡದ್ದಕ್ಕೆ ಬಹಳ ಜನರು ಸೇರಿದರು. ಬಾರ್ಡೋಲೀ ತಾಲೋಕಿನವರು ಈ ಹೋರಾಟಕ್ಕೆ ಸೇರಿ ತಮ್ಮ ಮನೆ ಮಾರು ಆಸ್ತಿ ಪಾಸ್ತಿಗಳನ್ನೂ ಕಳಕೊಂಡರು. ಹೀಗೆ ಸಾಧಾರಣ ರೈತರೂ ಸಹ ಈ ಸ್ವರಾಜ್ಯ ಹೋರಾಟಕ್ಕೆ ಸೇರುವಾಗ ಸ್ವರಾಜ್ಯ ಸರಕಾರದಲ್ಲಿ ಹಿಂದೂಸ್ಥಾನದ ಜನ ಸಂಖ್ಯೆಯಲ್ಲಿ ಹೆಚ್ಚಿನವರಾದ ಕಷ್ಟ ಜೀವಿಗಳಾದ ರೈತರಿಗೂ, ಕೂಲಿಗಾರರಿಗೂ ಪ್ರಯೋಜನವೇನು ದೊರಕೀತು ಎಂಬದನ್ನು ಜನರಿಗೆ ತಿಳಿಸಿಕೊಡುವುದು ಯುಕ್ತವೆಂತ ಯೋಚಿಸಿ ಈ ಸಂಬಂಧವಾಗಿ ಕರಾಚಿ ಕಾಂಗ್ರೆಸಿನಲ್ಲಿ ಒಂದು ಠರಾವನ್ನು ಮಂಜೂರು ಮಾಡಿದರು.

ಈ ಠರಾವಿನಲ್ಲಿ ವಿವರಿಸಲ್ಪಟ್ಟಿರುವ ಇಪ್ಪತ್ತು ಭಾಗಗಳಲ್ಲಿ ಮೊದಲನೆಯದು ವ್ಯಕ್ತಿ ಸ್ವಾತಂತ್ರ್ಯ. ವೃತ್ತಾಂತ ಪತ್ರಿಕೆಗಳಿಗೆ ಸ್ವಾತಂತ್ರ್ಯವಿರಬೇಕು. ಜನರಿಗೆ ಭಾಷಣ ಮಾಡುವ, ಕೂಟ ಕೂಡುವ ಸ್ವಾತಂತ್ರ್ಯವಿರಬೇಕು. ತನ್ನ ಮನಸ್ಸಾಕ್ಷಿಗೆ ಒಪ್ಪಿದ ಮತವನ್ನು ಅವಲಂಬಿಸುವ ಸ್ವಾತಂತ್ರ್ಯವಿರಬೇಕು. ಭಾಷೆ, ಬರವಣಿಗೆ, ಸಂಸ್ಕೃತಿಯನ್ನು ಕಾಪಾಡಿಕೊಳ್ಳುವ ಹಕ್ಕಿರಬೇಕು. ಪ್ರಜಾ ಹಕ್ಕುಗಳನ್ನು ಅನುಭವಿಸುವುದರಲ್ಲಿ ಗಂಡಸು ಹೆಂಗಸು ಎಂಬ ಭೇದವಿರಬಾರದು. ತಯಾರಿಸಲ್ಪಡುವ ನಿಯಮಗಳಿಗೆ ಒಳಪಟ್ಟು ಕೋವಿ ಕತ್ತಿಗಳನ್ನು ಹಿಡಿಯುವ ಹಕ್ಕುಗಳು ಎಲ್ಲರಿಗೂ ಇರಬೇಕು. ಸಾರ್ವಜನಿಕ ರಸ್ತೆ, ಬಾವಿ, ಶಾಲೆ ಮುಂತಾದ್ದನ್ನು ಉಪಯೋಗಿಸುವ ಹಕ್ಕು ಸರ್ವರಿಗೂ ಇರಬೇಕು. ಈ ಭಾಗಕ್ಕೆ ಆಕ್ಷೇಪಣೆಯು ಇರಲು ಕಾರಣವಿಲ್ಲ. ಅಸ್ಪೃಶ್ಯತಾ ಭಾವನೆಯೇ ಹೊರಟು ಹೋಗಲು ಬೇಕಾದ ಶರತ್ತುಗಳಿವೆ. ಸ್ವರಾಜ್ಯ ಸರಕಾರದಲ್ಲಿ ದೊಡ್ಡ ಸಂಖ್ಯೆ ಇರುವ ಅಸ್ಪೃಶ್ಯರೆನಿಸಿಕೊಳ್ಳುವವರಿಗೆ ಸ್ವಾತಂತ್ರ್ಯ ದೊರಕುತ್ತದೆ ಎಂಬ ಭರವಸೆ ಕೊಡಬೇಕಾದದ್ದು ಅತ್ಯವಶ್ಯವಾಗಿದೆ. ತಮ್ಮ ತಮ್ಮ ಮತವನ್ನು ನಿರಾತಂಕವಾಗಿ ಅನುಸರಿಸುವ ಸ್ವಾತಂತ್ರ್ಯವಿದೆಯೆಂದ ಮೇಲೆ ಯಾವ ಧರ್ಮದವರಿಗೂ ತಮ್ಮ ಧರ್ಮಕ್ಕೆ ಹಾನಿ ತಟ್ಟೀತೆಂಬ ಭಯಕ್ಕೆ ಎಡೆಯಿಲ್ಲ. ಆಯುಧಗಳನ್ನು ಹಿಡಿಯುವ ಹಕ್ಕು ಸರ್ವರಿಗೂ ಸಿಕ್ಕದೆ ಹೋದರೆ ಹಿಂದೀಯರ ಆತ್ಮ ಗೌರವಕ್ಕೆ ತಟ್ಟಿರುವ ಕೊರತೆಯು ಹೋಗುವುದಿಲ್ಲ.

ಸರ್ವ ಧರ್ಮದವರಿಗೂ ಧರ್ಮದ ಸ್ವಾತಂತ್ರ್ಯವೂ, ಪ್ರಜಾ ಹಕ್ಕುಗಳೂ ಸಿಕ್ಕುತ್ತವೆ ಎಂಬದಕ್ಕೆ ಸರ್ಕಾರವು ಧರ್ಮದ ವಿಷಯದಲ್ಲಿ ಕೈಹಾಕಬಾರದೆಂತಲೂ, ಓಟು ಕೊಡುವ ಹಕ್ಕು ಸರ್ವರಿಗೂ ಇರಬೇಕೆಂತಲೂ, ಪ್ರೈಮರಿ ವಿದ್ಯಾಭ್ಯಾಸವು ಮುಫ್ತಾಗಿ ಕೊಡಲಾಗುತ್ತದೆಯೆಂದಲೂ ಪ್ರತ್ಯೇಕ ಶರತುಗಳನ್ನು ಹಾಕಿದ್ದಾರೆ. ಸರ್ವರಿಗೂ ಓಟ್ ಕೊಡುವ ಹಕ್ಕು ಇರಬೇಕೆಂಬದನ್ನು ಆಕ್ಷೇಪಿಸುವರುಂಟು. ಆದರೆ ಒಂದು ದೇಶದಲ್ಲಿರುವ ಪ್ರತಿಯೊಬ್ಬನಿಗೂ ಸ್ವಾತಂತ್ರ್ಯದ ಹೆಮ್ಮೆ ಹುಟ್ಟಬೇಕಾದರೆ ಈ ಹಕ್ಕು ಇರಲೇ ಬೇಕು. ಈ ಹಕ್ಕನ್ನು ಕೊಟ್ಟರೆ ತುಂಬಾ ಕೂಲಿಗಾರರನ್ನು ಇಟ್ಟುಕೊಳ್ಳುವ ಹಣಗಾರರಿಗೆ ಅನುಕೂಲ ಹೆಚ್ಚಾದೀತೆಂತ ವಾದಿಸುವವರಿದ್ದಾರೆ. ಆದರೆ ಅಂಥಾ ಭೀತಿಗೆ ಎಡೆ ಇಲ್ಲ. ಕೂಲಿಗಾರರಿಗೆ ಹೊಟ್ಟೆ ತುಂಬಾ ಅನ್ನ ಕೊಡಬೇಕೆಂತಲೂ, ಕೂಲಿಗಾರರು ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಲು ಸಂಸ್ಥೆಗಳನ್ನು ಮಾಡಿಕೊಳ್ಳಬಹುದೆಂತಲೂ, ಕೂಲಿಗಾರರಿಗೆ ಇತರ ಅನುಕೂಲಗಳನ್ನು ಕೊಡಬೇಕೆಂತಲೂ ಇದೆ. ಹೀಗಿರುವಾಗ ಕೂಲಿಗಾರರು ಮಾಲೀಕರ ಹೇಳಿಕೆಯಲ್ಲಿ ಇರಬೇಕಾದ್ದಿಲ್ಲ. ಕೂಲಿಗಾರರನ್ನು ಮೂಢರನ್ನಾಗಿಯೇ ಇಟ್ಟುಕೊಂಡು ಪಾರ್ಲಿಮೆಂಟ್ ಮೊದಲಾದವುಗಳಲ್ಲಿ ಉಪಯೋಗಿಸುವ ಅನುಕೂಲ ತಪ್ಪಿಹೋಗುತ್ತದೆ. ಇದ್ದರಿಂದ ಕೂಲಿಗಾರರು ಸಹ ಸ್ವಂತ ಬುದ್ಧಿಯನ್ನು ಉಪಯೋಗಿಸುವರೆಂಬದರಲ್ಲಿ ಸಂಶಯವಿಲ್ಲ.

ಕೃಷಿಕರ ಕಂದಾಯವನ್ನೂ, ಗೇಣಿಯನ್ನೂ ಬಹು ಮಟ್ಟಿಗೆ ಕಡಿಮೆ ಮಾಡಲಾಗುತ್ತದೆಯೆಂತಲೂ, ಜೀವನಕ್ಕೆ ಬೇಕಾದಷ್ಟು ಭೂಮಿ ಇಲ್ಲದವರಿಗೆ ಕಂದಾಯವಿರುವುದಿಲ್ಲವೆಂತಲೂ, ಹೆಚ್ಚು ಕೃಷಿ ಉತ್ಪತ್ತಿ ಇರುವವರಿಗೆ ಉತ್ಪತ್ತಿ ಕರ ಹಾಕಬೇಕೆಂತಲೂ ಇದೆ. ಈ ಶರತುಗಳಿಗೆ ದೊಡ್ಡ ಭೂಮಾಲೀಕರು ಆಕ್ಷೇಪಿಸಬಹುದೆಂತಲೂ, ಈ ಸಮಯದಲ್ಲಿ ದೊಡ್ಡ ಭೂಮಾಲೀಕರ ಸಹಾನುಭೂತಿಯನ್ನು ತಪ್ಪಿಸಿಕೊಳ್ಳಬಾರದೆಂತಲೂ ಕೆಲವರು ವಾದಿಸಿದರು. ಆದರೆ ಧರ್ಮ ಬುದ್ಧಿ ಇರುವ ಯಾವನಿಗಾದರೂ ಈ ಶರತುಗಳಲ್ಲಿ ಆಕ್ಷೇಪಣೆ ತೋರಲಾರದು. ಈಗ ಭೂ ಕಂದಾಯ ಹಾಕಿರುವ ಕ್ರಮದಲ್ಲಿ ಅರೆಹೊಟ್ಟೆ ಅನ್ನಕ್ಕೆ ತಕ್ಕಷ್ಟು ಮಾತ್ರ ಭೂಮಿ ಇರುವವನ ಭೂಮಿಗೂ, ಭೂಮಿ ಉತ್ಪತ್ತಿಯಿಂದಲೇ ಸಮಸ್ತ ಭೋಗಗಳನ್ನು ಅನುಭವಿಸಲು ಅನುಕೂಲವಿರುವಷ್ಟು ಭೂಮಿ ಇರುವವನಿಗೂ ಹಾಕುವ ಕಂದಾಯದ ದರ ಒಂದೇ ಆಗಿದೆ. ಭೂಮಿ ವರಿಯ ಮೇಲೆ ಕಂದಾಯ ವಿಧಿಸಲಾಗಿದೆ. ಈಗ ಹಾಕುತ್ತಿರುವ ಇನ್‌ಕಮ್‌ಟ್ಯಾಕ್ಸ್ ಅಂದರೆ ಉತ್ಪತ್ತಿಯ ಮೇಲಿನ ಕಂದಾಯವಾದರೂ ವರ್ಷಕ್ಕೆ 2000 ರೂ ಉತ್ಪತ್ತಿ ಇರುವವರಿಗೆ ಇಲ್ಲ. ಅದರ ಮೇಲೆ ಹೆಚ್ಚೆಚ್ಚು ಉತ್ಪತ್ತಿ ಇದ್ದಂತೆ ಹೆಚ್ಚೆಚ್ಚು ದರದ ತೆರಿಗೆಯನ್ನು ನಿರ್ಣಯಿಸಿದ್ದಾರೆ. ಇದೇ ತತ್ವವನ್ನು ಭೂಮಿ ಹಿಡುವಳಿದಾರರಿಗೆ ಅನ್ವಯಿಸುವಂತೆ ಮಾಡುವದರಲ್ಲಿ ನ್ಯಾಯ ತೋರುತ್ತದೆ. ಅನುಕೂಲ ಹೆಚ್ಚಿರುವವರು ಸಾರ್ವಜನಿಕ ಕಾರ್ಯಗಳಾದ ಸರ್ಕಾರದ ಆಡಳಿತಗಳನ್ನು ನಡಿಸಲು ಹೆಚ್ಚಿನ ತೆರಿಗೆ ಕೊಡಬೇಕಾದದ್ದು ಯುಕ್ತ.

ಮಿಲಟರಿ ಇಲಾಖೆಗೆ ಆಗುತ್ತಿರುವ ಖರ್ಚನ್ನು ಅರ್ಧ ಕ್ಕಾದರೂ ಇಳಿಸಬೇಕೆಂತಲೂ, ಸರ್ಕಾರಿ ಉದ್ಯೋಗಸ್ಥರಿಗೆ ಕೊಡುವ ಸಂಬಳವು ಸಾಧಾರಣವಾಗಿ ತಿಂಗಳಿಗೆ 500 ರೂ ಗಿಂತ ಹೆಚ್ಚು ಇರಬಾರದೆಂತಲೂ ಇನ್ನೊಂದು ಶರತ್ತು ಇದೆ. ರೈತರು ತೆರುವ ತೆರಿಗೆಯನ್ನು ಕಡಿಮೆಮಾಡಬೇಕಾದರೆ ಸರಕಾರದ ಖರ್ಚು ಸಹ ಕಡಿಮೆಯಾಗಬೇಕಾದದ್ದು ಅವಶ್ಯ. ಮಿಲಿಟರಿ ಇಲಾಖೆಗ ಈಗ 55 ಕೋಟಿ ರೂ ಖರ್ಚಾಗುತ್ತದೆ. ಇಷ್ಟೊಂದು ದೊಡ್ಡ ಹಣವನ್ನು ಈ ಇಲಾಖೆಗೆ ಖರ್ಚು ಮಾಡುತ್ತಿರುವುದು ಇಂಡಿಯಾದ ಭದ್ರತೆಗಾಗಿಯಲ್ಲ. ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಗಾಗಿ ಎಂತ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹಿಂದೂಸ್ಥಾನಕ್ಕೆ ಸ್ವರಾಜ್ಯ ಸಿಕ್ಕಿದ ನಂತರ ಹಿಂದೀಯರಿಗೆ ಬೇರೆ ರಾಜ್ಯಗಳನ್ನು ತಮ್ಮ ಅಧೀನ ಮಾಡಿಕೊಳ್ಳುವ ಅಭಿಪ್ರಾಯವಿಲ್ಲದಿರುವಾಗ ಬೇರೆ ರಾಜರುಗಳ ಹಾವಳಿಯು ಹಿಂದೂಸ್ಥಾನಕ್ಕೆ ಇರಲಾರದು. ಇದ್ದರಿಂದ ಮಿಲಿಟರಿ ಖರ್ಚನ್ನು ಅರ್ಧದಷ್ಟು ಸುಲಭವಾಗಿ ಕಡಿಮೆ ಮಾಡಿಕೊಳ್ಳಬಹುದು. ಸರ್ಕಾರಿ ಉದ್ಯೋಗಸ್ಥರಿಗೆ ಕೊಡುವ ಸಂಬಳವು 500 ರೂ ಗಿಂತ ಹೆಚ್ಚಿರಬಾರದೆನ್ನುವ ಶರತ್ತು ನೋಡಿ ಕೆಲವರಿಗೆ ಆಶ್ಚರ್ಯವಾಗಬಹುದು. ನಮ್ಮ ದೇಶದ ಜಮೀನ್ದಾರರ ಸಂಘವು ಉದ್ಯೋಗಸ್ಥರ ಸಂಬಳವು 1000 ರೂ. ಗಿಂತ ಹೆಚ್ಚಿರಬಾರದು ಎಂತ ಶರತ್ತು ಹಾಕಿತ್ತು. ಪಂಡಿತ ಜವಾಹಿರ್ ಲಾಲರು ಈಚೆಗೆ ಮಾಡಿದ ಒಂದು ಭಾಷಣದಲ್ಲಿ 500 ರೂ ಸಹ ಹೆಚ್ಚಾಯಿತು, 250 ರೂ ಗಿಂತ ಹೆಚ್ಚಿರಬಾರದಿತ್ತು ಎಂತ ವಾದಿಸಿದ್ದಾರೆ. ಈ ರೀತಿ ಸಂಬಳ ಕಡಿಮೆ ಮಾಡಿದರೆ ಅಧಿಕಾರಿಗಳಲ್ಲಿ ಲಂಚ, ರುಸುಂ ಮುತ್ತು ಹೆಚ್ಚಾಗಬಹುದೆಂತ ಕೆಲವರ ಹೆದರಿಕೆ. ಅಧಿಕಾರಿಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವ ಹಕ್ಕು ಪ್ರಜಾ ಪ್ರತಿನಿಧಿಗಳಿಗೆ ಇರುವದರಿಂದ ಈ ಭಯಕ್ಕೆ ಕಾರಣವಿಲ್ಲ. ಪ್ರಪಂಚದಲ್ಲೆಲ್ಲಾ ಎಲ್ಲೂ ಇಲ್ಲದಷ್ಟು ದೊಡ್ಡ ಸಂಬಳವನ್ನು ಹಿಂದೂಸ್ಥಾನದಲ್ಲಿ ಕೊಡುತ್ತಾಲಿದ್ದಾರೆ. ಬಹು ದೂರದಿಂದ ಬರುವ ಬ್ರಿಟಿಷ್ ಅಧಿಕಾರಿಗಳಿಗೆ ಪ್ರಯೋಜನ ತೋರಿಸಲು ಸಂಬಳ ಹೆಚ್ಚಿಸಿಕೊಂಡದ್ದರಿಂದ ಅದೇ ಕೆಲಸ ಮಾಡುವ ಹಿಂದೀಯರಿಗೆ ಯಾಕೆ ಕೊಡಬಾರದೆಂಬ ವಾದದಿಂದ ಈಗಿನ ಹೆಚ್ಚಿನ ಸಂಬಳ ಏರಿದ್ದಾಗಿದೆ. ಹಿಂದೂಸ್ಥಾನದ ಸಾಂಪತ್ತಿಕ ಸ್ಥಿತಿಗೆ ತಕ್ಕಂತ ಸಂಬಳದಲ್ಲಿ ಕೆಲಸ ಮಾಡುವವರನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳುವುದರಿಂದ ಸಂಬಳವನ್ನು ಇಳಿಸಬೇಕಾದದ್ದು ಯುಕ್ತವಾಗಿದೆ.

ಸ್ವದೇಶೀ ಬಟ್ಟೆಯೇ ಉಪಯೋಗಕ್ಕೆ ಬಂದು ಜನರಿಗೆ ಬಡತನ ಉತ್ಪತ್ತಿಗೆ ದಾರಿಯಾಗುವಂತೆ ಪರದೇಶೀ ಬಟ್ಟೆ ನೂಲು ಸಹ ದೇಶಕ್ಕೆ ಬಾರದಂತೆ ಮಾಡುವ ಸ್ವಾತಂತ್ರ್ಯ ದೇಶಕ್ಕೆ ಇರಬೇಕು. ಈ ಶರತ್ತಿಗೆ ವೈಸರಾಯರಾದ ಲಾರ್ಡ್ ಇರ್ವಿನರೇ ಒಪ್ಪಿರುತ್ತಾರೆ. ಅವರವರ ದೇಶದ ಸಾಂಪತ್ತಿಕ ಅನುಕೂಲಕ್ಕಾಗಿ ಸ್ವದೇಶೀ ತತ್ವವನ್ನು ಅನುಸರಿಸುವುದರಲ್ಲಿ ಆಕ್ಷೇಪಣೆ ಇಲ್ಲವೆಂತ ಯಾರಿಗಾದರೂ ತೋರಬಹುದು. ಹಿಂದೂಸ್ಥಾನದ ಸ್ವರಾಜ್ಯ ಸರಕಾರದ ಧ್ಯೇಯವೇ ಹಿಂದೀಯರ ಅನುಕೂಲವನ್ನು ಹೆಚ್ಚಿಸುವುದಾಗಿರುವಾಗ ಈ ಶರತ್ತು ಇರುವುದು ಸ್ವಾಭಾವಿಕವಾಗಿದೆ.

ಬಡವರಿಗೆ ಅನುಕೂಲವಾಗುವಂತೆ ಹಿಂದೂಸ್ಥಾನದಲ್ಲಿ ತಯಾರಿಸುವ ಉಪ್ಪಿಗೆ ಸುಂಕವೇ ಇರಕೂಡದೆಂಬದೂ, ನಿಷಾ ಪದಾರ್ಥಗಳ ಉಪಯೋಗವನ್ನು ಸಂಪೂರ್ಣವಾಗಿ ನಿಲ್ಲಿಸಲಾಗುವುದು ಎಂಬದೂ ಇನ್ನೆರಡು ಶರತ್ತುಗಳಾಗಿವೆ. ಉಪ್ಪಿಗೆ ಹಾಕುವ ಸುಂಕವು ಬಡವರಿಗೇನೇ ಹೆಚ್ಚಾಗಿ ತಟ್ಟುವುದು. ಎಂಥಾ ಬಡವನಾದರೂ ಉಪ್ಪಿಲ್ಲದೆ ಅನ್ನ ತಿನ್ನುವುದಿಲ್ಲ. ಅನುಕೂಲವಿರುವವರಿಗೆ ಉಪ್ಪಿನ ಸುಂಕ ದೊಡ್ಡದಾಗಲಾರದು. ಆದರೆ ಅದನ್ನು ತೆಗೆದು ಹಾಕುವುದರಿಂದ ಬಡವರಿಗೆ ತುಂಬಾ ಸಹಾಯವಾಗುತ್ತದೆ. ನಿಷಾಸೇವನೆಯು ಸಂಪೂರ್ಣವಾಗಿ ನಿಲ್ಲಬೇಕೆಂಬದಕ್ಕೆ ಹೊಸತಾದ ಕಾರಣಗಳನ್ನೇನೂ ಕೊಡಬೇಕಾದ್ದಿಲ್ಲ.

ಕಾಂಗ್ರೆಸಿನಲ್ಲಿ ಈ ಠರಾವು ಪಾಸಾಗುವಾಗ್ಯೆ ಕೆಲವು ಮಟ್ಟಿಗೆ ಚರ್ಚೆಯಾಯಿತು. ಈ ಠರಾವನ್ನು ಗಡಿಬಿಡಿಯಲ್ಲಿ ತಯಾರಿಸಿದ್ದಾಗಿದೆ. ಇದ್ದರಿಂದ ಈ ಠರಾವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಆಲ್-ಇಂಡಿಯಾ ಕಾಂಗ್ರೆಸ್ ಕಮಿಟಿಗೆ ಕೊಟ್ಟಿರುತ್ತಾರೆ. ಈ ಠರಾವನ್ನು ಚೆನ್ನಾಗಿ ಮನಸಿಗೆ ತೆಗೆದುಕೊಂಡು ಸಲಹೆಗಳನ್ನು ಕೊಡುವ ಸ್ವಾತಂತ್ರ್ಯವು ಸರ್ವರಿಗೂ ಇದೆ.

ಕೊಡಗಿನ ಮುಂದಾಳುಗಳ್ಗೆ ಬೊಂಬಾಯಿಯಲ್ಲಿ ಸತ್ಕಾರ.

ಕೊಡಗಿನ ಮುಂದಾಳುಗಳಾದ ಶ್ರೀಯುತ ... ಪ್ಪನವರು ಮತ್ತು ಶ್ರೀಯುತ ಕೆ. ಸಿ ಕರುಂಬೈಯ್ಯನವರು ... ಲಿಗೇಟರುಗಳಾಗಿ ಕರಾಚಿ ಕಾಂಗ್ರೆಸ್ಸಿಗೆ ಹೋಗಿ ಬರುವಾಗ ಬೊಂಬಾಯಿ ಕೊಡಗು ಸಂಘದವರು ತಾರೀಕು 4ನೇ ಶನಿವಾರ ದಿನ ಸಂಜೆ 5 ಗಂಟೆಯಲ್ಲಿ ಮಿ. ಉಳುವಾರಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅವರಿಗೆ ಸತ್ಕಾರವನ್ನೀಡಿದರು. ಸಭೆಯವರು ಮುಂದಾಳುಗಳನ್ನು ಬರಮಾಡಿಕೊಂಡು ... ನಲ್ಲಿ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ... ಲೂ, ಕಷ್ಟ ಸಹಿಷ್ಣುತೆಯಿಂದಲೂ ನಡೆಸಿದ ... ಬಹಳವಾಗಿ ಹೊಗಳಿ ಮಾತಾಡಿದರು. ಅನಂತ ... ರು ಸಭೆಯ ಪರವಾಗಿ ಮುಂದಾಳುಗಳಿಗೆ ಹೂವಿನ ... ನ್ನು ಹಾಕಿ ಬೊಂಬಾಯಿ ಕೊಡಗರೆಲ್ಲರೂ ಸೇರಿ ... ಕಿದ್ದ 105 ರೂಪಾಯಿಗಳನ್ನು ಖಾದಿ ಚೀಲದಲ್ಲಿ ಸತ್ಯಾಗ್ರಹ ಮಂಡಳಿಯ ಅಧ್ಯಕ್ಷರಾದ ಶ್ರೀಯುತ ... ರಿಗೆ ಒಪ್ಪಿಸಿದರು.

ಶ್ರೀಯುತ ಬೆಳ್ಯಪ್ಪನವರು ಆಂಗ್ಲೇಯ ಭಾಷೆ ... ಯಲ್ಲದವರಾದುದರಿಂದಲೂ, ಸ್ವಭಾಷೆಗೆ ಗೌರವ ತೋರಿಸುವುದಕ್ಕಾಗಿಯೂ ಕನ್ನಡದಲ್ಲಿ ಭಾಷಣ ... ಅವರು ಸತ್ಕಾರಕ್ಕಾಗಿಯೂ, ಕೊಟ್ಟ ಹಣಕ್ಕಾಗಿ ಬೊಂಬಾಯಿ ಕೊಡಗರನ್ನು ಬಹಳವಾಗಿ ವಂದಿಸಿ, ಒಪ್ಪಿಸಿದ ಹಣದ ಚೀಲಕ್ಕಿಂತ ನಿಮ್ಮ ಮಾನಸಿಕ ... ಹವೇ ಹೆಚ್ಚಿನದೆಂದು ಹೇಳಿದರು. ಅಲ್ಲದೆ ... ದೇಶ ಕಾರ್ಯವನ್ನು ಸಾಂಗೋಪಾಂಗವಾಗಿ ... ಬೊಂಬಾಯಿ ಕೊಡಗರಿಂದ ದೊರೆತ ದ್ರವ್ಯ ಸಹಾಯವೂ ಮಾನಸಿಕ ಬೆಂಬಲವನ್ನೂ ಬಹುವಾಗಿ ಕೊಂಡಾಡಿ ... ವೇಳೆ ಕೊಡಗಿನ ಸತ್ಯಾಗ್ರಹಿಗಳು ಜೈಲುವಾಸವನ್ನು ಕೊಂಡಾಗ ಬೊಂಬಾಯಿಯಲ್ಲೂ, ಇನ್ನೂ ಇತರ ... ಗಳಲ್ಲೂ ಕೊಡಗು ಯುವಕ ಯುವತಿಯರು ... ಸಂಗ್ರಾಮದಲ್ಲಿ ಭಾಗಿಗಳಾಗಿ ದೇಶಾಭಿಮಾನವ ... ರಿಸಿ ಕಾರಾಗೃಹವಾಸಿಗಳಾದ ಶ್ರೀಮತಿ ... ಸೀತ ಪೂವೈಯ್ಯನವರನ್ನೂ, ಶ್ರೀಯುತ ಪುಟ್ಟ... ಯ್ಯಪ್ಪನವರನ್ನೂ, ಮಾತಂಡ ಮಂದಣ್ಣನವರನ್ನೂ ಮತ್ತು ಅಜ್ಜಿಕುಟ್ಟಿರ ತಮ್ಮಯ್ಯನವರನ್ನೂ ಅಭಿನಂದಿಸಿ, ಮಹಾತ್ಮ ಗಾಂಧಿಯವರ ಸತ್ಯ ಮತ್ತು ಅಹಿಂಸಾ ಭಾವವು ಬೆಟ್ಟ ಗುಡ್ಡಗಳಿಂದ ಆವರಿಸಲ್ಪಟ್ಟು ಮೇಲೆ ದೇಶಗಳಿಂದ ಪ್ರತ್ಯೇಕಿಸಲ್ಪಟ್ಟಿರುವ ಶೀತ ಮತ್ತು ... ದೇಶವಾದ ಕೊಡಗಿನಲ್ಲಿಯೂ ಹರಡಿ ರಾಜಭಕ್ತರು ... ರಾಗಿಕೊಂಡಿದ್ದ ಜನರನ್ನು ಈಗ ವಿಶೇಷ ದೇಶಭಕ್ತರ ... ಮಾರ್ಪಡಿಸಿರುವದು ಸಂತೋಷದ ವಿಷಯವೆಂದೂ, ... ಯಿಯಲ್ಲಿರುವ ಕೊಡಗರು ಕೋಮುವಾರು ತತ್ವವ ... ರಿಸಿ ರಾಷ್ಟ್ರೀಯತ್ವವನ್ನು ಪೋಷಿಸುತ್ತಿರುವ ... ಯವರಿಗೆ ಒಂದು ಉದಾಹರಣೆಯೆಂದೂ ಹೇಳಿ ... ಯ ಕೊಡಗರು ಸ್ವಾತಂತ್ರ್ಯ ಹೋರಾಟಕ್ಕೆ ಪ್ರಾ... ಲೇ ಮಾಡುತ್ತಾ ಬಂದಿರುವ ವಿಶೇಷ ಧನ ಸಹಾಯ ಪ್ರೋತ್ಸಾಹಕ್ಕೂ ಸತ್ಯಾಗ್ರಹ ಮಂಡಳಿಯ ಪರವಾಗಿ ಕೃತಜ್ಞತೆಯನ್ನು ಅರ್ಪಿಸಿ, ಇನ್ನು ಮುಂದಕ್ಕೂ ಇದೇ ಸಹಾಯ ಮಾಡಬೇಕಾಗಿ ಕೇಳಿದರು.

ಶ್ರೀಯುತ ಕರುಂಬೈಯ್ಯನವರು ತಾವು ಅಲ್ಲಿ ... ಕೊಡಗಿನಲ್ಲಿ ಮಾಡುವ ದೇಶ ಸೇವೆಗೆ ಸಭೆಯು ... ಗತವು ಸಲ್ಲತಕ್ಕದ್ದಲ್ಲವೆಂದೂ, ಆದರೆ ತಮ್ಮ ... ತ್ಸಾಹವೂ, ಮಾನಸಿಕ ಪ್ರೋತ್ಸಾಹವೂ ಕೊಡಗಿನ ... ಗಳನ್ನು ಎಡೆಬಿಡದೆ ಕಾರ್ಯ ನಡಿಸಲು ಬಹಳ ... ಮಾಡಿತೆಂದೂ ಮುಂತಾಗಿ ಹೇಳಿದರು. ಕೊಡಗು ... ದೇಶಾಭಿಮಾನವಿಲ್ಲವೆಂದೇ ಜನರ ಅಭಿಪ್ರಾಯವಾ... ರೆ ಈ ಕಳೆದ ಸಂಗ್ರಾಮದಲ್ಲಿ ಭಾಗಿಗಳಾದ ವೀರ ... ಯರ ಸಹಾಸವನ್ನು ನೋಡಿದರೆ ಕೊಡಗು ಜನಾಂಗವು ಯಾವ ಜನಾಂಗಕ್ಕೂ ಕಮ್ಮಿ ತರಗತಿಯಲ್ಲಿಲ್ಲವೆಂದು ಬಂದಿದೆಯೆಂದು ಅವರು ಹೇಳಿದರು. ತಾವು ಸ್ವ... ಕೊಡಗಿನ ಜನರು ಎಚ್ಚತ್ತು ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗಿಗಳಾದ ಸಂಗತಿಯು ಅವರನ್ನು ಬಹಳ ಆಶ್ಚರ್ಯ... ಸಿದೆಯೆಂದೂ ಹೇಳಿ ಶ್ರೀ. ಕರುಂಬೈಯ್ಯನವರು ... ನ್ನು ವಂದಿಸಿದರು.

ಸಭೆಯಲ್ಲಿದ್ದ ನಾಲ್ಕೈದು ಮಹನೀಯರುಗಳು ... ದ ಮೇಲೆ ಕೊನೆಯಲ್ಲಿ ಅಧ್ಯಕ್ಷರು—ಮುಂದಾಳುಗಳ ದೇಶಾಭಿಮಾನವನ್ನು ವಿವರಿಸಿ ಆ ಕಾರಣ ದೇಶ ಸೇವೆ ... ಬೆಗುಂದದೆ ನಡಿಸಿ ಕರುಪ ಮುಂಡಾಕದಂತಿದ್ದ ಕೊಡಗು ಜನಾಂಗವನ್ನು ಎಚ್ಚರಗೊಳಿಸಿದ್ದಕ್ಕಾಗಿ ಅವರನ್ನು ... ಸ್ತುತಿಸಿ ಮಾತಾಡಿದರು. ಕಡೇಯಲ್ಲಿ ರಾಷ್ಟ್ರ ... ಟದಲ್ಲಿ ಭಾಗಿಗಳಾದ ಎಲ್ಲಾ ಕೊಡಗು ಯುವಕ ... ಯರನ್ನು ಅಭಿನಂದಿಸಿದರು. ಅನಂತರ ಸಭೆಯು ಮುಂದಾಳುಗಳ ಸಮೇತ ತಿಂಡಿ ತೀರ್ಥಗಳಲ್ಲಿ ಭಾಗಿಯಾಗಿ ಸಂಗೀತದೊಡನೆ ಸಭೆಯು ಬರಖಾಸ್ತಾಯಿತು.

ಯಂ. ಯಂ. ಅಪ್ಪ...

(ಸೆಕ್ರೆಟರಿ.)

...ನಿತಾಸೇವಾ ಸಮಾಜದ ತೃತೀಯ ವಾರ್ಷಿಕೋತ್ಸವದಲ್ಲಿ

...ದ ಶ್ರೀಮತಿ ಡಿ. ಸಾಕಮ್ಮನವರ ಭಾಷಣ.

ಸೋದರ ಸೋದರಿಯರೇ,

ನನಗೆ ಈ ಸಮಾರಂಭದಲ್ಲಿ ಭಾಗಿಯಾಗುವ ...ಕಲ್ಪಿಸಿಕೊಟ್ಟು ನನ್ನ ಜೀವನದಲ್ಲಿ ಒಂದು ...ಯನ್ನೂ, ಉತ್ಸಾಹವನ್ನೂ ತುಂಬಿದ್ದೀರಿ. ...ವಹಿಸಲು ನನಗಿಂತಲೂ ಶಕ್ತರೂ, ವಿದ್ಯಾ... ಅನೇಕರು ಇಲ್ಲಿರುವರೆಂಬುದನ್ನೂ, ಈ ಸ್ಥಾ...ನ ಸಮರ್ಪಕವಾಗಿ ನಿರ್ವಹಿಸಲು ನನ್ನಲ್ಲಿ ...ವನ್ನು ನಾನು ಚೆನ್ನಾಗಿ ಬಲ್ಲೆ. ಆದರೆ ತಾ...ನನ್ನ ಶಕ್ತಿಯನ್ನೂ ನೋಡಿ ನನಗೆ ಈ ಗೌ...ಲ್ಲವೆಂದೂ, ನನ್ನಲ್ಲಿ ತಮಗಿರುವ ಅಭಿಮಾ...ವನ್ನೂ ತೋರಿಸುವುದಕ್ಕಾಗಿ ಈ ಉನ್ನತ ...ನಗಿತ್ತಿರುವಿರೆಂದು ತಿಳಿದಿದ್ದರೂ, ತಮ್ಮ ಪ್ರೀ...ದ ಆಜ್ಞೆಯನ್ನು ಮೀರಲಾರದೆ, ವಿನಯದಿಂ...ಂದಲೂ, ಆಗ್ರಾಸನವನ್ನು ಅಂಗೀಕರಿಸುವ...ನೆ ತಾವು ನನಗೆ ತೋರಿಸುತ್ತಿರುವ ಈ ಪ...ವನ್ನೆಲ್ಲ ಕೃತಜ್ಞತೆಯಿಂದ ವಂದಿಸುತ್ತೇನೆ ...ದ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿ...ಯನ್ನು ಕೊಡಬೇಕೆಂದು ಭಗವಂತನನ್ನು ...ನೆ.

...ದಿರುವ ಈ ಸಮಯವು ಮಹಾತ್ಮಾ ಗಾಂಧಿ ...ಸರಾಯರಾದ ಲಾರ್ಡ್ ಇರ್ವಿನ್ನರವರಿಗೂ ...ಶದಲ್ಲಿ ಶಾಂತಿಸ್ಥಾಪನೆಯಾದ ಸುಸಮಯವಾ...ತ್ರಗು ಹೇಳಿರುವಂತೆ ಬಹುವು ಯಾರಿಗಾಯಿ ... ಚರ್ಚಿಸುತ್ತಾ ಕಾರದೆ ಮುಂದಿನ ಚರ್ಚೆಗಳ ...ನಕ್ಕೆ ಗೌರವವಾದ ಪದವಿ ದೊರಕಲಿ ಎಂತ ...ರ್ಥಿಸಿ ವಿಶ್ರಾಂತಿಯಿಲ್ಲದೆ ಕಾರ್ಯದಕ್ಷತೆ ...ಮಾಡಿ ಈ ತೀರ್ಮಾನವನ್ನು ಸಾಧ್ಯವಾಗಿ ಮಾ...ಸರಾಯರಿಗೂ, ಮಹಾತ್ಮಾ ಗಾಂಧಿಯವರಿಗೂ ...ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ ...ದ ಇತಿಹಾಸದಲ್ಲಿ ಇಪ್ಪತ್ತನೆಯ ಶತಮಾನವು ...ವಾದ ಮತ್ತು ಹೆಸರನ್ನು ಹೊಂದಿರತಕ್ಕ ಕಾಲ ...ದ ೧೯ ಶತಮಾನಗಳಲ್ಲಿ ನಡೆದ ಐತಿಹಾಸಿಕ ... ಒಟ್ಟುಗೂಡಿಸಿದರೂ, ಈ ೩ ವರ್ಷಗಳಲ್ಲಿ ...ನಡೆದಿರುವ ಬದಲಾವಣೆಯು, ಅವುಗಳೆಲ್ಲಕ್ಕಿಂತ ...ದು ಹೇಳಬಹುದು. ಬದಲಾವಣೆಯೇ ಈ ...ಲವಂತ್ರ. ರಾಜಕೀಯ, ಸಾಮಾಜಿಕ, ಆರ್ಥಿಕ, ...ಭಾಗದಲ್ಲಿ ಯಾವೆಡೆ ನೋಡಿದರೂ, ಪಥಾತ ...ಯ ಬ್ರಹ್ಮದಂಡವನ್ನು, ಯಕ್ಷಿಣಿಯ ಆಟಗಾ... ತಿರುಗಿಸುತ್ತಿರುವುದು ಕಾಣುತ್ತದೆ. ಮೊನ್ನೆ ..., ಜರ್ಮನಿ, ಆಸ್ಟ್ರಿಯಾ ಮುಂತಾದ ಚಕ್ರಾಧಿ... ನೆಲಕ್ಕೆ ಉರುಳಿ, ಪ್ರಜಾಪ್ರಭುತ್ವವು ಸ್ಥಾಪಿತ...ತು. ...ಟರ್ಕಿ ಮತ್ತು ಅಫಘಾನಿಸ್ಥಾನ ಈ ಎರಡು ದೇ... ಅಸಾಧ್ಯವಾದ ಕ್ರಾಂತಿಯನ್ನು ಹೊಂದಿದವು ... ಮತ್ತು ಅಮೇರಿಕಾಖಂಡಗಳ ಸಾಮಾಜಿಕ ...ವನಗಳಲ್ಲಿ ತೀವ್ರವಾದ ಬಡಿದಾಟವುಂಟಾಗಿ ಜೀವ... ಎಲ್ಲರಿಗೂ ದೊಡ್ಡ ಪ್ರಶ್ನೆಯಾಗಿ ಬಿಟ್ಟಿದೆ ... ಪ್ರಕೃತಿಯ ಮೇಲೆ ಪ್ರತಿನಿತ್ಯವೂ ಹೊಂದುತ್ತಿ...ಗೆ ಬಗೆಯ ಜಯಗಳು, ವಿಜ್ಞಾನಶಾಸ್ತ್ರದ ಸಹಾಯ... ಕಂಡು ಹಿಡಿದಿರುವ, ದೊಡ್ಡ ಪ್ರಮಾಣದಲ್ಲಿ ವ...ತಯಾರಿಸುತ್ತಿರುವ ಯಂತ್ರಗಳು ಇವುಗಳೆಲ್ಲ ಶಿಂ ...ಸವು ಬದಲಾವಣೆಯ ಯುಗವೆಂಬುದನ್ನು ಸ್ಪಷ್ಟ...ಡಿಸುತ್ತವೆ.

...ತ್ಯದಲ್ಲಿ ಈ ಬದಲಾವಣೆಯು ಈಗ ತಾನೆ ಕಳೆದು ...ದು ರೂಪವೆಂದರೆ, ಆರ್ಥಿಕ ಮತ್ತು ರಾಜಕೀಯ ... ಸಮಾನ ಸ್ವಾತಂತ್ರ್ಯಕ್ಕಾಗಿ ಸ್ತ್ರೀಪುರುಷರ ಹೊ... ಹೋರಾಟವು ೧೯೦೫ನೇ ಸಂವತ್ಸರದಲ್ಲಿ ...ವಾದ ರೂಪವನ್ನು ತಾಳಿತು. ಇಂಗ್ಲೆಂಡಿನ ಸ್ತ್ರೀ... ಪ್ರತಿವಾದಕರಾದ ಸ್ತ್ರೀಯರು, ತಮಗೆ ಮತ (ಓ...ಡುವ ಅಧಿಕಾರವು ಬೇಕೆಂಬ ಚಳವಳ ನಡೆ...ದರು. ಅಮೇರಿಕಾದಲ್ಲಿಯೂ ಸ್ತ್ರೀಯರಿಗೆ ಮ...ವನ್ನು ಕೊಡುವ ವಿಚಾರದಲ್ಲಿ ಇದೇ ಬಗೆಯ ... ಈಗ ಸ್ತ್ರೀಪುರುಷರೆಲ್ಲರೂ ಮತದ ಹಕ್ಕನ್ನು ... ಇದೇ ರೀತಿ ವಿವಾಹ, ಜೀವನ, ಸಾಮಾಜಿಕ ...ಯ ಮೇಲೆ ಒಡೆತನ ಇವುಗಳೆಲ್ಲಲ್ಲಾ ಸ್ತ್ರೀ ಪು...ಕ್ಯ ದೇಶಗಳಲ್ಲಿ ಸಮಾನವಾದ ಹಕ್ಕುಬಾಧ್ಯತೆ...

...ತ್ಯ ದೇಶಗಳ ಈ ಬದಲಾವಣೆಯ ಗಾಳಿಯು ನ... ದೇಶಕ್ಕೂ ಬೀಸಿದೆ. ರಾಷ್ಟ್ರಜೀವನದ ಇತ... ನಮ್ಮವರು ಜಾಗ್ರತರಾದಂತೆ ಈ ವಿಷಯದಲ್ಲಿ ...ತರಾಗುತ್ತಿದ್ದಾರೆ. ಸ್ತ್ರೀಯರ ಕರ್ತವ್ಯ, ಅವರ...ವಾದ ಶಿಕ್ಷಣ, ಆ ಶಿಕ್ಷಣದ ವೈಶಿಷ್ಟ್ಯ, ಸಮಾ...ಶಾಸನದಲ್ಲಿ ಅವರ ಸ್ಥಾನ, ಇವುಗಳನ್ನು ಉ... ಸುಧಾರಕ ಬುದ್ಧಿಯಿಂದ ನಿರ್ಣಯಿಸಿ, ಆದರ್ಶವಾದ ಧ್ಯೇಯಸಾಧನೆಗೆ ಅವಿಶ್ರಾಂತವಾಗಿ ಪ್ರಯತ್ನಪಟ್ಟು, ಸಂಸಾರದಲ್ಲಿ ಉಪಯುಕ್ತಳಾದ ಸಹನಶೀಲಳಾದ ಉಚ್ಚತರದ ಪತ್ನಿಯನ್ನೂ, ಪ್ರೇಮಪೂರ್ಣ ಮಾತೆಯನ್ನೂ, ಹಿಂದೂ ಸಮಾಜಕ್ಕೆ ಸೃಷ್ಟಿಸಿ ಕೊಡುವುದೇ, ನಿಮ್ಮ ಸಂಸ್ಥೆಯಂತಹ ಸಂಸ್ಥೆಗಳ ಮೊದಲನೆಯದಾದ ಮತ್ತು ಮುಖ್ಯವಾದ ಉದ್ದೇಶವಾಗಿರಬೇಕು.

ಪಾಶ್ಚಾತ್ಯ ದೇಶದ ಸ್ತ್ರೀ ಸ್ವಾತಂತ್ರ್ಯದ ಹೋರಾಟದ ಕಡೆಗೆ, ಈಗ ತಾನೆ ನಿಮ್ಮ ಗಮನವನ್ನು ಎಳೆದಿದ್ದೇನೆ. ಆದರೆ ನಾವೂ ಆ ದಾರಿಯನ್ನೇ ಅನುಸರಿಸಬೇಕೆಂಬುವುದು ನನ್ನ ಅಭಿಪ್ರಾಯವಲ್ಲ. ಪಾಶ್ಚಾತ್ಯರ ಸ್ತ್ರೀ ಸ್ವಾತಂತ್ರ್ಯ ಪ್ರಶ್ನೆಗೂ, ನಮ್ಮ ದೇಶದ ಸ್ತ್ರೀ ಸ್ವಾತಂತ್ರ್ಯ ಪ್ರಶ್ನೆಗೂ ಬಹಳ ಹೆಚ್ಚು ಕಡಿಮೆ ಇದೆ. ಅವರ ಮೆಟ್ಟಲನ್ನೇ ನಾವೂ ಅನುಸರಿಸಕೂಡದು. ಪಾರ್ಲಿಮೆಂಟಿನ ಹೊಡೆದಾಟದ ಸ್ವಾತಂತ್ರ್ಯದಿಂದ ಪಾಶ್ಚಾತ್ಯ ಸ್ತ್ರೀಯರ ಸಾಮಾಜಿಕ ಮತ್ತು ಸಾಂಸಾರಿಕ ಪರಿಸ್ಥಿತಿಯಲ್ಲಿ ಯಾವ ಮೇಲ್ಮೆಯೂ ಉಂಟಾಗಿರುವುದಿಲ್ಲ. ಸ್ತ್ರೀ ಸ್ವಾತಂತ್ರ್ಯದ ಇಷ್ಟು ಹೊಡೆದಾಟವೊಡನೆಯೂ, ಇಂಗ್ಲೆಂಡ ದೇಶವೊಂದರಲ್ಲಿಯೇ ಈಗ ೫೦ ಲಕ್ಷ ಸ್ತ್ರೀಯರು ಕೂಲಿ ಕೆಲಸದಲ್ಲಿ ತೊಡಗಿ ಅಸಿಹೊಟ್ಟೆ ತಿನ್ನುತ್ತಿದ್ದಾರೆ. ನಮ್ಮ ದೇಶದ ಮಹಿಳೆಯರ ಕಷ್ಟಗಳೂ ನಾವು ಅವರಿಗಾಗಿ ಮಾಡಬೇಕಾದ ಕಾರ್ಯಗಳೂ, ಅನೇಕವಾಗಿವೆ ಆದರೆ ಆ ಕಾರ್ಯಸಾಧನೆಯಲ್ಲಿ, ನಾವು ನಮಗಿಂತ ಭಿನ್ನವಾದ ಪರಿಸ್ಥಿತಿಯಲ್ಲಿರುವವರ ಪೊಳ್ಳು ಪಾಂಡಿತ್ಯದ ಅನುಕರಣವನ್ನು ಮಾತ್ರ ಮಾಡಿದರೆ ಸಾಲದೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಪ್ರಾಚೀನ ಕಾಲದಿಂದಲೂ, ಹಿಂದುಗಳಲ್ಲಿ ಸ್ತ್ರೀಯರಿಗೆ ಹೆಚ್ಚಾದ ಗೌರವವೂ ಮನ್ನಣೆಯೂ ತೋರಿಸಲ್ಪಡುತ್ತಿವೆ. ಪ್ರತಿಯೊಬ್ಬ ಸ್ತ್ರೀಯಲ್ಲಿಯೂ ಮಾತೃತ್ವದ ಮತ್ತು ಆದಿಶಕ್ತಿಯ ನಿಸರ್ಗದತ್ತ ಮಹಿಮೆಯಿರುವುದರಿಂದ, ಸ್ತ್ರೀಯು ಪೂಜಾರ್ಹಳೆಂಬುದೇ ವೇದಗಳ ಮತ. ಸ್ತ್ರೀಯರಿಗೆ ವೇದಗಳ ಕಾಲದಲ್ಲಿ ಪೂರ್ಣವಾಗಿ ಸಾಮಾಜಿಕ ಸ್ವಾತಂತ್ರ್ಯವು ಕೊಡಲ್ಪಟ್ಟಿದ್ದಿತು. ಸ್ತ್ರೀಯು ಮನೆಗೆ ರಾಣಿಯಾಗಿ, ಗಂಡನ ಪ್ರೀತಿಗೆ ಪಾತ್ರಳಾಗಿದ್ದಳು. ಮನೆಯ ಆಡಳಿತವೆಲ್ಲ ನಡೆಸಲು ಅವಳಿಗೆ ಸಾವ ಧ್ಯವಿದ್ದಿತು. ಅವಳ ಅಪ್ಪಣೆಯಿಲ್ಲದೆ ಯಾವ ಕೆಲಸವನ್ನೂ ಮಾಡಲು ಗಂಡನಿಗೆ ಅಧಿಕಾರವಿರಲಿಲ್ಲ.

ವಿವಾಹದ ವಿಷಯದಲ್ಲಿಯೂ, ವೇದಗಳ ಕಾಲದಲ್ಲಿ ಸ್ತ್ರೀಯರು ಇಷ್ಟು ಸ್ವತಂತ್ರರಾಗಿದ್ದರು. ಬಾಲ್ಯವಿವಾಹವೆಂಬುದು ಆಗ ಜನರಿಗೆ ತಿಳಿದೇ ಇರಲಿಲ್ಲ. ವಿವಾಹದ ೪ನೆಯ ದಿವಸದಿಂದಲೇ ದಾಂಪತ್ಯ ಜೀವನವು ಪ್ರಾರಂಭವಾಗುತ್ತಿತ್ತೆಂಬುವುದನ್ನು ತಿಳಿಯಬಹುದು. ಆ ಕಾಲದಲ್ಲಿ ಇಷ್ಟಬಂದ ಸ್ತ್ರೀಯರು ವಿವಾಹಿತರಾಗದೆ ತಮ್ಮ ಕಾಲವನ್ನೆಲ್ಲ ವೇದಾಧ್ಯಯನಕ್ಕೆ ಅನ್ವಯಿಸಲು ಅವಕಾಶವಿದ್ದಿತು. ಇದಕ್ಕೆ ಲೋಪಾಮುದ್ರೆ ಮುಂತಾದವರೇ ಉದಾಹರಣೆಗಳು. ಮೈತ್ರೇಯಿ, ಗಾರ್ಗಿ ಇವರ ಹೆಸರನ್ನು ಕೇಳದವರೇ ಇಲ್ಲ. ಯಾಜ್ಞವಲ್ಕ್ಯನ ಕೂಡ ಗಾರ್ಗಿಯು ಜನಕರಾಯನ ಸಭೆಯಲ್ಲಿ, ಬ್ರಹ್ಮಜ್ಞಾನದಲ್ಲಿ ಚರ್ಚೆ ನಡೆಸಿದಳೆಂದ ಮೇಲೆ ಆಗಿನ ಕಾಲದ ಸ್ತ್ರೀಯರು ಎಷ್ಟು ವಿದ್ಯಾವತಿಯರಾಗಿದ್ದರೆಂಬುವುದು ಗೊತ್ತಾಗುತ್ತದೆ.

ಈಚೆಗೆ ರಾಮಾಯಣ ಭಾರತಾದಿ ಕಾವ್ಯಗಳ ಕಾಲದಲ್ಲಿಯೂ, ಸ್ತ್ರೀಯರ ಸ್ವಾತಂತ್ರ್ಯವೂ, ಗೌರವವೂ ಬಹಳ ಮಟ್ಟಿಗೆ ಕಡಮೆಯಾಗಿಲ್ಲ. ಒಂದು ರೀತಿಯಿಂದ ಕಾವ್ಯದ ಕಾಲವೇ ಹಿಂದೂ ಸ್ತ್ರೀಯರ ಅತ್ಯಂತ ವೈಭವದ ಕಾಲವೆಂಬುದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ವೇದಗಳ ಮತ್ತು ಕಾವ್ಯಗಳ ಕಾಲದಿಂದ ಈಚೆಗೆ ಸ್ತ್ರೀಯರ ಸ್ವಾತಂತ್ರ್ಯವೂ ಸ್ಥಾನವೂ ಕಡಿಮೆಯಾಯಿತು. ಮೊದಲನೆಯದಾಗಿ ಬಾಲ್ಯ ವಿವಾಹವು ತಲೆಯೆತ್ತಿತು. ಸ್ತ್ರೀಯರಿಗೆ ವಿದ್ಯಾರ್ಜನೆಯ ಅವಕಾಶಗಳು ಕಡಿಮೆಯಾಗಿ, ಅವರು ಕೇವಲ ಮನೆಯಲ್ಲಿ ಗುಡಿಸುವುದು, ಸಾರಿಸುವದು ಸಂತತಿಯ ಅಭಿವೃದ್ಧಿ, ಇವುಗಳಲ್ಲಿ ಮಾತ್ರ ನಿರತರಾದರು. ಇತ್ತೀಚಿಗೆ ಇಲ್ಲಿಯ ಸಂಸ್ಕೃತಿಯ ಮತ್ತು ಶಾಸನದ ಅಜ್ಞಾನದಿಂದ ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯತೆಯು ಪೂರ್ಣವಾಗಿ ನಾಶವಾಯಿತು. ಈ ತರದ ವಿವಿಧ ಕಾಲಸ್ಥಿತಿಯಿಂದ ಇಂದು ನಾವು ಹಿಂದೂ ದೇಶದಲ್ಲಿ ಸಂಸಾರ ದೃಷ್ಟಿಯಿಂದ ಸ್ವತಂತ್ರರೂ ಮನ್ನಣೆಯುಳ್ಳವರೂ ಅವರೂ, ಸಾಮಾಜಿಕ ಮತ್ತು ಶಾಸನ ದೃಷ್ಟಿಯಿಂದ ಅಸ್ವತಂತ್ರರಾದ ಅವಿದ್ಯಾವಂತರಾದ ಸ್ತ್ರೀಯರ ಗುಂಪಾಗಿದ್ದೇವೆ.

ಆದರೆ ಭಗಿನಿಯರೇ ನಾನು ಹೀಗೆ ಹೇಳಿದುದರಿಂದ ಹಿಂದೂ ಸ್ತ್ರೀಯರ ಸ್ಥಿತಿಯು ಇತರ ದೇಶದ ಸ್ತ್ರೀಯರ ಸ್ಥಿತಿಗಳಿಗಿಂತ, ಹೀನವಾಗಿದೆಯೆಂದು ತಿಳಿಯಬೇಡಿ. ಹಿಂದೂ ಸ್ತ್ರೀಯೇ ಮನೆಯರಾಣಿ, ಮನೆಯ ಅಧಿದೇವತೆ, ಅವಳಿಗಿರುವ ಗೌರವವು ಪ್ರಪಂಚದ ಮತ್ಯಾವ ದೇಶದ ಸ್ತ್ರೀಯರಿಗೂ ಇಲ್ಲ. ಆದರೆ ಈ ಗೌರವ ಪದವಿಯನ್ನು ಯೋಗ್ಯ ರೀತಿಯಿಂದ ಅಲಂಕರಿಸಲು ಅವಳಿಗೆ ಅರ್ಹತೆಯು ಕಡಿಮೆಯಾಗುತ್ತಾ ಬಂದಿದೆ. ಇದಕ್ಕೆ ಮುಖ್ಯ ಕಾರಣವು ಹಿಂದೂ ಸಂಸ್ಕೃತಿಯು ಹಿಂದೂ ಮಹಿಳೆಯರಿಗೆ ತಿಳಿಯದಿರುವುದು. ಇದನ್ನೇ ಸುಲಭವಾದ ರೀತಿಯಲ್ಲಿ ಹೇಳಬೇಕಾದರೆ, ಹಿಂದೂ ಮಹಿಳೆಯರು ಅವಿದ್ಯಾವಂತೆಯರಾಗಿರುವುದು. ವೇದಗಳ ಕಾಲದಲ್ಲಿ ಸ್ತ್ರೀಯರು ವಿದ್ಯಾವಂತೆಯರಾಗಿದ್ದರು. ಆಗ ಅವರಿಗೆ ಸಾಮಾಜಿಕ, ಶಾಸನದ ಸ್ವಾತಂತ್ರ್ಯವಿದ್ದಿತು. ಈಚೆಗೆ ನಾವು ಆ ವಿದ್ಯೆಯನ್ನು ಕಳೆದುಕೊಂಡೆವು. ಸ್ವಾತಂತ್ರ್ಯವು ಹೋಯಿತು. ಕಳೆದು ಹೋಗಿರುವ ನಮ್ಮ ವಿದ್ಯೆಯನ್ನು ಪುನಃ ಗಳಿಸಿಕೊಂಡರೆ, ನಾವು ಎಲ್ಲಾ ಸ್ವಾತಂತ್ರ್ಯಗಳನ್ನೂ ಗಳಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ.

ನಮ್ಮ ಮಹಿಳೆಯರ ಉನ್ನತಿಗೆ, ಮುಖ್ಯ ತಡೆಯಾಗಿರುವ ಒಂದೇ ಒಂದು ದೊಡ್ಡ ಬೆಟ್ಟವೆಂದರೆ, ಸ್ತ್ರೀ ವಿದ್ಯಾಭ್ಯಾಸದ ಅಭಾವ. ಪುರುಷರಿಗೆ ವಿದ್ಯೆಯಿಲ್ಲದಿದ್ದರೆ ಬೇಡ, ಸ್ತ್ರೀಯರಿಗೆ ವಿದ್ಯೆಯನ್ನು ಕೊಟ್ಟೇತೀರಬೇಕೆಂದು ಅನೇಕ ದೂರದೃಷ್ಟಿಯುಳ್ಳ ರಾಷ್ಟ್ರಸೇವಕರು ಹೇಳುತ್ತಿದ್ದಾರೆ. ನಮ್ಮ ದೇಶದಲ್ಲಿ ಶೂರರೂ, ಸಾಹಿತ್ಯಕರೂ, ಕವಿಗಳೂ, ರಾಷ್ಟ್ರವಿಧಾಯಕರೂ, ಕಲಾಕೋವಿದರೂ, ಹುಟ್ಟಿ ಭಾವೀ ಜನಾಂಗವು ಸರ್ವಸುಂದರವಾಗಬೇಕಾದರೆ, ಆ ಭಾವೀ ಜನಾಂಗದ ಮಾತೆಯರು ವಿದ್ಯಾವಂತೆಯರಾಗಿರತಕ್ಕದ್ದು ಅತ್ಯಾವಶ್ಯಕ. ಅವಿದ್ಯಾವಂತರ ಹೊಟ್ಟೆಯಿಂದ ನಮ್ಮ ಪೂರ್ವಜರಾದ ಯೋಗ್ಯರಾದವರು ಎಂದಿಗಾದರೂ ಹುಟ್ಟಿಯಾರೆ? ಪ್ರಾಚೀನ ಭಾರತದಲ್ಲಿ ಮತ್ತು ನಿನ್ನೆ ಮೊನ್ನೆಯವರೆಗೆ, ಪ್ರತಾಪ ಸಿಂಹ ಶಿವಾಜಿ ರಣಜಿತ್‌ಸಿಂಗ್, ಅಹಲ್ಯಾಬಾಯಿ, ಪದ್ಮಿನಿ ಮುಂತಾದ ವೀರಪುರುಷರೂ, ಸ್ತ್ರೀರತ್ನಗಳೂ ಹುಟ್ಟಿದ ದಕ್ಕೂ ಆಗಿನಂತೆ ಈಗ ಹುಟ್ಟದಿರುವುದಕ್ಕೂ ಆಗಿನಷ್ಟು ವೀರಮಾತೆಯರು ಈಗ ಹಿಂದೂ ದೇಶದಲ್ಲಿ ಇಲ್ಲದಿರುವುದೇ ಮುಖ್ಯ ಕಾರಣ. ಈ ನಮ್ಮ ಆರ್ಯರ ಪ್ರಾಚೀನ ಸಂಸ್ಕೃತಿಯು, ನಿನ್ನೆ ಮೊನ್ನೆಯವರೆಗೆ ಅಂದರೆ, ೧೯ನೇ ಶತಮಾನದ ಪ್ರಾರಂಭದ ವರೆಗೆ ತನ್ನ ಪ್ರಭಾವವನ್ನು ನಮ್ಮ ದೇಶದಲ್ಲಿ ತೋರುತ್ತಲೇ ಇದ್ದಿತು. ಅಂದಿನ ಹಿರಿಯರೂ, ಮನೆಯ ಅಜ್ಜಿಯರೂ ಚಿಕ್ಕಮಕ್ಕಳನ್ನೂ, ಸೊಸೆಯರನ್ನೂ ಕೂಡಿಸಿಕೊಂಡು, ರಾಮಾಯಣ, ಭಾರತ, ಭಾಗವತಾದಿ ಪುರಾಣಗಳ ವೀರರ ಕಥೆಗಳನ್ನೂ, ಸತ್ಯಸಂಧರ ಧೀರೋದಾತ್ತ ಗುಣಗಳನ್ನೂ, ಮಹಾಪತಿವ್ರತೆಯರ ನಿಸ್ವಾರ್ಥತ್ಯಾಗ ಕಷ್ಟಸಹಿಷ್ಣುತೆಗಳನ್ನೂ ಅವರಿಗೆ ಬೋಧಿಸುತ್ತಿದ್ದರು. ಭಾರತದ ವೀರರ ಇತಿಹಾಸಗಳನ್ನು ಕೇಳುತ್ತಿದ್ದ ಜೀಜಾಬಾಯಿಯವರ ಉದರದಿಂದ ಬಂದ ಶಿವಾಜಿಯು ಭಾರತವೀರರಂತೆಯೇ ಪರಾಕ್ರಮಿಯಾದನು. ಕೃಷ್ಣ ಪರಮಾತ್ಮನು ಚಕ್ರವ್ಯೂಹವನ್ನು ಭೇದಿಸುವ ಉಪಾಯವನ್ನು ಸುಭದ್ರೆಗೆ ಹೇಳುತ್ತಿದ್ದಾಗ, ವೀರ ಅಭಿಮನ್ಯುವು ಗರ್ಭದಲ್ಲಿದ್ದುಕೊಂಡೇ ಆ ಕಥೆಯನ್ನು ಕೇಳಿದನೆಂದು ಪ್ರತೀತಿಯಿದೆ. ವೀರಮಾತೆಯರ ಉದರದಿಂದ ಹುಟ್ಟಿದವರು ವೀರಪುತ್ರರಲ್ಲದೆ ಮತ್ತೇನಾದಾರು? ಆದರೆ ಈಗ ನಮ್ಮ ಮಹಿಳೆಯರಿಗೆ ಸಂಸಾರದ ಆ ಆರೋಗ್ಯಕರವಾದ ಪ್ರಭಾವವು ಕಡಿಮೆಯಾಗಿ ಆರ್ಯ ಸಂಸ್ಕೃತಿಯು ಅವರ ಕಣ್ಣಿಗೆ ಮರೆಯಾಗಿದೆ. ಆ ಸಂಸ್ಕೃತಿಯನ್ನು ಹಿಂದಕ್ಕೆ ಹೊಂದಬೇಕಾದರೆ ಆರ್ಯ ಮಹಿಳೆಯರ ಉದಾತ್ತ ಚರಿತ್ರೆಗಳನ್ನೂ, ಅವರ ಉನ್ನತವಾದ ಮತ್ತು ಆದರ್ಶವಾದ ಧ್ಯೇಯಗಳನ್ನೂ, ನಾವು ಚೆನ್ನಾಗಿ ಮನನ ಮಾಡಬೇಕು. ಆ ಪೂಜ್ಯಮಾತೆಯರ, ಪತಿವ್ರತೆಯರ ವೀರಮಾತೆಯರ ಜೀವನದಲ್ಲಿದ್ದ ಸದ್ಗುಣಗಳನ್ನು ನೆನೆಯಬೇಕು. 'ಕಾರ್ಯದಲ್ಲಿಯೂ, ಶಕ್ತಿಯಲ್ಲಿಯೂ, ರಾಜ್ಯವಾಳುವುದರಲ್ಲಿಯೂ, ಪಾತಿವ್ರತ್ಯ ಸಂರಕ್ಷಣೆ, ಮತ್ತು ಉನ್ನತ ಧ್ಯೇಯ ಸಾಧನೆಗಾಗಿ ದೇಹವನ್ನು ಬಲಿಕೊಡುವುದರಲ್ಲಿಯೂ, ಹಿಂದೂ ಸ್ತ್ರೀಯರಿಗೆ ಸಮಾನರಾದವರು ಮತ್ಯಾರೂ ಇಲ್ಲ." ಎಂಬದಾಗಿ ಡಾಕ್ಟರ್ ಅನಿಬೆಸೆಂಟರು ಹೇಳಿರುವ ವಾಕ್ಯವು ನಮ್ಮ ಕಣ್ಣನ್ನು ತೆರೆಯಬೇಕು.

ಇಂದಿನದನ್ನು ಮರೆತು ಸಾವಿರಾರು ವರ್ಷಗಳ ಹಿಂದಕ್ಕೆ, ಸ್ವಲ್ಪ ನಮ್ಮ ಕಣ್ಣುಗಳನ್ನು ತಿರುಗಿಸಿ ನೋಡೋಣ. ಪ್ರಪಂಚದಲ್ಲೆಲ್ಲ ಪ್ರಸಿದ್ಧರಾದ, ವೀರರಾದ ಮಹಿಳೆಯರಿಂದ ಕೂಡಿದ ಹಿಂದೂಸ್ಥಾನವು, ನಮ್ಮ ಕಣ್ಣಿಗೆ ಬೀಳುವುದು. ಆ ಪೂಜ್ಯರಾದ ಮಹಿಳೆಯರ ಇತಿಹಾಸವೇ, ಹಿಂದೂಸ್ಥಾನದ ಅಂದಿನ ಇತಿಹಾಸವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಂಡಿರಬೇಕು. ಮೈತ್ರೇಯಿ ಎಂಬ ಹೆಸರನ್ನು ಕೇಳಿದೊಡನೆಯೇ ಆಕೆಯು ಯಾಜ್ಞವಲ್ಕ್ಯನೊಂದಿಗೆ ಬ್ರಹ್ಮಜ್ಞಾನವನ್ನು ಚರ್ಚೆ ಮಾಡುತ್ತಿರುವುದು ನೆನಪಿಗೆ ಬರುವುದು. ಕುಂತಿಯ ಹೆಸರನ್ನು ಕೇಳಿದೊಡನೆಯೇ, ಪಾಂಡವರ ವೀರಮಾತೆಯು, ಮಕ್ಕಳಿಗೆ ಯುದ್ಧ ಕಾಲದಲ್ಲಿ 'ಈ ಸಮಯವನ್ನು ನೋಡುವುದಕ್ಕಾಗಿಯೇ ನಾನು ನಿಮ್ಮನ್ನು ಹೆತ್ತಿದ್ದು' ಎಂದು ಹೇಳಿದುದು ಕಣ್ಣುಮುಂದೆ ಕಟ್ಟುತ್ತದೆ. ಯುದ್ಧದಲ್ಲಿ ಒಬ್ಬ ವೀರಪುತ್ರನು ಮಡಿದುದನ್ನು ಕಂಡು ಯುದ್ಧಕ್ಕೆ ಕಳುಹಿಸಲು ನನಗೆ ಇನ್ನೂ ಹೆಚ್ಚಾಗಿ ಮಕ್ಕಳಿಲ್ಲವಲ್ಲ, ಎಂದು ಕೊರಗಿದ ಬವಾನ್ ಸ್ತ್ರೀಯು ಪಂಜಾಬಿಗೆ ಸೇರಿದವಳೇ ಕುಂತಿ. ದುರ್ಯೋಧನನಿಗೆ ವಿವೇಕವನ್ನು ಹೇಳಿ, ಮಾತೆಯ ಪ್ರೇಮದ ಪ್ರಭಾವದಿಂದ ಅವನ ಹಟವನ್ನು ಕಡಿಮೆ ಮಾಡಲು, ಗಾಂಧಾರಿಯು ಸಭಾಮಂಟಪಕ್ಕೆ ಬಂದುದನ್ನು ನೀವೆಲ್ಲರು ಬಲ್ಲಿರಿ. ಕ್ರೂರನಾದ ಕಾಲನ ಕೈ ಹಿಂದಟ್ಟಿ ಪ್ರಕೃತಿಯ ನಿಸರ್ಗನಿಯಮವಾದ ಮರಣವನ್ನು ಪ್ರೇಮದಿಂದ ಜಯಿಸಿದ ಸಾವಿತ್ರಿಯ ಪಾದಧೂಳಿಯಿಂದ ಪುನೀತವಾದುದೀ ಭರತಖಂಡವು. ಮಾತಿಗೆ ತಪ್ಪಿ, ಧರ್ಮಸಂಪನ್ನನ್ನು ನರೆಹಿಡಿದ ಅಶ್ವತ್ಥಾಮನಿಗೆ, ಅಮಲ ಸತೀತ್ವದ ಅಸಮ ಸಾಹಸದ ಅನುಪಮ ಮಾದರಿಯನ್ನು ತೋರಿ, ಗಂಡನ ಬಂಧನವನ್ನು ಬಿಡಿಸಿ. ಅಗ್ನಿಗಿಂತಲೂ ಹೊಳೆವಾದ, ಹೂವಿಗಿಂತಲೂ ಕೋಮಲವಾದ ತಮ್ಮ ದೇಹವನ್ನು ಅಗ್ನಿಗೆ ಆಹುತಿಯಿತ್ತು ಪ್ರಪಂಚದ ಇತಿಹಾಸದಲ್ಲಿ ಜೋಹರ್ ಎಂಬ ಪದವನ್ನು ಸೃಷ್ಟಿಸಿ, (ಆ ಹಿಂದಾಸ್ತ್ರಕ್ಕವಾದ) ಕೀರ್ತಿಯನ್ನು ಗಳಿಸಿದ ಪದ್ಮಿನಿಯೇ ಮೊದಲಾದ ರಾಜಪುತ್ರ ಮಹಿಳೆಯರನ್ನು ಕಂಡಿದ್ದೀರಿ. ಸ್ವಾಮಿ ಭಕ್ತಿಯ ಹುದಯನ್ನೇ ರಾಜನ ಪ್ರಾಣವನ್ನು ಕಾಪಾಡುವುದಕ್ಕಾಗಿ, ಜಗತ್ತಿನಲ್ಲಿ ನಾ

ವೆಲ್ಲೂ ಕಾಣದ ಅಸಾಧ್ಯವಾದ ತ್ಯಾಗವನ್ನು ಮಾಡಿ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ಬಲಿಕೊಟ್ಟ ಸಾಧ್ವಿ ಪನ್ನೆಯನ್ನು ನೋಡಿದ್ದೀರಿ. ತಾರಾಬಾಯಿ, ಚಾಂದ್‌ಬೀಬೀ, ಅಹಲ್ಯಾಬಾಯಿ ಇವರೆಲ್ಲರೂ ನಿನ್ನೆ ಮೊನ್ನೆಯವರು. ಅಹಲ್ಯಾಬಾಯಿಯ ಹೆಸರು ಹಿಂದೂ ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆಯಲ್ಪಡತಕ್ಕದ್ದು. ಆಕೆಯು ರಾಜ್ಯವನ್ನು ಬಹಳ ವ್ಯವಸ್ಥೆಯಿಂದ ಆಳಿ, ಶಾಂತಿಯನ್ನು ಸ್ಥಾಪಿಸಿ, ಭಂಡಾರವನ್ನು ಬರಿದು ಮಾಡದೆ ರಸ್ತೆಗಳನ್ನೂ, ಕೊಳಗಳನ್ನೂ ವೈದ್ಯಶಾಲೆಗಳನ್ನೂ ಕಟ್ಟಿಸಿ, ರಾಜ್ಯದ ಆಡಳಿತದಲ್ಲಿ ಹಿಂದೂ ಸ್ತ್ರೀಯರಿಗಿರುವ, ಅನನ್ಯಾದೃಶ್ಯವಾದ ಶಕ್ತಿಯನ್ನೂ, ನಿರ್ವಿಕಲ್ಪಜ್ಞಾನವನ್ನೂ ಜಗತ್ತಿಗೆ ತೋರಿಸಿದುದನ್ನು ನೀವು ನೋಡಿದ್ದೀರಿ.

ಹಿಂದು ಮಹಿಳೆಯರೆಂದರೆ ಇವರು, ಇವರನ್ನು ಸೃಷ್ಟಿಸಿದುದು ಹಿಂದೂದೇಶ. ಇಂತಹ ಮಹಿಳೆಯರು ಎಷ್ಟು ಎಷ್ಟು ಹೆಚ್ಚಾಗಿ ನಮ್ಮ ದೇಶದಲ್ಲಿ ಹುಟ್ಟುವರೋ, ಅಷ್ಟು ಅಷ್ಟು ಹೆಚ್ಚಾಗಿ ನಮ್ಮ ಕೀರ್ತಿಯು ಜಗತ್ತಿಗೆ ಹರಡುವುದು. ಇಂತಹ ವೀರಮಾತೆಯರು ಹೆಚ್ಚಾಗಿ ಹುಟ್ಟಿದ ಕಾಲದಲ್ಲಿ ಮಾತ್ರವೇ ವೀರಪುತ್ರರೂ ಹೆಚ್ಚಾಗಿ ಹುಟ್ಟಿದ್ದಾರೆ. ಇದುದರಿಂದ ಹಿಂದೂ ದೇಶವು ವಾಪಸು ಕಳೆದುಕೊಂಡಿರುವ ಉನ್ನತಿಯನ್ನು ಮತ್ತೆ ಏರುವ ವಾತಾವರಣವನ್ನು ಕಲ್ಪಿಸುವುದು, ನಮ್ಮಗಳೆಲ್ಲರ ಕರ್ತವ್ಯ.

ನಮ್ಮಲ್ಲಿ ಉಂಟಾಗಿರುವ ಅವನತಿಗೆ, ವಿದ್ಯೆಯ ಅಭಾವವೇ ಮುಖ್ಯ ಕಾರಣವೆಂಬುದನ್ನು ಮರೆಯಕೂಡದು. ಹಿಂದೂ ದೇಶದಲ್ಲಿ ವಿದ್ಯಾವಂತರಾದ ಸ್ತ್ರೀಯರ ಸಂಖ್ಯೆಯು, ಸಾವಿರಕ್ಕೆ ಹತ್ತು ಕೂಡ ದೊರಕುವುದಿಲ್ಲ. ೧೮ ನೇ ಶತಮಾನದ ವರೆಗೆ, ಒಂದಿಲ್ಲೊಂದು ರೀತಿಯಿಂದ ಪ್ರತಿಯೊಂದು ಮನೆಯಲ್ಲಿಯೂ ಸ್ತ್ರೀಯರಿಗೆ ಸ್ವಲ್ಪ ವಿದ್ಯೆಯು ಕೊಡಲ್ಪಡುತ್ತಲೇ ಇದ್ದಿತು. ಸ್ತ್ರೀಯರಿಗೆ ಗಣಿತದ ವಿದ್ಯೆಯನ್ನು ಕಲಿಸುತ್ತಿದ್ದರೆಂಬುದಕ್ಕೆ ಆಧಾರಗಳಿವೆ.

(ಮುಂದುವರಿಯುವುದು.)

ಕಾಂಗ್ರೆಸಿನ ಮುಂದಿನ ಸ್ವರಾಜ್ಯದ ಸ್ವರೂಪ.

ಇಷ್ಟರ ವರೆಗೆ ಸ್ವರಾಜ್ಯವೆಂದರೆ ಎಂತಹವೆಂಬ ಕುರಿತು ಕಾಂಗ್ರೆಸಿನವರು ಯಾವ ವಿವರಣೆಯನ್ನೂ ಕೊಟ್ಟಿರಲಿಲ್ಲ. ಈ ಸಲದ ಕಾಂಗ್ರೆಸಿನಲ್ಲಿ ಸ್ವರಾಜ್ಯದ ನಿಜಸ್ವರೂಪವನ್ನು ನಿರೂಪಿಸುವ ಈ ಕೆಳಗಣ ಪ್ರಾಮುಖ್ಯ ಸೂಚನೆಯೊಂದು ಮಂಜೂರಾಗಿರುವುದು. 'ಕಾಂಗ್ರೆಸಿನ ಅಭಿಪ್ರಾಯದ ಮೇರೆಗೆ ಸ್ವರಾಜ್ಯವೆಂದರೇನೆಂದು ಜನಸಾಮಾನ್ಯರು ಸುಲಭವಾಗಿ ತಿಳಕೊಳ್ಳುವಂತೆ ವಿವರಿಸುವುದು ಅಪೇಕ್ಷಣೀಯವೆಂದು ಕಾಂಗ್ರೆಸಿನ ಅಭಿಮತವಿರುತ್ತದೆ. ಆದುದರಿಂದ ಕಾಂಗ್ರೆಸಿನ ಪರವಾಗಿ ಸ್ವೀಕರಿಸಲ್ಪಡುವ ಯಾವುದಾದರೊಂದು ರಾಜನೀತಿಯ ಸಮ್ಮತದ ಮೇರೆಗಿನ ಸ್ವರಾಜ್ಯ ಸಂಕಲ್ಪದಲ್ಲಿ ಜನತೆಗೆ ಈ ಕೆಳಗಣ ಮೂಲಭೂತ ಹಕ್ಕು ಬಾಧ್ಯತೆಗಳಿರುವಂತಾಗಬೇಕು. (1) ಸಂಘ ಸಭಾ ಸ್ವಾತಂತ್ರ್ಯ. (2) ಭಾಷಣ ಮತ್ತು ಮುದ್ರಣ ಸ್ವಾತಂತ್ರ್ಯ. (3) ಸಾರ್ವಜನಿಕ ನೀತಿ ಶಾಂತಿಗೊಳಪಟ್ಟ ವಿಚಾರ ಸ್ವಾತಂತ್ರ್ಯ. ಮತ್ತು ಯಾವುದಾದರೊಂದು ಧರ್ಮಾವಲಂಬಿಯಾಗಿ ಅದನ್ನಾಚರಿಸುವ ಸ್ವಾತಂತ್ರ್ಯ. (4) ಅಲ್ಪಸಂಖ್ಯಾಕರ ಸಾಹಿತ್ಯ, ಭಾಷೆ, ಲಿಪಿಗಳ ರಕ್ಷಣೆ. (5) ಸ್ತ್ರೀಪುರುಷ ಭೇದವಿಲ್ಲದೆ ಎಲ್ಲಾ ನಾಗರೀಕರಿಗೂ ಸರಿಸಮಾನ ಹಕ್ಕು ಬಾಧ್ಯತೆಗಳು. (6) ಸಾರ್ವಜನಿಕ ಉದ್ಯೋಗ, ನೌಕರಿ, ಅಧಿಕಾರ, ಗೌರವ ಮತ್ತು ಯಾವ ವ್ಯಾಪಾರ ವೃತ್ತಿಯನ್ನನುಸರಿಸುವ ವಿಷಯದಲ್ಲಿಯೂ ಜಾತಿ, ಮತ ಪಂಥಗಳ ನಿಮಿತ್ತ ಯಾವ ಭೇದವೂ ಇಲ್ಲದ ಸರಿ ಸಮಾನತೆ. (7) ಸಾರ್ವಜನಿಕ ಶಾಲೆ, ರಸ್ತೆ, ಮತ್ತು ಎಲ್ಲಾ ಸಾರ್ವಜನಿಕ ಸ್ಥಳಗಳಿಗೆ ಹೋಗಿ ಅವನ್ನು ಉಪಯೋಗಿಸಲು ಎಲ್ಲರಿಗೂ ಸರಿಸಮಾನ ಹಕ್ಕು. (8) ಸರಕಾರವು ಮಾಡುವ ನಿಯಮ ನಿರ್ಬಂಧಗಳಿಗನುಸಾರವಾಗಿ ಆಯುಧಗಳನ್ನು ಧರಿಸುವ ಮತ್ತು ಇಟ್ಟುಕೊಳ್ಳುವ ಹಕ್ಕು.

I ಕಾನೂನಿಗನುಸಾರವಾಗಿ ಹೊರತು ಯಾವನೊಬ್ಬನ ಸ್ವಾತಂತ್ರ್ಯಾಪಹರಣ ಮಾಡಬಾರದು. ಮತ್ತು ಅವನ ನಿವಾಸ ಆಸ್ತಿಪಾಸ್ತಿಗಳನ್ನು ಆಕ್ರಮಣ, ಜಪ್ತಿ, ಜಪ್ತಿಗಳನ್ನು ಮಾಡಬಾರದು. II ಸರಕಾರವು ಧಾರ್ಮಿಕ ತಟಸ್ಥಭಾವವನ್ನು ವಹಿಸಬೇಕು. III ಕೈಗಾರಿಕೆ ಕೆಲಸಗಾರರಿಗೆ ನ್ಯಾಯವಾದ ಜೀವನ ನಡಿಸಲು ಸಾಕಷ್ಟು ಸಂಬಳ, ದಿವಸಕ್ಕೆ ಇಂತಿಷ್ಟೇ ಗಂಟೆ ಕೆಲಸಮಾಡಬೇಕೆಂಬ ನಿರ್ಬಂಧ, ಕೆಲಸ ಮಾಡಲು ಆರೋಗ್ಯಕರ ಸ್ಥಿತಿಗತಿ, ಮತ್ತು ಸಾಂಪತ್ತಿಕ ದುಷ್ಪರಿಣಾಮ, ವೃದ್ಧಾಪ್ಯ, ಅಸೌಖ್ಯ ಮತ್ತು ನಿರುದ್ಯೋಗ ಕಾಲದಲ್ಲಿ ರಕ್ಷಣೆ. IV ಗುಲಾಮಗಿರಿಯ ಮತ್ತು ಅದಕ್ಕೆ ಸಮೀಪವಾದ ಪರಿಸ್ಥಿತಿಯಿಂದ ಕೂಲಿ ಕೆಲಸಗಾರರನ್ನು ಬಿಡಿಸುವುದು. V ಸ್ತ್ರೀ ಕೆಲಸಗಾರರಿಗೆ ರಕ್ಷಣೆ ಮತ್ತು ವಿಶೇಷವಾಗಿ ಬಾಣಂತಿ ಕಾಲದಲ್ಲಿ ಅವರಿಗೆ ಸಾಕಷ್ಟು ರಜೆ ಕೊಡುವ ಏರ್ಪಾಡು. VI ಕಾರಖಾನೆಗಳಲ್ಲಿ ಶಾಲೆಗೆ ಹೋಗುವ ಪ್ರಾಯದ ಹುಡುಗರನ್ನು ಕೆಲಸಕ್ಕೆ ನೇಮಿಸುವ ನಿಷೇಧ. VII ತಮ್ಮ ಹಿತವನ್ನು ರಕ್ಷಿಸಲು ಯೂನಿಯನುಗಳನ್ನು ಸ್ಥಾಪಿಸುವ ಮತ್ತು ತಮ್ಮ ಜಗಳವನ್ನು ಮಧ್ಯಸ್ಥಿಕೆಯಿಂದ ಇತ್ಯರ್ಥಪಡಿಸಲು ಯೋಗ್ಯ ಏರ್ಪಾಡು ಮಾಡುವ ಸ್ವಾತಂತ್ರ್ಯ. VIII ರೈತರು ತೆರುವ ಭೂಕಂದಾಯ ಮತ್ತು ಗೇಣಿಯನ್ನು ಕಂಬಾ ಇಳಿಸುವುದು ಮತ್ತು ಸಾಕಷ್ಟು ಉತ್ಪತ್ತಿ ಬಾರದ ಜಮೀನನ್ನು ಸಾಗುವಳಿ ಮಾಡುವ ಒಕ್ಕಲುಗಳಿಗೆ ಆವಶ್ಯವಿರುವ ಕಾಲದ ವರೆಗೆ ಗೇಣಿ ಮಾಫಿ ಮಾಡುವುದು. ಇದರಿಂದೆಲ್ಲಾ ನಷ್ಟವುಂಟಾಗುವ ಚಿಕ್ಕ ಜಮೀನುದಾರರಿಗೆ ಆವಶ್ಯವಿದ್ದಲ್ಲಿ ಸಹಾಯಮಾಡುವುದು. IX ಆರೊಂದು ನಿಯಮಿತ ಪ್ರಮಾಣಕ್ಕಿಂತ ವ್ಯವಸಾಯ ಆದಾಯವು ಹೆಚ್ಚಿಗೆಯಾದಂತೆ ಅಧಿಕಾಧಿಕವಾಗಿ ಆದಾಯ ತೆರಿಗೆ ಹೊರಿಸುವುದು. X ಪರಂಪರಾಗತ ಆಸ್ತಿಯ ಪ್ರಮಾಣದ ಮೇರೆಗಿನ ತೆರಿಗೆ. XI ಪ್ರಾಯಬಂದವರಿಗೆಲ್ಲಾ ಓಟುಕೊಡುವ ಹಕ್ಕು. XII ಧರ್ಮಾರ್ಥ ಪ್ರಾಥಮಿಕ ಶಿಕ್ಷಣ. XIII ಈಗಿನ ಪ್ರಮಾಣಕ್ಕಿಂತ ಕೊನೆಯ ಪಕ್ಷಕ್ಕೆ ಅರೆವಾಸಿಯಷ್ಟಾದರೂ ಸೇನಾವೆಚ್ಚವನ್ನು ಇಳಿಸುವುದು. XIV ಸಿವಿಲ್ ನೌಕರರ ವೇತನ ಮತ್ತು ಸಂಬಳವನ್ನು ತುಂಬಾ ಕಡಿಮೆ ಮಾಡುವುದು. ಪ್ರತ್ಯೇಕವಾಗಿ ನೇಮಿಸಲ್ಪಡುವ ವಿದೇಶಿ ತಜ್ಞರಂಥವರ ಹೊರತು ಸರಕಾರದ ಯಾವ ಸೇವಕನಿಗಾಗಲಿ ರೂ. 500 ಕ್ಕಿಂತ ಮಿಕ್ಕಿದ ಸಂಬಳ ವಿರಬಾರದು. XV ವಿದೇಶಿ ವಸ್ತ್ರ ಮತ್ತು ನೂಲನ್ನು ನಿಷೇಧಿಸಿ ಸ್ವದೇಶಿ ವಸ್ತ್ರಕ್ಕೆ ರಕ್ಷಣೆಯೀಯುವುದು. XVI ಮಾದಕ ಪಾನ ಮತ್ತು ಪದಾರ್ಥಗಳನ್ನು ಸಂಪೂರ್ಣ ನಿಷೇಧಿಸುವುದು. XVII ಉಪ್ಪಿನ ಮೇಲಿನ ತೆರಿಗೆಯ ರದ್ದಿಯು. XVIII ಸ್ವದೇಶಿ ಕೈಗಾರಿಕೆಗಳಿಗೆ ಸಹಾಯವಿತ್ತು ಜನಸಾಮಾನ್ಯರ ಕಷ್ಟನಿವಾರಿಸುವುದಕ್ಕಾಗಿ ನಾಣ್ಯವಿನಿಮಯ ಮತ್ತು ಚಲಾವಣೆಯ ಮೇಲೆ ಸಂಪೂರ್ಣ ಅಧಿಕಾರ. XIX ಪ್ರಾಮುಖ್ಯ ಕೈಗಾರಿಕೆ ಮತ್ತು ಖನಿಜ ಧಾತುಗಳ ಮೇಲೆ ಅಧಿಕಾರ. XX ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾದ ಸಾಲಿಗ ವೃತ್ತಿಯ ಮೇಲೆ ಅಧಿಕಾರ. ಮೇಲಿನ ನಿರೂಪಣೆಗಳನ್ನು ಮಾರ್ಪಡಿಸುವ, ತಿದ್ದುಪಡಿ ಮಾಡುವ ಅಥವಾ ಹೆಚ್ಚಿಗೆಯಾಗಿ ಸೇರಿಸುವ ಹಕ್ಕು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರಿಗಿರುವುದು. ಮಹಾತ್ಮ ಗಾಂಧಿಯವರೇ ಈ ಸೂಚನೆ ತಂದು ಅದರ ಬೇರೆ ಬೇರೆ ವಿಷಯಗಳನ್ನೆಲ್ಲಾ ವಿವರಿಸಿ ಮಾತಾಡಿದ ಮೇಲೆ ತೀವ್ರಗಳಾದ ಪ್ರಕಾಶಮ್ ಮೊದಲಾದವರ ವಿರೋಧವಿದ್ದರೂ ಅದು ಪ್ರಬಲ ಬಹುಮತದಿಂದ ಮಂಜೂರಾಯಿತು.

ಕಾಂಗ್ರೆಸಿನ ಆಫೀಸರ್ ಕೆಲಸಗಳು.

ನಂತರ ಕಾಂಗ್ರೆಸಿನ ಅಧಿವೇಶನವು ಕೊನೆಗೊಂಡಿತು. ಶ್ರೀಮತಿ ಸರೋಜಿನಿ ದೇವಿಯವರು ಕಾಂಗ್ರೆಸಿನ ಪರವಾಗಿ ಸ್ವಾಗತ ಕಮಿಟಿಗೆ ವಂದನೆಯನ್ನರ್ಪಿಸಿ ಹಿಂದೂ ದೇಶದ ಬಂಧವಿಮೋಚನೆಗಾಗಿ ತರುಣರೆಲ್ಲರೂ ಉತ್ಸಾಹದಿಂದ ಕೆಲಸ ಮಾಡಬೇಕೆಂದು ವಿನಂತಿಸಿಕೊಂಡರು. ನಂತರ ಪ್ರೆಸಿಡೆಂಟರು, "ಗಾಂಧಿ-ಅರ್ವಿನ್ ಒಪ್ಪಂದ ಮತ್ತು ಸ್ವರಾಜ್ಯದಲ್ಲಿಯ ಹಕ್ಕು ಬಾಧ್ಯತೆಗಳ ನಿರೂಪಣೆಯು ಅತಿ ಮಹತ್ವದ ಠರಾವುಗಳಿರುವನ್ನು ಕಾಂಗ್ರೆಸು ಮಂಜೂರು ಮಾಡಿರುವುದು. ಸಂಧಾನಕ್ಕೆ ತರುಣರ ವಿರೋಧವಿರುವವರಾದರೂ ಇನ್ನಾರು ತಿಂಗಳಲ್ಲಿ ಅದರ ಫಲಿತಾಂಶವು ತಿಳಿಯುವಂತಾಗುವುದು. ತರುಣ ಜೀವನದಲ್ಲಿ 6 ತಿಂಗಳೆಂದರೆ ಅತ್ಯಲ್ಪ ಕಾಲಾವಧಿಯು. ಮುಂದರಿದ ನಾಸ, ಗಾಂಧಿಜಿಯವರೂ ಆ ಅವಧಿಯಲ್ಲಿಯೇ ಮೃತ್ಯುವಶರಾಗಬಹುದು. ಆದರೆ ನಾವು ಸಾಯುವ ಮೊದಲು ಹಿಂದದೇಶವು ಸ್ವತಂತ್ರವಾಗುವುದನ್ನು ಕಾಣಬೇಕೆಂದೇ ನಮ್ಮ ಆಕಾಂಕ್ಷೆ. ತರುಣರು ನಮಗೆ ಸಂದರ್ಭವನ್ನೀಯುವುದು ವಿಹಿತವಿದೆ. ಕಾಂಗ್ರೆಸು ಯಾವುದಾದರೊಂದು ಪಂಗಡಗಳ ಹಕ್ಕಿನದಾಗಿರುವುದಿಲ್ಲ. ಅದು ಇಡೀ ರಾಷ್ಟ್ರದ ಸೊತ್ತು. ಒಂದು ದಿನ ಅದು ತರುಣರ ಹಸ್ತಗತವಾಗುವುದು. ಆದುದರಿಂದ ಈಗವರು ಅಸಹಿಷ್ಣುಗಳಾಗಬಾರದು. ಈ ಆರು ತಿಂಗಳಲ್ಲಿ ಅವರು ಖಾದಿ ಪ್ರಚಾರ ಮತ್ತು ವಿದೇಶಿ ವಸ್ತ್ರ ಬಹಿಷ್ಕಾರದಲ್ಲಿ ನಿರತರಾಗಿರಬೇಕು. ಬರಿಯ ಮಾತಿನಿಂದ ಫಲವಿಲ್ಲ. ಒಬ್ಬನಿಗೆ ಮಾನವನ್ನು ತರುವುದೆಂದರೆ ಸೇವೆ ಮತ್ತು ಕಾರ್ಯ. ತರುಣರ ಹಿಂದೆ ಕಾರ್ಯ ಶಕ್ತಿಯು ಇದ್ದರೆ ರೌಂಡ್‌ಟೇಬಲ್ ಪರಿಷತ್ತಿನಿಂದುಂಟಾಗುವ ಯಾವ ರಾಜಕೀಯ ಸೂತ್ರವನ್ನಾದರೂ ತಮಗೊಪ್ಪಿಗೆಯಿಲ್ಲದಿದ್ದರೆ ಅವರು ಕಸದ ಬುಟ್ಟಿಗೆ ಬಿಸಾಡಬಹುದು. ಆದರೆ ಕಾರ್ಯದ ಬೆಂಬಲವಿಲ್ಲದಿದ್ದರೆ ಸಾವಿರಾರು ಗಾಂಧಿಯವರೂ ಅವರಿಗೆ ಸ್ವರಾಜ್ಯವನ್ನು ಪಡೆಯಲಾರರು. ತರುಣರು ಗಡಿನಾಡಿನ ಪ್ರಮುಖರಾದ ಸರ್ದಾರ್ ಅಬ್ದುಲ್ ಗಫಾರ್ ಖಾನರಂತಿರಬೇಕು. ಒಪ್ಪಂದವು ಒಳ್ಳೆಯದಾಗಿರಲಿ, ಕೆಟ್ಟದಾಗಿರಲಿ ಅದರ ಗೊಡವೆ ನನಗೆ ಬೇಡ. ನಾನೊಬ್ಬ ಸಾಮಾನ್ಯ ಸೇನಾನಿಯಾದ ಗಾಂಧಿಜಿಯವರ ಆಜ್ಞೆಗಳನ್ನು ಪಾಲಿಸುವುದೇ ತನ್ನ ಕರ್ತವ್ಯವೆಂಬ ಅವರ ಮನೋವೃತ್ತಿಯು ನಮ್ಮ ತರುಣರಲ್ಲಿರಬೇಕು" ಎಂದು ಅಧಿವೇಶನದ ಸಮಾಪ್ತಿಯ ಭಾಷಣವಿತ್ತರು. ಬರುವ ಕಾಂಗ್ರೆಸನ್ನು ಉತ್ಕಲ ಪ್ರಾಂತದವರು ಕರೆದಿರುವರು. ಸೇಟ್ ಜಮುನಾಲಾಲ್ ಬಜಾಜರು ಬರುವ ವರ್ಷದ ಕಾಂಗ್ರೆಸಿನ ಕೋಶಾಧಿಕಾರಿಯಾಗಿಯೂ, ಶ್ರೀಗಳಾದ ಪಂಡಿತ ಜವಾಹಿರ್‌ಲಾಲ ನೆಹರು, ಜೈರಾಮದಾಸ್ ದೌಲತ್‌ರಾಮ್ ಮತ್ತು ಡಾಕ್ಟರ್ ಸೈಯದ್ ಮಹಮ್ಮದರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು.

'ನವಯುಗ'

ಜಮೀನ್ದಾರರ ಸಂಘದ ಕಮಿಟಿ.

ಕೊಡಗ ಜಮೀನ್ದಾರರ ಸಂಘದ [illegible]ಟಿಯ ಮೀಟಿಂಗು ಈ ತಾ. 15ರಲ್ಲಿ ವಿ[illegible] ಭಂಡಾರ ಮಹಡಿಯಲ್ಲಿ ನಡೆಯಿತು. ಸಂಘ[illegible] ಜರಿಲ್ಲದ ಕಾರಣ ಮಿ. ಐ. ಸಿ. ಸುಬ್ಬಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಹಾಜರು ಗಳು—ಮಿ. ಗಳಾದ ಅಬ್ದುಲ್ ಗಫೂರ್ [illegible] ಸುಬ್ಬಯ್ಯನವರು [illegible] ಮಯ್ಯನವರು, ಐನಂಡ ಮಾದಪ್ಪನವರ [illegible] ಮುಂಡೀರ [illegible] ಗಣಪತಿಯವರು [illegible] ಪಿ ಐ ಜಿ.

1 ಹಳೆ ಮೀಟಿಂಗಿನ ಪ್ರೊಸೀಡಿಂಗ ಓದಿತು

2 [illegible]ದಿಂದ ಬಂದ ಅರ್ಜಿ [illegible] ಮುಂದೂಡಿ ಮಾಡಲಾಯಿತು

3 ಸಂಘದ ಈ ವರ್ಷದ ಮಹಾಸಭೆ [illegible] ಕೂಪ್ಪಲಲ್ಲಿ ನಡೆಸುವಂತೆ [illegible] ಪರ ಮಿ ಗಳಾದ ಮುನಿಯಪಂಡ ಚಿಣ್ಣಪ್ಪ [illegible] ಮಾದಪ್ಪನವರು ಮತ್ತು [illegible] ಅಪೇಕ್ಷಿಸಿದರು. ಇದರ [illegible] ಲ್ಲಿ ವಾರ್ಷಿಕ ಸಭೆಯನ್ನು ನಡೆಸುವಂತೆ ಯಿತು

4 [illegible] ಅಧ್ಯಕ್ಷರಾಗಿ [illegible] ದ ಪ್ರಮುಖರಾದ ಶ್ರೀಯುತ [illegible] ಸಂಘದ ಮಹಾಸಭೆಯ ಅಧ್ಯಕ್ಷತೆ [illegible] ಅಧ್ಯಕ್ಷರಾಗಿ ನೇಮಿಸಲಾಯಿತು

5 ಅಧ್ಯಕ್ಷರ ಅನುಕೂಲತೆ ಮೇರೆ ಮೇ ತಾ. 5ನೇ ಮಂಗಳವಾರ [illegible] 11 ಗಂಟೆಗೆ ಪ್ರಾರಂಭಿಸುವಂತೆಯಾ[illegible]

6 ಸಂಘದ ಲೆಖ್ಖವನ್ನು [illegible] ಯಸ್. ಪೂವಯ್ಯನವರನ್ನು ಮತ್ತು [illegible] ಗಣಪತಿಯವರನ್ನು ನೇಮಿಸಲಾಯಿತು.

7. ಸಂಘದ ವಾರ್ಷಿಕ ಲೆಖ್ಖವನ್ನು [illegible] ಸರ್ಟಿಫೈಡ್ ಆಡಿಟರಾದ ಮಿ ಬಿ [illegible] ಸಲಾಯಿತು ಮತ್ತು [illegible] 15/ರ [illegible] ನಿಶ್ಚೈಸಲಾಯಿತು

8. ಹಿಂದಿನ ವರ್ಷಗಳಲ್ಲಿ [illegible] ಕಟ್ಟದ [illegible] ವ ಮಹಾಸಭೆಯ ಒಳಗೆ ಆಫೀಸಿಗೆ ತಲುಪಿಸ[illegible] ಳಿಗೆ ನೋಟೀಸು ಕೊಡುವಂತೆ ತೀರ್ಮಾನಿಸ[illegible]

9 ಸಂಘದ ಕಟ್ಟಡದಲ್ಲಿರುವ [illegible] 24 ಇಂಚು ಉದ್ದ 18 ಇಂಚು ಅಗಲವಿರಬೇ[illegible] ಲಾಯಿತು ಮತ್ತು ಅದರಲ್ಲಿ ಕತ್ತಲಿಕ್ಕಿರುವ [illegible] ಮಾನಿಸಲ್ಪಟ್ಟವು

10 ಸಂಘದ ವಾರ್ಷಿಕ ಚಂದಾವನ್ನು 1 ದ 4 ಆಣೆಗೆ ಇಳಿಸುವುದರಿಂದ ಅದರ [illegible] ಶನನ್ನು ಕೇವಲ 25/ರಿಂದ 12½ಗೆ ಇಳಿಸು[illegible] ಸಲಾಯಿತು.

ಓಂ

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂ.

ಮಂಗಳೂರು, ದ. ಕನ್ನಡ.

ಯಾವತ್ತು ಬಗೆಯ ರಬ್ಬರು ಮೋಹರು [illegible] ಸ್ಟೆನ್ ಬೋರ್ಡರ್, ಹಾಫ್ ಟೋನ್ ದಿ [illegible] ನಮ್ಮಲ್ಲಿ ನಾಜೂಕಾಗಿ [illegible] ಕೊಡಲಾಗುತ್ತದೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕಾಗಲಿ [illegible] ಏಜೆಂಟರ ಮಿ. ಯಸ್ ಯಸ್ ನವರಿಗಾಗಲೀ ಬರೆದುಕೊಳ್ಳುವದು.

12—1

ಬೇಕಾಗಿದೆ! ಗುಮಾಸ್ತ!! ಬೇಕು

'ದಕ್ಷಿಣ ಕೊಡಗು ಸಹಕಾರ ಸ್ಟೋರ' ನಿರ್ವಾಹಕ್ಕೆ ಒಬ್ಬ ಗುಮಾಸ್ತನು ಬೇಕಾಗಿರುವ[illegible] ರೂ 210 ಪ್ರಾಥಮಿಕ [illegible] ಈ ತಾರೀಕು 28 ರೊಳಗೆ ಸೆ[illegible]ಡಂಟರಿಗೆ ಅರ್ಜಿ ಬರೆಯತಕ್ಕದ್ದು.

[illegible] Karumbiah
President
South Coorg Co-operative Stores

1—1

ವರ್ತಮಾನ ಸಂಗ್ರಹ.

ಒಳ ದೇಶ.

ತಾ. 15 ರ ರಾತ್ರಿ ಕೊಡಗಿನ ಹಲವು ಕಡೆಗಳಿಗೆ ಒಂದು ಸಾಧಾರಣವಾದ ಮಳೆ ಬಿತ್ತು.

ಕೊಡಗಿನ ಸಿವಿಲ್ ಕೋರ್ಟುಗಳು ಈ ತಾ. 20 ರಿಂದ ಆಷ್ಟೈರು ವರೆಗೆ ಮುಚ್ಚಲ್ಪಡುವವೆಂದು ತಿಳಿಯಬರುತ್ತದೆ.

ಕರಾಚಿ ಕಾಂಗ್ರೆಸ್ಸಿಗೆ ಹೋಗಿದ್ದ ಮೆ. ಕೆ. ಪಿ. ಚಿನ್ನಪ್ಪನವರು ಮತ್ತು ಶ್ರೀಮತಿ ಕೆ. ಸಿ. ಅಕ್ಕಮ್ಮನವರು ತಾ. 15 ರಲ್ಲಿ ಕೊಡಗಿಗೆ ವಾಪಸು ಬಂದು ತಲಪಿರುವರು.

ಸಿದ್ದಾಪುರ ಟ್ರಾವಲರ್ಸ್ ಬಂಗ್ಲೆಯು ಈ ತಾ. 16 ರಿಂದ ಜನಸಹ ತೆರೆಯಲ್ಪಟ್ಟಿದೆಯೆಂದು ಎಗ್ಸಿಕ್ಯೂಟಿವ್ ಇಂಜಿನಿಯರು ತಿಳಿಸಿರುತ್ತಾರೆ.

ಸಿದ್ದಾಪುರವು ಈಗ ಪ್ಲೇಗಿನ ಹಾವಳಿಯಿಂದ ಬಿಡುಗಡೆಯಾಗಿ ಆರೋಗ್ಯಕರವಾಗಿದೆಯೆಂದೂ, ಮೊದಲಿನಂತೆಯೇ ಸಂತೆ ಸಾರಿಗಳು ನಡಿಯುತ್ತಿವೆಯೆಂದೂ ತಿಳಿಯಬರುತ್ತದೆ.

ಬಿಲ್ಲವಸ್ಕಾರರ ಸಂಘದ ಕಾರ್ಯಕಾರೀ ಮಂಡಳಿಯ ಮೀಟಿಂಗೊಂದು ತಾ. 15 ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಮಡಿಕೇರಿಯಲ್ಲಿ ಪ್ಲೇಗಿನ ದೆಸೆಯಿಂದ ಕಾನ್ವೆಂಟ್ ಸ್ಕೂಲೂ, ಹಿಂದೂಸ್ಥಾನಿ ಸ್ಕೂಲೂ ಮತ್ತು ಮುನಿಸಿಪಲ್ ಹಿಂಗೆ ಕೆಲಸದ ಸ್ಕೂಲೂ ತತ್ಕಾಲ ಮುಚ್ಚಲ್ಪಟ್ಟಿವೆಯೆಂದು ಕೇಳುತ್ತೇವೆ.

ತಾ. 12 ರಲ್ಲಿ ಗೋಣಿಕೊಪ್ಪಲಲ್ಲಿ ಮೆ. ಬಿಮ್ಮಿ ಅಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಪಬ್ಲಿಕ್ ಮೀಟಿಂಗಿನಲ್ಲಿ ಮೆ. ಸಿ. ಎ. ಬೆಳ್ಯಪ್ಪನವರು ಮತ್ತು ಮೆ. ಕೆ. ಸಿ. ಕರುಂಬೈಯ್ಯನವರು 'ಕರಾಚಿ ಕಾಂಗ್ರೆಸ್ಸಿನ ಪ್ರಾಮುಖ್ಯತೆ' ಯನ್ನು ಕುರಿತು ಉಪನ್ಯಾಸ ಮಾಡಿದರು.

ಕೊಡಗು ಎತ್ಲೆಟಿಕ್ ಕ್ರಿಕೆಟ್ ಟೂರ್ನಮೆಂಟಿನಲ್ಲಿ ಕಾಸ್ಮೊಪಾಲಿಟನ್ ಕ್ಲಬ್‌ನವರು ಸೆಂಟ್ರಲ್ ಹೈಸ್ಕೂಲು ಟೀಮನ್ನು ಸೋಲಿಸಿದರು. ರಾ. ಬ. ಕೆ. ಚಂಗಪ್ಪನವರು ಜಯಶೀಲರಾದ ಕಾಸ್ಮೊಪಾಲಿಟನ್ ಕ್ಲಬ್ ಟೀಮಿನವರಿಗೆ ಇನಾಮತಿಯ ಬಿಲ್ಲನ್ನು ಕೊಟ್ಟರು.

ಮಡಿಕೇರಿನಾಡು ಮೊಣ್ಣಂಗೇರಿ ಗ್ರಾಮಸ್ಥರೆಲ್ಲರು ತಾ. 11 ರಲ್ಲಿ ಸೇರಿ ಅವರ ದವಸ ಭಂಡಾರದ ಜನರಲ್ ಮೀಟಿಂಗನ್ನು ನಡಿಸಿದರೆಂತಲೂ, ಅಧ್ಯಕ್ಷರಾಗಿದ್ದ ಮೆ. ಚಾರಿಂಗನ ಪೋಪಯ್ಯನವರು ಮಿತವ್ಯಯ ಮತ್ತು ಸಿಸಾನಿಷೇಧವನ್ನು ಕುರಿತು ಭಾಷಣ ಮಾಡಿದರೆಂದೂ ತಿಳಿಸುತ್ತಾರೆ.

ಕೊಡಗು ಬಿಲ್ಲವಸ್ಕಾರರ ಸಂಘದ ವಾರ್ಷಿಕ ಮಹಾಸಭೆಯು ಬರುವ ಮೇ ತಾ. 5 ನೇ ಮಂಗಳವಾರ ಗೋಣಿಕೊಪ್ಪಲಲ್ಲಿ ನಡೆಯುವುದೆಂದೂ, ಅದರ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಲು ಬಂಗಾಳದ ಪ್ರಮುಖ ಮುಂದಾಳಾದ ಶ್ರೀಯುತ ಜೆ. ಎಂ. ಸೇನ್‌ಗುಪ್ತರವರು ಒಪ್ಪಿರುವರೆಂದೂ ತಿಳಿಯುತ್ತೇವೆ.

ದೇವಣಗೇರಿ ಸ್ಕೂಲು ಒಳ ಸೇರಿ ಶಾಲೆಯವರ ಉಪಯೋಗಾರ್ಥವಾಗಿ ಬಾವಿ ತೋಡಿಸಲು ಡಿ. ಬೋರ್ಡಿನವರು ಕೊಟ್ಟ 800 ರೂ ಸಾಲದ್ದರಿಂದ ಮೆ. ಮುಕ್ಕಾಟ್ಟಿರ ಕಟ್ಟಪ್ಪನವರು ಅವರ ಮಗ ಪಿ. ಟಿ. ಸುಬ್ಬಯ್ಯನವರ ಜ್ಞಾಪಕಾರ್ಥವಾಗಿ 200 ಚಿಲ್ಲರೆ ರೂ. ಕಳವಾಗಿ ಕೊಟ್ಟು ಬಾವಿಯ ಕೆಲಸವನ್ನು ಪೂರೈಸಿಕೊಟ್ಟಿರುವರೆಂದು ತಿಳಿಯಬರುತ್ತದೆ.

ಕೊಡಗಿನ ಸರ್ಕಾರಿ ಸಿಬ್ಬಂದಿ ಮೋಟಾರು ಬಗ್ಗೆ ವಿಚಾರಿಸಲು ನಿಯಮಿಸಲ್ಪಟ್ಟಿರುವ ರಿಟ್ರೆಂಚ್ ಮೆಂಟ್ ಕಮಿಟಿಗೆ ಈ ಮೊದಲು ಪ್ರಕಟಿಸಿದ ಇಬ್ಬರು ಉದ್ಯೋಗಸ್ಥರಲ್ಲದ ಮೆಂಬರುಗಳಲ್ಲದೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರು ಸರ್ಕಾರಿ ಮೆಂಬರಾಗಿಯೂ, ಕಮೀಷನರವರು ಅಧ್ಯಕ್ಷರಾಗಿಯೂ ನೇಮಿಸಲ್ಪಟ್ಟಿರುವರೆಂದೂ ಇವರು ಕಾರ್ಯವನ್ನು ಈ ತಾ 28 ರಲ್ಲಿ ಪ್ರಾರಂಭಿಸುವರೆಂದೂ ತಿಳಿಯುತ್ತೇವೆ.

ತಾ. 13 ರಲ್ಲಿ ಬಿಟ್ಟಂಗಾಲದ ಸುತ್ತಮುತ್ತಲಿನ ಐದಾರು ಗ್ರಾಮಗಳ ನಿವಾಸಿಗಳು ಸುಮಾರು 300 ಗಂಡಸರು ಮತ್ತು 50 ಸ್ತ್ರೀಯರು ಬಿಟ್ಟಂಗಾಲ ಬಂಗಲೆ ಬಳಿ ಮೈದಾನದಲ್ಲಿ ಸಭೆ ಸೇರಿದರು. ಮೆ. ಕಂಬೀರಂಡ ಗಣಪತಿಯವರು ಅಧ್ಯಕ್ಷರಾಗಿದ್ದರು. ಮೆ. ಅಬ್ದುಲ್ ಗಫೂರ್ ಖಾನರವರು ಮತ್ತು ಮೆ. ಪಿ. ಐ. ಬೆಳ್ಯಪ್ಪನವರು 'ಈಗಿನ ರಾಜಕೀಯ ಪರಿಸ್ಥಿತಿ ಮತ್ತು ಕೊಡಗಿನವರ ಕರ್ತವ್ಯ' ವನ್ನು ಕುರಿತು ಭಾಷಣ ಮಾಡಿದರು.

ಮದ್ರಾಸು ಪ್ರಾಂತ್ಯದಲ್ಲಿ ಇಂಡಿಯನ್ ಪೋಲೀಸು ಸರ್ವಿಸಿಗೆ ಒಬ್ಬ ಬ್ರಾಹ್ಮಣೇತರ ಹಿಂದುವನ್ನು ನೇಮಿಸಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಮುಚ್ಚಾರ ಮಾಡಿರುವರೆಂದೂ, ಇದಕ್ಕೆ ಸೇರಲು ಇಚ್ಛೈಸುವ ಉಮೇದುವಾರರು ಮೇ 15 ರೊಳಗೆ ಕಮಿಷನರಿಗೆ ತಲಪುವಂತೆ ತಮ್ಮ ಅಪ್ಲಿಕೇಶನುಗಳನ್ನು ಕಳುಹಿಸಬೇಕೆಂತಲೂ, ಹೆಚ್ಚಿನ ಮಾಹಿತಿಯನ್ನು ಕಮಿಷನರವರ ಆಫೀಸಿನಲ್ಲಿ ಮುದ್ದ ಹೋಗಿ ತಿಳಕೊಳ್ಳಬಹುದೆಂದೂ ಛೀಫ್ ಕಮಿಷನರವರು ತಿಳಿಸಿರುತ್ತಾರೆ.

ಮಡಿಕೇರಿಯಲ್ಲಿ ಇಷ್ಟರ ವರೆಗೆ ನ್ಯೂಮೋನಿಕ್ ಪ್ಲೇಗು ಬಾಧಿಸಿಯೆಂದೂ, ಅದರಲ್ಲಿ ಒಂದು ಮರಣ ಮಾತ್ರ ಸಂಭವಿಸಿದೆಯೆಂದೂ ಸಿವಿಲ್ ಸರ್ಜನರು ತಿಳಿಸಿರುತ್ತಾರೆ. ಪ್ಲೇಗಿನ ದೆಸೆಯಿಂದ ಮಾರ್ಕೆಟು ಪೈನೀಯರ್ ರೋಡಿನ ಎಡಗಡೆ ಇರುವ ಡೇರೆ ಮೈದಾನದಲ್ಲಿ ನಡಿಸಲ್ಪಡುತ್ತಿದೆ. ಟೆರಿಟೋರಿಯಲ್ ಸಿಪಾಯಿಗಳಿಗೆಲ್ಲಾ ಇನಾಕ್ಯುಲೇಶನ್ ಮಾಡಿಸಲ್ಪಟ್ಟಿತು. ಸ್ಕೂಲು ಮತ್ತು ಪಬ್ಲಿಕ್ ಗಾರ್ಡನ್‌ಗಳಿಗೆ ಸೇರಿಸಬೇಕು ಕೆಡುವಂತೆ ಏರ್ಪಾಡು ಮಾಡಿರುತ್ತಾರೆ. ಪೇಟೆಯಲ್ಲಿ ಇನಾಕ್ಯುಲೇಶನ್ ಕೆಲಸವು ಜೋರಾಗಿ ನಡೆಯುತ್ತಿದೆ. ಗಾಳಿಬೀಡಿಯಲ್ಲೂ ಮತ್ತು ಮಹದೇವಪೇಟೆಯಲ್ಲೂ ಕೆಲವರು ಮನೆ ಬಿಟ್ಟು ಬೇರೆ ಕಡೆ ಹೋಗಿರುವರು.

ಸ್ವಯಂ ಸೇವಕರ ಕಾರ್ಯ.

ಮೂರ್ನಾಡು ಶಿಬಿರದ ಸ್ವಯಂ ಸೇವಕರು ತಾ. 3 ರಲ್ಲಿ ಬಿಳಿಗೇರಿ ಗ್ರಾಮದಲ್ಲೂ, ತಾ. 4 ರಲ್ಲಿ ಹಾಕತ್ತೂರು ಗ್ರಾಮದಲ್ಲಿಯೂ ಮನೆಗಳಿಗೆ ಹೋಗಿಯೂ, ತಾ. 5ರಲ್ಲಿ ಐಕೊಳ ಗ್ರಾಮದ ಅಯ್ಯಪ್ಪ ದೇವರ ಹಬ್ಬಕ್ಕೆ ನೆರೆದಿದ್ದವರಿಗೂ, ತಾ. 6ರಲ್ಲಿ ಹಾಕತ್ತೂರಿನ ಭಗವತಿ ದೇವರ ಉತ್ಸವಕ್ಕೆ ನೆರೆದಿದ್ದವರಿಗೂ, ತಾ. 7ರಲ್ಲಿ ಮರಗೋಡು ಗ್ರಾಮದಲ್ಲಿ ಮನೆಗಳಿಗೆ ಹೋಗಿಯೂ ನಿಸಾ ನಿಷೇಧ ಮತ್ತು ಖಾದಿ ಪ್ರಚಾರದ ವಿಷಯ ಬೋಧನೆ ಕೊಟ್ಟರು. ಅಲ್ಲದೆ ಅವರು ತಾ. 9 ರಲ್ಲಿ ಮೂರ್ನಾಡಿನ ಸೇಂದಿ ಸಾರಾಯಿ ಅಂಗಡಿಗಳನ್ನು ಶಾಂತ ರೀತಿಯಿಂದ ಪಿಕೆಟ್ ಮಾಡುತ್ತಿದ್ದಾಗ್ಗೆ ಅಲ್ಲಿಯ ಸೇಂದಿ ಅಂಗಡಿ ಕಂಟ್ರಾಕ್ಟುದಾರನು ಪಿಕೆಟ್ ಮಾಡುತ್ತಿದ್ದವರ ಮೈಮೇಲೆ ಸೇಂದಿಯನ್ನು ಹೊಯ್ದನೆಂದು ತಿಳಿಯಬರುತ್ತದೆ.

ಪೊನ್ನಂಪೇಟೆ ಶಿಬಿರದವರು ತಾ. 1 ರಲ್ಲಿ ತೆರೆಸಿದರು ಸಂಚಮರ ಏಕ್ಸಿಬಿಶನಿಂದೆಸ ಅಲ್ಲಿಯ ದಂಡಿನವರನ ದೇವಸ್ಥಾನದಲ್ಲಿ ಅವರ ಯಜಮಾನ ವೈಕುಂಟಯ್ಯನವರ ಅಧ್ಯಕ್ಷತೆಯಲ್ಲಿ ಸಭೆ, ಸಿಸಾ ನಿಷೇಧ, ಖಾದಿ ಪ್ರಚಾರ ಮುಂತಾದರ ವಿಷಯ ಕೇಳಿಸಿದ ನಂತರ ಅಲ್ಲಿ ನೆರೆದಿದ್ದವರ ಪೈಕಿ 30 ಜನರು ಇನ್ನು ಮುಂದೆ ಸಿಸಾ ಸೇವನೆ ಮಾಡುವುದಿಲ್ಲವೆಂತಲೂ, ಬಾಯಿಯನ್ನೇ ಧರಿಸುತ್ತೇವೆಂತಲೂ ಮತ್ತು ಸತ್ತ ದನದ ಮಾಂಸ ತಿನ್ನುವುದಿಲ್ಲವೆಂತಲೂ ಪ್ರಮಾಣ ಮಾಡಿಕೊಂಡರು. ಇದು ಬೇರೆ ಜನರಿಗೆ ಒಂದು ಉದಾಹರಣೆಯಾಗಿದೆ.

ವೀರಾಜಪೇಟೆ ಶಿಬಿರದವರು ತಾ. 2 ರಲ್ಲಿ ಕಂಡಂಗಾಲ ಗ್ರಾಮದಲ್ಲಿ ಮೀಟಿಂಗು ನಡಿಸಿಯೂ, ತಾ. 3 ರಲ್ಲಿ ಕುತ್ತುನಾಡಿನಲ್ಲಿ ಮನೆ ಮನೆ ಸುತ್ತಿಯೂ, ತಾ. 4 ರಲ್ಲಿ ಕಡಂಗ ಮುರೂರ ಗ್ರಾಮದಲ್ಲಿ ಮೀಟಿಂಗು ಸೇರಿಸಿಯೂ, ತಾ. 9 ರಲ್ಲಿ ಐಮಂಗಲ ಗ್ರಾಮದಲ್ಲಿ ಮೀಟಿಂಗನ್ನು ಜರಗಿಸಿಯೂ, ಖಾದಿ ಪ್ರಚಾರ, ಸಿಸಾ ನಿಷೇಧದ ವಿಷಯ ಭಾಷಣ ಮಾಡಿ ಇವುಗಳನ್ನು ಜಾರಿಗೆ ತರಲು ಅಲ್ಲಲ್ಲಿ ಗ್ರಾಮಸ್ಥರ ಕಮಿಟಿಗಳನ್ನು ನೇಮಿಸಿರುವರು.

ಹೊರ ದೇಶ.

ಸಿದ್ದಾಪುರದಲ್ಲಿ ಒಂದು ಖಾಲಿಯ ಪ್ರದರ್ಶನದಲ್ಲಿ ಗುಂಡು ಹೊಡೆಯಲ್ಪಟ್ಟ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಮೆ. ಪೆಡ್ಡಿಯವರು ಮೃತರಾದರು.

11 ನೇ ತಾರೀಕಿನಲ್ಲಿ ಸೇಲಂನಲ್ಲಿ ರೌಂಡ್ ಟೇಬಲ್ ಕಾನ್‌ಫರೆನ್ಸಿಗೆ ಕ್ರಿಶ್ಚಿಯನ್ ಪ್ರತಿನಿಧಿಯಾಗಿ ಹೋಗಿದ್ದ ಮೆ. ಕೆ. ಟಿ. ಪಾಲ್‌ರು ಮೃತರಾದರು.

ಅಖಿಲ ಭಾರತ ನ್ಯಾಶನಲಿಸ್ಟ್ ಮುಸ್ಲಿಮ್ ಕಾನ್ ಫರೆನ್ಸ್ ಈ ತಾ. 18 ಮತ್ತು 19ರಲ್ಲಿ ಲಕ್ನೋದಲ್ಲಿ ನಡೆಯುವುದು. ಸರ್. ಅಲಿ ಇಮಾಮ್‌ರವರು ಅಧ್ಯಕ್ಷ ಸ್ಥಾನವನ್ನು ವಹಿಸುವರು.

ಹೊಸ ವೈಸ್‌ರಾಯರಾದ ಲಾರ್ಡ್ ವೆಲ್ಲಿಂಗ್ಡನ್‌ರವರು ನಮ್ಮ ದೇಶಕ್ಕೆ ಬಂದ ಕೂಡಲೇ 2ನೇ ರೌಂಡ್ ಟೇಬಲ್ ಕಾನ್ಫರೆನ್ಸಿನ ಕುರಿತಾಗಿ ಮಹಾತ್ಮ ಗಾಂಧಿಯವರೊಡನೆ ಗುಪ್ತ ಸಂಭಾಷಣೆ ನಡಿಸಲಿರುವರು.

ಮದರಾಸು ಪ್ರಾಂತದಲ್ಲಿ ಶಾಸನಭಂಗ ಚಳವಳದ ಧಾಟಿಯ ಸಂಧಿಗಳ ಸಮಯದಲ್ಲಿ 1700 ಸೆರೆಯಾಳುಗಳ ಬಿಡುಗಡೆಯಾಯಿತು. ಉಳಿದ 71 ಮಂದಿಗಳನ್ನು ಅವರು ಹಿಂಸೆ ಮಾಡಿದವರು ಅಥವಾ ಹಿಂಸಾಕಾರರು ಇಲ್ಲವೇ ಇತರರನ್ನು ಹಿಂಸೆ ಮಾಡಲು ಪ್ರೇರೇಪಿಸಿದವರು ಎಂಬ ಕಾರಣದಿಂದ ಬಿಡುವುದಿಲ್ಲವಂತೆ.

ಲಾಹೋರ್ ಕೇಸಿನಲ್ಲಿ ತೂಗ ಹಾಕಲ್ಪಟ್ಟ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ ಇವರ ಹೆಣಗಳನ್ನು ಅಧಿಕಾರಿಗಳು ಕತ್ತರಿಸಿ ಅಪಮಾನ ಮಾಡಿದರೆಂಬ ಸುದ್ದಿಯು ಹರಡಿದುದರಲ್ಲಿ ತಂಬಾ ಅತೃಪ್ತಿ ಉಂಟಾಗಿರುವ ಕಾರಣ ಅದನ್ನು ವಿಚಾರಿಸುವ ಬಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಒಂದು ಉಪ ಕಮಿಟಿಯನ್ನು ನೇಮಿಸಿರುವರು.

ಸರಕಾರದವರು ತಮಗೆ ಕಷ್ಟ ಕೊಡುವರೆಂದೂ, ಗಾಂಧಿ ಸಿ ಕರ ಒಂದು ಕೇಳಿಕೊಳ್ಳಬೇಕೆಂದೂ ಗಡಿಪ್ರಾಂತ್ಯದ ಜನರು ಮಹಾತ್ಮ ಗಾಂಧಿಯವರಿಗೆ ಬರೆದುಕೊಂಡಿರುವರಂತೆ. ಮ. ಗಾಂಧಿಯವರನ್ನು ಅವರೆಲ್ಲ 'ಮಲಂಗ ಬಾಬಾ' ಎಂದು ಕರೆಯುತ್ತಿರುವರು. ಆದರೆ ಮಹಾತ್ಮ ಗಾಂಧಿಯವರು ಅಲ್ಲಿಗೆ ಹೋಗುವುದಕ್ಕೆ ಸರಕಾರದ ಬಹಿಷ್ಕಾರ ಅಪ್ಪಣೆ ಇದೆ.

ಡಿಸ್ಟ್ರಿಕ್ಟ್ ಬೋರ್ಡು ಗಳ ಕೈಕೆಳಗಿನ ಎಲ್ಲಾ ಡಿಸ್ಪೆನ್ಸರಿಗಳಲ್ಲಿ ಯುನಾನಿ, ಹಕೀಮು ಮತ್ತು ವೈದ್ಯವನ್ನು ಮಾತ್ರ ನೇಮಿಸಬೇಕೆಂದು, ದಾಕ್ಟರನ್ನು ಕಡಿತಗೊಳಿಸ ಪಂಜಾಬು ಸರಕಾರವು ಆ ಪ್ರಾಂತ್ಯದ ಸಮಸ್ತ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಅಪ್ಪಣೆ ಕೊಟ್ಟಿದೆ. ಆಯುರ್ವೇದ ಮತ್ತು ಯುನಾನಿ ವೈದ್ಯಕ್ಕೆ ಪ್ರೋತ್ಸಾಹನ ಕೊಡುವುದೇ ಉದ್ದೇಶ.

ಮದ್ರಾಸಿನಲ್ಲಿ ಕೆಲವು ದಿನಗಳ ಕೆಳಗೆ ಒಬ್ಬ ರಿಕ್ಷಾದವನನ್ನು ಕ್ಯಾಪ್ಟನ್ ಡಾಬಿ ಎಂಬವನು ಗುಂಡಿನಿಂದ ಹೊಡೆದು ಕೊಂದದ್ದಕ್ಕಾಗಿ ವಿಚಾರ ನಡೆದು ಅಪರಾಧಿಗೆ 1000 ರೂ ಜುಲ್ಮಾನೆ ಶಿಕ್ಷೆ ವಿಧಿಸಲಾಗಿದೆ. ಹೆಚ್ಚಿಗೆ ದುಡ್ಡು ಕೇಳಿದ್ದಕ್ಕೆ ಬೆದರಿಸಲಿಕ್ಕಾಗಿ ರಿವಾಲ್ವರನ್ನು ತೋರಿಸಿದಾಗ ಆಕಸ್ಮಾತ್ ಗುಂಡು ಹಾರಿ ಹೋಯಿತೆಂತ ಅಪರಾಧಿಯ ಹೇಳಿಕೆಯನ್ನೇ ಅಂಗೀಕರಿಸಿ ಈ ಸುಲಭ ಶಿಕ್ಷೆ ಕೊಟ್ಟದ್ದಾಗಿದೆ.

ಈ ವಾರದಲ್ಲಿ ವೈಸ್‌ರಾಯ್ ಲಾರ್ಡ್ ಇರ್ವಿನರು ಪಂಡಿತ ಮದನ ಮೋಹನ ಮಾಳವೀಯರ ಮತ್ತು ಡಾಕ್ಟರ್ ಸಪ್ರೂರವರ ಸಂಗಡ ರೌಂಡ್ ಟೇಬಲ್ ಕಾನ್‌ಫರೆನ್ಸ್ ವಿಷಯ ಮಾತನಾಡಿದರು. ಪ್ರತಿನಿಧಿಗಳು ರೌಂಡ್ ಟೇಬಲ್ ಕಾನ್ ಫರೆನ್ಸಿಗೆ ಲಂಡನಿಗೆ ಹೋಗುವ ಮುಂಚೆ ಹೊಸ ವೈಸ್‌ರಾಯರ ಸಂಗಡ ಡಿಲ್ಲಿಯಲ್ಲಿ ಸಂಭಾಷಣೆ ನಡಿಸಬೇಕೆಂಬ ಏರ್ಪಾಡು ನಡಿಯುತ್ತಲಿದೆ.

ಹಿಂದೂ ದೇಶದ ವೈಸ್‌ರಾಯರಾಗಿದ್ದ ಲಾರ್ಡ್ ಇರ್ವಿನ್‌ರವರು ತಮ್ಮ ಉದ್ಯೋಗದಿಂದ ನಿವೃತ್ತರಾಗಿ ಇಂಗ್ಲೆಂಡಿಗೆ ವಾಪಸು ಹೋಗಲು ತಾ. 14ರಲ್ಲಿ ಪತ್ನಿ ಸಮೇತ ಡೆಲ್ಲಿಯಿಂದ ಹೊರಟರು. ಇವರು ಬೊಂಬಾಯಿಯಲ್ಲಿ ಹೊಸ ವೈಸರಾಯರಾಗಿ ಬರುವ ಲಾರ್ಡ್ ವೆಲ್ಲಿಂಗ್ಡನ್‌ರವರನ್ನು ಭೇಟಿಯಾಗುವರು. ಮಹಾತ್ಮ ಗಾಂಧಿಯವರು ಇವರನ್ನು ತಾ. 16ರಲ್ಲಿ ಬೊಂಬಾಯಿಯಲ್ಲಿ ಭೇಟಿ ಮಾಡುವರೆಂದೂ ವರ್ತಮಾನವಿದೆ.

ರಾವಲ್‌ಪಿಂಡಿಯಲ್ಲಿ ಸಿಕ್ಕ ಜನರ ಹಬ್ಬವನ್ನು ಆಚರಿಸಲು ಪಂಜಾಬು ಪ್ರಾಂತ್ಯದ ಎಲ್ಲಾ ಭಾಗದಿಂದಲೂ ತುಂಬಾ ಜನರು ನೆರೆದಿದ್ದ ಸಮಯದಲ್ಲಿ ಭಗತ್‌ಸಿಂಗ್ ಮೊದಲಾದವರ ಗೌರವಾರ್ಥವಾಗಿ ಮೆರವಣಿಗೆ ಮಾಡಕೂಡದೆಂದು ಅಧಿಕಾರಿಗಳು 144ನೇ ಸೆಕ್ಷನ್ ಮೇರೆ ನೋಟೀಸು ಕೊಟ್ಟಿದ್ದರು. ಅದನ್ನು ಉಲ್ಲಂಘನೆ ಮಾಡಿದ್ದಕ್ಕಾಗಿ ನವಜವಾನ್ ಭಾರತ ಸಭಾದ ಅಧ್ಯಕ್ಷರು, ಸೆಕ್ರೆಟರಿಯವರೆ ಮೊದಲಾದ 11 ಜನರೂ, ಬೇರೆ ಸುಮಾರು 20 ಜನರೂ ಸೆರೆ ಹಿಡಿಯಲ್ಪಟ್ಟಿರುವರಂತೆ.

ಕರಾಚಿಯಲ್ಲಿ ಈ ತಾ. 1ರಲ್ಲಿ ಕೂಡಿದ 'ಹಿಂದ ಸ್ವಾತಂತ್ರ್ಯ ಸೇವಾದಳದ ಅಖಿಲಭಾರತೀಯ ಮಂಡಳಿ'ಯವರು ಮಾಡಿರು ಮಾಡಿದ ಗೊತ್ತುವಳಿಯ ಮೇರೆ ಈ ತಾ. 25ನೇ ಆದಿತ್ಯವಾರ ದಿನವನ್ನು ಅಖಿಲ ಭಾರತ ಖಂಡದಲ್ಲಿ 'ರಾಷ್ಟ್ರಧ್ವಜ ದಿನ'ವೆಂದು ಆಚರಿಸಿ ಬೆಳಿಗ್ಗೆ 8 ಗಂಟೆಗೆ ರಾಷ್ಟ್ರಧ್ವಜ ವಂದನೆಯನ್ನೂ, ಸಾಯಂಕಾಲ 5 ಗಂಟೆಗೆ ರಾಷ್ಟ್ರಧ್ವಜದ ಮೆರವಣಿಗೆಯನ್ನೂ ಮಾಡಿ, ಕಡೆಗೆ ಸಭೆ ಸೇರಿಸಿ ರಾಷ್ಟ್ರಧ್ವಜದ ಮಹತ್ವವನ್ನು ಕುರಿತು ಭಾಷಣ ಮಾಡಬೇಕೆಂದು ಕರ್ನಾಟಕದ ಸೇವಾದಳದವರ ಕೋರಿಕೆಯಾಗಿದೆ.

ಮೌಲಾನಾ ಶೌಕತ್ ಅಲಿಯವರು ಹಿಂದೂಗಳಿಗೂ, ಮುಸಲ್ಮಾನರಿಗೂ ಪ್ರತ್ಯೇಕ ಚುನಾವಣೆಯೇ ಆಗಬೇಕೆಂದೂ, ಮಹಾತ್ಮ ಗಾಂಧಿಯವರು ಹಿಂದೂ ಮುಸಲ್ಮಾನರಲ್ಲಿ ಮಾತ್ರವಲ್ಲ ಮುಸಲ್ಮಾನರು ತಮ್ಮ ತಮ್ಮೊಳಗೆ ಜಗಳ ಮಾಡುವಂತೆ ಮಾಡುತ್ತಿದ್ದಾರೆಂದೂ, ಬೊಂಬಾಯಿಯಲ್ಲಿ ಭಾಷಣ ಮಾಡಿದರು. ಈ ಭಾಷಣವು ಹಿಂದೂಗಳಲ್ಲಿ ಮಾತ್ರವಲ್ಲ ಹಲವು ಮುಸಲ್ಮಾನರಲ್ಲಿಯೂ ಅತೃಪ್ತಿ ಹುಟ್ಟಿಸಿದೆ. ರಾಷ್ಟ್ರೀಯ ಪಕ್ಷದ ಮುಸ್ಲಿಮರು ಬೊಂಬಾಯಿ, ಅಲ್ಲಹಾಬಾದು ಮುಂತಾದ ಕಡೆಗಳಲ್ಲಿ ಪಬ್ಲಿಕ್ ಸಭೆ ಸೇರಿಸಿ ಶೌಕತ್ ಅಲಿಯವರ ಅಭಿಪ್ರಾಯವನ್ನು ವಿರೋಧಿಸಿ ಠರಾವು ಪಾಸು ಮಾಡಿರುತ್ತಾರೆ.

ಸ್ಪೈನ್ ದೇಶದಲ್ಲಿಯ ಜನರ ಅಶಾಂತಿಯ ಫಲಿತಾಂಶವಾಗಿ ಅಲ್ಲಿಯ ಅರಸರಾದ ಅಲ್‌ಫೋನ್ಸೋರವರು ಸಿಂಹಾಸನವನ್ನು ಬಿಟ್ಟುಕೊಟ್ಟು ಪೋರ್ಟುಗೀಸ್ ಸರಹದ್ದಿನ ಪಟ್ಟಣಕ್ಕೆ ಹೊರಟು ಹೋದರು. ಅವರ ಮಂತ್ರಿಮಂಡಳಿಯು ರಾಜಿನಾಮೆ ಕೊಟ್ಟಿತು. ಈಗ ರಿಪಬ್ಲಿಕನ್ ಸರ್ಕಾರದ ಮಂತ್ರಿಮಂಡಳಿಯು ಆಡಳಿತೆಯ ಕಾರ್ಯವನ್ನು ಕೈಕೊಂಡಿದೆ. ರಕ್ತ ಪ್ರವಾಹವಿಲ್ಲದೆ ಕ್ರಾಂತಿಗೆ ಜಯವಾಯಿತು.

ತುರ್ಕಿಸ್ಥಾನದ ಮುಖ್ಯ ಪಟ್ಟಣವಾದ ಕಾನ್‌ಸ್ಟಾಂಟಿನೋಪಲಿನ ನಿವಾಸಿಯಾದ 157 ವರ್ಷ ಪ್ರಾಯದ ಜಾರೋ ಆಘಾ ಎಂಬವನು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಪ್ರವಾಸವನ್ನು ಮುಗಿಸಿಕೊಂಡು ತಾ. 14ರಲ್ಲಿ ಇಂಗ್ಲೆಂಡಿಗೆ ಹೋಗಿ ತಲಪಿದನು. ಅಲ್ಲಿ ಕೆಲವು ವಾರಗಳು ನಿಂತು ತನ್ನ ಹುಟ್ಟು ಸ್ಥಳಕ್ಕೆ ಹಿಂದಿರುಗುವನಂತೆ. ಈಗ ಪ್ರಪಂಚದಲ್ಲಿ ಜೀವಿಸಿರುವವರ ಪೈಕಿ ಇವನೇ ಎಲ್ಲರಿಗಿಂತಲೂ ಹಿರಿಯನಂತೆ.

Rubber Stamps of every design

and

Glass sign boards, Half tone Blocks, Monogram seals, Marble slabs, ring stones etc etc, to suit every pocket and taste. For further particulars please apply to:-

The Crown Rubber Stamp Co.,

Mangalore, S. K

Or

Mr. N. N. Ponnappa,

Agent,

Mercara

12-4

COORG FOREST DEPARTMENT,
Mercara, the 24th March 1931.

NOTICE.

It is hereby notified for the information of those gem malegars who took up the leases of gem males during and after 1924 and up to and including 1927 that payment of arrears of assessment by the aforesaid holders of cardamom males will be excused if they resign their males absolutely by 20th April 1931.

All malegars who do not wish to resign are required to pay up the arrears in full. They may pay the arrears in four equal yearly instalments as follows if the arrears exceed Rs 20/—

I. by 20th April 1931.
II. " 31st January 1932.
III. " " " 1933.
IV. " " " 1934.

Where the arrears are Rs 20/—or less the full amount must be paid up in two equal instalments as follows:—

I. by 20th April 1931.
II. " 31st January 1932.

All resignation applications must reach the undersigned on or before the 20th April 1931 without fail. Any resignation received after that date will be ignored.

H. G. HICKS.
3—3 Chief Forest Officer.

ನೋಟೀಸು.

ಈ ಮೂಲಕ ಗೇಣ್ ಮಲೆಗಾರರಿಗೆ ತಿಳಿಯಪಡಿಸುವು ದೇನಂದರೆ—1924ನೇ ಇಸವಿಯಿಂದ 1929ನೇ ಇಸವಿಯ ವರೆಗೆ ಗೇಣ್ ಮಲೆಗಳನ್ನು ಪಡಕೊಂಡು ಗೇಣ್ ಕಂದಾಯ ಕೊಡದೆ ಬಾಕಿ ಇರುವಂಥಾವರು ಇದೇ ಬರುವ ಏಪ್ರಿಲ್ ತಾರೀಕು 20 ರ ವಳಗೆ ಕಂದಾಯ ಬಾಕಿ ಇರುವ ಮಲೆಗಳನ್ನು ರಾಜಿನಾಮೆಯಿಂದ ಬಿಡಬಹುದು. ಆ ಮಲೆಗಳ ಬಾಕಿ ಕಂದಾಯವು ಮಾಫಿ ಮಾಡಲ್ಪಡುವುದು. ರಾಜಿನಾಮೆ ಕೊಡದೆ ಇಟ್ಟುಕೊಳ್ಳುವಂಥ ಮಲೆಗಳ ಬಾಕಿ ಕಂದಾಯವು 20 ರೂಪಾಯಿಗಿಂತ ಮೀರಿದ್ದರೆ ಅಂಥಾ ಕಂದಾಯವನ್ನು ನಾಲ್ಕು ಕಂತುಗಳಿಂದ ನಾಲ್ಕು ವರ್ಷಗಳಲ್ಲಿ ಕೊಟ್ಟು ಪಾವತಿ ಮಾಡಬೇಕು. ಅಂಥಾ ಕಂದಾಯವು 20 ರೂಪಾಯಿಗಿಂತ ಕಮ್ಮಿ ಇದ್ದರೆ ಎರಡು ಕಂತುಗಳಿಂದ ಎರಡು ವರ್ಷಗಳಲ್ಲಿ ತೀರಿಸಬೇಕು. ಎಲ್ಲಾ ರಾಜಿನಾಮೆ ಅರ್ಜಿಗಳು ಇದೇ ಏಪ್ರಿಲ್ ತಾರೀಕು 20 ರ ವಳಗೆ ಚೀಫ್ ಫಾರೆಸ್ಟ್ ಆಫೀಸರವರಿಗೆ ತಪ್ಪದೆ ತಲಪತಕ್ಕದು. ಸದರಿ ತಾರೀಕಿನ ನಂತರ ಬಂದ ಅರ್ಜಿಗಳು ತಿರಸ್ಕರಿಸಲ್ಪಡುವುವು.

ವೀರರಾಜಪೇಟೆ ಶಿಶು ಪ್ರದರ್ಶನದಲ್ಲಿ ಮಿಸೆಸ್. ಸಿ. ಯಮ್. ಮುತ್ತಣ್ಣನವರು ಮಾಡಿದ ಭಾಷಣ.

ಮಾನ್ಯರಾದ ಮಹಿಳೆಯರೇ! ಗೃಹಸ್ಥರೇ!

ಈ ದಿವಸ ನಾವು ವೀರರಾಜಪೇಟೆಯ ಶಿಶು ಮತ್ತು ಆರೋಗ್ಯ ಪ್ರದರ್ಶನವನ್ನು ನೆರವೇರಿಸುವುದಕ್ಕಾಗಿ ಒಟ್ಟುಕೂಡಿರುತ್ತೇವೆ.

ನಾನು ಕಂಡಂತೆ ಸುಮಾರು ಹತ್ತು ವರ್ಷಗಳಿಂದ ಈ ಚಳವಳಿ, ನಮ್ಮ ಇಂಡಿಯಾ ದೇಶದಲ್ಲಿ ಪ್ರಾರಂಭವಾಯಿತು. ಅದರ ಪ್ರತಿಫಲವೋ ಎಂಬಂತೆ ಕಳೆದ ಹತ್ತು ವರ್ಷಗಳ ಜನಸಂಖ್ಯೆ ಲೆಖ್ಖವು ಈಗ ತೆಗೆಯಲ್ಪಟ್ಟಾಗ ಜನ ಸಂಖ್ಯೆ ಒಂದು ನೂರಕ್ಕೆ ಹತ್ತರಂತೆ ಏರಿದೆ ಎಂಬದಾಗಿ ಗೊತ್ತಾಗಿದೆ. ಒಳ್ಳೆಯ ಆರೋಗ್ಯ ಮತ್ತು ಉತ್ತಮವಾಗಿ ಮಕ್ಕಳನ್ನು ಸಂರಕ್ಷಿಸುವುದು ಇವೇ ಜಗತ್ತಿನ ಜನರ ಬೆಳವಣಿಗೆಗೆ ಅಗತ್ಯ. ಬುದ್ಧಿವಂತರಾದ ಮಕ್ಕಳನ್ನು ಪಡೆಯಬೇಕೆಂದು ಸಾಧಾರಣವಾಗಿ ಎಲ್ಲರಿಗೂ ಅಭಿಲಾಷೆಯಿದೆ. A sound mind in a sound body ಎಂಬ ನಾಣ್ಣುಡಿಯನ್ನು ಯಾರು ತಾನೆ ಕೇಳಿಲ್ಲ? ನಮ್ಮ ಹಿರಿಯರಲ್ಲಿ "ಮನು" ಎಂಬ ಮಹಾ ಮುನಿಯು ಕೂಡ ಆರೋಗ್ಯ ಕಾಪಾಡಿಕೊಳ್ಳುವುದು ಪಾಪವೆಂದಿದ್ದಾನೆ.

ಈ ಜಗತ್ತು ಆರೋಗ್ಯಕ್ಕೆ ಗೌರವಕೊಡುತ್ತದೆ. ಇದಕ್ಕೆ ಸಾಕ್ಷಿ ಏನೆಂದರೆ, ನನ್ನನ್ನು ಕಂಡಾಗ್ಯ ನನ್ನ ಸ್ನೇಹಿತರೂ ಹಿತಚಿಂತಕರೂ, ಕ್ಷೇಮವೇ? ಚೆನ್ನಾಗಿದ್ದೀರಾ? ಎಂದು ನನ್ನನ್ನು ಮಾತಾಡಿಸುವರು. ಆದುಕಾರಣ ಆರೋಗ್ಯವು ಒಂದು ಭಾಗ್ಯ. ಆ ಭಾಗ್ಯವನ್ನೇ ನಾವು ಗೌರವಿಸಬೇಕಲ್ಲದೆ, ಇತರ ವಸ್ತುಗಳನ್ನಲ್ಲ. (Health is better than wealth) ಆದುದರಿಂದ ನಾವು ಆರೋಗ್ಯವಂತರಾಗಿ ಬಾಳಬೇಕು.

ಈ ಆರೋಗ್ಯವನ್ನು ಸಂಪಾದಿಸುವುದು ಹೇಗೆ? ಅಂಗಡಿಯಿಂದ ಕ್ರಯಕೊಟ್ಟು ತರುವ ಎಂದರೆ, ಅದು ಅಲ್ಲಿ ದೊರೆಯಲಾರದು. ಆದರೆ ಬಹು ಕರುಣಾಶಾಲಿಯಾದ ಭಗವಂತನು ಆ ಭಾಗ್ಯದ ವಸ್ತುಗಳನ್ನೆಲ್ಲಾ ನಮಗೆ ಧರ್ಮಾರ್ಥವಾಗಿ ಕೊಟ್ಟಿರುತ್ತಾನೆ. ಅಂಥಾ ಭಾಗ್ಯದ ವಸ್ತುಗಳು ಯಾವುವೆಂದರೆ:— ಬೆಳಕು, ಗಾಳಿ, ನೀರು, ಇವು ಮೂರು ಬಹು ಪ್ರಾಮುಖ್ಯವಾದುವು

ಮನೆಯ ಸುತ್ತು ಮುತ್ತು ಕೊಳಚೆ ನೀರು ನಿಲ್ಲಗೊಡಿಸಿ ಕೆಸರು ಆಗುವಂತೆ ಮಾಡಿದರೆ ಅದು ರೋಗದ ಕ್ರಿಮಿಗಳಿಗೆ ವಾಸಸ್ಥಾನವಾಗುವುದು. ಇವು ವಿವಿಧ ಅಂಟು ರೋಗಗಳಿಗೆ ಆಸ್ಪದ ಕೊಡುತ್ತದೆ. ಒಳ್ಳೆಯ ಗಾಳಿಯನ್ನು ನಾವು ಬರಮಾಡಿಕೊಳ್ಳಬೇಕು. ಒಕ್ಸಿಜನ್ (Oxygen) ಎಂಬ ಪ್ರಾಣವಾಯುವನ್ನು ನಾವು ಎಷ್ಟು ತೆಗೆದು ಕೊಳ್ಳುತ್ತೇವೋ ಅಷ್ಟು ಒಳ್ಳೆಯದು. ಹೀಗಿರ ಪ್ರಾಗ್ಯ ಒಳ್ಳೇ ಗಾಳಿಯು ಬರಲಿಕ್ಕೆ ನಾವು ಯಾವ ತೊಡಕನ್ನೂ ಮಾಡಬಾರದು ನಮ್ಮ ಮನೆಯನ್ನು ಆದಷ್ಟು ಮಟ್ಟಿಗೆ ಚೆನ್ನಾಗಿಡಬೇಕು. ಥಳಥಳಿಸುವ ನೆಲ, ಮಲ್ಲಿಗೆಯಂತೆ ಬೆಳ್ಳಗಿರುವ ಗೋಡೆ, ಮನೆಯ ಮುಂದೆ ಚಿಕ್ಕ ಹೂವಿನ ತೋಟ, ಇವುಗಳಲ್ಲಿ ವಾಸಿಸುವ ಜನರಿಗೆ ಆರೋಗ್ಯವನ್ನು ಒದಗಿಸುವವು. ಮನೆಯ ಮುಂದೆ ಅಗತ್ಯವಾಗಿ ಹಸ್ಪತ್ತು ವಿವಿಧ ಹೂವಿನ ಗಿಡಗಳು, ತೊಳಸಿ ಬೆಳೆಸಬೇಕು. ಸುತ್ತು ಮುತ್ತು ಶುಚಿಯಾಗಿಡಬೇಕು.

ಬಟ್ಟೆಬರೆಗಳು ಸ್ವಲ್ಪ ಮಟ್ಟಿಗೆ ನಮ್ಮ ಆರೋಗ್ಯಕ್ಕೆ ಸಹಾಯ ಮಾಡುತ್ತವೆ. ಕೊಳಕಾದ ಬಟ್ಟೆ ಎಂದರೆ ಹಾಯಿಲೆ ಎಂದೇ ತಿಳಿಯಬೇಕು. ಕೊಳಕಾದ ಹಾಸಿಗೆಯಲ್ಲಿ ಮಲಗಬಾರದು ಮಕ್ಕಳ ಬಟ್ಟೆ, ಬರೆ, ಮೈ ಕೈ ಇವನ್ನೆಲ್ಲಾ ಶುಚಿಯಾಗಿಟ್ಟಿರಬೇಕು. ಎಳೆ ಮೈಗೆ ರೋಗ ತಗಲುವುದು ಬಲು ಬೇಗ.

ಮಕ್ಕಳಿಗೆ ತಾಯಿ ಹಾಲೇ ಮೊದಲಿನ ಆಹಾರ. ಕೆಲವು ವೇಳೆ ಪಶುಗಳ ಹಾಲನ್ನು ಒದಗಿಸುವುದುಂಟು. ಹಾಲು ಕೊಡುವ ದನಗಳು ಮಧ್ಯಪ್ರಾಯದವುಗಳೂ, ಸುಖವುಳ್ಳವುಗಳೂ, ಆಗಿರಬೇಕು. ಅವಕ್ಕೆ ಪುಷ್ಟಿಕರವಾದ ತಿಂಡಿಯನ್ನೂ, ನಿರ್ಮಲವಾದ ನೀರನ್ನು ಕೊಟ್ಟು ಪೋಷಿಸಬೇಕು. ಅಂಥಾ ದನಗಳ ಹಾಲನ್ನು ಉಪಯೋಗಿಸಿದರೆ ಆರೋಗ್ಯಕ್ಕೆ ಭಂಗವಾಗಲಾರದು. ಬಲಹೀನ ಪಶುಗಳ ಹಾಲನ್ನು ಉಪಯೋಗಿಸುವುದು, "ಕ್ಷಯರೋಗ" ಮುಂತಾದ ರೋಗಗಳಿಗೆ ಆಸ್ಪದ ಕೊಟ್ಟ ಹಾಗಾಗುವುದು. ಮಕ್ಕಳು ನಲಿಯಬೇಕಾದರೆ ಆನಂದವಿರಬೇಕು. ಈ ಆನಂದವು ಮೇಲ್ಕಂಡ ರೀತಿಯಲ್ಲಿ ದೊರೆಯುವದು. ಮಕ್ಕಳು ನಲಿದರೆ, ಮನೆ ಬಲಿದರೆ, ನಾವು ಇದನ್ನು ಕಂಡು ಆನಂದಿಸಿದರೆ, ಅಲ್ಲಿಗೆ ಲಕ್ಷ್ಮಿಯು ತಾನಾಗಿ ಬರುವಳು.

ನಿಮಗಳ ಹೆಚ್ಚಿನ ಸಮಯವನ್ನು ಕಳೆಯಲು ನಾನು ಅಪೇಕ್ಷಿಸಲಾರೆನು. ನನ್ನನ್ನು ಅಧ್ಯಕ್ಷಸ್ಥಾನಕ್ಕೆ (Red Cross) ಸಂಘದವರು ಅಪೇಕ್ಷಿಸಿದ್ದು ನನಗೆ ಗೌರವವೇ. ನನಗೆ ಈ ಬಹುಮಾನ ಕೊಟ್ಟದ್ದಕ್ಕೆ (Red Cross) ಸಂಘದವರಿಗೆ ನಾನು ವಂದಿಸುತ್ತೇನೆ. ಈ ಪ್ರದರ್ಶನದ ಕೆಲಸವು ಜಯಪ್ರದವಾಗಿ ಮುಂದರಿಯುವಂತೆ ಅಪೇಕ್ಷಿಸುತ್ತೇನೆ

ಭಯಂಕರ ಭೂಕಂಪ! 2000 ಜನರು ಕೊಲ್ಲಲ್ಪಟ್ಟರು.

ಅಮೇರಿಕದ ಮನಾಗುವ ಎಂಬಲ್ಲಿ ಮಾರ್ಚಿ ತಾ 31 ರಲ್ಲುಂಟಾದ ಭೀಷಣ ಭೂಕಂಪದಿಂದ ಇಡೀ ಪಟ್ಟಣವೇ ನಾಶವಾಗಿರುವುದು. ಭೂಕಂಪದಿಂದ ಉರುಳಿ ಬೀಳದಿರುವ ಕೆಲವು ಮನೆಗಳು ಬೆಂಕಿ ಹಿಡಿದು ಸುಟ್ಟುಹೋಗುತ್ತಿರುವವು ಇಡೀ ಪಟ್ಟಣವನ್ನೇ ಪುನಹ ಕಟ್ಟಬೇಕಾಗಿರುವುದು. ಇಷ್ಟರ ವರೆಗೆ ಈ ಭೂಕಂಪದಿಂದ 2000 ಜನರು ಮೃತರಾಗಿರುವರೆಂದು ತಿಳಿದುಬಂದಿದೆ. ಆಸ್ಪತ್ರೆ ಮತ್ತು ಕಾರಾಗೃಹಗಳ ಕಟ್ಟಡಗಳು ಉರುಳಿಯೇ 700 ಮಂದಿ ಮೃತರಾಗಿರುವರು. ಸುಮಾರು 3 ಮಿಲ್ಯ ಪೌನುಗಳಷ್ಟು ನಷ್ಟವಾಗಿರುವುದಾಗಿದೆ. 30 ಸಾವಿರ ಜನರು ನಿರಾಶ್ರಿತರಾಗಿ ಶಯನ ಉಡುಗೆಗಳಿಂದ ಪಟ್ಟಣದ ಹೊರಗೆ ಡೇರೆಗಳಲ್ಲಿ ವಾಸಿಸಿಕೊಂಡಿರುತ್ತಾರೆ. ಜನರಿಗೆ ಆಶ್ರಯ ಸಹಾಯವೀಯುವ ಕಾರ್ಯವು ಭರದಿಂದ ನಡೆದಿರುವುದು. ಎಲ್ಲವರಿಗೂ ಬಲವಂತದಿಂದ ದಾಕು ಹಾಕಲ್ಪಡುತ್ತಿದೆ. ಮನಾಗುವ ಪಟ್ಟಣವನ್ನು ಪುನಹ ಕಟ್ಟಲು ಕೆಲವು ವರ್ಷ ಬೇಕಾದೀತಂತೆ. ನಾಕಷ್ಟು ನೀರು ದೊರೆಯದೆ ಬೀಯರೆಂಬ ಪಾನಕವನ್ನು ಹಂಚಲಾಗುತ್ತದೆ. ಅನಾರೋಗ್ಯಕರ ಸ್ಥಿತಿಗತಿಗಳ ನಿಮಿತ್ತ ರೋಗವುಂಟಾಗುವ ಸಂಭವವಿದೆ ತಾ 2 ರಲ್ಲು ಪುನಹ ಕಂಪ ಉವುಂಟಾಗಿ ಜರ್ಜರವಾಗಿ ಮಾಲಿಕೊಂಡು ನಿಂತಿರುವ ಗೋಡೆಗಳೆಲ್ಲಾ ಬಿದ್ದು ಜನರೆಲ್ಲಾ ಪುನಹ ದಿಗಿಲುಗೊಂಡರು ಬಿರುಗಾಳಿಯಿಂದ ಬೆಂಕಿಯು ಹಬ್ಬುವ ಮತ್ತು ಸೇಂಡಿನೋನೆಂಬ ಪ್ರಸಿದ್ಧ ದರೋಡೆಗಾರನು ಪಟ್ಟಣವನ್ನು ಲುಟಾಯಿಸುವನೆಂಬ ಭೀತಿಯಿಂದ ಜನರೆಲ್ಲರೂ ಕಂಪಿತರಾಗಿ ತೀವ್ರ ಆತುರದಿಂದಿರುತ್ತಾರೆ. ಭೂಕಂಪವು ಮನಾಗುವ ಪಟ್ಟಣವೊಂದರಲ್ಲೇ ಅಲ್ಲದೆ ಬೇರಲ್ಲಿಯೂ ಉಂಟಾಗಿರುವುದಿಲ್ಲ.

ಸತ್ತ ಸ್ತ್ರೀಯು ಪುನಹ ಸಜೀವಳಾದುದು!

ವಿಸ್ಮಪುರದ ಅಯೋಧ್ಯೆ ಎಂಬಲ್ಲಿಯ ಬಾಬು ಕಲಿಪಾದ ಬೆನರ್ಜಿ ಎಂಬವನ 20 ವರ್ಷದ ಕಂಪತಿ ಶ್ರೀಮತಿ ಕರಾಳಿದೇವಿಯೆಂಬವಳು ಅಪಸ್ಮಾರ ರೋಗಪೀಡಿತಳಾಗಿ ಗಂಡು ಮಗುವೊಂದನ್ನು ಹೆತ್ತಳು. ಮಗು ಸತ್ತು ಹೋಯಿತು. ಕರಾಳಿದೇವಿಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಮೃತಳಾದಳೆಂದು ಡಾಕ್ಟರೆಲ್ಲರೂ ಹೇಳಿದರು ಅವಳ ಸಂಬಂಧಿಕರು ಶವವನ್ನು ಸ್ಮಶಾನಕ್ಕೊಯ್ದು ಕಾಷ್ಠವೊಂದನ್ನು ಸಿದ್ಧಪಡಿಸಿದರು. ನಂತರ ಶವವನ್ನು ಕಾಷ್ಠದ ಮೇಲಿಡಲ್ಕು ಉಸಿರಾಡುವ ಚಲನೆಯು ಕಂಡು ಬಂತು. ಜನರು ಅವಳನ್ನು ಕಾಷ್ಠಕ್ಕೇರಿಸದೆ ನೆಲದ ಮೇಲಿಟ್ಟು ಪರೀಕ್ಷಿಸಲು ಸ್ವಲ್ಪ ಸಮಯದ ಮೇಲೆ ಕರಾಳಿದೇವಿಯು ಕಣ್ಣು ತೆರೆದು ಬಾಯಿಗೆ ನೀರೆರೆವಾಗ ನೆಯಾಗಿ ಕುಡಿದಳು ಇನ್ನು ಸ್ವಲ್ಪ ಸಮಯ ದಾಟಿದ ಮೇಲೆ ಅವಳು ಮೆಲ್ಲಗೆ ಮಾತನಾಡುತ್ತ ನನಗೆ ಬಿಸಿಲನ್ನು ತಡೆಯಲಾಗುವುದಿಲ್ಲವೆಂದಳು. ನಂತರ ಅವಳನ್ನು ಮನೆಗೊಯಿದ್ದು ಅವಳು ಈಗ ಸುಖವಾಗಿರುವಳೆಂದು ತಿಳಿದು ಬರುತ್ತದೆ. ಮರಣ ಉಂಟಾಗಿದ್ದಾಗ ಅವಳು ಕಂಡ ಕೌತುಕ ದೃಶ್ಯವನ್ನು ಈ ರೀತಿ ವಿವರಿಸುತ್ತಾಳಂತೆ. ಮಾರು 6 ವರ್ಷಗಳ ಮೊದಲು ಸತ್ತ ಅವಳ ಹಿರಿತಾಯಿಯು ಅವಳ ಬಳಿಗೆ ಬಂದು ಸುಂದರವಾದ ಸ್ಥಳವೊಂದಕ್ಕೆ ಕರೆದೊಯ್ದಳಂತೆ. ಅವಳು ತನ್ನ ಹಿರಿಯ ತಾಯಿಯ ಬೆನ್ನು ಹಿಡಿದು ಹೋಗಿ ಕಣ್ಣು ಕಾಣದ ಕಗ್ಗತ್ತಲೆಯ ಸ್ಥಳಕ್ಕೆ ಹೋದಾಗ ಗಟ್ಟಿಯಾಗಿ ಕೂಗಿದಳು. ಹಿರಿತಾಯಿಯು ಅದೃಶ್ಯಳಾದಳು. ಆಗ ಕೆಲವು ಕಪ್ಪು ರೂಪಗಳು ಬಂದು "ಇವಳೇಕೆ ಇಲ್ಲಿ ಬಂದವಳು. ಬೇಕಾದವಳು ಇವಳಲ್ಲ' ಎಂದವು. ಕೂಡಲೆ ಅವಳನ್ನು ಕರದೊಯ್ದು ಸ್ಥಳಕ್ಕೇನೇ ಬಿಟ್ಟುಬಂತೆ ಅವಳಿಗೆ ಭಾಸವಾಯಿತಂತೆ." ಇನ್ನಿದರ ರಹಸ್ಯವೇನೋ?

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕರ್ತರು ಜವಾಬ್ದಾರರಲ್ಲ. ಸಂ.

ಕೊಡಗು ಪ್ಲಾಂಟರುಗಳ ಕೋಆಪರೇಟಿವ್ ಲೇವಾದೇವಿ ಸಂಘ.

ನಮ್ಮ ಈ ಮೇಲಿನ ಸಂಘವು ಕೆಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಇದರ ಒಂದು ಶೇರ್ ಹಣವು 100 ರೂಪಾಯಿಗಳಾದ್ದರಿಂದ ಹೆಚ್ಚಿನ ಮೆಂಬರುಗಳು ಸೇರಲು ಬಹಳ ಅನಾನುಕೂಲವಾಗಿತ್ತು. ಈ ಗಾಗಲೇ ಕಳೆದ ವರ್ಷಗಳಿಂದ ಶೇರ್ ಹಣವನ್ನು ಕಮ್ಮಿ ಮಾಡಿದ್ದರಿಂದ ಈ ಮೊದಲಿದ್ದದ್ದಕ್ಕಿಂತ ಎರಡರಷ್ಟು ಮೆಂಬರುಗಳು ಸೇರಿರುತ್ತಾರೆ. ಇನ್ನು ಮುಂದಕ್ಕೂ ಇದೇ ಮೇರೆ ಸಹಕರಿಸಲು ಪ್ರತಿಯೊಬ್ಬ ತೋಟಗಾರನು ಪ್ರಯತ್ನಿಸಬೇಕಾಗಿ ನನ್ನ ಕೋರಿಕೆ.

ಸದ್ರಿ ಸೊಸೈಟಿಯಿಂದ ಸಾಲವನ್ನು ಪಡಕೊಂಡು ಅದನ್ನು ಕರಾರಿನ ವಾಯಿದೆಗೆ ಸರಿಯಾಗಿ ಪಾವತಿ ಮಾಡಿದಂಥ ಮೆಂಬರುಗಳಿಗೆ ನಮ್ಮ ವಂದನೆಗಳು. ಹೀಗೆಯೇ ಮುಂದಕ್ಕೂ ನಮಗೆ ಪ್ರೋತ್ಸಾಹ ಕೊಟ್ಟು ಸೊಸೈಟಿಯ ಮುಂದಿನ ಅಭಿವೃದ್ಧಿಯನ್ನೂ ಉದ್ಧಾರವನ್ನೂ ಸರ್ವದಾ ಬಯಸುವರಾಗಿ ನಾವು (ಕಮಿಟಿಯವರು) ಮೆಂಬರುಗಳನ್ನೆಲ್ಲಾ ಕೋರುತ್ತೇವೆ.

1931—32 ವರ್ಷದ ಕಾಫಿತೋಟದ ಖರ್ಚಿಗೆ ಅಡ್ವಾನ್ಸು ಬೇಕಾದವರು, ಸಾಲದ ಅರ್ಜಿಯನ್ನು ಪ್ರೆಸಿಡೆಂಟರಿಗೆ ಬರಕೊಳ್ಳುವದು. ಎಪ್ರಿಲ್ ತಾರೀಕು 25ರೊಳಗೆ ಸೊಸೈಟಿಯ ಆಫೀಸಿಗೆ ತಲಪಿಸಬೇಕು ಸಾಲದ ಅರ್ಜಿಯ ಫಾರಂ ಆಫೀಸಿನಲ್ಲಿ ಸೆಕ್ರಟರಿಯವರಿಂದ ಒಂದು ಆಣೆಗೆ ದೊರಕುವುದು

(sd) ಕೆ. ಸಿ. ದೇವಯ್ಯ
ಪ್ರೆಸಿಡೆಂಟ್.

ಕಿರುನಾಲ್ಕು ನಾಡಿನ ಪ್ರದರ್ಶನ.

ಕಿರುನಾಲ್ಕು ನಾಡಿಗೆ ಸೇರಿದ ಮತ್ತೂರು, ಕಿರುಗೂರು, ನಲ್ಲೂರು, ಕೋಟೂರು, ಬೆಸಗೂರು ಮತ್ತು ಮುಗಟಗೇರಿ ಗ್ರಾಮಸ್ಥರು ಸ್ವಾಮಿ ಕಾಂಭವಾನಂದರ ಮುಂದಾಳುತನದಿ ಈ ಸಾಲಿನ ಮತ್ತೂರು ದೇವಸ್ಥಾನದ ಉತ್ಸವದ ವೇಳೆಯಲ್ಲಿ ಒಂದು ದಿನ ನಾಡಿನ ಜನರ ಮುಂದಣ ಅಭಿವೃದ್ಧಿಗಾಗಿ ಒಂದು ಪ್ರದರ್ಶನವನ್ನು ನಡೆಸಬೇಕೆಂದು ಆಲೋಚಿಸಿ ಪ್ರತಿ ಗ್ರಾಮಗಳಲ್ಲಿ ಈ ಪ್ರದರ್ಶನದ ಪ್ರಯೋಜನ ಕುರಿತು ಮೀಟಿಂಗುಗಳನ್ನು ನಡೆಸಿ ಮುಂದಣ ಕಾರ್ಯವನ್ನು ನಡೆಸುವ ಬಗ್ಯೆ ಗ್ರಾಮವಾರು ಕಮಿಟಿ ಮೆಂಬರುಗಳನ್ನು ಚುನಾಯಿಸಿದರು. ಹೀಗೆ ಚುನಾಯಿತರಾದ ಮೆಂಬರುಗಳು ತಾ. 4—4—31 ರಲ್ಲಿ ಮತ್ತೂರು ನಾಡು ದೇವಸ್ಥಾನದಲ್ಲಿ ಸೇರಿ ಪ್ರದರ್ಶನವನ್ನು ಯಾವ ರೀತಿ ನಡೆಸಬೇಕೆಂದೂ, ಯಾವ ಯಾವ ಪ್ರದರ್ಶನ ಮಾಡಬೇಕೆಂದೂ ಚರ್ಚಿಸಿ ಅಂತ್ಯದಲ್ಲಿ ಪಶು, ಶಿಶು, ಮತ್ತು ವ್ಯವಸಾಯದ ಸಾಮಾನುಗಳು ಮತ್ತು ಕೈ ಪೆಟ್ಟು ಸಾಮಾನುಗಳನ್ನು ಪ್ರದರ್ಶಿಸ ಬೇಕೆಂದು ತೀರ್ಮಾನಿಸಿ ಈ ಕಮಿಟಿಗೆ ಮ ಪುಚ್ಚಿಮಾಡ ಕುಟ್ಟಪ್ಪನವರನ್ನು ಪ್ರೆಸಿಡೆಂಟರಾಗಿಯೂ, ಮೆ. ಪಿ. ಬಿ ಮುದ್ದವೆಯ್ಯನವರನ್ನು ಸೆಕ್ರಟರಿ ಮತ್ತು ಖಜಾನ್ಚಿಯಾಗಿ ಚುನಾಯಿಸಿಕೊಂಡು ತಾ 8—4—31 ನೇ ಬುಧವಾರ ದಿನ ಈ ಪ್ರದರ್ಶನವು ರಾವ್ ಬಹದ್ದೂರ್ ಕೆ. ಚಂಗಪ್ಪ, ಬಿ. ಎ. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು.

ಈ ಪ್ರದರ್ಶನವು ಮತ್ತೂರು ನಾಡು ದೇವಸ್ಥಾನದ ಳ ಚಾಮುಂಡೇಶ್ವರಿ ದೇವರ ಕೋಟೆಯಲ್ಲಿ ಏರ್ಪಡಿಸಲ್ಪಟ್ಟಿತು ಪ್ರದರ್ಶನಕ್ಕೆ ಬಂದ ವಸ್ತುಗಳನ್ನು ಇಡಲು ಸ್ಟಾಲುಗಳನ್ನು ಬೇರೆ ಬೇರೆ ಯಾಗಿ ವಿಂಗಡಿಸಿ ತೋರಣಗಳಿಂದಲೂ, ಕಾಗದ ಹೂವಿನ ಮಾಲೆಯಿಂದಲೂ ಅಲಂಕರಿಸಲ್ಪಟ್ಟಿತು. ತರಾವರಿಗಳ ಪ್ರದರ್ಶನ ಒಂದು ಸಾಲಿನ ಸ್ಟಾಲಿನಲ್ಲಿ ಇಡಲು ಏರ್ಪಡಿಸಿತ್ತು. ಇನ್ನೊಂದು ಸಾಲಿನಲ್ಲಿ ಹಣ್ಣು, ಹಂಪಲುಗಳ

...ಯಲ್ಲಿ ನಾನಾ ತರದ ತೂಗಳು, ಇನ್ನೊಂದು ನಾ...ಶಾಲೆ ಅಂದರೆ ವ್ಯವಸಾಯದ ಸೇಗಿಲು, ನೊಗ, ...ನದ ಕಸೂತಿ ಕೆಲಸ, ಚರಕ, ನೂಲು, ಹತ್ತಿ, ಮು...ತೆಂಗು, ಬಾಳೆ, ಕಬ್ಬು ಇವೇ ಮೊದಲಾದ ನಾ... ಪ್ರದರ್ಶನಕ್ಕೆ ಬಂದುದಲ್ಲದೆ ಎಲವ, ಕುರುಟ ಮ...ರಿಂದ ತಯಾರಿಸಿದ ಕುಕ್ಕೆ, ಮೊರ, ಚಾಪೆ, ಇತ್ಯಾ...ಗಳು ಸಹ ಪ್ರದರ್ಶನಕ್ಕೆ ತರಲ್ಪಟ್ಟಿದ್ದವು. ಪ್ರ...ೇಟಕ್ಕೆ ಅನುಕೂಲವಾಗುವ ರೀತಿ ಕ್ರಮವಾಗಿ ಇ... ಪ್ರದರ್ಶನವನ್ನು ತೆರೆಯಲು ಡಿಪ್ಯುಟಿ ಕಮಿಷನರ್ ...ಂದಣ್ಣನವರನ್ನು ಕೇಳಿಕೊಳ್ಳಲಾಗಿತ್ತು. ಪ್ರದ...ುವ ಮೊದಲೇ ಈಜು ಪಂದ್ಯಾಟವು ನಡೆಯಿತು. ...ು ಬೆಳಗಿನ ಒಂದು ದಿನದಲ್ಲಿ ಬೊಳಕಾಟ ಮತ್ತು ...ಬಾಳೋಪಾಟ್' ಹಾಡುವವರಿಗೆ ಇನಾಮು ಕೊಡ...ಯಿಸಿ ಅವರ ಆಟ ಓಟಗಳ ನೋಟ ನಡೆಯಿತು. ಪ್ರ...ಸ್ತುಗಳ ಇಡುವಿಕೆಯು ತೀರುವಷ್ಟರಲ್ಲಿ ಅಧ್ಯಕ್ಷರು ... ಅವರೊಡನೆ ಪ್ರದರ್ಶನಕ್ಕೆ ಬಂದಂತ ಮಿ. ಯಂ. ...ಂದಣ್ಣನವರಿಗೂ, ಡಾಕ್ಟರ್ ಡಿನ್ನ ಫ್ರಾನ್ಸಿಯವ...ರು, ಶ್ರೀಮತಿ ಡಾಕ್ಟರ್ ಬಿಷೆಪ್ಪ ಮುದ್ದಮ್ಮನವರಿ... ಇವರೊಂದಿಗೆ ಬಂದ ಇನ್ನು ಇತರ ಉದ್ಯೋಗ...ವಾಲಗದೊಡನೆ ಸ್ವಾಗತದಿಂದ ಕರೆದುಕೊಂಡು ಸ...ಸ್ಥಾನಕ್ಕೆ ಹೋಗಿ ತೀರ್ಥಪ್ರಸಾದದಿಂದ ಪ್ರದರ್ಶನದ ಜಪ್ಪರಕ್ಕೆ ಬರಮಾಡಿಕೊಳ್ಳಲಾಯಿತು.

...ಕ್ಷರು ಮತ್ತು ಇವರ ಸಹಪಾಟಿಗಳು ಒಂದು ...ಂಕರಿಸಿದಾಗ ನಾಡಿನ ಮಹಿಳೆಯರು ಮತ್ತು ಮಹ...ಸುಮಾರು ಎರಡು ಸಾವಿರದ ವರೆಗೆ ಸೇರಿದ್ದರು. ...ಮಂಡಳಿಯ ಅಧ್ಯಕ್ಷರು ಬಂದ ಅಧ್ಯಕ್ಷರಿಗೂ ಮ... ಡಾಕ್ಟರಿಗೂ, ಡಿಪ್ಯುಟಿ ಕಮಿಷನರವರಿಗೂ, ಡಾಕ್ಟರ್ ಡಿ...ಗೂ, ಹೂ ಮಾಲೆ ಹಾಕಿ ಈ ದಿವಸದ ಪ್ರದರ್ಶನವ...ುಲು ಡಿಪ್ಯುಟಿ ಕಮಿಷನರನ್ನು ಕೇಳಿಕೊಂಡರು.

... ಯಂ. ಯಸ್. ಮಂದಣ್ಣನವರು ನೆರೆದ ಮಹಿಳೆ...ಯರಿಗೆ ಇಂಥ ಪ್ರದರ್ಶನದ ಉಪಯೋಗವನ್ನು ಕುರಿ...ತೊಂಡ ಕಾಲ ಉಪನ್ಯಾಸ ಮಾಡಿ ಪ್ರದರ್ಶನವನ್ನು ತೆರೆ...ದಿದ್ದೇನೆಂದು ಹೇಳಿ ಭಾಷಣವನ್ನು ಮುಗಿಸಿದರು. ನಂತರ ...ಬಂದಂಥ ಅತಿಥಿಗಳೂ, ಮಹಿಳೆಯರೂ, ಮಹನೀಯರು ...ಪ್ರದರ್ಶನವನ್ನು ನೋಡಲು ಹೊರಟರು. ಈ ನಡು...ವೆಲ್ಲಿ ಡಾಕ್ಟರ್ ಫ್ರಾನ್ಸಿಯವರೂ, ಡಾ. ಸಿ. ಬಿ. ...ಪ್ಪನವರೂ ಮತ್ತು ಡಾ. ಶ್ರೀಮತಿ ಮುದ್ದಮ್ಮನವ...ರು ...ಗಳ ಪರೀಕ್ಷೆಗಾಗಿ ಇನ್ನೊಂದೆಡೆಗೆ ಹೋದರು. ವೆ...ಡಾ. ಮಿ. ಕೆ. ಎ. ಗಣಪತಿಯವರು ಈ ಮೊದಲೇ ಸ...ಜಡ್ಜುಗಳೊಡನೆ ದನಗಳನ್ನು ಪರೀಕ್ಷಿಸಲು ತೆರಳಿದರು. ...ರಲ್ ಡಿಮಾನ್ಸ್ಟ್ರೇಟರಾದ ಮಿ. ಕೆ. ಬಿ. ಪೊನ್ನಪ್ಪನ...ವರ ಜೊತೆ ಜಡ್ಜಿಯವರೊಂದಿಗೆ ತರಕಾರಿ, ಹೂ, ಹ...ಪಲುಗಳಿಗೆ ಬಹುಮಾನ ಹಂಚಲು ಹೊರಟರು. ಈ ...ದಲ್ಲಿ ಶಿಶು ಪ್ರದರ್ಶನಕ್ಕೆ ಬಂದ ಶಿಶುಗಳು ಹಾಲು, ...ಗಳಿಂದ ಸತ್ಕರಿಸಲ್ಪಟ್ಟವು. ಒಂದಾಥ ಮಹಿಳೆ...ಯರಿಗೆಲ್ಲಾ ಊಟ ಉಪಚಾರಕ್ಕೆ ತಕ್ಕ ಏರ್ಪಾ...ರ ಮಾಡಿತ್ತು. ಪ್ರದರ್ಶನದ ಇನ್ನೊಂದು ಕಡೆಯಲ್ಲಿ ಸ್ವಾಮಿ ಶಾಂಭವಾನಂದರಿಂದ ಪೆಟ್ಟಿಗೆಯಲ್ಲಿ ಸಾಕಿದ ಜೇನು ಗೂಡಿನ ಪೆಟ್ಟಿಗೆಗಳು ಸಹ ಇಡಲ್ಪಟ್ಟಿದ್ದವು. ಈ ನೋಟವು ಸುಮಾರು ಅರ್ಧ ಗಂಟೆಯ ವರೆಗೆ ಆದ ನಂತರ ಶ್ರೀಮತಿ ಮುದ್ದಮ್ಮನವರು ಹೆಂಗಸರ, ಮಕ್ಕಳ ಸಾಕುವಿಕೆಯ ವಿಷಯ ನೆರೆದ ಮಹಿಳೆಯರಿಗೆ ಕೊಡಗು ಭಾಷೆಯಲ್ಲಿ ಸ್ವಾರಸ್ಯವಾಗಿ ಎಲ್ಲರ ಮನಸ್ಸು ಒಲ್ಯುವಂತೆ ಭಾಷಣ ಮಾಡಿದರು. ಆ ಮೇಲೆ ಡಾಕ್ಟರ್ ಸಿ. ಬಿ. ಕಾರ್ಯಪ್ಪನವರು ಮಲೇರಿಯಾ ಮತ್ತು ಕೊಕ್ಕೆ ಹುಳದ ವಿಷಯ ಉಪನ್ಯಾಸ ಮಾಡಿದರು. ಅನಂತರ ಮಿ. ಕೆ. ಬಿ. ಪೊನ್ನಪ್ಪನವರು ವ್ಯವಸಾಯ, ಗೊಬ್ಬರ ಮತ್ತು ಕೊಟ್ಟಿಗೆಯನ್ನು ಹೇಗೆ ಇಡಬೇಕೆಂಬುದನ್ನು ಕುರಿತು ಭಾಷಣ ಮಾಡಿದರು. ಸ್ವಾಮಿ ಶಾಂಭವಾನಂದರು ಸಹ ಪ್ರದರ್ಶನವನ್ನು ಕುರಿತು ಮಾತಾಡಿದರು.

ಇದು ತೀರಿದನಂತರ ಅಧ್ಯಕ್ಷರು ಒಳ್ಳೆ ಹಣ್ಣು, ಹೂವು, ತರಕಾರಿ ತಂದವರಿಗೂ, ಒಳ್ಳೆ ಸಾಮಾನು, ಕೈಗಾರಿಕೆ ಮಾಡಿದವರಿಗೂ ಮತ್ತು ಈಜುವುದರಲ್ಲಿ ಮೊದಲು ಬಂದವರಿಗೂ, ಚೆನ್ನಾಗಿ 'ಬಾಳೋಪಾಟ್' ಹಾಡುವವರಿಗೂ, ಮತ್ತು ಬೊಳಕಾಟದಲ್ಲಿ ಒಂದನೆಯವರಿಗೂ ಇನಾಮುಗಳನ್ನು ಕೊಟ್ಟು ಈ ಪ್ರದರ್ಶನದಿಂದ ಎಲ್ಲರು ಬಹಳ ಕಲಿತುಕೊಳ್ಳಬೇಕಾದದ್ದು ಇದೆ. ಇಂಥಾ ಪ್ರದರ್ಶನದಿಂದ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಮುಂದಕ್ಕೆ ನಮ್ಮ ಆರ್ಥಿಕ ಮತ್ತು ಸಾಂಪತ್ತಿಕ ವಿಷಯಗಳನ್ನು ಅಭಿವೃದ್ಧಿ ಪಡಿಸಲು ಅನುಕೂಲವಿದೆ. ಇಂಥಾ ಪ್ರದರ್ಶನಗಳು ಪ್ರತಿ ನಾಡುಗಳಲ್ಲಿಯೂ ಊರುಗಳಲ್ಲಿಯೂ ಮಾಡಲ್ಪಟ್ಟರೆ ರೈತರು ಕಷ್ಟಪಟ್ಟು ಕೆಲಸ ಮಾಡಿ ಒಳ್ಳೆ ಇನಾಮುಗಳನ್ನು ಪಡೆಯಲು ಮುಂದೆ ಬರುವರು. ಹೀಗೆ ನಮ್ಮ ಅಭಿವೃದ್ಧಿಯನ್ನು ನಾವೇ ಮಾಡಿಕೊಳ್ಳಬಹುದಾಗುತ್ತದೆ. ಹೀಗೆ ನಮ್ಮ ಅಭಿವೃದ್ಧಿ ಹೊಂದಿದರೆ ಇಂಥಾ ಪ್ರದರ್ಶನವನ್ನು ಏರ್ಪಡಿಸಿದ ಮಹನೀಯರು ಮಾಡಿದ ಕೆಲಸವು ಸಾರ್ಥಕವಾದೀತೆಂದು ಹೇಳಿ ಸ್ವಾರಸ್ಯವಾದ ಭಾಷಣ ಮಾಡಿದರು.

ಅಂತ್ಯದಲ್ಲಿ ಸ್ವಾಗತ ಮಂಡಳಿಯ ಅಧ್ಯಕ್ಷರು ಈ ದಿನದ ಅಧ್ಯಕ್ಷರಿಗೂ, ಈ ಪ್ರದರ್ಶನದಲ್ಲಿ ಸ್ವಾರಸ್ಯವಾಗಿ ಭಾಷಣ ಮಾಡಿದ ಡಾಕ್ಟರು ಮತ್ತು ಇತರರಿಗೂ ಮತ್ತು ನಾಡಿನ ಎಲ್ಲಾ ಮಹಿಳೆ, ಮಹನೀಯರಿಗೂ ಮತ್ತು ಸ್ವಾಮಿ ಶಾಂಭವಾನಂದರಾಶ್ರಯದವರಿಗೂ ವಂದಿಸಿದರು. ಬಹುಮಾನಕ್ಕೆ ತಂದ ವಸ್ತುಗಳು ನಮ್ಮ ದಿನವಹಿ ಉಪಯೋಗಕ್ಕೆ ಬರುವ ಹಿತ್ತಾಳೆ ಸಾಮಾನುಗಳು, ಮತ್ತು ಸ್ವದೇಶಿ ಸಾಮಾನುಗಳೇ ಆಗಿದ್ದವು.

ಈ ಪ್ರದರ್ಶನಕ್ಕೆ ದ್ರವ್ಯಸಹಾಯ ಮಾಡಿದ ಮಹನೀಯರ ಹೆಸರುಗಳು ಮತ್ತು ಪ್ರದರ್ಶನದ ಇತರ ವಿವರವು ಪ್ರತ್ಯೇಕವಾಗಿ ಪ್ರಕಟಣೆ ಮಾಡಲಾಗುವುದು.

ಸಿ. ಜಿ. ಮುದ್ದಯ್ಯ, ಸೆಕ್ರೆಟರಿ.

ರಬ್ಬರ್ ಮೋಹರುಗಳು.

ನೀವು ಅಪೇಕ್ಷಿಸುವ ಯಾವತ್ತೂ ಮಾದರಿಯಲ್ಲಿ ತಯಾರಿಸಿ ಕೊಡಲಾಗುವವು.

ಮೇಲ್ಕಂಡ ಸಾಮಾನುಗಳಲ್ಲದೆ ಕನ್ನಡಿಯ ಸ್ಟ್ಯಾನ್ ಬೋರ್ಡುಗಳು ಪಾಕೆಟ್ ಟಿನ್ ಬ್ರಾಸ್ ಮನೋಗ್ರಾಮ್ ಮೋಹರು, ಚಂದ್ರಕಾಂತ ಶಿಲೆಯ ಹಲಿಗೆಗಳು, ಉಂಗುರಗಳಿಗಿಡುವ ಬಹು ಅಂದವಾದ ಸಣ್ಣ ಕಲ್ಲುಗಳು ಇತ್ಯಾದಿ.

ದಿ ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ,

12—5 ಮಂಗಳೂರು, ದ. ಕನ್ನಡ.

ಯಾ

ಏಜಂಟ್: **ಯನ್. ಯಸ್. ಪೊನ್ನಪ್ಪ,**
ಮಡಿಕೇರಿ.

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕವೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಪ್ರತಿ ತಿಂಗಳೂ ಸರಿಯಾಗಿ ಮುಟ್ಟಾಗದಿರುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಸೆಳೆಯುವಿಕೆ, ದುಸ್ವಪ್ನ ಬೀಳುವಿಕೆ, ಹೊಟ್ಟೆ ಶೂಲೆ ಬಿಳುಪು—ಕೆಂಪು ಹೋಗಿ ಗರ್ಭ ಪತನವಾಗುವಿಕೆ ವಾಂತಿ ಸರ್ಪಶಾಪ, ಪಿಶಾಚಬಾಧೆಯಿಂದ ನರಳುವಿಕೆ ಧಿಕ ಕುಂಟಿವೆ ಹಡಿಯೋಡುವಿದರೆ ಹಲವು...ವಿಕೆ ಇವೇ ಮೊದಲಾದವುಗಳು ಸಂತಾನ ಭಂಗಕ್ಕೆ ಕಾರಣಗಳು. ಚಿಕ್ಕ ಮಕ್ಕಳಿಗೆ ೧೨ ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ ಮುಟ್ಟುರೋಗ ಕಾಮಿಲೆ ಗ್ರಹಪೀಡೆ ದೃಷ್ಟಿದೋಷ ಮುಟಕೆಮ್ಮು, ವಿಶೇಷ ಅಳುವಿಕೆ ಹೊಟ್ಟೆಯೊಳಗಿಂದ ಎಳೆಯುವ ಭಯದಿಂದ ಜ್ವರಪೀಡೆ ಕ್ಷೀಣ ಹೊಂದುವಿಕೆ ಮೊದಲಾದವುಗಳಿಂದ ಸಾಯುತ್ತಿರುವರು. ಗರ್ಭರಕ್ಷಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ, ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧು ಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ. ಇದನ್ನು ಕಟ್ಟಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನ ಭಂಗವೂ ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಯಾವತ್ತೂ ಪರಿಹಾರವಾಗುತ್ತದೆ. ಹೆಣ್ಣು ಮಕ್ಕಳಿಗೆ ಸಂತಾನ ದಕ್ಷಿಣಿಂದ ೪ ರೂಪಾಯಿ. ಚಿಕ್ಕಮಕ್ಕಳಿಗೆ ೧೨ ಕ್ಕೆ ೨—೮—೦ ಪೋ. ಖ. ಬೇರೆ. ಕ್ಷೀರಲ್ ಮಾ ಜಾಗೃತ ಗುಣ ಕೊಡುವ ತಾಯಿತಕ್ಕೆ ಪೋ. ಖ. ಸೇರಿ ೫ ರೂ. ಅನಕಕ್ಕೆ ಬಿ ಕಾರಣಗಳನ್ನು ಸ್ಪಷ್ಟ ಬರೆಯಿರಿ. ಈ ತಾಯಿತ ಧರಿಸಿದಂದು ಗುಣವಿಲ್ಲದವರಿಗೆ 100 ರೂ. ಬಹುಮಾನ. ಒಂದು ಸಲ ತರಿಸಿ ಅನುಭವ ತಕೊಳ್ಳಿರಿ.

ಸ್ಥಳ ಸಂಕೋಚ ಮೂಲಕ ಮಾದರಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯ ಪ್ರಕೃತಿಯನ್ನು ನಾನಾಂಕಿತ ವೈದ್ಯ ಡಾಕ್ಟರರಿಗೂ ತೋರಿಸಲು ಗುಣಹೊಂದದಿರಲು ತಮ್ಮ ಆಶ್ಚರ್ಯಕರವಾದ ತಾಯಿತವನ್ನು ನನ್ನ ಹೆಂಡತಿಯು ಈವಾಗ್ಯೆ ೬ ಮಾಸಗಳ ವರೆ ಧರಿಸಿದ ಮಾತ್ರದಲ್ಲಿ ಮೈಯೊಳಗಿನ ಯಾವತ್ತೂ ರೋಗಗಳು ನಾಶವಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುವುದನ್ನು ತಿಳಿಸಲು ಅತಿ ಸಂತೋಷವೆನಿಸುತ್ತೆ.

ತಮ್ಮ ಸಿ. ಕೆ. ರಾವ ಸಾಹೇಬ, ಸೆಂಡಾಮು ಡಾರ್,
ಪ್ರಲ್ಹಾದ ಎಸ್ಟೇಟ್, ಮುಂಬೈ.

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,
ಮು. ಪೋ. ಅಥಣಿ, ಜಿ. ಬೆಳಗಾಂವ.

52—24

ಎಂ. ಎಸ್. ಶಿದ್ದಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

...ರೆಟ್ ಬೆಂಗಾರದ ನಿಬ್ಬು ಹಾಕಿನ ವಾತ್ರಿಯಾ ...ಂದೋಬಸ್ತಾ ಆದ ಪೌಂಟೆನ್ ಪೆನ್‌ಗಳು.		ಟೈಂ ಪೀಸ್ ಗಳು.		
		ಸಾ...ಡ್ ವಿದುವ ವಣ ಟೈಂಪೀಸ್	1 ಕ್ಕೆ	3 6 0
...ಮಂಡರ್ ಫೌಂಟೆನ್‌ಪೆನ್ 1ಕ್ಕೆ	ರೂ. 3 0 0	ಜರ್ಮನ್ ಮೇಕ್ ಸಣ್ಣ ಟೈಂಪೀಸ್	1ಕ್ಕೆ	2 2 0
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3 3 0	ಹಗಲಿಯೂ ಅಂಬರ ಟೈಂಪೀಸ್	1ಕ್ಕೆ	6 9 0, & 6 15 0
„ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3 8 0	ಹಗಲಿಯೂ ಸಣ್ಣ ಸ್ಪೆಷಲ್ ಅಳತರ ಟೈಂಪೀಸ್	1ಕ್ಕೆ	7 2 0
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮಾಡಲ್ ಕಲರ್ ಫೌಂಟೆನ್‌ಪೆನ್ 1ಕ್ಕೆ	3 14 0	ಹಗಲಿಯೂ ಅಳತರ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು	1ಕ್ಕೆ	8 10 0
„ ಮೋಟ್ ಕಲರ್ ಸ್ಕ್ರೂ ಕ್ಯಾಪ್ ಫೌಂಟೆನ್‌ಪೆನ್ 1ಕ್ಕೆ	4 2 0	ಬಿಗ್‌ಬೆನ್ ಅಳತರ ಟೈಂಪೀಸ್	1ಕ್ಕೆ	9 6 0
„ ಸೆಲ್ಫ್ ಫಿಲ್ಲಿಂಗ್ ಮಾಡಲ್ ಅನೆದ ಬ್ರವುನ್ ಕಲರ್ ಫೌಂಟೆನ್‌ಪೆನ್ 1ಕ್ಕೆ	5 8 0	ಬಿಗ್‌ಬೆನ್ ಅಳತರ ಸ್ಟ್ಯಾಂಡ್ ಇರತಕ್ಕ ಬಾಕ್ಸಿಯೊದ ಟೈಂಪೀಸ್	1ಕ್ಕೆ	13 4 0
...ಸ್ಪಟ್ ಫೌಂಟೆನ್‌ಪೆನ್ 1ಕ್ಕೆ	10 8 0	ಗ್ಯಾರಂಟಿಯೂ ಬಂದೋಬಸ್ತು ಆದ ಪಾಕೆಟ್ ವಾಚ್	1ಕ್ಕೆ	5 10 0
...ರ್ ಪೆನ್ 1ಕ್ಕೆ	14 6 0, & 20 10 0	...ಟೋ ನಮೂನೆಯಲ್ಲಿ ಎಸ್ಪಿ ಹಾರ್ತ್ ಕಂಪೆನಿಯ ಪಾಕೆಟ್ ವಾಚ್	1ಕ್ಕೆ	12 4 0
...ಲರ್ ಫೌಂಟೆನ್‌ಪೆನ್ 1ಕ್ಕೆ	3 8 0, & 3 12 0	...ಕ್ಕಲ್ ಕೇಸ್ ಸಿಲಿಂಡರ್ ಮುವುಮೆಂಟ್ ಸಾಧಾರಣ ತರದ ರಿಸ್ಟ್ ವಾಚ್	1ಕ್ಕೆ	5 4 0, 7 8 0, 10 0 0 & 12 8 0
...ಫೌಂಟೆನ್ ಪೆನ್ 1ಕ್ಕೆ	6 4 0, & 6 12 0			
...ರ್ಪಿನ್ ಫೌಂಟೆನ್ ಪೆನ್ 1ಕ್ಕೆ	8 2 0, & 8 10 0			

ಇಲ್ಲಿ ಕಾಣಿಸಿದ ಹೊಸ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅಲಾಯಿದಾ.

ಆರ್ಡರ್ ಕಳುಹಿಸುವ ವಿಳಾಸ —ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—41

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

	ರೂ
ಶೇರ್ ಬಂಡವಾಳ —	50 000
ವಸೂಲಾದ ಶೇರ್ ಮೊಬಲಗು —	23 160
ಒಮ್ಮೊಟ್ಟಿನ ಠೇವಣಾತಿ —	2,16 472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷ ಕ್ಕೊಂದಾವರ್ತಿ ಲೆಖ್ಖ ಪರೀಕ್ಷೆ ... ಲೆಕ್ಕ ಆಡಿಟ್ ಮಾಡಿಸಿ ಕೆ ಮಾಡುತ್ತಾರೆ

ಪ್ರಸಿಡೆಂಟರು, ಶ್ರೀಮಾನ್ ... ಅಪ್ಪಯ್ಯನವರು, ರಾವ್ ಬಹದ್ದೂರ್

ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ ಯನ್ ವೆಂಕಪ್ಪಯ್ಯನವರು ಬಿ.ಎ. ಬಿ.ಎಲ್.
ತಾರೀಖು 1—7—1930

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ವನ್ನು ಕೊಡುವುದರಿಂದ ಸಣ್ಣರೂ, ಪುಷ್ಟರೂ ಮತ್ತು ಸುದೇಹ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,
52—15 ಗಿರಿಗಾಂವ್, ಮುಂಬಯಿ.



Bore Victor Cartridges Rs 10/- Per 100

Mahomedally-Noorbhoy.

ARMS & AMMUNITION MART.

33 Abdul Rehman Street.

52 23 BOMBAY 3

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ಪುರೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯ ಈಗಿನ ಸ್ಥಿತಿಯಿಂದ ಸಷ್ಟ

ಹೊಸ ಕಲಸ	ಪ್ರೀಮಿಯಂ ವರಮಾನ
೧೯೨೭—೪೭೮ ಲಕ್ಷ ರೂಪಾಯಿಗಳು	೧೯೨೭—೧೨೨ ಲಕ್ಷ ರೂಪಾಯಿಗ,
೧೯೨೮—೫೮೫ ಲಕ್ಷ	೧೯೨೮—೧೪೦ ಲಕ್ಷ
೧೯೨೯—೭೫೦ ಲಕ್ಷ ,,	೧೯೨೯—೧೬೧ ಲಕ್ಷ

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು.

ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು:

೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗೆ ೨೨॥ ರೂಪಾಯಿಗಳು.

೧೯೨೭ ,, ,, ೨೫ ,,

ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದರೆ ಜನರಂಜಕವಾದ ಅತ್ಯಂತ ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭ

ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು.—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಎಂ. ವಿ. ಮುತ್ತುಕೃಷ್ಣ ನಾಯರ್ ಆಕ್ಟಿಂಗ ಬ್ರಾಂಚ್ ಸೆಕ್ರೆಟರಿ.

OR

ಕೆ. ಪಿ. ಚಿಣ್ಣಪ್ಪ, ಏಜೆಂಟ್, ಮಡಿಕೇರಿ.

52—8



ವ ಲೇರಿಯಾ ಜ್ವರ ಮತ್ತು ಚಳಿಜ್ವರ ಉಂಟು ಮಾಡುವ ಕಟ್ಟು ಬರುವ ಎಲ್ಲಾ ವಿಧದ ಜ್ವರಗಳನ್ನು ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ.
ಕ್ರಯ 8 ಡಿಬ್ಬಿಗೆ 1—8—0 ½ ಡಜನಿಗೆ 8—8— 16—8—0

ಪಿತ್ತ, ರೋಗಕ್ಕೆ ಕಂಪೌಂಡು ಸಿರಪ್ ...

ಪಿತ್ತಜ್ವರ ಕೈಕಾಲು ಬಚ್ಚಲು ರಕ್ತ ಇಲ್ಲದೆ ಬಿಳುಪು ರುಚಿ ಕೆಟ್ಟಿರುವ ನಾಲಿಗೆ ಅರಸಿನ ಬಣ್ಣ ... ಗೊಂಬೆ ಮತ್ತು ಶರೀರ ಪರಿಶ್ರಮ ಶಕ್ತಿ ತಗ್ಗುವದು ಹೊಟ್ಟೆ ಉರಿ ಎದೆ ಸುಡುವದು ನಾಲಿಗೆ ಒಣಗುವದು ಮೂತ್ರ ಭಂಗ ಪಿತ್ತ ಕಾರುವದು ನಿದ್ರೆ ಇಲ್ಲದೆ ಸಂಕಟವಾಗುವುದು ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3—8—0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಾಪರಿಲ.

ಶರೀರದಲ್ಲಿ ಬೀಳುವ ಮೈಕೈ ಕೆರತ ಬೊಕ್ಕೆಗಳು ವೀರ್ಯ ... ಬಗೆಯ ಚರ್ಮ ... ಅತೀ ಶೀಘ್ರದಲ್ಲಿ ಗುಣಪಡಿಸಿ ರಕ್ತ ಶುದ್ಧಿ ... ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ... ಕಂಪೌಂಡು ಸಿರಪು ಸರ್ಸಾಪರಿಲ ಎಂಬುದೇ ಬಾಟ್ಲಿಗೆ ರೂಪಾಯಿ 3—8—0

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನಮ್.

ತಿಂಗಳು ಗಟ್ಟಲೆ ಬರದೆ ... ಹೊಟ್ಟೆನೋವು ಕೈಕಾಲುಗಳ ಸೆಳತ ಗರ್ಭಕೋಶದ ಬಲಹೀನತೆ ... ರಕ್ತವು ... ಹರಿಯದೆ ನಿಂತು ಬಿಡುವದು ... ಬಸ್ಸಿನ ... ಇತ್ಯಾದಿ ಗರ್ಭಕೋಶದ ಎಲ್ಲಾ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನಮ್ ... ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3 ...

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ... ಬಲ ಇಲ್ಲದೆ ಇರುವದು ... ಬಗೆ ಬಗೆ ... ಇತ್ಯಾದಿ ರೋಗಗಳು ಕಂಡು ... ಬೇಬಿಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1—1—0

... ಎಲ್ಲಾ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ

ಪರೀಕ್ಷಿಸಿ ಕೊಡುವ ... ಅವುಗಳ ನಾನಾ ಬಗೆಯ ... ಬಿಸಿನೀರಿಗೆ ... ನಮ್ಮಲ್ಲಿ ನ್ಯಾಯವಾದ ಬೆಲೆಗೆ ದೊರೆಯುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ — ಮಲೇರಿಯಾ ಕಂಪನಿ,
ಹಂಪನಕಟ್ಟೆ, ... 14, ಮಂಗಳೂರು

52—24

ನೋಟೀಸು.

ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ... ಏಜೆಂಟರುಗಳಿಗೆ ... ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ ... ಅವರಿಗೆ ... ಸ್ಥಳಗಳಲ್ಲಿ ನಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜೆಂಟರು

ಉತ್ತರ ಕೊಡಗಿಗೆ ಮೆ, ಪಾಲೇಂಗಡ ... ಪ್ಪನವರು
,, ಮೆ ... ಸುಬ್ಬಯ್ಯನವರು.
ದಕ್ಷಿಣ ಕೊಡಗಿಗೆ ಮೆ ಅಲ್ಲಾರಂಡ ಮೊಣ್ಣಪ್ಪನವರು,
,, ಮೆ ಅಮ್ಮಂಡ ಸುಬ್ಬಯ್ಯನವರು
ಮರೆನಾಡು—ಮೆ ಕೇಕಿರ ಅಯ್ಯಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ)
ನಾಪೋಕ್ಲು—ಎಮ್. ಆರ್ ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಒಮ್ಮನ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಯ್ಯನವರು
,, ಮೆ ಸಣ್ಣುವಂಡ ಬೋಪಯ್ಯ
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು
ಮಡಿಕೇರಿ & ಕಿಗ್ಗತ್ತ—ಮೆ ಜಿ. ಮಾದಯ್ಯ
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯ
ಸೋಮವಾರಪೇಟೆ —ಸ್ಪೆಂಟು ಆದ ರಶೀತಿ ತೋರಿಸಿ ... ಚಂದಾ ಕೊಡಬೇಕಾದದಾಗಿ ಈ ಮೂಲಕ ತಿಳಿಸಿ ...

ಮೇನೇಜರ್,
ಕೊಡಗು ಲಿಮಿಟೆಡ್, ಮಡಿಕೇರಿ

ಎಲ್ಲಾ ಪತ್ರಿಕೆ ಸಿದ್ದವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರರು ... ಅಮಿತ ಜವಾಬ್ದಾರಿ ಪರಸ್ಪರ ಸಹಾಯ ... ಉಪನಿಬಂಧನೆಗಳೂ, ಬರೆದು ... ಕಷ್ಟ ಕಂಡುಹಿಡಿದಾಗ ಅದು ಸರಿಯಾಗಿ ಬರೆಯ ... ವೆಂದು ವಾದಿಸು ... ಅವನ್ನು ... ಸರಿಯಾಗಿ ... ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗೆ ... ವಾಗಿ ತಯಾರಿಸಲ್ಪಟ್ಟವಾದ ಫಾರಮುಗಳೂ, ... ಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಜ್ಜರ್ ... ಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ

Printed & published by P I Belliappa at "Kodagu" Press, Mer... for "Kodagu" Ltd.

"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಸುತ್ಸಕಾ । ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಚಂದಾ ರೂ. ೩—೮—೦.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

೧೦	ಮಡಿಕೇರಿ, ಸನ್ ೧೯೩೧ನೇ ಇಸವಿ ಏಪ್ರಿಲ್ ತಾರೀಕು ೨೪ ನೇ ಶುಕ್ರವಾರ.	ಸಂಚಿಕೆ ೪೦

Telegrams — "Precious"

V. Subramaniar Jeweller.

Telephone — 3145

DIAMOND MERCHANT, GOLD & SILVERSMITH.

Deals in all :-
SPORTS CUPS in all prices
MEADALS in up to date patterns
CASKETS in elegant styles

Nos, 2 & 3, Kuppumuthu St.,
TIRUVATESWARANPET,
Post Box 423, Triplicane P. O.,
MADRAS.

Deals in all :
GEM-SET JEWELS, set with Diamonds Rubies etc.,
GOLD ARTICLES of all patterns
SILVER WARE in latest style

52-23



ರಾಮಾಂ ಒರೆದರೆ ಇಂಗಿನ ಕ್ಯಾಟಲಾಗು ಮಫತಿಯಾಗಿ ಕಳುಹಿಸಲ್ಪಡುವದು

ಕೋವಿಗಳು, ಕತ್ತಿಗಳು, ಬಚೀಗಳು, ತೋಟಗಳು, ಪಿಸ್ತೂಲುಗಳು, ವ ನ್ನು ಮನೆ ಬೇಟೆಯ ಎಲ್ಲಾ [illegible] ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
GOOLAMHUSAIN A. LIBHOY & SONS
Firearms and Ammunition
Largest Importers of Firearms and Ammunition
Cheapest priced firm in India,
210 Abdul Rehman Street BOMBAY.

54-4

ಕಟುಕಷಾಯ ಮಲೆಜ್ವರಕ್ಕೆ:— [illegible] ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು [illegible] 7—8—0 12ಕ್ಕೆ ರೂ 14 [illegible] ರೂ 1—8—0 3ಕ್ಕೆ ರೂ 4—0—0, 6ಕ್ಕೆ ರೂ [illegible]

ಮೂತ್ರ ಪ್ರಮೇಹ ಕಟು ಕಷಾಯ

ಚಂದನಾಸವ:— [illegible] 1, 3 ಕ್ಕೆ ರೂ 1—4—0 3—8—0, 6—12—0 [illegible]

ರೋಮನಾಶಿನಿ:— [illegible] 3—8—0

ಸುತೋಲ್ಲಾಸಿನಿ ತೈಲ:— [illegible] ರೂ. 1, 3 ಸೀಸೆಗೆ 2—10—0 [illegible] ರೂ. 2, 3 [illegible] 5—8—0

ವಿಳಾಸ.—ಮನೋಲ್ಲಾಸಿನಿ ಕಂಪೆನಿ,
೨. ಮಂಗಳೂರು.

53-50

ಬಾಲಾರ್ಕಮದು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ [illegible] ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ. ಮಕ್ಕಳು [illegible]



[illegible] ಇದರಿಂದ ಬಹು ಬೇಗ ಪುಷ್ಟಿ [illegible] ದಿನ ದಿನಕ್ಕೆ ಆರೋಗ್ಯವೂ, [illegible] ಇದು ಮಧುರವಾಗಿದೆ ಚಿಕ್ಕ ಮಕ್ಕಳು ಆನಂದದಿಂದ [illegible] ಸೀಸೆ 1ಕ್ಕೆ 12 ಆಣೆ. [illegible] 9 ಆಣೆ.

[illegible] ಇಲ್ಲದ [illegible] ಗಮನಿಸುವದಿಲ್ಲಾ.

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶೀಮೊಗ್ಗಾ,
(ಮೈಸೂರು ಸೀಮೆ)

52-15

ಕೊಡಗು.

ಸ. ೧೯೩೦ನೇ ಇಸವಿ

ಏಪ್ರಿಲ್ ತಾ. ೨೪ ನೇ ಶುಕ್ರವಾರ.

ಜಮೀನ್ದಾರರ ಸಂಘದ ಬರುವ ಮಹಾ ಸಭೆ.

ಕೊಡಗು ಜಮೀನ್ದಾರರ ಸಂಘದ ಈ ವರ್ಷದ ಮಹಾ ಸಭೆಯು ಬರುವ ಮೇ ತಿಂಗಳು 5ರಲ್ಲಿ ಗೋಣಿಕೊಪ್ಪಲಲ್ಲಿ ನಡಿಸಲ್ಪಡುವದೆಂದು ತಿಳಿಯುತ್ತೇವೆ. ಈ ಸಂಘವು ಕಳೆದ ಹದಿನೆಂಟು ವರ್ಷಗಳಿಂದ ದೇಶದ ರಾಜಕೀಯ ಅಭಿವೃದ್ಧಿಯನ್ನು ಸಾಧಿಸುತ್ತಾ ಬರುತ್ತಿವೆ. ಪ್ರಥಮದಲ್ಲಿ ಇದು ಬರೇ ವ್ಯವಸಾಯಗಾರರ ಅಭಿವೃದ್ಧಿಯನ್ನು ಸಾಧಿಸಲು ಹೊರಡಿಸಲ್ಪಟ್ಟ ಸಂಸ್ಥೆಯಾದರೂ ಬರ ಬರುತ್ತಾ ಇದಕ್ಕೆ ಈ ದೇಶದಲ್ಲಿ ಹಿತವಿರುವ ಎಲ್ಲಾ ಜನರು ಸೇರಬಹುದೆಂದು, ಇದರ ಹೆಸರು ಹಾಗೆಯೇ ಇಡಲ್ಪಟ್ಟರೂ, ಇದರ ನಿಬಂಧನೆಗಳು ಬದಲಾಯಿಸಲ್ಪಟ್ಟು, ಈಗ ಇದರಲ್ಲಿ ಎಲ್ಲಾ ಜಾತಿ ಮತಗಳ ಮತ್ತು ಎಲ್ಲಾ ತರಹದ ಕಸಬಿನ ಜನರು ಮೆಂಬರುಗಳಾಗಿರುತ್ತಾರೆ. ಇದರಷ್ಟು ಹೆಚ್ಚು ಸದಸ್ಯರಿರುವ ಸಾರ್ವಜನಿಕ ಸಂಸ್ಥೆ ಬೇರೆ ಯಾವದೂ ಕೊಡಗಿನಲ್ಲಿಲ್ಲ. ಇದಕ್ಕೆ ಅತಿ ಬಡವರಾದರೂ ಸೇರಲು ಅನುಕೂಲವಾಗುವಂತೆ ಕಳೆದ ವರ್ಷದ ಮಹಾಸಭೆಯಲ್ಲಿ ಸದಸ್ಯರ ವಾರ್ಷಿಕ ಚಂದಾವನ್ನು ಒಂದು ರೂಪಾಯಿಯಿಂದ ನಾಲ್ಕಾಣೆಗೆ ಇಳಿಸಲಾಗಿದೆ. ಆಸಕಾರಣ ಈ ಸಾರಿ ದೇಶದ ಮಹನೀಯರೂ, ಮಹಿಳೆಯರೂ ಹೆಚ್ಚು ಸಂಖ್ಯೆಯಲ್ಲಿ ಈ ಸಂಘಕ್ಕೆ ಸೇರಿ ಇದರ ಬರುವ ಮಹಾಸಭೆಯಲ್ಲಿ ಭಾಗಿಗಳಾಗುವರಾಗಿ ನಂಬುತ್ತೇವೆ.

ಈ ಸಾರಿಯ ಮಹಾಸಭೆಯು ಬಹು ಪ್ರಾಮುಖ್ಯವಾದದ್ದಾಗಿದೆ. ಯಾಕಂದರೆ—ಸ್ವರಾಜ್ಯ ಪಡೆಯಲಿಕ್ಕಾಗಿ ಬ್ರಿಟಿಷ್ ಸರ್ಕಾರದೊಂದಿಗೆ ಅಹಿಂಸಾ ತತ್ವದ ಯುದ್ಧವನ್ನು ನಡಿಸುತ್ತಿದ್ದ ಮತ್ತು ಹಿಂದೂದೇಶದ ನಿಜವಾದ ಪ್ರತಿನಿಧಿ ಸಂಸ್ಥೆಯಾದ ಇಂಡಿಯನ್ ನೇಶನಲ್ ಕಾಂಗ್ರೆಸಿನವರು ಬೇಗನೆ ನಡಿಸಲ್ಪಡುವ ೭ನೇ ರೌಂಡು ಟೇಬಲಿನ ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳಲು ನಿಶ್ಚಯಿಸಿರುವರು. ಈ ಪರಿಷತ್ತಿನಲ್ಲಿ ಕಾಂಗ್ರೆಸಿನವರಿಗೆ ಒಪ್ಪುವಂಥ ರಚನೆಯನ್ನು ಕೊಡಲು ಬ್ರಿಟಿಷರು ಸಮ್ಮತಿಸಿದರೆ ಪ್ರಾಂತೀಕ ಸರ್ಕಾರಗಳ ರಚನೆಯು ಅಲ್ಲಿಯೇ ಚರ್ಚಿಸಲ್ಪಟ್ಟು ತೀರ್ಮಾನಿಸಲ್ಪಡುವುದು. ಆಗ್ಯೆ ನಮ್ಮ ಪ್ರಾಂತ್ಯದ ಮುಂದಿನ ರಾಜಕೀಯ ರಚನೆಯೂ ನಿಶ್ಚಯಿಸಲ್ಪಡುವುದು. ಆದುದರಿಂದ ನಮ್ಮ ಪ್ರಾಂತ್ಯಕ್ಕೆ ಯಾವ ತರಹದ ಸುಧಾರಣೆ ಬೇಕೆಂಬದನ್ನು ಈ ಮಹಾಸಭೆಯಲ್ಲಿ ಘನಹಒತ್ತಿ ಹೇಳಬೇಕಾಗಿದೆ. ದೇಶದಲ್ಲಿ ಮುಂದಿನ ಸುಧಾರಣೆಯ ವಿಷಯ ಭಿನ್ನಾಭಿಪ್ರಾಯಗಳು ಇರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹಿಂದೂದೇಶದವರು ಇಷ್ಟರವರೆಗೆ ನಡಿಸಿದ ಚಳವಳದ ಫಲಿತಾಂಶವು ಕೈಸೇರುವಂತಿರುವ ಈ ಘಟ್ಟದ ಸಮಯದಲ್ಲಿ ಭಿನ್ನಾಭಿಪ್ರಾಯಗಳಿಗೆ ಎಡೆಕೊಡಬಾರದು. ಭಿನ್ನಾಭಿಪ್ರಾಯಗಳಿರುವ ಪಾರ್ಟಿಗಳು ಎಲ್ಲವೂ ದೇಶದ ಎಲ್ಲಾ ಜನರಿಗೆ ಸೇರಲು ಅನುಕೂಲವಿರುವ ಈ ಸಂಘದ ಮಹಾ ಸಭೆಗೆ ಬಂದು ನೆರೆದು ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟು ಚರ್ಚಿಸಿ ಒಗ್ಗಟ್ಟಾಗಲು ಪ್ರಯತ್ನಿಸಬೇಕಾದದ್ದು ಪ್ರತಿಯೊಬ್ಬ ದೇಶೀಯನ ಕರ್ತವ್ಯವಾಗಿದೆ.

ಈ ವರ್ಷದ ಮಹಾ ಸಭೆಯ ಪ್ರಾಮುಖ್ಯತೆಗೆ ಇನ್ನೊಂದು ಕಾರಣವು—ಇದರ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಹಿಂದೂ ದೇಶದ ಒಬ್ಬ ಬಹು ಪ್ರಖ್ಯಾತ ಮುಂದಾಳಾದ ಶ್ರೀಯುತ ಜೆ. ಯಂ. ಸೆನ್‌ಗುಪ್ತರವರು ಒಪ್ಪಿದ್ದೇ ಆಗಿದೆ. ಇವರು ಬ್ಯಾರಿಸ್ಟರ್. ಎಟ್ ಲಾ ಆಗಿ ಕಲ್ಕತ್ತಾದಲ್ಲಿ ಆಯಾ ವೃತ್ತಿಯನ್ನು ಕೈಕೊಂಡು ಪ್ರಖ್ಯಾತಿಗೆ ಬಂದರು. ಬ್ರಿಟಿಷ್ ಸಾಮ್ರಾಜ್ಯದಲ್ಲಿ 2ನೇ ಪ್ರಮುಖ ಪಟ್ಟಣವಾದ ಕಲ್ಕತ್ತಾದ ಕಾರ್ಪೊರೇಶನಿನ ಅಧ್ಯಕ್ಷ ಪದವಿಯನ್ನು ಇವರು ಎರಡು ಸಾರಿ ಅಲಂಕರಿಸಿದ್ದರು. ಇದು ಜನ ಸಾಮಾನ್ಯರಿಂದ ಚುನಾಯಿತವಾಗುವ ಪದವಿಯಾದುದರಿಂದ ಇವರು ಅಲ್ಲಿಯ ಜನರ ವಿಶ್ವಾಸಕ್ಕೆ ಎಷ್ಟರ ಮಟ್ಟಿಗೆ ಪಾತ್ರರೆಂಬುದು ಗೊತ್ತಾಗುತ್ತದೆ. ಇವರು ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನಲ್ಲಿ ಬಹಳ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸಿನೊಳಗೆ ಸ್ವರಾಜ್ಯ ಪಾರ್ಟಿಯು ಸ್ಥಾಪಿತವಾದಾಗ್ಯೆ ಇವರು ಗತಿಸಿದ ದೇಶಬಂಧು ಚಿತ್ತರಂಜನ ದಾಸ್‌ರವರ ತತ್ವವನ್ನು ಅನುಸರಿಸಿ ಸದರಿ ಪಾರ್ಟಿಯಲ್ಲಿ ಕೆಲಸ ಮಾಡಿದರು. 1928ನೇ ಇಸವಿಯಲ್ಲಿ ನಡೆದ ಕಲ್ಕತ್ತಾ ಕಾಂಗ್ರೆಸಿನ ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದರು. ಈಚೆಗೆ ಮಹಾತ್ಮ ಗಾಂಧಿಯವರ ತತ್ವವನ್ನು ಅನುಸರಿಸುತ್ತಾ ಕಾಂಗ್ರೆಸಿನ ವರ್ಕಿಂಗ್ ಕಮಿಟಿ ಮೆಂಬರಾಗಿರುವರು. ಕಳೆದ ವರ್ಷದಲ್ಲಿ ರಂಗೂನಿನಲ್ಲಿ ಕೊಟ್ಟ ಭಾಷಣಕ್ಕಾಗಿ ಇವರಿಗೆ ಸಜವಾಗಿತ್ತಲ್ಲದೆ, ಖಾನೂನು ಭಂಗದ ಚಳವಳದಲ್ಲಿ ಎರಡು ಸಾರಿ ಕಾರಾಗೃಹವಾಸವನ್ನು ಅನುಭವಿಸಿ ಈಚೆ ಸಂಧಾನಕ್ಕಾಗಿ ಬಿಡಲ್ಪಟ್ಟವರಾಗಿರುತ್ತಾರೆ. ಇವರ ಪತ್ನಿಯವರು ಅಮೇರಿಕಾದ ಮಹಿಳೆಯಾದರೂ ಖಾನೂನು ಭಂಗ ಚಳವಳದಲ್ಲಿ ಭಾಗಿಯಾಗಿ ಬೈಲುವಾಸವನ್ನು ಕೈಕೊಂಡರು. ಇವರು ಅಖಿಲ ಭಾರತದ ಕೆಲವು ಪ್ರಮುಖ ಮುಂದಾಳುಗಳ ಪೈಕಿ ಒಬ್ಬರಾಗಿರುತ್ತಾರೆ. ಆದುದರಿಂದ ಮಹಾತ್ಮ ಗಾಂಧಿಯವರು ರೌಂಡು ಟೇಬಲು ಪರಿಷತ್ತಿಗೆ ಹೋಗುವಾಗ್ಯೆ ಅವರೊಂದಿಗೆ ಇಂಗ್ಲೆಂಡಿಗೆ ಇವರೂ ಹೋಗದೆ ಇರಲಾರರು. ಕಳೆದ ಕಾಂಗ್ರೆಸಿನಲ್ಲೇ ಇವರು ಅಧ್ಯಕ್ಷರಾಗುವ ಸಂಭವವಿತ್ತು. ಆದರೆ ಇವರಾಗಿ ಸದರಿ ಗೌರವವನ್ನು ಸರ್ದಾರ್ ವಲ್ಲಭ ಭಾಯಿ ಪಟೇಲರವರಿಗೆ ಬಿಟ್ಟು ಕೊಟ್ಟರು. ಇವರು ಇನ್ನಾದರೂ ಶೀಘ್ರದಲ್ಲೇ ಈ ಪದವಿಯನ್ನು ಅಲಂಕರಿಸುವುದರಲ್ಲಿ ಸಂಶಯವಿಲ್ಲ.

ಹಿಂದೂದೇಶದಲ್ಲಿ ಹಿಂದೂ ಮುಸಲ್ಮಾನರ ಸಮಸ್ಯೆಯನ್ನು ತೀರ್ಮಾನಿಸುವ ಮತ್ತು ರೌಂಡು ಟೇಬಲಿನ ಪರಿಷತ್ತಿನ ಸಮಯದಲ್ಲಿ ಇಂಗ್ಲೆಂಡಿಗೆ ಬೇಗನೆ ಹೋಗಲು ತಯಾರಾಗಬೇಕಾದ ಈ ಸಮಯದಲ್ಲು ಇವರು ಮಲಬಾರಿನ ಪ್ರಾಂತೀಕ ಕಾನ್‌ಫರೆನ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿಕೊಂಡಿರುವರೆಂದು ತಿಳಿದು ಜಮೀನ್ದಾರರ ಸಂಘದವರು ಕೊಡಗಿಗೆ ಬಂದು ತಮ್ಮ ಮಹಾ ಸಭೆಯ ಅಧ್ಯಕ್ಷರಾಗಬೇಕೆಂದು ಕೋರಿದಲ್ಲಿ ಇವರು ಸಮ್ಮತಿಸಿದ್ದು ಸಂಘದವರ ಮಾತ್ರವಲ್ಲ ಇಡೀ ಕೊಡಗಿನವರ ಭಾಗ್ಯವೆಂದೇ ಹೇಳಬೇಕು. ಇವರು ಒಬ್ಬ ಅದ್ವಿತೀಯ ಭಾಷಣಕಾರರಾಗಿರುವರು. ಇವರು ಸಿಂಹದಂತೆ ಘರ್ಜಿಸುತ್ತಾ ಸಭಿಕರ ಹೃದಯವನ್ನು ಕಲ್ಲಣಗೊಳಿಸುವರು. ಇಂಥಾ ಮಹನೀಯರು ನಮ್ಮ ಪ್ರಾಂತ್ಯಕ್ಕೇನೇ ಬರುವಾಗ್ಯೆ ಇವರ ಭಾಷಣವನ್ನು ಕೇಳಿ ಧನ್ಯರಾಗದೆ ಇರುವವರು ದುರ್ಭಾಗ್ಯರೆಂದರೆ ತಪ್ಪಾಗಲಾರದು. ಇಂಥಾ ರಾಜಕೀಯ ಪಟುಗಳೊಂದಿಗೆ ನಮ್ಮ ಪ್ರಾಂತ್ಯದ ಸಮಸ್ಯೆಯನ್ನು ಚರ್ಚಿಸಿ ಪ್ರಯೋಜನ ಹೊಂದಲು ಇದೊಂದು ಸುಸಂಧಿಯಾಗಿದೆ. ಈ ಅನುಕೂಲವನ್ನು ಯಾರೂ ಕಳಕೊಳ್ಳಬಾರದು. ಇವರು ದೊಡ್ಡ ಖಾದಿ ಪ್ರಿಯರಾದ ಕಾರಣ ನಮ್ಮ ವಿಖ್ಯಾತ ಅತಿಥಿಯನ್ನು ಸಂತೋಷಗೊಳಿಸಲಿಕ್ಕಾಗಿಯೂ, ತಮ್ಮ ದೇಶ ಭಕ್ತಿಯನ್ನು ತೋರಿಸಲಿಕ್ಕಾಗಿಯೂ ಅವರ ಭಾಷಣ ಕೇಳಲು ಬರುವವರೆಲ್ಲರೂ ಕೈನೂಲಿನ ಖಾದಿ ಉಡುಪನ್ನೇ ಧರಿಸಿ ಬರುವುದು ಯೋಗ್ಯವೆಂದು ನಾವು ಹೇಳಬೇಕಾಗಿಲ್ಲ. ಹೇಗೂ ಸಂಘದ ಈ ವರ್ಷದ ಮಹಾ ಸಭೆಗೆ ದೇಶದ ಎಲ್ಲಾ ಭಾಗಗಳಿಂದಲೂ, ಎಲ್ಲಾ ಪಾರ್ಟಿಗಳಿಂದಲೂ ಮಹನೀಯರೂ, ಮಹಿಳೆಯರೂ ಬಹು ಸಂಖ್ಯೆಯಲ್ಲಿ ಬಂದು ನೆರೆದು ಸಭೆಯ ಕಾರ್ಯವನ್ನು ಜಯಪ್ರದವಾಗಿ ಮಾಡುವರಾಗಿ ಆಶಿಸುತ್ತೇವೆ.

ಸಿಬ್ಬಂದಿ ಖೋತೆ ಕಮಿಟಿ.

ಕೊಡಗಿನಲ್ಲಿ ಕೌನ್ಸಿಲು ಪ್ರಾರಂಭವಾದಂದಿನಿಂದ ಕೊಡಗು ಸರ್ಕಾರದಲ್ಲಿ ಶೇಕರಿಸಿ ಇಡಲ್ಪಟ್ಟಿದ್ದ ಸುಮಾರು 6 ಲಕ್ಷ ರೂಪಾಯಿಗಳಲ್ಲಿ ಈ ವರ್ಷ ಸುಮಾರು ಅರ್ಧದಷ್ಟು ಖರ್ಚು ಮಾಡಬೇಕಾಗಿ ಬಂದಿದೆ. ಜನ ಸಾಮಾನ್ಯಕ್ಕೆ ಪ್ರಯೋಜನವಾಗುವಂಥ ಹೊಸ ಕೆಲಸಗಳಿಗೆ ಉಪಯೋಗಿಸಬೇಕಾಗಿದ್ದ ಈ ಉಳುವರಿ ಮೊಬಲಗನ್ನು ಎಂದಿನಂತೆ ಜರೀ ಆಡಳಿತವನ್ನು ನಡಿಸಲು ಉಪಯೋಗಿಸಬೇಕಾಗಿ ಬಂದದ್ದು ಶೋಚನೀಯವಾಗಿದೆ. ಆದಕಾರಣ ಈಗಿನ ತಲೆಭಾರ ಆಡಳಿತೆ ಕ್ರಮದಲ್ಲಿ ಸಿಬ್ಬಂದಿ ಖೋತೆಯನ್ನು ಮಾಡಬೇಕಾದದ್ದು ಅತ್ಯಾವಶ್ಯವಾಗಿದೆ. ಇದನ್ನರಿತು ಕೌನ್ಸಿಲಿನವರು ಒಂದು ಕಮಿಟಿಯನ್ನು ನೇಮಿಸಲು ತೀರ್ಮಾನಿಸಿದ್ದೂ, ಅವರಂತೆ ಚೀಫ್ ಕಮಿಷನರವರು ಅಂಥ ಕಮಿಟಿಯೊಂದನ್ನು ನೇಮಿಸಿದ್ದೂ ಯೋಗ್ಯವಾಗಿದೆ. ಆದರೆ ಸದರಿ ಕಮಿಟಿಗೆ ನೇಮಿಸಲ್ಪಟ್ಟಿರುವ ಮೆಂಬರುಗಳಷ್ಟೇ ಜನರಲ್ಲಿ ವಿಶ್ವಾಸವನ್ನು ಹುಟ್ಟಿಸಲು ಸಾಕಾಗುವಂತೆ ಕಾಣುವುದಿಲ್ಲ. ಈಗಿನ ಕೌನ್ಸಿಲಿನ ಕೆಲವು ಮೆಂಬರುಗಳು ಉದ್ಯೋಗಿಗಳ ಬದಲಾವಣೆಯ ವಿಷಯ ಈಗಾಗಲೇ ಕೌನ್ಸಿಲಿನಲ್ಲಿ ಮಾಡಿದ ಸೂಚನೆಗಳು ಅತೃಪ್ತಿಕರವಾದವೆಂದು ಜನರಿಗೆ ತೋರಿ ಬಂದಿವೆ. ಹೀಗಿರುವಲ್ಲಿ ಈ ಕಮಿಟಿಗೆ ಕೌನ್ಸಿಲಿನ ಹೊರಗಿರುವ ಕೆಲವು ಮಹನೀಯರನ್ನು ನೇಮಿಸಿದ್ದರೆ ಉತ್ತಮವಾಗುತ್ತಿತ್ತು.

ಸಿಬ್ಬಂದಿ ಖೋತೆ ಎಂದರೆ ವಾಡಿಕೆಯಾಗಿ ಸಣ್ಣ ಸಣ್ಣ ಉದ್ಯೋಗಸ್ಥರ ಸಂಖ್ಯೆಯನ್ನು ಕಡಿಮೆ ಮಾಡುವದೆಂಬೇ ಈಗಿನ ಸರ್ಕಾರದವರ ವರ್ತನೆಯಿಂದ ಹಲವರಿಗೆ ತೋರಿದೆ. ಹೀಗೆ ಮಾಡುವುದರಿಂದ ಪ್ರಯೋಜನವಾಗುವುದರ ಬದಲು ತುಂಬಾ ಹಾನಿಯುಂಟಾಗುವುದು. ಕೆಳಗಿನ ತರಗತಿಯ ಉದ್ಯೋಗಸ್ಥರನ್ನು ಕಡಿಮೆ ಮಾಡುವುದರಿಂದ ಬಡವರ ಅನ್ನಕ್ಕೆ ಮಣ್ಣು ಹಾಕಿದಂತಾಗುವುದು ಒಂದು. ವಾಸ್ತವವಾಗಿ ಹೆಚ್ಚಿನ ಕೆಲಸವೆಲ್ಲವೂ ಕೆಳ ದರ್ಜೆಯ ಉದ್ಯೋಗಸ್ಥರಿಂದಲೇ ನಡಿಸಲ್ಪಡುವುದಾಗಿದೆ. ಅವರಿಗೆ ಯಾವಾಗಲೂ ಕೈತುಂಬಾ ಕೆಲಸವಿದ್ದೇ ಇರುತ್ತದೆ. ಅವರಲ್ಲಿ ಕೆಲವರನ್ನು ತೆಗೆದು ಹಾಕಿದರೆ ಖರ್ಚಿನ ಉಳುವರಿ ಬಹು ಕಡಿಮೆಯಾಗುವುದಲ್ಲದೆ ಬಾಕಿಯವರಿಗೆ ಮಾಡಲಾರದಷ್ಟು ಕೆಲಸ ಉಂಟಾಗಿ ಆಡಳಿತೆಯ ಕಾರ್ಯ ನಿರ್ವಾಹಕ ಶಕ್ತಿಯು ಕುಂದಿ ಪ್ರಜೆಗಳಿಗೆ ಹಲವು ವಿಧದಲ್ಲಿ ತೊಂದರೆಯಾಗುವುದರಲ್ಲಿ ಸಂಶಯವಿಲ್ಲ.

ಕೊಡಗಿನ ಸರ್ಕಾರವು ತಲೆಭಾರದ ಸರ್ಕಾರವೆಂದು ಹೆಸರುಗೊಂಡಿದೆ. ಈ ಭಾರವಾದ ತಲೆಯಲ್ಲಿ ಖೋತೆ ಮಾಡಿದರೇನೇ ಏನಾದರೂ ಉಳುವರಿ ದೊರೆಯುವುದಲ್ಲದೆ ಅನ್ಯಥಾ ಅಲ್ಲ. ಇಷ್ಟು ಚಿಕ್ಕ ಪ್ರಾಂತ್ಯದಲ್ಲಿ ಗಜೆಟೆಡ್ ಉದ್ಯೋಗಸ್ಥರ ಸಂಖ್ಯೆಯು ವಿಪರೀತವಾಗಿದೆ. ಅದರಲ್ಲೂ ಅವರ ಸಂಬಳದ ಮೊಬಲಗುಗಳನ್ನು ಹೇಳಲೇ ಬೇಡ! ಕೊಡಗು ಜಮೀನ್ದಾರರ ಸಂಘದವರು ಯಾವ ಉದ್ಯೋಗಸ್ಥನಿಗಾದರೂ ತಿಂಗಳಿಗೆ ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಸಂ[ಬಳ] ಕೊಡಬಾರದೆಂದು ದೇಶದವರ ಅಭಿಪ್ರಾಯವನ್ನು ಸೂಚಿ[ಸಿ]ರುವರು. ಇಂಡಿಯನ್ ನೇಶನಲ್ ಕಾಂಗ್ರೆಸಿನವರು ನೆ[ನ್ನೆ] ನಡೆದ ಕರಾಚಿ ಮಹಾಸಭೆಯಲ್ಲಿ ಸರ್ಕಾರ ಉದ್ಯೋಗಸ್ಥರಿಗೆ ಸಾಧಾರಣವಾಗಿ ಮಾಹೆಯಾನ 500 ರೂಪಾಯಿಗಿಂತ ಹೆಚ್ಚು ಕೊಡಬಾರದೆಂದು ನಿರ್ಣಯಿಸಿರುವರು. ಕಳೆದ ವ[ರ್ಷದ] ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಪಂಡಿತ ಜವಾಹಿರ್‌ಲಾಲ್ [ನೆಹ್ರು]ರವರಿಗೆ ಇದೂ ಸಹ ತೃಪ್ತಿಯಾಗಿರುವುದಿಲ್ಲ. ಸೋವ್ಯೆಟು [ರಷ್ಯಾ]ದಲ್ಲಿರುವಂತೆ 250 ರೂಪಾಯಿಯು ಮೇಲೆ ಸಂಬಳ [ಕೊ]ಡಬಾರದೆಂದು ಇವರ ಅಭಿಪ್ರಾಯ. ಸಾಮಾನ್ಯ ಜನರ ಹಿತವನ್ನು ಸಾಧಿಸಲು ಯತ್ನಿಸುತ್ತಿರುವ ಸಂಸ್ಥೆಗಳ ಮು[ಖ್ಯ] ಮುಂದಾಳುಗಳ ಅಭಿಪ್ರಾಯಗಳು ಇಷ್ಟು ವಿಶದವಾಗಿ[ರುವ]ಲ್ಲಿ ನಮ್ಮ ಏಟ್ರಿಂಚ್‌ಮೆಂಟ್ ಕಮಿಟಿಯವರು ಏನು [ಮಾ]ಡುವರೆಂದು ನೋಡಬೇಕಾಗಿದೆ. ಇವರು ದೊಡ್ಡ ಉದ್ಯೋಗಗಳ ಸಂಖ್ಯೆಗೂ ಮತ್ತು ಅವರ ವೇತನಕ್ಕೂ ಕೊಡಲಿ ಹಾಕಲು ಎಷ್ಟರ ಮಟ್ಟಿಗೆ ಧೈರ್ಯವನ್ನು ತಾಳುವರೆಂದು ಇ[ನ್ನು] ಮುಂದೆ ಗೊತ್ತಾಗಬೇಕಷ್ಟೆ. ಹೊಟ್ಟೆಗೂ, ಬಟ್ಟೆಗೂ ಸಾಕಷ್ಟು ಇಲ್ಲದೆ ಕಷ್ಟಪಟ್ಟು ದುಡಿಯುವಂಥ ಬಡ ರೈತರು ಕಂದಾಯಗಳನ್ನು ಕೊಡುತ್ತಿರುವುದು ಒಬ್ಬನ ನ್ಯಾಯವಾ[ದ] ಜೀವನಕ್ಕಿಂತ ಹೆಚ್ಚಿಗೆ ಸಂಬಳ ಕೊಟ್ಟು ದುಂದುಗಾರಿಕೆಗೆ ಅನುಕೂಲಮಾಡಿ ಕೊಡಲಿಕ್ಕಲ್ಲವೆಂಬ ಮುಖ್ಯ ವಿಷಯವ[ನ್ನು] ಸಿಬ್ಬಂದಿ ಖೋತೆಯ ಕಮಿಟಿಯವರು ಕಣ್ಣ ಮುಂದಿಟ್ಟುಕೊಂಡೇ ತಮ್ಮ ಕೆಲಸವನ್ನು ನಡಿಸುವರಾಗಿ ನಂಬುತ್ತೇವೆ. ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಟ್ಟುಕೊಂಡು ಪ್ರಾಚೀನ ಸರ್ಕಾರ ನಡಿಸಲು ಸಾಧ್ಯವೋ ಎಂಬವನ್ನು ಕಮಿಟಿ ತೀರ್ಮಾನಗಳಿಂದ ಊಹಿಸಬಹುದು.

ಮಹಾತ್ಮರು ವಿದೇಶಿ ವಸ್ತ್ರಗಳ ವರ್ತಕರ ಮಾನಪತ್ರವನ್ನು ಸ್ವೀಕರಿಸಲಿಲ್ಲ.

ಮಹಾತ್ಮರು ಕರಾಚಿಯಿಂದ ಹೊರಟು ನವಸಾರಿ (ಬರೋಡೆಯ ಒಂದು ಭಾಗ)ಗೆ ಮುಟ್ಟಿದೊಡನೆ ಅಲ್ಲಿಯ ವರ್ತಕ ಮಂಡಲದವರು ಅವರಿಗೆ ಸ್ವಾಗತ ಮಾಡಿ ಸನ್ಮಾನಕ್ಕೋಸ್ಕರ ಹಾಗೂ ಅವರಲ್ಲಿರುವ ತಮ್ಮ ಅಪಾರ ಪ್ರೇಮವನ್ನು ತೋರಿಸುವುದಕ್ಕಾಗಿ ಮಾನಪತ್ರ ಕೊಟ್ಟು 600 ರೂಪಾಯಿಗಳನ್ನೂ, ಒಂದು ಕ್ಯಾಸ್ಕೆಟನ್ನೂ ಕೊಡಲು ಹೋದರು. ನೆರೆದ ಸಭೆಯಲ್ಲಿ ಮಹಾತ್ಮರು ಅವರ ಹಣವನ್ನಾಗಲಿ ಕ್ಯಾಸ್ಕೆಟನ್ನಾಗಲಿ ತಾನು ಸ್ವೀಕರಿಸುವುದಿಲ್ಲವೆಂದು 'ನಾನು ಹಗಲಿರುಳು 24 ಘಂಟೆ ಕಾಲವೂ ವಿದೇಶೀ ವಸ್ತ್ರಗಳ ವಿನಾಶಕ್ಕಾಗಿ ಪರಮೇಶ್ವರನಲ್ಲಿ ಪ್ರಾರ್ಥನೆ ಮಾಡುತ್ತಿರುವೆನು. ಆದ್ದರಿಂದ ಈ ಮಾನಪತ್ರವನ್ನು ಮುಟ್ಟುವುದು ನನ್ನಿಂದಾಗದು. ಇದು ಆತ್ಮಶುದ್ಧಿಯ ಯುಗವು. ನನ್ನ ಸ್ಪಷ್ಟೋಕ್ತಿಗಳಿಂದ ನಿಮಗೆ ತುಂಬಾ ಬೇಸರವಾಗಬಹುದು. ಆದರೂ ಸತ್ಯಾಗ್ರಹಿಗೆ ಸತ್ಯದಲ್ಲಿಯೇ ಸರ್ವಹಿತವಿದೆ. ಸತ್ಯಪಥದಿಂದ ಅತ್ತಿತ್ತ ಕದಲುವದು ಅವನಿಗೆ ಕಲ್ಯಾಣಕರವೇ ಅಲ್ಲ. ಸುಳ್ಳಿನ ಸುಳಿವು ಸತ್ಯಾಗ್ರಹಕ್ಕೆ ಮುಳ್ಳು. ಅದರ ನಿರ್ಮಲ ಕೀರ್ತಿಗೆ ಕಲಂಕ. ಸತ್ಯಾಗ್ರಹಿಗಳಿಗೆ ಸತ್ಯವೇ ಸರ್ವಸ್ವ. ನಾನು ಮಹಾತ್ಮನಲ್ಲ; ಮಹಾತ್ಮನೆಂಬ [ಹೆಸ]ರುದಿನ ದಬ್ಬಾಳಿಕೆಯು ನನ್ನಮೇಲೆ ನಡೆದಿದೆ. ಸತ್ಯಾಗ್ರಹಿ ಎಂಬುದೇ ನನ್ನ ಸ್ವಯಂ ಸ್ವೀಕೃತ ನಾಮಧೇಯ ಪದವಿ, ಇಂದು [ನಾ]ನು ಮಗಾಡುವ ನುಡಿಗಳಿಗಿಂತಲೂ ನಿಷ್ಠುರವಾದ ಮಾತುಗಳನ್ನು ಈ ಮೊದಲು ಹಲವು ಸಾರಿ ಕೇಳಿದ್ದೇನೆ, ಕೊಟ್ಟಿದ್ದೇನೆ. ಹಣೆ[ಬರಹ] ತಾಯಿ ತಂದೆ ಮಡದಿ ಇವರೊಡನೆಯೂ ಸತ್ಯಾಗ್ರಹವನ್ನು ಹೂಡಿದ್ದೆ. ಆದರೆ ಅದೆಲ್ಲವೂ ನಿರ್ಮಲ ಪ್ರೇಮದಿಂದ. ಇಂದ[ು] ನಿಮ್ಮೊಡನೆಯೂ ಅದೇ ಪ್ರೇಮ ಸಮರವನ್ನು ಸಾರಿ[ದ್ದೇ]ನೆ. ಆದ್ದರಿಂದಲೇ ಈ ನೋವು ಕೊಡುವ ಕಹಿ ಮಾತುಗಳನ್ನಾ[ಡ]ಬೇಕಾಗಿದೆ. ಬೆಲ್ಲದಂಥ ಸಿಹಿ ಮಾತುಗಳನ್ನಾಡಿ ಮೋಸವ[ಂಚನೆ] ಮಾಡುವುದಕ್ಕಿಂತಲೂ ಬೇವಿನಂಥ ಕಹಿ ಮಾತುಗಳಿಂದಾದರೂ ಅಸ[ತ್ಯ]ವಿಲ್ಲ. ಎದ್ದೇಳುವುದು ಲೇಸಲ್ಲವೇ? ಸ್ವರಾಜ್ಯದ ಸೌಭಾಗ್ಯವು ಸಂಸ್ಥಾನದವರಿಗೂ ಇಂಗ್ಲಿಷರಿಗೂ ಇದ್ದೇ ಇದೆ. ಆದರೆ ಅವರು ಸ್ನೇಹಸೇತುಗಳಿಂದ ನನ್ನೊಡನಿರಬೇಕು. ನೀವು ವಿದೇಶಿ ವಸ್ತ್ರಗಳ ವ್ಯಾಪಾರವನ್ನೇ ಮುಂದೆಯೂ ಮಾಡುವೆವೆಂಬ ಕನಸನ್ನು ಬಿಟ್ಟುಕೊಳ್ಳಬೇಡಿರಿ. ಈಗಿದ್ದ ಸಂಚಯವನ್ನೆಲ್ಲ ಒಂದೇ ಸಲ ಸುಡಬೇಕು. ಇಲ್ಲವಾದರೆ ವಿದೇಶಿಗಳಿಗೆ ಮರಳಿ ಕಳುಹಬೇಕು. ಸ್ವರಾಜ್ಯ ಸಿದ್ಧಿಯಾದನಂತರ ಲೆಕ್ಕ ಪಕ್ಕ ನೋಡಿ ನಿರ್ಣಯಿಸಬಹುದು. ಈ ನನ್ನ ನುಡಿಗಳು ನಿಮಗೆ ಸೇ[ರ]ದಿದ್ದರೆ ಈ ಮಾನ ಪತ್ರವನ್ನು, ಥೈಲಿಯನ್ನು ಮುಟ್ಟು ಮ[ರ]ಳಿ ತೆಗೆದುಕೊಳ್ಳಿರಿ. ಅದನ್ನು ಸ್ವೀಕರಿಸಿದರೆ ನನ್ನ ನಾಶವೇ ಆದೀತು. ಇದರ ಸದುಪಯೋಗವು ಆಗದು. ನೀವೆಲ್ಲ ವಿದೇಶಿ ವಸ್ತ್ರ ವ್ಯವಹಾರವನ್ನು ನಿಲ್ಲಿಸಿದಂದೇ ಇದನ್ನು ಸ್ನೇಹದಿಂದ ಸ್ವೀಕರಿಸುವೆ. ಅಲ್ಲಿಯ ವರೆಗೆ ಇದೇ ಈ ಸ್ವಯಂ ಸೇವಕನ ಕೈಯಲ್ಲಿ ಇವುಗಳಿರಲಿ," ಎಂದು ಮುಂತಾಗಿ ವರ್ತಕರ ಮತಿಯ ನಿದಾಕ್ಷಿಣ್ಯದಿಂದಲೂ ಸತ್ಯದ ಆಗ್ರಹದಿಂದಲೂ ಹೇಳಿ ಮಾನ ಪತ್ರ ನಿಧಿಗಳನ್ನು ಸ್ವೀಕರಿಸಲಿಲ್ಲ.

ಮಹಾತ್ಮರಂಥ ಜಗದ್ವಂದ್ಯ ವಿಭೂತಿಗಳು ವಿದೇಶೀ ವಸ್ತು ವಸ್ತ್ರಗಳ ಸಂಪರ್ಕಕ್ಕೆ ಇಷ್ಟೊಂದು ಭಯಪಡುವರೆಂದ ಬಳಿಕ ನಮ್ಮಂಥವರೆಷ್ಟು ಎಚ್ಚರದಿಂದಿರಬೇಕೆಂದು ಮತ್ತೊಮ್ಮೆ ಹೇಳ ಬೇಕೆ?

ಕಾ. ಬ.

[illegible]ವಾದ ವನಿತಾಸೇವಾ ಸಮಾಜದ ತೃತೀಯ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷರಾದ ಶ್ರೀಮತಿ ಬಿ. ಸಾಕಮ್ಮನವರ ಭಾಷಣ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ನಮ್ಮ ಮಹಿಳೆಯರಿಗೆಲ್ಲಾ ವಿದ್ಯಾಭ್ಯಾಸವು ಬೇಕು. ನಾನು ಮೊದಲೇ ಹೇಳಿದಂತೆ ಅವಿದ್ಯಾವತಿಯರಾದ ತಾಯಂದಿರಿಂದ ವಿದ್ಯಾವಂತರಾದ ಮಕ್ಕಳು ಜನಿಸಲಾರರು. ಮಕ್ಕಳು ಮುಂದಿನ ಜನಾಂಗದ ಮೊಳಕೆಯಾದುದರಿಂದಲೂ, ತಾಯಂದಿರ ಮೇಲೆ ಬಾಲ್ಯದ ಪಾಠಗಳನ್ನು ಕಲಿಸುವ ಭಾರವಿರುವುದರಿಂದಲೂ, ತಾಯಂದಿರು ವಿದ್ಯಾವತಿಯರಾಗದಿದ್ದರೆ ಮುಂದೆ ಜನಾಂಗವೇ ಅವನತಿಗಿಳಿಯುವುದು. ಆದರೆ ನಮಗೆ ಬೇಕಾದ ವಿದ್ಯೆ ಯಾವುದೆಂಬುದನ್ನು ಕುರಿತು ಸ್ವಲ್ಪ ಯೋಚಿಸಬೇಕಾಗಿದೆ. ಯಾವ ವಿದ್ಯೆಯು ನಾನು ಹಿಂದೆ ಹೇಳಿದಂತೆ ಸೀತೆ, ಸಾವಿತ್ರಿಯರಂತಹ ಮಹಾರತ್ನಗಳನ್ನು ಸೃಷ್ಟಿಸಿತೋ ಆ ವಿದ್ಯೆಯೇ ನಮಗೆ ಬೇಕು. ವಿದ್ಯೆಯನ್ನು ಕಲಿಯುವ ಭರದಲ್ಲಿ ನಮ್ಮ ಆತ್ಮವನ್ನು ನಾವು ಹಾಳು ಮಾಡಿಕೊಳ್ಳಬಾರದು. ಪಾಶ್ಚಾತ್ಯ ನಾಗರಿಕತೆಗೂ ಭಾರತೀಯ ನಾಗರಿಕತೆಗೂ ಉಂಟಾಗುತ್ತಿರುವ ಈ ತಿಕ್ಕಾಟದಲ್ಲಿ ನಮ್ಮ ಸಂಸ್ಕೃತಿಯನ್ನು ನಾವು ಮರೆತು ಬಿಡುವ ಸಂಭವವುಂಟು. ನಮ್ಮ ಆರ್ಯರ ನಾಗರೀಕತೆಯನ್ನು ನಾವು ಮರೆಯುವುದು ಆತ್ಮಹತ್ಯೆಯನ್ನು ಮಾಡಿಕೊಂಡಂತೆ. ನಮ್ಮ ಗುರಿಯು ಪ್ರಾಚೀನ ಹಿಂದೂದೇಶದ ವೈಭವವನ್ನು ಹಿಂದಕ್ಕೆ ತರುವುದರ ಕಡೆಗೇ ಇರಬೇಕು. ಸಂಸ್ಕೃತಿ ಎಂದರೆ ಉಡಿಗೆ ತೊಡಿಗೆ, ವೇಷ, ಭೂಷಣ, ಮಾತು, ನಡವಳಿ, ಆಚಾರ ಇವುಗಳಿಂದಾದದ್ದು. ಪರಸಂಸ್ಕೃತಿಯು ಮೊದಲು ಈ ಬಾಹ್ಯರೂಪಗಳ ಮೂಲಕ ನಮ್ಮನ್ನು ಸೇರಿ, ಕೂಡಲೆ ನಮ್ಮ ಆತ್ಮವನ್ನು ತಿರುಳನ್ನೇ ತಿಂದು ಬಿಡುತ್ತದೆ. ಪಾಶ್ಚಾತ್ಯವಿದ್ಯೆ, ನಾಗರೀಕತೆಯ ಮರ್ಕಟಾನುಕರಣೆಯಲ್ಲಿ ನಾವು ನಮ್ಮ ತಾಯಿಯ ಜ್ಞಾನವನ್ನು ಕಳೆದುಕೊಳ್ಳಬಾರದು. ಪರ ಸಂಸ್ಕೃತಿಯ ಆಕ್ರಮಣವು ನಮ್ಮ ಸಹೋದರರ ಮೇಲೆ ಆಗಾಗಲೇ ಆಗಿದೆ. ಅವರ ಉಡುಪನ್ನು ನೋಡಿ, ಮಾತನ್ನು ಕೇಳಿ, ಆಚಾರ ವ್ಯವಹಾರವನ್ನು ನೋಡಿ, ಅವರ ಆಲೋಚನಾತರಂಗವನ್ನು ನೋಡಿ ನೇರವಾಗಿ ನಾಲ್ಕು ಮಾತುಗಳನ್ನು ಕನ್ನಡದಲ್ಲಿ ತಪ್ಪಿಲ್ಲದೆ ಆಡುವುದಕ್ಕೆ ಬರುವುದಿಲ್ಲ. ಹಿಂದೂದೇಶವು 'ಹಿಂದೂ' ದೇಶವಾಗಿರುವುದು ಹಿಂದೂ ಮಹಿಳೆಯರಿಂದ. ಈಗ ನಮ್ಮ ಮೇಲೆ ಇರುವ ಜವಾಬ್ದಾರಿಯು ಸಾಮಾನ್ಯವಾದುದಲ್ಲ. ಹಿಂದೂದೇಶದ ಆತ್ಮವನ್ನು ಕಾಪಾಡುವುದು ನಮ್ಮ ಕೈಯಲ್ಲಿದೆ. ಅದುದರಿಂದ ಎಚ್ಚರಿಕೆ!

ನಾನು ಹೀಗೆ ಹೇಳಿದುದರಿಂದ ಪಾಶ್ಚಾತ್ಯ ವಿದ್ಯೆಯೇ ಬೇಡವೆಂದು ನನ್ನ ಅಭಿಪ್ರಾಯವೆಂದು ಯಾರೂ ತಿಳಿಯಬಾರದು. ನಮ್ಮ ಮಹಿಳೆಯರಿಗೆ ನಮ್ಮ ದೇಶದ ಇತಿಹಾಸವೂ, ನಮ್ಮ ವೀರರ ಚರಿತ್ರೆಯೂ ತಿಳಿದಿರಬೇಕು. ಈಗಿನ ಪ್ರಪಂಚದ ವಿದ್ಯಮಾನಗಳನ್ನು ತಿಳಿದುಕೊಳ್ಳುವ ಅನುಕೂಲವಿರಬೇಕು. ಅದಕ್ಕೆ ಅನುಕೂಲವಾದ ಸಮರ್ಪಕರೀತಿಯಾಗಿ ಬೇಕಾದರೆ ಮಹಿಳೆಯರಿಗೆ ದೇಶಭಾಷೆಯಲ್ಲಿ ಪುಸ್ತಕಗಳನ್ನು ಓದುವ ಜ್ಞಾನವಿರಬೇಕು. ಸ್ತ್ರೀಯರಿಗೆ ಸ್ವಲ್ಪ ಮಟ್ಟಿಗಾದರೂ ಗಾಯನ ಕಲೆಯು ತಿಳಿದಿರಬೇಕು. ಇದರಿಂದ ಸಂಗೀತದಲ್ಲಿ ಅಭಿರುಚಿಯುಳ್ಳ ಪತಿಯ ಮನಸ್ಸನ್ನು ತೃಪ್ತಿಪಡಿಸಬಹುದಲ್ಲದೆ, ಗಾನದ ಹುಚ್ಚಿನಿಂದ ಅವನಿಗೆ ದೊರಕಬಹುದಾದ ದುಸ್ಸಹವಾಸಗಳನ್ನು ತಪ್ಪಿಸಬಹುದು. ಕೊನೆಯದಾಗಿ ಅಂಗ ಸಾಧನವನ್ನು ಸ್ತ್ರೀಯರೆಲ್ಲರೂ ಚೆನ್ನಾಗಿ ಕಲಿಯಬೇಕು. ನಮ್ಮಲ್ಲಿ ಇದನ್ನು ಒಂದು ಕಲೆಯೆಂದು ಪರಿಗಣಿಸಲ್ಪಟ್ಟಿದೆ. ಇದು ಹಿಂದೂ ಸ್ತ್ರೀಯರ ಜನ್ಮಸಿದ್ಧವಾದ ಹಕ್ಕು. ನಮ್ಮ ಮನಸ್ಸು ಒಲಿವು ಇರುವುದು ಇಲ್ಲಿಯೇ. ಇದರ ಮೂಲಕ ನಾವು ಸಾಧಿಸಬಹುದಾದಷ್ಟು ಸಂಘ ಸಂಸ್ಥೆಗಳನ್ನು ಮತ್ತಾವುದರಿಂದಲೂ ಸಾಧಿಸಲು ಸಾಧ್ಯವಿಲ್ಲ. ನಮ್ಮ ದೇಹವು ನಾವು ತಿನ್ನುವ ಆಹಾರಕ್ಕೆ ಅನುಗುಣವಾಗಿ ಬೆಳೆಯುತ್ತದೆ. ಈ ಅನ್ನವನ್ನು ರುಚಿಯಾಗಿಯೂ, ಶುಚಿಯಾಗಿಯೂ ಮಾಡುವುದು ಮಹಿಳೆಯರಿಗೆಲ್ಲ ತಿಳಿದಿರಬೇಕು. ಇದು ಅವರ ಮುಖ್ಯ ಧರ್ಮವಾಗಿರಬೇಕು. ಗೌರವ ಮತ್ತು ನಾಗರಿಕತೆಯ ದೃಷ್ಟಿಯಿಂದ ತತ್ವ ಭಾವದಿಂದಲೂ, ಈ ಜವಾಬ್ದಾರಿಯನ್ನು ನಾವು ಉಪೇಕ್ಷಿಸಬಾರದು. ನಾವು ಸೋಮಾರಿಗಳಾಗಿ ಬಿಟ್ಟು ಕೊಟ್ಟರೆ, ಸಂಸಾರವೆಂಬ ರಥವನ್ನು ನಡೆಸಲು ಇಷ್ಟವಿಲ್ಲದೆ ದಾರಿ ತಪ್ಪಿದ ಕ್ಯಾಪ್ಟನ್‌ನಂತಾಗುತ್ತೇವೆ. ಆಗ ಮುಂದಿನ ಜನಾಂಗವಾದ ನಮ್ಮ ಮಕ್ಕಳ ಗತಿಯೇನು? ಅವರನ್ನು ಉದಾಸೀನ ಮಾಡಿದ ತಪ್ಪಿಗೆ ನಾವು ದೇವರ ಮುಂದೆ ಯಾವ ಕಾರಣವನ್ನು ಹೇಳಬಲ್ಲೆವು?

ಇನ್ನೊಂದು ವಿಚಾರ—ಈಗೀಗ ನಾಸ್ತಿಕವಾದಿಗಳ ಸಂಖ್ಯೆಯು ಹೆಚ್ಚುತ್ತಿದ್ದರೂ, ಸೃಷ್ಟಿಕರ್ತನೊಬ್ಬನಿರುವನೆಂಬ ಆಸ್ತಿಕವಾದ ಶ್ರೇಯವನ್ನು ನಾವು ಮರೆಯಬಾರದು. ದೇವರ ಮತ್ತು ಆತ್ಮದ ಒಲವಿಲ್ಲದೆ ಯಾವ ಮಹತ್ಕಾರ್ಯವನ್ನೂ ಸಾಧಿಸಲು ಸಾಧ್ಯವಿಲ್ಲ. ಅಂತಹ ದೈವಭಕ್ತಿಯು ನಮ್ಮಲ್ಲಿ ಬೆಳಗಿದ್ದು, ನಮ್ಮ ಮಕ್ಕಳಿಗೂ ಅದನ್ನು ನಾವು ಕಲಿಸಬೇಕು. ಮತತತ್ವ ಒಂದಿದೆಯೆಂಬುದನ್ನು ನಾವು ಮರೆತರೆ ನಮ್ಮಲ್ಲಿ ಅಧರ್ಮವು ಪ್ರವೇಶ ಮಾಡುವುದು. ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಹೇಳಿರುವ

ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ ಎಂಬ ವಾಕ್ಯವು ನೆನಪಿನಲ್ಲಿರಲಿ. ಭಾರತೀಯರ ಧರ್ಮವನ್ನು ಪಾಲಿಸುವ ಅಚ್ಚಳಿಯದಂತೆ ಇರಿಸುವ ಜವಾಬ್ದಾರಿಯು ನಮ್ಮ ಮೇಲೆ ಇದೆ. ಒಬ್ಬ ಆಂಗ್ಲೇಯ ಗ್ರಂಥಕರ್ತನು 'ಹಿಂದೂದೇಶದಲ್ಲಿ ಮಹಾನುಭಾವೆಯರಾದ ಸ್ತ್ರೀಯರು ಇಲ್ಲದೆ ಹೋಗಿದ್ದರೆ, ಹಿಂದೂದೇಶವು ಎಷ್ಟೋ ವರ್ಷಗಳ ಹಿಂದೆ, ಕಾಲನ ಕ್ರೂರವಾದ ದವಡೆಗೆ ಸಿಲುಕಿ ನಾಶವಾಗಿ ಬಿಡುತ್ತಿತ್ತು' ಎಂಬುದಾಗಿ ಹೇಳಿದ್ದಾರೆ. ಮುಂದಿನ ಇತಿಹಾಸಕಾರರು ನಮ್ಮ ವಿಷಯದಲ್ಲಿಯೂ ಇದೇ ವಾಕ್ಯವನ್ನು ಹೇಳುವಂತೆ ಹಿಂದೂ ಸಂಸ್ಕೃತಿಯನ್ನು ಉಳಿಸುವುದು ನಮ್ಮ ಮೊದಲನೆಯ ಕರ್ತವ್ಯ.

ಸ್ತ್ರೀಯರ ಪ್ರಪಂಚವೂ, ಆಧಿಪತ್ಯವೂ ಸಂಸಾರವೇ ಎಂಬುದನ್ನು ಒಪ್ಪಬೇಕು. ನಮ್ಮಲ್ಲಿ ಪ್ರತಿಯೊಬ್ಬ ಮಹಿಳೆಯೂ ಸೀತೆಯಂತಹ ಪತ್ನಿಯಾದರೆ ನಮಗೆ ಮತ್ತೇನು ಬೇಕು? ರಾಷ್ಟ್ರ ಪುರುಷನಾದ ಶಿವಾಜಿಯನ್ನು ಸೃಷ್ಟಿಸಿದ ಜೀಜಾಬಾಯಿಯಂ ಪ್ರತಿಯೊಬ್ಬ ಮಹಿಳೆಯೂ ಆಗಿ, ಅವರ ಉದರದಿಂದ ಒಬ್ಬ ವಿವೇಕಾನಂದನೋ, ಒಬ್ಬ ತಿಲಕನೋ, ಒಬ್ಬ ಗಾಂಧಿಯೋ, ಒಬ್ಬ ಕವಿ ಚಕ್ರವರ್ತಿ ಪಂಪನೋ ಜನಿಸಿದರೆ, ಅದಕ್ಕಿಂತ ಹೆಚ್ಚಾದ ದೇಶಸೇವೆಯು ಮಹಿಳೆಯರಿಗೆ ಮತ್ತೇನು ಬೇಕು. ಪಾಶ್ಚಾತ್ಯರಲ್ಲಿಯೂ ಕೂಡ ಇದೇ ಅಭಿಪ್ರಾಯವುಳ್ಳವರು ಅನೇಕರಿದ್ದಾರೆ.

ಆದರೂ ಸ್ತ್ರೀಯರು ಸಮಾಜ ಸೇವೆಯ ನೆಪದಿಂದ ಸಂಸಾರದ ಕಡೆ ಅಲಕ್ಷ್ಯ ಮಾಡುವುದು ಒಳ್ಳೇದಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಇದು ವಿಪರೀತಕ್ಕೆ ಬಂದು ಹೋಗಿದೆ. ಸ್ತ್ರೀಯು ಎಲ್ಲಾ ವಿಧದಲ್ಲಿಯೂ ಗಂಡಸಿನೊಂದಿಗೆ ಸಮಸಾಗಿ ಹೋರಾಡಲು ಹೊರಟಿದ್ದಾಳೆ. ಇದರ ಪರಿಣಾಮವು ಬಹು ವಿಚಿತ್ರವಾಗಿದೆ. ಪತಿ ಪತ್ನಿಯರಿಗೆ ಇದು ಸಂಸಾರ ಇದು ನಮ್ಮ ಮನೆ ಎಂಬ ಜವಾಬ್ದಾರಿಯೇ ಇಲ್ಲ. ಅವರ ಸ್ವಾರ್ಥತೆಯು ಹೆಚ್ಚಿ, ಸಂತಾನನಿರೋಧವನ್ನು ಅನುಸರಿಸಿ, ಸಂಸಾರವನ್ನು ಅನ್ಯಾಯವೆಂದು ತಿಳಿದು, ಪತಿ ಪತ್ನಿಯರು ಕೇವಲ ಪರಿಚಿತರಂತೆಯೂ, ನೆರೆಹೊರೆಯವರಂತೆಯೂ ಬಾಳುತ್ತಾರೆ. ಆ ಸ್ಥಿತಿ ನಮಗೆ ಬೇಡ. ನಾವೆಲ್ಲ ಸನಾತನದ ಹೆಸರನ್ನು ಹೇಳಿಕೊಂಡು ನಿತ್ಯ ಮೀಟಿಂಗ್, ಆಫೀಸ್, ಗೌರವಾಧಿಕಾರ ಇವುಗಳಿಗೆ ಹೊರಟರೆ ನಮ್ಮ ಸಂಸಾರವು ಹಾಳಾಗಿ ಹೋಗುತ್ತದೆ. ಗಂಡನು ಮನೆಯಲ್ಲಿ ಕುಳಿತು ಹೆಂಗಸು ಹೊರಗೆ ತಿರುಗಿದರೂ ಸಹ ಆಗುವುದಿಲ್ಲ. ಸಮಾಜದ ಕ್ಷೇಮವನ್ನೇ ಹೆಚ್ಚಿಂದು ಭಾವಿಸಿ, ಸಂಸಾರದ ಕ್ಷೇಮವನ್ನು ಅಲ್ಲಗಳೆಯುವುದು ಉಚಿತವಲ್ಲ. ಪ್ರತಿಯೊಬ್ಬ ವ್ಯಕ್ತಿಗೂ, ಪ್ರತಿಯೊಬ್ಬ ಜೀವಿಗೂ ತನ್ನ ಆತ್ಮದ ಉನ್ನತಿಗೆ ಎಷ್ಟು ಸ್ವಾತಂತ್ರ್ಯಬೇಕೋ, ಅಷ್ಟೇ ಸ್ವಾತಂತ್ರ್ಯವು ಸ್ತ್ರೀಯರಿಗಾದರೂ ಅವಶ್ಯಕವಾಗಿ ಬೇಕು. ಈ ಸ್ವಾತಂತ್ರ್ಯವು ಸ್ವಚ್ಛಂದವಾಗಿ ಹೊರಗೆ ತಿರುಗುವುದರಲ್ಲಿ ಇಲ್ಲ. ಅಸ್ವತಂತ್ರತೆಯು ಗುಲಾಮಗಿರಿಯಾದರೆ, ಈ ಸ್ವತಂತ್ರತೆಯು ಉಚ್ಛೃಂಖಲ ಪ್ರವರ್ತನೆ, ಮನಬಂದಂತೆ ಕುಣಿಯುವುದು. ಆತ್ಮವು ಎದುರಿಗೆ ನೊಣೆಯು ಬೇಲಿ ಹಾಕಲ್ಪಟ್ಟವಂತೆ ಕೂತರೆ, ಸ್ವತಂತ್ರ ಸ್ತ್ರೀಯು ಗಾಳಿಯಲ್ಲಿ ಸ್ವೇಚ್ಛೆಯಾಗಿ ಹಾರಾಡುವ ಹುಲ್ಲು ಕಡ್ಡಿ. ಒಬ್ಬಳಿಗೆ ಮನೆಯು ಹೊರಗೆ ಎನಿಸಿ ಎಂಬುದೇ ಗೊತ್ತಿಲ್ಲ. ಮತ್ತೊಬ್ಬಳಿಗೆ ಮನೆ ಎಂದರೇನೆಂಬುದೇ ಗೊತ್ತಿಲ್ಲ. ನಮಗೆ ಈ ಎರಡು ಸ್ಥಿತಿಗಳೂ ಬೇಡ. ವಿವೇಕದಿಂದ ಕೂಡಿದ ಮಧ್ಯದ ದಾರಿಯೇ ಸಾಕು. ಹೆಂಡತಿಯು ಯಜಮಾನಿಯಾಗಿ ಪಾಶ್ಚಾತ್ಯರಲ್ಲಿರುವಂತೆ ಗಂಡನನ್ನು ಗುಲಾಮನನ್ನಾಗಿ ಮಾಡುವುದರಿಂದ ಪ್ರಯೋಜನವಿಲ್ಲ. ಹಾಗೆ ಹಿಂದಿನ ಸಂಸಾರದಲ್ಲಿ ಗಂಡನಿಗೆ ಹೆಚ್ಚು ಪ್ರಾಧಾನ್ಯ ಅದು ಫಲವಿಲ್ಲ. ಸಂಸಾರವು ಸರಿಯಾಗಿ ನಡೆಯಬೇಕಾದರೆ ಪತಿ ಪತ್ನಿಯರು ಪರಸ್ಪರಾವಲಂಬಿಗಳಾಗಬೇಕು.

ಆದುದರಿಂದ ಸಂಸಾರವು ಸ್ತ್ರೀಯರ ಮುಖ್ಯ ಲಕ್ಷ್ಯದಲ್ಲಿರಬೇಕು. ಅದೇ ಅವರ ಗೃಹಸಾಮ್ರಾಜ್ಯ. 'ಗೃಹಿಣೀ ಗೃಹಮುಚ್ಯತೇ' ಒಬ್ಬ ಸಂಸಾರಸ್ಥಳಿಲ್ಲದ ಯಾವ ಸೇವೆಯೂ, ಯಾವ ಸಮಾಜವೂ ಹೆಂಗಸೊಬ್ಬಳಿಗೇ ಇರಲಾರದು. ಸ್ತ್ರೀಯು ಸಂಸಾರದ ಮೂಲಕ ಸಮಾಜದ ಪರಿಚಯವನ್ನು ಹೊಂದಬೇಕು. ಆಗ ಅದು ಸ್ವಾತಂತ್ರ್ಯವಾಗುವುದು. ಇಲ್ಲವಾದರೆ ಸ್ವಚ್ಛಂದ ಪ್ರವೃತ್ತಿಯಾಗುವುದು. ನಿಯತ ಪ್ರವೃತ್ತಿ ನಾಮಬೇಕ ಕರ್ತವ್ಯ, ಸಂವಿಧಾನಶಕ್ತಿ ಇವುಗಳೆಲ್ಲಾ ಸಂಸಾರವೆಂಬ ಪಾಠಶಾಲೆಯಲ್ಲಿ ತಿಳಿಯುವಂತೆ ಮತ್ತೆಲ್ಲೂ ತಿಳಿಯುವುದಿಲ್ಲ.

ನಾನು ಹೀಗೆ ಹೇಳಿರುವುದರಿಂದ ತಾನು ತನ್ನದು ಎಂಬ ಸ್ವಾರ್ಥತೆಯ ಸಂಸಾರ ಕೂಪದಲ್ಲಿಯೇ ಬಿದ್ದಿರಬೇಕೆಂದು ಅರ್ಥವಲ್ಲ. ಸಂಸಾರ ಬೆಳೆದರೆ ಸಮಾಜ ಬೆಳೆಯುತ್ತೆ. ಸಂಸಾರ ಸೇವೆಯಾದರೆ ಸಮಾಜದ ಸೇವೆಯಾಗುತ್ತದೆ. ಸಂಸಾರವನ್ನು ಬಿಟ್ಟು ಸಮಾಜವನ್ನು ಉದ್ಧರಿಸಲು ಹೋಗುವವಳು ತನ್ನ ಎಲೆಯಲ್ಲಿ ಬಿದ್ದಿರುವ ಹೆಗ್ಗಣವನ್ನು ಬಿಟ್ಟು ಮತ್ತೊಬ್ಬಳ ಎಲೆಯಲ್ಲಿ ಬಿದ್ದಿರುವ ನೊಣವನ್ನು ಓಡಿಸಲು ಪ್ರಯತ್ನ ಪಟ್ಟವಳಂತೆ ಆಗುತ್ತಾಳೆ.

ಈಗ ವೇಳೆಯಲ್ಲಿ ನಮ್ಮ ಸಹೋದರರಿಗೆ ಒಂದು ಮಾತನ್ನು ಹೇಳಬೇಕಾಗಿದೆ. ನಮಗೆ ಕೊಡಬೇಕಾದಷ್ಟು, ನಮ್ಮ ಆತ್ಮದ ಉನ್ನತಿಗೆ ಅವಶ್ಯಕವಾದಷ್ಟು ಸ್ವಾತಂತ್ರ್ಯವನ್ನು ಅವರು ನಮಗೆ ಕೊಟ್ಟಿಲ್ಲ. ಬಾಲ್ಯ ವಿವಾಹವು ಇನ್ನೂ ಪ್ರಚಾರದಲ್ಲಿದೆ. ವಿಧವೆಯರ ಕಣ್ಣೀರ ಕಾಲುವೆಯು ಭಾರತಖಂಡದಲ್ಲಿ ಹರಿಯುತ್ತಿದೆ. ಸರ್ಕಾರದವರೂ ಸ್ತ್ರೀ ವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚು ಹಣವನ್ನು ವೆಚ್ಚ ಮಾಡಬೇಕು. ಸಂಸಾರದಲ್ಲಿ ಸ್ತ್ರೀಯು ಗಂಡನ ಭೋಗೋಪಯೋಗ್ಯವಾದ ವಸ್ತು ಮಾತ್ರವೆಂಬ ಭಾವನೆಯು ದೂರವಾಗಿ, ಅವಳಿಗೂ ಒಂದು ಆತ್ಮವಿರುವುದೆಂದೂ ಆ ಆತ್ಮದ ಏಳಿಗೆಗೆ ಸ್ತ್ರೀ ಪುರುಷರು ಒಟ್ಟಾಗಿ ಸೌಹಾರ್ದದಿಂದ ಕೆಲಸ ಮಾಡುವುದು ಅವಶ್ಯಕವೆಂದೂ ತಿಳಿಯಬೇಕು. ಸರ್ಕಾರದವರು ಕಾನೂನಿನಲ್ಲಿ (Law) ಸ್ತ್ರೀಯರಿಗೆ ಇರುವ ಅಸ್ವತಂತ್ರತೆಯನ್ನು ತೆಗೆದು ಹಾಕಿ ಪುರುಷರಿಗೆ ಸಮಾನವಾಗಿ ಆಸ್ತಿ, ಸೊತ್ತುಗಳ ಹಕ್ಕುಗಳನ್ನು ನಮಗೂ ಕೊಡಬೇಕು.

ಶಕ್ತಿ ಇರುವವರು, ಅವಕಾಶವಿರುವವರು ಸಾರ್ವಜನಿಕ ಕಾರ್ಯಗಳಲ್ಲಿ ಭಾಗಿಗಳಾಗಲೇ ಬೇಕು. ಸ್ತ್ರೀಯರ ಈಗಿನ ಶೋಚನೀಯ ಸ್ಥಿತಿಯನ್ನು ಹೋಗಲಾಡಿಸಲು ಸ್ತ್ರೀಯರ್ಮಿಚ್ಛೆತ್ತು ಇಂಥಾ ಕೂಟಗಳನ್ನೂ, ಸಂಸ್ಥೆಗಳನ್ನೂ ಏರ್ಪಡಿಸಿಕೊಳ್ಳದಿದ್ದರೆ ಹೇಗೆ ಸಾಧ್ಯ. ಅವಶ್ಯ ಬಿದ್ದಾಗ ನಮ್ಮ ಸಹೋದರರ ಸಾರ್ವಜನಿಕ ಕಾರ್ಯಗಳಲ್ಲಿ ಭಾಗಿಗಳಾಗಲು ಅರ್ಹರಾಗಿಯೂ, ಶೂರರಾಗಿಯೂ ಇರಬೇಕು. ನೃಗಗಳಿಗಿಂತ ಕಡೆಯಾಗಿ ನೋಡುವ ಗಂಡಸರ ಬಲೆಯಿಂದ ತಪ್ಪಿಸಿಕೊಳ್ಳುವ ಶಕ್ತಿ ಇರಬೇಕು. ತಪ್ಪಿಸಿಕೊಂಡರೆ ಮರ್ಯಾದೆಯಿಂದ ಜೀವನ ನಡಿಸಿಕೊಳ್ಳುವ ಶಕ್ತಿಯನ್ನೂ ಸಂಪಾದಿಸಿಕೊಂಡಿರಬೇಕು. ದಾರಿದ್ರ್ಯದಿಂದ ಪತಿಗಳನ್ನು ಕಳೆದುಕೊಂಡರೆ ನಮಗೆ ಅನಾಥರೆಂಬ ಭಾವನೆಯನ್ನು ಸಮಾಜದಿಂದ ಕಿತ್ತು ಹಾಕುವ ಪ್ರಯತ್ನ ಮಾಡಬೇಕು. ಇದು ಸಾಧ್ಯವಾಗಬೇಕಾದರೆ ಅನ್ಯ ಸಹಕಾರಿ ರಾಜರ ಸಹಕಾರ ಬೇಕು. ಇದಕ್ಕಾಗಿ ನಾವು ಸಾರ್ವಜನಿಕ ರೂಪದಿಂದ ಕೆಲಸ ಮಾಡಬೇಕು.

ಸಹೋದರಿಯರೇ, ಹಿಂದೂದೇಶದ ಮಹಿಳೆಯರು, ಕನ್ನಡ ಮಹಿಳೆಯರು, ಇಂದಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪುರುಷರಷ್ಟೇ ಭಾಗವನ್ನು ವಹಿಸಿ ಮಹಿಳೆಯರಿಗೆ ಗೌರವವನ್ನು ತರುವಂತಾಗಿದೆ. ಈಗಿನ ಹೋರಾಟದಲ್ಲಿ ಮಹಿಳೆಯರು ಅತ್ಯಂತ ಸ್ತುತ್ಯವಾದ ಭಾಗವನ್ನು ವಹಿಸಿ ಹಾತ್ಮಗಾಂಧಿಯವರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ನಮ್ಮಲ್ಲಿ ಅಡಕವಾಗಿರುವ ಅದ್ಭುತ ಶಕ್ತಿ ಎಷ್ಟೆಂಬುದನ್ನು ತೋರಿಸುತ್ತಿದೆ.

ತಮಗೆಲ್ಲ ತಿಳಿದಿರುವಂತೆ ಕನ್ನಡ ನಾಡು ಬಹಳ ಹಿಂದಾಗಿ ಹೋಗಿದೆ. ಆದರೆ ಈಗೀಗ ಎಚ್ಚರದ ಚಿಹ್ನೆಗಳು ತೋರುತ್ತಿವೆ. ಒಂದು ವರ್ಷದಿಂದ ಈ ಮತ್ತೊಂದು ಸಾಹಿತ್ಯ ಪರಿಷತ್ತು ಹೋಗಿ ಅಭಿಪ್ರಾಯಗಳನ್ನು ಬದಲಾಯಿಸುತ್ತಿರುವುದು ಹೆಚ್ಚುತ್ತಿದೆ. ಕೊಡಗಿನವಳಾದ ನನಗೆ ಈ ಗೌರವವನ್ನು ಕೊಟ್ಟು ತಾವು ಕೊಡಗಿನ ಕನ್ನಡಿಗರನ್ನೆಲ್ಲ ಗೌರವಿಸಿದ್ದೀರಿ.

ಕಾರ್ಯ ಸಾಧನೆಯಲ್ಲಿ ಸ್ತ್ರೀಯರಿಗಿರುವ ಸಾಮರ್ಥ್ಯಕ್ಕೆ ನಾವು ಇಂದು ಉತ್ಸವವನ್ನು ನಡೆಸುತ್ತಿರುವಂಥ ಸಂಸ್ಥೆಗಳೇ ನಿದರ್ಶನ. ಹೆಂಗಸರ ಶ್ರೇಯೋಭಿವೃದ್ಧಿಗಾಗಿ ಈ ಬಗೆಯ ಎಷ್ಟು ಸಂಸ್ಥೆಗಳು ಏರ್ಪಟ್ಟರೂ ಅವು ನಮಗೆ ಬೇಕು. ನಮ್ಮ ದೇಶದ ಬಹು ಜನರು ಅಜ್ಞಾನದಲ್ಲಿಯೂ, ಬಡತನದಲ್ಲಿಯೂ ಮುಳುಗಿ ಹೋಗಿದ್ದಾರೆ. ಸಂಘ ಶಕ್ತಿಯಿಂದಲೇ ಅವರ ದುಸ್ಥಿತಿಯು ನಿವಾರಣೆಯಾಗಬೇಕು. ಇಂಥ ಸಂಸ್ಥೆಗಳು ಬಹಳವಾಗಿ ಹೆಚ್ಚಬೇಕು. ವಿದ್ಯೆಯಿಂದ ಅಜ್ಞಾನವನ್ನೂ, ಕಸುಬುಗಳಿಂದ ಬಡತನವನ್ನೂ ನಿವಾರಣೆ ಮಾಡಬೇಕು. ಇದೇನು, ಒಂದೆರಡು ದಿನಗಳಲ್ಲಿ ಒಂದೆರಡು ಸಂಸ್ಥೆಗಳಿಂದ ನಡೆಯುವ ಕೆಲಸವಲ್ಲ. ಆದಕಾರಣ ಇಂಥ ಅನೇಕ ಸಂಸ್ಥೆಗಳು ಹುಟ್ಟಿ, ನಿರಂತರವೂ ನಿರ್ಬಂಧನೆಯಿಂದ ಕೆಲಸ ನಡೆಯುವಂತೆ ಮಾಡುವುದು ಮಹಾ ಜನರ ಕರ್ತವ್ಯ. ಈ ಕರ್ತವ್ಯವು ಎಷ್ಟು ಬೇಗನೆ ನಡೆದರೆ ನಮ್ಮ ದೇಶವೂ ಅಷ್ಟು ಬೇಗ ಅಭ್ಯುದಯ ಹೊಂದುತ್ತದೆ. ನಾವೆಲ್ಲರೂ ಒಬ್ಬ ತಾಯಿಯ ಮಕ್ಕಳೇ ಎಂಬ ಭಾವನೆಯಿಂದ ಕೂಡಿ ಕೆಲಸ ಮಾಡಿದರೆ ಯಾವುದು ತಾನೇ ಸಾಧ್ಯವಿಲ್ಲ? ಪಾಶ್ಚಾತ್ಯ ದೇಶಗಳು ಸ್ವಪ್ರಯತ್ನದಿಂದ ನಮ್ಮ ಕಣ್ಣೆದುರಿನಲ್ಲಿಯೇ ದಿನದಿನಕ್ಕೂ ಮುಂದುವರಿಯುತ್ತಿವೆ. ಒಕ್ಕಟ್ಟಿನಿಂದ ಎಲ್ಲರೂ ಒಟ್ಟುಗೂಡಿ ಕೆಲಸ ಮಾಡಿ, ಮತ್ತೆ ನಮ್ಮ ದೇಶವನ್ನು ಉತ್ತಮ ಸ್ಥಿತಿಗೆ ತರುವುದು ನಮ್ಮ ಧರ್ಮ.

ಈ ವನಿತಾ ಸೇವಾ ಸಮಾಜವು ಕಳೆದ ಮೂರು ವರ್ಷಗಳಿಂದ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿರುವುದು ಅಂಕಿಅಂಶಗಳ ವರದಿಯಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ಆಗಿಂದಾಗ್ಯೆ ಇಲ್ಲಿಗೆ ಬಂದು ಪರೀಕ್ಷಿಸಿದವರೆಲ್ಲರೂ ಇಲ್ಲಿ ನಡೆಯುತ್ತಿರುವ ಕೆಲಸವನ್ನು ನೋಡಿ ಸಂತೋಷದಿಂದ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸಂಸ್ಥೆಯ ಆಡಳಿತವನ್ನು ಇಷ್ಟು ದಕ್ಷತೆಯಿಂದ ನಿರ್ವಹಿಸುತ್ತಿರುವುದಕ್ಕಾಗಿ ನಮ್ಮೆಲ್ಲರ ಅಭಿನಂದನೆಗಳನ್ನು ಶ್ರೀ. ಭಾಗೀರಥಿಬಾಯಿಯವರಿಗೆ ಸಮರ್ಪಿಸುತ್ತೇನೆ. ಇಲ್ಲಿ ಹುಡುಗಿಯರಿಗೂ, ವಯಸ್ಕರಾದ ಹೆಂಗಸರಿಗೂ ಓದುಬರಹಗಳನ್ನೂ, ಕಾಂತಿಲ ವಿದ್ಯೆಗಳನ್ನೂ ಕಲಿಯಲು ಅವಕಾಶವಿದೆ. ಇದು ಮತ್ತೂ ವಿಶೇಷ. ಇಲ್ಲಿ ಶಿಕ್ಷಣ ಹೊಂದಿದವರು ತಾವು ಕಲಿತ ವಿದ್ಯೆಯನ್ನು ಮತ್ತಷ್ಟು ವೃದ್ಧಿ ಮಾಡಿಕೊಂಡು ಜ್ಞಾನಾರ್ಜನೆ ಮಾಡಿ, ತಾವು ಕಲಿತ ಕಸಬುಗಳನ್ನು ವಿರಾಮ ಕಾಲಗಳಲ್ಲಿ ರೂಢಿ ಸುವುದಕ್ಕೆ ಪ್ರವೃತ್ತಿ ಮಾಡಿದರೆ, ಅವರ ಜೀವನವು ಸಾರ್ಥಕವಾಗಿ, ಸಮಾಜವು ಮುಂದುವರಿಯುವುದರಲ್ಲಿ ಸಂಶಯವಿಲ್ಲ.

ನಮ್ಮ ದೇಶದ ಈಗಿನ ಸ್ಥಿತಿಯಲ್ಲಿ ಯಾವ ಸಂಸ್ಥೆಯೇ ಆಗಲೀ ಹೀಗೆ ಕೆಲಸ ಮಾಡುತ್ತಾ ಬರುವುದು ಸಾಮಾನ್ಯವಾದುದಲ್ಲ. ವನಿತಾ ಸೇವಾ ಸಮಾಜದ ಕಾರ್ಯ ಕಲಾಪಗಳನ್ನು ಇಷ್ಟು ಚೆನ್ನಾಗಿ ನೆರವೇರಿಸುತ್ತಿರುವುದಕ್ಕಾಗಿ ಈ ಪ್ರಾಂತ್ಯದ ಮಹಿಳೆಯರಿಗೂ, ಇದಕ್ಕೆ ಆಶ್ರಯವನ್ನು ಕೊಟ್ಟು ಸಹಾಯ ಮಾಡುತ್ತಿರುವ ಮಹಾಜನರಿಗೂ ವಂದನೆಗಳು ಸಲ್ಲಬೇಕಾಗಿವೆ. ಈ ದಿನದ ಉತ್ಸವದಲ್ಲಿ ಭಾಗಿಯಾದುದು ನನಗೆ ವಿಶೇಷ ಸಂತೋಷಕರವಾಗಿದೆ. ಈ ಸಂಘವು ದಿನೇ ದಿನೇ ಅಭಿವೃದ್ಧಿ ಹೊಂದಿ ಇನ್ನೂ ಹೆಚ್ಚು ಹೆಚ್ಚಾಗಿ ನಮ್ಮ ಸಹೋದರಿಯರ ಸೇವೆ ಮಾಡುವಂತೆ ಭಗವಂತನು ಅನುಗ್ರಹಿಸಲೆಂದು ಮನಃಪೂರ್ವಕವಾಗಿ ಪ್ರಾರ್ಥಿಸುವೆನು.

ತಮ್ಮನ್ನೆಲ್ಲಾ ಮತ್ತೊಮ್ಮೆ ವಂದಿಸಿ ಕುಲಪತಿಗಳಾದ ಕಣ್ವರು ಶಕುಂತಲೆಗೆ ಹೇಳಿದ ವಾಕ್ಯಗಳನ್ನು ನಿಮ್ಮ ಮುಂದಿಟ್ಟು ನನ್ನ ಈ ನೀರಸವಾದ ಭಾಷಣವನ್ನು ಮುಗಿಸುತ್ತೇನೆ.

'ಪಿರಿಯರ್ ಸೇವೆಗೈ ಸವತಿಯರೊಳಿಷ್ಟವಯಸ್ಯೆ
ಯಂದದಿಂ |
ದಿರು ಪತಿಯೊರ್ವೆ ಹೇವಗೊಳಿಸಲ್ ಮುಳಿಸಿಂ
ಪ್ರತಿಕೂಲೆಯಾಗದಿರ್ |
ಪರಿಜನಮಂ ಕರಂ ಸಲವು ಭಾಗ್ಯದೆ ಬಾಗಿರು ಪೆಣ್
ಗಿಂತಿರಲ್ |
ಗರತಿಯರಪ್ಪರ್, ಇಂತಿರದರ್ ಅನ್ವಯಕಾಧಿಪಸಂ
ಟು ಮಾಳ್ಪರ್ ||'

ಜಯ ಕರ್ನಾಟಕ ಮಾತೆ
ಸಿಂಗನ್ನಡಂಗೆಲ್ಲೆ.

1930–31ನೇ ಸಾಲಿನ ಬಾಬ್ತು ಸಹಕಾರ ಯೂನಿಯನ್ನುಗಳ ಫೆಡರೇಶನ್ನಿನ ವರದಿ.

1929 ನೇ ಇಸ್ವಿ ಮಾರ್ಚಿ ತಿಂಗಳಲ್ಲಿ ಮೈಸೂರ ಸಂಘಗಳ ರಿಜಿಸ್ಟ್ರಾರವರಾದ ಮೆ. ಕೆ. ಎಚ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆಯಲ್ಲಿ ನಡೆದ ಸಹಕಾರ ಸಂಘಗಳ ಸಮ್ಮೇಳನದಲ್ಲಿ ಕೊಡಗಿನ ಸಹಕಾರಿ ಸಂಘಗಳ ಮೇಲ್ವಿಚಾರಣೆಗಾಗಿ ಯೂನಿಯನ್ನುಗಳ ಫೆಡರೇಶನ್ ಆಗಬೇಕೆಂಬ ಠರಾವು ಏಕಾಭಿಪ್ರಾಯದಿಂದ ಮಂಜೂರಾಯಿತು.

ಕೂಡಲೆ ಆಗಿನ ರಿಜಿಸ್ಟ್ರಾರವರು ಈ ವಿಷಯ ರೂಲ್ಸು ಮಾಡಿಕೊಡಲು ಉದ್ಯುಕ್ತರಾದರು. ರೂಲ್ಸನ್ನು ತಯಾರು ಮಾಡಲು ಒಂದು ಕಮಿಟಿ ಏರ್ಪಾಡಾಗಿ ಆ ಕಮಿಟಿಯವರು ಮತ್ತು ರಿಜಿಸ್ಟ್ರಾರವರು ರೂಲ್ಸನ್ನು ತಯಾರಿಸಿದರು. ಈ ಕಮಿಟಿಯ ಅಧ್ಯಕ್ಷರು, ರಿಜಿಸ್ಟ್ರಾರವರು, ಸೆಕ್ರೆಟರಿ ಮತ್ತು ಕನ್‌ವೀನರ್ ಮೆ. ಕೆ. ಪಿ. ಚಿಣ್ಣಪ್ಪನವರು, ಮೆಂಬರುಗಳು ಮೆಗಳಾದ ಸಿ. ಎಸ್. ವೆಂಕಪ್ಪಯ್ಯನವರು, ಪಿ. ಬಿ. ಬೆಳ್ಯಪ್ಪನವರು ಮತ್ತು ನೆಂಮಂಡ ನಂಜಪ್ಪನವರು ಆಗಿದ್ದರು. ಕಮಿಟಿಯವರು ತಯಾರಿಸಿದ ಇಂಗ್ಲಿಷ್ ಬೈಲಾಗಳನ್ನು ಚರ್ಚಿಸಲು ಎಲ್ಲಾ ಯೂನಿಯನ್ನುಗಳ ಪ್ರತಿನಿಧಿಗಳ ಜನರಲ್ ಮೀಟಿಂಗೊಂದು ನಡೆದು ಬೈಲಾಗಳನ್ನು ಕನ್ನಡದಲ್ಲಿ ಭಾಷಾಂತರಿಸುವಂತೆಯೂ, ಅನಂತರ ರಿಜಿಸ್ಟರು ಮಾಡಿಸುವಂತೆಯೂ ತೀರ್ಮಾನಿಸಲಾಯಿತು.

ತಾರೀಖು 24—5—30 ರಲ್ಲು ಫೆಡರೇಶನ್ನಿನ ಪ್ರಥಮ ಜನರಲ್ ಮೀಟಿಂಗು ನಡೆಯಿತು. ಜನರಲ್ ಮೀಟಿಂಗಿಗೆ 13 ಯೂನಿಯನ್ನುಗಳೂ, ಸೆಂಟ್ರಲ್ ಬ್ಯಾಂಕೂ, ಮಿತ ಜವಾಬ್ದಾರಿ ಸಂಘಗಳ ಪ್ರತಿನಿಧಿಗಳೂ, ದಿಡು ಮೆಂಬರು ಸಂಘಗಳ ಪ್ರತಿನಿಧಿಗಳೂ ಹೀಗೆ ಒಟ್ಟಾರೆ 16 ಸಂಘಗಳು ಹಾಜರಿದ್ದವು. ಇದೇ ಮೀಟಿಂಗಿನಲ್ಲಿ ರಿಜಿಸ್ಟ್ರಾರದ ಬೈಲಾಗಳು ಸರಿ ಇದೆಯೆಂದು ಎಲ್ಲರೂ ಅಂಗೀಕರಿಸಿದರು. ಅಲ್ಲದೆ ರಿಜಿಸ್ಟ್ರಾರದ ಸರ್ಟಿಫಿಕೇಟನ್ನು ಓದಿದ ನಂತರ ಚುನಾವಣೆಯಾಗಿ ಈ ಕೆಳಗಿನವರು ಪ್ರಥಮ ಕಾರ್ಯಕಾರಿ ಮಂಡಳಿಯವರಾಗಿ ಚುನಾಯಿಸಲ್ಪಟ್ಟರು.

1. ಮೆಗಳಾದ ರಾವ್‌ಬಹದೂರ್ ಪಿ. ದೇವಯ್ಯನವರು (ಅಧ್ಯಕ್ಷರು) 2. ಕೋಟೆರ ಪಿ. ಚಿಣ್ಣಪ್ಪನವರು (ಕಾರ್ಯದರ್ಶಿ) 3. ಪಡಿಕೇರಿಯಂಡ ಸೋಮಯ್ಯನವರು, 4 ಕೋಡಿರ ತಮ್ಮಯ್ಯನವರು, 5. ಬನಂಡ ಕಾರ್ಯಪ್ಪನವರು, 6 ಪಿ. ಜಿ. ಮುದ್ದಮ್ಮಯ್ಯನವರು, 7. ಕಿರಿಯಮಾಡ ನಂಜಪ್ಪನವರು, 8. ಮನೆಯಪಂಡ ಬೆಳ್ಯಪ್ಪನವರು, 9. ಎನ್. ಶಂಕರಯ್ಯನವರು, 10 ಸಕಲಾಯ ಶ್ರೀನಿವಾಸಯ್ಯನವರು, 11. ಹೆಬ್ಬಾಲೆ ಪೊನ್ನಪ್ಪನವರು, 12. ಮುಂಡಾಂಡಿರ ದೇವಯ್ಯನವರು, 13 ಉದಿಯಂಡ ಮಾಚಯ್ಯನವರು, 14. ಪಾಂಡಂಡ ಮುತ್ತಣ್ಣನವರು 15 ಬೆಳ್ಳಳ್ಳಿ ಬಸ್ವಣ್ಣಯ್ಯನವರು, 16. ರಾವ್‌ಬಹದೂರ್ ಕೆ. ಸುಬ್ಬಯ್ಯನವರು, 17 ಸಿ. ಎಸ್. ವೆಂಕಪ್ಪಯ್ಯನವರು. ಪುನಃ ಫೆಡರೇಶನ್ ರೂಲ್ಸ್ ಮೇರೆ ಎಕ್ಸಿಕ್ಯುಟಿವ್ ಕಮಿಟಿಯೊಂದು ತಾರೀಖು 7—6—30ರ ಕಾರ್ಯನಿರ್ವಾಹಕ ಸಭೆಯಲ್ಲಿ ಚುನಾವಣೆಯಾಯಿತು.

ಎಕ್ಸಿಕ್ಯುಟಿವ್ ಕಮಿಟಿಯ ಸದಸ್ಯರುಗಳು.

1 ಮೆ. ಗಳಾದ ರಾವ್ ಬಹದೂರ್ ಪಿ. ದೇವಯ್ಯನವರು ಅಧ್ಯಕ್ಷರು. 2. ಕೆ. ಪಿ. ಚಿಣ್ಣಪ್ಪನವರು. ಆನರರಿ ಸೆಕ್ರೆಟರಿಯವರು. 3. ರಾವ್‌ಬಹದೂರ್ ಕೆ ಸುಬ್ಬಯ್ಯನವರು ಕಮಿಟಿಮೆಂಬರು. 4. ಸಿ. ಯಸ್. ವೆಂಕಪ್ಪಯ್ಯನವರು 5 ಯಂ. ಯಂ. ಬೆಳ್ಯಪ್ಪನವರು 6. ಪಿ. ಜಿ. ಮುದ್ದಮ್ಮಯ್ಯನವರು 7 ಎನ್. ಶಂಕರಯ್ಯನವರು. ಫೆಡರೇಶನ್ನಿನವರು ಈ ವರೆಗೆ ಒಟ್ಟು 8 ಮೀಟಿಂಗುಗಳನ್ನು ಅವರ ಆಫೀಸಿನಲ್ಲಿ ಜರುಗಿಸಿದ್ದಾರೆ. ಈ ಪೈಕಿ 1 ಜನರಲ್ ಮೀಟಿಂಗೂ, 3 ಮ್ಯಾನೇಜಿಂಗ್ ಕಮಿಟಿ ಮೀಟಿಂಗುಗಳೂ, 4 ಎಕ್ಸಿಕ್ಯುಟಿವ್ ಕಮಿಟಿ ಮೀಟಿಂಗುಗಳನ್ನು ಸಹ ನಡಿಸಿರುತ್ತಾರೆ.

ಫೆಡರೇಶನ್ ಆಫೀಸು ಸಿಬ್ಬಂದಿ.

ತಾರೀಖು 7—6—30 ಮ್ಯಾನೇಜಿಂಗ್ ಕಮಿಟಿ ತೀರ್ಮಾನದ ಮೇರೆ ಫೆಡರೇಶನ್ನಿಗೆ ಪ್ರತ್ಯೇಕವಾದ ಒಬ್ಬ ಗುಮಾಸ್ತನನ್ನು ಅಂದರೆ ಸುಪರ್‌ವೈಜರುಗಳ ಪೈಕಿ ಹೆಚ್ಚಿನ ತರಬೇತಾದವರನ್ನು ನೇಮಕ ಮಾಡಲಾಯಿತು. ಆಫೀಸನ್ನು ಕೊಡಗು ಜಮೀನ್ದಾರರ ಸಂಘದ ಹಾಲ್‌ನ ಒಂದು ಕೋಣೆಯಲ್ಲಿ ಇಡಲಾಯಿತು. ಆಫೀಸಿಗೆ ತಕ್ಕ ಫರ್ನಿಚರುಗಳನ್ನು ಸಹ ಕೂಡುಕೊಳ್ಳಲಾಯಿತು. ಒಬ್ಬ ಜವಾನನನ್ನು ಸಹ 14/— ರೂಪಾಯಿ ಸಂಬಳದಲ್ಲಿ ಇಟ್ಟುಕೊಳ್ಳಲಾಯಿತು.

ಮೆ. ಪಿ. ಮುದ್ದಪ್ಪನವರು, ಗುಮಾಸ್ತರು, ಪಿ. ನಂಜುಂಡ ಜವಾನ.

ಸೆಕ್ರಿಟರ್ ಕಂಟಿಂಜೆಂಟ್ ಮತ್ತು ಲೈಬ್ರರಿ ಖರ್ಚಿನ ವಿವರ.

ಸಾದಿಲ್ವಾರು ಖರ್ಚು	ರೂ.	96	14	3
ಇತರ ಖರ್ಚು		6	4	0
ಫೆಡರೇಶನ್ ಬೈಲಾಗಳು		60	0	0
ಜೋಡ್ಸ್		18	8	0
ರಬ್ಬರ್ ಮೊಹರುಗಳು		18	9	0
ಕುರ್ಚಿ, ಮೇಜ ಮತ್ತು ಅಲ್ಮೈರ		98	0	0
ಜರ್ನಲ್ಸ್ ತರಿಸಿದ್ದು		101	4	0
ಲೈಬ್ರರಿ		53	10	0
ಸ್ಪೆಶಲ್ ಮರ್ಪ		64	4	6
ಒಟ್ಟು ಜುಮ್ಲ	ರೂ	426	15	9

ಸುಪರ್‌ವಿಜನ್ ಫಂಡಿನ ಜಮಾ ಖರ್ಚು.

ಫೆಡರೇಶನ್ ರಿಜಿಸ್ಟ್ರಾಗುವುದಕ್ಕೆ ಮೊದಲು ಸುಪರ್‌ವಿಜನ್ ಫಂಡನ್ನು ಪ್ರಾಥಮಿಕ ಸಂಘಗಳು ಸೆಂಟ್ರಲ್ ಬ್ಯಾಂಕಿಗೆ ಕಳುಹಿಸುತ್ತಿದ್ದರು. ಅಲ್ಲದೆ ರಿಜಿಸ್ಟ್ರಾರವರು ಸುಪರ್‌ವೈಜರುಗಳ ಮೇಲ್ವಿಚಾರಣೆಯನ್ನು ತೆಗೆದುಕೊಂಡಿದ್ದರು. ಫೆಡರೇಶನ್ ರಿಜಿಸ್ಟ್ರಾದ ಕೂಡಲೆ ಅಂದರೆ ಕಳೆದ ಜುಲೈ 1ರಿಂದ ರಿಜಿಸ್ಟ್ರಾರವರ ಹುಕುಂ ಮೇರೆ ಸೆಂಟ್ರಲ್ ಬ್ಯಾಂಕಿನವರು ತಮ್ಮ ಎಲ್ಲ ಲೆಕ್ಕಗಳನ್ನು ಫೆಡರೇಶನ್ನಿಗೆ ಒಪ್ಪಿಸಿದರು. ಆಗ ರೂಪಾಯಿ 1783—11—9 ಪೈಯೂ ಸೆಂಟ್ರಲ್ ಬ್ಯಾಂಕಿನಿಂದ ಫೆಡರೇಶನ್ನಿಗೆ ಜಮೆ ಬಂತು. ರಿಜಿಸ್ಟ್ರಾರವರು ಎಲ್ಲ ಪ್ರಾಥಮಿಕ ಸಂಘಗಳಿಗೂ ಮೇಲ್ವಿಚಾರಣ ನಿಧಿಯನ್ನು ಫೆಡರೇಶನ್ನಿಗೆ ಕಳುಹಿಸುವಂತೆ ಸರ್ಕಿಲಾರ್ ಕೊಟ್ಟರು. ಮೇಲ್ವಿಚಾರ ನಿಧಿಯು ಹೇಗಿದೆ ಎಂದು ಈ ಕೆಳಗಿನ ಪಟ್ಟಿಯಿಂದ ವೇದ್ಯವಾಗುತ್ತೆ.

1929—30ಕ್ಕೆ ಬರಬೇಕಾದುದರಲ್ಲಿ ಬಾಕಿ	ರೂ	1577	0	6
1930—31ಕ್ಕೆ ಬರಬೇಕಾದ್ದು		5936	10	0
ಜುಮ್ಲ		7514	0	0
ಈ ಮೇಲ್ಕಂಡ ಮೊಬಲಗಿನಲ್ಲಿ ಈ ವರೆಗೆ ವಸೂಲಾದದ್ದು		3193	11	8
ವಸೂಲಿಗಿರುವ ಬಾಕಿ ಮೊಬಲಗು		3520	4	4
ಈ ದಿನ ಹಸ್ತಾಂತರ ಬಾಕಿ		1386	12	9

ಫೆಡರೇಶನ್ ಆದ ಕೂಡಲೆ ಯೂನಿಯನ್ನುಗಳು ಎಚ್ಚತ್ತು ನ್ಯಾಯವಾದ ಕೆಲಸ ಮಾಡಲು ಪ್ರಾರಂಭಿಸಿದುದರಿಂದ ಕೆಲವು ಸಂಘಗಳು ತಮಗೆ ಫೆಡರೇಶನ್ ಮತ್ತು ಯೂನಿಯನ್ನುಗಳ ಮೇಲ್ವಿಚಾರಣೆ ಬೇಡವೆಂದು ಹೇಳುತ್ತಾ ಮೇಲ್ವಿಚಾರಣ ನಿಧಿಗಳನ್ನು ಕಳುಹಿಸದೆ ಬಾಕಿ ಮಾಡಿಕೊಂಡಿರುತ್ತಾರೆ. ಆದರೆ ಈಚೆಗೆ ರಿಜಿಸ್ಟ್ರಾರವರ ಮತ್ತು ಸೆಂಟ್ರಲ್ ಬ್ಯಾಂಕಿನವರ ಸರ್ಕಿಲಾರ್ ಹೊರಟ ನಂತರ ಮೇಲ್ವಿಚಾರಣ ನಿಧಿಯು ಅಂತಹ ಸಂಘಗಳಿಂದ ಬರಲು ಶುರುವಾಗಿದೆ. ರಿಜಿಸ್ಟ್ರಾರವರ ಮತ್ತು ಸೆಂಟ್ರಲ್ ಬ್ಯಾಂಕಿನವರು ಸರಿಯಾಗಿ ಫೆಡರೇಶನ್ನಿನೊಂದಿಗೆ ಸಹಕರಿಸಿದ ಪಕ್ಷ ಫೆಡರೇಶನ್ನಿನ ಯಾವ ಕೆಲಸಕ್ಕೂ ಅಡಚಣೆ ಇರಲಿಕ್ಕಿಲ್ಲವಾಗಿ ಖಂಡಿತ ಹೇಳಬೇಕಾಗಿದೆ.

ರಿಜಿಸ್ಟ್ರಾರವರಿಂದ ಸುಪರ್‌ವೈಜರುಗಳ ಮೇಲ್ವಿಚಾರಣೆಯನ್ನು ಫೆಡರೇಶನ್ನಿನವರು ತೆಗೆದುಕೊಂಡಾಗ ಒಟ್ಟು 10 ಸುಪರ್‌ವೈಜರುಗಳು ಇದ್ದರು. ಈಚೆಗೆ 5 ಮಂದಿಯನ್ನು ಹೆಚ್ಚಿಗೆ ತರಬೇತು ಮಾಡಿ ಇವರ ಪೈಕಿ 4 ಜನರನ್ನು ಸುಪರ್‌ವೈಜರುಗಳಾಗಿ ನೇಮಕ ಮಾಡಲಾಯಿತು. ಇವರುಗಳಲ್ಲಿ 2 ಮಂದಿ ಸುಪರ್‌ವೈಜರುಗಳನ್ನು ಕಳೆದ ಒಕ್ಟೋಬರ್ 1 ರಲ್ಲಿ ಕೊಯಂಬತ್ತೂರು ಸಹಕಾರಿ ತರಬೇತು ಶಾಲೆಗೆ ಕಳುಹಿಸಲಾಗಿದೆ. ಅವರಿಬ್ಬರನ್ನು ಫೆಬ್ರವರಿ ಆಖೈರ್ ವರೆಗೆ ತರಬೇತು ಮಾಡುವಂತೆ ಮೊದಲು ಗೊತ್ತುಮಾಡಲ್ಪಟ್ಟಿತು. ಆದರೆ ಅವರ ತರಬೇತಿನ ಅವಧಿಯನ್ನು ಪುನಃ 2 ತಿಂಗಳು ಮುಂದುವರಿಸಿದುದರಿಂದ ಎಲ್ಲಾ ಯೂನಿಯನ್ನುಗಳಿಗೂ ಪ್ರತ್ಯೇಕ ಸುಪರ್‌ವೈಜರುಗಳನ್ನು ನೇಮಕ ಮಾಡಲು ಸಾಧ್ಯವಾಗಲಿಲ್ಲ. ಈ ಮೊದಲೇ ಕೆಲಸ ಮಾಡುತ್ತಿದ್ದ ತನಿಖಾದಾರನಂತೆ ಸುಪರ್‌ವೈಜರು ಮೆ. ಸಿ. ಚೆನ್ನಕೇಶವಯ್ಯನವರು ಮತ್ತು ಮೂರ್ನಾಡು ಸುಪರ್‌ವೈಜರು ಮೆ. ಕೆ. ಮುತ್ತಣ್ಣನವರು ತಮ್ಮ ಕೆಲಸಕ್ಕೆ ರಾಜಿನಾಮೆ ಮಾಡಿದ್ದರಿಂದ ಅವನ್ನು ಅಂಗೀಕರಿಸಿ ಪ್ರತ್ಯೇಕ ಸುಪರ್‌ವೈಜರುಗಳನ್ನು ನೇಮಕ ಮಾಡಲಾಯಿತು. ಈಚೆಗೆ ಭಾಗಮಂಡಲನಾಡು ಸುಪರ್‌ವೈಜರು ಮೆ. ಪಿ. ಕೆ. ಪೂವಯ್ಯನವರು ತನ್ನ ಕೆಲಸವನ್ನು ಸರಿಯಾಗಿ ಮಾಡದ ನಿಮಿತ್ತ ಸಸ್ಪೆಂಡ್ ಮಾಡಲ್ಪಟ್ಟಿದ್ದವರು ಅವರು ಈಚೆಗೆ ರಾಜಿನಾಮೆ ಮಾಡಿರುತ್ತಾರೆ. ತಾರೀಖು 27—2—31ರಲ್ಲಿ ಇವರ ಬದಲಾಗಿ ಈ ಮೊದಲೇ ತರಬೇತಾದ ಮೆ. ಯಂ. ಪೂಣಚ್ಚರವರನ್ನು ಮತ್ತು ಹುದಿಕೇರಿ ಸಂಘದ ಸೆಕ್ರೆಟರಿ ಮೆ. ಗು... ರ ಮಾದಯ್ಯನವರನ್ನು ಹಂಗಾಮಿ ಸುಪರ್‌ವೈಜರುಗಳಾಗಿ ತಾ 4—2—31 ರಲ್ಲು ನೇಮಕ ಮಾಡಲಾಯಿತು.

ಸಾಮ್ವಾರಪೇಟೆ ತಾಲ್ಲೂಕಿನ ಸುಪರ್‌ವೈಜರು ಮೆ. ಕರಿಯಪ್ಪನವರನ್ನು ಪಾಲಿಬೆಟ್ಟ ತಾಲ್ಲೂಕು ಸೆಕ್ರೆಟರಿ ಕೆಲಸದ ಮೇರೆ ಸದರಿ ಸೆಕ್ರೆಟರಿ ಕೆಲಸಕ್ಕಾಗಿ ತಾರೀಖು 24-2-31ರಿಂದ ಬಿಟ್ಟು ಕೊಡಲಾಗಿದೆ. ಸೆಂಟರ ಸ್ಟೋರಿನವರು ಒಬ್ಬ ಸುಪರ್‌ವೈಜರ ಮಾಹೆಯಾನ ಸಂಬಳ 25/ ರೂಪಾಯಿಗಳನ್ನು ಫೆಡರೇಶನ್ನಿಗೆ ಕೊಡಲು ತೀರ್ಮಾನಿಸಿ ಅದೇ ಮೇರೆ ಫೆಡರೇಶನ್ನಿಗೆ ಕಳುಹಿಸುತ್ತಲಿದ್ದಾರೆ.

ಸುಪರ್‌ವೈಜರುಗಳ ಸಂಬಳದ ವಿವರ.

1	ಮೆ. ಕೆ. ಸೋಮಯ್ಯನವರು	ರೂ.	41	0 0
2.	,, ಬಿ. ದೇವಯ್ಯನವರು,		38	0 0
3	,, ಎ. ಬಿ. ಪೊನ್ನಪ್ಪನವರು,		34	0 0
4	,, ಕೆ. ಕೆ. ಮೊಣ್ಣಪ್ಪನವರು,		30	0 0
5.	,, ಕೆ. ಬಿ. ಶಾಂತಮಲ್ಲಪ್ಪನವರು,		30	0 0
		ಜುಮ್ಲ ರೂ.	173	0 0
6.	,, ಬಿ. ಎ. ಕುಶಾಲಪ್ಪನವರು,		30	0 0
7.	,, ಟಿ. ಕೆ. ಮುತ್ತಪ್ಪನವರು,		25	0 0
8	,, ಎಚ್. ಕೆ. ಚಿಂತಾಮಣಿಯವರು,		25	0 0
9	,, ಯು. ಮಹಲಿಂಗಪ್ಪನವರು		25	0 0
10	,, ಜೆ. ಮಾದಮಯ್ಯನವರು,		25	0 0
		ಜುಮ್ಲ ರೂ.	303	0 0

ತರಬೇತಿಗೆ ಹೋಗಿರುವ ಸುಪರ್‌ವೈಜರುಗಳ ಖರ್ಚು

ಮಾಹೆಯಾನ 25 ರೂಪಾಯಿಗಳ ಮೇರೆ ಇಬ್ಬರಿಗೆ ಒಕ್ಟೋಬರ್ ತಾ 10 ಆರಾಗಾಯ್ತು, ಮಾರ್ಚಿ ಆಖೈರುವರೆಗೆ 200 ರೂ ಸ್ಟೈಫಂಡು ಕೊಡಲಾಗಿದೆ. ಅಲ್ಲದೆ ತರಬೇತು ಮುಗಿದ ನಂತರ ಅವರ ಸಂಬಳದಲ್ಲಿ ಮಜಮಾಡಿಕೊಳ್ಳುವ ಶರತ್ತು ಮೇರೆ 25 ರೂ. ಮೇರೆ ಇಬ್ಬರಿಗೆ ಒಟ್ಟಿಗೆ 50 ರೂ. ಮುಂಗಡ ಕೊಟ್ಟಿದೆ.

ಒಟ್ಟಾರೆ ಸರಾಸರಿ ಒಂದು ವರ್ಷಕ್ಕೆ ಸುಪರ್‌ವೈಜರ ಸಂಬಳ ರೂ. 3936 ಖರ್ಚಾಗಬಹುದಾಗಿ ಹೇಳಬಹುದು.

ಸುಪರ್‌ವೈಜರುಗಳ ಪೈಕಿ ಮೆ. ಗಳಾದ ಎ. ಪಿ. ಪೊನ್ನಪ್ಪನವರು, ಕೆ. ಬಿ. ಶಾಂತಮಲ್ಲಪ್ಪನವರು, ಬಿ. ದೇವಯ್ಯನವರು, ಎಚ್. ಕೆ. ಚಿಂತಾಮಣಿಯವರು—ಒಳ್ಳೇ ಕೆಲಸ ಮಾಡಿರುತ್ತಾರೆ. ಇತರರ ಕೆಲಸವು ತೃಪ್ತಿಕರವಾಗಿಲ್ಲ. ಎಲ್ಲ ಸುಪರ್‌ವೈಜರುಗಳು ಇನ್ನು ಮುಂದಕ್ಕಾದರೂ ತಮ್ಮ ಕೆಲಸವನ್ನು ಸರಿಯಾಗಿ ಮೆಮೊರಾಂಡಂ ಆಫ್ ಇನ್‌ಸ್ಟ್ರಕ್ಷನ್‌ನುಗುಣವಾಗಿ ಮಾಡುತ್ತಾರೆಂದು ನಂಬುತ್ತೇವೆ.

ಸುಪರ್‌ವೈಜರುಗಳಿಗೆ ಪ್ರಾವಿಡೆಂಟ್ ಸ್ಕೀಮನ್ನು ಮಾಡಬೇಕೆಂದು ಫೆಡರೇಶನ್ನಿನವರು ಆಲೋಚನೆ ಮಾಡಿದ್ದರೂ ಮಂದಿ ವರ್ಷ ಈ ಕೆಲಸವನ್ನು ಕೈಕೊಳ್ಳಲಾಗಲಿಲ್ಲ. ಈ ಕೆಲಸವನ್ನು ಒಡನೆ ಏರ್ಪಾಡು ಮಾಡಬೇಕೆಂದಿದ್ದೇವೆ. 12 ವರ್ಷ ಸರ್ವೀಸು ಮಾಡಿ ಚೆನ್ನಾಗಿ ತರಬೇತು ಹೊಂದಿದ ಸುಪರ್‌ವೈಜರು ಪಿ. ಮುದ್ದಪ್ಪನವರು ಆಫೀಸು ಕೆಲಸವನ್ನು ಚೆನ್ನಾಗಿ ಮಾಡುತ್ತಾರೆ. ದಿನೆ ದಿನೆ ಹೆಚ್ಚಾಗುತ್ತಿರುವ ಕೆಲಸದ ದೆಸೆಯಿಂದ ಇನ್ನೊಬ್ಬ ರಿಸರ್ವ್ ಸುಪರ್‌ವೈಜರ ಆವಶ್ಯಕತೆಯು ಅತ್ಯಾವಶ್ಯವಾಗಿ ಕಾಣುತ್ತೆ. ಫೆಡರೇಶನ್ನಿನ ಮೇಲ್ವಿಚಾರಣನಿಧಿಯು ಎಲ್ಲ ಸಂಘಗಳಿಂದಲೂ ವಸೂಲಾಗಿ ಬಂದರೆ ಎನಡು ಲೀವ್ ರಿಸರ್ವ್‌ಗಳನ್ನು ಪ್ರಯಾಣ ಭತ್ಯವನ್ನು ಮತ್ತು ಒಳ್ಳೇ ಕೆಲಸ ಮಾಡುವ ಸುಪರ್‌ವೈಜರುಗಳಿಗೆ ಬಡ್ತಿಯನ್ನು ಸಹ ಕೊಡಬಹುದು.

(ಮುಂದುವರಿಯುವುದು.)

Rubber Stamps of every design
and
Glass sign boards. Half tone Blocks.
Monogram seals. Marble slabs. ring stones etc etc. to suit every pocket and taste. For further particulars please apply to:—

The Crown Rubber Stamp Co.,
Mangalore, S. K.
Or
Mr. N. N. Ponnappa,
Agent.
12—4 **Mercara.**

ವರ್ತಮಾನ ಸಂಗ್ರಹ.

ಒಳದೇಶ.

... ದಲ್ಲಿ ದೇಶದ ಕೆಲವು ಭಾಗಗಳಲ್ಲಿ ಮಳೆಯು ... ದೆ.

... ಮಿಷನರವರು ಈಗ ನಾಗರಹೊಳೆ ಫಾರೆಸ್ಟಿನ ... ಮಾಡುತ್ತಿದ್ದಾರೆಂದು ತಿಳಿಯ ಬರುತ್ತದೆ.

... ನ ಸಿವಿಲ್ ಕೋರ್ಟುಗಳು ಈ ತಾ. 20 ರಿಂದ ... ಕೆಗೆ ಮುಚ್ಚಲ್ಪಟ್ಟಿವೆಯೆಂದು ಗಜೆಟಿನಲ್ಲಿ ಪ್ರಕಟ ... ದೆ.

... ಪೇಟೆಯಲ್ಲಿಯೂ ಇಲಿಗಳು ಸಾಯುತ್ತಿರುವ ... ಗಿನ ಇನಾಕ್ಯುಲೇಶನ್ ಕೆಲಸವು ನಡೆಯುತ್ತಿದೆ ... ಯುತ್ತೇವೆ.

... ತಾ. 13 ರಲ್ಲಿ ಮಿ. ಕೊಳ್ಳಿಮಾಡ ಕರುಂಬೈಯ್ಯನವ ... ಯಲ್ಲಿ 'ಈಗಿನ ರಾಜಕೀಯ ಪರಿಸ್ಥಿತಿ'ಯನ್ನು ... ಲ್ ಮೀಟಿಂಗಿನಲ್ಲಿ ಭಾಷಣ ಮಾಡಿದರೆಂದು ತಿ ... ತ್ತೇವೆ.

... ಅಸಿಸ್ಟೆಂಟ್ ಸರ್ಜನರುಗಳಾದ ಮಿ. ನಾಯುಡುರ ... ನ್ನು ... ಸೋಮವಾರಪೇಟೆಯಿಂದ ಸಿದ್ದಾಪುರಕ್ಕೂ, ಮಿ. ಸಿ ... ನವರನ್ನು ಸಿದ್ದಾಪುರದಿಂದ ಸೋಮವಾರಪೇಟೆ ... ಯಿಸಿರುವರೆಂದು ತಿಳಿಯುತ್ತೇವೆ.

... ಡ್ ರಿಕಾರ್ಡು ಆಫೀಸಿನಲ್ಲಿದ್ದ ಮಿ. ತಾತಂಡ ನಂ ... ತಾ. 18 ರಲ್ಲಿ ಮಡಿಕೇರಿಯಲ್ಲಿ ಸ್ವರ್ಗಸ್ಥರಾಗಿ, ... ಕುಕ್ಲೂರು ಗ್ರಾಮದ ಅವರ ಮನೆಗೆ ಒಯ್ಯಲ್ಪ ... ದಹನ ಮಾಡಲ್ಪಟ್ಟಿತೆಂದು ತಿಳಿಸಲು ವಿಷಾದಿಸು ... ವೆ.

... ಗೊಟ್ಟು, ಮಾಪ್ಳೆ ಮತ್ತು ದೊಡ್ಡ ಭಂಡಾರ ಸೊಸೈ ... ಯವಾಗಿ ಕೆಲಸ ನಡೆಯುವುದಿಲ್ಲವಾದ್ದರಿಂದ ಅ ... ರದ್ದು ಮಾಡಿ ಅವುಗಳ ಸಾಲವನ್ನೂ ವಸೂಲಿ ... ದಲ್ಲಿ, ಬೊಯಿಕೇರಿ ಮತ್ತು ಚಿಕ್ಕ ಭಂಡಾರ ಸೊಸೈ ... ಸೇರಿಸಲಾಗಿದೆ.

... ನಿಷೇಧದ ವಿಷಯ ಪಂಚಾಯಿತಿ ಮಾಡಲು ಈ ... ಸೋಮವಾರ ಅಮ್ಮತ್ತಿಯಲ್ಲಿ ಮಿ. ... ನವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಅಮ್ಮತ್ತಿನಾಡಿನ ... ಯಲ್ಲಿ ಮಿ. ಪಿ. ಐ. ಬೆಳ್ಯಪ್ಪನವರು, ಕರಾಚಿ ಕಾಂ ... ಸಂದೇಶ' ವನ್ನೂ "ಕೊಡಗಿನಲ್ಲಿ ಸಿಯಾ ನಿಷೇಧ" ವ ... ಉಪನ್ಯಾಸ ಮಾಡಿದರು.

... ತಿಂಗಳ 5 ರಲ್ಲಿ ಗೋಣಿಕೊಪ್ಪಲಲ್ಲಿ ನಡೆಯಲಿ ... ರುವ ... ವರ್ತಕರ ಸಂಘದ ವಾರ್ಷಿಕ ಮಹಾ ಸಭೆಯ ... ಏರ್ಪಾಡಿನ ಬಗ್ಗೆ ಮುಖ್ಯಸ್ಥರು ಉದಾರ ಬುದ್ಧಿ ... ವಂತಿಗೆಯನ್ನು ಕೊಡುತ್ತಿದ್ದಾರೆಂದೂ, ತಾ. 19 ನೇ ಆ ... ದಿನ ಒಂದರಲ್ಲಿಯೇ ಸುಮಾರು 230 ರೂ. ವಂ ... ಸಂಗ್ರಹಿಸಲ್ಪಟ್ಟಿತೆಂದೂ ಸ್ವಾಗತ ಕಮಿಟಿ ... ತಿಳಿಸುತ್ತಾರೆ.

... ಮಡಿಕೇರಿಯಲ್ಲಿ ಇಲಿಗಳು ಸಾಯುತ್ತಲೇ ಇವೆ. ಪೇ ... ದಿನಗಳಲ್ಲಿ ಈ ವಾರ 3 ಜನರಿಗೆ ಪ್ಲೇಗು ಅಂಟಿ 1 ನ ರಣ ... ರೆಂದು ಸಿವಿಲ್ ಸರ್ಜನರಿಂದ ತಿಳಿದು ಬರುತ್ತದೆ. ... ವನ್ನು ಸಂಪೂರ್ಣ ... ಇನಾಕ್ಯುಲೇಶನ್ ... ನಡೆಸುತ್ತಿದ್ದಾರೆ. ... ಕೆಲವು ಜನರು ... ಗಳಿಗೆ ... ಹೋಗುವುದಿಲ್ಲ.

ಶಿಕ್ಷಣ ಸುದ್ದಿ.

ಕಳೆದ ವಾರ ಪ್ರಕಟವಾದಂತೆ ದಾವಣಗೇರಿ ಶಾಲೆಯ ... ಪರೀಕ್ಷೆಗೆ ... ಕುಳಿತವರು 800 ರೂ. ... ದೊರಕಲೂ, ಒಟ್ಟು 200 ರೂ. ... ಯ ಬಂದಿದೆ.

ಸತ್ಯಾಗ್ರಹ ಸಮಾಚಾರ.

... ವೀರರಾಜಪೇಟೆ ಶಿಬಿರದ ಸತ್ಯಾಗ್ರಹಿಗಳು ತಾ. 17 ರಲ್ಲಿ ... ಗ್ರಾಮಕ್ಕೆ ಹೋಗಿ ಮನೆ ಮನೆ ಸುತ್ತಿ, ಸೇಂದಿ ... ವನ್ನು ಬಿಡುವಿಕೆ ... ಪ್ರಯೋಜನವನ್ನು ಜನರ ಮನಸ್ಸಿಗೆ ... ಮನದಟ್ಟು ಮಾಡಿದರು. ಕೆಲವು ಜನರು ಸತ್ಯಾಗ್ರಹ ಫಂಡಿ ... ಗೆ ಸಹಾಯವನ್ನೂ ಮಾಡಿದರು.

... ಗೋಣಿಕೊಪ್ಪಲು ಶಿಬಿರದ ಸತ್ಯಾಗ್ರಹಿಗಳು ತಾ. 14 ರ ... ಲ್ಲಿ ... ಗ್ರಾಮಕ್ಕೂ, ತಾ. 16 ರಲ್ಲಿ ... ಹುಬ್ಬಳೆ ಗ್ರಾಮಗಳಿಗೂ ಮತ್ತು ತಾ. 17 ರಲ್ಲಿ ಕಳ ... ಗ್ರಾಮಕ್ಕೂ ಹೋಗಿ ಮನೆ ಮನೆ ಸುತ್ತಿ ... ವಿಷಯ ... ಸಾರಾಯಿ ... ಹೀಗೆ ... ಲ್ಲವೆಂದು ಅಂಗಡಿ ... ವನ್ನು ... ಕಡಿಸಿ ಬಿಟ್ಟರು.

... ತಾ. 20 ರಿಂದ ವೀರರಾಜಪೇಟೆ, ಗೋಣಿಕೊಪ್ಪಲು ... ಹುದಿಕೇರಿಯಲ್ಲಿರುವ ಸಾರಾಯಿ ಅಂಗಡಿಗಳನ್ನು ಸ ... ಹಿಗಳು ಸದಾ ಪಿಕೆಟ್ ಮಾಡುತ್ತಿರುವರು.

... ನ್ನು ಮುಂದೆ ಸತ್ಯಾಗ್ರಹ ಫಂಡಿಗಿರುವ ಚಂದಾವನ್ನ ... ರು ಪಿ. ಐ. ಬೆಳ್ಯಪ್ಪನವರ, ಕೆ. ಸಿ. ಕರುಂಬೈಯ್ಯನ ... "ಬೆಳ್ಳಿಯ ... ಚಾಪನವರು, ಮತ್ತು ... ಯ್ಯನವರು ಅಧ್ಯಕ್ಷರಾದ ಮಾಡಲ್ಪಟ್ಟವರು ಮತ್ತು ... ದ ಕಾರ್ಯಕರ್ತರ ಹಣಗಳಿಗೆ ಮಾತ್ರ ಕಟ್ಟಿ ಮಾಡಬೇಕೆಂದು ಸತ್ಯಾಗ್ರಹ ಮಂಡಳಿಯವರ ಕೋರಿಕೆಯಾಗಿದೆ.

ಹಿಂದೂದೇಶ.

ಪಂಡಿತ ಜವಾಹರಲಾಲ್ ನೆಹರುರವರು ಸಿಲೋನಿಗೆ ಹೋಗಿರುವರು. ಅವರು ಆರೋಗ್ಯಾಭಿವೃದ್ಧಿಗಾಗಿ ಅಲ್ಲಿ ... ರಾರೆಂದು ವರ್ತಮಾನ.

ವಾರ್ಷಿಕ ಲಿಬರಲ್ ಕಾನ್‌ಫರೆನ್ಸು ಮಿ॥ ವಸ್ ವಾ ... ಟ್ರಿಯರ್ ಶಾಸ್ತ್ರಿ ಯವರ ಮಹಾ ಸಭೆಯು ಮೇ ತಾ. 29,30 ಮತ್ತು 31 ರಲ್ಲಿ ಬೊಂಬಾಯಿಯಲ್ಲಿ ನಡೆಯುವುದು.

ಲಾರ್ಡ್ ಇರ್ವಿನ್‌ರವರು ಇಂಗ್ಲೆಂಡಿಗಾಗಿ ಬೊಂಬಾಯನ್ನು ಬಿಟ್ಟಾಗ ಬೊಂಬಾಯಿಯಲ್ಲಿರುವ ಯುರೋಪಿಯನರು ... ಹಿಂದೂದೇಶದ ಕಡೆಗೆ ಇರ್ವಿನ್‌ರವರು ತೋರಿಸಿದ ಸಹಾನುಭೂತಿಯ ಕಡೆಗೆ ಸಂಪೂರ್ಣ ಒಕ್ಕಸ ... ಯನ್ನೀಯುವ ಪತ್ರವನ್ನು ಅರ್ಪಿಸಿದರು.

ಉತ್ತರ ತರದ ಹೊಸ ಸರ್ಕಾರವು ... ವರನ್ನು ... ಒಂದು ಲಕ್ಷ ರೂಪಾಯಿ ಒಟ್ಟುಮಾಡಿ ಕೊಡುವ ... ಮಹಾತ್ಮ ಗಾಂಧಿಯವರು ... ಅಂತಹ ... ಮಾಡಲು ಇನ್ನು ಆರು ತಿಂಗಳ ಸಮಯ ... ಅವರು ಭಾರತ ... ಸಂಘದವರು ... ಪ್ರಕಟಿಸಿದರು.

ಗಾಂಧಿ–ಇರ್ವಿನ್ ಸಂಧಿಯಾಗಿ ಒಂದೂವರೆ ತಿಂಗಳಾದರೂ ಹಲವು ರಾಜಕೀಯ ಕೈದಿಗಳು ಇನ್ನು ಬಿಡುಗಡೆ ಹೊಂದಿಲ್ಲದಿರುವ ಸಂಗತಿಯನ್ನು ಗಾಂಧಿಜಿಯವರು ಬೊಂಬಾಯಿಯಲ್ಲಿ ... ಬೊಂಬಾಯಿ ಗವರ್ನರವರ ... ಚರ್ಚಿಸಿದರು. ... ಸೂಚನೆ ... ಅವಕಾಶವಿದೆ ದೊರೆಕಿದೆ.

ಭಗತ್ ಸಿಂಗ್, ರಾಜಗುರು ಮತ್ತು ಸುಖದೇವರ ಜ್ಞಾಪಕಾರ್ಥ ... ಕಟ್ಟಿಸಿದ ... ಮಾಡಲ್ಪಟ್ಟಿದೆ. ... ಕೋರುವುದಿಲ್ಲ. ... ತಿಳಿದು ಬರುತ್ತದೆ.

ಮಹಾತ್ಮ ಗಾಂಧಿಯವರು ದೇಶಕ್ಕಾಗಿ ಮಾಡಿರುವ ... ಹಸ್ತದ ... ಅವರನ್ನು ಬೊಂಬಾಯಿಯ 'ಇಂಡಿಯನ್ ಮರ್ಚೆಂಟ್ಸು ಚೇಂಬರ್' ನ ... ಗೌರವ ಮೆಂಬರಾಗಿ ನೇ ... ಮಾಡಿಕೊಳ್ಳುವ ವಿಷಯವು ... ಚರ್ಚಿಸಲ್ಪಡುವುದು. ಈ ಸಂಸ್ಥೆಗೆ ಗೌರವ ... ಸ್ವೀಕರಿಸಿಕೊಳ್ಳುವುದು ಇದೇ ಪ್ರಥಮ ವಾಗಿದೆ.

ಕತ್ಯಾವಾರ್ ಸಂಸ್ಥಾನದ ... ಮಿ. ಮಣಿಲಾಲ್ ... ತಾ. 21 ರಲ್ಲಿ ... ದಸ್ತಗಿರಿ ಮಾಡಿದರು. ... ರ ... ಬಿಟ್ಟು ... ಹುಕುಂ ಮಾಡಿದ್ದರು. ಈ ಹುಕುಂ ... ಉಲ್ಲಂಘಿಸಿ ಇವರು ... ಹಲವು ಸಾರಿ ... ದಸ್ತಗಿರಿ ಮಾಡಿರಲಿಲ್ಲ.

... ವೈಸರಾಯರಾದ ಲಾರ್ಡ್ ಇರ್ವಿನ್‌ರು, ... ಹೊಸ ವೈಸರಾಯರಾದ ಲಾರ್ಡ್ ವೆಲ್ಲಿಂಗ್ಡನ್‌ರವರು ಒಂದಾಗಿ ... ಬಗ್ಗೆ ... ಪ್ರಯತ್ನಗಳು ... ಭಂಗವುಂಟಾಗಿದೆ. ... ಇಂಗ್ಲೆಂಡಿಗೆ ... ಮಂತ್ರಿಯವರು ... ತೀರ್ಮಾನಕ್ಕೆ ಬರುವರೆಂದು ಊಹಿಸಲಾಗಿದೆ.

ಮಹಾತ್ಮ ಗಾಂಧಿಯವರ 'ಯಂಗ್ ಇಂಡಿಯಾ' ಪತ್ರಿಕೆ ... ಪ್ರಿಂಟಿಂಗ್ ... ಪ್ರೆಸ್ಸಿನ ಯಂತ್ರಗಳನ್ನು ... ಸರ್ಕಾರದವರು ... ಬೊಂಬಾಯಿಯಲ್ಲಿ ಇಟ್ಟಿರುತ್ತಾರೆ. ... ಅವುಗಳನ್ನು ... ಕೊಡಬೇಕಾಗಿದೆ ... ಬೊಂಬಾಯಿಯಿಂದ ... ಸರ್ಕಾರದವರೂ, ... ಪ್ರೆಸ್ಸಿನವರೂ ... ಸರ್ಕಾರದವರು ... ಒಪ್ಪಂದದ ಕರಾರಿನ ಮೇರೆ ... ನೀಡಬೇಕಾಗಿದೆ.

ಲಕ್ನೋವಿನಲ್ಲಿ ನಡೆದ ರಾಷ್ಟ್ರೀಯ ಪಕ್ಷದ ಮಹಮ್ಮದೀಯರ ಸಭೆಯ ತೀರ್ಮಾನಗಳನ್ನು ಡೆಲ್ಲಿಯಲ್ಲಿ ನಡೆದ ಮಹಮ್ಮದೀಯ ಕಾನ್‌ಫರೆನ್ಸಿನ ತೀರ್ಮಾನಗಳನ್ನು ಹೋಲಿಸಿ ... ಮುಸಲ್ಮಾನರ ... ಪ್ರತ್ಯೇಕ ಚುನಾವಣೆ ... ಪ್ರತ್ಯೇಕ ಚುನಾವಣೆ ... ಭೇದವಿಲ್ಲವೆಂತಲೂ, ... ಮುಸಲ್ಮಾನ ಪಾರ್ಟಿಗಳು ಸೇರಿ ಚರ್ಚಿಸಿದರೆ ... ತೀರ್ಮಾನಿಸಿಕೊಳ್ಳಬಹುದೆಂತಲೂ, ಆದಕಾರಣ ಮಹಾತ್ಮ ಗಾಂಧಿಯವರಿಗೆ ಮುಸಲ್ಮಾನರ ಅಭಿಪ್ರಾಯ ... ಎಲ್ಲಾ ಪಂಗಡಗಳ ... ಸಭೆ ನಡೆಸುವುದು ಉತ್ತಮವೆಂದೂ ... ಸೂಚಿಸಿರುವರು.

ಈ ತಾ. 18 ಮತ್ತು 19 ರಲ್ಲಿ ಲಕ್ನೋದಲ್ಲಿ ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಕಾನ್‌ಫರೆನ್ಸು ನಡೆಯಿತು. ಅ ... ಧ್ಯಕ್ಷರಾಗಿದ್ದ ಸರ್ ಅಲಿ ಇಮಾಮ್‌ರವರು ವಿಷಯ ನಿಯಾಮಕ ಕಮಿಟಿಯ ಮೀಟಿಂಗು ಮುಗಿದ ಮೇಲೆ ಬೇರೆ ತುರ್ತಾದ ಕೆಲಸಕ್ಕಾಗಿ ಹೊರಟು ಹೋದರು. ಜಾಯಿಂಟ್ ಇಲೆಕ್ಟೋರೇಟ್ ಅಂದರೆ ಜಾತಿ ಮತ ಭೇದವೆಣಿಸದೆ ಎಲ್ಲರೂ ಓಟು ಕೊಡುವ ಮಿಶ್ರಿತ ಚುನಾವಣೆ ಇರಬೇಕೆಂತಲೂ, ಪ್ರಾಯ ಬಂದವರೆಲ್ಲಾ ಓಟಿನ ಹಕ್ಕಿರ ಬೇಕೆಂತಲೂ ಠರಾವು ಪಾಸಾಯಿತು. ಇದೇ ಮುಖ್ಯ ಠರಾವು. ಮಂದ ಪಕ್ಷದ ಮತ್ತು ಸರಕಾರಿಗಳಾದ ಮುಸಲ್ಮಾನರು ಈ ಮೊದಲು ಡೆಲ್ಲಿಯಲ್ಲಿ ಸೇರಿ ಪ್ರತ್ಯೇಕ ಕೋಮುವಾರು ಚುನಾವಣೆ ಆಗ ಬೇಕು ಎಂದು ತೀರ್ಮಾನಿಸಿರುವರು.

ಮಹಾತ್ಮ ಗಾಂಧಿಯವರು ಕಳೆದ ವರ್ಷ ಮಾರ್ಚಿ ತಿಂಗಳಲ್ಲಿ ಉಪ್ಪಿನ ಕಾನೂನು ಮುರಿಯಲಿಕ್ಕಾಗಿ ದಂಡಿಗೆ ಹೋದಂದಿನಿಂದ ಅವರ ಸಬರಮತಿ ಆಶ್ರಮಕ್ಕೆ ಹೋಗಿರಲಿಲ್ಲ. ಈ ತಾ. 14 ರಲ್ಲಿ ಅವರು ತನ್ನ ಪತ್ನಿ ಕಸ್ತೂರಿಬಾಯಿಯವರೊಡನೆ ಆಶ್ರಮದಲ್ಲಿ ಬಿಟ್ಟ ಕಾಯಿಲಸ್ಥರನ್ನು ನೋಡಲು ಹೋಗಿದ್ದರಲ್ಲದೆ ತಾ. 21 ರಲ್ಲಿ ಆಶ್ರಮಕ್ಕೆ ಸೇರಿದ ಬಿಟ್ಟ ಹುಡುಗಿಯ ಮದುವೆಯನ್ನು ನಡಿಸಲು ಹೋಗಿದ್ದರು. ಆಗ, ಅವರು ಹೇಳಿದೇನೆಂದರೆ "ಯಜ್ಞವು ಫಲಿಸಿ ಯಾವಾಗ ಪೂರು ವಾಗುವದೆಂದು ಗೊತ್ತಿಲ್ಲ; ಸುದೀರ್ಘವಾದ ಬಹು ಜೋರಾಗಿ ನಡಿಯುವುದು. ದೇಶವು ಸಂಪೂರ್ಣ ಎಚ್ಚತ್ತಿದೆ. ಸ್ವರಾಜ್ಯವು ಫಲಿಸಿ ಪ್ರಾರಂಭವಾದರೆ ಕೋಟಿಗಟ್ಟಲೆ ಜನರು ಅದರಲ್ಲಿ ಭಾಗಿಗಳಾಗುವರು. ಒಂದು ವೇಳೆ ಅವರೆಲ್ಲರಿಗೂ ಧೈರ್ಯ ಕಂಡರೆ ಆಶ್ರಮದ ಒಂದು ಒಳ್ಳೇ ಉದಾಹರಣೆಯಾಗಿರ ಬೇಕು."

ಕಾನ್ಪುರದ ಗಲಭೆಯ ಮೇಲೆ, ಭಾರತ ಸೇವಾ ಸಮಿತಿಯ ಉಪಾಧ್ಯಕ್ಷರಾದ ಪಂಡಿತ ಹೃದಯನಾಥ ಕುಂಜ್ರುರವರು ಒಂದು ಹೇಳಿಕೆ ಪ್ರಕಟಿಸಿದಲ್ಲಿ,—ಗಲಭೆಯು ನಡೆಯುತ್ತಿರುವಾಗ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಸ್ವಸ್ಥವಾಗಿ ತಮ್ಮ ಬಂಗಲೆಯಲ್ಲಿ ಕುಳಿತಿದ್ದರೆಂದೂ, ಶಾಂತಿರಕ್ಷಣೆಗೆಂದು ಕಳುಹಲ್ಪಟ್ಟ ಕೆಲವು ಮಿಲಿಟರಿ ಸೋಲ್ಜರರೂ ಪೋಲೀಸರೂ ಯಾರ ಗೋಜಿಗೂ ಹೋಗದೆ ಮೌನ ... ವಾಗಿ ... ಮಾಡುತ್ತಿದ್ದರೆಂದೂ, ಗಲಭೆ ನಿಲ್ಲಿಸಲು ಗಳಿಗೆ ... ಹೊರಡಲ್ಪಟ್ಟಿತಾದರೂ ಪೋಲೀಸರ ಕಣ್ಣು ... ಅದನ್ನು ... ಶಿಕ್ಷೆಯಾಗಿಲ್ಲವೆಂದೂ ಬೆಡದರಾಗಿ ... ತಮಗೆ ತಿಳಿದುದನ್ನು 'ಹಿಂದೂ' ಪತ್ರಿಕೆಗೆ ... ಗಲಭೆಯ ... ಈ 1 ರವರಾದವು ಬಂದ ... ಕಮಿಟಿಯನ್ನು ನೇಮಿಸಿದೆ. ಈ ಕಮಿಟಿಯಲ್ಲಿ ಒಬ್ಬರು ಮುಸಲ್ಮಾನರು, ಮತ್ತೊಬ್ಬರು ಹಿಂದೂಗಳು, ಉಳಿದವರು ಯುರೋಪ್ಯರು. ಅಲ್ಲಿಯ ಹಿಂದೂ ಸಭೆಯ ನೇತೃತ್ವದಲ್ಲಿ ಒಂದು ಸಹಾಯಕ ಸಂಘವೂ ಏರ್ಪಟ್ಟಿದೆ.

ವಿದೇಶ.

ತಾ. 20 ರಲ್ಲಿ ಲಂಡನಿನಲ್ಲಿ ನಡೆದ ಸ್ತ್ರೀಯರ ಮಹಾ ಸಭೆಯಲ್ಲಿ, ಸತ್ಯಾಗ್ರಹ ಚಳವಳಿಯ ಭಾಗಿಗಳಾದ ಹಿಂದೂದೇಶದ ಮಹಿಳೆಯರನ್ನು ಅಭಿನಂದಿಸಿಯೂ, ಅವರ ಧೈರ್ಯವನ್ನೂ, ಸ್ಥಿರ ಮನಸ್ಸನ್ನೂ ಹೊಗಳಿಯೂ, ಇರ್ವಿನ್–ಗಾಂಧಿ ರಾಜಿ ಸಂಧಾನಕ್ಕೆ ಮೆಚ್ಚಿಗೆಯನ್ನು ಸೂಚಿಸಿಯೂ ಠರಾವುಗಳನ್ನು ಪಾಸು ಮಾಡಿದರು.

ಇಂಡಿಯಾದಲ್ಲಿ ತರಬೇತಿಗಾಗಿ ಬ್ರಿಟಿಷ್ ಸೈನ್ಯ ರಿಕ್ರೂಟುಗಳಿಗೆ ಆಗುವ ಖರ್ಚನ್ನು ಇಂಡಿಯಾ ಸರಕಾರದವರು ಬ್ರಿಟಿಷ್ ಸರ್ಕಾರಕ್ಕೆ ಕೊಡಕೂಡದೆಂಬ ಮತ್ತು ಹಿಂದೂದೇಶದಲ್ಲಿ ಆಗುವ ಸೈನ್ಯದ ಖರ್ಚಿನ ಒಂದು ಭಾಗವನ್ನು ಇಂಪೀರಿಯಲ್ ಸರ್ಕಾರದವರು ಕೊಡಬೇಕೆಂಬ ವಿಷಯಗಳನ್ನು ವಿಚಾರಿಸಲು ಒಂದು ಸ್ವತಂತ್ರ ಕಮಿಟಿಯನ್ನು ನೇಮಿಸಲಾಗುವುದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ನೋಟೀಸು.

ಕೊಡಗು ಜಮೀನ್ದಾರರ ಸಂಘದ 19ನೇ ವಾರ್ಷಿಕ ಜನರಲ್ ಮೀಟಿಂಗು ಗೋಣಿಕೊಪ್ಪಲಲ್ಲಿ ಅಂಗಾಡಿ ಪ್ರಮುಖ ಮುಂದಾಳಾದ ಶ್ರೀಯುತ ಜೆ. ಎಂ. ಸೇನಗುಪ್ತರವರ ಅಧ್ಯಕ್ಷತೆಯಲ್ಲಿ ... ಮೇ ತಾ. 5 ರಲ್ಲು ಮಧ್ಯಾಹ್ನ 12 ಗಂಟೆಗೆ ... ಮಧ್ಯಾಹ್ನದ ... ಕೆಟಿಗೆ ... ಪ್ರಾರಂಭವಾಗುತ್ತೆ ... ಕ್ಕಿಗ್ಗಟ್ಟನಾಡು ತಾಲೋಕಿನವರು ಏರ್ಪಾಡು ಮಾಡುತ್ತಾರೆ. ಚರ್ಚಿಸತಕ್ಕ ವಿಷಯಗಳನ್ನು ತಾ. 4—5—'31 ರ ಒಳಗೆ ಜನರಲ್ ಸೆಕ್ರೆಟರಿಯವರಿಗೆ ತಿಳುಹಿಸಬೇಕೆಂತಲೂ, ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತಲೂ ಕೋರುತ್ತೇನೆ.

ಚಂದಾ ಬಾಕಿಗಳನ್ನು ಎರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಿಗಳಾಗ ಕೂಡದು. ಎಲ್ಲಾ ಮೆಂಬರುಗಳು ತಮ್ಮ ಬಾಕಿ ಚಂದಾ ಮೊಬಲಗನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ.

ಕೊಡಗು ಜಮೀನ್ದಾರರ ಸಂಘ   ಪಿ. ಐ. ಬೆಳ್ಯಪ್ಪ,
ತಾ. 20—4—1931.   (ಜನರಲ್ ಸೆಕ್ರೆಟರಿ.)

"ರೂಪಾಯಿಗಳು 5-8-0 ಮಾತ್ರ.

ನಮ್ಮ ಉಚಿತ ಜೀವವಿಮೆಯು

ಅನೇಕ ಬಡಬಗ್ಗರನ್ನು ಕಾಪಾಡಿದೆ.

ನೀವೇಕೆ ಹೊಂದಬಾರದು?

ಈಗ ಆಗಲೇ 53,000 ಜನಗಳು ಮೆಂಬರಾಗಿದ್ದಾರೆ.

ಇಂಡಿಯಾ ಸರ್ಕಾರದಲ್ಲಿ ಡಿಪಾಜಿಟ್ ಕಟ್ಟಿರುವ

ಹಣ ರೂ. 2,00,000.

ಬಡವರಿಗೆ ಭಾಗ್ಯಕಾಲ! ಎಲ್ಲರಿಗೂ ಅನುಕೂಲ!!

WANTED.

Agents for Coorg on liberal Commission on decent pay per month.

Apply to.—

The Branch Secretary.
The Venus Assurance Co, Ltd.
No. 2 Krishna Buildings.
12—1. Bangalore City.

ಗಾಂಧಿಜಿಯವರ ಭಾಷಣ.

ಡಿಲ್ಲಿಯಲ್ಲಿ ಇಂಡಿಯನ್ ಚೇಂಬರ್ಸ್ ಫೆಡರೇಶನ್ ಎಂಬುದರಲ್ಲಿ ಗಾಂಧಿಜಿಯವರು ಹೀಗೆಂದರು. 'ನಾನು ಹಿಂದೀಯಲ್ಲೇ ಮಾತನಾಡುವೆನೆಂದು, ಯುದ್ಧ ಕಾಲದಲ್ಲಿ ಲಾರ್ಡ್ ಚೆಮ್ಸ್‌ಫೋರ್ಡ್ ಎಂಬವರೊಡನೆ ನಾನು ಕೇಳಿದಾಗ ಅವರು ಅದಕ್ಕೆ ಒಪ್ಪಿದರು. ಹಾಗೆ ನಾನು ಕೇಳಿಕೊಂಡುದು ಇದೇ ಮಂದಿರದಲ್ಲಿಯೇ. ಅಂದಿನಿಂದ ಹಿಂದಿಯಲ್ಲೇ ಮಾತನಾಡಲು ನನಗೆ ಪ್ರೋತ್ಸಾಹ ದೊರೆತಂತಾಯಿತು. ಈ ಫೆಡರೇಶನಿನಲ್ಲಿರುವುದು ಎಲ್ಲಾ ಹಿಂದೀಯ ವ್ಯಾಪಾರಿಗಳೇ ಆದುದರಿಂದ ಇದರ ಎಲ್ಲಾ ಕಾರ್ಯಭಾಗಗಳನ್ನು ಹಿಂದೀಯಿಂದಲೇ ಮಾಡುವುದು ನಮ್ಮ ಧರ್ಮವಾಗಿರುತ್ತದೆ. ಭೂಲೋಕದ ಯಾವ ಪ್ರಾಂತ್ಯವೂ ತನ್ನ ವ್ಯವಸ್ಥಿತ ರೀತಿಯನ್ನು ಅನ್ಯ ಭಾಷೆಯಲ್ಲಿ ನಡಿಸುದಿಲ್ಲ. ದಕ್ಷಿಣಾಫ್ರಿಕದಲ್ಲಿ ಡಚ್ಚರೂ, ಇಂಗ್ಲಿಷರೂ ಯುದ್ಧ ನಡಿಸಿ ಕೊನೆಗೆ ಎರಡು ಭಾಷೆಗಳನ್ನು ಜಾರಿಗೆ ತರಬೇಕೆಂದು ಆಲೋಚಿಸಿಕೊಂಡರು.

ಸ್ವರಾಜ್ಯವೆಂಬುದು ಬರೇ ಹಿಂದೂಗಳಿಗೆಂಬ ಭಾವನೆಗಿಂತ ತಪ್ಪು ಭಾವನೆ ಬೇರೊಂದಿಲ್ಲ. ಹೀಗಾಗಿ ಹೋದರೆ ನನ್ನ ಎಲ್ಲಾ ಸಾಮರ್ಥ್ಯವನ್ನೂ ಕೇಂದ್ರೀಕರಿಸಿ ನಾನು ಹೋರಾಡುವೆನು. ನನ್ನ ಅಭಿಪ್ರಾಯದ ಮೇರೆಗೆ ಸ್ವರಾಜ್ಯವೆಂದರೆ—ಹಿಂದು, ಮುಸಲ್ಮಾನ, ಸಿಖ್ಖ, ಪಾರ್ಸೀ ಮೊದಲಾದವರಿಗೆ ಅನುಕೂಲವಾಗಿರುವಂಥ ರಾಜ್ಯವೆಂದು. ಅವರೆಲ್ಲರೂ ಸಂತೋಷದಿಂದ, ಸಂತುಷ್ಟಿಯಿಂದ ಇರಬೇಕಾಗುವ ರಾಜ್ಯವೆಂದು. ದಕ್ಷಿಣಾಫ್ರಿಕದಲ್ಲಿ ನಾನು ಜನರಲ್ ಸ್ಮಟ್ಸ್ ಎಂಬ ಅಧಿಕಾರಿಯನ್ನು ಸಂದರ್ಶಿಸಿದಾಗ ಹೀಗೆಂದು ಕೇಳಿದೆನು—'ನಾವು ಇಂಗ್ಲೆಂಡಿನಲ್ಲಿ ಸಹಪಾಠಿಗಳಾಗಿದ್ದಾಗ ನಮ್ಮೊಳಗೆ ಮತ ವೈಷಮ್ಯವು ಇರಲಿಲ್ಲವಷ್ಟೆ! ಈಗ ನಮ್ಮನ್ನು ಪ್ರತ್ಯೇಕಿಸುವುದು ಯಾವುದು?' ಅದಕ್ಕೆ ಸ್ಮಟ್ಸರು—ಅದು "ನಮ್ಮ ನಿಮ್ಮ ಮತಭೇದಗಳಿಂದಾಗಿಯೇ ಆಗುತ್ತದೆ. ನಿಮ್ಮ ಪೌರಾತ್ಯ ಸಂಸ್ಕೃತಿಯನ್ನು ನಾವು ಮೆಚ್ಚುವುದಿಲ್ಲ. ಅದಕ್ಕಾಗಿಯೇ ನಾವು ಅನೇಕ ಶಾಸನಗಳನ್ನು ಜಾರಿಗೆ ತರುತ್ತಿರುವುದು" ಎಂದರು. ಅವರ ಮಾತಿನ ಅರ್ಥವು ನನಗಾಯಿತು. ಹಿಂದೀಯರು ಎಷ್ಟರ ತನಕ ದಕ್ಷಿಣಾ ಆಫ್ರಿಕಾದಲ್ಲಿರುತ್ತಾರೋ ಅಷ್ಟರ ತನಕ ಅವರು ಅಲ್ಲಿಯವರಂತೆಯೇ ನಡೆಕೊಂಡು ಬರಬೇಕು. ಹಿಂದೂಸ್ಥಾನದಲ್ಲಿಯೂ ಹಾಗೆಯೇ ನಾವು ಅದನ್ನು ಜಾಗ್ರತೆಯಿಂದ ಆಲೋಚಿಸಬೇಕು. ಆದುದರಿಂದ ನನ್ನ ಆಂಗ್ಲೇಯ ಸ್ನೇಹಿತರಿಗೆ ನಾನು ಹೇಳುವುದೇನೆಂದರೆ,—ಪೌರಾತ್ಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳೊಳಗೆ ವಿಶೇಷ ಬೇಧಾಬೇಧವಿರುವುದು. ಪೈಸರಾಯರು ಬಹು ಒಳ್ಳೆಯ ಜನರಾಗಿರಬಹುದು. ಆದರೂ ಅವರ ಇರುವಿಕೆಗೂ ನಮ್ಮ ಜೀವನಕ್ಕೂ ತಾರತಮ್ಯವಿದೆ. ಇಂಗ್ಲಾಂಡಿನಲ್ಲಿ ಹಲವು ವರ್ಷಗಳಿದ್ದು ಹಿಂದೂದೇಶಕ್ಕೆ ಒಂದೊಡನೆ ಇಲ್ಲಿಯ ಕ್ರಮಗಳಿಗನುಗುಣವಾಗಿ ನಡೆಯುತ್ತ ಬಂದಿದ್ದ ಎಷ್ಟೋ ಶ್ರೇಷ್ಠ ಕುಲಗಳನ್ನು ನಾನು ಅರಿತಿರುವೆನು. ನಮ್ಮ ಕುಲಗಳು ನಾಶವಾಗಿ ಹೋಗದಿದ್ದುದಕ್ಕಾಗಿ ನಾನು ದೇವರಿಗೆ ಉಪಕಾರ ಸ್ಮರಣೆಯನ್ನು ಮಾಡುತ್ತೇನೆ. ನಮ್ಮ ವ್ಯಾಪಾರ [illegible] ಸಂಬಂಧವಾಗಿ ನಾವು ಇಂಗ್ಲಾಂಡಿಗೆ [illegible]ದರೆ ಅದು ಬೇರೆ ವಿಷಯ. [illegible] ರೆ ಇಲ್ಲಿಯ ಸಂಸ್ಕೃತಿಯು ಈ ನೆಲದಲ್ಲೇ ಇರಬೇಕು. ಜೀನ್ನರ [illegible]ಗಳಲ್ಲೂ ಹಾಗೆಯೇ ಆಗುತ್ತಿರುತ್ತವೆ. ನಮ್ಮ ಸಂಸ್ಕೃತಿಯೇ ಉತ್ತಮವೆಂದು ನಾವು ಹೇಳುವುದಿಲ್ಲ. ಆಂಗ್ಲೇಯರು ನಮ್ಮನ್ನು ಅವರ ಸಂಸ್ಕೃತಿಯ ಪ್ರಕಾರ ನಡೆಯಬೇಕೆಂದರೆ ಆಗ ವಿಪರೀತವಾದ ಹೋರಾಟವುಂಟಾಗುವುದು.

ಕಾಂಗ್ರೆಸ್ಸೆಂಬುದು ಬಡವರ ಆಶ್ರಯಸ್ಥಾನ. ಅದು ಹಿಂದೂಸ್ಥಾನದ ವ್ಯಾಪಾರವನ್ನು ಅಭಿವೃದ್ಧಿಗೊಳಿಸಬೇಕೆಂದು ಆಶಿಸುತ್ತದೆ. ವರ್ತಕರು ಕಾಂಗ್ರೆಸ್ಸಿಗೆ ಅಪರಿಮಿತ ಸಹಾಯವನ್ನು ಮಾಡಿರುವರು. ಯಾವುದರಲ್ಲೂ ವರ್ತಕ ಜನಾಂಗವನ್ನು ಕೇಳಿಕೊಳ್ಳದೆ ಕೆಲಸಗಳನ್ನು ಅದು ಮಾಡುವುದಿಲ್ಲ. ಹಾಗಿರುವಾಗ ವರ್ತಕ ಸಮಾಜವು ರಾಷ್ಟ್ರ ಸೇವಕರಾಗಿ ತನ್ನ ತ್ಯಾಗದ ಬಲದಿಂದ ಕಾಂಗ್ರೆಸನ್ನು ವಶೀಕರಿಸಿಕೊಳ್ಳಬೇಕು. ಈ ಕಾಂಗ್ರೆಸ್ ಎಲ್ಲಾ ರೈತರಿಗಾಗಿಯೂ, ವರ್ತಕರಿಗಾಗಿಯೂ ಇರುತ್ತದೆ. ಅಂಥಾ ಕಾಂಗ್ರೆಸು ಈಗ ಏನನ್ನು ಕೃದೆ? 'ನೀವು ಇಷ್ಟರ ತನಕ ಬಡವರ ಹೆಗಲ ಮೇಲೆ ಕುಳಿತುಕೊಂಡಿದ್ದಿರಿ. ಈಗ ಕೆಳಗಿಳಿದು ಆ ಬಡವರ ರಕ್ಷಕರಾಗಿರಿ' ಹಿಂದೀಯರ ನಡುವೆ ಇದ್ದು ಬೇಕಾದರೆ ಇಂಗ್ಲಿಷರೂ ಕೂಡ ಹಿಂದೂದೇಶದ ಜನಾಂಗದ ಸೇವಕರಾಗಿರಲಿ, ಸ್ನೇಹಿತರಂತೆಯೂ, ಸಹಚರರಂತೆಯೂ ಅವರನ್ನು ನಾವು ಸ್ವೀಕರಿಸುತ್ತೇವೆ. ಆದರೆ ನಮ್ಮ ಯಜಮಾನರಾಗಿ ಅವರನ್ನು ನಾವು ಸ್ವೀಕರಿಸೆವು.

ನಿಜವಾದ ಸ್ವರಾಜ್ಯವು ಸಿಕ್ಕುವುದಾದರೆ ನಮ್ಮ ದೇಶಕ್ಕೆ ಸಿ. ಯಫ್. ಎಂಡ್ರೂಸರಂಥ ಮಹನೀಯರು ಯಾವಾಗಲೂ ಬರಬಹುದು. ಇಂಗ್ಲಿಷರು ಎಂದು ನಮ್ಮ ಜನರಿಗೆ ಸಹಾಯ ಮಾಡಿದರಾದೀತು. ನಮ್ಮ ರಾಷ್ಟ್ರವು ಪರರಾಷ್ಟ್ರಗಳಿಗೆ ಭಯವನ್ನುಂಟು ಮಾಡುವಂಥಾದ್ದಲ್ಲ. ನಮಗೆ ಅನ್ಯ ರಾಜ್ಯಗಳನ್ನು ಗೆಲ್ಲಬೇಕೆಂಬ ಅಭಿಪ್ರಾಯವಿಲ್ಲ. ಅಲ್ಲದೆ ಅನ್ಯ ರಾಷ್ಟ್ರಗಳು ನಮ್ಮನ್ನು ಗೆಲ್ಲಲು ಪ್ರಯತ್ನಿಸುವುದನ್ನು ನೋಡಿ ಸಹಿಸುವವರಲ್ಲ. ನನಗೆ ಬೇಕಾದುದು ರಾಜರ, ರೈತರ ವರ್ತಕರ, ಇಂಗ್ಲಿಷರ ಮತ್ತು ಎಲ್ಲರ ಶ್ರೇಯಸ್ಸಿಗಾಗಿರುವ ರಾಜ್ಯ—ಸ್ವರಾಜ್ಯ ಹೀಗಿದ್ದರೆ ಮಾತ್ರ ನಿಜವಾದ ಸಹೋದರಭಾವವು ತಲೆದೋರುವುದು. ವರ್ತಕ ಸಮಾಜದವರಾದ ನೀವು ದೇಶಕ್ಕಾಗಿ ತ್ಯಾಗಿಗಳಾದರೆ, ಸ್ವರಾಜ್ಯದ ಹಾದಿಯು ನಿಶ್ಚಯವಾಗಿ ಸುಲಭವಾಗುವುದು.

'ಸ್ವ. ಅ'

"ಜೀವಿಸಬೇಕಾದರೆ ಸ್ವಾತಂತ್ರ್ಯ ಧ್ವಜ ಹಿಡಿದೆತ್ತಿ"

ಮೌಲಾನಾ ಶೌಕತ್ಯಾಲಿಗಳೂ, ಅವರ ಹಿಂಬಾಲಕರೂ ಕೋಮುವಾರು ವಿಷಕಾರುತ್ತಿರಲು, ಗಾಂಧಿಯನ್ನು ಬಾಯಿಗೆ ಬಂದಂತೆ ಬಯ್ಯುತ್ತಿರಲು "ಗಡಿನಾಡಿನ ಗಾಂಧಿ" ಯೆನಿಸಿದ ಪಠಾಣಕುಲದ ಖಾನ್ ಅಬ್ದುಲ್ ಗಫಾರ್ ಖಾನರು ಮಹಮ್ಮದ್ ಪೈಗಂಬರರ ಶುದ್ಧ ಶಿಷ್ಯರಂತೆ, ಅಚ್ಚ ಮುಸಲ್ಮಾನರಂತೆ, ಮಾತನಾಡುತ್ತಿರುವರು. ಕೋಮುವಾರು ಅಗ್ನಿ ಭಕ್ಷಕರನ್ನು ಅವರು ತಲೆ ತಗ್ಗಿಸುವಂತೆ ಮಾಡುತ್ತಿರುವರು. ಮುಂಬಯಿಯಲ್ಲಿ ಅಂತಹ ಕೋಮುವಾರು ಕೂಟದ ಮುಸಲ್ಮಾನರನ್ನು ಸಂಬೋಧಿಸಿ ಮಾತನಾಡುತ್ತ ಅವರು "ಮಸೀದಿಯ ಮುಂದೆ ಸಂಗೀತವಾದರೆ ಅಯ್ಯೋ ನಮ್ಮ ಧರ್ಮ ಹಾಳಾಯಿತೆಂದು ಬೊಬ್ಬೆ ಇಡುತ್ತೇವೆ. ಅರಳೆ ಮರದ ಒಂದು ಕೊಂಬೆ ಮುರಿದರೆ ಅಯ್ಯೋ ಧರ್ಮ ನಾಶವಾಯಿತೆಂದು ಆರ್ಭಟಿಸುತ್ತೇವೆ. ಇದೆಂಥಹ ವಿಚಿತ್ರ ಧರ್ಮ!! ಇಂತಹ ಅಸಹನೆಯುಳ್ಳ ಧರ್ಮ ಧರ್ಮವೇ? ತಲೆತಿರುಕರನ್ನಾಗಿ ಮಾಡುವ, ರಕ್ತದಾಹದಿಂದ ನಾಲಿಗೆ ಚಾಚುವಂತೆ ಮಾಡುವ ಧರ್ಮ ಧರ್ಮವೇ? ಪೆಷಾವರದಲ್ಲಿ ಮಾರ್ಷಲ್ ಲಾ ಜಾರಿಯಲ್ಲಿದ್ದಾಗ ಮಸೀದಿಗಳ ಮುಂದೆ ಕೊಂಬು ಕಹಳೆಗಳೂ, ತಮಟೆ ತುತ್ತೂರಿಗಳೂ ನಿರಂತರ ವಾದ್ಯಘೋಷ ಮಾಡುತ್ತಿದ್ದವು. ಆಗ ನೀವೇಕೆ ಉರಿಕೆತ್ತಲಿಲ್ಲ? ಆಗ ನಿಮ್ಮ ಧರ್ಮಕ್ಕೆ ಲೋಪ ಬರಲಿಲ್ಲವೋ? ಆಗ ನಿಮ್ಮ ಧರ್ಮಾಭಿಮಾನವೆಲ್ಲಿ ಹೋಗಿತ್ತು? ಒಬ್ಬರಾದರೂ ಬಾಯೇ ಬಿಡಲಿಲ್ಲವಲ್ಲ ಆಗ? ಬ್ರಿಟಿಷರವನು ನಿಮ್ಮ ಮಸೀದಿಗಳ ಮುಂದೆ ಬೊಬ್ಬೆ ಇಡಬಹುದು. ಹಿಂದುವು ವಾದ್ಯ ಬಾರಿಸಿದರೆ ಮಾತ್ರ ಅದು ಮಹಾಪರಾಧ!! ಇದೇ ಅಲ್ಲವೇ ನಿಮ್ಮ ಧರ್ಮಶ್ರದ್ಧೆ." ಅಂದರು. ಹಿಂದುಗಳೂ, ಮುಸಲ್ಮಾನರೂ, ಉಭಯ ಪಂಗಡದವರೂ ಮೆಲುಕು ಹಾಕಲು ಬೇಕಾದಷ್ಟು ಆಹಾರವಿದೆ ಇದರಲ್ಲಿ.

ಇಂದಿನ ಸ್ವಾತಂತ್ರ್ಯ ಸಂಗ್ರಾಮದ ಮಹತ್ವತೆ, ಅಬ್ದುಲ್ ಗಫಾರ್ ಖಾನರು ಆಡಿದ ಮಾತುಗಳನ್ನು ಆಲಿಸಿ

"ಈ ಸಮಯದಲ್ಲಿ ನೀವು ದೇಶ ಸೇವೆಯಲ್ಲಿ ನಿರತರಾಗಬೇಕಾದುದು ನಿಮ್ಮ ಕರ್ತವ್ಯ. ಆ ಕರ್ತವ್ಯದ ನೆನಪನ್ನು ನಿಮಗೆ ಇತರರು ಮಾಡಿಕೊಡಬೇಕಾದ ಸ್ಥಿತಿಯೊದಗಿರುವುದನ್ನು ಕಂಡರೆ ನಾಚಿಕೆಯಾಗುವುದಿಲ್ಲವೇ?

ಮುಸಲ್ಮಾನರು ಭಾರತೀಯರಲ್ಲವೇನು? ಭಾರತವು ಅವರಿಗೆ ಮಾತೃಭೂಮಿಯಲ್ಲವೇನು? ಅದರ ಅಭಿವೃದ್ಧಿಯು ಮುಸಲ್ಮಾನರ ಸುಖವಲ್ಲವೇನು? ಭರತಖಂಡಕ್ಕೆ ಸ್ವರಾಜ್ಯ ಬಂದಾಗ ಮುಸಲ್ಮಾನರು ಆ ಸ್ವರಾಜ್ಯ ಸುಖವನ್ನು ಉಣ್ಣುವುದಿಲ್ಲವೇನು? ಇಲ್ಲ ತಮ್ಮ ಹಿತೈಷಿಗಳಾದ ಬ್ರಿಟಿಷರು ಭರತಖಂಡ ಬಿಟ್ಟು ಹೋಗುವರಲ್ಲಾ ಎಂದು ಅವರೊಂದಿಗೆ ಮುಸಲ್ಮಾನರೂ ಗಂಟು ಮೂಟೆ ಕಟ್ಟಿ ಭರತಖಂಡ ತ್ಯಾಗ ಮಾಡುವರೋ? ಇಷ್ಟು ಮಾತ್ರ ಅವರು ತಿಳಿಯಲಿ. ಅವರು ಎಲ್ಲಿಗೆ ಹೋದರೂ ಅವರನ್ನು ಒಸ್ಸೆಂದು ಕರೆಯುವುದಿಲ್ಲ. ಮುಸಲ್ಮಾನರು ಭರತ ಖಂಡದಲ್ಲೇ ಇರಬೇಕು. ಅವರು ಕಷ್ಟ ಸುಖಗಳಲ್ಲಿ ಭಾಗಿಗಳಾಗಬೇಕು. ಕಷ್ಟಪಟ್ಟು, ದಾರಿದ್ರ್ಯ ಇತರರು ಸುಖಸಂಪದಗಳನ್ನು ಗಳಿಸಲು, ಹಟವಾಗಿದ್ದ ನೀವು ಆಗ ಹೋಗಿ ಆ ಸಂಪತ್ತಿನಲ್ಲಿ, ಆ ಸುಖದ ಭಾಗಿಗಳಾಗಲು ನಾಚಿಕೆಯಾಗುವುದಿಲ್ಲವೆ? ಅನ್ನ ಅವ ಮಾಡಲಿ, ಊಟ ನಾನು ಮಾಡುತ್ತೇನೆ ಎಂಬ ನಡತೆ ನೀಚವಾದದ್ದು. ಎದ್ದೇಳಿ. ಕಾಲಧರ್ಮಕ್ಕೆ ಉಚಿತವಾಗಿ ವ್ಯವಹರಿಸಿ. ಹಿಂದೆ ಬೀಳಬೇಡಿ. ಭರತಖಂಡವು ಸ್ವತಂತ್ರವಾಗುತ್ತದೆ. ಅವರೊಂದಿಗೆ ನೀವೂ ಸ್ವತಂತ್ರರಾಗಬೇಕು. ಆಗ 'ಈ ವಿಜಯದಲ್ಲಿ ನಾನೇನು ಮಾಡಿದೆ' ನೆಂಬ ಪ್ರಶ್ನೆಯು ನಿಮ್ಮನ್ನೇ ಬಾಧಿಸುತ್ತದೆ. ಕಾಂಗ್ರೆಸ್ ಹಿಂದುಗಳದ್ದಲ್ಲ, ಮುಸಲ್ಮಾನರದ್ದಲ್ಲ, ಭಾರತೀಯರದು. ಅದು ನಿಮ್ಮದೇ, ನಿಮ್ಮದಾಗಿ ಮಾಡುವ ಶಕ್ತಿ ನಿಮ್ಮ [illegible] ಗ್ರೆಸು ಸ್ವಾತಂತ್ರ್ಯ ಬಯಸುತ್ತಿರುವುದು ಹಿಂದುಗಳ [illegible] ತಮಗಾಗಿ. ನಿಮ್ಮ ಗುಲಾಮಗಿರಿ, ಕೆಲಸಗಾರ[illegible] ವು ಮಾಡಬೇಕಾದ ಕೆಲಸವನ್ನು ಕಾಂಗ್ರೆಸು [illegible] ಸ್ವಾತಂತ್ರ್ಯ ಧ್ವಜ ಹಿಡಿದೆತ್ತಿ, ಶತಮಾನಗಳಿಂದ [illegible] ಸಲ್ಮಾನರು ಇಂದೆಲ್ಲಿ? ಪೈಗಂಬರರು ಹೇಳಿದ '[illegible] ಉದ್ಧಾರಕ್ಕಾಗಿ ಬಂದೆನು. ಒಂಧಕರ ನೋಕ್ಷದಾ[illegible] ದೆನು.' ಎಂಬ ಮಾತುಗಳನ್ನು ಮರೆತಿರಾ? ಅತನ[illegible] ಗಳೇ ನೀವು? ಹಿಂದುಗಳೂ ಮುಸಲ್ಮಾನರೂ [illegible] ತಖಂಡದಲ್ಲಿ ಉಳಿದವರಲ್ಲವೇ? ಗುಲಾಮರಾಗಿ [illegible] ಜೀವಿಸಬೇಕೆ? ಹಾಗಾದರೆ ಏಳಿ. ಸ್ವಾತಂತ್ರ್ಯ ಧ್ವಜ ಹಿಡಿಯಿರಿ."

ಭರತ ಖಂಡದ ಜನಸಂಖ್ಯೆ 1931

ಬ್ರಿಟಿಷ್ ಪ್ರಾಂತ್ಯಗಳು.

ಅಜಮೀರ್-ಮಾರವಾಡ	
ಅಂಡಮಾನ-ನಿಕೋಬಾರ್	
ಆಸಾಂ	
ಬಲುಚಿಸ್ಥಾನ	
ಬಂಗಾಳ	
ಬಿಹಾರ	
ಒರಿಸಾ	
ಛೋಟಾ ನಾಗಪುರ	
ಮುಂಬಯಿ (ಸಿಂಧ ಬಿಟ್ಟು)	
ಸಿಂಧು	
ಡಿಲ್ಲಿ	
ಬ್ರಹ್ಮದೇಶ	
ಮಧ್ಯಪ್ರಾಂತ	
ಬೀರಾರ್	
ಕೊಡಗು	
ದೆಹಲಿ	
ಮದರಾಸು	
ವಾಯುವ್ಯ ಸರಹದ್ದು	
ಪಂಜಾಬು	
ಆಗ್ರಾ	
ಅಯೋಧ್ಯಾ	
ಒಟ್ಟು	270614

ಸಂಸ್ಥಾನಗಳು.

ಅಸಾಮದಲ್ಲಿನ ಸಂಸ್ಥಾನಗಳು	11
ಬಲುಚಿಸ್ಥಾನದ ಸಂಸ್ಥಾನಗಳು	41
ಬರೋಡಾ	241
ಬಂಗಾಳದ ಸಂಸ್ಥಾನಗಳು	97
ಬಿಹಾರ-ಒರಿಸ್ಸಾ ಸಂಸ್ಥಾನಗಳು	461
ಮುಂಬಯಿ ಸಂಸ್ಥಾನಗಳು	437
ಮಧ್ಯ ಹಿಂದೂಸ್ಥಾನದ ಸಂಸ್ಥಾನಗಳು	661
ಮಧ್ಯ ಪ್ರಾಂತದ ಸಂಸ್ಥಾನಗಳು	248
ಗ್ವಾಲಿಯರ್	352
ಹೈದರಾಬಾದ್	1439
ಕಾಶ್ಮೀರ ಸಂಸ್ಥಾನ	361
ಕೊಚ್ಚಿ	120
ತಿರುವಾಂಕೂರು	507
ಮೈಸೂರು	655
ಸರಹದ್ದಿನ ಸಂಸ್ಥಾನಗಳು	225
ಪಂಜಾಬು ಸಂಸ್ಥಾನಗಳು	410
ರಜಪುತಾನ	12?
ಸಂಯುಕ್ತಪ್ರಾಂತ ಸಂಸ್ಥಾನ	20
ಪಶ್ಚಿಮ ಹಿಂದೂಸ್ಥಾನ ಸಂಸ್ಥಾನ	241
ಒಟ್ಟು	808355
ಒಟ್ಟು ಹಿಂದೂಸ್ಥಾನ	3514500

ರಬ್ಬರ್ ಮೋಹರುಗಳು.

ನೀವು ಅಪೇಕ್ಷಿಸುವ ಯಾವತ್ತೂ ಮಾದರಿಯಲ್ಲಿ ತಯಾರಿಸಿ ಕೊಡಲಾಗುವವು.

ಮೇಲ್ಕಂಡ ಸಾಮಾನುಗಳಲ್ಲದೆ ಕನ್ನಡಿಯ ಸ್ಟ್[illegible] ಬೇರೆಡ್ಡುಗಳು ಹಾಫ್ ಟೋನ್ ಬ್ಲಾಕ್ ಮನೋಗ್ರ[illegible] ಮೊಹರು, ಚಾದ್ರಕಾಂತ ಶಿಲೆಯ ಹಲಿಗೆಗಳು, ಉಂಗು[illegible] ಇಗಡುವ ಬಹು ಅಂದವಾದ ಸಣ್ಣ ಕಲ್ಲುಗಳು ಇತ್ಯಾದಿ

ದಿ ಕನ್ನಡ ರಬ್ಬರ್ ಸ್ಟಾಂಪ್ ಕಂಪೆನಿ,
12—6 ಮಂಗಳೂರು, ದ. ಕನ್ನಡ.
ಯಾ
ಏಜಂಟ್ ಯನ್. ಯ. ಸ್. ಪೊನ್ನಪ್ಪ,
ಮಡಿಕೇರಿ.

ಪತ್ರವ್ಯವಹಾರ.

[ಇಲ್ಲಿ ಪ್ರಕಟವಾಗುವ ಅಭಿಪ್ರಾಯಗಳಿಗೆ ಪತ್ರಿಕಾ ಸಂಪಾದಕರು ಬಾಧ್ಯಸ್ಥರಲ್ಲ. ಸಂ]

ಬೆಳ್ಳೂರಲ್ಲಿ ಸಿಡುಬು.

ಶ್ರೀಮಂಗಲ ನಾಡಿನ ಬೆಳ್ಳೂರು ಗ್ರಾಮದಲ್ಲಿ ಸಿಡುಬಿನ ರೋಗದ ನರಳುತ್ತಿದ್ದ 18 ಜನರ ಪೈಕಿ 8 ಜನರು ಇಹವನ್ನು ಬಿಟ್ಟರು. 7 ಜನರಿಗೆ ಡಾಕ್ಟ್ರ ಹಾಕಿದ್ದರಿಂದ ಗುಣವಾಯಿತು. ತಾ 18—4—31 ರಲ್ಲಿ ಬೆಳ್ಳೂರ ದುರ್ಗೆ ಉತ್ಸವದಲ್ಲಿ ನೆರೆದ 200 ಜನರಿಗೆ ವ್ಯಾಕ್ಸಿನೇಟರು ಡಾಕು ಹಾಕಿಸಿ ಕೊಳ್ಳುವುದರಿಂದ ಉಂಟಾಗುವ ಪ್ರಯೋಜನವನ್ನು, ಶುಚಿತ್ವದ ವಿಷಯಗಳನ್ನು ಕುರಿತು ಭಾಷಣ ಮಾಡಿದರು. ಈಗಾಗಲೇ 193 ಜನರಿಗೆ ಡಾಕು ಹಾಕಿ ಆದ್ದರಿಂದ ಗ್ರಾಮದಲ್ಲಿ ಸದರಿ ರೋಗವು ಹರಡುವ ಬಲ ಮತ್ತು ನಾಡಿನವರೆಲ್ಲರೂ ಸಿಡುಬು ರೋಗದಿಂದ ರೋಗ ಮುಕ್ತರಾಗಲು ಮನಸು ಕೊಡಬೇಕಾಗಿದೆ. ಸದರಿ ದೇವಸ್ಥಾನಕ್ಕೆ ಸತ್ಯಾಗ್ರಹ ಮಂಡಲಿಯವರಾಗಿ ಮೆ ಅಜ್ಜಮಾಡ ಮಾದಪ್ಪನವರು ಮದ್ಯಪಾನ ನಿಷೇಧ ಖಾದಿ ಪ್ರಚಾರ ಮತ್ತು ಗ್ರಾಮಸ್ಥರು ನಡಿಯತಕ್ಕ ಕೆಲಸ ಕ್ರಮಗಳನ್ನು ಬೋಧಿಸಿದರು.

"ಶ್ರೀಮಂಗಲ ನಾಡಿನವ'

ಕಾರ್ಯೋಣರ ತೀರ್ಮಾನ.

14—4—31ರಲ್ಲು ಹುದಿಕೇರಿ ಪೇಟೆಯ ಹತ್ತಿರವಿರುವ ಅಜ್ಜಪ್ಪನ ಕಾರಣೋರಸ್ಥಾನದಲ್ಲಿ ವರ್ಷಾಬ್ಧಿ ನಡೆಯಿತು. ಕೊಡಗಿನ ಸತ್ಯಾಗ್ರಹ ಮಂಡಳಿ ಪರವಾಗಿ ಕೊಳ್ಳಿಮಾಡ ಕರುಂಬೈಯ್ಯನವರೂ, ಅಜ್ಜಮಾಡ ..ರೂ, ಅಜ್ಜಿಕುಟ್ಟಿರ ಚಿಣ್ಣಪ್ಪನವರೂ, ಅಲೆಮಾಡ ..ರೂ, ಅಪ್ಪಂಡೆರಂಡ ಬಿದ್ದೈಯ್ಯನವರೂ, ಮುಕ್ಕಾಂಡ ..ರೂ, ಕಾಟಿಮಾಡ ಮಾದಪ್ಪನವರೂ, ಚೆಕ್ಕೇರ ..ನವರೂ, ಚೇಂದೀರ ಮುದ್ದೈಯ್ಯನವರೂ ಚೆಕ್ಕೇರ ..ನವರೂ ಮತ್ತು ಜೊಟ್ಟಿಂಗಲ ಕುಶಾಲಪ್ಪನವರೂ ..ರು. ಉತ್ಸವದಲ್ಲಿ ವರ್ಷ ವರ್ಷ ಸುಮಾರು 60 ..ನೆ ಸಾರಾಯಿ ಹರಕೆ ಮಾಡಿದರಿಂದ ಒರುತ್ತಿ ವರ್ಷ 5 ಸೀಸೆ ಮಾತ್ರ ಒಂದಿತ್ತು. ಕಾರ್ಣೋರರೂ ಇನ್ನು ಮುಂದಕ್ಕೆ ಸದರಿ ಸ್ಥಾನದಲ್ಲಿ ಸತ್ಯವಕ್ಕೆ ಯಾರೂ ಸಾರಾಯಿ, ಸೇಂದಿ ಕನುವ ..ದು ಒಪ್ಪಂದ ಕೊಟ್ಟು ಪ್ರಸಾದವನ್ನು ಮದ್ದೈಯ್ಯನವರಿಗೆ ಕೊಟ್ಟು ಅವರು ಹೋದಲ್ಲೆಲ್ಲ ..ಧಕ್ಕೆ ತುಂಬಾ ಜಯವಾಗಲೆಂದು ಆಶೀರ್ವದಿಸಿದರು.

ಒಯಮಂಗ ಸಂಚಪ್ಪ

ಮೂರ್ನಾಡು ಮತ್ತು ನಾಪೋಕ್ಲು ನಾಡುಗಳಲ್ಲಿ ಗ್ರಾಮ ಪ್ರಚಾರ

ತಾರೀಕು 12—4—31 ರಲ್ಲು ಸತ್ಯಾಗ್ರಹಿಗಳಾದ ಸೋಮೆಯಂಡ ಅಚ್ಚೈಯ್ಯನವರು, ಕಾತಮಂಡ ಪೂವೈಯ್ಯನವರು, ಚೈಯ್ಯಂಡ ಗಣಪತಿಯವರು, ಮಲಚಿರ ಚಿಣ್ಣಪ್ಪನವರು ಮೂರ್ನಾಡು ಹೊದ್ದೂರು ಗ್ರಾಮದ ಕಬ್ಬಾಡ ಕೇರಿಯಲ್ಲಿ ಸೇರಿ ಖಾದಿ ಪ್ರಚಾರ, ಮದ್ಯಪಾನ ನಿಷೇಧದ ವಿಷಯ ಪ್ರಚಾರ ಕೆಲಸ ಮಾಡಿದ್ದಲ್ಲದೆ ಮೀಟಿಂಗ್ ಸಹ ಮಾಡಲಾಯಿತು. ಗ್ರಾಮಸ್ಥರು ಉತ್ಸಾಹದಿಂದ ಮದ್ಯಪಾನ ನಿಷೇಧದ ಕಾರ್ಯವನ್ನು ಕೈಕೊಂಡಿರುವರು ತಾ 13-4-30 ರಲ್ಲು ಮೇಲ್ಕಂಡ ಸತ್ಯಾಗ್ರಹಿಗಳು ಸತ್ಯಾಗ್ರಹಿಗಳಾದ ಬಾಳ್ಯಂ ಈಶ್ವರೈಯ್ಯ ಮತ್ತು ಮೆ ಐನಂಡ ಕಾರ್ಯಪ್ಪನವರೊಡನೆ ಮೂರ್ನಾಡಿಗೆ ಸುತ್ತು ಮುತ್ತಲೂ ಇರುವ ನಾಲ್ಕಾರು ಮನೆಗಳಿಗೆ ಕುದ್ದಾಗಿ ಹೋಗಿ ಪ್ರಚಾರ ಕೆಲಸವನ್ನು ಪೂರೈಸಿದರು. ಮಾರನೆ ದಿನವೇ, ಈ ಮೊದಲು ಏರ್ಪಾಡು ಮಾಡಿದಂತೆ ಹೊದ್ದೂರು ಗ್ರಾಮಸ್ಥರ ಮೀಟಿಂಗು ಒಂದು ದೇವಸ್ಥಾನದ ಒಳ ಮಾಡಲಾಯಿತು. ಅಲ್ಲಿ ಸೇರಿದ ಸುಮಾರು 60 ಜನರಿಗೆ ಖಾದಿ ಪ್ರಚಾರ ಮದ್ಯಪಾನ ನಿಷೇಧ ಮತ್ತು ಈಗಿನ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಮೆ ಗಳಿಂದ ಐನಂಡ ಕಾರ್ಯಪ್ಪನವರೂ, ಸೋಮೆಯಂಡ ಅಚ್ಚೈಯ್ಯನವರೂ ಭಾಷಣ ಮಾಡಿದರು. ಭಾಷಣ ಮುಗಿದ ಕೂಡಲೆ ಗ್ರಾಮಸ್ಥರಲ್ಲಿ ಮೆ ಚೌರೀರ ಅಪ್ಪೈಯ್ಯನವರೂ ಮತ್ತು ಪೂವೈಯ್ಯನವರೇ ಮೊದಲಾದ ಮಹನೀಯರು ಇದಕ್ಕೆ ಒತ್ತಾಸೆಯಾದ ಭಾಷಣಗಳನ್ನು ಮಾಡಿ ಇನ್ನು ಮುಂದಕ್ಕೆ ಸೇಂದಿ ಸಾರಾಯಿಯನ್ನು ಪೂರಾ ನಿಲ್ಲಿಸುವಂತೆ ತೀರ್ಮಾನಿಸಿ ಆ ಬಗ್ಗೆ ಕೆಲಸ ಮಾಡಲು ಒಂದು ಕಮಿಟಿಯನ್ನು ಸಹ ನೇಮಕ ಮಾಡಲಾಯಿತು. ಸತ್ಯಾಗ್ರಹಿಗಳು ಅಲ್ಲಿಂದ ನೆಲಜಿಗೆ ಹೊರಟು ಆ ಗ್ರಾಮದ ಅಂಬಲದಲ್ಲಿ ಮೊದಲೇ ಏರ್ಪಾಡು ಮಾಡಿದ ಮೀಟಿಂಗಿಗೆ ಹಾಜರಾದರು. ನೆಲಜಿ ಗ್ರಾಮಸ್ಥರು ಸತ್ಯಾಗ್ರಹಿಗಳನ್ನು ಆದರ ಪೂರ್ವಕವಾಗಿ ಬರಮಾಡಿಕೊಂಡು ಅಲ್ಲಿ ಸೇರಿದ ಸುಮಾರು 100 ಜನ ಗ್ರಾಮಸ್ಥರ ಸಭೆಯಲ್ಲಿ ಮೆ. ಐನಂಡ ಕಾರ್ಯಪ್ಪನವರು ಈಗಿನ ರಾಜಕೀಯ ಪರಿಸ್ಥಿತಿ, ಸತ್ಯಾಗ್ರಹ ಚಳವಳಿ, ದೇಶಸ್ಥರು ಈಗ ಮಾಡತಕ್ಕ ಕರ್ತವ್ಯದ ವಿಷಯವಾಗಿ ಭಾಷಣವನ್ನು ಮಾಡಿದರು. ಇದಕ್ಕೆ ಒತ್ತಾಸೆಯಾಗಿ ಅಧ್ಯಕ್ಷರಾದ ಕೋಟೆರ ಚಂಗಪ್ಪನವರೂ, ನಾಪನೆರವಂಡ ಮೊಣ್ಣಪ್ಪನವರೂ ಮಾತಾಡಿದ ನಂತರ ಮದ್ಯಪಾನ ನಿಷೇಧದ ಕೆಲಸವನ್ನು ಕೂಡಲೆ ಕೈಕೊಳ್ಳಲು ಮೆ ಮಣವಟ್ಟಿರ ಪೊನ್ನಪ್ಪನವರೇ ಮೊದಲಾದ 4 ಜನ ಮಹನೀಯರ ಕಮಿಟಿಯೊಂದನ್ನು ನೇಮಕ ಮಾಡಲಾಯಿತು.

"ಹಾಜರಿದ್ದವ'

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.

ಮಂಗಳೂರು, ದ ಕನ್ನಡ.

ಎಲ್ಲಾ ತರಹದ ರಬ್ಬರು ಮೋಹರುಗಳು ಕನ್ನಡಿಯ ಸೈನ್ ಬೋರ್ಡು, ಹಾಪ್ ಟೋನ್ ಬ್ಲಾಕ್ ಇತ್ಯಾದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಬಳಕೆಗೆ ಬರುವಂತೆ ತಯಾರಿಸಿ ಕಳಿಸಲಾಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕಾಗಲೀ ಯಾ ನಮ್ಮ ಮಡಿಕೇರಿ ಏಜೆಂಟರು ಮೆ. ಯಸ್. ಯನ್. ಪೊನ್ನಪ್ಪನವರಿಂದಾಗಲೀ ಒದಗಿಸಿಕೊಳ್ಳಬಹುದು.

12—6

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕವೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳಿನಲ್ಲಿ ಸರಿಯಾಗಿ ಮುಟ್ಟಾಗದಿರುವಿಕೆ ಮುಟ್ಟಾಗುವ ಸಮಯದಲ್ಲಿ ಕೈಕಾಲು ಹರಿಯುವಿಕೆ, ಮಸ್ತಕ ಬೀಳುವಿಕೆ ಹೊಟ್ಟೆ ಕಡಿತ ಬಿಳುಪು—ಕೆಂಪು ಹೋಗಿ ಗರ್ಭ ಪತನವಾಗುವಿಕೆ ವಾಂತಿ ಸಮಾಚಾರ ಪಿಶಾಚಬಾಧೆಯಿಂದ ನರಳುವಿಕೆ, ದಿನ ತುಂಬದೆ ಹಡೆಯೋಣವೇ ಮುಂತಾದುವುಗಳು, ಇವೇ ಮೊದಲಾದವುಗಳು ಸಂತಾನ ಭಂಗಕ್ಕೆ ಕಾರಣಗಳು ಚಿಕ್ಕ ಮಕ್ಕಳಿಗೆ ೧೨ ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಿಂಡುರೋಗ ಮುಟ್ಟುದೋಷ ಕಾಮಾಲೆ, ಗ್ರಹಪೀಡೆ ದೃಷ್ಟಿದೋಷ ಮುಟಕಿಬ್ಬಾಸ ವಿಶೇಷ ಆಹಾರ ಹೊಟ್ಟೆಯೊಳಗಿಂದ ಎಲುಬು ಭಯದಿಂದ ಜ್ವರಪೀಡೆ ಕ್ಷೀಣ ಹೊಂದುವಿಕೆ ಮೊದಲಾದವುಗಳಿಂದ ಕಾಡುತ್ತಿರುವವು ಗರ್ಭರಕ್ಷಕ ವಿಧಿಯಲ್ಲಿ ಸ್ತ್ರೀಯರ ರಕ್ಷಕ ವಿಧಿಯಲ್ಲಿ ಇನ್ನು ಅನೇಕ ಗ್ರಂಥಗಳಲ್ಲಿ, ಹೇಳಿದ ಪ್ರಕಾರ ಶುಭದಿನದಲ್ಲಿ ಶಾಸ್ತ್ರೋಕ್ತ ಗ್ರಹಣ ಕಾಲದಲ್ಲಿ ಸಾಧು ಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ. ಇದನ್ನು ಕಟ್ಟಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನ ಭಂಗವೂ ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಯಾವತ್ತೂ ಪರಿಹಾರವಾಗುತ್ತದೆ. ಹೆಣ್ಣು ಮಕ್ಕಳಿಗೆ ಸಂತಾನ ದಶೆಯಿಂದ ೩ ರೂಪಾಯಿ, ಚಿಕ್ಕಮಕ್ಕಳಿಗೆ ೧ ರೂಪಾಯಿ ಮೇಲೆ ೩ ರೂ ... ಕೇಳಿದ ವಾ ಜಾಗ್ರತ ಗುಣ ಕೊಡುವ ತಾಯಿತಕ್ಕೆ ... ಸೇರಿ ೫ ರೂ. ಆಗುತ್ತ ... ಕಾರಣಗಳನ್ನು ಸ್ಪಷ್ಟ ಬರೆಯಿರಿ ಈ ತಾಯಿತ ಧರಿಸಿದಾಗ್ಯೂ ಗುಣವಿಲ್ಲವಾದರೆ 100 ರೂ ಬಹುಮಾನ ಒಂದು ಸಲ ಕಟ್ಟಿ ಅನುಭವ ತಿಳಿಯಿರಿ

ಸ್ಥಳ ಸಂಕೋಚ ಮೂಲಕ ಮಾದರಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯು ಕ್ರಿಕ್ಕತಿಯನ್ನು ನಾವೆಂತಿತ ವೈದ್ಯ ಡಾಕ್ಟರರಿಂದ ತೋರಿಸಲು ಗುಣಹೊಂದದಿರಲು ತಮ್ಮ ಆಶ್ಚರ್ಯಕಾರಕವಾದ ತಾಯಿತವನ್ನು ನನ್ನ ಹೆಂಡತಿಯು ಈವಾಗ್ಗೆ ೩ ವಾರಗಳ ಮೇಲೆ ಧರಿಸಿದ ಮಾತ್ರವೇ ನ್ಯಾಯೋಳಗಿನ ಯಾವತ್ತೂ ತಾಯಿಗಳು ನಾಶವಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುದನ್ನು ತಿಳಿಸಲು ಅತಿ ಸಂತೋಷವೆನಿಸುತ್ತದೆ. ತಮ್ಮ ಸಿ ಕೆ. ರಾವ್‌ಸಾಹೇಬ ಸುಭಾಷ ಡಾ ...,

ಪ್ರಿನ್ಸಸ್ ಸ್ಟ್ರೀಟ್, ಮುಂಬೈ.

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ, ಪಂಚಗಟ್ಟಿ,
ಮು. ಪೋ. ಅಥಣಿ, ಜಿ. ಬೆಳಗಾಂವ.

52—25

ಎಂ. ಎಸ್. ಶಿದ್ದಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಬಂಗಾರದ ನಿಬು ಹಾಕಿದ ಖಾತ್ರಿಯುಳ್ಳ ... ಆದ ಫೌಂಟನ್ ಪೆನ್‌ಗಳು			
...ರ್ ಫೌಂಟನ್‌ಪೆನ್ 1ಕ್ಕೆ	ರೂ 3	0	0
...ಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ...ಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0
ಮಾಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0
ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ ...ನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0
...ಫೌಂಟನ್‌ಪೆನ್ 1ಕ್ಕೆ	10	8	0
1ಕ್ಕೆ 14 6 0, &	20	10	0
...ಫೌಂಟನ್‌ಪೆನ್ 1ಕ್ಕೆ 3 8 0, &	3	12	0
...ನ್ ಪೆನ್ 1ಕ್ಕೆ 6 4 0, &	6	12	0
...ಫೌಂಟನ್ ಪೆನ್ 1ಕ್ಕೆ 9 2 0, &	8	10	0

ಟೈಂಪೀಸ್‌ಗಳು.			
ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ಲಿಗಲಿಯಾ ಆಕಾರದ ಟೈಂಪೀಸ 1ಕ್ಕೆ 6 9 0 &	6	15	0
ಲಿಗಲಿಯಾ ಸಣ್ಣಸೈಜಿನ ಆಕಾರದ ಟೈಂಪೀಸ್ 1ಕ್ಕೆ	7	2	0
ಲಿಗಲಿಯಾ ಆಕಾರದ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10	0
ಬಿಗ್‌ಬೆನ್ ಆಕಾರದ ಟೈಂಪೀಸ್ 1ಕ್ಕೆ	9	6	0
ಒಗ್‌ಬೆನ್ ಆಕಾರದ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13	4	0
ಖಾತ್ರಿಯುಳ್ಳ ಒಂದೋಬಸ್ಕೂ ಆದ ಪಾಕೆಟ್ ವಾಚ್ 1ಕ್ಕೆ	5	10	1
ವಿಟೋ ನಮೂನೆಯಲ್ಲಿ ಎಬ್ರಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲೆಂಡರ್ ಮುವೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 &	12	8	0



ಇಲ್ಲಿ ನಮೂದಿಸಿದ ಅಂದವಾದ ಟೇಬಲ್ ಕ್ಲಾಕ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅಲಾಯಿದಾ

ಮುನಿಯಾರ್ಡರ್ ಕಳುಹಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್- ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	23,160
ಜಮೆಬಂದ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ಸರ್ಕಾರ್ಯಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ

ಪ್ರೆಸಿಡೆಂಟರು	ಟ್ರೆಜರರ್
ಈಹಂಡ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್	ನವರು

ಸೆಕ್ರೆಟರಿ
ಸಿ ಯಸ್ ವೆಂಕಪ್ಪಯ್ಯನವರು ಬಿ ಎ, ಬಿ ಎಲ್,
ತಾರೀಖು 1—7—1930

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.
ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52—16 ಗಿರಿಗಾಂವ, ಮುಂಬಯಿ.



12 bore Victor Cartridges Rs. 10/- Per 100
Mahomedaily-Noorbhoy.
ARMS & AMMUNITION MART.
321 Abdul Rehman Street.
52 24 BOMBAY 3.

ಭರತಖಂಡದ ಜೀವವಿಮೆ ಕಂಪನಿಗಳಲ್ಲಿ ಅತ್ಯಂತ ದೊಡ್ಡದಾದ
ಓರಿಯಂಟಲ್ ಜೀವವಿಮೆ ಕಂಪೆನಿಯ
ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯ ಈಗಿನ ಸ್ಥಿತಿಯಿಂದ ಸಷ್ಟ

ಹೊಸ ಕೆಲಸ	ಪ್ರೀಮಿಯಂ ವರಮಾನ
೧೯೨೭—೪೬೮ ಲಕ್ಷ ರೂಪಾಯಿಗಳು	೧೯೨೭—೨೨ ಲಕ್ಷ ರೂಪಾಯಿಗಳು
೧೯೨೮— ೫೮೫ ಲಕ್ಷ ,,	೧೯೨೮—೧೪೦ ಲಕ್ಷ
೧೯೨೯—೬೫೦ ಲಕ್ಷ ,,	೧೯೨೯—೧೬೧ ಲಕ್ಷ ,,

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು
ಈ ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು
೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗೆ ೨೨| ರೂಪಾಯಿಗಳು
೧೯೨೭ ,, ,, ,, ೨೫ ,,
ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದ ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭ
ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ
ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.
ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.
ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು—

ಓರಿಯಂಟಲ್ ಬಿಲ್ಡಿಂಗ್ಸ್,	ಯಂ. ವಿ. ರಾಮಕೃಷ್ಣ ನಾಯುಡು,
ಸೌತ್ ಪೆರೇಡ್, ಬೆಂಗಳೂರು.	**ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.**

OR
52—9 **ಕೆ. ಪಿ. ಚಿಣ್ಣಪ್ಪ,**
ಮಡಿಕೇರಿ. **ಏಜೆಂಟ್,**

ಮಲೇರಿಯಾನಾಶ

ಮಲೇರಿಯಾನಾಶವು ಮುಚ್ಚಿಜ್ವರ ಚಳಿಜ್ವರ ಉರಿಜ್ವರ ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ ನಿಶ್ಶೇಷ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ ಕ್ರಯ 8 ಔನ್ಸಿಗೆ 1—8—0 1 ಡಜನಿಗೆ 8—8— 16—8—0

ಪಿತ್ಥ, ರೋಗಕ್ಕೆ ಕಂಪೌಂಡು ಸಿರಪ್ ಕಂದ

ಪಿತ್ತಜ್ವರ ಕೈಕಾಲು ಬತ್ತಲು ರಕ್ತ ಇಲ್ಲದೆ ಬಿಳ್ಳಗೆ ಶರೀರ ರುಚಿ ಕೆಟ್ಟಿರುವ ನಾಲಿಗೆ ಅರಸಿನ ಬಣ್ಣ ಕಂಡು ಗೊಂಬೆ ಮತ್ತು ಶರೀರ ಪರಿಶೋಧಿತ ತಲೆ ತಿರುಗುವದ ಬಾ ಹೊಟ್ಟೆ ಉರಿ ಎದೆ ಸುಡುವದು ನಾಲಿಗೆ ಒಡೆಯುವದು ಮೂತ್ರಕ್ಕೆ ಭಂಗ ಪಿತ್ತ ಕಾರುವದು ನಿದ್ರೆ ಇಲ್ಲದೆ ಸಂಕಟವಾಗುವದು. ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3—8—0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸ ಅಮಂಗ

ಶರೀರದಲ್ಲಿ ಬಿಳುವ ಬೊಕ್ಕೆ ತುರು ಬೊಬ್ಬೆಗಳು ಬೇಗ ಗುಣವಾಗದ ಘಾಯ ವ್ರಣಗಳು ವಿವಿಧ ಬಗೆಯ ಚರ್ಮ ರೋಗಗಳು ಶೀಘ್ರದಲ್ಲಿ ಗುಣಪಟ್ಟು ರಕ್ತ ಸಂಪೂರ್ಣ ಶುದ್ಧಿಯಾಗಿ ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ಬುತ್ತಿ ಕಂಪೌಂಡು ಸಿರಪ್ ಸರ್ಸ ಅಮಂಗ ಎಂಬುದೇ ಬಾಟ್ಲಿಗೆ ರೂಪಾಯಿ 3—8—0

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನಮ್.

ತಿಂಗಳು ಗಟ್ಟಿಯು ಬಾರದ ಹೊಟ್ಟೆನೋವು ಕೈಕಾಲುಗಳ ಸೆಳತ ಕೆಂಪಗಿನ ಬಿಳಿ ಸತ ಮುಟ್ಟಿನ ಉಪದ್ರ, ರಕ್ತವು ಬೇ ಹರಿಯದೆ ನಿಂತು ಬರುವದು ಅಲ್ಲದೆ ಸಮಯಕ್ಕೆ ಸ್ರಾವಿಸ ದದು ಬಸ್ತಿವಾಸನೆಯುಳ್ಳ ಕೆಸರು ಇತ್ಯಾದಿ ಗರ್ಭಕೋಶದ ಎಲ್ಲಾ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನಮ್ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3—8—0

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣ ತೋರಿ ಸೊಂಟಕ್ಕೆ ಬಲ ಇಲ್ಲದೆ ಇರುವದು ಬೆ ಮಾತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ ಬಲವಿಕೆಯನ್ನೂ ಕುಂದಿಸಿಬಿಡುವ ಈ ಆಪತ್ತುಗಳ ಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1—4—0

ಶುದ್ಧ ಚಿಕಿತ್ಸಾ ಪದ್ಧತಿಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ
ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ ಅವುಗಳ ನಾನಾ ಬಗೆಯ ಸಾಮಾನುಗಳೂ ಬಸಿಗೆ ಇದತಕ್ಕ ಒಳ್ಳೇ ತರದ ತ ನಮ್ಮಲ್ಲಿ ನ್ಯಾಯವಾದ ಖರೀದಿಗೆ ದೊರಲ್ಪಡುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ —ಮಲೇರಿಯಾನ ಕಂಪೆನಿ,
52—25 ಹಂಪನಕಟ್ಟೆ, ಇಗರ್ಜಿಬೈಲ್, ನಂಬರು 14, ಮಂಗಳೂರು

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಉತ್ತರ ಕೊಡಗಿಗೆ ಮೆ, ಪಾಲೇಂಗಡ ಕಾರ್ಯಪ್ಪನವರು,
,, ಮೆ ಬಾರಿಕೆ ಮಾಚಯ್ಯನವರು
ದಕ್ಷಿಣ ಕೊಡಗಿಗೆ ಮೆ ಅಲ್ಲಾರಂಡ ಮೇದಪ್ಪನವರು,
,, ಮೆ. ಅಮ್ಮಂಡ ಸುಬ್ಬಯ್ಯನವರು
ಮರೆನಾಡು—ಮೆ ಕೇಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು,
(ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್ ವೆಂಕಪ್ಪಯ್ಯನವರು
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾಡಪ್ಪನವರು.
ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ ಬಿ ಮುದ್ದಯ್ಯ
ಮೆ ಸಣ್ಣುವಂಡ ಬೋಪಯ್ಯ
ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತಿ—ಮೆ ಪಿ. ಮಾದಯ್ಯ
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮೊಣ್ಣಯ್ಯ

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಿಗೂ ಅವಶ್ಯವಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯ ಸಂಘದ ಉಪನಿಬಂಧನೆಗಳೂ ದಾವೆ ಬರೆದು ರಿಜಿಸ್ಟ್ರಾರ್ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡದೆ ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರಿಜಿಸ್ಟ್ರಾರ್ ರವರಿಂದ ಅಂಗೀಕರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬ್ಯಾಂಕ್ ನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ

Printed & published by P. I Belliappa at "Kodagu" Press Mer for "Kodagu" Ltd.

If not delivered please return to
"KODAGU" OFFICE MERCARA.

ಕೊಡಗು.

ಸಕ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತಯಾ । ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಳಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಸ್ತಕ ೧೦	ಮಡಿಕೇರಿ, ಸನ್ ೧೯೩೧ನೇ ಇಸವಿ ನೊ॥ ತಾರೀಕು ೧ ನೇ ಶುಕ್ರವಾರ.	ಸಂಚಿಕೆ ೪೧

Telegrams — "Precious"

Telephone — 3145

V. Subramaniaier
Jeweller,
DIAMOND MERCHANT, GOLD & SILVERSMITH.

Deals in all—
SPORTS CUPS in all pces
MEADALS in up to date patterns
CASKETS in elegant stes

Nos. 2 & 3, Kuppumuthu St
TIRUVATESWARANPLT,
Post Box 423, Triplicane P. O.,
MADRAS.

Deals in all:
GEM SET JEWELS, set with Diamonds Rubies etc,
GOLD ARTICLES of all patterns
SILVER WARE in latest style

52—24



ಕಾಗದ ಬರೆದರೆ ಈಗಿನ
ಕ್ಯಾಟಲಾಗು ಮಫತಿಯಾಗಿ
ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬಟಿಗಳು, ತೋಟೆ(ಟ), ಕೇತ್ರಗಳು, ಮತ್ತು ತರ ಬೇರೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದ ದೊರೆಯುವವು

GOOLAMHUSAIN ALLIBHOY & SONS.
Largest Importer of Firearms and Ammunition
Cheapest priced firm in India,
210 Abdul Rehman Street, BOMBAY.

24—5

ಕಟುಕಷಾಯ ಮುಚೆಜ್ವರಕ್ಕೆ ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ 'ಗುಣವಾಗದಿರುವ ಮಲೆ ಜ್ವರ ದಿನ ಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಂಡಿತ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—0, 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14

ಮಲೆ ಜ್ವರಕ್ಕೆ
ರಟು ಕಷಾಯ

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರ ಹಿಂದಿಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರ ನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು, ಹುದಿ ಹೋಗುವದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯುವುದಕ್ಕೆ ಸಾಮರ್ಥ್ಯವಿಲ್ಲದಿರುವದು ಮೇಹದಿಂದ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ ನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲು 1 3 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು ತಲೆತಿರುಗುವದು ಕಣ್ಣುರಿ, ಕಿವಿಯಿಂದ ಕೀವು ಸೋರುವದು ಕಿವುಡು [illegible] ಇವುಗಳೆಲ್ಲ ಖಂಡಿತ ಗುಣಮಾಡುತ್ತದೆ [illegible] [illegible] ಕೂದಲನ್ನು ಕಪ್ಪಾಗಿ ನುಣ್ಣಗಾಗಿರುವ ಕೂದಲುಗಳಿಗೆ [illegible] ಹೊಳಪನ್ನು ಕೊಟ್ಟು [illegible] ಕೂದಲನ್ನು [illegible] ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 [illegible] ಸೀಸೆಗೆ ರೂ 2, 3 ಸೀಸೆಗಳಿಗೆ 5—8

ವಿಳಾಸ—ಮನೋಲ್ಲಾಸಿನಿ ಕಂಪೆನಿ,
೨. ಮಂಗಳೂರು.

[illegible] ಮಡಿಕೇರಿ.

52—51

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ! ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ ಮಕ್ಕಳು ನಿರೋಗ



ಹಿಂಗತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿಯೂ ಬಲವೂ ಬರುವದು ದಿನ ದಿನಕ್ಕೆ ಆರೋಗ್ಯವೂ ಕಳೆಯೂ ಹೆಚ್ಚುವದು ಇದು ಮಧುರವಾಗಿದೆ ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ ಸೀಸೆ 1ಕ್ಕೆ 12 ಆಣೆ ಟಿ ಪು. 9 ಆಣೆ.

ಅದರ ಗುಣತತ್ವವನ್ನು ಅಡ್ರೆಸ್ಸನ್ನು ಮೇಲುಗಡೆ ಕಳುಹಿಸಿ ಕೊಡಿಸಿಕೊಳ್ಳಿರಿ ಅಡ್ರೆಸ್ಸು ಇಲ್ಲದ ಅರ್ಜಿಗಳನ್ನು ಗಮನಿಸುವದಿಲ್ಲ!

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ,
(ಮೈಸೂರು)

52—10

ಕೊಡಗು.

ಸಂ ೧೯೩೧ನೇ ಇಸವಿ

ಮೇ. ತಾ. ೧ ನೇ ಶುಕ್ರವಾರ.

ಮುಸ್ಲಿಮ್ ರಾಷ್ಟ್ರೀಯ ಪಕ್ಷದವರು.

ಕರಾಚಿ ಕಾಂಗ್ರೆಸು ಮುಗಿದೊಡನೆ ಸಹಕಾರ ಮತ್ತು ಶಾಂತ ಪಕ್ಷಗಳ ಮುಸಲ್ಮಾನರ ಕಾನ್‌ಫರೆನ್ಸೊಂದು ಡೆಲ್ಲಿಯಲ್ಲಿ ನಡೆದು ಅದರಲ್ಲಿ ಮಂಜೂರಾದ ರಾಷ್ಟ್ರೀಯತ್ವಕ್ಕೆ ಹಾನಿಕರವಾದ ಮತ್ತು ಹಿಂದೂ ಮುಸಲ್ಮಾನರ ಒಗ್ಗಟ್ಟಿಗೆ ಅಡಚಣೆ ತರುವಂಥ ಠರಾವುಗಳನ್ನು ಕುರಿತು ಕೆಲವು ದಿವಸಗಳ ಹಿಂದೆ ಟೀಕಿಸಿದ್ದೆವು. ಒಮ್ಮೆ ಕಾಂಗ್ರೆಸ್ಸಿನ ವೀರಪಕ್ಷದ ಒಬ್ಬ ಪ್ರಮುಖ ಮುಂದಾಳಾಗಿದ್ದು, ಆಗುವಷ್ಟು ಬೇಗನೆ ಪರದೇಶದವರನ್ನು ಇಂಡಿಯಾದಿಂದ ಹೊರದೂಡಿ ಸ್ವಾತಂತ್ರ್ಯವನ್ನು ಪಡೆಯಬೇಕೆಂದು ಹೋರಾಡುತ್ತಿದ್ದ ಮೌಲಾನ ಶೌಕತ್ ಅಲಿಯವರು—ಮೇಲಿನ ಕಾನ್‌ಫರೆನ್ಸಿನ ತೀರ್ಮಾನಗಳ ಬೆಂಬಲದ ಶಕ್ತಿಯಿಂದಲೋ ಅಥವಾ ಇವರಗಿಂತಲೂ ಹೆಚ್ಚು ರಾಷ್ಟ್ರೀಯ ಭಕ್ತರೂ, ರಾಜಕೀಯ ಪಟುಗಳೂ ಆಗಿದ್ದ ಇವರ ಸಹೋದರ ಗತಿಸಿದ ಮೌಲಾನ ಮುಹಮ್ಮದ್ ಅಲಿಯವರ ಸಂಪರ್ಕವು ಇಲ್ಲದ್ದಾದ್ದರಿಂದಲೋ ಏನೋ ಸ್ವಾತಂತ್ರ್ಯ ಹೋರಾಟದಲ್ಲಿ ಅರ್ಧದಾರಿ ಮುಂದುವರಿದಿರುವ ಕಾಂಗ್ರೆಸ್ ಸಂಸ್ಥೆಯ ಮೇಲೂ, ಅದರ ಮುಂದಾಳಾದ ಮಹಾತ್ಮ ಗಾಂಧಿಯವರ ಮೇಲೂ ಇಲ್ಲಸಲ್ಲದ ಆರೋಪಣೆಗಳನ್ನು ಹೊರಿಸುತ್ತಾ (ನೂತನ) ಯುದ್ಧದ ಹಾದಿಯನ್ನು ಹಿಡಿದರು. ಲೋಕವಿಖ್ಯಾತರೂ, ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಒಬ್ಬ ನೇ ಪ್ರತಿನಿಧಿಯೂ ಆಗಿರುವ ಮತ್ತು ಮುಸಲ್ಮಾನರಲ್ಲಿಯೂ ಕೂಡ ಡಾಕ್ಟರ್ ಅನ್ಸಾರಿ, ಸರಹದ್ದಿನ ಖಾನ್ ಅಬ್ದುಲ್ ಗಫಾರ್ ಖಾನ್ ರೇ ಮೊದಲಾದ ಹಲವು ಮುಖಂಡರೇ ಮುಂದಾಳೆಂದು ಒಪ್ಪಿಕೊಂಡಿರುವ ಮಹಾತ್ಮ ಗಾಂಧಿಯವರನ್ನು ಕುರಿತು ಶೌಕತ್ ಅಲಿಯವರು ಹೇಳಿದಂಥ—'ಗಾಂಧಿಯವರು ಹಿಂದೂ ಮುಸಲ್ಮಾನರಲ್ಲಿ ಜಗಳವನ್ನು ತರುತ್ತಿರುವುದಲ್ಲದೆ, ಮುಸಲ್ಮಾನರು ತಮ್ಮೊಳಗೇನೇ ಕಾದಾಡಿಕೊಳ್ಳುವಂತೆ ಮಾಡುತ್ತಿದ್ದಾರೆ. ಹತ್ತು ಸಾವಿರ ಗಾಂಧಿಗಳನ್ನು ನಾನು ಎದುರಾಡಬಲ್ಲೆನು' ಎಂಬ ಮಾತುಗಳು ಶೌಕತ್ ಅಲಿಯವರನ್ನು ಜನರ ದೃಷ್ಟಿಯಲ್ಲಿ ಬಹಳ ಮಟ್ಟಿಗೆ ಇಳಿಸಿ ಬಿಟ್ಟಿವೆ ಎಂಬುದರಲ್ಲಿ ಸಂಶಯವಿಲ್ಲ. 1921 ರಲ್ಲಿ ಪ್ರಾರಂಭಿಸಿದ ಅಸಹಕಾರ ಮತ್ತು ಖಿಲಾಫತ್ ಚಳವಳದಲ್ಲಿ ಮಹಾತ್ಮ ಗಾಂಧಿಯವರ ಬಲಗೈಯಂತೆ ಇದ್ದು ಮುಸಲ್ಮಾನರಿಂದ ಮಾತ್ರವಲ್ಲ, ಹಿಂದೂಗಳಿಂದಲೂ ರಾಷ್ಟ್ರೀಯವೀರರೆಂದು ಪೂಜಿಸಲ್ಪಡುತ್ತಿದ್ದ ಶೌಕತ್ ಅಲಿಯವರು ಈಗ ಕೋಮುವಾರು ತತ್ವವಾದಿಗಳಾಗಿ ಎಷ್ಟರ ಮಟ್ಟಿಗೆ ಜನರ ಪ್ರೀತಿಯನ್ನು ಕಳಕೊಂಡಿರುವರೆಂದು ವರ್ಣಿಸಲಾರೆವು. ಮೊದಲು ಹಿಂದೂಗಳಿಂದ ಅತಿಯಾಗಿ ಬಹುಮಾನಿಸಲ್ಪಡುತ್ತಿದ್ದ ಇವರು 'ಈಗ ತನ್ನ ಮಾತು ಹಿಂದೂಗಳಲ್ಲಿ ನಡೆಯುವುದಿಲ್ಲ' ವೆಂದು ಮೊನ್ನೆ ತಾನೆ ಬಹಿರಂಗವಾಗಿ ಒಪ್ಪಿಕೊಂಡರು. ಅಲ್ಲದೆ ಡೆಲ್ಲಿ ಕಾನ್‌ಫರೆನ್ಸಿನ ಸಮಯದಲ್ಲಿ 'ಹಿಂದೂ ಮುಸಲ್ಮಾನರ ಸಮಸ್ಯೆಯನ್ನು ತೀರ್ಮಾನಿಸುವ ಬಗ್ಗೆ ಮುಸಲ್ಮಾನರೆಲ್ಲರ ಪರವಾಗಿ ಒಬ್ಬ ಮುಂದಾಳನ್ನು ಕಳುಹಿಸಿ' ಎಂದು ಮಹಾತ್ಮ ಗಾಂಧಿಯವರು ಶೌಕತ್ ಅಲಿಯವರ ಅಧ್ಯಕ್ಷತೆಯಲ್ಲಿ ನಡೆದ ಮುಸಲ್ಮಾನರ ಸಭೆಯವರಿಗೆ ಹೇಳಿ ಕಳುಹಿಸಿದಾಗ್ಯೂ 'ತಮ್ಮಲ್ಲಿ ಅಂಥಾ ಮುಂದಾಳೊಬ್ಬನೂ ಇಲ್ಲ' ವೆಂಬ ಜವಾಬನ್ನು ಕಳುಹಿಸಿದರು. ಇದರಿಂದ ಮುಸಲ್ಮಾನರಲ್ಲಿಯೂ ಕೂಡ ಶೌಕತ್ ಅಲಿಯವರಿಗೆ ಎಷ್ಟರ ಪ್ರಾಮುಖ್ಯತೆ ಇದೆ ಎಂಬುದು ಸ್ಪಷ್ಟವಾಗುತ್ತದೆ. ಇವರು ಈ ನೋವಿನಿಂದಲೋ ಏನೋ ಮಹಾತ್ಮರ ಮೇಲೆ ಬೈಗಳದ ಮಳೆಯನ್ನು ಸುರಿಯಲಾರಂಭಿಸಿದರು. ಆದರೆ ಮಹಾತ್ಮರು ಇವರ ಬಿರುಸು ಬಾಣಗಳಿಂದ ಸಿಟ್ಟಿಗೇಳದೆ 'ಶೌಕತ್' ಅಲಿಯವರನ್ನು ಸಮಯವು ಶಾಂತಗೊಳಿಸುವದೆಂದು ಶಾಂತಿಯ ಉತ್ತರವನ್ನಿತ್ತರು. ಮಹಾತ್ಮರಿಂದ ಜಗಳದ ಜವಾಬನ್ನು ನಿರೀಕ್ಷಿಸುತ್ತಿದ್ದ 'ದೊಡ್ಡ ಸಹೋದರ'ರಿಗೆ ಅಂದರೆ ಶೌಕತ್ ಅಲಿಯವರಿಗೆ ಆಶಾಭಂಗವುಂಟಾಗಿದೆಯೆಂದರೆ ತಪ್ಪಾಗಲಾರದು. ಮಹಾತ್ಮರು ಹೇಳಿದಂತೆ ಸಮಯವು ದಾಟುತ್ತಾ ಬಂದ ಹಾಗೆ ಅಲಿಯವರ ಉರಿಯು ತಗ್ಗುತ್ತಿರುವುದಾಗಿ ಕಾಣುತ್ತದೆ. 'ಹಿಂದೂ ಮುಸಲ್ಮಾನರಲ್ಲಿ ಜಗಳ ತರಬೇಕೆಂಬುದು ತನ್ನ ಉದ್ದೇಶವಲ್ಲ, ಮುಸಲ್ಮಾನರೆಲ್ಲರೂ ಹಿಂದೂಗಳೊಡನೆ ಸ್ನೇಹಭಾವದಿಂದ ವರ್ತಿಸಲು ಪ್ರಯತ್ನ ಮಾಡಬೇಕು' ಎಂದು ಮೊನ್ನೆ ತಾನೇ ಅವರು ಮುಸಲ್ಮಾನರಲ್ಲಿ ಅಪೀಲು ಮಾಡಿಕೊಂಡಿದ್ದಾರೆ.

ಆದರೆ 'ದೊಡ್ಡ ಸಹೋದರ'ರು ಮತ್ತು ಅವರ ಸಂಗಡದವರ ರಾಷ್ಟ್ರೀಯ ಒಗ್ಗಟ್ಟು ಮತ್ತು ಸ್ವಾತಂತ್ರ್ಯ ಹೋರಾಟ ವಿರುದ್ಧ ಭಾಷಣಗಳಿಂದ ಒಂದು ಒಳ್ಳೇ ಫಲವುಂಟಾಗಿದೆ. ರಾಷ್ಟ್ರೀಯ ಪಕ್ಷದ ಮುಸಲ್ಮಾನರು ಎಚ್ಚತ್ತಿರುವರು. ಕೋಮುವಾರು ತತ್ವದ ಅಂದರೆ ಮುಸಲ್ಮಾನರಿಗೆ ಪ್ರತ್ಯೇಕ ಚುನಾವಣೆ ಬೇಕೆಂದು ಹೋರಾಡುವ ಅಲಿ ಸಂಗಡದವರಿಂದ ಹಿಂದೂದೇಶಕ್ಕೆ ಮಾತ್ರವಲ್ಲ ಮುಸಲ್ಮಾನರಿಗೇನೇ ಉಂಟಾಗಬಹುದಾದ ಕೇಡುಕುಗಳನ್ನು ಚೆನ್ನಾಗಿ ಅರಿತುಕೊಂಡು, ಸ್ವರಾಜ್ಯ ಹೋರಾಟದಲ್ಲಿ ಮಾತ್ರವಲ್ಲ, ಸ್ವರಾಜ್ಯ ಸರ್ಕಾರದಲ್ಲಿಯೂ ಕೂಡ ಒಗ್ಗಟ್ಟಿಗೆ ಸಾಧನವಾದ ಮಿಶ್ರ ಚುನಾವಣೆ (ಅಂದರೆ ಮತಭೇದವೆಣಿಸದೆ ಎಲ್ಲರೂ ಓಟುಕೊಡುವುದು) ಇರಬೇಕೆಂಬುದೇ ಮುಸಲ್ಮಾನರ ಬಹುಮತದವರ ಅಭಿಪ್ರಾಯವೆಂದು ತೋರಿಸಲಿಕ್ಕಾಗಿ ಅವರು ಕಳೆದ ತಾ. 18 ಮತ್ತು 19 ರಲ್ಲಿ ಲಕ್ನೋದಲ್ಲಿ ಒಂದು ಮಹಾಸಭೆಯನ್ನು ಕೂಡಿಸಿದರು. ಇದಕ್ಕೆ ಹಿಂದೂದೇಶದ ಎಲ್ಲಾ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಈ ವರೆಗೆ ಮುಸಲ್ಮಾನರ ಇಷ್ಟು ಮುಖ್ಯ ಪ್ರತಿನಿಧಿ ಸಭೆಯು ನಡೆದಿರಲಿಲ್ಲವೆಂದು ಕೆಲವು ಮುಖಂಡರ ಅಭಿಪ್ರಾಯವಾಗಿದೆ. ಈ ಮಹಾಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದ ಸರ್ ಅಲಿ ಇಮಾಮ್‌ರವರು ಕಾಂಗ್ರೆಸ್ಸಿಗೆ ಸೇರಿದವರಲ್ಲವಾದರೂ, ಅವರು ವಿಷಯ ನಿಯಾಮಕ ಸಮಿತಿಯ ಮೀಟಿಂಗು ಮುಗಿಯುವ ವರೆಗೆ ಅಧ್ಯಕ್ಷರಾಗಿದ್ದು ಮಿಶ್ರ ಚುನಾವಣೆಗೆ ಸಮ್ಮತಿಯನ್ನಿತ್ತಿರುವರು. ಹಿಂದೂಗಳಿಗೂ, ಮುಸಲ್ಮಾನರಿಗೂ ಕೌನ್ಸಿಲುಗಳಲ್ಲಿ ಪ್ರತ್ಯೇಕ ಪ್ರತಿನಿಧಿತ್ವ ಇಟ್ಟುಕೊಂಡು, ಚುನಾವಣೆಯು ಜಾತಿ ಮತ ಭೇದವಿಲ್ಲದೆ ಮಿಶ್ರವಾಗಿ ನಡೆಸಲ್ಪಡಬೇಕೆಂದೂ, ಪ್ರಾಯ ಪ್ರಬುದ್ಧರಾದವರಿಗೆಲ್ಲಾ ಓಟಿನ ಹಕ್ಕು ಇರಬೇಕೆಂದೂ ಠರಾವು ಮಂಜೂರಾದುದೂ ಇದೆ. ಈ ಠರಾವನ್ನು ಸಭೆಯ ಮುಂದಿಡುವಾಗ್ಯೆ ಪ್ರಖ್ಯಾತ ಧುರೀಣರಾದ ಡಾಕ್ಟರ್ ಅನ್ಸಾರಿಯವರು ಮಾಡಿದ ಭಾಷಣವು ಬಹು ವಿಶೇಷವಾದದ್ದಾಗಿದೆ. ಅದನ್ನು ಓದಿದರೆ ಪ್ರತ್ಯೇಕ ಚುನಾವಣೆಯಿಂದ ರಾಷ್ಟ್ರೀಯದ ಒಗ್ಗಟ್ಟಿಗೆ ಎಷ್ಟು ಹಾನಿತಟ್ಟುವದೆಂದೂ, ಮತ್ತು ಅದನ್ನು ಉಪಯೋಗಿಸುವ ಕೋಮಿನವರಿಗೇ ಅದರಿಂದ ಸಂಭವಿಸುವ ಕೇಡುಕುಗಳು ಎಷ್ಟು ವಿಪರೀತವಾಗಿವೆಯೆಂದೂ ಎಲ್ಲರಿಗೂ ವಿಷದವಾಗುವುದು. ಅವರ ಭಾಷಣವು ಕೋಮುವಾರು ತತ್ವವಾದಿಗಳ ಆಕ್ಷೇಪಗಳನ್ನು ಚೂರು ಚೂರು ಮಾಡಿದೆ. ಆದುದರಿಂದ ಈ ಠರಾವು ಅಲ್ಲಿ ವಿರೋಧವಿಲ್ಲದೆ ಪಾಸುಮಾಡಲಾಯಿತು.

ಡೆಲ್ಲಿ ಮುಸ್ಲಿಮ್ ಕಾನ್‌ಫರೆನ್ಸಿನ ನಂತರ ಹಿಂದೂ ಮುಸಲ್ಮಾನರ ಸಮಸ್ಯೆಯು ಎರಡು ಕಕ್ಷಿಯವರಿಗೂ ತೃಪ್ತಿಕರವಾಗಿ ತೀರ್ಮಾನಿಸಲ್ಪಡುವ ದಿನವು ದೂರ ಸರಿಯುತ್ತಿದೆ ಎಂದು ತೋರಿತು. ಹಿಂದೂದೇಶದ ರಾಜಕೀಯ ವಾತಾವರಣದ ಮೇಲೆ ಕಪ್ಪು ಮೋಡಗಳು ಕವಿದುಕೊಂಡಂತಾಯಿತು. ಸ್ವಾತಂತ್ರ್ಯವಾದಿಗಳಿಗೆ ತುಂಬಾ ಆಶಾಭಂಗವುಂಟಾಯಿತು. ಸ್ವಾತಂತ್ರ್ಯದ ಶತ್ರುಗಳು ಆನಂದದಿಂದ ನಗಾಡತೊಡಗಿದರು. ಆದರೆ ಈ ಸ್ಥಿತಿಯು ಗುಲಾಮಗಿರಿಯಲ್ಲಿ ನರಳುತ್ತಿರುವ ಬಡ ಹಿಂದೂಸ್ಥಾನದಲ್ಲಿ ಹೆಚ್ಚು ಕಾಲ ಇರಬಾರದೆಂಬುದು ಸೃಷ್ಟಿಕರ್ತನ ಇಚ್ಛೆಯಾಗಿತ್ತು. ಕೆಲವು ದಿವಸಗಳಲ್ಲಿ ಕಪ್ಪು ಮೋಡಗಳು ರಾಷ್ಟ್ರೀಯ ಪಂಗಡದ ಮುಸಲ್ಮಾನ್ ಮುಖಂಡರ ರಾಷ್ಟ್ರೀಯ ಭಾವನೆಯ ಚಂಡಮಾರುತದಿಂದ ದೂರ ಹಾರಿಸಲ್ಪಟ್ಟವು. ಒಗ್ಗಟ್ಟನ್ನು ಸಾಧಿಸುವ ಅವಕಾಶವು ಕಳೆದು ಹೋಗಲಿಲ್ಲ ಇನ್ನೂ ಇದೆಯೆಂದು ಲಕ್ನೋ ಸಭೆಯು ಘಂಟಾಘೋಷವಾಗಿ ಸಾರಿತು. ಒಗ್ಗಟ್ಟಿನ ಆಶೆಯು ಪುನಃ ಜನರಲ್ಲಿ ಹುಟ್ಟಲಾರಂಭಿಸಿದೆ.

ರಾಷ್ಟ್ರೀಯ ಪಕ್ಷದ ಮುಸಲ್ಮಾನರು ಈ ವರೆಗೆ ಕಾಂಗ್ರೆಸ್ಸಿನ ಚಳವಳದಲ್ಲಿ ಭಾಗ ತೆಗೆದುಕೊಳ್ಳುತ್ತಾ ಇದ್ದರೆ ಹೊರತು ಅವರ ಸ್ವಜಾತಿಯವರಲ್ಲಿ ಪ್ರತ್ಯೇಕ ಪ್ರಚಾರ ಕೆಲಸವನ್ನು ಕೈಕೊಂಡಿರಲಿಲ್ಲ. ಆದುದರಿಂದ ಕೋಮುವಾರು ತತ್ವವಾದಿಗಳಿಗೆ ಪ್ರತ್ಯೇಕ ಚುನಾವಣೆಯೇ ಇರಬೇಕೆಂದು ಸಾಮಾನ್ಯ ಜನರಿಗೆ ಬೋಧಿಸಲು ಸುಲಭವಾಗಿತ್ತು. ಆದರೆ ಇನ್ನು ಮುಂದೆ ರಾಷ್ಟ್ರೀಯ ಪಕ್ಷದ ಮುಂದಾಳುಗಳು ತಟಸ್ಥರಾಗಿರದೆ ಹಿಂದೂದೇಶದ ಎಲ್ಲಾ ಭಾಗಗಳಲ್ಲಿಯೂ ಸಭೆಗಳನ್ನು ಕೂಡಿಸಿ ಪ್ರತ್ಯೇಕ ಚುನಾವಣೆಯ ಕೇಡುಕುಗಳನ್ನೂ, ಮಿಶ್ರ ಚುನಾವಣೆಯ ಪ್ರಯೋಜನಗಳನ್ನೂ ಜನಸಾಮಾನ್ಯಕ್ಕೆ ಬೋಧಿಸುವಂತೆ ಲಕ್ನೋ ಸಭೆಯಲ್ಲಿ ತೀರ್ಮಾನಿಸಿಕೊಂಡರು. ಈಗಾಗಲೇ ಮುಸಲ್ಮಾನರಲ್ಲಿ ಬಹುಮತದವರು ಮಿಶ್ರ ಚುನಾವಣೆಯ ಪರವಾಗಿದ್ದಾರೆಂದು ಲಕ್ನೋ ಸಭೆಯವರ ಅಭಿಪ್ರಾಯವಾಗಿದೆ. ಮೇಲೆ ಸೂಚಿಸಿದಂತೆ ಅವರು ಪ್ರಚಾರ ಕೆಲಸವನ್ನು ಕೈಕೊಂಡದ್ದೇ ಆದರೆ ದೊಡ್ಡ ಬಹುಮತವು ಅವರ ಕಡೆ ಸೇರುವರೆಂಬುದರಲ್ಲಿ ಸಂಶಯವಿಲ್ಲ. ಯಾಕೆಂದರೆ ಗ್ರಾಮಾಂತರಗಳಿಗೆ ಹೋಗಿ ನೋಡಿದರೆ ಹಿಂದೂಗಳೂ ಮುಸಲ್ಮಾನರು ಅಣ್ಣ ತಮ್ಮಂದಿರಂತೆ ವಾಸಿಸುವುದು ಕಂಡು ಬರುವುದು. ಸರ್ಕಾರಿ ಉದ್ಯೋಗಗಳಿಗಾಗಲೀ, ಬಿರುದುಗಳಿಗಾಗಲೀ, ಬೇರೆ ಯಾವುದಾದರೂ ಸ್ವಾರ್ಥತೆಯನ್ನು ಸಾಧಿಸುವ ಉದ್ದೇಶ್ಯದಿಂದ ಕೆಲವರು ಕೋಮುವಾರು ತತ್ವವನ್ನು ಬೋಧಿಸುತ್ತಿರುವ ಪಟ್ಟಣಗಳಲ್ಲಿ ಮಾತ್ರ ಹಿಂದೂ ಮುಸಲ್ಮಾನ್ ವೈಷಮ್ಯ ಹುಟ್ಟಿ, ಹಿಂದೂ ಮುಸಲ್ಮಾನರ ಒಗ್ಗಟ್ಟಿನ ಶತ್ರುಗಳಿಂದ ಅಂಥ ವೈಷಮ್ಯಕ್ಕೆ ಉತ್ತೇಜನ ದೊರೆತು ಅಲ್ಲಲ್ಲಿ ಜಗಳಗಳುಂಟಾಗುವುದಲ್ಲದೆ ಅನ್ಯಥಾ ಅಲ್ಲ. ಆದುದರಿಂದ ರಾಷ್ಟ್ರೀಯ ಪಕ್ಷದ ಮುಖಂಡರ ಪ್ರಚಾರ ಕೆಲಸವು ತುಂಬಾ ಪ್ರಯೋಜನಕಾರಿಯಾಗುವುದು.

ಡೆಲ್ಲಿ ಕಾನ್‌ಫರೆನ್ಸಿನ ಒಬ್ಬ ಪ್ರಮುಖರಾದ ಸರ್ ಮುಹಮ್ಮದ್ ಶಾಫಿಯವರು ಡೆಲ್ಲಿ ಮತ್ತು ಲಕ್ನೋ ಕಾನ್‌ಫರೆನ್ಸುಗಳ ತೀರ್ಮಾನಗಳನ್ನು ಹೋಲಿಸಿ ನೋಡಿ, ಚುನಾವಣೆಯ ವಿಷಯದಲ್ಲಿ ಮಾತ್ರ ಇವೆರಡು ಸಭೆಗಳವರಿಗೆ ಭಿನ್ನಾಭಿಪ್ರಾಯವಿರುವುದಲ್ಲದೆ, ಬಾಕಿ ಎಲ್ಲಾ ಸಂಗತಿಗಳಲ್ಲಿ ಒಪ್ಪಿಗೆ ಇದೆ ಎಂತಲೂ, ಆದಕಾರಣ ಇದೊಂದು ವಿಷಯವನ್ನು ಚರ್ಚಿಸಿ ತೀರ್ಮಾನಿಸಿಕೊಂಡು ಮಹಾತ್ಮ ಗಾಂಧಿಯವರಿಗೆ ಮುಸಲ್ಮಾನರ ಒಗ್ಗಟ್ಟಿನ ಅಭಿಪ್ರಾಯ ಕೊಡಲು ಮುಸಲ್ಮಾನರ ಎಲ್ಲಾ ಪಾರ್ಟಿಗಳ ಪ್ರತಿನಿಧಿಗಳ ಒಂದು ದುಂಡು ಮೇಜು ಪರಿಷತ್ತನ್ನು ಕೂಡಲೇ ಸೇರಿಸುವುದು ಅಗತ್ಯವೆಂದೂ ಸೂಚನೆ ಕೊಟ್ಟರು. ಕೋಮುವಾರು ಪ್ರತಿನಿಧಿತ್ವ ಮತ್ತು ಚುನಾವಣಾ ಪ್ರಕ್ರಿಯೆಯನ್ನು ತೀರ್ಮಾನಿಸಲಿಕ್ಕಾಗಿ ಎಲ್ಲಾ ಮತಗಳ ಒಬ್ಬ ಪ್ರಮುಖರಿಂದ ಕೂಡಿದ ಒಂದು ಪಂಚಾಯಿತಿಯನ್ನು ನೇಮಿಸಿ (ಅವರ ಹೆಸರುಗಳನ್ನು ಸೂಚಿಸಿರುವರು.) ಮಾಡಿದ ತೀರ್ಮಾನಕ್ಕೆ ಎಲ್ಲರೂ ಒಪ್ಪಿಕೊಳ್ಳುವುದು ಉಚಿತವೆಂದು ಡಾಕ್ಟರ್ ಅನ್ಸಾರಿಯವರು ಸೂಚಿಸಿರುವರು. ಇದಕ್ಕಾಗಿ ಮಾಡುವ ಮೊದಲು ಪ್ರತ್ಯೇಕ ಚುನಾವಣೆ ಬೇಕೆನ್ನುವ ಮುಸಲ್ಮಾನ್ ಬಹುಮತದವರನ್ನು ಒಪ್ಪಿಸಿಕೊಳ್ಳಬೇಕು ಎಂದು ಶೌಕತ್ ಅಲಿಯವರು ಹೇಳಿರುವರು. ಈ ಸೂಚನೆಗಳನ್ನು ನೋಡಿದರೆ ಈ ವಿಷಯವನ್ನು ತೀರ್ಮಾನಿಸಬೇಕೆಂಬ ಕುತೂಹಲವು ಮುಸಲ್ಮಾನರ ಎಲ್ಲಾ ಪಂಗಡದವರಿಗೂ ಇದೆಯೆಂದು ಕಂಡು ಬರುತ್ತದೆ. ಮುಸಲ್ಮಾನರೆಲ್ಲರೂ ಒಗ್ಗಟ್ಟಾಗಿ ಕೊಡುವ ಅಭಿಪ್ರಾಯಕ್ಕೆ ಹಿಂದೂಗಳ ಪರವಾಗಿಯೂ, ಕಾಂಗ್ರೆಸಿನವರ ಪರವಾಗಿಯೂ ತಮ್ಮ ಒಪ್ಪಿಗೆ ಕೊಡುತ್ತೇನೆಂದು ಮಹಾತ್ಮ ಗಾಂಧಿಯವರು ತಿಳಿಸಿರುವರು. ಈ ಸಮಸ್ಯೆಯು ತೀರ್ಮಾನವಾಯಿತೆಂದರೆ ಸ್ವರಾಜ್ಯವು ನಮ್ಮಿಂದ ದೂರವಾಗಿ ನಿಲ್ಲಲಾರದು. ಒಗ್ಗಟ್ಟಿನ ಸಾಮ್ರಾಜ್ಯಕ್ಕೆ ವಿರೋಧವಾಗಿ ನಿಲ್ಲುವಂಥ ಪರರಾಷ್ಟ್ರಯಾವುದೂ ಇಲ್ಲ. ಆದುದರಿಂದ ಈ ಪ್ರಶ್ನೆಯನ್ನು ಶೀಘ್ರದಲ್ಲೇ ತೀರ್ಮಾನಿಸಿಕೊಳ್ಳುವಂತೆ ಎಲ್ಲಾ ಮುಖಂಡರಿಗೂ ದೇವರು ಬುದ್ಧಿ ಕೊಡಲೆಂದು ಪ್ರಾರ್ಥನೆ.

ಕಾಂಗ್ರೆಸ್ ಪ್ರೆಸಿಡೆಂಟರಾದ ಶ್ರೀ. ವಲ್ಲಭಭಾಯಿ ಪಟೇಲರು ಬೆಲ್ಗಾಂವಿನಲ್ಲಿ ಮಾಡಿದ ಭಾಷಣದಿಂದ

ಹಂಗಾಮಿ ರಾಜಿ ಶರತ್ತುಗಳ ಕುರಿತು ತುಂಬಾ ಚರ್ಚೆಯಾಗುತ್ತಲಿದೆ. ಬಿಳಿ ಚರ್ಮದ ಪತ್ರಿಕೆಗಳು ಕಾಂಗ್ರೆಸ್ಸಿನವರು ರಾಜಿ ಶರತ್ತುಗಳನ್ನು ನಡೆಸುತ್ತಿಲ್ಲವೆಂತ ಹೇಳುತ್ತಿವೆ. ಗಾಂಧಿಜೀಯವರು ಒಪ್ಪಿ ಸೈನ್ ಮಾಡಿರುವದರಿಂದ ಎಷ್ಟೇ ಕಷ್ಟವಾದರೂ ನಾವು ರಾಜಿ ಶರತ್ತುಗಳನ್ನು ನಡೆಸಿಯೇ ನಡೆಸುತ್ತೇವೆ. ರಾಜಿ ಶರತ್ತಿಗೆ ವಿರೋಧ ಮಾಡುವ ಭಾರವನ್ನು ಸರ್ಕಾರದ ಮೇಲೆ ಹಾಕುತ್ತೇವೆ. ಆರು ತಿಂಗಳು ಅಥವಾ ವರ್ಷದ ಒಳಗೆ ಸರ್ಕಾರವು ನಮ್ಮ ಕೈಗೆ ಬರಬೇಕು. ಇಲ್ಲವಾದರೆ ಈಗ ನಡೆದದ್ದಕ್ಕಿಂತಲೂ ಹೆಚ್ಚು ಭಯಂಕರವಾದ ಹೋರಾಟ ನಡೆಸಬೇಕು. ಸರ್ಕಾರದ ಅಧಿಕಾರಿಗಳು ರೈತರಿಂದ ತೆರಿಗೆ ವಸೂಲು ಮಾಡುತ್ತಾರೆ. ಒಬ್ಬರ ಮೇಲೆ ದೈವ ಭೂಮಿಯನ್ನು ವಾಪಸು ಕೊಡುವದೂ ಸಹ ಇಲ್ಲ. ರೈತರು ಕಷ್ಟಕ್ಕೆ ಈಡಾಗಬಾರದೆಂಬ ಭರವಸೆ ಇಲ್ಲದಿದ್ದರೆ ಗಾಂಧಿಜೀಯವರು ರಾಜಿಗೆ ಒಪ್ಪುತ್ತಿರಲಿಲ್ಲ. ಆದ್ದರಿಂದ ಅವರಲ್ಲಿ ಭರವಸೆ ಇರಿಸೋಣ.

ವಿದ್ಯಾರ್ಥಿಗಳೂ, ಬಾಯರುಗಳೂ ಹೆಚ್ಚು ಕೆಲಸ ಮಾಡಿಯಾರೆಂತ ನಂಬಿದ್ದೇನೆ. ಇನೆಲ್ಲಿಂದ ತಾವರ್ತಿಯೊದರೂ ನನ್ನ ಕೆಲಸವನ್ನು ನಿರಾಶೆ ಮಾಡಲಾರರೆಂತ ನಂಬುತ್ತೇನೆ. ಆಗ ಸ್ಕೂಲುಗಳಿಗೂ ಖಚೇರಿಗಳಿಗೂ ಎಡೆಯೇ ಇರುವುದಿಲ್ಲ. ನಮಗೆ ಬೇಕಾದ ಸ್ವರಾಜ್ಯದಲ್ಲಿ ನ್ಯಾಯ ತೀರ್ಪುಗಾರಿ, ನೀರು, ಉಪ್ಪಿನಂತೆ ಸುಲಭವಾಗಿ ಸಿಕ್ಕಬೇಕು. ದೊಡ್ಡ ಸಂಬಳಗಳನೂ ಇರುವುದಿಲ್ಲ. ರೈತರು ಕೊಡುವ ಹಣವನ್ನು ದುಂದು ಖರ್ಚು ಮಾಡುವುದಿಲ್ಲ. ಉದ್ಯೋಗಸ್ಥರ ಸಂಬಳವನ್ನು ರೂ. ೫೦೦. ಗೆ ಇಳಿಸಿದ ಲಂಚ ಹೆಚ್ಚಾದೀತೆಂತ ಹೇಳುತ್ತಾರೆ. ಈಗ ಲಂಚವಿಲ್ಲವೇ? ಹೆಚ್ಚು ಸಂಬಳವಿದ್ದರೆ ಲಂಚವೂ ಹೆಚ್ಚಾಗಬೇಕು. ಡಾಕ್ಟರ್ ಚಂದುಲಾಲರು (ಕಾಂಗ್ರೆಸ್ ಕೆಲಸಗಾರರು) ಅಧಿಕಾರಕ್ಕೆ ಬಂದರೆ ಹೆಚ್ಚು ಸಂಬಳ ಪಡೆಯಾರೆಯೋ? ಲಂಚ ತೆಗೆದುಕೊಂಡಾರೆಯೇ?

ಸ್ತ್ರೀಯರಿಂದ, ಪರದೇಶೀ ಬಟ್ಟೆ ವ್ಯಾಪಾರಿಗಳು ಬೇರೆ ಕೆಲಸವನ್ನು ನೋಡಿಕೊಳ್ಳಬೇಕೆಂತ ಎಚ್ಚರಿಸುತ್ತೇನೆ. ಇಲ್ಲವಾದರೆ ಒಂದು ವರ್ಷದೊಳಗೆ ಅವರಿಗೆ ಕಷ್ಟ ಬಂದೀತು. ಅವರದೆ ಅವರಿಗೆ ಕಸಬೇ ಇಲ್ಲವಾದೀತು. ಮಿಲಿಟರಿ ಖರ್ಚು ಕಮ್ಮಿ ಮಾಡಿದರೆ, ಅಧಿಕಾರಿಗಳ ಸಂಬಳ ಕಡಿಮೆ ಮಾಡಿದರೆ ಭೂಕಂದಾಯ ಕಡಿಮೆ ಮಾಡಲಾಗುತ್ತವೆ; ನಿಶಾ ಸೇವನೆ ನಿಲ್ಲಿಸಲಾಗುತ್ತದೆ. ಉಪ್ಪು ಮುಫ್ತಾಗಿ ಸಿಕ್ಕುತ್ತದೆ. ಗಾಂಧಿಜೀಯವರ ಇಪ್ಪತ್ತು ಶರತುಗಳ ಪ್ರಯೋಜನವು ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ದೊರಕುತ್ತದೆ.

ಬೊಂಬಾಯಿನ ವ್ಯಾಪಾರಿಗಳು, ಪರದೇಶೀ ಬಟ್ಟೆ ತರುವುದಿಲ್ಲವೆಂತ ವಾಗ್ದಾನ ಮಾಡಿದ್ದಾರೆ. ಇವರ ವಾಗ್ದಾನದಂತೆ ನಡೆಯುತ್ತಾರೋ ಎಂತ ನೋಡಿಕೊಳ್ಳುವುದು ಜನರ ಕರ್ತವ್ಯವಲ್ಲವೇ. ನೀವು ಕೂಡ ಜಾಗರೂಕರಾಗಿರದಿದ್ದರೆ ಈ ವರೆಗೆ ಹುಡುಗರು ಮತ್ತು ಸಹ ಪಿಕೆಟ್ ಮಾಡಿ ಕಷ್ಟ ಪಟ್ಟದ್ದೆಲ್ಲ ವ್ಯರ್ಥವಾಗುತ್ತದೆ. ಹಂಗಾಮಿ ರಾಜಿಯಿಂದ ನೀವು ನಿದ್ರೆ ಹೋಗಬಹುದೆಂತ ಅರ್ಥವಲ್ಲ. ಎಲ್ಲರೂ ಕಾಂಗ್ರೆಸ್ ಮೆಂಬರುಗಳಾಗಬೇಕು, ಎಲ್ಲರೂ ಖದ್ದರ್ ಧರಿಸಬೇಕು, ಇತರರನ್ನು ಧರಿಸುವಂತೆ ಮಾಡಬೇಕು. ಖದ್ದರ್ ಕೋರ್ಟುಗಳಲ್ಲಿಯೂ ದೇವಸ್ಥಾನಗಳಲ್ಲಿಯೂ, ಕೌನ್ಸಿಲುಗಳಲ್ಲಿಯೂ ಸಹ ಹಬ್ಬಬೇಕು. ಪರದೇಶೀ ಬಟ್ಟೆ ಧರಿಸಿದವರು ಮತಬೋಧನೆ ಮಾಡಲು ಅರ್ಹರಲ್ಲ. ಸರಕಾರವು ದಬ್ಬಾಳಿಕೆ ನಡೆಸುವುದರಲ್ಲಿ ತನ್ನ ಹತ್ಯಾರುಗಳನ್ನೆಲ್ಲಾ ಉಪಯೋಗಿಸಿಯಾಗಿದೆ. ತೋಪಿ ಗುಂಡು ಒಂದು ಮಾತ್ರ ಉಳಿದಿದೆ. ಅದಕ್ಕೆ ಎದೆ ಕೊಡಲು ಸಹ ತಯಾರಾಗಬೇಕು. ಕಾಂಗ್ರೆಸಿನ ಬೋಧನೆಗಳನ್ನು ಗ್ರಾಮಾಂತರಗಳಿಗೆ ಹರಡಿಸಲು ಎಲ್ಲರೂ ಸಹಾಯಕರಾಗಬೇಕು.

...ರಿ ಫೆಡರೇಶನಿನ ವಾರ್ಷಿಕ ಜನರಲ್ ಮೀಟಿಂಗು.

18—4—31ರಲ್ಲು ಮಡಿಕೇರಿಯಲ್ಲಿ ನಡೆದ ... ಫೆಡರೇಷನ್ನಿನ ವಾರ್ಷಿಕ ಜನರಲ್ ಮೀಟಿಂಗಿನ ...ಂಗ್ಸ್.

ಫೆಡರೇಶನ್ನಿಗೆ ಸಂಯೋಜಿಸಲ್ಪಟ್ಟ 13 ಯೂನಿಯನ್ ಮತ್ತು ಇತರ 2 ಸಂಸ್ಥೆಗಳ ಪ್ರತಿನಿಧಿಗಳು ಪ್ರತಿ... ...ದರು

ಸೆಂಟ್ರಲ್ ಬ್ಯಾಂಕ್ ಪರವಾಗಿ (1) ರಾವ್‌ಬಹದೂರ್ ... ದೇವಯ್ಯನವರು, (2) ಮೆ. ಗಳದ ಕೆ ಪಿ ಚಿಣ್ಣ... (3) ಐ ಸಿ. ಸುಬ್ಬಯ್ಯನವರು (4) ಪಿ ... ಬೇಂಗ ನಾಡು ಯೂನಿಯನ್ (1) ... ...ಯ್ಯನವರು, (2) ನರಪಂಡ ಗಣಪತಿಯವರ, 3 ...ನಾಡು ಯೂನಿಯನ್ (1) ಮೆ ಕೋಟೆರ ತಮ್ಮ... 4 ಫ್ರೇಜರ್‌ಪೇಟೆ ಯೂನಿಯನ್ (1) ಮೆ ... ...ಪ್ಪನವರು, 5 ಮಡಿಕೇರಿ ಯೂನಿಯನ್ (1) ... ...ಪಂಡ ಬೆಳ್ಳಪ್ಪನವರು, 6. ... (1) ಮೆ ಪಾಂಡಂಡ ಮುತ್ತಣ್ಣನವರ 7 ... ಯೂನಿಯನ್ (1) ಮೆ ಗಳಾದ ಕೆ ಟಿ ... ...ರು, (2) ಚೆಪ್ಪುಡಿರ ಪೊನ್ನಪ್ಪನವ, 8 ಶ್ರೀಮಂಗ... ಯೂನಿಯನ್ (1) ಮೆ. ಗಳಾದ ... ...ರು, (2) ಚೆಕ್ಕೆರ ಪೆಮ್ಮಯ್ಯನವ 9 ಎಡೆನಾಲ್ಕು... ಯೂನಿಯನ್ (1) ಮೆ ಗಳಾದ ... ...ಯ್ಯನವರು, (2) ... 10 ...ಸೋಕೆ ಯೂನಿಯನ್ (1) ಮೆ ... ...ಕಾಳೇಗೌಡರ, (2) ಬೆಳ್ಯಾರಳ್ಳಿ ...ಯ್ಯನವರು, 11 ...ನಾಲ್ಕುನಾಡು ಯೂನಿಯನ್ (1) ಮೆ. ... ...ಯ್ಯನವರು, 12 ಮಹದೇವಪೇಟೆ ಟೌನ್ ... ...ಟೆಡ್ (1) ಮೆ. ಎನ್ ... ಲಿಂಗಯ್ಯನವರು.

ಗೈ ರು ಹಾ ಜ ರು.

(1) ತಾವುನಾಡು ಯೂನಿಯನ್ (2) ಅಮ್ಮತ್ತಿನಾಡು ಯೂನಿಯನ್, (3) ಸೋಮವಾರಪೇಟೆ ಯೂನಿಯನ್

1 ಫೆಡರೇಶನ್ ಅಧ್ಯಕ್ಷರಾದ ರಾವಬಹದ್ದೂರ್ ಪಿ. ದೇವಯ್ಯನವರ ಅಧ್ಯಕ್ಷಸ್ಥಾನವನ್ನು ವ... ...ರು

2 ಫಡೇರಶನ್ ಗೌರವ ಕಾರ್ಯದರ್ಶಿಯವರ ಫೆಡರೇಶನ್ನಿನ ವರದಿಯನ್ನು ಓದಿ ವಿಮರ್ಶಿಸಿದ ನಂತರ ತಕ್ಕ ... ...ಯ ... ಅಂಗೀಕರಿಸಲಾಯಿತು

3 ಯೂನಿಯನ್ನುಗಳ ಪ್ರೆಸಿಡೆಂಟರು ಫೆಡರೇಶನ್ನಿನ ಕಾರ್ಯ ನಿರ್ವಾಹಕ ಮಂಡಳಿಯ ... ...ವನ್ನು ... ಈ ವರ್ಷ ... ಲ್ಲಿ ... ...ಕೊಂಡು ಬಾದರೆ ಮುಂದಿನ ... ...ಗೆ ತರಬೇಕೆಂದು ತೀರ್ಮಾನಿಸಲಾಯಿತು

ಸುಪರ್‌ವೈಜರುಗಳ ಸಂಖ್ಯೆಯನ್ನು ... ... ಅನುಕೂಲಕ್ಕಾಗಿ ಇಡಬೇಕೆಂಬುದಾಗಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು

5 ಸುಪರ್‌ವೈಜರು ... ವರ್ಗಾವಣೆ ... ಮತ್ತು ... ಕಾರ್ಯನಿರ್ವಾಹಕ ಫೆಡರೇಶನ್ನಿನ ... ...ದೇಶವಾಗಿ ತೀರ್ಮಾನಿಸಲಾಯಿತು

6 ಸಿ. ... ...ಕೇಕೆಂದು ... ...ಸಲಾಯಿತು

7 ರಿಜಿಸ್ಟ್ರಾರವರು ... ಸಂಘಗಳ ... ವನ್ನು ... ... ಅದರ ಪ್ರಯೋಜನ ... ...ದಂತೆ ... ... ಮತ್ತು ಮಡಿಕೇರಿಯ ... ಬಗ್ಗೆ ಪ್ರತಿ ... ಪ್ರತಿ ... ಯ ಮತ್ತು ... ಪಟ್ಟಿಗಳನ್ನು ... ...ಯುಕ್ತವಾಗಿರಬಂತೆಯೂ, ಗ್ರಾಮಗಳಲ್ಲಿಯೂ ... ...ರು ನೆಲಗಳಲ್ಲಿನ ಹಾಗೂ, ...ದಂತೆ ... ... ಇರುವ ... ಕ್ರಮಗಳನ್ನು ... ...ದ ಸಹಾಯದಿಂದ ತಕ್ಕ ಏರ್ಪಾಡು ಮಾಡಿಕೊಳ್ಳಬೇ... ...ಯೂ ಪೋಷಿಸಿದ ನಂತರದ ... ...ಲಾಯಿತು

8 ಹೋಂ ಸೇವಿಂಗ್ಸ್ ಪೆಟ್ಟಿಗೆಯನ್ನು ... ...ಗಳು ಮನೆಯಲ್ಲಿಯೂ ಇಟ್ಟು ... ಮತ್ತು ... ...ಥ ಮೆಂಬರರಿಂದ ಪೋಷಿಸಲ್ಪಡುವವರೆಲ್ಲ ಈ ಪೆಟ್ಟಿಗೆಯಲ್ಲಿ ಹಣವನ್ನು ಶೇಖರಿಸುವ ಪದ್ಧತಿಯನ್ನು ... ...ನ್ನವರೂ ತಮ್ಮ ಎಲ್ಲಾ ಸಂಘಗಳಿಗೂ, ...ಎಲ್ಲ ... ಈ ಪದ್ಧತಿಯನ್ನು ... ಬೋಧಿಸಿ ... ಯೂನಿಯನ್ನಿನ ... ... ಸಂಘದ ಪ್ರತಿನಿಧಿಗಳು ಅಂಥಾ ... ... ಎಲ್ಲರಿಗೂ ... ... ತೀರ್ಮಾನಿಸಲಾಯಿತು. ... ... ಪುಟ 111ರಲ್ಲಿ ... ...ನ್ನು ಓದಿದರೆ ... ಆಗುವದೆಂದು ... ...ಯಿತು

9 ಮಡಿಕೇರಿಯಲ್ಲಿರುವ ಎಲ್ಲಾ ಸಂಘಗಳಿಗೂ, ಮತ್ತು ದೇಶದ ಎಲ್ಲಾ ಸಹಕಾರಿಗಳಿಗೂ ಅನುಕೂಲವಾ... ... ಈ ... ಎಲ್ಲ ಯೂನಿಯನ, ಕಾನ್‌ಫರೆನ್ಸುಗಳಲ್ಲಿಯೂ ... ...ದ ಸಂಘಗಳ ಸಹಾಯದಿಂದ ಒಂದು ಟೌನ್ ಹಾಲ್ ಕಟ್ಟಿಸಬೇಕಾಗಿಯೂ, ಈ ವಿಷಯದಲ್ಲಿ ರಿಜಿಸ್ಟ್ರಾರವರೂ ಫೆಡರೇಶನ್ ಮತ್ತು ಸೆಂಟ್ರಲ್ ಬ್ಯಾಂಕ್ ಪ್ರೆಸಿಡೆಂಟರ... ... ... ಹೋಗಿ ಸರಕಾರ... ... ಧನ ಸ್ಥಳ ಮತ್ತು ಮರ ವಗೈರೆ ಸಹಾಯಗಳನ್ನು ... ...ಕೆ ತೀರ್ಮಾನವಾಯಿತು

10 ಈ ಕೆಳಗಿನ ಮೆಂಬರುಗಳು ಸರ್ವಸಮ್ಮತದಿಂದ ಕಾರ್ಯಕಾರಿ ಮಂಡಳಿಯವರಾಗಿ ಚುನಾಯಿಸಲ್ಪಟ್ಟರು

1. ಸೆಂಟ್ರಲ್ ಬ್ಯಾಂಕ್ ಪರವಾಗಿ (1) ರಾವ್‌ಬಹದ್ದೂರ್ ಪಿ ದೇವಯ್ಯನವರ, (2) ಮೆ. ಕೆ. ಪಿ ಚಿಣ್ಣಪ್ಪನವರು, ಡಿಸ್ಟ್ರಿಕ್ಟ ಮೆಂಬರು ಪರವಾಗಿ — (3) ಮೆ ಐ ಸಿ. ಸುಬ್ಬಯ್ಯನವರು, ಯಂ. ... ಬಿ ಎಲ್., 2 ... ... ಸಂಘಗಳ ಪರ — (1) ಮೆ ... ಶಿವಲಿಂಗಯ್ಯನವರು, 3 ... ... ಸಂಘಗಳ ಪರ — (4) ಮೆ. ಪಾಂಡಂಡ ಚಂಗಪ್ಪನವರ, ಯಂ ಎಲ್ ಸಿ., 4 ಕಡಿಯತ್ತುನಾಡು ಯೂನಿಯನ್—(6) ಮೆ ಕೂಂಡಿರ ತಮ್ಮಯ್ಯನವರು, 5 ಎಡೆನಾಲ್ಕುನಾಡು ಯೂನಿಯನ್ ಪರ—(7) ಮೆ. ನಡಿಕೇರಿಯಂಡ ... ...ಯ್ಯನವರು ಯಂ ಎಲ್ ಸಿ., 6 ಅಮ್ಮತ್ತಿನಾಡು ಯೂನಿಯನ್ ಪರ—(8) ಮೆ ... ...ಪ್ಪನವರ, 7 ಪೊನ್ನಂಪೇಟೆ ನಾಡು ಯೂನಿಯನ್—(9) ಮೆ ಚೆಪ್ಪುಡಿರ ಪೊನ್ನಪ್ಪನವರ, 8 ಶ್ರೀಮಂಗಲನಾಡು ಯೂನಿಯನ್—(10) ಮೆ. ಚೆಕ್ಕೆರ ಪೆಮ್ಮಯ್ಯನವರು 9 ಮಡಿಕೇರಿನಾಡು ಯೂನಿಯನ್—(11) ಮೆ ... ಬೆಳ್ಳಪ್ಪನವರು, 10. ಸೋಮವಾರಪೇಟೆ ಯೂನಿಯನ್—(12) ಮೆ ಎಸ್. ಶಂಕರಯ್ಯನವರು, 11. ತಾವುನಾಡು ಯೂನಿಯನ್ (13) ಮೆ ಎನ್ ಶ್ರೀನಿವಾಸಯ್ಯನವರ, 12. ಫ್ರೇಜರ್‌ಪೇಟೆ ನಾಡು ಯೂನಿಯನ್—(14) ಮೆ ಹೆಬ್ಬಾಲೆ ಹೊನ್ನಪ್ಪನವರ, 13 ...ನಾಡು ಯೂನಿಯನ್—(15) ಮೆ. ಪಾಂಡಂಡ ಮುತ್ತಣ್ಣನವರು, 14. ಬೇಂಗುನಾಡು ಯೂನಿಯನ್—(16) ಮೆ ...ಂಡಿರ ದೇವಯ್ಯನವರ, 15 ... ಟೌನ್ ಯೂನಿಯನ್—(17) ಮೆ ಗೋಪಾಲಪುರದ ಕಾಳೇಗೌಡರು. 16 ... ನಾಲ್ಕುನಾಡು ಯೂನಿಯನ್—(18) ಮೆ. ಉದಿಯಂಡ ... ...ಯ್ಯನವರು

11 ಈ ಮೇಲ್ಕಂಡ ಮೆಂಬರುಗಳ ಪೈಕಿ ರಾವ್‌ಬಹದೂರ್ ಮೆ. ಪಿ. ದೇವಯ್ಯನವರನ್ನು ಅಧ್ಯಕ್ಷರನ್ನಾಗಿ ಏಕಭಾವದಿಂದ ಚುನಾಯಿಸಲಾಯಿತು

12 ಸೆಕ್ರೆಟರಿ ಪರವಾಗಿ ಮೆ. ಕೆ. ಪಿ. ಚಿಣ್ಣಪ್ಪನವರ ಇರಬೇಕೆಂದು ಮೆ ಚೆಕ್ಕೆರ ಪೆಮ್ಮಯ್ಯನವರು ಸೂಚಿಸಿದರ ಮೆ. ಪಿ ಬಿ ... ...ಯ್ಯನವರು ಅನುಮೋದಿಸಿದರು

ಮೆ. ಯಂ. ಯಂ ಬೆಳ್ಳಪ್ಪನವರು ಸೆಕ್ರೆಟರಿಯಾಗಿರಬೇಕೆಂದು ಮೆ ಕಂಬೆಯಂಡ ಬೆಳ್ಳಪ್ಪನವರು ಸೂಚಿಸಿದರು. ಮೆ ಬೆಳ್ಯಾರಳ್ಳಿ ಬಸವಣ್ಣಯ್ಯನವರು ಅನುಮೋದಿಸಿದರು

ಮೆ. ಕೆ ಪಿ ಚಿಣ್ಣಪ್ಪನವರು ತನಗೆ ಸೆಕ್ರೆಟರಿಯವರಾಗಿರಲು ಅನಾನುಕೂಲವೆಂತಲೂ ಮೆ ಯಂ. ಯಂ ಬೆಳ್ಳಪ್ಪನವರು ... ... ಕೆಲಸ ಮಾಡುವ ... ... ಅವರನ್ನು ಸೆಕ್ರೆಟರಿಯವರಾಗಿ ... ... ತನ್ನ ಮೇಲೆ ... ... ಸೆಕ್ರೆಟರಿಯವರಾಗಿ ... ಮೆಂಬರುಗಳಿಗೆ ... ನಂತರ ಮೆ ಯಂ ಯಂ ಬೆಳ್ಳಪ್ಪನವರನ್ನು ಸರ್ವಸಮ್ಮತದಿಂದ ಸೆಕ್ರೆಟರಿಯವರಾಗಿ ಆರಿಸಿದರು

13 ಯೂನಿಯನ್ ಆಫೀಸಿಗೆ ಬಾಡಿಗೆ ಕೊಡುವ ವಿಷಯ ... ... ಸೆಕ್ರೆಟರಿ ... ... ಮೇನೇಜಿಂಗ್ ಕಮಿಟಿ ತೀರ್ಮಾನಕ್ಕೆ ಬಿಡಲಾಯಿತು.

14. ಮೆ ಕೆ ಪಿ ಚಿಣ್ಣಪ್ಪನವರು ಮೊದಲಿನ ಫೆಡರೇಶನ ಗೌರವ ಕಾರ್ಯದರ್ಶಿಯವರಾಗಿ ಈ ವರೆಗೆ ತೃಪ್ತಿಕರವಾಗಿ ಕೆಲಸ ... ... ಈಗ ಸೆಕ್ರೆಟರಿ ಕೆಲಸದಿಂದ ನಿವೃತ್ತರಾದುದರಿಂದ ಅವರಿಗೆ ಫೆಡರೇಶನ್ ಪರವಾಗಿ ವಂದನೆಗಳನ್ನು ಅರ್ಪಿಸಲಾಯಿತು

15 ಫೆಡರೇಶನ್ ಯೂನಿಯನ್ ಮತ್ತು ಸಂಘಗಳಲ್ಲಿ ನಡೆಯುವ ಪತ್ರವ್ಯವಹಾರಗಳು ... ... ಆಫೀಸುಗಳ ಗೌ... ... ... ಮೂಲಕ ಫೆಡರೇಶನ್ ಆಫೀಸು ಎಲ್ಲಾ ಸಂಘಗಳ ... ಆಫೀಸು ಆಗಿರುವುದರಿಂದ ಅದಕ್ಕೆ ತಕ್ಕ ಮರ್ಯಾದೆ ಕೊಟ್ಟು ಪತ್ರವ್ಯವಹಾರ ನಡಿಸಬೇಕಾಗಿ ರಿಜಿಸ್ಟ್ರಾರವರು ತಿಳಿಸಲು ... ... ನಂತರ ... ಸೂಚಿಸಿದಂತೆ ... ... ಸರ್ವಸಮ್ಮತದಿಂದ ತೀರ್ಮಾನಿಸಲಾಯಿತು.

16 ಅಧ್ಯಕ್ಷರು ಸಂಘಗಳ ಯೂನಿಯನ್ನುಗಳ ಮತ್ತು ರಿಜಿಸ್ಟ್ರಾರವರ ಕರ್ತವ್ಯಗಳನ್ನು ವಿವರ... ... ಅನ್ಯೋನ್ಯವಾಗಿ ಬೆರತು ಕೆಲಸ ಮಾಡುವುದರಿಂದ ಸಂಘಗಳಿಗೆ ... ... ವಗೈರೆ ತತ್ವಗಳನ್ನು ... ... ಇನ್ನು ಮುಂದೆ ... ಕೆಲಸ ... ...ಕೆಂದು ಭಾಷಣ ಮಾಡಿದರು.

17 ರಿಜಿಸ್ಟ್ರಾರವರು ಸಹಕಾರ ಸಂಘಗಳ ಜೀವನಕ್ಕೆ ಅನುಕೂಲವಾಗುವ ರೀತಿ ಫೆಡರೇಶನ್ನಿಗೆ ಅತ್ಯಂತ ಸಹಾಯ ... ... ಕೆಲಸವನ್ನು ... ... ಅವರಿಗೆ ವಂದನೆಗಳನ್ನು ಅರ್ಪಿಸಲಾಯಿತು

18 ಅಧ್ಯಕ್ಷರಿಗೂ ಮತ್ತು ರಿಜಿಸ್ಟ್ರಾರವರಿಗೆ ವಂದನೆಗಳನ್ನು ಅರ್ಪಿಸಿ ಮೀಟಿಂಗು ಬರಖಾಸ್ತು ಮಾಡಲಾಯಿತು

ಪಿ ದೇವಯ್ಯ.
ಪ್ರೆಸಿಡೆಂಟ್ ಕೊ. ಫೆ.

1930—31ನೇ ಸಾಲಿನ ಬಾಬ್ತು ಸಹಕಾರ ಯೂನಿಯನ್ನುಗಳ ಫೆಡರೇಶನಿನ ವರದಿ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಈಗಿನ ಸರಾಸರಿ ಸಿಬ್ಬಂದಿ ಖರ್ಚು ಮಾಹೆಯಾನ 392/ ರೂಪಾಯಿ ಆಗಿ ವರ್ಷಕ್ಕೆ 4704/ರೂಪಾಯಿ ಆಗಬಹುದು. ಇದಕ್ಕೆ ಸಾದಿಲ್ವಾರು ಖರ್ಚು ಅಂದಾಜು ಭತ್ಯೆ ವಗೈರೆ 626/ ರೂಪಾಯಿಗಳನ್ನು ಸೇರಿಸಿ 5330/ರೂಪಾಯಿ ಖರ್ಚು ಕಳೆ... ...ಲು 2184/ರೂಪಾಯಿ ಉಳಿಯಬಹುದಾಗಿದೆ. ರಿಜಿಸ್ಟ್ರಾರವರು ಮತ್ತು ಸೆಂಟ್ರಲ್ ಬ್ಯಾಂಕಿನವರು ಮೇಲ್ವಿಚಾರಣ ನಿಧಿಯ ... ...ಯಲ್ಲಿ ... ಎಂದಿನಂತೆ ಸಹಾಯ ಮಾಡಿದ್ದೇ ಆದರೆ ಫೆಡರೇಶನ್ನಿನ ಆರ್ಥಿಕ ಸ್ಥಿತಿಯು ಉತ್ತಮವಾಗಿ ಎಲ್ಲ ಯೂನಿಯನ್ನುಗಳಿಗೂ ಪ್ರತ್ಯೇಕವಾದ ಸುಪರ್‌ವೈಜರುಗಳನ್ನು ನೇಮಿಸಲು ಅನುಕೂಲವಾಗುವುದು.

ಸ್ಥಳೀಯ ಸಮ್ಮೇಳನ—

ಫೆಡರೇಶನ್ನಿನವರು, ವೀರಾಜಪೇಟೆ, ... ಸೋಮವಾರಪೇಟೆ ಫ್ರೇಜರ್‌ಪೇಟೆ, ಶ್ರೀಮಂಗಲ, ಪೊನ್ನಂಪೇಟೆ, ... ಅಮ್ಮತ್ತಿ, ಬೇಂಗುನಾಡು ಮತ್ತು ಮಡಿಕೇರಿ ಯೂನಿಯನ್ನುಗಳಲ್ಲಿ ... ಮೀಟಿಂಗು ಮತ್ತು ಕಾನ್‌ಫರೆನ್ಸುಗಳನ್ನು ಮಾಡಿ ಸಹಕಾರಿಗಳಿಗೆ ತತ್ವಗಳನ್ನು ಚೆನ್ನಾಗಿ ಬೋಧಿಸಿ ಮುಂದಿನ ... ಸಹಾಯ ಮಾಡುತ್ತಾರೆ ತಾವುನಾಡು ಯೂನಿಯನ್ನಿನವರು ಕಾನ್‌ಫರೆನ್ಸಿಗೆ ಏರ್ಪಡಿಸಿದ ದಿವಸ ಫೆಡರೇಶನ್ನಿನವರು ಹೋಗಿದ್ದರು ಆದರೆ ಕಾನ್‌ಫರೆನ್ಸಿಗೆ ಯಾರೂ ಬಂದಿರುವುದಿಲ್ಲ. ಅನೇಕ ಕಾನ್‌ಫರೆನ್ಸುಗಳಿಗೆ ರಿಜಿಸ್ಟ್ರಾರವರು ದಯಮಾಡಿಸಿ ಯೂನಿಯನ್ ಫೆಡರೇಶನ್ನುಗಳ ಕರ್ತವ್ಯ ವಗೈರೆ ತತ್ವಗಳನ್ನೂ, ಸ್ತ್ರೀಯರು ಸಂಘಗಳ ಮಹತ್ವವನ್ನೂ ಚೆನ್ನಾಗಿ ವಿವರಿಸಿರುತ್ತಾರೆ ಈ ಸಮ್ಮೇಳನಕ್ಕೆ ಫೆಡರೇಶನ್ನಿನ ಮೆಂಬರುಗಳು ಹಾಜರಾದ್ದಕ್ಕೂ, ಮತ್ತು ಮ್ಯಾನೇಜಿಂಗ್ ಮತ್ತು ಎಗ್ಸಿಕ್ಯೂಟಿವ್ ಕಮಿಟಿಯವರು ಫೆಡರೇಶನ್ ಮೀಟಿಂಗಿಗೆ ಹಾಜರಾದುದಕ್ಕೂ ಪ್ರಯಾಣದ ಬಾಬ್ತಿಗಾಗಿ 98—8—0 ಆಣೆ ಖರ್ಚಾಗಿರುತ್ತೆ ಫೆಡರೇಶನ್ ಮೆಂಬರುಗಳೆಲ್ಲರೂ ಕಾನ್‌ಫರೆನ್ಸಿಗೆ ಹಾಜರಾಗಿದ್ದ ಪಕ್ಷ ಪ್ರಯಾಣದ ಬಾಬ್ತು ಖರ್ಚು ಹೆಚ್ಚಾಗುತ್ತು. ಇನ್ನು ಮುಂದಕ್ಕಾದರೂ ಪ್ರಯಾಣದ ಬಾಬ್ತಿಗೆ ಮತ್ತು ಯೂನಿಯನ್ನುಗಳು ಮತ್ತು ಸಂಘಗಳು ಸಂದರ್ಭಗಳಿಗೂ ಕಡಮೆ ಪಕ್ಷ 1000 ರೂಪಾಯಿಗಳನ್ನಾದರೂ ಪ್ರತ್ಯೇಕವಾಗಿಟ್ಟರೆ ಫೆಡರೇಶನ್ನಿನ ಕೆಲಸಕ್ಕೆ ಉತ್ತೇಜನವಾಗುವುದು.

ಫೆಡರೇಶನ್ನಿಗೆ ಸೇರಿದ 13 ಯೂನಿಯನ್ನುಗಳ ಪೈಕಿ ಅಮ್ಮತ್ತಿ ಮತ್ತು ಎಡೆನಾಲ್ಕುನಾಡು ಯೂನಿಯನ್ನುಗಳು ಎಷ್ಟೇ ತಗಾದೆಮಾಡಿದರೂ ತಮ್ಮ ಸಂಯೋಜನೆ ಹಣವನ್ನು ಕೊಟ್ಟಿರುವದಿಲ್ಲ. ಎಲ್ಲ ಸಂಘಗಳು ಯೂನಿಯನ್ನುಗಳ, ಯೂನಿಯನ್ನುಗಳು ಫೆಡರೇಶನ್ನಿಗೂ ಸೇರಿದ ಹೊರತು ಸಹಕಾರದ ಕೆಲಸವು ಚೆನ್ನಾಗಿ ನಡೆಯುವಂತೆ ಕಾಣುವುದಿಲ್ಲ.

ರಿಜಿಸ್ಟ್ರಾರವರು ತಾರೀಖು 24—5—30ರ ಜನರಲ್ ಮೀಟಿಂಗಿಗೂ ಮತ್ತು 7—6—30ರ ಕಾರ್ಯನಿರ್ವಾಹಕ ಸಭೆಗೂ ದಯಮಾಡಿಸಿದ್ದರು ಈಚೆಗೆ ಯಾವ ಮೀಟಿಂಗಿಗೂ ದಯಮಾಡಿಸಿರುವುದಿಲ್ಲ. ಆದರೆ ಮೇಲ್ವಿಚಾರಣಾ ನಿಧಿಯನ್ನು ವಸೂಲ್ಮಾಡಲಿಕ್ಕೂ ವಗೈರ ಇತರ ಕೆಲಸಗಳಲ್ಲಿ ಉಚಿತ ಸಲಹೆಗಳನ್ನು ಕೊಟ್ಟು ಫೆಡರೇಶನ್ನಿನ ಕೆಲಸಕ್ಕೆ ಉತ್ತೇಜನ ಕೊಟ್ಟಿರುತ್ತಾರೆ.

ರಿಟೈಯರಾದ ರಿಜಿಸ್ಟ್ರಾರವರಿಗೆ ಸನ್ಮಾನ

ತಾರೀಖು 7—6—30ರ ಮ್ಯಾನೇಜಿಂಗ್ ಕಮಿಟಿಯವರ ಪ್ರೊಸೀಡಿಂಗ್ಸ್ ಮೇರೆ ಪ್ರತಿ ಸಂಘಗಳಿಂದ ಎರಡೆರಡು ರೂಪಾಯಿ, ವಸೂಲಿ ತೆಗೆದು ತಾರೀಖು 14—7—30ರಲ್ಲಿ ರಿಜಿಸ್ಟ್ರಾರಾಗಿದ್ದ ಮೆ. ... ಎಸ್. ಸುಬ್ರಾಯರಿಗೆ ಒಂದು ಎಡ್ರೆಸ್ಸನ್ನು ಕೊಡಲಾಯಿತು. ಈ ಬಾಬ್ತು 427 ರೂಪಾಯಿ ವಸೂಲಾಗಿ 252/ರೂಪಾಯಿ ಖರ್ಚಾಯಿತು. ಉಳಿಕೆಯಾದ ಹಣವನ್ನು ಫೆಡರೇಶನ್ನಿನವರು ... ... ಮಾಸಪತ್ರಿಕೆಯ ಖರ್ಚಿಗೆ ಉಪಯೋಗಿಸುವಂತೆ ತೀರ್ಮಾನವಾಯಿತು

ಸಹಕಾರಿ ಮಾಸ ಪತ್ರಿಕೆ.

ಫೆಡರೇಶನ್ನಿನ ತಾ. 6—9—30ರ ಮೀಟಿಂಗಿನಲ್ಲಿ ತೀರ್ಮಾನವಾದ ಹಾಗೆ ಫೆಡರೇಶನ್ನಿನವರು ನವಂಬರ್ ತಿಂಗಳಲ್ಲಿ ಒಂದು ಮಾಸ ಪತ್ರಿಕೆಯನ್ನು ಹೊರಡಿಸಿದರು. ಇದಕ್ಕೆ ಗೌರವ ಸಂಪಾದಕರಾಗಿ ಮೆ. ಕೆ. ಪಿ ಚಿಣ್ಣಪ್ಪನವರನ್ನು ನೇಮಕ ಮಾಡಿದರ. ಅಂದಿನಿಂದ ಈ ವರೆಗೆ ಮಾಸ ಪತ್ರಿಕೆಯು ನಡೆಯುತ್ತಾ ಇದೆ ಈ ಪತ್ರಿಕೆಯಲ್ಲಿ ಪ್ರಕಟಣೆಯಾಗುವಂತ ಲೇಖನಗಳನ್ನು ಎಲ್ಲಾ ಸಹಕಾರಿಗಳು ಓದಿ ಅದರಂತೆ ಆಚರಿಸಿದರೆ ಕೊಡಗು ... ಸಹಕಾರಿ ಸಂಘಗಳು ಅತ್ಯುತ್ತಮ ಸ್ಥಿತಿಗೆ ಬರುವಲ್ಲಿ ಸಂಶಯವಿರುವುದಿಲ್ಲ. ಸದರಿ ಮಾಸ ಪತ್ರಿಕೆಗೆ 250 ಚಂ...

ರಬ್ಬರ್ ಮೋಹರುಗಳು.

ನೀವು ಅಪೇಕ್ಷಿಸುವ ಯಾವತ್ತೂ ಮಾದರಿಯಲ್ಲಿ ತಯಾರಿಸಿ ಕೊಡಲಾಗುವವು.

ಮೇಲ್ಕಂಡ ಸಾಮಾನುಗಳಲ್ಲದೆ ಕನ್ನಡಿಯ ಸೈನ್ ಬೋರ್ಡುಗಳು ಹಾಫ್ ಟೋನ್ ಬ್ಲಾಕ್ ಮನೋಗ್ರಾಮ್ ಮೋಹರು, ಚಂದ್ರಕಾಂತ ಶಿಲೆಯ ಪಲಿಗೆಗಳು, ಉಂಗುರಗಳಿಗಿಡುವ ಬಹು ಅಂದವಾದ ಸಣ್ಣ ಕಲ್ಲುಗಳು ಇತ್ಯಾದಿ.

ದಿ ಕ್ರಾನ್ ರಬ್ಬರ್ ಸ್ಟಾಂಪ್ ಕಂಪೆನಿ,

12—7 ಮಂಗಳೂರು, ದ. ಕನ್ನಡ.

ಯಾ

ಏಜಂಟ್: **ಯನ್. ಯ. ನ್. ಪೊನ್ನಪ್ಪ,**
ಮಡಿಕೇರಿ.

ಮಾಧ್ಯಮಿಕ ಜನರ ನಿರುದ್ಯೋಗ.

ಪುಸ್ತಕದಲ್ಲಿ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಅಹಾಕಾರವು ಎದ್ದಿರುವದು. ಜನರ ಉತ್ಸಾಹವು ತಗ್ಗಿ ಸ್ಥಿರವುದ. ದೇಶದ ಅಭ್ಯುದಯವು ನಿಂತು ಹೋಗಿರುವುದು ಇದಕ್ಕೆ ಕಾರಣವು ಬಹು ಮಟ್ಟಿಗೆ ಮಾಧ್ಯಮಿಕ ಜನರ ನಿರುದ್ಯೋಗವೆನ್ನಬಹುದು. ಈ ನಿರುದ್ಯೋಗದ ಪರಿಣಾಮವೇ ದೊಡ್ಡ ಸೈತಾನದಂತೆ ಎಲ್ಲಾ ದೇಶಗಳಲ್ಲೂ ಜ[illegible]ಸಿಕೊಂಡಿದೆ. ಇದಕ್ಕೆ ಕಾರಣವೇನು? ನವನಾಗರೀಕತೆಯ ಪರಿಣಾಮವೇ? ನೂತನ ನಾಗರೀಕತೆಯು ಹೆಚ್ಚಿದ ಹಾಗೆಲ್ಲಾ ಕಷ್ಟವೂ ಸಂಭವಿಸುವದು ಬಹು ವಿಲಕ್ಷಣವಾಗಿ ತೋರಬಹುದು ಆದರೆ ಪ್ರತಿಯೊಬ್ಬರೂ ಕಣ್ಣಾರೆ ದಿನವೂ ನೋಡುತ್ತಿರುವ ಈ ದುರ್ಘಟ ಪ್ರಸಂಗದಲ್ಲಿ ಏನೊಂದೂ ವಿಲಕ್ಷಣೆಯು ತೋರದು.

ಈ ನಿರುದ್ಯೋಗವು ಅನೇಕ ರೀತಿಯಲ್ಲಿ ಕಂಡು ಬರುವುದು ಕೃಷಿ ಕೈಗಾರಿಕೆಗಳಲ್ಲಿನ ಕೆಲವು ಗುಣದೋಷಗಳಿಂದ ಉಂಟಾಗುವದೆಂದು ಒಂದು ಅಭಿಪ್ರಾಯ. ಕೃಷಿಯಲ್ಲಿ ಕೆಲವು ತಿಂಗಳುಗಳಲ್ಲಿ ಮಾತ್ರವೇ ಅಧಿಕ ಕೆಲಸವಿರುವುದು. ಉಳಿದ ಸಮಯವು ಹಾಳು ಹರಟೆಗಳಲ್ಲೇ ಕಾಲಕ್ಷೇಪ ಮಾಡಲ್ಪಡುವುದು ದಿನಂಪ್ರತಿ ಕೆಲ ಗಂಟೆಗಳ ತನಕ ಮಾಡಬಹುದಾದ ಕೆಲವು ಕಸಬುಗಳಿಂದವು. ಉಳಿದ ಕಾಲವು ಏನೂ ಕೆಲಸವಿಲ್ಲದೆ ಕಳೆಯುವುದು. ಇನ್ನೇ ನಿರುದ್ಯೋಗದ ಸಮಯವನ್ನು ಬೇರೆ ಯಾವುದಾದರೂ ಒಂದು ಉಪಯೋಗ ಕೆಲಸದಲ್ಲಿ ವಿನಿಯೋಗಿಸಿದರೆ ಅದರಿಂದ ತನಗೂ ಅಲ್ಲದೆ ದೇಶಕ್ಕೆ [illegible] ಉಪಕಾರ ಮಾಡಿದಂತಾಗುವುದು. ಇವೂ ಅಲ್ಲದೆ ನಾಗರೀಕತೆ ಹೆಚ್ಚಿದ ಹಾಗೆಲ್ಲಾ ಮನುಷ್ಯನ ಬುದ್ಧಿಶಕ್ತಿಯೂ ಹೆಚ್ಚುವುದು ವಿಜ್ಞಾನ ಶಾಸ್ತ್ರಗಳ ಮೂಲಕ ಅನೇಕ ಹೊಸ ಹೊಸ ಬದಲಾವಣೆಗಳನ್ನು ತರುತ್ತಿರುವನು. ಯಂತ್ರಗಳನ್ನು ನಿರ್ಮಿಸುವನು. ಈ ಯಂತ್ರಗಳ ಸಹಾಯದಿಂದ ಏನೊಂದೂ ಕಷ್ಟವಿಲ್ಲದೆ ಬಹು ಜನರ ಸಹಾಯವಿಲ್ಲದೆ ತನ್ನ ಕೆಲಸವನ್ನು ಆಗ ಮಾಡಿಸುವನು. ಯಂತ್ರ ನಿರ್ಮಾಣದಿಂದ ಕೆಲಸವು ಬಹು ಶೀಘ್ರದಲ್ಲಿ ಆಗಿ ಹೋಗಿ ಒಬ್ಬನೇ ಸಹಸ್ರ ಜನರಿಗೆ ಬೇಕಾಗುವ ಬಟ್ಟೆ ಬರೆಗಳನ್ನೇ ಮೊದಲಾದ ಸಾಮಾನುಗಳನ್ನು ಮಾಡುವನು. ಈ ಯಂತ್ರಗಳ ಮೂಲಕವೂ ದೇಶದಲ್ಲಿ ನಿರುದ್ಯೋಗವು ಹೆಚ್ಚಿರುವುದೆಂದು ಬೇರೆ ಹೇಳಬೇಕಾಗಿಲ್ಲ. ಕೆಲವು ದೇಶಗಳಲ್ಲಿ ಉಳಿವುದಕ್ಕೂ, ಪೈರನ್ನು ಕೊಯ್ಯುವುದಕ್ಕೂ ಯಂತ್ರಗಳಿವೆಯಂತೆ ಹೀಗಾಗಿ ಜನರಲ್ಲಿ ಉದ್ಯೋಗವೇ ಕಡಿಮೆಯಾಗಿದೆ. ಯಂತ್ರ ನಿರ್ಮಾಣದಿಂದ ಆದ ಪರಿಣಾಮವು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಊಹಿಸಿಯೇ ತಿಳಿಯಬೇಕು. ಕಲಸವೇನು ಅತಿ ನಾಜೂಕಾಗಿಯೂ ಶೀಘ್ರದಲ್ಲಿಯೂ ನೆರವೇರಿದರೂ ಎಷ್ಟು ಗಟ್ಟಿ ಜನರ ಜೀವನಕ್ಕೆ ಮಣ್ಣು ಎರಚುವುದು. ನಾಗರೀಕತೆ ಹೆಚ್ಚಿದಂತೆ ದಿನೇ ದಿನೇ ನಿರುದ್ಯೋಗವು ಹೆಚ್ಚುತ್ತಾ ಹೋಗಿರುವುದು. ಇಂಗ್ಲೆಂಡಿನಲ್ಲಿ ಎರಡು ಮಿಲಿಯ ಗಟ್ಟಿ ಜನರು ನಿರುದ್ಯೋಗಿಗಳಾಗಿ ಬೀದಿ ಬೀದಿಗಳಲ್ಲಿ ಅಲೆಯುವರು ಫ್ರಾನ್ಸ್ ದೇಶದಲ್ಲಿ ಮೂರು ಮಿಲಿಯಕ್ಕಿಂತ ಹೆಚ್ಚೆಂದು ಹೇಳಬಹುದು. ನಾಗರೀಕತೆಯ ವೃದ್ಧಿಯ ಶಿಖರಕ್ಕೆ ಮುಟ್ಟಿದ ಅಮೇರಿಕಾ ದೇಶದಲ್ಲಿ ಐದು ಮಿಲಿಯಕ್ಕೆ ಮೇಲೆ ನಿರುದ್ಯೋಗಿಗಳಿರುವರಂತೆ. ಹಿಂದೂಸ್ಥಾನದಲ್ಲಿ ಉದ್ಯೋಗರಹಿತರ ಸಂಖ್ಯೆಯು ಇನ್ನೂ ಗೊತ್ತು ಹಚ್ಚಿರುವದಿಲ್ಲ. ಅಂತು ಇಲ್ಲಿಯೂ ಕೂಡ ದಿನ ದಿನಕ್ಕೆ ವೃದ್ಧಿಯಾಗುತ್ತಾ ಇದೆಯೆಂದು, ನಾವೇ ಪ್ರತಿ ದಿನವೂ ಪ್ರತಿ ತಿಂಗಳಲ್ಲಿಯೂ ಪ್ರತಿ ವರ್ಷದಲ್ಲಿಯೂ ಕಣ್ಣಾರ ನೋಡುತ್ತೇವೆ. ಈ ಸಂಖ್ಯೆಯು ಹೆಚ್ಚುವುದರಿಂದ ಭವಿಷ್ಯತೆಯ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲವೆಂದೂ, ಪ್ರಸಂಗವು ಬಹು ಬಿಕ್ಕಟ್ಟಿಗೆ ಇಳಿಯುವುದೆಂದೂ ಹೊಳೆಯುವುದು.

ಹಿಂದೂಸ್ಥಾನದಲ್ಲಿ ಈ ನಿರುದ್ಯೋಗದ ಪಿಶಾಚವು ಅನೇಕ ವಿಧವಾಗಿ ಆವರಿಸಿಕೊಂಡಿದೆ. ಕೃಷಿಯೇ ಹಿಂದೂದೇಶದ ಮುಖ್ಯ ವ್ಯವಸಾಯ. ಕೃಷಿಯು ಮೇಲೆ ಹೇಳಿದಂತೆ ಕೆಲ ಕಾಲಗಳಲ್ಲಿ ಮಾತ್ರವೇ (Seasonable industry) ಮಾಡಲ್ಪಡುವುದು. ಕಾಲಕ್ಕೆ ಸರಿಯಾಗಿ ಮಳೆಯೂ ಬೀಳದೆ ಹೋದರೆ ಕೃಷಿ ಕೆಲಸವು ಬಿಕ್ಕಟ್ಟಿಗೆ ಉಳಿಯುವದರಿಂದ ಸ್ವತಃ ನಿರುದ್ಯೋಗಕ್ಕೆ ಕಾರಣವಾಗುವುದು. ಮೇಲಾಗಿ ಯಂತ್ರಗಳ ಬಂದುಮರವಣಿಗೆಯಿಂದ ಯಾರಿಗೂ ಸ್ವತಃ ಕೈಯಲ್ಲಿ ಏನೂ ಮಾಡಲು ಆಗುವುದಿಲ್ಲ. ಯಂತ್ರಗಳ ಆಗಮನಕ್ಕೆ ಮೊದಲು ಕೈಗಾರಿಕೆಯಲ್ಲಿ ಹಿಂದೂಸ್ಥಾನವು ಅಗ್ರಸ್ಥಾನವನ್ನು ಹೊಂದಿತ್ತು. ಜನರು ಬಟ್ಟೆಗಳನ್ನು ಬಹು ಸೊಗಸಾಗಿ ಕೈಯಿಂದಲೇ ಮಾಡುತ್ತಿದ್ದರು ಪ್ರತಿಯೊಬ್ಬರೂ ಏನಾದರೂ ಒಂದು ಕೈಗಾರಿಕೆಯನ್ನು ತೆಗೆದುಕೊಂಡು, ಅದರಿಂದ ತಮ್ಮ ಜೀವನ ಯಾತ್ರೆಯನ್ನು ಸುಖವಾಗಿ ಮಾಡುತ್ತಿದ್ದರು. ಯಂತ್ರ ನಿರ್ಮಾಣವು ಸಮಸ್ತ ಕೈಗಾರಿಕೆಗೂ ಪೆಟ್ಟು ಹಾಕಿತು. ನಂತರ ಕಳೆದ ಘೋರ ಯುದ್ಧವು ನಿಂತ ಮೇಲೆ ಪರದೇಶಗಳಿಂದ ಅಪರಿಮಿತವಾಗಿ ಬಟ್ಟೆಯು ಬರುವುದಕ್ಕೆ ಹಿಂದೂಸ್ಥಾನದಲ್ಲಿ ಮಾಡುವ ವ್ಯವಸ್ಥೆಯಿದ್ದುದರಿಂದ ಹಿಂದೂಸ್ಥಾನದಲ್ಲಿ ತಯಾರಾಗುತ್ತಿದ್ದ ಬಟ್ಟೆಗಳನ್ನು ಕೇಳುವವರೇ ಇಲ್ಲದಾಯಿತು. ಹೀಗಾಗಿ ಜನರಲ್ಲಿ ಅಸಮಾಧಾನವು ಉತ್ಪನ್ನವಾಗಿ ನಿರುದ್ಯೋಗವು ಆವರಿಸಿಕೊಂಡಿತು. ಪುಸ್ತಕದಲ್ಲಿ ವಿದ್ಯಾಭ್ಯಾಸದಲ್ಲಿ ಕಂಡು ಬರುವ ದೋಷವೂ ಈ ನಿರುದ್ಯೋಗಕ್ಕೆ ಉತ್ತೇಜನ ಕೊಡುವುದು. ಸುಶಿಕ್ಷಿತ ಹಿಂದೂ ಯುವಕರು ದೇಶೀಯ ಕೈಗಾರಿಕೆಗಳಲ್ಲಿ ಕೈಹಾಕದೆ, ಸರಕಾರ ನೌಕರಿಯನ್ನು ಹುಡುಕುವದರಲ್ಲೇ ತಮ್ಮ ಅಮೂಲ್ಯ ಸಮಯವನ್ನು ಕಳೆಯುವರು. ಇದೇ ವಿದ್ಯಾಭ್ಯಾಸದ ಮಹತ್ವಾಗಿರುವುದು ('Its purely literary character and aversion for manual labour ')

ಈ ನಿರುದ್ಯೋಗಕ್ಕೆ ನಿವಾರಣೆಯೇನು? ಇದನ್ನು ಬಹಳ ಮಟ್ಟಿಗೆ ತಗ್ಗಿಸಲು ಸಾಧ್ಯವಿಲ್ಲವೇ? ಇದು ದಿನ ಹೋದಂತೆ ಹೆಚ್ಚಲು ಕಾರಣವೇನು? ಪ್ರಸಂಗವು ಈ ಬಿಕ್ಕಟ್ಟಿನ ಸ್ಥಿತಿಗೆ ಇಳಿದಿರಲು ಕಾರಣವೇನು? ಇದರ ನಿವಾರಣೆ ಮಾರ್ಗವನ್ನು ಪ್ರತಿಯೊಂದು ದೇಶದಲ್ಲಿಯೂ ಕಂಡು ಹಿಡಿಯಲು ತೊಡಗಿರುವರು. ಇದನ್ನು ಕೆಲವು ಮಟ್ಟಿಗೆ ಕಡಿಮೆ ಮಾಡಬಹುದೆಂದು ಒಂದೆರಡು ಉಪಾಯಗಳಿಂದ ಪ್ರತಿಪಾದಿಸಬಹುದು. ಮುಖ್ಯವಾಗಿ ಎಲ್ಲಿ ಉದ್ಯೋಗದ ಆವಶ್ಯಕತೆಯೂ ಬೇಕಾಗಿರುವುದೋ ಅಲ್ಲಿಗೆ ನಿರುದ್ಯೋಗಿಗಳನ್ನು ಒದಗಿಸಬೇಕು "To bring together joblessmen and manless job") ಸರಕಾರದವರೂ ಪ್ರಜೆಯ[illegible] ಇಂಥ ವಿಷಯದಲ್ಲಿ ಯಾವದಾದರೂ ಒಂದು ಬ್ಯೂರೋವನ್ನು ಕಲ್ಪಿಸಬೇಕು. ಬಂಗಾಳ, ಮದರಾಸು, ಮುಂಬಯಿ, ಪಂಜಾಬು ಮೊದಲಾದ ಪ್ರಾಂತ್ಯಗಳಲ್ಲಿಯೂ, ತ್ರಾವಣಕೋರು ಮೊದಲಾದ ಆಶ್ರಿತ ದೇಶೀಯ ಸಂಸ್ಥಾನಗಳಲ್ಲಿಯೂ ಈ ನಿರುದ್ಯೋಗದ ಕಾರಣವನ್ನು ವಿಚಾರಿಸಲು ಅಲ್ಲಲ್ಲಿ ಕೆಲವು ಮಂಡಳಿಗಳು (Committees) ಏರ್ಪಟ್ಟು ಅವುಗಳು [illegible]ದ ವರದಿಗಳು ಭಯಾನಕವಾಗಿರುವುವು ಸ್ಯಾಡ್ಲರ ಕಮಿಷನ್ (The Sadler Commission remarked that the existence and steady increase of a sort of intellectual proletariat not with out reasonable grievances forms a menace to good government ') ಹೇಳಿದಂತೆ ದಿನ ದಿನಕ್ಕೆ ವೃದ್ಧಿಯಾಗುತ್ತಿರುವ ಸುಶಿಕ್ಷಿತ ನಿರುದ್ಯೋಗಿಗಳಿಂದ ದೇಶದ ಆಡಳಿತಕ್ಕೂ [illegible] ದರಕಾರಕ್ಕೂ ಆತಂಕವು ಪ್ರಾಪ್ತವಾಗುವುದು. ಈ ಮಾಧ್ಯಮಿಕ ಜನರ ನಿರುದ್ಯೋಗವೇ ದೇಶದಲ್ಲಿನ ಅಶಾಂತತೆಗೂ ಅಸಮಾಧಾನಕ್ಕೂ ಕಾರಣವು. ಮುಖ್ಯವಾಗಿ ಇಷ್ಟೆಲ್ಲಾ ಅನರ್ಥಗಳಿಗೆ ವಿದ್ಯಾಭ್ಯಾಸ ಕ್ರಮವೇ ಕಾರಣವಾದ್ದರಿಂದ ಪ್ರಕೃತ ವಿದ್ಯಾಭ್ಯಾಸ ಕ್ರಮದಲ್ಲಿ ಕೆಲವು ಬದಲಾವಣೆಗಳನ್ನು ತರಬೇಕು. ಪ್ರತಿ ವರ್ಷವೂ ಪಠ್ಯ ಶಾಲೆ[illegible]ಯಿಂದ ಹೊರಬೀಳುತ್ತಿರುವ ಸುಶಿಕ್ಷಿತ ಯುವಕರು ತಮ್ಮ ಜೀವನೋಪಾಯವು ಸುಲಭವಾಗಿ ಸಾಗುವಂತೆ ವಿಷಯವನ್ನು ಕಲಿಸಬೇಕು. ಪರೀಕ್ಷೆ ವಿಷಯ ಸ್ವಲ್ಪ ಬಿಗಿ ಹಿಡಿದು ನಿರುದ್ಯೋಗಿಗಳ ಸಂಖ್ಯೆ ಕಡಿಮೆಯಾಗ ಬಹುದು. ಇದರಿಂದ ದೇಶದ ಅನೇಕರಲ್ಲಿ ಅಸಮಾಧಾನವೂ ಅತೃಪ್ತಿಯೂ ಶಮನವಾಗುವುದು. ಇದರಿಂದ ಭವಿಷ್ಯದಲ್ಲಿ ಸುಖ ತೋರಬಹುದು. ಇದಲ್ಲದೆ ದೇಶೀಯ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕು. ಈ ಕೈಗಾರಿಕೆಗಳು ಯಾವುವೆಂದು ಬೇರೆ ಹೇಳಬೇಕಾಗಿಲ್ಲ ತಮ್ಮ ತಮಗೆ ಬೇಕಾಗುವ ಸಾಮಾನುಗಳನ್ನು ತಾವೇ ಒದಗಿಸಿಕೊಂಡ ಪಕ್ಷದಲ್ಲಿ ಅದರಿಂದ ತಮ್ಮ ಜೀವನ ಮಾರ್ಗವೂ ಸುಲಭವಾಗಿ ಸಾಗುವದಲ್ಲದೆ, ಇಂಥಾ ಕೈಗಾರಿಕೆಗಳಿಂದ ಬಹು ಮಟ್ಟಿಗೆ ಜನರ ನಿರುದ್ಯೋಗವು ಕಡಿಮೆಯಾಗ ಬಹುದೆಂಬುದರಲ್ಲಿ ಯಾವ ಸಂಶಯವೂ ಇಲ್ಲವು.

ಕೆ. ಯಸ್. ಆರ್.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಾಧಿಕಾರಿಗಳು ಜವಾಬ್ದಾರರಲ್ಲ. ಸಂ.]

ಮಡಿಕೇರಿಯಲ್ಲಿ ಪ್ಲೇಗಿನ ಗಲಾಟೆಯೋ, ಯಾ ಪೊಲೀಸಿನವರ ಗಲಾಟೆಯೋ?

ಅಯ್ಯಾ,

ಮಡಿಕೇರಿಯಲ್ಲಿ ಪ್ಲೇಗು ಇರುವುದರಿಂದ ಇನಾಕ್ಯುಲೇಶನ್ ಮಾಡಿಸಿಕೊಳ್ಳದೆ ಪಟ್ಟದ ಹೊರಗಿನ ಸ್ಥಳಗಳಿಗೆ ಹೋಗಕೂಡದೆಂದು ಮುನ್ಸಿಪಾಲಿಟಿಯವರು ಡಂಗುರ ಹೊಡಿಸಿದರು. ಇನಾಕ್ಯುಲೇಶನ್ ಮಾಡುವುದು ಮಾಡಿಸಿಕೊಳ್ಳುವವನ ಸುರಕ್ಷಿತೆಗಾಗಿ. ಇನಾಕ್ಯುಲೇಶನ್ ಮಾಡದವನಾದರೂ ಅವನ ಬಟ್ಟೆ ಬರೆಯಲ್ಲಿ ಪ್ಲೇಗಿನ ಕ್ರಿಮಿಗಳು ಬೇರೆ ಕಡೆ ಒಯ್ಯಲ್ಪಡಬಹುದು. ಹೀಗಿರುವಲ್ಲಿ ಮೇಲಿನ ಹುಕುಮಿನಿಂದ ಹೇಗೆ ಪ್ಲೇಗು ಹೊರಗೆ ಹಾಕದಂತೆ ತಡೆಯುತ್ತಾರೋ ತಿಳಿಯದು. ಅದು ಹೇಗೂ ಇರಲಿ ಇನಾಕ್ಯುಲೇಶನ್ ಮಾಡಲು ಮಡಿಕೇರಿಯಲ್ಲಿರುವ ಐದಾರು (ಸರಕಾರಿ ಮತ್ತು ಖಾಸಗಿ) ಡಾಕ್ಟರುಗಳಿಗೆ ಅನುಮತಿ [illegible] ಹೀಗೆ ಆಗುವದನ್ನು ಬೇಗನೆ [illegible] ಇನಾಕ್ಯುಲೇಶನ್ ಮಾಡಿಸಿಕೊಂಡು ಪಾಸು [illegible] ಗಿದೆ. ಆದರೆ ಪಟ್ಟಣದಿಂದ ಹೊರಗೆ ಹೋಗಬೇಕಾದರೆ ಇನಾಕ್ಯುಲೇಶನ್ ಸರ್ಟಿಫಿಕೇಟು ಪಡೆದ ಪಾಸ್ [illegible] ಗೇಟಿನಲ್ಲಿ ಪೊಲೀಸಿನವರಿಗೆ ತೋರಿಸಬೇಕಾಗಿದೆ. [illegible] ಬಿಡುವುದಿಲ್ಲ ಆದರೆ ಪ್ರೈವೇಟ್ ಪ್ರಾಕ್ಟೀಸ್ [illegible] ಗ್ ಡಾಕ್ಟರಾದ ಮಿ. ಎ [illegible] ಯಾರೊ ಬಂದ ಡಾಕ್ಟರ [illegible] ಚೀಟಿ [illegible] ಇಂಥಾ ಸರ್ಟಿಫಿಕೇಟ್ ನೋಡಿ ಬಿಡಲು ಹುಕುಮಿ [illegible] ಪೊಲೀಸ ನವರು [illegible] ಪ್ರಮಾಣಪತ್ರ [illegible] [illegible] ಸರ್ಟಿಫಿಕೇಟು ತೋರಿಸಿದವರನ್ನು ಒಳ್ಳೆ [illegible] ಸಿಬಿಟ್ಟು ಹೊರಗೆ ಹೋಗಲು ಬಿಡದ ಸಂದರ್ಭಗಳು ಇವೇನು ಅನ್ಯಾಯ! ಐದಾರು ಡಾಕ್ಟರುಗಳಿಗೆ ಇನಾಕ್ಯುಲೇಶನ್ ಮಾಡಲು ಅಪ್ಪಣೆ ಕೊಟ್ಟ ಆ [illegible] ಬಿಟ್ಟಿವೆ. [illegible] ತೋರದು ಕೊಡುವುದು ಯಾವ ಧರ್ಮ? [illegible] ರಿಗೆ ಅವುಗಳನ್ನು ಅನ [illegible] ಕೊಡುವದು [illegible] ಪೊಲೀಸಿನವರೂ, ಮುನ್ಸಿಪಾಲಿಟಿಯವರೂ [illegible] ವುದೇ? ಅಲ್ಲದೆ ಸರ್ಟಿಫಿಕೇಟ್ [illegible] ಅನ್ನು [illegible] ಬಂಧನ [illegible] ಇನಾಕ್ಯುಲೇಶನ್ ಮಾಡಲು ಅಧಿಕಾರವಿಲ್ಲವೇ? [illegible] ಪಣೆಯಿಲ್ಲವೇ? ಇನ್ನೊಂದು ವಿಷಯ— [illegible] ವು ಗಂಟೆಗೆ ಯಾ [illegible] ಬರಲಾರದ [illegible] ಕ ರಿಗೆ ಬಂದರೂ [illegible] ತೋರಿಸಬೇಕಂತೆ [illegible] ಕಳೆಯುವುದರ ಅರ್ಥವೇನು? [illegible] ಇರುವ [illegible] ಹೋಗದೆ ಕಚೇರಿ [illegible] ಕೆಲಸ [illegible] ಹೋಗ [illegible] ಸಾವಕಾಶವಾಗಿ ತೋರಿ [illegible] ಯವನ್ನು ನಿಲ್ಲಿಸ [illegible] ಧಪಟ್ಟ ಅಧಿಕಾರಿಗಳು ಬಹು ಬೇಗನೆ ಗಮನಿಸ ಬೇಕಾಗಿ ಆಶಿಸುತ್ತೇನೆ.

'ಪ್ರಯಾಣಸ್ಥ'

ಅರ್ಥಮಾಡಿಕೊಳ್ಳದೆ ಅನರ್ಥವಾಯಿತು.

ಅಯ್ಯಾ,

ತಾ 28—4—31 ರ 'ಲೋಕಮಾನ್ಯ' ಪತ್ರಿಕೆಯಲ್ಲಿ 'ಕೊಡಗಿನ ಸತ್ಯಾಗ್ರಹಿಗಳ ಅವಿಚಾರ' ಎಂಬ ಶಿರೋನಾಮೆಯ ವೃತ್ತವನ್ನು "ಭಾರತೀಯ"ರು ಪ್ರಕಟಿಸಿದ್ದನ್ನು ನೋಡಿ ನನಗೆ ತುಂಬಾ ವ್ಯಸನ ಉಂಟಾಯಿತು. ಆದರೆ ಸ್ವಲ್ಪ ಹೊತ್ತು ಯೋಚಿಸಿ ನೋಡಲು ಆ ಪತ್ರಿಕೆಯವರ ಸಗೆಯ [illegible] ವ ಕಾರಣ—ಮೇಲೆ ಸೂಚಿಸಿದ ಬರಹದಲ್ಲಿ 'ತಾವೆಲ್ಲರೂ ಕೊಡಗು ಪತ್ರಿಕೆಯಲ್ಲಿ 10—4—'31 ರಲ್ಲಿ ಸೋಮವಾರಪೇಟೆ ತಾಲೂಕಿನ ಸತ್ಯಾಗ್ರಹಿಗಳ ವಿಷಯವಾಗಿ ಹಿಂದೂಪುರ [illegible] ಅದೇನೆಂದರೆ—ಸೋಮವಾರಪೇಟೆ ತಾಲೂಕಿನವರು ಗ್ರಾಮಗಳಲ್ಲಿ ಕೆಲಸ ಮಾಡುತ್ತಿದ್ದರೆ ಅವರ ತಮ್ಮ ಬೈಸಿಗೆ ತಂಪು ಕಟ್ಟಿಕೊಳ್ಳುವುದರ ತನ್ನ ಅಭಿಪ್ರಾಯವನ್ನು ಬಹಳ ಗೆ ಬೋಧಿಸಿ ಮುಖ್ಯಸ್ಥರಿಗೆ ಬಹುಮಾನಿಸಿಕೊಳ್ಳುತ್ತಿದ್ದರು ಇರುವುದು' ಎಂದು ಬರೆಯಲ್ಪಟ್ಟಿದೆ ಹೀಗೆ ಸ್ವಾರ್ಥತ್ಯಾಗ ಮಾಡಿ ದೇಶಸೇವೆ ಮಾಡುತ್ತಿರುವ ಸೋಮವಾರಪೇಟೆ ಶಿಬಿರ, ಸತ್ಯಾಗ್ರಹಿಗಳ ಮೇಲೆ ಆರೋಪಣೆ ಹೊರಿಸಿ ಬಾತ್ಮಿಗೆ ಇಷ್ಟರವರೆಗೆ ಸತ್ಯಾಗ್ರಹ ಚಳವಳಿಕ್ಕೆ ಬೆಂಬಲವಾದ 'ಕೊಡಗು' ಪತ್ರಿಕೆಯಲ್ಲಿ ಎಡೆಕೊಡಲಾಯಿತೇ ಎಂದು ಸನಾಂದಿತ. ಪ್ರಾರಂಭದಿಂದಲೇ ಸತ್ಯಾಗ್ರಹ ಚಳವಳಿಯನ್ನು ತುಂಬಾ ಉತ್ತೇಜನ ಕೊಡುತ್ತಾ ಬಂದ 'ಕೊಡಗು' ಪತ್ರಿಕೆಯು ಇಂಥಾ ಆರೋಪಣೆಯ ವರ್ತಮಾನಕ್ಕೆ ಸ್ಥಳ ಕೊಡುವುದಿಲ್ಲವೆಂಬ ಸಂಶಯವು ಕಾಡಲಿ ಸನ್ಮಿತ್ರರೇ, 10—4—31 ರ "ಕೊಡಗು" ಪತ್ರಿಕೆಯನ್ನು ತೆಗೆದು ನೋಡಿದೆನು ಅದನ್ನು ನೋಡಿದಾಗ್ಗೆ ನನ್ನ ವ್ಯಸನವು ಬಹಳವಾಗಿ ತುಂಬಾ ನಗು ಬಂತು ಹಾಗೆಯೇ ಎಲ್ಲರಿಗೂ ಉಂಟಾಗಬಹುದಾದ ವ್ಯಸನವನ್ನು ಪರಿಹರಿಸಲಿಕ್ಕಾಗಿ ತಾ 10—4—31 ರ "ಕೊಡಗು" ಪತ್ರಿಕೆಯಲ್ಲಿ ಪ್ರಕಟವಾದ ವರ್ತಮಾನವನ್ನು ಇಲ್ಲಿ ಕೊಡುತ್ತೇನೆ. ಅದೇನೆಂದರೆ—'ಸೋಮವಾರಪೇಟೆ ಶಿಬಿರದವರು ಸಹ ಗ್ರಾಮಾಂತರಗಳಲ್ಲಿ ಬೋಧಿಸುತ್ತಿರ ತಮ್ಮ ಬೈಸಿ ಮಠಗಳಿಂದ ತಾವೇ ನೇರ್ಪಡಿಸಿ ಇಳಿಸುವುದು **ಒಂದು ಕೆಟ್ಟ ಅಭಿಪ್ರಾಯದಿಂದ ಆಗಬಹುದಾದ** [illegible] **ವನ್ನು** ಜನರು ದೇಶದ್ರೋಹವಾದ್ದರಿಂದ ಮುಖ್ಯಸ್ಥರಿಗೆ ನೈತಿಕ ಗೆಲುವುಕೊಳ್ಳುತ್ತಲೂ ಇದ್ದಾರೆ" ಇದರಲ್ಲಿ, ಮೇಲೆ ಸೂಚಿಸಿದ 'ಭಾರತೀಯ'ರ ಬರಹದಲ್ಲಿರುವಂತ" ಕೆಟ್ಟ ಅಭಿಪ್ರಾಯವನ್ನು ಬೋಧಿಸಲಿಲ್ಲವೆಂಬುದೂ, 'ಕೆಟ್ಟ ಅಭಿಪ್ರಾಯದಿಂದ ಆಗಬಹುದಾದ ಕೇಡನ್ನು' ಬೋಧಿಸುತ್ತಿದ್ದಾರೆ' ಎಂಬುದೂ ಸ್ಪಷ್ಟವಾಗಿದೆ. ಇಷ್ಟು ಸ್ಪಷ್ಟವಾಗಿರುವ 'ಆಗಬಹುದಾದ ಕೇಡನ್ನು' ಎಂಬ ಶಬ್ದಗಳೇ 'ಭಾರತೀಯ'ರ ದೃಷ್ಟಿಗೆ ಹೇಗೆ ಬೀಳಲಿಲ್ಲವೋ ತಿಳಿಯದು. ಅದನ್ನು ಅರಿಯದೆ ವಿವರಿಸುವುದ[illegible] ದ ಕರ್ತವ್ಯವಾಗಿದೆ. ಮೇಲಿನ ವಿಷಯಗಳಿಂದ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದುದ ತಪ್ಪೋ ಅಥವಾ ಅದನ್ನು ಸರಿಯಾಗಿ ಓದಿ ಅರ್ಥಮಾಡಿಕೊಳ್ಳದವರ ತಪ್ಪೋ ಎಂದು ವಾಚಕರಿಗೆ ವಿಶದವಾಗದೆ ಇರದು. 'ಭಾರತೀಯ'ರ ಬಾತ್ಮಿಯಲ್ಲಿ ಉಳಿದ ಹೆಚ್ಚಿನ ಭಾಗದ ಬೈಗಳದ ಮೇಲೆ ಲಕ್ಷಿಸಿ ನಾನು ಬರೆಯಲಿಲ್ಲ. ಯಾಕೆಂದರೆ—ಕೊಡಗಿನ ಸತ್ಯಾಗ್ರಹಿಗಳ ಸ **ಬಾತ್ಮಿಯು ಪ್ರಕಟವಾಗಿರುವ ಪತ್ರಿಕೆಯು** ಮನ್ನಣೆ [illegible]

[illegible] ಸತ್ಯಾಗ್ರಹಿ

ಗ್ರಾಮಗಳಲ್ಲಿ ಪ್ರಚಾರ ಕೆಲಸ

20—4—31ರಲ್ಲಿ [illegible] ದೇವಸ್ಥಾನದಲ್ಲಿ [illegible] 70 [illegible] ಉಪನ್ಯಾಸ [illegible] ಸತ್ಯಾಗ್ರಹಿ [illegible]

[illegible] 21—4—31 [illegible] 9 ಗಂಟೆಗೆ [illegible] 30 [illegible] ಉಪನ್ಯಾಸ ಕೊಟ್ಟರು [illegible]

ಎ. ಎಸ್.

ಶ್ರೀ [illegible] ಉತ್ಸವ

[illegible] 21—4—31 [illegible] ವೀರಶೈವರು [illegible] 10 ಗಂಟೆಗೆ [illegible] ಪೂಜೆ [illegible] ವೀರಶೈವರ [illegible] ಶಂಕರ [illegible] ಉಪನ್ಯಾಸ [illegible] ಮೆರವಣಿಗೆ [illegible] ದೇವರ [illegible] ಪೂಜೆ [illegible] ರಾತ್ರಿ 9 ಗಂಟೆಗೆ [illegible] ಉಪನ್ಯಾಸ [illegible] ಪ್ರೋತ್ಸಾಹವನ್ನಿತ್ತರು [illegible] ಉಪನ್ಯಾಸ [illegible]

ಪ್ರತ್ಯಕ್ಷ ದರ್ಶಿ

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.

ಮುಂಗಳೂರು, ದ ಕನ್ನಡ

[illegible] ರಬ್ಬರು [illegible] ಪೇಪರ್ [illegible]

[illegible] ಯಸ್. ಯಸ್. [illegible]

1—7

[illegible] ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕವೆಂಬ ಮಂತ್ರ ಯಂತ್ರದ [illegible]

[illegible] ಗರ್ಭ [illegible] ಮಕ್ಕಳು [illegible] 100 [illegible]

ಸ್ಥಳ ಸಂಕೋಚ ಮೂಲಕ ಮಾದರಿಗಾಗಿ ಬಹುದೂರ ಪತ್ರಿಕೆ ಒಂದೇ ಕೊಟ್ಟಿದೆ.

[illegible]

ಪ್ರಲ್ಹಾದ ಎಸ್ಟೇಟ್ ಮುಂಬೈ

ತಾಯಿತ ಸಿಗುವ ವಿಳಾಸ.—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

ಮು. ಪೋ. ಅಥಣಿ, ಜಿ. ಬೆಳಗಾಂವ.

52—26

ಎಂ. ಎಸ್. ಶಿವಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[illegible] ಪೆನ್ [illegible]

[illegible] ಫೌಂಟನ್‌ಪೆನ್ 1ಕ್ಕೆ	3 0 0	
,, [illegible] ಪೆನ್ 1ಕ್ಕೆ	3 3 0	
,, [illegible] ಪೆನ್ 1ಕ್ಕೆ	3 8 0	
,, [illegible] ಕಲರ್ ಫೌಂಟನ್‌ಪೆನ್ 1ಕ್ಕೆ	3 14	
[illegible] ಕಲರ್ [illegible] ಫೌಂಟನ್‌ಪೆನ್ 1ಕ್ಕೆ	4 2	
,, ಸೆಲ್ಫ್ ಫಿಲ್ಲಿಂಗ್ [illegible] ಕಲರ್ ಫೌಂಟನ್‌ಪೆನ್ 1ಕ್ಕೆ	[illegible] 8 0	
[illegible] ಫೌಂಟನ್‌ಪೆನ್	1ಕ್ಕೆ 10 8 0	
[illegible] ಪೆನ್	1ಕ್ಕೆ 14 6 0. & 20 10 0	
[illegible] ಫೌಂಟನ್‌ಪೆನ್	1ಕ್ಕೆ 3 8 0 & 3 12 0	
[illegible] ಪೆನ್	1ಕ್ಕೆ 6 4 0 & 6 12 0	
[illegible] ಫೌಂಟನ್‌ಪೆನ್ 1ಕ್ಕೆ	8 ? 0 & 8 10 0	

[illegible] ಗಳು.

[illegible] ಟೈಂಪೀಸ್ 1ಕ್ಕೆ	3 6 0
[illegible] ಟೈಂಪೀಸ್ 1ಕ್ಕೆ	2 2 0
[illegible] ಟೈಂಪೀಸ್ 1ಕ್ಕೆ	[illegible] 6 1? 0
[illegible] ಟೈಂಪೀಸ್ 1ಕ್ಕೆ	7 2 0
[illegible] ಟೈಂಪೀಸ್ [illegible] 1ಕ್ಕೆ	8 10 0
[illegible] ಟೈಂಪೀಸ್ 1ಕ್ಕೆ	9 6 0
[illegible] ಟೈಂಪೀಸ್ 1ಕ್ಕೆ	13 4 0
[illegible] 1ಕ್ಕೆ	? 10
[illegible] ವಾಚ್ 1ಕ್ಕೆ	1? 4 0
[illegible] 1ಕ್ಕೆ	5 4 0, 7 8 0, 10 0 0 & 12 8 0



[illegible] ನ 1ಕ್ಕೆ 3—6—0 [illegible]

[illegible] ಎಂ. ಎಸ್. [illegible]

[illegible] ವ್ಯಾಪಾರಿಗಳು, ಮೈಸೂರು.

52—4?

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

	ರೂ
ಶೇರ್ ಬಂಡವಾಳ	— 50,000
ವಸೂಲಾದ ಶೇರ್ ಮೊಬಲಗು	— 23,160
ಜಮೂಬಂದ ಠೇವಣಾತಿ	— 2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಬಾಯಿದೆ ಅಥವ ಹೆಚ್ಚಿನ ಬಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5 0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಬಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು,	ಟ್ರೆಜರರ್
ಕೇಚಂಡ ಅಪ್ಪಯ್ಯನವರು, ರಾವ್ ಬಹದ್ದೂರ್	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು ಬಿ.ಎ., ಬಿ.ಎಲ್.
ತಾರೀಖು 1—7—1930.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52—17 ಗಿರಿಗಾಂವ, ಮುಂಬಯಿ.



12 bore Victor Cartridges Rs. 10/—Per 100

Mahomedally-Noorbhoy.

ARMS & AMMUNITION MART.

321 Abdul Rehman Street.
52 35 **BOMBAY 3**

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯು

ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯ ಈಗಿನ ಸ್ಥಿತಿಯಿಂದ ಸ್ಪ

ಹೊಸ ಕೆಲಸ.	ಪ್ರೀಮಿಯಂ ವರಮಾನ
೧೯೨೭—೯೬೮ ಲಕ್ಷ ರೂಪಾಯಿಗಳು.	೧೯೨೭—೧೨೨ ಲಕ್ಷ ರೂಪಾಯಿಗಳು
೧೯೨೮—೫೮೫ ಲಕ್ಷ ,,	೧೯೨೮—೧೪೦ ಲಕ್ಷ ,,
೧೯೨೯—೬೫೦ ಲಕ್ಷ ,,	೧೯೨೯—೧೬೧ ಲಕ್ಷ ,,

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು.

ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು
೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳಿಗೆ ೨೨½ ರೂಪಾಯಿಗಳು
೧೯೨೭ ,, ,, ,, ,, ೨೫ ,,

ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದರೆ ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭ.

ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು—

ಓರಿಯಂಟಲ್ ಬಿಲ್ಡಿಂಗ್ಸ್,	ಯಂ. ವಿ. ಮುತ್ತುಕೃಷ್ಣ ನಾಯುಡು
ಸೌತ್ ಪೆರೇಡ್, ಬೆಂಗಳೂರು.	**ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.**

OR

52— 10 **ಕೆ. ಪಿ. ಚಿಣ್ಣಪ್ಪ,**
ಮಡಿಕೇರಿ. **ಏಜೆಂಟ್,**



ಮಲೇರಿಯೂನವು ಮಲೇರಿಯ, ಚಳಿಜ್ವರ, ಉರಿಜ್ವರ ಬಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ
ಕ್ರಯ 8 ಔನ್ಸಿಗೆ 1—8—0, ½ ಡಜನಿಗೆ 8—8—0 16—8—0

ಪಿತ್ತ, ರೋಗಕ್ಕೆ ಕಂಪೌಂಡು ಸಿರಪ್ ಕಂಡ್ಯುರಾಂಗೋ

ಪಿತ್ತಜ್ವರ, ಕೈಕಾಲು ಬಚ್ಚಲು, ರಕ್ತ ಇಲ್ಲದೆ ಬೆಳ್ಳಗೆ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಂಬಳಿ ಗೊಂಪಿ ಮತ್ತು ಶರೀರ ತಲೆಶಿಖಿತ, ತಲೆ ತಿರುಗುವದ ಬಾಯಿ ಹೊಟ್ಟೆ ಉಬ್ಬು, ಎದೆ ಸುಡುವದು ನಾಲಿಗೆ ಒಣಗುವದು ಮಲಮೂತ್ರಕ್ಕೆ ಭಂಗ ಪಿತ್ತ ಕಾರುವುದು ನಿದ್ರೆ ಇಲ್ಲದೆ ಸಂಕಟವಾಗುವುದು - ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3—8—0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ್ಲ.

ಶರೀರದಲ್ಲಿ ಬೀಳುವ ಬೊಕ್ಕೆ, ಕುರು, ತುಚ್ಛಗಳು, ಬೇಗ ಗುಣವಾಗದ ಘೋರ ವ್ರಣಗಳು ಎಲ್ಲಾ ಬಗೆಯ ಚರ್ಮ ರೋಗ ಇತ್ಯಾದಿಗಳಲ್ಲಿ ಗುಣಪಡಿಸಿ ರಕ್ತ ಸಂಪೂರ್ಣ ಶುಚಿಯಾಗಿ ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ಬಲವುಳ್ಳ ಕಂಪೌಂಡು ಸರ್ಸಪರಿಲ್ಲ ಎಂಬುದೇ ಬಾಟ್ಲಿಗೆ ರೂಪಾಯಿ 3—8—0

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನೋವ.

ತಿಂಗಳು ಗಟ್ಟಲೆಯ ಅತ್ಯವು, ಹೊಟ್ಟೆನೋವು ಕೈಕಾಲುಗಳ ಸೆಳತ, ಕೋಶದ ಬಲಹೀನತೆ ವಾಯುಗಳ ಉಪದ್ರ, ರಕ್ತವು ಎಲ್ಲೆ ಹರಿಯದೆ ನಿಂತು ಬಿಡುವದು ಅಲ್ಲದೆ ಸಮಯಕ್ಕೆ ಸ್ರಾವಿಸುವದು ಬಸ್ತಿನಾಳದಲ್ಲಿ ಕೆಡಕು ಇತ್ಯಾದಿ ಗರ್ಭಕೋಶದ ಎಲ್ಲಾ ಬಗೆ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನೋವ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3—8—0

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣ ಶರೀರ ಸೊಂಟಕ್ಕೆ ಬಲ ಇಲ್ಲದೆ ಇರುವದು ಜೀರ್ಣ ಮೂತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ, ಬಾಳುವಿಕೆಯನ್ನೂ ಕುಂದಿಸಿಬಿಡುವ ಈ ಅವಸ್ಥೆಗಳನ್ನು ಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1—4—0

ದೊಡ್ಡ ಟೆಕ್ಯಮದ್ದುಗಳೂ ಹೋಮ್ಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ ಅವುಗಳ ಸಾಮಾನು ಬಗೆಯ ಸಾಮಾನುಗಳೂ ಬಿಸಲಿಗೆ ಇಡತಕ್ಕ ಒಳ್ಳೇ ತರದ ತನ್ನ ನಮ್ಮಲ್ಲಿ ನ್ಯಾಯವಾದ ಕ್ರಯಕ್ಕೆ ದೊರೆಯುತ್ತದೆ

ಆರೋಗ್ಯಭಾಗ್ಯದ ರೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ —ಮಲೇರಿಯೂನ ಕಂಪೆನಿ,
52—26 ಹಂಪನಕಟ್ಟೆ, ಆಗರ್ಬೈಲ್, ನಂಬರು 14, ಮಂಗಳೂರು

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
,, ಮೆ. ಚಾಲಿಯಂಡ ಪೂವಯ್ಯನವರು,
ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ಮೇದಪ್ಪನವರು,
,, ಮೆ. ಅಮ್ಮಂಡ ಸುಬ್ಬಯ್ಯನವರು.
ಮಡಿಕೇರಿ—ಮೆ. ಕೇಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಪಾಡಿಭಂಡಾರ)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಒಮ್ಮಡ ಮಾದಪ್ಪನವರು,
ಅಮ್ಮತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ ಮುದ್ದಯ್ಯನವರು
,, ಮೆ. ಸಣ್ಣುವಂಡ ಬೋಪಯ್ಯನವರು
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ ಜಿ. ಮಾದಯ್ಯನವರು
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯನವರು

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಿಗೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರ್ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡದೆ ಎಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ವಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬುಕ್ಕರ್ ಸ್ಟಾಲ್‌ನಲ್ಲಿಯೂ ಮಾರಾಟಕ್ಕಿದೆ.

ಮೇನೇಜರ್,
"ಕೊಡಗು" ಮಡಿಕೇರಿ.

Printed & published by P. I Belliappa at "Kodagu" Press Mercara for "Kodagu" Ltd.

"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ಶೀಲ ಪ್ರಯುತ್ನತಾ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪು ೧೦ | ಮಡಿಕೇರಿ, ಸನ್ ೧೯೩೧ನೇ ಇಸವಿ ಮೇ ತಾರೀಕು ೮ ನೇ ಶುಕ್ರವಾರ. | ಸಂಚಿಕೆ ೪೨

Telegrams - Precious

V. Subramaniaier Jeweller,

Telephon - 3145

DIAMOND MERCHANT, GOLD & SILVERSMITH.

Deals in all -
SPORTS CUPS in all sizes
MEDALS in up to date patterns
CASKETS in elegant styles

Nos. 2 & 3, Kuppamuthu st
TIRUVATESWARANPET,
Post Box 423, Triplicane P. O.,
MADRAS.

Deals in all
GEM SET JEWELS set with Diamonds Rubies etc
GOLD ARTICLES of all patterns
SILVER WARE in latest style

52-25



[illegible] ಸ ಡುವುದು

ಕೋವಿಗಳು, ಕತ್ತಿಗಳು, ಬಾಕುಗಳು, ತೋಟಗಳು, [illegible]
[illegible] ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN [illegible]
[illegible]est Importers of Firearms and [illegible] on the
Cheapest priced firm in India.
210 Abdul Rehman Street BOMBAY
-6

[illegible] ಕಷಾಯ [illegible] ರೂ 1—8—0 [illegible] ರೂ 4—[illegible]—0 [illegible] ರೂ 7—8—0 [illegible] ರೂ 11

ಮಲೆ [illegible] ಕಷಾಯ

[illegible] ನಾಲ್ಕು 1 3 [illegible] ರೂ 1—[illegible]—0 3—8—0, 6—12—0

[illegible] 6 ಅಡಿ 3 [illegible] ರೂ 1 1 [illegible] 3—8—0

[illegible] ರೂ 1, 3 [illegible] 2—10—0
[illegible] ರೂ 1, 3 [illegible] 5—8—0
[illegible]

ಬಾಲಾರ್ಕಮಧು

[illegible] ಬಾಲಾರ್ಕ ಮಧುವನ್ನು [illegible]



[illegible]

ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ,
(ಮೈಸೂರುಸಂಸ್ಥಾನ)

52-17

ಜಮೀನ್ದಾರರ ಸಂಘದ ಮಹಾಸಭೆಯಲ್ಲಿ ಶ್ರೀಯುತ ಸೆನ್‌ಗುಪ್ತರ ಭಾಷಣ.

ಬಂಧು ಭಗಿನಿಯರೇ,

ಈ ಮಹಾ ಸಭೆಯ ಮಹನೀಯರಲ್ಲಿ ಎರಡು ವಿಷಯಗಳಿಗಾಗಿ ಕ್ಷಮೆ ಕೇಳಿಕೊಳ್ಳಬೇಕಾಗಿದೆ. ನಿಮ್ಮನ್ನು ಅನೇಕ ಗಂಟೆಗಳ ವರೆಗೆ ಕಾಯಿಸಿದೆ. ಕಾರಣವೇನೆಂದರೆ—ನಿಮ್ಮ ದೇಶವು ಬೇರೆ ಪ್ರಾಂತ್ಯಗಳಿಂದ ಪ್ರತ್ಯೇಕಿಸಲ್ಪಟ್ಟಿದೆ. ಬೆಟ್ಟ ಸೀಮೆಯಾಗಿದೆ. ಬ್ರಿಟಿಷರು ಜಾಗರೂಕತೆಯಿಂದ ನಿಮ್ಮನ್ನು ಬೇರೆ ಇಡಲಿಕ್ಕಾಗಿಯೋ ಎಂಬಂತೆ ನಿಮಗೊಂದು ರೈಲ್ ರಸ್ತೆ ಸಹ ಹಾಕಿ ಕೊಡಲಿಲ್ಲ. ಒಳ್ಳೇ ರಸ್ತೆಗಳಿಂದಲೇ ನಿಮ್ಮ ದೇಶವನ್ನು ತಲಪಬೇಕಾಗಿದೆ. ದಾರಿಯಲ್ಲಿ ನಾಲ್ಕು ಕಡೆ ನಮ್ಮ ಕಾರ್‌ಗಳು ತೊಂದರೆ ಕೊಟ್ಟವು. ಆದರೆ ನೀವು ಕಾಯುವ ಬೇಸರವನ್ನನುಭವಿಸುತ್ತಿರುವಾಗ ದಾರಿಯಲ್ಲಿ ನಾನು ನಿಮ್ಮ ದೇಶದ ಅದ್ಭುತ ಸೌಂದರ್ಯವನ್ನು ಅನುಭವಿಸುತ್ತಿದ್ದೆನೆಂತ ಸಂತೋಷಪಡುತ್ತೇನೆ. ನಿಮ್ಮ ವಿಶೇಷವಾದ ದೇಶಕ್ಕೆ ತಕ್ಕಂತೆ ವಿಶೇಷ ರೀತಿಯಿಂದ ಕಳೆದ ಹೋರಾಟದಲ್ಲಿ ನೀವು ಭಾಗ ತೆಗೆದುಕೊಂಡಿರುತ್ತೀರಿ.

ಅಲ್ಲದೆ ನಿಮ್ಮ ಭಾಷೆಯಲ್ಲಿ ಭಾಷಣ ಮಾಡಲಿಕ್ಕಾಗುವುದಿಲ್ಲವೆಂಬುದಕ್ಕೆ ಕ್ಷಮೆ ಕೇಳುತ್ತೇನೆ. ಆದರೆ ನಿಮ್ಮ ಭಾಷೆ ತಿಳಿಯದವನಾದ ನನ್ನನ್ನು ಆಮಂತ್ರಿಸಿ ನಿಮ್ಮ ಭಾಷೆಯನ್ನು ತಿಳಿಯದ್ದಕ್ಕೆ ಮನ್ನಿಸಲು ತಯಾರಿದ್ದೀರೆಂತ ನಂಬುತ್ತೇನೆ.

ಈ ಚಿಕ್ಕ ದೇಶವು ಸಹ ಕಳೆದ ಹೋರಾಟದಲ್ಲಿ ಭಾಗ ತೆಗೆದುಕೊಂಡು ಕಾಂಗ್ರೆಸಿನ ಶಕ್ತಿಯನ್ನೂ, ಮಹತ್ವವನ್ನೂ ನಿದರ್ಶಿಸಿರುತ್ತೀರಿ. ಬ್ರಿಟಿಷ್ ಜನರು ನಿಮ್ಮನ್ನು ಬೇರ್ಪಡಿಸಿ ಇಡಲು ಬೇಕಾದಷ್ಟು ಪ್ರಯತ್ನಿಸಿದ್ದಾರೆ. ಪ್ರಜಾ ಜವಾಬ್ದಾರಿ ಸರಕಾರ ಕೇಳಿದಾಗಲೆಲ್ಲಾ ಹಣವಿಲ್ಲವೆಂತ ಹೇಳುತ್ತಾರೆ. ನಿಮ್ಮ ಭೂಭಾಗದ ಸ್ಥಿತಿಯಿಂದ ಬ್ರಿಟಿಷ್ ಜನರು ಸುಖದಿಂದ ತೋಟ ಮಾಡಿಕೊಂಡು ಇರಲು ಅನುಕೂಲವಾದ, ಸೊಗಸಾದ ದೇಶವಾಗಿದೆ. ಬ್ರಿಟಿಷರು ಎಷ್ಟೋ ಪ್ರಯತ್ನಿಸಿದರೂ ಕಾಂಗ್ರೆಸಿನ ಚಳವಳಿಯು ಈ ದೇಶಕ್ಕೆ ಹಬ್ಬಿಬಿಟ್ಟಿತು. ಪ್ರತಿಯೊಂದು ಗ್ರಾಮವೂ, ಪ್ರತಿಯೊಬ್ಬ ಗ್ರಾಮಸ್ಥನೂ ಪ್ರಪಂಚದಲ್ಲಿ ಅತ್ಯಂತ ದೊಡ್ಡ ಮನುಷ್ಯನಾದ ಮಹಾತ್ಮ ಗಾಂಧಿಯವರನ್ನೂ, ಅವರ ಬೋಧನೆಯನ್ನೂ ತಿಳಿದಿರುತ್ತಾರೆ. ನಿಮ್ಮ ಸ್ವಾಗತದಲ್ಲಿ ಗ್ರಾಮಾಂತರಗಳ ಒರಟು ವಾದ್ಯಗಳನ್ನು ಸೇರಿಸಿದ್ದೀರಿ. ಆದರೆ ಅಂಥಾ ಸ್ವಾಗತವನ್ನು ಹಿಂದೂಸ್ಥಾನದ ಯಾವ ಭಾಗದಲ್ಲಾದರೂ ಯಾವ ದೊಡ್ಡ ಮನುಷ್ಯನಿಗಾದರೂ ಸಿಕ್ಕುವ ಸ್ವಾಗತಕ್ಕಿಂತ ದೊಡ್ಡ ಸ್ವಾಗತವಾಗಿ ನಾನು ಎಣಿಸುತ್ತೇನೆ. ಯಾಕೆಂದರೆ ಈ ಅದ್ಭುತ ಚಳವಳಿಯು ಗ್ರಾಮಾಂತರಗಳಿಗೆ ಹಬ್ಬಿ ಬಲವಾಗಿ ಬೇರೂರಿದೆಯೆಂತ ಸಂತೋಷವಾಗಿದೆ.

ಗ್ರಾಮಾಂತರಗಳಲ್ಲಿರುವ ಗ್ರಾಮವಾಸಿಗಳಿಲ್ಲದೆ ಕಾಂಗ್ರೆಸಿನವರಿಂದ ಏನು ಸಾಧ್ಯವಾದೀತು, ಸರಕಾರದಿಂದ ಏನು ಸಾಧ್ಯವಾದೀತು? ಕೃಶ ದೇಹದ ಮನುಷ್ಯನನ್ನು (ಮಹಾತ್ಮ ಗಾಂಧಿಯವರನ್ನು) ವೈಸರಾಯರಾದ ಲಾರ್ಡ್ ಇರ್ವಿನರು ಯಾಕೆ ಕರೆ ಕಳುಹಿಸಿದರು. ಹನ್ನೆರಡು ತಿಂಗಳ ಮುಂದೆ ಯಾವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯನ್ನು ಕಾನೂನು ವಿರುದ್ಧವೆಂತ ಮಾಡಿದ್ದರೋ ಅದೇ ಕಾಂಗ್ರೆಸನ್ನು ಕಾನೂನು ಬದ್ಧವೆಂತ ಮಾಡಿ ಅದರ ಮುಖಂಡರನ್ನು ಕರೆಸಿಕೊಂಡರು; ಯಾಕೆ? ನಿಮ್ಮಂಥ ಬೆಟ್ಟ ಹಿಂದೂಸ್ಥಾನದ ಗ್ರಾಮಗಳ ಬೆಂಬಲವು ಕಾಂಗ್ರೆಸಿಗೆ ಇದೆಯೆಂತ ಲಾರ್ಡ್ ಇರ್ವಿನರಿಗೆ ತಿಳಿಯಿತು. ಸರಕಾರವು ಈ ಚಳವಳಿಯನ್ನು ದಬಾಯಿಸಲು ಪ್ರಯತ್ನಪಟ್ಟಿತು. ಲಾರ್ಡ್ ಇರ್ವಿನರು ತನ್ನ ನಿರಂಕುಶ ಅಧಿಕಾರ ಬಲದಿಂದ ಆರ್ಡಿನೆನ್ಸ್‌ಗಳನ್ನು ಒಂದರಮೇಲೊಂದು ಮಾಡಿದರು. ಆದರೆ ದೇಶದ ಗಂಡಸರು, ಹೆಂಗಸರು, ಮುದುಕರು, ಮಕ್ಕಳು ಎಂಬ ಭೇದವಿಲ್ಲದೆ ಈ ಚಳವಳಿಯಲ್ಲಿ ಭಾಗವಹಿಸಿಕೊಂಡು ದೊಣ್ಣೆ ಪೆಟ್ಟುಗಳನ್ನೂ ಸಹಿಸಿಕೊಂಡದ್ದಲ್ಲದೆ ಅನೇಕರು ಗುಂಡಿನ ಬಾಯಿಗೆ ತುತ್ತಾದರು. ಇನ್ನೂ ಏನೇನೋ ಅತ್ಯಾಚಾರಗಳನ್ನು ಮಾಡಿದರು. ಕಾಂಗ್ರೆಸಿನ ಮುಖ್ಯ ಕಾರ್ಯಕಾರಿ ಮಂಡಲಿಯನ್ನು ಕಾನೂನು ವಿರುದ್ಧವೆಂತ ಮಾಡಿದ್ದಲ್ಲದೆ ಎಲ್ಲಾ ಕಾಂಗ್ರೆಸ್ ಕಮಿಟಿಗಳನ್ನೂ ಹಾಗೆಯೇ ಕಾನೂನು ವಿರುದ್ಧ ಮಾಡಿದರು. ದೇಶಕ್ಕಾಗಿ ಕೆಲಸ ಮಾಡಲು ಮನಸಿರುವ ಯಾವನೊಬ್ಬನಿಗೂ ಜೈಲಿನಿಂದ ಹೊರಗಿರಲು ಸಾಧ್ಯವಿಲ್ಲದೆ ಇರುವಂತೆ ಮಾಡಿದರು.

ಸೆಪ್ಟೆಂಬರ್ ತಿಂಗಳಲ್ಲಿ ಮಹಾತ್ಮರು ಯರವಾಡಾ ಜೈಲಿನಲ್ಲಿದ್ದಾಗ ಕಾಂಗ್ರೆಸಿನ ಪರವಾಗಿ ಕೇಳಿದ ಶರತ್ತುಗಳನ್ನು ತಾನು ನೋಡಲಿಕ್ಕೇ ಇಲ್ಲ, ಅವು ಅಸಾಧ್ಯವಾದ ಶರತ್ತುಗಳು ಎಂತ ಹೇಳಿಬಿಟ್ಟಿದ್ದ ಅದೇ ಲಾರ್ಡ್ ಇರ್ವಿನರೇ ಐದು ತಿಂಗಳ ನಂತರ ಕಾಂಗ್ರೆಸು ಕಾನೂನು ಬದ್ಧ ಅಂದರೆ ಕಾನೂನಿಗೆ ವಿರೋಧವಿಲ್ಲವೆಂತ ಮಾಡಿದರು; ಮಹಾತ್ಮ ಗಾಂಧಿಯವರನ್ನು—ನಿಮಗೆ ಬೇಕಾದದ್ದು ಏನೆಂತ ತಿಳಿಸಿ ಎಂತ ಕೇಳಿಕೊಂಡರು. ಮಹಾತ್ಮ ಗಾಂಧಿಯವರಿಗೂ ಲಾರ್ಡ್ ಇರ್ವಿನರಿಗೂ ಆದ ಮೊದಲನೇ ಭೇಟಿಯಲ್ಲೇ ಕಾಂಗ್ರೆಸಿನಲ್ಲಾದ ಸಂಪೂರ್ಣ ಸ್ವಾತಂತ್ರ್ಯದ ಠರಾವನ್ನು ಕಾಂಗ್ರೆಸಿನವರು ಒತ್ತಾಯಪಡಿಸುವ ಹಕ್ಕು ಸಿಕ್ಕಿದ್ದರಿಂದ ಹಂಗಾಮಿ ರಾಜಿಯಿಂದ ಪ್ರಯೋಜನವಿಲ್ಲವೆಂತ ಮಹಾತ್ಮ ಗಾಂಧಿಯವರು ಸ್ಪಷ್ಟವಾಗಿ ತಿಳಿಸಿದ್ದಾರೆ ಎಂತ ನನಗೆ ಗೊತ್ತಿದೆ. ಕಣ್ಣು ಕಟ್ಟು ಬಿಟ್ಟಂತೆ ಮಾತುಗಳನ್ನು ಚಮತ್ಕಾರದಿಂದ ಉಪಯೋಗಿಸಿದರೆ ಪ್ರಯೋಜನವಿಲ್ಲವೆಂತಲೂ, ನೆಲ ಸೈನ್ಯ, ಹಡಗು ಸೈನ್ಯ ಆದಾಯ ವೆಚ್ಚ, ವ್ಯಾಪಾರ ಮುಂತಾದವುಗಳ ಮೇಲೆ ಸಂಪೂರ್ಣ ಅಧಿಕಾರ ಸಿಕ್ಕದೆ ಯಾವ ಹೆಸರನ್ನು ಕೊಟ್ಟರೂ ಪ್ರಯೋಜನವಿಲ್ಲವೆಂತ ಮಹಾತ್ಮರು ಎಚ್ಚರಿಸುತ್ತಾರೆ. ವೈಸ್‌ರಾಯರು ಸ್ಟೇಟ್ ಸೆಕ್ರೆಟರಿಯವರಾದ ಬೆನ್ನರನ್ನು ತಂತಿ ಮೂಲಕ ಕೇಳಿ ಹಂಗಾಮಿ ರಾಜಿಕರಾರುಗಳಲ್ಲಿ ಕಾಂಗ್ರೆಸಿನವರಿಗೆ ಮನಸು ಬಂದದ್ದನ್ನು ರೌಂಡ್‌ಟೇಬಲ್ ಕಾನ್‌ಫರೆನ್ಸಿನಲ್ಲಿ ಕೇಳಿಕೊಳ್ಳಬಹುದೆಂಬ ಒಂದು ಶರತ್ತು ಸೇರಿಸಿದರು. ರಾಜಕೀಯ ರಚನೆಗೆ ಯಾವ ಹೆಸರು ಕೊಡುತ್ತಾರೆಂಬುದಕ್ಕೆ ವಾಗ್ವಾದ ನಡಿಸಬೇಡಿ. ಈಜಿಪ್ಟ್ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವಿದೆಯೆಂತ ಅಲ್ಲಿನ ರಚನೆಯಲ್ಲಿದೆ. ಅಂಥಾ ಸಂಪೂರ್ಣ ಸ್ವಾತಂತ್ರ್ಯವನ್ನು ನಾನು ನನ್ನ ಬೆರಳು ತುದಿಯಿಂದ ಮುಟ್ಟಲಿಕ್ಕಿಲ್ಲ. ಕೆಲವು ಸಾಮಂತ ರಾಜ್ಯಗಳಿಗಿರುವ ಸಾಮಂತ ಸ್ವರಾಜ್ಯವೂ ಪ್ರಯೋಜನವಿಲ್ಲ. ಈಜಿಪ್ಟಿಗೆ ಸಂಪೂರ್ಣ ಸ್ವಾತಂತ್ರ್ಯವಿದೆಯೆಂತ ಹೇಳಿದರೂ—ಈಜಿಪ್ಟಿನ ಪಾರ್ಲಿಮೆಂಟಿನವರು ಮೀಟಿಂಗ್‌ಗಳನ್ನು ನಡಿಸುವ ಹಕ್ಕಿನ ಕುರಿತು ಒಂದು ಕಾನೂನು ಮಾಡಿಕೊಂಡರು; ಕೂಡಲೇ ಬ್ರಿಟಿಷ್ ಹಡಗ ಸೈನ್ಯವು ಈಜಿಪ್ಟಿನ ಮುಖ್ಯ ಪಟ್ಟಣದ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿ ಆ ಕಾನೂನನ್ನು ರದ್ದು ಪಡಿಸಬೇಕೆಂತ ಒತ್ತಾಯಪಡಿಸಿದರು. ಲಾರ್ಡ್ ರೀಡಿಂಗ್, ಲಾರ್ಡ್ ಪೀಲ್ ಮುಂತಾದವರು ಕೊಡುವುದಾಗಿ ಹೇಳುವ ಸಾಮಂತ ಸ್ವರಾಜ್ಯವೆಂತೂ ಬೇಡ.

ಲಾಹೋರ್ ಕಾಂಗ್ರೆಸಿಗೆ ಮೊದಲು 1929ನೇ ನವಂಬರಿನಲ್ಲಿ ಮಹಾತ್ಮ ಗಾಂಧಿಯವರು ಲಾರ್ಡ್ ಇರ್ವಿನರನ್ನು ಕಂಡು ಸಾಮಂತ ಸ್ವರಾಜ್ಯ ಕೊಡಿ ಒಪ್ಪಿಕೊಳ್ಳುತ್ತೇವೆಂತ ಹೇಳಿದರು. ಓ, ಅದು ಸಾಧ್ಯವಿಲ್ಲ. ಸಾಮಂತ ಸ್ವರಾಜ್ಯವನ್ನು ಅನೇಕ ವರ್ಷಗಳ ನಂತರ ಸಾಧಿಸಿಕೊಳ್ಳಬಹುದಾದ ಧ್ಯೇಯವಾಗಿ ಇಟ್ಟುಕೊಳ್ಳಬಹುದೆಂತ ಹೇಳಿದರು. ಫಲಿತಾಂಶವೇನಾಯಿತು? ಲಾಹೋರ್ ಕಾಂಗ್ರೆಸಿನಲ್ಲಿ ಸಂಪೂರ್ಣ ಸ್ವಾತಂತ್ರ್ಯವೇ ಹಿಂದೀಯರ ಧ್ಯೇಯವೆಂತ ಮಂಜೂರಾಯಿತು. ಈಗಿನ ವೈಸರಾಯರಾದ ಲಾರ್ಡ್ ವಿಲ್ಲಿಂಗ್‌ಡನ್ನರೇ ಡೊಮಿನಿಯನ್ ಸ್ಟೇಟಸ್ (ಸಾಮಂತ ಸ್ವರಾಜ್ಯವನ್ನು) ಅಂಗೀಕರಿಸಿಕೊಳ್ಳಿ, ಕೊಡುತ್ತೇವೆಂತ ಹೇಳಿದ್ದಾರೆ. ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವುದು ಸಾಧ್ಯವಿದೆಯೋ ಎಂಬ ಸವಾಲಿಗೆ ಜವಾಬು ನಿಮ್ಮ ಕೈಯ್ಯಲ್ಲಿದೆ. ನಿಮ್ಮ ಮುಖಗಳನ್ನು ನೋಡಿದರೂ, ನೀವು ಕಾಂಗ್ರೆಸಿಗೆ ಜಯವಾಗಲೀ ಎಂತ ಮುಂತಾಗಿ ಮಾಡುವ ಜಯಘೋಷದಿಂದಲೂ ನಮಗೆ ಜಯವಿದೆಯೆಂತ ನನಗೆ ಭರವಸೆಯಾಗುತ್ತದೆ. ಕಾಂಗ್ರೆಸು ಗ್ರಾಮಗಳನ್ನು ಸಹ ಆವರಿಸಿಬಿಟ್ಟಿದೆ. ದೇಶಕ್ಕೆ ಸ್ವಾತಂತ್ರ್ಯವನ್ನು ಸಾಧಿಸಲು ಮಹಾತ್ಮರಿಂದ ಸಾಧ್ಯವಿಲ್ಲ. ಬಲವಾದ ವಾದದಿಂದ ಸಾಧ್ಯವಿಲ್ಲ. ನಿಮ್ಮ ಅಂದರೆ ಗ್ರಾಮವಾಸಿಗಳ ಕೆಲಸದಿಂದಲೇ ಸಾಧ್ಯವಿದೆಯಷ್ಟೆ.

ಮಹಾತ್ಮ ಗಾಂಧಿಯವರನ್ನು ಕರೆಸಿಕೊಂಡು ಹಂಗಾಮಿ ರಾಜಿಯಾಗದಿದ್ದರೆ ಏನಾಗುತ್ತಿತ್ತು? ಇನ್ನೂ ಕೆಲವು ತಿಂಗಳು ಚಳವಳಿ ನಡೆದಿದ್ದರೆ ಸರಕಾರಿ ಆಡಳಿತವೆಲ್ಲಾ ತಟಸ್ಥವಾಗುತ್ತಿತ್ತು. ಬ್ರಿಟಿಷ್ ವ್ಯಾಪಾರಿಗಳಿಗೆ ವ್ಯಾಪಾರದಲ್ಲಿ ಒಂದು ಕಾಸೂ ಸಂಪಾದನೆಯಾಗುತ್ತಿರಲಿಲ್ಲ. ಸರಕಾರಿ ಬೊಕ್ಕಸಕ್ಕೆ ಒಂದು ಕವಡಿ ಕಂದಾಯ ಬರುತ್ತಿರಲಿಲ್ಲ. ರೈಲ್ ಗಾಡಿಗಳು ನಡಿಯುತ್ತಿರಲಿಲ್ಲ. ವ್ಯಾಪಾರ ಹಡಗುಗಳಿಂದ ಸಾಮಾನುಗಳನ್ನು ಇಳಿಸುವವರು ಇರುತ್ತಿರಲಿಲ್ಲ. ಹಡುಗುಗಳಿಗೆ ಸಾಮಾನು ಏರಿಸುವವರು ಇರುತ್ತಿರಲಿಲ್ಲ. ಒಟ್ಟು ದೇಶದ ಆಡಳಿತವೇ ನಿಂತು ಹೋಗುತ್ತಿತ್ತು.

ಆದರೆ ಜನರು ತಮ್ಮೊಳಗೆ ಪಂಗಡಗಳಾಗಬಾರದು. ಹಿಂಸಾಮಾರ್ಗವನ್ನವಲಂಬಿಸುವ ಒಂದು ಪಂಗಡವಿದೆ. ಹಿಂಸಾಮಾರ್ಗವನ್ನು ಯಾರೂ ಕೈಕೊಳ್ಳಬಾರದೆಂತ ನಾನು ಎಚ್ಚರಿಸುತ್ತೇನೆ. ಹಿಂಸಾಮಾರ್ಗವನ್ನು ಸಂಪೂರ್ಣವಾಗಿ ಬಿಟ್ಟು ಕಾಂಗ್ರೆಸನ್ನು ಬಲಪಡಿಸಿ ಅಹಿಂಸಾಯುಕ್ತವಾದ ಚಳವಳಿ ನಡಿಸಿದರೆ ಮಿ. ಮೆಕ್ಡೊನಾಲ್ಡರಿಗೇ ಆಗಲೀ ಅಥವಾ ಲಿಬರಲ್, ಕನ್ಸರ್‌ವೇಟಿವ್ ಪಾರ್ಟಿಗಳಿಗೇ ಆಗಲೀ ಅಥವಾ ಮೂರು ಪಂಗಡಗಳು ಕಲೆತೇ ಆಗಲೀ ಹಿಂದೀಯರ ಕೋರಿಕೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ಒಟ್ಟು ದೇಶವೇ ಕಾಂಗ್ರೆಸ್ಸಿಗೆ ಬೆಂಬಲವಾಗಿದೆಯೆಂತ ಕಾರ್ಯತಃ ತೋರಿಸಬೇಕು.

ಹಿಂದೂ ಮುಸ್ಲಿಂ ಸಮಸ್ಯೆ ಇನ್ನೊಂದು ನಮಗೆ ಕಲಿಸಿದ ವಿದ್ಯೆಯಿಂದ ಯಾವದನ್ನು ನಂಬಬೇಕು, ಯಾವದನ್ನು ನಂಬಬಾರದು ಎಂತ ನಮ್ಮನ್ನು ತಬ್ಬಿಬ್ಬು ಮಾಡಿದ್ದಾರೆ. ಈ ಎರಡು ಜಾತಿಯ ಜನರೊಳಗೆ ಎಂದೂ ಒಗ್ಗಟ್ಟಾಗಲಾರದು. ಈ ಎರಡು ಮತದವರು ಎಂದೆಂದೂ ಹೊಡೆದಾಡುತ್ತಲೆ ಇರುತ್ತಾರಾದ್ದರಿಂದ ಬ್ರಿಟಿಷರು ಇಲ್ಲಿಂದ ಬಿಟ್ಟು ಹೋಗಲು ಸಾಧ್ಯವಿಲ್ಲವೆಂತ ನಾವು ನಂಬುವ ಹಾಗೆ ಮಾಡಿದ್ದಾರೆ. ಬ್ರಿಟಿಷರ ಪ್ರಯೋಜನಕ್ಕಾಗಿ, ಮುಸಲ್ಮಾನರನ್ನು ಹಿಂದೂಗಳೂ, ಹಿಂದೂಗಳನ್ನು ಮುಸಲ್ಮಾನರೂ ಕೊಲ್ಲುತ್ತಲೇ ಇರುತ್ತಾರೆಂತ ನಂಬಿಸುತ್ತಾರೆ. ಹಿಂದೂಸ್ಥಾನವು ದೊಡ್ಡ ಭೂಖಂಡವೇ ಆಗಿದೆ. ರಷ್ಯಾ ದೇಶವನ್ನು ಬಿಟ್ಟು ಉಳಿದ ಒಟ್ಟು ಯೂರೋಪ್ ಖಂಡದಷ್ಟು ಇದೆ. ಕಾನ್‌ಪುರದಲ್ಲಿ 300 ಜನರು ದಂಗೆಯಲ್ಲಿ ಸತ್ತರು. ಯೂರೋಪಿನ ಎಷ್ಟೊಂದು ಜನ ಪಟ್ಟಣಗಳಲ್ಲಿ ಪ್ರೊಟೆಸ್ಟೆಂಟ್ ರೋಮನ್ ಕೆಥೊಲಿಕರೊಳಗಿನ ಜಗಳಗಳಲ್ಲಿ ಸತ್ತರು! ಅದರಿಂದ ಯೂರೋಪಿನ ದೇಶಗಳಲ್ಲಿ ಒಗ್ಗಟ್ಟು

ಸಾಧ್ಯವೇ ಇಲ್ಲವೆಂತ ಯಾರಾದರೂ ಹೇಳಿದರೋ? ಹಿ
ಸ್ಥಾನದಲ್ಲಿ ನೂರಾರು ಪಟ್ಟಣಗಳೂ, ಲಕ್ಷಾಂತರ ಗ್ರಾಮ
ಇವೆ. ಯಾಕೆ ಈ ಎಲ್ಲಾ ಪಟ್ಟಣಗಳಲ್ಲೂ, ಗ್ರಾಮಗ
ಹೊಡೆದಾಟವಿಲ್ಲ. ಈ ಜಗಳಗಳನ್ನು ಬ್ರಿಟಿಷ್ ಜನರ
ಟರುಗಳು ಪ್ರಾರಂಭಿಸುವದಾಗಿದೆ. ಕಲ್ಕತ್ತಾದಲ್ಲಿ 19
ಜಾತಿ ಜಗಳಗಳಾದವು. ಆಗ ಏನಾಗುತಿತ್ತೆಂದರೆ—
ದಾದರೂ ಬೀದಿಯಲ್ಲಿ ಜಗಳವಾದರೆ ಬೇರೆ ಬೀದಿ
ನಮಗೇನು ಸಂಬಂಧವೆಂತ ಹೇಳಿ ಅಲಕ್ಷ್ಯಾಗಿರುತ್ತಿದ್ದ
ನ್‌ಪುರದಲ್ಲಿ ದಂಗೆಯಾಯಿತು. ಆದರ ವಿಷಯದಲ್ಲಿ
ಕಮಿಟಿಗಳು ವಿಚಾರ ಮಾಡುತ್ತಲಿವೆ. ಈ ಜಗಳವಾಗ
ತ ಸರಕಾರಿ ಅಧಿಕಾರಿಗಳ ಇಚ್ಛೆಯಾಗಿತ್ತು. ಸರಕಾರ
ಸು ಮಾಡಿದ್ದರೆ ಒಂದೇ ಗಂಟೆಯೊಳಗೆ ದಂಗೆಯನ್ನು
ಬಹುದಿತ್ತು. ಏನು ಮಾಡಿದರೂ ಕೊಲೆ, ಲೂಟಿ,
ಯಿಂದ ಅನಾಹುತ ನಡೆಯುತ್ತಿರುವುದನ್ನು ನೋಡುತ್ತಾ
ಲೀಸಿನವರು ಇಸ್ಪೀಟ್ ಆಡುತ್ತಾ ಕೂತರು. ಮಿಲಿಟ
ರು ಗುಂಡು ಹೊಡೆಯಲು ತಮಗೆ ಆರ್ಡರ್ ಇಲ್ಲವೆಂ
ಳಿದರು. ಒಂದು ಜಾತಿಯವನ ಕೈಯ್ಯಲ್ಲಿದ್ದ ಆಯುಧ
ಕಿತ್ತು ಇನ್ನೊಂದು ಜಾತಿಯವನಿಗೆ ಕೊಟ್ಟರು.

ಹನ್ನೆರಡು ವರ್ಷಗಳ ಕೆಳಗೆ ಹಿಂದೂ ಮುಸಲ್ಮಾ
ಗಳಗಳು ಇತ್ತಿಲ್ಲ. ಸರ್ಕಾರದವರು ತಮ್ಮ ಉಪಾ
ಸ್ನು ಹೂಡಿದರು. ಪಾಠ ಶಾಲೆಗಳಲ್ಲಿ ಜಾತಿ ವ್ಯ
ಮಾಡಲು ಪ್ರಾರಂಭಿಸಿದರು. ಸರ್ಕಾರಿ ಉದ್ಯೋಗ
ಜಾತಿ ವ್ಯತ್ಯಾಸವನ್ನು ತಂದರು. ಕೌನ್ಸಿಲ್ ಚುನಾ
ಯಲ್ಲಿ ಜಾತಿ ವ್ಯತ್ಯಾಸ ಬಂತು. ಸರ್ಕಾರವು ಹ
ಈ ಬಲೆಗಳಿಗೆ ಬೀಳದಂತೆ ಜಾಗರೂಕರಾಗಿರಿ.

ಈ ಸ್ಥಳದವರಿಗೆ ಸಂಬಂಧ ಪಡುವ ಒಂದೆರಡು ವಿ
ಗಳನ್ನು ಕುರಿತು ಮಾತನಾಡುತ್ತೇನೆ. ಜಮ್ಮ ಹಿ
ಯ ಭೂಮಿ ಕಂದಾಯವು ಖಾಯಂ ಕಂದಾಯ, ಹೆಚ್ಚಿ
ಡದೆಂತ ನೀವು ವಾದಿಸುತ್ತೀರಿ. ಸರ್ಕಾರವು ಹೆಚ್ಚಿ
ಬಿಟ್ಟಿತು. ಬಂಗಾಳದಲ್ಲೂ ಈ ರೀತಿ ನಡೆದಿದೆ. ನಿಮಗೆ ಕ
ವಾಗ್ದಾನಗಳಿಗೆ ಬೆಲೆಯಿಲ್ಲ. ಬ್ರಿಟಿಷ್ ಸರ್ಕಾರದ ವಾಗ್ದಾ
ನ್ನು ಎಷ್ಟರ ಮಟ್ಟಿಗೆ ನಡಿಸುತ್ತಾರೆಂಬದನ್ನು ಕುರಿತು
ಹೇಳಬೇಕಾದಿಲ್ಲ. ಕಾಂಗ್ರೆಸಿನ ಅಭಿಪ್ರಾಯವು ಕ
ದಾಯ ಮತ್ತು ಗೇಣಿ ಕಡಿಮೆಯಾಗಬೇಕೆಂಬದು,
ಮಿಯಲ್ಲಿ ಹಿಡುವಳಿದಾರರಿಗೆ ಹೆಚ್ಚಿಗೆ ಹಕ್ಕು ಕೊಡ
ಸ್ವರಾಜ್ಯ ಸರ್ಕಾರದಲ್ಲಿ ಭೂಕಂದಾಯವು ಖಂಡಿ
ಯೂ ಕಡಿಮೆಯಾದೀತೇ ತೊರಕು ಹೆಚ್ಚಾಗ
ಕಾಂಗ್ರೆಸ್ ಒಡವರಿಗಾಗಿಯೋ, ಕೂಲಿ ಕೆಲಸಗಾರ
ಯೋ ಕೆಲಸ ಮಾಡುತ್ತಿರುವುದಾಗಿದೆ. ಹತ್ತು ವರ್ಷಗ
ಲೂ ಈ ಧ್ಯೇಯದಿಂದಲೇ ಕೆಲಸ ಮಾಡುತ್ತಲಿವೆ.
ಕಾಂಗ್ರೆಸಿನಲ್ಲೂ ಸ್ಪಷ್ಟವಾಗಿ ಹೇಳಿದೆ.

ನಿಮ್ಮ ಪ್ರಾಂತ್ಯವು ಪ್ರತ್ಯೇಕ ನ್ಯಾಯವಿಧಾಯ
ಗೆ ಅಧೀನವಾದ ಆಡಳಿತ ಉಳ್ಳದ್ದಾಗಿ, ಪ್ರತ್ಯೇಕ ಪ್ರಾ
ವಾಗಿರಬೇಕೆಂತ ನಿಮ್ಮ ಅಭಿಲಾಷೆಯಾಗಿರಬಹುದು.
ಗ್ರೆಸಿನವರು ದೇಶದ ಯಾವ ಜನರ ಸಂಸ್ಕೃತಿಯನ್ನಾ
ಭಾಷೆಯನ್ನಾದರೂ ಕೆಡಿಸುವುದಿಲ್ಲವೆಂತ ಈಗಾಗಲೇ ವಾ
ನ ಕೊಟ್ಟಿದ್ದಾರೆ. ಪ್ರತ್ಯೇಕ ಇರಬೇಕಾದರೆ ಇರಿ.
ಸಹಾಯ ಮಾಡುತ್ತೇವೆ. ಆದರೆ ಜಾಗರೂಕರಾಗಿ
ವರ್ಗದವರನ್ನು ಎಷ್ಟು ಸುಲಭದಲ್ಲಿ ಮೋಸಗೊಳಿಸಿದ
ನ್ನು ನೆನಪಿನಲ್ಲಿಡಿ. ಬರ್ಮಾದವರು ಇಂಡಿಯಾದಿಂ
ಪಡಬೇಕೆಂತಲೂ, ಪೂರ್ತಿ ಸ್ವರಾಜ್ಯ ಬೇಕೆಂತಲೂ ಕೇ
ರು. ಬೇರಾಗಿರಬೇಕೆಂಬದನ್ನು ಅಂಗೀಕರಿಸಿಕೊಂಡೇ
ರು. ಸ್ವರಾಜ್ಯ ಕೊಡುವುದನ್ನು ಮಾತ್ರ ಹಿಂದಿನಿಂದ
ನೋಡೋಣವೆನ್ನುತ್ತಾರೆ. ಆದ್ದರಿಂದ ನೀವು ಬೇರೆ ಇರ
ಕೇಳುವಾಗಲೇ ಗುಲಾಮಗಿರಿಯು ಹೋಗಬೇಕೆಂತಲ
ಳಬೇಕು. ಬೇರೆ ಇರಬೇಕೆಂಬ ಕೋರಿಕೆಯನ್ನು ಸೈ
ವರದಿಯು ಅಂಗೀಕರಿಸಿಯೇ ಬಿಟ್ಟಿದೆ. ಆದರೆ ಸ್ವರಾ
ರ್ಕಾರವು ಎಂದೂ ಸಾಧ್ಯವಿಲ್ಲವೆಂತ ಬರೆದಿದೆ. ಸ್ವತಂ
ರ್ಕಾರ ನಡಿಸಲು ಹಣವಿಲ್ಲವೆನ್ನುತ್ತಾರೆ ಹಣವಿದೆ. ಅ
ಗಳ ಹೆಚ್ಚಿನ ಸಂಬಳವೆಲ್ಲಾ ಹೋಗಬೇಕು. ಆದರೂ ಎ
ಇಲಾಖೆಯಿಂದ ಬರುವ 4 ಲಕ್ಷ ರೂಪಾಯಿ ನಮ
ಬೇಕು ಎಂತ ನೆನಪಿನಲ್ಲಿಡಬೇಕು. ಈ ಸರಕಾರವು
ದಗಿಸಲಿಕ್ಕಾಗಿ ಎಲ್ಲೆಲ್ಲಿಯೂ ಹೊಡನಾರಾಯಿ, ಬ್ರಾಂ
ವ್‌ಗಳನ್ನು ಇಡಲು ಸಹಾಯ ಮಾಡುತ್ತದೆ. ಜನ
ಕಡಿಮೆ ಸರಕಾರ ನಡಿಸಲು ಏರ್ಪಾಡು ಮಾಡಿಬಿಟ್ಟಿದ್ದಾರೆ.
ಕತನವನ್ನು ನಿಲ್ಲಿಸಿದರೆ ಸರಕಾರದ ಬೇರೆ ಉತ್ಪತ್ತಿಯು ಹೆ
ಹುದು. ನಿಮ್ಮ ದೇಶದ ಆಡಳಿತವು ಹೇಗಿರಬೇಕೆಂ
ಸ್ವರಾಜ್ಯ ಸರಕಾರ ಸ್ಥಾಪಿತವಾದಾಗ ನಿಶ್ಚಯಿಸಿಕೊಳ್ಳಬ
ಆದರೆ ಬೇರೆಯೇ ಇರಬೇಕೆನ್ನುವ ವಯಸ್ಕರಿಗೆ ನಾನು
ಸುತ್ತೇನೆ. ಬೇರೆ ಇದ್ದರೆ ಗುಲಾಮರಾಗಿಯೇ ಇರ
ಬೇಕು.

ಈ ದೇಶದವರು ಅಥವಾ ಜಮ್ಮ ಹಿಡುವಳಿದಾ
ರೂ ಕೋವಿ ಹಿಡಿಯುವ ಸ್ವತಂತ್ರವುಳ್ಳವರಾಗಿದ್ದಾರೆಂ
ಯುತ್ತೇನೆ. ನೀವು ಸಹ ಸ್ವಾತಂತ್ರ್ಯ ಪ್ರಾಪ್ತಿಗಾಗಿ
ಸಾ ಮಾರ್ಗವನ್ನು ಹಿಡಿಯದಿರುವುದು ನೋಡಿದರೆ ಅ
ಧರ್ಮವು ಎಷ್ಟರ ಮಟ್ಟಿಗೆ ಹರಡಿದೆಯೆಂತ ಗೊತ್ತಾ
ನೀವು ಹಿಂಸಾ ಮಾರ್ಗವನ್ನು ಕೈಕೊಂಡರೆ ಫಲಿತಾಂಶ
ಯಿತು. ಭಯಂಕರ ಹಾನಿಯಾದೀತು. ಹುಟ್ಟುತನ

ಕೊಡಗು.
[illegible]
[illegible]
ಮೇ. ತಾ. [illegible]

ಜಮೀನ್ದಾರರ ಸಂಘದ ವಾರ್ಷಿಕ ಮಹಾ ಸಭೆ.

ಜಮೀನ್ದಾರರ ಸಂಘದ ವಾರ್ಷಿಕ ಮಹಾ ಸಭೆಯು [illegible]ದಲ್ಲಿ ಗೋಣಿಕೊಪ್ಪಲಿನಲ್ಲಿ ಬಹು ವಿಜೃಂಭಣೆಯಿಂದ [illegible]ತು. ದೇಶದಲ್ಲಿ ಹಿಡಕಲ ಹುಟ್ಟಿ [illegible], ಅಧಿ[illegible]ವನ್ನು ಗೋಣಿಕೊಪ್ಪಲಿನಲ್ಲಿ ನಡೆಸಲು ಬಹಳ ಸಹಾಯ [illegible]ಸಿದ್ದರಿಂದಲೂ ಗೋಣಿಕೊಪ್ಪಲು ಬಹು ಚಿಕ್ಕ ಊ[illegible]ಂದಲೂ ಊಟ ಉಪಚಾರದ ಏರ್ಪಾಡು ಸಂಪೂರ್ಣ [illegible] ಇರಲು ಕಾರಣವಾಯಿತು. [illegible] ಮಹಾ ಸಭೆಯಲ್ಲಿ ಮಹಾ ಸಭೆಗೆ ಬರುವ ಜನರು [illegible] ಕೊಡಬೇಕೆಂತ ತೀರ್ಮಾನಿಸಿದ್ದರು. ಗೋಣಿ[illegible] ಸಭೆಯ ಸ್ವಾಗತ ಕಮಿಟಿಯವರು [illegible] ತೆಗೆದುಕೊಳ್ಳದೇನೇ [illegible]. ಇದಕ್ಕೆ [illegible] ಸ್ವಾಗತ ಕಮಿಟಿಗೆ ಧನ್ಯವಾದಗಳ[illegible].

ಶ್ರೀಯುತ ಸೇನ್‌ಗುಪ್ತರು ಅಧ್ಯಕ್ಷಸ್ಥಾನವನ್ನು [illegible] ಒಪ್ಪಿದ್ದರೂ ಸಹ [illegible] ತಾರೀಖಿನ ದಿನ [illegible] ಬರಲಾಗುವುದಿಲ್ಲವೆಂತ [illegible] ಸಮ್ಮೇಳನದ [illegible] ದಿನದ ತಂತಿ ಮುಖಾಂತರ ತಿಳಿಸಿದರು. ಸ್ವಾ[illegible] ಕಮಿಟಿಯವರಿಗೂ, ಸಂಘದವರಿಗೂ, ದೇಶದ [illegible] ಆಶಾಭಂಗವಾಗುವ ಜಿಡರಿಕೆ [illegible]. ಆದರೆ ಸಂಘ[illegible], ಸಂ[illegible] ಶ್ರೀ [illegible] ಅವರ [illegible] ಶ್ರೀ ಸೇನ್‌[illegible]ಗುಪ್ತರನ್ನು, ಶ್ರೀ [illegible]ರವರನ್ನು ಕರೆತಂದು [illegible]ದಾರರ ಸಂಘದ ಸ್ವಯುಕ್ತವು ಸಫಲವಾಯಿತು. [illegible] ಮೊದಲೇ ಒಪ್ಪಿದ್ದಂತೆ ಶ್ರೀ ಸೇನ್‌ಗುಪ್ತರು ಕಾಂಗ್ರೆಸ್ [illegible] ಅಧ್ಯಕ್ಷಸ್ಥಾನದ [illegible] ಎಡಹನೇಯ [illegible]. ಅತ್ಯಂತ [illegible] ಕಲ್ಲವ್ಯಾಧಿಯ [illegible] ದೇಶವನ್ನು [illegible] ಒಪ್ಪಿದ್ದು ನಮ್ಮ ದೇಶದ ಪೂರ್ವ ಪುಣ್ಯವೇ [illegible]. ನಾವಿದ್ದೇವೆ ಆಂಧ್ರ ದೇಶದ [illegible]," [illegible] ಶ್ರೀ ಪ್ರಕಾಶ[illegible] ಬಂದದ್ದು ಇಷ್ಟೊಂದು ವಿಶೇಷವಾಯಿತು. [illegible] ಕಾಂಗ್ರೆಸ್ ಕಮಿಟಿಯಲ್ಲಿರುವ ಆಂಧ್ರ ದೇಶದ [illegible] ಶ್ರೀ ವಿಶ್ವನಾಥರಾವ್, [illegible] ದೇಶಸೇವಕರಾದ ಶ್ರೀ [illegible] ಮತ್ತು [illegible] ಸಹ [illegible] ಪತ್ರಿಕೆ [illegible] ಅಧ್ಯಕ್ಷರ [illegible] ಸಿಕ್ಕಿತ್ತು.

ಅಧ್ಯಕ್ಷರ ಭಾಷಣವು [illegible] ಪ್ರಕಟವಾಗಿ[illegible]. ಅಖಿಲ ಭಾರತದ [illegible] ದೇಶ [illegible] ಸ್ವಾತಂತ್ರ್ಯ ಸಿಕ್ಕದ ವಿನಹ ಈ ದೇಶಕ್ಕೆ [illegible] ತಂತ್ರವಿಲ್ಲ. ಆದ್ದರಿಂದ ಅಖಿಲ ಭಾರತದ ಹೋರಾ[illegible] ನಡೆಯುತ್ತಿದೆ. ಅದರಲ್ಲಿ ಸಹಕರಿಸಬೇಕಾದ್ದು [illegible] ದೇಶದ ಕರ್ತವ್ಯವಾಗಿದೆ. ಇಲ್ಲಿ [illegible] ಮತ್ತು ಪ್ರಾಂತೀಕವಿಷ್ಯೇ [illegible] ದೇಶದ ಗ್ರಾಮಗಳಲ್ಲಿ [illegible] ಸ್ವರಾಜ್ಯ ಸ್ಥಾಪನ [illegible] ಬೇಕಾದರೂ ಇದೆ [illegible] ಹೋರಾಟ [illegible] ಗ್ರಾಮವಾಸಿ [illegible] ಮಹಾತ್ಮಾ ಗಾಂಧಿ [illegible] ದೇಶಕ್ಕೆ ಸ್ವರಾಜ್ಯವನ್ನು [illegible]. ಗ್ರಾಮವಾಸಿಗಳ [illegible] ನಿರೀಕ್ಷಿಸುತ್ತಾರೆಂಬುದನ್ನು ಗ್ರಾಮವಾ[illegible]ಗೆ ಶ್ರೀ ಸೇನ್‌ಗುಪ್ತರಂಥ [illegible] ಕೊಡುವುದು ಬಹಳ ಆವಶ್ಯಕವಾಗಿದೆ.

ಪ್ರಪಂಚದಲ್ಲೆಲ್ಲಾ ಅತ್ಯಂತ ಬಲಶಾಲಿಯಾದ ಬ್ರಿಟಿಷ್ [illegible] ಹಿಂದೂಸ್ಥಾನದ ಕೋರಿಕೆಗಳಿಗೆ [illegible] ವರ್ಷಗಳಿಂದಲೂ [illegible], 1929ನೇ ಇಸವಿಯ [illegible]ದಿನಲ್ಲಿ ಕೊಡಲಾಗುವುದಿಲ್ಲವೆಂತ [illegible] ಡೊಮಿನಿ[illegible] ಸ್ಟೇಟಸ್ [illegible] ಸ್ವರಾಜ್ಯವನ್ನು ಕೊಡ[illegible]ವೆಂತ ಈಗ ಹೇಳಲಿಕ್ಕೂ, 1930ನೇ ಆಗಸ್ಟು ತಿಂಗಳಲ್ಲಿ [illegible] ಮತ್ತು ನೋಡಲಿಕ್ಕೂ ಅರ್ಥವಾಗದಲ್ಲವೆಂತ ಹೇಳಿ[illegible]ದ ಕರಾರು ನನ್ನೇ 1931ನೇ ಇಸವಿ ಮಾರ್ಚಿ ತಿಂಗಳಲ್ಲಿ [illegible] ಯೋಚಿಸಬಹುದು ಎಂತ ಒಪ್ಪಲಿಕ್ಕೂ ಕಾರಣವೇನು ಎಂತ ಕೇಳಿ, ಮಹಾತ್ಮ ಗಾಂಧಿಯವರ, ಆಯಾ ಕಾಂಗ್ರೆಸಿನ ಚಳವಳಿಯು ಗ್ರಾಮಾಂತರಗಳಲ್ಲಿ ಹಬ್ಬಿರುವುದೇ ಕಾರಣವೆಂತ ಬಹು ಸ್ಪಷ್ಟವಾಗಿಯೂ, ಮನಸಿಗೆ ನಾಟುವಂತೆಯೂ ಅಧ್ಯಕ್ಷರು ವಿವರಿಸಿದರು.

ಬಳಿಕ ಪ್ರಚಾರ ನಿಷಾ ನಿಷೇಧದ ಚಳವಳಿಯ ಆವಶ್ಯಕತೆಯನ್ನು ಕುರಿತು ಬೋಧಿಸಿದರು. ಇವು ಅಖಿಲ ಭಾರತಕ್ಕೆ ಸಂಬಂಧ ಪಡುವ ವಿಷಯಗಳಾದರೂ ಕೊಡಗಿನ ಪ್ರಕೃತಿಯಿಂದ ಜಮೀನ್ದಾರರಿಗೂ, ಕೂಲಿಗಾರರಿಗೂ, ವ್ಯಾಪಾರಸ್ಥರಿಗೂ ಸಂಬಂಧ ಪಡುವ ಸಂಗತಿಯಾಗಿದೆ. ನಿಷಾ ನಿಷೇಧದ ಚಳವಳಿಯಿಂದ ಕಳೆದ ವರ್ಷ ದೇಶಕ್ಕೆ ಆದ ಪ್ರಯೋಜನವನ್ನು ವಿಗಿಂಗ್ಯಾಗ್ಯೆ ವಿವರಿಸಿದ್ದೇವೆ. ಈಗ ಎಲ್ಲಾ ಕಡೆಗಳಲ್ಲಿ ಪಿಕೆಟಿಂಗ್ ಕೆಲಸವು ನಡೆಯುತ್ತಿಲ್ಲವಾದರೂ ಈಗಾಗಲೇ ನಡೆದ ಕೆಲ ಮದುವೆಗಳಲ್ಲಿ ಸಹ ನಿಷಾ ಪದಾರ್ಥಗಳ ಉಪಯೋಗವಿರಲಿಲ್ಲವೆಂತ ತಿಳಿದು ಬಂದಿದೆ. ಇದರಿಂದ ದೇಶಕ್ಕೆ ಎಷ್ಟೆಂದು ಆರ್ಥಿಕ ಮತ್ತು ನೈತಿಕ ಲಾಭವಾಗಿದೆಯೆಂತ ವಾಚಕರೇ ಊಹಿಸಬಹುದು. ಕೈನೂಲಿನ ಬಟ್ಟೆಯು ನಮ್ಮ ದೇಶದಲ್ಲೇ ತಯಾರು ಮಾಡಲಾಗುವಿದ್ದರೂ ನಮ್ಮ ಪ್ರಾಂತ್ಯದ ಬಡ ಜನರಿಗೆ ಅನ್ನ ಕೊಡುವ ಖದ್ದರ್ ಬಟ್ಟೆಯನ್ನೇ ಉಪಯೋಗಿಸಬೇಕಾದದ್ದು ಜೋಡಿ ಮುಖ್ಯ ಕರ್ತವ್ಯವಾಗಿದೆ. ಅಲ್ಲದೆ ಖದ್ದರ್ ಬಟ್ಟೆಯ ಉಪಯೋಗದಿಂದ ವಿಧವಿಧವಾದ, ಬಣ್ಣವುಳ್ಳ ಬಟ್ಟೆಗಳಿಗಾಗಿ ಆಗುತ್ತಿದ್ದ ಖರ್ಚು ಕಡಿಮೆಯಾಗಿ ದೇಶಕ್ಕೆ ದೊಡ್ಡ ಆರ್ಥಿಕ ಲಾಭ ಸಹ ಆಗಿದೆ. ಮತ್ತು ಹಿಂದೂಸ್ಥಾನದ ಜನರಲ್ಲಿ ಸ್ವಾತಂತ್ರ್ಯದ ಅಭಿಲಾಷೆಯು ಎಷ್ಟು ಪ್ರಬಲವಾಗಿದೆಯೆಂಬುದನ್ನು ಬ್ರಿಟಿಷ್ ಜನರಿಗೆ ತೋರಿಸಿಕೊಡಲಿಕ್ಕೂ ಸಹಾಯವಾಗಿದೆ.

ಈ ದೇಶವು ಪ್ರತ್ಯೇಕವಾಗಿರಬೇಕೇ, ಬೇರೆ ಪ್ರಾಂತ್ಯದೊಡನೆ ಸೇರಬೇಕೇ ಎಂಬ ಪ್ರಶ್ನೆಯನ್ನು ಕುರಿತು ಒಳ್ಳೆ ಸಲಹೆಯನ್ನು ಅಧ್ಯಕ್ಷರಾದ ಶ್ರೀ ಸೇನ್‌ಗುಪ್ತರು ಕೊಟ್ಟಿರುತ್ತಾರೆ. ಬೇರೆ ಇರಬೇಕೆಂಬ ಆಸೆಗೆ ಕಾಂಗ್ರೆಸ್ ಅಡ್ಡಿ ಬರುವುದಿಲ್ಲ, ಸ್ವರಾಜ್ಯವೇ ಮುಖ್ಯವೆಂತ ಹೇಳಿದರೂ ಸಹ ದೇಶದ ಅಧಿಕಾರಿಗಳ ದೊಡ್ಡ ಸಂಬಳವನ್ನು ಕಡಿಮೆ ಮಾಡುವವರೆಗೂ ಮತ್ತು ಎಕ್ಸೈಸ್ ಉತ್ಪತ್ತಿಯು ಇಲ್ಲದಿರಲಿ ಎಂದೂ ಹೇಳಿ ಬೇರೆ ಪ್ರಾಂತೀಕ ಸರ್ಕಾರವನ್ನು ನಡೆಸುವುದು ಕಷ್ಟವಾದೀತೆಂತಲೂ, ಒಕ್ಕೊಂತಲೂ ಮುಖ್ಯವಾಗಿ ಬೇರೆ ಇರುವಷ್ಟು ಲಾಭ ಗಳಿಸಲು ಗಿರುವ ಹಣದ ನಿಮಿತ್ತ ಕಲ್ಪನೆಯನ್ನು ತಪ್ಪಿಸಿಕೊಳ್ಳುವುದು ಕಷ್ಟವಾದೀತೆಂತಲೂ ತಿಳಿಸಿದ್ದಾರೆ. ಪರರಿಂದ ಆಳಲ್ಪಡುತ್ತಿರುವ ಅಗೌರವವಾದ ಸ್ಥಿತಿಯನ್ನು ಹೋಗಲಾಡಿಸಿಕೊಳ್ಳಲಿಕ್ಕಾಗಿಯೇ ಸಂಘವು ದೇಶಕ್ಕೆ ಪ್ರಜಾ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಕೊಡಬೇಕೆಂತಲೂ ಇದನ್ನು ಕೊಡಲು ಅಸಾಧ್ಯವಾದರೆ ಬೇರೆ ಪ್ರಾಂತ್ಯದೊಂದಿಗೆ ಸೇರಿಸಿಯಾದರೂ ದೇಶದ ಗೌರವ ಉಳಿಸಬೇಕೆಂತ ಕೇಳುತ್ತಿರುವುದಾಗಿದೆ. ಈ ಸಂಬಂಧದ ಠರಾವಿನ ಮೇಲೆ ಮಹಾ ಸಭೆಯಲ್ಲಿ ಚರ್ಚೆ ನಡೆದು ಬಹುಮತದಿಂದ ಮೇಲೆ ವಿವರಿಸಿದ ರೂಪದಲ್ಲಿ ಮಂಜೂರಾಯಿತು. ಈ ಠರಾವನ್ನು ಮಂಡಿಸಿದರು. ಮೊದಲಿಂದಲೂ ಪ್ರತ್ಯೇಕವಿರಬೇಕೆನ್ನುವವರ ಮನಸಿಗೆ ನೋವಾಗಲು ಕಾರಣವಿಲ್ಲ. ಪ್ರತ್ಯೇಕವಾಗಿಯೇ ಇರಲು ದೇಶವೆಲ್ಲವೂ ಒಪ್ಪುವಂತೆ ಪ್ರಜಾ ಜವಾಬ್ದಾರಿ ಸರ್ಕಾರ ಅಂದರೆ ಪ್ರಜಾ ಸ್ವಾತಂತ್ರ್ಯದ ಸರಕಾರವೇ ಸ್ಥಾಪಿತವಾಗುವಂತೆ ಅವರು ಸಹ ಪ್ರಯತ್ನಿಸಿ ಜಯಶೀಲರಾದರೆ ಅದಕ್ಕೆ ಸಂಘದ ಒಪ್ಪಿಗೆ ಇದೆ. ಆದರೆ ಗುಲಾಮಗಿರಿಯಲ್ಲಾದರೂ ಬೇರೆಯೇ ಇರಬೇಕೆಂಬುದಕ್ಕೆ ಮಾತ್ರ ಸಂಘವು ಒಪ್ಪುವುದಿಲ್ಲ.

ಈ ಸಾರಿಯ ಮಹಾಸಭೆಯಲ್ಲಿ ಮೊದಲಿನಂತೆ ಚಿಕ್ಕ ಚಿಕ್ಕ ವಿಷಯಗಳನ್ನು ಕುರಿತು ಹಲವು ಠರಾವುಗಳನ್ನು ಪಾಸು ಮಾಡುವುದರ ಬದಲು ಮುಖ್ಯವಾದ ಕೆಲವು ತೀರ್ಮಾನಗಳನ್ನು ಮಾತ್ರ ಮಾಡಿದ್ದು ಉತ್ತಮವಾಗಿದೆ. ಪೂರ್ಣ ಪ್ರಜಾ ಜವಾಬ್ದಾರಿ ಸರ್ಕಾರವು ಸಿಕ್ಕಿದರೆ ಜನರ ಬೇರೆ ಹಲವು ಕಷ್ಟಗಳನ್ನೆಲ್ಲಾ ನಿವಾರಿಸಿಕೊಳ್ಳಬಹುದಾದ ಕಾರಣ ಪೂರ್ಣ ಸ್ವರಾಜ್ಯ ಪಡೆಯುವ ಚಳವಳಿಯಲ್ಲಿಯೇ ಎಲ್ಲರೂ ಮಗ್ನರಾಗಿರಬೇಕಾದದ್ದು ಆವಶ್ಯಕವಾಗಿದೆ. ಕಳೆದ ಸಂಘದ ಮಹಾಸಭೆಯು ಈ ಸಾರಿ ಪೂರ್ಣ ಸ್ವರಾಜ್ಯವೇ ಸಂಘದ ಧ್ಯೇಯವೆಂದು ಠರಾವನ್ನು ಪಾಸುಮಾಡಿದೆ. ಸಾಮಂತ ಸ್ವರಾಜ್ಯ ಬೇಕೆನ್ನುವ ಕಾಲವು ಕಳೆದು ಹೋಯಿತು. ಇದೀಗ ಪೂರ್ಣ ಸ್ವರಾಜ್ಯದ ಹೋರಾಟದ ಕಾಲವಾಗಿದೆ. ಹಿಂದಿನ ಕರಾರು ಉಳ್ಳವರಲ್ಲಿ ಇದೇ ಕೂಗು ಕೇಳುತ್ತಿದೆ. ನಮ್ಮ ದೇಶದವರೂ ಈ ವಿಷಯದಲ್ಲಿ ಹಿಂದುಳಿಯದೆ ಹಿಂದೂ ದೇಶದ ಬೇರೆ ಭಾಗಗಳವರೊಂದಿಗೆ ಪೂರ್ಣ ಸ್ವರಾಜ್ಯದ ತಮ್ಮ ಕೂಗನ್ನು ಸೇರಿಸಿದ್ದು ಸಂಘದ ಗೌರವವನ್ನು ಬಹು ಮಟ್ಟಿಗೆ ಹೆಚ್ಚಿಸಿದೆ ಎಂಬುದರಲ್ಲಿ ಸಂಶಯವಿಲ್ಲ. ಸತ್ಯಾಗ್ರಹ ಚಳವಳಿಯಲ್ಲಿ ತಕ್ಕದಾದ ಭಾಗ ತೆಗೆದುಕೊಂಡು ಈ ಚಿಕ್ಕ ಪ್ರಾಂತ್ಯವು ಹಿಂದೂದೇಶದ ಮುಖಂಡರ ಗಮನಕ್ಕೆ ಬರುವಂತೆ ಮಾಡಿ, ಶ್ರೀ. ಸೇನ್‌ಗುಪ್ತರಂಥ ಧುರೀಣರನ್ನು ತಮ್ಮ ದೇಶಕ್ಕೆ ಕರೆಸಿಕೊಂಡಂಥ ಕೊಡಗು ಪ್ರಾಂತ್ಯದವರು ಪೂರ್ಣ ಸ್ವರಾಜ್ಯದ ಠರಾವನ್ನು ಮಂಜೂರು ಮಾಡಿಕೊಳ್ಳದೆ ಹೇಗೆ ತಾನೇ ಇರುವರು. ತಮ್ಮ ಸಾರ್ಥಕತೆಗಾಗಿ ಬ್ರಿಟಿಷ್ ಸರ್ಕಾರದ ಒಳ ಹೊಕ್ಕಿಕೊಂಡಿರುವಂಥ ಸೇಲವರಲ್ಲದೆ ಬಾಕಿ ಹಿಂದೀಯರಲ್ಲದ ಅಧಿಕಾರವೂ ಪೂರ್ಣ ಸ್ವರಾಜ್ಯವೆಂಬುದರಲ್ಲಿ ವಿನಾಯಿದೂ ಸಂಶಯವಿಲ್ಲ. ಆದುದರಿಂದ ಈ ಆವೇಶಭರವಾದ ಧ್ಯೇಯವನ್ನು ಮಂಜೂರು ಮಾಡಿಕೊಂಡ ಸಂಘದ ಮಹಾಸಭೆಯು ಬಹು ಜಯಪ್ರದವಾಗಿ ನಡೆಯಿತೆಂಬುದರಲ್ಲಿ ಅನುಮಾನವಿಲ್ಲ. ಆದಕಾರಣ ದೇಶದವರೆಲ್ಲರೂ ಇನ್ನಾದರೂ ಒಗ್ಗಟ್ಟಾಗಿ ಈ ಸಂಘಕ್ಕೆ ಸೇರಿ ಈ ಉತ್ತಮ ಧ್ಯೇಯವನ್ನು ಸಾಧಿಸಲು ಸೊಂಟಕಟ್ಟುವರಾಗಿ ಆಶಿಸುತ್ತೇವೆ.

ಶ್ರೀ ಸೇನ್‌ಗುಪ್ತರವರ ಭಾಷಣ.

(2 ನೇ ಪುಟದಿಂದ ಮುಂದುವರಿದದ್ದು.)

ಯಾದೀತು. ನಿಮಗೂ ಸಹ ದೇಶದ ಹೊರಗೆ ರಿವಾಲ್ವರನ್ನು ತೆಗೆದುಕೊಂಡು ಹೋಗಬೇಕಾದರೆ ಲೈಸೆನ್ಸ್ ಬೇಕೆಂತ ನಿರ್ಬಂಧಿಸಿದ್ದರಿಂದ ನಿಮಗೆ ನೋವಿದೆಯೆಂತ ತಿಳಿಯುತ್ತೇನೆ. ಒಟ್ಟು ಹಿಂದೂಸ್ಥಾನದಲ್ಲಿ ಕೋವಿ ಹಿಡಿಯುವ ಸ್ವತಂತ್ರವಿಲ್ಲ. ಸ್ವರಾಜ್ಯ ಸರಕಾರದಲ್ಲಿ ಕೋವಿ ಹಿಡಿಯುವ ಸ್ವತಂತ್ರವನ್ನು ಸರ್ವರಿಗೂ ಕೊಡಲಾಗುತ್ತದೆ. ಸ್ವರಾಜ್ಯ ಸರಕಾರವಲ್ಲೂ ಆರ್ಮ್ಸ್ ಆಕ್ಟ್ ಇರಬಹುದು. ಆದರೆ ಹಾಗಾದಿಯಾಗಿ ಈ ದೇಶಕ್ಕೆ ಬರುವ ಯೂರೋಪಿಯನರು ಕೋವಿ ಹಿಡಿಯ ಬೇಕಾದರೆ ಯಾವ ಯಾವ ನಿರ್ಬಂಧ ಬೇಕೆಂತ ನಿರ್ಣಯಿಸುವ ಖಾನೂನು ಇದ್ದೀತಷ್ಟೆ. ಈಗಿನ ದೇಶ ನಿವಾಸಿಗಳಿಗೆ ಕೋವಿ ಹಿಡಿಯುವ ಸ್ವತಂತ್ರವಿಲ್ಲದ ಖಾನೂನು ಖಂಡಿತವಾಗಿಯೂ ಇರುವುದಿಲ್ಲ.

ನನ್ನ ಭಾಷಣವು ದೀರ್ಘವಾಗುತ್ತಾ ಬಂತು. ನಿನ್ನೆ ದಿನ ಈ ನಿಮ್ಮ ಊರಿಗೆ ಬರುವುದಿಲ್ಲವೆಂತ ಯೋಚಿಸಿದ್ದೆ. ಶ್ರೀ ಮೂನ್ ಬೆಳ್ಯಪ್ಪನವರ ಪ್ರಯತ್ನದಿಂದ ನಾನು ಬಂದೆ. ನಾನು ಬರದೆ ಹೋಗಿದ್ದರೆ ಬಹಳ ವ್ಯಸನ ಪಡುತ್ತಿದ್ದೆ. ಈ ಸೌಂದರ್ಯವಾದ ದೇಶವನ್ನೂ, ಜನರನ್ನೂ ನೋಡುವ ಅವಕಾಶ ದೊರೆತದ್ದಕ್ಕೆ ಸಂತೋಷ ಪಡುತ್ತೇನೆ. ಸ್ವಾತಂತ್ರ್ಯವು ನಮಗೆ ಜನ್ಮಸಿದ್ಧ ಎಂತ ನೆನಪಿಸಲ್ಪಡಿ. ಇದನ್ನು ಬ್ರಿಟಿಷ್ ಜನರು ತಿಳಿದುಕೊಂಡಿದ್ದಾರೆ. ಪ್ರಪಂಚದ ಎಲ್ಲಾ ಸ್ವತಂತ್ರ ರಾಜ್ಯಗಳೂ ತಿಳಿದುಕೊಂಡಿದ್ದಾರೆ. ಆದರೆ ನಮ್ಮ ದೇಶೀಯರೇ ಕೆಲವರು ಇನ್ನೂ ತಿಳಿದುಕೊಂಡಿಲ್ಲ. ನಾವು ಸ್ವತಂತ್ರರಾಗುತ್ತೇವೆ ಎಂತ ದೃಢ ಸಂಕಲ್ಪ ಮಾಡಬೇಕು. ಕಾಂಗ್ರೆಸನ್ನು ಬಲಪಡಿಸಬೇಕು. ನಿಮ್ಮ ಮಹಿಳೆಯರು ಸಹ ಪಿಕೆಟ್ ಮಾಡಿ ಪೋಲೀಸಿಗೆ ಎದುರಾದರು. ಕಾಂಗ್ರೆಸ್ ಸಂಸ್ಥೆಯನ್ನು ಪ್ರಾರಂಭಿಸಿರಿ. ಹಿಂದೂ ದೇಶದ ಒಂದು ಚಿಕ್ಕ ಭಾಗವಾದ ನೀವು ಪ್ರತ್ಯೇಕವಾಗಿ ಸ್ವತಂತ್ರರಾಗುವುದು ಸಾಧ್ಯವಿಲ್ಲ. ಒಟ್ಟು ಹಿಂದೂಸ್ಥಾನದ ಸ್ವಾತಂತ್ರ್ಯ ಸಾಧನೆಗೆ ಸಹಾಯ ಮಾಡಿರಿ. ಖದ್ದರ್ ಪ್ರಚಾರ ಮಾಡಿರಿ. ನೀವು ಹೊಡೆದಾಡದೆ ಗುಲಾಮರಾದಿರಿ! ಈಗಲೂ ಕೋವಿ ಕತ್ತಿಯಿಂದ ಹೊಡೆದಾಡದೆ ಸ್ವತಂತ್ರರಾಗಿರಿ. ನಿಷಾ ಅಂಗಡಿಗಳನ್ನು ಶಾಂತ ರೀತಿಯಿಂದ ಪಿಕೆಟ್ ಮಾಡಿ. ಪ್ರಪಂಚದಲ್ಲೆಲ್ಲಾ ಅತ್ಯಂತ ಬಲಶಾಲಿಯಾದ ಬ್ರಿಟಿಷ್ ಸರಕಾರವು ಕಾಂಗ್ರೆಸಿನೊಂದಿಗೆ ರಾಜಿಗೆ ಬಂದದ್ದು ಯಾಕೆ? ಲಾರ್ಡ್ ಇರ್ವಿನರು ಬ್ರಿಟಿಷ್ ಜನಾಂಗದ ಪ್ರತಿನಿಧಿಯೇ. ಅಂತಹವರು ಶ್ರೇಷ್ಠರೆಂತ ಕರೆ. ಅವರೂ ಯಾಕೆ ರಾಜಿಗೆ ಬಂದದ್ದು? ಕಾಂಗ್ರೆಸಿನ ಬಲವನ್ನರಿತು ಬಂದದ್ದಾಗಿದೆ. ಅಂಥಾ ಕಾಂಗ್ರೆಸನ್ನು ಬಲಪಡಿಸಿರಿ. ನೀವು ಸಜ್ಜನರು, ಸುಲಭದಲ್ಲಿ ದೊರಕುವ ನಿಷಾ ಸೇವನೆಗೆ ಈಡಾಗುತ್ತೀರಿ. ಆದ್ದರಿಂದ ಈ ಕುಡುಕತನವನ್ನು ಸಂಪೂರ್ಣವಾಗಿ ಹೋಗಲಾಡಿಸಿಕೊಳ್ಳಬೇಕೆಂತ ಒತ್ತಿ ಹೇಳುತ್ತೇನೆ. ಬ್ರಿಟಿಷ್ ಸರಕಾರದ ಅಧಿಕಾರ ಹಬ್ಬಿದ ಬೇರೆ ದ್ವೀಪಾಂತರಗಳನ್ನೂ ನೋಡಿದ್ದೇನೆ. ಜನರ ದೈಹಿಕ ನೈತಿಕ, ಆತ್ಮೀಕ ಶಕ್ತಿ ಮನ್ನು ನಿಷಾ ಸೇವನೆಯಿಂದ ಕೆಡಿಸಿ ತನ್ನ ಅಧಿಕಾರವನ್ನು ಖಾಯಂಗೊಳಿಸುವುದೇ ಬ್ರಿಟಿಷ್ ಜನರ ನೀತಿಯಾಗಿದೆ.

ನೀವು ನನಗೆ ಕೊಟ್ಟ ಗೌರವಕ್ಕೆ ನಿಮ್ಮನ್ನು ವಂದಿಸುತ್ತೇನೆ.

ನೋಟೀಸು.

ಫೆಡರೇಶನ್ ಆಫೀಸು,
ಮಡಿಕೇರಿ, ತಾ. 1—5—'31

ಫೆಡರೇಶನ್ನಿನ ಮ್ಯಾನೇಜಿಂಗ್ ಕಮಿಟಿಯವರ ಒಂದು ಮೀಟಿಂಗು ಈ ಮೇ ತಾರೀಕು 16ನೆ ಶನಿವಾರ ಮಧ್ಯಾಹ್ನ 2 ಘಂಟೆಗೆ ಮಡಿಕೇರಿ ಫೆಡರೇಶನ್ ಆಫೀಸಿನಲ್ಲಿ ನಡೆಯುತ್ತದೆ. ಮೀಟಿಂಗಿನಲ್ಲಿ ಈ ಕೆಳಗಿನ ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನಿಸಲ್ಪಡುತ್ತವೆ.

1. ಲೆಕ್ಕ ಚೆಕ್ಕು ಮಾಡುವುದು.
2. ಎಕ್ಸಿಕ್ಯೂಟಿವ್ ಕಮಿಟಿಯವರ ಚುನಾವಣೆ.
3. ಯೂನಿಯನ್ ಆಫೀಸಿಗೆ ಫೆಡರೇಶನ್ನಿನಿಂದ ಬಾಡಿಗೆ ಕೊಡುವ ವಿಷಯ.
4. ವಾರಾಣಸಿ ಸಂಘದ ಸೆಕ್ರೆಟರಿಗಳ ಕರಬೇಕು ಕಾಳೆ ಇಡುವ ವಿಷಯ.
5. ಕಂದೇಕಿನಲ್ಲಿರುವ ಎರಡು ಸುಪರ್‌ವೈಸರುಗಳಿಗೆ ಸ್ಥಳ ನೇಮಕ ಮಾಡುವ ವಿಷಯ.
6. ಸುಪರ್‌ವೈಜರುಗಳ ಸಂಬಳ ನಿಷ್ಕರ್ಷೆ ಮಾಡುವ ವಿಷಯ.
7. ಸುಪರ್‌ವೈಜರುಗಳ ರಜಾ ವಿಷಯ.
8. ಅಧ್ಯಕ್ಷ ಅನುಮತಿ ಮೇರೆ ಇತರ ವಿಷಯಗಳು.

ಯಂ. ಯಂ. ಬೆಳ್ಯಪ್ಪ,
ಗೌರವ ಕಾರ್ಯದರ್ಶಿ.

ವರ್ತಮಾನ ಸಂಗ್ರಹ.

ಒಳದೇಶ.

ದಕ್ಷಿಣ ಕೊಡಗಿನ ಸುಬೇದಾರರಾಗಿರುವ ಮೆ ಕೆ ಟಿ. ಉತ್ತಪ್ಪನವರಿಗೆ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಅಧಿಕಾರವು ಕೊಡಲಾಗಿದೆ

ಕಳೆದ ಮಾರ್ಚಿ ತಿಂಗಳಲ್ಲಿ ಕೊಡಗು ಪ್ರಾಂತ್ಯದಲ್ಲಿ 277 ಮರಣಗಳೂ, 303 ಜನನಗಳೂ ಉಂಟಾದವೆಂದು ಗಜೆಟಿನಲ್ಲಿ ಪ್ರಕಟವಾಗಿದೆ

ಮೆ. ನಡಿಕೇರಿಯಂಡ ನಂಜಪ್ಪನವರು ರಾಜಿನಾಮೆ ಕೊಟ್ಟದ್ದರಿಂದ ಮೆ ಕೋಟೆರ ತಮ್ಮಯ್ಯನವರು ನಾಪೋಕ್ಲಿನಲ್ಲಿ ಒಬ್ಬ ಬೆಂಚ್ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು

ಈ ತಾ 23ರಲ್ಲಿ ನಡೆಯಲಿಕ್ಕಿರುವ ಮಡಿಕೇರಿ ಮುನ್ಸಿಪಲ್ ಕಮಿಟಿಯ ಖಾಲಿ ಸ್ಥಳದ ಉಪ ಚುನಾವಣೆಗೆ ಮೆ ಯಂ ಯಂ ಸಿದ್ದೀಕ್‌ರವರು ಉಮೇದುವಾರರಾಗಿ ನಿಂತಿರುವರು

ವೀರಾಜಪೇಟೆಯಲ್ಲಿ ಮುನ್ಸೀಫರಾಗಿದ್ದ ಮೆ ಸಿ ಯನ್ ಮುತ್ತಣ್ಣನವರಿಗೆ ಈ ಮೊದಲು ತೆಗೆದುಕೊಂಡಿದ್ದ ರಜೆಯ ಜೊತೆಗೆ ತಾ 25—10—'30ರಿಂದ 13—8—31ರ ವರೆಗೆ ಪುನಹ ರಜೆ ಮಂಜೂರಾಗಿದೆ

ಹಿಂದೂಸ್ಥಾನಿ ಸೇವಾದಳದ ಶ್ರೀ ಅಜ್ಜಿಕುಟ್ಟಿರ ತಮ್ಮಯ್ಯನವರು ಮತ್ತು ಶ್ರೀ ನಡಿಕೇರಿಯಂಡ ಮೇದಯ್ಯನವರು ಸೇವಾದಳದ ಆಫೀಸರ್ ತರಬೇತಿಗಾಗಿ ಕಳೆದ ತಾ 30ರಲ್ಲಿ ಹುಬ್ಬಳ್ಳಿಯಿಂದ ಬೊಂಬಾಯಿಗೆ ಹೋದರೆಂದು ತಿಳಿಯಬರುತ್ತದೆ.

ಲ್ಯಾಂಡ್ ರಿಕಾರ್ಡ್ಸ್ ಮತ್ತು ಎಗ್ರಿಕಲ್ಚರ್ ಡೆಪ್ಯುಟಿ ಡೈರೆಕ್ಟರು ಕೆಲಸಕ್ಕೆ ಮಂಡೇಪಂಡ ಮಂದಣ್ಣನವರೂ, ದಕ್ಷಿಣ ಕೊಡಗು ಸುಬೇದಾರ ಕೆಲಸಕ್ಕೆ ಮೆ ಕೆ ಟಿ ಉತ್ತಪ್ಪನವರು ಆಕ್ಟಿಂಗ್ ಆಗಿ ನೇಮಿಸಲ್ಪಟ್ಟಿದ್ದವರು ಈಗ ಖಾಯಂ ಮಾಡಲ್ಪಟ್ಟಿರುವರು

ಕೊಡಗಿನ [illegible] ಪರ್ಗವಾಗಿ ಹೋದ [illegible] ಜಿ ಡಬ್ಲ್ಯು ಪ್ರೆಸ್ಟನ್ [illegible] ಕೌನ್ಸಿಲು ಮೆಂಬರುತನಕ್ಕೆ ರಾಜಿನಾಮೆ ಕೊಟ್ಟದ್ದರಿಂದ ಹೊಸ ಕಮಿಷನರಾದ ಮೆ ಕೆ [illegible] ಯವರವರು ಕೌನ್ಸಿಲಿನ ಮೆಂಬರಾಗಿಯೂ, ಉಪ ಅಧ್ಯಕ್ಷರಾಗಿಯೂ ನೇಮಿಸಲ್ಪಟ್ಟಿರುವರು

ಮಡಿಕೇರಿ ಮತ್ತು ವೀರಾಜಪೇಟೆಯಲ್ಲಿ ಪ್ಲೇಗಿನಿಂದ ಇಲಿಗಳು ಸಾಯುತ್ತಿರುವುದಲ್ಲದೆ ಹೊಸಬರಿಗೆ ಯಾರಿಗೂ ಅಂಟಿರುವುದಿಲ್ಲವೆಂದೂ, ವೀರಾಜಪೇಟೆಯಲ್ಲಿ ಒಬ್ಬನಿಗೆ ತಗಲಿದ ಇಬ್ಬರಲ್ಲಿ ಒಬ್ಬನು ಮೃತಳಾದಳೆಂದೂ ಒಬ್ಬನಿಗೆ ವಾಸಿಯಾಯಿತೆಂದೂ ತಿಳಿಯ ಬರುತ್ತದೆ.

ಕೊಡಗು ರಿಜಿಸ್ಟ್ರೇಶನ್ ಟೆಸ್ಟ್ ಪರೀಕ್ಷೆಯು ಬರುವ ಆಗೋಸ್ಟು 20ರಲ್ಲಿ ಮಡಿಕೇರಿಯಲ್ಲಿ ನಡೆಯುವುದೆಂದೂ, ಈ ಪರೀಕ್ಷೆಗೆ ಕುಳಿತುಕೊಳ್ಳಲು ಇಚ್ಛಿಸುವವರು ತಮ್ಮ ಅಪ್ಲಿಕೇಶನುಗಳನ್ನು ಜುಲೈ ತಾ 31ರೊಳಗೆ ರಿಜಿಸ್ಟ್ರೇಶನಿನ ಇನ್ಸ್‌ಪೆಕ್ಟರ್ ಜನರಲರವರಿಗೆ ಕಳುಹಿಸತಕ್ಕದ್ದೆಂತಲೂ ಪ್ರಕಟವಾಗಿದೆ

ವಾಂತಿ ಭೇದಿ ರೋಗದಿಂದ ಇಷ್ಟರ ವರೆಗೆ ಪೊನ್ನಂಪೇಟೆಯಲ್ಲಿ 12 ಜನರೂ ಮರನಾಡು [illegible] ಮನೆಯಲ್ಲಿ 3 ಜನರೂ, ಶೆಟ್ಟಿಗೇರಿಯಲ್ಲಿ ಒಬ್ಬನೂ, [illegible]ಯಲ್ಲಿ ಇಬ್ಬರೂ, ಪೊನ್ನಂಪೇಟೆಯಿಂದ ಹೋದ ಒಬ್ಬನು ಕುಟ್ಟದಲ್ಲಿಯೂ ಮೃತರಾದರೆಂದೂ ಪೊನ್ನಂಪೇಟೆಯ ಮನೆಗಳು ಬಹು ಮಟ್ಟಿಗೆ ಖಾಲಿಯಾಗಿವೆಯೆಂದೂ ವರ್ತಮಾನವಿದೆ

ಶ್ರೀಯುತರುಗಳಾದ ಕಲ್ಕತ್ತಾದ ಸೆನ್‌ಗುಪ್ತರವರು ಮತ್ತು ಮದ್ರಾಸಿನ ಟಿ ಪ್ರಕಾಶಂರವರು ಈ ತಾ 5ರಲ್ಲಿ ಮಲಬಾರಿನಿಂದ ಗೋಣಿಕೊಪ್ಪಲಿಗೆ ಬಂದು, ಅಲ್ಲಿ ಜಮೀನ್ದಾರರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಭಾಷಣ ಮಾಡಿ, ರಾತ್ರಿ ಮಡಿಕೇರಿಯಲ್ಲಿ ಉಳಿದು ಮರುದಿನ ಬೆಳಿಗ್ಗೆ ಮಂಗಳೂರಿಗೆ ಹೊರಟು ಹೋದರು

ಶ್ರೀ ಗಣೇಶ ಮೋಟಾರು ಸರ್ವಿಸಿನವರು ಸಾಯಂಕಾಲ 3½ ಗಂಟೆಗೆ ಮಡಿಕೇರಿಯಿಂದ ಹೊರಟು ಸಿದ್ದಾಪುರ, ಅಮ್ಮತ್ತಿ, ವೀರಾಜಪೇಟೆ ಗೋಣಿಕೊಪ್ಪಲು ಮಾರ್ಗವಾಗಿ ಹೋಗಿ ತಿತಿಮತಿಗೆ ಸಾಯಂಕಾಲ 7½ ಗಂಟೆಗೆ ತಲಪುವಂತೆಯೂ, ಬೆಳಿಗ್ಗೆ ಅಲ್ಲಿಂದ 6½ ಗಂಟೆಗೆ ಹೊರಟು ಮೇಲ್ಕಂಡ ಮಾರ್ಗವಾಗಿ ಮಡಿಕೇರಿಗೆ 10½ ಗಂಟೆಗೆ ತಲಪುವಂತೆಯೂ ಬಸ್ಸುಗಳನ್ನು ಈ ತಾ. 7ರಿಂದ ನಡೆಸುತ್ತಿದ್ದಾರೆಂದು ತಿಳಿಯ ಬರುತ್ತದೆ

1927ನೇ ಇಸವಿಯ ಕೊಡಗು ಗ್ರಾಮಪಂಚಾಯಿತಿ ಶಾಸನದ 44ನೇ ಪ್ರಕರಣವನ್ನನುಸರಿಸಿ ಜಾರಿಗೆ ತರಬೇಕೆಂದು ಉದ್ದೇಶಿಸಿರುವ ಮಸೂದಾ ನಿಬಂಧನೆಗಳನ್ನು ಜನರ ತಿಳುವಳಿಕೆಗೋಸ್ಕರ ಗಜೆಟಿನಲ್ಲಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಕಟಿಸಿರುತ್ತಾರೆ ಈ ನಿಬಂಧನೆಗಳನ್ನು ಕುರಿತು ಯಾರಾದರೂ ಆಕ್ಷೇಪಗಳನ್ನೂ, ಅಥವಾ ಸಲಹೆಗಳನ್ನೂ ಜುಲೈ 1ರೊಳಗೆ ಕಳುಹಿಸಬಹುದೆಂತಲೂ, ನಂತರ ಅವುಗಳು ಪರ್ಯಾಲೋಚಿಸಲ್ಪಡುವುವೆಂತಲೂ ಪ್ರಕಟವಾಗಿದೆ.

ಜಮೀನ್ದಾರರ ಸಂಘದ ಕಾನ್‌ಫರೆನ್ಸಿನ ದೆಸೆಯಿಂದಲೂ, ಆಫೀಸು ಸಿಬ್ಬಂದಿಯಲ್ಲಿ ಕೆಲವರ ಗೈರುಹಾಜರಾತಿಯಿಂದಲೂ ಈ ವಾರದ ಪತ್ರಿಕೆಯು 6 ಪುಟಗಳು ಮಾತ್ರ ಉಳ್ಳದ್ದಾಗಿದೆ

ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನ.

ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನವು ಈ ತಾ 5ರಲ್ಲಿ ಗೋಣಿಕೊಪ್ಪಲಲ್ಲಿ ನಡೆಯಿತು. ಬಂಗಾಳದ ಶ್ರೀಯುತ ಸೆನ್‌ಗುಪ್ತರವರು ಈ ಮಹಾ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಈ ಮೊದಲೇ ಒಪ್ಪಿಕೊಂಡಿದ್ದರೂ ಸಹ ತಾ 3ರಲ್ಲಿ ತನ್ನ ಬೇರೆ ತುರ್ತ ಕೆಲಸಗಳ ದೆಸೆಯಿಂದ ಕೊಡಗಿಗೆ ಬರಲಿಕ್ಕಾಗುವುದಿಲ್ಲವೆಂದು ತಂತಿ ವರ್ತಮಾನ ಕಳುಹಿಸಿದ್ದರು ಆದರೆ ಸಂಘದ ಸಕ್ರೆಟರಿಯಾದ ಎ ಪಿ ಬಿದ್ದಪ್ಪನವರು ಮತ್ತು ಮೆ ಗುಂಡುಗುಟ್ಟಿ ಮಂಜುನಾಥಯ್ಯನವರು ಮಲಬಾರು ರಾಜಕೀಯ ಕಾನ್‌ಫರೆನ್ಸು ನಡೆಯುತ್ತಿದ್ದ ಬಡಗರಕ್ಕೆ ತಾ 4ರಲ್ಲಿ ಹೋಗಿ, ಅವರು ಮತ್ತು ಮದರಾಸಿನ ಸ್ವರಾಜ್ಯ ಪತ್ರಿಕೆಯ ಸಂಪಾದಕರಾದ ಶ್ರೀ. ಟಿ ಪ್ರಕಾಶಂರವರೂ ಕೊಡಗಿಗೆ ಬರುವಂತೆ ಒತ್ತಾಯಪಡಿಸಿದರು. ಮರುದಿನ ತಾ 5ರಲ್ಲಿ ಬೆಳಿಗ್ಗೆ ಅಲ್ಲಿಂದ ಮೆ ಮಂಜುನಾಥಯ್ಯನವರ ಮೋಟಾರು ಕಾರಿನಲ್ಲಿ ಹೊರಟು ವೀರಾಜಪೇಟೆಗೆ ಮಧ್ಯಾಹ್ನ ತಲಪಿದರು ದಾರಿಯಲ್ಲಿ ಮಲಬಾರು ಜಿಲ್ಲೆಯ ತಲಚೇರಿ, ಕೂತುಪರಂಬು ಮತ್ತು ಮಟ್ಟನೂರು ಸ್ಥಳಗಳಲ್ಲಿ ಜನರು ಸೇರಿದ್ದು ಅವರಿಗೆ ಸ್ವಾಗತವನ್ನೀಯುರು ವೀರಾಜಪೇಟೆಯ ಬೀದಿಗಳನ್ನು ತೋರಣ, ಬಾವುಟಗಳಿಂದ ಶೃಂಗರಿಸಿದ್ದುದಲ್ಲದೆ ಮಾರ್ಕೆಟಿನ ಬಳಿ ಕಾಯುತ್ತಿದ್ದ ತಂಡಜನರು ಧುರೀಣರಿಗೆ ಹೂವಿನ ಹಾರ ಹಾಕಿ ವಾದ್ಯದೊಡನೆ ಟ್ರಾವಲರ್ಸ್ ಬಂಗ್ಲೆ ವರೆಗೆ ಮೆರವಣಿಗೆಯಲ್ಲಿ ಕರೆತಂದರು ಅಲ್ಲಿ ಅವರು ಸ್ನಾನ ಮಾಡಿ ವಿಶ್ರಾಂತಿ ತೆಗೆದುಕೊಂಡ ಬಳಿಕ ವಿಶೇಷ ಬಂದೋಬಸ್ತು ಇನ್ನೊಂದು ಕಾರು ಬರುವ ವರೆಗೆ ಕಾದಿದ್ದು 1½ ಗಂಟೆಗೆ ಹೊರಟು 2 ಗಂಟೆಗೆ ಗೋಣಿಕೊಪ್ಪಲಿಗೆ ತಲಪಿದರು

3ನೇ ತಾರೀಕಿನಲ್ಲಿ ಬಂದ ಟೆಲಿಗ್ರಾಮಿನಿಂದ ಶ್ರೀ ಸೆನ್‌ಗುಪ್ತರು ಬರುತ್ತಾರೋ ಎಂಬ ಸಂಶಯದಿಂದ ಕಾಯುತ್ತಿದ್ದವರಿಗೆ 4ರಲ್ಲಿ ಶ್ರೀ ಸೆನ್‌ಗುಪ್ತರವರು, ಶ್ರೀ ಟಿ ಪ್ರಕಾಶಂರವರು, ಮತ್ತು ಬೇರೆ 4 ಜನರು ಬರುತ್ತಾರೆಂತ ರಾತ್ರಿ 8 ಗಂಟೆಗೆ ತಂತೀ ವರ್ತಮಾನ ಬಂದದನ್ನು ಕೂಡಲೇ ವೀರಾಜಪೇಟೆಗೂ ಮಡಿಕೇರಿಗೂ ಜನರನ್ನು ಕಳುಹಿಸಿ ತಿಳಿಸಲಾಯಿತು ಇವರು ಗೋಣಿಕೊಪ್ಪಲಿಗೆ ತಲಪುವುದು ಬೆಳಿಗ್ಗೆ 11 ಗಂಟೆಗೆ ಎಂತ ಇದ್ದದರಿಂದ ಜನರೆಲ್ಲರೂ ಸ್ವಯಂ ಸೇವಕರ ಸೇನೆ ಸಮೇತ 10½ ಗಂಟೆಯಿಂದಲೇ ಮುನೀಶ್ವರ ಗುಡಿ ಬಳಿ ಕಾಯುತ್ತಾ ಇದ್ದರು ಆದರೆ ದಾರಿಯಲ್ಲಿ [illegible] ಕೊಂಡದ್ದರಿಂದಲೂ, ಅಲ್ಲಲ್ಲಿ ಸ್ವಾಗತ ಏರ್ಪಾಡುಗಳಿದ್ದದರಿಂದಲೂ ಅಧ್ಯಕ್ಷರು ಗೋಣಿಕೊಪ್ಪಲಿಗೆ ತಲಪಲು ಮಧ್ಯಾಹ್ನ 2 ಗಂಟೆಯಾಯಿತು ಬಹಳ ತಡವಾದರೂ ಕೂಡ ಜನರು ಬೇಸರಿಕೆಯಿಲ್ಲದೆ ಬಿಸಿಲಿನಲ್ಲಿ ಮುಂದಾಳುಗಳ ಆಗಮನವನ್ನೇ ಕುತೂಹಲದಿಂದ ಕಾಯುತ್ತಿದ್ದರು ಕಾಲವನ್ನು ವ್ಯರ್ಥವಾಗಿ ಕಳೆಯುವ ಬದಲು ಸ್ವಯಂ ಸೇವಕರ ಮುಂದಾಳಾದ ಶ್ರೀ. ಮಾತಂಡ ಮಂದಣ್ಣನವರು ಮತ್ತು ಸ್ವಯಂ ಸೇವಕರಾದ ಮೆ ಪಿ. ಮೊಣ್ಣಪ್ಪನವರು ರಾಷ್ಟ್ರೀಯ ಗೀತೆಗಳನ್ನು ಹಾಡಿ ಜನರನ್ನು ಹುರಿದುಂಬಿಸಿದರು. ಅಧ್ಯಕ್ಷರು ತಲಪಿದೊಡನೆ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮೆ ಯಂ ಯಂ. ಚಿಣ್ಣಪ್ಪನವರು ಮುಂದಾಳುಗಳಿಗೆ ಹೂವಿನ ಹಾರಗಳನ್ನು ಹಾಕಿದ ನಂತರ ಸ್ವಯಂ ಸೇವಕರು ಅವರಿಗೆ ಗಾರ್ಡ್ ಆಫ್ ಆನರ್ ಒಪ್ಪಿಸಿ, ವಾದ್ಯದೊಡನೆ ಸತ್ಯಾಗ್ರಹ ಶಿಬಿರಕ್ಕೆ ಮೆರವಣಿಗೆಯಿಂದ ಜಯಘೋಷ ಮಾಡುತ್ತಾ ಕರೆತಂದರು. ಸ್ವಲ್ಪ ಸಮಯ ಅಲ್ಲಿ ವಿಶ್ರಮಿಸಿದ ನಂತರ ಶ್ರೀಯುತ ಸೆನ್‌ಗುಪ್ತರವರು ಅನಾರೋಗ್ಯದ ದೆಸೆಯಿಂದ ಆಹಾರ ತೆಗೆದುಕೊಳ್ಳದೆ ಸಮ್ಮೇಳನದ ಚಪ್ಪರಕ್ಕೆ ತೆರಳಿದರು ಶ್ರೀ ಪ್ರಕಾಶಂ ಮೊದಲಾದವರು ಶಿಬಿರದಲ್ಲಿ ಊಟವನ್ನು ಮುಗಿಸಿಕೊಂಡು ಅರ್ಧ ಗಂಟೆ ವೇಳೆ ಚಪ್ಪರಕ್ಕೆ ದಯಮಾಡಿಸಿದರು ಅಧ್ಯಕ್ಷರು ಸಭಾ ಮಂಟಪಕ್ಕೆ ನುಗ್ಗಿದಾಗ ಸರ್ವರೂ ಎದ್ದು ನಿಂತು ಜಯಘೋಷದಿಂದ ಸ್ವಾಗತವನ್ನಿತ್ತರು.

ಮಂಟಪದ ಸಮೀಪದಲ್ಲೇ ನಟ್ಟಿದ್ದ ಎತ್ತರವಾದ ಧ್ವಜ ಸ್ತಂಭದ ಮೇಲೆ ಅಧ್ಯಕ್ಷರು ರಾಷ್ಟ್ರೀಯ ಬಾವುಟವನ್ನು ಏರಿಸಿದರು ಸ್ವಯಂ ಸೇವಕರು ಸ್ತಂಭದ ಸುತ್ತ ನಿಂತು ರಾಷ್ಟ್ರೀಯ ಗೀತೆಯನ್ನು ಹಾಡಿ ಧ್ವಜಾಭಿವಂದನೆ ಮಾಡಿದರು ನಂತರ ಅಧ್ಯಕ್ಷರು ಸ್ವಯಂ ಸೇವಕರೊಡನೆ ಮಂಟಪಕ್ಕೆ ಬಂದರು ಸಭೆಯು ಪ್ರಾರಂಭವಾಗುವಾಗ್ಯೆ ಶ್ರೀ ಮಾತಂಡ ಮಂದಣ್ಣನವರು 'ವಂದೇ ಮಾತರಂ' ಗೀತೆಯನ್ನು ಹಾಡಿದರು ಎಲ್ಲರೂ ಎದ್ದು ನಿಂತಿದ್ದರು.

ಸಭಾ ಮಂಟಪದಲ್ಲಿ ಸುಮಾರು ಎರಡು ಸಾವಿರ ಜನರು ನೆರೆದಿದ್ದರು ಅವರ ಪೈಕಿ ಮುನ್ನೂರಕ್ಕಿಂತ ಹೆಚ್ಚು ಮಹಿಳೆಯರಾಗಿದ್ದರು ಪೊನ್ನಂಪೇಟೆಯಲ್ಲಿ ವಾಂತಿಭೇದಿಯ ಹಾವಳಿಯಿಂದಲೂ, ವೀರಾಜಪೇಟೆಯಲ್ಲಿ ಪ್ಲೇಗಿನ ಗಲಾಟೆಯಿಂದ ಈ ಸಭೆಗೆ ಜನರು ಸೇರಲು ಬಹಳ ಹಿಂಜರಿದರು ಈ ಗಲಾಟೆಗಳಿಲ್ಲದಿದ್ದರೆ ನಾಲ್ಕೈದು ಸಾವಿರ ಜನರು ಸೇರಬಹುದೆಂಬ ಅಂದಾಜು ಇತ್ತು ನೆರೆದಿದ್ದವರಲ್ಲಿ ಅರ್ಧಕ್ಕಿಂತ ಹೆಚ್ಚು ಜನರೂ, ಸ್ತ್ರೀಯರಲ್ಲಿ ಹೆಚ್ಚು ಕಮ್ಮಿ ಎಲ್ಲರೂ ಖಾದಿ ಉಡುಪನ್ನೇ ಧರಿಸಿದ್ದರು ಬೇರೆ ಕಡೆಗಳಲ್ಲಿ ಮುಂದುವರಿದ ರಾಜಕೀಯ ಸಭೆಗಳಲ್ಲಿ ಪರದೇಶೀ ಬಟ್ಟೆಗಳನ್ನು ಧರಿಸಿದವರು ಕಾಣುವುದೇ ಅಪರೂಪವಾದರೂ, ಈ ಸಭೆಯಲ್ಲಿ ಕುಳಿತವರು ಪರದೇಶೀ ಬಟ್ಟೆಗಳನ್ನು, ಅದರಲ್ಲೂ ಕ

ಲವರು ಹೇಟುಗಳನ್ನೂ ಧರಿಸಿ ಇದ್ದದ್ದು ಅಧ್ಯಕ್ಷರಿಗೂ [illegible]ರಿಂದ ಬಂದ ಬೇರೆ ಮುಂದಾಳುಗಳಿಗೂ ಆಶ್ಚರ್ಯವನ್ನೂ ವ್ಯಸನವನ್ನೂ ಉಂಟು ಮಾಡಿತು

ಸ್ವಾಗತ ಅಧ್ಯಕ್ಷರ ಭಾಷಣವಾದ ನಂತರ ಮೆ ಚಿಣ್ಣಪ್ಪನವರು ಅಧ್ಯಕ್ಷರಾದ ಶ್ರೀ ಸೆನ್‌ಗುಪ್ತರವರ ದೂರದೇಶಕ್ಕೂ ಮತ್ತು ಬಂಗಾಳಕ್ಕೂ ಮಾಡಿದ ಕೆಲಸ ವಿವರಿಸಿ, ಸಭೆಯವರಿಗೆ ಅವರ ಪರಿಚಯವನ್ನು ಮಾಡಿದರು ಅಧ್ಯಕ್ಷರು ಒಂದು ಗಂಟೆ ವರೆಗೆ ಸ್ವಾರಸ್ಯವಾದ [illegible] ಉತ್ಸಾಹ ಪೂರಿತವಾದ ಮತ್ತು ಹುರಿದುಂಬಿಸುವ ಭಾಷಣ ಮಾಡಿದರು ಇವರ ಇಂಗ್ಲೀಷು ಭಾಷಣವನ್ನು ನಂತರ [illegible]ದ ಅಧ್ಯಕ್ಷರಾದ ಶ್ರೀ ಸಿ ಯಂ ವೆಂಕಪ್ಪಯ್ಯನವರು [illegible]ದಲ್ಲಿ ತರ್ಜುಮೆ ಮಾಡಿ ಹೇಳಿದರು ಈ ಭಾಷಣವನ್ನು ಬೇರೊಂದು ಕಡೆ ಪ್ರಕಟವಾಗಿದೆ

ಕೂಡಲೇ ಶ್ರೀ ಪ್ರಕಾಶಂರವರು ಅರ್ಧ ಗಂಟೆ [illegible] ಒಗ್ಗಟ್ಟಿನ ಅವಶ್ಯಕತೆಯನ್ನು ಕುರಿತು ಉತ್ಸಾಹ [illegible]ದ ಭಾಷಣ ಮಾಡಿದರು. ಇವರ ಭಾಷಣವನ್ನು [illegible] ಅಧ್ಯಕ್ಷರು ವಾಕ್ಯ ವಾಕ್ಯವಾಗಿ ಕನ್ನಡದಲ್ಲಿ [illegible] ಮಾಡುತ್ತಾ ಬಂದರು. (ಇದನ್ನು ಬರುವ ವಾರ [illegible]ವಾಗುವುದು) ನಂತರ ಸಭೆಯ ಅಧ್ಯಕ್ಷರು [illegible] ಮರಣಕ್ಕೆ ವ್ಯಸನ ಸೂಚಕದ ಎರಡು ಠರಾವುಗಳನ್ನು [illegible] ಮುಂದಿಟ್ಟು ಎಲ್ಲರೂ ಎದ್ದು ನಿಂತು ಮಂಜೂರು [illegible] ಮೇಲೆ ತನಗೆ ಮುಂದಿನ ಪ್ರಯಾಣ ಬೆಳೆಸಲಿಕ್ಕಾಗಿ [illegible] ಬಿಟ್ಟು ಕೊಡಬೇಕೆಂತಲೂ ಸಂಘದ ಅಧ್ಯಕ್ಷರಾದ ಶ್ರೀ ಕಪ್ಪೆಯ್ಯನವರೇ ಸಭೆಯ ಮುಂದಿನ ಕಾರ್ಯಗಳನ್ನು [illegible] ನಿರ್ವಹಿಸಬೇಕೆಂತಲೂ ತಿಳಿಸಿದರು ಶ್ರೀ ವೆಂಕಪ್ಪಯ್ಯನವರ —ರು ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಲು [illegible] ದೇಹಾರೋಗ್ಯವನ್ನೂ ಸಹ ಲಕ್ಷಿಸದೆ ಬಹಳ ದೂರ ಪ್ರಯಾಣ ಮಾಡಿ ಬಂದು ದೇಶದ ಕಣ್ಣು ತೆರೆಯುವಂಥ ಭಾಷಣ [illegible]ದಕ್ಕೆ ಶ್ರೀ ಸೆನ್‌ಗುಪ್ತರನ್ನು ವಂದಿಸಿ ಕೊಡಗಿನ ಮುಂದಿನ [illegible]ಕೀಯ ಸ್ಥಿತಿಯನ್ನು ನಿರ್ಣಯಿಸುವ ಕಾರ್ಯದಲ್ಲಿ ಸಹಾಯ [illegible] ರಾಗಬೇಕೆಂತ ಕೇಳಿಕೊಂಡರಲ್ಲದೆ ಶ್ರೀ ಪ್ರಕಾಶಂ [illegible] ಇತರ ಅತಿಥಿಗಳನ್ನು ವಂದಿಸಿದರು

ಅನಂತರ ನೆರೆದಿದ್ದ ಸಭಿಕರು ಸಂಘದ ಕಾರ್ಯಕಾರಿ [illegible]ಡಳಿಯವರು 'ಸಬ್‌ಜೆಕ್ಟ್ ಕಮಿಟಿಯವರು' ಹಿಂದಿನ [illegible] ಚರ್ಚಿಸಿ ಇಟ್ಟಿದ್ದ ಠರಾವುಗಳನ್ನು ಪುನಹ ಚರ್ಚಿಸಿ ತೀರ್ಮಾನಿಸಿದರು. ಈ ಠರಾವುಗಳೂ, ಇವುಗಳ ಚರ್ಚೆಯು [illegible] ಬರುವ ವಾರ ಪ್ರಕಟಿಸಲಾಗುವುದು ಮುಂದಿನ 2 ವರ್ಷ[illegible]ಳ ಕಾರ್ಯಕಾರಿ ಮಂಡಳಿಯ ಚುನಾವಣೆಯಾದನಂತರ ರಾತ್ರಿ 8 ಗಂಟೆಗೆ ಸಭೆಯು ಬರಖಾಸ್ತಾಯಿತು

ಸಾಯಂಕಾಲ 5½ ಗಂಟೆಗೆ ಗೋಣಿಕೊಪ್ಪಲಿಂದ ಹೊರಟ ಶ್ರೀ ಸೆನ್‌ಗುಪ್ತ ಮೊದಲಾದವರು ವೀರಾಜಪೇಟೆ ಸಿದ್ದಾಪುರಕ್ಕಾಗಿ ಮಡಿಕೇರಿಗೆ 7½ ಗಂಟೆಗೆ ಬಂದು ತಲಪಿ ಅಲ್ಲಿ ಟ್ರಾವಲರ್ಸ್ ಬಂಗ್ಲೆಯಲ್ಲಿ ಊಟ ಮುಗಿಸಿ, ರಾತ್ರಿ ಶ್ರೀಮತಿ ಸಾಕಮ್ಮನವರ ಬಂಗ್ಲೆಯಲ್ಲಿ ಉಳಕೊಂಡು ಮರುದಿನ ಬೆಳಿಗ್ಗೆ 6 ಗಂಟೆಗೆ ಮೆ ಯಸ್. ಸ[illegible]ಯರ ಕಾರಿನಲ್ಲಿ ಸಂಘದ ಸೆಕ್ರೆಟರಿ ಶ್ರೀ ಪಿ ಬೆಳ್ಯಪ್ಪನವರೊಡನೆ ಮಂಗಳೂರಿಗೆ ಹೊರಟು ಹೋದರು. ದಾರಿಯಲ್ಲಿ ಸುಳ್ಯ, ಪುತ್ತೂರು ಮೊದಲಾದ ಸ್ಥಳಗಳಲ್ಲಿಯೂ ಕಾದಿದ್ದ ಜನರು ಅವರಿಗೆ ಜಯಘೋಷದೊಡನೆ ಸ್ವಾಗತವಿತ್ತರು

"ರೂಪಾಯಿಗಳು 5-8-0 ಮಾ

ನಮ್ಮ ಉಚಿತ ಜೀವವಿಮೆಯು

ಅನೇಕ ಬಡವರನ್ನು ಕಾಪಾಡಿದೆ.

ನೀವೇಕೆ ಹೊಂದಬಾರದು?

ಈಗ ಆಗಲೇ 53,000 ಜನಗಳು ಮೆಂಬರಾಗಿ[illegible]

ಇಂಡಿಯಾ ಸರ್ಕಾರದಲ್ಲಿ ಡಿಪಾಜಿಟ್ ಕಟ್ಟಿ[illegible]

ಹಣ ರೂ 2,00,000.

ಬಡವರಿಗೆ ಭಾಗ್ಯಕಾಲ: ಎಲ್ಲರಿಗೂ ಅನುಕೂ[illegible]

WANTED.

Agents for Coorg on liberal Com-sion on decent pay per month

Apply to—

The Branch Secretary.
The Venus Assurance Co. Ltd
No 2 Krishna Buildings
12-3 Bangalore City

HOUSE FOR RENT.

A nicely located house for rent with few furnitures & good water facilities Dechur, Mercara.

Please apply to—

P M Subbayya,
Rose ven[illegible],
Mer[illegible]

2-2.

ಟಿ. ಕೆ. ನಂಬೀಶನ್‌ರವರ ಅನುಭವ ಸಿದ್ಧೌಷಧಗಳು.

ಆರೋಗ್ಯ ಕಲ್ಪದ್ರುಮ ಲೇಹ್ಯ—ಒಳ್ಳೇ ಜೀರ್ಣಕಾರಿ ... ಅಂಧ, ಹೊಟ್ಟೆ ಕಚ್ಚು, ಮೂಲದ ಪಿಂಡಗಳ ನೋವು, ಕಾಸ, ಸ್ವರಭಂಗ, ನಿಶಕ್ತಿಗಳನ್ನು ಗುಣಪಡಿಸುವುದಲ್ಲದೆ ಸಮ್ಮಂಧವಾದ ರೋಗಗಳನ್ನೂ ಹೋಗಲಾಡಿಸುವು 1 ಪೌಂಡಿಗೆ ರೂ. 2—0—0 ಮಾತ್ರ

ಜ್ವರ ಗೆಂಡೆ ಸಂಹಾರಿ—ಒಳ ಜ್ವರ ಒಕಲಿಸುವಿಕೆ, ಕೈ ನೋಯುವಿಕೆ, ಉಬ್ಬಸ, ಎದೆ ಉರಿ, ತಲೆ ಸುತ್ತುವಿಕೆ, ... ಅಂಧ, ಕಣ್ಣು ಮುಖ ಅರಸಿನ ಬಣ್ಣವೇರುವಿಕೆ, ಅಜೀರ್ಣ, ಹೊಟ್ಟೆ ಶೂಲೆ, ಹೃದಯ ದೌರ್ಬಲ್ಯ, ದಾತು ಹೀನತೆಯು, ಕಲ್ಮಷ ಮೂತ್ರ ಇತ್ಯಾದಿಗಳಿಗೆ ರಾಮಬಾಣದಂತೆ 1 ಕುಪ್ಪಿಗೆ ರೂ 1—8—0 ಮಾತ್ರ

ಗರ್ಭರಕ್ಷಣೆ ಗುಳಿಗೆ—4 ತಿಂಗಳ ಮೊದಲ್ಗೊಂಡು ಗರ್ಭಿಣಿಯರು ಇದನ್ನು ಸೇವಿಸುವುದರಿಂದ ಶಿಶುಗಳು ದೃಢಕಾಯ, ... ಳ್ಳವರಾಗಿ ಜನಿಸಿ, ಬಾಲಗ್ರಹ ಇತ್ಯಾದಿ ರೋಗಗಳು ಬಾರದಾಗುವವು, ಪ್ರಸವವು ಅತಿ ಸುಲಭವಾಗುವುದು. ... ತ್ರೆಗಳ ಸೀಸೆ 1ಕ್ಕೆ 0—8—0 ಮಾತ್ರ.

... ಕಷ್ಟ, ಕಾಮಾಲೆ, ಪಾರ್ಶ್ವವಾಯು, ಪಿತ್ತ ಮುಲೇರಿಯ ... ವ್ಯಾಧಿ, ವಾಂತಿ, ಭೇದಿ, ಹಲ್ಲು ನೋವು ಹುಳುಕು ... ಸಾರಿಡು ಇತ್ಯಾದಿ ರೋಗಗಳಿಗೂ ಪ್ರತ್ಯೇಕ ಔಷಧಿಗಳು ತಯಾರುಂಟು ಒಂದು ಸಲ ಪರೀಕ್ಷಿಸಿ ... ರಿ

ನಂಬೀಶನ್ ಆಯುರ್ವೇದ ವೈದ್ಯ ಶಾಲಾ,

4—1 ಪೊನ್ನಂಪೇಟೆ (ಕೊಡಗು.)

ಸೆಂಟ್ರಲ್ ಬ್ಯಾಂಕಿನ ಮೀಟಿಂಗು.

... ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ತಾ. ... ಲ್ಲಿ ನಡೆಯಿತು 7 ಡೈರೆಕ್ಟರುಗಳು ಹಾಜರಿದ್ದರಲ್ಲದೆ ... ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರೂ ಸಹ ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸು ಓದಿ ಒಪ್ಪಲಾಯಿತು.

2. ಬ್ಯಾಂಕಿನ ಮಾರ್ಚಿ ತಿಂಗಳ ಜಮಾ ಖರ್ಚು ಪಟ್ಟಿ ಸ... ವು ಮಂಜೂರ್ಮಾಡಲಾಯಿತು.

3 ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು.

1. ಮಡಿಕೇರಿ ಟೌನ್ ಸೊಸೈಟಿಗೆ ರೂ. 2000, 2 ಕ... ಕುಟುಂಬದ ಸೊಸೈಟಿಗೆ ರೂ 2000, 3 ನಲ್ವಂಡದ ಸೊಸೈಟಿಗೆ ರೂ 1000, 4 ಪಾಡಿನಾಲ್ಕುನಾಡು ಸೊಸೈಟಿಗೆ ರೂ 2001, 5. ಪಂಚಕಟ್ಟೂರು ಸೊಸೈಟಿಗೆ ರೂ. 2000, 6 ಕ... ಸೊಸೈಟಿಗೆ ರೂ. 1000, 7. ಕುಂದಳ್ಳಿ ಕುಮ್ರಳ್ಳಿ ಸೊಸೈಟಿಗೆ ರೂ. 1320, 8 ನಂದಿಗುಂದ ಸೊಸೈಟಿಗೆ ರೂ ... 9 ಮಡಿಕೇರಿ ಟೌನ್ ಸೊಸೈಟಿಗೆ ರೂ. 2000 10 ಕೋಪಟ್ಟಿ ಸೊಸೈಟಿಗೆ ರೂ 200, 11. ಕಣಿವೆನಲ್ಲೂರು ಸೊಸೈಟಿಗೆ ರೂ 800, 12. ಫ್ರೇಜರ್‌ಪೇಟೆ ಟೌನ್ ಸೊಸೈಟಿಗೆ ರೂ 500, 13 ತಿರಂಗಾಲ ಸೊಸೈಟಿಗೆ ರೂ. 1000, 14. ಗಾಳಿಬೀಡು ಸೊಸೈಟಿಗೆ ರೂ. 500, 15 ಹೆಬ್ಬಾಲೆ ಸೊಸೈಟಿಗೆ ರೂ 1500, 16 ಅರ್ಜಿ ಸೊಸೈಟಿಗೆ ರೂ 1000, 17. ಸಂಪಾಜೆ ಮಲ್ಲೇಶ್ವರ ಸೊಸೈಟಿಗೆ ರೂ 2000, ಮತ್ತು 18 ಕಾಲೂರು ಸೊಸೈಟಿಗೆ ರೂ 200

4 ಕೊಡಗು ವಿದ್ಯಾ ಇಲಾಖೆ ಸೊಸೈಟಿಯವರ ತಾ. 8—4—1931ರ ಪತ್ರ ಓದಲಾಯಿತು.

ಬ್ಯಾಂಕಿನ ಗೌರವ ಸೆಕ್ರೆಟರಿಯವರು ತಾ. 31 3-1931 ರಲ್ಲಿ ಈ ಸೊಸೈಟಿಯ ಪ್ರೆಸಿಡೆಂಟರಿಗೆ ತಪಶೀಲಾಗಿ ಸುಪರ್‌ವಿಜನ್ ಫಂಡು ಹಣ ವಾಪತಿ ಮಾಡುವ ವಿಷಯ ಕಾಗದ ಬರೆದಾಗ್ಯೂ ಕೂಡ ಸೊಸೈಟಿಯವರು ಒಳೆದ ಕಾಗದದ ಬರವಣಿಗೆಗೆ ಬ್ಯಾಂಕು ವಿಷಾದಿಸುತ್ತದೆ.

5. ಬ್ಯಾಂಕಿನ ಆಫೀಸನ್ನು ಮೇ ತಾರೀಕು 1ರಿಂದ ಈಗ ಇರುವ ಸ್ಥಳದಿಂದ ಸರಕಾರಿ ಕಟ್ಟಡಕ್ಕೆ ಆದರೆ ಹಳೆ ತಾಲೋಕು ಆಫೀಸು ಇದ್ದ ಕಟ್ಟಡಕ್ಕೆ ವರ್ಗಾಯಿಸಬೇಕೆಂತ ತೀರ್ಮಾನವಾದದ್ದಲ್ಲದೆ ಸರಕಾರದವರು ಬ್ಯಾಂಕಿನ ಆಫೀಸನ್ನು ಇಡುವುದಕ್ಕೆ ಒಂದು ರೂಮ್ ಕೊಟ್ಟದ್ದಕ್ಕೆ ಬ್ಯಾಂಕು ವಂದಿಸುತ್ತದೆ.

6 ಬ್ಯಾಂಕಿನ ಗುಮಾಸ್ತರಿಗೆ ತಿಂಗಳಿಗೆ 50 ರೂಪಾಯಿಯಿಂದ ವರ್ಷಕ್ಕೆ 2—8—0 ರೂಪಾಯಿ ಬಡ್ತಿ ಸೇರಿ 75 ರೂಪಾಯಿ ವರೆಗೆ ಸಂಬಳ ನಿಗದಿ ಮಾಡಲಾಯಿತು. ಆದರೆ ಈಗಿನ ಗುಮಾಸ್ತರ ಕಳೆದ ಹತ್ತು ವರ್ಷಗಳಿಂದ ಬ್ಯಾಂಕಿನ ಕೆಲಸವನ್ನು ತೃಪ್ತಿಕರವಾಗಿ ಮಾಡುತ್ತಾ ಬಂದದ್ದರಿಂದ ಅವರಿಗೆ ಇದೇ ಮೇ ತಿಂಗಳು 1ರಿಂದ 60 ರೂಪಾಯಿ ಸ್ಟಾರ್ಟಿಂಗ್ ಸಂಬಳ ಕೊಡುವುದೆಂತ ತೀರ್ಮಾನವಾಯಿತು.

7 ಕೊಡಗು ಕಮಿಷನರವರಿಂದ ಟ್ರಸ್ಟ್ ಆಕ್ಟ್ ಬದಲಾವಣೆ ವಿಷಯ ಬಂದ ಕಾಗದ ಓದಲಾಯಿತು.

ಈ ವಿಷಯ ಚೆನ್ನಾಗಿ ಓದಿ ಆಲೋಚನೆ ಮಾಡಿ ಇನ್ನೊಂದು ಮೀಟಿಂಗಿನೊಳಗೆ ಬೋರ್ಡಿಗೆ ರಿಪೋರ್ಟು ಕಳುಹಿಸುವಂತೆ ಈ ಕೆಳಗಿನ ಮಹನೀಯರನ್ನು ಸಬ್ ಕಮಿಟಿ ಮೆಂಬರುಗಳಾಗಿ ಆರಿಸಲಾಯಿತು.

1. ರಾವ್ ಬಹದ್ದೂರ್ ಕೆ ಸುಬ್ಬಯ್ಯನವರು,
2 ಮೆ ಗಳಾದ ಐ. ಸಿ. ಸುಬ್ಬಯ್ಯನವರು ಯಂ. ಎ, ಬಿ. ಎಲ್.
3 ಸಿ. ಎನ್. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್.

ಪಿ. ದೇವಯ್ಯ,
(ಅಧ್ಯಕ್ಷರು)

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,

ಮಂಗಳೂರು, ದ. ಕನ್ನಡ.

ಎಲ್ಲಾ ತರದ ಬಗೆಯ ರಬ್ಬರು ಮೊಹರುಗಳು ಕನ್ನಡಿಯ ಸೈನ್ ಬೋರ್ಡು, ಹಾಫ್ ಟೋನ್ ಬ್ಲಾಕ್ ಇತ್ಯಾದಿ ಕೆಲಸಗಳು ನಮ್ಮಲ್ಲಿ ಸಾಜುಕಾಗಿ ಬಾಳಿಕೆಗೆ ಒದಗುವಂತೆ ತಯಾರು ಕೊಡಲ್ಪಡುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕಾಗಲೀ ಯಾ ನಮ್ಮ ಮಡಿಕೇರಿ ಏಜೆಂಟರು ಮೆ. ಯಸ್. ಯಸ್. ಪೊನ್ನಪ್ಪ ನವರಿಗಾಗಲೀ ಬರೆದುಕೊಳ್ಳುವದು.

12—8

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕವೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೂ ಸರಿಯಾಗಿ ಮುಟ್ಟಾಗದಿರುವಿಕೆ ಮುಟ್ಟಾಗುವ ಸಮಯದಲ್ಲಿ ಕೈಕಾಲು ಸೆಳೆಯುವಿಕೆ, ಮುಷ್ಟ ಬೀಳುವಿಕೆ, ಹೊಟ್ಟೆ ಶೂಲೆ ಬಿಳುಪು—ಕೆಂಪು ಹೋಗಿ ಗರ್ಭ ಪತನವಾಗುವಿಕೆ ವಾಂತಿ, ಸರ್ಪದೋಷ, ಪಿಶಾಚಬಾಧೆಯಿಂದ ನರಳುವಿಕೆ, ದಿನ ತುಂಬುವ ಮೊದಲೇ ಹಡೆಯುವಿಕೆ ಇವೇ ಮೊದಲಾದವುಗಳು ಸಂತಾನ ಭಂಗಕ್ಕೆ ಕಾರಣಗಳು ಚಿಕ್ಕ ಮಕ್ಕಳಿಗೆ ೧೨ ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂಧುರೋಗ, ಮುಟ್ಟುದೋಷ ಕಾಮಾಲೆ ಗ್ರಹಪೀಡೆ, ದೃಷ್ಟಿದೋಷ, ಮುಟಕಿಬ್ಯಾನೆ, ಎಸೀನ ಅಳೋಣ ಹೊಟ್ಟೆಯೊಳಗಿನ ವಿಕಾರ, ಭಯದಿಂದ ಜ್ವರಪೀಡೆ, ಕ್ಷೀಣ ಹೊಂದುವಿಕೆ ಮೊದಲಾದವುಗಳಿಂದ ಸಾಯುತ್ತಿರುವರು. ಗರ್ಭರಕ್ಷಕರ ವಿಧಿಯಲ್ಲಿ ಸೂರ್ಯ ರಕ್ಷಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ, ಹೇಳಿದ ಪ್ರಕಾರ ಶಾಸ್ತ್ರೋಕ್ತವಾಗಿ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧು ಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸುತ್ತದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನ ಭಂಗವೂ ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ದೂರವಾಗಿ ನಿವಾರಣವಾಗುತ್ತದೆ ಹೆಣ್ಣು ಮಕ್ಕಳಿಗೆ ಸಂತಾನ ಬೆಳೆಯಿಂದ ೫ ರೂಪಾಯಿ, ಚಿಕ್ಕಮಕ್ಕಳಿಗೆ ೧ಕ್ಕೆ ೨—೮—೦ ಪೋ. ಖ ಬೇರೆ ಕ್ಷೀರಲ್ ನಾ ಜಾಗ್ರತೆ ಗುಣ ಕೊಡುವ ತಾಯಿತಕ್ಕೆ ಪೋ. ಖ. ಸೇರಿ ೫ ರೂ. ಆಗಕ್ಕ ವ ಕಾರಗಳನ್ನು ಸ್ಪಷ್ಟ ಬರೆಯಿರಿ. ಈ ತಾಯಿತ ಧರಿಸಿದಂದು ಗುಣವಿಲ್ಲದವರಿಗೆ 100 ರೂ ಬಹುಮಾನ ಒಂದು ಸಲ ತರಿಸಿ ಅನುಭವ ತಿಳಿಯಿರಿ

ಸ್ಥಳ ಸಂಕೋಚ ನಿಮಿತ್ತ ಮಾದರಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯ ಪ್ರತ್ಯಕ್ಷವನ್ನು ನಾಮಾಂಕಿತ ವೈದ್ಯ ಡಾಕ್ಟರುಗಳು ತಿಳಿಯಲು ಗುಣಹೊಂದದಿದ್ದು ತಮ್ಮ ಆಶ್ಚರ್ಯಕರವಾದ ತಾಯಿತವನ್ನು ನನ್ನ ಹೆಂಡತಿಯು ಈವಾಗ್ಗೆ ೬ ವಾರಗಳ ವರೆಗೆ ಧರಿಸಿದ ದೆಸೆಯಿಂದ ವ್ಯಾಧಿಗಳಿಂದ ಮುಕ್ತಳಾಗಿ ಕಾಯಿಲೆಯಿಲ್ಲದೆ ಸರಿಯಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುದನ್ನು ತಿಳಿಸಲು ಅತಿ ಸಂತೋಷಪಡುತ್ತೇನೆ ತಮ್ಮ ಸಿ. ಕೆ. ರಾಮಸ್ವಾಮಿ, ಸುಪರ್‌ವೈಸರ್,

ಪ್ರಲ್ಹಾದ ಎಸ್ಟೇಟ್, ಮುಂಬೈ

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

ಮು. ಪೋ. ಅಥಣಿ, ಜಿ॥ ಬೆಳಗಾಂವ.

52—26

ಎಂ. ಎಸ್. ಶಿದ್ಧಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ರಿಟೇಲ್ ಭಂಗಾರದ ನಿಬು ಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟೆನ್‌ಪೆನ್‌ಗಳು.

ವಂಡರ್ ಫೌಂಟೆನ್‌ಪೆನ್ 1ಕ್ಕೆ	ರೂ. 3 0 0
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3 3 0
„ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ,	3 8 0
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟೆನ್‌ಪೆನ್ 1ಕ್ಕೆ	3 14 0
„ ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4 2 0
„ ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರೌನ್ ಕಲರ್ ಫೌಂಟನ್‌ಪೆನ್ 1ಕ್ಕೆ	5 8 0
... ಟ್ ಫೌಂಟನ್‌ಪೆನ್ 1ಕ್ಕೆ	10 8 0
... ಪೆನ್ 1ಕ್ಕೆ	11 6 0, & 20 10 0
... ಫೌಂಟನ್‌ಪೆನ್ 1ಕ್ಕೆ	3 8 0, & 3 12 0
... ಫೌಂಟೆನ್ ಪೆನ್ 1ಕ್ಕೆ	6 4 0, & 6 12 0
... ಮನ್ ಫೌಂಟನ್ ಪೆನ್ 1ಕ್ಕೆ	8 2 0, & 8 10 0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3 6 0
ಜರ್ಮನ್ ಮೇಕ್ ಸಣ್ಣ ಟೈಂಪೀಸ್ 1ಕ್ಕೆ	2 2 0
ಲಿಗಲಿಸ್ ... ಟೈಂಪೀಸ 1ಕ್ಕೆ	6 9 0, & 6 15 0
ಲಿಗಲಿಸ್ ... ಅಲಾರಂ ಟೈಂಪೀಸ್ 1ಕ್ಕೆ	7 2 0
ಲಿಗಲಿಸ್ ಅಲಾರಂ ಸಣ್ಣ ಟೈಂಪೀಸ್ ... ಡೈಲಿನಮ 1ಕ್ಕೆ	8 10 0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9 6 0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13 4 0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್ 1ಕ್ಕೆ	5 10 0
ಇದೇ ನಮೂನೆಯಲ್ಲಿ ಎಬ್ರಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12 4 0
ನಿಕ್ಕಲ್ ಕೇಸ್ ಸಿಲೆಂಡರ್ ಮೂಮೆಂಟ್ ಸಾಧಾರಣ ತರದ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12 8 0



ಇಲ್ಲಿ ನಮೂನೆ ಸಿರುವ ನಮೂನೆ ಅಂದವಾದ ಟೇಬಲ್ ಸ್ಟಾಂಡ್ ... ಸ್ 1ಕ್ಕೆ 3—... ಟೈಂ ಪೀಸ್ ... ಲಾಯಿತು

ಕುಶಿಯಾದರ್ ರವಾನಿಸುವ ವಿಳಾಸ.—ಎಂ. ಎಸ್. ಶಿದ್ಧಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—44

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	23,160
ಜಮೆಬಂದ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟ್,	ಡೈರಕ್ಟರ್
ಚೋಕಂಡ ಅಪ್ಪಯ್ಯನವರು,	ಮನಿಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್	ನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು. ಬಿ. ಎ. ಬಿ. ಎಲ್.

ತಾರೀಖು 1—7—1930

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ
ಓರಿಯಂಟಲ್ ಜೀವವಿಮೆ ಕಂಪೆನಿಯ

ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲೆಲ್ಲಾ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯ ಈಗಿನ ಸ್ಥಿತಿಯಿಂದ ಸಷ್ಟಪಡುತ್ತೆ

ಹೊಸ ಕೆಲಸ.	ಪ್ರೀಮಿಯಂ ವರಮಾನ
೧೯೨೭—೪೭೮ ಲಕ್ಷ ರೂಪಾಯಿಗಳು	೧೯೨೭—೧೩೩ ಲಕ್ಷ ರೂಪಾಯಿಗಳು.
೧೯೨೮—೫೮೫ ಲಕ್ಷ ,,	೧೯೨೮—೧೪೦ ಲಕ್ಷ ,,
೧೯೨೯—೭೫೦ ಲಕ್ಷ ,,	೧೯೨೯—೧೭೧ ಲಕ್ಷ ,,

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು.

ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು

೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳಿಗೆ ೨೨|| ರೂಪಾಯಿಗಳು.

೧೯೨೭ ,, ,, ,, ,, ೨೫ ,,

ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಾಗಿ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದಲ್ಲಿ ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭವುಂಟು

ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

ಓರಿಯಂಟಲ್ ಬಿಲ್ಡಿಂಗ್ಸ್,		ಯಂ. ವಿ. ಮುತ್ತುಕೃಷ್ಣ ನಾಯುಡು,
ಸೌತ್ ಪೆರೇಡ್, ಬೆಂಗಳೂರು.	OR	ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

52—11

ಕೆ. ಪಿ. ಚಿಣ್ಣಪ್ಪ,
ಮಡಿಕೇರಿ. ಏಜೆಂಟ್,

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52—18 ಗಿರಿಗಾಂವ, ಮುಂಬಯಿ.

ಮಲೆಜ್ವರಕ್ಕೆ
ಮಲೇರಿಯಾನ

ಮಲೇರಿಯಾನವು ಮಲೆಜ್ವರ, ಚಳಿಜ್ವರ ಉರಿಜ್ವರ ದಾಪು ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ, ಗೆಡ್ಡೆಯನ್ನೂ ಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ

ಕ್ರಯ ೩ ಟಿನ್ನಿಗೆ 1—8—0, ½ ಡಜನಿಗೆ 8—8—0 1 ಡಜನಿಗೆ 16—8—0 .

ಪಿತ್ತ, ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡಿನ

ಪಿತ್ತಜ್ವರ, ಕೈಕಾಲು ಬಚ್ಚಲು, ರಕ್ತ ಇಲ್ಲದೆ ಬಿಳ್ಳಗೆ ... ಕಹಿ ರುಚಿ ಕೆಟ್ಟಿರುವ ನಾಲಿಗೆ ಅರಸಿನ ಬಣ್ಣ ಕಾಣುವ ಕಣ್ಣು ಗೊಂಬೆ ಮತ್ತು ಶರೀರ ತಲೆಸಿಡಿತ, ತಲೆ ತಿರುಗುವದು, ಅಜೀರ್ಣ ಹೊಟ್ಟೆ ಉರಿ ಎದೆ ಸುಡುವದು ನಾಲಿಗೆ ಒಣಗುವದು, ಮಲಮೂತ್ರಕ್ಕೆ ಭಂಗ ಪಿತ್ತ ಕಾರುವುದು ನಿದ್ರೆ ಇಲ್ಲದೆ ಸಂಕಟವಾಗುವುದು ಇತ್ಯಾದಿ ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3—8—0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ.

... ಶರೀರದಲ್ಲಿ ಬೀಳುವ ಬೊಕ್ಕೆ, ಕುರು, ಖಜ್ಜಿಗಳು, ಬೇಗ ಗುಣವಾಗದ ಘಾಯ ವ್ರಣಗಳು ವಿವಿಧ ಬಗೆಯ ಚರ್ಮ ರೋಗ ... ಅತಿ ಶೀಘ್ರದಲ್ಲಿ ಗುಣಪಟ್ಟು ರಕ್ತ ಸಂಪೂರ್ಣ ಶುಚಿಯಾಗಿ ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ಬಲವುಳ್ಳ ... ಕಂಪೌಂಡು ಸಿರಪ್ ಸರ್ಸಪರಿಲ ಎಂಬುದೇ ಬಾಟ್ಲಿಗೆ ರೂಪಾಯಿ 3—8—0.

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬರ್ನಮ್.

ತಿಂಗಳು ಗಟ್ಟಲೆಯ ಅಕ್ರಮ ಹೊಟ್ಟೆನೋವು ಕೈಕಾಲುಗಳ ಸೆಳತ, ಶರೀರದ ಬಲಹೀನತೆ ವಾಯುವಿನ ಉಪದ್ರ, ರಕ್ತವು ಹೀಗಾದರೂ ಹರಿಯದೆ ನಿಂತು ಬಿಡುವದು ಅಲ್ಲದೆ ಸಮಯಕ್ಕೆ ಸ್ರಾವಿಸುವದು ಬಿಳ್ಳಿ ವಾಸನೆಯಲ್ಲಿ ಕೆಸರು ಇತ್ಯಾದಿ ಗರ್ಭಕೋಶದ ಎಲ್ಲಾ ಅವಸ್ಥೆ ರೋಗಗಳನ್ನು ಕಂಪೌಂಡು ಸಿರಪ್ ವಿಬರ್ನಮ್ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3—8—0.

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣ ತೋರಿ ಸೊಂಟಕ್ಕೆ ಬಲ ಇಲ್ಲದೆ ಇರುವದು ಜೀರ್ಣ ಬಚ್ಚಿ ಮೂತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ, ಬಾಳುವಿಕೆಯನ್ನೂ ಕುಂದಿಸಿಬಿಡುವ ಈ ಅಶಕ್ತಗಳನ್ನು ಬೇಬಿಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1—4—0.

ಶುದ್ಧ ಟಿಕ್ಚರುಮದ್ದುಗಳೂ ಹೋಮ್ಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ ಅವುಗಳ ನಾನಾ ಬಗೆಯ ಸಾಮಾನುಗಳೂ ಬಿಸಲಿಗೆ ಇಡತಕ್ಕ ಒಳ್ಳೇ ತರದ ಕನ್ನಡಕಗಳು ನಮ್ಮಲ್ಲಿ ನ್ಯಾಯವಾದ ಖರೀದಿಗೆ ದೊರಲ್ಪಡುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ.—ಮಲೇರಿಯಾನ ಕಂಪೆನಿ,
52—27 ಹಂಪನಕಟ್ಟೆ, ಇಗರ್ಜಿಬಳಿ, ನಂಬರು 14, ಮಂಗಳೂರು

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
,, ಮೆ. ಚಾರಿಂದ ಮಾದೈಯ್ಯನವರು,
ದಕ್ಷಿಣ ಕೊಡಗಿಗೆ ಮೆ. ಅಪ್ಪಾರಂಡ ಮೇದಪ್ಪನವರು,
,, ಮೆ. ಅಮ್ಮಂಡ ಸುಬ್ಬಯ್ಯನವರು.
ಮರೆನಾಡು—ಮೆ. ಕೇಕಿರ ಅಣ್ಣೈಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೇಸಂಡ ಸೋಮೈಯ್ಯನವರು. (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ. ಪಿ. ಜಿ ಮುದ್ದಯ್ಯನವರು.
,, ಮೆ ಕಣ್ಣುವಂಡ ಬೋಪೈಯ್ಯನವರು
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಪೊಣ್ಣಯ್ಯನವರು

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ವಾರ್ಷಿಕ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಜಾರ್ ಸ್ಟೋರ್ಸ್‌ನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.



12 bore Victor Cartridges Rs. 10/- Per 100

Mahomedally-Noorbhoy,

ARMS & AMMUNITION MART.

321 Abdul Rehman Street.
52—26 BOMBAY 3.

Printed & published by P. I Belliappa at "Kodagu" Press, Merca[illegible] for "Kodagu" Ltd.

If not delivered please return to
"KODAGU" OFFICE MERCARA.

ಕೊಡಗು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦ | ಮಡಿಕೇರಿ, ಸನ್ ೧೯೩೧ನೇ ಇಸವಿ ನವೆಂಬರ್ ತಾರೀಕು ೧೩ ನೇ ಶುಕ್ರವಾರ. | ಸಂಚಿಕೆ ೪೩

Telegrams — "Precious"

V. Subramaniaier Jeweller,

Telephone — 3145

DIAMOND MERCHANT, GOLD & SILVERSMITH.

Deals in all.—
SPORTS CUPS in all prices
MEADALS in up to date patterns
CASKETS in elegant styles

Nos. 2 & 3, Kuppumuthu St
TIRUVATESWARANPET,
Post Box 323, Triplicane P. O.,
MADRAS.

Deals in all
GEM SET JEWELS set with
Diamonds Rubies etc.,
GOLD ARTICLES of all patterns
SILVER WARE in latest style.

52–26



GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India.
210 Abdul Rehman Street BOMBAY

24–7

ಬಾಲಾರ್ಕಮಧು.

ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.

52–18

ಮಲೆ ಜ್ವರಕ್ಕೆ ಕಟು ಕಷಾಯ

ಚಂದನಾಸವ.—

ಸುಕೋಲ್ಲಾಸಿನಿ ತೈಲ:—

ಎಂ. ಸುಕೋಲ್ಲಾಸಿನಿ ಕಂಪೆನಿ,
ಬಿ. ಮಂಗಳೂರು.

ಕೊಡಗು.

ಸಂ ೧೯೩೧ನೇ ಇಸವಿ

ಮೇ. ತಾ. ೧೫ನೇ ಶುಕ್ರವಾರ.

ಒಪ್ಪಂದ ಪರಿಪಾಲನೆ.

ಕಳೆದ ಒಂದು ವರ್ಷದಲ್ಲಿ ಇಡಿ ಹಿಂದೂಸ್ಥಾನವನ್ನು ಎಚ್ಚರಗೊಳಿಸಿ, ಹೆಂಗಸರು, ಮಕ್ಕಳು, ಮುದುಕರೆನ್ನದೆ ಎಲ್ಲರನ್ನೂ ಯುದ್ಧರಂಗಕ್ಕೆ ಇಳಿಯುವಂತೆ ಮಾಡಿ, ಇಡೀ ಪ್ರಪಂಚದ ದೃಷ್ಟಿಯನ್ನೇ ಇಂಡಿಯಾದ ಕಡೆಗೆ ಎಳೆದಂತ ಮಹಾತ್ಮ ಗಾಂಧಿಯವರ ಅಹಿಂಸಾ ತತ್ವದ ಸ್ವಾತಂತ್ರ್ಯ ಸಂಗ್ರಾಮವು ಬ್ರಿಟಿಷ್ ಸರ್ಕಾರವನ್ನು ಎಷ್ಟಂ ಮಟ್ಟಿಗೆ ಒಗ್ಗಿಸಿ, ಹಿಂದೀಯರನ್ನು ಕಾಂಗ್ರೆಸಿನ ಮೂಲಕ ಸಂಸಮಾನರೆಂದು ಒಪ್ಪಿಕೊಳ್ಳುವಂತೆ ಮಾಡಿದ ವಿಷಯವು ಎಲ್ಲರಿಗೂ ತಿಳಿದದ್ದಾಗಿದೆ. ಮಹಾತ್ಮ ಗಾಂಧಿಯವರಿಗೂ, ಆಗ್ಗೆ ವೈಸರಾಯರಾಗಿದ್ದ ಲಾರ್ಡ್ ಇರ್ವಿನ್‌ರವರಿಗೂ ಕಳೆದ ಮಾರ್ಚ್ ತಿಂಗಳಲ್ಲಿ ಆದ ಒಪ್ಪಂದದ ಮೇರೆ ಕಾನೂನು ಭಂಗದ ಚಳವಳವು ನಿಲ್ಲಿಸಲ್ಪಟ್ಟಿದ್ದಾದರೂ ಈ ಒಪ್ಪಂದವು ದೇಶದವರ ಸಮ್ಮತಿಯನ್ನು ಪಡೆದೀತೋ ಎಂಬ ಸಂಶಯವು ಹಲವರಿಗೆ ಇತ್ತು. ಈ ವಿಷಯ ತೀರ್ಮಾನಕ್ಕೋಸ್ಕರವೇ ಕರಾಚಿಯಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ ಮಹಾಸಭೆಯು ಮಾರ್ಚ್ ಆಖೈರಿನಲ್ಲಿ ಸೇರಿದ್ದಾಯಿತು. ಈ ಮಹಾಸಭೆಯು ಸೇರುವ ಸ್ವಲ್ಪ ದಿವಸಗಳ ಮುಂಚೆ ಶ್ರೀಯುತ ಭಗತ್ ಸಿಂಗ್ ಮತ್ತು ಅವರ ಇಬ್ಬರು ಸಹ ಪಾಠಿಗಳನ್ನು ಗಲ್ಲಿಕ್ಕೆ ಏರಿಸಿದ್ದೂ, ಕಾನ್‌ಪುರದಲ್ಲಿ ಹಿಂದೂ ಮುಸಲ್ಮಾನರಿಗೆ ಉಂಟಾದ ಭೀಕರವಾದ ಹೊಡೆದಾಟವೂ ಕರಾಚಿ ಕಾಂಗ್ರೆಸ್ಸಿನ ಜಯಕ್ಕೆ ಅಡ್ಡವಾಗಿ ನಿಂತಿದ್ದವು. ಆದರೆ ಹಿಂದೂದೇಶದ ಸುದೈವದಿಂದ ಅಡಚಣೆಗಳೆಲ್ಲವೂ ಮಹಾತ್ಮ ಗಾಂಧಿಯವರ ಸತ್ಯದ ಮತ್ತು ಸ್ವಚ್ಛ ಮನಸ್ಸಿನ ಪ್ರಯತ್ನಗಳ ಮುಂದೆ ಮಾಯವಾಗಿ ಹೋದವು. ಗಾಂಧಿ—ಇರ್ವಿನ್ನರ ಒಪ್ಪಂದವು ಅಲ್ಲಿ ಮಂಜೂರಾತಿ ಪಡೆದದಲ್ಲದೆ ಮಹಾತ್ಮರು ಒಬ್ಬರನ್ನೇ ಕಾಂಗ್ರೆಸಿನ ಪರವಾಗಿ ಮುಂದೆ ನಡೆಯಲಿಕ್ಕಿರುವ ಎರಡನೇ ದುಂಡು ಮೇಜು ಪರಿಷತ್ತಿಗೆ ಪ್ರತಿನಿಧಿಯಾಗಿ ಚುನಾಯಿಸಲಾಯಿತು. ಹೀಗೆ ಇಡೀ ಹಿಂದೂಸ್ಥಾನದ ಪರವಾಗಿ ಒಬ್ಬರೇ ಪ್ರತಿನಿಧಿ ಹೋಗುವುದು ಈಗಾಗಲೇ ಬ್ರಿಟಿಷ್ ಸರ್ಕಾರದ ಮನಸ್ಸಿನಲ್ಲಿ ಗಲಿಬಿಲಿಯನ್ನು ಹುಟ್ಟಿಸಿರುವಂತೆ ಕಾಣುತ್ತದೆ. ಆದರೆ ಹಿಂದೂ ದೇಶದ ಭಾಗಕ್ಕೆ ಇದು ಬಹು ವಿಶೇಷವಾದ ವಿಷಯವಾಗಿದೆ.

ಗಾಂಧಿ—ಇರ್ವಿನ್ನರ ಒಪ್ಪಂದವು ಮೇಲೆ ಹೇಳಿದಂತೆ ಹಲವರಿಗೆ ಮುಖ್ಯವಾಗಿ ಯುವಕರಿಗೆ ಸಮ್ಮತವಾಗದೆ ಹೋದರೂ ಕೂಡ ಅವರು ಮಹಾತ್ಮರ ಮಾತನ್ನು ಮೀರದೆ ಸದರಿ ಒಪ್ಪಂದದ ಶರತುಗಳನ್ನು ಪರಿಪಾಲಿಸಲು ಸಹಾಯಕರಾದರು. ಆದರೆ ವೈಸರಾಯರ ಕೈಕೆಳಗಿನ ಉದ್ಯೋಗಸ್ಥರು ಈ ಒಪ್ಪಂದದಂತೆ ವರ್ತಿಸದೆ ಅದಕ್ಕೆ ವಿರೋಧವಾಗಿ ನಡೆದಂತ ಸಂದರ್ಭಗಳು ಹಲವು ಇವೆ. ಇಂಥಾ ಸಂದರ್ಭಗಳನ್ನು ಕಾಂಗ್ರೆಸು ಮುಖಂಡರು ಆಯಾಯ ಪ್ರಾಂತ್ಯದ ಗವರ್ನರುಗಳಿಗೆ ತಿಳಿಸಿರುವುದಲ್ಲದೆ ಮಹಾತ್ಮ ಗಾಂಧಿಯವರೇ ವೈಸರಾಯರ ಅವಗಾಹನೆಗೂ ತಂದಿರುವರು. ಆದರೂ ಕೂಡ ಎಲ್ಲವೂ ಸರಿಯಾಗಿ ಸಾಗುತ್ತಿದೆಯೆಂದು ಹೇಳಲಾಗುವುದಿಲ್ಲ. ಬೇರೆಯವರ ವಿಷಯ ಇರಲಿ ಮಹಾತ್ಮರ 'ಯಂಗ್ ಇಂಡಿಯಾ' ಪತ್ರಿಕೆಯು ಪ್ರಿಂಟಾಗುತ್ತಿದ್ದ ಅಚ್ಚಿನ ಯಂತ್ರಗಳನ್ನು ಒಪ್ಪಂದದ ಶರತ್ತಿನ ಮೇರೆ ವಾಪಸು ಕೊಡುವುದರಲ್ಲಿಯೇ ಸರ್ಕಾರಿ ಅಧಿಕಾರಿಗಳು ನೆಟ್ಟಗೆ ವರ್ತಿಸದೆ, ಆ ಸಂಬಂಧ ಪತ್ರ ವ್ಯವಹಾರವು ನಡೆಯುತ್ತಿದೆಯೆಂದು ಪ್ರಕಟವಾಗಿತ್ತು. ಇತ್ತಲಾಗಿ ಏನಾಯಿತೋ ತಿಳಿಯದು. ಸರ್ಕಾರಿ ನೌಕರರ ವರ್ತನೆಯು ಹೀಗಾಗುತ್ತಾ ಬಂದ ಕಾರಣ ಕಾನೂನು ಭಂಗ ಚಳವಳವನ್ನು ಪುನಹ ಕೈಕೊಳ್ಳುವಷ್ಟರ ಮಟ್ಟಿಗೆ ಸರ್ಕಾರದವರು ಒಪ್ಪಂದದ ಶರತುಗಳನ್ನು ಉಲ್ಲಂಘನೆ ಮಾಡಿರುವರೋ ಎಂದು ಮಹಾತ್ಮರು ಕಾಂಗ್ರೆಸಿನ ಅಧ್ಯಕ್ಷರೊಡನೆ ಆಲೋಚನೆ ಮಾಡುತ್ತಿದ್ದಾರೆಂಬ ವರ್ತಮಾನವೂ ಇತ್ತು.

ಹಿಂದೂದೇಶಕ್ಕೆ ಸ್ವಾತಂತ್ರ್ಯವು ದೊರೆತು ಪ್ರಜಾಜವಾಬ್ದಾರಿ ಸರ್ಕಾರವು ಸ್ಥಾಪಿತವಾದರೆ ತಮ್ಮ ದಬ್ಬಾಳಿಕೆಯು ಅಂತ್ಯವಾಗಿ ಬಿಡುವದೆಂಬ ಹೆದರಿಕೆಯಿಂದಲೋ ಏನೋ ಕೆಲವು ಅಧಿಕಾರಿಗಳು ವೈಸರಾಯರ ವಾಕ್ಯ ಪರಿಪಾಲನೆಯನ್ನು ಮಾಡದೆ ಕಾಂಗ್ರೆಸಿನವರ ಮೇಲೆ ದೂರನ್ನು ಹೊರಿಸುತ್ತಿರುವರು. ಮಹಾತ್ಮರ ಅನುಯಾಯಿಗಳಾದ ಕಾಂಗ್ರೆಸಿನವರ್‍ಯಾರೂ ಗಾಂಧಿ—ಇರ್ವಿನ್ನರ ಒಪ್ಪಂದಕ್ಕೆ ವಿರೋಧವಾಗಿ ವರ್ತಿಸಲಿಲ್ಲವೆಂದು ಹೇಳಲು ಸಂದೇಹವಿಲ್ಲ. ಇಂಡಿಯಾ ಸ್ಟೇಟ್ ಸೆಕ್ರಟರಿಯಾದ ಮಿ. ಬೆನ್ನ್‌ರವರೇ ಇಂಡಿಯಾದಲ್ಲಿ ಈಗ ನಡೆಯುವ ಪಿಕೆಟಿಂಗ್ ಕೆಲಸವು ಶಾಂತಿಮಯವಾದದ್ದೆಂದು ಪಾರ್ಲಿಮೆಂಟಿನಲ್ಲಿ ಹೇಳಿರುವರು. ಮಹಾತ್ಮರ ಕಡೆಯವರು ಒಪ್ಪಂದದ ಶರತುಗಳನ್ನು ಅನುಸರಿಸಿ ನಡೆಯುವಂತೆಯೇ ಸರ್ಕಾರಿ ಉದ್ಯೋಗಸ್ಥರೂ ತುಂಬಾ ಮೇಹನತ್ತಿನಿಂದ ರಾಜಿ ಶರತು ಪರಿಪಾಲನೆಗೆ ಪ್ರಯತ್ನಿಸಬೇಕು.

ಮುಸಲ್ಮಾನರೊಳಗೆ ರಾಜಕೀಯ ಸಂಬಂಧ ಇರುವ ಭಿನ್ನ ಭೇದಗಳನ್ನು ಚರ್ಚಿಸಿ ಒಗ್ಗಟ್ಟನ್ನು ಸಾಧಿಸಲು ಭೋಪಾಲದ ನವಾಬರವರ ಅರಮನೆಯಲ್ಲಿ ತಾ 10 ಮತ್ತು 11ರಲ್ಲಿ ಅಲ್ಲಿಯ ನವಾಬರು, ಡಾ. ಅನ್ಸಾರಿಯವರು, ಸರ್ ಮಹಮ್ಮದ್ ಶಾಫಿಯವರು, ಡಾ. ಇಕ್ಬಾಲರವರು, ಮೌಲಾನ ಶೌಕತ್ ಆಲಿಯವರು ಮತ್ತು ಟಿ. ಕೆ. ಶೆರ್ವಾನಿಯವರು ಸೇರಿದ್ದರು. ಅಲ್ಲಿ ಹಲವು ಸೂಚನೆಗಳು ಚರ್ಚಿಸಲ್ಪಟ್ಟವು. ಅವುಗಳಲ್ಲಿ ಕೆಲವನ್ನು ರಾಷ್ಟ್ರೀಯ ಪಂಗಡದವರಲ್ಲಿಯೂ ಶೌಕತ್ ಆಲಿಯವರ ಪಾರ್ಟಿಯವರಲ್ಲಿಯೂ ಚರ್ಚಿಸಿ ಅಭಿಪ್ರಾಯ ತೆಗೆದುಕೊಂಡು ಪುನಹ ಭೋಪಾಲದಲ್ಲಿ ಜೂನ್ ಒಂದನೇ ವಾರದಲ್ಲಿ ಸೇರುವರಂತೆ. ಒಗ್ಗಟ್ಟಿಗೆ ಎಲ್ಲರೂ ಕುತೂಹಲರಾಗಿರುವುದರಿಂದ ಅದು ಬೇಗನೆ ಸಾಧ್ಯವಾಗಬಹುದೆಂದು ಮಿ. ಶೆರ್ವಾನಿಯವರ ಅಭಿಪ್ರಾಯ.

ವಿದೇಶ.

ಕಟಿಂನಾನಹುಮರ ಎಂಬಾಕೆಯು 72 ಘಂಟೆ 21 ನಿಮಿಷಗಳ ಕಾಲದ ವರೆಗೆ ನೀರಿನಲ್ಲಿ ಈಜಿದಳು. ಇಷ್ಟು ದೀರ್ಘ ಕಾಲ ಈ ವರೆಗೆ ಮತ್ಯಾರೂ ಈಜಿರಲಿಲ್ಲ. ಮಾರ್ಚಿ ತಾ 22ರಲ್ಲಿ ಈಕೆ 72 ಘಂಟೆ 10 ನಿಮಿಷಗಳ ವರೆಗೆ ಈಜಿದ್ದಳು. ಈ ನೃತ್ಯಿಯಿಂದಲೇ ಈಕೆಯು ತನ್ನ ಸಂಸಾರವನ್ನು ನಿರ್ವಹಿಸುತ್ತಿದ್ದಾಳೆ.

ಸ್ಪೈನ್ ದೇಶದಲ್ಲಿ ರಾಜರನ್ನು ಓಡಿಸಿ ರಿಪಬ್ಲಿಕ್ ಸರಕಾರವು ಸ್ಥಾಪಿತವಾದಂದಿನಿಂದ ಅಲ್ಲಲ್ಲಿ ಜನರು ದಂಗೆ ಏಳುತ್ತಲೂ, ಲೂಟಿ ಮಾಡುತ್ತಲೂ, ಚರ್ಚ್ ಮಠ, ಕೆಥೋಲಿಕ್ ಪಾದ್ರಿ ಸಂಸ್ಥೆಗಳನ್ನು ಕೆಡಿಸುತ್ತಲೂ ತುಂಬಾ ಕಾಟ ನಡೆಯುತ್ತಿದೆ. ಆದಕಾರಣ ಕೆಲವು ಕಡೆಗಳಲ್ಲಿ (ಮಾರ್ಷಲ್ ಲಾ) ದಂಡಿನ ಕಾನೂನು ಜಾರಿಗೆ ತರಲ್ಪಟ್ಟಿದೆ.

ಜಪಾನ್ ದೇಶವು ಬಹು ಕಡಿಮೆ ದರದಲ್ಲಿ ವಸ್ತ್ರವನ್ನು ಹಿಂದೂದೇಶಕ್ಕೆ ಕಳುಹಿಸುತ್ತಿದೆ. ತಾವು ಇದಕ್ಕಿಂತಲೂ ಕಡಿಮೆ ದರದಲ್ಲಿ ವಸ್ತ್ರವನ್ನೊದಗಿಸಿ, ಹಿಂದೂದೇಶದಲ್ಲಿನ ವ್ಯಾಪಾರವನ್ನು ಪುನರ್ಘಟಿಸಬೇಕೆಂದು ಲಂಕಾಶಯರಿನವರೂ ನಿಶ್ಚಯಿಸಿರುವರು. ಆದರೆ, ರಷ್ಯವು ಇಂಗ್ಲೆಂಡಿನಷ್ಟಲ್ಲ ತನ್ನ ಅತೀ ಅಗ್ಗ ಬಟ್ಟೆಗಳಿಂದ ತುಂಬಿ, ಇಂಗ್ಲೆಂಡಿನ ವ್ಯಾಪಾರಗಳ ಹೊಟ್ಟೆ ಮತ್ತೂ ಹಿಸುಕುತ್ತಿದೆ.

ಚೈನಾದ ಮುಖ್ಯ ಪಟ್ಟಣವಾದ ನಾಂಕಿಂಗ್ ಎಂಬಲ್ಲಿ ಜನರ ಪ್ರತಿನಿಧಿಗಳ ಮಹಾಸಭೆ ನಡೆದು ಇನ್ನು ಮುಂದೆ ಚೈನಾದಲ್ಲಿ ಖಾಯಂ ಆಗಿ ರಿಪಬ್ಲಿಕ್ ಸರಕಾರ ಇರಬೇಕೆಂತಲೂ, ನಾಂಕಿಂಗ್ ಮುಖ್ಯ ಪಟ್ಟಣವಾಗಿರಬೇಕೆಂತಲೂ, ಈಗ ಚಾಂಗ್ ಕೈಶೆಕ್‌ರವರು ಸರ್ಕಾರದ ಅಧ್ಯಕ್ಷರಾಗಿರಬೇಕೆಂತಲೂ, ಇವರಿಗೆ ಸರ್ಕಾರದ ಎಲ್ಲಾ ಇಲಾಖೆಗಳ ಮೇಲಾಧಿಕಾರಿಗಳನ್ನೂ, ಮಂತ್ರಿಗಳನ್ನೂ ನೇಮಿಸುವ ಅಧಿಕಾರವಿರಬೇಕೆಂತಲೂ ತೀರ್ಮಾನಿಸಿದರು.

ಭಾರತ ವಿದ್ಯಾಭಿವೃದ್ಧಿಯನ್ನು ಕುರಿತು ಆಲೋಚಿಸಲು ಜಿನೀವಾದಲ್ಲಿ ಬರುವ ತಿಂಗಳಲ್ಲಿ ನಡೆಯಲಿಕ್ಕಿರುವ ವಿದ್ಯಾಭ್ಯಾಸದ ಪಂಡಿತರ ಕಾನ್ಫರೆನ್ಸಿಗೆ ಇಂಡಿಯಾದ ಯುನಿವರ್ಸಿಟಿಗಳ ಪರವಾಗಿ ಅಧ್ಯಕ್ಷರಾದ ಪ್ರಿನ್ಸಿಪಾಲ್ ಪಿ. ಸೇಶಾದ್ರಿಯವರು ಇಂಡಿಯಾದ ಪ್ರತಿನಿಧಿಯಾಗಿ ಆರಿಸಲ್ಪಟ್ಟಿರುವರು. ಇವರು ಇಂಡಿಯಾದ ಇಂಟರ ಯುನಿವರ್ಸಿಟಿ ಬೋರ್ಡಿನ ಸೆಕ್ರೆಟರಿಯಾಗಿರುವುದರಿಂದ ಲಂಡನಿನಲ್ಲಿ ನಡೆಯಲಿಕ್ಕಿರುವ ಬ್ರಿಟಿಷ್ ಯುನಿವರ್ಸಿಟಿಗಳ ಕಾಂಗ್ರೆಸಿಗೂ ಹೋಗುವರು.

ಹಿಂದುಸ್ಥಾನದ ಗ್ರಾಮಸ್ಥರಿಗೆ ಸರ್ಕಾರದ ಅಭಿಪ್ರಾಯವನ್ನು ತಿಳಿಸಲು ಆಯಾ ಸ್ಥಳೀಯ ಭಾಷೆಗಳಲ್ಲಿ ಪ್ರಿಂಟು ಮಾಡಿದ ಹೊಸ ಪತ್ರಿಕೆಗಳನ್ನು ವಿಮಾನದಿಂದ ಗ್ರಾಮಗಳಲ್ಲಿ ಹಾಕಬೇಕೆಂದು ಪಾರ್ಲಿಮೆಂಟಿನ ಮೆಂಬರೊಬ್ಬರು ಸೂಚಿಸಿದಕ್ಕೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು—ಸರಕಾರಿ ಉದ್ಯೋಗಸ್ಥರು ಈ ಕೆಲಸವನ್ನು ಮಾಡುತ್ತಿರುವರು, ವಿಮಾನದಿಂದ ಹೊಸ ಪತ್ರಿಕೆಗಳನ್ನು ಹಂಚುವುದರ ಬದಲು ಪಿಂಟೀಯವರಿಗೆ ಬ್ರಿಟಿಷರು ಕೊಟ್ಟಿರುವ ಭಾಷೆಗಳನ್ನು ನಡೆಸಿಕೊಡುವುದೇ ಉತ್ತಮವಾದದ್ದು ಎಂದು ಉತ್ತರವಿತ್ತರು.

ನೋಟೀಸು.

ಇನ್ನು ಮುಂದೆ ಸೆಂಟ್ರಲ್ ಬ್ಯಾಂಕಿಗೆ ಸಾಲಕ್ಕೆ ಅರ್ಜಿ ಬರೆದುಕೊಳ್ಳುವ ಎಲ್ಲಾ ಸೊಸೈಟಿಗಳು ತಮ್ಮ ಸಾಲದ ಅರ್ಜಿಗಳನ್ನು ಒಪ್ಪಾಯಿಸಿದನಂತರ ಆಯಾ ಸರ್ಕಲಿನ ಸುಪರ್‌ವೈಸರುಗಳಿಂದ ಸದರಿ ಅರ್ಜಿಯಲ್ಲಿ ಬರೆದಿರುವ ಬಾಬತ್ತುಗಳೆಲ್ಲ ಸರಿಯಾಗಿದೆಯೋ ಎಂತ ಸರ್ಟಿಫೈ ಮಾಡಿ ಯೂನಿಯನ್ ಮೂಲಕ ಕಳುಹಿಸಬೇಕೆಂತ ಈ ಮೂಲಕ ತಿಳಿಸಲಾಗಿದೆ.

ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್ } ಸಿ. ಯಮ್. ವೆಂಕಪ್ಪಯ್ಯ
ಮಡಿಕೇರಿ ತಾ 14—5—31 } (ಗೌರವ ಕಾರ್ಯದರ್ಶಿ)

ನೋಟೀಸು.

ಮಡಿಕೇರಿ ತಾ. 6—5—1931

ಕೊಡಗಿನ ರಿಸರ್ವ್ ಫಾರೆಸ್ಟುಗಳಲ್ಲಿಯೂ, ಪೈಸಾರಿಗಳಲ್ಲಿಯೂ, ದೇವರ ಕಾಡುಗಳಲ್ಲಿಯೂ ಮತ್ತು ಉಂಬಳಿಗಳಲ್ಲಿಯೂ 1931ನೇ ಇಸವಿ ಜುಲಾಯಿ ತಾರೀಖು 1ರಿಂದ 1932ನೇ ಇಸವಿ ಜೂನ ತಾರೀಖು 30ರ ವರೆಗೆ ಮೈನರ್ ಫಾರೆಸ್ಟ್ ಉತ್ಪತ್ತಿ ಯನ್ನು ಜಮಾಯಿಸುವ ಹಕ್ಕು ಸೋಮವಾರಪೇಟೆಯಲ್ಲಿ ಮೇ ತಾರೀಕು 25ರಲ್ಲಿಯೂ, ವೀರರಾಜಪೇಟೆಯಲ್ಲಿ 27ರಲ್ಲಿಯೂ, ಮಡಿಕೇರಿಯಲ್ಲಿ ಜೂನ್ ತಾರೀಕು 5ರಲ್ಲಿಯೂ, ಸೋಮವಾರಪೇಟೆಯಲ್ಲಿ 8ರಲ್ಲಿಯೂ ಮತ್ತು ಫ್ರೇಜರ್‌ಪೇಟೆಯಲ್ಲಿ 9ರಲ್ಲಿಯೂ ಹರಾಜು ಮಾಡಲ್ಪಡುವುದು.

ಹೆಚ್ಚಿನ ವಿವರಕ್ಕೆ ಚೀಫ್ ಫಾರೆಸ್ಟ್ ಆಫೀಸರು, ಮಡಿಕೇರಿ ಇವರಿಗೆ ಬರೆದು ತಿಳಿಯತಕ್ಕದ್ದು.

2—1

ರಬ್ಬರ್ ಮೊಹರುಗಳು.

ನೀವು ಅಪೇಕ್ಷಿಸುವ ಯಾವತರಹ ಮಾದರಿಯಲ್ಲಿ ತಯಾರಿಸಿ ಕೊಡಲಾಗುವವು.

ಮೊಹರುಗಳು ಸಹಿಗಳು, ಕನ್ನಡ ಇಂಗ್ಲಿಷ್ ಅಕ್ಷರಗಳು ಮೊನೋಗ್ರಾಮ್, ಬಾಗಿಲ ಮೇಲಿನ ನಾಮಫಲಕಗಳು, ಉಂಗುರಗಳಿಗೆ ಬೇಕಾದ ಹರಳುಗಳು ಇತ್ಯಾದಿ.

ದಿ ಕಾನ್ಸಿನ್ ರಬ್ಬರ್ ಸ್ಟಾಂಪ್ ಕಂಪೆನಿ,
12—8 ಮಂಗಳೂರು, ದ. ಕನ್ನಡ.
ಯಾ
ಏಜಂಟ್ ಯಮ್. ಯನ್. ಪೊನ್ನಪ್ಪ,
ಮಡಿಕೇರಿ.

Rubber Stamps of every design
and
Glass sign boards, Half tone Blocks,
Monogram seals, Marble slabs, ring stones etc etc., to suit every pocket and taste. For further particulars please apply to:--

The Crown Rubber Stamp Co.,
Mangalore, S. K.
Or
Mr. N. N. Ponnappa,
Agent,
12—7 **Mercara.**

ಕೊಡಗು ಜಮೀನ್‌ದಾರರ ಸಂಘದ 1930-31ನೇ ವರ್ಷದ ವರದಿ.

ಮೆಂಬರುಗಳು.

ಈಗ ಕೆಲವು ವರ್ಷಗಳಿಂದ ಸಂಘದ ಮೆಂಬರುಗಳ ಸಂಖ್ಯೆಯು ಇಳಿಯುತ್ತಾ ಬರುತ್ತಿದೆ. ಇದಕ್ಕೆ ವಸೂಲಾತಿಯು ಸರಿಯಾಗಿ ನಡೆಯದೆ ಇರುವುದೇ ಕಾರಣ. ಕಳೆದ ವರ್ಷ 1398 ಮೆಂಬರುಗಳಿದ್ದದ್ದು ಈ ವರ್ಷ 1010ಕ್ಕೆ ಇಳಿದು ಹೋಗಿದೆ. ಈ ವರ್ಷ ದೇಶದ ಎಲ್ಲಾ ಮೂಲೆಗಳಿಗೂ ಹಬ್ಬಿದ್ದ ಸ್ವಾತಂತ್ರ್ಯ ಹೋರಾಟದ ಸತ್ಯಾಗ್ರಹ ಚಳವಳದಲ್ಲಿಯೇ ಎಲ್ಲರ ಮನಸು ಮಗ್ನವಾಗಿ ಹೋಗಿದ್ದದರಿಂದ ಸಂಘದ ಕೆಲಸವು ಬಿರುಸಾಗಿ ನಡೆಯದೆ ಇದ್ದದ್ದಾಗಿದೆ. ಅತಿ ಬಡವರಿಗೂ ಕೂಡ ಮೆಂಬರರಾಗಿ ಸೇರಲು ಅನುಕೂಲವಾಗುವಂತೆ ಕಳೆದ ವರ್ಷದ ಮಹಾ ಸಭೆಯಲ್ಲಿ ವಾರ್ಷಿಕ ಚಂದವನ್ನು ಒಂದು ರೂಪಾಯಿಯಿಂದ ನಾಲ್ಕಾಣೆಗೆ ಇಳಿಸಿರುವುದರಿಂದ ಮೆಂಬರುಗಳ ಸಂಖ್ಯೆಯು ಬೇಗನೆ ಹೆಚ್ಚುವದೆಂದು ಭಾವಿಸಬಹುದು. ವಾಡಿಕೆಯಾಗಿ ವಾರ್ಷಿಕ ಮೀಟಿಂಗಿಗೆ ಸ್ವಲ್ಪ ಮುಂಚಿತವಾಗಿ ಮಾತ್ರ ಮೆಂಬರರು ಚಂದಾ ಪಾವತಿ ಮಾಡುವುದರಿಂದ ಚಂದಾ ಮೊಬಲಗು ಕಡಿಮೆ ಮಾಡಿದರ ಅನುಕೂಲವನ್ನು ಎಷ್ಟರ ಮಟ್ಟಿಗೆ ಜನರು ಉಪಯೋಗಿಸಿಕೊಂಡರೆಂಬುದು ಬರುವ ವರ್ಷದ ವರದಿಯಲ್ಲಿ ಗೊತ್ತಾಗುವುದು.

ಉದ್ಯೋಗಸ್ಥರು.

ತಾಲೋಕು ಜಾಯಿಂಟ್ ಸೆಕ್ರೆಟರಿಗಳ ಪೈಕಿ ಒಬ್ಬರಾಗಿಯೂ, ಸಂಘದ ಪರವಾಗಿ ಬಹು ಮುತುವರ್ಜಿಯಿಂದ ಕೆಲಸ ಮಾಡುತ್ತಲೂ ಇದ್ದ ಶ್ರೀಯುತ ಚಂಗಂಡ ಕುಟ್ಟಪ್ಪನವರು ಶಿವಾಧೀನರಾದದ್ದು ದುಃಖಕರವಾದ ವಿಷಯವಾಗಿದೆ. ಸಂಘದ ಪ್ರಚಾರ ಕೆಲಸವು ಚೆನ್ನಾಗಿ ನಡೆಯಬೇಕಾದಂಥ ಸಮಯದಲ್ಲಿ ಬಹು ಸ್ವಲ್ಪ ಮಂದಿ ಕೆಲಸಗಾರರ ಪೈಕಿ ಇವರೊಬ್ಬರನ್ನು ಕಳಕೊಂಡದ್ದು ಸಂಘಕ್ಕೆ ದೊಡ್ಡ ನಷ್ಟವಾಗಿದೆ. ತಾ. 7—9—'30ರಲ್ಲಿ ನಡೆದ ಕಮಿಟಿ ಮೀಟಿಂಗಿನಲ್ಲಿ ಇವರ ಮರಣಕ್ಕೆ ಸಂತಾಪವು ಸೂಚಿಸಲಾಯಿತು. ಅದೇ ಮೀಟಿಂಗಿನಲ್ಲಿ ಕಾರ್ಯಕಾರಿ ಮಂಡಳಿಯಲ್ಲಿ ಇವರ ಖಾಲಿ ಸ್ಥಳಕ್ಕೆ ಮೆ. ಬೆಳ್ಳಚಿಟ್ಟಿರ ಅಚ್ಚಯ್ಯನವರೂ, ಕಮಿಟಿ ಮೆಂಬರುತನಕ್ಕೆ ರಾಜೀನಾಮೆ ಕೊಟ್ಟಿದ್ದ ಮೆ. ಯನ್. ಮುದ್ದಪ್ಪನವರ ಸ್ಥಳಕ್ಕೆ ಮೆ. ಕೆ. ಪಿ. ಎಂ. ಮಹ್ಮದ್ ಗೌಸ್‌ರವರೂ ಕಮಿಟಿ ಮೆಂಬರುಗಳಾಗಿ ಆರಿಸಲ್ಪಟ್ಟರು. ಈಗಿನ ಕಾರ್ಯಕಾರಿ ಮಂಡಳಿಯ ಎರಡು ವರ್ಷ ಅವಧಿಯು ಮುಗಿದಿರುವುದರಿಂದ ಈ ಸಭೆಯಲ್ಲಿ ಹೊಸ ಮಂಡಳಿಯ ಮೆಂಬರುಗಳು ಚುನಾಯಿಸಲ್ಪಡಬೇಕಾಗಿದೆ.

ಆದಾಯ ವೆಚ್ಚ.

ವರದಿಯ ವರ್ಷದಲ್ಲಿ ಚಂದಾ ವಸೂಲಾತಿಯು ಚೆನ್ನಾಗಿ ಆಗದ್ದರಿಂದ ಉತ್ಪತ್ತಿಯು ಕಡಿಮೆಯಾಗಿ ಖರ್ಚು ಹೆಚ್ಚಾಗಿ ನಷ್ಟ ಉಂಟಾಗಿದೆ. 1930ರಲ್ಲಿ ಜಮೆ ಬಂದ ಮೊಬಲಗು 212—4—0, 1929ರ ಅಂತ್ಯದಲ್ಲಿ ಶಿಲ್ಕು 993—10—7; ಜುಮ್ಲಾ ಜಮೆ 1205—14—7 1930ರಲ್ಲಿ ಖರ್ಚು ರೂ. 729—4—3; ಉಳಿಕೆ ಇರುವ ಮೊಬಲಗು 476—10—4 ಇದರಿಂದ ಕಟ್ಟಡ ಮತ್ತು ಸಾಮಾನುಗಳ ಸವೆಯುವಿಕೆಗೆ ಬೇಕಾಗುವ 69—0—0 ವಜಾ ಹಾಕಿದರೆ ಬಾಕಿ 407—10—4 ಉಳಿಯುತ್ತೆ. 1930ರ ಲೆಖ್ಖವನ್ನೇ ಗಣನೆಗೆ ತೆಗೆದುಕೊಂಡರೆ 517—0—3 ನಷ್ಟವಾಗಿದೆ. ಮೇಲಿನ ಲೆಖ್ಖವನ್ನು ಕಾರ್ಯಕಾರಿ ಮಂಡಳಿಯವರ ತೀರ್ಮಾನದ ಮೇಲೆ ಸರ್ಟಿಫೈಡ್ ಆಡಿಟರಾದ ಮೆ. ಬಿ. ಶಾಮಣ್ಣನವರು ಆಡಿಟ್ ಮಾಡಿರುವರು. ಮತ್ತು 17ನೇ ಉಪನಿಬಂಧನೆಯ ಮೇರೆ ನೇಮಿಸಲ್ಪಟ್ಟ ಮೆ. ಚೆಪ್ಪುಡಿರ ಪೂವಯ್ಯನವರು ಮತ್ತು ಮೆ. ಕಾಕಮಾಡ ಗಣಪತಿಯವರು ಚೆಕ್ಕು ಮಾಡಿರುವರು.

ರಶೀತಿ ಪುಸ್ತಕಗಳು.

ಹಿಂದಿನ ವರ್ಷ ಚಂದಾ ವಸೂಲಾತಿ ಬಗ್ಗೆ ಕೊಟ್ಟ 12 ರಶೀತಿ ಪುಸ್ತಕಗಳೂ, ವರದಿ ವರ್ಷದಲ್ಲಿ ಕೊಟ್ಟ 14 ಪುಸ್ತಕಗಳ ಪೈಕಿ 2 ಪುಸ್ತಕ ಸಹ ಇನ್ನೂ ಆಫೀಸಿಗೆ ಬಂದಿರುವುದಿಲ್ಲ. ಎಷ್ಟು ತಗಾದೆ ಕೊಟ್ಟರೂ ಪುಸ್ತಕ ಹೊಂದಿಕೊಂಡವರು ಸುಮ್ಮನಿರುವುದು ಶೋಚನೀಯ. ಇದಕ್ಕೆ ಏನು ಮಾಡಬೇಕೆಂದು ಈ ಸಭೆಯವರು ಸೂಚನೆಕೊಡುವುದು ಉತ್ತಮವಾಗಿದೆ.

ಮೀಟಿಂಗುಗಳು.

ಈ ವರ್ಷದಲ್ಲಿ ಒಂದು ವಾರ್ಷಿಕ ಜನರಲ್ ಮೀಟಿಂಗೂ, ಒಂದು ವಿಶೇಷ ಜನರಲ್ ಮೀಟಿಂಗೂ ಮತ್ತು 7 ಕಮಿಟಿ ಮೀಟಿಂಗುಗಳೂ ನಡೆದವು. ಇವುಗಳಲ್ಲಿ ಜನರಲ್ ಮೀಟಿಂಗುಗಳೆರಡೂ, ಮೂರು ಕಮಿಟಿ ಮೀಟಿಂಗುಗಳೂ ವೀರಾಜಪೇಟೆಯಲ್ಲಿಯೂ, ನಾಲ್ಕು ಕಮಿಟಿ ಮೀಟಿಂಗುಗಳು ಮಡಿಕೇರಿಯಲ್ಲಿಯೂ ನಡೆದವು. ಮೂರು ಕಮಿಟಿ ಮೀಟಿಂಗುಗಳಿಗೆ ಕೋರಂ ಇಲ್ಲದೆ ಬಾಕಿ ಮಾಡಲಾದವು. ಆದರೆ ಕಳೆದ ವರ್ಷ ನಡೆದ 9 ಮೀಟಿಂಗುಗಳಲ್ಲಿ ಒಂದಾದರೂ ಕೋರಂ ಇಲ್ಲದೆ ಬಾಕಿಯಾಗಿರಲಿಲ್ಲ. ಮೀಟಿಂಗುಗಳಿಗೆ ಬರುವಷ್ಟು ಸಮಯವೂ, ಮನಸ್ಸೂ ಇಲ್ಲದವರನ್ನು ಕಮಿಟಿ ಮೆಂಬರುಗಳಾಗಿ ಆರಿಸಬಾರದೆಂಬ ಸೂಚನೆಯನ್ನು ಮಹಾ ಸಭೆಯವರು ಚುನಾವಣೆಯ ಕಾಲದಲ್ಲಿ ಮನಸ್ಸಿನಲ್ಲಿಟ್ಟುಕೊಳ್ಳುವುದು ಉತ್ತಮ.

ಪಿ. ಐ. ಬೆಳ್ಯಪ್ಪ,
(ಜನರಲ್ ಸೆಕ್ರೆಟರಿ)

ಕೊಡಗನ್ನು ಹೊರ ಪ್ರಾಂತ್ಯಕ್ಕೆ ಸೇರಿಸಬೇಡವೇ?

(ಬರೆದು ಬಂದದ್ದು)

ಮುಯಿಯು (Tit) ಶುರುವಾಗಿದೆ. ಜಮೀನ್ದಾರ ಸಂಘದ ಪ್ರಮುಖರು ಕೊಡಗನ್ನು ಪ್ರತ್ಯೇಕವಾಗಿರಿಸಬೇಕೆಂಬ ತತ್ವವನ್ನು ಸ್ವೀಕರಿಸಿದ್ದೇ ಆ ಮುಯ್ಯಿಯ ಕಡೆಗೆ ಬೇಗಬೇಗ ಹೋದಂತಾಯಿತು. ನಿಜತ್ವವನ್ನು ಮರೆಸಿ ಪ್ರಯೋಜನವಿಲ್ಲ. ಇಂದಿನ ವರೆಗೆ ರಾಜ್ಯದಾಡಳಿತೆಯು ಐಶ್ವರ್ಯವಂತರ ಮತ್ತು ಅಧಿಕಾರವಂತರ ಆಸ್ತಿಯಾಗಿತ್ತು. ಇಂದಿನಿಂದ ಅದು ಬಡವರ ಮತ್ತು ದೇಶಸೇವಾಸಕ್ತರ ಹಕ್ಕಾಗುವುದು. ಹೆಚ್ಚಿನ ಸಂಬಳವೆಂದರೆ 500 ರೂಪಾಯನ್ನು ಮೀರಕೂಡದೆಂದು ಮಹಾತ್ಮರು ನಿರ್ಣಯಿಸಿದ ಕೂಡಲೆ ಐಶ್ವರ್ಯವಂತರ ದುರಾಶೆಗಳಿಗೂ, ಜಾತಿ ಜಾತಿಗಳ ಪ್ರಮುಖರ ದುರಾಶೆಗಳಿಗೂ ಕೊಡಲಿಯನ್ನಿಟ್ಟರು. ಮಹಾತ್ಮ ಗಾಂಧಿಯವರ ಪ್ರಯತ್ನಗಳು ಫಲಕಾರಿಯಾಗುವುದು ಹೆಚ್ಚಾಗಿ ಅಸಂಭವವೆಂದು ಆಲೋಚಿಸುವ ಜನರು ಕೊಡಗಿನ ಹೊರಗೆ ಇರುವಂತೆ ಕೊಡಗಿನಲ್ಲೂ ಇರುತ್ತಾರೆ. ಆದರೆ ಅವರ ಆ ಅಭಿಪ್ರಾಯವು ಎಷ್ಟು ತಪ್ಪಿನದೆಂಬುದು ಬಹು ಬೇಗನೆ ತಿಳಿಯುವುದೆಂಬುದರಲ್ಲಿ ಸಂಶಯಗಳಿಲ್ಲ. ಇದಕ್ಕೆ ಇಂಗ್ಲೆಂಡಿನ ಈಗಿನ ಲೇಬರ್ ಪಾರ್ಟಿ ಸರಕಾರದ ರಾಜಶಕ್ತಿಯೇ ಕಾರಣವಾಗಿದೆ. ಕನ್ಸರ್ವೇಟಿವ್ ಎಂದರೆ ಐಶ್ವರ್ಯವಂತರ ಪಕ್ಷದವರನ್ನು ಮುರಿದು ಬಿಡಬೇಕೆಂಬುದನ್ನೇ ಅವರು ತಮ್ಮ ಪ್ರತಿಜ್ಞೆಯಾಗಿ ಮಾಡಿಕೊಂಡು ರಾಜ್ಯಭಾರ ಮಾಡುತ್ತಿರುವರು. ಪ್ರಥಮತಃ ಪಾರ್ಲಿಮೆಂಟಿನ ಚುನಾವಣೆಯ ಸಂಬಂಧವಾಗಿ ತಮಗೆ ಹಿತಕಾರಿಯಾಗುವ ಬದಲಾವಣೆಗಳನ್ನು ಮಾಡಿದ ಕೂಡಲೆ ತಮ್ಮ ಅಭಿವೃದ್ಧಿಗೆ ತಡೆಯಾಗಿರುವ ಹೌಸ್ ಆಫ್ ಲಾರ್ಡ್ಸನ್ನು ಕಿತ್ತು ಹಾಕುವರು. ಆ ದಿನವು ದೂರವಿಲ್ಲ. ಮತ್ತು ಅವರ್ಗಗಳಿಗೆ ಏಕ ಮಾತ್ರ ಬಲವಾಗಿರುವ ಹಿಂದೂಸ್ಥಾನವು ಅವರ ಪ್ರಯೋಜನಕ್ಕೆ ಇಲ್ಲದ ಹಾಗೆ ಮಾಡುವರು. (ಹಿಂದೂಸ್ಥಾನವನ್ನು ಕಳೆದುಕೊಳ್ಳುವುದರಿಂದ ಲೇಬರ್ ಪಾರ್ಟಿಗೆ ಹೇಗೆ ಪ್ರಯೋಜನವಾಗುವುದೆಂಬುದು ಮುಂದೆ ಬರೆಯಲ್ಪಡುವುದು.) ಕನ್ಸರ್ವೇಟಿವ್ ಪಂಗಡದವರಾದರೂ ನಿಜವಾಗಿಯೂ ಅತಿ ಲಿಬರಲ್ ಆಗಿರುವ ನಮ್ಮ ವೈಸರಾಯರಾದ ಲಾರ್ಡ್ ಅರ್ವಿನರ ಹಿಂದೂಸ್ಥಾನದ ಪರದ ಔದಾರ್ಯವು ಕನ್ಸರ್ವೇಟಿವ್ ಪಕ್ಷದವರಿಗೇ ಆಶ್ಚರ್ಯವನ್ನುಂಟುಮಾಡಿದೆ. ತಮ್ಮ ಅಭಿಪ್ರಾಯಗಳನ್ನು ನಡಸಿಕೊಂಡು ಬರುವುದಕ್ಕೆ ತಮ್ಮ ಬಲಭುಜವಾಗಿರುವ ಲಿಬರಲ್ ಪಕ್ಷದ ಲಾರ್ಡ್ ವಿಲ್ಲಿಂಗ್‌ಡನ್‌ರವರನ್ನು ಲೇಬರ್ ಸರಕಾರವು ಹಿಂದೂಸ್ಥಾನದ ವೈಸರಾಯರಾಗಿ ನೇಮಿಸಿದ್ದು ಲೇಬರ್ ಪಾರ್ಟಿಯ ಪ್ರಮುಖರ ರಾಜನೈಪುಣ್ಯದ ಇನ್ನೂ ಒಂದು ಗುರುತಾಗಿದೆ. ಅವರನ್ನು ವೈಸರಾಯರಾಗಿ ನೇಮಿಸಿ ಹಿಂದೂಸ್ಥಾನವನ್ನು ಕನ್ಸರ್ವೇಟಿವ್ ಪಕ್ಷದವರ ಹಿಡಿತದಿಂದ ತಪ್ಪಿಸುವುದನ್ನು ಅವರು ಖಂಡಿತವಾಗಿ ಸಾಧಿಸುತ್ತಾರೆ. ಈ ಮುಖ್ಯ ಕಾರಣದಿಂದಲೂ, ಮಹಾತ್ಮ ಗಾಂಧಿಯವರ ಸ್ವರಾಜ್ಯ ರಚನೆಯು ಲೇಬರ್ ಪಕ್ಷದವರ ಸ್ವಂತ ತತ್ವಗಳಿಗೆ ಅನುಗುಣವಾಗಿರುವುದರಿಂದಲೂ, ಮಹಾತ್ಮರು ಗೆಲ್ಲುವರೆಂಬುದರಲ್ಲಿ ಸಂಶಯಗಳಿಲ್ಲ. ಮಹಾತ್ಮರು ಕಳೆದ ಕರಾಚಿ ಕಾಂಗ್ರೆಸಿನಲ್ಲಿ ಮಂಜೂರು ಮಾಡಿದ ಸ್ವರಾಜ್ಯ ರಚನೆ ವಿಧಾನವನ್ನೇ 'ಗವರ್ನಮೆಂಟ್ ಆಫ್ ಇಂಡಿಯಾ' ಆಕ್ಟಿಗೆ ಸೇರಿಸದಿದ್ದರೂ, ಅದು ಹಿಂದೂಸ್ಥಾನದ ಪ್ರಥಮದ ಪಾರ್ಲಿಮೆಂಟಿನಲ್ಲೇ ಮಂಜೂರಾಗುವುದೆಂಬುದರಲ್ಲಿ ಯಾವ ಸಂಶಯಗಳೂ ಇಲ್ಲ. ಮಹಾತ್ಮರ ಸ್ವರಾಜ್ಯ ರಚನಾವಿಧಾನವು ಐಶ್ವರ್ಯಾಧಿಕಾರಿಗಳು ಒಂದೊಂದು ಕಡೆಯೇ ಸೇರಿಕೊಳ್ಳುವ ದುರ್ವ್ಯವಸ್ಥೆಯ ನಿರ್ಮೂಲವಾಗಿದೆ. ಇಂದಿನ ವರೆಗೆ ಇರುವಂತೆ ಮುಂದೆಯೂ ಐಶ್ವರ್ಯವಂತರು ಅಥವ ಅವರ ಅನುಯಾಯಿಗಳು ರಾಜ್ಯದಾಡಳಿತೆಯನ್ನು ನಡೆಸಬೇಕೆಂದು ಉಪಾಯದಿಂದ ಸರ್ ಜಾನ್ ಸೈಮನರು ನೇಟಿವ್ ರಾಜರುಗಳ ಮೀಳನದಿಂದ ಹಿಂದೂಸ್ಥಾನದ ರಾಜ್ಯವನ್ನು ನಡೆಸಬೇಕೆಂದು (ಫೆಡರೇಶನ್) ರಚಿಸಿದ ವಿಧಾನಕ್ಕೂ, ರೌಂಡ್ ಟೇಬಲ್ ಕಮಿಟಿಯ ಶಿಫಾರಸುಗಳಿಗೂ ವಂಚಿಸಿ ರಾಜರುಗಳು ಫೆಡರೇಶನಿಗೆ ಸೇರಲು ಒಪ್ಪಿರುತ್ತೇವೆಂದೂ, ಆದರೆ ಇಷ್ಟ ಬಂದಾಗ ಮಾತ್ರ ಸೇರುವೆವೆಂದೂ, ಹೇಳಿದ್ದೂ, ಫೆಡರೇಶನಿಗೆ ಸೇರಿ ತಮ್ಮ ನಿರಂಕುಶ ಪ್ರಭುತ್ವವನ್ನು ತ್ಯಜಿಸಲು ಆ ರಾಜರಿಗೆ ಇಷ್ಟವಿಲ್ಲದ್ದರಿಂದಲೂ, ಹಿಂದೂಸ್ಥಾನದ ಪ್ರಥಮದ ಪಾರ್ಲಿಮೆಂಟು ನಿಜವಾಗಿಯೂ ಹಿಂದೂಸ್ಥಾನದ ಬಡವರ ಪಾರ್ಲಿಮೆಂಟ್ ಆಗುವುದು. ಅಪ್ಪರ್ ಹೌಸ್ ಎಂದು ಇಂಗ್ಲೆಂಡಿನ ಹೌಸ್ ಆಫ್ ಲಾರ್ಡ್ಸಿಗೆ ಸಮಾನವಾದ ಒಂದು ರಚನೆಯನ್ನು ಹಿಂದೂಸ್ಥಾನದಲ್ಲಿ ಇಡಲಾಗದು. ಆದರೆ ಹಿಂದೂಸ್ಥಾನದ ಐಶ್ವರ್ಯವಂತರ ಸ್ಥಿತಿಯು ಹೀಗೆ ಶೋಚನೀಯವಾಗಿರುವುದರಿಂದ, ಇಂಗ್ಲೆಂಡಿನ ಕನ್ಸರ್ವೇಟಿವ್ ಪಕ್ಷದವರ ಬಗೆಗಳಿಗಿಂತಲೂ ಹೆಚ್ಚಿಗೆ, ಇವರಲ್ಲೂ ಹೊಸದಾಗಿ ಹುಟ್ಟಿ ಪ್ರಜಾ ಸರಕಾರದ ಶಕ್ತಿಗಳು ಮುಂದುವರಿಯುವೆನ್ನುವುದರಲ್ಲಿ ಸಂಶಯಗಳಿಲ್ಲ.

ಕೊಡಗಿನ ಐಶ್ವರ್ಯವಂತರ ಆತ್ಮಹತ್ಯ!

ಆದರೆ ಪ್ರತ್ಯೇಕವಾಗಿಯೇ ಇರುವ ಕೊಡಗಿಗೆ ಮಹಾತ್ಮರ ಸ್ವರಾಜ್ಯ ರಚನೆಯಿಂದ ಕೇಡು ಹೇಗುಂಟಾದೀತು? ಈ ವಿಷಯವನ್ನು ಕೊಡವ ಸಭೆಯವರು ಆಲೋಚಿಸದೆ ಹೋದದ್ದು ಆಶ್ಚರ್ಯ. ಲೋಕದ ಅಭಿಪ್ರಾಯವೆಲ್ಲವೂ ಐಶ್ವರ್ಯವಂತರ ವಿರುದ್ಧವಾಗಿದೆ. ಕೊಡಗಿನ ರಾಜಕೀಯ ಈಗಿನ ಪ್ರಾಮುಖ್ಯತೆಯು ಇದೇ ಕಾರಣದಿಂದ ಉಂಟಾದುದು. "ರಾಯಲ್ ಪ್ರೆಸ್" ಪಟ್ಟಿಯು ಅದಕ್ಕೆ ಉತ್ತೇಜನಕಾರಿ ಮಾತ್ರವಾಗಿದೆ. ಈ ರಾಯಲ್ ಮನೆತನದವರ ಪಟ್ಟಿಯೇ ಇಲ್ಲದೆ ಇದ್ದರೆ ಈಗಿನ ಜನ ಸಾಮಾನ್ಯದ ಚಳವಳವು ಇಲ್ಲದೆ ಮುಂದಾಗುತ್ತಿತ್ತು. ರಾಯ್ ಬಹದ್ದೂರ್‌ಗಳನ್ನೂ, ರಾವ್ ಬಹದ್ದೂರ್‌ಗಳನ್ನೂ ಜನಸಂಖ್ಯೆಯೇ ಕೊಡಗು ಕಾದಿರುತ್ತಿರಲೂ ಬಹುದಾಗಿತ್ತು. ಯಾರಿಗೆ ಗೊತ್ತು? ಅಂತೂ ಇಷ್ಟನ್ನು ಖಂಡಿತವಾಗಿ ಹೇಳಬಹುದು,—ಐಶ್ವರ್ಯವಂತರ ರಾಜಕೀಯ ಆವಸಾನಕ್ಕೆ ಇನ್ನು ಒಂದೇ ಒಂದು ಅಂಗುಲ ಮಾತ್ರವಿದೆ. ಅದನ್ನು ಕೊಡವ ಸಭೆಯವರು ದಾಟಿಯಿಟ್ಟಿರುವರು. ಮಹಾತ್ಮರ ಸ್ವರಾಜ್ಯ ರಚನೆಯು ಮೇರೆ ಮಧ್ಯಕ್ಕೆ (ನಿತ್ಯಾವಶ್ಯಕ ಪದಾರ್ಥಗಳ) ಹಿಡಿದಿಡುವ ವಿಷಯಕ್ಕೆ ಪ್ರತಿಬಂಧವಿದೆ. ಉದ್ಯೋಗವಿಲ್ಲದವರಿಗೆ ಉದ್ಯೋಗ ಕೊಡುವುದು ಸರಕಾರದ ಭಾರವಾಗುವುದು. ಹಾಗೆ ಉದ್ಯೋಗ ಕೊಡಿಸಿಕೊಡದಿದ್ದರೆ ಪೆನ್ಶನ್ ಕೊಡಬೇಕು. ಅದೇ ರೀತಿಯಲ್ಲಿ ರೋಗಗ್ರಸ್ತರಿಗೂ, ಮುದುಕರಿಗೂ ಪೆನ್ಶನ್ ಕೊಡಬೇಕು. ರೈತರ ಸಾಲ ತೀರುವ ವರೆಗೆ ಅವರಿಗೆ ಕಂದಾಯ ಹಾಕಕೂಡದು. ಈ ಪ್ರಯೋಜನಗಳಿಗೆ ಹಣವು ಎಲ್ಲಿಂದ? (1) ಹೆಚ್ಚೆಚ್ಚು ಭೂಮಿ ಇರುವವರಿಗೆ ಅಷ್ಟಷ್ಟು ಹೆಚ್ಚು ಕಂದಾಯ ಹಾಕಿಯೂ (ಮಹಾತ್ಮರ 11ನೇ ಕಲಂ) (2) ಎಷ್ಟು ಹೆಚ್ಚು ಐಶ್ವರ್ಯವಿಟ್ಟು ಸಾಯುತ್ತಾರೋ ಅಷ್ಟಷ್ಟು ಹೆಚ್ಚಿನ ಕಂದಾಯ ಹಾಕಿಯೂ (ಈ ಕಂದಾಯವು ಇಂಗ್ಲೆಂಡಿನಲ್ಲಿ 100ಕ್ಕೆ 60ರ ವರೆಗೆ ಇದೆ) (ಮಹಾತ್ಮರ 1[illegible] ಕಲಂ) (3) ಮುಖ್ಯ ಉತ್ಪತ್ತಿಯ ಕಾರಣಗಳ ಮತ್ತು [illegible] ಮಾಲಿಕತ್ವವನ್ನು ಸರಕಾರವು ಪಡೆದೂ, (ಮಹಾತ್ಮರ [illegible] ಕಲಂ) ಉತ್ಪತ್ತಿ ಮಾಡಿಕೊಳ್ಳುವುದು. ನಿಷಾ ನಿಷೇಧದ ಕೊಡಗಿನ ಸರಕಾರದ ಉತ್ಪತ್ತಿಯು 4 ಲಕ್ಷ ಕಡಿಮೆ ಆಗುವುದು. ಅದನ್ನು ಭರ್ತಿಮಾಡಿಕೊಂಡು ಇನ್ನಾವ ಸ[illegible]ಣೆ ಇಲ್ಲದಿದ್ದರೂ ಈಗಿನಂತೆಯೇ ನಡಸಿಕೊಂಡು ಹೋಗಲು ದಕ್ಷಿಣ ಕೊಡಗಿನ ಕಾಫಿತೋಟಗಳ ಮೇಲೆ ಕಂದಾಯ [illegible]ಷ್ಟು ಸಾಲದಾಗುತ್ತದೆ. ಈಗ ಹಾಕಿದರೂ ಸಹ ಅ[illegible]ಸ್ಥಿಯು ಜೀವನ್ಮರಣವೋ? ದಕ್ಷಿಣ ಕೊಡಗಿನಲ್ಲಿ [illegible]ಕಾಲ್ ಸ್ಟಿದ್ದ [illegible] ಕಾಫಿತೋಟಗಳೇ ಇದಕ್ಕೆ ಸಾಕ್ಷ್ಯವು. ಬಲವಾದ ಕಂದಾಯ ಹಾಕಿದ್ದರಿಂದ ಕಾಫಿತೋಟಗಳು ಮಾರಲ್ಪಡುವುದು, ಮಾತ್ರವಲ್ಲದೆ ಕೊಡಗಿನಲ್ಲಿ ಮಿಲ್ಲುಗಳು, ರೈಲ್ವೆಗಳಾಗಲಿ, ಕಾರ್ಖಾನೆಗಳಾಗಲಿ, ಸಿನೆಮಾ ನಾಟಕ—ಶಾಲೆಗಳಾಗಲಿ ಇಲ್ಲದಿರುವುದರಿಂದ ಹೆಚ್ಚು ಇರುವ ಕಾಫಿತೋಟಗಳನ್ನೂ, ಭೂಮಿಗಳನ್ನೂ ತಾನೇ ಹೇಳಿದ ಬೆಲೆಗೆ ಸರಕಾರವು ಕೊಂಡುಕೊಳ್ಳಬೇಕಾಗುವುದು. ಉತ್ಪತ್ತಿ ಕಡಿಮೆ ಇರುವ ಸರಕಾರಕ್ಕೆ ಇನ್ನಾವ ದಾರಿಯಿದೆ? ಇಲ್ಲಿನ ಐಶ್ವರ್ಯವಂತರು ಕೊಡಗಿನ ಹೊರಗಿನವರ ಸಂಗಡ ಹೋರಾಡಿ ಎಂದೂ ನಿಲ್ಲಲಾರದವರಾದರೂ ಇಲ್ಲಿ ಅವರೇ ಐಶ್ವರ್ಯವಂತರಷ್ಟೆ. ಪರ ಪ್ರಾಂತ್ಯದ ಸಂಗಡ ಸೇರಿ ತಲೆ ಉಳಿಸಿಕೊಳ್ಳಬಹುದಾದ ಇವರು ಕೊಡಗನ್ನು ಪ್ರತ್ಯೇಕವಾಗಿರಿಸಿ ತಮ್ಮ ತಲೆ ಕಡಿದುಕೊಳ್ಳುವರು. ಇದಕ್ಕಿಂತಲೂ ಭೀಷಣ [illegible]ಯ್ಯಯು ಇನ್ನಾವುದಾದರೂ ಇದ್ದೀತೆ? ಅವರ ಭೂಸ್ಥಿತಿಯನ್ನು ಸಂಕಟಾಂಕ್ಕ ಮಾಂ ಸಿಕ್ಕ ಅಲ್ಪ ಹಣವನ್ನು ಕೊಟ್ಟಾದರೂ ಜೀವನ ಮಾಡೋಣವೆಂದು ಅವರು ಆಲೋಚಿಸುವುದಾದರೆ ಅದೂ ಅಸಾಧ್ಯ. ಮಹಾತ್ಮರ ಸ್ವರಾಜ್ಯ ರಚನೆಯ 20ನೇ ಕಲಂ ಮೇರೆ, ಯಾವ ರೀತಿಯಲ್ಲೇ ಆಗಲಿ ಹಣಕ್ಕೆ ಬಡ್ಡಿ, ಎಂದರೆ ತನ್ನ ದೇಹ ಕಷ್ಟವಿಲ್ಲದೆ ಬರುವ ಹಣವನ್ನು ಇತರರಿಗೆ ಕೊಟ್ಟು ಯಾವ ರೂಪದಲ್ಲೇ ಆಗಲಿ ಪ್ರತಿಫಲವನ್ನು ಪಡೆಯುವುದು ಶಿಕ್ಷಾಸ್ಪದವಾಗುವುದು. ಉದ್ಯೋಗವಿಲ್ಲದವರಿಗೆ ಪೆನ್ಶನ್ ಕೊಡುವ ಶಕ್ತಿಯು ಕೊಡಗಿನ ಸರಕಾರಕ್ಕೆ ಇಲ್ಲದಿರುವುದು ಖಂಡಿತ. ಆಗ ಸ್ವರಾಜ್ಯದ ರಾಜ್ಯ ಕಡುಕಷ್ಟಗಳನ್ನು ಅನುಭವಿಸುವುದು ಮಾತ್ರ ಕೊಡಗಿನ ಹಣೆಯ ಬರಹವೇ?

ಮಹಾತ್ಮರ ಸ್ವರಾಜ್ಯ ವ್ಯವಸ್ಥೆಯ ಅವಶ್ಯಕತೆಯು ಹಿಂ ಸ್ಥಾನಕ್ಕೆ ಮಾತ್ರವಲ್ಲ, ಇಡೀ ಲೋಕಕ್ಕೇ ಬಂದಿದೆ. ಐ ರ್ಸವಂಶ ಅಮೇರಿಕದಲ್ಲೂ ಸಹ ದಾರಿದ್ರ್ಯವು ಅಹಾಕಾರ ಪಡುತ್ತಿರುವುದೇ ಅದಕ್ಕೆ ನಿದರ್ಶನವಾಗಿದೆ. ಅದರ ಈ ಬವು ಮುಂದಿನ ಲೇಖನದಲ್ಲಿ.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ರು ಜವಾಬ್ದಾರರಲ್ಲ. ಸಂ.]

ಮಹಿಷಾಹುತಿ.

ಸಂಪಾದಕರೇ,

ನಿಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಈ ಸಣ್ಣ ಬಾತ್ಮಿ ಪ್ರಕಟಿಸಲು ಸ್ವಲ್ಪ ಎಡೆಕೊಡುವಿರಾಗಿ ನಿಮ್ಮನ್ನು ಯದಿಂದ ಕೇಳಿಕೊಳ್ಳುತ್ತೇನೆ.

ಮಡಿಕೇರಿನಾಡು, ಲಿಂಗರಾಜೇಂದ್ರ, ಒಡೆಯರವರ ಕಾ ದಲೂ ಬಹಳ ಪ್ರಖ್ಯಾತಿ ಹೊಂದಿದಾಗಿತ್ತು. ಈಗ ಸಹ ದೇಶದ ಮುಖ್ಯ ಪಟ್ಟಣವಾದ ಮಡಿಕೇರಿಯು ಅಲ್ಲಿ ದರಿಂದ ಇದರ ಖ್ಯಾತಿಗೆ ಯಾವ ಕುಂದುಕವೂ ಇರುವ ಲ್ಲ. ಆದರೆ ಇತ್ತಲಾಗಿ ಈ ನಾಡಿನ ಹೆಚ್ಚಿನ ಜನರು ದೊ ಡ್ಡ ಸರ್ಕಾರಿ ಉದ್ಯೋಗಗಳನ್ನು ವಹಿಸಿದ್ದರಿಂದ ವ್ಯಾಪಾರ ಎಲ್ಲವೂ ದಕ್ಷಿಣ ಕೊಡಗಿನ ಕಡೆ ಹೋಗಿದ್ದಾಗ್ಯೂ ಒಂ ದಾನೊಂದು ಕಾಲದಲ್ಲಿ ಪ್ರಖ್ಯಾತಿ ಹೊಂದಿದ ನಾಡು. ಸಿದ್ಧಾ ವಸ್ಥೆಯಲ್ಲಿ ಕೆಲವು ಕಾಲ ಕಳೆದು ಈಗ ಎಚ್ಚತ್ತು ದೈವ ವ ಶಲಿ ಎತ್ತುತ್ತಿರುವುದನ್ನು ನೋಡಿ ತುಂಬಾ ಆನಂದ ಪ ಡುತ್ತೇನೆ. ಈ ನಾಡಿಗೆ ರಾಜದೃಷ್ಟಿಯೂ ದಂತು ದೈವ ಕೃಪೆ ಯೂ ಹೆಚ್ಚಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಈ ನಾಡಿನಲ್ಲಿ ಶ್ರೀ ಭದ್ರಕಾಳಿ ದೇವರ ಆರಾಧನೆಯೇ ವಿಶೇಷವಾಗಿದೆ. ಮಡಿಕೇರಿ ಕೋಟೆಯಿಂದ 5 ಯಾ 6 ಮೈ ಲು ಅಂತರದೊಳಗೆ ಈ ದೇವರ 7 ದೇವಸ್ಥಾನಗಳಿವೆ. ಈ ದೇ ವಸ್ಥಾನಗಳು ಬಹು ಪುರಾತನ ಕಾಲದಲ್ಲಿ ಸ್ಥಾಪಿಕವಾಗಿ ಬ ಹು ಸೊಗಸಾದ ಕಟ್ಟಡಗಳಿಂದಲಂಕೃತವಾಗಿವೆ. ವರ್ಷಾ ವಧಿ ಹಬ್ಬ ದಿವಸಗಳಲ್ಲಿ ಹೋಗಿ ನೋಡಿದರೆ ಅದರ ಸೊಗ ಸು ಮತ್ತು ಮಹಿಮೆಯು ತಿಳಿಯ ಬರುತ್ತೆ. ಈ ದೇವರಿಗೆ ಮಹಿಷಾಹುತಿ (ಕೋಣಬಲಿ) ವಿಶೇಷವೆಂದು ಜನರು ತಿಳಿದಿ ದ್ದರು. ಇದು ಅತಿ ಪಾಪಕರವಾದ ಕೆಲಸವೆಂದು ತಿಳಿದಿದ್ದ ರೂ ಸಹ ಮೂಢ ಭಕ್ತಿಯಿಂದ ಆ ಪದ್ಧತಿಯನ್ನವಲಂಬಿಸುತ್ತಿ ದ್ದರು. ಈ ಕೆಲಸವನ್ನು ಗುಟ್ಟಾಗಿ ಮಾಡುತ್ತಿದ್ದುದರಿಂದ ಇದುವರೆಗೆ ಹೊರಬೀಳಲಿಲ್ಲ.

ಆದರೆ ಕಳೆದ ವರ್ಷ ಈ ನಾಡಿನಲ್ಲಿ ಹುಟ್ಟಿ ಬೆಳೆದು ತುಂ ಬಾ ಅನುಭವ ಶಾಲಿಗಳೂ ಮತ್ತು ವಿದ್ಯಾವಂತರಾದ ಮಿ. ಮುಕುಂದ ಗಣಪತ್ಯಯವರು ಮಹಿಷಾಹುತಿಯನ್ನು ಖಂಡಿಸಿ ಆ ವಿಷಯ ತನ್ನ ಸ್ವಂತ ಖರ್ಚಿನಿಂದ ಹಸ್ತ ಪತ್ರಿಕೆಗಳನ್ನು ಹೊರಪಡಿಸಿದರು. ಈ ಪದ್ಧತಿಯನ್ನು ನಿಲ್ಲಿಸಬೇಕೆಂದು ಮ ಡಿಕೇರಿ ಹೈಸ್ಕೂಲಿನಲ್ಲಿ ಶಕ್ತ ಮುಖ್ಯಸ್ಥರ ಒಂದು ಮೀಟಿಂಗು ಏರ್ಪಡಿಸಿ ಚರ್ಚಿಸಿದಲ್ಲದೆ ನಮ್ಮ ದೇಶದ ಸ್ಥಳೀಯ ಪತ್ರಿಕೆಗ ಳಲ್ಲಿಯೂ ಸಹ ಆಗಿಂದಾಗ್ಯೆ ಪ್ರಾಣಿದಯೆಯ ವಿಷಯ ಅ ನೇಕ ಅರ್ಥಗರ್ಭಿತವಾದ ಬಾತ್ಮಿಗಳನ್ನು ಸಹ ಬರೆಯುತ್ತಿದ್ದ ರು. ಇವರು ಈ ಚಳವಳವನ್ನು ಪ್ರಾರಂಭಿಸುವಾಗ್ಯೆ ಅವರ ನ್ನು ನಾನಾನಿಂದ ಬಹಿಷ್ಕಾರ ಮಾಡಬೇಕೆಂದೂ, ಅವಮಾನ ಪ ಡಿಸಬೇಕೆಂದೂ ಮತ್ತು ದೇವರ ಮಾಯೆ ತಾಗುವಂತೆ ಮಾಡ ಬೇಕೆಂದೂ ಅನೇಕರು ಹೇಳುತ್ತಿದ್ದುದನ್ನು ನಾನು ಕೇಳಿದ್ದೇ ನೆ. ಇವರಿಗೆ ಸಹಾಯಕರಾಗಿ ಆಗ್ಯೆ ಮಡಿಕೇರಿ ಸರ್ಕಲಿನ ಸಹಕಾರಿ ಸಂಘಗಳ ಇನ್ಸ್‌ಪೆಕ್ಟರಾಗಿದ್ದ ಮಿ ಪಟ್ಟಮಾಡ ಪೊನ್ನಪ್ಪನವರು ಸಹ ಬಹು ಮುತುವರ್ಜಿಯಿಂದ ಕೆಲಸ ಮಾ ಡಿದರು. ಎಷ್ಟೋ ಪ್ರಾಣಿಗಳ ಪ್ರಾಣವನ್ನು ಉಳಿಸುವ ಕಾರಣ ಭೂತರಾದ ಈ ಇಬ್ಬರು ಮಹನೀಯರುಗಳಿಗೆ ದೇ ವರು ದೀರ್ಘಾಯುಷ್ಯವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಸ್ಥಳೀಯ ಎರಡು ಪತ್ರಿಕೆಗಳ ಎಡಿಟರ್ ಮಹಾಶಯ ವರುಗಳೂ ಸಹ ಆಗಿಂದಾಗ್ಯೆ ಈ ಮಹಿಷಾಹುತಿಯನ್ನು ಖಂ ಡಿಸಿ ತಮ್ಮ ಪತ್ರಿಕೆಗಳಲ್ಲಿ ಬಾತ್ಮಿಗಳನ್ನು ಹೊರಡಿಸಿದಕ್ಕೆ ಅವ ರಿಗೂ ಸಹ ಈ ನಾಡಿನವರ ಪರವಾಗಿ ವಂದಿಸಬೇಕಾಗಿದೆ. ಪ್ರಾರಂಭದಲ್ಲಿ ದೇವರ ಮೇಲಿನ ಮೂಢ ಭಕ್ತಿಯಿಂದ ಈ ನಾಡಿನ ಶಕ್ತ ಮುಖ್ಯಸ್ಥರು ಒಪ್ಪದಿದ್ದರೂ ಅನಂತರ ಮಹಿ ಷಾಹುತಿಯನ್ನು ಪೂರ್ತಿ ಮನ್ನ ಪಡಿಸಿ ತಮ್ಮ ಸಹಾನುಭೂ ತಿಯನ್ನು ತೋರಿಸಿದುದಕ್ಕೆ ಅವರನ್ನು ಸಹ ಎಷ್ಟು ವಂದಿಸಿದ ರೂ ಸಾಲದು. ಈ ರೀತಿ ಒಂದೇ ಮನಸ್ಸನ್ನು ದಯಪಾಲಿ ಸಿದ ಶ್ರೀ ಭದ್ರಕಾಳಿ ದೇವರಿಗೂ ಸಹ ನನ್ನ ಹೃದಯ ಪೂ ರ್ವಕವಾದ ವಂದನೆಗಳು.

ಮಡಿಕೇರಿ ನಾಡಿನ ಏಳು ನೆಲೆಗಳಲ್ಲಿಯೂ ಮಹಿಷಾಹು ತಿಯನ್ನು ಪೂರ್ತಿ ನಿಲ್ಲಿಸಿರುವುದಾಗಿ ದೇಶಸ್ಥರಲ್ಲಿ ತಿಳಿಸಲು ತುಂಬಾ ಸಂತೋಷ ಪಡುತ್ತೇನೆ. ಇನ್ನು ಮುಂದಾದರೂ ಈ ನಾಡಿನವರಿಗೆ ದೇವರು ಆಯುರಾರೋಗ್ಯವನ್ನೂ, ಸಂಪ ತ್ತನ್ನೂ ದಯಪಾಲಿಸಲೆಂದು ಶ್ರೀ ಭಗವಂತನನ್ನು ಪ್ರಾರ್ಥಿ ಸುತ್ತೇನೆ.

"ಮಡಿಕೇರಿ ನಾಡಿನವ"

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.

ಮಂಗಳೂರು, ದ. ಕನ್ನಡ.

ಯಾವತ್ತೂ ಬಗೆಯ ರಬ್ಬರು ಮೋಹರುಗಳು ಕನ್ನ ಡಿಯ ಸೈನ್ ಬೋರ್ಡ, ಹಾಪ್ ಟೋನ್ ಬ್ಲಾಕ್ ಇತ್ಯಾ ದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಬಾಳಿಕೆಗೆ ಬರುವಂತೆ ತಯಾರಿಸಿ ಕೊಡಲಾಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕಾಗಲೀ ಯಾ ನಮ್ಮ ಮಡಿಕೇರಿ ಏಜೆಂಟರ, ಮಿ. ಯಸ್. ಯಸ್. ಪೊನ್ನಪ್ಪ ನವರಿಗಾಗಲೀ ಬರೆದುಕೊಳ್ಳುವದು.

12—9

ಕೆ. ಟಿ. ಕೆ. ನಂಬೀಶನ್‌ರವರ ಅನುಭವ ಸಿದ್ಧೌಷಧಗಳು.

ಆರೋಗ್ಯ ಕಲ್ಪದ್ರುಮ ಲೇಹ್ಯ—ಒಳ್ಳೇ ಜೀರ್ಣಕಾರಿ. ಮಲಬಂಧ, ಹೊಟ್ಟೆಕಚ್ಚು, ಮಾಂಸ ಖಂಡಗಳ ನೋವು, ಕಾ ಸ ಶ್ವಾಸ, ಸ್ವರಭಂಗ, ನಿಶಕ್ತಿಗಳನ್ನು ಗುಣಪಡಿಸುವುದಲ್ಲದೆ ಮೇಹ ಸಮ್ಮಂಧವಾದ ರೋಗಗಳನ್ನೂ ಹೋಗಲಾಡಿಸುವು ದು. 1 ಪೌಂಡಿಗೆ ರೂ. 2—0—0 ಮಾತ್ರ.

ಜ್ವರ ಗೆಂಡೆ ಸಂಹಾರಿ—ಒಳ ಜ್ವರ, ಒಕರಿಸುವಿಕೆ, ಕೈ ಕಾಲು ಸೋಲುವಿಕೆ, ಉಬ್ಬಸ, ಎದೆ ಉರಿ, ತಲೆ ಸುತ್ತುವಿಕೆ, ಮಲಬಂಧ, ಕಣ್ಣು ಮುಖ ಅರಸಿನ ಬಣ್ಣವೇರುವಿಕೆ, ಅಜೀ ರ್ಣ, ಹೊಟ್ಟೆ ಶೂಲೆ, ಹೃದಯ ದೌರ್ಬಲ್ಯ, ದಾತು ಹೀನತೆಯು ಅಸಕ್ತಿ, ಕಲ್ಮಷ ಮೂತ್ರ ಇತ್ಯಾದಿಗಳಿಗೆ ರಾಮಬಾಣದಂತಿ ದೆ. 1 ಕುಪ್ಪಿಗೆ ರೂ. 1—8—0 ಮಾತ್ರ.

ಗರ್ಭರಕ್ಷಣೆ ಗುಳಿಗೆ—4 ತಿಂಗಳ ಮೊದಲೆರಡು ಗರ್ಭಿ ಣಿಯರು ಇದನ್ನು ಸೇವಿಸುವುದರಿಂದ ಶಿಶುಗಳು ದೃಢಕಾಯ, ತೇಜಸ್ಸುಳ್ಳವಾಗಿ ಜನಿಸಿ, ಬಾಲಗ್ರಹ ಇತ್ಯಾದಿ ರೋಗಗಳು ಬಾರದಾಗುವವು, ಪ್ರಸವವು ಅತಿ ಸುಲಭವಾಗಿ ಆಗುವುದು. 25 ಮಾತ್ರೆಗಳ ಸೀಸೆ 1ಕ್ಕೆ 0—8—0 ಮಾತ್ರ.

ಕಜ್ಜಿ, ಕಾಮಾಲೆ, ಪಾರ್ಶ್ವವಾಯು, ಪಿತ್ಥ, ಮಲೇರಿಯ ಮೂಲವ್ಯಾಧಿ, ವಾಂತಿ, ಭೇದಿ, ಹಲ್ಲು ನೋವು, ಹುಳುಕಡ್ಡಿ, ಕ್ಷಯ, ಪಾಂಡು ಇತ್ಯಾದಿ ರೋಗಗಳಿಗೂ ಪ್ರತ್ಯೇಕ ಹಸನಾ ದ ಔಷಧಿಗಳು ತಯಾರಿರುವವು. ಒಂದು ಸಲ ಪರೀಕ್ಷಿಸಿ ನೋಡಿರಿ.

ನಂಬೀಶನ್ ಆಯುರ್ವೇದ ವೈದ್ಯ ಶಾಲಾ,

4—3 ಪೊನ್ನಂಪೇಟೆ (ಕೊಡಗು.)

"ರೂಪಾಯಿಗಳು 5-8-0 ಮಾತ್ರ.

ನಮ್ಮ ಉಚಿತ ಜೀವವಿಮೆಯು ಅನೇಕ ಬಡಬಗ್ಗರನ್ನು ಕಾಪಾಡಿದೆ.

ನೀವೇಕೆ ಹೊಂದಬಾರದು?

ಈಗ ಆಗಲೇ 53,000 ಜನಗಳು ಮೆಂಬರಾಗಿದ್ದಾರೆ.

ಹಣ ರೂ. 2,00,000.

ಬಡವರಿಗೆ ಭಾಗ್ಯಕಾಲ! ಎಲ್ಲರಿಗೂ ಅನುಕೂಲ!!

WANTED.

Agents for Coorg on liberal Commission on decent pay per month

Apply to:—

The Branch Secretary,
The Venus Assurance Co, Ltd.,
No 2. Krishna Buildings,
12—4. Bangalore City.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಕ್ರೆಡಿಟ್ ಭಂಗಾರದ ನಿಬು ಹಾಕಿದ ಖಾತ್ರಿಯು ಬಂದೋಬಸ್ತು ಆದ ಫೌಂಟನ್‌ಪೆನ್‌ಗಳು.

ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ	3	0	0
,, ಬಿಗ್ ಬ್ಯಾರೆಲ್ ಪೆನ್ 1ಕ್ಕೆ		3	3	0
,, ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ		3	8	0
,, ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮಾಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ		3	14	0
,, ಮಾಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ		4	2	0
,, ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ ಬ್ರವುನ್ ಕಲರ್ ಫೌಂಟನ್‌ಪೆನ್ 1ಕ್ಕೆ		5	8	0
ಸ್ವಾಟ್ ಫೌಂಟನ್‌ಪೆನ್ 1ಕ್ಕೆ		10	8	0
ರ್ ಪೆನ್ 1ಕ್ಕೆ	14 6 0, &	20	10	0
ಬರ್ ಫೌಂಟನ್‌ಪೆನ್ 1ಕ್ಕೆ	3 8 0, &	3	12	0
ಫೌಂಟನ್ ಪೆನ್ 1ಕ್ಕೆ	6 4 0, &	6	12	0
ರ್ಮನ್ ಫೌಂಟನ್ ಪೆನ್ 1ಕ್ಕೆ	8 2 0, &	8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ		3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ ಕ್ಕೆ		2	2	0
ಲಿಗಲಿಯೂ ಆಕಾರದ ಟೈಂಪೀಸ್ 1ಕ್ಕೆ	6 9 0, &	6	15	0
ಲಿಗಲಿಯೂ ಸಣ್ಣ ಸೈಜಿನ ಆಕಾರದ ಟೈಂಪೀಸ್ 1ಕ್ಕೆ		7	2	0
ಲಿಗಲಿಯೂ ಆಕಾರದ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ		8	10	0
ಬಿಗ್‌ಬೆನ್ ಆಕಾರದ ಟೈಂಪೀಸ್ 1ಕ್ಕೆ		9	6	0
ಬಿಗ್‌ಬೆನ್ ಆಕಾರದ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ		13	4	0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್ 1ಕ್ಕೆ		5	10	0
ಡಿಟೋ ನಮೂನೆಯಲ್ಲಿ ಎಬ್ರಹಾಮ್ಸ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ		12	4	0
ನಿಕ್ಕಲ್ ಕೇಸ್ ಸಿಲೆಂಡರ್ ಮೂಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 &	12	8	0

ಇಲ್ಲಿ ನಮೂದಿಸಿರುವ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಬೇರೆಯಾಗಿಯೆ.

ಮುನಿಯಾರ್ಡರ್ ರವಾನಿಸುವ ವಿಳಾಸ,—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—45

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	23,160
ಜಮೂಬಂದ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ನಿರ್ವಹಣೆಯಾಗಾರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋಡಂಡ ಅಪ್ಪಯ್ಯನವರು, ರಾವ್ ಬಹದ್ದೂರ್	ಮನೆಯಪ್ಪಂಡ ಬೆಳ್ಯಪ್ಪನವರು,

ಸೆಕ್ರೆಟರಿ

ಸಿ. ಯಸ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1–7–1930.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು ಕೊಡುವುದರಿಂದ ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52—19 ಗಿರಿಗಾಂವ, ಮುಂಬಯಿ.



12 bore Victor Cartridges Rs 10/- Per 100

Mahomedally-Noorbhoy.

ARMS & AMMUNITION MART.

321 Abdul Rehman Street.

52· 27 BOMBAY 3

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲೆಲ್ಲಾ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯು ಈಗಿನ ಸ್ಥಿತಿಯಿಂದ ಸಷ್ಟಪಡು

ಹೊಸ ಕೆಲಸ.	ಪ್ರೀಮಿಯಂ ವರಮಾನ
೧೯೨೭—೪೭೮ ಲಕ್ಷ ರೂಪಾಯಿಗಳು.	೧೯೨೭—೧೨೨ ಲಕ್ಷ ರೂಪಾಯಿಗಳು.
೧೯೨೮—೫೮೫ ಲಕ್ಷ „	೧೯೨೮—೧೪೦ ಲಕ್ಷ „
೧೯೨೯—೭೫೦ ಲಕ್ಷ „	೧೯೨೯—೧೭೧ ಲಕ್ಷ „

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು.

ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು

೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳಿಗೆ ೨೨॥ ರೂಪಾಯಿಗಳು.

೧೯೨೭ „ „ „ „ ೨೫ „

ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದಲ್ಲಿ ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭವುಂ

ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.	ಯಂ. ವಿ. ಮುತ್ತುಕೃಷ್ಣ ನಾಯುಡು, ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

OR

52— 12

ಕೆ. ಸಿ. ತಿಮ್ಮಪ್ಪ,
ಏಜೆಂಟ್,
ಮಡಿಕೇರಿ.

ಮಲೇರಿಯಾ ಜ್ವರಕ್ಕೆ ಮಲೇರಿಯಾನ

ಮಲೇರಿಯಾನವು ಮಲೇರಿಯಾ ಚಳಿಜ್ವರ, ಉರಿಜ್ವರ, ದಿನ ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನೂ, ಗೆಡ್ಡೆಯು ಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ

ಕ್ರಯ 8 ಔನ್ಸಿಗೆ 1—8—0 ½ ಡಜನಿಗೆ 8—8—0, 1 ಡ 16—8—0

ಪಿತ್ತ, ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡ

ಪಿತ್ತಜ್ವರ ಕೈಕಾಲು ಬಚ್ಚಲು, ರಕ್ತ ಇಲ್ಲದೆ ಬೆಳ್ಳಗೆ ಶರೀರ ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಮಾಲೆ ಗೊಂಬೆ ಮತ್ತು ಶರೀರ, ತಲೆಶೂಲೆ, ತಲೆ ತಿರುಗುವದು, ಅಜೀ ಹೊಟ್ಟೆ ಉರಿ, ಎದೆ ಸುಡುವದು ನಾಲಿಗೆ ಒಣಗುವದು, ಮಲಮೂತ್ರಕ್ಕೆ ಭಂಗ ಪಿತ್ತ ಕಾರುವುದು, ನಿದ್ರೆ ಇಲ್ಲದೆ ಸಂಕಟವಾಗುವುದು ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ್ಲಾ.

ಶರೀರದಲ್ಲಿ ಬೀಳುವ ಬೊಕ್ಕೆ, ಕುರು, ಗುಳ್ಳೆಗಳು, ಬೇಗ ಗುಣವಾಗದ ಘಾಯ ವ್ರಣಗಳು ವಿವಿಧ ಬಗೆಯ ಚರ್ಮ ರೋಗ ಅತೀ ಶೀಘ್ರದಲ್ಲಿ ಗುಣಪಟ್ಟು ರಕ್ತ ಸಂಪೂರ್ಣ ಶುಚಿಯಾಗಿ, ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ಬಲವುಳ್ಳ ಕಂಪೌಂಡು ಸಿರಪು ಸರ್ಸ ಅಮಗ ಎಂಬುದೇ ಬಾಟ್ಲಿಗೆ ರೂಪಾಯಿ 3—8—0

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬುರ್ನಮ.

ತಿಂಗಳು ಗಟ್ಟಿಯ ಅಕ್ರಮ, ಹೊಟ್ಟೆನೋವು, ಕೈಕಾಲುಗಳ ಸೆಳತ, ಕೋಶದ ಬಲಹೀನತೆ ವಾಯುಗಳ ಉಪದ್ರ, ರಕ್ತವು ಬೇಕಾ ಹರಿಯದೆ ನಿಂತು ಬಿಡುವದು. ಅಲ್ಲದೆ ಸಮಯಕ್ಕೆ ಸ್ರಾವಿಸುವದು ಬಣ್ಣವಾಸನೆಯುಳ್ಳ ಕೆಡಳು ಇತ್ಯಾದಿ ಗರ್ಭಕೋಶದ ಎಲ್ಲಾ ಅವ ರೋಗಗಳನ್ನು ಕಂಪೌಂಡು ಸಿರಪ್ ವಿಬುರ್ನಮ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3—8—0

ಮಕ್ಕಳ ದೇಹದ ಪುಷ್ಟಿಗೆ–ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣ ತೋರಿ ಸೊಂಟಕ್ಕೆ ಬಲ ಇಲ್ಲದೆ ಇರುವದು ಬೇದಿ ಮೂತ್ರ ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ, ಬಾಳುವಿಕೆಯನ್ನೂ ಕುಂದಿಸಿಬಿಡುವ ಈ ಆಪತ್ತುಗಳನ್ನು ಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1—4—0

ಶುದ್ಧ ಟಿಕ್ಚರು ಮದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ, ಆಫೀಸಿಗಳ ನಾನಾ ಬಗೆಯ ಸಾಮಾನುಗಳೂ, ಬಿಸಿಲಿಗೆ ಇವಕ್ಕೆ ಒಳ್ಳೇ ತರದ ಕನ್ನಡ ನಮ್ಮಲ್ಲಿ ನ್ಯಾಯವಾದ ಖರೀದಿಗೆ ದೊರಲ್ಪಡುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ —ಮಲೇರಿಯಾನ ಕಂಪೆನಿ,

52—28 ಹಂಪನಕಟ್ಟೆ, ಈಗರ್ಜಿಬಳಿ, ನಂಬರು 14, ಮಂಗಳೂರು

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ದವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,

ಉತ್ತರ ಕೊಡಗಿಗೆ ಮೆ, ಪಾಲೇಂಗಡ ಕಾರ್ಯಪ್ಪನವರು,
„ ಮೆ· ಚಾರಿರ ಮಾದೈಯ್ಯನವರು,
ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ಮೇದಪ್ಪನವರು,
„ ಮೆ ಅಮ್ಮಂಡ ಸುಬ್ಬಯ್ಯನವರು.
ಮರೆನಾಡು—ಮೆ. ಕೇಚಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಪೂವಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ–ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಯ್ಯನವ
„ ಮೆ ಸಣ್ಣುವಂಡ ಬೋಪ್ಪಯ್ಯನವ
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜೆ. ಮಾದಯ್ಯನವ
ಸುಂಟಿಕೊಪ್ಪ—ಮೆ ಅಪ್ಪಚಟ್ಟೋಳಂಡ ಮಾಚಯ್ಯನವ

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಜಿಸ್ಟ್ರಾರ್ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಟಿಕ್ಕರ್ ಸ್ಟೋರ್ಸಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ

Printed & published by P. I. Belliappa at "Kodagu" Press, Mercara for "Kodagu" Ltd.

"KODAGU" OFFICE MERCARA.
If not delivered please return to

ಕೊಡಗು.

ಸರ್ವೇಷ ಭೂತದಯಯಾ ವಿದ್ಯಾ ...

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೧೦ | ಮಡಿಕೇರಿ, ೧೯೩೧ನೇ ಇಸವಿ ಮೇ ತಾರೀಕು ೨೨ ನೇ ಶುಕ್ರವಾರ. | ಸಂಚಿಕೆ ೪೪

Telegrams — "Precious"

V. Subramaniyer Jeweller,

Telephone 3 1 - 5

DIAMOND MERCHANT GOLD & SILVERSMITH.

Deals in all:—
SPORTS CUPS in all prices
MEDALS in up to date patterns
CASKETS in elegant styles

No. 2 & 3, Kuppumuthu St.
TRUVATESWARANPET,
Post Box 523, Triplicane
MADRAS.

Deals in all:
GEM SET JEWELS, set with Diamonds Rubies etc,
GOLD ARTICLES of all patterns
SILVER WARE in latest style.

52-27



ಕಾಡು ಏರಿದರೆ ಆಗಿನ
ರಕ್ಷಣೆಗಾಗಿ ಉಪಯೋಗಿ
ಸಬೇಕಾದ ಕೋವಿ

GOOLAMHUSAIN ALIBHOY & SONS
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

54-8

ಬಾಲಾರ್ಕಮಧು.

ನಿಮ್ಮ ಮಕ್ಕಳ ಆರೋಗ್ಯವನ್ನು ಕಾಪಾಡಬೇಕಾದರೆ ... ಬಾಲಾರ್ಕಮಧುವನ್ನು ಕೊಡಿರಿ.



ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.

52-19

ಮಲೆ ಜ್ವರಕ್ಕೆ ರಾಮಬಾಣ ಕಷಾಯ

ಮನೋಲ್ಲಾಸಿನಿ ತೈಲ:— ...

ಚಂದನಾಸವ:— ...

ವಿಳಾಸ—ಮನೋಲ್ಲಾಸಿನಿ ಕಂಪೆನಿ, ೧. ಮಂಗಳೂರು.

52-2

ಕೊಡಗು.

ಸನ್ ೧೯೩೧ನೇ ಇಸವಿ

ಮೇ ತಾ. ೨೨ನೇ ಶುಕ್ರವಾರ.

ಲಾರ್ಡ್ ಇರ್ವಿನ್‌ರವರ ಭಾಷಣ.

ಲಾರ್ಡ್ ಇರ್ವಿನ್‌ರವರು ವೈಸರಾಯಿ ಪದವಿಯಿಂದ ನಿವೃತ್ತರಾಗಿ ಹಿಂದೂ ದೇಶದಿಂದ ಇಂಗ್ಲೆಂಡಿಗೆ ವಾಪಸು ಹೋದ ಮೇಲೆ ಇಂಡಿಯಾವನ್ನು ಕುರಿತು ತಮ್ಮ ಪ್ರಥಮ ಭಾಷಣವನ್ನು ತಾ. 15ರಲ್ಲಿ ಮಾಡಿದರು. ಇದು ಅವರ ಗೌರವಾರ್ಥವಾಗಿ ಬ್ರಿಟಿಷ್ ಇಂಡಿಯಾ ಯೂನಿಯನ್‌ರವರು ಕೊಟ್ಟ ಫಲಹಾರ ಕೂಟದಲ್ಲಿ ಆಗಿದೆ. ಹಿಂದೂದೇಶದಲ್ಲಿ ನಡೆಯುತ್ತಿದ್ದ ಅಹಿಂಸಾ ತತ್ವದ ಯುದ್ಧವನ್ನು ನಿಲ್ಲಿಸಿ ಶಾಂತಿಯನ್ನು ಸ್ಥಾಪಿಸಲು ಮಹಾತ್ಮ ಗಾಂಧಿಯವರೊಂದಿಗೆ ರಾಜಿ ಒಪ್ಪಂದವನ್ನು ಮಾಡಿದ ಇರ್ವಿನ್‌ರವರು ಇಂಗ್ಲೆಂಡಿಗೆ ಹೋದ ಮೇಲೂ ತಮ್ಮ ವಿಶ್ವಾಸವನ್ನು ಕಾಪಾಡಲು ಪ್ರಯತ್ನಿಸುತ್ತಿರುವರೆಂಬುದು ಅವರ ಮೇಲೆ ವಿಶ್ವಾಸವಿಟ್ಟಿದ್ದ ಹಲವರಿಗೆ ತೃಪ್ತಿಯನ್ನುಂಟುಮಾಡದೆ ಇರದು. ಹಿಂದೂದೇಶದಲ್ಲಿ ಉದ್ಯೋಗ ಮಾಡಿ ಪೆನ್ಶನ್ ಅನುಭವಿಸುತ್ತಿರುವ ಇಂಗ್ಲಿಷ್ ಮಹನೀಯರು ಹಲವರು ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡಬಾರದೆಂಬ ಉದ್ದೇಶದಿಂದ ಇಲ್ಲಿಯ ಈಗಿನ ಸ್ಥಿತಿಯನ್ನು ಅರಿತುಕೊಳ್ಳದೆ, ಇಂಡಿಯಾದಲ್ಲಿ ನಡೆಯುತ್ತಿರುವ ಸಂಗತಿಗಳ ಹೆಚ್ಚಿನ ಪರಿಚಯವಿಲ್ಲದ ಇಂಗ್ಲೆಂಡಿನ ಜನ ಸಮುದಾಯದಲ್ಲಿ ತಪ್ಪು ಅಭಿಪ್ರಾಯಗಳನ್ನು ಹಬ್ಬಿಸುತ್ತಿರುವರು. ವಂಚಕರಾಗಿದೆ ಇದರಿಂದ ಬ್ರಿಟನ್ನಿಗೂ, ಹಿಂದೂಸ್ಥಾನಕ್ಕೂ ತುಂಬಾ ಕೇಡು ಉಂಟಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ವೊನ್ನೆಯವರೆಗೆ ಇಂಡಿಯಾ ಸರಕಾರದ ಮುಖ್ಯ ಅಧಿಕಾರಿಯಾಗಿದ್ದು, ಹಿಂದೂಸ್ಥಾನದ ರಾಷ್ಟ್ರೀಯ ಚಳವಳಿಯ ಬಲವನ್ನು ಅರಿತಿರುವ ಲಾರ್ಡ್ ಇರ್ವಿನ್‌ರವರು ಇಲ್ಲಿಯ ಸಂಗತಿಗಳನ್ನು ಇದ್ದಕ್ಕಿದ್ದ ಹಾಗೆ ಬ್ರಿಟನ್ನಿನವರಿಗೆ ತಮ್ಮ ಭಾಷಣದಲ್ಲಿ ತಿಳಿಸಿದ್ದು ಅವರು ತಮ್ಮ ಮಾತೃ ಭೂಮಿಗೂ, ಹಿಂದೂಸ್ಥಾನಕ್ಕೂ ದೊಡ್ಡ ಸೇವೆ ಮಾಡಿದಂತಾಗಿದೆ. ಇದರಿಂದ ಇಂಡಿಯಾದಲ್ಲಿ ದ್ವಾಗ್ಗೆ ಹಿಂದೀಯರ ರಾಷ್ಟ್ರೀಯ ಅಭಿಲಾಷೆಗಳಿಗೆ ತೋರಿಸಿದ ಸಹಾನುಭೂತಿಯು ನಿಜವಾದದ್ದೆಂದು ಅವರು ಈಗ ಇಂಗ್ಲೆಂಡಿನಲ್ಲಿ ಘಂಟಾಘೋಷ ಮಾಡುತ್ತಿರುವರೆಂದರೆ ತಪ್ಪಾಗಲಾರದು.

ಹಿಂದೀಯರ ರಾಷ್ಟ್ರೀಯತ್ವ ಭಾವನೆಯು ಬಹು ಬಲವಾಗಿದೆಯೆಂದೂ, ಅದನ್ನು ದಬ್ಬಾಳಿಕೆಯಿಂದ ಅಡಗಿಸಬಹುದೆನ್ನುವ ರಾಜನೀತಿಯು ಪೂರಾತನದ್ದೂ, ಪ್ರಕೃತ ಸ್ಥಿತಿಗೆ ವಿರೋಧವಾದದ್ದು ಎಂದು ಸ್ಪಷ್ಟವಾಗಿ ಅವರು ಹೇಳಿರುವರು. ಹಿಂದೂದೇಶದ ಅದ್ವಿತೀಯ ಸ್ವಾತಂತ್ರ್ಯ ಚಳವಳಿಯನ್ನು ಪೊಲೀಸಿನವರ ಲಾಟಿ ಪೆಟ್ಟುಗಳಿಂದಲೂ, ಹಿಂಸಾ ರೀತಿಗಳಿಂದಲೂ ಸೋಲಿಸಲು ಸಾಧ್ಯವಾಗಲಿಲ್ಲವೆಂಬುದೂ, ಅಹಿಂಸಾ ತತ್ವದವರನ್ನು ಹಿಂಸೆಗೊಳಿಸಿದ್ದರಿಂದ ಆ ಚಳವಳಿಗೆ ವಿಶೇಷ ನೈತಿಕ ಬಲ ದೊರತು ಅದರ ಶಕ್ತಿಯು ಹೆಚ್ಚಿತೆಂಬುದೂ ಆಗ ವೈಸರಾಯರಾಗಿದ್ದ ಲಾರ್ಡ್ ಇರ್ವಿನ್‌ರವರಿಗೆ ಚೆನ್ನಾಗಿ ಗೊತ್ತಿದೆ. ಪರಸ್ಪರ ಒಡಂಬಡಿಕೆಯಿಂದ ಹಿಂದೂಸ್ಥಾನವನ್ನು ಸಮಾಧಾನಗೊಳಿಸಿ ಬ್ರಿಟಿಷ್ ಸಾಮ್ರಾಜ್ಯದೊಳಗೆ ಇಟ್ಟುಕೊಳ್ಳಲು ಸಾಧ್ಯವಲ್ಲದೆ ಅನ್ಯಥಾ ಅಲ್ಲವೆಂದು ಹೇಳಿದರು. ಸೈನ್ಯ ಬಲದಿಂದಲೂ, ಹಿಂಸಾ ಬಲದಿಂದಲೂ ಭಾರತ ಭೂಮಿಯನ್ನು ಕೈವಶದಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂಬುದನ್ನು ಬ್ರಿಟನ್ನಿನವರು ಎಷ್ಟು ಬೇಗನೆ ಅರಿತುಕೊಳ್ಳುವರೋ ಅಷ್ಟೂ ಅವರಿಗೆ ಪ್ರಯೋಜನವಾಗುವುದು. ದಬ್ಬಾಳಿಕೆಯಿಂದ ರಾಷ್ಟ್ರೀಯ ಚಳವಳಿಯನ್ನು ನಾಶಪಡಿಸಿ ಶಾಂತತೆಯನ್ನು ಸ್ಥಾಪಿಸಲು ಸಾಧ್ಯವಾದರೂ, ಆ ಶಾಂತತೆಯು ನಿಜವಾದದ್ದಲ್ಲವೆಂತಲೂ, ಅದು ಬಹುಕಾಲ ಇರಲಾರದೆಂತಲೂ ಹೇಳಿರುವ ಇರ್ವಿನ್‌ರವರ ಅಭಿಪ್ರಾಯಕ್ಕೆ ವಿರೋಧಿಗಳೂ ಸಹ ಒಪ್ಪಬೇಕಾಗಿದೆ.

ಶಾಸನಬದ್ಧವಾದ ರಕ್ಷಣೋಪಾಯಗಳಿಗೆ ಹಿಂದೀಯರು ಒಪ್ಪಲು ತಯಾರಾಗಿರುವರೆಂದೂ, ಆದರೆ ಅವುಗಳೆಲ್ಲವೂ ಹಿಂದೂಸ್ಥಾನದ ಹಿತಕ್ಕಾಗಿರಬೇಕೆಂದೂ ಅವರಿಗೆ ವಿಶ್ವಾಸವಿರಬೇಕೆಂದೂ ಮಹಾತ್ಮ ಗಾಂಧಿಯವರು ಲಂಡನ್ನಿಗೆ ಹೋಗುವುದಕ್ಕೆ ಯಾವ ರಕ್ಷಣೋಪಾಯಕ್ಕೂ ಒಪ್ಪಲಾರರೆಂದು ಹುಟ್ಟಿರುವ ಶಂಕೆಯು ನಿರಾಧಾರವಾದದ್ದೆಂತಲೂ ಮುಂತಾಗಿ ಹೇಳಿ ಇರ್ವಿನ್‌ರವರು ಇಂಗ್ಲೆಂಡಿನ ಜನರ ಮನಸ್ಸಿನಲ್ಲಿ ಆಗಿರುವ ತಪ್ಪು ಭಾವನೆಗಳನ್ನು, ಸಂಶಯಗಳನ್ನು ನಿವಾರಿಸಲು ಯತ್ನಿಸಿರುವರು. ಭಾರತ ಭೂಮಿಯ ಹಿತಾಪೇಕ್ಷೆಯಿಂದ ಮಾಡಲ್ಪಡುವ ರಕ್ಷಣೋಪಾಯಗಳಿಗೆ ಹಿಂದೀಯರು ಒಪ್ಪದೆ ಇರಲು ಕಾರಣವಿಲ್ಲ. ಆದರೆ ಅವು ಬ್ರಿಟನ್ನಿನ ಪ್ರಯೋಜನಾರ್ಥವಾಗಿ ಮಾತ್ರ ಮಾಡಲ್ಪಟ್ಟರೆ ಸ್ವಾತಂತ್ರ್ಯವಾದಿಗಳಾದ ಹಿಂದೀಯರು ಅವುಗಳಿಗೆ ಹೇಗೆ ತಾನೇ ಒಪ್ಪುವರು? ಸ್ವಾತಂತ್ರ್ಯವಾದಿ ಬ್ರಿಟಿಷರು ಆಂಥಾವುಗಳಿಗೆ ಒಪ್ಪಿಕೊಳ್ಳಬೇಕೆಂದು ಹಿಂದೀಯರನ್ನು ಕೇಳುವುದು ತಾನೇ ಹೇಗೆ? ರಕ್ಷಣೋಪಾಯಗಳನ್ನು ಕುರಿತು ಹಲವರು ಅನೇಕ ವಿಧದ ಅರ್ಥವನ್ನು ಮಾಡುತ್ತಿರುವರು. ಆದರೆ ರಾಜಿ ಒಪ್ಪಂದವನ್ನು ಹೊರಿಸಿದ ಲಾರ್ಡ್ ಇರ್ವಿನ್‌ರವರೇ ಮಹಾತ್ಮ ಗಾಂಧಿಯವರಂತೆ ಅವು ಅಂದರೆ ರಕ್ಷಣೋಪಾಯಗಳು ಹಿಂದೂದೇಶದ ಹಿತಾಪೇಕ್ಷೆಯುಳ್ಳವಾಗಿರಬೇಕೆಂದು ವಿವರವಾಗಿ ಹೇಳಿರುವುದರಿಂದ ಅವುಗಳಿಗೆ ಬೇರೆ ಅರ್ಥವನ್ನು ಕಟ್ಟುವ ಅಧಿಕಾರವು ಬೇರೆ ಯಾರಿಗೂ ಇರುವುದಿಲ್ಲ.

ಹಿಂದೂದೇಶಕ್ಕೆ ತನ್ನ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವ ಅಭಿಲಾಷೆಯು ಬಲವಾಗಿರುವುದು ಸ್ವಾಭಾವಿಕವೆಂತಲೂ, ಹಿಂದೂದೇಶದ ಆರ್ಥಿಕ ಸ್ಥಿತಿಯು ಚೆನ್ನಾಗಿರುವುದರಿಂದ ಅದು ತೊಂದುಕೊಳ್ಳುವ ಶಕ್ತಿಯು ಹೆಚ್ಚುವುದೆಂತಲೂ, ವ್ಯಾಪಾರವು ಸ್ನೇಹಾಚಾರದಲ್ಲಿ ಬೆಳೆಯಬೇಕಲ್ಲದೆ ಅನ್ಯಥಾ ಅಲ್ಲವೆಂತಲೂ, ಇಂಡಿಯಾದಲ್ಲಿ ಬ್ರಿಟಿಷ್ ವ್ಯಾಪಾರಸ್ಥರು ಜಕೀಯ ಚಳವಳಿಯ ಅಭ್ಯಿ ಇಲ್ಲದೆ ವಾಡಿಕೆಯಾಗಿ ನಡೆಯುವಂತೆ ಇಂಡಿಯಾದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಗುವುದೆಂತಲೂ ಇರ್ವಿನ್‌ರವರು ತಮ್ಮ ಭಾಷಣದಲ್ಲಿ ಸೂಚಿಸಿರುವರು. ಬ್ರಿಟನ್ನಿನವರು ಹಿಂದೂದೇಶವನ್ನು ಇಷ್ಟರವರೆಗೆ ಆಳುತ್ತಿದ್ದದ್ದು ತಮ್ಮ ವ್ಯಾಪಾರದ ಪ್ರಯೋಜನಕ್ಕೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ದೀರ್ಘ ನಿದ್ರೆಯಿಂದ ಎಚ್ಚತ್ತಿರುವ ಭಾರತ ಭೂಮಿಯನ್ನು ಇನ್ನು ಮುಂದೆ ಬ್ರಿಟನ್ನಿನ ವ್ಯಾಪಾರಕ್ಕಾಗಿ ಕೈವಶದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲವೆಂದು ಕೆಲವು ಬ್ರಿಟಿಷ್ ಮುಖಂಡರೂ ಸಹ ಅರಿತುಕೊಂಡಿರುವರು. ಆದ ಕಾರಣ ಪಂಡಿತ ಜವಾಹರ ಲಾಲರು ಇಂಡಿಯಾದವರನ್ನು ಬಿಡಬಾರದೆಂದು ಇಂಗ್ಲೆಂಡಿನ ಅಲ್ಲಂಕಶಯರುನವರು ಬೊಬ್ಬೆ ಹಾಕುತ್ತಿರುವುದರಿಂದ ಪ್ರಯೋಜನವೇನು ಆಗಲಾರದು. ಹಿಂದೀಯರು ಕಳೆದ ಒಂದೂವರೆ ಕತವಾರದಿಂದ ಬ್ರಿಟಿಷರ ರಾಜನೀತಿಯಿಂದ ತಮ್ಮನ್ನು ಸಾರವನ್ನು ಕಲಿತಿರುವರು. ತಮ್ಮ ಹೊಟ್ಟೆ ಹಸಿವನ್ನು ಹೇಗೆ ನಿವಾರಿಸಿಕೊಳ್ಳಬಹುದೆಂತ ಹಿಂದೀಯರಿಗೆ ಗೊತ್ತಾಗಿದೆ. ಲ್ಯಾಂಕಶಯರಿನ ಬಟ್ಟೆಯನ್ನು ಕೊಂಡುಕೊಂಡರೆ ತಮ್ಮ ಹೊಟ್ಟೆ ತುಂಬುವುದಿಲ್ಲವೆಂಬುದನ್ನೂ ಹಿಂದೀಯರು ಅರಿತುಕೊಂಡಿರುವರು. ಆದಕಾರಣ ಲ್ಯಾಂಕಶಯರಿನವರು ಬೆಟಲಿಕೆಗೆ ಈಗ ಯಾರೂ ಹೆದರುವಂತಿಲ್ಲ. ಇಂಡಿಯಾದಲ್ಲಿಯೂ ತಮ್ಮಾರಿಗಿಂತಲೂ ಎಷ್ಟೋ ಹೆಚ್ಚಿನ ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವರೆಂಬದನ್ನು ಲ್ಯಾಂಕಶಯರಿನವರು ಅರಿತುಕೊಂಡು, ಇಂಡಿಯಾದವರೊಂದಿಗೆ ಸ್ನೇಹಭಾವದಿಂದ ವರ್ತಿಸಿ, ತಮ್ಮ ವ್ಯಾಪಾರಕ್ಕೆ ಅನುಕೂಲ ಕಲ್ಪಿಸಿಕೊಳ್ಳಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲವೆಂಬುದನ್ನು ಇರ್ವಿನ್‌ರವರ ಭಾಷಣದಿಂದಾದರೂ ತಿಳಿದುಕೊಳ್ಳುವರೇ?

ಲಾರ್ಡ್ ಇರ್ವಿನ್‌ರವರ ಭಾಷಣವು ಈ ಬಿಕ್ಕಟ್ಟಿನ ಸಮಯದಲ್ಲಿ ಇಂಗ್ಲೀಷರಿಗೆ ಇಂಡಿಯಾದ ಈಗಿನ ಸ್ಥಿತಿಯ ಮೇಲೆ ಇರುವ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸಲಿಕ್ಕೂ, ಹಿಂದೀಯರಿಗೆ ಗಾಂಧಿ—ಇರ್ವಿನ್ ಒಪ್ಪಂದದ ಮೇಲೆ ಇದ್ದ ಸಂಶಯಗಳನ್ನು ನಿವಾರಿಸಲಿಕ್ಕೂ ತುಂಬಾ ಸಹಾಯವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಈಗಿನ ವೈಸರಾಯರಾದ ಲಾರ್ಡ್ ವೆಲ್ಲಿಂಗ್ಟನ್‌ರವರೂ, ಅವರ ಕಾರ್ಯದರ್ಶಿಗಳೂ ಇರ್ವಿನ್‌ರವರ ತತ್ವವನ್ನು ಹಿಂಬಾಲಿಸಿಯೂ, ಬ್ರಿಟನ್ನಿನ ಮುಂದಾಳುಗಳು ಇರ್ವಿನ್‌ರವರ ಸೂಚನೆಗಳನ್ನು ಅನುಸರಿಸಿಯೂ ನಡೆದರೇನೇ ಈಗ ತತ್ಕಾಲ ಸ್ಥಾಪಿತವಾಗಿರುವ ಶಾಂತಿಯು ಖಾಯಂ ಆಗುವುದಲ್ಲದೆ ಅನ್ಯಥಾ ಅಲ್ಲವೆಂದು ಎಷ್ಟು ಒತ್ತಿ ಹೇಳಿದರೂ ಸಾಲದು.

ಜನರ ಆರ್ಥಿಕ ಸಂಕಟ.

ಒಟ್ಟು ಪ್ರಪಂಚದಲ್ಲಿಯೋ ಕೊಡಗಿನಲ್ಲೂ ಈಗ ಜನರು ಅತಿ ಕಠಿಣ ಆರ್ಥಿಕ ಸಂಕಟಕ್ಕೆ ಗುರಿಯಾಗಿದ್ದಾರೆ. ತಾವು ಬೆಳೆಯುವ ಭತ್ತ, ಏಲಕ್ಕಿ, ಕಾಫಿ, ಒಳ್ಳೆ ಮೆಣಸಿಗೆ ಸರಿಯಾದ ಕ್ರಯವಿಲ್ಲ. ಕಾಫಿ ಮುಂತಾದ ತೋಟದ ಪಸಲು ವ್ಯವಸಾಯ ಮಾಡುವವರು ಸಂಚೆ ಕವಿದಿರುವುದರಿಂದ ಅವರ ಆರ್ಥಿಕ ಜವಾಬ್ದಾರಿಯು ಹೆಚ್ಚಿರದು. ಹೆಚ್ಚಾಗಿ ಬೆಳೆ ಬರುವ ಭತ್ತಕ್ಕೆ ಕ್ರಯವು ಇನ್ನು ಇಳಿಯುತ್ತಲೇ ಹೋಗಿದ್ದರಿಂದ ಜನರು ಮುಂದಿನ ಜೀವನ ಮತ್ತು ವ್ಯವಸಾಯದ ಹಾದಿಯು ಬಹು ತೊಡಕಾಗಿ ಕಾಣುತ್ತದೆ. ಅದರಲ್ಲಿ ಕೊಡಗಿಗೆ ಪರಾಧೀನವಾದ ಪ್ಲೇಗ್ ಮತ್ತು ವಾಂತಿಭೇದಿಯ ಹಾವಳಿ ಮೊದಲಾಗಿ ಇರುವುದರಿಂದ ಬತ್ತದ ಮಾರಾಟಕ್ಕೆ ತುಂಬಾ ತೊಂದರೆಯಾಗಿದೆ. ದಕ್ಷಿಣ ಕೊಡಗಿನ ಭತ್ತದ ವ್ಯಾಪಾರದ ಮುಖ್ಯ ಸ್ಥಳವಾದ ಪೊನ್ನಂಪೇಟೆಯಲ್ಲಿ ವಾಂತಿಭೇದಿ ರೋಗವು ಬಿದ್ದಿರುವುದರಿಂದ ಅಲ್ಲಿನ ಭತ್ತದ ವ್ಯಾಪಾರಿಗಳಿಗಾದ ನಷ್ಟವು ಸಾಧಾರಣ ಎಲ್ಲರಿಗೂ ಬಾಧಕವಾಗಿ ಹೋಗಿಬಿದ್ದಿದೆ. ಇವಲ್ಲಿ ಅನೇಕರಿಗೆ ಆ ಪ್ರಾಂತ್ಯದ ಜನರು ಭತ್ತವನ್ನು ಮುಂದಾಗಿಯೇ ಕೊಟ್ಟಿದ್ದಾರೆ. ಅದ್ದರಿಂದ ಕೊಟ್ಟ ಭತ್ತಕ್ಕೆ ಹಣ ಬೇಗನೆ ಸಿಕ್ಕುವಂತಿಲ್ಲ. ಕೊಡದೆ ಇರುವ ಭತ್ತವನ್ನು ಕೊಂಡುಕೊಳ್ಳುವವರು ಇಲ್ಲದ್ದರಿಂದ ಕ್ರಯವಿಲ್ಲ.

ಜನರ ಈ ಕಷ್ಟ ನಿವಾರಣೆಗೆ ಸರಕಾರದ ಸಹಾಯವು ಸಿಕ್ಕಬೇಕಾದಂತೆ ಸಿಕ್ಕುತ್ತಿಲ್ಲ. ಕಂದಾಯವನ್ನು ಕಂತಿಗೆ ಬಂದಿಗೆ ಕಟ್ಟದಿದ್ದರೂ ಪ್ರೋಸೆಸ್ ಫೀಸ್, ಜಪ್ತಿ ವಾರಂಟ್ ಮುಂತಾದ ನಿರ್ಬಂಧಗಳೇನೂ ಈ ವರೆಗೆ ಪ್ರಾರಂಭಿಸದೆ ಇದ್ದದ್ದು ಕರುಣೆಯೋ ಏನೋ ಆಗಿದೆ. ಇದಕ್ಕೆ ದೇಶದ ಧನ್ಯವಾದವಿದೆ. ಗುದ್ದಿನ ಕೈತರಿಗೂ ಉಂಟಾಗಿರುವ ಆರ್ಥಿಕ ಸಂಕಟವನ್ನು ಪರಿಹರಿಸಲು ಉಪಾಯಗಳನ್ನು ಸೂಚಿಸಲು ಮದ್ರಾಸ್ ಸರಕಾರದವರು ಕಳೆದ ಫೆಬ್ರವರಿ ತಿಂಗಳಲ್ಲಿ ಒಂದು ಕಮಿಟಿಯನ್ನು ನೇಮಿಸಿದ್ದರು. ಆ ಕಮಿಟಿಯವರ ವರದಿಯು ಈಗ ಪ್ರಕಟವಾಗಿದೆಯಂತೆ. ಆ ವರದಿಯನ್ನು ನೋಡಲು ನಮಗೆ ದೊರಕದಿದ್ದರೂ ಅದರ ಸಿಫಾರಸ್ಸುಗಳು ಮದ್ರಾಸ್ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಜನರ ಮೇಲೆ ಬಿದ್ದಿರುವ ಭೂಮಿ ಕಂದಾಯವನ್ನು ತಾತ್ಕಾಲಿಕ ಹೊರಲು ಸಾಧ್ಯವಿಲ್ಲದ ಹೊರೆಗಳನ್ನು ಹೆಚ್ಚಿಸದ ಜನರ ಕಷ್ಟವು ಹೆಚ್ಚಾಗಿದೆಯೋ ಎಂಬುದನ್ನು ಸ್ಪಷ್ಟಪಡಿಸಬೇಕೆಂತ ಸರಕಾರದವರೂ ಕೇಳಿಕೊಂಡಿರುವ ಕಮಿಟಿಯವರು ಅದನ್ನು ಅಜಮಾಯಿಸಿಯೂ ಇದ್ದಾರೆ.

ಈ ಕಮಿಟಿಯು ಜನರು ಬೆಳೆಸುವ ಮತ್ತು ಕೈಗಾರಿಕೆ ತಯಾರಿಸುವ ಮಾಲುಗಳನ್ನು ಮಾರಾಟಕ್ಕೆ ಅನುಕೂಲವಾಗುವಂತೆ ಸಹಕಾರಿ ಇಟ್ಟು ಮಾರಾಟ ಮಾಡುವ ಸಹಕಾರ ಸಂಘಗಳನ್ನು ಹೆಚ್ಚಾಗಿ ಏರ್ಪಡಿಸಿಕೊಡಬೇಕೆಂತಲೂ, ಸರಕಾರದವರೆ ಮಾಲುಗಳ ಗುಂಡಿಗಳನ್ನು ಏರ್ಪಡಿಸಿ, ತಂದು ಕೊಡುವ ಮಾಲುಗಳನ್ನು ಇಟ್ಟುಕೊಂಡು ಅದಕ್ಕೆ ತಗಲುವ ಕಟ್ಟು ಅಂಥಾ ರಶೀತಿಗಳ ಆಧಾರದಿಂದ ಸಾಲ ಕೊಡುವ ಕೆಲವು ಆನುಕೂಲ ಸೂಚಿಸಿರುವದಲ್ಲದೆ, ಜನರಿಗೆ ವ್ಯವಸಾಯದ ಖರ್ಚಿಗೆ ಬೇಕಾಗುವ ಹಣವನ್ನು ಕಡಿಮೆ ಬಡ್ಡಿಯ ಸಾಲವಾಗಿ ಧಾರಾಳವಾಗಿ ಸರಕಾರವು ಕೊಡಬೇಕೆಂದು ಕೆಲವು ಅಭಿಪ್ರಾಯಗಳನ್ನು ಸೂಚಿಸಿದೆ. ವ್ಯವಸಾಯ ಕೈಗಾರಿಕಾ ಸಾಲಗಳನ್ನು ಏರ್ಪಡಿಸಿಕೊಡಲು ಅಧೀನವಾದ ಸಂಘಗಳನ್ನು ಸ್ಥಾಪಿಸಿಕೊಡಬೇಕೆಂತಲೂ ಇದ್ದೊಂದ. ಸಹಕಾರ ಸಂಘಗಳು ದೇಶದಲ್ಲಿ ಧಾನ್ಯಗಳನ್ನು ಶೇಖರಿಸಿಟ್ಟುಕೊಳ್ಳುವ ಮತ್ತು ಹಣ ಸಾಲ ಕೊಡುವ ಸಂಘಗಳು ಬೇಕೆಂದು ಇವೆ. ಅನ್ನಾ ಬೇಳೆ ಮತ್ತು ಸಹಾಯ ಕೊಡುವುದು ಕಡಿಮೆಯಾಗಿಲ್ಲ. ಈಗ ಇರುವ ಇಂಥಾ ಸಂಘಗಳು ಒಳ್ಳೆಯದಕ್ಕೂ, ಇಲ್ಲದ ಸ್ಥಳಗಳಲ್ಲಿ ಏರ್ಪಡಿಸಲ್ಪಡುವ ಕೋ-ಆಪರೇಟಿವ್ ರಿಜಿಸ್ಟ್ರಾರರ ಮೂಲಕ ತತ್ಕಾಲ ಮಾಡುವ ಕಟ್ಟಡಗಳ ಧಾನ್ಯದ ಮಾರಾಟದ ಸಹಾಯವು ನಮ್ಮ ದೇಶದಲ್ಲಿ ಬೇರೆ ಅಧಿಕಾರಿಗಳ ಅವಶ್ಯಕತೆ ಕೋ-ಆಪರೇಟಿವ್ ಇಲಾಖೆಯ ಅಧಿಕಾರಿಗಳು ಈ ವಿಷಯದಲ್ಲಿ ಸಹಾಯವಾಗಬಹುದು.

ಟಿಕಾರಿ ಸಾಲದ ಸಹಾಯವಿಲ್ಲದೆ ಮುಂದಿನ ವ್ಯವಸಾಯವು ಮಾಡುವುದು ಅನೇಕರಿಗೆ ಕಷ್ಟವಾಗಬಹುದು. ಕಂದಾಯವನ್ನೂ ನಮ್ಮ ದೇಶದ ಸರಕಾರವು ಸಾಕಷ್ಟು ಕಡಿಮೆ ಮಾಡಬೇಕು. ಸಹಕಾರ ಸಂಘಗಳ ಮೂಲಕ ಜನರಿಗೆ ಸಾಲ ಕೊಡಲು ಅನುಕೂಲವಾಗುವಂತೆ ಸರಕಾರವು ಹೆಚ್ಚಿನ ಸಾಲ ಕೊಡಬೇಕೆಂತ ಮುಂತಾದ ಸಲಹೆಯನ್ನು ಇಪ್ಪೊಂದು ತಿಳಿಸಿದ್ದನ್ನು ಇವೆ. ಇದನ್ನು ಸರಕಾರವು ಜಾರಿಗೆ ತರಬೇಕು.

ಸ್ವದೇಶದ ಬೆಲ್ಲ, ಸಕ್ಕರೆ ತಯಾರಿಗೆ ಉತ್ತೇಜನ ಕೊಡುವಂತೆ ಸಂದೇಶಿ ಸಕ್ಕರೆಗೆ ಹೆಚ್ಚಿನ ಸುಂಕ ಹಾಕಬೇಕೆಂದೂ ಕಮಿಟಿಯ ಸಲಹೆ. ಇದರಿಂದ ಸಹಜ, ನಮ್ಮ ಈ ಪೇಟೆಯಲ್ಲಿ ಬೆಲ್ಲ, ಸಕ್ಕರೆ ತಯಾರಿಯೂ ಜೀವನೋಪಾಯವು ಇಲ್ಲದಿರುವವರ ವಿಷಯದಲ್ಲಿ ಸಂದೇಹವು ಇಲ್ಲದಿರದು. ಜನರಿಗೆ ದೊರೆಯುವ ಎಣ್ಣೆ ಬೀಜಗಳಿಂದ ಎಣ್ಣೆ ತಯಾರಿಸಿ ಸರಕಾರವು ಉತ್ತೇಜನ ಕೊಡಬೇಕೆಂದು ಸೂಚಿಸಿದೆ. ಈ ಬಾಬಿನಲ್ಲಿ ಅನುಭವಿಸುವವರಿಗೆ, ಸಹಾಯಕ್ಕೂ ಸರಕಾರವು ತಯಾರಾಗುವ ಎಂದು ಹೇಳಬೇಕಾದದ್ದು ಅವಶ್ಯವಾಗಿದೆ. ಕಾರಣ ದೇಶವಾದ ಇಲ್ಲಿ ಎಣ್ಣೆ ಇರುವ ಅನೇಕ ಗಿಡಗಳೂ ಕಾಯಿಗಳೂ ಇವೆ. ಪೂರ್ವ ಕಾಲದಿಂದಲೂ ಅಂದವರು ಈ ದೇಶದ ಜನರು ಎಣ್ಣೆ ತೆಗೆದು ದೀಪಕ್ಕೂ, ತಿನ್ನಲಿಕ್ಕೂ ಔಷಧಿಗೂ ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಸೀಮೆ ಎಣ್ಣೆ ಬಂದುದರಿಂದ ಈ ಕಸಬು ಕಡಿಮೆಯಾಗಿದೆ. ಎಣ್ಣೆ ಬೀಜಗಳಿಂದ ಪ್ರಯೋಜನವಾದ ಎಣ್ಣೆಯನ್ನು ತೆಗೆಯುವಂತೆ ಎಣ್ಣೆ ತೆಗೆಯುವ ಯಂತ್ರಗಳನ್ನು ಸರಕಾರವು ಒದಗಿಸುವುದು ಬಹು ಅಗತ್ಯ.

ಮದ್ರಾಸ್ ಕಮಿಟಿಯ ಶಿಫಾರಸುಗಳನ್ನು ಎಷ್ಟರ ಮಟ್ಟಿಗೆ ಜಾರಿಗೆ ತರುತ್ತಾರೆಂತ ಗೊತ್ತಿಲ್ಲ. ನಮ್ಮ ದೇಶದ ಅಧಿಕಾರಿಗಳೂ ಸಹ ಈ ವಿಷಯದಲ್ಲಿ ಆಲೋಚಿಸಿ ಕೂಡಲೇ ಜನರ ಸಂಕಟ ಪರಿಹಾರಕ್ಕೆ ಸಹಾಯ ಮಾಡುವರೆಂದು ನಂಬುತ್ತೇವೆ.

ಓರಿಯಂಟಲ್ ಜೀವವಿಮೆ ಕಂಪೆನಿ.

ಮೇಲಿನ ಕಂಪೆನಿಯ 1930ನೇ ವರ್ಷದ ವರದಿಯು ಪ್ರಕಟವಾಗಿದೆ. 1930ರಲ್ಲಿ ಹಿಂದೂಸ್ಥಾನದಲ್ಲಿ ನಡೆದ ರಾಜಕೀಯ ಚಳವಳಿಯಿಂದಲೂ, ಆರ್ಥಿಕ ಸ್ಥಿತಿಯ ಏರುಪೇರಿನಿಂದಲೂ ಓರಿಯಂಟಲ್ ಜೀವವಿಮೆ ಕಂಪೆನಿಯು ಕೆಲಸಕ್ಕೆ ಪೆಟ್ಟು ತಗಲಿದೆ. ವರದಿಯ ವರ್ಷದಲ್ಲಿ 544 ರೂಪಾಯಿಯ 20,481 ಪಾಲಿಸಿಗಳು ಮಾತ್ರ ಸೇರಿಸಲ್ಪಟ್ಟಿವೆ. ಇದು 1929ರದ್ದಕ್ಕಿಂತ 105 ಲಕ್ಷ ರೂ. ಅಂದರೆ ನೂರಕ್ಕೆ ಶೇಕಡ 16ರಷ್ಟು ಕಡಿಮೆ. ಆದರೆ 1930ರಲ್ಲಿ ಒಟ್ಟು ಪ್ರೀಮಿಯಮ್ಮಿನ ವರಮಾನವು 179 ಲಕ್ಷ ರೂ. ಅಂದರೆ ಹಿಂದಿನ ವರ್ಷಕ್ಕಿಂತ 18 ಲಕ್ಷ ರೂ. ಹೆಚ್ಚು. ವರದಿಯ ವರ್ಷದಲ್ಲಿ ದೇಶದ ಆರ್ಥಿಕ ಸ್ಥಿತಿಯು ಬಹಳ ಮಟ್ಟಿಗೆ ಕೆಟ್ಟು ಹೋಗಿದ್ದರೂ 18 ಲಕ್ಷ ರೂ. ಹೆಚ್ಚಿದ್ದು ವಿಶೇಷವೇ. 1930ರಲ್ಲಿ ಬಡ್ಡಿಯ ಉತ್ಪತ್ತಿಯು 53 ಲಕ್ಷ ರೂ. ಇದು ಹಿಂದಿನ ವರ್ಷಕ್ಕಿಂತ 5 ಲಕ್ಷ ರೂ. ಹೆಚ್ಚಾಗಿದೆ. ಕಂಪೆನಿಯ ಖರ್ಚು ಪ್ರೀಮಿಯಂ ಉತ್ಪತ್ತಿಯ ಶೇಕಡ 22.4 ಇಳಿದಿದೆ. ಅಂದರೆ ಹಿಂದಿನ ವರ್ಷದಕ್ಕಿಂತ ಶೇಕಡ 1.4 ಕಡಿಮೆಯಾಗಿರುವುದು. 1930ರಲ್ಲಿ 3281 ವಿಮೆದಾರರಿಗೆ 81 ಲಕ್ಷ ರೂ. ಕೊಟ್ಟಿದ್ದಾರೆ. ಕಂಪೆನಿಯ ಭಂಡವಾಳವು ಸುಮಾರು 101 ಲಕ್ಷ ಹೆಚ್ಚಿದೆ. ಇದು ತೃಪ್ತಿಕರವಾದ ವಿಷಯ. ಮುಂದಿನ ವರ್ಷ ಕಂಪೆನಿಯ ಕೆಲಸವು ಬಹು ಚೆನ್ನಾಗಿ ನಡೆದೀತೆಂತ ನಂಬುತ್ತೇವೆ.

Rubber Stamps of every design
and
Glass sign boards. Half tone Blocks.
Monogram seals. Marble slabs. ring
stones etc etc. to suit. every pocket and
taste. For further particulars please
apply to:—

The Crown Rubber Stamp Co.,
Mangalore, S. K.
Or
Mr. N. N. Ponnappa,
Agent,
12-8 **Mercara.**

ಬಿನ್ನಹ.

(ಎಲ್ಲ ಕಾಂಗ್ರೆಸ್ ಕಾರ್ಯದರ್ಶಿಗಳಿಗೆ)

ರಾಷ್ಟ್ರದಲ್ಲಿ ಸತ್ಯಾಗ್ರಹ ಸಂಗ್ರಾಮವು ಭರದಿಂದ ಸಾಗಿದಾಗ ಎಷ್ಟೋ ಕಾಂಗ್ರೆಸ್ ಕೆಲಸಗಾರರು ಸೆರೆಮನೆಗಳನ್ನು ಸೇರಿದರು. ಕಾಂಗ್ರೆಸ್ ಕಮಿಟಿಗಳು ಶಾಸನ ವಿರುದ್ಧ ಆದವು. ಅಂಥಾ ಪ್ರಸಂಗದಲ್ಲಿ ಮುಖ್ಯ ಕಚೇರಿಯ ಕಾರ್ಯದರ್ಶಿಗಳು ಕಾಂಗ್ರೆಸ್ ಕಮಿಟಿಗಳ ಕೂಡ ಪತ್ರವ್ಯವಹಾರ ಸಂಬಂಧಗಳನ್ನಿಡದೆ ಆಯಾ ಸ್ಥಳಗಳ ಕೆಲವು ಸಜ್ಜನರ ಕೂಡ ಪತ್ರವ್ಯವಹಾರ ಮಾಡಿ ಅವರ ಮೂಲಕ ಕಾಂಗ್ರೆಸ್ಸಿನ ಕಾರ್ಯವನ್ನೂ, ಸತ್ಯಾಗ್ರಹದ ಸಂಗ್ರಾಮದ ಕೆಲಸವನ್ನೂ ಮುಂದುವರಿಸಬೇಕಾಯಿತು. ಆದರೆ ಈಗ ಆ ಪರಿಸ್ಥಿತಿ ಇಲ್ಲ. ಯುದ್ಧವು ತಡೆದಿರುವುದು. ಕಾಂಗ್ರೆಸ್ ಕಮಿಟಿಗಳು ಕಾಂಗ್ರೆಸ್ಸಿನವರ ಕೈ ಸೇರಿರುವವು. ಆದುದರಿಂದ ಈಗ ಮೊದಲಿನಂತೆ ವ್ಯಕ್ತಿಶಃ ಸಂಬಂಧವನ್ನಿಟ್ಟಂತೆ ಈಗ ಇಡಬಾರದು. ಇಟ್ಟರೆ ಕಾಗದ ಪತ್ರಗಳು ವೇಳೆಗೆ ಸರಿಯಾಗಿ ನಮಗೆ ಸಿಗದೆ ಕಾರ್ಯದಲ್ಲಿ ತೊಂದರೆಯಾಗುವುದು. ಆದ್ದರಿಂದ ಪ್ರತಿಯೊಂದು ಕಾಂಗ್ರೆಸ್ ಕಮಿಟಿಯವರು ಕಾರ್ಯದರ್ಶಿ, ಕಾಂಗ್ರೆಸ್ ಕಮಿಟಿ ಎಂದು ಪತ್ರವ್ಯವಹಾರ ಮಾಡಬೇಕು. ವ್ಯಕ್ತಿಶಃ ಪತ್ರವ್ಯವಹಾರದ ಸಂಬಂಧವನ್ನಿಡಬಾರದು.

ಎಲ್ಲೆಲ್ಲಿ ಈ ವೇಳೆಗೆ ಕಾಂಗ್ರೆಸ್ ಕಮಿಟಿಗಳು ಇರುವವೋ, ಇನ್ನು ಮುಂದೆ ಸ್ಥಾಪಿಸಲ್ಪಡುವವೋ ಅಲ್ಲಲ್ಲಿ ಕಾಂಗ್ರೆಸ್ ಕಮಿಟಿಗಳಿಗೆ ಪ್ರತ್ಯೇಕವಾಗಿ ಒಂದು ಕಾರ್ಯಾಲಯ (ಆಫೀಸು) ಇರಬೇಕು. ಇದಕ್ಕೆ ಹೆಸರಿನ ಬೋರ್ಡು ಹಚ್ಚಿರಬೇಕು. ಒಳಗೆ ಆಯಾ ತಾಲೂಕಿನ ನಕಾಶೆಯೊಂದು ತೂಗಾಡುತ್ತಿರಬೇಕು. ರಾಷ್ಟ್ರ ವೀರರ ಭಾವ ಚಿತ್ರಗಳಿಂದ ಅಲಂಕರಿಸಲ್ಪಟ್ಟಿರಬೇಕು. ಕಾಂಗ್ರೆಸ್ ಕೆಲಸಗಾರರೆಲ್ಲ ಅಲ್ಲಿಯೇ ಕಾರ್ಯ ಮಾಡಬೇಕು. ಕಾಗದ ಪತ್ರಗಳನ್ನು ಅಲ್ಲಿಯೇ ಇಡಬೇಕು. ಕಾಂಗ್ರೆಸ್ ಕಮಿಟಿಗಳನ್ನು ಪ್ರವೇಶ ಮಾಡಿದ ಕೂಡಲೇ ಪ್ರತಿಯೊಬ್ಬರಿಗೂ ಇದು ಕಾಂಗ್ರೆಸ್ ಸರ್ಕಾರದ ಕಚೇರಿಯೆಂದು ಅನಿಸಬೇಕು. ಇಷ್ಟು ಕಾಂಗ್ರೆಸ್ ಕಚೇರಿಯಲ್ಲಿ ವ್ಯವಸ್ಥೆ ಇರಬೇಕು. ಮತ್ತು ವೇಳೆಗೆ ಸರಿಯಾಗಿ ಕೆಲಸಗಳು ನಡೆಯಬೇಕು. ಶಿಸ್ತಿನಿಂದ, ಸುಸಂಘಟನೆಯಿಂದ ಕಾರ್ಯವನ್ನು ನಡಿಸಿದರೆ ಮಾಡಿದ ಕಾರ್ಯವು ಬಹುದಿನ ಬಾಳುವದಲ್ಲದೆ, ಬಹು ಸಮಯದಲ್ಲಿ ಆಗಬೇಕಾದ ಕಾರ್ಯವು ಸ್ವಸಮಯದಲ್ಲಿ ಆಗುವುದು.

ಧಾರವಾಡ, ರಾ ಶ್ರೀ. ಹುಕ್ಕೇರಿಕರ
೯—೫—೩೧. (ಕಾರ್ಯದರ್ಶಿ.)

ಹಿಂದೂಸ್ಥಾನಿ ಸೇವಾದಳ.

ಡಾ. ಹರ್ಡೀಕರರು ೬ ನೇ ತಾ. ಬೋರಸದಲ್ಲಿ ಗಾಂಧೀಜಿಯವರನ್ನು ಕಂಡರು. ಆಗ ಗಾಂಧೀಜಿಯವರ ಸಂದೇಶವಿದು.

" ಹಚ್ಚಿನ ಆತ್ಮಾರ್ಪಣಮಾಡಲು, ಹಚ್ಚಿನ ಶುದ್ಧಿ ಮಾಡಿಕೊಳ್ಳಲು, ದರಿದ್ರನಾರಾಯಣನ ಸೇವೆ ಹೆಚ್ಚಾಗಿ ಮಾಡಲು, ಸಹಿಸುವುದರಲ್ಲಿ, ಹಿಂಜರಿವುದರಲ್ಲಿ ಹೆಚ್ಚಿನ ಪ್ರಾವೀಣ್ಯತೆ ಪಡೆಯಲು, ಚರಕ ಕರ್ಮದಲ್ಲಿ ಜಾಣತನ ಗಳಿಸಲು, ವಿಶೇಷ ಸತ್ಯ ಮತ್ತು ಅಹಿಂಸಾ ತತ್ವಗಳ ಮೇಲಿನ ಶ್ರದ್ಧೆಯನ್ನು ಬೆಳೆಸಿಕೊಳ್ಳಲು ಕಲಿಯುವುದೇ ಕಾಂಗ್ರೆಸ್ ಸ್ವಯಂ ಸೇವಕರು ಶಿಬಿರಗಳಲ್ಲಿ ಮಾಡಬೇಕಾದ ಮುಖ್ಯ ಕೆಲಸ. ಶಿಕ್ಷಣಾ ಶಿಬಿರಗಳ ಸುತ್ತ ಮುತ್ತಣ ಹಳ್ಳಿಗಳಲ್ಲಿ ಎಲ್ಲ ದೃಷ್ಟಿಯಿಂದಲೂ ಸುಧಾರಣೆಯಾಗಬೇಕೆಂಬ ಲಕ್ಷ್ಯವಿರಬೇಕು

'ಭಾರತ ಸ್ವಾತಂತ್ರ್ಯನಿಧಿ'ಗಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಪಾವತಿ ಪುಸ್ತಕಗಳನ್ನು ಹಂಚಿದ್ದರು. ಅವುಗಳನ್ನು ಈಗ ರದ್ದುಮಾಡಲಾಗಿದೆ ಪ್ರತಿಯೊಬ್ಬರೂ ತಮ್ಮಲ್ಲಿ ಉಳಿದಿರುವ ಪಾವತಿ ಪುಸ್ತಕಗಳನ್ನು ಹಿಂದಕ್ಕೆ ಕಳಿಸಿಕೊಡಬೇಕೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಕರ್ನಾಟಕ ಮಹಾರಾಜ.

೬ನೇ ತಾ. ಡಾ. ಹರ್ಡೀಕರರು ಬೋರಸದಿನಲ್ಲಿ ಗಾಂಧೀಜಿಯವರನ್ನು ಕಂಡು 'ಯುನೈಟೆಡ್ ಕರ್ನಾಟಕ' ಎಂಬ ಪುಸ್ತಕವನ್ನವರ ಕೈಲಿಟ್ಟು 'ಕಾಂಗ್ರೆಸ್ಸಿನವರು ಕರ್ನಾಟಕ ಪ್ರಾಂತ್ಯದ ಕಡೆ ಉದಾಸೀನದಿಂದಿರುವರೆಂದು ಜನರಲ್ಲಿ ಅಭಿಪ್ರಾಯ ಬಂದಿದೆ. ಕಾಂಗ್ರೆಸಿನಲ್ಲಿಯೂ ಈ ವಿಚಾರವೇ ಬರಲಿಲ್ಲ. ಚಕ್ರಗೋಷ್ಠಿಗೆ ಕನ್ನಡಿಗರು ತಮ್ಮ ಪ್ರತಿನಿಧಿಯೊಬ್ಬನನ್ನು ಕಳಿಸುವ ಆಲೋಚನೆಮಾಡಿದ್ದಾರೆ" ಅನ್ನಲು ಗಾಂಧೀಜಿಯವರು —

"ಭಾಷಾನುಗುಣವಾದ ಪ್ರಾಂತ್ಯಗಳ ರಚನೆಯಾಗದೇ ಕೆಂದು ವಾದಕಾರಂಭಿಸಿದೆನೆ. ಕಾಂಗ್ರೆಸು ದುರ್ಲಕ್ಷ್ಯಿಸಲ್ಲ. ಕನ್ನಡಿಗರು ಗಮನಿಸುವುದು ತಪ್ಪು. ಕನ್ನಡಿಗರು ಚಳವಳಿ ನಡಿಸುವಷ್ಟು ಶಕ್ಯವಿದ್ದಷ್ಟು ಸಾತ್ವಿಸ ಮಾಡುವೆನು.

ಪತ್ರಾವಳಿ.

[ಬಾತ್ಮಿದಾರರು ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಮದ್ಯ ನಿಷಾನಿಷೇಧ

ಮಹನೀಯರೇ,

ಈ ಮೊದಲು ಕೊಡಗಿನವರ ಮದುವೆಗಳ ಶೀಲಶ ತೊಂಭತ್ತರಷ್ಟರಲ್ಲಿ ಸಭೆಗಳನ್ನು ಸೇರಿಸುತ್ತಿದ್ದರೆಂದರೆ ಅತಿಶಯೋಕ್ತಿಯಾಗದು. ಸೇಂದಿ ಸಾರಾಯಿ ಇಲ್ಲದ ಮದುವೆಗಳೇ ಇಲ್ಲದ ಕಾಲವು ಇದ್ದಿರಬಹುದು! 1922-23 ರಲ್ಲಿ ನಡೆದ ಅಸಹಕಾರ ಚಳವಳದ ಫಲಿತಾಂಶವಾಗಿ ಹಲವು ಮದುವೆಗಳಲ್ಲಿ ಸಾರಾಯಿಗೆ ಬಹಿಷ್ಕಾರ ಹಾಕುತ್ತಾ ಒಂದು ಚಳವಳವನ್ನು ಕೈಕೊಂಡ ಮಹನೀಯರು. ಅದನ್ನು ಉತ್ಸಾಹದಿಂದ ಮುಂದರಿಸದೆ ಊ, ಗ್ರಾಮ ಸಹ ಎಂದಿನಂತೆ ಲಗ್ನಗಳಲ್ಲಿ ಕುಡಿಯೂ ಹೋದ ಕಾಲವು ಬಂತು. ಕಳೆದ ವರ್ಷ ಕಮ್ಮಿ ಪಕ್ಷ ಟವು ಜೋರಾಗಿ ಮದುವೆಗಳಲ್ಲಿ ಮದ್ಯಪಾನಕ್ಕೆ ಎಡೆಮಾಡಿ ಶೇಕಡ 75 ಒಡಕಸದಲ್ಲಿ ಮುಳುಗಿದ್ದರೂ ಸಾಲ ಮಾಡುತ್ತಿತ್ತು. ಈ ಮದುವೆಯಿಂದ ಶುಭ ಲಗ್ನಗಳ ಊಟದ ವೇಳೆ ನಡೆಸುತ್ತಿದ್ದರು. ವೇಷದ ಅಲಂಕಾರದ ಈ ಗಳನ್ನು ಗಳ ದೇಹವನ್ನು ತೊಕ್ಕಿದ ಮೇಲೆ ಉಂಟಾಗುವ ಪರಿಣಾಮವನ್ನು ವರ್ಣಿಸುವುದಕ್ಕಿಂತ ಮನಸ್ಸಿನಲ್ಲಿ ಊಹಿಸಿಕೊಳ್ಳುವುದೇ ಉತ್ತಮ!

ಮಹಾತ್ಮ ಗಾಂಧಿಯವರ ಪ್ರಪಂಚ ಪ್ರಸಿದ್ಧವಾದ ಸತ್ಯಾಗ್ರಹ ಚಳವಳವು ಹಿಂದೂಸ್ಥಾನದಲ್ಲಿ 1930 ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಪ್ರಾರಂಭವಾದದ್ದು ಏಪ್ರಿಲ್ ತಿಂಗಳಲ್ಲಿ ಕೊಡಗಿಗೂ ತಪ್ಪಿತು. ಕಾನೂನು ಭಂಗ ಚಳವಳವನ್ನು ಕೊಡಗಿನಲ್ಲಿ ಪ್ರಾರಂಭಿಸಲು ಬಹು ಸ್ವಲ್ಪ ಜನರು ಮುಂದೆ ಬಂದರೂ ಅವರು ಗ್ರಾಮಾಂತರಗಳಲ್ಲಿ ನಡಿಸಿದ ನಿಷಾನಿಷೇಧ ಮತ್ತು ಖಾದಿ ಪ್ರಚಾರದ ಕೆಲಸಕ್ಕೆ ಪ್ರೇಕ್ಷಕರು ಕುಂದದ ಸಹಾನುಭೂತಿಯನ್ನು ತೋರಿಸಿ ಹಲವು ವಿಧದಲ್ಲಿ ಸಹಾಯ ಮಾಡಿದ್ದು ಕೊಡಗಿನ ಕೀರ್ತಿಯನ್ನು ಹೆಚ್ಚಿಸಿದೆ ಸ್ತ್ರೀ ಗೃಹಿಗಳು ನಡಿಸಿದ ಸಾರಾಯಿಯ ಗಡಂಗ ಮತ್ತು ಅಂಗಡಿ ಪಿಕೆಟಿಂಗಿನಿಂದ ದೇಶದ ಜನರಲ್ಲಿ ಉಂಟಾದ ಬದಲಾವಣೆ ಬಹು ವಿಶೇಷವಾದದ್ದಾಗಿದೆ. ಕಳೆದ ವರ್ಷದ ಕೈಲ್‌ಪೋದು ಮತ್ತು ಹುತ್ತರಿ ಹಬ್ಬಗಳಲ್ಲಿ ಸೇಂದಿ ಸಾರಾಯದ ಖರ್ಚು ಬಹಳ ಮಟ್ಟಿಗೆ ಕಡಿಮೆಯಾಗಿ ಹೋಯಿತು. ಅಷ್ಟೇ, ಸತ್ಯಾಗ್ರಹ ಚಳವಳದಿಂದ ಜೈಲುವಾಸ ಕೈಕೊಂಡ ಸಾವಿರ ಗಟ್ಟಲೆ ಸಹೋದರ, ಸಹೋದರಿಗೆ ಸಹಾನುಭೂತಿ ತೋರಿಸುವ ಉದ್ದೇಶ್ಯ ಕೊಡಗಿನ ಹಲವು ಕಡೆಗಳಲ್ಲಿ ಹುತ್ತರಿ ಹಬ್ಬದ ಸಂತೋಷದ ಕೂಟಗಳನ್ನೂ ಸಹ ಬಾಕಿ ಮಾಡಿದರು. ಕೊಡಗು ದೇಶವು ನೀಷಾಪಾನದ ಬಾಧೆಯಿಂದ ತಪ್ಪಿಸಿಕೊಳ್ಳುವ ಕಾಲವು ಬಂದಿದೆಯೆಂದು ತೋರುತ್ತಿತ್ತು.

ಕೊಡಗಿನಲ್ಲಿ ಮದುವೆಯ ಕಾಲವು ಬಂತು. "ಕುಡುಕತನವನ್ನು ಬಿಡಿಸಲಿಕ್ಕಾಗಿ ನಮ್ಮ ಸಹೋದರರು ಕೆಲವರು ಜೈಲುವಾಸವನ್ನು ಕೈಕೊಂಡಿರುವಾಗ್ಯೆ ನಾವು ಇನ್ನು ಆ ವಿಷ ಪದಾರ್ಥವನ್ನು ಶುಭ ಲಗ್ನಗಳಲ್ಲಿ ಸೇರಿಸುವುದು ತುಂಬಾ ನಾಚಿಕೆಗೇಡು, ಹಾಗೆ ಸೇರಿಸಿದ ಮದುವೆಗಳಿಗೆ ಯಾರೂ ಹೋಗಬಾರದು" ಎಂಬ ಘೋಷಣೆಯೇ ಎಲ್ಲೆಲ್ಲಿಯೂ ಕೇಳುತ್ತಿತ್ತು. ಮದುವೆಗಳು ಒಂದೊಂದಾಗಿ ನಿಷಾಸೇವನೆಯಿಲ್ಲದೆ ಕಡಿಮೆ ಖರ್ಚಿನಲ್ಲೂ, ತಂಟೆ ತಕರಾರುಗಳಿಲ್ಲದೆಯೂ ಚೆನ್ನಾಗಿ ನಡೆದು ಹೋದವು ಆದರೆ ಇಡೀ ಭರತಖಂಡದ ವರಷ್ಟೇ ಒದಲಾಯಿಸಿ, ಬ್ರಿಟಿಷ್ ಸರ್ಕಾರವನ್ನು ತಲ್ಲಣಗೊಳಿಸಿರುವ ಬಹು ವಿಶೇಷವಾದ ಈ ಸತ್ಯಾಗ್ರಹ ಚಳವಳವು ನಮ್ಮ ಪ್ರಾಂತ್ಯದಲ್ಲಿ 'ಕೂಪ ಕೂರ್ಮ'ದಂತಿರುವ ಕೆಲವರನ್ನು ಇನ್ನೂ ಎಚ್ಚರಿಸದೆ ಇರುವದು ಆಶ್ಚರ್ಯವೂ ಮತ್ತು ಶೋಚನೀಯವೂ ಆಗಿದೆ.

"ನನ್ನ ಹಿರೇ ಮಗಳ ಅಥವಾ ಕಿರೀ ಮಗಳ ಮದುವೆ, ಇದು ತಾನು ನಡಿಸುವ ಪ್ರಥಮ ಯಾ ಆಖೈರು ಮದುವೆ, ತಾನು ಈ ಮೊದಲು ಹಲವು ಲಗ್ನಗಳಲ್ಲಿ ಕುಡಿದಿರುವ ಕಾರಣ ತಾನು ಈಗ ಬೇರೆಯವರಿಗೆ ಕುಡಿಯಲು ಕೊಡಬೇಕು" ಎಂದು ಈ ಮೊದಲಾದ ಟೊಳ್ಳು ಕಾರಣಗಳಿಂದ ಈ ಸಮಯದಲ್ಲೂ ಕೂಡ ನಿಷಾ ಮಹಾಮಾರಿಯನ್ನು ಶುಭ ಲಗ್ನಗಳಲ್ಲಿ ಹಂಚಿದವರೂ ಕೆಲವರಿರುವರು. ಕೊಡಗಿನಲ್ಲಿ ಈ ವರ್ಷ ಈ ವರೆಗೆ ನಡೆದ ನೂರಾರು ಮದುವೆಗಳಲ್ಲಿ ನನಗೆ ತಿಳಿದ ಮಟ್ಟಿಗೆ ಒರೇ ಮೂರು ಮದುವೆಗಳಲ್ಲಿ ಮಾತ್ರ ನಿಷಾಪದಾರ್ಥಕ್ಕೆ ಎಡೆದೊರೆತಿತ್ತು! ಇಡೀ ದೇಶದ ಉದಾಹರಣೆಯನ್ನೇ ಉಲ್ಲಂಘನೆ ಮಾಡಿ ಇಂಥಾ ಮಹಾ ಕಾರ್ಯವನ್ನು ನಡಿಸಲು ಧೈರ್ಯ ತಂದುಕೊಂಡಂಥ ಮಹನೀಯರು ಯಾರೆಂದು ತಿಳಿಯಲು ಜನರು ಕುತೂಹಲವುಳ್ಳವರಾಗಿರಬಹುದು. ಆ ಮದುವೆಗಳು ಯಾವವೆಂದರೆ—ವೀರಾಜಪೇಟೆಯಲ್ಲಿ ನಡೆದ ಪಿ. ಕುಪ್ಪಂಡ ಮುದ್ದಯ್ಯನವರ ಮಗಳ ಮದುವೆ; ಮಡಿಕೇರಿಯಲ್ಲಿ ನಡೆದ ಎಂ. ಕೊಡಂದೇರ ಪೇಮಯ್ಯನವರ ಮಗಳ ಮದುವೆ, ಮತ್ತು ಕಾರ್ಗುಂಡದಲ್ಲಿ ನಡೆದ ಮೆ ಬಿದ್ದ ಪಯ್ಯನವರ ಮತ್ತು ಸಹೋದರ—ಇವರ ಮದುವೆ. ನಮ್ಮ ದೇಶದ ಸಹೋದರರಿಗೆ ಒಳ್ಳೇ ಉದಾಹರಣೆಯನ್ನು ಕಲಿಸ್ಯೂ, ದೇಶದ ಉದ್ಧಾರಕ್ಕೂ ನಿಷಾದೇವಿಗೆ ಹಾಕಿದ್ದರೆ ಇವರಿಗೆ ದೇಶದವರ ಧನ್ಯವಾದಗಳಿದ್ದವು. ಮುಂದೆ ಲಗ್ನ ನಡಿಸಲಿಕ್ಕಿರುವ ಮಹನೀಯರು ಇವರ ಲ್ಪಂಕ್ತಿಯನ್ನು ಅನುಸರಿಸದೆ, ನಿಷಾ ಪದಾರ್ಥವನ್ನು ವರ್ಜಿಸಿ ಮದುವೆ ಮಾಡಿದ ನೂರಾರು ಮಹನೀಯರ ದ್ವಾರದ ಉದಾಹರಣೆಯನ್ನೇ ಹಿಂಬಾಲಿಸಬೇಕೆಂದು ವನಾಗಿದ್ದೇನೆ.

ತಾ. 18—5—'31 "ಒಂ...

ತಳೇ ಸಂಬರಾಜ ಪಟ್ಟಣತಾಲೋಕಿನವರಲ್ಲಿ ವಿನಂತಿ

ಮಹನೀಯರೇ,

ಕೆಲವು ವರ್ಷಗಳ ಹಿಂದೆ ದೇಶವೃತ್ತಿಯಲ್ಲಿಯೂ, ವ್ಯಾಪಾರಿಗಳಲ್ಲಿಯೂ, ವಿದ್ಯ ಬುದ್ಧಿಯಲ್ಲಿಯೂ ದಿನೇ ದಿನೇ ಅಭಿವೃದ್ಧಿ ಹೊಂದುತಾ ಇದ್ದ ನೀವು ಇತ್ತೀಚೆಗೆ ಅವನತಿಗೆ ಬರಲು ಕಾರಣವೇನೆಂಬುದನ್ನೂ, ಅದನ್ನು ಪರಿಹರಿಸುವ ಉಪಾಯವನ್ನೂ ಕಂಡು ಹಿಡಿದುಕೊಳ್ಳದೆ ಹೋದರೆ ಇನ್ನು ಕೆಲವು ವರ್ಷಗಳೊಳಗೆ ನಿಮ್ಮ ತಾಲೋಕಿನ ಹೆಸರೇ ಇಲ್ಲದಾಗುತ್ತದೆ ಎಂಬ ಸಂಗತಿಯನ್ನು ನಾನು ಇಲ್ಲಿ ಬರೆಯಲು ಬಯಸುತ್ತೇನೆ.

ಅನೇಕ ಮಹನೀಯರಿಗೆ 400—500 ರೂ. ಕ್ರಯ ಬಾಳುವ ಆಸ್ತಿ ಇರುತ್ತೆ. ಇವರು ಮದುವೆಯಾಗಬೇಕಾದರೆ ಹುಡುಗಿಗೆ ಸದ್ಯಕ್ಕೆ 300—400—500 ರೂ. ಕೊಟ್ಟು ಅವರವರ ಮದುವೆ ಖರ್ಚು ಅವರವರೇ ಪಟ್ಟುಕೊಳ್ಳುವಂತೆ ಜೀವಮಾನ ಸಿಕೊಳ್ಳುತ್ತಾರೆ ಹೀಗಾಗಿ ಮದುವೆಯಾಗಿ ಒಂದೆರಡು ವರ್ಷಗಳನಂತರ ಬಡ್ಡಿ ಸಹ ತೆರಬಾರದೆ ಭೂಮಿಯನ್ನೇ ಬಿಟ್ಟು ಕೂಲಿ ಕಸಬು ಮಗ್ಗಿರಿಗೆ ಹೋಗುವದರಿಂದ ಅನೇಕ ಗ್ರಾಮಗಳು ಘಾಟಿಸ್ಟನವರ ಪಾಲಿಗೆ ಹೋಗಲುಬಗಿದೆ.

ಕೆಲವರು ಮದುವೆ ಮಾಡಿಕೊಳ್ಳಲು ಶಕ್ತಿ ಇಲ್ಲದೆ ತಮ್ಮ ವಯಸ್ಸು ಬಂದಾಗ್ಯೆ ತಮ್ಮ ಯವ್ವನ ಶಕ್ತಿಯನ್ನು ಅಡಗಿಸಿಕೊಳ್ಳಲು ತಿಳಿಯದೆ ದೇಹವನ್ನು ದುರಭ್ಯಾಸಗಳಿಂದ ಹಾಳು ಮಾಡಿಕೊಳ್ಳುತ್ತಾರೆ ಇತ್ಯಾಗಿ ಹುಡುಗಿಯರಿಗೆ ಸಹ ರಾಶಿ ಬರದೆ ಮನೆಯಲ್ಲಿ ನಿಲ್ಲಬೇಕಾಗಿ ಸಂಸಾರ ಅಭಿವೃದ್ಧಿಗೆ ಕುಂದಕ ಉಂಟಾಗುವಂತಿದೆ ಹೀಗಾಗಿಯೂ ಸಹ ಜನಸಂಖ್ಯೆ ಕಡಿಮೆಯಾಗಿ ಊರುಗಳೆಲ್ಲಾ ಪಾಳಾಗಿ ರಾಷ್ಟ್ರೀಕರಣ ಎಲ್ಲವೆಂದು ಹೇಳಿಕೊಂಡು ಸಾವಿರಾರು ರೂಪಾಯಿ ಖರ್ಚು ಮಾಡಿ ಪಾಳು ಬಿದ್ದ ಊರುಗಳನ್ನು ಪುನಹ ಅಭಿವೃದ್ಧಿಗೆ ತರುವದು ಸಾಮಾನ್ಯದ ಕೆಲಸವಲ್ಲವೆಂಬದು ಈಗ ಸರಕಾರದವರು ಯತ್ನ ಪಟ್ಟು ಮಾಡುವ ರೀನರೇಶನ್ ವಿಷ್ಯದ ಕಡೆ ನೋಡಿದರೆ ವೇದ್ಯವಾದೀತು.

ಉತ್ತರ ಕೊಡಗಿನಲ್ಲಿ ಅನೇಕರು ಸರ್ಕಾರ ಉದ್ಯೋಗ ಮಾಡಿ ಪೆನ್ಶನ್ ಸಹ ಪಡೆದವರಿದ್ದರು. ಹಲಬಾರು ಆಗಲೇ ಪೂರಾ ವಿದ್ಯಾವಂತರೇ. ಇತ್ತೀಚೆಗೆ ನೋಡಿದರೆ ಒಬ್ಬ ಇಬ್ಬರ ಹ ಗೊತ್ತಿರುವ ಒಂದೆರಡು ಜನರು ಒಂದೊಂದು ಗ್ರಾಮದಲ್ಲಿ ರುವದು ಬಹಳ ಕಷ್ಟ ವಿದ್ಯದ ಮೇಲೆ ಪ್ರೇಮ ಎಲ್ಲಾ ಮಾಯವಾಗಿದೆ. ಅಸ್ತಿವಾಸ್ತಿ ಆದರೆ ಪ್ರತಿಯೊಬ್ಬರೂ ಸುಖಾಬಸ್ಥರೇ ಆಗಿದ್ದರು ಈಗ ನೋಡಿದರೆ ಅಂಥಾ ಸುಖಾಬಸ್ಥರನ್ನು ಒಂದು ಕೈ ಬೆರಳಲ್ಲಿ ಲೆಕ್ಕ ಮಾಡಿದರೆ ಸಾಕು ಹೆಚ್ಚಾದಿತು

ಪಂಜಾಬಿನಲ್ಲಿ ಇಂಥಾ ಅನರ್ಥಗಳನ್ನು ಹೋಗಲಾಡಿಸಲು 'ಉತ್ತಮ ಜೀವನ ಸಂಘ' (Better Living Society) ಗಳನ್ನು ರಿಜಿಸ್ಟರು ಮಾಡಿಸಿಕೊಂಡು ಆ ಮೂಲಕ ವಿಷ್ಯಗಳನ್ನು ಕಲಿಸಲು ಪ್ರಯತ್ನ ಪಡುತ್ತಲಿದ್ದಾರೆ. ಅನೇಕ ಕಡೆ ಯಶಪ್ರದ ಹೊಂದಿಯೂ ಇದೆ. ಒಂದು ಸಂಘದಲ್ಲಿ ಒಬ್ಬ ಶ್ರೀಮಂತನಿದ್ದ ಒಬ್ಬ ದೊಡ್ಡ ಸ್ಯೆತನೊಬ್ಬನು ತನ್ನ ಮನೆಯಲ್ಲಿ ಮದುವೆಯಲ್ಲಿ ಸಂಘದ ಠೀವರ್ಣನವನ್ನು ಅತಿಕ್ರಮಿಸಿ ಖರ್ಚು ಮಾಡಿದ್ದಕ್ಕೆ ಸಂಘದವರು ಅವನಿಗೆ 100 ರೂ. ದಂಡವನ್ನು ವಿಧಿಸಿದರು. ಇನ್ನೊಂದು ಸಂದರ್ಭದಲ್ಲಿ ಲಗ್ನದ ಕಾಗದ ಪ್ರಿಂಟು ಮಾಡಿಸಿದಕ್ಕೆ ಸಂಘದವರು ಅವನನ್ನು ಬುಲುವಾನೆ ಮಾಡಿದರು. ಹೀಗೆಲ್ಲಾ ನಡಿಸುತ್ತಿರುವದರಿಂದಲೇ ಅಲ್ಲಿಯೂ ಜನರು ಮುಂದುವರಿಯುತ್ತಿದ್ದಾರೆ.

ನ್ಯಾಯ ಬಂದಾಗ್ಯೆ ಹುಡುಗರಿಗೂ, ಹುಡುಗಿಯರಿಗೂ ಮದುವೆ ಮಾಡಲೇ ಬೇಕು. ಹಣ ಕೊಟ್ಟು ಹೆಣ್ಣು ತರುವುದೆಂದರೆ ಇತರ ಕಡೆಗಳಲ್ಲಿ ಬಹಳ ನಾಚಿಕೆ ಕೇಡಿನ ಕರ, ಕೋಳಿ, ಆಡು, ಹಂದಿ ವಗ್ಯೆರೆ ಕ್ರಯಕೊಟ್ಟಲ್ಲದೆ ಹುಡುಗಿಯರನ್ನೂ ಕ್ರಯ ಕೊಟ್ಟು ತರುವ ವ್ಯಸನಕರ ಮತ್ತು ನಾಚಿಕೆಗೇಡು! ಅನೇಕರು ಬಿಡದೆ ಮದುವೆ ಮಾಡಿ ಕೊಟ್ಟಾರು; ಇಲ್ಲವೆಂದು ಹೇಳುವದಿಲ್ಲ ಆದರೆ ಹೆಚ್ಚು ಜನರು ಹಣ ಕೊಟ್ಟು ತರುವುದರಿಂದ ಪ್ರತಿಯೊಬ್ಬರೂ ಹಣ ಕೊಡುತ್ತಾರೆ ನ್ಯಾಯ.

ಕೆಲವರು ನಾಳಿನೋಳವಿಲ್ಲದೆ ನನ್ನ ಹುಡುಗಿಯನ್ನು ಒಳಸಿಕೊಡುವುದಿಲ್ಲವೆಂದೂ ಹೇಳಿ ಬಲತ್ಕಾರದಿಂದ ಬಿಡಿಸುತ್ತಿದ್ದರು. ಇತ್ತೀಚೆಗೆ ಇದು ಯಾವುದೋ ಕಾರಣದಿಂದ ನಿಂತ ಹಾಗೆ ಕಾಣುತ್ತೆ ಹುಡುಗಿಯನ್ನು ಕೊಟ್ಟು ಮದುವೆ ಮಾಡಿ ಅದಕ್ಕೆ ಬಡ್ಡಿಯನ್ನು

ಕೊಡಗು.

ಸನ್ ೧೯೩೧ನೇ ಇಸವಿ

ಸೋ. ತಾ. ೨೨ನೇ [illegible]

ಲಾರ್ಡ್ ಇರ್ವಿನ್‍ರವರ ಭಾಷಣ.

ಲಾರ್ಡ್ ಇರ್ವಿನ್‍ರವರು ವೈಸರಾಯಿ ಪದವಿಯಿಂದ ನಿವೃತ್ತರಾಗಿ ಹಿಂದೂ ದೇಶದಿಂದ ಇಂಗ್ಲೆಂಡಿಗೆ ವಾಪಸು ಹೋದ ಮೇಲೆ ಇಂಡಿಯಾವನ್ನು ಕುರಿತು ತಮ್ಮ ಪ್ರಥಮ ಭಾಷಣವನ್ನು ತಾ. 15ರಲ್ಲಿ ಮಾಡಿದರು. ಇದು ಅವರ ಗೌರವಾರ್ಥವಾಗಿ ಬ್ರಿಟಿಷ್ ಇಂಡಿಯಾ ಯೂನಿಯನ್‍ನವರು ಕೊಟ್ಟ ಫಲಹಾರ ಕೂಟದಲ್ಲಿ ಆಗಿದೆ. ಹಿಂದೂದೇಶದಲ್ಲಿ ನಡೆಯುತ್ತಿದ್ದ ಅಹಿಂಸಾ ತತ್ವದ ಯುದ್ಧವನ್ನು ನಿಲ್ಲಿಸಿ ಶಾಂತಿಯನ್ನು ಸ್ಥಾಪಿಸಲು ಮಹಾತ್ಮ ಗಾಂಧಿಯವರೊಂದಿಗೆ ರಾಜಿ ಒಪ್ಪಂದವನ್ನು ಮಾಡಿದ ಇರ್ವಿನ್‍ರವರು ಇಂಗ್ಲೆಂಡಿಗೆ ಹೋದ ಮೇಲೂ ತಮ್ಮ ವಾಗ್ದಾನವನ್ನು ಕಾಪಾಡಲು ಪ್ರಯತ್ನಿಸುತ್ತಿರುವರೆಂಬುದು ಅವರ ಮೇಲೆ ವಿಶ್ವಾಸವಿಟ್ಟಿದ್ದ ಹಲವರಿಗೆ ತೃಪ್ತಿಯನ್ನುಂಟುಮಾಡದೆ ಇರದು. ಹಿಂದೂದೇಶದಲ್ಲಿ ಉದ್ಯೋಗ ಮಾಡಿ ಪೆನ್ಶನ್ ಅನುಭವಿಸುತ್ತಿರುವ ಇಂಗ್ಲಿಷ್ ಮಹನೀಯರು ಹಲವರು ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡಬಾರದೆಂಬ ಉದ್ದೇಶದಿಂದ ಇಲ್ಲಿಯ ಈಗಿನ ಸ್ಥಿತಿಯನ್ನು ಅರಿತುಕೊಳ್ಳದೆ, ಇಂಡಿಯಾದಲ್ಲಿ ನಡೆಯುತ್ತಿರುವ ಸಂಗತಿಗಳ ಹೆಚ್ಚಿನ ಪರಿಚಯವಿಲ್ಲದ ಇಂಗ್ಲೆಂಡಿನ ಜನ ಸಮುದಾಯದಲ್ಲಿ ತಪ್ಪು ಅಭಿಪ್ರಾಯಗಳನ್ನು ಹಬ್ಬಿಸುತ್ತಿರುವರು. ವಾಸ್ತವಿಕವಾಗಿ [illegible] ಬ್ರಿಟನ್ನಿಗೂ, ಹಿಂದೂಸ್ಥಾನಕ್ಕೂ ತುಂಬಾ ಕೇಡು ಉಂಟಾಗುತ್ತದೆ ಎಂಬುದರಲ್ಲಿ [illegible] ಆದರೆ ಮೊನ್ನೆಯವರೆಗೆ ಇಂಡಿಯಾ ಸರ್ಕಾರದ [illegible] ಅಧಿಕಾರಿಯಾಗಿದ್ದು, ಹಿಂದೂಸ್ಥಾನದ ರಾಷ್ಟ್ರೀಯ ಚಳವಳಿಯ ಬಲವನ್ನು ಅರಿತಿರುವ ಲಾರ್ಡ್ ಇರ್ವಿನ್‍ರವರು ಇಲ್ಲಿಯ ಸಂಗತಿಗಳನ್ನು ಇದ್ದಕ್ಕಿದ್ದ ಹಾಗೆ ಬ್ರಿಟನ್ನಿನವರಿಗೆ ತಮ್ಮ ಭಾಷಣದಲ್ಲಿ ತಿಳಿಸಿದ್ದು ಅವರು ತಮ್ಮ ಮಾತೃಭೂಮಿಗೂ, ಹಿಂದೂಸ್ಥಾನಕ್ಕೂ ದೊಡ್ಡ ಸೇವೆ ಮಾಡಿದಂತಾಗಿದೆ. ಇಂಡಿಯಾದಲ್ಲಿದ್ದಾಗ್ಯೂ ಹಿಂದೀಯರ ರಾಷ್ಟ್ರೀಯ ಅಭಿಲಾಷೆಗಳಿಗೆ ತೋರಿಸಿದ ಸಹಾನುಭೂತಿಯು ನಿಜವಾದದ್ದೆಂದು ಅವರು ಈಗ ಇಂಗ್ಲೆಂಡಿನಲ್ಲಿ ಋಜುವಾತು ಮಾಡುತ್ತಿರುವರೆಂದರೆ ತಪ್ಪಾಗಲಾರದು.

ಹಿಂದೀಯರ ರಾಷ್ಟ್ರೀಯತ್ವ ಭಾವನೆಯು ಬಹು ಬಲವಾಗಿದೆಯೆಂದೂ, ಅದನ್ನು ದಬ್ಬಾಳಿಕೆಯಿಂದ ಅಡಗಿಸಬಹುದೆನ್ನುವ ರಾಜನೀತಿಯು ಪುರಾತನದ್ದೂ, ಪ್ರಕೃತ ಸ್ಥಿತಿಗೆ ವಿರೋಧವಾದದ್ದೂ ಎಂದು ಸ್ಪಷ್ಟವಾಗಿ ಅವರು ಹೇಳಿರುವರು. ಹಿಂದೂದೇಶದ ಅದ್ವಿತೀಯ ಸ್ವಾತಂತ್ರ್ಯ ಚಳವಳಿಯನ್ನು ಪೋಲೀಸಿನವರ ಲಾಟಿ ಪೆಟ್ಟುಗಳಿಂದಲೂ, ಹಿಂಸಾ ರೀತಿಗಳಿಂದಲೂ ಸೋಲಿಸಲು ಸಾಧ್ಯವಾಗಲಿಲ್ಲವೆಂಬುದೂ, ಅಹಿಂಸಾ ತತ್ವದವರನ್ನು ಹಿಂಸೆಗೊಳಿಸಿದ್ದರಿಂದ ಆ ಚಳವಳಿಗೆ [illegible] ಸಹಾನುಭೂತಿ ದೊರೆತು ಅದರ ಶಕ್ತಿಯು ಹೆಚ್ಚಿತೆಂಬುದೂ ಆಗ ವೈಸರಾಯರಾಗಿದ್ದ ಲಾರ್ಡ್ ಇರ್ವಿನ್‍ರವರಿಗೆ ಚೆನ್ನಾಗಿ ಗೊತ್ತಿದೆ. ಪರಸ್ಪರ ಒಡಂಬಡಿಕೆಯಿಂದ ಹಿಂದೂಸ್ಥಾನವನ್ನು ಸಮಾಧಾನಗೊಳಿಸಿ ಬ್ರಿಟಿಷ್ ಸಾಮ್ರಾಜ್ಯದೊಳಗೆ ಇಟ್ಟುಕೊಳ್ಳಲು ಸಾಧ್ಯವಲ್ಲದೆ ಅನ್ಯಥಾ ಅಲ್ಲವೆಂದು ಹೇಳಿದರು. ಸೈನ್ಯ ಬಲದಿಂದಲೂ, ಹಿಂಸಾ ಬಲದಿಂದಲೂ ಭಾರತ ಭೂಮಿಯನ್ನು ಕೈವಶದಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂಬುದನ್ನು ಬ್ರಿಟನ್ನಿನವರು ಎಷ್ಟು ಬೇಗನೆ ಅರಿತುಕೊಳ್ಳುವರೋ ಅಷ್ಟೂ ಅವರಿಗೆ ಪ್ರಯೋಜನವಾಗುವುದು. ದಬ್ಬಾಳಿಕೆಯಿಂದ ರಾಷ್ಟ್ರೀಯ ಚಳವಳಿಯನ್ನು ನಾಶಮಾಡಿ ಶಾಂತತೆಯನ್ನು ಸ್ಥಾಪಿಸಲು ಸಾಧ್ಯವಾದರೂ, ಆ ಶಾಂತತೆಯು ಸ್ಥಿರವಾದದ್ದಲ್ಲವೆಂತಲೂ, ಅದು ಶಾಶ್ವತ [illegible] ಇರಲಾರದೆಂತಲೂ ಹೇಳಿರುವ ಇರ್ವಿನ್‍ರವರ ಅಭಿಪ್ರಾಯಕ್ಕೆ ವಿರೋಧಿಗಳೂ ಸಹ ಒಪ್ಪಬೇಕಾಗಿದೆ.

ಶಾಸನಬದ್ಧವಾದ ರಕ್ಷಣೋಪಾಯಗಳಿಗೆ ಹಿಂದೀಯರು ಒಪ್ಪಲು ತಯಾರಾಗಿರುವರೆಂದೂ, [illegible] ಅವುಗಳೆಲ್ಲವೂ ಹಿಂದೂಸ್ಥಾನದ ಹಿತಕ್ಕಾಗಿರುವವೆಂದು ಅವರಿಗೆ ವಿಶದಪಡಿಸಬೇಕೆಂದೂ ಮಹಾತ್ಮ ಗಾಂಧಿಯವರು ಲಂಡನ್ನಿಗೆ [illegible] ರಕ್ಷಣೋಪಾಯಕ್ಕೂ ಒಪ್ಪಲಾರರೆಂದು ಹುಟ್ಟಿರುವ ಶಂಕೆಯು ಸಕಾರಣವಾದದ್ದಲ್ಲವೆಂತಲೂ [illegible] ಇರ್ವಿನ್‍ರವರು ಇಂಗ್ಲೆಂಡಿನ ಜನರ ಮನಸ್ಸಿನಲ್ಲಿ ಆಗಿಂದಾಗ್ಯೆ ಹುಟ್ಟುತ್ತಿರುವ ತಪ್ಪು ಭಾವನೆಗಳನ್ನೂ, ಸಂಶಯಗಳನ್ನೂ ನಿವಾರಿಸಲು ಯತ್ನಿಸಿರುವರು. ಭಾರತ ಭೂಮಿಯ ಹಿತಾಪೇಕ್ಷೆಯಿಂದ ಮಾಡಲ್ಪಡುವ ರಕ್ಷಣೋಪಾಯಗಳಿಗೆ ಹಿಂದೀಯರು ವಿರುದ್ಧರಾಗಿ ಇರಲು ಕಾರಣವಿಲ್ಲ. ಆದರೆ ಅವು ಬ್ರಿಟನ್ನಿನ ಪ್ರಯೋಜನಾರ್ಥವಾಗಿ ಮಾತ್ರ ಮಾಡಲ್ಪಟ್ಟರೆ ಸ್ವತಂತ್ರವಾದಿಗಳಾದ ಹಿಂದೀಯರು ಅವುಗಳಿಗೆ ಹೇಗೆ ತಾನೇ ಒಪ್ಪುವರು? ಸ್ವತಂತ್ರ ಪ್ರಿಯರಾದ ಬ್ರಿಟಿಷರು ಅಂಥಾವುಗಳಿಗೆ ಒಪ್ಪಿಕೊಳ್ಳಬೇಕೆಂದು ಹಿಂದೀಯರನ್ನು ಕೇಳುವುದು ತಾನೇ ಹೇಗೆ! ರಕ್ಷಣೋಪಾಯಗಳನ್ನು ಕುರಿತು ಹಲವರು ಅನೇಕ ವಿಧವಾದ ಅರ್ಥವನ್ನು ಮಾಡುತ್ತಿರುವರು. ಆದರೆ ರಾಜಿ ಒಪ್ಪಂದವನ್ನು ಮಾಡಿದ ಲಾರ್ಡ್ ಇರ್ವಿನ್‍ರವರೇ ಮಹಾತ್ಮ ಗಾಂಧಿಯವರಂತೆ ಅವು ಅಂದರೆ ರಕ್ಷಣೋಪಾಯಗಳು ಹಿಂದೂದೇಶದ ಹಿತಾಪೇಕ್ಷೆಯುಳ್ಳವಾಗಿರಬೇಕೆಂದು ವಿವರವಾಗಿ ಹೇಳಿರುವುದರಿಂದ ಅವುಗಳಿಗೆ ಬೇರೆ ಅರ್ಥವನ್ನು ಕಟ್ಟುವ ಅಧಿಕಾರವು ಬೇರೆ ಯಾರಿಗೂ ಇರುವುದಿಲ್ಲ.

ಹಿಂದೂದೇಶಕ್ಕೆ ತನ್ನ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವ ಅಭಿಲಾಷೆಯು ಬಲವಾಗಿರುವುದು ಸ್ವಾಭಾವಿಕವೆಂತಲೂ, ಹಿಂದೂದೇಶದ ಆರ್ಥಿಕ ಸ್ಥಿತಿಯು ಚೆನ್ನಾಗಾದರೇನೇ ಅದರ ಕೊಂಡುಕೊಳ್ಳುವ ಶಕ್ತಿಯು ಹೆಚ್ಚುವುದೆಂತಲೂ, ವ್ಯಾಪಾರವು ಸ್ನೇಹಾಚಾರದಲ್ಲಿ ಬೆಳೆಯಬೇಕಲ್ಲದೆ ಅನ್ಯಥಾ ಅಲ್ಲವೆಂತಲೂ, ಇಂಡಿಯಾದಲ್ಲಿ ಬ್ರಿಟಿಷ್ ವ್ಯಾಪಾರವು ರಾಜಕೀಯ ಚಳವಳಿಯ ಅಡ್ಡಿ ಇಲ್ಲದೆ ವಾಡಿಕೆಯಾಗಿ ನಡೆಯುವಂತೆ ಇಂಡಿಯಾದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಗುವುದೆಂತಲೂ ಇರ್ವಿನ್‍ರವರು ತಮ್ಮ ಭಾಷಣದಲ್ಲಿ ಸೂಚಿಸಿರುವರು. ಬ್ರಿಟನ್ನಿನವರು ಹಿಂದೂದೇಶವನ್ನು ಇಷ್ಟರವರೆಗೆ ಆಳುತ್ತಿದ್ದದ್ದು ತಮ್ಮ ವ್ಯಾಪಾರದ ಪ್ರಯೋಜನಕ್ಕೆಂದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ದೀರ್ಘ ನಿದ್ರೆಯಿಂದ ಏಳುತ್ತಿರುವ ಭಾರತ ಭೂಮಿಯನ್ನು ಇನ್ನು ಮುಂದೆ ಬ್ರಿಟನ್ನಿನ ವ್ಯಾಪಾರಕ್ಕಾಗಿ ಕೈವಶದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲವೆಂದು ಕೆಲವು ಬ್ರಿಟಿಷ್ ಮುಖಂಡರೂ ಸಹ ಅರಿತುಕೊಂಡಿರುವರು. ಆದ ಕಾರಣ ಪರದೇಶಿ ಬಟ್ಟೆಗೆ ಬಹಿಷ್ಕಾರ ಹಾಕಲು ಇಂಡಿಯಾದವರನ್ನು ಬಿಡಬಾರದೆಂದು ಇಂಗ್ಲೆಂಡಿನ ಲ್ಯಾಂಕಶಯರಿನವರು ಬೊಬ್ಬೆ ಹಾಕುತ್ತಿರುವುದರಿಂದ ಪ್ರಯೋಜನವೇನೂ ಆಗಲಾರದು. ಹಿಂದೀಯರು ಕಳೆದ ಒಂದೂವರೆ ಶತಮಾನದಿಂದ ಬ್ರಿಟಿಷರ ರಾಜನೀತಿಯಿಂದ ತಕ್ಕಷ್ಟು ಪಾಠವನ್ನು ಕಲಿತಿರುವರು. ತಮ್ಮ ಹೊಟ್ಟೆ ಹಸಿವನ್ನು ಹೇಗೆ ನಿವಾರಿಸಿಕೊಳ್ಳಬಹುದೆಂತ ಹಿಂದೀಯರಿಗೆ ಗೊತ್ತಾಗಿದೆ. ಲ್ಯಾಂಕಶಯರಿನ ಬಟ್ಟೆಯನ್ನು ಕೊಂಡುಕೊಂಡರೆ ತಮ್ಮ ಹೊಟ್ಟೆ ತುಂಬುವುದಿಲ್ಲವೆಂಬುದನ್ನೂ ಹಿಂದೀಯರು ಅರಿತುಕೊಂಡಿರುವರು. ಆದಕಾರಣ ಲ್ಯಾಂಕಶಯರಿನ [illegible] ದರಕಗೆ ಈಗ ಯಾರೂ ಹೆದರುವಂತಿಲ್ಲ. ಇಂಡಿಯಾದಲ್ಲಿಯೂ ತಮ್ಮೂರಿಗಿಂತಲೂ ಎಷ್ಟೋ ಹೆಚ್ಚಿನ ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವರೆಂಬುದನ್ನು ಲ್ಯಾಂಕಶಯರಿನವರು ಅರಿತುಕೊಂಡು, ಇಂಡಿಯಾದವರೊಂದಿಗೆ ಸ್ನೇಹಭಾವದಿಂದ ವರ್ತಿಸಿ, ತಮ್ಮ ವ್ಯಾಪಾರಕ್ಕೆ ಅನುಕೂಲ ಕಲ್ಪಿಸಿಕೊಳ್ಳಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲವೆಂಬುದನ್ನು ಇರ್ವಿನ್‍ರವರ ಭಾಷಣದಿಂದಾದರೂ ತಿಳಿದುಕೊಳ್ಳುವರೇ?

ಲಾರ್ಡ್ ಇರ್ವಿನ್‍ರವರ ಭಾಷಣವು ಈ ಬಿಕ್ಕಟ್ಟಿನ ಸಮಯದಲ್ಲಿ ಇಂಗ್ಲಿಷರಿಗೆ ಇಂಡಿಯಾದ ಈಗಿನ ಸ್ಥಿತಿಯ ಮೇಲೆ ಇರುವ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸಲಿಕ್ಕೂ, ಹಿಂದೀಯರಿಗೆ ಗಾಂಧಿ—ಇರ್ವಿನ್ ಒಪ್ಪಂದದ ಮೇಲೆ ಇದ್ದ ಸಂಶಯಗಳನ್ನು ನಿವಾರಿಸಲಿಕ್ಕೂ ತುಂಬಾ ಸಹಾಯವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಈಗಿನ ವೈಸರಾಯರಾದ ಲಾರ್ಡ್ ವೆಲ್ಲಿಂಗ್ಡನ್‍ರವರೂ, ಅವರ ತಾಬೇದಾರರುಗಳೂ ಇರ್ವಿನ್‍ರವರ ತತ್ವವನ್ನು ಹಿಂಬಾಲಿಸಿಯೂ, ಬ್ರಿಟನ್ನಿನ ಮುಂದಾಳುಗಳು ಇರ್ವಿನ್‍ರವರ ಸೂಚನೆಗಳನ್ನು ಅನುಸರಿಸಿಯೂ ನಡೆದರೇನೇ ಈಗ ತತ್ಕಾಲ ಸ್ಥಾಪಿತವಾಗಿರುವ ಶಾಂತಿಯು ಖಾಯಂ ಆಗುವುದಲ್ಲದೆ ಅನ್ಯಥಾ ಅಲ್ಲವೆಂದು ಎಷ್ಟು ಒತ್ತಿ ಹೇಳಿದರೂ ಸಾಲದು.

ಜನರ ಆರ್ಥಿಕ ಸಂಕಟ.

ಒಟ್ಟು ಪ್ರಪಂಚದಲ್ಲಿಯೇ ಕೊಡಗಿನಲ್ಲೂ ಈಗ ಜನರು ಅತಿ ಕಠಿಣ ಆರ್ಥಿಕ ಸಂಕಟಕ್ಕೆ ಗುರಿಯಾಗಿದ್ದಾರೆ. ತಾವು ಬೆಳೆಯುವ ಭತ್ತ, ಏಲಕ್ಕಿ, ಕಾಫಿ, ಒಳ್ಳೆ ಮೆಣಸಿಗೆ ಸರಿ ಬೆಲೆ ಏನೇನೂ ಕ್ರಯವಿಲ್ಲ. ಕಾಫಿ ಮುಖ್ಯವಾದ ತೋಟದ ಬೆಳೆಯ ವ್ಯವಸಾಯ ಮಾಡುವವರ ಸ್ಥಿತಿಯು [illegible] ಆರ್ಥಿಕ [illegible] ಹೆಚ್ಚಾಗಿ ಬೆಳೆ [illegible] ಭತ್ತಕ್ಕೆ ಕ್ರಯವು ಇನ್ನು ಇಳಿಯುತ್ತಲೇ [illegible] ಜನರ ಮುಂದಿನ ಜೀವನ ಮತ್ತು ವ್ಯವಸಾಯದ ಹಾದಿಯು ಬಹಳ ತೊಡಕಾಗಿ ಕಾಣುತ್ತದೆ. ಅದರಲ್ಲಿ ಕೊಡಗಿಗೆ ಅಪರೂಪವಾದ ಪ್ಲೇಗ್ ಮತ್ತು ವಾಂತಿಭೇದಿಯ ಹಾವಳಿಯು ಅಲ್ಲಲ್ಲಿ ಇರುವುದರಿಂದ ಭತ್ತದ ವ್ಯಾಪಾರಕ್ಕೆ ತುಂಬಾ ತೊಂದರೆಯಾಗಿದೆ. ದಕ್ಷಿಣ ಕೊಡಗಿನ ಭತ್ತದ ವ್ಯಾಪಾರದ ಮಧ್ಯಸ್ಥಳವಾದ ಪೊನ್ನಂಪೇಟೆಯಲ್ಲಿ ವಾಂತಿಭೇದಿ ರೋಗವು ಬಲಿದೋರಿದ್ದರಿಂದ ಅಲ್ಲಿನ ಭತ್ತದ ವ್ಯಾಪಾರಿಗಳಾದ ಮಾಪಿಳ್ಳೆಯವರು ಸಾಧಾರಣ ಎಲ್ಲರೂ ಮಲಬಾರಿಗೆ ಹೋಗಿಬಿಟ್ಟಿದ್ದಾರೆ. ಇವರಲ್ಲಿ ಅನೇಕರಿಗೆ ಆ ಪ್ರಾಂತ್ಯದ ಜನರು ಭತ್ತವನ್ನು ಮುಂದಾಗಿಯೇ ಕೊಟ್ಟಿದ್ದಾರೆ. ಆದ್ದರಿಂದ ಕೊಟ್ಟ ಭತ್ತಕ್ಕೆ ಹಣ ಬೇಗನೆ ಸಿಕ್ಕುವಂತಿಲ್ಲ. ಕೊಡದೆ ಇರುವ ಭತ್ತವನ್ನು ಕೊಂಡುಕೊಳ್ಳುವವರೂ ಇಲ್ಲದ್ದರಿಂದ ಕ್ರಯವಿಲ್ಲ.

ಜನರ ಈ ಕಷ್ಟ ನಿವಾರಣೆಗೆ ಸರಕಾರದ ಸಹಾಯವು ಸಿಕ್ಕಬೇಕಾದಂತೆ ಸಿಕ್ಕುತ್ತಿಲ್ಲ. ಕಂದಾಯವನ್ನು ಕಂತಿಗೆ ಸರಿಯಾಗಿ ಕಟ್ಟಬೇಕೆಂಬುದರಲ್ಲಿ ಫ್ರೋಸಸ್ ಫೀಸ್, ಜಪ್ತಿ ವಾರಂಟ್ ಮುಂತಾದ ನಿರ್ಬಂಧಗಳೇನೂ ಈ ವರೆಗೆ ಪ್ರಾರಂಭಿಸದೆ ಉದಾರವೇನೋ ಆಗಿದೆ. ಇದಕ್ಕೆ ದೇಶದ ಧನ್ಯವಾದವಿದೆ. [illegible] ದುಃಸ್ಥಿತಿಯ ರೈತರಿಗೂ ಉಂಟಾಗಿರುವ ಆರ್ಥಿಕ ಸಂಕಟವನ್ನು [illegible] ಉಪಾಯಗಳನ್ನು ಸೂಚಿಸಲು ಮದ್ರಾಸ್ ಸರಕಾರದವರು ಕಳೆದ ಫೆಬ್ರವರಿ ತಿಂಗಳಲ್ಲಿ ಒಂದು ಕಮಿಟಿಯನ್ನು ನೇಮಿಸಿದ್ದರು. ಆ ಕಮಿಟಿಯವರ ವರದಿಯು ಈಗ ಪ್ರಕಟವಾಗಿದೆಯಂತೆ. ಆ ವರದಿಯನ್ನು ನೋಡಲು ನಮಗೆ ದೊರಕದಿದ್ದರೂ ಅದರ ಸಿಫಾರಸ್ಸುಗಳು ಮದ್ರಾಸ್ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಜನರ ಮೇಲೆ ಬಿದ್ದಿರುವ ಭೂಮಿ ಕಂದಾಯ [illegible] ತಾಳಲು ಸಾಧ್ಯವಿಲ್ಲದ ಹೊರೆಗಳನ್ನು [illegible] ದ [illegible] ರ ಕಷ್ಟವು ಹೆಚ್ಚಾಗಿದೆಯೋ ಎಂಬುದನ್ನು [illegible] ಯುಸಬೇಕೆಂತ ಸರಕಾರದವರೂ ಕೇಳಿ [illegible] ಕಮಿಟಿಯವರು ಅದನ್ನು ಅಜಮಾಯಿಸಿಯೂ [illegible]

ಈ ಕಮಿಟಿಯು ಜನರು ಬೆಳೆಸುವ ಮತ್ತು [illegible] ದ ಸಪ್ಲೈ ಮಾಡುವ ಮಾಲುಗಳನ್ನು ಮಾರಾಟ [illegible] ಯವಾಗುವಂತೆ ಶೇಖರಿಸಿ ಇಟ್ಟು ಮಾರಾಟ [illegible] ಕತೆ ಸಂಘಗಳನ್ನು ಹೆಚ್ಚಾಗಿ ಏರ್ಪಡಿಸಿಕೊಡಲು [illegible] ಸರಕಾರವೇ [illegible] ಮಂಡಿಗಳನ್ನು ಏರ್ಪ [illegible] ತಂದು [illegible] ಮಾಲುಗಳನ್ನು ಇಟ್ಟುಕೊಂಡು ಅದ [illegible] ಕಿಗನ್ನು ಕೊಟ್ಟು ಅಂಥಾ ರಶೀತಿಗಳ ಆಧಾರದಿಂದ [illegible] ಲಕ್ಕೆ [illegible] ಅನುಕೂಲ ಮಾಡಿಕೊಡ [illegible] ಜನಗೆ ವ್ಯವಸಾಯದ ಖರ್ಚಿಗೆ ಬೇಕಾಗುವ ಹಣ [illegible] ಸಾಲವಾಗಿ ಧಾರಾಳವಾಗಿ, ಸರಕಾರವು [illegible] ತಕ್ಕ ಕೆಲವು ಅಭಿಪ್ರಾಯಗಳನ್ನು ಸೂಚಿಸಿದೆ. [illegible] ಸಂಘಗಳನ್ನು ಏರ್ಪಡಿಸಿಕೊಡಲು [illegible] ಸಿಕೊಡಬೇಕೆಂತಲೂ ಇನ್ನೊಂದು ಸಲಹೆ [illegible] ದೇಶದಲ್ಲಿ ಧಾನ್ಯಗಳನ್ನು ಶೇಖರಿಸಿಟ್ಟು [illegible] ಮೇಲೆ ಹಣ ಸಾಲ ಕೊಡುವ ಸಂಘಗಳು ಇಂದು [illegible] ಅವು ಜೀವಂತವಾಗಿ ಸಹಾಯ ಕೊಡುವ [illegible] ಗಿಲ್ಲ. ಈಗ ಇರುವ ಇಂಥಾ ಸಂಘ [illegible] ಇಲ್ಲದ ಸ್ಥಳಗಳಲ್ಲಿ ಏರ್ಪಡಿಸಲಿಕ್ಕೂ [illegible] ಕೋ-ಆಪರೇಟಿವ್ ರಿಜಿಸ್ಟ್ರಾರರ ಮೂಲಕ [illegible] ದ [illegible] ಹೊಸ ಧಾನ್ಯದ ಮಾರಾಟದ [illegible] ನಮ್ಮ ದೇಶದಲ್ಲಿ ಬೇರೆ ಆಫೀಸರುಗಳ ಅವಶ್ಯ [illegible] ಕೋ-ಆಪರೇಟಿವ್ ಇಲಾಖೆಯ ಅಧಿಕಾರಿಗಳು [illegible] [illegible] ದಿಟ್ಟರೆ ತುಂಬಾ ಸಹಾಯವಾಗಬಹುದು.

ಟಕಾವಿ ಸಾಲದ ಸಹಾಯವಿಲ್ಲದೆ ಮುಂದಿನ [illegible] ಮಾಡುವುದು ಅನೇಕರಿಗೆ ಕಷ್ಟವಾಗುವ [illegible] ಯನ್ನೂ ನಮ್ಮ ದೇಶದ ಸರಕಾರವು ಸಾಕಷ್ಟು [illegible] ಬೇಕು. ಸಹಕಾರ ಸಂಘಗಳು ಮುಖಾಂತರ [illegible] ಸಾಲ ಕೊಡಲು ಅನುಕೂಲವಾಗುವಂತೆ [illegible] ಸರಕಾರವು ಹೆಚ್ಚಿನ ಸಾಲ ಕೊಡಬೇಕೆಂತ ಮದ್ರಾಸ್ ಕಮಿಟಿಯು ಇನ್ನೊಂದು ಶಿಫಾರಸ್ಸು ಇದೆ. ಇದನ್ನು [illegible] ಸರಕಾರವು ಜಾರಿಗೆ ತರಬೇಕು.

ಸ್ವದೇಶದ ಬೆಲ್ಲ, ಸಕ್ಕರೆ ತಯಾರಿಗೆ ಉತ್ತೇಜನ [illegible] ವಿದೇಶೀ ಸಕ್ಕರೆಗೆ ಹೆಚ್ಚಿನ ಸುಂಕ ಹಾಕಬೇಕೆಂದು ಕಮಿಟಿಯ ಇನ್ನೊಂದು ಸಲಹೆ. ನಮ್ಮ [illegible] ಬೆಲ್ಲ, ಸಕ್ಕರೆ ತಯಾರಿಯೂ ಹೇರಳವಾಗಿ [illegible] ಶದರ [illegible] ದಲ್ಲಿ ಸಾವೇರಿ [illegible] ದೊಳಗೆ ದೊರಕುವ ಎಣ್ಣೆ ಬೀಜಗಳಿಂದ ಎಣ್ಣೆ ತೆಗೆಯಲು ಸರಕಾರವು ಉತ್ತೇಜನ ಕೊಡಬೇಕೆಂಬ ಸೂಚನೆಯು ಈ ಬಾಬಿನಲ್ಲಿ [illegible] ಸಹಾಯ [illegible] ಸರಕಾರವು ತಕ್ಷಣ ಗಮನ ಕೊಡಬೇಕಾದದ್ದು ಅವಶ್ಯವಾಗಿದೆ. ಕಾಡು ದೇಶವಾದ ಇಲ್ಲಿ ಎಣ್ಣೆ ಇರುವ ಅನೇಕ ಕಾಯಿಗಳು ಇವೆ. ಪೂರ್ವ ಕಾಲದಿಂದಲೂ ಅಂಥಾ ಈ ದೇಶದ ಜನರು ಎಣ್ಣೆ ತೆಗೆದು ದೀಪಕ್ಕೂ, ಎಣ್ಣೆ ಔಷಧಿಗೂ ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಕ್ರಮೇಣ ಸೀಮೆ ಎಣ್ಣೆ ಬಂದಂದಿನಿಂದ ಈ ಕಸಬೇ [illegible] ಹೋಗಿದೆ. [illegible] ಬೀಜಗಳಿಂದ ಪ್ರಯೋಜನವಾದ ಎಣ್ಣೆಯನ್ನು ತೆಗೆದುಕೊಳ್ಳುವುದರ ಬಗ್ಗೆ [illegible] ಎಣ್ಣೆ [illegible] ವುದು [illegible]

[illegible] ಕಮಿಟಿಯ ಶಿಫಾರಸ್ಸುಗಳನ್ನು ಎಷ್ಟರ ಮಟ್ಟಿಗೆ ಜಾರಿಗೆ ತರುತ್ತಾರೆಂತ ಗೊತ್ತಿಲ್ಲ. ನಮ್ಮ ದೇಶದ [illegible] ಅಧಿಕಾರಿಗಳೂ ಸಹ ಈ ವಿಷಯದಲ್ಲಿ [illegible] ಸಂಕಟ ಪರಿಹಾರಕ್ಕೆ ಸಹಾಯ [illegible]

ಓರಿಯಂಟಲ್ ಜೀವವಿಮೆ ಕಂಪೆನಿ

ಮೇಲಿನ ಕಂಪೆನಿಯು 1930ನೇ ವರ್ಷದ ವರದಿ [illegible] ನಮ್ಮ ಕೈಸೇರಿದೆ. 1930ರಲ್ಲಿ ಹಿಂದೂಸ್ಥಾನದಲ್ಲಿ ಸ [illegible] ಶೇಷ ರಾಜಕೀಯ ಚಳವಳಿಯಿಂದಲೂ, ಆರ್ಥಿಕ ಸ್ಥಿತಿಯ ವಿಕೆಯಿಂದಲೂ ಓರಿಯಂಟಲ್ ಜೀವವಿಮೆ ಕಂಪೆನಿಯ ಕೆಲಸಕ್ಕೆ ಪೆಟ್ಟು ತಗಲಿದೆ. ವರದಿಯ ವರ್ಷದಲ್ಲಿ 5 [illegible] ರೂಪಾಯಿಯ 20,481 ಪಾಲಿಸಿಗಳು ಮಾತ್ರ ಸೇರಿಸಲ್ಪಟ್ಟು ಇದು 1929ರದ್ದಕ್ಕಿಂತ 105 ಲಕ್ಷ ರೂ. ಅಂದರೆ ನೂರಕ್ಕೆ 16ರಷ್ಟು ಕಡಿಮೆ. ಆದರೆ 1930ರಲ್ಲಿ ಒಟ್ಟು [illegible] ಯ ವಿಮ್ಮಾನ ವರಮಾನವು 179 ಲಕ್ಷ ರೂ. ಅಂದರೆ ಹಿಂದಿನ ವರ್ಷಕ್ಕಿಂತ 18 ಲಕ್ಷ ರೂ. ಹೆಚ್ಚು. ವರದಿಯ ವರ್ಷ ದೇಶದ ಆರ್ಥಿಕ ಸ್ಥಿತಿಯು ಬಹಳ ಮಟ್ಟಿಗೆ ಕೆಟ್ಟು [illegible] 18 ಲಕ್ಷ ರೂ. ಹುಟ್ಟಿದ್ದು ವಿಶೇಷವೇ. 1930ರಲ್ಲಿ [illegible] ಉತ್ಪತ್ತಿಯು 52 ಲಕ್ಷ ರೂ. ಇದು ಹಿಂದಿನ [illegible] ಕ್ಕಿಂತ 5 ಲಕ್ಷ ರೂ. ಹೆಚ್ಚಾಗಿದೆ. ಕಂಪೆನಿಯ [illegible] ಯಂ ಉತ್ಪತ್ತಿಯ ಶೇಕಡ 22.4 ಇಳಿದಿದೆ. ಅಂದ [illegible] ನ ವರ್ಷದಕ್ಕಿಂತ ಶೇಕಡ 1.4 ಕಡಿಮೆಯಾಗಿರು [illegible] 1930ರಲ್ಲಿ 3281 ವಿಮೆದಾರರಿಗೆ 81 ಲಕ್ಷ ರೂ. [illegible] ಲ್ಲದೆ, ಕಂಪೆನಿಯ ಭಂಡವಾಳವು ಸುಮಾರು 104 [illegible] ಹೆಚ್ಚಿದೆ. ಇದು ತೃಪ್ತಿಕರವಾದ ವಿಷಯ. [illegible] ವರ್ಷ ಕಂಪೆನಿಯ ಕೆಲಸವು ಬಹು ಚೆನ್ನಾಗಿ ನಡೆದೀತೆಂ [illegible] ನುತ್ತೇವೆ.

Rubber Stamps of every design
and
Glass sign boards, Half tone Blocks,
Monogram seals, Marble slabs, ring
tones etc. etc. to suit. every pocket and
taste. For further particulars please
apply to:—
The Crown Rubber Stamp Co.,
Mangalore, S. K.
Or
Mr. N. N. Ponnappa,
Agent,
Mercara.
12—8

ಬಿನ್ನಹ.

(ಎಲ್ಲ ಕಾಂಗ್ರೆಸ್ ಕಾರ್ಯದರ್ಶಿಗಳಿಗೆ)

ರಾಷ್ಟ್ರದಲ್ಲಿ ಸತ್ಯಾಗ್ರಹ ಸಂಗ್ರಾಮವು ಭರದಿಂದ ಸಾಗಿದಾಗ ಎಷ್ಟೋ ಕಾಂಗ್ರೆಸ್ ಕೆಲಸಗಾರರು ಸೆರೆಮನೆಗಳನ್ನು ಸೇರಿದರು. ಕಾಂಗ್ರೆಸ್ ಕಮಿಟಿಗಳು ಶಾಸನ ವಿರುದ್ಧ ಆದವು. ಅಂಥಾ ಪ್ರಸಂಗದಲ್ಲಿ ಮುಖ್ಯ ಕಚೇರಿಯ ಕಾರ್ಯದರ್ಶಿಗಳು ಕಾಂಗ್ರೆಸ್ ಕಮಿಟಿಗಳ ಕೂಡ ಪತ್ರವ್ಯವಹಾರ ಸಂಬಂಧಗಳನ್ನು ಬಿಟ್ಟು ಆಯಾ ಸ್ಥಳಗಳ ಕೆಲವು ಸಜ್ಜನರ ಕೂಡ ಪತ್ರವ್ಯವಹಾರ ಮಾಡಿ ಅವರ ಮೂಲಕ ಕಾಂಗ್ರೆಸ್ಸಿನ ಕಾರ್ಯವನ್ನೂ, ಸತ್ಯಾಗ್ರಹದ ಸಂಗ್ರಾಮದ ಕೆಲಸವನ್ನೂ ಮುಂದುವರಿಸಬೇಕಾಯಿತು. ಆದರೆ ಈಗ ಆ ಪರಿಸ್ಥಿತಿ ಇಲ್ಲ. ಯುದ್ಧವು ತಡೆದಿರುವುದು. ಕಾಂಗ್ರೆಸ್ ಕಮಿಟಿಗಳು ಕಾಂಗ್ರೆಸ್ಸಿನವರ ಕೈ ಸೇರಿರುವವು. ಆದುದರಿಂದ ಈಗ ಮೊದಲಿನಂತೆ ವ್ಯಕ್ತಿಶಃ ಸಂಬಂಧವನ್ನಿಟ್ಟಂತೆ ಈಗ ಇಡಬಾರದು. ಇಟ್ಟರೆ ಕಾಗದ ಪತ್ರಗಳು ವೇಳೆಗೆ ಸರಿಯಾಗಿ ನಮಗೆ ಸಿಗದೆ ಕಾರ್ಯದಲ್ಲಿ ತೊಂದರೆಯಾಗುವುದು. ಆದ್ದರಿಂದ ಪ್ರತಿಯೊಂದು ಕಾಂಗ್ರೆಸ್ ಕಮಿಟಿಯವರು ಕಾರ್ಯದರ್ಶಿ, ಕಾಂಗ್ರೆಸ್ ಕಮಿಟಿ ಎಂದು ಪತ್ರವ್ಯವಹಾರ ಮಾಡಬೇಕು. ವ್ಯಕ್ತಿಶಃ ಪತ್ರವ್ಯವಹಾರದ ಸಂಬಂಧವನ್ನಿಡಬಾರದು.

ಎಲ್ಲೆಲ್ಲಿ ಆ ಮೊದಲೇ ಕಾಂಗ್ರೆಸ್ ಕಮಿಟಿಗಳು ಇರುವವೋ, ಇನ್ನು [illegible] ಸ್ಥಾಪಿಸಲ್ಪಡುವವೋ ಅಲ್ಲಲ್ಲಿ ಕಾಂಗ್ರೆಸ್ ಕಮಿಟಿಗೆ ಪ್ರತ್ಯೇಕವಾಗಿ ಒಂದು ಕಾರ್ಯಾಲಯ (ಆಫೀಸು) ಇರಬೇಕು. ಇದಕ್ಕೆ ಹೆಸರಿನ ಬೋರ್ಡು ಹಚ್ಚಿರಬೇಕು. [illegible] ತಾಲೂಕಿನ ನಕಾಶೆಯೊಂದು ತೂಗಾಡುತ್ತಿರಬೇಕು. ರಾಷ್ಟ್ರ ವೀರರ ಭಾವ ಚಿತ್ರಗಳಿಂದ ಅಲಂಕರಿಸಲ್ಪಟ್ಟಿರಬೇಕು. ಕಾಂಗ್ರೆಸ್ ಕೆಲಸಗಾರರೆಲ್ಲ ಅಲ್ಲಿಯೇ ಕಾರ್ಯ ಮಾಡಬೇಕು. ಕಾಗದ ಪತ್ರಗಳನ್ನು ಅಲ್ಲಿಯೇ ಇಡಬೇಕು. ಕಾಂಗ್ರೆಸ್ ಕಮಿಟಿಗಳನ್ನು ಪ್ರವೇಶ ಮಾಡಿದ ಕೂಡಲೇ ಪ್ರತಿಯೊಬ್ಬನಿಗೂ ಇದು ಕಾಂಗ್ರೆಸ್ ಸರಕಾರದ ಕಚೇರಿಯೆಂದು ಅನಿಸಬೇಕು. ಇಷ್ಟು ಕಾಂಗ್ರೆಸ್ ಕಚೇರಿಯಲ್ಲಿ ವ್ಯವಸ್ಥೆ ಇರಬೇಕು. ಮತ್ತು ವೇಳೆಗೆ ಸರಿಯಾಗಿ ಕೆಲಸಗಳು ನಡೆಯಬೇಕು. ಇದರಿಂದ ಸುಸಂಘಟನೆಯಿಂದ ಕಾರ್ಯವನ್ನು ನಡಿಸಿದರೆ ಮಾಡಿದ ಕಾರ್ಯವು ಬಹುದಿನ ಬಾಳುವದಲ್ಲದೆ, ಬಹು ಸಮಯದಲ್ಲಿ ಆಗಬೇಕಾದ ಕಾರ್ಯವು ಸ್ವಲ್ಪ ಸಮಯದಲ್ಲಿ ಆಗುವುದು.

ಧಾರವಾಡ, ರಾ. ಶ್ರೀ. ಮುಕ್ಕೇರಿಕರ,
೯—೫—೩೧. (ಕಾರ್ಯದರ್ಶಿ.)

ಹಿಂದೂಸ್ಥಾನೀ ಸೇವಾದಳ.

ಡಾ. ಹರ್ಡೀಕರರು ೭ನೇ ತಾ. ಬೋರಸಾದಿನಲ್ಲಿ ಗಾಂಧೀಜಿಯವರನ್ನು ಕಂಡರು. ಆಗ ಗಾಂಧೀಜಿಯವರಿತ್ತ ಸಂದೇಶವು.

" ಹಚ್ಚಿನ ಆತ್ಮಾರ್ಪಣಮಾಡಲು, ಹೆಚ್ಚಿನ ಆತ್ಮಶುದ್ಧಿ ಮಾಡಿಕೊಳ್ಳಲು, ದರಿದ್ರನಾರಾಯಣನ ಸೇವೆ ಹೆಚ್ಚಾಗಿ ಮಾಡಲು, ನೂಲುವುದರಲ್ಲಿ, ಹಿಂಜುವುದರಲ್ಲಿ ಹೆಚ್ಚಿನ ನೈಪುಣ್ಯತೆ ಪಡೆಯಲು, ಚರಕ ಕರ್ಮದಲ್ಲಿ ಜಾಣತನ ಗಳಿಸಲು, ವಿಶೇಷ ಸತ್ಯ ಮತ್ತು ಅಹಿಂಸಾ ತತ್ವಗಳ ಮೇಲಿನ ಶ್ರದ್ಧೆಯನ್ನು ಬೆಳೆಸಿಕೊಳ್ಳಲು ಕಲಿಯುವುದೇ ಕಾಂಗ್ರೆಸ್ ಸ್ವಯಂ ಸೇವಕರು ಶಿಬಿರಗಳಲ್ಲಿ ಮಾಡಬೇಕಾದ ಮುಖ್ಯ ಕೆಲಸ. ಶಿಕ್ಷಣ ಶಿಬಿರಗಳ ಸುತ್ತ ಮುತ್ತಣ ಹಳ್ಳಿಗಳಲ್ಲಿ ಎಲ್ಲ ದೃಷ್ಟಿಯಿಂದಲೂ ಸುಧಾರಣೆಯಾಗಬೇಕೆಂಬ ಲಕ್ಷ್ಯವಿರಬೇಕು."

'ಭಾರತ ಸ್ವಾತಂತ್ರ್ಯ ನಿಧಿ ಗಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಪಾವತಿ ಪುಸ್ತಕಗಳನ್ನು ಹಂಚಿದ್ದರು, ಅವುಗಳನ್ನು ಈಗ ರದ್ದುಮಾಡಲಾಗಿದೆ. ಪ್ರತಿಯೊಬ್ಬರೂ ತಮ್ಮಲ್ಲಿ ಉಳಿದಿರುವ ಪಾವತಿ ಪುಸ್ತಕಗಳನ್ನು ಹಿಂದಕ್ಕೆ ಕಳಿಸಿಕೊಡಬೇಕೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕರ್ನಾಟಕ ಏಕೀಕರಣ.

೭ನೇ ತಾ. ಡಾ. ಹರ್ಡೀಕರರು ಬೋರಸಾದಿನಲ್ಲಿ ಗಾಂಧೀಜಿಯವರನ್ನು ಕಂಡು 'ಯುನೈಟೆಡ್ ಕರ್ನಾಟಕ' ಎಂಬ ಪುಸ್ತಕವನ್ನವರ ಕೈಲಿಟ್ಟು 'ಕಾಂಗ್ರೆಸ್ಸಿನವರು ಕರ್ನಾಟಕ ಪ್ರಾಂತ್ಯದ ಕಡೆ ಉದಾಸೀನದಿಂದಿರುವರೆಂದು ಜನತೆಯಲ್ಲಿ ಅಭಿಪ್ರಾಯ ಹರಡಿದೆ. ಕಾಂಗ್ರೆಸಿನಲ್ಲಿಯಲ್ಲಿ ಈ ವಿಚಾರವೇ ಬರಲಿಲ್ಲ. ಚಕ್ರಗೋಷ್ಠಿಗೆ ಕನ್ನಡಿಗರು ತಮ್ಮ ಪ್ರತಿನಿಧಿಯೊಬ್ಬನನ್ನು ಕಳಿಸುವ ಆಲೋಚನೆ ಮಾಡಿದ್ದಾರೆ" ಅನ್ನಲು ಗಾಂಧೀಜಿಯವರು—

"ಭಾಷಾನುಗುಣವಾಗಿ ಪ್ರಾಂತ್ಯಗಳ ರಚನೆಯಾಗಬೇಕೆಂದು ವಾದಕಾರಂಭಿಸಿದವನು ನಾನೇ. ಕಾಂಗ್ರೆಸು ದುರ್ಲಕ್ಷಿಸಲ್ಲ. ಕನ್ನಡಿಗರು ಹಾಗೆ ಭಾವಿಸುವುದು ತಪ್ಪು. ಕನ್ನಡಿಗರು ಚಳವಳಿ ನಡಿಸಲಿ. ನಾನು ಶಕ್ಯವಿದ್ದಷ್ಟು ಸಾಹಸ ಮಾಡುವೆನು.

ಪತ್ರವ್ಯವಹಾರ.

ಬಾತ್ಮಿದಾರರು ಪತ್ರದ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಮದುವೆಗಳಲ್ಲಿ ನಿಷಾನಿಷೇಧ.

ಮಹನೀಯರೇ,

ಈ ಮೊದಲು ಕೊಡವರ ಮದುವೆಗಳ ಕೇಳಿದ ಕೊಂಥತ್ವಂಪ್ಟರಲ್ಲಿ ನಿಷಾಪದಾರ್ಥಗಳನ್ನು ಸೇರಿಸುತ್ತಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಸೇಂದಿ ಸಾರಾಯಿ ಇಲ್ಲದ ಮದುವೆ ಏ ಇಲ್ಲವೆಂಬ ಕಾಲವು ಇದ್ದಿರಬಹುದು! 1922-23 ರಲ್ಲಿ ನಡೆದ ನಿಷಾಪಾನ ಚಳವಳದ ಫಲಿತಾಂಶವಾಗಿ ಹಲವು ಮದುವೆಗಳಲ್ಲಿ ನಿಷಾದೇವಿಗೆ ಬಹಿಷ್ಕಾರ ಹಾಕುತ್ತಾ ಬಂದರು. ಆದರೆ ಆ ಚಳವಳವನ್ನು ಕೈಕೊಂಡ ಮಹನೀಯರೂ, ಗ್ರಾಮಸ್ಥರೂ ಅದನ್ನು ಉತ್ಸಾಹದಿಂದ ಮುಂದರಿಸದೆ ಹೋದ ಕಾರಣ ಪುನಃ ಎಂದಿನಂತೆ ಲಗ್ನಗಳಲ್ಲಿ ಕುಡಿಯೂಟವು ಜೋರಾಗುತ್ತಾ ಬಂತು. ಕಳೆದ ವರ್ಷ ಕಮ್ಮಿ ಪಕ್ಷ ಶೇಕಡ 75 ರಷ್ಟು ಮದುವೆಗಳಲ್ಲಿ ಮದ್ಯಪಾನಕ್ಕೆ ಎಡೆದೊರೆತಿತ್ತು. ಜನರು ಒಡಕತನದಲ್ಲಿ ಮುಳುಗಿದ್ದರೂ ನಾಲ ಮಾಡಿ ಈ ಮಹಾಮಾರಿಯಿಂದ ಶುಭ ಲಗ್ನಗಳ ಊಟದ ಮೇಜುಗಳನ್ನು ಅಲಂಕರಿಸುತ್ತಿದ್ದರು. ಮೇಜಿನ ಅಲಂಕಾರದ ಈ ವಸ್ತುವು ಅತಿಥಿಗಳ ದೇಹವನ್ನು ಹೊಕ್ಕಿದ ಮೇಲೆ ಉಂಟಾಗುವ ಅನರ್ಥ ಪರಿಣಾಮವನ್ನು ವರ್ಣಿಸುವುದಕ್ಕಿಂತ ಮನಸ್ಸಿನಲ್ಲಿ ಊಹಿಸಿಕೊಳ್ಳುವುದೇ ಉತ್ತಮ!

ಆದರೆ ಮಹಾತ್ಮ ಗಾಂಧಿಯವರ ಪ್ರಪಂಚ ಪ್ರಸಿದ್ಧವಾದ ಸತ್ಯಾಗ್ರಹ ಚಳವಳವು ಹಿಂದೂಸ್ಥಾನದಲ್ಲಿ 1930 ನೇ ಇಸವಿ ಮಾರ್ಚಿ ತಿಂಗಳಲ್ಲಿ ಪ್ರಾರಂಭವಾದದ್ದು ಏಪ್ರಿಲ್ ತಿಂಗಳಲ್ಲಿ ಕೊಡಗಿಗೂ ತಪ್ಪಿತು. ಆದಾಗ್ಯೂ ಧಾಗ ಚಳವಳವನ್ನು ಕೊಡಗಿನಲ್ಲಿ ಪ್ರಾರಂಭಿಸಲು ಬಹು ಸ್ವಲ್ಪ ಜನರು ಮುಂದೆ ಬಂದರೂ ಅವರು ಗ್ರಾಮಾಂತರಗಳಲ್ಲಿ ನಡಿಸಿದ ನಿಷಾ ನಿಷೇಧ ಮತ್ತು ಖಾದಿ ಪ್ರಚಾರದ ಕೆಲಸಕ್ಕೆ ದೇಶಸ್ಥರು ಕುಂಬಾರ ಸಹಾನುಭೂತಿಯನ್ನು ತೋರಿಸಿ ಹಲವು ವಿಧದಲ್ಲಿ ಸಹಾಯ ಮಾಡಿದ್ದು ಕೊಡಗಿನ ಕೀರ್ತಿಯನ್ನು ಹೆಚ್ಚಿಸಿದೆ. ಸತ್ಯಾಗ್ರಹಿಗಳು ನಡಿಸಿದ ಸಾರಾಯಿಯ ಗಡಂಗ ಮತ್ತು ಅಂಗಡಿಗಳ ಪಿಕೆಟಿಂಗಿನಿಂದ ದೇಶದ ಜನರಲ್ಲಿ ಉಂಟಾದ ಬದಲಾವಣೆ ಬಹು ವಿಶೇಷವಾದದ್ದಾಗಿದೆ. ಕಳೆದ ವರ್ಷದ ಕೈಲ್‌ಪೊಳ್ದು ಮತ್ತು ಹುತ್ತರಿ ಹಬ್ಬಗಳಲ್ಲಿ ಸೇಂದಿ ಸಾರಾಯಿಯ ಖರ್ಚು ಬಹಳ ಮಟ್ಟಿಗೆ ಕಡಿಮೆಯಾಗಿ ಹೋಯಿತು. ಅಷ್ಟೇ, ಸತ್ಯಾಗ್ರಹ ಚಳವಳದಿಂದ ಜೈಲುವಾಸ ಕೈಕೊಂಡ ಸಾವಿರ ಗಟ್ಟಲೆ ಸಹೋದರ, ಸಹೋದರಿಗೆ ಸಹಾನುಭೂತಿ ತೋರಿಸುವ ಉದ್ದೇಶ್ಯ ಕೊಡಗಿನ ಹಲವು ಕಡೆಗಳಲ್ಲಿ ಹುತ್ತರಿ ಹಬ್ಬದ ಸಂತೋಷದ ಕೂಟಗಳನ್ನೂ ಸಹ ಬಾಕಿ ಮಾಡಿದರು. ಕೊಡಗು ದೇಶವು ನಿಷಾಮಾರಿಯ ಬಾಯಿಯಿಂದ ತಪ್ಪಿಸಿಕೊಳ್ಳುವ ಕಾಲವು ಬಂದಿದೆಯೆಂದು ತೋರುತ್ತಿತು.

ಕೊಡಗಿನಲ್ಲಿ ಮದುವೆಯ ಕಾಲವು ಬಂತು. 'ಕುಡುಕತನವನ್ನು ಬಿಡಿಸಲಿಕ್ಕಾಗಿ ನಮ್ಮ ಸಹೋದರರು ಕೆಲವರು ಜೈಲುವಾಸವನ್ನು ಕೈಕೊಂಡಿರುವಾಗ್ಯೆ ನಾವು ಇನ್ನು ಆ ವಿಷ ಪದಾರ್ಥವನ್ನು ಶುಭ ಲಗ್ನಗಳಲ್ಲಿ ಸೇರಿಸುವುದು ತುಂಬಾ ನಾಚಿಕೆಗೇಡು. ಹಾಗೆ ಸೇರಿಸಿದ ಮದುವೆಗಳಿಗೆ ಯಾರೂ ಹೋಗಬಾರದು" ಎಂಬ ಪ್ರತಿಜ್ಞೆಯೇ ಎಲ್ಲೆಲ್ಲಿಯೂ ಕೇಳ ಹತ್ತಿತು. ಮದುವೆಗಳು ಒಂದೊಂದಾಗಿ ನಿಷಾಸೇವನೆಯಿಲ್ಲದೆ ಕಡಿಮೆ ಖರ್ಚಿನಲ್ಲೂ, ತಂಟೆ ತಕರಾರುಗಳಿಲ್ಲದೆಯೂ ಚೆನ್ನಾಗಿ ನಡೆದು ಹೋದವು. ಇದರೆ ಇಡೀ ಭರತಖಂಡದ ವನ್ನೇ ಬದಲಾಯಿಸಿ, ಬ್ರಿಟಿಷ್ ಸರಕಾರವನ್ನು ತಲ್ಲಣಗೊಳಿಸಿರುವ ಬಹು ವಿಶೇಷವಾದ ಈ ಸತ್ಯಾಗ್ರಹ ಚಳವಳವು ನಮ್ಮ ಪ್ರಾಂತ್ಯದಲ್ಲಿ 'ಕೂಪ ಕೂರ್ಮ'ದಂತಿರು. ಕೆಲವರನ್ನು ಇನ್ನೂ ಎಚ್ಚರಿಸದೆ ಇರುವದು ಆಶ್ಚರ್ಯವೂ ಮತ್ತು ಶೋಚನೀಯವೂ ಆಗಿದೆ.

"ತನ್ನ ಹಿರೇ ಮಗಳ ಅಥವಾ ಕಿರೀ ಮಗಳ ಮದುವೆ, ಇದು ತಾನು ನಡಿಸುವ ಪ್ರಥಮ ಯಾ ಆಖೈರು ಮದುವೆ. ತಾನು ಈ ಮೊದಲು ಹಲವು ಲಗ್ನಗಳಲ್ಲಿ ಕುಡಿದಿರುವ ಕಾರಣ ತಾನು ಈಗ ಬೇರೆಯವರಿಗೆ ಕುಡಿಯಲು ಕೊಡಬೇಕು"ಎಂಬ ತಾನು ಈಗ [illegible] ಈ ಮೊದಲಾದ ಟೊಳ್ಳು ಕಾರಣಗಳಿಂದ ಈ ಸನುಮದಲ್ಲೂ ಕೂಡ ನಿಷಾ ಮಹಾಮಾರಿಯನ್ನು ಶುಭ ಲಗ್ನಗಳಲ್ಲಿ ಹಂಚಿದವರೂ ಕೆಲವರಿರುವರು. ಕೊಡಗಿನಲ್ಲಿ ಈ ವರ್ಷ ಈ ವರೆಗೆ ನಡೆದ ನೂರಾರು ಮದುವೆಗಳಲ್ಲಿ ನನಗೆ ತಿಳಿದ ಮಟ್ಟಿಗೆ ಒರೇ ಮೂರು ಮದುವೆಗಳಲ್ಲಿ ಮಾತ್ರ ನಿಷಾಪಾನಕ್ಕೆ ಎಡೆದೊರಕಿತು! ಇದೇ ದೇಶದ ಉದ್ಧಾರಣೆಯ ಉಲ್ಲಂಘನೆ ಮಾಡಿ ಇಂಥಾ ಮಹಾ ಕಾರ್ಯವನ್ನು ನಡಿಸಲು ಧೈರ್ಯ ತಂದುಕೊಂಡಂಥ ಮಹನೀಯರು ಯಾರೆಂದು ತಿಳಿಯಲು ಜನರು ಕುತೂಹಲವುಳ್ಳವರಾಗಿರಬಹುದು. ಈ ಮದುವೆಗಳು ಯಾವವೆಂದರೆ—ವೀರರಾಜಪೇಟೆಯಲ್ಲಿ ನಡೆದ ಮ. ಕುಪ್ಪಂಡ ಮುದ್ದಯ್ಯನವರ ಮಗಳ ಮದುವೆ, ಮಡಿಕೇರಿಯಲ್ಲಿ ನಡೆದ ಮ. ಕೊಡಂದೆರ ನೇಪಯ್ಯನವರ ಮಗಳ ಮದುವೆ, ಮತ್ತು ಕಾರ್ಗುಂಡದಲ್ಲಿ ನಡೆದ ಮ. [illegible] ಪಯ್ಯನವರ ಮತ್ತು ಸಹೋದರ—ಇವರ ಮ[illegible] ದೇಶದ ಸಹೋದರರಿಗೆ ಒಳ್ಳೇ ಉದಾಹರಣೆ[illegible] ಆಲಿಕ್ಕು. ದೇಶದ ಉದ್ಧಾರಕ್ಕೂ ನಿಷಾದೇವಿಗೆ [illegible] ಹಾಕಿದ್ದರೆ ಇವರಿಗೆ ದೇಶಬಂಧುರ ಧನ್ಯವಾದಗಳಿದ್ದ[illegible] ಮುಂದೆ ಲಗ್ನ ನಡಿಸಲಿಕ್ಕಿರುವ ಮಹನೀಯರು [illegible] ಲ್ಪಂಕ್ತಿಯನ್ನು ಅನುಸರಿಸದೆ, ನಿಷಾ ಪದಾರ್ಥವಿಲ್ಲ[illegible] ರಿಸಿ ಮದುವೆ ಮಾಡಿದ ನೂರಾರು ಮಹನೀಯರ [illegible] ದ್ಧಾರದ ಉದಾಹರಣೆಯನ್ನೇ ಹಿಂಬಾಲಿಸಬೇಕೆಂದು [illegible] ವನಾಗಿದ್ದೇನೆ.

ತಾ. 18—5—'31 "[illegible]"

ಹಳೇ ನಂಜರಾಜ ಪಟ್ಣ ತಾಲೋಕಿನವರಲ್ಲಿ [illegible]

ಮಹನೀಯರೇ,

ಕೆಲವು ವರ್ಷಗಳ ಹಿಂದೆ ದೇಹಪುಷ್ಟಿಯಲ್ಲಿಯೂ, [illegible] ವಾಸಿ ಗಳಲ್ಲಿಯೂ, ವಿದ್ಯೆ ಬುದ್ಧಿಯಲ್ಲಿಯೂ ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಇದ್ದ ನೀವು ಇತ್ತೀಚೆಗೆ ಹೀನ [illegible] ತಿಗೆ ಬರಲು ಕಾರಣವೇನೆಂಬುದನ್ನೂ, ಅದನ್ನು ಸರಿಪಡಿಸು ಉಪಾಯವನ್ನೂ ಕಂಡು ಹಿಡಿದುಕೊಳ್ಳದೆ ಹೋದರೆ [illegible] ಕೆಲವು ವರ್ಷಗಳೊಳಗೆ ನಿಮ್ಮ ತಾಲೋಕಿನ ಹೆಸರೇ ಇಲ್ಲದ[illegible] ಗುತ್ತದೆ ಎಂಬ ಸಂಗತಿಯನ್ನು ನಾನು ಇಲ್ಲಿ ಬರೆಯಲು, ವಿ[illegible] ದಿಸುತ್ತೇನೆ.

ಅನೇಕ ಮಹನೀಯರಿಗೆ 400—500 ರೂ. ಕ್ರಯ [illegible] ಳುವ ಆಸ್ತಿ ಇರುತ್ತೆ. ಇವರು ಮದುವೆಯಾಗಬೇಕಾದರೆ [illegible] ಹುಡುಗಿಗೆ ಸದ್ಯಕ್ಕೆ 300—400—500 ರೂ ಕೊಟ್ಟು, ಅವರ[illegible] ಮದುವೆ ಖರ್ಚು ಅವರವರೇ ಪಟ್ಟುಕೊಳ್ಳುವಂತೆ ತೀರ್ಮಾ[illegible] ಸಿಕೊಳ್ಳುತ್ತಾರೆ. ಹೀಗಾಗಿ ಮದುವೆಯಾಗಿ ಒಂದೆರಡು [illegible] ಷಗಳನಂತರ ಬಡ್ಡಿ ಸಹ ತೆರಲಾರದೆ ಭೂಮಿಯನ್ನೇ ಬಿ[illegible] ಕೂಲಿ ಕಸಬು ವಗೈರೆಗೆ ಹೋಗುವದರಿಂದ ಅನೇಕ ಗ್ರಾ[illegible] ಗಳು ಫಾರೆಸ್ಟಿನವರ ಪಾಲಿಗೆ ಹೋಗಲಾಗಿದೆ.

ಕೆಲವರು ಮದುವೆ ಮಾಡಿಕೊಳ್ಳಲು ಶಕ್ತಿ ಇಲ್ಲದೆ ತಮ ವಯಸ್ಸು ಬಿಡಾಗ್ಯೆ ತಮ್ಮ ಯವ್ವನ ಶಕ್ತಿಯನ್ನು ಅಡ[illegible] ಕೊಳ್ಳಲು ತಿಳಿಯದೆ ದೇಹವನ್ನು ದುರಭ್ಯಾಸಗಳಿಂದ ಹಾ[illegible] ಮಾಡಿಕೊಳ್ಳುತ್ತಾರೆ. ಇತ್ತಲಾಗಿ ಹುಡುಗಿಯರಿಗೆ ಸೇತ[illegible] ರಾಶಿ ಬರದೆ ಮನೆಯಲ್ಲಿ ನಿಲ್ಲಬೇಕಾಗಿ ಸಂಸಾರ ಅಧ್ವಾ[illegible] ಗೆ ಕುಂದಕ ಉಂಟಾಗುವಂತಿದೆ. ಹೀಗಾಗಿಯೂ ಜನ ಜನ[illegible] ಖ್ಯೆ ಕಡಮೆಯಾಗಿ ಊರುಗಳೆಲ್ಲಾ ಪಾಳಾಗಿ ರಿಜನರೇ[illegible] ಎಲ್ಲವೆಂದು ಹೇಳಿಕೊಂಡು ಸಾವಿರಾರು ರೂಪಾಯಿ ಖ[illegible] ಮಾಡಿ ಪಾಳು ಬಿದ್ದ ಊರುಗಳನ್ನು ಪುನಹ ರೂಢಿಗೆ ತರುವ ಸಾಮಾನ್ಯದ ಕೆಲಸವಲ್ಲವೆಂಬದು ಈಗ ಸರಕಾರದವರು[illegible] ಯತ್ನ ಪಟ್ಟು ಮಾಡುವ ರಿಜನರೇಶನ್ ಎಸ್ಕೀಮ್ ಕಡೆ ನೋ[illegible] ರೆ ವೇದ್ಯವಾದೀತು.

ಉತ್ತರ ಕೊಡಗಿನಲ್ಲಿ ಅನೇಕರು ಸರ್ಕಾರ ಉದ್ಯೋ[illegible] ಮಾಡಿ ಪೆನ್ಶನ್ ಸಹ ಪಡೆದವರಿದ್ದರು. ತಳಬದು[illegible] ಈಗ ಪೂರಾ ವಿದ್ಯಾವಂತರೇ. ಇತ್ತೀಚೆಗೆ ನೋಡಿದರೆ [illegible] ಹ ಗೊತ್ತಿರುವ ಒಂದೆರಡು ಜನರು ಒಂದೊಂದು ಗ್ರಾಮ[illegible] ರುವದು ಬಹಳ ಕಷ್ಟ. ವಿದ್ಯದ ಮೇಲೆ ಪ್ರೇಮ ಎಂ[illegible] ಮಾಯವಾಗಿದೆ. ಆಸ್ತಿಪಾಸ್ತಿ ಅಂದರೆ ಪ್ರತಿಯೊಬ್ಬರೂ ಸುಕೂಲಸ್ಥರೇ ಆಗಿದ್ದರು. ಈಗ ನೋಡಿದರೆ ಉತ್ತಮ [illegible] ಕೂಲಸ್ಥರನ್ನು ಒಂದು ಕೈ ಬೆರಳಲ್ಲಿ ಲೆಕ್ಕ ಮಾಡಿ[illegible] ಹೇಳಬಹುದು.

ಪಂಜಾಬಿನಲ್ಲಿ ಇಂಥಾ ಅನರ್ಥಗಳನ್ನು ತೊಲಗಿಸ[illegible] ಲು 'ಉತ್ತಮ ಜೀವನ ಸಂಘ' (Better Living Soci[illegible] ಗಳನ್ನು ರಜಿಸ್ಟರು ಮಾಡಿಸಿಕೊಂಡು ಆ ಮೂಲಕ ಮಿತ[illegible] ಕಲಿಸಲು ಪ್ರಯತ್ನ ಪಡುತ್ತಲಿದ್ದಾರೆ. ಅನೇಕ ಜನ [illegible] ಪ್ರಪ ಹೊಂದಿಯೂ ಇದೆ. ಒಂದು ಸಂಘದಲ್ಲಿ ಕುಂಬ[illegible] ದ್ದ ಒಬ್ಬ ದೊಡ್ಡ ರೈತನೊಬ್ಬನು ತನ್ನ ಮನೆಯಲ್ಲಿ [illegible] ದುವೆಯಲ್ಲಿ ಸಂಘದ ತೀರ್ಮಾನವನ್ನು ಅತಿಕ್ರಮಿಸಿ ಧ[illegible] ಯ ಮಾಡಿದ್ದಕ್ಕೆ ಸಂಘದವರು ಅವನಿಗೆ 100 ರೂ[illegible] ಯನ್ನು ವಿಧಿಸಿದರು. ಇನ್ನೊಂದು ಸಂದರ್ಭದಲ್ಲಿ ಗ[illegible] ಕಾಗದ ಪ್ರಿಂಟು ಮಾಡಿಸಿದಕ್ಕೆ ಸಂಘದವರು ಒಂದು [illegible] ಬಿಲುವಾನೆ ಮಾಡಿದರು. ಹೀಗೆಲ್ಲಾ ನಡಿಸುತ್ತಿ[illegible] ದರಿಂದಲೇ ಅಲ್ಲಿಯಣ ಜನರು ಮುಂದುವರಿಯುತ್ತಿ[illegible] ದ್ದಾರೆ.

ಪ್ರಾಯ ಬಂದಾಗ್ಯೆ ಹುಡುಗರಿಗೂ ಹು[illegible] ಮದುವೆ ಮಾಡಲೇ ಬೇಕು. ಹಣ ಕೊಟ್ಟು [illegible] ವುದೆಂದರೆ ಇತರ ಕಡೆಗಳಲ್ಲಿ ಬಹಳ ನಾಚಿಕೆ [illegible] ಕರ, ಕೋಳಿ, ಆಡು, ಹಂದಿ ವಗೈರೆ ಕ್ರಯ ಕ[illegible] ಲ್ಲದೆ ಹುಡುಗಿಯರನ್ನೂ ಕ್ರಯ ಕೊಟ್ಟು ತರ[illegible] ವ್ಯವಸಾಯ ಮತ್ತು ನಾಚಿಕೆಗೇಡು! ಅನೇಕರು [illegible] ದ ಮದುವೆ ಮಾಡಿ ಕೊಟ್ಟರು 'ಇಲ್ಲವೆಂದು' [illegible] ನದಿಲ್ಲ. ಆದರೆ ಹೆಚ್ಚು ಜನರು ಹಣ ಕೊಟ್[illegible] ರುವುದರಿಂದ ಪ್ರತಿಯೊಬ್ಬರೂ ಹಣ ಕೊಡುತ್[illegible] ಪ್ರಾಯ.

ಕೆಲವರು ನೋಳಮೋಳವಿಲ್ಲದೆ ಸನ್ನ ಹು[illegible] ಳಿಸಿಕೊಡುವುದಿಲ್ಲವೆಂದೂ ಹೇಳಿ ಬಲತ್ಕಾರದಿ[illegible] ಡಿಸುತ್ತಿದ್ದರು. ಇತ್ತೀಚೆಗೆ ಇದು ಯಾವುದೆ[illegible] ರಣದಿಂದ ನಿಂತ ಹಾಗೆ ಕಾಣುತ್ತೆ. ಹುಡು[illegible] ಟ್ಟು ಮದುವೆ ಮಾಡಿ ಅದಕ್ಕೆ ಬಡ್ಡಿಯನ್ನು

ಚಂದಾದಾರರಲ್ಲಿ ವಿನಂತಿ.

'ಕೊಡಗು' ಪತ್ರಿಕೆಯ ಹಾಲಿ ವರ್ಷವು ಈ ತಿಂಗಳ ಆಖೈರಿಗೆ ಮುಕ್ತಾಯವಾಗುತ್ತದೆ. ನೋಟೀಸು ಕಾರ್ಡುಗಳು ಕಳುಹಿಸಿದ್ದರೂ ಹಲವು ಚಂದಾದಾರರು ಇನ್ನೂ ತಮ್ಮ ಚಂದಾ ಹಣವನ್ನು ಪಾವತಿ ಮಾಡದೆ ಇರುವುದು ತುಂಬಾ ವ್ಯಸನಕರ. ಮೊದಲಿನಂತೆ ವಿ. ಪಿ ಮೂಲಕ ಪತ್ರಿಕೆಯನ್ನು ಕಳುಹಿಸಿದರೆ—ಪೋಸ್ಟಲ್ ಇಲಾಖೆಯವರು ವಿ. ಪಿ. ಭಾಗವನ್ನು ಮೊದಲಿನಂತೆ ಹತ್ತು ದಿವಸಗಳ ವರೆಗೆ ಇಡುವ ಬದಲು ಈಗ ಬರೇ ಮೂರು ದಿವಸಗಳ ತನಕ ಮಾತ್ರ ಇಡುವ ನಿಯಮ ಮಾಡುತ್ತಿರುವದರಿಂದ ಮುಖ್ಯವಾಗಿ ಪೋಸ್ಟಾಫೀಸಿನಿಂದ ದೂರವಿರುವ ಗ್ರಾಹಕರಿಗೆ ವಿ. ಪಿ ಯನ್ನು ಬಿಡಿಸಿಕೊಳ್ಳಲು ಕಷ್ಟವಾಗುತ್ತದೆ. ಆದಕಾರಣ ಅವರೂ ತಮ್ಮ ಚಂದಾಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಆಫೀಸಿಗಾಗಲೀ, ನಮ್ಮ ಏಜೆಂಟರುಗಳಿಗಾಗಲಿ ಕೂಡಲೆ ಪಾವತಿ ಮಾಡಬೇಕಾಗಿ ಕೋರುತ್ತೇವೆ. ಹಣ ಬಾಕಿ ಮಾಡಿಕೊಳ್ಳುವುದರಿಂದಲೂ, ವಿ. ಪಿ. ಕಳುಹಿಸುವುದರಿಂದಲೂ ನಮಗೆ ತುಂಬಾ ನಷ್ಟ ಉಂಟಾಗುವ ಅಂಥವರಿಗೆ ಪತ್ರಿಕೆ ಕಳುಹಿಸುವುದನ್ನು ನಿಲ್ಲಿಸುವದೆಂದು ತಿಳಿಸಲು ವಿಷಾಧಿಸುತ್ತೇವೆ. ಕಳೆದ ವರ್ಷಗಳಿಂದ ದೇಶಸೇವೆ ಮತ್ತು ಜನಸೇವೆ ಮಾಡುತ್ತ ಆಯುಷ್ಯವನ್ನು ಸವೆಸುತ್ತಿರುವ "ಕೊಡಗು" ಪತ್ರಿಕೆಯ ಪ್ರಕಟನ ಕಾರ್ಯಕ್ಕೆ ತೊಂದರೆಯಾಗದಂತೆ ಎಲ್ಲಾ ಚಂದಾ ಹಣವನ್ನು ಮುಂಗಡವಾಗಿಯೇ ಕಳುಹಿಸಬೇಕಾಗಿ ಕೋರುತ್ತೇವೆ.

(ಮ್ಯಾನೇಜರು.)

ವರ್ತಮಾನ ಸಂಗ್ರಹ.

ಒಳದೇಶ.

ಸೋಮವಾರಪೇಟೆಯ ಶಾಲೆಯ ವಾರ್ಷಿಕೋತ್ಸವವು ಈ ತಾ. [illegible] ವಾರ ಡಿಸ್ಟ್ರಿಕ್ಟ್ ಬೋರ್ಡು ವೈಸ್ ಪ್ರೆಸಿಡೆಂಟ್ ಹಾನಗಲ್ ಚೆಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಲಿರುತ್ತದೆ.

ಈ ಮರಣವೊಂದಿಗೆ ಕಳೆದ ವಾರ ವೀರಾಜಪೇಟೆಯಲ್ಲಿ ಪ್ಲೇಗು ರೋಗವು ಅಂಟಿ ಮೃತವಾದನೆಂದು ತಿಳಿದುಬಂದಿದೆ. ಹೊಸದಾಗಿ ಯಾರಿಗೂ ಅಂಟಿರುವುದು ತಿಳಿಯುವುದಿಲ್ಲ.

ಸುಪರ್ ವೈಜರಾದ ಮ. ಎ. ಕಾಳಪ್ಪಯ್ಯನವರು ಸರಕಾರಿ ಕೆಲಸವನ್ನು ವಿಶ್ರಾಂತಿಯಿಂದ ಕಳೆಯಲು ತಾರೀಕು 14 ರಲ್ಲು ಪೊನ್ನಂಪೇಟೆಯಿಂದ ಕಾಶಿಗೆ ಹೋದರೆಂದು ತಿಳಿಯುತ್ತೇವೆ.

ಫಾರೆಸ್ಟ್ ಸ್ಪೆಷಲ್ ಕೃಷ್ಣನ ವಾರ್ಷಿಕ ... ತಾ. 16 ನೇ ಶನಿವಾರ ಫ್ರೇಜರ್ ಪೇಟೆಯಲ್ಲಿ ... ವರೆಗೆ ಮಿಸೆಸ್ ಕೊಡಂದೇರ ತಿಮ್ಮಯ್ಯನವರ ... ಮಗನನ್ನು ಹುಚ್ಚಿದರೆಂದೂ ತಿಳಿಯಬರುತ್ತದೆ. ... ದಿ ರೋಗವು ಕಿಗ್ಗಟ್ಟು ನಾಡಿನ ಹಲವು ಕಡೆ ... ವುದಲ್ಲದೆ ವೀರಾಜಪೇಟೆಗೆ ಸಮೀಪಿಸಿದೆಯೆಂದು ... ಗ್ರಾಮದ ಕುಂಜ್ಞಿನಾಯ ತೋಟದಲ್ಲಿ ... ಈ ಜಾಡ್ಯಕ್ಕೆ ತುತ್ತಾದರೆಂತಲೂ ...

... ಇಸ್ಲಾಂ ಸಂಘದ ಮಂತ್ರಿ ... ವಿ ಬಿಂಗು ಈ ತಾ. 26 ರಲ್ಲಿ ... ಅಫ್ಜಲುಲ್ ಉಲೇಮ ಮೌಲಾನ ಮೌಲ್ವಿ ... ವಾಹಾಬ್ ಸಾಹೇಬ್ ಬೆಂಗಳೂರಿನ ... ನಡೆಯುವದೆಂದು ತಿಳಿಯುತ್ತೇವೆ.

ಪೊನ್ನಂಪೇಟೆಯಲ್ಲಿ ಮಳೆ ಇಲ್ಲದೆ ಕುಡಿಯುವ ... ಜನರು ಬಹಳ ಕಷ್ಟದಲ್ಲಿ ಬಿದ್ದಿದ್ದಾರೆ. ... ಇಲ್ಲ. ಇರುವ ಕೋ-ಆಪರೇಟಿವ್ ... ಗೆ ಖಂ. 40—41ರಂತೆ ಕ್ರಯ ಕೊಡುತ್ತಾರೆ ... ವಾಯ ಕಟ್ಟದೆ ಬಹಳ ಬಾಕಿ ಇದೆ. ಸ್ಥಳದ ... ವಲ್ಲವೆಂದು ಒಬ್ಬರು ತಿಳಿಸುತ್ತಾರೆ.

... ಮೆಡಿಯೇಟ್ ಪರೀಕ್ಷೆಯಲ್ಲಿ ಮ. ... ಪಿ. ಕರುಂಬಯ್ಯನವರು, ಸಿ. ವಿ. ನಾಣಪ್ಪ ... ದೀವಾನರ ಕೆ. ಅಪ್ಪಯ್ಯನವರು ಫೂರ್ತಿಯಾ ... ರಾಡು ಕಾಡುಮಂಡ ಯಂ. ಅಯ್ಯಪ್ಪನವರ ... ಮಗನಾದ ಯಸ್. ಚಂಗಪ್ಪನವರು 2ನೇ ... ಗಳಲ್ಲಿ ತೇರ್ಗಡೆ ಹೊಂದಿರುವದಾಗಿ ತಿಳಿದು ಬರುತ್ತದೆ.

... ಟೌನಿನಲ್ಲಿ ಈಗ ಯಾವ ಕರದ ಕಾನೂನು ... ತಾರೀಕು 18 ನೇ ಸೋಮವಾರ ಪೊ... ಸಂಗಳೆಲ್ಲರು ಸೇರಿ ಬಹಿಷ್ಕಾರದ ಮೆರವ... ನಾಳೆ ದಿನ 'ಮಾರಿ ಬೀಳಕೆ'ದರೆಂತ ... ಮುತ್ತಲಿನ ಗ್ರಾಮಗಳಲ್ಲಿ ವಾಂತಿಭೇದಿ ... ಅಲ್ಲಿಯ ಶಾಲೆಯನ್ನು ಜೂನ್ 1 ... ಬಿಟ್ಟಿದೆಯೆಂತಲೂ ತಿಳಿಯುತ್ತೇವೆ.

... ನಾಪೋಕ್ಲಿನಲ್ಲಿಯೂ, 17 ರಲ್ಲಿ ... ಕಾಂಗ್ರೆಸ್ ಪ್ರಚಾರ ಕೆಲಸಕ್ಕಾಗಿ ಕೂಡ ... ಬಂಡಳಿಯವರು ನಡಿಸಿದ ಸಾರ್ವಜನಿಕ ಮಹಾಸಭೆಯಲ್ಲಿ ... ಬೆಂಗಳೂರಿನ ಶ್ರೀಯುತರುಗಳಾದ ಪಿ. ಐ. ಬೆಳ್ಯಪ್ಪನವರು ಮತ್ತು ಐ. ಪಿ. ಕಾರ್ಯಪ್ಪನವರು, "ಈಗಿನ ರಾಜಕೀಯ ಪರಿಸ್ಥಿತಿಯನ್ನೂ, ಕರಾಚಿ ಕಾಂಗ್ರೆಸ್ಸಿನ ಮಹತ್ವವನ್ನೂ, ದುಂಡು ಮೇಜು ಪರಿಷತ್ತನ್ನೂ" ಕುರಿತು ಭಾಷಣ ಮಾಡಿದರು.

ಹಿಂದೂ ದೇಶ.

ಕಲ್ಕತ್ತಾ ಪಟ್ಟದಲ್ಲಿ ಎರಡು ಗಿರಣಿಗಳಿಗೆ ಬೆಂಕಿ ಬಿದ್ದು ಸುಮಾರು ನಾಲ್ಕು ಲಕ್ಷ ರೂ. ಬೆಲೆಯ ನಾರು ನಷ್ಟವಾಯಿತು.

ಈ ತಿಂಗಳ ಅಂತ್ಯದಲ್ಲಿ ನಡೆಯುವ ಮೈಸೂರು ಮಹಾರಾಜರವರ ವರ್ಧಂತಿಗೆ ಮದ್ರಾಸಿನ ಗವರ್ನರವರು ಪತ್ನಿ ಸಮೇತ ದಯಮಾಡಿಸುವರೆಂತಲೂ, ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನ ಮಾಜಿ ಮೆಂಬರಾದ ಸರ್ ಮಹಮ್ಮದ್ ಹಬಿಬುಲ್ಲಾರವರೂ ಬರುವರೆಂತಲೂ ವರ್ತಮಾನ.

ಸಿಬ್ಬಂದಿ ಖೋತೆಯ ವಿಷಯ ಆಲೋಚಿಸಲು ಪ್ರಾಂತೀಕ ಸರಕಾರಗಳ ಮತ್ತು ಮಧ್ಯವರ್ತಿ ಸರಕಾರದ ಪ್ರತಿನಿಧಿಗಳ ಕಾನ್ ಫರೆನ್ಸ್, ತಾ 18ರಲ್ಲಿ ಸಿಮ್ಲಾದಲ್ಲಿ ಪ್ರಾರಂಭವಾಯಿತು. ಇಂಡಿಯಾ ಸರಕಾರದ ಫೈನಾನ್ಸ್ ಮೆಂಬರಾದ ಸರ್ ಜಾರ್ಜ್ ಶುಸ್ಟರ್ ರವರು ಅಧ್ಯಕ್ಷರಾಗಿದ್ದರು. ಕಾನ್ ಫರೆನ್ಸಿನವರು ನಿರ್ಧರಿಸಿದ ಎಂದು ಉಪಸಮಿತಿಗಳು ಈಗ ಚರ್ಚೆ ಮಾಡುತ್ತಾ ಇರುವರು.

ಕೋಲಾಪುರದಲ್ಲಿ ಪತ್ರಿಕೆ (ಪ್ರೆಸ್ಸ್?) ಕಾಯಿದೆಯ ಪ್ರಕಾರ 7 ವರ್ಷಗಳ ಕಠಿಣ ಸಜೆಗೆ ಗುರಿಪಡಿಸಲ್ಪಟ್ಟಿದ್ದ "ಕರ್ಮಯೋಗಿ" ಪತ್ರಿಕೆಯ ಸಂಪಾದಕರಾದ ಶ್ರೀಯುತ ರಾಜ್ವಾಡೆಯವರು ತಾ. 18ರಲ್ಲಿ ಬಿಡುಗಡೆ ಮಾಡಲ್ಪಟ್ಟರು. ಅವರ ತೂಕವು 8 ಪೌಂಡು ಕಡಿಮೆಯಾಗಿದೆ. ಅವರು ಜೈಲಿನಿಂದ ಹೊರಗೆ ಬಂದೊಡನೆ ಹಲವು ಜನರು ನೆರೆದು ಅವರಿಗೆ ಸ್ವಾಗತವನ್ನಿತ್ತರು.

ಲ್ಯಾಂಕಶಯರಿನವರ ಬಟ್ಟೆಯು ಇನ್ನು ಮುಂದೆ ಇಂಡಿಯಾದಲ್ಲಿ ಮಾರಾಟವಾಗುವ ಸಂಭವವಿಲ್ಲದ್ದರಿಂದ, ಕೆಲವು ಇಂಗ್ಲಿಷ್ ವಿಕ್ರಯಗಾರರು ಬಂಗಾಳಿಗಳನ್ನು ಪಾಲುಗಾರರಾಗಿ ಮಾಡಿ ಅವರ ಸಹಾಯದೊಡನೆ ಕಲ್ಕತ್ತಾದಲ್ಲಿ ಹತ್ತಿ ನೂಲಿನ ಗಿರಣಿಗಳನ್ನು ಸ್ಥಾಪಿಸುವ ವಿಚಾರದಲ್ಲಿರುವರಂತೆ. ಕಲ್ಕತ್ತೆಯಲ್ಲಿ ಹತ್ತಿಯ ಗಿರಣಿಗಳು ಬಹು ಕಡಮೆ. ನಾರಿನ ಗಿರಣಿಗಳೇ ಹೆಚ್ಚು. ಅವುಗಳಲ್ಲಿ ಹೆಚ್ಚಿನವೂ ಯೂರೋಪಿಯನ ಸ್ವಾಧೀನದಲ್ಲಿವೆ.

ನೆನಗೊಂಡೆಗೆ ಸೇರಿದ ಖಾನುಮಹಮ್ಮದುಪಲ್ಲಿ ಎಂಬ ಗ್ರಾಮದಲ್ಲಿ ಕಳೆದ ತಾ. 8ರ ಬೆಳಿಗ್ಗೆ ಒಬ್ಬ ಗರ್ಭಿಣಿ ಸ್ತ್ರೀಯು ಮೊದಲು ಒಂದು ಹೆಣ್ಣು ಮಗುವನ್ನು ಪ್ರಸವಿಸಿದಳು. ಇದಾದ ಒಂದು ಗಂಟೆಯ ವೇಳೆ ಇನ್ನೊಂದು ಮಗುವನ್ನು, ಇನ್ನೊಂದು ಗಂಟೆಯ ನಂತರ ಮತ್ತೊಂದು ಮಗುವನ್ನು, 4ನೆಯ ಗಂಟೆಯಲ್ಲಿ ಮಗದೊಂದು ಮಗುವನ್ನೂ ಹೆತ್ತಳು. ಇವು 4 ಮಕ್ಕಳೂ ಹುಟ್ಟಿದ ಕೂಡಲೇ ಮೃತವಾದವು. ಬಾಣಂತಿಯು ಆರೋಗ್ಯವಾಗಿರುತ್ತಾಳೆ.

ಕಳೆದ ವಾರ ಮಹಾತ್ಮ ಗಾಂಧಿಯವರೂ, ರೌಂಡ್ ಟೇಬಲ್ ಕಾನ್ ಫರೆನ್ಸಿನ ಕೆಲವು ಮುಖ್ಯ ಮೆಂಬರುಗಳೂ ಸಿಮ್ಲಾದಲ್ಲಿ ವೈಸರಾಯರೊಡನೆ ಸಂಭಾಷಣೆ ಮನ್ನು ನಡೆಸಿದರ ಫಲಿತಾಂಶವಾಗಿ ದುಂಡು ಮೇಜು ಪರಿಷತ್ತು ಯಾವಾಗ ನಡಿಸಬೇಕೆಂಬ ತೀರ್ಮಾನವು ಪ್ರಕಟವಾಗಿದ್ದಿದ್ದರೂ ಫೆಡರಲ್ ಸ್ಟ್ರಕ್ಚರ್ ಕಮಿಟಿ ಮೀಟಿಂಗು ಲಂಡನಿನಲ್ಲಿ ಬರುವ ಸೆಪ್ಟೆಂಬರ್ ತಿಂಗಳಿನಲ್ಲಿಯೂ, ದುಂಡು ಮೇಜು ಪರಿಷತ್ತು ನವಂಬರ್ ತಿಂಗಳಿನಲ್ಲಿಯೂ ನಡೆಸುವುದೆಂದು ಸುದ್ದಿ.

ಆರನೇ ಕರ್ನಾಟಕ ಪ್ರಾಂತೀಕ ಕಾನ್ ಫರೆನ್ಸು ಶ್ರೀಯುತ ಸೇಠ್ ಜಮನಲಾಲ್ ಬಜಾಜ್ ರವರ ಅಧ್ಯಕ್ಷತೆಯಲ್ಲಿ ಈ ತಾ. 24ರಲ್ಲಿ ಹುಕ್ಕೇರಿಯಲ್ಲಿ ನಡೆಯುವುದು. ಅದೇ ಸ್ಥಳದಲ್ಲಿ ಅದೇ ದಿನ 5ನೇ ಕರ್ನಾಟಕ ಏಕೀಕರಣ ಕಾನ್ ಫರೆನ್ಸೂ, ಕರ್ನಾಟಕ ಮಹಿಳಾ ಮಹಾಸಭೆಯೂ ನಡೆಯುವುದು. ತಾ. 25ರಲ್ಲಿ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಮೀಟಿಂಗು ನಡೆಯುವುದಲ್ಲದೆ ಖಾದಿ ಪ್ರದರ್ಶನವು ತೆರೆಯಲ್ಪಡುವುದು.

'ರಕ್ಷಣೋಪಾಯಗಳು ಹಿಂದೂದೇಶದ ಹಿತಕ್ಕಾಗಿವೆಯೆಂದು ಕನ್ನನ್ನು ತೃಪ್ತಿಪಡಿಸಬೇಕೆಂದು' ಮಹಾತ್ಮ ಗಾಂಧಿಯವರು ಹೇಳಿರುವರು ನಿಶ್ಚಯವೆಂತಲೂ, ಕಳೆದ ದುಂಡು ಮೇಜು ಪರಿಷತ್ತಿನ ತೀರ್ಮಾನಗಳನ್ನು ಪುನಃ ಆಲೋಚಿಸುವುದರಲ್ಲಿ ಕೆಡಕೇನೂ ಇಲ್ಲವೆಂತಲೂ, ಮಹಾತ್ಮರೊಬ್ಬರೇ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಬರುವರೆಂಬ ಸುದ್ದಿಯು ತನಗೆ ಆಶ್ಚರ್ಯವನ್ನುಂಟುಮಾಡಿತೆಂತಲೂ, ಲ್ಯಾಂಕಶಯರಿಗೂ ಇಂಡಿಯಾಕ್ಕೂ ಉಂಟಾಗಿರುವ ವಿರೋಧ ಭಾವವು ವಿಷಾದಕರವಾದುದೆಂತಲೂ, ಮಹಾತ್ಮರು ಲ್ಯಾಂಕಶಯರಿನವರನ್ನು ಭೇಟಿ ಮಾಡಿದರೆ ಇದು ತೃಪ್ತಿಕರವಾಗಿ ತೀರ್ಮಾನಿಸಲ್ಪಡಬಹುದೆಂತಲೂ, ದುಂಡು ಮೇಜಿನ ಪರಿಷತ್ತನ್ನು ತಡಮಾಡುತ್ತಿರುವುದರಿಂದ ತಂಟೆಗಾರರಿಗೆ ಅನುಕೂಲ ಏರ್ಪಡುವದೆಂತಲೂ ನ್ಯೂಸ್ ಕ್ರಾನಿಕಲ್ ಪತ್ರಿಕೆಗೆ ಶ್ರೀಯುತ ಶ್ರೀನಿವಾಸ ಶಾಸ್ತ್ರಿಯವರು ಲಂಡನಿನ ತಮ್ಮದೊಂದು ಭಾಷಣದಲ್ಲಿ ಹೇಳಿದರು.

ಅಸ್ಪೃಶ್ಯರ ವಿಚಾರ ನಡೆಯುತ್ತಿರುವ ಡಾಕ್ಟರ್ ಕಿಚ್ಲು ಮುಂತಾದ ಏಳು ಜನ ರಾಜಕೀಯ ಕೈದಿಗಳು ಅಲ್ಲಿಯ ಜೈಲಿನಲ್ಲಿ ಉಪವಾಸವ್ರತವನ್ನು ಕೈಕೊಂಡಿರುವರು. ಜೈಲು ನಿಬಂಧನೆಗಳಿಗೆ ವಿರೋಧ ಹೋದರೆಂದು ಅವರಿಗೆ ಕಠಿಣ ಶಿಕ್ಷೆ ಕೊಟ್ಟದ್ದರಿಂದ ಈ ವೊದಲೊಂದು ಸಾರಿ ಅವರು ಉಪವಾಸ ಮಾಡತೊಡಗಿದ್ದರು. ಆಗ್ಯೆ ಅಧಿಕಾರಿಗಳು ಕೊಟ್ಟಂಥ ವಾಗ್ದಾನದ ಮೇರೆ ನಡೆಕೊಳ್ಳಲಿಲ್ಲವೆಂತ ಪುನಃ ಈಗ ಉಪವಾಸ ಕೈಕೊಂಡದ್ದಾಗಿದೆಯಂತೆ.

ದುಂಡು ಮೇಜು ಪರಿಷತ್ತಿನ ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಮೀಟಿಂಗಿಗೆ ಪ್ರಧಾನ ಮಂತ್ರಿಯಾದ ಮ. ಮೆಕ್ಡಾನಾಲ್ಡ್ ರವರ ಹಾಜರಾತಿಯು ಅವಶ್ಯವಿದ್ದರೆ ಅವರ ಆರೋಗ್ಯವು ಚೆನ್ನಾಗಿಲ್ಲದ್ದರಿಂದ ಸೆಪ್ಟೆಂಬರ್ ವರೆಗೆ ಕಾಯಬೇಕಾಗುವದೆಂದು ಸ್ಟೇಟ್ ಸೆಕ್ರೆಟರಿಯವರು ವೈಸರಾಯರಿಗೆ ತಂತಿ ಕಳುಹಿಸಿದರಂತೆ. ಮಹಾತ್ಮ ಗಾಂಧಿಯವರು ವೈಸರಾಯರನ್ನು ಭೇಟಿಯಾದಾಗ್ಯೆ, 'ತಾನು ಕೂಡಲೆ ಲಂಡನಿಗೆ ಹೊರಡಲು ತಯಾರಾಗಿರುವೆನೆಂದೂ, ಮೆಕ್ಡಾನಾಲ್ಡ್ ರವರು ಫೆ. ಸ್ಟ್ರ. ಕಮಿಟಿಯ ಅಧ್ಯಕ್ಷರಲ್ಲವಾದುದರಿಂದ ಅವರ ಹಾಜರಾತಿಯು ಆವಶ್ಯಕವಲ್ಲವೆಂತಲೂ ಹೇಳಿರುವರಂತೆ. ಈ ಎರಡು ಅಭಿಪ್ರಾಯಗಳೂ ಸ್ಟೇಟ್ ಸೆಕ್ರೆಟರಿ ಮ. ಬೆನ್ ರವರಿಗೆ ತಿಳಿಸಲಾಗಿದೆ. ಅವರ ತೀರ್ಮಾನವು ಬೇಗನೆ ಪ್ರಕಟವಾಗುವದೆಂದು ವರ್ತಮಾನ.

ತಾ. 11ರ ರಾತ್ರಿ ಕಂಚಿಯಲ್ಲಿ ಒಂದು ಮಗುವನ್ನೆತ್ತಿಕೊಂಡಿದ್ದ ಒಬ್ಬ ಹಿಂದುವೂ, ಒಬ್ಬ ಮಹಮ್ಮದೀಯನೂ ಮಾರ್ಗದಲ್ಲಿ ಹೋಗುತ್ತಿರುವಾಗ್ಯೆ ಒಂದು ದೊಡ್ಡ ದೇವಿನ ಮರ ಬುಡ ಮೇಲಾಗಿ ಬಿದ್ದಿತು. ಅವರಿಬ್ಬರೂ ಅದರ ಕೆಳಗೆ ಸಿಕ್ಕಿ ಹಿಂದು ಕೂಡಲೇ ಸತ್ತುಹೋದನು. ಆದರೆ ಅವನೆತ್ತಿಕೊಂಡಿದ್ದ ಮಗುವು ಮಾತ್ರ ಯಾವ ಅಪಾಯವನ್ನೂ ಹೊಂದದೆ ಕೆಲಂಚ ದೂರದಲ್ಲಿ ಬಿದ್ದು ಭಯದಿಂದ ಅಳುತ್ತಿದ್ದಿತು. ಮಹಮ್ಮದೀಯನು ಪ್ರಾಣಾಪಾಯವನ್ನು ಹೊಂದಿ ಆಸ್ಪತ್ರೆಗೆ ಸಾಗಿಸಲ್ಪಡುವಾಗ್ಯೆ ದಾರಿಯಲ್ಲಿ ಮೃತನಾದನು. ಈ ಮರಕ್ಕೆ ನೀರೆರೆದು ಅದನ್ನು ಸಾಕುತ್ತಿದ್ದ ಹಿಂದು ಮನುಷ್ಯನು ಹಿಂದಣ ದಿವಸ ಸತ್ತುಹೋಗಿದ್ದನು. ಅವನ ಶವ ಸಂಸ್ಕಾರಕ್ಕೆ ಹೋಗಿದ್ದ ಜನರು ಹಿಂದಿರುಗಿ ಬರುತ್ತಿದ್ದಾಗ್ಯೆ ಈ ಮರವು ಉರುಳಿದುದರಿಂದ ಅದನ್ನು ಸಾಕುತ್ತಿದ್ದವನ ಪ್ರಭಾವದಿಂದ ಹೀಗಾಯಿತೆಂದು ಜನರು ಆಡಿಕೊಳ್ಳುತ್ತಿರುವರಂತೆ.

ವಿದೇಶ.

ಪೂರ್ವ ದೇಶಗಳಲ್ಲಿ ಇಂಗ್ಲೆಂಡಿನ ಸಾಮಾನುಗಳ ಮಾರಾಟವು ಕಡಿಮೆಯಾಗುತ್ತಿರುವುದರಿಂದ ಅವುಗಳನ್ನು ಆಗುವಷ್ಟು ಕಡಿಮೆ ಕ್ರಯಕ್ಕೆ ಕೊಡಲು ಅನುಕೂಲಿಸುವಂತೆ ಮ್ಯಾಂಚೆಸ್ಟರಿನ ಹಡಗು ಕಂಪೆನಿಗಳು ಒಂದಾಗಿ ಸೇರಿ ಇಂಡಿಯಾ ಮತ್ತು ಪೂರ್ವ ಪ್ರದೇಶಗಳಿಗೆ ಸಾಮಾನುಗಳನ್ನು ಒಯ್ಯುವ ಚಾರ್ಜನ್ನು ಕಡಿಮೆ ಮಾಡಲು ಏರ್ಪಾಡು ಮಾಡಿರುವವು.

ಸ್ಪೈನ್ ದೇಶದಲ್ಲಿ ಅರಸನನ್ನು ಓಡಿಸಿ ರಿಪಬ್ಲಿಕ್ ಸರಕಾರವು ಸ್ಥಾಪಿತವಾದಂದಿನಿಂದ ದಂಗೆ ಮುಂತಾದ ಗಲಾಟೆಗಳು ನಡೆಯುತ್ತಿದ್ದದರಿಂದ ದಂಡು ಕಾನೂನು ಜಾರಿಗೆ ತರಲ್ಪಟ್ಟಿತ್ತು. ಈಗ ಎಲ್ಲವೂ ಶಾಂತವಾಗಿರುವುದರಿಂದ ಮಾರ್ಷಲ್ ಲಾ ಹಿಂತೆಗೆಯಲ್ಪಟ್ಟಿದೆ. ಜೂನ್ 28ರಲ್ಲಿ ಜನರಲ್ ಚುನಾವಣೆಯು ನಡೆಯುವುದು.

ಅಫ್ಘಾನಿಸ್ಥಾನದ ಅಮೀರರಾದ ನಾದಿರ್ ಖಾನರು ಫ್ರಾನ್ಸ್ ದೇಶದಿಂದ ಹನ್ನೊಂದು ಲಕ್ಷ ರೂ. ಬೆಲೆಯ ಹತ್ತು ಸಾವಿರ ರೈಫಲ್ ಬಂದೂಕುಗಳನ್ನೂ, ಒಂದು ಕೋಟಿ ತೋಟೆಗಳನ್ನೂ ತರಿಸಿದ್ದಾರೆ. ಕರಾಚಿಯಿಂದ ಇವುಗಳನ್ನು ಪೆಶಾವರಕ್ಕೆ ಒಯ್ಯಲು 60 ಸಾವಿರ ರೂ. ರೈಲ್ವೆ ಚಾರ್ಜು; ಅಲ್ಲಿಂದ ಕಾಬೂಲಿಗೆ ಸಾಗಿಸಲು 240 ಮೋಟಾರು ಲಾರಿಗಳು ಬೇಕಾಗುವವು. ಆದರೆ 100 ಲಾರಿಗಳು ಈ ಕೆಲಸವನ್ನು ನಡಿಸಿದೆಯಂತೆ.

ಇಂಡಿಯನ್ ಪೋಸ್ಟಲ್ ಇಲಾಖೆಯ ವರದಿ.

ಹಿಂದೂಸ್ಥಾನದ ಪೋಸ್ಟಲ್ ಇಲಾಖೆಯವರ 1930 ನೇ ವರ್ಷದ ವರದಿಯು ಪ್ರಕಟವಾಗಿದೆ. ಅದರಲ್ಲಿಯ ಮುಖ್ಯ ಸಂಗತಿಗಳೆಂದರೆ:—ಆ ವರ್ಷದಲ್ಲಿ ಹಿಂದೂಸ್ಥಾನದಲ್ಲಿ 23838 ಪೋಸ್ಟಾಫೀಸುಗಳಿದ್ದವು; ಇವುಗಳಲ್ಲಿ 1,14,821 ಕೆಲಸಗಾರರಿದ್ದರು. ಇದಕ್ಕೆ ಪೋಸ್ಟ್ ಮೆನ್ನರ ಸಂಖ್ಯೆ ಸೇರಲಿಲ್ಲ. ಪೋಸ್ಟು ಖಾತೆಯ ಅಂಚೆಯ ಡಾಕು ದಾರಿಯು 1,66114 ಮೈಲಾಗಿತ್ತು. ಪೋಸ್ಟು ಮೂಲಕ 89 ಲಕ್ಷ ಪದಾರ್ಥಗಳು ಕಳುಹಿಸಲ್ಪಟ್ಟವು. ಆರು ಕೋಟಿ ಆರುವತ್ತು ಲಕ್ಷ ರೂಪಾಯಿಯ ಸ್ಟಾಂಪುಗಳು ಮಾರಲ್ಪಟ್ಟವು. ನಾಲ್ಕು ಕೋಟಿ ಏಳು ಲಕ್ಷ ಮನಿಯಾರ್ಡರುಗಳು ಕಳುಹಿಸಲ್ಪಟ್ಟವು. ಇವುಗಳ ಒಟ್ಟು ಮೊಬಲಗು 94 ಕೋಟಿ 7 ಲಕ್ಷ ರೂಪಾಯಿಗಳಾದವು. ವಿ. ಪಿ. ಯಿಂದ 28 ಕೋಟಿ 70 ಲಕ್ಷದ ಮತ್ತು ವಿಮೆಯಿಂದ 56 ಲಕ್ಷ ರೂಪಾಯಿಯ ವ್ಯವಹಾರವಾಯಿತು. 23,03,904 ಜನರು 37 ಕೋಟಿ 19 ಲಕ್ಷ ರೂಪಾಯಿಗಳನ್ನು ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟಿದ್ದರು. ಈ ವರ್ಷದಿಂದ ವಿಲಾಯಿತಿಗೆ ವಿಮಾನದ ಮೂಲಕ ಟಪಾಲು ಹೋಗಲು ಆರಂಭಿಸಿದೆ.

೪. ಪ್ರತಿ ಗ್ರಾಮದಲ್ಲೂ ವಾಚನಾಲಯ, ಪುಸ್ತಕ ಭಂಡಾರ, ವ್ಯಾಯಾಮ ಶಾಲೆ (ಗರಡಿ) ಗಳನ್ನು ಸ್ಥಾಪಿಸಿ.

೫. ಗ್ರಾಮ ಪಂಚಾಯಿತಿ, ಗ್ರಾಮ ಸಂರಕ್ಷಣಾ ಸಮಿತಿಗಳನ್ನು ರಚಿಸಿ.

೬. ಗ್ರಾಮ ಪುನರುಜ್ಜೀವನ ಕಾರ್ಯಕ್ಕಾಗಿ ಕೆಲಸಗಾರರನ್ನು ಸಿದ್ಧಗೊಳಿಸಿ.

೭. ರಾಜಕೀಯ, ಸಾಮಾಜಿಕ ಸೇವೆಗಾಗಿ ತರುಣರನ್ನೂ, ಹೆಂಗಸರನ್ನೂ ಅಣಿಗೊಳಿಸಿ.

೮. ರೈತರಿಗೆ ಎಲ್ಲಾ ಕೇಡು, ಶಿಕ್ಷಣ ಕೇಡು, ಅವರ ಆರ್ಥಿಕ ಉದ್ಧಾರ ಅವರ ಕೈಲೇ ಇದೆಯೆಂದು ತಿಳಿಸಿ.

೯. ಯಾವ ಕಾಲದಲ್ಲೇ ಆಗಲಿ, ಯಾರಿಗೆ ಆಗಲಿ ಕಷ್ಟ ಒದಗಿದಾಗ ನಿಸ್ಸ್ವಾರ್ಥ ಬುದ್ಧಿಯಿಂದ ಸೇವೆ ಮಾಡಲು ಕಲಿಯಿರಿ.

ಕರ್ನಾಟಕ	ಜಿ. ಡಿ. ಕೇಳ್ಕರ್,
ತರುಣ ಸಂಘ,	ಜಿ. ಬಿ. ಮಹಾಶಬ್ದೆ,
ಗಿರಗಾಂ, ಮುಂಬಾಯಿ.	ಕಾರ್ಯದರ್ಶಿಗಳು.

ಸಹಕಾರಿ ಫೆಡರೇಶನಿನ ಮೀಟಿಂಗು.

ತಾರೀಖು 16—5—31 ರಲ್ಲು ನಡೆದ ಕೊಡಗು ಸಹಕಾರಿ ಫೆಡರೇಶನ್ನಿನ ಮ್ಯಾನೇಜಿಂಗ್ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್.

18 ಮೆಂಬರುಗಳ ಪೈಕಿ 9 ಜನರು ಹಾಜರಿದ್ದರು.

ಈ ತಿಂಗಳ ಜಮೆ ಮತ್ತು ಖರ್ಚು ಓದಿ ಒಪ್ಪಲಾಯಿತು. ಒಟ್ಟು ಜಮೆ ರೂ 1633—2—9. ಖರ್ಚು ರೂ. 408—10— ಸಿಲ್ಕು ರೂ 1235—0—0.

2 ಈ ಕೆಳಗಿನ ಮೆಂಬರುಗಳನ್ನು ಸರ್ವಸಮ್ಮತದಿಂದ ಎಕ್ಸಿಕ್ಯೂಟಿವ್ ಕಮಿಟಿ ಮೆಂಬರುಗಳಾಗಿ ಚುನಾಯಿಸಲಾಯಿತು.

1. ರಾವ್‌ಬಹದೂರ್ ಪಿ. ದೇವಯ್ಯನವರು, (ಪ್ರೆಸಿಡೆಂಟರು) 2 ಮೆ. ಯಂ. ಯಂ ಬೆಳ್ಯಪ್ಪನವರು (ಗೌರವ ಕಾರ್ಯದರ್ಶಿ.) 3 ಮೆ ಗಳಾದ ಕೆ. ಪಿ. ಚಣ್ಣಪ್ಪನವರು, 4 ಐ ಸಿ ಸುಬ್ಬಯ್ಯನವರು ಯಂ ಎ ಮ ಎಲ್ 5. ಮೆಬ್ಬಾಲೆ ಪೊನ್ನಪ್ಪನವರು, 6. ಎಂ. ಶಿವಲಿಂಗಪ್ಪನವರು, 7. ಎಂ. ಎಂ. ದೇವಯ್ಯನವರು—ಕಮಿಟಿ ಮೆಂಬರುಗಳು.

3. ಎಕ್ಸಿಕ್ಯೂಟಿವ್ ಕಮಿಟಿಯವರಿಗೆ ಬೈಲಾ 26ರಲ್ಲಿ ಹೇಳುವ ಅಧಿಕಾರಗಳಲ್ಲದೆ ಬೈಲಾ 9ರಲ್ಲಿ ಹೇಳುವ ಅಧಿಕಾರಗಳನ್ನು ಸಹ ಕೊಡಲು ತೀರ್ಮಾನಿಸಲಾಯಿತು.

4. ಯೂನಿಯನ್ ಆಫೀಸಿಗೆ ಬಾಡಿಗೆ ಕೊಡಬೇಕೆಂದು ಮಾಡಿದ ನಾಪೋಕ್ಲುನಾಡು ಯೂನಿಯನ್ನಿನವರ ತಾರೀಖು 30.3.31ರ ಪ್ರೊಸೀಡಿಂಗ್ಸ್ ಓದಲಾಯಿತು.

ಫೆಡರೇಶನಿನಲ್ಲು ಸುಪರ್‌ವಿಜನ್ ಫಂಡು ಕಮ್ಮಿಯಾಗಿರುವುದರಿಂದಲೂ ಮತ್ತು ಯೂನಿಯನ್ನಿನಲ್ಲು ಕಿಕ್ಕ ಫಂಡು ಇರುವುದರಿಂದ ಅಂತ ಆಫೀಸು ಬಾಡಿಗೆ ಸದರಿ ಯೂನಿಯನ್ನಿನಿಂದಲೇ ಕೊಡಬಹುದಾದ್ದರಿಂದ ಅವರ ಕೋರಿಕೆಯನ್ನು ನೆರವೇರಿಸಲು ಆಗುವುದಿಲ್ಲವಾಗಿ ತೀರ್ಮಾನಿಸಲಾಯಿತು

5. ವಾರಾಣೆಯಲ್ಲು ಸೆಕ್ರೆಟರಿಗಳ ತರಬೇತು ಶಾಲೆಯನ್ನು ತೆರೆಯಬೇಕಾಗಿ ಕಳುಹಿಸಿದ ಕಡಿಯತ್ತುನಾಡು ಯೂನಿಯನ್ನಿನವರ ಠರಾವು ಓದಲಾಯಿತು ಅದೇ ಮೇರೆ ಸೆಕ್ರೆಟರಿಗಳ ತರಬೇತು ಶಾಲೆಯನ್ನು ವಾರಾಣೆಯಲ್ಲಿ ತೆರೆಯಲು ಮಂಜೂರಾದುದಲ್ಲದೆ ಇತರ ಯೂನಿಯನ್ನುಗಳಲ್ಲಿಯೂ ಸೆಕ್ರೆಟರಿ ತರಬೇತು ಶಾಲೆಯನ್ನು ತೆರೆಯುವಂತೆ ತೀರ್ಮಾನಿಸಲಾಯಿತು.

6. ಈ ಕೆಳಗಿನ ರೀತಿ ಸುಪರ್‌ವೈಜರುಗಳ ಸಂಬಳವನ್ನು ಸರ್ವಸಮ್ಮತದಿಂದ ನಿಗದಿ ಮಾಡಲಾಯಿತು. (1) ಕೆಲಸ ಆರಂಭ ಮಾಡುವವರಿಗೆ ಮಾಹೆಯಾನ 25/ರೂ. ಮೇರೆಯೂ ಅನಂತರ 30/ರಿಂದ ವರ್ಷಕ್ಕೆ ಎರಡು ರೂ. ಮೇರೆ 40/-ರೂ. ವರೆಗೂ, ಅನಂತರ ವರ್ಷಕ್ಕೆ ಒಂದು ರೂ ಮೇರೆ 50/-ರೂ. ವರೆಗೆ ಏರ್ಪಡಿಸುವಂತೆಯೂ, ಅತೃಪ್ತಿಕರವಾಗಿ ಕೆಲಸ ಮಾಡುವಂಥ ಸುಪರ್‌ವೈಜರುಗಳು ಬಡ್ತಿಗೆ ಹಕ್ಕುದಾರರಲ್ಲವೆಂದೂ, ಪ್ರತಿ ವರ್ಷ ಏಪ್ರಿಲ್ ವರಿಗೆ ಒಂದು ತಿಂಗಳಿಗೆ ಮುಂಚೆ ಯೂನಿಯನ್ ಪ್ರೆಸಿಡೆಂಟರು ಅವರ ಸುಪರ್‌ವೈಜರುಗಳ ಒಳ್ಳೇ ಮತ್ತು ಅತೃಪ್ತಿಕರವಾದ ಕೆಲಸಗಳ ಮತ್ತು ನಡತೆ ವಿವರವಾಗಿ ಗುಟ್ಟಾಗಿ ರಿಪೋರ್ಟು ಫೆಡರೇಶನ್ ಪ್ರೆಸಿಡೆಂಟರವರಿಗೆ ಕಳುಹಿಸುವಂತೆಯೂ, ಫೆಡರೇಶನ್ ಪ್ರೆಸಿಡೆಂಟರವರು ಮತ್ತು ಸೆಕ್ರೆಟರಿಯವರೂ ಸಹ ಅಂಥಾ ಕೆಲಸ ಮತ್ತು ನಡತೆ ಪರಿಶೋಧಿಸಿ ಸಂಬಳ ಬಡ್ತಿ ಮತ್ತು ಬಡ್ತಿ ಕೊಡತಕ್ಕದ್ದಾದ ವಿಷಯದ ಅಭಿಪ್ರಾಯಗಳನ್ನು ಮ್ಯಾನೇಜಿಂಗ್ ಕಮಿಟಿಯವರ ಅವಗಾಹನೆಗೆ ಕಳುಹಿಸುವಂತೆಯೂ ತೀರ್ಮಾನಿಸಲಾಯಿತು.

7. ಈ ಕೆಳಗೆ ಕಾಣಿಸಿರುವ ಸುಪರ್‌ವೈಜರುಗಳು ತೃಪ್ತಿಕರವಾಗಿ ಕೆಲಸ ಮಾಡಿದ್ದರಿಂದ ಅವರುಗಳಿಗೆ ಈ ಕೆಳಗಿನ ರೀತಿ ತಾ 1—7—31ರಿಂದ ಸಂಬಳ ಬಡ್ತಿ ಕೊಡಲು ತೀರ್ಮಾನಿಸಲಾಯಿತು.

(1) ಪಿ. ಯಂ. ಮುದ್ದಪ್ಪನವರಿಗೆ ಮಾಹೆಯಾನ 1/ ಅಂದರೆ 48/—(2) ಬಿ. ದೇವಯ್ಯನವರಿಗೆ ಮಾಹೆಯಾನ 2/— ಅಂದರೆ 40/—(3) ಎ ಪಿ ಪೊನ್ನಪ್ಪನವರಿಗೆ ಮಾಹೆಯಾನ 2/—ಅಂದರೆ 36/—(4) ಕೆ. ಬಿ ಶಾಂತಮಲ್ಲಪ್ಪನವರಿಗೆ 2/- ಅಂದರೆ 32/—(5) ಹೆಚ್. ಕೆ. ಚಿಂತಾಮಣಿ ಯವರಿಗೆ ಕೆಲಸ ಆರಂಭ ಮಾಡಿ 25/—ರಿಂದ 30/—ರ ವರೆಗೆ ಏರಿಸಲಾಯಿತು.

8. ಕೊಡಗು ಬಟಾಲಿಯನ್ನಿನಿಂದ ಸರಬರಾಜಾಗಿ ಬಂದಿರುವ ಸುಪರ್‌ವೈಜರು ಬಿ. ಸಿ. ಪೊನ್ನಪ್ಪನವರು ಮತ್ತು ಮದ್ದಂಡ ಕುಟ್ಟಪ್ಪನವರು ಸದರಿ ಕೊಯಮುತ್ತೂರು ಕಾಲೇಜ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಲ್ಲಿ ಅವರ ಕೆಲಸ ಖಾಯಂ ಮಾಡುವಂತೆಯೂ ಮತ್ತು ತಾರೀಖು 1—7—31ರಿಂದ ಬಡ್ತಿ ಕೊಡುವಂತೆಯೂ ತೀರ್ಮಾನಿಸಲಾಯಿತು.

9 ಸುಪರ್‌ವೈಜರುಗಳಿಗೆ ಹಕ್ಕು ಕೊಡುವ ರಜದ ಪಟ್ಟಿಯನ್ನು ತಯಾರಿಸಲು ಎಕ್ಸಿಕ್ಯೂಟಿವ್ ಕಮಿಟಿಯವರಿಗೆ ಬಿಡಲು ತೀರ್ಮಾನಿಸಲಾಯಿತು.

10 ಸುಪರ್‌ವೈಜರ್ ಕೆಲಸಕ್ಕೆ ತರಬೇತು ಮಾಡಲು ಇಬ್ಬರು ಉಮೇದ್ವಾರರನ್ನು ಎಕ್ಸಿಕ್ಯೂಟಿವ್ ಕಮಿಟಿಯವರು ಚುನಾಯಿಸುವಂತೆಯೂ ಸದರಿ ಕೆಲಸಕ್ಕೆ ಖಾಯಿಷ್ ಪಡುವ ಉಮೇದ್ವಾರರು ಬರುವ ಜೂನ್ ತಾ 10ರ ಒಳಗೆ ಫೆಡರೇಶನ್ ಪ್ರೆಸಿಡೆಂಟರವರಿಗೆ ತಲುಪುವಂತೆ ಅವರು ಯಸ್. ಯಸ್. ಯಲ್. ಸಿ. ತೇರ್ಗಡೆಯಾದವರಾಗಿಯೂ, ಅಂಥಾ ಸರ್ಟಿಫಿಕೇಟು ಮತ್ತು ಇತರ ನಡತೆ ವಗೈರೆ ವಿಷಯದ ಸರ್ಟಿಫಿಕೇಟುಗಳೊಡನೆ ಅರ್ಜಿ ಕಳುಹಿಸಬೇಕೆಂದೂ, ಸ್ಥಳೀಯ ಪತ್ರಿಕೆಯಲ್ಲಿ ಪಬ್ಲಿಷ್ ಮಾಡುವಂತೆಯೂ ತೀರ್ಮಾನಿಸಲಾಯಿತು.

11. ಪೊನ್ನಂಪೇಟೆ ಯೂನಿಯನ್ನಿಗೆ ಸಂಯೋಜನೆಯಾಗಿ ಶ್ರೀಮಂಗಲ ನಾಡಿನ ಯೂನಿಯನ್ ಸುಪರ್‌ವೈಜರ ಸುಪರ್‌ವಿಜನಿನಲ್ಲಿರುವ ಬೆಸಗೂರು, ಕೊಟ್ಟಗೇರಿ ಬೆಕ್ಕೆಸೊಡ್ಲೂರು ಮತ್ತು ಕೊಟ್ಟೂರು ಸಂಘಗಳನ್ನೂ ಪೊನ್ನಂಪೇಟೆ ಯೂನಿಯನ್ ಸುಪರ್‌ವೈಜರ ಸುಪರ್‌ವಿಜನ್ನಿಗೆ ಬಿಡುವಂತೆ ತೀರ್ಮಾನಿಸಲಾಯಿತು.

12 ಮಾದಾಪುರ, ಸುಂಟಿಕೊಪ್ಪ ಗರ್ವಾಲೆ ನಾಡು ಯೂನಿಯನ್ನಿನವರು ಮಾದಾಪುರದ ಪ್ರೊಪಗೆಂಡ ಕಮಿಟಿಯನ್ನು ನಡಿಸಲು ಹೊಂದಿರುವ ಸಹಕಾರಿ ಸಂಘ ಮತ್ತು ದವಸ ಭಂಡಾರ ಸಹ ಕೂಡಿಯೂ ಸಂಘ ಒಂದರ 5/—ರೂ. ಮೇರೆ ವಾರ್ಷಿಕ ವಂತಿಗೆ ಕೊಡಲು ತಕರಾರು ಮಾಡುತ್ತಾರೆಂದೂ, ಈ ವಿಷಯದಲ್ಲಿ ಯೂನಿಯನ್ನಿನವರ ತೀರ್ಮಾನವನ್ನು ಫೆಡರೇಶನ್ನಿನವರು ಪ್ರೋತ್ಸಾಹಿಸಬೇಕೆಂದೂ ಮಾಡಿದ ಪ್ರೊಸೀಡಿಂಗ್ಸನ್ನು ಓದಲಾಯಿತು

ಈ ಮೇಲ್ಕಂಡ ವಿಷಯವನ್ನು ಯೂನಿಯನ್ನಿನವರೇ ತೀರ್ಮಾನಿಸಿಕೊಳ್ಳಬೇಕಾದು ತೀರ್ಮಾನಿಸಲಾಯಿತು.

13 ಕೋಕೇರಿ ಸಂಘವನ್ನು ತಾ 25—10 30ರಿಂದ 21—2—30ರ ವರೆಗೆ ಸುಪರ್‌ವೈಜರ್ ಕೆ ಎ ಪೆಮ್ಮಯ್ಯನವರು ಸಂದರ್ಶನೆ ಮಾಡದ ಕಾರಣಕ್ಕಾಗಿ ಅವರು ಬರೆದ ಎಕ್ಸ್‌ಪ್ಲನೇಶನ್ ತೃಪ್ತಿಕರವಲ್ಲವೆಂದೂ ಮತ್ತು ಅವರು ಕಳೆದ ಒಂದು ವರ್ಷದ ಕೆಲಸವೂ ಸಹ ಅತೃಪ್ತಿಕರವೆಂದೂ ತೀರ್ಮಾನಿಸಲಾಯಿತು.

14 ಸೆಂಟ್ರಲ್ ಬ್ಯಾಂಕ್ ಜನರಲ್ ಮೀಟಿಂಗು ಮತ್ತು ಸುಪರ್‌ವೈಜರುಗಳ ಕಾನ್‌ಫರೆನ್ಸಿಗೆ ಸಮಯಕ್ಕೆ ಸರಿಯಾಗಿ ಹಾಜರಾದ ಸುಪರ್‌ವೈಜರುಗಳಿಗೆ ಬಸ್ಸು ಚಾರ್ಜು ಕೊಡುವಂತೆಯೂ, ಸುಪರ್ ವೈಜರುಗಳ ಕಾನ್‌ಫರೆನ್ಸಿಗೆ ಹಾಜರಾಗದ ಮತ್ತು ಸಮಯಕ್ಕೆ ಸರಿಯಾಗಿ ಹಾಜರಾಗದ ಸುಪರ್‌ವೈಜರುಗಳನ್ನು ಶಿಕ್ಷಿಸಲು ಪ್ರೆಸಿಡೆಂಟರವರಿಗೂ ಮತ್ತು ಗೌರವ ಕಾರ್ಯದರ್ಶಿಯವರಿಗೂ ಬಿಡುವಂತೆ ತೀರ್ಮಾನಿಸಲಾಯಿತು.

15 ಈ ಫೆಡರೇಶನ್ ಆಫ್ ಇಂಡಿಯಾ ಸಹಕಾರಿ ಇನ್ಸ್ಟಿಟ್ಯೂಟಿಗೆ ಮೆಂಬರಾಗಬೇಕೆಂತ ಆ ಇನ್ಸ್ಟಿಟ್ಯೂಟಿನ ಗೌರವ ಕಾರ್ಯದರ್ಶಿಯವರು ಬರೆದ ಪತ್ರ ಓದಲಾಯಿತು.

ಸದರಿ ಇನ್ಸ್ಟಿಟ್ಯೂಟಿಗೆ ಈ ಫೆಡರೇಶನು ಮೆಂಬರಾಗುವಂತೆಯೂ ಮತ್ತು ಶಾಶ್ವತ 25/—ರ ಮೇರೆ ವಂತಿಗೆ ಕೊಡುವಂತೆಯೂ ತೀರ್ಮಾನಿಸಲಾಯಿತು.

16 ತರಬೇತಿನಿಂದ ಬಂದ ಇಬ್ಬರು ಸುಪರ್‌ವೈಜರುಗಳನ್ನು ಖಾಯಂ ಕೆಲಸ ಸಿಕ್ಕುವ ವರೆಗೆ ತಾತ್ಕಾಲಿಕವಾಗಿ ಈ ಕೆಳಗೆ ಕಾಣಿಸುವ ಯೂನಿಯನ್ನುಗಳ ಸುಪರ್‌ವೈಜರುಗಳಾಗಿ ನೇಮಿಸಲಾಯಿತು.

(1) ಮೆ. ಬಿ ಸಿ ಪೊನ್ನಪ್ಪನವರು ಅಮ್ಮತ್ತಿನಾಡು ಯೂನಿಯನ್ (2) ಮೆ ಯಂ ಯ ಸಿ ಕುಟ್ಟಯ್ಯನವರು ಮಾದಾಪುರ ಗರ್ವಾಲೆನಾಡು

17 ಶ್ರೀಮಂಗಲ ಸೊಸೈಟಿ ಯೂನಿಯನಿನ ಚಾರ್ಜನ್ನು ಸುಪರ್‌ವೈಜರು ಸೋಮಯ್ಯನವರ ಸರ್ವೀಸನ್ನು 21—5—31 ರಿಂದ ದಿವ ಮಾಡುವಂತೆ ತೀರ್ಮಾನಿಸಲಾಯಿತು

18 ಮಡಿಕೇರಿನಾಡು ಸುಪರ್‌ವೈಜರ್ ಬಿ ದೇವಯ್ಯನವರನ್ನು ಶ್ರೀಮಂಗಲ ಸೊಸೈಟಿ ಸಂಘಗಳ ಕೊಡಗು ಮ್ಯಾನೇಜ್‌ಮೆಂಟ್ ಬಗ್ಗೆ ಅವರು ತಯಾರಿಸಲು ಅವಶ್ಯವಾದ ಲೆಕ್ಕಗಳನ್ನು ತಯಾರಿಸಿ ರಿಜಿಸ್ಟ್ರಾರರಿಗೆ ಕಳುಹಿಸಲಿಕ್ಕಾಗಿ ಹಂಗಾಮಿಯಾಗಿ ಶ್ರೀಮಂಗಲಕ್ಕೆ ಕಳುಹಿಸುವಂತೆ ತೀರ್ಮಾನಿಸಲಾಯಿತು

19 ಅಧ್ಯಕ್ಷರು ಸಹಕಾರಿ ಸಂಘಗಳಿಗೂ ಯೂನಿಯನ್ನುಗಳಿಗೂ ಮತ್ತು ಫೆಡರೇಶನ್ನಿಗೂ ಇರುವ ಸಂಬಂಧವನ್ನು ವಿವರಿಸಿ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕೆಂದೂ ಸಂಘದ ಹಣದಿಂದ ಸಾಲವನ್ನು ಯಾವ ಉದ್ದೇಶಕ್ಕಾಗಿ ತೆಗೆದುಕೊಳ್ಳುತ್ತಾರೋ ಅದೇ ಉದ್ದೇಶಕ್ಕೇನೇ ಉಪಯೋಗಿಸುವುದನ್ನು ಕಾಯುತ್ತಾ ಕಂತುಪ್ರಕಾರ ಉಂಟಾಗುವ ಉತ್ಪತ್ತಿಯಿಂದಲೇ ಸಾಲಗಾರರು ವಾಯಿದೆ ತಪ್ಪದೆ ಮರುಪಾವತಿ ಮಾಡಬೇಕೆಂದೂ ತಪ್ಪಿದಲ್ಲಿ ಆಯಾಯ ಸಂಘದ ಪ್ರತಿನಿಧಿಗಳು ಮತ್ತು ಯೂನಿಯನ್ ಸುಪರ್‌ವೈಜರುಗಳು ಪಡೆದ ಕರುಣೆಯಿಂದ ವಸೂಲ್ ಕ್ರಮ ಜರುಗಿಸಬೇಕೆಂದೂ ಬೋಧಿಸಿದ ನಂತರ ಅಧ್ಯಕ್ಷರಿಗೆ ವಂದನೆಗಳೊಂದಿಗೆ ಬರಖಾಸ್ತು ಮಾಡಲಾಯಿತು.

ಪಿ ದೇವಯ್ಯ,
ಪ್ರೆಸಿಡೆಂಟ್.

ಸಿಮ್ಲಾದ ಯೂರೋಪಿಯನ್ನರು ಮಹಾತ್ಮರನ್ನು ಯಾವ ಕಣ್ಣಿನಿಂದ ನೋಡಿದರು?

ಮಹಾತ್ಮರು ಮೆ. ಇರ್ವಿನರನ್ನು ಸಾಕ್ಷಾತ್ಕರಿಸಲು ಕಾಲಿಕೆ ಯುರೋಪಿಯನ್ನರ ಯುನೈಟೆಡ್ ಸರ್ವೀಸ್ ಕ್ಲಬ್ಬಿಗೆ ಹೋದರು. ಆಗ ಇವರ ಫಕೀರ ಉಡಿಗೆಯೊಡನೆ ಕೈಯಲ್ಲಿ ಕಾಗದ ಪತ್ರಗಳ ಒಂದು ಸುರುಳಿ ಹಿಡಿದು ಬರುವುದು, ಮೆಟ್ಟಿಲಿಂದ ಹೋಗುವುದು ಯೂರೋಪಿಯನ್ನರ ಮನಸ್ಸುಗಳಿಗೆ ಅಮಂಗಳ ಮತ್ತು ಅಭದ್ರವಾದದ್ದು. ಇದು ಅವಮಾನವೆಂದು ಭಾವಿಸುತ್ತಾರೆ. ತಲೆಯ ಟೋಪಿಯಿಂದ ಅಂಗಾಲು ಮುಚ್ಚುವ ಬೂಟೀಸು ವರೆಗೆ ಎಲ್ಲವೂ ಯುರೋಪಿಯನ್ ರಚನೆ. ಅಂದರೇ ಜಂಟ್ಲ್‌ಮ್ಯಾನ್. ಮಹಾತ್ಮರು ಯಾರಿಗೆ ಜಂಟ್ಲ್‌ಮ್ಯಾನ್ ಆಗುವದಿಲ್ಲ. ಅವರಲ್ಲಿ ಅಂಥ ಅಸಾಧಾರಣವಾದ ಆತ್ಮಬಲವಿಲ್ಲದಿದ್ದರೆ ಅವರನ್ನು ಒಳಗೆ ಬರಗೊಡುತ್ತಲೇ ಇದ್ದಿಲ್ಲ. ಆದರೆ ಯೂರೋಪಿಯನರಿಗೆ ಕೂಲ ನಮಸ್ಕಾರ ಮಾಡಬೇಕಾಯಿತು. ಕೆಲವರು ಪಿಳಿಪಿಳಿ ನ್ನು ತೆರೆದು ನೋಡುತ್ತಾ ನಿಂತರು. ಕೆಲವರು ಆಶ್ಚರ್ಯ ಚಕಿತರಾದರು. ಕೆಲವರಿಗೆ ಎಚ್ಚತ್ತಾರವಾಯಿತು. ಮಹಾತ್ಮರು ನಮಿಸಿದರೆ, ಒಂದಂತೆ ಅವರ ನಗುಮುಖ ನೋಡಿದವರೂ ಮೊದಲಿನ ತಕರಾರನ್ನು ಬಿಟ್ಟು ಅವರಲ್ಲಿ ಆದರಭಾವವನ್ನು ವ್ಯಕ್ತಪಡಿಸಿದರು. 'ವಿ'.

ಫೆಡರೇಶನ್ ಆಫೀಸು,
ಮಡಿಕೇರಿ, ತಾ 19—5—31.

ಬೇಕಾಗಿದೆ.

ಸುಪರ್‌ವೈಜರ್ ಕೆಲಸಕ್ಕೆ ತರಬೇತು ಮಾಡಲು ಇಬ್ಬರು ಉಮೇದ್ವಾರರು ಬೇಕಾಗಿದೆ. ಖಾಯಿಷ್ ಪಡುವವರು ತಮ್ಮ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪಾಸಾದ ಮತ್ತು ತಮ್ಮ ನಡತೆ ವಗೈರೆಗಳ ವಿಷಯದ ಸರ್ಟಿಫಿಕೇಟುಗಳೊಡನೆ ಬರುವ ಜೂನ್ ತಾರೀಖು 10 ಒಳಗೆ ತಲುಪುವಂತೆ ಕೊಡಗು ಸಹಕಾರಿ ಫೆಡರೇಶನ್ ಪ್ರೆಸಿಡೆಂಟರವರಿಗೆ ಅರ್ಜಿ ಬರ ಕೊಳ್ಳಬೇಕು ಹೆಚ್ಚಿನ ವಿವರಕ್ಕೆ ಫೆಡರೇಶನ್ ಆಫೀಸಿಗೆ ಬರಕೊಳ್ಳುವುದು

ಯಂ. ಯಂ. ಬೆಳ್ಯಪ್ಪ.
(ಗೌರವ ಕಾರ್ಯದರ್ಶಿ.)

ರಬ್ಬರ್ ಮೊಹರುಗಳು.

ನೀವು ಅಪೇಕ್ಷಿಸುವ ಮಾದರಿಯಲ್ಲಿ ತಯಾರಿಸಿ ಕೊಡಲಾಗುವವು.

ಮೇಲ್ಕಂಡ ಮೊಹರುಗಳಲ್ಲದೆ ಕನ್ನಡಿಯ ನಮೂನೆ, ಬೆಳ್ಳಿ ಸಾಮಾನುಗಳು ಬಾಕ್ಸ್ ಟೈಪ್ ಬ್ರಾಸ್ ಮೊನೋಗ್ರಾಮ್ ಮೊಹರ, ಚಂದ್ರಕಾಂತ ಶಿಲೆಯ ಸಾಮಾನುಗಳು, ಉಂಗುರಕ್ಕೆ ಸಿಗಿಡುವ ಎಲ್ಲಾ ಬಣ್ಣದ ಸಣ್ಣ ಕಲ್ಲುಗಳು ಇತ್ಯಾದಿ.

ದಿ ಕನ್ನಡ ರಬ್ಬರ್ ಸ್ಟಾಂಪ್ ಕಂಪೆನಿ,
12—9 ಮಂಗಳೂರು, ದ ಕನ್ನಡ.

ಯಾ

ಏಜಂಟ್ ಯಂ. ಯ ನ್. ಪೊನ್ನಪ್ಪ,
ಮಡಿಕೇರಿ.

ನೋಟೀಸು.

ಮಡಿಕೇರಿ ತಾ. 6—5—1931

ಕೊಡಗಿನ ರಿಸರ್ವ್‌ಡ್ ಫಾರೆಸ್ಟುಗಳಲ್ಲಿಯೂ, ಪೈಸಾರಿಗಳಲ್ಲಿಯೂ, ದೇವರ ಕಾಡುಗಳಲ್ಲಿಯೂ ಮತ್ತು ಜಂಗಲ್ಲುಗಳಲ್ಲಿಯೂ 1931ನೇ ಇಸವಿ ಜುಲಾಯಿ ತಾರೀಖು 1ರಿಂದ 1932ನೇ ಇಸವಿ ಜೂನ್ ತಾರೀಖು 30ರ ವರೆಗೆ ಮೈನರ್ ಫಾರೆಸ್ಟ್ ಉತ್ಪತ್ತಿಗಳನ್ನು ಸಂಗ್ರಹಿಸುವ ಹಕ್ಕು ಪೊನ್ನಂಪೇಟೆಯಲ್ಲಿ ಮೇ ತಾರೀಖು 25ರಲ್ಲಿಯೂ, ವೀರರಾಜಪೇಟೆಯಲ್ಲಿ 27ರಲ್ಲಿಯೂ, ಮಡಿಕೇರಿಯಲ್ಲಿ ಜೂನ್ ತಾರೀಖು 5ರಲ್ಲಿಯೂ, ಸೋಮವಾರಪೇಟೆಯಲ್ಲಿ 8ರಲ್ಲಿಯೂ ಮತ್ತು ಫ್ರೇಜರ್‌ಪೇಟೆಯಲ್ಲಿ 9ರಲ್ಲಿಯೂ ಹರಾಜು ಮಾಡಲ್ಪಡುವುದು.

ಹೆಚ್ಚಿನ ವಿವರಕ್ಕೆ ಚೀಫ್ ಫಾರೆಸ್ಟ್ ಆಫೀಸರ, ಮಡಿಕೇರಿ ಇವರಿಗೆ ಬರಕೊಳ್ಳತಕ್ಕದ್ದು.

2—2

ಬೇಕಾಗಿದೆ.

ಬೇತ್ರಿನಾಡು ನಾಡ ಸಹಕಾರಿ ಸಂಘಕ್ಕೆ ಒಬ್ಬ ಸ್ಟೋರ್ ಕೀಪರು ಬೇಕಾಗಿದೆ. ಮಾಹೆಯಾನ 30 ರೂ. ಸಂಬಳ ಕೊಡಲಾಗುವುದು. ಇದಕ್ಕೆ ಮ್ಯಾಟ್ರಿಕ್ಯುಲೇಶನ್, 2 ತಿಂಗಳು ಮುಂಚಿತವಾಗಿ, ಟ್ರೈನಿಂಗ್ ಕ್ಲಾಸಿನಲ್ಲಿ ತರಬೇತು ಹೊಂದಿರತಕ್ಕವರು. ಉಮೇದ್ವಾರರು ಕೂಡಲೆ ಈ ಕೆಳಗಿನ ವಿಳಾಸದಾರರಿಗೆ ಅರ್ಜಿ ಬರಕೊಳ್ಳತಕ್ಕದ್ದು.

ತಾ, 27—5—31

ಪ್ರೆಸಿಡೆಂಟರು,
ಬೇತ್ರಿನಾಡು ನಾಡು ಸಹಕಾರಿ ಸ್ಟೋರ್,
ನಾಪೋಕ್ಲು.

2—1

ಲಾರ್ಡ್ ಇರ್ವಿನರ ಭಾಷಣದ ಸಾರಾಂಶ.

ಮಾಜಿ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಇಂಡಿಯಾದಿಂದ ಇಂಗ್ಲೆಂಡಿಗೆ ವಾಪಸು ಹೋದ ಮೇಲೆ, ಅವರು ಅವರ ಸತ್ಕಿಯವರಿಗೆ ಬ್ರಿಟಿಷ್ ಇಂಡಿಯಾ ಯೂನಿಯನ್‌ರವರು ತಾ 15ರಲ್ಲಿ ಒಂದು ಔತಣವನ್ನು ಕೊಟ್ಟಾಗ್ಗೆ ಪ್ರಥಮ ಭಾಷಣವನ್ನು ಮಾಡಿದರು. ಅದರ ಸಾರಾಂಶವು ಕೆಳಗೆ ಕೊಡಲಾಗಿದೆ

ಹಿಂದೂಸ್ಥಾನದ ಸಿವಿಲ್ ಸರ್ವಿಸಿನವರು ಬಹಳ ಕಷ್ಟಕರವಾದ ಸಮಯದಲ್ಲಿ ಬಹಳ ತೃಪ್ತಿಕರವಾಗಿ ಕೆಲಸ ಮಾಡಿದರು ಶ್ಲಾಘನೀಯ, ಬ್ರಿಟಿಷ್ ಸರಕಾರದ ಉತ್ಸಾಹ ಸಮೂಹವನ್ನು ಅಂಗೀಕರಿಸಿ ಹೇಳಿದ್ದೇನೆಂದರೆ—ಹಿಂದೂಸ್ಥಾನದಲ್ಲಿ ಈಗ ಹುಟ್ಟಿರುವ ಅಸಾಧಾರಣ ರಾಷ್ಟ್ರೀಯ ಭಾವನೆಯನ್ನು ವಿವರಿಸಿ, ಬರಬೇಕಾದ ಆಳಬೇಕೆನ್ನುವವರು ಈಗಿನ ಕಾಲಸ್ಥಿತಿಯನ್ನು ತಿಳಿದು ಪುರಾತನ ಕಾಲದ ತತ್ವವನ್ನು ಉಪಯೋಗಿಸಬೇಕೆನ್ನುವ ಸಂಗಿದ್ದಾರೆ ಸಾಮ್ರಾಜ್ಯದೊಳಗೆ ತೃಪ್ತಿಯಳ್ಳ ಹಿಂದೂಸ್ಥಾನವನ್ನು ಒಪ್ಪಿಗೆಯಿಂದ ಇಟ್ಟುಕೊಳ್ಳಬೇಕಾದರೆ ಅನ್ಯೋನ್ಯ ರಾಜಿ ಒಪ್ಪಿಗೆಯಿಂದಲೇ ಆಗಬೇಕಷ್ಟೆ. ಹಿಂದೂಸ್ಥಾನದ ಕೈಗಾರಿಕೆಗಳನ್ನೂ, ಉತ್ಪತ್ತಿಗಳನ್ನೂ ಹೆಚ್ಚಿಸಿಕೊಳ್ಳಬೇಕೆಂಬ ಅಭಿಪ್ರಾಯವು ಹಿಂದೂಸ್ಥಾನದಲ್ಲಿ ಬಲವಾಗಿದೆಯೆಂತಲೂ, ಯಾವ ಸರಕಾರವು ಇಂತಹ ಕ್ಷೇಮವನ್ನೇ ಮುಂದೆ ನೋಡಿಕೊಳ್ಳಬೇಕಾದದ್ದು ಅವಶ್ಯವೆಂತಲೂ ಒಪ್ಪಿ [illegible] ರು

ಬಲವಾದ ಸರಕಾರವಾದ್ದರಿಂದ ಹಿಂದೂಸ್ಥಾನದ ಕೆಲವರು ನನ್ನೆಲ್ಲಾ ಪ್ರಾರಂಭದಲ್ಲೇ ಪರಿತಾಪ [illegible] ರು, ಎಲ್ಲಾ ಸಂತೋಷದಿಂದ ಇರಬಹುದೆಂತಲೂ ಅಭಿಪ್ರಾಯಪಡಬಹುದೆಂತ ನನಗೆ ಗೊತ್ತಿದೆ. [illegible]

ಬಲವಾದ ದಬ್ಬಾಳಿಕೆಯನ್ನು ಉಪಯೋಗಿಸಿ ನಡೆಸಿದರೆ ಅತ್ರ ಏನಾದರೂ ತೋರಿಕೆಯ ಶಾಂತಿಯಾಗಬಹುದಾಗಿದ್ದರೂ, ಅಂಥಾ ವರ್ತನೆಗೆ ದೇಶದ ಅಭಿಪ್ರಾಯದ ಬೆಂಬಲವು ದೊರಕಬಹುದಾಗಿದ್ದರೂ ಅಂಥಾ ಶಾಂತಿಯು ಮೇಲಿಂದ ಮೇಲೆ ತೋರುವ ಶಾಂತಿಯೇ ಹೊರತು ಒಪ್ಪಂದದಿಂದ ಹುಟ್ಟುವ ನಿಜವಾದ ಶಾಂತಿಯಾಗಿರುತ್ತಿರಲಿಲ್ಲ. ವಿಕ್ಟೋರಿಯಾ ರಾಣಿಯವರ ಕಾಲದಲ್ಲಿ ಇದ್ದ ಸಾಮ್ರಾಜ್ಯದ ಭಾವನೆಯ ಕಾಲ ಕಳೆದು ಎಷ್ಟೋ ಸಮಯವಾಯಿತು. ಈಗ ಸಾಮ್ರಾಜ್ಯದೊಳಗಿನ ಸಂಸ್ಥಾನಗಳ ಸಮಾನ ಪಂಕ್ತಿಗೆಯ ಭಾವನೆಯು ಬಲವಾಗಿದೆ. ಸ್ವರಾಜ್ಯವಿರುವ ವಸಾಹತುಗಳಿಗೂ ನಮಗೂ ಒಂದು ಹೊಸ ತರದ ಸಂಬಂಧವು ಬೆಳೆದಿದೆ. ಆದ್ದರಿಂದ ಹಿಂದೂಸ್ಥಾನದ ಅಭಿಪ್ರಾಯವೂ ಸಹ ಮುಂದೆ ಹೋಯಿತೆಂಬುದು ಸ್ವಭಾವಿಕವಾಗಿದೆ

ಹಿಂದೂಸ್ಥಾನದ ಸರಕಾರಕ್ಕೆ—ಹಿಂದೂಸ್ಥಾನದ ಕ್ಷೇಮಕ್ಕಾಗಿ ಹಿಂದೂಸ್ಥಾನಕ್ಕೆ ಬರುವ ವ್ಯಾಪಾರ ಸಾಮಗ್ರಿಗಳ ಮೇಲೆ ಬೇಕಾದ ಸುಂಕ ಹಾಕಬಹುದೆಂಬ ಸ್ವಾತಂತ್ರ್ಯವು ಅದಿಗೆ ಬಂದಿರುವುದನ್ನು ತಪ್ಪಿಸಲು ಮಾಡುವ ಪ್ರಯತ್ನವು ಫಲವಾಗಲಾರದು. ಹಿಂದೂಸ್ಥಾನದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂಬ ಭಾವನೆಯನ್ನು ಅಲ್ಲಗಳೆಯುವುದು ಬ್ರಿಟಿಷರಿಗೆ ಸಾಧ್ಯವಿಲ್ಲ. ಮತ್ತು ಈಗ ಕೈಗಾರಿಕೆಗಳ ಬೆಳವಣಿಗೆಯ ಅನುಕೂಲವನ್ನು ಎಂದೆಂದಿಗೂ ಪಡೆಯಲು ಮಿ. ಗಾಂಧಿಯವರಿಗೂ ಸಾಧ್ಯವಿಲ್ಲ. ಬ್ರಿಟನಿನವರು ಹಿಂದೂಸ್ಥಾನದಲ್ಲಿ ವ್ಯಾಪಾರವನ್ನು ನಿರಾತಂಕವಾಗಿ ನಡಸಲು ಸಾಧ್ಯವಾಗಬೇಕಾದರೆ ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಒಪ್ಪಂದ ಮಾಡಿಕೊಳ್ಳಬೇಕಾದದ್ದು ಅಕ್ಷ [illegible] ವಾಗಿದೆ

[illegible] ದ್ಯತೆಗಳು ಮೊದಲಿನಿಂದ ತಲೆ ಎಲ್ಲಾ ಹಿಂದೂಸ್ಥಾನದ ಕ್ಷೇಮಕ್ಕೋಸ್ಕರ ಅವಶ್ಯವಿದೆಯೆಂತ ಸಮಾಧಾನವಾದರೆ ಅಂಶಗಳನ್ನು ಅಂಗೀಕರಿಸಲು ಹಿಂದೀಯರು ತಯಾರಾಗಿದ್ದಾರೆ. ಮಿ. ಗಾಂಧಿಯವರು ಲಂಡನ್ನಿಗೆ ಬಂದರೆ ಈ ವಿಷಯಗಳ ಮತ್ತು ಚರ್ಚೆಗೆ ಬರುವ ಇತರ ವಿಷಯಗಳ ಕುರಿತ ಒಪ್ಪಂದಕ್ಕೆ ಬರುತ್ತಾರೆಂತ ನನಗೆ ನಂಬಿಕೆ ಇದೆ

ಕಡಿಮೆ ಸಂಖ್ಯೆಯ ಜನಾಂಗದ ಅತೃಪ್ತಿಯಿಂದಲೇ ಆಗಲೀ, ಪರರಾಜರಿಂದ ಬರುವ ಅಪಾಯವನ್ನು ತಪ್ಪಿಸಿಕೊಳ್ಳಲು ಬೇಕಾದ ಭದ್ರತೆ ಇಲ್ಲದೆಯಾಗಲೀ, ಹಿಂದೂಸ್ಥಾನದ ಆರ್ಥಿಕ ಭದ್ರತೆ ಸಾಲದೆಯಾಗಲೀ ಹಿಂದೂಸ್ಥಾನಕ್ಕೆ ಕೇಡು ಬರುವುದಕ್ಕೆ ಹಿಂದೀ ಮುಖಂಡರು ಯಾರೂ ತಯಾರಾಗಿಲ್ಲ. ಮಿ. ಗಾಂಧಿಯವರು ಲಂಡನ್ನಿಗೆ ಬಂದರೆ ಯಾವ ಭದ್ರತೆಗಳನ್ನೂ ಅಂಗೀಕರಿಸಲಿಕ್ಕಿಲ್ಲವೆನ್ನುವವರಿಗೆ, ತತ್ಕಾಲಿಕ ರಾಜಿಯಾಗುವಾಗ ಗಾಂಧಿಯವರು ಒಪ್ಪಿರುವ ತತ್ವವನ್ನು ನೋಡಿದರೆ ಸಂತೋಷ ನಿವಾರಣೆಯಾದೀತು. ಕರಾಚಿ ಕಾಂಗ್ರೆಸಿನಲ್ಲೂ ಈ ತತ್ವವನ್ನು ಸ್ವೀಕೃತವಾಗಿದೆ. ಮಿ. ಗಾಂಧಿಯವರು ಇಂಗ್ಲೆಂಡಿಗೆ ಬಂದರೆ ರಾಜಿಮಾಡಿಕೊಳ್ಳಲು ತಮ್ಮಿಂದ ಆಗುವಷ್ಟು ಪ್ರಯತ್ನ ಮಾಡುತ್ತಾರೆಂಬುದರಲ್ಲಿ ಸಂಶಯವಿಲ್ಲ

ಬ್ರಿಟಿಷ್ ಸಾಮಾನುಗಳನ್ನೇ ಬಹಿಷ್ಕರಿಸುತ್ತಾರೆಂಬ ಆಕ್ಷೇಪಣೆಯ ಕುರಿತು ಮಿ ಗಾಂಧಿಯವರೊಡನೆ ನಾನು ಇಂಗ್ಲಂಡಿಗೆ ಹೊರಡುವ ಮುಂಚೆ ಮಾತಾಡಿದೆ. ಅವರು ನನಗೆ ಸಂಪೂರ್ಣ ಭರವಸೆ ಕೊಟ್ಟಿದ್ದಾರೆ. ಈ ಕೆಳಗಿನ ಮೂರು ಸಂಗತಿಗಳನ್ನು ನೆನಪಿನಲ್ಲಿಡಬೇಕು.

1 ಹಿಂದೂಸ್ಥಾನದ ಸಾಂಪತ್ತಿಕ ಸ್ಥಿತಿಯು ಬೆಳೆದರೆ ಎಲ್ಲಾ ತರದ ಸಾಮಾನುಗಳನ್ನೂ ಕೊಂಡುಕೊಳ್ಳುವ ಶಕ್ತಿಯು ಹಿಂದೂಸ್ಥಾನಕ್ಕೆ ಹೆಚ್ಚುತ್ತದೆ.

2. ರಾಜಕೀಯ ಹೋರಾಟವು ನಿಂತರೆ ಬಹಳ ವರ್ಷಗಳ ವರೆಗೆ ಹಿಂದೂಸ್ಥಾನಕ್ಕೆ ಬೇಕಾದ ಸಾಮಾನುಗಳನ್ನು ಮಾಡಿಕೊಳ್ಳಲು ಹಿಂದೂಸ್ಥಾನಕ್ಕೆ ಸಾಧ್ಯವಿಲ್ಲ.

3 ಸ್ನೇಹದ ಪಾಯದ ಮೇಲೆಯೇ ವ್ಯಾಪಾರ ಬೆಳೆದದ್ದು—ಇನ್ನು ಮೇಲೆ ಬೆಳೆಯುವುದು ಸಹ ರಾಜಕೀಯ ಒಪ್ಪಂದವಾದರೆ ವ್ಯಾಪಾರವು ಸ್ವಾಭಾವಿಕವಾಗಿಯೇ ಬೆಳೆಯುತ್ತದೆ

ಕೆಲವು ವರ್ಷಗಳ ವರೆಗೆ ಹಿಂದೂಸ್ಥಾನವೂ, ಹಿಂದೂಸ್ಥಾನದ ವಿಷಯಗಳೂ ಪ್ರಪಂಚದ ರಾಜಕೀಯ ವಿಷಯಗಳಲ್ಲಿ ಮುಖ್ಯವಾಗಿರುತ್ತವೆ. ಬ್ರಿಟನಿನ ಜನತೆಯ ದೂರದೃಷ್ಟಿಯ ಮೇಲೆ ದೊಡ್ಡ ಜವಾಬ್ದಾರಿ ಇದೆ. ಬ್ರಿಟನಿನ ದೂರದೃಷ್ಟಿಯು ಸರಿಯಾದ ತೀರ್ಮಾನಕ್ಕೆ ಬಂದೀತೆಂತ ನನಗೆ ನಂಬಿಕೆ ಇದೆ.

ತುಂಬಾ ಕಷ್ಟಗಳಿವೆ—ಅದರ ನಿವಾರಿಸಿಕೊಳ್ಳಲು ಅಸಾಧ್ಯವಾದಂಥ ಕಷ್ಟಗಳಲ್ಲ. ಬೇಸರಕ್ಕೆ ಕಾರಣಗಳಿವೆ. ಆದರೆ ಧೈರ್ಯದಿಂದಲೂ, ಬುದ್ಧಿವಂತಿಕೆಯಿಂದಲೂ ಕೆಲಸ ಮಾಡಲು ಹೆಚ್ಚಿನ ಕಾರಣಗಳಿವೆ. ಅಧೈರ್ಯ ತಾಳಲು, ಸೋತೆವೆಂಬ ಭಾವನೆಗೂ ಖಂಡಿತವಾಗಿಯೂ ಅವಕಾಶವಿಲ್ಲ

ಸತ್ಯಾಗ್ರಹ ಸಮಾಚಾರ.

ಈ ವೊದಲಿನಂತೆಯೇ ವಿರಾಜಪೇಟೆ ಮತ್ತು ಹುದಿಕೇರಿಯಲ್ಲಿ ಸಾರಾಯಿ ಅಂಗಡಿಗಳ ಪಿಕೆಟಿಂಗ್ ನಡೆಯುತ್ತಾ ಇದೆ. ವಿರಾಜಪೇಟೆ ಶಿಬಿರದ ಮೆ ಸೋಮೆಯಂಡ ಅಚ್ಚಯ್ಯನವರು—ವಿರಾಜಪೇಟೆಯಲ್ಲಿ ಪ್ಲೇಗಿನ ಹಾವಳಿಯನ್ನು ತಪ್ಪಿಸಲು ಮಾಡಿದ ಪ್ರಾರ್ಥನೆ ಮೇರೆ ಈ ತಾ. 11ರಲ್ಲಿ ಮಲೆ ಮಹಾದೇವರ ಸ್ಥಾನದಲ್ಲಿ ನಡೆಸಿದ ಪೂಜೆಗೆ ನೆರೆದ ಸುಮಾರು 250 ಜನ ಭಕ್ತರಿಗೆ ಪೂಜೆ ಮುಗಿದು ಭೋಜನವಾದ ಮೇಲೆ ಖಾದಿ ಪ್ರಚಾರ ಮತ್ತು ನಿಷಾ ನಿಷೇಧವನ್ನು ಕುರಿತು ಉಪನ್ಯಾಸ ಕೊಟ್ಟರು. ಮೆ. ಚೋಕಂಡ ಐಯ್ಯಣ್ಣನವರು, ಮೆ. ತಿಗ [illegible] ದೇವರಾಜರವರು ಇದಕ್ಕೆ ಉತ್ಸಾಹ ಸೂಚಿಸಿದರು ತಾ 13 ಮತ್ತು 15ರಲ್ಲಿ ಸತ್ಯಾಗ್ರಹಿ ಅಚ್ಚಯ್ಯನವರು, ಮೆ ಗಳಾದ ಕುಟ್ಟಂಜೆಟ್ಟಿರ ಪೆಣ್ಣಪ್ಪನವರ ಮತ್ತು ಪೂವಯ್ಯನವರ ಸಮೇತ ಬೇತು ಗ್ರಾಮದಲ್ಲಿ ಸೇರಿ, ಮುಕ್ಕಾಟಿರ ಮನೆಯವರ ಹತ್ತಲೂ ಮತ್ತು ತೀಯರ ಚಂಡರವರ ತೋಟದಲ್ಲೂ ಇಳಿಸುತ್ತಿದ್ದ ನೀರಿಯನ್ನು ಬೋಧನೆ ಕೊಟ್ಟು ನಿಲ್ಲಿಸಿದರು.

ತಾ 16ರಲ್ಲು ನಾಪೋಕ್ಲಿನ ಸುತ್ತಮುತ್ತ ಗ್ರಾಮಸ್ಥರ ಮೀಟಿಂಗೊಂದು ನಾಪೋಕ್ಲು ಭಕ್ತರ ಬಳಿ ನಡೆಯಿತು. 234 ಜನರು ನೆರೆದಿದ್ದರು. ಕೆಲವು ಸ್ತ್ರೀಯರೂ ಹಾಜರಿದ್ದರು. ಮೆ ಅಪ್ಪಾರಂಡ ಚಂಗಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀಯುತ ಪಿ. ಐ. ಬೆಳ್ಯಪ್ಪನವರು—ಜೈಲಿನಿಂದ ಬಿಡುಗಡೆಯಾಗಿ ಬಂದ ಮೇಲೆ ಅಲ್ಲಿಗೆ ಇದೇ ಪ್ರಥಮ ಹೋದದ್ದಾದ ಕಾರಣ ತಮ್ಮ ಜೈಲು ಅನುಭವವನ್ನು ಕೊಂಚವನ್ನು ವಿವರಿಸಿ, ಗಾಂಧಿ—ಇರ್ವಿನ ಒಪ್ಪಂದದಿಂದ ಕಾಂಗ್ರೆಸ್ಸಿಗೆ ಉಂಟಾಗಿರುವ ಮಹತ್ವವನ್ನು ತೋರಿಸಿ ಗಾಂಧಿ—ಇರ್ವಿನ ಒಪ್ಪಂದವನ್ನು ಚರ್ಚಿಸಲು ಸೇರಿದ ಕರಾಚಿ ಕಾಂಗ್ರೆಸ್ಸಿನ ವಾರ್ತಾ ವರದಿಯನ್ನು ಸಂಕ್ಷೇಪವಾಗಿ ಭಗತ್ ಸಿಂಗ್ ವೊದಲಾದವರನ್ನು ತೂಗಿ, ಕೆಡಿಸಿದ್ದರೂ ಮಹಾತ್ಮ ಗಾಂಧಿಯವರ ಮೇಲೆ ಜನರಿಗಿದ್ದ ವಿಶ್ವಾಸದಿಂದ ನೆರೆದ ಒಪ್ಪಂದವು ಮಂಜೂರು ಮಾಡಲ್ಪಟ್ಟದ್ದಲ್ಲದೆ ದುಂಡು ಮೇಜಿನ ಪರಿಷತ್ತಿಗೆ ಮಹಾತ್ಮರೊಬ್ಬರೇ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಆರಿಸಲ್ಪಟ್ಟರು ಬಹು ವಿಶೇಷವಾದ ಸಂಗತಿಯೆಂತಲೂ, ಕಾಂಗ್ರೆಸ್ ಚಳವಳಿಗೆ ಇಷ್ಟು ಶಕ್ತಿ ಬರಲು ಗ್ರಾಮಸ್ಥರ ಪ್ರಯತ್ನಗಳೂ ಅದಕ್ಕೆ ಸಹಾಯವೂ ಬೇಕಾದ ಕಾರಣವಾದುದರಿಂದ ದುಂಡು ಮೇಜು ಪರಿಷತ್ತಿನಲ್ಲಿ ಮಹಾತ್ಮರು ನಮಗೆ ಬೇಕಾದ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಈ ವೊದಲಿಗಿಂತಲೂ ಹೆಚ್ಚಾಗಿ ಗ್ರಾಮವಾಸಿಗಳ ಪ್ರಯತ್ನಗಳೂ, ಬೆಂಬಲವು ಕನಸಿನಲ್ಲಿಯೂ ಕಾಂಗ್ರೆಸ್ಸಿನ ಕಾರ್ಯಕ್ರಮಕ್ಕೆ ಉತ್ಸಾಹ ಕೊಡುತ್ತಿರಬೇಕೆಂತಲೂ, ಅಂದರೆ ಎಲ್ಲರೂ ತಮ್ಮ ತೋಟಗಳಲ್ಲಿರುವ ಬೈನೆ ಮರಗಳಿಂದ ನೀರಿ ಇಳಿಸುವುದನ್ನು ನಿಲ್ಲಿಸಿ ನಿಷಾ ಸೇವನೆಯನ್ನು ಸಂಪೂರ್ಣವಾಗಿ ಬಿಡಬೇಕು ಮತ್ತು ಪರದೇಶೀ ಸಾಮಾನುಗಳನ್ನೂ, ಮುಖ್ಯವಾಗಿ ಪರದೇಶೀ ಬಟ್ಟೆಯನ್ನು ಬಹಿಷ್ಕರಿಸಿ, ಖಾದಿ ಮತ್ತು ಸ್ವದೇಶೀ ಬಟ್ಟೆಗಳನ್ನೇ ಧರಿಸಬೇಕೆಂತಲೂ, ಎಲ್ಲರೂ ನಾಲ್ಕಾಣೆ ಚಂದಾ ಕೊಟ್ಟು ಕಾಂಗ್ರೆಸ್ಸಿಗೆ ಮೆಂಬರುಗಳಾಗಿ ಸೇರಬೇಕೆಂತಲೂ ಮುಂತಾಗಿ ದೀರ್ಘ ಭಾಷಣ ಮಾಡಿದರು.

ಶ್ರೀ. ಐ. ಪಿ ಕಾರ್ಯಪ್ಪನವರು—ಬ್ರಿಟಿಷ್ ಆಡಳಿತೆಯಿಂದ ಹಿಂದೂಸ್ಥಾನಕ್ಕೆ ಉಂಟಾಗಿರುವ ನಷ್ಟ ಕಷ್ಟಗಳನ್ನು ವಿವರಿಸಿ, ಕುಡುಕತನದಿಂದ ನಮ್ಮ ದೇಶಕ್ಕೆ ಆಗಿರುವ ಕೇಡುಗಳನ್ನು ಸೂಚಿಸಿದ ಮೇಲೆ ಎಲ್ಲರೂ ಪರದೇಶೀ ಬಟ್ಟೆಯನ್ನು ದೂರೀಕರಿಸಿ, ಕುಡುಕತನವನ್ನು ಬಿಡಬೇಕೆಂದು ಅಪ್ಪೀಲು ಮಾಡಿದರು. ಶ್ರೀ ಯಸ್ ಅಚ್ಚಯ್ಯನವರು ತಾನ ಪ್ರಚಾರ ಕೆಲಸಕ್ಕಾಗಿ ಗ್ರಾಮಾಂತರಗಳಲ್ಲಿ ಸಂಚರಿಸುವಾಗ್ಯೆ ಹಳ್ಳಿಯವರು ಎಷ್ಟು ಉತ್ಸಾಹದಿಂದ ಸಹಾಯ ಮಾಡುತ್ತಿದ್ದಾರೆಂಬುದನ್ನು ವಿವರಿಸಿ, ಇನ್ನು ಮುಂದಕ್ಕೂ ಕುಡುಕತನವನ್ನು ನಿಲ್ಲಿಸುವ ಕೆಲಸದಲ್ಲಿ ಎಲ್ಲರೂ ಭಾಗಿಗಳಾಗಬೇಕೆಂದು ನೆರೆದವರನ್ನು ಕೇಳಿಕೊಂಡರು. ಸೆಕ್ರೇಟರಿಯವರಾದ ಕಳುಹಿಸಲ್ಪಟ್ಟಿದ್ದ ಕನ್ನಡ "ಷಾರ್ಟ್‌ಹ್ಯಾಂಡ್" (ಸಂಕ್ಷಿಪ್ತ ಲಿಪಿ) ರಿಪೋರ್ಟರವರು ಭಾಷಣಗಳನ್ನೆಲ್ಲಾ ಬರೆದುಕೊಳ್ಳುತ್ತಿದ್ದರು

ಈ ತಾ 17ರಲ್ಲಿ ಕಕ್ಕಬೆ ಸುತ್ತಮುತ್ತಲಿನ ಗ್ರಾಮಸ್ಥರ ಮೀಟಿಂಗು ಕಕ್ಕಬೆ ಸೇತುವೆ ಬಳಿ ನಡೆಯಿತು. ಶ್ರೀ. ಕೇಲೇಟಿರ [illegible] ವೆಂಕಣ್ಣಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಹಾಜರಿದ್ದ 282 ಜನರ ಪೈಕಿ 16 ಮಹಿಳೆಯರಾಗಿದ್ದರು. ಇಲ್ಲಿ ಪಬ್ಲಿಕ್ ಮೀಟಿಂಗಿಗೆ ಮಹಿಳೆಯರು ನೆರೆದದ್ದು ಇದೇ ಮೊದಲಂತೆ ಶ್ರೀ ಪುದ್ಯಂಡ ಬೆಳ್ಯಪ್ಪನವರು—ಕಾರಾಗೃಹ ವಾಸದ ಅನುಭವವನ್ನು ಸ್ವಲ್ಪದರಲ್ಲಿ ಹೇಳಿ, ಗಾಂಧಿ—ಇರ್ವಿನ್ ರಾಜಿ ಒಪ್ಪಂದವನ್ನೂ, ಕರಾಚಿ ಕಾಂಗ್ರೆಸ್ಸಿನ ಮಹತ್ವವನ್ನೂ ಹಿಂದೂ—ಮುಸಲ್ಮಾನರ ಸಮಸ್ಯೆಯನ್ನೂ ವಿವರಿಸಿ, ಕಾಂಗ್ರೆಸ್ಸಿನ ಚಳವಳಿಗೆ ಬ್ರಿಟಿಷ್ ಸರಕಾರದವರು ಒಗ್ಗಿದ ಕಾರಣಗಳನ್ನು ತಿಳಿಸಿ, ಇನ್ನು ಮುಂದಕ್ಕೂ ಎಲ್ಲರೂ ನಿಷಾ ನಿಷೇಧವನ್ನೂ, ಖಾದಿ ಪ್ರಚಾರವನ್ನು ಕೈಕೊಂಡು ಕಾಂಗ್ರೆಸ್ಸಿನ ಹಾಗೂ ಮಹಾತ್ಮ ಗಾಂಧಿಯವರ ಶಕ್ತಿಯನ್ನು ಹೆಚ್ಚಿಸಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಗಳಾಗಬೇಕೆಂದು ನೆರೆದಿದ್ದ ಜನರಲ್ಲಿ ಅಪ್ಪೀಲು ಮಾಡಿದರು. ಶ್ರೀ. ಐನಂಡ ಕಾರ್ಯಪ್ಪನವರು—ದೇಶದ ಈಗಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಮಹಾತ್ಮ ಗಾಂಧಿಯವರನ್ನು ಈಗ ಎಲ್ಲರೂ ಹಿಂಬಾಲಿಸದೆ ಹೋದರೆ ನಮಗೆ ಸ್ವಾತಂತ್ರ್ಯ ದೊರೆಯುವ ಕಾಲವು ಬಹು ದೂರವಾಗುವುದೆಂತಲೂ ಎಲ್ಲರೂ ಕಾಂಗ್ರೆಸ್ಸಿಗೆ ಉತ್ಸಾಹ ಕೊಡಬೇಕೆಂದೂ ಭಾಷಣ ಮಾಡಿದರು. ಶ್ರೀ ಬುಟ್ಟಿಯಂಡ ಮಾಚಯ್ಯನವರು—ಬ್ರಿಟಿಷರ ಆಳಿಕೆಯಿಂದ ಇಂಗ್ಲಂಡಿನ ಕೆಲವು ಪ್ರಯೋಜನಗಳನ್ನು ಸೂಚಿಸಿ, ಕಾಂಗ್ರೆಸ್ಸು ಚಳವಳಿಯು ಸರಿಯಾದದ್ದೆಂದು ಹೇಳಿ, ಅವರೊಂದಿಗೆ ಕೊಡಗಿನಲ್ಲಿರುವ ಕೊಡಗರು—ಕೊಡಗೇತರರೆಂಬ ಭಿನ್ನಭೇದವನ್ನು ಹೋಗಲಾಡಿಸಬೇಕೆಂದೂ ಮುಂತಾಗಿ ಮಾತಾಡಿದರು. ಶ್ರೀ ಗಳಾದ ಪರವಂಡ ಗಣಪತಿಯವರು, ಯಸ್. ಅಚ್ಚಯ್ಯನವರು [illegible] ಕಾರ್ಯಪ್ಪನವರು [illegible] ಯ್ಯನವರಿಗೆ ಬವಾಬನಿತ್ತರು. ಶ್ರೀ ಗಳಾದ ಪರವಂಡ [illegible] ಣ್ಣಪ್ಪನವರು ಕೋಡಿಮಣಿಯಂಡ ಮುತ್ತಪ್ಪನವರು, ಮಣವಟ್ಟಿರ ಪೊನ್ನಪ್ಪನವರು ಮತ್ತು ಆಂಜಪರವಂಡ ತಮ್ಮಯ್ಯನವರು ನೀರಿ ಇಳಿಸುವುದನ್ನು ನಿಲ್ಲಿಸಿ ಕುಡುಕತನವನ್ನು ಬಿಡುವ ಕೆಲಸಕ್ಕೆ ಎಲ್ಲರೂ ಸಹಾಯ ಮಾಡಬೇಕೆಂದು ವಂದಿಸಿದರು. ಅಧ್ಯಕ್ಷರ ಭಾಷಣವಾದ ಮೇಲೆ ಮೀಟಿಂಗು ಬರಖಾಸ್ತಾಯಿತು

ಕರ್ನಾಟಕ ತರುಣರಿಗೆ.

ಸಹೋದರ ಸೋದರಿಯರೇ!

ಭಾರತ ಖಂಡವು ವಿಚಿತ್ರ ಕಾಲಗತಿಗೆ ಸಿಕ್ಕಿ [illegible] ನಾವು ಸಕಲರಾದರು ಸತ್ಯಾಗ್ರಹ ಆರಂಭಿಸಿದರು. ತರುಣರಿಂದ ಅಪೂರ್ವ ತ್ಯಾಗ ಶೌರ್ಯಗಳನ್ನು ನಿರೀಕ್ಷಿಸಿದರು. ನಮ್ಮ ತರುಣರು ಅವರ ನಿರೀಕ್ಷೆಯನ್ನು ಮೀರಿದರೂ ನಿರಾಶೆಯುಂಟು ಮಾಡಲಿಲ್ಲ

ತರುಣರು ಪೂರ್ಣ ಸ್ವರಾಜ್ಯಾಭಿಲಾಷಿಗಳು. ಬ್ರಿಟಿಷ್ ಸಾಮ್ರಾಜ್ಯದಿಂದ ಸ್ವತಂತ್ರವಾಗ [illegible] ನಾವೇ ತರುಣ ವರ್ಗಕ್ಕೆ ಗಾಂಧಿ ಇರ್ವಿನ ಒಪ್ಪಂದವು ಸಮಾಧಾನ ತರಲಿಲ್ಲ. ರಣರಂಗದಲ್ಲಿದ್ದ ತಾತ್ಕಾಲಿಕ ಜೀವನವಿಡು [illegible] ಮನ್ನಿಸಲಿಕ್ಕಾಗಿ ಹೋಗುವುದು ತರುಣರಿಗೆ ಒಪ್ಪಿಗೆ ಇಲ್ಲ

ಆದರೆ ದೇಶದಲ್ಲಿ ತರುಣರಲ್ಲಿ ಶಿಸ್ತಿಲ್ಲ. ಐಕ್ಯವಿಲ್ಲ. ಆದರ ಮೂಲಕ ಕಾಂಗ್ರೆಸ್ಸಿನೊಳಗೂ ದೇಶದ ಮಹತ್ವ ಸ್ಥಳಗಳಲ್ಲೂ ಅಂತರವುಂಟು. [illegible] ಗಾಂಧಿ [illegible] ಒಪ್ಪಂದವನ್ನು [illegible] ಕಣ್ಣು ಮುಚ್ಚಿ [illegible] ಆದರೆ ತರುಣರಿಗೆ ಇದೇ ಸಮಯ. ಅವರು ಜನರನ್ನು ಎತ್ತಬೇಕು. [illegible] ಪೂರ್ಣ ಸ್ವರಾಜ್ಯಕ್ಕಾಗಿ ಹೋರಾಡಬೇಕು. ಪೂರ್ಣ ಸ್ವಾತಂತ್ರ್ಯ ಸಿಗುವ ವರೆಗೆ ಶಾಂತಿ ಇಲ್ಲಿಯವು?

ಈ ಉದ್ದೇಶ್ಯ ಸಾಧನೆಗಾಗಿ ಇಷ್ಟರಲ್ಲೇ ಕರ್ನಾಟಕದಲ್ಲಿ ತರುಣ ಸಮ್ಮೇಳನವೊಂದನ್ನು ನಡೆಸುವ [illegible] ದೆ ಕರ್ನಾಟಕ ತರುಣರು [illegible] ಸಮ್ಮೇಳನದಲ್ಲಿ ಕಲೆತು, ಮುಂದಿನ ಕಾರ್ಯಕ್ರಮ ನಿಶ್ಚೈಸಬೇಕು ಸಮ್ಮೇಳನವು ಬೇಗ ಕೂಡಬೇಕಾಗಿದೆ. ಆದಕಾರಣ ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ನೀವು [illegible] ಹುಟ್ಟಿಸಬೇಕು. ತರುಣರಪ್ಪ ಸಮ್ಮೇಳನಕ್ಕೆ ಬೇಗ [illegible] ಮುತ್ತಿಗೊಳಿಸಬೇಕು [illegible] ತಾಲೂಕಿನಲ್ಲಿ 'ತರುಣ ಸಂಘ'ವನ್ನು ಸ್ಥಾಪಿಸಬೇಕು. [illegible] ಅನುಭವಪಡಿಸಬೇಕು. ಸಧ್ಯಕ್ಕೆ ನೀವು ಈ ಕೆಲಸವನ್ನು ಕೈಕೊಳ್ಳಬಹುದು.—

೧ ಜಿಲ್ಲೆಯ ಬೇರೆ ಬೇರೆ ರಾಜ್ಯಗಳನ್ನು [illegible] ಗಳಲ್ಲಿಯಷ್ಟೇ, ಆ ಕ್ಷೇತ್ರಗಳ ಇತಿಹಾಸವನ್ನು ಅಭ್ಯಾಸ [illegible] ನೆಲ್ಲಿಯ, ಸ್ವಾತಂತ್ರ್ಯ ಗುಂಪುಗಳನ್ನು ಏರ್ಪಡಿಸಿ.

೨ ನಾಡಿನಲ್ಲಿ ಎಲ್ಲಾ [illegible] ವಿಚಾರಗಳನ್ನೂ ಕುರಿತು ಚರ್ಚೆ ಆರಂಭಿಸಿ

೩ ಸ್ವಯಂಸೇವಕರ ಶಿಕ್ಷಣ [illegible] ಮಾಡಿ. ಅದರಲ್ಲಿ ಉಚಿತ ವ್ಯಾಯಾಮ ಶಿಕ್ಷಣ ಕೊಡಿ. ಅಪೂರ್ವ ತ್ಯಾಗ ತೋರಿಸಲು ಉಚಿತ ಕರ್ತವ್ಯವನ್ನು ಅರಿಯುವುದು [illegible]

...ಸರುವಾಗ ಮಕ್ಕಳು ಹುಟ್ಟುತ್ತಾರೆ. ಈ ಮಕ್ಕಳಿಗೆ ಯಾವ ತರದ ಊಟ ಉಪಚಾರ ಕೊಡಲು ಒಬ್ಬ ತಿರಸ್ಕಾರದ ತಂದೆ ತಾಯಿಗಳಿಗೆ ಎಂಥಾ ಶಕ್ತಿ ಇರಬಹುದು. ಮತ್ತು ಪ್ರಾಯಕ್ಕೆ ಬಂದ ಮೇಲೆ ವಿದ್ಯಾ ಕೊಡಲು ಮನಸು ಎಲ್ಲಿಂದ ಬಂದೀತು?

ಈ ಸಂಗತಿಗಳೆಲ್ಲಾ ಸಂಬಂಧಪಟ್ಟ ತಾಲೋಕಿನ ಎಲ್ಲಾ ಜಾತಿಯವರಿಗೂ ಸಂಬಂಧಪಡುವದರಿಂದ ಇಲ್ಲಿಯಣ ಕೌನ್ಸಿಲ್ ಮೆಂಬರುಗಳೂ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳೂ ಸಹ ಒಂದು ಪಕ್ಷ ಸೇರಿಸಿ ಒಂದು ಸಂಘ ಮಾಡ ಲು ಏರ್ಪಡಿಸಿಕೊಂಡರೆ ಉತ್ಕರ್ಷ ಕೊಡಗಿನ ಹೆಸರು ಉಳಿದೀ ತು ಎಂಬದರಲ್ಲಿ ಸಂದೇಹವಿಲ್ಲ.

ಒಂದನೇ ಮದುವೆಯಲ್ಲಿ ಎಷ್ಟು ಖರ್ಚು ಮಾಡಬೇಕೆಂಬುದೂ, ಮುಂಡುಗಾರಿಕೆಯನ್ನು ತಪ್ಪಿಸುವದೂ, ಜಾತಿಯಲ್ಲಿ ರಬಹ ದಾ ನ ಕಟ್ಟು ಪದ್ಧತಿಗಳನ್ನು ತಪ್ಪಿಸುವದೂ ಸಹ ಇಂಥಾ ಸಂಘದ ಉದ್ದೇಶವಾಗಿರುವಾಗ ಮೇಲ್ಕಂಡ ಸಂಗತಿಗಳನ್ನೆಲ್ಲಾ ಸು ಲಭ ರೀತಿಯಲ್ಲಿ ಅಡಗಿಸಲು ಅನುಕೂಲವಿದೆ.

ಇಂಥಾ ಸಂದರ್ಭಗಳಲ್ಲಿ ಮದುವೆಯಾಗಲಿರುವ ಹುಡು ಗರು ಮುಂದೆ ಬಂದು ನಾವು ಹುಡುಗಿಯ ರಿಗೆ ಹಣ ಕೊಟ್ಟು ಮದುವೆಯಾಗ ವುದಿಲ್ಲವೆಂಬ ಶಪಥವನ್ನು ಕಟ್ಟಿರ ಹುಡುಗ ರೊನ್ನು ಎಲ್ಲಿಯವರೆಗೆ ಇಟ್ಟಾರು? ಹುಡುಗಿಯರ ತಂದೆ ತಾಯಿಗಳು ಕನ್ಯಾದಾನ ಮಾಡಲು ಮುಂದೆ ಬರಬೇಕಲ್ಲದೆ ಹುಡುಗಿಗಳನ್ನು ಮಾರಿಕೆ ಮಾಡುವ ಹಾಗಿ ವಗೈರ ... ಮಾರ ಲು ಪ್ರಯತ್ನ ಪಟ್ಟರೆ ಇವರಿಗೆ ಕನ್ಯಾದಾನದ ಪುಣ್ಯದಿಂದ ಬಂದೀತು? ಇದೊಂದು ವ್ಯಾಪಾರವೇ ಆಗಿರುತ್ತದೆ ... ದ ಇಂಥಾದ್ದನ್ನು ನಿಲ್ಲಿಸಲು ಸರ್ಕಾರ ಒಂದು ಕಾನೂನು ಮಾಡ ಲು ಪ್ರಯತ್ನ ಪಡಬೇಕಾಗಿ ಕೋರವ.

'ದ ...ದೃಷ್ಟಿ'

ಪೊಂಟಿಕೊಪ್ಪ ಶಾಲೆಯ ವಾರ್ಷಿಕೋತ್ಸವ

ಅಯ್ಯಾ,

ಆಹಾ ಮರೆತಿತ್ತೆನು! ಅನೇಕ ಶಾಲೆಗಳ ವಾರ್ಷಿಕೋತ್ಸ ವವು ನಡೆದ ಸಮಾಚಾರವನ್ನು ಪತ್ರಿಕೆಯಲ್ಲಿ ನೋಡುವಾಗ ನ ಮ್ಮ ಪೊಂಟಿಕೊಪ್ಪ ಶಾಲೆಯು ಹೊಸದಾಗಿ ನಡೆದ ವಾರ್ಷಿಕೋ ತ್ಸವದ ವಿಷಯ ಯಾವ ಪತ್ರಿಕೆಯಲ್ಲಿಯೂ ಕಂಡುಬರಲಿಲ್ಲ.

ಕಳೆದ ಮಾರ್ಚಿ ತಾ 28ನೇ ಶನಿವಾರ ಅಪರಾಹ್ನ 3 ಗಂ ಟೆಗೆ ಮ ಪಾಂಡಂಡ ಚಂಗಪ್ಪ ಯಂ. ಯಲ್. ಸಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 200 ಜನರು ನೆರೆ ದಿದ್ದರು. 3 ಗಂಟೆಯಿಂದ ಸಾಧಾರಣ 5 ಗಂಟೆ ವರೆಗೆ ಶಾ ಲೆಯ ಮಕ್ಕಳ ಮತ್ತು ಪಬ್ಲಿಕಿನವರ ಆಟ ಓಟಗಳು ಕಳೆಯಿ ತು. ಸ್ಪೋರ್ಟ್ಸ್ ತೀರಿದನಂತರ ತಿಂಡಿ ತೀರ್ಥವು ಮುಗಿದು ವಿದ್ಯಾರ್ಥಿಯರ ಪ್ರಾರ್ಥನೆಯೊಡನೆ, ಹೆಡ್ ಮಾಸ್ಟರವರು ಆವ ರ ಶಾಲೆಯ ವರ್ಷಾ ವರದಿಯನ್ನು ಓದಿದರು. ಅಧ್ಯಕ್ಷರು ಆಟ ಓಟಗಳಲ್ಲಿ ಗೆದ್ದ ಬಾಲಕ ಬಾಲಿಕೆಯರಿಗೂ, ಮತ್ತು ಪ ಬ್ಲಿಕಿನವರಿಗೂ ಇನಾಮುಗಳನ್ನು ಹಂಚಿ ಸ್ವಾರಸ್ಯವಾದ ಭಾ ಷಣವನ್ನು ಮಾಡಿದರು. ಮೇಲ್ಕಂಡ ಸ್ಪೋರ್ಟ್ಸ್‌ಗೆ ಇನಾ ಮುಗಳ ಪೈಕಿ ಮೆ ಕೆ ಎ ಪೂವಯ್ಯನವರದೂ, ಮೆ ಎ ಯಂ ಕಾಳಪ್ಪನವರದೂ ಮತ್ತು ಕೆ. ಬಿ. ಸಂಬುಂಡನವರದೂ ಬಂದೊಂದು ಇನಾಮುಗಳೆಂದು ತಿಳಿಸು ಬಂತು. ಇದಾ ದೊಡನೆ ಇಂಗ್ಲಿಷ್ ನಾಟಕವು ಕೆಲವು ಮಹನೀಯರ ನವರೊ ಡನೆ ಅಭಿನಯಿಸಲ್ಪಟ್ಟಿತು. ಸಾವಿತ್ರಿ ಸತ್ಯವಂತರೆಂಬ ಕನ್ನ ಡ ನಾಟಕವನ್ನು ಸಣ್ಣ ಮಕ್ಕಳು ಅತಿ ಸ್ವಾರಸ್ಯವಾಗಿ ಅಡಿ ಸಿದ್ದನ್ನು ಆಶ್ಚರ್ಯಗೊಳಿಸಿದರು. ಈ ನಾಟಕವನ್ನು ಅಭಿನ ಯಿಸಿದ ವಿದ್ಯಾರ್ಥಿಯರಿಬ್ಬರಿಗೆ ಮೆ ಕೋಣೇರಿರ ದೇವಯ್ಯ ನವರು ಇಟ್ಟ 1ನೇ ಇನಾಮನ್ನೂ, ಮಿಸೆಸ್ ಪಿ ಎ. ಸಂಟಪ್ಪ ನವರು ಇಟ್ಟ 2ನೇ ಇನಾಮನ್ನೂ ಅಧ್ಯಕ್ಷರು ಹಂಚಿದನಂ ತರ ವಿದ್ಯಾರ್ಥಿಯರ ಮಂಗಳಾರತಿಯಿಂದ ಸಭೆಯು ಬರಕಾ ಸ್ತಾಯಿತು.

ಪ್ರೇಕ್ಷಕ.

ದೇವಣಗೇರಿ ಶಾಲೆಯ ವಾರ್ಷಿಕೋತ್ಸವ.

ಕಳೆದ ಏಪ್ರಿಲ್ ತಿಂಗಳು 18 ನೇ ಶನಿವಾರ ದಿವಸ ನ ಮ್ಮ ದೇವಣಗೇರಿ ಶಾಲೆಯ ನಲ್ಲನೇ ವಾರ್ಷಿಕೋತ್ಸವವು ಕೊಡಗು ರಾಜಾ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರಾದ ಶ್ರೀ ಯುತ ಬಿ ಯ. ಸ್. ಕುಶಾಲಪ್ಪ ಬಿ ಎ ಎ ಯವರ ಅಧ್ಯ ಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಆಟ ಓ ಟಗಳು ಬೆಳಿಗ್ಗೆ 9 ಗಂಟೆಯಿಂದ 12ರ ವರೆಗೆ ನಡೆಯಿತು. ಸಾ ಧಾರಣ 400 ಜನರ ವರೆಗೆ ನೆರೆದಿದ್ದರು. ಆ ವೇಳೆ ಕೂಡಿ ದ ಜನರಿಗೆಲ್ಲಾ ಉಪಾಹಾರಗಳು ನಡೆದವು. ಅಪರಾ ಹ್ನ 3 ಗಂಟೆಯಿಂದ ಈ ಶಾಲಾ ಹೆಡ್ ಮಾಸ್ಟರವರು ಶಾಲೆಯ ರಿಪೋರ್ಟನ್ನು ಓದಿದರು. ಶ್ರೀಯುತ ಯನ್. ಸಿ. ಸುಬ್ಬ ಯ್ಯ ಬಿ. ಎ ಯವರು ಮಕ್ಕಳಲ್ಲಿ ತಂದೆ ತಾಯಿಗಳು ನ ... ಕೊಳ್ಳತಕ್ಕ ಬುದ್ಧಿವಾದಗಳನ್ನು ಬಹಳ ಚೆನ್ನಾಗಿ ವಿವರಿಸಿ ಮಾ ತಾಡಿದರು. ಆ ವೇಳೆ ಅಧ್ಯಕ್ಷರು ಆಟ ಓಟಗಳಲ್ಲಿ ಗೆದ್ದವ ರಿಗೆ ಇನಾಮನ್ನು ಹಂಚಿದರು. ತದನಂತರ ಅಧ್ಯಕ್ಷರು ನೆ ರೆದ ಸಭೆಯವರಿಗೆಲ್ಲಾ ತಿಳಿಯುವ ಹಾಗೆ ಬುದ್ಧಿವಂತಿಕೆಯು ಮತ್ತು ವಿದ್ಯಾಭ್ಯಾಸದ ವಿಷಯವಾಗಿಯು ನಡೆ ಬಹಳ ಸ್ವಾ ರಸ್ಯವಾದ ಭಾಷಣವನ್ನು ಮಾಡಿದರು. ಇದಾದ ಮೇಲೆ ಸಣ್ಣ ಬಾಲಕರು ಮಯೂರಿ ರಾಜನ ನಾಟಕವನ್ನು ಆಡಿ ಸಭೆ ಯನ್ನು ಆನಂದ ಪಡಿಸಿದರು. ಆ ವೇಳೆ ಮಂಗಳ ಹಾಡಿ ಸಭೆಯನ್ನು ಮುಕ್ತಾಯ ಗೊಳಿಸಿದರು.

ಕೆ. ಟಿ. ಕೆ. ನಂಬೀಶನ್‌ರವರ ಅನುಭವ ಸಿದ್ಧೌಷಧಗಳು.

ಆರೋಗ್ಯಕಲ್ಪದ್ರುಮ ಲೇಹ್ಯ—ಒಳ್ಳೇ ಜೀರ್ಣಕಾರಿ. ಮಲಬಂಧ, ಹೊಟ್ಟೆಕಚ್ಚು, ಮೂಲವ್ಯಾಧಿ ಗಳ ನೋವು, ಶ್ವಾಸ ಕ್ಷಾಸ, ಕ್ಷಯರೋಗ, ನಿಶಕ್ತಿಗಳನ್ನು ಗುಣಪಡಿಸುವುದಲ್ಲದೆ ಮೇಹ ಸಂಬಂಧವಾದ ರೋಗಗಳನ್ನೂ ಹೋಗಲಾಡಿಸುವು ದು. 1 ಪಾಡಿಗೆ ರೂ. 2—0—0 ಮಾತ್ರ.

ಜ್ವರ ಸಂಹಾರಿ—ಒಳ ಜ್ವರ, ಚಳಿಜ್ವರ, ಕೆಮ್ಮು, ಶ್ವಾಸ ನೋವು, ಉಬ್ಬಸ, ಎದೆ ಉರಿ, ತಲೆ ಸುತ್ತುವಿಕೆ, ಮಲಬಂಧಗಳು, ಮೈ ಅರಸಿನ ಬಣ್ಣವೇರುವಿಕೆ, ಅಜೀ ರ್ಣ, ಜೊಕ್ಕರಿಕೆ, ಹೃದಯ ದೌರ್ಬಲ್ಯ, ದೇಹ ಹೀನತೆಯು ಅಸಕ್ತಿ, ಕ್ಷಯ ಮೂತ್ರ ಇತ್ಯಾದಿಗಳಿಗೆ ರಾಮಬಾಣದಂತಿ ದೆ. 1 ಸ್ಸಿಗೆ ರೂ. 1—8—0 ಮಾತ್ರ.

ಗರ್ಭರಕ್ಷಕ ಗುಳಿಗೆ—4 ತಿಂಗಳ ಮೊದಲಿನ್ದಿಂದು ಗರ್ಭಿ ಣಿಯರು ಇದನ್ನು ಸೇವಿಸುವುದರಿಂದ ಶಿಶುಗಳು ದೃಢಕಾಯ, ತೇಜಸ್ವಿಯಾಗಿ ಜನಿಸಿ, ಬಾಲಗ್ರಹ ಇತ್ಯಾದಿ ರೋಗಗಳು ಬಾರದಿರುವವು, ಪ್ರಸವವು ಅತಿ ಸುಲಭವಾಗಿ ಆಗುವುದು. 25 ಗುಳಿಗೆಗಳ ಸೀಸೆ 1ಕ್ಕೆ 0—8—0 ಮಾತ್ರ.

ಪ್ಲೀಹ, ಕಾಮಾಲೆ, ಪಾರ್ಶ್ವವಾಯು, ಪಿತ್ತ, ಮಲೇರಿಯ ಮೂಲವ್ಯಾಧಿ, ವಾಂತಿ, ಭೇದಿ, ಹಲ್ಲು ನೋವು, ಹುಳುಕತ್ತ, ಕ್ಷಯ, ಕಜ್ಜಿ ತುರಿ ಇತ್ಯಾದಿ ರೋಗಗಳಿಗೂ ಪ್ರತ್ಯೇಕ ಪರಿಣಾಮ ಔಷಧಿಗಳು ತಯಾರಿರುವವು. ಒಂದು ಸಲ ಪರೀಕ್ಷಿಸಿ ನೋಡಿ.

ನಂಬೀಶನ್ ಆಯುರ್ವೇದ ವೈದ್ಯ ಶಾಲಾ,
4—4 ಪೊನ್ನಂಪೇಟೆ (ಕೊಡಗು)

ರೂಪಾಯಿಗಳು 5-8-0 ಮಾತ್ರ.

ನಮ್ಮ ಉಚಿತ ಜೀವವಿಮೆಯು
ಅನೇಕ ಬಡಬಗ್ಗರನ್ನು ಕಾಪಾಡಿದೆ.

ನೀವೇಕೆ ಹೊಂದಬಾರದು?

ಸೆಕ್ರೆಟರಿ ಈಗ ಅಗಲೇ 72,000 ಜನಗಳು ಮೆಂಬರಾಗಿದ್ದಾರೆ.
ಹಣ ರೂ. 2,00,000.

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.

ಮಂಗಳೂರು, ದ. ಕನ್ನಡ.

ಯಾವತರಹ ಒಗೆಯ ರಬ್ಬರು ಮೋಹರುಗಳು ಡಿಯ ಸ್ಟೈನ್ ಬೋರ್ಡು, ಹಾಫ್ ಟೋನ್ ಬ್ಲಾಕ್ ದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಬಾಳಿಕೆಗೆ ಬ ರುವಂತೆ ಕೆಳಗಿನ ತಯಾರಿಸಿ ಕೊಡಲಾಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕಾಗಲೀ ಯಾ ಮಡಿಕೇರಿ ಏಜಂಟರು ಮೆ. ಯನ್. ಯಮ್. ಕೃಷ್ಣ ನವರಿಗಾಗಲೀ ಬರೆದುಕೊಳ್ಳುವದು.

12—10

ಬಡವರಿಗೆ ಭಾಗ್ಯಕಾಲ! ಎಲ್ಲರಿಗೂ ಅನುಕೂಲ!!

WANTED.

Agents for Coorg on liberal Commission or decent pay per month
Apply to—

The Branch Secretary,
The Venus Assurance Co., Ltd.,
Bore Bank Road,
Benson Town,
Bangalore City.

12—5

ಎಂ. ಎಸ್. ಶಿದ್ದಲಿಂಗಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಗಳು, ಮೈಸೂರು.

ಕ್ಯಾಲಿಕೋ ಭಂಗಾರದ ನಿಬು ಹಾಕಿದ ಬಾಕ್ಸಿಯ ... ಟಿಂದೋಳಪಾ ಆದ ಫೌಂಟೆನ್ ಪೆನ್ ಗಳು.

ವಂಡರ್ ಫೌಂಟನ್ ಪೆನ್ 1ಕ್ಕೆ	ರೂ 3 0 0
" ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3 7 0
" ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3 8 0
" ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಹಾಕ್ ಕಲರ್ ಫೌಂಟನ್ ಪೆನ್ 1ಕ್ಕೆ	3 14 0
" ಮೊ... ಕಲರ್ ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4 2 0
" ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ ಬ್ರವುನ್ ಕಲರ್ ಫೌಂಟನ್ ಪೆನ್ 1ಕ್ಕೆ	5 8 0
...ಲ್ ಫೌಂಟನ್ ಪೆನ್ 1ಕ್ಕೆ	10 8 0
...ಪೆನ್ 1ಕ್ಕೆ	14 6 0, & 20 10 0
... ಫೌಂಟನ್ ಪೆನ್ 1ಕ್ಕೆ	3 8 0, & 3 12 0
...ಪೆನ್ 1ಕ್ಕೆ	6 4 0, & 6 12 0
... ಫೌಂಟನ್ ಪೆನ್ 1ಕ್ಕೆ	8 2 0, & 8 10 0

ಟೈಂಪೀಸ್ ಗಳು

ಸ್ಕ್ರೂಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3 6 0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2 2 0
ಅಗಲಿಯೂ ಅಲಾರಂ ಟೈಂಪೀಸ್ 1ಕ್ಕೆ	5 15 0
ಅಗಲಿಯೂ ಸಣ್ಣ ಸೈಜಿನ ಅಲಾರಂ ಟೈಂಪೀಸ್ 1ಕ್ಕೆ	7 2 0
ಅಗಲಿಯೂ ಅಲಾರಂ ಸಣ್ಣ ಟೈಂಪೀಸ್ 1ಕ್ಕೆ	8 10 0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	9 6 0
ಬಿಗ್ ಬೆನ್ ಅಲಾರಂ ಸ್ಟ್ಯಾಂಡ್ ಇರುವ ಟೈಂಪೀಸ್	13 4 0
ಬಾಕ್ಸಿಯೂ ಬಂದೋಬಸ್ತು ಅ... 1ಕ್ಕೆ	5 10 0
ಬಿಜೋ ನಮೂನೆಯಲ್ಲಿ ಎಬ್ಬಿಸುವ ವಾಚು 1ಕ್ಕೆ	12 1 0
ನಿಕ್ಕಲ್ ಕೇಸ್ ಸಿಲಿಂಡರ್ ಮು... ತರಹ ರಿಸ್ಟ್ ವಾಚ್ 1ಕ್ಕೆ	5 4 0, 7 0 0 & 12 8 0



ಇಲ್ಲಿ ನಮೂದಿಸಿದ ಸಿಸ್ಟಮ್ ನಮೂನೆ ಅಂದ ವಾದ ಟೇಬಲ್ ಟೈಂಪೀ ಸ್ 1ಕ್ಕೆ 3—6—0 ಪ್ಯಾ ಕಿಂಗ್ ಪೋಸ್ಟೇಜು ಅ ಧಿಕವಾಗಿ.

ಮೊಫಿಸಿಯಾರ್ಡರ್ ರವಾನಿಸುವ ... ಎಸ್. ಶಿದ್ದಲಿಂಗಪ್ಪ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

...—10

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	23,160
ಜಮೂಬಂದ ಠೇವಣಾತಿ —	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಮನೆಯಪ್ಪಂಡ ಬೆಳ್ಳಿಯಪ್ಪನವರು.

ಸೆಕ್ರೆಟರಿ, ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1-7-1930.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ಗ
ಓರಿಯಂಟಲ್ ಜೀವವಿಮೆ ಕಂಪೆನಿಯು

ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲೆಲ್ಲಾ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯು ಈಗಿನ ಸ್ಥಿತಿಯಿಂದ ಸಷ್ಟ...

ಹೊಸ ಕೆಲಸ.	ಪ್ರೀಮಿಯಂ ವರಮಾನ
೧೯೨೭—೪೬.೮ ಲಕ್ಷ ರೂಪಾಯಿಗಳು.	೧೯೨೭—೧.೨೨ ಲಕ್ಷ ರೂಪಾಯಿಗಳು.
೧೯೨೮—೫೮೫ ಲಕ್ಷ ,,	೧೯೨೮—೧೪೦ ಲಕ್ಷ ,,
೧೯೨೯—೬೫೦ ಲಕ್ಷ ,,	೧೯೨೯—೧೬೧ ಲಕ್ಷ ,,

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು.

ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು
೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳಿಗೆ ೨೨॥ ರೂಪಾಯಿಗಳು.
೧೯೨೭ ,, ,, ,, ,, ೨೫ ,,

ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಾಗಿ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದಲ್ಲಿ ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿಮಗೆ ಲಾಭವು.

ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗೆ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು:—

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಯಂ. ವಿ. ಮುತ್ತುಕೃಷ್ಣ ನಾಯುಡು, ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

OR

52—13

ಕೆ. ಪಿ. ಚಿಣ್ಣಪ್ಪ, ಏಜೆಂಟ್, ಮಡಿಕೇರಿ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.

ವನ್ನು ಕೊಡುವುದರಿಂದ ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ, ಗಿರಿಗಾಂವ, ಮುಂಬಯಿ.

52—20

ಮಲೇಜ್ವರಕ್ಕೆ ಮಲೇರಿಯಾನ

ಮಲೇರಿಯಾನವು ಮಲೇಜ್ವರ, ಚಳಿಜ್ವರ, ಉರಿಜ್ವರ, ದಿನ ವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನು ಗೆದ್ದು ... ಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ.

ಕ್ರಯ 8 ಡಿಸ್ಟಿಗೆ 1—8—0, ½ ಡಜನಿಗೆ 8—4—0, 16—8—0.

ಪಿತ್ತ ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡ...

ಪಿತ್ತಜ್ವರ, ಕೈಕಾಲು ಬಿಟ್ಟಲು, ರಕ್ತ ಇಲ್ಲದೆ ಬೆಳ್ಳಗೆ ... ರುಚಿ ಕೆಟ್ಟಿರುವ ನಾಲಗೆ ಅರಸಿನ ಬಣ್ಣ ... ಗೋಚೆ ಮತ್ತು ಶರೀರ ಹಳದಿ, ತಲೆ ತಿರುಗುವದು ... ಹೊಟ್ಟೆ ಉರಿ, ಎದೆ ಸುಡುವದು, ನಾಲಗೆ ಒಣಗುವದು, ಮಲಮೂತ್ರಕ್ಕೆ ಹೋಗ ಪಿತ್ತ ಕಾರುತ್ತಿರುವ ಇದ್ರೆ ಇಲ್ಲದೆ ಸಂಕಟವಾಗುವ ... ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲಾ.

ಶರೀರದಲ್ಲಿ ಬೀಳುವ ಬೊಕ್ಕೆ, ಕುರು, ಬಿಚ್ಚಿಗಳು, ಬೇಗ ಗುಣವಾಗದ ಘೋರ ವ್ರಣಗಳು ವಿವಿಧ ಬಗೆಯ ಚರ್ಮ ರೋ... ಅತಿ ಶೀಘ್ರದಲ್ಲಿ ಗುಣಪಟ್ಟು ರಕ್ತ ಸಂಪೂರ್ಣ ಶುಚಿಯಾಗಿ, ದೇಹದಲ್ಲಿ ಶುದ್ಧ ರಕ್ತವು ತುಂಬಿ ಆರೋಗ್ಯ ಕೊಡತಕ್ಕ ... ಕಂಪೌಂಡು ಸಿರಪು ಸರ್ಸ ಅಮಗ ಎಂಬುದೇ. ಬಾಟ್ಲಿಗೆ ರೂಪಾಯಿ 3—8—0.

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬರ್ನಮ್.

ತಿಂಗಳು ಗಟ್ಟಿಯ ಅಕ್ರಮ, ಹೊಟ್ಟೆನೋವು, ಕೈಕಾಲುಗಳ ಸೆಳತ, ಕೋಶದ ಬಲಹೀನತೆ, ವಾಯುಗಳ ಉಪದ್ರ, ರಕ್ತವು ... ಹರಿಯದೆ ನಿಂತು ಬಿಡುವದು ಅಲ್ಲದೆ ಸಮಯಕ್ಕೆ ಸ್ರಾವಿಸುವದು ಬಣ್ಣ ವಾಸನೆಯಲ್ಲಿ ಕೆಡಕು ಇತ್ಯಾದಿ ಗರ್ಭಕೋಶದ ಎಲ್ಲಾ ಅಪ... ರೋಗಗಳನ್ನು ಕಂಪೌಂಡು ಸಿರಪ್ ವಿಬರ್ನಮ್ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ. ಕ್ರಯ ಬಾಟ್ಲಿಗೆ ರೂ. 3—8—0

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ್.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣ ತೋರಿ, ಸೊಂಟಕ್ಕೆ ಬಲ ಇಲ್ಲದ ಇರುವದು, ಜೀರ್ಣ... ಮತ್ತು ಬಗೆ ಬಗೆ ತರದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ, ಬಾಳುವಿಕೆಯನ್ನೂ ಕುಂದಿಸಿಬಿಡುವ ಈ ಆಪತ್ತುಗಳನ್ನು ... ಟೋನ್ ಆಶ್ಚರ್ಯದಿಂದ ಗುಣ ಪಡಿಸುವದು. ಕ್ರಯ ಬಾಟ್ಲಿಗೆ 1—4—0

ಶುದ್ಧ ಚಿಕಿತ್ಸೆಯ ಮದ್ದುಗಳೂ ಹೋಮ್ಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ, ಅನೇಕ ನಾನಾ ಬಗೆಯ ಸಾಮಾನುಗಳೂ, ... ನಮ್ಮಲ್ಲಿ ನ್ಯಾಯವಾದ ಬೆಲೆಗೆ ದೊರೆಯುತ್ತದೆ.

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ವಿಳಾಸ:—ಮಲೇರಿಯಾನ ಕಂಪೆನಿ, ಹಂಪನಕಟ್ಟೆ, ... ನಂಬರು 14, ಮಂಗಳೂರು

52—29

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
,, ಮೆ. ಐಚೆಟ್ಟಿರ ಮಾದಯ್ಯನವರು,
ದಕ್ಷಿಣ ಕೊಡಗಿಗೆ ಮೆ. ಅಣ್ಣಾರಂಡ ಮೇದಪ್ಪನವರು,
,, ಮೆ. ಅಪ್ಪಂಡ ಸುಬ್ಬಯ್ಯನವರು
ಮರೆನಾಡು—ಮೆ. ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಸ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಚಮ್ಮಟ ಪೂದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಸಿ. ಜಿ. ಮುದ್ದಯ್ಯನವರು
,, ಮೆ. ಕಣ್ಣುವಂಡ ಬೋಪ್ಪಯ್ಯನವರು ಮತ್ತು, ಅರಮಣಮಾಡ ಪಿ. ಕಾರ್ಯಪ್ಪನವರು,
ಮಡಿಕೇರಿ & ತಿತಿಮತ್ತಿ—ಮೆ. ಜಿ. ಮಾನಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮೊಣ್ಣಯ್ಯನವರು

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ... ರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಿ...

ಮೇನೇಜರ್, "ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನೂ ಬರೆದುಕೊಡಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯ... ಧದ ಉಪನಿಬಂಧನೆಗಳೂ, ಸಾಲ ಪಡೆದು ರಿಜಿಸ್ಟ್ರಾರ್ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯ... ವೆಂದು ವಾಪಸು ಕಳುಹಿಸಿ ಅದನ್ನು ಪುನಃ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾ... ಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ... ಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್, "ಕೊಡಗು" ಮಡಿಕೇರಿ.



12 bore Victor Cartridges Rs. 10/- Per 100

Mahomedally-Noorbhoy,

ARMS & AMMUNITION MART.

321 Abdul Rehman Street.

BOMBAY 3.

28

Printed & published by F. I. Belliappa at "Kodagu" Press M... for "Kodagu" Ltd.

Reg. No. M. [illegible]
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತಯಾ । ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

[illegible]ಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦	[illegible] ತಾರೀಕು ೨೯ ನೇ ಶುಕ್ರವಾರ.	ಸಂಚಿಕೆ ೪[illegible]

Telegrams — "Precious" [partly illegible]

V. Subramaniyer Jeweller.

Telephone — 3145

DIAMOND MERCHANT GOLD & SILVERSMITH.

Deals in all —
SPORTS CUPS in all sizes
MEADALS in up-to-date patterns
CASKETS in elegant styles

Nos. 2 & 3 Kuppumuthu st.,
TRUVATEESWARANPET,
Post Box 423, Triplicane P. O.,
MADRAS.

Deals in all —
GEM SET JEWELS set with Diamonds Rubies etc.,
GOLD ARTICLES of all patterns
SILVER WARE in latest style.

52-26



[illegible] ಆರ್ಡರು ಬರೆದರೆ ಕ್ಯಾಟಲಾಗು [illegible] ಕಳುಹಿಸಲ್ಪಡುವುದು

[illegible] ಕತ್ತಿಗಳು, ಬಚ್ಚೆಗಳು, ತೋಟೆ[illegible] ಇನ್ನೂ ಇತರ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವು.

GOOLAMHUSAIN ALLIBHOY & SONS
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.
24-9

[illegible] ಮಲೇರಿಯಾ ಜ್ವರಕ್ಕೆ.—[illegible] ದಿನವು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ [illegible] ಮತ್ತು [illegible] ಬರುವ ಜ್ವರಗಳಿಗೆ [illegible] ಬಾಟ್ಲಿ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ.—[illegible] ಬಾಟ್ಲಿ 1 3 6ಕ್ಕೆ ರೂ 1—4—0 3—8—0 6—12—0

[illegible]ನಾಶಿನಿ.—[illegible] ಡಜನಿಗೆ 3—8—0

[illegible] ಸಿದ್ಧ [illegible] ಬೆಲೆ [illegible] 2—10—0 [illegible] 2, 3 ಸೀಸೆಗಳಿಗೆ 5—8—0

[illegible]

ಮನೋಲ್ಲಾಸಿನಿ ಕಂಪೆನಿ,
ಮಂಗಳೂರು.

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು [illegible] ಬಾಲಾರ್ಕಮಧುವನ್ನು [illegible] ಮಕ್ಕಳ ರೋಗ



[illegible] ಬಹು ಬೇಗ [illegible] ದಿನ ದಿನಕ್ಕೆ ಆರೋಗ್ಯವೂ [illegible] ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಆನಂದದಿಂದ [illegible] ಸೀಸೆ 1 ಕ್ಕೆ 12 ಆಣೆ [illegible] 9 ಆಣೆ.

ಆರ್ಡರ್ [illegible] ತಕ್ಕದ್ದು [illegible] ಆರ್ಡರುಗಳನ್ನು ಗಮನಿಸುವದಿಲ್ಲ.

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ,
(ಮೈಸೂರು ಸೀಮೆ)

52-20

ಕೊಡಗು.

ಸಂ ೧೯೩೧ನೇ ಇಸವಿ

ಮೇ ತಾ. ೨೯ನೇ ಶುಕ್ರವಾರ.

ಲ್ಯಾಂಕಷಯರಿನ ಬೊಬ್ಬೆ.

ಬ್ರಿಟಿಷ್ ಸರ್ಕಾರದವರು ಕಾಂಗ್ರೆಸಿನವರೊಂದಿಗೆ ರಾಜಿ ಒಪ್ಪಂದಕ್ಕೆ ಬರಲು ಬ್ರಿಟಿಷ್ ಬಟ್ಟೆಯ ಬಹಿಷ್ಕಾರವೇ ಮುಖ್ಯ ಕಾರಣವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಗಾಂಧಿ—ಇರ್ವಿನ್ ಒಪ್ಪಂದವಾದ ಕೂಡಲೆ ಬ್ರಿಟಿಷ್ ಬಟ್ಟೆ ವ್ಯಾಪಾರವು ಹಿಂದೂದೇಶದಲ್ಲಿ ಮೊದಲಿನಂತೆ ಹೆಚ್ಚಾಗುವುದೆಂದು ನಂಬಿದ್ದ ಬ್ರಿಟಿಷ್ ಹತ್ತಿ ಗಿರಣಿಗಳ ಮುಖ್ಯ ಸ್ಥಳವಾದ ಲ್ಯಾಂಕಷಯರಿನವರಿಗೆ ಈಗ ಪೂರಾ ಆಶಾಭಂಗವುಂಟಾಗಿದೆ. ಅವರಿಗೆ ಅತೃಪ್ತಿಯು ಎಷ್ಟರ ಮಟ್ಟಿಗೆ ಉಂಟಾಗಿದೆಯೆಂಬುದು ಅವರು ಕೆಲವು ದಿವಸಗಳ ಹಿಂದೆ ಅಲ್ಲಿಯ ಪಾರ್ಲಿಮೆಂಟಿನ ಕನ್‌ಸರ್ವೇಟಿವ್ ಪಕ್ಷದ ಮೆಂಬರುಗಳ ಒಂದು ಮೀಟಿಂಗಿನಲ್ಲಿ ಮಾಡಿದ ಭಾಷಣಗಳಲ್ಲಿ ವಿಷದವಾಗುತ್ತದೆ.

ಮ್ಯಾಂಚಸ್ಟರಿನ ವ್ಯಾಪಾರಿಗಳ ಸಂಘದ ಪ್ರತಿನಿಧಿಯಾದ ಮಿ. ಡೆಮೆಟ್ರಿಯಾಡಿಯವರು "ಬ್ರಿಟಿಷ್ ಪಾರ್ಲಿಮೆಂಟಿನ ಅಧೀನದಲ್ಲಿರುವ ಇಂಡಿಯಾ ಸರ್ಕಾರದವರು ಹಿಂದೀಯರ ರಾಜದ್ರೋಹದ ಚಳವಳವನ್ನು ಕೂಡಲೆ ಅಡಗಿಸದೆ ಬ್ರಿಟಿಷ್ ಬಟ್ಟೆ ಬಹಿಷ್ಕಾರಕ್ಕೆ ಎಡೆ ಮಾಡಿಕೊಟ್ಟರು. ಇಂಡಿಯಾದ ಐಶ್ವರ್ಯವಂತರಾದ ಗಿರಣಿ ಮಾಲೀಕರು ಈ ಚಳವಳಕ್ಕೆ ದ್ರವ್ಯ ಸಹಾಯ ಕೊಡುತ್ತಾ ತಮ್ಮ ಸ್ವಪ್ರಯೋಜನವನ್ನು ಅಂದರೆ ತಮ್ಮ ಗಿರಣಿ ಬಟ್ಟೆಯ ಮಾರಾಟವನ್ನು ಹೆಚ್ಚಿಸಿಕೊಂಡಿರುವರು. ಆದಕಾರಣ ಇಂಗ್ಲೆಂಡಿನ ಬಟ್ಟೆ ವ್ಯಾಪಾರವು ಬಹು ಮಟ್ಟಿಗೆ ನಿಂತು ಹೋಗಿದೆ. ಬ್ರಿಟಿಷ್ ಕಾರ್ಖಾನೆಯವರಿಗೆ ತುಂಬಾ ನಷ್ಟವುಂಟಾಗಿದೆ. ವ್ಯಾಪಾರದ ಪತ್ತು ಕೆಟ್ಟು ಹೋಗಿದೆ. ಮುಂದಿನ ವ್ಯಾಪಾರದ ಭರವಸೆಯೇ ಇಲ್ಲದ್ದಾಗಿದೆ" ಎಂದು ಹೇಳಿದರು. ಹಿಂದೀಯರ ಸ್ವಾತಂತ್ರ್ಯ ಹೋರಾಟವನ್ನು ರಾಜದ್ರೋಹವೆಂದು ದಬ್ಬಾಳಿಕೆಯಿಂದ ಅಡಗಿಸಲು ಮಾಡಿದ ಹಲವು ತರದ ಯತ್ನಗಳು ಸಫಲವಾಗದೆ ಅಖೈರಿಗೆ ಕಾಂಗ್ರೆಸಿನೊಂದಿಗೆ ಒಪ್ಪಂದಕ್ಕೆ ಬರಬೇಕಾದದ್ದು ಇಂಡಿಯಾದ ಸರ್ಕಾರದವರಿಗೇನೇ ಗೊತ್ತು. ಹಿಂದೀಯರಲ್ಲಿ ರಾಷ್ಟ್ರೀಯ ಭಾವನೆಯು ಎಷ್ಟು ಪ್ರಬಲವಾಗಿ ನಾಟಿ ಹೋಗಿದೆ ಎಂಬದನ್ನೂ, ಅದನ್ನು ಹಿಂಸಾ ಬಲದಿಂದ ನಾಶ ಮಾಡಲು ಸಾಧ್ಯವಿಲ್ಲವೆಂಬುದನ್ನೂ ಕನಸರ್ವೇಟಿವ್ ಪಕ್ಷಕ್ಕೆ ಸೇರಿದ ಮಾಜಿ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಮೊನ್ನೆ ತಾನೇ ಲಂಡನಿನ ತಮ್ಮದೊಂದು ಭಾಷಣದಲ್ಲಿ ಸೂಚಿಸಿರುವರು. ಶಾಂತ ರೀತಿಯ ಪಿಕೆಟರುಗಳ ಮೇಲೆ ಪೋಲೀಸಿನವರ ಲಾಟಿ ಪೆಟ್ಟು, ಮಹಿಳೆಯರ ಮೇಲೆ ಸಾರ್ಜೆಂಟರುಗಳ ಕ...ಂ... ಫ..., ಬೂಟ್ಸುಗಳ ಒತ್ತು, ಶಸ್ತ್ರಹೀನವಾದ ಜನ ಸಮುದಾಯದ ಮೇಲೆ ಮಿಲಿಟರಿಯವರ ಗುಂಡಿನ ಸುರಿ ಮಳೆ ಮುಂತಾದವು ಜನರ ಉತ್ಸಾಹವನ್ನು ಕುಂದಿಸುವುದರ ಬದಲು ಹಿಂಸೂ ಭಂಗ ಚಳವಳಕ್ಕೆ ತುಂಬಾ ಉತ್ತೇಜನ ಕೊಟ್ಟಿತೆಂಬುದು ಆರು ಸಾವಿರ ಮೈಲು ದೂರದಲ್ಲಿರುವ ಲ್ಯಾಂಕಶಾಯರಿನ ಗಿರಣಿ ಮಾಲೀಕರಿಗೇನು ಗೊತ್ತು? ಸತ್ಯಾಗ್ರಹ ಚಳವಳವು ನಡೆಯುತ್ತಾ ಇದ್ದಾಗ ಬಹಿಷ್ಕಾರ ಚಳವಳದಿಂದ ಬ್ರಿಟಿಷ್ ವ್ಯಾಪಾರಕ್ಕೇನೂ ಧಕ್ಕೆ ಉಂಟಾಗಿರುವುದಿಲ್ಲವೆಂತಲೂ, ಬ್ರಿಟನಿನ ಬಟ್ಟೆ ವ್ಯಾಪಾರವು ಎಂದಿನಂತೆಯೇ ಇಂಡಿಯಾಕ್ಕೆ ನಡೆಯುತ್ತಿದೆಯೆಂತಲೂ ಆಗಾಗ್ಯೆ ಇಂಡಿಯಾ ಸರ್ಕಾರದವರು ವಿಮರ್ಶೆಗಳನ್ನು ಪ್ರಕಟಿಸುತ್ತಿದ್ದರು. ಜನರ ಬಹಿಷ್ಕಾರ ಚಳವಳವನ್ನು ಹೀಯಾಳಿಸಲು ಆಗ್ಯೆ ಅಂಥಾ ವರ್ತಮಾನಗಳನ್ನು ಪ್ರಕಟಿಸಿದರೂ, ಈಗ ಲ್ಯಾಂಕಶಯರಿನವರು ಬ್ರಿಟಿಷ್ ಬಟ್ಟೆವ್ಯಾಪಾರವು ಬಹು ಮಟ್ಟಿಗೆ ನಿಂತುಹೋಗಿದೆಯೆಂದು ನಿಜ ಸಂಗತಿಯನ್ನು ಒಪ್ಪಿಕೊಂಡದ್ದು ಆಶ್ಚರ್ಯವೇ ಸರಿ. ಹೊಟ್ಟೆಗೆ ಇಲ್ಲದೆ ಆದಾಗ್ಯೆ ನಿಜ ಸಂಗತಿಯನ್ನು ಮರೆಮಾಚಿ, ಉಂಟೆಂದು ಹೇಳಿಕೊಳ್ಳುವುದರಿಂದ ಉಂಟಾಗುವ ಅನರ್ಥ ಪರಿಣಾಮವನ್ನು ನಮ್ಮ ಬ್ರಿಟಿಷ್ ಸಹೋದರರು ತಡವಾಗಿಯಾದರೂ ಅರಿತುಕೊಂಡದ್ದು ಸಂತೋಷಕರ. ಬಹಿಷ್ಕಾರವೆಂಬ ಸುಲಭ ರೀತಿಯು ನಮ್ಮ ಕೈಯ ಮೇಲೆ ಕೂತು ದರ್ಬಾರು ಮಾಡುತ್ತಿರುವಂಥ ಬಿಳಿಯರ ಸಹೋದರರನ್ನು ಎಷ್ಟರ ಮಟ್ಟಿಗೆ ಕಂಗಿವಂತೆ ಮಾಡಿದೆಯೆಂಬವನ್ನು, ಇನ್ನೂ ಪರದೇಶೀ ಬಟ್ಟೆಯನ್ನು ಧರಿಸುತ್ತಿರುವ ನಮ್ಮ ಹಿಂದೀ ಸಹೋದರ, ಸಹೋದರಿಯರು ಚೆನ್ನಾಗಿ ಅರಿತುಕೊಳ್ಳಬೇಕಾಗಿದೆ. ಹಿಂದೀ ಗಿರಣಿ ಮಾಲೀಕರು ಐಶ್ವರ್ಯವಂತರಾದರೂ, ಅವರು ತಯಾರಿಸುವ ಬಟ್ಟೆಯನ್ನು ಕೊಂಡುಕೊಳ್ಳುವುದರಿಂದ ಆ ಹಣವೆಲ್ಲವೂ ಇಂಡಿಯಾದಲ್ಲೇ ಉಳಿಯುವ ಕಾರಣ ಅದು ಲ್ಯಾಂಕಷಯರಿನ ಬಟ್ಟೆಯನ್ನು ಕೊಂಡುಕೊಳ್ಳುವುದಕ್ಕಿಂತ ಉತ್ತಮವೆಂಬದನ್ನು ಹಿಂದೀಯರು ಅರಿತುಕೊಳ್ಳಬೇಕಾದದ್ದು, ಮುಖ್ಯವೆಂದು ಲ್ಯಾಂಕಷಯರಿನವರ ಅಭಿಪ್ರಾಯವೋ ಏನೋ? ಹೊಟ್ಟೆಗಿಲ್ಲದೆ ಸಾಯುತ್ತಿರುವ ಸಾವಿರಗಟ್ಟಲೆ ಜನರಿಗೆ ಸಹಾಯಮಾಡುವುದಕ್ಕಾಗಿಯೇ ಬಡವರು ಮಾಡಿದ ಕೈನೂಲಿನ ಖಾದಿ ಬಟ್ಟೆಯನ್ನೇ ಉಪಯೋಗಿಸಬೇಕು, ಅದು ದೊರೆಯದಿದ್ದರೆ ಹಿಂದೀಯರ ಗಿರಣಿಗಳಲ್ಲಾಗುವ ಸ್ವದೇಶೀ ಬಟ್ಟೆಯನ್ನು ಕೊಂಡುಕೊಳ್ಳಬೇಕೆಂದು ಕಾಂಗ್ರೆಸಿನವರು ಹೇಳುತ್ತಿರುವದಾಗಿದೆ.

ಸದರಿ ಮಹನೀಯರೇ ಇನ್ನೊಂದು ಕಡೆ ಹೀಗೆಂದಿರುವರು—'ಇಂಗ್ಲೆಂಡಿನ ಹಿತವು ಇಂಡಿಯಾದ ಹಿತಕ್ಕೆ ವಿರೋಧವಲ್ಲ. ಇಂಡಿಯಾ ಸರ್ಕಾರದವರು ವ್ಯಾಪಾರವನ್ನು ಕ್ರಯವಾಗಿ ಕೊಟ್ಟು ರಾಜದ್ರೋಹವನ್ನು ಕೊಂಡುಕೊಳ್ಳುವಂತೆ ತೋರುತ್ತೆ. ಆದರೆ ವ್ಯಾಪಾರವು ಹೋಗಿ ರಾಜದ್ರೋಹವು ನಿಲ್ಲುವುದು. ಗಾಂಧಿ—ಇರ್ವಿನ್ ಒಪ್ಪಂದದಲ್ಲಿ ಪರದೇಶೀ ಬಟ್ಟೆ ಬಹಿಷ್ಕಾರಕ್ಕೂ, ಶಾಂತ ರೀತಿಯ ಪಿಕೆಟಿಂಗಿಗೂ ವೈಸರಾಯರು ಸಮ್ಮತಿಯನ್ನಿತ್ತದ್ದು ತಪ್ಪು. ಬಹಿಷ್ಕಾರವು ರಾಜಕೀಯ ದೃಷ್ಟಿಯಿಂದಾಗಿರಲೀ ಆರ್ಥಿಕ ದೃಷ್ಟಿಯಿಂದಾಗಿರಲೀ ಇಂಗ್ಲೆಂಡಿನವರಿಗೆ ಅದರ ಫಲಿತಾಂಶವು ಒಂದೇ. ಇದರೊಂದಿಗೆ ಈಗ ಇಂಡಿಯಾದಲ್ಲಿರುವ ಪರದೇಶೀ ಬಟ್ಟೆಗಳನ್ನು ಶೇಖರಿಸಿ ಹಿಂದೂಸ್ಥಾನದ ಹೊರಗೆ ಕಳುಹಿಸಿ ವಿಕ್ರಯಿಸುವ ಏರ್ಪಾಡು ನಡೆಯುತ್ತಿರುವುದು ಮತ್ತಷ್ಟೂ ಕಠಿಣ ತರಹದ ಬಹಿಷ್ಕಾರವಾಗಿದೆ. ಇವೆರಡನ್ನೂ ಖಾಯಸಿಗೆ ವಿರೋಧವೆಂದು ನಿಶ್ಚಯಿಸಿ ಅಡಗಿಸಬೇಕು. ಈಗ ಹಿಂದೀಯರು ನಮಗೆ ಹೇಳುವ "ನೀವೂ ನಾವೂ ಸ್ನೇಹಿತರು, ನಮ್ಮ ಸ್ವಾತಂತ್ರ್ಯ ಪಡೆಯಲು ಸಹಾಯಮಾಡಿ, ನಂತರ ನಮ್ಮ ವ್ಯಾಪಾರದ ಚೂರುಗಳನ್ನು ನಿಮಗೆ ಬಿಸಾಡಿ ಕೊಡುವೆವು' ಎಂಬ ಕುಯುಕ್ತಿಯ ಮಾತುಗಳಿಗೆ ನಾವು ಮರುಳಾಗಬಾರದು. ಇಂಡಿಯಾದಲ್ಲಿ ವ್ಯಾಪಾರ ಮಾಡುವ ಹಕ್ಕು ನಮಗಿದೆ. ಹಿಂದೂದೇಶದಲ್ಲಿ ಯಾವ ಸರ್ಕಾರವೇ ಅಧಿಕಾರಕ್ಕೆ ಬರಲಿ ನಮ್ಮ ಈ ಹಕ್ಕನ್ನು ಕಾಪಾಡುವುದು ಪಾರ್ಲಿಮೆಂಟಿನ ಕೆಲಸವಾಗಿದೆ'

ಇಂಗ್ಲೆಂಡಿನ ಹಿತವು ಹಿಂದೂದೇಶದ ಹಿತಕ್ಕೆ ವಿರೋಧ ಬರುವುದಿಲ್ಲವೆಂದು ಬ್ರಿಟಿಷರು ಹೇಗೆ ಕಣ್ಣು ಮುಚ್ಚಿಕೊಂಡು ಹೇಳುವರೋ ತಿಳಿಯದು. ಇಂಡಿಯಾದ ರಾಜಕೀಯವನ್ನು ಬಿಟ್ಟರೂ ಆರ್ಥಿಕ ಸ್ಥಿತಿಯನ್ನಾದರೂ ವೃದ್ಧಿಗೊಳಿಸಲಿಕ್ಕಾಗಿ ಇಲ್ಲಿಯ ಸಾಮಾನುಗಳಿಗೇನೇ ಉತ್ತೇಜನ ಕೊಡಬೇಕೆಂದು ನಡಸುತ್ತಿರುವ ಚಳವಳವನ್ನು ರಾಜದ್ರೋಹವೆಂದು ಅಡಗಿಸಬೇಕೆಂದು ಅವರು ಬೊಬ್ಬೆ ಹಾಕುತ್ತಿರುವುದರ ಅರ್ಥವೇನು? ದೇಶದ ಏಳಿಗೆಗಾಗಿ ಮಾಡುತ್ತಿರುವ ಶಾಂತರೀತಿಯ ಪ್ರಯತ್ನಗಳನ್ನು ಕೂಡ ರಾಜದ್ರೋಹವೆಂದು ಸರ್ಕಾರದವರು ಎಣಿಸುವುದಾದರೆ, ಅಂಥಾ ಸರ್ಕಾರವು ಬದಲಾದ ವಿನಹ 'ರಾಜದ್ರೋಹ'ವು ದೇಶದಿಂದ ಅಳಿಸಲ್ಪಡಲಾಗುವುದಿಲ್ಲವೆಂದರೆ ತಪ್ಪಾಗುವುದೇ? ಬ್ರಿಟಿಷ್ ಬಟ್ಟೆಯ ಬಹಿಷ್ಕಾರವನ್ನು ರಾಜಕೀಯ ಅಸ್ತ್ರವಾಗಿ ಉಪಯೋಗಿಸದೆ, ಆರ್ಥಿಕ ದೃಷ್ಟಿಯಿಂದ ಪರದೇಶೀ ಬಟ್ಟೆಯನ್ನು ಬಹಿಷ್ಕರಿಸಲು ಮಾಜಿ ವೈಸರಾಯರು ಒಪ್ಪಿದ್ದು ತಪ್ಪೆಂತ ಈಗ ಲ್ಯಾಂಕಷಯರಿನವರು ಹೇಳಿಕೊಳ್ಳಬಹುದು. ಆದರೆ ಅಹಿಂಸಾ ತತ್ವದ ಯುದ್ಧವು ಇನ್ನು ಕೆಲವು ಕಾಲ ನಡೆದಿದ್ದರೆ ಅದರ ಪರಿಣಾಮವು ಎಷ್ಟು ಕಠಿಣ ಕಂದದ್ದಾಗುತ್ತಿತ್ತೆಂದು 'ಯುದ್ಧ' ರಂಗದ ಮಧ್ಯದಲ್ಲಿದ್ದ ಲಾರ್ಡ್ ಇರ್ವಿನ್‌ರವರಿಗೆ ಗೊತ್ತು. ತಾಜಾವಾಗಿ ಯುದ್ಧವು ತತ್ಕಾಲ ನಿಲ್ಲಿಸಲ್ಪಡದಿದ್ದರೆ ಲ್ಯಾಂಕಶಯರಿನವರ ಬೊಬ್ಬೆಯು ಮತ್ತಷ್ಟೂ ಜೋರಾಗಿ, ಸೋತು, ಹೆಚ್ಚಿಗೆ ಬೊಬ್ಬೆ ಇಡಲು ಉಸಿರೂ ಸಹ ಕಡಿಮೆಯಾಗಿ ಹೋಗುತ್ತಿತ್ತೆಂಬದು ಅವರಿಗೆ ಇನ್ನೂ ಗೊತ್ತಾಗಿರುವಂತೆ ಕಾಣುವುದಿಲ್ಲ. ಇಷ್ಟರವರೆಗೆ ತಾವು ಹಿಂದೀಯರ ಹಿತಕ್ಕಾಗಿ ಹಿಂದೂದೇಶವನ್ನು ಆಳುತ್ತಿದ್ದೇವೆಂದು ಹೇಳುತ್ತಿದ್ದಂತ ಬ್ರಿಟಿಷರು ಈಗ 'ಇಂಡಿಯಾದಲ್ಲಿ ವ್ಯಾಪಾರ ಮಾಡಲು ತಮಗಿರುವ ಹಕ್ಕನ್ನು ಪಾರ್ಲಿಮೆಂಟಿನವರು ಕಾಪಾಡಬೇಕು.' 'ಸ್ನೇಹಿತರಾಗಿರುವ' ಎಂದು ಹೇಳುವ ಹಿಂದೀಯರ ಕುಯುಕ್ತಿಗಳಿಗೆ ಮರುಳಾಗಬಾರದು ಎಂದು ಸ್ಪಷ್ಟವಾಗಿ ಕೂಗತೊಡಗಿರುವರು. ಸ್ಥಿತಿಯು ಈಗ ಇಷ್ಟರ ಮಟ್ಟಿಗೆ ಬದಲಾಗಿದೆ. ನಿಜ ಸ್ಥಿತಿಯು ಹೊರಬೀಳುತ್ತಿದೆ.

ಬ್ರಿಟಿಷರ ಮನಸ್ಸಿನ ಸ್ಥಿತಿಯು ಇಷ್ಟರ ಮಟ್ಟಿಗೆ ಬದಲಾಗಲು ಮಹಾತ್ಮರ ಸತ್ಯಾಗ್ರಹ ಚಳವಳವೇ ಕಾರಣ. ಅದರಲ್ಲೂ ಸ್ವದೇಶೀ ಪ್ರೀತಿಯೂ, ಪರದೇಶೀ ಬಹಿಷ್ಕಾರವೂ ಮುಖ್ಯ ಕಾರಣ. ಕಳೆದ ವಾರ ಮಹಾತ್ಮ ಗಾಂಧಿಯವರು ಸಿಮ್ಲಾಕ್ಕೆ ಹೋಗಿದ್ದಲ್ಲಿ ಅವರ ಪತ್ನಿಯಾದ ಕಸ್ತೂರಿ ಬಾಯಿಯವರು ವೈಸರಾಯರ ಪತ್ನಿಯವರೊಂದಿಗೆ ಸಂಭಾಷಣೆ ನಡೆಸಿದಾಗ ಲೇಡಿ ವೆಲ್ಲಿಂಗ್ಡನ್‌ರವರು ಕೇಳಿಕೊಂಡ ಮೇರೆ ಅವರಿಗೆ ಸ್ವಲ್ಪ ಖಾದಿ ಬಟ್ಟೆಯನ್ನು ಕಳುಹಿಸಿಕೊಡಲು ಕಸ್ತೂರಿ ಬಾಯಿಯವರು ಒಪ್ಪಿಕೊಂಡರಂತೆ. ಸಾದಾ ಜೀವನದ ಖಾದೀ ಬಟ್ಟೆಯು ವೈಸರಾಯರ ಅರ್ಧಾಂಗಿಯವರ ಶರೀರವನ್ನೇ ಅಲಂಕರಿಸುವದಾದ ಮೇಲೆ ಅದನ್ನುಡದ ಸರಕಾರಿ ಉದ್ಯೋಗಸ್ಥನಿರಲು ಕಾರಣವಿಲ್ಲ. ಆದುದರಿಂದ ಭಾರತ ಮಾತೆಯ ಉದರದಲ್ಲಿ ಜನಿಸಿದ ಪ್ರತಿಯೊಬ್ಬನೂ ಇನ್ನಾದರೂ ಖಾದಿಯನ್ನೇ ಉಪಯೋಗಿಸುತ್ತಾ ಪರದೇಶೀ ಸಾಮಾನುಗಳನ್ನು ದೂರ ಮಾಡಿ, ಹಿಂದೂಸ್ಥಾನದ ಆರ್ಥಿಕ ಸ್ವರಾಜ್ಯವನ್ನು ಸ್ಥಾಪಿಸಲು ಸಹಾಯ ಮಾಡುವರಾಗಿ ಆಶಿಸುತ್ತೇವೆ.

೨೦ನೇ ಶತಮಾನದ ಸಹಗಮನ

(ಮಂ. ಕೆ. ಗಾಂಧಿ)

(ಬೊಂಬಾಯಿ ಕಡೆ ಒಬ್ಬ ಮಹಿಳೆಯು ಸಹಗ[ಮನ] ಮಾಡಿದಳೆಂಬ ವರ್ತಮಾನವನ್ನು ಮಹಾತ್ಮರಿ[ಗೆ] ಕೊಟ್ಟು, ಅವರ ಅಭಿಪ್ರಾಯ ಕೇಳಿದ್ದಕ್ಕೆ ಮಹಾತ್ಮರು ಬರೆದ ಲೇಖನ)

ಪತ್ರಿಕೆಗಳಲ್ಲಿ ಪ್ರಕಟವಾದ ವರ್ತಮಾನವು ... ರದೆಂತಲೂ, ಸದರಿ ಮಹಿಳೆಯು ಖಾಯಿಲೆಯಿಂದಲ್ಲ ... ಯಾವದಾದರೂ ದುರ್ಘಟನೆಯಿಂದಲೋ ಮೃತಳಾಗಿ ... ದೆಂತ ತಿಳಿಸುತ್ತೇನೆ. ಸತಿಯು ಎಂತವಳೆಂತ ನಮ್ಮ ... ಬರು ವರ್ಣಿಸಿರುತ್ತಾರೆ. ಸದರಿ ವಿವರಣೆಯು ... ಪ್ರತ್ಯಕ್ಷದೆ. ಸತಿಯೆಂದರೆ ತನ್ನ ಗಂಡನಲ್ಲಿ ನಿಷ್ಠೆ ... ತು, ಭಕ್ತಿಯುಳ್ಳವಳಾಗಿ ಗಂಡನ ಜೀವಮಾನದಲ್ಲಿ ... ರವೂ ಸ್ವಾರ್ಥತೆ ಇಲ್ಲದೆ ಸೇವೆಯಲ್ಲೇ ತನ್ನನ್ನು ... ರೆತು, ಮನೋವಾಕ್ಕಾಯದಲ್ಲೂ ಪರಿಶುದ್ಧಳಾ... ಸತಿ. ಗಂಡ ಸತ್ತಾಗ ಸಂಗಡಲೇ ಸಾಯುವುದು ... ಕೆಯನ್ನು ಸೂಚಿಸುವುದಿಲ್ಲ. ಆತ್ಮದ ಸ್ವಭಾವದ ... ವಿನೇನೂ ತಿಳುವಳಿಕೆಯಿಲ್ಲವೆಂಬದನ್ನು ನಿದರ್ಶಿಸ... ತ್ಮಕ್ಕೆ ಸಾವಿಲ್ಲ. ಬದಲಾವಣೆಯಿಲ್ಲ. ನಶ್ವರ... ದು ದೇಹವು ಸಾಯುವಾಗ ಸಾಯುವುದಿಲ್ಲ. ಸಂ... ಗದಿಂದ ಬಿಡುಗಡೆಯಾಗುವ ವರೆಗೆ ಅದು ಒಂದ ... ದ ಇನ್ನೊಂದು ದೇಹಕ್ಕೆ ಪ್ರಯಾಣ ಮಾಡುತ್ತಿರು... ದರ ಸತ್ಯತೆಗೆ ಅಸಂಖ್ಯಾತರಾದ ಜ್ಞಾನಿಗಳ ಅದ... ಈಗಲೂ ಅಪೇಕ್ಷೆ ಪಟ್ಟರೆ ಇದರ ಸತ್ಯತೆಯನ್ನು ... ನೋಡಬಹುದು. ಈ ನಿಜಗಳನ್ನು ತಿಳಿದರೆ ಆತ್ಮ... ನ್ಯಾಯಸಮಂಜಸವಾದದ್ದೆಂತ ಹೇಳಲು ಹೇಗೆ ಸಾ...

ಅಲ್ಲದೆ ನಿಜವಾದ ಮದುವೆಯೆಂದರೆ ಬರೀ ... ಸಂಬಂಧವಾಗುವುದಲ್ಲ. ಅದರಿಂದ ಆತ್ಮಗಳ ಐ... ಆಗುತ್ತದೆಯೆಂತ ಅರ್ಥ. ಮದುವೆಯಿಂದ ಬರೀ ದೇಹಗಳ ಸಂಬಂಧವಾಗುವುದಾದರೆ ಗಂಡನನ್ನು ... ಸ್ತ್ರೀಗೆ ಗಂಡನ ಒಂದು ಭಾವ ಚಿತ್ರದಿಂದಲೋ, ... ರಾದ ಪ್ರತಿಮೆಯಿಂದಲೋ ತೃಪ್ತಿಯಾಗಬೇಕು. ... ವು ನಿಷ್ಪ್ರಯೋಜನ ಮಾತ್ರವಲ್ಲ ಕೆಡಕು. ಸಹ ... ಸತ್ತವನನ್ನು ಜೀವಕ್ಕೆ ತರಲು ಸಾಧ್ಯವಂತೂ ಇಲ್ಲ ... ಮನುಷ್ಯರಲ್ಲಿ ಇನ್ನೊಂದು ವ್ಯಕ್ತಿಯನ್ನು ಸಹ ... ಬಿಡುಗಡೆ ಮಾಡಿದಂತಾಯಿತು.

ಸ್ಥೂಲ ದೇಹಗಳ ಮೂಲಕ ಆತ್ಮದ ಐಕ್ಯತೆ... ಕೆಂಬುದೇ ಮದುವೆಯ ಉದ್ದೇಶ. ಮದುವೆಯಿಂದ ... ಐಹಿಕ ಪ್ರೀತಿಯು ಆತ್ಮ ಸಂಬಂಧದ ಮತ್ತು ಸರ್ವ... ದ ಪ್ರೀತಿಯನ್ನು ಸಂಪಾದಿಸಲು ಬರೀ ಮೆಟ್ಟಿಲಾ... ದೆ. ಅದರಿಂದಲೇ ಅನುರಕ್ತವನ್ನು ಪಡೆದ ವಿಧ... ವಳು—

'ದೇವರು ಕೊಟ್ಟನೇ ನನ್ನ ಗಂಡ, ಬೇರೆಯಲ್ಲ" ಎ... ಡಿರುವುದು.

ಇದರಿಂದ ಸತಿಯಾದವಳು—ಮದುವೆಯು ತನ್ನ ... ಯ ಭೋಗಕ್ಕೆ ಇರುವುದಲ್ಲ, ತನ್ನ ವ್ಯಕ್ತಿತ್ವವನ್ನು ... ವ್ಯಕ್ತಿತ್ವದಲ್ಲಿ ಅಡಕಮಾಡಿ, ಸ್ವಾರ್ಥತೆ ಇಲ್ಲದ ಸೇವೆ... ನಡಿಸಲಿರುವ ಅನುಕೂಲ ಎಂತ ಭಾವಿಸುತ್ತಾಳೆ. ... ನ್ನ ಪತಿತ್ವವನ್ನು ಗಂಡನ ಚಿತೆಯಲ್ಲಿ ... ಪದಿ ಸುಸ್ಥಾನವಾದಾಗ ಗಂಡನನ್ನು ಸ್ವೀಕರಿಸಿದ... ತನ್ನ ತ್ಯಾಗ, ವೈರಾಗ್ಯದಿಂದ ಗಂಡನ, ಗಂಡ... ವ ತ್ಯಜಿಸಿಟ್ಟು ದೇಶದ ಸೇವೆಮಾಡುವ ಧ್ಯೇಯವನ್ನು ... ಮನಸ್ಸಿನಲ್ಲಿ ತನ್ನ ಧ್ಯೇಯವಾಗಿಟ್ಟುಕೊಂಡು ನಿದರ್ಶಿ... ತನ್ನ ಐಹಿಕ ಅನುಕೂಲಗಳನ್ನೂ, ಇಂದ್ರಿಯ ಸುಖ... ಜ್ಯೀಕರಿಸುತ್ತಾಳೆ. ಬೇರೆ ಕುಟುಂಬದ ಅನುಕೂಲ... ತ್ತು ತಾಪತ್ರೆಯಗಳ ಗುಲಾಮಳಾಗಲು ... ಯೊಂದು ನಿಮಿಷವನ್ನೂ ತನ್ನ ಜ್ಞಾನವನ್ನು ಹೆಚ್ಚಿ... ಕನ್ನು, ವೈರಾಗ್ಯದಿಂದ ಇಂದ್ರಿಯಗಳನ್ನು ಹತೋ... ಇಟ್ಟುಕೊಳ್ಳಲಿಕ್ಕೆ ಶಕ್ತಿಯನ್ನು ಹೆಚ್ಚಿಸಲಿಕ್ಕೂ ಉ... ಗಿಸುತ್ತಾ, ಪತಿಯ ಶ್ರೇಯಾಲಾಭಗಳಲ್ಲೇ ತಾನೂ ... ವಾಗಿ ಬಿಟ್ಟು ಪ್ರಪಂಚಕ್ಕೂ ತನಗೂ ಭೇದವಿಲ್ಲ ಎಂ... ನೆಯುಳ್ಳವಳಾಗಬೇಕು.

ಅಂಥಾ ಸತಿಯು ಗಂಡ ಸತ್ತಾಗ ವಿಪರೀತ ದು... ರಿಯಾಗದೆ ತನ್ನ ಗಂಡನ ಗುಣಗಳ ಧ್ಯೇಯಗಳೂ ತನ್ನ... ತ್ಯಕ್ಷವಾಗುವಂತೆ ಮಾಡಿ ಗಂಡನ ಯಶಸ್ಸು ಇನ್ನಷ್ಟ... ವಂತೆ ಮಾಡುತ್ತಾಳೆ. ತನ್ನ ಗಂಡನ ಆತ್ಮವು ಸಾ... ವೆಂತಲೂ ಇನ್ನೂ ಶಾಶ್ವತವಾಗಿಯೇ ಇದೆಯೆಂತಲ... ಪುನರ್ವಿವಾಹದ ಆಲೋಚನೆಯನ್ನೇ ಮಾಡುವುದಿಲ್ಲ.

"ನೀವು ವಿವರಿಸುವಂಥ ಸತಿಗೆ ಕಾಮವೇ ಇಲ್ಲ... ದ್ರಿಯ ಸುಖದ ಯೋಚನೆಯೇ ಇಲ್ಲ. ಅವಳಿಗೆ ... ಗಬೇಕೆಂಬ ಆಶೆ ಹುಟ್ಟಲಾರದ. ಅಂಥವಳು ಯಾ... ವೆಯಾಗಬೇಕು" ಎಂತ ವಾಚಕರು ಕೇಳಬಹುದು. ಜವಾಬೇನೆಂದರೆ—ನಮ್ಮ ಈಗಿನ ಹಿಂದೂ ಸಮಾಜದಲ್ಲಿ ... ವೆಯಾಗುವುದೂ,ಬಿಡುವುದೂ, ಹೆಚ್ಚಿನ ಜನರಿಗೆ ಅವ... ತ್ತದಲ್ಲಿಲ್ಲ. ಅಲ್ಲದೆ ಈಗಿನ ವಿಚಿತ್ರ ಕಾಲದಲ್ಲಿ ... ತೆಯನ್ನಿಟ್ಟುಕೊಳ್ಳಲಿಕ್ಕೂ, ಇಂದ್ರಿಯ ನಿಗ್ರಹಕ್ಕೂ...

(೩ನೇ ಪುಟದಲ್ಲಿ ಮುಂದುವರಿದಿದೆ.)

ಕೊಡಗೂ ಕರ್ನಾಟಕವೂ.

...ಡಗಿನಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವು ...ಗಬೇಕೆಂತಲೂ, ಇದು ಸಾಧ್ಯವಾಗದಿದ್ದರೆ ಜವಾ...ರ್ಕಾರದ ಪ್ರಯೋಜನವು ಕೊಡಗಿನವರಿಗೆ ದೊರಕ...ವಾಗುವಂತೆ ಕೊಡಗನ್ನು ಮದ್ರಾಸ್ ಆಧಿಪತ್ಯಕ್ಕೆ ...ತ್ಯೇಕ ಜಿಲ್ಲೆಯಾಗಿ ಸೇರಿಸಬೇಕೆಂತಲೂ ಈ ಸಮ್ಮೇ...ಳನವು ಪಡುತ್ತದೆ."

...ತಾರೀಕಿನ ದಿನ ಕೊಡಗಿನ ಜವಾಬ್ದಾರ ಸಂಘ... ಅಧಿವೇಶನವು ಶ್ರೀಯುತ ಸೇನಗುಪ್ತರ ಅಧ್ಯ... ನಡೆಯಿತು. ಕಳೆದ ವಾರ ಅಧ್ಯಕ್ಷರ ಭಾಷಣದ ...ಗಳನ್ನೆಲ್ಲ ಪ್ರಕಟಿಸಿದೆವು. ಆ ಸಭೆಯಲ್ಲಾದ ... ಗೊತ್ತುವಳಿಗಳಲ್ಲಿ ಸಾಧ್ಯಸಿಯಿದಾದ ಮೇಲಿನ ...ಯೊಂದೇ ಮುಖ್ಯವಾದುದು. ಈ ಗೊತ್ತುವಳಿ ...ಮುಮತದಿಂದ (ಒಬ್ಬಿಬ್ಬರು ವಿರೋಧಿಸಿದರು) ಅಂ... ಈ ಸಭಿಕರನ್ನು ನಾವು ಅಭಿನಂದಿಸಲಾರೆವು. ಇ... ...ವಾಬ್ದಾರ ಸಂಘದ ಅನೇಕ ಅಧಿವೇಶನಗಳಾದ ...ವ್ರತಿಯೊಂದು ಅಧಿವೇಶನದಲ್ಲೂ ಕೊಡಗು ಕರ್ನಾಟ... ...ಕರಣ ತತ್ವವನ್ನೇ ಪ್ರತಿಪಾದಿಸುತ್ತ ಬಂತು. ಬೆಳ... ...ಕಾಂಗ್ರೆಸ್ಸಿನ ದಿನಗಳಿಂದ ಕೊಡಗಿನಲ್ಲಿ ಕರ್ನಾಟಕತ್ವದ ...ಳ್ಳೂಂಟಾಗಿ, ಅವರು ಕರ್ನಾಟಕ ಪ್ರಾಂತ್ಯಸ್ಥಾಪನ ...ರ್ಯನಿರತರಾದರು. ಹೀಗಿದ್ದು ಈ ಸಾರೆ ಇಂತಹ ...ಗೊತ್ತುವಳಿ ಮಾಡಿರುವುದನ್ನು ನೋಡಿದರೆ ಬ...ಹವಾಗುತ್ತದೆ.

"ಕೊಡಗರೆ! ನೀವು ಬೇರೆ ಇರಬೇಕೆನ್ನಿಸಿದರೆ ಗ...ಮು ...ಇರುವಿರಿ" ಎಂದು ಒತ್ತಿ ಹೇಳಿದ ಅಧ್ಯಕ್ಷ ಶ್ರೀ ...ಗುಪ್ತರ ಮಾತನ್ನೂ ನಿರಾಕರಿಸಿ, ಶ್ರೀಯುತ ಟಂಗಟೂ... ...ರವರು ಹೇಳಿದರು.

"...ಟ್ಟು ಹಿಂದೂಸ್ಥಾನದ ಬಿಡುಗಡೆಗಾಗಿ ಈ ದೇಶದವ... ...ಮಾಡಬೇಕು. ಒಟ್ಟು ಹಿಂದೂಸ್ಥಾನಕ್ಕೆ ಸ್ವತಂ... ...ಏನಹ ಈ ದೇಶವು ಸ್ವತಂತ್ರವಾಗುವುದಿಲ್ಲ. ಒ... ...ಉದಾಹರಣೆ ನೆನಪಿನಲ್ಲಿಡಿ. ಬ್ರಿಟಿಷರು ಪ್ರತ್ಯೇಕ ...ಡಲು ಒಪ್ಪುತ್ತಾರೆ. ಆದರೆ ಸ್ವಾತಂತ್ರ್ಯ ಮಾತ್ರ ...ವುದಿಲ್ಲ. ಈ ದೇಶವು ಯೂರೋಪಿಯನ್ ಪ್ಲಾಂಟ...ಗೆ ಅನುಕೂಲವಾಗಿದೆ. ಬೇರೆ ಇಟ್ಟಿರುವುದು ಯೂ...ಪಿಯನರಿಗೆ ಅನುಕೂಲ. ಅದರಿಂದಲೇ ನೀವು ಜಾಗ...ರಾಗಿರಬೇಕೆಂತ ನಾನು ಹೇಳುವುದು. ಸ್ವರಾಜ್ಯ ದೊ...ರೆವಾಗ ನಿಮಗಿರುವ ಹಕ್ಕುಗಳು ಯಾವದೂ ಹೋಗುವು... ...ಚಿಷ್ಟು ಕಂದಾಯ ಹಾಕುವುದಿಲ್ಲ. ಈಗ ಕಾಂಗ್ರೆ... ಭಾಷಾನುಸಾರ ಬೇರೆಬೇರೆ ಪ್ರಾಂತ್ಯಗಳಿವೆ. ...ಡೊರೆತಾಗ ಹಿಂದೂಸ್ಥಾನವು ಭಾಷಾನುಸಾರ ವಿಂ...ಗುತ್ತದೆ. ಆಗ ನೀವು ಕರ್ನಾಟಕಕ್ಕೆ ಸೇರಿಕೊಳ್ಳಲೇ ...ಗುತ್ತದೆ. ಆದರೆ ಒಳಗಿನ ಆಡಳಿತಕ್ಕೆ ಕರ್ನಾಟಕದೊ...ನವು ಪ್ರತ್ಯೇಕ ಪ್ರಾಂತ್ಯವಾಗಿಯೇ ಇರುವಂತೆ ಮಾಡ...ಬಹುದು."

ಎಂಬ ಸಲಹೆಯನ್ನೂ ತಳ್ಳಿ ಹಾಕಿ, ತಮ್ಮ ಕರ್ನಾಟಕ... ...ಕೂಡ ನೆನೆಯದೆ 'ಕೊಡಗಿಗೆ ಜವಾಬ್ದಾರಿ ಸರಕಾರ ...ದಿದ್ದರೆ ಅದನ್ನು ಮದರಾಸಿನ ಒಂದು ಜಿಲ್ಲೆಯನ್ನಾ...ಗಿಸಬೇಕು' ಎಂದವಾಗಿ ಕೊಡಗಿನ ಕನ್ನಡಿಗರು ನಿಶ್ಚ...ಯಿಸಬೇಕಾಗಿದ್ದರೆ ಕರ್ನಾಟಕದ ದೌರ್ಭಾಗ್ಯವನ್ನು ...ಹೇಳೋಣ?

ಕರ್ನಾಟಕದ ನಾಯಕರು.

ಕೊಡಗಿನವರ ಮೇಲೆ ನಾವು ಯಾವ ತರದ ಆಕ್ಷೇಪಣೆ...ನ್ನು ತೆಗೆಯುವುದಿಲ್ಲ. ಅವರ ನಡತೆಯ ನೀತಿಯನ್ನು ...ಅವರೇ ಆಲೋಚಿಸಲಿ. ಅವರ ಅತ್ಮವು ಅವರು ಮ...ದಾರಿಗೆ ಒಪ್ಪಿಗೆ ಕೊಟ್ಟರೆ ನಮ್ಮದೇನೇನೂ ಅಡ್ಡಿಯಿಲ್ಲ. ಆದರೆ ಕರ್ನಾಟಕದ ಸಾರ್ವಜನಿಕ ನಾಯಕರನ್ನು ನಾ...ಕೇಳ ಬಯಸುತ್ತೇವೆ. ನಾಯಕರು ಕನ್ನಡಿಗರಲ್ಲಿ ...ರಾಷ್ಟ್ರಧರ್ಮ ಪ್ರಚಾರ ಮಾಡಲಿಲ್ಲ. ಕನ್ನಡಿಗರ ಕ...ಗೆ ಕರ್ನಾಟಕ ಸಂಸ್ಕೃತಿ ಜ್ಯೋತಿಯ ಬೆಳಕನ್ನು ತೋ...ರಿಸಲಿಲ್ಲ. ಇಂದು ಕೊಡಗು ಮದರಾಸಿ...ನ ಒಂದು ಜಿಲ್ಲೆಯಾಗಿರಬಯಸಬೇಕಾದರೆ ಅವರಿಗೆ ...ಹುದು? ನಮ್ಮ ನಾಡು ಯಾವುದು? ನಮ್ಮ ಹಿರಿ...ಯಾರು?' ಎಂಬ ಪರಿಜ್ಞಾನವೇ ಅವರಿಗಿಲ್ಲವೆಂಬು... ...ವಾಗುತ್ತದಲ್ಲವೆ?

...ವಾರ ಹುಬ್ಬಳ್ಳಿಯಲ್ಲಿ ಕರ್ನಾಟಕದ ಮು... ...ರುವರು. ಕರ್ನಾಟಕ ಏಕೀಕರಣ ಪರಿಷ...ದು. ಅಲ್ಲಿ ಈ ವಿಚಾರವನ್ನು ಕೊಂಚವಾ... ...ರುವರೆಂದೂ, ಮುಖಂಡರು ಎಲ್ಲ ಕನ್ನಡ ನಾ... ...ಚಾರವಾಡಿ ಕನ್ನಡಿಗರಿಗೆ ಅವರ ಕರ್ತವ್ಯವನ್ನು ... ...ವರೆಂದೂ ನಾವು ಹಾರೈಸುತ್ತೇವೆ.

"ವಿಶ್ವಕರ್ನಾಟಕ"

...ವರು ಅವತಾರ ಪುರುಷರು.

...ದಿಂದ ವಿಷನರಿಯಾಗಿ ಬಂದ ಬಾಯಿಸ್ಟ... ...ಮಹಾತ್ಮಾ ಗಾಂಧಿಯವರನ್ನು ಗುರುಗ...ಳಿಸಿ ಹಿಂದೂ ಉಡುಪನ್ನು ಧರಿಸುತ್ತಾ, ಕಲ್ಲ...ರುವ ಲಂಡನ ಸಾಪಕಾಗರರ ಸನ್ನಿಲಿನ...ಲ್ಲಿ ಇಂಗ್ಲೀಷ್ ಭಾಷಾ ಪ್ರೊಫೆಸರಾಗಿರುವರು. ತಮ್ಮಲ್ಲುಂಟಾದ ಈ ಬದಲಾವಣೆಯ ವಿಚಾರವಾಗಿ ಪತ್ರಿಕಾ ಪ್ರತಿನಿಧಿಯೊಡನೆ ಮಾತಾಡುತ್ತಾ ಅವರು ಈ ರೀತಿ ಹೇಳುವರು.

ಪಾಶ್ಚಾತ್ಯ ನಾಗರೀಕತೆಯ ಅನುಕೂಲಗಳನ್ನು ಬಿಟ್ಟು ಮಹಾತ್ಮಾ ಗಾಂಧಿಯವರ ಸುಲಭ ಜೀವನ ಮತ್ತು ಉಡುಪನ್ನು ನಾನು ಅನುಸರಿಸುವುದು ಅನೇಕರಿಗೆ ಆಶ್ಚರ್ಯಕರವಾಗಿ ಕಾಣಬಹುದು. ನಾನು ಹಿಂದೂಸ್ಥಾನದಲ್ಲಿರುವಾಗ ಹಿಂದೀಯರಂತೆ ಬಟ್ಟೆ ಹಾಕಿಕೊಳ್ಳುವುದರಿಂದ ಅನೇಕರು ನನ್ನನ್ನು ಹುಚ್ಚನೆಂದು ಭಾವಿಸುವರು. ಅವರಿಗೆ ನಾನು ಹೇಳುವುದೇನೆಂದರೆ ನಾನು ಉಡುವ ಖಾದಿ ಬಟ್ಟೆಯು ದಟ್ಟಿ ಮತ್ತು ಕಾಶ್ಮೀರ್ ಶಾಲು ಲಂಡನ್ನಿನ ಸುಧಾರಿಸಿದ ದರ್ಜಿಗಳಿಂದ ಮಾಡಲ್ಪಡದಿರಬಹುದು. ಆದರೆ ಹಿಂದೂಸ್ಥಾನದ ಸಾವಿರಾರು ವರ್ಷಗಳ ನಾಗರೀಕತೆಯಿಂದ ಅಲ್ಲಿಯ ವಾಯುಗುಣಕ್ಕನುಸಾರವಾಗಿ ನಿರ್ಮಿಸಲ್ಪಟ್ಟಿದೆ. ಹಿಂದೂಸ್ಥಾನದ ಸ್ಥಿತಿಗತಿಗಳಿಗೆ ಸರ್ವೋತ್ತಮವಾದ ಈ ಉಡುಪನ್ನು ಇಲ್ಲಿ ವಾಸಿಸುತ್ತಿರುವ ಇತರ ಪಾಶ್ಚಾತ್ಯರೂ ಹಾಕಿಕೊಳ್ಳದಿರುವುದಕ್ಕೆ ಅವರ ಜಾತ್ಯಭಿಮಾನವೇ ಕಾರಣವಾಗಿರುತ್ತದೆ. ತಾವು ಹಿಂದೂಗಳಂತೆ ಬಟ್ಟೆಯನ್ನು ಹಾಕಿದರೆ ಹಿಂದೂಗಳು ತಮ್ಮನ್ನು ಗೌರವಿಸುವುದಿಲ್ಲವೆಂದು ಅವರು ತಿಳಿದಿರುತ್ತಾರೆ. ನಾನು ಗಾಂಧಿಯವರ ಶಿಷ್ಯನಾದುದರ ಕಾರಣವು ಈ ಪ್ರಪಂಚದಲ್ಲಿರುವ ಜನರಲ್ಲಿ ತಾತ್ವಿಕ ದೃಷ್ಟಿಯಿಂದ ಮಹಾತ್ಮರು ಅತ್ಯಂತ ಪ್ರತಿಭಾಶಾಲಿಗಳಾದ ಆದರ್ಶಪುರುಷರಾಗಿರುವುದೇ. ಕ್ರೈಸ್ತನು ಪ್ರಸಂಗಿಸಿ ಸಾರಿದ ಸುವಾರ್ತೆಯನ್ನು ಅನೇಕ ಸಂದರ್ಭಗಳಲ್ಲಿ ಮಹಾತ್ಮ ಗಾಂಧಿಯವರು ಸಾರುತ್ತಾರೆ. ಈ ಪ್ರಾಪ್ತ ಸಮಯದಲ್ಲಿ ದೇವರೇ ಮಹಾತ್ಮ ಗಾಂಧಿಯವರ ರೂಪದಲ್ಲಿ ಅವತಾರ ಮಾಡಿರುವರೆಂದು ನಾನು ನಂಬುತ್ತೇನೆ. ಬೊಲ್ಶೆವಿಸಂ (ಅಥವಾ ಹಿಂಸೆ) ಮತ್ತು ಗಾಂಧಿಯವರ ಅಹಿಂಸಾತತ್ವ ಇವೆರಡೂ ಪ್ರಪಂಚದ ಆಧಿಪತ್ಯಕ್ಕಾಗಿ ಈಗ ಹೋರಾಡುತ್ತಿವೆ. ಜನರಲ್ಲಿ ಉಚ್ಚ ನೀಚ ಭಾವವನ್ನು ತೊಲಗಿಸುವುದೇ ಹಿಂಸೆಯ ಉದ್ದೇಶ. ಪ್ರೇಮ ಮತ್ತು ನ್ಯಾಯದ ರಾಜ್ಯವನ್ನು ಸ್ಥಾಪಿಸಲೆಳಸುವ ಮಹಾತ್ಮರು ಈ ಭೇದಭಾವವನ್ನು ಬಿಟ್ಟಿರುತ್ತಾರೆ. ಈಗ ಪ್ರಪಂಚಗಳನ್ನು ದಹಿಸುತ್ತಿರುವ ಹಿಂಸಾತತ್ವ, ವರ್ಣವಿರೋಧ ಪಾಶ್ಚಾತ್ಯ ಮತ್ತು ಪೌರ್ವಾತ್ಯ ನಾಗರೀಕತೆಗಳ ಹೋರಾಟ ಇವುಗಳಿಂದ ಮಾನವ ಜಾತಿಯನ್ನುದ್ಧಾರ ಮಾಡಬೇಕಾದರೆ ಮಹಾತ್ಮ ಗಾಂಧಿಯವರೊಬ್ಬರೇ ಶಕ್ತರು. ಪಾಶ್ಚಿಮಾತ್ಯ ದೇಶಗಳವರು ಗಾಂಧಿಯವರ ಮಹಿಮೆಯನ್ನು ಇನ್ನೂ ಚೆನ್ನಾಗಿ ತಿಳಿದಿಲ್ಲ. ಆದರೆ ಮಹಾತ್ಮಾ ಗಾಂಧಿಯವರು ಇಂಗ್ಲೆಂಡ್ ಮತ್ತು ಅಮೇರಿಕದಲ್ಲಿ ಸಂಚಾರಕ್ಕೆ ಹೋದಾಗ ಆ ದೇಶಗಳವರ ತಪ್ಪು ತಿಳುವಳಿಕೆಯು ಸಂಪೂರ್ಣವಾಗಿ ನಾಶವಾಗಿ ಪ್ರಪಂಚದಲ್ಲೆಲ್ಲಾ ಆಶ್ಚರ್ಯಕರವಾದ ಬದಲಾವಣೆಯಾಗುವುದೆಂದು ನಾನು ಖಂಡಿತವಾಗಿ ಹೇಳಬಲ್ಲೆನು.

"ಒ. ಪ"

ಹಿಂಸೆಯು ಯಾಕೆ ಬೇಡ?

ಸರದಾರ್ ಭಗತ್‌ಸಿಂಗರ ಗೆಳೆಯರಾದ ಶ್ರೀ. ಸುಖದೇವ ಇವರು ಗಲ್ಲಿಗೇರುವ ಮುಂಚೆ ಮಹಾತ್ಮರಿಗೆ ಒಂದು ಅನಾವೃತ ಪತ್ರವನ್ನು ಬರೆದಿದ್ದರಷ್ಟೆ. ಅದು ಮಹಾತ್ಮಜಿಯವರಿಗೆ ಸುಖದೇವರ ಮರಣದ ನಂತರ ತಲುಪಿತು. ಕ್ರಾಂತಿಕಾರರಿಗೆ ಮಹಾತ್ಮರು ಹಿಂಸೆಯನ್ನು ನಿಲ್ಲಿಸೆಂದು ಮಾಡುತ್ತಿರುವ ಬೋಧನೆಯನ್ನು ನಿಲ್ಲಿಸಬೇಕೆಂದೂ ಇಲ್ಲವೇ ಸೆರೆಯಲ್ಲಿದ್ದ ಕ್ರಾಂತಿಕಾರರ ಬಿಡುಗಡೆಗೆ ಪ್ರಯತ್ನಿಸಿ ಏನಾದರೂ ನಿರ್ಣಯಕ್ಕೆ ಬರಬೇಕೆಂದೂ ತಮ್ಮನ್ನು ಚಳುವಳಿಯಿಂದ ಸರ್ಕಾರಕ್ಕೆ ಸಹಾಯ ಮಾಡಿದಂತಾಗುವದೆಂದೂ ಸುಖದೇವರು ಪತ್ರದಲ್ಲಿ ಬರೆದುದಕ್ಕೆ ಉತ್ತರವೆಂದು ಮಹಾತ್ಮಜೀಯವರು ಹಿಂಸೆ ಬೇಡವೆನ್ನುವುದಕ್ಕೆ ಕೆಳಗಿನ ೧೧ ಕಾರಣಗಳನ್ನು ಕೊಟ್ಟಿದ್ದಾರೆ.

(೧) ಕ್ರಾಂತಿಕಾರರ ಚಳವಳವು ನಮ್ಮನ್ನು ನಮ್ಮ ಧ್ಯೇಯದ ಸಮೀಪಕ್ಕೆ ಕರೆದೊಯ್ಯಲಿಲ್ಲ.

(೨) ದೇಶದೊಳಗಿನ ಸೈನ್ಯಖರ್ಚನ್ನು ಹೆಚ್ಚು ಮಾಡಿದೆ.

(೩) ಈ ಚಳವಳದಿಂದ ಒಪ್ಪಿ ವೆಚ್ಚವಾದ ಸಾಧನಗಳ ಮೂಲಕ ಜನರ ಆಸ್ತಿಯನ್ನು ಕಸಿದುಕೊಳ್ಳಲು ಸರ್ಕಾರಕ್ಕೆ ಅವಕಾಶ ದೊರೆತಿದೆ. ನಮ್ಮ ನಾಡನ್ನು ಒತ್ತಿಕ್ಕಬೇಕೆನ್ನುವವರಿಗೆ ತಮ್ಮ ಮುಯ್ಯಿ ತೀರಿಸಿಕೊಳ್ಳಲು ಯೋಗ್ಯ ಕಾರಣವನ್ನು ನಾವೇ ಹೇಳಿಕೊಟ್ಟಂತಾಗಿದೆ.

(೪) ಎಲ್ಲೆಲ್ಲಿ ರಾಜಕೀಯ ಕೊಲೆಗಳಾಗಿರುವವೋ ಅಲ್ಲೆಲ್ಲಾ ಸ್ವಲ್ಪ ಕಾಲದ ವರೆಗಾದರೂ ಜನರು ಹೀನ ಸ್ಥಿತಿಗಿಳಿದಿರುತ್ತಾರೆ.

(೫) ಸಾಮುದಾಯಿಕ ಜಾಗೃತಿಯು ಈ ಚಳವಳದಿಂದ ಆಗಿಯೇ ಇಲ್ಲ.

(೬) ಜನರ ಮೇಲೆ ಈ ಚಳವಳವು ಎರಡು ರೀತಿಯಿಂದ ಕೆಟ್ಟ ಪರಿಣಾಮವನ್ನುಂಟುಮಾಡಿದೆ. ಕೊನೆಯಲ್ಲಿ ಅಧಿಕ ಖರ್ಚಿನ ಭಾರವನ್ನು ಜನರೇ ಸಹಿಸಬೇಕಾಗಿ ಬರುವುದಲ್ಲದೆ ಸರ್ಕಾರದ ಅಪ್ರತ್ಯಕ್ಷ ಕೋಪಕ್ಕೆ ಗುರಿಯಾಗಲೂ ಬೇಕಾಗುವ ಪ್ರಸಂಗವು ಬರುವುದು.

(೭) ರಾಜಕೀಯ ಕೊಲೆಯು ಹಿಂದೂಸ್ಥಾನ ದೇಶದಲ್ಲಿ ಯಶಸ್ವಿಯಾಗಲಾರದು. ಸಂಸ್ಕೃತಿಯು ಪರಂಪರೆಯೋ ರಾಜಕೀಯ ಹಿಂಸೆಗೆ ಪ್ರತಿಕೂಲವಾಗಿದೆಯೆಂಬುವದನ್ನು ಇತಿಹಾಸವು ಹೇಳುತ್ತಿದೆ.

(೮) ಜನಸಮುದಾಯವನ್ನು ತಮ್ಮ ಮಾರ್ಗಕ್ಕೆ ಮನವೊಲಿಸಿ ಕರೆದೊಯ್ಯಲು ಹಿಂಸಾವಾದಿಗಳು ಪ್ರಯತ್ನಿಸುವ ಪಕ್ಷದಲ್ಲಿ ನಮಗೆ ಮಿತಿ ಇಲ್ಲದಷ್ಟು ದೀರ್ಘ ಕಾಲವು ಬೇಕಾಗುವುದು. ವರ್ಗ ಕ್ರಮಣಕ್ಕೇನೇ ಮನವೊಲಿಸಲಿಕ್ಕೆ ಇಷ್ಟು ಹೊತ್ತು ಹಿಡಿದರೆ ಧ್ಯೇಯ ಪ್ರಾಪ್ತಿಗೆ ಅದೆಷ್ಟು ಸುದೀರ್ಘಕಾಲ ಬೇಕಾಗುವದೋ ಏನೋ!

(೯) ಇಷ್ಟೆಲ್ಲಾ ಆಗಿ ಹಿಂಸಾ ಮಾರ್ಗವು ಜನಪ್ರಿಯವಾದರೂ ಮುಂದೆ ಅದು ಕುಸಿದೇಳಲಿಕ್ಕೇ ಬೇಕು. ಪರದೇಶಗಳ ಚರಿತ್ರೆಗಳು ಇದಕ್ಕೆ ಸಾಕ್ಷಿಯಾಗಿವೆ. ಮುಂದೆ ನಾವೇ ಸ್ವಜನಸಂಹಾರಕರಾಗುವ ಸಂಭವವುಂಟು.

(೧೦) ಅಹಿಂಸಾ ಮಾರ್ಗವು ಎಷ್ಟು ಪ್ರಬಲವಾದ ಶಸ್ತ್ರವೆಂಬುದನ್ನು ಹಿಂಸಾ ವಾದಿಗಳು ಇಷ್ಟು ಹೊತ್ತಿಗೆ ಅರಿತಿರಬಹುದು. ಹಿಂಸಾವಾದಿಗಳ ಕೃತಿಗಳೂ ನೋಗಿಗೆ ಅಹಿಂಸೆಯನ್ನು ವೈಹಿಸಿದವರ ಕೃತಿಗಳೂ ಅಡ್ಡ ಬಂದರೂ ಅಹಿಂಸ ಮಾರ್ಗವು ತನ್ನ ಕೃತು ಶಕ್ತಿಯನ್ನು ಜಗತ್ತಿಗೆ ತೋರಿಸಿಯೇ ಇದೆ.

(೧೧) ಕ್ರಾಂತಿಕಾರರ ಹಿಂಸಾ ಮಾರ್ಗವು ಅಹಿಂಸಾಮಯ ಚಳವಳಿಗೆ ಯಾವ ಬಗೆಯಿಂದಲೂ ಬಲವನ್ನುಂಟುಮಾಡಿಲ್ಲ. ಇಷ್ಟೇ ಅಲ್ಲ. ಕೇಡನ್ನೇ ಉಂಟು ಮಾಡಿದೆ. ಸಂಪೂರ್ಣ ಶಾಂತಿಮಯ ಪರಿಸ್ಥಿತಿ ಇದ್ದಲ್ಲಿ ಇದಕ್ಕೂ ಬೇಗನೆ ನಮ್ಮ ಧ್ಯೇಯವನ್ನು ನಾವು ಸಾಧಿಸಿಕೊಳ್ಳಬಹುದಾಗಿತ್ತು.

ಯಂಗ್ ಇಂಡಿಯಾ.

ಕೊಡಗು ಗೌಡ ವಿದ್ಯಾ ಫಂಡಿನ ವಾರ್ಷಿಕ ಮೀಟಿಂಗ್.

ತಾ. 16—5—31 ರಲ್ಲು ಮಡಿಕೇರಿನಾಡು ಅರುವತ್ತೊಕ್ಲು ಗ್ರಾಮದ ಮೂಟೇರ ಮನೆ ಬಳಿ ಬಾಣೆಯಲ್ಲಿ ವ್ಯಕ್ತಿಯಲ್ಲಿ ವಕೀಲರಾಗಿರುವ ಮೆ. ಸೋಣಗೇರಿ ಚಿನ್ನಪ್ಪನವರು ಬಿ. ಎ. ಬಿ. ಯಲ್. ರವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಸಂಘದ ವಾರ್ಷಿಕ ಸಭೆಯು ಜರುಗಿಸಲ್ಪಟ್ಟಿತು. ದೇಶದ ಎಲ್ಲಾ ಭಾಗಗಳಿಂದಲೂ 300 ಕ್ಕೆ ಮೇಲ್ಪಟ್ಟು ಜನರು ಬಂದಿದ್ದರು.

ಮೆ. ಸಿದ್ದಮಲೆ ಸೋಮಣ್ಣನವರು ಸಭಾಧ್ಯಕ್ಷರನ್ನು ಸಭಿಕರಿಗೆ ಪರಿಚಯಗೊಳಿಸಿದರು. ಮೆ. ಮೂಟೇರ ಪೊನ್ನಪ್ಪನವರು ಅಧ್ಯಕ್ಷರನ್ನೂ, ಸಭಾಮಹನೀಯರನ್ನೂ ಆದರದಿಂದ ಬರಮಾಡಿಕೊಂಡು ಸ್ವಾಗತ ಭಾಷಣವನ್ನು ಓದಿದರು. ವಾರ್ಷಿಕ ವರದಿಯನ್ನು ಸಂಘದ ಸೆಕ್ರೆಟರಿಯವರು ಓದಿ ಹೇಳಿದನ್ನು ದೀರ್ಘ ಚರ್ಚೆಯಿಂದ ಸಭೆಯು ಮಂಜೂರು ಮಾಡಿತು. I—3—31 ರಲ್ಲಿ ಕಮಿಟಿಯವರು ನಿರ್ಣಯಿಸಿದಂತೆ ಪ್ರಜೆಗಳವರಲ್ಲಿ ನಿಂತು ಹೋದ ಹಣಕ್ಕೆ ಬಡ್ಡಿ ಮಾಫಿ ಮಾಡಿದ್ದನ್ನು ಸಭೆಯವರಿಂದ ಒಪ್ಪಿಕೊಳ್ಳಲ್ಪಟ್ಟಿತು. ಸಂಘದಿಂದ ಈ ವರೆಗೆ ಕೊಟ್ಟ ಸಾಲಗಳಿಗೆ ಅವರವರ ವಿದ್ಯಾಭ್ಯಾಸ ಮುಗಿದ ಒಂದು ವರ್ಷದ ನಂತರ ಕಮಿಟಿಯವರು ನಿರ್ಣಯಿಸಿದ ಬಾಕಿ ಕಂತುಗಳು ಹಣ ಮರುಪಾವತಿ ಮಾಡಲು ತಪ್ಪಿದಲ್ಲಿ ಅವರು ಹೊಂದಿಕೊಂಡ ಪೂರ್ತಿ ಮೊಬಲಗಿನ ಮೇಲೆ ಹಾಗೆ ಪಾವತಿ ಮಾಡಲು ತಪ್ಪಿದ ತಾರೀಕಿನ ಆರಂಭದಿಂದ ಶೇಕಡ ಏಳರಂತೆ ಬಡ್ಡಿ ವಿಧಿಸಬೇಕಾಗಿಯೂ, ಈ ವರೆಗೆ ಕೊಟ್ಟ ಬಡ್ಡಿಯ ಮೇಲೆ ಯಾವ ಚರ್ಚೆಯೂ ಇರಕೂಡದಾಗಿಯೂ ನಿರ್ಧರಿಸಲ್ಪಟ್ಟಿತು.

ಈ ವರ್ಷದಲ್ಲಿ ಸ್ಕಾಲರ್ ಶಿಪ್‌ಗಾಗಿ 250—ರೂಪಾಯಿಗಳನ್ನು ಮಂಜೂರು ಮಾಡಲ್ಪಟ್ಟಿತು. ಸರಕಾರದ ಸ್ಕಾಲರ್ ಶಿಪ್ ಪಡೆಯುತ್ತವರಿಗೆ ಈ ಮೊಬಲಗಿನಿಂದ ಸ್ಕಾಲರ್ ಶಿಪ್ ಯಾ ಇನ್ನಾವ ರೀತಿಯಿಂದಾಗಲೀ ಹಣ ಮಂಜೂರು ಮಾಡಕೂಡದೆಂತ ತೀರ್ಮಾನಿಸಲ್ಪಟ್ಟಿತು. ಅಲ್ಲದೆ ಸೆಕ್ರೆಟರಿಯವರಿಗೆ 50 ರೂಪಾಯಿ ಬೋನಸ್ ಕೊಡಲು ಮಂಜೂರಾಯಿತು. ಅದನ್ನು ಅವರು ಸ್ತ್ರೀ ವಿದ್ಯಾ ಸಂಘಕ್ಕೆ ಕೊಡಲು ಒಪ್ಪಿರುತ್ತಾರೆ.

ಸ್ತ್ರೀ ವಿದ್ಯಾ ಸಂಘವನ್ನು ಊರ್ಜಿತಗೊಳಿಸಬೇಕಾಗಿ ಮೆ. ಉಳುವಾರನ ಅಪ್ಪಯ್ಯನವರು ಸೂಚಿಸಿದ ಮೇರೆ ಈ ಬಗ್ಗೆ ಮುಂದಿನ ವರ್ಷದಲ್ಲಿ ಕಾರ್ಯಕ್ರಮ ಜರುಗಿಸಲು ಈ ಕೆಳಗೆ ಕಂಡಂತೆ ಒಂದು ಕಮಿಟಿಯು ನೇಮಿಸಲ್ಪಟ್ಟಿತು.

ಪ್ರೆಸಿಡೆಂಟ್ ಮತ್ತು ಸೆಕ್ರೆಟರಿ ಸಹ ಈ ನ ಘನವರೇ ಆಗಿದ್ದು ಕಾರ್ಯ ನಡೆಸತಕ್ಕದ್ದು. ಕಮಿಟಿಯವರು 1. ಮೆ. ಗಳಾರ ಉಳುವಾರನ ಅಪ್ಪಯ್ಯನವರು, 2 ಕುಂಬುಗೌಡನ ಅಪ್ಪಯ್ಯನವರು, 3 ಕೋರನ ದೇವಯ್ಯನವರು, 4. ಕುಂಬಾಡಿ ನಂಜಪ್ಪನವರು, 5. ಪೂಜಾರಿ ಪೂವಯ್ಯನವರು, 6 ಕೋಟಂಬೈಲು ಕಾಳಪ್ಪನವರು, 7 ಸಂಪಾಜೆ ಸಣ್ಣಯ್ಯನವರು, 8 ತೆಕ್ಕಡ ಪೂವಯ್ಯನವರು, 9 ಯಂಕನ ಅಣ್ಣಯ್ಯನವರು, 10 ಚೆಂಬುಮನೆ ನಂಜುಂಡನವರು.

ಮೆ. ಉಳುವಾರನ ಅಪ್ಪಯ್ಯನವರು ಒಂದು ಸಾವಿರ ರೂಪಾಯಿಗಳನ್ನು ಸಂಘಕ್ಕೆ ಕೊಡುವುದಾಗಿ ಬರೆದುಕೊಂಡ ಮೇರೆ ಕಮಿಟಿಯವರು ಅದನ್ನು ಸ್ವೀಕರಿಸಬಹುದಾಗಿತ್ತು, ಎಂದವಾಗಿ ಮೆ. ತೆಕ್ಕಡ ಪೂವಯ್ಯನವರು ಚರ್ಚೆಗೆ ತಂದ ವಿಷಯವನ್ನು ವಾಪಾಸು ತೆಗೆದುಕೊಂಡರು.

ಸಂಘದಲ್ಲಿ ರಕ್ಷ ಹಣದ ಪೈಕಿ ಒಂದು ಸಾವಿರ ರೂಪಾಯಿಗಳನ್ನು ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕಿನಲ್ಲಿ ಠೇವಣಿ ತೀರ್ಮಾನಿಸಲ್ಪಟ್ಟಿತು. ಸದರಿ ದಿನ 52-8-0 ಜಮೆ ಆಯಿತು

9. ಈ ಕೆಳಗೆ ಕಂಡ ರೀತಿ ಕಮಿಟಿಯು ಚುನಾಯಿಸಲ್ಪಟ್ಟಿತು.

ಮೆ. ಗಳಾದ ಬಡ್ಡನ ಮುತ್ತಣ್ಣನವರು ಪ್ರೆಸಿಡೆಂಟ್, ಪೈಕೇರ ಬೋಜಪ್ಪನವರು ವೈಸ್ ಪ್ರೆಸಿಡೆಂಟ್; ಚೆರಿಯಮನೆ ಪೊನ್ನಪ್ಪನವರು ಸಕ್ರೆಟರಿ ಮತ್ತು ಟ್ರೆಜರರ್ ಕೆಕ್ಕಡ ಪೊನ್ನಯ್ಯನವರು ಆಡಿಟರ್.

ಅಲ್ಲದೆ ಕಮಿಟಿ ಮೆಂಬರರು —ಮೆ. ಗಳಾದ 1 ಸಂಪಾಜೆ ಸಂಗ್ಣೈಯ್ಯನವರು, 2. ಕುಂಬುಗೌಡನ ಅಪ್ಪೈಯ್ಯನವರು, 3. ಮೂಟೇರ ಮಂದಣ್ಣನವರು, 4 ಮೂಟೇರ ಪೊನ್ನಪ್ಪನವರು, 5. ಕೈಬಿಲಿ ಐಯ್ಯಪ್ಪನವರು, 6 ದಂಬೇಕೋಡಿ ಅಪ್ಪಚ್ಚನವರು, 7. ಕೆದಂಬಾಡಿ ಸೋಮಪ್ಪನವರು, 8. ಮುಕ್ಕಾಟಿ ಸೋಮಪ್ಪನವರು, 9 ಕೋರನ ಪೆಮ್ಮೈಯ್ಯನವರು, 10. ಯಂಕನ ಮಾದೈಯ್ಯನವರು, 11. ಕೆಕ್ಕಡ ಬೋಪೈಯ್ಯನವರು, 12. ಪಾಂಡನ ದೇವಪ್ಪನವರು, 13 ಚೆಟ್ಟಿನಾಡನ ತಿಮ್ಮೈಯ್ಯನವರು 14 ಉಳುವಾರನ ಕುಶಾಲಪ್ಪನವರು, 15 ಕೋಟಂಬೈಲು ಕಾಳಪ್ಪನವರು, 16 ಮಂದ್ರಿ ಕಾರ್ಯಪ್ಪನವರು, 17. ಪೊಡನೋಳಂಡ ಬಸಪ್ಪನವರು.

ಮೆ. ಕೆಕ್ಕಡ ಅನಂಜೈಯ್ಯನವರು ಕಳೆದ ಮೂರು ವರ್ಷಗಳಿಂದ ತೃಪ್ತಿಕರವಾಗಿ ಸಂಘದ ಪ್ರೆಸಿಡೆಂಟರಾಗಿದ್ದು ಈಗ ನಿವೃತ್ತರಾದದ್ದಕ್ಕೆ ಅವರಿಗೆ ಜನಾಂಗದ ವಂದನೆಯನ್ನರ್ಪಿಸುವ ಠರಾವು ಪಾಸಾಯಿತು.

ಅಧ್ಯಕ್ಷರ ಭಾಷಣವಾದ ನಂತರ ಸಭಿಕರನ್ನು ಸಭಾಧ್ಯಕ್ಷರನ್ನೂ ವಂದಿಸಿ ಸಭೆಯು ಬರಕಾಸ್ತು ಮಾಡಲ್ಪಟ್ಟಿತು.

ಯಸ್. ಚಿಣ್ಣಪ್ಪ ಗೌಡ,
ಅಧ್ಯಕ್ಷರು.

೨ನೇ ಶತಮಾನದ ಸಹಗಮನ.

(2ನೇ ಪುಟದಿಂದ ಮುಂದುವರಿದದ್ದು)

ಯು ಅವಶ್ಯವಿದೆಯೆಂತ ಅನೇಕರು ನಂಬುತ್ತಾರೆ. ಅನೇಕರು ಮದುವೆಯಾಗುವ ಕಾಲದಲ್ಲಿ ಇಂದ್ರಿಯಗಳಿಗೆ ಒಳಗಾಗಿದ್ದರೂ ಕೆಲವು ಕಾಲದ ನಂತರ ಸಂಪೂರ್ಣ ಇಂದ್ರಿಯ ನಿಗ್ರಹವನ್ನು ಸಾಧಿಸಿದವರಾಗಿದ್ದಾರೆಂತಲೂ ಮದುವೆಯಾದ ಸ್ಥಿತಿಯಲ್ಲೇ ಸಂಪೂರ್ಣ ಇಂದ್ರಿಯ ನಿಗ್ರಹಕ್ಕೆ ಅನುಕೂಲವಿದೆಯೆಂತ ಅನುಭವ ಪಟ್ಟವರೂ ಇದ್ದಾರೆಂತ ನನಗೆ ಗೊತ್ತಿದೆ. ನಾನು ಬರೆದ ಸತೀತ್ವವು ಬರೇ ಮನೋರಾಜ್ಯದಲ್ಲಿರುವಂಥಾದ್ದಲ್ಲ. ಈ ನಮ್ಮ ಪ್ರಪಂಚದಲ್ಲೇ ಸಾಧಿಸಬಹುದೆಂಬದನ್ನು ತೋರಿಸಲಿಕ್ಕಾಗಿಯೇ ಈ ಉದಾಹರಣೆಗಳನ್ನು ನಾನು ಕೊಟ್ಟಿರುವುದಾಗಿದೆ.

ಸತಿಯಾಗಿರಲು ಪ್ರಯತ್ನಿಸುವ ಸಾಧಾರಣ ಹೆಂಗಸರು ತಾಯಿಂದಿರಾಗುತ್ತಾರೆಂತ ನಾನು ಒಪ್ಪುತ್ತೇನೆ. ಆದ್ದರಿಂದ ಮೇಲೆ ವಿವರಿಸಿದ ಗುಣಗಳಲ್ಲದೆ ತಮ್ಮ ದೇಶದ ಒಳ್ಳೇ ಸೇವಕರಾಗುವಂತೆ ಮಕ್ಕಳನ್ನು ಸಾಕುವ ವಿಧಾನವನ್ನು ಸಹ ಕಲಿಸಬೇಕು.

ನಾನು ಪತ್ನಿ ಸಂಬಂಧವಾಗಿ ಹೇಳಿದವೆಲ್ಲಾ ಪತಿಗೂ ಅನ್ವಯಿಸುತ್ತವೆ. ಪತ್ನಿಯು ಗಂಡನಿಗೆ ಭಕ್ತಿ ಮತ್ತು ಪ್ರೀತಿಯನ್ನು ಅವಶ್ಯ ತೋರಿಸಬೇಕಾದರೆ ಪತಿಯೂ ಹಾಗೆಯೇ ಪತ್ನಿಯಲ್ಲಿ ಅನನ್ಯ ಪ್ರೀತಿಯುಳ್ಳವನಾಗಿರಬೇಕು. ಪತಿಗೆ ಒಂದು ತರದ ಆಳ್ವಿಕೆಯಾದರೆ ಪತ್ನಿಗೆ ಇನ್ನೊಂದು ತರದ ಆಳ್ವಿಕೆಯೂ ಗಳಿಸಿದಳು. ಆದರೂ ಹೆಂಡತಿಯ ಚಿತೆಯನ್ನು ಗಂಡನು ಏರಿದನೆಂತ ನಾವು ಈ ವರೆಗೆ ಕೇಳಿರುವುದಿಲ್ಲ. ಗಂಡನ ಮರಣವಾದಾಗ ಹೆಂಡತಿಯು ಜತೆ ಸಾಯುವ ಪದ್ಧತಿಯು ಮೂಢತನದಿಂದಲೂ ಮತ್ತು ಗಂಡಸಿನ ಅಂಧ ಅಹಂಕಾರದಿಂದಲೂ ಹುಟ್ಟಿದ್ದೆಂತ ಧಾರಾಳವಾಗಿ ಹೇಳಬಹುದು. ಒಂದಾನೊಂದು ಕಾಲದಲ್ಲಿ ಈ ಪದ್ಧತಿಗೆ ಏನಾದರೂ ಅರ್ಥವಿದ್ದರೂ ಈಗಿನ ಕಾಲಕ್ಕೆ ಸರಿಯಾದ ಪದ್ಧತಿಯಲ್ಲ. ಪತ್ನಿಯು ಪತಿಯ ಗುಲಾಮಳಲ್ಲ. ಅವನ ಸಹ ಧರ್ಮಿಣಿ ಅಂದರೆ ಅವನ ಅರ್ಧಾಂಗಿ, ಸಹಚಾರಿಣಿ ಮತ್ತು ಸ್ನೇಹಿತೆ. ಪತಿಯಂತೆ ಸರೀ ಹಕ್ಕುಗಳಿಗೂ, ಜವಾಬ್ದಾರಿಕೆಗೂ ಬಾಧ್ಯಳು. ಆದ್ದರಿಂದ ಅವರೊಳಗಿನ ಮತ್ತು ಪ್ರಪಂಚಕ್ಕೆ ಸಂಬಂಧಪಡುವ ಅವರ ಜವಾಬ್ದಾರಿಗಳು ಅನ್ಯೋನ್ಯ ಮತ್ತು ಒಂದೇಯಾಗಿರಬೇಕು.

ಆದ್ದರಿಂದ ಸಹಗಮನ ನಿಷ್ಪ್ರಯೋಜನವಾದದ್ದೆಂತ ನನ್ನ ಭಾವನೆ. ಈಗ ನಡೆದದ್ದಾಗಿ ವರ್ತಮಾನ ಬಂದಿರುವುದನ್ನು ಯಾರೂ ಅನುಸರಿಸಬಾರದು. ಅಳಿಯದೆ ಸಾಯಲು ಅವಳಲ್ಲಿದ್ದ ಧೈರ್ಯವನ್ನಾದರೂ ನಾನು ಶ್ಲಾಘಿಸುವುದಿಲ್ಲವೇ ಎಂತ ಕೇಳಬಹುದು. ಮನಃಪೂರ್ವಕವಾಗಿ ಇಲ್ಲ ಎಂತ ಜವಾಬು ಕೊಡುತ್ತೇನೆ. ಕೇಡು ಮಾಡುವವರು ಸಹ ಈ ತರದ ಧೈರ್ಯವನ್ನು ತೋರಿಸುವುದಿಲ್ಲವೇ? ಆದರೂ ಅಂಥವರನ್ನು ಶ್ಲಾಘಿಸಬೇಕಂತ ಯಾರೂ ಈ ವರೆಗೆ ಹೇಳಲಿಲ್ಲ. ಆತ್ಮಹತ್ಯವನ್ನು ನಾನು ಶ್ಲಾಘಿಸಿ ಯಾವಳಾದರೂ ಒಬ್ಬ ಸಹೋದರಿಯನ್ನಾದರೂ ತಪ್ಪು ದಾರಿಗೆ ಹೋಗುವಂತೆ ಮಾಡುವ ಪಾಪವನ್ನು ನಾನ್ಯಾಕೆ ವಹಿಸಿಕೊಳ್ಳಬೇಕು? ಸತೀತ್ವವೆಂದರೆ ಚುಚ್ಚುವ ಪರಮಾವಧಿ. ಸಾಯುವುದರಿಂದ ಈ ಪರಿಶುದ್ಧತೆಯನ್ನು ಹೊಂದಲಾಗುವುದಿಲ್ಲ. ಅದನ್ನು ಪ್ರತಿ ನಿಮಿಷದಲ್ಲೂ ಪ್ರಯತ್ನಿಸಿ ಸಂಪಾದಿಸಿಕೊಳ್ಳಬೇಕಾಗಿದೆ.

ಧ್ವಜ ವಂದನೆ.

ಮೇ ತಾರೀಕು ೩ನೇ ರವಿವಾರ ೮ ಗಂಟೆಗೆ

೧೯೨೩ ರಲ್ಲಿ ನಾಗಪುರದಲ್ಲಿ ಭಾರತೀಯ ರಾಷ್ಟ್ರಧ್ವಜದ ಗೌರವವನ್ನು ಕಾಯಲಿಕ್ಕಾಗಿ ನಡೆದ ಚಿರಸ್ಮರಣೀಯ ಸಂಗ್ರಾಮದ ನಂತರ ಹಿಂದೀ ಜನಾಂಗವೆಲ್ಲವೂ ಏಕಮನಸ್ಸಿನಿಂದ ತಿರಂಗೀ ನಿಶಾನಿನ ಕೆಳಗೆ ಯಶಸ್ವಿಯಾಗಿ ಸಾಗಿದ ಈ ಸತ್ಯಾಗ್ರಹ ಯುದ್ಧವು ಇತಿಹಾಸದಲ್ಲಿ ಇದೇ ಮೊದಲನೆಯದು.

ತಮ್ಮ ತಮ್ಮ ನಿಶಾನೆಗಳ ಸಲುವಾಗಿ ಆಯಾಯ ರಾಷ್ಟ್ರಗಳ ಸ್ತ್ರೀ ಪುರುಷರು ಮಾಡಿದ ಸ್ವಾರ್ಥತ್ಯಾಗದಿಂದಲೇ ಆಯಾಯ ನಿಶಾನೆಗಳಿಗೆ ಉಜ್ವಲತೆಯು ಉಂಟಾಗುತ್ತದೆ. ಅಂಥ ಉಜ್ವಲತೆಯು ಹಿಂದೀ ತಿರಂಗೀ ನಿಶಾನೆಗೆ ದೊರೆತಿದೆ. ಇದನ್ನು ಎಂತಹ ಪ್ರಸಂಗ ಬಂದರೂ ನಾವು ರಕ್ಷಿಸಿ ಮಾಡತಕ್ಕದ್ದಿದೆ.

ದೇಶದಲ್ಲಿ ಶಾಂತತೆಯು ನೆಲೆಗೊಂಡ ನಂತರ ಕರಾಚಿಯಲ್ಲಿ ನಡೆದ ಹಿಂದೂಸ್ಥಾನೀ ಸೇವಾದಲದ ಸಮ್ಮೇಲನದಲ್ಲಿ ದಲದವರು ಈ ನಿಶಾನಿಯ ಕೆಳಗೆ ಅರ್ಪಿಸಿದ ಸ್ವಾರ್ಥತ್ಯಾಗವನ್ನು ನೆನಪು ತಂದುಕೊಡುವುದಕ್ಕಾಗಿಯೂ ಹಾಗೂ ಅದಕ್ಕೆ ರಾಷ್ಟ್ರದ ಅಚಲ ಭಕ್ತಿಯನ್ನು ತೋರಿಸುವುದಕ್ಕಾಗಿ ಏಪ್ರಿಲ್ ತಾ ೨೬ನೇ ದಿನ 'ಅಖಿಲ ಭಾರತ ರಾಷ್ಟ್ರಧ್ವಜ ದಿನ' ವೆಂದು ಆಚರಿಸಬೇಕೆಂದು ಗೊತ್ತುಪಡಿಸಿದರು.

ಈ ದಿನದ ಆಚರಣೆಯ ಸಂಬಂಧ ೧೭ ಪ್ರಾಂತ್ಯಗಳವರು ನಮ್ಮಲ್ಲಿಗೆ ವರದಿಗಳನ್ನು ಕಳುಹಿಸಿರುತ್ತಾರೆ. ೧೬೩ ಜಿಲ್ಲಾ ಮುಖ್ಯ ಪಟ್ಟಣಗಳು ಮತ್ತು ಅನೇಕ ಶಹರುಗಳಿಂದಲೂ ತಮ್ಮ ಹಾಗೂ ತಮ್ಮ ಅಕ್ಕಪಕ್ಕ ಪ್ರದೇಶಗಳಲ್ಲಿಯೂ ನಡೆದ ಆಚರಣೆಯ ಸಂಬಂಧವಾಗಿ ತಿಳಿಸಿರುತ್ತಾರೆ. ಇದು ಆನಂದ ಸಂಗತಿಯೇ ಸರಿ!

ಎಂದಿನಂತೆ ಸೇವಾದಳವು ತನ್ನ ಸಮ್ಮೇಳನಗಳಲ್ಲಿ ಮೇಲಿಂದ ಮೇಲೆ ಗೊತ್ತು ಪಡಿಸಿದಂತೆ ತಿಂಗಳ ತಿಂಗಳ ಧ್ವಜ ವಂದನೆಯನ್ನು ಆಚರಿಸಬೇಕೆಂದು ಆಗ್ರಹ ಮಾಡುತ್ತದೆ.

ಇದೇ ತಾ ೩ನೇ ರವಿವಾರವಾದರೂ ಎಂದಿನಂತೆ ೮ ಗಂಟೆಗೆ ಸರಿಯಾಗಿ ಧ್ವಜ ವಂದನೆಯನ್ನು ಮಾಡಿ, ಅದರ ದೆಸೆಯಿಂದ ತನ್ನ ಭಕ್ತಿಯನ್ನು ತೋರಿ ಸಂಪೂರ್ಣ ಸ್ವಾತಂತ್ರ್ಯ ದೊರೆಯುವ ವರೆಗೂ ರಾಷ್ಟ್ರದ ಕಾಳಗ ಕೇಳಿಬಂದೊಡನೆಯೇ ಉತ್ಸಾಹಶೀಲತೆಯಿಂದ ಈ ನಿಶಾನಿಯ ನೆರಳಿನಲ್ಲಿ ಕಾದಲು ಮನೋನಿಶ್ಚಯವನ್ನೂ ತೋರಿಸತಕ್ಕದ್ದಿದೆ.

ಹುಬ್ಬಳ್ಳಿ, ೨೫-೫-೩೧.

ನಾ. ಸು. ಹರ್ಡೀಕರ,
(ಪ್ರಧಾನ ಕಾರ್ಯದರ್ಶಿ)

(ಸೂಚನೆ—ಧ್ವಜ ವಂದನೆಯು ರಾಷ್ಟ್ರದಲ್ಲೆಲ್ಲಾ ನಿಯಮಿತ ರೀತಿಯಿಂದ ಆಚರಿಸಲ್ಪಡಬೇಕೆಂದು ಅದರ ನಿಯಮಗಳನ್ನು ಕುರಿತು 'ರಾಷ್ಟ್ರಧ್ವಜ'ವೆಂಬ ಪುಸ್ತಕವನ್ನು ಕನ್ನಡ, ಹಿಂದೀ, ಗುಜರಾತಿ ಮತ್ತು ಮರಾಠಿ ಭಾಷೆಗಳಲ್ಲಿ ಪ್ರಕಟಿಸಿದ್ದಾರೆ. ಇದರ ಕಿಮ್ಮತ್ತು ೨ ಆಣೆ ಇದೆ. ಬೇಕಾದವರು ಹುಬ್ಬಳ್ಳಿ ಅಥವಾ ಮುಂಬಯಿ ಸೇವಾದಲದ ಕಚೇರಿಗಳಿಗೆ ಬರೆದು ತರಿಸಿಕೊಳ್ಳತಕ್ಕದ್ದು.)

ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು.

ಕರ್ಣಾಟಕದಲ್ಲಿ ಈಗಾಗಲೇ ಹಲ ಕೆಲವು ಪತ್ರಿಕೆಗಳು ಜನಿಸಿ, ಯತ್ನನಾವಶ್ಯೆಯನ್ನು ಹೊಂದಿರುವುದಾಗಿದೆ. ಅವುಗಳು ತಮ್ಮ ನಾಶ್ಯಕ್ಕೆ ತಕ್ಕುದಾದ ಉತ್ತೇಜನದಿಂದಲೂ, ಚಟುವಟಿಕೆಯಿಂದಲೂ ಕೆಲಸವನ್ನು ನಿರ್ವಹಿಸುವುವಲ್ಲವೆಂದೇ ಹೇಳಬೇಕಾಗುತ್ತದೆ. ಮೊದಲೊಮ್ಮೆ ಮೇಲಿನ ವಿಷಯವು ಕರ್ಣಾಟಕದ ಹಲವರ ಮನಸ್ಸನ್ನಾಕರ್ಷಿಸಿ ಅವನ್ನು ಹಲ ಕೆಲವು ಕಾರ್ಯಗಳನ್ನು ಮಾಡುವಂತೆ ಪ್ರೇರೇಪಿಸುತ್ತಿದ್ದರೂ ಪತ್ರಿಕೆಗೆ ಪರಿಪಾಲನೆ ಎಂಬ ಆಕಾಶವು ಇನ್ನೂ ಮೋಡದಿಂದ ಮುಚ್ಚಿಕೊಂಡಿದೆ. ಅದು ಶುಭ್ರವಾಗಿ ಬೇಗ ದೇಶಬಾಂಧವರನ್ನು ಯಾವಾಗ ಉದ್ದೀಪಿಸುವುದೋ ಯಾರು ಬಲ್ಲರು! ಎಷ್ಟೋ ಪತ್ರಿಕೆಗಳು ಜನಿಸುತ್ತಿರುವವು. ಅವರ ಕರ್ಣಾಟಕದ ದುರ್ದೆಸೆಯಿಂದೇ ಹೇಳಬೇಕು; ಕೆಲವು ತ್ವರಿತದಲ್ಲೇ ಅಸ್ತಮಿಸಿ ಹೊಂದುತ್ತಿರುವವು. ಸುರಿತಿರುವ ನೆನಪಾದರ, ಚಾಲಕರ ಬೆಂಬಲವು ದೊರೆತರೂ ಕೂಡಾ ಹೆಚ್ಚಿನ ಪತ್ರಿಕಾ ಶಿಸುಗಳು ಎದ್ದು ನಿಂತುಕೊಳ್ಳುವಷ್ಟು ಚೈತನ್ಯವುಳ್ಳವುಗಳಾಗುವುದಿಲ್ಲ.

ಇದೇಕೆ ಹೀಗಾಯಿತು? ಸಾಮಾನ್ಯ ಮನುಷ್ಯನಿಗೆ ಪತ್ರಿಕೆಯ ರುಚಿಯು ಇನ್ನೂ ಹತ್ತಲಿಲ್ಲ. ಅದನ್ನೋದುವುದಕ್ಕೋಸ್ಕರ ವೆಚ್ಚ ಮಾಡುವ ಆ ಸಮಯವು ಅವನಿಗೆ ಮುಂದಕ್ಕೆ ಉತ್ತಮ ಫಲಪ್ರಾಪ್ತಕವಾಗುವುದೆಂಬುದನ್ನು ಅವನು ಮರೆತಿರುತ್ತಾನೆ. ಅಲ್ಲದೆ ನವೀನ್ಯಧನಿಯ ರೂಪದಿಂದ ಅದು ಪತ್ರಿಕೆಯೋಜನವನ್ನೂ ಅವನಿಗೆ ತೀರುವಳಿಸುವವರೂ ಇಲ್ಲ. ಹೀಗಾಗಿ ನಮ್ಮ ಕರ್ಣಾಟಕ ಪತ್ರಿಕಾ ಸಂಚಾಲನಾ ಕಾರ್ಯವು ಮುಸುಕಿಗೊತ್ತಿದ್ದಪ್ಪು, ಅವನತಿಯ ಕಡೆಗೆ ಇಳಿಕೆ ನೋಡುತ್ತಿದೆ.

ವರ್ತಮಾನ ಪತ್ರಿಕೆಗಳ ಓದ ವಿಕೆಯಿಂದ ದೊರೆಯುವ ಲಾಭಗಳನ್ನು ಆಂಗ್ಲೇಯರಲ್ಲಿ ಅಬಾಲವೃದ್ಧರೆಲ್ಲರೂ ಸಂಪೂರ್ಣ ಮನಗಂಡಿರುವರು. ಪತ್ರಿಕಾವಾಚನವು ಅವರ ದಿನನಿತ್ಯದ ಅಭ್ಯಾಸಗಳಲ್ಲಿ ಒಂದಾಗಿ ಹೋಗಿರುತ್ತದೆ. ಎಂದ ಮೇಲೆ ರಾಷ್ಟ್ರಾಭಿವೃದ್ಧಿಗೆ ಕುಂದೇನು?

ಆಂಗ್ಲೇಯರಲ್ಲಿ ಪ್ರಬಲವಾದ ಸ್ವಾತಂತ್ರ್ಯದ ಬೆಳಕು ಉಜ್ವಲವಾಗಿ ಬೆಳಗುತ್ತಿದ್ದು, ಇತರ ದೇಶಗಳ ಹರಿಯುತ್ತಿರಲು ಕಾರಣವೇನು? ಅಲ್ಪ ಜನ ಸಂಖ್ಯಾಕರಾದ ಅವರ ಜನಾಂಗವು ಬಹು ಸಂಖ್ಯಾಕರಾದ ನಮ್ಮ ಮೇಲೆ ಧಿಕಾರವನ್ನು ತೋರಿಸಿ ಮೆರೆಯಲು ಕಾರಣವೇನು? ಸ್ವಾಮಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನಗಳೆಂಬ ಉಚ್ಚತರ ಮತ್ತು ಉಚ್ಚತಮವಾದ ಗುಣಗಳು ಅವರ ಸ್ವಭಾವದಲ್ಲಿ ನೆಲೆಗೊಂಡಿರಲು ಕಾರಣವೇನು? ವ್ಯಾಪಾರ ವ್ಯವಹಾರಗಳಲ್ಲೂ, ಬುದ್ಧಿ ಕುಶಲತೆಗಳಲ್ಲೂ ಅವರನ್ನು ಅಗ್ರಗಣ್ಯರನ್ನಾಗಿ ಮಾಡಿದ ಆ ಯಂತ್ರವಾವುದು? ಬರೇ ಲೋಕಾಚಾರ ಜ್ಞಾನ ಪತ್ರಿಕಾವಾಚನದಿಂದ ಗಳಿಸಿದ ವಿವಿಧ ಶಿಕ್ಷೆಯು ಅವರ ಅದೊಂದು ವಾಸನೆ. ಅಲ್ಲದೆ ಪುಸ್ತಕದ ವ್ಯಾಪಾರಗಳು ಅವರಿಗೆ ಶ್ರೇಯಸ್ಸನ್ನುಂಟುಮಾಡಲಿಲ್ಲ. ಪತ್ರಿಕೆ ಪ್ರಚಂಡ ಕಾರ್ಯ ಕಲಾಪಗಳ ಹೆದರಿಕೆ ಇದ್ದುದರಿಂದಲ್ಲ ಸರ್ಕಾರವು ಆರ್ಡಿನೆನ್ಸುಗಳನ್ನು ಮುದ್ರಣಾಲಯಗಳ ಮೇಲೆ ಹೇರುತ್ತದೆ. ಆಂಗ್ಲೇಯರಲ್ಲಿ ಎಂಥಾ ದರಿದ್ರನೇ ಇರಲಿ—ವರ್ತಮಾನ ಪತ್ರಿಕೆಗಳನ್ನು ಓದದಿಲ್ಲ. ಕೂಲಿಯಾಳಿನಿಂದ ಹಿಡಿದು ಅರಸನ ವರೆಗೂ ಎಲ್ಲರೂ ಪತ್ರಿಕೆಗಳ ಮಧ್ಯೆ ಕಾಲ ಕಳೆಯುತ್ತಿರುವರು. ಪತ್ರಿಕಾವಾಚನವಲ್ಲ—ಪಠನೆಯೇ ಅವರ್ನು ಚಟ! ಇದಕ್ಕೆ ಅವರ ರಾಷ್ಟ್ರೀಯ ಭಾವನೆಯೂ ಧಾರಾಳ ಸಹಾಯವನ್ನೀಯುತ್ತದೆ. ಆದರೆ ಕರ್ಣಾಟಕದಲ್ಲಿ ಇಂದು ತಿಳಿಯದವನಿಗೆ ವರ್ತಮಾನ ಪತ್ರಿಕೆಗಳೆಂದರೇನೆಂದೂ ತಿಳಿಯದು, ಮಾತ್ರವಲ್ಲದೆ ಅದೇನೆಂದು ತಿಳಿಯಬೇಕೆನ್ನುವ ಕುತೂಹಲವಿರುವ ಜನರೂ ಕೂಡಾ ಅವರಲ್ಲಿಲ್ಲ. ಹೋಗಲಿ! ಅಲ್ಪ ವಿದ್ಯಾಸಂಪನ್ನರಾದರೋ? ಅವರು ಪತ್ರಿಕೆಗಳ ಓದುವಿಕೆಯನ್ನು ಸಂಪೂರ್ಣ ಅಲಕ್ಷ್ಯರಾಗಿಯೇ ಇರುವರು. ಏಕೆ? ಜ್ಞಾನಾಭಿವೃದ್ಧಿಯನ್ನು ಪಡೆಯಲು ಎಳ್ಳಷ್ಟೂ ಕುತೂಹಲವಿಲ್ಲದ್ದು. ಇದರ ಗೋಜಿಯಾದರೂ ಏಕೆ? ಕಲಿತವರನ್ನೇ ನೋಡುವ. ಇವರು ಯತ್ನಿಸುವವರೂ ಇದ್ದಾರೆಂದರೆ ಅದೊಂದು ಅತಿಶಯೋಕ್ತಿಯೇ! ಇನ್ನು ಸುಶಿಕ್ಷಿತ ವರ್ಗದವರ ಪಾಡಾದರೂ ಆಂಗ್ಲ ಪತ್ರಿಕೆಗಳಲ್ಲದೆ ಕನ್ನಡ ಪತ್ರಿಕೆಗಳ ಚಂದಾದಾರರಾಗುವುದೆಂದರೆ ಅವರಿಗೆ ಕೀಳ ಮಾನವೆಂದೇ ಭಾವನೆ. ಕನ್ನಡವನ್ನು ಶಾಲೆಗಳಲ್ಲಿ ಕಲಿತು ಎಕ್ಕಿಬಿಟ್ಟೆವಲ್ಲಾ ಎಂಬ ಪಶ್ಚಾತ್ತಾಪ ಪಡುವವರಾದರೂ ಏಕೆ ಇಲ್ಲ? ಹೀಗಾಗಿ ಕನ್ನಡ ವಾಙ್ಮಯ ಪಕ್ಷಿಯು ರೆಕ್ಕೆ ಕಿತ್ತಿಸಿಕೊಂಡು ಹಾರಾಡಲಾರದೆ ಅಲ್ಲದೆ ಕಣ್ಣುಕಟ್ಟಿ ಅಲ್ಲೇ ಮುದುಡಿಕೊಂಡು ಬೀಳುವ ಸಂಗವು ಒಂದು ನಿಂತಿದೆ. ಆದ ಮೇಲೆ ಕರ್ಣಾಟಕ ಪತ್ರಿಕೆಗಳು ಸ್ಥಿರವಾಗಿ ನಿಲ್ಲಲು ಅವಕಾಶವಾದರೂ ಎಲ್ಲಿ?

ಒಬ್ಬರೊಳಗಣ ಪ್ರಸ್ತುತದ ಸಂಕುಚಿತ ಸ್ವಭಾವವು ಕ್ಷೀಣ ವಿಕಾಸ ಹೊಂದಿ, ಅವರು ಶುದ್ಧಶುದ್ಧವೆಂದರೇನೆಂದು ಯಾವ್ಯಾಯಗಳೆಂದರೆಂತು? ಲೋಕ ವ್ಯವಹಾರವೆಂದರೇನು ಗಿದೆ? ತಾನು ಈ ಜೀವನ ಸಾಗರದಲ್ಲಿ ಧಾವಿಸುತ್ತಿರುವದರೂ ಎಲ್ಲಿಗೆ? ಸ್ವಜನರಿಗಾಗಿ, ಸ್ವದೇಶಕ್ಕಾಗಿ ತಾನೆಷ್ಟು ಕಾರ್ಯಗಳ ಭಾರವನ್ನು ಹೊತ್ತುಕೊಳ್ಳಬೇಕು? ಎಂಬ ಮೇಲಾದ ವಿಷಯಗಳನ್ನು ವಿವೇಚನೆಯಿಂದ ತಿಳಿಯಬೇಕಾದರೆ, ಮೊದಲಾಗಿ 'ನಾಡಿಗರಲ್ಲಿ ಸುಶಿಕ್ಷಿತರಾದವರಿಗೆ ಜನದ ಜೀವಾಳದ ಅರಿವು ಉಂಟಾಗಬೇಕು. ಅವರಿಂದ ಹಿತೋಪದೇಶಗಳು ಸಾಹಿತ್ಯ ಪ್ರಚಾರದಿಂದ ಎಲ್ಲರಲ್ಲಿ ಎಚ್ಚರಿಕೆ ಉಂಟಾಗಬೇಕು. ನಮ್ಮ ಸಮಾಜದ ಹೃದಯದ ಸಂಕುಚಿತ ಸ್ವಭಾವವು ನೀಗಿ ವಿಶಾಲವಾಗಬೇಕು. ವಿಶಾಲಮತದ ಮನುವೃತ್ತಿ ಸಂಕೋಚವನ್ನು ಹೋಗಲಾಡಿಸಿ ದೂರದೃಷ್ಟಿಯನ್ನೀಯಬೇಕು. ಹೀಗೆ ಪಕ್ಷದಲ್ಲಿ ಮತ್ತೇನುಳಿಯಿತು? ಕರ್ಣಾಟಕದ ಉದ್ಧಾರವೇ ಆಯಿತು.

ಇದಕ್ಕಾಗಿ ಎಲ್ಲರೂ ಪತ್ರಿಕೆಗಳನ್ನೋದುವ ಅಭ್ಯಾಸವನ್ನು ಮಾಡಬೇಕು. ಮಕ್ಕಳು ಮನೆಗಳನ್ನು ಕೂಡ ಆ ಮನದಲ್ಲಿ ಎಚ್ಚರಗೊಳಿಸಿ ಎವೆಯುಸ್ತುವ ಸಂಗತಿಗಳನ್ನು ಹಿಡಿದು ಹೇಳಿ ಅವರನ್ನು ಮುಂದುವರಿಸಬೇಕು. ಪ್ರತಿ ಶಾಲಾ ವಿದ್ಯಾರ್ಥಿಯೂ ಪತ್ರಿಕೆಗಳನ್ನೋದಬೇಕು. ಅಲ್ಲದೆ ವಿದ್ಯಾನಂತರವೂ ನಿರಂತರವಾಗಿ ಓದುವ ಉತ್ಸಾಹ ಪಡಬೇಕು. ಎಂದರೆ ಮಾತ್ರ ಜನಾಂಗದ ಜಾಗೃತಿಯು ಬೇಗನೆ ಆಗಿಯೇ ಆಗುವುದು.

ಆ ಪ

ರಬ್ಬರ್ ಮೋಹರುಗಳು.

ನೀವು ಅಪೇಕ್ಷಿಸುವ ಯಾರತದ್ದೂ ಮಾಡರಿಯಲ್ಲಿ ತಯಾರಿಸಿ ಕೊಡಲಾಗುವವು.

ಮೇಲ್ಕಂಡ ಸಾಮಾನುಗಳಲ್ಲದೆ ಕನ್ನಡಿಯ ನಕ್ಷೆ ಬೋರ್ಡುಗಳು ಹಾಫ್ ಟೋನ್ ಬ್ಲಾಕ್ ಮನೋಗ್ರಾಮ್ ಮೋಹರು, ಚಂದ್ರಕಾಂತ ಶಿಲೆಯ ಪದಕಗಳು, ಉಂಗುರಕ್ಕಿಡುವ ಬಹು ಅಂದವಾದ ಸಣ್ಣ ಕಲ್ಲುಗಳು ಇತ್ಯಾದಿ

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
12—10 ಮಂಗಳೂರು, ದ ಕನ್ನಡ

ಯಾ

ಏಜಂಟ್ **ಯಸ್. ಎ ನ್. ಪೊನ್ನಪ್ಪ**
ಮಡಿಕೇರಿ.

ವರ್ತಮಾನ ಸಂಗ್ರಹ.

ಒಳ ದೇಶ.

... ಯಂಡ ಕೆ. ಸೋಮಣ್ಣನವರು ಬಿ ಯಸ್ ... 1ನೇ ಭಾಗದಲ್ಲಿ ಇಂಗ್ಲೀಷಿನಲ್ಲಿ ಪಾಸಾಗಿರು ... ಹರ್ಷಿಸುತ್ತೇವೆ.

... ದೇಶದ ಹಲವು ಕಡೆಗಳಿಗೆ ಮಳೆ ಎದ್ದಿದೆ ... ದವಸಗಳಿಂದ ಮೋಡವು ಕವಿದುಕೊಂಡು ಮಳೆ ... ಕ್ಕೆ ಸಂಭವವಾಗುವಂತೆ ಕಾಣುತ್ತಿದೆ.

... ಇಂಜಿನೀಯರಿಂಗ್ ಕಾಲೇಜಿನಲ್ಲಿ ಓದುತ್ತಿ ... ಗಣಪತಿಯವರು ತಮ್ಮ ಕಡೇ ವರ್ಷದ ... ತಮ್ಮ ಶಿಕ್ಷಣವನ್ನು ಮುಗಿಸಿದ ವರ್ತ ... ಸಂತೋಷಪಡುತ್ತೇವೆ.

... ದಲ್ಲಿ ವಿರಾಜಪೇಟೆಯಲ್ಲಿ ಮನೆಯಿಂದ ... ಯಿಂದಲೂ ಮರಕೇರಿಯಲ್ಲಿ ಗಣಪತಿ ... ಹೊಂಬಿಕೊಪ್ಪಲು ಕಡೆಯಿಂದ ಬರುವರು ... ಮೃತರಾದರೆಂತಲೂ, ಪ್ಲೇಗಿನಲ್ಲಿ ... ಪ್ಲೇಗು ಅಂಟಿದೆಯೆಂತಲೂ, ಇಲಿಗಳು ಸಾಯುವುದು ... ದೆಯೆಂತಲೂ ತಿಳಿಯುತ್ತೇವೆ.

... ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಕಳೆದ ವರ್ಷ ... ತೇರ್ಗಡೆಯಾದವರಲ್ಲದೆ ಸೋಮವಾರಪೇಟೆಯ ಮ. ಎನ್ ... ಪ್ಪನವರು ಪೂರ್ತಿಯಾಗಿಯೂ ಮೇ ನಾಪನ ... ಬೆಳ್ಳಿಯಪ್ಪನವರು 1ನೇ ಭಾಗದಲ್ಲಿಯೂ ಮೇ ಬೆಂಗ್ರಾಂಡ ... ಕಾರ್ಯಪ್ಪನವರು 2ನೇ ಮತ್ತು 3ನೇ ಭಾಗಗಳಲ್ಲಿ ... ರ್ಣರಾಗಿರುವರೆಂದು ತಿಳಿಯುತ್ತೇವೆ.

... ಯಲ್ಲಿ ಪ್ಲೇಗಿನ ಗಲಾಟೆಯು ಕಡಿಮೆಯಾಗದ ... ಸೆಂಟ್ರಲ್ ಹೈಸ್ಕೂಲು ಈ ಮೊದಲು ಪ್ರಕಟಿ ... ಜೂನ್ 1ರಲ್ಲಿ ತೆರೆಯಲ್ಪಡುವದಿಲ್ಲವೆಂತಲೂ, ಸಿವಿ ... ಸರ್ಜನರವರ ಮುಂದಿನ ನೋಟೀಸು ಬರುವ ವರೆಗೆ ... ಮುಚ್ಚಲ್ಪಡುವದೆಂತಲೂ ಹೆಡ್ಮಾಸ್ಟರವರು ತಿಳಿಸಿರುತ್ತಾರೆ.

ಕೊಡಗು ಅಂಜುಮನ್ ಇತಿಹಾದ್ ಇಸ್ಲಾಮ್ ಸಂಘ ... ನೇ ಮಹಾಸಭೆಯು ಈ ತಾ 26ರಲ್ಲಿ ವೀರಾಜಪೇಟೆ ... ಲ್ಲಿ ಮಿ. ಯಸ್ ಎ ವಹಾಬ್ ಸಾಹೇಬ್ ಬೊಂಬಾಯಿ ಯಂ ... ಎಲ್. ಟಿ. ಯಂ. ಆರ್. ಎ ಯಸ್ ರವರ ಅಧ್ಯಕ್ಷತೆ ... ಲ್ಲಿ ಬಹು ಉತ್ಸಾಹದಿಂದ ನಡೆಯಿತೆಂದು ತಿಳಿಯಬರು ... ದೆ.

... ಮತ್ತು ವೈಲಾಸ್ಪುರ ಸೊಸೈಟಿಗಳು ಸ್ವಾ ... ವಾಗಿ ಕೆಲಸ ಮಾಡದ್ದರಿಂದ ಮೇಲ್ಕಂಡ 2 ಸೊಸೈಟಿಗಳ ... ರಿಜಿಸ್ಟ್ರೇಷನನ್ನು ವಜಾಮಾಡಿ, ... ರು ಸೊಸೈಟಿಯ ಸಾಲ ... ಗಳನ್ನು ... ರು ಸೊಸೈಟಿಗೂ, ವೈಲಾಸ್ಪುರ ಸಾ ... ಸಾಲಮೂಲಗಳನ್ನು ... ಸೊಸೈಟಿಗೂ ಸೇರಿಸ ... ಲಾಗಿ ತಿಳಿಯ ಬರುತ್ತದೆ.

... ಕೋಶೆಯ ವಿಷಯ ರಿಟ್ರೆಂಚ್ಮೆಂಟ್ ಕಮಿ ... ಟಿಯವರಿಗೆ ಸೂಚನೆಗಳನ್ನು ಕೊಡಲು ಜನಸಮುದಾಯದ ... ಅಭಿಪ್ರಾಯ ತೆಗೆದುಕೊಳ್ಳುವುದಕ್ಕಾಗಿ ತಿಗ್ಗಟ್ಟುನಾಡು ತಾ ... ಲೋಕಲ್ ಕೌನ್ಸಿಲು ಮೆಂಬರುಗಳು ಈ ತಾ 31ರಲ್ಲಿ ಗೋ ... ಕೊಪ್ಪಲಲ್ಲೂ, ಜೂನ್ ತಾ 1ರಲ್ಲಿ ಪೊದಿಕೇರಿಯಲ್ಲಿ ... ಮತ್ತು, ತಾ 2ರಲ್ಲಿ ಶ್ರೀಮಂಗಲದಲ್ಲಿಯೂ ತಾ 3ರಲ್ಲಿ ಪೊ ... ನ್ನಂಪೇಟೆಯಲ್ಲಿಯೂ ಪಬ್ಲಿಕ್ ಮೀಟಿಂಗುಗಳನ್ನು ನಡೆಸು ... ರೆಂದು ತಿಳಿಯಬರುತ್ತದೆ.

ಈ ತಾ ... ಸೋಮವಾರ ... ನಾಡು ಮತ್ತು ... ನಾಡುಗಳ ಕಂಬಟ್ಟಿ ಹೊಳೆಯಲ್ಲಿ 150 ಕ್ಕಿಂತ ಹ ... ಜನರು ಕಾಕೋಟು ಪರಂಬು ಬಳಿ ಸೇರಿ ನಿಷಾನಿಷೇಧ ... ಮದುವೆ ಮುಂತಾದುಗಳಲ್ಲಿ ಖರ್ಚು ಜೋತೆ ಮಾಡುವಿಕೆ, ಸತ್ತ ... ದಿನಗಳ ಮಾಡ ... ವುದನ್ನು ಮಿತ ... ಮುಂತಾ ... ದ ವಿಷಯಗಳನ್ನು ಕುರಿತು ಚರ್ಚಿಸಿದರೆಂತಲೂ, ಎಲ್ಲಾ ಭಾಗ ... ಗಳ ಜೋಲೆಯರು ಸೇರದ ಕಾರಣ ತೀರ್ಮಾನವನ್ನು ಇನ್ನೊಂ ... ದು ಮೀಟಿಂಗಿಗೆ ಇಡಲಾಯಿತೆಂತಲೂ ವರ್ತಮಾನ.

ಕೊಡಗಿನ ಸತ್ಯಾಗ್ರಹ ಕಮಿಟಿಯವರು ಕಾಂಗ್ರೆಸ್ ... ಪ್ರಚಾರ ಕೆಲಸಕ್ಕಾಗಿ ಈ ತಾ. 23ರಲ್ಲಿ ಕಾಕೋಟು ಪರಂಬಿ ... ನಲ್ಲಿಯೂ, ತಾ 24ರಲ್ಲಿ ಪಾಲಂಗಾಲೆಯಲ್ಲಿಯೂ, ಮತ್ತು ತಾ. ... ರಲ್ಲಿ ಕುಂಬಳಗೇರಿ ಗ್ರಾಮದಲ್ಲಿಯೂ ಸಾರ್ವಜನಿಕ ಮೀ ... ಟಿಂಗುಗಳನ್ನು ನಡಿಸಿದ್ದರಲ್ಲಿ ಶ್ರೀಯುತರುಗಳಾದ ಎ ಪಿ ರಾ ... ಪ್ಪನವರು, ಕೆ. ಪಿ ಚಿಣ್ಣಪ್ಪನವರು, ಅಬ್ದುಲ್ ಗಫೂರ್ ... ರವರು (ಕಾಕೋಟು ಪರಂಬಿನಲ್ಲಿ ಮಾತ್ರ) ಮತ್ತು ... ಪಿ. ಬೆಳ್ಯಪ್ಪನವರು ಭಾಷಣಗಳನ್ನು ಮಾಡಿದರು ಇದ ... ವಿವರವು ಬರುವ ವಾರ ಪ್ರಕಟಿಸಲಾಗುವುದು.

ಕಳೆದ ಬಿ. ಎ ಪರೀಕ್ಷೆಯಲ್ಲಿ ಮಿ ಗಳಾದ ಕಾಳಮಂ ... ಡ ಚಿಟ್ಟಿಯಪ್ಪನವರು, ಬೇಯಂಡ ದೇವಯ್ಯನವರು, ಎ ಕೆ ... ಸದಾಶಿವರಾವ್ ರವರು, ಪುಲಿಯಂಡ ಬಿ ಐಯ್ಯಪ್ಪನವರು ಮ ... ತ್ತು ಮನೆಯಪಂಡ ಯಂ ಪೊನ್ನಪ್ಪನವರು ಸಂಪೂರ್ಣವಾಗಿ ... ಯೂ, ಮಿ ಚೆಟ್ಟಂಗಡ ಅಪ್ಪಣ್ಣನವರು 3 ನೆಯ ಮತ್ತು 3ನೇ ಭಾ ... ಗಲ್ಲೂ, ಮಿ ಚೇಂದಿರ ಕಾರ್ಯಪ್ಪನವರು 1ನೇ ಭಾಗದ ... ಲ್ಲಿ, ಮಿ. ಕೋಟೆರ ಸಂಜುಂಡನವರು 2ನೇ ಭಾಗದಲ್ಲೂ, ... ಡಿಸ್ಸಾ ಘ್ರಾಮ್ನಿಯವರು 3ನೇ ಭಾಗದಲ್ಲೂ ತೇರ್ಗಡೆ ... ಯಾಗಿರುವರೆಂದು ತಿಳಿಯಬರುತ್ತದೆ. ಇವರೆಲ್ಲರನ್ನು ಅಭಿ ... ನಂದಿಸುತ್ತೇವೆ.

ಸ್ಟೇಟ್ ರೈಲ್ವೆಯ ಸುಪೀರಿಯರ್ ರೆವೆನ್ಯು ಸಿಬ್ಬಂದಿಯ ಟ್ರಾನ್ಸ್ಪೋರ್ಟೇಶನ್ ಮತ್ತು ಕಮರ್ಶ್ಯಲ್ ಇಲಾಖೆಗೆ ಇಂಡಿಯನ್ ಸರ್ವಿಸ್ ಆಫ್ ಇಂಜಿನೀಯರಿಂಗಿಗೂ ಸೇರಲಿಚ್ಛಿಸುವವರ ಸ್ಪರ್ಧಾತ್ಮಕ ಪರೀಕ್ಷೆಯೊಂದು ಡೆಲ್ಲಿಯಲ್ಲಿ ನವಂಬರು 2ರಲ್ಲಿ ಪ್ರಾರಂಭವಾಗುವುದೆಂದೂ ಅವರು 1931 ಆಗೋಸ್ತು 1ರಲ್ಲಿ 20 ವರ್ಷಕ್ಕೆ ಮೀರಿ 25 ರೊಳಗಿನ ಪ್ರಾಯವುಳ್ಳವರಾಗಿರಬೇಕೆಂದೂ, ಕೊಡಗಿನ ಉಮೇದುವಾರರ ಅರ್ಜಿ ಕಮೀಷನರ ಆಫೀಸಿನಲ್ಲಿ ಕಮಿಷನರವರಿಗೆ ಜೂನ್ 20 ರೊಳಗೆ ತಲಪುವಂತೆ ಕಳುಹಿಸಬೇಕೆಂತಲೂ, ಹೆಚ್ಚಿನ ಮಾಹಿತಿಗಳನ್ನು ಕಮೀಷನರವರ ಆಫೀಸಿಗೆ ಬದ್ದು ಹೋಗಿ ನಡೆಕೊಳ್ಳಬಹುದೆಂತಲೂ ಪ್ರಕಟವಾಗಿದೆ.

ಆರೋಗ್ಯಾಭಿವೃದ್ಧಿಗಾಗಿ ಸಿಂಹಳ ದ್ವೀಪಕ್ಕೆ ಹೋಗಿದ್ದ ಶ್ರೀಯುತ ಪಂಡಿತ ಜವಾಹರ್ಲಾಲ್ ನೆಹರುರವರು ವಾಪಸು ತಮ್ಮೂರಿಗೆ ಹೋಗುವಾಗ್ಗೆ ಕಲ್ಲಿಕೋಟೆಯಿಂದ ಕೊಡಗಿಗಾಗಿ ಮೋಟಾರಿನಲ್ಲಿ ಮೈಸೂರಿಗೆ ಹೋಗುವರೆಂಬ ಸುದ್ದಿ ಇದ್ದದರಿಂದ ಅವರಿಗೆ ವಿರಾಜಪೇಟೆಯಲ್ಲಿ ಸ್ವಾಗತವನ್ನೀಯುವ ಏರ್ಪಾಡು ಮಾಡಲಾಗುವದೆಂದು. ಜವಾಹರ್ಲಾಲರವರಿಗೆ ತಿಳಿಸುವಂತೆ ಕೊಡಗಿನ ಮುಖಂಡರು ಕಲ್ಲಿಕೋಟೆ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಯವರಿಗೆ ತಂತಿ ಕಳುಹಿಸಿದ್ದರು ಆದರೆ ಪಂಡಿತರು ಈ ತಿಂಗಳ ಅಂತ್ಯದಲ್ಲಿ ಕಲ್ಲಿಕೋಟೆಯಿಂದ ಸುಲ್ತಾನ ಬತ್ತೇರಿ ಸಂಚಾರಗಳಿಂದ ನಂಜನಗೂಡಿನ ಮೂಲಕ ಮೈಸೂರಿಗೆ ಮೋಟಾರಿನಲ್ಲಿ ಹೋಗುವ ಏರ್ಪಾಡು ಈ ಮೊದಲೇ ನಿಶ್ಚಯವಾಗಿದೆಯೆಂದೂ, ಹೇಗೂ ಜವಾಹರ್ಲಾಲ್ರವರು ಬಂದ ಕೂಡಲೆ ಅವರಿಗೆ ಇಲ್ಲಿಯ ತಾರು ಕೊಡಲ್ಪಡಲಾಗುವುದೆಂದೂ ಉತ್ತರ ಬಂದಿದೆ.

ಹಿಂದೂ ದೇಶ.

ಇಂಡಿಯನ್ ಸೇಂಡ್ಹರ್ಸ್ಟ್ ಕಮಿಟಿಯ ಮೀಟಿಂಗು ತಾ 25ರಲ್ಲಿ ಸಿಮ್ಲಾದಲ್ಲಿ ಪ್ರಾರಂಭವಾಯಿತು. ಹಿಂದೂದೇಶದ ಮುಖ್ಯ ಸೇನಾಧಿಪತಿಯವರು ಅಧ್ಯಕ್ಷರಾಗಿದ್ದರು. 18 ಮೆಂಬರುಗಳೆಲ್ಲರೂ ಹಾಜರಿದ್ದರು.

ಇನ್ನು ಬಿಡುಗಡೆ ಮಾಡದೆ ಇರುವ ರಾಜಕೀಯ ಕೈದಿಗಳ ವಿಷಯವೂ, ಸತ್ಯಾಗ್ರಹ ಚಳವಳದಲ್ಲಿ ಕೆಲಸ ಬಿಟ್ಟ ಪಟೇಲರುಗಳ ವಿಷಯವೂ ಸರ್ಕಾರಿ ಮೆಂಬರುಗಳ ಸಂಗಡ ಮಾತಾಡಲು ಶ್ರಿ ಟಿ ಪ್ರಕಾಶಂರವರು ಊಟಕಮಂಡಿಗೆ ಹೋಗಿದ್ದರು.

ದುಂಡು ಮೇಜು ಪರಿಷತ್ತಿನ ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಮೀಟಿಂಗು ಲಂಡನಿನಲ್ಲಿ ಜೂನ್ ತಾ 29ರಲ್ಲಿ ಪ್ರಾರಂಭವಾಗುವುದೆಂದೂ ಅದಕ್ಕೆ ಹೋಗುವ ಮೆಂಬರುಗಳು ಜೂನ್ ತಾ 13ರಲ್ಲಿ 'ಕಟಿಕ್' ಎಂಬ ಸ್ಟೀಮರಿನಲ್ಲಿ ಹೊರಡುವರೆಂದೂ ವರ್ತಮಾನವಿದೆ.

ಬರ್ಮಾದಲ್ಲಿ ನಡೆಯುತ್ತಿರುವ ದಂಗೆಯು ಕಡಿಮೆಯಾಗುವ ಚಿಹ್ನೆಗಳಿಲ್ಲ. ಆಗಾಗ್ಗೆ ಪೋಲೀಸಿನವರು ಮತ್ತು ಮಿಲಿಟರಿಯವರಿಗೂ, ದಂಗೆಖೋರರಿಗೂ ಯುದ್ಧವುಂಟಾಗಿ ಎರಡು ಕಡೆಯೂ ನಷ್ಟವುಂಟಾಗುತ್ತಿದೆ. ಈಗ ಹೆಚ್ಚಿನ ಮಿಲಿಟರಿ ಜನವನ್ನು ಅಲ್ಲಿಗೆ ಕಳುಹಿಸುತ್ತಾರೆ.

ಬಾರಡೋಲಿ ಭಂಗದ ಚಳವಳದಲ್ಲಿ ಕೈರಾ ಜಿಲ್ಲೆಯಲ್ಲಿ ಖಾಲಿಬಿದ್ದ ಅರ್ಧ ಪಟೇಲರ ಸ್ಥಾನಗಳಲ್ಲಿ ಅವರ ಸ್ಥಾನಕ್ಕೆ ಮೊದಲಿನ ಪಟೇಲರೇ ಸೇರಿಸಿಕೊಳ್ಳಲ್ಪಟ್ಟಿದ್ದಾರೆ. ಕಂದಾಯಕ್ಕಾಗಿ ಹರಾಜುದಾರರಿಂದ ವಶಮಾಡಿಕೊಂಡ ಗದ್ದೆಗಳ ಎಕ್ರೆ ಜಮೀನಿನಲ್ಲಿ 20 ಎಕ್ರೆಗಳ ಹೊರತು ಬಾಕಿ ಉಳಿದುದನ್ನೆಲ್ಲಾ ಸರಕಾರವು ಬಿಟ್ಟುಕೊಟ್ಟಿದೆ.

ಅಖಿಲ ಭಾರತ ಮುಸ್ಲಿಮ್ ಕಾನ್ಫರೆನ್ಸಿನ ವರ್ಕಿಂಗ್ ಕಮಿಟಿಯ ಮೀಟಿಂಗು ಈ ತಾ. 24ರಲ್ಲಿ ಲಾಹೋರಿನಲ್ಲಿ ನಡೆದು, ಮುಸ್ಲಿಮ್ ರಾಷ್ಟ್ರೀಯ ಪಕ್ಷದವರಿಗೂ, ಶೌಕತ್ ಅಲಿ ಪಾರ್ಟಿಯವರಿಗೂ ಕೌನ್ಸಿಲುಗಳಿಗೆ ಚುನಾವಣೆಯ ವಿಷಯದಲ್ಲಿದ್ದ ಭಿನ್ನಾಭಿಪ್ರಾಯವನ್ನು ರಾಜಿ ಮಾಡುವಂಥ ಒಂದು ಸೂಚನೆಯನ್ನು ಮುಂದಿನ ವಂತೆ ತೀರ್ಮಾನಿಸಿರುವರು.

ತಾ. 24ರ ರಾತ್ರಿ ಹೊಸ ಡೆಲ್ಲಿಯಲ್ಲಿ ವೈಸರಾಯರ ಬಂಗ್ಲೆಯಲ್ಲಿ ಆಕಸ್ಮಿಕ ಬೆಂಕಿ ಹಿಡಿದು ಬಿಟ್ಟವು ಬೆಂಡು. ಕಂಬಾ ನಷ್ಟವುಂಟಾಗಿದೆಯಂತೆ. ಅಲ್ಲಿ ಕೆಲಸ ಮಾಡುತ್ತಿದ್ದ ಕೂಲಿಯವನೊಬ್ಬನು ಬೆಂಕಿ ಇದ್ದ ಬೀಡಿಯನ್ನು ಕಿಟಕಿಯ ಮೇಲೆ ಇಟ್ಟು ಹೋಗಿದ್ದನೆಂದೂ, ಅದರಿಂದ ಬೆಂಕಿ ಕೇನಾತ್ತಿಸಿಗೆ ಹತ್ತಿ ಬೆಂಕಿಯು ಜೋರಾಗಿರಬೇಕೆಂದೂ ಊಹಿಸಲಾಗಿದೆ.

ಇಂಡಿಯಾ ಸರ್ಕಾರದ ರಿಟ್ರೆಂಚ್ಮೆಂಟ್ ಅಡ್ವೈಸರಿ ಕಮಿಟಿಯ ಮೀಟಿಂಗು ಈ ತಾ 25ರಲ್ಲಿ ಸಿಮ್ಲಾದಲ್ಲಿ ಪ್ರಾರಂಭವಾಗಿದೆ. ಇಂಡಿಯಾ ಸರ್ಕಾರದ ಫೈನಾನ್ಸ್ ಮೆಂಬರಾದ ಸರ್ ಜಾರ್ಜ್ ಷುಸ್ಟರವರು ಅಧ್ಯಕ್ಷರಾಗಿದ್ದರು. ಕಾರ್ಯದ ಕಮಿಟಿ ಮತ್ತು ಪ್ರಕಟಣೆ ಕಮಿಟಿಗಳೆಂಬ ಎರಡು ಉಪ ಕಮಿಟಿಗಳು ಆರಿಸಲ್ಪಟ್ಟವು. ಮೀಟಿಂಗು ಮುಂದುವರಿಯುತ್ತಾ ಇದೆ.

ದುಂಡು ಮೇಜು ಪರಿಷತ್ತಿಗೆ ಹೋಗುವುದರ ವಿಷಯದಲ್ಲಿ ಮಹಾತ್ಮ ಗಾಂಧಿಯವರು ನನ್ನ ಅಭಿಪ್ರಾಯವನ್ನು ಸ್ವಲ್ಪ ಬದಲಾಯಿಸಿರುವರೆಂತಲೂ, 'ಹಿಂದೂ ಮುಸಲ್ಮಾನ್ ಸಮಸ್ಯೆ ತೀರ್ಮಾನವಾಗದೆ ಹೋದರೂ, ರಾಜಿ ಒಪ್ಪಂದದ ಶರತ್ತುಗಳಿಗನುಸಾರವಾಗಿ ಸರ್ಕಾರದವರು ವರ್ತಿಸಿದರೆ ತಾನು ದುಂಡು ಮೇಜು ಪರಿಷತ್ತಿಗೆ ಬೇಗನೆ ಹೋಗಲು ತಯಾರಾಗಿರುವೆನೆಂತಲೂ, ಆದರೆ ಸದರಿ ಪರಿಷತ್ತಿನಲ್ಲಿ ತಾನು ಕಾಂಗ್ರೆಸ್ಸಿನ ಅಭಿಪ್ರಾಯವನ್ನು ವಿವರಿಸುವೆನಲ್ಲದೆ ಅದರ ಚರ್ಚೆಯಲ್ಲಿ ಭಾಗಿಯಾಗುವುದಿಲ್ಲವೆಂತಲೂ' ಮಹಾತ್ಮರು ಹೇಳಿರುವರೆಂದು ವರ್ತಮಾನ.

'ಇಂಗ್ಲೇಜಿ ಸರ್ಕಾರದವರು ಎರಡನೇ ರೌಂಡ್ ಟೇಬಲಿನಲ್ಲಿ ಕಾಂಗ್ರೆಸ್ಸು ತೃಪ್ತಿಪಡುವಂತೆ ರಾಜಕಾರಣ ಘಟನೆ ಮಾಡದಿದ್ದರೆ ಕಾಂಗ್ರೆಸ್ಸಿನವರು ಕಾಯದೆ ಭಂಗವನ್ನು ಪ್ರಾರಂಭಿಸುವರು. ಕೋಡ ಚಳವಳಿಯಲ್ಲಿ ಕೆಲ ಲಕ್ಷ ಜನರು ಮಾತ್ರ ಸೇರಿದ್ದರು. ಮುಂದಿನ ಚಳವಳಿಯಲ್ಲಿ ಕೋಟಿ ಸಂಖ್ಯೆಯ ಸೇರುವರು. ಹೋದ ಚಳವಳಿಯ ಸಾಮರ್ಥ್ಯ ಗೊತ್ತಾಗಲಿಕ್ಕೆ ಇಂಗ್ಲೇಜಿ ಸರ್ಕಾರಕ್ಕೆ ಹನ್ನೆರಡು ತಿಂಗಳು ಹತ್ತಿತು. ಮುಂದಿನ ಚಳವಳಿಯ ವಿರಾಟ್ ಸ್ವರೂಪದ ಜ್ಞಾನವು ಒಂದೇ ವಾರದಲ್ಲಾಗುವುದೆಂದು ಶ್ರೀ ಸೇನಗುಪ್ತರು ಕೂಮಿಲ್ಲಾದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದ್ದಾರೆ.

ಶ್ರೀಯುತ ಸುಭಾಷ್ಚಂದ್ರ ಬೋಸ್ರವರು ತಾ 25ರಲ್ಲಿ ಅಹ್ಮದಾಬಾದಿನಲ್ಲಿ ಖಾದೀ ಪ್ರದರ್ಶನವನ್ನು ತೆರೆದಾಗ— 'ರಾಜಿಯ ಸಮಯದಲ್ಲಿ ಸ್ವರಾಜ್ಯ ಪಡೆಯಲು ಮಾಡಬೇಕಾದದ್ದು ಬರೀ ಸ್ವದೇಶೀ ಪ್ರೀತಿ ಮತ್ತು ಪರದೇಶೀ ಬಹಿಷ್ಕಾರ. ಗಾಂಧಿ—ಇರ್ವಿನ್ ಒಪ್ಪಂದದಂತೆ ನಡೆಯಬೇಕಾದದ್ದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯ. ಅದನ್ನು ಉಲ್ಲಂಘಿಸುವ ಜವಾಬ್ದಾರಿಯು ಸರ್ಕಾರಕ್ಕೆ ಇರಲಿ. ಪ್ರತಿಯೊಂದು ನಾಗರೀಕತೆ ಹೊಂದಿದ ಸರ್ಕಾರವು ಸ್ವದೇಶೀ ಪ್ರದರ್ಶನವನ್ನು ತೆರೆಯಬೇಕು. ಆ ಕೆಲಸವನ್ನು ಈಗ ನಾವಾಗಿ ಮಾಡುತ್ತಿದ್ದೇವೆ. ಬೇರೆ ದೇಶಗಳಲ್ಲಿ ಸರ್ಕಾರಗಳು ಹೀಗೆ ಮಾಡುತ್ತಿದ್ದಾವೆ. ಆರ್ಥಿಕ ಕೊಳ್ಳೆಯೂ, ಗುಲಾಮಗಿರಿಯೂ ಯಾವಾಗಲೂ ಜೊತೆಯಲ್ಲೇ ಇರುತ್ತದೆ. ನಮಗೆ ರಾಜಕೀಯ ಸ್ವರಾಜ್ಯ ಮಾತ್ರವಲ್ಲ, ಆರ್ಥಿಕ ಸ್ವರಾಜ್ಯವೂ ಬೇಕಾಗಿದೆ' ಎಂದು ಮುಂತಾಗಿ ಹೇಳಿದರು.

ಗಾಂಧಿಯವರು ಸಿಮ್ಲಾದಲ್ಲಿದ್ದಾಗ ವಿಲ್ಲಿಂಗ್ಡನ್ ಸಾಹೇಬರ ಪತ್ನಿ ಕಸ್ತೂರಿಬಾಯಿಯವರನ್ನು ಆಮಂತ್ರಿಸಿ ಅವರೊಡನೆ ಅರ್ಧ ಗಂಟೆಯನ್ನು ಕಳೆದರಂತೆ. ಮೊದಲು ಗಾಂಧಿಯವರ ಆಹಾರದ ವಿಷಯದ ಮಾತು. ಗಾಂಧಿಯವರು ಒರೆ ಖರ್ಜೂರ, ಆಡಿನ ಹಾಲನ್ನು ಮಾತ್ರ ತೆಗೆದುಕೊಳ್ಳುತ್ತಾರೆಂದು ಕೇಳಿದೊಡನೆ ದೊರೆಸಾನಿಯವರು 'ಈ ಮುದುಕನು ಹೆಚ್ಚು ಆಹಾರಸೇವನೆ ಮಾಡುವಂತೆ ಒತ್ತಾಯಿಸಬೇಕು. ಇವನ ಜೀವನದಿಂದ ದೇಶಕ್ಕೆಷ್ಟು ಕಲ್ಯಾಣವಾಗಲುಂಟು' ಎಂದರಂತೆ. ಹಿಂದೂಸ್ಥಾನದ ಸರಕಾರದ ಕೇಂದ್ರವನ್ನು ೬ ತಿಂಗಳು ಸಿಮ್ಲಾದಲ್ಲಿರಿಸುವುದು ಯುಕ್ತವಲ್ಲ. ಇದರಿಂದ ದೇಶದ ಸಂಪತ್ತು ಹಾಳಾಗುತ್ತದೆ ಎಂದು ಗಾಂಧಿಯವರು ಹೇಳಿದುದಕ್ಕೆ ಇವರು ಒಪ್ಪಿದರಂತೆ. ಕೊನೆಗೆ ವೈಸರಾಯರ ಪತ್ನಿ ತನಗೂ ಸ್ವಲ್ಪ ಖಾದಿ ಬೇಕಾಗಿದೆಯೆಂದು ಕೇಳಿದರು. ಕಸ್ತೂರಿಬಾಯಿಯವರು ಕಳುಹಿಸಿಕೊಡುವೆನೆಂದು ವಾಗ್ದಾನ ಮಾಡಿದರು.

ಹಿಂದೂದೇಶದವರಂತೆಯೇ ತಮಗೂ ಸ್ವರಾಜ್ಯ ಬೇಕೆಂದು ಸ್ಕಾಟ್ಲೆಂಡಿನವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹೋರಾಡುತ್ತಿರುವರು. ಇದನ್ನು ವಿಚಾರಿಸಲು ಪ್ರಧಾನ ಮಂತ್ರಿಯಾದ ಮಿ. ಮೆಕ್ಡನಾಲ್ಡ್ರವರು (ಸ್ಕಾಟ್ಲೆಂಡಿನವರು) ಒಂದು ಕಮಿಟಿಯನ್ನು ಏರ್ಪಡಿಸುತ್ತೇವೆಂದು ಹೇಳಿದರು. ಅದಕ್ಕೆ ಸ್ಕಾಟ್ಲೆಂಡಿನ ರಾಷ್ಟ್ರೀಯ ಪಕ್ಷದವರು—ತಾವು ತಮ್ಮ ದೇಶದ ಪ್ರತಿಯೊಬ್ಬನ ಅಭಿಪ್ರಾಯವನ್ನು ತೆಗೆಯುತ್ತೇವೆ, ಅವರ ಹೇಳಿಕೆಯಂತೆ ನಡಿಸಬೇಕೆಂದು ಉತ್ತರ ಕೊಟ್ಟಿರುವರು.

ಬೇಕಾಗಿದೆ.

ನಾಡಿನಾಲ್ಕುನಾಡು ಸಹಕಾರಿ ಸ್ಟೋರಿಗೆ ಒಬ್ಬ ಸ್ಟೋರ್ ಕೀಪರು ಬೇಕಾಗಿದೆ. ಮಾಹೆಯಾನ 30 ರೂ. ಸಂಬಳ ಕೊಡಲಾಗುವುದು. ಇದಕ್ಕೆ ನೇಮಿಸಲ್ಪಟ್ಟವರು 2 ತಿಂಗಳು ಮಡಿಕೇರಿ ಟ್ರೈನಿಂಗ್ ಸ್ಟೋರಿನಲ್ಲಿ ತರಬೇತು ಹೊಂದಬೇಕಾಗುವುದು. ಉಮೇದುವಾರರು ಕೂಡಲೆ ಈ ಕೆಳಗಿನ ವಿಳಾಸದಾರರಿಗೆ ಅರ್ಜಿ ಬರಕೊಳ್ಳತಕ್ಕದ್ದು.

ತಾ 27—5—'31 ಪ್ರೆಸಿಡೆಂಟರು,
ನಾಡಿನಾಲ್ಕುನಾಡು ಸಹಕಾರಿ ಸ್ಟೋರ್,
2—2 ನಾಪೋಕ್ಲು.

ಫೆಡರೇಶನ್ ಆಫೀಸು,
ಮಡಿಕೇರಿ, ತಾ. 19—5—31.

ಬೇಕಾಗಿದೆ.

ಸುಪರ್ವೈಜರು ಕೆಲಸಕ್ಕೆ ತರಬೇತು ಮಾಡಲು ಇಷ್ಟರು ಉಮೇದ್ವಾರರು ಬೇಕಾಗಿದೆ. ಮೆಟ್ರಿಕ್ ಪಾಸಾದವರು ತಮ್ಮ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪಾಸಾದ ಮತ್ತು ತಮ್ಮ ನಡತೆ ವಗೈರೆಗಳ ವಿಷಯದ ಸರ್ಟಿಫಿಕೇಟ್ಗಳೊಡನೆ ಬರುವ ಜೂನ್ ತಾರೀಖು 10ರ ಒಳಗೆ ತಲಪುವಂತೆ ಕೊಡಗು ಸಹಕಾರಿ ಫೆಡರೇಶನ್ ಪ್ರೆಸಿಡೆಂಟರವರಿಗೆ ಅರ್ಜಿ ಬರಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಫೆಡರೇಶನ್ ಆಫೀಸಿಗೆ ಬರಕೊಳ್ಳುವುದು.

ಯಂ. ಯಂ. ಬೆಳ್ಯಪ್ಪ.
(ಗೌರವ ಕಾರ್ಯದರ್ಶಿ.)

ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆಯಲ್ಲಿ ಶಿವಾಚಾರದವರ ಬಸವೇಶ್ವರ ದೇವಸ್ಥಾನದ ಒಳ ಇರುವ ಕಂಚಿಗಾರರ ಸುಬ್ಬಣ್ಣ ಶೆಟ್ಟಿಯವರ ಬಾಪ್ತು, 2 ಬ್ಲಾಕಿನಲ್ಲಿರುವ ಕಾರೆಕೋಲು ಚಾರಿ, ಸಣ್ಣ ಮತ್ತು ದೊಡ್ಡ ಹಂಚು ಹಾಕಿರುವ ಸರ್ವೆ ನಂ 10ರ ಮನೆ ಮತ್ತು ಅದರ ಹಿಂಭಾಗದಲ್ಲಿರುವ ಕೊಟ್ಟಿಗೆ, ಇದರ ಪಕ್ಕದಲ್ಲಿರುವ ಸಣ್ಣ ಹಂಚು ಹಾಕಿದ ಸರ್ವೆ ನಂ. 110 ಮನೆ ಮತ್ತು ನಿಮೋಜ್ ಬಾಣೆ ಪಕ್ಕದಲ್ಲಿರುವ ಒಂದು ಎಕರೆ 38 ಸೆಂಟು ಕಾಫಿತೋಟ ಸಹ ಮಾರಾಟಕ್ಕಿದೆ. ಕೊಂಡುಕೊಳ್ಳಲು ಇಚ್ಛಿಸುವವರು ಈ ಕೆಳಗಿನ ನಿಶಾನೆದಾರರಿಗೆ ಬರೆದುಕೊಳ್ಳುವುದು.

ಕಂಚಿಗಾರರ ಸುಬ್ಬಣ್ಣ ಶೆಟ್ಟಿ,
4—1. ಮಹದೇವಪೇಟೆ,
ಮಡಿಕೇರಿ.

Rubber Stamps of every design
and
Glass sign boards. Half tone Blocks. Monogram seals. Marble slabs. ring stones etc. etc. to suit. every pocket and taste. For further particulars please apply to:—

The Crown Rubber Stamp Co.,
Mangalore, S. K.
Or
Mr. N. N. Ponnappa,
Agent,
12—9 **Mercara.**

ಸಿಬ್ಬಂದಿ ಖೋತೆ.

(ಲೇಖಕ—ಬಂಧು)

'ರಿಟ್ರೆಂಚ್‌ಮೆಂಟ್' ಅಂದರೆ ಸಿಬ್ಬಂದಿ ಖೋತೆ'ಯ ಮಾತೇ ಈಗ ಎಲ್ಲೆಲ್ಲಿಯೂ ಕೇಳಬರುತ್ತಿದೆ. ಹಿಂದೂಸ್ಥಾನದ ಹಲವು ಪ್ರಾಂತೀಯ ಸರ್ಕಾರಗಳು ಸಿಬ್ಬಂದಿ ಖೋತೆಯ ಕಮಿಟಿಗಳನ್ನು ನೇಮಿಸಿದರು. ಹಾಗೆಯೇ ನಮ್ಮ ಕೊಡಗು ಪ್ರಾಂತ್ಯದ ಸರ್ಕಾರದವರೂ ಒಂದು ಕಮಿಟಿಯನ್ನು ನೇಮಿಸಿರುವದು ವಾಚಕರಿಗೆಲ್ಲಾ ತಿಳಿದ ಸಂಗತಿಯಾಗಿದೆ. ಸಿಬ್ಬಂದಿ ಖೋತೆಯ ಈ ಕೋಲಾಹಲಕ್ಕೆ ಕಾರಣವೇನೆಂದು ಸ್ವಲ್ಪ ವಿಚಾರಿಸುವ. ಕಳೆದ ಒಂದು ವರ್ಷ ಹಿಂದೂಸ್ಥಾನದಲ್ಲಿ ನಡೆದ ಅದ್ವಿತೀಯ ಶಾಸನಭಂಗದ ಚಳವಳಿಯ ಫಲಿತಾಂಶವಾಗಿ ಸರ್ಕಾರದ ಬಜಾನೆಗೆ ಒಳ್ಳೇ ಧಕ್ಕೆ ತಗಲಿದೆ. ಮುಖ್ಯವಾಗಿ ಅಬ್ಕಾರಿ ಇಲಾಖೆಯ ಅಂದರೆ ಸೇಂದಿ ಸಾರಾಯಿ ಮೊದಲಾದ ನಿಷಾ ಪದಾರ್ಥಗಳ ಮತ್ತು ಉಪ್ಪು ಮಾರಾಟದ ಇಲಾಖೆಯ ಉತ್ಪತ್ತಿಯು ಬಹಳ ಮಟ್ಟಿಗೆ ಕಡಿಮೆಯಾಗಿ ಹೋಗಿದೆ. ಮಹಾತ್ಮ ಗಾಂಧಿಯವರಿಗೂ, ಲಾರ್ಡ್ ಇರ್ವಿನ್‌ರವರಿಗೂ ಆದ ರಾಜಿ ಒಪ್ಪಂದದ ಮೇರೆ ತತ್ಕಾಲ ಅಹಿಂಸಾತತ್ತ್ವದ ಯುದ್ಧವು ನಿಲ್ಲಿಸಲ್ಪಟ್ಟಿದ್ದರೂ ಸಮುದ್ರ ತೀರದ ಬಳಿ ಇರುವ ಜನರೆಲ್ಲರೂ ಸಮುದ್ರದ ನೀರಿನಿಂದ ಮುಫತ್ತಾಗಿ ಉಪ್ಪು ಮಾಡಿಕೊಳ್ಳಬಹುದೆಂತಲೂ, ಕುಡುಕತನವನ್ನು ನಿಲ್ಲಿಸಲು ಬೋಧಿಸುವದಲ್ಲದೆ ಶಾಂತ ರೀತಿಯಿಂದ ನಿಷಾ ಪದಾರ್ಥ ಮಾರಾಟದ ಅಂಗಡಿಗಳನ್ನು ಪಿಕೆಟ್ ಮಾಡಬಹುದೆಂತಲೂ ಒಪ್ಪಂದದಲ್ಲಿರುವ ಶರತ್ತುಗಳಿಗೆ ಸರ್ಕಾರದವರು ಒಪ್ಪಿರುವರು. ಹಾಗೆಯೇ ಈಗ ನಡೆಯುತ್ತಲೂ ಇದೆ. ಆದಕಾರಣ ಅಬ್ಕಾರಿ ಇಲಾಖೆಯ ಉತ್ಪತ್ತಿಯು ಸತ್ಯಾಗ್ರಹ ಚಳವಳಿಕ್ಕೆ ಮುಂಚೆ ಇದ್ದಷ್ಟಕ್ಕೆ ಏರುವ ಸಂಭವವೇ ಇಲ್ಲ, ಬದಲು ಮತ್ತಷ್ಟು ಕಡಿಮೆಯಾಗುವ ಸಂಭವವಿದೆ. ಅಲ್ಲದೆ ಪರದೇಶದವರ ವ್ಯಾಪಾರವು ಮುಖ್ಯವಾಗಿ ಬಟ್ಟೆ ವ್ಯಾಪಾರವು ಹಿಂದೂಸ್ಥಾನದಲ್ಲಿ ಬಹು ಮಟ್ಟಿಗೆ ಕಡಿಮೆಯಾಗಿ ಹೋಗಿದೆ. ಇದು ಬೇಗನೆ ಹೆಚ್ಚುವಂತೆ ಕಾಣುವುದಿಲ್ಲ. ಇದರಿಂದ ಸರ್ಕಾರಕ್ಕೆ ಬರುತ್ತಿದ್ದ ಸುಂಕದ ಉತ್ಪತ್ತಿಯೂ ಕಡಿಮೆಯಾಗಿ ಹೋಗಿದೆ. ಹೀಗೆ ಸರ್ಕಾರಿ ಉತ್ಪತ್ತಿಯು ಕಡಿಮೆಯಾದ ಕಾರಣ ಖರ್ಚನ್ನು ಕಡಿಮೆ ಮಾಡದೆ ಆಡಳಿತವನ್ನು ನಡಿಸಲು ಸಾಧ್ಯವಾಗುವುದಿಲ್ಲ. ಆದುದರಿಂದಲೇ ಸಿಬ್ಬಂದಿ ಖೋತೆಯ ಪ್ರಶ್ನೆಯು ಈಗ ಸರ್ಕಾರದವರಿಗೆ ಪ್ರಿಯ ತೋರಿರುವದಾಗಿದೆ.

ಸತ್ಯಾಗ್ರಹ ಚಳವಳಿಯ ಫಲಿತಾಂಶವಾಗಿ ಸರ್ಕಾರವು ಸಿಬ್ಬಂದಿ ಖೋತೆಯ ಕೆಲಸಕ್ಕೆ ಕೈ ಹಚ್ಚಿರುವದಾದರೂ, ಇದು ಶಾಸನಭಂಗ ಚಳವಳಿಯ ಉದ್ದೇಶವಲ್ಲ. ಇದು ಸದರಿ ಚಳವಳಿಯ ನಿಷ್ಪಲ ಫಲಿತಾಂಶಗಳಲ್ಲಿ ಒಂದು ಮಾತ್ರ. ಸರ್ಕಾರದವರಿಗೆ ಬಡ ಪ್ರಜೆಗಳ ಮೇಲೆ ಕನಿಕರ ಹುಟ್ಟಿ, ಅವರು ರಕ್ತವನ್ನು ನೀರು ಮಾಡಿ ದುಡಿದು ಸಂಪಾದಿಸಿ ಕರ ಕಂದಾಯಗಳ ರೂಪದಲ್ಲಿ ಕೊಡುವ ಹಣವನ್ನು ಪ್ರಪಂಚದಲ್ಲೆಲ್ಲೂ ಇಲ್ಲದಷ್ಟು ದೊಡ್ಡ ಸಂಬಳವನ್ನು ಕೊಟ್ಟು ಉದ್ಯೋಗಸ್ಥರಿಗೆ ದುಂದುಗಾರಿಕೆಯ ಜೀವನವನ್ನು ಕಲಿಸಿಕೊಡುತ್ತಿರುವ ತಪ್ಪನ್ನು ತಿಳಿದುಕೊಂಡು ಅದನ್ನು ತಿದ್ದಿಕೊಳ್ಳಲು ಸಿಬ್ಬಂದಿ ಖೋತೆಯ ಕಾರ್ಯವನ್ನು ಕೈಕೊಂಡಿರುವದಲ್ಲವೆಂದು ಹೇಳಿದರೆ ತಪ್ಪಾಗುವುದೇ? ಮೇಲಿನ ಕಾರಣದಿಂದ, ಕೈಕೊಂಡಿದ್ದ ಪಕ್ಷ ಇಷ್ಟು ವರ್ಷ ಸುಮ್ಮನಿರಲು ಕಾರಣವೇನು? ಉತ್ಪತ್ತಿಯು ಕಡಿಮೆಯಾದಾಗ ಮಾತ್ರ ಅವರಿಗೆ ಅವರ ತಪ್ಪು ತಿಳಿಯಿತೋ? ಒಂದು ವೇಳೆ ಅವರು ಈಗ ತಮ್ಮ ತಪ್ಪನ್ನು ತಿಳಿದುಕೊಂಡಿರುವದಾದರೆ, ರಿಟ್ರೆಂಚ್‌ಮೆಂಟ್ ಕಮಿಟಿಗಳು—ಬ್ರಿಟಿಷ್ ಪ್ರಧಾನ ಮಂತ್ರಿಯವರಿಗೆ ಬರೇ 5000 ರೂಪಾಯಿ ಸಂಬಳವಿರುವಾಗ್ಯೆ ಅವರ ಕೈಕೆಳಗೆ ಇರುವ ವೈಸರಾಯರಿಗೆ 21,000 ರೂ. ಗವರ್ನರುಗಳಿಗೆ 10,000 ರೂ. ಸಂಬಳ ಕೊಡುವುದು ಅನ್ಯಾಯವೆಂದು ಅರಿತು, ಅವುಗಳನ್ನು ಕಡಿಮೆ ಮಾಡುವವೋ? ರಿಪಬ್ಲಿಕ್ ಸರ್ಕಾರ ಸ್ಥಾಪಿತವಾಗಿರುವ ರಷ್ಯಾ ದೇಶದಲ್ಲಿ 250 ರೂ. ಗಿಂತ ಹೆಚ್ಚು ಸಂಬಳವಿರುವ ಆಫೀಸರೇ ಇಲ್ಲವಂತೆ! ಬೇರೆ ದೇಶಗಳಲ್ಲಿ ಹೀಗಿರುವಾಗ್ಯೆ ಇಂಡಿಯಾ ದೇಶದ ಸಿಬ್ಬಂದಿ ಖೋತೆಯ ಕಮಿಟಿಗಳು ಏನು ಮಾಡುವವೆಂದು ನೋಡಬೇಕು.

ಕೊಡಗಿನಲ್ಲಂತೂ ಜಾರಿಯಲ್ಲಿರುವ ತಲೆಭಾರ ಸರ್ಕಾರವನ್ನು ವಿವರಿಸಲು ಸಾಧ್ಯವೇ ಇಲ್ಲ. ಬರೇ 14 ಲಕ್ಷ ಉತ್ಪತ್ತಿ ಇರುವ ಈ ಚಿಕ್ಕ ಪ್ರಾಂತ್ಯದಲ್ಲಿ ನಾಲ್ಕೈದು ಇಂಪೀರಿಯಲ್ ಆಫೀಸರುಗಳಿಗೇ ವರ್ಷಕ್ಕೆ ಸುಮಾರು ಮುಕ್ಕಾಲು ಲಕ್ಷ ರೂಪಾಯಿಯಷ್ಟು ಖರ್ಚಾಗುತ್ತಿದೆಯಂತೆ! ರಿಟ್ರೆಂಚ್‌ಮೆಂಟ್ ಕಮಿಟಿಯವರು ಇವರ ಸಂಬಳವನ್ನು ಕಾಂಗ್ರೆಸಿನವರು ಬಡ ರೈತರ ಹಿತಕ್ಕಾಗಿ ಸೂಚಿಸಿರುವಂತೆ ತಿಂಗಳಿಗೆ 500 ರೂ. ಗಿಂತ ಏರದಂತೆ ನಿಶ್ಚೈಸುವರೇ? (ಅಥವಾ ಇಂಪೀರಿಯಲ್ ಆಫೀಸರುಗಳ ವಿಷಯ ಮಾತಾಡಲು ಇವರಿಗೆ ಅಧಿಕಾರವಿಲ್ಲವೆಂದು ಬಿಡುವರೋ?) ಹೀಗೆ ಮಾಡಿದರೆ ಈ ಕಮಿಟಿಯಿಂದ ಏನಾದರೂ ಪ್ರಯೋಜನವಾಗಬಹುದು. ಇಲ್ಲವಾದರೆ ಅದರಿಂದ ಪ್ರಯೋಜನವಾಗುವ ಬದಲು ದೇಶಕ್ಕೆ ನಷ್ಟ ಉಂಟಾಗುವದರಲ್ಲಿ ಸಂದೇಹವಿಲ್ಲ. ನಷ್ಟವು ಹೇಗೆಂದರೆ—ಕೆಲವು ಜವಾನರುಗಳನ್ನೂ, ಫಾರೆಸ್ಟ್ ಗಾರ್ಡುಗಳನ್ನೂ, ಇಲ್ಲವೇ ಕೆಲವು ಗುಮಾಸ್ತರುಗಳನ್ನೂ ಉದ್ಯೋಗದಿಂದ ತೆಗೆದು ಹಾಕಿದರೆ ಕೆಲವು ಬಡವರ ಅನ್ನಕ್ಕೆ ಮಣ್ಣು ಹಾಕಿದಂತೆ ಆಗುವದು. ದೇಶಕ್ಕೆ ಇದೊಂದು ನಷ್ಟ. ಇದರೊಂದಿಗೆ ರಿಟ್ರೆಂಚ್‌ಮೆಂಟ್ ಕಮಿಟಿಯವರಿಗೆ ಮೀಟಿಂಗು ಸೇರಿದಕ್ಕೆ ಕೊಡಬೇಕಾಗುವ ಬತ್ತೆದ ಖರ್ಚು. ಒಂದು ವೇಳೆ ಪ್ರಾಂತೀಕ ಉದ್ಯೋಗಗಳ ಅಥವಾ ನೂರು ರೂ ಮೇಲ್ಪಟ್ಟ ಸಂಬಳವುಳ್ಳ ಉದ್ಯೋಗಗಳ ಸಂಖ್ಯೆಯಲ್ಲಿ ಒಂದೆರಡು ಕಡಿಮೆ ಮಾಡಿದರೂ ಅದು ಜನರ ಕಣ್ಣು ಕಟ್ಟಲಿಕ್ಕೆ ಮಾತ್ರವಾಗುವುದು. ಯಾಕಂದರೆ—ಕೆಲವು ವರ್ಷಗಳ ಹಿಂದೆ ಮಿ. ಕ್ಯಾಂಬೆಲ್‌ರವರು ಕೊಡಗಿನ ಸರ್ಕಾರದ ಉದ್ಯೋಗಗಳ ಸಂಖ್ಯೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿದರು. ಆದರೆ ಅದು ಸ್ವಲ್ಪ ಸಮಯಕ್ಕೆ ಮಾತ್ರವಾಗಿದ್ದು, ವರ್ಷಗಳು ಕಳೆಯುತ್ತಾ ಬಂದಹಾಗೆ ತೆಗೆಯಲ್ಪಟ್ಟಿದ್ದ ಉದ್ಯೋಗಗಳು ಬೇರೊಂದು ರೂಪದಲ್ಲಿ ಪುನಹ ನೇಮಿಸಲ್ಪಟ್ಟವು. ಹೀಗೆಯೇ ಇನ್ನೂ ಆಗುವುದಿಲ್ಲವೆಂದು ಹೇಳಲು ಕಾರಣವಿಲ್ಲ.

ಈಗ ಹಿಂದೂ ದೇಶದ ಜನರನ್ನು ಪೀಡಿಸುತ್ತಿರುವ ಎಲ್ಲಾ ಕಾಟಗಳಿಗೂ ಸ್ವರಾಜ್ಯವೇ ದಿವ್ಯ ಔಷಧಿ ಎಂದು ಹಿಂದಿಯರಿಗೆ ಗೊತ್ತಾಗಿದೆ. ಆದುದರಿಂದಲೇ ಆ ಸ್ವರಾಜ್ಯವನ್ನು ಪಡೆಯಲು 70,000 ಹಿಂದೀ ಸಹೋದರ, ಸಹೋದರಿಯರು ಜೈಲುವಾಸವನ್ನು ಕೈಕೊಂಡಿರಲ್ಲದೆ, ಹಲವರು ಹಿಂಸಾ ತತ್ವವನ್ನನುಸರಿಸಿ ವರ್ತಿಸುತ್ತಿದ್ದಾಗ್ಯೆ ಪೋಲೀಸರ ಕ್ರೂರ ಲಾಟಿ ಪೆಟ್ಟಿಗೂ, ಸಾರ್ಜೆಂಟರುಗಳ ಕುದುರೆ ತುಳಿತಕ್ಕೂ, ಬೂಟ್ಸುಗಳ ಒದೆತಗಳಿಗೂ, ಕೆಲವರು ಸೈನಿಕರ ಕೋವಿಯ ಗುಂಡಿಗೂ ಒಳಗಾದದ್ದಾಗಿದೆ. ಸರ್ಕಾರದವರು ಕಾಂಗ್ರೆಸಿನವರೊಡನೆ ರಾಜಿಗೆ ಬಂದಿರುವದರಿಂದಲೇ ಸ್ವರಾಜ್ಯವು ಅರ್ಧ ದಾರಿಗೆ ತಲಪಿದೆಯೆಂದು ವಿಷದವಾಗುತ್ತದೆ. ಇನ್ನು ಹೇಗೂ ಸ್ವರಾಜ್ಯವು ದೊರೆಯದೆ ಹಿಂದೀಯರು ಸುಮ್ಮನಿರಲಾರರು. ಗುಲಾಮಗಿರಿಯಲ್ಲಿ ಇನ್ನು ಬದುಕಬಾರದೆನ್ನುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಹಿಂದೀಯರ ಈ ಭಾವನೆಯನ್ನು ತಡೆಯಲು ಇನ್ನು ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ ಸ್ವರಾಜ್ಯವು ಸಮೀಪಿಸಿದೆ ಎಂಬುದರಲ್ಲಿ ಸಂದೇಹವಿಲ್ಲ. ಒಂದೆರಡು ವರ್ಷಗಳಲ್ಲಿಯೇ ಅದು ಹಿಂದೀಯರ ಕೈಸೇರುವುದು. ಪೂರ್ಣ ಸ್ವಾತಂತ್ರ್ಯವು ಇಷ್ಟು ಬೇಗನೆ ದೊರೆಯಲಾರದೆಂದು ಹೇಳುವ ಕೆಲವರು ಇರಬಹುದು. ಹೇಗೂ ಈಗಿನ ಸರ್ಕಾರ ಪದ್ಧತಿಯು ಬೇಗನೆ ಬದಲಾವಣೆ ಹೊಂದಿ ಜನರ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ಬರುವದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಆಗ್ಯೆ ಈಗಿನ ರಿಟ್ರೆಂಚ್‌ಮೆಂಟ್ ಕಮಿಟಿಯ ಶಿಫಾರಸ್ಸುಗಳನ್ನು ಯಾರೂ ಗಮನಿಸಲಾರರು. ಅವುಗಳು ಮೂಲೆಗೆ ಬಿಸಾಡಲ್ಪಡುವವು. ಅಲ್ಲಿಯವರೆಗಾದರೂ ಅವುಗಳನ್ನು ಜಾರಿಗೆ ತರಬಹುದೆಂದು ಕೆಲವರು ಅನ್ನಬಹುದು. ಆದರೆ ಕಮಿಟಿಯವರು ತಮ್ಮ ಕೆಲಸವನ್ನು ಪೂರೈಸಿ, ವರದಿ ಒಪ್ಪಿಸಿ, ಅದನ್ನು ಕೌನ್ಸಿಲಿನವರು ಚರ್ಚಿಸಿ, ಸರ್ಕಾರದವರು ಮಂಜೂರು ಮಾಡುವುದರೊಳಗೆ ಈಗಿನ ಸರ್ಕಾರವು ಬದಲಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ಈಗಿನ ಕಮಿಟಿಯ ಕೆಲಸವು ನಿರರ್ಥಕವಾಗುವುದು. ಸರ್ಕಾರದವರು ಜನರ ಕಣ್ಣು ಕಟ್ಟಲಿಕ್ಕೆ ಮಾತ್ರ ಇಂಥಾ ಕಮಿಟಿಗಳನ್ನು ನೇಮಿಸಿರುವದಾಗಿದೆ. ಜನರು ಈ ಮಾತಿನ ಅರ್ಥವನ್ನು ಇಂದಲ್ಲದಿದ್ದರೆ ಸ್ವಲ್ಪ ಸಮಯದ ನಂತರ ಅರಿತುಕೊಳ್ಳುವರು.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ [illegible] ಕರ್ತರು ಜವಾಬ್ದಾರರಲ್ಲ.

ಪಂದಿಯೂ, ಮಾರಿಯೂ?

ಮಹಾನುಭಾವರುಗಳೇ,

ಕೆಲವು ಜನ ಪಂದಿ ಎಣ್ಣುವ ಒರ್ ಕರತ್‌ರ [illegible] ಚಾಕಿತ್ ಅದಂಡ ಯರ್ಚನ ತಿಂಬ. ಈ ಮೃಗಕ್ಕ [illegible] ನುಷ್ಯಂಗ್ ಎಚ್ಚರ್ ಕೇಡ್ ಉಂಡ್‌ಂದ್ ಎಣ್ಣುವಾ[illegible] ನ್ ಅವಚ್ಚರ್ ಮಟ್ಟಿಕ್ ಆ ಕೇದಲ್ ವಿವರಿಚಿ[illegible].

ಇದ್ ಮೃಗತ್‌ಲ್ ಎಲ್ಲಾಗುಂಜಿ ಹೀನವಾನ್ [illegible] ಇದ್‌ನ ಚಾಕುವಯಿಂಡ ಮನೆವೂರ್ ಪೆತ್ ಕೊ[illegible]ಪ್ಪ. ಈ ಪ್ರಾಣಿ ವಾಸಮಾಡುವ ಮನೆರ ಪಟ್ಟ[illegible]ವು ಕೆತ್ತರ ಕುಂಡ್ ಮಾಡಿಯಂಡ್ ಎಕ್ಕಾಲೂ ಅ[illegible]ವ. ಈ ಕೆತ್ತ ಕುಂಡ್‌ಲ್ ಮಲೇರಿಯಾ ಪನಿರ [illegible] ಪುಟ್ಟಿತ್ ಆ ಮನೆಲ್ ಉಳ್ಳಯಿನೆಲ್ಲಾ ತೊಂದರೆ [illegible] ಪಂದಿನ ಚಾಕುವಯಿಂಡ ಮನೆ ಪನಿರ್ [illegible] ಮನೆರ ಪಟ್ಟಯಲ್ಲಾ ಈ ಮೃಗತ್‌ರ ಹೇಸಿಕೆಲ್ ದು[illegible] ನಡಪಕ್ಕ ಕಾಲ್‌ನ ಮುಂಡೆರ ಮೇಲೆ ಬೆಪ್ಪಂಡ್ ನ[illegible] ಚಾಪ.

ಈ ಪೂರಿಯ ಬೇಲ್‌ಲ್ ಉಳ್ಳ ಜೊಳೆನ್ನೆಲ್ಲಾ ತಿಂ[illegible] ತಿಂದಲಾಡ ನಿಲನಚ್ಚರ್ ಚಾಟಿತ್ ಭೂಮಿಲ್ ಪೂತ[illegible] ಮನೆರ ಕೋಟೆ ತೊಡಿಯತ್ ಎಂಥಾಚೇಂಗಿ [illegible] ಟ್ಟುತುಂಡೇಂಗಿ, ತೊಳ್ಳ ಕಲ್ಲ [illegible] ಕಕ್ಕಟ್ ಕಟ್ಟಿ[illegible] ಗ್ಯ ಸರಿ, ಆ ಕಕ್ಕಟ್ ಪೊಳಿಚಿತ್ ಕರಕರಿನ ತಿಂಗ[illegible] ದ್ ಬೈಟ್ ವರುವದಿಲ್ಲೇಂದ್ ಈ ಪ್ರಾಣಿ ಹಟ ಪುಡಿ[illegible]

ಅಕ್ಕಳ್ ಮೇವರ್ಕ್ ಉಳ್ಳ ಪಿಳ್ಳ ವೈದ್ಯದಾನತ್ [illegible] ಉಕ್ ಮಂಚಿತ್ ಅಕ್ಕಳ್ ಮೇಪಕ್ಕೆ ಪಿಳ್ಳ ಇಲ್ಲತ್ತ[illegible] ಮಾಡುವ. ಈ ಪ್ರಾಣಿಯ ಉಳ್ಳ ಮನೆಲ್ ಅತ್ತ ಒ[illegible] ವದ್ ಕಮ್ಮಿ. ಆರಂಭಗಾರ ಪ್ರತಿ ಕಾಲೋ ಅಕ್ಕಳ ಕ[illegible] ಕ್ಕ ಎಡ್‌ಕಾಡ್ ಅವಂಥ ಮಾಡಂಡಿಪ ಆ. ಎನ್ನಂಗ್ [illegible] ಚೇಂಗಿ, ಕೊಡಿಲ್ ಎಣ್ಣನನಕೆ ಪಿಳ್ಳ ವೈದ್ಯದಾನತ್‌ನ ಪ[illegible] ಯ ಉತ್ತಿತ್ ಪಾಳ್ ಮಾಡುವದ್ ಒರ್ [illegible] ಪೂಗ[illegible] ಳ್ ಕಂಡನೊ, ಕಾಡ್‌ನೂ ಅತ್ತರ್ ಕೊಡ್‌ಪಾರಂಡ ಒ[illegible] ಈ ನೀಚ ಪ್ರಾಣಿಯಕ್ಕ ಕೊಡ್‌ಪವೇ ಇಂಙಾನಿತ್ [illegible] ಪೊಣ್ಣುಳ್ಳ ಈ ಮಾಟಯುಳ ಚಾಕುವಾನಗೂ[illegible] ಅತ್ತಾಡ ಮೇಲೆ ಪ್ರೀತಿ ಕಮ್ಮಿ. ಎಲ್ಲಿಯಾಚೆಂಗ್ಯೂ [illegible] ಪಯ್ಯೂವೊ, ಎಮ್ಮೆಯೊ ಕಡ್‌ಚಿ ಇಟ್ಟತೆಂಗಿ ಬೆಯ ಪೋ[illegible]ಯಿತ್ ಅದಂಡ ಮೊಟೆಲ್ ಉಳ್ಳ ಪಾಲ್‌ನ ಕಡ್‌ಚಿಕ್ಕ [illegible] ದ ಕೊಡ್‌ಕತೆ ಪೂಡಿಯೇಡ್ ಬಪ್ಪ. ಅಲ್ಲತೆ ಅವಂಗ್ [illegible]ದ್ ತುಳಿ ನೀರ್ ಕೂಡ ಕೊಡ್‌ಪಾಲೆ. ಪಂದಿನ ಚಾಕುವ ನೂರ್ ಮನೆಕ್ ಪೋಯಿತ್ ಬೋಡ್‌ಚೇಂಗ್ಯೂ ಬಾಯಾರಿ ಆಡಕುವಕ್ಕ ಒರ್ ತುಳಿ ನೋರ್ ಕೆಟ್ಟಲೆ.

ಇಚ್ಚಕ್ಕೆಲ್ಲಾ ನಷ್ಟ ಪಟ್ಟಂಡ್ ಪಂದಿಂದೊನ್ನುವ ಮೂರಿನ ಚಾಕುವೆ ಎನ್ನಂಗ್? ಇದ್ ಎಣ್ಣುವರ್ ನಾಕ್ ಘಾರಾಣ ಆ[illegible]ಪ. ಕೆಲಕ್ಕಾಯಿತ್ ಮಾತ್ರ ಇದಂಡ ಯರ್ಚನ ತಿಂದವಂಡ ಗತಿ ಎನ್ನ್? ಮುಂಡೆರ್ ಮಂದ ಬುದ್ಧಿ ಪೂಡ್‌ಪ್‌ಚಿಟ್ಟವದ್ ಪಂದಿ ಪೆರ್ ಗುಂದ ಬುದ್ಧಿ ಉಳ್ಳದಾಯಿತ್ ಎಕ್ಕಾಲೂ ಪಂ[illegible]ಯಂಡ್ ಇಪ್ಪ. ಇದಂಡ ಯರ್ಚನ ತಿಂದವಂಡ ಗತಿಯೂ ಇನ್ನನೇ. ಪಂದಿಯರ್ಚನ ಜಾಸ್ತಿಯಾಯಿತ್ ತಿಂಬವಂಗ "ನೀನ್ ಎಣ್ಣಚೇಂಗಿ ನೀಡಪ್ಪಂಡ್ ಎಣ್ಣುವ" ಪಂದಿ ಗವ ಇಪ್ಪದ್ ಪಾಡಿಕ. ಮುಂಡ್‌ಣ್ ಬಯ್ಯಾಕ್ ಯೋಚನೆ ಮಾಡತೆ ಪೆರ್ ಕೆಟ್ಟ, ಕೆಲಸತ್‌ನ ಮಾಡಿಚಿರುವಂಥ ಕೆಟ್ಟ ಸ್ವಭಾವತ್‌ನ ಈ ಯರ್ಚ ಉಂಟ್ ಮಾಡಿಚಿಪ. ಈ ಯರ್ಚನ ತಿಂಬ ಅಪ್ಪ ಅಪ್ಪಂಗಡ ಮಕ್ಕ ಪೆತ್ ಅಪಸ್ಮಾರ ರೋಯಲ (ಫಿಟ್ಸ್) ತಿಂಜಿ ಕಷ್ಟಪಡುವ. ಪಂದಿ ಯರ್ಚನ ತಿಂದವು ತುಂಬ ಮುಂಡೆರ್ ಪತ್ತ್ ಸುಂಡ್‌ನ ಒಡ್‌ತಿಯವ ಕ್ಕಾಯಿತ್ ಪೆತ್ ದಿನಕ್ಕೆತ್ತನಕೆ ಬೊಳ್ಳಿಕಳ್ಳ, ಬೆಲ್ಲನಾರಾಯಿಕ್‌ನ್ನೆಲ್ಲಾ ಕುಡಿಪ ಹಿಂದೂ ಧರ್ಮತ್‌ಲ್ ಅಂಬನೇ ಮಹಾಪಾತಕವಾಯಿತುಳ್ಳ ಸುರ ಪಾನತ್‌ನ ಕೂಡ ಈ ನೀಚ ಪ್ರಾಣಿರ ಯರ್ಚ ಜನರ್ ಅಭ್ಯಾಸ ಮಾಡ್‌ಚಿಟ್ಟಿತ್ ಅ[illegible] ಯಿನ ಕೇಡ್‌ತುವದ್ ನೋಟ್‌ಚೆಂಗಿ ಆರ್‌ಕ್ ಕೂಡ ದುಃಖವಾಗತೆ ಇಕ್ಕ? ಇದುಂಡ ಯರ್ಚನ ತಿಂಬಯಿಂಗ್ ಎಚ್ಚರ್ ಮುಖರ್ದಿ ಕೆಟ್ಟುವ ಎಣ್ಣುವದ್ ತಿಂಬಯಿಂಗೇ ಗೆ[illegible]ತ್ತಕ್ಕಾನಗೊಂಡ್ ಇಲ್ಲ ಅದ್‌ನ ಮಾರ್ಚಿರುಳೆ ಒರ್ ಸಮಾಚಾರ್ ನಡ್ಪ ಒಪ್ಪ ಅನಾಚಾರತ್‌ನ ತಿದ್ದುವ್ ಭಾರತ ಸಮಾಜತ್ ಉಳ್ಳ ಯೋಗ್ಯಂಗ್ ಕಾಡ್‌ನ್‌ಪದಲ್ಲಾ? ಬುದ್ಧಿವಂತಂಗಳೂ, ದೇಶಹಿತೈಷಿಯುಳ್ಳ ಇಂಙಾತಿಚೆಂಗ್ಯೂ ಕಣ್ಣ ತೊರಂದಿತ್, ಇಂ ಮತ ಅನ್ಯಾಯತ್‌ಲ್ ಪಾಳಾಪದಿಂಗ್ ಬುದ್ಧಿವಾದ ಎಣ್ಣುತ್ ನಲ್ಲ ದಟ್ಟಿಲ್ ಕೊಂಡ್‌ಬಪ್ಪಕ್ಕಾಗ? ಚೆನ್ನಂಗ ಜನತ್‌ನಗೊಂಡ್ ಎಲ್ಲಾಕೂ ಅಪಕೀರ್ತಿಯಲ್ಲಾ? ಕಂಡಿತೂ ಕಾಣತಯಿನ್ನಳ ಇಙಾಡ ಕಣ್ಣ ಮುಚ್ಚಿಯಾಂಡ್ ಇಪ್ಪದ್ ನಂಯಲ್ಲ.

"ಕೊಡವ"

ಪ್ರೈಮರಿ ಪರೀಕ್ಷೆ

ಮಾನ್ಯ ಸಂಪಾದಕರೇ,

ವೀರಾಜಪೇಟೆಯ ಪ್ರೈಮರಿ ಪರೀಕ್ಷೆಯು ನಡೆದು ಹೆಚ್ಚು ಕಮ್ಮಿ ಎರಡು ತಿಂಗಳುಗಳಾದವು. ಆದರೆ ಇದು ವರೆಗೂ ಆ ಪರೀಕ್ಷೆಯ ಫಲಿತಾಂಶವು ಗೊತ್ತಾಗಿರುವುದಿಲ್ಲ. ಆ ಸೋಮವಾರವೇ ವೀರಾಜಪೇಟೆಯ ಹೈಸ್ಕೂಲ ತೆರೆಯಲ್ಪಡುತ್ತಿದೆ. ಆಗ ಇದು ವರೆಗೂ ಪ್ರೈಮರಿ ಪರೀಕ್ಷೆಯ ಫಲಿತಾಂಶವು ಗೊತ್ತಾಗದೆ ಇರುವುದು ಕೊಂಚ ಆಶ್ಚರ್ಯವೇ, ಅಲ್ಲ ವ್ಯಸನವೇ! ಇಷ್ಟು ಕಾಲಗಳ ವರೆಗೆ ಬೋರ್ಡ್ ಪರೀಕ್ಷೆ ಎಂಬ ಗಾಂಭೀರ್ಯದ ಹೆಸರಿನಿಂದ ನಡೆಯುತ್ತಿದ್ದ ಪರೀಕ್ಷೆಗೂ, ಈಗ ನಡೆಯುವ ಬರೀ ಎಡ್ಮಿಷನ್ ಟೆಸ್ಟ್ ಎಂಬ ಬಹು ವಿನಯವಾದ ಹೆಸರಿನಿಂದ ನಡೆಯುವ ಪರೀಕ್ಷೆಗೂ ಯಾವುದಾದರೂ ಭೇದವಿದೆಯೋ? ಮೊದಲು ಕೋಳಿನು, ಕೋಳಿನೆಂದೆನ್ನುತ್ತಿದ್ದರು. ಈಗಲೋ ಕೋಳಿನ ಗರ್ವ ಸುಲಿದು ಬಡ ಕುರಿಯೆಂಬ ಹೆಸರಿಟ್ಟರೂ, ಅದು ಸಿಂಹದ ಮರಿಯಂತೆ ಕಾಣುತ್ತೆ. ವಿತರ್ಕನ ಏನು? ಹೆಚ್ಚು ಕಮ್ಮಿ 160ರಷ್ಟು ಪರೀಕ್ಷೆಗೆ ಹೋದ ಹುಡುಗರ ಪೈಕಿ 40 ಹುಡುಗರನ್ನು ಮಾತ್ರ ಹೈಸ್ಕೂಲಿಗೆ ತೆಗೆದುಕೊಳ್ಳುತ್ತೇವೆಂಬುದಾಗಿ ಕೆಲವು ದಿವಸಗಳ ಹಿಂದೆ ವರ್ತಮಾನವುಂಟು. ಇತ್ತಲಾಗೆ ಒಟ್ಟು 20 ಹುಡುಗರನ್ನು ಮಾತ್ರ ಸೇರಿಸಿಕೊಳ್ಳುವಂತೆ ಶಾಲಾ ಇನಸ್ಪೆಕ್ಟರರು ಹುಕುಂ ಕೊಟ್ಟಿರ ವರಿಂದಾಗಿ ವರ್ತಮಾನ. ಆ ಶಾಲಾ ಇನಸ್ಪೆಕ್ಟರರು ಯಾರು? ಪ್ರೈಮರಿ ಪರೀಕ್ಷೆಗೆ ಹೋದ ಶೇಕಡ 13ರಷ್ಟು ಮಾತ್ರ ಮೇಲಿನ ತರಗತಿಗೆ ಅರ್ಹರಾದರೆ, ಬಾಕಿಯ ಶೇಕಡ 87ರಷ್ಟು ಹುಡುಗರ ಪಾಡೇನು? ಇವರನ್ನು ಏನು ಮಾಡಲು ಶಾಲಾ ಇನಸ್ಪೆಕ್ಟರರು ಯೋಚಿಸುವರು! ಮತ್ತು ಸಂಪಾದಕರೇ ಇವರನ್ನು ಏನು ಮಾಡಲು ಯೋಚಿಸಿರುತ್ತೀರಿ ಮಕ್ಕಳ ತಂದೆಗಳೇ ಎದ್ದೇಳಿ

ಕೆ ಯಂ ಪಿ

ಲಗ್ನವೇ?

(ಭೋಗ ಷಟ್ಪದಿ)

ಒಂದು ದಿನ ಮಂದಿರದಲಿ
ಚಂದದಿಂದ ನೋಡುತಿರಲು
ಅಂದೆ ಕಂಡೆ ಮುಂದಕಿರುವ ತೊಂದರೆಗಳಾ |
ಬಂದು ಸಂದ ನೆಂಟರೆಲ್ಲ
ಅಂದದಿಂದ ಕಳಿತಿರಲು
ಮುಂದು ಬಂದ ಕಂದನನ್ನು ತಂದು ಇರಿಸಿದರ್ ||೧||

ಮುಖದಲೆಲ್ಲ ಮುಗುಳು ನಗೆಯು
ಸುಖಿತವಾಂತ ಸುಖವು ತುಂಬಿ
ಸಖರು ಎಲ್ಲಾ ನೋಡದಂತಾಡುತ್ತಿದ್ದರು |
ಆಕಟಾ ಬಂತು ವರ್ತಮಾನ
ಸುಖದ ಬೋಜನವು ಎಂದು
ಕಳುತ ಎಂದು ಓಡಿದರು ವೃಕಗಳಂತೆಯೇ ||೨||

ಎಲ್ಲಿ ಕುಸ್ತಿ ಎಲ್ಲಿ ಕೋಪ
ಅಲ್ಲಿ ತುಂಬಿ ತುಳುಕುತಿಹುದು
ಒಲ್ಲಿದರು ಬಡವರನ್ನು ನೂಕುತಿದ್ದರು
ಗಲ್ಲವಿಲ್ಲ ವಿಮಾನ ಇಲ್ಲ
ಒಲ್ಲೆಯೆಂದು ಹೇಳ್ವನಿಲ್ಲ
ಎಲ್ಲರಲ್ಲು ಪದ್ಯದಾಸೆ ತುಂಬಿ ತುಳುಕಿತು ||೩||

ಚಿನ್ನವನ್ನು ಕೊಟ್ಟ ಜನರು
ಅನ್ನವನ್ನು ನೋಡರಾರು
ಬಿನ್ನವನ್ನು ಪಡುವರವರು ಬಂದಕಾಗಿಯೇ
ಚಿನ್ನದಂತಾ ಪಾಕವ
ಮುನ್ನ ಎಲ್ಲಿ ತರುವರೆಂದು
ಸನ್ನೆಯಿಂದ ಅಲ್ಲಿ ಇಲ್ಲಿ ಕೇಳುತ್ತಿದ್ದರು ||೪||

ವಿಷದ ಬಲವು ಮುಂದು ಬರಲು
ತೃಷೆಯು ಎಲ್ಲರಿಗು ಆಯಿತು
ನೃಪವರಂತೆ ಕತ್ತನೆತ್ತಿ ನೋಡುತ್ತಿದ್ದರು
ಮಸೆಯುತಿಹರು ಹಲ್ಲುಗಳನು
ಎಸಪ ಎತಿಹರು ಓಪ ನೋಟ
ತೃಷೆಯ ತಡೆಯಬಾರದಾಗ ಗಳಿಗೆಯೊಂದಕೆ ||೫||

ಮುದುಕನಾನು ಒಲ್ಲೆನೆಂದು
ಇದ ನಾನು ಬಿಡೆನು
ಒದ ಕೆದವರು ಯಾರು ಇಂದ ಪೇಳಿಲ್ಲವೂ
ಅಧಿಕವಾಯಿತ ಆಶ್ಚರ್ಯವು
ಮುದುಕಿಯ ಒಳ ಕುದಿಯುತೊಡಗಿ
ಅಧಿಕ ನಾರಿಯರು ಅವ ಸೇರಿಕೊಂಡರು ||೬||

ಚಪ್ಪರದ ಕ ವಿಯ ಅಂದ
ಒಪ್ಪಿ ಕೊನೆಯ ವರಗೆ ಸಹಾ
ತಪ್ಪಿ ಬೇಡವೆಂದು ಯಾರು ಹೇಳಲಿಲ್ಲವು
ಅಪ್ಪಾ! ಇದರ ಮಹಿಮೆ ಏನಂತು?
ತಪ್ಪು ಎಂದು ತಿಳಿಯುವುದೆಂತು?
ತಪ್ಪನೇನಾ ಮೂಲೆಯಲ್ಲಿ ಕುಳಿತು ನೋಡಿದೆ ||೭||

ಕ್ಷೀರ ಸಾಗರದ ಮುಂದು
ಸುರ ಅಸುರರು ಸೇರಿ ಅಂದು
ಜೋರಿನಿಂದ ಕಡೆಯಲ್ ಮೊದಲು ವಿಷ ಬಂದಿತು
ಜೋರಿತನಗಿ ವಿಷ್ಣು ಅದನ
ಸೇರಿ ಇದ್ದ ರಾಕ್ಷಸರಿಗೆ
ಯಾರ ಗುಣದ ಗರ್ವ ಅದು ಇತ್ತ ಅರಿಯರೆ? ||೮||

ಊಟವೇನೋ ತೀರಿತಪ್ಪದು
ಕೂಟಕಿಂದು ಕೆಡಿಸಿಗದರು
ನೋಟವೆಂತ ನೋಡಲಯ್ಯೊ ಆಟಗಾರರ
ಬೇಟೆಯಂತೆ ಕೂಗುತಿಹರು
ಪೇಟೆಬೀದಿಯೇನೊ ಇದು?
ದಾಟಿ ಮುಂದು ಬಂದು ನಾರ ದಿದ್ದರು ||೯||

ಹಿಗ್ಗಿ ಬಂದ ನೆಂಟರೆಲ್ಲ
ಒಗ್ಗಿ ಓಡಿ ಹೋಗುತಿಹರು
ಮಗ್ಗುಲಲ್ಲಿ ಯಾರು ಇಲ್ಲ ನೀತಿ ನುಡಿಯಲು
ಆಗ ಇದ್ದ ಚಂದವೆಂತು
ಈಗ ಇರುವ ಗಲಬೆಯೆಂತು
ಬೇಗ ಇದರ ಬೇರ ಕಿತ್ತು ಬಿಸುಡ ಬಲ್ಲಿರಾ ||೧೦||

ಬಾಷೆ ಇಲ್ಲ ಬಿಡ್ಡೀಸಲು
ದೇಶವೆಲ್ಲ ನಾಶವಾಯ್ತು
ಕಾಶಿ ದಕ್ಷಿಣದು ಎಂದು ಕೀರ್ತಿ ಮಾತ್ರವೇ
ಲೇಷದಷ್ಟು ಕಮ್ಮಿ ಮಾಡು
ನಾಶವಾಗದಂತೆ ನೋಡು
ಕೇಶವನ ಬೇಡಿಕೊಂಬೆ ಮರೆಯಬೇಡವೋ? ||೧೧||

ಸ. ಜಿ. ಸುಬ್ಬಯ್ಯ

"ರೂಪಾಯಿಗಳು 5-8-0 ಮಾತ್ರ.
ನಮ್ಮ ಉಚಿತ ಜೀವವಿಮೆಯು
ಅನೇಕ ಬಡಬಗ್ಗರನ್ನು ಕಾಪಾಡಿದೆ.
ನೀವೇಕೆ ಹೊಂದಬಾರದು?
ಈಗ ಆಗಲೇ 7?,000 ಜನಗಳು ಮೆಂಬರಾಗಿದ್ದಾರೆ.
ಮಾ ರೂ 2 00 000
ಬಡವರಿಗೆ ಭಾಗ್ಯಕಾಲ ಎಲ್ಲರಿಗೂ ಅನುಕೂಲ!!

WANTED.

Agents for Coorg on liberal Commission or decent pay per month

Apply to—

The Branch Secretary
The Venus Assurance Co., Ltd
Bore Bank Road,
Benson Town
Bangalore City.

12–6

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.
ಮಂಗಳೂರ ದ ಕನ್ನಡ

ಯಾವತ್ತೂ ಒಗೆಯ ರಬ್ಬರು ಮೋಹರುಗಳು ಕನ್ನಡಿಯ ನೈನ್ ಬೋರ್ಡ್, ಬ್ರಾಸ್ ಟೋಲ್ ಬ್ಲಾಕ್ ಇತ್ಯಾದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಬಾಳಿಕೆಗೆ ಬರುವಂತೆ ತಯಾರಿಸಿ ಕೊಡಲಾಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕಾಗಲೀ ಯಾ ನಮ್ಮ ಮಡಿಕೇರಿ ಏಜೆಂಟರು ಮೆ. ಯನ್ ಯನ್. ಪೊನ್ನಪ್ಪನವರಿಗಾಗಲೀ ಬರೆದುಕೊಳ್ಳುವದು.

12–11

ಎಂ. ಎಸ್. ಶಿದ್ದಪ್ಪ ಆಂಡ್ ಬ್ರದರ್ಸ್
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಸ್ಕಾರಲೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯು ಬಂದೋಬಸ್ತು ಆದ ಫೌಂಟನ್‌ಪೆನ್‌ಗಳು.				
ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ 3	0	0	
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0	
„ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0	
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0	
„ ಮೊಟಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0	
„ ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರವುನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0	
ಬಿಗ್ ಸ್ಕಾಟ್ ಫೌಂಟನ್‌ಪೆನ್ 1ಕ್ಕೆ	10	8	0	
[illegible]ರ್ ಪೆನ್ 1ಕ್ಕೆ	11 6 0, & 20	10	0	
[illegible]ರ್ ಫೌಂಟನ್‌ಪೆನ್ 1ಕ್ಕೆ	3 8 0 & 4	12	0	
[illegible]ನ್ ಫೌಂಟನ್ ಪೆನ್ 1ಕ್ಕೆ	6 4 0 & 6	12	0	
[illegible]ರ್‌ಸನ್ ಫೌಂಟನ್ ಪೆನ್ 1ಕ್ಕೆ	8 ? 0, & 8	10	0	

ಟೈಂ ಪೀಸ್‌ಗಳು.			
ಸ್ಟ್ಯಾಂಡ್ ಇರುವ ಸಾ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2		0
ಲಿಗಲಿಯಾ ಆಕಾರದ ಟೈಂಪೀಸ 1ಕ್ಕೆ 6 9 0, &	6	15	0
ಲಿಗಲಿಯ ಸಣ್ಣ ಸೈಜಿನ ಆಕಾರದ ಟೈಂಪೀಸ್ 1ಕ್ಕೆ	7	2	0
ಲಿಗಲಿಯಾ ಆಕಾರದ ಸ್ಕ್ರೂ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10	0
ಬಿಗ್‌ಬೆನ್ ಆಕಾರದ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಆಕಾರದ ಸ್ಟ್ಯಾಂಡ್ ಇದಕ್ಕೆ ಖಾತ್ರಿಯಾದ ಟೈಂಪೀಸ್ 1ಕ್ಕೆ	13	4	0
ಖಾತ್ರಿಯೂ ಬಂದೋಬಸ್ತು ಆದ ಪಾಕೆಟ್ ವಾಚ್ 1ಕ್ಕೆ	5	10	?
ಡಿಜೋ ನಮೂನೆಯಲ್ಲಿ ಎಬ್ರಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	1?	4	0
ನಿಕ್ಕಲ್ ಕೇಸ್ ಸಿಲೆಂಡರ್ ಮುವುಮೆಂಟ್ ಸಾಧಾರಣ ತರದ ರಿಸ್ಟ್ ವಾಚ್ 1ಕ್ಕೆ 5 4 0, 7 8 0 10 0 0 &	12	8	0



ಕ್ರೈಸ್ತ ಸಮಾಜದ ... ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3–6–0 ಸ್ಟ್ರೈಕಿಂಗ್ ಫೋಸ್ಟೇಜು ಅ ಲಾಯಿದಾ.

ಮನಿಯಾರ್ಡರ್ ರವಾನಿಸುವವಿಳಾಸ — ಎಂ. ಎಸ್ ಶಿದ್ದಪ್ಪ ಆಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52–47

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕ್, ಲಿಮಿಟೆಡ್- ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	23,160
ಜಮೂಬಂದ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೊರ್‍ತಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0 ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಖು 1–7–1930.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ
ಓರಿಯಂಟಲ್ ಜೀವವಿಮೆ ಕಂಪೆನಿಯು

ಅಭಿವೃದ್ಧಿಯೇ ಜನರಂಜಕವಾದುದೆಂಬುದು ಭಾರತದೇಶದ ಜೀವವಿಮೆ ಕಂಪೆನಿಗಳಲ್ಲೆಲ್ಲಾ ಅತ್ಯಂತ ಮಹೋನ್ನತವಾದ ಓರಿಯಂಟಲ್ ಜೀವವಿಮೆ ಕಂಪೆನಿಯು ಈಗಿನ ಸ್ಥಿತಿಯಿಂದ ಸಷ್ಟಸಿದ್ಧ.

ಹೊಸ ಕೆಲಸ.	ಪ್ರೀಮಿಯಂ ವರವೂನ
೧೯೨೭—೪೬೮ ಲಕ್ಷ ರೂಪಾಯಿಗಳು.	೧೯೨೭—೧೨೨ ಲಕ್ಷ ರೂಪಾಯಿಗಳು.
೧೯೨೮—೫೮೫ ಲಕ್ಷ "	೧೯೨೮—೧೪೦ ಲಕ್ಷ "
೧೯೨೯—೬೫೦ ಲಕ್ಷ "	೧೯೨೯—೧೬೧ ಲಕ್ಷ "

ಜನರಂಜನೆಯಿಂದ ಅಭಿವೃದ್ಧಿಕರವಾದ ಲಾಭವುಂಟು.

ಒಟ್ಟು ಜೀವವಿಮೆಯ ಪಾಲಿಸಿಗಳ ಮೇಲೆ ಕೊಟ್ಟಿರುವ ಬೋನಸ್ ಮೊಬಲಗು

೧೯೨೪ ಒಂದು ವರ್ಷಕ್ಕೆ ೧೦೦೦ ರೂಪಾಯಿಗಳಿಗೆ ೨೨|| ರೂಪಾಯಿಗಳು.

೧೯೨೭ " " " " ೨೫ "

ಆದುದರಿಂದ ನೀವು ಮೊದಲನೇ ಸಲವಾಗಲೀ ಅಥವಾ ಹೆಚ್ಚಿಗೆ ಕಂಪೆನಿಯಲ್ಲಿ ಜೀವವಿಮೆ ಮಾಡಬೇಕಾದರೆ ಜನರಂಜಕವಾದ ಮತ್ತು ಅಭಿವೃದ್ಧಿಕರವಾದ ಓರಿಯಂಟಲ್ ಜೀವವಿಮೆ ಕಂಪೆನಿಗೆ ಬರುವುದರಿಂದ ನಿನಗೆ ಲಾಭವುಂ.

ಪ್ರಾಸ್ಪೆಕ್ಟಸ್ ಇತ್ಯಾದಿ ಹೆಚ್ಚಿನ ವಿಷಯಗಳಿಗ

ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು—

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಎಂ. ವಿ. ಮುತ್ತುಕೃಷ್ಣ ನಾಯುಡ. ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

OR

52— 14

ಕೆ. ಪಿ. ಚಿಣ್ಣಪ್ಪ, ಏಜೆಂಟ್, ಮಡಿಕೇರಿ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು ಕೊಡುವುದರಿಂದ ಬಲಿಷ್ಠರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52–21 ಗಿರಿಗಾಂವ, ಮುಂಬಯಿ



ಮಲೇರಿಯಾವು ಮಲೆಜ್ವರ ಚಳಿಜ್ವರ ಉಷ್ಣಜ್ವರ, ದಾಪವಾಯಿದೆ ಕಟ್ಟಿ ಬರುವ ಎಲ್ಲಾ ವಿಧದ ಜ್ವರಗಳನ್ನು ಗೆದ್ದು ಪೂರ್ಣ ಗುಣಪಡಿಸಿ ದೇಹಕ್ಕೆ ಆರೋಗ್ಯ ಕೊಡುತ್ತದೆ

ಕ್ರಯ 8 ಔನ್ಸಿಗೆ 1–8–0 ½ ಡಜನಿಗೆ 8–8–0 1 16–8–0

ಪಿತ್ತ ರೋಗಕ್ಕೆ ಕಂಪೌಂಡು ಸಿರಪ್ ಕಾರ್ಡ.

ಪಿತ್ತಜ್ವರ ಕೈಕಾಲು ಬಚ್ಚಲು, ರಕ್ತ ಇಲ್ಲದೆ ಬಿಳ್ಳಗೆ, ಶರೀರ ರುಚಿ ಕೆಟ್ಟಿರುವ ನಾಲಿಗೆ ಅರಸಿನ ಬಣ್ಣ ಕಹಿಯ ಗೊಂಬೆ ಮತ್ತು ಶರೀರ ನಿಶಿಶಿತ ತಲೆ ತಿರುಗುವದು ಹೊಟ್ಟೆ ಉರಿ, ಎದೆ ಸುಡುವದು ನಾಲಿಗೆ ಒಣಗುವದು, ಮಲಮೂತ್ರಕ್ಕೆ ಭಂಗ ಪಿತ್ತ ಕಾರುವದು ನಿದ್ರೆ ಇಲ್ಲದೆ ಸಂಕಟವಾಗುವುದು ಈ ರೋಗಗಳನ್ನು ಕಂಪೌಂಡ್ ಸಿರಪ್ ಖಂಡಿತ ಗುಣ ಪಡಿಸುತ್ತದೆ ಕ್ರಯ ಬಾಟ್ಲಿಗೆ 3–8–0

ರಕ್ತ ಶುದ್ಧಿಗೆ, ಕಂಪೌಂಡ್ ಸಿರಪ್ ಸರ್ಸಪರಿಲ್ಲ

ಶರೀರದಲ್ಲಿ ಬೀಳುವ ಬೊಕ್ಕೆ, ಕುರು, ಬಿಚ್ಚಿಗಳು ಬೇಗ ಗುಣವಾಗದ ಹುಣ್ಣು ವ್ಯಾಧಿ ವಿವಿಧ ಬಗೆಯ ಚರ್ಮ ರೋಗ ಅತಿ ಶೀಘ್ರದಲ್ಲಿ ಗುಣಪಡಿಸಿ ರಕ್ತ ಸಂಪೂರ್ಣ ರುಚಿಯಾಗಿ ದೇಹದಲ್ಲಿ ಶುದ್ಧ ರಕ್ತವು ತುಂಬ ಆರೋಗ್ಯ ಕೊಡತಕ್ಕ ಬಂತೆಲ್ಲ ಕಂಪೌಂಡು ಸಿರಪ್ ಸರ್ಸ ಅಮೃತ ಎಂಬುದೇ ಬಾಟ್ಲಿಗೆ ರೂಪಾಯಿ 3–8–0

ಗರ್ಭಕೋಶದ ರೋಗಕ್ಕೆ, ಕಂಪೌಂಡ್ ಸಿರಪ್ ವಿಬರ್ನೋನ.

ತಿಂಗಳು ಗಟ್ಟಿಯ ಅಕ್ರಮ, ಹೊಟ್ಟೆನೋವು ಕೈಕಾಲುಗಳ ಸೆಳತ, ಕೋಶದ ಬಲಹೀನತೆ ವಾಯುಗಳ ಉಪದ್ರ, ರಕ್ತವು ಬೇಕಾದ ಹರಿಯುವ ನಿಂತು ಬಿಡುವದು ಅಲ್ಲದೆ ಸಮಯಕ್ಕೆ ಸ್ರಾವಿಸುವದು ಬಹುವಾಸನೆಯುಳ್ಳ ಕೆಡಕು ಇತ್ಯಾದಿ ಗರ್ಭಕೋಶದ ಎಲ್ಲಾ ಅವಸ್ಥೆ ರೋಗಗಳನ್ನು ಕಂಪೌಂಡು ಸಿರಪ್ ವಿಬರ್ನೋನ ಸಂಶಯವಿಲ್ಲದೆ ಗುಣಪಡಿಸಿ ಆರೋಗ್ಯ ಕೊಡುತ್ತದೆ ಕ್ರಯ ಬಾಟ್ಲಿಗೆ ರೂ 3–8–0

ಮಕ್ಕಳ ದೇಹದ ಪುಷ್ಟಿಗೆ—ಬೇಬಿಟೋನ.

ಎದೆ ಗೂಡು ಕಟ್ಟಿ ಹೊಟ್ಟೆ ದೊಡ್ಡದಾಗಿ ಕಂಡು ಕೈಕಾಲು ಕ್ಷೀಣ ಸೊಂಟಕ್ಕೆ ಬಲ ಇಲ್ಲದೆ ಇರುವದು ಜೀಡಿನ ಬಣ್ಣ ಮೂತ್ರ ಒಗ ಬಗೆ ತಂದ ಮಲ ಇತ್ಯಾದಿ ರೋಗಗಳು ಕಂಡು ಬೆಳೆಯುವಿಕೆಯನ್ನೂ, ಬಾಳುವಿಕೆಯನ್ನೂ ಕುಂದಿಸುವ ಈ ಆಪತ್ತುಗಳನ್ನು ಟೋನ್ ಆಶ್ಚರ್ಯದಿಂದ ಗುಣ ಪಡಿಸುವದು ಕ್ರಯ ಬಾಟ್ಲಿಗೆ 1–4–0

ಶುದ್ಧ ಚಿಕಿತ್ಸಾ ಪದ್ಧತಿಗನುಸರಿಸಿ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ

ಪರೀಕ್ಷಿಸಿ ಕೊಡುವ ದೃಷ್ಟಿ ಚಕ್ರಗಳೂ ಅವುಗಳ ನಾನಾ ಬಗೆಯ ಸಾಮಾನುಗಳೂ ಬಿಸಲಿಗೆ ಇಡತಕ್ಕ ಒಳ್ಳೇ ತರದ ಕನ್ನಡಕ ನಮ್ಮಲ್ಲಿ ನ್ಯಾಯವಾದ ಕ್ರಯಕ್ಕೆ ದೊರಕುತ್ತದೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕ ಧರ್ಮಾರ್ಥ.

ಏಸ—ಮಲೇರಿಯ ಕಂಪೆನಿ,

52—30 ಹಂಪನಕಟ್ಟ, ಅಗಡಿ ಬೀ ನಂಬರು 14, ಮಂಗಳೂರು



12 bore Victor Cartridges Rs 10/- Per 100

Mahomedally-Noorbhoy.

ARMS & AMMUNITION MART.

321 Abdul Rahman Street.

52· 29 BOMBAY 3.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಿ ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜಂಟರುಗಳಿಗೆ ಏಜಂಟರವರ ಒಪ್ಪಿಗೆದಾರಿಕ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಉತ್ತರ ಕೊಡಗಿಗೆ ಮೆ, ಪಾಲೇಂಗಡ ಕಾರ್ಯಪ್ಪನವರು,

" ಮೆ ಚಾರಿಂ ಮಾದಯ್ಯನವರು,

ದಕ್ಷಿಣ ಕೊಡಗಿಗೆ ಮೆ ಅಲ್ಲಾರಂಡ ಮೇಪಿಪ್ಪನವರು,

" ಮೆ. ಅಮ್ಮಂಡ ಸುಬ್ಬಯ್ಯನವರು

ಮಡಿಕೇರಿ—ಮೆ. ಕೇಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಮುಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಶ್ರೀಮಂಗಲನಾಡು—ಮೆ. ಅಜ್ಜಮಾಡ ಪೂವಪ್ಪನವರು.

ಗೋಣಿಕೊಪ್ಪಲು—ಮೆ. ಐಮ್ಮಡ ಪೂವಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐಸುಡ ನಾಣಪ್ಪನವರು,

ಪೊನ್ನಂಪೇಟೆನಾಡು—ಮೆ ಸಿ ಜಿ ಮುದ್ದಯ್ಯನವರು

" ಮೆ ಸಣ್ಣುವಂಡ ಬೋಪ್ಪಯ್ಯನವರು ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,

ಸುವಿರ್ತೀ 1 ಕಿರಿಮಕ್ಕಿ—ಮೆ. ಬಿ ಮಾದಯ್ಯನವರು

ಶನಿವಾರಸಂತೆ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯನವರು

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಸ್ಕೀಮಿಯೊಟ್ಟು ಮೊಂಬರನ್ನಿಸಿದ ಸರಕಾರದ ಅಮಿತ ಜವಾಬ್ದಾರಿ ಪತ್ರದ ಸಹಾಯಕ ಉಪನಿಬಂಧನೆಗಳೂ, ದಾನ ಬರೆದು ರಜಿಸ್ಟ್ರರು ಕಳುಹಿಸಿದ್ದಾಗ ಅದು ಸರಿಯಾಗಿ ಬರೆಯಬೇಕೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಮಾಡಿ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರ ತಯಾರಿಸಲ್ಪಟ್ಟದಾವಾ ಫಾರಮುಗಳೂ, ನಾಪ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖಿದ್ದರ್ ಸ್ಟೋರ್‍ನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,

"ಕೊಡಗು" ಮಡಿಕೇರಿ

Printed & published by P. I. Belliappa at "Kodagu" Press, Merc[ara] for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸರ್ವೇನ ಭೂತದಯಯಾ ವಿದ್ಯಾ ನೀತಿ ಪ್ರಸಂತ್ಯಜಾ । ಐಕ್ಯಮತ್ಯೇನ ದೇಶಾನಾಂ ಸಂಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೧ನೇ ಇಸವಿ ಜೂನ್ ತಾರೀಕು ೫ ನೇ ಶುಕ್ರವಾರ.	ಸಂಚಿಕೆ ೧

Telegrams — "Precious"

V. Subramaniaier
Jeweller,
DIAMOND MERCHANT GOLD & SILVERSMITH.

Telephone :— 3145

Deals in all :—
SPORTS CUPS in all prices
MEADALS in up-to-date patterns
CASKETS in elegant styles

Nos. 2 & 3, Kuppumuthu st,
TIRUVATESWARANPET,
Post Box 423, Triplicane P. O.,
MADRAS.

Deals in all :—
GEM-SET JEWELS, set with Diamonds, Rubies etc,
GOLD ARTICLES of all patterns
SILVER WARE in latest style.

52-29



ಕಾಗದ ಬರೆದರೆ ಉಚಿತ
ಕ್ಯಾಟಲಾಗು ವಿಪಿ ಯಾಗಿ
ಕಳುಹಿಸಲ್ಪಡುವದು

ಕೋವಿಗಳು, ಕತ್ತಿಗಳು, ಬಿಚ್ಚುಗಳು, ಕೋವಿ ತೋಟಾ, ಕಾಡತೂಸುಗಳು, ಮತ್ತು ಬೇಟೆಯ ಎಲ್ಲಾ ಸಾಮಾನು ಬಹು ಕಡಿಮೆ ದರದಲ್ಲಿ ದೊರೆಯುವವು

GOOLAM HUSAIN ALLIBHOY & SONS.
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24-10

ಕಟುಕಷಾಯ ಮಲೆಜ್ವರಕೆ:—ಇದು ಅಂಜಾರ್ನ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಚಿ ಜ್ವರ, 3-4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರದ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0; 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14

ಮೂತ್ರ ಪ್ರಮೇಹ ರಕ್ತ ಕಷಾಯ

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ ಮೂತ್ರ ವಸಿಸಿದಾಗ ಹೋಗುವದು, ಮೂತ್ರಕೋಶದ ಉರಿ, ಮೂತ್ರ ಹಿಂದಣೆ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರ ನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯುವಕ್ಕೆ ಸಾಮರ್ಥ್ಯವಿಲ್ಲದಿರುವದು, ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ... ವರೆಗೆ ... ಔಷಧಿ ಬೆಲೆ ಬಾಟ್ಲಿ 1, 3 ಕ್ಕೆ ರೂ 1—1—0 1—8—0, ...—0

ಕೋಮನಾಶಿನಿ:— ... ತಲೆಯಲ್ಲಿ ... ಭಾಗಕ್ಕೆ ... ಬೆಲೆ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವದು, ತಲೆನವೆ, ಕಣ್ಣುರಿ ... ಮೈಗೂದಲು ... ನರಗಳ ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ... ಗುಣಮಾಡುತ್ತದೆ ... ಕೂದಲನ್ನು ... ಕೂದಲಿಗೆ ಸೌಂದರ್ಯವನ್ನೂ ... ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0 ... ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ—ಮನೋಲ್ಲಾಸಿನಿ ಕಂಪೆನಿ,
ಮಂಗಳೂರು.

ಬಾಲಾರ್ಕಮದು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ ಮಕ್ಕಳು ರೋಗ



ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿಯೂ, ಬಲವೂ ಬರುವದು ದಿನ ದಿನಕ್ಕೆ ಆರೋಗ್ಯವೂ, ಕಳೆಯೂ ಹೆಚ್ಚುವದು. ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ ಸೀಸೆ 1 ಕ್ಕೆ 12 ಆಣೆ. ಟಿ ಪಿ. 5 ಆಣೆ.

ಆರ್ಡರ್ ಜೊತೆಯಲ್ಲಿ ಅಡ್ವಾನ್ಸು ಮೊಬಲಗು ಕಳುಹಿಸಿ ಕೊಡತಕ್ಕದ್ದು ಅಡ್ವಾನ್ಸ್ ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲ

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ,
(ಮೈಸೂರು ಸೀಮೆ.)

52-21

ಕೊಡಗು.

ಸನ್ ೧೯೩೧ನೇ ಇಸವಿ

ಜೂನ್ ತಾ ೫ನೇ ಶುಕ್ರವಾರ.

ಕೊಡಗಿನಲ್ಲಿ ಸಿಬ್ಬಂದಿ ಖೋತೆ.

ದೇಶದ ಈಗಿನ ಆರ್ಥಿಕ ಹೀನ ಸ್ಥಿತಿಯಲ್ಲಿ ಸಿಬ್ಬಂದಿ ಖೋತೆಯ ಅವಶ್ಯಕತೆಯನ್ನು ಕುರಿತು ಸಂದೇಹ ಪಡುವವರೇ ಇಲ್ಲ. ರೈತನು ಬೆಳೆಸುವ ದವಸ ಧಾನ್ಯಗಳ ಬೆಲೆಯು ಕಡಿಮೆಯಾದ ಕಾರಣ ಅವನ ಗೃಹಕೃತ್ಯದ ಖರ್ಚನ್ನು ಹೇಗೆ ಕಡಿಮೆ ಮಾಡಬೇಕಾಗಿದೆಯೋ ಹಾಗೆಯೇ ಸರ್ಕಾರಕ್ಕೆ ಬರುವ ಉತ್ಪತ್ತಿಯು ಕಡಿಮೆಯಾದ ಕಾರಣ ಸರ್ಕಾರಿ ಆಡಳಿತದ ಖರ್ಚನ್ನು ಖೋತೆ ಮಾಡುವುದು ಅಗತ್ಯವಾಗಿದೆ. ಆದುದರಿಂದ ಇಂಡಿಯಾ ಸರ್ಕಾರದವರೂ, ಹಾಗೆಯೇ ಪ್ರಾಂತೀಕ ಸರ್ಕಾರಗಳೂ ಸಿಬ್ಬಂದಿ ಖೋತೆಯನ್ನು ಆಲೋಚಿಸುವ ಬಗ್ಗೆ ಕಮಿಟಿಗಳನ್ನು ನೇಮಿಸಿ ಅವು ವಿಚಾರಣೆಯ ಕಾರ್ಯಗಳನ್ನು ಪ್ರಾರಂಭಿಸಿವೆ. ಅದರಂತೆ ನಮ್ಮ ಕೊಡಗು ಸರ್ಕಾರದವರೂ ಒಂದು ಕಮಿಟಿಯನ್ನು ನೇಮಿಸಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಕಮಿಟಿಯವರು ಒಂದೆರಡು ಮೀಟಿಂಗುಗಳನ್ನು ನಡಿಸಿ, ಕೆಲವು ಪ್ರಶ್ನೆಗಳನ್ನು ತಯಾರಿಸಿ ದೇಶದ ಹಲ ಕೆಲವು ಮಹನೀಯರಿಗೆ ಅವರ ಅಭಿಪ್ರಾಯ ಕೊಡುವ ಬಗ್ಗೆ ಸದರಿ ಪ್ರಶ್ನೆಗಳನ್ನು ಕಳುಹಿಸಿ ಕೊಟ್ಟರೆಂತ ತಿಳಿಯಬರುತ್ತದೆ. ಸದರಿ ಪ್ರಶ್ನೆಗಳ ಸಂಖ್ಯೆಯು ಬಹಳ ಕಮ್ಮಿಯಾಗಿ ಅವು ಬಹಳ ಮೋಘಮೆಯಾದ ಕಾರಣ ... ಆಡಳಿತದ ಗುಟ್ಟು ಗೊತ್ತಿಲ್ಲದ ಉದ್ಯೋಗಸ್ಥರಲ್ಲದ ಮಹನೀಯರಿಗೆ ಸಮರ್ಪಕವಾದ ಅಭಿಪ್ರಾಯ ಕೊಡಲು ಕಷ್ಟವಾಗಿದೆ. ಕಮಿಟಿಯವರು ವಿವರವಾಗಿ ಪ್ರಶ್ನೆಗಳನ್ನು ಮಾಡಿದ್ದ ಪಕ್ಷ ದೇಶದವರ ಅಭಿಪ್ರಾಯವನ್ನು ಪಡೆಯಲು ಅನುಕೂಲವಾಗುತ್ತಿತ್ತು. ಈ ಕಮಿಟಿಯ ಉದ್ಯೋಗಸ್ಥರಲ್ಲದ ಮೆಂಬರುಗಳ ವಿಷಯದಲ್ಲಿ ದೇಶದವರಿಗೆ ತೃಪ್ತಿ ಉಂಟಾಗಿರುವುದಿಲ್ಲವೆಂದು ಈ ಮೊದಲೇ ಸೂಚಿಸಿದ್ದೆವು. ಈಗ ಅವರು ಅಭಿಪ್ರಾಯಕ್ಕಾಗಿ ಪ್ರಶ್ನೆಗಳನ್ನು ಕಳುಹಿಸಿರುವ ಮಹನೀಯರುಗಳ ಹೆಸರುಗಳೂ ದೇಶದ ಜನರ ಅತೃಪ್ತಿಯನ್ನು ಹೆಚ್ಚಿಸಿ, ಸದರಿ ಕಮಿಟಿಯ ಮೇಲೆ ಜನರಿಗಿದ್ದ ಅಲ್ಪ ವಿಶ್ವಾಸವೂ ಕೂಡ ಇಲ್ಲದಂತೆ ಆಗಿದೆಯೆಂದರೆ ತಪ್ಪಾಗಲಾರದು. ಇನ್ನು ಇವರು ಎಷ್ಟರ ಮಟ್ಟಿಗೆ ಜನಸಮ್ಮತವಾಗುವಂಥ ಸಿಫಾರಸ್ಸುಗಳನ್ನು ಬರೆದು ದೇಶದವರಲ್ಲಿ ಸಮಾಧಾನವನ್ನುಂಟುಮಾಡುವರೋ ನೋಡಬೇಕಾಗಿದೆ.

ಈ ಕಮಿಟಿಯವರ ಪ್ರಶ್ನೆ ಮಾಲಿಕೆಯಲ್ಲಿ ಕೆಲವು ಬಾಬುಗಳಿಗೆ ಕರ ಯಾ ಸುಂಕವನ್ನು ಹಾಕಿ ಸರ್ಕಾರದ ಉತ್ಪತ್ತಿಯನ್ನು ಯಾಕೆ ಹೆಚ್ಚಿಸಬಾರದೆಂದು ಕೇಳಿರುವರು. ಸಿಬ್ಬಂದಿ ಖೋತೆಯ ಕಮಿಟಿಯು ಕರ ಕಂದಾಯಗಳನ್ನು ಹೆಚ್ಚಿಸುವ ... ಯು ಮಾಡತಕ್ಕುದೆಂದರೆ ಆಶ್ಚರ್ಯವೇ ಸರಿ. ಇರುವ ಉತ್ಪತ್ತಿಯಿಂದ ಖರ್ಚನ್ನು ಸಾಧಿಸುವ ಏರ್ಪಾಡು ಮಾಡುವುದೇ ರಿಟ್ರೆಂಚ್‌ಮೆಂಟ್ ಕಮಿಟಿಯ ಕೆಲಸವಾಗಿರಬೇಕು. ಕರ ಕಂದಾಯಗಳನ್ನು ಹೆಚ್ಚಿಸಬೇಕಾದರೆ ಅದಕ್ಕೆ ಟೇಕ್ಸೇಷನ್ ಕಮಿಟಿ ಎಂಬ ... ಒಂದು ಕಮಿಟಿಯು ನೇಮಿಸಲ್ಪಡಬೇಕಿತ್ತು. ಇಂಥಾ ಕಮಿಟಿಗೆ ಈ ಕಾಲದಲ್ಲಿ ಎಡ ಇಲ್ಲ. ಸರ್ಕಾರಕ್ಕೆ ಉತ್ಪತ್ತಿ ಹೇಗೆ ಕಡಿಮೆಯಾಗಿದೆಯೋ ಹಾಗೆಯೇ ವ್ಯವಸಾಯಗಾರರ ಹುಟ್ಟುವಳಿಯೂ ಕಡಿಮೆಯಾಗಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದುದರಿಂದ ರೈತರ ಆರ್ಥಿಕ ಕಷ್ಟ ಸ್ಥಿತಿಯನ್ನು ಪರಿಹರಿಸಲು ಅವರು ಸರ್ಕಾರಕ್ಕೆ ಕೊಡುತ್ತಿರುವ ಹಲವು ತರದ ತೆರಿಗೆಗಳನ್ನು ಕಡಿಮೆ ಮಾಡಬೇಕಾದದ್ದು ಆವಶ್ಯ. ಅದರ ಬದಲು ಪುನಹ ಹೊಸ ತೆರಿಗೆಗಳನ್ನು ಅವರ ಮೇಲೆ ಸೀದಾ ಅಲ್ಲದಿದ್ದರೂ ಬಳಸಿಕೊಂಡು ಬರುವಂತೆ ಹಾಕುವುದು ಎಂದೂ ನ್ಯಾಯವಲ್ಲ. ಭತ್ತವೇ ಮೊದಲಾದ ವ್ಯವಸಾಯಗಾರರ ಹುಟ್ಟುವಳಿಯ ಧಾನ್ಯಗಳ ಬೆಲೆಯು ಬಹಳ ಇಳಿದಿರುವ ಈ ಕಾಲದಲ್ಲಿ ಹೊಸ ತೆರಿಗೆಗಳನ್ನು ಅವರ ಮೇಲೆ ಹೊರಿಸುವುದನ್ನು ದೇಶದವರು ಸಂಪೂರ್ಣ ವಿರೋಧಿಸುತ್ತಾರೆಂದು ದೃಢವಾಗಿ ಹೇಳಬಲ್ಲೆವು. ಅಲ್ಲದೆ ಕಳೆದ ವರ್ಷಗಳ ಹಿಂದೆ ಸೆಟ್ಲ್‌ಮೆಂಟಿನಲ್ಲಿ ಭೂಮಿಯ ಕಂದಾಯವನ್ನು ಹೆಚ್ಚಿಸಿದರು. ಇತ್ತೀಚೆಗೆ ಡಿಸ್ಟ್ರಿಕ್ಟ್ ಬೋರ್ಡ್ ಸೆಸ್ಸನ್ನು ಡಬ್ಬಲ್ ಮಾಡಿದರು, ಕೋರ್ಟ್ ಫೀ ಮತ್ತು ಸ್ಟಾಂಪಿನ ದರ ಏರಿಸಿದರು, ಅಂಚೆಯಲ್ಲಿ ಸ್ಟಾಂಪಿನ ಕ್ರಯವನ್ನು ಹೆಚ್ಚಿಸಿದರು. ಇಷ್ಟೆಲ್ಲಾ ಸಾಲದೆ ಇನ್ನು ಪುನಹ ಜನರ ಮೇಲೆ ಹೊರೆಯನ್ನು ಹೊರಿಸುವುದು ತುಂಬಾ ಅನ್ಯಾಯ ಮತ್ತು ಅಸಮಾಧಾನಕರ.

ಹೆಚ್ಚಿನ ತೆರಿಗೆಗಳನ್ನು ಹಾಕುವ ಪ್ರಶ್ನೆ ಬಿಟ್ಟರೆ ಇನ್ನು ರಿಟ್ರೆಂಚ್‌ಮೆಂಟ್ ಕಮಿಟಿಯವರು ಮಾಡಬೇಕಾದ ಕೆಲಸವೇನೆಂದರೆ ಕಂಬಳಿ ಇರುವಷ್ಟು ಕಾಲು ನೀಡು ಎಂತೆ ಮಾಡುವುದೇ ಆಗಿದೆ. ಉತ್ಪತ್ತಿಗೆ ಸರಿಯಾಗಿ ಖರ್ಚು ಖೋತೆ ಮಾಡಬೇಕು. ಈಗಾಗಲೇ ಬ್ರಿಟಿಷ್ ಹಿಂದೂಸ್ತಾನದವರಿಂದ ಸರ್ವಮಾನ್ಯರೆಂದು ಭಾವಿಸಲ್ಪಟ್ಟಿರುವ ಇಂಡಿಯನ್ ನೇಶನಲ್ ಕಾಂಗ್ರೆಸಿನವರು ಮುಂದಿನ ಆಡಳಿತ ಕ್ರಮದಲ್ಲಿ ಎಂತಹವರಾಗಿಯಾದರೂ ಉದ್ಯೋಗಸ್ಥನಿಗೂ ಮಾಹೆಯಾನ 500 ರೂಪಾಯಿಗಿಂತ ಹೆಚ್ಚು ಸಂಬಳ ಕೊಡಬಾರದೆಂದು ಸೂಚಿಸಿರುವರು. ಈ ಸೂಚನೆಗೂ ಈಗ ಜಾರಿಯಲ್ಲಿರುವ ಆಡಳಿತ ಕ್ರಮಕ್ಕೂ ಆಗಾಧ ಅಂತರ ವ್ಯತ್ಯಾಸವಿದೆ. ಒಂದೆರಡು ವರ್ಷಗಳಲ್ಲಿ ಈಗಿನ ಸರ್ಕಾರ ಕ್ರಮವು ಬದಲಾಗುವುದರಲ್ಲಿ ಏನೊಂದೂ ಸಂಶಯವಿಲ್ಲ. ಅಂಥಾ ಪ್ರಜಾ ಜವಾಬ್ದಾರಿ ಸರ್ಕಾರದಲ್ಲಿ ಕಾಂಗ್ರೆಸ್ ಪಕ್ಷದವರು ಪ್ರಬಲರಾಗಿರುವುದೇನೂ ಖಂಡಿತ. ಆಗ್ಯೆ, ಪ್ರಪಂಚದ ಯಾವ ಭಾಗದಲ್ಲಿಯೂ ಇಲ್ಲದೆ ಇರುವ ಹಿಂದೂಸ್ಥಾನದ ಈಗಿನ ದುಂದುಗಾರಿಕೆಯ ಆಡಳಿತ ಕ್ರಮವು ಸಿಬ್ಬಂದಿ ಖೋತೆಯ ಕತ್ತರಿಯಿಂದ ಚೆನ್ನಾಗಿ ಕತ್ತರಿಸಲ್ಪಟ್ಟು, ವ್ಯವಸಾಯಗಾರರ ಹೆಗಲು ಮುರಿಯುವಂತಿರುವ ಈಗಿನ ತೆರಿಗೆಗಳ ಭಾರವು ಕಡಿಮೆ ಮಾಡಲ್ಪಡುವುದು. ಈಗ ಕಾಂಗ್ರೆಸಿನವರು ಅಧಿಕಾರದಲ್ಲಿ ಇಲ್ಲದೆ ಇರುವುದರಿಂದ ಆಡಳಿತ ಖರ್ಚಿನ ಅವರ ಅಭಿಪ್ರಾಯವನ್ನು ಸದ್ಯದಲ್ಲಿ ಜಾರಿಗೆ ತರಲು ಸಾಧ್ಯವಿಲ್ಲದಿದ್ದರೂ ಬಹು ಬೇಗನೆ ಅವರು ಅಧಿಕಾರಕ್ಕೆ ಬರುವ ಕಾರಣ ಅವರ ಸಿಬ್ಬಂದಿ ಖೋತೆಗೆ ಉದ್ಯೋಗಸ್ಥರು ಈಗಿನಿಂದಲೇ ತಯಾರಾಗುವುದು ಉಚಿತವಾಗಿದೆ. ಆದಕಾರಣ ಈಗಿನ ದುಂದುಗಾರಿಕೆಯ ಕ್ರಮಕ್ಕೂ, ಕಾಂಗ್ರೆಸಿನವರ ಮಿತವ್ಯಯದ ಕ್ರಮಕ್ಕೂ ಮಧ್ಯ ತರಗತಿಯಲ್ಲಿ ಕೊಡಗಿನ ಸರ್ಕಾರದಲ್ಲಿ ಹೇಗೆ ಸಿಬ್ಬಂದಿ ಖೋತೆ ಮಾಡಬಹುದೆಂಬುವುದನ್ನು ಈ ಕೆಳಗೆ ಸೂಚಿಸಿರುತ್ತೇವೆ. ಇದರಂತೆಯಾಗಲೀ, ಹೆಚ್ಚು ಕಮ್ಮಿ ಇದಕ್ಕೆ ಹೋಲುವಂತೆಯಾಗಲೀ ಆಡಳಿತ ಖರ್ಚನ್ನು ಕಡಿಮೆ ಮಾಡದೆ ಹೋದರೆ ಇಲ್ಲಿಯ ಸರ್ಕಾರವನ್ನು ಉತ್ಪತ್ತಿಗೆ ಸರಿಯಾಗಿ ಜನರಿಗೆ ಪ್ರಯೋಜನವಾಗುವಂತೆ ನಡಿಸಲು ಇನ್ನು ಮುಂದೆ ಸಾಧ್ಯವಾಗಲಾರದು. ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಟ್ಟು, ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಕೊಡಬೇಕನ್ನುವವರು ಸಿಬ್ಬಂದಿ ಖೋತೆಯ ವಿಷಯಕ್ಕೆ ತುಂಬಾ ಸಿಗಕೊಡಬೇಕಾಗಿದೆ. ಕೊಡಗಿನ ಸಣ್ಣ ಉತ್ಪತ್ತಿಯಿಂದ ಪ್ರತ್ಯೇಕ ಪ್ರಾಂತೀಕ ಸರ್ಕಾರವನ್ನು ದೇಶಕ್ಕೆ ಪ್ರಯೋಜನವಾಗುವ ರೀತಿ ನಡಿಸಲು ಸಾಧ್ಯವೋ ಎಂಬದನ್ನು ತೋರಿಸಲು ಅವರಿಗೆ ಇದೊಂದು ಎಡೆ ದೊರೆತಂತಾಗಿದೆ.

ಈ ಚಿಕ್ಕ ಪ್ರಾಂತ್ಯಕ್ಕೆ ಐದು ಇಂಪೀರಿಯಲ್ ಉದ್ಯೋಗಸ್ಥರ ಆವಶ್ಯಕತೆ ಇರುವುದಿಲ್ಲ. ಮಾತ್ರವಲ್ಲ ಇದು ... ದೊಂದು ದುಂದುಗಾರಿಕೆಯೇ ಆಗಿದೆ. ಈ ಐದು ಉದ್ಯೋಗಗಳಲ್ಲಿ ಸಿವಿಲ್ ಸರ್ಜನರ, ಚೀಫ್ ಫಾರೆಸ್ಟ್ ಆಫೀಸರ್, ಎಗ್ಸಿಕ್ಯೂಟಿವ್ ಇಂಜಿನೀಯರ ಮತ್ತು ಸ್ಕೂಲ್ ಇನ್‌ಸ್ಪೆಕ್ಟರ ಉದ್ಯೋಗಗಳನ್ನು ಇಂಪೀರಿಯಲ್ ಗ್ರೇಡಿನಿಂದ ತೆಗೆದುಹಾಕಬೇಕು. ಕಮಿಷನರೊಬ್ಬರು ಮಾತ್ರ ಇಂಪೀರಿಯಲ್ ಗ್ರೇಡಿನಲ್ಲಿದ್ದರೆ ಸಾಕು. ಅವರ ಸಂಬಳವು ತಿಂಗಳಿಗೆ ರೂ 750 ರಿಂದ 1000 ದ ವರೆಗೆ ಮಾತ್ರ ಇರತಕ್ಕದ್ದು.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಸಂಬಳವು ರೂ 600 ರಿಂದ 900 ರ ವರೆಗೆ ಇರುವುದರ ಬದಲು ರೂ 400ರಿಂದ 600 ರ ವರೆಗೆ ಇರತಕ್ಕದ್ದು. ಇಬ್ಬರು ಸುಬೇದಾರರಿಗೆ ರೂ 100 ರಿಂದ 150ರ ವರೆಗೆ ಸಂಬಳ ಕೊಟ್ಟು, ಅವರ ರೆವಿನ್ಯೂ ಕೆಲಸದೊಂದಿಗೆ ಸಹಕಾರಿ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರರಾಗಿ ನೇಮಿಸಲ್ಪಡಬೇಕು. ಕಮಿಷನರವರು ಸಹಕಾರಿ ಸಂಘಗಳ ಮತ್ತು ಕಂಪನಿಗಳ ರಿಜಿಸ್ಟ್ರಾರರಾಗಿರತಕ್ಕದ್ದು. ಸುಬೇದಾರರಿಗೆ, ಪಾರುಪತ್ಯಗಾರರಿಗೆ ಮೇಜಿಸ್ಟ್ರೇಟ್ ಅಧಿಕಾರ ಇರುವುದು. ಪಾರುಪತ್ಯಗಾರರ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಕಛೇರಿಯ ಶಿರಸ್ತೇದಾರರ ಮತ್ತು ರೆವೆನ್ಯೂ ಆಫೀಸು ಹೆಡ್ ಗುಮಾಸ್ತರ ಸಂಬಳವು ರೂಪಾಯಿ 50ರಿಂದ 75ರ ವರೆಗೆ ಇರಬೇಕು.

ಚೀಫ್ ಫಾರೆಸ್ಟ್ ಆಫೀಸರರ ಸಂಬಳವು ರೂ 300 ರಿಂದ 500ರ ವರೆಗೆ ಇರಬೇಕು. ಈಗಿರುವ ಎರಡು ಎಕ್ಸ್‌ಟ್ರಾ ಅಸಿಸ್ಟೆಂಟ್ ಕನ್‌ಸರ್ವೇಟರರ ಹುದ್ದೆಯು ಬಜವಾಗಬೇಕು. ಎರಡು ರೇಂಜ್ ಆಫೀಸರುಗಳು ಮಾತ್ರ ಇದ್ದರೆ ಸಾಕು. ಅವರ ಸಂಬಳವು ರೂ 75 ರಿಂದ 125ರ ವರೆಗೆ ಇರಬೇಕು. ಫಾರೆಸ್ಟ್ ಆಫೀಸು ಮೇನೇಜರಿಗೆ ರೂ 75ರಿಂದ 100ರ ವರೆಗೆ ಸಂಬಳವಿರಬೇಕು.

ಎಗ್ಸಿಕ್ಯೂಟಿವ್ ಇಂಜಿನಿಯರರವರ ಸಂಬಳವು ರೂ 300 ರಿಂದ 500ರ ವರೆಗೆ ಇರಬೇಕು. ಇವರ ಕೆಲಸದೊಂದಿಗೆ ಇವರ ಒಂದು ಸಬ್ ಡಿವಿಜನಿನ ಚಾರ್ಜನ್ನು ವಹಿಸಿಕೊಳ್ಳಬೇಕು. ಇನ್ನೊಂದು ಸಬ್ ಡಿವಿಜನಿಗೆ ಒಬ್ಬ ಅಪ್ಪರ್ ಸಬಾರ್ಡಿನೇಟ್ ಪರೀಕ್ಷೆಯಾದವನನ್ನು ರೂ 75 ರಿಂದ 150ರ ವರೆಗಿನ ಸಂಬಳದಲ್ಲಿ ನೇಮಿಸಬೇಕು. ಸೆಕ್ಷನ್ ಆಫೀಸ್ ... ಲೋವರ್ ಸಬಾರ್ಡಿನೇಟರುಗಳಿಗೆ ರೂ 50ರಿಂದ 80ರ ವರೆಗೆ ಸಂಬಳವಿರಬೇಕು. ಪಿ ಡಬ್ಲ್ಯೂ ಡಿ ಆಫೀಸು ಮೇನೇಜರರಿಗೆ ರೂ 100 ರಿಂದ 150ರ ವರೆಗೆ ಸಂಬಳ ಕೊಡಬೇಕು.

ಸಿವಿಲ್ ಸರ್ಜನರವರಿಗೆ ರೂ 300 ರಿಂದ 500ರ ವರೆಗೆ ಸಂಬಳವಿರಬೇಕು. ವೀರರಾಜಪೇಟೆ ಆಸತ್ರೆಯ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಸರ್ಜನರಿಗೆ ರೂ 100 ರಿಂದ 150ರ ವರೆಗೆ ಸಂಬಳ ಕೊಡಬೇಕು. ಸಬ್ ಅಸಿಸ್ಟೆಂಟ್ ಸರ್ಜನರುಗಳ ಸಂಬಳವು ರೂ 50 ರಿಂದ 100ರ ವರೆಗೆ ಇರತಕ್ಕದ್ದು. ಡಾಕ್ಟರುಗಳಿಗೆ ರೋಗಿಗಳನ್ನು ಖಾಸಗಿಯಾಗಿ ಉಪಚರಿಸುವ ಉತ್ಪತ್ತಿ ಇರುವ ಕಾರಣ ಮೇಲಿನ ದರವು ಕಡಿಮೆಯಾಯಿತೆಂದು ಹೇಳಲಾಗುವುದಿಲ್ಲ. ಮಲೇರಿಯ ಜ್ವರ ನಿವಾರಣೆ ಬಗ್ಗೆ ನೇಮಿಸಿರುವ ಹೆಚ್ಚು ಸಂಬಳದ ಸ್ಪೆಶ್ಯಲ್ ಸಬ್ ಅಸಿಸ್ಟೆಂಟ್ ಸರ್ಜನರುಗಳ ಹುದ್ದೆಯು ತೆಗೆದು ಹಾಕಲ್ಪಡಬೇಕು. ಮಲೇರಿಯಾ ನಿವಾರಣೆ ಕೆಲಸವನ್ನು ಆಯಾಯ ಸ್ಥಳದ ಅಸಿಸ್ಟೆಂಟ್ ಸರ್ಜನರುಗಳ ಉಸ್ತುವಾರಿಯಿಂದ ನಡೆಸಬಹುದು. ಇವೆರಡು ಉದ್ಯೋಗಗಳಿಗೆ ತುಂಬಾ ಹಣ ... ಗಿದೆಯೆಂದು ತಿಳಿಯ ಬರುತ್ತದೆ. ಅಷ್ಟರ ಮಟ್ಟಿಗೆ ... ಜನವಾಗಿದೆಯೆಂದು ಯಾರೂ ಹೇಳಲಾರರು. ... ರು ಇನ್‌ಸ್ಪೆಕ್ಟರ ಹುದ್ದೆಯನ್ನು ತೆಗೆದು ಹಾಕಿ, ... ಸ್ಯಾನಿಟರಿ ಇನ್‌ಸ್ಪೆಕ್ಟರೊಂದಿಗೆ ಇನ್ನೊಬ್ಬ ಸ್ಯಾನಿಟರಿ ಇನ್‌ಸ್ಪೆಕ್ಟರನ್ನು ನೇಮಿಸಬೇಕು. ಇವರಿಬ್ಬರು ವೇಕ್ಸಿನೇಟರುಗಳ ಕೆಲಸದ ಉಸ್ತುವಾರಿ ನೋಡುತ್ತಾ, ಗ್ರಾಮ ... ಗೆ ಆರೋಗ್ಯಕ್ಕೆ ಆವಶ್ಯವಾದ ವಿಷಯಗಳನ್ನು ಬೆ... ದರಂತೆ ನಡೆಯುವಂತೆ ನೋಡಬೇಕು. ಇವರ ಸಂಬಳ ... ರಿಂದ 75 ರೂ ಆಗಿರಬೇಕು. ಕಂಪಾಂಡರುಗಳಿಗೂ ... ಕ್ಸಿನೇಟರುಗಳಿಗೂ ಗುಮಾಸ್ತರುಗಳಂತೆ 30ರಿಂದ 50 ... ರೆಗೆ ಸಂಬಳ ಕೊಡಬೇಕು.

ಈಗಿರುವ ಶಾಲಾ ಇನ್‌ಸ್ಪೆಕ್ಟರ ಹುದ್ದೆ ... ಕು. ವಿದ್ಯಾ ಇಲಾಖೆಯ ಮೇಲಧಿಕಾರಿಯಾದ ... ಮಿಷನರವರು ಹೈಸ್ಕೂಲುಗಳ ಉಸ್ತುವಾರಿ ನೋಡ... ಈಗಿರುವ ಸಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರ ಹು... ಇನ್ಸ್‌ಪೆಕ್ಟರ್ ಎಂದು ಬದಲಾಯಿಸಿ, ಇವರಿಗೂ ... ಸ್ಕೂಲುಗಳ ಹೆಡ್ ಮಾಸ್ಟರುಗಳಿಗೂ ರೂ 125ರಿಂದ ... ವರೆಗೆ ಸಂಬಳ ಕೊಡಬೇಕು. ಗ್ರೇಜ್ಯುವೇಟ್ ... ಯರುಗಳಿಗೆ ರೂ 75ರಿಂದ 125ರ ವರೆಗೆ ಸಂ...

ಪೋಲೀಸ್ ಡೆಪ್ಯುಟಿ ಸುಪರಿಂಟೆಂಡೆಂಟರ ... 200ರಿಂದ 300 ರೂ ಆಗತಕ್ಕದ್ದು. ಈಗಿರುವ ... ಲ್ ಇನ್‌ಸ್ಪೆಕ್ಟರ ಹುದ್ದೆಯು ಅನಾವಶ್ಯವಾದುದರಿಂದ ... ವಾಗಬೇಕು. ಆ ಗ್ರಾಜ್ಯುವೇಟರೊಬ್ಬರನ್ನು ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರಾಗಿ 125ರಿಂದ 200 ರೂ ಸಂ... ನೇಮಿಸಬೇಕು. ಪೋಲೀಸು ಸಬ್ ಇನ್‌ಸ್ಪೆಕ್ಟರುಗಳಿಗೆ 50ರಿಂದ 85ರ ವರೆಗೆ ಸಂಬಳ ಕೊಡಬೇಕು. ಪೋಲೀಸ ... ಬೇಕು ಶಾಲೆಗೂ ಮತ್ತು ಮಡಿಕೇರಿ ಪಟ್ಟಣಕ್ಕೂ ಇ... ಬ್ ಇನ್‌ಸ್ಪೆಕ್ಟರ ಹುದ್ದೆಯನ್ನು ತೆಗೆದು ಹಾಕಬೇಕು. ... ನ್ನು ಮಡಿಕೇರಿ ನಗರ ಇನ್‌ಸ್ಪೆಕ್ಟರು ನೋಡಿಕೊಳ್ಳ...

ಸಬ್‌ಜಡ್ಜರ ಸಂಬಳವು ರೂ 300ರಿಂದ 450ರ ... ಬೇಕು. ಇವರು ತಮ್ಮ ಕೆಲಸದೊಂದಿಗೆ ಟ್ರೆಜರಿ ... ಯೂ ಇರಬೇಕು. ಮುನ್ಸೀಫರಿಗೆ ರೂ 200... ವರೆಗೆ ಸಂಬಳ ಕೊಡತಕ್ಕದ್ದು. ಈ ಮೊದಲಿನಂ... ಯು ಮಡಿಕೇರಿಯಲ್ಲಿ ಮತ್ತು ಆರ್ಧಸಮಯ ... ಟೆಯಲ್ಲಿ ಕೋರ್ಟು ಮಾಡುವ ಒಬ್ಬ ಸ್ಟೇಶನರಿ ಮ... ಟರು ಇದ್ದರೆ ಸಾಕು. ಅವರಿಗೆ 100ರಿಂದ 150 ರೂ ... ಳವಿರತಕ್ಕದ್ದು. ಸಬ್‌ಜಡ್ಜರ ಕೋರ್ಟಿನ ಶಿರಸ್ತೇದಾ... 50ರಿಂದ 75 ರೂ ಸಂಬಳ ಕೊಡಬೇಕು.

ಎಗ್ರಿಕಲ್ಚರಲ್ ಡೆಪ್ಯುಟಿ ಡೈರೆಕ್ಟರವರು ವ್ಯವಸಾಯ ... ದ್ಯಾ ಪದವೀಧರರಾಗಿರತಕ್ಕದ್ದು. ಇವರು ಲ್ಯಾಂಡ್ ರೆಕಾರ್ಡ್ ಮತ್ತು ವೆಟರನರಿ ಇಲಾಖೆಗಳ ಚಾರ್ಜಿನಲ್ಲಿಯೂ ಇರ... ಇವರ ಸಂಬಳವು ರೂ 150ರಿಂದ 250ರ ವರೆಗೆ ಇರತಕ್ಕದ್ದು. ವೆಟರನರಿ ಸಬ್ ಅಸಿಸ್ಟೆಂಟ್ ಸರ್ಜನರುಗಳಿಗೆ ರೂ ... 75ರ ವರೆಗೆ ಸಂಬಳವಿರಬೇಕು.

ಈ ಮೊದಲಿನಂತೆ ಅಬ್ಕಾರಿ ಅಸಿಸ್ಟೆಂಟ್ ಇನ್‌ಸ್ಪೆಕ್ಟರ ... ದ್ದೆ ಬಜವಾಗಬೇಕು. ಎಕ್ಸೈಸ್ ಸಬ್ ಇನ್‌ಸ್ಪೆಕ್ಟರುಗಳಿಗೆ ರೂ 45ರಿಂದ 65ರ ವರೆಗೆ ಸಂಬಳವಿರಬೇಕು. ಕಮಿಷನರರ ... ಸು ಮೇನೇಜರಿಗೆ ರೂ 100ರಿಂದ 125ರ ವರೆಗೆ ... ಮಾಸ್ತರಿಗೂ ಮತ್ತು ಜುಡಿಶಲ್ ಶಿರಸ್ತೇದಾರರಿಗೂ ... 75 ರೂ ವರೆಗೆ ಸಂಬಳ ಕೊಡಬೇಕು. ಕೌನ್ಸಿಲ್ ... ಟರಿಗೆ 100ರಿಂದ 150ರ ವರೆಗೆ ಸಂಬಳವಿರಬೇಕು.

ಉಳಿದಿರುವ ಉದ್ಯೋಗಸ್ಥರುಗಳ ಸಂಬಳವನ್ನು ... ನ್ನದರದಂತೆ ಕಡಿಮೆ ಮಾಡಿಕೊಳ್ಳಬೇಕು. ಆದರೆ ... ಗಿಂತ ಕಡಿಮೆ ದೊರೆಯುವವರ ಸಂಬಳವನ್ನು ಇಳಿಸಬಾರದು. ಸರಕಾರಿ ನೌಕರ್ಯಾರಿಗೆ (ಬವಾನರೂ ಸಹಿತ) ತಿಂಗಳಿಗೆ ... ರೂ ಗಿಂತ ಕಮ್ಮಿ ಸಂಬಳವಿರಬಾರದು. ಉದ್ಯೋಗಸ್ಥರ ... ಯಾಣದ ಭತ್ಯವು ಮೈಲಿಗೆ 2 ಆಣೆಯಿಂದ 6 ಆಣೆ ವರೆಗೂ, ... ಭತ್ಯವು 8 ಆಣೆಯಿಂದ ... ರೂ ವರೆಗೂ ಮಾತ್ರವಿರತಕ್ಕದ್ದು.

ಮೇಲಿನ ಸಂಬಳದ ದರವು ಇನ್ನು ಮುಂದೆ ಬರುವ ಉದ್ಯೋಗಸ್ಥರಿಗೆ ಅನ್ವಯಿಸುವಂತೆ ಮಾಡಬೇಕು. ಈಗ ... ಗ ಉದ್ಯೋಗದಲ್ಲಿರುವ ರೂ—50 ರೂ ... ಕಮ್ಮಿ ಸಂಬಳದವರಿಗೆ ಖೋತೆ ಏನೂ ಮಾಡ ಕೂಡದು. 50ರಿಂದ ... ರೂ ಸಂಬಳವಿರುವವರಿಗೆ ಶೇಕಡ 5ರಷ್ಟು, 75 ರಿಂದ ... ವರೆಗೆ ಇರುವವರಿಗೆ ಶೇಕಡ 10ರಷ್ಟು, 150 ರಿಂದ ... ವರೆಗೆ ಇರುವವರಿಗೆ ಶೇಕಡ 15ರಷ್ಟು, 250 ರಿಂದ 500 ... ರೆಗೆ ಇರುವವರಿಗೆ ಶೇಕಡ 20ರಷ್ಟು, 500 ರಿಂದ 750 ... ರೆಗೆ ಇರುವವರಿಗೆ ಶೇಕಡ 25ರಷ್ಟು ಮತ್ತು 750 ರ ... ಇರುವವರಿಗೆ ಶೇಕಡ 30 ರಷ್ಟು ಕಡಿಮೆ ಮಾಡಬೇಕು. ... ಗಿನ ಉದ್ಯೋಗಸ್ಥರಿಗೆ ಮೇಲೆ ಸೂಚಿಸಿದ (ವ್ಯಕ್ತಿಸಮೇತ) ಅಗ್ರ ಸಂಖ್ಯೆಗಿಂತ ಹೆಚ್ಚು ಸಂಬಳ ಕೊಡಕೂಡದು. 25 ವರ್ಷ ಸರ್ವಿಸ್ ಪೂರೈಸಿದವರನ್ನೆಲ್ಲಾ ಕೆಲಸದಿಂದ ... ಕ್ಕಗೊಳಿಸಬೇಕು. ಮೇಲೆ ಸೂಚಿಸಿದ ಖೋತೆಯ ... ಸಂಬಳದಲ್ಲಿ ಕೆಲಸ ಮಾಡಲು ಇಷ್ಟಪಡದ ಉದ್ಯೋಗಸ್ಥರು ... ಅವರಿಗೆ ಸಲ್ಲತಕ್ಕ ಪೆನ್ಶನ್ ಹೊಂದಿಕೊಂಡು ನಿವೃತ್ತಿ ... ದುವ ಅವಕಾಶ ಅವರಿಗೆ ಕೊಡತಕ್ಕದ್ದು.

೯ನೇ ಕರ್ನಾಟಕ ಪ್ರಾಂತೀಕ ಪರಿಷತ್ತು,

ಹುಕ್ಕೇರಿ, ತಾ ೩೦, ೩೧ನೇ ಮೇ ೧೯೩೧.

ಸರ್ವಾನುಮತದಿಂದ ಗೊತ್ತಾದ ನಿರ್ಣಯಗಳು.

೧. ಪಂಡಿತ ಮೋತಿಲಾಲ್ ನೆಹರೂ, ಮೌಲಾನಾ ಮಹಮ್ಮದ ಅಲ್ಲಿ, ಗಣೇಶ ಶಂಕರ ವಿದ್ಯಾರ್ಥಿ, ಮಿಸ್ಟರ್ ಪಾಟೀಲ ಹಾಗೂ ಮಹಮ್ಮದ ಬಾಬಾದ ರಾಜಾ ಸಾಹೇಬ, ಇವರ ಅಕಾಲ ನಿಧನಕ್ಕಾಗಿ ಈ ಸಭೆಯು ಅತ್ಯಂತ ವಿಷಾದವನ್ನು ವ್ಯಕ್ತಪಡಿಸಿ ಅವರ ಆತ್ಮಕ್ಕೆ ಚಿರ ಶಾಂತಿ ದೊರೆಯಲೆಂದು ದೇವರನ್ನು ಪ್ರಾರ್ಥಿಸುತ್ತದೆ. ಇದೇ ಪ್ರಕಾರ ಕರ್ನಾಟಕ ಪ್ರಾಂತಿಕ ಕಮಿಟಿಯ ಲೆಕ್ಕ ತಪಾಸಿಗರಾದ ಧಾರವಾಡ ವಾಮನರಾಯರೂ ಹಾಗೂ ಈ ಕಮಿಟಿಯ ಸಭಾಸದರಲ್ಲೊಬ್ಬರಾದ ಧರ್ಮರಾವ್ ಮತ್ತು ಕರ್ಮವೀರದ ಉತ್ಸಾಹಿ ಕಾಂಗ್ರೆಸ್ ಕಾರ್ಯಕರ್ತರಾದ ಕಾಶ್ಯಾಪೋಕ ಹಾಗೂ ಧಾರವಾಡದ ಡಾ. ಶಿರಹಟ್ಟಿ, ಇವರು ಅಕಾಲದಲ್ಲಿ ಮರಣ ಹೊಂದಿದ್ದಕ್ಕಾಗಿ ಈ ಸಭೆಯು ದುಃಖಪಡುತ್ತದೆ

೨ ಇಡೀ ರಾಷ್ಟ್ರದ ಪಕ್ಷದ ವಿರುದ್ಧ ಧನಶೆಟ್ಟಿ ಮಲ್ಲಪ್ಪ, ಕುರ್ಬಾನ್ ಹುಸೇನ್, ಸಾರಡಾ ಮತ್ತು ಶಿಂದೆ ಇವರನ್ನು ಮುಂಬಯಿ ಸರ್ಕಾರದವರು ಗಲ್ಲಿಗೇರಿಸಿದ್ದನ್ನು ಈ ಸಭೆಯು ತೀವ್ರವಾಗಿ ನಿಷೇಧಿಸುತ್ತದೆ ಮತ್ತು ಅವರ ಮರಣದಿಂದ ಅವರ ಕುಟುಂಬಗಳಿಗೆ ಆದ ಹಾನಿಯ ಬಗ್ಗೆ ಪೂರ್ಣ ಸಹಾನುಭೂತಿಯನ್ನು ತೋರಿಸುವದು.

೩. ಭಗತ್‌ಸಿಂಗ್, ರಾಜಗುರು, ಸುಖದೇವ, ಇವರು ರಾಜಕಾರಣದಲ್ಲಿ ಕೈಕೊಂಡ ಹಿಂಸಾ ಮಾರ್ಗವನ್ನು ಪೂರ್ಣ ನಿರಾಕರಿಸಿದರೂ, ಈ ಸಭೆಯು ಅವರ ಧೈರ್ಯ ಮತ್ತು ದೇಶಾಭಿಮಾನಗಳನ್ನು ಕೊಂಡಾಡುತ್ತದೆ ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ಒಪ್ಪಂದವಾದ ಮೇಲೆ ಇಡೀ ರಾಷ್ಟ್ರದ ಅಭಿಪ್ರಾಯವನ್ನು ಧಿಕ್ಕರಿಸಿ ಅವರನ್ನು ಗಲ್ಲಿಗೇರಿಸಿ ಸರ್ಕಾರದವರು ತಮ್ಮ ಕುಹಕತನವನ್ನು ಮಾತ್ರ ತೋರಿಸಿರುವರೆಂದು ಈ ಸಭೆಯು ಅಭಿಪ್ರಾಯಪಡುತ್ತದೆ

೪. ಸತ್ಯಾಗ್ರಹ ಸಮರದಲ್ಲಿ ಸೇರಿ ಕಾರಾಗೃಹದಲ್ಲಿ ಮಡಿದ ರಾಮಚಂದ್ರ ಬಾಂದೆ ಮತ್ತು ಅನೇಕ ಜ್ಞಾತ, ಅಜ್ಞಾತ ಸತ್ಯಾಗ್ರಹ ವೀರರ ಆತ್ಮಗಳಿಗೆ ಶಾಂತಿ ದೊರೆಯಲೆಂದು ಸಭೆಯು ಬಯಸುತ್ತದೆ.

೫. ಕಾಂಗ್ರೆಸಿನವರು ಹೂಡಿದ ಸ್ವಾತಂತ್ರ್ಯ ಯುದ್ಧದ ಧುಮುಕಿ ಏಟು—ಪೆಟ್ಟು, ಕಾರಾಗೃಹವಾಸ, ದಂಡ ಮುಂತಾದವುಗಳನ್ನೆಲ್ಲ ಧೈರ್ಯದಿಂದ, ಶಾಂತಿಯಿಂದ, ಅಹಿಂಸಾ ವೃತ್ತಿಯಿಂದ ಸಹಿಸಿ ತಮ್ಮ ಅತುಲ ದೇಶಾಭಿಮಾನವನ್ನೂ ತ್ಯಾಗವನ್ನೂ ವ್ಯಕ್ತ ಮಾಡಿದ ವೀರರನ್ನು ಈ ಸಭೆಯು ಅಭಿನಂದಿಸುತ್ತದೆ.

ರಾಜಕೀಯ ಕರನಿರಾಕರಣೆಯಂಥ ಬಿಕ್ಕಟ್ಟಿನ ಚಳವಳಿಯನ್ನು ಕೈಕೊಂಡು ಧೈರ್ಯದಿಂದ ಮುಂದೆ ಸಾಗಿಸಿದ್ದಕ್ಕಾಗಿ ಅಂಕೋಲೆಯ ರೈತರನ್ನು ಈ ಸಭೆಯು ಅಭಿನಂದಿಸುತ್ತದೆ. ಅದೇ ಪ್ರಕಾರ ಆರ್ಥಿಕ ಕರನಿರಾಕರಣೆಯನ್ನು ಕೈಕೊಂಡದರಿಂದ ಜಪ್ತಿ ಮುಂತಾದ ಅಸಹ್ಯ ತೊಂದರೆಗಳನ್ನು ಧೈರ್ಯದಿಂದ ಸಹಿಸಿದ ಶಿರಸಿ—ಸಿದ್ದಾಪುರ, ಹಿರೇಕೇರೂರ, ಗೋಕಾಕ ತಾಲೂಕಿನಲ್ಲಿಯ ಕೊಂಚೀಕಟ್ಟಿ ಗ್ರಾಮದಲ್ಲಿಯ ರೈತರನ್ನು ಈ ಸಭೆಯು ಅಭಿನಂದಿಸುತ್ತದೆ.

ಈ ಸಾರಿ ಸ್ತ್ರೀಯರು ಮತ್ತು ಬಾಲ ಬಾಲಿಕೆಯರು ತೋರಿಸಿದ ಶೌರ್ಯ ಸಾಹಸಗಳನ್ನು ನೋಡಿ ಈ ಸಭೆಗೆ ಅತ್ಯಂತ ಸಮಾಧಾನ ಆಗಿದೆ ಮತ್ತು ಸ್ತ್ರೀಯರು ವೀರ ಮಹಿಳೆಯರೆಂಬ ಅಭಿಧಾನಕ್ಕೆ ಪಾತ್ರರಾಗಿರುವರೆಂದು ಅಭಿಪ್ರಾಯಪಡುತ್ತದೆ.

೬. ಹೋದ ಚಳವಳಿಯಲ್ಲಿ ಮಾದಕ ಪದಾರ್ಥಗಳ ಬಹಿಷ್ಕಾರಕ್ಕೆ ಸಹಾಯ ಮಾಡಿದ ಎಲ್ಲ ಸ್ತ್ರೀ ಪುರುಷರನ್ನೂ, ಕಳ್ಳು ಸೇಂದಿ ಗಿಡಗಳನ್ನು ಕಡಿಯಲಿಕ್ಕೆ ಕೊಟ್ಟ ಗಿಡದ ಮಾಲೀಕರನ್ನೂ, ಮಕ್ಕೆ ಮಾಡುವದನ್ನು ಬಿಟ್ಟ ಮಕ್ಕೆದಾರರನ್ನೂ ಈ ಸಭೆಯು ಅಭಿನಂದಿಸುತ್ತದೆ. ಇನ್ನು ಮುಂದಾದರೂ ಇದೇ ಪ್ರಯತ್ನವನ್ನು ಹೆಚ್ಚು ಬಲದಿಂದ ಮಾಡಿ, ಶರೀರ, ಮನ, ಧನಗಳನ್ನು ಹಾಳು ಮಾಡಿ ಬಿಡುವ ಈ ದುಶ್ಚಟವನ್ನು ದೇಶದಿಂದ ಹೊಡೆದೋಡಿಸುವಂತೆ ಎಲ್ಲರೂ ಯತ್ನಿಸಬೇಕೆಂದು ಈ ಸಭೆಯು ನಿರ್ಣೈಸುತ್ತದೆ.

೭. ಸತ್ಯಾಗ್ರಹ ಸಮರದ ಕರೆಯನ್ನು ಕೇಳಿದೊಡನೆ ಕರ್ನಾಟಕದ ಎಲ್ಲಾ ಭಾಗಗಳಿಂದ ಒಂದು ಆತುರತೆಯಿಂದ ರಣದಲ್ಲಿ ಹಾರಿಕೊಂಡು ಅತ್ಯಂತ ಕಷ್ಟ, ನಷ್ಟ, ಉಪವಾಸ, ವನವಾಸ ಮುಂತಾದವುಗಳನ್ನು ಸಹಿಸಿ ಕೇವಲ ದೇಶಾಭಿಮಾನದಿಂದ ಪ್ರೇರಿತರಾಗಿ ಮಾನ ಮರ್ಯಾದೆಗಳ ಅಭಿಲಾಷೆ ಇಲ್ಲದೆ, ಹೋರಾಡಿ ಯಶಸ್ವಿಗೆ ಕಾರಣೀಭೂತರಾದ ಸ್ವಯಂಸೇವಕ, ಸ್ವಯಂಸೇವಿಕೆಯರನ್ನೂ, ಸ್ವಯಂ ಸೇವಕರಿಗೆ ಯೋಗ್ಯ ಶಿಕ್ಷಣ ಕೊಟ್ಟು ಶಿಸ್ತು ಕಲಿಸಿ ಕೆಲಸವು ಸುವ್ಯವಸ್ಥಿತವಾಗುವಂತೆ ಮಾಡಿದ ಹಿಂ. ಸೇವಾದಲದ ಸಂಸ್ಥೆಯನ್ನೂ ಈ ಸಭೆಯು ಅಭಿನಂದಿಸುತ್ತದೆ.

೮. ಕರ್ನಾಟಕ ಏಕೀಕರಣದ ವಿಷಯದಲ್ಲಿ ಮಹಾತ್ಮ ಗಾಂಧಿಯವರು ಈ ಪ್ರಾಂತ್ಯಕ್ಕೆ ಕೊಟ್ಟ ಆಶ್ವಾಸನವನ್ನು ಕೇಳಿ ಈ ಪರಿಷತ್ತಿಗೆ ಸಂತೋಷವಾಗಿದೆ. ಮತ್ತು ಈ ವಿಷಯವನ್ನು ಅವರೇ ಕೊನೆಗಾಣಿಸುವರೆಂದು ಈ ಪರಿಷತ್ತು ತನ್ನ ವಿಶ್ವಾಸವನ್ನು ವ್ಯಕ್ತ ಮಾಡುತ್ತದೆ.

೯. ಈ ಚಳವಳಿಯ ಮೂಲಕ ಹಳ್ಳಿಗಳಲ್ಲಿ ಆದ ಪ್ರಚಂಡ ಜಾಗೃತಿಯು ಬಹಳ ಸಮಾಧಾನಕಾರಕವಿದೆ. ಆದರೆ ಸಾಲುವ ಪ್ರಚಾರ, ಸಾಮಾನ್ಯ ಜ್ಞಾನ ಪ್ರಸಾರ, ಪಂಚಾಯಿತಿಗಳ ಸ್ಥಾಪನೆ, ಅನ್ಯಾಯ ನಿರಾಕರಣೆ, ಸಂಘಟನ ಮುಂತಾದ ಮಾರ್ಗಗಳಿಂದ ಕಾಂಗ್ರೆಸ್ಸಿನವರು ಹಳ್ಳಿಗರ ನಿಷ್ಕಾಮ ಸೇವೆಯನ್ನು ಕೈಕೊಂಡು ಆ ಜಾಗೃತಿಯನ್ನು ಕಟ್ಟಿ ಹಳ್ಳಿಗರನ್ನು ಸ್ವಾವಲಂಬಿಯರನ್ನಾಗಿಯೂ, ಧೈರ್ಯಶಾಲಿಗಳನ್ನಾಗಿಯೂ ಮಾಡುವದು ಅವಶ್ಯವಿರುವದೆಂದು ಈ ಸಭೆಯು ನಿರ್ಣೈಸುತ್ತದೆ

೧೦. ಕರಾಚಿ ಕಾಂಗ್ರೆಸ್ಸಿನಲ್ಲಿ ತಾತ್ಕಾಲಿಕ ಒಪ್ಪಂದದ ಬಗ್ಗೆ ಆದ ಗೊತ್ತುವಳಿಯನ್ನು ಈ ಪರಿಷತ್ತು ಪೂರ್ಣವಾಗಿ ಸ್ವೀಕರಿಸುತ್ತದೆ. ಹಾಗೂ ತದನಂತರ ಕಾಂಗ್ರೆಸ್ ಕಾರ್ಯಕಾರಿ ಮಂಡಲದವರು ದುಂಡುಮೇಜಿನ ಪರಿಷತ್ತಿಗೆ ಮಹಾತ್ಮ ಗಾಂಧಿಯವರನ್ನೇ ಏಕಮೇವ ಪ್ರತಿನಿಧಿಗಳನ್ನಾಗಿ ನೇಮಿಸಿದ್ದನ್ನು ಈ ಪರಿಷತ್ತು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತದೆ.

೧೧. ಈ ಕೆಳಗಿನ ಸಂಗತಿಗಳನ್ನು ಒಪ್ಪಿಕೊಂಡು ಸಂಸ್ಥಾನಿಕರು ಏಕೀಕೃತ ಹಿಂದುಸ್ಥಾನದ ರಾಜ್ಯಘಟನೆಯಲ್ಲಿ ಅದರ ಪೆಡರೇಶನದಲ್ಲಿ ಸೇರಿದರೆ ಅದು ಈ ವಿಚಾರವು ಈ ಪರಿಷತ್ತಿಗೆ ಮಾನ್ಯವಿದೆ ಸಂಗತಿಗಳೆಂದರೆ— (ಅ) ಸಂಸ್ಥಾನಿಕರು ತಮ್ಮ ರಾಜ್ಯದಲ್ಲಿ ಕೂಡಲೇ ಜವಾಬ್ದಾರ ರಾಜ್ಯ ಪದ್ಧತಿಯನ್ನು ಆರಂಭಿಸಬೇಕು (ಬ) ಅಖಿಲ ಹಿಂದುಸ್ಥಾನಕ್ಕಾಗಿ ಇನ್ನು ಮುಂದೆ ನೇಮಿಸಲ್ಪಡತಕ್ಕ ಪ್ರಮುಖ ನ್ಯಾಯಸಭೆಯನ್ನು (ಸುಪ್ರೀಮ ಕೋರ್ಟ) ಅವರು ಮನ್ನಿಸಬೇಕು. ಹೊಸದಾಗಿ ಸಿದ್ಧವಾಗುವ ಭಾರತೀಯ ರಾಜ್ಯಘಟನೆಯಲ್ಲಿ ಸಂಸ್ಥಾನ ಪ್ರಜೆಗಳ ಮೂಲಭೂತ ಅಧಿಕಾರಿಗಳ ಸೇರ್ಪಡೆಯಾಗಿ ಅವುಗಳ ಬಗ್ಗೆ ನಿಶ್ಚಿತ ಆಶ್ವಾಸನವೂ ದೊರೆಯಬೇಕು. (ಕ) ಮುಂದಿನ ಫೆಡರಲ್ ರಾಜ್ಯಪದ್ಧತಿಯಲ್ಲಿ ಸಂಸ್ಥಾನಿಕ ಪ್ರಜೆಗಳಿಗೆ ಪ್ರತ್ಯೇಕ ಹಾಗೂ ಸ್ವಂತ ಪ್ರಾತಿನಿಧ್ಯವಿರಬೇಕು

೧೨ ಈ ಪರಿಷತ್ತು ಸಂಸ್ಥಾನಿಕರಿಗೆ ಒತ್ತಾಯದಿಂದ ತಿಳಿಯಪಡಿಸುವುದೇನಂದರೆ— ಸಂಸ್ಥಾನಗಳಲ್ಲಿ ಜವಾಬ್ದಾರ ಹಾಗೂ ಪ್ರಾತಿನಿಧಿಕ ರಾಜ್ಯಪದ್ಧತಿಯನ್ನು ಕೂಡಲೇ ಪ್ರಸ್ಥಾಪಿಸುವ ಹೊತ್ತು ಈಗ ಬಂದಿದೆ ಇದಕ್ಕೆ ಸಂಸ್ಥಾನಿಕರು ಒಪ್ಪದಿದ್ದರೆ ಸಂಸ್ಥಾನದ ಪ್ರಜೆಗಳು ಈ ಧ್ಯೇಯಕ್ಕಾಗಿ ಮಾಡುವ ಎಲ್ಲ ಶಾಂತ ಹಾಗೂ ನ್ಯಾಯವಾದ ಪ್ರಯತ್ನದಲ್ಲಿ ಸಂಸ್ಥಾನೇತರ ಹಿಂದೀ ಪ್ರಜೆಗಳು ತಮ್ಮಿಂದಾದಷ್ಟು ಸಹಾಯ ಮಾಡಿಯೇ ತೀರಬೇಕಾಗುವದು.

೧೩. ಈ ಸಾರೆ ಶಿರಸಿ—ಸಿದ್ದಾಪುರ ತಾಲೂಕುಗಳಲ್ಲಿಯ ಕೆಲವು ಭಾಗಗಳಲ್ಲಿ ಕೆಲವು ರೈತರ ಆರ್ಥಿಕ ಸ್ಥಿತಿಯು ಅತ್ಯಂತ ಹೀನವಾಗಿ ಅವರು ಅನ್ನಾನ್ನಗತಿಕರಾದುದರಿಂದ ಈ ಹೀನ ಸ್ಥಿತಿಯಲ್ಲಿದ್ದ ರೈತರಿಗೆ ಕರ್ನಾಟಕಸ್ಥರೆಲ್ಲರೂ ಅವರು ಎಲ್ಲಿಯೇ ಇರಲಿ ಕೈಲಾದಷ್ಟು ಸಹಾಯ ಮಾಡಬೇಕೆಂದು ಈ ಸಭೆಯು ಎಲ್ಲರನ್ನೂ ಪ್ರಾರ್ಥಿಸುತ್ತದೆ.

೧೪. (ಅ) ಕೇವಲ ಆರ್ಥಿಕ ಕಾರಣಗಳ ಸಲುವಾಗಿ ಇಚ್ಛಲಕರಂಜೀ ಸಂಸ್ಥಾನದ ಆಜರೆ ತಾಲೂಕಿನ ರೈತರು ಕಂದಾಯ ವಸೂಲಿಯ ವಿಷಯದಲ್ಲಿ ಬೇಡಿದ ಸವಲತ್ತುಗಳನ್ನು ಕೊಡದೆ ಸರ್ಕಾರದವರು ಅವರಿಗೆ ನಾನಾ ತರದ ಕಷ್ಟಗಳನ್ನು ಕೊಟ್ಟು ವಸೂಲು ಮಾಡಿದ್ದರಿಂದ ರೈತರಿಗೆ ಉಂಟಾದ ದುಃಖಗಳ ಬಗ್ಗೆ ಈ ಪರಿಷತ್ತು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ (ಬ) ರೈತರಿಗೂ ಅವರ ಮುಖಂಡರಿಗೂ ಇಚ್ಛಲಕರಂಜಿ ದರಬಾರದಿಂದ ಉಂಟಾದ ಕಷ್ಟಗಳ ಬಗ್ಗೆ ಹಾಗೂ ಅವುಗಳ ಬಗ್ಗೆ ವಿಚಾರಣೆ ನಡಿಸಬೇಕೆಂದು ಬೇಡಿಕೊಂಡರೆ ಅದನ್ನು ಸಹ ಒಪ್ಪದೆ ಇದ್ದ ಸಂಗತಿಯ ಬಗ್ಗೆ ಈ ಪರಿಷತ್ತು ದರಬಾರಿನ ಕೃತ್ಯವನ್ನು ನಿಷೇಧಿಸುತ್ತದೆ

೧೫ ಮಹಾತ್ಮ ಗಾಂಧಿ—ಅರ್ವಿನ್ ಒಪ್ಪಂದದ ಪ್ರಕಾರ ಕರ್ನಾಟಕದವರು ಎಲ್ಲ ಕರಾರುಗಳನ್ನು ಪಾಲಿಸುತ್ತ ಬಂದಾಗ್ಯೂ ಕೆಳಗೆ ಕಾಣಿಸಿದ ವಿಷಯಗಳ ಬಗ್ಗೆ ಸರ್ಕಾರದವರು ತಮ್ಮ ಪೂರ್ಣ ಕರ್ತವ್ಯವನ್ನು ಇನ್ನೂ ಮಾಡಿಲ್ಲವೆಂಬವನ್ನು ನೋಡಿ ಈ ಪರಿಷತ್ತಿಗೆ ಖೇದವೆನಿಸುತ್ತದೆ. (೧) ಜಪ್ತಿ ಮಾಡಿದ ಇನಾಮುಗಳ ಬಗ್ಗೆ, (೨) ಒಂದೂಕ ಪರವಾನಿಗೆ ಕೊಡುವ ಬಗ್ಗೆ, (೩) ಆರ್ಥಿಕ ದೃಷ್ಟಿಯಿಂದ ಕಂದಾಯನಿರಾಕರಣೆ ಮಾಡಿದ ಶಿರಸಿ, ಸಿದ್ದಾಪುರ, ಹಿರೇಕೇರೂರ ತಾಲೂಕುಗಳ ಆರ್ಥಿಕ ದುಃಖ ನಿವಾರಣೆಯ ಬಗ್ಗೆ, (೪) ಪಾಟಬಾ ಪುರದಲ್ಲಿ ಸೇಂದಿ ಗಿಡಗಳನ್ನು ಕಡಿದ ಹಾನಿಯ ಬಗ್ಗೆ ಹಣವನ್ನು ವಸೂಲು ಮಾಡುವ ಬಗ್ಗೆ, (೫) ರಾಜೀನಾಮೆ ಕೊಟ್ಟ ಮತ್ತು ಸಸ್ಪೆಂಡ್ ಮಾಡಲ್ಪಟ್ಟ ಕುಲಕರ್ಣಿಯರನ್ನು ಮತ್ತು ಶಿಕ್ಷಕರನ್ನು ಪುನಃ ಕೆಲಸದ ಮೇಲೆ ನೇಮಿಸುವ ಬಗ್ಗೆ. (೬) ಈಗಲಾದರೂ ಸರ್ಕಾರದವರು ನ್ಯಾಯದ ಧೋರಣವನ್ನು ಸ್ವೀಕರಿಸಿ ಒಪ್ಪಂದದ ಕರಾರುಗಳನ್ನು ತೀವ್ರ ಪಾಲಿಸುವರೆಂದು ಈ ಪರಿಷತ್ತು ಆಶಿಸುವದು.

೧೬. (ಅ) ಮೂಲಭೂತ ಹಕ್ಕುಗಳ ಬಗ್ಗೆ ಕರಾಚಿ ಕಾಂಗ್ರೆಸಿನಲ್ಲಿ ಪಾಸಾದ ೧೪ನೇ ಠರಾವಿನಲ್ಲಿ ಗೊತ್ತು ಪಡಿಸಿದ ಧೋರಣ ಹಾಗೂ ತತ್ವಗಳಿಗೆ ಈ ಪರಿಷತ್ತಿನ ಒಪ್ಪಿಗೆ ಇದೆ. (ಆ) ಈ ಠರಾವಿನ ಬಗ್ಗೆ ವಿವರವಾದ ಮತ್ತು ಅವಶ್ಯವಾದ ಬದಲಾವಣೆಗಳನ್ನು ಮಾಡಿ ಈ ವಿಷಯವಾಗಿ ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನೇಮಿಸಿದ ಕಮಿಟಿಗೆ ಆ ಬದಲಾವಣೆಗಳನ್ನು ಒಪ್ಪಿಸಲು ಮತ್ತು ಅವು ಇದೇ ಪರಿಷತ್ತಿನ ಅಭಿಪ್ರಾಯವೆಂದು ತಿಳಿಸಲು ಕರ್ನಾಟಕ ಪ್ರಾಂ. ಕಾಂ. ಕಮಿಟಿಯ ಕಾರ್ಯಕಾರೀ ಮಂಡಲದವರಿಗೆ ಈ ಪರಿಷತ್ತು ಅಧಿಕಾರ ಕೊಡುತ್ತದೆ. (ಇ) ಅಲ್ಲದೆ ಜನತೆಯ ಇಚ್ಛಾನುಸಾರ ಭಾಷಾನುಸಾರ ಪ್ರಾಂತ ರಚನೆ ಮಾಡುವದೆಂದು ಮೂಲಭೂತ ಹಕ್ಕಾಗಿರುವದೆಂಬ ಹೊಸ ಕಲಮನ್ನು ಅದಕ್ಕೆ ಜೋಡಿಸಬೇಕೆಂದು ಈ ಪರಿಷತ್ತಿನ ಅಭಿಪ್ರಾಯವಿರುವದನ್ನು ಕ. ಪ್ರಾಂ. ಕಾಂ ಕಮಿಟಿಯ ಕಾರ್ಯಕಾರೀ ಮಂಡಲದವರು ಅ. ಭಾ ಕಾಂ ಕಾರ್ಯಕಾರಿ ಮಂಡಲದಿಂದ ನೇಮಿಸಲ್ಪಟ್ಟ ಉಪಮಂಡಲಕ್ಕೆ ತಿಳಿಸಬೇಕ.

೧೭. ಹಿಂದುಸ್ಥಾನದಲ್ಲಿಯ ಬಹುಜನ ಸಮಾಜದ ದಾರಿದ್ರ್ಯವು ಬಹ್ವಂಶದಿಂದ ಉದ್ಯೋಗದ ಅಭಾವದಿಂದಲೇ ಇರುವದರಿಂದ ಸದ್ಯಸ್ಥಿತಿಯಲ್ಲಿ ನೂಲು ತೆಗೆಯುವ ಒಂದೇ ಒಂದು ಉಪ ಧಂದೆಯು ದಾರಿದ್ರ್ಯವನ್ನು ಪರಿಹರಿಸಲು ಸಮರ್ಥವಾಗಿರುವದೆಂದು ಈ ಪರಿಷತ್ತಿನ ಅಭಿಪ್ರಾಯವಿದೆ. ಇದರ ಹೊರ್ತು ಈಗ ದಾಸ್ಯ, ಅವಳಿ ಮುಂತಾದ ಒಕ್ಕಲತನದ ಪದಾರ್ಥಗಳ ಧಾರಣೆಯು ಇಳಿದಿರುವದರಿಂದಂತೂ ಒಕ್ಕಲಿಗರ ಪರಿಸ್ಥಿತಿಯು ತೀರ ಕಂಗಾಲವಾಗಿದೆ. ಈ ಕಾರಣದಿಂದಲಾದರೂ ಖಾದಿಗೆ ಮಹತ್ವ ಕೊಡುವದು ಅವಶ್ಯವಾಗಿದೆ ಮತ್ತು ಖಾದಿಯ ದ್ವಾರದಿಂದಲೇ ಪರದೇಶೀ ಬಟ್ಟೆಯ ಬಹಿಷ್ಕಾರವು ಯಶಸ್ವಿಯಾಗುವುದು ಸಾಧ್ಯವಿದೆ. ಆದ್ದರಿಂದ ಈ ಪ್ರಾಂತ್ಯದಲ್ಲಿಯ ಸ್ತ್ರೀ ಪುರುಷರು ಕೇವಲ ಖಾದಿಯನ್ನೇ ಧರಿಸತಕ್ಕದ್ದೆಂದು ಈ ಪರಿಷತ್ತಿನ ವಿನ್ನಹವಿದೆ.

ಅ ಭಾ ಚ ಸಂಘದ ಕರ್ನಾಟಕ ಶಾಖೆಯವರೂ, ಅವರಿಂದ ಶಿಫಾರಸ್ಸು ಪಡೆದ ಇತರ ಸಂಸ್ಥೆಯವರೂ ಖಾದಿಯ ಉತ್ಪತ್ತಿಯನ್ನು ಕೈಕೊಂಡಿದ್ದು, ಅವರ ಪ್ರಯತ್ನದಿಂದ ಸಿದ್ಧವಾದ ಖಾದಿಯು ಈಗ ಹೇರಳವಾಗಿ ಉಳಿದಿದೆ ಈ ಖಾದಿಯನ್ನೂ, ಇನ್ನು ಮುಂದೆ ಕರ್ನಾಟಕದಲ್ಲಿ ಹುಟ್ಟುವ ಖಾದಿಯನ್ನೂ ಕೊಂಡುಕೊಂಡು ಕರ್ನಾಟಕ ಪ್ರಾಂತದ ಖಾದಿಗೇ ಉತ್ತೇಜನ ಕೊಡುವದು ಈ ಪ್ರಾಂತದ ಜನರ ಕರ್ತವ್ಯವಾಗಿರುವದೆಂದು ಈ ಪರಿಷತ್ತಿನ ಅಭಿಪ್ರಾಯವಿದೆ

೧೮ ಬ್ರಿಟಿಷ್ ಕರ್ನಾಟಕದಲ್ಲಿ ಕನಿಷ್ಠ ಒಂದು ತಾಲೂಕನ್ನಾದರೂ ಬಾರ್ದೋಲಿಯ ಮಾದರಿಯ ಮೇಲೆ ಎಲ್ಲ ವಿಧದಿಂದಲೂ ಆದಷ್ಟು ಬೇಗನೆ ಸಿದ್ಧಪಡಿಸಲು ಕ. ಪ್ರಾಂ. ಕಾಂ. ಕಮಿಟಿಯವರು ಪ್ರಯತ್ನ ಮಾಡಬೇಕೆಂದು ಈ ಪರಿಷತ್ತು ಭಿನ್ನವಿಸಿಕೊಳ್ಳುತ್ತದೆ

೧೯. ಇಂಡಿಯನ್ ಪಿನಲ್ ಕೋಡದ ೧೨೪ ಅ ಕಲಮಿನ ಅನ್ವಯ ನಿಷ್ಪಾಲಣೆಯು ಕೆಲವು ಜನರ ಮೇಲೆ ಹಾಗೂ ಬೇರೆಯವರ ಮೇಲೆ ನಡಿಸಿದ ಖಟ್ಲೆಗಳು ಗಾಂಧಿ—ಅರ್ವಿನ್ ಕರಾರು ನಾಮೆಯ ಕಕ್ಷೆಯಲ್ಲಿ ಬರುತ್ತವೆಯೆಂದೂ, ಅಂಥ ಎಲ್ಲ ಕಟ್ಲೆಗಳನ್ನು ಸರ್ಕಾರದವರು ಕೂಡಲೆ ತಿರುಗಿ ತೆಗೆದುಕೊಳ್ಳಬೇಕೆಂದೂ ಈ ಪರಿಷತ್ತಿನ ಸ್ಪಷ್ಟವಾದ ಅಭಿಪ್ರಾಯವಿದೆ.

೨೦ ಪರದೇಶೀ ಬಟ್ಟೆಗಳನ್ನು ಬಹಿಷ್ಕರಿಸುವ ಕಾರ್ಯದಲ್ಲಿ ಕರ್ನಾಟಕದಲ್ಲಿಯ ಬಟ್ಟೆಯ ವ್ಯಾಪಾರಸ್ಥರು ಕಳೆದ ವರ್ಷ ಬಹಳ ಸಹಾಯವನ್ನು ಮಾಡಿದರೂ, ಒಪ್ಪಂದವಾದ ಮೇಲೆ ಆ ವ್ಯಾಪಾರಸ್ಥರು ಈ ವಿಷಯವಾಗಿ ಸಡಿಲುತನವನ್ನು ತೋರಿಸುತ್ತಿರುವದನ್ನು ಕಂಡು ಈ ಪರಿಷತ್ತಿಗೆ ಅತ್ಯಂತ ವ್ಯಸನವಾಗುತ್ತದೆ. ಇನ್ನು ಮುಂದಾದರೂ ಕರ್ನಾಟಕದ ಬಟ್ಟೆಯ ವ್ಯಾಪಾರಸ್ಥರು ದೇಶಭಕ್ತಿಯಿಂದ ಪ್ರೇರಿತರಾಗಿ ಪರದೇಶೀ ಹಾಗೂ ಬಹಿಷ್ಕೃತ ಗಿರಣಿಗಳ ಬಟ್ಟೆಯ ಮೇಲೆ ಪೂರ್ಣ ಬಹಿಷ್ಕಾರ ಹಾಕಲಿಕ್ಕೆ ಸಹಾಯ ಮಾಡಬೇಕೆಂದು ವಿನಂತಿ ಇದೆ

(ಬ) ಖಾದೀ ಹಾಗೂ ಬಹಿಷ್ಕಾರದ ಚಳವಳಿಯಿಂದಲೇ ತಮಗೆ ಬಹು ಕಲ್ಯಾಣವಾಗಿದೆ ಎಂಬುವನ್ನು ಲಕ್ಷ್ಯಕ್ಕೆ ತಂದು ಗಿರಣೀ ಮಾಲೀಕರು ಹಾಗೂ ಕೈ ಮಗ್ಗಗಳ ಮೇಲೆ ನೇಯುತ್ತಿರುವ ನೇಕಾರರು, ಖಾದಿಯ ಮತ್ತು ಬಹಿಷ್ಕಾರದ ಚಳವಳಿಗೆ ಸಹಾಯ ಮಾಡುವ ಕುರಿತು ಕೆಳಗಿನ ಕಾರ್ಯಗಳನ್ನು ಮಾಡಬೇಕೆಂದು ಅವರಿಗೆ ಈ ಪರಿಷತ್ತಿನ ವಿನ್ನಹವಿದೆ.

(೧) ಸ್ವತಃ ಸಂಪೂರ್ಣ ಖಾದಿಯನ್ನೇ ಧರಿಸಬೇಕು. (೨) ತಮ್ಮ ಮಗ್ಗಗಳಿಗೂ, ಗಿರಣಿಗಳಿಗೂ ಸ್ವದೇಶೀ ನೂಲನ್ನೇ ಉಪಯೋಗಿಸತಕ್ಕದ್ದು. (೩) ಖಾದಿಯಂಥ ಬಟ್ಟೆಯನ್ನಾಗಲಿ, ಕೆಳಗಿನ ನಂಬರಿನ ನೂಲನ್ನಾಗಲೀ ತೆಗೆದು ಖಾದಿಯ ಸಂಗಡ ಸ್ಪರ್ಧೆಯನ್ನು ಮಾಡಕೂಡದು.

(ಕ) ದೇಶದ ದಾರಿದ್ರ್ಯವನ್ನು ಪರಿಹರಿಸಲಿಕ್ಕೂ ಅದಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಿ ಕೊಡಲಿಕ್ಕೂ ಔದ್ಯೋಗಿಕ ಸ್ವಾತಂತ್ರ್ಯವು ಅತ್ಯಂತ ಅವಶ್ಯವಾಗಿರುವುದರಿಂದ ಬಟ್ಟೆಯಲ್ಲಿ ಕೇವಲ ಖಾದಿಯನ್ನೇ ಹಾಗೂ ಉಳಿದ ವಸ್ತುಗಳಲ್ಲಿ ಕೇವಲ ಸ್ವದೇಶೀ ವಸ್ತುಗಳನ್ನೇ ಕೊಂಡುಕೊಳ್ಳುವ ನಿರ್ಧಾರವನ್ನು ಎಲ್ಲರೂ ಮಾಡಬೇಕು.

೨೧. ಮುಂದಿನ ವರ್ಷದ ಕರ್ನಾಟಕ ಪ್ರಾಂತೀಕ ಪರಿಷತ್ತು ವಿಜಾಪುರ ಜಿಲ್ಲೆಯಲ್ಲಿ ಸೇರತಕ್ಕದ್ದು.

೨೨ ಎಲ್ಲರ ಆಭಾರ ಮನ್ನಣೆಯ ಗೊತ್ತುವಳಿಯನ್ನು ಮುದವೀಡು ಕೃಷ್ಣರಾಯರು ಸೂಚಿಸಿದರು. ನಾರಾಯಣರಾವ ಜೋಶಿಯವರು ಅದನ್ನು ಅನುಮೋದಿಸಿದರು. ಇದಾದ ಬಳಿಕ ಅಧ್ಯಕ್ಷರ ಸಮಾರೋಪದ ಭಾಷಣವಾಗಿ ಪರಿಷತ್ತು ಸಮಾಪ್ತವಾಯಿತು.

ಹುಕ್ಕೇರಿ
೩೧—೫—೩೧.

ಜಮನಾಲಾಲ ಬಜಾಜ,
(ಅಧ್ಯಕ್ಷರು.)

ಮುಸಲ್ಮಾನರ ಕಾನ್‌ಫರೆನ್ಸ್.

ಕೊಡಗು ಅಂಜುಮನ್ ಇತಿಹಾದ್ ಇಸ್ಲಾಮ್ ಸಂಘದ ಮೂರನೇ ವಾರ್ಷಿಕ ಮಹಾ ಸಭೆಯು ಕಳೆದ ತಾ. 26ರಲ್ಲಿ ವೀರರಾಜಪೇಟೆ ಇದ್ಗಾದಲ್ಲಿ ನಡೆಯಿತು. ಮದ್ರಾಸು ಗವರ್ನಮೆಂಟ್ ಮಹ್ಮದೀಯ ಕಾಲೇಜಿನ ಪ್ರೊಫೆಸರಾದ ಅಲಿ ಜನಾಬ್ ಅಫ್ಜಲುಲ್ ಉಲೆಮ ಮೌಲಾನ ಮೌಲ್ವಿ ಸೆಯುದ್ ಅಬ್ದುಲ್ ವಹಾಬ್ ಸಾಹೇಬ್ ಬೊಖಾರಿ ಯಂ. ಎ., ಎಲ್. ಟಿ., ಯಂ. ಆರ್. ಎ ಎಸ್. ರವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಬೆಳಿಗ್ಗೆ 10 ಗಂಟೆಗೆ ಅದಕ್ಕಾಗಿ ತಯಾರಿಸಿದ್ದ ಚಪ್ಪರದಲ್ಲಿ ಪ್ರಾರಂಭವಾಯಿತು. ಕೊರಾನಿನ ತಿಲ್ಲೀಕವನ್ನು ಹಾಡಿದ ನಂತರ ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದ ಮೆ. ಸಿ ಮಹ್ಮದ್ ಇಸ್ಮೈಲ್‌ರವರು ಕೊಡಗಿನ ಮುಸಲ್ಮಾನರ ಸಾಮಾಜಿಕ, ವಿದ್ಯಾಭ್ಯಾಸ ಮತ್ತು ಆರ್ಥಿಕ ಸ್ಥಿತಿಯನ್ನು ವಿವರಿಸಿ ಸ್ವಾಗತ ಭಾಷಣ ಮಾಡಿದರು. ಆ ಮೇಲೆ ಅಧ್ಯಕ್ಷರು ಸುಮಾರು ಒಂದೂವರೆ ಗಂಟೆ ವರೆಗೆ ತಮ್ಮ ಭಾಷಣವನ್ನು ಇಂಗ್ಲಿಷಿನಲ್ಲಿ ಮಾಡಿದರು. ಈ ಸ್ವಾರಸ್ಯವಾದ ಭಾಷಣದಲ್ಲಿ ಅವರು—'ನಾವು ನಮ್ಮ ಜನ್ಮದ ಉದ್ದೇಶವನ್ನು ಅರಿತುಕೊಂಡು, ದೇವರ ಸೃಷ್ಟಿಯಾದ ಮಾನುಷ ಜಾತಿಯ ಸೇವೆಯಿಂದಲೇ ನಮಗೆ ಮುಕ್ತಿ ಎಂದು ನಂಬಬೇಕು. ಹೀಗೆ ವರ್ತಿಸುತ್ತಿದ್ದಾಗ್ಯೆ ಮುಸಲ್ಮಾನರ ವೃದ್ಧಿಗೊಂಡಿದ್ದರು. ಆದರೆ ಸ್ವಾರ್ಥತೆಯ ಬಲೆಗೆ ಬಿದ್ದ ಮೇಲೆ ಅಧೋಗತಿಗೆ ಇಳಿದರು. ಮುಸಲ್ಮಾನರು ಹಿಂದು ಬೀಳಲು ಅಜ್ಞಾನ ಮತ್ತು ವಿದ್ಯಾ ಹೀನತೆಯೇ ಕಾರಣ. ನಮ್ಮ ಮಕ್ಕಳ ಮತ್ತು ಸ್ತ್ರೀಯರ ವಿದ್ಯಾಭ್ಯಾಸಕ್ಕೆ ತುಂಬಾ ಪ್ರಯತ್ನಿಸಬೇಕು. ವಿದ್ಯೆಯಿಂದ ನಮ್ಮಲ್ಲಿರುವ ಬೇರೆ ಕೊರತೆಗಳನ್ನು ಹೋಗಲಾಡಿಸಿಕೊಳ್ಳಬಹುದು. ಹಿಂದೂ ಮುಸಲ್ಮಾನರ ಜಗಳಕ್ಕೆ ಅಜ್ಞಾನವೇ ಕಾರಣ. ಯಾವ ಮತವೂ ಇನ್ನೊಂದು ಮತದವರನ್ನು ದ್ವೇಷಿಸಬೇಕೆಂದು ಹೇಳುವುದಿಲ್ಲ. ನಮ್ಮ ಮತದ ಬೋಧನೆ ಮೇರೆ ನಾವು ಎಲ್ಲಾ ಮನುಷ್ಯರನ್ನು ಭೇದವೆಣಿಸದೆ ಪ್ರೀತಿಸಬೇಕು. ನಾವು ಕೊರಾನಿನ ಪ್ರಕಾರ ನಡೆದರೆ ಇಂಡಿಯಾದ ಜನಾಂಗಕ್ಕೂದ ಸಾರವನ್ನು ಹೀರುತ್ತಿ ಕೋಮುವಾರು ಜಗಳಗಳ ತೊಂದರೆ ಇಲ್ಲದಾಗು ... ಎಂದು ಮುಂತಾಗಿ ಹೇಳಿದರು.

ಅಧ್ಯಕ್ಷರ ಭಾಷಣವಾದ ಮೇಲೆ ಬಿ. ಎ ಕ್ಲಾಸಿನ ವಿದ್ಯಾರ್ಥಿಗಳಾದ ಮೆ. ಮಹ್ಮದ್ ಹಾಫಿಜುರ್ ರಹಮಾನ್‌ರವರು ಮತ್ತು ಮೆ. ಅಬ್ದುಲ್ ರಶೀದ್ ಖಾನ್‌ರವರು ಉಪನ್ಯಾಸ ಮಾಡಿದರು. ಮಧ್ಯಾಹ್ನದ ಮೇಲೆ ಮೈಸೂರಿನ ಒಬ್ಬ ಡೆಲಿಗೇಟರಾದ ಮೌಲ್ವಿ ಹಕೀಮ್ ಸಯ್ಯದ್ ಗೌಸ್ ಮೊಯಿದ್ದೀನ್ ಸಾಹೇಬರು ಮತ್ತು ಕೆಲವರು ಭಾಷಣ ಮಾಡಿದ ಮೇಲೆ ಈ ಕೆಳಗಿನ ಠರಾವುಗಳು ಮಂಜೂರು ಮಾಡಲಾದವು

1. ಮೌಲಾನ ಮಹ್ಮದ್ ಅಲಿಯವರ ಮತ್ತು ಪಂಡಿತ ಮೋತಿಲಾಲ್ ನೆಹರೂರವರ ಮರಣಕ್ಕೆ ಸಂತಾಪ ಸೂಚನೆ. (ಎಲ್ಲರೂ ನಿಂತುಕೊಂಡು ಪಾಸು ಮಾಡಿದರು.)

2. ವೀರರಾಜಪೇಟೆಯಲ್ಲಿರುವ ಉರುದು ಪ್ರೈಮರಿ ಶಾಲೆಯನ್ನು ಉರುದು ಸೆಕೆಂಡರಿ ಶಾಲೆಯಾಗಿ ಮಾಡುವಂತೆ ಮುನ್ಸಿಪಲ್ ಕಮಿಟಿಯವರನ್ನು ಕೇಳಿಕೊಳ್ಳತಕ್ಕದ್ದು.

3. ವೀರರಾಜಪೇಟೆಯಲ್ಲಿ ಮತ್ತು ಮಡಿಕೇರಿಯಲ್ಲಿ ಒಂದೊಂದು ಉರುದು ಮುಸ್ಲಿಮ್ ಹುಡುಗಿಯರ ಶಾಲೆಯನ್ನು ಸ್ಥಾಪಿಸುವಂತೆ ಮುನ್ಸಿಪಾಲಿಟಿಯವರನ್ನು ಕೇಳಿಕೊಳ್ಳತಕ್ಕದ್ದು.

4. ಸ್ಥಳೀಯ ಮುನ್ಸಿಪಲ್ ಕಮಿಟಿಗೆ ಮೆಂಬರನಾಗಿ ನಿಲ್ಲಲು ಪ್ರತಿಯೊಬ್ಬ ಓಟರನಿಗೂ ಹಕ್ಕಿರತಕ್ಕದ್ದು.

5. ... ವಿಷಯದಲ್ಲಿ ಈ ಸಭೆಯು ಅಖಿಲ ಭಾರತ ಮುಸ್ಲಿಮ್ ಕಾನ್‌ಫರೆನ್ಸಿನ ತೀರ್ಮಾನಗಳಿಗೆ (ಈಗಲೂ, ಇನ್ನು ಮುಂದಕ್ಕೂ) ಒಪ್ಪುತ್ತದೆ.

6. ಹೈ ಸ್ಕೂಲಿನಲ್ಲಿ ಓದುವ ಮುಸಲ್ಮಾನ್ ವಿದ್ಯಾರ್ಥಿಗಳಿಗೆ ಹತ್ತು ರೂಪಾಯಿಯ 15 ವೇತನ (ಸ್ಕಾಲರ್ ಶಿಪ್)ಗಳನ್ನೂ ಕಾಲೇಜಿನಲ್ಲಿ ಓದುವವರಿಗೆ 25 ರೂಪಾಯಿಯ ಎರಡು ವೇತನಗಳನ್ನೂ ಕೊಡಬೇಕೆಂದು ಈ ಸಭೆಯು ಸರ್ಕಾರವನ್ನು ಕೇಳಿಕೊಳ್ಳುತ್ತದೆ.

7. ಕೊಡಗಿನಲ್ಲಿ ಇಬ್ಬರು ಮುಸಲ್ಮಾನರನ್ನು ಪೋಲೀಸು ಸಬ್ ಇನ್‌ಸ್ಪೆಕ್ಟರಾಗಿ ನೇಮಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತದೆ

8. ಕೊಡಗಿನ ಉರ್ದು ಶಾಲೆಗಳಿಗೆ ಒಬ್ಬ ಮುಸ್ಲಿಮ್ ಸುಪರ್‌ವೈಜರನ್ನು ನೇಮಿಸುವಂತೆ ಸರ್ಕಾರವನ್ನು ಕೇಳಿಕೊಳ್ಳುತ್ತದೆ.

9. ಐದು ಮೆಂಬರುಗಳಿಂದ ಕೂಡಿದ ಸಂಘದ ಒಂದು ಸ್ಟೇಂಡಿಂಗ್ ಕಮಿಟಿಯನ್ನು ಏರ್ಪಡಿಸತಕ್ಕದ್ದು.

10. ಪ್ರಾಯ ಬಂದವರಿಗೆ ಎರಡು ಶಾಲೆಗಳನ್ನು ಆಗುವಷ್ಟು ಬೇಗನೆ ಸ್ಥಾಪಿಸತಕ್ಕದ್ದು.

ಕಡೆಗೆ ಅಧ್ಯಕ್ಷರು ಮುಕ್ತಾಯದ ಭಾಷಣವನ್ನು ಮಾಡಿದರು. ಅಧ್ಯಕ್ಷರಿಗೂ ಪ್ರತಿನಿಧಿಗಳಿಗೂ ವಂದನಗಳಿಂದ ಸಭೆಯು ಸಾಯಂಕಾಲ 6.15 ಗಂಟೆಗೆ ಬರಖಾಸ್ತಾಯಿತು.

ಅಬ್ದುಲ್ ಮಜೀದ್‌ಖಾನ್,
(ಜ ಸೆಕ್ರೆಟರಿ.)

ಖಾದಿಯ ಹಾಡು.

(ಕಡು ಧೀರನೇ ಕರುಣೀ ಎಂಬಂತೆ.)

ಪರ ದೇಶದ ಬಟ್ಟೆಯ ಬಿಡು ಬಿಡು ಸುಡು ಸುಡು | ದೇಶ
ಬಂಧು | || ಪಲ್ಲ ||
—ದಯವಿಡು ದೇಶಬಂಧು ! ||

ಸ್ವರ್ಣಧರಣಿಯಾ ಸ್ವರ್ಣವನೆಲ್ಲವ |
ಪೂರ್ಣ ವಿದೇಶೀ ವಸ್ತ್ರಕೆ ಕೊಡುವಾ |
ಕರ್ಣಕಠೋರ ವಿಚಾರವ ಸುಡು ಸುಡು | ದೇಶಬಂಧು ! || ೧ ||

ಪರದೇಶಿಗಳಾ ಏಸನಕ್ಕೀಯುವ |
ಭರತಖಂಡದಾ ಜೀವನ ಧನವಾ |
ಗರವು ಸ್ವದೇಶೀ ಖಾದಿಗೆ ಕೊಡು ಕೊಡು | ದೇಶಬಂಧು !
|| ೨ ||

ನಾವಿರಗಟ್ಟಳೆಯಲಿ ಭಾರತದಲಿ |
ಸಾವರು ಕೂಳಿಲ್ಲದೆ ಹಸಿವಿಂದಲಿ |
ಜೀವನ ಮಾರ್ಗಕೆ ಬಟ್ಟೆಯ ಕೊಡು ಕೊಡು | ದೇಶಬಂಧು !
|| ೩ ||

ಮಾಸಿಸಿಯರು ಹಲವರು ಚಿತ್ತಳಿಯಲಿ |
ಕಾನನದೊಳಗಿರುವರು ಹಲವೆಡೆಯಲಿ |
ಮಾನದ ಹಾದಿಯ ಖಾದಿಯ ಕೂಡುಕೊಡು | ದೇಶಬಂಧು !
|| ೪ ||

ಚರಕವ ತಿರುಗಿಸಿ ಬಟ್ಟೆಯನೊದಗಿಸಿ |
ಪರದೇಶೀವಸ್ತ್ರಾಪಾರದ ನಿಲ್ಲಿಸಿ |
ಧರೆಗೆ ಸ್ವರಾಜ್ಯದ ಖಾದಿಯ ಕೊಡುಕೊಡು | ದೇಶಬಂಧು !
|| ೫ ||

ಭಾರತಸ್ವಾತಂತ್ರ್ಯಾಂಬರ ಮಿತ್ರನು |
ಧೀರ ಮಹಾತ್ಮನು ಸಾರಿಗನುಡಿಯನು |
ದೂರದಲೆಮನ್ನಿಸಿ ಖಾದಿಯ ಕೊಡುಕೊಡು ' ದೇಶಬಂಧು !
|| ೬ ||

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯ.

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ:—ನನ್ನ ಭಾವ ತಮ್ಮ ಪಟ್ಟಯ್ಯನು ಕಳೆದ ನಾಲ್ಕೈದು ವರ್ಷಗಳಿಂದ ಪತ್ತೆ ಇಲ್ಲದಿರುದರಿಂದಲೂ, ನಾವಿಬ್ಬರ ಸೊತ್ತು ನನ್ನ ಸ್ವಾಧೀನ ಅನುಭವದಲ್ಲಿರುವದರಿಂದಲೂ ಈತ ಸಾಲ ಮಾಡಿದ ಅಥವಾ ಇನ್ನು ಮುಂದೆ ಮಾಡುವ ಪಕ್ಷಕ್ಕೆ ಅಂಥಾ ಸಾಲ ಕೊಟ್ಟ ಮಹನೀಯರು ಈ ಪಟ್ಟಯ್ಯನ ದೇಹ ಜವಾಬ್ದಾರಿಯಿಂದಲೇ ಭರ್ತಿಮಾಡಿಕೊಳ್ಳಬೇಕಲ್ಲದೆ ಪಿತ್ರಾರ್ಜಿತ ಸೊತ್ತು ಅಂತಹ ಸಾಲಕ್ಕೆ ಈಡಾಗಲಾರದು. ಹಾಗೆ ಭರ್ತಿ ಮಾಡದ ಪಕ್ಷ ಸಾಲ ಕೊಟ್ಟವರು ಎಲ್ಲಾ ನಷ್ಟಕ್ಕೆ ತಾವೇ ಗುರಿಯಾಗತಕ್ಕದ್ದು. ಈತನು ಕುಟುಂಬ ಖರ್ಚಿಗಾಗಲೀ ಯಾ ಪಿತ್ರಾರ್ಜಿತ ಸೊತ್ತುಗಳ ರೂಪಿತ ವಗೈರೆಗಾಗಲೀ ಸಾಲ ಮಾಡಿದ್ದಲ್ಲ.

ಕುಂಡಂಡ ಚೆಂಗಪ್ಪ,
4—1 ಯವ್ವಕಪಾಡಿ ಗ್ರಾಮ,

ನಮ್ಮ ಪೂರ್ವಜರೆಲ್ಲ ಹಿಂದುಗಳು.

ಮಂಗಳೂರು ಜಿಲ್ಲೆಯ ೨ನೇ ಯುವಕ ಪರಿಷತ್ತಿನ ಅಧ್ಯಕ್ಷರಾದ ಮುಂಬಾಯಿಯ ಶ್ರೀ ಮೋಹನಲಾಲಿಯವರು ಮಾಡಿದ ಭಾಷಣದ ಮುಖ್ಯಾಂಶವಿದು.—

'ದೇಶ ಬಂಧುಗಳೇ ! ನಾನು ಸ್ಪಷ್ಟವಾದಿಯಾದುದರಿಂದ ಇದ್ದುದನ್ನು ಇದ್ದಂತೆಯೇ ಹೇಳುತ್ತೇನೆ ಗಾಂಧಿ—ಇರ್ವಿನರ ಒಪ್ಪಂದವೆಂದರೆ ಅದೇ ಒಂದು ಪ್ರಮಾದ. ಒಪ್ಪಂದದ ನಿಯಮಗಳನ್ನು ಪಾಲಿಸಬೇಕು, ಯುದ್ಧ ಭಾವವನ್ನು ಮನಸ್ಸಿನಲ್ಲಿಟ್ಟಿರಬೇಕು. ಹೀಗೆ ಮುಖಂಡರ ಹೇಳಿಕೆ. ಅಂಥ ಸಂಶಯದ ಸ್ಥಿತಿಯಲ್ಲಿ ನಮಗೇನಾದರೂ ಲಾಭವಾದೀತೆಂದು ನನಗಂತೂ ಸರ್ವಥಾ ಅನಿಸುವುದಿಲ್ಲ. ಆದಕಾರಣ ನಾವು ಯಾವಾಗಲೂ ಯುದ್ಧದ ಸಿದ್ಧತೆಯಲ್ಲಿರಬೇಕು. ಒಬ್ಬನನ್ನು ಇನ್ನೊಬ್ಬನು ಒತ್ತಾಯದಿಂದ ಆಳುವುದು ಈಶ್ವರೀ ಸಂಕೇತಕ್ಕೆ ವಿರೋಧವಾದದ್ದು. ಆದುದರಿಂದ ಪೂರ್ವದೇಶೀಯರು ಪಾಶ್ಚಿಮಾತ್ಯರ ವಿರುದ್ಧವಾಗಿ ಎದ್ದು ನಿಂತು ತುರ್ಕರು, ಪಾರ್ಶಿಗಳು, ಚೀನದವರೇ ಮೊದಲಾದವರು ತಮ್ಮ ಉದ್ಧಾರವನ್ನು ಮಾಡಿಕೊಂಡರು ಭಾರತೀಯರಾದ ನಾವು ಮಾತ್ರ ಇನ್ನೂ ಈ ಬಲೆಯಿಂದ ಪಾರಾಗಿರುವದಿಲ್ಲ; ಆದರೆ ಸ್ವಲ್ಪ ದಿವಸಗಳಲ್ಲಿಯೇ ಆಗುವೆವು ಅದಕ್ಕಾಗಿ ಯುವಕ ಯುವತಿಯರು ಅಸಾಧಾರಣವಾದ ಸ್ವಾರ್ಥತ್ಯಾಗವನ್ನು ಮಾಡಬೇಕು. ತರುಣ ತರುಣಿಯರೇ ರಾಷ್ಟ್ರದ ನಿಜವಾದ ಉದ್ಧಾರಕರು. ನಿಜವಾಗಿ ನೋಡಿದರೆ ನಮ್ಮ ದೇಶದಲ್ಲಿ ಜಾತಿ ವಿಷಯಕ ಪ್ರಶ್ನೆಯೇ ಇಲ್ಲ; ಆದರೆ ಹಲಕೆಲವರು ಸುಮ್ಮನೆ ಶಂಬಿನಾದ ಮಾಡಿ ಕಲಹವನ್ನೆಬ್ಬಿಸುತ್ತಿರುವರು. ಹಿಂದೂ ಮುಸಲ್ಮಾನರು ಬೇರೆ ಬೇರೆ ಜನಾಂಗದವರೆಂದು ಹೇಳುವ ಮಾತು ಸ್ವಾರ್ಥಪರರಾದ ಬ್ರಿಟಿಷರದು. ನಾವದನ್ನು ನಂಬಿ ಸುಮ್ಮ ಸುಮ್ಮನೇ ನಮ್ಮ ನಮ್ಮಲ್ಲಿ ಜಗಳವಾಡುತ್ತಿರುವೆವು ನನ್ನ ಪೂರ್ವಜರು ಹಿಂದುಗಳಾಗಿದ್ದರು; ನಾನೀಗ ಮುಸಲ್ಮಾನನಾಗಿದ್ದೇನೆ. ನೂರಕ್ಕೆ ೯೯ ಜನರು ಮುಸಲ್ಮಾನರೂ, ಕ್ರೈಸ್ತರೂ ಮೊದಲು ಹಿಂದುಗಳಾಗಿದ್ದರೆಂದು ಸ್ಥೈರ್ಯದಿಂದ ಹೇಳುತ್ತೇನೆ. ಇಂಥವರ ಮೇಲೆ ... ಎಂದೂ ಶ್ರೈಯಿಸಲಾರರು. ನಿಜವಾದ ಯೋಗ್ಯತೆಯುಳ್ಳವನು ಯಾವ ಜಾತಿಯವನಿದ್ದರೂ ಅವನಿಗೆ ತಕ್ಕ ... ಗೌರವಗಳು ತಾವಾಗಿಯೇ ದೊರೆಯುವವು. ... ಗ ಮುಸಲ್ಮಾನರು ತಮ್ಮ ಭದ್ರತೆಗಾಗಿ ಒದ್ದಾಡುತ್ತಿರುವುದು ತೀರಾ ಅಯೋಗ್ಯ. ಕೆಲಸವಿಲ್ಲದ ಕೆಲವು ಸ್ವಾರ್ಥಿಗಳೂ, ಶಾಸ್ತ್ರಿಗಳೂ ಧರ್ಮಕ್ಕೆ ಆಳಿಗಾಲ ಬಂತೆಂದು ಹೊಡೆಯುತ್ತಿರುವರು. ಧರ್ಮವು ಇನ್ನೊಬ್ಬನು ... ಶಂಬಿನಾದ ಮಾಡುವದರಿಂದಲೇ ನಾಶವಾಗುವಷ್ಟು ದುರ್ಬಲವಾಗಿದ್ದರೆ ಅಂಥ ಧರ್ಮವು ನಾಶವಾಗುವುದೇ ... ಸಾವಿರಾರು ವರ್ಷಗಳಿಂದ ಹಾಳಾಗದ ಧರ್ಮವು ... ರೂ ಹಾಳಾಗಲಾರದು. ಕಾಂಗ್ರೆಸ್ಸಿನಲ್ಲಿ ಎಲ್ಲ ... ರಿಗೂ ಸ್ಥಳವಿರುವುದು. ಆದರಿಂದ ಎಲ್ಲರೂ ಬರ... ಲು ಬರುವಂತಿದೆ. ಪ್ರಬುದ್ಧ ಯುವಕರೇ ! ಇನ್ನು ... ದಿನ ಕಾಲವು ನಿಮ್ಮದು. ಆದುದರಿಂದ ದೇಶ ಸ್ವಾ... ಕ್ಕಾಗಿ ಮೊದಲು ನೀವು ಟೊಂಕ ಕಟ್ಟಿರಿ, ಸಿದ್ಧ... ರಿ ! ಮಹಾತ್ಮರಿಗಾಗಿ ದೇಶ ಲಕ್ಷಿಲವೂ ಪ್ರಾಣ... ಕ್ಕೆ ಸಿದ್ಧವಾಗಿರುವುದು. ಇದರ ಕಾರಣವೇನು ... ಜೀಯವರು ತಮಗೆ ಸರಿದೋರಿದ ವಿಷಯವು ತಮ್ಮ ... ಪ್ರಾಗಲಿ ಅದನ್ನು ತೈಕೊಳ್ಳುತ್ತಾರೆ. ಬಾಯಿಯಿಂದ ... ದಂತೆ ತಪ್ಪದೆ ನಡೆದುಕೊಳ್ಳುತ್ತಾರೆ. ಅಂತಹ ಶ್ರ... ದ್ಧೆಯು ನಮ್ಮಲ್ಲಿರಬೇಕು. ಅದನ್ನೊದಗಿಸಿಕೊಂಡು ... ಷ್ಟ್ರ ಸೇವೆಗೆ ಸರ್ವರೂ ಸಿದ್ಧರಾಗೋಣ ಇನ್ಕ್ವಿ... ಝಿಂದಾಬಾದ್' ! !

ರಬ್ಬರ್ ಮೋಹರುಗಳು.

ನೀವು ಅಪೇಕ್ಷಿಸುವ ಯಾನತ್ತು ಮಾದರಿಯ ತಯಾರಿಸಿ ಕೊಡಲಾಗುವವು.

ಮೇಲ್ಕಂಡ ಸಾಮಾನುಗಳಲ್ಲದೆ ಕನ್ನಡಿಯ ಸ್ಪ್ರಿಂಗ್ ... ರ್ಗಳು, ಹಾಫ್ ಟೋನ್ ಬ್ಲಾಕ್, ಮೋನೋಗ್ರಾಮ್ ... ಮಾರ್ಕ್‌ಗಳು, ಚಂದ್ರಕಾಂತ ಶಿಲೆಯ ಹಲಿಗೆಗಳು, ಉಂ... ಳಗಿಡುವ ಬಹು ಅಂದವಾದ ಸಣ್ಣ ಕಲ್ಲುಗಳು ಇತ್ಯಾದಿ

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
12—10 ಮಂಗಳೂರು, ದ ಕನ್ನಡ
ಯಾ
ಏಜಂಟ್ ಯನ್. ಯ ನ್. ಪೊನ್ನಪ್ಪ,
ಮಡಿಕೇರಿ

WANTED.

An accountant for the Co-operative S... to be opened at Mercara shortly. The ca... date should have passed the S. S. L C ex... nation Preferance will be given to one ... possesses a knowledge of book-keeping. A... cations should reach the undersigned by the ... June, 1931

M. M Belliappa,
Hon Secretary,
2—6—31. Co-operative Store
2—1 Merc...

ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆಯಲ್ಲಿ ಶಿವಾಚಾರ ... ಓಂಕಾರೇಶ್ವರ ದೇವಸ್ಥಾನದ ಬಳಿ ಇರುವ ಕಂಚಿಗಾರರ ... ಣ್ಣ ಶೆಟ್ಟಿಯವರ ಬಾಬ್ತು, 2ನೇ ಬ್ಲಾಕಿನಲ್ಲಿರುವ ಕಾ... ಜಾರಿ, ಸಣ್ಣ ಮತ್ತು ದೊಡ್ಡ ಹಂಚು ಹಾಕಿರುವ ಸರ್ವೆ 10ರ ಮನೆ ಮತ್ತು ಅದರ ಹಿಂಭಾಗದಲ್ಲಿರುವ ಕೊಟ್ಟಿಗೆ ದರ ಪಕ್ಕದಲ್ಲಿರುವ ಸಣ್ಣ ಹಂಚು ಹಾಕಿದ ಸರ್ವೆ ನಂ ... ಮನೆ ಮತ್ತು ನಿಮಾಜ್ ಬಾಣೆ ಪಕ್ಕದಲ್ಲಿರುವ ಒಂದು ... ರೆ 38 ಸೆಂಟು ಕಾಫೀತೋಟ ಸಹ ಮಾರಾಟಕ್ಕಿದೆ. ಕೊ... ಕೊಳ್ಳಲು ಇಚ್ಛಿಸುವವರು ಈ ಕೆಳಗಿನ ವಿಳಾಸದಾರರಿಗೆ ... ದುಕೊಳ್ಳುವುದು.

ಕಂಚಿಗಾರರ ಸುಬ್ಬಣ್ಣ ಶೆ...
4—2. ಮಹದೇವಪೇಟೆ,
ಮಡಿಕೇರಿ

For Sale.

Good Coffee estate in Coorg.
For Particulars apply to—
"D"
C/o Manager, "Kodagu,"
2—1 Mercara

ಚಂದಾದಾರರಲ್ಲಿ ವಿನಂತಿ.

'ಕೊಡಗು' ಪತ್ರಿಕೆಯ ಹಾಲಿ ವರ್ಷವು ಈ ತಿಂಗಳ ಆಖೈರಿನಲ್ಲಿ ಅಂತ್ಯವಾಗುತ್ತದೆ. ನೇಕಟೀಸು ಕಾರ್ಡುಗಳು ಕಳುಹಿಸಲ್ಪಟ್ಟಾಗ್ಯೂ ಹಲವು ಚಂದಾದಾರರು ಇನ್ನೂ ತಮ್ಮ ಚಂದಾ ಹಣವನ್ನು ಪಾವತಿ ಮಾಡದೆ ಇರುವುದು ಕುಂಬಾ ವ್ಯಸನಕರ. ಮೊದಲಿನಂತೆ ವಿ ಪಿ ಮೂಲಕ ಪತ್ರಿಕೆಯನ್ನು ಕಳುಹಿಸುವೆವೆಂದರೆ—ಪೋಸ್ಟಲ್ ಇಲಾಖೆಯವರು ವಿ. ಪಿ ಭಾಗಿಯನ್ನು ಈ ಮೊದಲಿನಂತೆ ಹತ್ತು ದಿವಸಗಳ ವರೆಗೆ ಇಡುವದರ ಬದಲು ಈಗ ಒಲೇ ಮೂರು ದಿವಸಗಳ ತನಕ ಮಾತ್ರ ಇಟ್ಟು ವಾಪಸು ಮಾಡುತ್ತಿರುವದರಿಂದ ಮುಖ್ಯವಾಗಿ ಪೋಸ್ಟಾಫೀಸುಗಳಿಂದ ದೂರವಿರುವ ಗ್ರಾಮಸ್ಥರಿಗೆ ವಿ ಪಿ ಯನ್ನು ಹೊಂದಿಕೊಳ್ಳಲು ಕಷ್ಟವಾಗುತ್ತೆ. ಆದಕಾರಣ ಮಹನೀಯರೆಲ್ಲರೂ ತಮ್ಮ ಚಂದಾ ಹಣವನ್ನು ಮನಿಯಾರ್ಡರ್ ಮೂಲಕವಾಗಿ ನಮ್ಮ ಆಫೀಸಿಗಾಗಲೀ, ನಮ್ಮ ಏಜೆಂಟರುಗಳಿಗಾಗಲೀ ಕೂಡಲೆ ಪಾವತಿ ಮಾಡಬೇಕಾಗಿ ಕೋರುತ್ತೇವೆ. ಹಳೇ ಚಂದಾ ಬಾಕಿ ಮಾಡಿಕೊಳ್ಳುವುದರಿಂದಲೂ, ವಿ ಪಿ ವಾಪಸು ಮಾಡುವುದರಿಂದಲೂ ನಮಗೆ ತುಂಬಾ ನಷ್ಟ ಉಂಟಾಗುವುದರಿಂದ ಅಂಥವರಿಗೆ ಪತ್ರಿಕೆ ಕಳುಹಿಸುವುದನ್ನು ನಿಲ್ಲಿಸಬೇಕಾಗುವದೆಂದು ತಿಳಿಸಲು ವಿಷಾದಿಸುತ್ತೇವೆ. ಹಳೆದ ಹತ್ತು ವರ್ಷಗಳಿಂದ ದೇಶಸೇವೆ ಮತ್ತು ಸಮಾಜಸೇವೆ ಮಾಡುತ್ತಾ ತನ್ನ ಆಯುಷ್ಯವನ್ನು ಸವೆಸುತ್ತಿರುವ 'ಕೊಡಗು' ಪತ್ರಿಕೆಯ ಪ್ರಕಟನ ಕಾರ್ಯಕ್ಕೆ ತೊಂದರೆ ಸಾಗದಂತೆ ಎಲ್ಲರೂ ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿ ಸಹಾಯ ಮಾಡಬೇಕಾಗಿ ಕೋರುತ್ತೇವೆ.

(ಮೇನೇಜರು)

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗಿನ ಸಿವಿಲ್ ಕೋರ್ಟುಗಳು ರಜೆ ಮುಗಿದು ಈ ತಾ. 1ರಲ್ಲಿ ತೆರೆಯಲ್ಪಟ್ಟಿವೆ.

ಮೆ॥ ಯಂ. ಯಂ ಸಿದ್ದೀಕ್‌ರವರು ಮಡಿಕೇರಿ ಮುನ್ಸಿಪಲ್ ಕಮಿಟಿಯ ಮೆಂಬರಾಗಿ ಚುನಾಯಿಸಲ್ಪಟ್ಟಿರುವರು.

ಕಳೆದ ಏಪ್ರಿಲ್ ತಿಂಗಳಲ್ಲಿ ಕೊಡಗಿನಲ್ಲಿ 265 ಮರಣಗಳೂ, 341 ಜನನಗಳೂ ಆದವೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಮಾಸಿಕ ರಾಷ್ಟ್ರೀಯ ಧ್ವಜ ವಂದನೆಯು ಕಳೆದ ತಾ 31ನೇ ಆದಿತ್ಯವಾರ ಪೊನ್ನಂಪೇಟೆಯ ಕುಶಾಲಪುರದಲ್ಲಿ ನಡೆಯಿತೆಂದು ತಿಳಿಯುತ್ತೇವೆ.

ಚೀಫ್ ಕಮಿಷನರವರು ಕಳೆದ ತಿಂಗಳ ಅಂತ್ಯದಲ್ಲಿ ಬೆಂಗಳೂರಿಂದ ಪೊಳ್ಳಿಬೆಟ್ಟಕ್ಕೆ ಬಂದಿರುವರೆಂದೂ, ಅವರು ಕೆಲವು ದಿವಸಗಳು ಕೊಡಗಿನಲ್ಲಿರುವರೆಂದೂ ವರ್ತಮಾನ.

ಈ ವಾರ ದೇಶದ ಹಲವು ಭಾಗಗಳಿಗೆ ಮಳೆ ಬಿದ್ದಿದೆ. ಸದಾ ಮೋಡ ಕವಿದುಕೊಂಡು ಗಾಳಿ ಮಳೆಯು ಇರುವ ಕಾರಣ ಮಳೆಗಾಲವು ಪ್ರಾರಂಭಿಸಿದಂತೆ ಕಾಣುತ್ತದೆ.

ವೀರಾಜಪೇಟೆಯಲ್ಲಿ ಇಲಿಗಳು ಸಾಯುತ್ತಿವೆ. ಸಮೀಪದಲ್ಲಿ ಆರ್ಜಿ ಗ್ರಾಮದ ಬೋಪ್ಪಂಡ ಮನೆಯಲ್ಲಿ ಪ್ಲೇಗಿನಿಂದ ಒಂದು ಮರಣ ಸಂಭವಿಸಿರುವದೆಂದು ತಿಳಿಯಬರುತ್ತದೆ.

ಕಳೆದ ಎಫ್. ಎಲ್ ಪರೀಕ್ಷೆಯಲ್ಲಿ ಮೆ ಸಿ ಯಸ್ ನಾರಾಯಣರಾವ್ ಮತ್ತು ಮೆ ಎನ್ ಎಸ್ ರಾಮಸ್ವಾಮಿಯವರು ಪಾಸಾಗಿರುವರು. ಇವರಿಗೆ ನಮ್ಮ ಅಭಿನಂದನೆಗಳಿವೆ.

ಪಂಡಿತ ಜವಾಹರ್ ಲಾಲ್ ನೆಹರುರವರು ಕಳೆದ ತಾ 31ರಲ್ಲಿ (ಕ[illegible]ದಿಂದ ವೀರಾಜಪೇಟೆಗಾಗಿ ಬಂದು) ಕೊಯಮುತ್ತೂರಿನ [illegible] ರಸ್ತೆಗಾಗಿ ಮೈಸೂರಿಗೆ ತೆರಳಿ ಹೋದರೆಂದು ತಿಳಿಯುತ್ತೇವೆ.

ಪ್ಲೇಗಿನ ದೆಸೆಯಿಂದ ವೀರಾಜಪೇಟೆ ಹೈಸ್ಕೂಲು ಇನ್ನೊಂದು ಹುಕುಂ ವರೆಗೆ ಮುಚ್ಚಲ್ಪಟ್ಟಿದೆಯೆಂದೂ, ಮಡಿಕೇರಿ ಕಾನ್ವೆಂಟ್ ಹೈಸ್ಕೂಲೂ ಈ ತಾ 10ಲ್ಲಿ ತೆರೆಯಲ್ಪಟ್ಟಿಲ್ಲವೆಂದೂ ವರ್ತಮಾನ.

ಈ ತಾ 1ರಲ್ಲಿ ಮಡಿಕೇರಿ ಸಹಕಾರಿ ಸ್ಟೋರಿನ ಪ್ರಥಮ ಜನರಲ್ ಮೀಟಿಂಗು ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲಿ ನಡೆದು ಉಪನಿಬಂಧನೆಗಳನ್ನು ಮಂಜೂರು ಮಾಡಿ, ಕಮಿಟಿ ಮೆಂಬರುಗಳನ್ನು ಚುನಾವಣೆ ಮಾಡಲಾಯಿತು.

ಮಳೆಯು ಪ್ರಾರಂಭವಾದ ಕಾರಣ ವೀರಾಜಪೇಟೆ ಮತ್ತು ಮಡಿಕೇರಿಯಲ್ಲಿ ಸಾರಾಯಿ ಅಂಗಡಿಗಳ ಪಿಕೆಟಿಂಗ್ ಕೆಲಸವು ಈ ತಿಂಗಳ ಪ್ರಾರಂಭದಲ್ಲಿ ನಿಲ್ಲಿಸಲ್ಪಟ್ಟಿರುತ್ತದೆ. ಮಳೆಗಾಲವು ಅಂತ್ಯವಾದ ಕೂಡಲೆ ಈ ಕೆಲಸವು ಪುನಹ ಕೈಕೊಳ್ಳಲಾಗುವುದೆಂದು ತಿಳಿಯ ಬರುತ್ತದೆ.

ಈ ಮೊದಲು ಪ್ರಕಟಿಸಿದಂತೆ ಮೆ ಬಿದ್ದಂಡ ಅಚ್ಚಯ್ಯನವರು ಯಂ ಎ. ಪರೀಕ್ಷೆಯಲ್ಲಿ ಪಾಸಾದದಲ್ಲವೆಂತಲೂ, ಅವರು ಬಿ ಎ ಆನರ್ಸ್ ಪರೀಕ್ಷೆಯಲ್ಲಿ ಪಾಸಾದದ್ದೆಂತಲೂ, 2 ವರ್ಷಗಳನಂತರ ಅವರಿಗೆ ಯಂ ಎ. ಬಿರುದು ದೊರೆಯುತ್ತದೆಂತಲೂ ಇತ್ತಲಾಗಿ ತಿಳಿಯಬರುತ್ತದೆ.

ಕೊಡಗು ಸಹಕಾರಿ ಸಂಘ ಮತ್ತು ಕೊಡಗು ದವಸ ಭಂಡಾರವನ್ನು ಸಹಕಾರಿ ಸಂಘಗಳ ಆಕ್ಟಿನ 39ನೇ ಸೆಕ್ಷನ್ ಮೇರೆ ರದ್ದು ಮಾಡಿ, ವೀರಾಜಪೇಟೆ ಸರ್ಕಲಿನ ಸಹಕಾರಿ ಇನ್‌ಸ್ಪೆಕ್ಟರ್ ಮೆ. ಪಿ ಯಂ ಚಂಗಪ್ಪನವರನ್ನು ಸದರಿ ಸಂಘ ಮತ್ತು ಭಂಡಾರದ ಲಿಕ್ವಿಡೇಟರಾಗಿ ನೇಮಿಸಿದೆ.

ಮಡಿಕೇರಿಯಲ್ಲಿ ಇಲಿಗಳು ಸಾಯುವುದು ಜೋರಾಗಿದೆ. ಕಳೆದ ಶನಿವಾರ ಪ್ಲೇಗಿನಿಂದ ಒಂದು ಮರಣವೂ ಆಯಿತು. ಮಡಿಕೇರಿಗೆ ಸಂಟಿಕೊಪ್ಪದಿಂದ ಬಂದವನೊಬ್ಬನಿಗೆ ಪ್ಲೇಗು ಅಂಟಿದೆ. ಪ್ಲೇಗಿನ ನಿಮಿತ್ತ ಮಡಿಕೇರಿ ಚೌಕದ ಒಳ ಇರುವ ಜನಸು ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟಿವೆ.

ಮೆ॥ ಐಚೆಟ್ಟಿರ ಬಿ ಮಾದಪ್ಪನವರು ಮೈಸೂರು ಬಿ ಎ ಪರೀಕ್ಷೆಯಲ್ಲಿಯೂ, ಮೆ. ಯಸ್. ಕೆ ನಾರಾಯಣನವರು ಮದ್ರಾಸು ಬಿ ಎ ಪರೀಕ್ಷೆಯಲ್ಲಿಯೂ, ಮೆ ಪಾಲೇಕಂಡ ಡಿ ಮಂಕ್ಷ್ಮಣನವರು ಮೈಸೂರು ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ. ಇವರುಗಳನ್ನು ಅಭಿನಂದಿಸುತ್ತೇವೆ.

ವಿಜಯನಗರದ ರಾಜ ಕುಮಾರರು ತನ್ನ ಕ್ರಿಕೆಟ್ ಟೀಮಿನೊಡನೆ ಮಡಿಕೇರಿಗೆ ಬಂದು ಕಳೆದ ತಾರೀಕು 30 ಮತ್ತು 31ರಲ್ಲಿ ಕೊಡಗಿನ 'ಇಂಡಿಯನ್' ಟೀಮಿನೊಡನೆಯೂ, ಈ ತಾ 1 ಮತ್ತು 2ರಲ್ಲು ಯೂರೋಪಿಯನ್ ಟೀಮಿನೊಡನೆಯೂ ಆಡಿ ಕೊಡಗಿನ ಎರಡು ಟೀಮುಗಳನ್ನೂ ಸೋಲಿಸಿದರು. ರಾಜಕುಮಾರರು ಬಹು ಚೆನ್ನಾಗಿ ಆಡಿದರು.

ಕಳೆದ ಡಿಸೆಂಬರ್ ಸರಕಾರಿ ಬೋರ್ಡು ಪರೀಕ್ಷೆಯಲ್ಲಿ ಈ ಕೆಳಗಿನ ಶಾಲೆ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆಂದು ತಿಳಿಯುತ್ತೇವೆ. ವೀರಾಜಪೇಟೆ ಹೈಸ್ಕೂಲು 34, ಮಡಿಕೇರಿ ಹೈಸ್ಕೂಲು 23, ಮಡಿಕೇರಿ ಕಾನ್ವೆಂಟ ಹೈಸ್ಕೂಲು 11, ನಾಪೋಕ್ಲು ಶಾಲೆ 11, ಮಡಿಕೇರಿ ಶಾಲೆ 9, ಪೊನ್ನಂಪೇಟೆ ಶಾಲೆ 5, ಕಾಕೋಟುಪರಂಬು ಶಾಲೆ 3 ಮತ್ತು ಕೊಡ್ಲಿಪೇಟೆ ಶಾಲೆ 2.

ಕಳೆದ ಶನಿವಾರ ನಡೆದ ಮೆ ಅಲ್ಲಾರಂಡ ಈರಪ್ಪನವರ ಮದುವೆಗೆ ಬಂದವರೊಬ್ಬರ ಒಂದು ಚಿನ್ನದ ಉಂಗುರವು ಬೆಯಿನ್ ಸಿಂಗರವರ ಮನೆಯಲ್ಲಿ ಮೆ ಮಣವಟ್ಟಿರ ಚಿಣ್ಣಪ್ಪನವರಿಗೆ ಬಿದ್ದು ಸಿಕ್ಕಿದೆಯೆಂದೂ ಮಾಲೀಕರು ಬಂದು ಪಡೆದುಕೊಳ್ಳಬಹುದೆಂದೂ ಅವರು ತಿಳಿಸಿರುತ್ತಾರೆ.

ಹಿಂದೂದೇಶ.

ಬರುವ ವರ್ಷದ ರಾಷ್ಟ್ರೀಯ ಕಾಂಗ್ರೆಸ್ ಮಹಾ ಸಭೆಯನ್ನು ಉತ್ಕಲದ ಪ್ರಾಂತ್ಯದ ಪೂರಿ ಪಟ್ಟಣದಲ್ಲಿ ನಡಿಸುವಂತೆ ತೀರ್ಮಾನಿಸಲಾಗಿದೆ.

ದುಂಡುಮೇಜು ಪರಿಷತ್ತಿನ ಮುಖ್ಯ ಅಂಗವಾದ ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಮೀಟಿಂಗು ಬರುವ ಸೆಪ್ಟೆಂಬರ್ ನೊಳಗೆ ಪ್ರಾರಂಭಿಸಲಾಗುವದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಪ್ರಕಟಿಸಿರುವರು.

ಈ ಇಸವಿಯ ಕಳೆದ ನಾಲ್ಕು ತಿಂಗಳುಗಳಿಗೆ ಇಂಡಿಯಾಕ್ಕೆ ಬಂದ ಬ್ರಿಟಿಷ್ ಅರಿವೆ ಒಟ್ಟು ೧೩೯,೯೧೭,೦೦೦ ಚದರಗಜ ಮಾತ್ರ, ಕಳೆದ ವರ್ಷದ ಈ ತಿಂಗಳುಗಳಲ್ಲಿ ಬಂದುದಕ್ಕಿಂತ ೩೩೮,೪೪೫,೦೦೦ ಚದರ ಗಜದಷ್ಟು ಕಡಿಮೆ ಎಂದು ಪ್ರಕಟವಾಗಿದೆ.

ಈ ವಾರದಲ್ಲಿ ಬೊಂಬಾಯಿಯಲ್ಲಿ ನಡೆಯುವ ಮುಸಲ್ಮಾನ ಎಲ್ಲಾ ಪಾರ್ಟಿಗಳ ಮೀಟಿಂಗಿಗೆ ಮೌಲಾನ ಶೌಕತ್ ಆಲಿಯವರು ಹೋಗುವುದಿಲ್ಲವೆಂದು ಪ್ರಕಟಿಸಿದ ವರ್ತಮಾನವು ನಿಜವಲ್ಲವೆಂತಲೂ, ಅವರು ಸದರಿ ಮೀಟಿಂಗಿಗೆ ತಾ. 3ರಲ್ಲಿ ಹೊರಟಿರುವರೆಂತಲೂ ಬೊಂಬಾಯಿಯ ವರ್ತಮಾನ.

ಬಂಗಾಳದ ಕಾಂಗ್ರೆಸ್ ಸಂಸ್ಥೆಯಲ್ಲಿ ಶ್ರೀ ಸೆನ್‌ಗುಪ್ತರವರ ಪಾರ್ಟಿಗೂ, ಶ್ರೀ ಸುಭಾಸ್ ಚಂದ್ರಬೋಸ್‌ರವರ ಪಾರ್ಟಿಗೂ ಕಲಹ ಪ್ರಾರಂಭವಾಗಿದೆಯಂತೆ. ಈ ಕಲಹದ ತೀರ್ಮಾನವನ್ನು ಪಂಚಾಯಿತಿಗೆ ಬಿಡುವದು ಉಚಿತವೆಂದು ಮಹಾತ್ಮ ಗಾಂಧಿಯವರು ಶ್ರೀ ಸೆನ್‌ಗುಪ್ತರವರಿಗೆ ಬರೆದಿರುವರೆಂದು ವರ್ತಮಾನ.

ಆರನೆಯ ಕರ್ನಾಟಕ ಪ್ರಾಂತೀಯ ಪರಿಷತ್ತು ಹುಬ್ಬಳ್ಳಿಯಲ್ಲಿ ಸೇರಿತು. ಜಮಖಂಡಿ ರಾಜಾಸಾಹೇಬರು ಅಧ್ಯಕ್ಷರಾಗಿದ್ದರು. ಖಾದಿ ಮತ್ತು ಸ್ವದೇಶಿ ಪ್ರದರ್ಶನವನ್ನು ಕಾಕಾಸಾಹೇಬ ಕಾಲೇಲಕರರು ತೆರೆದರು. ಕರ್ನಾಟಕದ ಏಕೀಕರಣ ಪರಿಷತ್ತಿಗೆ ಡಾ. ಪಟ್ಟಾಭಿ ಸೀತಾರಾಮಯ್ಯನವರು ಅಧ್ಯಕ್ಷರಾಗಿದ್ದರು.

ಮದ್ರಾಸಿನ ಯೂನಿವರ್ಸಲ್ ಮ್ಯೂಚುವಲ್ ಏಡ್ ಎಂಡ್ ಪೂವರ್ ಹೌಸಸ್ ಎಸೋಸಿಯೇಶನ್ ಕಂಪೆನಿಯ ಆಡಳಿತ ಕಮಿಟಿಯ ಮೇಲೆ ತಿರುಪ್ಪೂರಿನ ಶ್ರೀ ಎ ಡಿ ಕೊಪ್ಪ ನಾಯಿಡು ಎಂಬವರಿಂದ ಕೆಲ ಆಕ್ಷೇಪಗಳು ಹೊರಬಿದ್ದುದರಿಂದ ಆ ವಿಚಾರವು ಮದರಾಸು ಹೈಕೋರ್ಟಿಗೆ ಬಂದಿದೆ. ಲಿಕ್ವಿಡೇಟರ ನೇಮಕವೂ ಆಗಿದೆ.

7 ವರ್ಷ ಕಠಿಣ ಸಜೆ ಅನುಭವಿಸಿ ಮೊನ್ನೆ ತಾನೇ ಬಿಡುಗಡೆಯಾದ ಮಹಾರಾಷ್ಟ್ರದ ಸತ್ಯಾಗ್ರಹ ಸೇನಾನಿ ಬಾಪಟರು ಮುಂಬಾಯಿಗೆ ಹೋದಾಗ ಅವರದೊಂದು ಭಾಷಣವಾಯಿತು. "ದೇಶಸೇವೆಗಾಗಿ ಪ್ರಾಣಾರ್ಪಣವನ್ನು ಮಾಡಲು ಸಿದ್ಧರಾದ ಒಂದು ಲಕ್ಷ ಸ್ವಯಂಸೇವಕರನ್ನು ಸಂಗ್ರಹಿಸಿ ಮಹಾತ್ಮರ ವಶದಲ್ಲಿ ಕೊಡುತ್ತೇನೆ. ಇದಕ್ಕಾಗಿ ಮಹಾರಾಷ್ಟ್ರವನ್ನು ಸಂಚರಿಸುತ್ತೇನೆ. ಅಲ್ಲಿ ಒಂದು ಲಕ್ಷ ಸ್ವಯಂಸೇವಕರು ದೊರೆಯದಿದ್ದರೆ ಇಡೀ ಹಿಂದುದೇಶವನ್ನು ಸಂಚರಿಸಿ ಪ್ರಯತ್ನಿಸುತ್ತೇನೆ" ಎಂದು ಅವರು ಹೇಳಿದರು.

ವಿದೇಶ.

ಸ್ಪೈನ್ ದೇಶದಲ್ಲಿ ಇನ್ನು ಮುಂದೆ ದೊಡ್ಡಸ್ಥಿಕೆಯ ಬಿರುದಾವಳಿಗಳೂ, ಬಿರುದುಗಳೂ ಇರಕೂಡದೆಂದು ಈಗಿನ ರಿಪಬ್ಲಿಕ್ ಸರ್ಕಾರದವರು ಹುಕುಂ ಮಾಡಿರುವರು.

ಜಾಫ್ನಾದಲ್ಲಿನ ಯುವಕನೊಬ್ಬನ, ನದಿ ತೀರದಲ್ಲಿ ಗಾಳ ಹಾಕುತ್ತಾ ಸಿಕ್ಕಿದ ಒಂದು ಮೀನನ್ನು ಬಾಯಿಯಲಿ ಭದ್ರವಾಗಿ ಹಿಡಿದು ಮತ್ತೊಂದಕ್ಕಾಗಿ ಗಾಳ ಬಿಸುಟಿದಾಗ ಬಾಯಲ್ಲಿನ ಮೀನು ಗಂಟಲ ಒಳಗೆ ನುಸುಳಿ ಸುಭದ್ರವಾಗಿ ಗಂಟಲಲ್ಲಿ ಸಿಲುಕಿ ಯುವಕನ ಪ್ರಾಣ ಹೀರಿತು!

ಲಂಡನಿನಲ್ಲೊಂದು ವಿನೋದವು ನಡೆಯಿತು. ಯಾರೋ ಒಬ್ಬನು, ಅನೇಕ ಪ್ರತಿಷ್ಠಿತ ಗೃಹಸ್ಥರ ಹೆಸರಲ್ಲಿ ಸಹಿಕೊಟ್ಟು, ಚರ್ಚಿಲ್ ಸಾಹೇಬರ ಗೌರವಾರ್ಥ ಮುಖ್ಯ ಮಂತ್ರಿ ಮೆ ಕ್ಡೊನಾಲ್ಡರನ್ನು, ಸ್ಟೇಟ್ ಸೆಕ್ರೆಟರಿ ಬೆನ್ನರನ್ನು, ಮತ್ತಿತರರನ್ನೂ ಒಂದು ಹೋಟೆಲಿಗೆ ಮೇಜವಾನಿಗಾಮಂತ್ರಿಸಿದನು. ಈ ಮಹಾಶಯರೆಲ್ಲ ಹೋದರು, ಅಲ್ಲಿ ಯಾರೂ ಇರಲಿಲ್ಲ! ಲಂಡನ್ ನಗರವೆಲ್ಲ ಇದನ್ನು ಕೇಳಿ ನಗುತ್ತಿದೆ.

'ಒರ್ಟಿಯ ಮೋಸದಿಂದ ಇಂಗ್ಲೆಂಡಿನ ಒಪ್ಪಿಗೆಯನ್ನು ಇಂಡಿಯಾಕ್ಕೆ ತರುವುದು ಸಾಧ್ಯವಿಲ್ಲವೆಂತಲೂ, ಹಿಂದೀಯರ ಅಭಿಲಾಷೆಗಳಿಗೆ ಸಹಾನುಭೂತಿ ತೋರಿಸಿ ಇಂಗ್ಲೆಂಡಿನ ಪತ್ರಿಯ ಸಾಮಾನುಗಳನ್ನು ಇಂಡಿಯಾದ ಮಾರ್ಕೆಟ್ಟಿಗೆ ಕಳುಹಿಸಬೇಕಲ್ಲದೆ ಬೇರೆ ದಾರಿ ಇಲ್ಲವೆಂತಲೂ' ಬ್ರಿಟನ್ನಿನ ಪ್ರಧಾನ ಮಂತ್ರಿಯಾದ ಮೆ ಮೆಕ್ಡನಾಲ್ಡರವರು ತಮ್ಮದೊಂದು ಭಾಷಣದಲ್ಲಿ ಹೇಳಿದರು.

ಆರೋಗ್ಯಾಭಿವೃದ್ಧಿಗಾಗಿ ವಿಯನ್ನಕ್ಕೆ ಹೋಗಿದ್ದ ಎಸೆಂಬ್ಲಿಯ ಮಾಜಿ ಅಧ್ಯಕ್ಷರಾದ ಶ್ರೀಯುತ ವಿ ಜೆ ಪಟೇಲರವರು ಈಗ ಲಂಡನಿನಲ್ಲಿರುವರು. ಅವರ ಆರೋಗ್ಯವು ಇನ್ನೂ ಸರಿಯಾಗಲಿಲ್ಲವಾದರೂ ಇಂಡಿಯಾದ ಈಗಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡುತ್ತಿದ್ದಾರೆ. ಒಂದು ಕಡೆ ಅವರು—'ಹಿಂದೀಯರೂ, ಬ್ರಿಟಿಷರೂ ಅಗಲುವ ಕಾಲ ಬಂದಿದೆ, ಅಗಲುವದು ಸ್ನೇಹಿತರಾಗಿಯೋ, ಯಾ ಶತ್ರುಗಳಾಗಿಯೋ ಎಂಬುದಷ್ಟೇ ಉಳಿದಿದೆ' ಎಂದು ಹೇಳಿದ್ದಾರೆ.

ಜವಾಸಿನಲ್ಲಿ ಸರ್ಕಾರಿ ಉದ್ಯೋಗಸ್ಥರ ಸಂಬಳವನ್ನು ಶೇಕಡ 20ರಷ್ಟು ಕಡಿಮೆ ಮಾಡಬೇಕೆಂಬ ಸರ್ಕಾರದವರ ಯೋಚನೆಯು ಉದ್ಯೋಗಸ್ಥರಲ್ಲಿ ಅತೃಪ್ತಿಯನ್ನುಂಟುಮಾಡಿತು. ಉದ್ಯೋಗಸ್ಥರಲ್ಲಿ ಅನೇಕರು ಸಂಬಳ ಕಡಿಮೆ ಮಾಡಿದರೆ ರಾಜಿನಾಮೆ ಕೊಡುವೆವೆಂದು ಹೆದರಿಸುತ್ತಿರುವರು. ಆದರೆ ಪಬ್ಲಿಕ್ ಜನರು ಅಲ್ಲಲ್ಲಿ ಮೀಟಿಂಗು ಮಾಡಿ ಸರ್ಕಾರದವರ ಯೋಚನೆಗೆ ಒತ್ತಾಸೆ ಕೊಡುತ್ತಿರುವರು. ಇತ್ತಲಾಗಿ ತಿಂಗಳಿಗೆ 100 ಯೆನ್ ಅಂದರೆ 10 ಪೌಂಡಿಗಿಂತ ಹೆಚ್ಚು ಸಂಬಳ ಇರುವವರಿಗೆ ಮಾತ್ರ ಸಂಬಳ ಕಡಿಮೆ ಮಾಡಲಾಗುವುದೆಂದು ತೀರ್ಮಾನಿಸಿದರ ಮೇಲೆ ಉದ್ಯೋಗಸ್ಥರ ಅಸಮಾಧಾನವು ಕಡಿಮೆಯಾಗುತ್ತಿದೆ. ಆದರೆ ರೈಲ್ವೆ ಇಲಾಖೆಯವರು ಮುಷ್ಕರ ಹಿಡಿಯುವಂತೆ ಇದೆ. ಈ ಗಲಭೆಗೆ ಅಲ್ಲಿಯ ಉದ್ಯೋಗಸ್ಥರಿಗೆ ಸಿಕ್ಕುವ ಕಮ್ಮಿ ಸಂಬಳವೇ ಕಾರಣ. ಮುಖ್ಯ ಮಂತ್ರಿಯವರಿಗೆ ತಿಂಗಳಿಗೆ 100 ಪೌಂಡು, ಬೇರೆ ಮಂತ್ರಿಗಳಿಗೆ 67 ಪೌಂಡು ಬಾಕಿಯವರಿಗೆ ಅದಕ್ಕಿಂತ ಕಡಿಮೆ ಸಂಬಳ ಇದೆ.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಒಪ್ಪಿಗೆ ಇಲ್ಲದ ರುಜು!

ಅಯ್ಯ,

ಯಾರೋ ಕೆಲವರು ಕೊಡಗು ರಿಟ್ರೆಂಚ್‌ಮೆಂಟ್ ಕಮಿಟಿಯ ವಿಷಯ ದಕ್ಷಿಣ ಕೊಡಗಿನ ಮುಖ್ಯ ಸ್ಥಳಗಳಾದ ಗೋಣಿಕೊಪ್ಪಲು, ಇ. ವಿಕೇರಿ, ಶ್ರೀಮಂಗಲ, ಪೊನ್ನಂಪೇಟೆ ಈ ಸ್ಥಳಗಳಲ್ಲಿ ಮೀಟಿಂಗು ಮಾಡಬೇಕೆಂದು ಮೆ. ಪುಚ್ಚಿಮಾಡ ನಾಣೈಯ್ಯ, ಚೆಪ್ಪುಡೀರ ಪೂವೈಯ್ಯ, ಕೊಂಗಂಡ ಗಣಪತಿ, ಗಿರಿಗೌಡನ ಸಂಜಪ್ಪನೆಂಬ 4 ಜನರ ಹೆಸರಿನಲ್ಲಿ ಹಸ್ತಪತ್ರಿಕೆಗಳನ್ನು ಹೊರಡಿಸಿ ದೇಶದಲ್ಲಿ ಹಂಚಿದ್ದಾರೆ. ಇದಕ್ಕೆ ನಾನು ಎಂದೂ ಸಮ್ಮತಿಸಲಿಲ್ಲ. ನನ್ನನ್ನೇ ಕೇಳಿ ಇಂಥಾ ಮೀಟಿಂಗುಗಳನ್ನು ಏರ್ಪಡಿಸುವ ಹಾಗೂ ಇಲ್ಲ. ಇಂಥಾ ಮೀಟಿಂಗುಗಳನ್ನು ಮಾಡುವ ಅಗತ್ಯ ಕಾಣುವುದಿಲ್ಲ. ನನ್ನನ್ನು ಕೇಳದೆ ನನ್ನ ಹೆಸರಿನಲ್ಲಿ ಹಸ್ತ ಪತ್ರಿಕೆಗಳನ್ನು ಹೊರಡಿಸಿದ್ದಕ್ಕೆ ನಾನು ಬಹಳ ವ್ಯಸನ ಪಡುತ್ತೇನೆ. ಆದ್ದರಿಂದ ದೇಶದವರಿಗೆ ನಾನು ಇಂಥಾ ಹಸ್ತ ಪತ್ರಿಕೆಗೆ ಎಂದೂ ಸೇರಲಿಲ್ಲವೆಂಬುದನ್ನು ತಿಳಿಸಲಿಕ್ಕಾಗಿ ಈ ಮೂಲಕ ಅರಿಕೆ ಮಾಡಿಕೊಂಡಿರುತ್ತೇನೆ. ರಿಟ್ರೆಂಚ್‌ಮೆಂಟ್ ಕಮಿಟಿಗೆ ನನ್ನ ಅಭಿಪ್ರಾಯವನ್ನು ಸಾಗಿನವರ ಪರವಾಗಿ ನಾನು ಹಿಂದೆಯೇ ಕಳುಹಿಸಿದ್ದೇನೆ.

ಗಿರಿಗೌಡರ ಸಂಜಪ್ಪಗೌಡ.

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ತಾ 30ರಲ್ಲಿ ನಡೆಯಿತು. 10 ಡೈರೆಕ್ಟರುಗಳು ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಏಪ್ರಿಲ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು.

(1) ಹುಂಡಿ ಸೊಸೈಟಿಗೆ ರೂ. 1500, (2) ಈಚೂರು ಸೊಸೈಟಿಗೆ ರೂ· 2000. (3) ಅವಂದೂರು ಸೊಸೈಟಿಗೆ ರೂ 200, (4) ನೂರಂಬಡ ಸೊಸೈಟಿಗೆ ರೂ. 1000, (5) ನಾಂಗಾಲ ಸೊಸೈಟಿಗೆ ರೂ. 2000, (6) ಕುಂಜಿಲಗೇರಿ ಸೊಸೈಟಿಗೆ ರೂ 1000, (7) ಕಿರಗಂದೂರು ಸೊಸೈಟಿಗೆ ರೂ 800, (8) ಮಾದಾಪುರ ಸೊಸೈಟಿಗೆ ರೂ. 900, (9) ಕುಟ್ಟ ಸೊಸೈಟಿಗೆ ರೂ. 750, (10) ಶ್ರೀಮಂಗಲ ಸೊಸೈಟಿಗೆ ರೂ. 1000, (11) ಸಂಪಾಜೆ ಮಲ್ಲೇಶ್ವರ ಸೊಸೈಟಿಗೆ ರೂ. 100. (12) ಕೊವೂರ ಲಿಂಗೇಶ್ವರ ಸೊಸೈಟಿಗೆ ರೂ. 300, (13) ಕೊಟ್ಟಗೇರಿ ಸೊಸೈಟಿಗೆ ರೂ. 1500, (14) ಬೆಕ್ಕೆಸೊಡ್ಲೂರು ಸೊಸೈಟಿಗೆ ರೂ. 2000, (15) ಮಾಯಮುಡಿ ಸೊಸೈಟಿಗೆ ರೂ· 1000, (16) ಕಾಫಿ ಪ್ಲಾಂಟರುಗಳ ಸೊಸೈಟಿಗೆ ರೂ. 10,000, (17) ಕಿರುಗೂರು ಸೊಸೈಟಿಗೆ ರೂ. 750, (18) ಕೆರೆಹಳ್ಳಿ ಸೊಸೈಟಿಗೆ ರೂ. 1500, (19) ಶನಿವಾರಸಂತೆ ಸ್ಟೋರಿಗೆ ರೂ 1500, (20) ಪೊನ್ನಂಪೇಟೆ ಟೌನ್ ಸೊಸೈಟಿಗೆ ರೂ. 1000, (21) ಕಿಗ್ಗಟ್ಟುನಾಡು ಸ್ಟೋರಿಗೆ ರೂಪಾಯಿ 1000.

4. ಕಂಗಳತ್ನಾಡು ಸೊಸೈಟಿ ಮತ್ತು ಕಾವರ್ಗಡು ಸೊಸೈಟಿಯ ಸಾಲದ ಅರ್ಜಿಗಳನ್ನು, ಬ್ಯಾಂಕಿಗೆ ಈ ವರ್ಷದ ವಾಯಿದೆ ಮೀರಿದ ಕಂತಿನ ಹಣ ಬಾಕಿರುವುದನ್ನು ವಾಪತಿ ಮಾಡಿದ ವಿನಹ ಆಲೋಚಿಸಲಾಗುವುದಿಲ್ಲವಾಗಿ ತೀರ್ಮಾನವಾಯಿತು.

5. ಸರ್ಕಾರಿ ಕಟ್ಟಡಕ್ಕೆ ಬ್ಯಾಂಕಿನ ಆಫೀಸನ್ನು ವರ್ಗಾಯಿಸುವ ಬಾಬಿನಲ್ಲಿ ಬಾಡಿಗೆ ವಿಷಯ ರಿಜಿಸ್ಟ್ರಾರವರಿಂದ ಬಂದ 2 ಪತ್ರ ಓದಲಾಯಿತು.

ಬಾಡಿಗೆ ವಿಷಯ ಅವರು ಜವಾಬು ಸಿಕ್ಕುವ ವರೆಗೆ ಸುಮ್ಮನಿರಬೇಕಾಗಿ ತೀರ್ಮಾನವಾಯಿತು,

6. ಇಂಡಿಯನ್ ಟ್ರಸ್ಟ್ ಆಕ್ಟ್ ಬದಲಾವಣೆ ವಿಷಯ ಕಮಿಷನರವರಿಂದ ಬಂದ ಪತ್ರ ಓದಲಾಯಿತು.

ಕಳೆದ ಮೀಟಿಂಗಿನಲ್ಲಿ ತೀರ್ಮಾನವಾದ ಮೇರೆ ಸಬ್ ಕಮಿಟಿಯವರು ತಯಾರಿಸಿದ ರಿಪೋರ್ಟನ್ನು ಕಳುಹಿಸಬಹುದೆಂತ ತೀರ್ಮಾನವಾಯಿತು.

7. ಕಿರಕೊಡ್ಲಿ ಸೊಸೈಟಿಯವರು ತಮ್ಮ ಬಾಕ್ತು ಬ್ಯಾಂಕಿನ ಈ ವರ್ಷದ ವಾಯಿದೆ ಮೀರಿದ ಸಾಲವನ್ನು ವಾಪತಿ ಮಾಡಲು ಇದೇ ಜೂನ್ ತಿಂಗಳು ಆಖೈರು ವರೆಗೆ ವಾಯಿದೆ ಕೊಡಬೇಕಾಗಿ ಬರಕೊಂಡ ಅರ್ಜಿ ಮೇರೆ ತಾರೀಕು 30—6—'31ರ ವರೆಗೆ ವಾಯಿದೆ ಕೊಡಬಹುದಾಗಿ ತೀರ್ಮಾನವಾಯಿತು.

8. ಕಾಲೂರು ಸೊಸೈಟಿಯವರು ಕಳೆದ ಏಪ್ರಿಲ್ ತಿಂಗಳಲ್ಲಿ ಹೊಂದಿಕೊಂಡ 300 ರೂಪಾಯಿ ಸಾಲಕ್ಕೆ ಮಂಜೂರಾದ 2 ಕಂತು ವಜಾ ಮಾಡಿ 4 ಕಂತು ಕೊಡಬೇಕಾಗಿ ಅರ್ಜಿ ಬರೆದುಕೊಂಡದ್ದು ಓದಲಾಯಿತು.

ಅವರ ಅರ್ಜಿ ಮೇರೆ 4 ಕಂತುಗಳು ಕೊಡಲಾಯಿತು

9 ಚೇರಳಶ್ರೀಮಂಗಲ ಸೊಸೈಟಿಯವರು ತಮ್ಮ ಬಾಕಿ ಇರುವ ಸಾಲಕ್ಕೆ ಹೆಚ್ಚಿನ ಕಂತು ಕೊಡಬೇಕಾಗಿ ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು

10. ಕಾವರ್ಗಡು, ಬೇಟೋಳಿ, ಮುರನಾಡು, ಮತ್ತು ಬಿಳುಗುಂದ ಈ ನಾಲ್ಕು ಸೊಸೈಟಿಯವರು ತಮ್ಮ ಬಾಕ್ತು, ಈ ವರ್ಷ ಬ್ಯಾಂಕಿಗೆ ವಾಪತಿ ಮಾಡಲು ಬಾಕಿ ಇರುವ ವಾಯಿದೆ ಮೀರಿದ ಸಾಲಕ್ಕೆ ಮುಂದಿನ ವರ್ಷದ ವರೆಗೆ ವಾಯಿದೆ ಕೊಡಬೇಕಾಗಿ ಬರಕೊಂಡ ಅರ್ಜಿಗಳು ಓದಲಾದವು.

ಮೇಲ್ಕಂಡ ಅರ್ಜಿಗಳನ್ನು ಇನ್ನೊಂದು ಮೀಟಿಂಗಿಗೆ ಇಡಲಾಗಿದೆ.

ಕೆ. ಅಪ್ಪಯ್ಯ,
(ಅಧ್ಯಕ್ಷರು.)

ಕೊಡಗಿನವರ ಆಹಾರ ರೀತಿ.

(ಲೇಖಕರು—ಮು. ಉ. ಕಾಳಪ್ಪ, ಬೆಂಗಳೂರು)

ಪ್ರತಿಯೊಬ್ಬನ ಅನಾರೋಗ್ಯಕ್ಕೆ "ಕೆಟ್ಟ ಯೋಚನೆಗಳು, ತಕ್ಕದ್ದಲ್ಲದ ಆಹಾರ ಮತ್ತು ಸರಿಯಲ್ಲದ ಶ್ವಾಸವಾಡುವಿಕೆಯು" (Improper thinking, improper eating and improper breathing) ಇವೇ ಮೂರು ಮುಖ್ಯ ಕಾರಣಗಳು ಎಂದು ಅಮೇರಿಕದ ಪ್ರಖ್ಯಾತಿ ಹೊಂದಿದ ಶಾಸ್ತ್ರಜ್ಞಳಾದ ಮಿಸೆಸ್ ಫ್ರೋಯಿಬ್ ಹೋಮ್ಸ್ (Mrs Phoebe Holmes) ರವರು ಹೇಳುತ್ತಾರೆ. ಈ ಲೇಖನದಲ್ಲಿ ಆಹಾರದ ವಿಷಯ ವಿಚಾರಿಸುವ.

ಕೊಡಗರು "ರಸ ಬಿಸಾಡಿ ಕಸ ತಿನ್ನುವವರು" ಎಂದು ಕೊಡಗಿನಲ್ಲಿ ಅನೇಕರು ಹೇಳುತ್ತಾರೆ. ಇದು ನಿಜವೇ. ಅಕ್ಕಿಯು ಕೊಡಗರ ಮುಖ್ಯ ಆಹಾರ ವಾಗಿದೆ. ಕೊಡಗಿನಲ್ಲಿ ಈ ಧಾನ್ಯವು ಯಥೇಷ್ಟವಾಗಿ ಬೆಳೆಯುತ್ತದೆ. ಪ್ರತಿಯೊಬ್ಬನೂ ದಿನಕ್ಕೆ ಎರಡು ಬಾರಿಯಾದರೂ ಅಕ್ಕಿಯ ಅನ್ನವನ್ನು ಊಟಮಾಡುತ್ತಾನೆ ಆದರೆ ಇದನ್ನು ಬೇಯಿಸುವ ವಿಧಾನಕ್ಕೆ ಯಾರೂ ಇಂದಿನ ವರೆಗೆ ಗಮನ ಕೊಟ್ಟಿರುವ ಹಾಗೆ ಕಾಣುವುದಿಲ್ಲ. ಅಕ್ಕಿಯನ್ನು ಚೆನ್ನಾಗಿ ಬೇಯಿಸಿ ಅದರ ಮುಖ್ಯ ಸತ್ವವಾದ ಗಂಜಿಯನ್ನು ತೆಗೆದು ಬಿಟ್ಟು ಬರೆ ಕಸಕ್ಕೆ ಸಮಾನವಾದ ಅನ್ನವನ್ನು ತಮ್ಮ ಹೊಟ್ಟೆಗೆ ತುಂಬಿಸುತ್ತಾರೆ. ಈ ಗಂಜಿಯನ್ನಾದರೂ ತಮ್ಮ ದನಗಳಿಗೆ ಕೊಟ್ಟರೆ ಕೊಂಚ ಹೆಚ್ಚು ಹಾಲು ದೊರಕಿ ತನಗೆ ಒಳ್ಳೆಯ ಪ್ರತಿಫಲವು ದೊರಕಬಹುದು. ಆದರೆ ಅದೂ ಸಹ ತನ್ನ ಮನಸ್ಸಿಗೆ ಹೊಳೆಯದು. ಗಂಜಿಯನ್ನು ಹಂದಿಗೆ ಕೊಟ್ಟು ಆ ಜಂತುಗಳನ್ನು ಸಾಕಿದರೆ ಇದಕ್ಕಿಂತಲೂ ಹೆಚ್ಚು ಲಾಭ ದೊರಕುತ್ತದೆಯಂತೆ! ನೋಡಿದಿರಾ! ನಮ್ಮ ಆಹಾರದ ವಿಷಯ ಎಷ್ಟು ಚಿಂತಿಸುತ್ತೇವೆಂದು. ಇಂದ ಬಳಿಕ ಇನ್ನಾದರೂ ಹಂದಿ ಸಾಕುವ ಪದ್ಧತಿಯನ್ನು ನಿರ್ಮೂಲ ಮಾಡಬೇಡವೇ?

ಉತ್ತರ ಹಿಂದುಸ್ಥಾನದಲ್ಲಿ ಅನ್ನ ಬೇಯಿಸುವ ವಿಧಾನವೇ ಬೇರೆ. ಅಕ್ಕಿಯನ್ನು ಬೇಯಿಸುವಾಗ ತಾವು ಪಾತ್ರಕ್ಕೆ ಹಾಕುವ ಅಕ್ಕಿಯು ಬೇಯಲಿಕ್ಕೆ ಎಷ್ಟು ನೀರು ಬೇಕೋ, ಅಷ್ಟೇ ನೀರನ್ನು ಅಳತೆ ಮಾಡಿ ಆ ಪಾತ್ರದಲ್ಲಿ ಸುಡಗುತ್ತಾರೆ. ಅದು ಬೆಂದ ಬಳಿಕ ಅದರಲ್ಲಿ ಕೊಂಚವೂ ಗಂಜಿ ಇಲ್ಲದಿರುವುದರಿಂದಲೇ ಈ ಅನ್ನವು ನಮ್ಮ ಅನ್ನಕ್ಕಿಂತಲೂ ಹೆಚ್ಚು ಸತ್ವ (Vitamin) ವುಳ್ಳದ್ದಾಗಿದೆ ಆದಕಾರಣವೇ ಅವರು ನಮ್ಮಂತೆಯೇ ಅನ್ನ ತಿನ್ನುವ ಇತರ ದಕ್ಷಿಣ ಹಿಂದೂಸ್ಥಾನದ ಜನರಿಗಿಂತಲೂ ಹೆಚ್ಚು ದೃಢಕಾಯರಾಗಿದ್ದಾರೆ. ಕೊಡಗಿನಲ್ಲಿ ಮಾಪಿಳ್ಳೆಗಳ ಭೋಜನ ಕ್ರಮವನ್ನು ನಾವೆಲ್ಲರೂ ನೋಡಿರಬಹುದು. ಇವರು ಅನ್ನದ ಗಂಜಿಯನ್ನು ಸ್ವಲ್ಪವೂ ಹಾಳು ಮಾಡದೆ ತಾವೇ ಸೇವಿಸುತ್ತಾರೆ ಕಳೆದ ಘೋರ ಯುದ್ಧದಲ್ಲಿ ಮೆಸೊಪಟೇಮಿಯದ ಒಂದು ಕಡೆಯಲ್ಲಿ ಮಾಪಿಳ್ಳೆಯವರ ಸೈನ್ಯವು ಯುದ್ಧ ಮಾಡುತ್ತಿರುವಾಗ ಅವರು ಬೇರೆ ದಕ್ಷಿಣ ಹಿಂದೂಸ್ಥಾನದ ಸೈನ್ಯದವರಿಗಿಂತಲೂ ತೋರಿಸಿದ ಧೈರ್ಯಕ್ಕೂ, ಪರಾಕ್ರಮಕ್ಕೂ ಮೆಚ್ಚಿ ಒಬ್ಬ ವಿದ್ವಾಂಸನು—ಇವರು ಅನ್ನದ ಗಂಜಿಯನ್ನು ಬಿಸಾಡದೆ ತಾವೇ ಸೇವಿಸುವುದೇ ಇವರ ಪರಾಕ್ರಮಕ್ಕೆ ಒಂದು ಕಾರಣವೆಂದು ಹೇಳಿರುವನು. ಅಷ್ಟೇಕೆ, ಮಾಂಸವನ್ನು ಬೇಯಿಸಿ ಅದರ ರಸ (Soup) ವನ್ನು ಬಿಸಾಡಿ ಬರೇ ಮಾಂಸ ತುಂಡುಗಳನ್ನು ತಿನ್ನಲು ನಾವು ಒಪ್ಪುವೆವೇ? ಹಾಗಾದರೆ ಅನ್ನದ ಗಂಜಿಯನ್ನು ಬಿಸಾಡಲು ಯಾಕೆ ಒಪ್ಪುವೆವು?

ನಮ್ಮ ಅಜ್ಜಂದಿಯರು ನಮಗಿಂತಲೂ ಹೆಚ್ಚು ದೃಢಕಾಯರಾಗಿದ್ದು, ನಮಗಿಂತಲೂ ಹೆಚ್ಚು ಕಾಲಜೀವಿಸುತ್ತಿದ್ದರು ಎಂದು ನಾವೇ ಹೇಳುತ್ತೇವೆ. ಹಾಗಾದರೆ ಅವರ ವೀರ್ಯವೂ ಮತ್ತು ಶಕ್ತಿಯೂ ನಮ್ಮ ರಕ್ತದಿಂದ ಅಳಿಸಿ ಹೋಯಿತೇ? ಎಂದೂ ಇಲ್ಲ. ಅವರ ಊಟ ಉಪಚಾರದ ವಿಧಾನವನ್ನು ಪಾಶ್ಚಿಮಾತ್ಯರ ನವೀನ ಆಹಾರ ಕ್ರಮಗಳು ಅಪಕ್ರಮಿಸಿ ಕೇವಲ ವಿದ್ಯಾವಂತರೆನ್ನಿಸಿಕೊಳ್ಳುವವರು ಈ ಪಾಶ್ಚಿಮಾತ್ಯರ ವಿಧಾನಗಳಿಗೆ ದಾಸರಾಗಿ ಹೋಗಿದ್ದಾರೆ ಚಾ, ಕೊಕ್ಕೊ ಎಂಬ ಪದಾರ್ಥಗಳು ಏನೆಂದು ಗೊತ್ತಿಲ್ಲದ ಗೃಹಗಳು, ಈಗ ಅವುಗಳು ಇಲ್ಲದಿದ್ದರೆ ತಾವು ಒಂದು ನಿಮಿಷವಾದರೂ ಜೀವಿಸಲಿಕ್ಕಾಗುವುದಿಲ್ಲವೆಂದು ಭಾವಿಸುತ್ತವೆ ನಮ್ಮ ಹಿರಿಯರು ಬೆಳಗ್ಗೆ ಊಟಮಾಡುತ್ತಿದ್ದ ಅಂಬಲಿ ಅನ್ನದ ಬದಲು ಈಗ ರೊಟ್ಟಿ ಮತ್ತು ಕಾಫಿ ಎಂಬ ಪದಾರ್ಥಗಳನ್ನು ಪ್ರತಿ ಮನೆಯಲ್ಲಿಯೂ ಕಾಣಬಹುದು ಕಾಫಿಗೆ ಹಾಲಿರಲಿ, ಇಲ್ಲದಿರಲಿ ಅದನ್ನು ಬೆಳಗ್ಗೆ ಸೇವಿಸಲೇ ಬೇಕು. ಅಂಬಲಿ ಅನ್ನ ಊಟ ಮಾಡುವುದು ಅಪಮಾನ! ಇದರೊಂದಿಗೆ ಹಾಲಿನ ಅಭಾವ. ಆದರೆ ಅದಕ್ಕೇನು ನಾವು ಹೆದರುವ ಹಾಗೆ ಇಲ್ಲ. ಒಂದು ವರ್ಷದ ಸಣ್ಣ ಮಕ್ಕಳಿಗೂ ಹಾಲಿನ ಬದಲು ಕಾಫಿ ಯಾ ಚಾವನ್ನು ಕೊಟ್ಟರೆ ಸಾಕು. ಇನ್ನು ಮಕ್ಕಳಿಗೆ ತಿಂಡಿ—ಹಾಲಿಲ್ಲದ ಬಳಿಕ ಮೊಸರಿನ ಪಿಂಡು ದೊರಕುವುದೆಲ್ಲಿಂದ? ಉಹುಂ! ಕಾರ್ನ್‌ಫ್ಲವರ್, ಗ್ಲಾಕ್ಸೋ ಮತ್ತು ಡಬ್ಬಿ ಹಾಲನ್ನು ಷಾಪಿನಿಂದ ತರಿಸುವ!

ಅಯ್ಯೋ! ನಮ್ಮ ಮಾತೆಗಳಿರಾ! ತಮ್ಮ ಶಿಸುಗಳಿಗೆ ಹೆಚ್ಚು ವ್ಯಯಮಾಡಿ ನಿಮ್ಮ ಷಾಪು ತಿಂಡಿಗಳನ್ನು ಕೊಡುವುದರ ಬದಲು ಅಗ್ಗವಾಗಿಯೂ, ಹೆಚ್ಚು ಸತ್ವವುಳ್ಳದ್ದಾಗಿಯೂ ಇರುವ ರಾಗಿ ಹಿಟ್ಟನ್ನು ಬೇಯಿಸಿಕೊಟ್ಟರೆ ನಿಮ್ಮ ಮರ್ಯಾದೆಗೆ ಕುಂದಕ ಬರುತ್ತದೆಯೋ? ಅಥವಾ ನಿಮ್ಮ ಮಕ್ಕಳು ಹೆಚ್ಚು ಕಾಲ ಬದುಕಿಬಿಡಬಹುದೆಂಬ ಹೆದರಿಕೆಯೋ? ಮಾತೆಗಳಿರಾ, ಇನ್ನಾದರೂ ನಿಮ್ಮ ತಪ್ಪಭಿಪ್ರಾಯವನ್ನು ಬಿಡಿ. ನೀವು ನಿಮ್ಮ ಮಕ್ಕಳಿಗೆ ಕೊಡುವ ಒಂದೊಂದು ಬಟ್ಟಲು ಕಾಫಿಯು ನಿಮ್ಮ ಮಕ್ಕಳ ಶವದ ಪೆಟ್ಟಿಗೆಗೆ ಒಂದೊಂದು ಮೊಳೆಯಂತೆ ನಾಟುತ್ತದೆ ಎಂದು ನಂಬಿ. ಕಾಫಿ, ಚಾ, ಗಳ ಬದಲು ನಿಮ್ಮ ಹಿತ್ತಲಿನಲ್ಲಿ ಅಗ್ಗವಾಗಿ ಬೆಳೆಯುವ ನಿಂಬೆ ಹಣ್ಣನ್ನು ತಂದು ಅದರ ರಸದಿಂದ ಸರಬತ್ತು ಮಾಡಿ ನಿಮ್ಮ ಕುಟುಂಬದ ಜನರಿಗೆ ಕೊಡಿ. ಇದು ನಿಮ್ಮ ಕುಟುಂಬದವರ ಆರೋಗ್ಯವನ್ನು ಕಾಪಾಡುವುದರಲ್ಲಿ ಸಂಶಯವಿಲ್ಲ.

ಈ ಇಪ್ಪತ್ತನೆಯ ಶತಮಾನದ ಜನರು ತಮ್ಮ ಆಹಾರಕ್ಕಿಂತಲೂ ತಮ್ಮ ಉಡುಪುಗಳಿಗೆ ಹೆಚ್ಚು ಗಮನ ಕೊಡುವುದು ನಮ್ಮ ದುರಾದೃಷ್ಟವಾಗಿದೆ. ಹೊಟ್ಟೆಗಿಲ್ಲದಿದ್ದರೂ ಬಟ್ಟೆ ಖರ್ಚು ಮಾಡಬೇಕು ಉಪವಾಸವಿದ್ದರೂ ಶೋಕು ಬೇಕು. ಇನ್ನಾದರೂ ನಮ್ಮ ದೇಶಬಾಂಧವರು ಎಚ್ಚತ್ತು ಆಹಾರದ ವಿಷಯದಲ್ಲಿ ನಮ್ಮ ಅಜ್ಜಂದಿಯರನ್ನು ಹಿಂಬಾಲಿಸುವರೆಂದು ನಂಬುತ್ತೇನೆ ಮಾತೆಗಳೇ, ನೀವೇ ನಿಮ್ಮ ಕುಟುಂಬದ ಆರೋಗ್ಯದ ಅಡಿಗಲ್ಲು. ಆರೋಗ್ಯಕ್ಕೆ ಆಹಾರವೇ ಮುಖ್ಯ ಯಾಕೆಂದರೆ—ಮಿಸೆಸ್ ಫ್ರೋಯಿಬ್ ಹೋಮ್ಸ್‌ರು ಹೇಳಿದ್ದು 'ನಾವು ನಮ್ಮ ಆಹಾರವನ್ನು ತಕ್ಕ ರೀತಿಯಲ್ಲಿ ಭುಂಜಿಸದಿರುವುದೇ ನಮ್ಮ ಕಾಯಿಲೆಗಳಿಗೆ ಮುಖ್ಯ ಕಾರಣವಾಗಿದೆ.'

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಹುದಿಕೇರಿಯ ಪತ್ರ.

ಅಯ್ಯಾ,

ಮಾರ್ಕೆಟು.—ಹುದಿಕೇರಿ ಮಾರ್ಕೆಟಿನ ಕಂಟ್ರಾಕ್ಟರ ಭಾಗ್ಯದಿಂದ ಮಳೆ ಇಲ್ಲದೆಯೂ ಅವರು ಹಿಡಿದ ಬಾವಿ ಕಟ್ಟಡದ ಕೆಲಸಕ್ಕೆ ನಷ್ಟ ಬಾರದೆ ಆದದಕ್ಕಾಗಿ, ಅಲ್ಲದೆ ಮಾರ್ಕೆಟು ಕೆಲಸ ಪೂರೈಸದೆ ಸಂತೆ ಅಂಗಡಿ ಇಡುವವರಿಗೆ ಪೂರಾ ಕಷ್ಟ ಬಂದಿದೆ ಇಲಾಖೆಯವರು ಒಂದು ಮಳೆ ಬಿದ್ದ ಮೇಲೆ ಎಚ್ಚರದಿಂದ ಕೆಲಸ ನಡಿಸುತ್ತಿದ್ದಾರೆ. ವ್ಯಾಪಾರಿಗಳ ಕಷ್ಟ ಸುಂಕ ಕಂಟ್ರಾಕ್ಟರರ ಪಾಡು ಅವರನ್ನೇ ಕೇಳಬೇಕು.

ಬೋರ್ಡಿಂಗ್ ಕಟ್ಟಡ.—ಹುದಿಕೇರಿ ಬೋರ್ಡಿಂಗ್ ಕಟ್ಟಡ ಪೂರೈಸಿದಂತಾಯಿತು. ಆದರೂ ವಾಗ್ದಾನವಿತ್ತವರಲ್ಲಿ ಕೆಲವರು ಹಣ ಕೊಡದೆ ತೊಂದರೆ ಮಾಡುತ್ತಿದ್ದಾರೆ. ಇದರ ಟ್ರಜರರೂ, ಸೆಕ್ರೆಟರಿಗಳೂ ತುಂಬಾ ಕೆಲಸ ಮಾಡಿದಲ್ಲದೆ ಹಣ ವಸೂಲು ವಿಷಯ ಓಡಾಡುತ್ತಿದ್ದಾರೆ ವಾಗ್ದಾನ ಮಾಡಿದ ಮಹನೀಯರುಗಳು ಈ ಸಮಯದಲ್ಲಿ ಸಹಾಯ ಮಾಡಿ ನಾಡಿನ ಒಂದು ಕಟ್ಟಡದ ಉದ್ಧಾರಕ್ಕೆ ಪ್ರೋತ್ಸಾಹಿಸಬೇಕು.

ಮುರನಾಡು ರಸ್ತೆ:—ಇದರ ಕೆಲಸ ಪೂರೈಸಿತು. ಜನರಿಗೆ ಪ್ರೀತಿ ಇಲ್ಲದೆ, ಉಪಕಾರಕ್ಕೆ ಬರುವುದಿಲ್ಲವೆಂದು ಎಷ್ಟೇ ಅಡಚಣೆ ಬಂದರೂ 1—2 ಜನರ ಮತ್ತು ಸರ್ಕಾರದವರ ಅಭಿಪ್ರಾಯದಂತೆ ನಡಿಸಿದ ರಸ್ತೆಯಿಂದ ಪ್ರಯೋಜನವಿಲ್ಲದಿದ್ದರೂ ಸರ್ಕಾರದವರು ಹಿಡಿದ ಕೆಲಸ ಪೂರೈಸಿದಕ್ಕೆ ಸಂತೋಷಪಡಬೇಕಲ್ಲವೇ?

ದುಡ್ಡಿನ ಅಭಾವ.—ಭತ್ತಕ್ಕೆ ಬೆಲೆ ಇಲ್ಲ. ಈ ನಾಡಿನ ಮುಖ್ಯ ಉತ್ಪತ್ತಿಯೇ ಭತ್ತ ಇದಕ್ಕೆ ಬೆಲೆಯಿಲ್ಲವೆಂದಾದರೆ ಬೇರೆ ಯಾವ ತರದಲ್ಲು ತಾಪತ್ರೆ ಸಮಾಧಾನವಾಗುವದು? ಸರ್ಕಾರದವರ, ಸಹಕಾರಿ ಸಂಘಗಳು ಮತ್ತು ಸಾಹುಕಾರರು ಈ ವರ್ಷ ಜನರ ಕಷ್ಟವನ್ನು ಅರಿಯದಿದ್ದರೆ ಉಳಿಯುವ ಕಾಲ ಇನ್ನಿರಬಹುದೋ?

ಪಿಕೆಟಿಂಗ್.—ಸತ್ಯಾಗ್ರಹಿಗಳ ಪಿಕೆಟಿಂಗು ಹುದಿಕೇರಿಯಲ್ಲು ಶಾಂತ ರೀತಿಯಿಂದ ನಡೆಯುತ್ತದೆ. ಆಟ ಬಾಟ ಜನರು ಉತ್ತೇಜನ ಕೊಡುತ್ತಿದ್ದಾರೆ. ವಾಂತಿಭೇದಿ ಕಾಯಿಲೆಕ್ಕೆ ಸಾರಾಯಿ ಔಷಧಿಯೆಂದು ಕೆಲವರು ಹೇಳುತ್ತಿರುವುದರಿಂದ ಔಷಧಿ ಇದಲ್ಲವೆಂದು ಪ್ರಚಾರಪಡಿಸುತ್ತಿದ್ದಾರೆ.

ಸಹಕಾರಿ ಸ್ಟೋರ್.—ನಮಗೆ ಒಂದು ಸ್ಟೋರ್ ಇರುತ್ತಿದ್ದರೆ ಬ್ಯಾಂಕಿನಿಂದ ಹಣ ತರಿಸಿ ಭತ್ತ ಸಾಲ್ವಕು ಮಾಡಬಹುದಾಗಿತ್ತಾಗಿಯೂ, ಮುಂದಕ್ಕಾದರೂ ಹುದಿಕೇರಿಗೆ ಸ್ಟೋರ್ ಪ್ರತ್ಯೇಕ ಮಾಡಿಕೊಳ್ಳುವ ಪ್ರಯತ್ನ ನಾಡಿನವರು ನಡೆಸಿಕೊಳ್ಳಬೇಕಾಗಿಯೂ, ಇನ್ಸ್‌ಪೆಕ್ಟರ್ ಸಾಹೇಬರವರು ಈ ವಿಷಯ ಜನರಿಗೆ ತಕ್ಕ ಸಲಹೆ ಕೊಡುವರಾಗಿಯೂ ಓರ್ವ ಸಹಕಾರಿಯ ಪ್ರಾರ್ಥನೆ.

ಆಸ್ಪತ್ರೆ.—ಪ್ರತ್ಯೇಕ ಆಸ್ಪತ್ರೆ ಖಾಯಂ ಹುದಿಕೇರಿಯಲ್ಲಿ ಇಡುವ ವಿಚಾರದ ಕಟ್ಟಡಕ್ಕಾಗಿ ಈ ಮೊದಲು ಸಮ್ಮಂಧಪಟ್ಟ ಅಧಿಕಾರಿಗಳು ಸ್ಥಳ ನೋಡಿಕೊಂಡು ಹೋದರು. ಅಲ್ಲಿಂದ ಯಾವ ವರ್ತಮಾನವೂ ಇಲ್ಲ. ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳೂ, ಕೌನ್ಸಿಲ್ ಮೆಂಬರುಗಳೂ ನಮ್ಮ ನಾಡನ್ನು ಮರೆತರೇ!

ಶ್ರೀಮಂಗಲನಾಡು ಯೂನಿಯನ್.—ಈ ಕೂಟಕ್ಕೆ ಪ್ರತ್ಯೇಕ ಒಂದು ಕಟ್ಟಡ ಕಟ್ಟಿಸಿಕೊಳ್ಳಬೇಕೆಂದು ಯೂನಿಯನ್ನಿನವರು ಸ್ಥಳ, ಮರ ಸಹ ಕೊಡಬೇಕಾಗಿ ಸರ್ಕಾರದವರಿಗೆ ಬರಕೊಂಡಿರುವರಾಗಿ ತಿಳಿಯಬರುತ್ತದೆ. ಎಲ್ಲಾ ಸಂಘಗಳಿಗೂ ಸಮ್ಮಂಧಪಡುವ ಕಟ್ಟಡವಾದ್ದರಿಂದ ಮಧ್ಯಸ್ಥಳದಲ್ಲು, ರಸ್ತೆ ಒತ್ತು ಜಾಗ ಕೊಡಿಸಲು ಸರ್ಕಾರದವರನ್ನು ಸಹಕಾರಿಗಳು ಪ್ರಾರ್ಥಿಸುತ್ತಾರೆ.

ಒಗ್ಗಟ್ಟು:—ಇಡೀ ಭರತ ಖಂಡದಲ್ಲಿ ಹಿಂದೂ ಮುಸಲ್ಮಾನರ ಒಗ್ಗಟ್ಟು ಸಾಧಿಸುತ್ತಿರುವಾಗ ನಮ್ಮ ಹುದಿಕೇರಿ ಟೌನಿನಲ್ಲು ಮುಸಲ್ಮಾನರು, ಮಾಪಿಳ್ಳೆ ಜನರು ಎಂದು ಪಾರ್ಟಿ ಅದರಲ್ಲೂ ಮುಸಲ್ಮಾನರೇ ಎರಡು ಪಾರ್ಟಿ ಇದರಲ್ಲಿ ಕೆಲವು ಮುಖಂಡರು ರಾಜಿ ಮಾಡುವ ವಿಚಾರ ಮಾಡುತ್ತಿರುವಾಗ ಎಲ್ಲರಿಗೂ ಲಾಟಿ ಪ್ರಹಾರವಾಗುವ ವಿಚಾರ ಒಂದು ಪಾರ್ಟಿಯಿಂದ ನಡೆಯುತ್ತಿತ್ತು! ಇದನ್ನರಿತು

ಪ್ರಸ್ತಾಪವನ್ನು ಬಿಟ್ಟರು ಮುಖ್ಯಸ್ಥರು ರಾಜಿ ಮಾಡ ಲು ಒಂದನೆ ಪ್ರಯತ್ನ ನಡೆಬೇಕಾಗಿ ನಲ್ಲಣನಾಗಿ ಓರ್ವನ ನಂತೆ.

'ಶ್ರೀಮಂಗಲ ನಾಡಿನವ'

—

ಪದ್ಯ ವಿಮರ್ಶೆ.

ಮಾನ್ಯ ಸಂಪಾದಕರೇ,

ನಿಮ್ಮ ಕಳೆದ ಮೇ ತಾ. 29ನೇ ಪತ್ರಿಕೆಯಲ್ಲಿ " ಲಗ್ನ ವೇ " ಎಂಬ ಶಿರೋನಾಮೆಯಲ್ಲಿ ಬರೆದ ಒಂದು ಪದ್ಯವನ್ನು ಉತ್ಸಾಹದಿಂದ ಓದಿ ನೋಡಿದೆನು. ಈ ವಿಷಯ ಒಂದೆರಡು ಪಂಕ್ತಿಗಳನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರಿಕೆ.

ಕನ್ನಡ ಸಾಹಿತ್ಯ ಪ್ರೇಮಿಗಳು ಸಾಹಿತ್ಯ ದೇವಿಯ ಪಾದ ಪೂಜೆಗಾಗಿ ಸುಶ್ರಾವ್ಯವಾದ ಪದ್ಯಗಳನ್ನೂ, ಸಂಗೀತಗಳನ್ನೂ, ಕಥೆಗಳನ್ನೂ, ನಾಟಕಗಳನ್ನೂ ಒಂದು ದೇವಿಯ ಅನುಗ್ರಹವನ್ನು ಸಂಪಾದಿಸಲು ಬಹಳ ಪ್ರಯತ್ನ ಪಡುತ್ತಿರುವರು. ಈ ರೀತಿ ಸಾಹಿತ್ಯ ಭಂಡಾರವನ್ನು ಏನೂ ಅಭಿವೃದ್ಧಿ ಗೊಳಿಸುತ್ತಲೂ ಇರುವರು ಸಾಮಾನ್ಯವಾಗಿ ಸಾಹಿತ್ಯದಲ್ಲಿ ಅಭಿರುಚಿ, ಅಭಿಮಾನವಿರುವವರು ಉತ್ಕೃಷ್ಟವಾದ ಶೈಲಿಯಲ್ಲಿ, ಶೋಭಣೆಯಲ್ಲಿ, ಸರಳವಾದ ನುಡಿಯಲ್ಲಿ ವಿಷಯಗಳನ್ನು ಬರೆದು ಕೊಟ್ಟು ಕನ್ನಡ ಭಾಷಾ ಸೇವೆಯನ್ನು ಚೆನ್ನಾಗಿ ಮಾಡುವವನೆಂದು ಗೊತ್ತಾಗಲೆಂದು ಹಂಬಲಿಸುತ್ತಿರುವರು. ಆದರೆ ಇದು ಸಾಧಾರಣವಾಗಿ ಸಾಹಿತ್ಯ ಸೇವಕರ ಧ್ಯೇಯ.

ಆದರೆ "ಸ. ಚಿ. ಸುಬ್ಬಯ್ಯ" ಎಂಬವರು ಬರೆದ "ಲಗ್ನವೇ ?" ಎಂಬ ಪದ್ಯವನ್ನು ಈ ಧ್ಯೇಯದ ಆಧಾರದಿಂದ ಪರಿಶೀಲಿಸಿದರೆ, ಪದ್ಯದಲ್ಲಿ ಯಾವ ಸ್ವಾರಸ್ಯವೂ ಇಲ್ಲವೆಂದೇ ಹೇಳಬೇಕಾಗಿದೆ. ಈ ಕವಿಯು ಕೆಲವು ಕನ್ನಡ ಪಂಕ್ತಿಗಳನ್ನು ಓದಲು ಸುಲಭವಾಗುವ ಧೋರಣೆಯಲ್ಲಿ ಜೋಡಿಸಿ, ವಾಚಕರ ಮುಂದಿಟ್ಟಿರುವರೇ ಹೊರತು ಬೇರೇನೂ ಇಲ್ಲ. 'ಭೋಗ ಷಟ್ಪದಿ" ಯಲ್ಲಿ ಬರೆದರೂ ಛಂದಸ್ಸನ್ನು ಅನುಸರಿಸಿದರೂ, ಕವಿತಾ ರಸ ಮತ್ತು ಜ್ಞಾನ ಇವು ಶೂನ್ಯವಾಗಿದ್ದರೆ, ಅದು ಪದ್ಯವೆನಿಸಲಾರದು. ಅಥವಾ ಕವಿತಾ ಸ್ವಾತಂತ್ರ್ಯವನ್ನು ಉಪಯೋಗಿಸುವುದಾದರೂ ಅದಕ್ಕೆ ಒಂದು ಎಲ್ಲೆಯೂ ಇದೆ. ಆ ಎಲ್ಲೆಯನ್ನು ಮೀರಿದರೆ, ಕವಿತಾ ರಸವು ಕೆಟ್ಟು, ಪದ್ಯದಲ್ಲಿನ ಶಬ್ದಗಳ ಅರ್ಥ ಪಲ್ಲಟವೂ ಆಗುವುದು. ಹೀಗೆ ಮೇಲ್ಕಂಡ ಪದ್ಯದಲ್ಲಿ ಅನೇಕ ಅಲಂಕಾರಗಳು ಕೆಟ್ಟು ಪದ್ಯವು ಛಿನ್ನ ಭಿನ್ನವಾಗಿದೆ. ಕವಿಯು ಇಂಥಾ ಪದ್ಯಗಳನ್ನು ಬರೆದು ಪ್ರಕಟಿಸಿ ಸಂತೋಷಪಡುವಾಗ ಇತರ ಸಾಹಿತ್ಯ ಪ್ರೇಮಿಗಳ ಮನಸ್ಸನ್ನು ರೇಗಿಸುತ್ತಾನೆಂಬ ವಿಷಯವನ್ನು ಚೆನ್ನಾಗಿ ತಿಳಿದುಕೊಂಡರೆ, ಉತ್ಸಾಹದ ಪ್ರಥಮ ಪ್ರಯತ್ನಗಳ ಫಲವಾದ ಈ ತರಹದ ಪದ್ಯಗಳನ್ನು ಪ್ರಕಟಿಸಲು ಬಯಸಲಿಕ್ಕಿಲ್ಲ. ಕೇವಲ ಪ್ರಕಟಣೆಯಿಂದಲೇ ಉತ್ಸಾಹ ಉಂಟಾದರೆ ಮುಂದಿನ ಕವನಗಳೂ ಕೂಡ ಈ ಟೀಕಾಸ್ಪದವಾದ ಪಥವನ್ನೇ ಅನುಸರಿಸುವುವು.

ಪದ್ಯದಲ್ಲಿ 'ಮಂದೀರ,' 'ಜೋರಿನಿಂದ 'ಬೇಟಿಯಂತೆ ಕೂಗುತಿಹರ, ಅಧಿಕ ನಾರಿಯರು ''ವೃಷಭದಂತೆ ಕತ್ತೆಸೆತ್ತಿ' ಇವೇ ಮೊದಲಾದ ಇನ್ನೂ ಅನೇಕ ಶಬ್ದಗಳು ಬಹಳ ವಿಚಿತ್ರ ಸಂದರ್ಭಗಳಲ್ಲಿ, ರೂಪಗಳಲ್ಲಿ ಉಪಯೋಗಿಸಲ್ಪಟ್ಟಿವೆ. ಇನ್ನು ಮುದ್ರಣ ದೋಷಗಳ ಮೇಲೆ ಕೆಲವು ಕೊರತೆಗಳನ್ನು ನೂಕಿ ಹಾಕಿದರೂ ಕೂಡ ಈ ಪದ್ಯವು ಸಾಹಿತ್ಯ ಸಂಪದಕ್ಕೆ ತಿಲ ಮಾತ್ರವು ಸಹಾಯಕವಾಗಿಲ್ಲವೆಂದೇ ಹೇಳಬೇಕಾಗಿದೆ.

ಇಷ್ಟು ಮುಂದುವರಿದರೂ ಈ ಕವಿಯು ಧೀರ್ಘಾಲೋಚನೆ ಮಾಡಿ ತನ್ನ ಪರಿಶ್ರಮ ಪ್ರಯತ್ನದ ಫಲವಾದರೂ ಅಂಥಾ ಪದ್ಯಗಳನ್ನು ವಿವೇಚನೆಯಿಂದ ಪ್ರಕಟಣೆಗೆ ಕಳುಹಿಸಿದರೆ ಅವು ಉತ್ತಮ ವಾಚಕರ ಅಜ್ಞಾನವನ್ನು ಕೆಡಿಸಿ ಹೊಡೆಯ ಹೋದರೆ ಅದು ಸಾಗಲಾರದು.

ಸಾಹಿತ್ಯ ಪ್ರೇಮಿ

—

ಸಹಕಾರಿ ಸೂಪರ್‌ವೈಜರುಗಳ ಅವಶ್ಯಕತೆ

ಅಯ್ಯಾ,

ಕೊಡಗಿನಲ್ಲಿ ಕೋ ಆಪರೇಟಿವ್ ಸಂಘಗಳ ಪೆಡರೇಷನ್ ಆದಂದಿನಿಂದ ಎಲ್ಲಾ ಸಹಕಾರಿ ಬ್ಯಾಂಕುಗಳೊಳಗೂ,ಸಂಘಗಳೊಳಗೂ, ಯೂನಿಯನ್, ಪೆಡರೇಶನ್, ಸೆಂಟ್ರಲ್ ಬ್ಯಾಂಕಿನ ವರೆಗೆ ಸರಪಣಿಯಂತೆ ಒಂದಕ್ಕೊಂದು ಸಮ್ಮಂದಪಟ್ಟದ್ದಾಗಿರುತ್ತೆ. ಪೆಡರೇಶನಿಗೆ ಒಳಪಟ್ಟ ಯೂನಿಯನ್ ತಾಲ್ಲೂಕು ಸೂಪರ್‌ವೈಜರು ಒಬ್ಬರು ಇದ್ದರು ಇಲ್ಲ ನಡೆಯುತ್ತಿರಲಿಲ್ಲ. ಈ ಮೊದಲು ಪ್ರತಿ ಯೂನಿಯನ್‌ಗಳಿಗೂ ಪ್ರತ್ಯೇಕ ಸೂಪರ್‌ವೈಜರು ಇಲ್ಲದೆ ಸಂಘಗಳ ಕೆಲಸವೂ, ಯೂನಿಯನ್ ಕೆಲಸವೂ ಸರಿಯಾಗಿ ನಡೆಯುತ್ತಿರಲಿಲ್ಲ. ಪೆಡರೇಶನವರು ಸಹ ಈ ವಿಷಯಕ್ಕೆ ಮೊದಲು ಗಮನ ಕೊಡಲಿಲ್ಲ. ಈಗ 6 ತಿಂಗಳ ಲಾಗಾಯಿತಿನಿಂದ ಪ್ರತಿ ಯೂನಿಯನ್ನಿಗೂ ಒಬ್ಬೊಬ್ಬ ಸೂಪರ್‌ವೈಜರನ್ನು ಕಟ್ಟಿದ್ದರಿಂದ ಸಂಘಗಳ ಮತ್ತು ಯೂನಿಯನ್ನಿನ ಕೆಲಸ ಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿದೆಂದು ಹೇಳಬಹುದು. ಈ ಮಧ್ಯ ಕಡೇ ಗಡಿಯಾದ ಶ್ರೀಮಂಗಲ ನಾಡಿಗೆ ಪ್ರತ್ಯೇಕ ಒಬ್ಬ ಸೂಪರ್‌ವೈಜರು ಬೇಡವೆಂದು, ಫೆಡರೇಶನಿನವರ ಅಭಿಪ್ರಾಯವೆಂದು ತಿಳಿಯಲಾಯಿತು. ಇದು ಎಂದೂ ನ್ಯಾಯವಲ್ಲ. ನಮ್ಮ ನಾಡಿನ ಸೂಪರ್‌ವೈಜರ್ ಫಂಡು ಹಣದಿಂದ 2 ಸೂಪರ್‌ವೈಜರುಗಳನ್ನು ತಿಂಗಳಿಗೆ 25/—ರೂಪಾಯಿಯಂತೆ ಕೊಟ್ಟು ನಡಿಸುವುದು. ಕಡೇ ಗಡಿ ಅಂದರೆ 18 ಮೈಲು ವರೆಗೆ ವಿಸ್ತಾರ ಉಳ್ಳ ಈ ನಾಡಿಗೆ ಪ್ರತ್ಯೇಕ ಸೂಪರ್‌ವೈಜರನ್ನು ನೇಮಿಸದಿದ್ದಲ್ಲಿ ಸಂಘಗಳ ಮತ್ತು ಯೂನಿಯನ್ನಿನ ಕೆಲಸ ಸರಿಯಾಗಿ ಆಗಲಾರದು. ಇದರ ಕಾರಣವು 6 ತಿಂಗಳಿಂದ ಸಂಘ ಸಂದರ್ಶನೆ ಮಾಡಿದವರಿಗೆ ಮಾತ್ರ ಗೊತ್ತಾಗುತ್ತದೆ.

ಸೂಪರ್‌ವೈಜರರ ತರಬೇತಿಗೆ ಉಮೇದುವಾರರಾಗಿ 2 ಜನರನ್ನು ಚುನಾಯಿಸುವದಾಗಿ ತಿಳಿಯ ತ್ತೇವೆ. ಸೂಪರ್‌ವೈಜರರ ಕೆಲಸಕ್ಕೆ ತರಬೇತಾದ ಸೆಕ್ರೆಟರಿಗಳನ್ನೇ ತೆಗೆದುಕೊಳ್ಳಬೇಕೆಂದು ಈ ಮೊದಲು ಫೆಡರೇಶನ್ನಿನವರೇ ಅಭಿಪ್ರಾಯಪಟ್ಟಿರುವಾಗ ಕೆಲಸ ಚೆನ್ನಾಗಿ ಮಾಡುವ ಸೆಕ್ರೆಟರಿಗಳನ್ನು ಕರೆಸಿ ಅವರಿಗೆ ಈ ಕೆಲಸವನ್ನು ಫೆಡರೇಶನ್ನಿನವರು ಯಾಕೆ ಕೊಡಬಾರದು? ಹೀಗೆ ಫೆಡರೇಶನ್ನಿನವರು ಮಾಡಿದಲ್ಲಿ, ಸೆಕ್ರೆಟರಿ ಕೆಲಸಕ್ಕೆ ಒಳ್ಳೇ ಉಮೇದುವಾರರು ಬರುತ್ತಾರೆ. ಒಳ್ಳೇ ಉಮೇದುವಾರರು ಬಂದರೆ ಸಂಘದ ಕೆಲಸ ಚೆನ್ನಾಗಿ ನಡೆಯುತ್ತೆ. ಚೆನ್ನಾಗಿ ಕೆಲಸ ಮಾಡಿದವರಿಗೆ ಉತ್ತೇಜನ, ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ. ಎಲ್ಲವೂ ಶಿಫಾರಸ್ಸು ಎಂದಾದರೆ ಒಳ್ಳೇ ಕೆಲಸ ಮಾಡಿದ ಸೆಕ್ರೆಟರಿಗಳಿಗೆ ಸಂಘದವರು ರಿಜಿಸ್ಟ್ರಾರ್ ಸಾಹೇಬರವರಿಂದ ಶಿಫಾರಸ್ಸು ಪತ್ರ ಪಡೆದು ಅಂಥಾ ಸೆಕ್ರೆಟರಿಗಳನ್ನೇ ಸೂಪರ್‌ವೈಜರ ತರಬೇತಿಗೆ ಕಳುಹಿಸುವುದು ಉತ್ತಮ. ಫೆಡರೇಶನ್ನಿನ ಅಧಿಕಾರಿಗಳು ಇದಕ್ಕೆ ನಿಗಕೊಡುವರೇ ?

'ಯೂನಿಯನ್ನಿನ ಒಬ್ಬ ಮೆಂಬರು'

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.

ಮಂಗಳೂರು, ದ. ಕನ್ನಡ.

ಯಾವತ್ತೂ ಬಗೆಯ ರಬ್ಬರು ಮೋಹರುಗಳು ಕನ್ನಡಿಯ ಸೈನ್ ಬೋರ್ಡು, ಹಾಫ್ ಟೋನ್ ಬ್ಲಾಕ್ ಇತ್ಯಾದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಬಾಳಿಕೆಗೆ ಬರುವಂತೆ ತಯಾರಿಸಿ ಕೊಡಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಕೇಳಿದ ವಿಳಾಸಕ್ಕಾಗಲೀ ಯಾ ನಮ್ಮ ಮಡಿಕೇರಿ ಏಜೆಂಟರು ಮ. ಯನ್. ಯೆನ್. ಪೊನ್ನಪ್ಪ ನವರಿಗಾಗಲೀ ಬರೆದುಕೊಳ್ಳುವದು.

12—10

—

"ರೂಪಾಯಿಗಳು 5-8-0 ಮಾತ್ರ.

ನಮ್ಮ ಉಚಿತ ಜೀವ ವಿಮೆಯು

ಅನೇಕ ಬಡಬಗ್ಗರನ್ನು ಕಾಪಾಡಿದೆ.

ನೀವೇಕೆ ಹೊಂದಬಾರದು ?

ಈಗ ಆಗಲೇ 72,000 ಜನಗಳು ಮೆಂಬರಾಗಿದ್ದಾರೆ.

ಹಣ ರೂ. 2,00,000.

ಬಡವರಿಗೆ ಭಾಗ್ಯಕಾಲ! ಎಲ್ಲರಿಗೂ ಅನುಕೂಲ!!

WANTED.

Agents for Coorg on liberal Commission or decent pay per month

Apply to—

The Branch Secretary.
The Venus Assurance Co., Ltd.
Bore Bank Road,
Benson Town,
Bangalore City.

12—7

ಎಂ. ಎಸ್. ಶಿದ್ದಪ್ಪ ಬ್ರದರ್ಸ್
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿನ ಖಾತ್ರಿಯುಳ್ಳ ಅಂಗೋಬಸ್ತು ಆದ ಫೌಂಟನ್‌ಪೆನ್‌ಗಳು.

ವೆಲ್ಸ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ.	3	0	0
" , ಬಿಗ್ ಬ್ಯಾರೆಲ್ ಪೆನ್ 1ಕ್ಕೆ		3	3	0
" " ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ		3	8	0
" , ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ		3	14	0
" " ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ		4	2	0
" " ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರೌನ್ ಕಲರ್ ಫೌಂಟನ್‌ಪೆನ್ 1ಕ್ಕೆ		5	8	0
ಬಿಗ್ ಸ್ಟಾಟ್ ಫೌಂಟನ್‌ಪೆನ್ 1ಕ್ಕೆ		10	8	0
ಪಾರ್ಕರ್ ಪೆನ್ 1ಕ್ಕೆ		14 6 0, & 20	10	0
ಬ್ಲಾಕ್‌ಬರ್ಡ್ ಫೌಂಟನ್‌ಪೆನ್ 1ಕ್ಕೆ		3 8 0, & 3	12	0
ಸ್ವಾನ್ ಫೌಂಟನ್ ಪೆನ್ 1ಕ್ಕೆ		6 4 0, & 6	12	0
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ		8 2 0, & 8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್	1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್	1ಕ್ಕೆ	2	2	0
ಲಿಗಲಿಯೂ ಅಲಾರಾಂ ಟೈಂಪೀಸ	1ಕ್ಕೆ	6 9 0, & 6	15	0
ಲಿಗಲಿಯೂ ಸಣ್ಣ ಸೈಜಿನ ಅಲಾರಾಂ ಟೈಂಪೀಸ್	1ಕ್ಕೆ	7	2	0
ಲಿಗಲಿಯೂ ಆಕಾರದ ಸಣ್ಣ ಟೈಂಪೀಸ್ ರೇಡಿಯಂ ಸ್ಟೈನದು	1ಕ್ಕೆ	5	10	0
ಎಗಾಜೆನ್ ಅಲಾರಾಂ ಟೈಂಪೀಸ್	1ಕ್ಕೆ	9	0	0
ಬಿಗ್‌ಬೆನ್ ಅಲಾರಾಂ ಸ್ಟ್ಯಾಂಡ್ ಇದಕ್ಕೆ ಖಾತ್ರಿ ಇರುವ ಟೈಂಪೀಸ್	1ಕ್ಕೆ	13	4	0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್	1ಕ್ಕೆ	5	10	0
ಚಿಟೋ ಸಮೂನೆಯಲ್ಲಿ ಎಬಿ, ವಾರ್ಡ್ ಕಂಪೆನಿಯ ನಾಕೆಟ್ ವಾಚ್	1ಕ್ಕೆ	15	4	0
ನಿಕ್ಕಲ್ ಕೇಸ್ ಸಿಲಿಂಡರ್ ಮೂಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 &	12	8	0



ಇಲ್ಲಿ ನಮೂದಿಸುವ ನಮೂನೆ ಅಂದವಾದ ಟೇಬಲು ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಲಾಯಿದಾ.

ಮುಖ್ಯವಿಳಾಸ ರವಾನಿಸುವವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—48

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋ ಅಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	23,160
ಜಮಾಬಂದ ಠೇವಣಾತಿ —	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಹೊರ್ತಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು, ಕೋಡಂಡ ಅಪ್ಪಯ್ಯನವರು ರಾವ್ ಬಹದ್ದೂರ್.
ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1930

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.
ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪನಿ,
52—22 ಗಿರಿಗಾಂವ, ಮುಂಬಯಿ.

Rubber Stamps of every design
and
Glass sign boards, Half tone Blocks, Monogram seals, Marble slabs, ring stones etc etc, to suit every pocket and taste. For further particulars please apply to:-

The Crown Rubber Stamp Co,
Mangalore, S. K.
Or
Mr. N. N Ponnappa,
Agent,
12-10 **Mercara.**

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ
ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲ
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 48ಕೋಟಿ ರೂ. ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ಎರಡು ಕಮ್ಮಿ ಖರ್ಚಿನಲ್ಲಿಯೇ ನಡೆಸಲ್ಪಟ್ಟಿ ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕ್ಷೇಮ ಬೀಜನೆ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು —

ಮೇನೇಜರು, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೆಂಗಳೂರು	ಡೌಲಗಾಸ್	ಮಂಡಲೆ	ರಾಯಿಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ

ಕೊಡಗಿನ ಗುಡುಗುಡು ಎಂಬ ಚಳಿ ಜ್ವರಕ್ಕೂ, ಮಲೇರಿಯ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರ ಗೆಡ್ಡೆಗೂ ಗುಣಕಾರಿಯಾದ್ದು ಯಾವುದೆಂದು ತಿಳಿದಿ ಇಗೋ ರಾಜ ಮದ್ದು ಮಾಡಿ ಸಂಪೂರ್ಣ ಜ್ವರವನ್ನು ಗುಣಪಡಿಸಿ ಗೆಡ್ಡೆಯನ್ನು ಕರಗಿಸಿ ಬಿಡುತ್ತದೆಂದು ಸ್ಥಿರ ನಂಬು ಕ್ರಯ ಬಾಟ್ಲಿಗೆ ½ ಡಜನ್ 8-8-0. 1 ಡಜನ್ 16-8-0.

ಕಂಪೌಂಡು ಸಿರಪು ಬ್ಲಟ.

ಗುರುಗುರು ಉಬ್ಬಸ ಸೇವಕದ ರೋಗದಿಂದ ಕಂಠ ಕಫ ಗಟ್ಟಿಯಾಗಿ ಎದೆ ಮತ್ತು ಪಾರ್ಶ್ವ ನೋವು ಬರುವುದಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಯು ಈ ಕಂಪೌಂಡು ಸಿರಪು ಬ್ಲಟ ಎಂಬುದನ್ನು ತಕ್ಷಣ ತರಿಸಿ ಕುಡಿಯಲಿ ಕ್ರಯ ಬಾಟ್ಲಿಗೆ ರೂ. 1—8—0.

ಕಂಪೌಂಡು ಸಿರಪು ಬನಲೀನ:— ಶ್ವಾಸಕೋಶದ ಕ್ಷಯವೆಂಬ ರೋಗಕ್ಕೆ ಈ ಸಿರಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿ, ಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು, ಕೆಮ್ಮು ಎದೆನೋವು ರಕ್ತ ಬೆರತ ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ಮುಂದುವರಿಯದಂತೆ ಕಾಪಾಡಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3—8—0.

ಕಂಪೌಂಡು ಸಿರಪು ಸಬೀನ ಸೇಪಿಯ:—ಹೆಂಗಸರ ಮುಟ್ಟಿನ ದೋಷದಿಂದಲೂ, ಗರ್ಭದ್ವಾರದಿಂದಲೂ ಹರಿಯುವ ಬಿಳಿ ಎಂಬ ರೋಗದಿಂದ ಸೊಂಟನೋವು, ಕೈಕಾಲು ಬಚ್ಚಲು ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರಿಸಿ ಬಲ ಕೊಡುವುದು ಕ್ರಯ ಬಾಟ್ಲಿಗೆ ರೂ. 3—8—0.

ಕಂಪೌಂಡು ಸಿರಪು ವೆಸಧೂಜ:— ಪ್ರಮೇಹವೆಂಬ ಗುಪ್ತರೋಗವನ್ನು ಪಡಕೊಂಡು, ಮೂತ್ರ ಬಂದು ಬಂದುಗಳ ದ್ವಾರದೊಳಗೆ ಹುಣ್ಣು ವ್ರಣಗಳು, ದುರ್ವಾಸನೆ ಕೂಡಿದ ಹಳದಿ ಬಣ್ಣದ ರೇಸಿಗೆ ಇತ್ಯಾದಿ ಕಠಿಣ ತರಹದ ರೋಗವನ್ನು ಈ ಬಲವಾದ ಸಂಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3—8—0.

ಶುದ್ಧ ಟಿಕ್ಚರುಗಳೂ ಹೋಮ್ಯೋಪತಿ ಔಷಧಿಗಳೂ, ನಮ್ಮಲ್ಲಿ ದೊರೆಯುತ್ತವೆ
ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ, ಅವುಗಳ ನಾನಾ ಬಗೆಯ ಸಾಮಾನುಗಳೂ, ಬಿಸಲಿಗೆ ಇಡತಕ್ಕ ಒಳ್ಳೇ ತರದ ಕನ್ನಡಕ ನಮ್ಮಲ್ಲಿ ನ್ಯಾಯವಾದ ಕ್ರಯಕ್ಕೆ ದೊರೆಯುತ್ತವೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

ವಿಳಾಸ —ಮಲೇರಿಯೂನ ಕಂಪೆನಿ,
52—31 ಪಂಪನಕಟ್ಟೆ, ಇಗಪಿಒಳ, 14, ಮಂಗಳೂರು ಪೋಸ್ಟು

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
" ಮೆ. ಚಾಂಡಿರ ಮಾದಯ್ಯನವರು
ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ಮೇದಪ್ಪನವರು,
" ಮೆ. ಅಮ್ಮಂಡ ಸುಬ್ಬಯ್ಯನವರು
ಮಡಿಕೇರಿ—ಮೆ. ಕಾಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಪುಂಡೇಸಂಡ ಸೋಮಯ್ಯನವರು, (ಬಾದಿಭಂಡಾರ)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಸಿ. ಪಿ ಮುದ್ದಯ್ಯನವರು
" ಮೆ. ಸಣ್ಣುವಂಡ ಬೋಪ್ಪಯ್ಯನವರು
ಮತ್ತು ಆರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಪಿ. ಮಂದಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯ ಸಂಘದ ಉಪನಿಬಂಧನೆಗಳೂ, ವಾದ ಬರೆದು ರಿಜಿಸ್ಟ್ರಾರ್ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಟ್ಟಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ವಾದಾ ಫಾರಮುಗಳೂ, ವಾರ್ಡುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಶಿವಪ್ಪನವರಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ

Printed & published by P. I Belliappa at "Kodagu" Press Mercara for "Kodagu" Ltd.

If not delivered please return to "KODAGU" OFFICE MERCARA.

ಕೊಡಗು.

[illegible] — ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

[illegible] ಚಂದಾ ರೂ. [illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[illegible] ೧೧	[illegible] ಜೂನ್ ತಾರೀಕು ೧೨ ನೇ ಶುಕ್ರವಾರ.	ಸಂಚಿಕೆ ೨

Telegrams - [illegible]

V. Subramaniayer Jeweller,

Telephone :- 3145

DIAMOND MERCHANT GOLD & SILVERSMITH.

Deals in all :—
SPORTS CUPS in all prices
MEADALS in up to date patterns
CASKETS in elegant styles

Nos 2 & 3, Kuppumuthu st
TIRUVATESWARANPET,
Post Box 423, Triplicane P. O.,
MADRAS.

Deals in all :—
GEM SET JEWELS, set with Diamonds Rubies etc,
GOLD ARTICLES of all patterns
SILVER WARE in latest style -

52–30



[illegible]

[illegible] ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24–11

ಮಳೆ ಜ್ವರ ಕಷಾಯ

[illegible]

52–5

ಬಾಲಾರ್ಕಮದು.

[illegible]



[illegible]

ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ,
([illegible])

52–22

ಕೊಡಗು.

ಸನ್ ೧೯೩೧ನೇ ಇಸವಿ

ಜೂನ್ ತಾ ೧೨ನೇ ಶುಕ್ರವಾರ.

ಕೊಡಗಿನಲ್ಲಿ ಸಿಬ್ಬಂದಿ ಖೋತೆ.

೨.

ಕೊಡಗಿನ ಆಡಳಿತ ಕ್ರಮದಲ್ಲಿ 'ತತ್ಕಾಲ ಹೇಗೆ ಸಿಬ್ಬಂದಿ ಖೋತೆ ಮಾಡಬಹುದೆಂದು ಕಳೆದ ವಾರ ಬರೆದಿದ್ದೆವು ಮಾಹೆಯಾನ 50 ರೂಪಾಯಿಗಿಂತ ಹೆಚ್ಚು ದೊರೆಯುವವರ ಸಂಬಳದಲ್ಲಿ ಶೇಕಡ ಇಂತಿಷ್ಟು ಕಡಿಮೆ ಮಾಡಬೇಕೆಂದು ಸೂಚಿಸಿದ್ದ ಮೇರೆ ಜಾರಿಗೆ ತಂದರೆ ಕೆಲವು ಉದ್ಯೋಗಸ್ಥರಿಗೆ ಅತೃಪ್ತಿಯುಂಟಾಗಬಹುದು ಇದು ಸ್ವಭಾವಿಕವೇ. ತನಗೆ ದೊರೆಯುವ ಸಂಬಳವು ಕಡಿಮೆಯಾಗುವುದು ಯಾರಿಗೂ ಇಷ್ಟವಿರಲಿಕ್ಕಿಲ್ಲ ಆದರೆ ದೇಶದ ಜನರ ಆರ್ಥಿಕ ಸ್ಥಿತಿಯು ಹೇಗಿದೆಯೆಂಬುದನ್ನು ಉದ್ಯೋಗಸ್ಥರು ಚೆನ್ನಾಗಿ ಅರಿತುಕೊಳ್ಳಬೇಕಾಗಿದೆ ಕೊಡಗಿನ ಮುಖ್ಯ ಫಸಲಾದ ಬತ್ತದ ಕ್ರಯವು ಅರ್ಧಕರ್ಧ ಇಳಿದು ಹೋಗಿದೆ ಹಾಗೆಯೇ ಕಾಫಿ, ಯಾಲಕ್ಕಿ, ಮೆಣಸು ಮೊದಲಾದುವುಗಳ ಬೆಲೆಯೂ ಕಡಿಮೆಯಾಗಿದೆ ವ್ಯಾಪಾರವೂ ಬಹು ಮಟ್ಟಿಗೆ ಇಳಿದು ಹೋಗಿದೆ. ಜನರ ಸ್ಥಿತಿಯು ಹೀಗಿರುವಲ್ಲಿ ಅವರ ಮೇಲಿರುವ ಹೇರಳವಾದ ತೆರಿಗೆಗಳನ್ನು ಕಡಿಮೆ ಮಾಡಲು ಯುಕ್ತಿಸಬೇಕಲ್ಲವೇ? ಕಡಿಮೆ ಮಾಡುವುದರ ಬದಲು ತೆರಿಗೆಗಳನ್ನು ಒಂದಲ್ಲ, ಒಂದು ವಿಧದಲ್ಲಿ ಹೆಚ್ಚಿಸಲು ಆಲೋಚನೆ ಮಾಡಿದರೆ ವ್ಯವಸಾಯಗಾರರ ಪಾಡೇನಾಗಬೇಕೆಂದು ಅಧಿಕಾರಿಗಳು ದೀರ್ಘಾಲೋಚನೆ ಮಾಡಬೇಕಾಗಿದೆ ಈಗಿರುವ ಕಂದಾಯ ಕಾಣಿಕೆಗಳನ್ನು ಕೊಡಲಾರದೆ ಹಲವರು ಕಷ್ಟ ಪಡುತ್ತಿರುವುದು ಸರ್ಕಾರದವರಿಗೆ ತಿಳಿಯದಲ್ಲ. ಇದನ್ನು ತಿಳಿದೂ ತಿಳಿಯದಂತೆ ತೆರಿಗೆಗಳನ್ನು ಹೆಚ್ಚು ಮಾಡಿದರೆ ಹಿಂದೂದೇಶದ ಬೇರೆ ಕಡೆಗಳಲ್ಲಿ ಆರ್ಥಿಕ ಹೀನ ಸ್ಥಿತಿಯಿಂದ ರೈತರು ಹೇಗೆ ಕಂದಾಯ ಕೊಡದ ಚಳವಳವನ್ನು ಕೈಕೊಂಡಿರುವರೋ ಹಾಗೆಯೇ ಇಲ್ಲಿಯೂ ನಡೆಸುವಂತೆ ವ್ಯವಸಾಯಗಾರರನ್ನು ಸರ್ಕಾರದವರೇ ಒಲಕ್ಷರಿಸಿದಂತಾಗುವುದರಲ್ಲಿ ಸಂಶಯವೇನಿದೆ? ಈ ಸ್ಥಿತಿಗೆ ದೇಶದವರನ್ನು ಇಳಿಸುವುದೇನೋ ಸುಲಭವಾಗಿರಬಹುದು ಆದರೆ ಅದರಿಂದ ಬಿಡುಗಡೆ ಹೊಂದುವುದು ಸುಲಭ ಸಾಧ್ಯದ ಕೆಲಸವಲ್ಲವೆಂಬುದನ್ನು ಅಧಿಕಾರಿಗಳು ಚೆನ್ನಾಗಿ ತಿಳಿದುಕೊಳ್ಳಬೇಕು.

ನಮ್ಮ ಉದ್ಯೋಗಸ್ಥರು ಸ್ವಲ್ಪ ವಿಶಾಲ ದೃಷ್ಟಿಯುಳ್ಳವರಾಗಬೇಕು ಸಿಬ್ಬಂದಿ ಖೋತೆಯು ನಮ್ಮ ಚಿಕ್ಕ ಪ್ರಾಂತ್ಯದಲ್ಲಿ ಮಾತ್ರವಲ್ಲ, ಇಡೀ ಹಿಂದೂಸ್ಥಾನದಲ್ಲಿ ಅಲ್ಲದೆ ಪ್ರಪಂಚದ ಬೇರೆ ದೇಶಗಳಲ್ಲೂ ಆಗುತ್ತಿದೆ ಜಪಾನ್ ಮತ್ತು ಆಸ್ಟ್ರೇಲಿಯ ದೇಶಗಳಲ್ಲಿ ಉದ್ಯೋಗಸ್ಥರ ಸಂಬಳವನ್ನು ಶೇಕಡ 20ರಷ್ಟು ಕಡಿಮೆ ಮಾಡಬೇಕೆಂದು ಯೋಚಿಸುತ್ತಿದ್ದಾರೆ ನ್ಯೂಜೀಲ್ಯಾಂಡಿನಲ್ಲೂ ಹೀಗೆಯೇ ಮಾಡುತ್ತಿದ್ದಾರೆ ಇಂಡಿಯಾ ಸರ್ಕಾರದವರೂ ಹಿಂದೂಸ್ಥಾನದ ಇತರ ಪ್ರಾಂತ್ಯಗಳೂ ಈ ವಿಷಯ ಆಲೋಚಿಸಲು ಕಮಿಟಿಗಳನ್ನು ನೇಮಿಸಿರುವುದು ವಾಚಕರಿಗೆ ತಿಳಿಯದಲ್ಲ ನಮ್ಮ ನೆರೆ ಪ್ರಾಂತ್ಯವಾದ ಮೈಸೂರಲ್ಲಿಯೂ ಇದೇ ಚಳುವಳಿಯು ಜೋರಾಗಿದೆ ಕೊಡಗಿಗಿಂತಲೂ ಅಲ್ಲಿಯ ಉದ್ಯೋಗಸ್ಥರ ಸಂಬಳವು ಬಹಳ ಕಡಿಮೆಯಾಗಿದ್ದರೂ ಕೂಡ ಅವರ ಸಂಬಳವನ್ನು ಖೋತೆ ಮಾಡಿ ರೈತರು ಸರ್ಕಾರಕ್ಕೆ ಕೊಡುತ್ತಿರುವ ಕಂದಾಯವನ್ನು ಕಡಿಮೆ ಮಾಡಬೇಕೆಂದು ಜನರ ಪ್ರತಿನಿಧಿಗಳು ಹೋರಾಡುತ್ತಿರುವರು ಈ ವಿಷಯ ಮೊನ್ನೆ ೩೦ನೇ ನಡೆದ ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಟ್ಟಾಗ್ಯೆ ದಿವಾನರು ತೃಪ್ತಿಕರವಾದ ಉತ್ತರ ಕೊಡಲಿಲ್ಲವೆಂದು ಸುಮಾರು 70—80 ಪ್ರತಿನಿಧಿಗಳು ಸಭೆಯಿಂದ ಎದ್ದು ಹೊರಗೆ ಹೋಗಿ, ಒಂದು ದಿನದ ಮಟ್ಟಿಗೆ ಮೀಟಿಂಗಿಗೆ ಬರಲೇ ಇಲ್ಲವಂತೆ ಕಂದಾಯವನ್ನು ಈಗ ಇರುವುದಕ್ಕಿಂತ ಕಡಿಮೆ ಮಾಡಲಿಕ್ಕೋಸ್ಕರ ಸರ್ಕಾರಿ ಸಿಬ್ಬಂದಿಖೋತೆ ಮಾಡಬೇಕೆಂದು ಮೈಸೂರಲ್ಲಿ ಇಷ್ಟು ಜೋರಾದ ಪ್ರಯತ್ನಗಳು ನಡೆಸಲ್ಪಡುತ್ತಿರುವಾಗ್ಯೆ, ಆ ದೇಶಕ್ಕಿಂತಲೂ ಬಡ ದೇಶವಾದ ಮತ್ತು ಉದ್ಯೋಗಸ್ಥರ ಸಂಬಳ ಹೆಚ್ಚಾಗಿರುವ ಕೊಡಗಿನಲ್ಲಿ ತೆರಿಗೆಗಳನ್ನು ಹೆಚ್ಚು ಮಾಡದಂತೆ ಈಗ ಇರುವ ಉತ್ಪತ್ತಿಯಲ್ಲೇ ಆಡಳಿತ ಕ್ರಮವನ್ನು ನಡಿಸಲು ಬೇಕಾದಷ್ಟು ಸಿಬ್ಬಂದಿ ಖೋತೆ ಮಾಡಬೇಕೆನ್ನುವುದಕ್ಕೆ ಉದ್ಯೋಗಸ್ಥರು ಅತೃಪ್ತರಾಗುವುದು ನ್ಯಾಯವೇ? ಜಪಾನ್ ದೇಶದ ಪ್ರಧಾನ ಮಂತ್ರಿಯವರ ಸಂಬಳವು ವರ್ಷಕ್ಕೆ ಒರೇ 1200 ಪೌಂಡುಗಳು ಅಂದರೆ ತಿಂಗಳಿಗೆ ಸುಮಾರು 1350 ರೂಪಾಯಿಗಳು ಮಾತ್ರ ಬಾಕಿ ಮಂತ್ರಿಗಳಿಗೂ, ಜಡ್ಜಿ ವಗೈರೆಗೂ ತಿಂಗಳಿಗೆ 900 ರೂಪಾಯಿಗಳಿಗಿಂತ ಹೆಚ್ಚು ದೊರೆಯುವುದಿಲ್ಲ ಹಾಗೆಯೇ ಕೆಳಗಿನ ಉದ್ಯೋಗಸ್ಥರ ಸಂಬಳವು ಕಡಿಮೆ ಇದೆ ಅಂಥಾದರಲ್ಲಿಯೂ ಕೂಡ ಅಲ್ಲಿ ಶೇಕಡ 20ರಷ್ಟು ಸಂಬಳ ಕಡಿಮೆ ಮಾಡಲು ನಿಶ್ಚೈಸುತ್ತಿರುವರು. ಇದನ್ನು ನೋಡಿದರೆ ನಾವು ಕಳೆದ ವಾರ ಮಾಡಿದ ಸೂಚನೆಗಳು ಕಠಿಣ ತರದವೇನೂ ಅಲ್ಲ.

ಉದ್ಯೋಗಸ್ಥ ಸಹೋದರರು ಇನ್ನೊಂದು ವಿಷಯ ಮನಸ್ಸಿನಲ್ಲಿಟ್ಟುಕೊಳ್ಳಬೇಕು ಉದ್ಯೋಗಸ್ಥರು ಹಾಗೂ ಸರ್ಕಾರವು ದೇಶದ ಆಡಳಿತೆಗೆ ಇರುವುದಲ್ಲದೆ ದೇಶವು ಸರಕಾರದ ಹಾಗೂ ಉದ್ಯೋಗಸ್ಥರಿಗಾಗಿ ಇರುವುದಲ್ಲ ಆದುದರಿಂದ ದೇಶದ ಜನರಿಗೆ ಹೆಚ್ಚಿನ ತೆರಿಗೆ ಕೊಡಲು ಸಾಧ್ಯವಿಲ್ಲದೆ ಇದ್ದಾಗ ಉದ್ಯೋಗಸ್ಥರ ಸಂಖ್ಯೆಯನ್ನೂ, ಸಂಬಳವನ್ನೂ ಅಂದರೆ ಆಡಳಿತದ ಖರ್ಚನ್ನು ಕಡಿಮೆ ಮಾಡಬೇಕಾದದ್ದು ಸರ್ಕಾರದವರ ಕರ್ತವ್ಯ ಇದಕ್ಕೆ ಉದ್ಯೋಗಸ್ಥರು ವಿರೋಧಿಸಿದರೆ, ಅಂಥವರು ದೇಶವನ್ನು ತಮ್ಮ ಸ್ವಪ್ರಯೋಜನಕ್ಕೆ ಉಪಯೋಗಿಸಬೇಕೆನ್ನುವವರೆಂದರೆ ತಪ್ಪಾಗಲಾರದು. ಹಿಂದೀಯ ಉದ್ಯೋಗಸ್ಥರು ಬಡತನದಲ್ಲಿ ಮುಳುಗಿರುವ ತಮ್ಮ ಸಹೋದರರ ಮೇಲಿರುವ ಹೊರೆಯನ್ನು ಮತ್ತಷ್ಟೂ ಹೆಚ್ಚಿಸಿ ತಾವು ದುಂದುಗಾರಿಕೆಯ ಜೀವನವನ್ನು ನಡಿಸಬೇಕೆಂದು ಬಯಸುವರೋ? ಹೊಟ್ಟೆಗೂ, ಬಟ್ಟೆಗೂ ಇಲ್ಲದೆ ಕಷ್ಟಪಡುತ್ತಿರುವ ತಮ್ಮ ಅಣ್ಣ ತಮ್ಮಂದಿಯರನ್ನಾದರೂ ನೋಡಿ ತೆರಿಗೆಗಳನ್ನು ಹೆಚ್ಚಿಸದಂತೆ ತಮ್ಮ ಸಂಬಳವನ್ನು ಖೋತೆ ಮಾಡಲು ಒಪ್ಪಿಕೊಳ್ಳಲಾರರೇ?

ಕಳೆದ ಘೋರ ಯುದ್ಧಕ್ಕೆ ಮುಂಚಿತವಾಗಿ ಇದ್ದ ಕಮ್ಮಿ ದರದ ಸಂಬಳವನ್ನು ಯಾವ ಕಾರಣದಿಂದ ಹೆಚ್ಚಿಸಿದರೆಂಬುದನ್ನು ತಿಳಿದುಕೊಂಡರೆ ಈಗ ಅದನ್ನು ಕಡಿಮೆ ಮಾಡುವುದಕ್ಕೆ ವಿರೋಧಿಸುವುದು ನ್ಯಾಯವಲ್ಲವೆಂದು ಗೊತ್ತಾಗುವುದು ಯುದ್ಧದ ಸಮಯದಲ್ಲೂ ಯುದ್ಧದ ನಂತರವೂ ದವಸ ಧಾನ್ಯಗಳ ಹಾಗೆಯೇ ಎಲ್ಲಾ ಸಾಮಾನುಗಳ ಕ್ರಯವು ಏರಿದ ಕಾರಣ ಜೀವನವನ್ನು ನಡಿಸುವ ಖರ್ಚು ಹೆಚ್ಚಾಯಿತು, ಆದುದರಿಂದ ಉದ್ಯೋಗಸ್ಥರ ಸಂಬಳವೂ ಹೆಚ್ಚಿಸಲ್ಪಟ್ಟಿತು ಆಗ್ಯೆ ರೈತರು ಬೆಳೆಸುತ್ತಿದ್ದ ಧಾನ್ಯಗಳಿಗೆ ಒಳ್ಳೇ ಧಾರಣೆ, ಸಿಕ್ಕುತ್ತಿದ್ದ ಕಾರಣ ಹೆಚ್ಚಿಸಿದ ತೆರಿಗೆಗಳನ್ನು ಕೊಡಲು ಅವರಿಗೆ ಅಷ್ಟೊಂದು ಕಷ್ಟವಾಗಿ ತೋರಲಿಲ್ಲ ಈಗ ರೈತನ ಉತ್ಪತ್ತಿಯು ಬಹು ಮಟ್ಟಿಗೆ ಇಳಿದು ಹೋಗಿದೆ ಸಾಮಾನುಗಳಿಗೆಲ್ಲಾ ಮುಖ್ಯವಾಗಿ ಆಹಾರ ಸಾಮಗ್ರಿಗಳಿಗೆ ಬೆಲೆಯು ಶೇಕಡ 50ರಷ್ಟು ಇಳಿದು ಹೋಗಿ ಜೀವನದ ಖರ್ಚು ಕಡಿಮೆಯಾಗಿದೆ ಅಂದರೆ ಈಗಿನ ಸ್ಥಿತಿಯು ಯುದ್ಧಕ್ಕಿಂತ ಮೊದಲು ಇದ್ದಂತೆ ಆಗಿದೆ ಜೀವನದ ಖರ್ಚು ಏರಿದಾಗ ಹೆಚ್ಚಿಸಿದ ಸಂಬಳವನ್ನು ಜೀವನದ ಖರ್ಚು ಕಡಿಮೆಯಾದಾಗ ಇಳಿಸಬಾರದೆಂಬುವುದು. ಯಾವ ನ್ಯಾಯವೋ ತಿಳಿಯೆವು ಅತಿ ವೃಷ್ಟಿಯ ಯಾ ಅನಾವೃಷ್ಟಿಯ ಕಷ್ಟಗಳು ಕ್ಷಾಮ ವಗೈರೆ ಬಾಧೆಗಳ ಮತ್ತು ವ್ಯಾಪಾರದ ಏರುಪೇರಿಯ ಯಾ ತಗ್ಗುವಿಕೆಯ ಪೆಟ್ಟುಗಳಿಗೆ ಹೆಚ್ಚಾಗಿ ಸಿಕ್ಕದೆ ಸಂತುಷ್ಟರಾಗಿ ನಿಶ್ಚಿಂತೆಯಲ್ಲಿ ಜೀವನ ನಡಿಸಿಕೊಂಡು ಹೋಗುತ್ತಿರುವವರು ಸರ್ಕಾರಿ ಉದ್ಯೋಗಸ್ಥರಲ್ಲದೆ ಬೇರೆ ಯಾರೂ ಅಲ್ಲ ಉದ್ಯೋಗಸ್ಥರಿಗೆ ಕೊಡುವ ಸಂಬಳವು ಬರೀ ಅವರ ಜೀವನ ನಡಸಲಿಕ್ಕಾಗಿದೆ ಬದಲು, ವ್ಯಾಪಾರಸ್ಥರಂತೆ ದೊಡ್ಡ ಐಶ್ವರ್ಯ ಸಂಪಾದಿಸಲಿಕ್ಕೆಂದು ಕೆಲವರು ತಿಳಿದ ಕೊಂಡಿರುವುದು ಸರಿಯಲ್ಲ ಅದುದರಿಂದಲೇ ಅವರಿಗೆ ಶಕ್ತಿಗುಂದಿ ಕೆಲಸ ಮಾಡಲು ಅಸಾಧ್ಯವಾಗದೆ ಇದ್ದಾಗ ಪೆನ್ಶನನ್ನೂ ಕೊಡುವ ಏರ್ಪಾಡು ಮಾಡಿರುವುದಾಗಿದೆ ಜೀವನದ ಖರ್ಚು ಜನರ ಉತ್ಪತ್ತಿಯೂ ಹೆಚ್ಚಾಗಿರುವ ಬ್ರಿಟನ್ ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲೂ ಕೂಡ ಇರುವ ಕಡಿಮೆ ಸಂಬಳವನ್ನು ಇನ್ನೂ ಖೋತೆ ಮಾಡುತ್ತಿರುವಲ್ಲಿ ಜನರ ಸರಾಸರಿ ಉತ್ಪತ್ತಿಯೂ ಜೀವನದ ಖರ್ಚು ಎಷ್ಟೋ ಕಡಿಮೆಯಾಗಿರುವ ನಮ್ಮ ದೇಶದಲ್ಲಿ ಈಗಿರುವ ದುಂದುಗಾರಿಕೆಯ ಸಂಬಳವನ್ನು ಇಳಿಸಕೂಡದೆನ್ನುವುದರಲ್ಲಿ ಏನೊಂದೂ ನ್ಯಾಯವಿಲ್ಲ

ಸಂಬಳವನ್ನು ಇಳಿಸಿ ಬಿಟ್ಟರೆ ಲಂಚ, ಪಕ್ಷಪಾತ ವಗೈರೆ ಹೆಚ್ಚಾಗಿ ಆಡಳಿತವು ಕೆಟ್ಟು ಹೋಗುವದೆಂದು ಕಲವರ ವಾದ ಇದು ನಿಜವಲ್ಲ ಯಾಕಂದರೆ ಲಂಚ, ಪ್ರಮಾಣಿಕತನಗಳಿಗೆ ಉದ್ಯೋಗಸ್ಥರ ನೀತಿಯೂ, ಮೇಲಧಿಕಾರಿಗಳ ಉಸ್ತುವಾರಿಯೂ ಕಾರಣವಲ್ಲದೆ ಸಂಬಳದ ಹೆಚ್ಚು ಕಮ್ಮಿಯಲ್ಲ, ಅದು ಸಂಬಳವನ್ನನುಸರಿಸುವುದಾದರೆ ವಾಡಿಕೆಯಾಗಿ ಸಣ್ಣ ಸಂಬಳದ ಉದ್ಯೋಗಸ್ಥರು ದೊಡ್ಡ ಸಂಬಳದ ಉದ್ಯೋಗಸ್ಥರಿಗಿಂತ ಹೆಚ್ಚು ಲಂಚ ಕೋರರೆಂದು ಹೇಳಬೇಕಲ್ಲವೇ? ಇದು ಯಥಾರ್ಥವಲ್ಲವೆಂದು ಎಲ್ಲರಿಗೂ ಗೊತ್ತಿದೆ ಜಪಾನಿನಂಥ ದೇಶಗಳ ಉದಾಹರಣೆಯನ್ನೂ ಕೊಡಬಹುದು. ಅಲ್ಲಿಯ ಉದ್ಯೋಗಸ್ಥರ ಸಂಬಳವು ಇಲ್ಲಿಯವರಿಗಿಂತ ಎಷ್ಟೋ ಕಡಿಮೆಯಾಗಿದ್ದರೂ ಅಲ್ಲಿಯವರು ಇಲ್ಲಿಯವರಿಗಿಂತ ಹೆಚ್ಚಿನ ಲಂಚಖೋರರಲ್ಲ. ಅಲ್ಲಿಯ ಆಡಳಿತ ಕ್ರಮವು ಇಲ್ಲಿಯದಕ್ಕಿಂತ ಒಂದಿಷ್ಟೂ ಕಡೆಯಾಗಿಲ್ಲ ಜನರ ಪ್ರತಿನಿಧಿಗಳಿಗೆ ಜವಾಬ್ದಾರಿಯಿರುವ ಸರ್ಕಾರವು ಬಂದ ಕೂಡಲೆ ಲಂಚ, ಮೋಸ, ಉದಾಸೀನತೆ, ಪಕ್ಷಪಾತ ಮುಂತಾದ ಕೊರತೆಗಳಿಗೆ ಎಡೆಯಿಲ್ಲದಂತಾಗುವುದರಲ್ಲಿ ಸಂಶಯವಿಲ್ಲ

ಕಳೆದ ವಾರದ ಲೇಖನದಲ್ಲಿ ಪೆನ್ಶನಿನ ವಿಷಯ ಬರೆಯಲು ಬಿಟ್ಟು ಹೋಗಿತ್ತು ಕೊಡಗಿಗೆ ಕೊಡಲು ಸರ್ಕಾರ ಬಂದು, ಇಲ್ಲಿಯ ಆದಾಯವೆಲ್ಲವು ಪ್ರತ್ಯೇಕಿಸಲ್ಪಟ್ಟ... ಉಳವರಿಯೆಲ್ಲವೂ ಇಂಪೀರಿಯಲ್ ಸರ್ಕಾರಕ್ಕೆ... ಇದು ಸುಮಾರು 40 ವರ್ಷಗಳಲ್ಲಿ ... ಹೆಚ್ಚಾಗಿದೆಯೆಂದು ಲೆಖ್ಖ ಹಾಕಲ್ಪಟ್ಟಿದೆ ಇದ... ಗಿನ ಸರ್ಕಾರಕ್ಕೆ ಕೊಡಬೇಕೆಂದು ಈ ಮೊದಲು ... ಯೂ, ಹೊರಗೂ ಪ್ರಬಲವಾದ ಹೋರಾಟ ನಡೆ... ಇಂಡಿಯಾ ಸರ್ಕಾರದವರು ಗಮನಿಸದೆ ಇರುವುದ... ನ್ಯಾಸನಕರ ಆದಾಯ ವೆಚ್ಚವನ್ನು ಸರಿಪಡಿಸ... ವಾಗುತ್ತಿರುವಂಥ ಈ ಸಮಯದಲ್ಲಾದರೂ ... ಸರ್ಕಾರದವರು ಈ ಉಳುವರಿಯನ್ನು ಸ್ಥಳೀಯ ... ಕೊಡಬೇಕಾದದ್ದು ಅತ್ಯವಶ್ಯವಾಗಿದೆ ಅಲ್ಲದೆ ... ದಲು ಕೊಡಗಿನಲ್ಲಿ ಉದ್ಯೋಗ ಮಾಡಿ ರಿಟಯ... ವರ ಪೆನ್ಶನನ್ನು ಆಗಿನ ಕಾಲದ ಉಳುವರಿಯನ್ನು ... ಗಿಸಿಕೊಂಡಿರುವ ಇಂಡಿಯಾ ಸರ್ಕಾರದವರು ಕೊಡ... ದೆ ಸ್ಥಳೀಯ ಸರ್ಕಾರದ ಖಜಾನೆಯಿಂದ ಕೊಡು... ದೂ ನ್ಯಾಯವಲ್ಲ ಇವೆರಡು ವಿಷಯಗಳಲ್ಲಿ... ಸರ್ಕಾರದವರು ಇಂಡಿಯಾ ಸರ್ಕಾರದೊಂದಿಗೆ ... ಹಾರ ನಡಿಸುತ್ತಿದ್ದಾರೆಂಬ ಸುದ್ದಿ ಇದೆ ಇದ... ಇದಕ್ಕೆ ದೇಶದವರ ಸಂಪೂರ್ಣ ಒತ್ತಾಸೆ ಇದೆ ... ಇರಲಾರದು

ಡಿಸ್ಟ್ರಿಕ್ಟ್ ಜಡ್ಜರ ಉದ್ಯೋಗ

ಸಿಬ್ಬಂದಿ ಖೋತೆಯ ಕೋಲಾಹಲದ ಈ ಸ... ಡಿಸ್ಟ್ರಿಕ್ಟ್ ಜಡ್ಜರ ಉದ್ಯೋಗವೊಂದನ್ನು ಪ್ರತ್ಯೇ... ವಿ ಸಬೇಕೆಂಬ ಮಾತು ಬಂದೆರಡು ಕಡೆ ಕೇ... ನ್ಯಾಯ ತೀರ್ಪಿನ ಅಧಿಕಾರಿಯಿಂದ ಆಡಳಿತದ... ನ್ನು ಬೇರ್ಪಡಿಸುವ ಉದ್ದಿಶ್ಯ ಈಗ ಎರಡ... ಳೂ ಅಡಕವಾಗಿರುವ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ... ಗವನ್ನು ವಜಾ ಮಾಡಿ, ಕಮಿಷನರವರೇ ಡಿಸ್ಟ್ರಿಕ್ಟ್ ಮೇಜಿ... ಸ್ಟ್ರೇಟರ ಕೆಲಸವನ್ನು ನೋಡುವಂತೆಯೂ ಈಗ ... ಲ್ಲಿರುವ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ ಜಡ್ಜರ ಅಧಿಕಾ... ವಜಾ ಮಾಡಿ ಪ್ರತ್ಯೇಕ ಒಬ್ಬ ಸೆಶ್ಶನ್ ಮತ್ತು ಡಿ... ಜಡ್ಜರನ್ನು ನೇಮಿಸುವಂತೆಯೂ ಏರ್ಪಾಡು ಮಾಡಿ... ಸಬ್‌ಜಡ್ಜರ ಹುದ್ದೆಯನ್ನು ತೆಗೆದುಹಾಕಿ, ಮು... ಲ್ಲಿ ಒಬ್ಬ ಮುನ್ಸೀಫರನ್ನು ನೇಮಿಸಿದರೆ ಸಾಕಾಗ... ಕೆಲವರ ಅಭಿಪ್ರಾಯವಂತೆ

ಈ ಸೂಚನೆಯಿಂದ ದೇಶಕ್ಕೆ ಪ್ರಯೋಜನವಾದೀತೋ ಅಥವಾ ಕಷ್ಟವಾಗುವುದೋ ಎಂದು ವಿಚಾರಿಸಬೇ... ಗಿದೆ ಈ ಏರ್ಪಾಡಿನಿಂದ ನ್ಯಾಯತೀರ್ಪಿನ ಅಧಿಕಾರದ ಆಡಳಿತದ ಅಧಿಕಾರವನ್ನು ಬೇರ್ಪಡಿಸಿದಂತೆ ... ದೇ ಇಲ್ಲ ಬದಲು ಅದಕ್ಕಿಂತ ಕಠಿಣವಾಗುತ್ತದೆ ಕಂದರೆ—ಮುಖ್ಯ ರೆವಿನ್ಯು ಆಫೀಸರಾದ ಕಮಿಷನ... ಮುಖ್ಯ ಮೇಜಿಸ್ಟ್ರೇಟರಾಗುತ್ತಾರೆ ಈಗಿರುವಂತೆ ... ರವರೇ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿರಬಾರದೆಂದು ಹಿಂದೂಸ್ಥಾನದ ಬೇರೆ ಪ್ರಾಂತ್ಯಗಳಲ್ಲಿ ಹೋರಾಟವು ನಡೆಯುತ್ತಿರುವಲ್ಲಿ ನಾವು ಈಗ ಹೊಸದಾಗಿ ಆ ಕಡೆಗೆ ... ದು ಎಂದೂ ಉಚಿತವಲ್ಲ ಈಗ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೇ ಅಸಿಸ್ಟೆಂಟ್ ಕಮಿಶನರಾಗಿದ್ದರೂ ... ಮೇಲಧಿಕಾರಿಯಾದ ಕಮಿಷನರು ಮುಖ್ಯ ರೆವಿನ್ಯೂ ಆಫೀಸರಾಗಿರುವರು ಇವರಿಗೆ ಈಗ ಇರುವ ನ್ಯಾಯತೀರ್ಪಿನ ಅಧಿಕಾರ ಕಡಿಮೆ

ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ ಜಡ್ಜರ ಉದ್ಯೋಗ ಒಂದನ್ನು ವಿಂಗಡಿಸಿದರೆ ಕೊಡಗಿನಲ್ಲಿ ಅವರಿಗೆ ಸಾಕಷ್ಟು ಕೆಲಸವೇ ಇಲ್ಲ ವಾಡಿಕೆಯಾಗಿ ಇಲ್ಲಿ ವರ್ಷಕ್ಕೆ ... ಡಜನಿಗಿಂತ ಹೆಚ್ಚು ಸಿವಿಲ್ ಅಪ್ಪೀಲುಗಳೂ, ಅರ್ಧ ಡಜನಿಗಿಂತ ಹೆಚ್ಚು ಸೆಶ್ಶನ್ ಕೇಸುಗಳೂ ಇರುವುದಿಲ್ಲ ಒಂದೂವರೆ ಡಜನ್ ಕೇಸುಗಳಿಗಾಗಿ ಒಬ್ಬ ದೊಡ್ಡ ಸಂಬಳದ ಉದ್ಯೋಗಸ್ಥನನ್ನು ನೇಮಿಸುವುದು ಸಿಬ್ಬಂದಿ ಖೋತೆಯಲ್ಲ! ಅದು ಸಿಬ್ಬಂದಿ ದುಂದುಗಾರಿಕೆಯಾಗುವುದು ಸೆಶ್ಶನ್ ಜಡ್ಜರಿಗೆ ಕೆಲಸ ಉಂಟು ಮಾಡಲು ಅವರಿಗೆ ರೆವಿನ್ಯೂ ಅಪ್ಪೀಲುಗಳನ್ನು ವಿಚಾರಿಸುವ ಅಧಿಕಾರ ಕೊಡಬಹುದೆಂದೂ ಇಲ್ಲವೆ ಟ್ರೆಜರಿ ಮುಂತಾದ ಬೇರೆ ಕೆಲಸಗಳನ್ನು ಕೊಡಬಹುದೆಂದೂ ಹೇಳುವರು. ಆದರೆ ಡಿಸ್ಟ್ರಿಕ್ಟ್ ಜಡ್ಜರು ರೆವಿನ್ಯೂ ವಿಚಾರಣೆ ಮಾಡುವುದು ವಾಡಿಕೆಯಾಗಿ ಬೇರೆ ಕಡೆಗಳಲ್ಲಿ ಇಲ್ಲ. ಒಂದು ವೇಳೆ ಅವರಿಗೆ ಆ ಅಧಿಕಾರ ಕೊಟ್ಟರೆ ... ರ ತೀರ್ಪಿನ ಮೇಲೆ ಜುಡಿಶ್ಯಲ್ ಕಮಿಷನರವರಿಗೆ ಅಪ್ಪೀಲು ಮಾಡುವ ಅವಕಾಶ ದೊರೆಯುತ್ತದಲ್ಲದೆ ... ಲಿನ ಅನುಕೂಲವೇ ಇಲ್ಲದಾಗುತ್ತೆ ಜನರಿಗೆ ಇದೊಂದು ದೊಡ್ಡ ಅಡಚಣೆಯಾಗುತ್ತದೆ. ಇವರಿಗೆ ಟ್ರೆಜರಿ ಮುಂತಾದ ಕೆಲಸಗಳನ್ನು ಕೊಟ್ಟರೆ ಇವರು ಕಮಿಷನರ ತಾಬೇದಾರರಾಗುತ್ತಾರೆ ಆದರೆ ಕ್ರಿಮಿನಲ್ ಕೇಸುಗಳಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ತೀರ್ಪಿನ ಮೇಲೆ ಸೆಶ್ಶನ್ ಜಡ್ಜರಿಗೆ ಅಪ್ಪೀಲು ಬರುವದು ಈ ಸಂದರ್ಭ ಇವರು ಕಮಿಷನರ ಮೇಲೆ ... ಕೀನರಾಗುವರು. ಇದು ಒಂದಕ್ಕೊಂದು ವಿರೋಧವಾಗ...

ಇಷ್ಟು ಮಾತ್ರವಲ್ಲ, ಇದಕ್ಕಿಂತಲೂ ದೊಡ್ಡ ಕಷ್ಟ ಇನ್ನೊಂದಿದೆ. ಸೆಶ್ಶನ್ ಜಡ್ಜರು ಸೆಶ್ಶನ್ ಕೇಸುಗಳ...

(೪ನೇ ಪುಟದಲ್ಲಿ ಮುಂದುವರಿದಿದೆ)

ಕ. ಪ್ರಾಂ. ಕಾಂ. ಕಮಿಟಿಯ ವಾರ್ಷಿಕ ಸಾಧಾರಣ ಸಭೆಯು.

ಹುಕ್ಕೇರಿಯಲ್ಲಿ ಗೊತ್ತಾದ ನಿರ್ಣಯಗಳು.

ಕ. ಪ್ರಾಂ. ಕಾಂ. ಕಮಿಟಿಯ ಕಾರ್ಯಕಾರಿ ಮಂಡಲವು ತಾ 25—5—31ನೇ ದಿವಸ ಹುಕ್ಕೇರಿಯಲ್ಲಿ ಕೂಡಿಸಿ ಮಾಡಿದಂತೆ ಈ ಕೆಳಗಿನ ನಿರ್ಣಯಗಳು 26ನೇ ದಿನ ಸೇರಿದ ಕ. ಪ್ರಾಂ. ಕಾಂ. ಕಮಿಟಿಯ ಅಧಿವೇಶನದಲ್ಲಿ ಸರ್ವಾನುಮತದಿಂದ ಸ್ವೀಕೃತವಾದವು. ನೂತನ ಕ. ಪ್ರಾಂ. ಕಾಂ. ಕಮಿಟಿಯ ಕಾರ್ಯಕಾರಿ ಮಂಡಲದ ಸಭೆಯು ಪುನಃ ತಾ 27ನೇ ದಿನ ಸೇರಿ ಆ ರನ್ನು ಪುಷ್ಟೀಕರಿಸಿತು. ಹೀಗೆ ಗೊತ್ತಾದ ನಿರ್ಣಯಗಳೆಂದರೆ:—

(1) ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿಂದ ಬಂದ ಸಭಾಸದರ ಕೆಳಗಿನ 18 ಸಭಾಸದರನ್ನು ಕ ಪ್ರಾಂ. ಕಾಂ ಆರಿಸಲಾಯಿತು. ಅವರ ಹೆಸರುಗಳು—1. ಕೆ. ರಂಗರಾವ್, 2 ಟಿ ಸುಬ್ರಮಣ್ಯಂ (ಕುಮಟಾ), ಕಮಲಾದೇವಿ ಚಟ್ಟೋಪಾಧ್ಯಾಯ, 4. ಡಾಕ್ಟರ್ ಶೆಟ್ಟಿ, 5 ಕೃಷ್ಣರಾವ್ ನಾರ್ವೇಕರ, 6 ಜೀರ್ಗೆ ಆಚಾರ್ಯ, 7. ರಾಮರಾವ್ ಹೀರವಡೆ, 8. ಡಾ ಕೋ ?, 9. ಕೆ ಜಿ. ಗೋಕುಲೆ, 10. ನಾ ಸುಭದ್ರಾಬಾಯಿ ?, 11. ತಿ. ಶ್ರೀ. ನಾಯಿಕ, 12. ಎನ್. ಎಸ್ 13 ವಾಸುದೇವರಾವ್ ನಾಯಕ, 14. ಪಿ. ವಿ. ಬೆಳ್ಳಪ್ಪ, 15. ಹಿರೇಮಠ, 16 ರಾಮರಾವ್ ಬೆಂಗೇರಿ ?, 17 ಗಂಗೂತಾಯಿ ಹೀರವಡೆ ಮತ್ತು 18. ಎ ಬಿ. ರಾಮರಾವ್.

(2) 1931ನೇ ವರ್ಷದ ಸಲುವಾಗಿ ಈ ಕೆಳಗೆ ಕಂಡವರು ಪ್ರಾಂ ಕಾಂ ಕಮಿಟಿಯ ಅಧಿಕಾರಿಗಳಾಗಿರಬೇಕು.

ಅಧ್ಯಕ್ಷರು:— ಶ್ರೀ. ಕಾರ್ನಾಡ ಸದಾಶಿವರಾಯರು.

ಉಪಾಧ್ಯಕ್ಷರು.— ಶ್ರೀ. ನಾರಾಯಣರಾವ್ ಜೋಶಿ.

„ „ ಎಸ್. ಆ. ಹುಗ?

„ „ ಶ್ರೀನಿವಾಸರಾವ್ ಕೌಜಲಗಿ,

ಕಾರ್ಯದರ್ಶಿಗಳು:— ಶ್ರೀ ರಂ. ರಾ ದಿವಾಕರ,

„ „ ಡಾ. ಶ್ರೀ. ಹುಕ್ಕೇರಿ (ಮುಖ್ಯ ಕಾ)

„ „ ವಿ ವಿ. ಪಾಟೀಲ.

ಕೋಶಾಧ್ಯಕ್ಷರು.— ಶ್ರೀ ಡಾ. ವಿ. ಎಸ್ ಉಮಚಗಿ.

(3) ಮುಂದೆ ಕಾಣಿಸಿದವರು ಕ. ಪ್ರಾಂ. ಕಾಂ ಕಮಿಟಿ ಕಾರ್ಯಕಾರಿ ಮಂಡಲದ ಸಭಾಸದರಾಗಬೇಕು—

1. ಹ ಶ್ರೀ ಕೌಜಲಗಿ, 2. ಯಂ. ಪಿ ಪಾಟೀಲ, 3 ಯಸ್. ಅಧಿಕಾರಿ, 4 ರಾಮನಾಯಕ ಬಾಸೆಲೆ ?, 5 ಸುಬ್ರಮಣ್ಯಂ (ಬಳ್ಳಾರಿ), 6. ಡಾ. ಹರ್ಡೀಕರ್, 7. ಕೆ ಟಿ ? ಅಯ್ಯಂಗಾರ್, 8. ರಾಮರಾವ್ ಹೀರವಡೆ, 9. ಮ ? ಕಬ್ಬೂರ, 10. ಡಾ. ಪ ?ಕರ, 11 ಕೆಳದೇರಿ ? ಮತ್ತು 12. ಪಿ. ಐ ಬೆಳ್ಳಪ್ಪ.

(4) ಅ. ಭಾ ಕಾಂಗ್ರೆಸ್ ಕಮಿಟಿಗೆ ಕರ್ನಾಟಕದ ಪರವಾಗಿ ಮುಂದೆ ಕಾಣಿಸಿದ ಸಭಾಸದರು ಆರಿಸಲ್ಪಟ್ಟರು—

1. ಡಾ. ಹರ್ಡೀಕರ್, 2, ಬಿ. ಎಸ್ ದಾತಾರ, 3 ಹ. ಕೌಜಲಗಿ, 4 ಶ್ರೀ. ಕಮಲಾದೇವಿ ಚಟ್ಟೋಪಾಧ್ಯಾಯ, 5 ಕಾರ್ನಾಡ ಸದಾಶಿವರಾವ್, 6. ವಿ. ವಿ ಪಾಟೀಲ, 7. ಟಿ ಸುಬ್ರಮಣ್ಯಂ (ಬಳ್ಳಾರಿ), 8. ಕ. ಟಿ ಭಾಷ್ಯಂ ಅಯ್ಯಂಗಾರ, 9 ಗಂಗಾಧರರಾವ್ ದೇಶಪಾಂಡೆ, 10 ಡಾ. ಹುಲ್ಯಾಳ 11. ಹ ರ. ಮೋಹರೆ, 12. ಶ್ರೀನಿವಾಸರಾವ್ ? 13. ವಾಸುದೇವರಾವ್ ನಾಯಕ, 14 ಯಂ ಪಿ. ಪಾಟೀಲ, 15. ಡಾ. ಉಮಚಗಿ.

(5) ಕ. ಪ್ರಾಂ. ಕಾಂ. ಕಮಿಟಿಯ ಕಚೇರಿಯ ಕೆಲಸಕ್ಕೆ ತಿಂಗಳಿಗೆ 25 ರೂ. ವರೆಗೆ ಸಂಬಳ ಕೊಟ್ಟು ಒಬ್ಬ ಕಾರಕೂನನನ್ನು ನೇಮಿಸಬೇಕು. ಅಧ್ಯಕ್ಷರು ನೇಮಕ ಮಾಡಬಹುದು.

(6) ಬಳ್ಳಾರಿಯ ಶ್ರೀ. ಬಿ ವಿ. ಶೀಶಗಿರಿರಾಯರು ಕ. ಪ್ರಾಂ. ಕಾಂ. ಕಮಿಟಿಯ ಲೆಕ್ಕ ತಪಾಸಿಗರಾಗಬೇಕು. ಅವರಿಗೆ 100 ರೂ. ಮೆಹನತಾನವನ್ನು ಕೊಡಬಹುದು

(7) ಕ. ಪ್ರಾಂ ಕಾಂ. ಕಮಿಟಿಯ ಹಾಗೂ ಹುಬ್ಬಳ್ಳಿ ಧಾರವಾಡಗಳ ಕರ್ನಾಟಕ ಸತ್ಯಾಗ್ರಹ ಮಂಡಲಗಳ 1931ರ ವರೆಗಿನ ಪ್ರಸಿದ್ಧವಾದ ಲೆಕ್ಕವನ್ನು ಮಂಜೂರ ಮಾಡಲಾಯಿತು

(8) ಕ. ಪ್ರಾಂ. ಕಾಂ. ಕಮಿಟಿಯ ಘಟನೆಯಲ್ಲಿ ಮುಂದಿನ ತಿದ್ದುಪಡಿಗಳಾಗತಕ್ಕದ್ದು.

1. ಕ. ಪ್ರಾಂ. ಪರಿಷತ್ತಿನ ಸ್ವಾಗತ ಮಂಡಲದ ಸಭಾಸದರು ಪರಿಷತ್ತು ಸೇರುವ ಜಿಲ್ಲೆಯವರೇ ಇರತಕ್ಕದ್ದು. 2. ಪ್ರತಿ ಕೊಟ್ಟು ಕಾಂಗ್ರೆಸ್ ಸಭಾಸದರಾದವರ ಬಗ್ಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಬಂದ ಹಣದಲ್ಲಿ ಅರ್ಧವನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಕ. ಪ್ರಾಂ. ಕಾಂ. ಕಮಿಟಿಗೆ ಕೊಡಬೇಕು.

(9) ಕಳೆದ ಒಂದೂವರೆ ವರ್ಷದ ವರದಿಯನ್ನು ಕಾರ್ಯಕಾರಿ ಮಂಡಲದವರು ಪರೀಕ್ಷಿಸಿ ಮುದ್ರಿಸತಕ್ಕದ್ದು

(10) ಎಲ್ಲ ಕಾಂಗ್ರೆಸ್ ಸಂಸ್ಥೆಗಳ ಲೆಕ್ಕ ಪತ್ರದ ವರ್ಷವು ನವಂಬರ್ 30ನೇ ತಾರೀಖಿನ ವರೆಗೆ ಇರಬೇಕೆಂದೂ, ಕ. ಪ್ರಾಂ. ಕಾಂ. ಕಮಿಟಿಯ ಲೆಕ್ಕದ ವರ್ಷವು ಡಿಸೆಂಬರ್ 31ರ ವರೆಗೆ ಇರಬೇಕೆಂದೂ ಮತ್ತು ಸಭಾಸದತ್ವದ ವರ್ಷವು ಮಾರ್ಚ್ 31ರ ವರೆಗೆ ಇರಬೇಕೆಂದೂ ಈ ಸಭೆಯು ನಿರ್ಣಯಿಸುತ್ತದೆ.

(11) ಡಾ ಕೋಲವಾಡಕರ, ಟಿ. ಸುಬ್ರಮಣ್ಯಂ (ಕುಮಟಾ) ಹಾಗೂ ರಾ. ಕೃ. ಹೀರವಡೆಯವರು ಕರ್ನಾಟಕದ ಸ್ವಯಂಸೇವಕರ ಮಂಡಲದ ಮೇಲೆ ಕ. ಪ್ರಾಂ. ಕಾಂ. ಕಮಿಟಿಯ ಪ್ರತಿನಿಧಿಗಳಾಗಿರತಕ್ಕದ್ದು.

(12) ಈ ವರ್ಷ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ನಡೆಸತಕ್ಕ ಕಾರ್ಯದಲ್ಲಿ (ಅ) ಸ್ವದೇಶೀ ವಸ್ತ್ರ, ಖಾದಿಯ ಮುಖಾಂತರ ಪರದೇಶೀ ವಸ್ತ್ರ ಬಹಿಷ್ಕಾರ, (ಬ) ಗ್ರಾಮ ಸಂಘಟನೆ, (ಕ) ಕರ್ನಾಟಕ ಏಕೀಕರಣ, (ಡ) ಮಾದಕ ಪದಾರ್ಥ ನಿಷೇಧ, (ಇ) ಕಾಂಗ್ರೆಸ್ ಕಮಿಟಿಗಳ ಸಂಘಟನೆ, (ಈ) ಸ್ವಯಂಸೇವಕರ ಸಂಘಟನೆ ಹೀಗೆ ವಿಭಾಗಗಳನ್ನು ಮಾಡಬೇಕು. ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ 3 ಕಾರ್ಯದರ್ಶಿಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ವಿಭಾಗವನ್ನು ಒಪ್ಪಿಸಬೇಕು. ಉಳಿದ 3 ವಿಭಾಗಗಳನ್ನು ಮತ್ತೆ 3 ಸಭಾಸದರಿಗೆ ಒಪ್ಪಿಸಬೇಕು. ಈ ಎಲ್ಲಾ ಕೆಲಸದ ಮೇಲೆ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಮುಖ್ಯ ಕಾರ್ಯದರ್ಶಿಯು ಮೇಲ್ವಿಚಾರಣೆ ಮಾಡಬೇಕು. ಮತ್ತು ಹೆಚ್ಚಿನ ಕಾರ್ಯವೇನಾದರೂ ಇದ್ದರೆ ಅದನ್ನು ಆಯಾ ವಿಭಾಗದವರಿಗೆ ಹಂಚಬೇಕು ಈ ಎಲ್ಲ ವಿಭಾಗಗಳನ್ನು ಒಪ್ಪಿಸಿಕೊಂಡವರೂ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳೂ ಕೂಡಿ ಒಂದು ಕಾರ್ಯಕಾರೀ ಮಂಡಲವಾಗಬೇಕು ಈ ರೀತಿ ಕಾರ್ಯ ನಡೆಯಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ. ಈ ನಿರ್ಣಯದ ಮೇರೆಗೆ ಈ ಕೆಳಗಿನಂತೆ ಆಯಾ ವಿಭಾಗಗಳು ಆಯಾ ಸಭಾಸದರಿಗೆ ಒಪ್ಪಿಸಲಾಗಿದೆ.—

1 ಸ್ವದೇಶೀ ಮತ್ತು ಬಹಿಷ್ಕಾರ	ಡಾ ಶ್ರೀ. ಹುಕ್ಕೇರಿಕರ
2 ಕಾಂಗ್ರೆಸ್ ಕಮಿಟಿಗಳ ಸಂಘಟನೆ	„ „
3. ಗ್ರಾಮ ಸಂಘಟನೆ	ವಿ. ವಿ. ಪಾಟೀಲ
4 ಕ ವಿ ಮತ್ತು ತಿರುಗಿ ನಿರ್ಮಾಣ ?	ರಂ. ರಾ. ದಿವಾಕರ್
5 ಸ್ವಯಂಸೇವಕರ ಸಂಘಟನೆ	ರಾಮರಾವ್ ಹೀರವಡೆ
6. ಮಾದಕ ಪದಾರ್ಥ ನಿಷೇಧ	ಟಿ. ಸುಬ್ರಮಣ್ಯಂ, ಬಳ್ಳಾರಿ.

(13) ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಕೆಲಸವು ಚೊಕ್ಕವಾಗಿ ನಡೆಯಬೇಕಾದರೆ 24 ತಾಸು ಅದೇ ಕಾರ್ಯಮಾಡುವ ಕಾರ್ಯಕರ್ತರೊಬ್ಬರು ಇರುವುದು ಅವಶ್ಯವೆಂದು ಈ ಸಭೆಯು ತಿಳಿಯುತ್ತದೆ. ಆವಶ್ಯವಿದ್ದರೆ ತಿಂಗಳಿಗೆ 50 ರೂ. ವರೆಗೆ ಸಂಬಳ ಕೊಟ್ಟು ಇಂಥ ಕಾರ್ಯಕರ್ತರೊಬ್ಬರನ್ನು ನೇಮಿಸಬೇಕೆಂದೂ ಪ್ರತಿ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಇದರಂತೆ 24 ತಾಸು ದುಡಿಯುವ ಒಬ್ಬರನ್ನಾದರೂ ನೇಮಿಸಬೇಕೆಂದೂ ಈ ಸಭೆಯು ಶಿಫಾರಸು ಮಾಡುತ್ತದೆ. ಕ. ಪ್ರಾಂ. ಕಾಂ. ಕಮಿಟಿಯ ಕಾರ್ಯಕರ್ತರನ್ನು ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸೇರಿ ನೇಮಿಸತಕ್ಕದ್ದು

(14) ಬಳ್ಳಾರಿಯಲ್ಲಿ ತಾ 23—2—1930ನೇ ದಿನ ಸೇರಿದ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಪಾಸಾದ ಕೆಳಗೆ ಕಂಡ ಠರಾವು ಕೂಡಲೇ ಅಮಲಿನಲ್ಲಿ ಬರತಕ್ಕದ್ದು. ಆ ನಿರ್ಣಯವೇನೆಂದರೆ.—

ಎಲ್ಲಾ ಕಾಂಗ್ರೆಸ್ ಸಭಾಸದರೂ, ಕಾಂಗ್ರೆಸಿನ ಅಧಿಕಾರಿಗಳೂ 300 ರೂ. ಗಳಿಗೆ ಕಡಿಮೆ ಇಲ್ಲದ ವಾರ್ಷಿಕ ಉತ್ಪನ್ನದಲ್ಲಿ 100 ಕ್ಕೆ 1 ರೂಪಾಯಿಯಂತೆ ಉತ್ಪನ್ನದ ಕರವಾಯವನ್ನು ಕಾಂಗ್ರೆಸಿಗೆ ಕೊಡಬೇಕೆಂದು ಈ ಸಭೆಯು ಬೇಡಿಕೊಳ್ಳುತ್ತದೆ. ಹೀಗೆ ಬಂದ ಒಟ್ಟು ಹಣದಲ್ಲಿ 100 ಕ್ಕೆ 40 ರಷ್ಟು ಕೆಳದ ಎಂದರೆ ತಾಲೂಕುಗಳ ಪರಗ ಆಯಾ ಸ್ಥಳದಲ್ಲಿದ್ದ ಅ ? ಗ್ರಾಮ ಅಥವಾ ತಾಲೂಕು ಕಾಂಗ್ರೆಸ್ ಕಮಿಟಿಗಳಿಗೂ, 100 ಕ್ಕೆ 25ರಷ್ಟು ಆಯಾ ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿಗೂ, 100ಕ್ಕೆ 35ರಷ್ಟು ಪ್ರಾಂತೀಕ ಕಾಂಗ್ರೆಸ್ ಕಮಿಟಿಗೂ ಸಲ್ಲತಕ್ಕದ್ದು. ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಕೂಡಲೇ ವಸೂಲಿಯನ್ನು ಪ್ರಾರಂಭಿಸತಕ್ಕದ್ದು.

(15) 1—5—31ರಿಂದ 31—12—31ರ ವರೆಗೆ ಮುಂದೆ ಕಾಣಿಸಿದ ಜಮ ಖರ್ಚಿನ ಅಂದಾಜು ಪತ್ರಿಕೆಯು ಮಂಜೂರು ಮಾಡಲಾಯಿತು.

ಬಡ್ಡಿ	240	0	0
ಮುಂಬೈ ಪ್ರಾಂತೀಕ ಕಾಂಗ್ರೆಸ್ ಕಮಿಟಿ	125	0	0
ಕಾಂಗ್ರೆಸ್ ಸಭಾಸದರ ಫೀ	1000	0	0
ಕ ಪ್ರಾಂ ಕಾಂ. ಕಮಿಟಿಯ ಸಭಾಸದರ ಫೀ	350	0	0
ಸೇರಿಸಲ್ಪಡಬೇಕಾದ ನಿಧಿ	2500	0	0
ಒಟ್ಟು ಜಮ.	4215	0	0

800—0—0 ಇದು ವರೆಗೆ ಕೆಲಸದ ಮೇಲಿದ್ದ ಸ್ವಯಂಸೇವಕರು ಹಾಗೂ ಕಾರ್ಯಕರ್ತರನ್ನು ಮನೆಗೆ ಕಳುಹಿಸುವುದು 600—0—0 ಕಚೇರಿಯ ಕೆಲಸಗಾರರ ಸಂಬಳ. 100—0—0 ಸಾದಿಲ್ವಾರ್. 150—0—0 ಟಪಾಲು ಹಾಗೂ ತಂತಿ ವೆಚ್ಚ. 500—0—0 ಮುದ್ರಣ 1000—0—0 ಪ್ರವಾಸ 400—0—0 ಸಂಬಳದಿಂದ ಕಾರ್ಯಮಾಡುವ ಇನ್ನೊಬ್ಬ ಕಾರ್ಯಕರ್ತ. 250—0—0 ಅ ಭಾ ಕಾ ಕಮಿಟಿ ಅಫೀಲಿಯೇಶನ್ ಫೀ. 100—0—0 ಲೆಕ್ಕ ತಪಾಸಿಗರ ಮೆಹನತಾನ. 700—0—0 ಕಚೇರಿಯ ಬಾಡಿಗೆ, ದೀಪ 145—0—0 ಮ. ಚಿಲ್ಲರೆ ವೆಚ್ಚ. ಒಟ್ಟು ಖರ್ಚು ರೂ. 4215—0—0.

ಹುಕ್ಕೇರಿ, ತಾ. 27—5—31.

ರಂ. ರಾ. ದಿವಾಕರ್.
(ಅಧ್ಯಕ್ಷರು.)

ಪಂಡಿತ ಜವಾಹಿರಿಲಾಲರ ಭಾಷಣದ ಸಾರಾಂಶ.

ಮೈಸೂರಲ್ಲಿ.

'ನನಗೆ ಈ ಮಾನ ಪತ್ರಗಳ ಹೊರೆಯನ್ನು ಹೊತ್ತು ಹೊತ್ತು ಸಾಕಾಗಿದೆ ಈ ಚೌಕಟ್ಟುಗಳನ್ನು ಕಟ್ಟಿಕೊಂಡು ನಾನೇನು ಮಾಡಲಿ? ನನ್ನ ಹತ್ತಿರ ೨೦೦ಕ್ಕಿಂತಲೂ ಹೆಚ್ಚಾಗಿ ಈ ಚೌಕಟ್ಟುಗಳು ಬಿದ್ದಿವೆ ಈ ಸನ್ಮಾನ ಪಾತ್ರವು ನನ್ನ ಕಿವಿಗೆ ಕಾದ ಸೀಸಕ್ಕಿಂತಲೂ ಅಸಹ್ಯವಾಗಿದೆ ದೇಶೀಯ ಸಂಸ್ಥಾನಗಳಲ್ಲಂತೂ ಈ ಸನ್ಮಾನ ಪಾತ್ರಗಳಿಗೆ ಕುದಿ ನೋಡಲೇ ಇಲ್ಲ. ನಾವು ನಿಜವಾಗಿ ಒಂದು ಬಲವಾದ ಜನಾಂಗವಾಗಬೇಕಾದರೆ ವ್ಯಕ್ತಿಗಳ ಆರಾಧನೆಯು ತಪ್ಪಬೇಕು. ಶಕ್ತಿಯ ಆರಾಧನೆಯು ಮೊದಲಿಡಬೇಕು. ಬರಿ ವ್ಯಕ್ತಿಗಳು ಏನನ್ನು ಮಾಡಲಾಗುವುದಿಲ್ಲ. ತಿಸ್ಸಿನಿಂದ ಕೂಡಿದ ಸಾವಿರಾರು ಜನರ ವ್ಯವಸ್ಥಿತವಾದ ಕೆಲಸವು ಬೇಕು ಕಳೆದ ವರ್ಷ ಮಹಾತ್ಮ ಗಾಂಧಿಯವರು ದಂಡಿ ಯಾತ್ರೆ ಆರಂಭಿಸಿದಾಗ ನಗುವವರೇ ಕಂಡರು. ಆದರೆ ಕ್ರಮ ಕ್ರಮಶಃ ನಮ್ಮದೇಶದ ಗಂಡಸರು, ಹೆಂಗಸರೂ, ಮಕ್ಕಳು ಅಕ್ಕಗಟ್ಟಳೆಯಲ್ಲಿ ಯುದ್ಧ ಭೂಮಿಗೆ ಧುಮುಕಿ ಲಾಠಿ ಏಟುಗಳು, ಜೈಲುಗಳ ಯಾತನೆಗಳು ಇವುಗಳನ್ನೆಲ್ಲಾ ಅತ್ಯಂತ ಸಂತೋಷದಿಂದ ಸಹಿಸಿದರು. ದೇಶಕ್ಕಾಗಿ ಕಷ್ಟಪಡುವದೇ ಅವರಿಗೆ ಆನಂದವಾಗಿತ್ತು. ಅವರು ಮಾಡಿದ್ದನ್ನು ಸ್ವಾರ್ಥತ್ಯಾಗವೆಂದು ನೀವೇಕೆ ಹೊಗಳುವಿರಿ? ಅದು ಅವರಿಗೆ ತ್ಯಾಗವಲ್ಲ ಅದು ಅವರಿಗೆ ಮಹದಾನಂದ. ಕಳೆದ ಸತ್ಯಾಗ್ರಹ ಸಮರವು ಸೊಪ್ಪುಸದೆಯಂತೆ ಜಳ್ಳಿನಂತಿದ್ದ ನಮ್ಮ ಜನಗಳನ್ನು ವೀರರನ್ನಾಗಿ ಮಾಡಿತು. ಕೆಲವು ಕಾಲ ನಮ್ಮ ದೇಶವು ವೀರಭೂಮಿಯಂತೆ ಕಾಣಿತು. ನಮ್ಮ ದೇಶದಲ್ಲಿ ನವಯುಗವು ಸ್ಥಾಪಿಸಲ್ಪಟ್ಟಿತು ಇದರ ಮಹತ್ವವು ಇಂಗ್ಲೆಂಡನ್ನು ಮಾತ್ರವೇ ಅಲ್ಲದೆ ಇಡೀ ಜಗತ್ತನ್ನೇ ವ್ಯಾಪಿಸಿತು. ಮಹಾ ಪರಾಕ್ರಮಶಾಲಿಯಾದ ಬ್ರಿಟಿಷ್ ಸಾಮ್ರಾಜ್ಯವನ್ನೂ ಬಗ್ಗಿಸುವ ಶಕ್ತಿಯು ನಮಗಿದೆ ಎಂಬ ಧೈರ್ಯವು ನಮಗುಂಟಾಯಿತು. ನಮಗೆ ಸ್ವಾತಂತ್ರ್ಯವು ಇಂದೇ ಬರುವುದೋ, ನಾಳೆ ಬರುವುದೋ ನಾನು ಹೇಳಲಾರೆ. ಆದರೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳಲು ಶಕ್ತಿಯು ನಮಗಿದೆ ಎಂಬುದು ನನಗೆ ಗೊತ್ತಿದೆ. ಆಯುಧಗಳ ಯುಕ್ತಿವಾದದಿಂದ ಸ್ವರಾಜ್ಯವು ಬರುವುದಿಲ್ಲ; ಜಯ ಜಯಕಾರಗಳಿಂದ ಬರುವುದಿಲ್ಲ, ಆದರೆ ಸ್ಥಿರವಾದ ಕಾರ್ಯಕ್ರಮಗಳಿಂದ ಬರುವುದು ನನಗೆ ಧೈರ್ಯಸಾಹಸಗಳು ಬೇಕು. 'ಬುಲ್-ಡಾಗ್' ಗಿರುವ ಪಟ್ಟುದಲೆಯು ನಮಗೆ ಬೇಕು. ನೀವುಗಳು ಶಕ್ತಿಯನ್ನು ಶೇಖರಿಸಿಕೊಂಡು ಮುಂದೆ ದೇಶಮಾತೆಯು ನಿಮ್ಮನ್ನು ಕರೆದರೆ ನೀವು ಸಿದ್ಧರಾಗಿರಬೇಕು. ಇದೇ ನನ್ನ ಪ್ರಾರ್ಥನೆ"

ಬೆಂಗಳೂರಲ್ಲಿ.

"ಮಾನಪತ್ರಗಳು ನನಗಲ್ಲ. ಕಾಂಗ್ರೆಸಿಗೆ ಕಾಂಗ್ರೆಸ್ ಅಂದರೆ ಭರತಖಂಡದ ಕೋಟ್ಯಾವಧಿ ಜನರು. ಮಾನಪತ್ರಗಳೆಲ್ಲ ಸತ್ಯಾಗ್ರಹ ಸಂಗ್ರಾಮದಲ್ಲಿ ಯಾರು ಸರ್ವಸ್ವವನ್ನು ತ್ಯಾಗಮಾಡಿ ಸ್ವಾತಂತ್ರ್ಯ ದೇವಿಯ ಚರಣತಲದಲ್ಲಿ ತಮ್ಮ ಜೀವನಸುಮವನ್ನಿಟ್ಟರೋ ಆ ಅಜ್ಞಾತ ವೀರರಿಗೆ. ರಣರಂಗ ಭೈರವರು ಅವರು. ಮಾನಪತ್ರಗಳ ಸ್ವೀಕಾರಕ್ಕೆ ನಾನು! ಕೀರ್ತಿಯ ಆಶೆಯಿಲ್ಲದೆ ಹೋರಾಡಿದ ವೀರರ ಹೆಸರುಗಳೂ ಕೂಡ ನಮಗೆ ಗೊತ್ತಿಲ್ಲ. ಎಲ್ಲ ಕೀರ್ತಿಯೂ ಅವರದು. ಎಲ್ಲ ಕೀರ್ತಿಯೂ ಸ್ತ್ರೀಯರದು. ಸ್ತ್ರೀಯರು ರಣರಂಗಕ್ಕೆ ಕಾಲಿಟ್ಟರು. ಧನಲಕ್ಷ್ಮಿಯು ನಮ್ಮನ್ನು ಒಲಿದಳು! ನಾವು ಬಯಸುವುದು ಧರ್ಮಶ್ವರ ಸ್ವರಾಜ್ಯವಲ್ಲ, ಶ್ರೀಮಂತರ ಸ್ವರಾಜ್ಯವಲ್ಲ. ಪ್ರಜೆಗಳ ಸ್ವರಾಜ್ಯ, ರೈತರ ಸ್ವರಾಜ್ಯ, ಕೂಲಿಗಾರರ ಸ್ವರಾಜ್ಯ. ಆ ಸ್ವರಾಜ್ಯದಲ್ಲಿ ಎಲ್ಲರೂ ಸಮಾನ ಹಕ್ಕುಳ್ಳವರು; ಸಮಾನ ಸುಖಿಗಳು. ಕರಾಚಿಯಲ್ಲಿ ಅಂತಹ ಸ್ವರಾಜ್ಯ ಧ್ವಜದ ನಿರ್ಮಾಣಕ್ಕೆ ಅಸ್ತಿಭಾರ ಹಾಕಿದ್ದೇವೆ. ಆ ಸ್ವರಾಜ್ಯದಲ್ಲಿ ಎಲ್ಲ ಪ್ರಾಂತಗಳೂ ಸಮಾನವುಳ್ಳವಾಗಿರುತ್ತವೆ ಎಲ್ಲ ಸಂಸ್ಥಾನಗಳಲ್ಲೂ ಜವಾಬ್ದಾರಿ ಸರಕಾರವು ಸ್ಥಾಪಿಸಲಾಗತಕ್ಕದ್ದು. ನಮಗೆ ಸಂಪೂರ್ಣ ಸ್ವರಾಜ್ಯಬೇಕು. ಅದು ಸಿಗುವ ವರೆಗೂ ನಾವು ಸುಮ್ಮನಿರ ಕೂಡದು. ನಮಗೆ ಶಾಂತಿಬೇಕು. ಆದರೆ ಶಾಂತಿಗಿಂತ ಹೆಚ್ಚಾಗಿ ಸ್ವಾತಂತ್ರ್ಯಬೇಕು.

ಗಾಂಧಿ ಅರ್ವಿನ್ ಸಂಧಿಯು ತಾತ್ಕಾಲಿಕವಾಗಿದೆ. ಇದರಿಂದ ಶಾಶ್ವತವಾದ ಶಾಂತಿಯೇ ಒದಗಬಹುದು. ಇಲ್ಲ ಘೋರ ಸಂಗ್ರಾಮವೇ ಕಾರಣವಾಗಬಹುದು. ನಾವು ಯಾವುದಕ್ಕೂ ಸಿದ್ಧರಾಗಿರಬೇಕು. ಕೂಗಿನಿಂದ, ಜಯಕಾರದಿಂದ ಸ್ವರಾಜ್ಯ ಬರುವುದಿಲ್ಲ. ವ್ಯವಸ್ಥೆಬೇಕು; ಶಿಸ್ತುಬೇಕು ವಿದೇಶೀವಸ್ತ್ರ ಬಹಿಷ್ಕಾರವಾಗಬೇಕು. ಮದ್ಯಪಾನ ನಿರೋಧಕಾರ್ಯ ನಡೆಯಬೇಕು. ಎಲ್ಲ ವಿಧದಿಂದ ಶಕ್ತಿ ಸಂಗ್ರಹ ಮಾಡಬೇಕು. "ಶಕ್ತಿಯೇ ಸ್ವರಾಜ್ಯ"

"ವಿ. ಕ."

For Sale:

Good Coffee estate in Coorg.
For Particulars apply to—
"D"
C/o Manager, "Kodagu,"
2–2

ಡಿಸ್ಟ್ರಿಕ್ಟ್ ಜಡ್ಜರ ಉದ್ಯೋಗ.

(೨ನೇ ಪುಟದಿಂದ ಮುಂದುವರಿದದ್ದು.)

ಕೊಲೆ ಕೇಸುಗಳನ್ನೂ ವಿಚಾರಿಸುವರು. ಅಂಥಾ ಅಧಿಕಾರ ವಿರುವ ಜಡ್ಜರು ದೀರ್ಘ ಕಾಲ ಬೇರೆ ಕಡೆ ವರ್ಗವಾಗದೆ ಒಂದೇ ಕಡೆ ಇದ್ದರೆ ಅದರಿಂದ ಜನರಿಗೆ ಎಷ್ಟು ಕಷ್ಟವಾಗುವುದೆಂದು ವರ್ಣಿಸಲಾರೆವು. ಈಗಲಾದರೋ ಸೆಶ್ಯನ್ ಜಡ್ಜರಾದ ಕಮಿಷನರವರು ಐದು ವರ್ಷಕ್ಕೊಂದು ಸಾರಿಯಾದರೂ ಬದಲಾಗುತ್ತಾರೆ. ಈಗಿರುವ ಸ್ಥಿತಿಯ ಮೇರೆ ಇಲ್ಲಿಯವರೇ ಸೆಶ್ಯನ್ ಜಡ್ಜಾಗಾದರೆ ಅವರು ರಿಟಯರ್ ಆಗುವ ವರೆಗೆ ವರ್ಗವಾಗುವ ಸಂದರ್ಭವೇ ಇಲ್ಲ.

ಬೇರೆ ಜಿಲ್ಲೆಗಳಲ್ಲಿಯಂತೆ ಕಲೆಕ್ಟರನ್ನೇ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿ ಮಾಡಿದರೂ, ಅಸಿಸ್ಟೆಂಟ್ ಕಮಿಶನರೊಬ್ಬರು ಇಲ್ಲದೆ ಇರಲು ಸಾಧ್ಯವಾಗಲಾರದು. ರೆವಿನ್ಯೂ ಅಧಿಕಾರಿಗಳ ಮೇಲೆ ಸಾಕಷ್ಟು ಮೇಲ್ವಿಚಾರ ನಡಿಸಲು ಬೇರೆ ತುಂಬಾ ಕೆಲಸವಿರುವ ಕಲೆಕ್ಟರ್—ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಂದ ಸಾಧ್ಯವಿಲ್ಲ. ಕಲೆಕ್ಟರ್—ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿರುವ ಬೇರೆ ಜಿಲ್ಲೆಗಳಲ್ಲಿಯೂ ಅಸಿಸ್ಟೆಂಟ್ ಕಮಿಶನರ ದರ್ಜೆಯ ಡಿಪ್ಯುಟಿ ಕಲೆಕ್ಟರರೆಂಬ ರೆವಿನ್ಯೂ ಅಧಿಕಾರಿಗಳಿದ್ದಾರೆ ಇಲ್ಲಿಯೂ ಅಸಿಸ್ಟೆಂಟ್ ಕಮಿಶನರನ್ನೂ ಇಟ್ಟುಕೊಳ್ಳಬೇಕಾಗುತ್ತದೆ ಅಗ್ಗ ಸಿಬ್ಬಂದಿ ಯೋಚನೆಯೂ ಯಿತೇ ?

ಅಲ್ಲದೆ ಈಗ ಸಬ್ ಜಡ್ಜಿಯರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಕೆಲಸ ನೋಡುತ್ತಾರೆ. ರಿಜಿಸ್ಟ್ರಾರರ ತೀರ್ಪಿನ ಮೇಲೆ ಕೆಲವು ಸಂದರ್ಭಗಳಲ್ಲಿ ಜನರಿಗೆ ಸಿವಿಲ್ ಕೋರ್ಟಿಗೆ ದಾವಾ ಮಾಡುವ ಹಕ್ಕಿರುವಾಗ ಡಿಸ್ಟ್ರಿಕ್ಟ್ ಜಡ್ಜಿಯರು ರಿಜಿಸ್ಟ್ರಾರಾಗಿ ಮಾಡಿದ ತೀರ್ಮಾನದ ಮೇಲೆ ಮುನಸೀಫ್ ಕೋರ್ಟಿಗೆ ದಾವಾ ಮಾಡಬೇಕಾಗುತ್ತದೆ; ಅಥವಾ ದೊಡ್ಡ ಹಣದ ಸಂಬಂಧವಾದರೆ ಡಿಸ್ಟ್ರಿಕ್ಟ್ ಜಡ್ಜಿಯರ ಕೋರ್ಟಿಗೇ ದಾವಾ ದಾಖಲ್ ಮಾಡಬೇಕಾಗುತ್ತದೆ. ಅವರು ಮೊದಲೇ ತೀರ್ಮಾನ ಕೊಟ್ಟವರಾದ್ದರಿಂದ ಅಂಥಾ ಕೇಸ್‌ಗಳನ್ನು ವಿಚಾರ ಮಾಡುವ ಕೋರ್ಟೇ ಇಲ್ಲವಾಗುತ್ತದೆ.

ಸಬ್ ಜಡ್ಜರ ಉದ್ಯೋಗ ಇರುವದಾದರೆ ಅವರು ಟ್ರೆಜರಿ ಚಾರ್ಜನ್ನಿಟ್ಟುಕೊಳ್ಳಬಹುದು ಡಿಸ್ಟ್ರಿಕ್ಟ್ ಜಡ್ಜರಾದರೆ ಪ್ರತ್ಯೇಕ ಟ್ರೆಜರಿ ಆಫೀಸರಾಗಬೇಕು. ಆದಕಾರಣ ಈ ಏರ್ಪಾಡಿನಂತೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಮತ್ತು ಸಬ್ ಜಡ್ಜರ ಹುದ್ದೆಗಳನ್ನು ತೆಗೆದರೆ ಡಿಸ್ಟ್ರಿಕ್ಟ್ ಜಡ್ಜ್, ಮುನಸೀಫ್, ಅಸಿಸ್ಟೆಂಟ್ ಕಮಿಶನರ್ ಮತ್ತು ಟ್ರೆಜರಿ ಆಫೀಸರುಗಳ ನಾಲ್ಕು ಹುದ್ದೆಗಳು ಹೊಸವು ಆಗಬೇಕಾಗುವುದರಿಂದ ಇದರಿಂದ ಖರ್ಚು ಹೆಚ್ಚಾಗುವುದಲ್ಲದೆ ಎಂದೂ ಕಡಿಮೆಯಾಗಲಾರದು. ಅಲ್ಲದೆ ಡಿಸ್ಟ್ರಿಕ್ಟ್ ಜಡ್ಜರ ಹುದ್ದೆಯನ್ನು ಪ್ರತ್ಯೇಕಿಸುವುದರಿಂದ ಅವರಿಗೆ ಸಾಕಷ್ಟು ಕೆಲಸವಿಲ್ಲದಾಗುವುದಲ್ಲದೆ ಜನರಿಗೆ ತುಂಬಾ ಕಷ್ಟವುಂಟಾಗುವುದರಿಂದ ಈ ಏರ್ಪಾಡನ್ನು ಮಾಡಲೇ ಬಾರದಾಗಿ ನಮ್ಮ ಅಭಿಪ್ರಾಯ

ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆಯಲ್ಲಿ ಶಿವಾಚಾರದವರ ಬಸವೇಶ್ವರ ದೇವಸ್ಥಾನದ ಬಳಿ ಇರುವ ಕಂಚಿಗಾರರ ಸುಬ್ಬಣ್ಣ ಶೆಟ್ಟಿಯವರ ಬಾಪ್ತು, 2ನೇ ಬ್ಲಾಕಿನಲ್ಲಿರುವ ಆರುಕೋಲು ಜಾರಿ, ಸಣ್ಣ ಮತ್ತು ದೊಡ್ಡ ಹಂಚು ಹಾಕಿರುವ ಸರ್ವೆ ನಂ. 10ರ ಮನೆ ಮತ್ತು ಅದರ ಹಿಂಭಾಗದಲ್ಲಿರುವ ಕೊಟ್ಟಿಗೆ, ಇದರ ಪಕ್ಕದಲ್ಲಿರುವ ಸಣ್ಣ ಹಂಚು ಹಾಕಿದ ಸರ್ವೆ ನಂ. 11ರ ಮನೆ ಮತ್ತು ಸಿವರಾಜ್ ಬಾಣೆ ಪಕ್ಕದಲ್ಲಿರುವ ಒಂದು ಎಕರೆ 38 ಸೆಂಟು ಕಾಫಿತೋಟ ಸಹ ಮಾರಾಟಕ್ಕಿದೆ. ಕೊಂಡು ಕೊಳ್ಳಲು ಇಚ್ಛಿಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವುದು

ಕಂಚಿಗಾರರ ಸುಬ್ಬಣ್ಣ ಶೆಟ್ಟಿ,
4—2. ಮಹದೇವಪೇಟೆ, ಮಡಿಕೇರಿ.

ಮುಂಡು.

ಮಹಾತ್ಮ ಗಾಂಧಿಯವರು ಮುಂಡನ್ನು ಮಾತ್ರ ಧರಿಸಿಕೊಂಡು ಅರ್ಧ ಬೆತ್ತಲೆ ಇರತಕ್ಕ ಫಕೀರರೆಂದು ಚರ್ಚಿಲ್‌ರವರು ತಿರಸ್ಕಾರದಿಂದ ಹೇಳಿದರು. ೩೫ ಕೋಟಿ ಜನರು ಕಷ್ಟಪಟ್ಟು ಸಂಪಾದಿಸಿದ್ದನ್ನು ಚತುರೋಪಾಯದಿಂದ ಸುಲಿದುಕೊಂಡು ದೇವೇಂದ್ರ ಪದವಿಯಲ್ಲಿರತಕ್ಕ ಬ್ರಿಟಿಷ್ ಡ್ಯೂಕ್‌, ಲಾರ್ಡ್‌ಗಳಿಗಿಂತ ಅರ್ಧ ಬಟ್ಟೆಗೆ ಅಪಮೂಲ್ಯತೆಯನ್ನು ವಹಿಸಿರತಕ್ಕ ಮಹಾತ್ಮ ಗಾಂಧಿಯವರು ನಿರ್ದೋಷಿಗಳಲ್ಲವೇ ಎಂಬುದಾಗಿ ವಿಚಾರಪರರಾದ ಕೆಲವರು ಕೇಳುತ್ತಾರೆ. ಅದು ಹೇಗಾದರೂ ಇರಲಿ. ಚರ್ಚಿಲ್ಲರವರು ಐಶ್ವರ್ಯಮದದಿಂದ ಪ್ರತಿಸ್ಪರ್ಧಿಯಾಗಿ ಮಹಾತ್ಮ ಗಾಂಧಿಯವರನ್ನು 'Half-naked Fakir' ಎಂಬುದಾಗಿ ಕರೆದಿರುವರು. ಲೋಕಹಿತಾರ್ಥವಾಗಿ Fully naked Fakir ಆದಾಗ್ಯೂ ಅವರಲ್ಲಿ ದೋಷವೇನೂ ಇರುವುದಿಲ್ಲ. ಅದು ಹೇಗಾದರೂ ಇರಲಿ. ಚರ್ಚಿಲ್ಲರು ಮಾತ್ರವೇ ಅಲ್ಲದೆ ಸ್ವಾರ್ಥಪರತೆಯ ಶಿಖರದಲ್ಲಿರುವ ಡ್ಯೂಹರ್ಡ್‌ಗಳೆಲ್ಲರೂ ಈ ಮಾತುಗಳನ್ನು ಹೇಳುತ್ತಲೂ, ಬರೆಯುತ್ತಲೂ ವಿಜೃಂಭಿಸುತ್ತಲಿದ್ದಾರೆ. ಇದನ್ನು ನೋಡಿ ತಾವು ಮಾನ ಮುಚ್ಚಿಕೊಳ್ಳುವುದಕ್ಕೆ ಎಷ್ಟು ಬಟ್ಟೆಯು ಬೇಕೋ ಅಷ್ಟರಲ್ಲೇ ತೃಪ್ತರಾಗುವುದಕ್ಕೆ ಕಾರಣವೇನೋ ಅದನ್ನು ಮಹಾತ್ಮರು ತಿಳಿಸಿರುವರು. ಅವರು ಹೇಳಿರುವುದೇನೆಂದರೆ:—

'ಭಾರತೀಯರಲ್ಲಿ ಕೋಟ್ಯಾಂತರ ಜನರು ಲಂಗೋಟಿಯನ್ನು ಹಾಕಿಕೊಂಡು ಬರಿ ಮೈಯಲ್ಲಿ ಹಗಲು ರಾತ್ರಿ ದುಡಿಯುವುದನ್ನು ನೋಡಿ ನನಗೆ ತುಂಬಾ ವ್ಯಸನವಾಯಿತು. ಇವರಿಗೆ ಹೊಟ್ಟೆ ತುಂಬ ಅನ್ನ, ಮೈ ತುಂಬಾ ಬಟ್ಟೆ ಸಿಕ್ಕುವಂತೆ ಮಾಡುವುದು ಕರ್ತವ್ಯವಲ್ಲವೇ ? ಎಂದು ನಾನು ಯೋಚಿಸಿದೆ. ಹೀಗೆ ಮಗ್ಗದ ಬಟ್ಟೆಗಳಾದರೂ ಇವರಿಗೆ ದೊರೆಯುವಂತೆ ಮಾಡಬೇಕೆಂದು ತೋರಿತು. ಪರದೇಶದ ಬಟ್ಟೆಗಳಿಗೆ ೩೫ ಕೋಟಿ ಜನ ಭಾರತೀಯರು ಗಿರಾಕಿಗಳಾದ್ದರಿಂದ ಭಾರತೀಯರು ಅಧೋಗತಿಗೆ ಬರಬೇಕಾಯಿತೆಂದು ನನ್ನ ಹೊಟ್ಟೆಗೆ ಬೇಕಾದ ಧಾನ್ಯಗಳನ್ನು ನಾವೇ ಬೆಳೆದುಕೊಂಡು, ನಮ್ಮ ಬಟ್ಟೆಗಳಿಗೆ ಬೇಕಾದ ಹತ್ತಿ ಮೊದಲಾದ ಪದಾರ್ಥಗಳನ್ನು ನಾವೇ ಬೆಳೆದುಕೊಂಡು, ನಮ್ಮ ಮಗ್ಗಗಳಿಂದಲೂ ನಮ್ಮಿಂದ ತಯಾರಾದ ನೂಲುವ ಮತ್ತು ನೇಯುವ ಯಂತ್ರಗಳಿಂದಲೂ ನಾವು ಕೆಲಸ ಮಾಡುತ್ತಾ ಬಂದರೆ ಹೊಟ್ಟೆಗೆ ಹಿಟ್ಟೂ, ಮಾನವನ್ನು ಮುಚ್ಚಿಕೊಳ್ಳುವುದಕ್ಕೆ ಲಂಗೋಟಿಯೂ ಅಭಾವವಾಗುವ ಸ್ಥಿತಿಗೆ ಮನುಷ್ಯರೆಂಥಾತರೇ ಮೊದಲಾದ ರಾಜಋಷಿಗಳ ಪ್ರಜೆಗಳಾದ ನಾವು ಬರುತ್ತಾ ಇದ್ದೇವೆ ಎಂಬುದಾಗಿ ಒಂದು ಸಂದೇಹವುಂಟಾಯಿತು. ಕೆಲವು ಜನ ಕೌಪೀನ ವಸ್ತ್ರವನ್ನು 'ವಿರಾಮ ಕಾಲಗಳಲ್ಲಿ ನೂಲುವುದರಲ್ಲಿಯೂ ನೇಯುವುದರಲ್ಲಿಯೂ ನೀವು ಮೆಹನತ್ತು ಮಾಡಿದರೆ ನಿಮ್ಮ ದಾರಿದ್ರ್ಯವು ಸ್ವಲ್ಪ ಕಡಿಮೆಯಾಗಬಹುದು ಎಂದು ನಾನು ಸೂಚಿಸಿದೆನು ನಾವೆಷ್ಟು ಕಷ್ಟಪಟ್ಟರೂ ಪರದೇಶದಿಂದ ಬರತಕ್ಕ ಬಟ್ಟೆಗಳು ಎಷ್ಟು ಬೆಲೆಗೆ ಸಿಕ್ಕುವುವೋ ಅಷ್ಟು ಬೆಲೆಯಲ್ಲಿ ನಮಗೆ ಸಿಕ್ಕುವುದಿಲ್ಲ ! ಎಂದು ಅವರು ಹೇಳಿದರು. ಎಲ್ಲಾ ಭಾರತೀಯರೂ ವಿರಾಮ ಕಾಲಗಳಲ್ಲಿ ನೂಲುವುದನ್ನೂ, ನೇಯುವುದನ್ನೂ ಅಭ್ಯಾಸ ಮಾಡಿದರೆ ಕೊಂಚ ಕಾಲದಲ್ಲಿಯೇ ಸ್ವದೇಶೀ ಬಟ್ಟೆಗಳಿಗೆ ನ್ಯಾಯವಾದ ಗಿರಾಕಿ ಸಿಕ್ಕುವಂತೆ ಮಾಡಿಕೊಳ್ಳಬಹುದೆಂದು ನನಗೆ ತೋರಿತು. ನನ್ನ ಭಾರತೀಯ ಸಹೋದರ ಸಹೋದರಿಯರಿಗೆಲ್ಲಾ ಹೊಟ್ಟೆ ತುಂಬ ಹಿಟ್ಟು, ಮೈ ತುಂಬ ಬಟ್ಟೆಯು ಸಿಕ್ಕುವ ವರೆಗೆ ಅವರಿಗಿಂತ ಹೆಚ್ಚಾದ ಸುಖವನ್ನು ನಾನೇಕೆ ಅಪೇಕ್ಷಿಸಬೇಕೆಂಬ ಭಾವನೆಯು ನನಗುಂಟಾಯಿತು. ಈ ಭಾವನೆಗೆ ಅನುಸಾರವಾಗಿ ಪ್ರಾಣಧಾರಣೆಗೆ ಎಷ್ಟು ಆವಶ್ಯಕವೋ ಅಷ್ಟಕ್ಕಿಂತ ಹೆಚ್ಚಾಗಿ ಅಪೇಕ್ಷಿಸುವುದು ಮಹಾಪಾಪವೆಂಬ ಮನೋಭಾವವು ನನಗೆ ಹುಟ್ಟಿತು. ನಾನು ಅರೆಮೊಳಗೆಯ ಫಕೀರನಾಗುವುದಕ್ಕೆ ಇದೇ ಕಾರಣ' ವೆಂಬುದಾಗಿ ಅಭಿಪ್ರಾಯ ಬರುವಂತೆ ಮಹಾತ್ಮ ಗಾಂಧಿಯವರು ಅಪ್ಪಣೆ ಕೊಡಿಸಿದ್ದಾರೆ. .. ಹಾತ್ಮರೆಂಬ ಹೆಸರು ಬರುವುದಕ್ಕೆ ಚಕ್ರವರ್ತಿಗಳು ಕಾರಣಭೂತರಲ್ಲ. ಪ್ರಭುಗಳೂ ಕಾರಣ ಭೂತರಲ್ಲ. ಸರಕಾರದವರೂ ಕಾರಣಭೂತರಲ್ಲ. ಸಕಲರೂ ಸುಖವಾಗಿರುವಂತೆ ಮಾಡಬೇಕೆಂಬುದಾಗಿ ಇವರ ಮನೋಭಾವದಿಂದ ನಿಸ್ಪೃಹವಾದ ಮಹಾಜನಗಳಿಗೆ ಹುಟ್ಟಿರತಕ್ಕ ಪ್ರೀತಿಯೇ ಇದಕ್ಕೆ ಮುಖ್ಯ ಕಾರಣ. ಈ ಪ್ರೀತಿಯು ಜಗದೀಶ್ವರನ ಗುಣಗಳಲ್ಲಿ ಮುಖ್ಯವಾದದ್ದು. ಇವರಲ್ಲಿ ಇದು ಮೂರ್ತಿಭವಿಸಿರುವುದರಿಂದ ಇವರು ಮಹಾತ್ಮರೆಂದು ಇವರ ಗುಣಾತಿಶಯಗಳನ್ನು ತಿಳಿದವರೆಲ್ಲರೂ ಹೇಳುತ್ತಾರೆ. ಜೈಲೇ ಅರಮನೆಯೆಂಬುದಾಗಿಯೂ, ಸ್ವರ್ಗವೆಂಬುದಾಗಿಯೂ ಭಾವನೆಯುಂಟಾಗಬೇಕಾದರೆ ಅವರು ಮಹಾತ್ಮರಾಗಿಯೇ ಇರಬೇಕು ಮಹಾತ್ಮರಾಗದ ಶೂರರಿಗೆ ಕಾರ್ಯತಃ ಇಂತಹ ಮನೋಭಾವವು ಎಂದಿಗೂ ಬರುವುದಿಲ್ಲ.

ಎಂ. ವೆಂಕಟ ಕೃಷ್ಣಯ್ಯ,
ಮೈಸೂರು.

WANTED.

An accountant for the Co-operative Store to be opened at Mercara shortly. The candidate should have passed the S. S L C examination. Preferance will be given to one who possesses a knowledge of book-keeping. Applications should reach the president by the 20th June, 1931.

M M Belliappa,
Hon Secretary,
2—6—31. Co-operative Store,
2—1 Mercara.

ಕಾಂಗ್ರೆಸ್ ಪ್ರಚಾರ ಕೆಲಸ.

ಕೊಡಗಿನ ಸತ್ಯಾಗ್ರಹ ಮಂಡಳಿಯ ಕೋರಿಕೆಯ ಮೇರೆ ತಾ. 23—5—31ರಲ್ಲಿ ಕಾಕೋಟು ಪರಂಬಿನಲ್ಲಿ ಒಂದು ಸಾರ್ವಜನಿಕ ಮೀಟಿಂಗು ನಡೆಯಿತು. ಮೆ. ಪೊಯ್ಯಟ್ಟಿರ ಪೂವಯ್ಯನವರು ಅಧ್ಯಕ್ಷರಾಗಿದ್ದರು. 105 ಮಹನೀಯರೂ, 25 ಮಹಿಳೆಯರೂ ಹಾಜರಿದ್ದರು. ಶ್ರೀಯುತರುಗಳಾದ ಪಿ. ಐ. ಬೆಳ್ಯಪ್ಪನವರು, ಅಬ್ದುಲ್ ಗಫೂರ್‌ಖಾನ್ ಮೈತ್ರಿಯವರು, ಕೆ. ಪಿ. ಚಿಣ್ಣಪ್ಪನವರು ಮತ್ತು ಐ. ಪಿ. ಕಾರ್ಯಪ್ಪನವರು ಸತ್ಯಾಗ್ರಹ ಚಳವಳದ ಫಲಿತಾಂಶ, ಗಾಂಧಿ—ಇರ್ವಿನರ ಒಪ್ಪಂದ, ಕರಾಚಿ ಕಾಂಗ್ರೆಸ್ಸಿನ ಮಹತ್ವ, ಈಗಿನ ರಾಜಕೀಯ ಪರಿಸ್ಥಿತಿ, ಪಾನ ನಿಷೇಧ, ಖಾದಿ ಪ್ರಚಾರ ಮೊದಲಾದ ವಿಷಯಗಳನ್ನು ಕುರಿತು ಭಾಷಣ ಮಾಡಿದರು. ಶ್ರೀ. ಪಿ. ಐ. ಬೆಳ್ಯಪ್ಪನವರು ಮತ್ತು ಶ್ರೀ. ಅಬ್ದುಲ್ ಗಫೂರ್‌ಖಾನ್‌ರವರು 'ಸತ್ಯಾಗ್ರಹ ಚಳವಳದಲ್ಲಿ ಕಾರಾಗೃಹವಾಸ ಅನುಭವಿಸಿದಕ್ಕಾಗಿ ಅವರು ಭಾಷಣ ಮಾಡುತ್ತಿದ್ದಾಗ ಸಭೆಯವರ ಪರವಾಗಿ ಶ್ರೀ. ಬಾಚೆಟ್ಟಿರ ಚಿಣ್ಣಪ್ಪನವರು ಅವರಿಗೆ ಹೂವಿನ ಹಾರಗಳನ್ನು ಹಾಕಿದರು. ಶ್ರೀಯುತರುಗಳಾದ ... ಟಿರ ಚರ್ಮಣ್ಣನವರು, ಕುಂಬೆರ ನಂಜಪ್ಪನವರು ಮತ್ತು ... ಮಾದಪ್ಪನವರು ಖಾದಿ ಪ್ರಚಾರ ಮತ್ತು ಪಾನ ನಿಷೇಧ ... ತ್ಯಾಸೆಯಾಗಿ ಮಾತಾಡಿದರು. ನಂತರ ಇವೆರಡು ಕೆಲಸ ... ಗ್ರಾಮಗಳಲ್ಲಿ ನಡಿಸಲು ಹನ್ನೊಂದು ಮೆಂಬರುಗಳ ಕಮಿಟಿಯು ನೇಮಿಸಲಾಯಿತು. ಅಧ್ಯಕ್ಷರಿಗೆ ಅಧ್ಯಕ್ಷರು ... ಶೀ ಬಟ್ಟೆ ಬಹಿಷ್ಕಾರ, ಕುಡುಕತನವನ್ನು ಬಿಡುವುದು, ... ಇಳಿಸದೆ ಇರುವುದು ಮತ್ತು ಚರಕಾದಲ್ಲಿ ನೂಲು ... ದರ ವಿಷಯವಾಗಿ ಸ್ವಾರಸ್ಯವಾದ ಭಾಷಣ ಮಾಡಿ ... ಗನ್ನು ಬರಖಾಸ್ತು ಮಾಡಿದರು.

ಮರುದಿನ ಮಧ್ಯಾಹ್ನದ ಮೇಲೆ ವಿರಾಜಪೇಟೆಯಲ್ಲಿ ... ದು ಪಬ್ಲಿಕ್ ಮೀಟಿಂಗು ನಡಿಸಲಾಯಿತು. 90 ಜನ ... ಪರೂ, 15 ಸ್ತ್ರೀಯರೂ ನೆರೆದಿದ್ದರು. ಶ್ರೀ. ಬೆಳ್ಯ... ಅಜ್ಜಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ... ನ ದಿನದ ಮೀಟಿಂಗಿನಂತೆಯೇ ಶ್ರೀ. ಪುಟ್ಟಿಚಂಡ ಪೆ... ವರ್ಯರಾಷ್ಟ್ರೀಯ ಗೀತೆಗಳನ್ನೂ, ಕುಡುಕತನದ ಹಾ... ಮತ್ತು ಖಾದಿಯ ಸೊಗಸಿನ ಪದಗಳನ್ನೂ ಇಂಪಾಗಿ ... ದರು ಮೆ. ಕಾದಿರ ಐಯ್ಯಣ್ಣನವರು ಜೈಲುವಾಸ... ದ್ದ ಶ್ರೀ. ಪಿ. ಐ. ಬೆಳ್ಯಪ್ಪನವರಿಗೆ ಹೂವಿನ ಹಾರವನ್ನು ... ಕಿದರು. ಶ್ರೀಯುತರುಗಳಾದ ಪಾಡ್ಯಂಡ ಬೆಳ್ಯಪ್ಪನ... ಕೋಟಿರ ಚಿಣ್ಣಪ್ಪನವರು, ಐನಂಡ ಕಾರ್ಯಪ್ಪನವರು, ... ಬಿದ್ದಂಡ ಸುಬ್ಬಯ್ಯನವರು ಹಿಂದೂದೇಶದ ಹಾಗೂ ಕೊಡಗಿ... ನ ರಾಜಕೀಯ ಪರಿಸ್ಥಿತಿ, ಕಾಂಗ್ರೆಸ್ಸಿನ ಚಳವಳ, ಸ್ವರಾಜ್ಯದ ಪ್ರಯೋಜನ, ಕುಡಿಕತನವನ್ನು ಬಿಟ್ಟು, ಖಾದಿ ಅಥವಾ ಸ್ವದೇಶೀ ಬಟ್ಟೆಯನ್ನೇ ಧರಿಸುವಿಕೆ ಮುಂತಾದ ಸಂಗತಿಗಳ ... ಭಾಷಣ ಮಾಡಿದರು. ನಂತರ ಹತ್ತು ಮೆಂಬರುಗಳ ... ಕಮಿಟಿಯನ್ನು ನೇಮಿಸಿ, ಅವರಿಗೆ ಸೇಂದಿ ಇಳಿಸುವುದ... ಲ್ಲಿಸುವಂತೆ ಜನರಿಗೆ ಬೋಧನೆ ಕೊಡುವ ಮತ್ತು ಖಾದಿ ಪ್ರಚಾರ ಮಾಡುವ ಕೆಲಸವು ಒಪ್ಪಿಸಲಾಯಿತು. ಕಡೆಗೆ ಅಧ್ಯಕ್ಷರು—ಭಾಷಣ ಕಾರರು ಹೇಳಿದ ಸೂಚನೆಗಳಂತೆ ಗ್ರಾಮಸ್ಥರು ನಡೆದುಕೊಂಡರೇನೇ ಗ್ರಾಮಾಭಿವೃದ್ಧಿಯಾಗುವುದು, ಕಾಂಗ್ರೆಸು ಮಾಡುತ್ತಿರುವ ಸ್ವರಾಜ್ಯದ ಹೋರಾಟದಲ್ಲಿ ಭಾಗಿಗಳಾಗಬೇಕಾದದ್ದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯವೆಂತ ಮೊದಲಾಗಿ ಭಾಷಣ ಮಾಡಿದರು ಅಧ್ಯಕ್ಷರಿಗೂ ಸಭಿಕರಿಗೂ ವಂದನೆಗಳಿಂದ ಮೀಟಿಂಗು ಮುಕ್ತಾಯವಾಯಿತು.

ಇದೇ ಮೇರೆ ತಾ. 25ರಲ್ಲಿ ಕುಂಜಿಲಗೇರಿಯ ... ದಲ್ಲಿ ಮೆ ಕುಂಬೆರ ನಂಜಪ್ಪನವರ ಅಧ್ಯಕ್ಷತೆಯಲ್ಲಿ ... ಮೀಟಿಂಗು ನಡೆಯಿತು. ಹಾಜರಿದ್ದ 100 ಜನರ ಪೈಕಿ ... ಸ್ತ್ರೀಯರಾಗಿದ್ದರು. ಮೀಟಿಂಗಿನ ಪ್ರಾರಂಭದಲ್ಲಿ ಶ್ರೀ ... ಟ್ಟಿರ ಬೆಳ್ಯಪ್ಪನವರು ಜಯಘೋಷ ಮಾಡುತ್ತಾ ಶ್ರೀ. ಪಿ. ... ಬೆಳ್ಯಪ್ಪನವರನ್ನು ಹೂವಿನ ಹಾರದಿಂದ ಬಹುಮಾನಿಸಿದರು. ಪುಟ್ಟಿಚಂಡ ಪೊಣ್ಣಪ್ಪನವರು ರಾಷ್ಟ್ರೀಯ ಗೀತೆಗಳನ್ನು ... ಹಾಡಿ ಸಭಿಕರ ಮನಸ್ಸನ್ನು ಆನಂದಗೊಳಿಸಿದರು. ಹಿಂದಿನ ... ಗಳ ಮೀಟಿಂಗಿನಂತೆ ಶ್ರೀಯುತರುಗಳಾದ ಪಿ. ಐ. ಬೆಳ್ಯಪ್ಪನ... ವರು, ಐ. ಪಿ. ಕಾರ್ಯಪ್ಪನವರು, ಕೆ. ಪಿ. ಚಿಣ್ಣಪ್ಪನ... ಬಿದ್ದಂಡ ಸುಬ್ಬಯ್ಯನವರು ಭಾಷಣ ಮಾಡಿದರು. ಶ್ರೀಯು... ತರುಗಳಾದ ಚೊಟ್ಟೆರ ಬೆಳ್ಯಪ್ಪನವರು, ಮುಕ್ಕಾಟಿರ ... ಯ್ಯನವರು ಮತ್ತು ಮುಕ್ಕಾಟಿರ ಅಪ್ಪಯ್ಯನವರು ಖಾದಿ ... ಪಯೋಗ ಮತ್ತು ಕುಡುಕತನವನ್ನು ಬಿಡಲು ಆ ಗ್ರಾಮದವರು ಮಾಡಿದ ಪ್ರಯತ್ನಗಳನ್ನು ವಿವರಿಸಿ, ಅದಕ್ಕೆ ಒತ್ತಾಸೆಯಾಗಿ ಮಾತಾಡಿದರು. ಮುಂದಿನ ಸದರಿ ಗ್ರಾಮದಲ್ಲಿ ನಡೆವ ಒಂದು ದೇವರ ಹಬ್ಬದಲ್ಲಿ ದೇವರ ಮೀದಿಗೂ ... ಸೇಂದಿ ಸಾರಾಯಿ ಕೂಡಕೂಡದೆಂದು ತೀರ್ಮಾನಿಸಲಾಯಿತು. ಗ್ರಾಮದಲ್ಲಿ ಮೊದಲೇ ನೇಮಿಸಲ್ಪಟ್ಟು ಕೆಲಸ ಮಾಡುತ್ತಿದ್ದ ಕಮಿಟಿಯವರು ಸೇಂದಿ ಇಳಿಸುವುದನ್ನು ನಿಷೇಧಿಸುವ ವಿಷಯ ಮಹಾತ್ಮ ಗಾಂಧಿಯವರ ಮೇಲೆ ವಿಶ್ವಾಸವಿಟ್ಟು ಮುಂದಕ್ಕೂ ತುಂಬಾ ಮೋಹನಶಕ್ತಿಯಿಂದ ಕೆಲಸ ಮಾಡಬೇಕೆಂದು ಶ್ರೀ. ಪಿ. ಐ. ಬೆಳ್ಯಪ್ಪನವರು ಅಪ್ಪೀಲು ಮಾಡಿದ ಮೇಲೆ ಸಭೆಯು ಬರಖಾಸ್ತಾಯಿತು.

ರಬ್ಬರ್ ಮೊಹರುಗಳು.

ನೀವು ಅಪೇಕ್ಷಿಸುವ ಯಾವತ್ತೂ ಮಾದರಿಯಲ್ಲಿ ತಯಾರಿಸಿ ಕೊಡಲಾಗುವವು.

ಮೇಲ್ಕಂಡ ಸಾಮಾನುಗಳಲ್ಲದೆ ಕನ್ನಡಿಯ ಸೈನ್ ಬೋರ್ಡುಗಳು, ಹಾಫ್ ಟೋನ್ ಬ್ಲಾಕ್, ಮೋನೋಗ್ರಾಮ್ ಮೊಹರು, ಚಂದ್ರಕಾಂತ ಶಿಲೆಯ ತಳಿಗೆಗಳು, ಉಂಗುರಕ್ಕೆ ಹಾಕಿಡುವ ಬಹು ಅಂದವಾದ ಸಣ್ಣ ಕಲ್ಲುಗಳು ಇತ್ಯಾದಿ

ದಿ ಕ್ರಿಶ್ಚಿಯನ್ ರಬ್ಬರ್ ಸ್ಟಾಂಪ್ ಕಂಪೆನಿ,
12—10 ಮಂಗಳೂರು, ದ. ಕನ್ನಡ.
ಯಾ
ಏಜಂಟ್ ಯನ್. ಯ. ನ್. ಪೊನ್ನಪ್ಪ,
ಮಡಿಕೇರಿ.

ವರ್ತಮಾನ ಸಂಗ್ರಹ.

ಒಳ ದೇಶ.

ಚೀಫ್ ಕಮಿಷನರವರು ಈ ತಾ ೯ರಲ್ಲಿ ಪೊಳ್ಳಿಬೆಟ್ಟದಿಂದ ಬೆಂಗಳೂರಿಗೆ ಹೊರಟು ಹೋದರೆಂದು ತಿಳಿಯ ಬರುತ್ತದೆ

ವೀರಾಜಪೇಟೆಯಲ್ಲಿ ಕಳೆದ ಸೋಮವಾರ ಪ್ಲೇಗು ತಗಲಿದ ಮೂವರಲ್ಲಿ ಇತ್ತಲಾಗಿ ಇಬ್ಬರು ಮೃತರಾದರೆಂದು ವರ್ತಮಾನ

ಕಳೆದ ಬಿ ಎಲ್ ಪರೀಕ್ಷೆಯಲ್ಲಿ ಮೆ ಮಲ್ಲೇಂಗಡ ಪಿ ಮುತ್ತಣ್ಣನವರು ತೇರ್ಗಡೆ ಹೊಂದಿರುವರು, ಇವರನ್ನು ಅಭಿನಂದಿಸುತ್ತೇವೆ

ಸುಂಟಿಕೊಪ್ಪಲಲ್ಲಿ ಪ್ಲೇಗಿನಿಂದ ಕೆಲವು ಮರಣಗಳಾದವೆಂದೂ, ಫ್ರೇಜರ್‌ಪೇಟೆಯಲ್ಲಿ ಇಲಿಗಳು ಸಾಯುತ್ತವೆಯೆಂದೂ ತಿಳಿಯುತ್ತೇವೆ

ಮಡಿಕೇರಿಯಲ್ಲಿ ವಾಂತಿಭೇದಿ ಕಾಯಿಲೆಯೂ ಪ್ರಾರಂಭವಾಗಿದೆ. ಈ ವಾರ ಮೂರು ಮುಹಮ್ಮದೀಯ ಜನರಿಗೆ ಅಂಟಿ ಒಬ್ಬಳು ಮೃತಳಾಗಿರುವಳು

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ 27—6—1931ನೇ ಶನಿವಾರ ದಿನ ಬೆಳಿಗ್ಗೆ 11 ಗಂಟೆಗೆ ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡಿಯುತ್ತೆ.

ಕಳೆದ ಶುಕ್ರವಾರದಿಂದೀಚೆಗೆ ಮಡಿಕೇರಿಯ ಹೆಡ್ಪೋಲಿಸನವನೊಬ್ಬನೂ ಸುಂಟಿಕೊಪ್ಪಲಿಂದ ಕಾಯಿಲೆಯಾಗಿ ಬಂದಿದ್ದವನೊಬ್ಬನೂ ಪ್ಲೇಗಿನಿಂದ ಮೃತರಾದರು

ಮಡಿಕೇರಿ ಸೆಂಟ್ರಲ್ ಹೈಸ್ಕೂಲೂ ಕಾನ್ವೆಂಟ್ ಹೈಸ್ಕೂಲೂ ಮತ್ತು ವೀರಾಜಪೇಟೆ ಹೈಸ್ಕೂಲೂ ಈ ತಾ 15 ನೇ ಸೋಮವಾರ ತೆರೆಯಲ್ಪಡುವವೆಂದು ತಿಳಿಯಬರುತ್ತದೆ

ಕಿಗ್ಗಟ್ಟುನಾಡು ತಾಲೋಕಿನ ಕೆಲವು ಗ್ರಾಮಗಳಲ್ಲಿ ಮುಖ್ಯವಾಗಿ ಶ್ರೀಮಂಗಲನಾಡು ಹಾತೂರು ಮತ್ತು ಕೈಕೇರಿಯಲ್ಲಿ ವಾಂತಿಭೇದಿ ಕಾಯಿಲೆಯಿಂದ ಜನರು ಇನ್ನೂ ಸಾಯುತ್ತಿದ್ದಾರೆಂದು ವರ್ತಮಾನ.

ಕೊಡಗು ವೀರಶೈವ ವಿದ್ಯಾನಿಧಿ ಸಂಘದ ವಾರ್ಷಿಕ ಜನರಲ್ ಮೀಟಿಂಗು ಈ ತಾ 15ನೇ ಸೋಮವಾರ ಶನಿವಾರಸಂತೆಯಲ್ಲಿ ಬೆಳ್ಳೂರು ಕಾಫಿ ಪ್ಲಾಂಟರ್ ಮೆ ಸಂಬೇಗೌಡರ ಅಧ್ಯಕ್ಷತೆಯಲ್ಲಿ ನಡೆಯುವದಾಗಿ ತಿಳಿಯುತ್ತೇವೆ

ಈ ವಾರವೆಲ್ಲಾ ಮೋಡ ಕವಿದುಕೊಂಡು ಮಳೆಯು ಸ್ವಲ್ಪ ಸ್ವಲ್ಪ ಹನಿಕುತ್ತಾ ಇತ್ತಲ್ಲದೆ ಜೋರಾದ ಮಳೆಯು ಬಿದ್ದಿರುವುದಿಲ್ಲ ದೇಶದಲ್ಲಿ ಭತ್ತದ ಆರಂಭ ಕೆಲಸವು ಪ್ರಾರಂಭವಾಗಿದೆ ಆದರೆ ನೀರಿನ ಅಭಾವದಿಂದ ತುಳುವರಿಗೆ ಏಳ ಹಾಕಲು ತೊಂದರೆಯಾಗಿದೆ

ಕೊಕ್ಕಂಡ ಕುಟುಂಬದ ದವಸ ಭಂಡಾರವು ನ್ಯಾಯವಾಗಿ ಕೆಲಸ ಮಾಡುವುದಿಲ್ಲವಾದ್ದರಿಂದ ಅದರ ರಿಜಿಸ್ಟ್ರೇಶನನ್ನು ವಜಾ ಮಾಡಿ, ಪೊನ್ನಂಪೇಟೆ ನಾಡಿನ ಕೋಆಪರೇಟಿವ್ ಇನ್ಸ್‌ಪೆಕ್ಟರು ಮೆ ಬಿ ಯಂ ಚಂಗಪ್ಪನವರನ್ನು ಅದರ ಲಿಕ್ವಿಡೇಟರಾಗಿ ನೇಮಿಸಲಾಗಿದೆಯೆಂತ ತಿಳಿಯ ಬರುತ್ತದೆ

ಈ ವರ್ಷದ ಎಸ್ ಎಂ ಪಿ (ಸಬ್ ಅಸಿಸ್ಟಂಟ್ ಸರ್ಜನರ) ಪರೀಕ್ಷೆಯಲ್ಲಿ ಮೆ ಗಳಾದ ಹೆಚ್ ಬಿ ರುದ್ರಪ್ಪನವರು ಮತ್ತು ನೆಲ್ಲಮಕ್ಕಳ ಯಂ ದೇವಯ್ಯನವರು ತೇರ್ಗಡೆಯಾಗಿರುವರೆಂದೂ, ಮೆ ರುದ್ರಪ್ಪನವರು ಪ್ರೆಸಿಡೆನ್ಸಿಯಲ್ಲಿ ಒಂದನೇಯವರಾಗಿ ಪಾಸಾಗಿರುವರೆಂದೂ ತಿಳಿಯುತ್ತೇವೆ. ಇವರಿಬ್ಬರಿಗೆ ನಮ್ಮ ಅಭಿನಂದನೆಗಳಿವೆ

ಮೈಸೂರು ಯುನಿವರ್ಸಿಟಿಯ ಬಿ ಎ ಪರೀಕ್ಷೆಯಲ್ಲಿ ಮೆ ಬಿ ಟಿ ಗೋವಿಂದಯ್ಯನವರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪಾಸಾಗಿರುವರೆಂದೂ ಕನ್ನಡದಲ್ಲಿ 1ನೇ ತರಗತಿಯಲ್ಲಿ ತೇರ್ಗಡೆಯಾಗಿರುವರೆಂದೂ, ಮೈಸೂರು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಶ್ರೀಮತಿ ಪಾಲೇಕಂಡ ಡಬ್ಲ್ಯು ಕಾಳಮ್ಮನವರು ಪಾಸಾಗಿರುವರೆಂದೂ ಕೇಳಿ ಸಂತೋಷಪಡುತ್ತೇವೆ.

ಮೊನ್ನೆ ತಾನೇ ಮದ್ರಾಸು ಇಂಜಿನೀಯರಿಂಗ್ ಕಾಲೇಜಿನಲ್ಲಿ ತಮ್ಮ ಕೋರ್ಸನ್ನು ಮುಗಿಸಿಕೊಂಡು ಬಂದ ಮೆ ಗುಮ್ಮಟ್ಟೀರ ಯಸ್ ಗಣಪತಿಯವರು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡಿನ ಅಸಿಸ್ಟೆಂಟ್ ಇಂಜನೀಯರಾಗಿ ನೇಮಿಸಲ್ಪಟ್ಟಿರುವರೆಂತಲೂ, ಅವರು ಈ ದಿನ ಮಂಗಳೂರಿಗೆ ಹೋಗಿ ಚಾರ್ಜು ತೆಗೆದುಕೊಳ್ಳುವರೆಂತಲೂ ತಿಳಿದು ಸಂತೋಷಪಡುತ್ತೇವೆ.

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕಾಯಿಲೆಯಾಗಿರುವ ಮೆ ಮೇರಿಯಂಡ ಮಾದಪ್ಪನವರ ಪತ್ನಿಯವರು ಶರೀರದಲ್ಲಿ ರಕ್ತವಿಲ್ಲದೆ ನಿಶಕ್ತರಾಗಿದ್ದಾಗ, ತಾ 5ರಲ್ಲಿ ಸದರಿ ಆಸ್ಪತ್ರೆ ಚಾರ್ಜಿನಲ್ಲಿರುವ ಮೆಡಿಕಲ್ ಆಫೀಸರಾದ ಡಾಕ್ಟರ್ ಜಿ ಯಫ್ ರಾಬಿನ್‌ಸನ್‌ರವರು ತಮ್ಮ ಶರೀರದಿಂದ 5 ರಿಂದ 6 ಔನ್ಸುಗಳಷ್ಟು ರಕ್ತವನ್ನು ಕೊಟ್ಟು, ಅವಳ ಶರೀರಕ್ಕೆ ಸೇರಿಸಿದ್ದರಿಂದ ಅವರು (ಮಿಸೆಸ್ ಮಾದಪ್ಪನವರು) ಈಗ ಗುಣವಾಗುತ್ತಿರುವರೆಂದು ತಿಳಿಯಬರುತ್ತದೆ ಈ ಮಹೋಪಕಾರವು ಸ್ತುತ್ಯಾರ್ಹವಾಗಿದೆ

ತಿದ್ದುಪಡಿ

ಕಳೆದ ವಾರ ಪ್ರಕಟಿಸಿದಂತೆ ವೀರಾಜಪೇಟೆ ಬಳಿ ಆರ್ಜಿ ಗ್ರಾಮದ ಬೊಪ್ಪಂಡ ಮನೆಯಲ್ಲಿ ಪ್ಲೇಗಿನಿಂದ ಮರಣ ಉಂಟಾಗಿಲ್ಲವೆಂತಲೂ ಕಾಯಿಲೆಯಸ್ಥಳು ಜ್ವರ ತಪ್ಪಿ ಬಿದ್ದಿದ್ದಾಗ ಮೃತಳಾದಳೆಂದು ಹುಟ್ಟಿದ ವರ್ತಮಾನವು ಪೇಟೆಯಲ್ಲಿ ಹಬ್ಬಿದ್ದಿತೆಂತಲೂ ಇತ್ತಲಾಗಿ ತಿಳಿಯಬರುತ್ತದೆ.

ಹೊರ ದೇಶ.

ಕೆಲವು ಸಮಯದ ಹಿಂದೆ ಪಂಜಾಬು ಗವರ್ನರಿಗೆ ಗುಂಡು ಹೊಡೆದ ಶ್ರೀ ಹರಿಕಿಶನ್‌ರವರನ್ನು ತಾ ೯ರಲ್ಲಿ ಲಾಹೋರಿನಲ್ಲಿ ಗಲ್ಲಿಗೆ ಏರಿಸಿದರು ಮರುದಿನ ಸದರಿ ಪಟ್ಟಣದ ಹೆಚ್ಚಿನ ಜನರು ಕಾಗುವಿಕೆಯನ್ನು ನಿಷೇಧಿಸುವ ಉದ್ದೇಶ ಹರತಾಳವನ್ನು ಆಚರಿಸಿದರು

ಗಾಂಧಿಯವರು ನಿತ್ಯದ ರೂಢಿಯಂತೆ, ಬಾರ್ಡೋಲಿಯಲ್ಲಿ ಬೆಳಿಗ್ಗೆ ಕಾಲ್ನಡೆಯಾಗಿ ಸಂಚರಿಸುತ್ತಿದ್ದಾಗ ಒಂದು ಬೂದಿ ರಾಶಿಯ ಮೇಲೆ ಕಾಲಿಡಲು ಒಳಗಿದ್ದ ಕೆಂಡಗಳು ಕಾಲಿಗೆ ತಾಗಿ ಕಾಲು ಸುಟ್ಟಂತಾಯಿತು ಪುನಃ ಆಶ್ರಮಕ್ಕೆ ಕಾಲ್ನಡೆಯಾಗಿಯೇ ಹೋಗಿರುತ್ತಾರೆ

ಮುಸಲ್ಮಾನರ ಎರಡು ಮುಖ್ಯ ಪಂಗಡಗಳ ಮುಖಂಡರ ಮೀಟಿಂಗು ಭೋಪಾಲದಲ್ಲಿ ನಡೆದು ಚುನಾವಣೆಯ ರೀತಿಯ ವಿಷಯ ಇರುವ ತಕರಾರು ಸಂಪೂರ್ಣ ತೀರ್ಮಾನಕ್ಕೆ ಬಾರದೆ ಬಾಕಿಯಾಯಿತು ಈ ವಿಷಯ ಬೇಗನೆ ಸಿಮ್ಲಾದಲ್ಲಿ ಸೇರಿ ಚರ್ಚಿಸಲ್ಪಡುವದೆಂದೂ ವರ್ತಮಾನವಿದೆ

ಜಾಜುಲಾಲನೆಂಬವನು ಕಲ್ಕತ್ತೆಯ ಒಬ್ಬ ಜಾಡವಲ್ಲಿ (ಕಸ ಗುಡಿಸ ಮಾನವ) ಇವನು ತನ್ನ ಜೀವಮಾನದಲ್ಲಿ ೧೧೪೦೦೦ ರೂ ಗಳನ್ನು ಹಲವು ಸ್ಥಿರಾಸ್ತಿಗಳನ್ನು ಕೂಡಿಸಿ ಹಾಕಿದ್ದನು ಸತ್ತ ಮೇಲೆ ವಿವಾದಕ್ಕೆ ಕಾರಣವಾಯಿತು ಮುಸಾಮತ್ ಹಿರಾಬೀಬಿ ಎಂಬಾಕೆಯು ತಾನು ಜಾಜುಲಾಲನ ಮಗಳೆಂದು ರುಜುಪಡಿಸಿ ೯೦೦೦೦ ರೂ ಪಡೆದಿದ್ದಾಳೆ

ತಮಿಳುನಾಡು ಪರಿಷತ್ತಿನ ೩೪ನೇ ಅಧಿವೇಶನವು ಇದೇ ತಾ ೫ರಲ್ಲಿ ಶ್ರೀ ಸತ್ಯಮೂರ್ತಿಯವರ ಅಧ್ಯಕ್ಷತೆಯಲ್ಲಿ ಮಧುರೆಯಲ್ಲಿ ಜರಗಿತು ಮಂಜೂರಾದ ಠರಾವುಗಳಲ್ಲಿ, ಗಾಂಧಿಯವರಲ್ಲಿ ಪೂರ್ಣ ಭರವಸೆಯನ್ನು ಸೂಚಿಸುವ ಮತ್ತು ಹಿಂದೂದೇಶದ ಭಾವೀ ರಾಜ್ಯ ರಚನೆಯಲ್ಲಿ ಎಲ್ಲಾ ಶಾಖೆಗಳ ಮೇಲಿನ ಅಧಿಕಾರವು ಹಿಂದೀಯರ ಕೈಯಲ್ಲಿರಬೇಕೆಂಬ ಠರಾವುಗಳು ಮುಖ್ಯವಾದವು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗು ಈ ತಾ ೯ರಲ್ಲಿ ಬೊಂಬಾಯಿಯಲ್ಲಿ ಪ್ರಾರಂಭವಾಗಿದೆ ಬಂಗಾಳದ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಚುನಾವಣೆಯಲ್ಲಿ ಶ್ರೀ ಸೆನ್‌ಗುಪ್ತರ ಪಾರ್ಟಿಯವರಿಗೂ ಶ್ರೀ ಸುಭಾಸ್ ಚಂದ್ರಬೋಸರ ಪಾರ್ಟಿಯವರಿಗೂ ಇರುವ ಕಲಹದ ವಿಷಯ ಚರ್ಚೆಯ ನಂತರ ಅದನ್ನು ತೀರ್ಮಾನಿಸಲು ಶ್ರೀ ಅಣೆಯವರನ್ನು ನೇಮಿಸಲಾಯಿತು

ಮಹಾತ್ಮ ಗಾಂಧಿಯವರು ಇಂಗ್ಲೆಂಡಿಗೆ ಹೋಗುವಾಗ್ಯೆ ಇಂಡಿಯಾದ ಪೂರ್ಣ ಸ್ವಾತಂತ್ರ್ಯದ ಮೇಲೆ ಸಹಾನುಭೂತಿ ಇರುವ ಅಮೇರಿಕದ ಸಂಯುಕ್ತ ಪ್ರಾಂತ್ಯದವರು ಅವರ ಕೆಲವು ಮುಖ್ಯ ರಾಜಕೀಯ ಪಟುಗಳ ಡೆಪ್ಯುಟೇಶನನ್ನು ಮಹಾತ್ಮರ ಭೇಟಿಗೆ ಲಂಡನಿಗೆ ಕಳುಹಿಸಿ ತಮ್ಮ ಸ್ನೇಹಿತಾರವನ್ನು ಇಂಡಿಯಾದ ಸ್ವತಂತ್ರ್ಯ ಹೋರಾಟಕ್ಕೆ ತಮಗಿರುವ ಮೆಚ್ಚಿಗೆಯನ್ನೂ ಮತ್ತು ತಮ್ಮ ಉತ್ಸಾಹವನ್ನೂ ತೋರಿಸಲು ಏರ್ಪಾಡು ಮಾಡುತ್ತಿದ್ದಾರೆಂದು ವರ್ತಮಾನ

ಬೊಂಬಾಯಿಯಲ್ಲಿ ಪ್ರಭಾತ್ ಫೇರಿ ಎಂಬ ಸಂಗೀತದಿಂದ ಕೂಡಿದ ಮೆರವಣಿಗೆಯ ಪದ್ಧತಿಯು ಪ್ರಾರಂಭವಾಗಿದೆ ಕಾಂಗ್ರೆಸ್ಸಿನವರು [illegible]ವಾಗಿ ಹೆಂಗಸರು ಮಕ್ಕಳು ಬೆಳಿಗ್ಗೆ 5 ಗಂಟೆಗೆ ರಾಷ್ಟ್ರೀಯ ಗೀತೆಗಳನ್ನೂ, ದೇವರ ಪದಗಳನ್ನೂ ಹಾಡುತ್ತಾ ಬೀದಿ ಬೀದಿ ತಿರುಗುವುದೇ 'ಪ್ರಭಾತ್' ಫೇರಿ ಯಾಗಿದೆ ಈ ತಾ 10ರಲ್ಲಿ ಅದನ್ನು ಪ್ರಾರಂಭಿಸಿದಾಗ್ಯೆ ಮಹಾತ್ಮ ಗಾಂಧಿಯವರು ಅವರಿಗೆ ಆಶೀರ್ವಾದವನ್ನು ಮಾಡಿದರು ಕಾಂಗ್ರೆಸ್ ಆಫೀಸಿನಲ್ಲಿ ಸರ್ದಾರ್ ವಲ್ಲಭಾಯಿ ಪಟೇಲರವರು ರಾಷ್ಟ್ರೀಯ ಧ್ವಜವನ್ನು ಹಾರಿಸಿದರು

ಮಹಾತ್ಮ ಗಾಂಧಿಯವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತಾಡುವಾಗ ತೆಗೆದ ಧ್ವನಿಯುಕ್ತ ಚಿತ್ರವು ನ್ಯೂಯಾರ್ಕಿನಲ್ಲಿ ಪ್ರದರ್ಶಿಸಲ್ಪಡುತ್ತಿದ್ದು, ಸಾವಿರಾರು ಜನರನ್ನು ಆಕರ್ಷಿಸುತ್ತಿದೆ ಅರ್ಧ ನಗ್ನನಾದ ಈ ಫಕೀರನನ್ನು, ಆತನ ನಗುಮುಖವನ್ನೂ, ರಾಜಕೀಯ ಅಭಿಪ್ರಾಯಗಳನ್ನೂ ನೋಡಿ ಎಲ್ಲರೂ ಬೆರಗಾಗಿರುವರು ಮಹಾತ್ಮ ಗಾಂಧಿಯವರು ಪ್ರಾತಃಕಾಲದಲ್ಲೆದ್ದು ನಿತ್ಯವಿಧಿಗಳನ್ನು ಜರಗಿಸುವ ಚಿತ್ರವನ್ನೂ ಫೋಕ್ಸ್ ಕಂಪೆನಿಯವರು ಮಹಾತ್ಮಾಜಿಯವರೊಂದಿಗೆ ಬರಿ ನೆಲದ ಮೇಲೆ ಮಲಗುವ ಕಷ್ಟವನ್ನು ಸಹಿಸಿ ತೆಗೆದಿರುವರು

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು.

ಈ ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೀಟಿಂಗ್ ತಾರೀಕು 30—5—31ರಲ್ಲು ನಡೆಯಿತು

9 ಕಮಿಟಿ ಮೆಂಬರುಗಳು ಹಾಜರಿದ್ದರು.

ಖಾಯಂ ಅಧ್ಯಕ್ಷರಾದ ಮೆ [illegible] ಎನ್. ಚೆಕಪ್ಪಯ್ಯ ಬಿ ಎ ಬಿ ಎಲ್ ರವರು ಅಧ್ಯಕ್ಷರಾಗಿದ್ದರು.

ತೀರ್ಮಾನಿಸಿದ ವಿಷಯಗಳು.

1 ಕಳೆದ ಜನರಲ್ ಮೀಟಿಂಗಿನಲ್ಲಿ ಆದ ಠರಾವುಗಳನ್ನು ಸಭೆಯ ಮುಂದಿಡಲಾಯಿತು ಈ ಠರಾವುಗಳನ್ನು ಮತ್ತು ಅದರೊಡನೆ ಮಂಜೂರಾದ ಕೆಲವು ಠರಾವುಗಳನ್ನು ಅವಶ್ಯವಿದ್ದಲ್ಲಿ ಹಸ್ತ ಪತ್ರಿಕೆ ಮೂಲಕ ಪ್ರಿಂಟುಮಾಡಿ ಹಂಚಲು, ಪ್ರೆಸಿಡೆಂಟರು, ಜನರಲ್ ಸೆಕ್ರೆಟರಿಯವರು ಮತ್ತು ಪಿ ಐ ಬೆಳ್ಯಪ್ಪನವರಿಗೆ ಅಧಿಕಾರ ಕೊಟ್ಟಿದೆ ಸಂಘದವರು ಸೆಪ್ಟಂಬರ್ ಅನಂತರ, ದೇಶದ ಎಲ್ಲಾ ಹಳೇ ನಾಡುಗಳ ಮುಖ್ಯ ಗ್ರಾಮಗಳಲ್ಲಿ ಪ್ರಚಾರ ಮೀಟಿಂಗ್ ನಡಿಸುವಂತೆಯೂ ಆಯಾಯ ನಾಡಿನ ಎಗ್ಸಿಕ್ಯುಟಿವ್ ಕಮಿಟಿ ಮೆಂಬರುಗಳು ಸ್ಥಳೀಕ ಮೀಟಿಂಗನ್ನು ಏರ್ಪಡಿಸಲು ತೊಂದರೆ ತೆಗೆದುಕೊಳ್ಳಬೇಕೆಂತಲೂ ತೀರ್ಮಾನವಾಯಿತು.

2 ಸಿಬ್ಬಂದಿಯ ವಿಷಯ ಚರ್ಚೆಮಾಡಿ, ದಿನಕ್ಕೆ ಎರಡು ಗಂಟೆಗೆ ಕಡಿಮೆ ಇಲ್ಲದೆ ಆಫೀಸಿನಲ್ಲಿಯೇ ಕೆಲಸ ಮಾಡುವ ಕ್ಲಾರ್ಕ ಒಬ್ಬನಿಗೆ 7—8—0 ರೂ ಕೊಡಬೇಕೆಂತಲೂ ಈ ವರೆಗೆ ಕೊಡಗು ಕಂಪನಿಗೆ ಕೊಡುತ್ತಿದ್ದ ಜವಾನನ ಸಂಬಳ 9—8—0 ರೂಪಾಯಿಯನ್ನು 5—0—0 ರೂಪಾಯಿಗೆ ಇಳಿಸುವಂತೆಯೂ ಬಹುಮತದಿಂದ ತೀರ್ಮಾನವಾಯಿತು ಇದು ಜೂನ್ 1—6—31 ರಿಂದ ಜಾರಿಗೆ ಬರತಕ್ಕದ್ದಾಗಿದೆ ಮೆ ಬಲ್ಲಂಡ ಪೂವಯ್ಯನವರ ಕೆಲಸವು 30—4—31 ಕ್ಕೆ ಖೈರಾಗಿದೆಯಾಗಿಯೂ, ಅವರಿಂದ ಚಿಣ್ಣಪ್ಪನವರು ನೇಮಿಸುವ ಹೊಸ ಕ್ಲಾರ್ಕ ಚಾರ್ಜು ತೆಗೆದುಕೊಳ್ಳಬೇಕಾಗಿಯೂ ತೀರ್ಮಾನವಾಯಿತು

ರಶೀತಿ ಪುಸ್ತಕ ಮತ್ತು ಹಣವನ್ನು ವಾಪತಿ ಮಾಡದ ಎಲ್ಲಾ ಮೆಂಬರುಗಳಿಗೂ ಕೂಡಲೇ ಕಾರ್ಡ ಬರೆದು, ಆಫೀಸಿಗೆ ವಾಪತಿ ಮಾಡುವಂತೆ, ಕೇಳಿಕೊಳ್ಳಲು ತೀರ್ಮಾನವಾಯಿತು

4 ಸಂಘದ ಕಟ್ಟಡಕ್ಕೆ ಹೆಚ್ಚು ಸಹಾಯ ಮಾಡಿದವರ ಹೆಸರುಗಳನ್ನು ಕಂಚಿನ ತಗಡಿನಲ್ಲಿ ಶಾಸನ ಮಾಡುವುದನ್ನು ಮತ್ತು ನಕ್ಷೆಗಳನ್ನು ಇತರವನ್ನು ಸೆಕ್ರೆಟರಿಯವರು ಕೂಡಲೇ ಏರ್ಪಾಡು ಮಾಡಬೇಕು

ಕೆ ಪಿ ಚಿಣ್ಣಪ್ಪ,
(ಜನರಲ್ ಸೆಕ್ರೆಟರಿ)

NOTICE.

Beneficiaries from the Coorg Education Fund are requested to renew their applications for Scholarships with their progress reports signed by the Principals of the Colleges where they are studying by the 20th June 1931, in order to decide which of the Scholarships should be renewed

B. I. KUTTAPPA,
Honourary Secretary,
1—1 Coorg Education Fund

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೂ ತಿಳಿಯ ಪಡಿಸುವುದೇನಂದರೆ —ನನ್ನ [illegible] ಸವೈಯ್ಯನು ಕಳೆದ ನಾಲ್ಕೈದು ವರ್ಷಗಳಿಂದ ಪತ್ತೆ ಇಲ್ಲದರಿಂದಲೂ ನಾವಿಬ್ಬರ ಸಡಕ, ನನ್ನ ಸ್ವಾಧೀನ ಅನುಭವದಲ್ಲಿರುವದರಿಂದಲೂ ಈತನು ಸಾಲ ಮಾಡಿದ ಅಥವಾ ಇನ್ನು ಮುಂದೆ ಮಾಡುವ ಪಕ್ಷಕ್ಕೆ ಅಂತಾ ಸಾಲ ಕೊಟ್ಟ ಮಹನೀಯರು ಈ ಸುಬ್ಬಯ್ಯನ ಸ್ವಂತ ಜವಾಬ್ದಾರಿಯಿಂದಲೇ ಭರ್ತಿಮಾಡಿಕೊಳ್ಳಬೇಕಲ್ಲದೆ ಪಿತ್ರಾರ್ಜಿತ ಸೊತ್ತು ಆತನ ಸಾಲಕ್ಕೆ ಆಧಾರವಾಗಲಾರದು ಹಾಗೆ ಭರ್ತಿ ಮಾಡದ ಪಕ್ಷ ಸಾಲ ಕೊಟ್ಟವರು ಎಲ್ಲಾ ನಷ್ಟಕ್ಕೆ ತಾವೇ ಗುರಿಯಾಗತಕ್ಕದ್ದು ಈತನು ಕುಟುಂಬ ಕರ್ತಾಗಾರನೂ ಅಲ್ಲ ಯಾ ಪಿತ್ರಾರ್ಜಿತ ಸೊತ್ತುಗಳ ರುಜು ವಗೈರೆಗಾಗಲೀ ಸಾಲ ಮಾಡಿದ್ದಲ್ಲ

ಪಾಂಡಂಡ ಚಂಗಪ್ಪ,
4—2 ಯವಕಪಾಡಿ ಗ್ರಾಮ.

ಖಾದಿಯೇ ಸ್ವಾತಂತ್ರ್ಯದ ಹಾದಿಯು!

ಪರದೇಶಿ ಬಟ್ಟೆಯ ಬಹಿಷ್ಕಾರದ ಕಾರ್ಯಕ್ರಮದಲ್ಲಿ ಖಾದಿಯು ಪ್ರಮುಖವಾದ ಸ್ಥಾನವನ್ನು ಪಡೆದಿರುವದು ಖಾದೀ ಹುಟ್ಟುವಳಿಯ ವಿಶಾಲವಾದ ಕಾರ್ಯವನ್ನು ಪೂರ್ಣವಾಗಿ ನೆರವೇರಿಸದೆ, ಪರದೇಶೀ ಬಟ್ಟೆಯ ಬಹಿಷ್ಕಾರವನ್ನು ಪರಿಣಾಮಕರವಾಗುವಂತೆ ಕೊನೆಗಾಣಿಸುವದು ಅಸಂಭವನೀಯವಾಗಿರುವದು ಇಷ್ಟೇ ಅಲ್ಲದೆ, ರಾಷ್ಟ್ರವು ಕೈಕೊಂಡ ಈ ಬಹಿಷ್ಕಾರದ ಪರಿಣಾಮವು ಕೇವಲ ಹಣವುಳ್ಳ ಅಲ್ಪ ಜನರಿಗಲ್ಲದ ಹಳ್ಳಿಹಳ್ಳಿಗಳಲ್ಲಿ ವಾಸಿಸುತ್ತಿರುವ ನಮ್ಮ ಲಕ್ಷಾವಧಿ ಜನರಿಗೆ ಹಿತಕರವಾಗಬೇಕೆಂದಿದ್ದರೆ ಜೀವನದಾತವಾಗಿರುವ ಕೈರಾಟೆಯ ಪ್ರಸಾರವನ್ನು ಎಲ್ಲೆಡೆಯಲ್ಲಿ ಮಾಡುವದರಿಂದಲೇ ಆ ಕಾರ್ಯವು ಕೈಗೂಡುವದು

ಮಹಾತ್ಮ ಗಾಂಧಿ (ಯಂಗ್ ಇಂಡಿಯಾ ೧೮—೪—೩೧)

ಇದರಂತೆ ಮೊನ್ನೆ ಕರಾಚಿ ರಾಷ್ಟ್ರೀಯ ಮಹಾಸಭೆಯವರಾದರೂ ಖಾದಿಯ ಪ್ರಸಾರದ ವಿಷಯವಾಗಿ ಒಂದು ನಿರ್ಣಯವನ್ನು ಮಾಡಿ ಅದರಂತೆ ಕಾರ್ಯವನ್ನು ಕೈಕೊಳ್ಳಲು ಎಲ್ಲಾ ರಾಷ್ಟ್ರೀಯ ಸಂಸ್ಥೆಗಳಿಗೆ ಬಿನ್ನಹ ಮಾಡಿರುವರು ನಾವೆಂತೂ ಈ ಕಾರ್ಯವನ್ನು ಸಾಗಿಸುತ್ತಲೇ ಇರುವೆವು. ಈ

ಗ ಎಲ್ಲ ತರದ ಒಟ್ಟಿಗೆ ಬೆಲೆಯನ್ನು ಕಡಿಮೆ ಮಾಡಿರುವೆವು. ನಮ್ಮ ಹುಟ್ಟುವಳಿಯು ಬೆಳೆಯುತ್ತ ನಡೆದಿರುವದು. ಮಾರಾಟವು ಮಾತ್ರ ಸ್ವಲ್ಪ ಮಂದವಾಗಹತ್ತಿರುವದು. ಹೀಗಾಗಿ ಖಾದಿಯು ಎಲ್ಲೆಡೆಯಲ್ಲಿ ಸಿಲ್ಕು ಬೀಳಹತ್ತಿದೆ. ಖಾದಿಯ ಮಾರಾಟವು ಕಳೆದ ವರ್ಷಕ್ಕಿಂತ ಹೆಚ್ಚಾಗುವಂತೆಯೂ, ಅದು ಒಂದು ವೇಳೆ ಶಕ್ಯವಾಗದಿದ್ದರೆ, ಅದಕ್ಕಿಂತ ಕಡಿಮೆಯಾಗದಂತಾದರೂ ಎಲ್ಲ ಪ್ರಾಂತದವರು ಪ್ರಯತ್ನಪಡಬೇಕೆಂದು ಮಹಾತ್ಮ ಗಾಂಧೀಜಿಯವರು ತಮ್ಮ ಇಚ್ಛೆಯನ್ನು ತೋರ್ಪಡಿಸಿರುವರು. ಇದಕ್ಕಾಗಿ ನಾವು ಕೆಳಗಿನ ಯೋಜನೆಯನ್ನು ಮಾಡಬೇಕೆಂದಿರುವೆವು. ಖಾದಿ ಪ್ರೇಮಿಗಳೆಲ್ಲರೂ ನಮಗೆ ನೆರವಾಗಬೇಕೆಂದು ಬೇಡಿಕೆ.

೧. ಖಾದಿಯನ್ನು ಹೊತ್ತು ಮಾರುವದು.

ಈ ಯೋಜನೆಯೇನೂ ಹೊಸದಲ್ಲ. ಇದರ ಲಾಭವನ್ನು ನಮ್ಮಲ್ಲಿ ಅನೇಕರು ಪಡೆದಿರುವರು. ಕಳೆದ ವರ್ಷ ಅವಶ್ಯಕತೆಯು ಇಲ್ಲದಿದ್ದರಿಂದ ಅ. ಭಾ. ಚ. ಸಂಘದವರು ಇದನ್ನು ನಿಲ್ಲಿಸಿದ್ದರು. ಈಗ ಅವಶ್ಯವಿದ್ದಲ್ಲಿ ಕೈಕೊಳ್ಳಬೇಕೆಂದು ಸೂಚಿಸಿರುವರು. ಈ ಮುಖಾಂತರ ಖಾದೀ ಪ್ರಸಾರವನ್ನು ಮಾಡುತ್ತ ಇದರಿಂದಾಗುವ ಅಲ್ಪ ಲಾಭದಿಂದ ಸಂತುಷ್ಟತೆಯನ್ನು ಪಡೆದು ಈ ಮಹತ್ಕಾರ್ಯಕ್ಕೆ ನೆರವಾಗಲಿಚ್ಛಿಸುವ ತರುಣರು ನಮ್ಮ ಕಡೆಗೆ ತಮ್ಮ ಹೆಸರುಗಳನ್ನು ಕೂಡಲೇ ಕಳಿಸಕೊಡಬೇಕೆಂದು ಪ್ರಾರ್ಥನೆ. ನಮ್ಮ ಯಾವತ್ತು ಖಾದೀ ಭಂಡಾರಗಳಲ್ಲಿಯೂ, ಬೆಳಗಾವಿಯ ಕಚೇರಿಯಲ್ಲಿಯೂ ಖಾದಿಯನ್ನು ಹೊತ್ತು ಮಾರುವವರು ಬರಕೊಡಬೇಕಾದ ಕರಾರು ಪತ್ರದ ಪ್ರತಿಗಳು ದೊರೆಯುವವು. ಅವುಗಳನ್ನು ಅಲ್ಲಿ ಪಡೆದು ಚೆನ್ನಾಗಿ ಓದಿ ಸಹಿ ಮಾಡಿ ನಮ್ಮ ಕಚೇರಿಗೆ ಕಳುಹಿಸಬೇಕು.

ಕಮಿಶನ್ನಿನ ನಿಯಮಗಳು.

ಖಾದಿಯನ್ನು ಹೊತ್ತು ಮಾರುವ ಕ್ರಮವು ಎರಡು ವಿಧವಾಗಿದೆ—ಪಟ್ಟಣದಲ್ಲಿ ಹಾಗೂ ಹಳ್ಳಿಯಲ್ಲಿ—ಈ ಸಂದರ್ಭದಲ್ಲಿ ೫೦೦೦ ಕ್ಕಿಂತ ಕಡಿಮೆ ಜನಸಂಖ್ಯೆಯು ಸ್ಥಳವು ಹಳ್ಳಿಯೆಂದು ತಿಳಿಯಲ್ಪಡುವದು.

(೧) ಪಟ್ಟಣದಲ್ಲಿ ಹೊತ್ತು ಮಾರಿದ ಖಾದಿ ... ವಾಗಿ ಮಾರಾಟದ ಹಣದ ಮೇಲೆ ಒಂದು ... ಗೆ ಒಂದು ಆಣೆ ಕಮಿಶನ್ ದೊರೆಯುವದು. (೨) ಹಳ್ಳಿಗಳಲ್ಲಿ ಮಾರಿದ್ದಕ್ಕೆ ... ತಿಂಗಳ ಮೊದಲನೆಯ ೧೦೦ ರೂ ಗಳಿಗೆ ೧॥ ರೂ, ... ಮಾರಾಟದ ಮೇಲೆ ಒಂದು ರೂ. ಗೆ ಒಂದಾಣೆ. (೩) ಪ್ರತಿಯೊಬ್ಬ ಹಾಕರನು ಅ. ಭಾ. ಚ. ಸಂಘದ ಯಾವುದೆ ಒಂದು ಭಂಡಾರಕ್ಕೆ ಹೊಂದಿದವನಿರತಕ್ಕದ್ದು. ಆ ಭಂಡಾರದಲ್ಲಿ ೨೦೦ ರೂ ಠೇವು ಇಟ್ಟು ಅಷ್ಟರ ಮಟ್ಟಿಗೆ ಖಾದಿಯನ್ನು ತೆಗೆದುಕೊಂಡು ಹೋಗತಕ್ಕದ್ದು. (೪) ಖಾದಿ ಭಂಡಾರಗಳಲ್ಲಿ ಉಪಯೋಗಿಸುವಂಥ ನಗದು ಪಟ್ಟಿಗಳನ್ನೇ ಉಪಯೋಗಿಸತಕ್ಕದ್ದು. ಪ್ರತಿಯೊಬ್ಬ ಗಿರಾಕಿಗೆ ಪಾವತಿ (ಬಿಲ್) ಯನ್ನು ಕೊಡಲೇ ಬೇಕು. ಮಾರಾಟದ ಪ್ರತಿಯೊಂದು ಬಾಬು ಪುಸ್ತಕದಲ್ಲಿ ಇರಲೇಬೇಕು. ಮಾರಾಟವಾದಂತೆ ಪ್ರತಿ ಹಣವನ್ನು ಅಂಗಡಿಯಲ್ಲಿ ತನ್ನ ಖಾತೆಗೆ ಜಮೆ ಬರಿಸಬೇಕು. (೫) ಪ್ರತಿ ತಿಂಗಳ ಕೊನೆಗೆ ತನ್ನ ಅಂಗಡಿಗೆ ಹೋಗಿ ತನ್ನ ಯಾವತ್ತು ಲೆಕ್ಕವನ್ನು ತೀರಿಸಿ ಮಾರದಿದ್ದ ಬಟ್ಟೆಯನ್ನು ತಿರುಗಿ ಕೊಟ್ಟು ಹೊಸದಾಗಿ ಬೇಕಾದ ಬಟ್ಟೆಯನ್ನು ಒಯ್ಯಬೇಕು. ಆದರೆ ತಮ್ಮ ಖಾತೆಗೆ ಜಮೆ ಇರುವ ಹಣದ ಬೆಲೆಗಿಂತ ಹೆಚ್ಚು ಖಾದಿಯು ಮಾತ್ರ ಎಂದಿಗೂ ದೊರೆಯಲಾರದು. (೬) ಪ್ರತಿಯೊಬ್ಬ ಹಾಕರನು ಮರುತಿಂಗಳು ೧೦ ನೇ ತಾರೀಕಿನೊಳಗಾಗಿ ನಮಗೆ ಮುಟ್ಟುವಂತೆ ಕಮಿಶನ್ನದ ಸಲುವಾಗಿ ಬಿಲ್ಲುಗಳನ್ನು (ಖಾದೀ ಭಂಡಾರಗಳ ... ಮುಖಾಂತರ) ಕಳಿಸತಕ್ಕದ್ದು. ... ದ ಮಂಜೂರಿಯು ದೊರೆತ ಮೇಲೆ ಕಮಿಶನ್ನಿನ ಹಣವು ಕೊಡಲ್ಪಡುವದು. ಬಿಲ್ಲಿನ ನಮೂನೆಗಳು ನಮ್ಮ ಎಲ್ಲ ಭಂಡಾರಗಳಲ್ಲಿ ದೊರೆಯುವವು. (೭) ನಮ್ಮ ಕಚೇರಿಯಲ್ಲಿ ಮುಂಗಡ ಹೆಸರು ಹಚ್ಚಿಸಿದ ಹಾಕರರಿಗಷ್ಟೇ ಕಮಿಶನ್ ದೊರೆಯುವದು. (೮) ಕರ್ನಾಟಕದಲ್ಲಿಯ ಅ. ಭಾ. ಚ. ಸಂಘದ ಖಾದೀ ಭಂಡಾರಗಳಿಂದ ಪಡೆದ ಖಾದಿಯ ಸಲುವಾಗಿಯಷ್ಟೇ ಮೇಲಿನ ಕಮಿಶನ್ ದೊರೆಯುವದು. (೯) ಯಾವನಾದರೊಬ್ಬ ಹಾಕರನು ನಡುವೆ ಬಿಟ್ಟರೆ ಆತನ ಲೆಕ್ಕವನ್ನು ಮಾಡಿ ಆತನ ಖಾತೆಗೆ ಜಮೆಯುಳಿದ ಠೇವಿನ ಹಣವು ತಿರುಗಿ ಕೊಡಲ್ಪಡುವದು.

೨. ನೂಲು ತೆಗೆಯುವವರಿಗೆ ಅನುಕೂಲತೆ.

ಕೈರಾಟೆಗಳ ಮೇಲೆ ನೂಲು ತೆಗೆಯುತ್ತಿರುವ ಕುಟುಂಬಗಳಿಗೆ ಸುಲಭವಾಗಿ ಖಾದಿಯು ದೊರೆಯಬೇಕೆಂದು ಈ ಕೆಳಗಿನ ಯೋಜನೆಯನ್ನು ಮಾಡಿದೆ.

೩೯ ಇಂಚು ಅಗಲುಳ್ಳ ೮ ವಾರ ಖಾದಿಗೆ ಸಾಮಾನ್ಯವಾಗಿ ೨೮೦೦೦ ವಾರು ನೂಲು ಬೇಕಾಗುತ್ತದೆಂದು ಗೊತ್ತಾಗಿದೆ. ಅದನ್ನು ನೇಯುವ ಕೂಲಿಯು ೧ ರೂ. ಬೀಳುವದು. ಈ ಕಾರಣ ಯಾರಾದರೂ ೨೮,೦೦೦ ವಾರು ಕೈನೂಲನ್ನು ಒಂದೆ ಅಳತೆಯ ಅಡ್ಡಕಟ್ಟು ಆದ ಅಡಿಗಳನ್ನು ತಂದುಕೊಟ್ಟು ಮೇಲೆ ೧ ರೂ. ಕೊಟ್ಟರೆ ಅವರಿಗೆ ೩೬ ಇಂಚು ಅಗಲುಳ್ಳ ೮ ವಾರು ಗಂಟೆಯಾಗದ ಖಾದಿಯನ್ನು ಕೊಡುವ ವ್ಯವಸ್ಥೆ ಮಾಡಿರುವೆವು. ಇದು ಆಗದಿದ್ದರೆ ನೂಲನ್ನು ಖಾದಿ ಅಂಗಡಿಯಲ್ಲಿ ಮಾರಬಹುದು. ಸರಿಯಾಗಿ ಅಳತೆಯುಳ್ಳ ಒಂದು ಸಾವಿರ ವಾರು ಉದ್ದವಿದ್ದ ಅಡಿಗೆ ಒಂದು ಆಣೆ ದೊರೆಯುವದು. ಅಥವಾ ಒಂದು ಪೌಂಡು ನೂಲಿಗೆ ಅರ್ಧ ರೂಪಾಯಿ ದೊರೆಯುವದು. ಆದರೆ ನೂಲು ಕೊಟ್ಟು ಮೇಲಿನಂತೆ ಖಾದಿಯನ್ನು ಪಡೆಯಲಿಚ್ಛಿಸುವ ಕುಟುಂಬಕ್ಕೆ ವರ್ಷಕ್ಕೆ ೫೨ ತಾಗೆಗಳಿಗಿಂತ ಹೆಚ್ಚು ಮಾತ್ರ ದೊರೆಯಲಾರದು.

೩. ಖಾದಿಯ ಆಶ್ರಯದಾತರು.

ಇದೊಂದು ಹೊಸ ಯೋಜನೆಯು; ಇದರ ನಿಯಮಗಳು.—

(೧) ಖಾದಿಯ ಆಶ್ರಯದಾತರಾಗಲಿಚ್ಛಿಸುವವರು ತಮಗೆ ಅನುಕೂಲವಾದ ಯಾವದೊಂದು ಅ. ಭಾ. ಚ. ಸಂಘದ ಕರ್ನಾಟಕ ಶಾಖೆಯ ಖಾದೀ ಭಂಡಾರಕ್ಕೆ ವರ್ಷ ಒಂದಕ್ಕೆ ೧ ರೂ. ವರ್ಗಣಿ ಕೊಡಬೇಕು. ಅವರಿಗೆ ಒಂದು ಟಿಕೇಟು ದೊರೆಯುವದು. (೨) ಇಂಥ ಆಶ್ರಯದಾತರಿಗೆ ಅವರು ಕೊಂಡುಕೊಳ್ಳುವ ಖಾದಿಯ ಬೆಲೆಯ ಮೇಲೆ ೧ ರೂ. ಗೆ ಮೂರು ಪೈ ಕಮಿಶನ್ ದೊರೆಯುವದು. ೧ ... ಗಿಂತ ಕಡಿಮೆ ಬೆಲೆಯ ಮೇಲೆ ಕಮಿಶನ್ ದೊರೆಯಲಾರದು.

ಹ. ಶ್ರೀ ಕೌಜಲಗಿ,
ಕಾರ್ಯದರ್ಶಿ.

ಪತ್ರವ್ಯವಹಾರ.

ಚರ್ಚಿತ್ರದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗಿನ ಪೋಲೀಸು ಇಲಾಖೆ

ಅಯ್ಯಾ,

ಕೊಡಗು ಪೋಲೀಸು ಇಲಾಖೆಯ ಇಬ್ಬರು ಆಫೀಸರುಗಳು ರಿಟಯರ್ ಆಗುವ ಖಾಲಿ ಸ್ಥಳಗಳಿಗೆ ಈ ಪ್ರಾಂತ್ಯದ ಹೊರಗಿನ ಜನರನ್ನು ಅಥವಾ ಅನುಭವವಿಲ್ಲದ, ಕಾಲೇಜಿನಿಂದ ಈಗ ತಾನೇ ಹೊರಗೆ ಬಂದಿರುವ ಕೊಡಗು ಗ್ರಾಜ್ಯುವೇಟರುಗಳನ್ನು ನೇಮಿಸುತ್ತಾರೆಂಬ ಸುದ್ದಿಯು ಪ್ರಬಲವಾಗಿದೆ. ಹೊರಗಿನ ಜನರನ್ನು ನೇಮಿಸುವುದು ನಿಜವಾದರೆ ಸಂಬಂಧಪಟ್ಟ ಅಧಿಕಾರಿಗಳು ದೊಡ್ಡ ತಪ್ಪು ಮಾಡುವರು. ಯಾಕಂದರೆ—ಹಾಗೆ ಮಾಡುವುದರಿಂದ ಸರ್ಕಾರದವರು ಕೊಡಗಿನ ಜನಾಂಗವನ್ನೇ ಅಪಮಾನ ಪಡಿಸಲು ಯತ್ನಿಸಿದಂತಾಗುವುದು ಮತ್ತು ದೇಶದವರ ಪೌರುಷವನ್ನು ಪ್ರಶ್ನಿಸಿದಂತಾಗುವುದು. ಲೆಜಿಸ್ಲೇಟಿವ್ ಕೌನ್ಸಿಲು ಇರುವ ಮತ್ತು (ಅಟಾನಮಿ) ಸ್ವಾತಂತ್ರ್ಯ ಪಡೆಯಲು ಯತ್ನಿಸುತ್ತಿರುವ ದೇಶವು ಅದರ ಆಡಳಿತೆಯ ಹಲವು ಇಲಾಖೆಗಳಲ್ಲಿ ಉಂಟಾಗುವ ಖಾಲಿ ಸ್ಥಳಗಳನ್ನು ಭರ್ತಿ ಮಾಡುವಷ್ಟು ಯೋಗ್ಯತೆಯುಳ್ಳವರಿಲ್ಲವೆಂದು ಯೋಚಿಸಲೂ ಕೂಡ ಸಾಧ್ಯವಿಲ್ಲ. ಯುದ್ಧಕ್ಕೆ ಉತ್ತಮರಾದ ಜನರನ್ನು ಕೊಟ್ಟಂಥ ಮತ್ತು ಸೈನ್ಯದಲ್ಲಿ ತನ್ನದೇ ಒಂದು ಪ್ರತ್ಯೇಕ ಕಂಪನಿ ಇರುವಂಥ ಜನಾಂಗವು ತನ್ನ ಪೋಲೀಸು ಇಲಾಖೆಯನ್ನು ನಡೆಸಲು ಅರ್ಹ ಜನರು ಅಥವಾ ತಮ್ಮ ಜನ್ಮ ಇಚ್ಛೆಯು ಕಾರ್ಯ ನಿರ್ವಾಹಕ ಶಕ್ತಿಯ ಉದ್ಯೋಗಸ್ಥರನ್ನು ಕೊಡಲು ಎರಡು ಸೋಲಲಿಕ್ಕಿಲ್ಲ. ಯಾರಾದರೂ ಈ ವಿಷಯ ಸಂಶಯ ಪಟ್ಟರೆ, ಒಂದು ಶತಮಾನದ ಬ್ರಿಟಿಷ್ ಆಡಳಿತದಲ್ಲಿಯೇ ವಿಶೇಷ ವಿಶೇಷ ಕೊರತೆ ಇದೆಯೆಂದು ಹೇಳಬೇಕು. ಆದ ... ಹಾಗಿಲ್ಲ, ಮತ್ತು ಸುರಕ್ಷಿತವಾಗಿಯೂ, ವಿಶ್ವಾಸ ಭರಿತವಾಗಿಯೂ ಆಡಳಿತ ಕ್ರಮವನ್ನು ಹೊರಗಿನವರ ಸಹಾಯವಿಲ್ಲದೆ ನಡೆಸುವಂಥ ಶಕ್ತಿವಂತ ಜನರು ನಮ್ಮಲ್ಲಿ ಸಾಕಷ್ಟು ಇದ್ದಾರೆಂದು ನನ್ನ ನಂಬಿಗೆಯಾಗಿದೆ.

ನನಗೆ ಗೊತ್ತಿರುವ ಮಟ್ಟಿಗೆ ಕೊಡಗು ಪೋಲೀಸು ಇಲಾಖೆಯಲ್ಲಿ ದೊಡ್ಡ ಕೊರತೆಯೇನೂ ಇಲ್ಲ. ಒಂದು ವೇಳೆ, ಅದು ಇಡೀ ಹಿಂದೂಸ್ಥಾನದಲ್ಲಿ ಅತ್ಯುತ್ತಮ ಮತ್ತು ಅತಿ ಪ್ರಮಾಣಿಕತನದ ಇಲಾಖೆಯಾಗಿರಬಹುದು. ಒಂದೆರಡು ಕೊಲೆ ಕೇಸುಗಳು ಪತ್ತೆ ಮಾಡಲ್ಪಡದ್ದರಿಂದ ಜನರು ವಿಪರೀತ ಆಲೋಚಿಸಬಾರದು. ಅಂಥಾ ಕೊರತೆಗಳು ಎಲ್ಲೆಲ್ಲಿಯೂ ಸಾಧಿಕೆಯಾಗಿವೆ. 'ಸ್ಕಾಟ್‌ಲ್ಯಾಂಡ್ ಯಾರ್ಡ್' ಪೋಲೀಸಿನವರಿಗೇ ಕೆಲವು ಕೇಸುಗಳನ್ನು ಪತ್ತೆ ಮಾಡಲು ಆಗಲಿಲ್ಲ. ಆದರೆ ಕೊಡಗಿನಲ್ಲಿ ಒಂದು ವೇಳೆ ಬದಲಾವಣೆಯು ಸ್ವಲ್ಪ ಅವಶ್ಯಕತೆ ಇರಬಹುದು. ಇದನ್ನು ಇಲಾಖೆಯಲ್ಲಿಯೇ ಅತ್ತಿತ್ತ ಬದಲಾಯಿಸಿಕೊಂಡು ಮಾಡಿಕೊಳ್ಳಬಹುದು; ಮತ್ತು ಹೊರಗಿನಿಂದ ಜನರನ್ನು ತರುವ ಅವಶ್ಯಕತೆಯೇ ಇಲ್ಲ. ಸೀದಾ ಕಾಲೇಜಿನಿಂದಾಗಲೀ ಯಾ ಬೇರೆ ಇಲಾಖೆಗಳಿಂದಾಗಲಿ ಹೊಸ ಮತ್ತು ಅನುಭವವಿಲ್ಲದ ಗ್ರಾಜ್ಯುವೇಟರುಗಳನ್ನು ತರುವ ವಿಷಯವನ್ನು ಚೆನ್ನಾಗಿ ಆಲೋಚಿಸಬೇಕು. ಪೋಲೀಸು ಇಲಾಖೆಯಲ್ಲಿ ಆಫೀಸರನಾಗತಕ್ಕವನು ಎಗ್ಸಿಕ್ಯುಟಿವ್ ಕೆಲಸದಲ್ಲಿ ಮಾತ್ರವಲ್ಲ ಪೋಲೀಸು ಕೆಲಸದಲ್ಲಿಯೂ ತುಂಬಾ ಅನುಭವವುಳ್ಳವನಾಗಿರಬೇಕು. ಈ ವಿಷಯದಲ್ಲೇ ಸರ್ಕಾರದವರು ಕೆಲವು ವರ್ಷಗಳ ಹಿಂದೆ ತಪ್ಪು ಮಾಡಿದ್ದಾಗಿದೆ; ಆಗ್ಯೆ ಪೋಲೀಸು ಡೆಪ್ಯುಟಿ ಸುಪರಿಂಟೆಂಡೆಂಟರ ಪದವಿಯನ್ನು ಗೌರವದಿಂದ ವಹಿಸುವಂಥವರು ಆ ಇಲಾಖೆಯಲ್ಲೇ ಇದ್ದರೂ ಕೂಡ ಆ ಉದ್ಯೋಗಕ್ಕೆ ರೆವಿನ್ಯೂ ಇಲಾಖೆಯಿಂದ ಒಬ್ಬ ಆಫೀಸರನ್ನು ಆರಿಸಿದರು. ಸ್ವಲ್ಪ ಸಮಯದಲ್ಲಿಯೇ 'ಚೌಕ ಮನುಷ್ಯನನ್ನು ಉರುಟು ತೂತಕ್ಕೆ' ಹಾಕಿದೆವೆಯೆಂದು ಅಧಿಕಾರಿಗಳಿಗೆ ಗೊತ್ತಾಯಿತು. ಈಗ ಜನರಿಗೆ ಆಶ್ಚರ್ಯವಾಗುವುದೇನಂದರೆ—ಅದೇ ತಪ್ಪನ್ನು ಪುನಹ ಮಾಡುವಂತೆ ಕಾಣುವುದು. ಈಗ ಒಂದು ಮುಂದಾದ ರೀತಿಯಲ್ಲಿ 'ಉರುಟು ಮನುಷ್ಯನನ್ನು ಚೌಕ ತೂತದಲ್ಲಿ ಹಾಕುವದು'. ಇದು ಒಂದು ವೇಳೆ ಪರೀಕ್ಷಾರ್ಥವಾಗಿರಬಹುದು. ಆದರೆ ಇದರಲ್ಲಿ ... ದ ವಾಸನೆ ಇದೆ ಮತ್ತು ಅಂಥಾ ಪರೀಕ್ಷೆಗಳನ್ನು ಇದೇ ... ಲೀಸು ಇಲಾಖೆಯು ಗೌರವದ ನಷ್ಟದಿಂದ ನಡಿಸಬಾರ ... ಪೋಲೀಸು ಕೆಲಸದಲ್ಲಿ ಒಳ್ಳೇ ತರಬೇತು ಮತ್ತು ತುಂಬಾ ಅನುಭವವು ಜನರ ಹಾಗೆಯೇ ಸರ್ಕಾರದವರ ಒಳ್ಳೇ ... ಅವಶ್ಯವಾಗಿದೆ. ಕಳೆದ ಕೊಡಗಿನ ಸತ್ಯಾಗ್ರಹ ಚಳವಳಿಯಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ತೋರಿಸಿದ ಕ... ಸಹಾನುಭೂತಿ ಮತ್ತು ಸಮಾಧಾನಕ್ಕೂ ಮತ್ತು ಪೋಲೀಸು ಉದ್ಯೋಗಸ್ಥರು ತೋರಿಸಿದ ವಿವೇಕಕ್ಕೂ, ಅಲ್ಲದಿದ್ದರೆ ... ಯು ವಿಪರೀತವಾಗುತ್ತಿತ್ತು. ಇದು ಪೋಲೀಸು ಕೆಲಸದ ದೀರ್ಘ ಮತ್ತು ಒಳ್ಳೇ ಅನುಭವದ ಪರಿಣಾಮವಾ... ಈಗ, ಇಪ್ಪತ್ತು ವರ್ಷ ಕಷ್ಟದ ಮತ್ತು ಪ್ರಮಾಣಿಕತನದ ಸರ್ವೀಸು, ವಿದ್ಯಾವಂತರಾಗಿ, ಮೇಧಾ ಶಕ್ತಿಯುಳ್ಳ ಮ... ಚಟುವಟಿಕೆಯ, ಅರ್ಧ ಡಜನಿಗಿಂತ ಹೆಚ್ಚು ಯುವಕ ಉದ್ಯೋಗಸ್ಥರು ಪೋಲೀಸು ಇಲಾಖೆಯಲ್ಲಿರುವರು. ಇವುಗಳ ... ಇಬ್ಬರನ್ನು ಖಾಲಿ ಸ್ಥಳ ಭರ್ತಿ ಮಾಡಲು ಸರ್ಕಾರದವರು ... ಉಚಿತವಾಗಿಯೂ ಆರಿಸಿಕೊಳ್ಳಬಹುದು. ಇಂದು 10 ... ಪೋಲೀಸು ಕೆಲಸದಲ್ಲಿ ಅನುಭವ ಇಲ್ಲದವರನ್ನು ಸರ್ಕಲ್ ... ಇನ್‌ಸ್ಪೆಕ್ಟರಾಗಿ ನೇಮಿಸಬಾರದೆಂದು ನನ್ನ ಅಭಿಪ್ರಾಯ, ... ಕೆಂದರೆ—ಈ ಆಫೀಸರಿಗೆ ಡೆಪ್ಯುಟಿ ಸುಪರಿಂಟೆಂಡೆಂಟ ... ಹೆಚ್ಚಿನ ಜವಾಬ್ದಾರಿ ಕೆಲಸವಿದೆ. ಸರ್ವೀಸಿನಲ್ಲಿರುವ ... ಮ್ಮ ಜೀವಮಾನದಲ್ಲಿ ಒಂದು ದಿನ ಇನ್‌ಸ್ಪೆಕ್ಟರುಗಳ ... ಸುಪರಿಂಟೆಂಡೆಂಟರುಗಳ ಪದವಿಗೆ ಏರುವೆನೆಂಬ ಆಶೆ ... ಇಲಾಖೆಗೆ ಸೇರಿದವರು; ಈ ಉದ್ದೇಶದಿಂದ 'ಕತ್ತೆಯ ... ವಾಸವು ಕತ್ತೆಗಳಂತೆ' 20 ವರ್ಷಗಳು ಹಗಲಿರುಳು ಕಷ್ಟದ ಕೆಲಸಮಾಡುತ್ತಾ ಬಂದಿರುವರು. ಅವರಲ್ಲಿ ಕೆಲವರು ಒ... ಪತ್ತೇದಾರಿ ಆಫೀಸರುಗಳಾಗಿ ತೋರಿಸಿಕೊಂಡು ಸರ್ಕಾ... ದರ ಮ ತ್ತು ... ಮೆಚ್ಚಿಗೆಯನ್ನು ಪಡೆದಿರುವರು. ನಿಜ ... ತಿಯು ಹೀಗಿರುವಲ್ಲ, ಈಗ ಸರ್ವೀಸಿನಲ್ಲಿರುವವರ ಹೆಚ್ಚಿನ ... ದ್ರಿಯ ಹಕ್ಕನ್ನು ಎಣಿಸದೆ ಸರ್ಕಾರದವರು ಅವರಿಗೆ ... ಯ ಮಾಡಿದಂತಾಗುವುದು. ಕೆಲವು ಸೀನಿಯರ್ ... ಗಳಲ್ಲಿ ಅರ್ಹತೆಯು ಕಾಣ ಬಾರದೆ ಹೋದರೆ, ... ಇಲಾಖೆಯಲ್ಲಿ ಉತ್ತಮರಾದ ಮತ್ತು ಹೆಚ್ಚು ಗಟ್ಟಿಗರಾ... ಹೆಕ್ಕಿ ಖಾಲಿ ಸ್ಥಳಕ್ಕೆ ನೇಮಿಸಬೇಕು. ಡೆಪ್ಯುಟಿ ಸ... ಪರಿಂಟೆಂಡೆಂಟರ ಸ್ಥಳವನ್ನು ವಹಿಸಿಕೊಂಡ ಹೆಚ್ಚಿನ ಕಾ... ರ್ಯನಿರ್ವಾಹಕ ಶಕ್ತಿಯುಳ್ಳ ಕೆಲಸ ಮಾಡುವಂಥ ಸರ್ಕಲ್ ... ಮತ್ತು ಪ್ರೋಸಿಕ್ಯೂಟಿಂಗ್ ಇನ್‌ಸ್ಪೆಕ್ಟರುಗಳು ಖಂಡಿತ ... ಯೂ ಈಗ ಇರುವರು. ಹಾಗೆಯೇ ಸ್ವಲ್ಪವೂ ಹಿಂಜರಿಯದೆ ಸರ್ಕಲ್ ಮತ್ತು ಪ್ರೋಸಿಕ್ಯೂಟಿಂಗ್ ಇನ್ಸ್‌ಪೆಕ್ಟರುಗಳಾಗಿ ನೇಮಿಸಲ್ಪಡಬಹುದಾದ ಚುರುಕಾದ ಮತ್ತು ಮೇಧಾ ಶಕ್ತಿ... ಸಬ್ ಇನ್‌ಸ್ಪೆಕ್ಟರುಗಳೂ ಇರುವರು.

ಈ ಉದ್ಯೋಗಗಳ ನೇಮಕವು ದೇಶದ ಜನರ ಮನಸ್ಸನ್ನು ಚಳವಳಿಗೊಳಿಸಿದೆ, ಮತ್ತು ಕೆಲವು ವ್ಯಕ್ತಿಗಳಿಗೆ ... ತೋರಿಸಲಿಕ್ಕಾಗಿ ಸರ್ಕಾರದವರು ಬೇಕಂತ ತಪ್ಪು ದಾರಿಯಲ್ಲಿ ಹೋಗುವರೆಂದು ಜನರು ಯೋಚಿಸುವಂತೆ ಮಾಡುತ್ತಿರುವರು. ನಾನು ಆ ಅಭಿಪ್ರಾಯದವನಲ್ಲವಾದರೂ, ಅಧಿಕಾರಿಗಳು ಕೈಕೊಳ್ಳಲು ಯೋಚಿಸುತ್ತಿರುವ ದಾರಿಯಲ್ಲಿ ನ್ಯಾಯವು ನನಗೆ ಕಂಡುಬಾರದೆ ಇರುವಾಗ ನನ್ನ ಅಭಿಪ್ರಾಯವನ್ನು ಬದಲಾಯಿಸದೆ ಸಾಧ್ಯವಿಲ್ಲ. ಆದುದರಿಂದ ದೇಶದವರ ಅಭಿಪ್ರಾಯವನ್ನು ತಿಳಿದಿರುವ ನಾನು ಅವರ ಪರವಾಗಿ, ಇಲಾಖೆಯಲ್ಲಿರುವ ಉದ್ಯೋಗಸ್ಥರ ಹಕ್ಕುಗಳಿಗೆ ಹೆಚ್ಚಿನ ಸಹಾನುಭೂತಿ ಮತ್ತು ಯೋಚನೆ ಕೊಡುವಂತೆ ಕಮಿಶನರವರಿಗೂ ಮತ್ತು ಚೀಫ್ ಕಮಿಶನರವರಿಗೂ ಅಪ್ಪೀಲು ಮಾಡುತ್ತೇನೆ. ಇಲ್ಲವಾದರೆ ಜನರ ಮನೋಭಾವನೆಯು ಬಹು ಮಟ್ಟಿಗೆ ... ದಲಿಸಲ್ಪಡುವದೆಂಬ ಭಯವಿದೆ.

'ಪ್ಲಾಂಟರು'

ಪದ್ಯ ವಿಮರ್ಶಕರ ವಿಮರ್ಶೆ.

ಅಯ್ಯಾ ಸಂಪಾದಕರೇ,

ನಾನು ಪದ್ಯ ಬರೆಯುವ ದಾರಿಯಲ್ಲಿ ಅಂಬೆಗಾಲಿಡುವಾಗಲೇ ಪ್ರೋತ್ಸಾಹ ಕೊಟ್ಟದ್ದಕ್ಕೆ ನಿಮಗೆ ನಾನು ಚಿರಋಣಿಯಾಗಿರುವೆನು. ಆದರೆ "ಸಾಹಿತ್ಯ ಪ್ರೇಮಿ" ಎಂದು ಲಕ್ಷಣವಾದ ನಾಮವನ್ನು ತಾಗೆಯು ನವಿಲು ಗರಿಗಳ ತೊಟ್ಟಂತೆ ಸ್ವತಹ ಧರಿಸಿ ಹೊರಟಿರಾದ "ಕವಿ" ಎಂಬ ಬಿರುದನ್ನು ನನಗೂ ಹೊರಿಸಿದವರು ನಿಜವಾದ ಪಂಡಿತ ಶಿರೋಮಣಿಗಳೋ ಯಾ "ವಾಚಕರ ಅಜ್ಞಾನವನ್ನು ಕೊಳ್ಳೆ ಹೊಡೆಯುಗೆ" ಜ್ಞಾನದ ವಾಸನೆಯೂ ಸಹ ವಾಚಕರಲ್ಲಿ ಇರಬಾರದೆಂದು, ಸರಾಯಿ ಮಾರಿಕೆಯಿಂದ ಹೊಟ್ಟೆ ಹೊರೆಯುವ ಆ "ದೇವಿಯ" ಅಥವಾ "ದೇವರ" ಪೂಜಾರಿಗಳ ಪಂಗಡದವರೋ ಎಂದು ತಿಳಿಯಲು ಉತ್ತರವನ್ನು ಪ್ರಕಟಿಸಬೇಕೋರಿದ್ದಾಯಿತು.

ಸ್ವಾಮಿ, ಗುರುಗಳಲ್ಲಿ, ಸಾಷ್ಟಾಂಗ ನಮಸ್ಕಾರ. ನಿಮ್ಮ ವಿಮರ್ಶೆಯನ್ನು ಓದಿ ಅತಿ ಸಂತೋಷ ಪಟ್ಟೆನು. ಈ ... ಮಣಿಗೆಯು ಶ್ಲೇಷಾರ್ಥದಿಂದಲ್ಲ. ಈ "ಲಗ್ನವೇ" ... ಪದ್ಯಕಿಂತ ಮೊದಲು ಲೇಖಕರಹಸ್ಯದಲ್ಲಿ 'ಎಳೆ ಬಾಲನ ಪದ್ಯ,' "ವಿದ್ಯಾರ್ಥಿಯಲ್ಲಿ," "ಜೀವಚರಿತ್ರೆ," "ಕೊಡಗಿನಲ್ಲಿ" "ಶಿವಾಧೀನ ಪಾಪ್ಪಂಗಳ ಕುಶಾಲಪ್ಪನವರಿಗಾಗಿ ಮೊರೆ"ಯ

ನ್ನು ಪ್ರಕಟಿಸಿದ್ದೀರಿ. ಆಗ ನೀವು ಈ ರೀತಿ ವಿವರಿಸಿ ನ ನ್ನ ತಪ್ಪುಗಳನ್ನು ತೋರಿಸಿದ್ದರೆ ನಾನು ನಿಮ್ಮ ಪಾದ ಸೇವೆಯನ್ನು ಅಂಗೀಕರಿಸಿಕೊಳ್ಳುತ್ತಿದ್ದೆ. ಏನಾದರೂ ನೀವು ಪ ತ್ರಿಕೆಯಿಂದ ಒಂದು ಅಥವ ಜ್ಞಾನಾರ್ಜನ ವ ಗ್ಗರಾಗಿದ್ದಲ್ಲಿ ಬೇಕು ನಮ್ಮಂಥ ಅಲ್ಪಜ್ಞಾನಿಗಳಿಗೆ ಸಾಹಿತ್ಯ ಕೃಷಿಯೋಗ್ಯವಾಗ ಬೇಕು ಯನ್ನು ಶೋಧಿಸ ಹೊರಟಿದ್ದಕ್ಕೆ ಎಷ್ಟು ಮಂದಿಯಾದರೂ ಸ್ವಲ್ಪ ಬೇ. 'ಇತರ ಸಾಹಿತ್ಯ ಪ್ರೇಮಿಗಳ ಮನಸ್ಸನ್ನು ಬೇಗನೆ ಬ ಹುದಾದ ಅಂಥಿಕೆಯೂ ನನ್ನಲ್ಲಿಯೂ ಇತ್ತು. ಆದರೆ ಹಾಗೆ ತಿಳಿಸಿಯಾದರೂ ನಿಮ್ಮಂಥ ಗುರುಗಳನ್ನು ಗೊತ್ತು ಹಚ್ಚಲು ಹೋದ ಉಪಾಯವು ಈ ಮೂರು ವರ್ಷಗಳಿಂದ ಇಂದು ಫ ಲಕಾರಿಯಾಯಿತು. ನಾನೇ ಧನ್ಯನು. ಆದರೆ ನಿಮ್ಮಲ್ಲಿ ಒಂದು ನ್ನಪ. ನಿಮ್ಮ ನಿಜವಾದ ವಿಳಾಸವನ್ನು ತಿಳಿಸಿದ ರೆ ಸ್ವತಃ ಬಂದಾಗಲೀ, ಲೇಖನಾ ರೂಪದಿಂದಾಗಲೀ ನಿ ಮ್ಮಿಂದ ವಿದ್ಯಾರ್ಜನೆಯನ್ನು ಮಾಡಬೇಕೆಂದು ಬಹಳ ಆಶಾ ತುರನಾಗಿರುವೆನು. ನೀವು ನಿಮ್ಮ ಹೆಸರನ್ನು ಪ್ರಕಟಿಸಲು ಉಪೇಕ್ಷಿಸುವಿರಾದರೆ ನನ್ನ ಪೂರ್ಣ ವಿಳಾಸವನ್ನು ಕೆಳಗೆ ಕೊ ಟ್ಟಿರುವೆನು. ಅದಕ್ಕನುಸಾರವಾದರೂ ನನಗೆ ಬರೆದು ನನ್ನನ್ನು ಪೊರೆಯಬೇಕು.

ಸ್ವಾಮಿ ನೀವು ತರೆಹುರಟೆ ಪದಿಶ ವ ಅಲ್ಪ ಎನ್ನಿದ ಮ ಹಾಗವಿ ಗಳಾಗಿದ್ದರೆ ನಿಮ್ಮ ತಂದೆ ತಾಯಿಗಳು ಹಾಕಿದ ಹೆ ಸರನ್ನು ಮರೆಯಲ್ಲಿಟ್ಟು ಕಾ ಗಂಭೀರವಾದ ಎರವಲ ಹೆಸರನ್ನು ಧರಿಸಿದ್ದು ನೀತಿಯೇ! ತೊದಲು ನುಡಿಯದೆ ಹುಟ್ಟಿದಾ ಗಲೇ ತಾಯಿಗೆ ಮಂತ್ರೋಪದೇಶವನ್ನು ಮಾಡಿದ ಕ ಬನವರು ನೀವಾಗಿರಬೇಕು. ಆ ಕಾರಣ ನನ್ನ ಧನವನ್ನು ತುಚ್ಛೀಕರಿಸು ವುದು ನೀತಿಯೆ ಸರಿ! ಸ್ವಾರಸ್ಯವೆಂದರೇನು? ನಾನು ಬರೆದ ದರಲ್ಲಿ ಇರಲಿಲ್ಲವೋ? ನಿಮ್ಮ ಮೆದುಳಿನಲ್ಲಿ ಕೂಸ್ಯವೋ! "ಧೋರಣೆಯಲ್ಲಿ ಬರೆದರೂ ಛಂದಸ್ಸನ್ನು ಅನುಸರಿಸದ್ದ ರೂ" ಎಂದು ಸಕ್ಷವನ್ನು ನುಡಿದದ್ದು ನಿಮ್ಮ ನೀತಿಗೆ ವಿರೋ ಧವಾಗಿ ಕಾಣುತ್ತೆ!

'ಈ ಕವಿಯು ಕೆಲವು ಕನ್ನಡ ಪಂಕ್ತಿಗಳನ್ನು ಓದಲು ಸುಲಭವಾಗುವ ಧೋರಣೆಯಲ್ಲಿ (a good style of composition Kittel Dict) ಬರೆಯಬೇಕಾದ ಅವ ಶ್ಯವಿಟ್ಟಿರುವರೇ ಹೊರತು ಬೇರೇನು ಇಲ್ಲ. ನಿಮ ನಂತೆ ಬೇ ರೇನು ಪ್ರಯತ್ನ ಪಡಲಿಲ್ಲ. ತುಳುವನ್ನಾಗಲೀ ಕನ್ನಡವನ್ನಾ ಗಲೀ ಒರೆಯಲು ಯತ್ನಿಸಿ ಕನ್ನಡವಾಯಿತೆಂದು ತಿಳಿದಿರಾ? ಕವಿತಾರಸ ಶೂನ್ಯವಾಗಿತ್ತೇ? ಹಾಗಿದ್ದು ನೀವು ಪದ್ಯವನ್ನು ಉತ್ಸಾಹದಿಂದ ಓದಿ ಮುಗಿಸಿದಿರಿ. ಇದ ಮನಸಾಕ್ಷಿಗೆ ಒಪ್ಪಿಸುದಿದದ್ದೋ? ಜ್ಞಾನ ಶೂನ್ಯವಾಗಿತ್ತೇ? ಲೋಕವೇ ಕೇಂದ್ರ ಸಾರಾಯಿ ಬೇಡವೆಂದು ಕೂಗುತ್ತಿರುವಾಗ ನಾನು ಹೊಸದೇನು ಬರೆಯಲಿ? ಸಾಮಾನ್ಯರಿಗೆ ಅರಿಯುವಂತೆ ಕೂಡ ಬಂಧವಾಗುವಂತೆ ಪದ್ಯರೂಪದಲ್ಲಿ ಬರೆದೆನು. ಹೊಸ ವಿ ಷಯು ಶೇಕ್ಸ್‌ಪಿಯರ್ ಕಾಳಿದಾಸರೇ ಬರೆಯಲಿಲ್ಲ. ನನ್ನಂ ತವರು ಬರೆಯುವುದೆಲ್ಲಿ? ಲೋಕದಲ್ಲಿ ಇಲ್ಲದ ಹೊಸ ಜ್ಞಾನ ವನ್ನು ತರುವುದು ನಿಮ್ಮ ಪಾಲಿಗಿರಲಿ.

ಹ್ಯಾಗೂ ತಪ್ಪಿ ನನ್ನನ್ನು ಕವಿಯೆಂದು ಕಲ್ಪಿಸಿದಿರೀ ಅದು ನಿಮ್ಮ ಕಾರಣವಿಲ್ಲದೆ ಹುಳುಕು ಹುಡುಕುವ ನೀತಿಗೆ ವಿರೋಧವಲ್ಲವೇ? ಮುದ್ರಣ ದೋಷಗಳ ಮೇಲೆ ಕೆಲವು ಕೊರತೆಗಳನ್ನು ಸೂಚಿ ಹಾಕುವುದು ನಿಮ್ಮ ಮುಖ್ಯ ಮಾತ್ರ ವೆಂದು ತೋರುತ್ತೆ. ಏನೆನಿಸ ಆ ಕವನ ತಪ್ಪುಗಳಿವೆ ಅ ದು ನನ್ನ ತಪ್ಪೆಂದು ತಿಳಿಯುವರು. ಈ ಇಲಿಗ ನ್ನು ಹುಲಿಯಾಗಿಸಿದ್ದು ನಿಮ್ಮ ನೀತಿಗನ ಸಾರವೇ ಸರಿ! 'ಮಾ ದಿದ ಮೊದಲಾದ ಶಬ್ದಗಳನ್ನು ನಾನು ಉಪಯೋಗಿಸಿದ್ದು ವಿಚಿತ್ರರೂಪಗಳೇ? ಇದು ಗ್ರಾಮ್ಯವೆನಿಸೀ ಪದಭಾಷೆಯೆಂ ದೋ? ಮೈಸೂರಿನ ಈಗಿನ ಪದ್ಯಗಳನ್ನು ಓದಿದ್ದೀರಾ? ಕವಿ ತಾಸ್ವಾತಂತ್ರ್ಯಕ್ಕೆ ಎಲ್ಲಿ ಇದೆಯೋ? ಅದು ಎಷ್ಟು? ನೀವೊ ನಾಗವರ್ಮರೋ ಅದು ಇಲ್ಲದ್ದು. ಪುಟ್ಟಪ್ಪನವರು ಕವಿ ಶಿಷ್ಯರೂ ಪ್ರಾಚೀನಾಚಾರ್ಯರು ಮೊದಲಾದ ಕವಿಗಳು ಈ ಎಲ್ಲೆ ಯೊಳಗೆ ಒದ್ದಾಡುತ್ತಿರುವರೆ? ನೀವು ಜೈಮಿನಿಯ ನವ ಕಾಲಿಕರಾಗಿದ್ದರೆ ನಿಮ್ಮ ಮನಸು ರಂಗೆದ್ದದೇ ಸರಿ. ಕೇವ ಲ ಪ್ರಕಟಣೆಯಿಂದ ಉತ್ಸಾಹ ಬರುವುದು. ನನಗಲ್ಲ ಗಾಳಿ ತ ಗುಲದ ಸ್ವಲ್ಪ ಬೆಳಗಿರುವ ಕೋಣೆಯಲ್ಲಿ ಕೂತು ಮನಸ್ಸಿನ ಕಲ ಸ ಮಾಡ ವವರಿಗೆ! ನಾನು ಪದ್ಯದ ಮಧ್ಯದಲ್ಲಿ ಒಂದ ಸಂಗತಿ ಯನ್ನೇ ಕೆಲವು ಸ್ಥಳದಲ್ಲಿ ಬರೆದಿದ್ದೇನೆ. ಅದೇ ಅಭಿ ಪ್ರಾಯವನ್ನು ಮನಸಿನಲ್ಲಿಟ್ಟು ಅಲ್ಲವೇ? ಎಂದು ಪದ್ಯ ವನ್ನು ಪ್ರಕಟಿಸಿದ್ದು ಇತು.

ನಿಮ್ಮ ಕಡೇ ಎರಡು ವಾಕ್ಯಗಳನ್ನು ನಾವು ಓದುವೆಂ ದ ನೀವೇ ಓದಿ ನೋಡಿ. ಅಲ್ಲದೆ ಪುನಃ ನೀವು ಇದಕ್ಕೆ ಉತ್ತರ ಬರೆಯುವುದಿದ್ದರೆ ನಿಮ್ಮ ಪೂರ್ಣ ವಿಳಾಸವನ್ನು ಕ ಡದಿದ್ದರೆ ಅದಕ್ಕೆ ಉತ್ತರ ಬರೆವೆನು. ನಾನು ಬಯಲಲ್ಲಿ ನೀವು ಮರೆಯಲ್ಲಿ ನಿಂತು ಹೋರಾಡುವುದು ಹೇಗೆ?

ಮೈಸೂರು ಸಿಟಿ — ನ ಚ ಸುಬ್ಬಯ್ಯ
ವೀರಭದ್ರಪೇಟೆ — ಉಪಾಧ್ಯಾಯ

ಒಂಟಿಯರ್ ಶಾಲೆಯ ಮೊದಲನೆಯ ವಾರ್ಷಿಕೋತ್ಸವ

ಇದೇ ಜೂನ್ ತಾ 7ನೇ ಪವಿತ್ರವಾರ ದಿನ ನಮ್ಮ ಒಂ ಟಿಯರ್ ಶಾಲೆಯ ಮೊದಲನೆಯ ವಾರ್ಷಿಕೋತ್ಸವವು ಕೊ ಡಗು ಶಾಲಾ ಸ ಇನ್ಸ್‌ಪೆಕ್ಟರಾದ ಮೆ. ಬಿ. ಎಸ. ಕುಶಾ ಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಟ ಓಟಗಳು ಬೆ ಳಿಗ್ಗೆ 10 ರಿಂದ 1 ಗಂಟೆಯ ವರೆಗೆ ನಡೆಯಿತು. ಸಾಧಾರ ಣ 200 ಜನರು ಹಾಜರಿದ್ದರು. ತದನಂತರ ಕೂಡಿದ ಜನರಿ ಗೆಲ್ಲಾ ಊಟ ಉಪಚಾರ ನಡೆದವು. ಆ ಮೇಲೆ 2 ಗಂಟೆ ಯಿಂದ ಅಧ್ಯಕ್ಷರು ಗೆದ್ದ ಬಾಲಕ ಬಾಲಕೀಯರಿಗೆ ಮ ಕ್ಕಳ ಪತ್ನಿಯರುಗಳೂ ಬಹುಮಾನಗಳನ್ನು ಹಂಚಿದರು. ಆ ಮೇಲೆ ಬಾಲಿಕಿಯರ ಸಂಗೀತವಾಗಿ ಸಭಿಕರ ಮನಸ್ಸು ಆನಂದಗೊಂಡಿತು. ತರುವಾಯ ಶಾಲಾ ಮಾಸ್ಟರು ಶಾ ಲೆಯ ರಿಪೋರ್ಟನ್ನು ಓದಿದರು. ನಂತರ ಅಧ್ಯಕ್ಷರು ನೆರೆ ದ ಸಭೆಯವರಿಗೆಲ್ಲಾ ಮಕ್ಕಳಲ್ಲಿ ತಂದೆ ತಾಯಿಗಳು ನಡೆಸು ಕೊಳ್ಳತಕ್ಕ ಜ್ಞಾನ ಮಾರ್ಗವನ್ನೂ ನಮ್ಮ ದೇಶ ಮತ್ತು ಇಂ ಗ್ಲೆಂಡಿನಲ್ಲಿ ನಡೆಯುವ ವಿದ್ಯೆಗೆ ಇರುವ ವ್ಯತ್ಯಾಸಗಳನ್ನು ವಿ ವರಿಸಿ ಭಾಷಣವನ್ನು ಮಾಡಿದರು.

ಮೆ. ಬಿ. ಜೆ. ಬಂಗೇರರವರು ಈ ಶಾಲೆಯ ಸಮ್ಮಂಧವಾ ಗಿ ಒಂದೆರಡು ಒಳ್ಳೆಯ ಮಾತುಗಳನ್ನು ಆಡಿದರು. ಆ ಮೈ ಕೆ ಉಪಾಧ್ಯಾಯರ ವರದಿಯಲ್ಲಿ ಕಂಡ ಮೇರೆ ಈ ಶಾಲೆಗೆ ಅತ್ಯಗತ್ಯವಾಗಿ ಒಬ್ಬ ಅಸಿಸ್ಟೆಂಟು ಮಾಸ್ಟರು ಮತ್ತು ನೀರಿನ ವಿಷಯವಾಗಿ ಒಬ್ಬ ಜವಾನನು ಬೇಕೆಂಬ ವಿಷಯವನ್ನು ಒ ತ್ತಿ ಹೇಳಿದ್ದಲ್ಲಿ ಪಂಚಾಯಿತದಾರರ ಮತ್ತು ಶಾಲಿ ಮಾಸ್ಟ ರ ಸಹ ಒತ್ತಾಸೆ ಇದೆ. ಈ ಕೋರಿಕೆಯನ್ನು ಅಧಿಕಾರಿಗ ಳು ಬೇಗನೆ ನಡಸಿಕೊಡುವಂತಾಗಿ ನಂಬಲಾಗಿದೆ.

ಆ ಮೇಲೆ ಮಂಗಳ ಹಾಡಿ ಸಭೆಯವರಿಗೆಲ್ಲಾ ತಿಂಡಿ ತೀ ರ್ಥವು ಹಂಚಿದ ನಂತರ ಸಭೆಯು ಬರಖಾಸ್ತಾಯಿತು.

ಯಂ ಯಂ ಸೋಮಯ್ಯ

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ
ಮಂಗಳೂರು ದ ಕನ್ನಡ.

ಯಾವತರ್‍ಹ ಬಗೆಯ ರಬ್ಬರು ಮೋಹರುಗಳು ತನ್ನ ಡಿಯ ಸ್ಟೆನ್ ಬೋರ್ಡು, ಪಾಕೆಟ್ ಟಿಕೀನ್ ಬ್ಲಾಕ್ ಇತ್ಯಾ ದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಬಾಳಿಕೆ ಬರುವಂತೆ ತಯಾರಿಸಿ ಕೊಡಲಾಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕಾಗಲೀ ಯಾ ನಮ್ಮ ವ ಏಜೆಂಟ ಮೆ. ಯನ್. ಯನ್. ಪೊನ್ನಪ್ಪ ನವರಿಗಾಗಲೀ ಬರೆದುಕೊಳ್ಳುವದು.

12—11

"ರೂಪಾಯಿಗಳು 5-8-0 ಮಾತ್ರ.
ನಮ್ಮ ಉಚಿತ ಜೀವವಿಮೆಯು
ಅನೇಕ ಬಡಬಗ್ಗರನ್ನು ಕಾಪಾಡಿದೆ.
ನೀವೇಕೆ ಹೊಂದಬಾರದು?
ಈಗ ಆಗಲೇ 72,000 ಜನಗಳು ಮೆಂಬರಾಗಿದ್ದಾರೆ
ಹಾ ರೂ 2,00 000
ಬಡವರಿಗೆ ಭಾಗ್ಯಶಾಲಿ! ಎಲ್ಲರಿಗೂ ಅನುಕೂಲ!!

WANTED.

Agents for Coorg on liberal Commission or decent pay per month

Apply to—

The Branch Secretary
The Venus Assurance Co, Ltd
Bore Bank Road,
Benson Town,
12-8 Bangalore City.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಬಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟನ್‌ಪೆನ್‌ಗಳು

ಕೆಲ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ 3	0	0	
,, ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0	
,, ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0	
,, ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಗಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0	
ಮೊಗಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0	
,, ಸೆಲ್ಫ್ ಫಿಲ್ಲಿಂಗ್ ಮೊಗಲ್ ಆದವ ಬ್ರವುನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0	
[illegible]ಗ್ ಸ್ಪಾಟ್ ಫೌಂಟನ್‌ಪೆನ್ 1ಕ್ಕೆ	10	8	0	
[illegible]ರ್ಡರ್ ಪೆನ್ 1ಕ್ಕೆ	14 6 0, &	20	10	0
[illegible]ಕಾಟರ್ ಫೌಂಟನ್‌ಪೆನ್ 1ಕ್ಕೆ	3 8 0, &	3	12	0
[illegible]ನ್ ಫೌಂಟನ್ ಪೆನ್ 1ಕ್ಕೆ	6 4 0, &	6	12	0
ಶ್ಯಾಮನ್ ಫೌಂಟನ್ ಪೆನ್ 1ಕ್ಕೆ	8 0 0, &	8	10	0

ಟೈಂಪೀಸ್‌ಗಳು.

ಲೈಟ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0	
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0	
ಬಗೆಬಗೆ ಆಕಾರದ ಟೈಂಪೀಸ್ 1ಕ್ಕೆ	6 9 0 &	6	15	0
ಬಗೆಬಗೆ ಸ್ವಿಸ್‌ಮೇಡ್ ಆಕಾರದ ಟೈಂಪೀಸ್ 1ಕ್ಕೆ	7	[illegible]	0	
ಬಗೆಬಗೆ ಆಕಾರದ ಸಣ್ಣ ಟೈಂಪೀಸ್ ರೆ ಡಿಯಂ ಡೈಲ್‌ದ 1ಕ್ಕೆ	8	10	0	
ಜರ್ಮನ್ ಆಕಾರದ ಟೈಂಪೀಸ್ 1ಕ್ಕೆ	9	6	0	
ಜರ್ಮನ್ ಆಕಾರದ [illegible] ಬಾಕ್ಸ್ ಇರುವ ಟೈಂಪೀಸ್ 1ಕ್ಕೆ	13	4	0	
ಖಾತ್ರಿಯುಳ್ಳ ಬಂದೋಬಸ್ತಾದ ಪಾಕೆಟ್ ವಾಚ್ 1ಕ್ಕೆ	5	10	0	
ಡಜೋ ನಮೂನೆಯಲ್ಲಿ ಎಚ್ಚರಿಸುವ ಕಂಪನಿಯ ಪಾಕೆಟ್ ವಾಚ್ 1ಕ್ಕೆ	1	4	0	
ನಿಕ್ಕಲ್ ಕೇಸ್ ಸಿಲಿಂಡರ್ ಮೂವ್‌ಮೆಂಟ್ ಸಾಧಾರಣ ತರದ ರಿಸ್ಟ್ ವಾಚ್ 1ಕ್ಕೆ	5 4 0, 7 8 0 10 0 0 &	12	8	0



ಇಲ್ಲಿ ನಮೂನೆ ಎಯ ನಮೂನ ಅಂದ ವಾದ ಟೇಬಲ ಟೈಂಪೀ ಸ್ 1ಕ್ಕೆ 3—6—0 ಪ್ಯಾ ಕಿಂಗ್ ಪೋಸ್ಟೇಜು ಬೇರೆಯಾಗಿ

ಮನಿಯಾರ್ಡರ್ ರವಾನಿಸುವ ವಿಳಾಸ—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—49

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಇದು ಕ್ರೆಡಿಟ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

	ರೂ
ಶೇರ್ ಬಂಡವಾಳ —	5 000
ವಸೂಲಾದ ಶೇರ್ ಮೊಬಲಗು —	23 160
ಜಮೂಬಂದ ಠೇವಣಾತಿ —	2 16 472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಿಯಾನ ದರ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಗ ಕೊಂಡಾಗ ಕೂಡ ಪಟೇಟಿವ್ ರಜಿಸ್ಟ್ರಾರವರು ... ಅ... ಗಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟರು	ಕೈ ರಕ್ಟರ್
...ಡಂಗ್ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾ ಬಹದ್ದೂರ್	ನವರು

ಸೆಕ್ರೆಟರಿ

... ಜುನ್ ವೆಂಕಟ ಯ ನವರು, ಬಿ. ಎ., ಬಿ. ಎಲ್.

ತಾರೀಖು 1—7—1930

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವ

ಬಾಲಾಮೃತ.

ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುತ್ತಾರೆ.
ಕೆ. ಟಿ. ಡೋಂಗರೆ ಕಂಪನಿ,

52—2   ಗಿರಿಗಾಂವ, ಮುಂಬಯಿ.

Rubber Stamps of every design
and
Glass sign boards Half tone Blocks
Monogram seals Marble slabs ring
stones etc etc to suit every pocket and
taste For further particulars please
apply to—

The Crown Rubber Stamp Co,
Mangalore, S. K.
Or
Mr. N N Ponnappa,
Agent,
12-11 **Mercara.**

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳ—544 ಲಕ್ಷ ರೂಪಾಯಿ ವಿಮೆ ... 26481 ಪಾಲಿಸಿಗಳ

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ   ಒಟ್ಟು ಪ್ರೀಮಿಯಮಿನ ವರಮಾನ—179 ...

ವಿಮೆದಾರರಿಗೆ ಕೊಟ್ಟದ್ದು— 3281 ಜನರಿಗೆ 81 ಲಕ್ಷ ರೂ   ಪಾಲಿಸಿದಾರರಿಗೆ ಸಾಲ—8013 ಜನರಿಗೆ

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1 78 322 ಜನರಿಗೆ 38ಕೋಟಿ ಮೇಲಿನ ಕಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22 4ರಕ್ಕಿಂತ ವಿಾರದ ಕಮ್ಮಿ ಖರ್ಚಿನಲ್ಲಿಯೇ ನಡಿಸ... ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ ಇದರ ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಉತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಮೇನೇಜರು, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ,

ಅಥವಾ ಕಂಪನಿಯ ಈ ಕೆಳಗಿನ ಯಾವ ಆಫೀಸುಗಳಿಂದಲೂ ಪಡೆಯಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ನೈರೋಬಿ	ರಂಗೂನು
ಅಹ್ಮದಾಬಾದು	ಕೊಲಂಬೋ	ಲಾಹೋರ್	ನಾಗಪೂರ	ರಾವಲ್ ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರ
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೆಂಗಳೂರು	ಡೌಂಗಾನ್	ಮಂಡಲೆ	ರಾಯಪುರ	ತಿರುವೆಂಡ್ರಂ
ಬೆಜವಾಡ	ಕರಾಚಿ	ಸಿಂಗಾಪೂರು	ರಾಂಚಿ	ವಿಶಾಖಪಟ್ಟಣ



ಕೊಡಗಿನ ಗುಡುಗುಡು ಎಂಬ ಚಳಿಜ್ವರಕ್ಕೆ ... ಉರಿ ... ರಕ್ತ ಗಟ್ಟಿಯಾದ ಜ್ವರ ಗೆಡ್ಡೆಗಳ ... ದ್ದು ಯಾವದೆಂದು ತಿಳಿದಿರಾ? ಇಗೋ ರಾಜ ಮದ್ದು ... ಸಂಪೂರ್ಣ ಜ್ವರವನ್ನು ಗುಣಪಡಿಸಿ ಗೆಡ್ಡೆಯನ್ನು ... ಗಿಸಿ ಬಿಡುತ್ತದೆ ... ಜ್ವರ ನಂಬು ಕ್ರಯ ಬಾಟ್ಲಿ ... ರಾಜನ್ ... 16— ...
ಕೆಂಪಾಗಿಂದು ಸಿರಪು ಗ್ಲುಟ

ಗುರುರುಪು ಉಬ್ಬಸ ನೀವಸದ ರೋಗದಿಂದ ... ಗಟ್ಟಿಯಾಗಿ ಎದೆಯಾಟಿ ಎದೆ ಮತ್ತು ಪಾರ್ಶ್ವ ... ಯುವುದಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಗ... ಗಕ ವಾಗಿಂದು ಸಿರಪು ಬ್ಲುಟಿ ಎಂಬದನ್ನು ತಕ್ಷಣ ತರಿಸಿ ಕುಡಿಯಲಿ ಕ್ರಯ ಬಾಟ್ಲಿಗೆ ರೂ. 1—8—0.

ಕೆಂಪಾಗಿಂದು ಸಿರಪು ಬನಲೀನ —ಶ್ವಾಸಕೋಶದ ಕ್ಷಯನೆಂಬ ರೋಗಕ್ಕೆ ಈ ಎರಪನ್ನು ಆರಂಭದ ... ಕೆಮ್ಮಲ್ಲಿ ಉಂಟಾಗುವ ... ಕೆಮ್ಮು ಎದೆನೋವು ರಕ್ತ ಬೆರತ ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿ ಮುಂಡುವರಿಯದಂತೆ ಶಾಶ್ವತ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 2 8—0

ಕೆಂಪಾಗಿಂದು ಸಿರಪು ಸೆಬೀನ ಸೇಲಿಯ.—ಹೆಂಗಸರ ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ... ವೆಂಬ ರೋಗದಿಂದ ಸೊಂಟನೋವು ಕೈಕಾಲು ಬತ್ತಲು ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಗೊಳಿಸುವುದು ಕ್ರಯ ಬಾಟ್ಲಿಗೆ ರೂ 3 8—0

ಕೆಂಪಾಗಿಂದು ಸಿರಪು ನೆಸಥೂಪ —ಪ್ರಮೇಹವೆಂಬ ಗುಪ್ತರೋಗವನ್ನು ಪಡಕೊಂಡು ಮೂತ್ರ ಎಂದು ಬಿಂದು ... ದ್ವಾರದೊಳಗೆ ಹುಂಡು ... ಮೂರ್ಛೆ ಕೊಡುವ ಹುದಿ ಬಂದದ ರೋಗಿಗೆ ... ಕಂಡ ತರಹದ ರೋಗವನ್ನು ಈ ಬಾಟ್ಲಿ ಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 2—8—0

ಶುದ್ಧ ಟಿಕ್ಚರುಗಳೂ ಹೋಮಿಯೋಪತಿ ಔಷಧಿಗಳೂ, ನಮ್ಮಲ್ಲಿ ದೊರೆಯುತ್ತವೆ

ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ ಅವುಗಳ ನಾನಾ ಬಗೆಯ ಸಾಮಾನುಗಳೂ ಬಿಸಿಗೆ ಇದಕ್ಕೆ ಒಳ್ಳೇ ತರದ ನಮ್ಮಲ್ಲಿ ನ್ಯಾಯವಾದ ಬೆಲೆಗೆ ಮಾರಲ್ಪಡುತ್ತವೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ

ವಿಳಾಸ —ಮಲೇರಿಯೂಸ ಕಂಪೆನಿ,

12—32   ಪಂಪನಕಟ್ಟೆ, ಅಗರ್ಬೈಲ್ 11 ಮಂಗಳೂರು ಪೋಸ್ಟು

ಸೂಚನೆ.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜಂಟರುಗಳಿಗೆ ಏಜಂಟ್ ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು

ಉತ್ತರ ಕೊಡಗಿಗೆ ವಿ, ಕಾಳೇಂಗಡ ಕಾರ್ಯಪ್ಪನವರು,
,,   ಮೆ ಚೆಂರಿರ ಮಾಚ್ಚಯ್ಯನವರು,
ದಕ್ಷಿಣ ಕೊಡಗಿಗೆ ಮೆ ಅಲ್ಲಾರಂಡ ಮೇದಪ್ಪನವರು,
,,   ಮೆ ಅಮ್ಮಂಡ ಸುಬ್ಬಯ್ಯನವರು
ಪ ಡೆನಾಡು—ಮೆ ಕೇಕಿರ ಅಪ್ಪಯ್ಯನವರು

ಸಬ್ ಏಜಂಟರುಗಳು

ವೀರರಾಜಪೇಟೆ—ಮೆ ಎಂಡೇಪಂಡ ಸೋಮಯ್ಯನವರು (ಖಾದಿಭಂಡಾರ)
ನಾಪೋಕ್ಲು—ಎಮ್. ಆರ್ ವೆಂಕಪ್ಪಯ್ಯನವರು
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು
ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರು
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು
ಪೊನ್ನಂಪೇಟೆನಾಡು—ಮೆ ಸಿ ಜೆ ಮುದ್ದಯ್ಯ...
ಮೆ ಸಣ್ಣುವಂಡ ಬೋಪ್ಪ...
ಮತು, ಆರಮೇರಿ...ಮಾಡ ... ಕಾರ್ಯಪ್ಪನವರು
ಹುದಿಕೇರಿ & ತಿತಿಮತ್ತಿ—ಮೆ ಜಿ ಮಾದಯ್ಯ...
ಸಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚ...

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿ... ರು ಚಂದಾ ಕೊಡಬಾರದಾಗಿ ಈ ಮೂಲಕ ...

ಮೇನೇಜರ್
ಕೊಡಗು ಲಿಮಿಟೆಡ್, ಮಾ...

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬ... ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾ... ಯದ ಉಪನಿಬಂಧನೆಗಳೂ ದಾವೆ ಬರೆದು ರಿಜಿಸ್ಟ್ರಾರ್... ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ... ವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸಲ್ಲಿ... ಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿ... ಬಾಗಿ ತಯಾರಿಸಲ್ಪಟ್ಟವಾದ ಫಾರಮುಗಳೂ ... ಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್... ಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್
"ಕೊಡಗು" ಮು...

Printed & published by P I Belliappa at "Kodagu" Press ...
for "Kodagu" Ltd

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ವೀತಿ ಪ್ರಯುಕ್ತಯಾ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಃ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ೧೯೨೩ನೇ ಇಸವಿ ಜೂನ್ ತಾರೀಕು ೧೯ ನೇ ಶುಕ್ರವಾರ. | ಸಂಚಿಕೆ ೩

Telegrams — "Precious"

V. Subramaniyer Jeweller,

Telephone:— 3145.

DIAMOND MERCHANT GOLD & SILVER SMITH.

Deals in all —
SPORTS CUPS in all prices
MEADALS in up to-date patterns
CASKETS in elegant styles

Nos. 2 & 3, Kuppumuthu st,
TIRUVATESWARANPET,
Post Box 423, Triplicane P. O.,
MADRAS.

Deals in all —
GEM-SET JEWELS, set with Diamonds Rubies etc,
GOLD ARTICLES of all patterns
SILVER WARE in latest style

52-31



ಈಗ ಕರೆದರೆ ಈಗಿನ ...

ತೋಟ, ಕತ್ತಿಗಳು, ಬಟೀಗಳು, ಕೋವಿಗಳು, ... ಮತ್ತು ... ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & Co.,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24-12

ಪ್ರಸಿದ್ಧ ... ಮಲೆಜ್ವರಕ್ಕೆ:—ಇದು ... ಗುಣವಾಗದಿರುವ ಮಲೆ ಜ್ವರ ದಿನಾ ಬರುವ ಜ್ವರ 3—4 ದಿವಸಕ್ಕೊಮ್ಮೆ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಬಾಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14

ಮಲೆ ಜ್ವರಕ್ಕೆ ರಾಮ ಕಷಾಯ

ಚಂದನಾಸವ —ಇದು ಪ್ರಮೇಹ ... ಮೂತ್ರ, ಹಳದಿಯಾಗಿ ಹೋಗುವುದು, ಮೂತ್ರರೋಗದ ಉರಿ, ಮೂತ್ರ ಹಿಂದಣಿಕೆ ಉರಿ, ಮೂತ್ರನಾಳದಲ್ಲಿ ... ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವುದಕ್ಕೆ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ ನಾಳದಲ್ಲಿ ... ಇವುಗಳು ... 35 ... 3 6ಕ್ಕೆ ... —1—0 3—8—0, ... —2—0

ರೋಗನಾಶಿನಿ:— ಈ ಮುಲಾಮನ್ನು ... ಕಡ್ಡಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ... ನೋವು ... ಶಿರೋರೋಗ ... ನೆನಪು ಶಕ್ತಿ ... ಕೂದಲನ್ನು ... ಬೆಳೆಯಿಸ ... ಸೀಸೆಗೆ ರೂ 1, 3 ಸೀಸೆಗೆ 2—10—0 ... ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ—ಮನೋಲ್ಲಾಸಿನಿ ಕಂಪೆನಿ,
ಕೆಮಿಕಲ್ ... ೨- ಮಂಗಳೂರು

52-6

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕ ಮಧುವನ್ನು ಕೊಡಿರಿ ಮಕ್ಕಳು ರೋಗ



ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿಯೂ ಬಲವೂ ಬರುವದು ... ದಿನಕ್ಕೆ ಆರೋಗ್ಯವೂ, ತೂಕವೂ ಹೆಚ್ಚುವದು ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತವೆ ಸೀಸೆ 1ಕ್ಕೆ 12 ಆಣೆ ಟ. ಖ. 9 ಆಣೆ.

ಆರ್ಡರ ಜೊತೆಯಲ್ಲಿ ಅಡ್ವಾನ್ಸು ಮೊಬಲಗು ಕಳುಹಿಸಿ ಕೊಡತಕ್ಕದ್ದು ಅಡ್ವಾನ್ಸು ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲ.

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ,
(ಮೈಸೂರು ಸೀಮೆ.)

52-23

ಕೊಡಗು.

ಸನ್ ೧೯೩೧ನೇ ಇಸವಿ

ಜೂನ್ ತಾ ೧೯ನೇ ಶುಕ್ರವಾರ.

ವರ್ಕಿಂಗ್ ಕಮಿಟಿಯ ತೀರ್ಮಾನ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ಮೀಟಿಂಗು ಈ ತಾ. 9ರಿಂದ 11ರ ವರೆಗೆ ಬೊಂಬಾಯಿಯಲ್ಲಿ ನಡೆಯಿತು. ಈ ಮೀಟಿಂಗಿನಲ್ಲಿ ಬಂಗಾಳ ಮತ್ತು ಡೆಲ್ಲಿಯ ಕಾಂಗ್ರೆಸ್ ಕಮಿಟಿಗಳ ಚುನಾವಣೆಯ ವಿವಾದಗಳನ್ನು, ರಾಷ್ಟ್ರೀಯ ಧ್ವಜ, ಇಂಡಿಯಾ ಸರ್ಕಾರದ ಸಾಲ, ಕಾನೂನು ಭಂಗ ಚಳವಳದಲ್ಲಿ ಮಾರಾಟವಾದ ಭೂಮಿ ಮುಂತಾದವುಗಳನ್ನೂ ಕುರಿತು ಚರ್ಚಿಸಿದರೂ, ಕಾಂಗ್ರೆಸು ಬರುವ ದುಂಡು ಮೇಜು ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳುವುದರ ವಿಷಯ ಮಾಡಿದ ತೀರ್ಮಾನವೇ ಬಹು ಮುಖ್ಯವಾದದ್ದಾಗಿದೆ. 'ಕೋಮುವಾರು ಚುನಾವಣೆಯ ಪ್ರಶ್ನೆಯನ್ನು ಗೌರವಯುಕ್ತವಾಗಿಯೂ ಮತ್ತು ತೃಪ್ತಿಕರವಾಗಿಯೂ ತೀರ್ಮಾನಿಸಲು ನಡಿಸಲ್ಪಡುತ್ತಿರುವ ಪ್ರಯತ್ನಗಳು ಜಯಪ್ರದವಾದೀತೆಂದು ವರ್ಕಿಂಗ್ ಕಮಿಟಿಯು ಆಶಿಸುತ್ತದೆ. ಆದರೆ ಈ ಪ್ರಯತ್ನಗಳು ಸಫಲವಾಗದಿದ್ದರೂ ಕೂಡ, ಕಾಂಗ್ರೆಸ್ಸಿನ ವರ್ತನೆಯು ಯಾವ ವಿಧದಲ್ಲಿಯೂ ತಪ್ಪು ತಿಳುವಳಿಕೆಯಾಗದಂತೆ ಮಾಡಲು, ಕಾಂಗ್ರೆಸ್ಸಿನ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳಿಕೊಂಡ ಪಕ್ಷ ಬೇರೆ ವಿದ್ಯಮಾನಗಳು ಹಿತಕರವಾಗಿದ್ದಲ್ಲಿ, ಮಹಾತ್ಮ ಗಾಂಧಿಯವರು ಕಾಂಗ್ರೆಸಿನ ಪ್ರತಿನಿಧಿಯಾಗಿ ದುಂಡು ಮೇಜು ಪರಿಷತ್ತಿಗೆ ಹೋಗತಕ್ಕದ್ದು.' ವರ್ಕಿಂಗ್ ಕಮಿಟಿಯ ಈ ತೀರ್ಮಾನವು ದೇಶದ ಜನಕ್ಕೆ ತೃಪ್ತಿಯನ್ನುಂಟುಮಾಡದೆ ಇರದು.

ಕೋಮುವಾರು ಪ್ರಾತಿನಿಧಿತ್ವದ ಸಮಸ್ಯೆಯು ಅಂದರೆ ಮುಖ್ಯವಾಗಿ ಹಿಂದುಗಳಿಗೂ, ಮುಸಲ್ಮಾನರಿಗೆ ಈ ಸಂಬಂಧ ಇರುವ ಭಿನ್ನಾಭಿಪ್ರಾಯವು ಎರಡು ಕಡೆಗಳಿಗೂ ಒಪ್ಪುವಂತೆ ತೀರ್ಮಾನಿಸಲ್ಪಡದೆ ಹೋದರೆ ತಾನು ದುಂಡು ಮೇಜು ಪರಿಷತ್ತಿಗೆ ಹೋಗುವುದಿಲ್ಲವೆಂದು ಮಹಾತ್ಮ ಗಾಂಧಿಯವರು ಈ ಮೊದಲು ಹೇಳಿದ್ದರು. ಹಿಂದೀಯರೊಳಗೆ ಉಂಟಾಗಿರುವ ಈ ಭಿನ್ನಾಭಿಪ್ರಾಯವನ್ನು ತಾವೇ ತೀರಿಸಿಕೊಳ್ಳಲು ಶಕ್ತರಲ್ಲವೆಂದು ಬೇರೆ ದೇಶದವರಿಗೆ ತಿಳಿಸುವುದು ತಮ್ಮ ಗೌರವಕ್ಕೆ ತುಂಬಾ ಹಾನಿಕರವೆಂಬುವುದೇ ಮಹಾತ್ಮ ಗಾಂಧಿಯವರ ಮೇಲಿನ ಹೇಳಿಕೆಗೆ ಕಾರಣವಾಗಿತ್ತು. ಆದರೆ ಮುಸಲ್ಮಾನರ ಕೋಮುವಾರು ತತ್ವವಾದಿಗಳ ವೀರ ಪಕ್ಷದವರು ಈ ಕಾರಣವನ್ನು ಒಪ್ಪಿಕೊಳ್ಳದೆ ಮೌಲಾನ ಶೌಕತ್ ಆಲಿಯವರಂತವರೇ ಕಾಂಗ್ರೆಸಿನವರು ದುಂಡು ಮೇಜು ಪರಿಷತ್ತಿನಲ್ಲಿ ಭಾಗ ವಹಿಸದೆ ಇರುವುದು ಸರಿಯಲ್ಲವೆಂದೂ, ಸದರಿ ಪರಿಷತ್ತಿನಲ್ಲಿಯೇ ಕೋಮುವಾರು ಹಕ್ಕುಗಳನ್ನು ಚರ್ಚಿಸಿ ತೀರ್ಮಾನಿಸಿಕೊಳ್ಳಬಹುದೆಂದೂ, ಈ ವಿಷಯವನ್ನು ದುಂಡು ಮೇಜು ಪರಿಷತ್ತಿನ ತೀರ್ಮಾನಕ್ಕೆ ಬಿಟ್ಟರೆ ಅದು ತನ್ನ ಕೈ ದಾಟಿ ಹೋ[illegible] ಕಾರಣದಿಂದ ಕಾಂಗ್ರೆಸು ಸದರಿ ಪರಿಷತ್ತಿಗೆ ಹೋಗಲು ಹಿಂಜರಿಯುತ್ತಿದೆಯೆಂದು [illegible] ಹೇಳುತ್ತಿದ್ದರು. ಈ ಮನೋಭಾವನೆ ಎಲ್ಲಾ ಮುಸಲ್ಮಾನರಿಗೆ ಮಹಾತ್ಮರ ಸ್ವಾಭಾವಿಕವಾದ ಕಾರಣವು ಒಪ್ಪಿಗೆಯಾಗದೆ ಹೋದದ್ದು ಆಶ್ಚರ್ಯವಲ್ಲ. 'ಕೋಮುವಾರು ಪ್ರಶ್ನೆಯನ್ನು ತೀರ್ಮಾನಿಸಲು ಮುಸಲ್ಮಾನರ ಎಲ್ಲಾ ಸಂಗಡಗಳು ಸೇರಿ ಒಬ್ಬ ಮುಂದಾಳನ್ನು ಚುನಾಯಿಸಿ ಕಳುಹಿಸಿ, ಇಲ್ಲವಾದರೆ ತಮ್ಮ ಎಲ್ಲಾ ಪಾರ್ಟಿಯವರಿಗೂ ಒಪ್ಪಿಗೆಯಾಗುವಂಥ ಅಭಿಪ್ರಾಯವನ್ನು ಕಳುಹಿಸಿ; ಅದಕ್ಕೆ ತಾನು ಕಾಂಗ್ರೆಸಿನ ಪರವಾಗಿ ಸಮ್ಮತಿಸಲು ತಯಾರಾಗಿದ್ದೇನೆಂದು' ಮಹಾತ್ಮ ಗಾಂಧಿಯವರು ಮುಸಲ್ಮಾನರ ಮುಖಂಡರನ್ನು ಕೇಳಿಕೊಂಡರೂ ಕೂಡ ಅವರಿಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ. ಆದರೆ ಅಂದಿನಿಂದ ಮುಸಲ್ಮಾನರಲ್ಲಿ ಮುಖ್ಯವಾಗಿ ಇರುವ ಎರಡು ಪಾರ್ಟಿಯವರು ಅಂದರೆ ಕಾಂಗ್ರೆಸಿಗೆ ಸೇರಿದ ರಾಷ್ಟ್ರೀಯ ಪಕ್ಷದವರು ಮತ್ತು ಮುಸ್ಲಿಂ ಕಾನ್‌ಫರೆನ್ಸಿಗೆ ಸೇರಿದ ಕೋಮುವಾರು ತತ್ವವಾದಿಗಳು, ಒಟ್ಟು ಸೇರಿ ಮಿಶ್ರ ಚುನಾವಣೆ ಇರಬೇಕೋ ಅಥವಾ ಪ್ರತ್ಯೇಕ ಚುನಾವಣೆ ಇರಬೇಕೋ ಎಂಬ ತಮ್ಮಲ್ಲಿರುವ ವ್ಯತ್ಯಾಸಗಳನ್ನು ರಾಜಿಯಿಂದ ತೀರ್ಮಾನಿಸಿಕೊಳ್ಳಲು ಪ್ರಯತ್ನಪಡುತ್ತಿರುವುದು ಶುಭ ಸೂಚನೆಯಾಗಿದೆ. ಈ ಸಂಬಂಧ ಭೋಪಾಲದ ನವಾಬರವರು ತೆಗೆದುಕೊಳ್ಳುತ್ತಿರುವ ತೊಂದರೆಗಳು ವಂದನೀಯವಾಗಿವೆ. ಭೋಪಾಲದಲ್ಲಿ ನಡೆದ ಮೀಟಿಂಗಿನಲ್ಲಿ ಯಾವ ತೀರ್ಮಾನವೂ ಆಗದೆ ಇದ್ದರೂ ಈ ವಿಷಯ ಚರ್ಚೆಯು ಮುಂದರಿಸಲ್ಪಡುವದಾದ ಕಾರಣ ಬೇಗನೆ ತೀರ್ಮಾನಕ್ಕೆ ಬರುವದೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಆಶಿಸುವುದರಲ್ಲಿ ನ್ಯಾಯವಿದೆ.

ಆದರೆ ಕೋಮುವಾರು ತೀರ್ಮಾನವಾಗದೆ ಹೋದರೂ ಕೂಡ ಕಾಂಗ್ರೆಸು ದುಂಡು ಮೇಜು ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳಬೇಕೆಂದು ಮಾಡಿದ ವರ್ಕಿಂಗ್ ಕಮಿಟಿಯ ಠರಾವಿನಿಂದ ಲಂಡನ್ ಕಾನ್‌ಫರೆನ್ಸಿನಲ್ಲೇ ಈ ವಿಷಯವು ತೀರ್ಮಾನಕ್ಕೆ ಬರುವದೆಂದು ನಂಬಿರುವ ಮುಸಲ್ಮಾನರ ಒಂದು ಪಾರ್ಟಿಯವರ ಸಂಶಯವನ್ನು ನಿವಾರಿಸಿದಂತಾಗುವುದಲ್ಲದೆ ಕೋಮುವಾರು ಸಮಸ್ಯೆಯ ಅಡಚಣೆಯಿಂದ ಕಾಂಗ್ರೆಸಿನವರು ಲಂಡನ್ ಪರಿಷತ್ತಿಗೆ ಹೋಗದೆ ಬಾಕಿಯಾಗಲೆಂದು ಆಶಿಸುತ್ತಿರುವ ಇಂಡಿಯಾ ಸ್ವಾತಂತ್ರ್ಯದ ಶತ್ರುಗಳಿಗೆ ಆಶಾಭಂಗವುಂಟಾಗುವುದರಲ್ಲಿ ಸಂಶಯವಿಲ್ಲ. ಮಹಾತ್ಮ ಗಾಂಧಿಯವರು ಈ ವಿಷಯದಲ್ಲಿ ತಮ್ಮ ಸ್ವಂತ ಅಭಿಪ್ರಾಯವು ಭಿನ್ನವಾಗಿದ್ದರೂ ಕೂಡ ದೀರ್ಘಾಲೋಚನೆ ಮಾಡಿ ವರ್ಕಿಂಗ್ ಕಮಿಟಿಯವರ ತೀರ್ಮಾನಕ್ಕೆ ಒಪ್ಪಿದ್ದು ಸಂತೋಷದ ಸಂಗತಿಯಾಗಿದೆ.

ವರ್ಕಿಂಗ್ ಕಮಿಟಿಯ ಮೇಲಿನ ಠರಾವಿನಲ್ಲಿ ಇನ್ನೊಂದು ಮುಖ್ಯ ಶರತ್ತಿದೆ. 'ಬೇರೆ ವಿದ್ಯಮಾನಗಳು ಹಿತಕರವಾಗಿದ್ದಲ್ಲಿ' ಎಂಬ ಮೂರು ಶಬ್ದಗಳು ತುಂಬಾ ಅರ್ಥಗರ್ಭಿತವಾಗಿವೆ. ಗಾಂಧಿ—ಇರ್ವಿನರ ರಾಜಿ ಒಪ್ಪಂದದ ಶರತುಗಳೆಲ್ಲವೂ ಸರಿಯಾಗಿ ನಡೆಸಲ್ಪಟ್ಟಿಲ್ಲ ಎಂಬುವುದೇ ಈ ಮೂರು ಶಬ್ದಗಳ ಅರ್ಥವೆಂಬುವುದು ಸ್ಪಷ್ಟವಾಗುತ್ತದೆ. ಈ ಶಬ್ದಗಳ ಅರ್ಥವು ವಿಷದವಾಗಿಲ್ಲವೆಂದು ಬ್ರಿಟಿಷ ಸರ್ಕಾರದವರೂ, ಇಂಡಿಯಾದ ವಿರೋಧಿಗಳೂ ಟೀಕಿಸಬಹುದು. ಅಂಥವರಿಗೆ ಈ ಶರತು ನ್ಯಾಯವೆಂದು ತೋರಲಿಕ್ಕಿಲ್ಲ. ಆದರೆ ಈ ಶರತು ಅತ್ಯವಶ್ಯವಾದದ್ದಾಗಿದೆ. ಡೆಲ್ಲಿ ಸಂಧಿಯ ಶರತುಗಳಿಗನುಸಾರವಾಗಿ ಸರ್ಕಾರಿ ಉದ್ಯೋಗಸ್ಥರು ನಡೆಯುತ್ತಿರುವುದಿಲ್ಲವೆಂತ ಪುಕಾರುಗಳು ಹುಟ್ಟಿ ಮಹಾತ್ಮ ಗಾಂಧಿಯವರು ವೈಸರಾಯರೊಂದಿಗೆ ಮಾತ್ರವಲ್ಲ, ಮಧ್ಯವರ್ತಿ ಸರ್ಕಾರದ ಮತ್ತು ಪ್ರಾಂತೀಕ ಸರ್ಕಾರಗಳ ಅಧಿಕಾರಿಗಳೊಂದಿಗೆ ಸಂಭಾಷಣೆ ನಡಿಸಿ ಸದರಿ ಒಪ್ಪಂದವನ್ನು ಕಾಪಾಡಲು ಸರ್ವಪ್ರಯತ್ನ ಮಾಡುತ್ತಿರುವರು. ಅಂಥಾದ್ದರಲ್ಲೂ ಕೂಡ ಬಿಹಾರ ಪ್ರಾಂತ್ಯದಲ್ಲಿ 200 ರಾಜಕೀಯ ಕೈದಿಗಳನ್ನು ಇನ್ನೂ ಬಿಡುಗಡೆ ಮಾಡಿರುವುದಿಲ್ಲವೆಂತಲೂ, ಸತ್ಯಾಗ್ರಹ ಕಾಲದ ಹೆಚ್ಚಿನ ಪೋಲೀಸಿನವರನ್ನು ವಜಮಾಡಿರುವುದಿಲ್ಲವೆಂತಲೂ, ಹಾಗೆಯೇ ವಾಯುವ್ಯ ಪ್ರಾಂತ್ಯದಲ್ಲಿ ರಾಜಿ ಶರತುಗಳು ಪಾಲಿಸಲ್ಪಡತ್ತಿಲ್ಲವೆಂತಲೂ ಶ್ರೀ ರಾಜೇಂದ್ರ ಪ್ರಸಾದ್‌ರವರು ಮತ್ತು ಶ್ರೀ ಅಬ್ದುಲ್ ಗಫಾರ್‌ಖಾನ್‌ರವರು ಮಹಾತ್ಮರಿಗೆ ತಿಳಿಸಿರುವರು. ಮಹಾತ್ಮರ ಕೋರಿಕೆಯಂತೆ ಕಾಂಗ್ರೆಸಿನವರು ಡೆಲ್ಲಿ ಒಪ್ಪಂದ ಪ್ರಕಾರ ನಡೆಯಲು ವಿಶ್ವಪ್ರಯತ್ನ ಮಾಡುತ್ತಿರುವಾಗ್ಯೆ ಸರ್ಕಾರಿ ಅಧಿಕಾರಿಗಳು ಅದನ್ನು ನಿರಾಕರಿಸಿ ವರ್ತಿಸುವುದು ಎಂದೂ ನ್ಯಾಯವಲ್ಲ. ಮುಖ್ಯ ಅಧಿಕಾರಿಗಳ ಹುಕುಂ ಬಂದಿಲ್ಲವೆಂದು ಕೆಳಗಿನ ದರ್ಜೆಯ ಉದ್ಯೋಗಸ್ಥರು ಈ ಒಪ್ಪಂದಕ್ಕೆ ವಿರೋಧವಾಗಿ ಕಾರ್ಯಗಳನ್ನು ನಡಿಸುತ್ತಿರುವ ಸಂದರ್ಭಗಳೂ ಇವೆ. ದೇಶದಲ್ಲಿ ನಿಜವಾಗಿಯೂ ಶಾಂತಿಯು ಸ್ಥಾಪನೆಯಾಗಬೇಕಾದರೆ ಪ್ರತಿಯೊಬ್ಬ ಉದ್ಯೋಗಸ್ಥನೂ ಗಾಂಧಿಯವರೊಡನೆ ಸಂಧಿಯನ್ನು ಮಾಡಿದ ಲಾರ್ಡ್ ಇರ್ವಿನ್‌ರವರ ಮನೋಭಾವನೆಯನ್ನು ಅರಿತುಕೊಂಡು ಅವರ (ವೈಸರಾಯರ) ಮಾತುಗಳನ್ನು ಅಕ್ಷರಶಃ ಪಾಲಿಸಲು ಸರ್ವ ಪ್ರಯತ್ನ ಮಾಡಬೇಕಾಗಿದೆ. ಇದರ ಬದಲು ಉದ್ಯೋಗಸ್ಥರು ತಮ್ಮ ಅಧಿಕಾರ ದರ್ಪವನ್ನು ತೋರಿಸಲು ಇನ್ನೂ ಯತ್ನಿಸಿದರೆ ಮಹಾತ್ಮರು ಚಕ್ರಗೋಷ್ಟಿಗೆ ಹೋಗುವ ದಾರಿಗೆ ಮುಳ್ಳು ಹಾಕಿದಂತಾಗುವುದು. ಮಹಾತ್ಮರ ದಾರಿಗೆ ಅಡ್ಡಗಟ್ಟಿ ಪುನಃ ಅಹಿಂಸಾ ತತ್ವದ 'ಯುದ್ಧ'ವನ್ನು ಪ್ರಾರಂಭಿಸುವಂತೆ ಅವರನ್ನು [illegible] ಅದರ ಪರಿಣಾಮವು ಎಷ್ಟು ಕಠಿಣತರವಾಗುವುದೆಂಬುದನ್ನು ಅಂಥಾ ಉದ್ಯೋಗಸ್ಥರು ಚೆನ್ನಾಗಿ ಆಲೋಚಿಸಬೇಕು.

ದುಂಡು ಮೇಜು ಪರಿಷತ್ತಿನಲ್ಲಿ ಇಂಡಿಯಾದ ಸ್ವಾತಂತ್ರ್ಯದ ಸಮಸ್ಯೆಯು ಸಮರ್ಪಕವಾಗಿ ತೀರ್ಮಾನಿಸಲ್ಪಡುವುದಿಲ್ಲವಾದ ಕಾರಣ ಅದಕ್ಕೆ ಹೋಗುವುದರಿಂದ ಪ್ರಯೋಜನವೇನೂ ಇಲ್ಲವೆಂತ ನಂಬಿದ ಪಕ್ಷವೊಂದೂ, ಆಂಗ್ಲೇಯರ ನ್ಯಾಯಪಂಕ್ತಿಯನ್ನು ಪರೀಕ್ಷಿಸಲು ಸದರಿ ಪರಿಷತ್ತಿಗೆ ಇನ್ನೊಂದು ಅವಕಾಶವನ್ನು ಕೊಟ್ಟರೆ, ತೀರ್ಮಾನಕ್ಕೆ ಬಾರದ ಜವಾಬ್ದಾರಿಯು ಕಾಂಗ್ರೆಸ್ಸಿನ ಮೇಲೆ ಬೀಳಲಿಕ್ಕಿಲ್ಲವಾದುದರಿಂದ ಕಾಂಗ್ರೆಸು ಸದರಿ ಪರಿಷತ್ತಿನಲ್ಲಿ ಭಾಗತೆಗೆದುಕೊಳ್ಳುವುದು ಉಚಿತವೆನ್ನುವ ಇನ್ನೊಂದು ಪಕ್ಷವೂ ವರ್ಕಿಂಗ್ ಕಮಿಟಿಯಲ್ಲಿದ್ದವು. ಎರಡನೇ ಪಕ್ಷದವರು ಬಹುಮತದವರಾದುದರಿಂದ ಮಹಾತ್ಮರು ಕಾಂಗ್ರೆಸಿನ ಏಕೈಕ ಪ್ರತಿನಿಧಿಯಾಗಿ ಚಕ್ರಗೋಷ್ಟಿಗೆ ಹೋಗತಕ್ಕದೆಂದು ನಿಶ್ಚಯಿಸಿದರು. ಇಂಡಿಯಾದ ಸಮಸ್ಯೆಯನ್ನು ರಾಜಿಯಿಂದ ತೀರ್ಮಾನಿಸಲು ಬ್ರಿಟಿಷರಿಗೆ ಎಲ್ಲಾ ಅವಕಾಶಗಳನ್ನು ಕೊಟ್ಟು, ಮತ್ತೂ ಅವರು ಹಿಂದೀಯರಿಗೆ ತೃಪ್ತಿಕರವಾಗುವಂತೆ ತೀರ್ಮಾನಿಸದೆ ಹೋದರೆ, ಕಾಂಗ್ರೆಸಿನವರು ಪುನಃ ಪ್ರಾರಂಭಿಸುವ ಚಳವಳಕ್ಕೆ ಮತ್ತಷ್ಟು ಸಹಾನುಭೂತಿಯೂ, ಶಕ್ತಿಯೂ ದೊರೆಯುವದೆಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ವರ್ಕಿಂಗ್ ಕಮಿಟಿಯವರ ತೀರ್ಮಾನಕ್ಕೆ ದೇಶದವರ ಸಂಪೂರ್ಣ ಒಪ್ಪಿಗೆಯು ಇದ್ದೇ ಇರುವುದು. ಅಲ್ಲದೆ ವರ್ಕಿಂಗ್ ಕಮಿಟಿಯವರು ಮಹಾತ್ಮರ ಕೈಯನ್ನು ಕಟ್ಟಿರುವುದಿಲ್ಲ. ಮಹಾತ್ಮರು ಸದರಿ ಪರಿಷತ್ತಿನ ಯಾವ ಕಮಿಟಿಯಲ್ಲಾದರೂ ಭಾಗ ತೆಗೆದುಕೊಳ್ಳಬಹುದು ಮತ್ತು ಕಾಂಗ್ರೆಸ್ಸಿನ ಗೊತ್ತುಗೊಳಿಸಲ್ಪಟ್ಟ ಯಾವ ತೀರ್ಮಾನವನ್ನಾದರೂ ಒಪ್ಪಿಕೊಳ್ಳಬಹುದು. ಮಹಾತ್ಮರು ಹಿಂದೂಸ್ಥಾನದ ಗೌರವವನ್ನು ಎಂದೂ ಬಿಟ್ಟುಕೊಡಲಿಕ್ಕಿಲ್ಲವೆಂಬ ವಿಶ್ವಾಸದಿಂದಲೇ ಕಾಂಗ್ರೆಸ್ಸಿನವರು ಅವರನ್ನು ಒ…
ತಿನಿಧಿಯಾಗಿ ಆರಿಸಿರುವದಾಗಿದೆ; ಅಂದಮೇಲೆ ಅವ…
ಗೋಷ್ಠಿಯಲ್ಲಿ ತನಗೆ ಉಚಿತ ತೋರಿದಂತೆ ವರ್ತಿ…
ರಿಗೆ ಸ್ವಾತಂತ್ರ್ಯಕೊಟ್ಟದ್ದು ಯುಕ್ತವಾಗಿದೆ. ಇ…
ರಾಜಿ ಕಾಂಗ್ರೆಸ್ಸಿನ ತೀರ್ಮಾನದ ತತ್ವಕ್ಕೆ ಅನು…
ಯೇ ಇದೆ. ಇನ್ನು ಬ್ರಿಟಿಷರ ವರ್ತನೆಯು ಹೇ…
ದೆಂದು ನೋಡಬೇಕಾಗಿದೆ.

ಕೊಡಗು ಮುಸ್ಲಿಮ್ ಕಾನ್‌ಫರೆನ್ಸಿ… ಅಧ್ಯಕ್ಷರ ಭಾಷಣ.

ಕಳೆದ ತಿಂಗಳು ವೀರಾಜಪೇಟೆಯಲ್ಲಿ ನಡೆದ ಕೊಡ…
ಸ್ಲಿಮ್ ಕಾನ್‌ಫರೆನ್ಸಿನ ಅಧ್ಯಕ್ಷರಾಗಿದ್ದ, ಮದ್ರಾಸಿ…
ನ ಮಹಮ್ಮದೀಯ ಕಾಲೇಜಿನ ಪ್ರೊಫೆಸರಾದ ಮೌ. ಸ…
ಯ್ಯದ್ ಅಬ್ದುಲ್ ವಹಾಬ್ ಸಾಹೇಬ್ ಬೊಖಾರಿ…
ಷಣದ ಸಾರಾಂಶ.

'ಆಲೋಚನೆ ಮಾಡದೆ ಇರುವುದೇ ನಮ್ಮ …
ಒಂದು ಮುಖ್ಯ ಕೆಡಕಾಗಿದೆ. ನಮ್ಮ ಪವಿತ್ರ ಪುಸ್ತಕ…
ರಿಕೆಯಂತೆ ನಮ್ಮ ಸೃಷ್ಟಿಯ ಉದ್ದೇಶದ ವಿಷಯ …
ಲೋಚನೆ ಮಾಡಿದರೆ ಖಂಡಿತವಾಗಿಯೂ ನಾವು …
ದ್ದೇಶಕ್ಕಾಗಿ ಸೃಷ್ಟಿಸಲ್ಪಟ್ಟಿರುತ್ತೇವೆಯೆಂದು ಗೊತ್ತಾ…
ದು. ಸರ್ವ ಶಕ್ತನಾದ ('ಅಲ್ಲಾ ಸು) ದೇವರು …
ಸ್ತುಗಳನ್ನು ಉಂಟುಮಾಡಿ ಅವುಗಳನ್ನು …
ಒಂದು ಉದ್ದೇಶಕ್ಕೆ ಒಳಗಾಗಿ ಮಾಡಿದನು; ಮ…
ನುಷ್ಯನ ಸೃಷ್ಟಿಯು ಈ ಸಾಧಾರಣದ ನಿಯಮಕ್ಕೆ …
ವಾಗಿಲ್ಲ. ದೇವರಿಗಾಗಿಯೇ ಮನುಷ್ಯನು ಸೃ…
ವನೆಂದು ಪವಿತ್ರ ಕುರಾನು ಹೇಳುತ್ತದೆ; ದೇವರಿಗೆ …
ಷ್ಟಿಯ ಸೇವೆಯು ಅವಶ್ಯವಿಲ್ಲದೆ ಇರುವಾಗ ಇದು …
ವುದು? 'ಅವನ ಮೇಲೆ ದೇವರ ('ಅಲ್ಲಾ'ನ) ಶಾಂ…
ಎಂಬ ಪವಿತ್ರ ಕಾಲಜ್ಞಾನಿಯಾದ ಮಹಮ್ಮದ್‌ರವ…
ಯಿಂದ ಇದು ವಿವರಿಸಲ್ಪಟ್ಟಿದೆ. ಅವರು ಹೇಳುವು…
ರೆ— ಇಡೀ ಸೃಷ್ಟಿಯೇ ದೇವರ ದೊಡ್ಡದೊಂದು ಕು…
ವಾಗಿದೆ, ಮತ್ತು ಸೃಷ್ಟಿಯನ್ನು ಪ್ರೀತಿಸುವವನು …
ವಾಗಿಯೂ ಸೃಷ್ಟಿ ಕರ್ತನನ್ನು ಪ್ರೀತಿಸುತ್ತಾನೆ.
ಸಮ ಜೀವಿಗಳ ಮೇಲೆ ನಮಗಿರುವ ಪ್ರೀತಿ ಮತ್ತು …
ನಾವು ಮಾಡುವ ಸೇವೆಯೆಂದರೆ ದೇವರ ಪ್ರೀತಿ ಮತ…
ನೆಯೆಂದೇ ಇದರಿಂದ ಅರ್ಥವಾಗುತ್ತದೆ. ಇದೀಗ …
ಸೃಷ್ಟಿಯ ಉದ್ದೇಶ. ನಮ್ಮ ಜೀವಮಾನ ಕಾಲವು …
ರ್ಣವಾಗಿ ಮಾನುಷ ವರ್ಗದ ಪ್ರೀತಿ ಮತ್ತು ಸೇವೆಗಾ…
ತ್ರ ಉಪಯೋಗಿಸಲ್ಪಡಬೇಕು. ಇದು ವಾಸ್ತವ ಮ…
ತ್ತು ಕಾರ್ಯಗತ ಬ್ರಹ್ಮ ಜ್ಞಾನ. ನಮ್ಮ ಸಂಪೂರ್ಣ…
ಮಾನ, ನಮ್ಮ ಮರಣ, ಯಾಕೆ ನಮ್ಮ ಕರ್ಮಗಳೆ…
ಒಂದು ಉದ್ದೇಶಕ್ಕೆ ಅಡಗಿರತಕ್ಕದ್ದು.

ಮುಸಲ್ಮಾನರು ಯಾವ ವರೆಗೆ ಮಾನುಷ ವರ್ಗ…
ತಿ ಮತ್ತು ಸೇವೆಯ ತತ್ವವನ್ನು ಅನುಸರಿಸಿ ನಡೆದರೋ…
ವ ವರೆಗೆ ಈ ಉದ್ದೇಶಕ್ಕಾಗಿ ತಮ್ಮ ಜೀವವನ್ನು …
ರೋ ಅಲ್ಲಿಯ ವರೆಗೆ ಅವರು ಜಯಶೀಲರಾಗಿದ್ದರು…
ರು ಸ್ವಾರ್ಥಪರರಾದಾಕ್ಷಣ ಅವರ ಅಧೋಗತಿಯು …
ಭವಾಯಿತು. ನೀವು ಪುನಃ ಒಮ್ಮೆ ನಿಜವಾದ …
ಮತಕ್ಕೆ ತಿರುಗಿ, ಆಶ್ಚರ್ಯಕರವಾದ ನೀತಿ ಶಾ…
ರಾನಿನ ಬೋಧನೆಯಂತೆ ನಡೆದು, ಮನುಷ್ಯ ಜಾತಿ …
ಮತ್ತು ಸೇವೆಯ ಉತ್ತ ಉದ್ದೇಶಕ್ಕಾಗಿ ನಿಮ್ಮನ್ನು …
ವುದೊಂದೇ ಈ ಕಾಯಿಲೆಗೆ ಮದ್ದಾಗಿದೆ.

ಪ್ರಿಯ ಮುಸ್ಲಿಮ್ ಸಹೋದರರೇ, ನಮ್ಮ …
ಅಧೋಗತಿಯ ದೆಸೆಯಿಂದ ಈಗ ಈ ಮನೋಗತವ…
ಹೇಳ್ಬೇಕಾಗಿ ಅವಶ್ಯವಿದೆ. ಒಮ್ಮೆ ನಾವು ಅರಸರಾಗಿ…
ಗ ಪ್ರಜೆಗಳಾಗಿದ್ದೇವೆ. ಒಮ್ಮೆ ನಾವು ವಿಶ್ವ ಮ…
ಯ ಯಜಮಾನರಾಗಿದ್ದೆವು. ಈಗ ನಮ್ಮಷ್ಟು ತೀ…
ಯಾರೂ ಇಲ್ಲ. ಒಮ್ಮೆ ನಾವು ವಿದ್ಯೆಯ ಮತ್ತು …
ದೀಪವನ್ನು ಪ್ರಪಂಚಕ್ಕೆಲ್ಲಾ ಒಯ್ದೆವು; ಈಗ ನಮ್ಮ…
ಜ್ಞಾನದಲ್ಲಿ ಮುಳುಗಿರುವವರು ಯಾರೂ ಇಲ್ಲ. …
ದರೆ, ಮತದಲ್ಲಿ ನಮ್ಮ ಸಹೋದರರಾದವರ ಸೇವೆಗ…
ದರೂ ಸೊಂಟಗಟ್ಟಲು ಇದು ಸಮಯವಲ್ಲವೇ? ದ…
ಷ್ಟದ ನಮ್ಮ ಕೋಮಿನವರಿಗೆ ಸಂಭವಿಸಿರುವ ಅತಿ …
ಮೆಯವು ಈಗಾಗಿದೆ; ಮತ್ತು ನಮ್ಮಲ್ಲಿ ಕೆಲವರಾದ…
ಮ್ಮ ಮತಸ್ಥರ ಅಭಿವೃದ್ಧಿಯ ಕೆಲಸಕ್ಕಾಗಿ ಕೈಹಚ್ಚದೆ…
ದರೆ ನಮ್ಮ ಭವಿಷ್ಯತ್ತು ಮಣ್ಣುಪಾಲಾಗುವುದು.

ಅಜ್ಞಾನ ಮತ್ತು ವಿದ್ಯಾ ಹೀನತೆಯು ನಮ್ಮ…
ರ್ಯವಾಗಿ ದೃಷ್ಟಿಸುತ್ತಿವೆ; ನಾವೂ ಕೂಡ ಧೈರ್ಯವ…
ಸಂಧವನ್ನು ಒಪ್ಪಿಕೊಳ್ಳಬಾರದೇ? ನಾವು ನಮ್ಮ …
ಗೆ ಪ್ರೈಮರಿ ಮತ್ತು [illegible] ಶಾಲೆಗಳನ್ನು ತೆರೆ…
ಮಾತ್ರವಲ್ಲ, ಸ್ತ್ರೀಯರ ವಿದ್ಯಾಭ್ಯಾಸಕ್ಕೂ ಸಾಕಷ್ಟು …
ಡು ಮಾಡಬೇಕು. ಮಗುವಿಗೆ ಪ್ರಥಮ [illegible] …
ಉಂಟಾಗುತ್ತದೆ; ಆದುದರಿಂದ ನಮ್ಮ ಸ್ತ್ರೀಯರನ್ನು …
ವಂತೆಯರಾಗಿ ಮಾಡುವುದು ಅತ್ಯವಶ್ಯ. ಪವಿತ್ರ …
ನಿಯಾದ ಮಹಮ್ಮದನು ವಿದ್ಯೆ ಮತ್ತು ತಿಳುವಳಿಕೆಯನ್ನು …
ರೂ ಮತ್ತು ಹೆಂಗಳರೂ ಸಂಪಾದಿಸಬೇಕೆಂದು ಅಪ್ಪ…

(4ನೇ ಪುಟದಲ್ಲಿ ಮುಂದುವರಿದಿದೆ.

ಸಹಕಾರ.

(ಲೇಖಕ — ಎ. ಎಂ. ತಿಮ್ಮಯ್ಯ ...)

೧ ನೇ ಭಾಗ.

ಇಡೀ ಹಿಂದೂದೇಶದಲ್ಲಿ ಈಗಿನ ಕಾಲದಲ್ಲಿ ಸಹಕಾರ, ಸಹಕಾರವೆಂಬ ತತ್ವವು ಆಳವಾಗಿ ಬೇರೂರಿದೆ. ಇದು ಆಧುನಿಕ ನಾಗರೀಕತೆಯ ಫಲಿತಾಂಶವಲ್ಲವೆಂದೂ, ನಮ್ಮ ದೇಶದಲ್ಲಿ ಅತೀ ಪುರಾತನ ಕಾಲದಲ್ಲಿಯೇ ಸಹಕಾರ ತತ್ವವು ಜನರ ಮನಸ್ಸುಗಳನ್ನು ಆಳುತ್ತಿತ್ತೆಂದೂ, ಕಾರಣಾಂತರದಿಂದ ನಮ್ಮ ಜನರು ಅದನ್ನು ಈಗಿನ ಕಾಲದಲ್ಲಿ ಮರೆತಿದ್ದರೆಂದೂ, ಆದ್ದರಿಂದ ನಮ್ಮ ಜನರು ಪುನಃ ಹಿಂದಿನವರಂತೆ ನಡೆಯಬೇಕೆಂದೂ ತಿಳಿದವರನೇಕರು ಹೇಳುವರು. ಹಿಂದೂದೇಶದ ನಮ್ಮ ಜನರು ಒಂದು ಹಂಗಡವೇ ಬೇರೆಯಾಗಿ ನಡೆ, ನುಡಿ, ಸಂಸ್ಕೃತಿ—ಇವೇ ಮುಂತಾದವುಗಳಲ್ಲಿ ವ್ಯತ್ಯಾಸ ತೋರಿಸುತ್ತಿರುವುದರಿಂದ ನಮ್ಮವರಲ್ಲಿ ಈ ಸಹಕಾರ ತತ್ವವು ಎಷ್ಟರ ಮಟ್ಟಿಗೆ ಇತ್ತು, ಈಗ ಹ್ಯಾಗಿದೆ, ಮುಂದಕ್ಕೆ ಹ್ಯಾಗೆ ಇರಬಹುದು ಎಂಬ ಸಂಗತಿಯನ್ನು ಸಂಕ್ಷಿಪ್ತವಾಗಿ ಪರೀಕ್ಷಿಸುವ.

ಪುರಾತನ ಕಾಲದಲ್ಲಿ ನಮ್ಮ ಜನರ ಸ್ಥಿತಿಯು ಹ್ಯಾಗಿತ್ತೆಂಬುದನ್ನು ಪರೀಕ್ಷಿಸುವಷ್ಟು ಶಕ್ತಿಯು ನನಗಿಲ್ಲ. ಆದರೆ ನಮ್ಮ ಹಿರಿಯರ ಮಾತನ್ನು ನಂಬಬಹುದಾದರೆ ಜನರೆಲ್ಲರೂ ಸುಖಶಾಂತಿಯಿಂದಿದ್ದರೆಂದು ತಿಳಿಯ ಬರುತ್ತೆ. ನಮ್ಮ ಪೂರ್ವ ಪದ್ಧತಿಗಳಿಂದಲೂ ಈ ಸಂಗತಿ ತಿಳಿದು ಬರುತ್ತೆ. ಕೊಡಗು ದೇಶದ ಸಾಮಾಜಿಕ ವಿಭಾಗಗಳನ್ನು (Social and administrative units) ನೋಡಿದಲ್ಲಿ, ಒಕ್ಕ, ಊರು, ನಾಡು, ದೇಶ ಇವೇ ಮೊದಲಾದ ವಿಭಾಗಗಳ ಕ್ರಮವಾಗಿ ಒಂದೊಂದು ಕೆಲಸಕ್ಕಾಗಿದ್ದವೆಂದೂ, ಈ ವಿಭಾಗಗಳಲ್ಲಿ ಒಂದರ ಜೊತೆಯಲ್ಲಿ ಮತ್ತೊಂದು ಸಹಕರಿಸಿ ಎಲ್ಲಾ ತರದ ಕೆಲಸವನ್ನು ಮಾಡುತ್ತಿದ್ದರೆಂದೂ ತಿಳಿದು ಬರುತ್ತೆ. ಒಂದು ಒಕ್ಕವು ಒಂದು ಮನೆತನವಾಗಿ, ಅದರ ಸಂಸ್ಥೆಗೊಳಪಟ್ಟ ಕಾರ್ಯವನ್ನು ಎಲ್ಲಾ ಜನರು ಸಹಕರಿಸಿ ನಡೆಸುತ್ತಿತ್ತು. ಅಂಥಾ ಸುಮಾರು ಅಂದರೆ 10, 15 ಒಕ್ಕಗಳು ಸೇರಿ ಒಂದು "ಊರು" ಎಂದಾಗಿ; ಅದರ ಸಂಸ್ಥೆಗೊಳಪಟ್ಟ ಕೆಲಸವನ್ನು ಅದರ ಜನರು ನಡೆಸುತ್ತಿದ್ದರು. ಇಂಥಾ ಸುಮಾರು ಊರುಗಳು ಸೇರಿ ನಾಡು ಮತ್ತು ನಾಡುಗಳೆಲ್ಲವೂ ಸೇರಿ ದೇಶ. ಸಂದರ್ಭ ಬಂದಾಗ ನಾಡುಗಳು ಸಹ ಒಟ್ಟು ಗೂಡಿ ದೇಶದ ಹಿತಕ್ಕೋಸ್ಕರ ಕೆಲಸ ಮಾಡುತ್ತಿದ್ದವು. ಈ ವಿಭಾಗಗಳಿಗೆ ಅಧಿಕಾರಿಗಳು ಸಹ ಇದ್ದರೆಂದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. 'ಒಕ್ಕ'ಕ್ಕೆ ಪಟ್ಟೇದಾರ, ಊರಿಗೆ ಊರು ತಕ್ಕ, ನಾಡಿಗೆ ನಾಡು ತಕ್ಕ ಮತ್ತು ದೇಶಕ್ಕೆ ದೇಶ ತಕ್ಕ ಎಂಬ ಅಧಿಕಾರಿಗಳಿಂದ ಈಗಲೂ ನಡೆದು ಬರುತ್ತಿರುವ ಒಕ್ಕಾಮ, ತಕ್ಕಾಮೆಗಳಿಂದ ತಿಳಿದು ಬರುತ್ತೆ. ಹೀಗೆ ಅನೇಕ ಭಾಗಗಳಿಗೆ ಒಳಗೊಂಡಿದ್ದ ಇಡೀ ದೇಶವು ಜನರ ನಡೆಸುವಿಕೆಯನ್ನು ಆಳುತ್ತಿತ್ತು (Governed) ಎಂದು ಈಗ ಜೀರ್ಣವಾಗಿರುವ ಪಂಚಾಯಿತಿ ಪದ್ಧತಿಯಿಂದ ತಿಳಿದು ಬರುತ್ತೆ. ಇಂಥ ಪಂಚಾಯಿತಿ ಕೂಟಗಳ ಮುಖ್ಯ ಅಂಶವು "ಸಹಕಾರ" ಜನರು ಎಲ್ಲಾ ಕೆಲಸಗಳಲ್ಲಿಯೂ ಒಬ್ಬೊಬ್ಬರ ಸಂಗಡ ಮಿಳಿತವಾಗಿ ಒಬ್ಬರನ್ನೊಬ್ಬರು ನಂಬಿ ಅವರ ಜೊತೆಯಲ್ಲಿ ಸಹಕರಿಸಿದಲ್ಲಿ ಎಂಥಾ ಕಷ್ಟವಾದ ಕೆಲಸವನ್ನೂ ಪೂರೈಸಬಹುದೆಂದು ಅವರು ಚೆನ್ನಾಗಿ ತಿಳಿದುಕೊಂಡಿದ್ದರು. ಇದರ ಫಲಿತಾಂಶವೇನು? ಹರದಾಸರು ಹೇಳುವಂತೆ.—ಕೊಲೆ ಕೊಳೆಯಿಲ್ಲ | ಕಳ್ಳ ಈ ದೇಶಕ್ಕೆ | ಕಳ್ಳರ ಸುದ್ದಿಯು | ಡಿಲ್ಲಿಯು ಕೇಸಿಲೆ || ಎಲ್ಲಾ ವಿಧದಲ್ಲಿಯೂ ಜನರು ಸುಖವನ್ನು ಪಡೆದಿದ್ದರು. ಅವರ ಮನಸು ಧಾರಾಳವಾಗಿ ಸದ್ಗುಣ ಭರಿತವಾಗಿತ್ತು. ನೆರೆಕರೆಯವರು ನೆರೆಯವರ ಕೆಲಸದಲ್ಲಿ ತಮ್ಮ ಕೆಲಸದಷ್ಟೇ ಉತ್ಸಾಹ ತೋರಿಸುತ್ತಿದ್ದರು. ಮದುವೆ ಮುಂಜಿಗಳಲ್ಲಿಯೂ, ಹಬ್ಬ ಹುಣ್ಣಿಮೆಗಳಲ್ಲಿಯೂ ನೆರೆಕರೆಯವರಿಗೆ ಸಹಾಯ ಮಾಡುವುದು ತಮ್ಮ ಕರ್ತವ್ಯವೆಂದು ನಂಬಿದ್ದರು. ದೇವರ ಭೀತಿಯೂ, ಮನುಷ್ಯನ ಪ್ರೇಮವೂ ಇತ್ತು. ಒಂದೊಂದು ಕೆಲಸದಲ್ಲಿ ಒಬ್ಬೊಬ್ಬರು ಉತ್ಸಾಹ ತೋರಿಸುವದರಿಂದ, ಆಯಾಯ ಕೆಲಸಕ್ಕೆ ಆಯಾಯ ಜನರು ಬೇರೆ ಬೇರೆ ಇದ್ದರು (Division of Labour) ಹಣದ ಪ್ರೇಮವು ಕಮ್ಮಿಯಾಗಿ ಮನುಷ್ಯನ ಪ್ರೇಮವು ಹೆಚ್ಚಾಗಿತ್ತು. ಈಗ ಹಣಕ್ಕೆ ದೊರಕುವ ಕೆಲಸವು (Labour) ಆಗ ಪ್ರೀತಿಗೆ ಸಿಕ್ಕುತ್ತಿತ್ತು. ಜನರ ಮನಸು ಶುದ್ಧವಾಗಿತ್ತು. ಎಲ್ಲರೂ ಒಂದೇ ಸಮನಾಗಿ ಮೇಲು ಕೀಳೆಂಬ ಇರಾದೆ ಇದ್ದದರಿಂದ ಜಗಳಕ್ಕೆ ಆಸ್ಪದವಿರಲಿಲ್ಲ. ಹೊಟ್ಟೆಕಿಚ್ಚು ಎಂಬ ವಿಷವೂ ದೂರದಲ್ಲಿತ್ತು. ನೆರೆಯವರ ಕಷ್ಟಗಳನ್ನು ಕಳೆಯುವುದು ನಮ್ಮ ಕರ್ತವ್ಯವೆಂದು ತಮ್ಮ ಮಗಳು ತಿಳಿದಿದ್ದರು. ಆದ್ದರಿಂದ ಎಕ್ಸರಕ್ಕೆ ದಾರಿ ಇರಲಿಲ್ಲ. ಈಗಿನಂತೆ ಕೋರ್ಟು ಖಚೇರಿಗಳ ದುಂದುಗಾರಿಕೆ ಇರಲಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ ಜನರೆಲ್ಲರೂ ಒಂದು ಕುಟುಂಬದವರಂತೆ ಒಂದೇ ಮನಸ್ಸಿನವರಾಗಿ ಸುಖ ಸಂತೋಷದಿಂದಿದ್ದರು. (In fine that has an age of peace and plenty)

ಅದು ಆಗಿನ ಕಾಲ. ಈಗಿನ ಕಾಲವು ಹ್ಯಾಗಿದೆ? ಪರೀಕ್ಷಿಸಿ ನೋಡಿದಲ್ಲಿ ಎಲ್ಲಾ ವಿಧದಲ್ಲೂ ನಮ್ಮ ಆಚಿನ ಕಾಲದ ಜನರಷ್ಟು ಸಹಕಾರ ತತ್ವವನ್ನು ಈಗಿನವರು ಹೊಂದಿರುವದಿಲ್ಲ. ಕೆಲ ಕೆಲವು ಪದ್ಧತಿಗಳನ್ನು ಜನರು ನಡೆಸುತ್ತಿರುವರಾದರೂ, ಪರಸ್ಪರ ಸಹಾಯವು ಅತಿ ಅಪರೂಪ. ಮದುವೆ, ಸಾವು ಮೊದಲಾದವುಗಳಲ್ಲಿ ಜನರು ಸಾಧಾರಣ ಒಗ್ಗಟ್ಟಾಗಿ ಕೆಲಸ ಮಾಡುತ್ತಿರುವರಾದರೂ ಅವುಗಳು ಪೂರ್ವ ಕಾಲದಷ್ಟು ಪೂರ್ಣವಾಗಿಲ್ಲದ್ದರಿಂದ ಜನರ ಅಭಿವೃದ್ಧಿಗೆ ಕುಂದಕವಿದೆ. ಅನೇಕ ಕಡೆಗಳಲ್ಲಿ ಅರುವನ ಮನೆತನವೇ ಇಲ್ಲ. ಆದ್ದರಿಂದ ಆ ಬಾಬಿನ ಕೆಲಸಕ್ಕೆ ಕುಂದಕವಾಯಿತು. ಕೆಲವು ಕಡೆಗಳಲ್ಲಿ ಅರುವನಿದ್ದರೂ ಒಂದು ಬಗೆಯ ಲಜ್ಜೆಯಿಂದ ಕೂಡಿದ ಅಸಮಾಧಾನವು ಹುಟ್ಟಿಕೊಂಡು ಅವರ ಕೆಲಸವನ್ನು ಅವರು ಮಾಡದಿರುವರು. ಊರವರೆಲ್ಲರೂ ಸೇರಿ ಪರಸ್ಪರ ಕೆಲಸವನ್ನು ಮಾಡುವುದನ್ನು ಈಗ ಅನೇಕ ಕಡೆಗಳಲ್ಲಿ ನಿಲ್ಲಿಸಿರುವರು. ಉದಾಹರಣೆಯಾಗಿ ನಮ್ಮ ಸಾವು ಪದ್ಧತಿಯನ್ನು ತೆಗೆದುಕೊಳ್ಳುವ. ಒಂದು ಊರಿನಲ್ಲಿ ಯಾರಾದರೂ ಸತ್ತರೆ ಆ ಊರವರು ಆ ದಿನ ಎಂಥ ಕೆಲಸವನ್ನೂ ಮಾಡತಕ್ಕದ್ದಾಗಿಲ್ಲ. 'ಅಗೆಯೋದು', 'ಬೊಳಿಯೋದು' ಆ ಕೆಲಸವನ್ನು ನಿಲ್ಲಿಸಿ ಸತ್ತವರ ಮನೆಗೆ ಎಲ್ಲರೂ ಹೋಗಿ ಅವರಿಗೆ ಬೇಕಾದ ಸಹಾಯವನ್ನು ಮಾಡಬೇಕೆಂಬ ಕಟ್ಟಳೆಯು ಈಗಲೂ ಇದ್ದರೂ ಅನೇಕರು ಅದಕ್ಕೆ ಸರಿಯಾಗಿ ನಡೆಯುವುದಿಲ್ಲವೆಂದರೆ ತಪ್ಪಾಗಲಾರದು. ದೇವಸ್ಥಾನದ ಕೆಲಸದಲ್ಲಿಯೂ, ಅಥವ ಬೇರೆ ಯಾವ ಕೆಲಸದಲ್ಲಾದರೂ ಹಾಗೆಯೇ ಎಲ್ಲಿ ನೋಡಿದರೂ ತಿಳಿಯದವರ ವಾದ ತಪ್ಪಿಸಿ, ತಿಳಿದವರು ಅದರಿಂದ ಪ್ರಯೋಜನ ಹೊಂದುವರೆಂದು ಜನರು ಹೇಳುತ್ತಿರುವರು. (Competetion which is the death of a sound social base has replaced Co operation, the life—blood of society) ಕಳವಿಕ್ಕೆ ದಾರಿ ಇಲ್ಲದಿದ್ದರೂ ಸ್ನೇಹ ಭಾವದ ದಾರಿಯನ್ನು ಮುಚ್ಚಿ ಹಿಂದುಗಡೆಯಿಂದ ಕಳವಿನ ಬಾಗಿಲು ತೆರೆಯುವರು. ಒಬ್ಬರನ್ನು ಮತ್ತೊಬ್ಬರು ದ್ವೇಷಿಸುವರು. ಸತ್ಯದ ದಾರಿಯನ್ನು ಬಿಡುವರು. ಹಸ ಮೇಯುವ ಜಾಗದ ವಿಷಯ ಕಳವು ಹಾಗೂ ನಡೆಸುವ ಜಾಗದ ವಿಷಯ ದೂರ. ಕೋಳಿ ಹಾರುವ ಗಾಳಿಗಾಗಿ ಹೊಡೆದಾಟ. ನಾಯಿ ಓಡುವ ಸ್ಥಳಕ್ಕಾಗಿ ಒಡಹುಟ್ಟಿದ ಸಹೋದರರೆಂಬ ಯೋಚನೆಯನ್ನು ಬಿಟ್ಟು ಹಿಲ್ಲರೆ ಸಂಗತಿಗಾಗಿ ವೈರತ್ವ. ನನ್ನ ಗದ್ದೆಯಿಂದ ಅವನ ಗದ್ದೆಗೆ ನೀರು ಬಿಡಕೂಡದು. ಅವನ ಬಾವಿಯಿಂದ ನಾನು ನೀರು ತೆಗೆಯಕೂಡದು. ಒಂದು ಅಡಿ ಜಾಗಕ್ಕೆ ಯಾವಾಗಲೂ ಜಗಳ. ಅದರ ಫಲಿತಾಂಶದಿಂದ ಕಳವು ಬೀರೆಯವರಿಗೆ ಹ್ಯಾಗಾದರೂ ಕಷ್ಟವಾಗಬೇಕು. ನನ್ನ ಆಳುಗಳು ಅವನ ಕೆಲಸ ಮಾಡಕೂಡದು. ಕಳವು ಮಾಡಿದರೆ ಆಳಿನ ಕಾಲು ಮುರಿದು ಹಾಕುತ್ತೇನೆ, ಎಂದು ಹೆದರಿಸಿ ರಟ್ಟೆ ಶಕ್ತಿಗೆ ಒಳಪಡುವಾಗಬೇಕು (Might is right) ನ್ಯಾಯಕ್ಕೆ ಅವಕಾಶ (Right is not might) ದೇವರ ಭಯವಿಲ್ಲ, ಮನುಷ್ಯರ ಪ್ರೀತಿಯಿಲ್ಲ.

ಈಗ ನಮ್ಮ ಜನರು ತಿಳಿದುಕೊಂಡಿರುವ ಸಹಕಾರವು ಸರಕಾರದವರ ಅಧೀನದಲ್ಲಿರುವುದು. ಎಲ್ಲಾ ಕಡೆಗಳಲ್ಲಿಯೂ ಸಹಕಾರ ಸಂಘಗಳು ಸರಕಾರದವರ ಅಧೀನದಲ್ಲಿರುವುದಾದರೂ, ಕೊಡಗಿನಲ್ಲಿ ಈ ಅಧಿಕಾರವು ಇನ್ನೂ ಹೆಚ್ಚಾಗಿರಬೇಕು. ಯಾಕೆಂದರೆ ಈ ಬಾಬಿನಲ್ಲಿ ಜನರ ತಿಳುವಳಿಕೆಯು ವಿಸ್ತಾರವಾಗಿಲ್ಲ. ಈ ವಿಷಯ ಪತ್ರಿಕೆಗಳ ಮೂಲಕ ಅನೇಕ ಚರ್ಚೆಗಳನ್ನು ಎಲ್ಲರೂ ಓದಿರಬಹುದಾಗಿ ನಂಬುತ್ತೇನೆ. ಆದರೂ ಸಹಕಾರ ಸಂಘಗಳಿಂದ ಕಂಡು ಬರುವ ಕೆಲವು ಕುಂದು ಕೊರತೆಗಳನ್ನು ಇಲ್ಲಿ ಕೊಡಬೇಕಾಗಿದೆ. ಇವು ಕೊಡಗಿನಲ್ಲಿಯೇ ಅಲ್ಲ ಬೇರೆ ಕಡೆಗಳಲ್ಲಿಯೂ ಇವೆಯೆಂದು ತಿಳಿಯುತ್ತೆ. ಆದ್ದರಿಂದ ಇದರ ಅಭಿಪ್ರಾಯವು ಯಾರನ್ನೂ ಚಿಪ್ಪಿತಸ್ಥನಾಗಿ ಮಾಡಬೇಕೆಂದಿಲ್ಲ.

1 ಅನೇಕರು ಸಹಕಾರದ ತತ್ವವನ್ನು ತಿಳಿಯದೆ ಹಣದ ಲಾಭವನ್ನು ಮನಸ್ಸಿನಲ್ಲಿಟ್ಟುಕೊಂಡು, ಅದಕ್ಕಾಗಿ ಸಂಘದ ಮೆಂಬರುಗಳಾಗುವರು.

2 ಅನೇಕ ಕಡೆಗಳಲ್ಲಿ ಸಂಘದ ಸಾಧಾರಣ ಮೆಂಬರುಗಳು ಕಮಿಟಿ ಮೆಂಬರುಗಳ ಬಾಕಿದಾರರಾಗಿರುವುದರಿಂದ, ಆ ಕಮಿಟಿ ಮೆಂಬರುಗಳು ಹಣದಿಂದ ಸಂಘದ ಮೆಂಬರುಗಳಾಗಿ, ಸಂಘದಿಂದ ಹಣ ತೆಗೆದು ಅವರ ಸಾಲವನ್ನು ತೀರಿಸುವರು.

3 ಸಹಕಾರ ಸಂಘಗಳು (ಗ್ರಾಮ ಸಂಘಗಳು—(Rural Societies) ಮುಖ್ಯವಾಗಿ ವ್ಯವಸಾಯಗಾರರ ಪ್ರಯೋಜನಕ್ಕಿರುವುದು. ಆದ್ದರಿಂದ ವ್ಯವಸಾಯದ ಉದ್ದೇಶವಾಗಿ ಖರ್ಚಿಗೋಸ್ಕರ ಜನರಿಗೆ ಸಾಲಕೊಡಬೇಕಲ್ಲದೆ ಬೇರೆ ಯಾವ ಉದ್ದೇಶ್ಯವಾಗಿಯೂ ಹಣ ಮಂಜೂರು ಮಾಡಬಾರದು. ಮದುವೆಗಾಗಿ, ಹಬ್ಬ ಹರಿದಿನಗಳಿಗಾಗಿ ಹೆಚ್ಚಿನ ಬಡ್ಡಿಯಲ್ಲಿ ಸಾಲಕೊಟ್ಟ ಲೇವಾದೇವಿ ಮಾಡಲಿಕ್ಕಾಗಿ ಹಣ ಮಂಜೂರು ಮಾಡುವರೆಂದು ಅನೇಕ ಕಡೆಗಳಲ್ಲಿ ಪುಕಾರುಗಳು ಎದ್ದಿವೆ.

4. ಮೆಂಬರುಗಳಿಗೆ ಅವರ ಶಕ್ತಿಯನ್ನರಿಯದೆ ಅವರಿಂದ ಹೆಚ್ಚಾದ ಸಾಲವನ್ನು ಕೊಟ್ಟು, ಅದರಿಂದ ವಸೂಲು ಮಾಡಲು ಕೋರ್ಟು ಖಚೇರಿಗಳಿಗೆ ಹೋಗಿ, ಖರ್ಚ ಹೆಚ್ಚಿಸಿ, ಹೊರಲಾರದ ಹೊರೆಗೆ ದೊಡ್ಡ ಒಡ್ಡೆ ಕಲ್ಲುಗಳನ್ನ ಹೇರಿಸಿ ರೈತರನ್ನು ಕಷ್ಟಕ್ಕೆ ಗುರಿಮಾಡುವರು.

5. ಕೊಡಗಿನ ಕೆಲವು ಕಡೆಗಳಲ್ಲಿ ಸಹಕಾರ ಸಂಘಗಳು ರಾಜಕೀಯ ತತ್ವದಿಂದ ಪಂಗಡ ಬೇಧಗಳನ್ನಿಟ್ಟಿರುವವೆಂದೂ, ಚುನಾವಣೆಯ ಸಮಯದಲ್ಲಿ ಸಹಕಾರ ಸಂಘಗಳು ಅವುಗಳಲ್ಲಿ ಭಾಗತೆಗೆಯುತ್ತಾವೆಂದೂ ಕೌನ್ಸಿಲಿನಲ್ಲಿ ಸಹ ಪ್ರಕಾರವು ಆಗಿದೆ.

6. ಮೇಲೆ ಹೇಳಿದಂತೆ ಕಮಿಟಿ ಮೆಂಬರುಗಳ ಮುಖಾಂತರದಲ್ಲಿ ಅನೇಕ ಮೆಂಬರುಗಳಿರುವುದರಿಂದ ಸಂಘದ ಯಾವ ತೀರ್ಮಾನಿಕೆಯಲ್ಲಾದರೂ ಮೆಂಬರುಗಳು ತಮ್ಮ ಸ್ವಂತ ಅಭಿಪ್ರಾಯವನ್ನು ಸೂಚಿಸಲು ಅವಕಾಶವಿಲ್ಲದೆ ತಮ್ಮ ಸಾಹುಕಾರರ ವಾಕ್ಯಕ್ಕೆ ಸರಿಯಾಗಿ ನಟನೆ ಮಾಡಬೇಕಾಗುತ್ತೆ. ಅನೇಕ ಕಡೆಗಳಲ್ಲಿ ಮೆಂಬರುಗಳು ಮೀಟಿಂಗುಗಳಿಗೆ ಹೋಗದೆ ಅವರ ಸಾಹುಕಾರ ಯಜಮಾನರೇ ಅವರ ಕೆಲಸಗಳನ್ನು ಮಾಡುವರೆಂದೂ, ಹಣ ಹೊಂದಿಕೊಳ್ಳುವುದು ಸಹ ಸಾಹುಕಾರರೆಂದೇ ತಿಳಿದು ಬರುತ್ತೆ.

7 ಯಾವ ಕಾರ್ಯಕ್ಕಾಗಿ ಹಣ ಬೇಕೋ, ಆ ಕಾರ್ಯಕ್ಕಾಗಿ ಹಣ ಮಂಜೂರು ಮಾಡಿದರೂ ಸಹ, ಕಾಲಕ್ಕೆ ಸರಿಯಾಗಿ ಹಣ ಕೊಡದೆ ಇರುವುದರಿಂದ ರೈತರು ಕಷ್ಟಪಡುವರು. ಉದಾಹರಣೆಯಾಗಿ, ಎತ್ತು ತೆಗೆಯಲು ಹಣ ಮಂಜೂರುಮಾಡಿ ಜುಲೈ, ಆಗಸ್ಟ್ ಅಂತ್ಯದಲ್ಲಿ ಹಣ ಕೊಟ್ಟಲ್ಲಿ ರೈತರು ಆ ಜೋರು ಮಳೆಗಾಲದಲ್ಲಿ ಒಂದು ಕೊಡುವಲ್ಲಿ ಎರಡು ಕೊಟ್ಟು, ಸಾಯಲಿಕ್ಕಾದ ಎತ್ತು ತಂದು ಅದರಿಂದ ಕೆಲಸ ಮಾಡಲು, ಎರಡು ದಿನದಲ್ಲಿಯೇ ಆ ಎತ್ತು ಸಾಯಲಿಕ್ಕಾಯಿತು. ಪುನಃ ಸಾಲ ಇದರಿಂದ ಅನೇಕ ಬಾಬಿನಲ್ಲಿ ಕಷ್ಟ ಇಂಥಾ ಉದಾಹರಣೆಗಳು ಅನೇಕ ಇವೆ. ಇದರ ದೆಸೆಯಿಂದ ಗರೀಬರ ಕಷ್ಟ ಹೆಚ್ಚಾಯಿತು.

8 ಸಂಘದ ಆಸ್ತಿ ಹಣವನ್ನು ರೈತರ ಪ್ರಯೋಜನಕ್ಕೆ ಉಪಯೋಗಿಸುವುದರ ಬದಲು, ಶೇರುದಾರರೊಳಗೆ ಹಂಚುವರು. ಇದರಿಂದ ಸಹಕಾರದ ತತ್ವವೇ ನಾಶವಾಯಿತಲ್ಲದೆ, ಸಂಘಗಳು ವ್ಯಾಪಾರ ಕೂಟಗಳಾಗುತ್ತವೆ.

9 ಮತ್ಸರದಿಂದ ಕಮಿಟಿ ಮೆಂಬರುಗಳು ಜನರಿಗೆ ಕಾಲಕ್ಕೆ ಸರಿಯಾಗಿ ಹಣ ಮಂಜೂರು ಮಾಡುವುದಿಲ್ಲ.

10 ಬಾಕಿದಾರರಿಗೆ ಪುನಃ ಹಣ ಮಂಜೂರುಮಾಡಿ, ಅದೇ ಹಣದಿಂದ ಅವರ ಸಾಲವನ್ನು ತೀರಿಸುವರು. ಇದರ ಫಲಿತಾಂಶವು—ಕೆಸರಿನಿಂದ ಕೆಸರನ್ನು ತೊಳೆಯುವಂತೆ.

11 ಒಂದೊಂದು ಸಂದರ್ಭದಲ್ಲಿ ಪ್ರೆಸಿಡೆಂಟರು ವಿಪರೀತ ಅಧಿಕಾರವನ್ನು ವಹಿಸುವರು (The president in some cases, is an autocrat of the highest order, vested with powers more than a despot)

ಹೀಗೆಲ್ಲಾ ಅನೇಕ ತರದ ಕುಂದು ಕೊರತೆಗಳು ಸಹಕಾರ ಸಂಘಗಳಲ್ಲಿರುವವು. ಕೊಡಗಿನಲ್ಲಿಯೂ ಇವು ಇರಬಹುದು. ಸರಕಾರದವರು ಇವನ್ನು ನಿಲ್ಲಿಸಲು ಪ್ರಯತ್ನಿಸುವರೆಂದೂ, ಜನರು ಇದಕ್ಕಾಗಿ ಕೆಲಸ ಮಾಡುವರೆಂದೂ ನಂಬುತ್ತೇನೆ. ಎಂಥ ಕಷ್ಟವಿದ್ದರೂ ಮನಸ್ಸಿದ್ದರೆ ಅದನ್ನು ತಪ್ಪಿಸಬಹುದು. ಸಾಧಿಸಿದರೆ ಸಬಳ ನುಂಗಬಹುದು.'

ಈ ಮೇಲೆ ತೋರಿಸಿರುವ, ಮತ್ತು ಇನ್ನೂ ಅನೇಕ ತರದ ಕುಂದು ಕೊರತೆಗಳನ್ನು ತಿದ್ದುಪಡಿ ಮಾಡಲು ಜನರನ್ನು ತರಬೇತು ಮಾಡುವುದು ಮುಖ್ಯವಾದ ಕೆಲಸ. ಅನೇಕ ಜನರು ಸಹಕಾರದ ತತ್ವವನ್ನು ತಿಳಿಯದೆ, "ಸೊಸೈಟಿ ಅಂದರೆ ಯಾವ ಕಾರ್ಯಕ್ಕಾಗಿಯೂ ಸುಲಭದ ಬಡ್ಡಿಯಲ್ಲಿ ಹಣ ದೊರಕುವುದೆಂಬ ಆಲೋಚನೆಯಿಂದ ದುಂದುಗಾರಿಕೆ ಮಾಡುವರು. ಈ ಮೇಲೆ ತೋರಿಸಿದ ಕುಂದು ಕೊರತೆಗಳನ್ನು ತಿದ್ದಲು ಯಾವ ತರದಲ್ಲಿ ಕೆಲಸಮಾಡಬೇಕೆಂದು ಆಲೋಚಿಸುವ.

1ನೇ ಕೊರತೆ —ಇದನ್ನು ಹೋಗಲಾಡಿಸಲು, ಸಹಕಾರವೆಂದರೆ ಪರಸ್ಪರ ಸಹಾಯಕವೆಂಬ ತತ್ವವನ್ನು ಎಲ್ಲರೂ ತಿಳಿಯುವಂತೆ ಮೀಟಿಂಗುಗಳನ್ನು ಮಾಡಿ, ಅಧಿಕಾರಿಗಳೂ, ಉಪದೇಶಕರೂ ಜನರಿಗೆ ಬೋಧಿಸಿ ಸಹಕಾರ ಸಂಘಗಳೆಂದರೆ, ವ್ಯಾಪಾರದ ಕೂಟಗಳಲ್ಲವೆಂದು ಜನರಿಗೆ ಮಂದಟ್ಟಾಗುವಂತೆ ಮಾಡಬೇಕು.

2ನೇ. ಸಂಘದಿಂದ ಯಾವ ಕಾರ್ಯಕ್ಕಾಗಿ ಹಣ ಹೊಂದಿಕೊಂಡಿರುವರೋ ಅದೇ ಕೆಲಸಕ್ಕೆ ಆ ಹಣವನ್ನು ಉಪಯೋಗಿಸುವಂತೆ ಮಾಡಬೇಕು. ಬೇರೆ ಕೆಲಸಕ್ಕೆ ಮತ್ತು ಬೇರೆ ಸಾಲ ತೀರಿಸಲು ಈ ಹಣವನ್ನು ಉಪಯೋಗಿಸದಂತೆಯೂ, ವ್ಯವಸಾಯಕ್ಕೆ ಮಾತ್ರ ಈ ಹಣವನ್ನು ಉಪಯೋಗಿಸುವಂತೆಯೂ ಅಧಿಕಾರಿಗಳು ನೋಡಬೇಕು.

3ನೇ. ಕಮಿಟಿ ಮೆಂಬರುಗಳಿಗೂ, ಬಡ ಮೆಂಬರುಗಳಿಗೂ ಯಾವ ತರದ ಲೇವಾದೇವಿ ಇರಲಿ, ಅಥವ ಸಂಘದ ಮೆಂಬರುಗಳ ಪೈಕಿ ಯಾರು ಎಷ್ಟೇ ಹಣವಂತರಾಗಿರಲಿ, ಇನ್ನೊಬ್ಬರು ಎಷ್ಟು ಬಡವರಾಗಿರಲಿ, ಸಂಘದ ಕೆಲಸದಲ್ಲಿ ಎಲ್ಲರೂ ಸಮಾನತ್ವದಲ್ಲಿ ಕೆಲಸ ಮಾಡುವಂತೆ ಜನರಿಗೆ ಬೋಧಿಸಬೇಕು. ಧೀನ, ಅಧೀನತ್ವದಿಂದ ಸಂಘದ ಕೆಲಸವು ಹಾಳಾಗಿ ಜನರ ಕ್ಷೇಮಕ್ಕೆ ಕುಂದಕವಿದೆ. (If a sense of superiority or inferiority complex is allowed to pervade the democratic atmosphere of co operative societies, the latter lose their spirit of co-operation, tend to become an alternative form of organised capitalism.)

4ನೇ ಸಾಲ ತೆಗೆಯುವವರ ಶಕ್ತಿಗೆ ಸರಿಯಾಗಿ ಸಾಲ ಮಂಜೂರು ಮಾಡಬೇಕು. ಅಲ್ಲದೆ, ವಸೂಲು ಮಾಡಲು ಕೋರ್ಟು ಖಚೇರಿಗಳಿಗೆ ಹೋಗಿ, ಬೀಳುವ ಮರಕ್ಕೆ ಕೊಡಲಿ ಹಾಕಿದಂತೆ, ಗರೀಬನ ಮೇಲೆ ಬೇರೆ ಖರ್ಚನ್ನು ಹೊರಿಸಬಾರ

ದು. ಪುರುಷಾವಧಿಯ ಕೆಲಸವು ಸರಿಯಾಗಿ ನಡೆಯದಿದ್ದರೂ ಸಹ ಕೋರ್ಟುಗಳಿಗೆ ಹೋಗದೆ ವಸೂಲು ಮಾಡಲು ಯತ್ನಿಸಬೇಕು

5ನೇ. ಕಾಲಕ್ಕೆ ಸರಿಯಾಗಿ ಸಾಲಕೊಡಬೇಕು. ಊಳಲು ಎತ್ತು ಕೊಂಡುಕೊಳ್ಳಲಿಕ್ಕೆ ಕೈಲು ಮುಗಿದ ದಿನ ಹಣ ಕೊಟ್ಟರೆ ಏನು ಪ್ರಯೋಜನ?

6ನೇ ಲಾಭ ಹಣವನ್ನು ಎಲ್ಲರಿಗೂ ಉಪಯೋಗವಾಗುವ ಕೆಲಸಕ್ಕೆ ಉಪಯೋಗಿಸಬೇಕು ಲಾಭ ಹಂಚಲೇ ಬಾರದು. ಬಾವಿ ತೋಡಲಿಕ್ಕಾಗಲಿ, ಮಾರ್ಗ ಕೆಲಸಕ್ಕಾಗಲೀ, ಆಥವ ಉತ್ತಮ ತಿಗೆಯಲಿಕ್ಕಾಗಲೀ, ಅಥವ ಬೇರೆ ಯಾವ ಕೆಲಸದಿಂದ ರೈತನಿಗೆ ಪ್ರಯೋಜನವುಂಟೆಯೋ ಅಂಥ ಕೆಲಸಕ್ಕೆ ಉಪಯೋಗಿಸಬೇಕು.

7ನೇ ಬಾಕಿದಾರನ ಸಾಲ ತೀರದೆ ಪುನಃ ಸಾಲ ಮಂಜೂರು ಮಾಡಬಾರದು. ಸಹಕಾರ ತತ್ವಕ್ಕೆ ವಿರೋಧ ಮಾಡಬಾರದು

8ನೇ. ಪ್ರೆಸಿಡೆಂಟರ ಅಧಿಕಾರವನ್ನು ನಿರ್ಬಂಧಪಡಿಸಿ, ಅದರ ಮೇಲೆ ದಾಟದಂತೆ ಅಧಿಕಾರಿಗಳು ಎಚ್ಚರವಿರಬೇಕು.

N B ಈ ಲೇಖನ ಬಾಗವನ್ನು ತೋರಿಸಿದ್ದು ಸಹಕಾರ ಸಂಘಗಳ ಉದ್ಧಾರಕ್ಕಾಗಿಯಲ್ಲದೆ, ಯಾರ ಮೇಲೆಯಾದರೂ ಆರೋಪ ಹೊರಿಸಲಿಕ್ಕಾಗಿಯಲ್ಲ ಈಗ ಇರುವ ಕುಂದು ಕೊರತೆಗಳನ್ನು ಹೋಗಲಾಡಿಸಿ ಮುಂದಿನ ಅಭಿವೃದ್ಧಿಯನ್ನು ಏನು ಮಾಡುವುದೇ ನಮ್ಮ ಕರ್ತವ್ಯವಾಗಿರುವುದು. ಕೊಡಗು ದೇಶವು ಸಹಕಾರ ಸಂಘಗಳಿಂದ ಅನೇಕ ಪ್ರಯೋಜನಗಳನ್ನು ಹೊಂದಿರಬಹುದು. ಅದೇ ನಮಗೆ ಆಸ್ತಿಯೆಂದು ನಾವು ನಮ್ಮಿಸಿದ್ದರೆ, ಎಲ್ಲಾ ದೇಶಗಳೂ ಮುಂದರಿಸುವಾಗ ನಾವು ಹಿಂದೆ ಬೀಳುವೆವು. (He is a spend thrift who lives on his capital) ಆದ್ದರಿಂದ ಈ ಅವಗುಣಗಳನ್ನು ಹೋಗಲಾಡಿಸಿ, ಮುಂದಕ್ಕೆ ಅಭಿವೃದ್ಧಿಯಾಗಬೇಕೆಂಬುದೇ ಈ ಲೇಖನದ ಉದ್ದೇಶವಾಗಿದೆ.

ಕನ್ನಡಿಗರಲ್ಲಿ ಬಿನ್ನಹ.

ಈಗೆರಡು ವರ್ಷಗಳಿಂದ ನಮ್ಮ ಬಿನ್ನಹವು ಪತ್ರಿಕೆಗಳಲ್ಲಿ ಬರುತ್ತಲೆ ಇದೆ ಅದರಲ್ಲಿ ನಮ್ಮ ಮುಖ್ಯ ಉದ್ದೇಶವು ಯಥಾರ್ಥವಾದ ಅನುಭವವನ್ನು ಕಂಡು ಹಿಡಿಯುವುದೇ ಆಗಿದೆ. ನಮ್ಮ ಆ ಪ್ರಯತ್ನಕ್ಕೆ ಇದು ವರೆಗೂ ಕಿಂಚಿತ್ತಾದರೂ ಸಾಫಲ್ಯದ ಚಿಹ್ನವು ತೋರಲಿಲ್ಲ ಯಥಾರ್ಥವಾದ ಅಯನಾಂಶವನ್ನು ಕಂಡು ಹಿಡಿಯದ ಹೊರತು ಜೋಯಿಸ ಶಾಸ್ತ್ರದ ಉಪಯೋಗವು ಲೋಕಕ್ಕೆ ಆಗಲಾರದು. ಶ್ರೀ ಲೊಕಮಾನ್ಯರು ಗ್ರಂಥಸ್ಥವಾದ ಆಧಾರಗಳ ಬಹುಮತದಿಂದ ಚೈತ್ರಪಕ್ಷದ ಅಯನಾಂಶವು ಯಥಾರ್ಥವೆಂದು ಅದನ್ನು ಪ್ರೋತ್ಸಾಹಿಸಿದರು ನಮಗೆ ಅದರ ಪ್ರತ್ಯಕ್ಷ ಪ್ರಮಾಣಗಳಿಂದ ಇದನ್ನು ಮನಗಾಣದ ಹೊರತು ಇಷ್ಟರಿಂದಲೇ ತೃಪ್ತಿಯಾಗಲಿಲ್ಲ. ಶ್ರೀ ಲೋಕಮಾನ್ಯರ ಶಿಷ್ಯರೆಂದು ಪ್ರಸಿದ್ಧರಾದ ಪಟವರ್ಧನ ರಘುನಾಥ ಶಾಸ್ತ್ರಿಗಳು, ಪ್ರೊಫೆಸರ ನಾಯಕ ಮುಂತಾದ ಮಹಾರಾಷ್ಟ್ರದ ಜ್ಯೋತಿರ್ವಿದರು ಶ್ರೀ. ಲೋಕಮಾನ್ಯರು ಸಾಗುಮಾಡಿದ ಈ ಕಾರ್ಯವನ್ನು ಅಲ್ಪ ಸಂತುಷ್ಟತೆಯಿಂದ ಮುಂದೆ ಸಾಗಿಸದೆ ಬಿಟ್ಟು ಬಿಟ್ಟಿದ್ದಾರೆ ಪ್ರತ್ಯಕ್ಷನಿದರ್ಶನವೆಂದರೆ ಫಲ ಜ್ಯೋತಿಷ್ಯ ಶಾಸ್ತ್ರದ ದೃಷ್ಟಿಯಿಂದಲೇ ನೋಡಬೇಕು ತಾವು ಹೇಳಿದ ಭವಿಷ್ಯವು ನಿಜವಾಯಿತೆಂದರೆ ಅದು ಪ್ರತ್ಯಕ್ಷ ಅನುಭವವೆಂದು ಸರ್ವಥಾ ತಿಳಿಯಬಾರದು. ಪ್ರತ್ಯಕ್ಷವೆಂದರೆ ಕಣ್ಣಿಗೆ ಕಾಣುವಂಥದ್ದೇ ಎಂದು ನಾವು ಭಾವಿಸುತ್ತೇವೆ ಮತ್ತು ಅದೇ ಮಾರ್ಗದಲ್ಲಿ ಪ್ರಯತ್ನಿಸುತ್ತಿರಲು ನಮಗಾದರೂ ಬ್ರಹ್ಮಜ್ಞಾತಕದ ಉಕ್ತಿಯು ಗೋಚರವಾಯಿತು. ಇದನ್ನು ಎಲ್ಲ ಜ್ಯೋತಿಷಿಗಳು ಅರಿತು ಇದರ ಮಹತ್ವವನ್ನು [illegible] ಮಾಡವದು. ನಾವು ಯಾರಿಗೂ ಗುರುತಿಲ್ಲದವರು ಹೊಸತು ತೆಗೆದದ್ದೇವೆಂದು ಗರ್ವಕರರಾಗುವುದಿಲ್ಲ. ನಮ್ಮ ಕನ್ನಡ ಬಂಧುಗಳು ನಮಗೆ ಬೇಕಾದ ಅಲ್ಪ ಸಹಾಯವನ್ನು ದಯಪಾಲಿಸಿದರೆ ಕರ್ನಾಟಕವು ಜ್ಯೋತಿಶ್ಶಾಸ್ತ್ರದ ಪ್ರಗತಿಗೆ ಬೆಂಬಲಕೊಟ್ಟ ಕೀರ್ತಿಗೆ ಪಾಲುಗಾರನಾಗುವುದು.

ಇನ್ನು ನಮಗೆ ಬೇಕಾದ ಸಹಾಯವನ್ನು ಕೇಳಿಕೊಳ್ಳುತ್ತೇವೆ. ದಿನಾಲು ಕರ್ನಾಟಕದಲ್ಲಿ ಎಷ್ಟೋ ಶಿಶುಗಳು ಜನಿಸುತ್ತವೆ. ಅವುಗಳನ್ನೆಲ್ಲ ಬಿಟ್ಟು ಕೆಲ ವಿಶಿಷ್ಟ ದಿನಗಳಲ್ಲಿ ಹುಟ್ಟಿದ ಶಿಶುಗಳ ವೃತ್ತಾಂತವು ನಮಗೆ ತಿಳಿಯಬೇಕಾದುದು. ಸದ್ಯಕ್ಕೆ ಈ ತಿಂಗಳಲ್ಲಿಯ ಕೆಲ ದಿನಗಳನ್ನು ಮಾತ್ರ ಆರಿಸಿದ್ದೇವೆ ಮುಂದೆ ಅಗಸ್ಟ್ ಹಾಗು ನವಂಬರ ತಿಂಗಳಲ್ಲಿಯೂ ಕೆಲ ದಿನಗಳು ಬರುವವು ಅವನ್ನು ಆಗಿಂದಾಗಲೇ ಪ್ರಸಿದ್ಧ ಮಾಡುವೆವು. ಸದ್ಯಕ್ಕೆ ಈ ಜೂನ್ ತಿಂಗಳ ೧೯ರಿಂದ ೨೦ ತಾರೀಕಿನ ವರೆಗೆ ಐದು ದಿನಗಳಲ್ಲಿ ಹುಟ್ಟಿದ ಶಿಶುಗಳಿಗೆ ದೇಹದ ಯಾವುದಾದರೂ ಅವಯವದಲ್ಲಿ 'ಮಚ್ಚೆ' ವು (ಬಣ್ಣದ ಕಲೆಗಳು) ಇರಬೇಕೆಂದು ತಿಳಿಯುವದು. ಅದು ಆದೆಯೋ ಇಲ್ಲವೋ ಚೆನ್ನಾಗಿ ಪರೀಕ್ಷಿಸಿ ನಮಗೆ ತಿಳಿಸಬೇಕು. ಮತ್ತು ಅದು ಇರುವ ಸ್ಥಾನ, ಆಕಾರ, ವರ್ಣ, ಶಿಶುವು ಜನಿಸಿದ ತಾರೀಕು, ವೇಳೆ, ಗ್ರಾಮ ಸಹಿತ ತಿಳಿಸುವದಾದರೆ ಬಹಳ ಉಪಕಾರವಾಗುವದು ಈ ಮಚ್ಚೆಗಳು ಪ್ರತ್ಯಕ್ಷ ಅನುಭವಕ್ಕೆ [illegible]

[illegible] ಕೊಟ್ಟದ್ದೂ ಹಸೆ ಮಾಡಬೇಕು [illegible]

ಕೊಡಗು ಮುಸ್ಲಿಮ್ ಕಾನ್‌ಫರೆನ್ಸಿನ ಅಧ್ಯಕ್ಷರ ಭಾಷಣ.

(2ನೇ ಪುಟದಿಂದ ಮುಂದುವರಿದದ್ದು.)

ವರು. ಮತ್ತು ಪುನಹ ಅವರ—'ವಿದ್ಯೆಯು ಬಹುದೂರದ ಚೈನಾದಲ್ಲಿದ್ದರೂ ಕೂಡ ಸಂಪಾದಿಸು' ಎಂದು ಹೇಳಿರುವರು ಇನ್ನೂ ಪುನಹ ಅವರು ತಿಳಿಸಿರುವುದೇನೆಂದರೆ—'ವಿದ್ಯಾವಂತನ ಶಾಯಿಯು ಮತಕ್ಕಾಗಿ ಪ್ರಾಣಕೊಟ್ಟವನ ರಕ್ತಕ್ಕಿಂತಲೂ ಉತ್ತಮವಾದದು.' ಈ ಹೇಳಿಕೆಗಳ ಮೇರೆ ನಾವು ನಮ್ಮ ಮತಸ್ಥರಲ್ಲಿ ವಿದ್ಯಾ ಪ್ರಚಾರ ಮಾಡದೆ ಇರುವುದು ಸರಿಯಲ್ಲ ಕೊಡಗಿನ ಮುಸಲ್ಮಾನರಿರುವ ಹಲವು ಸ್ಥಳಗಳಲ್ಲಿ ಪ್ರೈಮರಿ ಮತ್ತು ಪ್ರೌಢಯುಳ್ಳ ಶಾಲೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ತೆರೆಯಬೇಕು, ಕೆಲವುಗಳನ್ನು ಮಸೀದಿಗಳಲ್ಲಿ ತೆರೆದು ಸಾಧ್ಯವಾದಷ್ಟು ತಾವೇ ನಡಿಸಿಕೊಳ್ಳುವಂತೆ ಮಾಡಬೇಕು ಸರ್ಕಾರದ ಸಹಾಯಕ್ಕೆ ತುಂಬಾ ಆಶಿಸಬಾರದು ಹೀಗೆನ್ನುವಾಗ ಸರ್ಕಾರದ ಕರ್ತವ್ಯವನ್ನು ನಾನು ಕಡಿಮೆ ಮಾಡುವುದಿಲ್ಲ. ಆದರೆ ನಾವು ಯಾವಾಗಲೂ ಶಿಶುವಿನಂತೆ ಹೆಚ್ಚಾಗಿ ಅವರಿಂದ ಪೋಷಿಸಲ್ಪಡುತ್ತಿರಬಾರದು. ಸ್ವಸಹಾಯವೇ ಯಾವಾಗಲೂ ಉತ್ತಮ ಸಹಾಯ.

ವಿದ್ಯಾಪ್ರಚಾರದಿಂದಲೇ ಇಸ್ಲಾಮಿಗೆ ಸರಿಯಲ್ಲದ ಬೆಳವಣಿಗೆಗಳು ನಮ್ಮ ಮುಂದಿಂದ ಹೋಗುವವು ಕಠಿಣ ತರಹದ ಪರದಾ ಪದ್ಧತಿ ಮತ ಬಂಧನಗಳು ಮತ್ತು ಪಾರ್ಟಿಗಳು, ಸಾವು ಮತ್ತು ಮದುವೆಗೆ ಸಂಬಂಧಿಸಿದ ಬೇರೆ ಪದ್ಧತಿಗಳು ನಮ್ಮ ಗುಂಪಿನ ಜೀವ ರಕ್ತವನ್ನೇ ಹೀರುತ್ತಿವೆ ನಮ್ಮ ಸಮಾಜದಲ್ಲಿ ಈಗ ಇರುವ ಎಲ್ಲಾ ಕಡಕುಗಳಿಗೆ ವಿದ್ಯೆಯೇ ದಿವ್ಯಾವಷಧಿಯಾಗುವುದು.

ಮುಗಿಸುವ ಮೊದಲು ಹೆಚ್ಚಿಗೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ ಇತ್ತೀಚೆಗೆ ಹಿಂದೂಸ್ಥಾನವು ಹಿಂದೂ ಮುಸಲ್ಮಾನರ ಜಗಳ ಮತ್ತು ದೊಂಬಿಗಳಿಂದ ತುಂಬಿ ಹೋಗಿದೆ. ಇದೆಲ್ಲವೂ, ಅತ್ಯಲ್ಪ ಒಬ್ಬರ ಅಭಿಪ್ರಾಯವನ್ನು ಒಬ್ಬರು ಸರಿಯಾಗಿ ತಿಳಿದುಕೊಳ್ಳದೆ ಇರುವುದರ ಫಲಿತಾಂಶವಾಗಿದೆ ಮತವೆಂದು ಹೇಳಿಸಿಕೊಳ್ಳಲು ಯೋಗ್ಯತೆಯುಳ್ಳ ಯಾವ ಮತವೂ, ಬೇರೆ ಮತಾವಲಂಬಿಗಳನ್ನು ದ್ವೇಷಿಸಬೇಕೆಂದು ತನ್ನ ಹಿಂಬಾಲಕರಿಗೆ ಕಲಿಸುವುದಿಲ್ಲ. ಇಸ್ಲಾಮ್ ಮತವು ಎಲ್ಲಾ ಕಾಲಜ್ಞಾನಿಗಳನ್ನೂ, ಅವರ ಬೋಧನೆಗಳನ್ನೂ ನಂಬಬೇಕೆಂದು ಆಜ್ಞಾಪಿಸುತ್ತದೆ ಭೇದವಿಷ್ಟೇ, ಬೇರೆ ಮತಗಳ ಹಿಂಬಾಲಕರು, ಅವರವರ ಮತದ ಕಾಲಜ್ಞಾನಿಗಳನ್ನು ದೇವರ ಅವತಾರವೆಂದು ನಂಬುತ್ತಾರೆ, ಆದರೆ ಇಸ್ಲಾಮ್ ಮತಸ್ಥರು ಈ ಅಭಿಪ್ರಾಯವನ್ನು ಪೂರ್ಣ ತಿರಸ್ಕರಿಸುತ್ತದೆ. ತಿಳುವಳಿಕೆಯುಳ್ಳ ಮುಸಲ್ಮಾನರಿಗೆ ಮಹಮ್ಮದರೊಡನೆ ಜೀಸಸ್, ಮೋಸೆಸ್ ಮತ್ತು ಬೇರೆ ಅನೇಕರೂ ದೇವರ ಕಾಲಜ್ಞಾನಿಗಳಾಗಿರುವರು 'ಕಾಲಜ್ಞಾನಿಯು ಕಳುಹಿಸಲ್ಪಡದಂಥ ಜನಾಂಗವೇ ಇಲ್ಲ'ವೆಂದು ಕುರಾನಿನಲ್ಲಿ ಸೂಚಿಸಿದೆ ಮುಸಲ್ಮಾನರಿಗೂ, ಬೇರೆ ಮತಗಳವರಿಗೂ ವ್ಯತ್ಯಾಸ ಇಷ್ಟೇ, ಮುಸಲ್ಮಾನರು ಕಾಲಜ್ಞಾನಿಯನ್ನು ಕಾಲಜ್ಞಾನಿಯೆಂದು ಕರೆಯುತ್ತಾರೆ ಬೇರೆಯವರು ಅವರಿಗೆ ದೇವತಾ ಗುಣವನ್ನು ಹಚ್ಚುತ್ತಾರೆ. ಇಸ್ಲಾಂ ಮತಕ್ಕೆ ಪ್ರಕಾರ ಇದು ನಂತರದ ಬೆಳವಣಿಗೆಯಾಗಿದೆ, ಕಾಲಜ್ಞಾನಿಗಳು ಇದಕ್ಕೆ ಜವಾಬ್ದಾರರಲ್ಲ

ಹಾಗಾದರೆ ಇಸ್ಲಾಂ ಮತವು ಸರ್ವಸಾಮಾನ್ಯವಾದದ್ದಾಗಿದೆ ಮತ್ತು ಬೇರೆ ಮತಸ್ಥರನ್ನು ದ್ವೇಷಿಸಬೇಕೆಂದು ಎಂದೂ ಆಜ್ಞಾಪಿಸಲಾರದು. 'ಇಡೀ ಪ್ರಪಂಚವೇ ದೇವರ ಕುಟುಂಬವಾಗಿದೆ, ಮತ್ತು ಕುಟುಂಬವನ್ನು ಪ್ರೀತಿಸುವವನು ದೇವರನ್ನು ಪ್ರೀತಿಸುತ್ತಾನೆ' ಎಂದು ಮಹಮ್ಮದರು ಹೇಳಿರುತ್ತಾರೆ. ನಾವು ಮುಸಲ್ಮಾನರು ಬೇರೆಯವರ ಜಾತಿ ಮತವನ್ನೆಣಿಸದೆ ನಮ್ಮ ನೆರೆ ಹೊರೆಯವರನ್ನೆಲ್ಲ ಪ್ರೀತಿಸಬೇಕೆಂದು ಇದರಿಂದ ಗೊತ್ತಾಗುತ್ತದೆ. ನಾವು ಇಸ್ಲಾಂ ಮತದ ಬೋಧನೆಗೆ ಸರಿಯಾಗಿ ನಡೆದರೆ, ಈಗ ಹಿಂದೂಸ್ಥಾನದ ಜನಾಂಗತ್ವದ ಸಾವನ್ನೇ ಹೊರತಂದಿರುವ ಕೋಮುವಾರು ಜಗಳಗಳು ಅಳಿಸಿಹೋಗುವವು

ಕಡೆಯಲ್ಲಿಗೆ ಒಂದು ಮಾತು ಮಾತ್ರ, ನಾನು ಇಷ್ಟರ ವರೆಗೆ ಹೇಳಿದುದರ ಸಾರಾಂಶವೇನೆಂದರೆ— ಮಾಯ್ದ ಕೋಮು ಪೂರ್ವದ ಕೀರ್ತಿಯನ್ನು ಪುನಹ ಪಡೆಯಬೇಕೆಂದಿದ್ದರೆ ನಾವು ಕುರಾನಿಗೆ ತಿರುಗಿ, ಆ ವಿಶೇಷ ಪುಸ್ತಕದಲ್ಲಿ ಬರೆದಿರುವ ರೀತಿ ನಡೆಯಬೇಕು, ನಾವು ಮುಸಲ್ಮಾನರನ್ನು ಮಾತ್ರವಲ್ಲ ಮಾನುಷ ವರ್ಗವನ್ನೇ ಪ್ರೀತಿಸಲು ಮತ್ತು ಅವರ ಸೇವೆ ಮಾಡಲು ಸರ್ವ ಪ್ರಯತ್ನ ಮಾಡಬೇಕು ನಮ್ಮ ಪುನರುಜ್ಜೀವನಕ್ಕೆ ಇದೊಂದೇ ದಾರಿಯೆಂದು ನನಗೆ ತೋರುತ್ತದೆ. ಈ ವಿಷಯವನ್ನು ಅರಿತುಕೊಂಡು ಅದರಂತೆ ವರ್ತಿಸಲು ಭಗವಂತನು ನಮಗೆ ಸಹಾಯ ಮಾಡಲಿ.

ಮಡಿಕೇರಿನಾಡು ಕೋ ಆಪರೇಟಿವ್ ಸ್ಟೋರ್.

ತಾರೀಖು 1—6—31ರಲ್ಲು ಮಡಿಕೇರಿನಾಡು ಕೋಆಪರೇಟಿವ್ ಸ್ಟೋರಿನ ಜನರಲ್ ಮೀಟಿಂಗು ಮಡಿಕೇರಿ ಫೆಡರೇಶನ್ ಆಫೀಸಿನಲ್ಲಿ ನಡೆಯಿತು.

12 ಮಂದಿ ಮೆಂಬರರೂ, ಇಬ್ಬರು ಸಹಕಾರಿ ಇನ್‌ಸ್ಪೆಕ್ಟರುಗಳೂ ಮತ್ತು ಇತರ ಕೆಲವರೂ ಹಾಜರಿದ್ದರು. ರಾ. ಬಾ. ಕೆ. ಸುಬ್ಬಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. [illegible] ರಾ. ಬಾ. ಕೆ. ಸುಬ್ಬಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿ, ಈ ದಿನದ ಮೀಟಿಂಗಿನ ಉದ್ದೇಶವನ್ನು ಕುರಿತು ವಿವರಿಸಿದರು.

ರಾ. ಬಾ. ಪಿ ದೇವಯ್ಯನವರು ಈ ಸ್ಟೋರಿನ ಯೋಜನೆಯನ್ನು ವಿವರಿಸಿ ಕೊಡಬೇಕಾಗಿ, ಈಗ ತಾನೇ ಟ್ರೈನಿಂಗಿನಿಂದ ಟ್ರೈನಾಗಿ ಬಂದ ಇನ್‌ಸ್ಪೆಕ್ಟರು ಮೆ. ಪಿ [illegible] ಪೊನ್ನಪ್ಪನವರನ್ನು ಕೇಳಿಕೊಂಡರು. ಅದರಂತೆ ಇನ್‌ಸ್ಪೆಕ್ಟರವರು ಸ್ಟೋರ್ ಸಂಘದ ಪ್ರಯೋಜನವನ್ನೂ, ಪ್ರತಿಸದಸ್ಯರ ಕರ್ತವ್ಯವನ್ನೂ ಸಹ ವಿವರಿಸಿದರು.

ಬೈಲಾವನ್ನು ಓದಿ ಹೇಳಿದ ನಂತರ ಈ ಕೆಳಗಿನ ಚರ್ಚೆಯಿಂದ ಮಂಜೂರು ಮಾಡಲಾಯಿತು.

ಬೈಲಾ 17ರಲ್ಲಿ ಪಾಲು ಒಂದರ 20 ರೂ. ಎಂಬುದು ಇರುವುದನ್ನು 10 ರೂಪಾಯಿಗೆ ಇಳಿಸಬೇಕಾಗಿಯೂ ಕನಿಷ್ಠ ರೂ 20 ಕೊಡುವವರು ಎರಡು ಪಾಲುಗಳನ್ನು ಪಡೆಯಬಹುದಾಗಿಯೂ ಮೆ ರಾ ಪಟ್ಟಮಾಡ ಚಿಣ್ಣಪ್ಪನವರು ಸೂಚಿಸಿದರು.

ಬೈಲಾ 55ರ ಮೇರೆ ಇದನ್ನು ತಳ್ಳಿ ಹಾಕಲಾಯಿತು

ಇದಾದ ಮೇಲೆ ರಿಜಿಸ್ಟ್ರಾರರವರು ಈ ಸಂಘದ ಬೈಲಾವನ್ನು ರಿಜಿಸ್ಟರು ಮಾಡಿ ಕಳುಹಿಸಿದ ಸರ್ಟಿಫಿಕೇಟನ್ನು ಓದಿದ ನಂತರ ಮಂಜೂರು ಮಾಡಲಾಯಿತು.

ಕಮಿಟಿ ಮೆಂಬರುಗಳಾಗಿ ಮೆ. ಗಳಾದ ಮನೆಯಪಂಡ ಬೆಳ್ಯಪ್ಪನವರು, ಮಂಡೇಟಿರ ಅಪ್ಪಯ್ಯನವರು, ಪಟ್ಟಮಾಡ ಚಿಣ್ಣಪ್ಪನವರು, ಬಲ್ಲಚಂಡ ಬೆಳ್ಯಪ್ಪನವರು, ಯಂ ಯಂ ಸಿದ್ದೀಕ್‌ರವರು, ಎನ್ ಬಸಪ್ಪನವರು, ಕೆ. ಎನ್ ಸುಬ್ರಾಯರವರು, ರಾ ಬಾ ಕೆ ಸುಬ್ಬಯ್ಯನವರು ಮತ್ತು ರಾ ಬಾ ಪಿ ದೇವಯ್ಯನವರನ್ನು ಸಹ ಬಹುಮತದಿಂದ ಚುನಾಯಿಸಲಾಯಿತು.

ಈ ಪೈಕಿ ಮೆ ಮಂಡೇಟಿರ ಅಪ್ಪಯ್ಯನವರನ್ನು ಅಧ್ಯಕ್ಷರಾಗಿಯೂ, ಸೆಕ್ರೆಟರಿಯಾಗಿ ಮೆ ಮನೆಯಪಂಡ ಬೆಳ್ಯಪ್ಪನವರನ್ನೂ, ಖಜಾಂಚಿಯಾಗಿ ಮೆ ಪಟ್ಟಮಾಡ ಚಿಣ್ಣಪ್ಪನವರನ್ನು ಚುನಾಯಿಸಲಾಯಿತು

ಮಾಲುಗಳನ್ನು ರಖಂ ಆಗಿ ತರಿಸಲಿಕ್ಕೂ, ಕ್ರಯ ವಗೈರೆ ಗೊತ್ತುಪಡಿಸಲಿಕ್ಕೂ 'ಪರ್ಚೇಸಿಂಗ್ ಕಮಿಟಿ' ಯವರಾಗಿ ಮೆ ಗಳಾದ ಪಟ್ಟಮಾಡ ಚಿಣ್ಣಪ್ಪನವರು, ಯಂ. ಯಂ ಸಿದ್ದೀಕ್‌ರವರು. ಮತ್ತು ಬಲ್ಲಚಂಡ ಬೆಳ್ಯಪ್ಪನವರನ್ನು ಸಹ ಚುನಾಯಿಸಲಾಯಿತು

ಒಬ್ಬ ಎಕೌಂಟೆಂಟ್‌ರನ್ನೂ, ಇಬ್ಬರು ವ್ಯಾಪಾರಿಗಳನ್ನು ಚುನಾಯಿಸುವ ಅಧಿಕಾರವನ್ನೂ, ಎಕೌಂಟೆಂಟರನ್ನು ದಕ್ಷಿಣ ವಗೈರೆ ಸ್ಥಳಗಳಿಗೆ ತರಬೇತಿಗೆ ಕಳುಹಿಸುವ, ಇವರಿಗೆ ಸ್ಟೋರ್ ಕೀಪರಿಗೂ ಸಂಬಳ ಮೊಬಲಗು ಮಂಜೂರು ಮಾಡುವ ಅಧಿಕಾರ ವಗೈರೆ ಕಮಿಟಿಯವರಿಗೆ ಬಿಡಲಾಯಿತು.

ಪಾಲು ಧನವಾಳ ವಗೈರೆ ಹಣವನ್ನು ಒಡನೆ ವಸೂಲು ಮಾಡಿ ಕೆಲಸ ಕೈಕೊಳ್ಳಬೇಕಾಗಿ ತೀರ್ಮಾನಿಸಲಾಯಿತು ಕಟ್ಟಡದ ಸಂಗತಿ ಇನ್ನೊಂದು ಮೀಟಿಂಗಿನಲ್ಲಿ ತೀರ್ಮಾನಿಸಬಹುದಾಗಿ ಅಭಿಪ್ರಾಯ ಪಡಲಾಯಿತು

ಅಧ್ಯಕ್ಷರು—ಈಗ ಕೈಕೊಂಡ ಕೆಲಸವನ್ನು ಎಲ್ಲರೂ ಚೆನ್ನಾಗಿ ಮನಸ್ಸಿಟ್ಟು ಮಾಡಬೇಕಾಗಿ ಕೇಳಿಕೊಂಡರು. ಅಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗನ್ನು ಬರಖಾಸ್ತು ಮಾಡಲಾಯಿತು

ಕೆ. ಸುಬ್ಬಯ್ಯ,
(ಅಧ್ಯಕ್ಷ.)

ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆಯಲ್ಲಿ ಶಿವಾಚಾರದವರ ಬಸವೇಶ್ವರ ದೇವಸ್ಥಾನದ ಬಳಿ ಇರುವ ಕಂಚಿಗಾರರ ಸುಬ್ಬಣ್ಣ ಶೆಟ್ಟಿಯವರ ಬಾಪ್ತು, 2ನೇ ಬ್ಲಾಕಿನಲ್ಲಿರುವ ಆಫೀಸು ಜಗಲಿ, ಸಣ್ಣ ಮತ್ತು ದೊಡ್ಡ ಹಂಚು ಹಾಕಿರುವ ಸರ್ವೆ ನಂ 10ರ ಮನೆ ಮತ್ತು ಅದರ ಹಿಂಭಾಗದಲ್ಲಿರುವ ಕೊಟ್ಟಿಗೆ ಇದರ ಪಕ್ಕದಲ್ಲಿರುವ ಸಣ್ಣ ಹಂಚು ಹಾಕಿದ ಸರ್ವೆ ನಂ 11ರ ಮನೆ ಮತ್ತು ನಿವೋಜ್ ಬಾಣೆ ಪಕ್ಕದಲ್ಲಿರುವ ಒಂದು ಎಕರೆ 38 ಸೆಂಟು ಕಾಫಿತೋಟ ಸಹ ಮಾರಾಟಕ್ಕಿದೆ. ಕೊಂಡುಕೊಳ್ಳಲು ಇಚ್ಛಿಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವುದು

ಕಂಚಿಗಾರರ ಸುಬ್ಬಣ್ಣ ಶೆಟ್ಟಿ,
4—4. ಮಹದೇವಪೇಟೆ, ಮಡಿಕೇರಿ

ರಬ್ಬರ್ ಮೊಹರುಗಳು.

ನೀವು ಅಪೇಕ್ಷಿಸುವ ಯಾವತ್ತೂ ಮಾದರಿಯಲ್ಲಿ ತಯಾರಿಸಿ ಕೊಡಲಾಗುವವು.

ಮೇಲ್ಕಂಡ ಸಾಮಾನುಗಳಲ್ಲದೆ ಕನ್ನಡಿಯ ಸ್ಟೆನ್ ಬೋರ್ಡುಗಳು, ಹಾಫ್ ಟೋನ್ ಬ್ಲಾಕ್, ಮೋನೋಗ್ರಾಮ್ ಮೊಹರು, ಚಂದ್ರಕಾಂತ ಶಿಲೆಯ ಹಲಿಗೆಗಳು, ಉಂಗುರಗಳಿಗಿಡುವ ಬಹು ಅಂದವಾದ ಸಣ್ಣ ಕಲ್ಲುಗಳು ಇತ್ಯಾದಿ

ದಿ ಕ್ರಿಸ್ತಿಯನ್ ರಬ್ಬರ್ ಸ್ಟಾಂಪ್ ಕಂಪನಿ,
12—18 ಮಂಗಳೂರು, ದ ಕನ್ನಡ.

[illegible]

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿಯಲ್ಲಿ ಜೂನ್ 10ರ ಇಂದಿನ ವರೆಗೆ 4.65 ಇಂಚು, ಈ ವರ್ಷ ಒಟ್ಟು 14.18 ಇಂಚು ಮಳೆಯಾಗಿದೆ.

ಮಿ. ಕಾಂಬೆಯಂಡ ಯಸ್. ಬೆಳ್ಯಪ್ಪನವರು ಕಳೆದ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ಕೇಳಿ ಸಂತೋಷಪಡುತ್ತೇವೆ.

'ಕೊಡಗು' ಕಂಪೆನಿಯ ಡೈರೆಕ್ಟರುಗಳ ಮೀಟಿಂಗೊಂದು ಈ ತಾ. 27ನೇ ಶನಿವಾರ ಮಧ್ಯಾಹ್ನ 2 ಗಂಟೆಗೆ ಮಡಿಕೇರಿಯಲ್ಲಿರುವ ಕಂಪೆನಿಯ ಆಫೀಸಿನಲ್ಲಿ ನಡೆಯುವುದು.

ಮಳೆಯು ಪ್ರಾರಂಭವಾಗಿ ಕಾವೇರಿ ಹೊಳೆಯ ನೀರು ಹೆಚ್ಚಿದ ಕಾರಣ ಬೇತರಿ ಕಡವು ಮತ್ತು ಕೊಟ್ಟಮುಡಿ ತಾತ್ಕಾಲಿಕ ಸೇತುವೆಗಳು ವೈವಾಟಕ್ಕೆ ಮುಚ್ಚಲ್ಪಟ್ಟಿವೆ.

ಫ್ರೇಜರ್‌ಪೇಟೆಯ ಸೆರೆ ಕರೆಯಲ್ಲಿ ಪ್ಲೇಗು ರೋಗವು ಇರುವ ಕಾರಣ ಅಲ್ಲಿಯ ಟ್ರಾವೆಲರ್ಸ್ ಬಂಗ್ಲೆಯು ಇನ್ನೊಂದು ನೋಟೀಸು ವರೆಗೆ ಮುಚ್ಚಲಾಗಿದೆಯೆಂದು ಎಗ್ಸಿಕ್ಯೂಟಿವ್ ಇಂಜಿನಿಯರವರು ತಿಳಿಸಿರುತ್ತಾರೆ.

ಮಳೆಗಾಲವು ಸಮೀಪಿಸುತ್ತಿರುವುದರಿಂದ ಬಂಟ್ವಾಳ—ಸುಂಟಿಕೊಪ್ಪ ರಸ್ತೆಯು ಹರದೂರು ತಾತ್ಕಾಲಿಕ ಸೇತುವೆ ಮುಳುಗಿದ ಮೇ ತಿಂಗಳ 25ರಿಂದ ವೈವಾಟಕ್ಕೆ ಮುಚ್ಚಲ್ಪಟ್ಟಿದೆಯೆಂದು ಎಗ್ಸಿಕ್ಯೂಟಿವ್ ಇಂಜಿನಿಯರವರು ತಿಳಿಸಿರುತ್ತಾರೆ.

1000 ರೂಪಾಯಿಯ ಒಂದು ಹೊಸ ತರಹದ ನೋಟುಗಳು ಈ ತಿಂಗಳ ಮಧ್ಯದಲ್ಲಿ ಬೊಂಬಾಯಿ ಕರೆನ್ಸಿ ಆಫೀಸಿನಿಂದಲೂ, ನಂತರ ಬೇರೆ ಕರೆನ್ಸಿ ಆಫೀಸುಗಳಿಂದಲೂ ಚಲಾವಣೆಗೆ ಕೊಡಲ್ಪಡುವುವೆಂದು ಸದರಿ ನೋಟಿನ ವರ್ಣನೆ ಸಮೇತ ಇಂಡಿಯಾ ಸರ್ಕಾರದವರು ಪ್ರಕಟನೆಯನ್ನು ಹೊರಡಿಸಿರುವರು.

ಈ ವಾರ ಸುಂಟಿಕೊಪ್ಪದಲ್ಲಿ 6 ಜನರಿಗೆ ಪ್ಲೇಗು ತಗಲಿದೆಯೆಂದೂ, ಅಲ್ಲಿಗೆ ಸಮೀಪವಿರುವ ಕೊಡಗರಹಳ್ಳಿ ತೋಟದಲ್ಲಿ ಪ್ಲೇಗಿನಿಂದ ಒಂದು ಮರಣ ಸಂಭವಿಸಿದೆಯೆಂದೂ, ಫ್ರೇಜರ್‌ಪೇಟೆಯಲ್ಲಿ ಇಬ್ಬರು ಸತ್ತಿರುವರೆಂದೂ, ಸೋಮವಾರಪೇಟೆಯಲ್ಲಿ ಹೊಸದಾಗಿ ಸುಮಾರಿಗೆ ಅಂಟಿದುದರಲ್ಲಿ ಒಬ್ಬಳು ಮೃತಳಾಗಿರುವಳೆಂದೂ ವರ್ತಮಾನವಿದೆ.

ಕಳೆದ ಆದಿತ್ಯವಾರ ಮಡಿಕೇರಿ—ಸಿದ್ದಾಪುರ ರಸ್ತೆಯ 7ನೇ ಮೈಲು ಬಳಿ ಸ್ಟೀಮ್ ರೋಲರು ರಸ್ತೆ ಅಗೆಯುವ ಯಂತ್ರವನ್ನು ಎಳೆದುಕೊಂಡು ಹೋಗುತ್ತಿರಲಾಗಿ ಒಬ್ಬ ಮಾಪಿಳ್ಳೆಯು ಆಕಸ್ಮಿಕವಾಗಿ ಸದರಿಯ ಚಕ್ರದ ಅಡಿಗೆ ಸಿಕ್ಕಿ ಬಹು ಗಾಯಗೊಂಡನೆಂದೂ, ಅವನನ್ನು ಆಸ್ಪತ್ರೆಗೆ ಕಳುಹಿಸುವಷ್ಟರಲ್ಲಿ ಮೃತನಾದನೆಂದೂ ವರ್ತಮಾನ.

ಮಲಬಾರಿನ ವಯನಾಡಿನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿರುವ ಮಿ. ರಾಬಿನ್‌ಸನ್‌ರವರು ಪಾಲ್ಘಾಟ್ ಸರ್ಕಲಿನ ಕನ್ಸರ್ವೇಟರಾಗಿ ಈ ತಾ. 24 ರಲ್ಲಿ ವರ್ಗಾಯಿಸಲ್ಪಡುವುದರಿಂದ ಅಲ್ಲಿ ಎಕ್ಸ್‌ಟ್ರಾ ಅಸಿಸ್ಟೆಂಟ್ ಕನ್‌ಸರ್ವೇಟರಾಗಿರುವ ಮಿ. ಚೆನ್ನೀರ ಕುಶಾಲಪ್ಪನವರು ಆ ಸಮಯದಲ್ಲಿ ಎರಡು ತಿಂಗಳ ಮಟ್ಟಿಗೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ ಕೆಲಸದ ಚಾರ್ಜಿನಲ್ಲಿರುವರೆಂದು ತಿಳಿಯಬರುತ್ತದೆ.

ಕೊಡಗಿನ ಸತ್ಯಾಗ್ರಹ ಮಂಡಳಿಯ ಶ್ರೀಯುತರುಗಳಾದ ಅಜ್ಜಿಕುಟ್ಟಿರ ಚಿಣ್ಣಪ್ಪನವರು, ಚೆಕ್ಕೆರ ಪೊನ್ನಯ್ಯನವರು, ಎ. ಆರ್. ಕಮ್ಮಾರ್ಯನವರು ಮತ್ತು ಮಳಿಯಂಡ ಚಂಗಪ್ಪನವರು ಮೈಸೂರಿನಲ್ಲಿ ನಡೆಸಿದ ಹಿಂದೂಸ್ಥಾನಿ ಸೇವಾದಳದ ಸ್ವಯಂಸೇವಕ ಶಿಕ್ಷಣ ಶಿಬಿರದಲ್ಲಿ ಒಂದು ತಿಂಗಳು ತರಬೇತು ಹೊಂದಿ, ತಂಬಂಧದ ಸರ್ಟಿಫಿಕೇಟನ್ನು ಶ್ರೀಯುತ ಪಂಡಿತ ಜವಾಹರ್‌ಲಾಲ್ ನೆಹರುರವರಿಂದ ಪಡೆದು ವಾಪಸು ಕೊಡಗಿಗೆ ಬಂದಿರುವರೆಂದು ಕೇಳಿ ಸಂತೋಷಪಡುತ್ತೇವೆ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ.

ಈ ಕೆಳಗಿನ ವಿದ್ಯಾರ್ಥಿಗಳು ಕಾಲೇಜಿಗೆ ಸೇರಲು ಯೋಗ್ಯರಾಗಿರುವರೆಂದು ಪ್ರಕಟಿಸಲಾಗಿದೆ.

"ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಿಂದ ಪರೀಕ್ಷೆಗೆ ಹೋದ 30 ವಿದ್ಯಾರ್ಥಿಗಳಲ್ಲಿ ಈ ಕೆಳಗಿನ 20 ಮಂದಿ—ಮೆ. ಗಳಾದ 1. [illegible] ಯನ್. ಜಯಸಿಂಹ, 2. ಸಿ. ಆರ್. ಚಂದ್ರಶೇಖರಯ್ಯ, [illegible] ಡಿ. ಕೆ. ಶ್ರೀನಿವಾಸನ್; 4. ಕರೋಮಾಡ ಕೆ. ಅಪ್ಪಯ್ಯ, [illegible] ಯಂ. ಬಿ. ಗೋಪಾಲಪ್ಪ, 6. ಮಂಡೇಪಂಡ ಎ. [illegible] 7. ತೋಟಂಬೈಲು ಯಂ. ತಮ್ಮಯ್ಯ, 8. ನಾಳಿಯಂಡ ಯನ್. ಅಚ್ಚಪ್ಪ, 9 ಪಾಲೇಕಂಡ ಸಿ. ಕರುಂಬಯ್ಯ, 10. ಮಂಡೇಪಂಡ ಬಿ. ಕಾರ್ಯಪ್ಪ, 11 ಶ್ರೀಮತಿ ಹಟ್ಟ್ಸ್ ... [illegible], 12. ಕೋದಂಡ ಎ. ಬೆಳ್ಯಪ್ಪ, 13. ಅಪ್ಪಚ್ಚೀರ ಯಂ. ಪೊಳ್ಳಪ್ಪ 14. ಪಟ್ಟಮಾಡ ಯು ಸೋಮಣ್ಣ, 15. ಎ. ರಾಮರಾವ್, 16. ಐರುಗಿಪಾರ ಯಸ್. ಕುಟ್ಟಪ್ಪ, 17. ಮುಕ್ಕಾಟಿರ ಯಂ. ಅಚ್ಚಯ್ಯ, 18 ಪಾಲೇಕಂಡ ಎ. ನಂ[illegible] 19. ಪಾಲೇಕಂಡ ಪಿ. ಕಾರ್ಯಪ್ಪ ಮತ್ತು 20 ಮೇರಿ[illegible] ದೇವಯ್ಯ.

[illegible]ರಾಜಪೇಟೆ ಹೈಸ್ಕೂಲಿನಿಂದ ಪರೀಕ್ಷೆಗೆ ಹೋದ 28 [illegible]ಗಳ ಪೈಕಿ ಈ ಕೆಳಗಿನ 5 ಮಂದಿ—ಮೆ. ಗಳಾದ 1. [illegible]ಡ ಪಿ. ಅಪ್ಪಯ್ಯ, 2. ಮಂಡೇಪಂಡ ಯಂ. [illegible] [illegible] ಯಸ್. ನಾರಾಯಣಮೂರ್ತಿ, 4. ಮು[illegible] [illegible] ಕಾಳಪ್ಪ ಮತ್ತು 5. ಶ್ರೀಮತಿ ಬೊಟ್ಟೋಳಂಡ ಬಿ. ಕಾವೇರಮ್ಮ. (ಈ ಶಾಲೆಯಲ್ಲಿ 'ಸೆಲೆಕ್ಷನ್' ಮಾಡದೆ ಕ್ಲಾಸಿನಲ್ಲಿದ್ದವರನ್ನೆಲ್ಲಾ ಪರೀಕ್ಷೆಗೆ ಕಳುಹಿಸಿದ್ದಾಗಿದೆ.)

ಮಡಿಕೇರಿ ಹುಡುಗಿಯರ (ಕಾನ್ವೆಂಟ್) ಹೈಸ್ಕೂಲಿನಿಂದ ಪರೀಕ್ಷೆಗೆ ಹೋದ 7 ವಿದ್ಯಾರ್ಥಿನಿಯರ ಪೈಕಿ ಈ ಕೆಳಗಿನ 6 ಮಂದಿ—ಶ್ರೀಮತಿಗಳಾದ 1. ಚೋನಿರ ಬಿ. ಕಾವೇರಿ, 2. ಕೇಳಪಂಡ ಯಂ. ಬೊಳ್ಳಮ್ಮ, 3. ಆರ್. ಡಿಸೋಜ, 4. ಕಲಿಯಂಡ ಯಂ. ಪೊನ್ನಮ್ಮ, 5 ಕಾಯಪಂಡ ಡಿ. ಮುತ್ತಮ್ಮ ಮತ್ತು 6 ಕೀತಿಯಂಡ ಬಿ. ಪೂವಮ್ಮ.

ಖಾಸಗಿಯಾಗಿ ಹೋದವರಲ್ಲಿ—ಮೆ. ಗಳಾದ 1. ಕೋಟೆರ ಎ. ಅಪ್ಪಣ್ಣ, 2 ಯನ್. ಯಸ್. ರಾಮಚಂದ್ರ.

ಮೈಸೂರು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಶ್ರೀಮತಿ ಕೋಳಂಡ ಡಬ್ಲ್ಯೂ. ಸೀತಮ್ಮನವರು ಪಾಸಾಗಿರುವರೆಂದು ತಿಳಿಯಬರುತ್ತದೆ.

ಮುಸಲ್ಮಾನರ ಕಾನ್‌ಫರೆನ್ಸ್.

ತಿದ್ದುಪಡಿ.

ಜೂನ್ 5ರಲ್ಲಿ ಪ್ರಕಟವಾದ ಕೊಡಗು ಮುಸಲ್ಮಾನರ ಕಾನ್‌ಫರೆನ್ಸಿನ ತೀರ್ಮಾನಗಳ 5ನೇದು ಸರಿಯಾಗಿ ಬರಲ್ಪಡಲಿಲ್ಲವೆಂತಲೂ, ಈ ಕೆಳಗಿನ ಮೇರೆ ತಾನೇ ಅದನ್ನು ಮಹಾಸಭೆಯಲ್ಲಿ ತಿದ್ದುಪಡಿ ಮಾಡಿರುತ್ತೇನೆಂತಲೂ ಶ್ರೀಯುತ ಅಬ್ದುಲ್ ಗಫೂರ್ ಖಾನ್‌ರವರು ತಿಳಿಸಿರುತ್ತಾರೆ.

[illegible] ಈ ಸಭೆಯು ಅಖಿಲ ಭಾರತ ಮುಸ್ಲಿಂ ಕಾನ್‌ಫರೆನ್ಸಿನ ತೀರ್ಮಾನಗಳಿಗೆ (ಅಲಹಾಬಾದ್ ಮುಂತಾದವು) ಒಪ್ಪುತ್ತದೆ' ಎಂಬುದರ ಬದಲು 'ಮುಸ್ಲಿಂ ಕಾನ್‌ಫರೆನ್ಸಿಗೂ, ಕಾಂಗ್ರೆಸಿಗೂ ಆಗುವ ರಾಜಿ ಒಪ್ಪಂದಕ್ಕೆ ಸಮ್ಮತಿಸುತ್ತದೆ' ಎಂದು ಆಗಬೇಕು.

ಹೊರಪ್ರಾಂತ.

ಕಾನ್ಪುರದಲ್ಲಿ ಹಿಂದೂ ಮುಸಲ್ಮಾನರಿಗೆ ಉಂಟಾಗಿರುವ ವಿವಾದವನ್ನು ತೀರ್ಮಾನಿಸಲು ಮಹಾತ್ಮ ಗಾಂಧಿಯವರಿಗೆ ವಹಿಸಲಾಗಿದೆ ಎಂದು ವರ್ತಮಾನ.

ಕಳೆದ ದುಂಡು ಮೇಜು ಪರಿಷತ್ತಿನಲ್ಲಿ ಫೆಡರಲ್ ರಚನೆಗೆ ಒಪ್ಪಿಗೆಯನ್ನಿತ್ತಿದ್ದ ಪಟಿಯಾಲದ ಮಹಾರಾಜರು ಫೆಡರಲ್ ರಚನೆಯಿಂದ ಸಂಸ್ಥಾನಗಳಿಗೆ ತುಂಬಾ ಕೆಡಕುಗಳಿವೆಯೆಂದು ಅದಕ್ಕೆ ಈಗ ವಿರೋಧಿಸಿ, ಬೇರೊಂದು ರಚನೆಯನ್ನು ಸೂಚಿಸಿರುವರು.

ಮಹಾತ್ಮ ಗಾಂಧಿಯವರು ದುಂಡು ಮೇಜು ಪರಿಷತ್ತಿಗಾಗಿ ಲಂಡನಿಗೆ ಹೋಗುವಾಗ್ಯೆ ಹಡಗಿನ 'ಡೆಕ್' ಅಂದರೆ ಕೆಳಗಿನ ಅಂತಸ್ತಿನಲ್ಲಿ (ಕನಿಷ್ಠ ತರಗತಿಯಲ್ಲಿ) ಪ್ರಯಾಣ ಮಾಡುವರೆಂತಲೂ, ಲಂಡನಿನಲ್ಲಿ ಬಡವರಿಗಾಗಿ ಇರುವ 'ಕಿಂಗ್‌ಸ್ಲೇ ಹಾಲ್' ಎಂಬ ಮನೆಯಲ್ಲಿ ಇಳುಕೊಳ್ಳುವರೆಂದೂ ಸುದ್ದಿ ಇದೆ.

ಪಂಡಿತ ಜವಾಹಿರ್ ಲಾಲ್ ನೆಹರುರವರು ತಾ. 15ರಲ್ಲಿ ಪೂನಾದಲ್ಲಿ ಭಾಷಣ ಮಾಡುತ್ತಾ—ಪುನಃ ಯುದ್ಧ ಮಾಡಬೇಕಾಗುವದೋ, ಇಲ್ಲವೋ ಎಂದು ಖಚಿತ ಹೇಳಲು ಈಗ ಯಾರಿಗೂ ಸಾಧ್ಯವಿಲ್ಲ. ಆದರೆ ಜನಾಂಗವು ಕ್ರಮಕ್ಕೊಳಪಟ್ಟ ತರಬೇತಾದ ಸಿಪಾಯಿಗಳಂತೆ ಬರೂರಿನ ಕೆಲಸಗಳಿಗೆ ಯಾವಾಗಲೂ ತಯಾರಾಗಿಯೇ ಇರಬೇಕು' ಎಂದಿರುವರು.

ಮದರಾಸಿನ 'ಯೂನಿವರ್ಸಲ್ ಪಬ್ಲಿಕಲ್ ಐಡ್ ಎಂಡ್ ಪೂವರ್ ಹೌಸಿಂಗ್ ಎಸೋಸಿಯೇಶನ್'ನ ಆಡಳಿತದಲ್ಲಿ ಅವಿಶ್ವಾಸವನ್ನು ಕಂಡ ನಾಲುಗಾರರೊಬ್ಬರು ಕೋರ್ಟಿಗೆ ಅಜಿ ಮಾಡಿಕೊಂಡಂತೆ, ಆ ಸಂಘದ ಲೆಕ್ಕ ಪತ್ರಗಳನ್ನು ಶೋಧಿಸಿ ಸಂಘವನ್ನು ಮತ್ತದರ ಬಗ್ಗೆ ಲಿಕ್ವಿಡೇಟರರ ನೇಮಕವಾದುದನ್ನು ಮದರಾಸು ಹೈ ಕೋರ್ಟಿನಲ್ಲಿ ರದ್ದುಪಡಿಸಿರುತ್ತಾರೆ.

ಸೆಂಟ್ರಲ್ ಸಿಖ್ ಲೀಗಿನ ಮಹಾಸಭೆಯಲ್ಲಿ, ಮಿಸಸ್ ಕರ್ಟಿಸ್‌ರವರನ್ನು ಕೊಂದ ಸರ್ದಾರ್ ಸಿಂಗನನ್ನು ಶ್ಲಾಘಿಸಿ ಮಾಡಿದ ಠರಾವನ್ನು ಸದರಿ ಲೀಗಿನ ಕಾರ್ಯಕಾರೀ ಮಂಡಳಿಯವರು ಸಸ್ಪೆಂಡ್ ಮಾಡಿರುವರು ಮತ್ತು ಕೊಲೆಪಾತಕರನ್ನು ಹೊಗಳುವುದು ಅವರ ಗುರುಗಳ ಉತ್ಕೃಷ್ಟ ತತ್ವಕ್ಕೂ, ಬೋಧನೆಗೂ ವಿರೋಧವಾದುದರಿಂದ ಸದರಿ ಠರಾವನ್ನು ಪ್ರೊಸೀಡಿಂಗ್ಸಿನಿಂದ ತೆಗೆಯಬೇಕೆಂದು ಸೆಂಟ್ರಲ್ ಲೀಗಿನವರಿಗೆ ಬರೆದಿರುವರು.

ಕಳೆದ ಮಾರ್ಚ್ ತಿಂಗಳಲ್ಲಿ ಕಾನ್‌ಪುರದಲ್ಲಿ ನಡೆದ ಅಮಾನುಷ ಕೊಲೆಗಳ ಸಮಯದಲ್ಲಿ ಅಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿದ್ದ ಮಿ. ಸೇಲ್‌ರವರ ಅಜಾಗರೂಕತೆಯಿಂದ ಅಲ್ಲಿಯ ಸ್ಥಿತಿಯು ಅಷ್ಟು ಕಠಿಣಾವಸ್ಥೆಯನ್ನು ಹೊಂದಿದ್ದೆಂದು ಆ ವಿಷಯ ವಿಚಾರಿಸಿದ ಕಮಿಟಿಯು ರಿಪೋರ್ಟ್ ಮಾಡಲು, ಅವರಿಗೆ ರಜೆಯೂ ವರ್ಗ ಕೊಡಲಾಗುವುದೆಂದು ಸರ್ಕಾರದವರು ಮಾಡಿದ ಸೂಚನೆಯಂತೆ ಅವರು ರಜೆ ತೆಗೆದುಕೊಂಡಿರುವರಂತೆ. ಇದೀಗ ಅವರ ಅಜಾಗರೂಕತೆಗೆ ಶಿಕ್ಷೆ!

ಬರ್ಮಾದಲ್ಲಿ ದಂಗೆಯು ನಡೆಯುತ್ತಲೇ ಇದೆ. ಮಿಲಿಟರಿಯವರೂ, ಪೋಲೀಸಿನವರೂ ಆಗಾಗ್ಯೆ ದಂಗೆ ಕೋರರೊಂದಿಗೆ ಬಡಿದಾಟ ನಡೆಸುತ್ತಿರುವರು. ಆದರೂ ದಂಗೆಯನ್ನು ಇನ್ನೂ ಅಡಗಿಸಲಿಕ್ಕೆ ಸಾಧ್ಯವಾಗಿಲ್ಲ. ಈ ದಂಗೆಯು ಆರ್ಥಿಕ ಹೀನಸ್ಥಿತಿಯಿಂದಲೂ, ತೆರಿಗೆ ಹೆಚ್ಚಳಿಕೆಯಿಂದಲೂ ಉಂಟಾಗಿರುವ ಬಡತನ ಅತ್ಯಾವಶ್ಯಕವಾಗಿ ಪ್ರಾಣನಷ್ಟ ಮಾಡುವುದರ ಬದಲು ಅದರ ಮೂಲಕಾರಣಗಳ ಬಗ್ಗೆ ಸ[illegible] [illegible]

ಟೀ' ಯ ಮುಂದಾಳು ಗವರ್ನರರಿಗೆ ತಂತೀ ವರ್ತಮಾನ ಕಳುಹಿಸಿರುವರಂತೆ.

ಕುಂದಾಪುರ ತಾಲೋಕಿನ ಅಲಬಾಡಿ ಗ್ರಾಮದಲ್ಲಿ ಈ ತಾ. 8ರ ರಾತ್ರಿ 3 ಗಂಟೆ ಸಮಯದಲ್ಲಿ ಮನೆಯಲ್ಲಿ ಮಲಗಿ ನಿದ್ರೆ ಮಾಡಿದ್ದ 40 ವರ್ಷ ಪ್ರಾಯದ ಒಬ್ಬ ಕೊಟ್ಟಾರಿ ಜಾತಿಯ ಹೆಂಗಸನ್ನು ಒಂದು ಹುಲಿಯು ಕುತ್ತಿಗೆ ಹಿಡಿದು ಕಚ್ಚಿಕೊಂಡು ಸಮೀಪದ ಕಾಡಿಗೆ ಹೋಗಿ ಒಂದು ಕೆನ್ನೆ, ಕೈ ಮತ್ತು ಮೊಗ್ಗಲನ್ನು ತಿಂದು ಹಾಕಿತೆಂತಲೂ, ಮರುದಿನ ಬೆಳಿಗ್ಯೆ ಶವವು ಸಿಕ್ಕಿತೆಂತಲೂ, ಆ ಮನೆಯ ಚಾವಡಿಯಲ್ಲಿ ಹಲವು ಜನರೂ, ಅವಳ ಜೊತೆಯಲ್ಲಿ ಇನ್ನೊಬ್ಬ ಹೆಂಗಸೂ, ಒಬ್ಬ ಮಗನೂ ಮಲಗಿದ್ದರೆಂತಲೂ, ಅಂಗಳದಲ್ಲಿ ದನಕರುಗಳಿದ್ದವೆಂತಲೂ ವರ್ತಮಾನ. ಈ ಗ್ರಾಮದ ಸುತ್ತಮುತ್ತಲಲ್ಲಿ ಕಳೆದ ಒಂದು ವರ್ಷದಿಂದ ತಾಯಿಯ ಮಗ್ಗುಲಲ್ಲಿ ಮಲಗಿದ್ದ ಒಂದು ಮಗುವನ್ನೂ, ಒಬ್ಬ ಕುಂಬಾರ ಹುಡುಗನನ್ನೂ ಮತ್ತು ಒಬ್ಬ ಕುಡುಬಿ ಹುಡುಗಿಯನ್ನೂ ಹುಲಿಯು ಕೊಂದು ಕಾಡಿಗೆ ಎಳೆದುಕೊಂಡು ಹೋಗಿತ್ತೆಂತಲೂ, ಒಬ್ಬ ದನ ಕಾಯುವ ಹುಡುಗಿಯು ಮತ್ತು ಒಬ್ಬ ವಿಪ್ರ ನಡೆಯುತ್ತಿದ್ದ ಹೊಲತಿಯು ಹುಲಿಯಿಂದ ತಪ್ಪಿಸಿಕೊಂಡರೆಂತಲೂ ಸುದ್ದಿ ಇದೆ.

ವಿದೇಶ.

ಅಫ್ಘಾನಿಸ್ತಾನದ ರಾಜಧಾನಿಯ ಬಳಿ ಪಂಜಶೀರ್ ಪ್ರದೇಶದಲ್ಲಿ ತಾ. 15ರಲ್ಲಿ ಭೂಕಂಪ ಉಂಟಾಗಿ 50 ಮನೆಗಳು ನಾಶವಾದುದಲ್ಲದೆ 15 ಮರಣಗಳು ಸಂಭವಿಸಿದವು.

ನಾನ್‌ಕಿಂಗ್ ಎಂಬಲ್ಲಿ ವಿಯಾಂಗ್‌ಕ್ಸಾಗಿ ಹೊರಟಿದ್ದ ಒಂದು ಚಿಕ್ಕ ಸ್ಟೀಮರು ಬಿರುಗಾಳಿಗೆ ಸಿಕ್ಕಿ ಮುಳುಗಿ ಹೋಗಿ, ಸುಮಾರು 160 ಜನರು ನೀರಿನ ಪಾಲಾದರು.

'ಇಷ್ಟರ ವರೆಗೆ ಪ್ರಪಂಚದ ಯಾವ ಜನಾಂಗವೂ ಯುದ್ಧ ಮಾಡದೆ ಸ್ವಾತಂತ್ರ್ಯವನ್ನು ಪಡೆಯದೆ ಇದ್ದರೂ, ಹಿಂದೂದೇಶವು ಆಯುಧಗಳಿಲ್ಲದೆ ಅದನ್ನು ಬೇಗನೆ ಪಡೆಯುವಂತೆ ಇದೆಯೆಂತಲೂ, ಹಿಂದೂದೇಶವನ್ನು ಆಯುಧಗಳ ಕ್ರಾಂತಿಯಿಂದ ದೂರ ಮಾಡಿ, ಸ್ವಾತಂತ್ರ್ಯವು ಸಮೀಪಿಸುವಂತೆ ಮಿ. ಗಾಂಧಿಯವರ ಅಹಿಂಸಾ ತತ್ವವು ಮಾಡಿರುವಷ್ಟು ಬೇರೆ ಯಾವುದೂ ಮಾಡಿರುವುದಿಲ್ಲವೆಂತಲೂ' ಪಾರ್ಲಿಮೆಂಟಿನ ಮೆಂಬರಾದ ಮಿ. ವಾಲ್ಟರ್ ಐಲ್ಸ್‌ರವರು ತಮ್ಮದೊಂದು ಭಾಷಣದಲ್ಲಿ ಹೇಳಿದರು.

ವಿಮರ್ಷೆ.

'ಭಾರತೀಯ ರಾಷ್ಟ್ರಧ್ವಜ'ವೆಂಬ ಚಿಕ್ಕ ಪುಸ್ತಕವನ್ನು ಡಾ. ನಾ. ಸು. ಹರ್ಡೀಕರವರು ಈಗ ತಾನೇ ಪ್ರಕಟಿಸಿರುವರು. ಈಗ ಹಿಂದೂದೇಶದ ಎಲ್ಲಾ ಭಾಗಗಳಲ್ಲೂ ಹಾರಿಸಲ್ಪಡುತ್ತಿರುವ ಮೂರು ಬಣ್ಣದ ರಾಷ್ಟ್ರಧ್ವಜದ ಅರ್ಥವೇನು, ಅದರ ವಂದನ ವಿಧಿಯು ಹೇಗೆ ಎಂಬೀ ವಿಷಯಗಳನ್ನು ಚಿಕ್ಕ ಮಕ್ಕಳಿಗೂ ಕೂಡ ತಿಳಿಯಲು ಅನುಕೂಲವಾಗುವಂತೆ ಚಿತ್ರಪಟಗಳಿಂದ ಕೂಡಿ, ಹಲವು ನಾಡಗಳ ರೂಪದಲ್ಲಿ ಬರೆಯಲ್ಪಟ್ಟಿರುವ ಈ ಪುಸ್ತಕವು ರಾಷ್ಟ್ರೀಯ ಭಾವನೆಯು ತುಂಬಿ ಮೇಲಕ್ಕೆ ಉಕ್ಕಿ ಬರುತ್ತಿರುವ ಈ ಸಮಯದಲ್ಲಿ ಜನತೆಗೆ ತುಂಬಾ ಪ್ರಯೋಜನವಾಗದೆ ಇರದು. ಇದು ಎಲ್ಲರ ಕೈಸೇರಲು ಅನುಕೂಲವಾಗುವಂತೆ ಇದರ ಕ್ರಯವು ಬರೇ ಎರಡಾಣೆ ಇಡಲ್ಪಟ್ಟಿದೆ. ಇದು ಹುಬ್ಬಳ್ಳಿಯಲ್ಲಿರುವ "ಭಗಿನಿ ಮಂಡಲ"ದ ಕಾರ್ಯದರ್ಶಿಯವರಲ್ಲಿ ದೊರೆಯುವುದು.

5 ರೂಪಾಯಿ ಇನಾಮು!

ಸಾಧಾರಣ ಬಿಳಿದು ವರ್ಣದ. 1½ ಅಡಿ ಉದ್ದದ ಚೂಪಾದ ಹಿಂಗೊಂಬುಳ್ಳ, ಉದ್ದ ಬಾಲದ ಮತ್ತು ಸಾಧಾರಣ 4 ಅಡಿ ಎತ್ತರದ ಕೆಸಂಬ ಎಂಬ ಹೆಸರಿನ ಕೋಣ ಒಂದು ತಾ. 11—6—'31ರಿಂದ ಪರಾರಿಯಾಗಿದೆ. ಇದನ್ನು ಪತ್ತೆ ಮಾಡಿ ಕೊಟ್ಟವರಿಗೆ 5 ರೂ. ಬಹುಮಾನ ಕೊಡಲಾಗುವುದು.

ಎನ್. ಯಸ್. ಕಂಭಯ್ಯ,
ಗ್ರೀನ್ ಹಾಲೊ ಎಸ್ಟೇಟ್,
3—1 ಬಿಳಿಗೇರಿ ಪೋಸ್ಟು.

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.—ನನ್ನ ಅಣ್ಣನಾದ ತಮ್ಮಯ್ಯನು ಕಳೆದ ನಾಲ್ಕೈದು ವರ್ಷಗಳಿಂದ ಪತ್ತೆ ಇಲ್ಲದಿರುವುದರಿಂದಲೂ, ನಾವಿಬ್ಬರ ಸೊತ್ತು ನನ್ನ ಸ್ವಾಧೀನ ಅನುಭವದಲ್ಲಿರುವದರಿಂದಲೂ ಈತನು ಸಾಲ ಮಾಡಿದ ಅಥವಾ ಇನ್ನು ಮುಂದೆ ಮಾಡುವ ಪಕ್ಷಕ್ಕೆ ಅಂಥಾ ಸಾಲ ಕೊಟ್ಟ ಮನುಷ್ಯನು ಈ ತಮ್ಮಯ್ಯನ ದೇಹ ಜವಾಬ್ದಾರಿಯಿಂದಲೇ ಫೈಸಲ್ ಮಾಡಿಕೊಳ್ಳಬೇಕಲ್ಲದೆ ಪಿತ್ರಾರ್ಜಿತ ಸೊತ್ತು ಅಂತಹ ಸಾಲಕ್ಕೆ ಒಳಗಾಗಲಾರದು. ಹಾಗೆ ಭರ್ತಿ ಮಾಡದ ಪಕ್ಷ ಸಾಲ ಕೊಟ್ಟವರು ಎಲ್ಲಾ ನಷ್ಟಕ್ಕೆ ತಾವೇ ಗುರಿಯಾಗತಕ್ಕದ್ದು. ನಾನು ಕುಟುಂಬ ಖರ್ಚಿಗಾಗಲೀ ಯಾ ಪಿತ್ರಾರ್ಜಿತ ಸೊತ್ತುಗಳ ರೂಪಿತ ವಗೈರೆಗಾಗಲೀ ಸಾಲ ಮಾಡಿದ್ದಿಲ್ಲ.

ಪಾಂಡಂಡ ಚೆಂಗಪ್ಪ,
[illegible]

ಕರ್ನಾಟಕದಲ್ಲಿ ಒಂದು ತಾಲೋಕು ಸಂಘಟನೆಯ ಕಾರ್ಯವು.

ಸೂಚನೆಗಳನ್ನು ಕಳುಹಿಸಿರಿ.

ಕರ್ನಾಟಕದಲ್ಲಿ ಬಾರ್ಡೋಲಿಯಂಥ ಒಂದು ತಾಲೋಕನ್ನು ಸಿದ್ಧಗೊಳಿಸಬೇಕೆಂದು ಹುಕ್ಕೇರಿಯ ಕರ್ನಾಟಕ ಪ್ರಾಂತೀಕ ಪರಿಷತ್ತಿನಲ್ಲಿ ನಿರ್ಣಯವಾಗಿದೆ. ಅದರಂತೆ ಕೂಡಲೇ ಕಾರ್ಯವನ್ನು ಕೈಕೊಳ್ಳಬೇಕೆಂದು ಕ. ಪ್ರಾಂ. ಕಾಂ. ಕಮಿಟಿಯವರು ಹವಣಿಸುತ್ತಿರುವರು. ಈ ವಿಷಯದಲ್ಲಿ ಯಾರಿಗಾದರೂ ಸೂಚನೆಗಳನ್ನು ಮಾಡಬೇಕಾಗಿದ್ದರೆ ಅವರು ಅಂಥಾ ಸೂಚನೆಗಳನ್ನು ಇದೇ ಜೂನ್ ೨೫ನೇ ತಾರೀಕಿನೊಳಗಾಗಿ ನಮಗೆ ಮುಟ್ಟುವಂತೆ ಕಳುಹಿಸಬೇಕು.

ರಾ. [illegible]. ಹುಕ್ಕೇರಿಕರ,
ಮುಖ್ಯಕಾರ್ಯದರ್ಶಿ,
ಕ. ಪ್ರಾಂ. ಕಾಂ. ಕಮಿಟಿ.

ಧಾರವಾಡ,
೧೨—೬—೩೧.

ಕರ್ನಾಟಕಕ್ಕೆ ಮಹಾತ್ಮರ ಸಂದೇಶ.

ಹುಕ್ಕೇರೀ ಪರಿಷತ್ತಿಗೆ ಶುಭಾಶೀರ್ವಾದವನ್ನು ಕಳುಹಿಸುವಾಗ ಮಹಾತ್ಮ ಗಾಂಧಿಯವರು ಕೆಳಗಿನ ಸಂದೇಶವನ್ನು ಕಳುಹಿಸಿರುವರು

"ಕಳೆದ ಸತ್ಯಾಗ್ರಹ ಸಂಗ್ರಾಮದಲ್ಲಿ ಕರ್ನಾಟಕವು ಅಲೌಕಿಕವಾದ ಕಾರ್ಯವನ್ನು ಮಾಡಿದೆ. ಇನ್ನು ಮುಂದೆ ಕರ್ನಾಟಕವು ವಿಧಾಯಕ ಕಾರ್ಯಕ್ರಮವನ್ನು ಭರದಿಂದ ಸಾಗಿಸಿ ಖಾದೀ ಕಾರ್ಯದ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕು. ಖಾದಿಯಲ್ಲಿ ಹಿಂದುಸ್ಥಾನದ ಬಡಬಗ್ಗರ ಹಿತವಿರದಿದ್ದರೆ ನಾನು ಅದರ ಬಗ್ಗೆ ಇಷ್ಟೊಂದು ಅಗ್ರಹವನ್ನು ತಾಳುತ್ತಿರಲಿಲ್ಲ. ರಾಷ್ಟ್ರೀಯ ಸಭೆಗೆ ಕರ್ನಾಟಕ ಏಕೀಕರಣದ ತತ್ವವು ಮಾನ್ಯವಾಗಿದೆ. ಸ್ವರಾಜ್ಯದಲ್ಲಿ ಅದರ ಬಗ್ಗೆ ಯೋಗ್ಯವಾದ ವಿಚಾರವು ಆಗಿಯೇ ತೀರುವುದು. ಇದರ ವಿಷಯವಾಗಿ ಕನ್ನಡಿಗರು ವಿಮಂಚನೆ ಮಾಡುವ ಕಾರಣವಿಲ್ಲ. ಕರ್ನಾಟಕದಲ್ಲಿ ಲಿಂಗಾಯತ ಮುಂತಾದ ಸಮಾಜದವರು ಒಗ್ಗಟ್ಟಿನಿಂದ ರಾಷ್ಟ್ರಕಾರ್ಯ ಮಾಡುತ್ತಿರುವ ಸಂಗತಿಯು ಅತ್ಯಂತ ಸಮಾಧಾನಕರವಾದುದು"

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ರಾಗಿಯ ಪ್ರಯೋಜನ.

ಅಯ್ಯಾ,

ಇದೇ ತಾರೀಕು 5ರಲ್ಲಿ ಕೊಡಗಿನವರ ಆಹಾರರೀತಿಯನ್ನು ಮ. ಉ. ಕಾಳಪ್ಪನೆಂಬವರು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದನ್ನು ಓದಿ ನೋಡಿದೆನು.

1921ರಲ್ಲಿ ನಾನು ಇದೇ ವಿಷಯವಾಗಿ ತಮ್ಮ ಪತ್ರಿಕೆಯಲ್ಲಿ 'ರಾಗಿ' ಸೇವಿಸುವುದಕ್ಕಿಂತ ಮುಖ್ಯವಾದದ್ದು ಬೇರೆ ಯಾವುದೂ ಇಲ್ಲವಾಗಿ ಬರೆದಿದ್ದೆನು. ದೇಶ ಸಂಚಾರ ಹೊರಟು ಮದನಪಲ್ಲಿ ನೋಡಬೇಕೆಂಬ ಆಶೆಯಿಂದ ಅಲ್ಲಿಗೆ ಹೋದ ಸಮಯದಲ್ಲಿ ಅಲ್ಲಿ ಅಮೇರಿಕನ್ ಡಾಕ್ಟರ್ ಮುಲ್ಲರ್ ಎಂಬವರು ಇದ್ದರು. ಅವರು ಕ್ಷಯ ರೋಗದ ಆಸ್ಪತ್ರೆಯಾದ 'ಸ್ಯಾನಟೋರಿಯಂ' ಎಂಬ ಆಸ್ಪತ್ರೆಯ ಮುಖ್ಯ ಡಾಕ್ಟರಾಗಿದ್ದರು. ಅವರೊಡನೆ ಕ್ಷಯರೋಗಕ್ಕೆ ಕಾರಣವೇನೆಂಬುದನ್ನೂ, ಇದನ್ನು ಹೋಗಲಾಡಿಸುವ ಉಪಾಯವನ್ನೂ ಚರ್ಚಿಸುವಾಗ ಅವರು ಹೇಳಿದ್ದೇನೆಂದರೆ—'ಮೊದಲು ಇದ್ದ ಜನರು ಕಾಫಿ ಕುಡಿಯುತ್ತಿರಲಿಲ್ಲ. ಅವರಿಗೆ ರಾಗಿ ಉಪಯೋಗಿಸುವುದರಲ್ಲಿ ಬಹಳ ಪ್ರೀತಿ ಇತ್ತು. ಈಗಣ ಜನರು ರಾಗಿಯನ್ನು ತುಚ್ಛೀಕರಿಸಿ ಕಾಫಿಯನ್ನು ಕುಡಿಯುತ್ತಾರೆ. ಈ ಕಾಫಿಗೆ ಹಾಲಿಲ್ಲದೆ ಉಪಯೋಗಿಸುವುದೇ ಹೆಚ್ಚು. ಜನರಿಗೆ ದನ ಕರ ಸಾಕುವುದರಲ್ಲಿ ಪ್ರೀತಿ ಇಲ್ಲ. ಹೀಗಿರುವಾಗ ಹಾಲು ಎಲ್ಲಿಂದ ಬರುತ್ತೆ. ನಾವೂ ಸಹ ಆಸ್ಪತ್ರೆಯಲ್ಲಿ ಪ್ರತಿ ನಿತ್ಯವೂ ಬೆಳಗ್ಗೆ ಎಲ್ಲಾ ಕ್ಷಯ ರೋಗದವರಿಗೆ ರಾಗಿ ಗಂಜಿ ಮೊದಲು ಕೊಟ್ಟು ಆ ಮೇಲೆ ಮೊಟ್ಟೆ, ರೊಟ್ಟಿ ವಗೈರೆ ಕೊಡುತ್ತೇವೆ' ಎಂದರು.

ಈ ಸಂಗತಿಗಳನ್ನೆಲ್ಲಾ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕೆ ಒಂದೆರಡು ಜನರು ಬಂದು ನಾವು ಈಗ ರಾಗಿ ಸೇವಿಸಲು ಶುರುಮಾಡಿದ್ದೇವೆಂದು ಹೇಳಿದರು. 15 ದಿನಗಳ ಮೇಲೆ ಅವರನ್ನೇ ಪುನಹ ಕೇಳುವಾಗ ರಾಗಿ ಗಂಜಿ ಸೇವಿಸಿ ನಮ್ಮ ಮೈಯಲ್ಲೆಲ್ಲಾ ತುರಿ ಕಜ್ಜಿ ಶುರುವಾಗಿದೆ; ಆದ್ದರಿಂದ ಬಿಟ್ಟು ಬಿಟ್ಟೆವು ಎಂದು ಹೇಳಿದರು. ಹೊಟ್ಟೆಯೊಳಗಿರುವ ವ್ಯಾಧಿಯನ್ನು ರಾಗಿ ಗಂಜಿಯು ಹೊರಪಡಿಸಿ, ಅವರನ್ನು ಬಲಾಢ್ಯರಾಗಿ ಮಾಡಲು ರಾಗಿಯು ಪ್ರಯತ್ನಿಸುವ ಸಮಯದಲ್ಲಿ ಇದನ್ನು ಬಿಟ್ಟು ಬಿಟ್ಟು ಕಾಫಿ ಸೇವಿಸಿದಂಥಾ ನಮ್ಮ ಈ ಜನರನ್ನು ತಿಳಿಗೇಡಿಗಳೆಂದೇ ಹೇಳಬೇಕಾಗಿದೆ.

ಕೊಡಗು ದೇಶದಲ್ಲಿ 100ಕ್ಕೆ 99 ಮನೆಯಲ್ಲಿ ಹಾಲು ದೊರಕುವುದು ಅಸಾಧ್ಯವೆಂದು ಹೇಳಿದರೆ ತಪ್ಪಾಗಲಾರದು. ಹಾಗೆ ಒಂದು ಮನೆಯಲ್ಲಿ ಹಾಲು ಇದ್ದರೂ ಅವನ ಒಂದು ಹೊತ್ತಿನ ಕಾಫಿಗೆ ಸಾಲದು. ಹೀಗಿರುವಾಗ ಮಕ್ಕಳಿಗೆ ಹಾಲು ಎಲ್ಲಿಂದ ಬಂತು. ಹಾಲಿಲ್ಲದೆ ಬೆಳೆದ ಮಕ್ಕಳು ಹಕ್ಕಿಗೆ ದೃಢಕಾಯರಾಗುವುದು ಎಂಬುದನ್ನು ಪ್ರತಿಯೊಬ್ಬರೂ ಆಲೋಚಿಸಿ, ನಾವು ಮಾಡಿಕೊಂಡ ತಪ್ಪನ್ನು ಅಂದರೆ ಹಳಬರು ಇಟ್ಟಿದ್ದ ಪದ್ಧತಿಯನ್ನು ಅನುಸರಿಸಿ ಇನ್ನು ಮುಂದಕ್ಕಾದರೂ ದೇಶವು ಅಭಿವೃದ್ಧಿಯಾಗುವಂತೆ ರಾಗಿಯನ್ನು ಉಪಯೋಗಿಸಲು ಪ್ರಯತ್ನಪಡಬೇಕಾಗಿದೆ. ಇಲ್ಲವೇ ಇನ್ನು ಕೆಲವು ವರ್ಷಗಳಲ್ಲಿ 'ಜುಂಡೆ ಮರಕ' ಏಣಿ ಕಟ್ಟುವ' 4 ಅಡಿಗಳ ಜನರು ಹುಟ್ಟುವುದರಲ್ಲಿ ಸಂದೇಹವಿಲ್ಲ.

ಬರೇ ರಾಗಿಯನ್ನು ತಿಂದರೂ ಪ್ರಯೋಜನ ಹೆಚ್ಚಾಗಿ ದೊರಕಲಾರದು. ಹಂದಿಯನ್ನೂ ಸಹ ಪೂರ್ತಿ ಸಂಹಾರ ಮಾಡಿ ದನಗಳಿಗೆ ಹಾಲು ಹೆಚ್ಚಿಸುವ ವಿಧಾನವನ್ನು ಸಹ ಮಾಡಲು ಪ್ರಯತ್ನಪಡಬೇಕಾಗಿದೆ. ಒಂದೇ ಒಂದು ಹಂದಿ ಇದ್ದರೆ ಖಂಡಿತಾ ದನಗಳಿಗೆ ಗಂಜಿ ಸಿಕ್ಕುವುದಿಲ್ಲ. ಹಂದಿಯ ಸಂಗತಿ ಈ ಮೊದಲಿನ ಎರಡು ಬಾತ್ಮಿಗಳಲ್ಲಿ ವಿವರಿಸಿದ್ದರಿಂದ ನಾನು ಅನಾವಶ್ಯಕವಾಗಿ ಅದನ್ನೇ ಬರೆಯಲು ಇಷ್ಟಪಡುವುದಿಲ್ಲ.

ಇದನ್ನೆಲ್ಲಾ ದೀರ್ಘಾಲೋಚನೆ ಮಾಡಿ ಅನುಸರಿಸುವಂತೆ ಕೊಡಗಿನಲ್ಲಿ ಹುಟ್ಟಿದವರೆಲ್ಲರಿಗೂ ಬುದ್ಧಿ ಕೊಡುವಂತೆ ಕೊಡಗಿನ ಮುಖ್ಯ ದೇವತೆಯಾದ "ಕಾವೇರಿ ತಾಯಿ' ಯನ್ನು ಅಡ್ಡ ಬಿದ್ದು ಬೇಡುತ್ತೇನೆ.

'ದೂರದೃಷ್ಟಿ'

ಕೊಡಗಿನ ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಹೊಸ ಪಾಠ ಕ್ರಮಪಟ್ಟಿ.

ಅಯ್ಯಾ,

ಕೊಡಗು ದೇಶವು ಬೆಟ್ಟಗುಡ್ಡಗಳಿಂದ ಆವರಿಸಲ್ಪಟ್ಟ ಕಾಡು ಪ್ರದೇಶವಾದರೂ ಈ ದೇಶವು ಪ್ರಾಥಮಿಕ ವಿದ್ಯಾಭ್ಯಾಸದ ಮಟ್ಟಿಗೆ ಹಾರ್ಟಾಗ್ ಕಮಿಟಿ ರಿಪೋರ್ಟಿನ ಮೇರೆ ಇಡೀ ಹಿಂದೂಸ್ಥಾನದಲ್ಲಿ ದ್ವಿತೀಯ ಸ್ಥಾನವನ್ನು ಹೊಂದಿದೆ. ಈ ದೇಶದಲ್ಲಿ ಶೇಕಡ 11 ಮಂದಿ ಓದು ಬರಹ ತಿಳಿದವರಿದ್ದಾರೆ. ಬೆಂಗಳೂರು ಕ್ಯಾಂಟೋನ್ಮೆಂಟ್ ವಿನಹ ಬ್ರಿಟಿಷ್ ಇಂಡಿಯಾದ ಯಾವ ಭಾಗದಲ್ಲಿಯೂ ಇದಕ್ಕಿಂತ ಹೆಚ್ಚಿನ ಸಂಖ್ಯೆಯು ಇಲ್ಲ. ಈ ದೇಶದ ಒಟ್ಟು ಪ್ರಾಥಮಿಕ ಶಾಲೆಗಳ ಸಂಖ್ಯೆಯು 108, ಉಪಾಧ್ಯಾಯರ ಸಂಖ್ಯೆ 304, ಶಾಲೆಗಳಲ್ಲಿ ಒಟ್ಟು 10,000 ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಇದ್ದಾರೆ. ಪ್ರೈಮರಿ ವಿದ್ಯಾಭ್ಯಾಸಕ್ಕೆ ಒಟ್ಟು 88,459 ರೂಪಾಯಿಗಳು ಖರ್ಚಾಗುತ್ತವೆ. ಅಂದರೆ ಪ್ರತಿಯೊಬ್ಬ ವಿದ್ಯಾರ್ಥಿಗೂ 10—12—6 ಖರ್ಚು ತಗಲುತ್ತದೆ. ಬರೇ 1582 ಚದರ ಮೈಲಿಗಳ ವಿಸ್ತೀರ್ಣವುಳ್ಳ 1,63,838 ಜನಸಂಖ್ಯೆ ಇರುವ ಈ ಸಣ್ಣ ಸೀಮೆಯು ಇಂದಿನ ವರೆಗೆ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ನೆರೆ ಪ್ರಾಂತ್ಯಗಳಿಗಿಂತ ಒಂದು ಹೆಜ್ಜೆ ಮುಂದಿರುವುದಕ್ಕೆ ಇಲ್ಲಿನ ಜನರ ಉತ್ಸಾಹದೊಂದಿಗೆ ಇಲ್ಲಿಯ ವಿದ್ಯಾ ಇಲಾಖೆಯ ಮೇಲ್ವಿಚಾರಣೆಯ ಉದ್ಯೋಗಸ್ಥರೂ ಕಾರಣ ಭೂತರಾಗಿದ್ದಾರೆ.

1861ರಲ್ಲಿ ಕೊಡಗಿನ ವಿದ್ಯಾ ಇಲಾಖೆಗೆ ರೆವೆರೆಂಡ್ ರಿಕ್ಟರರು ಅಡಿಪಾಯವನ್ನಿಟ್ಟರು. ದಕ್ಷಿಣ ಹಿಂದೂಸ್ಥಾನದಲ್ಲಿ ವಿದ್ಯಾ ಪ್ರಸಾರವಾಗುವುದಕ್ಕೆ ಕ್ರೈಸ್ತ ಮಿಶನರಿಗಳ ಸಾಹಸ ಸದ್ಗುಣಗಳೇ ಕಾರಣವೆಂದರೆ ಆ ಮಾತು ಕೊಡಗಿಗೂ ಸರಿ ಹೋಗುತ್ತದೆ. ರಿಕ್ಟರ್ ಸಾಹೇಬರು ತಮ್ಮ ಅಸಾಧಾರಣವಾದ ಬುದ್ಧಿ ಶಕ್ತಿಯನ್ನು ಕೊಡಗಿನ ಗ್ರಾಮಾಂತರಗಳಲ್ಲಿ ಶಾಲೆಗಳನ್ನು ಸ್ಥಾಪಿಸುವುದರಲ್ಲಿಯೂ, ಆ ಕಾಲದ ಬಾಲ ಬಾಲಕಿಯರನ್ನು ತರಬೇತು ಮಾಡುವುದರಲ್ಲಿಯೂ ವಿನಿಯೋಗಿಸಿದರು. ಅವರ ಹಿಂದೆ ಬಂದವರು ಅವರ ಏರ್ಪಾಡನ್ನೇ ಮುಂದುವರಿಸಿದರು. 1912ರಲ್ಲಿ ಎ. ರಾಮರಾಯರು ಹೊಸ ಪಾಠಕ್ರಮ ಪಟ್ಟಿಯನ್ನು ತಯಾರಿಸಿ ತರಬೇತು ಹೊಂದಿದ ಉಪಾಧ್ಯಾಯರ ಮೂಲಕ ನಾನಾ ವಿಧದ ಮಾರ್ಪಾಡುಗಳನ್ನು ಮಾಡಿದರು. ಶಾಲೆಗಳ ಸಂಖ್ಯೆಯು ಇದರಿಂದ ಹೆಚ್ಚಿತು. ಹಳ್ಳಿಯ ಬಾಲಕರಿಗೆ ಶಾಲೆಯ ಅಭಿರುಚಿ ಹುಟ್ಟಿತು. ಅನಂತರ ಶಾಲೆಗಳ ಸಂಖ್ಯೆಯೂ, ಉಪಾಧ್ಯಾಯರ ಸಂಖ್ಯೆಯೂ ಕೆಲವು ಮಟ್ಟಿಗೆ ಹೆಚ್ಚಿದರೂ ಪಾಠ ಕ್ರಮದಲ್ಲಿ ಯಾವ ಮಾರ್ಪಾಡೂ ಇಲ್ಲದೆ ಈ ವರೆಗೆ ಹಳೆಯ ಪಾಠಕ್ರಮ ಪಟ್ಟಿಯನ್ನೇ ಪ್ರಾಥಮಿಕ ಶಾಲೆಗಳಲ್ಲಿ ಅನುಸರಿಸುತ್ತಿದ್ದರು.

1923ನೇ ಇಸವಿಯಲ್ಲಿ ಕೊಡಗಿನ ರಾಜಕೀಯ ವಿಷಯಗಳಲ್ಲಿ ಪ್ರಖ್ಯಾತ ಮಾರ್ಪಾಡುಗಳಾದವು. ಅಂದಿನಿಂದ ಇಲ್ಲಿಯ ವಿದ್ಯಾ ಖಾತೆಯು ಮದ್ರಾಸಿನಿಂದ ವಿಂಗಡಿಸಲ್ಪಟ್ಟು ಚೀಫ್ ಕಮಿಶನರ ಅಧೀನದಲ್ಲಿ ಇಡಲ್ಪಟ್ಟಿತು. ಕಾಂಡದಿಂದ ಕತ್ತರಿಸಲ್ಪಟ್ಟ ರೆಂಬೆಯು ನೀರೆರೆಯದಿದ್ದರೆ ಹೇಗೆ ತಾನೇ ಚಿಗುರೀತು? (Education is a growing science) ವಿದ್ಯಾಜ್ಞಾನವು ದಿನೇ ದಿನೇ ರೂಪಾಂತರಗೊಳ್ಳತಕ್ಕದ್ದಾಗಿದೆ. ಮದ್ರಾಸು ಪ್ರಾಂತ್ಯದಲ್ಲಿ ಆಗಿಂದಾಗ್ಯೆ ಪ್ರಾಜ್ಞರಾದವರಿಂದ ಕೂಡಿದ ಸಮಿತಿಗಳನ್ನು ಏರ್ಪಡಿಸಿ ದೇಶದಲ್ಲಿ ವಿದ್ಯಾಭಿವೃದ್ಧಿಯನ್ನುಂಟುಮಾಡುವ ವಿಚಾರದಲ್ಲಿ ಅವರ ಸಲಹೆ ಕೇಳುತ್ತಾರೆ. ಮದ್ರಾಸಿನ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನರ ಮೇಲ್ವಿಚಾರಣೆಯಿಂದ ಹೊರಗಾದ ಕೊಡಗಿನ ವಿದ್ಯಾಖಾತೆಯು ನಿಪುಣರಾದವರ ಸಲಹೆಯ ಸಹಾಯವಿಲ್ಲದೆ ವೃದ್ಧಿಯಾಗುವುದೆಂತು? ಮದ್ರಾಸಿನ ಪ್ರಾಥಮಿಕ ವಿದ್ಯಾಭ್ಯಾಸದ ಕ್ರಮವು ಸ್ಟ್ಯಾತಮ್ ರಿಪೋರ್ಟು ಮತ್ತು ಚ್ಯಾಂಪಿಯನ್ ರಿಪೋರ್ಟು ಮೇರೆ ರೂಪಾಂತರಗೊಳ್ಳುತ್ತಿದೆ. ವರ್ಷಂಪ್ರತಿ ವಿದ್ಯಾರ್ಥಿಗಳು ತೇರ್ಗಡೆಯಾಗದೆ ಕೂತಲ್ಲೇ ಕೂರುವುದು, (Stagnation), ಪ್ರಾಥಮಿಕ ಶಾಲೆಯ 5ನೇ ತರಗತಿಗೆ ತಲುಪುವ ಮೊದಲೇ ಶಾಲೆ ಬಿಡುವುದು ಮತ್ತು ಶಾಲೆ ಬಿಟ್ಟ ಕಲಿತದ್ದನ್ನು ಮರೆಯುವುದರಿಂದ (Replace into Illitera ಸರಕಾರದ ಹಣವು ನಿರರ್ಥಕವಾಗಿ ವ್ಯಯವಾಗುವುದ ದನ್ನು ತಪ್ಪಿಸಲು ಈಗ ತಕ್ಕ ಏರ್ಪಾಡುಗಳು ನಡೆಯು

ಒಬ್ಬನೇ ಉಪಾಧ್ಯಾಯನಿರುವ ಶಾಲೆಗಳಿಂದ ಪ್ರ ಜನವಿಲ್ಲವೆಂದು ಅಂಥಾ ಶಾಲೆಗಳಲ್ಲಿ ಎರಡಕ್ಕಿಂತ ಹೆಚ್ಚು ಪಾಧ್ಯಾಯರನ್ನಿಡಲು ಲೋಕಲ್ ಬೋರ್ಡುಗಳಿಗೆ ಸ್ಸು ಮಾಡಿದ್ದಾರೆ. ಒಬ್ಬ ಉಪಾಧ್ಯಾಯನು ಮೂ ಲ್ಕು ತರಗತಿಗಳನ್ನು ಕಲಿಸಬೇಕೆಂಬುದು ಅಮಾನುಷ ಈಗಾಗಲೇ ಮದ್ರಾಸು ಪ್ರಾಂತ್ಯದ ಅನೇಕ ಪಟ್ಟಣಗಳಲ್ಲಿ ಡ್ಡಾಯವಾಗಿ ವಿದ್ಯಾಭ್ಯಾಸ ಮಾಡಿಸುವ ಪದ್ಧತಿಯನ್ನು ಗೊಳಿಸಿದ್ದಾರೆ. ಇಂಥಾ ಏರ್ಪಾಡುಗಳನ್ನು ಕೊಡಗಿನ ಲೆಗಳಲ್ಲಿ ಬೇಗನೇ ತಂದೊಡ್ಡಿ ಇತರ ಪ್ರಾಂತ್ಯಗಳೊಡನೆ ಕ್ಕೆ ಹಿಡಿದುಕೊಂಡು ಹೋಗಬೇಕು.

ಎ. ರಾಮರಾಯರ ಪಾಠಕ್ರಮ ಪಟ್ಟಿಯು ಈಗಿನ ಲಕ್ಕೆ ಸರಿ ಹೋಗದಿದ್ದರೂ ಅನೇಕ ವರ್ಷಗಳ ವರೆಗೆ ತಿದ್ದುಪಡಿ ಇಲ್ಲದೆ ಹಳ್ಳಿ ಶಾಲೆಗಳಲ್ಲಿ ಜಾರಿಯಲ್ಲಿತ್ತು. ಗಿನ ಸ. ಅ. ಇ.ರಾದ ಮ. ಬಿ. ಎಸ್. ಕುಶಾಲಪ್ಪನವ ಗ ಒಂದು ಹೊಸ ಪಾಠಕ್ರಮ ಪಟ್ಟಿಯನ್ನು ತಯಾರಿ ಇದರ ಹಾಳೆ ಮಗುಚದೇ ಹೇಳುವದಾದರೆ—' ಕಳೆದ ಪ ರ್ಷಗಳಿಂದ ಉಪಾಧ್ಯಾಯರು ಆಶಿಸುತ್ತಿದ್ದ ಒಂದು ಯು ಅವರ ಕೈಸೇರಿತು" ಎಂದೆನ್ನಬಹುದು. ಈ ಪುಸ್ ಹಾಳೆಯನ್ನು ಅವಸರದಿಂದ ಮಗುಚಿದೆನು. ಅದರ ಮಂಗೇಶರಾಯರು ಬರೆದ 'ಪುತ್ತೂರಿಪಾಡು' ನಮ್ಮ ಬಾ ಲಕಿಯರ ತುಟಿಯ ಮೇಲೆ ನಲಿಯುವಂತೆ ಅಸ್ಪದ ಕೊಟ್ಟ ಸ್ತುತ್ಯವಾಗಿದೆ. ಇಲಿಗಳ ಧಕ್ಕಧೈ, ಮೆಣಸಿನ ಕಾಳಪ್ಪ ತಾದ ಅಜ್ಜಿ ಕಥೆಗಳ ಬದಲು ಕೊಡಗಿನ ಇತಿಹಾಸದಿಂ ಚ್ಚಿರ ಮಂದಣ್ಣ, ಕುಂಟು ಬಸವ ಚೌರೀರ ಕಾ ವಾಸ, ಕೈಯ್ಯಂದಿರ ಅಪ್ಪಯ್ಯ, ಕಲಿಯಂಡ ಪೊನ್ನಪ್ ತ್ತು ಅಯ್ಯಕೋವಿರ ಅಪ್ಪಯ್ಯ ಮುಂತಾದ ವೀರರ ಚ ಳನ್ನು ಸ. ಅ. ಇ. ಯವರೇ ಬರೆದು ಕೊಡಗಿನ ವಿದ್ಯಾರ್ಥಿ ಕೈಸೇರುವಂತೆ ಮಾಡಬಹುದು. ಈಗಿನ ಕಾಲದಲ್ಲಿ ಇಲಿ ಕನ್ನಡಿಗಳು ಮಾತಾಡಿದಂತೆ ಕಥೆ ಬರೆದರೆ ಸಣ್ಣ ಮಕ್ಕ ಪೂರಾ ಸುಳ್ಳೆಂದು ಕಥೆಯನ್ನು ಆದರಣೆಯಿಂದ ಆಲಿಸ ಲ್ಲ. ದೊಡ್ಡ ತರಗತಿಯಲ್ಲಿ ನೆಪೋಲಿಯನ್, ನೆಲ್ಸನ್ ಗೆ ಹಿಂದೂಸ್ಥಾನದ ಈಗಿನ ಮುಂದಾಳುಗಳ, ವೈಜ್ಞಾನಿ ತ್ತು ಪಾತ್ರಿಗಳ ಪರಿಚಯ ಮಾಡಿಸಿದರೆ ತಪ್ಪಾಗಲಾರದು. ದಿನ ಪ್ರಜೆಗಳಾದ ಈಗಿನ ಬಾಲಕರು ಮಾತೃ ಭಾಷೆಯ ನ್ನಡದಲ್ಲಿ ತುಂಬಾ ಸಾಹಿತ್ಯವನ್ನು ಓದುವಂತೆ ಮಾಡಬೇ ರೋಮಾಂಚನವನ್ನುಂಟುಮಾಡುವ ಜೀವನ ಚರಿತ್ರೆಗಳ ಳ ಕೈಸೇರುವಂತೆ ಮಾಡಿ ಮನೆಯಲ್ಲಿ ವಿಶ್ರಾಂತಿ ಕಾಲ ಹೆಚ್ಚು ಹೊತ್ತು ಕೂತು ಓದುವ ಅಭ್ಯಾಸವನ್ನು ಕಲ್ಪಿ ಡಬೇಕು. ಬಾಲಕರ ಸಾಮಾನ್ಯ ತಿಳುವಳಿಕೆಯನ್ನು ಹೆಚ್ಚಿ ಪ್ರತಿ ಶಾಲೆಗೂ ವೃತ್ತಾಂತ ಪತ್ರಿಕೆಗಳನ್ನು ತರಿಸಿ ಕೊಡ ಅವಶ್ಯಕ. ವ್ಯಾಯಾಮದ ವಿಷಯದಲ್ಲಿ ಬೀಸ್ಲೆ ಕಮಿಟಿ ರ ರಿಪೋರ್ಟಿನ ಆಧಾರದ ಮೇಲೆ ಬರೆಯಲ್ಪಟ್ಟಿದೆಯಾ ಣುತ್ತದೆ. ಒಂದೇ ಕೈಯಿಂದ ತಯಾರಿಸಲ್ಪಟ್ಟ ಈ ಪಾ ಮ ಪಟ್ಟಿಯಲ್ಲಿ ಇತರರ ದೃಷ್ಟಿಯಲ್ಲಿ ಕೆಲವು ದೋಷ ಕಂಡುಬರಬಹುದು. ಆದರೆ ಇಂಥಾ ಪಟ್ಟಿಯನ್ನು ತಯಾ ವುದಕ್ಕೆ ಎಷ್ಟು ಕಷ್ಟವಿದೆಯೆಂದು ಅನುಭವಶಾಲಿಗಳಾ ಪಾಧ್ಯಾಯರಿಗೆ ವೇದ್ಯವಿದೆ. ಇದನ್ನು ಬರೆದವರ ನಾ ಹೇಳುವುದಾದರೆ 'ಅಂಬಿಗನಿಲ್ಲದ ದೋಣಿ'ಯನ್ನು ನಡೆ ಚುಕ್ಕಾಣಿ' ಹಿಡಿದ ಒಬ್ಬ ಅಂಬಿಗನನ್ನು ಏರ್ಪಡಿಸಿದಂತಾ ತು. ಹೊಸ ಪಾಠ ಕ್ರಮ ಪಟ್ಟಿಯಲ್ಲಿರುವ ಅನೇಕ ಹೊ ವಿಷಯಗಳನ್ನು ಬೋಧಕರಿಗೆ ತಿಳಿಸಲು ಆಗಿಂದಾಗ್ಯೆ ಪು ವರ್ತನೆ ತರಬೇತು (Refresher Course) ಗಳನ್ನು ಏ ಸಬಹುದು. ಅಥವಾ ಉಪಾಧ್ಯಾಯರ ಸಮ್ಮೇಳನದ ಸ ದಲ್ಲಿ ಸ. ಅ. ಇ. ರವರು ಮತ್ತು ಸುಪರ್‌ವೈಜರರು ಇದ ಷಯ ಭಾಷಣಗಳನ್ನು ಕೊಡಲು ಸಂದರ್ಭ ಕಲ್ಪಿಸಿಕೊಂ ಹಳ ಅನುಕೂಲವಾದೀತು ....

ಕೊಡಗಿನ ವಿದ್ಯಾರ್ಥಿಗಳ ಮೇಧಾಶಕ್ತಿ ಮತ್ತು ಔ ದಾರ್ಯವು ಚಿಕ್ಕ ಪ್ರಾಯದಲ್ಲಿ ಇತರ ಪ್ರಾಂತ್ಯದವರಿಗಿಂ ಮ್ಮಿಯಾಗಿರುವುದಿಲ್ಲ. ಕ್ರಮೇಣ ಅನೇಕರು ಮಧ್ಯೆ ನಿಶ್ಶಕ್ತರಾದ ಬುದ್ಧಿಯಾಟದಿಂದಲೋ, ಮಲೇರಿಯಾ ಬಾಧೆಯಿಂದಲೋ ರಕ್ತ ಕುಂದಿ ಶಕ್ತಿಹೀನರಾಗಿ ಆಟ ಪಾ ಳಲ್ಲಿ ಹಿಂದೆ ಬೀಳುತ್ತಾರೆ. ಶಾಲಾ ಮಕ್ಕಳಿಗೆ ಮಧ್ಯಾಹ್ನ ವೇಳೆ ಬಿಸಿ ಬಿಸಿಯಾದ ಮತ್ತು ರುಚಿಕರವಾದ ಆಹಾರ ದೊ ಕುವಂತೆ ಮಾಡಲು ಪ್ರತಿಯೊಬ್ಬ ಪೋಷಕನ ಮತ್ತು ಸ ರದ ಕರ್ತವ್ಯವಾಗಿದೆ. ಕ್ವಿನೈನಾ ಗುಳಿಗೆಗಳನ್ನು ಅ ಟ್ಟೆಯಿಂದಿರುವ ಮಕ್ಕಳಿಗೆ ಹಂಚಲು 1000 ರೂ. ಖರ್ಚು ಡುವ ಸರ್ಕಾರವು ಇನ್ನೆರಡು ಸಾವಿರ ರೂ. ಹೆಚ್ಚು ಮಾಡಿ ಅದರೊಂದಿಗೆ ಹಾಲನ್ನೂ ಕೊಟ್ಟರೆ ಉಪಕಾರವಾ ಕು. ಮುಂದಿನ ಕೊಡಗಿನ ನಿವಾಸಿಗಳ ಕೈಕಾಲುಗಳನ್ನು ಮಾಡಿ, ಮೆದುಳನ್ನು ವೃದ್ಧಿಪಡಿಸಿ, ಸ್ವತಂತ್ರ ಜೀವಿಗಳ ಮಾಡುವುದು ವಿದ್ಯಾಖಾತೆಯ ಮೇಲ್ವಿಚಾರಕರ ಕೈ ಲ್ಲಿದೆ.

"ವಿದ್ಯಾಭಿಮಾನಿ"

ವಿಮರ್ಶೆಯ ಮೇಲೆ ವಿಮರ್ಶೆ.

ಶ್ರೀಯುತ ಸಂಪಾದಕರೇ,

ನಾನು 'ನ ಚಿ ಸುಬ್ಬಯ್ಯ'ನವರ ಪದ್ಯದ ವಿಮರ್ಶೆ ಮಾಡಿದೆನು. ಅದರಂತೆಯೇ ಅವರೂ ತಮ್ಮ ಪದ್ಯವನ್ನು ವಿಮರ್ಶಿಸಿ ನನ್ನ ವಿಮರ್ಶೆಯು ತಪ್ಪೆಂದು ವ್ಯಕ್ತಪಡಿಸಿದ್ದರೆ ನನ್ನ ಮತ್ತು ನನ್ನ ಮನಸ್ಸಿಗೆ ಸಮಾಧಾನವಾಗುತ್ತಿತ್ತು. ಅದನ್ನು ಬಿಟ್ಟು ಅವರು ನನ್ನ ವಿಮರ್ಶೆಯಿಂದ ಸಿಟ್ಟುಗೊಂಡು ಉದ್ದವಾದ ಲೇಖನವನ್ನು ಬರೆದುದರಿಂದ ವಿಷಯವು ಚರ್ಚಾಸ್ಪದವಾಗಿದೆ. ಇನ್ನು ನಾನು ಅವರಿಗೆ ಉತ್ತರವನ್ನೀಯುತ್ತಾ ಹೋದರೆ ವಿಷಯವು ವಿಷಮಾವಸ್ಥೆಯನ್ನೀಯುವುದು. ಆದಕಾರಣ ಈ ಲೇಖನವನ್ನು ಬರೆದು ಇನ್ನು ಈ ವಿಷಯ ಬರೆಯುವುದನ್ನು ಮುಕ್ತಾಯ ಮಾಡುವೆನು. ದಯವಿಟ್ಟು ನನ್ನ ಈ ಲೇಖನವನ್ನು ಪ್ರಕಟಿಸಬೇಕಾಗಿ ವಿನಂತಿ.

'ನ. ಚಿ. ಸುಬ್ಬಯ್ಯನವರೇ, ನಿಮ್ಮ ಲೇಖನವನ್ನು ಓದಿದ ಮೇಲೆ ನಾಗೆಯನ್ನೇ ನವಿಲೆಂದೂ, ಕಪಿಯನ್ನೇ ಕವಿಯೆಂದೂ ಸಾಧಿಸಿದೆನೇ ಎಂದು ಸ್ವಲ್ಪ ಕಳವಳವಾಗಿದೆ.

ನೀವು ನಿಮಗೆ ನನ್ನನ್ನು ಯಾರೆಂದು ತಿಳಿಯಬೇಕೆಂಬ ಕುತೂಹಲವನ್ನು ತೋರಿದುದರಿಂದ ನಿಮ್ಮ ಲೇಖನದಲ್ಲಿನ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಕೊಡಲೆಳಸಿರುವೆನು. ನಾನು 'ಪಂಡಿತ ಶಿರೋಮಣಿ' ಯಲ್ಲ, ಸಾಹಿತ್ಯಪ್ರೇಮಿ ಮಾತ್ರನು. ಸೆಂದಿ, ಸಾರಥಿಯ, 'ದೇವ' ಅಥವಾ 'ದಸ್ತು' ಪೂಜಾರಿಯೂ ಅಲ್ಲ. ಆದರೆ ಕನ್ನಡ ಸಾಹಿತ್ಯ ಸೇವೆಯ ನಮ್ಮಂಥ ಕಪಟ ಪೂಜಾರಿಗಳಿಗೆ ನನ್ನ ದೇವರು ಮಾಗಿ ತಂದು ಕೊಂಡಿರಬಹುದು. ನಾನು ಅಂಥಾ ಸೇವೆಯೂ ಸಹ ಅಲ್ಲ. ನೀವು ಉಪಾಧ್ಯಾಯರು; ನಿಮಗೆ ಉತ್ತರ ಕೊಡಬೇಕಾಗಿದ್ದು ನಾನು ಸಾಹಿತ್ಯಸೇವಕ ಅಷ್ಟೇ ನನು ನಿಮಗೂ ವ್ಯತ್ಯಾಸ.

ಈಗಿನ ವರೆಗೆ ನಿಮ್ಮ ಪದ್ಯಗಳನ್ನು ನೋಡಲಿಲ್ಲ. ಈಗ ನಿಮ್ಮ ಪದ್ಯವನ್ನು ನೋಡಿದುದರಿಂದಲೇ ಒಂದು ಆಧಾರದ ಮೇಲೆ ಅದನ್ನು ವಿಮರ್ಶಿಸಿದೆನು. ಅಷ್ಟು ಮಾತ್ರಕ್ಕೆ ನೀವು ಉಪಾಧ್ಯಾಯರಿಗೆ ಸಲ್ಲದಂಥ ಗುಣಪ್ರದರ್ಶನವನ್ನು ನಿಮ್ಮ ಲೇಖನದಲ್ಲಿ ಬೀರಿ ವಿಮರ್ಶಕನ ಮೇಲೆ ನಿಮ್ಮ ಊಹಾಕಲ್ಪನಾದ ಆರೋಪಣೆಗಳನ್ನು ಮಾಡಿದ್ದೀರಿ. ಇದರಿಂದ ನಿಮ್ಮ ಸಂಕುಚಿತ ಮನೋಭಾವದ ಗುರುತುಗಳೇ ಪ್ರದರ್ಶಿಸಲ್ಪಟ್ಟಿವೆ. ನನಗೆ ಯಾವ ಮನೋಕ್ಲೇಶವೂ ಆಗಿರುವುದಿಲ್ಲ. ಒಂದು ವಿಷಯ ಮಾತ್ರ ವ್ಯಕ್ತವಾಯಿತು. ಟೀಕೆಯನ್ನು ಇಚ್ಛಿಸುವುದಿಲ್ಲವೆಂದು ಮತ್ತೊಂದು ನಿಮ್ಮ ಮನಸ್ಸಿನ ನಿಜ ಸ್ವಭಾವ. ಅದು ವ್ಯಕ್ತಿಯನ್ನು ಹೀಯಾಳಿ ಕೆಟ್ಟ ಆರೋಪಣೆ ಮಾಡುವುದು. ನೀವು ಉಪಾಧ್ಯಾಯರು ವಿಮರ್ಶಕನ ಗುಣವನ್ನು ಊಹಿಸಿ ಉಪಾಧ್ಯಾಯತನವನ್ನೇ ಬರೆದಿರುವಿರಿ, ಮತ್ತೇನೂ ಇಲ್ಲ.

ನನ್ನ ವಿಳಾಸವನ್ನು ಈ ಕೆಳಗೆ ಕೊಟ್ಟಿರುವೆನು. ಹೆಸರು ನನ್ನ ಹೆಸರನ್ನು ಪ್ರಕಟಿಸದೆ ಇದ್ದದ್ದು ಹೆಸರಿನಿಂದ ಕೆಲವು ನೀಚ ವ್ಯಕ್ತಿದೂಷಣೆಗೆ ಆಸ್ಪದವಾಗುತ್ತದೆಂದು ಕಲ್ಪಿತನಾಮವನ್ನು ಕೊಟ್ಟೆನು. ಇದು ಪ್ರಕಟನಾ ಕಾರ್ಯದಲ್ಲಿ ಒಂದು ನೀತಿ ನಿಬಂಧನೆಯನ್ನು ಅತಿಸಿಯಲ್ಲ. ಬಿರುದುಗಳು ಸರ್ಕಾರಿ ಉದ್ಯೋಗಸ್ಥರಾಗಿರುವಂಥ ನಿಮ್ಮ ಪಾಲಿಗೇ ಇರಲಿ. ನನಗೆ ಗೊತ್ತಿರುವುದನ್ನು ನಿಮಗೆ ತಿಳುಹಲು ಯಾವ ಅಡ್ಡಿಯೂ ಇರುವುದಿಲ್ಲ. ಆಗತ್ಯವಾಗಿಯೂ ನಿಮ್ಮ ಇಚ್ಛೆಯಂತೆಯೇ ನಡಿಡಬಹುದು. ಆದರೆ ಒಂದು ಸೂಚನೆ ಮಾತ್ರ. ನನ್ನೊಡನೆ ಪತ್ರವ್ಯವಹಾರ ಬೇಕಾದಾಗ ಉತ್ತರಕ್ಕೆ ತಕ್ಕಷ್ಟು ಸ್ಟಾಂಪನ್ನು ಹಚ್ಚಬೇಕು. ಇಲ್ಲವಾದರೆ ನಿಮ್ಮ ಪತ್ರವ್ಯವಹಾರಕ್ಕೆ ಗಮನ ಕೊಡಲಾಗುವುದಿಲ್ಲ. ನನ್ನಿಂದ ವಿದ್ಯಾರ್ಜನೆ ಮಾಡಬೇಕೆಂದು ಬಹಳ ಆತುರರಾಗಿರುವುದು ನಿಜವಾದರೆ ನನ್ನ ಶಕ್ತ್ಯನುಸಾರ ನಿಮ್ಮ ಬಯಕೆಯನ್ನು ನೆರವೇರಿಸುವೆನು.

ನಿಮ್ಮ ಲೇಖನದ 4, 5ನೇ ಅಧ್ಯಾಯಗಳಲ್ಲಿ ಅಡಕವಾಗಿರುವ ಅಂಶಗಳು ನನ್ನಿಂದ ಈ ಮೂಲಕ ಉತ್ತರ ಪಡೆಯಲು ಅನುಚಿತವೂ, ಅನರ್ಹವೂ, ಅಯೋಗ್ಯವೂ ಆದವುಗಳಾಗಿವೆ. ಈ ಪರಿಯಂತ ನಮ್ಮ ಪ್ರಸ್ತಾಪ ನಡೆದಲ್ಲಿ ಆಗತ್ಯವಿದ್ದರೆ ವಿವರಿಸಲಾಗುವುದು. ಇದೇ ರೀತಿ ನಾನು ಬಿಟ್ಟಿರುವ ಇನ್ನೂ ಅನೇಕ ಅಂಶಗಳು ಆಗ ವಿವರಿಸಲಾಗುವುವು. ಅದರ ಹೆದರಿಕೆಯಿಂದಾಗಲೀ, ಅಂಜಿಕೆಯಿಂದಾಗಲೀ ಅಲ್ಲ.

ಕವಿತಾ ಸ್ವಾತಂತ್ರ್ಯಕ್ಕೆ ಎಲ್ಲೆ ಇದೆ. ಭ್ರಾಂತಿ ವಿಲಾಸದ ವರೆಗೆ ಅದು ಎಷ್ಟೆಂದು ಇಲ್ಲಿ ನಿರ್ಧರಿಸುವುದು ಸಾಧ್ಯವಲ್ಲ. ಆ ಎಲ್ಲೆಯು ಕಲ್ಪಿತವಾಗಿರುವುದು ಭ್ರಾಂತಿ ವಿಲಾಸಕರಿಂದಲ್ಲದೆ ನಾಗವರ್ಮ ರಘುನಾಥಾಚಾರ್ಯರಿಂದಲ್ಲ ನನ್ನಿಂದಲೂ ಅಲ್ಲ.

ಪುಟ್ಟಪ್ಪನವರು ಮತ್ತು ಅವರ ಕೆಲವು ಸಮಕಾಲೀನರ ಕವಿತಾ ಪ್ರಾಮುಖ್ಯತೆಯಲ್ಲಿ ಅನಾದರದಿಂದ ಮುಗ್ಧರಾಗಿದ್ದರೆ ಅವರಲ್ಲಿ ಕವಿತಾವಾಸನೆ ಮಾಯಗಳು ತುಂಬಿ ತುಳುಕುತ್ತಿವೆ. ಕವಿತಾ ಮಂಡಲದ ವರೆಗೆ ಹ ತ್ತ ಬೇಕಾದುದೇ ಇಲ್ಲ. ಮೈಸೂರಿನ ಈಗಿನ ಪದ್ಯಗಳನ್ನು ನೀವು ಓದುವುದು ಉಚಿತವಾಗಿಯೇ ನಾನು ಓದಿದ್ದೇನೆ. ಪುಟ್ಟಪ್ಪನವರ ಕವನಗಳ ಮತ್ತು ಮೈಸೂರಿನ ಇತರ ಕವನಗಳ ವಿಷಯ ಈ ಪ್ರಸ್ತಾಪದ ಸಂದರ್ಭದಲ್ಲಿ ಸಮಗ್ರವಾಗಿ ತಿಳಿಸಲಿಲ್ಲ. ಇದ್ದದ್ದು ನೀವು ಹೇಳುವ ಜೈಮಿನಿಯ ಕಾಲವಲ್ಲ, 'ಜೈಮಿನಿಯ ಕಾಲ' ಇದೂ ನಿಮ್ಮ ಕವಿತಾ ಸ್ವಾತಂತ್ರ್ಯವೇನೋ!

ತಿಳಿ ಮಾತ್ರ ಬೆಳಕಿರುವ ಕೋಣೆಯಲ್ಲಿ ಕೂತು ಕೆಲಸ ಮಾಡುವ ಮುನ್ಸಿಯರಿಗೆ ಮಾತ್ರ ಪ್ರಕಟಣೆಯಿಂದ ಉಲ್ಲಾಸವಲ್ಲ. ತುಂಬಾ ಬೆಳಕು, ಗಾಳಿ, ಇವುಗಳಿರುವ ವಿಶಾಲವಾದ ಕೋಣೆಗಳಲ್ಲಿ ಕೆಲವು ವಿದ್ಯಾರ್ಥಿಗಳನ್ನು ನಗಿಸುತ್ತಿ, ತೃಪ್ತಿ ಪಡಿಸುವ ಉಪಾಧ್ಯಾಯರುಗಳಿಗೆ ಪ್ರಕಟಣೆಯಿಂದ ಬಹು ಉಲ್ಲಾಸ ಉಂಟು. ಇದು ನನ್ನ ಅನುಭವದಲ್ಲಿ ಗೊತ್ತಾಗಿದೆ.

ನೀವು ಪದ್ಯ ರೂಪದಲ್ಲಿ ಬರೆದ ವಿಷಯವಾಗಿಯೂ, ನಿಮ್ಮ ಉದ್ದೇಶವಿಂದಲೂ, ನಾನು ನಿಮ ಗಂತಲೂ ಹೆಚ್ಚು ಬೋಧನೆ ಮಾಡುತ್ತೇನೆ. ಆದರೆ ನಿಮ್ಮಷ್ಟು ತ್ವರೆಯಾಗಿ ಆ ವಿಷಯ ಬೋಧಕರವಾದ ಪದ್ಯಗಳನ್ನು ಬರೆಯಲು ಪ್ರಯತ್ನಿಸಲಿಲ್ಲ. ನೀವು ಉಪಾಧ್ಯಾಯರು. ನೀವು ಹೇಳಿದುದೆಲ್ಲಾ ಮತ್ತು ಬರೆದುದೆಲ್ಲಾ ನಿಮಗೆ ಬೋಧನೆಯಾಗಿ ಕೇಳುದು, ಓದುವವರಿಗೂ, ಕೇಳುವವರಿಗೂ ನಿಮ್ಮ ಬೋಧನೆ ಮನಸ್ಸಿಗೆ ಬೇಸರ, ಕಿವಿಗೆ ಭಾರವೆಯಾಗಿರಬಹುದು. ಇದನ್ನು ನೀವು ತಿಳಿಯಬೇಕು.

ಆದುದರಿಂದ ಭಿನ್ನಾಭಿಪ್ರಾಯಕ್ಕೆ ಸಂದರ್ಭವಿದೆ. ಇನ್ನು ನೀವು ಪೀಠದಲ್ಲಿಯೇ ಇರುವಿರಿ, ನಾನು ಮರೆಯಲ್ಲಿಯೇ ಇರುವುದಿಲ್ಲ. ಸಾಹಿತ್ಯ ರಂಗಭೂಮಿಯಲ್ಲಿ, ವಾದಭೂಮಿಯಲ್ಲಿ ಹೋರಾಡಲು ಸಿದ್ಧನಾಗಿರುವೆನು. ಪೂರ್ಣ ವಿಳಾಸವನ್ನು, ಇಲ್ಲಿ ಕೊಟ್ಟು ಈ ವಿಷಯಕ್ಕೆ ನನ್ನ ಲೇಖನಿಗೆ ಪೂರ್ಣ ವಿರಾಮವನ್ನು ಕೊಡುತ್ತೇನೆ.

ಮೈಸೂರಿ,
ಗೋಣಿಕೊಪ್ಪಲು

ಯಂ ಯಂ ನಂಜುಂಡ

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.

ಮಂಗಳೂರು ದ ಕನ್ನಡ

ಯಾವತ್ತೂ ಬಗೆಯ ರಬ್ಬರು ಮೊಹರುಗಳು ತನ್ನ ಡಿಸು ಪ್ಯಾಸ್ ಬೋರ್ಡು, ಹಾವ್ ಟೋನ್ ಬ್ಲಾಕ್ ಇತ್ಯಾದಿ ಕೆಲಸಗಳು ನಮ್ಮಲ್ಲಿ ನಾಜೂಕಾಗಿ ಬಾಳಿಕೆಗೆ ಬರುವಂತೆ ಕಡಿಮೆ ಕ್ರಯಕ್ಕೆ ಆಗುತ್ತವೆ.

ಹೆಚ್ಚಿನ ವಿವರಗಳಿಗೆ ನಮ್ಮ ವಿಳಾಸಕ್ಕಾಗಲೀ ಯಾ ನಮ್ಮ ಏಜೆಂಟರಾದ ಮಿ. ಯನ್ ಯಸ್. ಪೊನ್ನಪ್ಪನವರಿಂದಾಗಲಿ ಬರೆದುಕೊಳ್ಳುವದು.

12—12

"ರೂಪಾಯಿಗಳು 5-8-0 ಮಾತ್ರ.

ನಮ್ಮ ಉಚಿತ ಜೀವವಿಮೆಯು ಅನೇಕ ಬಡಬಗ್ಗರನ್ನು ಕಾಪಾಡಿದೆ.

ನೀವೇಕೆ ಹೊಂದಬಾರದು?

ಈಗ ಆಗಲೇ 75,000 ಜನಗಳು ಮೆಂಬರಾಗಿದ್ದಾರೆ.

ಹಣ ರೂ 2,00,000.

ಬಡವರಿಗೆ ಭಾಗ್ಯಕಾಲ! ಎಲ್ಲರಿಗೂ ಅನುಕೂಲ!!

WANTED.

One Chief Agent for Coorg at Virajpet on Rs 50/- plus Rs 7/8 - per mensum

For terms apply -

A. A. MANDANNA
Branch Secretary
The Venus Assurance Co., Ltd.
Bore-Bank Road,
Benson Town,
Bangalore City.

12—9

ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಕ್ಯಾರೆಟ್ ಬಂಗಾರದ ನಿಬ್ಬು ಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟೆನ್ ಪೆನ್‌ಗಳು.

ಒನ್ಡರ್ ವಂಡರ್ ಫೌಂಟನ್ ಪೆನ್ 1ಕ್ಕೆ	ರೂ. 3	0 0
,, ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3 0
,, ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8 0
,, ಬಿಗ್ ಬ್ಯಾರಲ್ ಸ್ಕ್ರೂ ಕ್ಯಾಪ್ ಮೂಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14 0
,, ಮೂಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2 0
,, ಸೆಲ್ಫ್ ಫಿಲ್ಲಿಂಗ್ ಮೂಡಲ್ ಆದವ ಬ್ರೌನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8 0
ಸ್ವಾನ್ ಫೌಂಟನ್‌ಪೆನ್ 1ಕ್ಕೆ	10	8 0
ವಾಟರ್‌ಮನ್ ಪೆನ್ 1ಕ್ಕೆ	14 6 0, & 20	10 0
ಪಾಕೆಟ್ ಫೌಂಟನ್‌ಪೆನ್ 1ಕ್ಕೆ	3 8 0, & 3	12 0
ಕ್ರೌನ್ ಫೌಂಟನ್ ಪೆನ್ 1ಕ್ಕೆ	6 4 0, & 6	12 0
ಓನ್‌ಸನ್ ಫೌಂಟನ್ ಪೆನ್ 1ಕ್ಕೆ	8 4 0, & 18	10 0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6 0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2 0
ಲಿಗಲಿಯೂ ಅಲಾರಂ ಟೈಂಪೀಸ 1ಕ್ಕೆ 6 9 0, & 6	15	0
ಲಿಗಲಿಯೂ ಸಣ್ಣ ಸೈಜಿನ ಅಲಾರಂ ಟೈಂಪೀಸ್ 1ಕ್ಕೆ 7	2	0
ಲಿಗಲಿಯೂ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10 0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6 0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13	1 0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್ 1ಕ್ಕೆ	5	10 0
ಟಿಟೋ ನಮೂನೆಯಲ್ಲಿ ಎಚ್. ಎಂ. ಟಿ. ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4 0
ನಿಕ್ಕಲ್ ಕೇಸ್ ಸಿಲಿಂಡರ್ ಮೂವ್‌ಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 & 12	8	0

ಇಲ್ಲಿ ನಮೂದಿಸಿದ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪಾಕಿಂಗ್ ಪೋಸ್ಟೇಜು ಅಲಾಯಿದಾ.

ಮುಖಿಯೊರ್ಡರ್ ರವಾನಿಸುವ ವಿಳಾಸ.—ಎಂ. ಎಸ್. ಶಿವಪ್ಪ, ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—50

ಪ್ರಕಟಣೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಗೆ ಆಫಿಲಿಯೇಟ್ ಸೊಸೈಟೀಸ್ ಅಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ
ಶೇರ್ ಬಂಡವಾಳ	—	10,000
ವಸೂಲಾದ ಶೇರ್ ಮೊಬಲಗು	—	23,160
ಜಮೂಬಂದ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ಗವರ್ನಮೆಂಟಿನ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು	ಟ್ರೆಜರರ್
ಕೋದಂಡ ಅಪ್ಪಯ್ಯನವರು	ಮನಿಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್	ನವರು

ಸೆಕ್ರೆಟರಿ

ಸಿ ಯನ್ ವೆಂಕಟ್ರಾವ್ ರಾಯರು, ಬಿ. ಎ. ಎಲ್. ಟಿ.

ತಾರೀಖು 1-7-1930

ಸಣ್ಣ ಹುಡುಗರ ಸಲುವಾಗಿ



ಇವರ

ಬಾಲಾಮೃತ.

ವ ಸ್ತು ಕೊಡುವುದರಿಂದ ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ದೋಂಗರೆ ಕಂ. ನಿ, ಗಿರಿಗಾಂವ, ಮುಂಬಯಿ.

52-24

Rubber Stamps of every design and Glass sign boards Half tone Blocks Monogram seals Marble slabs ring stones etc etc. to suit every pocket and taste For further particulars please apply to:—

The Crown Rubber Stamp Co.,
Mangalore, S. K.
Or
Mr. N. N Ponnappa,
Agent,
12-12 **Mercara.**

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ. ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ
ಒಟ್ಟು ಪ್ರೀಮಿಯಮಿನ ವರಮಾನ—179 ಲ...
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ
ಪಾಲಿಸಿದಾರರಿಗೆ ಸಾಲ—8013 ಜನರಿಗೆ 3...

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1 78 322 ಜನರಿಗೆ 38ಕೋಟಿ ... ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22 4ರಕ್ಕಿಂತ ಕಡಿಮೆ ಖರ್ಚಿನಲ್ಲಿಯೇ ನಡಿಸಲ್ಪಟ್ಟ...

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ... ಚೀನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸು... ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಮ್ಯಾನೇಜರು, ಓರಿಯಂಟಲ್ ಬಿಲ್ಡಿಂಗ್ಸ್, ಮುಂಬಾಯಿ,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರ ಬಹುದು

ಆಗ್ರ	ಕಲ್ಕತ್ತ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸಿಕಂದ್ರಾಬಾದ್
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೆಂಗಳೂರು	ಡಾರೆಸಲಾಮ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ



ಕೊಡಗಿನ ಗುಡುಗುಡು ಎಂಬ ಚಳಿ ಜ್ವರಕ್ಕೂ ... ಬಿಟ್ಟುಬಿಟ್ಟು ಬರುವ ಜ್ವರಕ್ಕೂ ಗಟ್ಟಿಯಾದ ಜ್ವರ ಗಡ್ಡೆಗೂ ಗುಡಗುಡು ... ಯಾವದೆಂದು ಹೇಳಿ ಹಗೂ ಗಾಜ ಮದ್ದು ಮಲೇರಿಯ ಸಂಪೂರ್ಣ ಜ್ವರವನ್ನು ಗುಣಪಡಿಸಿ ಗಡ್ಡೆಯನ್ನು ... ಗಿಸಿ ಬಿಡುತ್ತದೆಂದು ... ನಂಬು ಕ್ರಯ ಬಾಟ್ಲಿಗೆ ½ ಡಜನ್ 9-8-0. 1 ಡಜನ್ 16-8-0

ಕಂಪೌಂಡು ಸಿರಪ್ಪು ಬ್ಲಟ.

ಗುರುಗುರು ಉಬ್ಬಸ ನೀವಸದ ರೋಗದಿಂದ ಕಫ ಗಟ್ಟಿಯಾಗಿ ಎಳದಾಟ ಎದೆ ಮತ್ತು ಪಾರ್ಶ್ವನೋವು ... ಯುವವಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಯು ... ಗಿ ಕಂಪೌಂಡು ಸಿರಪ್ಪು ಬ್ಲಟ ಎಂಬದನ್ನು ತಕ್ಷಣ ತರಿಸಿ ಕುಡಿಯಲಿ ಕ್ರಯ ಬಾಟ್ಲಿಗೆ ರೂ. 5-8-0.

ಕಂಪೌಂಡು ಸಿರಪ್ಪು ಬಸಲೀನ. —ಶ್ವಾಸಕೋಶದ ಕ್ಷಯವೆಂಬ ರೋಗಕ್ಕೆ ಈ ಸಿರಪ್ಪನ್ನು ಆರಂಭದ ಸ್ಥಿತಿಯಲ್ಲಿಯೇ ... ಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು ಕೆಮ್ಮು ಎದೆನೋವು ರಕ್ತ ಬೆರತ ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ಮುಂದೆಯುದಂತೆ ಕಾಪಾಡಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3-8-0

ಕಂಪೌಂಡು ಸಿರಪ್ಪು ಸಬಿನ ಸೇಪಿಯೆ —ಹೆಂಗಸರ ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ಬಿಳಿ ಎಂಬ ರೋಗದಿಂದ ಸೊಂಟನೋವು ಕೈಕಾಲು ಬಚ್ಚಲು ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರಿಸುವುದು ಕ್ರಯ ಬಾಟ್ಲಿಗೆ ರೂ 3-8-0.

ಕಂಪೌಂಡು ಸಿರಪ್ಪು ವೆಸಿಥೂಪ:— ಪ್ರಮೇಹವೆಂಬ ಗುಪ್ತರೋಗವನ್ನು ಪಡಕೊಂಡು, ಮೂತ್ರ ಬಿಂದು ಬಿಂದುಗಳ ದ್ವಾರದೊಳಗೆ ಹುಣ್ಣು ವ್ರಣಗಳು ದುರ್ಗಂಧ ಕೂಡಿದ ಹಳದಿ ಬಣ್ಣದ ರೇಸಿಗೆ ಇತ್ಯಾದಿ ಕಠಿಣ ತರದ ರೋಗವನ್ನು ಈ ಬಲವಾದ ... ಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ. 3-8-0.

ಶುದ್ಧ ಬೆಶ್ಯಮದ್ದುಗಳೂ ಹೋಮ್ಯೋಪಥಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಪುಟ 3—5ರ ವರೆಗೆ ಓದಿಕೊಂಡು ಬರೆಯತಕ್ಕದ್ದು ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ ಬಸಲಿಗೆ ಇಡತಕ್ಕ ಒಳ್ಳೇ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಕ್ರಯದಿಗೆ ಮಾರಲ್ಪಡ...

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ

52-33 **Malariana Co,**
Hampankatta No 14 Mangalore

ವಿಳಾಸ —ಮಲೇರಿಯಾನ ಕಂಪೆನಿ, ಹಂಪನಕಟ್ಟೆ ನಂಬ್ರ 14, ಮಂಗಳೂರು ...

ಸೂಚನೆ.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ ಕೆಳಗಿನ ಸಬ್ ಏಜಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
" ಮೆ. ಚಾರಿರ ನಂಜಯ್ಯನವರು,
ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ಮೇದಪ್ಪನವರು,
" ಮೆ. ಚೆಕ್ಕೆರ ಪೊನ್ನಯ್ಯನವರು
ಸುರನಾಡು—ಮೆ ಕೀಕಿರ ಅಪ್ಪಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು, (ಪಾದಿಭಂಡಾರ.)
ನಾಪೋಕ್ಲು—ಎಮ್. ಆರ್ ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಪೂವಪ್ಪನವರು
ಹೋಣಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಅನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ ಜಿ ಮುದ್ದಯ್ಯನ
" ಮೆ ಪಣ್ಯಂಡ ಬೋಪ್ಪ...
ಮುತ್ತು, ಅರಮಣಮಾಡ ಪಿ ಕಾರ್ಯಪ್ಪನವರು,
ಸುಂಟಿಕೊಪ್ಪ & ತಿತಿಮತ್ತಿ—ಮೆ ಜಿ ಮಾದಯ್ಯನ
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚ್ಚ...

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳ... ರೂ ಚಂದಾ ಕೊಡತಕ್ಕದ್ದಾಗಿ ಈ ಮೂಲಕ ತಿಳಿಸು...

ಮ್ಯಾನೇಜರ್,
"ಕೊಡಗು" ಲಿಮಿಟೆಡ್, ಮಡಿ...

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರ್... ಕರಡೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯ... ದದ ಉಪನಿಬಂಧನೆಗಳೂ, ಸಾಲ ಬರೆದು ರಿಜಿಸ್ಟ್ರಾ... ಆಫೀಸಿಗೆ ಕಳುಹಿಸಿದಾಗ ಅದು ತಿದ್ದಿಯಾಗಿ ಬರೆಯ... ದೆಂದು ವಾಪಸು ಕಳುಹಿಸಿ ಅವನ್ನು ಪುನಹ ಸರಿಪಡಿ... ಸುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗೆ... ವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ವಾರ್... ಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದ... ಯಲ್ಲಿಯೂ ಮಾರಾಟಕ್ಕಿವೆ.

ಮ್ಯಾನೇಜರ್,
"ಕೊಡಗು" ಮಡಿ...

Printed & published by P. I Belliappa at "Kodagu" Press Mer... for "Kodagu" Ltd.

If not delivered please return to "KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ವೀಚಿ ಪ್ರ ಸುತ್ಯಸಾ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ಸಾಲಿನ ಚಂದಾ ರೂ. ೩—೮—೦.   ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಸ್ತಕ ೧೧ ‖ ಮಡಿಕೇರಿ, ಸನ್ ೧೯೩೧ನೇ ಇಸವಿ ಜೂನ್ ತಾರೀಕು ೨೭ ನೇ ಶುಕ್ರವಾರ. ಸಂಖ್ಯೆ ೮

Telegrams "Precious"

V. Subramaniaier

Jeweller,

DIAMOND MERCHANT GOLD & SILVER SMITH

Deals in all—
SPORTS CUPS in all prices
MEADALS in up-to-date patterns
CASKETS in elegant styles

Nos 2 & 3 Kuppumuthu st
IRUVATI SWARANPE
Post Box 4 3, Triplicane P. O.,
MADRAS.

Deals in all—
GEM SET JEWELS set
Diamonds Rubies etc
GOLD ARTICLES
SILVER WARE

52-32



ಬಂದೂಕು ಒಂದರ ಒಗೆದ ...

ಕೋವಿಗಳು, ಕತ್ತಿಗಳು, ಬಟೆಗಳು, ಕೋಟೆಗಳು ... ಮತ್ತು ... ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು

GOOLAMHUSAIN A... ...ONS.
...rgest Importers of Firearms and ...mmunition
Cheapest priced firm in India,
24-13 210 Abdul Rehman Street, BOMBAY

ಕಟುಕಷಾಯ ಮಲೆಜ್ವರಕ್ಕೆ.—ಇದು ... ಮಲೆ ಜ್ವರ ... ಜ್ವರ, 3—4 ದಿವಸಕ್ಕೊಂದು ... ಜ್ವರ ಮತ್ತು ... ಬರುವ ಜ್ವರಗಳಿಗೆ ... ಗುಣಕೊಡುತ್ತದೆ. ... ಒಂದಕ್ಕೆ ರೂ 1—8—0 3ಕ್ಕೆ ರೂ 4—... ಕ್ಕೆ ರೂ —8—0 12ಕ್ಕೆ ರೂ 14

...ಮಲೆ ಜ್ವರಕ್ಕೆ
...ಟು ಕಷಾಯ

... ಕೋಲ್ಡ್ ... ಬಾಟ್ಲ 1 3 ... ರೂ 1—1—0 ...

ಕೋಮುನಾಶಿನಿ:— ... ರೂ 1 1 ... 3—8—0

ಮುಕೋಲ್ಲಾಸಿನಿ ತೈಲ—... ರೂ 1, 3 ... 2, 3 ... 5—8—0

... ಮುಕೋಲ್ಲಾಸಿನಿ ಕಂಪೆನಿ,
೨. ಮಂಗಳೂರು

ಬಾಲಾರ್ಕಮಧು.

ನಿಮ್ಮ ಮಕ್ಕಳ ... ಬಾಲಾರ್ಕ ಮಧುವನ್ನು ... ಮಕ್ಕಳು ...



... ಮಕ್ಕಳು ... 12 ... 8 ... ಗಮನಿಸಬೇಕು.

ಎಂ. ವಿ. ಪ್ರಸಾದಿಕ,
ಔಷಧಾಲಯ,
52-21 ಶಿವಮೊಗ್ಗಾ,
(ಮೈ ಸೂರು ಸಂಸ್ಥಾನ)

ಕೊಡಗು.

ಸನ್ ೧೯೩೧ನೇ ಇಸವಿ

ಜೂನ್ ೫ ೨೬ನೇ ಶುಕ್ರವಾರ.

ಫೆಡರೇಶನೂ, ಸಂಸ್ಥಾನಗಳೂ.

ಕಳೆದ ದುಂಡು ಮೇಜು ಪರಿಷತ್ತಿನಲ್ಲಿ ಆದ ತೀರ್ಮಾನಗಳಲ್ಲಿ ಇಂಡಿಯಾದ ಮುಂದಿನ ಸರ್ಕಾರವು ಫೆಡರೇಶನ್ (ಸಂಯುಕ್ತ) ರಚನೆಯ ದಾಗಿರಬೇಕೆಂಬುದೇ ಬಹು ಮುಖ್ಯವಾದದ್ದು. ಫೆಡರೇಶನ್ ಸರ್ಕಾರದಲ್ಲಿ ಬ್ರಿಟಿಷ್ ಪ್ರಾಂತ್ಯಗಳ ಪ್ರತಿನಿಧಿಗಳೂ, ರಾಜರಿಂದ ಆಳಲ್ಪಡುತ್ತಿರುವ ಸಂಸ್ಥಾನಗಳ ಪ್ರತಿನಿಧಿಗಳೂ ಸೇರಿ ಅಖಿಲ ಹಿಂದೂಸ್ಥಾನಕ್ಕೆ ಸಂಬಂಧ ಪಡುವ ವಿಷಯಗಳನ್ನೆಲ್ಲಾ ಚರ್ಚಿಸಿ ತೀರ್ಮಾನಿಸುವರು. ಸಂಸ್ಥಾನಗಳಂತೆಯೇ ಬ್ರಿಟಿಷ್ ಪ್ರಾಂತೀಕ ಸರ್ಕಾರಗಳಿಗೂ ತಮ್ಮ ಪ್ರದೇಶಕ್ಕೆ ಮಾತ್ರ ಸಂಬಂಧ ಪಡುವ ಎಲ್ಲಾ ವಿಷಯಗಳಲ್ಲಿ ಸಂಪೂರ್ಣ ಅಧಿಕಾರವಿರುವುದು. ಈ ತರಹದ ಫೆಡರೇಶನ್ ರಚನೆಯ ಸೂಚನೆಯು ಮಾಂಟ್‌ಫರ್ಡ್ ಮತ್ತು ಸೈಮನ್ ವರದಿಗಳಲ್ಲಿ ಸ್ವಲ್ಪ ಮಟ್ಟಿಗೆ ಮಾಡಲ್ಪಟ್ಟಿದ್ದರೂ ಈ ರಚನೆಯು ಇಷ್ಟು ಮಟ್ಟಕ್ಕೆ ಬರಲು ಪಂಡಿತ ಮದನಮೋಹನ ಮಾಲವೀಯರು ಇತ್ಯಾಲಾಗಿ ದುಂಡು ಮೇಜು ಪರಿಷತ್ತು ಕಾರಣ ಭೂತರೆಂದು ತಿಳಿಯ ಬರುತ್ತದೆ. ಪಂಡಿತ ಮಾಲವೀಯರು 1929ರಲ್ಲಿ ವೈಸರಾಯ್ ಲಾರ್ಡ್ ಇರ್ವಿನ್‌ರವರು ಇಂಗ್ಲೆಂಡಿಗೆ ಹೋಗುವ ಮುಂಚೆ ಈ ತರಹದ ರಚನೆಯನ್ನು ಕುರಿತು ಅವರಿಗೊಂದು ದೀರ್ಘ ಪತ್ರವನ್ನು ಬರೆದಿದ್ದರಂತೆ. ಈ ಪತ್ರವು ಪ್ರಧಾನ ಮಂತ್ರಿಗಳವರ ಕೈಸೇರಿರಬಹುದೆಂದು ಊಹಿಸಲಾಗಿದೆ. ನಂತರ ಮಾಲವೀಯರು ಕೆಲವು ರಾಜರುಗಳೊಂದಿಗೆ ಈ ವಿಷಯ ಚರ್ಚಿಸಿ ಅವರನ್ನು ಒಪ್ಪಿಸಿದರೆಂತಲೂ ವರ್ತಮಾನವಿತ್ತು. ಹೇಗೂ ರಾಜರುಗಳು ದುಂಡು ಮೇಜು ಪರಿಷತ್ತಿಗೆ ಹೋದಲ್ಲಿ ಅವರ ಪೈಕಿ ಕೆಲವರು ಮುಂದಾಗಿ ಸೇರಿ ಆಲೋಚಿಸಿ ಫೆಡರಲ್ ಸರ್ಕಾರಕ್ಕೆ ತಾವು ಒಪ್ಪಿಗೆಯನ್ನೀಯುತ್ತೇವೆಂದು ಸೂಚಿಸಿದರು.

ದುಂಡ ಮೇಜು ಪರಿಷತ್ತಿನಲ್ಲಿ ಈ ವಿಷಯವು ಚರ್ಚೆಗೆ ಬಂದಾಗ್ಯೂ ಪ್ರಾಮುಖ್ಯ ರಾಜರುಗಳು ಇದಕ್ಕೆ ಸಮ್ಮತಿಯನ್ನಿತ್ತರು. ಬ್ರಿಟಿಷ್ ಪ್ರತಿನಿಧಿಗಳೂ ಇದಕ್ಕೆ ಒಪ್ಪಿದರು. ಆಗ್ಯೆ ರಾಜರುಗಳ ಕೌನ್ಸಿಲಿನ (ಚೇಂಬರ್ ಆಫ್ ಪ್ರಿನ್ಸಸ್) ಚ್ಯಾನ್ಸಲರ್ ಅಂದರೆ ಮುಖ್ಯಸ್ಥರಾಗಿದ್ದ ಪಟಿಯಾಲದ ಮಹಾರಾಜರು, ತನ್ನ ಸಂಗಾತಿ ರಾಜರುಗಳ ಅಭಿಪ್ರಾಯವನ್ನು ಅರಿತುಕೊಂಡು ಫೆಡರೇಶನ್‌ನಿಂದಲೇ ಹಿಂದೂದೇಶದ ಒಗ್ಗಟ್ಟು ಸಾಧಿಸಲ್ಪಡುವದೆಂದೂ, ಅದಕ್ಕೆ ಎಲ್ಲಾ ರಾಜರುಗಳು ಸೇರಬೇಕೆಂದೂ ಮುಂತಾಗಿ ಗಂಭೀರವಾದ ಭಾಷಣ ಮಾಡಿ ತನ್ನ ಸಂಪೂರ್ಣ ಒತ್ತಾಸೆಯನ್ನು ಕೊಟ್ಟರು. ರಾಜರುಗಳ ಸಮ್ಮತಿಯು ದೊರೆತ ಕಾರಣ ಇಂಡಿಯಾದ ಮುಂದಿನ ಸರ್ಕಾರ ರಚನೆಯು ಫೆಡರೇಶನ್ ಆಗಿರಬೇಕೆಂದು ಅಲ್ಲಿ ತೀರ್ಮಾನಿಸಲ್ಪಟ್ಟಿತು. ಗಾಂಧಿ—ಇರ್ವಿನ್ ಒಪ್ಪಂದದಲ್ಲಿ ಈ ಫೆಡರೇಶನ್ ರಚನೆಯನ್ನು ಇಟ್ಟುಕೊಂಡೇ ಮುಂದಿನ ಚರ್ಚೆ ನಡೆಸಬೇಕೆಂದು ಶರತ್ತು ಇರುವದಾಗಿದೆ.

ಆದರೆ ಇತ್ತಲಾಗಿ ಪಟಿಯಾಲದ ಮಹಾರಾಜರವರು ತಮ್ಮ ಅಭಿಪ್ರಾಯವನ್ನು ಸಂಪೂರ್ಣವಾಗಿ ಬದಲಾಯಿಸಿ ಫೆಡರೇಶನ್‌ನಿಂದ ಸಂಸ್ಥಾನಗಳಿಗೆ ತುಂಬಾ ಕೆಡಕುಗಳುಂಟಾಗುವವೆಂದೂ, ಕ್ರಮೇಣ ಸಣ್ಣ ಸಂಸ್ಥಾನಗಳು ಇಲ್ಲದೆ ಆಗುವವೆಂದೂ ಮುಂತಾದ ಕಾರಣಗಳನ್ನು ಹಾಕಿ ಫೆಡರೇಶನನ್ನು ವಿರೋಧಿಸಿರುವರು. ಎರಡನೇ ದುಂಡು ಮೇಜು ಪರಿಷತ್ತನ್ನು ನಡೆಸಲು ಕಾಲ ವಿಳಂಬ ಮಾಡಿದರೆ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಡಬಾರದೆನ್ನುವವರಿಗೆ ಕಂಟಿ ಮಾಡಲು ಅವಕಾಶವಾಗುವದೆಂದು ರಾಷ್ಟ್ರೀಯ ಮುಂದಾಳುಗಳು ಸೂಚಿಸಿದ್ದರು. ಹಾಗೆಯೇ ಈಗ ಪಟಿಯಾಲದ ಮಹಾರಾಜರು ಸ್ವರಾಜ್ಯ ವಿರೋಧಿಗಳ ಬಲೆಗೆ ಸಿಕ್ಕಿದಂತೆ ತೋರುತ್ತದೆ. ಇಲ್ಲವಾದರೆ ಸದರಿ ಮಹಾರಾಜರು ಇಷ್ಟು ದೊಡ್ಡ ಪಲ್ಟಿ ಹೊಡೆಯಲು ಕಾರಣವಿಲ್ಲ. ಒಂದನೇ ದುಂಡು ಮೇಜು ಪರಿಷತ್ತಿನಲ್ಲಿ ಎಲ್ಲರಿಗಿಂತಲೂ ಗಟ್ಟಿಯಾದ ಸ್ವರದಿಂದ ಫೆಡರೇಶನ್ ರಚನೆಗೆ ಒಪ್ಪಿಗೆಯನ್ನಿತ್ತು, ಈಗ ಅದನ್ನೆಲ್ಲಾ ಮರೆತು, ಅದಕ್ಕೆ ವಿರೋಧಿಸುವುದರಿಂದ ಅವರು ಹಿಂದೀ ಸ್ವರಾಜ್ಯದ ಹೋರಾಟಕ್ಕೆ ಮೋಸ ಮಾಡಿದಂತಾಗಿದೆಯೆಂದರೆ ತಪ್ಪಾಗಲಾರದು.

ಫೆಡರೇಶನ್ ಸರ್ಕಾರಕ್ಕೆ ರಾಜರುಗಳೂ ಒಳಗಾದರೆ ಅವರು ಸಂಸ್ಥಾನಗಳಲ್ಲಿ ನಡೆಸುತ್ತಿರುವ ನಿರಂಕುಶ ಪ್ರಭುತ್ವಕ್ಕೆ ಎಡೆ ಸಿಕ್ಕಲಾರದೆಂಬುದು ಪಟಿಯಾಲ ಮಹಾರಾಜರ ವಿರೋಧಕ್ಕೆ ಒಂದು ಮುಖ್ಯ ಕಾರಣವಾಗಿರಬಹುದು. ಫೆಡರೇಶನ್ ಸರ್ಕಾರ ಆಗಲೀ, ಆಗದಿರಲೀ, ಸಂಸ್ಥಾನಗಳೂ ಬ್ರಿಟಿಷ್ ಪ್ರಾಂತ್ಯಗಳಂತೆಯೇ ರಾಜ್ಯಾಡಳಿತೆಯ ಕ್ರಮದಲ್ಲಿ ಮುಂದು ವರಿಯಬೇಕೆಂಬುದೇನೋ ಖಂಡಿತ. ಬ್ರಿಟಿಷ್ ಪ್ರಾಂತ್ಯದಲ್ಲಿರುವ ಜನರಂತೆಯೇ ಸಂಸ್ಥಾನಗಳ ಪ್ರಜೆಗಳೂ ಈಗ ಎಚ್ಚತ್ತಿರುವರು. ಫೆಡರೇಶನಿಗೆ ರಾಜರುಗಳು ಒಪ್ಪಿದರೂ ಕೂಡ ಅಂಥಾ ಫೆಡರಲ್ ಸಂಸ್ಥೆಗೆ ಪ್ರಜೆಗಳ ಪ್ರತಿನಿಧಿಗಳನ್ನು ಕಳುಹಿಸುವ ಅನುಕೂಲವು ದೊರೆಯದೆ ಹೋದರೆ ತಾವು ಅದಕ್ಕೆ ಎಂದಿಗೂ ಸಮ್ಮತಿಸಲಾರೆವೆಂದು ಸಂಸ್ಥಾನಗಳ ಪ್ರಜೆಗಳು ಮೊನ್ನೆ ತಾನೇ ಬೊಂಬಾಯಿಯಲ್ಲಿ ನಡೆದ ತಮ್ಮ ಮಹಾಸಭೆಯಲ್ಲಿ ತೀರ್ಮಾನಿಸಿರುವರು. ಆದ ಕಾರಣ ರಾಜರುಗಳು ತಮ್ಮ ಪ್ರಜೆಗಳನ್ನು ಇಷ್ಟರ ವರೆಗಿನಂತೆ ಇನ್ನು ಮುಂದಕ್ಕೂ ನಿರಂಕುಶವಾಗಿ ಆಳುತ್ತೇವೆಂಬ ಭಾವನೆಯನ್ನು ಬಿಟ್ಟು ಬಿಡಬೇಕು. ಸತ್ಯಾಗ್ರಹ ಚಳವಳದ ಮಹಾಶಕ್ತಿಯನ್ನು ಎಲ್ಲರೂ ಅರಿತುಕೊಂಡಿರುವರು. ಸೈನಿಕರ ಮತ್ತು ಪೋಲೀಸಿನವರ ಭುಜಬಲದಿಂದ ದಬ್ಬಾಳಿಕೆ ನಡೆಸಿ ಜನರಲ್ಲಿ ಉಕ್ಕಿ ಬರುತ್ತಿರುವ ಸ್ವಾತಂತ್ರ್ಯ ಪ್ರೀತಿಯನ್ನು ಅಡಗಿಸುವ ಕಾಲವು ಕಳೆದು ಹೋಯಿತು. ರಾಜರುಗಳು ಕಾಲಸ್ಥಿತಿಗನುಗುಣವಾಗಿ ವರ್ತಿಸಿದರೇನೇ ಅವರ ಪ್ರಭುತ್ವವು ಉಳಿಯುವುದೆಂಬದನ್ನು ಅವರು ಮರೆಯಬಾರದು.

ಈಗಿನ ಕ್ರಮ ಪ್ರಕಾರ ರಾಜರುಗಳು ಬ್ರಿಟಿಷ್ ಚಕ್ರವರ್ತಿಯವರ ಅಧೀನರಾಗಿರುವರು. ಫೆಡರೇಶನಿಗೆ ಸೇರಲು ಅವರು ಒಪ್ಪಿದರೆ ಹಿಂದೀಯರಿಂದ ನಡೆಸಲ್ಪಡುವ ಇಂಡಿಯಾ ಸರ್ಕಾರಕ್ಕೆ ಅಧೀನರಾಗಬೇಕಾಗುವ ಕಾರಣ, ಅದು ತಮ್ಮ ಗೌರವಕ್ಕೆ ಕೊರತೆಯೆಂದು ಪಟಿಯಾಲ ಮಹಾರಾಜರಿಗೆ ಅನಿಸುತ್ತದೋ, ಏನೋ! ಆದರೆ ಪರದೇಶೀ ಸರ್ಕಾರದ ಕೈಕಳಗೆ ಚಿನ್ನದ ಬೇಡಿಗಳನ್ನು ಹಾಕಿಕೊಂಡವರಂತೆ ಇರುವುದಕ್ಕಿಂತ ತಮ್ಮಿಂದಲೂ, ತಮ್ಮ ನಿಕಟ ಸಂಬಂಧಿಕರಾದ ಹಿಂದೀಯರಿಂದಲೂ ಕೂಡಿ ನಡೆಸಲ್ಪಡುವ ಫೆಡರಲ್ ಸರ್ಕಾರಕ್ಕೆ ಒಳಗಾಗಿರುವುದು ಹೆಚ್ಚಿನ ಗೌರವವಲ್ಲವೇ ಎಂಬದನ್ನು ರಾಜರುಗಳು ಚೆನ್ನಾಗಿ ಆಲೋಚಿಸಬೇಕು.

ಪಟಿಯಾಲ ಮಹಾರಾಜರೊಂದಿಗೆ ಎಷ್ಟು ಸಂಸ್ಥಾನಗಳ ಅರಸರು ಫೆಡರೇಶನಿಗೆ ವಿರೋಧಿಸುತ್ತಾರೆಂದು ನೋಡುವ. ಹಿಂದೂಸ್ಥಾನದಲ್ಲಿರುವ ಎಲ್ಲಾ ಸಂಸ್ಥಾನಗಳ ಒಟ್ಟು ಜನಸಂಖ್ಯೆಯು ಸುಮಾರು 81 ಮಿಲಿಯ. ಇದರಲ್ಲಿ ಹೈದರಾಬಾದು, ಮೈಸೂರು, ಕಾಶ್ಮೀರು ಮೊದಲಾದ ದೊಡ್ಡದಾದ 8 ಸಂಸ್ಥಾನಗಳಲ್ಲಿ ಸುಮಾರು 40½ ಮಿಲಿಯ ಜನರಿರುವರು. ಈ ಎಂಟು ಸಂಸ್ಥಾನಗಳ ಅರಸರು ಫೆಡರೇಶನ್ ರಚನೆಗೆ ಒಪ್ಪಿರುವರು. ನಂತರದ 50 ಸಂಸ್ಥಾನಗಳ ಪೈಕಿ ಹೆಚ್ಚಿನವು ಫೆಡರೇಶನಿಗೆ ವಿರೋಧಿಸುವುದಿಲ್ಲ. ಒಂದು ವೇಳೆ ಚಿಕ್ಕ ಚಿಕ್ಕ ಸಂಸ್ಥಾನಗಳು ಹಲವು ವಿರೋಧಿಸಬಹುದು. ಇದರಿಂದ ಆ ಸಂಸ್ಥಾನಗಳಿಗೇನೇ ತೊಂದರೆ ಮತ್ತು ನಷ್ಟವುಂಟಾಗುವುದಲ್ಲದೆ ಫೆಡರೇಶನಿಗೆ ಸೇರಿದವರಿಗೇನೂ ಇಲ್ಲ. ಸಂಸ್ಥಾನಗಳ ಜನಸಂಖ್ಯೆಗಿಂತ ಮೂರರಷ್ಟು ಹೆಚ್ಚು ಇರುವ ಬ್ರಿಟಿಷ್ ಪ್ರಾಂತ್ಯಗಳೊಂದಿಗೆ ಸಂಸ್ಥಾನಗಳಲ್ಲಿ ಸುಮಾರು ಅರ್ಧಾಂಶ ಪಾಲು ಸೇರುವಾಗ್ಯೂ ಫೆಡರಲ್ ಸರ್ಕಾರವನ್ನು ನಡೆಸಲು ಏನೊಂದೂ ಅಡಚಣೆ ಉಂಟಾಗಲಾರದು. ಈ ವಿರೋಧಿಸುವಂಥ ರಾಜರುಗಳು ಕ್ರಮೇಣ ಫೆಡರೇಶನಿನ ಪ್ರಯೋಜನವನ್ನು ಅರಿತು ಅದಕ್ಕೆ ಸೇರುತ್ತಾರೆಂಬುವುದರಲ್ಲಿ ಸಂಶಯವಿಲ್ಲ.

ಹಲ ಕೆಲವು ಸಂಸ್ಥಾನಗಳು ಫೆಡರೇಶನಿಗೆ ವಿರೋಧಿಸುತ್ತಾರೆಂಬ ಕಾರಣದಿಂದ ಫೆಡರಲ್ ಸರ್ಕಾರವನ್ನು ಇಂಡಿಯಾದಲ್ಲಿ ನಡೆಸಲು ಸಾಧ್ಯವಿಲ್ಲವೆಂದೂ, ಆದುದರಿಂದ ಹಿಂದೀಯರಿಗೆ ಹೆಚ್ಚಿನ ರಾಜಕೀಯ ಸುಧಾರಣೆ ಕೊಡಕೂಡದೆಂದೂ ಇಂಡಿಯಾ ಸ್ವಾತಂತ್ರ್ಯದ ವಿರೋಧಿಗಳು ಬೊಬ್ಬೆ ಹಾಕಬಹುದು. ಮೇಲೆ ಸೂಚಿಸಿದಂತೆ ಸಂಸ್ಥಾನಗಳಲ್ಲಿ ಅಲ್ಪಸಂಖ್ಯೆಯವರು ಮಾತ್ರ ಫೆಡರೇಶನಿಗೆ ವಿರೋಧಿಸುವುದರಿಂದ ಫೆಡರಲ್ ಸರ್ಕಾರವನ್ನು ನಡೆಸಲು ತೊಂದರೆಯೂ ಇರುವುದಿಲ್ಲ. ಅಲ್ಲದೆ ಬ್ರಿಟಿಷ್ ಪ್ರಾಂತ್ಯದ ಜನರ ಸ್ವರಾಜ್ಯ ಹೋರಾಟಕ್ಕೂ ಸಂಸ್ಥಾನಗಳಿಗೂ ಸಂಬಂಧವೇನೂ ಇಲ್ಲ. ಈ ಮೊದಲು ಬ್ರಿಟಿಷ್ ಪ್ರಾಂತ್ಯದವರು ಸಾಮಾಂತ ಸ್ವರಾಜ್ಯಬೇಕೆಂದು ಹೋರಾಡುತ್ತಿದ್ದಾಗ್ಯೆ ಫೆಡರೇಶನಿನ ಅಂದರೆ ರಾಜರುಗಳು ಸೇರಿ ನಡೆಸುವ ಸರ್ಕಾರ ಕ್ರಮದ ಅಭಿಪ್ರಾಯವೇ ಇರಲಿಲ್ಲ. ಈ ಅಭಿಪ್ರಾಯವು ಈಗ ತಾನೇ ಪ್ರಾಮುಖ್ಯತೆಗೆ ಬಂದಿರುವುದಾಗಿದೆ. ಕೆಲವು ರಾಜರುಗಳ ನೆಪದಿಂದ ಬ್ರಿಟಿಷರು ಈ ಮೊದಲು ಹಿಂದೀಯರಿಗೆ ಕೊಟ್ಟಿರುವ ಭಾಷೆಗಳನ್ನು ನಡೆಸಿಕೊಡದೆ ಹೋದರೆ ಅದೆಂದಿಗೂ ನ್ಯಾಯವಾಗಲಾರದು, ಮತ್ತು ಅದರ ಫಲಿತಾಂಶವು ಏನಾಗುವುದೆಂದು ಬ್ರಿಟಿಷರಿಗೆ ತಿಳಿಯದ್ದಲ್ಲ. ಈಗ ಎಲ್ಲರೂ ಮಹಾತ್ಮರು ಎರಡನೇ ದುಂಡು ಮೇಜು ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳುವುದರ ಫಲಿತಾಂಶವನ್ನು ಕಾಯುತ್ತಿರುವರು.

ಕೋಮುವಾರು ಸಮಸ್ಯೆ.

ಹಿಂದೂಸ್ಥಾನದ ಮುಂದಿನ ಆಡಳಿತ ಕ್ರಮದಲ್ಲಿ ಮುಸಲ್ಮಾನರಿಗೆ ಪ್ರತ್ಯೇಕ ಚುನಾವಣೆ ಇರಬೇಕೋ ಯಾ ಮಿಶ್ರ ಚುನಾವಣೆ ಇರಬೇಕೋ ಎಂಬ ವಿಷಯವನ್ನು ನಿರ್ಧರಿಸಲು ಮುಸಲ್ಮಾನರಲ್ಲಿ ಇರುವ ಎರಡು ಪಂಗಡಗಳು ಕಳೆದ ಮೇ ತಿಂಗಳಿಂದ ನಡೆಸುತ್ತಾ ಬಂದ ಪ್ರಯತ್ನಗಳು ಮೊನ್ನೆ ದಿವಸದಲ್ಲಿ ಸಫಲವಾಗದೆ ಅಂತ್ಯವಾದವೆಂದು ಕೇಳಿ ವ್ಯಸನಪಡುತ್ತೇವೆ. ರಾಷ್ಟ್ರೀಯ ಪಕ್ಷದ ಮುಸಲ್ಮಾನರು ಡಾಕ್ಟರ್ ಅನ್ಸಾರಿಯವರ ಮುಂದಾಳುತನದಲ್ಲಿ ಕೋಮುವಾರು ಪ್ರತ್ಯೇಕ ಚುನಾವಣೆಯಿಂದ ದೇಶಕ್ಕೂ ಮುಸಲ್ಮಾನರ ಕೋಮಿನ ಅಭಿವೃದ್ಧಿಗೆ ತುಂಬಾ ಹಾನಿ ತಟ್ಟುವುದು, ಅದನ್ನು ಒಪ್ಪಿಕೊಳ್ಳುವದಾದರೂ ತತ್ಕಾಲ ಅವಶ್ಯಕತೆಯೆಂದು ಒಪ್ಪಿಕೊಳ್ಳಬೇಕಲ್ಲದೆ ಅನ್ಯಥಾ ಅಲ್ಲವೆಂದು ಪ್ರಾರಂಭದಿಂದಲೇ ಹೇಳುತ್ತಾ ಬಂದಿರುವರು. ಮಿಶ್ರ ಚುನಾವಣೆಯೇ ದೇಶದ ಏಳಿಗೆಗೂ, ಒಗ್ಗಟ್ಟಿಗೂ ಮುಖ್ಯವೆಂಬುದು ಅವರ ತತ್ವ.

ಆದರೆ ಅಖಿಲಭಾರತ ಮುಸ್ಲಿಂ ಕಾನ್‌ಫರೆನ್ಸಿನವರು ಮೌಲಾನ ಶೌಕತ್ ಆಲಿಯವರ ಮುಂದಾಳುತನದಲ್ಲಿ ಕೋಮುವಾರು ಪ್ರತ್ಯೇಕ ಚುನಾವಣೆಯನ್ನು ಖಾಯಂ ಮಾಡಲು ಪ್ರಯತ್ನಿಸುತ್ತಿರುವರು. ಇದರಿಂದಲೇ ತಮ್ಮ ಕೋಮಿನವರ ಅಭಿವೃದ್ಧಿಯಾಗುವುದೆಂದು ಅವರ ಅಭಿಪ್ರಾಯ. ಹಿಂದೂಸ್ಥಾನದ ರಾಜಕೀಯ ಹೋರಾಟದಲ್ಲಿ ಕೆಲವು ವರ್ಷ ಹಿಂದೆ ಮುಸಲ್ಮಾನರು ವಿದ್ಯಾ ಬುದ್ಧಿಗಳಲ್ಲಿ ಹಿಂದಿದ್ದರೆಂಬ ಕಾರಣ ತತ್ಕಾಲ ಪ್ರತ್ಯೇಕ ಚುನಾವಣೆ ಇತ್ತು. ಈಗ ಕೆಲವರು ಚಳವಳ ನಡೆಸಿದ್ದಲ್ಲದೆ ಅದನ್ನು ಖಾಯಂ ಇಟ್ಟುಕೊಳ್ಳಲಿಕ್ಕಿಲ್ಲವೆಂಬದನ್ನು ಮೌ॥ ಶೌಕತಾಲಿಯವರಂಥವರು ಮರೆತಂತೆ ಕಾಣುತ್ತದೆ. ಈಗ ಮುಸಲ್ಮಾನರು ಬಹಳಷ್ಟು ಮುಂದುವರಿದಿರುವರು ಮತ್ತು ಮುಂದಿನ ರಾಷ್ಟ್ರೀಯ ಸರ್ಕಾರ ಕ್ರಮದಲ್ಲಿ ವಿದ್ಯಾಭ್ಯಾಸದ ಅನುಕೂಲ್ಯವು ಎಲ್ಲರಿಗೂ ಒಂದೇ ಸಮನಾಗಿ ದೊರೆಯುವುದರಿಂದ ಚಿಕ್ಕ ಕೋಮಿನವರಿಗೆ ಪ್ರತ್ಯೇಕ ಚುನಾವಣೆಯಿಂದ ಪ್ರಯೋಜನಕ್ಕಿಂತ ಹೆಚ್ಚು ಕೆಡಕು ಉಂಟಾಗುವುದು. ಉದಾಹರಣೆಗೆ ಸಿಲೋನಿನಲ್ಲಿ ಮೊದಲು ಕೋಮುವಾರು ಚುನಾವಣೆ ಇದ್ದಾಗ್ಯೆ ಯೂರೋಪಿಯನರಿಗೆ ಅಲ್ಲಿಯ ಕೌನ್ಸಿಲಿನಲ್ಲಿ ಒಬ್ಬ ಪ್ರತಿನಿಧಿಯ ಹಕ್ಕು ಮಾತ್ರ ಇತ್ತು. ಈಗ ಅಲ್ಲಿ ಮಿಶ್ರ ಚುನಾವಣೆಯು ಜಾರಿಗೆ ಬಂದದ್ದರಿಂದ ಮೊನ್ನೆ ತಾನೇ ನಡೆದ ಚುನಾವಣೆಯಲ್ಲಿ ಇಬ್ಬರು ಯೂರೋಪಿಯನರು ಆರಿಸಲ್ಪಟ್ಟಿರುವರು. ಮಿಶ್ರ ಚುನಾವಣೆಯಲ್ಲಿ ದೇಶದ ಹಿತವನ್ನು ಸಾಧಿಸುವವನು ಯಾವ ಕೋಮಿನವನೇ ಆಗಲಿ ಜಯಶೀಲನಾಗುವನು.

ಮೌ॥ ಶೌಕತಾಲಿಯ ಪಾರ್ಟಿಯವರು ಕೇಳುವಂತೆ ಮುಸಲ್ಮಾನರಿಗೆ ಕೋಮುವಾರು ಪ್ರತ್ಯೇಕ ಚುನಾವಣೆ ಕೊಡುವದಾದರೆ ಹಾಗೆಯೇ ಕಮ್ಮಿ ಜನಸಂಖ್ಯೆ ಇರುವ ಕೋಮಿನವರೆಲ್ಲವೂ ತಮಗೆ ಪ್ರತ್ಯೇಕ ಚುನಾವಣೆ ಕೊಡಬೇಕೆಂದು ಕೇಳುತ್ತಿರುವರು. ಹಾಗೆ ಹಿಂದೂಸ್ಥಾನದಲ್ಲಿರುವ ಹಲವು ಜಾತಿಮತಗಳಿಗೆಲ್ಲಾ ಪ್ರತ್ಯೇಕ ಚುನಾವಣೆಯ ಹಕ್ಕು ಕೊಟ್ಟರೆ ಸರ್ಕಾರವು ಹೇಗೆ ನಡೆಸಲ್ಪಡುವದೆಂದು ಮುಸ್ಲಿಂ ಕಾನ್ಫರೆನ್ಸಿನ ಪಕ್ಷದವರು ಚೆನ್ನಾಗಿ ಆಲೋಚಿಸಬೇಕಾಗಿದೆ. ಮೊದಲು ಈ ಸಮಸ್ಯೆಯು ಹಿಂದೂಗಳಿಗೂ ಮುಸಲ್ಮಾನರಿಗೂ ಸಂಬಂಧಪಟ್ಟದ್ದಾಗಿತ್ತು. ಆದರೆ ಕಳೆದ ಕಾಂಗ್ರೆಸಿನಂತರ ಹಿಂದೂಗಳ (ಕಾಂಗ್ರೆಸ್ಸಿನ) ಪರವಾಗಿ ಮಹಾತ್ಮ ಗಾಂಧಿಯವರು ಮುಸಲ್ಮಾನರ ಎಲ್ಲಾ ಪಾರ್ಟಿಗೂ ಒಪ್ಪುವಂಥ ಶರತುಗಳಿಗೆ ಸಮ್ಮತಿಸುತ್ತೇನೆಂದು ಹೇಳಿರುವದರಿಂದ ಅದು ಈಗ ಮುಸಲ್ಮಾನರೊಳಗೆ ಇರುವ ಪಾರ್ಟಿಗಳಿಗೆ ಮಾತ್ರ ಸಂಬಂಧಿಸುವಂತಾಗಿದೆ. ಇಷ್ಟರವರೆಗೆ ಧರ್ಮ ಭೇದಗಳಿಂದ ಈ ಸಮಸ್ಯೆಯು ಬಿಡಿಸಲ್ಪಡದಂಥದ್ದಾಗಿತ್ತು. ಈಗ ಅದರಿಂದ ಧರ್ಮದ ಭಾವನೆಯು ಬಿಟ್ಟಿದೆ. ಆದುದರಿಂದ ಮುಸ್ಲಿಂ ಮುಂದಾಳುಗಳು ಇನ್ನು ದೀರ್ಘಾಲೋಚನೆ ಮಾಡಿ ತಮ್ಮ ಜಾತಿಯವರ ಹಾಗೂ ದೇಶದವರ ಒಗ್ಗಟ್ಟಿಗೂ, ಅಭಿವೃದ್ಧಿಗೂ ಆಗ ತಮ್ಮೊಳಗಿನ ಭೇದಭಾವಗಳನ್ನು ಹೋಗಲಾಡಿಸಿಕೊಳ್ಳಲು ಯತ್ನಿಸುವರೆಂದು ಆಶಿಸುತ್ತೇವೆ.

ಸ್ಕೂಲ್‌ಫೈನಲ್ ಪರೀಕ್ಷೆಯ ಫಲಿತಾಂಶ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯ ಕೊಡಗಿನ ಸ್ಕೂಲುಗಳ ಫಲಿತಾಂಶವನ್ನು ಕಳೆದ ವಾರ ಪ್ರಕಟಿಸಿದೆವು. ಇವುಗಳಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಫಲಿತಾಂಶ ವಿಶೇಷವಾದದ್ದಾಗಿದೆ. ಕಾನ್ವೆಂಟ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿನಿಯರು ತೇರ್ಗಡೆಯಾಗಿರುವರಾದರೂ ಆ ಕಡೆಗಳಲ್ಲೂ ಮತ್ತು ಈ ಶಾಲೆಗೂ ವಾಡಿಕೆಯಾದ ಮಧ್ಯಮ ಫಲಿತಾಂಶವಾಗಿದೆ. ಆದರೆ ಸೆಂಟ್ರಲ್ ಹೈಸ್ಕೂಲಿಗೆ ಈ ವರ್ಷದಷ್ಟು ಉತ್ತಮ ಫಲಿತಾಂಶವು ಇದುವರೆಗೂ ದೊರೆತಿಲ್ಲವೆಂದು ತಿಳಿಯಬರುತ್ತದೆ. ಅಲ್ಲಿ 30 ವಿದ್ಯಾರ್ಥಿಗಳು ಅಂದರೆ ಶೇಕಡ 66⅔ ರಷ್ಟು ಪಾಸಾದದ್ದು ಬಹು ಉತ್ತಮ ಫಲಿತಾಂಶವೆಂದೇ ಹೇಳಬೇಕು. ಈ ಶಾಲೆಗೆ ಇದು ಸಾಧಾರಣವಾದ ಸಂಗತಿಯಲ್ಲ. ಈ ಪ್ರಾಂತ್ಯದಲ್ಲಿ ಸರಾಸರಿ ಫಲಿತಾಂಶವು ಬರೇ ೩೩% ಶ್ರೇಯಸ್ಕರವಾದ ಫಲಿತಾಂಶಕ್ಕಾಗಿ ಸೆಂಟ್ರಲ್ ಹೈಸ್ಕೂಲಿನ ಉಪಾಧ್ಯಾಯರನ್ನು, ವಾಡಿಕೆಯಾದರೂ ಉತ್ತಮವಾದ ಫಲಿತಾಂಶಕ್ಕಾಗಿ ಮಡಿಕೇರಿ ಹುಡುಗಿಯರ ಹೈಸ್ಕೂಲಿನವರನ್ನೂ ಅಭಿನಂದಿಸುತ್ತೇವೆ.

ಸಹಕಾರ.

(ಲೇಖಕ—ಎ ಯಂ ತಿಮ್ಮಯ್ಯ ಸಾಲಗಿರಿ)

೨ ನೇ ಭಾಗ.

ಹಿಂದಿನ ವಾರದ ಲೇಖನದಲ್ಲಿ ಸಹಕಾರದ ತತ್ವವನ್ನೂ, ಸಹಕಾರ ಸಂಘಗಳ ಕುಂದು ಕೊರತೆಗಳನ್ನೂ ತೋರಿಸಿ, ಅವುಗಳನ್ನು ಹೇಗೆ ಹೋಗಲಾಡಿಸಬಹುದೆಂದು ಬರೆದಿದ್ದಾಯಿತು. ಈ ಪ್ರಬಂಧದಲ್ಲಿ ಸಹಕಾರ ಸಂಘಗಳನ್ನು ಮುಂದಕ್ಕೆ ಹೇಗೆ ಅಭಿವೃದ್ಧಿಪಡಿಸಬಹುದೆಂದು ಪರೀಕ್ಷಿಸುವುದೇ ನನ್ನ ಉದ್ದೇಶವಾಗಿದೆ.

ಹಿಂದೂಸ್ಥಾನದಲ್ಲಿ ಶೇಕಡ 75 ರಷ್ಟು ಜನರು ವ್ಯವಸಾಯಗಾರರೆಂದು ಅಂದಾಜು ಮಾಡಲಾಗಿದೆ. ಕೊಡಗನ್ನೇ ಪ್ರತ್ಯೇಕವಾಗಿ ತೆಗೆದುಕೊಂಡರೆ ಶೇಕಡ 98 ರಷ್ಟು ಜನರು ವ್ಯವಸಾಯಗಾರರಾಗಿರುವರೆಂದರೆ ತಪ್ಪಾಗಲಾರದು. ವ್ಯವಸಾಯಗಾರರ ಹಿತಕ್ಕಾಗಿ ಒಂದೆರಡು ಶತಮಾನಗಳ ಹಿಂದೆ ಜರ್ಮನಿಯಲ್ಲಿ ರೈಫಿಸನ್ (Reiffisrn) ಎಂಬಾತನು ಸಹಕಾರದ ತತ್ವವನ್ನು ಕಂಡು ಹಿಡಿಯಲು ಅದರ ಗುಣವನ್ನು ತಿಳಿದು, ಯೂರೋಪ್ ಖಂಡದವರೂ, ಕಳೆದ ಶತಮಾನದ ಅಂತ್ಯದಲ್ಲಿ ಇಂಡಿಯಾ ಸರಕಾರದವರೂ ಅದರ ಬೀಜವನ್ನು ಬಿತ್ತಿಯೂ, ಇಲ್ಲಿಯೂ ಬಿತ್ತಿ ಬೆಳೆಸಿದರು. ಹಿಂದೂದೇಶದಲ್ಲಿ ... ಹಿತಕ್ಕೋಸ್ಕರ ಕೊಡುತ್ತಿದ್ದ ... ಕಷ್ಟವನ್ನು ನೀಗುವ ಶಕ್ತಿ ... ದಿನೇ ದಿನೇ ಹೆಚ್ಚಾಗುತ್ತಿ ... 1904ನೆ ಇಸವಿಯಲ್ಲೂ ... 1912 ... ಇಂಡಿಯಾ ಸರಕಾರದವರು ಸಹಕಾರ ... ಕಾನೂನು ಮಾಡಿದರು (... ಹಿಂದೂಸ್ಥಾನ ... ಈ ಉಪನ್ಯಾಸಕ್ಕೆ ಅನಾವಶ್ಯಕವಾಗಿ ... ನಮ್ಮ ದೇಶಕ್ಕೆ ಸಮ್ಮಂಧವಾದ ಸಂಗತಿಯನ್ನು ಮಾತ್ರ ಇಲ್ಲಿ ಬರೆಯುತ್ತೇನೆ) ಸಹಕಾರ ಸಂಘಗಳಿಂದ ಕೊಡಗಿನ ರೈತರಿಗೆ ಆದ ಗುಣಾವಗುಣಗಳು ಎಲ್ಲರಿಗೂ ತಿಳಿದಿದೆ. ಮುಂದಕ್ಕೆ ಅವುಗಳನ್ನು ಬೇರೆ ದೇಶದವರಂತೆ ಅಭಿವೃದ್ಧಿಗೊಳಿಸಲು ಜನರೂ, ಸರಕಾರದವರೂ ಯಾವ ರೀತಿಯಲ್ಲಿ ಕೆಲಸ ಮಾಡಿ ... ಬೇಕೆಂದು ಆಲೋಚಿಸುವ.

ಸಹಕಾರ ಸಂಘಗಳ ಮುಖ್ಯ ಕೆಲಸವು (Of Rural Societies) ರೈತನ ಕಷ್ಟವನ್ನು ನೀಗಿಸುವುದಾಗಿದೆ. ಆದ್ದರಿಂದ ರೈತನಿಗೆ ಯಾವ ಬಾಬಿನಲ್ಲಿ ಇಂಥ ಸಂಘಗಳು ಸಹಾಯ ಮಾಡಬೇಕೆಂದೂ, ಯಾವ ವಿಧದಲ್ಲಿ ರೈತನಿಗೆ ತೊಂದರೆ ಇದೆಯೆಂದೂ ನೋಡುವ. ಎಲ್ಲಾರಿಗೂ ತಿಳಿದ ಮಟ್ಟಿಗೆ ಎಲ್ಲಿಯೂ ರೈತನಿಗೆ ಸಾಲದ ಹಾವಳಿಯು ವಿಪರೀತವಾಗಿದೆ. ಇಂಥ ಸಾಲಕ್ಕೆ ಯಾವ ಕಾರಣವೆಂದು ಆಲೋಚಿಸಿ, 'ಮೂಲಕ್ಕೆ ಕೊಡಲಿ ಕುಠಾರನ ಮುಟ್ಟಿಲೇ ಸುರಿಕೊಂಡು', ಎಂಬಂತೆ, ಆ ಕಾರಣಗಳನ್ನು ಅಲ್ಲಿಯೇ ನಾಶಮಾಡಬೇಕು. ಸಾಧಾರಣವಾಗಿ ರೈತರ ಸಾಲಕ್ಕೆ ಈ ಕೆಳಗಿನ ಕಾರಣಗಳನ್ನು ಕೊಡಬಹುದು.

1. Mal-distribution of population ಜನ ಸಂಖ್ಯೆಯು ಹಿಂದೂಸ್ಥಾನದ ಎಲ್ಲಾ ಭಾಗಗಳಂತೆ ಕೊಡಗಿನಲ್ಲಿ ಸ್ಥಳಕ್ಕೆ ಸರಿಯಾಗಿ ಹಂಚಲ್ಪಟ್ಟಿರುವುದಿಲ್ಲ. ಒಂದೊಂದು ಸ್ಥಳದಲ್ಲಿ ಕಾರಣಾಂತರದಿಂದ ಜನರು ಗುಂಪು ಗುಂಪಾಗಿರುವರು. ಇಂಥಾ ಸ್ಥಳದಲ್ಲಿ ಜನರಿಗೆ ಜೀವನೋಪಾಯವು ಬಹಳ ಕಷ್ಟವಾಗಿರುವುದರಿಂದ, ಕಷ್ಟಪಟ್ಟು, ಅದು ಸಾಲದ್ದಕ್ಕೆ ಸಾಲ ಮಾಡುತ್ತಾರೆ. ಈ ತರದ ಸಾಲವನ್ನು ತೀರಿಸುವುದು ವಿಪರೀತ ಕಷ್ಟ. ಇನ್ನೂ ಕೆಲವು ಕಡೆಗಳಲ್ಲಿ ಜಾಗಕ್ಕೆ ಸರಿಯಾಗಿ ಜನರಿಲ್ಲದಿರುವುದರಿಂದ ಅಲ್ಲಿಯ ಜಾಗವು ... ಬೀಳುವುದು. ಕೊಡಗು ದೇಶದ ಜನರೆಲ್ಲರೂ ಸರಿಯಾಗಿ ಹರಡಿದ್ದಲ್ಲಿ, ... ಕೆಲಸವು ಅಲ್ಲಿಯೇ ಇದೆಯೆಂದೂ, ಸಾಲಕ್ಕೆ ಅವಶ್ಯಕತೆಯೇ ಇಲ್ಲವೆಂದೂ ಅಭಿಪ್ರಾಯಪಡುವವರಿದ್ದಾರೆ.

2. Fragmentation of Land ಭೂಮಿಯನ್ನು ಪಾಲು ಮಾಡುವುದು. ಉರಿಯುವ ಬೆಂಕಿಗೆ ಸೀಮೆಯೆಣ್ಣೆ ಹೊಯ್ದಂತೆ ಅನ್ನಕ್ಕಿಲ್ಲದೆ ನರಳುವ ಕಾಲದಲ್ಲಿ ಭೂಮಿಯನ್ನು ಪಾಲು ಮಾಡೋಣವೆಂಬ ಬಗೆ! ಹೀಗೆ ಪಾಲು ಮಾಡುವುದರ ಹಾನಿಯು ಎಲ್ಲರಿಗೂ ತಿಳಿದೇ ಇದೆ. ಪಾಲುಮಾಡಿ ಕಡೆಗೆ ಭೂಮಿಯೆಲ್ಲಾ ತೀವರಿಯಾಗಿ ಹೋಗುತ್ತೆಂದು ಎಷ್ಟೋ ಜನರು ಹೇಳುತ್ತಿರುವರು. ಹೀಗೆ ಪಾಲುಮಾಡುವುದರಿಂದ ಪೈರು ಗದ್ದೆಗಳನ್ನೂ, ತೋಟಗಳನ್ನೂ ಮುತ್ತಲಿನ ಹಿತ್ತಲುಗಳನ್ನೂ ಅಭಿವೃದ್ಧಿಪಡಿಸಲು ಆಗುವುದಿಲ್ಲ. ಒಬ್ಬಂಟಿಗನಿಂದ ಯಾವ ಕೆಲಸವನ್ನೂ ಮಾಡಲಾಗದೆ, ನಮೂನೆ ಕೆಲಸ ನಡೆಸುವ, 100/—ರೂ ಉತ್ಪತ್ತಿಯ ರಸ್ಯದಲ್ಲಿ ಬರೇ 10/ರೂ 5/ರೂ ಉತ್ಪತ್ತಿಯಾಗುವ ಸಂಗತಿಗಳು ಎಷ್ಟೋ ಇವೆ. ಅ ... ಕುಟುಂಬದಲ್ಲಿಯೂ ಒಗ್ಗಟ್ಟಿರುವುದಿಲ್ಲ. ಅಲ್ಲದೆ ಮುಂದುವರಿದ ನವೀನ ತರದ ವ್ಯವಸಾಯ ರೀತಿಯನ್ನು ಕೈಗೊಳ್ಳಲು ಸಣ್ಣ ಸಣ್ಣ ಗದ್ದೆಗಳಿಂದ ಯಾವಾಗಲೂ ಆಗುವುದಿಲ್ಲ. ಮಣ್ಣನ್ನು ಪರೀಕ್ಷಿಸಿ, ಯಾವ ಮಣ್ಣಿಗೆ ಯಾವ ಗೊಬ್ಬರ ಬೇಕು, ಯಾವ ... ಬೇಕು ಎಂಬುದನ್ನು ಕಂಡು ಹಿಡಿಯಲು ದೊಡ್ಡ ದೊಡ್ಡ ಗದ್ದೆಗಳು ಸಹಾಯವು. ಸಣ್ಣ ಗದ್ದೆಯಿಂದಾಗುವುದಿಲ್ಲ. ಅ ... ಮಿಯರ ಮತ್ತು ಕುಟುಂಬದ ಕಲಹದಿಂದ ಆದ ವಿಕಟವಾದ ಹಾನಿಯೂ, ಕೋರ್ಟು ಕಚೇರಿಗಳ ಪ್ರೇರಣೆಯೂ, ಅವುಗಳಿಂದ ಉಂಟಾಗುವ ಖರ್ಚು, ಹಾಳಾಗುವ ಸಮಯ ಮತ್ತು ಕೆಲಸವು ಎಷ್ಟಾಗುತ್ತೆಂದು ವಾಚಕರೇ ಊಹಿಸಬಹುದು. ಇದಲ್ಲದೆ, ಹಣಕ್ಕೆ ತೊಂದರೆಯಾಗಿ ಈ ಹಾಳು ಪದ್ಧತಿಯು ... ಕಾಲಕ್ಕೇ ಪಕ್ಕೆ ತೊಂದರೆ ಮಾಡುವುದಲ್ಲದೆ, ಜನರನ್ನು ಸಾಲದಲ್ಲಿ ಮುಳುಗಿಸುವುದು.

3 ಹಣದ ದುರ್ಭಿಕ್ಷ ಕಾಲಕ್ಕೇ ಪಡುವ ಕಷ್ಟದಿಂದಲೂ, ಹಣದ ಗಲಾಟೆಯಿಂದಲೂ, ಜನರು ಓಡಾಡುತ್ತಿರುವಾಗ ಅವರಿಗೆ ಹಣ ದೊರಕುವುದು ದುರ್ಲಭ. ಎಲ್ಲರಿಗೂ ತಿಳಿದ ಹಾಗೆ ಕೊಡಗು ದೇಶವು ಬಹಳ ಗಂಭೀರವಾಗಿಯಲ್ಲಿರುವುದು. ಅದರೆ ಹಣಗಾರರು ಒಂದೊಂದು ಊರಿಗೆ ಸರಿಯಾಗಿ ಹಣ ಕೊಡುವ ಶಕ್ತಿವಂತರಾಗಿ ಅನೇಕ ಊರುಗಳಲ್ಲಿರುವರು. ಅವರು ಹೆಚ್ಚಿನ ಬಡ್ಡಿಯ ದರದಲ್ಲಿ ಹಣ ಕೊಡುತ್ತಾರೆ. ಶೇಕಡ 18 ರಿಂದ 25 ರ ವರೆಗೂ, ಕೆಲವು ಸಂದರ್ಭದಲ್ಲಿ 40 ರವರೆಗೂ ... ತ್ತಾರೆ ... ಹಣಗಾರರಿಲ್ಲದ್ದರಿಂದ ಇವರಿಗೆ ಪಕ್ಕ ಪೋಟಾ ಪೋಟಿ ಮಾಡತಕ್ಕ ಹಣಗಾರರೂ ಇಲ್ಲ. ಹಣಗಾರರಿಲ್ಲದ ಕಾರಣ ಅವರು ಮುಂದಕ್ಕೆ ಬರ ... ಶಕ್ತಿ ತೋರಿಸುವುದಿಲ್ಲ. ಬೇರೆ ದೇಶಗಳಲ್ಲಿರುವಂತೆ ಶೇಕಡ 5—6 ರ ಬಡ್ಡಿ ದರ ... ಇಲ್ಲ. ಈ ಹೇರಳವಾದ ಬಡ್ಡಿಯ ದರದಿಂದ ಅನೇಕ ಜನರು ... ಜೀವನ ... ಕೊಡುವುದು ... ತೀರಿಸು ... ಗುಂಪು ... ಸಾಲ ... ಅನೇಕರು ಸಾಹುಕಾರರ ... ಇಂದ ತಪ್ಪಿಸಲಾರ ... ಮುಂದೆ ... ಸಾಲ ಮಾ ... ಅವರು ಬೇಕಾದ ... ಅವರೇ ... ವರು.

4 ಸಮಯವನ್ನು ಕಳೆಯುವುದು.—ವ್ಯವಸಾಯಗಾರರಿಗೆ ಒಂದು ವರ್ಷದಲ್ಲಿ ಸಾಧಾರಣ 4 ತಿಂಗಳು ಮಾತ್ರ ಸರಿಯಾದ ಕೆಲಸವಲ್ಲದೆ, ಬೇರೆ 8 ತಿಂಗಳನ್ನ ಅನಾವಶ್ಯವಾಗಿ ಕಳೆಯ ಬೇಕಾಗುತ್ತೆ. ಈ 8 ತಿಂಗಳಲ್ಲಿ ಜನರಿಗೆ ಸುಮ್ಮನಿರುವುದು ಕಷ್ಟ. ಆದ್ದರಿಂದ ಅನಾವಶ್ಯವಾಗಿಯೂ, ಹಾನಿಕರವಾಗಿಯೂ ಇರುವ ನಾನಾ ವ್ಯಸನದಲ್ಲಿ ಮುಳುಗುವರು. ಅನೇಕರು ಸೋಮಾರಿತನದಲ್ಲಿ ಕಾಲ ಕಳೆಯುವರು. ಇನ್ನು ಕೆಲವರು ಸುಮ್ಮನಿರಲಿಕ್ಕಾಗದೆ ಊರಲ್ಲಿರುವ 'ಮಿಳ್ಳನ್ನ' ಸ್ನೇಹ ಮಾಡುವರು. ಸರ್ವಜ್ಞನು ಹೇಳುವ ಹಾಗೆ, 'ಬೆಟ್ಟರು ಜೊತೆ ಸೇರಿ, ಕಳ್ಳನಲ್ಲದ ಕೇಳ! ಕಳ್ಳಂಗಕೆ ಅಲ್ಲಕು! ಬೊಳ್ಳಿಕಳ್ಳದೆನ್ನದ!|' ಎಂಬ ರೋಗದಿಂದ ಕಷ್ಟ ನನ ಯವನ್ನೆಲ್ಲಾ 'ಚಾಪೆ ಯಲ್ಲಿಯೂ ಬಿಲ್ಲಿನ ಮನೆಯಲ್ಲಿಯೂ ಕಳೆಯುವರು. ಇದಕ್ಕೆಲ್ಲಾ ಕಾರಣವೇನೆಂದರೆ, ಅವರಿಗೆ ಕೆಲಸವಿಲ್ಲದಿರುವಿಕೆ. ಕೆಲಸವಿದ್ದರೆ ಹೀಗೆ ದಾರಿ ತಪ್ಪಿ ಹೋಗಿ ತನ್ನ ಶರೀರವನ್ನೂ, ಬುದ್ಧಿಯನ್ನೂ ಮಾನ ಮರ್ಯಾದೆಯನ್ನೂ ನಾಶಮಾಡಲು ಅವಕಾಶವಿಲ್ಲ. ಅಲ್ಲದೆ, ಹಣವಿಲ್ಲದ ಸಮಯದಲ್ಲಿ ಸಾಲ ಮಾಡಲು ಅವಕಾಶವಿಲ್ಲ. ಹೀಗೆ ಕುಡಿದು, ಸಾಲಗಾರರಾಗಿ ತಮ್ಮ ಆಸ್ತಿಯನ್ನು ಕಳೆಕೊಂಡವರ ಉದಾಹರಣೆ ಎಲ್ಲೆಲ್ಲಿಯೂ ಇವೆ. ಕುಡಿಯುವುದರ ಹಾನಿಯು ಎಲ್ಲರಿಗೂ ತಿಳಿದಿರುವುದರಿಂದ ಅದನ್ನು ಇಲ್ಲಿ ಎತ್ತಿ ಬರೆಯುವುದಿಲ್ಲ.

5 ದನ ಕರಗಳ ನಷ್ಟ—ಕೊಡಗಿನಲ್ಲಿ ದನ ಸಾಕುವ ವಿಚಾರವು ಇನ್ನೂ ಅಭಿವೃದ್ಧಿಗೆ ಬಂದಿರುವುದಿಲ್ಲ. ತಮಗೆ ಬೇಕಾದಾಗ ಕೆಲಸವನ್ನು ಮಾಡಿಸಿ, ನೋಡುವ ದನಕರಗಳನ್ನು ಅವುಗಳ ಪಾಡಿಗೆ ಬಿಡುವರು. ನಾನಾ ತರದಲ್ಲಿ ಅವುಗಳ ಪೋಷಣೆ ಹೇಗೆ ಜನರಿಗೆ ತಿಳಿಯದು. ಕೊಡಗಿನ ಹೊರಗೆ ಅನೇಕ ಕಡೆಗಳಲ್ಲಿ ಸರಕಾರದವರೂ, ಸಹಕಾರ ಸಂಘಗಳೂ ಈ ವಿಷಯ ತೊಂದರೆ ತೆಗೆದುಕೊಂಡು ಕೆಲಸ ಮಾಡುತ್ತಿರುವರು. 1926ನೇ ಇಸವಿಯ ಇಂಡಿಯಾ ಸರಕಾರದವರು ಹಿಂದೂಸ್ಥಾನದ ವ್ಯವಸಾಯದ ವಿಷಯ ಇಂಡಿಯಾ ಸೆಕ್ರೆಟರಿಯವರಿಗೆ ಬರೆದ ರಿಪೋರ್ಟು ನೋಡಿದಲ್ಲಿ, ಅನೇಕ ಪ್ರಾಂತೀಯ ಸರಕಾರದವರು ದನಕರಗಳ ಪೋಷಣೆಗಾಗಿ ಬೇರೆ ದೇಶದಿಂದ ಬಂದ ... ತರದ ಹುಲ್ಲನ್ನು ತಂದು ಇಲ್ಲಿ ಬೆಳೆಸುತ್ತಾರೆಂದು ತಿಳಿಯುತ್ತದೆ. ನಮ್ಮ ಸರಕಾರದವರೂ ಈ ವಿಷಯ ರೈತರ ಹಿತಕ್ಕಾಗಿ ತೊಂದರೆ ತೆಗೆಯುವರಾಗಿ ನಂಬುತ್ತೇನೆ. ಜನರಿಗೆ 'ಸ್ಟೈಫೀಡರ' ಎಂಬುದು ಸರಿಯಾದುದಾಗಿ ತಿಳಿಯದು. ಅನೇಕ ಜನರು ದನಕರಗಳ ನಷ್ಟದಿಂದ ಸಾಲಮುಕ್ತರಾಗುವರು. ... ಮೇಯುವ ಪ್ಯಾಸ್ತೂರಗಳಲ್ಲಿ ಅಂತಾ ... ದು. ದನಗಳಿಗೆ ದೇವರು ಕೊಡುವ ಹುಲ್ಲಿನಿಂದ ಜೀವನವಲ್ಲದೆ, ಕೈ ತಿಂಡಿಯ ಸಹಾಯವೇ ಇಲ್ಲ. ನಮಗೆ ಅನ್ನ ಕೊಡುವ ದನಗಳ ಬದಲು, ನಮ್ಮ ಶರೀರವನ್ನು ಹಾಳುಮಾಡುವ ಪಂದಿಗಳ ವಿಷಯ ಅನೇಕರು ಬಹಳ ಎಚ್ಚರದಲ್ಲಿರುವರು. ದನಗಳಿಗೆ ಕಾಯಿಲೆ ಬಂದಲ್ಲಿ, ಕೈಸ್ವಾಭಾವಿಕವಾದ ಬಂದೇ ತರದ ಔಷಧಿಯನ್ನು ಎಲ್ಲಾ ಕಾಯಿಲೆಗಳಿಗೂ ಉಪಯೋಗಿಸುವರು. ಸಹಕಾರ ಸಂಘಗಳ ವಿಕಾಸವನ್ನು ನೋಡಿದಲ್ಲಿ ಎತ್ತು ಕೊಂಡುಕೊಳ್ಳಲು ಸಾಲ ಮಾಡುವವರ ಸಂಖ್ಯೆಯು ಹೆಚ್ಚಾಗಿರುವುದು.

6 ಜನರ ಅನಾರೋಗ್ಯ—ಕೊಡಗಿನಲ್ಲಿ ಹಲ ಜೆನನ್ನಾಗಿ ಇದ್ದವರೂ ಹ ... ರೋಗದಿಂದ ಜನರು ರೋಗಪೀಡಿತರಾಗಿ ಸರಿಯಾಗಿ ಕೆಲಸ ಮಾಡಲು ಅಶಕ್ತರಾಗಿರುವರು. ಆದ್ದರಿಂದ ಅವರ ಕೆಲಸವನ್ನು ಅರ್ಧದಲ್ಲಿಯೇ ನಿಲ್ಲಿಸುವುದಲ್ಲದೆ ಪೂರ್ಣವಾಗುವ ಕೆಲಸವನ್ನು ಮಾಡುವುದೇ ಇಲ್ಲ. ಜನರ ಅನಾರೋಗ್ಯ ತಿಂಡಿಯಿಂದಲೂ ಸುಲಭ ದಾರಿ ಇದೆ. ಕೊಡಗಿನಲ್ಲಿ ಶೇಕಡ 95 ರಷ್ಟು ಜನರು ಹಾಲು ಬೆಣ್ಣೆಯನ್ನು ಕಾಣದವರಾಗಿರುವರು. ಹಾಲು ಬೆಣ್ಣೆ ತಿನ್ನಲು ಅವಕಾಶವಿರುವವರೂ ನಹ, ತಿನ್ನದೆ, ಒಟ್ಟುಗೂಡಿಸಿ ಮಾರುವರು, ಹಾದಿಗೆ ಹೊಯ್ಯುವರು. ಹೀಗೆ ಅನಾರೋಗ್ಯದಿಂದ ಜನರಿಗೆ ಶಕ್ತಿ, ಕಮ್ಮಿಯಾಗಿ ಕೆಲಸ ಸರಿಯಾಗಿ ನಡೆಯದೆ, ಉತ್ಪತ್ತಿ ಕಮ್ಮಿಯಾಗುವುದಲ್ಲದೆ, ಔಷಧಿಗೆಂದೂ, ಡಾಕ್ಟರುಗಳಿಗೆಂದೂ, ಅನಾವಶ್ಯ ವೆಚ್ಚ ಮಾಡುವರು. ಆದ್ದರಿಂದ ಆದಾಯ ಕಮ್ಮಿ, ಖರ್ಚು ಹೆಚ್ಚು. ಆದ್ದರಿಂದ ರೈತರು ಸಾಲದಲ್ಲಿ ಬೀಳುವರು.

7 ಆಭರಣ ಪ್ರೇಮ—ಅನೇಕ ಜನರು ತಮ್ಮ ಶಕ್ತಿಮೀರಿ ಸಾಲ ಮಾಡಿ ತಮಗೂ, ಸ್ತ್ರೀಯರಿಗೂ ಆಭರಣ ಮಾಡುವುದರಿಂದ ಸಾಲಗಾರರಾಗಿರುತ್ತಾರೆ. ಒಟ್ಟೆ ಮಾಡಲಿಕ್ಕೂ ಸಾಲ ಮಾಡುತ್ತಾರೆಂಬುವುದಕ್ಕೆ ಒಟ್ಟೆ ಸಾಹುಕಾರರಿಗೆ ಅನೇಕರು ಸಾಲಗಾರರಾಗಿರುವುದೇ ಸಾಕ್ಷಿಯಾಗಿದೆ.

8 ಈ ಕೋರ್ಟುಗಳ ಪ್ರೇಮ—ಕೋರ್ಟಿಗೆ ಹೋಗಿ ಜನರು ಸಾಲಗಾರರಾಗುವ ಸಂಗತಿ ಎಲ್ಲರಿಗೂ ತಿಳಿದೇ ಇದೆ. ಚಿಲ್ಲರೆ ಸಂಗತಿಗಾಗಿ, ಶಕ್ತಿಮೀರಿ ಕೋರ್ಟುಗಳಿಗೆ ಹೋಗುವರು— 'ನಾಳೆ ಮೂರು ಮಾರ ಹೋಚೆಂಗಿಯೂ ಪವ ... ಇದೆ, ಒರ್ ಕೈ ನೋಟುವಿ'—ಎಂಬ ಹಟದಿಂದ ಅನೇಕರು ಸಾಲಗಾರರಾಗಿರುತ್ತಾರೆ.

9 ಆದಾಯ ವೆಚ್ಚ ಸಂಬಂಧ ಸರಿಯಾಗಿರುವಿಕೆ—ಜನರು ಆದಾಯಕ್ಕೆ ಸರಿಯಾಗಿ ಖರ್ಚು ಮಾಡುವ ವಿಧಾನವನ್ನು ತಿಳಿದುಕೊಳ್ಳದೆ, ಆದಾಯಕ್ಕಿಂತ ಹೆಚ್ಚಾಗಿಯೇ ಖರ್ಚು ಮಾಡುವುದರಿಂದ ಜನರು ಸಾಲಗಾರರಾಗುತ್ತಾರೆ. ಕೊಡಗಿನಲ್ಲಿ ರೈತರ ಜೀವನೋಪಾಯವು ಬಹಳ ಬಡತನದಲ್ಲಿ ಕಳೆಯುತ್ತೆ. ಆದರೆ ನಾವು, ನಾವು ಮಾಡಲಾದ ಕಾರ್ಯಗಳಲ್ಲಿ ಪದ್ಧತಿಗೆ ಸರಿಯಾಗಿ ನಡೆಯಬೇಕೆಂಬ ಯೋಚನೆಯಿಂದ ಸಾಲಮಾಡಿ, ಪ್ರಯೋಜನಕ್ಕಿಲ್ಲದ ಖರ್ಚನ್ನು ಮಾಡುವರು. ಪದ್ಧತಿಯನ್ನು ತಿದ್ದುಪಡಿ ಮಾಡುವ ಕಾಲ ಒಂದಿದೆ (The old order changeth yielding place to new. Lest one good custom should corrupt the world) ಕಾಲಕ್ಕೆ ಸರಿಯಾಗಿ ನಡೆಯಬೇಕು (We must move with the times) ಮದುವೆಗಾಗಿ ಬಹಳ ಜನರು ಸಾಲ ಮಾಡುತ್ತಾರೆ. ಹಣ ಇರಲಿ, ಇಲ್ಲದಿರಲಿ ಹುಡುಗಿಗೆ ಪದ್ಧತಿ ಪ್ರಕಾರ 'ಪೊಟ್ಟ, ಕಡಕ, ಚಿಚ್ಚು ಮುಟ್ಟ್' ಗಳನ್ನು ಕೊಡಬೇಕು ... ಬೀಕು! ... ರಮಣೀ ಮಣಿಗಳೇ, ಸಿಟ್ಟೇಕೆ ಬೇಡಿ. ನಾನು ಸಂಗತಿ ಹೀಗೆಂದು ಬರೆಯುವೆನು. ಒಡ ಜನರು ಹೀಗೆ ಪದ್ಧತಿಯನ್ನನುಸರಿಸಲು ತಮ್ಮ ಶಕ್ತಿ ಮೀರಿ ಖರ್ಚು ಮಾಡುವುದರಿಂದ ಸಾಲಗಾರರಾಗುತ್ತಾರೆ.

10 ವ್ಯಾಪಾರನ್ನರ ಕೊಳ್ಳೆ—ಕೊಡಗಿನಲ್ಲಿ ಬೆಳೆಯುವ ದವಸ ಧಾನ್ಯಗಳನ್ನು ಪರದೇಶದಲ್ಲಿ ಮಾರಲು ಯಾವ ಅವಕಾಶವೂ ಇಲ್ಲದ್ದರಿಂದ ಪರದೇಶ ವ್ಯಾಪಾರಿಗಳು ನಮ್ಮ ದೇಶದಲ್ಲಿ ಕೊಳ್ಳೆ ಹೊಡೆಯುತ್ತಿರುವರು. ನಮ್ಮ ಮುಖ್ಯ ಉತ್ಪತ್ತಿಯಾದ ಭತ್ತವನ್ನು ಮುಲಾಜಿಗೆ ಕಡಿಮೆ ಸಾಹುಕಾರರೂ, ಶಾಪಿನವರು ಮಂಗಳೂರು ಕಡೆಯೂ, ಕಿತ್ತಳೆಯನ್ನು ಮೈಸೂರು ಕಡೆಯೂ ಸಾಗಿಸುವರು. ಇವುಗಳಲ್ಲಿ ಭತ್ತದ ಸಂಗತಿ ವಿಪರೀತ ವ್ಯಸನಕರವಾದ ಸಂಗತಿ. ಭತ್ತ ಸಾಹುಕಾರರ ವ್ಯಾಪಾರವು ಗ್ರಾಮಗಳಲ್ಲಿ ಹೆಚ್ಚು. ಪಟ್ಟಣದಲ್ಲಿ ಸಿಕ್ಕುವ ಬೆಲೆಗಿಂತ ಅರ್ಧ ಕಮ್ಮಿ ಹೇಳುವರು. ಅವರಲ್ಲಿ ಅವರ ... ಇನ್ನು ... ಹುಲ್ಲಿನ ... ಅವರ 'ಬೆಟ್ಟ' ಮಾ ... ಕಳಿಸುವರು. ಸಾಹುಕಾರನಿಗೆ ಆಳು ಕಳುಹಿಸು ... ಅವರ ಪಡಿಯಲ್ಲಿ ಅವರೇ ಅಳೆಯು ... ರೈತನಿಗೆ ಹಣದ ಗಲಾಟೆ ... ಕಾರನ ಬಳಿಗೆ ಎನ್ನುವರು. ಅಳತೆಯಲ್ಲಿ ಕೊಳ್ಳೆ ಹೊಡೆಯುವುದಲ್ಲದೆ ಲೆಕ್ಕದಲ್ಲಿ ಮರಳು ಮಾಡುವನು. ಎಷ್ಟೋ ಸಾಕೇ? ಭತ್ತ ಮಾರುವ ಸಂಕಟ, ಹಣಕ್ಕೆ ದ ಸಾಹುಕಾರನ ಹತ್ತಿರ 10 ಕಾರಿ ಭತ್ತ ಪಡೆದು ... ರೈತನ ಕೆಲಸ ಹಾಳಾಗಿ ... ಆದ್ದರಿಂದ ಉತ್ಪತ್ತಿ ಕಮ್ಮಿಯಾಯಿತು. ಖರ್ಚು ಬಂದು 'ಮುಡಿ' ... ಮಟ್ಟಿ ... 'ಗುಂಡಿ' ಸಾಹುಕಾರನ ಹತ್ತಿರ ಹೋದನು ... ಬಳಿಗೆ ಸಾಲ ... ಸಾಹುಕಾರನು ಒಬ್ಬ 2 ರೂ ಇನ್ನೊಬ್ಬ 5 ರೂ. ಮತ್ತೊಬ್ಬ 10 ರೂ ಹೀಗೆ ... ಕೊಟ್ಟು ಕೊನೆಗೆ ಸಾಲ ಅವನ ಹತ್ತಿರ ನಡೆ ... ಅಂತ ... ಹಣವನ್ನು ತೀರಿಸುವನು. ಅಷ್ಟರೊಳಗೆ ರೈತನು ಸಾಲ ಮಾಡಿದ ಹಣ ... ಬಡ್ಡಿ ಸೇರಿ 125 ರೂ. ಆಯಿತು. ಈ ಹೆಚ್ಚಾದ ಬಡ್ಡಿಯನ್ನು ತೀರಿಸದೆ, ತನ್ನ ಕೆಲಸ ಹಾಳಾಗಿ ... ಶಕ್ತಿ ಕಮ್ಮಿಯಾಯಿತು. ಹೋಗುವ ಬರುವ ಖರ್ಚು ಅಲ್ಲದೆ ಮೇಲೆ ಹೇಳಿದಂತೆ ಅಳತೆಯಲ್ಲಿಯೂ, ಲೆಕ್ಕದಲ್ಲಿಯೂ ... ಎಂದು ವಿಧಾನದ ಕೊಳ್ಳೆ. ಹೀಗೆಲ್ಲಾ ... ರೈತನು ಸಾಹುಕಾರನ ಜೊತೆ ಬಳಿಗೆ ಬದ್ಧ ಮನುಷ್ಯ ನೋಡಬಾರದವನು.

ಇನ್ನೇ ಅಲ್ಲ ಬೇರೆ ಕಾರಣಗಳೂ ಇರಬಹುದು. ಆದರೆ ಮುಖ್ಯವಾಗಿ ಇವು. ಬರುವ ವಾರದಲ್ಲಿ ಈ ರೀತಿಯಲ್ಲಿರುವ ರೈತನ ಕಷ್ಟವನ್ನು ಹ್ಯಾಗೆ ಹೋಗಲಾಡಿಸಬಹುದೆಂಬದನ್ನು ಬರೆಯುತ್ತೇನೆ.

ಫಾದರ್ ಎಲ್ವಿನ್.

ಬಾರ್ಡೋಲಿಗೆ ಯಾತ್ರೆಗೆ ಮೂವರು ಅತಿಥಿಗಳು ಬಂದಿದ್ದರು. ಒಬ್ಬೊಬ್ಬರು ಒಂದೊಂದು ವಿಧದ ಆಲೋಚನೆಯುಳ್ಳವರಾಗಿದ್ದಾರೆ, ಆದರೆ ಎಲ್ಲರೂ ಹಿಂದೂಸ್ಥಾನವನ್ನು ಸ್ವಾತಂತ್ರ್ಯ ಪ್ರಾಂತ್ಯವಾಗಿ ನೋಡಲು ಕುತೂಹಲವುಳ್ಳವರು. ಕ್ರಿಸ್ತ ಸೇವಾ ಸಂಘದ ಫಾದರ್ ಎಲ್ವಿನ್‌ರು "ಯಂಗ್ ಇಂಡಿಯ" ವಾಚಕರಿಗೆ ತಿಳಿದವರೇ ಆಗಿದ್ದಾರೆ. ಅವರು ಹಿಂದೂಸ್ಥಾನದ ಸೇವೆಗೆ ಬಂದಿದ್ದಾರೆ. ಹಿಂದೂಗಳನ್ನೂ, ಮುಸಲ್ಮಾನರನ್ನೂ ಕ್ರಿಶ್ಚಿಯನ್ ಜಾತಿಗೆ ತಿರುಗಿಸುವ ಸೇವೆಯಲ್ಲ. ಯೇಸುವಿನ ನಿಜವಾದ ಭಕ್ತನ ಜೀವನವನ್ನು ನಡಿಸುವುದರಿಂದಲೂ, ಸಾಧ್ಯವಿದ್ದರೆ ತನ್ನ ದೇಶೀಯರ ನೈತಿಕ ಭಾವನೆಯನ್ನು ಎಚ್ಚರಗೊಳಿಸಿ ಸಾಮ್ರಾಜ್ಯದ ದಬ್ಬಾಳಿಕೆಯಲ್ಲಿ ಮಾಡುತ್ತಿರುವ ಪಾಪಗಳಿಗೆ ಮನ್ನಣೆ ಕೇಳುವಂತೆ ಮಾಡುವದರಿಂದಲೂ ಹಿಂದೂಸ್ಥಾನದ ಸೇವೆ ಮಾಡಲು ಬಂದಿದ್ದಾರೆ. ಈ ಮಾಡಬಾರದ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಂಡು ಇನ್ನು ಮುಂದೆ ಒಳ್ಳೇದು ಮಾಡಲು ಸಹಾಯಕರಾಗಬೇಕೆನ್ನುವ ಮಿಶನರಿಗಳಲ್ಲಿ ಒಬ್ಬರಾಗಿದ್ದಾರೆ. ತನ್ನ ದಾರಿಯು ಸುಲಭವಾದ್ದಲ್ಲವೆಂತ ಅವರಿಗೆ ಗೊತ್ತಾಗಿದೆ. ಆದರೆ ತನ್ನ ಕಷ್ಟಗಳನ್ನು ಕುರಿತು ಮಾತಾಡಲು ಇಚ್ಛಿಸುವುದಿಲ್ಲ. ಧರ್ಮಕ್ಕಾಗಿ ನಿರಂತರವೂ ಆತುರ ಪಡುವವರಲ್ಲೊಬ್ಬರಾದ್ದರಿಂದ ಗಾಂಧಿಯವರ ಸಂಗಡ ಒಂದು ವಾರವಿದ್ದು ಅವರನ್ನು ಚೆನ್ನಾಗಿ ತಿಳಿದುಕೊಳ್ಳಲು ಬಂದರು. 'ನಿಜವಾದ ಎಹಿಲಸದ ಜೀವನವನ್ನು ನಡಿಸಬೇಕೆಂತ ಇದ್ದೇನೆ. ಅದಕ್ಕೆ ಈ ಆಶ್ರಮದಲ್ಲಿ ಅವಕಾಶವಿರುವುದರಿಂದ ಇಲ್ಲಿ ಸ್ವಲ್ಪ ಸಮಯ ಇರುತ್ತೇನೆಂತ' ಗಾಂಧೀಜೀಯವರ ಸಂಗಡ ಹೇಳಿದರು. ನಮ್ಮ ಸಂಗಡ ಬಾರ್ಡೋಲಿಯಲ್ಲಿದ್ದಾಗ ಕಲವು ಗ್ರಾಮಗಳನ್ನು ಸಂದರ್ಶಿಸಿದರಲ್ಲದೆ ತಾನೇ ಕೆಲಸ ಮಾಡುವುದನ್ನು ಕಲಿಯಲು ಅಪೇಕ್ಷಿಸಿ ಮಿರಾಬೆನ್‌ರಿಂದ ಹತ್ತಿ ಹಿಂಜುವ, ಅಡಿಗೆ ಮಾಡುವ ಮತ್ತು ಒಟ್ಟ ಒಗೆಯುವ ಕೆಲಸಗಳನ್ನು ಕಲಿತುಕೊಂಡರು. ಬಾರ್ಡೋಲಿ ಗ್ರಾಮಸ್ಥರ ಸಂಗಡ ಅವರು ಆಡಿದ ಮಾತುಗಳಲ್ಲಿ ಅವರು ಕಳೆದ ಹೋರಾಟದಲ್ಲಿ ವಹಿಸಿದ ಮಹತ್ವದ ಭಾಗವನ್ನು ಶ್ಲಾಘಿಸಿದ್ದಲ್ಲದೆ 'ನಮ್ಮನ್ನು ಕ್ಷಮಿಸಿ ನಮ್ಮನ್ನು ಪ್ರೀತಿಸುತ್ತಲೇ ಇರಬೇಕಂತ' ಪ್ರಾರ್ಥಿಸಿಕೊಂಡು 'ನಿಮ್ಮ ತ್ಯಾಗದಿಂದ ಭರತ ಭೂಮಿ ಮಾತ್ರವಲ್ಲ ಒಟ್ಟು ಪ್ರಪಂಚವೇ ಪರಿಶುದ್ಧವಾಗಬೇಕಂತ' ಹೇಳುತ್ತಿದ್ದರು. ಅವರು ಇಂಗ್ಲಿಷ್ ಮನುಷ್ಯನಾದರೂ ಕಾಂಗ್ರೆಸ್ ತತ್ವವನ್ನು ಯಾಕೆ ಅಂಗೀಕರಿಸುತ್ತಾರೆಂಬುದೇ ಮುಖ್ಯ ಅಂಶವಾಗಿದೆ. ಅವರು ಹೇಳುವುದರಲ್ಲಿ ಅವರ ದೇಶೀಯರಿಗೆ ಆಲೋಚನೆಗೆ ತುಂಬಾ ವಿಷಯಗಳಿವೆ. ಯಾಕೆಂದರೆ ಫಾದರ್ ಎಲ್ವಿನರಂಥ ದೇವರ ಮನುಷ್ಯರ ಸಹಾಯದಿಂದ ನಾವು ಇನ್ನೂ ನಮ್ರರಾಗಬೇಕು. ಅವರ ಮಾತಿನಲ್ಲೇ ಅವರು ಕೊಡುವ ನಾಲ್ಕು ಕಾರಣಗಳು ಈ ಕೆಳಗೆ ಕೊಡಲ್ಪಟ್ಟಿವೆ.

(1) ಹಿಂದೂಸ್ಥಾನದ ಪೂರ್ಣ ಸ್ವಾತಂತ್ರ್ಯ ಧ್ಯೇಯವನ್ನು ಯಾಕೆ ಒಪ್ಪುತ್ತೇನೆಂದರೆ—ನಾನು ಇಂಗ್ಲಿಷ್ ಮ್ಯಾನ್. ಸ್ವಾತಂತ್ರ್ಯವನ್ನು ಪ್ರೀತಿಸುವವನೇ ಇಂಗ್ಲಿಷ್ ಮ್ಯಾನ್. ನನ್ನ ದೇಶೀಯರು ನನ್ನನ್ನು 'ದೇಶ ದ್ರೋಹಿ' ಯೆನ್ನುತ್ತಾರೆ. ಅವರೇ ದೇಶದ್ರೋಹಿಗಳು. ನಾನು ಇಂಗ್ಲಿಷ್ ಸ್ವಾತಂತ್ರ್ಯ ಧ್ಯೇಯದಲ್ಲಿ ಅತ್ಯುತ್ತಮವಾದ ಗುಣಗಳನ್ನು ಒಪ್ಪುವವನಾಗಿದ್ದೇನೆ. ವಾಲ್ ರಿಚಾರ್ಡ್ ಎಂಬವರು 'ನಿಮ್ಮ ದೇಶವು ದಬ್ಬಾಳಿಕೆಗೆ ಒಳಗಾಗಿದ್ದಿದ್ದರೆ ವಿರೋಧಿಸಿರಿ, ನಿಮ್ಮ ದೇಶವು ದಬ್ಬಾಳಿಕೆಯನ್ನು ನಡಿಸುವದಾದರೂ ಇನ್ನಷ್ಟು ವಿರೋಧಿಸಿರಿ' ಎಂತ ಹೇಳಿದ್ದಾರೆ. ನಿಮಗೆ ಎಷ್ಟರ ಮಟ್ಟಿಗೆ ಸ್ವಾತಂತ್ರ್ಯ ಬೇಕೆನ್ನುತ್ತೀರೋ ಅಷ್ಟೇ ಬೇರೆಯವರಿಗೂ ಕೊಡದಿದ್ದರೆ ಸ್ವಾತಂತ್ರ್ಯದ ಅರ್ಥವೇನು?

(2) ನಾನು ಗಾಂಧೀಜೀಯವರ ಹಿಂಬಾಲಕನೇ ಆಗಿದ್ದೇನೆ, ಯಾಕೆಂದರೆ ಅವರೇ ಇಂಗ್ಲೆಂಡಿನ ಜೀವಿತ ಸ್ನೇಹಿತರಲ್ಲಿ ಅತ್ಯುತ್ತಮ ಸ್ನೇಹಿತರಾಗಿದ್ದಾರೆ. ಅವರ ಕೃಪೆ ಮತ್ತು ನಿಶಸ್ತ್ರದಿಂದಲೇ ಇಂಗ್ಲೆಂಡಿನ ಸಾಮ್ರಾಜ್ಯವನ್ನು ಹಾಳು ಮಾಡುತ್ತಾರೆಂತ ನನಗೆ ಗೊತ್ತಿದೆ. ಆದರೆ ಇಂಗ್ಲೆಂಡಿನ ಆತ್ಮವನ್ನು ಉದ್ಧಾರ ಮಾಡುವುದರಲ್ಲಿದ್ದಾರೆಂತಲೂ ನನಗೆ ಗೊತ್ತಿದೆ. ವ್ಯಕ್ತಿಗಳಿಗೆ ಆತ್ಮವಿರುವಂತೆಯೇ ಜನಾಂಗಗಳಿಗೂ ಆತ್ಮವಿದೆಯೆಂತಲೂ, ನಾನೂ ನೀವೂ ಪಾಪ ಮಾಡಬಹುದಾದಂತೆಯೇ ಜನಾಂಗಗಳೂ ಪಾಪ ಮಾಡಬಹುದೆಂತಲೂ ನಾನು ನಂಬುತ್ತೇನೆ. ನಾನಾಗಲೀ ನೀವಾಗಲೀ ನಮ್ಮ ಸಹೋದರನೊಬ್ಬನನ್ನು ಗುಲಾಮಗಿರಿಯಲ್ಲಿ ಇಡುವುದಾಗಲೀ ದಬ್ಬಾಳಿಕೆಗೆ ಗುರಿಪಡಿಸುವುದಾಗಲೀ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವುದಾಗಲೀ ತಪ್ಪಾದರೆ ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಗುಲಾಮಗಿರಿಯಲ್ಲಿ ಇಡುವುದೂ, ದಬ್ಬಾಳಿಕೆಗೆ ಗುರಿಪಡಿಸುವುದೂ, ಸ್ವಾರ್ಥಕ್ಕೆ ಉಪಯೋಗಿಸುವದೂ ತಪ್ಪೆ. ಹಿಂದೂಸ್ಥಾನವನ್ನು ದಬ್ಬಾಳಿಕೆಗೆ ಗುರಿಪಡಿಸಿ ಮತ್ತು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವ ದೊಡ್ಡ ಪಾಪವನ್ನು ಇಂಗ್ಲೆಂಡ್ ಮಾಡುತ್ತಿದೆ. ಇಂಗ್ಲೆಂಡ್ ಆ ಪಾಪದಿಂದ ವಿಮುಕ್ತವಾಗುವುದನ್ನು ನೋಡಲು ನಾನು ಆತುರನಾಗಿದ್ದೇನೆ. ಒಂದು ಜನಾಂಗವು ಪಡಬಹುದಾದ ಅತ್ಯಂತ ದೊಡ್ಡ ಕೇಡಿನಿಂದ ಇಂಗ್ಲೆಂಡನ್ನು ತಪ್ಪಿಸಲು ಪ್ರಯತ್ನಿಸುವವನಿಗೆ ನಾನು ಉತ್ಸಾಹ ಕೊಡದಿರುವುದು ಹೇಗೆ? ರಾಷ್ಟ್ರೀಯ ಆತ್ಮ ಪರಿಶುದ್ಧತೆಯ ನಿಮ್ಮ ಕೆಲಸವು ಇಂಡಿಯಕ್ಕೆ ಮಾತ್ರ ವ್ಯಾಪಿಸುವುದಲ್ಲ. ನಿಮ್ಮ ಕೆಲಸವು ಇಂಗ್ಲೆಂಡನ್ನು ಸಹ ಉದ್ಧಾರ ಮಾಡುತ್ತದೆ.

(3) ನಾನು ಕಾಂಗ್ರೆಸ್ಸಿಗೆ ಯಾಕೆ ಉತ್ಸಾಹ ಕೊಡುತ್ತೇನೆಂದರೆ—ಕಾಂಗ್ರೆಸಿನ ಆಯುಧವಾದ ಸತ್ಯಾಗ್ರಹವೇ ಈಗಿನ ಪ್ರಪಂಚದಲ್ಲಿ ಯುದ್ಧದ ಬದಲಿಗೆ ಉಪಯೋಗಿಸಬಹುದಾದ ಆಯುಧವೆಂತ ನನಗೆ ತಿಳಿದಿದೆ. ಸತ್ಯಾಗ್ರಹವನ್ನು ಸೋಲಿಸಲು ಸಾಧ್ಯವೇ ಇಲ್ಲವೆಂತ ನಾನು ನಂಬುತ್ತೇನೆ. ಅತ್ಯಂತ ದೊಡ್ಡ ಸೈನ್ಯ, ಅತಿ ಬಲವಾದ ಯುದ್ಧದ ಹಡಗಕ್ಕಿಂತಲೂ ಸತ್ಯಾಗ್ರಹದ ಭಾವವು ತುಂಬಿದ ಮನುಷ್ಯನು ಹೆಚ್ಚಿನ ಬಲಾಢ್ಯನಾಗಿದ್ದಾನೆ. ಪ್ರೀತಿಗಿಂತ ಹೆಚ್ಚು ಬಲವಾದದ್ದು ಇನ್ನೊಂದು ಇಲ್ಲ. ತಾಯಿಗೆ ಮಗನಲ್ಲಿರುವ, ಹೆಂಡತಿಗೆ ಗಂಡನಲ್ಲಿರುವ ಪ್ರೀತಿಗಿಂತ ಬಲವಾದದ್ದು ಬೇರೆಯೊಂದು ಏನಿದೆ? ಈ ಆಧ್ಯಾತ್ಮ ಶಕ್ತಿಯನ್ನು ಗಾಂಧಿಯವರು ಕುಟುಂಬದಲ್ಲಿ ಅಡಕವಾಗಿದ್ದದನ್ನು ಪ್ರಪಂಚದ ರಾಜಕೀಯ ಕ್ಷೇತ್ರದಲ್ಲಿ ಉಪಯೋಗಿಸಿದ್ದಾರೆ. ಅಂತರ ರಾಷ್ಟ್ರೀಯ ಸಂಬಂಧದಲ್ಲಿ ಸತ್ಯಾಗ್ರಹವು ಗಾಬರಿಗೊಳಿಸಿವೆ ಯಾಕೆಂದರೆ—ಅದನ್ನು ಈ ಕ್ಷೇತ್ರದಲ್ಲಿ ಯಾರೂ ನಿರೀಕ್ಷಿಸಿರಲಿಲ್ಲ. ಇಂಗ್ಲಿಷ್ ಜನರಿಗೆ ಶತ್ರುವಿನ ದ್ವೇಷ ಗೊತ್ತಿದೆ. ಅದಕ್ಕೆ ಹೇಗೆ ಎದುರಾಗಬೇಕೆಂತಲೂ ಗೊತ್ತಿದೆ. ಆದರೆ ಶತ್ರುವಿನ ಪ್ರೀತಿಗೆ ಎದುರಾಗುವಾಗ ಹೇಗೆ ವರ್ತಿಸಬೇಕೆಂತ ಗೊತ್ತಿಲ್ಲದೆ ಕಳವಳಗೊಂಡಿದ್ದಾರೆ. ಸೋಲು ಬೇಕಾದರೆ ಇಂಗ್ಲಿಷರನ್ನು ದ್ವೇಷಿಸಲು ಪ್ರಾರಂಭಿಸಿರಿ. ಆಗ ನಿಮಗೆ ಕ್ಷೇಮವಾಗುವ ಸಂಭವವಿಲ್ಲ. ನೀವು ಅವರೂ ನಮ್ಮನ್ನು ಪ್ರೀತಿಸುತ್ತಾ ಮುಂದರಿದರೆ ನಿಮಗೆ ಎದುರಾಗಿ ನಾವು ಏನೂ ಮಾಡಲಾರೆವು.

(4) ಆಖೈರಿನಲ್ಲಿ ಕಾಂಗ್ರೆಸಿಗೆ ನಾನು ಯಾಕೆ ಉತ್ಸಾಹ ಕೊಡುತ್ತೇನೆಂದರೆ—ಕಾಂಗ್ರೆಸು ಬಡವನ ಸ್ವರಾಜ್ಯವನ್ನು ಸ್ಥಾಪಿಸುತ್ತದೆ. ಕರಾಚಿ ಕಾಂಗ್ರೆಸಿನಲ್ಲಿ ಜನರ ಹಕ್ಕು ಬಾಧ್ಯತೆಗಳನ್ನು ನಿರ್ಣಯಿಸಿದ ಠರಾವು ಮಂಜೂರಾದಾಗ ನನಗೆ ಉಂಟಾದಷ್ಟು ಸಂತೋಷ ಬೇರೆ ಯಾವಾಗ ಆಗಿತ್ತೆಂತ ಹೇಳಲಾಗುವುದಿಲ್ಲ. "ನನ್ನ ಕನಸಿನಲ್ಲೂ ಸಹ ಕಾಣುವ ಸ್ವರಾಜ್ಯವು ಬಡವರ ಸ್ವರಾಜ್ಯ"ವೆಂತ ಗಾಂಧೀಜೀಯವರು ಹೇಳಿದ್ದಾರೆ. ಆ ಸ್ವರಾಜ್ಯದಲ್ಲಿ ನಿಜವಾದ ಸಮಸಮಾನತ್ವವಿರುತ್ತದೆ. ಆ ಸ್ವರಾಜ್ಯದಲ್ಲಿ 'ಅಸ್ಪೃಶ್ಯತೆ' ಇರುವುದಿಲ್ಲ. ಸಮುದಾಯದ ಹಣವು ವೈಸರಾಯರ ಅರಮನೆಗಳಿಗಾಗಲೀ, ದೊಡ್ಡ ಸೈನ್ಯಗಳಿಗಾಗಲೀ ದುಂದು ಖರ್ಚು ಮಾಡಲ್ಪಡುವುದಿಲ್ಲ. ಅದು ವಿದ್ಯಾ ಪ್ರಚಾರಕ್ಕೂ, ಆರೋಗ್ಯ ಸ್ಥಾಪನೆಗೂ, ಚಿಕಿತ್ಸೆಗೂ, ಬಡವರ ಜೀವನದ ಹೊರೆಯ ಭಾರವು ಕಡಿಮೆಯಾಗುವಂತೆ ಮಾಡಲಿಕ್ಕೂ ಉಪಯೋಗಿಸಲ್ಪಡುತ್ತದೆ. ಆಗ ಎಲ್ಲಾ ಜನರೂ ಅನ್ಯೋನ್ಯ ಭ್ರಾತೃಭಾವದಿಂದ ಇರುತ್ತಾರೆ.

"ಯಂಗ್ ಇಂಡಿಯ"

ಬೇಕಾಗಿದೆ.

ಫೆಡರೇಶನ್ ಆಫೀಸು,
ಮಡಿಕೇರಿ, ತಾ 22—6—'31

ಸುಪರ್‌ವೈಜರು ಕೆಲಸಕ್ಕೆ ತರಬೇತು ಮಾಡಲು ಒಬ್ಬ ಉಮೇದ್ವಾರನು ಬೇಕಾಗಿದೆ. ಖಾಯಸ್‌ದಾರರು ಬರುವ ಜುಲೈ ತಾ 10ರ ಒಳಗೆ ತಲಪುವಂತೆ ತಮಗಳ ಸ್ಕೂಲ್ ಫೈನಲ್ ಪರೀಕ್ಷೆ ತೇರ್ಗಡೆಯಾದ ಮತ್ತು ಇತರ ನಡತೆಗಳ ವಿಷಯದ ಸರ್ಟಿಫಿಕೇಟ್‌ಗಳೊಡನೆ ಕೊಡಗು ಪ್ರಾಂತೀಯ ಸಹಕಾರಿ ಫೆಡರೇಶನ್ನಿನ ಪ್ರೆಸಿಡೆಂಟರವರಿಗೆ ಅರ್ಜಿ ಬರೆಕೊಳ್ಳತಕ್ಕದ್ದಲ್ಲದೆ, ಅಂಥಾ ಉಮೇದ್ವಾರರು ಸದರಿ ತಾ 12ನೇ ಭಾನುವಾರ ದಿನ ಪೂರ್ವಾಹ್ನ 11 ಗಂಟೆಗೆ ನಡೆಯುವ ಸಹಕಾರಿ ಫೆಡರೇಶನಿನ ಎಗ್ಸಿಕ್ಯೂಟಿವ್ ಕಮಿಟಿಯವರ ಮುಂದೆ ಮಡಿಕೇರಿ ಫೆಡರೇಶನ್ ಆಫೀಸಿಗೆ ಹಾಜರಾಗತಕ್ಕದು.

ಯಂ. ಯಂ. ಬೆಳ್ಯಪ್ಪ,
2—1 (ಜನರಲ್ ಸೆಕ್ರಟರಿ)

---

5 ರೂಪಾಯಿ ಇನಾಮು!

ಸಾಧಾರಣ ಬೂದು ವರ್ಣದ 1½ ಅಡಿ ಉದ್ದದ ಚೂಪಾದ ಹಿಂಗೋಡುಳ್ಳ, ಉದ್ದ ಬಾಲದ ಮತ್ತು ಸಾಧಾರಣ 4 ಅಡಿ ಎತ್ತರದ ಕೆಂಚ ಎಂಬ ಹೆಸರಿನ ಕೋಣ ಒಂದು ತಾ 11—6—'31ರಿಂದ ಪರಾರಿಯಾಗಿದೆ. ಇದನ್ನು ಪತ್ತೆ ಮಾಡಿ ಕೊಟ್ಟವರಿಗೆ 5 ರೂ ಬಹುಮಾನ ಕೊಡಲಾಗುವುದು.

ಎನ್. ಯಸ್. ಕಂಭಯ್ಯ,
ಗ್ರೀನ್ ಹಾಲೊ ಎಸ್ಟೇಟ್,
3—2 ಚೆಟ್ಟಳ್ಳಿ ಪೋಸ್ಟು

ಫೆಡರೇಶನಿನ ಕಮಿಟಿ ಮೀಟಿಂಗು.

ತಾರೀಕು 21—6—1931ರಲ್ಲು ನಡೆದ ಕೊಡಗು ಫೆಡರೇಶನ್ನಿನ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್.

ಹಾಜರಿದ್ದ ಮೆಂಬರುಗಳು

(1) ರಾವ್‌ಬಹದ್ದೂರು ಪಿ ದೇವಯ್ಯನವರು (ಪ್ರೆಸಿಡೆಂಟರು), (2) ಮೆ ಗಳಂಡ ಏ ಸ. ಸುಬ್ಬಯ್ಯನವರು, ಯಂ. ಎ, ಬಿ. ಎಲ್., (3) ಕೆ ಪಿ ಚಿನ್ನಪ್ಪನವರು, (4) ಯಂ. ಯಂ. ದೇವಯ್ಯನವರು, (5) ಹಿಚ್. ಪೊನ್ನಪ್ಪನವರು, (6) ಯಂ ಸಿದ್ದಿಂಗಪ್ಪನವರು, (7) ಯಂ ಯಂ ಬೆಳ್ಯಪ್ಪನವರು.

1, ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿಯಿತು.

2 ಕಳೆದ ಮೀಟಿಂಗಿನ ಬಾಬೆಗೆ ಆದ ಜಮ ಖರ್ಚು ಒದಲಾಗಿ ಒಪ್ಪಲಾಯಿತು.

ಜಮ	2139—8—9
ಖರ್ಚು	560—8—6
ಸಿಲ್ಕು ಬಾಕಿ	1579—0—3

ಈ ವರುಷಕ್ಕೆ ಬರಬೇಕಾದ ಸುಪರ್‌ವಿಜನ್ ಫಂಡ್ ಮೊಬಲಗು 7396

ಈವರೆಗೆ ವಸೂಲಾದದ್ದು 5110

ಬಾಕಿ ಬರತಕ್ಕದ್ದು 2285

3 ಸುಪರ್‌ವೈಜರ್ ಕೆಲಸಕ್ಕೆ ಬಂದ 15 ಅರ್ಜಿಗಳಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪಾಸಾಗಿ ಇಂಟರ್ ಮಿಡಿಯೇಟ್ ಕ್ಲಾಸಿನಲ್ಲಿ ಒಂದು ವರ್ಷ ಓದಿರುವ ಮಂದಣ್ಣನವರನ್ನು ತಿಂಗಳು 1ರ 25 ರೂ. ತಲಬಿನ ಪ್ರೊಬೇಶನರಿ ಸುಪರ್ ವೈಜರಾಗಿ ತಾ 1—7—193[illegible] ಚುನಾಯಿಸಲಾಯಿತು.

ಬಾಕಿ ಅರ್ಜಿದಾರರುಗಳಲ್ಲಿ ಕೆಲವರು ಸ್ಕೂಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದವರಾದ್ದರಿಂದಲೂ [illegible]ರು ತೇರ್ಗಡೆ ಹೊಂದಿದವರಾದರೂ ಮೀಟಿಂಗಿನಲ್ಲಿ ಎ[illegible]ಟಿವ್ ಕಮಿಟಿಯವರ ಮುಂದೆ ಹಾಜರಾಗದ್ದರಿಂದಲೂ ಅರ್ಜಿಗಳನ್ನು ತಿರಸ್ಕರಿಸಲಾಯಿತು.

4 ಸುಪರ್‌ವೈಜರ್ ತರಬೇತಿಗೆ ಇನ್ನೂ ಒಬ್ಬ [illegible]ದ್ವಾರನು ಬೇಕಾಗಿರುವದರಿಂದ ಸದರಿ ಕೆಲಸಕ್ಕೆ [illegible]ಪಡುವವರು ಫೆಡರೇಶನ್ ಪ್ರೆಸಿಡೆಂಟರವರಿಗೆ ಬರುವ ತಾ 10ರೊಳಗೆ ತಲಪುವಂತೆ ಅರ್ಜಿ ಕಳುಹಿಸಬೇ[illegible] ಅರ್ಜಿದಾರರು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ [illegible] ಹೊಂದಿದವರಾಗಿರಬೇಕಾಗಿಯೂ, ಅರ್ಜಿ ಜೊತೆಯು [illegible]ಗ್ರಡೆಯಾದ ಮತ್ತು ಇತರ ನಡತೆಗಳ ವಿಷಯದ ಸ[illegible]ಟ್‌ಗಳನ್ನು ಸಹ ಕಳುಹಿಸಬೇಕೆಂದೂ ಸ್ಥಳೀಕ ಪತ್ರಿ[illegible] ಪ್ರಕಟಣೆ ಮಾಡುವಂತೆ ತೀರ್ಮಾನಿಸಲಾಯಿತಲ್ಲ[illegible]ಹ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗನ್ನು ಫೆಡರೇಶ[illegible]ನಿನಲ್ಲಿ ಈ ಬರುವ ಜುಲೈ ತಾ, 12ನೇ ಭಾನುವಾರ [illegible]ರ್ವಾಹ್ನ 11 ಗಂಟೆಗೆ ನಡಿಸಿ ಸುಪರ್‌ವೈಜರ ತರಬೇತಿಗೆ [illegible]ದ್ವಾರರನ್ನು ಚುನಾಯಿಸುವಂತೆಯೂ ಸಹ ತೀರ್ಮಾ[illegible]ಯಿತು.

ಪಿ ದೇವ[illegible]
(ಪ್ರೆಸಿಡೆಂ[illegible])

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೂ ತಿಳಿಯ ಪಡಿಸುವದರೆ—ನನ್ನ ತಾಸಾ ತಮ್ಮ ಸುಬ್ಬಯ್ಯನು ಕಳೆದ [illegible]ದು ವರ್ಷಗಳಿಂದ ಪತ್ತೆ ಇಲ್ಲದರಿಂದಲೂ, ನಾ[illegible]ತ್ತು ನನ್ನ ಸ್ವಾಧೀನ ಅನುಭವದಲ್ಲಿರುವದರಿಂದಲೂ ಸಾಲ ಮಾಡಿದ ಅಥವಾ ಇನ್ನು ಮುಂದೆ ಮಾಡು[illegible] ಅಂಥಾ ಸಾಲ ಕೊಟ್ಟ ಮಹನೀಯರು ಈ ಸುಬ್ಬೆ[illegible]ಹ ಜವಾಬ್ದಾರಿಯಿಂದಲೇ ಭರ್ತಿಮಾಡಿಕೊಳ್ಳಬೇಕಲ್ಲಿ[illegible]ರ್ಜಿತ ಸೊತ್ತು, ಅಂತಹ ಸಾಲಕ್ಕೆ ಈಡಾಗಲಾರದು [illegible] ಭರ್ತಿ ಮಾಡದ ಪಕ್ಷ ಸಾಲ ಕೊಟ್ಟವರು ಎಲ್ಲಾ [illegible]ವೇ ಗುರಿಯಾಗತಕ್ಕದ್ದು. ಈತನು ಕುಟುಂಬ [illegible]ಲೀ ಯಾ ಪಿತ್ರಾರ್ಜಿತ ಸೊತ್ತುಗಳ ರೂಪಿತ ವಗೈರೆ[illegible] ಸಾಲ ಮಾಡಿದ್ದಲ್ಲ.

ಪಾಂಡಂಡ ಚೆಂಗಪ್ಪ[illegible]
4 -4 ಯವ್ವಕಪಾಡಿ ಗ್ರಾಮ[illegible]

"ರೂಪಾಯಿಗಳು 5-8-0 ಮ[illegible]

ನಮ್ಮ ಉಚಿತ ಜೀವವಿಮ[illegible]

ಅನೇಕ ಬಡಬಗ್ಗರನ್ನು ಕಾಪಾಡಿದೆ.

ನೀವೇಕೆ ಹೊಂದಬಾರದು?

ಈಗ ಆಗಲೇ 75,000 ಜನಗಳು ಮೆಂಬರಾ[illegible]

ಹಣ ರೂ 2,00,000.

ಬಡವರಿಗೆ ಭಾಗ್ಯಕಾಲ! ಎಲ್ಲರಿಗೂ ಅನು[illegible]

WANTED.

One Chief Agent for Co[illegible]
Virajpet on Rs 50/— plus Rs. 7/8 [illegible]
mensum

For terms apply —

A. A. MANDANNA
Branch Secretary,
The Venus Assurance Co., Ltd.,
Bore Bank Ro[illegible]
Benson To[illegible]
12—10 Bangalore

ಚಂದಾದಾರರಲ್ಲಿ ವಿನಂತಿ.

'ಕೊಡಗು' ಪತ್ರಿಕೆಯ ಹಾಲಿ ವರ್ಷವು ಈ ತಿಂಗಳ ಆಖೈರಿಗೆ ಮುಕ್ತಾಯವಾಗುತ್ತದೆ. ನೋಟೀಸು ಕಾರ್ಡುಗಳು ಕಳುಹಿಸಿದ್ದಾಗ್ಯೂ ಹಲವು ಚಂದಾದಾರರು ಇನ್ನೂ ತಮ್ಮ ಚಂದಾ ಹಣವನ್ನು ಪಾವತಿ ಮಾಡದೆ ಇರುವುದು ಕುಂಬಾ ವ್ಯಸನಕರ. ಮೊದಲಿನಂತೆ ವಿ ಪಿ ಮೂಲಕ ಪತ್ರಿಕೆಯನ್ನು ಕಳುಹಿಸೋಣವೆಂದರೆ—ಪೋಸ್ಟಲ್ ಇಲಾಖೆಯವರು ವಿ ಪಿ ಫಾರಂಗಳನ್ನು ಈ ಮೊದಲಿನಂತೆ ಹತ್ತು ದಿವಸಗಳ ವರೆಗೆ ಇಡುವ ಬದಲು ಈಗ ಬರೇ ಮೂರು ದಿವಸಗಳ ತನಕ ಮಾತ್ರ ಇಟ್ಟುಕೊಂಡು ವಾಪಸು ಮಾಡುತ್ತಿರುವದರಿಂದ ಮುಖ್ಯವಾಗಿ ಪೋಸ್ಟಾಫೀಸುಗಳಿಂದ ದೂರವಿರುವ ಗ್ರಾಮಸ್ಥರಿಗೆ ವಿ ಪಿ ಬಿಡಿಸಿಕೊಳ್ಳಲು ಕಷ್ಟವಾಗುತ್ತೆ. ಆದಕಾರಣ ಮಹನೀಯರೆಲ್ಲರೂ ತಮ್ಮ ಚಂದಾ ಹಣವನ್ನು ಮನಿಯಾರ್ಡರ್ ಮೂಲಕವಾಗಿ ನಮ್ಮ ಆಫೀಸಿಗಾಗಲೀ, ನಮ್ಮ ಏಜೆಂಟರುಗಳಿಗಾಗಲೀ ಕೂಡಲೆ ಪಾವತಿ ಮಾಡಬೇಕಾಗಿ ಕೋರುತ್ತೇವೆ. ಚಂದಾ ಬಾಕಿ ಮಾಡಿಕೊಳ್ಳುವುದರಿಂದಲೂ, ವಿ ಪಿ ಮಾಡುವುದರಿಂದಲೂ ನಮಗೆ ತುಂಬಾ ನಷ್ಟ ಉಂಟಾಗುವುದರಿಂದ ಅಂಥವರಿಗೆ ಪತ್ರಿಕೆ ಕಳುಹಿಸುವುದು ನಿಲ್ಲಿಸಲಾಗುವದೆಂದು ತಿಳಿಸಲು ವಿಷಾದಿಸುತ್ತೇವೆ. ಕಳೆದ ಹತ್ತು ವರ್ಷಗಳಿಂದ ದೇಶಸೇವೆ ಮತ್ತು ಸಮಾಜಸೇವೆ ಮಾಡಿ ತನ್ನ ಆಯುಷ್ಯವನ್ನು ಸವೆಸುತ್ತಿರುವ ಕೊಡಗು ಪತ್ರಿಕೆಯು ಪ್ರಕಟನ ಕಾರ್ಯಕ್ಕೆ ತೊಂದರೆಯಾಗದಂತೆ ಎಲ್ಲರೂ ಚಂದಾ ಹಣವನ್ನು ಮುಂಗಡವಾಗಿಯೇ ಕಳುಹಿಸಿ ಸಹಾಯ ಮಾಡಬೇಕಾಗಿ ಕೋರುತ್ತೇವೆ.

ಮ್ಯಾನೇಜರು

ವರ್ತಮಾನ ಸಂಗ್ರಹ.

ಒಳದೇಶ.

ವೀರಾಜಪೇಟೆಯಲ್ಲಿ ಈ ವಾರ ಒಬ್ಬನಿಗೆ ಪ್ಲೇಗು ಅಂಟಿದುದಾಗಿ ತಿಳಿಯುತ್ತೇವೆ.

ಮಿ. ಪಾಂಡಂಡ ಸಿ. ಮುತ್ತಣ್ಣನವರು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿಯುತ್ತೇವೆ.

ಕೊಡಗು ರಿಟ್ರೆಂಚ್‌ಮೆಂಟ್ ಕಮಿಟಿಯ ಮೀಟಿಂಗೊಂದು ಜುಲೈ ತಾ. 8ರಲ್ಲಿ ಪ್ರಾರಂಭವಾಗುವದೆಂದು ಸುದ್ದಿ ಇದೆ.

ವೀರಾಜಪೇಟೆಯಲ್ಲಿ ಭತ್ತಕ್ಕೆ ಗಾಡಿ ಒಂದರ 45 ರೂ. ಇದೆಯೆಂದೂ, ಗ್ರಾಮಾಂತರಗಳಲ್ಲಿ 35ರಿಂದ 40 ರೂ.ಗೆ ಮಾತ್ರ ಇದೆಯೆಂದೂ ವರ್ತಮಾನ.

ಮಳೆಗಾಲದ ದೆಸೆಯಿಂದ ಮಡಿಕೇರಿಯಿಂದ ಮೂರ್ನಾಡು ನಾಪೋಕ್ಲುಗಾಗಿ ಭಾಗಮಂಡಲಕ್ಕೆ ಹೋಗುತ್ತಿದ್ದ 'ದ ಕೂರ್ಗ್ ಬಸ್ ಸರ್ವಿಸು' ಕಳೆದ ವಾರದಿಂದ ನಿಲ್ಲಿಸಲ್ಪಟ್ಟಿದೆಯೆಂದು ತಿಳಿಯ ಬರುತ್ತದೆ.

ಮಡಿಕೇರಿಯಲ್ಲಿ ಆಯುರ್ವೇದ ಚಿಕಿತ್ಸೆ ಮಾಡುತ್ತಿದ್ದ ಪಂಡಿತ ಕೆ. ಯಸ್. ವೆಂಕಪ್ಪಯ್ಯನವರು 20ನೇ ತಾರೀಕು ಶನಿವಾರ ದಿನ ಬರೇ ಮೂರು ದಿನದ ಜ್ವರದ ಕಾಯಿಲೆಯಲ್ಲಿ ಸ್ವರ್ಗದಲ್ಲಿ ಮೃತರಾದರೆಂತ ತಿಳಿಸಲು ವಿಷಾದಿಸುತ್ತೇವೆ.

ಕಳೆದ ಶನಿವಾರದಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 5 ಇಂಚು ಮಳೆಯಾಗಿದೆ. ದಕ್ಷಿಣ ಕೊಡಗಿನಲ್ಲಿ ಸಾಕಷ್ಟು ಮಳೆ ಇಲ್ಲದ್ದರಿಂದ ಹಲವು ಕಡೆಗಳಲ್ಲಿ ಬೀಜ ಬಿತ್ತುವ ಅಡಚಣೆಯುಂಟಾಗಿದೆಯೆಂದು ತಿಳಿಯ ಬರುತ್ತದೆ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಗೆ ಖಾಸಗಿಯಾಗಿ ಹೋಗಿದ್ದವರಲ್ಲಿ ಮಿ. ಗಳಾಡ ನಾಳಿಯಂಡ ಯನ್. ಅಪ್ಪಣ್ಣನವರು ಹಾಗೂ ಮಿ. ಬಿ. ಚಿಣ್ಣಪ್ಪನವರು ಮತ್ತು ಪೋಪೈಯ್ಯನ ಎ ದೇವಯ್ಯನವರು ತಮ್ಮ ಸರ್ಟಿಫಿಕೇಟ್ ಪುಸ್ತಕಗಳನ್ನು ಪೂರ್ತಿಗೊಳಿಸಿರುವರೆಂದು ತಿಳಿಯ ಬರುತ್ತದೆ.

ಕೊಡಗು ವೀರಶೈವ ವಿದ್ಯಾನಿಧಿ ಸಂಘದ 5ನೇ ಮಹಾಸಭೆಯು ಹಾಸನ ಡಿಸ್ಟ್ರಿಕ್ಟಿನ ಬೇಲೂರು ತಾಲೂಕು ಪ್ಲಾಂಟರ್ ಕೆ. ನಂಜೇಗೌಡರವರ ಅಧ್ಯಕ್ಷತೆಯಲ್ಲಿ ಈ ತಾ 15ನೇ ಸೋಮವಾರ ಮಧ್ಯಾಹ್ನ 2 ಗಂಟೆಗೆ ಶನಿವಾರಸಂತೆಯಲ್ಲಿ ಶ್ರೀ ಕಂಟೇಶ್ವರ ರೈಸ್ ಮಿಲ್ ಕಟ್ಟಡದಲ್ಲಿ ವಿಜೃಂಭಣೆಯಿಂದ ನಡೆಯಿತು. ಸುಮಾರು 400 ಜನರು ನೆರೆದಿದ್ದರು. ಕಾರ್ಯಕ್ರಮ ಪಟ್ಟಿಯ ಮೇರೆ ಕೆಲಸವು ಮುಗಿದ ಮೇಲೆ ಕೆಲವು ಭಾಷಣಗಳಾದವು. ಫಲತಾಂಬೂಲಾದಿಗಳ ವಿತರಣೆಯಿಂದ ಸಭೆಯು ವಿಸರ್ಜಿಸಲ್ಪಟ್ಟಿತೆಂದು ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಕಳೆದ ಟೀಚರ್ಸ್ ಟ್ರೈನಿಂಗ್ ಪರೀಕ್ಷೆಯಲ್ಲಿ ಈ ಕೆಳಗಿನವರು ತೇರ್ಗಡೆಯಾಗಿರುವರೆಂದು ಕೇಳಿ ಸಂತೋಷ ಪಡುತ್ತೇವೆ. ಸೀನಿಯರ್ ಗ್ರೇಡಿನಲ್ಲಿ ಮಿ. ಗಳೇದ 1 ಆರ್. ಮುತ್ತಪ್ಪನವರು, 2 ಕುಪ್ಪಂಡ ಸಿ. ಪೊನ್ನಪ್ಪಯ್ಯನವರು 3 ಕರ್ತಮಾಡ ಎ. ಬೋಪಯ್ಯನವರು, 4 ಮಾಟೇರಿ ರಘು ರ್‌ ಯ್ಯನವರು, 5. ಕೋಳೇರ ಕೆ. ಅಪ್ಪಯ್ಯನವರು ಮತ್ತು ಮಂಡೇಪಂಡ ಕೆ. ಅಪ್ಪಯ್ಯನವರು. ಜೂನಿಯರ್ ಗ್ರೇಡಿನಲ್ಲಿ ಮಿ. ಗಳೇದ 1. ಕುಂಬಾರರ ಕಾಳಶೆಟ್ಟಿ, 2. ಪಟ್ಟಚೆರವಂಡ ಯನ್. ತಮ್ಮಯ್ಯನವರು, 3 ಹುತ್ತದ ಕೆ. ರುದ್ರಶೆಟ್ಟಿಯವರು, 4. ಅಮ್ಮಟಂಡ ಪಿ. ಚಿಣ್ಣಪ್ಪನವರು, 5. ಚಾಕರ ಕೆ. ಮಂದಪ್ಪನವರು, 6 ಮೂವೆರ ಪೂಂಚಯ್ಯನವರು ಮತ್ತು 7. ಮಾಚಿರಮಾಡ ಯಂ. ಪೂವಯ್ಯನವರು.

ತಿದ್ದುಪಡಿ.

ಕಳೆದ ವಾರ ಪ್ರಕಟವಾದ ಸ್ಕೂಲ್ ಫೈನಲ್ ಪರೀಕ್ಷೆ ಫಲಿತಾಂಶದಲ್ಲಿ ವೀರಾಜಪೇಟೆ ಹೈ ಸ್ಕೂಲಿನಿಂದ ತೇರಿದವರಲ್ಲಿ 2ನೇಯದು 'ಮಂಡೆಪಂಡ ಯಂ. ಕಾರ್ಯಪ್ಪ' ಎಂಬದು 'ಮಾದಪಂಡ ಯಂ ಕಾರ್ಯಪ್ಪ' ಎಂದು ತಿದ್ದುಪಡಿಯಾಗಬೇಕಾಗಿದೆ.

ಹಿಂದೂ ದೇಶ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕೌನ್ಸಿಲಿನ ವಿಶೇಷ ಮೀಟಿಂಗೊಂದು ಜುಲೈ ತಾ. 5ರಲ್ಲಿ ಧಾರವಾಡದಲ್ಲಿ ನಡೆಯುವುದು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನೇಮಿಸಿದ ಮೇರೆ ಪಂಡಿತ ಜವಾಹಿರ್‌ಲಾಲ್ ನೆಹರೂರವರು ಡೆಲ್ಲಿ ಕಾಂಗ್ರೆಸ್ ಕಮಿಟಿಯ ಚುನಾವಣೆಯಲ್ಲಿದ್ದ ವಿವಾದಗಳನ್ನು ಎಲ್ಲಾ ಪಾರ್ಟಿಯವರಿಗೂ ಒಪ್ಪುವಂತೆ ತೀರ್ಮಾನಿಸಿರುವರು.

ನೇಶನಲ್ ಲಿಬರಲ್ ಫೆಡರೇಶನ್ನಿನ 13ನೇ ಮಹಾಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿರು ಪಿ. ಸಿ. ವೈ. ಚಿಂತಾಮಣಿಯವರ ಕೋರಿಕೆ ಮೇರೆ ಸದರಿ ಮಹಾಸಭೆಯನ್ನು ಜುಲೈ 31ರಿಂದ ಆಗೋಸ್ಟು 2ರ ವರೆಗೆ ನಡಿಸುವಂತೆ ನಿಶ್ಚೈಸಲಾಗಿದೆ.

ಕಾಶ್ಮೀರ ಹಿಂದೂ ಮುಸಲ್ಮಾನರ ವಿಷಯ ಮುಸಲ್ಮಾನ ರೀಗಳ ರಾಷ್ಟ್ರೀಯ ಪಕ್ಷದವರು, ಅಖಿಲ ಭಾರತ ಮುಸ್ಲಿಂ ಕಾನ್‌ಫರೆನ್ಸಿನವರು ಇದ್ದ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಭೋಪಾಲದ ನವಾಬರ ಮಧ್ಯಸ್ತಿಕೆಯಿಂದ ಕಳೆದ ಮೇ ತಿಂಗಳಿಂದ ನಡಿಸಲ್ಪಡುತ್ತಿದ್ದ ಪ್ರಯತ್ನಗಳು ಸಫಲವಾಗದೆ ತಾ 22 ರಲ್ಲಿ ಸಿಮ್ಲಾದಲ್ಲಿ ಅಂತ್ಯವಾದವು.

ಈ ತಾ 19 ರಲ್ಲಿ ರಷ್ಯಾ ಸರ್ಕಸ್ ಕಂಪೆನಿಯವರ ಕುದುರೆಯೊಂದು ಕರಾಚಿಯಲ್ಲಿ ಅಭ್ಯಾಸ ಮಾಡುತ್ತಿದ್ದ ಹಾಗೆಯೇ ಮೃತವಾಯಿತು. ಈ ಕುದುರೆಯನ್ನು ಸದರಿ ಸರ್ಕಸಿನ ಮೇನೇಜರು 8 ವರ್ಷಗಳ ಹಿಂದೆ 25,000 ರೂ. ಗೆ ಕೊಂಡು ಕೊಂಡದೆಂತಲೂ, ಈಗ ಅದಕ್ಕೆ 50,000 ರೂ. ಬೆಲೆ ಬಾಳುತ್ತಿತೆಂತಲೂ, ಅದಕ್ಕೆ ಗಣಿತದಲ್ಲಿ ಲೆಕ್ಕ ಮಾಡಲು ಬರುತ್ತಿತೆಂತಲೂ ವರ್ತಮಾನ.

ಮಹಾತ್ಮ ಗಾಂಧಿಯವರು ದುಂಡು ಮೇಜು ಪರಿಷತ್ತಿಗಾಗಿ ಇಂಗ್ಲೆಂಡಿಗೆ ಹೋಗುವಾಗ್ಯೆ ಇಟಲಿಗೆ ಬರಬೇಕೆಂಬುದು ಅಲ್ಲಿಯ ಡಿಕ್ಟೇಟರಾದ ಮಿ ಮುಸ್ಸಲೋನಿಯವರು ಆಹ್ವಾನಿಸಿರುವರೆಂದೂ, ಮಹಾತ್ಮರು ಅವರ ಯೂರೋಪಿಯನ್ ಪ್ರವಾಸದಲ್ಲಿ ತಮ್ಮ ಸ್ಟೀಮರುಗಳನ್ನು ಉಪಯೋಗಿಸಿಕೊಳ್ಳಬಹುದೆಂದು ಇಟಲಿಯ ಎರಡು ಹಡಗು ಕಂಪೆನಿಗಳು ಅವರಿಗೆ ತಿಳಿಸಿರುವರೆಂದೂ ವರ್ತಮಾನ.

ಮಹಾತ್ಮ ಗಾಂಧಿಯವರು ಕೆಲವು ದಿವಸಗಳ ಹಿಂದೆ ಬೊಂಬಾಯಿಗೆ ಹೋಗಿದ್ದಾಗ್ಯೆ ಅಲ್ಲಿಯ ಶ್ರೀಮತಿ ಗಂಗಾಬೆನ್ ಮಗನಲಾಲ್ ಬರ್ಫಿವಾಲ ಎಂಬಾಕೆಯು ಬಹು ಸುಂದರವಾದ ಚಿತ್ರಗಳು ಕೆತ್ತಲ್ಪಟ್ಟಿರುವ ಬೆಳ್ಳಿಯ ಕುರ್ಚಿಯೊಂದನ್ನೂ, ಒಂದು ಕಾಲು ಮಣೆಯನ್ನೂ ಮಹಾತ್ಮರಿಗೆ ಅರ್ಪಿಸಿದರು. ಅದರ ಬೆಲೆಯು 2000 ರೂಪಾಯಿ. ಇವುಗಳು ಬೊಂಬಾಯಿಯಲ್ಲಿರುವ ಮಣಿಭವನದಲ್ಲಿ ಇಡಲ್ಪಟ್ಟಿವೆಯಂತೆ.

ನಾಗಪುರಕ್ಕೆ ಸೇರಿದ ಪರಾಡಿ ಎಂಬ ಸ್ಥಳದಲ್ಲಿ ಹಿಂದೂಗಳು ಉಪಯೋಗಿಸುವ ಬಾವಿಯಲ್ಲಿ ಅಸ್ಪೃಶ್ಯರು ನೀರು ತೆಗೆಯಕೂಡದೆಂದು ಹಿಂದೂಗಳು ನಿರ್ಬಂಧ ಪಡಿಸಿದ ಕಾರಣ, ಅದನ್ನು ಸಹಿಸಲಾರದೆ 100 ಅಸ್ಪೃಶ್ಯರು ಈ ತಾ 12ರಲ್ಲಿ ಮುಸ್ಲಿಂ ಮತವನ್ನು ಅವಲಂಬಿಸಿರುವರು! ಮತ್ತು ಇನ್ನೂ 200 ಜನರು ಮುಸ್ಲಿಮರಾಗುವ ಸಂಭವವಿದೆ ಯಂತೆ!! ಮುಸಲ್ಮಾನರಾದ ಮೇಲೆ ಅವರು ಸದರಿ ಬಾವಿಯ ನೀರನ್ನು ಮುಟ್ಟಬಹುದಲ್ಲವೇ?

ಚಟ್ಟಪುರದಲ್ಲಿ ರಿಸರ್ವ್ ಪೋಲೀಸು ಇನ್‌ಸ್ಪೆಕ್ಟರಾದ ಮಿ. ಡಬ್ಲ್ಯು. ಗುಡ್‌ಶೆಫರ್ಡರವರನ್ನು ತಾ. 22ರ ರಾತ್ರಿ ಒಬ್ಬ ರಿಜರ್ವ್ ಪೋಲೀಸನವನು ಗುಂಡು ಹೊಡೆದು ಬಿಟ್ಟನು. ಇನ್‌ಸ್ಪೆಕ್ಟರು ಸ್ವಲ್ಪ ಹೊತ್ತಿನ ಮೇಲೆ ಆಸ್ಪತ್ರೆಯಲ್ಲಿ ಮೃತರಾದರು. ಕೊಲೆಗಾರನು ಆತ್ಮ ಹತ್ಯ ಮಾಡಲು ಯತ್ನಿಸಿದನು. ಗುಂಡು ಕುತ್ತಿಗೆಯನ್ನು ಸವರಿಕೊಂಡು ಹೋಯಿತು. ಅವನು ದಸ್ತಗಿರಿ ಮಾಡಲ್ಪಟ್ಟಿರುವನು. ಕೊಲೆಯ ಕಾರಣವು ಗೊತ್ತಾಗಿರುವುದಿಲ್ಲ.

ಮಹಾತ್ಮ ಗಾಂಧಿಯವರು ನಿನ್ನೆ ರಾತ್ರಿ ಬೊಂಬಾಯಿಯ 'ಯುವಕ ಯೂರೋಪಿಯನರೊಡನೆ ತಾಜ್‌ಮಹಲ್ ಹೋಟೇಲಿನಲ್ಲಿ ಔತಣದಲ್ಲಿ ಭಾಗಿಗಳಾಗಿರುವರೆಂದೂ, ಆಗ್ಯೆ ಆರ್ಥಿಕ ಸಂರಕ್ಷಣೆ ಮತ್ತು ವ್ಯಾಪಾರ ಹಕ್ಕುಗಳನ್ನು ಕುರಿತು ಭಾಷಣ ಮಾಡುವರೆಂದೂ ವರ್ತಮಾನ. 'ಯುವಕ ಯೂರೋಪಿಯನ'ರ ಗುಂಪು ಪ್ರಬಲವಾಗುತ್ತಾ ಬರುತ್ತಿದೆ. ಈಗ ಅದರ ಮೆಂಬರುಗಳ ಸಂಖ್ಯೆ 150ಕ್ಕೆ ಏರಿದೆ. ಜರ್ಮನಿ, ಇಟಲಿ ಮುಂತಾದ ದೇಶದವರೂ ಇದಕ್ಕೆ ಸೇರಿರುವರಂತೆ.

"ಈಗಿನ ಕಾಲದಲ್ಲಿ ಸ್ವದೇಶೀ ವ್ರತವೇ ಬಹಳ ಶ್ರೇಷ್ಠವಾದ ವ್ರತವು. ಇದು ಮನುಷ್ಯನ ಸ್ವಭಾವದಲ್ಲಿ ಸೇರಿ ಹೋಗಿದೆ. ಆದುದರಿಂದಲೇ ಈಗ ಎಲ್ಲರೂ ಪ್ರಮಾಣ ಮಾಡಬೇಕಾದ ಅಗತ್ಯವುಂಟಾಗಿದೆ. ಪರಿಶುದ್ಧತೆಯುಳ್ಳ ರೀತಿಯಲ್ಲಿ ಸ್ವದೇಶೀ ವ್ರತವನ್ನು ನಡೆಯಿಸಿದರೆ ವಿಶ್ವಮಾನವ ಸೇವೆಯೆನಿಸಿಕೊಳ್ಳುವುದು. ಸ್ವದೇಶ ವ್ರತದಿಂದಲೂ, ಮಾನವ ಸಂಘದಿಂದಲೂ ಪ್ರಯೋಜನವಾಗದೇ ಕಾಗಿದ್ದಲ್ಲಿ ಖದ್ದರನ್ನು ಅಗತ್ಯವಾಗಿ ಧರಿಸಬೇಕು" ಎಂದು ಮಹಾತ್ಮ ಗಾಂಧಿಯವರು ಲೇಖನ ಬರೆದಿರುವರು.

ಬೊಂಬಾಯಿಯ ಹಿಂದೂ ಜಿಮ್ಖಾನದವರು ಕಳೆದ ವರ್ಷ ರಾಜಕೀಯ 'ಯುದ್ಧವು' ನಡೆಯುತ್ತಿದ್ದ ಕಾರಣ ಕ್ವಾಡ್ರಾಂಗ್ಯುಲರ್ ಕ್ರಿಕೆಟ್ ಪಂದ್ಯದಾಟಗಳಿಗೂ, ಇಂಗ್ಲೆಂಡಿನ ಯಂ. ಸಿ. ಸಿ. ಟೀಮಿನವರ ಆಟಗಳಿಗೂ ಬಹಿಷ್ಕಾರ ಹಾಕಿದ್ದರು. ಯಂ ಸಿ. ಸಿ. ಟೀಮಿನವರು ಈಗ ಪುನಹ ಬೇಗನೆ ಇಂಡಿಯಕ್ಕೆ ಬರಲಿರುವುದರಿಂದ ಕಳೆದ ವರ್ಷದ ಬಹಿಷ್ಕಾರದ ತೀರ್ಮಾನವನ್ನು ರದ್ದುಪಡಿಸಲು ಪ್ರಯತ್ನಗಳು ನಡಿಸಲ್ಪಡುತ್ತಿವೆ. ಈ ವಿಷಯ ಚರ್ಚಿಸಲಿಕ್ಕಾಗಿ ಸದರಿ ಜಿಮ್ಖಾನದ ಮಹಾಸಭೆಯನ್ನು ಜುಲೈ 6ರಲ್ಲಿ ನಡಿಸಲು ನಿಶ್ಚೈಸಲಾಗಿದೆ. ಕ್ರಿಕೆಟ್ ಆಟಗಳಿಗೆ ಯಾವ ತರಹದ ಬಹಿಷ್ಕಾರವನ್ನೂ ಹಾಕಕೂಡದೆಂದು ಮಹಾತ್ಮ ಗಾಂಧಿಯವರು ಸೂಚಿಸಿರುವರೆಂದು ಒಂದು 'ಆಂಗ್ಲೋ ಇಂಡಿಯನ' ಪತ್ರಿಕೆಯ ವರ್ತಮಾನ.

ಗುಜರಾತು ಕಾಲೇಜಿನ ಪ್ರಿನ್ಸಿಪಾಲರು ಸತ್ಯಾಗ್ರಹ ಚಳವಳಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಪುನಃ ಕಾಲೇಜಿಗೆ ಸೇರಿಸಿಕೊಳ್ಳುವುದಿಲ್ಲವೆಂದು ತಿರಸ್ಕರಿಸುವುದಲ್ಲದೆ, ಆಯಾ ಹೈಸ್ಕೂಲು ವಿದ್ಯಾರ್ಥಿಗಳ ತಂದೆ ತಾಯಿಗಳು ಇನ್ನು ಮುಂದೆ ತಮ್ಮ ಮಕ್ಕಳು ರಾಜಕೀಯದಲ್ಲಿ ಕೈ ಹಾಕುವುದಿಲ್ಲವೆಂದು ಒಂದು ಕರಾರು ಬರೆದು ಆ ಮಕ್ಕಳನ್ನು ಪುನಹ ಶಾಲೆಗೆ ಸೇರಿಸಿಕೊಳ್ಳಬಹುದೆಂದು ಹೇಳಿರುವರು. ಇಂಥಾ ಪ್ರಕಾರಗಳು ಬೇರೆ ಕಡೆಗಳಿಂದಲೂ ಮಹಾತ್ಮ ಗಾಂಧಿಯವರಿಗೆ ತಿಳಿದಿದ್ದರಿಂದ ಅವರು ಹೀಗೆಂದು ಬರೆದಿರುವರು—"ಇದು ಡೆಲ್ಲಿ ಒಪ್ಪಂದಕ್ಕೆ ಸರಿಯಾಗಿದೆಯೋ ಎಂದು ನಾನು ಚರ್ಚಿಸುವುದಿಲ್ಲ. ಒಪ್ಪಂದದಲ್ಲಿ ಎಲ್ಲಾ ಚಿಕ್ಕ ಸಂಗತಿಗಳನ್ನು ವಿಶದಪಡಿಸಲು ಸಾಧ್ಯವಿಲ್ಲ. ತಂದೆ ತಾಯಿಗಳು ಅಂಥಾ ಬರವಣಿಗೆ ಕೊಡುವುದರಿಂದ ಪ್ರಯೋಜನವಿಲ್ಲ, ಹಾಗೆ ಬರೆದು ಕೊಡಬಾರದೆಂದು ನನ್ನ ಅಭಿಪ್ರಾಯ. ಹಾಗೆ ಬರೆದುಕೊಡದೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಿಲ್ಲವಾದರೆ ಅವರು ಓದದೆ ಇರುವದು ಒಳ್ಳೇದು. ಈ ಸ್ಥಿತಿಯು ದೀರ್ಘ ಕಾಲ ಇರಲಾರದು. ಬರುವ ವರ್ಷದ ಪ್ರಾರಂಭದಲ್ಲಿ ಬ್ರಿಟಿಷರು ಕಾಂಗ್ರೆಸಿನ ತೀರ್ಮಾನಗಳನ್ನು ನಡಿಸಿಕೊಡುವರೋ, ಇಲ್ಲವೋ ಎಂಬದು ಗೊತ್ತಾಗುವುದು. ನಡಿಸಿಕೊಡದೆ ಹೋದರೆ ನಾವು ಏನು ಮಾಡಬೇಕೆಂದು ಈಗ ಹೇಳುವ ಅವಶ್ಯವಿಲ್ಲ."

ವಿದೇಶ.

ಸ್ಪೈನ್ ದೇಶದಲ್ಲಿ ರಾಜ್ಯ ಕ್ರಾಂತಿಯ ಗಲಭೆಗಳಲ್ಲಿ 27 ಲಕ್ಷ ಪವನು ಮೌಲ್ಯದ ಸೊತ್ತು ನಾಶವಾಗಿದೆ. ಪದಚ್ಯುತ ಅರಸನ 20 ಲಕ್ಷ ಪವನಿನ ಚರ-ಸ್ಥಿರ ಸೊತ್ತುಗಳನ್ನು ಹೊಸ ಸರ್ಕಾರವು ವಶಪಡಿಸಿಕೊಂಡಿದೆ.

ವರ್ಷಕ್ಕೆ 162 ಪೌಂಡಿಗಿಂತ ಕಡಿಮೆ ಆದಾಯದವರಿಗೆ ತೆರಿಗೆ ಇಲ್ಲವಾದರೂ 1929—30 ರಲ್ಲಿ ಇಂಗ್ಲೆಂಡಿನಲ್ಲಿ ತೆರಿಗೆ ಕೊಡುವವರ ಸಂಖ್ಯೆ 5,100,000 ಮತ್ತು ಇವರೆಲ್ಲರ ಒಟ್ಟು ವಾರ್ಷಿಕ ಆದಾಯ 272 ಕೋಟಿ ಪೌಂಡುಗಳು ಆಗಿದ್ದವು. ಸರ್ಕಾರಕ್ಕೆ ಆದಾಯ ತೆರಿಗೆಯಿಂದ 23½ ಕೋಟಿ ಪೌಂಡುಗಳ ಮೇಲೆ ಉತ್ಪತ್ತಿ. ಆದಾಯ ತೆರಿಗೆ ಒಂದು ಮಿತಿ ಮೀರಿದ ಮೇಲೆ ಸುಪರ್ ತೆರಿಗೆ ಹಾಕುತ್ತಾರೆ. ಈ ಸುಪರ್ ತೆರಿಗೆಯಿಂದ ಉತ್ಪತ್ತಿ 52,610,000 ಪೌಂಡುಗಳು! ಇದೇ ವರ್ಷ 130,000 ಶ್ರೀಮಂತರಿಗೆ ಸಾವಿನ ಸುಂಕ ವಿತ್ತು. ಇವರ ಒಟ್ಟು ಆಸ್ತಿ 51 ಕೋಟಿ ಪೌಂಡುಗಳಂತೆ! ಇದೀಗ ಕುಬೇರನ ರಾಜ್ಯ!!

ಪ್ರಪಂಚದ ಆರ್ಥಿಕ ಹೀನ ಸ್ಥಿತಿಯ ದೆಸೆಯಿಂದ ಯೂರೋಪಿಯನ್ ದೇಶಗಳು ಅಮೇರಿಕದ ಸಂಯುಕ್ತ ಸಂಸ್ಥಾನಕ್ಕೆ ಕೊಡಲಿಕ್ಕಿರುವ ಯುದ್ಧದ ಸಾಲವನ್ನು ಒಂದು ವರ್ಷದ ವರೆಗೆ ವಸೂಲು ಮಾಡುವದು ಬೇಡವೆಂದು ಅಮೇರಿಕ ಸರ್ಕಾರದ ಪ್ರೆಸಿಡೆಂಟರಾದ ಮಿ ಹೂವರವರು ಪ್ರಕಟಿಸಿರುವರು. ಇದು ಪ್ರಪಂಚದ ಹಲವು ದೇಶಗಳಲ್ಲಿ ಸಂತೋಷವನ್ನುಂಟುಮಾಡಿರುವುದಲ್ಲದೆ ವ್ಯಾಪಾರ ವ್ಯವಹಾರವೂ ಉತ್ತಮವಾಗುತ್ತಿದೆಯಂತೆ. ಇಂಗ್ಲೆಂಡ್, ಜರ್ಮನಿ, ಜಪಾನ್, ಆಸ್ಟ್ರೇಲಿಯ ಮುಂತಾದ ದೇಶಗಳು ಹೂವರವರ ಅಭಿಪ್ರಾಯಕ್ಕೆ ಒಪ್ಪಿಗೆಯನ್ನಿತ್ತಿರುವರು. ಫ್ರಾನ್ಸಿನವರು ಕೆಲವು ಶರತುಗಳ ಮೇರೆ ಒಪ್ಪಿಗೆಯನ್ನೀಯುವರೆಂದು ಸುದ್ದಿ.

ಹಿಂದೂದೇಶದಲ್ಲಿ ನಡೆಯುತ್ತಿರುವ ಅಂಗಡಿಗಳ ಪಿಕೆಟಿಂಗಿನ ವಿಷಯ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದಾಗ ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಮಿ. ಬೆನ್‌ರವರು ಹೀಗೆಂದರು—'ಕಾನ್‌ಪುರದಲ್ಲಿ ಒಬ್ಬ ಪರದೇಶೀ ಬಟ್ಟೆ ಅಂಗಡಿಯನ್ನು ಇಬ್ಬರು ಸ್ವಯಂ ಸೇವಕರು ಪಿಕೆಟ್ ಮಾಡುತ್ತಿದ್ದಾಗ್ಯೆ ಅಂಗಡಿಯವನು ಪಿಕೆಟ್ ಮಾಡಕೂಡದೆಂದು ಅವರನ್ನು ಗದರಿಸಿ, ಬೈದು, ನಿಂದಿಸಿದನು. ಸ್ವಯಂಸೇವಕರು ಏನೊಂದೂ ಹೇಳದೆ ಹೊರಟು ಹೋಗಿ ಒಂದು ಗಂಟೆಯ ನಂತರ ಆ ಅಂಗಡಿಯವನ ಹೆಂಡತಿ ಮಕ್ಕಳನ್ನು ಕರೆತಂದು ಅವರ ಸಮೇತ ಪಿಕೆಟ್ ಮಾಡಲಾರಂಭಿಸಿದರು. ವರ್ತಕನು ಬಾಯಿ ಮುಚ್ಚಿಕೊಂಡು, ಅಂಗಡಿಗೆ ಬೀಗ ಹಾಕಿ ಹೊರಟು ಹೋದನು. ಹೀಗಿರುವಾಗ್ಯೆ "ಪರದೇಶೀ ಬಟ್ಟೆಯನ್ನು ಹಿಂದೀಯರು ಕೊಂಡುಕೊಳ್ಳುವಂತೆ ಮಾಡುವುದು ಹೇಗೆ!?

೧೩ ಮಂದಿ ಗಂಡರನ್ನು ನೀಗಿದ ಸತಿ!

ಫ್ರಾನ್ಸಿನ ಒಂದು ಔಷಧಾಲಯದಲ್ಲಿ ಜನ್ನೈನ ಕ್ಯಾರೋಲೀನೆಂಬ ಹೆಸರಿನ ದಾದಿ (ನರ್ಸ್) ಇರುವಳು. ಕಳೆದ 14 ವರ್ಷಗಳಿಂದ ಈ ಸೌಭಾಗ್ಯ ಕಾಂಕ್ಷಿಣಿಯು ಲಗ್ನವಾಗಲು ಹವಣಿಸುತ್ತಿದ್ದಾಳೆ. ಈ 14 ವರ್ಷಗಳಲ್ಲಿ ಈ ಸೌಭಾಗ್ಯ ಕಾಂಕ್ಷಿಣಿಯ ಕೈಹಿಡಿಯ ಹೋಗಿ 12 ಮಂದಿ ವರರು ಕೈಲಾಸವನ್ನು ಕಂಡಿದ್ದಾರೆ. ಇಷ್ಟಾದರೂ ಜನ್ನೈನಳ ಲಗ್ನದ ಹುಚ್ಚು ಹೋಗಿರುವುದಿಲ್ಲ. ಇವಳ 12 ಮಂದಿ ಪತಿರಾಯರು ಪರಲೋಕವನ್ನೈದಿದ ಸಂಗತಿಯು ಮನೋರಂಜಕವಾಗಿದೆ. ಮನಗೊಟ್ಟು ಬರೆದರೆ ಕ್ಯಾರೋಲೀನಳ ಕಲ್ಯಾಣವೆಂಬುದೊಂದು ನವೀನ ಪುರಾಣವೇ ಆದೀತು.

1 ಮೊದಲು ಕ್ಯಾರೋಲೀನಳ ಕೈ ಹಿಡಿದವನು ಓರ್ವ ಆಂಗ್ಲೇಯ ದಂಡಾಳು. ಸೈನಿಕನು ಲಗ್ನವಾದೊಡನೆ ಯುದ್ಧಭೂಮಿಯಲ್ಲಿ 24 ತಾಸುಗಳೊಳಗೆ ವೀರಸ್ವರ್ಗವನ್ನೈದಿದನು.

2 ಮುಂದೆ ಕ್ಯಾರೋಲೀನಳು ಓರ್ವ ಫ್ರೆಂಚ್ ಸೈನಿಕನನ್ನು ವರಿಸಿದಳು. ವಧೂವರರು ಲಗ್ನವಿಧಿ ತೀರಿಸಲು ಚರ್ಚಿಗೆ ಹೋದರು. ಚರ್ಚಿನ ಮೇಲೆ ಬಾಂಬು ಬಿದ್ದು 70 ಜನರು ಮರಣ ಹೊಂದಿದರು. ಅವರಲ್ಲಿ ಕ್ಯಾರೋಲೀನಳ ದ್ವಿತೀಯ ಪತಿಯೂ ದುರ್ಮರಣಕ್ಕೀಡಾದನು.

3 ಕ್ಯಾರೋಲೀನಳ 3ನೇ ಪತಿಯು ರಷ್ಯಾ ಯುದ್ಧದಲ್ಲಿ ಹೋರಾಡಿ ರಣಭೂಮಿಯಲ್ಲಿ ದೇಹವಿಟ್ಟನು.

4ನೇ ಯುವನು ಕ್ಯಾರೋಲೀನಳನ್ನು ಮದುವೆಯಾದ ಮರುದಿನ ಮೋಟಾರಿನಲ್ಲಿ ಕುಳಿತುಕೊಂಡು ವಿಹರಿಸುತ್ತಿರುವಾಗ ಒಂದು ... ವ ... ಮಾಡಿಕೊಂಡು ಮೃತನಾದನು.

5ನೇ ಪತಿಯು ಕ್ಯಾರೋಲೀನಳ ಲಗ್ನಕ್ಕಾಗಿ ಸಾಕಣೆ ನಡೆಸಿದ್ದ ... ಕುಡಿದು ಬಿಗಡು ಬಿದ್ದ.

6ನೇ ಪತಿಯು ಅಕಸ್ಮಾತ ಉಗಿಬಂಡಿಯ ಬಾಯಿಗೆ ಬಿದ್ದು ಸತ್ತನು.

7ನೇ ಪತಿಯು ಕ್ಯಾರೋಲೀನಳನ್ನು ಮದುವೆಯಾಗಿ ಕೆಲಕಾಲ ಅವಳ ಸುಗಸುಖವನ್ನನುಭವಿಸಿದನು. ಆದರೆ ಆಲ್ಪ್ಸ ಪರ್ವತದಲ್ಲಿಯೇ ಬಿರುಸು ಒಂದು ಅವನ ... ಏನೇನೋ ... ಕೂಡಲೇ ಅವನು ಆತ್ಮಹತ್ಯ ಮಾಡಿಕೊಂಡನು.

8ನೇ ಪತಿಯು ... ಜ್ವರದಿಂದ ಸ್ವರ್ಗಸ್ಥನಾದನು.

9ನೇ ಗಂಡನು ಮೋಟಾರಿನಲ್ಲಿ ಕುಳಿತುಕೊಂಡು ಹೋಗುತ್ತಿದ್ದ ... ಇವನ ಗಾಡಿಯು ... ತಪ್ಪಿದ್ದರಿಂದ ... ಕಾಲಾಧೀನನಾದನು.

10ನೇ ... ಕತ್ತಲೆಯಲ್ಲಿ ಎತ್ತಲೋ ಹೊರಟಿದ್ದಾಗ ಕಳ್ಳನೆಂದು ... ಪೋಲೀಸನೆಂದು ತಿಳಿದು ಗುಂಡು ಹಾಕಿ ಇವನನ್ನು ಕೊಂದನು.

11ನೇ ಗಂಡನು ಕ್ಯಾರೋಲೀನಳ ಕೈಹಿಡಿಯಬೇಕೆಂದು ಒಕ್ಕೀ ಅಚುರೆಯಿಂದ ಹೊರಟ ಉಗಿಗಾಡಿಯನ್ನು ಹತ್ತಲು ಹೋಗಿ ಕಾಲ ಜಾರಿ ಬಿದ್ದು ಪರಲೋಕದಲ್ಲಿ ಎದ್ದ.

12 ಒಬ್ಬ ಅರ್ಧಂಭಟ್ಟನು ಕ್ಯಾರೋಲೀನಳನ್ನು ಮೋಹಿಸಿದ. ಇವನ ಆಕಾರವನ್ನು ಕಂಡು ಕ್ಯಾರೋಲೀನಳು 'ಏನು ಗುಡಾಣವಾಗಿರುವೆಯಲ್ಲ!' ಎಂದು ಅಪಹಾಸ್ಯಮಾಡಿದಳು. ವಧುವು ಮಾಡಿದ ಅಪಹಾಸ್ಯದಿಂದ ನೊಂದು ಅರ್ಧಂಭಟ್ಟನು ಮೈ ಇಳಿಸಿಕೊಳ್ಳಲು ಯತ್ನಮಾಡಹತ್ತಿದನು. ಅದರಲ್ಲಿ ಏನು ಹೆಚ್ಚುಕಡಿಮೆಯಾಯಿತೋ ಅವನೂ ತನ್ನ 12 ಜನ ಅಣ್ಣಗರು ಹಿಡಿದ ದಾರಿ ಹಿಡಿದು ನಡೆದ. ಕ್ಯಾರೋಲೀನಳು ಇಷ್ಟಾದರೂ ಲಗ್ನದ ಹಂಬಲವನ್ನು ಬಿಟ್ಟಿರುವದಿಲ್ಲವಂತೆ! 13ನೇ ಗಂಡನನ್ನು ಹುಡುಕುತ್ತಿರುವಳಂತೆ!!

ವೈ. ಸ್ವಾ.

ಸನ್ಯಾಸಿಗಳೂ ಖಾದಿಯೂ

ಹುಬ್ಬಳ್ಳಿಯ ಮೂರು ಸಾವಿರ ಮಠದ ಶ್ರೀ ಜಗದ್ಗುರು ಗಂಗಾಧರ ಸ್ವಾಮಿಗಳವರ ಖಾದೀ ಪ್ರೇಮವು ಅನುಕರಣೀಯವಾಗಿರುವದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಖಾದಿಯ ಪವಿತ್ರತೆಯನ್ನು ಚನ್ನಾಗಿ ತಿಳಿದಿರುವ ಈ ಮಹಾಸ್ವಾಮಿಗಳು ತಾವು ಸ್ವತಃ ಖಾದಿಯನ್ನೇ ಧರಿಸಬೇಕೆಂದು ಬಲವಾದ ಆಜ್ಞೆಯನ್ನು ನೀಡಿರುವರು. ಮಠದೊಳಗಿನ ಮೂರ್ತಿಯೂ ಪವಿತ್ರವಾದ ಖಾದಿಯಿಂದಲೇ ಶೋಭಿಸುತ್ತಿರುವದು. ಶ್ರೀ ಸ್ವಾಮಿಗಳವರ ಮಠದಲ್ಲಿ ಸಂಗೀತ ಸಂಸ್ಕೃತ ಮೊದಲಾದ ಅಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳೂ ಸನ್ನಿಧಿಯ ಪರಿಚಾರಕ ಜಂಗಮಮೂರ್ತಿಗಳವರೂ ಇನ್ನುಳಿದ ಸೇವಕ ವರ್ಗದವರೂ ಸದಾ ಪವಿತ್ರವಾದ ಖಾದಿಯನ್ನೇ ಧರಿಸಿಕೊಂಡಿರುವದರಿಂದ ಅವರೆಲ್ಲರೂ ರಾಜಹಂಸಗಳೋಪಾದಿಯಲ್ಲಿ ರಾರಾಜಿಸುತ್ತಿರುವರು. ದರ್ಶನಕ್ಕೆಂದು ಹೋದ ನಮ್ಮಂಥ ದುರಾಭಿಮಾನಿಗಳೊಬ್ಬರು ಮಾತ್ರ ಮೈಮೇಲಿರುವ ವಿದೇಶೀ ... ಮೂಲಕ ಆ ರಾಜಹಂಸಗಳ ಸಮೂಹದಲ್ಲಿ ... ಕಾಣುವರು. ಅವರಿಗಾದರೂ ಜಗದ್ಗುರುಗಳವರ ಖಾದಿಯ ಮಹಿಮೆಯನ್ನೂ ಪವಿತ್ರತೆಯನ್ನೂ ತಿಳಿಹೇಳಿ ಒಲಿಸ್ತಾಡುವರು. ಒಟ್ಟಿನ ಮೇಲೆ ಜಗದ್ಗುರುಗಳವರು ವಿಶೇಷವಾಗಿ ನಮ್ಮ ಧರ್ಮ ಶೀಲಗಳ ಮೂಲ ತಳಹದಿಯಂದೂ ವಿದೇಶೀ ವಸ್ತ್ರಗಳನ್ನು ಧರಿಸಿದವನು ಎಂಥ ಆಚಾರವಂತನಿದ್ದರೂ ಆ ಸದಾ ಆಚಾರವು ನಿರರ್ಥಕವಾದದೆಂದೂ ಭಕ್ತವರ್ಗಕ್ಕೆ ಬೋಧಿಸುತ್ತಿರುವರಂತೆ. ಧನ್ಯರು! ಈ ನವ್ಯ ಜಗದ್ಗುರುಗಳವರು ಪರಮ ಧನ್ಯರು!

ವಿ. ಕ.

ಆಶ್ಚರ್ಯಲಹರಿ.

ಯಾಂತ್ರಿಕ ಮನುಷ್ಯ

ಅಮೇರಿಕೆಯ ಶಾಸ್ತ್ರಜ್ಞರು ಒಬ್ಬ ಕೃತ್ರಿಮ ಅಥವಾ ಯಾಂತ್ರಿಕ ಮನುಷ್ಯನನ್ನು ತಯಾರಿಸಿದ್ದಾರೆ. ಆ ಮನುಷ್ಯನ ಹೆಸರು ಮಿ. ಪ್ರೊಕಲಾಯಿಟ'. ಈ ಯಾಂತ್ರಿಕ ಮನುಷ್ಯನಿಗೆ ಎಲ್ಲವೂ ತಿಳಿಯುತ್ತದೆ. ಅಪ್ಪಣೆಯಂತೆ ಎಲ್ಲ ಕೆಲಸವನ್ನೂ ಮಾಡುತ್ತಾನೆ. ಬಾಯಿಂದ ಹೇಳಿದುದೆಲ್ಲ ಅವನಿಗೆ ತಿಳಿಯುವುದು. ಅವನು ಕುಳಿತಿದ್ದರೆ ಅಪ್ಪಣೆಯಾದ ಕೂಡಲೇ ಎದ್ದು ನಿಲ್ಲುವನು. ಪುನಃ ಕೂಡ್ರುವನು. ಗಾಯನಮಾಡುವನು. ಮಾತಾಡುವನು. ಸಿಗರೇಟು ಸೇದುವನು. ಬಂದೂಕವನ್ನು ಎಳೆಯುವನು. ದೀಪಹಚ್ಚುವನು. ದೀಪವನ್ನು ನಂದಿಸುವನು. ಹೀಗೆ ವಿದ್ಯುಚ್ಛಕ್ತಿಯಿಂದ ನಡೆಯುವ ಕೆಲಸಗಳನ್ನೆಲ್ಲ ಮಾಡುವನು. ಯಂತ್ರಸಹಾಯದಿಂದ ನಡೆಯುವ ಎಲ್ಲ ಕೆಲಸಗಳನ್ನೂ ಮಾಡುವನು. ಕೆಲಸ ಮಾಡುತ್ತಿರುವಾಗ ಹಾಡುವುದು ಸಿಗರೇಟ್ ಸೇದುವುದು ಮಾತಾಡುವದು ನಡೆದೇ ಇರುತ್ತವೆ. ಕೈಗಾರಿಕೆಯ ಕ್ಷೇತ್ರದಲ್ಲಿ ಅಥವಾ ಪ್ರಯೋಗಶಾಲೆಯಲ್ಲಿ ಮನುಷ್ಯನಿಂದ ಆಗುವ ಎಲ್ಲ ಕೆಲಸಗಳನ್ನು ಅವನು ಸುವ್ಯವಸ್ಥಿತವಾಗಿ ಮಾಡುವನು. ಈತನು ಬ್ಯಾಂಕುಗಳನ್ನು ಕಳ್ಳರಿಂದ ರಕ್ಷಿಸುವನು. ಉಕ್ಕಿನ ಭಟ್ಟಿಯಲ್ಲಿ ಅಂದರೆ ಮನುಷ್ಯರು ಹೋಗಲು ಶಕ್ಯವಿಲ್ಲದಿದ್ದಲ್ಲಿ ಕೆಲಸಮಾಡುವನು. ಈ ಯಾಂತ್ರಿಕ ಮನುಷ್ಯನಿಂದ ಅಮೇರಿಕೆಯಲ್ಲಿ ವೈಮಾನಿಕ ಬಾದರದ ಅನಾವರಣ ಸಮಾರಂಭವು ನೆರವೇರಿಸಲ್ಪಟ್ಟಿತು. ಆಗ ಈತನು ವಿಮಾನವನ್ನೇರುವ ಪ್ರಯಾಣಿಕರನ್ನು ಕರೆದು ಅವರಿಗೆಲ್ಲ ಎತ್ತರಿಕೆ ಕೊಟ್ಟನು. ಆ ಸಮಯಕ್ಕೆ ಈತನು ಒಂದು ಸುಂದರವಾದ ಭಾಷಣಮಾಡಿದನು.'

ವೈ. ಸ್ವಾ.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಮಡಿಕೇರಿ ಸಹಕಾರ ಸ್ಟೋರ್

ಅಯ್ಯಾ,

ಮಡಿಕೇರಿಯಲ್ಲೊಂದು ಸಹಕಾರ ಸ್ಟೋರು ರಿಜಿಸ್ಟರಾಗಿದೆ ಎಂದು ಮೊದಲೇ ತಿಳಿದಿದ್ದೆನು. ಈಚೆಗೆ ಕೆಲವು ... ರೆ 10–12 ಮೆಂಬರುಗಳು ಸೇರಿ ತಮ್ಮ ತಮ್ಮನ್ನೂ ತ... ಗೆ ಬೇಕಾದವರನ್ನೂ ಕಮಿಟಿ ಪ್ರೆಸಿಡೆಂಟರು ಸೆಕ್ರೆಟರಿ ವಗೈರೆಯಾಗಿ ಚುನಾಯಿಸಿಕೊಂಡಿರುವರೆಂದು ತಿಳಿಯುತ್ತೇನೆ. ಈ ಸ್ಟೋರು ಮಡಿಕೇರಿ ಯೂನಿಯನ್ನಿಗೊಳಪಟ್ಟ ಎಲ್ಲಾ ಸಂಘಗಳಿಗೂ ಮತ್ತು ಪಟ್ಟಣಿಗರಿಗೂ ಬೇಕಾಗಿರುವುದಾಗಿದೆ. ಜನರಲ್ ಮೀಟಿಂಗನ್ನು ತಮ್ಮ ಮನಬಂದಂತೆ ಹತ್ತನ್ನೆರಡು ಮೆಂಬರುಗಳಿಂದ ನಡೆಸುವದರಲ್ಲಿ ಅರ್ಥವಿಲ್ಲ. ಸ್ಟೋರನ್ನು ಚೆನ್ನಾಗಿ ನಡೆಸುವ ಬಗ್ಗೆ ಮತ್ತು ಎಲ್ಲರಲ್ಲಿಯೂ ಉತ್ಸಾಹವನ್ನು ಹುಟ್ಟಿಸುವ ಬಗ್ಗೆ ಈಗ ಇರುವ ಹಂಗಾಮಿ ಕಮಿಟಿಯವರು ಪುನಹ ಒಂದು ಜನರಲ್ ಮೀಟಿಂಗನ್ನು ಮಡಿಕೇರಿಯಲ್ಲಿ ಮಾಡಬೇಕಾಗಿಯೂ ಮೀಟಿಂಗಿನ ದಿನವನ್ನು ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿಯೂ, ಆದಷ್ಟು ಬೇಗನೆ ಎಲ್ಲರನ್ನೂ ಬರಮಾಡಿ ಸ್ಟೋರಿನ ಕೆಲಸವನ್ನು ಅತಿ ಉತ್ಸಾಹದಿಂದ ಜಯಪ್ರದವಾಗಿ ಮಾಡಬೇಕೆಂದು ಕೋರುವ,

'ಪಟ್ಟಣಿಗ'

ಕಾನ್ವೆಂಟ್ ಬೋರ್ಡಿಂಗ್ ಮನೆ

ರೆವರೆಂಡ್ ಮದರವರೇ

ನಾವು ನಮ್ಮ ಮಕ್ಕಳನ್ನು ತಮ್ಮ ಸ್ಕೂಲಿಗೆ ವಿದ್ಯಾರ್ಜನೆಗೆ ಕಳುಹಿಸುವುದು ಸರಿಯಷ್ಟೆ. ನಾವು ನಮ್ಮ ಮಕ್ಕಳನ್ನು ಬೋರ್ಡರುಗಳಾಗಿಯೂ, ಇನ್ನು ಕೆಲವರು ತಮ್ಮ ಮಕ್ಕಳನ್ನು ಡೇ ಸ್ಕಾಲರುಗಳಾಗಿಯೂ ಕಳುಹಿಸುತ್ತಾರೆ. ಹೀಗೆ ಕಳುಹಿಸಿದ ಮಕ್ಕಳಿಗೆ ತಾವು ತುಂಬಾ ಮುತುವರ್ಜಿಯಿಟ್ಟು ವಿದ್ಯೆಯನ್ನು ಕಲಿಸುತ್ತೀರಿ. ಇದಕ್ಕೆ ನಮ್ಮ ವಂದನೆಗಳು.

ಇದರ ಮಧ್ಯೆ ಧನ ಧಾನ್ಯಗಳ ಬೆಲೆಯು ಕಡಿಮೆಯಾಗಿದೆ. ಆದರೂ ಕೂಡ ಪ್ಲೇಗಿನ ಗಲಾಟೆಯಾಗಿ ಕೆಲಮಟ್ಟಿಗೆ ತೊಂದರೆಯಾಗಿದ್ದಿತು. ಇನ್ನಾದರೂ ತಮ್ಮ ಬೋರ್ಡಿಂಗಿನಲ್ಲಿ ಚಾರ್ಜನ್ನು ಕಡಿಮೆ ಮಾಡಲಾರಿರಾ? ಅಥವಾ ಕಮ್ಮಿ ಮಾಡಲಾರದೆ ಇದ್ದರೆ ಬೇರೆ ಉತ್ತಮವಾದ ಊಟ ಉಪಚಾರವನ್ನಾದರೂ ಕೊಡಬೇಕೆಂದು ನಮಗಳ ಕೋರಿಕೆ.

ಮತ್ತೊಂದು ವಿಷಯವನ್ನು ಹೇಳಲಿಚ್ಛಿಸುವೆನು. ತಾವೇನೋ ವೈರಾಗ್ಯವನ್ನು ಕೈಕೊಂಡು ಬಂಧು ಬಳಗದ ಮೇಲಿರತಕ್ಕ ಪ್ರೇಮವನ್ನು ಬಿಟ್ಟು ಬ್ರಹ್ಮಚರ್ಯವನ್ನು ಕೈಕೊಂಡಿರುವಿರಿ. ಇದು ಸ್ತುತ್ಯಾರ್ಹವೇ ಸರಿ. ಆದರೆ ನಿಮ್ಮಲ್ಲಿ ಓದತಕ್ಕ ಮಕ್ಕಳಿಗೆ ಹೀಗೆ ಮಾಡಲು ಸಾಧ್ಯವಿಲ್ಲ. ಅವರಿಗೆ ಬಂಧುಗಳ ಮೇಲೆ ಇರತಕ್ಕ ಪ್ರೇಮವು ಹೆಚ್ಚು. ... ಎಲ್ಲೂ ಅಲ್ಲಿಯೇ ಬೋರ್ಡರುಗಳಾಗಿರತಕ್ಕವರಿಗೆ ತಮ್ಮ ಬಂಧುಗಳು ಎಂದರೆ ಅಷ್ಟು ಪ್ರೇಮ. ಅವರೊಡನೆ ಎಷ್ಟು ಮಾತಾಡಿದರೂ ಸಾಲದು. ಏನಾದರೂ ಬಂಧು ವಾತ್ಸಲ್ಯವಲ್ಲವೇ? ಹೀಗಿರುವಲ್ಲಿ ನೀವು ಮಕ್ಕಳಿಗೆ ಹೇಳುವುದೇನೆಂದರೆ– 'ನೀವು ನಿಮ್ಮ ಬಂಧುಗಳ ಎಂದರೆ ವಾರ ನಿಮಿಷ ಮಾತಾಡಬ... ಟ್ಟು ಹಿಂತಿರುಗಬೇಕೆಂತ'. ಏನು ನಮ್ಮ ಮಕ್ಕಳೊಡನೆ ಮಾತಾಡಲೂ ನಮಗೆ ಸ್ವಾತಂತ್ರ್ಯವಿಲ್ಲವೇ? ಆದ್ದರಿಂದ ಮದರೇ, ದಯವಿಟ್ಟು ಈ ಕಟ್ಟಳೆಯನ್ನು ತೆಗೆದು ಹಾಕಿ ಅದರ ಬದಲು ಮುಂದಿನ ಮದರುಗಳು ಮಾಡುತ್ತಿದ್ದಂತೆ ಮಕ್ಕಳಿಗೆ ಅವರ ಬಂಧುಗಳನ್ನು ಕರೆದುಕೊಂಡು ಕ್ಲಾಸು ರೂಮಿನಲ್ಲಿ ಮಾತಾಡುವ ಹಾಗೆ ಅಪ್ಪಣೆ ಕೊಡಬೇಕಾಗಿ ಕೋರಿಕೆ. ದಯವಿಟ್ಟು ಇದನ್ನು ಉಪೇಕ್ಷೆ ಮಾಡಬಾರದಾಗಿ ಪುನಃ ಕೇಳಿಕೊಳ್ಳುವೆನು.

'ಮಕ್ಕಳ ...

ಸಿಬ್ಬಂದಿ ಖೋತೆ

ಅಯ್ಯಾ,

ಇಡೀ ಇಂಡ್ಯಾ ದೇಶದಲ್ಲು ಹೇಗೋ ಹಾಗೆ ಕೊಡಗು ಸರಕಾರವು ಕೂಡ ಸರಕಾರಿ ಸಿಬ್ಬಂದಿ ಖೋತೆ ಮಾಡ ಹೊರಟಿದ್ದು ಸಹಜವಾಗಿದೆ. ಅಲ್ಲದೆ ಸಿಬ್ಬಂದಿ ಖೋತೆಯನ್ನು ಸರಕಾರದವರೂ ಮುಂದಾಳುಗಳೂ ಮಾಡಲು ಕೊಡಗಿನ ಪರಿಸ್ಥಿತಿ, ವಿಸ್ತೀರ್ಣ ಜನಸಂಖ್ಯೆ ಇವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆಯೂ ಜನಸಮೂಹದ ಅಭಿಪ್ರಾಯಕ್ಕೆ ತಕ್ಕದಾದ ಇಲಾಖೆಗಳ ಸ್ಥಿತಿಯನ್ನು ಆಲೋಚಿಸದೆಯೂ ಮಾಡುವುದು ನ್ಯಾಯವಲ್ಲ. ಸಿಬ್ಬಂದಿ ಖೋತೆ ಎಂದರೆ ... ನಿಂತಿರುವ ಮರದ ... ಹಿಂದು ... ಎಂದು ನೋಡದೆ ಕೊಂಬೆಗಳನ್ನು ಕಡಿದು ಹಾಕುವ ತತ್ವದಿಂದ ಗಣನೆ ಹಾನಿಯೇ ಹೆಚ್ಚಾಗುವದು. ಕೇವಲ ನೆರೆ ಜಿಲ್ಲೆಯ ... ರನ್ನು ತೆಗೆದುಕೊಂಡು ಅದರ 33 ಲಕ್ಷ ಜನ ಸಂಖ್ಯೆ ... ಕೊಡಗಿನ 1½ ಲಕ್ಷ ಜನ ಸಂಖ್ಯೆಗೆ ಹೋಲಿಸಿ ನೋಡಿದರೆ ... ಯ ½ನೇ ಭಾಗದ ಸಿಬ್ಬಂದಿ ಮಾತ್ರ ಈ ಕೊಡಗಿಗೆ ಸಾಕಾಗಿದೆ. ಈಗ ಇರುವದು ನೋಡಿದರೆ ಅಲ್ಲಿ ... ನ ಇಲಾಖೆಗಳೂ ನೆ... ಮಾತ್ರಕ್ಕೆ ಇಲ್ಲಿ ಇವೆ. ... ಅಂಥಾ ಬಂದೊಂದು ಇಲಾಖೆಗೆ ನಾಲ್ಕಾರು ತಲೆ ... ದ್ಯೋಗಸ್ಥರು ಇರುವದು ಕೇವಲ ಅನ್ಯಾಯವಾಗಿದೆ.

ಇದನ್ನು ತಪ್ಪಿಸಲು ನಾಲ್ಕಾರು ಇಲಾಖೆಗಳನ್ನು ಒಬ್ಬ ಮೇಲಧಿಕಾರಿಯ ಕೈಕೆಳಗೆ ಇಟ್ಟರೆ ನಾನೇ ರಾ... ಮಂತ್ರಿ, ನಾನೇ ಜವಾನ ಎಂಬದಾಗಿ ಆಗುತ್ತ... ಸ್ವಲ್ಪಾ ತಪ್ಪಿಸಲು ನೋಡುವದು ಸಾಧಾರಣ ಕೆಲಸ ... ಎಂದು ಗೊತ್ತಿದೆ. ದೊಡ್ಡ ಪ್ರಾಂತ್ಯವಾದ ಮದ್ರಾಸಿನ ಸಿಬ್ಬಂದಿ ಖೋತೆಯ ಕೆಲಸವು ಇಲ್ಲಿ ಕಷ್ಟಕರ ... ಇದರ ವಿಷಯ ಬಂದೆರಡು ಅಭಿಪ್ರಾಯಗಳನ್ನು ಕೇಳ... ದಾಳುಗಳಿಗೆ ನಮ್ಮ ಸರಕಾರವು ಅವಕಾಶ ಕೊಟ್ಟರೆ ... ಕೃತ್ಯವು ಕಾಲು ಇಡುತ್ತದೆ. ಇರುವ ಸಬ್‌ಜಡ್ಜ ... ನ್ನು ತೆಗೆದು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿ ... ನ್ನು ನಿರ್ಮಿಸಿ ಕೊಡಬೇಕೆಂಬ ಅಭಿಪ್ರಾಯದ ... ದು ಹೋಗುತ್ತೆ. ಇಂಥಾ ನಗೆಗೇಡಿತನದ ಅಭಿಪ್ರಾ... ಕೊಡುವದರಿಂದ ಸರಕಾರಕ್ಕೆ ಮುಂದಾಳುಗಳ ... ತಕ್ಕ ವಿಶ್ವಾಸವು ಕಡಿಮೆಯಾಗುತ್ತೆ. ಇದರಿಂದ ... ಕಲೂ ಹಾನಿಯೇ ಹೆಚ್ಚಾಗುತ್ತದೆ. ಸಿಬ್ಬಂದಿ ಖೋ... ಅಭಿಪ್ರಾಯವನ್ನು ಕೊಡಲು ಸರಕಾರವು ಒಂದೇ ... ಪ್ರಾಯಕ್ಕೆ ಸೇರಿದ ಕೌನ್ಸಿಲ್ ಮೆಂಬರುಗಳನ್ನೂ ... ಪಟ್ಟಣದಲ್ಲಿ ಕಮಿಶನರಿಗೆ ಹತ್ತಿರ ಇರುವ ನಾಲ್ಕಾರು ... ವ ಮುಖಂಡರನ್ನೂ ಮಾತ್ರ ಕೇಳಿರುವದೇ ಇಂಥಾ ನಗೆ... ಅಭಿಪ್ರಾಯಕ್ಕೆ ಕಾರಣವಾಗಿದೆ. ನಿಜವಾಗಿಯೂ ... ರೆ ರಾಜ್ಯಾಡಳಿತೆಯ ಕಷ್ಟ ಸುಖಗಳು ಹಳ್ಳಿಗಾಡ... ಅನುಭವಕ್ಕೆ ಹೆಚ್ಚಾಗಿ ಬರುವಂತಿದೆ. ಅಂಥವ... ಅಭಿಪ್ರಾಯವನ್ನು ಸಹ ಈ ಬಿಕ್ಕಟ್ಟಿನ ಕೆಲಸದಲ್ಲಿ ... ಕೊಳ್ಳುವದು ನ್ಯಾಯವಾಗಿದೆ. ಕಾಂಗ್ರೆಸ್ ಸ... ಮುಂದಿನ ಸರಕಾರದ ಭಾರವನ್ನು ಹೊರುತ್ತಾರೆಂ... ಸಂದೇಹವಿಲ್ಲ. ಇಂಥಾ ಕಾಂಗ್ರೆಸ್ಸೇ ಇಡೀ ಹಿಂ... ವನ್ನು ಆತಕ್ಕೆ ಮುಂದಿನ ಮುಖ್ಯ ಉದ್ಯೋಗಸ್ಥ... ವೂ ಕೂಡ ಮಹೆಯಾನ 500/–ರೂಪಾಯಿಗಳಿಗೆ ... ರಬಾರದೆಂದು ತೀರ್ಮಾನಿಸಿರುವಾಗ್ಯೆ, ಇದು ಗೊತ್ತಿ... ಮ್ಮ ಕೊಡಗು ಪತ್ರಿಕೆಯು ಹಿಂದುಸ್ಥಾನದ ಬಾ... ಯಾದ ಮಲಬಾರಿನ ½ನೇ ಭಾಗದ ಜನಸಂಖ್ಯೆಯ... ಟ್ಟ ದೇಶದ ಮುಖ್ಯ ಅಧಿಕಾರಿಗೆ ಒಂದು ಸಾವಿ... ಬಳ ಕೊಡಲು ಅಭಿಪ್ರಾಯ ಕೊಟ್ಟಿರುವದಲ್ಲದೆ ಇ... ಲ್ಕಾರು ಜನ ಉದ್ಯೋಗಸ್ಥರಿಗೆ ಕಾಂಗ್ರೆಸಿನವರು ... ಕ್ಕ ಮೈಸೂರಾಯರ 500/–ರೂ ಸಂಬಳವನ್ನು ... ರುವುದು ... ಹಾಗಾದರೆ ಮಲೆಯಾಳದ ಕಲೆಕ್ಟರಿಗೆ ... ಬಳ? ಮದ್ರಾಸು ಗವರ್ನರಿಗೆ ಎಷ್ಟು ಸಂಬಳ ... ದು ಎಂಬ ಅಂದಾಜು ಪಟ್ಟಿಯನ್ನು ಕೊಡಗು ಪ... ಮಾಡಬೇಕಾಗಿದೆ. ಹ್ಯಾಗೂ ಈ ಪತ್ರಿಕೆಯು ದ... ಸರ್ಕಾರಿಗೆ ತಿಂಗಳಿಗೆ ಸದ್ಯ 1 ಲಕ್ಷ ರೂ ಸಂ... ಬೇಕಾಗಿದೆ. ಇದನ್ನು ಈ ಪತ್ರಿಕೆಯೇ ಕೊಡಬೇಕಲ್ಲ... ದಿನ ಇಂಡ್ಯಾ ಸರಕಾರವು ಕೊಡಲಿಕ್ಕಿಲ್ಲ. ... ಗದ ಮಾತು. ಕೊಡಗನ್ನು ಮದ್ರಾಸಿನ ಒಂದು ... ಸಬ್ ಡಿವಿಜನ್ ಎಂಬ ಭಾವನೆಯಿಂದ ಮಾತ್ರ ... ತೆಯ ಕೆಲಸವನ್ನು ಮುಂದುವರಿಸಿದರೆ ಕೆಲಸ ... ಕೊಡಗು ಒಂದು ಪ್ರಾಂತೀಕ ಸರಕಾರವೆಂಬ ಭಾ... ಎಲ್ಲಾ ವೈಭವಗಳಿಂದ ಕೂಡಿ ಕೆಲಸ ಮಾಡಿದರೆ ... ಗಲಿಕ್ಕಿಲ್ಲ. ಒಟ್ಟಾರೆ ಹೇಳುವದಾದರೆ ಕೊಡಗ... ವರು 500/–ರೂಪಾಯಿಗಿಂತ ಕಮ್ಮಿಯಾಗಿ ಸಂ...

[illegible] ಅವರ ಯೋಗ್ಯತೆಗೆ ತಕ್ಕುದಾಗಿ ತೋರಬಹುದು. 500/—ರೂ ಗಿಂತ ಹೆಚ್ಚಾಗಿ ಈ 15 ನೈಲು ಉದ್ದ [illegible] ದೇಶದ ಆಡಳಿತ ನಡೆಸುವವರಿಗೆ ಕೊಡುವುದು [illegible] ಯೋಗ್ಯತೆಗೆ ಹೆಚ್ಚಾಗಿಯೂ ಕಾಣಬರುತ್ತದೆ! [illegible] ಹೀಗೆ ಹಾಗೆ? ಕಾಣಬರುವುದು ಒಂದೇ, ಕೊ[illegible] ವದರಾದರೂ ಮದ್ರಾಸಿನ ಒಂದು ಜಿಲ್ಲೆಗೆ ಸ್ವತ್ರೀ [illegible] ಡಿವಿಜನ್ ಆಗಿ, ನಮ್ಮ ದೇಶದ ಎಲ್ಲಾ ಹಕ್ಕು[illegible]ನ್ನು ಉಳಿಸಿಕೊಂಡು, ಸೇರಿಸಿ, ಹಾಲಿ ಇರುವ ಕೊ[illegible] ನಿಬಂಧನೆಗಳಿಗೆ ಅನುಗುಣವಾಗಿ ಮೇಲ್ವಿಚಾರ[illegible] ಈ ಬಗ್ಗೆ ಮೇಲ್ವಿಚಾರ ಖರ್ಚಿಗೆ ಮದ್ರಾಸು ಸರಕಾ[illegible] ನಿರ್ಧಂಬಾದ ಮೊಬಲಗು ಕೊಡುವಂತೆ ಏರ್ಪಾಡು ಮಾಡು[illegible] ಉತ್ತಮವಾಗಿ ತೋರಿ ಬರುತ್ತೆ. ಇದರಿಂದ ನಮ್ಮ ಉ[illegible] ಮದ್ರಾಸು ಪ್ರಾಂತೀಯ ಸರಕಾರದಲ್ಲಿ ಹೆಚ್ಚಿನ [illegible] ಉದ್ಯೋಗಗಳಿಗೂ ಅವಕಾಶವಾಗುವುದು. ಒಳ [illegible]ನೆಲ್ಲಾ ದೇಶೀಯರಲ್ಲಿ ಉಳಿಯಬಹುದು. ಮ[illegible] ಮದ್ರಾಸಿನವರಿಗೆ ಮಾತ್ರ ಎಂಬ ತಕ್ಕವು ಬಿಟ್ಟು ಮ[illegible] ಕೊಡಗಿನವರಿಗೂ ಇದೆ ಎಂಬಂತೆ ಮಾಡಿಕೊಳ್ಳಬಹುದು. [illegible] ಯೂನಿವರ್ಸಿಟಿಗಳ ಪ್ರಯೋಜನ ಹೊಂದಬಹುದು. [illegible] ದೇಶದ ಎಲ್ಲಾ ಇಲಾಖೆಗಳೂ ಮದ್ರಾಸಿನ ಆ[illegible] ಇಲಾಖೆಯ ವಿಶೇಷಜ್ಞರಾದ ಶಾಸ್ತ್ರಜ್ಞರಿಂದ ಪರಿಶೋ[illegible] ವ್ಯವಸಾಯ ಇಲಾಖೆ ಎನೆಂದು ಗೊತ್ತಿಲ್ಲದ, [illegible] ಇಲಾಖೆಯ ವೃದ್ಧಿಯ ಹೆಸರು ಕೂಡ ಗೊತ್ತಿಲ್ಲದ [illegible] ತಂತ್ರದ ಉತ್ತೀರ್ಣತೆಯಿಲ್ಲದ, ಆಬ್ಕಾರಿ [illegible] ತಿಳಿಯದ, ವಿದ್ಯಾ ಇಲಾಖೆಯ ಪಾಂಡಿತ್ಯ [illegible] ದೊರೆಗಳುಗಳ ಮೂಲಕ ಸ್ವಹಿಂದವೇ [illegible] ಅಭಿವೃದ್ಧಿಯ ಇಲಾಖೆಗಳು ನ್ಯಾಯವಾಗಿಯೂ ಆ ಇಲಾಖೆ[illegible]ಗಳನ್ನು ಇಟ್ಟಿರುವ ಉದ್ದೇಶವು ನೆರವೇರ ಪ್ಪು[illegible] ಈಗಿರುವ [illegible] ಪ್ರಸಂಗದಲ್ಲಿರುವ ಎಲ್ಲಾ ಇಲಾಖೆಗಳ ನಮ್ಮ ಈ ದೇಶದಲ್ಲಿವೆ.

'ಕಾರ್ಯಕರ್ತ'

ಗಳ ನೇಮಕದ ವಿಷಯದಲ್ಲಿ ದೇಶದ ಜನರ ಅಭಿಪ್ರಾಯವು ಹೇಗಿದೆಯೆಂದು ಸರ್ಕಾರಕ್ಕೆ ತಿಳಿಸಬೇಕಾದದ್ದು ಅತ್ಯಂತ ಅವಶ್ಯಕ. ಯಾವ ದೇಶದಲ್ಲಿಯೇ ಆಗಲೀ ಸರ್ಕಾರದ ಅಧಿಕಾರವು ಅನೇಕ ಕಾಲಗಳ ವರೆಗೆ ಒಂದೇ ಪಂಗಡದವರ ಅಥವಾ ಒಂದೇ ಕೋಮಿನವರ ಕೈಯ್ಯಲ್ಲಿರುವುದು ದೇಶದ ಏಳಿಗೆಗೆ ಹಾನಿಕರ. ಅದರಿಂದ ಬೇರೆ ಪಂಗಡದವರು ಅತೃಪ್ತರಾಗಿ, ತಮ್ಮ ಹಕ್ಕನ್ನು ಸ್ಥಾಪಿಸಲಿಕ್ಕಾಗಿ ಹೊಡೆದಾಡುವ ಸಂದರ್ಭವು ಒದಗುವುದು. ಹೀಗೆ ಹೊಡೆದಾಡುವುದರಿಂದ ದೇಶದಲ್ಲಿ ಪಂಗಡ ಭೇದವು ಬಲಿತು ದೇಶದ ಅಭಿವೃದ್ಧಿಗೆ ಅದು ಯಾವಾಗಲೂ ಕುಂದುಕವನ್ನು ತರುವುದು. ಆದ್ದರಿಂದ [illegible]ದರಾಸು ಪ್ರಾಂತ್ಯದಲ್ಲಿಯೂ, ಹಿಂದೂದೇಶದ ಇತರ ಪ್ರಾಂತ್ಯಗಳಲ್ಲಿಯೂ ಎಲ್ಲಾ ಪಂಗಡದವರಿಗೂ ದೇಶದ ಆಡಳಿತದಲ್ಲಿ ಭಾಗಿಗಳಾಗುವ ಸಂದರ್ಭವನ್ನು ಆಗಾಗ್ಗೆ ಸರ್ಕಾರದವರು ಒದಗಿಸಿಕೊಡುತ್ತಿರುವರು.

ನಮ್ಮ ಕೊಡಗಿನಲ್ಲಿ ಈಗ ಅನೇಕ ವರ್ಷಗಳಿಂದ ಸರಕಾರದಲ್ಲಿ, ಅದರಲ್ಲೂ ಪೋಲೀಸು ಇಲಾಖೆಯಲ್ಲಿ ಮುಖ್ಯ ಉದ್ಯೋಗಗಳ ಪೈಕಿ ಶೇಕಡ 95ರಷ್ಟು ದೇಶದಲ್ಲಿ ಬಹುವಾಗಿ ಇರುವಂಥವರಿಂದ ಕೊಡಗರಿಗೆ [illegible] ದೊರಕಿವೆ. ಇದರಿಂದ ದೇಶದಲ್ಲಿ ಅಧಿಕ ಜನ ಸಂಖ್ಯೆ ಇರುವ ಕೊಡಗೇತರರಲ್ಲಿ ಬಹು ಮಟ್ಟಿಗೆ ಅತೃಪ್ತಿಯು ಉಂಟಾಗಿದೆ. ಅವರಿಗೆ ದೇಶದ ಆಡಳಿತದಲ್ಲಿ ಅವರ ಭಾಗವನ್ನು ಕೊಟ್ಟು ಸಲಿಸಬೇಕ [illegible] ಸರ್ಕಾರದವ[illegible] ದೇಶದ ಶಾಂತತೆಗೆ ಕ[illegible] ಒದಗುವುದರ[illegible] ಸಂಶಯ [illegible] ಈಗ ಆ ಬಗ್ಗೆ [illegible] ಹಕ್ಕಿಗಾಗಿ ಹೊಡೆದಾಡುವ ಸಂದರ್ಭವು ದೊರೆತಿದೆ. ಕೊಡಗೇತರರಲ್ಲಿ ಪ್ರಾಸಿಕ್ಯೂಟಿಂಗ್ ಅಥವಾ ಸರ್ಕಲ್ ಇನ್ಸ್‌ಪೆಕ್ಟರ ಕೆಲಸಕ್ಕೆ ಯೋಗ್ಯರಾದ ತರುಣರು ಅನೇಕರಿ[illegible] ಹೀಗಿರುವಾಗ ಈ ಎರಡು ಹುದ್ದೆಗಳ ಪೈಕಿ ಒಂದನ್ನಾದರೂ ಒಬ್ಬ ಕೊಡಗೇತರನಿಗೆ ಕೊಡತಕ್ಕದ್ದು ನ್ಯಾಯವಾಗಿದೆ. ಸರ್ಕಾರದವರು ದೇಶದಲ್ಲಿ ಶಾಂತತೆಯನ್ನು ಪರಿಪಾಲಿಸುವುದಕ್ಕೂ, ತಮ್ಮ ನ್ಯಾಯ ಪರಿಶೀಲತೆಯನ್ನು ತೋರ್ಪಡಿಸಲಿಕ್ಕೂ ಇದು ಒಳ್ಳೇ ಸಂದರ್ಭವಾಗಿದೆ. ಇಂಥಾ ಸಂದರ್ಭದಲ್ಲಿ ಸರ್ಕಾರದವರು ದೇಶದ ಸ್ಥಿತಿಯನ್ನು ಅರಿಯದಿದ್ದರೆ ಕೊಡಗೇತರರು ತಮ್ಮ ಅತೃಪ್ತಿಯನ್ನು ಬೇರೆ ವಿಧದಲ್ಲಿ ತೋರ್ಪಡಿಸುವ ಸಂದರ್ಭ ಒದಗುವುದು. ಆದರೆ ಸರ್ಕಾರದವರು ಅಂಥಾ ಸಂದರ್ಭಕ್ಕೆ ಎಡೆಕೊಡಲಾರರೆಂದು ನಂಬಿದ್ದೇನೆ.

ಅಲ್ಲದೆ ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ದೇಶದವರ ಮತ್ತು ಸರ್ಕಾರದವರ ಅವಗಾಹನೆಗೆ ತಂದುಕೊಡಬೇಕಾಗಿದೆ. ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ ಕೆಲಸಕ್ಕೆ ಉಮೇದ್ವಾರರಾಗುವವರು ಪ್ರಾಯದಲ್ಲಿ 25 ವರ್ಷಕ್ಕಿಂತ ಹಿರಿಯರಾಗಬಾರದೆಂದು ಒಂದು ಶರತ್ತನ್ನು ಇಡುವರೆಂಬ ವದಂತಿ ಇದೆ. ಹೀಗೆ ಅವರು ಶರತ್ತನ್ನು ಇಡುವುದು ಅನೇಕ ರೀತಿಯಲ್ಲಿ ಅನ್ಯಾಯವಾಗಿದೆ. ಸಾಧಾರಣವಾಗಿ 25 ವರ್ಷ ಪ್ರಾಯದೊಳಗೆ ಬಿ. ಎ., ಬಿ. ಎಲ್. ಪಾಸಾಗುವವರು ಬಹಳ ಕಮ್ಮಿ. ಹಾಗೆ ಪಾಸಾಗುವವರ ಪೈಕಿಯೂ ಕೂಡ ಎಲ್ಲರೂ ತಮ್ಮ ನಿಜವಾದ ಪ್ರಾಯವನ್ನು ಶಾಲೆಯಲ್ಲಿ ಕೊಡುವರೆಂಬುದು ಸಂಶಯಕರ. ಹೀಗೆ ಪ್ರಾಯದ ಶರತ್ತನ್ನು ಇಡುವುದರಿಂದ ನ್ಯಾಯವಾದ ಹುನಾವಣೆಗೆ ದಾರಿಯೇ ಇಲ್ಲದಂತಾಗುವುದು. ಏಕೆಂದರೆ—ಬಿ. ಎ., ಬಿ. ಎಲ್., ಪಾಸಾದವರ ಪೈಕಿ 25 ವರ್ಷಕ್ಕಿಂತ ಕಮ್ಮಿ ಪ್ರಾಯದವರು ಕೊಡಗಿನಲ್ಲಿ ಒಂದೆರಡು ಜನರು ಮಾತ್ರ ಇರಬಹುದು. ಉದಾಹರಣೆಗಾಗಿ ಈ ಪ್ರಾಯದೊಳಗೆ ಒಬ್ಬನೇ ಇರುವನೆಂದು ಭಾವಿಸುವ. ಹಾಗಿದ್ದರೆ ಚುನಾವಣೆಗೆ ಅವಕಾಶವೆಲ್ಲಿದೆ? ಬೇರೆ ಎಲ್ಲಾ ಯೋಗ್ಯತೆಗಳನ್ನು ಬಿಟ್ಟು ಪ್ರಾಯ ಒಂದನ್ನೇ ನೋಡಿ ಆತನಿಗೆ ಕೆಲಸ ಕೊಡಬೇಕಾಗುವುದು. ಆಗ ಬೇರೆ ಎಲ್ಲಾ ಅರ್ಹತೆಗಳಿಗೂ ಬೆಲೆಯಿಲ್ಲದೆ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ ಕೆಲಸಕ್ಕೆ ಪ್ರಾಯವೊಂದೇ ಬೇಕಾದ ಯೋಗ್ಯತೆಯಾಗುವುದು. ಇಂಥಾ ನೇಮಕವು ಎಷ್ಟರ ಮಟ್ಟಿಗೆ ತಪ್ಪೆಂದು ನಾನು ಇಲ್ಲಿ ಹೇಳಬೇಕಾಗಿಲ್ಲ. ಅಲ್ಲದೆ ಹೀಗೆ 25 ವರ್ಷ ಪ್ರಾಯವನ್ನು ಶರತ್ತಾಗಿ ಇಡುವುದರಿಂದ ಇನ್ನೊಂದು ಕೆಡುಕಿದೆ. ಇದರಿಂದ ಲಾಯರ್ ಕೆಲಸದಲ್ಲಿ ಒಂದೆರಡು ವರ್ಷದ ಅಥವಾ ಹೆಚ್ಚಿನ ಅನುಭವವಿರುವವರೆಲ್ಲರನ್ನೂ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ ಕೆಲಸಕ್ಕೆ ಅಯೋಗ್ಯರನ್ನಾಗಿ ಮಾಡಿದಂತಾಗುವುದು. ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ ಕೆಲಸವು ಪೋಲೀಸ್ ಇಲಾಖೆಯಲ್ಲಿದ್ದರೂ, ಅದು ನಿಜವಾಗಿ ಒಂದು ಜುಡಿಶಿಯಲ್ ಉದ್ಯೋಗವಾಗಿದೆ. ಇಂಥಾ ಕೆಲಸವನ್ನು ಲಾಯರ್ ಕೆಲಸದಲ್ಲಿ ಏನೂ ಅನುಭವವಿಲ್ಲದ ಹೊಸಬರಿಗೆ ಕೊಡುವುದು ಸರಿಯಲ್ಲ. ಆದ್ದರಿಂದ ಸರ್ಕಾರದವರು ಇಂಥಾ ಪ್ರಾಯದ ಶರತ್ತನ್ನು ಇಡ [illegible] ಒಂದು ವೇಳೆ ಇಟ್ಟಿದ್ದರೆ ಅದನ್ನು ಸದ್ಯ 30 ವರ್ಷಕ್ಕಾದರೂ [illegible]ಸುವುದು ಒಳ್ಳೇಯದಾಗಿದೆ.

ಒಟ್ಟಿನ ಮೇಲೆ ದೇಶದಲ್ಲಿ ಮುಖ್ಯವಾಗಿ ಕೊಡಗೇತರರಲ್ಲಿ ಉಂಟಾದ ಅತೃಪ್ತಿಯನ್ನು ಹೋಗಲಾಡಿಸಿ, ಶಾಂತತೆಯನ್ನು ಸ್ಥಾಪಿಸಲಿಕ್ಕಾಗಿ ಈಗ ಖಾಲಿ ಬೀಳಲಿಕ್ಕಿರುವ ಎರಡು [illegible] ಮುಖ್ಯ ಉದ್ಯೋಗಗಳ ಪೈಕಿ ಒಂದನ್ನಾದರೂ ಕೊಡಗೇತರರಲ್ಲಿ ಒಬ್ಬನಿಗೆ ಕೊಡ ತಕ್ಕದ್ದು. ಅಲ್ಲದೆ ಪ್ರಾಸಿಕ್ಯೂಟಿಂಗ ಇನ್ಸ್‌ಪೆಕ್ಟರ ಕೆಲಸಕ್ಕೆ ಸ್ವಲ್ಪವಾದರೂ ಅನುಭವವಿರುವವನೊಬ್ಬನು ಬೇಕಾದುದರಿಂದ 25 ವರ್ಷಕ್ಕಿಂತ ಹಿರಿದಿರಬಾರದೆಂಬ ಶರತ್ತನ್ನು ತೆಗೆದು ಹಾಕತಕ್ಕದ್ದು. ಇವೆರಡು ವಿಷಯಗಳನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡಾರೆಂತ ಭಾವಿಸುತ್ತೇನೆ.

'ನ್ಯಾಯವಾದಿ'

ಪೋಲೀಸು ಆಫೀಸರುಗಳ ನೇಮಕ

[illegible]ಯರೇ,

ನಮ್ಮ ಕೊಡಗಿನ ಪೋಲೀಸ್ ಇಲಾಖೆಯಲ್ಲಿ ಸದ್ಯದಲ್ಲಿಯೇ ಎರಡು ಆಫೀಸರುಗಳ ಹುದ್ದೆಯು ಖಾಲಿ ಬೀಳುತ್ತದೆಂದು ತಿಳಿದು ಬಂದಿದೆ. ಹಾಗೆ ಖಾಲಿ ಬೀಳುವ ಹುದ್ದೆಗಳ ಪೈಕಿ ಡಿಪ್ಟಿ ಸುಪರಿಂಟೆಂಡೆಂಟರ ಸ್ಥಳಕ್ಕೆ ಈಗ ಇರುವ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರನ್ನು ನೇಮಿಸುವರಾದರೆ ಒಬ್ಬ ಪ್ರಾಸಿಕ್ಯೂಟಿಂಗ್ ಮತ್ತು ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ ಎಂಬ ಸ್ಥಳಗಳಿಗೆ ಉಮೇದ್ವಾರರು ಬೇಕೆಂದು ಪ್ರಕಟಣೆ ಮಾಡುವರೆಂದೂ, ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ ಕೆಲಸಕ್ಕೆ ಒಬ್ಬ ಲಾಯರನ್ನು ನೇಮಕಮಾಡಬೇಕಾಗಿ ಸರ್ಕಾರದವರು [illegible]ಸಿರುವರೆಂದೂ ದೇಶದಲ್ಲೆಲ್ಲಾ ವರ್ತಮಾನವು ಹಬ್ಬಿದೆ. ಇಂಥಾ ಸಂದರ್ಭದಲ್ಲಿ ಉಮೇದ್ವಾರರು ಬೇಕಾಗಿರುವ ಎರಡು ಇನ್ಸ್‌ಪೆಕ್ಟರುಗಳ ಸ್ಥಳಗಳಿಗೆ ಹೊಸ ಆಫೀಸರು

ಸ್ವೀಕಾರ.

ಕಿರ್ಲೋಸ್ಕರ ವಾಡಿಯ ಕಿರ್ಲೋಸ್ಕರ ಕಂಪೆನಿಯ ವ್ಯವಸಾಯ ಮುಟ್ಟುಗಳ ಕ್ಯಾಟಲಾಗು ನಂ 4 ನಮ್ಮ ಕೈಸೇರಿದೆ. ಅದರಲ್ಲಿ ಹಲವು ತರದ ಕಬ್ಬಿಣದ ನೇಗಿಲುಗಳು, ಗಾಣಗಳು, ಪಂಪುಗಳು ಮಂಚಗಳು ಕುರ್ಚಿಗಳು ಇತ್ಯಾದಿ ಸಾಮಾನುಗಳ ಚಿತ್ರ ಸಮೇತ ವಿವರವೂ, ಕ್ರಯವೂ ತಪಶೀಲಾಗಿ ಕೊಡಲ್ಪಟ್ಟಿವೆ. ಸಂಪೂರ್ಣ ಸ್ವದೇಶಿಯಾದ ಈ ಕಂಪೆನಿಯವರ ಸಾಮಾನುಗಳನ್ನು ಕೊಂಡುಕೊಂಡು ಅವರಿಗೆ ಉತ್ತೇಜನ ಕೊಡಬೇಕಾದದ್ದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯವಾಗಿದೆ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು ಮೈಸೂರು.

4 ಕ್ಯಾರೆಟ್ ಭಂಗಾರದ ನಿಬ್ಬು [illegible] ಖಾತ್ರಿ[illegible]
ಬಂದೋಬಸ್ತು ಆದ ಫೌಂಟನ್ ಪೆನ್‌ಗಳು

[illegible] ವಂಡರ್ ಫೌಂಟನ್ ಪೆನ್ 1ಕ್ಕೆ	ರೂ 3	0	0
[illegible] ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
[illegible] ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
[illegible] ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ [illegible] ಕಲರ್ ಫೌಂಟನ್ ಪೆನ 1ಕ್ಕೆ	3	14	0
[illegible] ಮಾರ್ಬಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4	2	0
[illegible] ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ [illegible] ವುನ್ ಕಲರ್ ಫೌಂಟನ ಪೆನ್ 1ಕ್ಕೆ	5	8	0
ಬಿಗ್ [illegible] ಫೌಂಟನ್ ಪೆನ್ 1ಕ್ಕೆ	10	8	0
[illegible] 1ಕ್ಕೆ 14 6 0, & 20		10	0
[illegible] ಫೌಂಟನ್‌ಪೆನ್ 1ಕ್ಕೆ 3 8 0, & 3		12	0
[illegible] ಫೌಂಟನ್ ಪೆನ್ 1ಕ್ಕೆ 6 4 0, & 6		12	0
[illegible] ಫೌಂಟನ್ ಪೆನ್ 1ಕ್ಕೆ 8 2 0, & 3		10	0

ಟೈಂಪೀಸ್‌ಗಳು.

ಸಾ[illegible] ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0
[illegible] ಸಣ್ಣ ಟೈಂಪೀಸ್ 1ಕ್ಕೆ	2	2	[illegible]
[illegible] ಆಲಾರಂ ಟೈಂಪೀಸ 1ಕ್ಕೆ 6 9 0 & 6		15	0
[illegible] ಸನ್ಯಾಸಿ[illegible] ಅಲಾರಂ ಟೈಂಪೀಸ್ 1ಕ್ಕೆ	7	2	0
[illegible] ಆಲಾರಂ ಸಣ್ಣ ಟೈಂಪೀಸ್ [illegible] ಲೈಟಿನದು 1ಕ್ಕೆ	8	10	0
[illegible] ಅಲಾರಂ ಟೈಂಪೀಸ್ 1ಕ್ಕೆ	9	6	0
[illegible]ಗೋಡೆನ್ ಅಲಾರಂ ಸಾ[illegible] ಇರತಕ್ಕ [illegible] ಯಾದ ಟೈಂಪೀಸ್ 1ಕ್ಕೆ	13	1	0
[illegible] ಬಂದೋಬಸ್ತು ಆದ ಪಾಕೆಟ್ ವಾಚ್ 1ಕ್ಕೆ	5	11	[illegible]
[illegible] ನಮೂನೆಯಲ್ಲಿ ಎಬ್ಬಿ ಹಾಕ್ಕ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮುವ್ಮೆಂಟ್ ಸಾಧಾರಣ ತರದ [illegible] ವಾಚ್ 1ಕ್ಕೆ 5 4 0, 7 8 0, 10 0 0 & 12		8	0



ಇಲ್ಲಿ ನಮೂದಿ[illegible] ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅ[illegible]ಯಿತು.

ಮಾರ್ಕೆಟ್ ಸರ್ಕಲ್ [illegible]—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ [illegible], ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	23 160
ಜಮೊಬಂದ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5–0–0ರ ದರದಲ್ಲಿ ಒಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ಸರ್ಕಾರ್ಯಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟಾಯಿಸಿಕೆ ಮಾಡುತ್ತಾರೆ.

ಪ್ರಸಿಡೆಂಟರು	ಟ್ರೆಜರರ್
ಪೋದಂಡ ಅಪ್ಪಯ್ಯನವರು	ಮುಸೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್	ನವರು

ಸೆಕ್ರೆಟರಿ

ಸಿ ಯನ್ ವೆಂಕಪ್ಪಯ್ಯನವರು ಬಿ ಎ, ಬಿ ಎಲ್

ತಾರೀಕು 1 7–1930

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವ ನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52–25 ಗಿರಿಗಾಂವ, ಮುಂಬಯಿ.

ನೋಟೀಸು,

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,

ಮೆ ಚೌರಿರ ಮೊದ್ಯಯ್ಯನವರು,

ದಕ್ಷಿಣ ಕೊಡಗಿಗೆ ಮೆ ಅಜ್ಜಿಕುಟ್ಟಿರಂಡ ಮೇದಪ್ಪನವರು,

,, ಮೆ ಚೆಕ್ಕೆರ ಮೊಣ್ಣಯ್ಯನವರು

,, ಮೆ ಸೋಮೆಯಂಡ ಅಚ್ಚಯ್ಯನವರು

ಮುರನಾಡು—ಮೆ ಕೇಕಿರ ಅಣ್ಣಯ್ಯನವರು

ಸಬ್ ಏಜಂಟರುಗಳು

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು, (ವಾದಿಭಂಡಾರ)

ಸಾವೋಕ್ಲು—ಎಮ್. ಆರ್ ವೆಂಕಪ್ಪಯ್ಯನವರು

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು

ಗೋಣಿಕೊಪ್ಪಲು—ಮೆ. ಒಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐಸಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಯ್ಯನವರು,

ಮೆ ಸಣ್ಣುವಂಡ ಬೋಪಯ್ಯನವರು

ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ ಜಿ. ಮಾದಯ್ಯನವರು,

ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮೊಣ್ಣಯ್ಯನವರು.

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26 481 ಪಾಲಿಸಿಗಳು

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 3...

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1 78 322 ಜನರಿಗೆ 38ಕೋಟಿ ... ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22 4ಕ್ಕಿಂತ ವಿಾರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟ...

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ... **ಚೀನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.**

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಮೇನೇಜರು, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ನೈರೋಬಿ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಾಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೆಂಗಳೂರು	ಡಾರ್ಜಿಲಿಂಗ್	ಮಂಡಲೆ	ರಾಯಪುರ	ತಿರುವೆಂದ್ರಂ
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ

ಕೊಡಗಿನ ಗುಡುಗುಡು ಎಂಬ ಚಳಿಜ್ವರಕ್ಕೂ ಸು... ಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗೆಡ್ಡೆಗೂ ಗುಣಕಾರಿಯಾದದೆಂದು ತಿಳಿದಿರಬೇಕಾದದ್ದು ಮಲೇರಿಯಾ ಸಂಪೂರ್ಣ ಜ್ವರವನ್ನು ಗುಣಪಡಿಸಿ ಗೆಡ್ಡೆಯನ್ನು ... ಗೊಳಿಸುತ್ತದೆಂದು ಸ್ಥಿರ ನಂಬು. ಕ್ರಯ ಬಾಟ್ಲಿಗೆ ½ ಡಜನ್ 8–8–0. 1 ಡಜನ್ 16–8–0

ಕಂಪೌಂಡು ಸಿರಪು ಬ್ಲಟಿ.

ಗುರುಗುರು ಉಬ್ಬಸ ನೇವಸದ ರೋಗದಿಂದ ಕಂಠ ಕಫ ಗಟ್ಟಿಯಾಗಿ ಎದೆನೋವು ಎದೆ ಮತ್ತು ಪಾರ್ಶ್ವಸೋಪು ಯುವುದಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಯು ಈ ಕಂಪೌಂಡು ಸಿರಪು ಬ್ಲಟಿ ಎಂಬದನ್ನು ತಕ್ಷಣ ತರಿಸಿ ಕುಡಿಯಲಿ ಕ್ರಯ ಬಾಟ್ಲಿಗೆ ರೂ. 3–8–0.

ಕಂಪೌಂಡು ಸಿರಪು ಬಸಲೀನ —ಕ್ಷಯಕೋಶದ ಕ್ಷಯವೆಂಬ ರೋಗಕ್ಕೆ ಈ ಸಿರಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿದರೆ ಶ್ವಾಸಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು ಕೆಮ್ಮು ಎದೆನೋವು ರಕ್ತ ಪಿತ್ತ ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ಮುಂದರಿಯದಂತೆ ಕಾಪಾಡಿ ಆರೋಗ್ಯ ಕೊಡುವದು ಕ್ರಯ ಬಾಟ್ಲಿಗೆ ರೂ 3–8–0

ಕಂಪೌಂಡು ಸಿರಪು ಸಬೀನ ಸೇಪಿಯ.—ಹೆಂಗಸರ ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ವೆಂಬ ರೋಗದಿಂದ ಸೊಂಟನೋವು ಕೈಕಾಲು ಬತ್ತಲು ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರಿಸುವದು ಕ್ರಯ ಬಾಟ್ಲಿಗೆ ರೂ 3 8–0

ಕಂಪೌಂಡು ಸಿರಪು ಪೆಸಿಫ್ಲೋರ:— ಪ್ರಮೇಹವೆಂಬ ಗುಪ್ತರೋಗವನ್ನು ಪಡಕೊಂಡು ಮೂತ್ರ ಬಿಂದು ಬಿಂದುಗಳಾಗಿ ... ದ್ವಾರದೊಳಗೆ ಹುಣ್ಣು ವ್ರಣಗಳು ದುರ್ಗಂಧ ಕೂಡಿದ ಹಳದಿ ಬಣ್ಣದ ರೇಸಿಗೆ ಇತ್ಯಾದಿ ಕಠಿಣ ತರದ ರೋಗವನ್ನು ಈ ಬಲವಾದ ಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3–8–0.

ಶುದ್ಧ ಟಿಕ್ಚರುಮದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಫುಟ 3 —6ರ ವರೆಗೆ ಓದಿಕೊಂಡು ಬರೆಯತಕ್ಕದು. ಪರೀಕ್ಷಿಸಿ ಕೊಡುವ ದೃಷ್ಟಿಚಕ್ರಗಳೂ ಬಿಸಲಿಗೆ ಇಡತಕ್ಕ ಒಳ್ಳೇ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಖರೀದಿಗೆ ದೊರಕುವದು.

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ

52–34 **Malariana Co,** Han pankatta No 14 Mangalore

ವಿಳಾಸ —ಮಲೇರಿಯಾನ ಕಂಪೆನಿ ಹಂಪನಕಟ್ಟೆ ಇಗಜಿ ಬಳಿ 14 ಮಂಗಳೂರು ...

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರ... ಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮ... ಬದ್ಧರಿ ಪರಸ್ಪರ ಸಹಾಯಕ ಸಂಘದ ಮತ್ತು ದವ... ರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ... ಕಾರಿ ಸಂಘಗಳ ಮತ್ತು ದವಸ ಭಂಡಾರಗಳ ... ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ ... ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾ... ಖರಾರು ಫಾರಮುಗಳೂ, ಜಪ್ತಿ ಮಂಜೂರಾತಿ... ಗಳೂ ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ ... ಖರಾರು ಫಾರವುಗಳೂ ಸ್ಟೋರ್ ಕೀಪರ್ ... ರಮುಗಳೂ, ಓಚರ್ ಪುಸ್ತಕಗಳೂ, ರಶೀತಿ ಪು... ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ... ಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆ... ಯುದ್ದು ಒದಗಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ಮೂಲಕ ಕಳುಹಿಸಲಾಗುವುದು

ಮೇನೇಜರ್,

"ಕೊಡಗು" ಆಫೀ...

ಮಡಿಕೇ...

Printed & published by P. I Belliappa at "Kedagu" Press M... for 'Kodagu" Ltd

Reg. No. M. 1550.
If not delivered please return to "KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | [illegible] ತಾರೀಖು ೩ ನೇ ಶುಕ್ರವಾರ. | ಸಂಚಿಕೆ ೫

V. Subramaniaier Jeweller.

DIAMOND MERCHANT, GOLD & SILVER SMITH.

Telephone 3 1 [illegible]

Deals in all:-
SPORTS CUPS in all prices
MEDALS in up-to-date patterns
CASKETS in elegant styles

Nos. 2 & 3, Kuppumuthu st, TIRUVATESWARANPET,
Post Box 323, Triplicane, P. O.,
MADRAS.

Deals in all:-
GEM-SET JEWELS, set with Diamonds Rubies etc.,
GOLD ARTICLES of all patterns
SILVER WARE in latest style.

52-33



[illegible] ಕಳುಹಿಸಲ್ಪಡುವದು

ಕೋವಿಗಳು, ಕತ್ತಿಗಳು, [illegible] ಎಲ್ಲಾ [illegible]

GOOLAMHUSAIN [illegible] HOY [illegible] SON:
Largest Impor[illegible] an[illegible]tion
Cheapest pr[illegible] in India,
210 Abdul Rehman Street, BOMBAY.
24-14

ಕಟುಕಷಾಯ ಮಲೆಜ್ವರಕ್ಕೆ [illegible] 3—4 [illegible] ರೂ 1—8—0 3 ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಮಲೆ ಜ್ವರಕ್ಕೆ [illegible]

ಚಂದನಾಸವ:— [illegible] 1 3 [illegible] ರೂ 1—4—0 [illegible]—8—0 6— 2—0

ಕೋಮನಾಸಿನಿ:— [illegible] 1ಕ್ಕೆ 6 ಆಣೆ, 3 [illegible] 1 1 [illegible] 3—3—0

ಮನೋಲ್ಲಾಸಿನಿ [illegible] 1, 3 [illegible] 10—0 [illegible] 2, 3 [illegible] 5—8—0

53-8

ಬಾಲಾರ್ಕಮಧು.

ಮಕ್ಕಳ [illegible] ಬಾಲಾರ್ಕ ಮಧುವನ್ನು [illegible]



[illegible] 12 [illegible] 9 [illegible]

ಎಂ. ವಿ. ಪ್ರ

52-25

ಕೊಡಗು.

ಸನ್ ೧೯೩೧ನೇ ಇಸವಿ

ಜುಲೈ ತಾ. ೩ನೇ ಶುಕ್ರವಾರ.

ವೈಸರಾಯರ ಭಾಷಣ.

ಹೊಸ ವೈಸರಾಯರಾದ ಲಾರ್ಡ್ ವೆಲ್ಲಿಂಗ್ಡನ್‌ರವರು ತಮ್ಮ ಉದ್ಯೋಗವನ್ನು ಕೈಕೊಂಡು ಎರಡು ತಿಂಗಳಾದರೂ ಕಳೆದ ತಾ 27ರಲ್ಲಿ ತಾನೇ ತಮ್ಮ ಪ್ರಥಮ ರಾಜಕೀಯ ಭಾಷಣವನ್ನು ಮಾಡಿದರು ಚೆಲ್ಮ್ಸ್ ಫರ್ಡ್ ಕ್ಲಬ್ಬಿನಲ್ಲಿ ಒಂದು ಔತಣವೇ ಆ ಭಾಷಣದ ಸಂದರ್ಭವಾಗಿತ್ತು ಈ ಭಾಷಣದಲ್ಲಿ ಹೊಸ ವಿಷಯಗಳೇನೂ ಇಲ್ಲವಾದರೂ ಈಗಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಹಿಂದೂಸ್ಥಾನದ ಮುಖ್ಯ ಅಧಿಕಾರಿಯವರ ಅಭಿಪ್ರಾಯವು ಹೇಗಿದೆಯೆಂದು ತಿಳಿಯಲು ಜನರು ಕುತೂಹಲವುಳ್ಳವರಾಗಿದ್ದಾರೆಂಬುವುದರಲ್ಲಿ ಸಂಶಯವಿಲ್ಲ.

ಹಿಂದಿನ ವೈಸರಾಯರಾದ ಲಾರ್ಡ್ ಇರ್ವಿನ್‌ರವರಿಗೂ ಮಹಾತ್ಮ ಗಾಂಧಿಯವರಿಗೂ ಆಗಿರುವ ರಾಜಿ ಒಪ್ಪಂದದ ಶರತ್ತುಗಳನ್ನು ನಡಿಸಿಕೊಡುವ ಭಾರವನ್ನು ತಾನು ವಹಿಸಿಕೊಂಡಿರುತ್ತೇನೆಂತಲೂ ಹಾಗೆ ನಡಿಸಿಕೊಡಲು ತಾನು ಯಥಾರ್ಥವಾಗಿ ಪ್ರಯತ್ನಿಸುವೆನೆಂತಲೂ, ಮಹಾತ್ಮ ಗಾಂಧಿಯವರು ತಮ್ಮ ಭಾಗದಲ್ಲಿ ಸದರಿ ಶರತುಗಳನ್ನು ನಡಿಸಿಕೊಡಲು ಮನಃಪೂರ್ವಕವಾಗಿ ಪ್ರಯತ್ನಿಸುತ್ತಿದ್ದಾರೆಂತಲೂ ಮುಂತಾಗಿ ಹೇಳಿ ವೈಸರಾಯರು ತಮ್ಮ ನಿಷ್ಕಪಟದ ಅಭಿಪ್ರಾಯವನ್ನು ಹೊರಗೆಡಹಿದಕ್ಕೆ ಎಲ್ಲರೂ ಸಂತೋಷ ಪಡಬೇಕಾಗಿದೆ ಆದರೆ ಈ ಒಪ್ಪಂದವು ತಾತ್ಕಾಲಿಕವಾದದ್ದಲ್ಲದೆ ಖಾಯಂ ಶಾಂತಿಗೆ ಅಲ್ಲವೆಂದೂ ಇದು ಮುಂದಿನ ಚಳವಳಿಕ್ಕೆ ತಯಾರಿಸಲು ಇರುವ ಸಮಯವೆಂದೂ ಕೆಲವು ಮಹನೀಯರು ಬರೆಯುತ್ತಿರುವುದೂ ಭಾಷಣ ಮಾಡುತ್ತಿರುವುದೂ ರಾಜಿ ಒಪ್ಪಂದದ ಶರತ್ತುಗಳಿಗನುಸಾರವಾಗಿ ನಡೆದಂತೆ ಆಗುವುದಿಲ್ಲವೆಂತಲೂ, ತಾನು ತಾತ್ಕಾಲಿಕ ರಾಜಿಗೆ ಇರುವವನಲ್ಲ, ಖಾಯಂ ಶಾಂತಿಗೆ ಇರುವವನು, ಖಾಯಂ ಶಾಂತಿಯಾದರೇನೇ ದೇಶದಲ್ಲಿ ಅತೃಪ್ತಿಯೂ, ಚಳವಳಿವೂ ಇಲ್ಲದಂತಾಗಿ ದೇಶದ ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಯಾಗಲು ಅವಕಾಶ ಉಂಟಾಗುವುದೆಂತಲೂ ಮೊದಲಾಗಿ ಅವರು ಸೂಚಿಸಿದರು. ವೈಸರಾಯರೇನೋ ರಾಜಿ ಶರತ್ತುಗಳನ್ನು ನಡಿಸಿಕೊಡಲು ನಿಜವಾಗಿ ಯತ್ನಿಸುತ್ತಿದ್ದೇನೆಂದು ಹೇಳುತ್ತಿದ್ದಾರೆ. ಆದರೆ ಪ್ರಾಂತೀಕ ಸರ್ಕಾರದ ಅಧಿಕಾರಿಗಳು ಎಷ್ಟರ ಮಟ್ಟಿಗೆ ವೈಸರಾಯರ ಸೂಚನೆಯಂತೆ ಈ ವಿಷಯದಲ್ಲಿ ನಡೆಯುತ್ತಿದ್ದಾರೆಂಬುವುದನ್ನು ವಿಮರ್ಶಿಸಬೇಕಾಗಿದೆ ರಾಜಕೀಯ ಕೈದಿಗಳೆಲ್ಲರನ್ನೂ ಇನ್ನೂ ಬಿಡುಗಡೆ ಮಾಡಿರುವುದಿಲ್ಲ ಆಂಧ್ರದ ಶ್ರೀಯುತ ಅನ್ನಪೂರ್ಣಯ್ಯ, ಬೊಂಬಾಯಿಯ ಶ್ರೀಯುತ ಹೆಚ್ ಡಿ ರಾಜಾ ಮುಂತಾದವರು ಇನ್ನೂ ಜೈಲಿನಲ್ಲಿ ಕೊಳೆಯುತ್ತಿರುವರು ಚಿಕ್ಕ ಸಂಗತಿಗಳಲ್ಲಿಯೂ ಕೂಡ ಅಧಿಕಾರಿಗಳು ಶಾಂತಿಯು ಖಾಯಂ ಆಗಬೇಕೆಂಬ ದೃಷ್ಟಿಯಿಂದ ವರ್ತಿಸುತ್ತಿರುವುದಿಲ್ಲ ಶಾಂತ ರೀತಿಯಿಂದ ಪಿಕೆಟ್ ಮಾಡುತ್ತಿರುವವರ ಮೇಲೆ ಲಾಟಿ ಪೆಟ್ಟುಗಳು ಬೀಳಲು ಬಿಟ್ಟಿರುವುದು ಮಾತ್ರವಲ್ಲ, ಅವರನ್ನು ದಸ್ತಗಿರಿಯೂ ಮಾಡಿದ ವರ್ತಮಾನಗಳಿವೆ. ಬೊಂಬಾಯಿಯಲ್ಲಿ ಮೊನ್ನೆ ತಾನೇ 'ಪ್ರಭಾತ್‌ಫೇರಿ' ಎಂಬ ಸಂಗೀತ ಪಾರ್ಟಿಯವರ ಮೆರವಣಿಗೆಯನ್ನು ತಡೆದು ಪೋಲೀಸಿನವರು ಅವರ ಶಾಂತ ರೀತಿಯ ಕೆಲಸಕ್ಕೆ ತೊಂದರೆ ಮಾಡಿದರು ಸತ್ಯಾಗ್ರಹದಲ್ಲಿ ಭಾಗಿಗಳಾದ ವಿದ್ಯಾರ್ಥಿಗಳ ತಂದೆ ತಾಯಿಗಳು ಇನ್ನು ಮುಂದೆ ತಮ್ಮ ಮಕ್ಕಳು ರಾಜಕೀಯ ಚಳವಳಿದಲ್ಲಿ ಕೈ ಹಾಕುವುದಿಲ್ಲವೆಂದು ಬರೆದುಕೊಟ್ಟ ವಿನಹ ಆ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಿಕೊಳ್ಳುವುದಿಲ್ಲವೆಂದು ಶಾಲಾ ಅಧಿಕಾರಿಗಳು ಹಟ ಹಿಡಿಯುತ್ತಿದ್ದಾರೆ ಕೆಲವು ಕಡೆಗಳಲ್ಲಿ ರಾಜಿನಾಮ ಕೊಟ್ಟ ಸರ್ಕಾರಿ ನೌಕರರಿಗೆ ಪುನಃ ಕೆಲಸ ಕೊಡುವುದೂ ಸರಾಗವಾಗಿ ನಡೆಯುತ್ತಿಲ್ಲ. ಇಂಥಾ ಸಂಗತಿಗಳನ್ನೆಲ್ಲಾ ಮಹಾತ್ಮ ಗಾಂಧಿಯವರೇ ಸಂಬಂಧಪಟ್ಟ ಪ್ರಾಂತೀಕ ಅಧಿಕಾರಿಗಳಿಗೂ, ವೈಸರಾಯರಿಗೂ ಆಗಿಂದಾಗ್ಗೆ ತಿಳಿಸುತ್ತಾ, ಬರುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ ಇವೆಲ್ಲವೂ ನಿಜವಲ್ಲವೆಂತಲೂ, ಕಾಂಗ್ರೆಸ್ಸಿನವರೇ ರಾಜಿ ಶರತ್ತುಗಳಿಗೆ ವಿರೋಧವಾಗಿ ನಡೆಯುತ್ತಿದ್ದಾರೆಂತಲೂ ಸ್ಥಳೀಯ ಅಧಿಕಾರಿಗಳು ಇಂಡಿಯಾ ಸರ್ಕಾರಕ್ಕೆ ತಿಳಿಸುತ್ತಿರುವುದರಿಂದಲೋ ಏನೋ, ಸರ್ಕಾರದ ಕಡೆಯಿಂದ ರಾಜಿ ಶರತ್ತುಗಳ ಮಟ್ಟಿಗೆ ಎಲ್ಲವೂ ಸರಿಯಾಗಿ ನಡೆಯುತ್ತಿದೆ ಎಂದು ವೈಸರಾಯರು ನಂಬಿಕೊಂಡಿರುವಂತೆ ತೋರುತ್ತದೆ ಸರ್ಕಾರಿ ಅಧಿಕಾರಿಗಳೆಲ್ಲರೂ ವೈಸರಾಯರಂತೆ ನಿಷ್ಕಪಟವಾಗಿ ರಾಜಿ ಶರತ್ತುಗಳನ್ನು ಪಾಲಿಸಲು ಯತ್ನಿಸದೆ ಹೋದರೆ ವೈಸರಾಯರು ಇಚ್ಛಿಸುವ ಹಾಗೆ ಖಾಯಂ ಶಾಂತಿಯು ಹೇಗೆ ತಾನೇ ಉಂಟಾಗುವುದು?

ಚಿಕ್ಕ ಚಿಕ್ಕ ವಿಷಯಗಳಲ್ಲೂ ಕೂಡ ಅಧಿಕಾರಿಗಳು ರಾಜಿ ಶರತಿಗೆ ಅನುಸಾರವಾಗಿ ನಡೆಯುವಂತೆ ನೋಡಲು ಮಹಾತ್ಮ ಗಾಂಧಿಯವರು ವೈಸರಾಯ್‌ಗೆ ಪತ್ರ ಬರೆಯಬೇಕಾಗುವಂಥ ರಾಜಿ ಒಪ್ಪಂದವನ್ನು ಮಹಾತ್ಮರು ಮಾಡಿದ್ದೇ ಆಗಲಿಲ್ಲವೆಂದು ಹಲವರು ಹೇಳ ಹತ್ತಿರುವರು ಬ್ರಿಟನ್ನಿನಲ್ಲಂತೂ ಅಲ್ಲಿಯ ಬಟ್ಟೆಯನ್ನು ಹಿಂದೂಸ್ಥಾನದಲ್ಲಿ ಬಲಾತ್ಕಾರದಿಂದ ಬಹಿಷ್ಕಾರ ಮಾಡಿಸಬೇಕೆಂಬ ಚಳವಳಿವೂ, ಹಿಂದೀಯರಿಗೆ ಸ್ವಾತಂತ್ರ್ಯವು ದೊರೆತರೆ ಇಂಡಿಯಾದಲ್ಲಿ ಇಂಗ್ಲಿಷರ ವ್ಯಾಪಾರಕ್ಕೆ ತೊಂದರೆ ಉಂಟಾಗುವದೆಂದು ಹಿಂದೀ ಸ್ವರಾಜ್ಯಕ್ಕೆ ಅಡ್ಡಿ ಮಾಡುವ ಚಳವಳಿವೂ ನಡೆಯುತ್ತಲೇ ಇವೆ ಇವೆಲ್ಲವೂ ಖಾಯಂ ಶಾಂತಿಗೆ ಸಹಾಯ ಮಾಡುತ್ತಿಲ್ಲ ಹೀಗೆ ಇಂಗ್ಲೆಂಡಿನಲ್ಲಿ 'ಡೈಹಾರ್ಡ್'ಗಳೂ ಇಂಡಿಯಾದಲ್ಲಿ ಕೆಲವು ಆಳರಸರೂ ತಾತ್ಕಾಲಿಕ ರಾಜಿಯ ಸಮಯವನ್ನು ಹಿಂದೀಯರಲ್ಲಿ ಸ್ವರಾಜ್ಯಕ್ಕಾಗಿ ಹುಟ್ಟಿರುವ ಸ್ಫೂರ್ತಿಯನ್ನು ತಗ್ಗಿಸಲು ಉಪಯೋಗಿಸುತ್ತಿರುವಾಗ್ಯೆ ಇನ್ನೊಂದು (ಅಹಿಂಸಾತ್ಮಕ) ಯುದ್ಧಕ್ಕೆ ದೇಶದವರು ತಯಾರಾಗಿರಬೇಕೆಂದು ಕೆಲವು ಮುಂದಾಳುಗಳು ಹೇಳುವುದರಲ್ಲಿ ತಪ್ಪೇನಿದೆ? ಇಂಗ್ಲೆಂಡಿನಲ್ಲಿ ಕನ್‌ಸರ್ವೇಟಿವ್ ಪಕ್ಷದವರ ಮತ ನೋಡಿದರೆ ದುಂಡು ಮೇಜು ಪರಿಷತ್ತಿನಲ್ಲಿ ಕಾಂಗ್ರೆಸಿನವರಿಗೆ ತೃಪ್ತಿಕರವಾಗುವ ತೀರ್ಮಾನವಾಗುವಂತೆ ಕಾಣುವುದಿಲ್ಲವೆಂದು ಅಸೆಂಬ್ಲಿಯ ಮಾಜಿ ಅಧ್ಯಕ್ಷರಾದ ಶ್ರೀಯುತ ವಿ ಜೆ ಪಟೇಲರಂಥವರೇ ಸೂಚಿಸುತ್ತಿದ್ದಾರೆ ವೈಸರಾಯರು ತಮ್ಮ ಭಾಷಣದಲ್ಲಿ ಈಗ ಹಿಂದೂದೇಶದಲ್ಲಿ ಆಗುತ್ತಿರುವ ಕಷ್ಟಗಳನ್ನು ಅರಿತುಕೊಂಡು ಇಂಡಿಯಾದ ಸ್ಥಿತಿಯನ್ನು ಸಾಮ್ರಾಜ್ಯದ ಒಂದು ಬಹು ಮುಖ್ಯ ವಿಷಯದಂತೆ ಗಮನಿಸಬೇಕಲ್ಲದೆ ಸ್ಥಳೀಯ ಪಾರ್ಟಿ ಪ್ರಶ್ನೆಯಂತೆ ಎಣಿಸಬಾರದೆಂದು ತಮ್ಮ ದೇಶೀಯರಿಗೂ ಅಪ್ಪೀಲು ಮಾಡಿರುವರು ಇಂಥಾ ಅಪ್ಪೀಲಿನ ಫಲಿತಾಂಶವೇನೆಂದು ಹಿಂದೀಯರಿಗೆ ತಿಳಿಯದ್ದಲ್ಲ.

ವೈಸರಾಯರು ಎರಡನೇ ದುಂಡು ಮೇಜು ಪರಿಷತ್ತನ್ನು ಕುರಿತು ಮಾತಾಡಿದಾಗ್ಯೆ, ಅದನ್ನು ಬರುವ ಸೆಪ್ಟಂಬರು 5ರಲ್ಲಿ ಪ್ರಾರಂಭಿಸುವಷ್ಟು ತಡವೇಕೆ ಆಯಿತು ಎಂಬದನ್ನು ವಿವರಿಸಿದರಲ್ಲದೆ, ಅದನ್ನು ನಡಿಸಲು ಸಂಪೂರ್ಣ ಶಾಂತಿಯ ವಾತಾವರಣವನ್ನು ಕಲ್ಪಿಸಲು ಹಿಂದೂದೇಶದ ಜನರಲ್ಲಿಯೂ, ಉದ್ಯೋಗಸ್ಥರಲ್ಲಿಯೂ, ಬ್ರಿಟಿಷರಲ್ಲಿಯೂ ಮತ್ತು ಪತ್ರಿಕಾ ಕರ್ತರುಗಳಲ್ಲಿಯೂ ಅಪ್ಪೀಲು ಮಾಡಿದರು ರಾಜಿ ಸಂಧಿಯ ಶರತುಗಳನ್ನು ಪಾಲಿಸಲು ಪ್ರಾಂತೀಕ ಸರ್ಕಾರಗಳಲ್ಲಿಯೂ, ಸಿವಿಲ್ ಸರ್ವಿಸಿನ ಉದ್ಯೋಗಸ್ಥರುಗಳಲ್ಲಿಯೂ ಮಹಾತ್ಮ ಗಾಂಧಿಯವರು ಮಾಡಿಕೊಂಡಿರುವ ಬೇಡಿಕೆಯನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ ಜನರ ಮುಂದಾಳಾದ ಮಹಾತ್ಮ ಗಾಂಧಿಯವರ ಮತ್ತು ಸರ್ಕಾರದ ಮುಖ್ಯಾಧಿಕಾರಿಯಾದ ವೈಸರಾಯರ ಅಪ್ಪೀಲುಗಳನ್ನು ಮನಸ್ಸಿಗೆ ತೆಗೆದುಕೊಂಡು ಇನ್ನು ಮುಂದಾದರೂ ಸಂಬಂಧಪಟ್ಟವರೆಲ್ಲರೂ ತಾತ್ಕಾಲಿಕ ಶಾಂತಿಯನ್ನು ಖಾಯಂ ಮಾಡಲು ಯತ್ನಿಸುವರಾಗಿ ಆಶಿಸುತ್ತೇವೆ

'ರಿಟ್ರೆಂಚ್‌ಮೆಂಟ್.'

ಹಿಂದೂದೇಶದ ಹಲವು ಪ್ರಾಂತೀಕ ಸರ್ಕಾರಗಳು ಮಾತ್ರವಲ್ಲ ಮಧ್ಯವರ್ತಿ ಸರ್ಕಾರವೂ ಸಿಬ್ಬಂದಿ ಖೋತೆ ಮಾಡುವ ಬಗ್ಗೆ ಕಮಿಟಿಗಳನ್ನು ನೇಮಿಸಿರುವುದು ನೋಡಿದರೆ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲದಂಥ ಹಿಂದೂದೇಶದ ವಿಶೇಷ ತಲೆಭಾರ ಸರ್ಕಾರದಲ್ಲಿ ನಿಜವಾಗಿಯೂ ಖರ್ಚು ಖೋತೆ ಮಾಡಲು ಇಂಡಿಯಾ ಸರ್ಕಾರದವರು ಯೋಚಿಸಿರುವರೆಂದು ತೋರಬಹುದು ಆದರೆ ಸಿಬ್ಬಂದಿ ಖೋತೆಯು ಬರೇ ಉತ್ಪತ್ತಿಯ ದೃಷ್ಟಿಯಿಂದ ಮಾತ್ರ ಆಗುವುದಲ್ಲ. ಅದು ಸರ್ಕಾರದ ಧ್ಯೇಯವನ್ನನುಸರಿಸಿದೆ. ಕಂದಾಯ ಮತ್ತು ತೆರಿಗೆ ರೂಪದಲ್ಲಿ ಸರ್ಕಾರದ ಬೊಕ್ಕಸವನ್ನು ತುಂಬುತ್ತಿರುವ ಬಡ ಜನರ ಪ್ರಯೋಜನಾರ್ಥವಾಗಿ ಆ ಹಣವನ್ನು ಉಪಯೋಗಿಸಬೇಕೆಂಬ ಉದ್ದೇಶವಿರುವ ಸರ್ಕಾರವು ಹಿಂದೂದೇಶದಲ್ಲಿ ಹಾಗೂ ನಮ್ಮ ಪ್ರಾಂತ್ಯದಲ್ಲಿರುವಂಥ ವಿಪರೀತ ಖರ್ಚಿನ ತಲೆಭಾರ ಸರ್ಕಾರವನ್ನು ಎಂದೂ ಇಟ್ಟುಕೊಳ್ಳಲಿಕ್ಕಿಲ್ಲ, ಆಡಳಿತ ಕ್ರಮವನ್ನು ಕಾರ್ಯನಿರ್ವಾಹಕ ಶಕ್ತಿಯು ಕಡಿಮೆಯಾಗದ ರೀತಿ ಆಗುವಷ್ಟು ಕಡಿಮೆ ಖರ್ಚಿನಿಂದ ನ[illegible] ರು ಮತ್ತು ಉಳಿಕೆ ಹಣವನ್ನು ಪ್ರಜಾ[illegible] ಉಪಯೋಗಿಸುವರು ಪ್ರಜೆಗಳ [illegible] ಇರಲಿ, ಅವರು ಸರ್ಕಾರಕ್ಕೆ ಕೊಡಬೇಕಾ[illegible] ಗಳನ್ನು, ಇಷ್ಟ ಬಂದಾಗ್ಯೆ ಹೆಚ್ಚಿಸಿ, ವ[illegible] ಉದ್ದೇಶವಾಗಿ ಇಟ್ಟುಕೊಳ್ಳುವ ಸರ್ಕಾರ[illegible] ಲ್ಲಿ ದುಂದುಗಾರಿಕೆಯನ್ನು ಕಡಿಮೆ ಮಾ[illegible] ಸೇರಾರದು ಆದುದರಿಂದ ಆಡಳಿತ ಕ್ರ[illegible] ಚ್ಚು, ಕಮ್ಮಿಯು ಆಯಾಯ ಸರ್ಕಾರದ [illegible] ಸಿರುತ್ತದೆ ಆದುದರಿಂದ ಹಿಂದೂದೇಶದ [illegible] ನಿಜವಾದ ಸಿಬ್ಬಂದಿ ಖೋತೆಯು ಬೇಗನ[illegible] ಳಿತ ಕ್ರಮದ ಬದಲಾವಣೆಯನ್ನು [illegible] ದರಲ್ಲಿ ಸಂದೇಹವಿಲ್ಲ

ಆದರೂ ಕೂಡ ಸರ್ಕಾರಿ ಉತ್ಪತ್ತಿಯಲ್ಲಿ ಸ್ವಲ್ಪವಾದರೂ ಆಡಳಿತ ಖರ್ಚು[illegible] ಧ್ಯವಿಲ್ಲ ಇದೇ ಹಲವು ರಿಟ್ರೆಂಚ್‌ಮೆಂ[illegible] ಟಕ್ಕೆ ಕಾರಣ ಆದರೆ ಈ ಕಮಿಟಿಗ[illegible] ಖೋತೆ ಮಾಡುತ್ತಾರೆಂಬುದು [illegible] ಗಿನ ಸರ್ಕಾರದ ತಲೆಭಾರ ಆಡಳಿತ[illegible] ಕೊಟ್ಟು, ಕೆಳ ದರ್ಜೆಯ ಬಡ ಉದ್ಯೋ[illegible] ಯುವವರೋ ಎಂಬ ಸಂಶಯವಿದೆ ಯಾ[illegible] ರಲ್ಲೂ ಇಂಥಾ ಕಮಿಟಿಗಳು ನೇಮಿಸಲ್ಪ[illegible] ಗೆ ಮೆ ಕ್ಯಾಂಬೆಲ್‌ರಂಬವರು ಈ ಉದ್ದ[illegible] ಬಂದಿದ್ದರು ಇವರೆಲ್ಲರೂ ಮಾಡಿದ[illegible] ರಿಗೂ ಮರೆಯುವಂತಿಲ್ಲ. ಇವರ ರಿಟ್ರೆಂ[illegible] ಚ್‌ಮೆಂಟ್ ಎಂದರೆ ಕೆಲವು ಜವಾನರು[illegible] ಕು ಕಾನ್‌ಸ್ಟೇಬಲುಗಳು ಮತ್ತು [illegible] ಕಳುಹಿಸುವುದೆಂದು ಜನರ ಅಭಿಪ್ರಾ[illegible] ಈ ಅಭಿಪ್ರಾಯವನ್ನೇ ಬಲಪಡಿ[illegible] ಹಾಯ ಮಾಡುವವೋ ಅಥವಾ [illegible] ಖ್ಯೆಯನ್ನೂ ಸಂಬಳವನ್ನೂ ಕಡಿ[illegible] ದ ಭಾರವನ್ನು ಸ್ವಲ್ಪವಾದರೂ [illegible] ರೋ ಎಂದು ನೋಡಬೇಕಾಗಿ[illegible]

ಇಂಡಿಯಾ ಸ್ಟೇಟ್ ಸೆಕ್ರೆಟರಿಯವ[illegible] ವ ಇಂಪೀರಿಯಲ್ ಸರ್ವಿಸಿನವರಲ್ಲಿ [illegible] ಮ್ಮ ಪ್ರಾಂತೀಕ ಸರ್ಕಾರದ ಕಮಿಟಿ[illegible] ಯೋ ಏನೋ ತಿಳಿಯದು ಈ ವಿಷ[illegible] ಟಿಯವರು ಜನರ ಅಭಿಪ್ರಾಯಕ್ಕಾಗಿ [illegible] ಪ್ರಶ್ನೆ ಮಾಲಿಕೆಯಲ್ಲಿ ವಿಷದಪಡಿಸಿರು[illegible] ಮಿಟಿಯವರಿಗೇನೇ ಈ ವಿಷಯ ಗೊತ್ತಿ[illegible] ರವೆಂದರೆ ತಪ್ಪಾಗಲಾರದ ನಮ್ಮ ಈ [illegible] ತಿಂಗಳಿಗೆ ಸಾವಿರ ರೂಪಾಯಿಗಿಂತ ಹೆ[illegible] ದು ಇಂಪೀರಿಯಲ್ ಆಫೀಸರುಗಳರ[illegible] ನಾಲ್ಕು ಹುದ್ದೆಗಳನ್ನು ತೆಗೆದು ಹಾಕಿ ಆ[illegible] ರೂಪಾಯಿಯೊಳಗೆ ಸಂಬಳವಿರುವ ಪ್ರೊ[illegible] ಳನ್ನು ಏರ್ಪಡಿಸಬೇಕೆಂದೂ, ಉಳಿಯುವ[illegible] ಲ್ ಉದ್ಯೋಗಸ್ಥನಿಗೆ ಒಂದು ಸಾವಿರ[illegible] ಸಂಬಳ ಕೊಡಕೂಡದೆಂದೂ ಈ ಮೊದ[illegible] ಹೀಗೆ ಇಂಪೀರಿಯಲ್ ಉದ್ಯೋಗಗಳಲ್ಲಿ[illegible] ಹೋದರೆ ಇಲ್ಲಿಯ ಆಡಳಿತ ಖರ್ಚಿನಲ್ಲಿ[illegible] ಷ್ಟು ಕಡಿಮೆ ಮಾಡಲು ಸಾಧ್ಯವೇ ಇ[illegible] ನ್ಸಿಯಲ್ ಉದ್ಯೋಗಗಳಲ್ಲಿಯೂ [illegible] ಲ್ಲಿಯೂ ಖೋತೆ ಮಾಡಬಹುದು [illegible] ದು ಆದುದರಿಂದ ಬೆಂಗಾಳಿ ರಿ[illegible] ಟ್ರೆಂಚ್‌ಮೆಂಟ್ ಕಮಿಟಿಯ ಉದ್ಯೋಗಸ್ಥ[illegible] ಗಳು ಇಂಪೀರಿಯಲ್ ಸರ್ವಿಸಿನಲ್ಲಿ ಮ[illegible] ಪ್ರೊವಿನ್ಸಿಯಲ್ ಸರ್ವಿಸಿನಲ್ಲಿ ಖೋತೆ[illegible] ಪ್ಪುವದಿಲ್ಲವೆಂದು ಅಲ್ಲಿಯ ಸರ್ಕಾರಕ್ಕೆ[illegible] ಮತ್ತು ಅವರು ಸದರಿ ಕಮಿಟಿಯ ವರದಿ[illegible] ದಿಲ್ಲವೆಂದೂ ವರ್ತಮಾನವಿದೆ. ಈ 'ಸಂ[illegible] ನ್ನು ಅಲ್ಲಿಯ ಸರ್ಕಾರದವರು ಇಂಡಿಯಾ[illegible] ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ[illegible] ಪ್ರಾಯವನ್ನು ಕೇಳಿರುವರಂತೆ ಮಾ[illegible] ದ್ಯೋಗಸ್ಥ ಮೆಂಬರುಗಳ ವರ್ತನೆಯು [illegible] ಅವರು ಬೇರೆ ಪ್ರಾಂತ್ಯಗಳ ಕಮಿಟಿಗಳಿಗೆ[illegible] ಸೆಯನ್ನು ಹಾಕಿ ಕೊಟ್ಟಿರುವರು ನಮ್ಮ[illegible] ಮಿಟಿಯ ಉದ್ಯೋಗಸ್ಥರಲ್ಲದ ಮೆಂಬ[illegible] ರಕೆಯನ್ನು ಹಿಂಬಾಲಿಸುವಷ್ಟು ಧೈರ್ಯ[illegible] ಲೋಚನೆಯೂ ಉಳ್ಳವರಾಗುವರೇ [illegible] ಯನ್ನು ಕೈಕೊಳ್ಳದೆ ಹೋದರೆ ಆಸ್ಥಾ[illegible] ಲಧಿಕಾರಿಗಳಾದ ಇಂಪೀರಿಯಲ್ ಉದ್ಯೋ[illegible] ಯಂತೆ ಕೆಲವು ಬಡ ನೌಕರರ ಅನ್ನಕ್ಕೆ[illegible] ಮಾತ್ರ ಕಮಿಟಿಯವರು ಸಹಾಯ ಮಾಡಿ[illegible] ನಿಜವಾದ ಸಿಬ್ಬಂದಿ ಖೋತೆಯಾಗುವುದಿ[illegible] ಗಿ ಹೇಳಬಹುದು

ಸ ಹ ಕಾ ರ.

(ಲೇಖಕ—ಎ ಮು. ತಿಮ್ಮಯ್ಯ, ಶಾಂತಿ [illegible])

೩ ನೇ ಭಾಗ.

[illegible]ವಾರ ರೈತರು ಸಾಲದಲ್ಲಿ ಮುಳುಗುವುದು ಯಾವ [illegible] ಎಂಬುದನ್ನು ಪರೀಕ್ಷಿಸಿದೆಯಷ್ಟೆ. ಈ ವಿಧ [illegible] ಕಾರಣಗಳನ್ನು ಹೋಗಲಾಡಿಸಲು ಜನರೂ, ಸಹಕಾರ [illegible]ಗಳೂ, ಸರ್ಕಾರದವರೂ ಏನು ಮಾಡಬೇಕೆಂದು ಪ [illegible].

[illegible] Distribution of rural population —ಒಂದೇ [illegible]ವಾಗಿ ಕರಿಸಮೂಹವಿಲ್ಲದೆ ಜನರು ಒಂದೊಂದು [illegible] ಗುಂಪು ಗುಂಪಾಗಿ ವಾಸ ಮಾಡುವದೇ ಕೇಡೆಂಬ [illegible] ಈ ತಗ್ಗು ಮೆಟ್ಟಿಗಳನ್ನು ಹೋಗಲಾಡಿ [illegible] ಸುಲಭವಾಗಿರುವುದಿಲ್ಲ. ಮತ್ತು ಎಲ್ಲಾ [illegible] ಇದರ ವಿಷಯ ಮುಂದಟ್ಟಾಗುವ ಅಭಿಪ್ರಾಯ ನಿವಾ [illegible] ಕೆಲಸವನ್ನು ನಿರ್ವಹಿಸುವುದು ಸುಲಭವಲ್ಲ. ಜನ [illegible] ದೇಶದಲ್ಲಿ ಸರಿಯಾಗಿ ಹರಡಬೇಕೆಂಬ ಪ್ರದೇಶ [illegible] ಆದರೆ ಇದು ಹೇಗಾಗಬಹುದೆಂಬ ಪ್ರಶ್ನೆ [illegible] ವಿಷಯಗಳಿರುವುದರಿಂದ ಈ ಸಂಗತಿ [illegible] ಕೊಡಬೇಕಾಗುತ್ತೆ. ಅದ್ದರಿಂದ ಈ ವಿಷಯ [illegible] ಆ ವರೆಗೆ ತಿಳಿದಿರುವ [illegible] ವಿಷಯ ಜನರ ತಿಳುವಳಿಕೆ [illegible] ಕೃತಜ್ಞನಾಗುವೆ.

2. Fragmentation of Land—[illegible] ಮಾಡುವುದರ ಹಾನಿಯನ್ನು ಹೋಗಲಾಡಿ [illegible] ಪ್ರಯತ್ನ ಪಡಲೇ ಬೇಕು. [illegible] ಕಡೆಗಳಲ್ಲಿ ಸರ್ಕಾರದವರು [illegible] ಮಾಡುತ್ತಿರುವ ಪ್ರ [illegible] ನಮ್ಮ ಜಿಲ್ಲೆಯು ಸರಕಾರದವರ. ಈ ವಿಷಯ [illegible]ನೆ ಮಾಡಿ, ಈ ಕೆಡಕನ್ನು ಹೋಗಲಾಡಿಸಲು, ಪಾಲು ಮಾಡುವ ಪದ್ಧತಿಯನ್ನು ಮನ್ನ ಮಾಡಬೇಕೆಂದೂ, ಪೂರ್ತಿ [illegible]ಗಿ ಮನ್ನ ಮಾಡದಿದ್ದರೂ, ಒಂದೊಂದು ತುಂಡು ಜಮೀ [illegible] ವಿಸ್ತೀರ್ಣವು ಸಾಧಾರಣವಾಗಿ ಇಷ್ಟೇ ಇರಬೇಕೆಂದು [illegible] ಕಡಮೆ ಇದ್ದಲ್ಲಿ ರೆವಿನ್ಯೂ ರಿಕಾರ್ಡುಗಳಲ್ಲಿ ಅ [illegible]ಗಳನ್ನು ದಾಖಲು ಮಾಡಲಾಗುವುದಿಲ್ಲವೆಂದೂ ಅಭಿಪ್ರಾ [illegible] ಪಟ್ಟರು. ಆದರೆ ಇದು ಫಲಿಸಲಿಲ್ಲ. ಪಂಜಾಬಿನ [illegible] ಕಡೆಗಳಲ್ಲಿ ಆಸ್ತಿಯನ್ನು ಪಾಲುಮಾಡಕೂಡದೆಂದೂ, [illegible]ದರೂ ಒಬ್ಬನ ಕೈಯಲ್ಲಿಯೇ ಅದು ಇರಬೇಕೆಂದೂ [illegible]. ಬೇರೆ ಕೆಲವು ಕಡೆಗಳಲ್ಲಿ ಪಾಲು ಮಾಡಲಿಕ್ಕೆ [illegible] ಸಾಲ ತೆಗೆಯುವುದರ ಪ್ರೇಮದಿಂದ ಕರಗುವರೆಂದೂ [illegible], ಸರ್ಕಾರದವರು ಸಾಲ ಕೊಡುವ ಸಾಹುಕಾರರಿಗೆ ಭೂಮಿಯನ್ನು ಮಾರಕೂಡದೆಂಬ ಶಾಸನವನ್ನು ಮಾಡಿದರು. ಭೂಮಿಯನ್ನು ಮಾರಕೂಡದೆಂಬ ಶಾಸನವು ನಮಗ [illegible] ಇಲ್ಲವಲ್ಲದೆ, ಕೊಡಗಿನಲ್ಲಿ ಭೂಮಿಯನ್ನು ಮಾರುವ ಪ್ರೇಮ ದಿಂದ ಸಾಲ ಮಾಡುವುದಲ್ಲವಾದೇ ನಂಬಬೇಕಾಗಿದೆ. [illegible] ಅಣ್ಣ ತಮ್ಮಂದಿರುಗಳೂ ಒಡಹುಟ್ಟಿದವರಲ್ಲಿ ಪ್ರೇಮವಿಲ್ಲ ಮತ್ತು ನಂಬಿಕೆ ಇಲ್ಲ. ಆದ್ದರಿಂದ ಸರಕಾರದ ಮೊದಲನೆಯ ಕರ್ತವ್ಯವು ಜನರಿಗೆ ವಿದ್ಯಾಭ್ಯಾಸ ಕೊಡುವುದೆಂದು ಎಲ್ಲರೂ ಒಪ್ಪುವರು. ಈ ಬಾಬಿನಲ್ಲಿ ಕೊಡಗು [illegible] ಸ್ಕೂಲ್ [illegible] ಈ ಕೆಲಸವು ಕಷ್ಟವಾಗಿಲ್ಲ. ಸ [illegible] ಈಗ [illegible] ವಿದ್ಯಾಭ್ಯಾಸವು ಮಾಫಿಯಾಗಿದೆ. ಮುಂ [illegible] ಪ್ರೈಮರಿ ವಿದ್ಯಾಭ್ಯಾಸವನ್ನು ಎಲ್ಲಾ ಬಾಲಕರೂ ಕಲಿಯು [illegible] ಶಾಸನವನ್ನು ಮಾಡಬೇಕಲ್ಲದೆ (Compulsory) ಸಂಗ [illegible] ವಿದ್ಯಾಭ್ಯಾಸವನ್ನು ಮಾಫಿ ಮಾಡಬೇಕು. [illegible] ನಮ್ಮ ಕೌನ್ಸಿಲು ಮೆಂಬರುಗಳು ಈ ವಿಷಯ ನಿಗ [illegible]ದಲ್ಲಿ ಆಸ್ತಿಯನ್ನು ಪಾಲು ಮಾಡುವುದನ್ನು ತಿದ್ದಿ ಪಡಿ ಮಾಡಲು ಶಾಸನವನ್ನು [illegible] ಆಸ್ತಿಯನ್ನು ಪಾಲು ಮಾಡಲೇ ಬಾರದೆಂದು ಈ ಪ್ರಬಂಧದ ಅಭಿಪ್ರಾಯವಲ್ಲ. [illegible]ಒಂದು ತುಂಡಿನ ವಿಸ್ತೀರ್ಣವು ಇಷ್ಟು ಎಕ್ರೆಗಿಂತ (ಸಾಧಾರಣ 1 ಎಕರೆಗಿಂತ) ಕಮ್ಮಿ ಇರಬಾರದೆಂದು ಸರ್ಕಾರದಿ [illegible] ಬಂಧಿಸಿರುವುದಾದರೂ ಜನರ ಹಿತಕ್ಕಾಗಿ [illegible] ಮಾಡ [illegible]ದು. ಈ ವಿಷಯದಲ್ಲಿ ಸರ್ಕಾರದವರೂ, ಜನರ ಪ್ರತಿನಿಧಿಗಳಾದ ಕೌನ್ಸಿಲ್ ಮೆಂಬರುಗಳೂ, ಬೇಗನೆ ಪ್ರಯತ್ನ [illegible]ದ್ದರೆ ಎರಡು ಬೆಕ್ಕುಗಳು ಜಗಳವಾಡಿ ಒಂದನ್ನೊಂದು [illegible]ಗುತ್ತಾ ಕಡೆಗೆ ಎರಡು ನುಂಗಿ ಹೋಗಿ ಅವುಗಳ ಬಾಲ [illegible] ಎಂಬ ಕಥೆಯಂತೆ, ಕೊಡಗು ದೇಶದ ಜನ [illegible] ಅವರವರ ಗದ್ದೆಗಳನ್ನು ಭಾಗ ವಿಭಾಗ ಮಾಡುತ್ತಾ ಕೊನೆಗೆ ಗ [illegible]ಲ್ಲವೂ ತೆವರುಗಳಾಗುವುದರಲ್ಲಿ ಸಂಶಯವಿಲ್ಲ. ಜನ [illegible]ವು ಒಸ್ತೇ [illegible] ಹೆಚ್ಚಾಗುತ್ತಾ ಬರುವುದರಿಂದ ಈ ವಿಷ [illegible] ಸಹಕಾರ ಸಂಘಗಳು ಈ ವಿಷಯದಲ್ಲಿ [illegible] ಪ್ರತಿ ಊರಿನಲ್ಲಿಯೂ ಇರುವ ಸಹಕಾರ [illegible]ಗಳು ಆ ಊರಿನಲ್ಲಿ ಇಂಥ ಕೆಲಸವನ್ನು [illegible] ಜನರಿಗೆ ಬೋಧನೆ ಮಾಡಿದಲ್ಲಿ ಇಂಥಾ ಬೋಧನೆಯ [illegible]ಗೆಯಲು ಕೊಡದವರು ಹಿಂದೆ ನೀಳವು ಅನೇಕ ಜನರ [illegible] ಪದ್ಧತಿಯ ಜಾಸ್ತಿಯ ಅನುಭವವು ಇಲ್ಲದೆ ನಂತರ ವಿ [illegible]ವು ಇಂಥವರನ್ನು ಬೋಧನೆ ಮಾಡಿ, ಅವರು [illegible]ದ ತಪ್ಪನ್ನು ತಿದ್ದಬಹುದು. ಗ್ರಾಮದಲ್ಲಿ ಯಾವ ಪ್ರ [illegible] ಇದ್ದರೂ ಸಹಕಾರಪದವರು ಅವನ್ನು ತೀರಿಸಬಹುದು.

ಇದಕ್ಕೆ ಮುಖ್ಯವಾಗಿ ಸಹಕಾರವೆಂದರೆ ಹಣ ಸಾಲ ಮಂಜೂರು ಮಾಡುವುದು ಮಾತ್ರವಲ್ಲ, ರೈತನ ಬೇರೆ ಎಲ್ಲಾ ಕಷ್ಟದಲ್ಲಿಯೂ ಸಹಕರಿಸಿ ಅವನನ್ನು ಉದ್ಧಾರ ಮಾಡಬೇಕು ಎಂಬ ಸಂಗತಿಯನ್ನು ಎಲ್ಲರೂ ತಿಳಿದಿರಬೇಕು. ಈ ರೀತಿ ಮಾಡಿ ಭೂಮಿಯನ್ನೂ ನಷ್ಟ ಬಟ್ಟುಗಳಿಸಬಹುದು.

3 ಜಗಿನ ಅನೇಕ ಕಡೆಗಳಲ್ಲಿ ಈ ಪಾಲು ಮಾಡುವ ಪದ್ಧತಿಯಿಂದಲೂ, ಇನ್ನು ಅನೇಕ ಕಾರಣಗಳಿಂದಲೂ, ಜನರ ಹೂಮಿಯು ಅನೇಕ ಸಣ್ಣ ಸಣ್ಣ ತುಂಡುಗಳಾಗಿ ಅನೇಕ ಕಡೆಗಳಲ್ಲಿ ಚದರಿಕೊಂಡಿವೆ. ಹೀಗೆ ಚದರಿಕೊಂಡಿರುವುದರಿಂದ ವ್ಯವಸಾಯ ಮಾಡಲು ವಿಶೇಷ ತೊಂದರೆ ಇದೆ, ಅಲ್ಲದೆ ಜನರಿಗೆ [illegible] ನಷ್ಟ ದಾರಿ ಇದೆ. ಒಂದು ಮನೆಯವರ ಭೂಮಿಯು ಅರ್ಧವು ಇನ್ನೊಂದು ಕಡೆಯವರ ಭೂಮಿಯ ಮಧ್ಯದಲ್ಲಿಯೂ, ಮತ್ತೊಬ್ಬರದು ಬೇರೊಬ್ಬರ ಊರಿನಲ್ಲಿಯೂ ಚದರಿಕೊಂಡಿರುವುದರಿಂದ ಕೊಡಗಿನಲ್ಲಿ ಎತ್ತು ಹೊಡೆಯುವಾಗಲೂ ನೀರು ಬಿಡುವಾಗಲೂ ಜನರಿಗೆ [illegible] ಎಷ್ಟೋ ನಷ್ಟ ಕಷ್ಟಗಳುಂಟಾಗಿವೆ. [illegible] ಹಾನಿಯನ್ನು ಹೋಗಲಾಡಿಸಲು ಸಹಕಾರ ಸಂಘದವರು ಸರ್ಕಾರದವರ ಸಹಾಯದಿಂದ [illegible] ಪ್ರಯತ್ನ [illegible] ಅನೇಕ ಕಡೆಗಳಲ್ಲಿ [illegible]ವಾಗಿ [illegible]ನಲ್ಲಿಯೂ, ಮಧ್ಯಪ್ರಾಂತ್ಯದಲ್ಲಿಯೂ [illegible] ಕಷ್ಟಪಡಿದವರ [illegible] ಒಬ್ಬ [illegible] ಅವರ [illegible] ಬಾಗದಲ್ಲಿ [illegible] ನಮ್ಮ ಜಾಗದಲ್ಲಿ [illegible] ತೆಗೆದುಕೊಂಡಲ್ಲಿ ಯಾವ ತೊಂದರೆಯೂ ಇಲ್ಲದಿರಬಹುದು. [illegible] ಸರಿಸಮಾನವಾಗುವ ಹಾಗೆ ಹಣ ಕೊಟ್ಟಾಗಲೀ, ಅಥವಾ ಬೇರೆ ಯಾವ ವಿಧದಿಂದಾಗಲೀ ಸರಿ ಮಾಡಬಹುದು. ಈ ಸಂಗತಿ ನಮ್ಮ ಜನರಿಗೆ ತಿಳಿಯದಲ್ಲ. ಒಬ್ಬೊಬ್ಬರು ಹೀಗೆ ಮಾಡಿರುವ ಸಂಗತಿ ಇರುವುದು. ಜನರೂ, ಸಹಕಾರ ಸಂಘದವರೂ ಮುತುವರ್ಜಿಯಿಂದ ಕೆಲಸ ಮಾಡಿದಲ್ಲಿ ಸರಕಾರದವರ ಸಹಾಯವೂ ದೊರಕೀತು.

ಹಣದ ಅಭಾವದಿಂದ ಜನರಿಗೆ ತೊಂದರೆಯಲ್ಲದೆ ಸಹಕಾರ ಸಂಘಗಳ ಅಭಿವೃದ್ಧಿಗೂ ಕುಂದಕ ಉಂಟಾಗಿದೆ. ಸಹಕಾರ ಸಂಘಗಳಿಗೆ ಈಗ ಹಣವು ಬರೀ ಸೆಂಟ್ರಲ್ ಬ್ಯಾಂಕಿನಿಂದ ಬರಬೇಕಲ್ಲದೆ ಬೇರೆ ಹಣಗಾರರು ಡಿಪೊಜಿಟ್ ಲೋನ್ ಕೊಡುವುದು [illegible] ಡಿಪೊಜಿಟ್ ಲೋನಿನ ಬದಲು ವಿಪರೀತವಾಗಿ ಬಡ್ಡಿ ಸಿಗುವುದರಿಂದ ಜನರಿಗೆ ಸಾಲ ಕೊಟ್ಟು ಪಡೆಯಲು ಮಾಡುವಾಗ ಜನರನ್ನು ಕೆಟ್ಟ ಮಾಡುತ್ತಾರೆ. ಜನರು ಈ ತರದ ಸಾಲಕ್ಕೆ ಮರುಳಾಗುತ್ತಾರೆ. ಆದ್ದರಿಂದ ಸರಕಾರದವರು ಜನರ ಹಿತಕ್ಕಾಗಿ ಬೇರೆ ಜನರು ಹಣ ಸಾಲ [illegible]ವಾಗ ಅವರ ಬಡ್ಡಿಯ ದರವು ಸಹಕಾರ ಸಂಘಗಳ ಬಡ್ಡಿಯ ದರಕ್ಕಿಂತಲೂ, ಕಮ್ಮಿ ಇರಬೇಕೆಂದು ಶಾಸನವನ್ನು ಮಾಡಿದಲ್ಲಿ ಗಲೀಬ ಜನರ ಕಷ್ಟವು ಪರಿಹಾರವಾಗುವುದಲ್ಲದೆ ಸಹಕಾರ ಸಂಘಗಳ ಅಭಿವೃದ್ಧಿಯೂ ವಿನಾಯಾಗುವುದು. ನಮ್ಮ ಈಗಿನ ರಿಜಿಸ್ಟ್ರಾರವರು ಸಹಕಾರ ಸಂಘಗಳ ಅಭಿವೃದ್ಧಿಯ ಲಕ್ಷ್ಯ, ಜನರ ಅಭಿವೃದ್ಧಿಯಲ್ಲೂ ಬಹಳ ಕುತೂಹಲ ತೋರಿಸುವುದರಿಂದ ಈ ವಿಷಯ ಗಮನಕ್ಕೆ ತೆಗೆದುಕೊಂಡು ಜನರ ಕಷ್ಟವನ್ನು ಪರಿಹರಿಸುವರೆಂದು ನಂಬುತ್ತೇನೆ. ಅಲ್ಲದೆ ಕೌನ್ಸಿಲ್ ಮೆಂಬರುಗಳು ಸಹ ಈ ವಿಷಯ ಜನರಿಗಾಗಿ ಹೋರಾಡುವರೆಂದು ನಂಬುತ್ತೇನೆ. ಹಾಗೆ ಸಾಲ ಕೊಡುವ [illegible] ಜನರ ಹಿತವನ್ನು ಮನಸ್ಸಿಗೆ ತಂದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

4 ವ್ಯವಸಾಯದ ಸಮಯ ತೀರಿದನಂತರ ಜನರು ಸರಿಯಾಗಿ ಕೆಲಸವಿಲ್ಲದೆ ತಮ್ಮ ಸಮಯವನ್ನು ದುರಭ್ಯಾಸದಲ್ಲಿ ಕಳೆಯುವುದರಿಂದ ಎಷ್ಟೋ ಜನ ಹಾನಿಗೊಳಗಾಗುವುದು ಹೇಳಬೇಕಿಲ್ಲ. ಆದ್ದರಿಂದ ಒಂದು ವರ್ಷದಲ್ಲಿ ಕಮ್ಮಿ 8 ತಿಂಗಳು ಹೀಗೆ ನಾಶವಾಗುವುದರ ಬದಲು ಆ ಸಮಯದಲ್ಲಿ ಎಷ್ಟೋ ಬೇರೆ ಕೆಲಸ ಮಾಡಬಹುದು. ಅನೇಕ ಜನರು ತಮ್ಮ ತಮ್ಮ ಆವಶ್ಯಕತೆಗೆ ಬೇಕಾದಷ್ಟು ಮಾತ್ರ ಕೆಲಸ ಮಾಡಿ ಸುಮ್ಮನಿರುತ್ತಾರೆ. ಇನ್ನು ಕೆಲವರು ಜನರ ಸಹಾಯವಿಲ್ಲದೆ ಸೋಮಾರಿಯಾಗಿರುತ್ತಾರೆ. ಇಂಥಾ ಕೆಲಸವಿಲ್ಲದ ಸಮಯದಲ್ಲಿ ಜನರು ಪರಸ್ಪರ ಸಹಾಯದಿಂದ ಮನೆಗಾಲಕ್ಕೂ, ತಮ್ಮ ಕೆಲಸದ ಸಮಯಕ್ಕೂ ಬೇಕಾದ ಸಾಮಗ್ರಿಗಳನ್ನು ಕೂಡಿ ಹಾಕಬಹುದು, ತಮಗೆ ಬೇಕಾದ ತರಕಾರಿ ಬೆಳೆಸಬಹುದು, ಕಾಫಿ ತೋಟ ಮಾಡಬಹುದು. ಪೈರಿಗೆ ಗೊಬ್ಬರ [illegible]ದ, [illegible]ಗಳ ಪೋಷಣೆಗಾಗಿ, [illegible]ನ್ನು ನಿರ್ಮಿಸುವುದಲ್ಲದೆ, ಅವುಗಳ ದೊಡ್ಡಿಗಳನ್ನು ಉತ್ತಮ ಸ್ಥಿತಿಗೆ ತರಬಹುದು, ಮಳೆಗಾಲದ [illegible], ಆನೆಯ ಹಾವಳಿಯಿಂದಲೋ ನಷ್ಟವಾದ ಗದ್ದೆಗಳನ್ನು ಜೀರ್ಣೋದ್ಧಾರಗೊಳಿಸಬಹುದು, ತಮ್ಮ ತಮ್ಮ ಮನೆಗಳನ್ನು, ಸತ್ತ ಮತ್ತೊಬ್ಬನ ವಸ್ತುಗಳನ್ನು ಉತ್ತಮ ಸ್ಥಿತಿಗೆ ತರಬಹುದು. ಮನೆ ಇಲ್ಲದ [illegible] ಮನೆ ಕಟ್ಟಬಹುದು. ಹೀಗೆ ಮಾಡುವುದರಿಂದ "ಆಡಿ [illegible] ಬಾಳ, ಅರಿಚಕಾರಿ." ಇಂಥಾ [illegible] ಹೋಗುವ ದುಡ್ಡು ರೈತರಿಗೆ ಸಿಕ್ಕುತ್ತೆ. ಪೈರಿದ ಕೆಲಸದಿಂದ ಹಣ ಸಂಪಾದಿಸಬಹುದು; ಓಟೆ ಕೆಲಸ, ಮಣ್ಣಿನ ಕೆಲಸ, ಇವೇ ಮೊದಲಾದವು ಅಲ್ಲದೆ, ವ್ಯವಸಾಯಕ್ಕೆ ನೇಗಿಲು ಮಾಡಲು ಗೊತ್ತಿರುವವರು ನೇಗಿಲು ಮಾಡಬಹುದು; ನೊಗ ಮಾಡಬಹುದು, ಹಗ್ಗ—ಇವೇ ಅನೇಕ ತರದ ಕೆಲಸಗಳನ್ನು ಕೈಗೊಂಡು ದುಡ್ಡು ಸಂಪಾದಿಸಬಹುದು. ಹೀಗೆ ತಮಗೆ ಬೇಕಾದ ಕೆಲಸ ಮಾಡುವುದರಿಂದ ದುಡ್ಡು ಸಂಪಾದನೆ ಮಾಡಬಹುದಲ್ಲದೆ, ದುರಭ್ಯಾಸಕ್ಕೆ ಸಮಯ ಸಿಕ್ಕುವುದೂ ಇಲ್ಲ, ದುರಭ್ಯಾಸದಲ್ಲಿ ಹಣ ಕಾಸು ನಷ್ಟವೂ ಆಗುವುದಿಲ್ಲ. ಈ ವಿಷಯದಲ್ಲಿ ಸಹಕಾರ ಸಂಘಗಳು ಕೆಲಸ ಮಾಡಿ, ಜನರ ಕೈಗಾರಿಕೆ ಕೆಲಸದಲ್ಲಿ ನಿಗಕೋರಿಸಿದಲ್ಲಿ ಇದರ ಪ್ರತಿಫಲವು ಜಯಪ್ರದವಾಗುವುದು. ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ಜಾದಿ [illegible] ಮಾಡಲು ಸಹಕಾರ ಸಂಘಗಳು ಉತ್ತೇಜನ ಕೊಟ್ಟಿವೆ. ಈ ಮೂಲಕ ಜನರು ತಮಗೆ ಬೇಕಾದ ಬಟ್ಟೆಗಳನ್ನು ಸಹ ನೂಡಿಕೊಳ್ಳುತ್ತಾರೆ.

(ಮುಂದುವರಿಯುವುದು.)

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ತಾರೀಕು 27 ರಲ್ಲಿ ಮಡಿಕೇರಿಯಲ್ಲಿ ನಡೆಯಿತು. 10 ಡೈರೆಕ್ಟರುಗಳು ಹಾಜರಿದ್ದರು.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2 ಕಳೆದ ಮೇ ತಿಂಗಳ ಜಮೆ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರಾಗಲ್ಪಟ್ಟಿತು.

3 ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) ನಾಪೋಕ್ಲು ಸೊಸೈಟಿಗೆ ರೂ 1500/ (2) ದೇವಣಗೇರಿ ಸೊಸೈಟಿಗೆ ರೂ 1000/ (3) ಬೆಸಗೂರು ಸೊಸೈಟಿಗೆ ರೂ 600 ಮತ್ತು (4) ಗುಹ್ಯ ಅಗಸ್ತ್ಯೇಶ್ವರ ಸೊಸೈಟಿಗೆ ರೂ 300.

4 ಚೆಕ್ಕೇರಿ ಸೊಸೈಟಿ, ತಾಳ್ತರೆ ಶೆಟ್ಟಳ್ಳಿ ಸೊಸೈಟಿ, ಯಡೂರು ಸೊಸೈಟಿ, ಸೋಮವಾರಪೇಟೆ ಟವುನ್ ಸೊಸೈಟಿ, ಕಾಫಿಪ್ಲಾಂಟರ್ಸ್ ಸೊಸೈಟಿ, ಹೊಸೂರು ಸೊಸೈಟಿ, ಶ್ರೀಮಂಗಲ ಸೊಸೈಟಿ ಮತ್ತು ಹುದಿಕೇರಿ ಸೊಸೈಟಿ, ಈ ಮೇಲ್ಕಂಡ 8 ಸೊಸೈಟಿಗಳಿಗೆ ಅವರ ಸಾಲದ ಅರ್ಜಿ ಮೇರೆ ಕಾರಣಾಂತರಗಳಿಂದ ಸಾಲಗಳು ಮಂಜೂರಾಗಿರುವುದಿಲ್ಲ.

5. ಬೋಟಿಯೋಳಿ ಸೊಸೈಟಿ, ಕಾವೇರಿ [illegible] ಸೊಸೈಟಿ ಮರೆನಾಡು ಸೊಸೈಟಿ, ಬಿಳುಗುಂದ ಸೊಸೈಟಿ, ಚೇರಂಬಾಣೆ ಸೊಸೈಟಿ ಮತ್ತು ತೂಚಮಕೇರಿ ಸೊಸೈಟಿ, ಈ ಮೇಲ್ಕಂಡ 6 ಸೊಸೈಟಿಗಳು ಬ್ಯಾಂಕಿಗೆ ಈ ವರ್ಷದ ಕಂತಿಗೆ ಪಾವತಿ ಮಾಡಲು ಬಾಕಿ ಇರುವ ವಾಯಿದೆ ಮೀರಿದ ಸಾಲಕ್ಕೆ ವಾಯಿದೆ ಕೊಡಬೇಕಾಗಿ ಬರಕೊಂಡ ಅರ್ಜಿಗಳು ಓದಲಾದವು.

ಅವರ ಅರ್ಜಿಗಳ ಮೇರೆ ವಾಯಿದೆ ಕೊಡಲು ಆಗುವುದಿಲ್ಲವಾಗಿಯೂ, ಬೇಗನೆ ಪಾವತಿ ಮಾಡುವಂತೆ ತಿಳಿಸಬೇಕಾಗಿಯೂ, ತಪ್ಪಿದಲ್ಲಿ ವಸೂಲಾತಿಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗಿಯೂ ತೀರ್ಮಾನವಾಯಿತು.

6 ಮೆ ಕೊಡಂದೇರ ಅಯ್ಯಪ್ಪನವರ ಮಗ ಮೈನರು [illegible] ಅಯ್ಯನವರು ತನ್ನ ತಂದೆಯು ಈಗ ಹಾಲಿ ಮಡಿಕೇರಿಯಲ್ಲಿ ಹಾಜರಿಲ್ಲದ್ದರಿಂದ ಅವರ ಹೆಸರಿನಲ್ಲಿ ಡಿಪಾಜಿಟ್ಟು ಇರುವ ಹಣವನ್ನು ಮೈನರುಗಳಾದ ತನಗೆ ಖರ್ಚಿಗೋಸ್ಕರ ವಾಪಸ್ಸು ಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಮೈನರುಗಳಿಗೆ ನ್ಯಾಯವಾದ ಗಾರ್ಡಿಯನ್ ಆಗಿ ಅವರು ಕೇಳಿದ [illegible] ಹಣ ವಾಪಸು ಕೊಡಲಾಗುವುದಿಲ್ಲವಾಗಿ ತೀರ್ಮಾನವಾಯಿತು.

7. ಗುಡ್ಡೆಹೊಸ [illegible] ಸೊಸೈಟಿಯವರು ಗವರ್ನ್ಮೆಂಟಿನಿಂದ [illegible] ಫಂಡ [illegible] ಡಿಪೋಜಿಟ್ಟಿಗೆ ಕಳುಹಿಸುವುದರ ಬದಲು 82 ರೂಪಾಯಿಯನ್ನು ಶೇರು ಹಣಕ್ಕೆಂತ ಕಳುಹಿಸಿದ ಮೇರೆ ಶೇರು [illegible] ದಾಖಲ್ಲಾದರನ್ನು [illegible] ರಿಜರ್ವ್ ಫಂಡ್ [illegible] ಪಟ್ಟಿಗೆ ತೆಗೆದುಕೊಳ್ಳಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಅವರ ಕೋರಿಕೆಯನ್ನು ನೆರವೇರಿಸಲು ಆಕ್ಷೇಪಣೆ ಇಲ್ಲವೆಂದು ತೀರ್ಮಾನವಾಯಿತು.

8. ಕೊಡ್ಲಿಪೇಟೆ ಗ್ರಾಮದ [illegible] ವೀರಪ್ಪನವರು ತನ್ನ ತಂದೆ [illegible]ಯ್ಯನವರು ಸೆಂಟ್ರಲ್ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಟ್ಟ ಎರಡು ಸಾವಿರ ರೂಪಾಯಿಯನ್ನು ತಂದೆ ಸತ್ತ ಹೋದುದರಿಂದ ತನಗೆ ಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಅರ್ಜಿದಾರನು ನ್ಯಾಯವಾದ ಸಕ್ಸೆಷನ್ ಸರ್ಟಿಫಿಕೇಟು ಪಡೆದು ಬ್ಯಾಂಕಿಗೆ ಹಾಜರು ಪಡಿಸದ ವಿನಹ ಹಣ ಕೊಡಲಾಗುವುದಿಲ್ಲವೆಂತ ತೀರ್ಮಾನವಾಯಿತು.

9 ಡೈರೆಕ್ಟರುಗಳು ಇನ್ನೊಂದಾವೃತ್ತಿ ತೀರ್ಮಾನಿಸುವ ವರೆಗೆ ಬೇರೆಯವರಿಂದ ಹೊಸ ಡಿಪಾಜಿಟ್ಟನ್ನು (ಠೇವಣಾತಿಯನ್ನು) ತೆಗೆದುಕೊಳ್ಳಬಾರದವಾಗಿ ತೀರ್ಮಾನಿಸಲಾಯಿತು.

10. ಈಗ ನಗದು ಬಾಕಿ ಇರುವ ಹಣದ ಪೈಕಿ 40 000 ರೂಪಾಯಿಗಳನ್ನು ಅರ್ಬನ್‌ಬ್ಯಾಂಕ್, ಮೈಸೂರು ಬ್ಯಾಂಕ್ ಮತ್ತು ಇಂಡಿಯನ್ ಬ್ಯಾಂಕು, ಈ ಮೂರು ಬ್ಯಾಂಕುಗಳಲ್ಲಿ 1 ವರ್ಷದ ವರೆಗೆ ನಿರಖು ಠೇವಣಾತಿಯಾಗಿ (ಡಿಪಾಜಿಟ್ಟಾಗಿ) ಇಡುವಂತೆ ತೀರ್ಮಾನವಾಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು.)

ಗ್ರಾಮೋದ್ಧಾರಕ ಪರಿಷತ್ತು.

ಪಂಡಿತ ಮಾಳವೀಯರ ಭಾಷಣ.

ಕಳೆದ ತಾ. ೨೦ ರಲ್ಲಿ ಗ್ರಾಮೋದ್ಧಾರವನ್ನು ಕುರಿತ ಪರಿಷತ್ತೊಂದು ಪ್ರೂಸಾದಲ್ಲಿ ನಡೆಯಿತು. ಪಂಡಿತ ಮದನ ಮೋಹನ ಮಾಳವೀಯರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಭಾಷಣದ ಸಾರಾಂಶವು ಈ ಕೆಳಗೆ ಕೊಡಲಾಗಿದೆ.

"ಒಕ್ಕಲುತನದ ಸುಧಾರಣೆಯನ್ನು ಹ್ಯಾಗೆ ಮಾಡಬೇಕೆಂಬದನ್ನು ಸೂಚಿಸಲಿಕ್ಕೆ ಸರಕಾರದವರು ಒಂದು ಕಮಿಶನ್ನವನ್ನು ನೇಮಿಸಿದ್ದರು. ಆದರೆ ಇವರು ಗ್ರಾಮ ಸುಧಾರಣೆಯ ವಿಷಯವನ್ನು ಸಂಪೂರ್ಣ ದುರ್ಲಕ್ಷಿಸಿದರು.

ಹಳ್ಳಿಯ ಜನರು ನಾನಾಬಗೆಯ ರೋಗಗಳಿಂದ ಪೀಡಿತರಾಗಿ ಬಳಲುತ್ತಾರೆ. ಆದರೆ ಅವರಿಗೆ ಸರಿಯಾಗಿ ಔಷಧೋಪಚಾರಗಳಾಗುವದಿಲ್ಲ. ಹಳ್ಳಿಯ ಸುಧಾರಣೆಯು ಮಹಾರಾಷ್ಟ್ರ ಪ್ರಾಂತ್ಯದ ಪ್ರಶ್ನೆ ವಿರದೆ ಇಡೀ ಹಿಂದೂಸ್ಥಾನದ ಪ್ರಶ್ನೆಯಾಗಿರುತ್ತದೆ.

ಗ್ರಾಮಗಳಲ್ಲಿ ಸುಧಾರಣೆಯಾಗಬೇಕಾದರೆ ಸಾರ್ವತ್ರಿಕ ಅವಶ್ಯಕ ಶಿಕ್ಷಣವು ಬೇಕು. ಇದು ಎಲ್ಲರಿಗೂ ದೊರಕುವಂತೆ ಆಗಬೇಕು. ಅದರೊಡನೆ ಉದ್ಯೋಗ ಧಂದೆಯ ಶಿಕ್ಷಣವೂ ಬೇಕು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನೀರು, ದವಾಖಾನೆ ಮಿಂಚಿನ ದೀವಿಗೆ ನೋಡುತ್ತೇವೆ. ಆದರೆ ಹಳ್ಳಿಗಳ ಕಡೆಗೆ ಲಕ್ಷ್ಯ ತಿರುಗಿದರೆ ಅಲ್ಲಿ ಅನಾರೋಗ್ಯ, ದಾರಿದ್ರ್ಯ ಮತ್ತು ಅಜ್ಞಾನಗಳೇ ವಾಸ ಮಾಡಿಕೊಂಡಿವೆ.

ಸರಕಾರದ ರೂ ೫೦ ಕೋಟಿ ರೂಪಾಯಿ ಖರ್ಚು ಮಾಡಿ ಹೊಸ ಡಿಲ್ಲಿಯನ್ನು ಕಟ್ಟಿಸಿದರು. ಆದರೆ ಅಲ್ಲಿಂದ ೧೫ ಮೈಲುಗಳ ಒಳಗೆಯೇ ಹಳ್ಳಿಗಳಲ್ಲಿ ದಾರಿದ್ರ್ಯವು ವ್ಯಾಪಿಸಿಕೊಂಡಿದೆ. ಸರಕಾರವು ಹಿಂದೂಸ್ಥಾನದ ೭ ಲಕ್ಷ ಹಳ್ಳಿಗಳನ್ನು ಹೀಗೆಯೇ ದುರ್ಲಕ್ಷಿಸುತ್ತಲಿದ್ದಾರೆ.

ಸರಕಾರವು ಈ ಕಡೆಗೆ ಲಕ್ಷ್ಯ ಕೊಡುವ ಬದಲು ಅದು ತನ್ನ ಮಿಲಿಟರಿ ಖರ್ಚನ್ನು ಮಿತಿಮೀರಿ ಬೆಳೆಸುತ್ತಲಿದೆ. ಆದರೆ ಹಳ್ಳಿಯವರ ಶಿಕ್ಷಣ, ವೈದ್ಯಕೀಯ ವ್ಯವಸ್ಥೆ, ಆರೋಗ್ಯ ರಕ್ಷಣ ಇವುಗಳಿಗೆ ಏನೂ ಲಕ್ಷ್ಯ ಕೊಡುವದಿಲ್ಲ.

ನಮ್ಮ ವಿದ್ಯಾರ್ಥಿಗಳಿಗೆ ಇಂಗ್ರೇಜೀ ಭಾಷೆಯಲ್ಲಿ ಶಿಕ್ಷಣ ಕೊಡುವದು ತಪ್ಪು. ಅದು ಒಂದು ಕಠಿಣವಾದ ಭಾಷೆ. ಆದರೆ ನಾವು ನಮ್ಮ ಮಕ್ಕಳಿಗೆ ಮಾತೃಭಾಷೆಯಲ್ಲಿಯೇ ಶಿಕ್ಷಣ ಕೊಡಬೇಕು. ಈ ಶಿಕ್ಷಣವು ಹ್ಯಾಗೆ ಇರಬೇಕೆಂಬುದನ್ನು ಗೊತ್ತುಪಡಿಸುವ ಅಧಿಕಾರವು ಪ್ರಜೆಗಳ ಕಡೆಗೆ ಇರಬೇಕು.

ನಾವು ಉಚ್ಚ ವಿಚಾರವುಳ್ಳವರೂ, ಸಾದಾ ವೃತ್ತಿಯವರೂ ಆಗಬೇಕು. ಈಗ ನಮ್ಮ ಮಕ್ಕಳು ೨೦ ವರ್ಷ ವಿದ್ಯಾವ್ಯಾಸಂಗ ಮಾಡಿದರೂ ಕೂಡ ತಮ್ಮ ಕುಟುಂಬದ ಪಾಲನಪೋಷಣೆ ಮಾಡಲಾರದವರಾಗಿದ್ದಾರೆ.

ನಮ್ಮ ಹುಡುಗರಿಗೆ ಓದು, ಬರಹ, ಗಣಿತ ಮತ್ತು ಧರ್ಮ ಇವುಗಳನ್ನಷ್ಟು ಕಲಿಸಿದರೆ ಸಾಕು.

ಗ್ರಾಮ ಸಂಘಟನೆಯಿಂದ ಜಾತಿ ವಿಷಯಕ ತಂಟೆಗಳು ತಾವಾಗಿಯೇ ಅಡಗುವವು.

ಗ್ರಾಮ ಸಂಘಟನೆಯಿಂದ ಗ್ರಾಮದಲ್ಲಿಯೇ ಎಲ್ಲರಿಗೆ ಉದ್ಯೋಗ ಸಿಗುವಂತೆ ಆಗಬೇಕು. ಅಲ್ಲಿ ನೂಲುವದೂ, ನೇಯುವದೂ ಬಹಳ ಪ್ರಸಾರವಾಗಬೇಕು" ಎಂದು ಅಧ್ಯಕ್ಷರು ಅನೇಕ ವಿಷಯಗಳುಳ್ಳ ತಮ್ಮ ಭಾಷಣವನ್ನು ಮಾಡಿದರು.

"ನ. ಕ."

ಶತ್ರುಗಳಂತೆ ಭಾವಿಸದಿರಿ.

ಮಹಾತ್ಮರ ಬೇಡಿಕೆ.

'ಪ್ರಾಂತ್ಯ ಸರಕಾರಗಳನ್ನೂ, ಸಿವಿಲ್ ಸರ್ವಿಸಿನ ಉದ್ಯೋಗಿಗಳನ್ನೂ ಕುರಿತು 'ನೀವು ನಮ್ಮ ಸಹಾಯಕ್ಕೆ ಬನ್ನಿ' ರೆಂದು ಬೇಡುತ್ತೇನೆ. ನನ್ನ ಹುರಿಗೆ ಬೇಕಾದಷ್ಟು ಸಾಕ್ಷ್ಯವಿದೆ. ಅದರಿಂದ ಅವರು ಗಾಂಧಿ 'ಇರ್ವಿನ್' ಒಪ್ಪಂದವನ್ನು ಬುದ್ಧಿಪೂರ್ವಕವಾಗಿ ಮುರಿಯುತಿದ್ದರೂ ಆ ಒಪ್ಪಂದದ ಷರತ್ತುಗಳನ್ನು ಪಾಲಿಸದಂತೆ ಬೇಕಾದ ಹಾಗೆ ಅಲ್ಲಿ ಆತಂಕಗಳನ್ನುಂಟುಮಾಡುತ್ತಿರುವರೆಂಬ ಸಂಶಯವುಂಟಾಗಿದೆ. ಇದನ್ನು ಅವರಿಗೂ, ಲೋಕಕ್ಕೂ ತಿಳಿಯಪಡಿಸುವುದು ಧರ್ಮ. ಅವರ ವಿಚಾರದಲ್ಲಿ ಜನರು ಪಡುತ್ತಿರುವ ಸಂಶಯಗಳು ನಿಜವಾಗದಿರಲಿ. ಹಗಲಿರುಳೆನ್ನದೆ ಲಾರ್ಡ್ ಅರ್ವಿನ್ನರು ಕಷ್ಟಪಟ್ಟು ನಿರ್ಮಿಸಿದ ಸಂಧಿಪತ್ರವನ್ನು ಉರುಳಿಸಿ, ನೆಲಸಮ ಮಾಡಿದವರಿವರು ಎಂಬ ಅಪಕೀರ್ತಿಗೆ ಅವರು ಭಾಜನರಾಗದಿರಲಿ. ಈ ಒಪ್ಪಂದವು ಇಬ್ಬರು ವ್ಯಕ್ತಿಗಳ ಮಧ್ಯೆ ಆದುದೆಂದು ಭಾವಿಸದಿರಲಿ. ಯುದ್ಧ ಮಾಡುತ್ತಿದ್ದ ಎರಡು ಪಕ್ಷಗಳಿಗಾದ ಒಪ್ಪಂದವಿದು. ಉಭಯ ಪಕ್ಷಗಳೂ ಸಹಕಾರ ಸಾಧನೆಗಾಗಿ ಮಾಡಿಕೊಂಡ ಕರಾರಿದು. ಕಾಂಗ್ರೆಸಿನವರು (ಈ ಒಪ್ಪಂದವು ಜೀವವಾಗಿರುವವರೆಗೆ) ಅಧಿಕಾರಿಗಳಾರನ್ನೂ ಶತ್ರುಗಳೆಂದು ಭಾವಿಸದಿರಲಿ; ಅವರ ಕೃತಿಗಳಲ್ಲಿ ಸಂಶೇಹಪಡದಿರಲಿ. ಹಾಗೆಯೇ ಅಧಿಕಾರಿಗಳೂ ನಮ್ಮ ಕಾಂಗ್ರೆಸ್ ಸೇವಕರನ್ನು ಶತ್ರುಗಳಂತೆ ಭಾವಿಸದಿರಲಿ" ಎಂದು ಗಾಂಧೀಜಿಯವರು 'ಯಂಗ್ ಇಂಡಿಯಾ'ದಲ್ಲಿ ಬರೆದಿರುವರು.

ಕ. ಪ್ರಾಂ. ಕಾಂ. ಕಮಿಟಿಯ ಕಾರ್ಯಾಲಯ,
ಧಾರವಾಡ, ೨೯—೬—೧೯೩೧.

ಬಹಿಷ್ಕೃತ ಗಿರಣಿಗಳ ಬಟ್ಟೆಯೂ, ಪರದೇಶೀ ಬಟ್ಟೆಯೂ.

ಹಿಂದೂಸ್ಥಾನದಲ್ಲಿಯ ಬಹಿಷ್ಕೃತ ಗಿರಣಿಗಳ ಬಟ್ಟೆಯನ್ನೂ ಸೀಲ್ ಮಾಡಿಡಬೇಕೋ ಹೇಗೆಂಬ ಬಗ್ಗೆ ಕೆಲವು ವರ್ತಕರು ಸಂಶಯ ವ್ಯಕ್ತಪಡಿಸಿದ್ದರಿಂದ ಈ ಬಗ್ಗೆ ಸ್ಪಷ್ಟೀಕರಣ ಮಾಡಬೇಕೆಂದು ಅ. ಭಾ. ಕಾಂ. ಕಮಿಟಿಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರನ್ನು ನಾವು ತಂತಿಯಿಂದ ಕೇಳಿದೆವು. ಅದಕ್ಕೆ ಸರದಾರರು ತಂತಿಯಿಂದಲೇ ತಿಳಿಸಿದ್ದೇನಂದರೆ—

"ಈಗಲೂ ಬಹಿಷ್ಕೃತವಿದ್ದ ಗಿರಣಿಗಳ ಮಾಲನ್ನು ಪರದೇಶೀ ಬಟ್ಟೆಯಂತೆಯೇ ತಿಳಿಯಬೇಕು."

ಸರದಾರ ವಲ್ಲಭಭಾಯಿಯವರು ಪತ್ರದಿಂದ ಪುನಃ ಸವಿಸ್ತಾರವಾಗಿ ತಿಳಿಸಿರುವದೇನಂದರೆ—"ವ್ಯಾಪಾರಸ್ಥರ ಹತ್ತರ ಬಹಿಷ್ಕೃತ ಗಿರಣಿಗಳ ಬಟ್ಟೆ ಇದ್ದರೆ—ಅಗನ್ನು ನಾವು ಸಂಪೂರ್ಣವಾಗಿ ಬಹಿಷ್ಕರಿಸಬೇಕು"

"ಮೊದಲು ಒಂದು ಗಿರಣಿಯು ಬಹಿಷ್ಕೃತವಿದ್ದು ಈಗ ಅದರ ಮೇಲಿನ ಬಹಿಷ್ಕಾರವು ಹೋಗಿದ್ದರೆ ಆ ಗಿರಣಿಯಲ್ಲಿ ಪರದೇಶೀ ನೂಲಿನಿಂದ ಸಿದ್ಧವಾದ ಬಟ್ಟೆಯನ್ನೂ ಇದೇ ರೀತಿ ಬಹಿಷ್ಕರಿಸಬೇಕು. ಉಳಿದ ಬಟ್ಟೆಯನ್ನು ಬಹಿಷ್ಕರಿಸುವ ಕಾರಣವಿಲ್ಲ"

ರಂ. ಶ್ರೀ. ಹುಕ್ಕೇರಿಕರ,
(ಪ್ರಧಾನ ಕಾರ್ಯದರ್ಶಿ)

"ರೂಪಾಯಿಗಳು 5-8-0 ಮಾತ್ರ.

ನಮ್ಮ ಉಚಿತ ಜೀವವಿಮೆಯು
ಅನೇಕ ಬಡಬಗ್ಗರನ್ನು ಕಾಪಾಡಿದೆ.

ನೀವೇಕೆ ಹೊಂದಬಾರದು ?

ಈಗ ಆಗಲೇ 75,000 ಜನಗಳು ಮೆಂಬರಾಗಿದ್ದಾರೆ.

ಹಣ ರೂ. 2,00,000.

ಬಡವರಿಗೆ ಭಾಗ್ಯಕಾಲ! ಎಲ್ಲರಿಗೂ ಅನುಕೂಲ!!

WANTED.

One Chief Agent for Coorg at Virajpet on Rs 50/- plus Rs. 7/8/- per mensum

For terms apply :—

A. A. MANDANNA,
Branch Secretary,
The Venus Assurance Co, Ltd.,
Bore-Bank Road,
Benson Town,
12—10 Bangalore City'

ಐಶ್ವರ್ಯವಂತರಾಗುವ ನಿಯಮಗಳು.

ನ್ಯೂ ಆರ್ಲಿಯನ್ಸ್ ಎನ್ನುವ ಶಹರದಲ್ಲಿ ಜಾನ್ ಯಂ. ಡೋನೋಫ್ ಈ ಹೆಸರಿನ ಓರ್ವ ಶ್ರೀಮಂತ ವ್ಯಾಪಾರೀ ಗೃಹಸ್ಥನಾಗಿ ಹೋದನು. ಅವನು ಐಶ್ವರ್ಯವಂತನಾಗುವ ನಿಯಮಗಳನ್ನು ತನ್ನ ಗದ್ದಿಗೆಯ ಮೇಲೆ ಕೊರೆಯಿಸುವುದಕ್ಕಾಗಿ ಬರೆದಿಟ್ಟಿದ್ದನು. ಮತ್ತು ಅವನು—'ಈ ನಿಯಮಗಳಂತೆಯೇ ನಾನು ನಡೆದುಕೊಂಡಿದ್ದರಿಂದ ನನಗೆ ಈ ಅಪಾರವಾದ ಸಂಪತ್ತು ದೊರಕಲು ಕಾರಣವಾಯಿತು' ಎಂದು ಅಂದಿರುವನು. ಇಂಥ ಉಪಯುಕ್ತ ನಿಯಮಗಳನ್ನು ನಮ್ಮ ಕರ್ನಾಟಕಸ್ಥರೂ ತಿಳಿದಿರಬೇಕೆಂದು ಅವುಗಳನ್ನು ಇಲ್ಲಿ ಬರೆಯಲಾಗಿದೆ.

'ನಿಮಗೆ ಈ ಜಗತ್ತಿನಲ್ಲಿ ಸುಖದಿಂದ ಕಾಲಕ್ಷೇಪವನ್ನು ಮಾಡಬೇಕೆಂಬ ಇಚ್ಛೆ ಇದ್ದರೆ ನೀವು ಪರಿಶ್ರಮವನ್ನು ಅತ್ಯವಶ್ಯವಾಗಿ ಮಾಡಲೇ ಬೇಕಾಗುವದೆಂಬದನ್ನು ಚೆನ್ನಾಗಿ ಲಕ್ಷ್ಯದಲ್ಲಿಡಿರಿ. ಪವಿತ್ರವಾದ ಹೊರತು ನಿಮ್ಮ ಜೀವನವು ಸುಖರೂಪದಿಂದ ಹೇಗೂ ನಡೆಯಲಾರದು. ವೇಳೆಯು ಬಂಗಾರಕ್ಕಿಂತ ಬೆಲೆಯುಳ್ಳದ್ದಾಗಿರುವದು. ಒಂದೇ ಒಂದು ಪಳವನ್ನಾದರೂ ವ್ಯರ್ಥವಾಗಿ ಕಳೆಯಬೇಡಿರಿ. ಪ್ರತಿ ಕ್ಷಣದಲ್ಲಿಯೂ ಏನಾದರೂ ಸದುದ್ಯೋಗವನ್ನು ಮಾಡುತ್ತ ಕಳೆಯಿರಿ.'

'ಎರಡನೆಯವರು ನಿಮ್ಮ ಸಂಗಡ ಹೇಗೆ ನಡೆದುಕೊಂಡರೆ ನಿಮಗೆ ಆನಂದವಾಗುವದೋ ಹಾಗೆಯೇ ನೀವೂ ಸಹ ಅವರ ಕೂಡ ನಡೆಯಿರಿ.'

'ಇಂದು ಮಾಡತಕ್ಕ ಕಾರ್ಯವನ್ನು ನಾಳೆಗೆಂದಿಗೂ ಇಡಬೇಡಿರಿ.'

'ಸ್ವತಃ ನೀವು ಮಾಡತಕ್ಕ ಕೆಲಸಕ್ಕೆ ಎರಡನೆಯವರನ್ನು ಹಚ್ಚಬೇಡಿರಿ.'

'ಬೇರವರ ಒಡವೆಗೆ ಎಂದೂ ಆಶೆ ಮಾಡಬೇಡಿರಿ'.

'ಯಾವುದೇ ಒಂದು ಸಂಗತಿಯಾದರೂ ಕ್ಷುಲ್ಲಕವಾಗಿರುವುದೆಂದು ಭಾವಿಸಬೇಡಿರಿ'.

'ಏನಾದರೂ ಉತ್ಪನ್ನವಾಗುವಂತಿದ್ದರೆ ವ್ಯ[illegible] ಮಾಡಿರಿ'.

'ನಿಮ್ಮ ಎಲ್ಲ ವ್ಯವಹಾರಗಳಲ್ಲಿಯೂ ಸು[illegible] ಡಿರಿ'.

'ನಿಮ್ಮ ಶಕ್ಯವುಳ್ಳಾದ ಮಟ್ಟಿಗೆ ಪರೋಪ[illegible] ಮಾಡಿರಿ'.

'ತೀರ ಸಾದಾ ರೀತಿಯಿಂದ ನಿಮ್ಮ ಆಚರಣ[illegible]

'ಕೊನೆಯ ವರೆಗೂ ಉದ್ಯೋಗವನ್ನು ಮಾಡು[illegible] ಯಿರಿ.'

'ನಿಯಮಿತ ತನದ ಹೊರತು ಆರೋಗ್ಯವಿಲ್ಲ[illegible] ಸದ್ಗುಣಗಳ ಹೊರತು ಶಾಂತಿ ಇಲ್ಲವೆಂಬುವುದನ್ನು [illegible] ಶ್ರದ್ಧೆಯ ಹೊರತು ಸುಖವಿಲ್ಲವೆಂಬುದನ್ನೂ ಚೆನ್ನಾ[illegible] ದಲ್ಲಿಡಿರಿ.'

ಈ ಮೇಲಿನ ನಿಯಮಗಳನ್ನು ಲಕ್ಷ್ಯದಲ್ಲಿಟ್ಟು ನೀವು ನಡೆದರೆ ಯಶಸ್ಸೂ, ಸಂಪತ್ತೂ ನಿಮ್ಮ ಮ[illegible] ಗಿಲಿಗೆ ತಾವಾಗಿಯೇ ನಡೆದು ಬರುವುದಲ್ಲದೆ ನಿ[illegible] ಗ್ಯತೆಯೂ ಉತ್ತರೋತ್ತರ ಬೆಳೆಯುತ್ತಾ ಹೋಗ[illegible]

'ಸುಬೋ[illegible]

ಬೇಕಾಗಿದೆ.

ಫೆಡರೇಶನ್ ಆಫೀ[illegible]
ಮಡಿಕೇರಿ, ತಾ. 22—6[illegible]

ಸುಪರ್‌ವೈಜರು ಕೆಲಸಕ್ಕೆ ತರಬೇತು ಮಾಡ[illegible] ಉಮೇದ್ವಾರರು ಬೇಕಾಗಿದೆ. ಬಾಯಿಸ್ ದಾರರು ಜುಲೈ ತಾ. 10ರ ಒಳಗೆ ತಲಪುವಂತೆ ತಮಗಳ ಸ್ಕೂಲ್ ಪರೀಕ್ಷೆ ತೇರ್ಗಡೆಯಾದ ಮತ್ತು ಇತರ ನಡತೆಯದ ಸರ್ಟಿಫಿಕೇಟ್‌ಗಳೊಡನೆ ಕೊಡಗು ಪ್ರಾಂತೀಯ ರಿ ಫೆಡರೇಶನ್ನಿನ ಪ್ರೆಸಿಡೆಂಟರವರಿಗೆ ಅರ್ಜಿ ಬರೆ[illegible] ಲ್ಲದೆ, ಅಂಥಾ ಉಮೇದ್ವಾರರು ಸದರಿ ತಾ. 12ನೇ ವಾರ ದಿನ ಪೂರ್ವಾಹ್ನ 11 ಗಂಟೆಗೆ ನಡೆಯುವ ಫೆಡರೇಶನಿನ ಎಗ್ಸಿಕ್ಯೂಟಿವ್ ಕಮಿಟಿಯವರ ಮು[illegible] ಕೇರಿ ಫೆಡರೇಶನ್ ಆಫೀಸಿಗೆ ಹಾಜರಾಗತಕ್ಕದು

ಯಂ. ಯಂ. ಬೇ[illegible]

2—2 (ಜನರಲ್ ಸೆಕ್[illegible]

---

5 ರೂಪಾಯಿ ಇನಾಮು!

ಸಾಧಾರಣ ಬಿಳಿದು ವರ್ಣದ, 1½ ಅಡಿ ಉದ್ದ[illegible] ವಾದ ಹಿಂಗೋಡುಳ್ಳ, ಉದ್ದ ಬಾಲದ ಮತ್ತು ಸ[illegible] 4 ಅಡಿ ಎತ್ತರದ ಕೊಂಚ ಎಂಬ ಹೆಸರಿನ ಕೋ[illegible] ತಾ. 11—6—'31ರಿಂದ ಪರಾರಿಯಾಗಿದೆ. ಇದ[illegible] ಮಾಡಿ ಕೊಟ್ಟವರಿಗೆ 5 ರೂ. ಬಹುಮಾನ ಕೊಡಲ[illegible]

ಎನ್. ಯಸ್. ತಂಭ[illegible]
ಗ್ರೀನ್ ಹಾಲೊ ಎಸ್ಟೇ[illegible]
3—3 ಚೆಟ್ಟಳ್ಳಿ ಪೋಸ್ಟು.

ನೋಟೀಸು.

ಈ ತಾರೀಖು 12ನೇ ಭಾನುವಾರ ದಿನ [illegible] ಗಂಟೆ ಸಮಯದಲ್ಲಿ ಕೊಡಗು ಫೆಡರೇಶನ್ ಆಫೀ[illegible] ಕೆಳಗಿನ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಲು ಸಹಕಾರಿ ಸ್ಟೋರಿನ ಒಂದು ವಿಶೇಷ ಜನರಲ್ ಮೀ[illegible] ಡೆಯುತ್ತದೆ.

ಚರ್ಚಿಸತಕ್ಕ ವಿಷಯಗಳು

1. (a) ಕಮಿಟಿ ಮೆಂಬರುಗಳ ಚುನಾವಣೆ
(b) ಪ್ರೆಸಿಡೆಂಟರ ಚುನಾವಣೆ
(c) ಸೆಕ್ರೆಟರಿಯವರ ಚುನಾವಣೆ
(d) ಪರ್ಚೇಸಿಂಗ್ ಕಮಿಟಿಯ ಚುನಾವಣೆ
2. ಶೇರು ಮೌಲ್ಯವನ್ನು ರೂ. 20 ರಿಂದ [illegible] ಇಳಿಸುವುದು.
3. ಬೈಲಾ 40ಕ್ಕೆ ಪರ್ಚೇಸಿಂಗ್ ಕಮಿಟಿಯ[illegible] ಸವನ್ನು ಸೇರಿಸುವುದು.

ಸಹಕಾರಿ ಸ್ಟೋರ್, ಮಡಿಕೇರಿ,

ಯಂ. ಪಿ. ಅ[illegible]
ತಾರೀಖು, 2—7—1931. (ಪ್ರೆಸಿ[illegible]

ಬೇಕಾಗಿದೆ.

'ಕೊಡಗು' ಪತ್ರಿಕೆಯ ಆಫೀಸಿನಲ್ಲಿ ಸಬ್ ಎ[illegible] ತು ಎಕೌಂಟೆಂಟರ ಹುದ್ದೆಗೆ ಉಮೇದುವಾರರು [illegible] ದ್ದಾರೆ. ಸಂಬಳವು ತಿಂಗಳಿಗೆ ರೂ 30ರಿಂದ ಪ್ರಾ[illegible] ಡುವುದು. ಉಮೇದುವಾರನ ಕಾರ್ಯನಿರ್ವಾ[illegible] ಯ ಮೇರೆ ಸಂಬಳದಲ್ಲಿ ಏರಿಕೆಯು ಸಂಭವವಿದೆ [illegible] ನ್ನ ಯೋಗ್ಯತಾ ಪತ್ರಗಳೊಂದಿಗೆ ಈ ಕೆಳಗಿನವರ[illegible] 10ರೊಳಗೆ ತಲಪುವಂತೆ ಕಳುಹಿಸತಕ್ಕದ್ದು.

ಸಿ. ಯಸ್. ವೆಂಕಟ[illegible]
ಕಾರ್ಯಾಧ್ಯಕ್ಷ[illegible]
'ಕೊಡಗು' ಲಿಮಿ[illegible]
ಮಡಿಕೇರಿ.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗೊಂದು ಜುಲೈ ತಾ. 8ರಲ್ಲಿ ನಡೆಯುವದೆಂದು ತಿಳಿಯಬರುತ್ತದೆ

ಕೊಡಗಿನಲ್ಲಿ ಕಳೆದ ಮೇ ತಿಂಗಳಲ್ಲಿ 392 ಜನನಗಳು ಮತ್ತು 394 ಮರಣಗಳು ಆದವೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಮೆ ಕೋದಂಡ ಮಾದಯ್ಯನವರು ಈ ತಾ 1ರಲ್ಲಿ ಬೆಂಗಳೂರು ಸಿಟಿ ಮುನ್ಸಿಪಾಲಿಟಿಯ ಕಮಿಷನರ್ ಉದ್ಯೋಗದಿಂದ ನಿವೃತ್ತರಾಗಿರುವರೆಂದು ತಿಳಿಯುತ್ತೇವೆ

ಮೆ. ಎ ಕಾಳಪ್ಪಯ್ಯನವರ ರಾಜೀನಾಮೆಯಿಂದ ಖಾಲಿಯಾಗಿರುವ ಪೊನ್ನಂಪೇಟೆ ಬೆಂಚ್ ಮೇಜಿಸ್ಟ್ರೇಟರ ಸ್ಥಳಕ್ಕೆ ಮೆ. ಪಿ ಬಿ ಮುದ್ದಪ್ಪಯ್ಯನವರು ನೇಮಿಸಲ್ಪಟ್ಟಿರುವರು

ಹಿಂದೂಸ್ಥಾನೀ ಸೇವಾದಳದಲ್ಲಿರುವ ಶ್ರೀಯುತ ಮಾಚಯ್ಯ ಮಂದಣ್ಣನವರು ಈಗ ಧಾರವಾಡ ಕ್ಯಾಂಪಿನಲ್ಲಿ ಸ್ವಯಂಸೇವಕರನ್ನು ತರಬೇತು ಮಾಡುತ್ತಿರುವರಾಗಿ ತಿಳಿಯಬರುತ್ತದೆ

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ಜೂನ್ ತಾ 27ರಲ್ಲು ಕೋರಂ ಇಲ್ಲದೆ ಮುಂದಕ್ಕೆ ಹಾಕಿದ ಕಾರಣ ಈ ತಾ 10ರಲ್ಲು ಕಂಪೆನಿಯ ಆಫೀಸಿನಲ್ಲಿ ಪುನಹ ನಡೆಯುವುದು

ದಕ್ಷಿಣ ಕೊಡಗಿನ ಪೋಲೀಸು ಸರ್ಕಲ್ ಇನ್ಸ್ಪೆಕ್ಟರಾಗಿದ್ದ ರಾ ಸಾ ಕೋದಂಡ ಮಾಚಯ್ಯನವರು ಈ ತಾ 1 ರಿಂದ ಡೆಪ್ಯುಟಿ ಇನ್ಸ್ಪೆಕ್ಟರ್ ಮೆ ಪಂಡೀಮಾಡ ಗಣಪಯ್ಯನವರಿಗೆ ಚಾರ್ಜು ಕೊಟ್ಟು ರಿಟೈರ್ ಆಗಿರುವರು

ಹಿಂದೆ ಕೆಲವು ವರ್ಷಗಳ ವರೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಹೆಡ್ ಮಾಸ್ಟರಾಗಿದ್ದ ಮೆ ಬಿ ಎಸ್ ಎ ಸ್ಟೀಲ್ ರವರು ಮದುರೆಯಲ್ಲಿ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರಾಗಿದ್ದು ಕಳೆದ ವಾರ ರಿಟೈರಾದರೆಂದು ತಿಳಿಯುತ್ತದೆ

ಪೋಲೀಸು ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರ ಹುದ್ದೆಗೆ ಲಾ ಗ್ರಾಡ್ಯುವೇಟರು ಮತ್ತು ಸರ್ಕಲ್ ಇನ್ಸ್ಪೆಕ್ಟರ ಹುದ್ದೆಗೆ ಗ್ರಾಡ್ಯುವೇಟ್ ಉಮೇದ್ವಾರರು ಆಗೊಸ್ತು 1ರೊಳಗೆ ಮಿಶನರವರಿಗೆ ಅಪ್ಲಿಕೇಶನ್ ಕಳುಹಿಸಬೇಕೆಂದು ಗಜೆಟಿನಲ್ಲಿ ಪ್ರಕಟಿಸಲ್ಪಟ್ಟಿದೆ

ಮಡಿಕೇರಿ ಮುನ್ಸಿಪಲ್ ಕ್ಲಾರ್ಕರಾಗಿರುವ ಮೆ ಅಲ್ಲಾರಂಡ ಮೊಡಪ್ಪನವರ ಮಗ ಪೊಣ್ಣಪ್ಪನವರು ಕಳಕೇರಿನಾಡು ಗ್ರಾಮದಲ್ಲಿರುವ ಅವರ ಮನೆಯಲ್ಲಿ ಕಳೆದ ಮಂಗಳವಾರ ಬೇಗೈ ಆಕಸ್ಮಾತ್ತಾಗಿ ಕೋವಿಯಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡರಾಗಿ ತಿಳಿದು ಬರುತ್ತದೆ

ಈಗ ಸೋಮವಾರಪೇಟೆ ಬೆಂಚ್ ಮೇಜಿಸ್ಟ್ರೇಟರಾಗಿರುವ ಮೆ ಗಳಾದ ಡಿ. ನಾರಾಯಣ ಶೆಟ್ಟಿಯವರು, ಕೆ ಶಂಕರಯ್ಯನವರು, ಹಿ ಬಿ ಬಸವಯ್ಯನವರು ಸಿಂಗೂರು ಬಸಪ್ಪನವರು ಮತ್ತು ಹಿ. ಚೆನ್ನವೀರಪ್ಪನವರು—ಇವರುಗಳ ಅವಧಿಯನ್ನು ಕಳೆದ ಜೂನ್ 29 ರಿಂದ 5 ವರ್ಷಗಳ ವರೆಗೆ ವಿಸ್ತರಿಸಲಾಗಿದೆ.

ಈ ವಾರ ಮಡಿಕೇರಿಯಲ್ಲಿ ಮಳೆಯೂ, ಗಾಳಿಯೂ ಜೋರಾಗಿದೆ ಕಳೆದ ಶನಿವಾರದಿಂದ ಇಂದಿನ ವರೆಗೆ 15 24 ಇಂಚು ಮಳೆಯೂ, ಜೂನ್ ತಿಂಗಳು ಆಖೈರು ವರೆಗೆ ಒಟ್ಟು 13-26 ಇಂಚು ಮಳೆಯೂ ಆಗಿದೆ. ಗ್ರಾಮಾಂತರಗಳಲ್ಲಿಯೂ ಈ ವಾರ ಸಕ್ತ ನಾಟಿ ಕೆಲಸ ಪ್ರಾರಂಭವಾಗಿದೆಯೆಂದು ತಿಳಿಯಬರುತ್ತದೆ.

ಕುಂಜಿಲಗೇರಿ ಲಂಕಾನ ಪಿ ಸ್ಟೇಟ ಮತ್ತು ಚೆನ್ನೈನ ಸೇಟೆ ಕಂಪೆನಿ ಗ್ರೇಯಿನ್ ಬ್ಯಾಂಕು ನ್ಯಾಯವಾಗಿ ಕೆಲಸ ಮಾಡುವುದಿಲ್ಲವಾದ್ದರಿಂದ ಅವುಗಳ ರಿಜಿಸ್ಟ್ರೇಶನನ್ನು ರದ್ದು ಮಾಡಿ ದಕ್ಷಿಣ ಕೊಡಗು ಕೋಆಪರೇಟಿವ್ ಇನ್ಸ್ಪೆಕ್ಟರ್ ಮೆ. ಪಿ. ಎಂ. ಚಂಗಪ್ಪನವರನ್ನು ಅವುಗಳ ಲಿಕ್ವಿಡೇಟರಾಗಿ ನೇಮಿಸಲಾಗಿದೆಯೆಂದು ತಿಳಿಯಬರುತ್ತದೆ

ಪೋಲೀಸು ಡೆಪ್ಯುಟಿ ಸುಪರಿಂಟೆಂಡೆಂಟರಾಗಿರುವ ರಾ ಸಾ. ಕೇಳಪಂಡ ಕಾಳಪ್ಪನವರು ಬರುವ ಆಗೊಸ್ತು ತಿಂಗಳು 1 ಕ್ಕೆ ರಿಟೈರ್ ಆಗುವ ಮುಂಚೆ 6 ತಿಂಗಳು ರಜೆಯಲ್ಲಿ ಹೋಗುವುದರಿಂದ ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರಾಗಿರುವ ಮೆ. ಚಟ್ಟಿಯಂಡ ಕುಟ್ಟಪ್ಪನವರು ಆಗೊಸ್ತು 1 ರಿಂದ ಡೆಪ್ಯುಟಿ ಸುಪರಿಂಟೆಂಡೆಂಟರ ಕೆಲಸವನ್ನು ನೋಡುವಂತೆ ನೇಮಿಸಲಾಗಿದೆಯೆಂದು ತಿಳಿಯುತ್ತೇವೆ

ಮೀನು ಹಿಡಿಯುವ ಸಂಬಂಧವಾಗಿ ಇರುವ ಶಾಸನದ ಪ್ರಕಾರ ಕೋಟೆ ಹಾಕಿಯಾಗಲೀ, ಮದ್ದು ಹಾಕಿಯಾಗಲೀ ಹೊಳೆಯಲ್ಲಿ ಮೀನು ಹಿಡಿಯುವವರನ್ನು ವಾರಂಟಿಲ್ಲದೆ ದಸ್ತಗಿರಿ ಮಾಡುವ ಹಕ್ಕು ರಾವ್ ಬಹದ್ದೂರ್ ಕೋದಿಮಣಿಯಂಡ ಸುಬ್ಬಯ್ಯನವರು, ಎ ಎಫ್. ಬ್ರೇಕನ್ ಪಿ ಬಿ ಟಿ ಡಗ್ ಮತ್ತು ಜೆ. ಒ ಯಫ್. ಮಾರಿಸ್ ಎಂಬವರಿಗೆ ಚೀಫ್ ಕಮಿಷನರ್ ಕೊಟ್ಟಿದ್ದಾರೆಂತ ಗಜೆಟಿನಲ್ಲಿ ಪ್ರಕಟವಾಗಿದೆ ಕೆಲಸ ಮಾಡುವದಕ್ಕೆ ಇವರಿಗೆ "ರಿವರ್ ವಾರ್ಡೆನ್" ಅಂದರೆ ಹೊಳೆಗಳ ಮೇಲ್ವಿಚಾರಕರು ಎಂಬ ಹೆಸರು ಕೊಡಲ್ಪಟ್ಟಿದೆ.

ಹಿಂದೂದೇಶ.

ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ಮೀಟಿಂಗು ಈ ತಾ 7ರಲ್ಲಿ ಬೊಂಬಾಯಿಯಲ್ಲಿ ನಡೆಯುವುದು

ಕಲಕತ್ತೆಗೆ ಸೇರಿದ ಗೋಸ್ವಾಮಿ ಎಂಬ ಬಿ ಎ ಪದವೀಧರನು ಚೋಟಿಂಗ್ ಸ್ಟ್ರೀಟಿನಲ್ಲಿ ಒಸರ ಬೂಟ್‌ಪಾಲಿಷ್ ಮಾಡಿ ಹೊಟ್ಟೆ ತುಂಬಿಕೊಳ್ಳುತ್ತಿದ್ದನು ಪೋಲೀಸರು ಇವನನ್ನು ಸುಳ್ಳಿನ ಆರೋಪದ ಮೇಲೆ ಸೆರೆಹಿಡಿದಿರುವರು

ಗಾಂಧಿ—ಇರ್ವಿನ್ ಸಂಧಿಯು ದೊಡ್ಡ ತಪ್ಪೆಂದು ಲಂಡನಿನ ಇಂಡಿಯನ್ ಕಾಂಗ್ರೆಸ್ ಮಂಡಳಿಯವರ ಕಾನ್‌ಫರೆನ್ಸಿನಲ್ಲಿ ತೀರ್ಮಾನವಾಯಿತು ಎಸೆಂಬ್ಲಿಯ ಮಾಜಿ ಅಧ್ಯಕ್ಷರಾದ ಶ್ರೀ ವಿಠಲಭಾಯಿ ಪಟೇಲರೇ ಇದಕ್ಕೆ ಅಧ್ಯಕ್ಷರಾಗಿದ್ದರು.

ಮೈಸೂರು ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಇಸ್ಮೈಲ್‌ರವರು ದುಂಡು ಮೇಜು ಪರಿಷತ್ತಿಗೆ ಹೋಗಿ ಬಂದ ಖರ್ಚು 72 ಸಾವಿರ ರೂಪಾಯಿ ಅಲ್ಲಿಯ ಎಸೆಂಬ್ಲಿಯಲ್ಲಿ ಮಂಜೂರಾಯಿತು ಬರುವ ದುಂಡು ಮೇಜು ಪರಿಷತ್ತಿನಲ್ಲಿ ಇವರು ರಜಪುತಾನದ ಜಯಪುರ ಸಂಸ್ಥಾನದ ಪ್ರತಿನಿಧಿಯಾಗಿಯೂ ಇರುವರಂತೆ

ವಿಲ್ಲುಪುರಂ ಸಮೀಪದಲ್ಲಿನ ಮೇಲಪಟ್ಟಿತುಪ್ಪಂ ಎಂಬ ಹಳ್ಳಿಯಲ್ಲೊಂದು ನೂತನ ರೋಗವು ತಲೆದೋರಿದೆ ಬೆವರಿನ ಮೇಲೊಂದು ಗುಳ್ಳೆ ಏಳುವುದು ಬಿರುನೋಯುವುದು ಮುಂದಿನ ದಿನ ಈ ರೋಗಿ ಸಾಯು ಇದಕ್ಕೆ ಹುತಾತ್ಮರು ಈ ರೋಗ ತಗಲಿದವನೊಬ್ಬನ ನೆತ್ತರು ತೆಗೆದು ಮದರಾಸಿಗೆ ಶೋಧನೆಗಾಗಿ ಕಳುಹಿಸಲಾಗಿದೆ

ಕಾಂಗ್ರೆಸು ಸ್ವಯಂ ಸೇವಕರ ಪಿಕೆಟಿಂಗನ್ನು ತಪ್ಪಿಸಲಿಕ್ಕಾಗಿ ಈ ತಾ 1ಕ್ಕೆ ಇಟ್ಟಿದ್ದ ಸೇಂದಿ ಮತ್ತು ಸಾರಾಯಿ ಅಂಗಡಿಗಳ ಲೈಸೆನ್ಸ್ ಹರಾಜನ್ನು ಬೊಂಬಾಯಿ ಕಲೆಕ್ಟರವರು ಈ ತಾ 6ಕ್ಕೆ ಮುಂದರಿಸಿಟ್ಟು, ಸೇಂದಿ ಅಂಗಡಿಗಳಿಗೆ 200 ರೂಪಾಯಿ ಮತ್ತು ಸಾರಾಯಿ ಅಂಗಡಿಗಳಿಗೆ 100 ರೂಪಾಯಿಯ ಠೇವಣಾತಿ ಸಮೇತ ಅರ್ಜಿಯ ಮೂಲಕ ಟೆಂಡರುಗಳನ್ನು ಕಳುಹಿಸುವಂತೆ ಕಂಟ್ರಾಕ್ಟುದಾರರನ್ನು ಕೇಳಿಕೊಂಡಿರುವರು.

ಡಾಕ್ಟರ್ ಅನ್ಸಾರಿಯವರು ಫರೀದಾಪುರದಲ್ಲಿ ನಡೆದ ಬಂಗಾಳದ ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಕಾನ್‌ಫರೆನ್ಸಿನ ಅಧ್ಯಕ್ಷ ಸ್ಥಾನವನ್ನು ವಹಿಸಲು ಹೋದಾಗ್ಯೆ ಕಲ್ಕತ್ತದ ಕಾರ್ಪೊರೇಶನಿನವರು ಕಳೆದ ತಾ 30ರಲ್ಲಿ ಅವರಿಗೆ ಒಂದು ಬಿನ್ನಹ ಪತ್ರವನ್ನು ಅರ್ಪಿಸಿದರು. ಅದಕ್ಕೆ 1000 ರೂಪಾಯಿ ಖರ್ಚು ಮಂಜೂರು ಮಾಡಿದ್ದರು ಕಾರ್ಪೊರೇಶನಿನ ಯೂರೋಪಿಯನ್ ಮೆಂಬರುಗಳಲ್ಲದೆ, ಕೆಲವು ಮುಸಲ್ಮಾನ ಮೆಂಬರುಗಳೂ ಗೈರುಹಾಜರಾಗಿದ್ದರು

ಮಹಾತ್ಮ ಗಾಂಧಿಯವರು ಲಂಡನಿಗೆ ಹೋಗುವಾಗ್ಯೆ ಲ್ಯಾಂಕಾಶಯರಿನ ಗಿರಣಿ ಮಾಲೀಕರು ತಮ್ಮ ಸ್ಥಿತಿಯನ್ನು ವಿವರಿಸಲು ಅವರನ್ನು ಲ್ಯಾಂಕಾಶಯರಿಗೆ ಬರಮಾಡಿಕೊಳ್ಳುವರೆಂದೂ ಹಾಗೆ ಆಹ್ವಾನಿಸಲ್ಪಟ್ಟರೆ ತಾನು ಬೇರೆ ಎಲ್ಲಾ ಕೆಲಸಗಳನ್ನು ಬಿಟ್ಟು ಅಲ್ಲಿಗೆ ಹೋಗಿ ಸ್ವದೇಶೀ ಬಟ್ಟೆ ಬಹಿಷ್ಕಾರದ ನಿಜವಾದ ಅರ್ಥವನ್ನು ಅವರಿಗೆ ವಿವರಿಸಿ ಆ ವಿಷಯ ಅವರಲ್ಲಿ ಹುಟ್ಟಿರುವ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸುವೆನೆಂದು ಮಹಾತ್ಮ ಗಾಂಧಿಯವರು ಹೇಳಿರುವರೆಂದೂ ಪ್ರಕಟವಾಗಿದೆ.

ನಾಗಪುರದಲ್ಲಿ ಶ್ರೀ ಆನಂದರಾವ ಪಾಟೀಲ ಎಂಬವರು ಪಾಟನಸಾವಂಗಿ ಎಂಬ ಊರಿನ ಒಂದು ಬಟ್ಟೆಯಲ್ಲಿ ಒಂದು ಪಕ್ಷದ ವಕೀಲರಾಗಿದ್ದರು , ಕಳೆದ ಗುರುವಾರ ತಾರೀಖಿನಲ್ಲಿ ಇವರು ಮೋಟಾರಿನಲ್ಲಿ ಕುಳಿತು ಪಯಣ ಬೆಳೆಸುತ್ತಿರುವಾಗ ಅವರ ವಿರೋಧ ಪಕ್ಷದವರು ಮೋಟಾರು ನಿಲ್ಲಿಸಿ ವಕೀಲರ ಒಂದು ಕಣ್ಣು ಕಿತ್ತು ತೆಗೆದರಲ್ಲದೆ ಮೂಗು ಕೊಯ್ದರು. ವಕೀಲರು ಮೇಯೊ ದವಾಖಾನೆಯಲ್ಲಿ ಆರೈಕೆ ಹೊಂದುತ್ತಿರುವರು ತಪ್ಪಿತಸ್ಥರ ಪತ್ತೆಗೆ ಬಿದ್ದು ದುಡ್ಡಿನ ಆಶೆಗಾಗಿ ಪಂಗಡ ಕಟ್ಟಿ ಬಿಟ್ಟಿ ನಡಿಸ ವಕೀಲರು ಇತ್ತ ಲಕ್ಷ ಕೊಡಬೇಕು

ಈ ತಾ 27ರಲ್ಲಿ ಲಂಡನಿನಲ್ಲಿ ನಡೆದ ಇಂಡಿಯನ್ ನೇಶನಲ್ ಕಾನ್‌ಫರೆನ್ಸಿನ ಅಧ್ಯಕ್ಷರಾಗಿ ಮೆ. ವಿ. ಜೆ. ಪಟೇಲರವರು (ಎಸೆಂಬ್ಲಿಯ ಮಾಜಿ ಅಧ್ಯಕ್ಷರು)—'ರಕ್ಷಣೋಪಾಯಗಳಿಲ್ಲದೆ ಪೂರ್ಣ ಸ್ವಾತಂತ್ರ್ಯ ಬೇಕೆಂದು ಇಂಡಿಯಾವು ಕೇಳುತ್ತಿದೆ ಇದಕ್ಕೆ ಬ್ರಿಟಿಷರು ಒಪ್ಪದಿದ್ದರೆ ದುಂಡು ಮೇಜು ಪರಿಷತ್ತು ಜಯಪ್ರದವಾಗಲಿಕ್ಕಿಲ್ಲ ಹಾಗೆ ತೀರ್ಮಾನಕ್ಕೆ ಬಾರದೆ ಹೋದರೆ ಇಂಡಿಯಾದಲ್ಲಿ ಬ್ರಿಟಿಷರ ವ್ಯಾಪಾರವು ಸಂಪೂರ್ಣ ನಾಶವಾಗುವುದು ಮತ್ತು ಹಿಂದೂಸ್ಥಾನಕ್ಕೂ, ಬ್ರಿಟನಿಗೂ ಇರುವ ಸಂಬಂಧವು ಕಡಿಯಲ್ಪಡುವುದು' ಎಂದು ಬ್ರಿಟಿಷರಿಗೆ ಎಚ್ಚರಿಕೆಯನ್ನು ಕೊಟ್ಟಿರುವರು

ಆಂಧ್ರದ ಪ್ರಾಂತೀಕ ರಾಜಕೀಯ ಕಾನ್‌ಫರೆನ್ಸು ಕಳೆದ ತಾ 27ರಿಂದ 29ರ ವರೆಗೆ ಶ್ರೀಯುತ ಟಿ. ಪ್ರಕಾಶಂರವರ ಅಧ್ಯಕ್ಷತೆಯಲ್ಲಿಯೂ, ಮಹಿಳೆಯರ ಸಭಾ ಸಭೆಯು ತಾ 28ರಲ್ಲಿ ಶ್ರೀಮತಿ ದುರ್ಗಾಬಾಯಿಯವರ ಅಧ್ಯಕ್ಷತೆಯಲ್ಲಿಯೂ, ಯುವಕರ ಕಾನ್‌ಫರೆನ್ಸು ಜೂನ್ ತಾ 30ರಲ್ಲಿ ಶ್ರೀ ಸುಭಾಷ್ ಚಂದ್ರಬೋಸ್‌ರವರು ಗೈರುಹಾಜರಾದುದರಿಂದ ಮೆ. ಬಾಪಿನೀಡುರವರ ಅಧ್ಯಕ್ಷತೆಯಲ್ಲಿಯೂ, 8ನೇ ಹಿಂದೂ ಮಹಾ ಸಭೆಯು ಕಳೆದ ತಾ 28ರಲ್ಲಿ ಹೈದರಾಬಾದಿನ ಮೆ ರಾಮಚಂದ್ರ ವಾಮನ ನಾಯಕರವರ ಅಧ್ಯಕ್ಷತೆಯಲ್ಲೂ, ಮತ್ತು ಹಿಂದೂ ಮಹಾಸಭೆಯು ಜೂನ್ ತಾ 29ರಲ್ಲಿ ಮು. ಪಂಡಿತ ಕೇಶವದೇವ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿಯೂ ನಡೆದವು

ಇಂಡಿಯಾದಲ್ಲಿ ಬಟ್ಟೆಯ ಗಿರಣಿಗಳಲ್ಲಿ ಕೆಲಸ ಮಾಡುವ ಜನರ ಸಂಖ್ಯೆ ೩೦ ಲಕ್ಷ ಈ ಗಿರಣಿಗಳಿಗೆ ಒಂದು ಲಕ್ಷ ಪಾಲುಗಾರರಿರುವರು, ೬೦ ಕೋಟಿ ರೂಪಾಯಿ ಬೆಲೆಯ ವಸ್ತ್ರವು ಉತ್ಪತ್ತಿಯಾಗುತ್ತಿದೆ ಇಷ್ಟು ದೊಡ್ಡ ಮೊಬಲಗಿನ ಪ್ರಯೋಜನವು ಅಷ್ಟು ಸಣ್ಣ ಸಂಖ್ಯೆಯಷ್ಟು ಜನರಿಗೆ ಸಲ್ಲುತ್ತಿದೆ ಆದರೆ ಕೈ ನೂಲಿನ ಖಾದಿಯಿಂದ ಇದಕ್ಕಿಂತ ಲಕ್ಷ ನೂರಾರು ಪಾಲು ಹೆಚ್ಚು ಜನರು ಪ್ರಯೋಜನ ಹೊಂದುವರು ಆದಕಾರಣ ದೇಶೀಯ ಗಿರಣಿಗಳ ಬಟ್ಟೆಗಳನ್ನು ಟ್ಟ ಮಾತ್ರದಿಂದ ದೇಶಸೇವೆಯ ಕರ್ತವ್ಯ ಪಾಲು ಸಂಧಿಕೊಂಡೆನೆಂದೆಣಿಸಿದವರು ಮುಂದೆ ಕೈ ಮಗ್ಗದ ಖಾದಿಯನ್ನೇ ಅವಶ್ಯವಾಗಿ ಧರಿಸಬೇಕು ಎಂದು ಬೊಂಬಾಯಿಯಲ್ಲಿ ಮಹಾತ್ಮಾಜಿಯವರ ಉಪದೇಶ

'ಕಳೆದ ತಿಂಗಳ 21ರಲ್ಲಿ ಯುನೈಟೆಡ್ ಪ್ರಾಂತ್ಯದ ಹಿಂದೂಸ್ಥಾನೀ ಸೇವಾದಳವನ್ನು ರಾಣಿ ಲಕ್ಷ್ಮೀಬಾಯಿಯವರು ತೆರೆದರು ಅಲ್ಲಿಯ ಮುಂದಾಳಾದ ಮೆ ಧುಳೀಕರವರು ಅಧ್ಯಕ್ಷರಾಗಿದ್ದರು ಹದಿನಾರು ಡಿಸ್ಟ್ರಿಕ್ಟುಗಳಿಂದ 39 ಉಮೇದುವಾರರು ಬಂದಿರುವರು ಪ್ರಾಂತೀಕ ದಳ ಬೋರ್ಡಿನ ಸೆಕ್ರೆಟರಿಯಾದ ನಾಕುಪೂರ ಡಿಯೆಂ ವಶಿಷ್ಠರವರು ಕ್ಯಾಂಪು ನಡಿಸುತ್ತಿರುವರು ಕಮಾಂಡಿಂಗ್ ಆಫೀಸರಾದ ಮೆ ಯಂ ಸಿ ಮಹಂತರವರು (ಮೆ. ಮಾಚಂಡ ಮಂದಣ್ಣನವರು) ಐದು ಇನ್ಸ್ಟ್ರಕ್ಟರುಗಳ ಸಮೇತ ತರಬೇತು ಕೊಡುತ್ತಿರುವರು ರಾಂಚಿಯ ಡಿಸ್ಟ್ರಿಕ್ಟ್ ಮತ್ತು ಪಟ್ಣ ಕಾಂಗ್ರೆಸ್ ಕಮಿಟಿಗಳು ದ್ರವ್ಯ ಸಹಾಯ ಕೊಡುತ್ತಿರುವರು ತಾ 28ರಲ್ಲಿ ಮಹಿಳಾ ಧ್ವಜಾಭಿವಂದನೆಯನ್ನು ನಡಿಸಿದರು ಎಂದು ಶಾತೀವಾರ್ತೆ ಬಂದಿದೆ

ಉಣ್ಣೆಯ ಬಟ್ಟೆಯನ್ನು ಮಾಡುವುದರಲ್ಲಿಯೂ ಸ್ಪರ್ಧೆಯೆಂಬುದಿದೆ ಅಮೇರಿಕದವನೊಬ್ಬನು ೧೦ ವರ್ಷಗಳ ಕೆಳಗೆ ೬ ಘಂಟೆ ೨೩ ನಿಮಿಷಗಳಲ್ಲಿ ಉಣ್ಣೆಯನ್ನು ನೆಯ್ದು ಬಟ್ಟೆ ಮಾಡಿ ಅಂಗಿ ಹೊಲಿದು ಜಗದೇಕನೆನಿಸಿದ್ದನು ಕಳೆದ ವಾರ ಇಂಗ್ಲಾಂಡಿನವನೊಬ್ಬನು ೩ ಘಂಟೆ ೩೦ ನಿಮಿಷಗಳ ಅವಧಿಯಲ್ಲಿ ಅಷ್ಟು ಕೆಲಸವನ್ನು ಮಾಡಿ ಪೂರೈಸಿ ಅಮೇರಿಕಾನನ ದಾಖಲೆಯನ್ನು ಮುರಿದನು ಕೇವಲ ೨೦½ ನಿಮಿಷಗಳಲ್ಲಿ ೧೨ ಕುರಿಗಳ ಮೈಮೇಲಿನ ಉಣ್ಣೆಯನ್ನು ಕತ್ತರಿಸಿ ಮತ್ತೆ ಕೆಲ ಅವಧಿಯಲ್ಲಿ ಅದನ್ನು ತೊಳೆದು ಬಣ್ಣ ಹಾಕಿ, ಒಣಗಿಸಿ ವಸ್ತ್ರ ನೆಯ್ದು ಮೋಟಾರಿನಲ್ಲಿ ದರ್ಜಿಯ ಕಡೆಗೊಯ್ದು ೧೦ ದರ್ಜಿಗಳ ಸಹಾಯದಿಂದ ೩೭ ನಿಮಿಷಗಳಲ್ಲಿ ಒಂದು ಅಂಗಿಯನ್ನೂ ಚಲ್ಲಣವನ್ನೂ ಹೊಲಿಸಲಾಯಿತು. ಇದನ್ನೀಗ ಉಣ್ಣೆಯ ಪ್ರದರ್ಶನವೊಂದರಲ್ಲಿ ಪ್ರದರ್ಶಿಸಲಾಗುತ್ತದೆ

ವಿದೇಶ.

ಸ್ಪೈನ್ ದೇಶದ ಕಳೆದ ಜನರಲ್ ಚುನಾವಣೆಯಲ್ಲಿ ರಿಪಬ್ಲಿಕನ್ ಪಾರ್ಟಿಯವರೇ ಬಹುಮತದಲ್ಲಿ ಜಯಶೀಲರಾಗಿರುವರು

ಬಿಸಿಗಾಳಿಯ ದೆಸೆಯಿಂದ ಅಮೇರಿಕಾದಲ್ಲಿ 500 ಮರಣಗಳಾದವು. ದನಕರುಗಳು ನೊಣಗಳ ಹಾಗೆ ಸತ್ತು ಬೀಳುತ್ತಿವೆಯಂತೆ!

ಸೈಮನ್ ಕಮಿಷನ್ ಮೆಂಬರುವಾಗಿಯ ಸರ್ ಜಾನ್ ಸೈಮನ್‌ರವರು ತಮ್ಮ ನಾಲ್ಕೈದು ಹಿಂಬಾಲಕರೊಡನೆ ಲಿಬರಲ್ ಪಕ್ಷವನ್ನು ಬಿಟ್ಟು ಕನ್ಸರ್ವೇಟಿವ್ ಪಂಗಡಕ್ಕೆ ಸೇರಿರುವರು

ಕನ್ಸರ್ವೇಟಿವ್ ಪಾರ್ಟಿಯವರು ಬರುವ ದುಂಡು ಮೇಜು ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳುವ ಮುಂಚೆ ಹಿಂದುಸ್ಥಾನದಂತೆಯೇ ಬ್ರಿಟನಿನ ಹಿತದಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನವರ ಜಾರಿಗೆ ತರಬಹುವಾದ ರಕ್ಷಣೋಪಾಯಗಳು ರಚನೆಯು ಮುಖ್ಯ ಭಾಗವಾಗಿರುವವೆಂದೂ ಮತ್ತು ದುಂಡು ಮೇಜು ಪರಿಷತ್ತಿನಲ್ಲಿ ಪೂರ್ಣ ಸ್ವಾತಂತ್ರ್ಯದ ವಿಷಯ ಮಾತೆತ್ತಲು ಬಿಡ ಪ್ರದಿಲ್ಲವೆಂದೂ ಸರ್ಕಾರದವರು ಭರವಸೆ ಕೊಡಬೇಕೆಂದು ಕನ್ಸರ್ವೇಟಿವ್ ಪಕ್ಷದವರು ತಮ್ಮದೊಂದು ಮೀಟಿಂಗಿನಲ್ಲಿ ತೀರ್ಮಾನಿಸಿರುವರು

ಚಿಕಾಗೋ ನಗರದ ಮಿಸೆಸ್ ಜಾರ್ಜ್ ರೇ ನಮ್ಮರ್ ಎಂಬ ನವರಕ್ಷಿಸಿಯು ಈಗ್ಗೆ ೨೫ ವರ್ಷಗಳಿಂದಲೂ ತನ್ನ ನಾಲ್ಕು ಮಂದಿ ಪತಿಗಳನ್ನೂ, ಒಬ್ಬ ಉಪಪತಿಯನ್ನೂ, ಇಬ್ಬರು ಸಹೋದರರನ್ನೂ, ಚಿಕ್ಕ ಪ್ರಾಯದ ಒಬ್ಬ ಮಗಳನ್ನೂ ಇನ್ನೂ ಸ್ವಂತವಾದ ೧೯ ಜನ ಬಂಧು ಬಳಗವನ್ನು ವಿಷ ಹಾಕಿ ಕೊಂದು ಹಾಕಿ ೧೬೦೦೦ ಪೌಂ. ಡುಗಳ ಇನ್ ಷೂರೆನ್ಸ್ ಹಣವನ್ನು ಅಪಹರಿಸಿದಳೆಂಬ ಅಪವಾದನೆಗಾಗಿ ಕಳೆದ ಮೇ ತಿಂಗಳ ೨೬ರಲ್ಲಿ ದಸ್ತಗಿರಿ ಮಾಡಲ್ಪಟ್ಟಿರುತ್ತಾಳೆ. ಈ ಮೊಕದ್ದಮೆಯ ಸಂಬಂಧವಾಗಿ ವಿಷಪ್ರಯೋಗ ಮಾಡಲ್ಪಟ್ಟ ೨೦ ಮೃತದೇಹಗಳು ಗೋರಿಯಿಂದ ತೆಗೆಯಲ್ಪಟ್ಟು ಡಾಕ್ಟರ ಪರೀಕ್ಷೆಗೆ ಒಪ್ಪಿಸಲಾಗಿದೆ.

ಬೆಂಗಳೂರು ಕೊಡಗರ ಸಂಘ.

ಮೇಲ್ಕಂಡ ಸಂಘದ ಜನೆರಲ್ ಮೀಟಿಂಗು ರಾ ಬಾ. ಆರ್ಕಾಟ್ ನಾರಾಯಣ ಸ್ವಾಮಿ ಸ್ಕೂಲ್ ಹಾಲಿನಲ್ಲಿ ಜೂನ್ 21 ನೇ ತಾರೀಕು ಆದಿತ್ಯವಾರ ದಿನ ಬೆಳಿಗ್ಗೆ 9½ ಘಂಟೆಗೆ, ಸಂಘದ ಪ್ರೆಸಿಡೆಂಟರಾದ ಮ. ರಾ. ಶ್ರಿ. ಕೋದಂಡ ಮಾಚಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಸುಮಾರು 35 ಮೆಂಬರುಗಳು ಹಾಜರಿದ್ದರು.

ಕಳೆದ ಮೀಟಿಂಗಿನ ಕಾರ್ಯಕಲಾಪದ ವಿವರವನ್ನು ಓದಲಾಯಿತು. ಆ ದಿನದ ಮುಂದಿನ ಕಾರ್ಯವನ್ನು ಪ್ರಾರಂಭಿಸುವ ಮೊದಲು ಮೆ. ಮುಂಡೇಪಂಡ ಎ. ಕಾಳಪ್ಪನವರು, ಲೇಟ್ ಅಪ್ಪಾರಂಡ ಕಾರ್ಯಪ್ಪನವರ ಮರಣಕ್ಕಾಗಿ, ಈ ಮೊದಲು ಸಂಘದ ದುಃಖವನ್ನು ಸೂಚಿಸಲು ಅವಕಾಶ ದೊರೆಯದಿದ್ದುದಕ್ಕಾಗಿ ಬಹಳ ವಿಷಾದ ಪಟ್ಟರು. ತದ ನಂತರ ಅವರ ಗುಣ ಕಥನವನ್ನು ಮಾಡಿ, ಅವರು ಬೆಂಗಳೂರಿಗೆ ದಯಮಾಡಿಸಿದ್ದಾಗ ಈ ಸಂಘದ ಆಡಳಿತದಲ್ಲಿ ಒಂದು ಕೊಡಗು ಹಾಸ್ಟೆಲನ್ನು ಏರ್ಪಡಿಸುವ ವಿಷಯದಲ್ಲಿ ಅವರು ಸೂಚಿಸಿದ ಉತ್ಸಾಹವನ್ನು ವಿವರಿಸಿ, ಅವರು ಕೆಲವು ಕಾಲ ಜೀವಿಸಿದ್ದಲ್ಲಿ, ಸಂಘಾಭಿವೃದ್ಧಿಗೆ ಸಹಾಯಕರಾಗುತ್ತಿದ್ದರೆಂದು ತಿಳಿಸಿದರು. ಇದಾದ ಕೂಡಲೇ, ಗತಿಸಿದ ಆತ್ಮದ ಗೌರವಾರ್ಥವಾಗಿ ಅಲ್ಲಿ ನೆರೆದಿದ್ದವರೆಲ್ಲರೂ ಒಂದು ನಿಮಿಷ ಕಾಲ ಎದ್ದು ನಿಂತು ಮೌನವನ್ನಾಚರಿಸಿದರು. ಅಧ್ಯಕ್ಷರು ಮೆ. ಕಾರ್ಯಪ್ಪನವರು ತಮ್ಮ ಸಹಾಧ್ಯಾಯಿಗಳಾಗಿದ್ದರೆಂದು ತಿಳಿಸಿ, ಅವರ ಸದ್ಗುಣಗಳನ್ನು ಬಹಳವಾಗಿ ಹೊಗಳಿ, ತಾನು ಸಂಘದ ಸಂತಾಪ ಸೂಚನೆಯನ್ನು ಈ ಮೊದಲೇ ತಂತಿಯ ಮೂಲಕ ತಿಳುಹಿಸಬೇಕಾಗಿದ್ದದ್ದು ತಮ್ಮ ಕರ್ತವ್ಯವಾಗಿದ್ದರೂ, ತಾನು ಅವರ ಮರಣ ಕಾಲದಲ್ಲಿ ಬೆಂಗಳೂರಿನಲ್ಲಿ ಇಲ್ಲದುದರಿಂದ ತನ್ನ ಇಷ್ಟವನ್ನು ನೆರವೇರಿಸಲಾಗಲಿಲ್ಲವೆಂದು ವಿಷಾದಿಸಿದರು.

ತರುವಾಯ ಮೆ ಮುಂಡೇಪಂಡ ಕಾಳಪ್ಪನವರು ಈ ಕೆಳಗಿನ ಠರಾವನ್ನು ಮ. ರಾ ಶ್ರಿ. ಅಪ್ಪರಂಡ ಜಾಗಪ್ಪನವರಿಗೂ ಮತ್ತು ಅವರ ಸಂಸಾರಕ್ಕೂ ಪ್ರೆಸಿಡೆಂಟರು ಸಂಘದ ಪರವಾಗಿ ಕಳುಹಿಸಬೇಕೆಂದು ಸೂಚಿಸಿದರು. ಅದು ಸರ್ವಸಮ್ಮತದಿಂದ ಒಪ್ಪಲಾಯಿತು.

"ಈ ಸಂಘವು ಮ. ರಾ. ಶ್ರಿ ಅಪ್ಪಾರಂಡ ಕಾರ್ಯಪ್ಪ, ಎಮ್. ಎ. ಬಾರ್ ಅಟ್ ಲಾ ರವರ ಮರಣದಿಂದ ನಮ್ಮ ದೇಶಕ್ಕೆ ಅತ್ಯಧಿಕವಾದ ನಷ್ಟವಾಯಿತೆಂಬುದನ್ನು ಬಹಳ ದುಃಖದಿಂದ ದಾಖಲೆ ಮಾಡುತ್ತದೆ."

ತದನಂತರ ಸಂಘದ ಪ್ರೆಸಿಡೆಂಟರು ಸಂಘದ ಹೊಸ ಮೆಂಬರುಗಳಿಗೆ ಸ್ವಾಗತವನ್ನು ನೀಡಿ ಅವರೆಲ್ಲರೂ ಉಪಾಧ್ಯಾಯರ ತರಬೇತಿಗೆ ಬಂದವರಾದುದರಿಂದ ಉದ್ಯೋಗಗಳಲ್ಲೆಲ್ಲಾ ಉಪಾಧ್ಯಾಯನ ಸ್ಥಾನವು ಅತ್ಯುತ್ತಮವಾದುದೆಂದೂ, ಗೌರವವಾದುದೆಂದೂ, ತಮ್ಮ ಜೀವಮಾನದ ಕೆಲವು ನಿದರ್ಶನಗಳಿಂದ ತಿಳಿಸಿ, ಉಪಾಧ್ಯಾಯನಲ್ಲಿ ಮುಖ್ಯವಾಗಿ ಸತ್ಯ ಸಂಧತೆ, ನ್ಯಾಯಾನುಸರಣೆ ಇವೇ ಮೊದಲಾದ ಗುಣಗಳಿರಬೇಕೆಂದು ಹೇಳಿದರು. ಸೇವಕ ಸ್ವಭಾವನ್ನಭಿವೃದ್ಧಿಗೊಳಿಸುವ "ಸರ್" ಎಂದು ಉಪಾಧ್ಯಾಯರನ್ನು ಮತ್ತು ಇತರರನ್ನೂ ವಿದ್ಯಾರ್ಥಿಗಳು ಬಾರಿ ಬಾರಿಗೂ ಸಂಬೋಧಿಸುವುದನ್ನು ನಿರ್ಮೂಲ ಮಾಡಬೇಕೆಂದು ಒತ್ತಿ ಹೇಳಿ, ಇನ್ನೂ ಅನೇಕ ಬುದ್ಧಿವಾದದ ಮಾತುಗಳಿಂದ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಇದಾದ ಕೂಡಲೇ, ಈ ವರ್ಷ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರ ಪೈಕಿ ಹಾಜರಿದ್ದ ಮೆ. ಗಳಾದ ದೇಯಂಡ ದೇವಯ್ಯನವರಿಗೂ, ಐಚೆಟ್ಟಿರ ಮೊದಪ್ಪನವರಿಗೂ ಸಂಘದ ಪರವಾಗಿ ಅಭಿನಂದನೆಗಳನ್ನರ್ಪಿಸಿದರು.

ತರುವಾಯ ಉಪಾಧ್ಯಾಯರುಗಳ ಪೈಕಿ ಮೆ. ಗಳಾದ ಪಳಂಗಂಡ ಮುತ್ತಪ್ಪನವರನ್ನು ಮತ್ತು ಮನೇಪಂಡ ಗಣಪತಿಯವರನ್ನು ಕಾರ್ಯನಿರ್ವಾಹಕ ಮಂಡಲಿಯ ಮೆಂಬರುಗಳಾಗಿಯೂ ಮತ್ತು ಪೆಮ್ಮಂಡ ಸುಬ್ಬಯ್ಯನವರನ್ನು ಆಟದ ಕೆಪ್ಟನ್ನರಾಗಿಯೂ ಚುನಾಯಿಸಲಾಯಿತು.

ಕೊನೆಯಲ್ಲಿ ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿದ ನಂತರ, ಅವರು ಏರ್ಪಡಿಸಿದ, ಟೀ, ಫಲಾಹಾರಗಳನ್ನು ಸ್ವೀಕರಿಸಿ, ಸಭೆಯು ಮುಕ್ತಾಯವಾಯಿತು.

ಕೆ. ಕೆ. ಅಪ್ಪಯ್ಯ,
(ಉಪ ಗೌರವ ಕಾರ್ಯದರ್ಶಿ)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

'ಕಳವುಗಳು'

ಅಯ್ಯಾ,

ಅಮ್ಮತ್ತಿಯಲ್ಲಿ ಈಗ ಒಂದೆರಡು ವರ್ಷಗಳಿಂದ ಸುಮಾರು 8—10 ಕಳವುಗಳಾದವು. ಕಳವುಗಳೆಲ್ಲಾ ಇದಿರು ಬಾಗಿಲುಗಳ ಬೀಗ ಮಗ್ಗಿತೆ ಮುರಿದೇ ಮಾಡಿದ್ದಾಗಿದೆ. ಈಗ 2 ವಾರದಿಂದ ಎರಡು ಕಳವುಗಳಾದವು. ಕಳವು ಯಾವದೂ ಈ ವರೆಗೆ ಪತ್ತೆಯಾಗಿರುವದಿಲ್ಲ. ಸದ್ಯ ಈ ಟೌನಿಗೆ ಒಂದು ಪೊಲೀಸು ಅವುಟ್ ಪೋಸ್ಟನ್ನು ಇಟ್ಟು ಒಬ್ಬ ಹೆಡ್ ಕಾನ್‌ಸ್ಟೇಬಲನ್ನೂ, ಇಬ್ಬರು ಕಾನಿಸ್ಟೇಬಲರನ್ನೂ ಕಾಯಂ ಆಗಿ ಇಟ್ಟದ್ದ ಪಕ್ಷ ಈ ಕಳವುಗಳ ಹಾವಳಿ ಕಮ್ಮಿಯಾಗಿ ಟೌನ್ ವಾಸಿಗಳು ಸ್ವಲ್ಪ ನೆಮ್ಮದಿಯಲ್ಲಿರುತ್ತಿದ್ದರು.

"ಪಟ್ಟಣವಾಸಿ"

ಪೊಲೀಸು ಉದ್ಯೋಗಸ್ಥರ ನೇಮಕ.

ಮಹನೀಯರೇ,

ಕಳೆದ ವಾರ ಈ ಪತ್ರಿಕೆಯಲ್ಲಿ ಮೇಲಿನ ವಿಷಯವನ್ನು ಕುರಿತು "ನ್ಯಾಯವಾದಿ" ಎಂಬವರು ಬರೆದಿದ್ದ ಬಾತ್ಮಿಗೆ ದೇಶದ ಹಲವರು ಒತ್ತಾಸೆಕೊಡದೆ ಇರರು. ಕಮ್ಮಿ ಜನ ಸಂಖ್ಯೆಯ ಮತ್ತು ಹಿಂದುಳಿದಿರುವ ಕೋಮಿನವರ ಹಿತವನ್ನು ಕಾಪಾಡುವ ಭಾರವು ಮುಂದುವರಿದ ಬಲಿಷ್ಠ ಸಂಗಡದವರದಾಗಿದೆಯೆಂದು ಎಲ್ಲರೂ ಒಪ್ಪಬೇಕಾಗಿದೆ. ಬಲಿಷ್ಠ ಕೋಮಿನವರು ಬಲಹೀನ ಕೋಮಿನವರನ್ನು ಸಂಗಡವೇ ಇಟ್ಟುಕೊಳ್ಳದೆ ಹೋದರೆ ಬಲಹೀನರಲ್ಲಿ ಅಸಮಾಧಾನವೂ, ಅತೃಪ್ತಿಯೂ ಉಂಟಾಗುವುದು ಖಂಡಿತ. ಇದರಿಂದ ದೇಶದಲ್ಲಿ ಜಗಳಗಳೂ, ಕಲಹಗಳೂ ಹೆಚ್ಚುವವು.

ಈಗ ಪೊಲೀಸು ಇಲಾಖೆಯಲ್ಲಿ ಸಬ್ ಇನ್‌ಸ್ಪೆಕ್ಟರಿಂದ ಹಿಡಿದು ಸುಪರಿಂಟೆಂಡೆಂಟರ ವರೆಗೂ ಎಲ್ಲಾ ಉದ್ಯೋಗಸ್ಥರೂ ಕೊಡವರೇ ಆಗಿರುವರು. ದೇಶದ 1 ಲಕ್ಷ 63 ಸಾವಿರ ಜನ ಸಂಖ್ಯೆಯಲ್ಲಿ ಬರೇ 44 ಸಾವಿರ ಮಾತ್ರ ಕೊಡವರಾಗಿರುವರು. ಹೀಗಿರುವಲ್ಲಿ ಜನರ ಪ್ರಾಣ ಮತ್ತು ಆಸ್ತಿಪಾಸ್ತಿಗಳನ್ನು ಕಾಪಾಡುವ ಪೊಲೀಸು ಇಲಾಖೆಯಲ್ಲಿಯೂ ಕೂಡ ಕೊಡಗೇತರರು ಯಾರೂ ದೊಡ್ಡ ಉದ್ಯೋಗದಲ್ಲಿ ಇಲ್ಲದೆ ಇರುವಾಗ ಕೊಡಗೇತರರಿಗೆ ತೃಪ್ತಿಯು ಹೇಗೆ ತಾನೇ ಇದ್ದೀತು? ಯಾವಾಗಲೂ ಅವರು ಹೆದರಿಕೆಯಿಂದಲೇ ಜೀವಿಸಬೇಕಲ್ಲವೇ? ಇಷ್ಟರ ವರೆಗಾದರೂ ಕಡಿಮೆ ಜನ ಸಂಖ್ಯೆಯ ಕೋಮಿನವರಲ್ಲಿ ಉದ್ಯೋಗಕ್ಕೆ ತಕ್ಕ ಯೋಗ್ಯತೆಯುಳ್ಳವರು ಇರಲಿಲ್ಲವೆಂಬ ಕಾರಣವಿತ್ತು. ಈಗ ಬಿ ಎ ಬಿ. ಎಲ್. ಪಾಸಾದವರೂ ಇದ್ದಾರೆ. ಆದ ಕಾರಣ ಕಡಿಮೆ ಜನ ಸಂಖ್ಯೆಯ ಕೋಮಿನವರಿಗೆ ಉತ್ತೇಜನ ಕೊಡಲಿಕ್ಕಾಗಿ ಎರಡು ಇನ್‌ಸ್ಪೆಕ್ಟರುಗಳ ಉದ್ಯೋಗದಲ್ಲಿ ಒಂದನ್ನಾದರೂ ಅವರಿಗೆ ಕೊಡುವುದು ಯೋಗ್ಯವಾಗಿದೆ.

ಸರ್ಕಾರಿ ದೊಡ್ಡ ಉದ್ಯೋಗಸ್ಥರ ಪೈಕಿ ಶೇಕಡ 99 ರಷ್ಟು ದಕ್ಷಿಣ ಕೊಡಗಿನವರಾಗಿರುವರು. ಇದು ಉತ್ತರ ಕೊಡಗಿನವರಿಗೆ ದೊಡ್ಡ ಅನ್ಯಾಯವಲ್ಲವೇ? ಆದುದರಿಂದ ಈಗ ಪೊಲೀಸು ಇಲಾಖೆಯಲ್ಲಿ ಖಾಲಿಯಾಗುವ ಎರಡು ಸ್ಥಳಗಳಲ್ಲಿ ಒಂದನ್ನಾದರೂ ಉತ್ತರ ಕೊಡಗಿನವರಿಗೆ ಕೊಡುವದು ಅವಶ್ಯವಾಗಿದೆ. ಈ ವಿಷಯಗಳಿಗೆ ಚೀಫ್ ಕಮಿಷನರವರು ಗಮನಕೊಡುವರಾಗಿ ಕೋರುತ್ತೇನೆ.

"ಉತ್ತರ ಕೊಡಗಿನವ"

ಸಿಬ್ಬಂದಿಖೋತೆಯೂ, ಬೋರ್ಡಿಂಗೂ

ವಾಚಕ ಮಹಾಶಯರೆ,

ನಾವು ಎತ್ತ ಕಡೆ ನೋಡಿದರೂ ಸಿಬ್ಬಂದಿ ಖೋತೆಯ ಚಳವಳವು. ಅದರೆ ನಾವು ನಮ್ಮ ಈ ಪುಟ್ಟ ಸೀಮೆಯಲ್ಲಿ ಏನು ನೋಡುವುದು? ಬರೀ ಗುಲ್ಲು ನಿದ್ರೆಗೇಡು. ಈಗಾಗಲೆ ನಮ್ಮ ಸಿಬ್ಬಂದಿ ಖೋತೆಯ ಕಮಿಟಿಯವರು ಅನೇಕ ಜನರಿಗೂ, ಸಭೆಗಳಿಗೂ ಅವರವರ ಅಭಿಪ್ರಾಯ ತಿಳಿಸುವ ಹಾಗೆ ಬರೆದಿರುತ್ತಾರೆ. ಅಂಥಾವರು ತಿಳಿಸಿರುತ್ತಾರೆ ಮತ್ತು ಆ ಕಮಿಟಿಯವರು ಸಹ ಈ ತಿಂಗಳಲ್ಲಿ ಮೀಟಿಂಗು ನಡಿಸುವರು.

ಘನ ಸರ್ಕಾರದವರು ಪ್ರಜೆಗಳ ಸಂಕಟವನ್ನರಿತು ಮತ್ತು ಅವರೇ ಅನುಭವಿಸುವ ಹಾಗೆ ಹಣದ ಸಂಕಟದಿಂದ (Financial crisis) ಸಿಬ್ಬಂದಿ ಖೋತೆಯನ್ನು ನಿಜವಾಗಿಯೂ ಗಣನೆಗೆ ತರುವುದಾದರೆ ಈಗಾಗಲೇ ಅನೇಕ ಇಲಾಖೆಗಳಲ್ಲಿ ಖಾಲಿ ಬಿದ್ದಿರುವ ಮತ್ತು ಬೀಳುವ ಸ್ಥಳಗಳಿಗೆ ಸಿಬ್ಬಂದಿ ಖೋತೆಯ ಅಭಿಪ್ರಾಯವನ್ನು ತಿಗೆದುಕೊಳ್ಳುವ ವರೆಗೆ ಖಾಲಿಯಾಗುವ ಸ್ಥಳಗಳನ್ನು ತತ್ಕಾಲಕ್ಕೆ ರದ್ದು ಮಾಡಿ ಈ ವಿಷಯ ಮುಂದಾಲೋಚನೆ ಮಾಡುವುದು ಸರ್ಕಾರದವರ ಕರ್ತವ್ಯವಾಗಿದೆ.

ಬೋರ್ಡಿಂಗುಗಳಲ್ಲು ಹುಡುಗ ಮತ್ತು ಹುಡುಗಿಯರ ಸಂಖ್ಯೆಯು ಈ ವರ್ಷ ಬಹಳ ಕಮ್ಮಿಯಾಗಿದೆ. ಜನರ ಹಣದ ಸಂಕಟವೇ ಇದಕ್ಕೆ ಕಾರಣವೆಂದರೆ ತಪ್ಪಾಗಲಾರದು. ಜಿನಸುಗಳ ಕ್ರಯವು ಕಮ್ಮಿಯಾಗಿರುವಾಗ್ಯೆ ಬೋರ್ಡಿಂಗು ಅಧಿಕಾರಿಗಳು ಫೀಸನ್ನು ಯಾಕೆ ಇನ್ನು ಕಮ್ಮಿ ಮಾಡಿರುವುದಿಲ್ಲವೆಂಬ ಸಂಗತಿ ಶೋಚನೀಯಕರ. ಬೋರ್ಡಿಂಗುಗಳಲ್ಲು ಈ ತನಕ ಸುಧಾರಣೆ ಮಾಡಿದಲ್ಲಿ ನಿಸ್ಸಳ ಲಾಭವು ಖಂಡಿತವಾಯೂ ಇರುವುದು. ಆದ ಕಾರಣ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯಕ್ಕೆ ಒಡನೆ ಗಮನಕೊಟ್ಟು ಖರ್ಚನ್ನು ಕಮ್ಮಿ ಮಾಡಿಸಿ ಗರೀಬರ ಹುಡುಗರು ಶಾಲೆಗೆ ಬರವು ದಾರಿ ತೋರುವರಾಗಿ ನಂಬಿರುತ್ತೇನೆ. ಇಂಥಾ ಜನಸಮುದಾಯದ ಮಂಡಳಿಗಳು ಖರ್ಚನ್ನು ಖೋತೆ ಮಾಡಿ ಸರ್ಕಾರದವರಿಗೆ ದಾರಿ ತೋರಿಸಬೇಕಾಗಿದೆ.

ಪಿ. ಎಂ. ಸಿ.

ಕೊಡವರ ಕಟ್ಟು ಕಟ್ಟಳೆಗಳು.

ಅಯ್ಯಾ,

ನಮ್ಮ ಸಮಾಜದಲ್ಲು ಒಂದು ಕಟ್ಟು ಕಟ್ಟಳೆ ... ತ ಪ್ರತಿಯೊಬ್ಬರೂ ಅವರವರ ಮನ ಬಂದಂತೆ ವರ್ತಿ... ನೋಡುವಾಗ ಇನ್ನು ಕೆಲವು ಕಾಲದಲ್ಲಿ ನಮ್ಮ ... ಲ್ಲಿ ಹಿಡುಕಟ್ಟು ತಪ್ಪಿ ಹಿಂದುಳಿದ ಸಂಗಡಕ್ಕಿಂತಲೂ ... ಬರುವದೋ ಎಂಬ ಹೆದರಿಕೆ ಹುಟ್ಟಿ ನಾನು ಇದನ್ನು ಬರೆಯಬೇಕಾಯಿತು.

ಉದಾಹರಣೆಗಾಗಿ ಈಗ ಎರಡು, ಮೂರು ವರ್ಷ... ದುವೆಗಳಲ್ಲಿ ಕೆಲವರು ವಧುವರರಿಗೆ ಒಂದೇ ಮುಹೂ... ಗಿಯೂ, ಕೆಲವರು ಮುಹೂರ್ತ ದಿನವೇ ಹುಡುಗಿ... ಕಳುಹಿಸಿಬಿಡುವದಾಗಿಯೂ ಮತ್ತು ಕೆಲವರು ಸಿಹಿಸ... ಲ್ಲಿ ಊಟ ಉಪಚಾರ ಕೊಡುವದೂ ಸಹ ಮಾಡುತ್ತಿ... ಎಲ್ಲಾ ಜನರ ತಿಳುವಳಿಕೆಗೆ ಬಂದಿದೆ.

ಇದೂ ಅಲ್ಲದೆ ಮರಣಾಂತರದಲ್ಲಿ ಸಾವನ್ನು ... ಸದೆಯೂ, ಕೊಡಗು ಪದ್ಧತಿ ಮೇರೆ ಕುಪ್ಪಸ ದಟ್ಟಿ ... ಉಡಿಸದೆ ಉಟ್ಟ ಬಟ್ಟೆಯಲ್ಲೇ ಧಫನ ಮಾಡ ... ಮತ್ತು ಮಹನಿಯರೂ ಮಹಿಳೆಯರೂ ಸಹ ಪದ್ಧ... ರೋಧವಾಗಿ 'ಪರಂಗಿಯರಂತೆ ಬೂಟ್ಸು ವಗ್ಯೆರೆ ಹಾ... ಡು ಶ್ರವದ ಸುತ್ತು ಮುತ್ತು ಓಡ್ಯಾಡುವದು ಕಾಣ... ದೆ ಸಂದರ್ಭಾನುಸಾರ ಬೂಟ್ಸು ಹಾಕಿಕೊಂಡು ... ಹೊರುವದೂ ಸಹ ಕಣ್ಣಾರೆ ಕಾಣುತ್ತೇವೆ.

ಇಂಥಾ ಅಕ್ರಮಗಳನ್ನು ನಮ್ಮ ನವೀನ ಕೊಡ... ಯಲ್ಲಿ ಚರ್ಚಿಸಿದ್ದು ಕಂಡು ಬರುವದಿಲ್ಲ. ಯಾವ... ಒಂದು ಖಂಡಿತವಾದ ಪದ್ಧತಿಯನ್ನು ಅನುಸರಿಸಲಿಕ್ಕೆ ... ಡು ಮಾಡಿದರೆ ನಮ್ಮ ಈ ಚಿಕ್ಕ ಜನಾಂಗದ ಒಗ್ಗ... ಹಾಯ ಮಾಡಿದಂತಾಗುವದಲ್ಲದೆ ಹಾಗೆ ಮಾಡುವ... ಹೆಸರು ಸಹ ಊರ್ಜಿತವಾಗಿ ನೆಲೆಗೊಂಡಂತಾಗುತ್ತೆ...

ಮಹಾಸು ಭಾವಗಳಿರಾ—ಯಾವ ಜನಾಂಗವೇ ... ಅವರವರ ಜಾತಿ ಪದ್ಧತಿಗೆ ಸರಿಯಾಗಿ ಅವರವರು ನ... ವಲ್ಲದೆ ನಮ್ಮ ಹಾಗೆ ಮನ ಬಂದಂತೆ ಯಾರೂ ನ... ಲ್ಲ. 'ಪರಂಗಿಯರೂ' ಸಹ ತಮ್ಮ ಪೂರ್ವ ಪದ್ಧ... ಊರ್ಜಿತಪಡಿಸುತ್ತಾರಲ್ಲದೆ ನಮ್ಮ ಹಾಗೆ ಇತರರನ್ನು ... ಲಂಬಿಸಿ ತಮ್ಮ ಪದ್ಧತಿಯನ್ನು ಮೂಲೆಗೊತ್ತಲು ... ಸುವದಿಲ್ಲ.

ನಮ್ಮ ಹಳೇ ಪದ್ಧತಿಯನ್ನು ಬದಲಾವಣೆ ಮಾ... ದು ಹಲವರ ಅಭಿಪ್ರಾಯ. ಅಂಥಾ ಸಂಗತಿಗಳನ್ನು ... ಚರ್ಚಿಸಿ ಯಾವದಾದರೊಂದು ಅಭಿಪ್ರಾಯಕ್ಕೆ ಬರ... ಈ ಲೇಖನದ ಉದ್ದೇಶ.

ದೇಶದ ಜನರೆಲ್ಲರೂ ಕಣ್ದೆರೆದು ಈ ಸಂಗ... ಚರ್ಚಿಸಿ ಸಮಾಜದ ಪದ್ಧತಿ ಉಳಿಯುವಂತೆ ನೋಡ... ಬೇಡುವ

'ಕೊಡ...

ರೈತರ ಗೋಳು.

ಅಯ್ಯಾ,

ಈ ವರ್ಷ ದೇಶದಲ್ಲಿ ಉತ್ಪತ್ತಿಯಾಗುವ ದವ... ಗಳ ಬೆಲೆಯು ಅವರಲ್ಲೂ ಹೆಚ್ಚಿನ ಜನ ಸಂಖ್ಯೆಯವ... ತರ ಮುಖ್ಯ ಉತ್ಪತ್ತಿಯಾದ ಭತ್ತದ ಕ್ರಯವು ... ಇಳಿದು ಹೋಗಿರುವುದು ಯಾರಿಗೂ ತಿಳಿಯದ್ದಲ್ಲ ... ಮಸ್ಥರ ಕೈಯ್ಯಲ್ಲಿ ಕಾಸು ಹುಟ್ಟುವುದೇ ಕಷ್ಟವಾ... ಮೊದಲು ರೂಪಾಯಿಯಲ್ಲಿ ಲೆಖ್ಖ ಮಾಡುತ್ತಿದ್ದವ... ಯಲ್ಲಿ ಲೆಖ್ಖ ಹಾಕುತ್ತಿರುವರು! ರೂಪಾಯಿ ... ಕಾದರೆ ರೈತರು ಈಗ ಪೇಟೆಗಳಲ್ಲಿರುವ ವ್ಯಾಪಾ... ವೂ ಮುಖ್ಯವಾಗಿ ಸರ್ಕಾರಿ ಉದ್ಯೋಗಸ್ಥರಲ್ಲಿಗೆ ... ಬೇಕಾಗಿದೆ. ಒಟ್ಟಿಗೆ ಎರಡು ರೂಪಾಯಿಯಲ್ಲಾ... ತ್ತ ಮೂರ ವ ಎರಡೆ ನಗದು ಹಣ ಕೊಟ್ಟು ಕೊ... ಪವರೇ ಇಲ್ಲ. ಸಾಲವಾಗಿ ಮಾರಿದರೆ ಆ ವ... ಸೂಲಿ ಮಾಡಲು ಮಾಪಿಳ್ಳೆ ಸಾಹುಕಾರರಲ್ಲಿಗೆ ... ಸಲ ಕೆಲಸ ಹಾಳು ಮಾಡಿಕೊಂಡು ಹೋಗ... ಅಂದರೂ ಸಮಕ್ಕೆ ಸರಿಯಾಗಿ ಸಿಕ್ಕುವುದಿಲ್ಲ ... ಲೂ ಈಗ ಸಿಕ್ಕುವುದೇ ದುರ್ಲಭವಾಗಿದೆ.

ರೈತರ ಸ್ಥಿತಿಯು ಹೀಗಿದ್ದರೂ ಕಂದಾಯದ ... ರಾಗುತ್ತಿದೆ. ತಿಗ್ಗಟ್ಟುನಾಡು ತಾಲೋಕಿನಲ್ಲಂ... ರಥಸವನ್ನು ವರ್ಣಿಸಲಾರೆ. ರವಿನ್ಯು ಆಫೀಸ... ವಟಿಕೆಯನ್ನು ಹೇಳಿ ಪೂರೈಸಲಾಗುವುದಿಲ್ಲ. ... ಸ್ನು ಪೂರ್ತಿಯಾಗಿ ಕೂಡಲೆ ವಸೂಲಿ ಮಾಡದೆ ... ವರಿಗೆ ಬಡ್ತಿ ದೊರೆಯುವುದಿಲ್ಲವೋ ಎಂಬ ... ಲೋ ಏನೋ ಅವರು ಆಗುವಷ್ಟು ಭೂಮಿಗಳ... ಯದ ಬಾಕಿಗಾಗಿ ಹರಾಜಿಗೆ ಇಡಲು ಹೊಂದ... ಳ್ಳುತ್ತಿದ್ದಾರೆಂದರೆ ಅತಿಶಯೋಕ್ತಿಯಾಗಲಾರ... ಗೆಳೆಯರನ್ನು ಕಂಡೂ ಕಾಣದಂತೆ, ಕಂದಾಯ ... ಲು ಮಾಡದ ಪಟೇಲರನ್ನು ಕೆಲಸಕ್ಕೆ ಯೋಗ್ಯ... ಹೇಳುವ ಉದ್ಯೋಗಸ್ಥರೂ ಇದ್ದಾರೆ.

ಇದರ ಮಧ್ಯೆ ಇನ್ನೊಂದು ವಿಶೇಷ! ಸ... ಪಳದಿಂದ ದೇಶದಲ್ಲಿ ಕುಡುಕತನವೂ ಸ್ವಲ್ಪ... ಯೂ ಕಡಿಮೆಯಾಗುತ್ತಿರುವುದನ್ನು, ಮಹನೀಯ...

ನೋ, ಎಲ್ಲವನ್ನು ಕಳೆದುಕೊಂಡು ಸ್ವಂತ ಮನೆ ಮನೆಗೆ ಹೋಗಿ, 'ಸೇಂದಿ ಇಳಿಸಲು ಬೈನೆ ತೋಟ ಗುತ್ತಿಗೆ ಕೊಡದೇ ಇದ್ದವು ವ. ಕಾಲುಗಳಿದ್ದೀರಿ ಹಣಕ್ಕೆ ಇಷ್ಟು ತೊಂದರೆ ಇರುವ ಈ ಕಾಲದಲ್ಲಿ ಬೈನೆ ತೋಟದಿಂದ ಇಷ್ಟು ಹಣ ವು ಯಾಕೆ ಕಳಕೊಳ್ಳುತ್ತೀರಿ. ನಾನೇ ನಗದು ಹಣ ಕೊಡುತ್ತೇನೆ ನಿಮ್ಮ ತೋಟದ ಗುತ್ತಿಗೆ ಚೀಟಿ ಬರೆಯಿರಿ' ಎಂದು ರೈತರನ್ನು ಪುಸಲಾಯಿಸುವ ಅಬ್ಕಾರಿ ಇಲಾಖೆಯ ಉದ್ಯೋಗಸ್ಥರೂ ಇರುತ್ತಾರಲ್ಲವೆ! ಇವರ ಇಲಾಖೆಯ ಉತ್ಪತ್ತಿ ಕಡಿಮೆಯಾದರೆ ಇವರಿಗೆ ಸಂಬಳ ಎಲ್ಲಿಂದ ಬರಬೇಕು? ಇಲ್ಲ ಎಂಬ ಹೆದರಿಕೆಯಿಂದ ಇವರು ಹೀಗೆ ಮಾಡುತ್ತಾರೆಂದು ಊಹಿಸಿದರೂ, ಈ ಕೆಲಸಕ್ಕೆ ರೆವಿನ್ಯೂ ಇಲಾಖೆಯ ಉದ್ಯೋಗಸ್ಥರೂ ಕೂಡ ಇಳಿದಿರುವುದು ಆಶ್ಚರ್ಯವಲ್ಲವೇ? ಕಂದಾಯ ಕೊಡಲು ಹಣವಿಲ್ಲವೆಂದು ರೈತರು ಹೇಳಿದರೆ ನಿಮ್ಮ ಬೈನೆ ತೋಟಗಳನ್ನು ಗುತ್ತಿಗೆ ಕೊಟ್ಟು ನಿಮ್ಮ ಕಂದಾಯ ಕಟ್ಟಿ, ಇಲ್ಲವಾದರೆ ನಿಮ್ಮ ಭೂಮಿ ಹರಾಜು ಮಾಡಬೇಕಾಗುವದೆಂದು ಹೇಳುವ ಪಾರುಪತ್ಯಗಾರರೆಷ್ಟೋ ಇದ್ದಾರೆ! ಸರ್ಕಾರ ಉದ್ಯೋಗಸ್ಥರಿಗೆ ಸೇಂದಿ ಗುತ್ತಿಗೆಯವರಿಂದ ಇಷ್ಟೊಂದು ಪ್ರೀತಿಯು ಯಾಕೆ ಹುಟ್ಟಿರುವುದು ನಮಗೆ ತಿಳಿಯಲಾಗುವುದಿಲ್ಲ. ರೈತರು ಎಷ್ಟು ಕಷ್ಟದಲ್ಲಿ ಇದ್ದರೂ ಅವರಿಂದ ಕಂದಾಯವನ್ನು ಬೇಗನೆ ವಸೂಲಿ ಮಾಡಿ ಮೇಲುದ್ಯೋಗಸ್ಥರ ಶಿಫಾರಸ್ಸನ್ನು ಪಡೆದು ತಮ್ಮ ಸಂಬಳ ಜಾಸ್ತಿ ಮಾಡಿಸಿಕೊಳ್ಳುವುದಕ್ಕಾಗಿ ಈ ಪ್ರಯತ್ನಗಳಿರಬಹುದೋ, ತಿಳಿಯದು!

ನಮ್ಮ ದೇಶೀಯ ಉದ್ಯೋಗಸ್ಥರು ನಿಜವಾಗಿಯೂ ದೇಶದ ಹಿತವನ್ನು ಬಯಸುವವರಾದರೆ ಮದ್ಯಪಾನ ನಿಷೇಧವನ್ನು ಏಳಿಗೆ ಮಾಡುವ ಎಲ್ಲಾ ಪ್ರಯತ್ನಗಳಿಗೆ ಮೆಚ್ಚಿ, ಕಂದಾಯ ಕಟ್ಟಲಾರದೆ ಇರುವ ರೈತರ ಕಷ್ಟಗಳನ್ನು ಮೇಲಧಿಕಾರಿಗಳಿಗೆ ತಿಳಿಸಿ ಅವರ ಸಹಾಯ ಮಾಡಬೇಕಾಗಲಿ, ದೀರ್ಘ ಅವಧಿ ಕೊಡಿಸಿಯೂ ಬಡವರು ತಮ್ಮ ವಗೈರೆ ಇನಾಮತಿ ಹಕ್ಕುಗಳನ್ನು ಕಳೆದುಕೊಳ್ಳದಂತೆ ಭೂಮಿಯನ್ನು ಹರಾಜು ಮಾಡದೆ ಇರುವದೂ ಅವರ ಕರ್ತವ್ಯವಾಗಿದೆ.

ಬಂಧು.

ಕೊಡಗು ಚೀಫ್ ಕಮಿಶನರವರಲ್ಲಿ ವಿನಂತಿ

ರಿಜಿಸ್ಟ್ರಾರವರೂ, ಕರಡ ಸಹಕಾರ ಸಂಘವೂ;

ಅಯ್ಯಾ,

ಕರಡ ಸಹಕಾರ ಲೇವಾದೇವಿ ಸಂಘವು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಸಂಘಗಳ ರಿಜಿಸ್ಟ್ರಾರವರು ಅದನ್ನು ತಾರೀಕು 26—5—31ರಲ್ಲಿ ಒಡೆದು ಹಾಕಿ ಲೇವಾದೇವಿಗಳನ್ನು ವಸೂಲು ಮಾಡುವ ಬಗ್ಗೆ ಲಿಕ್ವಿಡೇಟರನ್ನು ನೇಮಕ ಮಾಡಿರುತ್ತಾರೆ. ಈ ವಿಷಯದಲ್ಲಿ ಕಡಿಯತ್ತನಾಡು ಯೂನಿಯನ್ನಿನವರು ತಾರೀಕು 8—6—1931 ರಲ್ಲಿ ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ಕಾನ್ಫರೆನ್ಸು ಮಾಡಿ ಸಂಘವನ್ನು ಒಡೆದದ್ದು ಪೂರಾ ಅನ್ಯಾಯಕರವೆಂದೂ, ಬಡ ರೈತರ ಜನ್ಮದ ಭೂಮಿಯು ಖಂಡಿತ ಹಾಳಾಗುವದೆಂದೂ ಎಷ್ಟು ಹೇಳಿದರೂ ತನ್ನ ಆರ್ಡರಿನ ಮೇಲೆ ಅಪೀಲು ಮಾಡಿಕೊಳ್ಳಬಹುದೆಂದು ಹೇಳಿದ್ದಾರೆ. ಅಪೀಲು ಮಾಡುವುದಾದರೆ ಒಡೆದ ತಾರೀಕಿನಿಂದ ಎರಡು ತಿಂಗಳು ಮಾತ್ರ ಸಮಯವಿರುವದಾಗಿದೆ. ಯೂನಿಯನ್ನಿನ ಒಬ್ಬ ಕೇರು ದಾರನ ಅಥವಾ ಮೆಂಬರುಗಳ ಅಪೀಲು ಈ ಜುಲೈ 26ರೊಳಗೆ ದಾಖಲಾಗಬೇಕಾಗಿದೆ.

ಕರಡ ಸಂಘವು ಬೇಳರಿಕೆ ನಾಡು ಸಂಘದಿಂದ ಪ್ರತ್ಯೇಕಿಸಲ್ಪಟ್ಟನಂತರ ಚೆನ್ನಾಗಿ ಕೆಲಸ ಮಾಡದಿರುವುದೇನೋ ನಿಜವಾಗಿರಬಹುದು. ಹೀಗೆ ಕೆಲಸ ಮಾಡದಿದ್ದುದಕ್ಕೆ ಒಂದು ಮುಖ್ಯ ಕುಟುಂಬಸ್ಥರ ಪರಸ್ಪರ ಕಲಹವೂ, ಕಂಡಿ ಮತ್ತು ಮಗ ಪ್ರೆಸಿಡೆಂಟ್ ಮತ್ತು ಸೆಕ್ರೆಟರಿಯಾಗಿರುವುದೇ ಮುಖ್ಯವಾದ ಕಾರಣಗಳಲ್ಲೊಂದೆಂದು ತಿಳಿಯುತ್ತೇನೆ. ಆದರೆ ಈ ಕಾರಣಗಳಿಗಿಂತ ಇಲಾಖಾಧಿಕಾರಿಗಳೇ ಈ ಸ್ಥಿತಿಗೆ ಕಾರಣರೆಂದರೂ ಸಹ ತಪ್ಪಾಗಲಾರದು. ಏಕೆಂದರೆ ನೂರಾರು ರೂಪಾಯಿ ಸಂಬಳ ಕೊಟ್ಟು ಇರುವ ರಿಜಿಸ್ಟ್ರಾರೂ ಸಹಕಾರ ಇನ್ಸ್‌ಪೆಕ್ಟರುಗಳೂ ಆಗಿಂದಾಗ್ಯೆ ಈ ಸಂಘದಲ್ಲಿ ಜನರಲ್ ಮೀಟಿಂಗ್ ಮಾಡಿ ಮೆಂಬರುಗಳಿಗೆ ಉಪದೇಶಗಳನ್ನು ಕೊಟ್ಟು ಖಾತೆಗೆ ಎರಡು ಬಾರಿ ತಪ್ಪದೆ ತಂಟೆ ಮಾಡುವ ಮತ್ತು ಲೇವಾದೇವಿ ಮಾಡುವ ಮೆಂಬರುಗಳನ್ನು ತೆಗೆದು ಹಾಕಿದ್ದ ಪಕ್ಷ ಈ ಸಂಘವನ್ನೊಡೆಯುವ ಸ್ಥಿತಿಯು ಬರುತ್ತಿರಲಿಲ್ಲ. ಸಂಘದ ಸ್ಥಿತಿಯು ಚೆನ್ನಾಗಿಲ್ಲವೆಂದೂ ಅದನ್ನು ಸರಿಪಡಿಸಬೇಕೆಂದೂ ಫೆಡರೇಶನ್ ಸೆಕ್ರೆಟರಿ ರಿಜಿಸ್ಟ್ರಾರರಿಗೆ ಬರೆದನಂತರವೂ ರಿಜಿಸ್ಟ್ರಾರವರು ಅದನ್ನು ಪರಿಶೋಧಿಸಿ ಸರ್ಕಲ್ ಕೋಆಪರೇಟಿವ್ ಇನ್ಸ್‌ಪೆಕ್ಟರಿಗೆ ರಿಪೋರ್ಟು ಕೊಟ್ಟರೆಂತಲೂ ಅದಕ್ಕೆ ಇನ್ಸ್‌ಪೆಕ್ಟರು ಇದನ್ನು ಒಡೆಯಬೇಕೆಂತ ಸೂಚಿಸಿದ ಮೇಲೆ ಸಂಘವನ್ನು ಒಡೆದು ಹಾಕಿದ್ದಾರೆಂದೂ ತಿಳಿಯುತ್ತೇನೆ. ರಿಜಿಸ್ಟ್ರಾರವರಿಗೆ ತನ್ನ ದೇಶ, ತನ್ನ ಸಂಘ, ತನ್ನ ಗ್ರಾಮ, ತನ್ನ ಬಡ ರೈತರೆಂಬ ಅಭಿಮಾನವಿದ್ದ ಪಕ್ಷದಲ್ಲಿ ಒಬ್ಬರ ರಿಪೋರ್ಟಿಗಿಂತ ತಾನು ನೇರಾಗಿ ತನಿಖೆ ಮಾಡದೆ ಹೀಗೆ ಒಡೆದು ಹಾಕುತ್ತಿರಲಿಲ್ಲವೆಂದೇ ಅನೇಕರ ಅಭಿಪ್ರಾಯ. ಒಡೆದು ಹಾಕುವ ಮುಂದೆ ಅವರು ಸಂಘದ ಬಡ ರೈತರ ಹಿತಕ್ಕಾಗಿ ತನಗೆ ಎಷ್ಟೇ ಅಧಿಕಾರವಿದ್ದರೂ ಈ ಕೆಳಗಿನ ರೀತಿ ಮಾಡುವುದು ಅವಶ್ಯವಿತ್ತು.

1 ಇನ್ಸ್‌ಪೆಕ್ಟರನ್ನು ಕುದ್ದು ಸಂಘಕ್ಕೆ ಕಳುಹಿಸಿ ಜನರಲ್ ಮೀಟಿಂಗ್ ಮಾಡಿಸಿ ಅಕ್ರಮಗಳನ್ನು ಸರಿಪಡಿಸುವುದು.

(2) ತಾನು ಕುದ್ದು ಹೋಗಿ ಜನರಲ್ ಮೀಟಿಂಗ್ ಮಾಡಿ ಸಂಘದ ಜವಾಬ್ದಾರಿಯನ್ನು ತಿಳಿಸಿ, ಲಿಕ್ವಿಡೇಶನ್ ಆದರೆ ಆಗುವ ತೊಂದರೆಗಳನ್ನು ಮೆಂಬರುಗಳಿಗೆ ಪ್ರತ್ಯಕ್ಷ ತಿಳಿಸುವುದು.

(3) ಸಂಘದವರು ಹೀಗೆ ಮಾಡಿಯೂ ಕೆಲಸ ನಡೆಸದೆ ಹೋದರೆ ಸಂಘವನ್ನು ಒಡೆದು ಹಾಕುವೆನೆಂದು ಕಡಿಮೆ ಪಕ್ಷ ಆರು ತಿಂಗಳಿಗೆ ಮೊದಲೇ ನೋಟೀಸು ಕೊಡುವುದು.

4 ಫೆಡರೇಶನಿಗೆ ಈ ವಿಚಾರವನ್ನು ತಿಳಿಸಿ ಅವರ ಮೂಲಕ ಜನರಲ್ ಮೀಟಿಂಗ್ ಮಾಡಿಸಿ ಸಂಘದ ಸ್ಥಿತಿಯನ್ನು ಸರಿಪಡಿಸುವುದು. ಇಂತಿಷ್ಟು ಕೆಲಸ ಮಾಡಿದ್ದರೆ ರಿಜಿಸ್ಟ್ರಾರವರು ಖಂಡಿತವಾಗಿಯೂ ತನ್ನ ಕೆಲಸವನ್ನು ಮಾಡಿದಂತೆ ಆಗುತ್ತಿತ್ತು.

ಈಗಿನ ಸ್ಥಿತಿ.

ಈಗ ಗ್ರಾಮದ ಬಡ ಮೆಂಬರುಗಳ ಕಷ್ಟವನ್ನು ಹೇಳುವುದೆಲ್ಲಿ? ಜವಾಬ್ದಾರಿಯೇ ಮಿತಿ ಇಲ್ಲದ್ದು. ಒಬ್ಬನ ಭೂಮಿ ಮತ್ತು ಜನರ ಸಾಲಕ್ಕಾಗಿ ಇನ್ನೊಬ್ಬ ಸಂಘದ ಅನುಕೂಲಸ್ಥ ಮೆಂಬರನಿಂದ ಎಲ್ಲಾ ಸಾಲವನ್ನು ಭರ್ತಿಮಾಡಿಕೊಳ್ಳಬಹುದು. ಲಿಕ್ವಿಡೇಟರಿಗೆ ಎಲ್ಲಾ ಲೆಕ್ಕಗಳನ್ನು ಕೊಟ್ಟು ಅವರ ಹೇಳಿಕೆಯಂತೆ ನಡೆಯಬೇಕು. ಲಿಕ್ವಿಡೇಟರು ಹಣ ಸಿಕ್ಕದೆ ಹೋದರೆ ಪ್ರತಿ ಒಬ್ಬ ಮೆಂಬರಿನ ಭೂಮಿಯನ್ನು ಹರಾಜಿಗೆ ತರಬಹುದು. ಲಿಕ್ವಿಡೇಟರಿಗೆ ವಾಯಿದೆ ಕೊಡುವ ಅಧಿಕಾರವಿಲ್ಲ. ಪ್ರತಿ ಒಂದು ಕಾಸನ್ನು ನಿರ್ದಾಕ್ಷಿಣ್ಯವಾಗಿ ವಸೂಲು ಮಾಡಿಯೇ ತೀರಬೇಕು.

ಮೇಲಧಿಕಾರಿಗಳಿಗೆ ಮುಂದಾಲೋಚನೆಯಿದ್ದಿದ್ದರೆ ಈ ಇಕ್ಕಟ್ಟಿನ ಪ್ರಪಂಚದಲ್ಲೇ ಹಣದ ಅಭಾವವಿರುವ, ಬೆಳೆಸುವ ಪೈರು ಪಚ್ಚೆಗಳಿಗೆ ಕ್ರಯವಿಲ್ಲದ ಒಂದು ಬಟ್ಟೆ ಭತ್ತವನ್ನು ಎರಡು ರೂಪಾಯಿಗೆ ಕೇಳದ ಈ ಸಮಯದಲ್ಲಿ ಕೇವಲ ಬಡ ವರ್ಗದ ಈ ಬಡ ಕರಡ ಗ್ರಾಮಸ್ಥರ ಸಂಘವನ್ನು ಒಡೆದು ಹಾಕುವುದಾದರೇನ? ಇದರ ಪರಿಣಾಮವಾಗಿ ಗ್ರಾಮದ ಭೂಮಿ ಎಲ್ಲವೂ ಹರಾಜಾಗಿ ಒಬ್ಬಿಬ್ಬ ಅನುಕೂಲಸ್ಥನಿಗೆ ಹೋಗುವುದನ್ನು ನಮ್ಮ ರಿಜಿಸ್ಟ್ರಾರರು ಮತ್ತು ಸಹಕಾರಿ ಮುಂದಾಳುಗಳು ಸಹ ನೋಡಬಹುದಲ್ಲವೇ!

ಕಡಿಯತ್ತನಾಡು ಯೂನಿಯನ್ನಿನವರು ಒಡೆದು ಹಾಕಬಾರದೆಂಬದಾಗಿ ಬೇಡಿಕೊಂಡಿದ್ದಾರಂತೆ. ಫೆಡರೇಶನ್ನಿನವರ ಕಡೆಯಿಂದ ಏನೂ ಆಗಿಲ್ಲವಂತೆ. ಸಂಘದ ಬಡ ಮೆಂಬರುಗಳು ರಿಜಿಸ್ಟ್ರಾರವರಲ್ಲಿ ಮೊರೆ ಇಟ್ಟರೂ, ಚೀಫ್ ಕಮಿಶನರವರಿಗೆ ಅಪೀಲು ಮಾಡಿಕೊಳ್ಳಿ ಎಂಬ ಜವಾಬು ದೊರೆತಿದೆಯಂತೆ.

ಈ ಸ್ಥಿತಿಯಲ್ಲಿ ನಮ್ಮ ಅಚ್ಚುಂಡಿಯರು ಗಳಿಸಿದ ಜನ್ಮ ಭೂಮಿಯಾದ ಜಮ್ಮವು ಕಂಡಿತವಾಗಿಯೂ ಹರಾಜಿಗೆ ಬಂದು ದೇಶಕ್ಕೇನೇ ಅಪಕೀರ್ತಿ ಬರುತ್ತೆ. ಇಂಥಾ ಪವಿತ್ರವಾದ ಜಮ್ಮವನ್ನು ಕಳೆಯದಂತೆಯೂ, ಸಂಘದಲ್ಲಿ ಜನರಲ್ ಮೀಟಿಂಗ್ ವಗೈರೆ ಮಾಡಿ ಎಲ್ಲವನ್ನು ಸರಿಪಡಿಸಲು ತಕ್ಕ ಏರ್ಪಾಡು ಮಾಡುವಂತೆಯೂ ರಿಜಿಸ್ಟ್ರಾರವರು ಒಡೆದು ಹಾಕಿದ ಹುಕುಮನ್ನು ರದ್ದುಮಾಡುವಂತೆಯೂ ಕೊಡಗು ಚೀಫ್ ಕಮಿಶನರವರಲ್ಲಿ ಅಪೀಲು ಮಾಡಿಕೊಳ್ಳುತ್ತೇನೆ. ರಿಜಿಸ್ಟ್ರಾರವರು ಸಹ ತನ್ನ ತಪ್ಪನ್ನು ತಿದ್ದಿಕೊಂಡು ತಾನು ದೇಶೀಯನೆಂದೂ, ಜಮ್ಮದವನೆಂದೂ, ಜಮ್ಮವು ಬಹಳ ಪವಿತ್ರವೆಂದೂ ಭಾವಿಸಿ, ತನಗೆ ಎಷ್ಟೇ ಅಧಿಕಾರವಿರಲಿ, ಸಂಘವನ್ನು ಒಡೆದು ಹಾಕುವುದರ ವಿಷಯದಲ್ಲಿ ತನ್ನ ಅಧಿಕಾರವನ್ನು ಬಹಳ ದೀರ್ಘಾಲೋಚನೆಯಿಂದ ಉಪಯೋಗಿಸಬೇಕೆಂದೂ ಅಪೀಲು ಮಾಡುತ್ತೇನೆ.

ಈ ವಿಷಯವು ಬಹಳ ಪ್ರಾಮುಖ್ಯವಾದ್ದರಿಂದ ನಮ್ಮ ದೇಶದ ವೃತ್ತಪತ್ರಿಕೆಗಳೂ, ಮತ್ತು ಕೌನ್ಸಿಲು ಮೆಂಬರುಗಳೂ ಸಹ ಎಚ್ಚೆತ್ತು, ಸರಕಾರಕ್ಕೆ ತಕ್ಕ ಸಲಹೆಗಳನ್ನು ಕೊಡುವರೆಂದು ನಂಬಿ ನನ್ನ ಈ ಬಡ ವಿನಂತಿಯನ್ನು ಮುಕ್ತಾಯ ಮಾಡುತ್ತೇನೆ.

"ಯೂನಿಯನ್ ಮೆಂಬರು"

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಬಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂಡವಾಳಕ್ಕೆ ಆದ ಫೌಂಟನ್‌ಪೆನ್‌ಗಳು.

ರೆಲ್ಯಾ ಪಂಡರ್ ಫೌಂಟನ್‌ಪೆನ್ 1ಕ್ಕೆ	ರೂ 3	0	0	
ಬಿಗ್ ಬ್ಯಾರಲ್ ಪೆನ್ 1ಕ್ಕೆ	3	3	0	
ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	6	0	
ಬಿಗ್ ಬ್ಯಾರಲ್ ಸ್ಕ್ರೂ ಕ್ಯಾಪ್ ಡಬಲ್ ಕಲರ್ ಫೌಂಟನ್‌ಪೆನ್ 1ಕ್ಕೆ		14	0	
ಮಾರ್ಬಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0	
ಸೆಲ್ಫ್ ಫಿಲ್ಲಿಂಗ್ ಮೆಂಡರ್ ಅಥವ ಗ್ರೀನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0	
ಬಿಗ್ ಸ್ಪಾಟ್ ಫೌಂಟನ್‌ಪೆನ್ 1ಕ್ಕೆ	10	8	0	
ಪಾರ್ಕರ್ ಪೆನ್ 1ಕ್ಕೆ	14 6 0, & 20	10	0	
ಕ್ವಾರ್ಟರ್ ಫೌಂಟನ್‌ಪೆನ್ 1ಕ್ಕೆ	3 8 0, & 3	12	0	
... ಫೌಂಟನ್ ಪೆನ್ 1ಕ್ಕೆ	6 4 0, & 6	12	0	
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ	8 2 0, & 8	10	0	

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್	1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್	1ಕ್ಕೆ	2	2	0
ಲಿಗಲಿಯಾ ಆಕಾರದ ಟೈಂಪೀಸ್	1ಕ್ಕೆ	6 9 0 & 6	15	0
ಲಿಗಲಿಯಾ ಸಣ್ಣ ಸೈಜಿನ ಅಲಾರಂ ಟೈಂಪೀಸ್	1ಕ್ಕೆ	7	2	0
ಲಿಗಲಿಯಾ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು	1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್	1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್	1ಕ್ಕೆ	13	4	0
ಖಾತ್ರಿಯುಳ್ಳ ಒಂದೋಳೆಸ್ಕೋ ಆದ ಪಾಕೆಟ್ ವಾಚ್	1ಕ್ಕೆ	5	10	0
ವಿಟೋ ನಮೂನೆಯಲ್ಲಿ ಎಚ್ಚ್ ಹಾರ್ಡ್ ಕಂಪೆನಿಯ ಪಾಕೆಟ್ ವಾಚ್	1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲೆಂಡರ್ ಮೂಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್	1ಕ್ಕೆ	5 4 0 7 8 0, 10 0 0 & 12	8	0



ಸ್ಪೆಶಲ್ಲಿ ನಮೂದಿಸಿರುವ ನಮೂನೆಯಂದವಾದ ಟೇಬಲ್ ಕ್ಲಾಕ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ ಕಾಯಿದಾ

ಮನಿಯಾರ್ಡರ್ ರವಾನಿಸುವವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—52

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ
ಶೇರ್ ಬಂಡವಾಳ	—	50 000
ವಸೂಲಾದ ಶೇರ್ ಮೊಬಲಗು	—	23,160
ಜಮೂಬಂದಿ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 1ರ ಲೆಕ್ಕ ದೊರೆಯುತ್ತೆ.

ಹೆಚ್ಚಿನ ವಿವರಕ್ಕಾಗಿ ಕೊಆಪರೇಟಿವ್ ರಿಜಿಸ್ಟ್ರಾರವರು ಕಚೇರಿಯಲ್ಲಿ ವಿಚಾರಿಸಬಹುದು.

ಪ್ರೆಸಿಡೆಂಟರು	ಡೈರಕ್ಟರ್
ಕೋದಂಡ ಅಪ್ಪಯ್ಯನವರು	ಮುಸೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್	ನವರು

ಸೆಕ್ರಟರಿ

ಸಿ ಯಸ್ ವೆಂಕಟಸ್ವಾಮಿ ನವರು ಬಿ ಎ ಬಿ ಎಲ್

ತಾರೀಕು 1—7—1930

ಸಣ್ಣ ಹುಡುಗರ ಸಲುವಾಗಿ

ಡೋಂಗ್ರೆ

ಇವರ

ಬಾಲಾಮೃತ.

ವನ್ನು ಕೊಡುವುದರಿಂದ ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52—26 ಗಿರಿಗಾಂವ, ಮುಂಬಯಿ.

ನೋಟೀಸು.

ಈ ಕೆಳಗಿನ ಮಹನೀಯರು ಕೊಡಗು ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಿ ಒಪ್ಪಿಸುವಂತಹದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳನ್ನು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಬವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು

ಉತ್ತರ ಕೊಡಗಿಗೆ ಮ ಪಾಲೇಂಗಡ ಕಾರ್ಯಪ್ಪನವರು,

ಮ ಚೆಂಬಿರ ಮಾದಯ್ಯನವರು,

ದಕ್ಷಿಣ ಕೊಡಗಿಗೆ ಮ ಅಲ್ಲಾರಂಡ ಮೇದಪ್ಪನವರು,

ಮ ಚೆಕ್ಕೇರ ದೊಸ್ಯಯ್ಯನವರು

ಮ ಸೋಮೆಯಂಡ ಅಚ್ಚಯ್ಯನವರು

ಮರೆನಾಡು—ಮ ಕೇಕಿರ ಅಚ್ಚಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮ ಮಂಡೇಪಂಡ ಸೋಮಯ್ಯನವರು, (ಹಾದಿಭಂಡಾರ.)

ನಾಪೋಕ್ಲು—ಎಮ್ ಆರ್ ವೆಂಕಪ್ಪಯ್ಯನವರು

ಶ್ರೀಮಂಗಲನಾಡು—ಮ ಅಜ್ಜಮಾಡ ಮೊದಪ್ಪನವರು

ಗೋಣಿಕೊಪ್ಪಲು—ಮ ಚಮ್ಮಡ ಮೊದಪ್ಪನವರ

ಅಮ್ಮತ್ತಿ—ಸಿದ್ದಾಪುರ—ಮ ಬಸಂಡ ದೊಡಪ್ಪನವರು,

ಪೊನ್ನಂಪೇಟೆನಾಡು—ಮ ಪಿ ಜಿ ಮುದ್ದಯ್ಯನವರು,

ಮ ಸಣ್ಣುವಂಡ ಬೋಪಯ್ಯನವರು

ಮತ್ತು ಅರಮನೆಮಾಡ ಎ ಕಾರ್ಯಪ್ಪನವರು,

ಹುದಿಕೇರಿ ಕ ತಿತಿಮತ್ತಿ—ಮ ಜಿ ದಳವಯ್ಯನವರು

ಮಂಟಿಕೊಪ್ಪ—ಮ ಅಪ್ಪಡೆಪ್ಪೋಲಂಡ ಪೊಚ್ಚಯ್ಯನವರು,

ಸೂಚನೆ—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮ್ಯಾನೇಜರ್,

ಕೊಡಗು ಲಿಮಿಟೆಡ್,

ಮಡಿಕೇರಿ,

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್,

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26 481 ಪಾಲಿಸಿಗಳ

ನಿವ್ವಳ ಒಟ್ಟು ಉತ್ಪತ್ತಿ—52 ಲಕ್ಷ ರೂ ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ

ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ ಪಾಲಿಸಿದಾರರಿಗೆ ಸಾಲ—8013 ಜನರಿಗೆ 3…

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1 78 322 ಜನರಿಗೆ 38ಕೋಟಿ …

ಮೇಲಿನ ಕಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22 ಕಿಂತಲೂ ಕಡಿಮೆ ವೆಚ್ಚದಲ್ಲಿಯೇ ನಡೆಸಲ್ಪಟ್ಟ…

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಮಾಣವನ್ನು ಈ ಸಂಖ್ಯೆಗಳಿಂದಲೂ ಇದರ ಚಿರ ಜೀವನ ಮತ್ತು ಉತ್ತಮವಾದ ನಡೆಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಪ್ರೋತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖ್ಲೆಗಳಿಂದಲೂ ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್‌ಪೆರೇಡ್ ಬೆಂಗ…

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಡೆಲ್ಲಿ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಹಾಬಾದು	ಢಕ್ಕ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಪುರ	ತಿರುವೆಂದ್ರಂ
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟ…

ಮಲೇರಿಯಾ ಜ್ವರ ಕ್ಕೆ

ಕೊಡಗಿನ ಗುಡುಗುಡು ಎಂಬ ಚಳಿಜ್ವರಕ್ಕೂ ಬಿಸಿಲು ಜ್ವರಕ್ಕೂ ಗಟ್ಟಿಯಾದ ಜ್ವರಗಳಿಗೂ ಗುಣಕಾರಿಯಾದ ಮಲೇರಿಯಾ ನಾಶಕ ಮದ್ದು ಮಲೇರಿಯಾ ಸಂಪೂರ್ಣ ಜ್ವರವನ್ನು ಗುಣಪಡಿಸಿ ಗೆಡ್ಡೆಯನ್ನು … ಕರಗಿಸಿ ಬಿಡುತ್ತದೆಂದು ಸ್ಥಿರ ನಂಬು ಕ್ರಯ ಬಾಟ್ಲಿ 1 ½ ಡಜನ್ 8—8—0. 1 ಡಜನ್ 16—8—0

ಕಂಪೌಂಡು ಸಿರಪು ಬ್ಲಟ.

ಗುರುಗುರು ಉಬ್ಬಸ ನೇವಸದ ರೋಗದಿಂದ ಕಫ ಗಟ್ಟಿಯಾಗಿ ಎಳೆದಾಟ ಎದೆ ಮತ್ತು ಪಾರ್ಶ್ವನೋವು ಮುಂತಾದವಕ್ಕೆ ಅತಿ ಸಂಕಷ್ಟದಿಂದ ನರಳುವ ರೋಗಿಯು ಗಿ ಕಂಪೌಂಡು ಸಿರಪು ಬ್ಲಟ ಎಂಬದನ್ನು ತಕ್ಷಣ ತಂದು ಕುಡಿಯಲಿ ಕ್ರಯ ಬಾಟ್ಲಿಗೆ ರೂ 1—8—0

ಕಂಪೌಂಡು ಸಿರಪು ಬಸಲೀನ —ಕ್ಷಯರೋಗದ ಕ್ಷಯನಂಬ ರೋಗಕ್ಕೆ ಈ ಸಿರಪ್ಪನ್ನು ಆರಂಭದ ಸ್ಥಿತಿಯಲ್ಲಿಯೇ ಕೊಟ್ಟರೆ … ಉಂಟಾಗುವ ಹುಣ್ಣು ವ್ರಣಗಳು ಕೆಮ್ಮು ಎದೆನೋವು ರಕ್ತ ಬೀಳ ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ಮುಂದೆಯಿರುತ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3—8—0

ಕಂಪೌಂಡು ಸಿರಪು ಸೆಬೀನ ಸೇಪಿಯ —ಹೆಂಗಸರ ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ಬಿಳಿ ಕೆಂಪು ರೋಗದಿಂದ ಸೊಂಟನೋವು ಕೈಕಾಲು ಬತ್ತಲು ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರಿಸುವುದು ಕ್ರಯ ಬಾಟ್ಲಿಗೆ ರೂ 3—8—0.

ಕಂಪೌಂಡು ಸಿರಪು ನೆಸಿಫಿಲಾಜ — ಪ್ರಮೇಹವೆಂಬ ಗುಹ್ಯರೋಗವನ್ನು ಪಡಕೊಂಡು ಮೂತ್ರ ಬಂದು ಬಂದು ಮೂತ್ರದ್ವಾರದಲ್ಲಿ ಹುಣ್ಣು ವ್ರಣಗಳು ದುರ್ಗಂಧ ಕೆಡುದ ತರದ ಎಂಬದ ರೋಗ ಇತ್ಯಾದಿ ರೋಗ ತರದ ರೋಗವನ್ನು ಈ ಬಲಶಾಲಿ ಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ. 3—8—0

ಶುದ್ಧ ವೈದ್ಯಮದ್ದುಗಳೂ ಹೊಮ್ಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಪುಟ 3 — ರ ವರೆಗೆ ಓದಿಕೊಂಡು ಬರೆಯತಕ್ಕದ್ದು ಪರೀಕ್ಷಿಸಿ ಕಾಡುವ ವ್ಯಾಧಿಕರಗಳು ಬಿಸಲಿಗೆ ಇದಕ್ಕೆ ಒಳ್ಳೆ ಔಷಧಗಳನ್ನು ನಮ್ಮಲ್ಲಿ ನ್ಯಾಯವಾದ ಬೆಲೆಗೆ ದೊರೆಯುವುವು

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ ಧರ್ಮಾರ್ಥ

52—35 **Malariana Co ,** ವಿಳಾಸ —**ಮಲೇರಿಯಾನ ಕಂಪೆನಿ**

Hampankatta No 14 Mangalore ಹಂಪನಕಟ್ಟೆ ಇಗರ್ಜಿಬಳಿ 14, ಮಂಗಳೂರು …

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರ… ಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿ… ಜ್ಯಾರಿ ಪರಸ್ಪರ ಸಹಾಯಕ ಸಂಘದ ಮತ್ತು ದ… ರದ ಉಪನಿಬಂಧನೆಗಳೂ ಪಾಸ್ ಬುಕ್ಕುಗಳೂ … ಕಾರಿ ಸಂಘಗಳ ಮತ್ತು ದವಸ ಭಂಡಾರಗಳ … ಕ್ರಮ ಪ್ರಕಾರ ನಡೆಸಲು ಅತ್ಯವಶ್ಯವಾಗಿರುವ … ಸೇರವಂಗಿ ತಯಾರಿಸಲ್ಪಟ್ಟಿರುವ ದಾವಾ ಫಾ… ಬರಾರು ಫಾರಮುಗಳೂ ಜಮಾ ಖರ್ಚು … ಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ … ಬರಾರು ಫಾರಮುಗಳೂ ಸ್ಟೋರ್ ಕೀಪರ್ … ರದ ಎಗ್ರಾ ಓವರ್ ಪುಸ್ತಕಗಳೂ ರಶೀತಿ … ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು … ಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊ… ಬೇಕಾದವರು ಆರ್ಡರು ಕೊಟ್ಟಲ್ಲಿ … ಮೂಲಕ ಕಳುಹಿಸಲಾಗುವುದು

ಮ್ಯಾನೇಜರ್

"ಕೊಡಗು ಲಿ…

ಮಡಿ…

Printed & published by P I Bellappa at "Kodagu" Press, for 'Kodagu' Ltd

Reg. No. ...
If not delivered please return to
"KODAGU" OFFICE MERCARA

ಕೊಡಗು.

ಸರ್ವೇಷಾ ಭೂತದಯಯಾ ... ಐಕ್ಯಮತ್ಯೇನ ದೇಶಾನಾಂ ಸುಸ್ಥಿರಂ ರಾಜ್ಯ ಸಂಪದಾ

ವರ್ಷಿಕ ಚಂದಾ ರೂ. ೩—೮—೦ | ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ... ೧೯೩೮ನೇ ಇಸವಿ ಜುಲೈ ತಾರೀಕು ೧೦ ನೇ ಶುಕ್ರವಾರ. | ಸಂಚಿಕೆ ೬

Subramaniar Jeweller

Telegrams ... | Telephone — 3145

DIAMOND MERCHANT GOLD & SILVER SMITH

Deals in all —
SPORTS CUPS in all prizes
MEDALS in up-to-date patterns
CASKETS in elegant styles

Nos 2 & 3 Kuppumuthu ... st
TIRUVATESWARANPET
Post Box 423, Triplicane P. O.,
MADRAS.

Deals in all —
GEM SET JEWELS set with Diamonds Rubies etc
GOLD ARTICLES of all patterns
SILVER WARE in latest style

12—34



ಕೋವಿಗಳು, ಕತ್ತಿಗಳು, ... ತೋಟದ ... ಸಾಮಾನುಗಳು ಮತ್ತು ... ಎಲ್ಲಾ ಸಾಮಾನುಗಳು ... ದೊರೆಯುವ

GOOLAM ... SAIN ... HDY & SONS
Largest Importers ... and ... tion
Chea ...
4—15 | 210 Abdul Rehman Street, ... BAY

... ನ ... ಬಂದರೆ ... ಪಾಡಾದ ...

ಬಾಲಾರ್ಕಮಧು.

ನಿಮ್ಮ ಮಕ್ಕಳ ಆರೋಗ್ಯವನ್ನು ಕಾಪಾಡಬೇಕಾದರೆ ಅವಶ್ಯಕ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ ... ಮಕ್ಕಳು ...



ಸಿದಿಕರಿಗೆ ... ದರಿಂದ ಬಹು ಬೇಗ ... ದಿನ ದಿನಕ್ಕೆ ಆರೋಗ್ಯವು ... ಮಕ್ಕಳು ಆನಂದದಿಂದ ... 12 ಅಂ ... 8 ಅಂ.

... ಗಮನಿಸುವದಿಲ್ಲ.

ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ,
(ಮೈಸೂರು ...)

12—0

ಕಟಬೋಳಪ್ಪಾಯ ಮಾತ್ರೆ ... ಜ್ವರ ... 3 ... 35 ... 17 ... 14

ಚಂದ್ರ ... ಕ್ರಮೇಣ ... ಮಕ್ಕಳ ... ತಾಯಿ ... 1 3 6 ... 1—4—0 ... 8—0 5— 2—0

ರಾಮ ... ದಿನದ ... 1 ... 0

ಮನೋಲ್ಲಾಸಿನಿ ... 3 ... 2— 0—0 ... 2 3 ... 5—8—0

52—9

ಕೊಡಗು.

ಸನ್ ೧೯೩೧ನೇ ಇಸವಿ

ಜುಲೈ ತಾ ೧೦ನೇ ಶುಕ್ರವಾರ.

ಕೂಲಿ ಕಸಬಿನ ಮೇಲೆ ರಾಯಲ್ ಕಮಿಷನ್.

ಹಿಂದೂದೇಶದ ಕೂಲಿ ಕಸಬಿನ ವಿಷಯ ವಿಚಾರಿಸಲು ಎರಡು ವರ್ಷಗಳ ಹಿಂದೆ ನೇಮಿಸಲ್ಪಟ್ಟಿದ್ದ ವ್ಹಿಟ್ಲೆ ಕಮಿಷನಿನವರು ಕಳೆದವಾರ ತಮ್ಮ ವರದಿಯನ್ನು ಪ್ರಕಟಿಸಿರುವರು ಈ ಕಮಿಶನಿನ 12 ಮೆಂಬರುಗಳಲ್ಲಿ 7 ಹಿಂದೀಯರು ಮತ್ತು 5 ಯೂರೋಪಿಯನರು. ಆಗಿದ್ದರು ನಾಮದಾರಿ ಜೆ ಹೆಚ್ ವ್ಹಿಟ್ಲೆಯವರು ಇದರ ಅಧ್ಯಕ್ಷರಾಗಿದ್ದರಿಂದ ಇದಕ್ಕೆ ವ್ಹಿಟ್ಲೆ ಕಮಿಷನೆಂದೂ ಕರೆಯುತ್ತಾರೆ ಹಿಂದೀಯ ಮೆಂಬರುಗಳ ಪೈಕಿ ಕೂಲಿ ಕಸಬಿನವರ ಪರ ಮೆಂಬರುಗಳೂ ಮತ್ತು ಧನಿಕರ ಪ್ರತಿನಿಧಿಗಳೂ ಇದ್ದರು ... ... ಪಕ್ಷದ ಕೂಲಿ ಕಸಬಿನ ಮುಂದಾಳುಗಳು ಈ ಕಮಿಷನನ್ನು ಬಹಿಷ್ಕರಿಸಿದ್ದರಿಂದ ಸದರಿ ಪಕ್ಷದ ಕಸಬಿನವರ ಕಷ್ಟ ಸುಖಗಳು ಮತ್ತು ಅಭಿಪ್ರಾಯಗಳು ಕಮಿಷನಿನ ಮುಂದಿಡಲಾಗಲಿಲ್ಲ ಈ ಕಮಿಷನಿನವರು ಹಿಂದೂದೇಶಕ್ಕೆ ಎರಡು ಸಾರಿ ಬಂದು ಕೈಗಾರಿಕೆಯ ಮುಖ್ಯ ಸ್ಥಳಗಳನ್ನು ಸಂದರ್ಶಿಸಿದರು ಇವರು ಹಿಂದೂಸ್ಥಾನದಲ್ಲೆಲ್ಲಾ 16,000 ಮೈಲುಗಳ ಪ್ರಯಾಣ ಮಾಡಿರು ... ಸುಮಾರು 200 ಕಡೆಗಳಲ್ಲಿ ವಿಚಾರಣೆ ನಡಿಸಿ 800ಕ್ಕಿಂತ ಹೆಚ್ಚು ... ... ಅಭಿಪ್ರಾಯ ತೆಗೆದುಕೊಂಡದ್ದಲ್ಲದೆ 180 ಕಾರ್ಖಾನೆ ಮತ್ತು ಕೈಗಾರಿಕೆ ಕೆಲಸದ ಸ್ಥಳಗಳನ್ನು ಹೋಗಿ ನೋಡಿದರು ಕಮಿಷನಿನ ಕೆಲವು ಮೆಂಬರುಗಳು ಕೊಡಗಿಗೆ ಬಂದು ಕೆಲವು ತೋಟಗಳನ್ನು ನೋಡಿದ್ದರು

'ಹಿಂದೂಸ್ಥಾನದ ಕೈಗಾರಿಕೆ ಕಸಬಿನ ಮತ್ತು ತೋಟಗಳ ಕೂಲಿ ಕೆಲಸಗಾರರ ಈಗಿನ ಆರೋಗ್ಯ ಸ್ಥಿತಿ, ಕಾರ್ಯನಿರ್ವಾಹಕ ಶಕ್ತಿ ಮತ್ತು ಅವರ ಜೀವನದ ಕ್ರಮವನ್ನೂ, ಕೆಲಸಗಾರರಿಗೂ, ಯಜಮಾನರಿಗೂ ಇರುವ ಸಂಬಂಧವನ್ನೂ ಕುರಿತು ವಿಚಾರಿಸಿ, ಅವುಗಳ ಅಭಿವೃದ್ಧಿಗಾಗಿ ಶಿಫಾರಸ್ಸು ಮಾಡುವ ಉದ್ದೇಶಕ್ಕಾಗಿಯೇ ಈ ರಾಯಲ್ ಕಮಿಷನು ನೇಮಿಸಲ್ಪಟ್ಟದ್ದಾಗಿದೆ, ಆದುದರಿಂದ ಕೈಗಾರಿಕೆಯ ಕಸಬಿನವರಿಗಿಂತ ಎಷ್ಟೋ ಹೆಚ್ಚು ಸಂಖ್ಯೆ ಇರುವ ವ್ಯವಸಾಯ ಕೆಲಸಗಾರರ ಸ್ಥಿತಿಯನ್ನು ವಿಚಾರಿಸುವುದು ಈ ಕಮಿಷನಿಗೆ ಸೇರಿದ್ದಲ್ಲವೆಂಬುದು ವಿಷದವಾಗುತ್ತದೆ 580 ಪುಟಗಳನ್ನು ಹೊಂದಿರುವ ಈ ವರದಿಯಲ್ಲಿ ಕಾರ್ಖಾನೆಗಳ ಕೆಲಸದ ಕರಾರುಗಳು, ಕೈಗಾರಿಕೆಯ ಕಸಬಿನವರ ಜೀವನದ ಕ್ರಮ, ಅವರ ಕಾಯಿಲೆ ಅಶಕ್ತತೆ ಕಷ್ಟಗಳು, ಕಷ್ಟ ಪರಿಹಾರಕ ಸಹಾಯ, ಕೆಲಸಗಾರರ ಕೂಟ ಮತ್ತು ಸಂಸ್ಥೆಗಳು ಕೆಲಸ ಮಾಡಿಸುವ ಯಜಮಾನರಿಗೂ, ಕೆಲಸ ಮಾಡುವ ಆಳುಗಳಿಗೂ ಇರುವ ಸಂಬಂಧ ಅವರೊಳಗೆ ಉಂಟಾಗುವ ವಾದ ವಿವಾದಗಳು ಮತ್ತು ಅವುಗಳನ್ನು ತೀರಿಸುವ ವಿಧಾನ, ಸರ್ಕಾರಕ್ಕೂ ಕೆಲಸಗಾರರಿಗೂ ಇರುವ ಸಂಬಂಧ ಮತ್ತು ಮುಂದಿನ ಆಡಳಿತ ರಚನೆಯಲ್ಲಿ ಕೂಲಿ ಕಸಬಿನ ಸ್ಥಳ ಮುಂತಾದ ಕೂಲಿ ಕೆಲಸಗಾರರಿಗೆ ಸಂಬಂಧಿಸುವ ಎಲ್ಲಾ ಸಂಗತಿಗಳನ್ನು ಚೆನ್ನಾಗಿ ವಿಚಾರಿಸಿ, ಪಕ್ಷಪಾತವಿಲ್ಲದೆ ವಿಮರ್ಶಿಸಿದೆ ಈ ವರದಿಯಲ್ಲಿ ಸೂಚಿಸಿರುವ ಮೇರೆ ಇಂಡಿಯಾದ ಕೆಲಸಗಾರರ ಸ್ಥಿತಿಯು ಬಹು ಹೀನವಾಗಿದೆಯೆಂಬುದರಲ್ಲಿ ಸಂಶಯವಿಲ್ಲ ಕೆಲವು ಕಡೆಗಳಲ್ಲಿ ಕೂಲಿ ಜನರು ಸಂಪಾದಿಸುವ ಸಂಬಳದಲ್ಲಿ ಶೇಕಡ 85ರಷ್ಟು ಜೀವವನ್ನು ಶರೀರದಲ್ಲಿಡಲು ಅತ್ಯವಶ್ಯವಾದ ಅನ್ನ, ಬಟ್ಟೆ, ಮನೆ ಬಾಡಿಗೆ, ಸೌದೆ, ಬೆಳಕು ಮುಂತಾದವುಗಳಿಗೂ, ಉಳಿದ 15ರಲ್ಲಿ ಸುಮಾರು 7ರಷ್ಟು ಸಾಲದ ಬಡ್ಡಿ ಕೊಡಲಿಕ್ಕೂ, 3ರಷ್ಟು ನಿಷಾ ಸೇವನೆಗೂ ಹೋಗಲಾಗಿ ನೂರರಲ್ಲಿ 5ರಷ್ಟು ಮಾತ್ರ ಉಳಿತಾಯವಾಗುತ್ತದೆಯಂತೆ! ಇದರಿಂದ ಇಂಡಿಯಾದ ಕೂಲಿಯವರಿಗೆ ಜೀವನದ ಸಂತೋಷ ಭಾಗವೇನೆಂಬುದನ್ನು ಅರಿಯಲೂ ಕೂಡ ಅನುಕೂಲವಿಲ್ಲವೆಂದು ಗೊತ್ತಾಗುತ್ತದೆ. ಕೆಲಸಗಾರರ ಈ ಕಷ್ಟ ಸ್ಥಿತಿಯು ಅಧಿಕಾರ ಹೊಂದಿದ ಕಮಿಷನಿನವರ ವರದಿಯ ಮೂಲಕ ಬಹಿರಂಗವಾದ ಮೇಲೆಯೂ ದೇಶದವರು ಅದಕ್ಕೆ ಕಣ್ಣು ಮುಚ್ಚಿ ಕೂರುವುದು ನ್ಯಾಯವಲ್ಲ

ಕಮಿಷನಿನ ಶಿಫಾರಸ್ಸುಗಳ ಪೈಕಿ—ಯಜಮಾನರ, ಕೂಲಿ ಜನರ ಮತ್ತು ಸರ್ಕಾರದವರ ಪ್ರತಿನಿಧಿಗಳು ಸೇರಿ ಕೂಲಿ ಕಸಬಿನವರನ್ನು ಕುರಿತು ಆಲೋಚನೆ ಮಾಡಲು 'ಇಂಡಸ್ಟ್ರಿಯಲ್ ಕೌನ್ಸಿಲ್'ನ್ನು ಸ್ಥಾಪಿಸಬೇಕೆಂಬುದು ವಾರದ ... ... ಇರುವ ವಾರಕ್ಕೆ 60 ಗಂಟೆಯ ಕೆಲಸವನ್ನು 54 ಗಂಟೆಗೆ ಇಳಿಸಬೇಕೆಂದೂ, ... ಗಣಿಗಳಲ್ಲಿ ಹೆಂಗಸರೂ, 14 ವರ್ಷದೊಳಗಿನ ಮಕ್ಕಳೂ ಕೆಲಸ ಮಾಡುವುದನ್ನು ನಿಲ್ಲಿಸಬೇಕೆಂದೂ ನಿರುದ್ಯೋಗದ ಸಮಸ್ಯೆಯನ್ನು ಹೋಗಲಾಡಿಸಲು ನಿರುದ್ಯೋಗದ ವಿಮೆ ವಿಷಯ ...ಸ್ತು ಮಾಡುವುದಲ್ಲದೆ ಸರ್ಕಾರದವರು ಬೇಗನೆ ತಕ್ಕ ದಾರಿಯನ್ನು ಕಂಡುಹಿಡಿಯಬೇಕೆಂದೂ, ಕೂಲಿಯವರ ಸಂಬಳವನ್ನು ಒಂದು ಮಿತಿಗಿಂತ ಕಡಿಮೆ ಮಾಡದಂತೆ ನೋಡಲು ಬೋರ್ಡುಗಳನ್ನು ನೇಮಿಸಬೇಕೆಂದೂ, ಕೆಲಸಗಾರರ ಯೂನಿಯನ್ ಸಂಸ್ಥೆಗಳನ್ನು ಸರ್ಕಾರದವರು ಅಂಗೀಕರಿಸಿ ಅವರಿಗೆ ಉತ್ತೇಜನ ಕೊಡಬೇಕೆಂದೂ ಇರುವವು ಇನ್ನು ಕೆಲವು ಉತ್ತಮ ಸೂಚನೆಗಳಾಗಿವೆ ಇವುಗಳಿಂದ ಹಿಂದೀಯ ಕೆಲಸಗಾರರಿಗೆ ಪಾಶ್ಚಿಮಾತ್ಯದೇಶಗಳ ಕೆಲಸಗಾರರಿಗಿರುವಷ್ಟು ಅನುಕೂಲತೆಗಳು ದೊರೆಯಲಾರದೆ ಹೋದರೂ ಅವರ ಈಗಿನ ಸ್ಥಿತಿಯು ಅಭಿವೃದ್ಧಿಯಾಗುವುದೆಂಬುದರಲ್ಲಿ ಸಂದೇಹವಿಲ್ಲ ಕೂಲಿ ಕಸಬಿನವರ ಸ್ಥಿತಿಯನ್ನು ಉತ್ತಮಗೊಳಿಸಬೇಕೆಂಬ ಈ ವರದಿಯ ಮುಖ್ಯ ವಿಷಯಗಳಲ್ಲಿ ಕಮಿಟಿ ಮೆಂಬರುಗಳೆಲ್ಲರೂ ಏಕಮತ ಉಳ್ಳವರಾಗಿರುವುದು ಸಂತೋಷಕರ ಇಬ್ಬರು ಮೆಂಬರುಗಳು ಮಾತ್ರ ಒಂದೆರಡು ಚಿಕ್ಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳನ್ನು ಸೂಚಿಸಿರುವರು ಸರ್ಕಾರದವರು ಈ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಜಾರಿಗೆ ತರಲು ಕಾನೂನು ಮಾಡಿದರೇನೇ ಈ ಕಮಿಷನಿನ ಕೆಲಸವು ಕೂಲಿ ಜನರಿಗೆ ಪ್ರಯೋಜನಕರವಾಗುವುದು ಬಡವರ ಹಿತವನ್ನು ಕಾಯುತ್ತಿದ್ದೇವೆಯೆಂದು ಹೇಳುವ ಸರ್ಕಾರವು ಇವುಗಳನ್ನು ಬೇಗನೆ ಜಾರಿಗೆ ತರುವರೆಂದು ನಂಬುತ್ತೇವೆ

ಕೂಲಿ ಜನರಿಗೆ ಲೆಜಿಸ್ಲೇಟಿವ್ ಕೌನ್ಸಿಲುಗಳಲ್ಲಿ ಪ್ರಾತಿನಿಧ್ಯವಿರಬೇಕೆಂದು ಕಮಿಷನಿನವರು ಒಪ್ಪಿದರೂ ಅದು ಎಷ್ಟರ ಮಟ್ಟಿಗೆ ಇರಬೇಕೆಂಬುದನ್ನು ಸೂಚಿಸಿರುವುದಿಲ್ಲ ಅಲ್ಲದೆ ಪ್ರಾಯಬಂದವರಿಗೆಲ್ಲ ಓಟಿನ ಹಕ್ಕಿರಬೇಕೆಂಬುದಕ್ಕೆ ಒಪ್ಪಿರುವುದಿಲ್ಲ ವರದಿಯ ಈ ಶಿಫಾರಸ್ಸುಗಳು ಕೆಲಸಗಾರರಲ್ಲಿ ಅಸಮಾಧಾನವನ್ನೂ ಅತೃಪ್ತಿಯನ್ನೂ ಉಂಟು ಮಾಡದೆ ಇರವು ಆದರೆ ಒಟ್ಟಾರೆ ನೋಡಿದರೆ ಈ ವರದಿಯು ತೃಪ್ತಿಕರವಾಗಿದೆಯೆಂತಲೂ ಸರ್ಕಾರದವರು ಇದರ ಶಿಫಾರಸ್ಸುಗಳನ್ನು ಜಾರಿಗೆ ತಂದರೆ ಹಿಂದೂಸ್ಥಾನದ ಕೂಲಿ ಕಸಬಿನ ಚರಿತ್ರೆಯಲ್ಲಿ ಇದೊಂದು ಮುಖ್ಯ ಅಧ್ಯಾಯವಾಗುವದೆಂತಲೂ ಹೇಳದೆ ಇರಲಾರೆವು

ಕೊಡಗಿನ ಚರಿತ್ರೆಯ ಒಂದು ನೋಟ.

(1918ನೇ ಇಸವಿ ಅಗೋಸ್ತು ತಿಂಗಳ 'ಮೋಡರ್ನ್ ರಿವ್ಯೂ' ಎಂಬ ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಲೇಖನದಿಂದ)

ಲಾರ್ಡ್ ವಿಲಿಯಂ ಬೆಂಟಿಂಕರ ಅಧಿಕಾರದಲ್ಲಿ ಒಂದು ಯುದ್ಧವು ಸಂಭವಿಸಿತು ಪರಿಣಾಮವೇನೆಂದರೆ—ಒಂದು ಪ್ರಾಂತ್ಯವು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾಯಿತು ಹಿಂದೂಸ್ಥಾನವಾಸಿಗಳಾದ ಇಂಗ್ಲಿಷ್ ಜನರಿಗೆ ಕೊಡಗು ದೇಶವು ಭೂಲೋಕದ ಸ್ವರ್ಗದಂತೆ ಕಂಡು ಬಂದುದರಿಂದ ಅದನ್ನು ವಶಪಡಿಸಿಕೊಳ್ಳಬೇಕೆಂಬ ಲವಲವಿಕೆಯು ಹೇರಳವಾಗಿತ್ತು ಕೊಡಗು ಮತ್ತು ಮೈಸೂರು ದೇಶಗಳ ಚೀಫ್ ಕಮೀಷನರಾಗಿದ್ದ ಮಿ. ಎಲ್ ಬೌರಿಂಗ್ ಎಂಬವರು ತಮ್ಮ 'ಈಸ್ಟರ್ನ್ ಎಕ್ಸ್‌ಪೀರಿಯನ್ಸಸ್' (ಪೌರಾತ್ಯ ಅನುಭವಗಳು) ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ —

"ಚಿಕ್ಕ ಬೆಟ್ಟ ಸೀಮೆಯಾದ ಕೊಡಗು ಪ್ರಾಂತ್ಯಕ್ಕಿಂತ ಸೌಂದರ್ಯವಾದ ಪ್ರಾಂತ್ಯಗಳು ಹಿಂದೂಸ್ಥಾನದಲ್ಲಿ ವಿರಳ ಈ ದೇಶನಿವಾಸಿಗಳಿಗಿಂತ ಶೂರರೂ, ರಾಜ ಭಕ್ತರೂ ಆದ ಜನಾಂಗವು ಬೇರೆ ಎಲ್ಲಿಯೂ ಇಲ್ಲ. ಪೂರ್ವ ಕಾಲದಲ್ಲಿ ಅಂದರೆ ಒಂದು ದೇಶದ ಸೈನ್ಯವು ಅದನ್ನು ಪ್ರವೇಶಿಸಲಿಕ್ಕಿರುವ ಆತಂಕವನ್ನು ಹೊಂದಿದೆಯೆಂದು ಪರಿಗಣಿಸುತ್ತಿದ್ದ ಕಾಲದಲ್ಲಿ ಪರಸ್ಥಳದ ಧಾಳಿಗ ಳಿಗೆ ಕೊಡಗಿನಷ್ಟು ಸುರಕ್ಷಿತವಾಗಿದ್ದ ದೇಶಗಳು ಬಹಳ ಕಡಿಮೆ ಈ ದೇಶವನ್ನು ಪ್ರವೇಶಿಸಬೇಕಾದರೆ ದಟ್ಟವಾದ ಅರಣ್ಯಗಳಿಗಾಗಿಯೂ ಅಥವಾ ಹಳ್ಳಕೊಳ್ಳಗಳಿಂದ ತುಂಬಿರುವ ಉನ್ನತವಾದ ಪರ್ವತಗಳನ್ನೇರಿಯೂ ಹೋಗಬೇಕು."

ಈ ಸೌಂದರ್ಯವಾದ ದೇಶದ ಮುಚ್ಚಿದಂಥ ಪರದೆಯನ್ನು ಎತ್ತಿ ಬ್ರಿಟಿಷರ ಅಧೀನ ಮಾಡಿಕೊಳ್ಳಲಿಕ್ಕಾಗಿ ಲಾರ್ಡ್ ವಿಲಿಯಮ್ ಬೆಂಟಿಂಕರು ಈ ದೇಶದ ರಾಜನ ಮೇಲೆ ಯುದ್ಧ ಮಾಡಿದರು ಕೊಡಗಿನ ರಾಜನು ಎಂದೂ ಇಂಗ್ಲಿಷರಿಗೆ ಸ್ನೇಹಿತನಾಗಿಯೇ ಇದ್ದನು ಇಂಗ್ಲಿಷರು ಟಿಪ್ಪುವಿನ ಸಂಗಡ ಯುದ್ಧ ಮಾಡಿದಾಗ ಕೊಡಗಿನ ರಾಜನಿಂದ ದೊರೆತ ಸಹಾಯಕ್ಕಾಗಿ ಕೊಡಗಿನ ರಾಜನ ಕೂಡೆ 1790 ರಲ್ಲಿ ಒಂದು ಕರಾರು ಮಾಡಿಕೊಂಡರು, ಅದರ ಶರತ್ತುಗಳೇನೆಂದರೆ—

"1 ಸೂರ್ಯ ಚಂದ್ರರಿರುವ ಪರ್ಯಂತ ಅನ್ಯೋನ್ಯ ಸ್ನೇಹಕ್ಕೆ ಭಂಗವನ್ನುಂಟುಮಾಡಬಾರದು

2. ಟಿಪ್ಪು ಮತ್ತು ಅವನ ಸ್ನೇಹಿತರು ಉಭಯ ಪಕ್ಷದವರಿಗೂ ಶತ್ರುಗಳಾಗಿರಬೇಕು ರಾಜನು ತಮ್ಮ ಕೈಯ್ಯಲ್ಲಾದಷ್ಟು ಪ್ರಯತ್ನಿಸಿ ಟಿಪ್ಪುವಿಗೆ ಕೆಡಕು ಮಾಡಬೇಕು.

3 ಕೊಡಗು ದೇಶದಲ್ಲಿ ದೊರಕುವ ಸರಬರಾಯಿಗಳನ್ನು ನ್ಯಾಯವಾದ ಬೆಲೆಗೆ ಕೊಡಗಿನ ರಾಜನು ಇಂಗ್ಲಿಷರಿಗೆ ಒದಗಿಸಿಕೊಡಬೇಕು ಮತ್ತು ಬೇರೆ ಟೋಪಿವಾಲರ ಸಂಗಡ ಸಂಬಂಧವನ್ನಿಟ್ಟುಕೊಳ್ಳಕೂಡದು.

4 ಕಂಪನಿಯು ಕೊಡಗಿನ ಸ್ವಾತಂತ್ರ್ಯವನ್ನು ಕಾಪಾಡುತ್ತಾ ಮತ್ತು ಟಿಪ್ಪುವಿನ ಸಂಗಡ ರಾಜಿಯಾಗುವದಾದರೆ ಕೊಡಗಿನ ರಾಜನ ಹಿತವನ್ನು ಕಾಪಾಡಲಿಕ್ಕೂ ಭರವಸೆ ಕೊಡುತ್ತದೆ

5. ಶಾಂತಿ ಸ್ಥಾಪನೆಯಾಗುವ ವರೆಗೆ ರಾಜ್ಯ... ...ರಿಯಲ್ಲಿ ಇರಲು ಅನುಕೂಲವನ್ನೂ, ಆತಿಥ್ಯವನ್ನೂ ... ಹುದೆಂತ ತಿಳಿಸಲಾಗಿದೆ.

ದೇವರು, ಸೂರ್ಯ, ಚಂದ್ರ, ಭೂಮಿಯೇ ಸಾ...

"ಕಲ್ಕತ್ತಾ ರಿವ್ಯೂ" ಸಪ್ಟೆಂಬರ್ 1856 (...

ಈಸ್ಟ್ ಇಂಡಿಯಾ ಕಂಪೆನಿಯ ರಿವಾಜ್... ...ಡಗಿನ ಸಂಗಡ ನಡಿಸಿದ ವರ್ತನೆಯು ಧರ್ಮಯು... ...ಲಿಲ್ಲ ಲಾರ್ಡ್ ಬೆಂಟಿಂಕರು ಮದ್ರಾಸ್ ಗವರ್ನ... ...ಗ ಕೊಡಗು ದೇಶವು ತನ್ನ ಜನಾಂಗದವರ ... ಮಾಡಿಕೊಳ್ಳಲು ಉಪಯುಕ್ತವಾದದ್ದೆಂತ ತಿಳಿ... ...ದ ಕೊಡಗನ್ನು ಕಂಪೆನಿ ಆಳ್ವಿಕೆಗೆ ಸೇರಿಸ... ಅವರು ದೃಢ ನಿಶ್ಚಯ ಮಾಡಿದಂತೆ ತೋರುತ್ತ... ...ಡಗಿನ ಸಂಬಂಧದ ವಿವಾದವನ್ನು ನ್ಯಾಯವಾಗಿ... ...ದ್ದರೆ ಏನೂ ತೊಂದರೆ ಇರುತ್ತಿದ್ದಿಲ್ಲ ಕೊಡಗಿನ ರಾಜನ ಹಕ್ಕೂ ಅಷ್ಟು ಭದ್ರವಾದದ್ದಾಗಿರಲಿಲ್ಲ. ...ಇಸವಿ ಸಪ್ಟೆಂಬರ್ ತಿಂಗಳ ಕಲ್ಕತ್ತಾ ರಿವ್ಯೂ ... ...ವಾದ ರೆವರೆಂಡ್ ಡಾಕ್ಟರ್ ಮೊಗ್ಲಿಂಗರ ಕೊಡಗಿ... ...ಯಲ್ಲಿ ಹೀಗೆಂತ ಬರೆದಿದ್ದಾರೆ—

'ಸಿಂಹಾಸನಚ್ಯುತರಾದ ಈಗಿನ ಕೊಡಗಿನ ... ...ನು ಸಿಂಹಾಸನವನ್ನೇರಿದನು ಏನೂ ತೊಂದರೆ ... ...ಟಿಷ್ ಸರ್ಕಾರವು ಇವನನ್ನು ಅಂಗೀಕರಿಸಿಕೊಂಡ... ...ವಮ್ಮಾಜಿಯ ಹಕ್ಕುಗಳನ್ನೂ, ಬ್ರಿಟಿಷ್ ಸರ್ಕಾರ... ತಂದೆಗೆ ಕೊಟ್ಟ ವಾಗ್ದಾನಗಳನ್ನೂ ಅಲ್ಲಗಳೆದರು ...ರಾಜೇಂದ್ರರ ಮಗಳು ಪ್ರಾಯ ಪ್ರಬುದ್ಧಕ್ಕೆ ಬಂದ... ...ಗಿನ ಸಂಗತಿಯನ್ನು ತನಿಖೆ ಮಾಡಬೇಕೆಂತ ನೂರ್ಕ್ರ... ಹೇಸ್ಟಿಂಗ್ಸ್‌ರು ಮಾಡಿದ ತೀರ್ಮಾನವನ್ನು ಮರೆತಂ... ...ತ್ತದೆ" (ಪುಟ 196)

ರಾಜನು ಪಿಶಾಚಿಯ ಅವತಾರವಂತಲೇ (... ಹೇಳುತ್ತಾರೆ. ಅವನ ನೆಂಟರನ್ನೂ ಪ್ರಜೆಗಳನ್ನೂ ... ...ಣವಾಗಿ ಕೊಲೆಮಾಡಿಸುತ್ತಿದ್ದನೆಂತಲೂ ಹೇಳುತ್ತಾ... ...ನ ತಂಗಿ ದೇವಮ್ಮಾಜಿಯೂ ಅವಳ ಗಂಡನೂ ರಾಜ... ...ಕೊಲ್ಲಲ್ಪಡಬಹುದೆಂಬ ಭೀತಿಗಾಗಿ ಮೈಸೂರು ರೆಸಿ... ...ಬಂದ ಮೇಲೆ ಹೊಕ್ಕಾಗ ಅಂತ್ಯದ ಅವಕಾಶ ದೊರಕಿತ ... ...ನ ರಾಜ ಪದವಿಗೆ ತನಗಿರುವ ಹಕ್ಕುಗಳನ್ನು ಕಂಪೆನಿ... ...ಗೆ ತಿಳಿಸಿಕೊಡಲು ಕಂಪೆನಿಯ ರಾಜ್ಯಕ್ಕೆ ದೇವಮ್ಮಾಜಿ ...ಹೋದದ್ದಾಗಿರಬೇಕೆಂಬುದು ಕಾರಣ ಯುಕ್ತವಾಗಿ ... ...ತ್ತದೆ ತನ್ನ ಕಾರ್ಯಸಾಧನೆಗಾಗಿ ಇವಳು ತನ್ನ ಅಣ್ಣನ... ...ಲೆ ಕ್ರೂರ ಕೃತ್ಯಗಳ ಆರೋಪಣೆಗಳನ್ನೆಲ್ಲಾ ಉಂಟು ಮಾ... ...ದ್ದರೂ ಇರಬಹುದು. ಅವರ ರೆಸಿಡೆಂಟರೂ, ಕಂಪೆನಿ... ...ರೂ ದೇವಮ್ಮಾಜಿಯನ್ನೂ, ಇವಳ ಗಂಡನನ್ನೂ ತಮ್ಮ ... ...ಣೆಗೆ ತೆಗೆದುಕೊಂಡದ್ದೂ ಅಲ್ಲದೆ ರಾಜನನ್ನು ಬಲವಂತ... ...ಡಿಸಲು ಸಹ ಸುರು ಮಾಡಿದರು. ಸಂಪೂರ್ಣ ಸ್ವಾತಂತ್ರ್ಯ... ...ವಿದ್ದ ರಾಜನು (ಕೊಡಗಿನ ರಾಜನು) ಈ ರೀತಿ ತನ್ನ ವಿಷ... ...ಕ್ಕೆ ಕೈಹಾಕಿದ್ದಕ್ಕಾಗಿ ಸಿಟ್ಟುಗೊಂಡನು ವಿತಿಮೀರಿ... ...ರಿತು. ಹುಚ್ಚು ಹುಚ್ಚು ಮಾತುಗಳನ್ನು ನಾಡಲು... ...ದ್ಯುಕ್ತನಾದನೆನ್ನುತ್ತಾರೆ ಹಾಗೆ ಮಾಡಿದ್ದರೂ ಆ ... ...ಯು ನ್ಯಾಯವಾದದ್ದಲ್ಲವೆನ್ನಲಾಗುವುದಿಲ್ಲ ಬಹುಶಃ (... ...ಪೆನಿ) ಅಧಿಕಾರಿಗಳು ಕೊಡಗಿನ ರಾಜಪದವಿಯನ್ನು ... ...ನು ಪಡೆಯಲು ಉಪಾಯ ತಕ್ಕಂತೆ ರಾಜನನ್ನು ರೇ... ...ದ್ರೇಕ ಪಡಿಸಿ, ರಾಜನ ತನ್ನ ಗೌರವವನ್ನೂ, ಶ್ರೇ... ...ಉಳಿಸಿಕೊಳ್ಳಲಿಕ್ಕಾಗಿ ಅವನು ಅಂಥಾ ಕೆಲಸಗಳನ್ನೆಲ್ಲಾ ... ...ಡುವಂತೆ ನಿರ್ಬಂಧಿಸಿದಂತೆ ಕಾಣುತ್ತದೆ

ಕಂಪೆನಿ ಅಧಿಕಾರಿಗಳು ಇದನ್ನೇ ಅಪೇಕ್ಷಿಸುತ್ತಿ... ...ರಾಜನ ಮೇಲೆ ಯುದ್ಧಕ್ಕೆ ಹೊರಟರು. ಬ್ರಿಟಿಷ್ ಸೈ... ...ಧಿಪತಿಗಳ ಅಧೀನದಲ್ಲಿ ಒಂದು ಸೈನ್ಯವನ್ನು ದೇಶಕ್ಕೆ ಮ... ...ಗೆ ಹಾಕಲು ಕಳುಹಿಸಿದರು. ರಾಜನು ಯುದ್ಧವನ್ನು ... ...ಕ್ಷಿಸಿಯೇ ಇರಲಿಲ್ಲ. ಆದ್ದರಿಂದ ಬ್ರಿಟಿಷರ ಸೈನ್ಯಕ್ಕೆ ... ...ವನ್ನು ಸ್ವಾಧೀನಪಡಿಸಿಕೊಳ್ಳುವುದು ಕಷ್ಟವಾಗಲಿಲ್ಲ ...ರೆಂಡ್ ಡಾಕ್ಟರ್ ಮೊಗ್ಲಿಂಗರು ಸಹ ಕೆಳಗಿನಂತೆ ಹೇಳಿದ... ...ಯಿತು.

"ರಾಜನು ಇವನ್ನು ರಾಜಿಯಾಗಬಹುದೆಂಬ ನಿರೀ... ...ಯಿಂದಲೂ, ಅತ್ಯಂತ ಎಕ್ಕಟ್ಟಿಗೆ ಬಂದರೆ ತನ್ನ ಸರ್ವಸ್ವ... ...ಕಳಕೊಳ್ಳಬೇಕಾದೀತೆಂಬುದರಿಂದಲೂ ಕಂಪೆನಿಯ ಸೈ... ...ಮೇಲೆ ಯುದ್ಧ ಮಾಡಬೇಡಿರೆಂತ ಕೊಡಗರಿಗೆ ಹುಕುಂ ... ...ಹಿಸಿದನು. ರಾಜನ ಈ ತರದ ಚಂಚಲ ಬುದ್ಧಿಯಿಂದಲೇ ... ...ಟಿಷರ ಸೈನ್ಯಕ್ಕೆ ಜಯಪ್ರದವಾಯಿತು ಮತ್ತು ಸುರಕ್ಷಿತ... ...ತ್ತು. ಸೇನಾಧಿಪತಿಗಳ ಚತುರತೆ ಮತ್ತು ಶಕ್ತಿಯಿಂದ...

ರಾಜನು ಶರಣಾಗತನಾದನು ಅವನನ್ನು ರಾಜ... ...ಯಿಂದ ತೆಗೆದು ಬನಾರಸಕ್ಕೆ (ಕಾಶಿಗೆ) ಸೆರೆಯಲ್ಲಿ ಕಳುಹಿಸ... ಲಾರ್ಡ್ ಬೆಂಟಿಂಕ್ ಪ್ರಮಾಣೀಕ ಮನುಷ್ಯನಾಗಿದ್ದ... ...ಕೊಡಗಿನ ಸಿಂಹಾಸನಕ್ಕೆ ರಾಜಕುಮಾರಿಗೆ ಇದ್ದ ಹಕ್ಕ... ...ಜಮಾಯಿಸಲು ಒಳ್ಳೇ ಅವಕಾಶ ದೊರಕಿತ್ತು ಅವನು... ...ಗೇನೂ ಮಾಡಲಿಲ್ಲ. ಅದರ ಬದಲು ಈಸ್ಟ್ ಇಂಡಿಯಾ ಕಂಪೆನಿಯ ಅಧೀನಕ್ಕೆ ತೆಗೆದುಕೊಳ್ಳಬೇಕೆಂತ ದೇಶದ ಬ... ...ಒಗ್ಗಟ್ಟಿನಿಂದ ಕೇಳಿಕೊಂಡರೆಂಬ ಕೋರಿಕೆಯ ಕಾರಣ... ...ದೇಶವನ್ನು ಕಂಪೆನಿ ಸರಕಾರಕ್ಕೆ ಸೇರಿಸಿಕೊಂಡನು. ಈ ... ...ನೀತಿಯ ಜಾಹೀರಾತಿಯ ಉದ್ದೇಶವು ನಮಗೆ ಗೊತ್ತಿದೆ

(4ನೇ ಪುಟದಲ್ಲಿ ಮುಂದುವರಿಸಿದೆ.)

ಸಹಕಾರ.

(ಲೇಖಕ—ಎ ಯಂ ತಿಮ್ಮಯ್ಯ ಬಿ.ಎ(ಆನರ್ಸ್))

(ಹಿಂದಿನ ವಾರದಿಂದ ಮುಂದುವರಿದುದು.)

5. ರೈತರುಗಳನ್ನು ಸಾಕುವ ನೂತನ ವಿಧಾನಗಳನ್ನು ಸರಕಾರದವರು ವೆಟರ್ನರಿ ಡಿಪಾರ್ಟ್‌ಮೆಂಟಿನವರ ಸಹಾಯದಿಂದ ಜನರಿಗೆ ಬೋಧಿಸಬೇಕು. ಎತ್ತುಗಳು ಸತ್ತ ಮೇಲೆ ಸಾಲಕೊಟ್ಟು ಎತ್ತುಗಳನ್ನು ಕೊಂಡುಕೊಳ್ಳಲು ಸಹಾಯ ಮಾಡಿದ್ದಲ್ಲದೆ ಅದರಿಂದ ಕಡಕೇ ಹೊರ ಒಳ್ಳೆಯದಿಲ್ಲ. ಜನರು ಸುಲಭವಾಗಿ, ಕಮ್ಮಿ ದರಕ್ಕೆ ಹಣ ಸಿಕ್ಕುವುದರಿಂದ ದನಕರುಗಳ ವಿಷಯ ಎಚ್ಚರ ತೆಗೆಯುವುದಿಲ್ಲ. ರೋಗದಿಂದ ದನಗಳು ಸಾಯುವುದನ್ನು ನಿಲ್ಲಿಸುವುದು ಸಹಕಾರ ಸಂಘಗಳ ಕರ್ತವ್ಯ. ದನಕರುಗಳಿಗೆ ಹುಲ್ಲು ಒದಗಿಸಿ, ಊರಿನಲ್ಲಿರುವ ಲಂತಾನವನ್ನು ನಾಶಮಾಡಲು ಸಹಕಾರ ಸಂಘಗಳು ಕೆಲಸ ಮಾಡಬೇಕು. ಅಲ್ಲದೆ ದನಕರುಗಳಿಗೆ ಪೌಷ್ಟಿಕ ಆಹಾರ ಕೊಡಬೇಕು. ಗಂಡಂದಿಯರು ಹೆಂಗಸರಿಗೆ ಬೋಧಿಸಿ, ಹಿಂಡಿಯನ್ನು ನಾಶವಾದಂತೆ ಮಾಡ ಹಾರಿಗೆ ಕೊಡುವ ಹಿಂಡಿಯನ್ನು ದನಕರುಗಳಿಗೆ ಕೊಡುವಂತೆ ಮಾಡಬೇಕು. ಪೌಷ್ಟಿಕ ಆಹಾರಂಗಳ ಪ್ರಯೋಜನಗಳನ್ನು ಜನರಿಗೆ ಬೋಧಿಸಿ, ಮತ್ತೆ ಕೊಡಗಿನಲ್ಲಿ ಸಹಕಾರ ಸಂಘಗಳ ಮೇಲ್ವಿಚಾರದಲ್ಲಿ ಒಂದು ಡೈರಿಫಾರಂ ತೆರೆಯಬೇಕು. ಇದಕ್ಕೆ ಉತ್ತರಕೊಡಗಿ ಹಂಚಾ ಊರಲ್ಲಿರುವ ಅಥವ ಮೈಸೂರಿನಲ್ಲಿರುವ ಡೈರಿಫಾರಂಗಳನ್ನು ನೋಡಬಹುದು. ಸರಕಾರದವರೂ, ಸಹಕಾರ ಸಂಘಗಳ ಅಧಿಕಾರಿಗಳೂ ಈ ವಿಷಯ ದೃಷ್ಟಿಗಾಗಿ ಕೊಂಡರೆ ಕೆಲಸವಾದೀತೆಂದು ನಂಬುತ್ತೇನೆ.

ಕುಸುಮ, 7. ಇವೆರಡು ಕಾರಣಗಳನ್ನು ಹೋಗಲಾಡಿಸಲು ಮುಖ್ಯ ಹೆಂಗಸಿನಷ್ಟು ಶಕ್ತಿಯು ಯಾರಿಗೂ ಇರದು. ಆದ್ದರಿಂದ ಮನೆಯ ಜನರು ಆರೋಗ್ಯದಲ್ಲಿರಬೇಕಾದರೆ ಆ ಮನೆಯ ಒಡತಿ ಸುತ್ತು ಮುತ್ತಲೂ ಶುದ್ಧವಾಗಿರಬೇಕು. ವ್ಯಯ ಆಗದೆ ಹೆಂಗಸೂ, ಹುಡುಗರೂ ಗಂಡಸೂ, ಶುದ್ಧ ಮಿತವ್ಯಯ, ಗಂಡಸಿಗಿಂತಲೂ ಮನೆಯೊಳಗೆ ಹೆಂಗಸಿಗೆ ಅಧಿಕಾರವಿದ್ದು ಇರುವುದರಿಂದ (God forbid henpecked husbands) ಮನೆಯನ್ನು ಶುದ್ಧ ಮಾಡದೆ ಆಕೆಗೆ ತನ್ನ ಗಂಡನು ಇಲ್ಲವೆಂದು ಅವಳು ಮುಷ್ಕರ ಹಿಡಿದಲ್ಲಿ ಕೆಲಸವು ಸಾಧಿಸುತ್ತದೆ. ಹೀಗೆ ಮಾಡಿದಲ್ಲಿ ಮಲೇರಿಯ ಕಮಿಕವಾಗುವ ಜೊತೆಗೆ ಕೆಲಸವಿಲ್ಲದೆ, ಅವರಿಗೆ ಖರ್ಚು ಮಾಡುವ ಹಣವನ್ನು ಬೇರೆ ವಿಧಾನದಲ್ಲಿ ಉಪಯೋಗಿಸಬಹುದು. ಅಲ್ಲದೆ ನಿಮ್ಮ ಸ್ತ್ರೀಯರಿಗೆ ಹೊದಿಯ ಮೇಲೆ ಒಹು ಪ್ರೇಮ. ಈ ಪ್ರೇಮವನ್ನು ಹೋಗಲಾಡಿಸಿ, ಅವರುಗಳಿಗೆ ಕೊಡುವ ಹಂಚಿನ ಹಣವನ್ನು ಮಕ್ಕಳುಗಳಿಗೆ ಕೊಟ್ಟಲ್ಲಿ, ಹಾಲು, ಬೆಣ್ಣೆ, ಮೊಸರು ಇವರ ಆರೋಗ್ಯವು ಚೆನ್ನಾಗಿರುತ್ತೆ. ಹಂದಿ ಸಾಕಿದರೆ ಮಕ್ಕಳು ಹೇಗೆ, ನಷ್ಟ ಕಷ್ಟ ಎಲ್ಲಾ ನಿಮಗೆ ತಿಳಿದಿದೆ. ಆದುದರಿಂದ ಆ ಮಾರಿಯನ್ನು ನಿಲ್ಲಿಸಿ, ದನ ಕರುಗಳನ್ನು ಶುದ್ಧ ಮಾಡಿ, ಹೀಗೆ ಮಾಡಿದ್ದಲ್ಲಿ ಜನರ ಆರೋಗ್ಯ ಹೆಚ್ಚಾಗುತ್ತೆ. ಚೆನ್ನಾಗಿ ಕೆಲಸ ಮಾಡಿ ಹೆಚ್ಚು ಸಂಪಾದನೆ ಮಾಡಬಹುದು, ಅಲ್ಲದೆ ಕಾಯಿಲೆಯಿಂದ ಪೀಡಿತರಾಗಿ ಡಾಕ್ಟರರಿಗೆ, ಅವರಿಗಿಂತ ಹೆಚ್ಚಾಗಿ ಕಣಿಯಾನಿಗೂ, ಮಲೆಯನಿಗೂ, ಪಾಣರಿಗೆ ಬ್ರಾಹ್ಮಣನಿಗೂ ಖರ್ಚು ಮಾಡುವ ದುಡ್ಡು ಬೇರೆ ಒಳ್ಳೆಯ ದಾರಿಯಲ್ಲಿ ಉಪಯೋಗಿಸಬಹುದು.

ಸ್ತ್ರೀಯರಲ್ಲಿ ಮತ್ತೊಂದು ವಿನಂತಿ ನಿಮ್ಮ ಗಂಡಂದಿಯರಿಗೆ ಶಕ್ತಿ ಇಲ್ಲದಿದ್ದಲ್ಲಿ ದಯವಿಟ್ಟು ನಿಮಗೆ ಆಭರಣ ಬೇಕೆಂದು ಅವರಿಗೆ ತೊಂದರೆ ಕೊಡಬೇಡಿ. ಅವರು ಸಾಲ ಮಾಡಿ ನಿಮಗೆ ಆಭರಣ ಮಾಡಿ ಅನೇಕ ಕೊಂಡರೆ ಗುರಿಯಾಗುತ್ತಾರೆ. "ಸಾಲ ಮಾಡಿಯಾದರೂ ಓಲೆ ಮಾಡಿತು ಓಲೆ ಮಾರಿತು ಸಾಲ ತೀರಲಿಲ್ಲ" ಎಂಬ ಸಂಗತಿ ನಿಮಗೆ ತಿಳಿದಿದೆ. ಆಭರಣವಿಲ್ಲದಿದ್ದರೆ ನಿಮ್ಮನ್ನು ಸ್ತ್ರೀರತ್ನಗಳಲ್ಲವೆಂದು ಯಾರು ಹೇಳುತ್ತಾರೆ. ಆಭರಣವೇ ಮುಖ್ಯವಲ್ಲ, ಬಟ್ಟೆ ಬರೆಯಲ್ಲಿ ಹೊಸ ಶೈಲಿ, ಕಾಶ್ಮೀರ್ ಪ್ಯಾಷಿಯ, ಬೆನಾರೀಸ್ ಶಾಲ್, ಕಾಶ್ಮೀರಿ ಜಾಕೆಟ್,' ಬೇಕೆಂದು ಹೇಳಿ ಗಂಡಂದಿಯರಿಗೆ ತೊಂದರೆ ಕೊಡಬೇಡಿ. ನಿಮ್ಮ ಶಕ್ತಿಗೆ ಮೀರಿ ಹೋಗಿ, ಹಿಂದಿನಿಂದ ಕಷ್ಟಪಡುವುದಕ್ಕಿಂತಲೂ, ಶಕ್ತಿಗೆ ತಕ್ಕಂತೆ ಇದ್ದು ಉಲ್ಲಾಸಪಡುವುದು ಮೇಲಲ್ಲವೇ? ಸಾಲ ಮಾಡಿ ಹೀಗೆ ಉಲ್ಲಾಸ ಮಾಡಿದ್ದಲ್ಲಿ ಆ ಸಾಲದ ಭಾರವನ್ನು ನಿಮ್ಮ ಮಕ್ಕಳು ಸಹ ಅನುಭವಿಸಬೇಕಾಗುತ್ತೆ.

8. ಕೊಡಗಿನಲ್ಲಿ ಮದುವೆ ಮುಂತಾದವುಗಳಿಗೆ ಬೇಕಾದ ಖರ್ಚು ಮಿತಿಮೀರಿದೆ. ಅನೇಕ ಜನರು ಮದುವೆ ಮುಂತಾದವುಗಳಿಂದ ಸಾಲ ಕಲ್ಪಿಸಿಕೊಂಡು ಸಾಲದಲ್ಲಿ ಮುಳುಗಿರುವರು. ಆ ಕೊಡಗಿನ ಸಾಲವನ್ನು ತೀರಿಸುವುದರಿಂದ ಯಾವ ವಿಧದಲ್ಲಿ ತಕ್ಕ ಯೋಚನೆ ಮಾಡಿ ಖರ್ಚು ಉಂಟಾಗುತ್ತದೆಂಬ ವಿಷಯವು ಎಲ್ಲಾರಿಗೂ ತಿಳಿದಿದೆ. ವಿವಾಹಕ್ಕೆ ಸರಿಯಾದ ಖರ್ಚು ಉಂಟಾಗುವುದಲ್ಲದೆ, ಆಯಾಯಾ ಫೀಸ, ಅಣ್ಣತಮ್ಮಂದಿರು ಬಂಟರು ಇವರುಗಳಿಗೆ ಮಿಷನ್, ಅವರಿಗೆ ಸ್ವಂತ ಖರ್ಚು, ಅಲ್ಲದೆ ನೆಂಟರಿಗೆ ಇನಾಮು, ಇವೇ ಅಲ್ಲದೆ, ಇನ್ನು ಅನೇಕ ತರದ ಖರ್ಚು ತಿಂಡಿ ತೀರ್ಥ ಹಾಗು ಹೋಗುವ ಒಂದು ಖರ್ಚು, ಹೋಗುವ ಬರುವ ಕೆಲಸ ಹಾಳು, ಉತ್ಪತ್ತಿ ಕಡಿಮೆ—ಮುಂತಾಗಿ ಈ ವಿಷಯ ಎಲ್ಲಾರಿಗೂ ತಿಳಿದೇ ಇದೆ. ಆದ್ದರಿಂದ ಸಹಕಾರ ಸಂಘಗಳ ಮತ್ತು ಜನರ ಮುಖ್ಯ ಕರ್ತವ್ಯವು ಜನರನ್ನು ಸಾಲದ ಕೊಳ್ಳೆಯಿಂದ ತಪ್ಪಿಸುವುದಾಗಿದೆ. ಮೊದಲನೆಯದಾಗಿ ಜನರ ವಿದ್ಯಾಭಿವೃದ್ಧಿಗೊಳಿಸುವುದು ಸರಕಾರದವರ ಕರ್ತವ್ಯವಾಗಿದೆ. ಎಷ್ಟೋ ವಿದ್ಯಾವಂತರಾದರೂ ಜನರಲ್ಲಿ ಪರಸ್ಪರ ಜಗಳವು ತಪ್ಪಲಾರದು. ಇಂಥ ಸಂದರ್ಭದಲ್ಲಿ ನ್ಯಾಯ ತೀರ್ಪಿಗೆ ಗ್ರಾಮ ಗ್ರಾಮಗಳಲ್ಲಿ ಪಂಚಾಯತಿಗೆ ಕಾಲಗಳನ್ನು ಏರ್ಪಡಿಸಲೇ ಬೇಕಾಗಿದೆ. ಪುರಾತನ ಕಾಲದಲ್ಲಿದ್ದಂತ ಪಂಚಾಯತಿಗೆ ಕೂಟಗಳನ್ನು ಪುನರುದ್ಧಾರ ಮಾಡದಿದ್ದರೆ ಜನರನ್ನು ಕೊಳ್ಳೆಮಾಡುವ ವಿವಿಧವಾದ ವಿಜಾಂಟರುಗಳು ಅವರ ಕೆಲಸವನ್ನು ಬಿಡಲಾರರು. ಈ ಸಮ್ಯಂಥ ಸರಕಾರದವರು ಸಹ ಏರ್ಪಾಡು ಮಾಡುತ್ತಾರೆಂದು ತಿಳಿಯಲಾಯಿತು. ಸರಕಾರದವರು ಏರ್ಪಾಡು ಮಾಡಿದಲ್ಲಿ ಈಗ ಕೋರ್ಟು ಖಚೇರಿಗಳಿಗುಂಟಾಗುವ ಖರ್ಚು ಕಮ್ಮಿಯಾಗುತ್ತೆ. ಆಗ ಜನರ ಮೇಲೆ ಕಂದಾಯ ಕಮ್ಮಿಯಾಗುತ್ತೆ. ಜನರಿಗೆ ಎಲ್ಲಾ ವಿಧದಲ್ಲಿಯೂ ಸುಖವಿದೆ. ಈ ವಿಷಯದಲ್ಲಿ ಹಿಂದೂಸ್ಥಾನದ ಮೊದಲ ನಕ್ಷತ್ರವಾದ ಪಂಡಿತ ಜವಾಹರ್‌ಲಾಲ್ ನೆಹರೂರವರು ಕೆಲವು ದಿನಗಳ ಹಿಂದೆ ಅಲ್ಲಹಾಬಾದಿನಲ್ಲಿ ಮಾಡಿದ ಭಾಷಣವು ಎಲ್ಲರಿಗೂ ಹಿತಕರವಾಗಿರುವುದು. ಆದ್ದರಿಂದ ಸಹಕಾರ ಸಂಘದವರು ಈ ವಿಷಯವನ್ನು ಮಾಡಬೇಕೆಂಬುದನ್ನು ಪರ್ಯಾಲೋಚಿಸುವ.

ಗ್ರಾಮದೊಳಗೆ ಜನರ ಹಿತಕ್ಕೋಸ್ಕರ ಮಾಡಬೇಕಾದ ಎಲ್ಲಾ ಕೆಲಸವನ್ನೂ ಗ್ರಾಮ ಪಂಚಾಯತಿಗೆ ಕೂಟಗಳು ಪೂರ್ಣವಾಗಿಯೂ ಸಹಕಾರ ಮಾರ್ಗಕ್ಕೆ ಹಿತವಾಗಿಯೂ ಮಾಡಬಹುದು. ಎಲ್ಲಾ ತರದ ಜಗಳದಲ್ಲಿ ನ್ಯಾಯ ತೀರಿಸುವಂತೆ ಮಾಡಿ, ಗ್ರಾಮದ ಜನರನ್ನು ಒಬ್ಬರನ್ನೊಬ್ಬರು ಪ್ರೀತಿಸುವಂತೆಯೂ ಸಂಬಂಧಿಕರಂತೆಯೂ ವರ್ತಿಸುವಂಥ ವಿದ್ಯೆಯನ್ನು ಕೊಡುವುದು. ಹಿಂದೆ ಏರ್ಪಡಿಸಿರುವ ನಮ್ಮ ಸ್ತ್ರೀಯರನ್ನು ಮುಂದಕ್ಕೆ ತರುವ ಕೆಲಸವನ್ನೂ, ಅವರ ಸಹಾಯದಿಂದ ಗ್ರಾಮದ ಅಭಿವೃದ್ಧಿಯನ್ನು ಸ್ಥಾಪಿಸುವ ಕಲಸವನ್ನೂ ಮಾಡಿ ಜನರಿಂದ ಕೋರ್ಟು ಖಚೇರಿಗಳಿಗಾಗುವ ದುಂದುಗಾರಿಕೆಯ ಖರ್ಚುಗಳನ್ನು ನಿಲ್ಲಿಸಬಹುದು.

9. ಈ ತರದ ಖರ್ಚನ್ನು ಜನರು ನಿಲ್ಲಿಸುವುದಕ್ಕೆ ಜನರ ಕಷ್ಟವೇನೂ ಇಲ್ಲ. ಅವರು ಅವರ ಆದಾಯಕ್ಕೆ ಸರಿಯಾಗಿ ಖರ್ಚನ್ನು ಸರಿಪಡಿಸಿಕೊಂಡು ಅವರವರ ಶಕ್ತಿ ವಿವರಿಸಿ ಇದ್ದಲ್ಲಿ ಯಾವತರದ ಕಷ್ಟಕ್ಕೂ ಕಾರಣವಿಲ್ಲ. ಮದುವೆ ಮುಂತಾದವುಗಳಲ್ಲಿ, ಹಬ್ಬ ಹರಿದಿನಗಳಲ್ಲಿ, ಬೇರೆ ಅನೇಕ ತರದ ಸಾಮಾಜಿಕ ಸಂದರ್ಭಗಳಲ್ಲಿ ಹಿತಕ್ಕಾಗುವ ಖರ್ಚನ್ನು ಕಮ್ಮಿ ಮಾಡುವ ಸಂಗತಿ (Economy)ಯನ್ನು ತಿಳಿದವರೂ, ಸಹಕಾರ ಸಂಘದವರೂ ಜನರಿಗೆ ಬೋಧಿಸಿ ಅವರ 'ಫ್ಯಾಮಿಲಿ ಬಜೆಟ್' (Family Budget) ಸರಿಪಡಿಸಬೇಕು.

10 ಈ ವಿಷಯದಲ್ಲಿ ಹೆಚ್ಚಾಗಿ ಬರೆಯಲು ಅವಕಾಶವಿಲ್ಲ. ಕೊಡಗಿನಲ್ಲಿ ಜನರು ಅನುಭವ ಇಲ್ಲದ್ದರಿಂದಲೋ ಅವರಿಗೆ ತಿಳುವಳಿಕೆ ಬೇಡವೆಂಬ ಯೋಚನೆಯಿಂದಲೋ (Lethergic indifference to information) ತಾವಾಗಿ ನಡಿಸುವ ಸಂಗತಿಯಲ್ಲಿ (Business talent) ಬಹಳ ಹಿಂದೆ ಬಿದ್ದಿರುವರು. ಅವರು ಅವರ ನಿದ್ದೆಯಿಂದೆದ್ದು, ತಮ್ಮ ತಮ್ಮ ವ್ಯಾಪಾರಕ್ಕೋಸ್ಕರ ಬೇರೆಯವರ ಬಳಿಗೆ ಓಡದೆ ಇರಲು ತಾವೇ ಸಂಘಗಳನ್ನು ಏರ್ಪಡಿಸಿ ಅವುಗಳ ಮೂಲಕ ತಮ್ಮ ಧಾನ್ಯಗಳಿಗೆ ಸರಿಯಾದ ಬೆಲೆ ದೊರಕಿಸಬಹುದಲ್ಲದೆ ವ್ಯಾಪಾರದ ಗುಟ್ಟನ್ನೂ ತಿಳಿಯಬಹುದು. ಜನರ ನೋವನ್ನಂತಹ ಮತ್ತು ನಷ್ಟವನ್ನೂ ಹೋಗಲಾಡಿಸಬಹುದಲ್ಲದೆ, ಪರದೇಶದಿಂದ ಬರುವ ಸಾಮಾನುಗಳ ಹಾವಳಿಯನ್ನು ಸಹ ನಿಲ್ಲಿಸಬಹುದು. ಮುಖ್ಯವಾಗಿ ಮಾರ್ಗಗಳನ್ನೂ ಚೆನ್ನಾಗಿ ಮಾಡಿ ಪಟ್ಟಣಗಳಿಗೆ ಗಾಡಿ ಹೋಗಲು ಸುಲಭ ಮಾಡಬೇಕು. ಜನರು ಅವರವರ ಸಂಸ್ಥೆಗಳನ್ನೇರ್ಪಡಿಸಿ, ಧನವಂತರು ದ್ರವ್ಯ ಸಹಾಯ ಮಾಡಿದಲ್ಲಿ ಬೇಕಾದ ಜನರು ಒಂದು ಖಂಡಿತವಾಗಿಯೂ ಮುಂದುವರಿಕೆಯಿಂದ ಕೆಲಸ ಮಾಡುವರೆಂಬುವುದಕ್ಕೆ ಸಂಶಯವಿಲ್ಲ. ಈ ವಿಷಯ ಸಹಕಾರ ಸಂಘಗಳ ವಿಸ್ತೀರ್ಣ ಕೆಲಸ ಮಾಡಿ ಜನರ ಏಳಿಗೆಯನ್ನು ಮಾಡಿ ಎಲ್ಲಿಸಬಹುದು. ಸರಕಾರದವರು 'ಅಳತೆಯ ವಿಷಯ ಕೆಲಸ' ತೆಗೆದುಕೊಂಡು ಸ್ಟೆಂಡರ್ಡ್ ಪರಿಯನ್ನು ಮಾಡಲು ಏರ್ಪಾಡು ಮಾಡಿರುವುದಕ್ಕೆ ಅವರಿಗೆ ಎಷ್ಟು ವಂದಿಸಿದರೂ ಸಾಲದು. ಈ ವಿಷಯದಲ್ಲಿ ಜನರು, ಎಚ್ಚರಗೊಂಡು, ಸಹಕಾರ ಸಂಘದವರೂ, ಸರಕಾರದವರೂ ಕೊಂಡರೆ ತೆಗೆದುಕೊಂಡರು ತಮ್ಮ ಸಹಾಯ ಮಾಡಿದಲ್ಲಿ ಕೊಡಗಿನ ಜನರಿಗೆ ಬಹಳ ಸಹಾಯವಾಗುವುದು.

ವಾಚಕರೇ, ನಾನು ಬರೆದ ಸ್ವಲ್ಪವಲ್ಲ, ಇದು ಕೊನೆಯಲ್ಲ. ಅವುಗಳಲ್ಲವನ್ನು ನೀವು ತಿದ್ದಿ, ಈ ಲೇಖನದಲ್ಲಿರುವ ಒಳ್ಳೆಯ ಸಂಗತಿಗಳನ್ನು ಮನಸ್ಸಿಗೆ ತಂದು, ಕೆಟ್ಟದ್ದರೆ ಅವನ್ನು ಬಿಟ್ಟು ಜನರ ಹಿತಕ್ಕೋಸ್ಕರ ಎಲ್ಲರೂ ಕೆಲಸ ಮಾಡಿದಲ್ಲಿ ಈ ಲೇಖನದ ಉದ್ದೇಶವು ಸಾರ್ಥಕವಾಗುತ್ತೆ.

ಅಖಿಲ ಕರ್ಣಾಟಕದ ಮಹಾಜನರಲ್ಲಿ ವಿಜ್ಞಾಪನೆ.

ರಾಷ್ಟ್ರದ ರಾಜಕೀಯ ಇತಿಹಾಸದಲ್ಲಿಯ ಅತ್ಯಂತ ಬಿಕ್ಕಟ್ಟಿನ ಇಂದಿನ ದಿನಗಳಲ್ಲಿ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಪದವಿಯನ್ನು ನನಗೆ ಕೊಟ್ಟದ್ದಕ್ಕಾಗಿ ತುಂಬಾ ಕೃತಜ್ಞನಿರುವೆನು ಏಕೆಂದರೆ—ನನ್ನ ಮುಂದಿರುವ ಕರ್ತವ್ಯಭಾರವನ್ನು ವಹಿಸುವುದು ದುಷ್ಕರ ಕಾರ್ಯವಾದರೂ, ಸಹಾಯಕರಾಗಿ ಕೈಕೊಟ್ಟು ನಡಸಲು ಅಖಿಲ ಕರ್ಣಾಟಕದ ಕಾಂಗ್ರೆಸ್ ಕೆಲಸಗಾರರು ಹವಣಿಸುತ್ತಿರುವರೆಂದು ನನಗೆ ವಿಶ್ವಾಸ ಉಂಟು. ಇಂದಿನ ದಿನಗಳಿಗೆ ನಮ್ಮ ರಾಜಕೀಯ ಜೀವನದಲ್ಲಿ ಅತ್ಯಂತ ಮಹತ್ವವಿರುತ್ತದೆ. ಸಂಧಾನಕ್ಕಾಗಿ ನಡೆಯುತ್ತಿರುವ ಮಹಾತ್ಮಾಜಿಯವರ ಪ್ರಯತ್ನಗಳಿಗೆ ಯಶಸ್ಸು ದೊರೆತು ದೇಶದಲ್ಲಿ ಚಿರಶಾಂತಿಯು ನೆಲೆಗೊಳ್ಳಲಿಕ್ಕಿದೆಯೋ, ಅಥವಾ ಪುನಃ ಸತ್ಯಾಗ್ರಹ ಸಂಗ್ರಾಮದ ಪ್ರಸಂಗವು ಒದಗುವುದೋ ಈಗ ಹೇಳಲು ಸಾಧ್ಯವಿಲ್ಲ. ಸಂಧಾನವು ಮುರಿಯದೆ ಶಾಂತಿಯಿಂದಲೇ ನಮ್ಮ ಕಾರ್ಯಸಾಧನೆಯಾದೀತೆಂದು ನನಗೆನಿಸುತ್ತದೆ. ಈ ನಂಬಿಕೆಯು ವ್ಯರ್ಥವಾಗದಂತೆ ನಾವೇ ಮಾಡಬಲ್ಲೆವು. ದೇಶವು ಇನ್ನೊಂದು ಸಂಗ್ರಾಮಕ್ಕೆ ಪೂರ್ಣ ಸಿದ್ಧವಿರುವುದೆಂಬುದನ್ನು ನಾವು ಪ್ರತಿ ಶಕ್ತಿಗಳಿಗೆ ಖಚಿತಗೊಳಿಸಬಲ್ಲೆವಾದರೆ ಮತ್ತೆ ಸಂಧಾನವು ಮುರಿಯುತ್ತದೆಂಬ ಯೋಚನೆಗೆ ಎಡೆಕೊಡಬೇಕಾಗುವುದಿಲ್ಲ.

ನಮ್ಮ ಇಂದಿನ ಕರ್ತವ್ಯವು.

ಸ್ಪಷ್ಟವಿರುತ್ತದೆ. ಗಾಂಧಿ-ಇರ್ವಿನ್ ಒಪ್ಪಂದದಲ್ಲಿಯ ಸರಕಾರದವರು ಪಾಲಿಸಬೇಕಾಗಿದ್ದ ಶರ್ತಗಳನ್ನೆಲ್ಲಾ ನಮ್ಮ ಪ್ರಾಂತ್ಯದಲ್ಲಿ ಅವರನ್ನು ಪಾಲಿಸಿಲ್ಲ. ಆದರೆ ಅದಕ್ಕಾಗಿ ನಾವು ನಮ್ಮ ಪಾಲಿಗಿನ ಶರ್ತಗಳನ್ನು ಪಾಲಿಸುವುದರಲ್ಲಿ ಮಾತ್ರ ಸ್ವಲ್ಪವಾದರೂ ಹೆಚ್ಚು ಕಡಿಮೆ ಮಾಡಲಾಗದು. ಸರಕಾರದವರು ಶರ್ತಗಳನ್ನು ಪಾಲಿಸುವಂತೆ ಮಾಡುವ ಜವಾಬ್ದಾರಿಯು ಮಹಾತ್ಮಾಜಿಯವರಿಗೆ ಸೇರಿದೆ. ಈ ವಿಚಾರಗಳಲ್ಲಿ ದೂರು ಕೊಡುವ ವ್ಯಕ್ತಿಗಿಂತ ಹೆಚ್ಚಿನದೇನೂ ನಾವು ಮಾಡುವಂತಹದಿಲ್ಲ. ಆದುದರಿಂದ ಈ ವಿಷಯದಲ್ಲಿ ನಾವು ನಿಶ್ಚಿಂತೆಯನ್ನು ತಾಳಿ ಶಾಂತರೀತಿಯಿಂದ ವಿಧಾಯಕ ಕಾರ್ಯವನ್ನು ಮುಂದೊತ್ತಿ, ಕಳೆದ ಸಂಗ್ರಾಮದ ಭಂಗಿ ಎಚ್ಚತ್ತು ಎದ್ದು ನಿಂತಿರುವ ಅಖಿಲ ಕರ್ಣಾಟಕದ ಜನಸ್ತೋಮವನ್ನು ಸುವ್ಯವಸ್ಥಿತವಾಗಿ ಸಂಘಟನಗೊಳಿಸಿ ಅಗತ್ಯ ಬಿದ್ದರೆ ಮುಂದಿನ ರಾಷ್ಟ್ರದ ರಣರಂಗದಲ್ಲಿ ಅದನ್ನು ಒಲಿಯಾಗಿ ಅರ್ಪಿಸಲು ಸನ್ನದ್ಧರಾಗಿ ನಿಲ್ಲುವುದೇ ಇಂದಿನ ನಮ್ಮ ಕರ್ತವ್ಯವು.

ಹುಕ್ಕೇರಿಯಲ್ಲಿ ಸೇರಿದ ಕರ್ಣಾಟಕ ಪರಿಷತ್ತಿನಲ್ಲಿ ಕರ್ಣಾಟಕದಲ್ಲಿಯ ಒಂದು ತಾಲೂಕನ್ನು ಬಾರ್ಡೋಲಿಯಂತೆ ಸಿದ್ಧಗೊಳಿಸಬೇಕಾಗಿ ನಿರ್ಣಯವಾಗಿರುವುದು. ನಿರ್ಣಯವು ವ್ಯವಹಾರ ದೃಷ್ಟಿಯಿಂದ ಯೋಗ್ಯವೇ ಇರುತ್ತದೆ. ಅವರ ಅಖಿಲ ಕರ್ಣಾಟಕವು ಇಂದು ಬಾರ್ಡೋಲಿಯಂತೆ ಸಿದ್ಧತೆಯನ್ನು ಹೊಂದದೆ ಗತ್ಯಂತರವಿಲ್ಲವೆಂದ ಸ್ಪಷ್ಟವಾಗಿ ಹೇಳುವುದು ನನ್ನ ಪಾಲಿನ ಕರ್ತವ್ಯವಿರುತ್ತದೆ. ಜನತೆಯು ಸಂಪೂರ್ಣ ಎಚ್ಚರಗೊಂಡಿರುವ ಈಗಿನ ದಿನದಲ್ಲಿ ಇಂಥ ಸಿದ್ಧತೆಯನ್ನು ಸಾಧಿಸುವುದು ಅಸಾಧ್ಯವೆಂದಾದರೂ ಭಾವಿಸಬೇಕಾಗಿಲ್ಲ. ವಿಧಾಯಕ ಕಾರ್ಯ ಕ್ರಮದಲ್ಲಿಯ ಮುಖ್ಯ ಅಂಗಗಳನ್ನು ಸರ್ವತ್ರ ಸಾಧಿಸುವುದರಿಂದ ಇಂಥ ಸ್ಥಿತಿಯು ತಾನಾಗಿ ಪ್ರಾಪ್ತವಾಗುವದು.

ಪರದೇಶೀ ವಸ್ತ್ರ ಬಹಿಷ್ಕಾರ.

ಪರದೇಶೀ ಬಟ್ಟೆಯ ಸಂಪೂರ್ಣ ಬಹಿಷ್ಕಾರವೂ ಸ್ವತಂತ್ರ ಖಾದಿ ಪ್ರಚಾರವೂ ನಮ್ಮ ಕಾರ್ಯಗಳಲ್ಲೆಲ್ಲಾ ಅತ್ಯಂತ ಮಹತ್ವದವು. ಪರದೇಶೀ ಬಟ್ಟೆಯನ್ನು ಮುಂದೆ ತರಿಸಲಾಗದು ಮಾತ್ರವಲ್ಲ ಒಂದು ತುಂಡನ್ನಾದರೂ ದೇಶದೊಳಗೆ ಮಾರಲಾಗದೆಂಬ ಕಾಂಗ್ರೆಸಿನ ಸ್ಪಷ್ಟವಾದ ಧೋರಣವನ್ನು ಕರ್ಣಾಟಕದಲ್ಲಿಯ ವ್ಯಾಪಾರಸ್ಥರು ಆಸ್ಥೆಯಿಂದ ಪಾಲಿಸಬೇಕಾಗಿ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳಬಯಸುವೆನು. ರಾಷ್ಟ್ರದ ಹಿತವೇ ತಮ್ಮ ಹಿತವೆಂದೂ, ರಾಷ್ಟ್ರಕ್ಕೆ ಅನಿಷ್ಟವೆನಿಸುವ ವ್ಯಾಪಾರವು ತಮಗೆ ಲಾಭ ನಿಶ್ಚಯವೆಂದೂ, ಪ್ರಮಾಣ ಪಾತಕವೆಂದೂ ಎಂಬುದನ್ನು ವಿಚಾರಿಸಿ ನೋಡಿದಾಗ, ಅವರು ತಿಳಿದುಕೊಳ್ಳಬಲ್ಲರು. ರಾಷ್ಟ್ರದ ಕಲ್ಯಾಣಕ್ಕಾಗಿ ನಾವು ಸಹಿಸಬೇಕಾಗುವ ಸ್ವಲ್ಪ ನಷ್ಟವು ನಿಜವಾದ ನಷ್ಟವಲ್ಲ. ಅನೇಕ ನಮ್ಮ ಸ್ತ್ರೀಯರಿಗೆ ಕಾರಣವಾಗುವುದು. ಧರ್ಮದ ತವರೂರಾದ ಭಾರತ ದೇಶದ ವರ್ತಕರು ಈ ವಿಷಯದಲ್ಲಿ ವಿಶ್ವಾಸವಿಡಲಾರರೇ? ಪರದೇಶೀ ಬಟ್ಟೆಯ ಬಹಿಷ್ಕಾರವು ಪೂರ್ಣ ಯಶಸ್ವಿಯಾಗಬೇಕಾದರೆ, ಖಾದಿಯ ಸಾರ್ವತ್ರಿಕ ಪ್ರಚಾರವೊಂದೇ ದಾರಿ ಇರುವುದು. ಸ್ವದೇಶೀ ಎಂಬ ಗಿರಣಿಗಳ ಬಟ್ಟೆಗೆ ಕರ್ಣಾಟಕವು ತುತ್ತಾಗದಿರಲೆಂದು ಆಶಿಸುತ್ತೇನೆ. ಬಡ ರೈತರ ಬಡತನ ನೀಗಿಸುವ ಈ ದೇಶದಲ್ಲಿ ದೇವರ ಉದ್ಧಾರದ ಏಕ ಮಾತ್ರ ಸಾಧನವಾದ ಖಾದಿಗೆ ಆತ್ಮಘಾತ ನೆರವು ಗಿರಣಿ ಬಟ್ಟೆಗೆ ಬರಲಾರದೆಂಬುದನ್ನು ಕನ್ನಡಿಗರು, ನಾಗರಿಕರು ಕರ್ಣಾಟಕದಲ್ಲಿ ತಯಾರಾದ ಖಾದಿಯೇ ಸಮರ್ಪಕ ಖಾದಿಗಾಗಿ ಒಳಿತೆನ್ನುತ್ತದೆ. ಎಂದ ಖಾದಿಯ ಉತ್ಪಾದಕರ ದಾರಿ ಕೇಳಿಕೊಳ್ಳುತ್ತದೆ. ಕರ್ಣಾಟಕದ ಖಾದಿಯನ್ನು ಕನ್ನಡಿಗರು ಕೊಳ್ಳದೆ ಮತ್ಯಾರು ಕೊಂಡುಕೊಳ್ಳಬೇಕು? ಕನ್ನಡಿಗರು ಕರ್ಣಾಟಕದ ಖಾದಿಯನ್ನೇ ಕೊಂಡುಕೊಳ್ಳುವುದು ಸ್ವದೇಶೀ ತತ್ವದ ಪ್ರಕಾರ ಅವರ ಕರ್ತವ್ಯವಿರುತ್ತದೆ.

ಮಾದಕ ದ್ರವ್ಯ ಬಹಿಷ್ಕಾರ

ದೇಶದ ಕಲಂಕವಾದ ಮಾದಕ ದ್ರವ್ಯಗಳ ಹಾವಳಿಯನ್ನು ಸಂಪೂರ್ಣವಾಗಿ ನಿವಾರಿಸುವುದು ನಮ್ಮ ಮುಂದಿರುವ ಇನ್ನೊಂದು ಮುಖ್ಯ ಕಾರ್ಯಕ್ರಮವು. ಮೊದಲೇ ಅತಿ ಬಡತನದಿಂದ ನರಳುತ್ತಿರುವ ಈ ದೇಶದಲ್ಲಿ ಈ ದುರ್ವ್ಯಸನಗಳಿಗಾಗಿ ದುರ್ವ್ಯಯವಾಗುವ ಹಣದ ಮೊಬಲಗನ್ನು ಲೆಕ್ಕ ಹಾಕಿ ನೋಡಿದರೆ, ಈ ಅಭ್ಯಾಸಗಳ ಭಯಾನಕ ಪರಿಣಾಮವನ್ನು ಸರಿಯಾಗಿ ಕಲ್ಪಿಸಬಹುದು. ಮಧ್ಯದ ಗಾಡಿ

ದ್ರವ್ಯವನ್ನು ಅಧಿಕಗೊಳಿಸಿ ಬಾಲಕರ ಬಾಯಿಗೆ ಹೋಗುವ ಅನ್ನದ ತುತ್ತನ್ನು ಸೆಳೆದು, ಕರ್ನಾಟಕದ ಬಡ ಸ್ತ್ರೀಯರ ಕಣ್ಣುಗಳಿಂದ ಸಂತತ ನೀರನ್ನು ಸುರಿಸುವ ಈ ದುರ್ವ್ಯಸನದ ಉಪಯೋಗ ಮಾಡಿಕೊಂಡು ಸರ್ಕಾರವು ತನ್ನ ಕರದ ಉತ್ಪತ್ತಿಯನ್ನು ಸಾಧಿಸಲೆಳಸುವದನ್ನೂ, ವರ್ಗದಾರರು ಗುತ್ತೇದಾರರು ಅಥವಾ ಮೂಕೇದಾರರು ಲಾಭ ಮಾಡಲೆಳಸುವದನ್ನೂ ವಿಚಾರಿಸಿ ನೋಡಿದರೆ, ಇದೇ ವ್ಯಾಪಾರದ ಪೈಶಾಚಿಕ ವೃತ್ತಿಯು ಮನದಟ್ಟಾಗುವುದು. ಪವಿತ್ರವಾದ ಸತ್ಯಾಗ್ರಹ ಸಮರಕ್ಕೆ ಸಿದ್ಧರಾಗಲೆಳಸುವ ನಾವು ಆತ್ಮ ಶುದ್ಧಿಯ ಅವಶ್ಯಕತೆಯನ್ನು ತಿಳಿದು ಈ ಭಯಂಕರ ದುಶ್ಚಟವನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸಲು ಯತ್ನಿಸುವುದು ನಮ್ಮ ಮುಖ್ಯ ಕರ್ತವ್ಯಗಳಲ್ಲೊಂದಾಗಿದೆ.

ಜಾತಿ ವೈಷಮ್ಯ.

ಹಿಂದೂ—ಮುಸಲ್ಮಾನ, ಬ್ರಾಹ್ಮಣ—ಬ್ರಾಹ್ಮಣೇತರ ಮೊದಲಾದವರೊಳಗಿನ ಭೇದ ಬುದ್ಧಿಯನ್ನು ದೂರಗೊಳಿಸಿ ಜಾತಿ ವೈಷಮ್ಯಗಳಿಗೆ ಎಡೆ ಕೊಡದೆ, ಐಕ್ಯವನ್ನು ಸಾಧಿಸಿಕೊಳ್ಳುವುದು ಮಹತ್ವದ ವಿಷಯಗಳಲ್ಲೊಂದು. ಪರಸ್ಪರ ವಿಶ್ವಾಸವನ್ನು ಹುಟ್ಟಿಸುವಂಥ ವರ್ತನದಿಂದಲೇ ಇದು ಸಾಧ್ಯವಲ್ಲದೆ ಪ್ರತಿಯೊಬ್ಬರೂ ತಮ್ಮ ತಮ್ಮ ಹಕ್ಕುಗಳಿಗಿಂತ ಪರರ ಹಕ್ಕುಗಳನ್ನು ಭದ್ರಗೊಳಿಸುವುದರಿಂದಲೇ ತಮ್ಮ ಹಕ್ಕುಗಳು ತಮಗೆ ತಾವಾಗಿ ದೊರೆಯುವವೆಂಬುದನ್ನು ತಿಳಿದು ಈ ಪ್ರಶ್ನೆಯ ಇತ್ಯರ್ಥ ಮಾಡಿಕೊಳ್ಳಬೇಕು. ಇದೇ ರೀತಿ ಹಿಂದೂ ಸಮಾಜದವರು ಅಸ್ಪೃಶ್ಯತೆಯ ಕಲಂಕವನ್ನು ನಿವಾರಿಸುವ ಕಾರ್ಯವನ್ನು ಈ ದಿನಗಳಲ್ಲಿ ಪೂರ್ಣಗೊಳಿಸಬೇಕು.

ಸ್ವರಾಜ್ಯ ಸರ್ಕಾರದಲ್ಲಿ ಸರ್ವರಿಗೂ ಸಮಾನ ಹಕ್ಕುಗಳು ದೊರೆಯುವವೆಂದು ಕಾಂಗ್ರೆಸಿನವರು ಕೊಟ್ಟಿರುವ ಆಶ್ವಾಸನೆಯಲ್ಲಿ ಎಲ್ಲರೂ ವಿಶ್ವಾಸವಿಡುವಂತಾದರೆ ಜಾತಿ ವೈಷಮ್ಯದ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ಕಷ್ಟವಾಗದು. ಪ್ರತಿಯೊಂದು ಪಂಗಡದವರೂ ತಮ್ಮ ಧರ್ಮದ ನಿಯಮಗಳನ್ನು ಇತರರಿಗೆ ತೊಂದರೆಯಾಗದಂತೆ ಆಚರಿಸಲು ಸ್ವಾತಂತ್ರ್ಯವು ದೊರೆಯುವದಲ್ಲದೆ [illegible] ಅಸ್ಪೃಶ್ಯತೆಯನ್ನು ಇಟ್ಟುಕೊಳ್ಳಬೇಕೆಂಬ [illegible] ಕೂಡ ತಾನು [illegible] ಬೇರೆ ಇದು [illegible] ಸರ್ಕಾರದವರು [illegible] ಬಲತ್ಕಾರ ಪಡಿಸುವಂತಿಲ್ಲವೆಂದು ಮಹಾತ್ಮಾಜಿಯವರು ಮೊನ್ನೆ ತಾನೇ 'ಯಂಗ್ ಇಂಡಿಯಾ'ದಲ್ಲಿ ಆಶ್ವಾಸನೆ ಕೊಟ್ಟಿರುವರು. ಕಡಮೆ ಸಂಖ್ಯಾತರಿಗೆ—ಹಿಂದುಳಿದ ಸಮಾಜಗಳಿಗೆ—ಬಡ ರೈತರಿಗೆ—ಮಜೂರರಿಗೆ—ಇವರೆಲ್ಲರಿಗೂ ಸ್ವರಾಜ್ಯದಲ್ಲಿ ತಮ್ಮ ಪೂರ್ಣ ಬೆಳವಣಿಗೆಯನ್ನು ಹೊಂದಲು ಅನುಕೂಲವಾಗುವದೆಂಬುದನ್ನು ಕರಾಚಿ ಕಾಂಗ್ರೆಸ್ಸಿನಲ್ಲಿ ಮಂಜೂರಾದ ಪ್ರಜೆಗಳ ಮೂಲಭೂತ ಹಕ್ಕುಗಳ ವಿವರವನ್ನು ಸ[illegible] ಪ್ರಚಾರಗೊಳಿಸುವುದರಿಂದ ಎಲ್ಲರಿಗೂ ಸ್ಪಷ್ಟಗೊಳಿಸಬಹುದು.

ಗ್ರಾಮ—ಗ್ರಾಮಗಳಲ್ಲಿ ಪಂಚಾಯತಿ ಸ್ಥಾಪನೆ, ರಾಷ್ಟ್ರಕ್ಕೆ ಯೋಗ್ಯವೆನಿಸುವ ಶಿಕ್ಷಣ ಪ್ರಸಾರ ಮೊದಲಾದುವುಗಳಿಂದ ಗ್ರಾಮ ಸಂಘಟನೆಯನ್ನು ಸಾಧಿಸುವುದು ನಮ್ಮ ಕಾರ್ಯಕ್ರಮದಲ್ಲಿಯ ಇನ್ನೊಂದು ಮುಖ್ಯ ವಿಷಯವಿರುತ್ತದೆ. ಗ್ರಾಮ ಜೀವನವೇ ಪ್ರಧಾನವಾಗಿರುವ ಈ ದೇಶದಲ್ಲಿ ಈ ಕಾರ್ಯಕ್ಕೆ ಎಷ್ಟು ಮಹತ್ವವಿದೆಯೆಂಬುದನ್ನು ಪುನಹ ವರ್ಣಿಸುವ ಅವಶ್ಯಕತೆ ಇಲ್ಲ.

ಹಿಂದೀ ಪ್ರಚಾರ.

ರಾಷ್ಟ್ರಭಾಷೆಯಾದ ಹಿಂದೀ ಭಾಷೆಯ ಪ್ರಚಾರಕ್ಕಾಗಿ ಕನ್ನಡಿಗರು ಯತ್ನಿಸಬೇಕು. ಇದೇ ರೀತಿ ಕಳೆದ ಸಂಗ್ರಾಮದ ಯಶಸ್ಸಿಗೆ ಬಲು ಮಟ್ಟಿಗೆ ಕಾರಣರಾಗಿ ಎಚ್ಚರಗೊಂಡಿರುವ ಸ್ತ್ರೀಸಮಾಜವನ್ನು ವ್ಯವಸ್ಥಿತಗೊಳಿಸಿ ಅವರ ಕಡೆಯಿಂದ ಸ್ತ್ರೀಸಮಾಜದ ಉನ್ನತಿಯನ್ನೂ, ದೇಶದ ಉನ್ನತಿಯನ್ನೂ ಸಾಧಿಸುವಂಥ ಕಾರ್ಯವು ನೆರವೇರುವಂತೆ ಪ್ರಯತ್ನಿಸುವದೂ ನಮ್ಮ ಭಾಗ್ಯದ ಕಾರ್ಯಗಳಲ್ಲೊಂದಾಗಿರುವುದು.

ಹೀಗೆ ಸಂಕ್ಷೇಪದಲ್ಲಿ ನಿರೂಪಿಸಿರುವ ಈ ವಿಧಾಯಕ ಕಾರ್ಯಕ್ರಮವನ್ನು ಬಲವತ್ತರವಾಗಿ ಅಖಿಲ ಕರ್ನಾಟಕವು ಮುಂದೊತ್ತಬೇಕು. ಇತ್ತೀಚೆಗೆ ಆರ್ಥಿಕ ಸಂಕಷ್ಟಗಳಿಗೆ ಸಿಲುಕಿರುವ ಸಿರಸಿ, ಸಿದ್ದಾಪುರ, ಹಿರೇಕೆರೂರು ಮೊದಲಾದ ಪ್ರದೇಶದವರನ್ನು ಮರೆಯದೆ ಅವರಿಗೆ ಬೇಕಾದ ಸಹಾಯವನ್ನು ಕೂಡಲೇ ಒದಗಿಸಬೇಕು. ಪರಸ್ಪರ ಬೆಂಬಲದಿಂದ ಜಿಲ್ಲೆ ಜಿಲ್ಲೆಗಳೊಳಗಿನ ಭೇದಗಳನ್ನು ಮರೆತು ಪರಸ್ಪರ ಸೌಹಾರ್ದದಿಂದ ಅಖಂಡ ಕರ್ನಾಟಕದ ದೃಷ್ಟಿಯಿಂದ ಈ ಕಾರ್ಯಕ್ರಮಗಳನ್ನು ಮುಂದೊತ್ತಲು ಯತ್ನಿಸಿದರೆ ಈ ಕಾರ್ಯಸಾಧನೆಯಾಗುವಾಗಲೆ ಕರ್ನಾಟಕದ ನಿಜವಾದ ಏಕೀಕರಣವು ಸಾಧಿಸಲ್ಪಡುವುದು. ಹೃದಯದ ಸಂಬಂಧವನ್ನು ಪರಕೀಯ ರಾಜ ಸತ್ತೆಯು ಛೇದಿಸಲಾರದು. ಮುಂದಿನ ರಾಜ್ಯಘಟನೆಯಲ್ಲಿ ಕರ್ನಾಟಕವು ಏಕರಾಜ್ಯವಾಗುವುದು ಸಿದ್ಧವಿರುವ ಮಾತಾಗುವುದರಿಂದ ಅದರ ಬಗ್ಗೆ ಚಿಂತೆಯನ್ನು ತಳೆದ ಮೇಲೆ ನಾನು ಸವಿಸ್ತರವಾಗಿ ನಿವೇದಿಸಿದಂತೆ ಕಾಂಗ್ರೆಸ್ ಕಾರ್ಯವನ್ನು ಸಾಧಿಸುವಾಗ ಪರಸ್ಪರ ಸೌಹಾರ್ದವನ್ನು ಬೆಳಸಿ ನಿಜವಾದ ಕರ್ನಾಟಕದ ಏಕೀಕರಣವನ್ನು ಪ್ರಯತ್ನಿಸುವುದು ಕೆಲಸಗಾರರ [illegible] ಎಂದು ನನ್ನ ನಮ್ರತೆಯಿಂದ ಸೂಚಿಸಬಯಸುತ್ತೇನೆ.

[illegible] ದಲ್ಲಿ ಕರ್ನಾಟಕವು ತನಗೆ ಯೋಗ್ಯವೆನಿಸುವಂಥ ಭಾಗವನ್ನು ವಹಿಸಿ, ಈ ಕಾರ್ಯಕ್ರಮದಲ್ಲಿ [illegible] ಕರ್ನಾಟಕದ [illegible] ಪೂರ್ಣವಾಗಿ ಸಹಕರಿಸಬೇಕಾಗಿ ವಿಜ್ಞಾಪಿಸಿ, ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ನನಗೆ ಕೊಟ್ಟಿರುವ ಅಧ್ಯಕ್ಷ ಪದವಿಯ ಕರ್ತವ್ಯಭಾರವನ್ನು ವಹಿಸಲು ಕರ್ನಾಟಕದ ಎಲ್ಲಾ ಕೆಲಸಗಾರರೂ ಕೈಕೊಟ್ಟು ಸಹಾಯ ಮಾಡಬೇಕಾಗಿ ಬೇಡಿಕೊಂಡು ಈ ನನ್ನ ಚಿಕ್ಕ ಬಿನ್ನಹವನ್ನು ಕನ್ನಡಿಗರ ಮುಂದಿರಿಸುವೆನು.

ಸದಾಶಿವರಾವ್ ಕಾರ್ನಾಡ,
ಅಧ್ಯಕ್ಷ, ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿ.

ಕೊಡಗಿನ ಚರಿತ್ರೆಯ ಒಂದು ನೋಟ.

(2ನೇ ಪುಟದಿಂದ ಮುಂದುವರಿದದ್ದು.)

(ಕೊಡಗನ್ನು ಬ್ರಿಟಿಷರ ಅಧೀನಕ್ಕೆ ತೆಗೆದುಕೊಂಡದ್ದಕ್ಕೆ ಸಮಾಧಾನ ಕೊಡುವ ಕಾರ್ಟನ್‌ರವರು ಹೇಳಿರುವದೇನೆಂದರೆ,—"ಗೆದ್ದ ಪ್ರಾಂತ್ಯವನ್ನು ಬ್ರಿಟಿಷ ಪ್ರಾಂತ್ಯಕ್ಕೆ ಸೇರಿಸಿಕೊಂಡದ್ದನ್ನು ಚೆನ್ನಾಗಿ ವಿಚಾರಿಸಿ ನೋಡಬದ್ಧರೆ ತಕ್ಕಷ್ಟು ಕಾರಣವಿದ್ದಂತೆ ತೋರುವುದಿಲ್ಲ. ಆದರೆ ಕೆಲವು ವಿವರಣೆಯನ್ನು ಕೊಟ್ಟರೆ ಈ ಸಂದರ್ಭದಲ್ಲೂ ಸಹ ಸರಿಯಾದದ್ದನ್ನೇ ಮಾಡಲಾಯಿತೆಂತ ತಿಳಿಯುತ್ತದೆ. ರಾಜನಿಗೆ ಮಕ್ಕಳಿರಲಿಲ್ಲ. (ಇದು ನಿಜವಲ್ಲ. ಯಾಕೆಂದರೆ—ರಾಜನ ಮಗಳೊಬ್ಬಳು ಇಂಗ್ಲಿಷ ಗೃಹಸ್ಥನೊಬ್ಬನನ್ನು ಮದುವೆಯಾದಳು) ಮತ್ತು ತನ್ನಿಂದಲ್ಲದೆ ಬೇರೆ ಯಾವ ವಿಧದಿಂದಲೂ ಕೊಡಗಿನ ರಾಜ ಪದವಿಗೆ ಹಕ್ಕುದಾರರಿಲ್ಲದಂತೆ ಮಾಡಲು ತಕ್ಕ ಏರ್ಪಾಡು ಮಾಡಿಕೊಂಡಿದ್ದನು. ಖಾಲಿಯಾದ ಸಿಂಹಾಸನಕ್ಕೆ ಹಕ್ಕುದಾರರಿಲ್ಲ. ರಾಜ್ಯವನ್ನು ಆಕ್ರಮಿಸಿಕೊಂಡ ಸರಕಾರವೇ ದೇಶದ [illegible] ಮಾಡಬೇಕಾಯಿತು. ರಾಜ ವಂಶಕ್ಕೆ ಸಂಬಂಧವಿಲ್ಲದವನನ್ನು ಸಿಂಹಾಸನದಲ್ಲಿ [illegible] ಬಹುದಿತ್ತು. ಆದರೆ ಅಷ್ಟೆಲ್ಲಾ ಸ್ವಾರ್ಥ ತ್ಯಾಗಕ್ಕೆ ಕಾರಣವಿರಲಿಲ್ಲ. ಮುಖ್ಯವಾಗಿ ದೇಶದ ಜನರು ಬ್ರಿಟಿಷ ಪ್ರಜೆಗಳಾಗಲು ಬಲವಾದ ಅಪೇಕ್ಷೆಯನ್ನು ಸೂಚಿಸಿದಾಗ ಸ್ವಾರ್ಥ ತ್ಯಾಗಕ್ಕೆ ಏನೂ ಕಾರಣವಿಲ್ಲ. ಜನರ ಈ ಅಭಿಲಾಷೆಯಿಂದ ಬ್ರಿಟಿಷರು ಹಿಂದು ಮುಂದು ನೋಡಬೇಕಾದ ಕಾರಣವೂ ಇಲ್ಲದಾಯಿತು.)

ಕೊಡಗಿನ ರಾಷ್ಟ್ರೀಯ [illegible] ಈ ಕೆಳಗಿನ ನಾಕೀಲಾತಿಯನ್ನು ಹೊರಡಿಸಿದರು —

ಕೊಡಗಿನ ನಿವಾಸಿಗಳ ಒಗ್ಗಟ್ಟಿನ ಅಭಿಪ್ರಾಯದ ಮೇರೆ ಬ್ರಿಟಿಷ ಸರಕಾರದ ಅಧೀನಕ್ಕೆ ಸೇರಿಸಿಕೊಳ್ಳಬೇಕಂತ ಬಿದ್ದುದರಿಂದ ಗವರ್ನರ್ ಜನರಲ್ ಸಾಹೇಬರು ವೀರರಾಜೇಂದ್ರ ಒಡೆಯನಿಂದ ಆಳಲ್ಪಡುತ್ತಿದ್ದ ರಾಜ್ಯವನ್ನು ಕಂಪೆನಿಗೆ ಸೇರಿಸಿಕೊಳ್ಳಲು ತೀರ್ಮಾನಿಸಿರುತ್ತಾರೆ. (ಕೊಡಗಿನ) ನಿವಾಸಿಗಳನ್ನು ಇನ್ನು ಮೇಲೆ ದೇಶೀಯರ ಆಡಳಿತಕ್ಕೆ ಒಳಪಡಿಸುವದಿಲ್ಲವೆಂತಲೂ, ಅವರ ಹಕ್ಕುಗಳನ್ನೂ, ಧರ್ಮವನ್ನೂ ಕಾಪಾಡಲಾಗುತ್ತದೆಯೆಂತಲೂ, ಅವರ ಕ್ಷೇಮ, ಅನುಕೂಲ ಮತ್ತು ಸುಖವನ್ನು ಹೆಚ್ಚಿಸಲು ಬ್ರಿಟಿಷ ಸರಕಾರವು ಯಾವಾಗಲೂ ಇಷ್ಟೆಯುಳ್ಳದ್ದಾಗಿರುತ್ತದೆ ಎಂತಲೂ ಕೊಡಗಿನ ನಿವಾಸಿಗಳಿಗೆ ಈ ಮೂಲಕ ವಾಗ್ದಾನ ಕೊಡಲಾಗಿದೆ

ಮಿ ಬೌರಿಂಗರು ಬರೆಯುತ್ತಾರೆ—

'ಗೆಲ್ಲಲ್ಪಡದೆ ಜನರು ಒಪ್ಪಿಕೆಯಿಂದ ಬ್ರಿಟಿಷರ ಅಧೀನಕ್ಕೆ ಬಂದ ಹಿಂದೂಸ್ಥಾನದ ಅತಿ ಸ್ವಲ್ಪ ಸಂಖ್ಯೆ ಪ್ರಾಂತ್ಯಗಳಲ್ಲಿ ಕೊಡಗು ಒಂದಾಗಿದೆ. ಬಹುಶಃ ಈ ಕಾರಣದಿಂದಲೇ 1834ರಲ್ಲಿ ಈ ದೇಶದವರು ಅಂಗೀಕರಿಸಿಕೊಂಡ ಸರ್ಕಾರವು ಇವರಿಗೆ ಪದೇ ಪದೇ ರಿಯಾಯಿತಿ ತೋರಿಸಿರುವುದಲ್ಲದೆ, ಅವರ ಮನಸ್ಸಿನ ಭಾವವನ್ನೂ, ಅಭಿಪ್ರಾಯವನ್ನೂ ಗೌರವಿಸುತ್ತಲಿದೆ. ಉದಾಹರಣೆಗಾಗಿ ಈ ದೇಶದಲ್ಲಿ ದೇಶ ನಿವಾಸಿಗಳ ಆಕ್ಷೇಪಣೆ ಇರುವ ವರೆಗೆ ಗೋಹತ್ಯೆ ಮಾಡುವುದಿಲ್ಲವೆಂತ ದೇಶವನ್ನು ಬ್ರಿಟಿಷ ಸರ್ಕಾರಕ್ಕೆ ಸೇರಿಸಿಕೊಳ್ಳುವಾಗ ಕರ್ನಲ್ ಫ್ರೇಸರ್ ಕೊಟ್ಟ ವಾಗ್ದಾನದ ಮೇರೆ ದನಗಳನ್ನು ಕೊಲ್ಲುತ್ತಲೂ ಇಲ್ಲ, ಕೊಲ್ಲುವುದೂ ಇಲ್ಲ, ಎಂಬದನ್ನು ತೋರಿಸಬಹುದು."

ಕೊಡಗನ್ನು ಗೆಲ್ಲಲಿಲ್ಲವೆಂತ ಒಪ್ಪುತ್ತಾರೆ. ಆದ್ದರಿಂದ ಕೊಡಗಿನ ನಿವಾಸಿಗಳು ಇಂಗ್ಲೆಂಡಿನ ಅಡಿಯಾಳುಗಳಲ್ಲ. ಆದರೂ ಕೊಡಗಿನವರು ಸ್ವತಂತ್ರ ಪ್ರಜೆಗಳ ಹಕ್ಕುಗಳನ್ನೂ, ಅನುಕೂಲಗಳನ್ನೂ ಅನುಭವಿಸುತ್ತಲಿದ್ದಾರೆಯೋ?

ಕೊಡಗಿನವರ ಹಕ್ಕುಗಳನ್ನು ಸರ್ಕಾರವು ಗೌರವಿಸುತ್ತದೆಯೆಂತ ಗಂಭೀರವಾಗಿ ಒಪ್ಪಲಾಗಿದೆ. ಈ ವಾಗ್ದಾನಕ್ಕೆ ವಿರೋಧವಾಗಿ ಸರ್ಕಾರಕ್ಕೆ ಕೊಡುವ ಭೂಮಿ ತೆರಿಗೆಯನ್ನು ಹಣದ ರೂಪದಲ್ಲಿ ಕೊಡಬೇಕೆಂತ ಕೇಳಿದಾಗ ಹಕ್ಕುಗಳಿಗೆ ವಿರೋಧವಾಗಿ ನಡೆಯಲಿಲ್ಲವೇ? ರೆವರೆಂಡ್ ಡಾಕ್ಟರ್ ಮೊಗ್ಲಿಂಗ್‌ರು ಹೇಳುತ್ತಾರೆ:—

"ರಾಜರ ಕಾಲದಲ್ಲಿ ಕಂದಾಯವನ್ನು ಧಾನ್ಯದ ರೂಪದಲ್ಲೇ ಕೊಡುತ್ತಿದ್ದರು. ಮುಂಗಳೂರಿನ ಕಲೆಕ್ಟರವರು ಹಣದ ರೂಪದಲ್ಲಿ ತೆರಿಗೆಯನ್ನು ಕೊಡಬೇಕೆಂತ ಕೇಳಿದರು. [illegible] ರಿಂದ ರೈತರು ಹಣಗಾರರ ಬಳಿಗೆ ಬೀಳಬೇಕಾದ್ದರಿಂದ ಇದನ್ನು ರೈತರು ವಿರೋಧಿಸಿದರು'

ಒಂದು ಕಾಟಕಾಯಿಯಾಯಿತು. ಇದನ್ನು ದಬ್ಬಾಳಿಕೆಯಿಂದ ಅಡಗಿಸಲಾಯಿತು.

[illegible] ಕೊಡಗು ನಿವಾಸಿಗಳ ಹಕ್ಕನ್ನು ಮನ್ನಿಸಿದ್ದು)

[illegible] ರಾಜನಿಗೆ ಈಸ್ಟ್ ಇಂಡಿಯಾ ಕಂಪೆನಿಯವರು [illegible] ಲಾರ್ಡ [illegible] ಬೆಂಟಿಂಕರು ಜವಾಬ್ದಾರರು. ಈ ಹಣಕ್ಕೆ ಪರಿಹಾರ ಪಡೆಯುವುದಕ್ಕಾಗಿ ರಾಜನು ಇಂಗ್ಲೆಂಡಿಗೆ ಹೋದನು. ರಾಜನು ಕೊಟ್ಟ ತೊಂದರೆಗಳನ್ನು ಅವರ ಕಷ್ಟಗಳನ್ನೂ ಇಲ್ಲಿ ವಿಸ್ತಾರವಾಗಿ ಹೇಳಬೇಕಾಗಿ[illegible]

ಇಂಗ್ಲಿಷ್ ಜನರು ವಸತಿ ಮಾಡಿಕೊಳ್ಳಲು ಅನು[illegible]ವಾದ ಪ್ರಾಂತ್ಯವಾದ್ದರಿಂದ ಬ್ರಿಟಿಷ ಅಧೀನಕ್ಕೆ ಸೇ[illegible] ಕೊಂಡರು. ಕೊಡಗಿನಲ್ಲಿ ಕಾಫಿ ಪ್ಲಾಂಟರ್‌ಗಳಾಗಿ [illegible] ಸನೆಯಾದ ಇಂಗ್ಲಿಷ್ ಜನರ ಸಂಖ್ಯೆ ಬಹಳ ದೊಡ್ಡದು. [illegible] ತ್ತು ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಕ್ಕಿಂತಲೂ ಇಲ್ಲಿ [illegible] ಚ್ಚು ಕಾಫಿ ವ್ಯವಸಾಯವಿರುವುದಾಗಿದೆ. 1904—5ರ [illegible] ದ ಮೇರೆ ಕೊಡಗಿನಲ್ಲಿ 48,142 ಏಕರು ಕಾಫಿ ವ್ಯವಸಾ[illegible] ದ ಜಾಗವಿದೆ. ಮಿ. ಬೌರಿಂಗರು ಬರೆದಿದ್ದಾರೆ.—

"ಕೊಡಗಿನ ಜನರ ತಿಳುವಳಿಕೆಯು ಹೆಚ್ಚಬೇಕಾದ[illegible] ಹೆಚ್ಚದೆ ಇದ್ದರೂ ಜನರ ಆರ್ಥಿಕ ಅಭಿವೃದ್ಧಿಯು ಬಹು ಶೀಘ್ರವಾಗಿದೆ. ಇದಕ್ಕೆ ಕಾಫಿ ಪ್ಲಾಂಟರುಗಳು ಈ ದೇ[illegible] ನ್ನು ತಮ್ಮ ವಸತಿಯಾಗಿ ಮಾಡಿಕೊಂಡು ತುಂಬಾ ಕಾ[illegible] ಳೆಸಲು ಪ್ರಾರಂಭಿಸಿದ್ದೇ ಕಾರಣ. ಈ ದೇಶದ ಫಲವತ್ತಾ[illegible] ಕಾಡುಗಳು ಈ ದೇಶವನ್ನು ವಸತಿ ಮಾಡಿಕೊಂಡು ಮೆ[illegible] ತ್ತು ಮಾಡುವವರಿಗೆ ಒಳ್ಳೇ ಫಲದಾಯಕವಾಗಿವೆ.

ಕೊಡಗಿನಲ್ಲಿ ಯೂರೋಪಿಯನರು ವಸತಿಗೆ ಪ್ರಾ[illegible] ಸಿ ಕಾಫಿ ವ್ಯವಸಾಯ ಸುರುಮಾಡಿದಂದಿನಿಂದ ಕಾಡಿಗೆ [illegible] ದು ಹೊಸ ಬೆಲೆ ಬಂತು. ಆದರೆ ಸುರುವಿನಲ್ಲಿ ಸ್ವಂತ ಹಿ[illegible] ಳಿಯಲ್ಲದ ದೇವರಿಗೆ ಸೇರದ ಕಾಡುಗಳು ಕೇಳಿದವರಿಗೆ [illegible] ತ್ತಿತ್ತು. ಸರಕಾರದಿಂದ ಸರಿಯಾದ ಹಕ್ಕು ಪಡೆಯಲು ಹೆ[illegible] ತೊಂದರೆ ತೆಗೆದುಕೊಳ್ಳುತ್ತಿರಲಿಲ್ಲ. ಸರಕಾರಕ್ಕೆ ಕಂ[illegible] ಯ ಕೊಡಲು ಒಪ್ಪಿದರೆ ಕಾಫಿ ವ್ಯವಸಾಯಕ್ಕೆ ಬಿಡುತ್ತಿದ್ದ[illegible]

ಇಷ್ಟು ತಿಳಿದ ಮೇಲೆ ಕೊಡಗಿನ ನಿವಾಸಿಗಳು ಇ[illegible] ಷರ ಸಂರಕ್ಷಣೆಗೆ ಒಳಪಡಲು ಒಗ್ಗಟ್ಟಿನಿಂದ ಒಪ್ಪಲಿಕ್ಕೆ [illegible] ಣವೇನೆಂತ ಆಶ್ಚರ್ಯಪಡಬೇಕಾಗಿಲ್ಲ."

ಸೂಚನೆ—ಲಾರ್ಡ್ ವಿಲಿಯಮ್ ಬೆಂಟಿಂಕರ ಇಂ[illegible] ನ್ ಆಳ್ವಿಕೆಯ ಕುರಿತು ಮೋಹರ್ [illegible] ವ್ಯೂ ವಿನ 1918ನೇ [illegible] ಸ್ಟ ಆಗಸ್ಟ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಲೇಖನ[illegible] ದ ಕೊಡಗಿಗೆ ಸಂಬಂಧಪಟ್ಟ ಭಾಗವನ್ನು ಮಾತ್ರ ಉ[illegible] ರಾಗಿದೆ. ಕೊಡಗನ್ನು ಬ್ರಿಟಿಷರ ಸ್ವಾಧೀನಕ್ಕೆ ತೆಗೆದುಕೊ[illegible] ಡಾಗ ಏನೇನು ನಡೆಯಿತು, ಯಾರ ಯಾವ ವಾಗ್ದಾ[illegible] ಕೊಡಲ್ಪಟ್ಟದ್ದವು ಎಂಬದನ್ನು ಸರಿಯಾಗಿ ತಿಳಿದುಕೊಳ್ಳ[illegible] ಸಹಾಯವಾಗುವುದರಿಂದ ಈ ಲೇಖನವನ್ನು ಕನ್ನಡದಲ್ಲಿ [illegible] ಪ್ರಕಟಿಸಿರುವದಾಗಿದೆ. ಸಂ. ಕೊ.]

NOTICE.

A pure bred Scindhi breeding bull of the following description will be sold by public auction by the undersigned on Friday the 24 July 1931 at 12 noon in front of the Mercara [illegible] office. The bull is the produce of the Imper[ial] Institute of Animal Husbandry and Dairying Bangalore, with a good record. It is a use[ful] dual purpose animal i. e., both for milk and wo[rk] and is most suited to improve the breed [of] cattle in Coorg

DESCRIPTION.

Age—Five.
Colour—Red.
Height—4 feet 9 inches (including hump)
Length—6 feet 8 inches
Girth—6 feet·

M. S. MANDANNA.
7—7—31 Deputy Director,
Land Records and Agriculture, Coo[rg]

ನೋಟೀಸು.

ಈ ಕೆಳಗೆ ವಿವರಿಸಿರುವ ಸಿಂಧೀ ದೇಶದ ಶುದ್ಧ [illegible] ಯ ಐದು ವರ್ಷ ಪ್ರಾಯದ ಬೀಜದ ಹೋರಿ ಒಂದು [illegible] ಳಗೆ ಸೈನು ಮಾಡಿದವರ ಮುಂದೆ ಇದೇ ಜುಲೈ ತಾ 24[illegible] ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಮಡಿಕೇರಿ[illegible] ಡು ಖಚೇರಿ ಮುಂದೆ ಪಬ್ಲಿಕ್ ಹರಾಜಿನಲ್ಲಿ ಮಾರಲ್ಪಡು[illegible] ದು. ಈ ಹೋರಿಯು ಬೆಂಗಳೂರಿನಲ್ಲಿರುವ ಇಂಡಿಯ[illegible] ಸರ್ಕಾರದ ಡೈರಿ ಫಾರಮಿನಲ್ಲಿ ಹುಟ್ಟಿ ಬೆಳೆದು ಹೆಸರು[illegible] ಪಡೆದಿದೆ. ಈ ಜಾತಿಯು ಹಾಲಿಗೂ, ಕೆಲಸಕ್ಕೂ ಸಹ [illegible] ಖ್ಯಾತಿಗೊಂಡಿದೆ. ಕೊಡಗಿನ ದನಗಳ ತಳಿ ಅಭಿವೃದ್ಧಿ ಪ[illegible] ಲಿಕ್ಕೆ ಅತ್ಯುತ್ತಮವಾದದು.

ವಿವರ.

ವಯಸ್ಸು—ಐದು.
ವರ್ಣ—ಬಂಪು.
ಎತ್ತರ—4 ಅಡಿ 9 ಇಂಚು (ಹಿಮಳು ಸೇರಿ)
ಉದ್ದ—6 ಅಡಿ 8 ಇಂಚು.
ಸುತ್ತಳತೆ—6 ಅಡಿ.

ಯಂ. ಯಸ್. ಮಂದಣ್ಣ
7—7—31. ಡಿಪ್ಯುಟಿ ಡೈರೆಕ್ಟರ್,
2—1 ಲ್ಯಾಂಡ್ ರೆಕಾರ್ಡ್ ಮತ್ತು ಅಗ್ರಿಕಲ್ಚ[illegible]

ವರ್ತಮಾನ ಸಂಗ್ರಹ.

ಒ ಳ ದೇ ಶ.

28ನೇ ಆದಿತ್ಯವಾರ ಪೊನ್ನಂಪೇಟೆ ಕೊಡವ [illegible] ಸಂತೆ ವಹಿಸಿಕೊಳ್ಳುವ ಧ್ವಜಾರೋಹಣ [illegible] ...

[illegible] ದ ಪ್ರೇಜರ್‌ಪೇಟೆಯಲ್ಲಿ ಒಬ್ಬನಿಗೆ ಪ್ಲೇಗು ಬಂ [illegible] ಕಿರುಗೂರು ಗ್ರಾಮದಲ್ಲಿ ನಾಲ್ಕೈದು [illegible] ಲುಂಬಾಯಿತೆಂದೂ ತಿಳಿಯ ಬರುತ್ತದೆ.

ಕೋದಂಡ ಪಯ್ಯಣ್ಣನವರು ರಿಟಯರ್ ಆದ [illegible] ಬಿಟ್ಟಿರುವ ದಕ್ಷಿಣ ಕೊಡಗು ಪೊಲೀಸು ಇ [illegible] ದ್ದೆಯು ಭರ್ತಿ ಮಾಡಲ್ಪಡದೆ ತಾತ್ಕಾಲಿಕ ಏರ್ಪಾಡಾಗಿ ವರ್ತಮಾನವಿದೆ.

[illegible] ಮಡಿಕೇರಿಯಲ್ಲಿ ಮಳೆ ಬಿರುಸು [illegible] ಇಂದಿನ ವರೆಗೆ 5.83 ಇಂಚು ಮಳೆಯಾಗಿದೆ [illegible] ದು ದಿನಗಳಿಂದ ಕಳೆದ ವಾರ ಮಳೆ ಜೋರಾ [illegible] ವಾಗ ಕಡಿಮೆಯಾಗಿರುವುದು ವರ್ತಮಾನ.

[illegible] ಸೋಮವಾರ ಸಾಯಂಕಾಲ ಸಾಹುಕಾರ್ [illegible] ಥಿಗಳು ಹಾಕಿ ಆಟ ವಿದ್ಯಾರ್ಥಿ ಕ್ಲಬ್ಬಿಗೆ [illegible] ಗಳಿ ಮೆ ಒಡುವಂಡ ಗಣಪತಿಯವರ ಮಗ [illegible] ಎರಡು ಗೋಲುಗಳನ್ನು ಹೊಡೆದು [illegible] ಲು ವ್ಯಸನಪಡುತ್ತೇವೆ.

[illegible] ಇಸವಿ ಜನವರಿ ತಾರೀಖು 4ರಲ್ಲಿ ಡೆಲ್ಲಿ ಮ [illegible] ಸಿನಲ್ಲಿ ಪ್ರಾರಂಭವಾಗುವ ಇಂಡಿಯನ್ ಸಿವಿಲ್ [illegible] ರ್ಥಿಯ ಪರೀಕ್ಷೆಗೆ ಕೊಡಗಿನಿಂದ ಹೋಗಲು ಇ [illegible] ಕಮಿಷನರವರ ಮುಖಾಂತರ ಚೀಫ್ ಕಮಿಷನರಿ [illegible] ನ್ನು ತಾ. 15 ರೊಳಗೆ ಅರ್ಜಿ ಕಳುಹಿಸಬೇಕೆಂ [illegible] ಪ್ರಕಟಿಸಲ್ಪಟ್ಟಿದೆ. ಇದಕ್ಕೆ ಸಂಬಂಧಿಸಿ [illegible] ನಮ್ಮ ಆಫೀಸಿನಲ್ಲಿ ನೋಡಬಹುದು. [illegible]

[illegible] ಬಾಯಿ ಶಿಬಿರದಲ್ಲಿ ಹಿಂದೂಸ್ಥಾನೀ ಸೇವಾದಳ [illegible] ಗಳ ತರಬೇತು ಹೊಂದುತ್ತಿದ್ದ ಶ್ರೀಯುತ ಕೊಡಗಿನ [illegible] ರ ತಮ್ಮಯ್ಯನವರು ಮತ್ತು ಮಡಿಕೇರಿಯಿಂದ [illegible] ನವರು ಅಲ್ಲಿಯ ತರಬೇತನ್ನು ಮುಗಿಸಿ, ಪಂಡಿತ [illegible] ಲಾಲ್‌ರವರ ಅನುಮತಿಯಿಂದ ಕವಾಯಿದು ತರಬೇತಿನ [illegible] ನ್ನು ಮಹಾತ್ಮ ಗಾಂಧಿಯವರ ಹಸ್ತದಿಂದ ಪಡೆ [illegible] ಮುಂದಿನ ತರಬೇತಿಗಾಗಿ ಬಾಗಲಕೋಟೆಗೆ ಹೋ [illegible] ಕೇಳಿ ಸಂತೋಷ ಪಡುತ್ತೇವೆ.

[illegible] ಸಬ್ ಇನ್‌ಸ್ಪೆಕ್ಟರುಗಳಾದ ಪಿ. ಕೋದಂಡ [illegible] ವರು ಮಡಿಕೇರಿಯಿಂದ ವೀರರಾಜಪೇಟೆಗೂ ಮಿ [illegible] ದ ಗಣಪತಿಯವರು ವೀರರಾಜಪೇಟೆಯಿಂದ ಪೊ [illegible], ಮೆ. ಕಲಿಯಂಡ ಮುತ್ತಣ್ಣನವರು ಪೊನ್ನಂಪೇ [illegible] ಮಡಿಕೇರಿ ಟೌನ್ ಸ್ಟೇಶನಿಗೂ, ಮೆ. ಚೆಂದ್ರಿ [illegible] ಮುತ್ತಣ್ಣನವರು ಮಡಿಕೇರಿಯಿಂದ ಸೋಮವಾರಪೇ [illegible]. ಕಂಡ್ರತಂಡ ಕಾರ್ಯಪ್ಪನವರು ಸೋಮವಾರ [illegible] ಪೇಟೆಗೆ ಪ್ರಾಸಿಕ್ಯೂಟಿಂಗ್ ಕೆಲಸಕ್ಕೆ [illegible] ಕೇರಿಯಿಂದ ಚಿಣ್ಣಪ್ಪನವರು ವೀರಾಜಪೇಟೆಯಿಂದ [illegible] ಪ್ರಾಸಿಕ್ಯೂಟಿಂಗ್ ಕೆಲಸಕ್ಕೂ, ಮತ್ತು ಮೆ. [illegible] ಯಿಂದ ಬೆಳ್ಳಿಯಪ್ಪನವರು ಮಡಿಕೇರಿ ಟ್ರೈನಿಂಗ್ ಸ್ಕೂ [illegible] ತಿಲೋಕ ಸ್ಟೇಶನಿಗೂ ವರ್ಗಾಯಿಸಲ್ಪಟ್ಟ [illegible] ತಿಳಿಯ ಬರುತ್ತದೆ.

ಹಿಂ ದೂ ದೇ ಶ.

[illegible] ವಾರ ಪಂಜಾಬಿನ ಸರಿಹದ್ದಿನ ಆದೇಶದಂ [illegible] ... [illegible] ... ತಂದಿಟ್ಟಿದ್ದಾರೆ [illegible]

[illegible] ಬುಗಳನ್ನು ತಯಾರಿಸಲು ಎಲ್ಲಿಂದಲೋ ಹೇ [illegible] ಚಿತ್ತಗಾಂಗಿನ ಗಣಿ ವರ್ಷ ಪ್ರಾಯದ ನಾರಾ [illegible] ರಾದ ಚೌಧರಿ ಎಂಬ ಯುವಕನಿಗೆ ಇ ವರ್ಷದ [illegible] ಶಾಲೆಯ ಶಿಕ್ಷೆಯಾಯಿತು.

[illegible] ಟ್ರೆಂಚ್‌ಮೆಂಟ್ ಕಮಿಟಿಯವರ ಸಲಹೆಗಳನ್ನು ಮದ [illegible] ರವು ಒಪ್ಪಿದೆ. ಸನ್ನದಿಲ್ಲದ ನೌಕರ [illegible] ನೌಕರರ ಸಂಬಳವನ್ನು ಶೇಕಡ [illegible] ಕಡಿಮೆ [illegible] ಅಧಿಕಾರಿಗಳಿಗೆಲ್ಲ ತಿಳಿಸಿದರಂತೆ.

[illegible] ಲಯ ಪರ್ವತದ ಶಿಖರಗಳಲ್ಲಿ 25,447 ಅಡಿ ಎತ್ತ [illegible] ಮೌಂಟ್ ಕಾಮೆತ್ ಎಂಬ ದುರ್ಘಟನಾದ ಶಿಖರ [illegible] ಇಂಗ್ಲಿಷ್ ಜನರು ಹತ್ತಿದರಂತೆ. ಇದುವರೆಗೆ [illegible] ಮನುಷ್ಯರಾರೂ ತಲಪಿರಲಿಲ್ಲವೆಂದ ಕೇಳಿದು [illegible]

[illegible] ಟ್ರೆಂಚ್‌ಮೆಂಟ್ ಕಮಿಟಿಯ ಸೂಚನೆಯಂತೆ ಮದರಾ [illegible] ಕ್ಕದ 'ಕರಾವಳಿಗಳಲ್ಲಿನ ಕಸ್ಟಮ್ಸ್ ಇಲಾಖೆಯಲ್ಲಿ [illegible] ಇನ್‌ಸ್ಪೆಕ್ಟರುಗಳ—ಎಳು ಸಬ್ ಇನ್‌ಸ್ಪೆಕ್ಟರು [illegible] ದೆಗಳ ಸ್ಥಾನವನ್ನು ರದ್ದು ಮಾಡುವರಂತೆ ಎಷ್ಟು [illegible] ಯಿತು!

[illegible] 50ರಲ್ಲಿ ಕಲ್ಕತ್ತಾದಲ್ಲಿ ನಡೆದ 'ಪ್ರೇದ' ಯು [illegible] ಕಾಂಗ್ರೆಸ್ಸಿನ ಮಹಾ ಸಭೆಯಲ್ಲಿ ಎರಡು ಪಂಗಡಗ [illegible] ಉಂಟಾಗಿ ಅಧ್ಯಕ್ಷರಾಗಿದ್ದ ಶ್ರೀ. ಸುಭಾಸ್‌ಚಂ

ದ್ರ ಬೋಸ್‌ರವರು ಸಭೆಯನ್ನು ಅಗಕ್ಕೆ ಬರಕಾಸ್ತು ಮಾಡಿ ಮುಂದರಿಸಿಟ್ಟರು.

ಬಂಗಾಳದ ಜೈಲುಗಳ ಇನ್‌ಸ್ಪೆಕ್ಟರ್ ಜನರಲರಾದ ಕ ರ್ನಲ್ ಸಿಂಪ್‌ಸನ್‌ರವರನ್ನು ಕೊಲೆ ಮಾಡಿದಕ್ಕಾಗಿ ಮರಣ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದ ದಿನೇಶ್‌ಗುಪ್ತರವರು ತಾ. 7ರಲ್ಲಿ ಆಲಿಪುರ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಕ್ಕೆ ಹಾಕಲ್ಪಟ್ಟ ರು. ಪೊಲೀಸು ಬಂದೋಬಸ್ತು ಜೋರಾಗಿ ಮಾಡಿದ್ದರು.

ಮಹಾತ್ಮ ಗಾಂಧಿಯವರು ಲಂಡನಿಗೆ ಹೋದಾಗ್ಯೆ, ಅ ಲ್ಲಿ ಒಡನಾಡಿಗಾಗಿ ಕಳೆದ 30 ವರ್ಷಗಳಿಂದ ಕೆಲಸ ಮಾಡು ತ್ತಾ ಬಹು ಕಾಲದ ಜೀವನವನ್ನು ಕೈಕೊಂಡಿರುವ ಮತ್ತು 5 ವ ರ್ಷಗಳ ಹಿಂದೆ ಇಂಡಿಯಕ್ಕೆ ಬಂದಿದ್ದಾಗ್ಯೆ ಮಹಾತ್ಮರ ಆ ಶ್ರಮದಲ್ಲಿ ಆರು ತಿಂಗಳು ಉಳಿದಿದ್ದ ಮಿಸ್ ಲೆಸ್ಟರ್ ಎಂ ಬವರಲ್ಲಿ ಉಳಿದುಕೊಳ್ಳುವರೆಂದು ವರ್ತಮಾನವಿದೆ.

ಕಳೆದ ಜನವರಿ 26ರಲ್ಲಿ 'ಇಂಡಿಪೆಂಡೆನ್ಸ್' ದಿನವನ್ನು ಆ ಚರಿಸುತ್ತಿದ್ದ ಅಗ್ಗಿ ಕಲ್ಕತ್ತಾದ ಮೇಯರಾಗಿದ್ದ ಶ್ರೀ ಸುಭಾ ಸ್‌ಚಂದ್ರಬೋಸ್‌ರವರಿಗೆ ಪೊಲೀಸಿನವರು ಲಾಟಿ ಪೆಟ್ಟು ಕೊ ಟ್ಟದ್ದನ್ನು ವಿಚಾರಿಸಲು ನೇಮಿಸಲ್ಪಟ್ಟಿದ್ದ ಕಮಿಟಿಯವರು 'ಹಾಗೆ ಹೊಡೆದದ್ದು ನ್ಯಾಯವಲ್ಲವೆಂತಲೂ, ಮುಂದಾಗಿಯೇ ಏರ್ಪಡಿಸಿದ್ದದೆಂತಲೂ' ಅಭಿಪ್ರಾಯಪಟ್ಟಿರುವರು.

ಮಧ್ಯಪ್ರಾಂತ ಸರಕಾರದವರು ನೇಮಿಸಿದ ರಿಟ್ರೆಂಚ್‌ಮೆಂ ಟ್ ಕಮಿಟಿಯವರು ಎಲ್ಲಾ ಸಂಬಳ ಮತ್ತು ಎಲೋವೆನ್ಸ್‌ಗಳ ಲ್ಲಿ ಶೇಕಡ [illegible] ಕಡಿಮೆ ಮಾಡುವುದರಿಂದಲೂ, ಅನಾ ವಶ್ಯಕವಾದ ಹುದ್ದೆಗಳನ್ನೂ ಕಾರ್ಯಗಳನ್ನೂ ವಜಾ ಮಾಡಿ, ಕೆ ಲವು ವರ್ಷಗಳ ವರೆಗೆ ಮುಂದೂಡಿಸಬಹುದಾದ ಕಾರ್ಯಗಳ ನ್ನು ಮಾಡದೆ ಇರುವುದರಿಂದಲೂ ಸಿಬ್ಬಂದಿ ಚೇತರಿಕೆಯನ್ನು ಸಾಧಿಸಲು ಶಕ್ಯವಿರುತ್ತದೆಂದು ಪ್ರಕಟಿಸಿರುವರು.

[illegible] ಮಹಾತ್ಮ ಗಾಂಧಿಯವರು [illegible] ದುಂಡು ಮೇಜು ಪರಿಷತ್ತಿಗೆ ರಾಷ್ಟ್ರೀಯ [illegible] ಮುಸಲ್ಮಾನರ ಪ್ರತಿನಿಧಿಯಾಗಿ ಸರ್ ಅಲಿ ಇಮಾಮ್‌ರವರು [illegible] ... ಇವರ ನೇಮಕಕ್ಕೂ [illegible] ... ಡಾಕ್ಟರ್ ಅನ್ಸಾರಿಯವರು ವಿರೋಧಿಸಿ, [illegible] ... [illegible] ... [illegible] ... ಹೋಗಲು ತಿರಸ್ಕರಿಸಲೂ ಬಹುದೆಂದು ಸೂಚಿಸಿರುವರಂತೆ.

ಬರುವ ಸೆಪ್ಟೆಂಬರದಲ್ಲಿ 'ಆಲ್ ಇಂಡಿಯಾ ...' ಇಂ ಡಿಯಾ [illegible] ... ಪ್ರತಿಭಟನೆಗಳಲ್ಲಿ [illegible] ... ಇಂಗ್ಲೆಂಡಿಗೆ ಬಂದ ರೆ ಭಾಷಣ ಮಾಡಲು ಒಪ್ಪುತ್ತೇನೆಂತಲೂ, ಆದರೆ ಇಲ್ಲಿ ಈ ವರ್ಷದ ಕೊನೆಯೊಳಗಾಗಿ ತಾನು ಇಂಗ್ಲೆಂಡಿಗೆ ಹೊರಡುವುದು ಅಸಾಧ್ಯವಾಗಬಹುದೆಂದೂ ಮಹಾತ್ಮ ಗಾಂಧಿಯವರು '[illegible]' [illegible] ಉತ್ತರ ಬರೆದಿರುವರು.

ಮಹಾತ್ಮ ಗಾಂಧಿಯವರು ಮತ್ತು ಅವರ ಸಂಗಡಿಗರು ಬರುವ ಆಗೋಸ್ತು 15ರಲ್ಲಿ '[illegible]' ಎಂಬ ಹಡಗಿನಲ್ಲಿ ಇಂಗ್ಲೆಂಡಿಗೆ ಹೊರಡುವರೆಂತಲೂ [illegible] ಸರಕಾರ ದ ಅಧಿಕಾರಿಗಳಿಗೆ ಕಾದಿಟ್ಟಿರುವ [illegible] ಗಳನ್ನು ಗಾಂಧಿಜಿ ಯವರು ಉಪಯೋಗಿಸಬಹುದೆಂದು. ಆದರೂ ಅವರು ಅದ ನ್ನು ವಿನಯಪೂರ್ವಕ ತಿರಸ್ಕರಿಸಿ, ಅವರು ಕೆಳಗೆ ತರಗತಿಯ [illegible] ಅಂತಸ್ತಿನಲ್ಲಿ ('ಡೆಕ್'ನಲ್ಲಿ) ಹೋಗುವರೆಂದೂ '[illegible]' [illegible] ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಬೆಂಗಳೂರಿನ ಗಾಂಧಿ ಸಾಹಿತ್ಯವೆಂಬಲ್ಲಿ ಪಂಡಿತ ಜವಾ ಹರ್‌ಲಾಲ್ ನೆಹರೂರವರ [illegible] ಯಲ್ಲಿ ಏರಿಸಿದ್ದ ರಾಷ್ಟ್ರೀಯ ಧ್ವಜವನ್ನು ಯಾರೋ ಒಂದು ರಾತ್ರಿ ನಾಶ ಮಾಡಿಬಿಟ್ಟರು. ಅದನ್ನು ಪುನಃ ಏರಿಸಿಕೊಂಡು [illegible] ಸಿದಾಗ ಅಲ್ಲಿಯ ಪೋಲೀಸ್ ಸೂಪರಿಂಟೆಂಡೆಂಟರು ಸ್ಟ್ಯಾಂಡಿನ ಲ್ಲಿ ರಾಜನ ಬಾವುಟವಲ್ಲದೆ ಬೇರೆ ಯಾವ ಧ್ವಜವನ್ನೂ ಹಾ [illegible] ಕೂಡದೆಂದು [illegible] ಆಜ್ಞಾಪಿಸಿದರು. ಅಲ್ಲಿಯ ಕಾಂಗ್ರೆಸ್ ಕಮಿಟಿಯ ಶ್ರೀಯುತ ಕೆ. ಟಿ ಭಾ ಷ್ಯಮ್‌ರವರು ಮಹಾತ್ಮ ಗಾಂಧಿಯವರ ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಅಭಿಪ್ರಾಯ ಕೇಳಲು ಬೊಂಬಾ ಯಿಗೆ ಹೋಗಿರುವರು.

ಬೊಂಬಾಯಿ ರಿಟ್ರೆಂಚ್‌ಮೆಂಟ್ ಕಮಿಟಿಯ ಬಹುಮ ತವರು—ತಿಂಗಳೊಂದರ 40 ರೂ. ಗಿಂತ ಕಮ್ಮಿ ಸಂಬಳ ಇರು ವವರಿಗೆ ಏನೂ ಕಡಿಮೆ ಮಾಡಕೂಡದೆಂತಲೂ, 40ರಿಂದ 200 ರೂ. ವರೆಗೆ ಶೇಕಡ 5 ದಷ್ಟು, 200 ರಿಂದ 500 ರೂ. ವರೆಗೆ 6¼% ದಷ್ಟು, 500 ರಿಂದ 750 ರ ವರೆಗೆ 7½% ದಷ್ಟು ಮತ್ತು 750 ರ ಮೇಲೆ 10% ದಷ್ಟು ಕಡಿಮೆ ಮಾಡಬೇಕೆಂದೂ, ಮಂತ್ರಿಗಳ ಸಂಖ್ಯೆಯನ್ನು 3 ರಿಂದ 2 ಕ್ಕೂ, ಎಕ್ಸಿಕ್ಯುಟಿವ್ ಮೆಂಬರುಗಳ ಸಂಖ್ಯೆಯನ್ನು 4 ರಿಂದ 2 ಕ್ಕೆ ಇಳಿಸಬೇಕೆಂ ದೂ, ಹೀಗೆ ಮಾಡುವುದರಿಂದ 24 ಲಕ್ಷ ರೂಪಾಯಿ ಉ ಳಿತಾಯವಾಗುವದೆಂದೂ, ಹೀಗೆ 1933ನೇ ಇಸವಿ ವರೆಗೆ ಜಾ ರಿಗೆ ತಂದು ನಂತರ ಎಲ್ಲವನ್ನೂ ಪುನಃ ವಿಚಾರಿಸಿ ಆಲೋ ಚಿಸಬೇಕೆಂದೂ ಸಿಫಾರಸ್ಸು ಮಾಡಿರುವರು. ಇವರ ವರದಿ ಯ ಮೇಲೆ ಒಟ್ಟು 50 ಲಕ್ಷ ರೂಪಾಯಿ ಖರ್ಚು ಕಡಿಮೆ ಯಾಗುವುದಂತೆ.

ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯು ಬೊಂಬಾಯಿಯಲ್ಲಿ ತಾ 7ರಲ್ಲಿ ಬೊಂಬಾಯಿಯಲ್ಲಿ ಪ್ರಾರಂಭವಾಗಿ ಇಂಡಿ ಯಾದ ಪಬ್ಲಿಕ್ ಸಾಲದ ವಿಷಯ ಆಲೋಚಿಸಲು ಮತ್ತು ಮೂಲ ಹಕ್ಕುಗಳನ್ನು ನಿಶ್ಚಯಿಸಲು ನೇಮಿಸಲ್ಪಟ್ಟಿದ್ದ ಉಪ

ಕಮಿಟಿಗಳ ವರದಿಗಳು ವರ್ಕಿಂಗ್ ಕಮಿಟಿಯ ಮುಂದಿಡಲಾದ ವು. ಪಬ್ಲಿಕ್ ಸಾಲದ ಕಮಿಟಿಯ ವರದಿಯನ್ನು ಮೆಂಬರುಗ ಳಿಗೆ ಓದಲು ಸಮಯ ಬೇಕಾದುದರಿಂದ ಅದರ ಮೇಲಿನ ಚ ರ್ಚೆಯು ಮುಂದರಿಸಿಡಲಾಯಿತು. ಮೂಲ ಹಕ್ಕುಗಳ ಕ ಮಿಟಿಯ ವರದಿಯು ಒಪ್ಪಲಾಯಿತು. ಡೆಲ್ಲಿ ರಾಜಿಯ ಕರ ತುಗಳನ್ನು ಎಷ್ಟರ ಮಟ್ಟಿಗೆ ಅಧಿಕಾರಿಗಳು ಅನುಸರಿಸಿ ನಡೆ ಯುತ್ತಿದ್ದಾರೆಂಬ ವಿಷಯ ಆಯಾಯ ಪ್ರಾಂತ್ಯದ ಮೆಂಬರು ಗಳು ಕಮಿಟಿಯವರಿಗೆ ವಿವರಿಸಿ ಹೇಳಿದರು. ಹಿಂದೂ—ಮು ಸಲ್ಮಾನರ ಕೋಮುವಾರು ಸಮಸ್ಯೆಯ ವಿಷಯ ಡಾಕ್ಟರ್ ಅ ನ್ಸಾರಿಯವರು ಒಂದು ಸೂಚನೆಯನ್ನು ಮುಂದಿಟ್ಟಿರುವರು. ಇವೆರಡು ಮುಖ್ಯ ವಿಷಯಗಳ ಚರ್ಚೆಯು ನಡೆಯುತ್ತಾ ಇದೆ.

ವಿ ದೇ ಶ.

ಜಪಾನಿನ ಕಿಯೋಟೋ ಎಂಬಲ್ಲಿಯ ಅಬ್ಸರ್ವೇಟರಿಯ ವರು 185 ಮಿಲಿಯ ಮೈಲು ದೂರದಲ್ಲಿರುವ ಒಂದು ಹೊಸ ನಕ್ಷತ್ರವನ್ನು ಕಂಡು ಹಿಡಿದಿರುತ್ತಾರೆಂದು ವರ್ತಮಾನ.

ಫೆಡರಲ್ ಸ್ಟ್ರಕ್ಚರ್ ಕಮಿಟಿಯು ಎಂಟಂಗಿಗೆ ಡೊಮಿ ನಿಯನ್‌ಗಳ ಪ್ರತಿನಿಧಿಗಳನ್ನು ಕರೆಸುವುದಿಲ್ಲವೆಂದು ಇಂಡಿ ಯಾ ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಹೇಳಿ ದರು.

ಅಮೇರಿಕಾದ ಹಿಂದೀ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಶೈಲೇಂದ್ರನಾಥ ಘೋಷರವರು ಇಂಡಿಯಕ್ಕೆ ಬರಲು, ಬ್ರಿಟಿ ಷ್ ಸರಕಾರವು ಇದೀಗ ಎರಡನೇ ಸಲ ಒಪ್ಪಿಗೆ ಕೊಟ್ಟಿರು ವುದಿಲ್ಲ.

ಎಸೆಂಬ್ಲಿಯ ಮಾಜಿ ಅಧ್ಯಕ್ಷರಾದ ಶ್ರೀಯುತ ವಿ. ಜೆ ಪಟೇಲರವರು ವಿಲಾಯಿತಿನಲ್ಲಿ ಇಂಗ್ಲೆಂಡಿನಿಂದ ಬರ್ಲಿನಿಗೆ ಹೋ ಗಿ ಇಳಿದಿರುವರು. ಅವರು ಜೆನೀವ ಪಟ್ಟಣಕ್ಕೆ ಹಿಂತಿ ರುಗುವರು.

ಪ್ಯಾರಿಸ್ ಪಟ್ಟಣದಲ್ಲಿ 6 ದಂಪತಿಗಳು 426 ಗಂಟೆಗಳಿಂದ ಕುಣಿ [illegible] ಇದ್ದಾರಂತೆ! ಅವರಿಗೆ ಗಂಟೆಯೊಂದಕ್ಕೆ ಊಟ ಮತ್ತು ವಿಶ್ರಾಂತಿಗಾಗಿ 15 ಮಿನಿಟುಗಳ ವಿಶ್ರಾಂತಿ ಮಾ ತ್ರ ಕೊಡಲಾಗುತ್ತದಂತೆ. ಇನ್ನು ಎಷ್ಟು ಸಮಯ ಕುಣಿ ಯುವರೆಂದು ನೋಡಬೇಕು!

ಈಚೆ ಏಪ್ರಿಲಿನ ಖಾನೆಷು ಮಾರಿ ಲೆಖ್ಖದ ಪ್ರಕಾರ ಗ್ರೇ ಟ್ ಬ್ರಿಟನ್ನಿನಲ್ಲಿ 45 ಮಿಲಿಯ ಜನರಿರುವರೆಂದೂ, ಗಂಡಸರ ಗಿಂತ 1½ ಮಿಲಿಯ ಹೆಂಗಸರು ಹೆಚ್ಚಿರುವರೆಂದೂ, 1921ರಿಂ ದ 1931ರ ವರೆಗೆ 1½ ಮಿಲಿಯ ಜನಸಂಖ್ಯೆ, ಅರ್ಧ ಮಿಲಿಯ ಮರಣ [illegible] ಕಡಿಮೆಯೆಂತಲೂ, ಒಟ್ಟಾರೆ ಎರಡು ಮಿಲಿಯ ಜನ ಸಂಖ್ಯೆಯು ಹೆಚ್ಚಿದೆಯೆಂತಲೂ ತಿಳಿಯ ಬಂದಿದೆ. ಅ ಲ್ಲದೆ ಲಂಡನ್ ಪಟ್ಟಣದ ಜನ ಸಂಖ್ಯೆಯು 8 ಮಿಲಿಯಕ್ಕೆ ಏ ರಿದೆ.

ಹೊಸ ವೈಸರಾಯರಾದ ಲಾರ್ಡ್ ವೆಲ್ಲಿಂಗ್ಡನ್‌ರವರು ಚೆಮ್ಸ್‌ಫರ್ಡ್ ಕ್ಲಬ್ಬಿನ ತನ್ನ ಭಾಷಣದಲ್ಲಿ—ಹಿಂದೂಸ್ತಾ ನಕ್ಕೆ ಬೇಗನೆ ಹೆಚ್ಚಿನ ಸುಧಾರಣೆಗಳು ದೊರೆತು ತನ್ನ ಜವಾ ಬ್ದಾರಿಯು ಕಡಿಮೆಯಾಗಿ, ತಾನು ಕೆನಡಾದಲ್ಲಿದ್ದಂತೆ ಇಲ್ಲಿ ಯೂ ಬರೇ ನಾಮ ಮಾತ್ರ ಗವರ್ನರಾಗಿರುವ ಕಾಲವು ಬರಲೆಂದು ಬಯಸುತ್ತೇನೆಂದು ಹೇಳಿದ್ದಕ್ಕೆ ಅತೃಪ್ತಿ ಸೂಚಿಸುವ ಒನ್ನೆ ಮಿ. ಬ್ರೇಕರ್ ಎಂಬವರು ಪಾರ್ಲಿಮೆಂಟಿನಲ್ಲಿ ಲಾರ್ಡ್ ವೆಲ್ಲಿಂಗ್ಡನ್‌ರವರ ಮೇಲೆ ಅವಿಶ್ವಾಸದ ಠರಾವಿನ ನೋಟೀಸು ಕೊಟ್ಟಿರುವರು.

ಮಾಜಿ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಷೆ ಫೀಲ್ಡ್ ಯುನಿವರ್ಸಿಟಿಯವರು ಕೊಟ್ಟ ಗೌರವದ ಡಿಗ್ರಿಯನ್ನು ಸ್ವೀಕರಿಸಿದಾಗ್ಯೆ 'ಹಿಂದೂಸ್ಥಾನದವರು ತಮ್ಮ ದೇಶದ ಆಡಳಿ ತವು ತಮ್ಮ ಅಧೀನವಾಗಬೇಕೆಂದು ಕೇಳುವದು ಸ್ವಭಾವಿಕವೆಂ ತಲೂ, ಇದರಲ್ಲಿ ಆಶ್ಚರ್ಯವೇನೂ ಇಲ್ಲವೆಂತಲೂ, ಅದು 150 ವರ್ಷಗಳ ಬ್ರಿಟಿಷ್ ಆಳಿಕೆಯ ಫಲವೆಂತಲೂ, ಹಿಂ ದೀಯರ ಈ ಕೋರಿಕೆಯನ್ನು ನೆರವೇರಿಸಿ ಕೊಡದಿದ್ದರೆ ನಾವು (ಬ್ರಿಟಿಷರು) ಮಾತಿಗೆ ತಪ್ಪಿದಂತಾಗುವುದೆಂತಲೂ, ಆದರೆ ಈ ಕ್ಕನೆ ಹಿಂದೂಸ್ತಾನಕ್ಕೂ, ಇಂಗ್ಲೆಂಡಿಗೂ ಇರುವ ಸಂಬಂಧವ ನ್ನು ಕಡಿದು ಬಿಟ್ಟರೆ ಹಿಂದೂಸ್ಥಾನಕ್ಕೆ ದೊಡ್ಡ ನಷ್ಟ ತಪ್ಪು ವುದಿಲ್ಲವೆಂತಲೂ, ಬರುವ ರಚನೆಯಲ್ಲಿ ರಕ್ಷಣೋಪಾ ಯಗಳು ಹಿಂದೀಯರ ಹಿತಕ್ಕಾಗಿ ಇರತಕ್ಕದಾಗಬೇಕೆಂತಲೂ' ಮುಂತಾಗಿ ಭಾಷಣ ಮಾಡಿದರು.

ಮಿಸೆಸ್ ಬರ್ನರ್ಡ್ ಶಿನ್‌ಬರ್ಗ್ ಎಂಬವಳು 69 ಮಕ್ಕ ಳನ್ನು ಹೆತ್ತು 56ನೇ ವಯಸ್ಸಿನಲ್ಲಿ ಮೃತಳಾದಳು! ಈ ವಿಶೇ ಷ ತಾಯಿಯು ಆಸ್ಟ್ರಿಯಾದ ಜರ್ಮನ್ ಸರಹದ್ದಿನಲ್ಲಿ ವಾ ಸಿಸುತ್ತಿದ್ದಳು ಮತ್ತು ಸುಮಾರು 20 ವರ್ಷಗಳ ಹಿಂದೆ ತೀರಿ ಹೋದಳು. ಒಂದು ಸಲವಾದರೂ ಒಂದು ಮಗುವನ್ನು ಹೆ ರಲಿಲ್ಲ. ಅವಳು ನಾಲ್ಕು ಸಾರಿ ನಾಲ್ವರಂತೆಯೂ, ಏಳು ಸಾರಿ ಮೂವರಂತೆಯೂ ಮತ್ತು 16 ಸಾರಿ ಇಬ್ಬರಂತೆಯೂ ಮಕ್ಕಳನ್ನು ಹಡೆದಳು. ಅವಳ ಗಂಡನು ಈಗಲೂ ಜೀವದ ಲ್ಲಿರುವನು ಮತ್ತು ಪುನಃ ಮದುವೆಯಾಗಿರುವನು. ಇವನಿ ಗೆ ಎರಡನೇ ಹೆಂಡತಿಯಿಂದ 18 ಮಕ್ಕಳಾಗಿವೆ, ಅವಳೂ ಜೀ ವದಲ್ಲಿರುವಳು. ಅವನು ಈಗ 78 ವರ್ಷ ಪ್ರಾಯದವನಾಗಿ ಒಳ್ಳೇ ಆರೋಗ್ಯದಲ್ಲಿರುವನು. ಅವನಿಗೆ ಹುಟ್ಟಿದ 87 ಮ ಕ್ಕಳ ಪೈಕಿ 67 ಈಗ ಜೀವದಲ್ಲಿರುವರು.

ವಿಮರ್ಶೆ.

ಮಹಾತ್ಮ ಕಬೀರ್ ದಾಸ್.

ಗ್ರಂಥಕರ್ತ—ಅನಂತ. ಬೆಲೆ ನಾಲ್ಕಾಣೆ.

ಶ್ರೀರಾಮ ಪ್ರೆಸ್, ನಂಜನಗೂಡು, ಇಲ್ಲಿ ಮುದ್ರಿತ.

ಇತ್ತೀಚೆಗೆ ಕನ್ನಡ ವಾಙ್ಮಯವು ದೊಡ್ಡದಾಗಿ ಬೆಳೆಯುತ್ತಿರುವುದು ಹರ್ಷಾಸ್ಪದವಾದ ಸಂಗತಿಯಾಗಿದೆ. ಕರ್ನಾಟಕದ ಭಾಗವಾದ ಮೂಲೆಯಲ್ಲಿರುವ ಕೊಡಗಿನಲ್ಲಿಯೂ ಕನ್ನಡ ಮಾತೆಯ ಸೇವೆಯು ಯತ್ಕಿಂಚಿತ್ ರೀತಿಯಿಂದಲಾದರೂ ಜರುಗುತ್ತಿರುವುದನ್ನು ನೋಡಿ, ಇತರ ಕನ್ನಡ ಪ್ರಾಂತ್ಯದವರು ಆನಂದಿಸದೇ ಇರಲಿಕ್ಕಿಲ್ಲ. ಕನ್ನಡ ಗ್ರಂಥಕಾರರು ಧರ್ಮ ಸಂಬಂಧವಾಗಿದ್ದರೂ, ಇನ್ನೂ ಧಾರ್ಮಿಕ ಗ್ರಂಥಗಳನ್ನೇ ಬರಹಗಾರರು ಬರೆಯುತಿದ್ದಾರಲ್ಲಾ ಎಂದೊಂದು ಅನುಮಾನವು ಕೆಲವರಿಗಿದೆ. ಧರ್ಮದ ಕುರಿತ ಗ್ರಂಥಗಳು ಎಷ್ಟೇ ಇದ್ದರೂ, ಇನ್ನೂ ಇನ್ನೂ ಬೇಕೆಂದೇ ನಮ್ಮ ಭಾವನೆ. ಅಭಿಪ್ರಾಯಗಳು ಹಳೆಯವೇ ಆಗಿದ್ದರೂ, ರೀತಿಯು ಮಾತ್ರ ಕಾಲಕ್ಕೆ ತಕ್ಕಂತಿದ್ದರೆ ಸಾಕು.

ಹಿಂದೂ ಮುಸಲ್ಮಾನ ಮತಗಳು ನಮ್ಮ ದೇಶದಲ್ಲಿ ಬಹು ಕಾಲದಿಂದಲೂ ಇವೆಯಷ್ಟೆ. ಆದರೆ ಈಚೆಗೆ ಮೊದಲು ಇವುಗಳಲ್ಲಿದ್ದ ಸೌಹಾರ್ದವು ಕಡಿಮೆಯಾಗಲಾರಂಭಿಸಿದೆ. ಮೂಲತಃ ತತ್ವಗಳು ಎರಡಕ್ಕೂ ಒಂದೆ. ಮಾತ್ರ ರೀತಿ ರಿವಾಜುಗಳು ಬೇರೆ. ಒರೇ ಆಚಾರಗಳಿಗೆ ಕಟ್ಟು ಬೀಳದೆ, ತತ್ವವನ್ನು ಹುಡುಕುವುದು ಮನುಷ್ಯನ ಮುಖ್ಯ ಗುಣವಾಗಿರಬೇಕು. ನಿಜವಾದ ಧರ್ಮ ಸೂಕ್ಷ್ಮಗಳನ್ನು ಹಿಂದೆ ಬೋಧಿಸಿದ ಅವತಾರಿಕರ ಜೀವನ ಚರಿತ್ರೆಗಳನ್ನು ಓದುವುದರಿಂದ ತಿಳಿದು, ಮತ ಸಂಬಂಧವಾದ ವೈಮನಸ್ಸನ್ನು ದೂರ ಮಾಡಿಕೊಳ್ಳಬಹುದು. ಅದಕ್ಕಾಗಿಯೇ ನಾವು ಇಂಥ ಗ್ರಂಥಗಳನ್ನು ಓದತಕ್ಕದು. ನಮಗೊಂದು ಈ ರೀತಿಯ ಪದ್ಯ ಗ್ರಂಥವು ವಿಮರ್ಶೆಗೆ ಬಂದಿದೆ. ಅದನ್ನು ಬರೆದವರು ಅನಂತರು. ಇವರು ಮಡಿಕೇರಿಯಲ್ಲಿಯೇ ಸರಕಾರಿ ಉದ್ಯೋಗದಲ್ಲಿರುವ ಮಿ. ಅನಂತ ಪದ್ಮನಾಭರವರು. 'ಮಹಾತ್ಮ ಕಬೀರ್ ದಾಸ್' ಎಂಬುದೇ ಆ ಪುಸ್ತಕ. ಕಾದಂಬರಿ ಸಂಗ್ರಹ ಗ್ರಂಥಮಾಲೆಯಲ್ಲಿ ಇದು ಸ್ಥಾನವನ್ನು ಹೊಂದಿದೆ. ಇದಕ್ಕೆ ಮುನ್ನುಡಿಯನ್ನು ಸಂಸ್ಕೃತಾಧ್ಯಾಪಕರಾದ ಮಿ. ಆತ್ಮ ರಾಮಶಾಸ್ತ್ರಿಗಳು ಬರೆದು ಗ್ರಂಥವನ್ನು ಕನ್ನಡಿಗರ ಮುಂದಿಟ್ಟಿರುತ್ತಾರೆ. ಇವರು ಅದರಲ್ಲಿ ಹೇಳಿರುವ ಮಾತುಗಳನ್ನೇ ಎತ್ತಿ ಬರೆಯುವದಾದರೆ— "ಶ್ರೀಯುತ ಅನಂತ ಪದ್ಮನಾಭರಾಯರ ಪದ್ಯವಾಣಿಯು ರಸಪರಿಪ್ಲುತವಾಗಿದ್ದು ಪ್ರಾಸಾದಿತವಾಗಿದೆ. ಇವರ ರಚನಾಶೈಲಿಯು ಪ್ರಾಚೀನ ಕಾವ್ಯಸರಣಿಯನ್ನು ಹೋಲುವಂತಿದೆ. ಈ ಕಾವ್ಯದಲ್ಲಿರುವ ಇನ್ನೊಂದು ವಿಶೇಷವೇನೆಂದರೆ—ಕ್ಲಿಷ್ಟಕಲ್ಪನೆ, ಅಸ್ವಾಭಾವಿಕ ವರ್ಣನೆ, ದೀರ್ಘ ಸಮಾಸ, ಅಪ್ರಸಿದ್ಧ ಪದಪ್ರಯೋಗ ಇತ್ಯಾದಿ ಇದರಲ್ಲಿರದೆ ಬಹು ಸುಲಭವಾದ ಶೈಲಿಯಲ್ಲಿ ಈ ಪದ್ಯಗಳು ಬರೆಯಲ್ಪಟ್ಟಿವೆ."

ಗ್ರಂಥವು ಎಲ್ಲರೂ ಓದತಕ್ಕದ್ದಾಗಿದೆ. ಬೆಲೆಯು ಬಹು ಕಡಿಮೆಯಾಗಿದೆ. ಆದುದರಿಂದ ಕನ್ನಡಿಗರು ಇದನ್ನು ಓದಿ ಆನಂದಪಡಬೇಕಾಗಿ ನಮ್ಮ ಹಾರೈಕೆ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಸಬ್ ಜಡ್ಜರ ಹುದ್ದೆ ಅವಶ್ಯವಿದೆಯೋ?

ಅಯ್ಯಾ,

ಇಡೀ ಪ್ರಪಂಚದ ಆರ್ಥಿಕ ಹೀನ ಸ್ಥಿತಿಯ ದೆಸೆಯಿಂದ ಸರ್ಕಾರದ ಉತ್ಪತ್ತಿಯು ಕಡಿಮೆಯಾಗಿರುವ ಕಾರಣ ಆಡಳಿತ ಕ್ರಮದಲ್ಲಿ ಖರ್ಚು ಕಡಿಮೆ ಮಾಡಬೇಕೆಂದು ಮನಸ್ಸಾಕ್ಷಿ ಪ್ರಕಾರ ನಡೆಯುವವರೆಲ್ಲರೂ ಹೇಳುತ್ತಿದ್ದಾರೆ. ಆದರೆ ಸಿಬ್ಬಂದಿ ಖೋತೆಯನ್ನು ಜಾರಿಗೆ ತರುವುದು ಕಷ್ಟವೆಂಬುವುದರಲ್ಲಿ ಸಂಶಯವಿಲ್ಲ. ಸಿಬ್ಬಂದಿ ಖೋತೆಯನ್ನು ಸೂಚಿಸುವವರಿಗೂ ಬೇಸರಿಕೆ, ಖೋತೆ ಮಾಡಲ್ಪಡುವ ಸಿಬ್ಬಂದಿಯವರಿಗೆ ಅದಕ್ಕಿಂತಲೂ ಕಷ್ಟ. ಹೇಗೂ ಇದು ಸಂತೋಷಕರವಾದ ಕೆಲಸವಲ್ಲ. ಎಲ್ಲದಕ್ಕಿಂತಲೂ ನಮ್ಮ ಕೊಡಗಿನಲ್ಲಿ ಬಹು ಕಷ್ಟ. ಇಲ್ಲಿ ಉದ್ಯೋಗಗಳ ಅದರಲ್ಲೂ ದೊಡ್ಡ ಸಂಬಳದ ಉದ್ಯೋಗಗಳ ಸಂಖ್ಯೆಯು ಬಹಳ ಕಡಿಮೆ. ಯಾವದಾದರೊಂದು ಉದ್ಯೋಗದ ಸಂಬಳವನ್ನು ಕಡಿಮೆ ಮಾಡಬೇಕೆಂದು ಸೂಚಿಸಿದರೆ ಆ ಉದ್ಯೋಗದಲ್ಲಿ ಈಗ ಇರುವ ವ್ಯಕ್ತಿಯ ಮೇಲೆ ದ್ವೇಷದಿಂದ ಹಾಗೆ ಮಾಡುವುದೆಂದು ಹೇಳುವವರೂ ಇದ್ದಾರೆ. ಉದ್ಯೋಗಸ್ಥರ ಸಂಖ್ಯೆಯು ಬಹು ಕಡಿಮೆಯಾದುದರಿಂದ ಹಾಗೆ ಹೇಳಲು ಎಡೆಯೂ ಇದೆ. ಅಲ್ಲದೆ ಈ ಚಿಕ್ಕ ದೇಶದಲ್ಲಿ ಸಿಬ್ಬಂದಿ ಖೋತೆಯನ್ನು ಕುರಿತು ಅಭಿಪ್ರಾಯ ಕೊಡುವಂಥ ಮಹಾಸಭೆಯವರಿಗೂ, ದೊಡ್ಡ ಸಂಬಳದ ಉದ್ಯೋಗಸ್ಥರಿಗೂ, ನೆಂಟಸ್ತಿಕೆ, ಸ್ನೇಹಾಚಾರ, ಪರಿಚಿತಿ, ದ್ವೇಷ, ಅಸೂಯೆ—ಒಂದಲ್ಲ ಒಂದು ಇದ್ದೇ ಇದೆ. ಆದುದರಿಂದ ಕೊಡಗಿನಲ್ಲಿ ಈ ಕಾರ್ಯವು ಬಹು ಕಷ್ಟತರವಾಗಿದೆ; ಮತ್ತು ಕಮಿಟಿಯವರು ಈ ವಿಷಯ ಎಷ್ಟರ ಮಟ್ಟಿಗೆ ಪ್ರಜೆಗಳಿಗೆ ಹಿತವಾಗುವ ರೀತಿಯಲ್ಲಿ ನ್ಯಾಯವಾದ ನಿರ್ಧಾರವನ್ನು ಮಾಡುವರೆಂದು ನೋಡಬೇಕಾಗಿದೆ.

ಈ ಕೆಲಸವು ಎಷ್ಟು ಬೇಸರಿಕೆಯದಾದರೂ, ಸರ್ಕಾರದ ಬೊಕ್ಕಸವನ್ನು ತುಂಬುತ್ತಿರುವ ಒಡ ಪ್ರಜೆಗಳ ಹಿತದ ದೃಷ್ಟಿಯಿಂದ ನನಗೆ ತೋರುವ ಸೂಚನೆಯನ್ನು ಮಾಡದೆ ಇರಲಾರೆನು. ಯಾರು ಹೇಗೆ ಬೇಕಾದರೂ ಯೋಚಿಸಿಕೊಳ್ಳಲಿ. ಅನಾವಶ್ಯಕವಾದ ಹುದ್ದೆಯನ್ನು ತೆಗೆದು ಹಾಕುವುದು ಸಿಬ್ಬಂದಿ ಖೋತೆಗೆ ಬಹು ಸುಲಭದ ದಾರಿಯಾಗಿದೆ. ಹಾಗಾದರೆ ಕೊಡಗಿನಲ್ಲಿ ಈಗ ಅನಾವಶ್ಯಕವಾದ ದೊಡ್ಡ ಹುದ್ದೆ ಯಾವದೆಂದು ನೋಡುವ. ಈಗ ಇರುವ ನಾಲ್ಕೈದು ಇಂಪೀರಿಯಲ್ ಉದ್ಯೋಗಗಳ ಅವಶ್ಯಕತೆಯು ಕೊಡಗಿಗೆ ಇಲ್ಲವೆಂಬುದನ್ನು 'ಕೊಡಗು' ಪತ್ರಿಕೆಯು ಈ ಮೊದಲೇ ಸೂಚಿಸಿದೆ. ಅವುಗಳ ಬದಲಿಗೆ ಪ್ರೊವಿನ್ಶಿಯಲ್" ಹುದ್ದೆಗಳಿದ್ದರೆ ಸಾಕೆಂದು ಎಲ್ಲರೂ ಒಪ್ಪುವಂಥಾದ್ದಾಗಿದೆ. ಸಬ್ ಜಡ್ಜರ ಹುದ್ದೆಯಿಂದ ಎಷ್ಟು ಪ್ರಯೋಜನವಿದೆಯೆಂದು ಆಲೋಚಿಸುವ. ಮಡಿಕೇರಿ ಸಬ್ ಜಡ್ಜ್ ಕೋರ್ಟಿನಲ್ಲಿ ವೀರರಾಜಪೇಟೆ ಮುನಸೀಫ್ ಕೋರ್ಟಿನಲ್ಲಿರುವುದರ ಅರ್ಧದಷ್ಟೇ ಕೆಲಸವಿರುವವಾದರೂ ಖರ್ಚು ಮೂರರಲ್ಲಿ ಒಂದು ಭಾಗ ಹೆಚ್ಚಾಗಿದೆ ಎಂದು "ಕೊಡಗು" ಪತ್ರಿಕೆಯಲ್ಲಿ ಕೆಲವು ತಿಂಗಳುಗಳ ಹಿಂದೆ ಪ್ರಕಟಿಸಿದ್ದನ್ನು ನೋಡಿದ ಯೋಚನೆಯು ನನಗೆ ಬರುತ್ತದೆ! ಈ ಲೆಖ್ಖದ ಪ್ರಕಾರ ಮಡಿಕೇರಿಯಲ್ಲಿ ಸಬ್ ಜಡ್ಜರಿಗೆ ಮಾತ್ರವಲ್ಲ, ಒಬ್ಬ ಮುನಸೀಫರಿಗೂ ಸಹ ಸಾಕಷ್ಟು ಕೆಲಸವಿಲ್ಲವೆಂದಾಯಿತು. ಅರ್ಧ ಮುನಸೀಫರಿಗೆ ಮಾತ್ರ ಕೆಲಸವಿದೆ. ಆದರೆ ವೀರರಾಜಪೇಟೆ ಮುನಸೀಫರಿಗೆ ಕೆಲಸವು ಸ್ವಲ್ಪ ಹೆಚ್ಚಾಗಿರುವುದರಿಂದ ಅವರ ಜ್ಯೂರಿಸ್‌ಡಿಕ್ಷನನ್ನು ಸ್ವಲ್ಪ ಕಡಿಮೆ ಮಾಡಿ, ಅದನ್ನು ಮಡಿಕೇರಿಗೆ ಸೇರಿಸಬಹುದು. ಹೇಗೂ ಮಡಿಕೇರಿಯಲ್ಲಿ ಒಬ್ಬ ಮುನಸೀಫರನ್ನು ಮಾತ್ರ ಇಟ್ಟರೆ ಸಾಕಾಗಿದೆ. ಅಪ್ಪೀಲುಗಳನ್ನು ಕಮಿಷನರವರು ವಿಚಾರಿಸಬಹುದು. ಕೊಡಗಿನಲ್ಲಿ ಅಪ್ಪೀಲುಗಳ ಸಂಖ್ಯೆಯು ಕಡಿಮೆಯಾಗಿರುವುದರಿಂದಲೂ, ಕಮಿಷನರವರಿಗೆ ಅವುಗಳನ್ನು ವಿಚಾರಿಸುವಷ್ಟು ಸಮಯವಿರುವುದರಿಂದಲೂ ಕೊಡಗಿನಲ್ಲಿ ಇಬ್ಬರು ಮುನಸೀಫರುಗಳನ್ನು ಇಟ್ಟುಕೊಂಡು ಸಬ್ ಜಡ್ಜರ ಹುದ್ದೆಯನ್ನು ತೆಗೆದು ಹಾಕಬಹುದು. ಹೀಗೆ ಮಾಡಿದರೆ ತತ್ಕಾಲ ವರ್ಷಕ್ಕೆ ಐದಾರು ಸಾವಿರ ರೂಪಾಯಿಯ ಉಳಿಕೆಯಾದರೂ ಆಗುವುದು. ಕ್ರಮೇಣ ಈ ಉಳಿಕೆಯು ಹೆಚ್ಚಾಗುವುದು.

ಈಗ ಸರ್ಕಾರಿ ಉದ್ಯೋಗದಲ್ಲಿರುವವರಿಗೆಲ್ಲ ಒಂದು ತರಹದ 'ಕಂಟ್ರಾಕ್ಟು' ಇರುವುದರಿಂದ ಅವರನ್ನು ಉದ್ಯೋಗದಿಂದ ತೆಗೆಯಲಿಕ್ಕೂ ಕೂಡದು, ಮತ್ತು ಅವರ ಸಂಬಳವನ್ನು ಕಡಿಮೆ ಮಾಡಲಿಕ್ಕೂ ಕೂಡದು ಎಂದು ವಾದಿಸುವ ಉದ್ಯೋಗಸ್ಥರ ಮಾತನ್ನು ನಾನು ಕೇಳಿದ್ದೇನೆ. ಇಂಥಾ 'ಕಂಟ್ರಾಕ್ಟು' ಇದೆಯೋ, ಇಲ್ಲವೋ ಎಂಬುದು ಸರ್ಕಾರದ ಗುಟ್ಟು ತಿಳಿಯದ ನನಗೆ ಗೊತ್ತಿಲ್ಲ. ಇಂಥಾ 'ಕಂಟ್ರಾಕ್ಟನ್ನು' ಉದ್ಯೋಗಸ್ಥರು ಯಾವಾಗ ಸಹಿ ಮಾಡಿದರೋ ಎಂಬುದೂ ಗೊತ್ತಿಲ್ಲ! ಒಂದು ವೇಳೆ ಇದು ನಿಜವಾದರೆ ಸಿಬ್ಬಂದಿ ಖೋತೆ ಮಾಡುವುದು ಹೇಗೆ ಮತ್ತು ಸಿಬ್ಬಂದಿ ಖೋತೆಯ ಕಮಿಟಿಯನ್ನು ಸರ್ಕಾರದವರು ಯಾತಕ್ಕಾಗಿ ನೇಮಿಸಿರುವರು? ಮೇಲುದ್ಯೋಗಸ್ಥರಿಗೆ ಸಿಕ್ಕುವ ದೊಡ್ಡ ಸಂಬಳದೊಂದಿಗೆ ಈ ಕಮಿಟಿಯವರೂ ಸ್ವಲ್ಪ ಖರ್ಚು ಮಾಡಲೆಂದೋ? ಹೀಗೆ ಖರ್ಚು ಮಾಡಿ ಸರ್ಕಾರದಲ್ಲಿ ಮೊದಲಿನ ಉಳಿವರಿ ಇರುವ 3 ಲಕ್ಷ ರೂಪಾಯಿಯನ್ನು ಬೇಗನೆ ತೀರಿಸಿ ಬಿಟ್ಟು, ಸರ್ಕಾರವನ್ನು ನಂತರ ದೇಶವನ್ನು ದಿವಾಳಿ ಏಳಿಸಲಿಕ್ಕಾಗಿಯೋ? ಈ ತರಹದ 'ಕಂಟ್ರಾಕ್ಟು' ಇದ್ದರೆ ಹಿಂದೂದೇಶದ ಬೇರೆ ಕಡೆಗಳಲ್ಲಿ ಉದ್ಯೋಗಸ್ಥರ ಸಂಬಳವನ್ನು ಕಡಿಮೆಮಾಡುತ್ತಿರುವುದಲ್ಲದೆ, ಕೆಲವು ಹುದ್ದೆಗಳನ್ನೂ ಸಹ ತೆಗೆಯುತ್ತಿರುವುದು ಹೇಗೆ? ಹಳ್ಳಿಗಾಡಿನ ಜನರು ಹೊಟ್ಟೆಗೂ, ಬಟ್ಟೆಗೂ ಇಲ್ಲದೆ ಕಷ್ಟ ಪಡುತ್ತಿರುವ ಸಮಯದಲ್ಲಿ ಉದ್ಯೋಗಸ್ಥರು ತಮ್ಮ 'ಕಂಟ್ರಾಕ್ಟಿ'ನ ವಿಷಯ ವಾದ ಮಾಡುತ್ತಿರುವುದು ಶೋಚನೀಯ. ಉದ್ಯೋಗಸ್ಥರಿಗೆ ತಮ್ಮ ಬಡ ಸಹೋದರರ ಮೇಲೆ ಯಾವಾಗ ಕನಿಕರ ಹುಟ್ಟುವುದೋ ನೋಡುವ!

"ಬಂಧು"

ಪೊಲೀಸು ಉದ್ಯೋಗಸ್ಥರ ನೇಮಕ.

ಅಯ್ಯಾ, ನ್ಯಾಯವಾದಿಯರೇ,

ತಾ. 26—6—31 ರ ಸಂಚಿಕೆಯಲ್ಲಿ ಪೊಲೀಸು ಆಫೀಸರುಗಳ ನೇಮಕವೆಂಬ ಬಾತ್ಮಿಯಲ್ಲಿ ಕೊಡಗಿನ ಆಡಳಿತವು ಕೊಡಗರ ಕೈಯಲ್ಲಿ ಅನೇಕ ವರ್ಷಗಳಿಂದ ಇರುವದರಿಂದ ದೇಶದ ಏಳಿಗೆಗೆ ಹಾನಿಕರವೆಂಬ ಭಾವನೆಯು ಅಸೂಯೆಯಿಂದಲೂ ಸರಕಾರದವರ ಮುಂದೆ ಪಂಗಡದ ಮೇಲೆ ಆರೋಪಣೆ ಹೊರಿಸಿ, ಗಟ್ಟಿಗರು ತಮ್ಮ ಪಂಗಡದಲ್ಲಿ ಇಲ್ಲದಿದ್ದರೂ ಸುಲಭವಾಗಿ ಉದ್ಯೋಗವನ್ನು ತನ್ನ ಪಂಗಡದವರಿಗೆ ಒದಗಿಸಿಕೊಡುವ ಸುಲಭ ಉಪಾಯದ ದಾರಿ ಎಂಬದನ್ನು ಅರಿತುಕೊಂಡು ಬರೆದ ಲೇಖನಕ್ಕೆ ಸರಕಾರದವರು ಬೆಲೆ ಕೊಟ್ಟರೆ ಆಡಳಿತವೇ ಅಭದ್ರವಾದೀತೆಂಬುದರಲ್ಲಿ ಸಂಶಯವಿಲ್ಲ.

ಕೊಡಗಿನ ಆಡಳಿತವು ಬ್ರಿಟಿಷರ ಕೈಯಲ್ಲೇ ಅನೇಕ ವರ್ಷಗಳಿಂದ ನಡೆಯುತ್ತಿರುವದು, ಈಗಲೂ ನಡೆಯುವದು ಎಂಬದನ್ನು ಮರೆಮಾಚಿಕೊಂಡು ಬ್ರಿಟಿಷ್ ಸರಕಾರದವರ ಕಾನೂನು ಕಾಯಿದೆ ನಿರ್ಬಂಧನೆಗಳನ್ನು ಅನುಸರಿಸಿ ಕೆಲಸ ಮಾಡುತ್ತಿರುವ ಒಂದೆರಡು ಉದ್ಯೋಗಸ್ಥರ ನೇಮಕದ ಮೇಲೆ ಕೊಡಗರ ಮೇಲೆ ಕಣ್ಣು ಮುಂದಿಟ್ಟುಕೊಂಡು ಆಡಳಿತವೇ ಕೊಡಗರ ಕೈಯಲ್ಲಿ ಇರುವದರಿಂದ ದೇಶದ ಏಳಿಗೆಗೆ ಹಾನಿಕಾರವೆಂಬುದಾಗಿ ಬರೆದ ನಿಮ್ಮ ಅಭಿಪ್ರಾಯದ ಲೇಖನಕ್ಕೆ ಎಷ್ಟು ವ್ಯಸನಪಟ್ಟರೂ ಸಾಲದು. ಕೊಡಗಿನಲ್ಲಿ ಸಬಾರ್ಡಿನೇಟ್ ಜಡ್ಜರ, ಮುನ್ಸೀಫರ, ಇಂಗ್ಲಿಷ್ ಆಫೀಸು ಮೇನೆಜರುಗಳ ಮತ್ತು ಇತರ ಎಲ್ಲಾ ಡಿಪಾರ್ಟುಮೆಂಟುಗಳ ಹೆಡ್ ಕ್ಲಾರ್ಕರುಗಳಲ್ಲಿಯೂ ಕೊಡಗರು ಎಷ್ಟು ಜನರಿದ್ದರು, ಕೊಡಗೇತರರು ಎಷ್ಟು ಜನರಿದ್ದರು? ಮೊನ್ನೆ ತಾನೇ ರಿಟಯರ್ ಆಗಿರುವ ಡೆಪ್ಯುಟಿ ಡೈರೆಕ್ಟರರು, ಎಕ್ಸೈಜ್ ಇನ್ಸ್‌ಪೆಕ್ಟರರು ಯಾರು? ಮತ್ತು ಈಗ ಇರುವ ಕಾರ್ಡ್‌ಹ್ಯಾಂಡ್ ರಿಪೋರ್ಟರರು ಯಾರು? ಇಂಜಿನೀಯರಿಂಗ್ ಡಿಪಾರ್ಟುಮೆಂಟಿನಲ್ಲಿ ಕೊಡಗರು ಎಷ್ಟು ಜನರಿರುತ್ತಾರೆ? ಪೊಲೀಸು ಮತ್ತು ಅಬ್ಕಾರಿ ಇಲಾಖೆಯಲ್ಲಿ ಇರಬಹುದಾದ ಕೊಡಗರು ಮಾತ್ರ ಕಣ್ಣಿಗೆ ಬೀಳುತ್ತಾರೆ! ಕೂತಲ್ಲಿ ಸುಖವಾಗಿ ಕೆಲಸ ಮಾಡಿಕೊಂಡಿರುವ ಕೊಡಗೇತರರನ್ನು ಕಣ್ಣಿಗೆ ಬಿದ್ದರೂ ಬೀಳದಂತೆ ನಟಿಸುವದು ನ್ಯಾಯವಲ್ಲ. ಲಾಯರುಗಳಾಗಿ ಕೊಡಗೇತರರು ಈಗಲೂ ಎಷ್ಟು ಜನ ಇದ್ದು ಎಷ್ಟು ಸಂಪಾದಿಸಿರುತ್ತಾರೆ? ಇದಕ್ಕೆ ಕೊಡಗರು ಏನು ಅಡ್ಡಿ ಮಾಡಿರುತ್ತಾರೆ? ಸೆಲೆಕ್ಷನಿಗೆ ಇದ್ದ ವಯಸ್ಸಿನ ಪ್ರಾಯದ ನಿರಕ್ಕನ್ನು ತಪ್ಪಿಸಬೇಕೆಂಬುದಾಗಿ ಬರೆದಿರುತ್ತೀರಿ. ಪ್ರಾಯದ ನಿರಕು ಇಟ್ಟಿರುತ್ತಾರೆಯೇ ಹೊರತು ಪಂಗಡ ಭೇದ ಇಟ್ಟಿಲ್ಲವಲ್ಲ. ನಿಮ್ಮ ಪಂಗಡದಲ್ಲಿ 30 ವರ್ಷದವರು ಇರುವದರಿಂದಲೂ, ಪಂಗಡವಾದಿ ಆದ್ದರಿಂದಲೂ ಆ ಅಭಿಪ್ರಾಯ ಸೂಚಿಸಿರುತ್ತೀರಿ. ಇಲ್ಲವಾದರೆ ಐ. ಸಿ. ಎಸ್, ಮಿಲಿಟರಿ, ಪ್ರಾವಿನ್ಶಿಯಲ್ ಸರ್ವಿಸಿಗೆ ಸೇರಲು ನಿಗದಿಯು ಮಾಡಿರುವ ಪ್ರಾಯದ ನಿರಕ್ಕನ್ನು ತೆಗೆದು ಹಾಕಬೇಕೆಂತಲಾಗಲಿ, ಇಲ್ಲವೆ 30 ವರ್ಷಕ್ಕೆ ಏರಿಸಬೇಕೆಂತಾಗಲಿ ಸೂಚನೆ ಕೊಡುತ್ತಿದ್ದರೆ ಅಂಥ ಸೂಚನೆಯಿಂದ ಎಲ್ಲಾ ಪಂಗಡಕ್ಕೂ ಸಹಾಯ ಮಾಡಿದಂತೆ ಆಗುತ್ತಿರಲಿಲ್ಲವೇ? ಪೊಲೀಸ್ ಡಿಪಾರ್ಟುಮೆಂಟಿನಲ್ಲಿ ಈಗಲೂ, ಈ ವರೇಗೂ ನಿಮ್ಮ ಅಂಕೆಯಷ್ಟೆ ಜನರು ಉದ್ಯೋಗದಲ್ಲಿ ಇರುತ್ತಾರೆ. ಕೊಡಗೇತರರಲ್ಲಿ ಕೊಡಗರಿಗಿಂತ ವಿದ್ಯಾವಂತ ಯುವಕರಿಗೆ ಕಮ್ಮಿ ಏನು ಇರಲಿಲ್ಲ. ಆದರೆ ಈ ದೇಶದ ಸ್ಥಿತಿಗನುಸಾರ ಈ ಡಿಪಾರ್ಟುಮೆಂಟಿನಲ್ಲಿ ಕೆಲಸ ಮಾಡುವದು ಕಷ್ಟವೆಂತ ಅರಿತುಕೊಂಡದ್ದರಿಂದ ಅದಕ್ಕೆ ಸೇರಲು ಇಚ್ಛೆ ಪಡಲಿಲ್ಲವೆಂತ ಹೇಳಿದರೆ ತಪ್ಪಾಗಲಾರದು. ನನ್ನ ತಿಳಿವಳಿಕೆಯಲ್ಲಿ ಒಬ್ಬ ಬ್ರಾಹ್ಮಣರು ಸಬ್ ಇನ್‌ಸ್ಪೆಕ್ಟರಾಗಿ ನೇಮಕವಾಗಿದ್ದವರು 3—4 ವರ್ಷ ಸರ್ವಿಸ್ ಮಾಡಿ ಬೇರೆ ಡಿಪಾರ್ಟುಮೆಂಟಿಗೆ ವರ್ಗ ಮಾಡಿಸಿಕೊಂಡರು. ಎರಡು ಮೂರು ವರ್ಷಗಳ ಕೆಳಗೆ ಪ್ರಾಯದ ನಿರ್ಕು ಸಹ ಯೋಚಿಸದೆ ಒಬ್ಬ ಕೊಡಗೇತರರನ್ನು ಸಬ್ ಇನ್‌ಸ್ಪೆಕ್ಟರವರ ಕೆಲಸಕ್ಕೆ ಓದಲಿಕ್ಕೆ ಕಳುಹಿಸಿದರು. ಅವರು ಪಾಸಾಗದೆಯಾಗಲಿ ಯಾ ನ್ಯಾಯವಾದ ಕೆಲಸ ಮಾಡದೆಯಾಗಲಿ ಹೋದರೆ ಯಾರು ಏನು ಮಾಡಬಹುದು? 'ಕಬ್ಬಾದರೆ ಮೆದ್ದೇನು, ಕಠಿಣವಾದರೆ ವಲ್ಲೆ' ಎಂಬಂತೆ! ಈ ವರೆಗೆ ಹಗಲು ರಾತ್ರಿ ಎನ್ನದೆ ಸಣ್ಣ ಉದ್ಯೋಗದಲ್ಲಿ ಕಷ್ಟಪಟ್ಟು ಕೆಲಸ ಮಾಡಿದವರ ಪೈಕಿ ಲಾಯಕ್ಕಾದವರನ್ನು ಮೇಲಿನ ದರ್ಜೆಯ ಉದ್ಯೋಗಕ್ಕೆ ನೇಮಕ ಮಾಡಬೇಕೆಂತ ಕೂಗುವದರ ಬದಲು ಅವರನ್ನು ನೇಮಕ ಮಾಡುವದಕ್ಕೆ ಹೊಟ್ಟೆ ಉರಿಸಿಕೊಳ್ಳುವದು ಧರ್ಮವೇ?

ದೇಶದವರು ಸರ್ಕಾರಕ್ಕೆ ಕೊಡುವ ತೆರಿಗೆಯನ್ನು ಸರ್ಕಾರದವರ ತಲೆಭಾರದ ಅಧಿಕಾರಿಗಳ ಸಂಬಳಕ್ಕಾಗಿ ಖರ್ಚು ಮಾಡುವುದರಿಂದ ¾ ಭಾಗ ಮಾತ್ರ, ದೇಶದ ಏಳಿಗೆಗೆ ಕುಂದು ಕವಿದ್ದರೂ ದೇಶದ ವ್ಯಾಪಾರವು ಕೊಡಗೇತರರ ಕೈಯಲ್ಲಿ ಇರುವುದರಿಂದ ¼ ಭಾಗ ದೇಶದ ಏಳಿಗೆಗೆ ಕುಂದು ಕವಿದುದರ ಕುರಿತ ಹೇಳುವದಲ್ಲದೆ ಬರೀ ಉದ್ಯೋಗದ ನೇಮಕಕ್ಕಾಗಿ ಕೊಡಗೇತರರು ಕೊಡಗರ ಮೇಲೆ ಕತ್ತಿ ಕಟ್ಟುವದಾದರೆ ಕೊಡಗರು ತಮ್ಮ ಹಿತವನ್ನು ಬಯಸಿ ಲಾಯರುಗಳ ವೃತ್ತಿಯನ್ನು ಮತ್ತು ವ್ಯಾಪಾರಸ್ಥರ ಸಂಖ್ಯೆಯನ್ನು ಕೊಡಗರಿಗೆ ಅನುಕೂಲವಾಗುವಷ್ಟು ಕಾದಿಡಬೇಕಲ್ಲೂ, ಹಾಗೆ ಕಾದಿಡದೆ ಹೋದರೆ ಕೊಡಗೇತರ ಸಾಹುಕಾರರ ಹಾವಳಿಯಿಂದ ಕೊಡಗರು ತುಂಬಾ ಕಷ್ಟ ನಷ್ಟಗಳಿಗೆ ಒಳಗಾಗುತ್ತಾ ಇದ್ದಾರೆಂತ ಸರ್ಕಾರದವರ ಮುಂದಿಟ್ಟು ಅದಕ್ಕೆ ತಕ್ಕ ಚಳವಳವನ್ನೂ ಸಹ ಹೂಡಲೇ ಬೇಕೆಂತ ನಿಮ್ಮ ಬಾತ್ಮಿಯು ಎಚ್ಚರಿಸುತ್ತದೆ.

ಸರ್ಕಾರದವರಲ್ಲಿ ನನ್ನ ವಿನಂತಿ ಏನಂದರೆ:—ಪಂಗಡ ಭೇದಗಳನ್ನು ಕಲ್ಪಿಸಿಕೊಂಡು ಜನರು ಉದ್ಯೋಗಗಳನ್ನು ಪಡೆದುಕೊಳ್ಳಲು ಸುಲಭದೊಂದು ಉಪಾಯವೆಂತ ನೋಡಿಕೊಂಡು ಆಚರಣೆಯಲ್ಲಿ ಬಂದಿರುತ್ತೆ. ಈ ಮೇರೆ ನಡೆಯುವುದರಿಂದ ಕಾಲಕ್ರಮದಲ್ಲಿ ಆಡಳಿತವು ಅಭದ್ರವಾಗದಿರಲು ಸಾಧ್ಯವೇ ಇಲ್ಲ. ಇನ್ನಾದರೂ ಸರ್ಕಾರದವರು ಪ್ರತಿ ದಿನಲ್ಲಿ ಇರುವ ನಿಬಂಧನೆಗಳನ್ನು ಏರ್ಪಾಡು ಮಾಡಿಕೊಂಡು ಮಂತ್ರಾಲಯಗಳಲ್ಲಿಯೂ ಪಕ್ಷಪಾತವಿಲ್ಲದೆ ಪ್ರಾಮಾಣಿಕರು, ಗಟ್ಟಿಗರು ಮತ್ತು ನೀತಿವಂತರನ್ನು ಕಂಡು ಹಿಡಿದು ಪಂಗಡ ಭೇದವೆಣಿಸದೆ ಉದ್ಯೋಗಕ್ಕೆ ಜನರನ್ನು ನೇಮಿಸುತ್ತಾ ಬಂದಲ್ಲಿ ಆಡಳಿತವು ತೃಪ್ತಿಕರವಾಗಿ ನಡೆಯುವುದಲ್ಲದೆ ಜನರಿಗೆ ಸೌಕರ್ಯ ಸಹ ಉಂಟಾಗುವುದರಲ್ಲಿ ಸಂಶಯವಿಲ್ಲ. 'ನ್ಯಾಯವಾದಿ' ಎಂಬವರು ಅವರ ಹೆಸರಿಗೆ ತಕ್ಕಂಥವರಲ್ಲ. ಸರ್ಕಾರದವರ ಮನೋಭಾವನೆಯನ್ನು ಬದಲಾಯಿಸಿ ತನ್ನ ಪಂಗಡದವರಿಗೆ ಉದ್ಯೋಗ ದೊರಕಿಸಿಕೊಳ್ಳಬೇಕೆಂಬ ಅಭಿಪ್ರಾಯದಿಂದಲೇ ತನ್ನ ವಿಳಾಸ ಪೂರ್ತಿ ಹಾಕದ ಈ ಲೇಖನ ಬರೆದದ್ದೆಂಬುದು ಖಂಡಿತ.

ಹೊಸೂರು, ಕೊಡಂದೇರ ಚಂಗಪ್ಪ.

ಪೋಲೀಸ್ ಉದ್ಯೋಗಸ್ಥರ ನೇಮಕ

ವಿಷ್ಯ.

ಪೋಲೀಸ್ ಇನ್‌ಸ್ಪೆಕ್ಟರುಗಳ ಕೆಲಸಕ್ಕೆ ಉಮೇದ್ವಾರರು ಬೇಕೆಂದು ಈ ತಿಂಗಳ ಗಜೆಟಿನಲ್ಲಿ ಪ್ರಕಟವಾದ್ದನ್ನು ಓದಿದೆವು. ಈ ವಿಷಯವಾಗಿ ಕೊಡಗು ಪತ್ರಿಕೆಯಲ್ಲಿ ಈ ರೀತಿ ಒಂದೆರಡು ಚರ್ಚೆಗಳು ಹೊರಟದ್ದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಸಮಯದಲ್ಲಿ ಸರಕಾರದವರು ಯಾವ ರೀತಿ ನಡೆಯಬೇಕೆಂಬ ವಿಷಯವನ್ನು ಇಲ್ಲಿ ಕೆಲವು ಮಟ್ಟಿಗೆ ವಿವರಿಸುತ್ತೇವೆ.

ಕೊಡಗಿನ ಪೋಲೀಸ್ ಇಲಾಖೆಯು ಒಂದೇ ಕೋಮಿನ ಕೈಯಲ್ಲಿರುವುದು ಮಾತ್ರವಲ್ಲದೆ, ಇಲಾಖೆಯಲ್ಲಿ ಕಲಿಸಿ ಉಳಿದ ವರೆಗೂ ಕೇವಲ ಪತ್ರಿ ಸಂಬಂಧಿಕರಿರುತ್ತಾರೆ. ಇದು ಸ್ವಪ್ರಯೋಜನವಾದ ಆಡಳಿತೆಯ ತತ್ವಕ್ಕೆ ಸಂಪೂರ್ಣ ವಿರೋಧವಾಗಿದೆ. ಇದರಿಂದ ಕೊಡಗೇತರರಿಗೆ ಮಾತ್ರವಲ್ಲ, ಕೊಡವರಲ್ಲಿಯೂ ಅನೇಕರಿಗೆ ಅನ್ಯಾಯವಾಗುವ ಸಂದರ್ಭವಿದೆ. ಇಲಾಖೆಯಲ್ಲಿ ಒಂದೇ ಕೋಮಿನವರು ಉದ್ಯೋಗಸ್ಥರಾಗಿರುವುದರಿಂದ ದೇಶದ ಅಭಿಪ್ರಾಯಕ್ಕೆ ಇಲಾಖೆಯವರು ಗಮನಕೊಡಬೇಕಾಗುವ ಅವಶ್ಯಕತೆಯೇ ಇರುವುದಿಲ್ಲ. ಎಲ್ಲವನ್ನೂ ಅವರಿಷ್ಟದಂತೆ ನಡೆಯಿಸಿಕೊಳ್ಳಬಹುದು. ಇಲಾಖೆಯಲ್ಲಿ ಇತರ ಕೋಮಿನವರೂ ಸಹ ಇದ್ದರೆ ಇಂಥಾ ಸ್ವೇಚ್ಛೆಯ ಕೆಲಸಗಳಿಗೆ ಮಾರ್ಗವಿಲ್ಲ. ಅಗ್ಗ ಅವರು ಯಾವಾಗಲೂ ಜನರ ಅಭಿಪ್ರಾಯದಂತೆ ನಡೆದುಕೊಳ್ಳಬೇಕಾಗುವದು. ಅಲ್ಲದೆ ಇಲಾಖೆಯ ಮಲಿನತೆಯು ಕೂಡ ಹೋಗಿ ಇಲಾಖೆಯ ಸಡಕೆಗಳು ಕ್ರಮವಾಗಿ ಒರಗುವವು. ಆಡಳಿತದಲ್ಲಿ ಜಾತಿ ಭೇದ, ಪಂಗಡ ಭೇದಗಳು ಸಹ ಕಡಿಮೆಯಾಗುವವು.

ಇದಲ್ಲದೆ ಇನ್ನೊಂದು ವಿಷಯವಿದೆ. ಸರಕಾರಿ ಇಲಾಖೆಗಳ ಸ್ಥಳಿ ಪೋಲೀಸ್ ಇಲಾಖೆಯವರೇ ಜನರೊಡನೆ ಹೆಚ್ಚಾಗಿ ಮಿಳಿತವಾಗುವ ಸಂದರ್ಭವಿರುವುದು. ಹೀಗಿರುವಾಗ ಆ ಇಲಾಖೆಯಲ್ಲಿ ಪೂರ್ತಿ ಒಂದೇ ಕೋಮಿನವರಿದ್ದರೆ ಇತರ ಪಂಗಡದವರಿಗೆ ಅನೇಕ ರೀತಿಯಲ್ಲಿ ಕಷ್ಟ ಉಂಟಾಗುವುದು. ಮೊಕದ್ದಮೆಗಳು ಬಂದಾಗ, ಸ್ವಭಾವಿಕವಾಗಿ, ಉದ್ಯೋಗಸ್ಥರ ಸ್ವಜಾತಿಯವರಿಗೆ ಧೈರ್ಯವೂ, ಇತರ ಜಾತಿಯವರಿಗೆ ಅಧೈರ್ಯವೂ ಉಂಟಾಗುವುದು. ಹೀಗೆ ಕೊಡಗೇತರರು ಧೈರ್ಯಗೆಟ್ಟು ಸಂಕಟದ ಆಡಳಿತದಲ್ಲಿ ತಮಗಿರುವ ಹಕ್ಕನ್ನು ತಿಳಿದುಕೊಳ್ಳುವ ಶಕ್ತಿ ಇಲ್ಲದ ತಾವು ಸದಾ ಪೋಲೀಸ್ ಉದ್ಯೋಗಸ್ಥರ ಇಷ್ಟದಂತೆ ನಡೆದುಕೊಳ್ಳಬೇಕೆಂದೂ, ಅವರ ಅನುಕೂಲಕ್ಕೆ ಇಷ್ಟಕ್ಕೂ ತಪ್ಪಿ ನಡೆದರೆ ತಮಗೆ ತುಂಬಾ ತೊಂದರೆಯುಂಟಾದೀತೆಂದೂ ತಿಳಿದುಕೊಳ್ಳುವರು.

ಅದೇ ನಿಜವಾಗಿ ಈಗ ಕೊಡಗಿನಲ್ಲಿರುವ ಸ್ಥಿತಿಯಾಗಿದೆ. ಆದ್ದರಿಂದ ಬ್ರಿಟಿಷ್ ಅಧಿಕಾರಿಗಳು ದೇಶದ ಸರ್ವರ ಹಿತವನ್ನು ಬಯಸುವುದಾದರೆ, ಕೊಡಗೇತರರಿಗೆ ದೇಶದ ಆಡಳಿತದಲ್ಲಿ ನ್ಯಾಯವಾದ ಭಾಗವನ್ನು ಕೊಡುವುದು ಅತ್ಯಾವಶ್ಯಕ. ದೇಶದ ಹಿತಚಿಂತಕರೂ, ದೂರದೃಷ್ಟಿಯುಳ್ಳವರೂ ಆದ ಬ್ರಿಟಿಷ್ ಅಧಿಕಾರಿಗಳು ಈ ವಿಷಯವನ್ನು ಗಮನಕ್ಕೆ ತಂದು ಈಗ ಖಾಲಿ ಬಿದ್ದಿರುವ ಎರಡು ಸ್ಥಳಗಳಿಗೂ ಯೋಗ್ಯರಾದ ಕೊಡಗೇತರರನ್ನು ನೇಮಿಸತಕ್ಕದ್ದು. ಇದಿಷ್ಟು ಆಡಳಿತದಲ್ಲಿ ಭಾಗಿಗಳಾಗದಿರುವ ಕೊಡಗೇತರರ ಹಕ್ಕಾಗಿರುವುದು, ಮತ್ತು ಈ ಸ್ಥಳಗಳಿಗೆ ಯೋಗ್ಯರಾಗಿರುವ ಕೊಡಗೇತರ ಯುವಕರು ಬೇಕಾದ ಹಾಗೆಯೂ ಸಿಕ್ಕುತ್ತಾರೆ. ಹೀಗೆ ನಡೆದುಕೊಂಡರೆ ಇಲಾಖೆಯ ಮಲಿನತೆಯು ಹೋಗಿ, ಸ್ವಚ್ಛವಾಗುವುದು ಮತ್ತು ದೇಶದ ಎಲ್ಲಾ ಕೋಮಿನವರಲ್ಲಿಯೂ ಸಮಾಧಾನ ಉಂಟಾಗುವುದು. ಎಂದು ಸರಕಾರದವರು ಮರೆಯಬಾರದು.

"ಕೊಡಗೇತರ"

ಕೊಡಗಿನಲ್ಲಿ ರಾಷ್ಟ್ರೀಯ ಧ್ವಜದ ಪ್ರಚಾರ.

(ಕೊಡಗಿನ ಸಂವಾದದಿಂದ)

ಮಹನೀಯರೆ

ಅಖಿಲ ಹಿಂದೂಸ್ಥಾನದಂತೆಯೇ ಕೊಡಗು ಸಹ ರಾಷ್ಟ್ರೀಯ ಧ್ವಜ ಸಂಬಂಧ ತನ್ನ ಮಹತ್ವದ ಕಾರ್ಯವನ್ನು ಮಾಡಿದೆ. ಎರಡು ವರ್ಷಗಳ ಹಿಂದೆ ಅಂದರೆ 1929ನೇ ಇಸವಿ ಮೇ ತಾರೀಖು ೬ರಲ್ಲಿ ಪೊನ್ನಂಪೇಟೆ ಕಾಶಾಲಪುರದಲ್ಲಿ ತಿಂಗಳ ಕೊನೆಯ ಆದಿತ್ಯವಾರ ಧ್ವಜಾಭಿವಂದನೆಯು ಸುರು ಮಾಡಲ್ಪಟ್ಟಿತು.

1929ನೇ ಇಸವಿ ರಾಷ್ಟ್ರೀಯ ಮಹಾಸಭೆಯ ಆಜ್ಞೆಯಂತೆ 1930ನೆ ಇಸವಿ ಜನವರಿ ತಾರೀಖು 25ರಲ್ಲಿ ಕಾಶಾಲಪುರದಲ್ಲಿ ಇಡೀ ಹಿಂದೂಸ್ಥಾನದಂತೆಯೇ ಸ್ವಂತ್ರ ದಿನವೂ ಆಚರಿಸಲ್ಪಟ್ಟಿತು

1930ನೇ ಇಸವಿ ಏಪ್ರಿಲ್ ತಾರೀಖು 27ರಲ್ಲಿ ಪೊನ್ನಂಪೇಟೆ ಕಾಶಾಲಪುರದಿಂದ ರಾಷ್ಟ್ರೀಯ ಧ್ವಜಾಭಿವಂದನೆಯನ್ನು ಮಾಡಿ ಕೊಡಗು ಸತ್ಯಾಗ್ರಹ ಮಂಡಳಿಯು ಹೊರಟಿತು. ಸದರಿ ಸತ್ಯಾಗ್ರಹ ಮಂಡಳಿಯು ಹೋದ ಹೋದ ಹಳ್ಳಿಗಳಲ್ಲಿಯೂ ಮತ್ತು ಪಟ್ಟಣಗಳಲ್ಲಿಯೂ ರಾಷ್ಟ್ರೀಯ ಧ್ವಜವನ್ನು ಹಾರಿಸುವುದು ಅದರ ಮಹತ್ವವನ್ನು ಜನರಿಗೆ ತಿಳಿಸುವುದು, ಎಲ್ಲ ಸೂಚನೆಗಳ ಪ್ರಚಾರ ಕೆಲಸವಾಗಿತ್ತು. ಅದರಿಂದ ಆ ಕಾಲದಲ್ಲಿ ಕೊಡಗಿನ ಎಲ್ಲಾ ಭಾಗಗಳಲ್ಲಿಯೂ ರಾಷ್ಟ್ರೀಯ ಧ್ವಜವು ಏರಿಸಲ್ಪಟ್ಟಿತು. 1930ನೇ ಇಸವಿ ಡಿಸೆಂಬರು ತಾರೀಖು 17ರಲ್ಲಿ ಕೊಡಗಿನ ಇತಿಹಾಸ ಪ್ರಸಿದ್ಧವಾದ ಮಡಿಕೇರಿ ಕೋಟೆಯ ಮೇಲೂ ರಾಷ್ಟ್ರೀಯ ಧ್ವಜವು ಸತ್ಯಾಗ್ರಹಿಗಳಿಂದ ಹಾರಿಸಲ್ಪಟ್ಟು ಇವರು ಸತ್ಯಾಗ್ರಹಿಗಳು ಸರಕಾರದವರಿಂದ 2 ತಿಂಗಳು, ಮೂರು ವಾರದ ಕಠಿಣ ಶಿಕ್ಷೆಗೆ ಗುರಿ ಮಾಡಲ್ಪಟ್ಟರು

ಈಗಲೂ ಅನೇಕ ಭಾಗಗಳಲ್ಲಿ ಪ್ರತಿ ತಿಂಗಳ ಕೊನೆ ಆದಿತ್ಯವಾರ ರಾಷ್ಟ್ರೀಯ ಧ್ವಜವು ಏರಿಸಲ್ಪಡುವದೆಂಬುದು ಸಂತೋಷದ ಸಂಗತಿಯು.

ಆದರೆ ಅದರ ವರದಿಯು ನಮ್ಮ ಕೈಸೇರುವದಿಲ್ಲ. ಆದರಿಂದ ಯಾವ ಯಾವ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ರಾಷ್ಟ್ರೀಯ ಧ್ವಜಾಭಿವಂದನೆಯು ನಡೆಸಲ್ಪಡುವದೆಂಬ ವರದಿಯು ಲೆಕ್ಕವು ನಮಗೆ ಅವಶ್ಯವಾದ್ದರಿಂದಲೂ, ಮತ್ತು ಹಿಂದೂಸ್ಥಾನ ಸೇವಾದಳಕ್ಕೆ ಅದರ ವರದಿಯನ್ನು ಕಳುಹಿಸಬೇಕಾದುದರಿಂದಲೂ, ರಾಷ್ಟ್ರೀಯ ಧ್ವಜಾಭಿವಂದನೆಯನ್ನು ಮಾಡುವ ಪ್ರತಿ ಸ್ಥಳಗಳಿಂದಲೂ ಅದರ ವರದಿಯನ್ನು ಈ ಕೆಳಗೆ ಕಂಡ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ತಮ್ಮನ್ನು ಕೇಳಿಕೊಳ್ಳುತ್ತೇವೆ.

ಧ್ವಜಾಭಿವಂದನೆಯನ್ನು ಮಾಡಿದ ಮೂರು ದಿನಗಳೊಳಗೆ ತಮ್ಮ ವರದಿಯು ನಮ್ಮ ಕೈಸೇರತಕ್ಕದ್ದು. ನಾಲ್ಕನೇಯ ದಿನದಲ್ಲಿ ನಾವು ಅದನ್ನು ಹಿಂದೂಸ್ಥಾನಿ ಸೇವಾದಳಕ್ಕೆ ಕಳುಹಿಸಬೇಕಾಗುವದು. ವರದಿಯಲ್ಲಿ ನಮಗೆ ತಿಳಿಸತಕ್ಕ ವಿಷಯಗಳು —

1. ರಾಷ್ಟ್ರೀಯ ಧ್ವಜಾಭಿವಂದನೆಯನ್ನು ಮಾಡಿದ ಸ್ಥಳದ ಹೆಸರು, ಮತ್ತು ಗ್ರಾಮದ ಅಥವಾ ಪಟ್ಟಣದ ಹೆಸರು. 2. ಹಾಜರಿದ್ದ ಜನರ ಸಂಖ್ಯೆ. 3 ಅವರಲ್ಲಿ ಮಹಿಳೆಯರ ಸಂಖ್ಯೆ. 4. ಅಧ್ಯಕ್ಷರ ಹೆಸರು (ಧ್ವಜಾಭಿವಂದನೆಯ ಕಾಲದ)

ನಮಗೆ ವರದಿ ಕಳುಹಿಸತಕ್ಕವರ ಪೂರ್ಣ ಹೆಸರು ಗ್ರಾಮ ಮತ್ತು ಪೋಸ್ಟು ಇವುಗಳನ್ನು ತಿಳಿಸಬೇಕು.

ಈ ರೀತಿಗೆ ನಡಿಸುತ್ತಾ, ಒಂದಂತೆ ಇನ್ನು ಮುಂದಕ್ಕೂ ರಾಷ್ಟ್ರೀಯ ಧ್ವಜಾಭಿವಂದನೆಯನ್ನು ಕೊಡಗಿನ ಎಲ್ಲಾ ಭಾಗಗಳಲ್ಲಿಯೂ ನಡಿಸುತ್ತಾ ಬಂದು, ರಾಷ್ಟ್ರೀಯ ಕಾರ್ಯವನ್ನು ಮುಂದುವರಿಸಲು ತಾವೆಲ್ಲರೂ ಸಹಾಯಕರಾಗಿದ್ದೀರೆಂದು ನಂಬಿದ್ದೇವೆ

ಎ. ಯಸ್. ಚಿನ್ನಪ್ಪ,
ಬಸವನಪುರ,
ತಿತಿಮತಿ

"ರೂಪಾಯಿಗಳು 5-8-0 ಮಾತ್ರ.

ನಮ್ಮ ಉಚಿತ ಜೀವವಿಮೆಯು ಅನೇಕ ಬಡಬಗ್ಗರನ್ನು ಕಾಪಾಡಿದೆ.

ನೀವೇಕೆ ಹೊಂದಬಾರದು ?

ಈಗ ಆಗಲೇ 75,000 ಜನಗಳು ಮೆಂಬರಾಗಿದ್ದಾರೆ.

ಹಣ ರೂ. 2,00,000.

ಬಡವರಿಗೆ ಭಾಗ್ಯಕಾಲ! ಎಲ್ಲರಿಗೂ ಅನುಕೂಲ!!

WANTED.

One Chief Agent for Coorg at Virajpet on Rs 50/- plus Rs. 7/8/- per mensum

For terms apply :-

A. A. MANDANNA.
Branch Secretary
The Venus Assurance Co., Ltd.
Bore-Bank Road,
Benson Town,
12-12 Bangalore City.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಗ್ಯಾರಂಟಿ ಆದ ಫೌಂಟೆನ್‌ಪೆನ್‌ಗಳು			ಟೈಂಪೀಸ್‌ಗಳು.		
ವಂಡರ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ 3 0 0		ಅಲಾರಂ ಇರುವ ಸಾದಾ ಟೈಂಪೀಸ್	1ಕ್ಕೆ	3 6 0
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3 3 0		ಜರ್ಮನ್ ಮೇಡ್ ಸಣ್ಣ ಟೈಂಪೀಸ್	1ಕ್ಕೆ	2 2 0
„ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3 8 0		ಬೆಳಗುವ ಅಲಾರಂ ಟೈಂಪೀಸ 1ಕ್ಕೆ 6 9 0 &		6 15 0
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮಾರ್ಬಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3 14		ಬೆಳಗುವ ಸ್ವಿಟ್ಸರ್ ಅಲಾರಂ ಟೈಂಪೀಸ್	1ಕ್ಕೆ	7 2 0
„ ಮಾರ್ಬಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4 [illegible] 0		ಬೆಳಗುವ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಸೈಜಿನದು	1ಕ್ಕೆ	8 10 0
„ ಸೆಲ್ಫ್ ಫಿಲ್ಲಿಂಗ್ ಮಾರ್ಬಲ್ ಅಥವ ಬ್ರವುನ್ ಕಲರ್ ಫೌಂಟನ್‌ಪೆನ್ 1ಕ್ಕೆ	[illegible] 0		ಎಂಗ್ಲೆನ್ ಅಲಾರಂ ಟೈಂಪೀಸ್	1ಕ್ಕೆ	9 6 0
ಬಿಗ್ ಸ್ಟ್ಯಾಂಡರ್ಡ್ ಫೌಂಟನ್‌ಪೆನ್	1ಕ್ಕೆ 10 8 0		ಎಂಗ್ಲೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಎತ್ತರದ ಟೈಂಪೀಸ್	1ಕ್ಕೆ	13 4 0
ಪಾರ್ಕರ್ ಪೆನ್	1ಕ್ಕೆ 14 0 0, & 20 10 0		ಜರ್ಮನಿಯೂ ಒಂದೋಳಸ್ತು ಆದ ಪಾಕೆಟ್ ವಾಚ್	1ಕ್ಕೆ	5 10 0
ಬ್ಲ್ಯಾಕ್‌ಬರ್ಡ್ ಫೌಂಟನ್‌ಪೆನ್	1ಕ್ಕೆ 3 8 0, & 3 12 0		ಹೊಸ ನಮೂನೆಯಲ್ಲಿ ಎಚ್. ಹಾರ್ಡಿ ಕಂಪನಿಯ ಪಾಕೆಟ್ ವಾಚ್	1ಕ್ಕೆ	1 4 0
ಸ್ವಾನ್ ಫೌಂಟನ್ ಪೆನ್	1ಕ್ಕೆ 6 4 0, & 6 12 0		ನಿಕ್ಕಲ್ ಕೇಸ್ ಸಿಲಿಂಡರ್ ಮೂವ್ಮೆಂಟ್ ಸಾಧಾರಣ ಕೈಗಡಿಯಾರ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 &	12 8 0
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ	8 2 0, & 8 10 0				



ಇಲ್ಲಿ ತೋರಿಸಿದ ಹೊಸ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3-6-0 ಪ್ಯಾಕಿಂಗ್ ಪೋಸ್ಟೇಜು ಅಲಾಯಿದಾ

ಮಂಗಳೂರು ದವಾಖಾನೆ ಹಾದಿ — ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52-1

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ
ಶೇರ್ ಬಂಡವಾಳ	—	50 000
ವಸೂಲಾದ ಶೇರ್ ಮೊಬಲಗು	—	23 160
ಜಮೂಬಂಡ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0-0ರ ದರದಲ್ಲಿ ಬಡ್ಡಿ ದೊರೆಯುತ್ತ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತ

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ

ಪ್ರೆಸಿಡೆಂಟರು	ಟ್ರೇಷರರ್
ಗುಡ್ಡಂಡ ಅಪ್ಪಯ್ಯನವರು	ಮನಿಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್	ನವರು

ಸೆಕ್ರೆಟರಿ

ಬಿ ಎಸ್ ವೆಂಕಟ್ಟಯ್ಯನವರು ಬಿ ಎ ಬಿ ಎಲ್

ತಾರೀಖು 1 7-1940

ಸಣ್ಣ ಹುಡುಗರ ಸಲುವಾಗಿ

ಬಾಲಾಮೃತ

ಇವರ

ಬಾಲಾಮೃತ.

ವನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷ ಚಿತ್ತರೂ ಆಗುವರು.

ಕ. ಟಿ. ಜೋಂಗರೆ ಕಂಪನಿ,

52–27 ಗಿರಿಗಾಂವ್, ಮುಂಬಯಿ.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜಂಟರುಗಳಿಗೆ ಏಜಂಟ್ ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು

ಉತ್ತರ ಕೊಡಗಿಗೆ ಮೆ ಪಾಲೇಂಗಡ ಕಾರ್ಯಪ್ಪನವರು,
" ಕಾರಿರ ಪೂವಯ್ಯನವರು,

ದಕ್ಷಿಣ ಕೊಡಗಿಗೆ ಮೆ ಅಲ್ಲಾರಂಡ ಮೇದಪ್ಪನವರು,
" ಮೆ ಚೆಕ್ಕೆರ ಪೊನ್ನಯ್ಯನವರು
" ಮೆ ಸೋಮೆಯಂಡ ಅಚ್ಚಯ್ಯನವರು,
ಮುರನಾಡು—ಮೆ ಕೇಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ)
ನಾಪೋಕ್ಲು—ಎಮ್ ಆರ್ ವೆಂಕಪ್ಪಯ್ಯನವರು
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು
ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರು,
ಅಮ್ಮತಿ—ಸಿದ್ದಾಪುರ—ಮೆ ಬಸಂತ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಬಿ ಮುದ್ದಯ್ಯನವರು,
" ಪಿ ಸಣ್ಣುವಂಡ ಬೋಪ್ಪಯ್ಯನವರು
ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು.
ಹುದಿಕೇರಿ & ತಿತಿಮತಿ—ಮೆ ಜಿ ಮಾದಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ

ಸರಕಾರಿ ಭದ್ರತೆ ಇರುವ,

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ ಒಟ್ಟು ಪ್ರೀಮಿಯಮಿನ ವರವಾನೆ—179
ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ ಪಾಲಿಸಿದಾರರಿಗೆ ಸಾಲ—8013 ಜನರಿಗೆ 3
ಬಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78 322 ಜನರಿಗೆ 38ಕೋಟಿ
ಮೇಲಿನ ಕಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22 4ರಕ್ಕಿಂತ ವಿಾರದ ಕಮ್ಮಿ ಖರ್ಚಿನಲ್ಲಿಯೇ ನಡೆ
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ
ಜೀವನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂಬ ಇಚ್ಛೆ,
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಉತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಕಂಪನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡಿಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾಲಿಗಾಂವ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ

ಕೊಡಗಿನ ಗುಡುಗುಡು ಎಂಬ ಚಳಿ ಜ್ವರಕ್ಕೂ, ಬಹು ದಿನ ಜ್ವರಕ್ಕೂ, ಗಟ್ಟಿಯಾದ ಜ್ವರಗೆಡ್ಡೆಗೂ ಗುಣ ಕೊಡುವದೆಂದು ತಿಳಿದಿರಾಗೋಣ ರಾಜಮುದ್ದು ಮಲೇರಿಯ ಸಂಪೂರ್ಣ ಜ್ವರವನ್ನು ಗುಣಪಡಿಸಿ ಗೆಡ್ಡೆಯನ್ನು ಕರಗಿಸಿ ಬಿಡುತ್ತದೆಂದು ಸ್ಥಿರ ನಂಬು ಕ್ರಯ ಬಾಟ್ಲಿ ½ ಡಜನ್ 8—8—0. 1 ಡಜನ್ 16—8—0

ಕಂಪೌಂಡು ಸಿರಪ್ಪು ಬ್ಲಡ

ಗುರುಗುರು ಉಬ ಸ ಸೆ ವಸಡ ರೋಗದೊಡನೆ ಕಫ ಗಟ್ಟಿಯಾಗಿ ಎಳದಾಟ ಎದೆ ಮತ್ತು ಪಾರ್ಶ್ವಗಳು ನೋಯುವುದಕ್ಕ ಅತಿ ಸಂಕಷ್ಟದಿಂದ ನರಳುವ ರೋಗಿಯು ಈ ಕಂಪೌಂಡು ಸಿರಪ್ಪು ಬ್ಲಡ ಎಂಬದನ್ನು ತಕ್ಷಣ ತಂದು ಕುಡಿಯಲಿ ಕ್ರಯ ಬಾಟ್ಲಿಗೆ ರೂ 1—8—0.

ಕಂಪೌಂಡು ಸಿರಪ್ಪು ಬಸಲೀನ:—ಶ್ವಾಸಕೋಶದ ಕ್ಷಯವೆಂಬ ರೋಗಕ್ಕೆ ಈ ಸಿರಪ್ಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿ ಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು ಕೆಮ್ಮು ಎದೆನೋವು ರಕ್ತ ಬೆರತ ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ಬಂದರಿಯದಂತ ಶಾಶ್ವತ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3—8—0

ಕಂಪೌಂಡು ಸಿರಪ್ಪು ಸೆಬೀನ ಸೇಟಿಯ:—ಹೆಂಗಸರ ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ಬಿಳಿ ಸೆರಗು ಎಂಬ ರೋಗದಿಂದ ಸೊಂಟನೋವು ಕೈಕಾಲು ಎಳೆತ ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಗೊಳಿಸುವುದು ಕ್ರಯ ಬಾಟ್ಲಿಗೆ ರೂ 3—8—0.

ಕಂಪೌಂಡು ಸಿರಪ್ಪು ವೆಸಿಥೂಪ — ಪ್ರಮೇಹವೆಂಬ ಗುಪ್ತರೋಗವನ್ನು ಪಡಕೊಂಡು ಮೂತ್ರ ಬಿಂದು ಬಿಂದುಗಳಾಗಿ ದ್ವಾರದೊಳಗೆ ಹುಣ್ಣು ವ್ರಣಗಳು ದುರ್ವಾಸನೆ ಕೂಡಿದ ಹಳದಿ ಎಂಬದ ರೇಸಿಗೆ ಇತ್ಯಾದಿ ಕಠಿಣ ತರದ ರೋಗವನ್ನು ಈ ಬದಿವಾರ ಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವದು . ಕ್ರಯ ಬಾಟ್ಲಿಗೆ ರೂ 3—8—0.

ಸರ್ವ ಟಿಕ್ಚರ್ ಮದ್ದುಗಳೂ ಹೋಮಿಯೋಪಥಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಪುಟ 3 —6ರ ವರೆಗೆ ಓದಿಕೊಂಡು ಬರೆಯುತಕ್ಕದ್ದು ಪರೀಕ್ಷಿಸಿ ಕೊಡುವ ಪ್ರತ್ಯುತ್ತರಗಳೂ ಬಹಳಗೆ ಇದಕ್ಕೆ ಒಳ್ಳೇ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಕ್ರಯಕ್ಕೆ ಸಿಗುವುದು

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ

52–36 **Malariana Co.,**
Hampankatta No 14 Mangalore

ವಿಳಾಸ —ಮಲೇರಿಯಾನ ಕಂಪೆನಿ,
ಹಂಪನಕಟ್ಟೆ ಜಾಗರ್ಬೈಲ್ 14, ಮಂಗಳೂರು

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರ

ಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಧಿಕೃತ ಬ್ಯಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸ ಕ್ರಮ ಪ್ರಕಾರ ನಡಿಸಲು ಆವಶ್ಯವಾಗಿರುವ, ಪ್ರಕಾರವಾಗಿ ತಯಾರಿಸಲ್ಪಟ್ಟಿರುವ ದಾವೆ ಫಾರಂ ಬಿರಾರು ಫಾರಮುಗಳೂ, ಬಟ್ಟೆ ಮಂಜೂರಾತಿ ಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಬಿರಾರು ಫಾರಮುಗಳೂ ಸ್ಟೋರ್ ಕೀಪರ್ ಬಿರಾರು ರಮುಗಳೂ ಓನರ್ ಪುಸ್ತಕಗಳೂ ರಶೀತಿ ಪುಸ್ತಕ ಬವರೂ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಬೇರೆ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುವುದು ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ಮೂಲಕ ಕಳುಹಿಸಲಾಗುವುದು

ಮೇನೇಜರ್,
'ಕೊಡಗು' ಆಫೀ
ಮಡಿಕೇ

Printed & published by P I Belliappa at "Kodagu" Press M
for 'Kodagu' Ltd

ಕೊಡಗು.

ಸನ್ ೧೯೩೧ನೇ ಇಸವಿ

ಜುಲೈ ತಾ. ೧೭ನೇ ಶುಕ್ರವಾರ.

ವರ್ಕಿಂಗ್ ಕಮಿಟಿಯ ತೀರ್ಮಾನ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ಮುಖ್ಯವಾದ ಕೂಟವೊಂದು ವೊನ್ನೆ ತಾನೇ ಬೊಂಬಾಯಿಯಲ್ಲಿ ನಡೆಯಿತು. ಕಮಿಟಿಯ ಚರ್ಚೆಗೆ ಬಹು ಮುಖ್ಯವಾದ ವಿಷಯಗಳಿದ್ದುದರಿಂದ ಕಮಿಟಿಯವರು ತಾ 7ರಿಂದ 10ರ ವರೆಗೆ ಹಗಲಿರುಳು ಕೂತು ತಮ್ಮ ಕೆಲಸವನ್ನು ಮುಗಿಸಿದರು. ಡೆಲ್ಲಿ ಸಂಧಿಯ ಶರತುಗಳಿಗನುಸಾರವಾಗಿ ಸರ್ಕಾರಿ ಉದ್ಯೋಗಸ್ಥರು ನಡೆಯುತ್ತಿರುವರೋ ಎಂಬುದನ್ನು ಕಂಡು ಹಿಡಿಯುವುದು ಮತ್ತು ಕೋಮುವಾರು ಚುನಾವಣೆಯ ಪ್ರಶ್ನೆಯನ್ನು ಹೇಗೆ ತೀರ್ಮಾನಿಸುವುದು ಎಂಬ ಇವೆರಡು ಸಂಗತಿಗಳು ಕಮಿಟಿಯ ಮುಂದಿದ್ದ ಪ್ರಾಮುಖ್ಯ ಪ್ರಶ್ನೆಗಳಾಗಿದ್ದುವು. ಇವರಡನ್ನು ಕಮಿಟಿಯವರು ದೇಶದ ವರೆಗೆ ಒಪ್ಪುವಂತೆ ತೀರ್ಮಾನಿಸಿರುವುದು ಸಂತೋಷದ ಸಂಗತಿಯಾಗಿದೆ.

ಗಾಂಧಿ—ಇರ್ವಿನ್ ಒಪ್ಪಂದದ ಶರತುಗಳನ್ನು ಅಕ್ಷರಶಃ ಪಾಲಿಸಲು ಮಹಾತ್ಮರ ಕೋರಿಕೆಯಂತೆ ಕಾಂಗ್ರೆಸಿನವರು ಎಷ್ಟು ಪ್ರಯತ್ನಿಸುತ್ತಾ ಇರುವರಾದರೂ ಪ್ರಾಂತೀಕ ಸರಕಾರಗಳ ಅಧಿಕಾರಿಗಳು ಸದರಿ ಶರತುಗಳಿಗೆ ವಿರೋಧವಾಗಿ ವರ್ತಿಸುತ್ತಾ ಸರ್ಕಾರವು ಕಾಂಗ್ರೆಸ್ಸಿನೊಂದಿಗೆ ಯುದ್ಧ ಮಾಡುತ್ತಿದೆಯೋ ಎಂದು ತೋರುವ ಸಂದರ್ಭಗಳು ಹಲವು ಮಹಾತ್ಮರ ತಿಳುವಳಿಕೆಗೆ ಬಂದು, ಅವರು ಅವುಗಳನ್ನು ಕಳೆದ ವಾರದ 'ಯಂಗ ಇಂಡಿಯ' ಪತ್ರಿಕೆಯಲ್ಲಿ ಪ್ರಕಟಿಸಿರುವರು. ಈ ಸಂಗತಿಗಳು ಮಹಾತ್ಮರಿಗೆ ಹಲವು ದಿನಸಗಳ ವೊದಲೇ ತಿಳಿದಿದ್ದರೂ ಕೂಡ ಸಂಬಂಧಪಟ್ಟ ಪ್ರಾಂತೀಕ ಸರಕಾರಗಳಿಗೆ ಬರೆದು ತಿಳಿಸಿದ್ದಲ್ಲಿ ಅಧಿಕಾರಿಗಳು ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವರೆಂದು ಅವರು ಕಾದು, ನಿರಾಶರಾಗಿ, ಅವುಗಳನ್ನು ವೊನ್ನೆ ಪ್ರಕಟಿಸಿರುವದೆಂದು ಅವರೇ ಹೇಳಿರುತ್ತಾರೆ. ಅಲ್ಲದೆ ವರ್ಕಿಂಗ್ ಕಮಿಟಿಯ ಕೂಟವು ಪ್ರಾರಂಭವಾದೊಡನೆ ಮಹಾತ್ಮರು ಕಮಿಟಿ ಮೆಂಬರುಗಳಿಂದ ಎಲ್ಲಾ ಪ್ರಾಂತ್ಯಗಳ ಸಮಾಚಾರವನ್ನು ಅರಿತುಕೊಂಡು, ಅಧಿಕಾರಿಗಳ ವರ್ತನೆಯನ್ನು ಕುರಿತು ವೈಸರಾಯರಿಗೆ ತಂತೀ ವಾರ್ತೆ ಕಳುಹಿಸಿದರು. ಲಾರ್ಡ್ ವೆಲ್ಲಿಂಗ್ಡನ್‌ರವರು ರಾಜಿ ಶರತುಗಳನ್ನು ಸರ್ಕಾರದವರು ಸಂಪೂರ್ಣವಾಗಿ ಪಾಲಿಸುವರು ಎಂಬ ಭರವಸೆಯ ಜವಾಬನ್ನು ಮಹಾತ್ಮರಿಗೆ ಕೊಟ್ಟ ಕಾರಣ ಅದರಿಂದ ಕಾಂಗ್ರೆಸ್ ಮುಂದಾಳುಗಳಿಗೆ ಸಮಾಧಾನ ಉಂಟಾಗಿದೆಯೆಂದು ವರ್ತಮಾನವಿದೆ. ಅಲ್ಲದೆ ವೈಸರಾಯರ ಕೋರಿಕೆ ಮೇರೆ ಮಹಾತ್ಮ ಗಾಂಧಿಯವರು ಈ ತಾ. 15ರಲ್ಲಿ ಸಿಮ್ಲಾಕ್ಕೆ ಹೋಗಿ ಈ ಸಂಬಂಧ ಅವರೊಂದಿಗೆ ಮಾತಾಡಬೇಕಿದ್ದರು. ಈ ಸಂಭಾಷಣೆಯ ಫಲಿತಾಂಶವೇನಾಗಿದೆಯೆಂದು ಇಷ್ಟರ ವರೆಗೆ ತಿಳಿಯ ಬಂದಿರುವುದಿಲ್ಲ.

ಇಂಡಿಯಾ ಸರ್ಕಾರದ ಮುಖ್ಯ ಅಧಿಕಾರಿಯಾದ ವೈಸರಾಯರು ರಾಜಿ ಒಪ್ಪಂದವನ್ನು ಸಂಪೂರ್ಣವಾಗಿ ನಡಿಸಿಕೊಡುತ್ತೇವೆಂದು ಆಗಾಗ್ಯೆ ಭರವಸೆ ಕೊಡುತ್ತಿದ್ದರೂ ಹಲವು ಕಡೆಗಳಲ್ಲಿ ಸ್ಥಳೀಯ ಉದ್ಯೋಗಸ್ಥರು ಹೇಗೆ ವೈಸರಾಯರ ಮಾತನ್ನು ಉಲ್ಲಂಘಿಸಿ, ಕಾಂಗ್ರೆಸ್ ಕೆಲಸಗಾರರ ಮೇಲೆ ಸಂಶಯ ಪಡುತ್ತಾ ಡೆಲ್ಲಿ ಸಂಧಿಗೆ ವಿರೋಧವಾಗಿ ವರ್ತಿಸುತ್ತಿರುವರೆಂಬುದು ಆಶ್ಚರ್ಯವನ್ನುಂಟುಮಾಡುತ್ತದೆ. ದುಷ್ಟಾಳಿಕೆಯ ಹುಕುಂ ಏನಾದರೂ ವೈಸರಾಯರಿಂದ ಹೊರಟಿತೆಂದರೆ ಸರ್ಕಾರಿ ಸರ್ವ ಉದ್ಯೋಗಸ್ಥರೂ ಅದನ್ನು ಅಕ್ಷರಶಃ ಪಾಲಿಸುವರು. ಹಾಗೆಯೇ ವೈಸರಾಯರ ಶಾಂತಿಸ್ಥಾಪನೆ ಹುಕುಮನ್ನು ಉದ್ಯೋಗಸ್ಥರು ಯಾಕೆ ಅನುಸರಿಸಿ ನಡೆಯುವುದಿಲ್ಲ ಎಂಬದನ್ನು ತಿಳಿಯಲು ಕಷ್ಟವಾಗಿದೆ. ಒಂದು ವೇಳೆ ವೈಸರಾಯರು ಪ್ರಾಂತೀಕ ಅಧಿಕಾರಿಗಳಿಗೆ ಸ್ಪಷ್ಟವಾಗಿ ಹುಕುಂ ಕಳುಹಿಸದೆ ಇರಬೇಕು, ಇಲ್ಲವಾದರೆ ಮೇಲು ಅಧಿಕಾರಿಗಳಿಗೆ ಕೆಳ ಉದ್ಯೋಗಸ್ಥರ ಮೇಲಿರುವ ಹಿಡಿತವು ಕಮ್ಮಿಯಾಗಿರಬೇಕು. ಇವೆರಡರಲ್ಲಿ ಯಾವದಾದರೊಂದು ಸಂಭವಿಸದಿದ್ದಲ್ಲಿ 'ಸರ್ಕಾರದವರು ಕಾಂಗ್ರೆಸ್ಸಿನ ಮೇಲೆ ಯುದ್ಧ ಮಾಡುತ್ತಿರುವಂತೆ ತೋರುತ್ತಿರಲಿಲ್ಲ. ಇವೆರಡರಲ್ಲಿ ಯಾವದು ಆಗಿರಬಹುದೆಂದು ವಾಚಕರೇ ಊಹಿಸಿಕೊಳ್ಳಲಿ. ಹೇಗೂ, ಮಹಾತ್ಮ ಗಾಂಧಿಯವರು ಈಗ ಹಿಂದೂಸ್ಥಾನದಲ್ಲಿ ಶಾಂತಿಯ ಒಂದು ದೊಡ್ಡ ಶಕ್ತಿಯೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರೇ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಒಪ್ಪಿಕೊಂಡಿರುವಾಗ್ಯೆ, ವೈಸರಾಯರೂ, ಅವರ ಸರಕಾರಿ ಅಧಿಕಾರಿಗಳೂ ಮಹಾತ್ಮ ಗಾಂಧಿಯವರು ಪ್ರಯತ್ನಿಸುತ್ತಿರುವಂತೆಯೇ ರಾಜಿ ಒಪ್ಪಂದದಂತೆ ನಡೆದು ತತ್ಕಾಲಿಕ ಸಂಧಿಯನ್ನು ಖಾಯಂ ಶಾಂತಿಯನ್ನಾಗಿ ಮಾಡಲು ಇನ್ನಾದರೂ ಸಹಕರಿಸುವರಾಗಿ ಆಶಿಸುತ್ತೇವೆ.

ಕೋಮುವಾರು ಚುನಾವಣೆಯನ್ನು ಕುರಿತು ರಾಷ್ಟ್ರೀಯ ಪಕ್ಷದ ಮುಸಲ್ಮಾನರಿಗೂ, ಅಖಿಲ ಭಾರತ ಮುಸ್ಲಿಂ ಕಾನ್‌ಫರನ್ಸಿನ ಪಕ್ಷದವರಿಗೂ ಇದ್ದ ಭಿನ್ನಭೇದಗಳನ್ನು ಹೋಗಲಾಡಿಸಲು ಕಲವು ದಿವಸಗಳ ಹಿಂದೆ ಭೋಪಾಲದ ನವಾಬರು ಮಾಡಿದ ಪ್ರಯತ್ನಗಳು ಹೇಗೆ ನಿಷ್ಫಲವಾದವೆಂದು ಈ ಮೊದಲು ತಿಳಿಸಿದ್ದೆವು. ಇದನ್ನು ಅಲ್ಲಿಗೇ ಬಿಡದೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಪುನಃ ಪ್ರಯತ್ನಿಸಿ ನೋಡಿದರು. ಪ್ರತ್ಯೇಕ ಚುನಾವಣೆ ಪಕ್ಷದ ಮುಂದಾಳಾದ ಮೌಲಾನ ಶೌಕತ್ ಅಲಿಯವರನ್ನು ವರ್ಕಿಂಗ್ ಕಮಿಟಿಯವರು ಬೊಂಬಾಯಿಗೆ ಕರೆಯಿಸಿಕೊಂಡು ಮುಸ್ಲಿಂ ರಾಷ್ಟ್ರೀಯ ಪಕ್ಷದ ಮುಂದಾಳಾದ ಡಾಕ್ಟರ್ ಅನ್ಸಾರಿಯವರೊಂದಿಗೆ ಒಪ್ಪಂದಕ್ಕೆ ತರಲು ಸಾಧಿಸಿದರು. ಆದರೆ ಮೌ. ಶೌಕತ್ ಅಲಿಯವರು ಮಿಶ್ರ ಚುನಾವಣೆಗೆ ತಾನು ಒಪ್ಪುದಿಲ್ಲವೆಂತಲೂ, ಪ್ರತ್ಯೇಕ ಚುನಾವಣೆಯೇ ಆಗಬೇಕೆಂತಲೂ ಹಟ ಹಿಡಿದ ಕಾರಣ ರಾಜಿ ಪ್ರಯತ್ನವು ಮುರಿಯಿತು. ಆದರೆ ವರ್ಕಿಂಗ್ ಕಮಿಟಿಯವರು ಇದರಿಂದ ನಿರಾಶರಾಗದೆ ಹಿಂದೂಸ್ಥಾನದ ಎಲ್ಲಾ ಜಾತಿಗಳವರಿಗೆ ಒಪ್ಪಿಗೆಯಾಗಬಹುದಾದ ರಾಜಿಪ್ರೊಂದನ್ನು ಪಾಸುಮಾಡಿರುವರು. ಮಿಶ್ರ ಚುನಾವಣೆಯೂ, ಪ್ರಾಯ ಬಂದವರಿಗೆಲ್ಲಾ ಓಟಿನ ಹಕ್ಕಿರುವುದೂ ಈ ರಾಜಿಯ ತಳಹದಿಯಾದರೂ ಕಡಿಮೆ ಜನ ಸಂಖ್ಯೆಯವರ ಮತ್ತು ಹಿಂದುಳಿದ ಪಂಗಡದವರ ಹಿತವನ್ನು ಕಾಪಾಡಲು ಬೇಕಾದ ಶರತುಗಳೆಲ್ಲವೂ ಅದರಲ್ಲಿವೆ.

ಚುನಾವಣೆಯು ಮಿಶ್ರವಾದರೂ, ಸಿಂಧಿನಲ್ಲಿ ಹಿಂದೂಗಳಿಗೂ, ಅಸ್ಸಾಮಿನಲ್ಲಿ ಮುಸಲ್ಮಾನರಿಗೂ, ಪಂಜಾಬು ಮತ್ತು ವಾಯವ್ಯ ಪ್ರಾಂತ್ಯಗಳಲ್ಲಿ ಸಿಖ್ಖರಿಗೂ ಮತ್ತು ಒಟ್ಟು ಜನ ಸಂಖ್ಯೆಯ ಶೇಕಡ ೭ಕ್ಕಿಂತ ಕಡಿಮೆ ಹಿಂದೂಗಳಾಗಲೀ, ಮುಸಲ್ಮಾನರಾಗಲೀ ಇರುವ ಪ್ರಾಂತ್ಯಗಳಲ್ಲಿ ಆ ಮೈನಾರಿಟಿ ಕೋಮಿನವರಿಗೂ ಫೆಡರಲ್ ಮತ್ತು ಪ್ರಾಂತೀಕ ಕೌನ್ಸಿಲುಗಳಲ್ಲಿ ಸ್ಥಳಗಳು ಕಾಯ್ದಿಡಲ್ಪಡತಕ್ಕದೆಂದೂ, ಫೆಡರಲ್ ಮತ್ತು ಪ್ರಾಂತೀಕ ಮಂತ್ರಿ ಮಂಡಳಿಗಳಲ್ಲಿಯೂ ಕಮ್ಮಿ ಜನ ಸಂಖ್ಯೆ ಕೋಮಿನವರ ಪ್ರಾತಿನಿಧ್ಯವಿರುವ ಪದ್ಧತಿಯನ್ನು ಮಾಡಿಕೊಳ್ಳಬೇಕೆಂತಲೂ, ನಿಯಮಿಸಲ್ಪಡದೆ ಇರುವಂಥ (ರೆಸಿಡ್ಯುವರಿ) ಅಧಿಕಾರಗಳು ಪ್ರಾಂತೀಕ ಕೌನ್ಸಿಲುಗಳಿಗೆ ಬೇಕೆಂತಲೂ ಶರತುಗಳಿವೆ. ಆದರೆ ಮೇಲಿನ ಕಡೇ ಶರತು ಮುಂದೆ ನಡಿಸುವ ವಿಚಾರದಲ್ಲಿ ಹಿಂದೂದೇಶದ ಹಿತಕ್ಕೆ ವಿರೋಧವೆಂತ ಕಂಡು ಬಾರದೆ ಹೋದಲ್ಲಿ ಮಾತ್ರ ಇರಬೇಕೆಂದು ಸೂಚಿಸಲಾಗಿದೆ. ಮೇಲೆ ಸೂಚಿಸಿರುವ ಕಡೇ ಎರಡು ಶರತುಗಳು ಇದ್ದೇ ಇರಬೇಕೆಂದು ಮುಸಲ್ಮಾನ ಮುಂದಾಳುಗಳ ಇಚ್ಛೆಯಾಗಿದೆ. ಮೇಲಿನ ಮಿಶ್ರ ಶರತುಗಳೂ ಕೋಮುವಾರು ತತ್ವವನ್ನು ಒಳಕೊಂಡಿರುವ ಕಾರಣ ರಾಷ್ಟ್ರೀಯತ್ವಕ್ಕೆ ವಿರೋಧವಾಗಿರುವ ಕೋಮುವಾರು ತತ್ವವನ್ನು ರಾಷ್ಟ್ರೀಯ ಕಾಂಗ್ರೆಸಿನ ಕಮಿಟಿಯವರು ಹೇಗೆ ಒಪ್ಪಿಕೊಂಡರೆಂದು ಕೆಲವರು ಟೀಕಿಸಬಹುದು. ಆದರೆ ಸಂಪೂರ್ಣ ರಾಷ್ಟ್ರೀಯತ್ವಕ್ಕೂ, ಸಂಪೂರ್ಣ ಕೋಮುವಾರುತ್ವಕ್ಕೂ ಇರುವ ಭಿನ್ನಭೇದವನ್ನು ಹೋಗಲಾಡಿಸಲಿಕ್ಕಾಗಿಯೂ, ದೇಶದ ಎಲ್ಲಾ ತರಹದ ಅಭಿಪ್ರಾಯಗಳ ಪಾರ್ಟಿಯವರಿಗೂ, ಎಲ್ಲಾ ಕೋಮಿನ ಜಾತಿಯವರಿಗೂ ಒಪ್ಪಿಗೆಯಾಗುವಂಥ ತೀರ್ಮಾನವನ್ನು ಮಾಡಬೇಕಾದ ಕಾರಣ ಕಾಂಗ್ರೆಸಿನವರು ತಮ್ಮ ತತ್ವವನ್ನು ಕಿಂಚಿತ ಬಿಟ್ಟುಕೊಡಬೇಕಾಯಿತೆಂಬದನ್ನು ದೇಶದವರು ಮರೆಯಬಾರದು.

ಮಿಶ್ರ ಚುನಾವಣೆಗೆ ಒಪ್ಪಿದರೆ ಹಿಂದೂಗಳಿಗಿಂತ ಕಡಿಮೆ ಜನ ಸಂಖ್ಯೆ ಇರುವ ಮುಸಲ್ಮಾನರಿಗೆ ತುಂಬಾ ಕೆಡಕುಗಳುಂಟಾಗುವವೆಂದೇ ಮೌಲಾನಾ ಶೌಕತ್ ಅಲಿ ಪಾರ್ಟಿಯವರ ಹೆದರಿಕೆಯಾಗಿದೆ. ಆದರೆ ವರ್ಕಿಂಗ್ ಕಮಿಟಿಯವರ ರಾಜಿಯಲ್ಲಿ ಕಡಿಮೆ ಜನ ಸಂಖ್ಯೆಯ ಪಂಗಡಗಳ ಹಿತವನ್ನು ಕಾಯಲು ಸಾಕಷ್ಟು ಶರತುಗಳು ಇಡಲಾಗಿವೆ. ಅಲ್ಲದೆ ಹಿಂದೂಸ್ಥಾನದ ನಿವಾಸಿಗಳಲ್ಲಿ ೧೦ರಲ್ಲಿ ೪ ಭಾಗದವರು ಮಿಶ್ರ ಚುನಾವಣೆ ಬೇಕೆಂದು ಕೇಳುತ್ತಿರುವರು. ಆದುದರಿಂದ ಅಖಿಲಭಾರತ ಮುಸ್ಲಿಂ ಕಾನ್‌ಫರನ್ಸಿನ ಪಕ್ಷಕ್ಕೆ ಸೇರಿದ ಮುಸಲ್ಮಾನ ಸಹೋದರರು ಇನ್ನಾದರೂ ದೇಶದ ಮತ್ತು ಅವರ ಜಾತಿಯ ಕಲ್ಯಾಣದ ದೃಷ್ಟಿಯಿಂದ ವರ್ಕಿಂಗ್ ಕಮಿಟಿಯ ತೀರ್ಮಾನಕ್ಕೆ ಒಪ್ಪುವರೆಂದು ಆಶಿಸುತ್ತೇವೆ. ಇಷ್ಟು ಮಾತ್ರವಲ್ಲ, ದೇಶದ ಎಲ್ಲಾ ಪಾರ್ಟಿಗಳಿಗೆ ಸಮ್ಮತವಾಗುವ ಬೇರೆ ಯಾವ ತೀರ್ಮಾನಕ್ಕಾದರೂ ಒಪ್ಪಲು ಕಾಂಗ್ರೆಸಿನವರು ತಯಾರಿರುವರೆಂದೂ ವರ್ಕಿಂಗ್ ಕಮಿಟಿಯವರು ಸೂಚಿಸಿರುವರು. ಆದುದರಿಂದ ವರ್ಕಿಂಗ್ ಕಮಿಟಿಯ ರಾಜಿಗೆ ಪ್ರತ್ಯೇಕ ಚುನಾವಣೆ ಬೇಕೆನ್ನುವ ಮುಸಲ್ಮಾನರು ಒಪ್ಪುವದಿಲ್ಲವಾದರೆ, ಎಲ್ಲಾ ಪಂಗಡಗಳಿಗೆ ಒಪ್ಪುವಂಥ ತೀರ್ಮಾನವನ್ನು ಮಾಡುವ ಭಾರವು ಮೌ. ಶೌಕತ್ ಅಲಿಯವರ ಪಾರ್ಟಿಯ ಮೇಲಿದೆ. ಅವರ ವರ್ತನೆಯು ಇನ್ನು ಹೇಗಾಗುವದೆಂದು ನೋಡಬೇಕಾಗಿದೆ.

ಶಾಂತವಾದ ವಾಗ್ದಂಡನೆ.

(ಮಹಾತ್ಮ ಗಾಂಧಿಯವರು "ಯಂಗ್ ಇಂಡಿಯಾ" ಪತ್ರಿಕೆಗೆ ಬರೆದ ಲೇಖನದ ಅನುವಾದ)

"ಕುಡುಕತನದ ಕೆಡುಕಿನ ವಿಷಯ ಏನು ಬರೆಯಲಿ, ಅದು ರಾಜಗೋಪಾಲಾಚಾರಿಯವರ ತೀಕ್ಷ್ಣವಾದ ದೃಷ್ಟಿಗೆ ಬೀಳದೆ ಇರದು. ನಾನು ಪುರೋಳಿಯಲ್ಲಿ ಬಂದ ಕಾರಖಾನೆಯ ಕಳಪದಿನಿಟ್ಟಾಗ ಮಾಡಿದ ಭಾಷಣವನ್ನು ಓದಿರುವರು. ನನ್ನ ಆ ಭಾಷಣದಲ್ಲಿ ಗಿರಣಿಕಾರರಿಗೂ ಕುಡುಕತನಕ್ಕೂ ಇರುವ ಸಂಬಂಧವನ್ನು ತೋರಿಸುತ್ತಾ, ಶ್ರೀಮತಿ ಮಿಥೂಬೆನ್ ಪೆಟಿಟರವರಿಗೆ ತನ್ನ ನಿಷಾನಿಷೇಧ ಕೆಲಸದಲ್ಲಿ ಉಂಟಾದ ಅನುಭೋಗವನ್ನು ವಿವರಿಸುತ್ತಾ, ಗಿರಣಿಕಾರರನ್ನು ಪೂರ್ತಿ ಕುಡುಕತನದಿಂದ ಪಾರು ಮಾಡಬೇಕಾದರೆ, ಅವರಿಗೆ ವಿರಾಮ ಕಾಲದಲ್ಲಿ ಬೇರೇನಾದರೂ ಪ್ರವೃತ್ತಿಯನ್ನು ಕೊಡಲೇ ಬೇಕೆಂತಲೂ, ಅದಕ್ಕಾಗಿ ಕೈ ಮಗ್ಗದ ಕೆಲಸವನ್ನು ಅವರಿಗೆ ಕಲಿಸಿಕೊಡಬೇಕೆಂತಲೂ ಶ್ರೀಮತಿ ಮಿಥೂಬೆನ್‌ರು ಅಭಿಪ್ರಾಯಪಟ್ಟರೆಂದೂ, ಜನರು ದಿನವೆಲ್ಲಾ ಕಷ್ಟಪಟ್ಟು ಕೆಲಸಮಾಡಿದರೆ ಆಯಾಸ ತಗ್ಗಿಸಲು ಕೊಡುವ ಪದಾರ್ಥವೇನಾದರೂ ಕೊಡಬೇಕೆಂತಲೂ, ನಾನು 'ಬೋರ' ಯುದ್ಧದಲ್ಲಿ ಕೆಲಸ ಮಾಡುತ್ತಿದ್ದಾಗ ಸಿಪಾಯಿಗಳಿಗೆ ಚೈತನ್ಯ ಬರಲು "ರಮ್" ಎಂಬ ಸಾರಾಯಿ ಕೊಡುತ್ತಿದ್ದರೆಂತಲೂ ನನ್ನ ಭಾಷಣದಲ್ಲಿ ಹೇಳಿದ್ದೆನು. ಇದು ಅಜ್ಞಾನವೇನೋ ನಿಜ. ಆದರೆ ಅಜ್ಞಾನವು ಸುಲಭದಲ್ಲಿ ಬೇಗನೆ ಬಿಡಲೊಲ್ಲದು.

ಈಗ ನನ್ನ ಭಾಷಣವು ನಿಷಾನಿಷೇಧ ವಿರೋಧಕರಿಗೆ ತಪ್ಪು ಅಭಿಪ್ರಾಯವನ್ನು ಹುಟ್ಟಿಸಬಹುದೆಂದು ರಾಜಗೋಪಾಲಾಚಾರಿಯವರು ಹೆದರಿದ್ದರು. ಈಗ ಅದು ಹಾಗೆಯೇ ಆಯಿತು. ನನಗೆ ಈಗ ಬುದ್ಧಿ ಸ್ಥಿರತ್ವವು ಬಂತೆಂದು ನನ್ನನ್ನು ಹೊಗಳಿ ಬರೆಯುವ ಅನೇಕ ಪತ್ರಗಳು ನನಗೆ ಆಗಲೆ ಬಂದಿವೆ. ಇವನ್ನೆಲ್ಲಾ ನೋಡಿ ನಾನು ಗಾಬರಿಯಾಗಿರುವೆನು. ಯಾಕೆಂದರೆ, ನನ್ನಲ್ಲಿ ಅಂಥಾ ಬುದ್ಧಿ ಬದಲಾವಣೆಗಳೇನೂ ಉಂಟಾಗಿಲ್ಲ. ಇದು ಒಬ್ಬನು ತಾನು ಸತ್ತಿರುವೆನೆಂಬ ಪತ್ರವಾನದಲ್ಲಿ ತನಗೆ ಗೊತ್ತಿಲ್ಲದ ಸದ್ಗುಣಗಳು ತನ್ನಲ್ಲಿದ್ದುವು ಎಂಬ ನಿಧನ ಸೂಚನೆಗಳನ್ನು ನೋಡಿ ನಾಚಿಕೆಯಾಯಿತು.

ಆದುದರಿಂದ ಮುಂದಕ್ಕೆ ಹೋಗುವ ಮೊದಲು ಸಂಪೂರ್ಣ ನಿಷಾನಿಷೇಧದಲ್ಲಿ ನನಗಿರುವ ವಿಶ್ವಾಸವನ್ನು ಪುನಃ ಪ್ರಕಟಿಸುತ್ತೇನೆ. ನಾನು ಒಂದು ಗಂಟೆಯ ವರೆಗೆ ಈ ಹಿಂದೂಸ್ಥಾನಕ್ಕೆ ಸರ್ವಾಧಿಕಾರಿಯಾಗಿ ನೇಮಿಸಲ್ಪಟ್ಟರೆ ನಾನು ಮಾಡುವ ಪ್ರಥಮ ಕೆಲಸವೇನೆಂದರೆ—ಮಾಲೀಕರಿಗೆ ನಷ್ಟದ ಪ್ರತಿಫಲ ಕೊಡದೆ ಎಲ್ಲಾ ಸಾರಾಯಿ ಅಂಗಡಿಗಳನ್ನು ಮುಚ್ಚಿಸುವುದು, ನನಗೆ ಗುಜರಾತಿನಲ್ಲಿ ಗೊತ್ತಿರುವಂತೆ ತಾಡಿ ಗಿಡಗಳನ್ನು ನಾಶಪಡಿಸುವುದು, ಕೂಲಿ ಜನರನ್ನು ಮನುಷ್ಯೋಚಿತವಾಗಿ ನಡಿಸುವಂತೆಯೂ, ಅವರಿಗೆ ಸಾತ್ವಿಕ ತೀರ್ಥಗಳೂ, ನಿಷ್ಕಲಂಕವಾದ ತಮಾಷೆಗಳೂ ದೊರೆಯುವ ತಿಂಡಿ ಮತ್ತು ವಿಶ್ರಾಂತಿ ಭವನಗಳನ್ನು ಸ್ಥಾಪಿಸಬೇಕೆಂದೂ ಕಾರ್ಖಾನೆಯ ಯಜಮಾನರನ್ನು ಬಲತ್ಕರಿಸಿ, ಕೊಡಲಾಗದು ಹಣವಿಲ್ಲವೆಂದರೆ ಕಾರ್ಖಾನೆಗಳನ್ನು ಮುಚ್ಚಿಸಿಬಿಡುತ್ತಿದ್ದೆನು. ಅಮಲು ಪದಾರ್ಥವನ್ನು ನಾನು ಮುಟ್ಟುವವನಲ್ಲವಾದ ಕಾರಣ ಒಂದು ಗಂಟೆ ಸರ್ವಾಧಿಕಾರ ಸಿಕ್ಕಿದರೂ ನಾನು ಸ್ವಸ್ಥ ಚಿತ್ತವುಳ್ಳವನಾಗಿಯೇ ಇರುವೆನು. ಆದಕಾರಣ ಔಷಧಿಗಾಗಿ ಬ್ರಾಂಡಿ ಮೊದಲಾದವುಗಳ ಅವಶ್ಯಕತೆಯಲ್ಲಿರುವ ನನ್ನ ಯೂರೋಪಿಯನ್ ಸ್ನೇಹಿತರ ರೋಗಿಗಳ ಪರೀಕ್ಷೆಗಾಗಿ ಸರ್ಕಾರದ ಖರ್ಚಿನಿಂದ ಡಾಕ್ಟರುಗಳನ್ನು ನೇಮಿಸಿ, ಅವಶ್ಯವಿದ್ದಲ್ಲಿ ಅವರಿಗೆ ಬೇಕಾಗುವ ಮದ್ಯವಗಳನ್ನು ಸಾಕಷ್ಟು ಪ್ರಮಾಣದಲ್ಲಿ ಲೈಸೆನ್ಸುಳ್ಳ ಕೆಮಿಸ್ಟರ ಅಂಗಡಿಗಳಲ್ಲಿ ಸಿಗಲು ಸರ್ಟಿಫಿಕೇಟುಗಳನ್ನು ಕೊಡುವ ಏರ್ಪಾಡು ಮಾಡುತ್ತಿದ್ದೆನು. ಈ ರೂಲು ಬೇರೆ ಅಮಲು ಪದಾರ್ಥಗಳಿಗೂ ಅನ್ವಯಿಸುವುದು.

ಕುಡುಕತನದಿಂದ ಬರುವ ಉತ್ಪತ್ತಿಯ ನಷ್ಟಕ್ಕಾಗಿ ನಾನು ಸೈನ್ಯ ಖಾತೆಯ ಖರ್ಚನ್ನು ಖೋತ ಮಾಡುತ್ತಿದ್ದೆನು, ಮತ್ತು ಮುಖ್ಯ ಸೇನಾಧಿಪತಿಯು ಕೊಟ್ಟಷ್ಟು ಹಣದಲ್ಲಿ ಎಲ್ಲವನ್ನು ಅವರಿಗೆ ಸಾಧ್ಯವಾದಷ್ಟು ಮಟ್ಟಿಗೆ ಹೊಂದಿಸಿಕೊಳ್ಳುವಂತೆ ಹೇಳುತ್ತಿದ್ದೆನು. ಮುಚ್ಚಲ್ಪಟ್ಟಿರುವ ಕಾರ್ಖಾನೆಗಳು ಅವಶ್ಯವಿರುವ ತರತುಗಳ ಮೇರೆ ಲಾಭಕರವಾಗಿ ನಡೆಯುವದೆಂದೂ, ಆದಕಾರಣ ಅವುಗಳನ್ನು ಮಾಲೀಕರಿಂದ ಸರ್ಕಾರವು ವಹಿಸಿಕೊಳ್ಳಬಹುದೆಂದೂ ಆ ಸ್ವಲ್ಪ ಸಮಯದಲ್ಲಿ ಸಲಹೆಗಳು ಕೊಡಲ್ಪಡದೆ ಹೋದ ಪಕ್ಷದಲ್ಲಿ, ಕಾರ್ಖಾನೆಗಳು ಮುಚ್ಚಲ್ಪಟ್ಟು ಕೆಲಸವಿಲ್ಲದೆ ಇರುವ ಕೂಲಿ ಜನರಿಗೆ ಸಾಧ್ಯವಾದಷ್ಟು ಮಟ್ಟಿಗೆ ಕಾರ್ಖಾನೆಗಳ ಸಮೀಪದಲ್ಲೇ ಕೂಡಲೆ ಮಾದರಿಯ ಹೊಲಗಳನ್ನು ಮಾಡಿಸಿ, ಅಲ್ಲಿ ಕೆಲಸ ಕೊಡುತ್ತಿದ್ದೆನು.

ಗ್ರಾಮಗಳ ಗತ ವೈಭವ.

(ಲೇಖಕ—ಕೆ. ಯಸ್. ಆರ್. ಬಿ. ಎ.)

ಪ್ರಕೃತದಲ್ಲಿ ಗ್ರಾಮಗಳ ನಿಜ ಸ್ಥಿತಿಯನ್ನು ತಿಳಿಯಬೇ[illegible]ಶಾಸ್ತ್ರಕಾರರ ಆಗಿನದಕ್ಕೂ ಮುಂದೆ ಇದ್ದ ಸ್ಥಿತಿಯು [illegible] ಪಟ್ಟಿಗೆ ಆಲೋಚಿಸಿ ನೋಡಬೇಕು. ಹಾಗಾ[illegible] ಆಗಿನ ಗ್ರಾಮ ಹಳ್ಳಿಗಳ ಶೋಚನೀಯಾವಸ್ಥೆಯು [illegible]ವುದು.

ಒಂದು ಕಾಲದಲ್ಲಿ ಗ್ರಾಮವು ರಾಜ್ಯಭಾರದ ವಿಭಾಗ[illegible]ಯೂ ಪ್ರತ್ಯೇಕವಾಗಿ ಸ್ವತಂತ್ರದಲ್ಲಿದ್ದು (Self-[illegible] Institution) ಶಾರೀರಕ, ನೈತಿಕ, ಸಾಂಸ್ಕೃತಿಕ [illegible]ಗೆ ಕೆಲಸ ಮಾಡಬೇಕಾಗಿರುವ ಕಾರ್ಯಸ್ಥಾನವಾಗಿತ್ತು. [illegible]ರ ಕಾಲದಲ್ಲಿ ರಾಜ್ಯಭಾರ ಕ್ರಮದಲ್ಲಿ ಅನೇಕ ಬ[illegible]ಗಳು ಮಾಡಲ್ಪಟ್ಟಿದ್ದರೂ ಗ್ರಾಮವು ಮಾತ್ರ ಯಾವ [illegible]ಬದಲಾವಣೆಗಳಿಗೆ ಒಳಗಾಗದೆ ಸ್ವಾತಂತ್ರ್ಯವಾಗಿತ್ತು. [illegible]ಆದ ಅರಸರ ಕಾಲದಲ್ಲಿ ದೇಶದಲ್ಲಿ ಅನಾಹುತ ಅತ್ಯಾ[illegible] [illegible]ರಿ ಮೊಗಲರೂ ತಲೆಹೋರಿ ದೇಶದ ಸಿರಿಯೇ ನ[illegible] [illegible]ಗೊಂಡಿತು. ಕಷ್ಟಗಳು ಆಗಿದ್ದರೂ ಬಹು [illegible] ಗ್ರಾಮಗಳಲ್ಲಿ ಅಂಥಾ ದುಃಸ್ಥಿತಿಯನ್ನು ಕೇಳಿದವರೇ ಇ[illegible]. ಗ್ರಾಮದ ಸಂಘ ಸಂಸ್ಥೆಗಳು ಒಡೆದು ಹೋಗಿ[illegible]. ಮತದ್ವೇಷ, ಪರಸ್ಪರ ಕಲಹಾದಿಗಳು ನಾಮಮಾತ್ರ[illegible] ಆತ್ಮದ ಹಿಂದೂಸ್ಥಾನದ [illegible] ಕಾರಣದಿಂದ ಅಸ್ಮದ [illegible] ಗ್ರಾಮಗಳ ಏಕಚಿತ್ತತೆ [illegible] ಸೌಂದರ್ಯ [illegible] ಒಗ್ಗಟ್ಟು (Village tie) [illegible] 20—30 ವರ್ಷಗಳ ಹಿಂದೆ ಗ್ರಾಮಗಳಲ್ಲಿ ಹಿಂದೂ ಮುಸಲ್ಮಾನರು ಪರಸ್ಪರ ವಿಶ್ವಾಸದಿಂದ [illegible] ಪರಸ್ಪರ ಕಷ್ಟ ಸುಖಗಳಲ್ಲಿ ಸಹಾನುಭೂತಿಯನ್ನು ತೋರಿಸುತ್ತಿದ್ದುದಲ್ಲದೆ ಅವುಗಳಲ್ಲಿ ಭಾಗಿಗಳಾಗಿ [illegible] ಸಮಾರಂಭಗಳಲ್ಲಿ ಒಟ್ಟಿಗೆ ಸೇರುತ್ತಿದ್ದರು. ದೇಶ ಭಕ್ತ [illegible] ಆಗಿನ ಕಾಲಕ್ಕೆ ಜಾತಿ—ಕುಲ—ಪಂಥಾದಿಗಳ ಭೇದಗಳಾ[illegible]ರಲಿ, ಸ್ತ್ರೀ ಪುರುಷ ಭೇದವೂ ಶ್ರೇಷ್ಠ ಕನಿಷ್ಠ ಭೇದವೂ [illegible]ಲ್ಲ. ಪ್ರತಿ ಗ್ರಾಮದಲ್ಲಿಯೂ ಪಂಚಾಯಿತಿಕಾರರು [illegible] ಇವರೇ ಗ್ರಾಮದ ಜನರಿಗೆ ನ್ಯಾಯಾನ್ಯಾಯ[illegible] ತೀರ್ಪುಗಳನ್ನು ಕೊಡುತ್ತಿದ್ದರು. ಒಟ್ಟಿಗೆ ಸ್ವಾತಂತ್ರ್ಯ[illegible] [illegible]ಗಾಗಿ ಯಾರೂ ತಮ್ಮ ತಮ್ಮ ಜಾತಿ ಧರ್ಮದಂತೆ ಆ[illegible]ಸಿ ತಮ್ಮ ಧರ್ಮ ಶೀಲವನ್ನು [illegible] ಕಾಯ್ದು[illegible]ಳ್ಳುವ ಸ್ವಾರ್ಥ ಪರರು ಇದ್ದಿಲ್ಲ. ಹೊರಗಿನಿಂದ ಕಳ್ಳ[illegible] ಶತ್ರುಗಳ ಭಯವಿದ್ದರೆ ಎಲ್ಲರೂ ಒಟ್ಟಿಗೆ ಸೇರುತ್ತಿದ್ದ[illegible]. ಅವರು ವರ್ಣ ಸಂಕರ ಮಾಡುವಷ್ಟು ಧರ್ಮ ಅಂಧ[illegible], ನಾಸ್ತಿಕರೂ ಇದ್ದಿಲ್ಲ. ಎಲ್ಲರೂ ತಮ್ಮ ಶಕ್ತಿ ಸರ್ವ[illegible]ವನ್ನು ಒಟ್ಟು ಗೂಡಿಸಿ ಗ್ರಾಮದ ಕಾರ್ಯವನ್ನು ಏಳಿ[illegible] ಏಳಿಗೆಯ ಕಾರ್ಯವನ್ನೇ ನಿರ್ವಹಿಸುತ್ತಿದ್ದರು. [illegible] ಪ್ರಸಂಗದಲ್ಲಿ ಗ್ರಾಮಾಧಿಕಾರಿಗಳು ತಮ್ಮ ಜಾತಿ—[illegible]—ಪಂಥ ಮೊದಲಾದವುಗಳ ಭೇದವನ್ನು ಮರೆತು ಒಟ್ಟು[illegible]ತ್ತಿದ್ದರು. ಈ ಅಧಿಕಾರಿಗಳು ಮುಖ್ಯವಾಗಿ, ಪಟೇ[illegible] (Head man), ಲೆಕ್ಕ ನೋಡುವವ (Accountant) ಮ[illegible] [illegible]ಕಿದಾರ (Chowkidar) ಇವರೇ ಇದ್ದರು. ಆ[illegible] ಪ್ರಸ್ತುತದಲ್ಲಿ ಇವರು ಇಲ್ಲವೆಂದಲ್ಲ. ಇದೇ ಅಧಿಕಾರಿಗಳು ಈಗಲೂ ಇದ್ದಾರೆ. ಆದರೆ ಆಗಿನ ಕಾಲದಲ್ಲಿ ಇ[illegible] ಸರಕಾರದಿಂದ ನೇಮಿಸಲ್ಪಡದೆ ಜನರಿಂದಲೇ ನೇಮಿಸ[illegible]ತ್ತಿದ್ದು ಅವರಿಗೆ ವಿರುದ್ಧವಾಗಿ ಯಾವ ಕೆಲಸವನ್ನು [illegible] ವುದೂ ಅಲ್ಲದೆ ತಮ್ಮ ಜೀವನ [illegible] ಕೆಲವು ಸ್ವಾರ್ಥ[illegible] ತಮ್ಮ [illegible]ಯನ್ನು ಮೀರಿ ತಮ್ಮ ಅಧಿಕಾರವನ್ನು [illegible] ಕೊಳ್ಳಲು ಯಾರಿಗೂ ಧೈರ್ಯವಿರಲಿಲ್ಲ ಮತ್ತು ಸಾಧ್ಯ[illegible]ವಿರಲಿಲ್ಲ. ಇದೇ ಪ್ರಕಾರ [illegible] ಪಂಚಾಯಿತ [illegible] ಸಭೆ (Council of elders) ಇತ್ತು. [illegible] ಅನುಭವಶಾಲಿಗಳಾದ ಪಂಚಾಯಿತರ ಮೇಲೆ ಆ[illegible]ಧಾರವಿದ್ದಿತು. ಪ್ರತಿಯೊಬ್ಬನ ನ್ಯಾಯವನ್ನು ನ್ಯಾಯ [illegible] ನಿರ್ಣಯಿಸುತ್ತಿತ್ತು. ಪಂಚಾಯಿತರ ತೀರ್ಪು [illegible]ವಾಗಿ ತೋರಿದರೂ [illegible] ಮೇಲೆ [illegible] ಮತ್ತು ಜನರು ನಡೆಯುವಂತೆಯೇ [illegible]ಗಿದ್ದಿತು.

[illegible]ದಲ್ಲಿ [illegible], [illegible] ಅಲ್ಲದೆ ಬೇ[illegible] [illegible] ಕುಂಬಾರ, [illegible] ಅಗಸ [illegible] ([illegible]maker) ಇತ್ಯಾದಿ ಕಸಬಿನವರೂ ಇದ್ದರು. [illegible] ಉದ್ಧಾರಕ್ಕಾಗಿ ಹಿಂದೂ ಧರ್ಮಕ್ಕೆ [illegible]ವನ್ನು ತೊಲಗಿಸಿದ್ದರು. [illegible] ಆವರ ಗ್ರಾಮ ಶಿಕ್ಷಣದ [illegible] ಈಗಿನಂತೆ [illegible] ಸಂಗತಿಗಳು ಯಾರೂ ಕೇಳಿರಲಿಲ್ಲ. ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದ [illegible] ಕಲಹ ಬೆಳೆಸಲಿಕ್ಕೆ ಅವಸರವೇ ದೊರೆಯುವಂತಿರ[illegible] [illegible]ದ್ಯೋಗಿಗಳಾಗಿ ಕುಶಲತನದಿಂದ [illegible] ಮಾಡುತ್ತಿದ್ದರೆ ಮನೆಯಲ್ಲಿ ಕಲಹಗಳಿಗೆ ಅ[illegible]ಗುವುದು. ಆಗಿನ ಗ್ರಾಮಸ್ಥರ ಕುಟುಂಬದೊಳಗಿನ ಜನರ ಪರಸ್ಪರ—'ಇವನು ಮೂರ್ಖನು, ಇವನು ಕುಂಟನು, ಇವನು ಹೊಟ್ಟೆ ಬಾಕನು' ಎಂದಾಗಲೀ ಅಥವಾ "ಇವನಿಗೆ ಹಿಡಿ ಹೋಗುತ್ತದೆ, ಇವನಿಗೆ [illegible], ಇವನಿಗೆ ಕಾರ ಆಗದು," ಎಂದಾಗಲೀ ಹೀಯಾಳಿಸುತ್ತಾ ಅಂತಃ ಕಲಹ ಬೆಳೆಸಿ, ತಾನೆಲ್ಲವೂ ತನ್ನ ಸಂಪಾದಿಕ ಎಂಬ ಒಂದೇ ಸ್ವಾರ್ಥದ ಭಾವನೆಯಿಂದ ಬೇರ್ಪಡಾಗಿ ಕುಟುಂಬದ ಒಗ್ಗಟ್ಟನ್ನು ಕಡಿದು, ಗ್ರಾಮದಲ್ಲಿ ಅಶಾಂತಿ ಸ್ಥಾಪನೆ ಮಾಡುತ್ತಿದ್ದರು ದಿನ ಬೇಗಾದರೆ ಈಗಿನವರಂತೆ ಬಗೆಯಲಿಲ್ಲ.

ಗ್ರಾಮಸ್ಥರೇ! ನಿಮ್ಮ ಪೂರ್ವದ ಗತ ವೈಭವವನ್ನು ನೆನೆಯಿರಿ! ನಿಮ್ಮ ಪೂರ್ವಿಕರ ಶೀಲತೆ, ನಯಗಳನ್ನು ನೋಡಿರಿ!! ಅವರ ಆ ಸ್ವಾಭಿಮಾನ ಅವರ ಉಜ್ವಲವಾದ ಆ ಸ್ವಾವಲಂಬನ, ಸ್ವದೇಶಾಭಿಮಾನ ಇತ್ಯಾದಿಗಳು ಈಗ ಎಲ್ಲಿ ಮಾಯವಾಗಿರುವವು? ಸ್ಮರಿಸಿರಿ ಅವುಗಳನ್ನು!

ಮುಖ್ಯ ಆಗಿನವರು ಆತ್ಮಾಶೆಯಲ್ಲಿ ನಿರತರಾಗದೆ ಸದಾ ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಂಡು ಇದ್ದರು. ವಿಶೇಷವಾಗಿ ತಮಗೆ ಸಂಬಂಧವಿಲ್ಲದ ಕಾರ್ಯಗಳಲ್ಲಿ ಮತಿವಿಹಿನ ಚರ್ಚೆ ಮಾಡದೆ ತಮ್ಮ ಜೀವನ ಯಾತ್ರೆಯನ್ನು ಸುಖಮಯವನ್ನಾಗಿಟ್ಟುಕೊಂಡಿದ್ದರು. ಹಸುರಾದ ಬಯಲು ಪ್ರದೇಶಗಳಿಂದ ಕೂಡಿದ ಸ್ಥಳದಲ್ಲಿ ಗ್ರಾಮದವರ ಪಶು ಕರುಗಳು ಬಂದು ಮೇಯುವಂತೆ ಅನುಕೂಲಗಳಿದ್ದವು. ಈಗಿನಂತೆ ಒಡಕ [illegible] ತೃಪ್ತಿಯಿಂದ [illegible] ವೃಕ್ಷ [illegible] ಹಾಲು ಕೊಡುತ್ತಿದ್ದವು. ಮೇವೂ ಗಂಜಿ, ಹಿಂಡಿ ಮುಂತಾದುವನ್ನು ದನ ಕರುಗಳಿಗೆ ವಿಶೇಷ ಈಗಿನವರಂತೆ ಹಂಚಿ ಹೊಸಲಿನ [illegible] ಅರು ವ್ಯಾಪಾರಗಳಿಗೆ ಇಷ್ಟೆ ತಮ್ಮ ನಾಡಿ ಸಲಹ [illegible] ಧಗಳನ್ನು ಅಷ್ಟು ನಿಶ್ಚಯವಾಗಿ ಕಾಣುವ [illegible]ರಲಿಲ್ಲ, ಭೂಮಿಯೂ ಫಲವತ್ತಾಗಿದ್ದು ಕೃಷಿಯ ಬಾಗವು ಈಗಿನಷ್ಟು [illegible]ವನ್ನು ಹೊಂದಿರಲಿಲ್ಲ. ವರ್ಷಂಪ್ರತಿ ಕೆಲವು ಭೂಮಿಗಳು ಮಾತ್ರವೇ ನಡಲ್ಪಟ್ಟು, ಉಳಿದ ಬಾಗವು ದನ ಕರುಗಳ ಮೇಯುವ ಸ್ಥಾನವಾಗಿತ್ತು. ಒಂದು ವರ್ಷದ ಉತ್ಪತ್ತಿ 2—3 ವರ್ಷಗಳ ವರೆಗೆ ಒಂದು ಮನೆಗೆ ಸಾಕಾಗು[illegible] ಪ್ರತಿ ಮನೆಯಲ್ಲಿ ಧಾನ್ಯಗಳು ತುಂಬಲ್ಪಡುತ್ತಿದ್ದವು. ಒಟ್ಟಿಗೆ ಎಲ್ಲರೂ ಪ್ರಕೃತಿಗನುಸಾರವಾಗಿಯಲ್ಲದೆ ಇಷ್ಟ ದೇವತೆಯು ಇಚ್ಛೆಗೆ ವಿರುದ್ಧವಾಗಿ ನಡೆಯುತ್ತಿರಲಿಲ್ಲವಾದ್ದರಿಂದ ಅವಳ ಕೃಪೆಯು ಜನರ ಮೇಲೆ ವಿಶೇಷವಾಗಿತ್ತು. ಹೀಗಾಗಿ ಬರಗಾಲಕ್ಕೆ ದಾಳಿ ಇಡಲು ಅವಸರವೇ ಸಿಕ್ಕುತ್ತಿರಲಿಲ್ಲ. ಮಳೆಯು ಅಭಾವವಿಲ್ಲದ್ದರಿಂದ ರೈತರ ಸುಖ ಜೀವನಕ್ಕೆ ಮತ್ತಷ್ಟು ಕಾರಣವಾಗುತಿತ್ತು. ಅಭಾವವಿದ್ದರೂ ಆದರಿಂದ ಕೃಷಿಯ ಕಾರ್ಯಗಳಿಗೆ ಅಡಚಣೆಯು ಬಾರದಂತೆ ಅಲ್ಲಲ್ಲಿ ಕಾಲುವೆಗಳಿದ್ದುದರಿಂದ ಜನರು ನಿರುತ್ಸಾಹಿಗಳಾಗುತ್ತಿರಲಿಲ್ಲ. ವಿಶೇಷ ಮಳೆಯು ಅನಾಹುತಗಳಾದರೂ ಜನರಿಗೆ ಅವನ್ನು ತಡೆಯುವ ಧೈರ್ಯವಿತ್ತು. ಆಯಾ ಕಸಬಿನವರು ನಿರಂತರವಾಗಿ ಒಂದೆ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದರು. ಒಂದು ಗ್ರಾಮದ ಬಡಗಿಯವನೂ, ಕಮ್ಮಾರನೂ ನೇರಿ ಕೃಷಿಗೆ ಬೇಕಾಗುವ ನೇಗಿಲು ಮೊದಲಾದ ಸೌಕರ್ಯಗಳನ್ನು ಒದಗಿಸುತ್ತಿದ್ದರು. ಜನರಿಗೆ ಬೇಕಾಗುವ ಮಡಿಕೆ ಕುಡಿಕೆಗಳನ್ನು [illegible] ತುಂಬಾರನ ಕೆಲಸವಾಗಿತ್ತು. ಮುಖ್ಯವಾಗಿ ಯಾರೂ ನಿರುದ್ಯೋಗಿಗಳಾಗಿರಲಿಲ್ಲ. ವಿದ್ಯಾವಂತ ಯುವಕರು ಗ್ರಾಮವೊಕ್ಕಲಿಗರ [illegible] ಅವರು ಕಷ್ಟದ [illegible] ನಿಶ್ಚಯಿಸಿದ್ದರು. [illegible] ಶಿಕ್ಷಿತ [illegible] ನವನಾಗರಿಕರಿಗೆ [illegible] ನಡೆದಂತೆ ಸ್ವಗ್ರಾಮದ [illegible] ಮಕ್ಕಳ [illegible] ಶಾಲಾ [illegible] ವಿಶ್ವವಿದ್ಯಾಲಯದ ವಿದ್ಯಾಭ್ಯಾಸದಿಂದ [illegible] (Deprived of University Education) ಅಜ್ಞಾನದಿಂದ ಕತ್ತಲಲ್ಲಿ ಮುಳುಗಿದ ನಮ್ಮ [illegible] ಗ್ರಾಮದ ಇತರ ಜನಗಳನ್ನು ಕೈಹಿಡಿ[illegible] ಸ್ವಾರ್ಥ [illegible] ಅಥವಾ [illegible] ಪೇಕ್ಷೆಯಿಂದಲೋ [illegible] ಇದ್ದವರೂ ಕೂಡ ಸರಕಾರಿ ನೌಕರಿಗಾಗಿ ಪಟ್ಟಣವನ್ನು ಸೇರುವ ಯುವಕರಾಗಿರಲಿಲ್ಲ. ತಾವು ಕಲಿತ ವಿದ್ಯೆಯನ್ನು ಗ್ರಾಮಗಳಲ್ಲಿ ಹರಡಿ ಆದರಿಂದ ಜನರಲ್ಲಿ ಜ್ಞಾನೋದಯವನ್ನು ಕಲ್ಪಿಸಬೇಕೆಂಬುದೇ ಆ ಯುವಕ ಜನಾಂಗದ ಪ್ರಥಮ ಕರ್ತವ್ಯವಾಗಿತ್ತು. '(Back to the Villages)' 'ಹಳ್ಳಿಗಳಿಗೆ ಹಿಂತಿರುಗಿ' ಎಂಬ ಕೂಗು ಈಗ ಎಲ್ಲಾ ಕಡೆಗಳಿಂದಲೂ ಕೇಳಿ ಬರುತ್ತಿರುವ ಈ ದುರ್ಘಟ ಪ್ರಸಂಗದಲ್ಲಿ ಮಧ್ಯಮಿಕ ಜನರ ನಿರುದ್ಯೋಗದ (Unemployment among the middle class) ಹಾಹಾಕಾರವು ಸಮುದ್ರದಂತೆ ಘೋರ್ಗರೆಯುತ್ತಿರುವ ಸಮಯದಲ್ಲಿ ಸ್ವಗ್ರಾಮಗಳನ್ನು ಬಿಡುವದು ಬಹು ವಿಷಾದಕರವಾಗಿರುವದು. ಇದೇನು ಕಾಲ ಮಹಿಮೆಯೋ? ಅಥವಾ ವಿದ್ಯಾ ಮಹಿಮೆಯೋ?

ಹಿಂದೆ ಪ್ರತಿಯೊಬ್ಬರೂ ತಮ್ಮ ತಮ್ಮ ಕಸಬುಗಳನ್ನು ಮಾಡುತ್ತಿದ್ದರೆಂದು ಮೇಲೆ ಹೇಳಿರುವೆ. ಆ ಕಸಬುಗಾರರ ಸಂಬಳವು ವರ್ಷದ ಅಂತ್ಯದಲ್ಲಿ ಧಾನ್ಯ ರೂಪದಲ್ಲಿ ಕೊಡಲ್ಪಡುತ್ತಿತ್ತು. ಏಕೆಂದರೆ—ಆಗ ಈಗಿನಂತೆ ನಾಣ್ಯದ ಚಲಾವಣೆಯು ಅಷ್ಟು ವಿಶೇಷವಾಗಿರಲಿಲ್ಲ. ರೈತರು ಸ್ವತಃ ಹತ್ತಿಯನ್ನು ಬೆಳಸಿ ಸಮಯ ಸಿಕ್ಕಿದ ಹಾಗೆಲ್ಲಾ ಕುಟುಂಬದ ಹೆಂಗಸರೊಡನೆ ನೂಲನ್ನು ಮಾಡಿ ಬಟ್ಟೆಯನ್ನು ನೇಯಿದು ಗ್ರಾಮದ ದರ್ಜಿಯ ಮುಖಾಂತರ ತನಗೆ ಮತ್ತು ಕುಟುಂಬಕ್ಕೆ ಬೇಕಾಗುವ ವರ್ಷಾವಧಿ ಅಂಗಿ ಬಟ್ಟೆಗಳನ್ನು ಹೊಲಿಸಿಕೊಳ್ಳುತ್ತಿದ್ದನು. ಮನುಷ್ಯನಿಗೆ ಬೇಕಾದದ್ದು ಹೊಟ್ಟೆ ತುಂಬ ಊಟ ಮತ್ತು ಮೈತುಂಬ ಬಟ್ಟೆ. ಇವೆರಡೂ ಆಗಿನ ಗ್ರಾಮವಾಸಿಗಳ ಸಂತೋಷಪೂರ್ವಕವಾದ ಸಹಕಾರದಿಂದ (Willing Co-operation) ನೆರವೇರುತಿದ್ದವು. ರೈತನಿಂದ ಬೆಳೆಯುತಿದ್ದ್ಯಾಗದ ವಸ್ತುಗಳು ಅಂದರೆ ಉಪ್ಪು, ಜೀರಿಗೆ ವಗೈರೆಗಳಿಗೆ ಅವನು ಹೊರಗಿನವರ ಸಹಾಯವನ್ನು ನಿರೀಕ್ಷಿಸಬೇಕಾಗಿದ್ದರೂ ಅದಕ್ಕಾಗಿ ಬಹು ದೂರ ಹೋಗಬೇಕಾದ ಪ್ರಸಂಗವಿರಲಿಲ್ಲ. ಗ್ರಾಮದ ವ್ಯಾಪಾರಸ್ಥನೇ ಪಕ್ಕದ ಪಟ್ಟಣಗಳಿಂದ ತಂದು ಅವುಗಳನ್ನು ಒದಗಿಸಿ ಕೊಡುತ್ತಿದ್ದನು. ಅಲ್ಲದೆ ಗ್ರಾಮವಾಸಿಗಳಿಗೆ ಜೀವನಕ್ಕೆ ಬೇಕಾಗುವ ಬೇರೆ ಇತರ ಸಾಮಾನುಗಳನ್ನು ತನ್ನ ಅಂಗಡಿಯಲ್ಲಿ ಕೂಡಿಸಿಟ್ಟುಕೊಂಡಿರುತ್ತಿದ್ದನು. ಕೆಲವು ಸಮಯದಲ್ಲಿ 3—4 ಗ್ರಾಮಗಳ ಜನರು ಒಂದೆಡೆಯಲ್ಲಿ ಕಲೆತು ಅಲ್ಲಿಯೇ ಮಾರ್ಕೆಟು ಮಾಡಿ ತಾವು ತಂದ ಸಾಮಾನುಗಳನ್ನು ಮಾರಿ ಮಾರುವದಲ್ಲದೆ ತಮಗೆ ಬೇಕಾದದ್ದನ್ನು ಕೊಂಡು ಕೊಂಡು ಹೋಗುತ್ತಿದ್ದರು. ಇದರಿಂದ ಬಾಲಕರಿಗೆ ಆಟದ ವಸ್ತುಗಳು ಸಿಕ್ಕಲು, ಸ್ತ್ರೀಯರಿಗೆ ಬೇಕಾಗುವ ಟಾಯಿಲೆಟ್ (Toilet) ಇತ್ಯಾದಿಗಳು ದೊರೆಯಲು ಅನುಕೂಲವಾಗುತ್ತಿತ್ತು. ಇವೂ ಅಲ್ಲದೆ ಇನ್ನೂ ಅನೇಕ ಉಪಯೋಗಕರ ಕೆಲಸಗಳಿಗೆ ಅವಕಾಶವುಂಟಾಗುತ್ತಿತ್ತು. ನೆರೆ ಗ್ರಾಮದವರ ಪರಿಚಯ ಏಕಚಿತ್ತತೆ, ಸೋದರತೆ, ಪ್ರೇಮ, ವಿಶ್ವಾಸಗಳಿಗೆ ಕಾರಣವಾಗುತ್ತಿತ್ತು. [illegible] ದೊಡ್ಡ ವ್ಯಾಪಾರವು ಮಾತ್ರ ಹಣದ ಮೂಲಕವಾಗಿ ಸಾಗುತಿತ್ತು. ಹಣದ ಅದಲಾಬದಲಿಗೆ ಉಂಟಾಗುವ ಆದಕ್ಕಾಗಿ ಬಹು ಕಷ್ಟಪಡಬೇಕಾದ ಅವಶ್ಯವಿರಲಿಲ್ಲ. ಸಾಲ ಕೊಡುವವನು (Village Money lender) ಸಿದ್ಧವಾಗಿಯೇ ಇದ್ದನು. ಸುಲಭ ದರದ ಬಡ್ಡಿಗೆ ಸಾಲವು ದೊರೆಯುತಿತ್ತು. ಸಾಲ ತೆಗೆದುಕೊಳ್ಳುವುದು ಅಪರೂಪವಾಗಿತ್ತು. ತೆಗೆದರೂ ಸ್ವಲ್ಪ ಕಾಲಕ್ಕೆ ಸಲ್ಲುತಿತ್ತು. ಸಾಲಕೊಟ್ಟವನ ತಂಟೆ ತಕರಾರು ಈಗಿನವರಷ್ಟು ಪ್ರಬಲವಾಗಿರಲಿಲ್ಲ. ಆದಷ್ಟು ಹಣವನ್ನು ಬಡವನಿಂದ ಸೆಳೆದುಕೊಳ್ಳಲು ಅವಕಾಶವೂ ಇರಲಿಲ್ಲ. ಕೆಲವು ಸಂದರ್ಭಗಳಲ್ಲಿ ಸಾಲವನ್ನು ಧಾನ್ಯ ರೂಪದಲ್ಲಿ ತೀರಿಸುವುದಾಗಿತ್ತು. ತನಗೆ ಸಾಲ ತೀರಿಸಲು ಸಾಕಷ್ಟು ಧೈರ್ಯವಿಲ್ಲದಿದ್ದರೆ ಸಾಲದವನೇ ಕರುಣೆಯಿಂದ ಸ್ವಲ್ಪ ಭಾಗವನ್ನು ಬಿಟ್ಟುಬಿಡುತ್ತಿದ್ದನು. ಆದರೆ ಕೃತಜ್ಞತಾ ಭಾವದಿಂದಲೂ ಧಾರ್ಮಿಕ ರೀತಿಯಿಂದಲೂ, ಅವನ ಸಂತತಿಯವರು ಅನೇಕ ವರ್ಷಗಳ ನಂತರ ತಮ್ಮ ಪೂರ್ವಿಕನ ಸಾಲವನ್ನು ತೀರಿಸಿದ ಉದಾಹರಣೆಗಳಿವೆಯಂತೆ! ನ್ಯಾಯಕ್ಕಾಗಿ ಹಗನುಕ ವರ್ಷಗಟ್ಟಲೆಯಾದರೂ ಕೋರ್ಟು ಕಚೇರಿಗಳ ಬಾಗಿಲುಗಳನ್ನು ಕಾಯುವ ಪ್ರಸಂಗವು ಆಗ ಇರಲಿಲ್ಲ.

(ಮುಂದುವರಿಯುವುದು)

ಅಖಿಲ ಭಾರತ ಸ್ವದೇಶೀ ವಸ್ತು ಪ್ರದರ್ಶನ ಹುಬ್ಬಳ್ಳಿ.

ಹಿಂದೂಸ್ಥಾನದಲ್ಲಿ ತಯಾರಾಗುವ ಸ್ವದೇಶಿ ವಸ್ತುಗಳನ್ನು ಜನರಿಗೆ ಪರಿಚಯ ಮಾಡಿಕೊಟ್ಟು ಅದರ ಮೂಲಕ ಸ್ವದೇಶಿ ವಸ್ತುಗಳ ಪ್ರಸಾರವನ್ನು ಮಾಡಿ ಅವುಗಳ ಮಾರಾಟ ಹೆಚ್ಚಿಸಿ ವಸ್ತು ತಯಾರು ಮಾಡುವವರಿಗೆ ಪ್ರೋತ್ಸಾಹವನ್ನು ಕೊಡುವದರ ಸಲುವಾಗಿ ಅಕ್ಟೋಬರ ತಿಂಗಳಲ್ಲಿ ಹದಿನೈದು ದಿವಸಗಳ ವರೆಗೆ ಹುಬ್ಬಳ್ಳಿಯಲ್ಲಿ ಹಿಂದುಸ್ಥಾನಿ ಸೇವಾದಳದ ಆಶ್ರಯದಲ್ಲಿ ಅಖಿಲ ಭಾರತ ಸ್ವದೇಶೀ ವಸ್ತು ಪ್ರದರ್ಶನವು ನೆರೆಯಲ್ಪಡುವದು.

ಹುಬ್ಬಳ್ಳಿಯು ಮುಂಬೈ ಪ್ರಾಂತ್ಯದ ಹತ್ತಿ ವ್ಯಾಪಾರದ ಒಂದು ಪ್ರಮುಖ ಕೇಂದ್ರ ಹಾಗೂ ಕಾಂಗ್ರೆಸ್ ಕರ್ನಾಟಕದ ಮಧ್ಯವರ್ತಿ ಪ್ರದೇಶವಾಗಿದೆ. ಇದು ಮದ್ರಾಸ್ ಮತ್ತು ಸದರ್ನ ಮರಾಠಾ ರೈಲ್ವೆಯ ಸೋಲಾಪೂರ, ಬೆಂಗಳೂರ್, ಪುಣೆ, [illegible], ಪೋರ್ತುಗೀಜ ಗೋವಾ, ಮುಂತಾದ ಸ್ಥಳಗಳಿಗೆ ಹೋಗುವ ಜಂಕ್ಷನ್ ಇದೆ. ಇದಲ್ಲದೆ ಮುಂಬೈ ಕರ್ನಾಟಕದ ವಿಜಾಪೂರ, ಬೆಳಗಾವಿ, ಧಾರವಾಡ ಮತ್ತು ಉತ್ತರ ಕಾನಡಾ ಈ ನಾಲ್ಕು ಜಿಲ್ಲೆಗಳಿಗೆ ಹೋಗುವ ಮೋಟರು ಗಾ[illegible]ಸ್ಥಾನವು; ವ್ಯಾಪಾರಸ್ಥಾನವೆನಿಸಿಯೂ ವಿಶೇಷ ವ್ಯಾಪಾರ ಸಂಬಂಧವಿದೆ. ಆದ್ದರಿಂದ ಈ ಪ್ರದರ್ಶನವು ಜಯಲಕ್ಷ್ಮಿಗೆ ಕಡಿಮೆ ಇಲ್ಲದೆ ಜನರು ಬಂದು ಇದರಿಂದ ಲಾಭವನ್ನು ಪಡೆಯುವರೆಂದು ನಮ್ಮ ಆಧಾರವು ಇದೆ.

ಆದ ಕಾರಣ ಈ ಪ್ರದರ್ಶನದಿಂದ ಲಾಭ ಪಡೆಯಲಿಚ್ಛೆಯುಳ್ಳ ವ್ಯಾಪಾರಸ್ಥರೂ, ಸ್ವದೇಶೀ ವಸ್ತು ತಯಾರು ಮಾಡುವವರೂ ಹಾಗೂ ಬೇರೆ [illegible] ಈ ಪ್ರದರ್ಶನದಲ್ಲಿ ತಮ್ಮ ಸರಕುಗಳನ್ನು ಪ್ರದರ್ಶಿಸಿ ಅವುಗಳಿಗೆ ಹೆಚ್ಚು ಪ್ರಸಾರವನ್ನಿತ್ತು ತಮ್ಮ ವ್ಯಾಪಾರವನ್ನು ವೃದ್ಧಿಪಡಿಸಿಕೊಳ್ಳಲು ಇದು ಅತ್ಯಂತ ಸುಸಂಧಿಯಾಗಿದೆ. ಇಳಿದ ಹೆಚ್ಚಿನ ಮಾಹಿತಿಗೆ ಸ್ವದೇಶೀ ಪ್ರದರ್ಶನದ ಕಾರ್ಯದರ್ಶಿ ಇವರಿಗೆ ಬರೆದು ತಿಳಿದುಕೊಳ್ಳಬಹುದು.

ಇಂಥಹ ಸುಸಂಧಿಯನ್ನು ವ್ಯಾಪಾರಸ್ಥರು ತಮ್ಮ ಹಿತಾರ್ಥವಾಗಿಯೂ ಹಾಗೂ ದೇಶದ ಕಲ್ಯಾಣಕ್ಕಾಗಿಯೂ ಕಳೆದುಕೊಳ್ಳುವದಿಲ್ಲವೆಂದು ನಮ್ಮ ದೃಢ ನಂಬಿಕೆ ಇದೆ.

ಬಿ. ಜಿ. ಲೋಕರೆ.
ಚೀಫ್ ಕಾರ್ಯದರ್ಶಿ,
ಹಿಂದೂಸ್ಥಾನಿ ಸೇವಾದಲ

ಹುಬ್ಬಳ್ಳಿ,
ತಾ [illegible]

ಪೂರ್ವ ಆಫ್ರಿಕದ ಕೊಡವರ ಸಂಘ.

ಈ ಸಂಘವು ಆಫ್ರಿಕದ ಕೊಡವ ಸಹೋದರರ ಮತ್ತು ಸಹೋದರಿಯರ ಅಭಿವೃದ್ಧಿಗೋಸ್ಕರವೂ, ಅಲ್ಲದೆ ಇನ್ನಷ್ಟು ಕೊಡವರ ಜನಸಂಖ್ಯೆಯನ್ನು ಇಲ್ಲಿ ಹೆಚ್ಚಿಸಬೇಕೆಂಬ ಉದ್ದೇಶದಿಂದ ಸ್ಥಾಪಿಸಲ್ಪಟ್ಟದ್ದಾಗಿದೆ ಇದು ಸ್ಥಾಪಿಸಲ್ಪಟ್ಟು ಒಂದು ವರ್ಷ ಮಾತ್ರವಾದರೂ, ಇದರ ಉದ್ದೇಶವನ್ನು ನೆರವೇರಿಸಲು ತಕ್ಕ ಮಟ್ಟಿಗೆ ಕೆಲಸ ಮಾಡುತ್ತಾ ಇದೆ ದೈವಾನುಗ್ರಹದಿಂದ ಹಿಂದೂಸ್ಥಾನದ ಹೊರಗಿನ ದೂರ ದೇಶಗಳ ಪೈಕಿ ನಮ್ಮ ಈ ಪೂರ್ವ ಆಫ್ರಿಕದಲ್ಲಿ ಸ್ಥಾಪಿತವಾದ ಈ ಮೇಲಿನ ಸಂಘವೇ ಪ್ರಾಥಮಿಕ 'ಕೊಡವರ' ಸಂಘವೆಂಬದೊಂದು ಸಂತೋಷಕರವಾದ ಸಂಗತಿಯಾಗಿದೆ

1ನೇ ವಾರ್ಷಿಕ ವರದಿ 1930

ಸ್ಥಾಪಕರು —ಮೆ ಗಳಾದ ಸಿ ಯಂ ಬಿದ್ದೈಯ್ಯ ಪಿ ಬಿ ತಿಮ್ಮಯ್ಯ, ಸಿ ಕೆ ಬೆಳ್ಳಿಯಪ್ಪ ಬಿ ಡಬ್ಲ್ಯು ಐಯ್ಯಪ್ಪ ಯಂ ಬಿ ಕುಶಾಲಪ್ಪ ಯು ಸಿ ಯಂ ಕಾಳಪ್ಪ, ಮತ್ತು ಮಿಸೆಸ್ ಸಿ ಬಿದ್ದೈಯ್ಯ

ಪ್ರೋತ್ಸಾಹಕರು —ಮೆ ಗಳಾದ ಯು ಕೆ ಮಂದಪ್ಪ ಪಿ ಬಿ ಅಪ್ಪಯ್ಯ ಮತ್ತು ಕೆ ಪಿ ಪೊನ್ನಪ್ಪ

ಗೌರವ ಮೆಂಬರರು —ಮೆ ಗಳಾದ ಕೆ ಎ ಚಂಗಪ್ಪ ಸಿ ಎ ಕಾರ್ಯಪ್ಪ ಮತ್ತು ಮಿಸೆಸ್ ಎ ಅಪ್ಪಯ್ಯ

ಹೊಸ ಮೆಂಬರರು —ಯಂ ಸಿ ಐಯ್ಯಪ್ಪ, ಬಿ ಡಬ್ಲ್ಯು ಮುದ್ದಪ್ಪ ಕೆ ಯಂ ಸಂಟಪ್ಪ ಮತ್ತು ಮಿಸೆಸ್ ಯಂ ಅಯ್ಯಪ್ಪ

ಸಂಘದ ಕೂಟ ಮತ್ತು ಚಟುವಳಿ —ಕಳೆದ ಹನ್ನೆರಡು ತಿಂಗಳುಗಳಲ್ಲಿ, 1931ನೇ ಜನವರಿಗೆ ಆದಷ್ಟು ನಡೆದ ವಾರ್ಷಿಕ ಕೂಟವನ್ನು ಬಿಟ್ಟರೆ, 8 ಸಾಧಾರಣ ಮೀಟಿಂಗುಗಳು ಮತ್ತು ಒಂದು ವಿಶೇಷ ಮೀಟಿಂಗೂ ಸಹ ನಡೆದಿರುವುವು. 1930ನೇ ಇಸವಿ ಶುರುವಿನಿಂದ ಅದೇ ಜೂನ್ ತಿಂಗಳ 30 ರ ವರೆಗೆ ಈ ಸಂಘದ ಮುಂದುವರಿಕೆಯು ಬಹಳ ಮಟ್ಟಿಗೆ ನಿಧಾನವಾಗಿತ್ತು, ಇದರಿಂದ ಒಂದೇ ಎರಡು ಸಾಧಾರಣ ಮೀಟಿಂಗುಗಳು ಮೊದಲಿನ ಅರ್ಧ ವರ್ಷದಲ್ಲಿ, ಉಳಿದ ಕೂಟಗಳು ಕೊನೇ ಅರ್ಧ ವರ್ಷದಲ್ಲೂ ನಡೆದವು ಇನ್ನಷ್ಟು ಮೆಂಬರುಗಳನ್ನು ಸೇರಿಸುವುದು ಸಂಘದ ಮುಖ್ಯೋದ್ದೇಶವೂ ಸಾಧ್ಯವಾದಷ್ಟು ಮಟ್ಟಿಗೆ ಚಂದಾ ಹಣಗಳನ್ನು ಸ್ವೀಕರಿಸುವುದೂ ಎರಡನೆಯ ಅಭಿಲಾಷೆಯಾಗಿತ್ತು.

ಬಿನ್ನಹ ಪತ್ರ —1930ನೇ ಜುಲೈ ತಾರೀಕು 13ನೇ ಆದಿತ್ಯವಾರ ಈ ಸಂಘದವರು ಇದರ ಅಧ್ಯಕ್ಷರಾದ ಮ ರಾ ಶ್ರೀ ಸಿ ಯಂ ಬಿದ್ದೈಯ್ಯನವರಿಗೆ ಅವರ ವರ್ಗಾವರ್ಗಿಯ ನಿಮಿತ್ತವಾಗಿ ಈ ಕೆಳಗಿನ ರೀತಿಯಲ್ಲಿ ಒಂದು ವಿನ್ನಹ ಪತ್ರವನ್ನು ಅರ್ಪಿಸಿದರು —

ಅಯ್ಯಾ ಬಿದ್ದೈಯ್ಯನವರೇ

ತಾವು ಈ ದಿವಸ ತಮ್ಮ ಸಂಸಾರ ಸಮೇತ ಈ ಸಂಘದವರ ಅಪೇಕ್ಷೆ ಮೇರೆ ಇಲ್ಲಿಗೆ ದಯಮಾಡಿಸಿ ಅಧ್ಯಕ್ಷಸ್ಥಾನವನ್ನು ವಹಿಸಿದಕ್ಕೆ ತಮ್ಮನ್ನು ಎಷ್ಟು ವಂದಿಸಿದರೂ ಸಾಲದು ಈ ಈಸ್ಟ್ ಆಫ್ರಿಕದಲ್ಲಿ ಈಗ ಕಳೆದ 2 ವರ್ಷಗಳಿಂದೀಚೆಗೆ ಅನೇಕ ಕೊಡವ ಸಹೋದರರ ನೆಲೆಗೆ ಕಾರಣಭೂತರಾದ ತಾವು ಈಗ ನಮ್ಮನ್ನು ತ್ಯಜಿಸಿ ಹೊರ ಪ್ರಾಂತ್ಯಕ್ಕೆ ವರ್ಗವಾಗಿ ಹೋಗುವಿರೆಂಬುದೊಂದು ಅತ್ಯಂತ ವ್ಯಸನಕರವಾದ ಸಂಗತಿಯಾದರೂ ತಮಗೆ ಈಗ ಮೊದಲಿನ್ನದಕ್ಕಿಂತ ಮೇಲಿನ ಪದವಿಯು ದೊರಕಿದ ಕಾರಣ ಹೊರಗಿನ ಪ್ರಾಂತ್ಯಕ್ಕೆ ಹೋಗಬೇಕಾಯಿತೆಂಬುದು ಇನ್ನೊಂದು ವಿಧದಲ್ಲಿ ಹೆಚ್ಚಿನ ಸಂತೋಷವನ್ನುಂಟುಮಾಡುವ ವಿಷಯವಾಗಿದೆ

ತಾವು ತಮ್ಮ ಹೃದಯದಲ್ಲಿ ನಾಟಿದಂತ ಗುರುಹುವನ್ನು ಭಹಿರಂಗಪಡಿಸಲೋಸುಗ, 'ನನ್ನ ದೇಶದವರು, ನನ್ನವರು ನನ್ನ ಸಹೋದರರು ಎಂದು ಚೆನ್ನಾಗಿ ಅರಿತು ತಮ್ಮ ಕೈಯಲ್ಲಾದಷ್ಟು ಸಹಾಯವನ್ನು ಮಾಡಿ ನಮಗೆಲ್ಲರಿಗೂ ಒಂದೊಂದು ದಾರಿಯನ್ನು ತೋರಿಸಿಕೊಟ್ಟು, ನಾನಾ ವಿಧದಲ್ಲಿ ಉದ್ಧಿಮಾರ್ಗವನ್ನು ಶೋಧಿಸಿ ನಮ್ಮೆಲ್ಲರನ್ನೂ ಈ ಸ್ಥಿತಿಗೆ ತಂದುದಕ್ಕೆ ತಮ್ಮನ್ನು ಎಷ್ಟು ವಂದಿಸಿದರೂ ಕಡಿಮೆಯೆ

ಹೆಚ್ಚೇಕೆ ಫಲವೇನು ತಾವು ಮಾಡಿದಂಥ ಉಪಕಾರಕ್ಕೆ ತಮ್ಮ ಜನ ಮನವನ್ನರ್ಪಿಸಿ ಇಲ್ಲಿ ಸ್ಥಾಪಿಸಿ ಉತ್ಸಾಹದಿಂದ ಎಳ್ಳಷ್ಟು ಕುಂದು ಕೊರತೆಯಿಲ್ಲದೆ ಈಗ ನಡೆಯುತ್ತಾ ಬರುವ ಈ 'East African Coorg's Union' ನೇ ಸಾಕ್ಷಿಯಲ್ಲದೆ ಅನ್ಯಥ ಇಲ್ಲ ತಾವು ಇಂದಿನ ವರೆಗೆ ತಮ್ಮ ಸಂಸಾರ ಸಮೇತರಾಗಿ ನಮ್ಮೊಡನೆ ಪಕ್ಷಪಾತವಿಲ್ಲದೆ ಸಹೋದರ ಭಾವದಿಂದ ಕಲೆತು ನಮ್ಮೆಲ್ಲರ ಕ್ಷೇಮಾಭಿಲಾಷಿಗಳಾಗಿದ್ದು ಇನ್ನು ಮುಂದಕ್ಕೆ ತಮ್ಮ ಮತ್ತು ತಮ್ಮ ಸಂಸಾರದ ಪ್ರೀತಿಯೆಂಬ ನೆರಳಿನಲ್ಲಿ ವಿಶ್ರಾಂತಿಪಡಕೊಳ್ಳುವ ಸುಸಮಯವು ನಮಗೆ ಯಾವಾಗ್ಗೆ ದೊರೆಯುವುದೋ ಎಂಬುದೊಂದು ಯೋಚನೆಯು ನಮ್ಮನ್ನು ಬಹಳವಾಗಿ ಕಾಡುತ್ತಿರುವುದು ಆದರೆ ದೈವೇಚ್ಛೆಯು ಬೇರೆಯಾದ್ದರಿಂದ ಎಷ್ಟು ಹೇಳಿ ತಾನೇ ಫಲವೇನು

ತಾವು ಈಗ ತಮ್ಮ ಮೇಲಿನ ಪದವಿಗೆ ಪ್ರಯುಕ್ತ ಹೊರ ಪ್ರಾಂತ್ಯಕ್ಕೆ ಹೋಗುವುದರಿಂದ ತಮ್ಮ ಮುಂದಿನ ಅಭಿವೃದ್ಧಿಗೆ ದೇವರು ಕುಂದು ಕೊರತೆಯಿಲ್ಲದಂತೆ ಸಂಸಾರ ಸಮೇತವಾಗಿ ಆಯುರಾರೋಗ್ಯೈಶ್ವರ್ಯ ಸಂಪನ್ನರಾಗಿ ಬಾಳುವ ಕೃಪೆಯನ್ನು ತಮಗೂ ತಮ್ಮ ಪತ್ನಿ ಪುತ್ರರಿಗೂ ದೇವರು ಈಯಲೆಂದು ನಾವೆಲ್ಲರೂ ಒಮ್ಮನಸಿನಿಂದ ಬೇಡುವೆವು

ಆರ್ಥಿಕ ವ್ಯವಸ್ಥೆ —ವರ್ಷದ ಆದಿಯಲ್ಲಿ ಸಂಘದ ಭಂಡವಾಳವು ಬಹಳ ಹೀನಸ್ಥಿತಿಯಲ್ಲಿದ್ದರೂ ಅಂತ್ಯದಲ್ಲಿ ಬಾಕಲಾತಿ ಫೀಜೂ, ಚಂದಾ ಹಣವೂ ಸೇರಿ, 300/—ಶಿಲಿಂಗುಗಳು, ಇದರ ಮೇಲೆ 106—ಶಿಲಿಂಗುಗಳು ಬಡ್ಡಿಯೂ ಅಂತು ಒಟ್ಟಾರೆ 416—ಶಿಲಿಂಗುಗಳೂ ಶೇಕರಿಸಲಾಗಿದೆ ಅಲ್ಲದೆ ಚಂದಾ ವಾಪತಿ ಒಗ್ಗೆ ಎಶ್ಲಾ ಜಿಲ್ಲೆಗಳ (Up Country) ಮೆಂಬರರಿಂದ 22—ಶಿಲಿಂಗುಗಳು ಇನ್ನೂ ವಸೂಲಾಗಲಿಕ್ಕಿದೆ ಇದೇ ರೀತಿ ನಡೆಯುತ್ತಾ ಬಂದರೆ 1931ನೇ ವರ್ಷದ ಅಂತ್ಯದಲ್ಲಿ ಈ ಸಂಘದ ಭಂಡವಾಳವು ಹೆಚ್ಚು ಕಮ್ಮಿ 1000—ಶಿಲಿಂಗುಗಳು ಆಗಬಹುದೆಂದು ಧೃಢವಾಗಿ ಹೇಳಬಹುದು

ಖರ್ಚು ವೆಚ್ಚ —ಈ ಸಂಘವು ಕಳೆದ 12 ತಿಂಗಳುಗಳಲ್ಲಿ ಬೇಕಾದ ಪುಸ್ತಕಗಳನ್ನು ಮತ್ತು ಇತರ ಅವಶ್ಯವಿರುವ ಸಾಮಗ್ರಿಗಳನ್ನು ಒದಗಿಸಿಕೊಳ್ಳುವ ಒಗ್ಗೆ 45—ಶಿಲಿಂಗುಗಳು ಮತ್ತು 22 ಸೆಂಟು ಸಹ ಖರ್ಚು ಮಾಡಬೇಕಾಗಿ ಬಂತು ಆದರೆ ಸಂಘದ ಆರ್ಥಿಕ ವ್ಯವಸ್ಥೆಯನ್ನು ಪರಿಶೀಲಿಸಿದಲ್ಲಿ ಖರ್ಚಾದ ಮೊಬಲಗು ಸ್ವಲ್ಪ ಹೆಚ್ಚಾಯಿತೆಂದೇ ಹೇಳಬಹುದು ಇದೇ ಈ ಸಂಘದ ಪ್ರಥಮ ವರ್ಷವಾದ್ದರಿಂದ ಇಷ್ಟು ಖರ್ಚಾಗಬೇಕಾಯಿತು ಇನ್ನು ಮುಂದಿನ ವರ್ಷಗಳಲ್ಲಿ ಇಂಥಾ ದುಂದುಗಾರಿಕೆಯ ಖರ್ಚು ಮಿತವಾಗಿಯೂ ಆಗಲಿಕ್ಕಿಲ್ಲವೆಂದು ಭರವಸೆ ಇದೆ

ಪತ್ರಿಕೆಗಳು —ಎಪ್ರಿಲ್ ತಿಂಗಳ ಆದಿಯಲ್ಲಿ ಕೊಡಗು ಪತ್ರಿಕೆಯಲ್ಲಿ ನಮ್ಮ ಸಂಘವು ಸ್ಥಾಪಿತವಾದ ವರ್ತಮಾನವನ್ನು ಮೊದಲು ಪ್ರಕಟಿಸಲಾಗಿದೆ ಅದೇ ತಿಂಗಳ ಅಂತ್ಯದಲ್ಲಿ ನಮ್ಮ ಸಂಘದ ಮೆಂಬರರ ಪೈಕಿ ಮೆ ಯಂ ಬಿ ಕುಶಾಲಪ್ಪನವರ ವಿದ್ಯಾಭ್ಯಾಸದ ವಿಷಯ ಬಂದು ವಾಕ್ಯ ಸಹ ಪ್ರಕಟವಾಗಿರುತ್ತಾರೆ ಅಲ್ಲದೆ ಒಯುಕರ್ನಾಟಕ ಸಂಪಾದಕರ ಕೋರಿಕೆ ಮೇರೆ ನಾನು ನಮ್ಮ ಸಂಘದ ಅಲ್ಪ ಮೆಂಬರುಗಳನ್ನು ಪತ್ರ ಮುಖೇನ ಒಂದು ಸಣ್ಣ ಜಾತಿ ಸಹಿತ ಪ್ರಕಟನೆ ಒಗ್ಗೆ ಕಳುಹಿಸಿದ ಆ ಸಣ್ಣವನ್ನು ಜಯಕರ್ನಾಟಕ ಪತ್ರಿಕಾಕರ್ತರು ಅವರ 1930ನೇ ಡಿಸೆಂಬರ್ ತಿಂಗಳ ಸಂಚಿಕೆಯಲ್ಲಿ ಪ್ರಕಟಿಸಿ ಅದರ ಅಲ್ಪ ಸಂಚಿಕೆಗಳನ್ನು ನಮಗೆ ದಯಪಾಲಿಸಿರುವರು ಸಂಗಡ ಕಳುಹಿಸಿದ ಬಾಕ್ಯವನ್ನು ಇದು ವರೆಗೂ ಪ್ರಕಟಿಸದಿರುವುದು ಯಾವ ಕಾರಣದಿಂದ ಎಂಬುದನ್ನು ಅರಿಯೆನು ಬಹುಶಃ ಸ್ಥಳ ಸಂಕೋಚದಿಂದಾಗಿರಬಹುದು

ಪರದೇಶ ಮಹನೀಯರ ಉದಾರತ್ವ — ಜಯಕರ್ನಾಟಕದ ಸಂಪಾದಕರಾದ ಮೆ ಯನ ವಿ ಜಾಲಿಹಾಳರಿಗೆ ನಮ್ಮ ಸಂಘದ ಅಭಿವೃದ್ಧಿಯಲ್ಲಿರುವ ಉತ್ಸಾಹಕ್ಕೆ ಅವರು ಸಂಘಕ್ಕೆ ಉಚಿತಾರ್ಥವಾಗಿ ಕಳುಹಿಸಿದ 7 ಕನ್ನಡ ಕಾದಂಬರಿಗಳೇ ಸಾಕ್ಷಿ ಅವರ ಉಪಕಾರವನ್ನು ಬಹುಮಾನಪೂರ್ವಕವಾಗಿ ಸ್ವೀಕರಿಸಲಾಗಿದೆ

ಅಭಿವಂದನಾ ಸೂಚಕ ಠರಾವುಗಳು —ನಮ್ಮ ಈ ಸಂಘದ ಹಂಗಾಮಿ ಮೆಂಬರರಾಗಿದ್ದ ಮೆ ಪಿ ಬಿ ಕಾರ್ಯಪ್ಪನವರೂ, ಅಲ್ಲದೆ ಸಹೋದರಿ ಶ್ರೀಮತಿ ಸಿ ಪಿ ಸೀತಮ್ಮನವರೂ ಮೆ ಗಳಾದ ಪಿ ಎ ಬೆಳ್ಳಿಯಪ್ಪನವರು, ಕೆ ಕರುಂಬೈಯ್ಯನವರು, ಯಂ ಮಂದಣ್ಣನವರು, ಹೆಚ್ ಕೃಷ್ಣೈಯ್ಯನವರು ಮತ್ತು ಅಬ್ದುಲ್ ಗಫೂರ್ ಖಾನ್'ರವರೂ ಸ್ವಾರ್ಥತ್ಯಾಗ ಬುದ್ಧಿಯಿಂದ ಮಾತೃ ಭೂಮಿ ಸೇವೆಗೋಸ್ಕರ ಕಾರಾಗೃಹ ವಾಸ ಮಾಡಿದಕ್ಕೋಸುಗ ಅವರನ್ನು ಅಭಿನಂದಿಸಬೇಕೆಂಬ ಠರಾವು ಈ ಸಂಘದಲ್ಲಿ ಪಾಸಾಯಿತು.

ಕೋರಿಕೆ

ವಾಚಕ ಮಹಾಶಯರೇ

ಈ ಮೇಲಿನ ವರದಿಯಲ್ಲಿ ಏನಾದರೂ ಕುಂದುಕೊರತೆಗಳಿದ್ದರೆ, ಅಂಥದನ್ನು ತಿದ್ದುಪಡಿ ಮಾಡಿಕೊಂಡು ಸಾಧಾರಣ 4000 ಮೈಲುಗಳ ದೂರದಲ್ಲಿ ಪ್ರಾಥಮಿಕವಾಗಿ, ಈಗ ಇಲ್ಲಿರುವ ಮತ್ತು ಇನ್ನು ಮುಂದಕ್ಕೆ ಬರುವ ಕೊಡಗ ಸಹೋದರ ಸಹೋದರಿಯರ ಕ್ಷೇಮಾಭಿವೃದ್ಧಿಗೋಸ್ಕರ ಸ್ಥಾಪಿಸಲ್ಪಟ್ಟ ಈ ಪುಟ್ಟ ಸಂಘವನ್ನು ಪ್ರೋತ್ಸಾಹಿಸಬೇಕಾಗಿ The East African Coorg's Union ನ್ನಿನ ಪರವಾಗಿ ಕೋರುವ,

ಪಿ ಬಿ ತಿಮ್ಮಯ್ಯ
(ಗೌರವ ಕಾರ್ಯದರ್ಶಿ)

[ಸೂಚನೆ—ಸ್ಥಳ ಸಂಕೋಚದಿಂದ ಮೇಲಿನ ವರದಿಯನ್ನು ಸ್ವಲ್ಪ ಚಿಕ್ಕದು ಮಾಡಲಾಗಿದೆ ಸಂ. ಕೊ.]

ಪ್ರಾಂತೀಯ ಕಾಂಗ್ರೆಸ್ ಕಮಿಟಿ

ಜನೇ ತಾರೀಖಿನಲ್ಲಿ ಧಾರವಾಡದಲ್ಲಿ ಕರ್ನಾಟಕ ಕಾಂಗ್ರೆಸ್ ಕಮಿಟಿಯ ಕೌನ್ಸಿಲ್ ಸಭೆಯಾಗಿ ಅಲ್ಲಿ ಈ ಅಮೂಲ್ಯವಾದ ಗೊತ್ತುವಳಿಗಳು ಅಂಗೀಕೃತವಾದವು —

(೧) ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ವಿದೇಶೀ ವಸ್ತ್ರ ... ಸರ್ಕಾರದ ನಿರ್ಬಂಧ ... ಸರಕಾರವನ್ನು ಸೇರಿಸುವುದು, ಕಾಂಗ್ರೆಸ್ ನಿಧಿ ಕೂಡಿಸುವುದು ಮೊದಲಾದವು ಅಲ್ಲದೆ—

ಬಿಜಾಪುರ ಜಿಲ್ಲೆಯಲ್ಲಿ—ರೈತರ ಆರ್ಥಿಕ ದುರವಸ್ಥೆ
ಧಾರವಾಡ „ —ನಾಲಾ ಜಲದ ಅಸ್ವಾಸ್ಥ್ಯ
ಬೆಳಗಾಂ „ —ಅರಣ್ಯದ ಅನಾನುಕೂಲ, ಶಾಸನದ ಕಷ್ಟಗಳು
ಬಳ್ಳಾರಿ —ಅರಣ್ಯದ ಅನಾನುಕೂಲ, ಆರ್ಥಿಕ ದುರವಸ್ಥೆ,
ಮಂಗಳೂರು „ —ಸರ್ವೆ ಸೆಟ್ಲ್‌ಮೆಂಟ್ ದುರವಸ್ಥೆ,
ಕಾರವಾರ —ಅರಣ್ಯದ ಅನಾನುಕೂಲ
ಈ ವಿಚಾರ ವಿಮರ್ಶೆ ನಡೆಸಬೇಕು.

(೨) ಕರ್ನಾಟಕದಲ್ಲಿ ವಿದೇಶೀ ವಸ್ತ್ರ ಮತ್ತು ಮದ್ಯ ಬಹಿಷ್ಕಾರ ವ್ಯವಸ್ಥೆ ನಡೆಸಲು ಶ್ರೀಯುತ ಆರ್. ಆರ್. ದಿವಾಕರ್, ಮುದವೇಡಕರ ಈ ಮೂವರನ್ನು ನೇಮಿಸಲಾಯಿತು

(೩) ಅಖಿಲ ಭಾರತ ಸ್ವದೇಶೀ ಬೋರ್ಡಿಗೆ ಕ್ಕೇರಿಕರರನ್ನು ನೇಮಿಸಲಾಯಿತು

(೪) ಸಿರಸಿ ಸಿದ್ದಾಪುರ (ಕರ್ನಾಟಕದಲ್ಲಿ) ರೈತರ ಕಷ್ಟಗಳಾಗಿವೆ ಒಪ್ಪಂದ ಕ್ರಮವೇ ಮುಂತಾದ ಕೆಯ ಪ್ರಸಂಗಗಳಿಂದ ಅಧಿಕಾರಿಗಳು ಗಾಂಧಿ—ಒಪ್ಪಂದ ಮುರಿದಿರುವರು

(೫) ಈ ಕೌನ್ಸಿಲಿನವರು ಮೈಸೂರು ಸರಕಾರಿಪುರದ ತಾಲೂಕಿನ ರೈತರ ದುರವಸ್ಥೆಗಾಗಿ ಸಂಸ್ಥಾನ ಸರಕಾರದವರು ರೈತರ ದೂರು ... ಕೂಡಲೇ ಮಾಡಬೇಕೆಂದು ಪ್ರಾರ್ಥಿಸುತ್ತದೆ ಗಡಿನಾಡು (ಹಿರೇಕಂಪುರು ಇತ್ಯಾದಿ) ಗಳಲ್ಲಿ ... ರ ಕೊಡಲಾಗಿದೆ

(೬) ಕರ್ನಾಟಕದಲ್ಲಿ ಗಾಂಧಿ—ಇರ್ವಿನ್ ಒಪ್ಪಂದವನ್ನು ಅಧಿಕಾರಿಗಳು ಮುರಿದಿರುವುದು ಸ್ಥಳ ಶೋಧಿಸಲು ಶ್ರೀ ದಿವಾಕರರಿಗೆ ...

(೭) ಗೋವಾಮೀನದ ಶುಲ್ಕ ವಿಚಾರ ಪರೀಕ್ಷಕರನ್ನಾಗಿ ... ರನ್ನು ನೇಮಿಸತಕ್ಕದ್ದು.

(೮) ಕರ್ನಾಟಕದ ಒಂದು ತಾಲೂಕನ್ನು ... ಸಿದ್ಧಗೊಳಿಸಬೇಕೆಂಬ ಗೊತ್ತುವಳಿಗೆ ... ಲು ಒಂದು ಸಮಿತಿಯ ರಚನೆಯಾಯಿತು

NOTICE.

A pure bred Scindhi breedin[g bull of the] following description will be so[ld by public] auction by the undersigned on Fri[day the 17th] July 1931 at 12 noon in front of t[he] office The bull is the produce of [the] Institute of Animal Husbandry an[d Dairying,] Bangalore with a good record [and is a] dual purpose animal i. e., both for [milk and draught] and is most suited to improve t[he] cattle in Coorg

DESCRIPTION

Age—Five
Colour—Red
Height—4 feet 9 inches (includi[ng hump])
Length—6 feet 8 inches
Girth—6 feet

M. S. M[...]
7—7—31 Deputy [...]
Land Records and Agric[ulture]

ನೋಟೀಸು.

ಈ ಕೆಳಗೆ ವಿವರಿಸಿರುವ ಸಿಂಧೂ ದೇಶದ ... ಯ ಐದು ವರ್ಷ ಪ್ರಾಯದ ಬೀಜದ ಹೋರಿ ... ಳಗೆ ಸೈನು ಮಾಡಿದವರ ಮುಂದೆ ಇದೇ ... ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಸರಿಯಾ[ಗಿ] ಡ. ಆಪೀಸಿನ ಮುಂದೆ ಪಬ್ಲಿಕ್ ಹರಾಜಿನಲ್ಲಿ ... ದು ಈ ಹೋರಿಯು ಬೆಂಗಳೂರಿನಲ್ಲಿರುವ ಸರ್ಕಾರದ ಡೈರಿ ಫಾರಮಿನಲ್ಲಿ ಹುಟ್ಟಿ ... ಪಡೆದಿದೆ (ಇ) ಜಾತಿಯು ಹಾಲಿಗೂ ... ಖ್ಯಾತಿಗೊಂಡಿದೆ ಕೊಡಗಿನ ದನಗಳ ತಳಿ ... ಲಿಕ್ಕೆ ಅತ್ಯುತ್ತಮವಾದದು

ವಿವರ.

ವಯಸ್ಸು—ಐದು
ವರ್ಣ—ಕೆಂಪು.
ಎತ್ತರ—4 ಅಡಿ 9 ಇಂಚು (ಹಿಣಿಲು ಸೇ[ರಿ])
ಉದ್ದ—6 ಅಡಿ 8 ಇಂಚು
ಸುತ್ತಳತೆ—6 ಅಡಿ.

ಯಂ. ಯಸ್ [...]
7—7—31 ಡಿಪ್ಯುಟಿ ಸೂ[...]
2—2 ಲ್ಯಾಂಡ್ ರಿಕಾರ್ಡ್ ಮ[...]

ವರ್ತಮಾನ ಸಂಗ್ರಹ.

ಒಳ ದೇ ಶ.

ಕೊಡಗು ಸಹಕಾರಿ ಫೆಡರೇಶನಿನ ಎಕ್ಸಿಕ್ಯುಟಿವ್ ಕಮಿಟಿ ಮೀಟಿಂಗು ಈ ತಾ 12ರಲ್ಲಿ ಮಡಿಕೇರಿಯಲ್ಲಿ ನಡೆಯಿತು

ಫ್ರೇಸರ್‌ಪೇಟೆ ಸಮೀಪ ಒಂದು ಗ್ರಾಮದಲ್ಲಿ ಈ ವಾರ ಪ್ಲೇಗಿನಿಂದ ಒಂದು ಮರಣ ಉಂಟಾಯಿತೆಂದು ತಿಳಿದುಬರುತ್ತದೆ

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗೊಂದು ಈ ತಾ. 2ರಲ್ಲಿ ಮಡಿಕೇರಿಯಲ್ಲಿ ನಡೆಯುವುದಾಗಿ ತಿಳಿಯುತ್ತೇವೆ.

ಮಡಿಕೇರಿ ಮಹದೇವಪೇಟೆಯ ದೇವಾಂಗದ ಸಾಕಯ್ಯನೆಂಬವನು ಈ ತಾ 12ರ ರಾತ್ರಿ ಮಾರ್ಕೆಟು ಬಳಿ ಇರುವ ತೋಡಿಗೆ ಬಿದ್ದು ಆತ್ಮ ಹತ್ಯ ಮಾಡಿಕೊಂಡನಾಗಿ ವರ್ತಮಾನ

ರಿಟ್ರೆಂಚ್‌ಮೆಂಟ್ ಕಮಿಟಿಯ ಮೀಟಿಂಗು ಈ ತಾ 8ರಿಂದ 10ರ ವರೆಗೆ ಮಡಿಕೇರಿಯಲ್ಲಿ ನಡೆಯಿತು ಪುನಹ ಈ ತಾ 22ರಿಂದ 26ರ ವರೆಗೆ ನಡೆಯುವುದಾಗಿ ತಿಳಿಯಬರುತ್ತದೆ

ಈಸ್ಟ್ ಆಫ್ರಿಕದಲ್ಲಿ ಉದ್ಯೋಗದಲ್ಲಿದ್ದ ಮ ಪುಟ್ಟಿಚಂಡ ಬಿ ಅಪ್ಪಯ್ಯನವರು ರಜೆಯಾಗಿ ಕಣ್ಣಾನೂರಿನಲ್ಲಿ ಚಿಕಿತ್ಸೆ ಹೊಂದುತ್ತಿದ್ದವರು ಈ ತಾ 9ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಲು ವಿಷಾದಿಸುತ್ತೇವೆ

ಕೊಡ್ಲಿಪೇಟೆಯಲ್ಲಿ ಕೆಲವ ಜನರುಗಳ ಮೇಲೆ ಸಾರ್ವಜನಿಕ ನ್ಯಾಯವನ್ನು ಹೊಡೆದ ಕೇಸು ಬಗ್ಗೆ ಕೇಸು ಈ ತಾ 13ರಿಂದ ಇಂದಿನ ವರೆಗೆ ಸೆಷನ್ಸ್ ಕೋರ್ಟಿನಲ್ಲಿ ವಿಚಾರ ಣೆ ಯಿತು ಜಡ್ಜ್‌ಮೆಂಟು ಆಗಲಿಲ್ಲ

ಮಡಿಕೇರಿಯಲ್ಲಿ ಕಳೆದ ಜನವರಿಯಿಂದ ಇಂದಿನ ವರೆಗೆ 9 21 ಇಂಚು ಮಳೆಯಾಗಿ ... ಕಳೆದ ವರ್ಷ 14ರಲ್ಲಿ 3 21 ಇಂಚು ... ಹೋದ ವರ್ಷಕ್ಕಿಂತ ಕಡೆಗೆ ಈಗಲೂ ಹೆಚ್ಚಾಗಿ ಮಳೆಯಾಗಿದೆಯೆಂದು ವರ್ತಮಾನ.

ಯೂನಿವರ್ಸಲ್ ಮ್ಯೂಚುವಲ್ ಏಯಿಡ್ ಕಂಪೆನಿಯ ಶಾಖೆಯಾಗಿದ್ದ ಕೊಡಗು ಮ್ಯೂಚುವಲ್ ಏಯಿಡ್ ಕಂಪೆನಿಯ ಲೆಕ್ಕಾಚಾರಗಳು ಈಗ ಯೂನಿವರ್ಸಲ್ ಕಂಪೆನಿಯಿಂದ ಪ್ರತ್ಯೇಕಿಸಲ್ಪಟ್ಟಿವೆಯೆಂದೂ, ಇನ್ನು ಕೊಡಗು ಮ್ಯೂಚುವಲ್ ಏಯಿಡ್ ಕಂಪೆನಿಯು ಸ್ವತಂತ್ರವಾಗಿ ಕೊಡಗಿನಲ್ಲೇ ಕಾರ್ಯ ಕಲಾಪಗಳನ್ನೆಲ್ಲಾ ನಡೆಸುವಂತೆ ಏರ್ಪಾಡಾಗಿದೆಯೆಂದೂ, ಅದರ ಕೆಲಸಕ್ಕೆ ಎಲ್ಲರೂ ಉತ್ತೇಜನ ಕೊಡಬೇಕೆಂತಲೂ ಸದರಿ ಕಂಪೆನಿಯ ಅಧ್ಯಕ್ಷರ ಕೋರಿಕೆಯಾಗಿದೆ

ಸನಿವಾರಸಂತೆ ನೋಯಗಿಕಾರರ ಸಹಕಾರಿ ಸಂಘ ಮೊದಲ್ಗೊಂಡು ಹೊಸಪಟ್ಟಿ, ಬೇಡಗೆಟ್ಟ ಮತ್ತು ಕೊಡ್ಲಿಪೇಟೆ ದವಸ ಭಂಡಾರಗಳು ಮತ್ತು ಮಡಿಕೇರಿ ಮುನಿಸಿಪಲ್ ಕೂಲಿ ಜನರ ಸಂಘವು ಸರಿಯಾಗಿ ಕೆಲಸ ನಡಿಸದ್ದರಿಂದ ಅವುಗಳ ರಿಜಿಸ್ಟ್ರೇಷನ್ ರದ್ದು ಮಾಡಲ್ಪಟ್ಟು ಮೊದಲಿನ ನಾಲ್ಕು ಸಂಘಗಳಿಗೆ ಕೋ ಆಪರೇಟಿವ್ ಇನ್‌ಸ್ಪೆಕ್ಟರಾದ ಮ ಪಟ್ಟಮಾಡ ಪೊನ್ನಪ್ಪನವರೂ, ಕಡೇ ಸಂಘಕ್ಕೆ ಕೊ ಇ ಮಿ ಕೆ ಎ ಶೀಪತಿ ರಾವ್‌ರವರೂ ಲಿಕ್ವಿಡೇಟರುಗಳಾಗಿ ನೇಮಿಸಲ್ಪಟ್ಟಿರುವರು

ಮಡಿಕೇರಿನಾಡು ಸಹಕಾರಿ ಸೊಸೈಟಿಯ 2ನೇ ಜನರಲ್ ಮೀಟಿಂಗು ಈ ತಾ 12ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಈ ಮೊದಲು ಆರಿಸಲ್ಪಟ್ಟಿದ್ದ ಕಮಿಟಿಯವರು ರಾಜೀನಾಮೆ ಕೊಟ್ಟ ಮೇಲೆ ರಾ ಸಾ ಕೋದಂಡ ವಿಸ್ವನಾಥನವರು ಸೊಸೈಟಿಯ ಅಧ್ಯಕ್ಷರಾಗಿಯೂ, ಮ ಮನೆಯಂಡ ಪೆಮ್ಮಯ್ಯನವರು ಸೆಕ್ರೆಟರಿಯಾಗಿಯೂ, ಮ. ಎಸ್ ಬಸಪ್ಪನವರು ಖಜಾಂಚಿಯಾಗಿಯೂ, ಸೊಸೈಟಿಗಳ ಪರವಾಗಿ ನಾಲ್ಕು ಮತ್ತು ಬಿಡಿ ಮೆಂಬರುಗಳ ಪರವಾಗಿ ಎದು ಜನರು ಕಮಿಟಿ ಮೆಂಬರುಗಳಾಗಿಯೂ ಚುನಾಯಿಸಲ್ಪಟ್ಟರು ಶೇರಿನ ಮೌಲ್ಯವು 20 ರಿಂದ 10 ರೂಪಾಯಿಗಳಿಗೆ ಇಳಿಸಲಾಯಿತು

ಹಿಂ ದೂ ದೇ ಶ.

ಬೊಂಬಾಯಿ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಶ್ರೀಯುತ ಕೆ. ಯಫ್ ನರಿಮನ್‌ರವರೇ ಪುನಹ ಆರಿಸಲ್ಪಟ್ಟಿರುವರು

ಚಿಟಗಾಂಗಿನ ನಮೂನಾ ಬಜಾರಿನ ಅಂಗಡಿಗಳಿಗೆ ಆಕಸ್ಮಾತು ಬೆಂಕಿ ಬಿದ್ದು ಹಲವು ಅಕ್ಕಿ ಮಳಿಗೆಗಳು ಬೆಂದು ಸುಮಾರು 5 ಲಕ್ಷ ರೂಪಾಯಿ ನಷ್ಟವಾಗಿದೆಯಂತೆ

ಬೆಂಗಳೂರಿನಲ್ಲಿ ರಾಷ್ಟ್ರೀಯ ಧ್ವಜವನ್ನು ... ದಕ್ಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ... ರನ್ನು ಕುರಿತು ... ಗಾಂಧಿಯವರು ವೈಸರಾಯ ಸರಕಾರದೊಡನೆ ಪತ್ರವ್ಯವಹಾರ ನಡೆಸುವರೆಂದು ಅವರು ಹೇಳುವರು.

ಪಂಜಾಬಿನ ಗವರ್ನರವರಿಗೆ ಗುಂಡು ಹೊಡೆದರೆಂಬ ಅಪರಾಧಕ್ಕಾಗಿ ಗಲ್ಲಿಗೆ ವಿಧಿಸಲ್ಪಟ್ಟ ಹರಿಕಿಸನರವರ ತಂದೆಯು ಮಗನು ಗಲ್ಲಿಗೇರಿಸಲ್ಪಟ್ಟ ಶೋಕದಿಂದ ಕಾಯಿಲೆಯಾಗಿ ಮೃತರಾದರು.

ಬೊಂಬಾಯಿ ಪ್ರಾಂತ್ಯದ ಮ. ಎ ಪಿ. ಹಾರ್ಡಿಮನ್‌ರವರು ... ದಿಂದ ಲಾಹೋರಿನಲ್ಲಿ ಹಿಂದು ಹೆರಾಲ್ಡ್' ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡು, ಅದನ್ನು 'ಡೈಲಿ ಹೆರಾಲ್ಡ್' ಎಂಬ ಹೆಸರಿನಲ್ಲಿ ನಡೆಸುವರು.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗು ಆಗೊಸ್ಟ್ ತಾ. 5 ರಲ್ಲಿಯೂ, ವರ್ಕಿಂಗ್ ಕಮಿಟಿಯ ಮೀಟಿಂಗು ಅದೇ ತಾ. 4 ಮತ್ತು 5 ರಲ್ಲಿಯೂ ಬೊಂಬಾಯಿಯಲ್ಲಿ ನಡೆಯುವಂತೆ ನಿಶ್ಚಯ ಮಾಡಲಾಗಿದೆ

ಎಪ್ಪೆಸ್ಸಿ (ರಾಜದ್ರೋಹದ ಕೃತ್ಯ)ಯ ಮೇರೆ, ಬಂಗಾಳದ ದುಗೆಯಲ್ಲಿ ಸೆರೆಹಿಡಿಯಲ್ಪಟ್ಟು ಜೈಲಿನಲ್ಲಿದ್ದ 1600 ಕೈದಿಗಳು ಬಿಡುಗಡೆ ಮಾಡಲ್ಪಟ್ಟಿರುವರು. ಈ ಸಂಬಂಧದ ಕೈದಿಗಳು 1700 ಇನ್ನೂ ಜೈಲಿನಲ್ಲಿರುವರಂತೆ

ಪಂಜಾಬಿನ ಶೇಖ್‌ಪುರದೆಂಬಲ್ಲಿ ಒಬ್ಬ ವಿಧವೆಯು ತಾಯಿಲ್ಲದವನಾಗಿದ್ದ ತನ್ನ ಮಗನು ಉಳಿಯಲಾರನೆಂದು ಶೋಕದಿಂದ ಒಂದು ಬಾವಿಯ ನೀರಿಗೆ ಬಿದ್ದು ಪ್ರಾಣ ಹತ್ಯ ಮಾಡಿಕೊಂಡಳು. ಆದರೆ ಆ ಹುಡುಗನು ಕಡೆಗೆ ಬದುಕಿಕೊಂಡನು.

ಸಿಂಧು ಪ್ರಾಂತ್ಯದ ಜಾಕೋಬಾಬಾದಿನಲ್ಲಿ ಪೋಲೀಸು ಅಸಿಸ್ಟೆಂಟ್ ಇನ್‌ಸ್ಪೆಕ್ಟರಾದ ಮ ಶೇರ್ ಮಹ್ಮದ್‌ರವರು ಈ ತಾ 6ರ ರಾತ್ರಿ ಮಲಗಿದ್ದಾಗ್ಯೂ ಯಾರೋ ಅವರಿಗೆ ಗುಂಡು ಹೊಡೆದರೆಂದೂ, ಗುಂಡು ಅವರಿಗೂ ಅವರ ಪತ್ನಿಗೂ ತಗಲಿ ಅವರಿಬ್ಬರೂ ಮೃತರಾದರೆಂದೂ ವರ್ತಮಾನ

ಉತ್ತರ ಕನ್ನಡದ ಶಿರಸಿ—ಸಿದ್ದಾಪುರ ಪ್ರದೇಶಗಳ ಸ್ಥಿತಿಯು ಬಹು ಶೋಚನೀಯವಾಗಿದೆ ಕಂದಾಯ ಕಟ್ಟದ್ದಕ್ಕಾಗಿ ಜಪ್ತಿ ಕೆಲಸವು ಜೋರಾಗಿ ನಡೆದಿದೆಯಂತೆ ಬೆಳೆಸಿದ್ದ ಜನವನ್ನು ಬಹಳವಾಗಿ ಪೀಡಿಸುತ್ತಿದೆ ಹೊಟ್ಟೆಗೆ ಅನ್ನವಿಲ್ಲದೆ ಜನರು ಬೇರೆ ಪ್ರದೇಶಕ್ಕೆ ಹೋಗುತ್ತಿರುವುದಲ್ಲದೆ ಆತ್ಮಹತ್ಯೆಗಳೂ ಕೂಡ ನಡೆಯುತ್ತಿವೆಯಂತೆ!

ಕಾಂಗ್ರೆಸ್ಸಿನ ಅಧ್ಯಕ್ಷರಾದ ವಲ್ಲಭಭಾಯಿ ಪಟೇಲರವರನ್ನು, ಪಂಡಿತ ಜವಾಹಿರ್ ಲಾಲ್ ನೆಹರುರವರನ್ನೂ ಸೆರೆ ಹಿಡಿಯಬೇಕೆಂಬ ಚರ್ಚೆಯು ವೈಸರಾಯ ಎಕ್ಸಿಕ್ಯುಟಿವ್ ಕೌನ್ಸಿಲಿನಲ್ಲಿ ಒಂದಾಗ್ಯೆ ಸರ್ ರಾಮಸ್ವಾಮಿ ಅಯ್ಯರವರ ಕೋರಿಕೆ ಮೇರೆ ಹಾಗೆ ಮಾಡುವುದು ಬಾಕಿಮಾಡಲಾಯಿತೆಂದು ... ವರ್ತಮಾನವು ಪುರಾ ಸುಳ್ಳೆಂದು ಇತ್ತಲಾಗಿ ತಿಳಿದು ಬರುತ್ತದೆ

ಸತ್ಯಾಗ್ರಹ ಚಳವಳಿ ಕಾರಣ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದಾಗ್ಯೂ ರಾಯಪುರದ ಪಂಡಿತ ಎ ರಾಠೋರ ಶುಕ್ಲ ಎಂಬವರ ಹಸ್ವಿಟ್ಟು ಮುದ್ರೆಯನ್ನು ಡಿಪ್ಯುಟಿ ಕಮಿಷನರ್ ಸಿ ಕೆ ಸೀಮನ್‌ರವರು ಬಲತ್ಕಾರದಿಂದ ತೆಗೆದಿದ್ದರಿಂದ ಈಗ ಜೈಲಿನಿಂದ ಬಿಡುಗಡೆಯಾಗಿರುವ ಸದರಿ ರಾಜಕೀಯ ಕೈದಿಯವರು ಕಮಿಷನರ ಮೇಲೆ ವಹನ ನಷ್ಟಕ್ಕಾಗಿ 1500 ರೂಪಾಯಿಗಳಿಗೆ ದಾವೆ ಹೂಡಿದ್ದಾರೆ.

ಸರ್ಕಾರವು ಗಾಂಧಿ—ಇರ್ವಿನರ ಒಪ್ಪಂದಕ್ಕೆ ವಿರೋಧವಾಗಿ ನಡೆದುದಕ್ಕೆ ಪ್ರತಿ ಕ್ರಿಯೆಯಾಗಿ ಕಾನೂನು ಭಂಗದ ಚಳವಳಿಯನ್ನು, ಕಂದಾಯ ಕೊಡದ ಚಳವಳಿಯನ್ನೂ ಪುನಹ ಪ್ರಾರಂಭಿಸುವಂತೆ ಕಾಂಗ್ರೆಸ್ಸನ್ನು ಕೇಳಿಕೊಳ್ಳಬೇಕು" ಎಂಬ ನಿರ್ಣಯವು ಬೊಂಬಾಯಿಯಲ್ಲಿ ಶ್ರೀಮತಿ ಕೆ ಯಫ್ ನರಿಮನ್‌ರವರ ಅಧ್ಯಕ್ಷತೆಯಲ್ಲಿ ನಡೆದ ತರುಣ ಸಂಘದ ಮಹಾ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು

"ಲಂಡನಿಗೆ ಯಾವ ಉಡುಪನ್ನು ಹಾಕಿಕೊಂಡು ಹೋಗುವಿರಿ" ಎಂದು ಮಹಾತ್ಮರನ್ನು ಒಬ್ಬರು ಪ್ರಶ್ನಿಸಿದಾಗ ಅವರು ಹೇಳಿದರು— ನಾನು ದುಂಡು ಮೇಜಿನ ಸಭೆಗೆ ಹೋಗುವುದು ಕಾಂಗ್ರೆಸಿನ ಪ್ರತಿನಿಧಿಯಾಗಿ ... ಇಂಗ್ಲೆಂಡಿಗೆ ... ಕಾಂಗ್ರೆಸ್ ಅರ್ಧ ... ಅರ್ಧ ಹೊಟ್ಟೆ ತುಂಬದ ಜನರ ಪ್ರತಿನಿಧಿಯಾಗಿ ... ಇಂಗ್ಲೆಂಡಿನ ಸಭ್ಯರು ... ದ ಉಡುಪನ್ನು ತೊಡದೆ, ನನ್ನ ಲಂಗೋಟಿ (ತುಂಡು ಪಂಚೆ)ಯಿಂದಲೇ ಹೋಗುವೆನು. ಹವವು ಹೆಚ್ಚು ಶೀತವಾದರೆ ... ಒಂದು ಬಟ್ಟೆಯನ್ನು ಧರಿಸುವೆನು"

ಗುಂಟೂರಿನ ಒಂದು ಸರ್ಕಾರಿ ಆಸ್ಪತ್ರೆಯಲ್ಲಿ ಅಸಿಸ್ಟೆಂಟ್ ಸರ್ಜನರಾಗಿದ್ದ ಡಾ ವೆಂಕಟಪತಿಯವರು ತಮ್ಮ ಕೆಲಸಕ್ಕೆ ರಾಜೀನಾಮೆಕೊಟ್ಟು ಸತ್ಯಾಗ್ರಹ ಚಳವಳಿಗೆ ಸೇರಿ ಕಾರಾಗೃಹ ವಾಸವನ್ನು ಕೈಕೊಂಡಿದ್ದರು ರಾಜಿಯಾಗಿ ಬಿಡುಗಡೆಯಾದ ಮೇಲೆ, ಅವರು ಹಾಕಿ, ರಾಜಿ ಶರತ್ತಿನ ಮೇರೆ ತನ್ನ ಹಿಂದಿನ ಉದ್ಯೋಗವನ್ನು ಮರಳಿ ಪಡೆದರು ನಂತರ ಒಂದು ದಿನ ಅವರ ಮೇಲಧಿಕಾರಿಗಳು—ಸರ್ಕಾರಕ್ಕೆ ವಿರೋಧವಾಗಿ ಕಾನೂನು ಭಂಗ ಚಳವಳಿಗೆ ಸೇರಿದ ತಪ್ಪಿಗೆ ಕ್ಷಮೆ ಕೇಳಿಕೊಳ್ಳಬೇಕೆಂದುದಕ್ಕೆ ಸದರಿ ಡಾಕ್ಟರವರು ತಿರಸ್ಕರಿಸಿದರು ಈಗ ಅವರು ಡಿಸ್‌ಮಿಸ್ ಮಾಡಲ್ಪಟ್ಟಿರುವರೆಂದು ತಿಳಿದುಬಂದಿದೆಯಂತೆ! ಇದು ಡೆಲ್ಲಿ ಒಪ್ಪಂದಕ್ಕೆ ವಿರೋಧವೆಂದು ಮಹಾತ್ಮರಿಗೆ ಪುರಾವೆ ಹೋಗಿದೆ.

ಪಂಜಾಬಿನ ಮುಲ್ತಾನಿನ ಬಳಿಯ ಸಿಕಂದರಾಬಾದಿನಲ್ಲಿ ಹಣದ ವಿಷಯದಲ್ಲಿ ಜಗಳವುಂಟಾಗಿ ದೊಡ್ಡ ಗಲಾಟೆಯಾಗಿರುವುದು. ಪ್ರಮುಖ ಮುಸಲ್ಮಾನರೊಬ್ಬರು 500 ಮುಸಲ್ಮಾನರನ್ನು ಕೂಡಿಸಿ ಲಾಠಿ, ಕೊಡಲಿ, ಬಂದೂಕು ಎಣ್ಣೆ ಡಬ್ಬಿಗಳನ್ನು ಹಿಡಿದುಕೊಂಡು ಡಂಗುರ ಹೊಡೆಸಿಕೊಂಡು ಸಿಕಂದರಾಬಾದಿಗೆ ಹೋಗಿ 100 ಅಂಗಡಿಗಳುಳ್ಳ 3 ಬಜಾರುಗಳನ್ನು ಲೂಟಿಮಾಡಿ, ಮನೆಗಳಿಗೆ ಬೆಂಕಿ ಕೊಟ್ಟು ಗಲಾಟೆ ನಡಿಸಿರುವರೆಂದು ತಿಳಿದು ಬರುತ್ತದೆ. 40 ಮಂದಿ ಹಿಂದುಗಳೂ 4 ಮಂದಿ ಮುಸಲ್ಮಾನರೂ ಗಾಯಗೊಂಡಿರುವರು. ಮುಸಲ್ಮಾನ ಪಂಗಡಿಗರು ಧಂಕಳ್ ಬಜಾರಿನ ಶ್ರೀಮಂತರ ಮನೆಯನ್ನು ಮುತ್ತಿದಾಗ, ಪೋಲೀಸರು ಬರುವ ತನಕ ಅವರು ತಡೆದರು. ಪೋಲೀಸರು ಒಂದು 4 ಮಂದಿಯನ್ನು ಕೈದುಮಾಡಿರುವರು ಲೂಟಿಗಾರರು ನೆರೆಯ ಗ್ರಾಮದಲ್ಲಿಯೂ 10 ಅಂಗಡಿಗಳನ್ನು ಕೊಳ್ಳೆಹೊಡೆದಿರುವರು

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ಮೀಟಿಂಗು ಈ ತಾ 7 ರಿಂದ 12 ರ ವರೆಗೆ ಬೊಂಬಾಯಿಯಲ್ಲಿ ನಡೆಯಿತು. ಡೆಲ್ಲಿ ಸಂಧಿಯ ಶರತ್ತುಗಳನ್ನು ಸರ್ಕಾರದವರು ಪಾಲಿಸುತ್ತಿರುವದಿಲ್ಲವೆಂದು ಕಮಿಟಿಯವರು ಪುಕಾರು ಕಳುಹಿಸಲಾಗಿ ವೈಸರಾಯರು ಇನ್ನು ಮುಂದೆ ಸರಿಯಾಗಿ ನಡಿಸಲಾಗುವದೆಂಬ ಭರವಸೆ ಕೊಟ್ಟಿರುವರು. ಕೋಮುವಾರು ಚುನಾವಣೆಯನ್ನು ಕುರಿತು ಎಲ್ಲಾ ಕಡಿಮೆ ಜನಸಂಖ್ಯೆ ಕೋಮಿನವರ ಹಿತವನ್ನು ಕಾಯುವಂಥ ಮಿಶ್ರ ಚುನಾವಣೆಯ ಠರಾವು ಪಾಸುಮಾಡಲಾಯಿತು. ಅಸ್ಪೃಶ್ಯತಾ ನಿವಾರಣೆಯ ಕೆಲಸವನ್ನು ಪುನಹ ಭರದಿಂದ ನಡಿಸುವಂತೆ ತೀರ್ಮಾನಿಸಲಾಯಿತು ಹಿಂದೂಸ್ಥಾನೀ ಸೇವಾದಳವನ್ನು ಕಾಂಗ್ರೆಸ್ಸಿನ ಶಾಖೆಯಾಗಿ ಇಟ್ಟುಕೊಳ್ಳುವಂತೆ ನಿಶ್ಚಯಿಸಲಾಯಿತು. ಕಮಿಟಿ ಮೀಟಿಂಗು ಮುಗಿದ ನಂತರ ಮಹಾತ್ಮ ಗಾಂಧಿಯವರು ವೈಸರಾಯರ ಭೇಟಿಗೆ ಸಿಮ್ಲಾಕ್ಕೆ ಹೋದರು

ಕಾನೂನುಭಂಗ ಚಳವಳದ ಸಮಯದಲ್ಲಿ ಬೊಂಬಾಯಿ ಕಾರ್ಪೊರೇಶನಿನಲ್ಲಿರುವ ನೌಕರರಿಗೆ ಬೇರೆ ಗಿರಣಿಗಳಿಂದ ನೇಂದಿ ಇಳಿಸ ಕೂಡದೆಂದು ಠರಾವು ಪಾಸುಮಾಡಿದ್ದರು. ಇದರಿಂದ ಕಾರ್ಪೊರೇಶನಿಗೆ 50 ಸಾವಿರ ರೂಪಾಯಿ ನಷ್ಟವಾಗುವ ಕಾರಣ ಮೊದಲಿನ ಠರಾವನ್ನು ರದ್ದುಮಾಡಿ, ನೇಂದಿ ಇಳಿಸಲು ಬಿಡಬೇಕೆಂಬ ಠರಾವು ಮೊನ್ನೆ ತಾನೇ ಸದರಿ ಕಾರ್ಪೊರೇಶನಿನ ಮೀಟಿಂಗಿನಲ್ಲಿ ಚರ್ಚಿಸಲ್ಪಟ್ಟು 2 ಓಟುಗಳ ಬಹುಮತದಿಂದ ಸೋಲಿಸಲ್ಪಟ್ಟಿತು. ಅಲ್ಲದೆ ಕಾರ್ಪೊರೇಶನಿನ ಕಟ್ಟಡದಲ್ಲಿ ರಾಷ್ಟ್ರೀಯ ಧ್ವಜವನ್ನು ಏರಿಸಬೇಕೆಂಬ ಠರಾವೂ ಚರ್ಚಿಸಲ್ಪಟ್ಟಿತು ಎರಡು ಕಡೆಯವರೂ ರಭಸದಿಂದ ಭಾಷಣ ಮಾಡಿದರು ದುಂಡು ಮೇಜು ಪರಿಷತ್ತಿನ ಫಲಿತಾಂಶ ತಿಳಿಯುವ ವರೆಗೆ ಈ ವಿಷಯ ಬಾಕಿ ಮಾಡಬೇಕೆಂಬ ಉಪಸೂಚನೆಯು ಕಡೆಗೆ ಪಾಸಾಯಿತು ಇವೆರಡು ಠರಾವುಗಳ ದೆಸೆಯಿಂದ ಕಾಂಗ್ರೆಸ್ ಸ್ವಯಂಸೇವಕಿಯರು ರಾಷ್ಟ್ರೀಯ ಧ್ವಜ ಹಿಡಿದು ಮೀಟಿಂಗಿನ ಮೆಂಬರುಗಳನ್ನು ರಾಷ್ಟ್ರೀಯ ಪಕ್ಷಕ್ಕೆ ಸಹಾಯಕೊಡುವಂತೆ ಬೇಡಿಕೊಳ್ಳುತ್ತಿದ್ದರು.

ವಿ ದೇ ಶ.

'ನಾನು ರಾಜಕೀಯ ಪಟುವಲ್ಲ, ಆದರೆ ಯಾವ ಪಾರ್ಟಿಯೇ ಅಧಿಕಾರದಲ್ಲಿರಲಿ ಪಾರ್ಲಿಮೆಂಟು ಹಿಂದೂದೇಶವನ್ನು ಬಿಡಲಿಕ್ಕಾಗಲೀ, ಅದಕ್ಕೆ ಸಾಮಂತ ಸ್ವರಾಜ್ಯ ಕೊಡಲಿಕ್ಕಾಗಲೀ ಎಂದಿಗೂ ಒಪ್ಪಲಿಕ್ಕಿಲ್ಲ' ವೆಂದು ಲಾರ್ಡ್ ಇಂಚ್‌ಕೇಪ್‌ರವರು ಒಂದು ಭಾಷಣದಲ್ಲಿ ಹೇಳಿದರು.

ದಕ್ಷಿಣ ಹಿಂದೂಸ್ಥಾನದಲ್ಲಿಯೂ, ಕಲ್ಕತ್ತಾದಲ್ಲಿಯೂ ಆಯುರ್ವೃತ್ತಿಯಲ್ಲಿ ಪ್ರಸಿದ್ಧಿಗೊಂಡಿದ್ದ ಮ ಆರ್ಥರ್ ನಾರ್ಟನ್‌ರವರು ಈ ತಾ 13ರಲ್ಲಿ ಇಂಗ್ಲೆಂಡಿನಲ್ಲಿ ಮೃತರಾದರು ಇವರು ಪ್ರಖ್ಯಾತ ಕ್ರಿಮಿನಲ್ ಲಾಯರಾಗಿದ್ದದಲ್ಲದೆ ಹಿಂದೂದೇಶದ ಸ್ನೇಹಿತರಲ್ಲೊಬ್ಬರಾಗಿದ್ದರು ಕಾಂಗ್ರೆಸ್ಸಿನ ಪ್ರಾರಂಭ ಕಾಲದಲ್ಲಿ ಅದಕ್ಕೆ ತುಂಬಾ ಸಹಾಯ ಮಾಡಿದ್ದರು.

'ಚೀನಾ ರಾಜ್ಯಕ್ಕೆ ಸೇರಿದ ನಾನ್ಕಿನ್ನಿಗೆ ಮೂವರು ಭಾರತೀಯರು ಬಂದು ತಾವು ಕಾಂಗ್ರೆಸ್ಸಿನವರೆಂದೂ, ಈಗ್ಯೆ ಭಾರತ ದೇಶದ ಕಾಂಗ್ರೆಸ್ಸಿನವರು ಅಹಿಂಸಾವೃತ್ತಿಯನ್ನು ವರ್ಜಿಸಿರುವರೆಂದೂ ಇಲ್ಲಿ ಬಹಿರಂಗವಾಗಿ ಹೇಳುತ್ತಿರುವರು ಇದು ವಾಸ್ತವ್ಯವೇ' ಎಂದು ಚೀನಾ ದೇಶದವರೊಬ್ಬರು ಮಹಾತ್ಮರಿಗೆ ಬರೆದುದಕ್ಕಾಗಿ " ನಾನಾಗಲೀ ಕಾಂಗ್ರೆಸು ಸಂಘದವರಾಗಲೀ ಯಾರನ್ನೂ ಚೀನಾಕ್ಕೆ ಕಳುಹಿಸಲಿಲ್ಲ. ಅಹಿಂಸಾ ವ್ರತವನ್ನು ಕಾಂಗ್ರೆಸಿನವರು ಕಳೆದ 12 ವರ್ಷಗಳಿಂದಲೂ ಹಿಡಿದಿರುವರು ಮತ್ತು ಅದನ್ನು ಹೆಚ್ಚಿಸುವರಲ್ಲದೆ ಎಂದಿಗೂ ವಿಸರ್ಜಿಸರು " ಎಂದು ಮಹಾತ್ಮರು ಉತ್ತರವನ್ನು ಕೊಟ್ಟಿರುತ್ತಾರೆ.

ಸಧ್ಯಕ್ಕೆ 150 ವರ್ಷ ಪ್ರಾಯದ ಮೂರೋ ಆಗ ಎಂಬ ಟರ್ಕಿ ಗೃಹಸ್ಥರೇ ಇಡೀ ಭೂಮಂಡಲದಲ್ಲಿ ಎಲ್ಲರಿಗಿಂತಲೂ ವಯೋವೃದ್ಧರೆಂದು ಪ್ರಕಟವಾಗಿತ್ತು. ಆದರೆ ಸುಮಾರು 250 ಪ್ರಾಯದ ಲಿ ಚಿಂಗ್ ಯುನ್ ಎಂಬ ಚೈನಾ ಗೃಹಸ್ಥರೊಬ್ಬರು ಜೀವಂತರಾಗಿರುವರೆಂದು ಗೊತ್ತಾಗಿದೆ. 1678 ರಲ್ಲಿ ಹುಟ್ಟಿದನೆಂದು ಹೇಳುವ ಇವರು 14 ಲಗ್ನಗಳನ್ನು ಮಾಡಿರುವರು. ಮತ್ತು 11 ಪೀಳಿಗೆಯ ವರೆಗೆ ವಂಶಜನನ್ನು ನೋಡಿರುವರು. ಸುಮಾರು 200 ವರ್ಷಗಳ ವರೆಗೆ ಇವರು ಜೀವನಕ್ಕಾಗಿ ಔಷಧಿ ಮೂಲಿಕೆಗಳನ್ನು ಮಾರುತ್ತಾ ದಿವಸಕ್ಕೆ ಸರಾಸರಿ 30 ಮೈಲುಗಳಷ್ಟು ನಡೆಯುವರಂತೆ. ಇವರಿಗೆ ಕಾಯಿಲೆಯೂ ಬಹು ಅಪರೂಪವೆಂತಲೂ, ಈಗಲೂ ದೃಢಕಾಯರಾಗಿದ್ದಾರೆಂತಲೂ ಇವರ ಹೇಳಿಕೆ!

ಕೊ ಡ ಗು ಮಾ ತೆ.

ವಾಚಕ ಮಹಾಶಯರೇ,

ಈ ಕೆಳಗೆ ಬರೆದಿರುವ ಪದ್ಯವು ನನ್ನ ಅಲ್ಪವಾದ ಬುದ್ಧಿಗೆ ಇದೇ ಪ್ರಾರಂಭವಾಗಿರುವುದರಿಂದ, ಮಕ್ಕಳ ಕೊಡಲ್ಲಿದಿಗೆ ತಂದೆ ತಾಯಿಗಳು ಸಂತೋಷಪಟ್ಟು ಮಾತಗಳನ್ನು ತಿದ್ದಿ ಹೇಳಿಕೊಡುವಂತೆ ತಪ್ಪುಗಳೂ, ವ್ಯತ್ಯಾಸಗಳೂ ಇದ್ದಲ್ಲಿ ತಿದ್ದಿಕೊಂಡು ಕ್ಷಮಿಸಬೇಕಾಗಿ ಪ್ರಾರ್ಥಿಸುತ್ತೇನೆ.

ವೀರರಾಜೇಂದ್ರಪೇಟೆ. ಬಿ. ಡಿ. ಗಣಪಯ್ಯ.

ರು ಬ್ರಾಹ್ಮಣೇತರರು. ಒಬ್ಬ ಮಹಮ್ಮದೀಯರು ಮತ್ತು ಒಬ್ಬ ಪಂಚಮರನ್ನು ಸೇರಿಸಿರುವುದನ್ನು ಪತ್ರಿಕೆಗಳಲ್ಲಿ ಎಲ್ಲರೂ ನೋಡಿರಬಹುದು. ಈ ತತ್ವವನ್ನು ನಮ್ಮ ಕೊಡಗು ಸರಕಾರದವರು ಯಾಕೆ ಹಿಂಬಾಲಿಸಲಾರರು? ಕೊಡಗೇತರರಲ್ಲಿ ಪಾಸುಮಾಡಿಕೊಂಡ ಯೋಗ್ಯರಾದ ಯುವಕರು ಅನೇಕರಿಲ್ಲವೇ? ಹೀಗಿರುವಾಗ ನ್ಯಾಯವಾಗಿ ನೋಡಿದರೆ ಕಳೆದ ವಾರ ಒಬ್ಬ "ಕೊಡಗೇತರ"ರು ಬರೆದಂತೆ ಖಾಲಿ ಬಿದ್ದಿರುವ ಎರಡು ಉದ್ಯೋಗಗಳನ್ನೂ ಸಹ ಕೊಡಗೇತರರಿಗೇನೆ ಕೊಡುವುದು ನ್ಯಾಯಸಮ್ಮತವಾಗಿದೆ. ಅನರಲ್ಲೂ ಒಂದನ್ನಾದರೂ ಒಬ್ಬ ಕೊಡಗೇತರನಿಗೆ ಕೊಡಬೇಕೆಂದರೆ—ನಮ್ಮ ಕೊಡಗರ ಸಂಗಸ್ಥನವರಿಗೆ ಅದು ಕಣ್ಣಿರಿ ... ಎಲ್ಲಿ ತಮ್ಮ ಸಂಗಡದವರ ಕೈಯಿಂದ ಅಧಿಕಾರ ತಪ್ಪಿಹೋಗುವುದೋ ಎಂಬ ಭಯ.

ನೀವು ಪ್ರಥಮದಲ್ಲಿ ಒಪ್ಪಿಕೊಂಡರೂ, ನಿಮ್ಮ ಎರಡನೇ ಪ್ರಕರಣದಲ್ಲಿ ರಾಜ್ಯಾಡಳಿತವು ಕೊಡಗಿನಲ್ಲಿ ಬೇಟೆಸದ ಕೈಯಲ್ಲಿರುವುದೆಂಬ ತಪ್ಪು ಅಭಿಪ್ರಾಯವನ್ನು ಜನರಲ್ಲಿ ಹರಡುವುದಕ್ಕೆ ಪ್ರಯತ್ನಿಸುತ್ತೀರಿ. ರಾಜ್ಯಾಡಳಿತದ ಸೂತ್ರವು ಮೇಲ್ಗಿನಿಂದ ಬ್ರಿಟಿಷ್ ಅಧಿಕಾರಿಗಳಿಂದ ನಡೆಸಲ್ಪಡುವುದೇ ನಿಜ. ದೇಶದ ಒಳ ಆಡಳಿತವೂ, ನಿಜವಾದ ಅಧಿಕಾರವೂ ಪೂರ್ತಿ ಕೊಡಗರ ಕೈಯಲ್ಲಿದೆ. ದೇಶದ ಆಡಳಿತದ ಮರ್ಮವನ್ನು ತಿಳಿದವರನೇಕರಿಗೆ ಈ ವಿಷಯವು ಚೆನ್ನಾಗಿ ಗೊತ್ತಿದೆ. ರಾಜಕೀಯ ಜ್ಞಾನವನ್ನು ಹೊಂದಿ, ನಿಷ್ಪಕ್ಷಪಾತಿಗಳೂ, ಧೈರ್ಯಶಾಲಿಗಳೂ ಆದ ಅನೇಕ ಕೊಡಗರಿಗೆ ಇದರ ಗುಟ್ಟು ಚೆನ್ನಾಗಿ ಗೊತ್ತಿರುವುದರಿಂದಲೇ ಅವರು ಕೊಡಗಿನ ಒಳ ಆಡಳಿತೆಯನ್ನು ಬಗ್ಗೆ ಎಚ್ಚರಿಸುತ್ತಿರುವರು.

ಇನ್ನು ಹೆಡ್ ಕ್ಲಾರ್ಕ್, ಎರಡು ಸಬ್ ಜಡ್ಜರು, ಮುನ್ಸೀಫರು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಶಿರಸ್ತೇದಾರ್, ಜಮಾಬಂದಿ ಹೆಡ್ ಕ್ಲಾರ್ಕರು ಯಾರು? ಎಲ್ಲರೂ ಕೊಡಗರಲ್ಲವೇ? ಇಂಗ್ಲಿಷ್ ಆಫೀಸಿನ ಮ್ಯಾನೇಜರೊಬ್ಬರು ಮಾತ್ರ ನಿಮ್ಮ ಕಣ್ಣಿಗೆ ಬೀಳುವರೇ? ಪೊಲೀಸು ಸುಪರಿಂಟೆಂಡೆಂಟರನ್ನು ಯಾಕೆ ತಂದರು? ಕೊಡಗಿನಲ್ಲಿ ಯಾರೂ ಪೊಲೀಸು ಅನುಭೋಗವಿದ್ದವರು ಇಲ್ಲದ್ದರಿಂದಲ್ಲವೇ? ಅಂಥ ಅನುಭೋಗವಿದ್ದವರು ಇರುತ್ತಿದ್ದರೆ ನೀವು ಆವರ ನೇಮಕಕ್ಕೆ ಒಪ್ಪುತ್ತಿದ್ದಿರೇ? ಅದೇ ರೀತಿಯಲ್ಲಿ ಕೊಡಗಿನಲ್ಲಿ ಯಾರಿಗೂ ಕೆಲಸ ಅನುಭೋಗವಿಲ್ಲದ್ದರಿಂದ ಎಕ್ಸೈಸ್ ಇನ್‌ಸ್ಪೆಕ್ಟರನ್ನು ಮದ್ರಾಸಿನಿಂದ ಕರೆಸಿಕೊಂಡರು. ಇವೆರಡು ಕೆಲಸಗಳಲ್ಲಿಯೂ, ಬೇರೆ ಏನೂ ದಾರಿ ಇಲ್ಲದ್ದರಿಂದ ಮಾತ್ರ ಮದರಾಸು ಸರಕಾರದಿಂದ ಎರಡು ಉದ್ಯೋಗಸ್ಥರನ್ನು ತರಿಯಿಸಿ ಕೊಂಡದ್ದಾಗಿದೆ. ಇದು ಕೊಡಗೇತರರಿಗೆ ಎರಡು ಉದ್ಯೋಗಗಳನ್ನು ಕೊಡಬೇಕೆಂಬ ಉದಾರ ಭಾವದಿಂದ ಕೊಟ್ಟದ್ದೆಂದು ನಿಮ್ಮ ಅಭಿಪ್ರಾಯವೋ? ಎಂತಹ ಉದಾರವ! ಒಬ್ಬರನ್ನು ಆಗಲೇ ಓಡಿಸಿಬಿಟ್ಟಿದ್ದೀರಿ. ಇನ್ನೊಬ್ಬರನ್ನೂ ಸಹ ಓಡಿಸಿಬಿಡಬೇಕೆಂಬ ಪ್ರಯತ್ನದಲ್ಲಿದ್ದೀರಿ. ನೀವು ಹಾನೇ ಪೆನ್ಷನ್ ಪಡೆದ ಡಿಪ್ಯುಟಿ ಡೈರೆಕ್ಟರು ಮಿ. ಕೆ. ಸುಬ್ರಾಯರವರು ಅವರ ಪದವಿಗೆ ಹೇಗೆ ಬಂದರೆಂಬುದು ನಿಮಗೆ ಗೊತ್ತಿದೆಯೋ? ಇದೇ ಸುಬ್ರಾಯರವರನ್ನು ಸುಭೇದಾರರನ್ನಾಗಿ ಮಾಡುವಾಗ ಕೊಡಗರನೇಕರು ಅಡ್ಡಿ ಮಾಡಿದ್ದು ನಿಮ್ಮ ತಿಳುವಳಿಕೆಯಲ್ಲಿದೆಯೋ? ಕೊಡಗಿನ ಕಮಿಷನರಾಗಿದ್ದ ಹ್ಯಾರಿಸ್ (Mr L. T Haris) ದೊರೆಗಳು ಎಲ್ಲ ಸುಭೇದಾರರುಗಳ ಸ್ಥಿತಿ ಎಷ್ಟಾದರೂ ಕೊಡಗೇತರರಿಗೆ ಕೊಡತಕ್ಕದ್ದು ಎಂಬ ತತ್ವವನ್ನನುಸರಿಸಿ ಸುಬ್ರಾಯರನ್ನು ನೇಮಕ ಮಾಡಿದ್ದಾಗಿದೆ. ಸುಭೇದಾರರಾಗಿದ್ದಾಗ ಅವರ ಅನುಭೋಗಕ್ಕೂ, ಸಾಮರ್ಥ್ಯಕ್ಕೂ ಮೆಚ್ಚಿ ಆಗ ಕೊಡಗಿನ ಕಮಿಷನರಾಗಿದ್ದ ಹ್ಯಾರಿಂಗ್‌ಟನ್ (Mr. Harington) ದೊರೆಗಳು ಅವರನ್ನು ಡಿಪ್ಯುಟಿ ಡೈರೆಕ್ಟರ ಪದವಿಗೆ ಏರಿಸಿದರೇ ಹೊರತು ಅವರು ಕೊಡಗರ ಉದಾರ ಭಾವದಿಂದ ದೊಡ್ಡ ಹುದ್ದೆಯನ್ನು ಪಡೆದದ್ದಲ್ಲ. ಇನ್ನು ಕೊಡಗಿನ ಪೊಲೀಸ್, ಫಾರೆಸ್ಟು, ಅಬ್ಕಾರಿ ಮತ್ತು ರೆವಿನ್ಯೂ ಇಲಾಖೆಗಳನ್ನು ವಿಚಾರಿಸುವ ಪೊಲೀಸ್, ಫಾರೆಸ್ಟು ಮತ್ತು ಅಬ್ಕಾರಿ ಇಲಾಖೆಗಳಲ್ಲಿ ಶೇಕಡ 91ರಷ್ಟು, ರೆವಿನ್ಯೂ ಇಲಾಖೆಯಲ್ಲಿ 75ರಷ್ಟು ಉದ್ಯೋಗಗಳು ಕೊಡಗರ ಕೈಯಲ್ಲಿವೆ. ಆದ್ದರಿಂದ ಜಾಗ್ರತನವರೇ, ಈ ವಿಷಯವನ್ನು ಸರಕಾರದವರ ಮತ್ತು ದೇಶದವರ ಗಮನಕ್ಕೆ ತರಲು ಅನುಕೂಲ ದೊರಕಿಸಿಕೊಟ್ಟದ್ದಕ್ಕೆ ನಿಮ್ಮನ್ನು ವಂದಿಸಬೇಕಾಗಿದೆ.

ಸರಕಾರಿ ಉದ್ಯೋಗಸ್ಥರ ನೇಮಕದ ವಿಷಯವಾಗಿ ಬರೆಯುವಾಗ ನೀವು ಕೊಡಗೇತರ ರಾಯರುಗಳ ಮತ್ತು ಅವರ ಸಂಪಾದನೆಯ ವಿಷಯ ಎತ್ತಿ ಬರೆದುದು ನಿಮ್ಮ ತಿಳಿಗೇಡಿತನವೆಂದೇ ಹೇಳಬೇಕಾಗಿದೆ. ಇದಕ್ಕೆ ವ್ಯಸನ ಪಡಬೇಕೇ ಹೊರತು ಉತ್ತರ ಕೊಡುವ ಆಗತ್ಯವಿಲ್ಲ. ಚುನಾವಣೆಗೆ ಇಟ್ಟ ಪ್ರಾಯದ ನಿರಕ್ತಿನ ಅನ್ಯಾಯವನ್ನು ನನ್ನ ಕಳೆದ ಬಾರಿಯ ಕಾಗದದಲ್ಲಿ ವಿಶದ ಪಡಿಸುತ್ತೇನೆ. ಪ್ರಾಯದ ನಿರಕ್ತನ್ನು ಕಡಿಮೆ ಮಾಡಿದ್ದರಿಂದ ಕೆಲವು ಪಂಗಡಗಳಿಗೆ ಅನ್ಯಾಯವಾಗಬಹುದೇ ಹೊರತು, ಹೆಚ್ಚು ಮಾಡುವುದರಿಂದ ಯಾವ ಪಂಗಡಗಳಿಗೂ ಅನ್ಯಾಯವಾಗಲಾರದು. ಪ್ರಾಯದ ನಿರಕ್ತನ್ನು 30 ಕ್ಕೆ ಏರಿಸಿದರೆ ಕೊಡಗರಿಗಾಗುವ ನಷ್ಟವೇನು? ಅದಕ್ಕೆ ಜಾಗ್ರತನವರು ಬೆಚ್ಚಿ ಬೀಳಲು ಕಾರಣವೇನು? ಪಿ. ಡಬ್ಲ್ಯು. ಡಿ. ಮುಂತಾದ ಇಲಾಖೆಗಳು ಇಂಪೀರಿಯಲ್ ಸರಕಾರದ ಇಲಾಖೆಗಳಾದ್ದರಿಂದ ಅದು ನಮ್ಮ ಸ್ಥಳೀಯ ಸರಕಾರಕ್ಕೆ (Local Government) ಸಂಬಂಧಿಸುವುದೇ ಇಲ್ಲ.

ಪೊಲೀಸ್ ಇಲಾಖೆಯಲ್ಲಿ ಎಲ್ಲಾ ಹುದ್ದೆಗಳೂ ಕೊಡಗರ ಕೈಯಲ್ಲೇ ಇದೆಯೆಂದು ನೀವೇ ಒಪ್ಪಿಕೊಂಡದ್ದು ಸಂತೋಷಕರ. ಒಬ್ಬನೇ ಇದ್ದ ಬ್ರಾಹ್ಮಣ ಸಬ್ ಇನ್‌ಸ್ಪೆಕ್ಟರನೂ, ಇನ್ನೊಬ್ಬ ಕೊಡಗೇತರನೂ ಕೆಲಸದಿಂದ ನಿವೃತ್ತರಾಗಲು ನಿಜವಾದ ಕಾರಣವೇನೆಂಬುವುದು ಸರಕಾರದವರಿಗೂ, ದೇಶದಲ್ಲಿ ತಿಳಿದವರನೇಕರಿಗೂ ಚೆನ್ನಾಗಿ ಗೊತ್ತಿದೆ. ಆ ವಿಷಯವನ್ನು ವಿವರಿಸಲು ಇದು ಸ್ಥಳವಲ್ಲ.

ನೀವು ಘನತ ವಿಷಯ ಬದಲಾಯಿಸಿ ವ್ಯಾಪಾರವು ಕೊಡಗೇತರರ ಕೈಯಲ್ಲಿರುವುದು ದೇಶದ ಏಳಿಗೆಗೆ ಕುಂದು ಕರವೆಂದೂ, ವ್ಯಾಪಾರವನ್ನೂ, ಲಾಯರುಗಳ ವೃತ್ತಿಯನ್ನೂ ಕೊಡಗರಿಗೆ ಅನುಕೂಲವಾಗುವಷ್ಟು ಕಾದಿಡುವಂತೆ ಚಳವಳ ನಡೆಸ ಬೇಕೆಂದೂ ಬರೆದಿರುತ್ತೀರಿ. ಇದರಿಂದ ನಿಮ್ಮ ಮನೋಭಾವನೆಯು ಚೆನ್ನಾಗಿ ವಿಶದವಾಗುತ್ತದೆ. ಕೊಡಗೇತರರ ಕೈಯಲ್ಲಿ ವ್ಯಾಪಾರವಿರುವುದು ನಿಮಗೆ ಕಣ್ಣುರಿಯಾಗಿದೆಯಲ್ಲವೇ? ಅವರಿಗೆ ದೇಶದ ಆಡಳಿತದಲ್ಲಿ ಹೇಗೂ ಭಾಗವಿಲ್ಲ. ಈಗ ವ್ಯಾಪಾರವನ್ನೂ ಸಹ ಅವರ ಕೈತಪ್ಪಿಸಬೇಕೆಂಬ ಆಲೋಚನೆಯನ್ನು ಹೂಡುತ್ತಿರುವಿರಲ್ಲವೇ? ಆದ್ದರಿಂದ ಜಾಗ್ರತನವರೇ, ಪಾದಶಾಂತರಗಳಿಂದ ಆಡಳಿತವು ಒಂದು ಕೋಮಿನವರ ಕೈಸೇರಿದರೆ ಅದು ಶಾಶ್ವತವಾಗಿ ಅವರ ಕೈಯಲ್ಲೇ ನಿಲ್ಲುವುದೆಂದು ನೀವು ಭಾವಿಸುವಿರೋ? ಗಾದೆನ ಮನೆಯಲ್ಲಿ ವಾಸ ಮಾಡಿಕೊಂಡಿರುವ ನೀವು ಇತರರಿಗೆ ಕಲ್ಲು ಹೊಡೆಯಲು ಪ್ರಯತ್ನಿಸುವುದು ಸರಿಯೋ ಎಂತ ಚೆನ್ನಾಗಿ ಯೋಚಿಸಿ ನೋಡಿರಿ. ಕೊಡಗು ದೇಶದ ಭೂಕಂದಾಯದಲ್ಲಿ ಕೊಡವರೆಷ್ಟು ಕೊಡುತ್ತಾರೆ? ಕೊಡಗೇತರರೆಷ್ಟು ಕೊಡುತ್ತಾರೆ? ಯಾರ ಸಹಾಯದಿಂದ ಕೊಡಗು ಸರಕಾರವು ನಡೆಯುತ್ತಿದೆಯೆಂದು ನೀವು ಬಲ್ಲಿರೋ? ಕೊಡಗೇತರರ ಸಂಖ್ಯೆಯು ನಿಮ್ಮ ಸಂಖ್ಯೆಗಿಂತ ನಾಲ್ಕರಷ್ಟು ಹೆಚ್ಚಿರುವುದರಿಂದ, ಅವರೆಲ್ಲರೂ ಒಗ್ಗಟ್ಟಾದರೆ, ದೇಶದ ಆಡಳಿತವನ್ನು ಬಹು ಸುಲಭದಲ್ಲೇ ಅವರ ಸ್ವಾಧೀನ ಮಾಡಿಕೊಳ್ಳಬಹುದು. ಮದ್ರಾಸ್ ಸರಕಾರವು ಇಪ್ಪತ್ತು ವರ್ಷಗಳ ಹಿಂದೆ ಯಾರ ಸ್ವಾಧೀನದಲ್ಲಿತ್ತು? ಈಗ ಯಾರ ಸ್ವಾಧೀನದಲ್ಲಿದೆ? ಯಾಕೆ ಎಂಬುದನ್ನು ಚೆನ್ನಾಗಿ ಯೋಚಿಸಿರಿ.

ನಿಮ್ಮ ಕಡೆಯ ಪ್ರಕರಣದಲ್ಲಿ ಬೇರೆ ಬೇರೆ ಪಂಗಡದವರಿಗೆ ಉದ್ಯೋಗ ಕೊಡುವುದರಿಂದ ಸರಕಾರವು ಅಭದ್ರವಾದೀತೆಂದು ಬರೆದಿದ್ದೀರಿ. ಸರಕಾರವು ಒಂದೇ ಕೋಮಿನವರ ಕೈಯ್ಯಲ್ಲಿದ್ದರೆ ಅಭದ್ರವಾದೀತೇ ಹೊರತು ಬೇರೆ ಬೇರೆ ಕೋಮಿನವರ ಕೈಯ್ಯಲ್ಲಿದ್ದರೆ ಎಂದಿಗೂ ಅಭದ್ರವಾಗಲಾರದು. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸರಕಾರದವರ ಅವಗಾಹನೆಗೆ ತರಬೇಕಾಗಿದೆ. ದೇಶದಲ್ಲಿ ಮುಂದುವರಿದ ಪಂಗಡಗಳಿಗೇನೇ ಸರಕಾರದವರು ಹೆಚ್ಚು ಉತ್ತೇಜನ ಕೊಡುವುದರ ಬದಲು ದೇಶದ ಎಲ್ಲರ ಏಳಿಗೆಯನ್ನು ಬಯಸಿ ಹಿಂದುಳಿದ ಪಂಗಡಗಳಿಗೂ ಆಡಳಿತದಲ್ಲಿ ನ್ಯಾಯವಾದ ಹಕ್ಕನ್ನು ಕೊಡುವುದು ದೇಶಕ್ಕೂ ಹಿತಕರ ಮತ್ತು ಸರಕಾರದ ಭದ್ರತೆಗೂ ಸಹ ಅದು ಅತ್ಯವಶ್ಯವೆಂಬುದನ್ನು ಸರಕಾರದವರು ತಿಳಿದುಕೊಳ್ಳತಕ್ಕದ್ದು. ಪ್ರಮಾಣಿಕರು, ಗಟ್ಟಿಗರು ಮತ್ತು ನೀತಿವಂತರಿಗೆ ಉದ್ಯೋಗ ಕೊಡತಕ್ಕದ್ದೆನ್ನೋ ಸಹಜ. ಆದರೆ ಇಂಥಾವರನ್ನು ಒಂದೇ ಕೋಮಿನಿಂದ ಚುನಾಯಿಸದೆ ಬೇರೆ ಬೇರೆ ಕೋಮಿನವರಿಂದ ಚುನಾಯಿಸುವುದೇ ಸರಕಾರದವರ ತತ್ವವಾಗಿರಬೇಕು. ಮೇಲೆ ಹೇಳಿದ ಗುಣವುಳ್ಳವರು ಎಲ್ಲಾ ಕೋಮುಗಳಲ್ಲೂ ಸಿಕ್ಕುವರೆಂಬುದನ್ನು ಸರಕಾರದವರು ಮರೆಯಬಾರದು. ಹಿಂದೆ ಬಿದ್ದಿರುವ ಪಂಗಡದವರನ್ನು ಅವಶ್ಯ ಉತ್ತೇಜನ ಕೊಟ್ಟು ಮುಂದಕ್ಕೆ ತರುವುದೇ ಸರಕಾರದವರ ಧ್ಯೇಯವಾಗಿರತಕ್ಕದ್ದು. ಬ್ರಿಟಿಷ್ ಪ್ರಧಾನ ಮಂತ್ರಿಯಾದ ಮೆಕ್‌ಡೊನಾಲ್ಡ್ (Mr. Macdonald) ಸಾಹೇಬರೂ, ಇಂಡಿಯಾದ ಸ್ಟೇಟ್ ಸೆಕ್ರೆಟರಿಯಾದ ಬೆನ್ (Mr. Benn) ಸಾಹೇಬರೂ ಹಿಂದೂದೇಶದ ಹಿಂದುಳಿದ ಪಂಗಡಗಳಿಗೆ ಆಗಾಗ್ಗೆ ಕೊಡುತ್ತಿರುವ ಅಭಯವನ್ನು ನಮ್ಮ ದೇಶದ ಬ್ರಿಟಿಷ್ ಅಧಿಕಾರಿಗಳೂ ಗಮನಕ್ಕೆ ತರಬೇಕೆಂಬುದೇ ನನ್ನ ವಿನಂತಿಯಾಗಿದೆ.

'ನ್ಯಾಯವಾದಿ'

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಗ್ಯಾರಂಟಿ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂಪೋಬಸ್ತಾದ ಫೌಂಟನ್ ಪೆನ್‌ಗಳು.

ವಂಡರ್ ಫೌಂಟನ್ ಪೆನ್ 1ಕ್ಕೆ	ರೂ 3	0	0
ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
ಸ್ಕ್ರ್ಯೂ ಕ್ಯಾಪ್ ಪೆನ್ 1ಕ್ಕೆ	3	8	0
ಬಿಗ್ ಬ್ಯಾರೆಲ್ ಸ್ಕ್ರ್ಯೂ ಕ್ಯಾಪ್			
ಮಾರ್ಬಲ್ ಕಲರ್ ಫೌಂಟನ್ ಪೆನ್ 1ಕ್ಕೆ	3	14	0
ಮೊಸಾಯ್ ಕಲರ್ ಸ್ಕ್ರ್ಯೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4	2	0
ಸಲ್ಫ್ ಫಿಲ್ಲಿಂಗ್ ಮಾಡೆಲ್ ಆದ ಟ್ರ್ಯಾನ್ಸ್ ಕಲರ್ ಫೌಂಟನ್ ಪೆನ್ 1ಕ್ಕೆ	5	8	0
ಸ್ವಾನ್ ಫೌಂಟನ್ ಪೆನ್ 1ಕ್ಕೆ	10	8	0
ಪೆನ್ 1ಕ್ಕೆ	14 0 0, & 20	10	0
... ಫೌಂಟನ್ ಪೆನ್ 1ಕ್ಕೆ	3 8 0, & 3	12	0
ವಾಟರ್‌ಮ್ಯಾನ್ ಪೆನ್ 1ಕ್ಕೆ	6 4 0, & 6	12	0
... ಫೌಂಟನ್ ಪೆನ್ 1ಕ್ಕೆ	8 2 0, & 8	10	0

ಟೈಂಪೀಸ್‌ಗಳು.

ಇಂಗ್ಲೆಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ಲಿಗಲಿಯೂ ಅಲಾರಂ ಟೈಂಪೀಸ್ 1ಕ್ಕೆ	6 9 0, & 6	15	0
ಲಿಗಲಿಯೂ ಸಣ್ಣ ಸೈಜಿನ ಅಲಾರಂ ಟೈಂಪೀಸ್ 1ಕ್ಕೆ	7	2	0
ಲಿಗಲಿಯೂ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇದಕ್ಕೆ ಖಾತ್ರಿ ಇರುವ ಟೈಂಪೀಸ್ 1ಕ್ಕೆ	13	4	0
ಖಾತ್ರಿಯೂ ಒಂದೊಂದು ಆದ ವಾಚ್ ವಾಚ್ 1ಕ್ಕೆ	5	10	0
ಇದೇ ನಮೂನೆಯಲ್ಲಿ ಎಲ್ಲಾ ಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಕೆಂಡರ್ ಮೂಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12	8	0



ಪ್ರತಿ ... ನಮೂನೆ
ಸಿಂಹ ನಮೂನೆ ಅಂದ
ವಾದ ಟೇಬಲ್ ಕ್ಲಾಕ್
ಸ್ 1ಕ್ಕೆ 3—8—0 ಪ್ಯಾ
ಕಿಂಗ್ ಪೋಸ್ಟೇಜು ಅ
ಲಾಯಿದಾ!

ಮಾಹಿತಿಯೂ ಮಾರ್ ದವಾಖಿಸುವವಿಳಾಸ —ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರು ಮಾಡಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ
ಶೇರ್ ಬಂಡವಾಳ	—	50 000
ವಸೂಲಾದ ಶೇರ್ ಮೊಬಲಗು	—	23 160
ಒಟ್ಟು ಠೇವಣಾತಿ	—	2,16 472

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆಯ ಸಹಕಾರಿ ಸಂಘಗಳಿಗೆ ಸಾಲ ಕೊಡಲ್ಪಡುವುದು.

ಒಂದು ವರ್ಷ ಮಾಯಿದೆ ಅಥವ ಅದಕ್ಕಿಂತ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ ರೂ 5 0 ರ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧಿಸುತ್ತಾರೆ.

ಪ್ರೆಸಿಡೆಂಟರು — ಡೈರೆಕ್ಟರು
ಚೇರಂಡ ಅಪ್ಪಯ್ಯನವರು — ಮಣವಟ್ಟೀರ ಬೆಳ್ಯಪ್ಪ
ರಾವ್ ಬಹದ್ದೂರ್ — ನವರು

ಸೆಕ್ರೆಟರಿ
ಸಿ. ವೆಂಕಪ್ಪಯ್ಯನವರು ಬಿ.ಎ. ಬಿ.ಎಲ್.
ತಾರೀಖು 1 7—1930

ಮಕ್ಕಳು ಹುಡುಗರ ಸಲುವಾಗಿ

ಡೋಂಗರೆ

ಇವರ
ಬಾಲಾಮೃತ.
ವನ್ನು
ಕೊಡುವುದರಿಂದ
ಸ್ತ್ರೀಯರೂ, ಪುರುಷರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪನಿ,
52—26 ಗಿರಿಗಾಂವ, ಮುಂಬಯಿ.

ಸರಕಾರಿ ಭದ್ರತೆ ಇರುವ
ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26 481 ಪಾಲಿಸಿಗಳು

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ — ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ

ವಿಮೆ ದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ — ಪಾಲಿಸಿದಾರರಿಗೆ ಸಾಲ 8013 ಜನರಿಗೆ 38 ...

ಬಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1 78 322 ಜನರಿಗೆ ..ಕೋಟಿ ರೂ ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22 4ರಕ್ಕಿಂತ ಏರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದೆ. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಭಿವೃದ್ಧಿಯಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ವಿವರಗಳಿಗೆ ಬರೆದು ತಿಳಿದುಕೊಳ್ಳತಕ್ಕದ್ದು —

ಆಫೀಸಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸುಗಳಿಂದಲೂ ಪಡೆಯಬಹುದು.

ಆಗ್ರ	ಕಲ್ಕತ್ತಾ	ಕೊಯಮತ್ತೂರು	ನೈರೋಬಿ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚನಾಪಳ್ಳಿ
ಬೊಂಬಾಯಿ	ಡೌಲಗಾಂವ್	ಮಂಡಲೆ	ರಾಯಿಪುರ	ತಿರುವೆಂದ್ರಮ
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	...

ಮಲೇರಿಯಾಕ್ಕೆ ಮಲೇರಿಯಾನ

ಕೊಡಗಿನ ಗುಡುಗುಡು ಎಂಬ ಚಳಿಜ್ವರಕ್ಕೂ ... ಗಟ್ಟಿಯಾದ ಜ್ವರಗಳಿಗೂ ... ಯ ಮದ್ದು ... ಸಂಪೂರ್ಣ ಜ್ವರವನ್ನು ಗುಣಪಡಿಸಿ ... ಬಿಡುತ್ತದೆಂದು ... ಕ್ರಯ ...
½ ... 1 ... 16—6—

ಕಂಪೌಂಡು ಸಿರಪ್ಪು ಬ್ಲಡ್

... ರೋಗ ... ಗಟ್ಟಿಯಾಗಿ ... ಸಂಕಷ್ಟದಿಂದ ನರಳುವ ರೋಗಿ... ಕಂಪೌಂಡು ಸಿರಪ್ಪು ಬ್ಲಡ್ ಎಂಬುದನ್ನು ತಕ್ಷಣ ತಂದು ಕುಡಿಯಲಿ. ಕ್ರಯ ಬಾಟ್ಲಿಗೆ ರೂ 1—8—0

ಕಂಪೌಂಡು ಸಿರಪ್ಪು ಬಸಲೀನ — ... ಕ್ಷಯವೆಂಬ ರೋಗಕ್ಕೆ ಈ ... ಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು ... ರಕ್ತ ... ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ಮುಂದರಿಯದಂತೆ ಕಾಪಾಡಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 1—6—0

ಕಂಪೌಂಡು ಸಿರಪ್ಪು ಸೆಬೀನ ಸೇಪಿಯ —... ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ... ರೋಗದಿಂದ ಸೊಂಟನೋವು ಕೈಕಾಲು ಬಚ್ಚಲು ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರ ವುದು ಕ್ರಯ ಬಾಟ್ಲಿಗೆ ರೂ 3 8—0.

ಕಂಪೌಂಡು ಸಿರಪ್ಪು ವೆಸಿಥೂ — ಪ್ರಮೇಹವೆಂಬ ಗುಪ್ತರೋಗವನ್ನು ಪಡಕೊಂಡು ಮೂತ್ರ ಬಿಂದು ಬಿಂದು ... ದ್ವಾರದೊಳಗೆ ಹುಣ್ಣು ವ್ರಣಗಳು ... ಇತ್ಯಾದಿ ... ರೋಗವನ್ನು ಈ ... ಪೂರ್ಣ ಗುಣಪಡಿಸಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3 9—0

ಎಲ್ಲಾ ಟೀಕ್ಯ ಮದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿ ... ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ... ಬರೆಯುತ್ತ ... ಪರೀಕ್ಷೆ ಕೊಡುವ ದೃಷ್ಟಿಚಕ್ರಗಳೂ ಬಿಸಲಿಗೆ ... ನಮ್ಮಲ್ಲಿ ನ್ಯಾಯವಾದ ...

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ

52—37 **Malariana Co,**
Hamparkutta No 14 Mangalore

ಏಜೆಂಟ —ಮಲೇರಿಯಾನ ಕಂಪೆನಿ
ಹಂಪನಕಟ್ಟೆ ... 14 ಮಂಗಳೂರು ...

ನೋಟೀಸು.

ಈ ಕೆಳಗಿನ ಮಹನೀಯರು ಕೊಡಗು ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರುಗಳ ಮುಖಾಂತರ ಬೇರೆ ರಶೀತಿ ಪುಸ್ತಕಗಳು ... ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳಗಳಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜೆಂಟರುಗಳು

ಉತ್ತರ ಕೊಡಗಿಗೆ ಮೆ ಪಾಲಂಗಡ ಕಾರ್ಯಪ್ಪನವರು
ಮೆ ಚಾರಿರ ಮಾದಯ್ಯನವರು

ದಕ್ಷಿಣ ಕೊಡಗಿಗೆ ಮೆ ಅಲ್ಲಾರಂಡ ಮೇದಪ್ಪನವರು
ಮೆ ಚೆಕ್ಕೆರ ನಾಣಯ್ಯನವರು
ಮೆ. ಸೋಮೆಯಂಡ ಅಚ್ಚಯ್ಯನವರು,
ಮುರನಾಡು—ಮೆ ಕೀಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ ಮುಂಡೇಪಂಡ ಸೋಮಯ್ಯನವರು (ಜಂಬಿಭಂಡಾರ)
ನಾಪೋಕ್ಲು—ಎಮ್. ಆರ್ ವೆಂಕಪ್ಪಯ್ಯನವರು
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರ
ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರ.
ಪೊನ್ನಂಪೇಟೆ—ಸಿದ್ದಾಪುರ—ಮೆ ... ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ ಜಿ ಮುದ್ದಯ್ಯನವರು
ಮೆ ಪಣ್ಣುವಂಡ ಬೋಪಯ್ಯನವರು
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಕುಡಿಕೇರಿ ಓ. ತಿತಿಮತ್ತಿ—ಮೆ. ಜಿ. ಮಾದಯ್ಯನವರು
ಸ ಂಟಿಕೊಪ್ಪ—ಮೆ ಒಪ್ಪಟೀರ ... ವ ... ಯ್ಯನವರು,

ನೂತನ —ಪ್ರಿಂಟು ಆದ ರಶೀತಿ ಹೊಂದಿರದ ... ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
ಕೊಡಗು ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರ ... ಯೊಬ್ಬ ಮೆಂಬರನ್ನೂ ... ಇರಬೇಕಾದ ... ಬ್ಯಾರಿ ... ಸಹಾಯಕ ಸಂಘದ ಮತ್ತು ... ರದ ... ಬಾಧಕಗಳೂ ಪಾಸ್ ಬುಕ್ಕುಗ ... ಕಾರಿ ಸಂಘಗಳ ಮತ್ತು ದವಸ ಭಂಡಾರ... ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರು... ಸಾಧಾರಣ ತಯಾರಿಸಲ್ಪಟ್ಟಿರುವ ದಾತಾ ... ಖರಾಬು ... ಮುಂಗಡ ... ಗಳೂ ... ಟ್ಟಿ ... ಖರೀದು ... ಸ್ಟಾಕ್ ರಿಜಿಸ್ಟರ್ ... ರುಗಳೂ ಮೆಂಬರ್ ಪುಸ್ತಕಗಳು ... ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳು ... ಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ... ಬೇಕಾದವರು ಆರ್ಡರು ಕೊಟ್ಟು ... ಮೂಲಕ ಕಳುಹಿಸಲಾಗುವುದು

ಮೇನೇಜರ್
ಕೊಡಗು ...

Printed & published by P I Belliappa at ' Kodagu ' Press for ' Kodagu ' Ltd

Reg. No. M.
If not delivered please return to
"KODAGU" OFFICE MERCARA

ಕೊಡಗು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ವರ್ಷಕ್ಕೆ ಚಂದಾ ರೂ. ೩—೮—೦.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೧ನೇ ಇಸವಿ ಜುಲೈ ತಾರೀಕು ೨೪ ನೇ ಶುಕ್ರವಾರ. | ಸಂಚಿಕೆ ೮

Telegrams "Precious"

V. Subramaniaier Jeweller,

Telephone— 3135

DIAMOND MERCHANT GOLD & SILVER SMITH.

Dealers in all —
SPORTS CUPS in ...
MEDALS in up to date patterns
CASKETS in elegant styles

Nos. 2 & 3 Kuppamuthu St.
TIRUVATESWARANPET
Post Box 423, Triplicane P. O.,
MADRAS.

Dealers in all —
GEM SET JEWELS set with Diamonds Rubies etc.,
GOLD ARTICLES of all patterns
SILVER WARE in latest style.

52-36



GOOLAM HUSAIN ALLIBHOY & SONS.
Largest Importers of Firearms and Ammunition
Cheapest priced firm in India,
210 Abdul Rehman Street BOMBAY

44-17

ಮಲೆ ಜ್ವರಕ್ಕೆ
ರಟು ಕ್ಷಾಯ

52-11

ಬಾಲಾರ್ಕಮದು.



ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.

ಕೊಡಗು.

ಸನ್ ೧೯೩೦ನೇ ಇಸವಿ

ಜುಲೈ ತಾ ೨೫ನೇ ಶುಕ್ರವಾರ.

ಲೇಬರ್ ಕಮಿಶನಿನ ವರದಿ.

ತೋಟಗಳಿಗೆ ಸಂಬಂಧಪಡುವ ವಿಷಯಗಳು.

ಆಳುಗಳ ಊರಿನಿಂದ ತೋಟಕ್ಕೆ ಪ್ರಯಾಣ ಮಾಡುವ ಖರ್ಚನ್ನು ಆಳುಗಳಿಂದ ವಸೂಲ್ ಮಾಡುವುದು ಖಾನೂನಿಗೆ ವಿರೋಧವೆಂತ ಮಾಡಬೇಕೆಂತಲೂ, ಆಳುಗಳು ಕೆಲಸ ಪ್ರಾರಂಭಿಸುವ ಮುಂಚೆ ಕೊಡುವ ಅಡ್ವಾನ್ಸ್‌ಗಳನ್ನು ಮೊದಲನೇ ವಾರದ ಮಜೂರಿಯಿಂದ ವಸೂಲ್ ಮಾಡಬೇಕೇ ಹೊರತು ಅನಂತರ ವಸೂಲ್ ಮಾಡಕೂಡದೆಂತ ಖಾನೂನು ಮಾಡಬೇಕೆಂತಲೂ ಈ ವರದಿಯಲ್ಲಿ ಶಿಫಾರಸು ಇದೆ. ಆಳುಗಳ ಪ್ರಯಾಣಕ್ಕಾಗಿ ಆಗುವ ಚಾರ್ಜನ್ನು ಕೊಡಗಿನ ಸಾಧಾರಣ ಎಲ್ಲಾ ಪ್ಲಾಂಟರುಗಳು ಆಳುಗಳಿಗೆ ಖರ್ಚು ಬರೆದು ಅವರಿಂದ ವಸೂಲ್ ಮಾಡುತ್ತಿದ್ದಾರೆಂತ ತೋರುತ್ತದೆ. ಕೆಲವು ತೋಟಗಾರರು ಈ ಖರ್ಚನ್ನು ತಮ್ಮ ಕೈಯಿಂದ ಕೊಡುತ್ತಾರೆ. ಆದರೆ ಆಳುಗಳನ್ನು ತಂದು ಒದಗಿಸುವ ಮೇಸ್ತ್ರಿಗಳು ಅಂಥಾ ಹಣವನ್ನು ತೋಟದಿಂದ ತೆಗೆದುಕೊಂಡರೂ ಆಳುಗಳಿಂದ ಪುನಃ ವಸೂಲ್ ಮಾಡುತ್ತಾರೆಂತ ಕಾಣುತ್ತದೆ. ಹೀಗೆ ವರದಿಯ ಈ ಶಿಫಾರಸು ಮಂಜೂರಾದರೆ ಆಳುಗಳ ಪ್ರಯಾಣದ ಖರ್ಚೆಲ್ಲಾ ತೋಟಗಾರರೇ ವಹಿಸಿಕೊಳ್ಳಬೇಕಾಗುತ್ತದೆ.

ಕೆಲಸ ಪ್ರಾರಂಭವಾಗುವ ಮುಂಚೆ ಕೊಡುವ ಅಡ್ವಾನ್ಸುಗಳನ್ನು ಕೋರ್ಟಿನ ಮೂಲಕ ವಸೂಲ್ ಮಾಡಲು ಬಿಡಬಾರದೆಂಬ ಶರತ್ತು ಇರುವುದರಿಂದ ಆಳುಗಳಿಗೆ ಹಣ ಸಾಲ ದೊರೆಯದೆ ಇರಬಹುದು. ಆದರೆ ಅಡ್ವಾನ್ಸು ಕೊಟ್ಟು ಆಳುಗಳನ್ನು ಗುಲಾಮರಾಗಿ ಮಾಡಿ ಇಟ್ಟುಕೊಳ್ಳಲು ಸಾಧ್ಯವಾಗಲಾರದು.

ತಿಂಗಳಿಗೆ ನೂರು ರೂಪಾಯಿ ಸಂಬಳಕ್ಕೆ ಕಡಿಮೆ ಇರುವವರ ಸಂಬಳವನ್ನು ಜಪ್ತಿ ಮಾಡಬಾರದೆಂತಲೂ, ತಿಂಗಳಿಗೆ 100 ರೂ॥ ಗಿಂತ ಕಡಿಮೆ ಸಂಬಳ ಇರುವವರನ್ನು ಸಾಲಕ್ಕಾಗಿ ದಸ್ತಗಿರಿ ಮಾಡಬಾರದೆಂತಲೂ ಖಾನೂನು ಮಾಡಬೇಕೆಂಬ ಶಿಫಾರಸು ಇದೆ. ಈ ಶಿಫಾರಸು ತೋಟದ ಕೆಲಸಗಾರರಿಗೆ ವ್ಯಾಪಿಸುತ್ತದೋ ತಿಳಿಯದು. ವ್ಯಾಪಿಸುತ್ತದಾದರೆ ತೋಟಗಾರರು ಆಳುಗಳಿಗೆ ಅಡ್ವಾನ್ಸ್ ಕೊಡುವ ಸಂಭವವೇ ಇಲ್ಲ. ಆಳುಗಳು ಸಾಲಗಾರರಾಗುವ ಸಂಭವವೂ ಇಲ್ಲ. ಈ ರೀತಿ ಅಡ್ವಾನ್ಸ್ ಕೊಡುವ ಪದ್ಧತಿ ನಿಂತು ಹೋದರೆ ಆಳುಗಳ ಸಂಬಳ ಹೆಚ್ಚಬಹುದು. ಆಳುಗಳು ದುಡಿದದ್ದೆಲ್ಲಾ ಅವುಗಳ ಜೀವನಕ್ಕೇನೇ ಖರ್ಚಾಗಬಹುದು.

ಆಳುಗಳ ಸಂಬಳವು ವಾರ ವಾರ ಬಟವಾಡೆಯಾಗಬೇಕೆಂತ ಇನ್ನೊಂದು ಶಿಫಾರಸು. ಇದರಿಂದ ತೋಟಗಾರರಿಗೆ ಏನೂ ತೊಂದರೆ ಇಲ್ಲ. ಆಳುಗಳಿಗೆ ಜೀವನದ ಅನುಕೂಲಗಳನ್ನು ಹೆಚ್ಚು ಮಾಡಿಕೊಳ್ಳಲು ಉತ್ತೇಜನ ದೊರಕಬಹುದು. ಅವರು ತಿಂಡಿ ತೀರ್ಥಗಳನ್ನೂ, ಬಟ್ಟೆಬರೆಗಳನ್ನೂ ಚೆನ್ನಾಗಿ ಮಾಡಿಕೊಳ್ಳಬಹುದು. ಆದರೆ ಕುಡುಕತನಕ್ಕೆ ಅನುಕೂಲವಾಗುವಂತೆ ಸೇಂದಿ ಸಾರಾಯಿ ಅಂಗಡಿಗಳು ಸಮೀಪದಲ್ಲೇ ಇದ್ದರೆ ಆಳುಗಳಿಗೆ ವಾರ ವಾರ ಸಿಕ್ಕುವ ಪೂರ್ತಿ ಸಂಬಳವು ಸೇಂದಿ ಸಾರಾಯಿ ಅಂಗಡಿಗಳಿಗೆ ಹೋಗಿ ಆಳುಗಳ ಆರೋಗ್ಯ, ನಡತೆ ನೀತಿ ಸಹ ಕೆಡುತ್ತದೆಯೇ ಹೊರತು ಪ್ರಯೋಜನವಾಗಲಾರದು. ದೊಡ್ಡ ಪಟ್ಟಣಗಳಲ್ಲೂ, ಕೈಗಾರಿಕೆ ಕಾರ್ಖಾನೆಗಳು ಇರುವಲ್ಲಿಯೂ ಸೇಂದಿ ಸಾರಾಯಿ ಅಂಗಡಿಗಳು ದೂರದಲ್ಲಿದ್ದು, ಅಂಗಡಿಗಳ ಸಂಖ್ಯೆಯನ್ನೂ, ವ್ಯಾಪಾರದ ಸಮಯವನ್ನೂ ಕಡಿಮೆ ಮಾಡಬೇಕೆಂತ ವರದಿಯ ಶಿಫಾರಸು ಇದೆ. ಈ ಶಿಫಾರಸು ತೋಟಗಳಿಗೂ ವ್ಯಾಪಿಸಲೇಬೇಕು. ಇಲ್ಲವಾದರೆ ಆಳುಗಳು ಹೆಚ್ಚಾಗಿ ಸೇರಬೇಕೆಂಬ ಉದ್ದೇಶದಿಂದ ಸೇಂದಿ ಸಾರಾಯಿ ಅಂಗಡಿಗಳು ತೋಟಗಳ ಸಮೀಪ ಇರಬೇಕೆಂತ ತೋಟಗಾರರು, ಈ ಮೊದಲು ಕೆಲವರು ಕೇಳಿದಂತೆ, ಕೇಳಬಹುದು. ವರದಿಯ ಶಿಫಾರಸುಗಳು ಕೂಲಿಕಾರರ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಸಹಾಯಕರವಾಗಬೇಕಾದರೆ ನಿಷಾಪದಾರ್ಥಗಳ ಅಂಗಡಿಗಳನ್ನು ತೋಟಗಳಿಂದ ಬಹಳ ದೂರವಾಗಿ ಇಡಬೇಕು.

'ಎಲ್ಲಾ ತೋಟಗಳಲ್ಲೂ ಮೇನೇಜರುಗಳು ಜನನ ಮರಣದ ರಿಜಿಸ್ಟರು ಇಡಬೇಕು. ಇದನ್ನು ಸರಕಾರದ ಅಧಿಕಾರಿಗಳು ಆಗಿಂದಾಗ್ಯೆ ನೋಡುವ ಹಕ್ಕಿರಬೇಕು. ಆಳುಗಳಿಗೆ [illegible]ಸಲಿಕ್ಕೂ, ತರಕಾರಿ ಬೆಳೆಸಿಕೊಳ್ಳಲಿಕ್ಕೂ ಬೇಕಾ[illegible] ಕೊಡಬೇಕು. ಮಲೇರಿಯಾ ನಿವಾರಣೆ ಕೆಲಸವನ್ನು ಡಾಕ್ಟರುಗಳ ಸಹಾಯದಿಂದ ಹೆಚ್ಚಾಗಿ ನಡಿಸಬೇಕು. ಸಾಧ್ಯವಿದ್ದಲ್ಲೆಲ್ಲಾ ಪಂಪ್ ನೀರನ್ನು ಒದಗಿಸಿಕೊಡಬೇಕು. ಆಳುಗಳ ವಾಸದ ಮನೆಗಳು ಎತ್ತರ ಸ್ಥಳದಲ್ಲಿದ್ದು ಒಂದು ಕುಟುಂಬಕ್ಕೆ ಎರಡು ಕೊಠಡಿಗಳಿರುವಂತೆ ಮಾಡಿಕೊಡಬೇಕು. ಬೆಳಕು ಗಾಳಿ ಬೇಕಾದಷ್ಟು ದೊರಕುವಂಥ ಮಾದರಿ ಮನೆಗಳನ್ನು ಸರಕಾರದವರು ನಿರ್ಣಯಿಸಿಕೊಡಬೇಕು. ಇವುಗಳ ಹಾಗೆ ತೋಟಗಾರರು ಮನೆಗಳನ್ನು ಕಟ್ಟಿಸುವಂತೆ ಮಾಡಬೇಕು. ಆಳುಗಳು ಸ್ವಂತ ಮನೆ ಮಾಡಿಕೊಳ್ಳಲು ಅನುಕೂಲ ಕೊಡಬೇಕು. ಸ್ನಾನಕ್ಕೂ, ಬಟ್ಟೆ ಒಗೆಯಲಿಕ್ಕೂ ತಕ್ಕ ಅನುಕೂಲ ಮಾಡಿಕೊಡಬೇಕು. ಆರೋಗ್ಯದ ಬಗ್ಗೆ ಮಾಡಿಕೊಳ್ಳುವ ಕೂಟಗಳು ಸ್ತ್ರೀ ಡಾಕ್ಟರುಗಳನ್ನು ನೇಮಿಸಿಕೊಳ್ಳಬೇಕು. 'ಹುಕ್ ವರ್ಮ್' ಅಂದರೆ ಕೊಕ್ಕೆ ಹುಳಕ್ಕಾಗಿ ವರ್ಷಕ್ಕೆ ಒಂದಾವರ್ತಿ ಎಲ್ಲಾ ಆಳುಗಳಿಗೂ ಚಿಕಿತ್ಸೆ ಮಾಡಬೇಕು. ತೋಟಗಳಿಗಾಗಿ ಇಡುವ ಆಸ್ಪತ್ರೆಗಳಲ್ಲಿ ಖಾಯಿಲೆಗೆ ಚಿಕಿತ್ಸೆ ಹೊಂದುವ ಆಳುಗಳಿಗೆ ಮುಫತ್ತಾಗಿ ಊಟ ತಿಂಡಿ ಕೊಡಬೇಕು. ಗರ್ಭಿಣಿ ಸ್ತ್ರೀಯರಿಗೆ ಸಹಾಯ ಕೊಡಲೇಬೇಕೆಂತ ಖಾನೂನು ಮಾಡಬೇಕು. ಗರ್ಭಿಣಿ ಹೆಂಗಸರಿಗೆ ಹೆರಿಗೆಯ ಮುಂಚೆ 4 ವಾರ, ನಂತರ 4 ವಾರ ರಜೆ ಕೊಟ್ಟು, ಅರ್ಧ ಸಂಬಳ ಕೊಡಬೇಕು. ಮತ್ತು 5 ರೂ. ಬೋನಸ್ ಸಹ ಕೊಡಬೇಕು. ಹತ್ತು ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳಿಂದ ಕೆಲಸ ಮಾಡಿಸಬಾರದು. ಕೆಲಸ ಮಾಡುವಷ್ಟು ಪ್ರಾಯ ಬರದ ಮಕ್ಕಳಿಗೆ ಮುಫತ್ತಾಗಿ ಊಟ ಕೊಡಬೇಕು. ಆಳುಗಳಿಗೆ ಆಟ ಆಡಲು ಮೈದಾನಗಳನ್ನು ಏರ್ಪಡಿಸಿಕೊಟ್ಟು ಆಟ ಆಡಲು ಉತ್ತೇಜನಕೊಡಬೇಕು.'

ಈ ಎಲ್ಲಾ ಶಿಫಾರಸ್ಸುಗಳು ಜಾರಿಗೆ ಬಂದರೆ ಆಳುಗಳು ಮನುಷ್ಯರಂತೆ ಜೀವಿಸಬಹುದು. ಅವರ ಊರಿನಲ್ಲಿ ಇರುವ ಅನುಕೂಲ ನೋಡಿದರೆ ತೋಟಗಳಲ್ಲಿ ಈಗ ದೊರಕುವ ಅನುಕೂಲಗಳು ತುಂಬಾ ಹೆಚ್ಚಾಗಿವೆ ಎಂತ ಕೆಲವರು ಹೇಳುವುದುಂಟು. ಅವರ ಊರಿನ ಜೀವನವೂ, ತೋಟದ ಜೀವನವೂ ಉತ್ತಮವಾಗಬೇಕೆಂಬುದೇ ಸರಕಾರದ ಮತ್ತು ತೋಟಗಾರರ ಉದ್ದೇಶವಾಗಿರಬೇಕು. ಈ ತರಹದ ಅನುಕೂಲಗಳನ್ನೆಲ್ಲಾ ಒದಗಿಸಿ ಕೊಟ್ಟರೆ ತೋಟಗಾರರಿಗೆ ತೋಟಗಳಿಂದ ತುಂಬಾ ಪ್ರಯೋಜನವಾಗದೆ ಇರಬಹುದು. ಆದರೆ ಪ್ರಪಂಚದ ಈಗಿನ ಬಹುಮತದ ಅಭಿಪ್ರಾಯವು ಅನೇಕರ ಕಷ್ಟದಿಂದ ಕೆಲವರು ಮಾತ್ರ ಹೆಚ್ಚಿನ ಸುಖಪಡಬಾರದು ಮತ್ತು ಅನೇಕರು ಪಡುವ ಕಷ್ಟದ ಪ್ರತಿಫಲವು ಸರ್ವರಿಗೂ ಸರಿ ಸಮಪಾಲಾಗಿ ಹಂಚಲ್ಪಡಬೇಕೆಂದಾಗಿದೆ. ಈ ವರದಿಯ ಶಿಫಾರಸ್ಸುಗಳಿಂದ ಮೇಲ್ಕಂಡ ಧ್ಯೇಯವು ಸಾರ್ಥಕವಾಗಲಾರದಾದರೂ ಆಳುಗಳು ಪಡುವ ಕಷ್ಟದಿಂದ ತೋಟಗಳಲ್ಲಿ ಉಂಟಾಗುವ ಉತ್ಪತ್ತಿಯ ಈಗಲಿಗಿಂತ ಹೆಚ್ಚಿನ ಭಾಗ ಆಳುಗಳಿಗೆ ದೊರಕುತ್ತದೆ.

'ಆಳುಗಳ ಮಕ್ಕಳಿಗೆ ವಿದ್ಯೆ ಕೊಡಲು ಸರ್ಕಾರದಿಂದ ಎಷ್ಟು ಹಣ, ತೋಟಗಾರರು ಎಷ್ಟು ಹಣ ಕೊಡಬಹುದೆಂಬುದನ್ನು ತೋಟಗಾರರ ಪ್ರತಿನಿಧಿಗಳೂ, ಸರ್ಕಾರದ ಪ್ರತಿನಿಧಿಗಳೂ ಸೇರಿ ಚರ್ಚಿಸಿ ನಿಶ್ಚಯಿಸಿಕೊಳ್ಳಬೇಕು. ಆರೋಗ್ಯ ಮತ್ತು ಅನುಕೂಲದ ಬೋರ್ಡ್ ಎಂಬ ಸಂಸ್ಥೆಗಳು ಏರ್ಪಡಿಸಬೇಕು. ಇವುಗಳ ಖರ್ಚಿಗೆ ಹಣದ ಬಗ್ಗೆ ತೋಟಗಳ ಮೇಲೆ ವಿಸ್ತೀರ್ಣದ ಲೆಕ್ಕದಿಂದಾಗಲೀ, ತೋಟಗಳಲ್ಲಿರುವ ಕೆಲಸಗಾರರ ಲೆಕ್ಕದಿಂದಾಗಲೀ ಒಂದು ಸೆಸ್ ಹಾಕಬೇಕು. ಈ ಸೆಸ್ಸಿನ ಉತ್ಪತ್ತಿಯ ಒಂದು ಭಾಗವನ್ನು ತೋಟಗಳಿಗೇ ಆರೋಗ್ಯದ ವಿಷಯಕ್ಕಾಗಿ ಕೊಡಬೇಕು' ಎಂದೂ ವರದಿಯಲ್ಲಿದೆ. ಆಳುಗಳ ಮಕ್ಕಳಿಗೆ ವಿದ್ಯೆ ಕೊಡುವ ಏರ್ಪಾಡು ಮಾಡಬೇಕಾದುದ್ದು ಅತ್ಯವಶ್ಯ. ಆಳುಗಳ ಮಕ್ಕಳಿಗೆ ಮಾತ್ರವಲ್ಲ, ಆಳುಗಳಿಗೂ ಸಹ ಅವರ ವಿರಾಮ ಕಾಲದಲ್ಲಿ ಓದು ಬರಹ ಕಲಿಸಲು ಏರ್ಪಾಡು ಮಾಡಿದರೆ ಇನ್ನೂ ಮೇಲು.

ಆಳುಗಳ ಕ್ಷೇಮವನ್ನು ಕಾಪಾಡಿಕೊಳ್ಳಲು 'ಲೇಬರ್ ಯೂನಿಯನ್' ಎಂಬ ಸಂಸ್ಥೆಗಳನ್ನು ಮಾಡಿಕೊಳ್ಳಲು ಅನುಕೂಲ ಕೊಡಬೇಕೆಂಬ ಶಿಫಾರಸ್ಸು ಮತ್ತು ತೋಟಗಳ ಆಳುಗಳಿಗೆ ಸಹ ಸಂಬಂಧಪಡುವ ಶಿಫಾರಸು ಒಂದು ಇದೆ. 'ಲೇಬರ್ ಯೂನಿಯನ್'ಗಳು ಅಂದರೆ ಕೂಲಿಕಾರರ ಸಂಘಗಳು ಎಂಬ ಸಂಸ್ಥೆಗಳನ್ನು 'ರಿಜಿಸ್ಟರ್' ಮಾಡಿಸಿಕೊಳ್ಳಲು ಈಗಲೇ ಖಾನೂನು ಇದೆ. ಕಾರ್ಖಾನೆ ಕೂಲಿಗಳಲ್ಲಿ ಈ ಸಂಸ್ಥೆಗಳು ಈಗಾಗಲೇ ಅನೇಕ ಕಡೆಗಳಲ್ಲಿ ಏರ್ಪಟ್ಟಿರುವುವು. ಇಂಥಾ ಕೂಟಗಳನ್ನು ಮಾಡಿಕೊಂಡು ವಿನಹ ಆಳುಗಳ ಹವಾಲುಗಳನ್ನು ಮಾಲೀಕರಿಗೂ, ಸರ್ಕಾರಕ್ಕೂ ಒಗ್ಗಟ್ಟಾಗಿ ತಿಳಿಸಲು ಅನುಕೂಲವಿರುವುದಿಲ್ಲ. ಆಳುಗಳೇ ಇಂಥಾ ಕೂಟಗಳನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ. ಸಾರ್ವಜನಿಕ ಕೆಲಸ ಮಾಡುವ ಮುಂದಾಳುಗಳು ಆಳುಗಳಿಗೆ ಇಂಥಾ ಕೂಟಗಳ ಪ್ರಯೋಜನಗಳನ್ನು ಹೇಳಿಕೊಟ್ಟು, ಅವುಗಳನ್ನು ಏರ್ಪಡಿಸಲು ಸಹಾಯ ಮಾಡಬೇಕು. ಆಳುಗಳು ಮನಸೋ ಇಚ್ಛೆ ಓಡದಂತೆ ಮಾಡಿಕೊಳ್ಳಲಿಕ್ಕೂ ಮತ್ತು ಅವರು ಹೊಂದುವ ಪ್ರತಿಫಲಕ್ಕೆ ತಕ್ಕ ಕೆಲಸ ಮಾಡುವಂತೆ ನೋಡಿಕೊಳ್ಳಲಿಕ್ಕೂ ಇಂಥಾ ಕೂಟಗಳಿದ್ದರೆ ತೋಟಗಾರರಿಗೂ ಸಹಾಯವೇ. ಆದ್ದರಿಂದ ಇಂಥಾ ಕೂಟಗಳನ್ನು ಮಾಡಿಕೊಳ್ಳಲು ತೋಟಗಾರರು ಸಹ ಸಹಾಯ ಕೊಡಬೇಕು.

ಅಪಾಯಕರವಾದ ಕೆಲಸಗಳಲ್ಲಿ ದುಡಿಯುವ ಕೂಲಿಕಾರರು ಕೆಲಸದ ಅಪಾಯದಿಂದ ಘಾಯಪಟ್ಟು ಅಂಗಹೀನರಾದರೆ ಅವರಿಗೂ, ಮೃತರಾದರೆ ಅವರ [illegible] ಪರಿಹಾರ ಕೊಡಬೇಕೆಂಬ ಖಾನೂನು [illegible]ನ್ನು ಮೇಲೆ ಇಂಥಾ ಪರಿಹಾರಗಳನ್ನು [illegible] ಮಾಡುವಾಗ ಅಪಾಯಕ್ಕೆ ಗುರಿಯಾದವ[illegible]ಕೆಂತ ಖಾನೂನು ಮಾಡಬೇಕೆಂಬ ಶಿಫಾರಸ್ಸು [illegible] ನ್ಯಾಯವಾದ ಶಿಫಾರಸ್ಸೇ ಆಗಿದೆ. ಒಂದು [illegible]ವಾಗ ಅಪಾಯಕ್ಕೆ ಗುರಿಯಾಗಿ ಮುಂದೆ [illegible] ಕೊಳ್ಳಲು ಸಾಧ್ಯವಿಲ್ಲವಾದರೆ ಅಂಥವನಿಗೆ [illegible] ಬೇಕಾದದ್ದು, ಮೃತನಾದರೆ ಅವನ ಹೋ[illegible] ಮುಂದೆ ಸ್ವಲ್ಪ ಕಾಲದ ವರೆಗಾದರೂ [illegible]ಲವಾಗುವಂತೆ ಪರಿಹಾರ ಕೊಡಬೇಕಾದದ್ದು [illegible] ಇಂಥಾ ಅಪಾಯಗಳಿಗೆ ಗುರಿಯಾದವರಿಗೆ [illegible] ಈಗಲೂ ಸಹಾಯ ಕೊಡುತ್ತಲಿರಬಹುದು [illegible] ಸಹಾಯ ಕೊಡಲೇ ಬೇಕೆಂತ ಖಾನೂನಿನ ಕ[illegible] ಆದ್ದರಿಂದ ಅಪಾಯಕ್ಕೆ ಗುರಿಯಾದ ಎಲ್ಲಾ [illegible] ಸಹಾಯ ದೊರಕಿಯೇ ದೊರಕುತ್ತದೆ ಎಂ[illegible]ತ್ತದೆ.

ಈ ಶಿಫಾರಸುಗಳಲ್ಲಿ ಯಾವಾವುವನ್ನು [illegible] ಜಾರಿಗೆ ತರುತ್ತಾರೆಂತ ನೋಡಬೇಕಷ್ಟೆ.

ಕೋಮುವಾರು ಸಮ[illegible]

(ಮಹಾತ್ಮ ಗಾಂಧಿಯವರಿಂದ)

ವರ್ಕಿಂಗ್ ಕಮಿಟಿಯವರಿಂದ ತಯಾರಿಸ[illegible] ದೇಶದ ಸಮ್ಮತಿಗೆ ಸೂಚಿಸಲ್ಪಟ್ಟಿರುವ ವ್ಯವಸ್ಥೆ[illegible] ಡಾಕ್ಟರ್ ಅನ್ಸಾರಿಯವರ ಮತ್ತು ನಂತರ ಪ[illegible]ಯರು, ಡಾ. ಅನ್ಸಾರಿಯವರು ಮತ್ತು ಸರ್ದಾರ್ ಸಿಂಘ್‌ರವರಿಂದ ಕೂಡಿದ ಉಪಕಮಿಟಿಯು [illegible]ಲಸದ ಫಲಿತಾಂಶವಾಗಿದೆ. ಡಾ. ಅನ್ಸಾರಿಯ[illegible] ಮುಸಲ್ಮಾನರು ಪ್ರಶ್ನೆಯಲ್ಲಿ ಮಗ್ನರಾದಷ್ಟು ಬೇರೆ[illegible] ಆದದ್ದು ನನಗೆ ತಿಳಿಯದು. ಅವರು ತಮ್ಮ [illegible] ಪ್ರೀತಿಸುತ್ತಾರೆ ಮತ್ತು ಅದಕ್ಕಾಗಿ ಜೀವಿಸು[illegible]ವರು. ಅವರು ರಾಜಕೀಯದಲ್ಲಿದ್ದರೆ ಅಧವಾ [illegible] ಅಧ್ಯಕ್ಷರಾಗಿದ್ದರೆ ಅವರನ್ನು ಅಲ್ಲಿಗೆ ಅವರ ಸ್ವ[illegible]ದದ್ದಾಗಿದೆ. ಅವರು ಬಹು ಘನತೆವುಳ್ಳವರೂ [illegible]ಪಕ್ಷರೂ ಆದುದರಿಂದ ಅಂಥವುಗಳನ್ನು ವಿರೋ[illegible] ಆದರೆ ಅವರು ಕೋಮುವಾರು ಸಮಸ್ಯೆಯನ್ನು [illegible]ಹು ಪ್ರೀತಿಯಾಗಿ ನಡಿಸಿಕೊಂಡಿರುವರು. ಅ[illegible] ಜಯಪ್ರದವಾಗಲಿ! ಅತ್ಯುತ್ತಮ ಗುಣಗಳೂ [illegible] ನಡಿಸುವ ಮುಂಚೆ ಮಾನುಷ ಶರೀರದಲ್ಲಿ [illegible]ಗಿವೆ.

ಕೋಮುವಾರು ಪ್ರಶ್ನೆಯ ತೀರ್ಮಾನದ [illegible]ನ್ನು ಒಪ್ಪಿಕೊಂಡರು ನಿಜವಾಗಿ ಆಲೋಚಿಸಿದ [illegible]ಸ್ಥೆಯು ಕೊರತೆ ಇಲ್ಲದೆಂದು ನನಗೆ ತೋರುತ್ತ[illegible] ಸ್ಪಷ್ಟ ರಾಷ್ಟ್ರೀಯ ಪಕ್ಷದವರಾಗಿದ್ದರೆ [illegible] ಕಾಗಿಲ್ಲ. ಧರ್ಮದಿಂದ ನಾವು ಬೇರೆ [illegible]ದು, ಒಂದು ಜನಾಂಗದಂತೆ ನಾವು ಒಂದಾ[illegible]ದೆ ಇರಬೇಕು. ನಾವು ನಮ್ಮ ನ್ಯಾಯ [illegible] ಆರಿಸುವೆವು ಮತ್ತು ಧರ್ಮ ಮತ್ತು ಜಾತಿಯ[illegible] ಅವರ ಯೋಗ್ಯತೆ ಮೇರೆ ನೌಕರರನ್ನು ನೇಮಿ[illegible] ತದನಂತರ ಮೇಲೆ ವಿಚಾರಿಸಿದರೆ ಈ ವ್ಯವಸ್ಥೆ[illegible]ದ್ದಿದೆ. ಆದರೆ ನಾವು ಕೆಳಗೆ ಬಿದ್ದಿದ್ದೇವೆ [illegible] ನನ್ನಾಚ್ಚರು ಸಂಶಯ ಪಡುತ್ತೇವೆ ಮತ್ತು [illegible]ರೂ ಸ್ವರಾಜ್ಯವು ನಮ್ಮ ಹುಟ್ಟು ಹಕ್ಕು [illegible]ದು ನಮಗೆ ಬೇಕು. ಆದುದರಿಂದ ಕಾಂಗ್ರೆಸ್ [illegible] ವ್ಯವಸ್ಥೆಯನ್ನು ಸೂಚಿಸಿದೆ. ಮಹಾಲಾನ [illegible]ವರು ವರ್ಕಿಂಗ್ ಕಮಿಟಿಯೊಂದಿಗೆ ಇದ್ದಾ[illegible]ಗುವರು. 'ನನಗೆ ಏನು ಬೇಕೆಂದು ನನ್ನನ್ನು [illegible]ಡದೆ ಕೇಳುತ್ತೀರಿ. ನನಗೆ ಏನು ಬೇಕೆಂದು [illegible] ಮಗೆ ಹೇಳಿರುತ್ತೇನೆ. ನೀವು ಏನು ಕೊಡು[illegible] ಬೇಕೆ ನನಗೆ ಹೇಳುವುದಿಲ್ಲ.' ಈ ಮಾತು [illegible]ತು. ಕಾಂಗ್ರೆಸ್ಸಿನ ಸ್ವಚ್ಛ ರಾಷ್ಟ್ರೀಯತ್ವದ [illegible] ಯೋಜನೆಕರವಾಗಿರಲಿಲ್ಲ. ಅವರು (ಮ[illegible] ಯವರು) ಇದೇ ಸ್ವತಂತ್ರೀಯ ಮತಸ್ಥರ ಪ್ರತಿ[illegible] ತಿರಸ್ಕರಿಸಲ್ಪಟ್ಟಿತು. ಆದುದರಿಂದ ಕಾಂಗ್ರೆಸ [illegible] ಬಹುದೆಂಬುದನ್ನು ತಿಳಿಯುವ ಹಕ್ಕು ಅವರಿಗಿತ್ತು. [illegible] ಪಕ್ಷದ ಸಿಖ್ಖರು, ಮುಸಲ್ಮಾನರು ಮತ್ತು [illegible] ಪ್ರಲಾಪದಂಥ ಯಾವುದನ್ನೂ ಕಾಂಗ್ರೆಸು [illegible]ತ್ತು. ಆದುದರಿಂದ ಆ ಉಪ ಕಮಿಟಿಯು [illegible] ವರ್ಕಿಂಗ್ ಕಮಿಟಿಯಿಂದ ರೂಪಿತಗೊಳಿಸಲ್ಪಟ್ಟ[illegible]ಯು ಉಂಟಾಯಿತು.

ಇದನ್ನು ಒಪ್ಪಲು ಇಚ್ಛೆ ಇಲ್ಲದವರ ಮೇ[illegible]ದಿಂದ ಹಾಕಲು ವರ್ಕಿಂಗ್ ಕಮಿಟಿಯವರು [illegible] ಆದರೆ ಮೂರು ಕೋಮುಗಳಿಗೆ ಸೇರಿದ ರಾಷ್ಟ್ರೀ[illegible]ದವರಿಗೆ ಕೆಲಸ ಮಾಡಲು ಇದೊಂದು ಆಧಾ[illegible] ಅವರು ತಮ್ಮ ತಮ್ಮ ಕೋಮುಗಳಲ್ಲಿ ಏನಾ[illegible] ಅಭಿಪ್ರಾಯಗಳನ್ನು ಬೆಳಸಲಿ.

(೩ನೇ ಪುಟದಲ್ಲಿ ಮುಂದುವರಿದಿದೆ)

ಗ್ರಾಮಗಳ ಗತ ವೈಭವ.

(ಲೇಖಕ—ಶ್ರೀ. ಯು. ಆರ್. ಬ. ಎ)

(ಹಿಂದಿನ ವಾರದಿಂದ ಮುಂದುವರಿದುದು)

... ಪ್ರಚಾರಕೆಯೂ ಆಗ ಸುಲಭವಾಗಿತ್ತು. ಆ ... ಬಾಲಕರಿಗಾಗಿ ಕಟ್ಟಲ್ಪಟ್ಟಿದ್ದುವು. ಇದ ... ಅಜ್ಞಾನವು ಹೋಗಿ ತನ್ನ ಜೀವನ ಕ್ರಮದ ... ಯಲ್ಲಿ ಇಟ್ಟುಕೊಳ್ಳಲು ಸಹಾಯಕವಾಗು ... ಯ ಅಭಾವವಿದ್ದರೆ ಅದರಿಂದ ಆಗುವ ನಷ್ಟ ... ತಿಳಿದ ವಿಷಯ. ಗ್ರಾಮಸ್ಥರು ಯಾರೂ ... ದೂರದ ಪಟ್ಟಣದ ಶಾಲೆಗಳಿಗೆ ತಮ್ಮ 5—6 ... ವಯಸ್ಸಿನ ಬಾಲಕರನ್ನು ಕಳುಹಿಸುವುದಿಲ್ಲ. ಹೀಗಾ ... ಅನಂತರವೇ ಬಾಲಕನ ಪ್ರಥಮ ಅಕ್ಷರ ಜ್ಞಾ ... ವಾಗುವುದು. ಗ್ರಾಮದಲ್ಲೇ ಶಾಲೆಗಳಿದ್ದರೆ ಇಂ ... ಅಲ್ಲಿಗೆ ಆಸ್ಪದವಿಲ್ಲವು. ಮತ್ತು 5 ವರ್ಷದಿಂ ... ರು ಶಾಲೆಗೆ ಹೋಗುವುದರಿಂದ 2—3 ವರ್ಷಗ ... ವ್ಯರ್ಥವಾಗಿ ಕಳೆಯಬೇಕಾದ ಅವಶ್ಯವಿಲ್ಲವು. ಮ ... ಪ್ರತಿ ನಿಮಿಷವೂ ಜಗತ್ತಿಗೆ ಕಲ್ಯಾಣವಾಗುವ ಏ ... ದು ಉದ್ಯೋಗದಲ್ಲಿ ಪ್ರವೃತ್ತನಾಗಿರಬೇಕು. ಸ್ವ ... ಗಳೆ, ನಿಮಿಷ ಸೆಕೆಂಡುಗಳು ಬಹು ಅಮೂಲ್ಯವಾ ... ಹೀಗಿರುವಾಗ 2—3 ವರ್ಷಗಳನ್ನು ವ್ಯರ್ಥವಾ ... ಕಳೆಯಬೇಕಾದ ಅವಶ್ಯವಿಲ್ಲವು ... ಹೋದುದೆಂದರೆ ಯಾರಿಗೂ ಮನಸ್ಸು ಒಪ್ಪದು. ... ಯನೂ ವಿದ್ಯಾಸಂಸ್ಥೆ ... ಪ್ರಸಂಗ ... ಸನಿಷ್ಟ. ... ... ರಾಗಿಯ ... ... ದೆ ನಾಗರಿಕತೆಯು ... ಸಂದೇಶದಿಂದ ... (Barley) ಜೋಳ ... (Corn floor) ... ಆಗ ...

ಹೀಗೆ ಇನ್ನೊಂದು ದೃಷ್ಟಿಯಲ್ಲಿ ಗ್ರಾಮದ ಜೀವನವು ... ಯವಾಗ ಕಳ್ಳಕಾಕರ ಭಯವೆಲ್ಲಿಂದ ಬರಬೇಕು? ... ಯರೂ ಕೇವಲ ಸ್ವದೇಶೋದ್ಧಾರದ ಕಾರ್ಯ ... ದಲ್ಲಿ ... ಯವರು ಸಹಾಯಮಾಡುತ್ತ ತಮ್ಮ ಕಾಲವನ್ನು ... ಕಳೆಯುತ್ತಿದ್ದರಲ್ಲದೆ ಈಗಿನ ಕೈಲಾಗದವರಂತೆ ಮಂಡಿ ಮು ... ರಿಗೆ ಹೊಕ್ಕಪುತ್ತಿರಲಿಲ್ಲ. ... ಅದ ಅವರು ಮರ್ಯಾದೆಯನ್ನು ಸಮಾಜದಲ್ಲಿ ... ಪಡೆಯುತ್ತಿದ್ದರು. ತಂದೆಯವರಾದರೂ ಕಷ್ಟತರವಾಗಿರಲಿ ... ಉತ್ಪತ್ತಿಗ ತಕ್ಕಂತೆ ವಿಭಾಗಪಡುತ್ತಿತ್ತು.

ಪ್ರಿಯ ದೇಶಬಾಂಧವರೇ ಹಾಗೂ ಸಹೋದರೀ, ಫನರೂ ... ಭೂಮಾತೆಯ ಆಗಿನ ಸೌಭಾಗ್ಯವು ಆಕಾಶದ ಈ ... ಗ ಹೋಗಿ ... ಯುಂಟ ... ದಲ್ಲಿ ... ರುವ ... ಕಣಗಳಂತೆ ... ನಿಮ್ಮ ಗ್ರಾಮದ ಗತವೈಭವ ... ನ್ನು ಸ್ಮರಿಸಿರಿ! ಆಗಿನ ಲಕ್ಷಣವು ಎಲ್ಲಿಗೆ ಹೋಗಿದೆ? ... ಈಗ ಎಷ್ಟರ ಮಟ್ಟಿಗೆ ... ಬರುವುದು? ಧ ... ಕಾಲದಲ್ಲಿ ... ತಮ್ಮ ತಮ್ಮ ಧರ್ಮದಂತೆ ನ ... ಡೆದರೆ ... ದಿಂದಿರುವುದು ಸಹಜವಲ್ಲವೇ? ... ದ ಅಭಿವೃದ್ಧಿಯಿಂದ ಗ್ರಾಮ ... ಗಳು ನೆಲಸುವುವು ... ಗಳು ಲಭಿಸುವುವು. ... ನಾಲ್ಕು ... ಆಗ ಜನರಲ್ಲಿ ಸುಖ ... ಗಳು ... ಜನರು ... ತಮ್ಮ ... ಧರ್ಮಗಳನ್ನು ತಪ್ಪ ... ದೆ ಪಾಲಿಸುತ್ತಿದ್ದರು. ನಂತರ ತ್ರೇತಾ, ದ್ವಾಪರ, ಕಲಿಯುಗ ... ಗಳಲ್ಲಿ ... ವು ಕುಗ್ಗುತ್ತಾ ಬಂದದ್ದರಿಂದ ಧರ್ಮವು ... ನಿಲ್ಲದಂತಾಗುತ್ತಾ ಬಂದು ಕಡೆಗೆ ಈ ಕಲಿಯುಗದ ... ಧರ್ಮವು ... ಇರುವುದರಿಂದ ... ಈ ... ಗೆ ... ಬಂದಿರುವುದೆಂದು ಗೊತ್ತಾಗುವುದು.

... ಬ್ರಿಟಿಷರು ಮೊತ್ತ ಮೊದಲು ಹಿಂದೂದೇಶದಲ್ಲಿ ... ಕ್ರಮೇಣ ಒಂದು ದೊಡ್ಡ ಸಾ ... ಮ್ರಾಜ್ಯವನ್ನೇ ಸ್ಥಾಪಿಸಿದ ವಿಷಯ ಎಲ್ಲರಿಗೂ ವಿದಿತವಾಗಿ ... ರುವುದು. ಇದಕ್ಕೆ ... ಕಾರಣವೆಂದನ್ನಬೇಕು. ಕ್ರಿ. ಶ. 1858 ರಿಂದ ಈಚೆಗೆ ... ಎಲ್ಲಾ ... ಅಧಿಕಾರಗಳನ್ನು ... ದ್ದರ ಫಲವಾಗಿ ಭಾರತೀಯರು ... ಅವರ ... ಈಗ ಉದ್ಯೋಗವು ದೊರಕುವುದೂ ... ಪ್ರಥಮದಲ್ಲಿ ಈ ದೇಶ ... ದಿಂದ ... ಮಟ್ಟಿಗೆ ದ್ರವ್ಯವನ್ನು ... ಬೇಕೆಂಬುದೇ ... (East India Company) ಮು ... ಖ್ಯೋದ್ದೇಶವಾಗಿತ್ತು. ಕಂದಾಯವನ್ನು ಹಣದ ರೂಪ ... ದಲ್ಲಿ ಕಟ್ಟಬೇಕೆಂದು ನಿಷ್ಕರ್ಷೆಯಾಯಿತು. ಮತ್ತು ಕೃಷಿಕನ ... ಉತ್ಪತ್ತಿಗೆ ತಕ್ಕಂತೆ ... 'ಖಾ ... ಯ ಪದ್ಧತಿ' (Permanent Settlement) ... ಕಂದಾಯದ ವಸೂಲಿಗೆ ... (Landlords or Zamindars) ... ಈ ... ಗಳನ್ನು ... ಇವರಿಗೆ ... ಮೀನ್‌ದಾರರೆನ್ನುವರು. ಇವರು ಸರಕಾರಕ್ಕೂ (State) ರೈತರಿಗೂ ಮಧ್ಯದಲ್ಲಿದ್ದು (Middlemen, rent collectors) ರೈತರಿಂದ ಕಂದಾಯವನ್ನು ಎತ್ತಿ ಸರಕಾರಕ್ಕೆ ಸಲ್ಲಿಸುತ್ತಿದ್ದರು. ... ದ್ರವ್ಯ ಲಾಭವನ್ನೇ ಮೂಲವಾಗಿಟ್ಟುಕೊಂಡ ಕಂಪೆನಿಯವರು ತಮ್ಮ ಅಧಿಕಾರಿಗಳಿಗೆ (Landlords) ಹೆಚ್ಚಿನ ಹಣ ವಸೂಲಿಸಲು ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ಮೊದಲೇ ಒಂದು ಕಡೆ ಪಾಳೆಯಗಾರರೂ, ಇನ್ನೊಂದು ಕಡೆ ಮಹಮ್ಮದೀಯರೂ, ಮತ್ತೊಂದು ಕಡೆ ಪಿಂಡಾರಿಯವರೂ ಹಳ್ಳಿಗಳನ್ನು ಕೊಳ್ಳೆ ಹೊಡೆದು ಹಳ್ಳಿಯವರನ್ನು ತೀರಾ ಹಣ್ಣುಮಾಡಿದ್ದರಿಂದ ಅವರ ಬಲವೂ, ಸ್ವಾತಂತ್ರ್ಯವೂ ಕುಗ್ಗಿಹೋಗಿತ್ತು. ಅದರ ನಂತರ ಸರಕಾರದಿಂದ ಹೊಸತಾಗಿ ನಿಯಮಿಸಲ್ಪಟ್ಟ ಜಮೀನುದಾರರು ಬಲಾತ್ಕಾರದಿಂದ ಹೆಚ್ಚಿನ ಕಂದಾಯವನ್ನು ವಸೂಲು ಮಾಡಲು ತೊಡಗಿದ ಮೇಲೆ ಗ್ರಾಮದ ಸಂಪೂರ್ಣ ನಾಶಕ್ಕೆ ಕಾರಣರಾದರು. ಇದಲ್ಲದೆ "ರೈಲ್ವೆ, ಟೆಲಿಗ್ರಾಂ ಮುಂತಾದುವುಗಳ ನಿರ್ಮಾಣವೂ, ಪಾಶ್ಚಿಮಾತ್ಯಾನುಕರಣದ ಹೈಸ್ಕೂಲು, ಕಾಲೇಜು, ಮೊದಲಾದ ಆಂಗ್ಲ ವಿದ್ಯಾಲಯಗಳ ಸ್ಥಾಪನೆಯೂ, ವ್ಯಕ್ತಿ ಸ್ವಾತಂತ್ರ್ಯಾನುಕರಣ ... ವೂ ಬೇರೆ ಕಾರಣಗಳಾದವು. ಮೊದ ಮೊದಲು ಕಂಪೆನಿಯ (East India Company) ನೌಕರರನ್ನು ... ದಿಂದ ... ನಮ್ಮ ನಾಡಿನ ಹಳ್ಳಿಗಳ ಜನರ ... ಸಂಪತ್ತಿನ ... ಇಂದು ಜಾತೀಯ ಪ್ರದೇಶ ... ಸಿಕ್ಕಿ ನರಳುವ ಕಾಲವು" ಬಂದಿತು.

... ಅನಂತರ ಕಂಪೆನಿಯವರು ಇಂಗ್ಲೆಂಡಿನಲ್ಲಿ ರೂಢಿಯಲ್ಲಿ ... ಪದ್ಧತಿಯನ್ನು (English System of landlordism) ... ಇದರಿಂದ ರೈತರು ... ಸರಕಾರಕ್ಕೆ (State) ಕಂದಾಯವನ್ನು ಕಟ್ಟುವಂತೆ ನಿ ... (Thus the state became the land lord while the cultivators, the tenants of the state) ಗ್ರಾಮದ ಸ್ವಾತಂತ್ರ್ಯವು ಗತಪ್ರಾಯವಾಯಿತು. ಗ್ರಾಮದ ಆಡಳಿತವು ಗ್ರಾಮದವರ ಕೈಬಿಟ್ಟು ಸರ ... ಕಾರದ ವಶವಾಯಿತು. ಮೊದಲಿನ ಪಟೇಲ ಶಾನಭೋಗರು ಸರಕಾರದವರ ಅಧೀನರಾದ ಮೇಲೆ ಅವರಿಗೆ ಗ್ರಾಮದ ಮೇಲಿನ ಅಭಿಮಾನವೂ, ವಿಶ್ವಾಸವೂ ಕಡಿಮೆಯಾದುವು. ಇದಲ್ಲದೆ ವಂಶಾನುಕ್ರಮವಾಗಿ ಬಂದ ಕಸಬಿನವರಾದ ... ಮುಂತಾದವರಿಗೆ ತಮ್ಮ ತಮ್ಮ ಕಸಬುಗಳನ್ನು ... ಇಲ್ಲದಾಗಲು ಜೀವನದ ಸಲುವಾಗಿ ಕೂಲಿ ಕೆಲಸಕ್ಕೆ ಹೋಗಬೇಕಾಯಿತು. ನಾಗರೀಕತೆಯ ಹೊಸ ಸಾಧನಗಳು ಹಳ್ಳಿಯ ಜನರನ್ನು ಸಾಮಾನ್ಯ ಜೀವನದಲ್ಲಿರಿಸಲು ... ಗುರಿಮಾಡಿದುವು. ... ಮನೆಗಳನ್ನು ಹುಲ್ಲು ಸೊಪ್ಪುಗಳಿಂದ ಕಟ್ಟುವುದನ್ನು ಬಿಟ್ಟು ... ಅನುಸರಿಸಬೇಕಾಗಿ ಬಂತು.

ನಮ್ಮ ಗ್ರಾಮಗಳ ಸ್ಥಿತಿಯು ಕಳೆದ 150 ವರ್ಷಗಳಿಂದ ... ಪಾಶ್ಚಾತ್ಯರ ಆಳ್ವಿಕೆಯಿಂದುಂಟಾದ ಪರಿಣಾಮದಿಂದ ತಿಳಿದು ಬರುವುದು. ಕಂದಾಯದ ವಸೂಲಾತಿ ... ರೈತರ ಕಷ್ಟ ಸುಖಗಳನ್ನು ನೋಡದೆ ನಡೆಯುತ್ತಿರುವುದು. ಬಹು ರೈತರು ಸಾಲ ಸೋಲದಲ್ಲಿ ಮುಳುಗಿರುವರು ಇದನ್ನು ಎಲ್ಲರೂ ಕಾಣುವ ವಿಷಯವಾಗಿದೆ. ಕೆಲಸಗಾರರು ಹೊಟ್ಟೆ ... ಗೆ ಸ್ವಲ್ಪ ಸಂಬಳಕ್ಕಾದರೂ ದುಡಿಯಲು ಸಿದ್ಧರಿರುವರು. ... ಹೊಟ್ಟೆ ಬಟ್ಟೆ ಇಲ್ಲದಿದ್ದರೆ ದವಸ ಧಾನ್ಯಗಳಿಗೆ ಧಾರಣೆ ಇಳಿದಿರುವುದರಿಂದ ಕೊಡುವ ಸ್ವಲ್ಪ ಕಂದಾಯವಾದರೂ ಈಗಿನ ಮಟ್ಟಿಗೆ ದೊಡ್ಡ ಪರ್ವತದಂತಿರುವುದು. ಆಶ್ಚರ್ಯವಿಲ್ಲ. ಅನೇಕ ರೈತರಿಗೆ ಕಂದಾಯ ಕಟ್ಟಿದ ಮೇಲೆ ... ತಮ್ಮ ಜೀವನ ಯಾತ್ರೆಯು ಒಂದು ... ಮುಂದಕ್ಕೆ ಸಾಗದಿರಲು ... ಎಂದು ... ಬಿಡುವ ಕಾಲವು ಒದಗಿರುವುದು ನಿರುದ್ಯೋಗದ ... ರೈತನು ... (Inefficient) ... ಭಾವ. ಹೀಗಾಗಿ ಅವನು ಅಧೋಗತಿಗಿಳಿದಿರುವನು.

ಇವೆಲ್ಲಾ ಅನರ್ಥಗಳಿಗೆ ಕಾರಣವೇನು? ಇದನ್ನು ವಿಚಾರಿಸಲು ಅನೇಕ ಪಾಶ್ಚಾತ್ಯರನ್ನು ... ಮನಸ್ಸಿಗೆ ಯಾವ ನಿವಾರಣೆಯೂ ಹೊಳೆಯುವಂತಿಲ್ಲ. ಮಳೆಯ ಅಭಾವ (Failure of monsoons) ಮತ್ತು ದಿನೇ ದಿನೇ ವೃದ್ಧಿಯಾಗುತ್ತಿರುವ ಜನಸಂಖ್ಯೆ (Rapid growth of Population) ಯೇ ಕಾರಣಗಳಾಗಿರಬಹುದೆ? ಜನಸಂಖ್ಯೆಗೆ ಸರಿಯಾಗಿ ಭೂಮಿಯ ಉತ್ಪತ್ತಿಯು ಇಲ್ಲವು. ಕೆಲವು ಕಡೆ ಮನುಷ್ಯನು ಸೃಷ್ಟಿ ದೇವತೆಯ ಆಗ್ರಹಕ್ಕೆ ಪಾತ್ರನಾಗಿರುವನು. ಬೇರೆಡೆಗಳಲ್ಲಿ ಮಾನವನು ಸೃಷ್ಟಿದೇವತೆಗೂ ಇದಿರಾಗಿ ತನ್ನ ಪ್ರಯತ್ನಗಳನ್ನು ಮಧ್ಯಕ್ಕೆ ನಿಲ್ಲಿಸದೆ, ಧೈರ್ಯನಾಗಿ ಸ್ವಲ್ಪ ಮಟ್ಟಿಗೆ ತನ್ನ ಕರ್ತವ್ಯದಲ್ಲಿ ಕೃತಕೃತ್ಯನಾಗಿರುವನು. ಅಮೇರಿಕಾ ದೇಶವು ಒಮ್ಮೆ ಮರುಭೂಮಿಯಾಗಿದ್ದ ಸ್ಥಳದಲ್ಲಿ ಈಗ ವಿಶೇಷವಾಗಿ ಬೆಳೆಯನ್ನು ಬೆಳೆಯುವುದಾದರೆ (bumper crops) ಹಿಂದೂ ದೇಶವು ಒಂದು ವರ್ಷದ ಮಳೆಯ ಅಭಾವವಾದರೂ ಏನೂ ಬೆಳೆಯದಿರಲು ಕಾರಣವೇನು? ಭಾರತ ಭೂಮಾತೆಯು ಅಷ್ಟೊಂದು ... ಹೀನಳಾದಳೇ? ರೈತರು ... ? ಸಾಕಷ್ಟು ಮಳೆ ಇರುವಾಗಲೂ ರೈತನಿಗೆ ಜೀವನ ನಡೆಸುವುದು ಕಷ್ಟವಾಗಿರುವುದು. ಒಟ್ಟಿಗೆ ಹಿಂದೂ ದೇಶದ ರೈತನು 5 ವರ್ಷ ... ಕಾಲಕ್ಕೆ ಸರಿಯಾಗಿ ಮಳೆ ಬಂದು ಆರನೇ ವರ್ಷ ಮಳೆಯ ಅಭಾವವಾದರೆ ಆ ವರ್ಷದಲ್ಲಿ ತನ್ನ ಜೀವನವನ್ನು ಸುಖವಾಗಿ ಸಾಧಿಸಬಾರದಷ್ಟರ ... ಬಡತನಕ್ಕೆ ಇಳಿದಿರುವನು. ಬರೇ ಹಿಂದೂಸ್ಥಾನವನ್ನೇ ತೆಗೆದುಕೊಂಡರೆ ಇಲ್ಲಿ ಮಳೆಯ ಅಭಾವವು 4—5 ವರ್ಷಗಳಿಗೆ ಒಂದಾವರ್ತಿ ಆಗುವುದೆಂದು ತಿಳಿಯುತ್ತೆ. ಅರ್ಥಾತ್ 4 ವರ್ಷಗಳು ಮಳೆ ಬಂದರೂ ರೈತನಿಗೆ ಮುಂದಿನ ವರ್ಷದ ಕೆಲವು ತಿಂಗಳಿನ ಮಟ್ಟಿಗೆ ... ಅನುಭವಿಸಬೇಕಾಗುವ ಕಷ್ಟದಿಂದ ಪಾರಾಗಲು ಸಾಕಷ್ಟು ಧೈರ್ಯವಿಲ್ಲವೆಂದಾಯಿತು. ಸರ್ಕಾರದಿಂದ ನೇಮಿಸಲ್ಪಟ್ಟ ಅಗ್ರಿಕಲ್ಚರಲ್, ಕೆಮಿಕಲ್ ಮತ್ತು ಮಿಟಿಯೊರೊಲಾಜಿಕಲ್ (Meteorogical) ಸಂಘಗಳು ಅನೇಕವಿದ್ದರೂ ಮಳೆಯ ಅಭಾವಕ್ಕೆ ಕಾರಣವನ್ನು ಕಂಡು ಹಿಡಿಯಲು ಆಗಲಿಲ್ಲ. ಅದಕ್ಕಾಗಿ ತಕ್ಕ ಪ್ರಯತ್ನಗಳೂ ನಡೆದಿಲ್ಲ. ಆದರೆ ಹಿಂದೂದೇಶದಲ್ಲಿ ದೊಡ್ಡ ದೊಡ್ಡ ನದಿಗಳಿರುವುದರಿಂದ ಬಹು ದೊಡ್ಡ ಉಪಕಾರವಾದಂತಾಗಿದೆ. ಅವುಗಳಿಂದ ಅನೇಕ ಕಾಲುವೆಗಳೂ ರೈತರ ಉಪಯೋಗಕ್ಕೆ ಮಾಡಲ್ಪಟ್ಟಿವೆ. ರೈತರು ಅಷ್ಟೊಂದು ವಿದ್ಯಾವಂತರಲ್ಲವೆಂಬುವುದೇ ಒಂದು ದೊಡ್ಡ ಕೊರತೆ. ಇದರಿಂದ ಕೃಷಿಯಲ್ಲಿ ಉತ್ಕೃಷ್ಟತರದ ಬೆಳವಣಿಗೆಯನ್ನು ಅವರು ಅರಿತಿಲ್ಲ. ತಮ್ಮ ಭೂಮಿಯನ್ನು ಮುಂದಕ್ಕೆ ತರಲು ಹಣದ ಅಡಚಣೆಯು ತುಂಬಾ ಇರುವುದರಿಂದ ಈ ಬಗ್ಗೆ ಸರ್ಕಾರದಿಂದ ಯಾವ ಹಣ ಸಹಾಯವೂ ದೊರೆಯುವಂತಿಲ್ಲ. ಅಗ್ರಿಕಲ್ಚರಲ್ ಲೋನ್ಸ್ ಆಕ್ಟ್ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟ್ (Agricultural Loans act and Land Improvements Act) ಗಳಿಂದ ಹೆಚ್ಚಿನ ಮಟ್ಟಿಗೆ ಯಾವ ಪ್ರಯೋಜನವೂ ರೈತನಿಗೆ ದೊರೆತಿಲ್ಲವೆಂದು ಅದರ ವಿಷಯವನ್ನು ಶೋಧಿಸಲು ಏರ್ಪಾಡಾದ ಕಮಿಟಿಯ (Royal Commission on Agriculture) ವರದಿಯಿಂದ ತಿಳಿಯುವುದು.

ಜನ ಸಂಖ್ಯೆಯನ್ನು ತೆಗೆದುಕೊಂಡರೆ ಹಿಂದೂದೇಶದಲ್ಲಿ ಇತರ ದೇಶಗಳಲ್ಲಿನ ಜನ ಸಂಖ್ಯೆಯಷ್ಟು ದಿನೇ ದಿನೇ ವೃದ್ಧಿಯಾಗುವುದಿಲ್ಲ. ಹಾಗಾದರೆ ಆ ದೇಶಗಳಲ್ಲಿನ ಜನರು ತಮ್ಮ ಜೀವನಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಳ್ಳಲು ಶಕ್ತರಾದರೆ ನಮ್ಮ ರೈತರು ಏಕೆ ಅಶಕ್ತತೆಯನ್ನು ತೋರಿಸುವರು? ಕ್ರಿ. ಶ. 1880ರಲ್ಲಿ ದೇಶದ ಕ್ಷಾಮದ ನಿವಾರಣೋಪಾಯಕ್ಕೆ ಒಂದು ಕಮಿಟಿಯು ಏರ್ಪಾಡಾಯಿತು. ಆ ಕಮಿಟಿಯ (Famine Commission) ವರದಿಯು—'ಹಿಂದೂದೇಶದ ದುಃಸ್ಥಿತಿಗೆ ಕೃಷಿಯೇ ಕಾರಣ ನೂರಕ್ಕೆ 75 ರಂತೆ ಕೃಷಿಗಾರರೇ ಇದ್ದು ಇತರ ಕೈಗಾರಿಕೆ (Industries) ಗಳು ಬಹಳ ಕಮ್ಮಿ. ಕೃಷಿಯು ಯಾವಾಗಲೂ ಮಳೆಯನ್ನೇ ಹೊಂದಿಕೊಂಡಿರುವುದು. ಮಳೆಯ ಅಭಾವವಾದರೆ ರೈತರಲ್ಲಿ ನಿರುದ್ಯೋಗವು ಸಂಭವಿಸುವುದಲ್ಲದೆ ಆಹಾರ ಸಿಕ್ಕುವುದಕ್ಕೂ ಕಷ್ಟವಾಗುವುದು. ಆದ್ದರಿಂದ ದೇಶದಲ್ಲಿ ಕೃಷಿಯಲ್ಲದೆ ಬೇರೆ ಕೈಗಾರಿಕೆ (Industries)ಗಳನ್ನೂ, ಕಸಬುಗಳನ್ನೂ ಹೆಚ್ಚಿಸಿದರೆ ಸ್ವಲ್ಪ ಮಟ್ಟಿಗೆ ಇದರ ನಿವಾರಣೆಯೂ ದೊರಕು' ಎಂದಾಗಿತ್ತು.

ಗ್ರಾಮಗಳ ಸ್ವಸ್ವರೂಪದ ಜ್ಞಾನವಾಯಿತಷ್ಟೆ. ಇನ್ನು ಅವುಗಳ ಪುನರ್ಜೀವನ ಕರ್ತವ್ಯ ಮಾತ್ರ ಉಳಿದಿರುವುದು. ಈ ಕೆಲಸವು ಕೇವಲ ಸ್ವಾರ್ಥತೆಯಲ್ಲಿ ದೃಷ್ಟಿ ಇಟ್ಟು ಗ್ರಾಮೋದ್ಧಾರಕರೆಂದು ಕರೆಯಲ್ಪಡುವವರ ಬಾಹ್ಯಾಡಂಬರದಿಂದ ಬೇಕೆಯೂ ಬೇಯಲಾರದು. ಬಾಯಿಯಿಂದ ಆಗದ ಕೆಲಸವಿದು. ಕೈಯಲ್ಲಿಯೇ ಮಾಡಿ ತೋರಿಸಬೇಕು. ಅಂತ್ಯಜೋದ್ಧಾರಕರು ಅಸ್ಪೃಶ್ಯರ (Depressed classes) ಸಲುವಾಗಿ ತಾವು ಬಡವರಾಗುವುದರಲ್ಲಿಯೂ, ಕಷ್ಟ ಪಡುವುದರಲ್ಲಿಯೂ ಅವರ ಉದ್ಧಾರದ ಬೀಜವಿರುವುದಲ್ಲದೆ ಅವರನ್ನು ಬರೇ ಮುಟ್ಟಿ ಒಳಗೆ ಬಿಡುವುದರಲ್ಲಿ, ಅವರೊಡನೆ ಊಟ ಮಾಡುವುದರಲ್ಲಿ ... ಶಕ್ತಿಗಳನ್ನು ಮುಟ್ಟಿಸಿ ... ಭಾವನೆಯ ... ಏನೂ ಅರ್ಥವಿಲ್ಲ. ಅವರಂತೆಯೇ ಗ್ರಾಮೋದ್ಧಾರಕರೂ ಆಗಬೇಕು.

ESANOFELE FOR MALARIA

ಮಲೇರಿಯ

ಜ್ವರದಿಂದ ನೀವು ನರಳುತ್ತಿದ್ದೀರೋ? ಹಾಗಾದರೆ

ಎಸನೊಫೀಲ್

ಎಂಬ ಔಷಧಿಯನ್ನು ಬೇಗನೆ ತೆಗೆದುಕೊಳ್ಳಿ.

ಈ ಕಾಲದಲ್ಲಿ ಜಗತ್ಪ್ರಸಿದ್ಧವಾದ ಮತ್ತು ಸರಿಸಮಾನವಿಲ್ಲದ ಗುಣಗಂಡ ಔಷಧಿ ಇದೊಂದೇ. ಇದರ ಸತ್ಯವು ಅತ್ಯುತ್ಕರ್ಷವಾದದ್ದು. ಇದರ ಗುಣವು ಶಾಶ್ವತವಾದದ್ದು. ಒಮ್ಮೆ ಉಪಯೋಗಿಸಿ ಮತ್ತು ನಿಮ್ಮನ್ನು ಮಲೇರಿಯವು ಮುಟ್ಟದಂತಾಗುವುದು. ಎಲ್ಲಾ 'ಕೆಮಿಸ್ಟ್‌'ರಲ್ಲಿ ದೊರೆಯುವುದು.

Sole Agents:—

GORIO LTD.
P. O. Box 159,
Fort, Bombay.

26—1

ಕೋಮುವಾರು ಸಮಸ್ಯೆ.

(೭ನೇ ಪುಟದಿಂದ ಮುಂದುವರಿದದ್ದು.)

ನಾನು ಹಿಂದೂಗಳಿಂದ ಪ್ರಾರಂಭಿಸುತ್ತೇನೆ. ನಾವು ಒಂದು ದೊಡ್ಡ ಬಹುಮತವಾಗಿದ್ದೇವೆ. ಮುಸಲ್ಮಾನ್ ಮತ್ತು ಸಿಖ್ಖ ರಾಕ್ಷಸರ ಮುಂದೆ ನಾವು ಶರೀರದಲ್ಲಿ ಗುಜ್ಜಾರಿಗಳೆಂದು ಭಾವಿಸುವದಾದರೆ ನ್ಯಾಯವಿಧಾಯಕ ಸಭೆಗಳ ಮೂಲಕ ನಾವೆಂದಿಗೂ ಬೆಳೆಯಲಾರೆವು. ನಾವು ಹೆದರಿಕೆಯನ್ನು ಹೋಗಲಾಡಿಸಿ ಬೆಳೆಯುವೆವಲ್ಲದೆ ನಮ್ಮ ಅವಯವಗಳನ್ನು ಪ್ರಯೋಗ ಪಡಿಸುವುದರಿಂದಲ್ಲ. ಧೈರ್ಯವು ಎಂದೂ ಸ್ನಾಯುಗಳದ್ದಲ್ಲ, ಅದು ಹೃದಯದ್ದು. ಬಹು ಗಟ್ಟಿಯಾದ ಸ್ನಾಯುವೂ ಕೂಡ ಭಾವನೆಯು ಹೆದರಿಕೆ ಮುಂದೆ ನಡುಗುವುದು. ಸ್ನಾಯುವನ್ನು ನಡಗುವಂತೆ ಮಾಡಿದ್ದು ಹೃದಯವು. ನಾವು ಧೈರ್ಯವನ್ನು ತಾಳಿ ಮುಸಲ್ಮಾನರು ಮತ್ತು ಸಿಖ್ಖರು ಕೇಳುವುದಕ್ಕೆ ಸಮ್ಮತಿಸುವ. ಅಹಿಂಸಾ ಯೂ ಇನ್ನೊಂದು ಜನರಿನ ಪ್ರೀತಿಯ ತಕ್ಕಡಿಯಲ್ಲಿ ತೂಗಿದರೆ ಇದು ನ್ಯಾಯವಾಗಿದೆ. ಈ ವ್ಯವಸ್ಥೆಯು ನಾವು ಹಿಂದೂಗಳ ಕಣ್ಣನ್ನು ತೆರೆಯುವಂತೆ ಮಾಡಿದರೆ ರಾಷ್ಟ್ರೀಯ ಪಕ್ಷಕ್ಕೆ ಸೇರದ ಸಿಖ್ಖರು ಮತ್ತು ಮುಸಲ್ಮಾನರು ಅದನ್ನು ತಿರಸ್ಕರಿಸಿದರೂ ಕೂಡ ಅದು ಒಳ್ಳೆಯದೆ

ನಾವು ಈ ವ್ಯವಸ್ಥೆಯನ್ನು ಗೊಣಗುಟ್ಟದೆ ಒಪ್ಪಿಕೊಂಡರೆ ಎಲ್ಲಾ ಸಿಖ್ಖರಿಗೂ ಮತ್ತು ಎಲ್ಲಾ ಮುಸಲ್ಮಾನರಿಗೂ ಸಮ್ಮತವಾಗುವಂಥ ಬೇರೆ ಯಾವ ವ್ಯವಸ್ಥೆಯನ್ನಾದರೂ ಒಪ್ಪಿಕೊಳ್ಳಲು ತಯಾರಿರಬೇಕು. ಆದರೆ ಮುಂದಾಗಿ ಬೇರೆ ಯಾವದಾದರೊಂದು ವ್ಯವಸ್ಥೆಗೆ ಒಪ್ಪುವೆನೆಂದು ಭಾಷೆ ಕೊಟ್ಟು ಈ ವ್ಯವಸ್ಥೆಯಿಂದ ನಮ್ಮನ್ನು ನಾನು ಬಿಡಿಸಲಿ ಇರಲಿ. ನನ್ನ ಸ್ವಂತದ ಮಟ್ಟಿಗೆ ನಾನು ತೀರ್ಮಾನಿಸಿದ್ದೇನೆ ಮತ್ತು ಅನೇಕ ಸಾರಿ ಅದನ್ನು ಹೇಳಿಯೂ ಇದ್ದೇನೆ. ಆದರೆ ಈ ವ್ಯವಸ್ಥೆಯು ವರ್ಕಿಂಗ್ ಕಮಿಟಿಯ ಬೇರೆ ಹಿಂದೂ ಮೆಂಬರುಗಳಲ್ಲದೆ ಪಂಡಿತ ಮದನ ಮೋಹನ ಮಾಳವೀಯರ ಮತ್ತು ಶ್ರೀಯುತ ಮಾಧವರಾವ್ ಅಣೆಯವರ ಆಶೀರ್ವಾದವನ್ನು ಪಡೆದಿರುವವರಿಂದ ಇದನ್ನು ಒಪ್ಪಿಕೊಳ್ಳಿರಿ ಎಂದು ನಾನು ಹಿಂದೂಗಳಿಗೆ ಹೇಳುವುದಾಗಿದೆ.

'ಯಂಗ್ ಇಂಡಿಯಾ'

ಕಾಂಗ್ರೆಸ್ಸೂ, ಕೋಮುವಾರು ಸಮಸ್ಯೆಯೂ.

ವರ್ಕಿಂಗ್ ಕಮಿಟಿಯ ಠರಾವು.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಈ ತಿಂಗಳ 7 ರಿಂದ 12ರ ವರೆಗೆ ಬೊಂಬಾಯಿಯಲ್ಲಿ ನಡೆದ ತಮ್ಮ ಮೀಟಿಂಗಿನಲ್ಲಿ ಕೋಮುವಾರು ಸಮಸ್ಯೆಯನ್ನು ಕುರಿತು ಈ ಕೆಳಗಿನ ಠರಾವನ್ನು ಪಾಸು ಮಾಡಿರುವರು

'ತನ್ನ ಉದ್ದೇಶವನ್ನು ಸಾಧಿಸುವುದರಲ್ಲಿ' ಎಷ್ಟು ಅಪಜಯ ಹೊಂದಿದ್ದರೂ ಕೂಡ ಕಾಂಗ್ರೆಸು ಪ್ರಾರಂಭದಿಂದಲೇ ಕೋಮುವಾರು ಅಡಚಣೆಗಳನ್ನು ಮುರಿಯಲಿಕ್ಕಾಗಿ ಸ್ವಚ್ಛವಾದ ರಾಷ್ಟ್ರೀಯತ್ವವನ್ನೇ ತನ್ನ ಗುರಿಯಾಗಿ ಇಟ್ಟುಕೊಂಡಿದೆ. ರಾಷ್ಟ್ರೀಯತ್ವದ ಕಡೆಗೆ ಹೋಗುವ ದಾರಿಯ ತುದಿಯೇ ಈ ಕೆಳಗಿನ ಲಾಹೋರ್ ಠರಾವಾಗಿತ್ತು.

"ಸ್ವತಂತ್ರ ಹಿಂದೂಸ್ಥಾನದಲ್ಲಿ ಕೋಮುವಾರು ಪ್ರಶ್ನೆಗಳು ರಾಷ್ಟ್ರೀಯತ್ವದ ದೃಷ್ಟಿಯಿಂದಲೇ ತೀರ್ಮಾನಿಸಲ್ಪಡುವವೆಂದು ಕಾಂಗ್ರೆಸ್ ನಂಬುವದರಿಂದ ನೆಹರು ವರದಿಯು ರದ್ದಾಗಿರುವ ಕಾರಣ ಕೋಮುವಾರು ಸಮಸ್ಯೆಯನ್ನು ಕುರಿತು ಕಾಂಗ್ರೆಸಿನ ತತ್ವವನ್ನು ಪ್ರಕಟಿಸುವುದು ಅನಾವಶ್ಯವಾಗಿದೆ. ಆದರೆ ಮುಖ್ಯವಾಗಿ ಸಿಖ್ಖರು ಮತ್ತು ಸಾಧಾರಣವಾಗಿ ಮುಸಲ್ಮಾನರು ಮತ್ತು ಬೇರೆ ಕಡಿಮೆ ಸಂಖ್ಯೆಯ ಕೋಮಿನವರು ನೆಹರು ವರದಿಯಲ್ಲಿ ಸೂಚಿಸಿದ್ದ ಕೋಮುವಾರು ಸಮಸ್ಯೆಯ ತೀರ್ಮಾನದ ವಿಷಯದಲ್ಲಿ ಅತೃಪ್ತಿಯನ್ನು ವ್ಯಕ್ತಪಡಿಸಿದ್ದ ಕಾರಣ ಮುಂದಿನ ಯಾವ ರಾಜಕೀಯ ರಚನೆಯಲ್ಲಾದರೂ ಸಂಬಂಧಪಟ್ಟ ಪಂಗಡಗಳಿಗೆ ಪೂರ್ಣ ತೃಪ್ತಿಕರವಲ್ಲದ ತೀರ್ಮಾನವು ಕಾಂಗ್ರೆಸಿಗೆ ಒಪ್ಪಿಗೆಯಾಗಲಿಕ್ಕಿಲ್ಲವೆಂದು ಈ ಕಾಂಗ್ರೆಸು ಸಿಖ್ಖರು, ಮುಸಲ್ಮಾನರು ಮತ್ತು ಬೇರೆ ಕಮ್ಮಿ ಜನ ಸಂಖ್ಯೆಯ ಪಂಗಡಗಳಿಗೆ ಭರವಸೆ ಕೊಡುತ್ತದೆ."

ಆದುದರಿಂದ ಕೋಮುವಾರು ಸಮಸ್ಯೆಯನ್ನು ಕೋಮುವಾರು ದೃಷ್ಟಿಯಿಂದ ಬಗೆಹರಿಸುವದರಲ್ಲಿ ಕಾಂಗ್ರೆಸ್ಸು ಅಡ್ಡಗಟ್ಟಲ್ಪಟ್ಟಿರುವುದು. ಆದರೆ ರಾಷ್ಟ್ರದ ಚರಿತ್ರೆಯ ಈ ಬಿಕ್ಕಟ್ಟಿನ ಸಮಯದಲ್ಲಿ, ಕೋಲಕೆಗೆ ಕೋಮುವಾರಾಗಿದ್ದರೂ ಸಾಧ್ಯವಾದಷ್ಟು ರಾಷ್ಟ್ರೀಯತ್ವವನ್ನನುಸರಿಸಿ ಸಂಬಂಧಪಟ್ಟ ಕೋಮುಗಳಿಗೆ ಒಪ್ಪಿಗೆಯಾಗುವಂಥ ಸೂಚನೆಯನ್ನು ದೇಶದವರ ಮುಂದೆ ವರ್ಕಿಂಗ್ ಕಮಿಟಿಯವರು ಇಡಬೇಕೆಂದು ತೋರಿದೆ. ಆದುದರಿಂದ ವರ್ಕಿಂಗ್ ಕಮಿಟಿಯವರು ಸಂಪೂರ್ಣವಾದ ಮತ್ತು ಸರಾಗವಾದ ಚರ್ಚೆಯನ್ನು ನಡಿಸಿ ಈ ಕೆಳಗಿನ ಠರಾವನ್ನು ಸರ್ವ ಸಮ್ಮತದಿಂದ ಪಾಸು ಮಾಡಿದರು.

೧. (ಎ) ಮೂಲಭೂತವಾದ ಹಕ್ಕುಗಳಲ್ಲಿ ಪ್ರತಿಯೊಂದು ಪಂಗಡದವರಿಗೂ ಅವರವರ ಸಂಸ್ಕೃತಿ, ಭಾಷೆ, ಲಿಪಿ, ಶಿಕ್ಷಣ, ವೃತ್ತಿ, ಮತಾಚಾರ, ಮತ್ತು ಧರ್ಮದಾಯಗಳು ಇವುಗಳನ್ನೆಲ್ಲ ಸಂರಕ್ಷಿಸಲಾಗುವದೆಂದು ಭರವಸೆ ಕೊಡಲಾಗುತ್ತದೆ.

(ಬಿ) ವ್ಯಕ್ತಿ ಸಂಬಂಧವಾದ ಶಾಸನಗಳನ್ನೆಲ್ಲ ಪಾಲಿಸಲು ವ್ಯವಸ್ಥೆಯಲ್ಲಿ ಉಚಿತ ನಿಯಮ ಮಾಡಲಾಗುತ್ತದೆ.

(ಸಿ) ಪ್ರತಿ ಪ್ರಾಂತ್ಯದ ಅಲ್ಪ ಸಂಖ್ಯಾತ ಕೋಮಿನವರ ಹಕ್ಕುಗಳ ವಿಚಾರವೆಲ್ಲ ಫೆಡರಲ್ ಸರ್ಕಾರಕ್ಕೆ ಒಳಪಡುತ್ತದೆ.

೨. ಪ್ರಾಪ್ತ ವಯಸ್ಕರಾದ ಹೆಂಗಸು ಗಂಡಸರೆಲ್ಲರಿಗೂ ಓಟಿನ ಅಧಿಕಾರವುಂಟು.

(ಸೂಚನೆ—ಕರಾಚಿ ಠರಾವು ಮೇರೆ ವರ್ಕಿಂಗ್ ಕಮಿಟಿಯವರು ವಯಸ್ಕರಾದವರಿಗೆ ಓಟಿನ ಹಕ್ಕು ಕೊಡುವದು ವಿನಹ ಬೇರೆ ಯಾವ ತರಹದ ಓಟಿನ ಹಕ್ಕನ್ನು ಅಂಗೀಕರಿಸಕೂಡದು. ಆದರೆ ಕೆಲವು ಕಡೆಗಳಲ್ಲಿ ತಪ್ಪು ಹೆದರಿಕೆಗಳು ಉಂಟಾಗಿರುವ ಕಾರಣ, ಹೇಗಾದರೂ ಓಟಿನ ಹಕ್ಕು ಒಂದೇ ಸಮನಾಗಿಯೂ, ಪ್ರತಿಯೊಂದು ಕೋಮಿನ ಜನ ಸಂಖ್ಯೆಗೆ ಸರಿಯಾಗಿ ಓಟರುಗಳ ಸಂಖ್ಯೆ ಇರುವಷ್ಟು ವಿಶಾಲವಾದದ್ದಾಗಿಯೂ ಇರತಕ್ಕದೆಂದು ಕಮಿಟಿಯು ವಿಷದ ಪಡಿಸುತ್ತದೆ.)

೩. (ಎ) ಮುಂದಿನ ರಾಜಕೀಯ ವ್ಯವಸ್ಥೆಯಲ್ಲಿ ಅವಿಭಕ್ತ ಚುನಾವಣೆಯ ತತ್ವವನ್ನೇ ಅನುಸರಿಸತಕ್ಕದ್ದು.

(ಬಿ) ಸಿಂಧಿನ ಹಿಂದೂಗಳಿಗೂ, ಅಸ್ಸಾಮಿನ ಮುಸಲ್ಮಾನರಿಗೂ, ಪಂಜಾಬಿನ ಮತ್ತು ವಾಯುವ್ಯ ಪ್ರಾಂತ್ಯದ ಸಿಖ್ಖರಿಗೂ, ಯಾವ ಪ್ರಾಂತ್ಯದಲ್ಲೇ ಆಗಲೀ ಜನ ಸಂಖ್ಯೆಯಲ್ಲಿ ಶೇಕಡ ೨೫ಕ್ಕೆ ಕಡಿಮೆ ಇರುವ ಹಿಂದೂಗಳಿಗೂ, ಮುಸಲ್ಮಾನರಿಗೂ ಫೆಡರಲ್ ಮತ್ತು ಪ್ರಾಂತೀಕ ಶಾಸನ ಸಭೆಗಳಲ್ಲಿ ಜನ ಸಂಖ್ಯೆಯ ಲೆಕ್ಕದ ಮೇರೆ ಸ್ಥಳಗಳನ್ನು ಕಾಯ್ದಿಡತಕ್ಕದ್ದು. ಇದರ ಮೇಲೆ ಯಾರಾದರೂ ಸ್ಥಾನಕ್ಕೆ ಚುನಾವಣೆಗೂ ನಿಲ್ಲಬಹುದು.

೪. ಯಾವ ಪಕ್ಷಕ್ಕೂ ಸೇರದ 'ಪಬ್ಲಿಕ್ ಸರ್ವಿಸ್' ಕಮಿಷನ್ ನವರಿಗೆ ಎಲ್ಲಾ ಉದ್ಯೋಗಗಳನ್ನು ಕೊಡುವ ಅಧಿಕಾರವಿರತಕ್ಕದ್ದು. ಎಲ್ಲಾ ಕೋಮಿನವರಿಗೂ, ಉಚಿತ ಅವಕಾಶವಿರುವ ಹಾಗೂ, ಆಡಳಿತ ವಿಚಕ್ಷಣೆಗೆ ಬಾಧಕ ಬರದ ಹಾಗೂ ಅವರು ಉದ್ಯೋಗ ನಿಯೋಗ ಮಾಡತಕ್ಕದ್ದು.

೫. ಫೆಡರಲ್ ಮತ್ತು ಪ್ರಾಂತೀಕ ಮಂತ್ರಿ ಮಂಡಲಗಳಲ್ಲಿ ಅಲ್ಪ ಸಂಖ್ಯಾತರನ್ನು ಬಹುದಂತೆ ಅವರಿಗೂ ಉಚಿತ ಸ್ಥಾನ ಸಿಕ್ಕುವಂತೆ ಒಂದು ಪದ್ಧತಿಯನ್ನು ಸ್ಥಾಪಿಸತಕ್ಕದ್ದು.

೬. ವಾಯುವ್ಯ ಪ್ರಾಂತ್ಯ ಮತ್ತು ಬಲೂಚಿಸ್ಥಾನಗಳಲ್ಲೂ ಸಹ ಇತರ ಪ್ರಾಂತ್ಯಗಳಂತೆಯೇ ಸರ್ಕಾರವಿರತಕ್ಕದ್ದು.

೭. ಸಿಂಧಿಗಳು ವೆಚ್ಚವನ್ನೆಲ್ಲ ಹೊರಲು ಸಿದ್ಧರಾಗಿದ್ದರೆ ಪ್ರತ್ಯೇಕ ಪ್ರಾಂತ್ಯ ರಚನೆ ಮಾಡಬಹುದು.

೮. ಭವಿಷ್ಯದ್ಭಾರತದ ರಾಜ್ಯಾಂಗ ಸ್ವರೂಪವು 'ಫೆಡರಲ್' ಆಗಿರತಕ್ಕದ್ದು. ಅನ್ಯತ್ರ ಅಧಿಕಾರವು ಪ್ರಾಂತೀಕ ಸರ್ಕಾರಗಳಲ್ಲಿ ಇರತಕ್ಕದ್ದು. ಮುಂದೆ ಇದು ಭಾರತ ಹಿತಕ್ಕೆ ವಿರೋಧವಾಗಿದೆ ಎಂದು ಕಂಡು ಬಂದರೆ ಆ ಪ್ರಶ್ನೆಯನ್ನು ಪರೀಕ್ಷಿಸತಕ್ಕದ್ದು.

ಪೂರ್ಣ ಕೋಮುವಾರುತ್ವದ ಮತ್ತು ಸ್ವಚ್ಛ ರಾಷ್ಟ್ರೀಯತ್ವದ ಸೂಚನೆಗಳಿಗೆ ಮಧ್ಯಸ್ಥವಾಗಿ ವರ್ಕಿಂಗ್ ಕಮಿಟಿಯವರು ಮೇಲಿನ ವ್ಯವಸ್ಥೆಯನ್ನು ಸೂಚಿಸುವುದಾಗಿದೆ. ಇಡೀ ರಾಷ್ಟ್ರವೇ ಈ ವ್ಯವಸ್ಥೆಯನ್ನು ಒಪ್ಪಿಕೊಳ್ಳುವದೆಂದು ವರ್ಕಿಂಗ್ ಕಮಿಟಿಯು ಹಾರೈಸುವಾಗ್ಯೂ, ಇನ್ನೊಂದು ಕಡೆ, ಸಂಬಂಧ ಪಟ್ಟ ಎಲ್ಲಾ ಪಂಗಡಗಳಿಗೆ ಒಪ್ಪಿಗೆಯಾಗುವಂಥ ಬೇರೆ ಯಾವ ವ್ಯವಸ್ಥೆಗಾದರೂ (ಲಾಹೋರು ಠರಾವಿನ ಮೇರೆ ಒಪ್ಪಲೇ ಬೇಕಾಗಿರುವುದರಿಂದ) ಈ ಕಮಿಟಿಯು ಸಂತೋಷದಿಂದ ಸಂಪೂರ್ಣ ಒಪ್ಪುತ್ತದೆಂದು ಈ ಠರಾವಿಗೆ ಸಮ್ಮತಿಸಲಾರದ ಪೀರಪಕ್ಷದವರಿಗೆ ಭರವಸೆಯನ್ನೀಯುತ್ತದೆ.

ಹಿಂದೂಸ್ಥಾನೀ ಸೇವಾದಲವು ಕಾಂಗ್ರೆಸ್ಸಿನಲ್ಲಿ ಸೇರ್ಪಡೆಯಾಯಿತು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಗೊತ್ತುವಳಿಯು.

(ಮುಂಬಯಿ ೧೧—೭—೧೯೩೧.)

ರಾಷ್ಟ್ರೀಯ ಮಹಾಸಭೆ ಹಾಗೂ ಹಿಂದೂಸ್ಥಾನೀ ಸೇವಾದಲ ಇವುಗಳ ಸಂಬಂಧದ ವಿಷಯವಾಗಿ ಉದ್ಭವಿಸಿರುವ ವೃಥಾರೋಪಗಳನ್ನೂ ಮತ್ತು ದೇಶದಲ್ಲಿಯ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಅನಧಿಕೃತವಾದ ಸ್ವಯಂ ಸೇವಕರ ಸಂಸ್ಥೆಗಳು ಕಾಂಗ್ರೆಸಿನ ಹೆಸರುಗಳಲ್ಲಿ ಕೆಲಸ ಮಾಡುವ ಸಂಗತಿಯನ್ನೂ ಲಕ್ಷಕ್ಕೆ ತಂದು, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕೆಳಗಿನ ನಿರ್ಣಯವನ್ನು ಸ್ವೀಕರಿಸುತ್ತದೆ

(೧) ಹಿಂದೂಸ್ಥಾನೀ ಸೇವಾದಲವು ಕಾಂಗ್ರೆಸ್ಸಿನ ಮಧ್ಯವರ್ತಿ ಸ್ವಯಂ ಸಂಸ್ಥೆ ಎಂದು ಈ ಮೂಲಕ ವರ್ಕಿಂಗ್ ಕಮಿಟಿಯು ಒಪ್ಪುತ್ತದೆ. ಈ ಸಂಸ್ಥೆಯು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇಲ್ಲವೆ ಅದರಿಂದ ನಿಯಮಿಸಬಹುದಾದ ಒಬ್ಬ ಅಥವಾ ಹೆಚ್ಚಿಗೆ ಜನರ ಅಧಿಕಾರದಲ್ಲಿಯೇ ಇದ್ದು ಕೆಳಗಿನ ಕಾರ್ಯಗಳನ್ನು ಮಾಡತಕ್ಕದ್ದು.

(ಅ) ಹಿಂದೂಸ್ಥಾನೀ ಸೇವಾದಲವು ಅಧಿಕಾರಿ (Officer) ಮತ್ತು ಶಿಕ್ಷಕ (Trainer) ರ ಶಿಕ್ಷಣವನ್ನು ಕೊಡಲಿಕ್ಕೆ ಯೋಗ್ಯ ಅಧಿಕಾರವನ್ನು ಹೊಂದಿ ಕೆಲಸ ಮಾಡುವ ಸಂಸ್ಥೆಯಾಗಿದೆ.

(ಬ) ಇದು ಕರ್ನಾಟಕದಲ್ಲಿಯೂ ಅಥವಾ ವರ್ಕಿಂಗ್ ಕಮಿಟಿಯವರು ವೇಳೆ ವೇಳೆಗೆ ನಿರ್ಣಯಿಸಬಹುದಾದ ಸ್ಥಳಗಳಲ್ಲಿ ಸ್ವಯಂ ಸೇವಕರನ್ನು ತರಬೇತಿ ಶಿಕ್ಷಣ ಕೊಡುವುದು. ಮತ್ತು ಈ ರೀತಿಯಿಂದ ಶಿಕ್ಷಣ ಕೊಟ್ಟ ಸ್ವಯಂ ಸೇವಕರದೇ ಒಂದು ಸ್ಥಿರ ಮಧ್ಯವರ್ತಿದಲ (Corps) ಸ್ಥಾಪಿಸಲ್ಪಡುವುದು. ಈ ಮಧ್ಯವರ್ತಿದಲವು ಅವಶ್ಯವಿದ್ದ ಸ್ಥಳಗಳಿಗೆ ಹೋಗಿ ಕಾರ್ಯ ಮಾಡಬೇಕಾಗುವುದು ಇದ್ದು ಅನುಕೂಲವಾದ ಬೇರೆ ಸ್ಥಳಗಳಲ್ಲಿ ಅಧಿಕಾರೀ ಮತ್ತು ಶಿಕ್ಷಕರ ಶಿಕ್ಷಣವನ್ನು ಕೊಡಲು ಶಿಕ್ಷಣ ಕೇಂದ್ರಗಳನ್ನೂ ಮತ್ತು ಶಿಬಿರಗಳನ್ನೂ ಈ ಸಂಸ್ಥೆಯು ಪ್ರಾರಂಭಿಸುವುದು.

(ಕ) ಈ ಸಂಸ್ಥೆಯು ಬೇರೆ ಬೇರೆ ಪ್ರಾಂತ್ಯಗಳಿಗೆ ಅವುಗಳ ವೆಚ್ಚದಿಂದ ಅಧಿಕಾರಗಳನ್ನೂ, ಶಿಕ್ಷಕರನ್ನೂ ಕಳುಹಿಸುವುದು.

(ಡ) ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ಇಚ್ಛಿಸಿದ ಸ್ಥಳಗಳಲ್ಲಿ ಆಯಾ ಪ್ರಾಂತ್ಯಗಳಲ್ಲಿ ಸ್ವಯಂ ಸೇವಕ ದಲ (Corps) ಗಳನ್ನು ಸ್ಥಾಪಿಸಲು ಸೇವಾದಲಕ್ಕೆ ಅಧಿಕಾರವಿದೆ.

(೨) ಎಲ್ಲ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ತಮ್ಮ ಪ್ರಾಂತ್ಯಗಳಲ್ಲಿ ಸೇವಾದಲಗಳನ್ನು ಸ್ಥಾಪಿಸತಕ್ಕದ್ದು. ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳು ಹೀಗೆ ಮಾಡಲು ಅಪೇಕ್ಷಣೀಯವಾಗಿದೆ.

(೩) ಕಾಂಗ್ರೆಸ್ ಸಭಾಸದರಲ್ಲದ, ಕಾಂಗ್ರೆಸ್ ಧ್ಯೇಯಕ್ಕೊಪ್ಪದ ಜನರನ್ನೊಳಗೊಂಡಿರುವ ಮತ್ತು ಹಿಂದೂಸ್ಥಾನೀ ಸೇವಾದಲದ ಪ್ರಮಾಣ ಪತ್ರಗಳನ್ನು ಹೊಂದಿದ ಅಧಿಕಾರಿಗಳಿಂದೊಡಗೂಡಿದ ಯಾವ ದಲ (Corps) ವು ಕಾಂಗ್ರೆಸ್ಸಿಗೆ ಸಮ್ಮತವಾಗಲಾರದು.

(೪) ಮೊದಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಒಪ್ಪಿಗೆಯನ್ನು ಪಡೆಯದ ಸ್ವಯಂ ಸೇವಕ ಮಂಡಳಿಗಳು ಅಥವಾ ದಳಗಳು ಕಾಂಗ್ರೆಸ್ಸಿನ ಹೆಸರಿನಿಂದ ಅಥವಾ ಕಾಂಗ್ರೆಸ್ಸಿನ ಪರಿಯಿಂದ ಯಾವ ಕಾಂಗ್ರೆಸ್ ಪ್ರಾಂತ್ಯದಲ್ಲಿಯೂ ಕೆಲಸ ಮಾಡಲಾರವು.

(೫) ಮೇಲೆ ಹೇಳಿದ ಕಾಂಗ್ರೆಸ್ಸಿನ ಮಧ್ಯವರ್ತಿ ಸ್ವಯಂ ಸೇವಕ ಸಂಸ್ಥೆಯ ಕಾರ್ಯವನ್ನು ನಿರ್ವಹಿಸಲು ಕಾಂಗ್ರೆಸ್ ಸಭಾಸದರಲ್ಲೊಬ್ಬರಾದ ಪಂಡಿತ ಜವಾಹಿರ್‌ಲಾಲ್ ನೆಹರು, ಇವರನ್ನು ವರ್ಕಿಂಗ್ ಕಮಿಟಿಯು ನಿಯಮಿಸುತ್ತದೆ ಮತ್ತು ಅದರ ಸಂಘಟನಾ ಕಾರ್ಯದರ್ಶಿಯಾಗಿ ಕಾರ್ಯ ಮಾಡಲು ಡಾ. ನಾ. ಸು. ಹರ್ಡೀಕರ ಇವರನ್ನು ನಿಯಮಿಸುತ್ತದೆ. ಇವರಿಬ್ಬರೂ ವರ್ಕಿಂಗ್ ಕಮಿಟಿಯು ಗೊತ್ತು ಮಾಡುವ ವೇಳೆಯ ವರೆಗೆ ಈ ಅಧಿಕಾರದಿಂದ ಕಾರ್ಯ ಮಾಡುವರು. ವರ್ಕಿಂಗ್ ಕಮಿಟಿಯ ಗೊತ್ತುವಳಿಗೆ ಬಾಧೆ ಬರದಂತೆ ಈ ಸಂಸ್ಥೆಯ ನಿಯಮಗಳನ್ನು, ಇದರ ನಿರ್ವಹಣೆ ನಾಮ ಸ್ಥಾಪನೆ, ಗೊತ್ತುಮಾಡುವದನ್ನು, ಸ್ವಯಂ ಸೇವಕ ಸಂಘಗಳ ಸ್ಥಾಪನೆ ಮತ್ತು ಅಧಿಕಾರಿಗಳ ಯೋಗ್ಯತೆಗಳನ್ನು, ಕರ್ತವ್ಯಗಳನ್ನೂ ನಿರ್ಧರಿಸುವರು. ಆದರೆ ಮೊದಲು ವರ್ಕಿಂಗ್ ಕಮಿಟಿಯಿಂದ ಒಪ್ಪಿಗೆಯನ್ನು ಪಡೆದ ಬಳಿಕ [illegible] ಸ್ವಯಂ ಸೇವಕ ಮಂಡಲವು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಈ ಗೊತ್ತುವಳಿಯನ್ನು [illegible] ಬಳಿಕ, ಈ ನಿಯಮಗಳು ಜಾರಿಯಲ್ಲಿ ಬರುವವು.

ಹುಬ್ಬಳ್ಳಿ, 18—7—31.

ಕಾರ್ಯದರ್ಶಿ, ಹಿಂದೂಸ್ಥಾನೀ ಸೇವಾದಲ

ತಿದ್ದುಪಡಿ.

ಕಳೆದ ವಾರ ಪ್ರಕಟವಾದ "ಪೂರ್ವ ಆಫ್ರಿಕದ ಕೊಡವರ ಸಂಘ"ವೆಂಬ ಲೇಖನದಲ್ಲಿ 1930ನೇ ವಾರ್ಷಿಕ ವರದಿಯ "ಆರ್ಥಿಕ ವ್ಯವಸ್ಥೆ" ಎಂಬ ಪ್ಯಾರಾವಲ್ಲಿ ವರ್ಷದ ಕೊನೆಯಲ್ಲಿ ಸಂಘದ ಭಂಡವಾಳವು ಬಹಳ ಹೀನ ಸ್ಥಿತಿಯಲ್ಲಿದ್ದರೂ, ಅಂತ್ಯದಲ್ಲಿ ದಾತರಾತಿ ಫೀಜೂ, ಚಂದಾ ಸೇರಿ 300 ಶಿಲಿಂಗುಗಳೂ ಎಂಬಲ್ಲಿ "350" ಶಿಲಿಂಗುಗಳೆಂದು, ಇದರ ಮೇಲೆ 106 ಶಿಲಿಂಗುಗಳು ಬಡ್ಡಿಯೂ ಕೂಡಿ ಒಟ್ಟಾರೆ 400 ಶಿಲಿಂಗುಗಳೂ ಎಂಬಲ್ಲಿ "456" ಶಿಲಿಂಗುಗಳೆಂದೂ ತಿದ್ದಿಕೊಳ್ಳಬೇಕೆಂದು ಸಂಘದ ಗೌರವ ಕಾರ್ಯದರ್ಶಿ ಮಿ. ಸಿ. ಬಿ. ತಿಮ್ಮಯ್ಯನವರು ತಿಳಿಸಿರುತ್ತಾರೆ.

ಮಾರಾಟಕ್ಕಿದೆ.

ವೀರರಾಜಪೇಟೆಯಲ್ಲಿ, ಪೋಲೀಸ್ ಸ್ಟೇಷನಿನ ಸಮೀಪದ [illegible] ಮನೆ, ಹಿಂದುಗಡೆ ಸುಮಾರು ಒಂದು ಎಕರೆ ಹಿತ್ತಲು, ಮತ್ತು ಅದರಲ್ಲಿ ಸುಮಾರು 200 ಬುಡ ಕಿತ್ತಳೆ ಗಿಡ ಇದೆ. ಸುತ್ತಾ ತಂತಿ ಬೇಲಿ ಹಾಕಲ್ಪಟ್ಟಿದೆ ಒಳ್ಳೆ ಬೆಲೆಗೆ ಬರುತ್ತೆ. ಹೊಸ ಮನೆ ಕಟ್ಟಲು ಜಾಗ ಸಹ ಇದೆ. [illegible]ಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ಕ್ರಯ ಮಾಡಿಕೊಳ್ಳಬಹುದು.

'X'

C/o The Manager,

"Kodagu"

Mercara

3—1

ವಾರ್ತಾ ಸಂಗ್ರಹ.

ಒಳದೇಶ.

ಉತ್ತರ ಕೆಲುಗರ ಬೀದಿಯಲ್ಲಿ ಈ ವಾರ ಒಬ್ಬನಿಗೆ ಪ್ಲೇಗಾಯಿತೆಂದು ಸುದ್ದಿ.

ಮಳೆ ರಜೆಗಾಗಿ ವೀರರಾಜಪೇಟೆ ಸ್ಕೂಲುಗಳು ... ವಾರಗಳ ವರೆಗೆ ಮುಚ್ಚಲ್ಪಡುವವೆಂದು ವರ್ತಮಾನ.

... ಪುರದ ನಿವಾಸಿಯೊಬ್ಬರು ಮೈಸೂರಿಗೆ ಹೋಗಿ ... ಮಡಿಕೇರಿಗೆ ಬಂದು, ಈ ವಾರ ಗ ... ಮೃತರಾದರು.

ಮದ್ರಾಸು ಪ್ರಾಂತ್ಯದ ಪೋಸ್ಟ್ ಮಾಸ್ಟರ್ ಜನರಲ್ ರ ... ರವರಲ್ಲಿ ಮಡಿಕೇರಿಗೆ ಬಂದು, ಇಲ್ಲಿಯ ಪೋಸ್ಟಾಫೀಸಿಗೆ ಹೊಸ ಕಟ್ಟಡದ ಇನ್‌ಸ್ಪೆಕ್ಷನ್ ಮಾಡಿ ತಿರುಗಿ ಹೋದರು.

... ಸೀರಿಯನ್ ಕ್ರಿಶ್ಚಿಯನ್ ಶ್ರೀಮತಿ ಸಿ. ಎ ... ಎಲ್. ಎಂ. ಪಿ ಯವರು ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟಂಟ್ ಸರ್ಜನರಾಗಿ ... ವಾರದಿಂದ ನೇಮಿಸಲ್ಪಟ್ಟಿರುವರು.

ವೀರರಾಜಪೇಟೆ ಸರ್ಕಾಲಿನ ಸಬ್‌ಇನ್ಸ್‌ಪೆಕ್ಟರರಾದ ಮಿ. ಯಂ. ಚಂಗಪ್ಪನವರು ಈ ವಾರ ಮಡಿಕೇರಿ ಪ್ರೈಮರಿ ... ಮತ್ತು ಅಸಿಸ್ಟಂಟ್ ಸ್ಕೂಲ್ ... ಕೊಡಗಿನ ಆರ್ಥಿಕ ಸ್ಥಿತಿಯ ಕುರಿತು ... ಮಾಡಿದರೆಂದು ತಿಳಿಯುತ್ತದೆ.

ಈ ವಾರ ಮಡಿಕೇರಿಗೆ ಮಳೆಯು ಕಡಿಮೆ. ... ಒಂದು ದಿನ ಬಿಸಿಲೂ ಕಾಯುತ್ತಿತ್ತು. ಕಳೆದ ಶನಿವಾರದ ತನಕ ಇಲ್ಲಿ 5 ... ಇಂಚು ಮಳೆಯಾಗಿದೆ. ... ಮಳೆಯಾದ ತಾ. 23ರಲ್ಲಿ 2, 2... ಇಂಚು ಬಿತ್ತು. ... ಕಡೆಗಳಲ್ಲಿಯೂ ಮಳೆ ಬಹಳ ಕಡಿಮೆಯೆಂದು ವರ್ತಮಾನ.

ರಿಟ್ರೆಂಚ್‌ಮೆಂಟ್ ಕಮಿಟಿಯವರು ಈ ತಾ 22 ಮತ್ತು 23 ರಲ್ಲಿ ಮಡಿಕೇರಿ ಸರಕಾರಿ ಆಫೀಸುಗಳ ಕೆಲಸವನ್ನು ನೋಡಿ, ಸುಂಟಿಕೊಪ್ಪ ಮತ್ತು ಫ್ರೇಜರಪೇಟೆ ನಾಡು ಕಚೇರಿಗಳನ್ನು ನೋಡಬಹುದೆಂದು ಹೇಳುತ್ತಾರೆ. ಆ ದಿನ ಸೋಮವಾರಪೇಟೆ, ವೀರರಾಜಪೇಟೆ ಮತ್ತು ಅಮ್ಮತ್ತಿ ಸರಕಾರಿ ಆಫೀಸುಗಳ ಕೆಲಸವನ್ನು ನೋಡಿಕೊಂಡು ಬರುವರೆಂದು ತಿಳಿಯುತ್ತದೆ.

ಕೊಡಗಿನ ಸಂಪನ್ಮೂಲದಲ್ಲಿರುವ ವಯನಾಡಿನಲ್ಲಿ ... ಸಿಂದಿ ಅಂಗಡಿಗಳ ಪಿಕೆಟಿಂಗ್ ಕೆಲಸವು ಚೆನ್ನಾಗಿ ನಡೆಯುತ್ತಿದೆಯೆಂದೂ, ಕೊಡಗಿನ ಮಿ. ಕೆ ಯಂ. ಅಪ್ಪಚ್ಚನವರು ಮತ್ತು ಮಂಗಳೂರಿನ ಮಿ ಕೆ ಕೃಷ್ಣ ಐಯ್ಯರವರು ಅಲ್ಲಿ ... ವರ್ಕಿಂಗ್ ಕಮಿಟಿಯ ಮೆಂಬರುಗಳಾಗಿರುವರೆಂದೂ, ... ನವರಾದ ಮಿ. ಗಳಾದ ಅಲ್ಲಾವುದ್ದೀನ್ ಚಿಟ್ಟಿಯಪ್ಪನವರು, ಕೆ. ... ನವರು ಮತ್ತು ಟಿ. ಆರ್. ನಾರಾಯಣರವರು ಪಿಕೆಟಿಂಗ್ ಕೆಲಸ ನಡೆಸುತ್ತಿರುವರೆಂದೂ ತಿಳಿಯುತ್ತದೆ.

ಕಳೆದ ವಾರ ಪ್ರಕಟಿಸಿದಂತೆ ಈ ತಾ. 13ರಿಂದ 17 ರ ವರೆಗೆ ಸೆಷನ್ಸ್ ಕೋರ್ಟಿನಲ್ಲಿ ವಿಚಾರ ನಡೆದ ಕೊಲೆ ಕೇಸಿನ ತೀರ್ಪನ್ನು ಜಡ್ಜ್‌ಮೆಂಟು ತಾ 20ರಲ್ಲಿ ಹೇಳಲಾಯಿತು. ಅಪರಾಧಿಗಳಿಬ್ಬರು ತಪ್ಪಿತಸ್ಥರಲ್ಲವೆಂದು ಎಸೆಸರುಗಳು ಅಭಿಪ್ರಾಯ ಕೊಟ್ಟರೂ, ಕೆದಮುಳ್ಳೂರಿನ ... ಗ್ರಾಮದ ಬೋಳಿಯ ಪಣ್ಣ ಎಂಬವನಿಗೆ ಕಳೆದ ... ತಿಂಗಳಲ್ಲಿ ಬಿಲ್ಲಿನಿಂದ ಹೊಡೆದು ಮತ್ತು ಬಲ ... ಎಂಬವರಿಬ್ಬರು ಅಪಾಯಕರವಾದ ನೋವನ್ನುಂಟುಮಾಡಿದರೆಂದು ಜಡ್ಜರು ಅವರಿಬ್ಬರಿಗೆ ಒಂದೊಂದು ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಕೊಡಗಿನ ಸರ್ಕಾರದ ಖರ್ಚಿನ ವಿಷಯ ನಡೆಯುತ್ತಿರುವ ವಿಚಾರವು ಮುಗಿಯುವ ವರೆಗೆ ಈ ಜುಲೈ ತಾ. 16ರಿಂದ ... ಅಧಿಕಾರ ಮುಗಿಯುವುದಾಗಿ, ಈ ಜುಲೈ 15ರಲ್ಲಿ ಸರಕಾರಿ ಹುದ್ದೆಯಲ್ಲಿ ಇಲ್ಲದೆ ಇರುವವರನ್ನು ಉದ್ಯೋಗಕ್ಕೆ ನೇಮಿಸುವುದಾಗ್ಯೂ ಚೀಫ್ ಕಮಿಷನರವರಿಗೆ ಸಂಬಳ ನಿಶ್ಚಯಿಸುವ ಅಧಿಕಾರವಿರುವ ಹುದ್ದೆಗಳನ್ನು ಖಂಗಾಮಿಯಾಗಿ ನೇಮಕ ಮಾಡಲಾಗುವುದೆಂದೂ, ಆದರೆ ಪೊಲೀಸು ಇಲಾಖೆಯ ... ಜೈಲು ಇಲಾಖೆಯ ವಾರ್ಡರು ಮತ್ತು ಹೆಡ್ಡ್ ವಾರ್ಡರುಗಳಿಗೆ ಈ ತೀರ್ಮಾನವು ಅನ್ವಯಿಸುವುದಿಲ್ಲವೆಂದೂ ... ಖಾಯಂ ಆಗಿ ಖಾಲಿ ಇರುವ ಹುದ್ದೆಗಳನ್ನು ... ಆಗಿ ಭರ್ತಿ ಮಾಡುವ ಬಗ್ಗೆ ಚೀಫ್ ಕಮಿಷನರ ... ಗಜೆಟಿನಲ್ಲಿ ಪ್ರಕಟವಾಗಿದೆ.

—

ಹಿಂದೂಸ್ಥಾನ.

ಆಗ್ರಾ ಪಟ್ಟಣದ ವ್ಯವಸಾಯದಲ್ಲಿ ಕಾಲೇಜನ್ನು ಸ್ಥಾಪಿಸಿ ... ಕರ್ಣಾಟಕಿಯವರು ... ಮಹಾರಾಜರು ... ಎರಡು ಲಕ್ಷ ರೂಪಾಯಿ ಉಚಿತವಾಗಿ ಕೊಟ್ಟಿರುವರು ... ಸಂಸ್ಥಾನದಲ್ಲಿ ಇನ್ನು ಮುಂದೆ ... ಶಿಕ್ಷೆಯನ್ನು ಕೊಡಬಾರದೆಂದು ಮಹಾರಾಜರು ... ಇದು ಪ್ರಪಂಚದಲ್ಲೇ ಒಂದು ಉತ್ತಮ ... ವಾಗಿದೆ.

ಕಳೆದ ವಾರ ಬಿಡ್ವಾನ್‌ನಲ್ಲಿ ನಡೆದ ಬಂಗಾಳದ ... ಸಭೆಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಕೋಮುವಾರು ಸಮಸ್ಯೆಯ ವಿಷಯ ಮಾಡಿರುವ ವ್ಯವಸ್ಥೆಗೆ ಒಪ್ಪಿಗೆಯನಿತ್ತು ಠರಾವು ಮಂಜೂರು ಮಾಡಿದರು.

ಕಳೆದ ಏಪ್ರಿಲ್ ತಿಂಗಳಲ್ಲಿ ವಾಯುವ್ಯ ಪ್ರಾಂತ್ಯದ ... ಗ್ರಾಮದಲ್ಲಿ ಒಂದು ರಾಜದ್ರೋಹದ ನಾಟಕವನ್ನಾಡಿದರೆಂದು ದಸ್ತಗಿರಿ ಮಾಡಲ್ಪಟ್ಟ 12 ಜನ 'ರೆಡ್ ಶರ್ಟ್' ವಾಲಂಟಿಯರುಗಳಲ್ಲಿ 6 ಜನರು ಬಿಡುಗಡೆ ಮಾಡಲ್ಪಟ್ಟು, ಬಾಕಿ 6 ಜನರಿಗೆ ನಾಲ್ಕು ಮೂರು ವರ್ಷ ಕಠಿಣ ಸಜೆ ವಿಧಿಸಲಾಯಿತು.

ಕೋಮುವಾರು ಸಮಸ್ಯೆಯನ್ನು ಕುರಿತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ವ್ಯವಸ್ಥೆಯನ್ನು ಮಹಮ್ಮದೀಯ ... ರು ವಿರೋಧಿಸಿ ಅಭಿಪ್ರಾಯ ಕೊಟ್ಟಿರುವರು. ಆದರೆ ಡಾಕ್ಟರ್ ಅನ್ಸಾರಿ, ಅಬ್ದುಲ್ ಕಲಾಂ ಅಜಾದ್, ಡಾ. ಕಿಚ್ಲು, ಸರ್ದಾರ ಶಾರ್ದೂಲ್ ಸಿಂಘ್ ಮೊದಲಾದವರು ಅದಕ್ಕೆ ಒಪ್ಪಿಗೆಯನ್ನು ಸೂಚಿಸಿರುವರು.

ಹಿಂದೂದೇಶದಲ್ಲಿ ನಡೆಯುತ್ತಿರುವ ವಿದೇಶೀ ಬಟ್ಟೆ ಬಹಿಷ್ಕಾರದ ಪರಿಣಾಮವು ಬಹು ಚೆನ್ನಾಗಿ ಆಗುತ್ತಿದೆ. ಕಳೆದ ವರ್ಷದ ಮೊದಲನೇ ಆರು ತಿಂಗಳಲ್ಲಿ ಬ್ರಿಟನ್ನಿನಿಂದ ಇಂಡಿಯಕ್ಕೆ 1,06,60,0 ... ಪೌನು ಬೆಲೆಯ ಬಟ್ಟೆಯು ಕಳುಹಿಸಲ್ಪಟ್ಟಿತ್ತು. ಆದರೆ ಈ ವರ್ಷ ಅದೇ ಕಾಲದಲ್ಲಿ ಬರೇ 29,37,000 ಪೌನು ಬೆಲೆಯ ಬಟ್ಟೆ ಮಾತ್ರ ಕಳುಹಿಸಲ್ಪಟ್ಟಿದೆ. ಅಂದರೆ 6 ತಿಂಗಳ ಕಾಲದಲ್ಲಿ 76,43,000 ಪೌನು ಬೆಲೆಯ ಬಟ್ಟೆ ... ಕಡಿಮೆಯಾಯಿತು!

ಬೊಂಬಾಯಿ ಗವರ್ನರಾದ ಸರ್ ಅರ್ನೆಸ್ಟ್ ಹಾಟ್ಸನ್ ರವರು ತಾ ... ರಲ್ಲಿ ಪೂನಾದ ಫರ್ಗ್ಯೂಸನ್ ಕಾಲೇಜಿನ ಲೈಬ್ರರಿಯನ್ನು ನೋಡ ... ಗೈದ ವಿದ್ಯಾರ್ಥಿಯು ಅವರಿಗೆ ... ಎರಡು ಗುಂಡುಗಳನ್ನು ಹೊಡೆದನಂತೆ. ಪ್ರಥಮ ಗುಂಡು ... ಮೇಲ್ಗಡೆ ಕೋಟಿಗೆ ತಗಲಿದರೂ ... ಪುಸ್ತಕದ ಕೋಶದ ಗುಂಡಿಯು ಅದನ್ನು ತಡೆಯಿತಂತೆ, 2ನೇ ಗುಂಡು ತಗಲೇ ಇಲ್ಲವೆಂತಲೂ. ಆ ವಿದ್ಯಾರ್ಥಿಯು ಕೂಡಲೇ ದಸ್ತಗಿರಿ ಮಾಡಲ್ಪಟ್ಟನೆಂತಲೂ ವರ್ತಮಾನ.

ಹಿಂದೂದೇಶದಲ್ಲಿ ಬೇಗನೆ ಆಗಲಿಕ್ಕಿರುವ ರಾಜಕೀಯ ಬದಲಾವಣೆಗಳಿಂದ ಮುನ್ಸಿಪಲ್ ಓಟರುಗಳ ಪಟ್ಟಿಯೂ ಬದಲಾಗ ಬಹುದಾದ ಕಾರಣ, ಆ ಚುನಾವಣೆಗಾಗಿ ಬೊಂಬಾಯಿ ಕಾರ್ಪೋರೇಶನಿಗೆ ಉಂಟಾಗುವ 1,45,000 ರೂ. ಖರ್ಚನ್ನು ಉಳಿಕೆ ಮಾಡಲಿಕ್ಕಾಗಿ ಈಗಿರುವ ಮೆಂಬರುಗಳ ಅವಧಿಯನ್ನು ಒಂದು ವರ್ಷ ಮುಂದರಿಸುವಂತೆ ಸರ್ಕಾರದವನ್ನು ಕೇಳಿಕೊಳ್ಳಬೇಕೆಂಬ ಠರಾವು ಸದರಿ ಕಾರ್ಪೋರೇಶನಿನಲ್ಲಿ ರಾಷ್ಟ್ರೀಯ ಪಕ್ಷದ ಮೆಂಬರುಗಳಿಂದ ವಿರೋಧಿಸಲ್ಪಟ್ಟರೂ, 2 ಓಟುಗಳ ಬಹುಮತದಿಂದ ಪಾಸಾಯಿತು.

ಜರ್ಮನಿಯ ಒಂದು ಬೆಟ್ಟದ ಜನರು ಯೂರೋಪಿನ ... ಅದ್ಭುತ ದುರ್ಗಕ್ಕೆ ಪ್ರಥಮ ಕಾರಣ, ಅಲ್ಲಿಯ ಸರ್ಕಾರದವನ್ನು ಕಿತ್ತೊಗೆಯಬೇಕೆಂದು ಅವರು ಪ್ರಯತ್ನಪಟ್ಟರು, ಅದಕ್ಕೆ ಹಣದ ಅಭಾವದಿಂದ ... ವು ಹೊಂದಿ ಬಹುವರೂ ಸಹಾಯ ಮಾಡಿದರು. ಈ ಬಗ್ಗೆ ... ಸಂಬಂಧವಾದ ಕಲಹವು ಗಾಳಿವಾರ್ತೆ, ಕಡೆಗೆ ಪ್ರಚಂಡವಾದ ಜ್ವಾಲೆಯಾಗಿ ಉರಿಯಿತು' ಎಂದು ಜರ್ಮನಿಯ ... ಪ್ರಕಟಿಸಿದ ವರದಿಯು ಹೇಳುತ್ತದೆ.

ಲಾಹೋರಿನ "ಜಮೀನ್‌ದಾರ್" ಪತ್ರಿಕೆಯ ಸಂಪಾದಕರಾದ ಜಾಫರ್ ಅಲಿಖಾನ್‌ರವರ ಪ್ರಯತ್ನದಿಂದ ಮುಸಲ್ಮಾನರ ... ಪಾರ್ಟಿಗಳನ್ನು ಒಂದುಗೂಡಿಸಿ, ... ವರ್ಗಗಳ ವರೆಗೆ ಮುಸಲ್ಮಾನರಿಗೆ ಪ್ರತ್ಯೇಕ ಚುನಾವಣೆ ಇಟ್ಟು, ನಂತರ ಮುಸಲ್ಮಾನರ ಬಹುಮತವಿರುವ ಪ್ರಾಂತ್ಯಗಳಲ್ಲಿ ನೆಟ್ಟಿಗೆ ಜಂಟಿ ಚುನಾವಣೆ ಜಾರಿಗೆ ಬರಬೇಕೆಂದೂ, ಅ ... ವನ್ನು ನ್ಯಾಯಸ್ಥರಿಗೆಲ್ಲಾ ಓಟಿನ ಹಕ್ಕು ಕೊಡಬೇಕೆಂದು ... ಮುಸಲ್ಮಾನರಿಗೆ ... ಇಲ್ಲದೆ ಇರುವ ಪ್ರಾಂತ್ಯಗಳಲ್ಲಿ ... ವರೆಗೆ ... ಮೆಂಬರುಗಳ ಸಂಖ್ಯೆ ಕಾಯ್ದಿರಿಸಲ್ಪಟ್ಟು, ... ಬಿ ಪಾಪಡ ಜಾರಿಗೆ ತಂದು, ಅನಂತರ ಮುಸಲ್ಮಾನರ ಓಟುಗಳು ಬಹುಮತದಲ್ಲಿ ತೀರ್ಮಾನಿಸುವಂತೆ ಚುನಾವಣೆಯ ಕ್ರಮವನ್ನು ಕೈಕೊಳ್ಳಬಹುದೆಂದೂ ಮಧ್ಯಸ್ಥಿಕೆಯ ತೀರ್ಮಾನಕ್ಕೆ ಒಪ್ಪಿಸಿರುವರು. ಈ ತೀರ್ಮಾನವು ತಾ. 20ರಲ್ಲಿ ನಡೆದ ಮುಸಲ್ಮಾನರ ಪಬ್ಲಿಕ್ ಮೀಟಿಂಗಿನಲ್ಲಿ ಕೆಲವರು ವಿರೋಧಿಸಿ, ತಂಟೆ ಮಾಡಿದರೂ ಕೂಡ ಬಹುಮತದಿಂದ ಪಾಸಾಯಿತೆಂದು ವರ್ತಮಾನ.

ಬರುವ ಸೆಪ್ಟೆಂಬರ ತಾ 3ರ ನಂತರ ಲಂಡನಿನಲ್ಲಿ ಸೇರಲಿಕ್ಕಿರುವ ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಮೆಂಬರುಗಳ ಹೆಸರುಗಳನ್ನು ಬ್ರಿಟನ್ನಿನ ಪ್ರಧಾನ ಮಂತ್ರಿಯವರು ಪ್ರಕಟಿಸಿದರು. ಹೊಸದಾಗಿ 22 ಮೆಂಬರುಗಳಲ್ಲಿ ಮೈಸೂರು ಎಗ್ಸಿಕ್ಯೂಟಿವ್ ಕೌನ್ಸಿಲಿನ ತಾತ್ಕಾಲಿಕ ... ಮೆಂಬರಾಗಿ ನೇಮಿಸಲ್ಪಟ್ಟಿರುವ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರವರ ... ವಿವರ ಜಾತಿ 21 ಮೆಂಬರುಗಳು ಹೊಸದಾಗಿ ನೇಮಿಸಲ್ಪಟ್ಟಿರುವುದಲ್ಲದೆ 16 ಜನ ಸದಸ್ಯರು ನೇಮಿಸಲ್ಪಟ್ಟಿರುವರು. ... ಯಲ್ಲಿ ಚೆಟ್ಟಿಯವರು. ಮೊದಲನೇ ರೌಂಡು ಟೇಬಲು ಪರಿಷತ್ತಿನ ಸದಸ್ಯರಾಗಿದ್ದರು. ಹೊಸ ಮೆಂಬರುಗಳ ಪೈಕಿ ಮಹಾತ್ಮ ಗಾಂಧಿಯವರು, ಪಂಡಿತ ಮದನಮೋಹನ ಮಾಳವೀಯರು, ಹೈದರಾಬಾದಿನ ಮಹಾರಾಜರ, "ಹಿಂದೂ" ಪತ್ರಿಕೆಯ ಸಂಪಾದಕರಾದ ಶ್ರೀ. ಎ. ರಂಗಸ್ವಾಮಿ ಅಯ್ಯಂಗಾರರವರು, ಕಾಶ್ಮೀರ ಜನರ ಪರವಾಗಿ ಶ್ರೀ ಎನ್. ಯಂ. ಜೋಶಿಯವರು, ಅಂತ್ಯಜರ ಪರವಾಗಿ ಡಾ ಅಂಬೇಡ್ಕರ್‌ರವರು ಮತ್ತು ಸ್ತ್ರೀಯರ ಪರವಾಗಿ ಮಿಸೆಸ್ ಸುಬ್ಬರಾಯನ್‌ರವರು ಕೆಲವು ಪ್ರಮುಖರಾಗಿರುವರು.

ವಾರ್ಸಾ ... ಒಬ್ಬ ಪ್ರಸಿದ್ಧ ವ್ಯಾಪಾರಿಯು ಸನ್ನಿಪಾತಜ್ವರ ಪೀಡಿತನಾಗಿ ದೊಡ್ಡ ಡಾಕ್ಟರಿಂದ ಚಿಕಿತ್ಸೆ ಮಾಡಿಸಿಕೊಂಡಾಗ್ಯೂ ಗುಣಹೊಂದದೆ ಮೃತನಾದನು. ಅವನ ಮೃತದೇಹವು ಕ್ರಮಪ್ರಕಾರವಾಗಿ ನಿಕ್ಷೇಪಿಸಲ್ಪಟ್ಟಿತು. ಆ ನಿಕ್ಷೇಪವಾದ ರಾತ್ರಿ, ಮೃತನು ತನ್ನ ಧರ್ಮಪತ್ನಿಯ ಸ್ವಪ್ನದಲ್ಲಿ ಬಂದು ತಾನು ಸತ್ತಿಲ್ಲವೆಂದು ಹೇಳಿದನು. ಆದರೆ ಆಕೆಯು ಅದನ್ನು ನಂಬದೆ ಸ್ವಪ್ನವೆಂದು ತಿಳಿದುಕೊಂಡು ಸುಮ್ಮನಾದಳು. ಮರುದಿವಸ ರಾತ್ರಿಯೂ ಯಥಾ ಪ್ರಕಾರ ಹೆಂಡತಿಯ ಸ್ವಪ್ನದಲ್ಲಿ ಕಾಣಿಸಿಕೊಂಡು ಹೇಳಲು ಆಕೆಯು ಕೂಡಲೇ ಸ್ಮಶಾನಕ್ಕೆ ಹೋಗಿ ಸಮಾಧಿಯನ್ನು ಕಿತ್ತು ಗಂಡನನ್ನು ಹೊರತೆಗೆದು ಬದುಕಿಸಲು ಅವನು ಬದುಕಿಕೊಂಡನು. ಅನಂತರ ಅವನು ತಾನು ಸತ್ತುಹೋದನೆಂದು ಹೇಳಿದ ಡಾಕ್ಟರನ್ನು ನಿಂದಿಸತೊಡಗಲು ಆ ಡಾಕ್ಟರು 'ಅವನ ಹೆಂಡತಿಯು ಮಹಾ ಪತಿವ್ರತೆ, ತನ್ನ ಪಾತಿವ್ರತ್ಯ ಪ್ರಭಾವದಿಂದ ಸತ್ತ ಗಂಡನನ್ನು ಬದುಕಿಸಿದಳು. ಆದುದರಿಂದ ಲೋಕದ ಸ್ತ್ರೀಯರೆಲ್ಲ ಆಕೆಯ ಭಾವಚಿತ್ರಕ್ಕೆ ಪ್ರತಿ ದಿನವೂ ನಮಸ್ಕರಿಸಬೇಕು.' ಎಂದು ಪ್ರಕಟಿಸಿರುವರು!

—

ವಿದೇಶ.

ಮಹಾತ್ಮ ಗಾಂಧಿಯವರು ಇಂಗ್ಲೆಂಡಿಗೆ ಹೋದರೆ ... ಸಮ್ಮೇಳನದಲ್ಲಿ ... ಸಂದರ್ಭದಲ್ಲಿ ವಿದೇಶೀ ವಸ್ತ್ರ ಬಹಿಷ್ಕಾರದ ಪೆಟ್ಟು ಹೆಚ್ಚಾಗಿ ತಗಲಿರುವ ಲ್ಯಾಂಕಶೈರ್ ಎಂಬ ಸ್ಥಳಕ್ಕೆ ಹೋಗುವರೆಂದೂ, ಅಲ್ಲಿಯ ಮೇಯರಾದ ಮಿ. ... ರವರ ಅತಿಥಿಯಾಗಿರುವರೆಂದೂ ಸುದ್ದಿ.

'ಡೀನ್ ಇಂಗ್' ಎಂಬುದು ಯೂರೋಪಿನ ಒಬ್ಬ ಭವಿಷ್ಯ ಹೇಳುವವರ ಹೆಸರು. ಇವರು ಬಹಳ ಪ್ರಖ್ಯಾತಿ ಹೊಂದಿದವರು. ಇದು ವರೆಗೆ ಇವರು ಸುಳ್ಳು ಹೇಳಲಿಲ್ಲವಂತೆ, ಇದುವರೆಗೆ ಇವರು ಹೇಳಿದುದು ಸುಳ್ಳಾಗಲಿಲ್ಲವಂತೆ. ಅವರು ಈಗ ಒಂದು ಆಶ್ಚರ್ಯವನ್ನು ಕಂಡು ಹಿಡಿದಿದ್ದಾರೆ. "ಇನ್ನು ಕೆಲವು ವರ್ಷಗಳಲ್ಲಿ ಲೋಕವು ಬಹಳ ಉಚ್ಛ್ರಾಯ ಸ್ಥಿತಿಗೆ ಬರುತ್ತದೆ, ಪ್ರಪಂಚವೇ ರಾಮರಾಜ್ಯವಾಗುತ್ತದೆ; ಆ ಸಮಯದಲ್ಲಿ ಲೋಕದಲ್ಲಿ ಯುದ್ಧಗಳು ನಡೆಯುವುದಿಲ್ಲ. ಜನರಲ್ಲಿ ಕಲಹಗಳು ಬರುವುದಿಲ್ಲ; ಕೋರ್ಟು ಕಚೇರಿಗಳು ನಿರ್ನಾಮವಾಗುತ್ತವೆ, ವಕೀಲರ ಕುಲವೇ ಅಳಿದು ಹೋಗುತ್ತದೆ." ಎಂದು ಅವರು ಹೇಳುತ್ತಾರೆ.

ಪಾರ್ಲಿಮೆಂಟಿನಲ್ಲಿ ಇಂಪೀರಿಯಲ್ ಉದ್ಯೋಗಸ್ಥರ ಸಂಬಳವನ್ನು ಕುರಿತ ಪ್ರಶ್ನೆಗಳಿಗೆ ಉತ್ತರವಾಗಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಮಿ. ಬೆನ್‌ರವರು ಹೀಗೆಂದರು—"ಈ ವಿಷಯ ರಿಟ್ರೆಂಚ್‌ಮೆಂಟ್ ಕಮಿಟಿಯ ಶಿಫಾರಸು ಮೇರೆ ಇಂಡಿಯಾ ಸರ್ಕಾರದಿಂದ ಸೂಚನೆಗಳೇನೂ ಬಂದಿಲ್ಲ. ಹಾಗೆ ಬಂದರೆ ಜಾಗರೂಕತೆಯಿಂದ ಆಲೋಚಿಸಲ್ಪಡುವುದು. ಮತ್ತು, ಕಾಯಿದೆ ಮೇರೆ ರಕ್ಷಿಸಲ್ಪಟ್ಟಿರುವ ಹಕ್ಕುಗಳಿಗೆ ಏನಾದರೂ ಸಂಬಂಧಿಸಿದರೆ ಪಾರ್ಲಿಮೆಂಟಿನ ... ಆಗಬೇಕು". ಆಧಾರ ಸರ್ವಿಸಿನವರ ಸಂಬಳವನ್ನು ಬದಲಾಯಿಸುವುದರಿಂದ ಸದರಿ ... 'ಪಾರ್ಲಿಮೆಂಟು' ಸಭೆಯು ಹೇಗೆ ನಡೆಯಬೇಕೆಂದು ಹೇಳುವ ಯೋಗ್ಯತೆಯೂ ತನಗಾಗಲೀ, ಪ್ರಶ್ನೆ ಕೇಳಿದವರಿಗಾಗಲೀ ಇಲ್ಲವೆಂದೂ, ಈ ವಿಷಯ ಆಲೋಚನೆ ಮಾಡಿ ಮೇಲಿನ ಸೂಚನೆಯು ... ಗೊಳಿಸಲ್ಪಡುವವೆಂದೂ' ಹೇಳಿದರು.

—

WANTED·

A Clerk for the Oriental Govt. Security Life Assurance Company's agencey office· Coorg· Mercara

Pay according to qualifications· honesty and bussiness canvassing capacity·

Please apply to the undersigned before the 30th July 1931·

K· P· CHINNAPPA·
Agent·
"Oriental·" Mercara·

2—1·

—

ಮಾರಾಟಕ್ಕಿದೆ.

ಸೋಮವಾರಪೇಟೆ ನಾಡು ... ಗ್ರಾಮದಲ್ಲಿರುವ ... ಜಮ್ಮಾ ... 11 15 ಎಕರು, ಹೊಸ ಗದ್ದೆ ... 5 . 26 ಎಕರು, ಗದ್ದೆ 4 . 60 ಹೈಲು ... 3 20 ಎಕರು ... 1 . 24 ... ಅಂತು ಒಟ್ಟು 30 . 45 ಎಕರು ಮಾರಾಟಕ್ಕಿದೆ.

ಕೊಂಡುಕೊಳ್ಳಲು ಅಪೇಕ್ಷಿಸುವವರು ಈ ... ಬರೆದು ಹೆಚ್ಚಿನ ವಿಷಯ ತಿಳಿದುಕೊಳ್ಳ ...

4—1.

C/o "ಕೊ"

ಮೈಸೂರು.

—

ಉಳುವ ಹಾಡು.

ಹರ ಹರ ಈ ಈ ಎನ್ನುತಲಿ |
ಹರಿಯನು ಹರನನು ನೆನೆಯುತಲಿ |
ಹಿರಿಯರ ಮಾತನು ನಡೆಸುತಲಿ |
ಹರುಷ ಹೊಯ್ಯೆಂದುಳ್ಳುಡುವನ ||೧||

ಆಳಕೆ ನೇಗಿಲ ಕಟ್ಟುವನ |
ನೀಳಕೆ ಸಾಲನು ಹಾಕುವನ |
ಬಾಳಿದು ಸುಖವೆಂದರಿಯುವನ |
ಕಾಳಗ ಭೂಮಿಯೊಳಾಡುವನ ||೨||

ಆಳದಿ ಉತ್ತ ಭೂಮಿಯೊಳು |
ನೀಳದಿ ಬಿದ್ದ ಬೆಳೆಯುವುದು |
ಕಾಳಿನ ದಪ್ಪವು ಏರುವುದು |
ಕಾಳನೆ ಕೇಳೋ ಹೇಳುವುದು ||೩||

ಇಮ್ಮಡಿ ಬೆಳಸಲು ನೋಡುವನ |
ಸಮ್ಮನ ಮೆಚ್ಚಿಕೆ ತೂಗುವನ |
ದಮ್ಮಯ್ಯ ಎಂದರು ಬಿಡದವರು |
ಸುಮ್ಮನೆ ಕಟ್ಟಲೆ ಬೇಕಿಹೆಯೊ ||೪||

ಸಾಲಗಾ ಬಾಕಿದು ಸಪ್ಪಗಿದೆ |
'ನಾನಿಂದಿಲ್ಲವೇ ಏನಣ್ಣ' |
'ಮೇಲು ಗದ್ದೆಗೆ ನಾ ಸಾಲು |
ಸಾಲನು ಏಳರಿಂದ ಹಾಕುವೆನು' ||೫||

ಹಾಡು ಬಾಳೊಂದ ಹಾಡುತಲೆ |
ಊಟಕೆ ಹೋದರೆ ನಾವೀಗ |
ಕೇಳು [illegible] ಎತ್ತುಗಳು |
ನಾಳಿನ ಕಾಣದು [illegible] ||೬||

ಬೆಳ್ಳನ ಹಾಡನು ಚನ್ನಗಿದೆ |
[illegible] ಕುರಿತೆ ಹಾಡುವನು |
ನಮ್ಮ ಸಗ್ಗಗ ಕೇಳಬೇಕೊ |
ನಿಮ್ಮಯ [illegible] ||೭||

[illegible] |
[illegible] |
[illegible] |
[illegible] ||೮||

[illegible] |
[illegible] |
[illegible] |
[illegible] ||೯||

ಅ. ಬಿ.

ಸಹಕಾರಿ ಫೆಡರೇಷನಿನ ಕಮಿಟಿ ಮೀಟಿಂಗು.

ತಾರೀಕು 1—7—31 ಲ್ಲು ನಡೆದ ಕೊಡಗು ಸಹಕಾರ ಫೆಡರೇಷನಿನ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸು.

7 ಮೆಂಬರುಗಳ ಪೈಕಿ 5 ಜನರು ಹಾಜರಿದ್ದರು.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸು ಓದಿ ಹೇಳಿ ಒಪ್ಪಲಾಯಿತು.

2 ಕಳೆದ ಮೀಟಿಂಗಿನ ಈಚೆಗೆ ಜಮ ಮತ್ತು ಖರ್ಚು ಓದಲಾಗಿ ಒಪ್ಪಲಾಯಿತು.

ಜಮ ರೂ. 1657—2—3, ಖರ್ಚು ರೂ 478—12—0

ನಗದು ಹಣ ಈ ದಿನ 1188—6—3 ಪೈಕಿ ರೂ. 1168—0—0 ಸೇವಿಂಗ್ಸ್ ಬ್ಯಾಂಕಿನಲ್ಲಿಯೂ, ಬಾಕಿ ರೂ 20—6—3 ಪೈಕಿ ಕ್ಲಾರ್ಕರ ಹತ್ತಿರವಿದೆ ಪಾಸು ಬುಕ್ಕು ಬಿಲ್ಲು ಕೊಡಲು [illegible] ದುದರಿಂದ ಟಿವಾಜಿಟ್ ಮಾಡಲಿಲ್ಲ.

1930—31 ಕ್ಕೆ ಬರಬೇಕಾದ ಸುಪರ್‌ವಿಜನಾ ಫಂಡು ರೂ. 7 [illegible]6—10—0 ಇದರಲ್ಲಿ ಈ ವರೆಗೆ ವಸೂಲಾದದು ರೂಪಾಯಿ [illegible]172—11—4, ವಸೂಲಿಗೆ ಬಾಕಿ ರೂಪಾಯಿ [illegible]223—14—4 ಪೈ.

3. ಸುಪರ್‌ವೈಜರು ಕೆಲಸಕ್ಕೆ ಬಂದ ಅರ್ಜಿದಾರರ ಪೈಕಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಉಳಿಕ ಅರ್ಜಿದಾರರಿಗಿಂತ ಪರೀಕ್ಷೆಯಲ್ಲಿ ಹೆಚ್ಚು ನಂಬರು ತೆಗೆದಿರುವ ಮೊಣ್ಣಂಡ ಅಪ್ಪಯ್ಯನವರನ್ನು ತಿಂಗಳು 1ಕ್ಕೆ 25 ರೂ. ಸಂಬಳದ ಮೇರೆ ಪ್ರೊಬೇಶನರಿ ಸುಪರ್‌ವೈಜರಾಗಿ ತಾ 15—7—31 ರಿಂದ ಚುನಾಯಿಸಲಾಯಿತು.

ಬಾಕಿ ಅರ್ಜಿದಾರರಲ್ಲಿ [illegible] ಈ ಕೆಳಗಿನ 4 ಅರ್ಜಿದಾರರು ಅವರಿಗೆ ನೇಮಿಸುವ ಸಹಕಾರಿ ಇನ್‌ಸ್ಪೆಕ್ಟರವರ ಜೊತೆಯಲ್ಲಿ [illegible] ತಿಂಗಳ ವರೆಗೆ ತಮಗಳ ಸ್ವಂತ ಖರ್ಚಿನಲ್ಲಿ ತರಬೇತು ಆಗಬೇಕೆಂದೂ, ಹಾಗೆ ತರಬೇತು ಹೊಂದಿ ಏಟಿ ಸ್ಟ್ರಾರವರಿಂದ ಸರ್ಟಿಫಿಕೇಟ್ ಪಡೆದಲ್ಲಿ ಖಾಲಿ ಬಿದ್ದ ಸ್ಥಳಕ್ಕೆ ನೇಮಿಸುವುದಾಗಿ ತೀರ್ಮಾನಿಸಲಾಯಿತು.

1. ಎನ್. ಎಸ್ ರಾಮಚಂದ್ರಯ್ಯನವರು ನಾಪೋಕ್ಲಿನಲ್ಲಿಯೂ, 2. ಚೋವಂಡ ದೇವಯ್ಯನವರು ಮತ್ತು 3. ಪುಗ್ಗೆರ ಚಿನ್ನಪ್ಪನವರು ವೀರರಾಜಪೇಟೆಯಲ್ಲಿಯೂ ಮತ್ತು 4 [illegible] ಚಿನ್ನಪ್ಪನವರು ಮಡಿಕೇರಿಯಲ್ಲಿಯೂ ತರಬೇತಾಗಬೇಕೆಂದು ತೀರ್ಮಾನಿಸಲಾಯಿತು.

4. ಇನ್ನು [illegible] ಒಂದು ಮಾಸ ಪತ್ರಿಕೆಯನ್ನು ಪ್ರಕಟಿಸಿ [illegible], ಅದಕ್ಕೆ [illegible] ಮೂರು ಕೈಯು, ಮೇರೆ [illegible] ದಾದಾರರಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

5. ಕಳೆದ ವರ್ಷದ ವಾರ್ಷಿಕ ಪತ್ರಿಕೆ ಛಾಪಾ ಮಾಡಿಸಿ ಬಾಕಿ ಇರುವ ಮೊಬಲಗನ್ನು ಸುಪರ್‌ವೈಜರುಗಳಿಗೆ ಯೂನಿಯನ್‌ಗಳ ಮೂಲಕ ಬರೆದು ವಸೂಲು ಮಾಡಿಸುವಂತೆ ತೀರ್ಮಾನಿಸಲಾಯಿತು.

ಪಿ ದೇವಯ್ಯ,
(ಅಧ್ಯಕ್ಷರು.)

ಮಡಿಕೇರಿನಾಡು ಸ್ಟೋರ್.

ತಾ. 12—7—31ರಲ್ಲು ಸಹಕಾರ ಫೆಡರೇಶನ್ ಆಫೀಸಿನಲ್ಲಿ ನಡೆದ ಮಡಿಕೇರಿ ನಾಡು ಸಹಕಾರ ಸ್ಟೋರಿನ ಜನರಲ್ ಮೀಟಿಂಗಿನ ಪ್ರೊಸೀಡಿಂಗ್ಸಿನ ವಿವರ.—29 ಜನರು ಹಾಜರಿದ್ದರು. ಮ. ಮಂಡೇಟಿರ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು.

1. ತಾರೀಕು 1—6—31ರಲ್ಲು ನಡೆದ ಜನರಲ್ ಮೀಟಿಂಗಿನ ಮತ್ತು ತಾರೀಕು 27—6—31ರಲ್ಲು ನಡೆದ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸುಗಳನ್ನು ಓದಿ ಹೇಳಿದುದನ್ನು ಒಪ್ಪಲಾಯಿತು.

2 ಮ. ಮಂಡೇಟಿರ ಅಪ್ಪಯ್ಯನವರು ತಮ್ಮ ಪ್ರೆಸಿಡೆಂಟ್ ಕೆಲಸಕ್ಕೆ ರಾಜೀನಾಮೆ ಕೊಟ್ಟದನ್ನು ಅಂಗೀಕರಿಸಲಾಯಿತು.

3. ಈ ದಿನದ ಮೀಟಿಂಗಿಗೆ ರಾ ಬಾ. ಕೆ ಸುಬ್ಬಯ್ಯನವರು ಅಧ್ಯಕ್ಷರಾಗಬೇಕಾಗಿ ಸೂಚಿಸಲ್ಪಟ್ಟನಂತರ ಸದರಿಯವರು ಸರ್ವ ಸಮ್ಮತದಿಂದ ಅಧ್ಯಕ್ಷಸ್ಥಾನವನ್ನು ವಹಿಸಿದರು

4 ಮಡಿಕೇರಿನಾಡು ಮೆಂಬರು ಸಂಘಗಳ ಪರವಾಗಿ ಪ್ರತಿನಿಧಿಗಳ ಪೈಕಿ ಈ ಕೆಳಗಿನ 4 ಜನರನ್ನು ಕಮಿಟಿ ಮೆಂಬರುಗಳಾಗಿ ಸರ್ವ ಸಮ್ಮತದಿಂದ ಆರಿಸಲಾಯಿತು

(1) ಮ. ಗಳಂದ ಮಂಡೇಟಿರ ತಿಮ್ಮಯ್ಯನವರು (2) ಸಾರಂಡಿರ ಮಂದಪ್ಪನವರು (3) ಬೈರಂಡಿರ ಗಣಪತಿಯವರು, ಮತ್ತು (4) ಊರುಗಟ್ಟಿರ ಮುತ್ತಣ್ಣನವರು.

ಬಿಡಿಮೆಂಬರುಗಳ ಪರವಾಗಿ ಈ ಕೆಳಗಿನ 5 ಜನರನ್ನು ಕಮಿಟಿ ಮೆಂಬರುಗಳಾಗಿ ಬಹುಮತದಿಂದ ಚುನಾಯಿಸಲಾಯಿತು

(1) ರಾ. ಬಾ ಪಿ. ದೇವಯ್ಯನವರು, (2) ರಾ. ಬಾ ಕೆ ಸುಬ್ಬಯ್ಯನವರು, (3) ರಾ. ಸಾ. ಕೆ. ಐಯ್ಯಣ್ಣನವರು, (4) ಮ. ಯಸ್ ಬಸಪ್ಪನವರು, ಮತ್ತು (5) ಮ ಮೇರಿಯಂಡ ಭೀಮಯ್ಯನವರು

5. ಈ ಮೇಲ್ಕಂಡ ಕಮಿಟಿಯವರ ಪೈಕಿ ರಾ ಸಾ ಕೆ. ಐಯ್ಯಣ್ಣನವರನ್ನು ಸ್ಟೋರಿನ ಪ್ರೆಸಿಡೆಂಟರಾಗಿಯೂ, ಮ ಮನೆಯಪಂಡ ಬೆಳ್ಯಪ್ಪನವರನ್ನು ಗೌರ್ನದರ್ಶಿಯರಾಗಿಯೂ, ಮ. ಯಸ್. ಬಸಪ್ಪನವರನ್ನು ಖಜಾಂಚಿಯರಾಗಿಯೂ ಸಮ್ಮತದಿಂದ ಆರಿಸಲಾಯಿತು

6. ರಜಿಸ್ಟರಾದ ಬೈಲಾ ನಂಬರು 17ರಲ್ಲಿ 'ಸಂಘದ ಪಾಲು ಭಂಡವಾಳವು ತತ್ಕಾಲಕ್ಕೆ ಪಾಲು ಒಂದರ ರೂಪಾಯಿ 20 ಆಗಿದ್ದು, 1000 ರೂಪಾಯಿಗಳಿಂದ 20,000 ಪಾಲು ಭಂಡವಾಳವಾಗಿರತಕ್ಕದ್ದು' ಎಂಬುವುದರ ಬದಲಿಗೆ 'ಸಂಘದ ಪಾಲು ಭಂಡವಾಳವು ತತ್ಕಾಲಕ್ಕೆ ಪಾಲು ಒಂದರ ರೂಪಾಯಿ ಹತ್ತು ಆಗಿದ್ದು 2000 ಪಾಲುಗಳಿಂದ ರೂ. 20,000 ಪಾಲು ಭಂಡವಾಳವಾಗಿರತಕ್ಕದ್ದು' ಎಂದು ತಿದ್ದುಪಡಿ [illegible] ಸರ್ವ ಸಮ್ಮತದಿಂದ ತೀರ್ಮಾನಿಸಿ, ತಿದ್ದುಪಡಿ ಮತ್ತು ಮಂಜೂರಾತಿ ಬಗ್ಗೆ ರಿಜಿಸ್ಟ್ರಾರವರಿಗೆ ಬರೆದು ಕೊಳ್ಳುವಂತೆ ತೀರ್ಮಾನಿಸಲಾಯಿತು.

7. ಬೈಲಾ ನಂಬರು ೪೦ ಎಂಬುದನ್ನು 40 (a) ಎಂಬುದಾಗಿಯೂ '40 (b)' ಎಂಬ ಕಲಮನ್ನು ತೆರೆದು ಅದರಲ್ಲಿ ಈ ಕೆಳಗಿನ ಮೇರೆ 'ಸಂಘದ ವ್ಯಾಪಾರಗಳಿಗೆ ಬೇಕಾಗುವ ಜಿನಸು ವಗೈರೆ ಸಾಮಾನುಗಳನ್ನು ಕಾಲ ಕಾಲಕ್ಕೆ ಸರಿಯಾಗಿ ತಕ್ಕ ಧಾರಣೆಯಲ್ಲಿ ತರಿಸಲು ಬೇಕಾಗುವ ಏರ್ಪಾಡುಗಳನ್ನು ಮಾಡಲು 4 ಮಂದಿಗೆ ಜಾಸ್ತಿ ಇಲ್ಲದ ಒಂದು ಪರ್ಚೇಸಿಂಗ್ ಕಮಿಟಿಯನ್ನು ಏರ್ಪಾಡು ಮಾಡಲು ಕಮಿಟಿಯವರಿಗೆ ಅಧಿಕಾರವಿರತಕ್ಕದ್ದು. ಮತ್ತು ಇವರುಗಳ ಕೆಲಸವನ್ನು ನಡೆ ಕಮಿಟಿಯವರೇ ನಿಶ್ಚಯಿಸಿ, ಅವರ ಮೇಲೆ ತಕ್ಕ ಉಸ್ತುವಾರಿ ಮಾಡತಕ್ಕದ್ದು.' ಎಂಬದನ್ನು ಸೇರಿಸಿ ತಿದ್ದುಪಡಿ ಬಗ್ಗೆ ಮತ್ತು ಮಂಜೂರಾತಿ ಬಗ್ಗೆ ಈ ಪ್ರೊಸೀಡಿಂಗ್ಸಿನ ನಕಲಿನೊಂದಿಗೆ ರಜಿಸ್ಟರಾದ ಬೈಲಾವನ್ನು ರಿಜಿಸ್ಟ್ರಾರವರಿಗೆ ಕಳುಹಿಸುವಂತೆ ಸರ್ವಸಮ್ಮತದಿಂದ ತೀರ್ಮಾನಿಸಲಾಯಿತು.

ಅಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗನ್ನು ಬರಖಾಸ್ತು ಮಾಡಲಾಯಿತು.

ಕೆ. ಸುಬ್ಬಯ್ಯ,
(ಅಧ್ಯಕ್ಷರು)

ಪತ್ರವ್ಯವಹಾರ.

ಬಾತ್ಮಿದಾರರು ನಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ರಿಟ್ರೆಂಚ್ ಮೆಂಟ್.

ಅಯ್ಯ,

ಮಡಿಕೇರಿಯಲ್ಲಿ ಒಂದು ರಿಟ್ರೆಂಚ್‌ಮೆಂಟ್ ಕಮಿಟಿ ಕೆಲಸ ಮಾಡುತ್ತಿದೆಯೆಂದೂ ಆ ಕಮಿಟಿಯ ಉದ್ಯೋಗಸ್ಥರಲ್ಲದ ಮೆಂಬರುಗಳು, ಮ. ಬಿ ಶ್ರೀನಿವಾಸರಾಯರು ಮತ್ತು ರಾಜೈಶ್ವರ್ಯನವರೆಂದು ಸಹ ತಿಳಿಯುತ್ತೇನೆ. ಈ ಮೆಂಬರುಗಳನ್ನು ಕೌನ್ಸಿಲಿನಲ್ಲಿ ಮೆಂಬರುಗಳೇ ಚುನಾಯಿಸಿ ಸರಕಾರದವರೇ ನೇಮಕವಾದುದು ತಿಳಿಯಿತು. ತೃಪ್ತಿಕರ ಹಾಗಾದರೆ ಅವರ ಅಭಿಪ್ರಾಯಗಳು ಎಷ್ಟರ ಮಟ್ಟಿಗೆ ಜನಗಳಿಗೆ ಅನುಕೂಲವಾಗಿರುತ್ತದೋ ಏನೋ ನೋಡಬೇಕಾಗಿದೆ.

ಭೂಲೋಕದಲ್ಲಿ ಎಲ್ಲಾ [illegible] ಹಾಗೆಯೇ ಸ್ವಭಾವಿಕವಾಗಿ ಈ ರಿಟ್ರೆಂಚ್‌ಮೆಂಟ್ ಬಡವರೇ ಅವರೆ, ಗುಮಾಸ್ತೆಗಳೂ, ಪೋಲೀಸು [illegible]ಗಳೂ, ಜವಾನರೂ, ಬಡ ಗುಮಾಸ್ತರು [illegible] ದುಡಿಯುವರೆಂಬ ವರ್ತಮಾನ. ಈ ಮೊದಲು [illegible] ರಿಟ್ರೆಂಚ್‌ಮೆಂಟಿನಲ್ಲಿಯೂ, ಸಹ ಬಡವರನ್ನು [illegible] ವರಿಗೆ ಹೆಚ್ಚು ಅನುಕೂಲ ಮಾಡಿರುತ್ತಾರೆ. ಈ [illegible]ನ ಕಮಿಟಿಯವರು ಮೊದಲೆ ಏನತ್ತು ರೂಪಾಯಿ [illegible]ಲ್ಪಟ್ಟವರ ಸಂಬಳವನ್ನು ಕಡಿಮೆ ಮಾಡುವುದೂ, [illegible]ವಾಗಿ ಸಂಬಳ, ಬತ್ತ ತಿನ್ನುವ, ಗಜೆಟೆಡ್ ಉದ್ಯೋಗಸ್ಥರ ಕಡಿಮೆ ಮಾಡಲಿಕ್ಕೆ ಪ್ರಯತ್ನ ಪಡಬೇಕಾಗಿ [illegible] ಸೂಚನೆ.

ಈ ಮಧ್ಯೆ ಯಾವುದೋ ಒಂದು ಸಂಸ್ಥೆಯ [illegible] ಕೆಲಸ ಮಾಡಲಿಕ್ಕೆ ಅನರೆ ಸಬ್‌ಜಡ್ಜಿಯವರ [illegible] ಕೈ ಹಿಡಿಯುವರಾಗಿ ಮಾಡಲಿಕ್ಕೂ, ಒಬ್ಬ ರೆವಿನ್ಯೂ ಸೇನಲ್ ಅಸಿಸ್ಟೆಂಟರನ್ನಾಗಿ ಮಾಡಲಿಕ್ಕೂ, [illegible] ಇನ್ಸ್‌ಪೆಕ್ಟರನ್ನು ಅಸಿಸ್ಟೆಂಟ್ ಇನ್ಸ್‌ಪೆಕ್ಟರನ್ನಾಗಿ [illegible] ಸೂಚನೆ ಕೊಟ್ಟಿರುವರಂತೆ ಅಹಾ, ಏನು ಚೆನ್ನಾಗಿ [illegible]ಗಿನಲ್ಲಿ ಈ ರೀತಿ ಆಗಲಿಕ್ಕೆ ಸಾಕು! ಕೆಲವು ಕುಟ್ಟು [illegible]ನುಕೂಲಕ್ಕಿರುವ ರಾಜ್ಯಭಾರವೆಂದು ಈ ಮೊದಲಿ[illegible] ದಿಂದ ತಿಳಿಯದೇ?

ರಿಟ್ರೆಂಚ್‌ಮೆಂಟಿನ ವಿಷಯ ನಮ್ಮ ಸರಕಾರದ [illegible]ನ್ನು ಗಟ್ಟಿಮಾಡಿದ್ದರೆ ಈ ಕೆಳಗಿನ ವಿಷಯಗಳನ್ನು [illegible] ಜಾರಿಗೆ ತರುವುದು

1 ಇಪ್ಪತ್ತೈದು ವರ್ಷ ಸರ್ವೀಸಾದವರನ್ನು [illegible] ಕಳುಹುವುದು

2 ಇದಕ್ಕಿಂತ ಕಡಿಮೆ ಸರ್ವೀಸು ಮಾಡಿದ [illegible]ಟ್ಟರೆ ಅವರನ್ನು ಸಹ ಹತ್ತಿರುವ ಪೆನ್‌ಷನ ಕೊಟ್ಟು [illegible] ಸುವುದು ಮತ್ತು ಹೀಗೆ ಖಾಲಿ ಬಿದ್ದ ಉದ್ಯೋಗಗಳ [illegible] ಭರ್ತಿಮಾಡದೆ ಹಾಗೆಯೇ ಬಿಡುವುದು

3 ಟ್ರೆಜರಿ ಆಫೀಸರ ಹುದ್ದೆಯನ್ನು ತೆಗೆದು [illegible]ಬ್ ಜಡ್ಜಿಯವರನ್ನು ಟ್ರೆಜರಿ ಆಫೀಸರಾಗಿ [illegible] ಮತ್ತು ಇಂಗ್ಲಿಷ್ ಆಫೀಸು ಮೇನೇಜರನ್ನು [illegible] ಕೌನ್ಸಿಲು ರಿಪೋರ್ಟರಿಗೆ ಆ ಚಾರ್ಜು ಕೊಡುವುದು [illegible] ಕೆಲಸವನ್ನು ಶ್ರೀಘ್ರದಲ್ಲಿ ಮಾಡಿ ಮುಂದಿನ [illegible] ಅಲ್ಲಿ ಪಡಿಸಿಯಿಂದ ಕೈಕೊಳ್ಳಬಾರದೇ?

ರಿಟ್ರೆಂಚ್‌ಮೆಂಟ್ ಕಮಿಟಿಯವರು ಏನು ಮಾಡುವರೆಂದು ನೋಡುವ.

'ಕಾರಣ'

ಕೊಡಗಿಗೆ ಬ್ಯಾಂಕು ಬೇಡವೇ?

ಮಹನೀಯರೇ

ನಮ್ಮಲ್ಲಿ ಪರಸ್ಪರ ಸಂಘಗಳಿಗೆ ಮಾತ್ರ [illegible] ಲ್ ಬ್ಯಾಂಕು ಇದೆ ಇದರ ವಹಿವಾಟುಗಳು [illegible] ವಾಯಿದೆ ಸಂಘಗಳಿಗೆ ಮಾತ್ರ ಇರುವುದು [illegible] ಎಷ್ಟು ಕಿಂಚಿತ ಮೊಬಲಗಿನಿಂದ ಮತ್ತು ಸ್ವಲ್ಪವೇ [illegible] ದಾರರಿಂದ ಅದರ ಕೆಲಸವನ್ನು ಕೈಕೊಂಡು [illegible] ನ್ನತ ಸ್ಥಿತಿಯಲ್ಲಿದೆ ಎಂದು ಹಾಗೆ [illegible] ಬೇರೆ ಬ್ಯಾಂಕುಗಳಿಗೆ ನಮ್ಮ ಈ ದೇಶದಲ್ಲಿ [illegible] ಯೂ ಅವಶ್ಯಕತೆ ಇಲ್ಲವೇ ಎಂದು ಕೇಳುತ್ತೇನೆ [illegible] ಯುರೋಪ್, ಅಮೇರಿಕಾ ಮೊದಲಾದ [illegible] 4 ಯೂ 5 ಸಾವಿರ ಜನಸಂಖ್ಯೆಗಳಿಗೆ ಒಂದು ಬ್ಯಾಂಕು [illegible]ವುದು ಬ್ಯಾಂಕಿನ ಸಹಾಯದಿಂದ ಸಹ [illegible] ಲ ಜನರಿಗೂ, ವ್ಯಾಪಾರಿಗಳಿಗೂ, ಕೃಷಿಕರಿಗೂ [illegible] ಕಾನೇಕ ಉಪಯೋಗದಿಂದ ಉದ್ಧರಿಸುವಂತಿದೆ [illegible] ಸರ್ಕಾರದ ಮತ್ತು ಪ್ರಜೆಗಳ ಸಹಕಾರದಿಂದಲೂ ನಡೆದಿರುವುದು.

ನಮ್ಮ ಈ ದೇಶದ ಜನರು ವ್ಯಾಪಾರಗಳಿಂದಲೂ [illegible]ಷಿ ಮತ್ತು ಅನೇಕ ತರಹದ ಸಂಪಾದನೆಗಳಿಂದಲೂ [illegible] ಉತ್ಪತ್ತಿಯನ್ನು ಪರದೇಶದ ಬ್ಯಾಂಕಿನಲ್ಲು ನಿರಖು [illegible]ತಿಯಾಗಿಯೂ, ಸರ್ಕಾರದಲ್ಲು ವಾರ್ ಬಾಂಡು, ಪೋಸ್ಟ್ ಆಫೀಸು ಕ್ಯಾಷ್ ಸರ್ಟಿಫಿಕೇಟುಗಳು ಮತ್ತು [illegible] ತಮ್ಮ ಕಪ್ಪಣದ ಪೆಟ್ಟಿಗೆಯಲ್ಲೇ ಉಳಿಸಿ ಮಾಡಿ[illegible] ನಮ್ಮ ದೇಶದ ಏಳಿಗೆಯನ್ನು ಮಾಡಲೆಗೊತ್ತಿರುತ್ತಾರೆ [illegible] ಗಾಗಲೇ ಸಹಕಾರ ಸೆಂಟ್ರಲ್ ಬ್ಯಾಂಕಿನವರು 40,000 ರೂಪಾಯಿಗಳನ್ನು ಪರದೇಶದ ಬ್ಯಾಂಕುಗಳಿಗೆ ನಿರಖು [illegible]ತಿಗೆ ಕಳುಹಿಸುವರಾಗಿ ತೀರ್ಮಾನ ಮಾಡಿರುತ್ತಾರೆ.

ನಮ್ಮ ದೇಶದಲ್ಲು ಬೇರೆ ತರಹದ ಬ್ಯಾಂಕುಗಳಿ[illegible]ದ್ದ ಪಕ್ಷ ಈ 40,000 ರೂಪಾಯಿಗಳನ್ನು ನಮ್ಮ ಈ [illegible]ಲ್ಲೇ ಉಪಯೋಗಿಸಿ ಬಡ ರೈತರ ಗೋಳನ್ನು ಪರಿ[illegible] ಹರಿಸಬಹುದಿತ್ತಲ್ಲವೇ. "ಖರ್ಜೂರವು ಹಣ್ಣಾಗುವಾಗ ಕಾಗೆಗೆ ಬಾಯಲ್ಲಿ ಹುಣ್ಣಾಯಿತು" ಎಂಬ ಗಾದೆಯು ಇಲ್ಲಿ ಹೋಲುವುದು. ಮತ್ತು ಮುಂದಕ್ಕೆ ನಿರಖು [illegible] ಒರುವ ಹಣವನ್ನು ಡೈರೆಕ್ಟರುಗಳು ಇನ್ನೊಂದಾವೃತ್ತಿ ಪೂರ್ಣಿಸುವ ವರೆಗೆ ತೆಗೆದುಕೊಳ್ಳಬಾರದೆಂದಾಗಿಯೂ ಸಹ ತೀರ್ಮಾನಿಸಿರುವರು. ಇದು ನೋಡಿದರೆ ಹಣವು ಒರತೆ ಇರುವುದೆಂದು ಗೊತ್ತಾಗುತ್ತೆ.

ಅಲ್ಲದೆ ಸರಕಾರದ ಸೆಂಟ್ರಲ್ ಬ್ಯಾಂಕು ಉತ್ಸನ್ನವಾ ಗಿರುವುದೇ ಇನ್ನೊಂದು. ಬ್ಯಾಂಕನ್ನು ಯಾರೇ ನಡೆಸಲಿ ಈ ಬ್ಯಾಂಕಿನ ಸಮೂಹನೆಯೂ ಇಂಪೀರಿಯಲ್ ಬ್ಯಾಂಕಿನ್ ನಡೆ ಯ ಹಾಗೆ ಇರಬೇಕು. ಇದನ್ನು ಸ್ವಲ್ಪ ದಿನಗಳಿಂದಲೂ, ಜನ ಕೊಡುವಂತೆಯೇ ಮೊದಲಾದ ಹಣಗಳಿಂದ ಖಂಡಿತ ವಾಗಿಯೂ ಜನಸಮುದಾಯದ ಏಳಿಗೆಗೆ ನಡೆಸಲು ನಮ್ಮ ಜ ನ್ನು ಸಾಧ್ಯವಾದರೂ ಇದೆ ಎಂದು ನಾನು ಒಲ್ಲೆನು.

ಇನ್ನು ಸಾಧಾರಣವಾಗಿ ಒಂದು 50 ರೂಪಾಯಿಯ ಜ ಮ್ಮ ಲಾಭಾಯಿಸಲಿಕ್ಕೆ ಸ್ಪೆನ್ಸರ್ ಯಾ, ಮೆಕ್‌ಡವೆಲ್ ಅ ಪಾಸ್ಟಾ ಕಂಪೆನಿಗಳಿಗೆ ಹೋಗಿ ಹುವ್ವ ಭಾರಿ ಒಟ್ಟ ಟ್ಟು ಪೂರ್ತಿ ಹಣವನ್ನು ಕಟ್ಟಿದರೆ 5, 10, 15 ರೂಪಾ ಯಿಗಳಾಗಿ ದಿನ ದಿನವೂ ಕೇಳಿಕೊಂಡು. ಒದಗಾಗುವುದು. ಹೀಗೆ ಸ್ಟಾಂಟುಗಳು ಹಲವು ವಿಧದಲ್ಲಿ ಸಂಕಟಪಡುತ್ತಿ ಬರುವ ನಮ್ಮ ಒಗ್ಗಟ್ಟಿನಿಂದ ಈ ಸಂಕಟವನ್ನು ಹೋಗ ಲಾಡಿಸ ಬಾರದೇ?

ನಮ್ಮ ಮುಂದಾಳುಗಳು ಮತ್ತು ಯುವಕರು ಕಡೆಯೂ ಡೆ ಈ ಕೆಲಸವನ್ನು ಕೈಕೊಳ್ಳುವುದಕ್ಕೆ ವಿಚಾರಮಾಡು ವಾಗಿಯೂ ಮತ್ತು ಪತ್ರಿಕೆಗಳು ಸಹ ಉತ್ತೇಜನ ಕೊಡುವ ಹಾಗೆ ಹೇಳುತ್ತೇನೆ. ಏ ಮು. ಸಿ

ಪೊಲೀಸು ಉದ್ಯೋಗಸ್ಥನ ಸೆ ಮಕ.

ಅಯ್ಯಾ ನ್ಯಾಯವಾದಿ,

ನ್ಯಾಯವಾದಿಯೆಂದು ಕರೆದುಕೊಳ್ಳಲಿಕ್ಕೆ ನಿನಗ ಧೈ ರ್ಯವುಂಟೇ? ಸ್ವಾರ್ಥವಾದಿಯೆಂದಿದ್ದಿದ್ದರೆ ತಪ್ಪು ಗೂಡ ಹಾಗೆ ಬರುತ್ತಲೇ ಇರಲಿಲ್ಲ. ಮೆ ಕೆ. ಬಂಗಪ್ಪನವರಿಗೆ ಕಟ್ಟು ಜವಾಬಿನಿಂದ ಸರ್ಕಾರದ ಮುಂದೆ ಕೊಡಗರನ್ನು ಬ ಹಿಷ್ಕಾರಿಗಳಾಗಿಯೂ, ಅನ್ಯಾಯಗಾರರಾಗಿಯೂ ತೋರಿಸಲು ಇ ಚ್ಛಿಸಿದ್ದೀರಿ. ಕೊಡಗರನ್ನು ಒರೆದು ಮೇಲೆ ಹತ್ತಲಿಕ್ಕೆ ನೋ ಡುವ ನಿಮ್ಮ ನಿಪುಣತೆಯು ಚೆನ್ನಾಗಿ ನಿಮ್ಮ ಲೇಖನದಲ್ಲೇ ತೋರುತ್ತಿದೆ ಲೋಕವು ಕುರುಡೆಂದು ಯೋಚಿಸಬೇಡ. ದೇಶವನ್ನು ಒಡೆದು ಹಾಳುಮಾಡಬೇಡಿ ಜನರು ಅವರವರ ಯೋಗ್ಯತೆಗೆ ತಕ್ಕ ಸ್ಥಳದಲ್ಲಿ ನಿಂತು ತಮ್ಮ ಕಾಲ ಕಳೆಯುವ ರು. ಶಿಕ್ಷ ಜನಾಂಗನಾದ ಅಂಗ್ಲೇಯರು ಎಷ್ಟು ನೂರು ವರ್ಷಗಳಿಂದ ನೇಮಗಳು ಅಕ್ಷವಿಸದ ಚಕ್ರಾಧಿಪತ್ಯವನ್ನು ಆಳುತ್ತಿದ್ದಾರೆಂಬುದು ತಮಗೆ ತಿಳಿಯದೇ? ಇದು ಅವರ ಸ ತ್ಯ, ಧೈರ್ಯ ಮತ್ತು ಸ್ಥೈರ್ಯದಿಂದಾಗಿದೆ. ಕಲಕತ್ತಾದಂತ ಕದಿಂದ ಇಲ್ಲಿರುವ ಕೊಡಗರಲ್ಲಿ ಕೆಲವರು ಮಾತ್ರ ಇಲ್ಲಿ ಉ ದ್ಯೋಗ ಮಾಡುತ್ತಿರುವುದು ತಮಗೆ ಹೊಟ್ಟೆಕಿಚ್ಚೇ? ಕೊಡ ಗರು ಲಂಡನ್ ಪಟ್ಟಣದಿಂದ ಒಂದು ಇಲ್ಲಿ ಆಳುತ್ತಾರೆಯೇ? ನಾವು ಕಾಲು ಪಾಲು ಕೊಡಗರು ವ ಎಷ್ಟಾಲು ಪಾಲು ಕೊ ಡಗೇತರರು ಇರುವರೆಂದು ಎನ್ನುವಿರಿ. ಕಾಲು ಪಾಲು ಕೊ ಡಗರಿನ್ನು ಮಾರು ಕೊಡಗರೇ ಮುಕ್ಕಾಲು ಪಾಲು ಕೊಡ ಗೇತರರಲ್ಲಿ ಯಾರೆಲ್ಲ ಇರುವರೆಂದು ನೋಡುವ ಪರದೇಶ ಗಳಿಂದ ಒಂದ ಕೂಲಿಕಾರರ ಸಂಬೆ ಎಷ್ಟೋ ಸಾವಿರ ವ್ಯಾ ಪಾರಕ್ಕಾಗಿ ಒಂದ ಒಟ್ಟಿಲ್, ಮಲಿಯಾಳಿ, ಮಂಗಳೂರು, ಮೈಸೂರು, ಮದರಾಸು ಮೊದಲಾದ ಜನರು ಎಷ್ಟೋ ಸಾ ವಿರ. ಉದ್ಯೋಗ, ಬಾಯರ ವೃತ್ತಿ, ಹೋಟೇಲ್, ಕಾಫಿ ತೋಟಗಳ ರೈಟರು, ಮೇಸ್ತ್ರಿಗಳು, ಅಪಪ್ಪೋ! ದೇರ ವ್ಯಾ ಪಾರಸ್ಥರು ಎಷ್ಟೋ ಸಾವಿರ ಸಂತೆಗೆ ಬಂದವರು, ಸೆಂಟ ರು ಇಸ್ಪರು, ಗಾಡಿಯವರು, ಮೋಟಾರಿನವರು ಅದೆಷ್ಟೋ ಸಾವಿರ ಕಾಯಿ ಕೊಡಗೇತರರು, ತಂಪೆ ವ್ಯೆಸೂರ, ತಂ ಬೆ ಕೊಡಗೇತರ ಅಣ್ಣ ಮದರಾಸಿ, ಅಕ್ಕ ಮೈಸೂರು, ತಾಯಿ ಬೆಂಗಳೂರು ಇವರು ಎಷ್ಟೋ ಸಾವಿರ ಈ ಸಂಖ್ಯೆಯ ನ್ನು ಕೊಡಗರ ಸಂಖ್ಯೆಯೊಡನೆ ಹೋಲಿಸಿ ಘನ ಸರ್ಕಾರದ ಮುಂದಿಟ್ಟು ಕೊಡಗೇತರರೇ ಹೆಚ್ಚೆಂದು ತೋರಿಸಿ ತಮ್ಮ ಉದ್ದೇಶವನ್ನು ನೆರವೇರಿಸಲು ಯತ್ನಿಸುತ್ತೀರಿ ಎನಯ್ಯಾ ನ್ಯಾಯವಾದಿ, ಸಣ್ಣಾಯು ದನಕರಗಳ ಸಂಖ್ಯೆಯನ್ನೂ ಸಹ ಕೊಡಗೇತರರ ಸಂಖ್ಯೆಗೆ ಸೇರಿಸಲು ಬಿಟ್ಟು ಹೋಯಿತಲ್ಲವೇ! ತಂದೆ ತಾಯಿಗಳಿಬ್ಬರೂ ಕೊಡಗಿನಲ್ಲೇ ಹುಟ್ಟಿ ಬೆಳೆದು ಮೂ ರು ತಲೆಮಾರಿನಿಂದ ಇಲ್ಲಿರುವ ಕೊಡಗೇತರರೆಷ್ಟು? ಸಾವಿರ ಇರಬಹುದೋ? ಇಲ್ಲಿ ಈ ದಿನ ಕೊಡಗೇತರ, ನಾಳೆ ಸಿಂಗಾ ಪುರ ಎನ್ನುವುದನ್ನು ತಿಳಿಯುವಿರೋ? ದೇಶದಲ್ಲಿ ಈ ತರ ತಿರು ಗಾಡುವವರ ಸಂಖ್ಯೆಯನ್ನು ಎತ್ತಿಕೊಂಡು ಇಲ್ಲೇ ಜೀವಿಸಿ ಕಾ ಲ ಕಳೆಯುವವರನ್ನು ಒಡೆದು ದೇಶವನ್ನು ಹಾಳುಮಾಡಬೇಡಿ

ಹಿಂದುಳಿದವರು, ಮುಂದುಳಿದವರೆಂದು ಬೊಬ್ಬೆ ಹೊಡೆ ಯುತ್ತೀರಿ ಕೊಡಗರೇ ಹಿಂದುಳಿದವರು ಇದನ್ನೂ ಕೊ ಡಗೇತರ ಎಷ್ಟೋ ದೇಶದಿಂದ ಇಲ್ಲಿ ಒಂದು ಕುಂಟುವ ನ ಸಂಗಡ ಕೊಡಗರಿಗೆ ಹೋರಾಡಬೇಕಾಗುವುದು ಎನ್ನುವನ್ನು ಪ್ರತ್ಯೇಕವಿಟ್ಟು ಅಂಗ್ಲ ಸರ್ಕಾರವು ಆಳುತ್ತಿರುವುದು ತಮಗೆ ತಿಳಿಯದೇ? ಈ ದೇಶದ ಬ್ರಾಹ್ಮಣರು, ನಾಯುಡು, ಶೆಟ್ಟಿ, ಗೌಡರು ಇನ್ನು ಸೇಟರುಗಳು ಮುಂದುವರಿದವರೆಂದು ಇವರಿಗೆ ಹೆಚ್ಚಿನ ರಾಜಕೀಯ ಹಕ್ಕು ದೇಶ ಪ್ರಾಂತ್ಯಗಳಲ್ಲಿ ಕೊಟ್ಟಿರುವುದು ತಮಗೆ ತಿಳಿಯದೇ? ವಿದ್ಯೆ ಕಲಿತ ಕೆಲವರನ್ನು ಕೊಡಗರು ಹೊಸ ಪಾಠಶಾಲೆ ಕಟ್ಟಲು ಕಷ್ಟ ಸಹಿಸಿ ಕಾಲ ಕಳೆಯುವುದನ್ನು ಮುಂದಿಟ್ಟು ಅವರನ್ನು ಮುಂದುವರಿ ದವರೆಂದು ತೋರಿಸಿ ತಾವು ಆಲೋಚಿಸುವವರೇ? ಮನೆ ಮಠ ಬಿಟ್ಟುಕೊಂಡು ತಿರುಗುವವರು ಹಿಂದುಳಿದವರೋ? ಮುಂದಾಳುತ್ವ ನಾಂದಿಯವರು ಯಾರು? ಇದು ನನ್ನ ದೇಶ ನನ್ನ ನಾಡು, ನನ್ನ ಊರೆಂದು ಉಳಿಯುವ ಕೊಡಗೇತರರು ಎಷ್ಟಿದ್ದಾರೆ? ಕೊಡಗೇತರರಿಗೆ ಇದು ಧರ್ಮಶಾಲೆಯೇ ತವರು (Home) ಕೊಡಗರಿಗೆ ಈ ಕಾಡು ದೇಶ ಮಾತ್ರ ತವರುಮನೆಯಾಗಿದೆ ಕೊಡಗರು ಎಲ್ಲಿಯೂ ಬೆಳೆಯಲಾರ, ಉಳಿಯಲಾರ, ಅಳಿಯ ಲಾರ ಕೊಡಗರಿಗೆ ಬೇರೆ ದೇಶದಲ್ಲಿ ಸ್ಥಳವಿಲ್ಲ ಕೊಡ ಗರವರು ಕಾಸ. ನಾಮಧಾರಿ ತಾಲೂಕು, ರಾಮಣ್ಣನ ಮ ಗ ಕರೋಮಸುಂದರನೆಂದು ಎಲ್ಲಿಯೂ ಉದ್ಯೋಗ ಹೊಂದ ದನು. ಕೊಡಗರು ಹೊರಗಿ ಉದ್ಯೋಗಕ್ಕಾಗಿ ನಿಂತೊಡನೆ ಅವನನ್ನು ಕಂಡು ಹಿರಿಯರು Hallo, you are a coorg, I am sorry I cannot employ you I know that you are much better in every way. But what to do Go and try in your own place ಎಂದ ಬಳಿಕ ಸಿಕ್ಕುತ್ತದೆ ಈ ದೇಶವನ್ನು ತಮ್ಮ ಸರ್ವಸ್ವವೆಂದೂ, ಇಂಗ್ಲಾಂಡನ್ನು ಅಂಗ್ಲೇಯರು ನಂಬಿದಂತೆ ಕೊಡಗನ್ನು ಕೊ ಡಗರು ನಂಬಿ ಬದುಕುವುದನ್ನೂ, ಅವರ ಸ್ಥಳ, ಕಾಲ, ಕಾರಣ, ಗುಣಗಳನ್ನೂ ಅವರ ದೇಶ ಪ್ರೇಮವನ್ನೂ ಈಗಿನ ಸರ್ಕಾ ರವು ಅವರ ಅಭ್ಯುದಯದಂತೆ ನೋಡಲಿಕ್ಕೆ ತಪ್ಪಬೇಕೇ?

ಕೊಡಗರನ್ನು ಮದರಾಸು ಬ್ರಾಹ್ಮಣರಂತೆ ತೋರಿಸಿ ಅವರನ್ನು ಯಾಕೆ ಮಾಡಲಿಕ್ಕೆ ಪ್ರಯತ್ನಿಸುತ್ತೀರಿ ಇ ದು ನ್ಯಾಯವಾದವೇ? ನೂರು ಕೊಡಗರಿಗೆ ಒಬ್ಬ ಮದರಾ ಸು ಬ್ರಾಹ್ಮಣನನ್ನು ಹೋಲಿಸಲು ಸಾಧ್ಯವೇ? ತಿರುಗಲಾರದ ಒಬ್ಬರು ಬೇರೆ ಉದ್ಯೋಗಕ್ಕೂ, ಕಟ್ಟ ನಡತೆಯಿಂದ ಒಬ್ಬರು ಜೈಲಿಗೂ, ಕೆಲಸ ತಿಳಿಯದೆ ಒಬ್ಬರು ಮನೆಗೆ ಹೋದ ಕೊಡ ಗೇತರ ಪೊಲೀಸ್ ಉದ್ಯೋಗಸ್ಥರನ್ನು ಸಹ ಕೊಡಗರ ಹಾವ ಳಿಯಿಂದ ಹೋದರೆಂದು ತೋರಿಸಲು ಪ್ರಯತ್ನಿಸುತ್ತೀರಲ್ಲ ವೇ? ಎಂಥಾ ನ್ಯಾಯವಾದಿ! ಕೆಲವು ಕೊಡಗರನ್ನು ಹೊಗಳಿ ತಮ್ಮ ರೊಟ್ಟಿಗೆ ತುಪ್ಪ ಬೀಳಿಸಲು ಪ್ರಯತ್ನಿಸುತ್ತೀರಿ.

ತಮ್ಮವರ ಪ್ರಾಯ 30 ಇರಬಹುದು. ಇದಕ್ಕಾಗಿ ಸ ರಕಾರವು ಬಾಗಾಸನವನ್ನು ಮೂಲೆ ಗೊತ್ತಿ ತನ್ನ ಹೇರು ಹಾಳುಮಾಡಿಕೊಂಡು ನಿಮಗಾಗಿ ಸರಕಾರವು 25 ರಿಂದ ಪ್ರಾ ಯ ನಿರ್ಬಂಧನೆಯನ್ನು 30 ಕ್ಕೆ ಏರಿಸಬೇಕೇ? "ಅಯ್ಯೋ, ನನ್ನ ಜಾವನ ಪ್ರಾಯ 28 ಆದುದರಿಂದ ಪ್ರಾಯನಿರ್ಬಂಧನೆಯನ್ನು 28 ಕ್ಕೆ ಏರಿಸಿರಿ"ದು ಏಕೆ ಕೇಳಿರಿ? ಮೆಲ್ಲ ಮೆಲ್ಲನೆ ನರ ನಾಯವನ್ನು ಕಟ್ಟೆ ಕೊಡಗರ ನ್ಯಾಯ ಮತ್ತು ಧರ್ಮ ನ ಡತೆಗೆ ಕುಂದು ತಂದು ಸರ್ಕಾರದ ಮುಂದಿಡಲು ನೋಡು ತ್ತಿದ್ದೀರಿ. ತಾವು ದಾನವಾಗಿ ತಮ್ಮ ಉದಾರತ್ವದಿಂದ ಉ ದ್ಯೋಗವನ್ನು ಕೊಡಗರಿಗೆ ಕೊಡಲಿಲ್ಲ. ಸಾಧ್ಯವಾದಲ್ಲಿ ಈ ದಿನವೇ ಕೊಡಗರನ್ನು ದೇಶದಿಂದ ಹೊರಗೆ ಓಡಿಸುವಿರೆಂದು ತಮ್ಮ ಲೇಖನವು ತೋರಿಸುತ್ತದೆ. ಇದು ತಮಗೆ ಸಾಧ್ಯ ವೇ? ಕೊಡಗೇತರರ ಕಂದಾಯದಲ್ಲಿ ಇಂಗ್ಲೀಸು ಪ್ಲಾಂಟ ರುಗಳ ಕಂದಾಯವೆಷ್ಟೆಂಬುದು ತಿಳಿದಿರುವಿರೋ? ತಮ್ಮ ಲೇಖನವು ಸರಕಾರಕ್ಕೆ ಒಂದು ಮೆಮೋರಿಯಲೆಂದು ಜನರಿಗೆ ತಿಳಿಯದೆಂದು ತಿಳಿದಿರುವಿರೋ? ಪೊಲೀಸ್ ಉದ್ಯೋಗದ ಚ ರ್ಯವನ್ನು ತೆಗೆದುಕೊಂಡಲ್ಲಿ ಅದಕ್ಕೆ ತಕ್ಕ ಯೋಗ್ಯರನ್ನು ಕೊಡಗು ಮಹನ್ಮದೀಯರು ಮತ್ತು ಕೊಡಗರು ಯೋಗ್ಯ ರೆಂದರೆ ವಂಚನೆಯಾಗಲಿಕ್ಕಿಲ್ಲ. ಕೊಡಗಿನ ಮುಸಲ್ಮಾನರು ಕೊಡವರೇ ಆಗಿರುತ್ತಾರೆ ಅವರಲ್ಲಿ ಒಬ್ಬ ಯುವಕರಿಗೆ ಈ ಉದ್ಯೋಗಕೊಟ್ಟರೆ ನಮಗೇನೋ ಸಂತೋಷ ಇತರ ಕೊ ಡಗೇತರರು. ನಮಯು ಮತ್ತು ಆಧ್ಯನರಿತು ಕೊಡಗಿನಿಂದ ಜಾರಬಿಡುವರು. ದೇಶದ ಹಿತಚಿಂತನೆ ಅವರಲ್ಲಿ ಎಷ್ಟಿದೆ ಯೋ ತಿಳಿಯೆ ಕೊಡಗರು ತನ್ನ ಸಮುದಾಯದವರ ಮ ಧ್ಯದಲ್ಲಿ ಕೆಲಸಮಾಡುವುದರಿಂದ ತನ್ನ ನಡತೆ ಮತ್ತು ನೀತಿಯ ನ್ನು ಎಂದೂ ಮತ್ತು ಎಲ್ಲಿಯೂ ಕಾಪಿಡಲೇ ಬೇಕು

ಕೊಡಗು ಸರಕಾರವೇ ನಮ್ಮಿನಸ್ಪೆಕ್ಟರಾಗಿದ್ದವರನ್ನು ಡೆ ಪ್ಯುಟಿ ಸುಪರಿಂಟೆಂಡೆಂಟನ್ನಾಗಿ ಮಾಡಲು ಯೋಗ್ಯತೆ ಇವೆ ಎ ನ್ನುವರು ಸಬ್ಬಿನಸ್ಪೆಕ್ಟರು ಇನಸ್ಪೆಕ್ಟರಾಗಲಿಕ್ಕೆ ಯೋಗ್ಯರ ಲ್ಲವೆಂದು ಎನ್ನುವರು ಯಾವ ನ್ಯಾಯ? ಸರ್ಪವು ಅವರವರ ಹೊಟ್ಟೆ ಉರಿಸುವುದು ನ್ಯಾಯವಲ್ಲ.

'ಕೊಡಗರ ಪ್ರೇಮಿ'

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಶ್ರೀ ಶ್ಯಾಮೀಲೆ ಫೌಂಗಾರದ ಶಿಸ್ತು ಕೂಡಿದ ಮಾತ್ರಾಸ್.
ಒಂದು ವರ್ಷ ಬರುವ ಫೌಂಟೆನ್ ಪೆನ್‌ಗಳು.

ಕಲರ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ 3 0 0
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3 3 0
„ ಸ್ಕ್ರು ಕ್ಯಾಪ್ ಪೆನ್ 1ಕ್ಕೆ	3 8 0
„ ಲಗ್ ... ಸ್ಕ್ರು ಕ್ಯಾಪ್	
„ ... ಕಲರ್ ಫೌಂಟನ್‌ಪೆನ್ 1ಕ್ಕೆ	3 14 0
„ ... ಕಲರ್ ಸ್ಕ್ರು ಕ್ಯಾಪ್	
ಫೌಂಟನ್‌ಪೆನ್ 1ಕ್ಕೆ	4 2 0
„ ಸೆಲ್ಫ್ ಫಿಲ್ಲಿಂಗ್ ಮಾಡೆಲ್ ಅಥವ	
ಬ್ರವುನ್ ಕಲರ್ ಫೌಂಟನ್‌ಪೆನ್ 1ಕ್ಕೆ	3 8 0
...ಟ್ ಫೌಂಟನ್‌ಪೆನ್ 1ಕ್ಕೆ	10 8 0
...ಲ್ ಪೆನ್ 1ಕ್ಕೆ	14 6 0, & 20 10 0
...ಬರ್ ಫೌಂಟನ್‌ಪೆನ್ 1ಕ್ಕೆ	3 8 0, & 3 12
... ಫೌಂಟನ್ ಪೆನ್ 1ಕ್ಕೆ	6 4 0, & 6 12 0
...ಮನ್ ಫೌಂಟನ್ ಪೆನ್ 1ಕ್ಕೆ	8 2 0, & 8 10 0

ಟೈಂ ಪೀಸ ಗಳು.

ನತ್ತಿಂಗ್ ಇರುವ ಸಣ ಟೈಂಪೀಸ್ 1ಕ್ಕೆ	3 6 0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2 2 0
ರಿಗಲಿಯೂ ಆಕಾರದ ಟೈಂಪೀಸ 1ಕ್ಕೆ	6 9 0 & 6 15 0
ರಿಗಲಿಯೂ ಸಣ್ಣ ಸೈಜಿನ ಆಕಾರದ ಟೈಂಪೀಸ್ 1ಕ್ಕೆ	7 2 0
ರಿಗಲಿಯೂ ಆಕಾರದ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8 10 0
ಬಿಗ್ ಬೆನ್ ಆಕಾರದ ಟೈಂಪೀಸ್ 1ಕ್ಕೆ	9 6 0
ಬಿಗ್ ಬೆನ್ ಆಕಾರದ ಸ್ವಾಂಡ್ ಇರತಕ್ಕ ಬಾತ್ರಿ ಯಾದ ಟೈಂಪೀಸ್ 1ಕ್ಕೆ	13 4 0
ಬಾತ್ರಿಯೂ ಒಂದೋಬಸೂ, ಆದ ಪಾಕೆಟ್ ವಾಚ್ 1ಕ್ಕೆ	5 10 0
ಡಿಸೋ ನಮೂನೆಯುಳ್ಳ ಎಬ್ಬ ಹಾತ್ತ ಕಂಪೆನಿ ಯ ಪಾಕೆಟ್ ವಾಚ್ 1ಕ್ಕೆ	12 4 0
ನಿಕ್ಕಲ್ ಕೇಸ್ ಸಿಲಿಂಡರ್ ಮುಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12 8 0

... ಗಳು ... ನಿಕ್ಕಲ್ ನಮೂನೆ ಅಂದ ವಾದ ಟೇಬಲ್ ಟೈಂಪೀ ಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅ ಧಿಕವಾಗಿ.

ಮುಂಗಡಮಾರ್ ರವಾನಿಸುವವಿಳಾಸ — ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—ತಿ

ಪ್ರೊಸ್ಪೆಕ್ಟಸ್.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
[illegible]ವಸೂಲಾದ ಶೇರ್ ಮೊಬಲಗು	—	23 160
[illegible]ಜಮೊಬಂದ ಠೇವಣಾತಿ	—	2,16,472

[illegible] ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗ[illegible]ಗೇನೇ ಹೆಚ್ಚಾಗಿ ಸಾಲಕೊಡಲಾಗುತ್ತದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ರೂ. 5 0-0ರ ವರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ 1ರ ಬಡ್ಡಿ ದೊರೆಯುತ್ತೆ.

[illegible] ಕೋಆಪರೇಟಿವ್ ರಜಿಸ್ಟ್ರಾರವರು [illegible]

[illegible] ಪ್ರೆಸಿಡೆಂಟ್

[illegible] ಮನೆಯಪ್ಪಂಡ ವಿಟ್ಟಪ್ಪ ನವರು.

[illegible]

[illegible] ಬಿ.ಎ., ಎಲ್.ಟಿ.

[illegible] 7-1930

ಸಣ್ಣ ಹುಡುಗರ ಸಲುವಾಗಿ

[illegible]

ಇವರ

ಬಾಲಾಮೃತ

ವನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷ ಚಿತ್ತರೂ ಆಗುವವರು.

ಕೆ. ಟಿ. ಡೋಂಗರೆ ಕಂಪೆನಿ,

52-29 ಗಿರಿಗ್ರಾಂವ, ಮುಂಬಯಿ.

ನೋಟೀಸು.

[illegible] ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ [illegible] ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ [illegible] ಕೆಳಗಿನ ಸಬ್ ಏಜೆಂಟರುಗಳಿಗೆ [illegible] ರಶೀತಿ ಪುಸ್ತಕಗಳು [illegible] ಅವರಿಗೆ [illegible] ನಮ್ಮ [illegible] ಕೋರಿದೆ

ಏಜೆಂಟರುಗಳು

[illegible]ಕೊಡಗಿಗೆ ಮೆ. ಪಾಲೇಂಗಡ [illegible]ಪ್ಪನವರು,

[illegible] ಮೆ [illegible] ಪೂವಯ್ಯನವರು,

ದಕ್ಷಿಣ ಕೊಡಗಿಗೆ ಮೆ. ಅಲ್ಲಾರಂಡ ಮೋದಪ್ಪನವರು,

" ಮೆ ಚೆಕ್ಕೆರ ಪೊನ್ನಯ್ಯನವರು

" ಮೆ. ಸೋಮೆಯಂಡ ಅಚ್ಚಯ್ಯನವರು,

ಮರೆನಾಡು—ಮೆ ಕೇಕಿರ ಅಚ್ಚಯ್ಯನವರು.

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ. ಮಂಡೇಪಂಡ [illegible]ಯ್ಯನವರು, (ಖಾದಿಭಂಡಾರ)

[illegible]—ಮೆ ಆರ್. ಬೆಳ[illegible]ಯ್ಯನವರು

ಶ್ರೀಮಂಗಲನಾಡು—ಮೆ [illegible] ನಾಣಪ್ಪನವರು

ಗೋಣಿಕೊಪ್ಪಲು—ಮೆ [illegible] ಮಾದಪ್ಪನವರು,

ಬಿಟ್ಟಂಗಾಲ—ಸಿದ್ದಾಪುರ—ಮೆ. [illegible] ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. [illegible] ಮುತ್ತಯ್ಯನವರ,

" ಮೆ ಸಣ್ಣುವಂಡ ಬೋಪಯ್ಯನವರು

ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,

ಸುದಿಕೇರಿ & ತಿತಿಮತ್ತಿ—ಮೆ [illegible] ಪೂವಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೂವಯ್ಯನವರು.

ಸೂಚನೆ.—[illegible] ರಶೀತಿ [illegible] ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

"ಕೊಡಗು" ಲಿಮಿಟೆಡ್,

ಮಡಿಕೇರಿ

ಸರಕಾರಿ ಛಪ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—514 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—17[illegible]

[illegible] ಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ [illegible]

ಸಂಗ್ರಹವಾಗಿರುವ ಮೊತ್ತ—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1 78,322 ಜನರಿಗೆ 3[illegible] ಮೇಲಿನ ಕೆಲಸಗಳಲ್ಲಿ ಪ್ರೀಮಿಯಂ ಉತ್ಪತ್ತಿಯ ಶೇಕಡ 22 4ಕ್ಕಿಂತ ಹೆಚ್ಚು ಕಮ್ಮಿ ಖರ್ಚಿನಲ್ಲಿಯೇ [illegible]

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದು [illegible] ಹುತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛೆ[illegible] ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ [illegible]

ಅಥವಾ ಕಂಪೆನಿಯ ಕೆಳಗಿನ ಯಾವ [illegible] ಬರೆಯಬಹುದು

ಆಗ್ರ	[illegible]	[illegible]	ಬೆಂಗಳೂರು	ರಂಗೂನ್
ಅಹ್ಮದಾಬಾದು	ಕೊಲಂಬೊ	[illegible]ಹೋರ್	ನಾಗಪುರ	ರಾವಲ್[illegible]
ಅಜ್ಮೀರ್	ಕಲ್ಕತ್ತೆ	[illegible]	ಪಾಟ್ನಾ	ಸುಕ್ಕೂರು
ಅಲ್ಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾ[illegible]
ಬೊಂಬಾಯಿ	[illegible]ಗಾಂವ್	ಮುಂಬಯಿ	ರಾಯಪುರ	ತಿರುನೆಲ[illegible]
ಬೆಂಗಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖ[illegible]

ಕೊಡಗಿನ ಗುಮುಗುಮು ಎಂಬ [illegible] ಬಹು [illegible] ಜ್ವರಗಳನ್ನೂ [illegible] ಅಗೋ ರಾಜ [illegible] ಗುಣಪಡಿಸಿ [illegible]

[illegible]

1 ಡಜನ್ [illegible]-0. 1 ಡಜನ್ 1 [illegible]

[illegible] ಎರಡು [illegible]

[illegible]

[illegible] ಕ್ರಯ ಬಾಟ್ಲಿಗೆ ರೂ. [illegible]

[illegible] ಕೊಡುವುದು ಕ್ರಯ ಬಾಟ್ಲಿಗೆ ರೂ. [illegible]-0.

[illegible] ಕ್ರಯ ಬಾಟ್ಲಿಗೆ ರೂ. 3-[illegible]-0.

[illegible] ಕ್ರಯ ಬಾಟ್ಲಿಗೆ ರೂ. 3-[illegible]-0.

[illegible] ಸಹ್ಯಲ್ಲಿ ದೊರೆಯುತ್ತವೆ

ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗ್ಯದ ಪುಟ 3 [illegible] ವರೆಗೆ ಓದಿಕೊಂಡು [illegible]

ಆರೋಗ್ಯಭಾಗ್ಯದ ರೀತಿ ಪತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. [illegible]

[illegible]2-38 **Malariana Co.,**

Hampankutta No 14 Mangalore

ವಿಳಾಸ—ಮಲೇರಿಯಾನ [illegible]

[illegible] 11 [illegible]

ನೂರಾಟಿಕ್ಕೆ ಸಿದ್ಧನಾಗಿದೆ

ಸಹಕಾರ ಸಂಘಗಳ ಮತ್ತು ದವಸ ಭಂಡಾ[illegible]

ಯೊಬ್ಬ ಮೆಂಬರನಲ್ಲಿಯೂ 'ಇರಬೇಕಾದ [illegible] ಬ್ಯಾರಿ ಪರಸ್ಪರ ಸಹಾಯಕ ಸಂಘದ ಮತ್ತು [illegible] ರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, [illegible] ಕಾರಿ ಸಂಘಗಳ ಮತ್ತು ದವಸ ಭಂಡಾರಗಳ [illegible] ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿ[illegible] ಸೇರವಾಗಿ ತಯಾರಿಸಲ್ಪಟ್ಟಿರುವ ನಾನಾ ಫಾ[illegible] ಖರಾರು ಫಾರಮುಗಳೂ, ಜಮ್ಮ ಮಂಜೂರಾ[illegible]ಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳ[illegible] ಖರಾರು ಫಾರಮುಗಳೂ, ಸ್ಟೋರ್ ಕೀಪರ್ [illegible]ರಮುಗಳೂ, ಓವರ್ ಪುಸ್ತಕಗಳೂ, ರಶೀತಿ [illegible] ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು [illegible]ಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊ[illegible] ಮುದ್ದು ಬರಲಿಕ್ಕೆ ಬೇಕಾದವರು ಆರ್ಡರು ಕೊಟ್ಟ[illegible] ಮೂಲಕ ತಿಳಿಸಬಹುದು.

ಮೇನೇಜರ್

"ಕೊಡಗು" [illegible]

ಮ[illegible]

Printed & published by P I Bellhappa at "Kodagu" Press for "Kodagu" Ltd.

Reg. No. M. 1530
If not delivered please return to
"KODAGU" OFFICE MERCARA.

ಕೊಡಗು.

[illegible]

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೧ನೇ ಇಸವಿ ಜುಲೈ ತಾರೀಕು ೩೧ ನೇ ಶುಕ್ರವಾರ.	ಸಂಚಿಕೆ ೯

V. Subramaniaier Jeweller,

Telegrams — "Precious"

Telephone — 3145

DIAMOND MERCHANT GOLD & SILVER SMITH.

Dealing in all—
SPORTS CUPS in all prices
MEDALS in up to date patterns
CASKETS in elegant styles

Nos. 2 & 3, Kuppumuthu st
TIRUVATESWARANPET
Post Box 423, Triplicane P. O.,
MADRAS.

Deals in all:—
GEM SET JEWELS set with Diamonds, Rubies etc.,
GOLD ARTICLES of all patterns
SILVER WARE in latest style.

52—37



ಕೋವಿಗಳು, ಶಕ್ತಿಗಳ, ಬಟೀಗಳು, ಕೋಟೆಗಳು, ಕೇಸ್ಗಳು, ಮತ್ತು [illegible] ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವು

GOOLA[illegible] [illegible]SAIN [illegible]LLIJHOY & SONS.
Largest Impo[illegible]ters of F[illegible] and [illegible]tion
Cheapest priced firm in India,
24—18 210 [illegible] BOMBAY.

[illegible] ಉಚಿತವಾಗಿ ಕಳುಹಿಸಲ್ಪಡುವದು

ಬಾಲಾರ್ಕಮಧು.

ನಿಮ್ಮ ಮಕ್ಕಳ [illegible] ಬಾಲಾರ್ಕ ಮಧುವನ್ನು ಕೊಡಿರಿ ಮಕ್ಕಳು ರೋಗ



[illegible] ದಿನ ದಿನಕ್ಕೆ ಆರೋಗ್ಯವೂ, [illegible] ಮಧುರವಾಗಿದೆ. [illegible] 1 ಕ್ಕೆ 12 ಆಣೆ ವಿ. ಪಿ. 9 ಆಣೆ.

[illegible]

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ,
(ಮೈಸೂರು)

52—29

ಚಳಿಜ್ವರ ಕಷಾಯ [illegible] 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14



[illegible] 1 3 6ಕ್ಕೆ ರೂ 1—4—0 3—8—0 6—12—0

[illegible] 1ಕ್ಕೆ 6 ಆಣೆ 3 [illegible] 1 1 [illegible]—3—0

[illegible] 1, 3 [illegible] 2—10—0 [illegible] 2 [illegible] 5—8—0

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು.

12

ಕೊಡಗು.

ಸನ್ ೧೯೩೧ನೇ ಇಸವಿ

ಜುಲೈ ತಾ ೩೧ನೇ ಶುಕ್ರವಾರ.

ಇಂಡಿಯಾ ಸರ್ಕಾರದ ಸಾಲ.

ಇಷ್ಟರ ವರೆಗೆ ಹಿಂದೂದೇಶದ ಸರ್ಕಾರವು ಮಾಡಿರುವ ಸಾಲವು ಹಿಂದೀಯರ ಒಪ್ಪಿಗೆಯಿಂದಲ್ಲವಾದುದರಿಂದ, ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರೆಯುವಾಗ ಅಂಥಾ ಸಾಲವನ್ನು ವಾಪಸು ಕೊಡುವ ಜವಾಬ್ದಾರಿಯನ್ನು ಹಿಂದೀ ಜನಾಂಗವು ವಹಿಸಿಕೊಳ್ಳಲಾರದೆಂದು ಇಂಡಿಯನ್ ನೇಶನಲ್ ಕಾಂಗ್ರೆಸ್ಸು ಕಳೆದ ಗಯಾ ಮಹಾಸಭೆಯಲ್ಲಿ ತೀರ್ಮಾನಿಸಿತ್ತು. ಇದು ಹಲವು ತರಹದ ಟೀಕೆಗಳಿಗೆ ಆಸ್ಪದ ಕೊಟ್ಟಿತ್ತು. ಲಿಬರಲ್ ಮುಂತಾದ ಸಹಕಾರ ಪಕ್ಷಗಳು ಕಾಂಗ್ರೆಸ್ಸಿನ ಈ ತೀರ್ಮಾನವನ್ನು ವಿರೋಧಿಸಿದರು. ಎರಡನೆ ಕಳೆದ ಶಾಸನಭಂಗ ಚಳವಳಿಯನ್ನು ನಿಲ್ಲಿಸುವಾಗ್ಯೆ ಮಹಾತ್ಮ ಗಾಂಧಿಯವರೂ, ಲಾರ್ಡ್ ಇರ್ವಿನ್‌ರವರೂ ಬರೆದ ಗಾಂಧಿ ಸಂಧಿಯಲ್ಲಿ ಈ ವಿಷಯ ದುಂಡು ಮೇಜು ಪರಿಷತ್ತಿನಲ್ಲಿ ಚರ್ಚಿಸಿ ತೀರ್ಮಾನಿಸಿಕೊಳ್ಳಬಹುದೆಂದು ಒಪ್ಪಲಾಯಿತು. ಅದುದರಿಂದ ಇಂಡಿಯಾ ಸರ್ಕಾರದವರು ಮಾಡಿದ ಸಾಲವೆಲ್ಲವನ್ನೂ ನಿರಾಕರಿಸುವ ಬದಲು ಅದರಲ್ಲಿ ಎಷ್ಟು ಹಿಂದೂಸ್ಥಾನದ ಹಿತಕ್ಕಾಗಿ ಮಾಡಲ್ಪಟ್ಟದ್ದು ಮತ್ತು ಎಷ್ಟು ಬ್ರಿಟಿಷರ ಸ್ವಪ್ರಯೋಜನಕ್ಕಾಗಿ ಮಾಡಲ್ಪಟ್ಟದ್ದು ಎಂಬುದನ್ನು ಕಂಡು ಹಿಡಿಯಲಿಕ್ಕಾಗಿ ಕಾಂಗ್ರೆಸು ಸಭೆಯು ಒಂದು ಉಪಕಮಿಟಿಯನ್ನು ನೇಮಿಸಿತು. ಈ ಕಮಿಟಿಯ ವರದಿಯು ಈಗ ಪ್ರಕಟವಾಗಿದೆ. ಇದು ಆಗೋಸ್ತು ತಾ 6ರಲ್ಲಿ ಬೊಂಬಾಯಿಯಲ್ಲಿ ನಡೆಯಲಿಕ್ಕಿರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗಿನಲ್ಲಿ ಚರ್ಚಿಸಲ್ಪಡಲಿಕ್ಕಿದೆ.

ಈ ಉಪಕಮಿಟಿಯ ಮೆಂಬರುಗಳು ನಮ್ಮವರೂ ಹಿಂದೀಯರ ಅಭಿಪ್ರಾಯದಲ್ಲಿ ಮಾತ್ರವಲ್ಲ ಬ್ರಿಟಿಷರ ದೃಷ್ಟಿಯಲ್ಲಿಯೂ ಘನವಂತರೆಂಬುದನ್ನು ಸೂಚಿಸಬೇಕಾಗಿದೆ. ಇವರಲ್ಲಿ ಶ್ರೀಯುತರುಗಳಾದ ಡಿ ಎನ್ ಬಹದೂರ್ಜಿಯವರು ಮತ್ತು ಭುಲಾಭಾಯಿ ಜೆ. ದೇಸಾಯಿಯವರು ಒಮ್ಮೆ ಅಡ್ವಕೇಟ್ ಜನರಲ್ ಪದವಿಯಲ್ಲಿದ್ದದಲ್ಲದೆ ಹೆಸರು ವಾಸಿ ಹೊಂದಿದ ಲಾಯರುಗಳಾಗಿರುವರು. ಇನ್ನೊಬ್ಬ ಮೆಂಬರಾದ ಪ್ರೊಫೆಸರ್ ಕೆ ಟಿ ಷಾ ರವರು ಅಖಿಲ ಭಾರತ ಪ್ರಸಿದ್ಧಿಯ ಅರ್ಥಶಾಸ್ತ್ರಜ್ಞರು. ಅವರು ಹಲವು ಬೆಲೆಯುಳ್ಳ ಗ್ರಂಥಗಳನ್ನು ಬರೆದಿರುವವರಲ್ಲದೆ ಅನೇಕ ವರ್ಷಗಳ ವರೆಗೆ ಬೊಂಬಾಯಿ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಪ್ರೊಫೆಸರರಾಗಿದ್ದರು. ನಾಲ್ಕನೇ ಮೆಂಬರಾದ ಶ್ರೀಯುತ ಜೆ ಸಿ ಕುಮಾರಪ್ಪನವರು ಅಮೆರಿಕದಲ್ಲಿ ಅರ್ಥಶಾಸ್ತ್ರ ಪಾರಂಗತರಾಗಿ ಗುಜರಾತು ವಿದ್ಯಾಪೀಠದ ಒಬ್ಬ ಪ್ರೊಫೆಸರರಾಗಿರುವಲ್ಲದೆ ಪರಿಶೋಧನಾ ಕಾರ್ಯದಲ್ಲಿ ತುಂಬಾ ಪ್ರಸಿದ್ಧಿಯೂ ಪರಿಜ್ಞಾನವೂ ಉಳ್ಳವರಾಗಿದ್ದಾರೆ. ಆದುದರಿಂದ ಬ್ರಿಟಿಷರೂ ಮತ್ತು ಪರದೇಶೀಯರು ಈ ವರದಿಯನ್ನು ಬರೇ ರಾಜಕೀಯ ಚಳವಳಿಗಾರರು ಬರೆದದೆಂದು ಅದನ್ನು ತೃಣೀಕರಿಸಲು ಸಾಧ್ಯವಿಲ್ಲ. ಈ ಕಾರ್ಯವನ್ನು ಮಾಡಲು ಸಂಪೂರ್ಣ ಯೋಗ್ಯತೆಯುಳ್ಳ ಈ ನಾಲ್ಕು ಮಹನೀಯರು ರಾಜಕೀಯ ಪಕ್ಷಪಾತವನ್ನು ಸ್ವಲ್ಪವೂ ತೋರಿಸದೆ ನ್ಯಾಯವಾದ ರೀತಿಯಲ್ಲಿ ವಿಮರ್ಶಿಸಿ ಬರೆದಿರುವ ಈ ವರದಿಯು ಬಹು ಬೆಲೆಯುಳ್ಳದ್ದಾಗಿದೆ. ಅದರಲ್ಲೂ ರಾಜಕೀಯದ ಈ ಬಿಕ್ಕಟ್ಟಿನ ಸಮಯದಲ್ಲು ಇದರ ಪ್ರಾಮುಖ್ಯತೆಯು ಮತ್ತಷ್ಟೂ ಹೆಚ್ಚಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಈ ವರದಿಯ ಪ್ರಕಾರ ಹಿಂದೂದೇಶದ ಬ್ರಿಟಿಷ್ ಸರ್ಕಾರದವರು ಈ ವರೆಗೆ 1138 ಕೋಟಿ ರೂಪಾಯಿ ಸಾಲ ಮಾಡಿರುವರು. ಆದರೆ ಈ ಸಾಲವು ಹಿಂದೀಯರ ಒಪ್ಪಿಗೆಯಿಂದ ಹಿಂದೂದೇಶದ ಹಿತಕ್ಕಾಗಿ ಮಾಡಿದ ರಾಷ್ಟ್ರೀಯ ಸಾಲವಲ್ಲ. ಬ್ರಿಟಿಷ್ ಸರ್ಕಾರದವರು ತಮ್ಮ ದೇಶದ ಪ್ರಯೋಜನಕ್ಕಾಗಿಯೂ, ತಮ್ಮ ಸಾಮ್ರಾಜ್ಯದ ಭದ್ರತೆಗಾಗಿಯೂ ಹಿಂದೂದೇಶದ ಸರ್ಕಾರದಿಂದ ಮಾಡಿಸಿದ ಸಾಲವಿದು. ಹಿಂದೂದೇಶದ ಸ್ವಾಧೀನತೆಯಿಂದಲೇ ಬ್ರಿಟನ್ನಿಗೆ ಇಷ್ಟೆಲ್ಲಾ ಪ್ರಾಬಲ್ಯ ಐಶ್ವರ್ಯ ಮತ್ತು ಅಭಿವೃದ್ಧಿ ಉಂಟಾಗಿರುವದಾಗಿದೆ. ಆದರೆ ಹಿಂದೂದೇಶವು ಬ್ರಿಟಿಷರ ಆಳ್ವಿಕೆಗೆ ಒಂದಂದಿನಿಂದ ಅದರ ಕೈಗಾರಿಕೆ, ವ್ಯಾಪಾರಗಳ ನಾಶವಾಗಲು ಪ್ರಾರಂಭಿಸಿದವು. ಅದು ಬ್ರಿಟಿಷರ ಸಾಮಾನುಗಳಿಗೆ ಒಂದು ದೊಡ್ಡ ಮಾರ್ಕೆಟ್ ಆಗಿ ಹೋಗಿದೆ. ಬ್ರಿಟಿಷರಿಗೆ ಹೆಚ್ಚು ಸಂಬಳದ ಹುದ್ದೆ ದೊರೆಯಲು ಅದೊಂದು ಉತ್ತಮ ಸ್ಥಳವಾಗಿ ಬಿಟ್ಟಿದೆ. ಇಂದು ಬ್ರಿಟನು ಪ್ರಪಂಚದಲ್ಲಿ ಅತಿ ಪ್ರಬಲ ರಾಷ್ಟ್ರವಾಗಿಯೂ, ಹಿಂದೂಸ್ಥಾನವು ಅತಿ ದರಿದ್ರ ರಾಜ್ಯವಾಗಿಯೂ ಇದೆ. ಈ ಕಾರಣಗಳಿಂದಲೇ ಈಗ ಇಂಡಿಯಾ ಸರ್ಕಾರದ ಮೇಲಿರುವ ಸಾಲದ ದೊಡ್ಡ ಹೊರೆಯನ್ನು ಬ್ರಿಟನ್ನಿನವರೇ ವಹಿಸಿಕೊಳ್ಳಬೇಕೆಂದು ವರದಿಯಲ್ಲಿ ಮಾಡಿರುವ ಸೂಚನೆಯು ನ್ಯಾಯವಾದದ್ದೆಂದು ಯಾರೂ ಒಪ್ಪದೆ ಇರಲಾರರು.

ಆದರೂ ಕೂಡ ಈ ಸಾಲದಲ್ಲಿ ಹಿಂದೂದೇಶಕ್ಕೆ ಪ್ರಯೋಜನವಾಗಬಹುದಾದ ಕಾರ್ಯಗಳಿಗಾಗಿ ಮಾಡಿರುವ ಸಾಲವನ್ನು ಮುಂದಿನ ಹಿಂದೀ ಸರ್ಕಾರವು ವಹಿಸಿಕೊಳ್ಳಬವೆಂದು ಹಾಗೆ ನೀರಾವರಿ ಕಾಮಗಾರಿ, ರೈಲ್ವೆ, ತಂತಿ ಟಪ್ಪಾಲುಗಳು, ಕ್ಷಾಮ ನಿವಾರಣೆ ಮೊದಲಾದ ಕೆಲಸಗಳಿಗಾಗಿ ಮಾಡಿರುವ ಸಾಲದಲ್ಲಿ ಅತೃಪ್ತಿಕರವಾದ ಆಡಳಿತೆಯಿಂದ ಬಹಳ ಅನಾವಶ್ಯವಾಗಿದ್ದರೂ ಕೂಡ ಅವನ್ನು ವಿನಾಯಿಸಿ ಬಾಕಿ ಬ್ರಿಟಿಷರೇ ತೆರಬೇಕಾದ 729 ಕೋಟಿ ರೂಪಾಯಿಯ ಸಾಲವನ್ನು ಕಮಿಟಿಯವರು ಈ ಕೆಳಗಿನ ರೀತಿ ವಿಂಗಡಿಸಿರುವರು.

ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತದಲ್ಲಿ ಹೊರಗಿನ ಯುದ್ಧಗಳಿಗಾಗಿ 35 ಕೋಟಿ. ಕಂಪೆನಿಯ ಮೂಲ ಧನ ಹಿಡ್ಡಿ ನಷ್ಟಕ್ಕಾಗಿ 37 ಕೋಟಿ, ಸಿಪಾಯಿ ದಂಗೆಯ ಖರ್ಚು 40 ಕೋಟಿ. ಬ್ರಿಟಿಷ್ ಸರ್ಕಾರದ ಅಧಿಕಾರದಲ್ಲಿ ಹೊರಗಿನ ಯುದ್ಧಗಳಿಗಾಗಿ 37 ಕೋಟಿ ಯೂರೋಪಿನ ಯುದ್ಧದ ಖರ್ಚು 171 ಕೋಟಿ ಚಿಲ್ಲರೆ ಖರ್ಚು 20 ಕೋಟಿ ಪರದೇಶದ ಒಗ್ಗೆ ಖರ್ಚು 82 ಕೋಟಿ ಸೆಕ್ರೆಟರಿ ಕೌನ್ಸಿಲ್ ನಷ್ಟಗಳು 35 ಕೋಟಿ ಮತ್ತು ರೈಲ್ವೆಗಾಗಿ 83 ಕೋಟಿ ಒಟ್ಟು 729 ಕೋಟಿ ರೂಪಾಯಿಗಳು.

ಈಸ್ಟ್ ಇಂಡಿಯಾ ಕಂಪೆನಿಯ ದರ್ಬಾರಿನಲ್ಲೇ ಆಗಲಿ ಬ್ರಿಟಿಷ್ ಸರ್ಕಾರದ ಆಡಳಿತದಲ್ಲೇ ಆಗಲಿ ಹಿಂದೂದೇಶದ ಹೊರಗಿನ ಯುದ್ಧಗಳನ್ನು ಮಾಡಿದ್ದು ಬ್ರಿಟನ್ನಿನ ಪ್ರಯೋಜನಕ್ಕೆ ಮಾತ್ರವಾದ ಕಾರಣ ಅದರ ಖರ್ಚನ್ನು ಬ್ರಿಟನ್ನಿನವರೇ ಕೊಡಬೇಕೆಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. 1857 ರಲ್ಲಿ ನಡೆದ ಸಿಪಾಯಿ ದಂಗೆಯನ್ನು ಅಡಗಿಸಲು 40 ಕೋಟಿ ರೂ ಖರ್ಚು ಮಾಡಿದ್ದು ಬ್ರಿಟಿಷರ ಆಳಿಕೆಯನ್ನು ಶಾಂತಿಯಿಂದ ಸ್ಥಿರಗೊಳಿಸಲಿಕ್ಕಾಗಿಯಾಗಿದೆ. ಆಫ್ರಿಕದಲ್ಲಿ ನಡೆದ ಇದೇ ತರಹದ ಬೂವರ್ ಯುದ್ಧದ ಖರ್ಚನ್ನು ಬ್ರಿಟಿಷರೇ ವಹಿಸಿದಲ್ಲದೆ ಬೂವರರಿಗೆ ನಷ್ಟ ಪರಿಹಾರ ಸಹ ಕೊಟ್ಟರು. ಅಂದ ಮೇಲೆ ಸಿಪಾಯಿ ದಂಗೆಯ ಖರ್ಚನ್ನು ಹಿಂದೀಯರ ಮೇಲೆ ಹೊರಿಸುವುದು ಹೇಗೆ? ಕಳೆದ ಘೋರ ಯುದ್ಧಕ್ಕಾಗಿ ಇಂಡಿಯಾ ಸರ್ಕಾರವು 171 ಕೋಟಿ ರೂಪಾಯಿ ಖರ್ಚು ಮಾಡಿರುವುದಲ್ಲದೆ, 189 ಕೋಟಿ ರೂ ದಾನ ಕೊಟ್ಟಿದೆ. ದಾರಿದ್ರ್ಯದಲ್ಲಿ ಮುಳುಗಿರುವ ಹಿಂದೂಸ್ಥಾನವು ಇಷ್ಟು ದೊಡ್ಡ ದಾನ ಕೊಡುವ ಸ್ಥಿತಿಯಲ್ಲೂ ಇರಲಿಲ್ಲ ಮತ್ತು ಅದರ ಹೆಸರಿನಲ್ಲಿ ದಾನ ಕೊಡುವ ಅಧಿಕಾರ ಸರ್ಕಾರಕ್ಕೂ ಇರಲಿಲ್ಲ. ಹಿಂದೂದೇಶದಿಂದ ಇಷ್ಟು ದೊಡ್ಡ ಸಹಾಯ ಕೊಟ್ಟದ್ದಲ್ಲದೆ ಇಲ್ಲಿಯ ಸಿಪಾಯಿಗಳು ಲಕ್ಷ ಗಟ್ಟಲೆಯಲ್ಲಿ ಯೂರೋಪಿನ ರಣರಂಗದಲ್ಲಿ ಪ್ರಾಣವನ್ನರ್ಪಿಸಿದರು. ಇಷ್ಟು ಮಾಡಿದರೂ ಕೂಡ ಈ ಯುದ್ಧದ ಫಲಿತಾಂಶವಾಗಿ ಇಂಡಿಯಾಕ್ಕೆ ಎಷ್ಟರ ಮಟ್ಟಿಗೆ ಲಾಭ ದೊರೆಯಿತೆಂಬುದು ಹಿಂದೀಯರಿಗೆ ತಿಳಿಯದಲ್ಲ. ಬ್ರಿಟಿಷ್ ವಸಾಹತುಗಳು ಇಂಡಿಯಾದಷ್ಟು ಸಹಾಯ ಮಾಡದೆ ಹೋಗಿದ್ದರೂ ಕೂಡ ಅವುಗಳಿಗೆ ದೊರಕಷ್ಟು ಪ್ರಯೋಜನವು ಇಂಡಿಯಾಕ್ಕೆ ದೊರೆಯಲಿಲ್ಲ. ಆದುದರಿಂದ ಇಂಡಿಯಾಕ್ಕೆ ಸಂಬಂಧವಿಲ್ಲದೆ ಇದ್ದ ಈ ಯೂರೋಪಿನ ಯುದ್ಧದ ದೆಸೆಯಿಂದ ಉಂಟಾದ ಸಾಲದ ಹೊರೆಯನ್ನು ಬಡ ಹಿಂದೂಸ್ಥಾನದ ಮೇಲೆ ಹಾಕುವುದು ಎಂದೂ ನ್ಯಾಯವಲ್ಲ.

ಹಿಂದೂದೇಶವು ರಾಷ್ಟ್ರೀಯ ಸರ್ಕಾರದಲ್ಲಿ ಎಷ್ಟೆಂದರೂ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಅದು ಏನೊಂದೂ ಹೊರೆಯಿಲ್ಲದೆ ಸ್ವಾತಂತ್ರ್ಯದಿಂದ ಪ್ರಾರಂಭಿಸಬೇಕು. ಹಿಂದೀಯರು ಹೆಚ್ಚಿನ ಕಂದಾಯದ ಭಾರವನ್ನು ಹೊರಲಾರರು. ದೇಶದ ಉತ್ಪತ್ತಿಯನ್ನು ದೇಶದ ಹಿತದ ಕಾರ್ಯಗಳಿಗೇನೇ ಉಪಯೋಗಿಸುವುದರಿಂದಲೂ, ತನ್ನ ಅವಶ್ಯಕತೆಗಳಿಗೆ ತಕ್ಕಂತೆ ಮಿಲಿಟರಿ ಮತ್ತು ಸಿವಿಲ್ ಆಡಳಿತ ಕ್ರಮದ ಖರ್ಚನ್ನು ಕಡಿಮೆ ಮಾಡುವುದರಿಂದಲೂ ಮತ್ತು ಈ ಮೊದಲು ತನ್ನ ಹಿತಕ್ಕಾಗಿ ಮಾಡದ ಸಾಲದ ಹೊರೆಯಿಂದ ಬಿಡುಗಡೆ ಹೊಂದುವುದರಿಂದಲೂ ಮಿಕ್ಕ ಹಣವನ್ನು ಉಳಿಸಿ ದೇಶದ ಏಳಿಗೆಗೆ ಅವಶ್ಯವಾದ ಕೆಲಸಗಳಿಗೆ ಉಪಯೋಗಿಸಬಹುದಲ್ಲದೆ ಅನ್ಯಥಾ ಅಲ್ಲವೆಂದು ಕಮಿಟಿಯವರ ಅಭಿಪ್ರಾಯವಾಗಿದೆ. ಹಿಂದೂದೇಶದ ಅಭಿವೃದ್ಧಿಯನ್ನು ಅಪೇಕ್ಷಿಸುವವರಲ್ಲರೂ ಈ ಅಭಿಪ್ರಾಯಕ್ಕೆ ಒಪ್ಪಲೇ ಬೇಕಾಗಿದೆ.

ಈ ವರದಿಯು ಕಾಂಗ್ರೆಸಿನವರ ಆಖೈರು ಅಭಿಪ್ರಾಯವಲ್ಲವೆಂತಲೂ, ಅವಶ್ಯ ತೋರಿದಂತೆ ಕಾಂಗ್ರೆಸು ಇದರಲ್ಲಿ ಬರೆ ಅಪಾದನೆಗಳನ್ನು ನೋಡಬಯಸುವೆನೆಂತಲೂ, ಕಾಂಗ್ರೆಸಿನವರು ಹೇಳದನ್ನೇ ಬ್ರಿಟಿಷರು ಒಪ್ಪಿಕೊಳ್ಳಬೇಕೆಂದು ಕಾಂಗ್ರೆಸಿನವರು ಹಟ ಹಿಡಿಯುವುದಿಲ್ಲವೆಂತಲೂ, ಬ್ರಿಟಿಷರು ಒಪ್ಪದ ವಿಷಯಗಳನ್ನು ನಿಷ್ಪಕ್ಷಪಾತವಾದ ಒಂದು ಕಮಿಟಿಯ ತೀರ್ಮಾನಕ್ಕೆ ಬಿಡಬಹುದೆಂತಲೂ ಮಹಾತ್ಮ ಗಾಂಧಿಯವರು ಸೂಚಿಸಿರುವರು. ಕಾಂಗ್ರೆಸಿನ ಈ ವರ್ತನೆಯು ನ್ಯಾಯಪ್ರಿಯರಾದ ಪ್ರತಿಯೊಬ್ಬನಿಗೂ ಸರಿಯೆಂದು ತೋರದೆ ಇರದು. ಕಾಂಗ್ರೆಸು ಹೀಗೆ ವರ್ತಿಸದೆ ಹೋದರೆ ಮಹಾತ್ಮರೇ ಹೇಳಿರುವಂತೆ ಕಾಂಗ್ರೆಸಿನ ಮೇಲೆ ವಿಶ್ವಾಸವಿಟ್ಟಿರುವ ಜನರನ್ನು ಮೋಸಗೊಳಿಸಿದಂತಾಗುವುದರಲ್ಲಿ ಸಂದೇಹವಿಲ್ಲ. ಈ ವಿಷಯವು ಬರುವ ದುಂಡು ಮೇಜು ಪರಿಷತ್ತಿನಲ್ಲಿ ಚರ್ಚಿಸಲ್ಪಡುವುದರಿಂದ ಈ ವರದಿಯು ಆ ಚರ್ಚೆಯಲ್ಲಿ ಭಾಗಿಗಳಾಗುವವರಿಗೆ ಬಹು ಉಪಯುಕ್ತ ಕೈಪಿಡಿಯಾಗುವುದು. ಬಡ ಹಿಂದೀಯರ ಭಾಗವು ಮಹಾತ್ಮರ ಕೈಯ್ಯಲ್ಲಿ ಸುರಕ್ಷಿತವಾಗಿರುವದೇನೋ ಖಂಡಿತ.

ಉದ್ಯೋಗಸ್ಥರ ಕೊಲೆಗಳು.

ಬಂಗಾಳ ಪ್ರಾಂತ್ಯದ 24 ಪರಗಣದ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮಿ ಆರ್ ಆರ್ ಗಾರ್ಲಿಕ್ ಐ ಸಿ ಯಸ್ ರವರು ಈ ತಾ 27ರಲ್ಲಿ ಮಧ್ಯಾಹ್ನ ಕೋರ್ಟಿನಲ್ಲಿ ಕೇಸನ್ನು ವಿಚಾರಿಸುತ್ತಿದ್ದಾಗ್ಯೆ ಒಬ್ಬ ಬಂಗಾಳಿಯಿಂದ ಗುಂಡು ಹೊಡೆಯಲ್ಪಟ್ಟು, ಸ್ವಲ್ಪ ಹೊತ್ತಿನಲ್ಲೇ ಆಸ್ಪತ್ರೆಯಲ್ಲಿ ಮೃತರಾದರೆಂಬ ಭಯಾನಕ ವರ್ತಮಾನವನ್ನು ಯಾರು ತಾನೆ ಖಂಡಿಸದೆ ಇರುವರು? ಇವರಿಗೆ ಗುಂಡು ಹೊಡೆದ ಬಂಗಾಳಿಯು ಕೂಡಲೆ ಅಲ್ಲಿದ್ದ ಪೋಲೀಸು ಆಫೀಸರ ಕೋವಿಯ ಬಲಿಯಾಗಿ ಸತ್ತಾದನು. ಈ ಮನ್ನೆ ಅಲ್ಲಿದ್ದ ಒಬ್ಬ ಸಿ ಐ ಡಿ ಕಾನ್‌ಸ್ಟೇಬಲನಿಗೆ ಗುಂಡು ತಗಲಿ ಆಸ್ಪತ್ರೆಯಲ್ಲಿರುವನು. ಈ ಜಡ್ಜರು ಕ್ರಾಂತಿಕಾರರನ್ನು ವಿಚಾರಿಸಿದ ಹಲವು ನ್ಯಾಯ...ಗಳ ಅಧ್ಯಕ್ಷರಾಗಿದ್ದದರಿಂದ ಇವರಿಗೆ ಹಲವು ದಿವಸಗಳಿಂದ ... ಸೂಚಕವಾದ ಪತ್ರಗಳು ಬರುತ್ತಿದ್ದ ಕಾರಣ ಇವರ ಭದ್ರತೆಗಾಗಿ ಇವರ ಬಂಗ್ಲೆಗೂ ಕೋರ್ಟಿಗೂ ಪೋಲೀಸ ಕಾವಲಿಟ್ಟಿದ್ದರು. ಆದರೂ ಕೊಲೆಗಾರನು ಕೋರ್ಟಿನ... ಹಿಂದುಗಡೆ ಬಾಗಿಲಿನಿಂದ ನುಗ್ಗಿ ಜಡ್ಜರಿಗೆ ಮೊದಲು ಹಾ...ದ ಗುಂಡು ತಪ್ಪಿ ಹೋಯಿತು. ಕೂಡಲೆ ಸಮೀಪ ಹೋ... ಇನ್ನೊಂದು ಗುಂಡನ್ನು ಅವರ ತಲೆಗೆ ಹೊಡೆದನು. ಕೊಲೆಗಾ...ನು ಕೊಲ್ಲಲ್ಪಟ್ಟ ಮೇಲೆ ನೋಡುವಾಗ್ಯೆ ಅವನ ಜೇಬಿನಲ್ಲಿ ... ಹಲವು ತಿಂಗಳುಗಳ ಹಿಂದೆ ಕರ್ನಲ್ ಸಿಂಪ್‌ಸನ್‌ರವರನ್ನು ಕೊಂ... ದಿನೇಶ ಗುಪ್ತರನ್ನು ಫಾಸಿಗೆ ಗುರಿಮಾಡಿದಕ್ಕಾಗಿ ಈ ಜಡ್ಜರನ್ನು ತಾನು ಬೇಕೆಂತ ಗುಂಡು ಹೊಡೆದು ಕೊಂದಿರುತ್ತೇನೆಂದು ... ರೆದ ಒಂದು ಪತ್ರವು ಇತ್ತಂತೆ. ಇದರಿಂದ ಖೂನಿಯ ಉದ್ದೇಶವು ವಿಶದವಾಗಿದೆ.

ಈ ತಾ 22ರಲ್ಲಿ ಬೊಂಬಾಯಿ ಗವರ್ನರಾದ ಸರ್ ಅರ್ನೆಸ್ಟ್ ಹಾಟ್‌ಸನ್‌ರವರು ಪೂನಾದ ಫರ್ಗ್ಯುಸನ್ ಕಾಲೇಜಿನ ಲೈಬ್ರರಿಯನ್ನು ನೋಡುತ್ತಿದ್ದಾಗ್ಯೆ ಅಲ್ಲಿಯ ವಿದ್ಯಾರ್ಥಿಯೊಬ್ಬನು ಅವರಿಗೆ ಎರಡು ಗುಂಡುಗಳನ್ನು ಹಾರಿಸಿದಂತೆ ದೇವರ ಕೃಪೆಯಿಂದ ಅವರು ಅಪಾಯದಿಂದ ಹೇಗೆ ಪಾರಾದರು ಎಂಬ ವರ್ತಮಾನವನ್ನು ಕಳೆದ ವಾರ ಪ್ರಕಟಿಸಿದ್ದೆವು. ದಸ್ತಗಿರಿ ಮಾಡಲ್ಪಟ್ಟಿರುವ ಈ ವಿದ್ಯಾರ್ಥಿಯು ಕೆಲವು ತಿಂಗಳುಗಳ ಹಿಂದೆ ಶೋಲಾಪುರದಲ್ಲಿ 'ಮಾರ್ಷ್ಯಲ್ ಲಾ' (ಯುದ್ಧದಿನ ಕಾನೂನು) ವನ್ನು ಜಾರಿಗೆ ತಂದ ಮತ್ತು ಹಂಗಾಮಿ ಗವರ್ನರ್ ಪದವಿಗೆ ಏರಿದ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರಾದ ಹಿಂದೀಯರನ್ನು ನೇಮಿಸದೆ ಸರ್ ಅರ್ನೆಸ್ಟ್ ಹಾಟ್‌ಸನ್‌ರವರನ್ನು ನೇಮಿಸಿದ ಅನ್ಯಾಯವೇ ತನ್ನ ಈ ಕೊಲೆಯ ಪ್ರಯತ್ನಕ್ಕೆ ಕಾರಣ ಎಂದು ಹೇಳಿರುವನು. ಇವೆರಡೂ ರಾಜಕೀಯ ಕೊಲೆಗಳೆಂಬುದರಲ್ಲಿ ಸಂದೇಹವಿಲ್ಲ. ಈ ಕೃತ್ಯವನ್ನು ಮತ್ತು ಮಹಾತ್ಮ ಗಾಂಧಿಯವರು ಹೇಳುವುದೇನೆಂದರೆ— ... ಲೇಜಿಗೆ ಅತಿಥಿಯಾಗಿ ಹೋದ ಗವರ್ನರಿಗೆ ಗುಂಡು ಹಾರಿಸಿದ್ದು ದೊಡ್ಡ ವಿಶ್ವಾಸ ಘಾತಕದ ಕೃತ್ಯ. ಇದರಿಂದ ವಿದ್ಯಾರ್ಥಿ ಜೀವನದ ಒಳ್ಳೇ ಹೆಸರಿಗೆ ಕಪ್ಪು ಬಿದ್ದಂತಾಗಿದೆ. ಇದರಿಂದ ಕಠೋರತ್ವವು ಹೆಚ್ಚುವುದು. ... ಇಂಥಾ ಕೃತ್ಯಗಳು ಹಿಂದೂಸ್ಥಾನದ ಪ್ರಗತಿಯನ್ನು ಕುಂಠಿತ, ತಟಸ್ಥ ಹೆಸರುವಾಸಿಯನ್ನು ತರುವುದು, ಇಂಥಾ ಕೆಲಸಗಳಿಂದ ಸ್ವರಾಜ್ಯಕ್ಕೆ ಹಿಂದೂಸ್ಥಾನದ ಯೋಗ್ಯತೆಯನ್ನು ಹೆಚ್ಚಿಸಿದಂತಾಗುವುದಿಲ್ಲ. ... ದಲು ಕಡಿಮೆ ಮಾಡಿದಂತಾಗುವುದು ಮತ್ತು ಸ್ವರಾಜ್ಯವನ್ನು ಕೆಡಮಾಡಿದಂತಾಗುತ್ತದೆ. ಇಷ್ಟು ದೊಡ್ಡ ಮತ್ತು ಪುರಾತನ ದೇಶಕ್ಕೆ ಸ್ವರಾಜ್ಯವನ್ನು ಮೋಸಗಾರಿಕೆಯ ವಿಧಾನಗಳಿಂದ ಪಡೆಯಲು ಸಾಧ್ಯವಿಲ್ಲ.' ಮಹಾತ್ಮರ ಈ ಮಾತುಗಳ ನ್ಯಾಯವನ್ನು ಯಾರೂ ಅಲ್ಲಗಳೆಯಲಾರರು. ಹಿಂಸಾತತ್ವವು ದೇಶದಲ್ಲಿ ಹರಡುತ್ತಾ ಬಂದರೆ ಸ್ವರಾಜ್ಯ ದೊರೆತ ಮೇಲೂ ಇದರಿಂದ ದೇಶಕ್ಕೆ ತುಂಬಾ ಕೇಡಾಗದೆ ಇರದು. ಯಾಕೆಂದರೆ ಮಹಾತ್ಮರು ಹೇಳಿರುವಂತೆ 'ಕೊಲೆಗಾರರು ತಮ್ಮ ಕೊಲೆಪಾತಕದ ಅನುಭವದಿಂದ ತಾವು ಮೆಚ್ಚದಾತವರನ್ನು ಖೂನಿ ಮಾಡುವರು.' ಆದುದರಿಂದ ಹಿಂದೂದೇಶದ ಏಳಿಗೆಯನ್ನು ಬಯಸುವವರೆಲ್ಲರೂ ಹಿಂಸಾ ಮಾರ್ಗವನ್ನು ನಿಷೇಧಿಸಿ, ಅಹಿಂಸಾ ತತ್ವವನ್ನೇ ಅವಲಂಬಿಸಿ ವರ್ತಿಸಬೇಕೆಂದು ಎಷ್ಟು ಒತ್ತಿ ಹೇಳಿದರೂ ಸಾಲದು.

ಸರಕಾರದ ಭರವಸೆಯುಳ್ಳ

ಓರಿಯಂಟಲ್ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1874ರಲ್ಲಿ ಇಂಡಿಯಾದಲ್ಲಿ ಸ್ಥಾಪಿತವಾಯಿತು

ಹೆಡ್ ಆಫೀಸು—ಮುಂಬಾಯಿ.

ಕಂಪೆನಿಯ ಇತರ ಆಫೀಸುಗಳು.

ಆಗ್ರ.	ಬೆಂಗಳೂರು.	ಢಕ್ಕ	ಕರಾಚಿ	ಮದ್ರಾಸ್.	ನಾಗಪೂರ್.	ರಾಂಚಿ.	ಸುಕ್ಕೂರ್.
ಅಹಮುದಾಬಾದ್	ಭೋಪಾಲ್	ದೆಹಲಿ	ಕೌಲಾಲಂಪೂರ್	ಮಂಡಲೆ.	ಪಾಟ್ನ.	ರಂಗೂನ್.	ತಿರುಚಿನಾಪಲ್ಲಿ.
ಅಜಮೀರ್.	ಕಲ್ಕತ್ತ	ಗೌಹತಿ	ಲಾಹೋರ್	ಮಂಗಳೂರು	ಪೂನಾ.	ರಾವಲ್ಪಿಂಡಿ.	ಟ್ರಿವೆಂಡ್ರಂ.
ಅಲಹಾಬಾದ.	ಕೊಲಂಬೊ.	ಜಲಗಾಂವ್.	ಲಕ್ನೌ.	ಮಾಂಬೋಸಾ.	ರಾಯಪೂರ್.	ಸಿಂಗಪೂರ್.	ವಿಶಾಖಪಟ್ಟಣ.

1930ನೇ ಡಿಸಂಬರು 31ಕ್ಕೆ ಮುಗಿದ ಮೂರು ವರ್ಷಗಳಲ್ಲಿನ ಈ ಕಂಪೆನಿಯ ಆದಳಿತದ ಅತಿಶಯವಾದ ಫಲಿತಾಂಶಗಳು.

ಹಂಚಲು ನಿರ್ಧರಿಸಿದ ನಿವ್ವಳ ಲಾಭ—1,16,23,543 ರೂಪಾಯಿಗಳು.

ಪಾಲಿಸಿದಾರರಿಗೆ ಬೋನಸ್ಸು { ಹೋಲ್ ಲೈಫ್ ಪಾಲಿಸಿಗಳಿಗೆ 1,000 ರೂಪಾಯಿಗಳಿಗೆ ವರ್ಷ 1ಕ್ಕೆ 25 ರೂಪಾಯಿಗಳು [illegible] ರೂಪಾಯಿಗಳಿಗೆ ವರ್ಷ 1ಕ್ಕೆ [illegible] ರೂಪಾಯಿಗಳು.

ಈ ಕಂಪೆನಿಯ ಕನ್ಸಲ್ಟಿಂಗ್ ಆಕ್ಚುಯರಿಯವರ ವರದಿಯಲ್ಲಿ [illegible] ವಿಷಯವೇನೆಂದರೆ:—

[illegible] ಅನುಕೂಲವಾಗಿ [illegible] ಸಂಪಾದಿಸುವ ಬಡ್ಡಿಯ ದರವು ಒಂದೇ ಸಮನಾಗಿ ತೃಪ್ತಿಕರವಾಗಿದೆ. [illegible] ಸಾಧ್ಯವಾದಷ್ಟು ಮಿತವಾಗಿ ಇಡಲ್ಪಟ್ಟಿದೆ. ಈ ಕಾರಣಗಳಿಂದ ಕಂಪೆನಿಯ [illegible] ಕಳೆದ ಮೂರು ವರ್ಷಗಳಲ್ಲಿ ಕೊಟ್ಟ ಅಧಿಕವಾದ ಬೋನಸ್ಸಿನ ದರವನ್ನೇ ಈಗಲೂ ಸಹ ಕೊಡಲು ಅನುಕೂಲ[illegible].

ಕಂಪೆನಿಯ ಉಚ್ಛ್ರಾಯ ಸ್ಥಿತಿಯು [illegible] ಚ್ಯುತಿ ಇಲ್ಲದೇ ಇರುವುದರಿಂದ ಇದಕ್ಕೆ ಸಂಬಂಧಪಟ್ಟವರೆಲ್ಲರೂ ಇದರ ಭವಿಷ್ಯತ್ತಿನ ಅಭಿವೃದ್ಧಿಯ ವಿಚಾರದಲ್ಲಿ ಪೂರ್ಣ ಭರವಸೆಯನ್ನು ಇಟ್ಟುಕೊಳ್ಳಬಹುದು. ಲಾಭ ಸಹಿತ [illegible] ವಿಮೇದಾರರಾಗುವವರು ಮುಂದಿನ ಡಿಸಂಬರು 31ನೇ ತಾರೀಖಿನೊಳಗೆ ವಿಮೆ ಮಾಡಬೇಕು. ಹಾಗೆ ವಿಮೆ ಮಾಡಿದ [illegible] 1933ನೇ ಡಿಸೆಂಬರ್‌ವರೆಗೂ ಚಾಲ್ತಿ ಇದ್ದರೆ ಆದರೆ ಆ ವಿಮೇದಾರರು ಆಗ ಹಂಚಲ್ಪಡುವ ಮೂರು ವರ್ಷಗಳ ಲಾಭವನ್ನು ಪಡೆಯಲು ಅರ್ಹರಾಗುತ್ತಾರೆ.

ವಿಮೇದಾರರಾಗಲು ಇಷ್ಟ ಪಡುವವರು [illegible] ಈ ಕೆಳಗೆ ಕೊಟ್ಟಿರುವ ಅಡ್ರೆಸ್ಸಿಗಾಗಲೀ ಅಥವಾ ಕಂಪೆನಿಯ ಇತರ ಆಫೀಸುಗಳಿಗಾಗಲೀ ಅಥವಾ ಚೀಫ್ ಏಜೆನ್ಸಿಗಳಿಗಾಗಲೀ ಬರೆದು ಬೇಕಾದ ವಿಷಯಗಳನ್ನು ತಿಳಿದುಕೊಳ್ಳಬೇಕೆಂದು ಕೋರುತ್ತೇವೆ.

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೆರೇಡ್, ಬೆಂಗಳೂರು.

ಯಂ. ವಿ. ಮುದ್ದುಕೃಷ್ಣನಾಯುಡು,
ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

ಓರಿಯಂಟಲ್ ಅಷ್ಯೂರೆನ್ಸ್ ಕಂಪೆನಿ.

ವಾರ್ಷಿಕ ಸಭೆಯ ನಡವಳಿಕೆಗಳು.

ಬೊಂಬಾಯಿ ಓರಿಯಂಟಲ್ ಕಟ್ಟಡದಲ್ಲಿ 1931ನೇ ಜುಲೈ ತಾರೀಖು 8 ರಲ್ಲಿ ನಡೆದ ಕಂಪೆನಿಯ ಶೇರುದಾರರ ಮತ್ತು ಪಾಲಿಸಿದಾರರ ಜನರಲ್ ಮೀಟಿಂಗಿನಲ್ಲಿ ಸೊಸೈಟಿಯ [illegible] ಮಿಸ್ಟರ್ [illegible] ಅಧ್ಯಕ್ಷರಾದ [illegible] ಕಂಪೆನಿಯ [illegible] ವರ್ಷಗಳಲ್ಲಿ ಅಸಾಧಾರಣವಾದ ಅಭಿವೃದ್ಧಿಸ್ಥಿತಿಯನ್ನು ವ್ಯಕ್ತಪಡಿಸಿರುವ [illegible] ವರ್ಷವಾಗಿರುತ್ತೆ. ಆದರೆ [illegible] ವರ್ಷ ಮಾತ್ರ [illegible] ವ್ಯಾಪಾರಿಕ ಮತ್ತು ರಾಜಕೀಯ ಸಂಬಂಧದ [illegible] ಕಂಪೆನಿಯ ಆಡಳಿತದ ಅಭಿವೃದ್ಧಿ [illegible] ಪಡೆಯಲ್ಪಟ್ಟಿತು. ಆದಾಗ್ಯೂ ಕಂಪನಿಯ ಕನ್ಸಲ್ಟಿಂಗ್ ಆಕ್ಚುಯರಿಯವರ ವರದಿಯಲ್ಲಿ [illegible] ಕಳೆದ [illegible] ತ್ರೈವಾರ್ಷಿಕಗಳ ಫಲಿತಾಂಶಗಳನ್ನು ಮತ್ತು ಈ ತ್ರೈವಾರ್ಷಿಕದ ಫಲಿತಾಂಶವನ್ನೂ ಹೋಲಿಸಿ ನೋಡಿದ್ದರಲ್ಲಿ ಕಂಪೆನಿಯ ಆಡಳಿತಗಳು ಅತ್ಯಂತ ಉಚ್ಛ್ರಾಯಸ್ಥಿತಿಯಲ್ಲಿರುವ ವಿಷಯವು ಸಮರ್ಪಕವಾಗಿ ವ್ಯಕ್ತಗೊಳಿಸಲ್ಪಟ್ಟಿದೆ. 17½ ಕೋಟಿ ರೂಪಾಯಿಗಳಿಗೆ ಮೀರಿದ 34,867 ಹೊಸ ಪಾಲಿಸಿಗಳು ಕೊಡಲ್ಪಟ್ಟಿವೆ. ಇದರ ಮೊದಲನೇ ವರ್ಷದ ಪ್ರೀಮಿಯಂ ಉತ್ಪತ್ತಿಯು 99½ ಲಕ್ಷ ರೂ. ಈ ಹೊಸ ಕೆಲಸವು [illegible] ವಾರ್ಷಿಕದ ಸಫಲತಾಂಶವನ್ನು ಅತ್ಯಧಿಕವಾಗಿ [illegible] ದು ನಿಸ್ಸಂದೇಹವಾಗಿ ಹೇಳಬಹುದು. ಕಳೆದ ತ್ರೈವಾರ್ಷಿಕದ ಪ್ರೀಮಿಯಂ ಉತ್ಪತ್ತಿಗಿಂತಲೂ ಈ ಸಲದ ಪ್ರೀಮಿಯಂ ಉತ್ಪತ್ತಿಯು 480 ಲಕ್ಷಕ್ಕೆ ಅಂದರೆ ಶೇಕಡಾ [illegible] ವೃದ್ಧಿಯನ್ನು ಸೂಚಿಸುತ್ತದೆ. ನಿವ್ವಳ [illegible] 142 ಲಕ್ಷ ಅಂದರೆ ಶೇಕಡ 25 [illegible] ಅಧಿಕ[illegible] ಕಳೆದ ಮೂರು ವರ್ಷದ [illegible] ಶೇಕಡ 22·9 ಈ ತ್ರೈವಾರ್ಷಿಕದ [illegible] ಹೊಸ ಕೆಲಸದ ಆದಳಿತಗಳನ್ನು [illegible] ಕಂಪೆನಿಯ [illegible] ಮಿತವಾಗಿ ಇಡಲ್ಪಟ್ಟಿದೆ ಎನ್ನುವುದು ಎಲ್ಲರಿಗೂ ಸಮರ್ಪಕವಾಗಿರುತ್ತೆ. ಹಿಂದಿನ ಎರಡು ತ್ರೈವಾರ್ಷಿಕಗಳಲ್ಲಿ ನಿರ್ಧರಿಸಿದ ನಫೆಯು 51,51,497 ರೂ. 77,94,726 ರೂ. ಆಗಿರುತ್ತೆ. ಈ ತ್ರೈವಾರ್ಷಿಕದ ನಫೆಯು 1,16, 23, 543 ರೂ. [illegible] ಕಂಪೆನಿಯ ನಫೆಯು ಶೇಕಡಾ 50 ರಷ್ಟು ಹೆಚ್ಚಿರುವುದು ವ್ಯಕ್ತವಾಗುತ್ತದೆ. ಅಲ್ಲದೆ ಪ್ರೀಮಿಯಂ ಉತ್ಪತ್ತಿಗೂ ನಫೆಗೂ [illegible] [illegible] ಎಂದು [illegible] ತ್ತದೆ.

ಕಂಪೆನಿಯು ಶೇರುದಾರರಿಗೆ ಕಳೆದ ಎರಡು ತ್ರೈವಾರ್ಷಿಕಗಳಲ್ಲಿ ಶೇರು 1ಕ್ಕೆ 30 ರೂ. ಸಾಲಿಯೂ, 50 ರೂ. ಸಾಲಿಯೂ ಈ ತ್ರೈವಾರ್ಷಿಕದಲ್ಲಿ ಶೇರು 1ಕ್ಕೆ 75 ರೂ. ಸಾಲಿಯೂ [illegible] ಕೊಡಲು ತೀರ್ಮಾನವಾಗಿದೆ.

ಪಾಲಿಸಿದಾರರಿಗೆ ಲಾಭ ಸಹಿತವಾದ ಹೋಲ್ ಲೈಫ್ ಪಾಲಿಸಿಗಳ ಮೇಲೆ ವರ್ಷ 1ಕ್ಕೆ 1,000 ರೂ. ನ ಪಾಲಿಸಿ [illegible] ರೂ. ಸಾಲಿಯ [illegible] ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷ 1ಕ್ಕೆ 1,000 ರೂ. ನ ಪಾಲಿಸಿಗೆ 20 ರೂ. ಸಾಲಿಯೂ ಬೋನಸ್ ಹಂಚಬಹುದೆಂದು ಕನ್ಸಲ್ಟಿಂಗ್ ಆಕ್ಚುಯರಿಯವರು ಅನುಮೋದಿಸಿದ್ದರ ಮೇಲೆ ಅದೇ ರೀತಿ ನಫೆ ಹಂಚಲ್ಪಟ್ಟಿತು. ಕಳೆದ ಡಿಸೆಂಬರು ಮಾಹೆ 31 ರಲ್ಲಿ ಚಾಲಿಯಲ್ಲಿದ್ದ ಎಲ್ಲಾ ಪಾಲಿಸಿಗಳಿಗೂ ಕೊಡ್ಬೇಕಾದ ಬೋನಸ್ಸನ್ನು ಹಂಚಲು ಉಪಯೋಗಿಸಿದ ಮೊಬಲಗು 1,00,05328 ರೂಪಾಯಿ. ಕಳೆದ ತ್ರೈವಾರ್ಷಿಕದಲ್ಲಿ ಹಂಚಲು ಉಪಯೋಗಿಸಿದ ಮೊಬಲಗು, 65,10,318 ರೂಪಾಯಿ. ಬೋನಸ್ಸಿನ ದರವು ಹೆಚ್ಚಿಸಲ್ಪಡದೆ ಇದ್ದಾಗ್ಯೂ ಬೋನಸ್ಸಿನ ಮೊಬಲಗು ಕಳೆದ ತ್ರೈವಾರ್ಷಿಕಕ್ಕಿಂತಲೂ ಶೇಕಡ 50 ರಷ್ಟು ಹೆಚ್ಚಿರುವುದು. ಇದಕ್ಕೆ ಈಗ ಚಾಲಿಯಲ್ಲಿರತಕ್ಕ ಪಾಲಿಸಿಗಳ ಸಂಖ್ಯೆಯು ಅಧಿಕವಾಗಿರುವುದೇ ಕಾರಣವಾಗಿರುತ್ತದೆ.

ಈಗ ನಡೆದ [illegible] ತ್ರೈವಾರ್ಷಿಕದಲ್ಲಿ [illegible] ಕ್ಷೇಮುಗಳ [illegible] ಬೋನಸ್ಸನ್ನು ಕೊಡಬಹುದೆಂದು ಕನ್ಸಲ್ಟಿಂಗ್ ಆಕ್ಚುಯರಿಯವರು [illegible] ಮಾಡಿರುವುದು ನೋಡಿದರೆ ಬೋನಸ್ಸಿನ ದರವು ಮುಂದೆ [illegible] ಕಡಮೆಯಾಗುವುದಿಲ್ಲವೆಂಬ ಭರವಸೆಯನ್ನು ಸೂಚಿಸುತ್ತದೆ. ಈ ಅಂಶಗಳನ್ನು ಓದಿದರೆ ನಮ್ಮ ಹಿಂದೂಸ್ಥಾನದ ಕಂಪೆನಿಯು [illegible] ಈಗ ವಿಮೇದಾರರಾಗುವವರಿಗೂ ಮುಂದೆ ಪಾಲಿಸಿದಾರರಾಗತಕ್ಕವರಿಗೂ ಸಂಪೂರ್ಣ ತೃಪ್ತಿಯನ್ನು ಕೊಡತಕ್ಕದ್ದೆಂಬುವುದು ಸ್ಪಷ್ಟವಾಗುತ್ತದೆ.

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಈ ಬ್ಯಾಂಕಿನ ಷೇರುದಾರರುಗಳ ಮೀಟಿಂಗು ಈ [illegible] ಲ್ಲಿ ನಡೆಯಿತು. 9 ಸ್ಥಳದವರುಗಳು ಹಾಜರಿದ್ದರು. [illegible] ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರೂ ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ [illegible] ತಿಂಗಳ ಜಮ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು (1) [illegible] ಸೊಸೈಟಿಗೆ ರೂ. 500, (2) [illegible] ಸೊಸೈಟಿಗೆ ರೂ. 1000, (3) ಕೊಡಗು ಕಾಫಿ ಪ್ಲಾಂಟರ ಗಳ ಸೊಸೈಟಿಗೆ ರೂ. 5000, (4) [illegible] ಸೊಸೈಟಿಗೆ ರೂ. 250, ಮತ್ತು (5) [illegible] ಸೊಸೈಟಿಗೆ ರೂ. 200

4. [illegible] ಸೊಸೈಟಿಗೆ, [illegible] ಸೊಸೈಟಿಗೆ, [illegible] ಸೊಸೈಟಿಗೆ, ಮತ್ತು [illegible] ಸೊಸೈಟಿಗೆ ಕಾರಣಾಂತರಗಳಿಂದ ಸಾಲ ಮಂಜೂರು ಮಾಡಲಿಲ್ಲ.

5. ಮಿ. [illegible] ಅಯ್ಯಪ್ಪನವರ ಹೆಸರಿನಲ್ಲಿರುವ ಡಿಪಾಜಿಟ್ಟು ಹಣವನ್ನು ತನಗೆ ಕೊಡಬೇಕಾಗಿ ಮಿ. ಕೆ. ಸಿ. ತಿಮ್ಮಯ್ಯನವರು ಡಿಸ್ಟ್ರಿಕ್ಟ್ ಜಡ್ಜಿಯವರ ಆರ್ಡರ್ ಸಮೇತ ಬರೆದಿರುವ ಅರ್ಜಿ ಓದಲಾಯಿತು.

ಡಿಸ್ಟ್ರಿಕ್ಟ್ ಜಡ್ಜಿಯವರ ಆರ್ಡರ್ ಮೇರೆ ಮಿ. ಅಯ್ಯಪ್ಪನವರ ಹೆಸರಿನಲ್ಲಿರುವ ಡಿಪಾಜಿಟ್ಟು ಹಣವನ್ನು ಅವರ ಅಣ್ಣನಾದ ಮಿ. ತಿಮ್ಮಯ್ಯನವರಿಗೆ ಕೊಡಬಹುದಾಗಿ ತೀರ್ಮಾನವಾಯಿತು.

6. [illegible] ಅಪ್ಪಚ್ಚನವರ ಪತ್ನಿ [illegible] ತನ್ನ ಗಂಡನ ಹೆಸರಿನಲ್ಲಿ ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಹಣವನ್ನು ತನ್ನ ಹೆಸರಿಗೆ ವರ್ಗಾಯಿಸಬೇಕು [illegible] ಕೊಟ್ಟ ಅರ್ಜಿ ಓದಲಾಯಿತು.

ಅವರ ಅರ್ಜಿ ಮೇರೆ ವರ್ಗಾಯಿಸುವುದಾಗಿ ತೀರ್ಮಾನವಾಯಿತು.

7. [illegible] ಆಫೀಸನ್ನು ಹಳೇ ತಾಲೋಕು ಕಛೇರಿ ಕಟ್ಟಡಕ್ಕೆ ತಾ. 1—8—31ರಿಂದ ವರ್ಗಾಯಿಸಬೇಕಾಗಿ ತೀರ್ಮಾನವಾಯಿತು.

8. ಮೈಸೂರು ಬ್ಯಾಂಕಿಗೆ ರೂ. 20,000 ಮತ್ತು ಮದರಾಸು ಪ್ರೊವಿನ್ಷಿಯಲ್ ಕೋ-ಆಪರೇಟಿವ್ ಬ್ಯಾಂಕಿಗೆ ರೂ. 20,000 ಕಳೆದ ಮೀಟಿಂಗಿನಲ್ಲಿ ತೀರ್ಮಾನವಾದ ಮೇರೆ ಕಳುಹಿಸಲು ಮಂಜೂರು ಮಾಡಲಾಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು)

WANTED.

Bed and Basket Coffee Plants

Write to –

Nellikere Estate,

2–1 **Sunticopa.**

ಪುನಃ ಯುದ್ಧವಾಗುವುದೆ?

"ಮಾನವ ಕೋಟಿಯು ಅದೊಂದು ಉದ್ಯಾನ ಅದ ನ್ನು ಯೋಗ್ಯ ರೀತಿಯಲ್ಲಿಡಬೇಕಾದರೆ ಗಿಡಗಳನ್ನು ಆಗಿಂದಾಗ್ಗೆ ಕೊಯ್ದು ಕೆಲವನ್ನು ಕಿತ್ತು ಹಾಕಬೇಕಾಗುತ್ತದೆ ಇದೇ ರೀತಿ ಮಾನವ ಉದ್ಯಾನವನ್ನು ಕೊಯ್ಯುತ್ತಿರಬೇಕು. ಯುದ್ಧವೆಂಬುದು ಹೀಗೆ ಕೊಯ್ಯುತ್ತಿರುವ ಕತ್ತಿ ರಾಷ್ಟ್ರಗಳೊಳಗೆ ಮೇಲಾಟವಿರಬೇಕು ಮೇಲಾಟವಿರದಿದ್ದರೆ ಜಗತ್ತು ಪ್ರಗತಿ ಹೊಂದಲಾರದು ಸ್ವಾತಂತ್ರ್ಯ ಹಾಗೂ ಶಾಂತಿಯನ್ನಪೇಕ್ಷಿಸುವವರು ಅತ್ತ ಬಲಿದಾನವೀಯಲು ತಯಾರಿರಬೇಕೆಂದು ಪ್ರಕೃತಿಯು ಹಿಂದೆಯೇ ಸಿದ್ಧಗೊಳಿಸಿದೆ" ಎಂಬೀ ತತ್ವವನ್ನು ಸ್ಕಾಟ್‌ಲೆಂಡಿನ ಅಬರ್ಡೀನ್ ವಿಶ್ವವಿದ್ಯಾಲಯದ ಲೆಕ್ಚರರೂ ವಿಜ್ಞಾನ ವಿಶಾರದರೂ ಆದ ಸರ್ ಆರ್ಥರ್ ಕೈತರು ಇತ್ತಲಾಗಿ ಪ್ರತಿಪಾದಿಸಿ, ಲೋಕಹಿತಕ್ಕೇನೇ ಯುದ್ಧದ ಅವಶ್ಯಕತೆಯಿದೆಯೆಂಬ ಭಾವವನ್ನು ಹೊಂಗೆಡಹಿರುವರು

ಜರ್ಮನಿಯ ಸೇನಾಧಿಪತಿಗಳಾದ ಲುಡೆಂಡಾರ್ಫರು ತಾ 1–5–1932ಕ್ಕೆ ಪುನಃ ಘೋರ ಸಮರವಾಗುವುದೆಂಬ ಭವಿಷ್ಯ ಹೇಳುವರು ಈ ಯುದ್ಧದಲ್ಲಿ ಮಿತ್ರ ವಿರೋಧಿಗಳು ಫ್ರಾನ್ಸ್ ಮತ್ತು ಇಟಲಿ ರಾಷ್ಟ್ರಗಳು ಇಂಗ್ಲೆಂಡ್ ಜರ್ಮನಿ ಮತ್ತು ರಷ್ಯಾದೇಶಗಳು ಇಟಲಿಯ ಕಡೆಗೂ, ಪೋಲೆಂಡ್, ಯುಗೋಸ್ಲಾವಿಯಾ ಮತ್ತು ಝೆಕೋಸ್ಲೋವಾಕಿಯಾಗಳು ಫ್ರಾನ್ಸ್ ದೇಶದ ಪಕ್ಷಕ್ಕೆ ಸೇರುವವು ದಕ್ಷಿಣ ಜರ್ಮನಿ, ದಕ್ಷಿಣ ಆಸ್ಟ್ರಿಯಾ ದೇಶಗಳೇ ಸಮರ ರಂಗವು ಅನೇಕ ಕಡೆಗಳಲ್ಲಿ ಹಿಂದೆ ಮುಂದೆ ನೋಡದೆ ಸಾವಿರಾರು ಜನರ ಕೊಲೆಯಾಗುವುದು ವಿಮಾನಗಳ ಹಾರಾಟ! ಹಡಗು ಪಡೆಗಳ ಓಡಾಟ ವಿಷಗಾಳಿಯ ಸುಳಿಗಳಿಂದೆಲ್ಲಾ ಪ್ರದೇಶವು ತುಂಬಿ ಹೋಗುವುದು ಸುಮಾರು 3 ಲಕ್ಷ ಬ್ರಿಟಿಷ್ ಸೈನಿಕರು ಬಾಲ್ಟಿಕ್ ಸಮುದ್ರದ ತೀರಬಂದರದಲ್ಲಿಳಿದು ಬೆಲ್ಜಿಯನ್ ಮತ್ತು ಫ್ರೆಂಚರೊಡನೆ ಹೋರಾಡುವರು ರಷ್ಯಾ ದೇಶವು ಪೋಲೆಂಡ್ ರುಮೇನಿ ದೇಶಗಳೊಡನೆ ಜಗಳಾಡುವುದು. ಫ್ರಾನ್ಸ್ ದೇಶದಲ್ಲಿ ರಾಜ್ಯ ಕ್ರಾಂತಿಯಾಗುವುದು ಅಮೇರಿಕದವರು ಏನ ಮಾಡುವುದೆಂದು ಕೊನೆಗೆ ಅನುಮಾನವುಳ್ಳವರಾಗಿರುವರು ... ಹೇಳಿದಷ್ಟು ಪ್ರಸಿದ್ಧವಾಗುವುದು "ನ ಯು

WANTED·

A Clerk for the Oriental Govt Security Life Assurance Company's agencey office Coorg· Mercara

Pay according to qualifications honesty and bussiness canvassing capacity

Please apply to the undersigned before the 7th Aug 1931

K P CHINNAPPA

2–2 Agent·

"'Oriental' Mercara.

ನನ್ನ ವಿಷಯವಾಗಿ ಪ್ರಾಣಿಗಳೇನು ಹೇಳುತ್ತವೆ?

ಕುದುರೆ—'ಮನುಷ್ಯನು ಏತಕ್ಕೆ ಮದ್ಯಪಾನ ಮಾಡುತ್ತಾನೆ? ಅವನು ನಮಗಿಂತ ಶ್ರೇಷ್ಠನು ಮತ್ತು ನಮ್ಮ ಯಜಮಾನನು ಮತ್ತು ಪ್ರತಿ ವಿಧದಲ್ಲಿಯೂ ನಮಗಿಂತ ಒಳ್ಳೆಯ ರೀತಿಯಲ್ಲಿ ನಡೆಯುತ್ತಾನೆ ಆದರೆ ಅವನಿಗಿರುವ ಈ ಮದ್ಯಪಾನ ಮಾಡುವ ಹುಚ್ಚು ಅಭ್ಯಾಸವು ಮಾತ್ರ ಎಲ್ಲಿಂದ ಬಂದಿತೆಂದು ನನಗೆ ತಿಳಿಯದು.'

ಕತ್ತೆ—'ನನಗೆ ಕೂಡ ಅದೇನೆಂದು ತಿಳಿಯುವುದಿಲ್ಲ, ಆದರೆ ನಾನು ತುಂಬಾ ಅನುಭವಶಾಲಿಯೆಂದು ನಾನು ಹೇಳುವುದಿಲ್ಲ. ನಾನು ಕಣ್ಣಾರೆ ಕಂಡುದನ್ನು ಮಾತ್ರ ಹೇಳಬಲ್ಲೆನು ಮನುಷ್ಯನು ಮದ್ಯಪಾನ ಮಾಡಿದಾಗ ನನ್ನನ್ನು ಬಹಳವಾಗಿ ಹೊಡೆಯುತ್ತಾನೆ. ಅವನಲ್ಲಿರುವ ಹಣವನ್ನೆಲ್ಲಾ ಮದ್ಯದಲ್ಲಿ ವೆಚ್ಚ ಮಾಡಿದಾಗ್ಯೂ ನನಗೆ ಆಹಾರವೇನೂ ದೊರಕುವುದಿಲ್ಲ."

ದನ—"ನನ್ನನ್ನು ಹಿಂದೂಸ್ಥಾನದಲ್ಲಿ ಬಹಳವಾಗಿ ಗೌರವಿಸುತ್ತಾರೆ ಮನುಷ್ಯರಿಗೆ ನನ್ನ ಮಾತು ತಿಳಿಯುವಂತಿದ್ದರೆ ನಾನು ಕೊಡುವ ಮಧುರವಾದ ಪಾನೀಯವನ್ನು ಅಲಕ್ಷಿಸಿ, ಭಯಂಕರವಾದ ಆ ಮದ್ಯವನ್ನು ಸೇವಿಸುವುದು ಪಾಪವೆಂದೂ, ಅಪಮಾನವೆಂದೂ ನಾನು ಅವನಿಗೆ ಹೇಳುತ್ತಿದ್ದೆನು ನಾನು ಕೊಡುತ್ತಿರುವ ಪುಷ್ಟಿಕರವಾದ ಮತ್ತು ಬೆಲೆಯುಳ್ಳ ಪಾನೀಯವನ್ನು ಕುಡಿಯುವುದರಿಂದ ಯಾರಿಗೂ ಯಾವ ಕೆಟ್ಟ ಪರಿಣಾಮವಾದುದನ್ನು ನಾನು ಕೇಳಿಲ್ಲ, ಆದರೆ ಅಯ್ಯೋ! ಮದ್ಯಪಾನದಿಂದ ಸಾವಿರಾರು ಜನರನ್ನು ನಾಶಗೊಳಿಸಿದೆ"

ಕೋತಿ—"ಮನುಷ್ಯನು ನನ್ನನ್ನು ತನ್ನ ಪೂರ್ವಜನೆಂದು ಹೇಳುತ್ತಾನೆ. ಆದರೆ ಇದು ನನಗೆ ನಾಚಿಕೆಯನ್ನು ಕೊಡುತ್ತದೆ ಒಂದು ವಿಷಯದ ಮಟ್ಟಿಗೆ ನಾನೇ ಅವನಿಗಿಂತ ಬುದ್ಧಿವಂತನೆನ್ನುತ್ತೇನೆ ನಾನು ನನಗೆ ಹಿತವಾದುದನ್ನೇ ತಿನ್ನುತ್ತೇನೆ ಮತ್ತು ಕುಡಿಯುತ್ತೇನೆ ಆದರೆ ಮದ್ಯವು ತನಗೆ ಅಹಿತವೆಂದು ಮನುಷ್ಯನಿಗೆ ಗೊತ್ತಿದ್ದಾಗ್ಯೂ ಅವನು ಅದನ್ನು ಕುಡಿಯುತ್ತಾನೆ."

ಆನೆ—"ಹರಿಯುವುದಾಗಿಯೂ ಸ್ವಚ್ಛವಾಗಿಯೂ, ತಣ್ಣಗಾಗಿಯೂ, ರುಚಿಕರವಾಗಿಯೂ ಇರುವ ನೀರಿಗಿಂತಲೂ ಉತ್ತಮವಾದ ಬೇರೊಂದು ಪಾನವಿದೆಯೆಂದು ನಾನು ಭಾವಿಸಲಾರೆನು. ಅದು ಎಲ್ಲಿ ಬೇಕಾದರೂ ಯಥೇಷ್ಟವಾಗಿ ದೊರೆಯುತ್ತದೆ. ನನ್ನ ಬಾಯಾರಿಕೆ ತಣಿಸುವುದಕ್ಕೆ ನನಗೆ ತುಂಬಾ ನೀರು ಬೇಕಾಗುತ್ತದೆ. ಆದರೆ ನನಗೆ ಬೇಕಾದಷ್ಟು ನೀರು ಎಲ್ಲೆಲ್ಲಿಯೂ ಸಿಕ್ಕುತ್ತದೆ. ಮತ್ತು ಮನುಷ್ಯನಾದರೋ ನೆಲವನ್ನು ತೋಡಿ ತನ್ನಷ್ಟು ಹೆಚ್ಚು ನೀರು ಪಡೆಯುತ್ತಾನೆ ಆದರೂ ಕೂಡ ಅವನು ಮದ್ಯವನ್ನು ಕುಡಿಯುತ್ತಾನೆ! ಅಬ್ಬಾ! ಎಷ್ಟೊಂದು ಹುಚ್ಚುತನ! ನಾನು ಮನುಷ್ಯನಿಗಿಂತ ಗಾತ್ರದಲ್ಲಿ ದೊಡ್ಡದಾಗಿಯೂ, ಅಧಿಕ ಬಲಶಾಲಿಯಾಗಿಯೂ ಇರುತ್ತೇನೆ. ಆದರೆ ನನ್ನ ಪಾನೀಯವು ನೀರೇ ಆಗಿರುವುದು'

ಹಂದಿ—"ನಾನೊಂದು ಕೊಳಕಾದ ಮೂರ್ಖ ಪ್ರಾಣಿಯೆಂದು ಗೊತ್ತುಮಾಡಲ್ಪಟ್ಟಿರುವೆನು ಆದರೆ ನಾನು ಮದ್ಯವನ್ನು ಉಪಯೋಗಿಸದಷ್ಟು ಮಟ್ಟಿಗೆ ಬುದ್ಧಿವಂತನಾಗಿರುವೆನು. ಕೊಳೆಯನ್ನೆಲ್ಲಾ ನಾನು ತಿನ್ನುತ್ತೇನಾದರೂ ಮದ್ಯವು ಕೇವಲ ಕೊಳಕೆಂದು ಕಾಣುತ್ತದೆ. ಮನುಷ್ಯನು ಮದ್ಯಪಾನ ಮಾಡಲಾಗಿ, ನನಗಿಂತ ಕೀಳಾಗಿ ನನ್ನಂತೆಯೇ ನೆಲದ ಮೇಲೆ ಹೊರಳಾಡುತ್ತಾನೆ"

ಇದನ್ನು ಓದಿದ ನಂತರವಾದರೂ ಮನುಷ್ಯನು ಮದ್ಯ ಸೇವನೆ ಮಾಡಲು ನಾಚಿಕೆಪಡಬೇಕು ಆ ಒಳ್ಳೆಯ ಅವನು ಕುಡಿದ ಪಕ್ಷದಲ್ಲಿ ಅವನು ಅತ್ಯಂತ ಹೀನವಾದ ಪ್ರಾಣಿಗಿಂತ ಹೀನನಾಗುತ್ತಾನೆ ಹಂದಿಗಿಂತಲೂ ಕಡೆಯಾಗುತ್ತಾನೆ

ಸೆಂಟ್ರಲ್ ಪ್ರಚಾರ ಬೋರ್ಡ್

ಮದರಾಸು.

ಮಾರಾಟಕ್ಕಿದೆ.

ಸೋಮವಾರಪೇಟೆನಾಡು ಕುಸುಬೂರು ಗ್ರಾಮದಲ್ಲಿರುವ ಫಸಲು ಆಗ್ತಿರುವ ಕಾಫಿತೋಟ 19 15 ಎಕರು ಹೊಸ ಗಿಡ ಹಾಕಿರುವ ಕಾಫಿತೋಟ 5 26 ಎಕರು ಗದ್ದೆ 4 60 ಎಕರು ಪಾತಿ 0 20 ಎಕರು ಮತ್ತು ಕಾಡು 1 24 ಎಕರು ಅಂತು ಒಟ್ಟು 30 45 ಎಕರು ಮಾರಾಟಕ್ಕಿದೆ

ಕೊಂಡುಕೊಳ್ಳಲು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ವಿಷಯ ತಿಳಿದುಕೊಳ್ಳಬಹುದು

ಶ್ರೀ

1—2 C/o ಮೇನೇಜರು

ಕೊಡಗು ಆಫೀಸು,

ಮಡಿಕೇರಿ

ಬೊಜ್ಜು ಬೆಳೆಯಿರಿ!

'ಬೊಜ್ಜು ಬೆಳೆಯಿರಿ! ಸುಖವಾಗಿ ಬಾಳಿರಿ!' ಎಂಬುದು ಟರ್ಕಿ ದೇಶದ ತೋರ ಮನುಷ್ಯರ ತತ್ವೋಪದೇಶ ಅಲ್ಲಿ ಬೊಜ್ಜು ಬೆಳೆದು ಕಾಣಲಿಕ್ಕೆ ಯಾರು ಬಹಳ ದಪ್ಪವಾಗಿದ್ದರೂ, ಯಾರು ತೂಕದಲ್ಲಿ ಹೆಚ್ಚು ಭಾರವುಳ್ಳವರಾಗಿದ್ದಾರೊ ಅವರಿಗೆ ಮರ್ಯಾದೆ ಹೆಚ್ಚು ಇಂತಹ ಪರಿವಾರ ಮಾತಿಗಳದೊಂದು ಸಂಸ್ಥೆಯುಂಟಲ್ಲಿ. ಸುಮಾರು ೧೫೦ ಮಂದಿ ಮೆಂಬರರಿದ್ದಾರೆ ಅದರಲ್ಲಿ. ಎಲ್ಲರೂ ಸುಖವಾಗಿ ಊಟ ಮಾಡಿಕೊಂಡು ನಿದ್ರೆಮಾಡಿಕೊಂಡು ಇದ್ದಾರೆ ಎಲ್ಲರೂ ನಿದ್ರೆಮಾಡಿಕೊಂಡಿರುವಾಗ ಅವರು ಗೊರೆಯುವ ಶಬ್ದವು ಮೂರು ನಾಲ್ಕು ಮೈಲುಗಳ ವರೆಗೆ ಕೇಳಿಸುತ್ತದೆ ಸುಮಾರು ೫೦ ಹಂದಿಗಳು ಒಮ್ಮೆಯೇ ಅರಚಿದರೆ ಎಷ್ಟು ಶಬ್ದವಾದೀತು? ೧೫೦ ಮಂದಿಯಲ್ಲಿ ಹೆಚ್ಚು ತೋರವಾದವರೊಬ್ಬರು ಆ ಸಂಸ್ಥೆಯ ಅಧ್ಯಕ್ಷರು. ಇವರು ಸುಮಾರು ೧೦೪ ಮಣ ಭಾರವುಳ್ಳವರು ಕೂತುಕೊಳ್ಳುವುದಕ್ಕೆ, ಮಲಗುವುದಕ್ಕೆ, ಸ್ನಾನ ಮಾಡುವುದಕ್ಕೆಲ್ಲ ಇವರಿಗೆ ಅನುಕೂಲವಾಗುವಂತೆ ಬೇರೆ ಬೇರೆ ವಿಧದ ವ್ಯವಸ್ಥಾಭೇದಗಳು ಅವರು ಹೇಳುತ್ತಾರೆ "ಮನುಷ್ಯರೆಲ್ಲ ತೋರವಾಗಿ ಬೆಳೆಯಬೇಕು ಬಹಳ ಸುಖವಾಗಿ ಬಾಳಬಹುದು. ತೋರ ಬೆಳೆದವರಿಗೇನೂ ಹೊಟ್ಟೆ ಗಟ್ಟರೆ ಆಹಾರವು ಬೇಕಾಗುವುದಿಲ್ಲ ಟರ್ಕಿಯಲ್ಲಿ ಬೊಜ್ಜು ಬೆಳೆಯುವುದು ಬಹಳ ಅನುಕೂಲ ಎಂದಾದರು ಒಂದು ದಿನ ಮಣ್ಣುಪಾಲಾಗುವ ಈ ದೇಹವನ್ನು ಒಮ್ಮೆ ಬೆಳೆಯುವಷ್ಟು ಬೆಳೆಸಿ ನೋಡಲೇಬೇಕು ಯೂರೋಪಿನ ಜನರಿಗೆ ಈ ತತ್ವವು ಗೊತ್ತೇ ಇಲ್ಲ ಸುಖದ ಕಡೆಗೆ ಅವರಿಗೆ ದೃಷ್ಟಿಯಿಲ್ಲ. ಸದಾ ಕೆಲಸ, ಮೈಮುರಿಯುವುದು, ಸರಿಯಾಗಿ ಒಮ್ಮೆ ಒಂದು ತೊಳೆಯುವಷ್ಟು ಸಮಯದ ವಿಶ್ರಾಂತಿಯಿಲ್ಲ ಅವರಿಗೆ ಹಿಡಿದಿದೆ ಕೆಲಸದ ಭ್ರಾಂತಿ! ಇದನ್ನೆಲ್ಲ ಬಿಟ್ಟು ಕಾಲಕ್ರಮೇಣ ಇಡೀ ಪ್ರಪಂಚವನ್ನೇ ಪುಷ್ಟ ಪುಷ್ಟವನ್ನಾಗಿ ಮಾಡುವ ಮಹತ್ಕಾರ್ಯವನ್ನು ಕೈಕೊಂಡಿದೆ ನಮ್ಮ ಸಂಸ್ಥೆಯು ಬನ್ನಿರಿ, ಬನ್ನಿರಿ, ಸದಸ್ಯರಾಗಿರಿ. ಬೊಜ್ಜು ಬೆಳೆಯಿರಿ! ಸುಖ ಪಡೆಯಿರಿ!' ಎಂದ.

ಶಾ. ಬ.

ಸಿದ್ದಾಪುರದ ರೈತರು ಹೊಟ್ಟೆಗಿಲ್ಲದೆ ಸಾಯುತ್ತಿದ್ದರು!

ಸಿದ್ದಾಪುರ ತಾಲೂಕಿನ ಹಳ್ಳಿಗಳಲ್ಲಿ ರೈತರು ಹೊಟ್ಟೆಗಿಲ್ಲದೆ ಉಪವಾಸ ಸಾಯುತ್ತಿದ್ದಾರೆ. ಕಾನ್ಸಲಿ ಸೀಮೆ ಗಿಳಗಿಂಗಿ ಗ್ರಾಮದ ಸಾವಲ ಗದ್ದೆಯ ಬೊಟ್ಟೆ ಒಕ್ಕಲಿಗನು ಹೊಟ್ಟೆಗಿಲ್ಲದೆ ಆಗೊಂದು ತಿಂಗಳಿಂದ ಕಹಿ ಕಳ್ಳು ಉಪ ಜೀವಿಸುತ್ತಿದ್ದನು ಇದು ಬಂದಾದ ಕೂಡಲೆ ಅವನ ಹೆಂಡತಿಯು ಕೂಲಿ ಮಾಡಿ ಇಬ್ಬರು ಮಕ್ಕಳಿಗೆ ಗಂಜಿ ಮಾಡಿ ಹಾಕಿ ಗಂಡ ಹೆಂಡಿರು ಹಲಸಿನಕಾಯಿ, ಬಾಳೆಕಾಯಿ ತಿನ್ನಲು ಪ್ರಾರಂಭಿಸಿದರು. ೮–೧೦ ದಿವಸ ಹೀಗೆಯೇ ಕಳೆಯಲು ಗಂಡನು ಉಪವಾಸದಿಂದ ಸತ್ತನು. ಗಂಡನ ಮರಣದಿಂದ ಅತ್ಯಂತ ದುಃಖಿತಳಾಗಿ ಹೆಂಡತಿಯೂ ಕೂಲಿಗೆ ಹೋಗುವುದನ್ನು ಬಿಟ್ಟು ಮಕ್ಕಳನ್ನು ನೆರೆಹೊರೆಯವರ ಮನೆಗೆ ಕಳುಹಿಸಿ ತಾನೂ ಅನಶನ ವ್ರತ ಸ್ವೀಕರಿಸಿ ಮರಣ ಹೊಂದಿದಳು

ಇದೇ ಹಳ್ಳಿಯ ಇನ್ನೊಂದು ಕುಟುಂಬದವರು ಹೊಟ್ಟೆಗಿಲ್ಲದೆ ಸಾಯುವೆವೆಂದು ತಿಳಿದು ಊರು ಬಿಟ್ಟು ಕುಮಟೆಗೆ ಹೋದರು

ಹೆರೂರ ಸೀಮೆಯ ಶಿವಳದ ಮನೆ ಗ್ರಾಮದ ಹುಣಸೆ ನಾರಾಯಣ ಸುಬ್ಬಾಭಟ್ಟರ ಮನೆಯಲ್ಲಿ ಆ ಜನರಿದ್ದು ವರ ಹೊಟ್ಟೆಯ ಅನ್ನದ ಸಲುವಾಗಿ ಬಹಳ ಪ್ರಯತ್ನ ಪಡಲು ಕೊನೆಗೆ ಎಲ್ಲಾ ಉಪಾಯಗಳು ನಿಂತದ್ದರಿಂದ ... ತಿಂದು ಪ್ರಾಣ ಬಿಟ್ಟನು

ಶಿರಸಿ ಸಿದ್ದಾಪುರಗಳಲ್ಲಿ ತಗಾವಿ ತಹಕೂಬಿಯ ಫಾರ್ಸು

ಶಿರಸಿ ಸಿದ್ದಾಪುರ ತಾಲೂಕುಗಳ ಬಡ ರೈತರ ಸಹಾಯಕ್ಕಾಗಿ ೫೫೦೦೦ ರೂ ತಗಾವಿ ಮಂಜೂರು ಮಾಡಲ್ಪಟ್ಟಿದೆ. ಅಡಕೆ ಗಿಡಗಳಿಗೆ ಕಟ್ಟೆ ಕಟ್ಟಿಸಿಕೊಳ್ಳುತ್ತಿಲ್ಲ ಹಣವಿಲ್ಲದ್ದರಿಂದ ತಗಾವೀ ಕೊಡಬೇಕೆಂದು ರೈತರ ವಿನಂತಿ ಅರ್ಜಿ ಆದರೆ ಅಧಿಕಾರಿಗಳು ಶೀರ್ವೆಯಷ್ಟೇ ಹಣ ಪಂಜೂರು ಮಾಡುವದಲ್ಲದೆ ಆ ಹಣವನ್ನು ರೈತರ ಮನೆಕ್ಕೆ ಕೂಡ ಬರದೆ ಶೀರ್ವೆ ಜಮೆ ಬರೆದುಕೊಳ್ಳುತ್ತಿರುವರು!! ಹಾಗೆ ಸರ್ಕಾರದ ತಗಾವಿ ಫಾರ್ಸು!! ಅಡಕೆ ಗಿಡಗಳಿಗೆ ಕಟ್ಟೆ ಕಟ್ಟುವುದು ಬಹು ಶ್ರಮದ ಕೆಲಸ. ಎಲ್ಲರೂ ಅದನ್ನು ಮಾಡಲಾರರು ಇದಕ್ಕಾಗಿ ಹಣ ಕೊಟ್ಟು ಘಟ್ಟದ ಕೆಳಗಿನ ಜನರನ್ನು ಕೂಲಿ ಹಚ್ಚಬೇಕಾಗುತ್ತದೆ ಟಕಾವಿ ಹಣ ಸಿಕ್ಕದಿದ್ದರೆ ಹೊಟ್ಟೆಗಿಲ್ಲದೆ ಬಳಲುವ ರೈತರಿಗೆ ಕಟ್ಟೆ ಕಟ್ಟಿಸಲಿಕ್ಕೆ ಹಣ ಎಲ್ಲಿಂದ ಬರಬೇಕು? ಅರ್ಥಾತ್ ಮುಂದಿನ ವರ್ಷದ ಅಡಕೆ ಬೆಳೆಯು ನಾಶವಾಗುವುದು ಈ ವರ್ಷದಂತೆ ಮುಂದಿನ ವರ್ಷವೂ ರೈತರ ಸ್ಥಿತಿಯು ಅತ್ಯಂತ ಹೀನವಾಗುವುದು ಅಧಿಕಾರಿಗಳು ರೈತರ ವಿಪತ್ತಿನ ಸ್ಥಿತಿಯ ಕಡೆಗೆ ಸಹಾನುಭೂತಿ ಪೂರ್ವಕ ವಿಚಾರ ಮಾಡಿ ಅವರಿಗೆ ಟಕಾವಿ ಹಣ ಸಿಗುವಂತೆ ಮಾಡುವರೋ?

ಶಾಂ ಕಮಿಟಿ.

ಮಾರಾಟಕ್ಕಿದೆ.

ವೀರಾಜಪೇಟೆಯಲ್ಲಿ ಪೋಲೀಸ್ ಸ್ಟೇಶನಿನ ಸಮೀಪವಿರುವ ಹಂಚಿನ ಮನೆ, ಹಿಂದುಗಡೆ ಸುಮಾರು ಒಂದು ಎಕರೆ ಹಿತ್ತಲು, ಮತ್ತು ಅದರಲ್ಲಿ ಸುಮಾರು 200 ಬುಡ ಬಾಳೆ, ಮಾರಾಟಕ್ಕೆ ಇದೆ ಸುತ್ತಾ ತಂತಿ ಬೇಲಿ ಹಾಕಲ್ಪಟ್ಟಿದೆ ಒಳ್ಳೆ ಬೆಲೆಗೆ ಬರುತ್ತೆ ಹೊಸ ಮನೆ ಕಟ್ಟಲು ಜಾಗ ಸಹ ಇದೆ ಪಿಂಚಿನ್ ಇರುವವರು ಈ ಕೆಳಗಿನ ವಿಳಾಸಕ್ಕೆ ಬರೆದು ಕ್ರಯ ತಿಳಿದುಕೊಳ್ಳಬಹುದು

'X'

C/o The Manager

3–2 'Kodagu

Mercara



ಮಲೇರಿಯ

ಜ್ವರದಿಂದ ನೀವು ನರಳುತ್ತಿದ್ದೀರೋ? ಹಾಗಾದರೆ

ಎಸನೊಫೀಲ್

ಎಂಬ ಔಷಧಿಯನ್ನು ಒಡನೆ ತೆಗೆದುಕೊಳ್ಳಿ.

ಈ ಕಾಲದಲ್ಲಿ ಜಗತ್ಪ್ರಸಿದ್ಧವಾದ ಮತ್ತು ಸಂಶಯವಿಲ್ಲದ ಘನಗಂಡ ಔಷಧಿ ಇದೊಂದೇ ಇದರ ಸತ್ವವ ಶ್ಚರ್ಯಕರವಾದದ್ದು. ಇದರ ಗುಣವು ಬಾಯಿಂ ಅದನ್ನು ತಮಿಟೀಕನ್ ಗಳ ವಿಷಯ ಎಚ್ಚರಿಕೆ. "Special Formula for India" ಎಂದು ಅದರ ಬುಡ್ಡಿಯ ಗುರುತಿನ ಚೀಟು ಅಂಟಿಸಿರುವ ನಮ್ಮ ನಿಜವಾದ ಕುಪ್ಪಿಗಳನ್ನು ಕೊಂಡುಕೊಳ್ಳಲು ಜಾಗರೂಕರಾಗಿರಿ

Sole Agents –

GORIO LTD·

26–2 P O Box 159

Fort· Bombay

ವರ್ತಮಾನ ಸಂಗ್ರಹ.

ಒಳದೇಶ.

ಈ ತಾ. 26ನೇ ಆದಿತ್ಯವಾರ ಎಂದಿನಂತೆ ಮಾಸಿಕ ಧ್ವಜಾರೋಹಣವು ಪೊನ್ನಂಪೇಟೆ ಕುಶಾಲಪುರದಲ್ಲಿ ನಡೆಯಿತು.

ಕಳೆದ ವಾರ ವೀರಾಜಪೇಟೆ ಮತ್ತು ಫ್ರೇಜರ್‌ಪೇಟೆಯು ಪ್ಲೇಗಿನಿಂದ ಒಂದೊಂದು ಮರಣವುಂಟಾಯಿತೆಂದು ತಿಳಿಯುತ್ತೇವೆ.

ರಿಟ್ರೆಂಚ್‌ಮೆಂಟ್ ಕಮಿಟಿಯವರು ಪುನಃ ಆಗೋಸ್ತು ...ಲ್ಲಿ ಮಡಿಕೇರಿಯಲ್ಲಿ ಮೀಟಿಂಗು ಸೇರಲಿಕ್ಕಿರುವರೆಂದು ತಿಳಿಯು ಬರುತ್ತದೆ.

ಮಡಿಕೇರಿ ನೋರ್ಮಲ್ ಸ್ಕೂಲು ಮತ್ತು ಮಹದೇವಪೇಟೆ ಮುನ್ಸಿಪಲ್ ಸ್ಕೂಲು ಮಳೆಗಾಲದ ರಜೆಗಾಗಿ ಈ ತಾ. ...ರಿಂದ ಎರಡು ವಾರಗಳ ವರೆಗೆ ಮುಚ್ಚಲ್ಪಟ್ಟಿರುವವು.

ಒಮ್ಮೆ ಕೊಡಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿದ್ದ ಬಾರ್ನ್‌ವೆಲ್‌ರವರು ಈಗ ಚಿತ್ರದುರ್ಗದ ಡಿಸ್ಟ್ರಿಕ್ಟ್ ಜಡ್ಜಿಯಾಗಿರುವ ಕಾರಣ ಬೆಂಗಳೂರಿನಲ್ಲಿ ಈ ತಿಂಗಳಿಂದ ಕೆಲಸ ಮಾಡುವ ... ನ ಎಡಿಷನಲ್ ಜುಡಿಷ್ಯಲ್ ಕಮಿಷನರಾಗಿರುವರು.

ವೀರಾಜಪೇಟೆಯಲ್ಲಿ ಪೋಲೀಸ್ ಪ್ರಾಸಿಕ್ಯೂಟಿಂಗ್ ಸಬ್ ಇನ್ಸ್‌ಪೆಕ್ಟರಾಗಿದ್ದ ಮೆ. ನಡಿಕೇರಿಯಂಡ ಚಿಣ್ಣಪ್ಪನವರನ್ನು ಬಿಟ್ಟಿಯಂಡ ಕುಟ್ಟಪ್ಪನವರ ಸ್ಥಳಕ್ಕೆ ಮಡಿಕೇರಿ ಆಕ್ಟಿಂಗ್ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರಾಗಿ ತಾ. 1—8—31ರಿಂದ ನೇಮಿಸಲಾಗಿದೆಯೆಂದು ತಿಳಿಯು ಬರುತ್ತದೆ.

ಈ ವರೆಗೆ ಕೊಡಗು ಬಿಸಿನೆಸ್ ...ರರ ಸಂಘದ ಕಟ್ಟಡದಲ್ಲಿ ಆಫೀಸು ಮಾಡಿಕೊಂಡಿದ್ದ ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕಿನ ಆಫೀಸು ಇದೇ ಆಗೋಸ್ತು ತಿಂಗಳಿಂದ ಮಡಿಕೇರಿ ತಾಲೋಕು ಆಫೀಸು ಇದ್ದ, ಸರ್ಕಾರಿ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಿದೆ.

ವೀರಾಜಪೇಟೆ ಪೋಲೀಸ್ ಸಬ್ ಇನ್ಸ್‌ಪೆಕ್ಟರಾದ ಮೆ. ಕೋದಂಡ ಯಂ ಸುಬ್ಬಯ್ಯನವರನ್ನು ರಿಟಯರಾಗಿರುವ ಮೆ. ಸಾ. ಕೋದಂಡ ಐಯ್ಯಣ್ಣನವರ ಸ್ಥಳಕ್ಕೆ ದಕ್ಷಿಣ ಕೊಡಗಿನ ಆಕ್ಟಿಂಗ್ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರಾಗಿ ತಾ. 5—8—31ರಿಂದ ನೇಮಿಸಲಾಗಿದೆಯೆಂತ ತಿಳಿಯುತ್ತೇವೆ.

ತಾ. 5—9—30 ರಲ್ಲಿ ಮಡಿಕೇರಿ ಗಣಪತಿ ಬೀದಿಯಲ್ಲಿ ...ಗಳ ಎರಡು ಪಂಗಡಗಳೊಳಗಾದ ದೊಂಬಿ ಕೇಸಿನಲ್ಲಿ ... ಬ್ಯಾರಿಯವರ ಪಾರ್ಟಿಗೆ ಕುಲಾಸಾಗಿದೆಯೆಂದು ತಿಳಿಯುತ್ತೇವೆ. ಅಬ್ಬುಬಕರ್‌ರವರ ಪಾರ್ಟಿಯ ಮೇಲಿನ ಕೇಸು ಇನ್ನೂ ತೀರ್ಮಾನವಾಗಿರುವುದಿಲ್ಲ.

ಈಗ ಡೆಪ್ಯುಟಿ ಸುಪರಿಂಟೆಂಡೆಂಟರಾಗಿರುವ ಮೆ. ನಡಿಕೇರಿಯಂಡ ಕಾಳಪ್ಪನವರು ರಿಟಯರಾಗುವ ಮುಂಚೆ 4 ತಿಂಗಳು ರಜೆಯಲ್ಲಿ ಹೋಗುವುದರಿಂದ ಮೆ. ಬಿಟ್ಟಿಯಂಡ ಕುಟ್ಟಪ್ಪನವರು ಆಗೋಸ್ತು 1ನೇ ಶನಿವಾರ ಡೆಪ್ಯುಟಿ ಸುಪರಿಂಟೆಂಡೆಂಟರ ಉದ್ಯೋಗದ ಚಾರ್ಜನ್ನು ತೆಗೆದುಕೊಳ್ಳುವರೆಂದು ತಿಳಿಯುತ್ತೇವೆ.

ಈ ವಾರವೂ ಮಡಿಕೇರಿಯಲ್ಲಿ ಮಳೆ ಕಡಿಮೆ. ಕಳೆದ ಶನಿವಾರದಿಂದ ಇಂದಿನ ವರೆಗೆ 6 . 24 ಇಂಚು ಮಾತ್ರ ಮಳೆ ಬಂದಿದೆ. ಜುಲೈ ತಿಂಗಳಲ್ಲಿ ಒಟ್ಟು 36 76 ಇಂಚು ಮಳೆಯಾಗಿದೆ. ನಾಡು ಕಡೆಗಳಲ್ಲಿ ಮಳೆ ಸಾಕಷ್ಟು ಇಲ್ಲವೆಂದೂ, ಅದರಲ್ಲೂ ಹತ್ತುಗಟ್ಟು ನಾಡಿನ ಕಡೆ ಮಳೆಯು ಬಹಳ ಕಡಿಮೆಯಾಗಿ ವ್ಯವಸಾಯದ ಕೆಲಸಕ್ಕೆ ಅಡಚಣೆಯಾಗುತ್ತಿದೆಯೆಂದೂ ವರ್ತಮಾನ.

ಕಳೆದ ಎಪ್ರೆಲಿನಲ್ಲಿ ಮಡಿಕೇರಿಯಲ್ಲಿ ನಡೆದ ಟೆಕ್ನಿಕಲ್ ಪರೀಕ್ಷೆಯಲ್ಲಿ ವೀರಾಜಪೇಟೆ ಸರ್ಕಲಿನ ಸಹಕಾರ ಸಂಘಗಳ ಇನ್ಸ್‌ಪೆಕ್ಟರು ಮೆ. ಪಿ ಯಂ. ಚಂಗಪ್ಪನವರು ಹೈಯರ್ ಗ್ರೇಡ್ ಅಕೌಂಟಿಂಗಿನಲ್ಲಿಯೂ, ಪೊನ್ನಂಪೇಟೆ ಸರ್ಕಲಿನ ಕೋಆಪರೇಟಿವ್ ಇನ್ಸ್‌ಪೆಕ್ಟರು ಮೆ. ಬಿ ಯಂ. ಚಂಗಪ್ಪನವರು ಲೋವರ್ ಗ್ರೇಡ್ ಬುಕ್ ಕೀಪಿಂಗಿನಲ್ಲಿಯೂ, ಸೆಂಟ್ರಲ್ ಬ್ಯಾಂಕಿನ ಅಕೌಂಟೆಂಟರಾದ ಮೆ. ಹೆಚ್. ಕರಿಬಸವಯ್ಯನವರು ಲೋಯರ್ ಗ್ರೇಡ್ ಟೈಪ್ ರೈಟಿಂಗಿನಲ್ಲಿಯೂ (ಫಸ್ಟ್ ಕ್ಲಾಸ್) ಪಾಸಾಗಿರುತ್ತಾರಾಗಿ ತಿಳಿಯ ಬರುತ್ತದೆ.

ಮಡಿಕೇರಿ ರಾಜಾಸೀಟ್ ರಸ್ತೆಯಲ್ಲಿರುವ ಕೇಳಪಂಡ ಮಿಸೆಸ್ ಮುದ್ದಪ್ಪನವರ ಮನೆಯಲ್ಲಿ ಅಡಿಗೆ ಕೆಲಸ ಮಾಡುತ್ತಿದ್ದ ಬಂಟರ ಕೊರಗನೆಂಬ ಯುವಕನು ಅವರ ಮನೆಯಿಂದ ಸುಮಾರು 50 ರೂ. ಬೆಲೆಯ ಒಂದು ಚಿನ್ನದ ಒಡವೆಯನ್ನು ಕದ್ದು ಬಿಟ್ಟಿದ್ದಾನೆಂದೂ, ಪೋಲೀಸು ಸಬ್ ಇನ್ಸ್‌ಪೆಕ್ಟರವರು ಆವನ ಮನೆಗೆ ಹೋಗಿ ಅವನನ್ನು ವಿಚಾರಿಸುತ್ತಿದ್ದ ಸಮಯದಲ್ಲಿ ತಾ. 29ನೇ ಬುಧವಾರ ಸಾಯಂಕಾಲ ಸುಮಾರು ೦ ಗಂಟೆಗೆ ಕೊರಗನು ಪಕ್ಕನೆ ಅಂಗಳದಲ್ಲಿದ್ದ ಬಾವಿಗೆ ಬಿದ್ದು ಆತ್ಮಹತ್ಯ ಮಾಡಿಕೊಂಡನೆಂದು ತಿಳಿಯ ಬರುತ್ತದೆ.

ಕೊಡವ ವಿದ್ಯಾಭಿವೃದ್ಧಿ ಫಂಡಿನ ಕಮಿಟಿ ಮೀಟಿಂಗು ಈ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದು ಮೆ. ಗಳಿಯಾದ ಪಟ್ಟಮಾಡ ಎನ್ ಅಪ್ಪಣ್ಣ, ಪುಲಿಯಂಡ ಎಸ್. ಅಪ್ಪಯ್ಯ, ಕೊಂಗಂಡ ಎಸ್. ಬಿಯ್ಯಪ್ಪ, ಕೋಡಿಮಣಿಯಂಡ ಕೆ ಮುತ್ತಪ್ಪ, ಪಾಲೇಕಂಡ ಯಂ ಸ್ವುಬ್ಬಯ್ಯ, ಚಾರಿಮಂಡ ಟಿ. ಅಪ್ಪಯ್ಯ, ಪಾಲೇಕಂಡ ಯಂ. ದೇವಯ್ಯ ಮತ್ತು ಮೂಡೆರ ಬಿ ಬಿಯ್ಯಪ್ಪ ಇವರ ಸ್ಕಾಲರ್ ಶಿಪ್‌ಗಳನ್ನು 1931—32ರಲ್ಲಿ ಮುಂದುವರಿಸುವಂತೆಯೂ, ಮೆ. ಗಳಿಯಾದ ಪಟ್ಟಮಾಡ ಯಂ. ಸೋಮಣ್ಣ ಮತ್ತು ಪಾಲೇ... [illegible]

ಯೂ ತೀರ್ಮಾನಿಸಿದಲ್ಲದೆ ರಾಜಿನಾಮೆ ಕೊಟ್ಟ ಮೆ. ಬಿಟ್ಟಿಯಂಡ ಕುಟ್ಟಪ್ಪನವರ ಬದಲಿಗೆ ಮೆ. ಕೀತಿಯಂಡ ಬೆಳ್ಳಪ್ಪನವರು ಫಂಡಿನ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟರು.

ಹಿಂದೂದೇಶ.

ಸರ್ಕಾರದಿಂದ ಅವಶ್ಯವಿರುವ ಪತ್ರವ್ಯವಹಾರ ನಡೆದು, ಸ್ಥಿತಿಯು ತೃಪ್ತಿಕರವಾಗಿದ್ದರೆ ಮಹಾತ್ಮ ಗಾಂಧಿಯವರು ಆಗೋಸ್ತು ತಾ. 8ರಲ್ಲಿ ಇಟಾಲಿಯನ್ ಸ್ಟೀಮರಿನಲ್ಲಿ ಹೊರಟು ಇಟಲಿ ಮತ್ತು ಫ್ರಾನ್ಸಿಗಾಗಿ ಇಂಗ್ಲೆಂಡಿಗೆ ಹೋಗುವರೆಂದು "ಹಿಂದೂಸ್ಥಾನ್ ಟಯಮ್ಸ್" ಪತ್ರಿಕೆಯಲ್ಲಿ ಪ್ರಕಟವಾಗಿದೆ.

'ಲಾರ್ಡ್ ಇರ್ವಿನರನ್ನು ಇಂಡಿಯಾಕ್ಕೆ ವೈಸರಾಯರಾಗಿ ಕಳುಹಿಸುವ ಬದಲು ವಿಷಪರಾಗಿ ಕಳುಹಿಸಿದ್ದರೆ ಉತ್ತಮವಾಗಿತ್ತೆಂತಲೂ, ರಿಟಯರ್ಡ್ ವೈಸರಾಯರಾಗಿ ಇರ್ವಿನರು, ಹಿಂದೂದೇಶವನ್ನು ಬ್ರಿಟನು ಬಿಟ್ಟು ಕೊಟ್ಟು, ಅದನ್ನು ಗಲಿಬಿಲಿಗೆ ತುತ್ತು ಮಾಡಬೇಕೆಂದು ಇನ್ನೂ ಹೇಳುತ್ತಿರುವಂತೆ ಕಾಣುತ್ತದೆಂದೂ' ಲಾರ್ಡ್ ಇಂಚ್ ಕೇಪ್‌ರವರು "ಟಯಮ್ಸ್" ಪತ್ರಿಕೆಯಲ್ಲಿ ಬರೆದಿರುವರೆಂದು ವರ್ತಮಾನ.

ಬೊಂಬಾಯಿಯ ಅಸ್ಪೃಶ್ಯರು ಕಾಂಗ್ರೆಸ್ಸಿನವರಿಗೆ ತಮ್ಮ ಹಾಲು ಹವಾಲುಗಳನ್ನು ಹೇಳಿಕೊಳ್ಳುವದಕ್ಕಾಗಿ ಒಂದು ಸೆಂಟ್ರಲ್ ಬೋರ್ಡನ್ನು ನೇಮಿಸಿರುವರು. ಸದರಿ ಕಮಿಟಿಗೆ ಶ್ರೀ. ಕೆ ಯಂ. ಮುನ್ಷಿಯವರು ಅಧ್ಯಕ್ಷರಾಗಿಯೂ, ಅಂತ್ಯಜರಲ್ಲಿ ಒಬ್ಬರಾದ, ಪ್ರಸಿದ್ಧ ಕ್ರಿಕೆಟ್ ಆಟಗಾರರಾದ ಪಿ. ಬಾಲುರವರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿರುವರು. ಡಾ. ಅಂಬೇಡ್ಕರರವರ ಪಾರ್ಟಿಯವರು ಕಾಂಗ್ರೆಸಿನೊಂದಿಗೆ ಸಹಕರಿಸುವ ಈ ಪ್ರಯತ್ನಕ್ಕೆ ವಿರೋಧಿಸಿದರೂ ಬಹುಮತ ದೊರೆಯಲಿಲ್ಲ.

ಸಂಯುಕ್ತ ಪ್ರಾಂತ್ಯದಲ್ಲಿ ರೈತರ ಆರ್ಥಿಕ ಸ್ಥಿತಿಯು ಕೆಟ್ಟುಹೋಗಿ ಭೂಮಾಲೀಕರಿಗೆ ಕಂದಾಯ ಕೊಡಲಾರದೆ ಬಹಳ ತೊಂದರೆಗಳುಂಟಾಗಿದ್ದವು. ಕಾಂಗ್ರೆಸ್ಸಿನವರು ರೈತರ (ಪಾರಗಾರರ) ಗೂ, ಸರ್ಕಾರದವರು ಜಮೀನ್ದಾರರಿಗೂ ಸಹಾಯ ಮಾಡುತ್ತಿದ್ದರು. ಈಗ ಸರ್ಕಾರದವರೂ, ಕಾಂಗ್ರೆಸ್ ಮುಂದಾಳುಗಳೂ, ಜಮೀನ್ದಾರರ ಮತ್ತು ರೈತರ ಪ್ರತಿನಿಧಿಗಳೂ ಸೇರಿ ಚರ್ಚಿಸಿ, ಧಾನ್ಯಗಳ ಈಗಿನ ಧಾರಣೆಯನ್ನನುಸರಿಸಿ ಕಂದಾಯವನ್ನು ನಿಶ್ಚೈಸಲು ಸರ್ಕಾರದವರು ಒಂದು ಕಮಿಟಿಯನ್ನು ನೇಮಿಸುವಂತೆ ತೀರ್ಮಾನಿಸಲಾಗಿದೆ ಎಂದು ವರ್ತಮಾನ.

ದುಂಡುಮೇಜು ಪರಿಷತ್ತಿನವರು ಕಡಿಮೆ ಸಂಖ್ಯೆ ಕೋಮಿನವರ ರಕ್ಷಣೋಪಾಯಗಳನ್ನು ಕುರಿತು ಆಲೋಚಿಸಲು ನೇಮಿಸಿರುವ "ಮೈನಾರಿಟಿ" ಸಬ್ ಕಮಿಟಿಗೆ ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಪರವಾಗಿ ಡಾಕ್ಟರ್ ಅನ್ಸಾರಿಯವರನ್ನು ಮತ್ತು ಸರ್ ಅಲಿ ಇಮಾಮ್‌ರವರನ್ನು ನೇಮಿಸುವರೆಂಬ ವದಂತಿ ಇದೆ. ಇದು ನಿಜವಾದರೆ ಮುಸ್ಲಿಮ್ ಕಾನ್‌ಫರೆನ್ಸಿನ ಪಾರ್ಟಿಯ ಮುಸಲ್ಮಾನರು ಅಂದರೆ ಪ್ರತ್ಯೇಕ ಕೋಮುವಾರು ಚುನಾವಣೆ ಬೇಕೆನ್ನುವವರು ತುಂಬಾ ಅತೃಪ್ತರಾಗುವರೆಂದೂ, ಅವರು ದುಂಡು ಮೇಜು ಪರಿಷತ್ತನ್ನು ಬಹಿಷ್ಕರಿಸುವ ಆಲೋಚನೆ ಕೂಡ ಮಾಡಬಹುದೆಂದೂ ಸುದ್ದಿ.

ತಾರೀಕು 22—7—31 ರಲ್ಲಿ ಸಿಮ್ಲಾದಲ್ಲಿ ಹೋಮ್ ಮೆಂಬರರಾದ ಸರ್ ಜೇಮ್ಸ್ ಕ್ರೆರಾರರೊಡನೆ ಮಾತುಕತೆ ನಡೆಸಿ ಮಹಾತ್ಮ ಗಾಂಧೀಜೀಯವರು ಮಹಡಿಯ ಮೆಟ್ಟಲುಗಳನ್ನಿಳಿವಾಗ ಹೆಜ್ಜೆ ತಪ್ಪಿ ಸ್ವಲ್ಪ ಪೆಟ್ಟಾಯಿತು. ಕೂಡಲೇ ಸರ್ ಕ್ರೆರಾರವರು ಡಾಕ್ಟರಿಗೆ ಹೇಳಿ ಕಳುಹಿಸಲು ಗಾಂಧೀಜೀಯವರು ನಗುತ್ತ 'ಬೇಡ ಡಾಕ್ಟರರ ಅವಶ್ಯಕತೆ ಇಲ್ಲ' ಎಂದು ಉತ್ತರವಿತ್ತರು. 'ನಮ್ಮ ಏಕ್ಕಾ ಬಂಡಿಯಲ್ಲಿ ಕುಳಿತುಕೊಂಡು ಹೋಗಬಹುದಲ್ಲವೇ?' ಎಂದು ಕ್ರೆರಾರವರು ಸೂಚಿಸಿದರು. ಗಾಂಧೀಜೀಯವರು ಅದಕ್ಕೂ 'ಬೇಡ' ಎಂದರು. ನಡೆದು ಬರುವಾಗ ಮಳೆಯಲ್ಲಿ ಒದ್ದೆಯಾದ ಗಾಂಧೀಜೀಯವರ ಶಾಲನ್ನು ಕ್ರೆರಾರವರು ಒಣಗಲಿಕ್ಕೆ ಕೊಡಬೇಕೆಂದದನ್ನು ಪುನಹ ತಾವೇ ತಂದು ಕೊಟ್ಟರು. ಗಾಂಧೀಜೀಯವರು ಅದನ್ನು ಹೊದ್ದುಕೊಂಡು, 3½ ಮೈಲುಗಳ ದೂರವನ್ನು ಕಾಲ್ನಡೆಯಲ್ಲಿಯೇ ಹೋದರು.

ಕಳೆದ ವಾರ ಮಹಾತ್ಮ ಗಾಂಧಿಯವರು, ಸಂಕರ ಪಂಡಿತ ಜವಾಹಿರ್‌ಲಾಲ್ ನೆಹರುರವರು ಸಿಮ್ಲಾದಲ್ಲಿ ಇಂಡಿಯಾ ಸರ್ಕಾರದ ಹೋಮ್ ಸೆಕ್ರೆಟರಿಯಾದ ಮೆ. ಎಮರ್ಸನ್ನರವರನ್ನೂ, ಹೋಮ್ ಮೆಂಬರಾದ ಸರ್ ಜೇಮ್ಸ್ ಕ್ರೆರಾರನ್ನೂ ಮತ್ತು ವೈಸರಾಯಿ ಲಾರ್ಡ್ ವೆಲ್ಲಿಂಗ್ಟನ್ನರವರನ್ನೂ ಪ್ರತ್ಯೇಕ ಪ್ರತ್ಯೇಕ ಕಂಡು ಮಾತಾಡಿದರು. ಗಾಂಧಿ—ಇರ್ವಿನ್ ಒಪ್ಪಂದದ ಕರಾರುಗಳನ್ನು ಸರ್ಕಾರದವರು ಸರಿಯಾಗಿ ಪಾಲಿಸುತ್ತಿದ್ದಾರೋ ಎಂಬುದೇ ಸಂಭಾಷಣೆಯ ಮುಖ್ಯ ವಿಷಯವಾಗಿತ್ತು. ಈ ಸಂಭಾಷಣೆಯು ನಡೆಯುತ್ತಿದ್ದಾಗ್ಯೂ ಪತ್ರಿಕೆಯ ಪ್ರತಿನಿಧಿಗಳು ಎಷ್ಟು ಪ್ರಯತ್ನಿಸಿದರೂ ಫಲಿತಾಂಶವೇನಾಯಿತೆಂಬದನ್ನು ತಿಳಿಯಲಾಗದೆ ಹೋಯಿತು. ಮಹಾತ್ಮರಾಗಲಿ, ವೈಸರಾಯರಾಗಲೀ ಸಂಭಾಷಣೆಯನ್ನು ಕುರಿತು ಯಾವದೊಂದು ಪ್ರಕಟಣೆಯನ್ನೂ ಈ ವರೆಗೆ ಹೊರಡಿಸಿರುವುದಿಲ್ಲ. ಸ್ಥಿತಿಯು ಮೊದಲು ಇದ್ದ ಹಾಗೆಯೇ ಇದೆಯೆಂಬ ಮಾತು ಮಾತ್ರ ಮಹಾತ್ಮರ ಬಾಯಿಯಿಂದ ಹೊರಬಿದ್ದಿದೆ. ಮಹಾತ್ಮರು ದುಂಡು ಮೇಜು ಪರಿಷತ್ತಿಗೆ ಹೋಗುವುದು ಇನ್ನೂ ಖಂಡಿತವಾಗಿ ತೀರ್ಮಾನಿಸಲ್ಪಟ್ಟಿರುವುದಿಲ್ಲ. ... [illegible] ...ವರ್ತಮಾನ.

ವಿದೇಶ.

ಅಮೇರಿಕದ ಚಿಕಾಗೊ ಪಟ್ಟಣದಲ್ಲಿ ಜಗತ್ತಿನಲ್ಲೇ ಅತಿ ದೊಡ್ಡದಾದ ಭೋಜನಾಲಯ ಒಂದಿರುವುದು. ಇದರಲ್ಲಿ ಊಟ ಉಪಚಾರಂಳಲ್ಲ. ಮಲಗುವುದಕ್ಕೂ ತಕ್ಕ ಏರ್ಪಾಡುಗಳಿರುವುದಲ್ಲದೆ, ಆಟ ನೋಟಗಳಿಗೂ ಸರಿಯಾದ ವ್ಯವಸ್ಥೆ ಮಾಡಲ್ಪಟ್ಟಿದೆ. 25 ಅಂತಸ್ತುಗಳ ಈ ಕಟ್ಟಡದಲ್ಲಿ 3,000 ಕೋಣೆಗಳಿವೆ!

ಬ್ರಿಟನ್ನಿನ ಪ್ರಧಾನ ಮಂತ್ರಿಯಾದ ಮೆ. ರಾಮ್ಸೆ ಮೆಕ್ಡೊನಾಲ್ಡರವರು ಮತ್ತು ಪರದೇಶಗಳ ಸೆಕ್ರೆಟರಿಯಾದ ಮೆ. ಹೆಂಡರ್ಸನ್‌ರವರು ಈಗ ಬರ್ಲಿನ್‌ನಲ್ಲಿ ಜರ್ಮನಿಯ ಸರ್ಕಾರದೊಂದಿಗೆ ಆರ್ಥಿಕ ಮತ್ತು ವ್ಯಾಪಾರ ಸಂಬಂಧವನ್ನೂ, ಪ್ರಪಂಚದ ಶಾಂತತೆಯ ವಿಷಯವನ್ನು ಕುರಿತು ಸಂಭಾಷಣೆ ನಡಿಸುತ್ತಿರುವರು.

ಪೇರಗ್ವಾಜ್ ಎಂಬಲ್ಲಿ ಸರ್ಕಾರದವರು ಪುರೋಹಿತರ ಸಂಖ್ಯೆಯನ್ನು ಕಡಿಮೆ ಮಾಡಲು ಮಾಡಿದ ಶಾಸನದಿನ ದೆಸೆಯಿಂದ ಜನರಿಗೂ, ಸರ್ಕಾರಿ ಉದ್ಯೋಗಸ್ಥರಿಗೂ ಜಗಳವುಂಟಾಗಿ ಹಲವರು ಮೃತರಾಗಿರುವರು; ಗವರ್ನರಿಗೆ ಸ್ವಲ್ಪ ಘಾಯವಾಗಿದೆ. ನಾಲ್ಕು ಚರ್ಚುಗಳು ಸುಡಲ್ಪಟ್ಟಿವೆ. ಅಲ್ಲಿ, 'ಮಾರ್ಷಲ್ ಲಾ' ಜಾರಿಗೆ ತರಲ್ಪಟ್ಟಿದೆ.

ದಕ್ಷಿಣ ಅಮೇರಿಕದ ಚಿಲ್ಲಿ ಪ್ರಾಂತ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ 'ಡಿಕ್ಟೇಟರ್' (ಸರ್ವಾಧಿಕಾರಿ) ಆಗಿದ್ದ ಪ್ರೆಸಿಡೆಂಟ್ ಇಬಾನೆಜ್‌ರವರು ತಮ್ಮ ಪದವಿಗೆ ರಾಜಿನಾಮೆ ಕೊಟ್ಟಿರುವರು. ಕಳೆದ ಒಂದು ತಿಂಗಳಲ್ಲಿ ಮೂರು ಮಂತ್ರಿಮಂಡಳಿಗಳು ರಾಜಿನಾಮೆ ಕೊಟ್ಟವಂತೆ! ಇಬಾನೇಜ್‌ರವರ ಅಧಿಕಾರದಲ್ಲಿ ಜನರಲ್ಲಿ ತುಂಬಾ ಅತೃಪ್ತಿ ಹುಟ್ಟಿತಂತೆ.

ಆಸ್ಟ್ರೇಲಿಯಕ್ಕೆ ಸೇರಿದ ನ್ಯೂ ಸೌತ್ ವೇಲ್ಸ್ ಪ್ರಾಂತ್ಯದ ಗವರ್ನರರಾದ ಸರ್ ಫಿಲಿಪ್ ಗೇಮ್‌ರವರು ಅಲ್ಲಿಯ ಆರ್ಥಿಕ ಹೀನಸ್ಥಿತಿಯ ದೆಸೆಯಿಂದ ತಾನಾಗಿಯೇ ತನ್ನ ಸಂಬಳದಲ್ಲಿ ಶೇಕಡ 25 ರಷ್ಟು ಕಡಿಮೆ ಮಾಡಲು ಒಪ್ಪಿರುವರೆಂದು ವರ್ತಮಾನ. ಸಿಬ್ಬಂದಿ ಬೇಕೆ ಅತ್ಯವಶ್ಯವಾಗಿರುವ ಹಿಂದೂದೇಶದಲ್ಲಿ ದೊಡ್ಡ ಅಧಿಕಾರಿಗಳು ಅವರ ಉದಾಹರಣೆಯನ್ನು ಹಿಂಬಾಲಿಸುವರೇ ?

ಲಕ್ನೋದ ಪಬ್ಲಿಕ್ ಹೆಲ್ತಿನ ಡೈರೆಕ್ಟರವರಿಗೆ ಹೆಡ್ ಅಸಿಸ್ಟಾಂಟರಾದ ಖಾನ್ ಸಾಹೇಬ್ ಹಾಫಿಸ್ ಮೊಯಿದೀನ್‌ರವರು ಸ್ಯಾನಿಟರಿ ಇನ್ಸ್‌ಪೆಕ್ಟರ್ ಪರೀಕ್ಷೆಯಲ್ಲಿ ಸೋತು ಹೋಗಿದ್ದ ನಾಬಿ ಅಹ್ಮದ್ ಎಂಬ ಒಬ್ಬ ಪಠಾಣ ಯುವಕನಿಗೆ ಅವನ ಪರೀಕ್ಷೆಯ ನಂಬರುಗಳನ್ನು ತೋರಿಸಲಿಲ್ಲವೆಂಬ ಕಾರಣದಿಂದ ಅಹ್ಮದನು ಮೊಯಿದೀನ್‌ರವರಿಗೆ ಆಫೀಸಿನಲ್ಲಿ ಚೂರಿಯಿಂದ ತಿವಿದು ಬಿಟ್ಟನು. ಮೊಯಿದೀನ್‌ರವರು ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಅಹ್ಮದನು ಕೂಡಲೆ ದಸ್ತಗಿರಿ ಮಾಡಲ್ಪಟ್ಟನು.

ಬೃಹಸ್ಪತಿ ನಕ್ಷತ್ರ ಮಂಡಲದಲ್ಲಿ 17 ಅಡಿ ಎತ್ತರವಿರುವ ಮನುಷ್ಯರಿರುವರೆಂತಲೂ, ಸಿರಿಯಸ್ ಎಂಬ ಮತ್ತೊಂದು ಗ್ರಹದಲ್ಲಿ 9 ಮೈಲು!! ಎತ್ತರವಿರುವ ಮನುಷ್ಯರು ವಾಸ ಮಾಡಿಕೊಂಡಿರುವರೆಂತಲೂ ಜರ್ಮನಿಯ ಜ್ಯೋತಿಶ್ಶಾಸ್ತ್ರಜ್ಞನೊಬ್ಬನು ಕಂಡು ಹಿಡಿದಿದ್ದಾನೆಂದು ವರ್ತಮಾನ. ಇದು ನಿಜವಾದರೆ ರಾಮಾಯಣ ಮಹಾಭಾರತಗಳಲ್ಲಿ ವರ್ಣಿಸಿರುವ ಅದ್ಭುತ ವ್ಯಕ್ತಿಗಳು ಹಳೇ ಪುರಾಣದ ಬೊಗಳೆ ಹರಟೆಯೆಂದು ಅನ್ನುತ್ತಿರುವವರು ಬಾಯಿ ಮುಚ್ಚಬೇಕಾಗುವುದಲ್ಲವೇ ?

ಬ್ರಿಟನ್ನಿನ ಎಲ್ಲಾ ಪಾರ್ಟಿಯ ಮೆಂಬರುಗಳೂ ಕೂಡಿದ್ದ ಪಾರ್ಲಿಮೆಂಟು ಸದಸ್ಯರ ಮೀಟಿಂಗಿನಲ್ಲಿ ನವನಗರದ ಜಾಮ್ ಸಾಹೇಬರು—'ಹಿಂದೂಸ್ಥಾನಕ್ಕೆ ಚಕ್ರಾಧಿಪತ್ಯದಲ್ಲಿ ಸರಿಸಮಾನತ್ವ ದೊರೆಯಬೇಕೆಂದೂ, ಗಾಂಧಿ—ಇರ್ವಿನ್ ಒಪ್ಪಂದವನ್ನು, ದುಂಡು ಮೇಜು ಪರಿಷತ್ತಿನ ಕೆಲಸ ಮುಂದುವರಿಸುವುದಕ್ಕೆ ತನ್ನ ಪೂರ್ಣ ಒಪ್ಪಿಗೆ ಇದೆಯೆಂದೂ ಹೇಳಿ, ಹಿಂದೂದೇಶದ ಅಭಿವೃದ್ಧಿಗೆ ಅಡ್ಡ ಬರಲು ಇಷ್ಟಪಡದ್ದರಿಂದ ರಾಜರುಗಳು ಫೆಡರೇಶನಿಗೆ ಸೇರಲಿಕ್ಕೆ ಒಪ್ಪಿದೆಂದೂ, ಆದರೆ ಅವರು ಚಕ್ರಾಧಿಪತ್ಯದೊಳಗೇನೇ ಇರಲು ನಿರ್ಧರಿಸಿರುವರೆಂದೂ' ಭಾಷಣ ಮಾಡಿದರು.

ಇಂಡಿಯಾದ ಇಂಗ್ಲಿಷ್ ಸ್ನೇಹಿತರಲ್ಲಿ ಒಬ್ಬರಾದ ಮೆ. ಆಂಡ್ರ್ಯೂಸ್‌ರವರು ಬ್ರಿಟನ್ನಿನ ಬಟ್ಟೆ ವ್ಯಾಪಾರವು ಇಂಡಿಯಾದಲ್ಲಿ ಬಹು ಪಟ್ಟಿಗೆ ಕಡಿಮೆಯಾದ ಕಾರಣ ಲ್ಯಾಂಕಶೈರಿನವರಿಗೆ ಉಂಟಾಗಿರುವ ಕಷ್ಟವನ್ನು ಕುರಿತು ಇಂಗ್ಲೆಂಡಿನ ಒಂದು ಪತ್ರಿಕೆಯಲ್ಲಿ 'ಲ್ಯಾಂಕಶಯರಿನವರಿಗೆ ಇಂಡಿಯಾದಲ್ಲಿಯ ಬಹಿಷ್ಕಾರದಿಂದ ಘಕ್ಕನೆ ತಗಲಿರುವ ಪೆಟ್ಟನ್ನು ಕಡಿಮೆ ಮಾಡಲು ಇಂಡಿಯಾಕ್ಕೆ ಇಂಗ್ಲೆಂಡಿಗೂ ಬಹಿಷ್ಕಾರದ ಬದಲು ಸ್ನೇಹಾಚಾರದ ವ್ಯಾಪಾರ ನಡಿಸುವ ದಾರಿಯೊಂದನ್ನು ಕಂಡು ಹಿಡಿಯಬೇಕೆಂದು ಹೊರತು ಬೇರೆ ಸಾಧ್ಯವಿಲ್ಲ'ವೆಂದು ಬರೆದಿರುವರು.

ಕಳವು.

ಅಯ್ಯೋ,

ಅಮ್ಮತ್ತಿಯಲ್ಲಿ ಕಳೆದ ವಾರ ಒಂದು ಕಳವು. ಎಂದಿನಂತೆ ಇದಿರು ಬಾಗಿಲಿನಿಂದಲೇ ನುಗ್ಗಿದ್ದು. ಆದರೆ ಈ ಸ್ಥಳ ಪೋಲೀಸು ಸ. ಇ. ರವರು ಮುತುವರ್ಜಿಯಿಂದ ಅಲ್ಲಲ್ಲಿ ವಿಚಾರ ನಡಿಸುತ್ತಿರುವರು. ಪಕ್ಕೆ ಮಾತ್ರ ಇಲ್ಲ. ಬೀಟ್‌ನಲ್ಲಿರುವ ಕಾ. ಪಳನಿ ಏನು ಮಾಡುತ್ತಿರುವರೆಂದಾದರೂ ವಿಚಾರ ಮಾಡಿದರೆ ಟೌನಿನವರಿಗೆ ಉಪಕಾರವಾಗುತ್ತಿತ್ತು.

'ಪಟ್ಟಣಿಗ'

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ[illegible]ಕರು ಜವಾಬ್ದಾರರಲ್ಲ. ಸಂ.]

ಮುಸ್ಲಿಂ ಸ್ತ್ರೀ ವಿದ್ಯಾಭ್ಯಾಸ.

ಅಯ್ಯಾ,

ತಾ. 25—7—31ರಲ್ಲಿ ಮಡಿಕೇರಿಯ ಮುಸಲ್ಮಾನರ ಒಂದು ಸಭೆಯು ಹಿಂದೂಸ್ತಾನಿ ಸ್ಕೂಲ್ ಹಾಲ್‌ನಲ್ಲಿ ಶ್ರೀ ಜನಾಬ್ ಯಂ ರಸೂಲ್ ಖಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು.

ಜನಾಬ್ ಯಂ. ಯಂ ಸಿದ್ದೀಕರವರು ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತು ಅದರ ಅವಶ್ಯಕತೆಯನ್ನೂ ಮತ್ತು ಸ್ತ್ರೀಯರು ಮೂಢರಾಗಿರುವುದರಿಂದ ಆಗುವ ಕೇಡನ್ನು ವಿವರಿಸಿ ಒಂದು ದೀರ್ಘ ಉಪನ್ಯಾಸವನ್ನು ಮಾಡಿದರು. ಶಾಲಾ ಹೆಡ್ ಮಾಸ್ಟರ್ ಜನಾಬ್ ಅಬ್ದುಲ್ ಹಮೀದ್ ಸಾಹೇಬರವರು ಸ್ಕೂಲು [illegible] ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಿದರು. ಜನಾಬ್ ರಸೂಲ್ ಖಾನ್ ಸಾಹೇಬರವರು ಸ್ತ್ರೀ ವಿದ್ಯಾಭ್ಯಾಸಕ್ಕೆ [illegible] ಕೊಡುತ್ತೇನೆಂತಲೂ, ಹಿಂದೂ[illegible] ಸ್ಕೂಲ್ ಅಭಿವೃದ್ಧಿಗಾಗಿ ಸ್ಕೂಲ್ ಡೇ [illegible] ಮಾಡುತ್ತೇನೆಂತ[illegible] [illegible] ಮಾಡಿದರು. [illegible]

ಜನಾಬ್ [illegible] ಖಾನ್ ಸಾಹೇಬರವರು ತಮ್ಮ ಉದಾರ ಮನಸ್ಸಿನಿಂದ ವಿದ್ಯಾಭ್ಯಾಸಕ್ಕಾಗಿ ಸಹಾಯ ಕೊಡುತ್ತೇನೆಂತ ವಾಗ್ದಾನ ಮಾಡಿದ[illegible], ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿ ಸಭೆಯ ಕಾರ್ಯವನ್ನು ನಡಿಸಿದಕ್ಕಾಗಿಯೂ ಅವರನ್ನು ವಂದಿಸಿ ಸಭೆ ಬರ್ಖಾಸ್ತಾಯಿತು.

'ಹಾಜರಿದ್ದವ'

[illegible]

ಅಯ್ಯಾ,

[illegible] ಆಡಳಿತದ [illegible] ಕೊಡಗನ್ನು [illegible] ಜಿಲ್ಲೆಗಳೊಂದು [illegible] ಸೇರಿಸಿ ಕೆಲಸ ನಡಿಸಿ[illegible] ಆಗಬಾರದೆಂದು ಈ ಮುಂಚೆ ಸೂಚಿಸಿದೆನು. ಹೀಗೆ [illegible] ಈ ಕೆಳಗಿನ [illegible] ಯೋಚಿಸುವುದು ಸಾಧ್ಯವಿದೆ. [illegible] ಸೂಚನೆಯಿಂದ [illegible] ಇಲಾಖೆಗಳ ವಿಷಯ [illegible] ಬರೆಯುತ್ತೇನೆ.

[illegible] ಅವಶ್ಯವಾಗಿ [illegible] ಉದ್ಯೋಗಸ್ಥರ ಕೆಲಸ[illegible] ಸಲು ಪ್ರಾರಂಭಿಸಿ [illegible] ಶುದ್ಧವಾದ [illegible] ಕಳ್ಳತನದ ಸಾರಾಯಿ[illegible] ಇಲ್ಲ. ಈಗಿನ ಸಾರಾಯಿಯ ಕ್ರಯವು [illegible] ಬ್ರಾಂಡಿ, ವಿಸ್ಕಿಗಳ ಕ್ರಯ[illegible] ಪೂರ್ವದಲ್ಲಿ ಬ್ರಾಂಡಿಗೆ ಕುಪ್ಪಿ[illegible] 2—8—0 ರೂ. ಇದ್ದಾಗ್ಯೂ ಸಾರಾಯಿಯ ಕ್ರಯವು ಕೇವಲ 1 ರೂ. ಮಾತ್ರ [illegible] ಈಗ [illegible] ಸಾರಾಯದ ಕ್ರಯವು ಕುಪ್ಪಿಗೆ 7 ರೂ. [illegible] ಸಾರಾಯಿದ ಕ್ರಯವು ಮಾತ್ರ 1—8—0 ರೂ. ಅಂಗಡಿಯಲ್ಲಿ [illegible] ವುದು ಕೇವಲ ಅಕ್ರಮವಾಗಿದೆ. ಅಂಗಡಿ ಸಾರಾಯಿದ ಕ್ರಯವು ಸದ್ಯ ಕುಪ್ಪಿಗೆ 3 ರೂ. [illegible] ಈ ಸಾರಾಯಿವನ್ನು 1 ಕುಪ್ಪಿ, ½ ಕುಪ್ಪಿ, ¼ ಕುಪ್ಪಿಯ ಸೀಸೆಗಳಲ್ಲಿ ಕಂಪೆನಿಯಿಂದಲೇ ಭರ್ತಿ ಮಾಡಿಸಿ, ಅಂಗಡಿಗಳಲ್ಲಿ ಮಾರಾಟ ಮಾಡಿಸುವ ಕ್ರಮವನ್ನು ಮಾಡಿದರೆ ಆಳತೆಯು ಹೆಚ್ಚು ಕಮ್ಮಿಯಾಗಲೀ, ನೀರು, ಕರ್ಪೂರದ ಬೆರಕೆಯು ಬಾಧಕವಾಗಲೀ ಕುಡುಕರಿಗೆ ಬರಲು ಕಾರಣವಿಲ್ಲ. ಇಷ್ಟು ಮಾತ್ರವೇ ಅಲ್ಲದೆ ಸರ್ಕಾರಕ್ಕೆ ಸತ್ಯಾಗ್ರಹಿಗಳ ಪಿಕೆಟಿಂಗಿನ ಭಾದೆಯು ಬಹಳ ಮಟ್ಟಿಗೆ ತಪ್ಪುವುದು. ಕುಡುಕತನವನ್ನು ಪೂರ್ತಿ [illegible] ಸರ್ಕಾರಕ್ಕೆ [illegible] ಕುಡುಕರು ತಮ್ಮ ತಮ್ಮ ಮನೆಗಳಲ್ಲಿ ಮಾತ್ರ ಕುಡಿಯುವ ಅಭ್ಯಾಸವನ್ನು ಕಲಿಸಿದಂತೆ ಆಗುತ್ತೆ. ಇದರಿಂದ ಪೇಟೆ ಬೀದಿಗಳಲ್ಲಿ ಬಿದ್ದು [illegible] ತಪ್ಪಿಸಿದಂತೆ ಆಗುತ್ತೆ. ಈ [illegible] ಅಬ್ಕಾರಿ ಇಲಾಖೆಯ [illegible] ಅನುಕೂಲವಾಗಿ [illegible] ಸಬ್ 'ಇನ್‌ಸ್ಪೆಕ್ಟರ' [illegible] ಇನ್‌ಸ್ಪೆಕ್ಟರ ಹುದ್ದೆ[illegible] ಅವಶ್ಯವಿಲ್ಲದಾಗುತ್ತೆ.

[illegible] ಇಲಾಖೆಯು [illegible] ಗಳಿಯನ್ನು [illegible] ಹೈಸ್ಕೂಲುಗಳನ್ನು ಚೀಫ್ ಕಮಿಶನರವರ [illegible] 'ಇನ್‌ಸ್ಪೆಕ್ಟರ ಹುದ್ದೆಯನ್ನು [illegible] ಸಾಧ್ಯವಿದೆ. ಈಗ [illegible] 'ಇನ್‌ಸ್ಪೆಕ್ಟರ' [illegible] ಜವಾಬ್ದಾರರಾಗುವುದಿಲ್ಲ. ಒಂದು [illegible] ಇನ್‌ಸ್ಪೆಕ್ಟರ ನೆರಳಲ್ಲಿಯೂ, ಇನ್ನೊಂದು [illegible] ಪ್ರೆಸಿಡೆಂಟರಾದ ಕಮಿಶನರವರ ನೆರಳಲ್ಲಿಯೂ [illegible] ನಡಸುತ್ತಲಿದ್ದರೆ. [illegible] ಶಾಲೆಗಳ [illegible] ಹುಟ್ಟಲಿದೆ. ಸ್ಕೂಲ್ ಡೇ, ಸು[illegible] ಪೂಜೆ, [illegible] ಇವುಗಳಲ್ಲಿ ಸಮಯವು [illegible] ಈ [illegible] ಮಕ್ಕಳ

ತಂದೆಗಳಿಗೆ ಸಾಕಾಗಿದೆ [illegible] ಹನ್ನೆರಡು ವರುಷದಲ್ಲಿ ಸ್ಕೂಲುಗಳನ್ನು ಆಯಾ [illegible] ಕಲ್ ಹೆಡ್ ಮಾಸ್ಟರುಗಳ ತಾಬೆಗೆ ಕೊಟ್ಟು ಪ್ರಕೃತಿಗೆ ಅನುಗುಣವಾದ ವಿದ್ಯೆಯನ್ನು ಮಿಡ್ಲ್ ಸ್ಕೂಲಿನ 1ನೇ ತರಗತಿಯಿಂದಲೇ ಶಕ್ತ್ಯಂತ ಮಕ್ಕಳಿಗೆ ತಂದೆಯ [illegible] ಕೊಡಲು ಅನುಕೂಲವಾಗುತ್ತೆ. ಈ ವಿಧಾನದಿಂದ ಮಿಡ್ಲ್ ಸ್ಕೂಲುಗಳ ಮೇಲ್ವಿಚಾರ ಕೆಲಸವು ಸರಿಯಾಗಿ ನಡೆಯ ಬಹುದು. 1ನೇ ತರಗತಿಯಿಂದ 6th ಫಾರಂ ವರೆಗೆ ವಿದ್ಯೆಯು ಏಕರೀತಿಯಾಗಿ ನಡೆಯ ಬಹುದು. ಬೋರ್ಡ್ ಸ್ಕೂಲುಗಳನ್ನು ಮಾತ್ರ ಸಬ್ ಡಿ. ಇನ್‌ಸ್ಪೆಕ್ಟರ ತಾಬೆಗೆ ಕೊಟ್ಟು, ಇವರು ಕೇವಲ ಡಿ ಬೋರ್ಡ್ ಪ್ರೆಸಿಡೆಂಟರವರ ಜವಾಬ್ದಾರಿಕೆಗೆ ಒಳಗಾಗುವಂತೆ ಮಾಡುವುದು ಉತ್ತಮವಾಗಿದೆ. ಇವರ ಸಂಬಳವು ಹೆಚ್ಚೆ 100ರಿಂದ 150 ರೂ. ವರೆಗೆ ಸಾಕಾಗುತ್ತೆ. ಅಲ್ಲದೆ ಈಗಿನ ಗರ್ಲ್ಸ್ ಸ್ಕೂಲುಗಳು ಕೇವಲ ಕಮ್ಮಿ ಕೆಲಸ ನಡಿಸುತ್ತವೆ. ಕೊಡಗಿನ 2—3 ಸ್ಕೂಲುಗಳು ವಿನಹ ಉಳಿದ ಗರ್ಲ್ಸ್ ಸ್ಕೂಲುಗಳ ಮೇಲೆ ರೈತರಿಗೆ ವಿಶ್ವಾಸವೇ ಕಮ್ಮಿಯೋ ಏನೋ [illegible] ಆ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕೇವಲ ಕಮ್ಮಿ [illegible] ಬರುತ್ತಿದೆ. ಈ ಶಾಲೆಗಳನ್ನು ಪ್ರತ್ಯೇಕವಾಗಿ ಇಡುವದಕ್ಕಿಂತ ಆಯಾಯ ಸೆಂಟರಿನ ಹುಡುಗರ ಶಾಲೆಗಳಿಗೆ ಈ ಶಾಲೆಗಳನ್ನು ಸೇರಿಸಿ ಆ ಟಗ್ಗೆ ಡಿ. ಬೋರ್ಡಿಗೆ ಸರಕಾರ ಗ್ರಾಂಟನ್ನು ಕೊಟ್ಟರೆ ಕೆಲಸವು ಚೆನ್ನಾಗಿ ನಡೆಯುತ್ತೆ. [illegible] ವಿ ಸ್ಕೂಲು ಮಿಸ್ಟ್ರೆಸ್‌ಗಳು ಹೀಗೆ ಸಂಯೋಜಿಸಲಾದ ಶಾಲೆಗಳಲ್ಲಿ [illegible] ತರಗತಿಗಳ [illegible] ಅನುಕೂಲವಾಗುತ್ತೆ. [illegible] ಹುಡುಗಿಯರು ಸಹ ಜೊತೆಯಲ್ಲೇ ಗರ್ಲ್ಸ್ ಸ್ಕೂಲು ಇಲ್ಲದ ಅನೇಕ ಗ್ರಾಮ ಶಾಲೆಗಳಲ್ಲಿ ವಿದ್ಯೆ ಕಲಿಯುತ್ತಿರುವರು. ಬಾಲಿಕೆಯರು ಪ್ರೈಮರಿಯಲ್ಲಿ ಹುಡುಗರೊಡನೆ ಕಲೆತು ವಿದ್ಯೆ ಕಲಿಯುತ್ತಿರುವರು. ಹೀಗಿರುವಾಗ್ಯೂ ಈ ಸಂಗತಿ ಆಕ್ಷೇಪಣೆಗೆ ಕಾರಣವಿಲ್ಲವೆಂದು ನಿಶ್ಚಿತವಾಗಿ ಹೇಳಬಲ್ಲೆನು. ಈ ವಿಧಾನದಿಂದ ಇಲಾಖೆಯಲ್ಲಿ ಉಂಟಾದ ಉಳಿತಾಯದಿಂದ ದಕ್ಷಿಣ ಕೊಡಗಿನ ರೈತರು ಹೆಚ್ಚೆ ಅನೇಕ ವರ್ಷಗಳಿಂದ ಬೇಡಿಕೊಳ್ಳುತ್ತಲಿರುವ ಹುಡುಗಿಯರ ಸೆಕೆಂಡರಿ ಶಾಲೆ [illegible] ವೀರರಾಜಪೇಟೆಯಲ್ಲಿ ಸ್ಥಾಪಿಸಲು ವಿಶಿಷ್ಟವಾದ [illegible] ಕಿಯುತ್ತೆ. ಜನಾಭಿವೃದ್ಧಿಯ ಇಲಾಖೆ[illegible] [illegible] ವನ್ನು ಜನಾಭಿವೃದ್ಧಿಯ ಬಾಬಿಗೇನೇ [illegible] ಗುತ್ತೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗು ಈ ತಾ 4ರಲ್ಲಿ ಬೊಂಬಾಯಿಯಲ್ಲಿ ಪ್ರಾರಂಭವಾಗಿದೆ ಲಂಡನ್ ಕಾಂಗ್ರೆಸ್ ಕಮಿಟಿಯು ಕಾಂಗ್ರೆಸ್ಸಿನ ಧ್ಯೇಯಕ್ಕನುಸಾರವಾಗಿ ನಡೆಯದ್ದರಿಂದ ಕಾಂಗ್ರೆಸ್ಸಿಗೆ ಅದರ ಸಂಬಂಧವನ್ನು ಬಿಡ ಮಾಡುವಂತೆ ತೀರ್ಮಾನಿಸಲಾಯಿತು ಧ್ವಜ ಕಮಿಟಿಯವರ ಶಿಫಾರಸ್ಸು ಮೇರೆ ಮೇಲೆ ಹಳದಿ, ಮಧ್ಯದಲ್ಲಿ ಬಿಳುಪು ಮತ್ತು ಕೆಳಗೆ ಕೆಂಪಿನ ಬಣ್ಣದಿಂದ ಕೂಡಿ, ಬಿಳುಪಿನ ಮೇಲೆ ನೀಲಿ ಬಣ್ಣದ ಚರಕಾದ ಗುರ್ತು ಇರುವ ಮೂರು ಬಣ್ಣದ ರಾಷ್ಟ್ರೀಯ ಧ್ವಜವನ್ನೇ ಉಪಯೋಗಿಸುವಂತೆ ತೀರ್ಮಾನಿಸಿರುವರು

ಬರುವ ದುಂಡು ಮೇಜು ಪರಿಷತ್ತಿನ ಮೆಂಬರುಗಳ ಹೆಸರುಗಳು ಪ್ರಕಟವಾಗಿವೆ. ಅದರಲ್ಲಿ 13 ಬ್ರಿಟಿಷ್ ಮೆಂಬರುಗಳೂ 19 ಸಂಸ್ಥಾನಗಳ ಪರ ಮೆಂಬರುಗಳೂ, 70 ಬ್ರಿಟಿಷ್ ಇಂಡಿಯಾದ ಪರ ಮೆಂಬರುಗಳೂ ಇರುವವು ಇವುಗಳಲ್ಲಿ ಮಹಾತ್ಮ ಗಾಂಧಿಯವರು, ಸರೋಜಿನಿ ದೇವಿಯವರು, ಪಂಡಿತ ಮದನಮೋಹನ ಮಾಳವೀಯರು, ರಂಗಸ್ವಾಮಿ ಅಯ್ಯಂಗಾರರು, ಮೌಲಾನ ಶೌಕತ್ ಅಲಿಯವರು ಸರ್ ಅಲಿ ಇಮಾಮ್‌ರವರು ಪ್ರಾಮುಖ್ಯ ಹೊಸ ಮೆಂಬರುಗಳಾಗಿರುವರು. ಈ ಪರಿಷತ್ತಿನ 'ಮೈನಾರಿಟೀಸ" ಅಂದರೆ ಕಡಿಮೆ ಸಂಖ್ಯೆ ಸಂಗಡಗಳ ಉಪಕಮಿಟಿಯ 44 ಮೆಂಬರುಗಳ ಹೆಸರುಗಳೂ ಪ್ರಕಟವಾಗಿವೆ ರಾಷ್ಟ್ರೀಯ ಪಕ್ಷ ಮುಸಲ್ಮಾನರ ಮುಂದಾಳಾದ ಡಾ ಅನ್ಸಾರಿಯವರ ಹೆಸರು ಈ ಪಟ್ಟಿಯಲ್ಲಿ ಸೇರಿಸದೆ ಹೋದದ್ದು ದೇಶದಲ್ಲಿ ಅತೃಪ್ತಿಯಾಗಿದೆಯೆಂದು ವರ್ತಮಾನ.

ಮಹಾತ್ಮ ಗಾಂಧಿಯವರು ಪೂನಾಕ್ಕೆ ಹೋಗಿ ಅಲ್ಲಿ ಬೊಂಬಾಯಿಯ ಗವರ್ನರೊಂದಿಗೆ ರಾಜಕೀಯ ಸಂಗತಿಗಳನ್ನು ನಾಲು ಸಾವುರದ ವಿಷಯ ಸಂಭಾಷಣೆ ನಡಿಸಿ ವಾಪಸು ತಾ 4 ರ ಸಾಯಂಕಾಲ ಬೊಂಬಾಯಿಗೆ ಹಿಂತಿರುಗಿ ಬಂದರು. ಅವರು ದುಂಡು ಮೇಜು ಪರಿಷತ್ತಿಗೆ ಹೋಗುವುದು ಇನ್ನೂ ನಿಶ್ಚಯಿಸಲ್ಪಟ್ಟಿರುವುದಿಲ್ಲ ಸರ್ಕಾರದ ಅಧಿಕಾರಿಗಳು ಡೆಲ್ಲಿ ಒಪ್ಪಂದದ ಶರತುಗಳಿಗನುಸಾರವಾಗಿ ನಡೆಯದೆ ಇರುವದೂ ಒಂದು ಕಡೆಯೂ, ಇಂಡಿಯಾದ ಸ್ನೇಹಿತರು ಹೇಗಾದರೂ ಅವರು ದುಂಡು ಮೇಜು ಪರಿಷತ್ತಿಗೆ ಹೋಗಬೇಕೆಂದು ಒತ್ತಾಯ ಪಡಿಸುತ್ತಿರುವುದು ಇನ್ನೊಂದು ಕಡೆಯೂ ಮಹಾತ್ಮರನ್ನು ಉತ್ಕಂಠಿತೆಯಂತೆ ಆದುದರಿಂದ ಅವರು ಲಂಡನಿಗೆ ಹೋಗುವದು, ಯಾ ಬಿಡುವುದು ವರ್ಕಿಂಗ್ ಕಮಿಟಿಯವರ ತೀರ್ಮಾನಕ್ಕೆ ಬಿಟ್ಟಿರುವರಂತೆ ವರ್ಕಿಂಗ್ ಕಮಿಟಿಯವರು ಈ ವಿಷಯ ಚರ್ಚಿಸುತ್ತಲೇ ಇದ್ದಾರೆ

ಬೊಂಬಾಯಿಯಲ್ಲಿ ಒಬ್ಬ ಪ್ರಸಿದ್ಧ ಸಿನೇಮಾ ನಟಿಯಾದ ಸುಲ್ತಾನಾ ಎಂಬಾಕೆಯು, ಅಲ್ಲಿಯ ಮುನ್ಸಿಪಾಲಿಟಿಯ ಮಾಜಿ ಅಧ್ಯಕ್ಷರಾದ ಲಾಲ್ಜಿಯವರ ಮಗ ಯೂಸುಬ್ ಹುಸೇನ್ ಬಾಯಿ ಲಾಲ್ಜಿಯವರಿಗೂ ತನಗೂ ಕಳೆದ ವರ್ಷ ಜುಲೈಯಲ್ಲಿ ಮದುವೆಯಾಗಿತ್ತೆಂದೂ, ಆಗ್ಯೆ ಅವರು ಕೊಡುತ್ತೇನೆಂದು ವಾಗ್ದಾನ ಮಾಡಿ ಪ್ರೋನೋಟು ಬರೆಕೊಟ್ಟ 5 ಲಕ್ಷ ರೂಪಾಯಿಯನ್ನು, ತಪ್ಪಿದರೆ ಈ ವರಿಗಿನದು 29,400 ರೂ ಮತ್ತು ಇನ್ನು ಮುಂದೆ ತಿಂಗಳಿಗೆ 1700 ರೂ ಜೀವನಾಂಶ ಕೊಡಿಸಬೇಕೆಂದೂ ದಾವೆ ಮಾಡಿರುತ್ತಾಳೆ. ಪ್ರತಿವಾದಿಯು, ತಾನು ಹಾಗೆ ಮದುವೆ ಆಗಿರುವುದಿಲ್ಲವೆಂದೂ, ಆಕೆಯು ಒಂದು ದಿನ ಹೋಟೇಲಿನಲ್ಲಿ ಅವನಿದ್ದಲ್ಲಿಗೆ ಬಂದು ಹಾಗೆ ಪ್ರೋನೋಟು ಬರೆದು ಕೊಡದೆ ಹೋದರೆ ಮಾನಭಂಗ ಮಾಡಿದಿರೆಂದು ಪೋಲೀಸಿಗೆ ಕೇಸು ಕೊಡುತ್ತೇನೆಂದು ಹೆದರಿಸಿ, ಬಲವಂತದಿಂದ ಪ್ರೋನೋಟು ಬರೆಸಿದಳೆಂತಲೂ, ಆ ವಿಷಯ ತಾನು ಕ್ರಿಮಿನಲ್ ಕೇಸು ಕೊಟ್ಟಿರುತ್ತೇನೆಂತಲೂ ವಾಗ್ಮೂಲ ಕೊಟ್ಟಿರುವನು. ಮುಂದೆ ಏನಾಗುವದೆಂದು ನೋಡಬೇಕು.

ವಿದೇಶ.

ದುಂಡು ಮೇಜು ಪರಿಷತ್ತಿನಲ್ಲಿ ಇಂಡಿಯಾದಲ್ಲಿರುವ ಬ್ರಿಟಿಷ್ ಸರ್ವಿಸಿನವರ ಪರ ಪ್ರತಿನಿಧಿಯನ್ನು ನೇಮಿಸಲು ಸಾಧ್ಯವಿಲ್ಲವೆಂದು ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುವರು

ಎಸೆಂಬ್ಲಿಯ ಮಾಜಿ ಅಧ್ಯಕ್ಷರಾದ ವಿ. ಜೆ. ಪಟೇಲರವರು ವಿಯನ್ನದಲ್ಲಿ ಆಪರೇಶನ್ ಮಾಡಲ್ಪಟ್ಟಿರುವರು. ಅವರ ಸ್ಥಿತಿಯು ಉತ್ತಮವಾಗುತ್ತಿದೆಯೆಂದೂ, ಎರಡು ವಾರಗಳೊಳಗೆ ಗುಣವಾಗುವರೆಂದೂ ವರ್ತಮಾನವಿದೆ.

ದುಂಡುಮೇಜು ಪರಿಷತ್ತಿನ ಜಯಕ್ಕಾಗಿ ಇಂಗ್ಲೆಂಡಿನ ಚರ್ಚುಗಳಲ್ಲಿ ಆಗಾಗ್ಯೆ ಪ್ರಾರ್ಥನೆಗಳನ್ನು ನಡಿಸಬೇಕೆಂದು ಅಲ್ಲಿಯ ಚರ್ಚುಗಳ ಮುಖ್ಯಾಧಿಕಾರಿಯಾದ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ಪರವರು ಸೂಚಿಸಿರುವರು

ಇಂಗ್ಲೆಂಡಿನ ಬ್ರಿಸ್ಟಲ್ ಬಂದರದಲ್ಲಿ ಒಬ್ಬ ವಿಶೇಷ ಯುವತಿ ಇರುವಳು 5 ಅಡಿ 11 ಅಂಗುಲ ಎತ್ತರವಿರುವ ಇವಳು 394 ಪೌಂಡ ತೂಕವುಳ್ಳವಳಾಗಿರುವಳು! ಇವಳ ರಟ್ಟೆಯ ಸುತ್ತಳತೆ 29 ಇಂಚು! ಎದೆಯು 62 ಇಂಚು! ಕುಂಡೆಯು 72 ಇಂಚು!! ಈ ಮಹಾಕಾಯಿಯು ಅಟ್ಟಗಳಿಗೆ ಹತ್ತುವಾಗ ಮರದ ಮೆಟ್ಟಲುಗಳು ಭಾರದಿಂದ ಘುಳಿಪಿಸುವವಂತೆ. ಕಲಿಯುಗದ ಹಿಡಿಂಬಿಯಂತಿರುವ ಇವಳನ್ನು ಯಾವದಾದರೊಂದು ಪ್ರದರ್ಶನದಲ್ಲಿರುವ ಏರ್ಪಾಡು ನಡೆಯುತ್ತಿದೆಯಂತೆ.

ಕಳೆದ ಮೇ ತಿಂಗಳಲ್ಲಿ ಬಿಟನ್ ನಾನಪ್ಪಳಾದ ವಾಸ್ತೆನೇಸ್ ಎಂಬ ಆಂಗ್ಲ ಸ್ತ್ರೀಯು ಮೃತಳಾದಳು. ತನ್ನ ಕಳೇಬರವನ್ನು ದಹನಮಾಡಿ ಬೂದಿಯನ್ನು ಭರತಖಂಡದ ಗಂಗೆಯಲ್ಲಿ ಬಿಡಬೇಕೆಂದು ತನ್ನ ಮೃತ್ಯು ಪತ್ರದಲ್ಲಿ ಬರೆದಿದ್ದಳಂತೆ. ಅದೇ ಪ್ರಕಾರ ಬೂದಿಯು ಬೆಳ್ಳಿಯ ಭರಣಿಯಲ್ಲಿಡಲ್ಪಟ್ಟು ಭರತಖಂಡಕ್ಕೆ ಕಳುಹಿಸಲ್ಪಟ್ಟಿದ್ದು ಆಕೆಯ ಸ್ನೇಹಿತನಾದ ಇಂಡಿಯಾ ಡಾಕ್ಟರು ಬೂದಿಯನ್ನು ಗಂಗೆಯಲ್ಲಿ ಬಿಡಿಸಿದನು. ಈಕೆಯು ಬೌದ್ಧಮತಾವಲಂಬಿಯಾಗಿದ್ದಳಲ್ಲದೆ ಭರತಖಂಡದಲ್ಲಿ ಪುನಃ ಜನ್ಮವೆತ್ತೇನೆಂದು ನಂಬಿದ್ದಳಂತೆ.

ಮಾರಾಟಕ್ಕಿದೆ.

ಸುಂಟಿಕೊಪ್ಪಲಿನಲ್ಲಿ ಪೋಲೀಸ್ ಸ್ಟೇಶನಿನ ಸಮೀಪ ಒಂದು ಹಂಚಿನ ಮನೆ, ಹಿಂದುಗಡೆ ಸುಮಾರು ಒಂದು ಎಕರೆ ಹಿತ್ತಲು, ಮತ್ತು ಅದರಲ್ಲಿ ಸುಮಾರು 200 ಬುಡ ಬಾಳೆ, ಮಾರಾಟಕ್ಕೆ ಇದೆ. ಸುತ್ತಾ ತಂತಿ ಬೇಲಿ ಹಾಕಲ್ಪಟ್ಟಿದೆ. ಒಳ್ಳೆ ಬಾಡಿಗೆ ಬರುತ್ತೆ. ಹೊಸ ಮನೆ ಕಟ್ಟಲು ಜಾಗ ಸಹ ಇದೆ. ಖರೀದಿಸ ಬರುವವರು ಈ ಕೆಳಗಿನ ವಿಳಾಸಕ್ಕೆ ಬರೆದು ಕ್ರಯ ತಿಳಿದುಕೊಳ್ಳಬಹುದು

'X'
C/o The Manager.
"Kodagu"
3—3 Mercara

WANTED.

Bed and Basket Coffee Plants

Write to —

Nellikere Estate,
2—2 **Sunticopa.**

ಮಕ್ಕಳ ಮನಸ್ಸು ತಪ್ಪಿನ ಕಡೆ ತಿರುಗಬಾರದು!

ಕಲಕತ್ತೆಯಲ್ಲಿ ಮಕ್ಕಳ ಕೋರ್ಟಿನ ನ್ಯಾಯಾಧೀಶರಾದ ಬಿ. ಎನ್. ಮುಖರ್ಜೀ ಎಂಬವರು ಮಕ್ಕಳ ಮನಸ್ಸು ತಪ್ಪಿನ ಕಡೆ ತಿರುಗದಂತೆ ಯಾವ ಬಗೆಯ ದಕ್ಷತೆಯನ್ನು ವಹಿಸಬೇಕೆಂಬ ವಿಚಾರದಲ್ಲಿ ಹೀಗೆ ಹೇಳಿರುವರು :-"ಮಕ್ಕಳ ವಿರಾಮ ಸಮಯವನ್ನು ಉತ್ತಮವಾದ ರೀತಿಯಲ್ಲಿ ಉಪಯೋಗಿಸುವಂತೆ ಮಾಡುವುದು ಮುಖ್ಯ ಕರ್ತವ್ಯವಾಗಿದೆ. ಮಕ್ಕಳು ಉದ್ಯೋಗ ಪ್ರಿಯರು. ಅವರು ಏನಾದರೊಂದು ಕೆಲಸವನ್ನು ಮಾಡುತ್ತಲೆ ಇರುವರು. ಅಂತಹ ಸಮಯದಲ್ಲಿ ಸಡಿಲವೂ, ಚಂಚಲವೂ ಆದ ಅವರ ಮನಸ್ಸು ಒಂದಿಲ್ಲವಾದರಿನ್ನೊಂದು ವಿಚಾರದಲ್ಲಿ ಮಗ್ನವಾಗುವುದು. ಉಪಯುಕ್ತವಾದ ಕೆಲಸ ಅಥವಾ ಆಟ ವಿನೋದಗಳಲ್ಲಿ ಮನಸ್ಸು ಮಗ್ನವಾಗದಿದ್ದರೆ ಬೇಡವಾದ ವಿಚಾರಗಳು ಅವರ ತಲೆಯಲ್ಲಿ ಹೊಕ್ಕು ಅವರು ಅಪರಾಧ ಕಾರ್ಯಗಳಲ್ಲಿ ಪ್ರವೃತ್ತರಾಗುವರು. ಆದ್ದರಿಂದ ಅವರ ವಿರಾಮ ಸಮಯವನ್ನು ಒಳ್ಳೆಯ ಕೆಲಸದಲ್ಲಿ ವಿನಿಯೋಗವಾಗುವಂತೆ ಮಾಡಬೇಕು. "ಸ್ಟ್ರೀಟ್ ಬಾಯ್ಸ್ ಕ್ಲಬ್ (ಬೀದಿಯ ಮಕ್ಕಳ ಸಂಘ)' ವನ್ನು ನಮ್ಮ ದೇಶದಲ್ಲಿ ಸ್ಥಾಪಿಸುವುದು ಅತ್ಯಾವಶ್ಯಕವಾಗಿದೆ. ಬಾಲಚರರೂ (ಸ್ವಯಂಸೇವಕ,) ಸ್ಕೌಟಿಂಗ್, ಆಟ, ವ್ಯಾಯಾಮ, ಸಿನೇಮಾ, ವನಭೋಜನ ಇತ್ಯಾದಿ ವಿಷಯಗಳಲ್ಲಿ ಮಕ್ಕಳ ಮನಸ್ಸು ಮಗ್ನವಾಗಿರುವಂತೆ ಮಾಡಬೇಕು. ಮನುಷ್ಯ ಪ್ರಾಣಿಯು ಸ್ವಾಭಾವಿಕವಾಗಿ ಸಂಘಟನಾ ಪ್ರಿಯನಾಗಿರುವುದು. ಆದುದರಿಂದ ಒಂದು ಬಾರಿ ಮಕ್ಕಳಿಗೆ ತಾತನ್ನು ಮಂಡಳಿಯಲ್ಲಿ ವಿನೋದವನ್ನೆಸಗುವ ಅಭ್ಯಾಸವು [illegible] ಅವರು ಬುದ್ಧಿಪೂರ್ವಕವಾಗಿ ಪರಿಶಾಂತಿಕರಾಗುವರು. ಅಷ್ಟು ಮಾತ್ರವಲ್ಲದೆ ತಮ್ಮ ಮಂಡಳಿಯಿಂದ [illegible] ಸ್ವತಂತ್ರರಾಗಿ [illegible] [illegible] ಅದರ ಉಪಯುಕ್ತವಾಗಿರುವ [illegible] ಇಂಗ್ಲೆಂಡಿನಲ್ಲಿ ಈ ಬಗೆಯ ಮಂಡಳಿಗಳಿಂದ ವಿಶೇಷ ಪ್ರಯೋಜನವಾದೆಯೆಂದು ಕಂಡುಬಂದಿರುವುದು. ಅಲ್ಲದೆ ಮಕ್ಕಳ ನ್ಯಾಯಸ್ಥಾನಗಳ [illegible] ಕೇವಲ ಕಾಯಿದೆ [illegible] ನ್ಯಾಯವನ್ನೀಯದೆ [illegible] ಯಂತ್ರಾಲಯಗಳಂತೆ ಮಕ್ಕಳನ್ನು [illegible] ಮಾಡುವ [illegible] ಬೇಕು. ಹೀಗಾಗುವುದಕ್ಕೆ ಮೂರು ವಿಷಯಗಳು ಅವಶ್ಯವಾಗಿರುವವು :-(೧) ಇಂತಹ ಕೋರ್ಟುಗಳ ಕಲಸದ ಕಡೆ ಜನತೆಯು ಶ್ರದ್ಧೆಯಿಂದ ಗಮನಿಸಬೇಕಾಗುವುದು. (೨) ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲತೆ [illegible] ಶಿಕ್ಷಣ, ಸಂಗೋಪನ ಗೃಹ ವ್ಯವಸ್ಥೆ ಇತ್ಯಾದಿ ವಿಷಯಗಳಲ್ಲಿ ಸರಕಾರವು ದಕ್ಷತೆಯನ್ನು ವಹಿಸಬೇಕು. (೩) ಮಕ್ಕಳ ಸಂಸ್ಥೆಗಳಲ್ಲಿ ಯೋಗ್ಯವಾದ ಶಾಲಾಗೃಹಗಳನ್ನೂ, ಯೋಗ್ಯರಾದ ಶಿಕ್ಷಕರನ್ನೂ [illegible] ತಕ್ಕಷ್ಟು ಹಣವನ್ನು ಒದಗಿಸಿಕೊಡಬೇಕು. ಈ ಬಗೆಯಿಂದ ಶಿಶುಶಿಕ್ಷಣ ಮತ್ತು ಕೋರ್ಟಿನ ವ್ಯವಸ್ಥೆಯನ್ನು ಲಕ್ಷ್ಯಪೂರ್ವಕವಾಗಿ ನೆರವೇರಿಸಿದರೆ ತಿರಸ್ಕಾರ್ಯವಾದ ಅಪರಾಧಗಳ ಕಡೆಗೆ ಮಕ್ಕಳ ಪ್ರವೃತ್ತಿಯು ದಿನ ದಿನಕ್ಕೂ ಕಡಿಮೆಯಾಗುತ್ತ ಹೋಗುವುದು.

ಒ. ಕ

ಕಾಂಗ್ರೆಸ್ ಕೆಲಸಗಾರರಿಗೆ ಹಾಗು ಸಭಾಸದರಿಗೆ ಕ. ಪ್ರಾಂ. ಕಾಂ. ಕಮಿಟಿಯ ಪ್ರಕಟನೆಗಳು.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಮಹತ್ವದ ಪ್ರಕಟನೆಗಳನ್ನು ಈ ಕೆಳಗಿನ ವೃತ್ತ ಪತ್ರಗಳಿಗೆ ನಾವು ಕಳುಹಿಸುತ್ತಿದ್ದೇವೆ. ಆ ವೃತ್ತ ಪತ್ರಿಕೆಗಳಲ್ಲಿ ಕೆಲವು ಪತ್ರಿಕೆಗಳ ಸಂಪಾದಕರು ತಾವು ನಮ್ಮ ಪ್ರಕಟನೆಗಳನ್ನು ಅವಶ್ಯವಾಗಿ ಪ್ರಕಟಿಸುವೆವೆಂದು ಬರೆದು ತಿಳಿಸಿದ್ದಾರೆ. ಉಳಿದವರೂ ನಾವು ಕಳುಹಿಸುವ ಪ್ರಕಟನೆಗಳನ್ನು ತಪ್ಪದೆ ಮುದ್ರಿಸಿ ಕಾಂಗ್ರೆಸ್ ಕಾರ್ಯಕ್ಕೆ ನೆರವಾಗುವರೆಂದು ನಂಬಿಕೆ ಇದೆ. ಆದ್ದರಿಂದ ಆಯಾ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಭಾಸದರು ಕ. ಪ್ರಾಂ. ಕಾಂ. ಕಮಿಟಿಯ ಮಹತ್ವದ ಪ್ರಕಟನೆಗಳಿಗಾಗಿ ತಮ್ಮ ಜಿಲ್ಲೆಯಲ್ಲಿಯ ಈ ಕೆಳಗಿನ ಪತ್ರಿಕೆಗಳನ್ನು ನೋಡುತ್ತಿರಬೇಕೆಂದು ವಿನಂತಿಯುಂಟು.

1. ಕರ್ಮವೀರ, ಧಾರವಾಡ
2. ಲೋಕಮತ, ಹುಬ್ಬಳಿ.
3. ತರುಣ ಕರ್ನಾಟಕ, ಹುಬ್ಬಳ್ಳಿ.
4. ಸಂಯುಕ್ತ ಕರ್ನಾಟಕ, ಬೆಳಗಾಂವಿ.
5. ತರುಣ ಭಾರತ, ಬೆಳಗಾಂವಿ.
6. ಕರ್ನಾಟಕ ಧುರೀಣ, ಕುಮಟಾ.
7. ಕಾನಡಾ ವೃತ್ತ, ಕುಮಟಾ.
8. ರಾಷ್ಟ್ರಬಂಧು, ಮಂಗಳೂರು
9. ನವಯುಗ, ಮಂಗಳೂರು.
10. ಕರ್ನಾಟಕ ವೈಭವ, ವಿಜಾಪುರ
11. ನವಕರ್ನಾಟಕ, ವಿಜಾಪುರ
12. ಕೊಡಗು, ಮಡಿಕೇರಿ.
13. ವಿಶ್ವಕರ್ನಾಟಕ, ಬೆಂಗಳೂರು.
14. ತಾಯಿನಾಡು, ಬೆಂಗಳೂರ.
15. ಪ್ರಜಾಬಂಧು, ಬಳ್ಳಾರಿ

ಕ. ಪ್ರಾಂ. ಕಾಂ. ಕಮಿಟಿಯ ಕಾರ್ಯಾಲಯ ಧಾರವಾಡ

ತಾ. ೨೯-೬-೧೯೩೧

ಮಹಾಶಯರೇ,

ಅ. ಭಾ. ಕಾಂ. ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಾದ ಪಂಡಿತ ಜವಾಹರಲಾಲರು ಬರೆದು ತಿಳಿಸುವದೇನೆಂದರೆ -'ಯುದ್ಧಕ್ಕೆ ಸಿದ್ಧವಾಗಿರತಕ್ಕದ್ದು''

"ಗಾಂಧಿ ಅರ್ವಿನ್ ಒಪ್ಪಂದವನ್ನು ಸರಕಾರದವರು ಮುರಿದ ಎಷ್ಟೋ ಸಂಗತಿಗಳು ಈಗ ಪ್ರಸಿದ್ಧವಾಗಿವೆ. ಈ ಬಗ್ಗೆ ವಿಚಾರ ಮಾಡುವ ಸಲುವಾಗಿ ಮಹಾತ್ಮ ಗಾಂಧಿಯವರು ಸಿಮ್ಲಾಕ್ಕೆ ಹೋಗಿ ಬಂದರು. ಅಲ್ಲಿ ಏನು ನಡೆಯಿತೆಂಬುದನ್ನು ಈಗಲೇ ಹೇಳಲಿಕ್ಕಾಗದು. ಮಹಾತ್ಮರು ಹೀಗೆ ವಿಚಾರ ಮಾಡಲಿಕ್ಕೆ ಹೋದಾಗ ಜನರು ಮಾತ್ರ ತಮ್ಮ ಎಲ್ಲ ಸಂಘಟನೆಯನ್ನು ಸರಿಯಾಗಿ ಕಾಯ್ದುಕೊಂಡು, ಪುನಃ ಯುದ್ಧದ ಪ್ರಸಂಗ ಬಂದರೆ ಅದಕ್ಕೆ ಸಿದ್ಧರಾಗಿರತಕ್ಕದ್ದು. ಎಲ್ಲಾ ಕಾಂಗ್ರೆಸ ಕಮಿಟಿಗಳೂ ಈ ವಿಷಯದಲ್ಲಿ ದಕ್ಷವಾಗಿರಬೇಕಾಗಿ ವಿನಂತಿಯುಂಟು."

ಜಾತಿ ಜಾತಿಗಳಲ್ಲಿ ಒಪ್ಪಂದವು.

ಜಾತಿ ಜಾತಿಗಳಲ್ಲಿಯ ಒಪ್ಪಂದದ ಬಗ್ಗೆ ಕಾಂಗ್ರೆಸ ಕಾರ್ಯಕಾರೀ ಮಂಡಲದವರು ಮುಂಬಯಿಯಲ್ಲಿ ತಾ. ೭-೬-೩೧ ನೇ ದಿನ ನಡೆದ ಅಧಿವೇಶನದಲ್ಲಿ ಒಂದು ವಿಸ್ತೃತವಾದ ನಿರ್ಣಯವನ್ನು ಮಾಡಿರುವರು. ಆ ನಿರ್ಣಯದ ಮುಖ್ಯಾಂಶವು ಈಗ ಬಹು ತರ ಎಲ್ಲ ವೃತ್ತಪತ್ರಗಳಲ್ಲಿ ಪ್ರಸಿದ್ಧವಾಗಿದೆ. ಆ ಬಗ್ಗೆ ಕರ್ನಾಟಕದ ಎಲ್ಲ ಸ್ಥಳಗಳಲ್ಲಿಯೂ ಬೆಂಬಲವು ದೊರೆಯುವಂತೆ ಸ್ಥಾನಿಕ ಕಾಂಗ್ರೆಸ ಕಮಿಟಿಗಳು ಸಭೆ [illegible] ಎಂದು ವಿನಂತಿಯುಂಟು. [illegible] ಹೀಗೆ [illegible] ಇಲ್ಲಿಗೆ [illegible] ತಿಳಿಸುವೆ.

ರಂ. ಶ್ರೀ. ಹುಕ್ಕೇರಿಕರ,
ಪ್ರಧಾನ ಕಾರ್ಯದರ್ಶಿ

ಪತ್ರವ್ಯವಹಾರ.

ಬರಹಗಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ

ರಿಟ್ರೆಂಚ್ ಮೆಂಟ್

ಅಯ್ಯಾ,

ರಿಟ್ರೆಂಚ್ ಮೆಂಟ್ ಕಮಿಟಿ ಮಂಡಲಿಗಳಿಗೆ [illegible] ಇಷ್ಟೆಲ್ಲಾ ತಿಳಿಯದಿರೆ ಯಾಕೆ? 1898-99 ನೇ ವರ್ಷದ [illegible], ಈಗಿನ ದಾಂಡಣೆಗಳಿಗೂ ಹೆಚ್ಚಿನ ವ್ಯತ್ಯಾಸಗಳು ಕಂಡುಬರುವದಿಲ್ಲ. ಆದುದರಿಂದ ಆ ಕಾಲದಂತೆಯೇ ನಾಡುಗಳನ್ನೂ, ಉದ್ಯೋಗಸ್ಥರನ್ನೂ, ಅವರ ಸಂಬಳವನ್ನೂ ಇಟ್ಟರೆ ಎಷ್ಟರ ಮಟ್ಟಿಗೆ ಉಳಿತಾಯವಾಗುತ್ತೆ ನೋಡಿರಿ. ಅಗ್ಗ ಆದರೋ ವಿದ್ಯಾವಂತರು ದೊರೆಯುತ್ತಿರಲಿಲ್ಲ. ಈಗ ಉದ್ಯೋಗಕ್ಕಾಗಿ ಅಲೆದಾಡುವ ಯುವಕರೆಷ್ಟೋ ಇದ್ದಾರೆ.

ಒಬ್ಬ ಪಿಂಚಿನ್ ದಾರ

ಫಾರೆಸ್ಟು ರಸ್ತೆ ರೈತರಿಗ ಇಲ್ಲವೇ?

ಅಯ್ಯಾ,

ದೇವನೂರು ಗ್ರಾಮದಿಂದ ಗಣಗೂರು ಫಾರೆಸ್ಟಿಗಾಗಿ ಮತ್ತಿಗೋಡು ಮೇಲೆ ಹೋಗುವ ರಸ್ತೆಗಾಗಿ ಪರದೇಶಗಳಿಗೆ ಹೋಗುವ ನಮ್ಮ ಭತ್ತ, ಕಿತ್ತಳೆ ವಗೈರೆ ಸಾಮಾನುಗಳು ಮಾಮೂಲಾಗಿ ಹೋಗುತ್ತಾ ಇತ್ತು. ಆದರೆ ಈಗ 2 ತಿಂಗಳಿಂದ ಫಾರೆಸ್ಟಿನವರು ಸದರಿ ರಸ್ತೆಗೆ ಬೇಲಿ ಕಟ್ಟಿಸಿ, ಕೋಣೆಗಳನ್ನು ಅಡ್ಡ ಹಾಕಿ ರೈತರ ಗಾಡಿ ತರುಗಾಡಲು ಅಟಂಕ ಮಾಡಿರುತ್ತಾರೆ. ಏನು ಕಾರಣದಿಂದ ಹೀಗೆ ಮಾಡಿರುವರೆಂದು ವಿಚಾರಿಸಿದಲ್ಲಿ, 'ಸಾಹೇಬರು ಮೋಟಾರಿಸಲ್ಲು ಬರುವಾಗ್ಯೆ, ರಸ್ತೆಯು ಕೊರಕಲಾಗಿ ಮೋಟಾರು ಹೂಳಿಕೊಳ್ಳುವದೆಂದ' ಹೇಳುತ್ತಾರೆ. ದೇಸಿಗೆಯಲ್ಲ ಬೆಂಕಿ ಹಂಗಾಮದಲ್ಲಿಂದ ಗಾಡಿ ಬಿಡುವದಿಲ್ಲ. ಮಳೆಗಾಲದಲ್ಲು ರಸ್ತೆ ಕೊರಕಲಾಗಿ ಮೋಟಾರು ಹೂಳಿಕೊಳ್ಳುವದೆಂದು ಗಾಡಿ ಬಿಡುವುದಿಲ್ಲವಾದರೆ, ರೈತರ ಗತಿ ಏನಾಗಬೇಕೋ ದೇವರೇ ಬಲ್ಲ. ರಸ್ತೆ ಮಾಡಿಸಿರುವದು ಬರೀ ಸಾಹೇಬರ ಮೋಟಾರು ತಿರುಗಾಡಲಿಕ್ಕೆ ಮಾತ್ರವಾದರೆ ಬಡ ರೈತರ ಪಾಡೇನಾಗಬೇಕು? ಆದ್ದರಿಂದ ಮೇಲಾಫೀಸರವರು ಈ ಸಂಗತಿಯನ್ನು ವಿಚಾರಿಸಿ ರೈತರ ಗಾಡಿ ವಗೈರೆ ವೈವಾಟುಗಳಿಗೆ ಅವಕಾಶ ಮಾಡಿಕೊಡದೆ ಹೋದರೆ ರೈತರ ಕಷ್ಟವನ್ನು ವರ್ಣಿಸಲಾಗುವುದಿಲ್ಲ.

'ಒಬ್ಬ ರೈತ'

ಡಿ. ಬೋ. ಗ್ರಾಮ ರೋಡುಗಳ ರಿಪೇರಿ.

ಮಹಾಶಯರೇ,

ಕೊಡಗು ಡಿ. ಬೋ. 1930-31ರ ಬಜೆಟ್ಟಿನಲ್ಲಿ ಗ್ರಾಮ ರಸ್ತೆಗಳನ್ನು ರಿಪೇರಿ ಮಾಡಲಿಕ್ಕೆ ರೂ 12,000-0-0 ಮತ್ತು ಹೊಳೆಗಳಿಗೆ ಪಾಲ ಹಾಕುವ ಬಗ್ಗೆ ರೂ. 1000-0-0 ಮಂಜೂರು ಆಗಿರುತ್ತೆ.

ಮೇಲಿನ ಕೆಲಸಗಳು ತತ್ಕಾಲದಲ್ಲೇ ಕೊಡಲಾಗುವವು. ಮಂಜೂರು ಮಾಡಿದ ಹಣವನ್ನು ಪೂರಾ ಕೆಲಸಕ್ಕೆ ಖರ್ಚು ಮಾಡುವುದಕ್ಕಾಗಿಯೂ, ಇದರಿಂದ ಕೆಲಸವು ಉತ್ತಮ [illegible]ಗೆ ಬರುವುದೆಂದೂ ಮತ್ತು ಅನೇಕ ಸ್ಥಳಗಳಲ್ಲು ನಾಟಿ [illegible] ಆದನಂತರ ವ್ಯವಸಾಯಗಾರರಿಗೆ ತಕ್ಕುದಾದ ಕೆಲಸ [illegible]ದ ಕಾರಣ ಅವರೂ ಸಹ ಇಂಥಾ ಕೆಲಸಗಳನ್ನು ಕೈಕೊಂಡು ನಮ್ಮ ದೇಶದ ಹಣದ ಖರ್ಚಿಗೂ, ಆದಾಯಕ್ಕೂ [illegible] ಭಾಗಗಳಾಗಲಿಕ್ಕೂ ಡಿ ಬೋರ್ಡಿನಲ್ಲು ನಡೆಯುವ [illegible] ಕೆಲಸಗಳನ್ನೆಲ್ಲಾ ಪರಸ್ಪರ ಲೇವಾದೇವಿ ಸಂಘಗಳ ಮುಖಾಂತರ ನಡೆಸತಕ್ಕದ್ದೆಂದು ಬೋರ್ಡಿನ ಒಂದು ಮೀಟಿಂಗಿನಲ್ಲು [illegible] ವರ್ಣನವಾಗಿರುವ ಸಂಗತಿ ನಿಮಗೆಲ್ಲರಿಗೂ ವೇದ್ಯವಿದೆ.

ಆದ ಕಾರಣ ಆಯಾಯ ನಾಡು ಮತ್ತು ಗ್ರಾಮಸ್ಥರು ಅವರವರಿಗೆ ಅನುಕೂಲವಿರುವ ಕೆಲಸಗಳನ್ನೆಲ್ಲಾ ಪರಸ್ಪರ ಲೇವಾದೇವಿ ಸಂಘಗಳ ಯಾ ಅವರವರ ಜವಾಬ್ದಾರಿಕೆಯಿಂದ ಯಾಯ ನಾಡು ವ್ಯವಹಾರಸ್ಥರಿಂದ ವಹಿಸಿಕೊಂಡು [illegible] ಬೋರ್ಡಿನಿಂದ ಬಂದ ನಿಮ್ಮ ಹಣವನ್ನು ನಿಮ್ಮ ಗ್ರಾಮಗಳ ವೃದ್ಧಿಗೆ ನ್ಯಾಯವಾದ ರೀತಿಯಲ್ಲು ಉಪಯೋಗಿಸಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಪಿ. ಯಂ.

ಮಡಿಕೇರಿಯ ಮುಸ್ಲಿಂ ಬಂಧುಗಳೇ, ನಿಮಗಿದು ಹುಸವು

ಮಡಿಕೇರಿ ಮುನ್ಸಿಪಾಲಿಟಿಯಲ್ಲು ಹಲವು ವರ್ಷಗಳ ದ ಇಬ್ಬರು ಮುಸ್ಲಿಂ ಮೆಂಬರುಗಳು ಇದ್ದೂ ಇಲ್ಲಿಯ ಮುಸ್ಲಿಂಗಳಿಗೆ ಯಾವ ತರಹದ ಪ್ರಯೋಜನವೂ ದೊರೆಯಲಿಲ್ಲವೆಂಬ ಸಂಗತಿ ಯಾರಿಗೆ ತಾನೇ ತಿಳಿಯದು. ಈಗ ತಾನೇ ಜನಾಬ್ ಯಂ ಯಂ ಸಿದ್ದೀಕರವರು ಮುನ್ಸಿಪಲ್ ಮೆಂಬರಾಗಿ ಚುನಾಯಿಸಲ್ಪಟ್ಟಿರುತ್ತಾರಷ್ಟೆ. ಇವರಿಂದ ಮಡಿಕೇರಿಯ ಬಡ ಮುಸಲ್ಮಾನ್ ಜನಾಂಗಕ್ಕೆ ಇದು ತನಕ ಮಟ್ಟಿಗೆ ಪ್ರಯೋಜನಕರವಾದ ವಿಷಯ [illegible] ಬೇಕೆಂಬುದನ್ನು ಯಾರೂ ಅಲ್ಲಗಳೆಯರು.

ತಾ 11-7-1931ರ 'ಕೊಡಗು ಪತ್ರಿಕೆ'ಯ [illegible] ಸ್ತ್ರೀ ವಿದ್ಯಾಭ್ಯಾಸಕ್ಕೆ ಸಹಾಯವೀಯುವ ಒಂದು ಲೇಖನವನ್ನು ಕಂಡೆನು. ಕಾಫಿ ಪ್ಲಾಂಟರ್ ಸಾಹುಕಾರ [illegible] ಯಂ ರಸೂಲ್ ಖಾನ್ ಸಾಹೇಬರವರು (ಮಡಿ ಎಂ [illegible]) ಒಂದು ಕಟ್ಟಡವನ್ನು ಸ್ತ್ರೀ ವಿದ್ಯಾಭ್ಯಾಸಕ್ಕೆ [illegible] ವಾಗಿಯೂ, ಸ್ಕೂಲ್ ಡೇ ಮಾಡುವುದಾದರೆ ಧನ ಸಹಾಯ ಮಾಡುತ್ತಾರಾಗಿಯೂ ವಾಗ್ದಾನ ಮಾಡಿದ್ದಾರೆಂಬುವುದು ಕೇಳಿ ಅತ್ಯಂತ್ಯ ಸಂತೋಷ ಪಡಬೇಕಾಗಿದೆ. [illegible] ಸಾಹುಕಾರರು ಬೇರೆ ಪ್ರಾಂತ್ಯಗಳಲ್ಲಿ ತೋರ್ಪಡಿಸಿದ [illegible] ದರಿ ಸ್ತ್ರೀ ಶಾಲೆಗೆ ಒಂದು ಗೋಡಾ ಗಾಡಿಯನ್ನು [illegible] ಮೊಂದಿಗ ದಯಪಾಲಿಸುವಂತೆ ಸರ್ವ ಶಕ್ತನಾದ ದೇವರು [illegible]ವರಿಗೆ ಮನಸ್ಸು ಕೊಡಲೆಂದು ಪ್ರಾರ್ಥಿಸುತ್ತಿರುವ,

'ಅಬಿದಾ'

ಬೋರ್ಡಿಂಗು ಚಾರ್ಜು

ಅಯ್ಯಾ

ದವಸಧಾನ್ಯಗಳ ಕ್ರಯವು ಬಹಳ ಮಟ್ಟಿಗೆ ಕಡಿಮೆಯಾಗಿರುವುದರಿಂದಲೂ, ಸರ್ಕಾರದ ಉತ್ಪತ್ತಿ ತಗ್ಗಿರುವ [illegible] ಲೂ ಸಿಬ್ಬಂದಿ ಖೋತೆ ಮಾಡಿ ಖರ್ಚು ಕಡಿಮೆ ಮಾಡ[illegible]ಬ ಬೊಬ್ಬೆಯು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಸಂಬಳವನ್ನು ಕಡಿಮೆ ಮಾಡಬೇಕೆನ್ನುವದಾದರೆ ಜೀವನದ ಖರ್ಚು ಇಳಿಸಬೇಕೆಂದಾಯಿತಲ್ಲವೇ? ಹಾಗಾದರೆ ನಮ್ಮ ಮಕ್ಕಳು ಉಳಕೊಳ್ಳುತ್ತಿರುವ ಬೋರ್ಡಿಂಗಿನಲ್ಲಿ ಚಾರ್ಜು ಕಡಿಮೆ ಮಾಡಬೇಕಾದದ್ದು ಅವಶ್ಯವೆಂದು ಪ್ರತ್ಯೇಕ ಹೇಳಬೇಕೆ? ನಮ್ಮ ಮಕ್ಕಳ ಊಟಕ್ಕೆ ಮುಖ್ಯವಾಗಿ ಬೇಕಾದದ್ದು ಅಕ್ಕಿ. ಅದರ ಕ್ರಯವು ಈಗ ಅರ್ಧಕರ್ಧ ಕಡಿಮೆಯಾಗಿ[illegible]ವೆ ಊಟಕ್ಕೆ ಬೇಕಾದ ಬೇರೆ ಜಿನಸ್ಸುಗಳ ಕ್ರಯವೂ ಒಳ[illegible]ಳಿದಿವೆ. ಇದರ ಮೇರೆ ಬೋರ್ಡಿಂಗುಗಳಲ್ಲಿ [illegible] ರ್ಜನ್ನು ಅರ್ಧ ಕಡಿಮೆ ಮಾಡಬೇಕಲ್ಲವೇ? ಇಷ್ಟು [illegible] ಹೋದರೂ ಕೂಡ ನಾಲು ಭಾಗದಷ್ಟಾದರೂ ಕಡಿಮೆ [illegible] ಬೇಕಾದದ್ದು ಅಗತ್ಯವಾಗಿದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಬೋರ್ಡಿಂಗಿ[illegible] ವಾರಕ್ಕೆ 2 ರೂ ಚಾರ್ಜು ಇದ್ದದನ್ನು ಈಗ ರೂ 1-[illegible]ಗೆ ಇಳಿಸಿದ್ದಾರೆಂದು ತಿಳಿಯುತ್ತೇನೆ. ಇದು ನಿಜವಾ[illegible] ಅವರಿಗೆ ತುಂಬ ಧನ್ಯವಾದಗಳ ವಂದನೆಗಳಿವೆ. ಮಡಿಕೇರಿ [illegible] ಸ್ವೆಂಟ್ ಬೋರ್ಡಿಂಗ್ನವರು ಮಾತ್ರ [illegible]. ಇವರ [illegible] ರಶೆಯನ್ನು ಹಿಂಬಾಲಿಸುವುದಿಲ್ಲವೋ ತಿಳಿಯದು. [illegible] ಡು ಬೋರ್ಡಿಂಗಿನವರೂ ಒಂದೇ ಮಾರ್ಕೆಟ್ಟಿ[illegible] ಜಿನಸ್ಸುಗಳು ತೆಗೆಯುವದಾಗಿದೆ. ಹಾಗಾದ ಮೇಲೆ [illegible] ಬೋರ್ಡಿಂಗುಗಳಲ್ಲಿಯೂ ಒಂದೇ ಸಮನಾಗಿ ಖರ್ಚು ಮೆಯಾಗಬೇಕಲ್ಲವೇ? ಅದಲ್ಲದೆ, ಕಾನ್ವೆಂಟ್ ಬೋರ್ಡಿಂಗಿನ ಅಧಿಕಾರಿಗಳು ಸ್ವಾರ್ಥತ್ಯಾಗಿಗಳಾದ ಕನ್ಯಾ[illegible] ಬಹು ದೂರ ದೇಶದಿಂದ ಪರೋಪಕಾರಾರ್ಥವಾಗಿ [illegible] ಬಂದವರು. ಸೆಂಟ್ರಲ್ ಹೈಸ್ಕೂಲಿನ ಬೋರ್ಡಿಂಗಿನ[illegible] ಗಳಾದರೋ ಸಂಸಾರಿಕರು, ಸಂಬಳಕ್ಕಾಗಿ ಕೆಲಸ ಮಾಡುವವರು. ಆದರೂ ಇವರು ತಮ್ಮ ಬೋರ್ಡಿಂಗಿನ [illegible] ಕಾಲು ಭಾಗದಷ್ಟು ಕಡಿಮೆ ಮಾಡಿರುತ್ತಾರೆ. [illegible]ಲೆ ಕಾನ್ವೆಂಟ್ ಬೋರ್ಡಿಂಗಿನ ರವರೆಂದು ಮಹಾ[illegible]ದ ಚಾರ್ಜನ್ನು ಅರ್ಧದಷ್ಟು ಕಡಿಮೆ ಮಾಡಬೇಕಲ್ಲವೆ!

ಈ ವಿಷಯ ಕೆಲವು ದಿವಸಗಳ ಹಿಂದೆ ನಿಮ್ಮ ಪತ್ರಿಕೆಯಲ್ಲಿ ಒಂದು ವಾರ್ತೆ ಪ್ರಕಟವಾದದ್ದು ನೋಡಿದ್ದೆನು. ಅದಕ್ಕೆ ಕಾನ್ವೆಂಟಿನ ಅಧಿಕಾರಿಗಳು ಸ್ವಲ್ಪವೂ ಗಮನ ಕೊಡದ್ದು ವ್ಯಸನಕರ. ಅವರು ಇನ್ನಾದರೂ ಸೆಂಟ್ರಲ್ ಹೈಸ್ಕೂಲು ಬೋರ್ಡಿಂಗಿನವರ ಉತ್ತಮ ಮೇಲ್ಪಂಕ್ತಿಯನ್ನು ಅನುಸರಿಸುವರೇ? ಪರೋಪಕಾರಿಗಳಾಗಿ ಇಲ್ಲಿಗೆ ಬಂದಿರುವ ಅವರು ತಮ್ಮ ಪರೋಪಕಾರ ಬುದ್ಧಿಯನ್ನು ಈಗ ಕಾರ್ಯತಃ ಎಷ್ಟರ ಮಟ್ಟಿಗೆ ತೋರಿಸುವರೆಂದು ಎದುರು ನೋಡುತ್ತಿರುವ,

"ಬಂಧು"

ಸಿಬ್ಬಂದಿ ಖೋತೆ—ಏನು ಚೋದ್ಯ!

ಅಯ್ಯಾ,

ಸ್ಥಳಿಕ ವಾರ ಪತ್ರಿಕೆಗಳಲ್ಲಿ ಹಲವು ವಾರಗಳಿಂದ ನಾನಾ ತರದ ವಾರ್ತೆಗಳು ಸಿಬ್ಬಂದಿ ಖೋತೆಯ ವಿಷಯ ತೋರುವುದನ್ನು ಎಲ್ಲರೂ ನೋಡುವರು. ಆದರೆ ಇನು ಚೋದ್ಯ!

ಇವುಗಳನ್ನು ಕುರಿತು ಆಶ್ಚರ್ಯವಾಗಿಯೇ ನೋಡುವವನೊಬ್ಬನು; ಇನ್ನೊಬ್ಬನು ಆಶ್ಚರ್ಯವಾಗಿಯೇ ಅವನ್ನು ಕುರಿತು ಮಾತನಾಡುವನು; ಮತ್ತೊಬ್ಬನು ಈ ಸಂಗತಿ ಕುರಿತು ಆಶ್ಚರ್ಯಪಡುವಂತೆ ಕೇಳುವನು, ಮತ್ತೊಬ್ಬನು ಈ ಸಂಗತಿಯನ್ನು ಕುರಿತು ಕೇಳಿಯೂ ಅರಿಯಲಾರನು.

ಸಿಬ್ಬಂದಿ ಖೋತೆಯು ಬಡವರಿಗೆ ಹೆಚ್ಚು ಬಡತನವನ್ನೂ ಐಶ್ವರ್ಯವಂತರಿಗೆ ಅಧಿಕ ಲಾಭವನ್ನೂ ಕೊಡಲಿಕ್ಕೆ ಏರ್ಪಾಡು ಮಾಡುವುದಲ್ಲ. ಕೃಷಿಕಾವಳಿಯಿಂದ ಎತ್ತಿದ ಕಂದಾಯವನ್ನು ಜನಸಮುದಾಯದ ರಾಜ್ಯಭಾರದಲ್ಲಿ ಪಕ್ಷಪಾತವಿಲ್ಲದೆ ನಡೆಸಬೇಕಾದುದೇ ಮುಖ್ಯಾಭಿಪ್ರಾಯವು.

ಆದರೆ ನಾವು ನೋಡುವುದೇನು? ವಾರ್ತೆದಾರರು ಸೆಟ್ ಬಡ್ಡಿಯವರಿಗೆ ಡಿ. ಸಿ ಪಟ್ಟ ಕೆಲಸ ದೊರಕುವುದೊ, ಸ. ಅ. ಇ. ರವರಿಗೆ ಅ. ಇ. ಕೆಲಸ ಸಿಕ್ಕುವುದೊ ಎಂಬೀ ಮೊದಲಾದ ಗಾಬರಿಯಿಂದ ವಾರ್ತೆಗಳನ್ನು ಬರೆದು ಜನರನ್ನೂ ಸರಕಾರವನ್ನೂ ಮೋಸಗೊಳಿಸುವುದು ಎತರ ನ್ಯಾಯ?

ಮೇಲಿನ ಅಭಿಪ್ರಾಯವನ್ನು ಒತ್ತಾಸೆ ಕೊಟ್ಟವರು ಸಿಬ್ಬಂದಿ ಖೋತೆಯಲ್ಲು ಖರ್ಚು ವೆಚ್ಚವನ್ನು ತೋರಿಸಿಯೇ ತೃಪ್ತಿಕರರಾಗಿರುವರು. ಹಾಗಾದರೆ ಇದು ಏಕೆ ಆಗಬಾರದು? ಮೇಲಿನ ಉದ್ಯೋಗಗಳಿಗೆ ಅವರು ಅರ್ಹರು ಆಗಿರುವುದಿಲ್ಲವೇ? ಈ ಉದ್ಯೋಗಗಳು ಅವರಿಗೆ ಜನ್ಮವೆ? ಮುಂದಕ್ಕೆ ತಯಾರಾಗಿ ಬರುವ ಯುವಕರಿಗೆ ಒಂದು ದಾರಿಯಾಗಲಿಲ್ಲವೇ? ಯಾವ ಅಪವಾದಗಳಿಂದ ದೂಷಿಸುವುದು? ಮತ್ತು ಇಷ್ಟು ಕಾಲ ನಮ್ಮಲ್ಲಿನ ಕೊಡಗು ಪತ್ರಿಕೆಯು, ಜಮಾನುದಾರ ಸಂಘದ ಮುಂದಾಳುಗಳು ಮತ್ತು ಅನೇಕ ಮಹಾಶಯರು (Separation of the Executive form the Judiciary) ವಿಷಯವಾಗಿ ಪತ್ರಿಕೆಯ ಮೂಲಕವೂ, ಕೌನ್ಸಿಲ್‌ನಲ್ಲೂ, ಜನರ ಮೀಟಿಂಗ್‌ನಲ್ಲೂ ಸಹ ಬಹಿರಂಗವಾಗಿ ಮಾತಾಡಿದ್ದನ್ನು ನಾವೆಲ್ಲರೂ ಕೇಳಿದ್ದೇವೆ. ಈಗ ಇವರ ಅಭಿಪ್ರಾಯವೇನು? ತಿಳಿಸಲಿ.

ಸಿಬ್ಬಂದಿ ಖೋತೆಯಲ್ಲೇ ಖರ್ಚು ಖೋತೆಮಾಡಿ ಮಾರ್ಗದು ಪೂರೈಸುವ ಸಮಯ ನಮಗೊದಗಿ ಬಂದಿರುವಾಗ್ಯೆ ಪತ್ರಿಕೆಗಳ ಮತ್ತು ಜನರ ಕೆಲಸವೇನು? ಒಬ್ಬೊಬ್ಬನಿಗೆ ಒಂದೊಂದು ದೊಡ್ಡ ಕೆಲಸ ಸಿಕ್ಕಾಕೆಂಬ ಭಯದಿಂದ ಹೊಸ ರಿಯಾಯತಿಗಳು ಬೇಡವೆಂಬುವವರು ಜನ ಸಮುದಾಯದ ದೂ ದೇಶದ ಏಳಿಗೆಯ ಹಿತಚಿಂತಕರೇ? ಕೇಳುವವಾರು ಚಿಂತಕರೆಂದರೆ ತಪ್ಪಾಗಲಾರದು. ಇದು ಏನು ಚೋದ್ಯ?

ಸಿಬ್ಬಂದಿಖೋತೆಯು ಫಾರೆಸ್ಟ್ ಗಾರ್ಡುಗಳನ್ನೂ, ಫಾರೆಸ್ಟರ್‌ಗಳನ್ನೂ, ಕೆಲವು ಜವಾನರನ್ನೂ ಮತ್ತು ಕೆಲವು ಚಿಕ್ಕ ಕೆಲಸದ ಕ್ಲಾರ್ಕ್‌ಗಳನ್ನೂ ಯಾ ಒಂದೆರಡು ಸ್ಥಾನವನ್ನು ತೆಗೆದು ಹಾಕಿ ಬಡ ಜನರ ಗೋಳನ್ನು ಹೆಚ್ಚಿಸುವುದು ಧರ್ಮವಲ್ಲ. ಇಂಥಾ ಸಂಗತಿ ಚರ್ಚೆಗೆ ಬಂದಲ್ಲಿ ಕೌನ್ಸಿಲಿಂದ ಆರಿಸಲ್ಪಟ್ಟ ಮೆಂಬರುಗಳು ರಾಜೀನಾಮೆಯನ್ನು ಕೊಟ್ಟು ಜನಸಮುದಾಯಕ್ಕೆ ಅವರ ಅಭಿಪ್ರಾಯವನ್ನು ಸೂಚಿಸುವುದು ಅವರ ಕರ್ತವ್ಯವಾಗಿರುವುದು. ಇಲ್ಲವಾದರೆ ದೇಶದ ಜನರು ಇಂಥಾ ಸಿಬ್ಬಂದಿ ಖೋತೆಗೆ ಒಪ್ಪುವವರಲ್ಲ. ಮುಂದಕ್ಕೆ ಕೆಡಕು ಆಗುವ ಸಂಭವವೂ ದೊರೆಯ ಬಹುದು.

ಆದರೆ ನ್ಯಾಯಮಾರ್ಗದಲ್ಲು ಇತರ ಪ್ರಾಂತ್ಯಗಳಲ್ಲು ಸಿಬ್ಬಂದಿ ಖೋತೆಯು ಏರ್ಪಟ್ಟಂತೆ ನಡೆಯುವ ಕ್ರಮವನ್ನು ಮನಸ್ಸಿಗೆ ತಂದುಕೊಂಡು ನಮ್ಮ ದೇಶದ ಆದಾಯ ವೆಚ್ಚವನ್ನು ಗ್ರಹಿಸಿಕೊಂಡು ಜನಸಮುದಾಯಕ್ಕೆ ಯೋಗ್ಯವಾದ ರಿಯಾಯತಿಗಳಿಂದ ಖರ್ಚನ್ನು ಕಮ್ಮಿ ಮಾಡಿ ದೇಶೋದ್ಧಾರ ಮಾಡುವರಾಗಿ ನಂಬಿರುತ್ತೇನೆ.

ಓ. ಯಂ. ಸಿ.

ಡಿ. ಪಿ. ಡಬ್ಲ್ಯು. ಇಲಾಖೆಯಲ್ಲಿ ಸಿಬ್ಬಂದಿ ಖೋತೆ.

ಅಯ್ಯಾ,

ಕೊಡಗಿನ ಆಡಳಿತ ಕ್ರಮದಲ್ಲಿ ಸಿಬ್ಬಂದಿ ಖೋತೆ ಹೇಗೆ ಮಾಡಬಹುದೆಂದು ಒಂದೆರಡು ಇಲಾಖೆಗಳನ್ನು ಕುರಿತು ವಿವರವಾಗಿ ಈ ಮೊದಲು ಬರೆದಿದ್ದೆನು. ಈಗ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಎಷ್ಟರ ಮಟ್ಟಿಗೆ ಖರ್ಚು ಕಡಿಮೆ ಮಾಡಬಹುದೆಂದು ಸ್ವಲ್ಪ ಸೂಚಿಸುತ್ತೇನೆ.

ಡಿ. ಪಿ. ಡಬ್ಲ್ಯು. ಇಲಾಖೆಯ ಮೇಲಧಿಕಾರಿಯಾದ ಎಗ್ಸಿಕ್ಯುಟಿವ್ ಇಂಜನೀಯರಾಗಿ ಇಂಪೀರಿಯಲ್ ಗ್ರೇಡಿನವರ ಬದಲು ಪ್ರೊವಿನ್ಸಿಯಲ್ ಗ್ರೇಡಿನವರನ್ನು 500 ರೂ. ಸಂಬಳದೊಳಗೆ ನೇಮಿಸಿಕೊಳ್ಳಬಹುದು. ಎಗ್ಸಿಕ್ಯುಟಿವ್ ಇಂಜನಿಯರವರೇ ಒಂದು ಡಿವಿಜನಿನ ಚಾರ್ಜನಲ್ಲಿರುವಂತೆ ಮಾಡಿ ಇನ್ನೊಂದು ಡಿವಿಜನಿಗೆ ಒಬ್ಬ ಅಪ್ಪರ್ ಸಬಾರ್ಡಿನೇಟರನ್ನು ಸಬ್ ಡಿವಿಜನಲ್ ಆಫೀಸರಾಗಿ ನೇಮಿಸಿದರೆ ಸಾಕು. ಅಲ್ಲದೆ ಸೆಕ್ಷನ್ ಆಫೀಸರುಗಳಾಗಿ ಲೋವರ್ ಸಬಾರ್ಡಿನೇಟರುಗಳನ್ನೇ ನೇಮಿಸಿದರೆ ಸಾಕು. ಈಗ ಇರುವ 8 ಸೆಕ್ಷನ್ ಆಫೀಸರುಗಳ ಪೈಕಿ ಇಬ್ಬರು ಅಪ್ಪರ್ ಸಬಾರ್ಡಿನೇಟರುಗಳಾಗಿರುತ್ತಾರೆ. ಈ ಸೆಕ್ಷನ್ ಆಫೀಸರುಗಳು ಅತ್ತಿತ್ತ ವರ್ಗಾಯಿಸಲ್ಪಡುವಾಗ ಲೋವರ್ ಸಬಾರ್ಡಿನೇಟರು ಚಾರ್ಜಿನಲ್ಲಿದ್ದ ಸೆಕ್ಷನಿನಲ್ಲೇ ಅಪ್ಪರ್ ಸಬಾರ್ಡಿನೇಟರೂ ಕೆಲಸ ಮಾಡುವದಾಗಿದೆ. ಅಪ್ಪರ್ ಸಬಾರ್ಡಿನೇಟರಿಗೆ ಹೆಚ್ಚಿನ ಕೆಲಸವೇನೂ ಇಲ್ಲ. ಹಾಗಿದ್ದ ಮೇಲೆ ಲೋವರ್ ಸಬಾರ್ಡಿನೇಟರು ಮಾಡಬಹುದಾದ ಕೆಲಸಕ್ಕೆ ಹೆಚ್ಚಿನ ಸಂಬಳದ ಅಪ್ಪರ್ ಸಬಾರ್ಡಿನೇಟರನ್ನು ನೇಮಿಸುವುದು ದುಂದುಗಾರಿಕೆಯಾಗಿದೆ. ಅಪ್ಪರ್ ಸಬಾರ್ಡಿನೇಟರುಗಳಿಗೆ 80ರಿಂದ 250 ರೂ ಗಳ ವರೆಗೆ ಸಂಬಳವಿರುವುದಲ್ಲದೆ ಅವರಿಗೆ ಭತ್ಯವು ತಿಂಗಳಿಗೆ ಸುಮಾರು 40 ರೂ. ಸಿಕ್ಕುತ್ತೆ. ಲೋವರ್ ಸಬಾರ್ಡಿನೇಟರುಗಳಿಗೆ ತಿಂಗಳಿಗೆ 50ರಿಂದ 100 ರೂ. ಮಾತ್ರ ಸಂಬಳವಿರುವುದಲ್ಲದೆ ಅವರಿಗೆ ಭತ್ಯವು ಸುಮಾರು 20 ರೂ ಮಾತ್ರ ಇದೆ. ಸಂಬಳ ಮತ್ತು ಭತ್ಯದಲ್ಲಿ ಇಷ್ಟು ದೊಡ್ಡ ವ್ಯತ್ಯಾಸ ಇರುವುದರಿಂದ ಅಪ್ಪರ್ ಸಬಾರ್ಡಿನೇಟರುಗಳ ಬದಲು ಲೋವರ್ ಸಬಾರ್ಡಿನೇಟರುಗಳನ್ನೇ ನೇಮಿಸಿದರೆ ಮಿಕ ಪ್ರಮಾಣದ ಹಣವನ್ನು ಜಾರಿಗೆ ತಂದಂತಾಗುವುದು. ಎಗ್ಸಿಕ್ಯುಟಿವ್ ಇಂಜನಿಯರವರು ಮತ್ತು ಸಬ್ ಡಿವಿಜನಲ್ ಆಫೀಸರುಗಳು ಆಗಾಗ್ಯೆ ಮೇಲು ಉಸ್ತುವಾರಿ ನೋಡುತ್ತಾ ಇರುವುದರಿಂದ ಲೋವರ್ ಸಬಾರ್ಡಿನೇಟರುಗಳಿಂದಲೇ ತೃಪ್ತಿಕರವಾಗಿ ಕೆಲಸ ಮಾಡಿಸಿಕೊಳ್ಳಬಹುದು. ಈ ಮಾರ್ಪಾಡಿನಿಂದ ಯಾರಿಗೂ ಯಾವ ವಿಧದಲ್ಲೂ ನಷ್ಟ ಕಷ್ಟಗಳಿಲ್ಲವಾದ ಕಾರಣ ಇಲಾಖಾ ಅಧಿಕಾರಿಗಳೂ, ಸಿಬ್ಬಂದಿ ಖೋತೆ ಕಮಿಟಿಯವರೂ ಇದನ್ನು ಮನಸ್ಸಿಗೆ ತೆಗೆದುಕೊಳ್ಳುವರಾಗಿ ನಂಬುತ್ತೇನೆ.

ಇನ್ನೊಂದು ವಿಷಯ. ಈ ಇಲಾಖೆಯು ಸ್ಟೀಮ್ ಇಂಜಿನ್‌ಗಳ ಮತ್ತು ಲಾರಿಗಳ ಡ್ರೈವರುಗಳ ಮೇಲುಸ್ತುವಾರಿಗಾಗಿ ಸುಮಾರು 125 ರೂ. ಸಂಬಳದಲ್ಲಿ ಒಬ್ಬ ಫೋರ್‌ಮ್ಯಾನರನ್ನು ಈಗ ಸುಮಾರು 2 ವರ್ಷಗಳಿಂದ ಈಚೆಗೆ ನೇಮಿಸಿರುತ್ತಾರೆ. ಇವರಿಗೆ ಸಾಕಷ್ಟು ಕೆಲಸವಿಲ್ಲವೆಂದು ವರ್ತಮಾನ. 2 ವರ್ಷಗಳ ಮೊದಲು ಈ ಹುದ್ದೆಯೇ ಇರಲಿಲ್ಲ. ಉತ್ಪತ್ತಿ ಕಡಿಮೆಯಾದ ಈ ಸಮಯದಲ್ಲಿ ಇಂಥಾ ಅನಾವಶ್ಯಕವಾದ ದುಂದುಗಾರಿಕೆಯ ಹುದ್ದೆಗೆ ಅವಕಾಶವಿಲ್ಲವೆಂದು ಹೇಳಬೇಕಾಗಿಲ್ಲ. 2 ವರ್ಷಗಳಿಗ ಮುಂಚೆ ಇದ್ದಂತೆಯೇ ಈ ಹುದ್ದೆಯಿಲ್ಲದೆ ಕೆಲಸವನ್ನು ನಡಿಸಬಹುದು.

ಮತ್ತೊಂದು ಸಂಗತಿ. ಈ ಇಲಾಖೆಯಲ್ಲಿ ಇತ್ತಲಾಗಿ ಎರಡೋ, ಮೂರೋ ಲಾರಿಗಳನ್ನು ಇಟ್ಟುಕೊಂಡು ಲಾರಿ ಒಂದರ ವರ್ಷಕ್ಕೆ ಸುಮಾರು 5000 ರೂ. ಯಷ್ಟು ಖರ್ಚು ಮಾಡುತ್ತಿದ್ದಾರೆಂದು ತಿಳಿಯಬರುತ್ತದೆ. ಈ ಲಾರಿಗಳಿಂದ ಖರ್ಚಿಗೆ ತಕ್ಕಷ್ಟು ಕೆಲಸವಾಗುವದಿಲ್ಲವೆಂದೂ ವರ್ತಮಾನವಿದೆ. ಅಲ್ಲದೆ ರಸ್ತೆ ಕೆಲಸಕ್ಕೆ ಬೇಕಾಗುವ ಸಾಮಾನುಗಳ ಹೇರಾಟಕ್ಕೆ ಕಂಟ್ರಾಕ್ಟುದಾರರೇ ಗಾಡಿ ವಗೈರೆ ಉಪಯೋಗಿಸಿಕೊಂಡು ಮಿತವ್ಯಯದಲ್ಲಿ ಕೆಲಸ ನಡಿಸುತ್ತಿರುವಲ್ಲು ಸಾವಿರಗಟ್ಟಲೂ ಖರ್ಚಾಗುತ್ತಿರುವ ಲಾರಿಗಳೇಕೆ? ಈ ದುಂದು ಖರ್ಚನ್ನು ಹೋಗಲಾಡಿಸಲು ಲಾರಿಗಳನ್ನೇ ತೆಗೆದು ಹಾಕಿ, ಅವುಗಳನ್ನು ಮಾರಾಟ ಮಾಡುವುದು ಉತ್ತಮ. ಸಿಬ್ಬಂದಿ ಖೋತೆಗೆ ಸಂಬಂಧಪಟ್ಟವರು ಈ ಮೇಲಿನ ವಿಷಯಗಳಿಗೆ ಗಮನ ಕೊಡುವರೇ?

'ಕಾರ್ಯಸ್ಥ'

ಎಂ.ಎಸ್.ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು.ಮೈಸೂರು.

4 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟೆನ್ ಪೆನ್‌ಗಳು.

ಕರಲ್ಸ್ ವಂಡರ್ ಫೌಂಟನ್ ಪೆನ್ 1ಕ್ಕೆ	ರೂ. 3 0 0
" " ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3 3 0
" " ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3 8 0
" " ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡರ್ ಕಲರ್ ಫೌಂಟನ್ ಪೆನ್ 1ಕ್ಕೆ	3 14 0
" " ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4 2 0
" " ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರವುನ್ ಕಲರ್ ಫೌಂಟನ್ ಪೆನ್ 1ಕ್ಕೆ	5 8 0
ಬಿಗ್ ಸ್ಪ್ರೆಟ್ ಫೌಂಟನ್ ಪೆನ್ 1ಕ್ಕೆ	10 8 0
ಪಾರ್ಕರ್ ಪೆನ್ 1ಕ್ಕೆ	14 0 0, & 20 10 0
[illegible] ಫೌಂಟನ್ ಪೆನ್ 1ಕ್ಕೆ	3 8 0, & 3 12
ಸ್ವಾನ್ ಫೌಂಟನ್ ಪೆನ್ 1ಕ್ಕೆ	6 4 0, & 6 12 0
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ	8 2 0, & 8 10 0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3 6 0
ಜರ್ಮನ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2 2 0
ಬಿಗಲಿಯೂ ಆಕಾರದ ಟೈಂಪೀಸ 1ಕ್ಕೆ	6 9 0 & 6 15 0
ಬಿಗಲಿಯೂ ಸಣ್ಣ ಸೈಜಿನ ಆಕಾರದ ಟೈಂಪೀಸ್ 1ಕ್ಕೆ	7 [illegible] 0
ಬಿಗಲಿಯೂ ಆಕಾರದ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8 10 0
ಬಿಗ್‌ಬೆನ್ ಆಕಾರದ ಟೈಂಪೀಸ್ 1ಕ್ಕೆ	9 6 0
ಬಿಗ್‌ಬೆನ್ ಆಕಾರದ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13 4 0
ಖಾತ್ರಿಯುಳ್ಳ ಬಂದೋಬಸ್ತು ಆದ ಪಾಕೆಟ್ ವಾಚ್ 1ಕ್ಕೆ	5 10 0
ಡಿಟೋ ನಮೂನೆಯಲ್ಲಿ ಎಬ್ರಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12 4 0
ನಿಕ್ಕಲ್ ಕೇಸ್ ಸಿಲಿಂಡರ್ ಮೂಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12 8 0



[illegible] ನಮೂನೆ ... ಯುವ ನಮೂನ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಅಲಾಯಿದಾ.

ಮಣಿಯಾರ್ಡರ್ ರವಾನಿಸುವವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—4

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೊ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ
(ಸ್ಥಾಪಿತವಾದದ್ದು 1920ರಲ್ಲಿ)

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	23,160
ಒಪ್ಪೊಬಂದ ಠೇವಣಾತಿ	—	2,16,472

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೪ರ ಬಡ್ಡಿ ದೊರೆಯುತ್ತೆ.

ಹೆಚ್ಚಿನ ವಿವರಗಳಿಗೆ ಮ್ಯಾನೇಜಿಂಗ್ ಡೈರೆಕ್ಟರ್ ರವರನ್ನು ವಿಚಾರಿಸಬಹುದು.

ಪ್ರೆಸಿಡೆಂಟರು	ಡೈರೆಕ್ಟರ್
ಕೋದಂಡ ಅಯ್ಯಣ್ಣನವರು	ಮನೆಯಪಂಡ ಬೆಳ್ಯಪ್ಪ
ರಾವ್ ಬಹದ್ದೂರ್	ನವರ

ಸೆಕ್ರೆಟರಿ

... ಸೆಂಟ್ರಲ್ ..., ಬಿ. ಎ., ಬಿ. ಎಲ್.
ತಾರೀಕು 1-7-1930

ಮದುವೆಗಳ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ

ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52-31 ಗಿರಿಗಾಂವ, ಮುಂಬಯಿ.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜೆಂಟರುಗಳು

ಉತ್ತರ ಕೊಡಗಿಗೆ ಮೆ|| ಪಾಲೇಂಗಡ ... ಅಪ್ಪನವರು,
ಮೆ|| ... ಮಾದಯ್ಯನವರು,

ದಕ್ಷಿಣ ಕೊಡಗಿಗೆ—ಮೆ|| ಸೋಮೆಯಂಡ ಅಚ್ಚಯ್ಯನವರು,
ಮರೆನಾಡು—ಮೆ|| ಕೇಕಿರ ಅಚ್ಚಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ|| ಮಂಡೇಪಂಡ ಸೋಮಯ್ಯನವರು, (ಪಾನಿಭಂಡಾರ)
ಸಾಪೋಕ್ಲು—ಎಮ್ ಆರ್ ವೆಂಕಪ್ಪಯ್ಯನವರು
ಶ್ರೀಮಂಗಲನಾಡು—ಮೆ|| ಅಜ್ಜಮಾಡ ಮಾಚಪ್ಪನವರು,
ಗೋಣಿಕೊಪ್ಪಲು—ಮೆ|| ಒಮ್ಮಾಡ ಮಾದಪ್ಪನವರು
ಅಮ್ಮತ್ತಿ—ಸಿದ್ದಾಪುರ—ಮೆ|| ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ|| ಪಿ. ಜಿ. ಮುದ್ದಯ್ಯನವರ
" ಮೆ|| ಸಣ್ಣುವಂಡ ಬೋಪ್ಪಯ್ಯನವರು
ಮತ್ತು ಅರಮಣಮಾಡ ಪಿ. ಕಾರ್ಯಪ್ಪನವರು,
ಹುದಿಕೇರಿ & ತಿತಿಮತಿ—ಮೆ|| ಬಿ. ಮಾದಯ್ಯನವರು
ನಂಜರಾಯಪಟ್ಟಣ—ಮೆ|| ಅಪ್ಪನೆರವಂಡ ಮಾದಯ್ಯನವರು,

ಸೂಚನೆ—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
ಕೊಡಗು ಲಿಮಿಟೆಡ್,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು

ಸ್ವ ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ	ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ
ವಿಮೆದಾರರುಗಳಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ	ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ

ಭಂಡವಾಳವು ಹೆಚ್ಚಿದದ್ದು—ಸುಮಾರು 10½ ಕೋಟಿ ರೂ

... ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 178,372 ಜನರಿಗೆ 38 ಕೋಟಿ ರೂ ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 13ಕ್ಕಿಂತ ಕಡಿಮೆ ಖರ್ಚಿನಲ್ಲಿಯೇ ನಡಿಸಲ್ಪಟ್ಟವು. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ... ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸು.
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಉತ್ತೇಜನವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗೆ ಬರೆದರೂ ತಿಳಿಯಬಹುದು.

ಆಗ್ರಾ	ಕಲ್ಕತ್ತಾ	ಜಾಲಂಧರಪುರ	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಕರಾಚಿ	ಲಕ್ನೋ	ಪಾಟ್ನಾ	ಸಕ್ಕೂರು
ಅಲ್ಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಪುರ	ತಿರುವೆಂದ್ರಂ
ಕ್ಯಾಲಿಕಟ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ

ಮಲೇರಿಯಾನಾ

ಕೊಡಗಿನ ಗುಡ್ಡಗಾಡು ಎಂಬ ಚಳಿ ಜ್ವರಕ್ಕೂ ... ಗಟ್ಟಿಯಿಂದ ಜರಗಿದ ಗುಡಕರ ... ಮಲೇರಿಯ ಸಂಪೂರ್ಣ ಜ್ವರವನ್ನು ಗುಣಪಡಿಸಿ ... ಬದುಕುತ್ತದೆಂದು ಸ್ಥಿರ ನಂಬು. ಕ್ರಯ ಬಾಟ್ಲಿಗೆ 1 ಡಜನ್ ... 1 ಡಜನ್ 10-8

ಕಂಪನಿಯ ಸಿರಪ್ ಬ್ಲಟ. ಗುರುಗುರು ಉಬ್ಬಸ ... ರೋಗದಿಂದ ಕಂಠ ... ಗಟ್ಟಿಯಾಗಿ ಎದೆ ಮತ್ತು ಪಾರ್ಶ್ವನೋವು ... ಯುವುದಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಯು ... ಕಂಪನಿಯ ಸಿರಪ್ ಬ್ಲಟ ಎಂಬದನ್ನು ತಪ್ಪದೆ ತರಿಸಿ ಕುಡಿಯಲಿ. ಕ್ರಯ ಬಾಟ್ಲಿಗೆ ರೂ. 1-8-0.

ಕಂಪನಿಯ ಸಿರಪ್ ಬಸಲೀನ — ... ರೋಗಕ್ಕೆ ಈ ಸಿರಪ್ಪನ್ನು ... ಕೋಶದಲ್ಲಿ ಉಂಟಾಗುವ ಹುಣ್ಣು ವ್ರಣಗಳು ಕೆಮ್ಮು ಎದೆನೋವು ರಕ್ತ ... ಕಫ ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ... ಮುಂದರಿಯದಂತೆ ಕಾಪಾಡಿ ಆರೋಗ್ಯ ಕೊಡುವುದು. ಕ್ರಯ ಬಾಟ್ಲಿಗೆ ರೂ 3-8-0.

ಕಂಪನಿಯ ಸಿರಪ್ ಸಬೀನ ಸೇಪಿಯ—ಹೆಂಗಸರ ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ... ವೆಂಬ ರೋಗದಿಂದ ಸೊಂಟನೋವು ಕೈಕಾಲು ಬಚ್ಚಲು ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರಿಸುವುದು. ಕ್ರಯ ಬಾಟ್ಲಿಗೆ ರೂ. 3-8-0.

ಕಂಪನಿಯ ಸಿರಪ್ ನೆಸಿಫೋಟ:—ಪ್ರಮೇಹವೆಂಬ ಗುಪ್ತರೋಗವನ್ನು ಪಡಕೊಂಡು ಮೂತ್ರ ಬಿಂದು ಬಿಂದುಗಳಾಗಿ ... ದ್ವಾರದೊಳಗೆ ಹುಣ್ಣು ವ್ರಣಗಳು ದುರ್ಗಂಧ ಕೂಡಿದ ಹಳದಿ ಬಣ್ಣದ ರೇಸಿಗೆ ಇತ್ಯಾದಿ ಕಠಿಣ ತರದ ರೋಗವನ್ನು ಈ ... ಪೂರ್ಣ ಗುಣ ಪಡಿಸಿ ಆರೋಗ್ಯ ಕೊಡುವುದು. ಕ್ರಯ ಬಾಟ್ಲಿಗೆ ರೂ 3-8-0.

ಶುದ್ಧ ಟಿಂಕ್ಚರ್ ಮದ್ದುಗಳೂ ಹೋಮಿಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.
ರೋಗಿಗಳು ತಮ್ಮ ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ ಭಾಗದ ... ವರೆಗೆ ... ಬರೆಯತಕ್ಕದ್ದು ... ಪರೀಕ್ಷಿಸಿ ಕೊಡುವ ದೃಷ್ಟಿಚಶ್ಮಗಳೂ ... ಒಳ್ಳೆ ಕನ್ನಡಕಗಳೂ ನಮ್ಮಲ್ಲಿ ನ್ಯಾಯವಾದ ಕ್ರಯಕ್ಕೆ ದೊರೆಯುತ್ತವೆ.

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧನ್ವಂತರಿ

52-10 **Malariana Co.**	ವಿಳಾಸ —ಮಲೇರಿಯಾನ ಕಂಪೆನಿ.
Hampankatta No 14 Mangalore	ಹಂಪನಕಟ್ಟೆ, ಬಿಲ್ಡಿಂಗ್, 14, ಮಂಗಳೂರು ಪೋಸ್ಟ್

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರ ... ಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ... ವ್ಯಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ... ರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ... ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ... ಕ್ರಮ ಪ್ರಕಾರ ನಡೆಸಲು ಅವಶ್ಯಕವಾಗಿರುವ, ... ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಂ ... ಬಿರಾಯಿ ಫಾರಮುಗಳೂ, ಜಮಾ ಖರ್ಚು ... ಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ ... ಬಿರಾಯಿ ಫಾರಮುಗಳೂ ಸರ್ವೇ ಶೀಟ್ ... ಫಾರಮುಗಳೂ, ಓಚರ್ ಪುಸ್ತಕಗಳೂ ರಶೀತಿ ಪುಸ್ತಕಗಳೂ ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ... ಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ ... ಬೇಕಾದವರು ಆರ್ಡರು ಕೊಟ್ಟಲ್ಲಿ ... ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್,
'ಕೊಡಗು' ಆಫೀಸ್
ಮಡಿಕೇರಿ

Printed & published by P I Belliappa at "Kodagu" Press M... for "Kodagu" Ltd

If not delivered please return to

ಕೊಡಗು.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಚಿಕೆ ೧೧

Telegrams "Precious"

V. Subramaniyer Jeweller

Telephone — 3145

DIAMOND MERCHANT GOLD & SILVERSMITH

Deals in all —
SPORTS CUPS in all prices
MEDALS in up to date patterns
CASKETS in elegant styles

Post Box ... Triplicane P. ...
MADRAS.

Deals in all
... with
... Rubies etc.
... of all patterns
SILVER WARE in latest style.

52–10



GOOLAMALLY ... AND SONS
Largest Importers of Firearms and Ammunition
Cheapest price ... in India,
10 Abdul Rehman Street, BOMBAY

11–20

ಬಾಲಾರ್ಕಮಧು.

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.

57–31

1–14

ಕೊಡಗು.

ಸನ್ ೧೯೩೧ನೇ ಇಸವಿ

ಆಗೋಸ್ಟು ತಾ. ೧೪ನೇ ಶುಕ್ರವಾರ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ.

ಕರಾಚಿ ಕಾಂಗ್ರೆಸ್ ಕಳೆದ ನಂತರ ಚುನಾಯಿಸಲ್ಪಟ್ಟ ಹೊಸ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಪ್ರಥಮ ಮೀಟಿಂಗು ಈ ತಾ. 6ರಿಂದ 8ರ ವರೆಗೆ ಬೊಂಬಾಯಿಯಲ್ಲಿ ನಡೆಯಿತು. ಕಾಂಗ್ರೆಸ್ಸಿನ ಈ ವರ್ಷದ ಅಧ್ಯಕ್ಷರಾದ ಸರ್ದಾರ್ ವಲ್ಲಭಭಾಯಿ ಪಟೇಲರವರು ಅಧ್ಯಕ್ಷರಾಗಿದ್ದರು. ಸುಮಾರು 180 ಮೆಂಬರುಗಳು ಹಾಜರಿದ್ದರು. ಮೆಂಬರುಗಳು 30 ಖಾಸಗಿ ಠರಾವುಗಳ ನೋಟೀಸು ಕೊಟ್ಟಿದ್ದರೂ ಕೂಡ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಮಂಜೂರು ಮಾಡಿದ್ದ ಕೆಲವು ಮುಖ್ಯ ಠರಾವುಗಳನ್ನು ಚರ್ಚಿಸುವುದಕ್ಕೇ ಮೂರು ದಿವಸಗಳು ಹಿಡಿದದ್ದರಿಂದ ಖಾಸಗಿ ಠರಾವುಗಳ ವಿಚಾರವೆಲ್ಲಾ ಇನ್ನೊಂದು ಮೀಟಿಂಗಿಗೆ ಇಡಬೇಕಾಯಿತು.

ಕಮಿಟಿಯ ಈ ಮೀಟಿಂಗಿನಲ್ಲಿ ಪಾಸಾದ ಠರಾವುಗಳ ಪೈಕಿ ರಾಜಕೀಯ ಕೊಲೆಗಳನ್ನು ಖಂಡಿಸಿ ಮಾಡಿದ ತೀರ್ಮಾನವೇ ಬಹು ಮುಖ್ಯವಾದದ್ದಾಗಿದೆ. ಬೊಂಬಾಯಿಯ ಹಂಗಾಮಿ ಗವರ್ನರಾದ ಸರ್ ಅರ್ನೆಸ್ಟ್ ಹಾಟ್‌ಸನ್‌ರವರನ್ನು ಕೊಲ್ಲಲು ನಡೆಸಿದ ಪ್ರಯತ್ನದ ಮತ್ತು ಬಂಗಾಳದ ಒಬ್ಬ ಜಡ್ಜಾದ ಮಿ. ಗಾರ್ಲಿಕ್‌ರವರನ್ನು ಕೊಲೆ ಮಾಡಿದರ ವಿಷಯ ಈ ಮೊದಲೇ ಟೀಕಿಸಿದ್ದೆವು. ಕಮಿಟಿಯವರು ಈ ಎರಡು ಕೃತ್ಯಗಳಿಗೆ ವಿಷಾದಿಸಿ, ರಾಜಕೀಯ ಕೊಲೆಗಳನ್ನೆಲ್ಲಾ ಖಂಡಿಸಿದಲ್ಲದೆ ಇಂಥಾ ಖೂನಿಗಳೆಲ್ಲಾ ದೇಶದ ಅಭಿವೃದ್ಧಿಗೆ ಅಡ್ಡಿ ಬರುವುದರಿಂದ ಅವುಗಳಿಗೆ ಯಾರೂ ಉತ್ತೇಜನ ಕೊಡಬಾರದೆಂತ ದೇಶದವರನ್ನು ಎಚ್ಚರಿಸಿ, ಕಾಂಗ್ರೆಸ್ ಸಂಸ್ಥೆಗಳೆಲ್ಲಾ ಇಂಥಾ ಹಿಂಸಾತ್ಮಕ ಕೃತ್ಯಗಳನ್ನು ಮಾಡದಂತೆ ಪ್ರಚಾರ ಕೆಲಸ ನಡಿಸಬೇಕೆಂತಲೂ, ರಾಷ್ಟ್ರೀಯ ಪತ್ರಿಕೆಗಳು ಈ ಕೆಲಸಕ್ಕೆ ಸಹಾಯ ಕೊಡಬೇಕೆಂತಲೂ ವಿನಂತಿ ಮಾಡಿರುವರು. ಮಹಾತ್ಮ ಗಾಂಧಿಯವರು ಈ ಠರಾವನ್ನು ಸೂಚಿಸಿ, ಈಗ ಕೆಲವು ವರ್ಷಗಳಲ್ಲಿ ತಾನು ಮಾಡಿದ ಭಾಷಣಗಳಲ್ಲೆಲ್ಲಾ ಅತಿ ದೀರ್ಘ ಭಾಷಣವನ್ನು ಎಲ್ಲರ ಮನಸ್ಸು ಕರಗುವಂತೆ ಮಾಡಿದರು. ಅಹಿಂಸಾ ತತ್ವವನ್ನು ಒಪ್ಪಿಕೊಂಡು ಅದರಂತೆ ತನ್ನ ಕಾರ್ಯಕ್ರಮಗಳನ್ನು ನಡಿಸುತ್ತಿರುವ ಕಾಂಗ್ರೆಸ್ ಸಭೆಯು ಈ ಠರಾವನ್ನು ದೊಡ್ಡ ಬಹುಮತದಿಂದ ಪಾಸು ಮಾಡಿದ್ದು ಯೋಗ್ಯವಾಗಿದೆ. ಕಾಂಗ್ರೆಸ್ ಸಭೆಯು ತನ್ನ ಕಳೆದ ಸತ್ಯಾಗ್ರಹ ಚಳವಳದಿಂದ ತನಗೆ ಅಹಿಂಸಾ ತತ್ವದ ಮೇಲಿರುವ ವಿಶ್ವಾಸವನ್ನು ಅನೇಕರ ಮನಸ್ಸು ಕರಗುವಂತೆ ಕಾರ್ಯತಃ ತೋರಿಸಿದರೂ ಕೂಡ ಸರ್ಕಾರಿ ಪಕ್ಷದ ಕೆಲವರು ಕಾಂಗ್ರೆಸ್ಸಿಗೆ ದೇಶದ ಜನಸಮುದಾಯದ ಮೇಲಿರುವ ಶಕ್ತಿಯನ್ನು ನೋಡಿ ಸಹಿಸಲಾರದೆಯೋ ಏನೋ, ರಾಜಕೀಯ ಕೊಲೆಗಳಿಗೆ ಕಾಂಗ್ರೆಸ್ಸಿನ ಚಳವಳವೇ ಕಾರಣವೆಂದು ಹೇಳುತ್ತಿರುವರು. ಇಂಥಾದ್ದನ್ನು ಖಂಡಿಸಬೇಕೆಂದು ಕಾಂಗ್ರೆಸ್ಸಿನ ಕಮಿಟಿ ಮೆಂಬರೊಬ್ಬರು ಸೂಚಿಸಿದ್ದಕ್ಕೆ ಇಂಥಾವುಗಳು ಕಮಿಟಿಯ ಗಣನೆಗೆ ಯೋಗ್ಯವಲ್ಲವಾದ ಕಾರಣ ಅವುಗಳನ್ನು ತುಚ್ಛೀಕರಿಸುವುದು ಉತ್ತಮವೆಂದು ತೀರ್ಮಾನಿಸಿದರು. ಎಲ್ಲಾ ತಪ್ಪುಗಳನ್ನು ಕಣ್ಣುಮುಚ್ಚಿಕೊಂಡು ಕಾರಣಗಳೇನೂ ಕೊಡದೆ ಕಾಂಗ್ರೆಸ್ಸಿನವರ ಮೇಲೆ ಹೊರಿಸುವವರಿಗೆ ತಿರಸ್ಕಾರವೇ ಉತ್ತಮ ಜವಾಬು. ಕಾಂಗ್ರೆಸ್ ಸಭೆಯು ಹಿಂಸಾತ್ಮಕ ಕೃತ್ಯಗಳಿಗೆ ಪೂರ್ತಿ ವಿರೋಧವಿದೆಯೆಂಬುವುದು ಅದರ ಕಮಿಟಿಯ ಮೇಲಿನ ತೀರ್ಮಾನದಿಂದ ವಿಶದವಾಗಿದೆ. ದೇಶದ ಅಭಿವೃದ್ಧಿಯನ್ನು ಬಯಸುವವರು ಇನ್ನಾದರೂ ಕಾಂಗ್ರೆಸ್ಸಿನ ಎಚ್ಚರಿಕೆಯನ್ನು ಮನಸ್ಸಿಗೆ ತೆಗೆದುಕೊಳ್ಳುವರಾಗಿ ಆಶಿಸುತ್ತೇವೆ.

ಈ ಕಮಿಟಿಯು ಈ ಮೊದಲು ನೇಮಿಸಿದ್ದ ರಾಷ್ಟ್ರೀಯ ಧ್ವಜ ಉಪ ಕಮಿಟಿ, ಪ್ರಾಥಮಿಕ ಹಕ್ಕುಗಳ ಉಪ ಕಮಿಟಿಗಳ ವರದಿಗಳು ಚರ್ಚಿಸಲ್ಪಟ್ಟು ಸ್ವಲ್ಪ ಬದಲಾವಣೆಗಳಿಂದ ಮಂಜೂರು ಮಾಡಲ್ಪಟ್ಟವು. ಈ ಮೊದಲು ಇದ್ದ ಧ್ವಜದಲ್ಲಿ ಕೆಂಪು ಬಣ್ಣದ ಬದಲು ಕೇಸರಿ ಬಣ್ಣವನ್ನು ಹಾಕಿ ಮಧ್ಯದಲ್ಲಿರುವ ಬಿಳುಪಿನ ಮೇಲೆ ನೀಲ ಬಣ್ಣದ ಚರಕದ ನಕ್ಷೆ ಇರುವ ಮೂರು ಬಣ್ಣದ ಧ್ವಜವನ್ನೇ ಉಪಯೋಗಿಸಬೇಕೆಂದೂ, ಈ ಬಣ್ಣಗಳು ಕೋಮುಗಳ ಪ್ರತಿನಿಧಿತ್ವದ ಗುರುತುಗಳಾಗಿರದೆ ಸಾತ್ವಿಕ ಗುಣಗಳ ಚಿನ್ನೆಗಳಾಗಿರಬೇಕೆಂದೂ ಮಾಡಿದ ತೀರ್ಮಾನವು ಈ ಮೊದಲಿನ ರಾಷ್ಟ್ರೀಯ ಧ್ವಜದ ಮೇಲಿದ್ದ ತಪ್ಪು ಭಾವನೆಗಳನ್ನು ಹೋಗಲಾಡಿಸಿಯಾವೆಂದು ನಂಬುತ್ತೇವೆ. ಅಲ್ಲದೆ ಈ ಆಗೋಸ್ಟು ತಾ. 30ನ್ನು ಅಖಿಲ ಭಾರತ ರಾಷ್ಟ್ರೀಯ ಧ್ವಜ ದಿನವೆಂದು ಹೊಸ ಧ್ವಜಾಭಿವಂದನೆಯ ಮೂಲಕ ಎಲ್ಲಾ ಕಡೆಗಳಲ್ಲೂ ಆಚರಿಸಬೇಕೆಂದೂ ನಿಶ್ಚಯಿಸಿರುವರು. ಲಂಡನ್ ಕಾಂಗ್ರೆಸ್ ಕಮಿಟಿಯು ಕಾಂಗ್ರೆಸ್ ಸಭೆಯ ಧ್ಯೇಯಕ್ಕೆ ವಿರೋಧವಾಗಿ ವರ್ತಿಸುತ್ತಿರುವುದರಿಂದ ಕಾಂಗ್ರೆಸಿಗೆ ಅದರ ಸಂಬಂಧವು ವಜಾಮಾಡಲ್ಪಟ್ಟಿತು. ಶಾಖೆಗಳು ಮಧ್ಯವರ್ತಿ ಸಂಸ್ಥೆಯ ತತ್ವವನ್ನು ಅನುಸರಿಸಿ ನಡೆಯದೆ ಹೋದರೆ ಅವುಗಳ ಸಂಬಂಧವನ್ನು ತಪ್ಪಿಸಬೇಕಾದದ್ದು ಅವಶ್ಯವೆ.

ರಿಟಯರಾದ ಮುನಸೀಫರು.

ಶ್ರೀಯುತ ಕೊರವಂಡ ಮುತ್ತಣ್ಣ ಬ್ಯಾರಿಸ್ಟರ್ ಎಟ್ ಲಾ ರವರು ಈ ತಾ. 13ರಲ್ಲಿ ಮುನಸೀಫ್ ಕೆಲಸದಿಂದ ನಿವೃತ್ತರಾದರೆಂದು ತಿಳಿಯ ಬರುತ್ತದೆ. ಇವರು ಇಂಗ್ಲೆಂಡಿನಲ್ಲಿ ಬಾರ್ ಎಟ್ ಲಾ ಪಾಸಾಗಿ ಬಂದ ಸ್ವಲ್ಪ ಸಮಯದಲ್ಲಿಯೇ ಮುನಸೀಫ್ ಉದ್ಯೋಗವನ್ನು ಹಂಗಾಮಿಯಾಗಿ ನೋಡುವ ಅನುಕೂಲವು ದೊರೆತು, ಕೆಲವು ಸಮಯದನಂತರ ಆ ಹುದ್ದೆಯಲ್ಲಿ ಖಾಯಂ ಮಾಡಲ್ಪಟ್ಟರು. ಇವರು ಈ ಹುದ್ದೆಯಲ್ಲೇ ಸುಮಾರು 23 ವರ್ಷ ಸರ್ವಿಸು ಮಾಡಿರುವರು. ಇವರು ಒಂದೇ ಕಡೆ ಅಂದರೆ ವೀರರಾಜಪೇಟೆಯಲ್ಲಿಯೇ ಒಂದೇ ಉದ್ಯೋಗದಲ್ಲಿ ಇಷ್ಟು ದೀರ್ಘ ಕಾಲ ಇದ್ದರೂ ಕೂಡ ಇವರ ನ್ಯಾಯ ತೀರ್ಪುಗಳಿಂದ ಜನರಿಗೆ ಅತೃಪ್ತಿಯೇನೂ ಉಂಟಾಗಿರಲಿಲ್ಲ. ಇವರು ತೃಪ್ತಿಕರವಾಗಿ ಕೆಲಸ ಮಾಡಿದ್ದರೂ ಕೂಡ ಇವರಿಗೆ ಸಲ್ಲಬೇಕಾಗಿದ್ದ ಪ್ರಮೋಶನ್ ದೊರೆಯದೆ ಎರಡು ಸಾರಿ ನಿರಾಶರಾದರು. ರಾ. ಸಾ. ಹೆಚ್. ಚನ್ನಯ್ಯನವರು ಸಬ್‌ಜಡ್ಜಿ ಪದವಿಯಿಂದ ನಿವೃತ್ತರಾದಾಗ ಇವರಿಗೆ ಆ ಪದವಿಯು ದೊರೆಯಬೇಕಾಗಿತ್ತು. ಆದರೆ ಸರ್ಕಾರದವರು ಕೊಡಗಿನ ಹೊರಗೆ ಲಾಯರು ವೃತ್ತಿಯನ್ನು ಮಾಡುತ್ತಿದ್ದ ಮಿ. ಎ. ಬಿ. ಕಾರ್ಯಪ್ಪ ಬಾರ್ ಎಟ್ ಲಾ ರವರನ್ನು ಸಬ್‌ಜಡ್ಜ್ ಪದವಿಗೆ ನೇಮಿಸಿ ಬಿಟ್ಟರು. ಈ ಮೊದಲೇ ಕೊಡಗಿನ ಸರ್ಕಾರದ ಉದ್ಯೋಗದಲ್ಲಿದ್ದುಕೊಂಡು ಅಭಿವೃದ್ಧಿಯನ್ನು ಆಶಿಸುತ್ತಿದ್ದ ಮಿ. ಮುತ್ತಣ್ಣನವರಿಗೆ ಇದು ಉತ್ತೇಜನ ಕೊಟ್ಟಂತಾಗಲಿಲ್ಲ. ಆದರೂ ಅವರು ತಾಳ್ಮೆಯಿಂದ ತನ್ನ ಕರ್ತವ್ಯವನ್ನು ಮಾಡುತ್ತಾ ಬಂದು 1929ರಲ್ಲಿ ಇನ್ನೊಂದು ಸಂದರ್ಭ ಒದಗಿತು. ಆ ವರ್ಷ ಮಿ. ಎ. ಬಿ. ಕಾರ್ಯಪ್ಪನವರು ಉದ್ಯೋಗದಿಂದ ನಿವೃತ್ತರಾದರು. ಆಗಲಾದರೂ ಮಿ. ಮುತ್ತಣ್ಣನವರಿಗೆ ಪ್ರಮೋಶನ್ ದೊರೆಯುವದೆಂದು ಅವರು ಮಾತ್ರವಲ್ಲ, ದೇಶದ ಜನರೂ ನಂಬಿದ್ದರು. ಆದರೆ ಎಲ್ಲಾ ವಿಧದಲ್ಲೂ ಯೋಗ್ಯರಾಗಿದ್ದ ಅವರನ್ನು ಬಿಟ್ಟು ಸರ್ಕಾರದವರು ಬೇರೊಬ್ಬ ಹೊಸಬರನ್ನು ನೇಮಿಸಬಿಟ್ಟರು. ಇದರಿಂದ ಮಿ. ಮುತ್ತಣ್ಣನವರಿಗೆ ಎಷ್ಟು ದೊಡ್ಡ ಅನ್ಯಾಯವಾಯಿತೆಂದು ಆಗ್ಗೆ ವಿವರವಾಗಿ ಟೀಕಿಸಿದ್ದೆವು. ಈ ಅನ್ಯಾಯವು ಮಿ. ಮುತ್ತಣ್ಣನವರ ಮನಸ್ಸಿಗೆ ತುಂಬಾ ನೋವನ್ನುಂಟುಮಾಡಿ ಅವರಿಗೆ ಮನಶ್ಶಾಂತಿ ಇಲ್ಲದಂತೆಯೂ, ಅವರ ಆರೋಗ್ಯ ಕೆಡುವಂತೆಯೂ ಮಾಡಿತೆಂದರೆ ಅತಿಶಯೋಕ್ತಿಯಾಗಲಾರದು. ಈ ನಿರಾಶೆಯಿಂದ ಅನಾರೋಗ್ಯರಾದ ಮಿ. ಮುತ್ತಣ್ಣನವರು ದೀರ್ಘ ರಜೆ ತೆಗೆದುಕೊಂಡರು. ಈ ರಜೆಯ ವಿಶ್ರಾಂತಿಯಲ್ಲೂ ಕೂಡ ಅಧಿಕಾರಿಗಳಿಂದ ತನಗುಂಟಾದ ಅನ್ಯಾಯದಿಂದ ಶಾಂತಿಯನ್ನೂ, ಆರೋಗ್ಯವನ್ನು ಪಡೆಯಲಾರದೆಯೋ ಇನ್ನೇ ಪುನಹ ಉದ್ಯೋಗಕ್ಕೆ ಬರಲಾರದೆ ಹೋದರೆಂದರೆ ತಪ್ಪಾಗಲಾರದು.

ಉದ್ಯೋಗದಿಂದ ನಿವೃತ್ತರಾದ ಇವರು ಇನ್ನಾದರೂ ಶಾಂತ ಮನಸ್ಕರಾಗಿ, ತಾನು ಸಂಪಾದಿಸಿರುವ ಅನುಭವವನ್ನೂ, ಜ್ಞಾನವನ್ನೂ ಜನ ಸಮುದಾಯದ ಅಭಿವೃದ್ಧಿಗೂ, ದೇಶದ ಏಳಿಗೆಗೂ ಉಪಯೋಗಿಸುವರೆಂತ ಆಶಿಸುತ್ತೇವೆ. ಐಶ್ವರ್ಯವಂತರೂ, ವಿದ್ಯಾವಂತರೂ ಆದ ಇವರಿಗೆ ದೇಶದ ಪ್ರಗತಿಯನ್ನು ನಿರ್ಧರಿಸುವ ಈ ಬಿಕ್ಕಟ್ಟಿನ ಸಮಯದಲ್ಲಿ ಸಾರ್ವಜನಿಕ ಕೆಲಸಗಳಿಗೆ ಸಹಾಯ ಮಾಡಲು ತುಂಬಾ ಅವಕಾಶವಿದೆ. ಇವರು ಈ ಉತ್ತಮವಾದ ಅವಕಾಶವನ್ನು ಕಳಕೊಳ್ಳಲಿಕ್ಕಿಲ್ಲವಾಗಿ ನಂಬುತ್ತೇವೆ.

ಅಸ್ಪೃಶ್ಯರ ಸೇವೆ.

(ಅಹಮದಾಬಾದಿನಲ್ಲಿ ಸರ್ ಚುನಿಲಾಲ್ ಮಾಧವಲಾಲ್ ಮತ್ತು ಇವರ ತಾಯಿಯವರು ಸೇರಿ ತಮ್ಮ ಕುಟುಂಬದ ದೇವಾಲಯವನ್ನು ಅಸ್ಪೃಶ್ಯರೆನ್ನಿಸಿಕೊಂಡವರ ಪ್ರವೇಶಕ್ಕೆ ಬಿಟ್ಟುಕೊಟ್ಟಾಗ ಮಹಾತ್ಮ ಗಾಂಧಿಯವರು ಮಾಡಿದ ಭಾಷಣ. ಯಂ. ಇ.)

"ಅಸ್ಪೃಶ್ಯ"ರೆನಿಸಿಕೊಂಡವರ ಸೇವೆಯು ನನ್ನ ಭಾಗಕ್ಕೆ ಯಾವ ತರದ ರಾಜಕೀಯ ಕೆಲಸಕ್ಕಿಂತಲೂ ಕಡಿಮೆ ಪ್ರಾಮುಖ್ಯತೆಯದಲ್ಲ. ಸ್ವಲ್ಪ ಹೊತ್ತಿಗೆ ಮುಂಚೆ ಮಿಶನರಿ ಸ್ನೇಹಿತರೊಬ್ಬರು ಈ ತರದ ಭೇದ ಮಾಡಲು ಯತ್ನಿಸಿದಾಗ ನಾನು ಅವರನ್ನು ಖಂಡಿಸಬೇಕಾಯಿತು. ನನ್ನ ಸಮಾಜ ಸುಧಾರಣೆ ಕೆಲಸವು ನನ್ನ ರಾಜಕೀಯ ಕೆಲಸಕ್ಕಿಂತ ಕಡಿಮೆ ಇಲ್ಲವೆಂತಲೂ, ರಾಜಕೀಯ ಕೆಲಸಕ್ಕೆ ಸಮಾಜ ಸುಧಾರಣೆಯ ಕೆಲಸವು ಅಧೀನವಾಗಿಲ್ಲವೆಂತಲೂ ಅವರಿಗೆ ತಿಳಿಸಿದೆ. ರಾಜಕೀಯ ಕೆಲಸವಿಲ್ಲದೆ ಸಮಾಜ ಸುಧಾರಣೆ ಕೆಲಸವು ಕೆಲವು ಮಟ್ಟಿಗಾದರೂ ಸಾಧ್ಯವಿಲ್ಲವೆಂತ ನನಗೆ ಗೊತ್ತಾದ್ದ... ನು ಸಮಾಜ ಸೇವೆಗೆ ಅವಶ್ಯವಿರುವಷ್ಟು ಮಾತ್ರ ರಾಜ... ಕೆಲಸಕ್ಕೆ ಕೈಹಾಕಿದ್ದೇನೆ. ಆದ್ದರಿಂದ ಸಮಾಜ ಸು... ಯು ಅಥವಾ ಈ ತರದ ಆತ್ಮಶುದ್ಧಿಯ ಕೆಲಸವು ನನ... ಜಕೀಯ ಕೆಲಸಕ್ಕಿಂತ ನೂರು ಮಡಿ ಹೆಚ್ಚು ಪ್ರಿಯ...

"ಅಸ್ಪೃಶ್ಯ"ರ ಸೇವೆ ಅಥವ ಅವರಿಗೆ ನ್ಯಾಯ... ವುದೆಂದರೇನು? ಶತಮಾನಗಳಿಂದ ಬಾಕಿಯಾದ ಸಾ... ಣೆ ಮಾಡಿಕೊಳ್ಳುವುದಾಗಿದೆ. ಬಹು ಕಾಲದಿಂದ ನ... ಧು ಮಿತ್ರರಾದ ಇವರನ್ನು ದಬ್ಬಾಳಿಕೆಗೆ ಗುರಿಪಡಿ... ಯಾದೆ ಪಡಿಸಿದ ಪಾಪಕ್ಕೆ ಕೆಲವು ಮಟ್ಟಿಗಾದರೂ ಪ್ರಾ... ಶ್ಚಿತ್ತ ಮಾಡಿಕೊಳ್ಳುವುದಾಗಿದೆ. ನಾವು ನಮ್ಮ ದು... ರ್ದೃಷ್ಟದ ಸಹೋದರರೊಂದಿಗೆ ಹೇಗೆ ವರ್ತಿಸಿದೆವೆಂದ... ಸ ಸ್ವರೂಪವನ್ನು ತಾಳಿದವನು ತನ್ನ ಮನುಷ್ಯ ಸ... ನೊಂದಿಗೆ ವರ್ತಿಸುವ ರೀತಿಯಲ್ಲಿ ವರ್ತಿಸಿದ್ದೇವೆ. ... ಮುಂದೆ ಅಸ್ಪೃಶ್ಯತಾ ನಿವಾರಣೆಗಾಗಿ ಇಟ್ಟುಕೊಂ... ರ್ಯಕ್ರಮವು ಈ ರಾಕ್ಷಸೀ ಸ್ವಭಾವದ ವರ್ತನೆಗಾ... ಡಿಕೊಳ್ಳುವ ಅಲ್ಪ ಸ್ವಲ್ಪ ಪ್ರಾಯಶ್ಚಿತ್ತವಾಗಿದೆ. ... ರ್ಯಕ್ರಮವನ್ನು ನಾವು ಕೈಕೊಂಡಿರುವುದು ಪ್ರಾಯ... ರೂಪದ ಅಥವಾ ಆತ್ಮ ಶುದ್ಧಿಯ ಕಾರ್ಯವಾ... ಯಾವ ಹೆದರಿಕೆಯಿಂದಾಗಲೀ ಯಾವ ಪ್ರೀತಿ ಸ... ನೆಗಾಗಿಯಾಗಲೀ ಮಾಡುವ ಕೆಲಸವಲ್ಲ. ಅಸ್ಪೃ... ಬೇರೆ ಜಾತಿಗೆ ಸೇರಿ ಬಿಡುತ್ತಾರೆಂಬ ಭೀತಿಯಿಂದಾಗ... ಧವ ಅವರು ನಮ್ಮ ಮೇಲೆ ತಮ್ಮ ಸೇಡನ್ನು ತೀರಿಸಿ... ರೆಂತಾಗಲೀ, ಅಥವಾ ರಾಜಕೀಯ ಕೆಲಸಕ್ಕೆ ಅವಶ್ಯ... ತಾಗಲೀ ಈ ಅಸ್ಪೃಶ್ಯರ ಸೇವೆಯನ್ನು ನಾವು ಕೈಕೊ... ಹಿಂದೂತ್ವವೇನೆಂಬುದನ್ನು ನಾವು ತಿಳಿದುಕೊಂಡಿಲ್ಲ... ನ್ನೂ, ಶತಮಾನಗಳಿಂದ ನಮ್ಮ ಸೇವೆ ಮಾಡಿದವರಿಗೆ ಕೃತಘ್ನತೆಯನ್ನೂ ತೋರಿಸಿದಂತಾಗುತ್ತದೆ. ... ಕಾರ್ಯಕ್ರಮದಲ್ಲಿ ಈ ವಿಷಯಕ್ಕೆ ಪ್ರಾಮುಖ್ಯತೆ... ಸು ನಾನೆಂತ ಒಪ್ಪುತ್ತೇನೆ. ಅಸ್ಪೃಶ್ಯರನ್ನು ನನ್ನ ... ರಿಸಿಕೊಳ್ಳಲಿಕ್ಕಾಗಿ ನಾನು ಮಾಡಿದ ಉಪಾಯ... ಮೇಲೆ ಟೀಕಿಸುವವರು ಹೇಳಬಹುದು. ಅದು ... ಆರೋಪಣೆಯೆಂತ ಕೂಡಲೇ ಹೇಳಬಲ್ಲೆನು. ಹಿಂದೂ... ಸಿಕೊಳ್ಳುವವರು ತಮ್ಮ ಹಿಂದೂತ್ವಕ್ಕೆ ಗರ್ವಪಡಬೇ... ಈ ಕಳಂಕವನ್ನು ಹೋಗಲಾಡಿಸಿಕೊಳ್ಳುವ ಪ್ರಾಯಶ್ಚಿ... ಡಿಕೊಳ್ಳಬೇಕೆಂತಲೂ, ಕಾಂಗ್ರೆಸಿನ ಹೆಚ್ಚು ಜನರು ಹಿ... ಗಳಾದ್ದರಿಂದಲೂ, ಆತ್ಮಶುದ್ಧಿಯ ಕಾರ್ಯಕ್ರಮವು ಕಾಂ... ಗ್ರೆಸಿನ ಮುಂದೆ ಇಕ್ಕಿಲ್ಲವಾದ್ದರಿಂದಲೂ, ಈ ಕಳಂಕ... ನಿವಾರಿಸಿಕೊಳ್ಳಲು ಹಿಂದುಗಳು ತಯಾರಿಲ್ಲದಿದ್ದರೆ ಅವ... ರಾಜ್ಯಕ್ಕೆ ಅರ್ಹರೆಂತ ಭಾವಿಸಲು ಸಾಧ್ಯವಿಲ್ಲವೆಂತ ಪೂ... ರ್ಣವಾಗಿ ನಂಬಿ ನಾನು ಕಾಂಗ್ರೆಸಿನ ಕಾರ್ಯಕ್ರಮ... ಸ್ಪೃಶ್ಯತಾ ನಿವಾರಣೆಗೆ ನಾನು ಪ್ರಾಮುಖ್ಯತೆ ಕೊ... ಈ ನಂಬಿಕೆಗೆ ಬೇರೆ ಆಧಾರ ಕೊಡಬೇಕೆಂತ ... ಅಸ್ಪೃಶ್ಯತಾ ಕಳಂಕವು ಹಾಗೇ ಇದ್ದು ನಮಗೆ ಸ್ವ... ದೊರೆತರೆ ಅಸ್ಪೃಶ್ಯರ ಸ್ಥಿತಿಯು ಈಗಿನದ್ದಕ್ಕಿಂತ ಇನ್ನೂ ... ದೆಯೆಂತ ನನಗೆ ನಂಬಿಕೆ ಇದೆ. ಯಾಕೆಂದರೆ, ಆಗ ನಮ್ಮ... ರತೆಗಳನ್ನೂ ದೋಷಗಳನ್ನೂ ಭದ್ರವಾಗಿ ಉಳಿಸಿಕೊಳ್ಳ... ಮಗೆ ಅಧಿಕಾರದ ಬಲವಿರುತ್ತದೆ. ಸ್ವರಾಜ್ಯ ಸಂಪಾದ... ಆತ್ಮಶುದ್ಧಿಯು ಅತ್ಯಾವಶ್ಯವೆಂತ ನಾನು ಯಾವಾಗ... ಬಿದ್ದೇನೆ. ಈಗ ಯೋಚಿಸಿಕೊಂಡಂಥ ವಿಷಯವಲ್ಲ... ನು ಸ್ವರಾಜ್ಯದ ವಿಷಯ ಯೋಚಿಸಲು ಪ್ರಾರಂಭಿಸಿ... ಹುಟ್ಟಿದ ಯೋಚನೆಯಾಗಿದೆ. ಆದ್ದರಿಂದ ಈ ದಿನದ ... ದಲ್ಲಿ ನಾನು ಭಾಗಿಯಾಗಲು ಸಾಧ್ಯವಾದ್ದಕ್ಕೆ ನಾನು ... ರಿಗೆ ಧನ್ಯನಾಗಿದ್ದೇನೆ. ಇಂಥಾ ಕೆಲಸಗಳನ್ನು ಮಾ... ನಾನು ಯಾವಾಗಲೂ ಕುತೂಹಲವುಳ್ಳವನಾಗಿದ್ದೇನೆ... ಥಾ ಕೆಲಸ ಮಾಡಲು ರಾಜಕೀಯ ಕೆಲಸವನ್ನು ಬಿ... ಟ್ಟು ಅನೇಕ ಸಾರಿ ಬಂದಿದ್ದೇನೆ. "ರಾಜಕೀಯ ... ಉತ್ತೇಜಕ ವಿಷಯದಲ್ಲೇ ಮನಸು ಇರುವವರಿಗೆ ಇಂ... ಲಸಗಳನ್ನು ನೋಡಿ ನಗು ಬರಬಹುದು. ಆದರೆ ನನ... ಕ್ಕೆ ಅತ್ಯಂತ ಪ್ರಿಯವಾದ ಕೆಲಸವಾಗಿದೆ.

ಚಿನುಭಾಯಿ ಮಾತೆಯವರೇ, ನಿಮ್ಮ ಕರ್ತವ್ಯವನ್ನು ... ವು ಮಾಡಿದ್ದಕ್ಕೆ, ನಿಮ್ಮ ಆತ್ಮಶುದ್ಧಿಯ ಈ ಕಾರ್ಯ... ದ್ದಕ್ಕೆ ನಿಮಗೆ ಧನ್ಯವಾದಗಳನ್ನೇನೂ ಕೊಡಬೇಕಾ... ಧನ್ಯವಾದ ಕೊಡಬೇಕಾದ ಕಾಲ ಶೀಘ್ರದಲ್ಲೇ ಬರ... ಬ್ರಾಹ್ಮಣ ಪೂಜಾರಿಯವರು ಈ ದಿನದ ಕಾರ್ಯಕ್ಕೆ ... ಒಪ್ಪಿಕೊಂಡಿರುತ್ತಾರೆ. ನಿಮ್ಮ ದೇವಸ್ಥಾನದಲ್ಲಿ ... ಜೆ ಮಾಡಲಿಕ್ಕಿಲ್ಲವೆಂತ ಹೇಳುವ ದಿವಸ ಬರಬಹುದು ... ಹ್ಮಣ ಜಾತಿಯವರೆಲ್ಲಾ ಒಗ್ಗಟ್ಟಾಗಿ ನಿಮಗೆ ಕಷ... ಲು ನೋಡಬಹುದು. ಆದರೂ ನೀವು ನಿಮ್ಮ ಮನ... ಗೆ ಸರಿಯಾಗಿ ಹೆದರದೆ ನಿಂತೀರಿ ಎಂತ ಆಶಿಸುತ್ತೇನೆ... ಪ್ರಾರ್ಥಿಸುತ್ತೇನೆ. ಅಂಥಾ ದಿನದಲ್ಲಿ ದೇವಸ್ಥಾ... ಇರುವ ಕಲ್ಲಿನ ಶಿವ ಪ್ರತಿಮೆಗೆ ದೇವರ ಆವಾಹನೆ ... ತ ನೀವು ನಂಬಬಹುದು. ನಿಮ್ಮನ್ನು ನಿಮ್ಮ ಜನ... ಸೇರಿ ನಿಮ್ಮ ಈ ಆತ್ಮಶುದ್ಧಿಯ ಕಾರ್ಯಕ್ಕಾಗಿ ಬಹಿಷ್ಕ... ರೆ ಆ ದಿನವೇ ನಿಮ್ಮ ಆತ್ಮ ಶುದ್ಧಿಯ ತಪಸ್ಸಿನ ಫಲ ... ನೀವು ನಂಬಬಹುದು. ಆಗ ನಿಮಗೆ ನಾನು ಧನ್ಯವಾ... ನ್ನು ಕೊಡುತ್ತೇನೆ.

(4ನೇ ಪುಟದಲ್ಲಿ ಮುಂದುವರಿದಿದೆ.)

೫೦೦ ರೂಪಾಯಿಯ ಮಿತಿ.

(ಯಂ. ಇ. ಗಾಂಧಿಯವರಿಂದ)

[illegible]ರಾಚಿ ಕಾಂಗ್ರೆಸ್ಸಿನಲ್ಲಿ ಪಾಸಾದ ಮೂಲಭೂತ ಹಕ್ಕುಗಳ [illegible]ದ ಠರಾವಿನಲ್ಲಿ ಸರಕಾರಿ ಉದ್ಯೋಗಸ್ಥರ ಸಂಬಳವು [illegible] ೫೦೦ ರೂ. ಅಥವಾ ವರ್ಷಕ್ಕೆ ೬೦೦೦ ರೂಪಾಯಿ [illegible] ಹೆಚ್ಚಾಗಿರಬಾರದೆಂಬ ಠರಾವಿನ ಮೇಲೆ ಆದಷ್ಟು [illegible] ಟೀಕೆಯು ನಡೆದಿಲ್ಲ. ಈ ಪರದೇಶೀ[illegible] ಸರಕಾರಿ ಉದ್ಯೋಗಸ್ಥರಿಗೆ ದೊಡ್ಡ ಸಂಬಳ [illegible] ಅಭ್ಯಾಸ ಮಾಡಿದ್ದರೆ ೫೦೦ ರೂ. ಮಿತಿಯು [illegible] ಏನೂ ಆಶ್ಚರ್ಯಪಡುವದಿಲ್ಲ. ದೊಡ್ಡ ಸಂಬಳ[illegible] ಕೊಡಬಾರದೆಂಬ ಏನೂ ನಿರ್ಬಂಧವಿಲ್ಲ. ೪೦ [illegible] ಸರಕಾರದ ಸಿವಿಲ್ ಮತ್ತು ಮಿಲಿಟರಿ [illegible] ಖರ್ಚು ಹೆಚ್ಚುತ್ತಿದೆಯೆಂತ ದೂರುತ್ತಿದ್ದಾರೆ. [illegible] ಗಳು ಸಂಬಳ ಹೆಚ್ಚಾಗಬೇಕೆಂದೇ ಒತ್ತಿ [illegible]. ಅರ್ಥ ಶಾಸ್ತ್ರದ ಹಳೇ ಆಕ್ಷೇಪಣೆಗೆ [illegible] ರೂಪವನ್ನು ಕೊಟ್ಟಿತು. ಕಾಂಗ್ರೆಸ್ ಠರಾವ[illegible]ವನ್ನು ಅನುಮೋದಿಸಬೇಕಾದರೆ ಹಿಂದೂಸ್ಥಾನದ [illegible] ಜನರ ಸರಾಸರೀ ಉತ್ಪತ್ತಿಯನ್ನೂ, ಬೇರೆ ದೇಶ[illegible] ಸರಾಸರಿ ಉತ್ಪತ್ತಿಯನ್ನೂ, ಸರಕಾರದ ಅಧಿಕಾರಿಗಳ ಸಂ[illegible] ಹೋಲಿಸಿ ನೋಡಬೇಕು. ಪ್ರಪಂಚದ ಮುಖ್ಯ [illegible] ಸಂಖ್ಯೆಗಳನ್ನು ತುಲಿಸಿ [illegible] "ಯಂಗ ಇಂಡಿಯಾ" [illegible] ಸರಾಸರಿ ಉತ್ಪತ್ತಿ [illegible] ಸರಕಾರಿ ಉದ್ಯೋಗಸ್ಥರ ಸಂಬಳವು ತಿಳಿದಿದ್ದ [illegible] ಮತ್ತು ಕೆಳ ದರ್ಜೆಯ ಸರಕಾರಿ ಉದ್ಯೋಗಸ್ಥರ [illegible] ಸಂಬಳಗಳು [illegible] ಗವರ್ನ[illegible] ತಿಂಗಳಿಗೆ ೧೦೦೦ [illegible] ವರ್ಷಕ್ಕೆ ೧೦,೦೦೦ ದಿಂದ ೧೦ ೭೦೦ ರೂ [illegible] ತಿಂಗಳಿಗೆ ೬೦೦ ರೂ [illegible] ೧೦೦೦ ರೂ. [illegible] ೧೫೦೦ದಿಂದ ೭೦೦ ರೂ. [illegible] ಅಧಿಕಾರಿಗೆ ತಿಂಗಳಿಗೆ ೭೦ [illegible] ೬೦ [illegible] ಪೋಲೀಸ್ ಸಾರ್ಜೆಂಟನಿಗೆ ೭೦ ರಿಂದ ೮೦ ರೂ. [illegible]

[illegible] ಆದರೆ ಜವಾಬ್ದಾರಿಯ ಅಧಿಕಾರಿಗಳು [illegible] ಅಧಿಕಾರಿ[illegible]ಗಳಷ್ಟು ಉಂಚಕ್ಕೆ ಏರಿಸಬೇಕೆಂದು [illegible] ಬೇಕಾಗುತ್ತದೆ [illegible] ಸಂಬಂಧವಾಗಿ ಮಾಡಿದ ಒಂದು [illegible] ಕಾನೂನು [illegible] ದೊಡ್ಡ [illegible] ಸರಕಾರಿ [illegible]

"[illegible] ನಿಯಮವನ್ನು [illegible] ಪ್ರಭಾವ ಮತ್ತು [illegible] ಉತ್ಸಾಹ [illegible] ಕೆಲಸಗಾರರಿಗೆ ಜೀವನಕ್ಕೆ ಬೇಕಷ್ಟು ಕೊಡತಕ್ಕದ್ದು [illegible] ಜೀವನಕ್ಕೆ ಬೇಕಷ್ಟು ಮಾತ್ರವಲ್ಲ [illegible] ಜೀವನದ ರೀತಿಯ ಮೇಲೆ [illegible] ಕಾಂಗ್ರೆಸ್ಸಿನ ಮೇಲೆ ನಿರ್ಧರಿಸಲ್ಪಡ [illegible] ಅನಾವಶ್ಯಕ ಅನುಕೂಲತೆಗಳನ್ನು [illegible] ಕಾಲದ ವರೆಗೆ ಅಧಿಕಾರಿಗೆ [illegible] ಕೆಲಸ [illegible] ಆಸ್ತ್ರೇಲಿಯಾದ [illegible] ಕೆಲಸಗಾರರಿಗೆ [illegible] ಉದ್ದೇಶ [illegible] ಪ್ರಪಂಚದ ಅಧಿಕ [illegible] ಖರ್ಚು ನಡಿಸಿಕೊಳ್ಳುವುದೇ ಕಷ್ಟವಾಗಿ[illegible] ತದಳಿಕವಿಲ್ಲದಿದ್ದರೆ ಪ್ರಪಂಚದ ಅಗಸ [illegible]

ಸ್ಥಿತಿಯಲ್ಲಿ ಹಿಂದೂಸ್ಥಾನಕ್ಕೆ ಇಷ್ಟು ಕಷ್ಟ ಅನುಭವಿಸಬೇಕಾದ ಅವಶ್ಯವಿಲ್ಲ. ಆದ್ದರಿಂದ ನೆಯಸಿಟಾಲಿನಲ್ಲಿ ಜನರು ಜೀವನದ ರೀತಿಯನ್ನು ಬದಲಾಯಿಸಿಕೊಳ್ಳಬೇಕೆಂತ ನಾನು ಹೇಳಲಿಕ್ಕಿಲ್ಲ. 'ಹಾಗಾದರೆ ಮಾತ್ರ ಜನರಿಗೆ ಅಧಿಕತರ ಉಪಾಬ್ಧಾರ ಒಂದಾಗ ಕಷ್ಟವಿಲ್ಲದೆ ಅಧಿಕ ನಡಿಸಲು ಸಾಧ್ಯವಾದೀತು. ದೇಶದ ಸ್ಥಿತಿಗೆ ತಕ್ಕಷ್ಟು ಸಂಬಳ ಕೊಟ್ಟಾಗ ಈಗಿನ ಅಸ್ವಾಭಾವಿಕ ಜೀವನ ನಡಿಸಲು ಸಾಧ್ಯವಾದೀತೆಂತ ನಂಬುವದು. ಅನುಕೂಲಸ್ಥರು ಇತರರಿಗೆ ಮಾದರಿಯಾಗುವಂತೆ ದೇಶದ ಸ್ಥಿತಿಗೆ ತಕ್ಕ ಜೀವನ ನಡಿಸಲು ಪ್ರಾರಂಭಿಸಬೇಕು.

'ಯಂಗ ಇಂಡಿಯಾ'

ಸ್ವಾತಂತ್ರ್ಯ.

(ಶ್ರೀ ಜಿ. ಪಿ. ಯವರಿಂದ)

ಸ್ವಾತಂತ್ರ್ಯವು ಮಾನವ ಪ್ರಕೃತಿ, ಇದರಿಂದಲೇ ನೆಲದ ಜನರಿಗೆ ಉಂಟಾಗುವಂಥ ಶಕ್ತಿ, ಧೈರ್ಯ ಮತ್ತು ಆತ್ಮ ಸಂತೋಷವೂ ಕೂಡ ಲಭಿಸುತ್ತದೆ. ನಾನಾ ತರಹದ ಕಷ್ಟ [illegible] ನಾವು ಎದೆಗುಂದದೆ ಧೈರ್ಯವನ್ನೂ, ಶಕ್ತಿಯನ್ನೂ ಈ ಸ್ವಾತಂತ್ರ್ಯದ ಮೂಲಕ ಹೊಂದಬಹುದು. ಆದರೆ ಈ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಪ್ರತಿ [illegible] ಕೂಡ ಸ್ವಾರ್ಥತೆಯನ್ನು ಬಿಟ್ಟು ಪರಿಪೂರ್ಣವಾದ [illegible] ದ್ರಿಯ ಭೋಗ ಮತ್ತು ಆಶೆಗಳನ್ನು ತ್ಯಜಿಸಬೇಕಾಗುವದು ಮತ್ತು ಪ್ರತಿ ಒಬ್ಬರು [illegible] ಚಂಚಲ ಮನಸ್ಸು, ವ್ಯಾಕುಲತೆ ಉಂಟಾಗಿ [illegible] ಅನೇಕ ತರಹದ ತೊಂದರೆಗಳಿಗೆ ಈಡಾಗಬೇಕಾಗುವದು. [illegible] ಆತ್ಮಕ್ಕೆ ಶಾಂತಿ ಮತ್ತು ಸಂತೋಷವು ಕೂಡ ಇಲ್ಲದೆ [illegible] ಸುಖವು ಲಭಿಸಲಿಕ್ಕಿಲ್ಲ.

ಒಂದು ಪಕ್ಷ ಬರೇ ಕೂಡ ಇದು ಕ್ಷಣ ಮಾತ್ರಕ್ಕೆ [illegible] ಸಾಧ್ಯ[illegible] [illegible] ಸ್ವಾತಂತ್ರ್ಯದಿಂದ [illegible]

[illegible] ಹೊರಗೆ [illegible]

[illegible] ಕಾರ್ಯ [illegible] ಸಾಧ್ಯವಾಗುವುದು. ಕಪ್ಪ

[illegible] ಸುತ್ತಮುತ್ತ [illegible] ನಾವು [illegible] ಸಂಪ್ರದಾಯಗಳಲ್ಲಿ [illegible] ಮನಸ್ಸು ಬಹುವಾಗಿ ಸ್ವನಿಂದ ಮುಕ್ತ [illegible] ಕಂಡುಬರುವುದುಂಟು. ಹಾಗೆ [illegible] ಪಕ್ಷದಲ್ಲಿ [illegible] ನಾವು [illegible] ಪ್ರಪಂಚ [illegible]

[illegible] ಇಲ್ಲ. [illegible] ಬದುಕು [illegible] ಇದಕ್ಕಿಂತ ಹೆಚ್ಚಿಗೆ ಬಿಟ್ಟು ಇರಲಾರರೋ ಹಾಗೆಯೇ [illegible] ಒಂದು ಇರಲಾರದು. [illegible] ಪ್ರಪಂಚದಲ್ಲಿ ಪ್ರತಿ ಒಬ್ಬನೂ ಕೆಲಸ ಸುಲಭ್ಯ ಮಾತ್ರ [illegible] ಇದು ಯಾರಿಗೂ ಸಫಲವಾದುದಿಲ್ಲ. ಹಾಗಾದ ಪಕ್ಷದಲ್ಲಿ ಕಪ್ಪಕ್ಕೆ ಪ್ರಯತ್ನ ಮಾಡತಕ್ಕವು [illegible] ಈ ತರಹದ ಅವಕಾಶವು [illegible] ಎಂದಿಗೂ [illegible] ಅನೇಕರಲ್ಲಿರುವದು. ಈ ವಿಷಯಗಳನ್ನು ಅವರವರ ಆಲೋಚನೆಗೆ [illegible] ಅನೇಕ ತರದ ಕಷ್ಟ [illegible] ಯಾರಿಗೆ ಯಾವ [illegible] ಕೊಡುತ್ತಾರೋ, ಅದು [illegible] ಮತ್ತು ಹೆಚ್ಚಿನ [illegible] ಉಂಟಾಗಬೇಕಿದ್ದರೆ [illegible] ನಮ್ಮ ಜನಗಳು [illegible] ಇದು [illegible]

ಆದುದರಿಂದ [illegible] ಬಂದಾಗ ಧೈರ್ಯಗುಂದದೆ, ಸುಖ ಬಂದಾಗ ಹಿಗ್ಗದೆ, ಬರುವ ಕಾಲಗಳಲ್ಲಿಯೂ ಚಿತ್ತವನ್ನು ಸಮಾಧಾನವಾಗಿಟ್ಟುಕೊಂಡು, ಅಧರ್ಮ ಮಾರ್ಗಕ್ಕೆ ಹೋಗದೆ ಇರುವಂಥ ಸ್ವಾತಂತ್ರ್ಯವನ್ನು ಸ್ಥಾಪಿಸಬೇಕು. ಧರ್ಮಕಾರ್ಯವು ಎಷ್ಟು ಕಷ್ಟದಿಂದಲೂ ತನ್ನ ಸ್ವತ್ವವನ್ನು, ಧರ್ಮವನ್ನು ಕೊನೆಯ ವರೆಗೂ ಬಿಡಲಿಲ್ಲವೆಂಬುವದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದರೆ ಧರ್ಮರಾಯನ[illegible] ಹಾಗೆ ಇರಲಿಕ್ಕೆ ಕಷ್ಟ ಇರಬಹುದು. ಹಾಗೆ ಕಷ್ಟ ಬಿಟ್ಟಿಗಾದರೂ ನಾವು ಹಿಂದುಗಳು ಇರತಕ್ಕದ್ದು. ನಮಗಳ ಧರ್ಮ ಶಾಸ್ತ್ರದ ನಿಬಂಧನೆಯಾಗಿದೆ.

ಸ್ವಾತಂತ್ರ್ಯವನ್ನು ಅಭ್ಯಾಸ ಮಾಡುವದಕ್ಕೆ ಮೊದಲು ಇಂದ್ರಿಯಗಳನ್ನು ನಿಗ್ರಹಿಸಬೇಕು, ತದನಂತರ ಮನಸ್ಸನ್ನು ಇಷ್ಟ ದೇವತೆಯ ಮೇಲೆ ನಿಲ್ಲಿಸಬೇಕೆಂಬುದಾಗಿ ವೇದಾಂತವು ತಿಳಿಸುತ್ತೆ. ಸದಾ ಇಂದ್ರಿಯಗಳನ್ನು ನಿಗ್ರಹಿಸುವುದರಿಂದ ಸತ್ಯದ ದರ್ಶನವನ್ನು ಸ್ಥಿರಗೊಳಿಸಬಹುದು. ಮನಸು ಪ್ರಪಂಚದ ಮೇಲೆ ಹೆಚ್ಚಾಗಿ ಇರುವುದರಿಂದಲೇ ಎಲ್ಲಾ ವಿಧದ ತೊಂದರೆಗಳುಂಟಾಗುವವು. ಇಂದ್ರಿಯ ನಿಗ್ರಹದಿಂದ ಮನಶಾಂತಿಯು ಲಭಿಸುವುದು. ಆದುದರಿಂದ ಪ್ರತಿಯೊಬ್ಬರೂ ಹುಟ್ಟಿನ ಇಂದ್ರಿಯ ಭೋಗದ ವಿಷಯದಲ್ಲಿ ಸುಖ ಉಂಟಾಗಲಿಕ್ಕೆ ಅಭಿಲಾಷೆಯನ್ನು ದೂರಗೊಳಿಸಿ ಹೃದಯ ಪರಿಶುದ್ಧತೆಯನ್ನುಂಟು ಮಾಡುವ ಕಾರ್ಯದಲ್ಲಿ ಮಗ್ನರಾಗುವದು ನೋಲು. ಇದರಲ್ಲಿ ಸ್ತ್ರೀಯರು ಹೆಚ್ಚಿನ ಮನಸನ್ನು ಇಟ್ಟು ಧರ್ಮ ಸ್ಥಾಪನೆಯನ್ನು ನೆರೆಗೊಳಿಸಿ ದೇಶದ ಮತ್ತು ಜನಾಂಗದ ಕೀರ್ತಿಯನ್ನು [illegible] ಇಸಬೇಕಾಗಿದೆ. ಈ ವಿಷಯದಲ್ಲಿ ಹೆಚ್ಚಿನ ಅವಕಾಶವನ್ನು ಶ್ರೀ ಭಗವಂತನು ಅವರಲ್ಲಿ ಕಲ್ಪಿಸಿರುತ್ತಾನೆ. ನಮ್ಮ ದೇಶದ ಸ್ತ್ರೀಯರು ದೇವಭಕ್ತಿಯನ್ನು ಸಂಪಾದಿಸಿ, ಸುಪುತ್ರರನ್ನು ಪಡೆದು ದೇಶಕ್ಕೆ ಕಲ್ಯಾಣವನ್ನುಂಟುಮಾಡುವವರಾಗಲಿ.

ಸ್ವಾತಂತ್ರ್ಯದಿಂದ ನಮಗೆ ಹೆಚ್ಚಿನ ಜ್ಞಾನಶಕ್ತಿ ಉಂಟಾ[illegible] [illegible]

[illegible] ಉಂಟಾಗುವ ಪ್ರಯೋಜನವನ್ನು [illegible] ಹೃದಯವು ಸಂಪೂರ್ಣವಾಗಿ ಸ್ವಾತಂತ್ರ್ಯವನ್ನು [illegible] ಉಂಟಾಗಿ [illegible] ಪ್ರೀತಿಯನ್ನು [illegible] ಕೊಂಡರೆ, ಶಾಂತಿ [illegible] ಕೇಳಿದ [illegible] ಗಳಿಗೆ [illegible]

[illegible] ಮನಃಪೂರ್ವಕ [illegible] ಇರುವುಗಳಲ್ಲಿ ಪ್ರಪಂಚವನ್ನು [illegible] ತ್ಯಜಿಸಿ ಆತ್ಮಶುದ್ಧಿಯನ್ನು ಪಡೆದ [illegible] ಪರಮಾತ್ಮನು ಪ್ರಕಾಶಿಸುತ್ತಿರುವ [illegible] ವಸ್ತುಗಳ [illegible] ಗೂ, ಒಳಗೂ ತನಗಾಗಿ ಗೋಚರವಾಗುವದು. ಮತ್ತು ನಾನು, ನನ್ನದು, ನನ್ನಿಂದಲೇ ಸಕಲವೂ ಆಗತಕ್ಕದ್ದು ಎಂಬ ತಪ್ಪು [illegible] ಭಾವನೆಯನ್ನು [illegible] ಬಿಡತಕ್ಕದ್ದು. [illegible] ದೇವನೇ ನಮ್ಮಲ್ಲಿರುವನು, ಸ್ಪಷ್ಟವಾಗಿ ತಿಳಿದ ನಂತರ ನಾವು ಮಾಡುವಂಥ ಕಲಹ ನಮ್ಮದು ಎಂದು ಹೇಳುವುದಕ್ಕೇ ಆಗುವುದಿಲ್ಲ. ಆದುದರಿಂದ ಪ್ರತಿಯೊಬ್ಬರೂ ಸ್ವಾರ್ಥತೆಯನ್ನು ಬಿಟ್ಟು ಪರಮಾತ್ಮನ ಸೇವೆಮಾಡಿ, ಶರಣುಹೊಂದಿ ಮುಕ್ತರಾಗುವುದು ಉತ್ತಮ. ದೇವರ ಅಕ್ಕದಲ್ಲಿ ಶಾಂತಿಯನ್ನು ನೆಲೆಗೊಳಿಸಲೆಂದು ಆತನಲ್ಲಿ ಪ್ರಾರ್ಥಿಸುವ.

ಕ. ಪ್ರಾಂ. ಕಾಂಗ್ರೆಸ್ ಕಮಿಟಿಯ

ಕಾರ್ಯಕಾರೀ ಮಂಡಲದ ಸಭೆಯು.

(ಧಾರವಾಡ ತಾ. ೪—೮—೧೯೩೦ ಸಾಯಂ ೪ ಗಂಟೆ)

೧. ನಿರಲಸವಾಗಿ ರಾಷ್ಟ್ರಕಾರ್ಯವನ್ನು ಮಾಡುತ್ತಿದ್ದು ಮತ್ತು ಪೋಲೀಸ ಸತ್ಯಾಗ್ರಹ ಸಮರದಲ್ಲಿ ವೀರರಂತೆ ಹೋರಾಡಿ ಕಾರಾಗೃಹ [illegible] ಭೋಗಿಸಿದ ಕ. ಪ್ರಾಂ. ಕಾಂ. ಕಮಿಟಿಯ ಸದಸ್ಯರು ಶ್ರೀ. ಹಣಮಂತರಾವ ನಾಯಕ ನಾಡಗೀರ ಮತ್ತು ಶ್ರೀ. ರಾಮಚಂದ್ರ ಆಗಲಗೆ ಇವರ ಆಕಾಲಿಕ ನಿಧನದ ಬಗ್ಗೆ ಈ ಸಭೆಯು ವಿಷಾದವನ್ನು ವ್ಯಕ್ತ ಪಡಿಸುವುದು ಮತ್ತು ಅವರ ಆತ್ಮಕ್ಕೆ ಶಾಂತಿಯು ದೊರೆಯಲೆಂದು ದೇವರನ್ನು ಪ್ರಾರ್ಥಿಸುವುದು.

೨. ಮುಂಬಯಿ ಗವರ್ನರರಾದ ಸಾಯಿಕೆಸ್ ಸಾಹೇಬರನ್ನು ಕೊಲ್ಲುವ ಪ್ರಯತ್ನ ಮತ್ತು ಅವೇ ರೀತಿಯ ಅತ್ಯಾಚಾರಗಳನ್ನು ಈ ಸಭೆಯು ನಿಸ್ಸಂದೇಹವಾಗಿ ನಿಷೇಧಿಸುವುದು ಮತ್ತು ಈ ಬಗೆಯ ಕೃತ್ಯಗಳಿಂದ ರಾಷ್ಟ್ರಕಾರ್ಯಕ್ಕೆ ಕೇಡು ಒದಗುವದೆಂದು ಅಭಿಪ್ರಾಯ ಪಡುವುದು.

೩. ಕರ್ನಾಟಕದಲ್ಲಿ ಅಸ್ಪೃಶ್ಯತಾ ನಿವಾರಣೆಯನ್ನು ಬೇಗನೆ ಸಾಧಿಸಲು ಎಷ್ಟು ದುಡಿಯಲು ಪ್ರಯತ್ನಿಸುವ [illegible] ಶ್ರೀ. ದಿವಾಕರರು ನಿಯಮಿಸಿ, ಅ [illegible] ಪಟ್ಟಿಯನ್ನಾದರೂ ಬರುವ ಕಾನ್ಫರೆನ್ಸಿನ ಸಭೆಯು ಮುಂದೆ ಇಡಬೇಕೆಂದು ಈ ಸಭೆಯು ಅವರಿಗೆ ವಿನಂತಿ ಮಾಡಿಕೊಳ್ಳುತ್ತದೆ.

ಕೊಡಗು.

ಸನ್ ೧೯೩೧ನೇ ಇಸವಿ

ಆಗೋಸ್ತು ತಾ. ೧೪ನೇ ಶುಕ್ರವಾರ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ.

ಕರಾಚಿ ಕಾಂಗ್ರೆಸ್ ಕಳೆದ ನಂತರ ಚುನಾಯಿಸಲ್ಪಟ್ಟ ಹೊಸ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಪ್ರಥಮ ಮೀಟಿಂಗು ಈ ತಾ. 6ರಿಂದ 8ರ ವರೆಗೆ ಬೊಂಬಾಯಿಯಲ್ಲಿ ನಡೆಯಿತು. ಕಾಂಗ್ರೆಸ್ಸಿನ ಈ ವರ್ಷದ ಅಧ್ಯಕ್ಷರಾದ ಸರ್ದಾರ್ ವಲ್ಲಭಭಾಯಿ ಪಟೇಲರವರು ಅಧ್ಯಕ್ಷರಾಗಿದ್ದರು. ಸುಮಾರು 180 ಮೆಂಬರುಗಳು ಹಾಜರಿದ್ದರು ಮೆಂಬರುಗಳು 30 ಖಾಸಗಿ ಠರಾವುಗಳ ನೋಟಿಸು ಕೊಟ್ಟಿದ್ದರೂ ಕೂಡ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಮಂಜೂರು ಮಾಡಿದ್ದ ಕೆಲವು ಮುಖ್ಯ ಠರಾವುಗಳನ್ನು ಚರ್ಚಿಸುವುದಕ್ಕೇ ಮೂರು ದಿವಸಗಳು ಹಿಡಿದದ್ದರಿಂದ ಖಾಸಗಿ ಠರಾವುಗಳ ವಿಚಾರವೆಲ್ಲಾ ಇನ್ನೊಂದು ಮೀಟಿಂಗಿಗೆ ಇಡಬೇಕಾಯಿತು.

ಕಮಿಟಿಯ ಈ ಮೀಟಿಂಗಿನಲ್ಲಿ ಪಾಸಾದ ಠರಾವುಗಳ ಪೈಕಿ ರಾಜಕೀಯ ಕೊಲೆಗಳನ್ನು ಖಂಡಿಸಿ ಮಾಡಿದ ತೀರ್ಮಾನವೇ ಬಹು ಮುಖ್ಯವಾದದ್ದಾಗಿದೆ. ಬೊಂಬಾಯಿಯ ಹಂಗಾಮಿ ಗವರ್ನರಾದ ಸರ್ ಅರ್ನೆಸ್ಟ್ ಹಾಟ್‌ಸನ್‌ರವರನ್ನು ಕೊಲ್ಲಲು ಮಾಡಿದ ಪ್ರಯತ್ನದ ಮತ್ತು ಬಂಗಾಳದ ಒಬ್ಬ ಜಡ್ಜರಾದ ಮಿ. ಗಾರ್ಲಿಕ್‌ರವರನ್ನು ಕೊಲೆ ಮಾಡಿದರ ವಿಷಯ ಈ ಮೊದಲೇ ಟೀಕಿಸಿದ್ದೆವು. ಕಮಿಟಿಯವರು ಇವೆರಡು ಕೃತ್ಯಗಳಿಗೆ ವಿಷಾದಿಸಿ, ರಾಜಕೀಯ ಕೊಲೆಗಳನ್ನೆಲ್ಲಾ ಖಂಡಿಸಿದಲ್ಲದೆ ಇಂಥಾ ಖೂನಿಗಳೆಲ್ಲಾ ದೇಶದ ಅಭಿವೃದ್ಧಿಗೆ ಅಡ್ಡಿ ಬರುವುದರಿಂದ ಅವುಗಳಿಗೆ ಯಾರೂ ಉತ್ತೇಜನ ಕೊಡಬಾರದೆಂತ ದೇಶದವರನ್ನು ಎಚ್ಚರಿಸಿ, ಕಾಂಗ್ರೆಸ್ ಸಂಸ್ಥೆಗಳೆಲ್ಲಾ ಇಂಥಾ ಹಿಂಸಾತ್ಮಕ ಕೃತ್ಯಗಳನ್ನು ಮಾಡದಂತೆ ಪ್ರಚಾರ ಕೆಲಸ ನಡಿಸಬೇಕೆಂತಲೂ, ರಾಷ್ಟ್ರೀಯ ಪತ್ರಿಕೆಗಳು ಈ ಕೆಲಸಕ್ಕೆ ಸಹಾಯ ಕೊಡಬೇಕೆಂತಲೂ ವಿನಂತಿ ಮಾಡಿರುವರು. ಮಹಾತ್ಮ ಗಾಂಧಿಯವರು ಈ ಠರಾವನ್ನು ಸೂಚಿಸಿ, ಈಗ ಕೆಲವು ವರ್ಷಗಳಲ್ಲಿ ತಾನು ಮಾಡಿದ ಭಾಷಣಗಳಲೆಲ್ಲಾ ಅತಿ ದೀರ್ಘ ಭಾಷಣವನ್ನು ಎಲ್ಲರ ಮನಸ್ಸು ಕರಗುವಂತೆ ಮಾಡಿದರು. ಅಹಿಂಸಾ ತತ್ವವನ್ನು ಒಪ್ಪಿಕೊಂಡು ಅದರಂತೆ ತನ್ನ ಕಾರ್ಯಕ್ರಮಗಳನ್ನು ನಡಿಸುತ್ತಿರುವ ಕಾಂಗ್ರೆಸ್ ಸಭೆಯು ಈ ಠರಾವನ್ನು ದೊಡ್ಡ ಬಹುಮತದಿಂದ ಪಾಸು ಮಾಡಿದ್ದು ಯೋಗ್ಯವಾಗಿದೆ. ಕಾಂಗ್ರೆಸ್ ಸಭೆಯು ತನ್ನ ಕಳೆದ ಸತ್ಯಾಗ್ರಹ ಚಳವಳದಿಂದ ತನಗೆ ಅಹಿಂಸಾ ತತ್ವದ ಮೇಲಿರುವ ವಿಶ್ವಾಸವನ್ನು ಅನೇಕರ ಮನಸ್ಸು ಕರಗುವಂತೆ ಕಾರ್ಯತಃ ತೋರಿಸಿದರೂ ಕೂಡ ಸರಕಾರಿ ಪಕ್ಷದ ಕೆಲವರು ಕಾಂಗ್ರೆಸ್ಸಿಗೆ ದೇಶದ ಜನಸಮುದಾಯದ ಮೇಲಿರುವ ಶಕ್ತಿಯನ್ನು ನೋಡಿ ಸಹಿಸಲಾರದೆಯೋ ಏನೋ, ರಾಜಕೀಯ ಕೊಲೆಗಳಿಗೆ ಕಾಂಗ್ರೆಸ್ಸಿನ ಚಳವಳವೇ ಕಾರಣವೆಂದು ಹೇಳುತ್ತಿರುವರು. ಇಂಥಾದ್ದನ್ನು ಖಂಡಿಸಬೇಕೆಂದು, ಕಾಂಗ್ರೆಸ್ಸಿನ ಕಮಿಟಿ ಮೆಂಬರೊಬ್ಬರು ಸೂಚಿಸಿದ್ದಕ್ಕೆ ಇಂಥಾವುಗಳು ಕಮಿಟಿಯ ಗಣನೆಗೆ ಯೋಗ್ಯವಲ್ಲವಾದ ಕಾರಣ ಅವುಗಳನ್ನು ತುಚ್ಛೀಕರಿಸುವುದು ಉತ್ತಮವೆಂದು ತೀರ್ಮಾನಿಸಿದರು. ಎಲ್ಲಾ ತಪ್ಪುಗಳನ್ನು ಕಣ್ಣುಮುಚ್ಚಿಕೊಂಡು ಕಾರಣಗಳೇನೂ ಕೊಡದೆ ಕಾಂಗ್ರೆಸ್ಸಿನವರ ಮೇಲೆ ಹೊರಿಸುವವರಿಗೆ ತಿರಸ್ಕಾರವೇ ಉತ್ತಮ ಜವಾಬು. ಕಾಂಗ್ರೆಸ್ ಸಭೆಯು ಹಿಂಸಾತ್ಮಕ ಕೃತ್ಯಗಳಿಗೆ ಪೂರ್ತಿ ವಿರೋಧವಿದೆಯೆಂಬುವುದು ಅದರ ಕಮಿಟಿಯ ಮೇಲಿನ ತೀರ್ಮಾನದಿಂದ ವಿಷದವಾಗಿದೆ. ದೇಶದ ಅಭಿವೃದ್ಧಿಯನ್ನು ಬಯಸುವವರು ಇನ್ನಾದರೂ ಕಾಂಗ್ರೆಸ್ಸಿನ ಎಚ್ಚರಿಕೆಯನ್ನು ಮನಸ್ಸಿಗೆ ತೆಗೆದುಕೊಳ್ಳುವರಾಗಿ ಆಶಿಸುತ್ತೇವೆ.

ಈ ಕಮಿಟಿಯು ಈ ಮೊದಲು ನೇಮಿಸಿದ್ದ ರಾಷ್ಟ್ರೀಯ ಧ್ವಜ ಉಪ ಕಮಿಟಿ, ಪ್ರಾಥಮಿಕ ಹಕ್ಕುಗಳ ಉಪ ಕಮಿಟಿಗಳ ವರದಿಗಳು ಚರ್ಚಿಸಲ್ಪಟ್ಟು ಸ್ವಲ್ಪ ಬದಲಾವಣೆಗಳಿಂದ ಮಂಜೂರು ಮಾಡಲ್ಪಟ್ಟವು. ಈ ಮೊದಲು ಇದ್ದ ಧ್ವಜದಲ್ಲಿ ಕೆಂಪು ಬಣ್ಣದ ಬದಲು ಕೇಸರಿ ಬಣ್ಣವನ್ನು ಹಾಕಿ ಮಧ್ಯದಲ್ಲಿರುವ ಬಿಳುಪಿನ ಮೇಲೆ ನೀಲ ಬಣ್ಣದ ಚರಕದ ನಕ್ಷೆ ಇರುವ ಮೂರು ಬಣ್ಣದ ಧ್ವಜವನ್ನೇ ಉಪಯೋಗಿಸಬೇಕೆಂದೂ, ಈ ಬಣ್ಣಗಳು ಕೋಮುಗಳ ಪ್ರತಿನಿಧಿತ್ವದ ಗುರುತುಗಳಾಗಿರದೆ ಸಾತ್ವಿಕ ಗುಣಗಳ ಚಿನ್ಹೆಗಳಾಗಿರಬೇಕೆಂದೂ ಮಾಡಿದ ತೀರ್ಮಾನವು ಈ ಮೊದಲಿನ ರಾಷ್ಟ್ರೀಯ ಧ್ವಜದ ಮೇಲಿದ್ದ ತಪ್ಪು ಭಾವನೆಗಳನ್ನು ಹೋಗಲಾಡಿಸಿಯಾವೆಂದು ನಂಬುತ್ತೇವೆ. ಅಲ್ಲದೆ ಈ ಆಗೋಸ್ತು ತಾ. 30ನ್ನು ಅಖಿಲ ಭಾರತ ರಾಷ್ಟ್ರೀಯ ಧ್ವಜ ದಿನವೆಂದು ಹೊಸ ಧ್ವಜಾಭಿವಂದನೆಯ ಮೂಲಕ ಎಲ್ಲಾ ಕಡೆಗಳಲ್ಲೂ ಆಚರಿಸಬೇಕೆಂದೂ ನಿಶ್ಚಯಿಸಿರುವರು. ಲಂಡನ್ ಕಾಂಗ್ರೆಸ್ ಕಮಿಟಿಯು ಕಾಂಗ್ರೆಸ್ ಸಭೆಯ ಧ್ಯೇಯಕ್ಕೆ ವಿರೋಧವಾಗಿ ವರ್ತಿಸುತ್ತಿರುವುದರಿಂದ ಕಾಂಗ್ರೆಸಿಗೆ ಅದರ ಸಂಬಂಧವು ವಜಮಾಡಲ್ಪಟ್ಟಿತು. ಶಾಖೆಗಳು ಮಧ್ಯವರ್ತಿ ಸಂಸ್ಥೆಯ ತತ್ವವನ್ನು ಅನುಸರಿಸಿ ನಡೆಯದೆ ಹೋದರೆ ಅವುಗಳ ಸಂಬಂಧವನ್ನು ಕತ್ತರಿಸಬೇಕಾದದ್ದು ಅವಶ್ಯವೆ.

ರಿಟೈಯರಾದ ಮುನಸೀಫರು.

ಶ್ರೀಯುತ ಕೊರವಂಡ ಮುತ್ತಣ್ಣ ಬ್ಯಾರಿಸ್ಟರ್ ಎಟ್ ಲಾ ರವರು ಈ ತಾ. 13ರಲ್ಲಿ ಮುನಸೀಫ್ ಕೆಲಸದಿಂದ ನಿವೃತ್ತರಾದರೆಂದು ತಿಳಿಯ ಬರುತ್ತದೆ. ಇವರು ಇಂಗ್ಲೆಂಡಿನಲ್ಲಿ ಬಾರ್ ಎಟ್ ಲಾ ಪಾಸಾಗಿ ಬಂದ ಸ್ವಲ್ಪ ಸಮಯದಲ್ಲಿಯೇ ಮುನಸೀಫ್ ಉದ್ಯೋಗವನ್ನು ಹಂಗಾಮಿಯಾಗಿ ನೋಡುವ ಅನುಕೂಲವು ದೊರೆಯಿತು. ಕೆಲವು ಸಮಯದನಂತರ ಆ ಹುದ್ದೆಯಲ್ಲಿ ಖಾಯಂ ಮಾಡಲ್ಪಟ್ಟರು. ಇವರು ಈ ಹುದ್ದೆಯಲ್ಲೇ ಸುಮಾರು 23 ವರ್ಷ ಸರ್ವಿಸು ಮಾಡಿರುವರು ಇವರು ಒಂದೇ ಕಡೆ ಅಂದರೆ ವೀರಾಜಪೇಟೆಯಲ್ಲಿಯೇ ಒಂದೇ ಉದ್ಯೋಗದಲ್ಲಿ ಇಷ್ಟು ದೀರ್ಘ ಕಾಲ ಇದ್ದರೂ ಕೂಡ ಇವರ ನ್ಯಾಯ ತೀರ್ಪುಗಳಿಂದ ಜನರಿಗೆ ಅತೃಪ್ತಿಯೇನೂ ಉಂಟಾಗಿರಲಿಲ್ಲ. ಇವರು ತೃಪ್ತಿಕರವಾಗಿ ಕೆಲಸ ಮಾಡಿದ್ದರೂ ಕೂಡ ಇವರಿಗೆ ಸಲ್ಲಬೇಕಾಗಿದ್ದ ಪ್ರಮೋಶನ್ ದೊರೆಯದೆ ಎರಡು ಸಾರಿ ನಿರಾಶಿತರಾದರು. ರಾ. ಸಾ. ಹೆಚ್. ಚನ್ನಯ್ಯನವರು ಸಬ್‌ಜಡ್ಜಿ ಪದವಿಯಿಂದ ನಿವೃತ್ತರಾದಾಗ ಇವರಿಗೆ ಆ ಪದವಿಯು ದೊರೆಯದೇ ಹೋಗಿತು. ಆದರೆ ಸರ್ಕಾರದವರು ಕೊಡಗಿನ ಹೊರಗೆ ಆಯುರು ವೃತ್ತಿಯನ್ನು ಮಾಡುತ್ತಿದ್ದ ಮಿ. ಎ. ಬಿ. ಕಾರ್ಯಪ್ಪ ಬಾರ್ ಎಟ್ ಲಾ ರವರನ್ನು ಸಬ್‌ಜಡ್ಜ್ ಪದವಿಗೆ ನೇಮಿಸಿ ಬಿಟ್ಟರು. ಈ ಮೊದಲೇ ಕೊಡಗಿನ ಸರ್ಕಾರದ ಉದ್ಯೋಗದಲ್ಲಿದ್ದುಕೊಂಡು ಅಭಿವೃದ್ಧಿಯನ್ನು ಆಶಿಸುತ್ತಿದ್ದ ಮಿ ಮುತ್ತಣ್ಣನವರಿಗೆ ಇದು ಉತ್ತೇಜನ ಕೊಟ್ಟಂತಾಗಲಿಲ್ಲ. ಆದರೂ ಅವರು ತಾಳ್ಮೆಯಿಂದ ತನ್ನ ಕರ್ತವ್ಯವನ್ನು ಮಾಡುತ್ತಾ ಬಂದು 1929ರಲ್ಲಿ ಇನ್ನೊಂದ ಸಂದರ್ಭ ಒದಗಿತು. ಆ ವರ್ಷ ಮಿ. ಎ. ಬಿ ಕಾರ್ಯಪ್ಪನವರು ಉದ್ಯೋಗದಿಂದ ನಿವೃತ್ತರಾದರು ಆಗಲಾದರೂ ಮಿ. ಮುತ್ತಣ್ಣನವರಿಗೆ ಪ್ರಮೋಶನ್ ದೊರೆಯುವದೆಂದು ಅವರು ಮಾತ್ರವಲ್ಲ, ದೇಶದ ಜನರೂ ನಂಬಿದ್ದರು. ಆದರೆ ಎಲ್ಲಾ ವಿಧದಲ್ಲೂ ಯೋಗ್ಯರಾಗಿದ್ದ ಅವರನ್ನು ಬಿಟ್ಟು ಸರಕಾರದವರು ಬೇರೊಬ್ಬ ಹೊಸಬರನ್ನು ನೇಮಿಸಿಬಿಟ್ಟರು. ಇದರಿಂದ ಮಿ. ಮುತ್ತಣ್ಣನವರಿಗೆ ಎಷ್ಟು ದೊಡ್ಡ ಅನ್ಯಾಯವಾಯಿತೆಂದು ಆಗ್ಗೆ ವಿವರವಾಗಿ ಟೀಕಿಸಿದ್ದೆವು ಈ ಅನ್ಯಾಯವು ಮಿ. ಮುತ್ತಣ್ಣನವರ ಮನಸ್ಸಿಗೆ ತುಂಬಾ ನೋವನ್ನುಂಟು ಮಾಡಿ ಅವರಿಗೆ ಮನಶಾಂತಿ ಇಲ್ಲದಂತೆಯೂ, ಅವರ ಆರೋಗ್ಯ ಕೆಡುವಂತೆಯೂ ಮಾಡಿತೆಂದರೆ ಅತಿಶಯೋಕ್ತಿಯಾಗಲಾರದು. ಈ ನಿರಾಶೆಯಿಂದ ಅನಾರೋಗ್ಯರಾದ ಮಿ. ಮುತ್ತಣ್ಣನವರು ದೀರ್ಘ ರಜೆ ತೆಗೆದುಕೊಂಡರು. ಈ ರಜೆಯ ವಿಶ್ರಾಂತಿಯಲ್ಲೂ ಕೂಡ ಅಧಿಕಾರಿಗಳಿಂದ ತನಗುಂಟಾದ ಅನ್ಯಾಯದಿಂದ ಶಾಂತಿಯನ್ನೂ, ಆರೋಗ್ಯವನ್ನು ಪಡೆಯಲಾರದೆಯೋ ಏನೋ ಪುನಹ ಉದ್ಯೋಗಕ್ಕೆ ಬರಲಾರದೆ ಹೋದರೆಂದರೆ ತಪ್ಪಾಗಲಾರದು

ಉದ್ಯೋಗದಿಂದ ನಿವೃತ್ತರಾದ ಇವರು ಇನ್ನಾದರೂ ಶಾಂತ ಮನಸ್ಕರಾಗಿ, ತಾನು ಸಂಪಾದಿಸಿರುವ ಅನುಭವವನ್ನೂ, ಜ್ಞಾನವನ್ನೂ ಜನ ಸಮುದಾಯದ ಅಭಿವೃದ್ಧಿಗೂ, ದೇಶದ ಏಳಿಗೆಗೂ ಉಪಯೋಗಿಸಿಯಾರೆಂತ ಆಶಿಸುತ್ತೇವೆ. ಐಶ್ವರ್ಯವಂತರೂ, ವಿದ್ಯಾವಂತರೂ ಆದ ಇವರಿಗೆ ದೇಶದ ಪ್ರಗತಿಯನ್ನು ನಿರ್ಧರಿಸುವ ಈ ಬಿಕ್ಕಟ್ಟಿನ ಸಮಯದಲ್ಲಿ ಸಾರ್ವಜನಿಕ ಕೆಲಸಗಳಿಗೆ ಸಹಾಯ ಮಾಡಲು ತುಂಬಾ ಅವಕಾಶವಿದೆ. ಇವರು ಈ ಉತ್ತಮವಾದ ಅವಕಾಶವನ್ನು ಕಳಕೊಳ್ಳಲಿಕ್ಕಿಲ್ಲವಾಗಿ ನಂಬುತ್ತೇವೆ.

ಅಸ್ಪೃಶ್ಯರ ಸೇವೆ.

(ಅಹಮದಾಬಾದಿನಲ್ಲಿ ಸರ್ ಚುನಿಲಾಲ್ ಮಾಧವಲಾಲ್ ಮತ್ತು ಇವರ ತಾಯಿಯವರು ಸೇರಿ ತಮ್ಮ ಕುಟುಂಬದ ದೇವಾಲಯವನ್ನು ಅಸ್ಪೃಶ್ಯರೆನ್ನಿಸಿಕೊಂಡವರ ಪ್ರವೇಶಕ್ಕೆ ಬಿಟ್ಟುಕೊಟ್ಟಾಗ ಮಹಾತ್ಮ ಗಾಂಧಿಯವರು ಮಾಡಿದ ಭಾಷಣ. ಯಂ. ಇ.)

"ಅಸ್ಪೃಶ್ಯ"ರೆನಿಸಿಕೊಂಡವರ ಸೇವೆಯು ನನ್ನ ಭಾಗಕ್ಕೆ ಯಾವ ತರದ ರಾಜಕೀಯ ಕೆಲಸಕ್ಕಿಂತಲೂ ಕಡಿಮೆ ಪ್ರಾಮುಖ್ಯತೆಯದಲ್ಲ. ಸ್ವಲ್ಪ ಹೊತ್ತಿಗೆ ಮುಂಚೆ ಮಿಶನರಿ ಸ್ನೇಹಿತರೊಬ್ಬರು ಈ ತರದ ಭೇದ ಮಾಡಲು ಯತ್ನಿಸಿದಾಗ ನಾನು ಅವರನ್ನು ಖಂಡಿಸಬೇಕಾಯಿತು. ನನ್ನ ಸಮಾಜ ಸುಧಾರಣೆ ಕೆಲಸವು ನನ್ನ ರಾಜಕೀಯ ಕೆಲಸಕ್ಕಿಂತ ಕಡಿಮೆ ಇಲ್ಲವೆಂತಲೂ, ರಾಜಕೀಯ ಕೆಲಸಕ್ಕೆ ಸಮಾಜ ಸುಧಾರಣೆಯ ಕೆಲಸವು ಅಧೀನವಾಗಿಲ್ಲವೆಂತಲೂ ಅವರಿಗೆ ತಿಳಿಸಿದೆ. ರಾಜಕೀಯ ಕೆಲಸವಿಲ್ಲದೆ ಸಮಾಜ ಸುಧಾರಣೆ ಕೆಲಸವು ಕೆಲವು ಮಟ್ಟಿಗಾದರೂ ಸಾಧ್ಯವಿಲ್ಲವೆಂತ ನನಗೆ ಗೊತ್ತಾ... ನು ಸಮಾಜ ಸೇವೆಗೆ ಅವಶ್ಯವಿರುವಷ್ಟು ಮಾತ್ರ ... ಕೆಲಸಕ್ಕೆ ಕೈಹಾಕಿದ್ದೇನೆ. ಆದ್ದರಿಂದ ಸಮಾಜ ... ಯು ಅಥವಾ ಈ ತರದ ಆತ್ಮಶುದ್ಧಿಯ ಕೆಲಸವು ... ಜಕೀಯ ಕೆಲಸಕ್ಕಿಂತ ನೂರು ಮಡಿ ಹೆಚ್ಚು ಪ್ರಿಯ...

ಹೆಚ್ಚು ಕಮ್ಮಿ ಕೊಡಗಿನಲ್ಲಿಯ ಪ್ರತಿಯೊಂದು [illegible]ದಲ್ಲಿಯೂ ಅನೇಕ ದೇವಸ್ಥಾನಗಳು ಇದ್ದು ಅವುಗಳಲ್ಲಿ ವರ್ಷಂಪ್ರತಿಯೂ ಹಬ್ಬ ನಡಿಸುವುದಕ್ಕೋಸ್ಕರ ಗ್ರಾಮವಾಸಿಗಳು ವಿಪರೀತ ತೆರಿಗೆ ಕೊಡುವವರಾಗಿರುತ್ತಾರೆ. ಕೆಲವು ಊರುಗಳಲ್ಲಿ ಒಂದೊಂದು ಕುಟುಂಬದವರು ತಾವು ಸರ್ಕಾರಕ್ಕೆ ಕಂದಾಯ ಕೊಡುವುದಕ್ಕಿಂತಲೂ ಹೆಚ್ಚು ಊರಿಗೆ [illegible]ಗೆ ಕೊಡುತ್ತಾರೆ. ಮತ್ತು ಕೊಡಗಿನ ಹೆಚ್ಚಿನ [illegible]ಲ್ಲಿ ಕೈಲು ಪೊಳಿಯತ್ತ್ ಮತ್ತು ಹುತ್ತರಿ ಹಬ್ಬಗಳಿ[illegible] [illegible] ಖರ್ಚು ಮಾಡುತ್ತಾರೆ. ಅದರಲ್ಲೂ ಹುತ್ತರಿ[illegible] [illegible] ದಿವಸಗಳ ವರೆಗೆ ಎಲ್ಲಾ ಕೆಲಸಗಳನ್ನೂ ಬಿಟ್ಟು [illegible] ಮನೆ ಹಾಳುಮಾಡಿಕೊಂಡು ಕಾಲಕ್ಷೇಪ ಮಾಡುತ್ತಾರೆ. ಈ ಹುತ್ತರಿ ಹಬ್ಬದ ದೆಸೆಯಿಂದ ಅನೇಕ ಜನರು ಬಂದ[illegible] ವಾರ ಕಳೆದು ನ್ಯಾಯವಾದ ಬೆಲೆ ದೊರಕುವ ಅವರ ವಸ್ತುಗಳನ್ನು ವ್ಯಾಪಾರಿಗಳಿಗೆ ಅರ್ಧಕರ್ಧ ಕ್ರಯಕ್ಕೆ ಕೊಟ್ಟುಬಿಡುತ್ತಾರೆ. ಇವೆಲ್ಲವೂ ಕುಟುಂಬಗಳು ಒಂದಾಗಿದ್ದುಕೊಂಡು (Patriarchal system) ಪ್ರತಿ ಕುಟುಂಬವೂ ಚಿಕ್ಕದೊಂದು ಸರಕಾರದಂತೆ ನಡೆಯುತ್ತಿದ್ದ ಸಮಯದಲ್ಲಿ ಸರಿ[illegible]. ಆದರೆ ಈಗ ಒಂದು ಕುಟುಂಬದ ಆಸ್ತಿಗೆ ಅನೇಕ [illegible] ದಾರ್ ಒಬ್ಬ ಮನುಷ್ಯನಿಗೆ ಅವನ ಅನೇಕ ತಾಪತ್ರಯಗಳ[illegible] ಮನ ಕೊಡಬೇಕಾದ ಈ ಸಮಯದಲ್ಲಿ ಆ ಕಾಲದ ಪದ್ಧತಿಗಳನ್ನು ಇಟ್ಟುಕೊಳ್ಳುವುದು ಸರಿಯಾದ್ದೇ?

ಇವುಗಳೆಲ್ಲದಕ್ಕೂ ನಾವೇ ಸಂಪೂರ್ಣ [illegible] [illegible] ಕೊಡವ [illegible] ಅವುಗಳಲ್ಲಿ [illegible] [illegible] ದೇಶದಲ್ಲಿಯ ಮುಂದಾಳುಗಳು ಗಮನ ಕೊಡ[illegible] [illegible] ಪೂರಕ ವಿಚಾರದ ನಾವು ಸ್ವರಾಜ್ಯಕ್ಕೆ [illegible] [illegible] ನ್ಯಾಯವೇ. [illegible] ಸ್ವರಾಜ್ಯವು [illegible] [illegible] ಜನರ [illegible] ಅಭಿವೃದ್ಧಿಯಾಗುವುದೂ [illegible] ಆ ಸಮಯದ ವರೆಗೆ ನಮ್ಮ ಇಂತಹ ಕುಂದು [illegible] [illegible] ನಾವು ಹೋಗಲಾಡಿಸಿಕೊಂಡರೇ ನಾವೂ, [illegible] ದೇಶವೂ ಮತ್ತಷ್ಟು ಮುಂದರಿಯುವುದಲ್ಲವೇ?

[ನಕೇಸ

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕರ್ತರು ಜವಾಬ್ದಾರರಲ್ಲ. ಸಂ |

ಭೂಭ್ರಾಂತಿ

ಸಿಬ್ಬಂದಿ ಬೋಳತೆ—ಏನು ಹೋಯ್ತು!

ಅಯ್ಯಾ,

ಈ ಶಿರೋನಾಮದಿಂದ ಮೇ '[illegible]' [illegible] ತಳಿದ ವಾರ ಪ್ರಕಟಿಸಿದ ಬಾತ್ಮಿಯನ್ನು ಓದಿದ ನನಗೆ [illegible] ನಗೆ ಬಂತು. ಹಾಗೆಯೇ ಪಲವು ವಾಚಕರಿಗೂ [illegible] ಮುದೆಂದು ತೋರುತ್ತದೆ. [illegible]—ಅವರು [illegible] [illegible] ಕೊಟ್ಟ ಶಿರೋನಾಮವನ್ನು ದೃಢೀಕರಿಸಲೋ [illegible] ಅವರಲ್ಲಿ ಬಹು ಹೋದ್ಯದ ಅಭಿಪ್ರಾಯಗಳನ್ನು [illegible] ವರು [illegible] ಪ್ರಥಮದಲ್ಲೇ [illegible] [illegible] ರೆಂದು ತೋರಿಸಲಿಕ್ಕಾಗಿಯೋ [illegible] [illegible] [illegible] ವಾಕ್ಯಗಳನ್ನು (ಇವುಗಳನ್ನು [illegible] [illegible] [illegible] ಅರಿಯಬಾರದು) ಅಪ್ಪ ಸಂಗತಿಯ [illegible] ಕುರಿತು ಪತ್ರಿಕೆಯಲ್ಲಿ ಪ್ರಕಟಿಸಲು ಒದೆದ ಬಾತ್ಮಿಯಲ್ಲಿ[illegible] ದು ಹಾಕಿರುವುದು ಹೋದ್ಯವಲ್ಲವೇ? ಅದು [illegible]

"ಸಿಬ್ಬಂದಿ ಬೋಳತೆಯು ಬಡವರಿಗೆ ಹೆಚ್ಚು ಬಡತನವನ್ನು, ಐಶ್ವರ್ಯವಂತರಿಗೆ ಅಧಿಕ ಲಾಭವನ್ನೂ ಉಂಟುಮಾಡುವುದಲ್ಲ. [illegible]"

ಎಂದು ಮುಂತಾಗಿ ನ್ಯಾಯವಾದ ಅಭಿಪ್ರಾಯವನ್ನು ಸೂಚಿಸಿ, ಕೂಡಲೆ "ಸಬ್ ಜಡ್ಜಿಯವರಿಗೆ ಡಿ. & ಸೆ. ಜಡ್ಜಿ ಕೆಲಸ ದೊರಕುವುದೋ, ಸ. ಅ. ಇ ರವರಿಗೆ ಅ. ಇ. ಕೆಲಸ ಸಿಕ್ಕುವುದೋ ಎಂಬೀ ಮೊದಲಾದ ಗಾಬರಿಯಿಂದ [illegible] [illegible] ಜನರನ್ನು ಸರಕಾರವನ್ನು ಮೋಸಗೊಳಿಸುವು[illegible] [illegible] ನ್ಯಾಯ?" ಎಂಬ ನಿರ್ದಿಷ್ಟ [illegible]ಗಳಿಗೆ [illegible] ಕೊಡುವ ಅಂದರೆ 'ಐಶ್ವರ್ಯವಂತರಿಗೆ ಅಧಿಕ ಲಾಭವನ್ನು ಉಂಟುಮಾಡುವ' [illegible] ಮಾಡಿದ್ದು ಹೋದ್ಯವಲ್ಲವೇ?

ನಂತರ "ಮೇಲಿನ ಅಧಿಕಾರಿಯಕ್ಕೆ ಬರುತ್ತಿರುವ ಕೆಲವರು ಸಿಬ್ಬಂದಿ ಬೋಳತೆಯಲ್ಲಿ ಖರ್ಚು ವೆಚ್ಚವನ್ನು ತೋರಿಸದೆ ಯೇ ಪುಷ್ಟೀಕರಿಸಿರುವರು" ಎಂದು ಬರೆದದ್ದಾರೆ. ಅವರೆ "ಪಿ. ಡಬ್ಲ್ಯು. ಡಿ" ಯವರಿಗೆ ಕಡೆದಲ್ಲಿ ಹಾಗೆ ಸಿಬ್ಬಂದಿ ಬೋಳತೆಯಾಗುತ್ತದೆ ಎಂಬುದನ್ನು ಯೋಚಿಸಲಿಕ್ಕೆ ಆಗದೆ, 'ಅವರು [illegible] ದಲ್ಲಿ ಅರ್ಹರು ಆಗಿಲ್ಲವೋ, ಅದು ಅವರಿಗೆ ಅಪ್ಪನ ಮುಂದಿನ ಯುವಕರಿಗೆ ಬಂದು ದಾರಿಯಾಗಲಿಲ್ಲವೇ?" ಎಂ

ಮುಂತಾಗಿ' ಉಂಡಿಯೋನೋ ಕುಂಡಿಭಟ್ಟ' ಎಂದು ಕೇಳ್ದ 'ಮುಂದಾಗು ಮೂರು ವೇಳೆ' ಎಂಬಂತೆ ಸಿಬ್ಬಂದಿ ಶೋಧನೆಯನ್ನು ಕುರಿತು ಬರೆಯುವಾಗ್ಯೆ 'ಮುಂದಿನ ಯುವಕರಿಗೆ ಒಂದು ದಾರಿಯನ್ನು ಸೂಚಿಸಿರುವುದು ಹೋದ್ಯವಲ್ಲವೆ ? ಉದ್ಯೋಗಕ್ಕೆ ಅರ್ಹರಾದವರು ಹಲವರಿರುವರು; ಯಾ ಉದ್ಯೋಗವೂ ಯಾರಿಗೂ ಜನ್ಮವಲ್ಲ ಮತ್ತು ಮುಂದಿನ ಯುವಕರಿಗೆ ಒಂದಲ್ಲ ಹೆಚ್ಚಿನ ದಾರಿಗಳಾಗುತ್ತವೆ ಎಂಬ ಕಾರಣದಿಂದ ಅರ್ಹರಾದವರಿಗೆಲ್ಲಾ ದೊಡ್ಡ ದೊಡ್ಡ ಸಂಬಳದ ಉದ್ಯೋಗಗಳನ್ನು ನಿರ್ಮಿಸಬಹುದಲ್ಲವೇ ? ಸಬ್ ಜಡ್ಜರು ಮತ್ತು ಸ. ಅ. ಇ. ಯವರು ಮಾತ್ರ ದೊಡ್ಡ ಹುದ್ದೆಗೆ ಅರ್ಹರಾದವರೇ ? ಇವರಿಗಿಂತ ಹೆಚ್ಚಿನ ಅರ್ಹತೆಯುಳ್ಳ ಬೇರೆಯವರು ಇರುವಾಗ್ಯೆ ಅವರಿಗೆಲ್ಲಾ ದೊಡ್ಡ ಉದ್ಯೋಗಗಳನ್ನು ಮಾಡಿಕೊಡದೇಕಲ್ಲವೇ ? ಇದೇಕೆನ್ನುತ್ತಾರೋ "ಪಿ. ಯಂ. ಸಿ." ಯವರು ಸಿಬ್ಬಂದಿ ಶೋಧನೆಯೆಂದು !

ಆಡಳಿತ ಅಧಿಕಾರದಿಂದ ನ್ಯಾಯಾಧಿಕಾರವನ್ನು ಬೇರ್ಪಡಿಸುವ ವಿಷಯ "ಕೊಡಗು" ಪತ್ರಿಕೆಯೂ, ಜನಪ್ರತಿನಿಧಿ ಸಂಘದವರೂ ಬಹಿರಂಗವಾಗಿ ಹೇಳಿದ್ದು ನಿಜ. ಅವರು ಈಗಲೂ ಅದೇ ಅಭಿಪ್ರಾಯದಲ್ಲಿರುವರೆಂಬುದನ್ನು ಸಂಶಯಪಡಲು ಕಾರಣವಿಲ್ಲ. ಸಬ್ ಜಡ್ಜರನ್ನು ಡಿಸ್ಟ್ರಿಕ್ಟ್ ಜಡ್ಜರಾಗಿ ಮಾಡಿದರೆ, ಆಡಳಿತ ಅಧಿಕಾರದಿಂದ ನ್ಯಾಯಾಧಿಕಾರವನ್ನು ಬೇರ್ಪಡಿಸಿದಂತೆ ಆಗುವುದಿಲ್ಲವೆಂತಲೂ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಮತ್ತು ಸಬ್ ಜಡ್ಜರ ಹುದ್ದೆಗಳನ್ನು ತೆಗೆದರೆ ಡಿಸ್ಟ್ರಿಕ್ಟ್ ಜಡ್ಜ್, ಮುನಸೀಫ್, ಅಸಿಸ್ಟೆಂಟ್ ಕಮಿಷನರ್ ಮತ್ತು ಟ್ರೆಜರಿ ಆಫೀಸರುಗಳ ನಾಲ್ಕು ಹುದ್ದೆಗಳು ಹೊಸವು ಆಗಬೇಕಾಗಿರುವುದರಿಂದ ಖರ್ಚು ಹೆಚ್ಚಾಗುವುದಲ್ಲದೆ, ಡಿಸ್ಟ್ರಿಕ್ಟ್ ಜಡ್ಜರಿಗೆ ಸಾಕಷ್ಟು ಕೆಲಸವಿಲ್ಲದಾಗುವುದು ಮಾತ್ರವಲ್ಲ ಜನರಿಗೆ ತುಂಬಾ ಕಷ್ಟ ಉಂಟಾಗುವುದೆಂದು ಮುಂತಾಗಿ ಕಳೆದ ಜೂನ್ ತಾ. 12ರ 'ಕೊಡಗು' ಪತ್ರಿಕೆಯಲ್ಲಿ ಅಗ್ರಲೇಖನ ಬರೆದದ್ದನ್ನು "ಪಿ. ಯಂ. ಸಿ." ಯವರು ನೋಡಲಿಲ್ಲವೆಂದು ಕಾಣುತ್ತದೆ. ನೋಡಿದ್ದರೂ ಮರೆತಂತೆ ನಟಿಸುತ್ತಾರೆಂದು ಕಾಣುತ್ತೆ. ಇಲ್ಲವಾದರೆ ಆಡಳಿತ ಅಧಿಕಾರದಿಂದ ನ್ಯಾಯಾಧಿಕಾರವನ್ನು ಬೇರ್ಪಡಿಸುವುದು ಎಂಬುದರ ಅರ್ಥವನ್ನು ಅವರು ತಿಳಿದುಕೊಂಡಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಯಾಕೆಂದರೆ ಸಬ್ ಜಡ್ಜರಿಗೆ ಕೆಲಸ ಕಡಿಮೆ ಮಾಡಿ, ಸಂಬಳ ಹೆಚ್ಚಿಸಿ ಅವರನ್ನು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿ ಮಾಡುವುದರಿಂದಲೂ, ಸ. ಅ. ಇನ್‌ಸ್ಪೆಕ್ಟರಿಗೆ ಅದೇ ಕೆಲಸವನ್ನು ಮಾಡುತ್ತಾ ಸಂಬಳವನ್ನು ಮಾತ್ರ ಹೆಚ್ಚಿಸಲು ಅ. ಇನ್‌ಸ್ಪೆಕ್ಟರ್ ಎಂಬ ಹೆಸರು ಕೊಡುವುದರಿಂದಲೂ ಆಡಳಿತ ಅಧಿಕಾರದಿಂದ ನ್ಯಾಯಾಧಿಕಾರವನ್ನು ಬೇರ್ಪಡಿಸಿದಂತೆ ಆಗುವುದಿಲ್ಲವೆಂದು ಯಾರಿಗೆ ತಾನೇ ವೇದ್ಯವಾಗದೆ ಇರುವುದು !

'ಪಿ. ಯಂ. ಸಿ.'' ಯವರು ಕುರಿಯ ಚರ್ಮವನ್ನು ಹೊದ್ದುಕೊಂಡ ತೋಳನಂತೆ, ಬಡ ಗುಮಾಸ್ತರ, ಫಾರೆಸ್ಟರುಗಳ ಮತ್ತು ಗಾರ್ಡುಗಳ ಹಿತಚಿಂತಕರಂತೆ ನಟಿಸಿಕೊಂಡು ದೊಡ್ಡ ಉದ್ಯೋಗಸ್ಥರಾದ ಸಬ್ ಜಡ್ಜ್ ಮತ್ತು ಸ. ಅ. ಇನ್‌ಸ್ಪೆಕ್ಟರಿಗೆ ಸಂಬಳ ಹೆಚ್ಚಿಸಿಕೊಡಲು ಮಾಡುತ್ತಿರುವ ಪ್ರಯತ್ನಗಳನ್ನು ಯಾರು ತಾನೇ ಅರಿತುಕೊಳ್ಳದೆ ಇರುವರು ? ಕೆಳ ದರ್ಜೆಯ ಉದ್ಯೋಗಸ್ಥರನ್ನು ತೆಗೆಯಲೂ ಬಾರದು, ದೊಡ್ಡ ಉದ್ಯೋಗಸ್ಥರಿಗೆ ಸಂಬಳ ಹೆಚ್ಚಿಸಲೂ ಬೇಕೆಂದರೆ ಸಿಬ್ಬಂದಿ ಶೋಧನೆಯು ಹೇಗಾಗುವುದೋ ದೇವರೇ ಬಲ್ಲ !

"ಸೊಕ್ಕುದೃಷ್ಟಿ"

ಡಿ. ಪಿ. ಡಬ್ಲ್ಯು. ಇಲಾಖೆಯವರ ವರ್ತನೆ.

ಅಯ್ಯಾ,

ಖಾಲಿ ಬಿದ್ದಿರುವ ಪೋಲೀಸು ಉದ್ಯೋಗಗಳನ್ನು ಕೊಡವರಿಗೆ ಕೊಡಬೇಕೆಂದೂ, ಕೊಡಗೇತರರಿಗೆ ಕೊಡಬೇಕೆಂದೂ ವಾದವು ನಡೆಯುತ್ತಿರುವಾಗ್ಯೆ, ಡಿ. ಪಿ. ಡಬ್ಲ್ಯು. ಇಲಾಖೆಯಲ್ಲಿ ಖಾಲಿ ಬೀಳುವ ಸ್ಥಳಗಳು ಕೊಡಗಿನ ನಿವಾಸಿಗಳಾದ ಕೊಡವರಿಗೂ, ಕೊಡಗೇತರರಿಗೂ ಸಿಕ್ಕದೆ ಹೊರ ಪ್ರಾಂತ್ಯದವರಿಗೆ ಹೋಗುತ್ತಿರುವುದಕ್ಕೆ ಯಾರೂ ಗಮನಿಸದೆ ಇರುವುದು ತುಂಬಾ ವ್ಯಸನಕರ. ಕೊಡಗಿನ ಸರ್ಕಾರಿ ಹುದ್ದೆಗಳನ್ನು ಕೊಡವರಿಗೇ ಆಗಲೀ, ಕೊಡಗೇತರರಿಗೇ ಆಗಲಿ ಕೊಡಬೇಕೆಂದು ಚರ್ಚಿಸುವುದರಲ್ಲಿ ನ್ಯಾಯವಿದೆ. ಯಾಕೆಂದರೆ ಅವರೆಲ್ಲರೂ ಇಲ್ಲಿಯ ಖಾಯಂ ನಿವಾಸಿಗಳಾಗಿ ಈ ದೇಶದ ಹಿತಚಿಂತನೆಗಳಲ್ಲಿ ಭಾಗಿಗಳಾಗಿರುವರು. ಅವರು ಒಂದು ಮನೆಯಲ್ಲಿ ಅಣ್ಣ ತಮ್ಮಂದಿಯರಂತಿರುವರು. ಇವರಲ್ಲಿ ಯಾರಿಗೆ ಸಿಕ್ಕಿದರೂ ನಮ್ಮ ದೇಶದವರಿಗೆ ಸಿಕ್ಕಿದಂತಾಗುವುದು.

ಆದರೆ ಇಲ್ಲಿಯ ನಿವಾಸಿಗಳ ಹಕ್ಕುಗಳನ್ನೆಲ್ಲಾ ಮೂಲೆಗೊತ್ತಿ, ಪರ ಪ್ರಾಂತ್ಯದವರಿಗೆ ಚಿಕ್ಕ ಸಂಬಳದ ಗುಮಾಸ್ತೆಯಿಂದ ಇಲಾಖೆಯ ಮೇಲಧಿಕಾರಿಯ ವರೆಗೂ ಅವಕಾಶ ಮಾಡಿಕೊಡುತ್ತಿರುವುದು ನಮ್ಮ ಡಿ. ಪಿ. ಡಬ್ಲ್ಯು. ಇಲಾಖೆಯೆಂದರೆ ತಪ್ಪಾಗಲಾರದು. ಇತ್ತೀಚೆಗೆ ಆ ಇಲಾಖೆಯಲ್ಲಿ ಉಂಟಾಗುತ್ತಿರುವ ಖಾಲಿ ಸ್ಥಳಗಳಿಗೆ ಇಲ್ಲಿಯವರು ಅವಶ್ಯವಿರುವ ಅರ್ಹತೆಗಳಿದ್ದು ಅರ್ಜಿ ಹಾಕಿದರೂ ಕೂಡ ಪರ ಪ್ರಾಂತ್ಯದವರನ್ನು ನೇಮಿಸುತ್ತಿರುವರೆಂದು ತಿಳಿಯಬರುತ್ತದೆ. ಇದು ನಿಜವಾದರೆ, ದೇಶದವರಿಗೆ ಇದೊಂದು ಅನ್ಯಾಯವೆಂದು ಹೇಳಬೇಕಲ್ಲವೇ ? ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿ ಮಾಡಿದ ಮೇಲೆ ಇಲ್ಲಿಯವರಿಗೆ ಹೊರಗಿನ ಪ್ರಾಂತ್ಯಗಳಲ್ಲಿ ಉದ್ಯೋಗ ದೊರೆಯುವುದು ದುರ್ಲಭವಾಗಿದೆ. ಪ್ರಾಂತೀಯ ಸರ್ಕಾರಗಳು ಆಯಾಯ ಸ್ಥಳೀಕರಿಗೇ ಉತ್ತೇಜನ ಕೊಡುತ್ತಿರುವವು ಹೀಗಿರುವಲ್ಲಿ ಇಲ್ಲಿಯ ಸರ್ಕಾರಿ ಇಲಾಖೆಯವರೂ ಇಲ್ಲಿಯವರಿಗೇನೇ ಪ್ರಥಮ ಅವಕಾಶವನ್ನು ಕೊಡತಕ್ಕದ್ದು. ಇಲ್ಲಿ ಆಯಾಯ ಉದ್ಯೋಗಕ್ಕೆ ಬೇಕಾದ ಯೋಗ್ಯತೆಗಳಿರುವವರು ದೊರೆಯದೆ ಹೋದರೆ ಮಾತ್ರ ಹೊರಗಿನವರನ್ನು ತರಬಹುದಷ್ಟೆ. ಅದರಲ್ಲೂ ಸರ್ಕಾರಿ ಉದ್ಯೋಗಕ್ಕೆ ಕಮ್ಮಿ ಅರ್ಹತೆಯಾದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಉದ್ಯೋಗವಿಲ್ಲದೆ ಅಲೆದಾಡುತ್ತಿರುವ ಕೊಡಗಿನ ಯುವಕರು ಅನೇಕರು ಇರುವಾಗ್ಯೆ ಗುಮಾಸ್ತರ ಕೆಲಸವನ್ನೂ ಕೂಡ ಪರ ಪ್ರಾಂತ್ಯದವರಿಗೆ ಕೊಡುತ್ತಿರುವುದು ಎಂದೂ ಸರಿಯಲ್ಲ. ಈ ವಿಷಯಕ್ಕೆ ಎಲ್ಲಾ ಇಲಾಖೆಯವರು ಗಮನ ಕೊಡಬೇಕಾದದ್ದೂ, ಡಿ. ಪಿ. ಡಬ್ಲ್ಯು. ಇಲಾಖೆಯವರು ಹೆಚ್ಚಿನ ನಿಗವಿಡಬೇಕಾಗಿ ಸೂಚಿಸುತ್ತೇನೆ. ಸ್ಥಳೀಯ ಸರ್ಕಾರದ ಮೇಲಧಿಕಾರಿಗಳೂ ಈ ವಿಷಯ ಎಲ್ಲಾ ಇಲಾಖೆಗಳ ಮುಖ್ಯ ಅಧಿಕಾರಿಗಳಿಗೆ ತಕ್ಕ ತಿಳುವಳಿಕೆ ಕೊಡುವರಾಗಿ ಆಶಿಸುತ್ತೇನೆ

"ಬಂಧು"

ಸಿಬ್ಬಂದಿ ಶೋಧನೆ—ಎಲ್ಲಿ ?

ಅಯ್ಯಾ,

ಈಗಾಗಲೇ ಅನೇಕ ವಾಚಕರು ಮತ್ತು ಪತ್ರಿಕೆಗಳ ಸಂಪಾದಕರು ನಾನಾ ವಿಧವಾಗಿ ಸಿಬ್ಬಂದಿ ಶೋಧನೆಯ ವಿಷಯ ಚರ್ಚಿಸಿರುವ ಸಂಗತಿ ನಾವೆಲ್ಲರು ನೋಡಿದ್ದೇವೆ. ಇವೆಲ್ಲವೂ ಧರ್ಮ ಮಾರ್ಗದಲ್ಲಿ ರೈತರಿಗೆ ಅನುಗುಣವಾಗಿದೆಯೇ ನೋಡೋಣ.

ಹಳೇ ಸಮಾನೆಯಲ್ಲಿದ್ದ ಕೆಲಸಗಳು ತಾನಾಗಿಯೋ ಖಾಲಿ ಬಿದ್ದ ಸ್ಥಳಗಳಿಗೆ ಸರ್ಕಾರದವರು ಪುನಹ ಭರ್ತಿ ಮಾಡುತ್ತಿರು ... ಸಿಬ್ಬಂದಿ ಶೋಧನೆಯ ಸುಧಾರಣೆಯಲ್ಲು ಅನೇಕ ಮಹನೀಯ ... ಅನೇಕ ವಿಧವನ್ನು ಅವರವರ ಅಭಿಪ್ರಾಯಗಳನ್ನು ... ಕಮಿಟಿಯವರು ಮತ್ತು ಸರ್ಕಾರದವರು ... ಬಂದಿರುವುದಿಲ್ಲ. ಈ ಬಗ್ಗೆ ಬರುವುದರಲ್ಲಿ ಈ ಕೆಳಗಿನ ಸೂಚನೆಗಳನ್ನು ಮುಂದಿಡುವರೆ ?

1. ಇ ಪೀರಿಯಲ್ ಆಫೀಸರ ಬದಲಿಗೆ ಓವರ್‌ಸೀಸ್ ಬತ್ಯ ಇಲ್ಲದವರನ್ನು ನೇಮಕ ಮಾಡಿದ ಪಕ್ಷ ಸುಮಾರು 40,000 ರೂಪಾಯಿಗಳು ಉಳಿತಾಯವಾಗುವುದು.

2. ಆಯಾಯ ಇಲಾಖೆಯ ಉದ್ಯೋಗಸ್ಥರು ತಿರುಗುವ ಬತ್ಯವನ್ನು ತಿಂಗಳು ಒಂದಕ ರೂ. 100/—ಮೇರೆ ನಿರಕು ಮಾಡಿದರೆ ಅವಶ್ಯವಿದ್ದಷ್ಟು ತಿರುಗಿ 15ರಿಂದ 20 ಸಾವಿರ ರೂ. ವರೆಗೆ ಉಳಿತಾಯವಾಗುವುದು.

ಈ ವಿಷಯ ಸಿಬ್ಬಂದಿಶೋಧನೆಯ ಕಮಿಟಿ ಮೆಂಬರುಗಳು 10 ವರ್ಷದಿಂದೀಚೆಗೆ ಆಯಾಯ ಇಲಾಖೆಯ ಗಜೆಟೆಡ್ ಉದ್ಯೋಗಸ್ಥರು ಸಂಪಾದಿಸಿದ ಭತ್ಯವನ್ನೂ, ಹಿಂದಿನವರ ಕೆಲಸವನ್ನೂ ಭತ್ಯವನ್ನೂ ತಾರತಮ್ಯದಲ್ಲಿ ನೋಡಿದರೆ ಬಡ ರೈತರ ಕಂದಾಯದ ಹಣವನ್ನು ಹ್ಯಾಗೆ ಸರ್ಕಾರದವರು ವ್ಯಯ ಮಾಡುತ್ತಿರುವರೆಂದು ವೇದ್ಯವಾಗುವುದು. ಸರ್ಕಾರದವರು ಈ ಬಾಬಿನ ಖರ್ಚಿನಲ್ಲು ಸರಕಾರಕ್ಕೆ 10 ಯಾ 12ರಂತೆ ಶೋಧನೆ ಮಾಡುವುದು ಯಾವ ಬಾಬಿನಲ್ಲೂ ನ್ಯಾಯವಲ್ಲ. ಮೇಲೆ ಸೂಚಿಸಿದ ಮೇರೆ ತಿಂಗಳಿಗೆ ರೂ. 100/—ಮೇರೆ ನಿರಕು ಭತ್ಯವು ಧಾರಾಳವಾಗುವುದೆಂದು ಕಠೋರವಾಗಿ ಹೇಳಬಹುದು.

3. ಸರ್ಕಾರದ ಆಡಳಿತದಲ್ಲು ಒಂದರ ಮೇಲೊಂದು ಅನೇಕ ಇಲಾಖೆಗಳಲ್ಲು ಅನಾವಶ್ಯವಾಗಿ ಉಪ್ಪುವಾರಿ ಮಾಡುವ ಉದ್ಯೋಗಗಳನ್ನು (Duplcation of work) ಎತ್ತಬಹುದು.

ಈ ಕೆಲವು ಧರ್ಮ ಸೂಚನೆಗಳನ್ನು ಅನುಸರಿಸಿದರೆ ಹಲವು ಗುಮಾಸ್ತರು (Clerks) ಗಳ, ಫಾರೆಸ್ಟ್ ಗಾರ್ಡುಗಳ ಮತ್ತು ಅವರನ್ನು ನಂಬಿದವರ ಕುಟುಂಬಗಳ ಹೊಟ್ಟೆಗೆ ಹೊಡೆಯುವ ಸಂದರ್ಭಗಳನ್ನು ಕಮ್ಮಿ ಮಾಡಬಹುದು. ಸಿಬ್ಬಂದಿ ಶೋಧನೆ ಎಲ್ಲಿ, ಹ್ಯಾಗೆ ನಡೆಯುತ್ತೆ, ನೋಡೋಣ.

ಪಿ. ಯಂ. ಸಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಶ್ಯಾರಿಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟನ್‌ಪೆನ್‌ಗಳು.

ರೆಲ್ಸ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ. 3	0	0
,, ,, ಬಿಗ್ ಬ್ಯಾರಲ್ ಪೆನ್ 1ಕ್ಕೆ	3	3	0
,, ,, ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
,, ,, ಬಿಗ್ ಬ್ಯಾರಲ್ ಸ್ಕ್ರೂ ಕ್ಯಾಪ್ ಮಾಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0
,, ,, ಮಾಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0
,, ,, ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ ಬ್ರವುನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0
ಬಿಗ್ ಸ್ವಾಟ್ ಫೌಂಟನ್‌ಪೆನ್ 1ಕ್ಕೆ	10	8	0
ಪಾರ್ಕರ್ ಪೆನ್ 1ಕ್ಕೆ	14 6 0, & 20	10	0
...ಟರ್ ಫೌಂಟನ್‌ಪೆನ್ 1ಕ್ಕೆ	3 8 0, & 3	12	
...ನ್ ಫೌಂಟನ್ ಪೆನ್ 1ಕ್ಕೆ	6 4 0, & 6	12	0
...ಟರ್ಮನ್ ಫೌಂಟನ್ ಪೆನ್ 1ಕ್ಕೆ	8 2 0, & 8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ಲಿಗಲಿಯೂ ಅಲಾರಾಂ ಟೈಂಪೀಸ 1ಕ್ಕೆ 6 9 0, & 6	15	0	
ಲಿಗಲಿಯೂ ಸಣ್ಣಸೈಜಿನ ಅಲಾರಾಂ ಟೈಂಪೀಸ್ 1ಕ್ಕೆ	7	2	0
ಲಿಗಲಿಯೂ ಅಲಾರಾಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10	0
ಬಿಗ್‌ಬೆನ್ ಅಲಾರಾಂ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಅಲಾರಾಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13	4	0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್ 1ಕ್ಕೆ	5	10	0
ಜಪೋ ನಮೂನೆಯಲ್ಲಿ ಎಚ್ ಹಾರ್ಡ್ ಕಂಪನಿಯ ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮುಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 & 12	8	0	



ಇಲ್ಲಿ ನಮೂದಿಸಿದ ನಮೂನೆ ಅಂದವಾದ ಟೇಬಲ್ ಕ್ಲಾಕ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಬೇರೆ.

ಮನಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

54—5

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50 000
ವಸೂಲಾದ ಶೇರ್ ಮೊಬಲಗು	—	20,800
ಜಮೆಯಾದ ಠೇವಣಾತಿ	—	2,50 301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಜಾಸ್ತಿಯಾಗಿ ಸಾಲಕೊಡಲ್ಪಡುವುದು.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ದ ರಿಜಿಸ್ಟ್ರಾರ್ ಕೋ ಆಪರೇಟಿವ್ ಸೊಸೈಟೀಸ್ ರವರು ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು ರಾವ್ ಬಹದ್ದೂರ್,

ಟ್ರೆಜರರ್, ಮನೆಯಪ್ಪಂಡ ಬೆಳ್ಯಪ್ಪನವರು

ಸೆಕ್ರೆಟರಿ, ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ಮಡಿಕೇರಿ 1—7—1931

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52—3 ಗಿರಿಗಾಂವ್, ಮುಂಬಯಿ.

ನೋಟೀಸು.

ಈ ಸಲ ಮಹಾಸಭೆಯು "ಕೊಡಗು" ಪತ್ರಿಕೆಯ ಮಾರಾಟ ... ಒಪ್ಪಿಕೊಂಡದ್ದರಿಂದ, ... ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳನ್ನು ಕೊಡಲಾಗಿದೆ. ... ಸಬ್ ಏಜೆಂಟರುಗಳಿಗೆ ... ಮೇಲೆ ರಶೀತಿ ಪುಸ್ತಕಗಳು ... ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
ಮೆ. ಚಾರಿಮಂಡ ಮಾದಯ್ಯನವರು,

ಸರಕಾರಿ ಛಾಪು ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—... ಲಕ್ಷ ... ರೂ. 181 ಪಾಲಿಸಿಗಳ

ಜೀವ ನಿಧಿಯ ಒಟ್ಟು ಉತ್ಪತ್ತಿ—... ಲಕ್ಷ ರೂ.

ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—1281 ಒಳಗೆ 81 ಲಕ್ಷ ರೂ.

ಪಾಲಿಸಿದಾರರಿಗೆ ಸಾಲ—6013 ಒಳಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ... 1 78,372 ಒಳಗೆ 38 ಕೋಟಿ ರೂ.

ಪಾಲಿಸಿ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22 ... ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ

ಈ ದೊಡ್ಡ ಇಂಡಿಯನ್ ಕಂಪೆನಿಯ ... ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ... ಜೀನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಉತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಆದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ಸ್ಪಷ್ಟವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಕಂಪೆನಿಯ ಈ ... ಬ್ರಾಂಚುಗಳಲ್ಲಿ ವಿಚಾರಿಸಬಹುದು

ಆಗ್ರ	ಕಲ್ಕತ್ತಾ	ಕೌಲಾಲಂಪೂರು	...	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಾಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	...	ಮಂಡಲ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	...	ವಿಶಾಖಪಟ್ಟ [52—2

ಮಲೇರಿಯಾನ

ಕೊಡಗಿನ ... ಮಲೇರಿಯಾನವೇ ... ಗುಣಪಡಿಸಿ ... ಕ್ರಯ ಬಾಟ್ಲಿಗೆ 1—8—0 ... ಡಜನ್ 16—8—0.

ಕಂಪಾಂಡು ಸಿರಪ್ಪು ಬ್ಲಡ್.

... ಕಂಪಾಂಡು ಸಿರಪ್ಪು ಬ್ಲಡ್ ಎಂಬದನ್ನು ... ಕ್ರಯ ಬಾಟ್ಲಿಗೆ ರೂ. -8-0.

ಕಂಪಾಂಡು ಸಿರಪ್ಪು ... ಆರೋಗ್ಯ ಕೊಡುವದು ಕ್ರಯ ಬಾಟ್ಲಿಗೆ ರೂ. 1—8—0.

ಕಂಪಾಂಡು ಸಿರಪ್ಪು ... ಕ್ರಯ ಬಾಟ್ಲಿಗೆ ರೂ. 3-8—0.

ಕಂಪಾಂಡು ಸಿರಪ್ಪು ... ಆರೋಗ್ಯ ಕೊಡುವದು ಕ್ರಯ ಬಾಟ್ಲಿಗೆ ರೂ. 3—8—0.

ಶುದ್ಧ ಟಿಕ್ಚರುಗಳೂ ಹೋಮ್ಯೋಪಥಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

... ನಮ್ಮ ಆರೋಗ್ಯ ಭಾಗ್ಯದ ... ನ್ಯಾಯವಾದ ...

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

52—41 **Malariana Co.,** Hampankatta No 14 Mangalore

ವಿಳಾಸ —ಮಲೇರಿಯಾನ ಕಂಪೆನಿ, ಹಂಪನಕಟ್ಟೆ, ... 14 ಮಂಗಳೂರು ಪೋಸ್ಟ್

ದಕ್ಷಿಣ ಕೊಡಗಿಗೆ—ಮೆ. ... ಅಚ್ಚಯ್ಯನವರು
ವಿರಾಜಪೇಟೆ—ಮೆ. ... ಅಪ್ಪಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮ. ... ಸೋಮಯ್ಯನವರ
(ಖಾದಿಭಂಡಾರ)
...
ಶ್ರೀಮಂಗಲ—ಮೆ. ...
... —ಮ. ...
... —ಮೆ. ...
... —ಮ. ...
,, ಮ. ... ಬೋಪಯ್ಯನವರು
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ... ಅಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ... ಅಯ್ಯನವರು.

ಸೂಚನೆ.—ಪ್ರಿಂಟು ಇದ ರಶೀತಿ ಪುಸ್ತಕದಲ್ಲಿ ... ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ... ಉಪಯೋಗಕರವಾದ ಅಮಿತ ... ಉಪನಿಬಂಧನೆಗಳೂ, ... ಬುಕ್ಕುಗಳೂ, ಎಲ್ಲಾ ಸಹ ... ಭಂಡಾರಗಳ ... ಫಾರಮುಗಳೂ, ... ಫಾರಮುಗಳೂ, ... ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ... ಫಾರಮುಗಳೂ, ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ... ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ... ವಿ. ಪಿ. ಮೂಲಕ ಕಳುಹಿಸಲಾಗುವುದು

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

Printed & published by P. I. Bellhappa at "Kodagu" Press Mercara for "Kodagu" Ltd.

ಕೊಡಗು.

ಸರ್ವೇಷಾಂ ಭೂತದಯಯಾ ವಿದ್ಯಾನೀತಿ ಪ್ರಯುಕ್ತ್ಯಾ / ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ॥

ವಾರ್ಷಿಕ ಚಂದಾ ರೂ. ೩—೮—೦

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಸ್ತಕ ೧೧ | ಮಡಿಕೇರಿ, ಸನ್ ೧೯೩೧ನೇ ಇಸವಿ ಆಗೊಸ್ಟ್ ತಾರೀಕ್ ೨೧ ನೇ ಶುಕ್ರವಾರ. | ಸಂಚಿಕೆ ೧೨

Telegrams: ...

Telephone: 3135

Subramaniar Jeweller

DIAMOND MERCHANT, GOLD & SILVER SMITH.

Deals in all:—
SPORTS CUPS in all prices
MEADALS in up-to-date patterns
CASKETS in elegant styles

Nos. 2 & 3, ... st.
TRUVATESSWAR ...
Post Box ..., Triplicane ...
MADRAS.

Deals in all:—
GOLD ... JEWELS ...
...
GOLD ... of all patterns
SILVER WARE in latest style

52-40



GOOLAM ... DY
Largest Importers of Firearms and Ammunition
Cheapest priced firm in India.
210 Abdul Rehman Street, BOMBAY

52-21



52-15.

ಮಂಗಳೂರು.

ಬಾಲಾರ್ಕಮಧು.



ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.

52-32

ಕೊಡಗು.

ಸನ್ ೧೯೩೧ನೇ ಇಸವಿ

ಅಗೊಸ್ತು ತಾ. ೨೧ನೇ ಶುಕ್ರವಾರ.

ದುಂಡು ಮೇಜು ಪರಿಷತ್ತಿಗೆ ಬಹಿಷ್ಕಾರ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಒಬ್ಬನೇ ಪ್ರತಿನಿಧಿಯಾದ ಮಹಾತ್ಮ ಗಾಂಧಿಯವರು ದುಂಡು ಮೇಜು ಪರಿಷತ್ತಿಗೆ ಹೋಗುವರೆಂದು ಲಂಡನಿನಲ್ಲಿ ಅವರ ಸತ್ಕಾರಕ್ಕೆ ಬೇಕಾದ ಏರ್ಪಾಡುಗಳು ನಡೆದಿದ್ದುವು. ಇಂಗ್ಲೆಂಡ್ ಜನರು ಮಹಾತ್ಮರ ಆಗಮನವನ್ನು ಎದುರು ನೋಡುತ್ತಾ ಇದ್ದರು. ಪ್ರಪಂಚದ ಜನಾಂಗಗಳೆಲ್ಲವೂ ಮಹಾತ್ಮರು ಸದರಿ ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳುವದನ್ನು ನೋಡಲು ಕುತೂಹಲದಿಂದ ಕಾಯುತ್ತಿದ್ದರು. 'ಮುಲ್ತಾನ' ಹಡಗವು ಮಹಾತ್ಮರನ್ನು ತಾ. ೧೫ರಲ್ಲಿ ಲಂಡನಿಗೆ ಒಯ್ಯಲು ಆಶೆಯಿಂದ ತಯಾರಾಗಿ ನಿಂತಿತ್ತು. ಆದರೆ ದೇವರ ಇಚ್ಛೆಯು ಬೇರೆಯಾಗಿತ್ತು. ಮಹಾತ್ಮರು ಲಂಡನಿಗೆ ಹೋಗಬಾರದೆಂದು ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಈ ತಾ 13ರಲ್ಲಿ ತೀರ್ಮಾನಿಸಿರುವರು. ಹಡಗು ಹೊರಡಲು ಒಂದು ದಿವಸಕ್ಕೆ ಮುಂಚೆ ಮಾಡಿದ ಈ ತೀರ್ಮಾನವು ಜನರಿಗೆ ದುಃಖವನ್ನೂ ಮತ್ತು ಆಶ್ಚರ್ಯವನ್ನೂ ಉಂಟುಮಾಡಿದೆ.

ಈಗ ಕೆಲವು ದಿವಸಗಳಿಂದ ಮಹಾತ್ಮರು ಲಂಡನಿಗೆ ಹೋಗುವದನ್ನು ಖಚಿತ ನಿಶ್ಚಯ ಮಾಡಲಿಲ್ಲವೆಂದು ಹೇಳುತ್ತಿದ್ದರೂ ಕೂಡ ಡೆಲ್ಲಿ ಒಪ್ಪಂದದ ಶರತುಗಳನ್ನು ಪಾಲಿಸಲು ಕಾಂಗ್ರೆಸ್ಸಿನವರೂ ಹಾಗೆಯೇ ಸರಕಾರದವರೂ ವಿಶ್ವ ಪ್ರಯತ್ನ ಮಾಡುತ್ತಿದ್ದೇವೆಂದು ಎರಡು ಕಡೆಗಳ ಪ್ರಮುಖರುಗಳು ಘೋಷಿಸುತ್ತಿದ್ದ ಕಾರಣ ಮಹಾತ್ಮರು ಲಂಡನಿಗೆ ಹೋಗಲು ತಕ್ಕ ಅವಕಾಶವು ಖಂಡಿತವಾಗಿ ಕಲ್ಪಿಸಲ್ಪಡುವ ದೆಂದು ಎಲ್ಲರೂ ನಂಬಿದ್ದರು. ಆದುದರಿಂದ ವರ್ಕಿಂಗ್ ಕಮಿಟಿಯ ತೀರ್ಮಾನವು ಜನರಲ್ಲಿ ಆಶ್ಚರ್ಯವನ್ನುಂಟುಮಾಡಿದೆ. ಕಳೆದ ಮಾರ್ಚು ತಿಂಗಳ ಆರಂಭದಿಂದ ಸರಕಾರದವರು ಮತ್ತು ದೇಶದವರುಗಳು ಅನುಭವಿಸಿದ ಕಷ್ಟ ನಷ್ಟಗಳನ್ನು ಚೆನ್ನಾಗಿ ಅರಿತಿದ್ದ ಜನರು ಕಡೆಯದಾಗಿ ಎಲ್ಲವನ್ನೂ ರಾಜಿಯಿಂದ ತೀರ್ಮಾನಿಸಿಕೊಳ್ಳುವ ಉದ್ದೇಶದಿಂದ ಡೆಲ್ಲಿಯ ಒಪ್ಪಂದವನ್ನು ಮಾಡಿ ಅದರ ಮೇರೆಗೆ ಸರಕಾರದವರೂ, ಕಾಂಗ್ರೆಸಿನವರೂ ದುಂಡು ಮೇಜು ಪರಿಷತ್ತಿನಲ್ಲಿ ಸೇರಿ ಭಾರತದ ಶಾಂತಿಯನ್ನು ಸ್ಥಾಪಿಸಬಹುದೆಂದು ನಂಬಲಾಗಿತ್ತು. ಆ ಕಾರಣ ಕಾಂಗ್ರೆಸಿನವರು ಸದರಿ ಪರಿಷತ್ತಿಗೆ ಬಹಿಷ್ಕಾರ ಹಾಕಿದ ತೀರ್ಮಾನವು ಜನರಲ್ಲಿ ವ್ಯಸನವನ್ನು ಉಂಟು ಮಾಡಿರುವದಾಗಿದೆ.

ಈ ವ್ಯಾಕುಲ್ಯದಾಯಕ ತೀರ್ಮಾನಕ್ಕೆ ಕಾರಣ ಭೂತವಾದ ವಿಷಯಗಳನ್ನು ಪರಿಶೀಲಿಸಿದಲ್ಲಿ ಎಲ್ಲವನ್ನು ಶಾಂತ ರೀತಿಯಿಂದಲೇ ತೀರ್ಮಾನಿಸಬೇಕೆಂದು ಒಬ್ಬ ಕೂಡ ಬಯಸುವ ಮಹಾತ್ಮರು ಲಂಡನಿಗೆ ಹೋಗ ಬಾರದ ಪ್ರಸಂಗ ಬಂದದ್ದರಲ್ಲಿ ಸಂಶಯವಿಲ್ಲ. ಕಾಂಗ್ರೆಸಿನ ಸಮಸ್ಯೆಯು ತೀರ್ಮಾನವಾಗದ ವಿನಹ ತಾನು ದುಂಡು ಮೇಜು ಪರಿಷತ್ತಿಗೆ ಹೋಗುವುದಿಲ್ಲವೆಂದು ಹೇಳಿದ್ದ ಮಹಾತ್ಮರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ತೀರ್ಮಾನಕ್ಕೆ ಒಪ್ಪಿ ಸದರಿ ಸಮಸ್ಯೆಯು ಬಗೆಹರಿಯದಿದ್ದರೂ ಲಂಡನಿಗೆ ಹೋಗಲು ಸಿದ್ಧರಿದ್ದರು. ಸರಕಾರಿ ಉದ್ಯೋಗಸ್ಥರು ಡೆಲ್ಲಿ ಒಪ್ಪಂದದ ಶರತುಗಳನ್ನು ಉಲ್ಲಂಘಿಸಿ ವರ್ತಿಸಿದ ಸಂದರ್ಭಗಳು ಹಲವು ಇದ್ದರೂ ಕಾಂಗ್ರೆಸಿನವರು ಹಾಗೆ ಮಾಡಬಾರದೆಂದು ಮಹಾತ್ಮರು ಅದಕ್ಕೆ ಮಾಡಿಕೊಳ್ಳುತ್ತಿದ್ದರು. ಚಿಕ್ಕ ವಿಷಯಗಳಲ್ಲೂ ಕೂಡ ಮಹಾತ್ಮರು ಉದ್ಯೋಗಸ್ಥರನ್ನು ಕಂಡು ಮಾತಾಡಿ ಒಪ್ಪಂದವನ್ನು ಪಾಲಿಸಲು ಹಿಂದೆಗೆಯಲಿಲ್ಲ. ಆದರೆ ಮಹಾತ್ಮರು ಇಂಗ್ಲೆಂಡಿಗೆ ಹೋಗ ಬಾರದೆಂದು ಅವರಿಂದಲೊಳಗೆ ಅರಿಸುತ್ತಿದ್ದ ಸಿವಿಲ್ ಸರ್ವಿಸಿನ ಉದ್ಯೋಗಸ್ಥರು ಕೆಲವರು ಇದ್ದಾರೆಂದೇ ಕಂಡು ಬರುತ್ತದೆ. ಮಹಾತ್ಮರು ದುಂಡು ಮೇಜು ಪರಿಷತ್ತಿಗೆ ಹೋದರೆ ಹಿಂದೂ ದೇಶದ ಆಡಳಿತವು ಹಿಂದೀಯರ ಕೈಗೆ ಸಿಕ್ಕುವುದರಿಂದ ತಮ್ಮ ಅಧಿಕಾರವು ಕಡಿಮೆಯಾಗುವುದೆಂಬ ಭಯದಿಂದ ಅವರು ಮಹಾತ್ಮರ ದಾರಿಗೆ ಮುಳ್ಳು ಹಾಕಲು ಯತ್ನಿಸುತ್ತಿದ್ದಾರೆಂದು ಹೇಳದೆ ತಪ್ಪುಗಿರಲಾರದು.

ಡೆಲ್ಲಿ ಶರತುಗಳನ್ನು ಆ ಪ್ರಕಾರ ನಡೆಯುವುದರಲ್ಲಿಯೂ, ಶರತುಗಳನ್ನು ಅರ್ಥಮಾಡುವುದರಲ್ಲಿಯೂ ಸರಕಾರದವರಿಗೂ, ಕಾಂಗ್ರೆಸಿನ ಭಿನ್ನಾಭಿಪ್ರಾಯಗಳು ಹುಟ್ಟಿದ ಕಾರಣ ಅವುಗಳನ್ನು ತೀರ್ಮಾನಿಸಲು ನಿಷ್ಪಕ್ಷಪಾತವಾದ ಒಂದು ಸಮಿತಿಯನ್ನು ನೇಮಿಸುವುದು ಒಳ್ಳೆಯದೆಂದು ಮಹಾತ್ಮ ಗಾಂಧಿಯವರು ಸರಕಾರದವರಿಗೆ ಸೂಚಿಸಿದರು. ಹೀಗೆ ಸಮಿತಿಯನ್ನು ನೇಮಿಸಿದರೆ ಸರಕಾರವು ತೀರ್ಪಿನಲ್ಲಿ ಜನಸಾಮಾನ್ಯ ಕಾಂಗ್ರೆಸ್ಸಿ- ನನ್ನು ಜಾರಿಗೆ ತರುವ ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟಂತಾಗುವುದರಿಂದ ಇದಕ್ಕೆ ಒಪ್ಪಲಾಗುವುದಿಲ್ಲವೆಂದು ಬಿಟ್ಟರು. ಬಾರ್ಡೋಲಿಯಲ್ಲಿ ರೈತರು ಕಂದಾಯ ಕೊಡದೆ ಮುಷ್ಕರ ಹಿಡಿದಿದ್ದರು. ರಾಜಿ ಶರತನ್ನು ನಡಿಸುವ ಬಗ್ಗೆ ಮಹಾತ್ಮರೂ, ಬೇರೆ ಕಾಂಗ್ರೆಸ್ ಕೆಲಸಗಾರರೂ ಅಲ್ಲಿಯ ರೈತರಿಗೆ ಸಲಹೆ ಕೊಟ್ಟು ಬಾಕಿ ಇದ್ದ ಸುಮಾರು 20 ಲಕ್ಷ ರೂ ಯಲ್ಲಿ 19 ಲಕ್ಷ ರೂಪಾಯಿಯನ್ನು ವಸೂಲಿ ಮಾಡಲು ಸಹಾಯ ಮಾಡಿದರು. ಇದರಿಂದ ಅಲ್ಲಿಯ ಅಧಿಕಾರಿಗಳು ತೃಪ್ತರಾಗದೆ, ಬಾಕಿಯು ಅಲ್ಪ ಮೊಬಲಗನ್ನೂ ಸಲ್ಲಿಸುವಂತೆ ರೈತರನ್ನು ಬಲಾತ್ಕರಿಸಿದರು. ರೈತರು ಸಾಲ ಮಾಡದೆ ಕೊಡಲು ಸಾಧ್ಯವಿದ್ದಷ್ಟು ಮಾತ್ರ ಕಂದಾಯ ವಸೂಲಿ ಮಾಡಬೇಕಲ್ಲದೆ, ಹೆಚ್ಚಿಗೆ ವಸೂಲು ಮಾಡಲು ಅವರನ್ನು ಬಲಾತ್ಕಾರ ಮಾಡತಕ್ಕದ್ದೆಂಬ ರಾಜಿ ಶರತ್ತಿಗೆ ಇದು ವಿರೋಧವಾಯಿತು. ರೈತರಿಗೆ ಹೆಚ್ಚಿಗೆ ಕೊಡಲು ಸಾಧ್ಯವಿದೆಯೇ, ಇಲ್ಲವೋ ಎಂಬದನ್ನು ತೀರ್ಮಾನಿಸುವ ಹಕ್ಕು ಸರಕಾರಿ ಅಧಿಕಾರಿಗಳಿಗಿದೆಯೆಂದು ಸರಕಾರದವರ ವಾದ. ಮಹಾತ್ಮರು ಈ ವಾದಕ್ಕೆ ಒಪ್ಪಲಿಲ್ಲ. ಸರಕಾರದವರೂ, ಕಾಂಗ್ರೆಸಿನವರೂ ಒಪ್ಪಂದಕ್ಕೆ ಬಂದಿರುವಾಗ್ಯೂ, ಸದರಿ ಒಪ್ಪಂದದ ಶರತುಗಳನ್ನು ನಡಿಸುವ ಮತ್ತು ಅವುಗಳನ್ನು ಕುರಿತು ನ್ಯಾಯ ತೀರ್ಪು ಕೊಡುವ ಅಧಿಕಾರವು ಒಂದು ಪಾರ್ಟಿ ಯಾದ ಸರಕಾರದಲ್ಲಿ ಇರತಕ್ಕದ್ದು ಎಂಬುದೇ ಮಹಾತ್ಮರ ವಾದ. ಶಾಂತಿಯಿಂದ ಬಲಾತ್ಕಾರದಿಂದ ವಸೂಲಿ ಮಾಡಿದ ಕಂದಾಯವನ್ನು ವಾಪಸು ಕೊಡಬೇಕೆಂದೂ, ಈ ಸಂಬಂಧ ವಿವಾದಗಳನ್ನು ತೀರ್ಮಾನಿಸಲು ಒಂದು ಪ್ರತ್ಯೇಕ ಕಮಿಟಿಯನ್ನು ನೇಮಿಸಬೇಕೆಂದೂ ಮಹಾತ್ಮರು ಬೊಂಬಾಯಿ ಗವರ್ನರಿಗೆ ಬರೆದರು. ಆದರೆ ಸದರಿ ಗವರ್ನರವರು ಹಾಗೆ ಮಾಡಲಾಗುವುದಿಲ್ಲವೆಂದು ಉತ್ತರ ಕೊಟ್ಟರು. ಅದೇ ವೇಳೆ ಮಹಾತ್ಮರು ವೈಸರಾಯರಿಗೆ ತಂತಿವಾರ್ತೆ ಕಳುಹಿಸಿದರು. ವೈಸರಾಯರೂ ಬೊಂಬಾಯಿ ಗವರ್ನರಿಗೆ ಒತ್ತಾಸೆಯಾಗಿಯೇ ಉತ್ತರ ಕೊಟ್ಟರು. ಆ ಕಾರಣ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ದುಂಡು ಮೇಜು ಪರಿಷತ್ತಿಗೆ ಮಹಾತ್ಮರು ಹೋಗಬಾರದೆಂದು ತೀರ್ಮಾನಿಸಿದ್ದಾಗಿದೆ.

ಕಾಂಗ್ರೆಸ್ಸಿಗೂ, ಸರಕಾರಕ್ಕೂ ಉಂಟಾಗಿರುವ ಭಿನ್ನಾಭಿಪ್ರಾಯವು ಅಲ್ಪವಾದದ್ದೆಂದೂ, ಇದಕ್ಕಾಗಿ ಮಹಾತ್ಮರು ಲಂಡನಿಗೆ ಹೋಗಲು ಬಾಕಿ ಮಾಡಿದ್ದು ವ್ಯಸನಕರವೆಂದೂ ಕೆಲವರು ಹೇಳಬಹುದು. ಆದರೆ ಇದು ಅಷ್ಟೊಂದು ಅಲ್ಪ ಸಂಗತಿಯಲ್ಲ. ಇದು ಡೆಲ್ಲಿ ಒಪ್ಪಂದದ ಒಂದು ಮುಖ್ಯ ತತ್ವವಾಗಿದೆ. ಒಪ್ಪಂದಕ್ಕೆ ಬಂದ ಎರಡು ಪಾರ್ಟಿಗಳವರೇ ಆ ಒಪ್ಪಂದದ ಶರತುಗಳನ್ನು ನಡಿಸುವುದರ ವಿಷಯದಲ್ಲಿ ಜವಾಬ್ದಾರರಾಗಿರುವುದು ಎಂದೂ ಹೊಸದಲ್ಲ. ಮಾಜಿ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಡೆಲ್ಲಿ ಒಪ್ಪಂದವನ್ನು ಮಾಡಲು ಬಹು ಶ್ರಮ ತೆಗೆದುಕೊಂಡರು. ಆದರೆ "ಕವಿಲಿಂಗ್ಡನ್ ಪ್ರಭು ಲಾರ್ಡ್‌ಗೆ ಸರಿಯಿಲ್ಲ" ಎಂಬಂತೆ ಈಗಿನ ವೈಸರಾಯರಾದ ಲಾರ್ಡ್ ವೆಲ್ಲಿಂಗ್ಡನ್‌ರವರು ಅದನ್ನು ಬಹು ಸುಲಭದಲ್ಲಿ ಮುರಿದು ಹಾಕಿಬಿಟ್ಟರು. ಮಹಾತ್ಮರು ಲಂಡನಿಗೆ ಹೋಗಬಾರದೆಂದು ಬಯಸುತ್ತಿದ್ದ ಸಿವಿಲ್ ಸರ್ವೀಸಿನವರುಗಳ ಒಳಗೆ ಇವರೂ ಒಬ್ಬರೆಂದರೆ ತಪ್ಪಾಗಲಾರದು. ಬೊಂಬಾಯಿ ಗವರ್ನರವರೇ ಸಂಧಿಯು ಮುರಿಯಲು ಮೂಲ ಕಾರಣರಾದರೂ, ವೈಸರಾಯರೂ ಅವರಿಗೆ ಒತ್ತಾಸೆ ಕೊಟ್ಟರು. ಇವರಿಬ್ಬರೂ ಒಟ್ಟು ಜವಾಬ್ದಾರಿಯನ್ನು ವಹಿಸಿಕೊಂಡಿರುವರು. ಹಿಂದೂದೇಶಕ್ಕೂ ಬ್ರಿಟನ್ನಿಗೂ ಶಾಂತಿಯಿಂದ ಒಪ್ಪಂದವಾಗಬಹುದಾದ ಪ್ರಸಂಗಕ್ಕೆ ಇವರಿಬ್ಬರೂ ಅಡ್ಡ ನಿಂತಿರುವುದು ಚರಿತ್ರೆ ಪ್ರಸಿದ್ಧವಾಗದೆ ಇರದು.

ಮಹಾತ್ಮರು ಲಂಡನಿಗೆ ಹೋಗಿದ್ದರೆ ಸರಕಾರದವರು ಹಿಂದೀಯರುಗಳು ಹೆಚ್ಚಿನ ಕಷ್ಟ ನಷ್ಟಗಳೆಲ್ಲದೆ ರಾಜಿಯನ್ನು ಮಾಡುವ ಸಂಭವವಿತ್ತೆಂದು. ಸದರಿ ದೇಶದವರೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ತೀರ್ಮಾನವು ಸಂಯಮವಾದದ್ದಲ್ಲವೆಂದು ಹೇಳಬಹುದು. ಲಂಡನಿಗೆ ಹೋಗಬೇಕೆಂಬ ಉತ್ಸಾಹವು ಮಹಾತ್ಮರಿಗೂ ತುಂಬಾ ಇದೆಯೆಂಬುದು ಅವರ ಭಾಷಣಗಳಿಂದಲೂ, ಅಂದರೆ ಹೇಳಿಕೆಗಳಿಂದಲೂ ವಿಷದವಾಗುತ್ತದೆ. ಸರಕಾರದ ಅಧಿಕಾರಿಗಳ ವರ್ತನೆಯೇ ಅವರು ಈ ತೀರ್ಮಾನಕ್ಕೆ ಬರುವಂತೆ ಮಾಡಿದ್ದಾಗಿದೆ. ನಿಷ್ಪಕ್ಷಪಾತದ ಕಮಿಟಿಯು ಬದಲು ಕಾಂಗ್ರೆಸ್ಸಿನವರಿಗೆ ಒಪ್ಪುವಂಥ ಒಬ್ಬ ಹೈಕೋರ್ಟ್ ಜಡ್ಜರನ್ನು ನೇಮಿಸಿದರೂ ಸಾಕೆಂದು ಮಹಾತ್ಮರು ಕಡೆಗೆ ಸೂಚಿಸಿರುವರು. ಇದಕ್ಕಾದರೂ ಸರಕಾರದವರು ಒಪ್ಪಬಹುದಿತ್ತು ಇದು. ಅವರು ಆತುರವಾಗಿ ಆಶ್ರಯಿಸಿಕೊಳ್ಳುತ್ತಿರುವ ಅವರ 'ಗೌರವ'ಕ್ಕೆ ಕುಂದಕ ತರಬಾರದಷ್ಟೆ!

ಮುಂದೆ ಏನಾಗುವುದೆಂದು ತಿಳಿಯಲು ಎಲ್ಲರೂ ಕುತೂಹಲರಾಗಿರುವರು. ಮೇಲಿನ ತೀರ್ಮಾನದಿಂದ ಡೆಲ್ಲಿ ಒಪ್ಪಂದವು ಅಂತ್ಯವಾಗಲಿಲ್ಲವೆಂತಲೂ, ಅದರಿಂದ ಕಾಂಗ್ರೆಸಿನವರು ಸದರಿ ಒಪ್ಪಂದದ ಮೇರೆ ನಡೆಯಬೇಕೆಂತಲೂ ವರ್ಕಿಂಗ್ ಕಮಿಟಿಯವರು ನಂತರ ಏರ್ಪಾಡು ಮಾಡಿದರು. ಅಲ್ಲದೆ ಮಹಾತ್ಮರು ವೈಸರಾಯರಿಗೆ ತನ್ನ ಪತ್ರದಲ್ಲಿ, ಸರಕಾರದವರು ತಮ್ಮ ವರ್ತನೆಯಿಂದ ಬಲಾತ್ಕರಿಸಿದ ವಿನಹ ಕಾಂಗ್ರೆಸ್ಸಿನವರು ಬೇಗನೆ ಶಾಸನಭಂಗ ಚಳವಳಿಯನ್ನು ಪ್ರಾರಂಭಿಸುವದಿಲ್ಲವೆಂತಲೂ ಬರೆದಿರುವರು. ಇದರಿಂದ ಶಾಂತಿ ಭಂಗ ಮಾಡುವ ಇಚ್ಛೆಯು ಕಾಂಗ್ರೆಸ್ಸಿನವರಿಗೆ ಸ್ವಲ್ಪವೂ ಇಲ್ಲವೆಂದು ವಿಷದವಾಗುತ್ತದೆ. ಇದರ ಸಂತರ ನಡೆಯುವ ಕಾರ್ಯದ ಜವಾಬ್ದಾರಿಯು ಸರಕಾರದ ಮೇಲೆ. ಅನಪಾಯಕರವಾದ ದೇಶೀಯರಿಗಾಗಿ ಕಾದಿರುವ ಕಾಂಗ್ರೆಸ್ ಮಹಾಸಭೆಯ ತೀರ್ಮಾನವನ್ನು ನಿಷ್ಠೆಯಿಂದ ಜನರು ತಯಾರಾಗಿರುವರೆಂಬುವದರಲ್ಲಿ ಸಂಶಯವಿಲ್ಲ.

ಸಹಾಯಕರಾಗಲು ಅವಶ್ಯಕತೆ.

(ಮಹಾತ್ಮ ಗಾಂಧಿಯವರಿಂದ)

ದೇವರು ದೊಡ್ಡವನು, ನಾವು ತೃಣ ಸಮಾನರು ಎಂದು ದೇವರಂತ ಬಾಯಿಯಿಂದ ಹೇಳುತ್ತಿರುವಾಗಲೇ ನಮ್ಮ ನಡತೆಯು ಆ ಹೇಳಿಕೆಗೆ ವಿರೋಧವಾಗಿರುತ್ತದೆ. ದೇವರು ನಮ್ಮ ಸ್ವಪ್ನವೇ ಎಂದು ಯೋಚಿಸುತ್ತಿರುವಾಗ ನಮ್ಮ ವಿಷಯ ತುಂಬಾ ಯೋಚಿಸುತ್ತೇವೆ. ಇದಕ್ಕೆ ನಮ್ಮ ಹೆಮ್ಮೆ ಕಾರಣ. ಅವರ ನಮ್ಮ ಅಸಹಾಯವನ್ನು ತಿಳಿದುಕೊಳ್ಳುವ ಶಕ್ತಿ ಬಂದಿದೆ. ಪ್ರಾಮಾಣಿಕವಾದ ಹೇಳಾಗುತ್ತಲೇ ಇದೆ. ವಿಚಾರ ಮಾಡಬೇಕು. ಮೊದಲಾಯಿಯಲ್ಲಿ ಇದರ ಅತಿ ಕಠಿಣ ಅನುಭವವಾಗಿ ಇದರಿಂದ ಎಲ್ಲಾರೂ ತುಂಬಾ ಆಲೋಚಿಸಬೇಕಾಗಿದೆ. ಎಂದರೆ ಪ್ರಾಮಾಣಿಕವಾಗಿ ಪ್ರತಿಯೊಬ್ಬರೂ ಪ್ರಾಮುಖ್ಯ ಮಾಡತಕ್ಕದು. ಪ್ರತಿಯೊಬ್ಬ ಪ್ರಾಮಾಣಿಕ ಮಾಡುವುದಕ್ಕೆ ಸಂಬಂಧ ಇಲ್ಲದೇನೂ ಇಲ್ಲ. ಎಲ್ಲಿಗಿಂತ ಗಟ್ಟಿಯಾಗಿ ಹಿಡಿದುಕೊಳ್ಳುವರೂ ಒಂದು ಹಟ್ಟಿಗೆ ಎರಡು ಹೆಚ್ಚು ಕೊಡುವುದು. 5 ಜನರ ಗುಂಪು ಕಾರ್ಯಕ್ಕೆ ಎರಡಾಗಿ 10 ಜನರ ಗುಂಪು ಕೂಡುವುದೂ, ಇಂಥ ಕೆಲಸಕ್ಕಿಂತ ಸುಲಭ ಕಾರ್ಯಗಳು ಬೇರಿಲ್ಲ. ಇದರಿಂದ ಈ ಲೋಕದಲ್ಲಿ ಏನೂ ಪ್ರಯೋಜನವಿಲ್ಲ. ಪರಲೋಕದಲ್ಲಿ ಪ್ರಯೋಜನಕಾರಿಯಾಗುವುದರ ಬದಲು ಅಂಧಪರಲೋಕವು ನರಕಕ್ಕಿಂತ ಕಠಿಣವಾಗಿರಬಹುದು.

ಹೀಗೆ ಬೆಳೆಯುತ್ತಾ ಹೋಗುವ ಕೇಡನ್ನು ತಡೆಯಲು ಏನೂ ಉಪಾಯವಿಲ್ಲವೇ? ಬಹು ಕಾಲದಿಂದ ನಡೆದು ಬಂದು ಚೆನ್ನಾಗಿ ಉಪಯೋಗಿಸಲ್ಪಟ್ಟಿರುವ ಉಪಾಯವು ಉಪವಾಸ ಮತ್ತು ಪ್ರಾರ್ಥನೆ. ಅದರ ಇವೆರಡೂ ಅಂತಃಕರಣದಿಂದ ಹೊರಡಬೇಕು. ಒಳ್ಳೇ ಒಳ್ಳೇ ಪ್ರಾರ್ಥನೆಗಳನ್ನು ಬಾಯಿಯಿಂದ ಗಿಳಿಯಂತೆ ಪಠಿಸಿದರೂ, ದೇಹವನ್ನು ಒಣ ಉಪವಾಸಕ್ಕೆ ಗುರಿಪಡಿಸಿದರೂ ಪ್ರಯೋಜನವಿಲ್ಲ, ಮಾತ್ರವಲ್ಲ ಅಪಾಯಕಾರಕವು. ನಮ್ಮ ಮನೆಯೊಳಗೆ ನಮ್ಮ ಸ್ನೇಹಿತರಂತೆ ನಮಗೆ ಹೇಗೆ ತಿಳಿದಿರುತ್ತದೋ ಹಾಗೆಯೇ ನಮ್ಮೊಳಗೆ ದೇವರು ಇರುವಂತೆ ಮನಃಪೂರ್ತಿಯಾಗಿ ತಿಳಿದಿದ್ದರೆ ಮಾತ್ರ ಪ್ರಾರ್ಥನೆ ಮತ್ತು ಉಪವಾಸದಿಂದ ಪ್ರಯೋಜನವಿದೆ. ನಮ್ಮನ್ನು ನಾವೇ ಮೋಸಗೊಳಿಸಿಕೊಂಡರೆ ಪ್ರಯೋಜನವಿಲ್ಲ.

ಜಪಾನಿನವರೊಬ್ಬರು ಮನನೊಂದು 'ಇದರಿಂದ ಧರ್ಮವು ಕುಂದಿದಾಗ್ಲೆ ನಿಂತು ಹೋಗುತ್ತೆ, ಮತ್ತು ನಮ್ಮ ಸ್ವಾತಂತ್ರ್ಯವನ್ನು ನಮ್ಮ ವ್ಯಾಪಿಸೀತು' ಎಂತ ಕೇಳಿದಾಗ ಅವರ ಮನಸ್ಸಿಗೆ ಕೆಲವರು ಅಭಿಪ್ರಾಯವನ್ನು ಸೂಚಿಸಿದರು. ಪ್ರಾಮಾಣಿಕವಾಗಿ ಉತ್ತರ ಕೊಡದಿರುವುದೇ ಇದನ್ನು ನಿಲ್ಲಿಸುವ ದಾರಿ. ಅವರು ಆಕ್ರಮಿಸಿಕೊಂಡ ವಿಚಾರಗಳಿಂದ ತಕರಾರನ್ನು ಹುಟ್ಟಿಸುವ ಜನರು ಹೊರಟು ಹೋಗಬೇಕು. ಹೀಗಿರದಿಂದ ಸತ್ಯವನ್ನು ಅಡಗಿಸಲು ಸಾಧ್ಯವಿಲ್ಲ. ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡುವವರು ಪ್ರತೀಕಾರ ಮಾಡದೆ ಕಷ್ಟವನ್ನು ಸಹಿಸಿದರೆ ನಮ್ಮ ಪ್ರಯತ್ನವಿಲ್ಲದೇನೇ ಹರಡುತ್ತದೆ. ಸತ್ಯವು ನಮ್ಮಲ್ಲಿ ಇದೆ ಎಂತ ತಿಳಿದುಕೊಳ್ಳುವುದೇ ಕಷ್ಟ. ಕಾಲವು ಬಲ್ಲುದು. ಸತ್ಯವನ್ನು ಅವಲಂಬಿಸಿದವನೆಂತ ಹೇಳುವುದು ಸುಲಭ. ತಾನು ಹೇಳುವುದೇ ಸತ್ಯವೆಂತ ಖಂಡಿತವಾಗಿ ನುಡಿಯುವುದು ಸಾಧ್ಯವಿಲ್ಲದ್ದರಿಂದ ಸಮಾಜವು ಶಾಂತ ರೀತಿಯಿಂದ ನಡೆಸಬೇಕಾದರೆ ಸಹನಾಗುಣವು ಎಷ್ಟರ ಮಟ್ಟಿಗೆ ಅವಶ್ಯವೆಂಬುದು ಸ್ಪಷ್ಟವಾಗುತ್ತದೆ. ಒಬ್ಬನ ಅಭಿಪ್ರಾಯವು ಅದಕ್ಕೆ ವಿರೋಧವಾದ ಅಭಿಪ್ರಾಯವಿರುವವರ ಕಡೆ ಇಲ್ಲದೇ ಇರುವ ಸ್ವಾತಂತ್ರ್ಯವಿಲ್ಲದಿದ್ದರೆ ಶಾಂತಿಯುತವಾದ ಜೀವನವೇ ಅಸಾಧ್ಯವಾಗುತ್ತದೆ.

ಸ್ತ್ರೀ ರಕ್ಷಣೆ ಮಾಡಿಕೊಳ್ಳುವುದಕ್ಕೆ ತರಬೇತಿ ಪಡೆಯುವುದು ನಮ್ಮ ಕಾಲದ ಫಲಿತಾಂಶವಾಗುತ್ತದೆಯೋ? ಅಹಿಂಸೆಯನ್ನು ಸಂಪೂರ್ಣವಾಗಿ ನಂಬುವವರಿಗೆ ಆತ್ಮರಕ್ಷಣೆಯು ಅಸಾಧ್ಯವೇ. ಆದರೂ ಈ ಸಂದರ್ಭದಲ್ಲಿ ನಾನು ಅಷ್ಟು ಮುಂದರಿಸಿ ಹೋಗಬೇಕಾದ್ದಿಲ್ಲ. ರಕ್ಷಣೆ ಮಾಡಿಕೊಳ್ಳದಿರುವುದೇ ಅವರಿಗೆ ಬರತಕ್ಕ ರಕ್ಷಣೆ. ಆದರೆ ಈ ಸ್ಥಿತಿಯನ್ನು ಹೊರಗಿಂದ ಪಡೆಯುವಂತೆ ಮಾಡಲು ಸಾಧ್ಯವಿರುವುದಿಲ್ಲ. ಪಡೆಯಲು ಸಾಧ್ಯವಿಲ್ಲ. ಈ ಭಾವವು ತನ್ನಲ್ಲೇ ಬೆಳೆದಿರಬೇಕು. ತನ್ನೊಳಗೆ ಎಷ್ಟರ ಮಟ್ಟಿಗೆ ಅಸಹಾಯಕರಾಗಿದ್ದೇವೆಂತ ತಿಳಿದುಕೊಂಡರೆ ಸಾಕಾಗದ ತಮ್ಮಲ್ಲಿ 'ದೇವರು ಅನಾಥ ರಕ್ಷಕ'ನೆಂತ ಒಂದು ಗಾಢ ಇದೆ. ಈಗಿನ ಅಗಾಧ ಶಕ್ತಿಯುಳ್ಳ ಅಸಹಾಯಕತೆಯನ್ನು ತಿಳಿದುಕೊಂಡು ದೇವರಿಗೆ ಬಿಡದೇ ಶರಣಾಗಿ, ಅಹಿಂಸೆಯನ್ನು ಕೈಕೊಂಡರೆ ಏನಾದರೇನಂತೆ ಮನಸ್ಸಿನಿಂದ ಪ್ರಯೋಜನವಾಗಲಾರದು. ಅದು ಶಕ್ತಿಶಾಲಿ ಹೆಣ್ಣು ಬೀದಿ ರಕ್ತ ತೋರದ ಕಗ್ಗತ್ತಲೆಯಲ್ಲಿ ಸಿಕ್ಕಿಹಾಕಿಕೊಂಡ ನಾಯಕತ್ವದ ಅಸಹಾಯರಾದ ಗಂಡಸು ಹಂಗಸರ ನಡುವೆ ಬೆಳ್ಳಿಯಂತೆ ಹೊಳೆಯುವಂತೆ ಒಬ್ಬರು ಹೆಣ್ಣಿಗೆ ಹತ್ತಿರ ಬಂದರೆ ನಾಕೆಂಟ ಜನವೂ ಹಾಡಲು ಸಾಧ್ಯವಾದದ್ದಾಗಿದೆ.

'ಯಂಗ್ ಇಂಡಿಯಾ'

ಹಿಂದೂಸ್ಥಾನೀ ಸೇವಾದಲದ ವಿಶೇಷ ಪರಿಷತ್ತಿನಲ್ಲಿ ಅಂಗೀಕರಿಸಲ್ಪಟ್ಟ ಗೊತ್ತುವಳಿಗಳು.

ಮುಂಬಯಿ (೯–೮–೧೯೩೧.)

೧. ಹಿಂದೂಸ್ಥಾನೀ ಸೇವಾದಲವನ್ನು ಕಾಂಗ್ರೆಸ್ಸಿನ ಸ್ವತಂತ್ರ ಸ್ವಯಂ ಸೇವಕ ಸಂಸ್ಥೆಯಾಗಿ ಮಾಡಬೇಕೆಂಬ ಅಖಿಲ ಭಾರತೀಯ ರಾಷ್ಟ್ರೀಯ ಮಹಾ ಸಭೆಯ ಕಾರ್ಯಕಾರೀ ಮಂಡಲದ ಗೊತ್ತುವಳಿಯನ್ನು ಹಿಂದೂಸ್ಥಾನೀ ಸೇವಾದಲದ ಈ ವಿಶೇಷ ಸಭೆಯು ಸ್ವೀಕರಿಸುತ್ತದೆ ಮತ್ತು ಈ ದೇಶದಲ್ಲಿಯ ಸೇವಾದಲದ ಸಮಸ್ತ ಸ್ವಯಂ ಸೇವಕ ಸಂಸ್ಥೆಯನ್ನು ಕಾಂಗ್ರೆಸ್ಸಿನ ವಶಕ್ಕೆ ಕೊಟ್ಟು, ಕಾಂಗ್ರೆಸ್ಸಿನ ಕಾರ್ಯಕಾರೀ ಮಂಡಲದ ರೀತಿಯಾದ ಹಿಂದೂಸ್ಥಾನೀ ಸೇವಾದಲದ ಕಾಂಗ್ರೆಸ್ ಸ್ವಯಂ ಸೇವಕ ಸಂಸ್ಥೆಗಳನ್ನು ಕೂಡ ಪ್ರಾರಂಭಿಸಲು ಅನುಕೂಲವಾಗಬೇಕೆಂದು ಸೇವಾದಲದ ಅಖಿಲ ಭಾರತೀಯ ಪ್ರಾಂತಿಕ ಮತ್ತು ಉಳಿದ ಎಲ್ಲಾ ಮಂಡಲಗಳು, ಸ್ಥಾನೀಯ ವ ಪ್ರಾಂತಿಕ ಮತ್ತು [illegible] ಮಂಡಲಗಳು ಸಲ್ಲಿಸಲ್ಪಡಬೇಕೆಂದೂ (Desolve) ಈ ದೇಶದಲ್ಲಿ ಹಿಂದೂಸ್ಥಾನೀ ಸೇವಾದಲಕ್ಕೆ [illegible] ಮತ್ತು ಸೇವಾದಲವು ಮುಂದಿಗೆ ಕೆಲಸಬೇಕಾದ್ದೆಲ್ಲವೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಒಪ್ಪಿಸಲ್ಪಡಬೇಕೆಂದೂ ಹಿಂದೂಸ್ಥಾನಿ ಸೇವಾದಲವು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ [illegible] ಈ ಸಂಬಂಧವಾಗಿ ಅದು [illegible] ಮಂಡಲದ [illegible] ವ್ಯಕ್ತಿಗಳಿಗೆ ಒಪ್ಪಿಸಲ್ಪಡ [illegible] ವರೆಗೆ [illegible] ಇರುವ ಸೇವಾದಲದ ಮಂಡಲಗಳು [illegible] ನಿರ್ಧರಿಸುತ್ತದೆ.

೨ ಹಿಂದೂಸ್ಥಾನೀ ಸೇವಾದಲದ ಅಖಿಲಭಾರತ ಮಂಡಲ ಅದಕ್ಕೆ ಅಧೀನಪಟ್ಟ ಉಳಿದ ಮಂಡಲಗಳ ಬರುವ [illegible] (೧೯೩೧) ತಿಂಗಳ [illegible] ನಲ್ಲಿಸಲಿಕ್ಕೂ ಮತ್ತು ಸೇವಾದಲ ಸಂಸ್ಥೆಯನ್ನ ವರ್ಕಿಂಗ್ ಕಮಿಟಿಯ ಅಥವಾ ಅದು ಈ ಸಂಬಂಧವಾಗಿ ನಿಯಮಿಸುವ ವ್ಯಕ್ತಿಗಳ ವಶಕ್ಕೆ ಆ ತಾರೀಖಿನ ಮುನ್ನವಾಗಿ ಇಲ್ಲವೆ, ವರ್ಕಿಂಗ ಕಮಿಟಿಯು ತನ್ನ ವಶಕ್ಕೆ ತೆಗೆದುಕೊಳ್ಳಲು, ಸಿದ್ಧವಾದ ಕೂಡಲೆ ಸೇವಾದಲವನ್ನು ಅದರ ವಶಕ್ಕೆ ಕೊಡಲಿಕ್ಕೂ, ೧ ಶ್ರೀ. ಪಿ. ಸಾಂಬಮೂರ್ತಿ, ೨ ಡಾ. ಎನ್. ಎಸ್. ಹರ್ಡೀಕರ, ೩ ಶ್ರೀ ಗೋಪೀನಾಥ ಭಾರ್ಗವ, ೪ ಶ್ರೀ ಹನ ಮಂತರಾವ ಕೌಜಲಗಿ ಇವರನ್ನೊಳಗೊಂಡ ಒಂದು ಮಂಡಲವನ್ನು ಈ ಪರಿಷತ್ತು ನಿಯಮಿಸುತ್ತದೆ.

೩ ಸೇವಾದಲದ ಸಂಸ್ಥೆಗಾಗಿ ಡಾ ಎನ್. ಎಸ್. ಹರ್ಡೀಕರ, ಉಳಿದ ದಲದ ೫ ಸಭಾಸದರು ಮತ್ತು ಅಧಿಕಾರಿಗಳು ಕಳೆದ ಸುಮಾರು ಎಂಟು ವರ್ಷಗಳಿಂದ ತೋರಿದ ಸೇವೆಗಾಗಿ ಈ ಪರಿಷತ್ತು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ, ಕಾಂಗ್ರೆಸಿನ ಹೊಸ ಯೋಜನೆಯು ಸ್ವೀಕಾರ ಒಟ್ಟು ಉತ್ಸಾಹವನ್ನು ಹೊಂದುವ ಹಿಂದೂಸ್ಥಾನೀ ಸೇವಾದಲಕ್ಕೆ ಇವರೆಲ್ಲರೂ ತಮ್ಮ ಸಹಕಾರವನ್ನು ಕೊಟ್ಟು ಮುಂದುವರಿಯುವರೆಂದು ಆಶಿಸುತ್ತದೆ

೪ ಸೇವಾದಲದ ಅಖಿಲಭಾರತೀಯ ಮಂಡಲದ ಅಧ್ಯಕ್ಷರಾದ ಶ್ರೀ ಬಿ ಸಾಂಬಮೂರ್ತಿಯವರ [illegible] ಮತ್ತು ದಲದ [illegible] ಮಂಡಲದ ಸಭಾಸದರು [illegible] ಅಭಿನಂದಿಸುತ್ತದೆ

ಸಹಕಾರಿ ಫೆಡರೇಶನಿನ ಕಮಿಟಿ ಮೀಟಿಂಗ.

ತಾ. ೯–೮–೩೧ರಲ್ಲು ನಡೆದ ಕೊಡಗು ಸಹಕಾರ ಫೆಡರೇಶನಿನ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್—

7ರ ಪೈಕಿ 5 ಮೆಂಬರುಗಳು ಹಾಜರಿದ್ದರು.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಕೇಳಿ ಒಪ್ಪಲಾಯಿತು

2 ಕಳೆದ ಮೀಟಿಂಗಿನ ಈಚೆಗೆ ಜಮಾ ಮತ್ತು ಖರ್ಚು ಓದಲಾಗಿ ಒಪ್ಪಲಾಯಿತು.

ಜಮಾ	1406	11	2
ಖರ್ಚು	459	4	0
ಬಾಕಿ	1007	7	2
1931-32ನೇ ಇಸವಿ [illegible] ಫಂಡು	6012	5	0
[illegible]	[illegible]7	3	4
ಒಟ್ಟು	8299	8	4
ಈಚೆಗೆ ಖರ್ಚು	21?	11	0
ಜಾತಾ ಬಾಕಿ.	8085	13	1

3 ಪಾರಾಣೆಯಲ್ಲ ನಾಡು ಯೂನಿಯನ್ನಿನವರು ತಮ್ಮ ಸ್ಟೋರಿನ ಕೆಲಸಕ್ಕಾಗಿ ಹಂಗಾಮಿಯಾಗಿ ಇಟ್ಟುಕೊಟ್ಟ ಸುಪರ್ ವೈಸರ್ ಕೆ ಸೋಮಯ್ಯನವರಿಗೆ ಸುಪರ್‌ವೈಜರ ಲೀವ್ ಕೊಟ್ಟು ಮೂರು ವರ್ಷಗಳ ಪರ್ಯಂತರ ಸ್ಟೋರಿನ ಕೆಲಸಕ್ಕಾಗಿ ಬಿಟ್ಟು ಕೊಡಬೇಕೆಂದು ಅವರ ತಾರೀಖು 27–7–31ರ ರೆಸೊಲ್ಯೂಶನ್ ಪರಾಂಬರಿಸಲಾಯಿತು.

ಆ ರೀತಿ ಸದರಿ ಸುಪರ್‌ವೈಜರಿಗೆ ಲೀವ್ ಕೊಡಲಿಕ್ಕಾಗುವುದಿಲ್ಲವೆಂದೂ, ಹಾಗೆ ಅವರ ಸರ್ವಿಸ್ ಸದರಿ ಸ್ಟೋರಿನಲ್ಲು ಅವಶ್ಯ ಇದ್ದಲ್ಲಿ ಅವರನ್ನು ಸ್ಟೋರಿನ ಕೆಲಸಕ್ಕೆ ಇಟ್ಟುಕೊಳ್ಳುವಲ್ಲಿ ಫೆಡರೇಶನಿನವರ ಆಕ್ಷೇಪಣೆ ಇಲ್ಲವಾಗಿಯೂ ಅವರಿಗೆ ಸದರಿಯವರಿಗೆ ತಾರೀಖು 1–6–31ರಿಂದ ಸ್ಟೋರಿನವರೇ ಸಂಬಳ ಕೊಟ್ಟುಕೊಳ್ಳಬೇಕೆಂದೂ ಠರಾವು ನಿರ್ಧರಿಸಲಾಯಿತು.

4. ಪಾರಾಣೆಯಲ್ಲ ನಾಡು ಯೂನಿಯನ್ನಿನವರು ಸ್ಟೋರಿನ ಮನೆಗೆ ಸ್ಟೋರಿನವರು ಕೊಡುವ 6 ರೂ ಬಾಡಿಗೆ ಅಲ್ಲದೆ ಹೆಚ್ಚಿಗೆ ಯೂನಿಯನ್ ಆಫೀಸಿಗಾಗಿ 5 ರೂ ಮನೆಯೊಳ ಬಾಡಿಗೆ ಕೊಡುವಂತೆ ತೀರ್ಮಾನಿಸಿರುವ ತಾರೀಖು 27-7-31ರ ರೆಸೊಲ್ಯೂಶನ್ ಓದಲಾಯಿತು

ಸ್ಟೋರಿನ ಕಟ್ಟಡಕ್ಕೆ 11 ರೂ ಬಾಡಿಗೆ ಬಹಳ ಹೆಚ್ಚಾಗಿ ಕಾಣುತ್ತೆ. ಯೂನಿಯನ್ನಿನವರು ತಿಂಗಳಿಗೆ ಒಂದು ಮೀಟಿಂಗು ನಡೆಸುವುದಕ್ಕೂ ಮತ್ತು ಯೂನಿಯನ್ನಿನ ಕೆಲವು ರಿಕಾರ್ಡುಗಳನ್ನು ಇಟ್ಟುಕೊಳ್ಳಲಿಕ್ಕೂ 5 ರೂ ಬಾಡಿಗೆ ಕೊಡುವ ಅವಶ್ಯಕತೆ ಕಾಣುವುದಿಲ್ಲ. ಸ್ಟೋರಿನವರು ಬಾಡಿಗೆ [illegible] ಅವರನ್ನು [illegible] ಕೆಲಸಕ್ಕೆ ಬಿಟ್ಟುಕೊ [illegible] ಸಹಕಾರ [illegible] ಒಂದು ತಕ್ಕದಾಗಿದೆ ಹಾಗೆ [illegible] ನಾಪೋಕ್ಲುನಾಡು ಕಚೇರಿ [illegible] ಒಂದು ಕೊಟ್ಟಡಿಯನ್ನು [illegible] ಕೊಡುವಂತೆ [illegible] ವರೆಗೆ ಅರ್ಜಿ [illegible]

[illegible]

5 ಫೆಡರೇಶನ್ ಪ್ರೊಸೀಡಿಂಗ್ಸ್ [illegible] 5 [illegible] 1–7–31 [illegible] ಒಪ್ಪಲಾಯಿತು.

'ಲೋಕಮಾನ್ಯ' ಪ್ರೆಸ್ಸಿನವರು ಸದರಿ ಪ್ರತಿಗಳನ್ನು [illegible] ಒಪ್ಪಿಕೊಂಡಿರುವುದರಿಂದ ಕೊಡಗು ಪ್ರೆಸ್ಸಿನವರು [illegible] 2[illegible] ಗಳಿಗೆ ಒಪ್ಪಿಕೊಳ್ಳಬೇಕಾಗಿ ಬರೆಯುವಂತೆ ತೀರ್ಮಾನಿಸಲಾಯಿತು

6 ಸಂಘಗಳ ಆಡಿಟ್ ಕೆಲಸ ಪೂರೈಸಿದನಂತರ [illegible] ನಲ್ಲಿರುವ ಸುಪರ್‌ವೈಜರುಗಳನ್ನು ಸರ್ಟಿಫಿಕೇಟ್ ಸರ್ಟಿಫಿಕೇಟ ಹೊಂದಿದನಂತರ ಕೆಲಸಕ್ಕೆ ನೇಮಕ ಮಾಡುವಂತೆ ತೀರ್ಮಾನಿಸಲಾಯಿತು.

7 'ಕೊಡಗು' ಪ್ರೆಸ್ಸಿನವರು ಫಾರಂ ವಗೈರೆ ಪ್ರಿಂಟು ಮಾಡಿದ ಚಾರ್ಜು ಕೊಡಬೇಕೆಂದು ಬರೆದಿರುವ ತಾ 13 7-31ರ ಪತ್ರ ಓದಲಾಯಿತು.

ಫೆಡರೇಶನಿನವರು ಫಾರಂ ವಗೈರೆ ಪ್ರಿಂಟು ಮಾಡಿಸಿಕೊಡಬೇಕೆಂದು ಕೇಳಿಕೊಂಡ ದಾಖಲೆಗಳಿಲ್ಲದ್ದರಿಂದ ಸದರಿ ಮೊಬಲಗುಗಳನ್ನು ಕೊಡಲಿಕ್ಕಾಗುವುದಿಲ್ಲವೆಂದು ತೀರ್ಮಾನಿಸಲಾಯಿತು.

8 ರಿಸರ್ವ್ ಫಂಡಿನ ಹಣ ಭಾಗವನ್ನು ಸೆಂಟ್ರಲ್ ಬ್ಯಾಂಕಿನಲ್ಲಿ ಡಿಪಾಜಿಟ್ ಮಾಡಲು, ಮುಂದಿನ ವರ್ಷದ ವರೆಗೆ ಲೋಕಲ್ ಗವರ್ನ್‌ಮೆಂಟಿಗೆ ಬರೆದು ಪಡೆದುಕೊಳ್ಳ ಕ್ಕೋಡೋಣವೆಂದು ಬಾರಿ ಪಾಡಿನಾಡು ಯೂನಿಯನ್ನಿನ ತಾ. 27–7–31ರ ಪ್ರೊಸೀಡಿಂಗ್ಸ್ ಓದಲಾಯಿತು

ಇವರ [illegible] ಮೇಲೆ ಲೋಕಲ್ ಗವರ್ನ್‌ಮೆಂಟಿಗೆ ಬರೆಯ [illegible] ಸೂಕ್ತವಾಗಿ ತೀರ್ಮಾನಿಸಲಾಯಿತು.

9. ಸಹಕಾರ ಮಾಸಪತ್ರಿಕೆಯನ್ನು ತ್ರೈಮಾಸಿಕ ಪತ್ರಿಕೆಯಾಗಿ 12 [illegible] ಗಳಿಗೆ 250 ಪ್ರತಿಗಳನ್ನು ಮುದ್ರಿಸಿ ಕೊಡುವಂತೆ 'ಕೊಡಗು' ಪ್ರೆಸ್ಸಿನವರಿಗೆ [illegible] ತೀರ್ಮಾನಿಸಲಾಯಿತು

10 ಸುಪರ್‌ವೈಜರ ಇನ್ಸ್‌ಪೆಕ್ಷನ್ ರಿಪೋರ್ಟಿನ 2000 ಫಾರಂಗಳನ್ನು ಪ್ರಿಂಟು ಮಾಡಿಸುವಂತೆ ತೀರ್ಮಾನಿಸಲಾಯಿತು

11. ಈಗ ತಯಾರಿಸಿ ಮಂಜೂರು ಮಾಡಿದ ಸುಪರ್‌ವೈಜರುಗಳ ರಜದ ಪಟ್ಟಿಯ ಪ್ರತಿಗಳನ್ನು ಎಲ್ಲಾ ಯೂನಿಯನ್ನುಗಳಿಗೂ ಮತ್ತು ಸುಪರ್‌ವೈಜರುಗಳಿಗೂ ಕಳುಹಿಸುವಂತೆ ತೀರ್ಮಾನಿಸಲಾಯಿತು.

ಪಿ ದೇವಯ್ಯ,
(ಪ್ರೆಸಿಡೆಂಟ್)

ತಾ. 9–8–'31.

ಅಖಿಲ ಭಾರತ ರಾಷ್ಟ್ರೀಯ ಧ್ವಜಾ ದಿನವು.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಗೊತ್ತುವಳಿಗಳು.

೧ ರಾಷ್ಟ್ರೀಯ ಧ್ವಜವು—ಧ್ವಜವು ಮೊದಲಿನಂತೆ ತ್ರಿವರ್ಣಕ್ಕೆ ಸಮಾಂತರವಾಗಿದ್ದ ಮೂರು ಬಣ್ಣದ್ದಿರಬೇಕು ಆದರೆ ಬಣ್ಣಗಳು ಕೇಸರಿ ಬಿಳುಪು ಮತ್ತು ಹಸುರು. ಹೀಗೆ ಧ್ವಜದ ಮೇಲಿನಿಂದ ಕೆಳಗಿನ ವರೆಗೆ ಇರಬೇಕು. ಧ್ವಜದ ನಡುವಿನ ಬಿಳಿ ಪಟ್ಟಿಯ ನಡುವೆ ದಟ್ಟವಾದ ನೀಲಿ ಬಣ್ಣದ ಚರಖೆಯುಳ್ಳ ಸೂಚನ ರಾಟೆ ಇರಬೇಕು. ಈ ಬಣ್ಣಗಳಿಂದ ಭಿನ್ನ ಭಿನ್ನ ಜಾತಿ ಅಥವಾ ಧರ್ಮಗಳ ಬೋಧನೆಯಾಗದೆ ಕೇಸರಿ ಬಣ್ಣವು ತ್ಯಾಗ ಮತ್ತು ಸ್ವಾರ್ಥತ್ಯಾಗಗಳನ್ನು, ಬಿಳಿ ಬಣ್ಣವು ಶಾಂತಿ ಮತ್ತು ಸತ್ಯವನ್ನೂ ಮತ್ತು ಹಸುರು ಬಣ್ಣವು [illegible] ಮತ್ತು [illegible] ರಕ್ಷಿಸುವ [illegible] ಚರಖೆಯು [illegible] ಹಿಂದೂಸ್ಥಾನದ [illegible] ಸೂಚಿಸುತ್ತವೆ.

[illegible] ಧ್ವಜದ ಅಳತೆ (ಉದ್ದಗಲದ ಅಳತೆ) ಮತ್ತು ಅಗಲಕ್ಕೆ (ಧ್ವಜ ಸ್ತಂಭದ [illegible]) ಇವುಗಳ ಪ್ರಮಾಣವು ೩ಕ್ಕೆ ೨ ಇರಬೇಕು.

೨ ರಾಷ್ಟ್ರ ಧ್ವಜ ದಿನವು—ಇದೇ ತಿಂಗಳ [illegible] ದಿನ (ತಾ ೩೦–೮–೧೯೩೧ರ) [illegible] 'ರಾಷ್ಟ್ರೀಯ ಧ್ವಜ ದಿನ'ವೆಂದು ಆಚರಿಸಬೇಕೆಂದು ಅಖಿಲ ಭಾರತೀಯ ಕಾಂಗ್ರೆಸ್ ಕಮಿಟಿಯು ದೇಶದಲ್ಲಿಯ ಸರ್ವ ಕಾಂಗ್ರೆಸ್ ಸಂಸ್ಥೆಗಳಿಗೆ ವಿನಂತಿಸುತ್ತದೆ ಆ ದಿವಸ ಮುಂಜಾನೆ [illegible] ಗಂಟೆಗೆ [illegible] ರಾಷ್ಟ್ರೀಯ ಧ್ವಜವನ್ನು [illegible]

ಈ ಗೊತ್ತುವಳಿಗಳ ಮೇರೆಗೆ ರಾಷ್ಟ್ರ ಧ್ವಜ ದಿನವನ್ನು ಎಲ್ಲರೂ ತಮ್ಮ ತಮ್ಮ ಸ್ಥಳಗಳಲ್ಲಿ ಆಚರಿಸಬೇಕು. ಆ ದಿವಸ ಎಲ್ಲೆಡೆಯಲ್ಲಿಯೂ ರಾಷ್ಟ್ರ ಧ್ವಜವನ್ನು ಹಾರಿಸಬೇಕು ಮನೆಗಳ ಮೇಲೆ, ಅಂಗಡಿಗಳ ಮೇಲೆ, ಮೋಟಾರುಗಳ ಮೇಲೆ ಗಾಡಿಗಳ ಮೇಲೆ ರಾಷ್ಟ್ರ ಧ್ವಜಗಳು ಕಾಣಬೇಕು.

ಈ ಸಮಾರಂಭವು ತಮ್ಮ ತಮ್ಮ ಸ್ಥಳಗಳಲ್ಲಿ ನಡೆದ ವರ್ತಮಾನವನ್ನು ವಿಸ್ತಾರವಾಗಿ ಹುಬ್ಬಳ್ಳಿಯ ಸೇವಾದಲದ ಕಛೇರಿಗೆ ಕಳುಹಿಸಬೇಕಾಗಿ ವಿನಂತಿಸುವ

ಸೇವಾದಲದ ಕಛೇರಿ.	ಕಾರ್ಯದರ್ಶಿ,
ಹುಬ್ಬಳ್ಳಿ, ೧೩–೮–೧೯೩೧	ಕರ್ನಾಟಕ ದಲ

ಸಂಪಾದಕರ ಚೀಲದಿಂದ ಸಂಗ್ರಹಿಸಿದ್ದು.

ಔಷಧ.

[illegible]

[illegible] ಕಾಂಗ್ರೆಸ್ ಕಮಿಟಿ ಮೆಂಬರು ಮತ್ತು ಅಲ್ಲಲ್ಲಿಯ ಅನೇಕ ಜನ ಸೇವಾ ಕರ್ತರು. ಔಷಧಕ್ಕಾಗಿ ನನಗೆ ಪತ್ರಗಳನ್ನು ಬರೆದದ್ದಾರೆ. [illegible] ನಾನು ಔಷಧವನ್ನು ಉಚಿತವಾಗಿ [illegible] ಔಷಧಕ್ಕಾಗಿ ಬರೆಯುವವರು [illegible] ಔಷಧ [illegible] ಅವರಿಗಾಗಿ [illegible] ಬಹಳ ದಿವಸದಿಂದ [illegible] ಪಡೆದುಕೊಳ್ಳಬೇಕು

೧ ಕೊಳೆ ಅರೆವಾನ (ತವುರ) ಹಸು (Tavasvu) ೧॥ ಕೊಳೆ ಉಂಡೆ ಕರ್ಪೂರ (ಪಚ್ಚ ಕರ್ಪೂರ) ಇವನ್ನು ಒಂದು ಶೀಶೆಯಲ್ಲಿ ಹಾಕಿ ಬಾಯಿಗೆ ಬಿರಡೆ ಹಾಕಿ ಬೆಚ್ಚಗೆ ಇಡಬೇಕು. ಎರಡೂ ಕರಗಿ ಒಂದು ದ್ರಾವಕವಾಗುವುದು.

ಈ ರಸದ ೧೦ ಹನಿ ಇದನ್ನು ಅರ್ಧ ಕೊಳೆ ಸಕ್ಕರೆಯಲ್ಲಿ ಕಲಸಿ ತಿನ್ನುವುದಕ್ಕೆ ಕೊಡಬೇಕು ಮತ್ತು ಮೈಯೆಲ್ಲಾ [illegible] ಮೂಲವಾಗುವುದು. ಎಲ್ಲಿಯೂ ದರದ [illegible] ಮೊದಲನೇ [illegible] ಔಷಧವನ್ನು [illegible] ಕೊಡುವುದು. [illegible]

[illegible] ಕೊಡಬೇಕು ಅರ್ಧಕ್ಕೆ [illegible] ಗಂಟೆಗೊಮ್ಮೆ, ಮೂರನೆ [illegible] ಗಂಟೆಗೊಮ್ಮೆ. [illegible] ದಿನಕ್ಕೆ [illegible]

[illegible] ದ್ರಾವಣವನ್ನೇ [illegible] ಕ್ಕೆ ಕಾಲುಗಳ [illegible] ತಿಕ್ಕಬೇಕು. [illegible] ಹನಿ [illegible] ಮೂರು [illegible]

ಪಥ್ಯ ಪಥ್ಯ—[illegible] ವರೆಗೆ [illegible] ಆಹಾರ [illegible]

ಪೂರ್ತಿ [illegible] ಅಕ್ಕಿ [illegible] ಗಂಜಿ [illegible] ನೀರಿಗೆ [illegible] ಮಜ್ಜಿಗೆ ಮತ್ತು ನಿಂಬೆ [illegible]

ಎಷ್ಟೋ [illegible] ಔಷಧಗಳು [illegible]

ಧಾರಕ ಸೇವಾ ಕೇಂದ್ರಗಳಲ್ಲಿ ಇದನ್ನು ನಾನೂ ನನ್ನಲ್ಲಿ ವೈದ್ಯ ವಿದ್ಯೆಯನ್ನು ಹೊಂದಿದ ಯುವಕ ಯುವತಿಯರು ಕೊಟ್ಟು ಸಾವಿರಾರು ಮಂದಿಯನ್ನು ಕ್ರೂರ ಮೃತ್ಯುವಿನ ಬಾಯಿಂದ ಬಿಡಿಸಿದ್ದಾರೆ. ವಾಚಕರು ಇದರ ಅನುಭವವನ್ನು ಪಡಕೊಳ್ಳಬೇಕಾಗಿ ಪ್ರಾರ್ಥನೆ. ವಿಶೇಷ ಮಾಹಿತಿಯು ಬೇಕಾದರೆ ಅಗತ್ಯ ಒಂದು ಪತ್ರ ಬರೆಯುವುದು.

೨೯—೭—೩೧ ತಮ್ಮ ಸೇವಕ

ಪ್ರೇಮಾಯತನ ತುಂಗಭದ್ರಾ. ತಾರಾನಾಥ

ನಾವು ಮಾರಿಕಾ ಬೇನೆಗೆ ಉಪಾಯವೇನೆಂದು ಪಂಡಿತ ತಾರಾನಾಥಜಿಯವರನ್ನು ವಿಚಾರಿಸಲಾಗಿ ಅವರಿಂದ ಈ ಮೇಲಿನ ಉತ್ತರವು ಪ್ರಸಿದ್ಧಿಗಾಗಿ ನಮ್ಮ ಕಡೆಗೆ ಬಂದಿದೆ. ಇದರ ಅನುಭವವನ್ನು ಪಡೆಯಬೇಕಾಗಿ ವಿನ್ನಪ.

ತಮ್ಮ ವಿಧೇಯ,

೬—೭—೩೧ ಆ. ರಂಗಚಾರ್ಯ,

ಮಿಣಜಗಿ ಶಂಕರಪ್ಪಾ,

ಧಾರವಾಡ. ಕಾರ್ಯದರ್ಶಿ ಕಾಂಗ್ರೆಸ್ ಕಮಿಟಿ

ಕೊಡಗು ಫಾರೆಸ್ಟು ಇಲಾಖೆ,
ಮಡಿಕೇರಿ, 15—8—1931.

ಬಿದಿರು ಮಾರಾಟ.

ತಾರೀಖು 1—10—1931ರಿಂದ 30—9—1932ರ ಒಳಗ ಮಾಲ್ದಾರೆ—ಗದ್ದಿಗೆ ರೋಡ್, ಮಾಲ್ದಾರೆ—ಮುಟ್ಟಾರೆ ರೋಡ್ ಬೆಟ್ಟದ ಲೈನ್ ಮತ್ತು ಪೂರ್ವ ಲೈನ್‌ಗಳ ಮಧ್ಯೆ ಇರುವ ಬ್ಲಾಕಿನಲ್ಲಿರುವ ಬಿದಿರನ್ನು ಕತ್ತರಿಸಿ ಸಾಗಿಸುವ ಹಕ್ಕು ತಾ. 30—8—1931ರಲ್ಲಿ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಸಿದ್ದಾಪುರ ಟ್ರಾವಲರ್ಸ್ ಬಂಗಲೆಯ ಹತ್ತಿರ ಉತ್ತರ ಕೊಡಗು ಡಿವಿಜನಲ್ ಫಾರೆಸ್ಟ್ ಆಫೀಸರಿಂದ ಹರಾಜು ಮಾಡಲ್ಪಡುವುದು. ಹೆಚ್ಚಿನ ವಿಷಯಗಳಿಗೆ ಚೀಫ್ ಫಾರೆಸ್ಟು ಆಫೀಸರವರಿಗೆ ಬರೆದುಕೊಳ್ಳತಕ್ಕದು.

1—1.

"ನಾನು ಯಾಕೆ ನಿಶ್ಚೈಸಲಿಕ್ಕಾಗುವುದಿಲ್ಲ."

(ಬೊಂಬಾಯಿಯಲ್ಲಿ ಈ ತಾ. 8 ರಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗಿನಲ್ಲಿ ದುಂಡು ಮೇಜು ಪರಿಷತ್ತಿಗೆ ಹೋಗಲು ಯಾಕೆ ನಿಶ್ಚೈಸಲು ಸಾಧ್ಯವಾಗಲಿಲ್ಲವೆಂತ ಮಹಾತ್ಮ ಗಾಂಧಿಯವರು ಈ ಕೆಳಗೆ ಕಂಡ ಸೋರೆ ವಿವರಿಸಿದರು.)

ಲಂಡನ್ನಿಗೆ ಹೋಗಲಿಕ್ಕೆ ಸಾಧ್ಯವಾಗುವಂತೆ ಮನುಷ್ಯ ಪ್ರಯತ್ನದಿಂದ ಸಾಧ್ಯವಿದ್ದಷ್ಟೆಲ್ಲಾ ಮಾಡುತ್ತಿದ್ದೇನೆ. ರಾಜಿ ಕರಾರಿನಲ್ಲಿ ದುಂಡು ಮೇಜು ಪರಿಷತ್ತಿನಲ್ಲಿ ಕಾಂಗ್ರೆಸ್ ಭಾಗ ತೆಗೆದುಕೊಂಡು ಕಾಂಗ್ರೆಸಿನ ಅಭಿಪ್ರಾಯವನ್ನು ಪರಿಷತ್ತಿನ ಮುಂದೆ ಇಡಬೇಕೆಂತ ಸಹ ಒಪ್ಪಂದವಾಗಿದೆ. ಆದರೆ ತಕ್ಕ ವಾತಾವರಣವಿಲ್ಲದೆ ನಾನು ಹೋಗುವುದು ನಿಷ್ಪ್ರಯೋಜನ. ಅದ್ದರಿಂದ ಹಿಂದೂ, ಮುಸ್ಲಿಮ್, ಸಿಕ್ ಸಮಸ್ಯೆಯು ಇತ್ಯರ್ಥವಾದ ವಿನಹ ನಾನು ಹೋಗುವುದಿಲ್ಲವೆಂತ ಹೇಳಿದೆ. ನನ್ನ ಹೇಳಿಕೆಯನ್ನು ವರ್ಕಿಂಗ್ ಕಮಿಟಿಯು ಚರ್ಚಿಸಿತು. ನನ್ನ ಕಾರಣಗಳು ಅವರಿಗೆ ಒಪ್ಪಿಗೆಯಾಗಲಿಲ್ಲ. ಈ ಸಮಸ್ಯೆಯು ತೀರ್ಮಾನವಾಗದಿದ್ದರೂ ನಾನು ಹೋಗಬೇಕೆಂತ ವರ್ಕಿಂಗ್ ಕಮಿಟಿಯು ನಡಿಸಿದ ತೀರ್ಮಾನಕ್ಕೆ ನಾನು ತಲೆ ಬಾಗಿಸಬೇಕಾಯಿತು. ಆದರಿಂದ ನಾನು ಬರೇ ಹಿಂದುವಾಗ ಹೋಗಬೇಕೆಂತ ಅರ್ಥವಲ್ಲ. ನಾನು ಬರೇ ಹಿಂದುವಾಗಿ ಹೋಗುವುದಾದರೆ ನಾನು ಕಾಂಗ್ರೆಸ್ ಪ್ರತಿನಿಧಿಯೆನಿಸಿಕೊಳ್ಳುವುದಿಲ್ಲ. ಕಾಂಗ್ರೆಸ್ ಎಲ್ಲಾ ಕೋಮಿನವರಿಗೂ ಕೂಡಿದ್ದಾಗಿದೆ. ಕಡಿಮೆ ಬಲದಿಂದ ಕೂಡಿಯಾದರೂ, ಆತ್ಮ ಶಕ್ತಿಯಲ್ಲಿ ಕಡಿಮೆ ಸಂಖ್ಯೆಯಿಂದಲಾದರೂ ದುಂಡು ಮೇಜು ಪರಿಷತ್ತಿನಿಂದ ನಾನು ಗೈರ್‌ಹಾಜರಾಗ ಕೂಡದೆಂತ ವರ್ಕಿಂಗ್ ಕಮಿಟಿಯು ಹೇಳಿತು. ಅದರಿಂದ ಲಂಡನಿನ ಕಡೆ ಒಂದು ಹೆಜ್ಜೆ ಇಟ್ಟಂತಾಯಿತು.

ಆದರೆ ಬೇರೆ ಕಷ್ಟಗಳಿದ್ದವು. ರಾಜಿ ಕರಾರಿನಂತೆ ಸರಕಾರವು ನಡಿಯುತ್ತಿದೆಯೋ ಎಂಬುದು ಈ ವಿಷಯದಲ್ಲಿ ರಾಜಿ ಕರಾರಿಗೆ ವಿರೋಧವಾಗಿ ವರ್ತಿಸುವ ಚಿಕ್ಕ ಚಿಕ್ಕ ಸಂಗತಿಗಳನ್ನು ಬಿಟ್ಟು ಬಿಡಬಹುದಾಗಿ ನಿಶ್ಚೈಸಿದೆ. ರಾಜಿ ಕರಾರಿನ ಮೇರೆ ಜೈಲಿನಿಂದ ಬಿಡುಗಡೆ ಹೊಂದಬೇಕಾದವರು ಇನ್ನೂ ಅನೇಕ ಬಿದ್ದಾರೆ. ಪ್ರೋಸಿಕ್ಯೂಶನ್‌ಗಳು ನಡಿಯುತ್ತಲೇ ಇವೆ. ದಸ್ತಗಿರಿಗಳಾಗುತ್ತಲೇ ಇವೆ. ಆದರೆ ಕೇಸರಿಗಾರರಾದ ನಾವು ಕಷ್ಟದ ದಾರಿಯನ್ನು ತಿಳಿದೇ ಕೈಕೊಂಡಿರುವಾಗ ಇನ್ನೂ ಕೆಲವು ತಿಂಗಳುಗಳ ಬಂಧಿಖಾನೆ ವಾಸವು ದೊಡ್ಡದಲ್ಲ. ಆದರೆ ಕೃಷಿಕರ ವಿಷಯವಾದರೋ ಹಾಗಲ್ಲ. ಇಲ್ಲಿ ಹೆಚ್ಚು ಕಷ್ಟವನ್ನಾದರೂ ಸಹಿಸಿಕೊಳ್ಳಿ ಎಂತ ಅವರಿಗೆ ನಾನು ಹೇಗೆ ಹೇಳಲಿ? ಕಾಂಗ್ರೆಸು ಮುಖ್ಯವಾಗಿ ಕೃಷಿಕರ ಸಂಘವೇ ಆಗಿದೆ. ಜವಿಹನ್ನಾರ ಮತ್ತು ಸೆನತ್ತು ಗಾರರ ಕ್ಷೇಮವನ್ನೂ ಕಾಪಾಡಲು ಕಾಂಗ್ರೆಸು ಪ್ರಯತ್ನಿಸುತ್ತದೆ. ಆದರೆ ಕೃಷಿಕರ ಕ್ಷೇಮಕ್ಕೆ ವಿರೋಧ ಒದಗಿದ್ದನ್ನು ಪಡಿಸಲ್ಲ. ಸಂಯುಕ್ತ ಪ್ರಾಂತ್ಯ ಮತ್ತು ಗುಜರಾತಿನಲ್ಲಿ ಕೃಷಿಕರ ಸಮಸ್ಯೆಯು ಬಲವಾಯಿತು. ಹೋಮ್ ಸೆಕ್ರೆಟರಿಯಾದ ಮಿ. ಎಮರ್ಸನರು ಆ ಪರಿಂದ ಸಾಧ್ಯವಾದಷ್ಟು ಸಹಾಯ ಮಾಡಿದರು. ವೈಸರಾಯರೂ ಸಹ ನಾನು ಬೇಸರ ಪಡಬೇಕಾದುದಿಲ್ಲವೆಂತಲೂ, ಮಾಡಬೇಕಾದದ್ದನ್ನೆಲ್ಲಾ ತಾನು ಮಾಡುವುದಾಗಿಯೂ ಹೇಳಿದರು. ಈ ಭರವಸೆಗಳು ಮನಃಪೂರ್ತಿಯಾಗಿ ಕೊಡಲ್ಪಟ್ಟವಾದರೂ ಅವುಗಳನ್ನು ನಡಿಸಲ್ಪಡುವ ಸೂಚನೆಗಳು ಎಷ್ಟರ ಮಟ್ಟಿಗೆ ತೋರಿಬರುತ್ತವೆ ಎಂತ ನೋಡಬೇಕಾಯಿತು. ಈಗಲೂ ಪಕ್ಷಪ್ಪವಾದ ನಡಿಸುತ್ತಲೇ ಇದ್ದೇನೆ. ನಾಗಪ್ಪನವನ್ನು ಕೊಡಬೇಕಾದವರ ಮೇಲೆ ಅವರು ಹಿಡಿಯಲಾರದಷ್ಟು ವಕಾಲ್ಯು ಪಡಿಸುವುದಿಲ್ಲವೆಂತ ಭರವಸೆ ಕೊಡುತ್ತೇನೆ. ನಾನು ಗೈರ್‌ಹಾಜರಾದೊಡನೇ ಇಲ್ಲಿ ಎಲ್ಲಾ ತೀರ್ಮಾನವು ಆಗಿ ಹೋಗುತ್ತೆನ್ನುವಷ್ಟು ಕಲಿ ತಿಳಿಯದವನೂ ನಾನಲ್ಲ. ಲಾರ್ಡ್ ಇರ್ವಿನರೊಂದಿಗೆ ರಾಜಿ ಸಂಭಾಷಣೆ ನಡಿಸಿದ ರೀತಿ [illegible]

ಆದರೆ ಹಣಗಿಗೆ ಹತ್ತು ವರೆಗೂ ನಾನು ಲಂಡನ್ನಿಗೆ ಹೋಗುತ್ತೇನೆಂತ ಭಾವನೆ ಇದ್ದಿತು. ಈ ದಿನಕ್ಕೂ 15 ನೇ ತಾ. [illegible] ಅದೇ ಕೆಂತ ಯಾರಿಂದ ಹೇಳಲು ಸಾಧ್ಯವಿದೆ? ನಮ್ಮ ದು ಒಡು ಮಾತ್ರ ಹೇಳಿ ಸಂತರಹದ ನಾಶ ವರ್ತಮಾನಗಳವೆ. ಯಾವುದಾದರೂ ಕಾರಣದಿಂದ ಬಂತ ಹತ್ತಿಕೊಳ್ಳಬಹುದು. ಜಿನ್ನಾ ಮಿಮೋರಿಯಲ್ ಹಾಲ್‌ನಲ್ಲಿ ಏನಾಯಿತೆಂತ ನಿಮಗೆ ತಿಳಿದಿದೆ. ಅಂಥಾ ಕೃತ್ಯಗಳಿಂದ ನಾನು ನಡಗಿ ಹೋಗುತ್ತೇನೆ. ಸಂಪೂರ್ಣ ಬಲಹೀನನಾದವನನ್ನು ಪರಿಷತ್ತಿಗೆ ನೀವು ಕಳುಹಿಸುತ್ತೀರೋ? ನನ್ನ ತೀರ್ಮಾನವು ಲಾರ್ಡ್ ಇರ್ವಿನರ ಮನಸ್ಸಿಗೆ ನೋವನ್ನುಂಟು ಮಾಡಬಹುದು. ನನ್ನ ಒಬ್ಬ ಸ್ನೇಹಿತನಾಗಿದ್ದರೋ ಎಂತ [illegible] ಇಂದಿಗೂ 15ನೇ ತಾರೀಕಿಗೂ ಮಧ್ಯೆ ಸಂಭವಿಸುವ ವಿವಾದರೂ ವಿಷಯವು ನನ್ನ ಜೆನ್ನು ಮೂಳೆಯನ್ನೇ ನಡುಗಿಸುವಂಥದ್ದಾದರೆ ನಾನು ಹೋಗದೆ ಇಲ್ಲೇ ಇರಲು ನಿಶ್ಚೈಸಿಯೇನು. ಹಿಂದುಗಳ ಮೇಲೆ ಎಷ್ಟು ಪ್ರೀತಿ ಇದೆಯೋ ಅಷ್ಟೇ ಮುಸಲ್ಮಾನರ ಮೇಲೆಯೂ ಇದೆ. ನನ್ನ ಹೃದಯದಲ್ಲಿ ಹಿಂದೂಗಳಿಗಾಗಿ ಎಷ್ಟು ಕನಿಕರವಿದೆಯೋ ಅಷ್ಟೇ ಮುಸಲ್ಮಾನರಿಗೂ ಇದೆ. ನನ್ನ ಹೃದಯವನ್ನು ಬಿಚ್ಚಿ ತೋರಿಸಲು ಸಾಧ್ಯವಿದ್ದರೆ ಅಲ್ಲಿ ಹಿಂದೂಗಳಿಗೆ ಬೇರೆ ಭಾಗ, ಮುಸಲ್ಮಾನರಿಗೆ ಬೇರೆ ಭಾಗ ವಗೈರೆ ಇಲ್ಲವೆಂತ ನಿಮಗೆ ಕಂಡೀತು. ಮುಸಲ್ಮಾನನೊಬ್ಬನು ಹಿಂದುವನ್ನು ಕೊಲ್ಲಲುದ್ಯುಕ್ತನಾದಾಗಲೂ, ಹಿಂದುವು ಮುಸಲ್ಮಾನನನ್ನು ಕೊಲ್ಲಲುದ್ಯುಕ್ತನಾದಾಗಲೂ ನಾನೇ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತೇನೆ. ಇಂಥವುಗಳನ್ನು ಈ ವರೆಗೆ ಸಹಿಸಿದೆ. ಆದರೆ ಮನುಷ್ಯನ ಸಹನೆಗೂ ಮಿತಿ ಇದೆ. ಸತ್ಯವನ್ನು ಪಾಲಿಸಲು ಹೊರಟವನಾದ್ದರಿಂದ ನನ್ನ ಹೃದಯವನ್ನು ಬಿಚ್ಚಿ ತೋರಿಸುತ್ತೇನೆ. ಯಾವ ಮನುಷ್ಯನಿಗಾದರೂ ತನ್ನ ಮನಸ್ಸಿನಲ್ಲಿ ಹುಟ್ಟಿದ ಅಭಿಪ್ರಾಯಗಳನ್ನೆಲ್ಲಾ ತಿಳಿಸುವುದು ಕಷ್ಟ. ಆದರೆ ನಿಮ್ಮಿಂದ ಮರೆ ಮಾಚ ಏನೂ ಇಡಲಿಲ್ಲವೆಂತ ನನಗೆ ಗೊತ್ತಿದೆ. ಮುಂದೆ ಬರುವ ತುಫಾನಿನ ಕುರುಹುಗಳು ಕಾಣುತ್ತವೆ. ಅಂಥಾ ಕುಂಬಾ ತುಫಾನಿನ ಮುಂದೆ ನಾನು ನಡುಗಿದರೆ ಆಶ್ಚರ್ಯ ಪಡಬೇಡಿ. ಆಗ ನನ್ನ ಶಕ್ತಿ ಎಲ್ಲಾ ಹೋಗಬಹುದು. ಸಂಪೂರ್ಣ ನಪುಂಸಕನಾಗಬಹುದು. ನನ್ನನ್ನು ನಿಮ್ಮ ಒಬ್ಬನೇ ಪ್ರತಿನಿಧಿಯಾಗಿ ಆರಿಸಿರುವದರಿಂದ ನನ್ನ ಕುಂದು ಕೊರತೆಗಳೊಡನೆ ನನ್ನನ್ನು ನೀವು ಅಂಗೀಕರಿಸಿಕೊಳ್ಳಬೇಕು. ನನ್ನ ಎಲ್ಲಾ ಬಲಹೀನತೆಗಳನ್ನು ನಿಮಗೆ ತಿಳಿಸಿದ್ದೇನೆ. ಅಂಥಾ ಬಲಹೀನತೆಯನ್ನು ಒಮ್ಮೆ ಗೆದ್ದೇನು. ಒಬ್ಬನೇ ಮನುಷ್ಯನನಾದರೂ ನನ್ನ ಬೆದರಿಕೆಗಳನ್ನು, ನಪುಂಸಕತ್ವವನ್ನು ಹೋಗಲಾಡಿಸಲು ಸಮರ್ಥನಾದೇನು.

ಇಷ್ಟರಲ್ಲಿ ಮಹಾತ್ಮರ ಮನಸ್ಸಿನ [illegible]

ನನ್ನ ಮನೋಭಾವಗಳನ್ನು ನಿಮ್ಮ ಮುಂದೆ ನಾನು ತೋರಿಸಲು ನಾನು ಇಲ್ಲಿಗೆ ಬಂದಿರಲಿಲ್ಲ. ಆದರೆ ಯಾತ್ರಾ, ಎಂದ ಹಾಗೆ ನನ್ನ ಮನಸ್ಸಿನಲ್ಲಿ ಹುಟ್ಟಿದ [illegible] ನಿನ ತರಂಗಗಳನ್ನು ಕಡೆದು ನಿಲ್ಲಿಸಲು ಸಾಧ್ಯವಾಗಲಿಲ್ಲ. ನನ್ನ ಹೃದಯದಲ್ಲಿ ತುಫಾನು ಎದ್ದಿದ್ದರೂ ಹೊರಗೆ ನಗುತ್ತಿರಲು ಸಾಧ್ಯವಾಗುವ ಅಭ್ಯಾಸ ಮಾಡುತ್ತೇನೆ. ಆದರೆ ಈಗ ತುಫಾನಿನ ಆರಂಭವೇ ಕಾಣಿಸಿದಂತಾಗಿದೆ. ನನ್ನ ಶಕ್ತಿಯನ್ನೆಲ್ಲಾ ತಳಕೆಯಿಂದಿರುತ್ತೇನೆ. ಸರಕಾರಕ್ಕೆ ಪಕ್ಷಪಾತವಿಲ್ಲ ನಾವು ಸರ್ವಶಕ್ತರಾಗಿ ತೋರಿದರೂ ಸಮಯ ಬಂದಾಗ ನಾನು ತಡವರಿಲ್ಲವೆಂತ ಆದೀತೋ ಎಂಬ ಸಂಶಯವಿದೆ. ಮೊನ್ನೆ ಜಿನ್ನಾ ಮಿಮೋರಿಯಲ್ ಹಾಲ್‌ನಲ್ಲಿ ನಡೆದ ಸಂಗತಿಗಳನ್ನು ನೋಡಿ. ಏನೂ ಕಷ್ಟ ಮಾಡದವರ ಮೇಲೆ ಬಿದ್ದು ಕೋಪೋದ್ರೇಕಕ್ಕೆ ಕಾರಣವಿಲ್ಲದಿದ್ದರೂ ಹೊಡದರು. ಬಲವನ್ನು ಉಪಯೋಗಿಸಿದ್ದರೆ 10 ಜನರನ್ನು ಹೊಡೆಯಲು ಶಕ್ತಿ ಇದ್ದ ಒಬ್ಬನ ವೈಯಿಂದ ಮೃಗಗಳು ಮೇಲೆ ಬಿದ್ದು ಘಾಸಿಪಡಿಸಿದರು. ಪೆಟ್ಟಿಗೆ ಗುರಿಯಾದ್ದರಿಂದ ಧಾರಾಳ ರಕ್ತ ಸೋರುತ್ತಿದ್ದದ್ದನ್ನು ನೋಡಿದೆನು. ಹೃದಯದ್ರಾವಕವಾಗಿತ್ತು. ನಡೆದ ಸಂಗತಿಗಳನ್ನೆಲ್ಲಾ [illegible] ವಾಗಿ ಕೇಳಿದೆನು. ಬಾಣದಿಂದ ಚುಚ್ಚಲ್ಪಟ್ಟಂತೆ ಅವು ಹೃದಯವನ್ನು ನಾಟಿತು. ಅಷ್ಟೇ ಅಲ್ಲ. ಮೇಲೆ ತಿಳಿಸಿದ ಒಳಗೆ ಏನು ಗುಟ್ಟಾಗಿ ನಡೆಯುತ್ತಿದೆಯೆಂತ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಇಂಥಾ ಕೃತ್ಯಗಳಿಗೆ ಸಂಪೂರ್ಣ ಮಟ್ಟಿಗೆ ನಾನು ಜವಾಬ್ದಾರನೆಂತ ಒಪ್ಪಬೇಕು. 1919ರ ದೇಶದ ಮೊದಲ ಜಾಗೃತಿಯಾಗಲು ನನ್ನನ್ನು ದೇವರು ನಿಯೋಗಿಸಿದರು. ಸ್ವಾಭಾವಿಕವಾಗಿ ಮನೋಭಾವವು [illegible] ಆದರ ಎಲ್ಲರ ಹಿಂದೆಯೇ ಭಾವಿ ಬಂದ ಉದ್ದೇಶಕ್ಕೆ ಹೇಳಲಾಡುತ್ತಿದ್ದರು. ಅದ್ದರಿಂದ [illegible] ಅವಕಾಶವಿಲ್ಲ ಆದರೆ ಅದು ಬರೇ ತತ್ಕಾಲ [illegible] ಹೋಗಿಯಂತೆ ಜರುಗಿ ಹೋಯಿತು [illegible] ಅನ್ಯೋನ್ಯ ಯುದ್ಧ ಮಾಡುತ್ತಿರುವುದು [illegible] ಈ ಸ್ಥಿತಿಯು ನನ್ನನ್ನು ಸ್ವರಾಜ್ಯ ಕೆಲಸಕ್ಕೆ ಹೋಗಲ್ಲದವನಾಗಿ ಮಾಡಿದೆ. ವಾತಾವರಣವು ಬೇರೆ ಕಡೆ [illegible] ಳ್ಳಿ ಸಹಜವಾಗಿ ಕಂಡರೂ ನನಗೆ ಹುಚ್ಚು ಹಿಡಿಸುವಂಥ ನನ್ನ ಶಕ್ತಿಗಳನ್ನೆಲ್ಲಾ ಹೋಗಲಾಡಿಸುವಂಥ ವಿನಾದರೂ [illegible] ನಡೆಯಬಹುದು. ಅಷ್ಟು ಬಲಹೀನನಾದ ನಾನು ಲಂಡನಿಗೆ ಹೋಗಬೇಕೆಂತ ನೀವು ಅಪೇಕ್ಷಿಸಲಾರಿರಿ. ಯಾರಾದರೂ [illegible] ಇಂಥವನನ್ನು ಕಳುಹಿಸಬೇಕು. ನನ್ನ [illegible] ಕಳೆಕೊಂಡಂತೆ ತೋರುತ್ತದೆ. ಸ್ವಲ್ಪ ಹೊತ್ತಿಗೆ ಮುಂಚೆ ನೀವು ನೋಡಿದ ಅರಿಯಾದ ಸ್ಥಿತಿಯು ನನ್ನಲ್ಲಿ ಶ್ರದ್ಧೆ ಕಡಿಮೆಯಾದ್ದರಿಂದಲೇ ಉಂಟಾಯಿತು.

British Photo Camera Rs 2—8—0

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಾಗಳು ವಿಲಾಯಿತಿಯಲ್ಲಿ ತಯಾರಾದವು. ಈ ಕ್ಯಾಮರಾಗಳಲ್ಲಿ ಬೇರೆ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟು ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ಎಷ್ಟು ಮಂದಿಗಳಿಗಾದರೂ ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು. ಕ್ರಯ ಕ್ಯಾಮರಾ 1 ಕ್ಕೆ ರೂ. 2—8—0

ಕಮಲಾ ಟ್ರೇಡಿಂಗ್ ಕಂಪೆನಿ,
17 ನಮ್ಮಾಳ್‌ವಾರ್ ಬೀದಿ,

4—1 ಜಿ. ಟಿ. ಮದರಾಸ್

Gents Lever Wrist Watch Rs 4—12—0.

ಜೆಂಟ್ಸ್ ಲೀವರ್ ರಿಸ್ಟ್ ವಾಚ್.



ಈ ಹೊಸ ನಮೂನೆ ಗಡಿಯಾರಗಳು ಬಹಳ ಬಲಿಷ್ಠವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟವೆ. ನೋಡಲಿಕ್ಕೆ ಭಂಗಾರದ ಗಡಿಯಾರದ ಹಾಗೆ ಕಾಣುವುವು. ಚಿಕ್ಕ ಸೈಜು, ಕೈಯಲ್ಲಿ ಕಟ್ಟಿಕೊಳ್ಳಲು ಬಹು ಅಂದವಾಗಿರುತ್ತೆ. ಇಂಗ್ಲಿಷ್ ನಮೂನೆ ಗಡಿಯಾರ ಗ್ಯಾರಂಟಿ 3 ವರ್ಷಗಳು ಕೊಡಲ್ಪಡುತ್ತೆ. ಬ್ರೇಸ್‌ಲೆಟ್ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 4—12—0.

ಕಮಲಾ ಟ್ರೇಡಿಂಗ್ ಕಂಪೆನಿ,
17 ನಮ್ಮಾಳ್ ವಾರ್ ಬೀದಿ,

4—1 ಜಿ ಟಿ, ಮದರಾಸು

ಶೃಂಗಾರದ ಪುಸ್ತಕ! ಶೃಂಗಾರದ ಪುಸ್ತಕ!!

ಸ್ತ್ರೀ ಪುರುಷರ [illegible] ಮರ್ಮಗಳನ್ನು ಫೋಟೋಗಳ ಸಹಿತ ತಿಳಿಸುವ [illegible]

[illegible] ಕ್ರಯ ರೂ. ೧—೦—೦.

ಕನ್ನಡ ಭಾಷೆಯಲ್ಲಿ ಅಂದವಾದ ಗ್ಲೇಜ್ ಕಾಗದದಲ್ಲಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ದೇಶದ ವೇಶ್ಯಾ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಳೆಯಾಳ, ಜಪಾನ್, ಫ್ರಾನ್ಸ್ ದೇಶದ ವೇಶ್ಯಾ ಸ್ತ್ರೀಯರ ಮಲಗುವ ಮನೆ ಫೋಟೋಗಳು, ಕನ್ಯೆಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು, ಜರ್ಮನಿ ದೇಶದಲ್ಲಿ ಸ್ತ್ರೀಯರು ದಿಗಂಬರವಾಗಿರುವ ವಿನೋದಗಳು, ರತಿ—ಮನ್ಮಥರ ಆನಂದವಾಗಿರುವುದಕ್ಕೆ ಮೋಹದ ಮಾರ್ಗಗಳು, ಈ ಫೋಟೋಗಳ ಸಹಿತ ಕೂಡಿದ ಈ ಶೃಂಗಾರವಾದ ಪುಸ್ತಕವನ್ನು ಓದಲು ಬಹು ಆನಂದವಾಗಿರುವದು. ಫೋಟೋಗಳು ಸಹಿತ ಪುಸ್ತಕಕ್ಕೆ ೧ ರೂಪಾಯಿ.

ಕಮಲಾ ಟ್ರೇಡಿಂಗ್ ಕಂಪೆನಿ,
17 ನಮ್ಮಾಳ್‌ವಾರ್ ಬೀದಿ,
ಜಿ. ಟಿ. ಮದರಾಸು.

ವರ್ತಮಾನ ಸಂಗ್ರಹ.

ಒಳನಾಡು.

ಈ ವಾರ ನಾಲ್ಕುನಾಡು ಸೆಲಜಿ ಗ್ರಾಮದ ಮಂಡಿರ ಬೆಳ್ಯಪ್ಪನವರ ಪತ್ನಿ ತನ್ನ ಕುತ್ತಿಗೆ ಕೊಯಿದುಕೊಂಡು ಆತ್ಮಹತ್ಯೆ ಮಾಡಿಕೊಂಡರಾಗಿ ವರ್ತಮಾನ.

ಮೆ. ಕೆ. ಯಸ್. ಬೆಳ್ಯಪ್ಪನವರು ಮಡಿಕೇರಿ ಚಾರ್ಕಿ ಬಳಿ ಪಯೊನೀರ್ ರಸ್ತೆಯಲ್ಲಿ ಹೊಸದಾಗಿ ಒಂದು ಔಷಧಶಾಲೆಯನ್ನು ತೆರೆದಿರುವರೆಂದು ತಿಳಿಯುತ್ತೇವೆ.

ಮುಂದುವರಿಸಿ ಇಟ್ಟ ಕೊಡವ ವಿದ್ಯಾಭಿವೃದ್ಧಿ ಫಂಡಿನ ಜನರಲ್ ಮೀಟಿಂಗ್ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲ್‌ನಲ್ಲಿ ಈ ತಾ. 31 ನೇ ಸೋಮವಾರ ಸಾಯಂಕಾಲ 5½ ಗಂಟೆಗೆ ನಡೆಯುವುದೆಂದು ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಮಡಿಕೇರಿ ಬಾಣೆಪೇಟೆ, ಮತ್ತು ಬ್ರಾಹ್ಮಣರ ಕೇರಿಯಲ್ಲಿ ಇಲಿಗಳು ಸಾಯುತ್ತಾ ಇವೆ; ಕ್ರಿಸ್ಟಲ್ ಪ್ಯಾಲೇಸಿನಲ್ಲಿ ವಾಸವಿರುವ "ಕೊಡಗು" ಪತ್ರಿಕೆಯ ಸಬ್ ಎಡಿಟರಾದ ಮೆ. ಮಾಚಿಮಂಡ ಗಣಪತಿಯವರಿಗೆ ತಾ. 11 ರಲ್ಲಿ ಪ್ಲೇಗು ಅಂಟಿ, ಈಗ ವಾಸಿಯಾಗುತ್ತಿದೆ.

ಕಳೆದ ಸೋಮವಾರ ಸಾಯಂಕಾಲ ತುಮಕೂರಿನ ಪಂಡಿತ ಸಯ್ಯದ್ ಮಹ್ಮದ್ ಖಸಿಂ ಬೀಸ್‌ದಾರರವರು ಧರ್ಮ ವಿಚಾರವನ್ನು ಕುರಿತು ಮಡಿಕೇರಿಯಲ್ಲಿರುವ ಜಮೀನ್ದಾರರ ಸಂಘದ ಹಾಲ್‌ನಲ್ಲಿ ಭಾಷಣ ಮಾಡಿದಾಗ್ಯೂ ಹಿಂದೂ ಮುಸ್ಲಿಂ ಐಕ್ಯಮತ್ಯದ ವಿಷಯ ಸಭೆಯ ... ಮಾತಾಡಿದರು.

ಈ ತಾ. 15 ರಲ್ಲಿ ಅಳೀತ. ಮಾಡ. ಗ್ರಾಮದ ಮೆ. ... ಅಲ್ಲಿರ ಕಾರ್ಯಪ್ಪನವರೂ, ವಿರಾಜಪೇಟೆಯಲ್ಲಿ ಸಿಂಗರ್ ಕಂಪೆನಿಯ ಕೊಡಗಿನ ಮ್ಯಾನೇಜರಾಗಿದ್ದ ಮೆ. ಐಚೆಟ್ಟಿರ ಕಂಬ್ಯಯ್ಯನವರೂ, ಕಳೆದ ವಾರ ಶಾಂತಳ್ಳಿ ಗ್ರಾಮದ ಮೆ. ... ಬಿದ್ದಪ್ಪನವರೂ ಮತ್ತು ತಾ. 17 ರಲ್ಲಿ ಲೇಟ್ ನಡಿಕೇರಿಯಂಡ ಕೆ. ಅಪ್ಪಚ್ಚನವರ ಪತ್ನಿಯವರೂ ಶಿವಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ಮಡಿಕೇರಿಯಂತೆ ಮಳೆಯೂ, ಗಾಳಿಯೂ ಜೋರಾಗಿವೆ. ಹೊಳೆ ತೋಡುಗಳ ಪ್ರವಾಹದಿಂದ ವ್ಯವಸಾಯಗಾರರಿಗೆ ತುಂಬಾ ನಷ್ಟವುಂಟಾಗಿದೆಯೆಂದು ವರ್ತಮಾನ. ತಾ. 15 ರಿಂದ ಈ ದಿನದವರೆಗೆ ಮಡಿಕೇರಿಯಲ್ಲಿ 22.97 ಇಂಚು ಮಳೆಯಾಗಿದ್ದು ಜೋರು ಮಳೆ ಹೊಡೆದ ತಾ 16 ರಲ್ಲಿ 5.12 ಇಂಚು ನಿಕ್ಕು.

ಮಡಿಕೇರಿಯ ಮಹಮ್ಮದೀಯ ಯುವಕ ಸಂಘದವರು ತಾ. 15 ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ ನಡೆಸಿದ ಮಹ್ಮದ್ ಪೈಗಂಬರವರ ಜನ್ಮೋತ್ಸವದಲ್ಲಿ ... ಫಾಜಿಲ್‌ರವರು ಬಾರದ್ದರಿಂದ ಬೆಂಗಳೂರಿನ ಮೆ. ... ಹ್ಮದ್ ಅಲಿ ಸಾಹೇಬರವರು ಅಧ್ಯಕ್ಷಸ್ಥಾನವನ್ನು ವಹಿಸಿ ಮಹ್ಮದರವರ ಜೀವಚರಿತ್ರೆಯ ವಿಷಯ ಸ್ವಾರಸ್ಯವಾದ ಭಾಷಣವನ್ನು ಮಾಡಿದರು.

ಕುರುಬರ ಕಾಳಿಂಗ ಮತ್ತು ಗಂಟಿ ಎಂಬವರು ಬಟ್ಟನಳ್ಳಿ ಗ್ರಾಮದ ಮುಸಲ್ಮಾನರ ಜವರಾಲ್‌ಬಿ ಎಂಬವಳ ಮನೆಯಲ್ಲಿ ಕೆಲಸಕ್ಕೆ ಒರುತ್ತಿದ್ದವರು ಸದರಿ ಜವರಾಲ್‌ಬಿಯ ನಗಗಳನ್ನು ಕದಿಯಲೆಂದು ಹೋಗಿ ... ಕೇಸು ಕಳೆದ ವಾರ ಶೆಷನ್ಸ್ ಕೋರ್ಟ್‌ನಲ್ಲಿ ವಿಚಾರ ನಡೆದು ವ್ಯೆಸರ್ ... ಗಾರ್ಡಿಯನ್ಸಿನ ಸ್ವಾಧೀನದಿಂದ ... ಹೋದ ಕಳ್ಳರಿಗೆ ಮಾತ್ರ ಕಾಳಿಂಗನಿಗೆ 2 ವರ್ಷ ಸಜೆಯಾಯಿತು. ಗಂಟಿಗೆ ಬಿಡುಗಡೆಯಾಯಿತು.

ಹಿಂದೂದೇಶ.

ಬಾಂಬಾಯಿಯಲ್ಲಿ ಅನಾವೃಷ್ಟಿಯ ಸಂಬಂಧ ಹುಲ್ಲು ಒಣಗಿ ಆಹಾರವಿಲ್ಲದೆ ದನ ಕರುಗಳು ನೂರಾರು ಸಂಖ್ಯೆಯಲ್ಲಿ ಸಾಯುತ್ತಿರುವವು. ಹರಕು ಬಟ್ಟೆ, ಕಾಗದಗಳನ್ನು ಕೂಡ ತಿನ್ನಬೇಕಾಗಿ ಬಂದಿದೆ.

ದುಂಡು ಮೇಜು ಪರಿಷತ್ತಿನ ಖರ್ಚಿನ ಬಗ್ಗೆ ಇಂಡಿಯಾ ಸರ್ಕಾರದವರು 7,92,000 ರೂಪಾಯಿಗಳನ್ನು ಮಂಜೂರು ಮಾಡಿರುವರು. ಬಾಕಿ ಅರ್ಧ ಖರ್ಚನ್ನು ಬ್ರಿಟಿಷ್ ಸರ್ಕಾರದವರು ಕೊಡುವರಂತೆ.

ಈಗಿನ ಪ್ರಾಚೀನ ಹೀನಸ್ಥಿತಿಗಾಗಿ 'ಸಿನೇಮ' (ಚಲನಚಿತ್ರ ಪ್ರದರ್ಶನ) ನೋಟಗಳನ್ನು ಜನರು ಬಹಿಷ್ಕರಿಸುವಂತೆ ಮಾಡಲು ಪೇಷಾವರದಲ್ಲಿ ಎಲ್ಲಾ ಕೋಮುಗಳ ಯುವಕರು ಸೇರಿ ಒಂದು ಸಂಘವನ್ನು ಏರ್ಪಡಿಸಿರುವರು.

ಮಹಾತ್ಮ ಗಾಂಧಿಯವರು ಭಾಗ ತೆಗೆದುಕೊಳ್ಳದ ಚಕ್ರಗೋಷ್ಠಿಯ ತೀರ್ಮಾನಗಳು ಫಲಕಾರಿಯಾಗಲಾರವಾದುದರಿಂದ ರಾಷ್ಟ್ರೀಯ ಪಕ್ಷದ ಮೆಂಬರುಗಳೆಲ್ಲರೂ ಚಕ್ರಗೋಷ್ಠಿಯನ್ನು ಬಹಿಷ್ಕರಿಸಬೇಕೆಂದು ಕಾನ್‌ಪುರದ ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಸಭೆಯು ತೀರ್ಮಾನಿಸಿದೆ.

ಹಿಂದೂದೇಶದ ವರ್ತಕರ ಸಂಘದಿಂದ ದುಂಡು ಮೇಜು ಪರಿಷತ್ತಿಗೆ ಮೂರು ಪ್ರತಿನಿಧಿಗಳನ್ನು ನೇಮಿಸಬೇಕೆಂದು ಕೇಳಿಕೊಂಡರೂ, ಸರ್ಕಾರದವರು ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್‌ರೊಬ್ಬರನ್ನು ಮಾತ್ರ ಆಹ್ವಾನಿಸಿದ್ದರಿಂದ, ಅವರೂ ಸದರಿ ಪರಿಷತ್ತಿಗೆ ಹೋಗದೆ ಹಿಂದೆ ನಿಂತಿರುವರು.

ಸಂಸ್ಥಾನಗಳ ಅರಸರುಗಳು ಅಲ್ಲಿಯ ಪ್ರಜೆಗಳ ಪ್ರತಿನಿಧಿಗಳಲ್ಲವೆಂತಲೂ, ಸಂಸ್ಥಾನಗಳ ಪ್ರಜೆಗಳ ಪ್ರತಿನಿಧಿಗಳಿಲ್ಲದ ದುಂಡು ಮೇಜು ಪರಿಷತ್ತಿನಲ್ಲಾಗುವ ತೀರ್ಮಾನಗಳು ಅವರಿಗೆ ಸಂಬಂಧಿಸುವದಿಲ್ಲವೆಂತಲೂ ಅಖಿಲ ಭಾರತ ಸಂಸ್ಥಾನಗಳ ಪ್ರಜೆಗಳ ಕಾನ್‌ಫರೆನ್ಸಿನ ಜನರಲ್ ಸೆಕ್ರೆಟರಿಯಾದ ಮೆ. ಮೇಹ್ತ್ಯರವರು ವೈಸರಾಯರಿಗೆ ತಿಳಿಸಿರುವರು.

ಮಹಾತ್ಮ ಗಾಂಧಿಯವರ ದುಂಡು ಮೇಜು ಪರಿಷತ್ತಿಗೆ ಹೋಗುವುದಿಲ್ಲವೆಂದು ತೀರ್ಮಾನಿಸಿದ್ದರಿಂದ ಪಂಡಿತ ಮದನ ಮೋಹನ ಮಾಳವೀಯರೂ, ಶ್ರೀಮತಿ ಸರೋಜಿನಿ ನಾಯುಡುರವರೂ ಮತ್ತು ಸರ್ ... ಶಂಕರ್ ... ರೂ ಸದರಿ ಪರಿಷತ್ತಿಗೆ ಹೋಗುವುದಿಲ್ಲ ... ರು. ಬಾಕಿ ಮೆಂಬರುಗಳು 'ಮುಲ್ತಾನ್' ಹಡಗಿನಲ್ಲಿ ತಾ. 15ರಲ್ಲಿ ಲಂಡನಿಗೆ ಪಯಣ ಬೆಳೆಸಿದರು.

ಈ ವಿಕ್ಷಟ್ಟಿನ ಸಮಯದಲ್ಲಿ ಮಹಾತ್ಮ ಗಾಂಧಿಯವರನ್ನು ಲಂಡನಿಗೆ ಹೋಗಗೊಡದೆ ಹೋದರೆ ಬ್ರಿಟಿಷ್ ಸರ್ಕಾರವನ್ನು ಇಂಡಿಯಾದ ಮತ್ತು ಇಂಗ್ಲೆಂಡಿನ ಮಾತ್ರವಲ್ಲ ಇಡೀ ಪ್ರಪಂಚದ ಜನಸಮುದಾಯವು ಕ್ಷಮಿಸಲಿಕ್ಕಿಲ್ಲವೆಂತಲೂ, ಬ್ರಿಟಿಷ ಸರ್ಕಾರವು ಇನ್ನಾದರೂ ದಾರಿಗೆ ಅಡ್ಡ ಬರಲಿಕ್ಕಿಲ್ಲವೆಂದು ತನಗೆ ತೋರುತ್ತದೆಯೆಂದೂ ಪಂಡಿತ ಮದನ ಮೋಹನ ಮಾಳವೀಯರು ತಾ. 17 ರಲ್ಲಿ ಹೇಳಿರುವರು.

ಡೆಲ್ಲಿ ಒಪ್ಪಂದವನ್ನು ಸರ್ಕಾರದವರು ಮುರಿದು ಹಾಕಿದ ವಿಷಯ ಮಹಾತ್ಮ ಗಾಂಧಿಯವರಿಗೂ, ವೈಸರಾಯರಿಗೂ, ಬೊಂಬಾಯಿ ಗವರ್ನರಿಗೂ, ಇಂಡಿಯಾ ಸರ್ಕಾರದ ಹೋಂ ಸೆಕ್ರೆಟರಿಯವರಿಗೂ, ಸೂರತ್ ಕಲೆಕ್ಟರಿಗೂ ನಡೆದ ಪತ್ರವ್ಯವಹಾರಗಳು ಪ್ರಕಟವಾಗಿರುವುದಲ್ಲದೆ, ವರ್ಕಿಂಗ್ ಕಮಿಟಿಯ ತೀರ್ಮಾನದ ನಂತರ ತಾ. 14ರಲ್ಲಿ ಮಹಾತ್ಮರು ಬೊಂಬಾಯಿಯಿಂದ ಅಹ್ಮದಾಬಾದಿಗೆ ತೆರಳುವ ಮುಂಚೆ ಸರ್ಕಾರದವರು ರಾಜಿ ಶರತ್ತಿಗೆ ವಿರೋಧವಾಗಿ ವರ್ತಿಸಿದ ಸಂದರ್ಭಗಳನ್ನೆಲ್ಲಾ ವಿವರಿಸಿ ವೈಸರಾಯರಿಗೆ ಬರೆದ ಪತ್ರವೂ ಪ್ರಕಟಿಸಲ್ಪಟ್ಟಿದೆ.

ಸಂಯುಕ್ತ ಪ್ರಾಂತ್ಯದ ಮುಸಲ್ಮಾನರ ಮಹಾಸಭೆಯು ಅಲಹಾಬಾದಿನಲ್ಲಿ ಕಳೆದ ಈ ತಿಂಗಳು ತಾರೀಕಿನಲ್ಲಿ ಜರಗಿತು. ನೇಪಾಳದ ನವಾಬರು ಅಧ್ಯಕ್ಷರಾಗಿದ್ದರು. ಸೌಕತಾಲಿಯರೂ ಕೆಲವು ಮಿನಿಟು ಈ ಸಭೆಯಲ್ಲಿ ಹಾಜರಿದ್ದು ಕಡೆಗೆ ಹೊರಟು ಹೋದರು. ಶ್ರೀ ಎಮ್. ಎ ಜಿನ್ನರು ಹಿಂದೂ ಮುಸಲ್ಮಾನರ ಐಕಮತ್ಯದ ವಿಷಯವಾಗಿ ಭಾಷಣ ಕೊಟ್ಟರು. ಹಿಂದುಗಳೂ ಮುಸಲ್ಮಾನರೂ ಒಂದಾಗಿ ಪ್ರತಿನಿಧಿಗಳನ್ನು ಚಕ್ರಗೋಷ್ಠಿಗೆ ಕಳುಹಿಸಬೇಕು ಎಂದು ಹೇಳಿದರು. ಹಿಂದೂ ಮುಸಲ್ಮಾನರಿಗೆ ರಾಜಿಯಾಗುವಂತೆ ಪ್ರಯತ್ನ ನಡಬೇಕು ಎಂಬ ಠರಾವು ಅಂಗೀಕೃತವಾಯಿತು.

ಡೆಲ್ಲಿ ಒಪ್ಪಂದದ ಶರತುಗಳನ್ನು ನಡಿಸುವುದರಲ್ಲಿ ಸರಕಾರದವರಿಗೂ, ಕಾಂಗ್ರೆಸ್ಸಿನವರಿಗೂ ಭಿನ್ನಾಭಿಪ್ರಾಯಗಳು ಹುಟ್ಟಿ, ಕಾರಣ ಅವುಗಳ ತೀರ್ಮಾನದ ಬಗ್ಗೆ ಒಂದು ನಿಷ್ಪಕ್ಷಪಾತದ ಕಮಿಟಿಯನ್ನು ನೇಮಿಸಬೇಕೆಂಬ ಮಹಾತ್ಮರ ಕೋರಿಕೆಗೆ ಸರ್ಕಾರದವರು ಒಪ್ಪದ್ದರಿಂದ ಮಹಾತ್ಮ ಗಾಂಧಿಯವರು ದುಂಡು ಮೇಜು ಪರಿಷತ್ತಿಗೆ ಹೋಗುವುದಿಲ್ಲವೆಂದು ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಈ ತಾ. 13ರಲ್ಲಿ ತೀರ್ಮಾನಿಸಿದರು. ನಿಷ್ಪಕ್ಷಪಾತದ ಕಮಿಟಿಯ ಬದಲು ಜನರಿಗೆ ಒಪ್ಪುವಂಥ ಒಬ್ಬ ಹೈಕೋರ್ಟ್ ಜಡ್ಜರನ್ನಾದರೂ ನೇಮಿಸಿದರೆ ಸಾಕೆಂತ ಮಹಾತ್ಮರು ಇತ್ತಲಾಗಿ ಸೂಚಿಸಿರುವರು. ಈ ವಿಷಯ ಇಂಡಿಯಾ ಸರ್ಕಾರದವರು ಆಲೋಚಿಸುತ್ತಿರುವರೆಂದು ವರ್ತಮಾನವಿದೆ.

ಅಂಕೋಲೆಯಲ್ಲಿ ಕೂಡಿದ ಹಿಂದೂ ಮಹಾಸಭೆಯ ಅಧಿವೇಶನವು ಮುಗಿಯಿತು. ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯು ಜಾತೀಯ ಜಗಳವನ್ನು ತೀರಿಸಲು ... ಕಾರ್ಯಕ್ರಮವನ್ನು ನಿಷೇಧಿಸುವ, ಕಾನ್ಪುರ ಗಲಭೆಗಾಗಿ ದುಃಖ ಸೂಚಿಸುವ, ಕಳೆದ ... ಪರಿಷತ್ತಿನಲ್ಲಿ ... ಮೂಂಜೆಯವರು ಮಾಡಿರುವ ಹಿಂದೂ ... ಸೇವೆಯನ್ನು ಕೃತಜ್ಞತೆಯಿಂದ ದಾಖಲಿಸ್ಮಡುವ, ಅಧಿಕಪ್ರಾಂತ್ಯವನ್ನು ಪ್ರತ್ಯೇಕಿಸುವುದನ್ನು ವಿರೋಧಿಸುವ, ಇವೇ ಮೊದಲಾದ ಠರಾವುಗಳಾದುವು. ಮುಂದಿನ ವರ್ಷದ ಕಾರ್ಯಕಾರೀ ಮಂಡಲಿಯ ಚುನಾವಣೆಯು ಈ ಕೆಳಗಿನಂತೆ ನಡೆದಿದೆ:— ಶ್ರೀ. ವಿಜಯರಾಘವಾಚಾರ್ಯರು ಅಧ್ಯಕ್ಷರು; ಡಾ. ಮೂಂಜೆಗಳು ಕಾರ್ಯಕಾರೀ ಅಧ್ಯಕ್ಷರು; ಪಂಡಿತ ಮಾಲವೀಯ, ಶ್ರೀ ರಮಾನಂದ ಚಟರ್ಜಿ, ರಾಜಾ ನರೇಂದ್ರನಾಥ, ಶ್ರೀ. ಕೇಳಕರ ಮತ್ತು ಭಾಯಿಪರಮಾನಂದ ಇವರು ಉಪಾಧ್ಯಕ್ಷರು. ಶ್ರೀ. ಜಗತ್‌ನಾರಾಯಣ ಲಾಲರವರು ಜನರಲ್ ಸೆಕ್ರೆಟರಿ, ಶ್ರೀ. ಪದ್ಮರಾಜ ಜೈನ್, ಶ್ರೀ. ಗೌರಿ ಶಂಕರ ಮಿಶ್ರ ಮತ್ತು ಗಣಪತರಾಯ ಇವರು ಸೆಕ್ರೆಟರಿಗಳು; ೧೫ ಮಂದಿಗಳು ಸದಸ್ಯರು.

ವಿದೇಶ.

ಜೈನಾದ ಹಾಂಕೌ ಪಟ್ಟಣದಲ್ಲಿ ನೆರೆಯ ದೆ. ಒಂದು ಮಿಷನ್ ಆಸ್ಪತ್ರೆಯು ಕುಸಿದು ಬಿದ್ದು ಅದರಲ್ಲಿದ್ದ 40 ರೋಗಿಗಳು ಮಣ್ಣು ಪಾಲಾದರು.

ಮೆಕ್ಸಿಕೋದಲ್ಲಿ ನೆರೆಯ ಹಾವಳಿಯಿಂದ 150 ಮನೆಗಳು ನೆಲಸಮವಾದವು. ಸಾನ್ ಪೆಡ್ರೊ ಡಿ ಕೋಲನ್ ಎಂಬಲ್ಲಿ 200 ಮಕ್ಕಳು ಅಪಘಾತದಿಂದ ಮೃತರಾದರು.

ಮಹಾತ್ಮರು ಚಕ್ರಗೋಷ್ಠಿಯಲ್ಲಿ ಭಾಗ ತೆಗೆದುಕೊಳ್ಳುವಂತೆ ಮಾಡಲು ಲಾರ್ಡ್ ಇರ್ವಿನ್‌ರವರು ಪ್ರಯತ್ನಿಸುತ್ತಿರುವರೆಂದು ಹೊರಟ ವರ್ತಮಾನವು ನಿಜವಲ್ಲವೆಂದು ಇತ್ತಲಾಗಿ ಪ್ರಕಟವಾಗಿದೆ.

ಸ್ಪೈನ್ ದೇಶದ ಹೊಸ ಆಡಳಿತ ರಚನೆಯು ಪ್ರಕಟಿಸಲ್ಪಟ್ಟಿದೆ. ಅದರ ಪ್ರಕಾರ ಅಲ್ಲಿಯವರು ಯುದ್ಧವನ್ನು ಬಹಿಷ್ಕರಿಸಬೇಕು. ಪಾರ್ಲಿಮೆಂಟು ಸಭೆಯು ಒಂದೇ ಆಗಿರಬೇಕು. ಆದರೆ ಅದು ಅಧ್ಯಕ್ಷರ ಆರಿಸುವ ಹಕ್ಕು ಅದಕ್ಕಿರುವುದಿಲ್ಲ.

ಮಹಾತ್ಮ ಗಾಂಧಿಯವರು ದುಂಡುಮೇಜು ಪರಿಷತ್ತಿಗೆ ಬರುವುದಿಲ್ಲವೆಂದು ಮಾಡಿದ ತೀರ್ಮಾನವು ಇಂಗ್ಲೆಂಡಿನಲ್ಲಿ ಜನರಿಗೆ ತುಂಬಾ ಆಶಾಭಂಗ ಉಂಟಾಗಿದೆಯೆಂದೂ. ಮಹಾತ್ಮರು ಅಲ್ಲಿಗೆ ಬರುವಂತೆ ಮಾಡಲು ಸರ್ವ ಪ್ರಯತ್ನಗಳನ್ನು ಮಾಡಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಒತ್ತಾಯಪಡಿಸಲ್ಪಡುತ್ತಿರುವರೆಂದೂ ಸುದ್ದಿ.

ಆಫ್ರಿಕದಲ್ಲಿ ನರ ಭಕ್ಷಕರು—ಬೆಲ್ಜಿಯಮಿಗೆ ಸೇರಿದ ಕಾಂಗೋವಿನ ಕಾಡು ಜನರ ಕೈಗೆ ಒಬ್ಬ ಇಂಗ್ಲಿಷ್ ಡಿಸ್ಟ್ರಿಕ್ಟ್ ಕಮಿಷನರ್ ಸಾಹೇಬರು ಸಿಕ್ಕಲು ಆ ಕಾಡು ಜನರು ಸಾಹೇಬರನ್ನು ಕೊಂದು ಬೇಯಿಸಿ ತಿಂದರು. ಸರ್ಕಾರದ ಸೈನ್ಯವು ಹೋಗಿ ಆ ಜನರೊಂದಿಗೆ ಒಂದು ಸಣ್ಣ ಕಾಳಗವನ್ನು ಮಾಡಿ ಅವರ ಮುಖಂಡನನ್ನು ಕೊಲ್ಲಲಾಯಿತು.

ಸ್ಪೈನ್ ದೇಶದಿಂದಹೊರಗೆ ಹಣ ಸಾಗಿಸದ ಹಾಗೆ ಅಲ್ಲಿಯ ಈಗಿನ ರಿಪಬ್ಲಿಕ್ ಸರ್ಕಾರದವರು ಬಹು ಎಚ್ಚರಿಕೆಯಲ್ಲಿರುವರು. ದೇಶದ ಗಡಿಯಲ್ಲಿರುವ ಪಹರೆಯವರು ಒಬ್ಬ ಹೆಂಗಸು ಹೊರಗೆ ಹೆತ್ತುಕೊಂಡು ಹೋಗುತ್ತಿದ್ದ ಮಗುವನ್ನು ಸಂಶಯದ ಮೇಲೆ ತಕ್ಕೊಂಡು ನೋಡಿದಾಗ್ಯೆ ಅದರೊಳಗೆ 50 ಸಾವಿರ (ಪೆಸೆಟಾಸ್) ನಾಣ್ಯಗಳಿದ್ದವಂತೆ!

ಇದೇ ಒನೇ ತಾರೀಕಿನ ದಿವಸ, ಇಂಡಿಯಾ ದೇಶದ ವೈಸರಾಯರಾಗಿದ್ದ ಲಾರ್ಡ್ ರೀಡಿಂಗ್‌ರವರು ಲಂಡನಿನಲ್ಲಿ ಮಿಸ್ ಸ್ಟೆಲ್ಲಾ ಚರ್ನಾರ್ಡು ಎಂಬಾಕೆಯನ್ನು ಅತ್ಯಂತ ವಿಜೃಂಭಣೆಯಿಂದ ಮದುವೆಯಾದರು. ಅವರ ಪ್ರಥಮ ಪತ್ನಿಯು ಕಳೆದ ಜನವರಿಯಲ್ಲಿ ಮೃತಪಟ್ಟರು. ಆದ್ದರಿಂದ ಕಳೆದ ೧೦ ವರ್ಷಗಳಿಂದಲೂ ತಮ್ಮ ಪ್ರೈವೇಟ್ ಸೆಕ್ರೆಟರಿಯಾಗಿದ್ದ, ತಮ್ಮ ರಾಜಕೀಯ, ಸಾಮಾಜಿಕ ವ್ಯವಹಾರಗಳಲ್ಲಿ ಸಹಾಯಕಳಾಗಿದ್ದ ಮಿಸ್ ಸ್ಟೆಲ್ಲಾ ಚರ್ನಾರ್ಡಳನ್ನೇ ಅವರು ಮದುವೆಯಾದರು. ಲಾರ್ಡ್ ರೀಡಿಂಗ್‌ರ ವಯಸ್ಸು 70; ವಧುವಿನ ವಯಸ್ಸು 37.

ಎಲ್ಲಿ ಹೋದರೂ ಪೋಲೀಸರು ನ್ಯಾಯವನ್ನೇ ಮಾಡಿದರು ಎಂದು ಹೇಳುವಂತಿಲ್ಲ. ಕಳೆದ ಹತ್ತು ವರ್ಷಗಳಿಂದ ಅಮೇರಿಕದ ಅರ್ಧಾಂಶ ಪಟ್ಟಣಗಳಲ್ಲಿಯೂ ಪೋಲೀಸರು ಅನ್ಯಾಯಮಾಡುತ್ತಾರಂತೆ. ಅದನ್ನು ವಿಚಾರಿಸುವುದಕ್ಕೆ ನೇಮಕವಾದ ಕಮಿಟಿಯ ವರದಿಯನ್ನು ನೋಡಿ ಅಧ್ಯಕ್ಷರಿಗೆ ಸಿಟ್ಟು ಬಂದಿದೆ. ಅಪರಾಧಿಗಳನ್ನೂ, ಅಪರಾಧಿಗಳೆಂದು ಸಂಶಯವಿದ್ದವರನ್ನೂ ಬಿಡದೆ ನಿದ್ರೆ ಕೆಡಿಸುವುದು, ಹೊಡೆಯುವುದು, ಹೊಟ್ಟೆ ಹಸಿವೆ ಹಿಡಿಯುವವರೆಗೂ ನೀರು ಕುಡಿಸುವುದು, ಅ ಮೇಲೆ ತಲೆಕೆಳಗಾಗಿ ಬಂಧಿಸುವುದು ಮೊದಲಾಗಿ ಕ್ರೂರವಾಗಿ ಶಿಕ್ಷಿಸುತ್ತಿದ್ದಾರೆ ಎಂದು ವರದಿಯು ಹೇಳುತ್ತದೆ.

ಮಲೇರಿಯ

ಜ್ವರದಿಂದ ನೀವು ನರಳುತ್ತಿದ್ದೀರೋ? ಹಾಗಾದರೆ

ಅನಫೀಲ್

ಎಂಬ ಔಷಧಿಯನ್ನು ಒಡನೆ ತೆಗೆದುಕೊಳ್ಳಿ.

ಈ ಕಾಲದಲ್ಲಿ ಜಗತ್ಪ್ರಸಿದ್ಧವಾದ ಮತ್ತು ಸಂಶಯವಿಲ್ಲದ ಗುಣಗಂಡ ಔಷಧಿ ಇದೊಂದೇ. ಇದರ ಸತ್ವವು ಆಶ್ಚರ್ಯಕರವಾದದ್ದು. ಇದರ ... ನಾವು ಖಾಯಂ ಆದದ್ದು. ಇಮಿಟೇಷನ್‌ಗಳ ವಿಷಯ ಎಚ್ಚರಿಕೆ. "Special Formula for India" ಎಂದು ಅರಸಿನ ಬಣ್ಣದ ಗುರುತಿನ ಚೀಟು ಅಂಟಿಸಿರುವ ನಮ್ಮ ನಿಜವಾದ ಕುಪ್ಪಿಗಳನ್ನು ಕೊಂಡುಕೊಳ್ಳಲು ಬಾಗ್ರತೆಯಾಗಿರಿ.

Sole Agents:—

GORIO LTD.,
P. O. Box 155
Fort, Bombay.

26—5

ಪತ್ರವ್ಯವಹಾರ.

[ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗಿನ ರೈತರ ಕ್ಷೀಣಗತಿ

ಅಯ್ಯಾ,

ಅಗ್ಗಿ ಕಳೆದ ವರ್ಷದಿಂದ ಉಂಟಾಗಿರುವ ವಸ್ತುಗಳ ಬೆಲೆಯ ಇಳಿಯುವಿಕೆಯಿಂದ ರೈತರೂ, ವ್ಯಾಪಾರಿಗಳೂ ಕ್ಷೀಣಗತಿಗೆ ಇಳಿದು ಅಧೋಗತಿಯಲ್ಲಿರುವರು. ಈಗಿನ ನಿರ್ಗತಿಯಿಂದ ವಾರಗಲು ದಾರಿ ಕಾಣದೆ ನರಳುತ್ತಿರುವರು. ಅನೇಕ ರೈತರು ಸಾಲಗಾರರಾಗಿ ಪರಿಣಮಿಸಿದೆ. ಹಣವಂತರು ಕೇವಲ ವಿರಳ ಅಲ್ಪಸ್ವಲ್ಪ ಇರುವವರು ಕೂಡ ವ್ಯಾಪಾರ ವೃತ್ತಿಯಿಂದ ರೈತರಿಗೆ ಸಾಲ ಕೊಡಲು ಅಂಜುತ್ತಾರೆ. ಇಡೀ ಹಿಂದೂಸ್ಥಾನದ ವ್ಯವಸಾಯಗಾರರ ಒಂದೊಂದು ಕುಟುಂಬಕ್ಕೆ ಸರಾಸರಿ 325 ರೂ. ಸಾಲವಿದೆಯೆಂಬುದನ್ನು ಸ್ಥಿರಪಡಿಸಿರುವರು. ಕೊಡಗು ದೇಶದಲ್ಲಾದರೋ, ಸಹಕಾರ ಸಂಘಗಳ ಮೂಲಕ ಸಾಲ ಮೂಲ ಪಟ್ಟಿ [illegible] ಕೊಡಿಸಿದನ್ನು ನೋಡಿದಲ್ಲಿ 100 ಬಟ್ಟಿ ಭೂಮಿ ಇರುವವನಿಗೆ 400 ರೂ. ಗಿಂತಲೂ ಸರಾಸರಿ ಸಾಲವಿರುವದಾಗಿ ಕಾಣ ಬರುತ್ತದೆ. ಆತನ ಸಾಲವೆಲ್ಲವೂ ಸಾಧಾರಣವಾಗಿ ಶೇಕಡ 12½ಯಿಂದ 36ರ ಬಡ್ಡಿಯದಾಗಿದೆ. ಕೊಡಗಿನ ರೈತರು ಅದರಂತೆ ಚಿಕ್ಕ ಸಾಹುಕಾರರಲ್ಲಿ ಗಿರವಿ ಇಟ್ಟು 100 ರೂಪಾಯಿಗೆ 25 ರೂಪಾಯಿ ಬಡ್ಡಿಗೆ ಸಾಲ ತೆಗೆಯುತ್ತಾ ಇರುವದು ತಿಳಿದ ಸಂಗತಿಯಾಗಿದೆ. ಹೀಗಾಗಿ ಚಿನ್ನ ಬೆಳ್ಳಿಯೂ ತೀರಿವೆ. ಬ್ಯಾಂಕಿನಲ್ಲಿಯಾದರೂ ಇಟ್ಟು ಸುಲಭ ಬಡ್ಡಿಯಲ್ಲಿ ಸಾಲ ತೆಗೆಯುವರೆಂದರೆ ಬ್ಯಾಂಕೆಂಬುದು ಕೊಡಗಿನ ಹಣೇ ಬರಹದಲ್ಲಿ ಇಲ್ಲ. ಬ್ಯಾಂಕಿಂಗ್ ಇನ್ಕ್ವಯರಿ ಕಮಿಟಿಯೊಂದು ಕೊಡಗು ದೇಶಕ್ಕೆ ಕಳೆದ ವರ್ಷ ವೈಸರಾಯರಂತೆ ವಿಜೃಂಭಣೆಯಿಂದ ಕಾಲಿಕ್ಕಿತು. ಆದರೇನು? ಹೊಟ್ಟೆಯವರು ದಂಗೆ ಎದ್ದ ಕೂಡಲೆ ಕೊಡಗಿಗಾಗಿ ರೈಲು ಹಾಕ [illegible] ಸರ್ವೆ ಮಾಡಿಸಿದಂತಾಯಿತು. ಈ ತರದ ರೈಲಿನಿಂದಲೇ ಕೊಡಗನ್ನು ಶತಮಾನದಿಂದ ಕಾಯುತ್ತಿದ್ದಾರೆ. ಅದರಂತೆಯೇ ಬ್ಯಾಂಕೂ! ರೈತರ ಚಿನ್ನವೂ [illegible]. ಇನ್ನು ಉಳಿದಿರುವದು ಭತ್ತ. 100 ಬಟ್ಟಿ ಭೂಮಿಯವನಿಗೆ 400 ರೂ. ಸಾಲವಾದರೆ ಬಡ್ಡಿಯೇ 100 ರೂಪಾಯಿಯಾಯಿತು. 100 ಬಟ್ಟಿ ಭೂಮಿಯಲ್ಲಿ ವ್ಯವಸಾಯದ ಖರ್ಚು ಕಳೆದು 30 ಬಟ್ಟಿ ಭತ್ತ ಸಿಕ್ಕುತ್ತೆ. [illegible] 20 ಬಟ್ಟಿಯನ್ನು ಇಟ್ಟುಕೊಂಡರೂ [illegible] ಉಳಿಯುವ 10 ಬಟ್ಟಿ ಭತ್ತದಿಂದ [illegible] 40 ರೂ. [illegible] 36 ಬಟ್ಟಿ [illegible] 400 ರೂಪಾಯಿ [illegible]

[illegible]

(1) ಸೆಂಟ್ರಲ್ ಬ್ಯಾಂಕಿನಿಂದ [illegible] ವನ್ನು ಕಮ್ಮಿ ಬಡ್ಡಿ [illegible] ಯಿಂದ ಸಾಲ [illegible] ದಿಗೆ ಶೇಕಡ 6 ರೂ. ಬಡ್ಡಿ [illegible]

(2) ಸೆಂಟ್ರಲ್ ಬ್ಯಾಂಕಿನಲ್ಲಿ ಚಿನ್ನ [illegible] ಕೊಂಡು ವೆಂಬರುಗಳಲ್ಲದವರಿಗೆ 5 [illegible] ಹಣ ಸಾಲ ಕೊಡುವ ಏರ್ಪಾಡು ಮಾಡುವುದು.

(3) ಸೆಂಟ್ರಲ್ ಬ್ಯಾಂಕಿನಿಂದ ಗ್ರಾಮ ಸಂಘಗಳಿಗೆ ದೀರ್ಘ ಕಂತಿನ ಸಾಲವನ್ನು ಕೊಡುವುದಕ್ಕೆ ಬ್ಯಾಂಕಿಗೆ ಸರ್ಕಾರವು ಅನುಕೂಲಪಡಿಸಿ, ಈ ಮೂಲಕ ರೈತರಿಗೂ ಗ್ರಾಮ ಸಂಘದಿಂದ ದೀರ್ಘ ಕಂತಿನ ಸಾಲವನ್ನು ಕೊಡಿಸುವುದು.

(4) ಟಕಾವಿ ಮತ್ತು ಕಂದಾಯಕ್ಕೆ ಉದಾರವಾದ ವಾಯಿದೆ ಮತ್ತು ಕಂತು ಕೊಡುವದು.

(5) ಸಿವಿಲ್ ಕೋರ್ಟುಗಳಲ್ಲಿ ಬರುವ ಎಲ್ಲಾ ದಾವೆಗಳ ಮೇಲೆ ಹಿರಾದು ತಾರೀಖು [illegible] ವರೆಗೆ ಪ್ರತಿವಾದಿಯ ಸ್ಥಿತಿಗತಿಯನ್ನು ನೋಡಿ ಶೇಕಡ 6 ರೂ. ಮಾತ್ರ ಬಡ್ಡಿ ಕೊಡಿಸಿ ಡಿಕ್ರಿ [illegible] ಅಧಿಕಾರವನ್ನು ಸಿವಿಲ್ ಕೋರ್ಟುಗಳಿಗೆ ಕೊಡುವದು. ಮತ್ತು ದೀರ್ಘ ಕಂತುಗಳನ್ನು ಕೊಡುವದು.

(6) ಅಡಾಯದುಗಳ ಬಡ್ಡಿಯನ್ನು 100ಕ್ಕೆ 5 ರೂಪಾಯಿಯಿಂದ 3½ ರೂಪಾಯಿಗೆ ಇಳಿಸುವುದು.

(7) ದೀರ್ಘ ನಿದ್ರೆಯಲ್ಲಿರುವ ಗ್ರಾಮ ಪಂಚಾಯತಿಗಳನ್ನು ಜಾಗರಿತಗೊಳಿಸುವದು.

(8) ಗ್ರಾಮಗಳಲ್ಲಿ ರೈತರ [illegible] ಸಹಾಯ [illegible] ಅಂಗಡಿಗಳನ್ನು [illegible] ಸುವುದು.

(9) ಕೆಲವು ಪ್ರೊಫೆಸ್ ಟ್ಯಾಕ್ಸುಗಳನ್ನು ಇಳಿಸುವುದು.

(10) ಗ್ರಾಮ ಸಹಕಾರ ಸಂಘಗಳು [illegible] ಮೆಂಬರುಗಳಿಂದ [illegible] ವಸೂಲು ಮಾಡದಂತೆ ನೋಡುವುದು.

ಮೇಲ್ಕಂಡ ಸೂಚನೆಗಳನ್ನು ಸರಕಾರದವರೂ, [illegible] ರೈತರಿಗೆ ಕೊಡದೆ ಇದ್ದಲ್ಲಿ [illegible] ಮತ್ತು [illegible] ವ್ಯವಸಾಯವೂ ಅಧೋಗತಿಗೆ ಇಳಿದು, ಕೊಂಚ ಕಾಲದಲ್ಲೇ [illegible] ರೈತರು ಗೆಸ್ಟೆ ಗೆಣಸುಗಳಿಂದ [illegible] ಪರಿಣಮಿಸ ಬಹುದರಲ್ಲಿ ಸಂಶಯವಿಲ್ಲ.

[illegible]

ಕೊಡಗಿನ [illegible]

([illegible])

ಇನ್ನು ಇದರ ಎರಡನೆ [illegible] ಗಿದೆ. ನಮ್ಮ ಸರಕಾರವು [illegible] ಸುಖ ಸಂಪತ್ತನ್ನು [illegible] ನಮ್ಮನ್ನು ಆದರ [illegible]

[illegible]

ಕೊಂಡು ವ್ಯಾಪಾರಿಗಳಿಂದ ಪಡೆಯಲ್ಲಿ ಅಳತೆ ಮಾಡಿ [illegible] ಕೊಟ್ಟು ಅದರ ಹೊರಸೂಲಾತಿಗೆ ಪಡುವ ಕ್ರಮದಲ್ಲಿ ಜನರು ವಿಪರೀತ ನಷ್ಟಕ್ಕೊಳಗಾಗುತ್ತಾರೆ. ಗ್ರಾಮಗಳ ಸಂಯೋಗದ ರಸ್ತೆಯು ಈ ವರ್ಷದಲ್ಲಿ ನಾಲ್ಕೈದು ತಿಂಗಳ ವರೆಗೆ ಜನರು ಕೈ ಕೊಂಡರೆಗಳಿಗೆ ಒಳಪಡು [illegible] ರಾಗುತ್ತಾರೆ. ನಾಲ್ಕು ಕಡೆಯಿಂದ ಸರಕಾರಕ್ಕೆ ಅಷ್ಟು [illegible] ಕಂದಾಯ ದೊರಕಿದ ವೀರರಾಜಪೇಟೆಯಿಂದ [illegible] ಲ್ಯನಾಡಿಗೆ ಹೋಗುವ ರಸ್ತೆಯನ್ನು ಅಭಿವೃದ್ಧಿಗೆ ತರಲು [illegible] ಸರಕಾರದವರಿಗೆ ಸಾಧ್ಯವಾಗಲೋಗಿದೆ. ಆ ವಿಷಯವಾಗಿ ಕೂಗಿತ್ತಿದರೆ ಸರಕಾರದವರಿಗೆ ಕರವು ಅಲ್ಲಿ ದೆ—ಹಣವಿಲ್ಲ ಹಣವಿಲ್ಲ! ಪೊನ್ನಂಪೇಟೆಯಿಂದ ಸಿದ್ದಾಪುರಕ್ಕೆ ಹೋಗುವ [illegible] ಸ್ತೆಯನ್ನು ಬೇಗಿಗೆ ಕಾಲದಲ್ಲಿರ್ಧ ಮೈಲಿ ದೂರದಿಂದ [illegible] ರು [illegible] ಮಾಡಲು ಹಣವಿಲ್ಲ ಯೇ? ಈ ರಸ್ತೆಯ ವಿಷಯ ಪ್ರಾಂತ್ಯದಲ್ಲಿರುವ [illegible] ಕೂಗಿತ್ತಲಿಲ್ಲ. ಆದರೂ ಆ ಕೆಲಸವು ಆಗುತ್ತಿಲ್ಲ. [illegible] ಪೊನ್ನಂಪೇಟೆಯಿಂದ ಅಮ್ಮತ್ತಿ ಮಾರ್ಗವಾಗಿ ಸಿದ್ದಾಪುರಕ್ಕೆ [illegible] ಮೈಲಿ, ಪೊನ್ನಂಪೇಟೆಯಿಂದ [illegible] ಸಿದ್ದಾಪುರಕ್ಕೆ 7 ಮೈಲಿ. ಸಿದ್ದಾಪುರ ಪ್ರಾಂತ್ಯದಲ್ಲಿ ಕೆಲವು ಯೂರೋಪಿಯನ್ ಪ್ಲಾಂಟರುಗಳಿಗೆ ಎಲ್ಲಾ ಸಮಯದಲ್ಲಿಯೂ ಮೋಟರು ಮೈ [illegible] ದಾರಿಗಾಗಿ ಪೊನ್ನಂಪೇಟೆ ಹೋಗಲು ಅನುಕೂಲ ಮಾಡಿಕೊಡಲು ಆ ರಸ್ತೆಗೆ [illegible] ಖರ್ಚು ಮಾಡ [illegible] ಆ ಪ್ರಾಂತ್ಯದಲ್ಲಿನ ರೈತರಿಗೆ ಈ ರಸ್ತೆಯ [illegible] ಖರ್ಚು ಮಾಡುವ ಹಣದ ಶೇಕಡ [illegible] ಆಗಿಲ್ಲವೆಂದು. [illegible] ರಸ್ತೆಯಲ್ಲಿ ಆಗಲಾದರೂ ಕೂಡ ಸರಾಸರಿ ದಿನಕ್ಕೆ 10 [illegible] ರಾಗಲೀ, ಎರಡು ಬಂಡಿಗಳಾಗಲೀ ತಿರುಗುವುದಿಲ್ಲ. [illegible] ಆಗಿ ಇಷ್ಟು ಹಣವನ್ನು ನಾಲ್ಕು ನಾಡಿನ ರಸ್ತೆಗೆ ಖರ್ಚು ಮಾಡಿದ್ದರೆ ಇದಕ್ಕಿಂತಲೂ ಸಾವಿರ ಪಾಲು ಪ್ರಯೋಜನವಾಗುತ್ತಿತ್ತು.

ಈ ಚಿಕ್ಕ ದೇಶದಲ್ಲಿ ತಲೆ ಭಾರದ ಆಡಳಿತದ ವೆಚ್ಚ [illegible] ವಾಗಿ ಹೇಳುವುದಾದರೆ ನಮಗೆ ಒಬ್ಬ ಕಮಿಶನರು ಬೇಕು. [illegible]ರ್ವೇಟರ್ ಬೇಡ, ಅಂಜಿನೀಯರ್ ಮತ್ತು ಸಿವಿಲ್ [illegible] ನ್ ಮೊದಲೇ ಬೇಡ ಮತ್ತು ಇವರುಗಳ ಜೊತೆಗೆ ಬೇರೆ [illegible] ಹುದ್ದೆಗಳು ಅನಾವಶ್ಯ. ಈ ಹುದ್ದೆಗಳನ್ನು ತೆಗೆದು ಹಾಕಿದರೆ ರೈತರಿಗೆ ಎಲ್ಲಾ ವಿಧದಲ್ಲಿಯೂ ಸಹಾಯ ಮಾಡಿ [illegible] ವನ್ನು ಅಭಿವೃದ್ಧಿಗೆ ತರಲು ಸರಕಾರದಲ್ಲಿ ಬೇಗನೆ ಹಣ [illegible] ವುದಲ್ಲದೆ 20 ರೂಪಾಯಿಗಿಂತ ಕಮ್ಮಿ ಇರುವ ಸರ್ಕಾರ [illegible] ನೌಕರರಿಗೆ ಸಂಬಳ ಏರಿಸಬಹುದು. ಪಿ. ಡಬ್ಲ್ಯು. ಡಿ. [illegible] ಯಿಂದ ಉಂಟಾಗುತ್ತಿರುವ ಖರ್ಚನ್ನು ನೋಡಿ [illegible] ಯ ಕೊರತೆಯ ಪ್ರಜೆಗೆ ಹೊಟ್ಟೆ ಉರಿಯಾಗದೆ ಇದ್ದೀತೆ? Public works department ಎಂಬುದನ್ನು ಬೇಗನೆ Public money wasting department ಎಂದರೆ ಬಹು ನಿಜವಾಗುವುದು. ಅಮ್ಮತ್ತಿ ವೀರರಾಜಪೇಟೆ ಮಧ್ಯ [illegible] ಮೈಲಿ [illegible] ಕಿರಿದು ಬಿದ್ದಿರುವ ರಸ್ತೆಯನ್ನು ಕಳೆದ ಹತ್ತು ವರ್ಷಗಳಲ್ಲಿ ಎಷ್ಟಾವರ್ತಿ ರಿಪೇರಿ ಮಾಡಿರುತ್ತಾರೆ? ಈ ತರದ ಕೆಲಸವನ್ನು ಮಾಡಲು ಸಾವಿರ ರೂಪಾಯಿಯಷ್ಟು ಸಂಬಳ ತಿನ್ನುವ ಆಫೀಸರುಗಳು ಬೇಕೇ? ಈಗಾಗಲೇ ವೀರರಾಜಪೇಟೆಯಿಂದ [illegible] ಪೊರಟದ ವರೆಗಿನ ರಸ್ತೆಗೆ ತಾರು ಹಚ್ಚುವರೆಂದು. ಅದಂತೆ ಮತ್ತು ಅದಕ್ಕೆ ಅಂದಾಜು ಖರ್ಚು 1,40,000. ಮಡಿಕೇರಿ ವೀರರಾಜಪೇಟೆ ಟೌನ್ ನೊಳಗೆ ತಾರು ಹಾಕಿರುವುದನ್ನು ವಾಚಕ [illegible] ನೋಡಿರಬಹುದು. ಮತ್ತು ಆ ಕೆಲಸ ಮಾಡಿ ಎಷ್ಟು ವರ್ಷಗಳಾದವು ಎಂಬುದಾಗಿಯೂ ಸಹ [illegible] ಗಣನೆಯಲ್ಲಿರಬಹುದು. ದೇಶದ ಜನರು ಬಡತನದಲ್ಲಿ [illegible] ಸಮಯದಲ್ಲಿ ಎರಡು ವರ್ಷಗಳ ಪ್ರಯೋಜನ ಕೂಡ ಇಲ್ಲದಂತ [illegible] ಲಕ್ಷ ರೂ [illegible] ಖರ್ಚುಮಾಡಲು ನಿಮ್ಮೆಲ್ಲರ ಒಪ್ಪಿಗೆ ಇದೆಯೇ? ಅಲ್ಲದೆ ರಸ್ತೆಯ [illegible] ರಿಪೇರಿ ಖರ್ಚು ವರ್ಷಕ್ಕೆ 10,000 ರೂಪಾಯಿಗಳು. ಹೇಗೂ ಪಿ. ಡಬ್ಲ್ಯು. ಇಲಾಖೆಯಲ್ಲಿ ವಿಪರೀತ ಹಣ ಖರ್ಚಾಗುತ್ತೆ. ಇದು ಎಷ್ಟರ ಮಟ್ಟಿಗೆ ಸತ್ಯ [illegible] ಎಂಬುದನ್ನು ಸರಕಾರದವರು [illegible] ಕಮಿಟಿ [illegible] ಪರೀಕ್ಷಿಸಿದ್ದರೆ ಉಪಯೋಗವಿತ್ತು.

ಕೊಡಗಿನ ಪಟ್ಟಣಗಳಲ್ಲಿ ಸ್ವಂತ ಡಾಕ್ಟರುಗಳು ಇಟ್ಟುಕೊಂಡಿರುವಂಥ X-ray installation ಕೊಡಗು ಪ್ರಾಂತ್ಯದಲ್ಲಿ ಇಲ್ಲದಿರುವುದು ಎಷ್ಟು ನಾಚಿಕೆ. ಸಿವಿಲ್ ಸರ್ಜನರಿಗೆ [illegible] ಕೆಲವು ತಿಂಗಳ ಸಂಬಳದಿಂದ ಇಂಥಾದೊಂದನ್ನು ಕೊಡಿಸ [illegible] ಒಬ್ಬನ ಒರೇ ಒಂದು ತಿರ ಬೆಳಗಿನ [illegible] ಅದನ್ನು ಕೊಡಗಿನಲ್ಲಿ ಸಂಪಾದಿಸಲು ಸಾಧ್ಯವಾಗದೆ ಮೈಸೂರಿಗೆ ಹೋಗಬೇಕಾಗಿದೆ. ಈ ದಿವಸದಲ್ಲಿ ಮೈಸೂರು ಬೆಂಗಳೂರು ಆಸ್ಪತ್ರೆಗಳಲ್ಲಿ ಕೊಡಗಿನ ಎಷ್ಟು [illegible] ಚಿಕಿತ್ಸೆ ಹೊಂದುತ್ತಿರುವರು ಮತ್ತು ಅದು ಏಕೆ? ಈ ವಿಷಯದಲ್ಲಿ ಬಡ ರೈತರು ಎಷ್ಟು ಹಣ ವೆಚ್ಚ ಮಾಡುತ್ತಾರೆ.

ಸಂದೇಶಗಳಲ್ಲಿ ನಿರುದ್ಯೋಗಿಗಳ ಪ್ರಶ್ನೆಯು ದಿನೇ ದಿನೇ ಬಹು ಮಹತ್ವದ ಪ್ರಶ್ನೆಯಾಗಿ ಬರುತ್ತಲಿದೆ. ನಮ್ಮ ದೇಶದಲ್ಲಿ ಅದರ ಸಂಕಟಗಳನ್ನು ಕೇಳುವವರೇ ಇಲ್ಲ. ಕೊಡಗಿನ ರೈತರಿಗೆ ವರ್ಷದಲ್ಲಿ 6 ತಿಂಗಳು ಕೆಲಸವಿಲ್ಲದೆ 6 ತಿಂಗಳು ಕಷ್ಟಪಟ್ಟು ಸಂಪಾದಿಸಿದುದನ್ನು ನೋಡಿ ಗುತ್ತಿಗೆಯಲ್ಲಿಯೇ [illegible]

...ೂ ಬೇರೆ ಅನೇಕ ಪ್ರಯೋಜನವ ಕೆಲಸಗಳಲ್ಲಿ ಖರ್ಚು ಮಾಡುತ್ತಾರೆ. ಇವರಿಗೆ ಆ ಸವದಲ್ಲಿ ಒಂದು ವೃತ್ತಿಯನ್ನು ಕಂಡು ಹಿಡಿಯಲು ಸರ್ಕಾರ ಯಾತಕ್ಕೆ ಸಹಾಯ ಮಾಡಬಾರದು? ನಮ್ಮ ದೇಶವು ಇನ್ನೂ ಅರ್ಧಕ್ಕಿಂತಲೂ ಹೆಚ್ಚು ಸ್ಥಳವು ಕಾಡುಪ್ರದೇಶವಾಗಿಯೇ ಇದೆ ...ವುಗಳೆಲ್ಲವನ್ನೂ ಅವಶ್ಯವಿದ್ದಷ್ಟರಿಗೆ 10—15 ವರ್ಷಗಳವರೆಗೆ ಕಂದಾಯವಿಲ್ಲದೆ ಕೊಟ್ಟು ಅವರಿಗೆ ಸರಕಾರದವರು ಹಣ ಸಹಾಯಮಾಡಿ ಕಾಫಿ ಕಿತ್ತಳೆ ಮುಂತಾದವುಗಳನ್ನು ಬೆಳೆಸಲು ಪ್ರೋತ್ಸಾಹ ಕೊಟ್ಟರೆ ಕೆಲವು ವರ್ಷಗಳಲ್ಲಿ ಸರಕಾರದ ಖಜಾನೆಯು ತುಂಬುದಿಲ್ಲವೇ? ಇಷ್ಟೆಲ್ಲವೂ ಹಣವೆಲ್ಲಿಂದ ಬರುವುದೆಂಬುದಾಗಿ ಒಂದು ಪ್ರಶ್ನೆ. ಸ... ನೆರೆ ಪ್ರಾಂತ್ಯವಾದ ಮೈಸೂರು ಸೀಮೆಯು ಕನ್ನಂಬಾಡಿ ಕಟ್ಟೆ ಮುಂತಾದ ರೈತರಿಗೆ ಪ್ರಯೋಜನಕಾರವಾದ ಕೆಲಸಗಳನ್ನು ಕೈಕೊಂಡಾಗ ಅವರ ಖಜಾನೆಯೇನೂ ತುಂಬಿರಲಿಲ್ಲ. ಹಾಗೂ, ಅಂತಹ ಮಹತ್ಕಾರ್ಯಗಳನ್ನು ಅವರು ನೆರವೇರಿಸಲಿಲ್ಲವೇ? ಈಗ ಅಲ್ಲಿಯ ಕಬ್ಬು ನೀರು ಬೆಳೆಗೆಯ ದೆಸೆಯಿಂದಲೇ ಲಕ್ಷಾಂತರ ರೂಪಾಯಿಗಳನ್ನು ಸರಕಾರಕ್ಕೆ ಬರುವುದೆಂದು ಬಂತೆ ಇಲ್ಲದೆ ಕೊಡುವುದಿಲ್ಲವೇ? ದೇಶದಲ್ಲಿ ಬೇಕಾದಷ್ಟು ಹಣವು—ನಮ್ಮ ಕೊಡಗಿನಲ್ಲಿಯೂ ಕೂಡ—ಸ ...ನ ಪ್ರಯೋಜನವಿಲ್ಲದೆ ಬಿದ್ದಿದೆ. ಈ ಹಣವನ್ನು ಅಷ್ಟು ಕೂಡಿಸಲು ಬಹು ಕಷ್ಟವೇ? ಒದಾಹರಣೆಗೆ, ದೇಶದಲ್ಲಿ ... ಬಡ ರೈತರು ಹಣವಿಲ್ಲದೆ ಗೋಳಾಡುತ್ತಿರುವ ಈ ಸಮಯದಲ್ಲಿಯೂ ಕೂಡ, ದೇಶದಲ್ಲಿ ಹಣ ಖರ್ಚಾಗುವ ಹಾಗೆ ... ಪ್ರವೃತ್ತಿಯನ್ನು ತೆಗೆಯಲು ಇಲ್ಲ ಕಷ್ಟವಿದ್ದರೂ ಕೂಡ, ಕೊಡಗಿನಲ್ಲಿರುವ ಸೆಂಟ್ರಲ್ ಬ್ಯಾಂಕು ಆದಾಗ್ಯೂ ಹಾಗೂ ಹೊರಗಿನ ಜನರ ಉದ್ಯೋಗಗಳಿಗೆ ... ಬ್ಯಾಂಕುಗಳಿಗೆ ಕಳುಹಿಸ ... ಸಂಘ ಒದಗಿದಕ್ಕೆ ಪ್ರೋತ್ಸಾಹಿಸಬೇಕಾಗಿದೆ. ಸಾಹುಕಾರರ ಒಪ್ಪಂದ ವ್ಯವಸ್ಥೆಯನ್ನು ಮುಂದೆ ಬಂದರೆ ದೇಶದಲ್ಲಿ ಒಂದು ಕಾಸೂ ಕೂಡ ಪ್ರಯೋಜನವಿಲ್ಲದೆ ಅಡಗಿರದು. ಬಡ್ಡಿಯಿಂದ ಸುಲಭವಾಗಿ ಸಾಲ ದೊರಕುವುದರಿಂದ ಅನೇಕ ರೈತರು ಹಣ ಸಾಲ ಪಡೆದುಕೊಂಡು ಮರುಪಾವತಿ ಮಾಡಲು ಶಕ್ತಿ ಇಲ್ಲದೆ ತಮ್ಮ ಸರ್ವಸ್ವವನ್ನೂ ಕಳೆಕೊಳ್ಳುವರು ಎಂಬುದಾಗಿ ಕೆಲವರ ... ಅದು ನಿಜವಾಗಬಹುದು. ಹಾಗೆಂದ ಇಂತಹ ... ನಗುಂದಿಸುವ ಉದಾಹರಣೆಗಳನ್ನು ತೆಗೆದುಕೊಂಡು ಹೆಚ್ಚು ಪ್ರಯೋಜನಗಳು ದೊರಕುವ ಮಾರ್ಗಗಳಿಗೆ ಅಡ್ಡಿ ಕಟ್ಟುವುದು ಯುಕ್ತವೇ?

ಕೊಡಗಿನ ಹೊರ ಪ್ರಾಂತ್ಯಗಳು ಕೇವಲ ಬಂಜರು ಪ್ರದೇಶವಾಗಿದ್ದರೂ ಕೂಡ ಅಲ್ಲಿಯ ದನ ಕರಗಳು ಪುಷ್ಟಿಯಾಗಿರುವುವು, ಪ್ರತಿ ಮನೆಯಲ್ಲಿಯೂ ಬೇಕಾದಷ್ಟು ಹಾಲು ತುಪ್ಪ ಸೇವಿಸಲು ಇರುವುದು. ಆದರೆ ಯಥಾ ಹಸುರಾಗಿರುವ ನಮ್ಮ ದೇಶದಲ್ಲಿ ದನ ಕರಗಳು ಪುಷ್ಟಿಯಾಗಿಲ್ಲ, ಮಾತ್ರವಲ್ಲದೆ ಶೇಕಡ 80 ರಷ್ಟು ಜನರು ಹಾಲಿಲ್ಲದ ಕಾಫಿ ಸೇವಿಸುತ್ತಿರುವರು. ಲಕ್ಷಗಟ್ಟಲೆ ಜನರು ವಾಸಿಸುವ ಬೆಂಗಳೂರು, ಮದ್ರಾಸು ಪಟ್ಟಣಗಳಲ್ಲಿ ಸ್ವಚ್ಛವಾದ ಹಾಲು ಬೇಕಷ್ಟು ಸಿಕ್ಕುವಾಗ ನಮ್ಮ 5000 ಜನರಿಲ್ಲದ ಪಟ್ಟಣಗಳಲ್ಲಿ ನೀರು ಬೆರೆಸಿದ ಹಾಲು ಕೂಡ ಸಿಕ್ಕುವುದು ದುರ್ಲಭವಾಗಿದೆ. ಸ... ಸರಕಾರದವರು ದನ ಕರಗಳನ್ನು ಸಾಕುವ ಜನರಿಗೆ ತಕ್ಕಷ್ಟು ಪ್ರೋತ್ಸಾಹ ಕೊಡದೆ ಕೊಡಗು ದೇಶವು ನಮ್ಮ ನೆರೆ ಪ್ರಾಂತ್ಯವಾದ ಮೈಸೂರಿಗೆ ಬೆಣ್ಣೆ, ದನಕರಗಳು ಮತ್ತು ಆಡು ಕುರಿಗಳನ್ನು ಕೊಂಡುಕೊಳ್ಳುವುದರಲ್ಲಿ ವರ್ಷ ಗಟ್ಟಲೆ ನ... ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿ ಕೊಡುತ್ತದೆ. ಈ ... ಲಕ್ಷ ರೂಪಾಯಿಗಳ ಹುಟ್ಟುವಳಿಯನ್ನು ನಮ್ಮ ದೇಶದಲ್ಲಿಯೇ ನಿಲ್ಲುವಂತೆ ಮಾಡಲು ಅಸಾಧ್ಯವೇ? ವರ್ಷ ಒಂದರ 100 ರೂ. ಹುಟ್ಟುವಳಿ ಇಲ್ಲದ ರೈತನು ಒಂದೆರಡು ವರ್ಷಕ್ಕೊಮ್ಮೆ 50 ರೂಪಾಯಿಗಳಷ್ಟು ದನಗಳನ್ನು ಕೊಂಡುಕೊಳ್ಳಲು ಖರ್ಚು ಮಾಡಿದರೆ ಅವನ ಸ್ಥಿತಿಯು ಹೇಗೆ ಇದ್ದೀತು. ಇಂಡಿಯಾ ದೇಶದಲ್ಲಿ ಶೇಕಡ 80 ಕ್ಕಿಂತಲೂ ಹೆಚ್ಚು ಜನರು ವ್ಯವಸಾಯಗಾರರು. ವ್ಯವಸಾಯಗಾರರಿಗೆ ದನ ಕರಗಳು ಅಷ್ಟು ಅತ್ಯಾವಶ್ಯಕವಾದುದರಿಂದಲೇ ಶಾಸ್ತ್ರಗಳಲ್ಲಿಯೂ ಕೂಡ ಗೋವುಗಳನ್ನು ದೇವತೆಗೆ ಸಮಾನವಾಗಿ ಸೂಚಿಸಿರುವರು. ಇದರಿಂದಲೇ ಗೋವುಗಳನ್ನು ಕೊಲ್ಲುವುದು ಹಿಂದುಗಳಲ್ಲಿ ಮಹಾ ಪಾಪ. ನಮ್ಮ ಪೂರ್ವಿಕರಾದ ಆರ್ಯರಿಗೆ ಸರ್ವತ್ರ ಬೇಕಾದ ಆಸ್ತಿಯಾಗಿತ್ತು. ಯೂರೋಪ್ ಖಂಡದಲ್ಲಿ ಡೆನ್ಮಾರ್ಕ್ ಎಂಬ ಸಮುದ್ರದ ವಿಪರೀತ ದಾಳಿಗೆ ಒಳಪಟ್ಟು, ಹೆಚ್ಚಿನ ಸೀಮೆಯು ಜವಳು ಪ್ರದೇಶವಾಗಿದ್ದ ದೇಶವು ದನಗಳನ್ನು ನಮ್ಮ ವೇದಿಕ್ ಆರ್ಯರಂತೆ ಪೋಷಿಸಲು ತೊಡಗಿ ಕೆಲವು ವರ್ಷಗಳಲ್ಲಿಯೇ £ 11,000,000 ದಷ್ಟು ಬೆಣ್ಣೆಯನ್ನು ಇಂಗ್ಲೆಂಡ್ ಒಂದು ದೇಶಕ್ಕೆ ಕಳುಹಿಸಿತು.

ಕೊಡಗಿನಲ್ಲಿ ದನ ಕರಗಳ ಪೋಷಣೆಯು ವಿಶೇಷ ಎಂಬುದು ತವಾಗಿಯೂ ಸರಿಯಾದ ರೀತಿಯಲ್ಲಿ ನಿಗವಿಡಬೇಕಾಗಿದೆ. ಪ್ರತಿ ಗ್ರಾಮಗಳಲ್ಲಿಯೂ ಹುಲ್ಲುಗಾವಲುಗಳಿಗೆ ತಕ್ಕಷ್ಟು ಏರ್ಪಾಡು ಮಾಡಿ, ಅವುಗಳಲ್ಲಿ ಉತ್ತಮ ... ಹುಲ್ಲು ಬೆಳೆಸಲು ಸಾಧ್ಯವಾಗಬೇಕು. ಈ ... ವ ... ದ ಗದ್ದೆಗಳಿಗೂ ಕೂಡ ರಸಾಯನಿಕ ಗೊಬ್ಬರವನ್ನು ಉಪಯೋಗಿಸಬೇಕೆಂದು ವ್ಯವಸಾಯ ಇಲಾಖೆಯವರು ಬೋಧಿಸಿಕೊಂಡಿರುವರು. ಇದು ಸರಿಯಾದ ಬೋಧನೆ ಎಂದು ನನಗೆ ತೋರುವುದಿಲ್ಲ. ಏಕೆಂದರೆ, ದನಕರಗಳನ್ನು ಸಾಕಲು ಪ್ರೋತ್ಸಾಹ ಕೊಟ್ಟರೆ ರೈತರಿಗೆ ವಿಪರೀತ ಒಳ್ಳೆಯದನ್ನು ಉಂಟುಮಾಡುತ್ತದೆ ... ರಸಾಯನಿಕ ಗೊಬ್ಬರವನ್ನು ಉಪಯೋಗಿಸಿ ಬಿಟ್ಟನು ಎಂದು ... 100 ರೂಪಾಯಿ ಸಂಪಾದನೆ ಮಾಡಬಹುದೆಂತಲೂ, ದನದ ಗೊಬ್ಬರದಿಂದ ಬರೀ 70 ರೂಪಾಯಿ ಸಂಪಾದನೆ ಮಾಡಬಹುದೆಂತಲೂ ಯೋಚಿಸುವ. ಈ ಮೂವತ್ತು ರೂಪಾಯಿಯ ಲಾಭದ ಅರ್ಧದಷ್ಟು ಆ ಗೊಬ್ಬರವನ್ನು ಕೊಂಡುಕೊಳ್ಳುವುದರಲ್ಲಿ ಪರದೇಶಕ್ಕೆ ಹೋಗುತ್ತೆ. ಮತ್ತು ಬಾಕಿಯ 15 ರೂಪಾಯಿ ಲಾಭದ ಆಶೆಗಾಗಿ ತಾನು ಹಾಲಿಲ್ಲದ ಕಾಫಿ ಕುಡಿಯಬೇಕಾಗುವುದಲ್ಲದೆ, ಕೆಲವು ವರ್ಷಕ್ಕೊಮ್ಮೆ ತನಗೆ ಉಳಲು ಬೇಕಾದ ದನಗಳನ್ನು ಸಹ ಕೊಂಡುಕೊಳ್ಳಬೇಕಾಗುತ್ತೆ. ದನಕರಗಳು ಹೆಚ್ಚಿರುವ ರೈತನಿಗೆ ಅದೇ ಒಂದು ಭಾಗ್ಯ. ಅವು ತನ್ನ ಗದ್ದೆಯನ್ನು ಉಳುವ ಸಿವಾಯ, ತನ್ನ ಗದ್ದೆಗೆ ಗೊಬ್ಬರ ಒದಗಿಸಿಕೊಡುವ ಸ್ನೇಹಿತ, ತನಗೂ, ತನ್ನ ಕುಟುಂಬಕ್ಕೂ ಹಾಲು, ಬೆಣ್ಣೆ ಒದಗಿಸಿಕೊಡುವ ಗೌಳಿ ಮತ್ತು ಪ್ರತಿ ರೈತ ಜೀವನ ಕಾಲವನ್ನು ಹೆಚ್ಚಿಸುವ ವೈದ್ಯನೆಂದು ಹೇಳಬಹುದು.

ಮತ್ತು, ಈಗ ನಿತ್ಯ ದನಗಳ ಚರ್ಮಗಳು ಬಹು ಸುಲಭ ಕ್ರಯಕ್ಕೆ ಮಂಡಿ ವ್ಯಾಪಾರಿಗಳ ಕೈಗೆ ಸಿಕ್ಕಿ, ರೈತರಿಗೆ ಒಂದು ಕಾಸೂ ಇಲ್ಲದೆ, ಅದರ ಪೂರಾ ಲಾಭವ ಸಾಗಿಸಿಕೊಂಡು ಹೋಗುತ್ತಾರೆ. ಮತ್ತು ಸತ್ತ ದನಗಳ ಮೂಳೆಯಿಂದ ಮೂಳೆ ಗೊಬ್ಬರ ತಯಾರಿಸಲು ಅನ...

ಸ್ವತಂತ್ರದ ಎಲ್ಲಾ ದೇಶಗಳಲ್ಲಿಯೂ ಅಲ್ಲಿಯ ... ಬೆಳೆಸುವ ಪ್ರತಿ ಒಂದಕ್ಕೂ ಒಳ್ಳೆ ಬೆಲೆ ದೊರೆಯುವಂತೆ ಮಾಡಲು ಸರ್ಕಾರದವರು ಗಮನಿಸುತ್ತಾರೆ. ಆದರೆ ನಮ್ಮವರಾದರೇನು? ನಾವು ಕಷ್ಟಪಟ್ಟು ಬೆಳೆಸುವ ಫಲವು ಕೆಲವು ವ್ಯಾಪಾರಿಗಳ ಕೈಗೆ ಸೇರಿ ಅವರ ಇಷ್ಟಾನುಸಾರ ರೈತರನ್ನು ಕುಣಿಸುತ್ತಾರೆ. ಕೊಡಗಿನಲ್ಲಿಯ ಕಿತ್ತಳೆ ವ್ಯವಸಾಯವು ಕೂಡ ಅದೇ ಸ್ಥಿತಿಯಲ್ಲಿದೆ. ಕಿತ್ತಳೆ ಹಣ್ಣನ್ನು ಬೆಳೆಸಿ ಕುಯಿಸಿ ಮೈಸೂರಿಗೆ ಸಾಗಿಸಿಕೊಂಡು ಹೋಗಿ ಅಲ್ಲಿ ಬೇಕಾದ ... ಒಳೆ ಕಟ್ಟಿಕೊಂಡು ಕಾದು ಕೂತುಕೊಂಡಿರುವ ದಳ್ಳಾಳಿಗಳ ಒಳೆಗೆ ನ್ಯಾಯಕ್ಕೆ ಹೋಗಿ ಬೀಳುವುದೇ! ಇದರ ವಿಷಯ ಸರಕಾರದವರು ಸಹಾಯ ಮಾಡಿ ಕಿತ್ತಳೆ ಬೆಳೆಸುವವರ ಒಂದು ಸಂಘವನ್ನು ಖಂಡಿತವಾಗಿಯೂ ಸ್ಥಾಪಿಸಿದರೆ ದಕ್ಷಿಣ ಹಿಂದೂಸ್ಥಾನದಲ್ಲಿಯೂ ಕಿತ್ತಳೆ ವ್ಯಾಪಾರವನ್ನು ಕೊಡಗು ದೇಶವು ತನ್ನ ಸ್ವಂತದ ... ಮಾಡಿಕೊಳ್ಳಬಹುದು.

ರೈತರ ಕಷ್ಟವನ್ನು ನಿವಾರಣೆ ಮಾಡಲು ಸಹಕಾರ ಸಂಘಗಳು ಕೊಂಚ ಪ್ರಯತ್ನಿಸುತ್ತಿವೆ. ಆದರೆ ಅವರ ಪ್ರಯತ್ನವು ಪೂರಾ ಸಫಲವಾಗಿಲ್ಲದ ... ರೈತರಿಗೆ ಬೇರೆ ಸಾಲಗಳು ಇಲ್ಲದೆ ಬರೇ ಅವರ ದಿನದ ಕುಟುಂಬದ ಖರ್ಚಿನ ದುಡ್ಡಕ್ಕೆ ... ಮಾತ್ರ ಹಣ ದೊರಕದೆ ಕಾಪ ... ಇಲ್ಲವಾದರೆ ಸಹಕಾರ ಸಂಘಗಳು ಈಗ ಒದಗಿಸಿಕೊಡುವ ಸಹಾಯವು ಸಾಕಾಗುವುದು. ಆದರೆ ನಮ್ಮ ರೈತರು ಸಾಲದಲ್ಲಿ ಮುಳುಗಿ ಹೋಗಿ ಗ್ರಾಮಗಳಲ್ಲಿರುವ ಕ...ತ್ತವನ್ನು ಹೀರುವ ಸಾಹುಕಾರರುಗಳಿಂದ ಮೊದಲೇ ಹೊಂದಿಕೊಂಡಿರುವ ಸಾಲಕ್ಕೆ ಶೇಕಡ 25 ರಂತೆ ಬಡ್ಡಿ ಕೊಡಲು ಅವರ ಒಂದು ವರ್ಷದ ಉತ್ಪತ್ತಿಯೇ ಸಾಕಾಗುವುದಿಲ್ಲ. ಹೆಚ್ಚಾಗಿ ರೈತರು ಸಂಘದಿಂದ ಹೊಂದಿಕೊಂಡ ಸಾಲವನ್ನು ಆ ... ಬಡ್ಡಿ ಕೊಡಲು ಖರ್ಚು ಮಾಡುತ್ತಾರೆ. ಸಹಕಾರ ಸಂಘಗಳು ರೈತರಿಗೆ ಸಹಾಯವಾಗಬೇಕಾದರೆ ಸಹಕಾರ ಸಂಘಗಳು ರೈತರ ಎಲ್ಲಾ ಸಾಲಗಳನ್ನು ವಹಿಸಿಕೊಂಡು ರೈತರು ಶೇಕಡ 12 ಕ್ಕಿಂತ ಹೆಚ್ಚು ಕೊಡುವ ಬಡ್ಡಿಯನ್ನು ತಪ್ಪಿಸಬೇಕು. ಹೀಗೆ ಮಾಡಿದರೆ ರೈತರು ಸಾಹುಕಾರರುಗಳ ಹಿಡಿತದಿಂದ ತಪ್ಪುವುದು ಅವರ ಕ್ರಿಯಾಶಕ್ತಿ ... ರೈತರು ಅಭಿವೃದ್ಧಿಯಾಗುವರು.

ಇವುಗಳೆಲ್ಲದರ ನಡುವೆ ಮಧ್ಯಪಾನದ ನೋಟ

ಈ ಸಂಗತಿಯಾಗಿ ಬರೆಯುವುದಾದರೆ ಅನೇಕ ಪುಟಗಳು ಬರೆಯಬಹುದು. ಆದರೆ ಈಗ ಅದರಿಂದ ಹೆಚ್ಚು ಪ್ರಯೋಜನವಾಗುವ ಹಾಗೆ ಏನೂ ಇಲ್ಲ. ನಮ್ಮ ಸರಕಾರವು ಇವೆಲ್ಲವಕ್ಕೆ ಕಿವಿಕೊಡುವಂತೆ ಇಲ್ಲ. ಪ್ರಜಾ ಸರಕಾರವೇ ಆಗಲಿ, ಕಪ್ಪು ಸರಕಾರವೇ ಆಗಲಿ ಪ್ರಜೆಗಳಿಗೆ ಜವಾಬ್ದಾರರಾಗಿರುವ ಸರಕಾರವು ಬರುವ ವರೆಗೆ ರೈತರಿಗೆ ಯಾವ ವಿಧದಲ್ಲಿಯೂ ಮೋಕ್ಷವಿಲ್ಲ. ಅಂತಹ ಸರಕಾರವು ಬಂದರೆ ರೈತರೇ ದೇಶದ ಹೆಚ್ಚಿನ ಓಟುಗಳಾಗಿರುವುದರಿಂದ ರೈತರ ಸುಖವೇ ಎಲ್ಲದಕ್ಕಿಂತಲೂ ಮುಂದಿರುವುದು.

ಕೆ. ಯಂ. ಪೂವಯ್ಯ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು. ಮೈಸೂರು.

ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟನ್ ಪೆನ್‌ಗಳು.

... ವಂಡರ್ ಫೌಂಟನ್ ಪೆನ್ 1ಕ್ಕೆ	ರೂ 3	0	0
" " ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
" " ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
" " ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟನ್ ಪೆನ್ 1ಕ್ಕೆ	3	11	0
" " ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4	8	0
" " ಸೆಲ್ಫ್ ಫಿಲ್ಲಿಂಗ್ ಮೊಡಲ್ ಆದ ಬ್ರವುನ್ ಕಲರ್ ಫೌಂಟನ್ ಪೆನ್ 1ಕ್ಕೆ	5	6	0
... ಸ್ವಾನ್ ಫೌಂಟನ್ ಪೆನ್ 1ಕ್ಕೆ	10	8	0
...ರ್ ಪೆನ್ 1ಕ್ಕೆ	14 6 0, & 20	10	0
...ಬರ್ಟ್ ಫೌಂಟನ್ ಪೆನ್ 1ಕ್ಕೆ	3 8 0, & 3	12	
...ನ್ ಫೌಂಟನ್ ಪೆನ್ 1ಕ್ಕೆ	6 4 0, & 6	12	0
...ರ್‌ಮನ್ ಫೌಂಟನ್ ಪೆನ್ 1ಕ್ಕೆ	8 ? 0, & 3	10	0

ಸ್ಪೆಕ್ಟಕಲ್ಸ್‌ಗಳು.

ಸ್ಟಾಂಡರ್ಡ್ ಇರುವ ಪಿನ್ ಸ್ಪೆಕ್ಟಕಲ್ಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಸ್ಪೆಕ್ಟಕಲ್ಸ್ 1ಕ್ಕೆ	2	2	0
ಲಿಗಲಿಯೂ ಆಕಾರದ ಸ್ಪೆಕ್ಟಕಲ್ಸ್ 1ಕ್ಕೆ	6 9 0, & 6	15	0
ಲಿಗಲಿಯೂ ಸಣ್ಣ ಪಿನ್ ಆಕಾರದ ಸ್ಪೆಕ್ಟಕಲ್ಸ್ 1ಕ್ಕೆ	7	2	0
ಲಿಗಲಿಯೂ ಆಕಾರದ ಸಣ್ಣ ಸ್ಪೆಕ್ಟಕಲ್ಸ್ ರೀತಿಯದು ಪ್ರೈಜಿನದು 1ಕ್ಕೆ	8	10	0
ಬಿಗ್‌ಪಿನ್ ಆಕಾರದ ಸ್ಪೆಕ್ಟಕಲ್ಸ್ 1ಕ್ಕೆ	9	6	0
... ಆಕಾರದ ... ಇದಕ್ಕೆ ಖಾತ್ರಿ ಯಾದ ಸ್ಪೆಕ್ಟಕಲ್ಸ್ 1ಕ್ಕೆ	13	4	0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್ 1ಕ್ಕೆ	5	10	0
ಟಿಟೋ ನಮೂನೆಯಲ್ಲಿ ... ಹಾರ್ತ ಕಾಪಿನದು ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮುಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12	8	0

ಅಲ್ಲಿ ನಮೂದಿಸಿರುವ ನಮೂನೆ ಅಂದವಾದ ಟೇಬಲ್ ಸ್ಟಾಂಡ್ ... ಸ್ 1ಕ್ಕೆ 3—6—0 ಬ್ಯಾಟರಿ ... ಪೋಸ್ಟೇಜು ... ಬೇರೆ.

ಸ್ಪೆಶಿಯಲ್ ರವಾನಿಸುವ ವಿಳಾಸ —ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

52—6

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಈ ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಬಂಡವಾಳ	—	26,800
ಠೇವಣಿಗಳು	—	2,50,301

ತ್ತಿದ್ದಾರೆ. ... ಪ್ರೆಸಿಡೆಂಟರು ... ಆನರರಿ ಸೆಕ್ರೆಟರಿ ...

ತಾರೀಕು 1—7—931

... ಹುಡುಗರ ಸಲುವಾಗಿ



ಇವರ ...

ವನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

32—33 ಗಿರಿಗಾಂವ, ಮುಂಬಯಿ

ನೋಟೀಸು.

ಈ ಕೆಳಗಿನ ಮಹನೀಯರು ಕೊಡಗು ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ... ಪುಸ್ತಕಗಳು ಕೊಡಲ್ಪಟ್ಟಿವೆ ... ಏಜೆಂಟರವರ ... ಪುಸ್ತಕಗಳು ಕೊಡಲಾಗಿದೆ. ... ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ... ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು

... ಕೊಡಗಿಗೆ ... ನಾಕೇಂಗಡ ಕಾರ್ಯಪ್ಪನವರು,

... ಮಾದಯ್ಯನವರು,

ಸರಕಾರಿ ...

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(... ಸ್ಥಾಪಿತವಾದದ್ದು ... ರಲ್ಲಿ)

... ನೇ ವರ್ಷದ ಫಲಿತಾಂಶಗಳು.

... 26,48 ... ಗಳು

... —179 ಲಕ್ಷ ... —8013 ಜನರಿಗೆ 3... ಲಕ್ಷ

... —ಸುಮಾರು 1½ ಕೋಟಿ ...

... 178 ... ಹೆಚ್ಚಿನ ... ಕೊಡಲ್ಪಟ್ಟಿದೆ ... ಇದರ ...

... ಓರಿಯಂಟಲ್ ... ದೇಶೀಯ ...

...	...	...	...	...



... ಯುವಕರಿಗೂ ... —8—

... —6—0

... ರೂ 3—8—0

... 3—8—0

... ಮೈಸೂರು ...

2—42 ... Kalbarina ...

Hampankatti No 14 Mangalore

ದಕ್ಷಿಣ ಕೊಡಗಿಗೆ—... ಅಯ್ಯನವರು

...

ಮೇನೇಜರು,

ಕೊಡಗು ...

... ಕೊಡಗು ...

ಮೇನೇಜರ್

"ಕೊಡಗು ..."

ಮಡಿಕೇರಿ

Printed & published by P I Bellhappa at "Kodagu" Press Mercara "Kodagu" Ltd

If not delivered please return
"KODAGU" OFFICE MERCARA

ಕೊಡಗು.

ಸರ್ವೇಷ ಭೂತದಯೆಯಿಂ ವಿದ್ಯಾ ನೀತಿ ಪ್ರಯುಕ್ತ್ಯೈಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. [illegible] — ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೧೨	[illegible] ಆಗೋಸ್ತು ತಾರೀಕು ೨೮ ನೇ [illegible]	ಸಂಚಿಕೆ ೧೩



Telephone — 3145

DIAMOND M[illegible]ANT[illegible] GOLD & SILVER[illegible]

Deals in all
SPORTS CUPS [illegible]
MEDALS in up-to-date patterns
CASKETS in elegant styles

[illegible]
Post Box 423, Triplicane [illegible]
MADRAS.

Deals in all
G[illegible] SET JEWELS set with Diamonds Rubies etc.,
GOLD ARTICLES of all patterns
SILVER WARE in latest style

52 —



ಕೋವಿಗಳು, ಕತ್ತಿಗಳು, ಬಚೀಗಳು, ತೋಟೆಗಳು, [illegible] ವಗೈರೆ [illegible] ಸಾಮಾನುಗಳು ಬಹು ಕಡಿಮೆ ದರದಲ್ಲಿ [illegible]

GOOL[illegible] HUS[illegible] N[illegible] DY[illegible]
Largest Importers of Fi[illegible] and [illegible]tio[illegible]
Cheapest priced firm in India,
210 Abdul Rehman Street, BOMBAY.

—22

ಬಾಲಾರ್ಕಮಧು.

[illegible] ಮಕ್ಕಳ [illegible] ಬಾಲಾರ್ಕ ಮಧುವನ್ನು ಕೊಡಿರಿ [illegible] ಮಕ್ಕಳು [illegible]

[illegible] ಪ್ರಸಾದಿಕ,
[illegible]ಧಾಲಯ,
[illegible]ಮೊಗ್ಗಾ,
(ಮೈಸೂರು ಸಂಸ್ಥಾನ)

—2—



[illegible] 1 ಡಜನ್ 1—8—0 [illegible] 6 ಡಜನ್ [illegible] 14

[illegible] 2 3 [illegible] 5—8—0

9 [illegible]

2—16

ಕೊಡಗು.

ಸನ್ ೧೯೩೧ನೇ ಇಸವಿ

ಆಗೊಸ್ತು ತಾ. ೨೮ನೇ ಶುಕ್ರವಾರ.

ಕಾಂಗ್ರೆಸ್ಸೂ, ದುಂಡುಮೇಜು ಪರಿಷತ್ತೂ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಕಾಂಗ್ರೆಸ್ಸಿನ ಪ್ರತಿನಿಧಿಯಾದ ಮಹಾತ್ಮ ಗಾಂಧಿಯವರು ದುಂಡುಮೇಜು ಪರಿಷತ್ತಿಗೆ ಹೋಗಬಾರದೆಂದು ಮಾಡಿದ ತೀರ್ಮಾನವನ್ನು ಕುರಿತು ಕಳೆದ ವಾರ ಬರೆದಿದ್ದೆವು. ನಂತರ ಈ ಸಂಬಂಧದ ವಿಚಾರವು ಇನ್ನೊಂದು ತರವಾಗ ಹತ್ತಿದೆ. ಕಾಂಗ್ರೆಸ್ಸಿನ ಪರವಾಗಿ ಮಹಾತ್ಮರೂ, ವೈಸರಾಯರು, ಬೊಂಬಾಯಿ ಗವರ್ನರವರು, ಇಂಡಿಯಾ ಸರಕಾರದ ಹೋಮ್ ಸೆಕ್ರೆಟರಿಯವರು, ಸೂರತ್ತಿನ ಕಲೆಕ್ಟರವರೇ ಮೊದಲಾದ ಸರಕಾರದ ಕಡೆಯವರೂ ಈ ಸಂಗತಿಯನ್ನು ಕುರಿತು ನಡೆಸಿದ ಪತ್ರವ್ಯವಹಾರಗಳೆಲ್ಲವೂ ಪ್ರಕಟಿಸಲ್ಪಟ್ಟಿವೆ. ಡೆಲ್ಲಿ ರಾಜಿ ಒಪ್ಪಂದದ ಕರಾರುಗಳನ್ನು ಎಷ್ಟರ ಮಟ್ಟಿಗೆ ಸರಕಾರವು ಮೀರಿದೆಯೆಂಬುದನ್ನು ಕುರಿತು ಸಾದರ ಪಡಿಸಿದ ಮಹಾತ್ಮರು ವೈಸರಾಯರಿಗೆ ಬರೆದ 'ಚಾರ್ಜ್ ಶೀಟ್' ಎಂಬ ಪತ್ರವೂ ಬಹಿರಂಗ ಮಾಡಲ್ಪಟ್ಟಿತು. ಸರಕಾರದವರ ಮೇಲೆ ತುಂಬಾ ತಪ್ಪನ್ನು ಹೊರಿಸಿದ ಈ ಪತ್ರವನ್ನು ಮಹಾತ್ಮರು ಪ್ರಕಟಿಸಿದ ಕಾರಣ ಸರಕಾರದವರಿಗೆ ಕೋಪವುಂಟಾಗಿರಬಹುದೆಂತಲೂ, ಆದುದರಿಂದ ಮಹಾತ್ಮರು ಲಂಡನ್ನಿಗೆ ಹೋಗುವ ಸಂಭವವೇ ಇಲ್ಲವಾಗಿ ಹೋಯಿತೆಂತಲೂ ವರ್ತಮಾನ ಹುಟ್ಟಿತು. 'ಚಾರ್ಜ್ ಶೀಟ'ನ್ನು ಮಹಾತ್ಮರು ಇಷ್ಟು ಬೇಗನೆ ಹೊರಗೆಡಹಬಾರದಾಗಿತ್ತೆಂದೂ ಟೀಕೆಗಳು ಹೊರಟವು. ಆದರೆ ವೈಸರಾಯರ ಅನುಮತಿ ತೆಗೆದುಕೊಂಡೇ ತಾನು ಪತ್ರವನ್ನು ಬಹಿರಂಗಪಡಿಸಿದ್ದೆನೆಂದೂ, ಇಲ್ಲದೆ ಅದನ್ನು ಪ್ರಕಟಿಸದೆ ಹೋಗಿದ್ದರೆ ಸರಕಾರದವರು ರಾಜಿ ಒಪ್ಪಂದದ ಕರಾರುಗಳಿಗನುಸಾರವಾಗಿ ನಡೆದಿಲ್ಲವೆಂದು ಕಾಂಗ್ರೆಸಿನವರು ಅವರ ಮೇಲೆ ಹೊರಿಸಿದ ಜವಾಬ್ದಾರಿಯ ಯಥಾರ್ಥವು ಜನರಿಗೆ ಗೊತ್ತಾಗುತ್ತಿರಲಿಲ್ಲವೆಂತಲೂ ಮಹಾತ್ಮರು ತನ್ನ ಕಾರ್ಯವನ್ನು ಸಮರ್ಥಿಸಿದರು. ಮಹಾತ್ಮರು ತನ್ನ 'ಚಾರ್ಜ್ ಶೀಟ'ನ್ನು ಪ್ರಕಟಿಸದೆ ಹೋಗಿದ್ದರೆ ದುಂಡು ಮೇಜು ಪರಿಷತ್ತಿಗೆ ಗಾಂಧಿಜೀಯವರು ಹೋಗಬಾರದೆಂದು ವರ್ಕಿಂಗ್ ಕಮಿಟಿಯು ಮಾಡಿದ ಬಹು ಮುಖ್ಯವಾದ ತೀರ್ಮಾನಕ್ಕೆ ಯಾತಕ್ಕೆ ಕಾರಣಗಳಿದ್ದವೋ ಎಂದು ಹಲವರಲ್ಲಿ ಹುಟ್ಟಿದ್ದ ಸಂಶಯವು ಪರಿಹಾರವಾಗುತ್ತಿರಲಿಲ್ಲವೆಂಬುದಕ್ಕೆ ಸಂದೇಹವಿಲ್ಲ.

ಆದರೆ ಈ ಮಧ್ಯೆ ವೈಸರಾಯರು ಕಲ್ಕತ್ತಾ ಕಡೆ ಪ್ರವಾಸ ಹೋಗಿದ್ದವರು ಥಕ್ಕನೆ ಅದನ್ನು ಬಾಕಿ ಮಾಡಿ ಸಿಮ್ಲಾಕ್ಕೆ ವಾಪಸು ಬಂದರು. ಅಷ್ಟರಲ್ಲಿ 'ಮುಲ್ತಾನ' ಹಡಗಿನಲ್ಲಿ ಲಂಡನಿಗೆ ಹೋಗುತ್ತಿದ್ದ ಸರ್ ತೇಜ್ ಬಹದ್ದೂರ್ ಸಪ್ರುರವರು ಮತ್ತು ಶ್ರೀಯುತ ಜಯಕರರವರು ಮಹಾತ್ಮರಿಗೆ 'ರೇಡಿಯೊ' ಮೂಲಕ ವಾರ್ತೆ ಕಳುಹಿಸಿದರು. ಇದೇ ಸಮಯದಲ್ಲಿ ಇವರಿಬ್ಬರು ಮಹನೀಯರಿಗೂ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ ಮತ್ತು ವೈಸರಾಯರಿಗೂ ತಂತಿ ವಾರ್ತೆಗಳೂ ನಡೆಯುತ್ತಾ ಇದ್ದವೆಂದು ವರ್ತಮಾನವಾಯಿತು. ಹೇಗೂ ಕಾಂಗ್ರೆಸಿನ ಪ್ರತಿನಿಧಿಯು ದುಂಡುಮೇಜು ಪರಿಷತ್ತಿಗೆ ಹೋಗುವಂತೆ ಮಾಡಲೇ ಬೇಕೆಂಬ ಕುತೂಹಲವು ಎಲ್ಲಾ ಕಡೆಗಳಲ್ಲಿಯೂ ಇರುವಂತೆ ಕಂಡು ಬಂತು.

ವರ್ಕಿಂಗ್ ಕಮಿಟಿಯ ತಾ 13ರ ತೀರ್ಮಾನದ ನಂತರ ಮಹಾತ್ಮರು ಬೊಂಬಾಯಿಯಿಂದ ಅಹ್ಮದಾಬಾದಿಗೆ ಹೋದ ಮೇಲೆ, ಕಾಂಗ್ರೆಸಿನವರಿಗೂ, ಸರಕಾರದವರಿಗೂ ಡೆಲ್ಲಿ ಒಪ್ಪಂದವನ್ನು ಕುರಿತು ಉಂಟಾಗಿರುವ ವಿವಾದಗಳನ್ನು ತೀರ್ಮಾನಿಸಲು ಸರಕಾರವು ಒಪ್ಪದೆ ಹೋದರೂ ಜನರಿಗೆ ಒಪ್ಪುವಂಥ ಬಿಪ್ಪ ಕ್ಕೆ ಕೋರ್ಟು ಒಡ್ಡರನ್ನಾದರೂ ನೇಮಿಸಿದರೆ ತಾವು ಹೋಗುವುದೆಂದು ಸೂಚಿಸಿದ್ದರು. ಈ ಸೂಚನೆಯು ಸರಕಾರದವರನ್ನು ಪುನರಾಲೋಚಿಸುವಂತೆ ಮಾಡಿದೆಯೆಂಬ ಸುದ್ದಿಯೂ ಹುಟ್ಟಿತು. ಅಲ್ಲದೆ ವೈಸರಾಯರು ಮಹಾತ್ಮರ ಪತ್ರಗಳನ್ನೂ, ಸಂಭಾಷಣೆಗಳನ್ನೂ ಸರಿಯಾಗಿ ಅರ್ಥಮಾಡಿಕೊಳ್ಳದೆ ಅವರು ಮಹಾತ್ಮರಿಗೆ ಅತೃಪ್ತಿಕರವಾದ ಜವಾಬು ಕೊಡಲು ಕಾರಣವಾಯಿತೆಂದು ಮಹಾತ್ಮರಿಗೆ ಸಿಮ್ಲಾದಿಂದ ಹೊರಟ ಅಭಿಪ್ರಾಯಗಳಿಂದ ತೋರಿ ಬಂತು. ಆದಕಾರಣ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುವ ಬಗ್ಗೆ ವೈಸರಾಯರೊಡನೆ ಪುನಹ ಮಾತಾಡಲು ತಯಾರಾಗಿದ್ದೇನೆಂದು ಮಹಾತ್ಮರು ಲಾರ್ಡ್ ವೆಲ್ಲಿಂಗ್ಟನ್‌ರವರಿಗೆ ತಿಳಿಸಿದರು. ವೈಸರಾಯರು ಕೂಡಲೇ ತಮ್ಮ ಎಗ್ಸಿಕ್ಯುಟಿವ್ ಕೌನ್ಸಿಲಿನ ಮೀಟಿಂಗೊಂದನ್ನು ನಡಿಸಿ, ಮಹಾತ್ಮರು ಸಿಮ್ಲಾಕ್ಕೆ ಬರಬಹುದೆಂದು ಜವಾಬು ಕೊಟ್ಟರು. ಆ ಮೇರೆ ಗಾಂಧಿಜೀಯವರು ಸಿಮ್ಲಾಕ್ಕೆ ಹೋಗಿರುವರು. ಇವರ ಕೋರಿಕೆ ಮೇರೆ ಕಾಂಗ್ರೆಸ್ಸಿನ ಅಧ್ಯಕ್ಷರಾದ ಸರ್ದಾರ್ ವಲ್ಲಭಬಾಯಿ ಪಟೇಲರವರೂ ಪಂಡಿತ ಜವಾಹರ್‌ಲಾಲ್ ನೆಹರೂರವರೂ ವಾಯುವ್ಯ ಸರಹದ್ದು ಪ್ರಾಂತ್ಯದ ಗಾಂಧಿ ಅಬ್ದುಲ್ ಗಫಾರ್ ಖಾನ್‌ರವರೂ ಸಿಮ್ಲಾಕ್ಕೆ ಹೋಗಿರುವರು. ಮಹಾತ್ಮರು ವೈಸರಾಯರನ್ನು ಕಳೆದ ಸೋಮವಾರ ನೋಡುವ ಏರ್ಪಾಡಾಗಿದ್ದರೂ, ವೈಸರಾಯರಿಗೆ ಅಸೌಖ್ಯವಾದ ಕಾರಣ ಅವರ ಭೇಟಿಯು ಬುಧವಾರಕ್ಕೆ ಮುಂದಿಟ್ಟಿದೆ. ಈ ಸಂಭಾಷಣೆಯ ಫಲಿತಾಂಶವು ಏನಾಗಿದೆಯೆಂದು ಇಷ್ಟರ ವರೆಗೆ ತಿಳಿದು ಬಂದಿರುವುದಿಲ್ಲ.

ಇತ್ತಲಾಗಿ, ಮಹಾತ್ಮರ 'ಚಾರ್ಜ್ ಶೀಟಿ'ಗೆ ವೈಸರಾಯರ ಜವಾಬೂ ಪ್ರಕಟವಾಗಿದೆ. ಮಹಾತ್ಮರು ಸರಕಾರದವರ ಮೇಲೆ ಹೊರಿಸಿರುವ ಆರೋಪಣೆಗಳಲ್ಲಿ ಹಲವು ನಿಜವಲ್ಲವೆಂತಲೂ, ಕೆಲವು ಡೆಲ್ಲಿ ಒಪ್ಪಂದಕ್ಕೆ ಒಳಗಾಗದವೆಂತಲೂ, ಇನ್ನು ಕೆಲವು ಕಾಂಗ್ರೆಸಿನವರಿಂದ ಕಲ್ಪಿಸಿಕೊಂಡವೆಂತಲೂ, ಒಟ್ಟಾರೆ ಸರಕಾರದವರು ರಾಜಿ ಕರಾರುಗಳನ್ನು ಪಾಲಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಿದ್ದಾರೆಂತಲೂ ಈ ಜವಾಬಿನಲ್ಲಿ ಸೂಚಿಸಲ್ಪಟ್ಟಿದೆ. ನಡೆದ ಸಂಗತಿಗಳನ್ನು 'ನಿಜವಲ್ಲ, ಸುಳ್ಳು ಕಲ್ಪನೆಯವು' ಎಂದು ಮುಂತಾಗಿ ಸುಲಭವಾಗಿ ತಿರಸ್ಕರಿಸಿ ಬಿಡಬಹುದು. ಆದರೆ ಆಯಾಯ ಸಂಗತಿಗಳು ನಡೆದ ಸ್ಥಳದವರನ್ನೂ, ಅವುಗಳನ್ನು ಚೆನ್ನಾಗಿ ತಿಳಿದಿರುವವರನ್ನೂ ಸುಲಭದಲ್ಲಿ ಮೋಸಗೊಳಿಸಲಾಗುವುದಿಲ್ಲ. ಸತ್ಯವಂತರೆಂದು ಜಗತ್ಪ್ರಸಿದ್ಧಿಯಾಗಿರುವ ಮಹಾತ್ಮರ ಮಾತುಗಳು 'ಸುಳ್ಳೆ'ಂದು ಹೇಳಿ ಬಿಟ್ಟಾಕ್ಷಣ ಅದನ್ನು ಎಷ್ಟರ ಮಟ್ಟಿಗೆ ಜನರು ನಂಬಿಕೊಳ್ಳುವರೆಂದು ಇಲ್ಲಿ ವಿವರಿಸಬೇಕಾಗಿಲ್ಲ.

ರಾಜಿ ಒಪ್ಪಂದವನ್ನು ಮುರಿದು ಶಾಂತಿ ಭಂಗಕ್ಕೆ ಅವಕಾಶ ಕೊಟ್ಟರೆ ದೇಶದಲ್ಲಿ ಉಂಟಾಗುವ ಪರಿಸ್ಥಿತಿಯು ಬಹು ಕಠಿಣತರದ್ದಾಗುವುದೆಂದು ಈಗ ಹೇಳಬೇಕಾಗಿಲ್ಲ. ದೇಶದ ಆರ್ಥಿಕ ಸ್ಥಿತಿಯು ಬಹು ಕ್ಷೀಣಗತಿಯನ್ನು ಹೊಂದಿದೆ. ವ್ಯವಸಾಯಗಾರರು ಬೆಳೆಯುವ ದವಸಧಾನ್ಯಗಳಿಗೆ ಒಳ್ಳೆ ಬೆಲೆಯಿಲ್ಲದ್ದರಿಂದ ರೈತರ ಪಾಡನ್ನು ವಿವರಿಸಲು ಸಾಧ್ಯವಿಲ್ಲ. ವ್ಯಾಪಾರದ ಈಗಿನ ಹೀನಸ್ಥಿತಿಯಲ್ಲಿ ವರ್ತಕರು ಜೀವನವನ್ನು ಸಾಗಿಸುವುದೇ ಕಷ್ಟವಾಗಿ ಪರಿಣಮಿಸುತ್ತಿದೆ. ಜನಸಮುದಾಯದ ಸ್ಥಿತಿಯು ಹೀಗಿರುವುದರಿಂದ ಯಾವ ಕೆಲಸಕ್ಕಾದರೂ ಹಣದ ಅಭಾವವು ತೊಡಕನ್ನುಂಟು ಮಾಡಬಹುದು. ಸರಕಾರದ ಸ್ಥಿತಿಯಾದರೋ ಉತ್ತಮವಾಗಿಲ್ಲ. ಇಂಡಿಯಾದ ಎಲ್ಲಾ ಪ್ರಾಂತೀಕ ಸರಕಾರಗಳೂ, ಮಧ್ಯವರ್ತಿ ಸರಕಾರವೂ ಉತ್ಪತ್ತಿ ಕಡಿಮೆಯಾಗಿ ಖರ್ಚು ಹೆಚ್ಚಾದ್ದರಿಂದ ಸಿಬ್ಬಂದಿ ಕಡಿತ ಮಾಡಲು ಹಗಲಿರುಳು ಪ್ರಯತ್ನಿಸುತ್ತಿರುವವು. ರಾಜಕೀಯ ಚಳವಳವು ಜೋರಾದರೆ ಸರಕಾರದ ಉತ್ಪತ್ತಿಯು ಮತ್ತಷ್ಟು ಕಡಿಮೆಯಾಗುವುದಲ್ಲದೆ, ಅಂಥಾ ಚಳವಳವನ್ನು ದಬಾಯಿಸಲು ಸರಕಾರದವರು ತುಂಬಾ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಹಣದ ಅಡಚಣೆಯು ಅವರಿಗೂ ಇದೆ. ಆದುದರಿಂದ ರಾಜಿ ಒಪ್ಪಂದವನ್ನು ರದ್ದು ಮಾಡುವ ವಿಷಯ ಉಭಯ ಪಕ್ಷದವರೂ ದೀರ್ಘಾಲೋಚನೆ ಮಾಡಬೇಕಾಗಿದೆ. ಆರ್ಥಿಕ ಸ್ಥಿತಿಯು ಎಷ್ಟು ಕಠಿಣತರವಾಗಿದ್ದರೂ ಸ್ವಾತಂತ್ರ್ಯವು ಎಲ್ಲದಕ್ಕಿಂತಲೂ ಅಮೂಲ್ಯವಾದದ್ದೆಂದು ಈಗ ತಿಳಿಯದ ಜನರೇ ಬಹು ಕಡಿಮೆ. ಸ್ವಾತಂತ್ರ್ಯವು ದೊರಕಿದರೆ ಆರ್ಥಿಕ ಹೀನ ಸ್ಥಿತಿಯ ಕಾರಣಗಳನ್ನು ಹೋಗಲಾಡಿಸಿಕೊಳ್ಳಬಹುದೆಂದು ನಂಬುವವರೇ ಬಹು ಸಂಖ್ಯಾತರಾಗಿರುವ ಕಾರಣ ಕಾಂಗ್ರೆಸಿನವರು ಮಾಡುವ ತೀರ್ಮಾನವನ್ನು ಕೈ ಕೊಳ್ಳಲು ಜನರು ಸ್ವಲ್ಪವೂ ಹಿಂಜರಿಯಲಾರರೆಂಬುದು ಸರಕಾರಕ್ಕೆ ತಿಳಿಯದ್ದಲ್ಲ. ಆದುದರಿಂದ ಹೆಚ್ಚಿನ ಕಷ್ಟನಷ್ಟಗಳುಂಟಾಗದಂತೆ ಎಲ್ಲವನ್ನೂ ಶಾಂತ ರೀತಿಯಿಂದ ತೀರ್ಮಾನಿಸಿಕೊಳ್ಳಲು ಸಂಬಂಧ ಪಟ್ಟವರಿಗೆಲ್ಲಾ ದೇವರು ಬುದ್ಧಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುವ.

ಬ್ರಿಟಿಷ್ ಮಂತ್ರಿ ಮಂಡಲಿ.

ಈಗ ಎರಡು ವರ್ಷಗಳಿಂದ ಬ್ರಿಟಿಷ್ ಸರಕಾರವನ್ನು ನಡಿಸುತ್ತಿದ್ದ ಕೂಲಿಕಾರರ ಪಕ್ಷದ ಮಂತ್ರಿ ಮಂಡಲಿಯು ಕಳೆದ ವಾರ ಕೆಲಸದಿಂದ ನಿವೃತ್ತಿಯಾಗಬೇಕಾಗಿ ಬಂತು. ಸರಕಾರದ ಆದಾಯಕ್ಕೆ ತಕ್ಕಷ್ಟೇ ಖರ್ಚನ್ನು ನಿಲ್ಲಿಸಲು ಪ್ರಯತ್ನ ಮಾಡುವುದರಲ್ಲಿ ಉದ್ಯೋಗವಿಲ್ಲದವರಿಗೆ ಸರಕಾರದಿಂದ ಕೊಡುತ್ತಿದ್ದ ಜೀವನಾಂಶದ ದರವನ್ನು ಕಡಿಮೆ ಮಾಡುವ ಏರ್ಪಾಡು ಮಾಡುತ್ತಿದ್ದುದೇ ಈ ರೀತಿ ಮಂತ್ರಿ ಮಂಡಲಿಯು ರಾಜಿನಾಮೆ ಕೊಡಬೇಕಾಗಿ ಬರಲು ಕಾರಣವಾಯಿತು. ಕೂಲಿಕಾರರ ಪಕ್ಷಕ್ಕೆ ಸೇರಿದ ಟ್ರೇಡ್ ಯೂನಿಯನ್ ಕಾಂಗ್ರೆಸ್ ಎಂಬ ಸಂಸ್ಥೆಯವರು ನಿರುದ್ಯೋಗಿಗಳಿಗೆ ಕೊಡುವ ಜೀವನಾಂಶವನ್ನು ಕಡಿಮೆ ಮಾಡುವ ಸರಕಾರದ ಮತಲಪ್ಪಿಗೆ ಬಲವಾಗಿಯೂ ವಿರೋಧಿಸುತ್ತಾರೆಂತ ತಿಳಿಸಿದ ಮೇಲೆ ಮಂತ್ರಿಮಂಡಲಿಗೆ ಪಾರ್ಲಿಮೆಂಟಿನಲ್ಲಿ ಬಹುಮತದ ಬೆಂಬಲವಿಲ್ಲದೆ ಹೋಗುವುದರಿಂದ ಮಂತ್ರಿಮಂಡಲಿಯವರು ರಾಜಿನಾಮೆ ಕೊಟ್ಟರು.

ಈಗ ರಾಜಿನಾಮೆ ಕೊಟ್ಟ ಮಂತ್ರಿ ಮಂಡಲಿಯಿಂದ ಇಂಡಿಯಾಕ್ಕೆ ಸಿಕ್ಕಬಹುದಾದಷ್ಟು ಸುಧಾರಣೆಗಳು ಬೇರೆ ಯಾವ ಪಾರ್ಟಿಯಿಂದಲೂ ಸಿಕ್ಕಲಾರದು. ಇಂಡಿಯಾಕ್ಕೆ ಸ್ವತಂತ್ರ ಕೊಡಬಾರದೆಂಬ ವಿಷಯದಲ್ಲಿ ಇಂಗ್ಲೆಂಡಿನ ಎಲ್ಲಾ ಪಂಗಡಗಳೂ ಒಂದೇ ಅಭಿಪ್ರಾಯದಲ್ಲಿರುವವಾದರೂ ಈ ಕೂಲಿಕಾರರ ಪಕ್ಷದ ಸಹಾನುಭೂತಿ ಇಂಡಿಯಾಕ್ಕೆ ಇದ್ದಷ್ಟು ಬೇರೆಯವರದು ಇರಲಿಲ್ಲ. ಈಗಾಗಲೇ ಕೆಲಸದಿಂದ ನಿವೃತ್ತಿಹೊಂದಿದ ಕೂಲಿಕಾರರ ಪಕ್ಷದ ಮಂತ್ರಿ ಮಂಡಲದ ಮುಖ್ಯ ಮಂತ್ರಿಯಾದ ರಾಮ್ಸೆ ಮೆಕ್ಡೊನಾಲ್ಡರು ಮಂತ್ರಿ ಪದವಿಗೆ ಬರುವ ಮುಂಚೆ ಬರೆದ ಪುಸ್ತಕವೊಂದರಲ್ಲಿ ಹಿಂದೂಸ್ಥಾನದ ಸ್ವಾತಂತ್ರ್ಯದ ಹೋರಾಟಕ್ಕೆ ತುಂಬಾ ಸಹಾನುಭೂತಿ ತೋರಿಸಿದ್ದರು. ಪಾರ್ಲಿಮೆಂಟಿನಲ್ಲಿ ಈ ಎರಡು ವರ್ಷಗಳಲ್ಲಿ ಮೂರು ಪಂಗಡಗಳು ಇದ್ದವು, ಕೂಲಿಕಾರರು, ಲಿಬರಲ್ ಮತ್ತು ಕನ್ಸರ್ವೇಟಿವ್. ಲಿಬರಲ್ ಮತ್ತು ಕನ್ಸರ್ವೇಟಿವ್ ಪಕ್ಷದ ಮೆಂಬರುಗಳೆಲ್ಲಾ ಒಂದಾದರೆ ಕೂಲಿಕಾರ ಪಂಗಡದ ಪ್ರತಿನಿಧಿಗಳ ಸಂಖ್ಯೆ ಕಡಿಮೆಯಾಗುತ್ತಿತ್ತು. ಆದುದರಿಂದ ಕೂಲಿಕಾರರಪಕ್ಷದವರು ಲಿಬರಲ್ ಪಕ್ಷದವರಿಗಾದರೂ ಒಪ್ಪಿಗೆಯಾಗದ ಸುಧಾರಣೆಗಳನ್ನು ಇಂಡಿಯಾಕ್ಕೆ ಕೊಡಲು ಸಾಧ್ಯವಿರಲಿಲ್ಲ. ಆದ್ದರಿಂದ ಮೆಕ್ಡೊನಾಲ್ಡರ ಅಭಿಪ್ರಾಯಗಳನ್ನು ಕಾರ್ಯರೂಪದಲ್ಲಿ ಜಾರಿಗೆ ತರಲು ಸಾಧ್ಯವಿರುತ್ತಿರಲಿಲ್ಲ.

ಈಗ ಬಿಟ್ಟ ಮಂತ್ರಿಮಂಡಲಿಯಲ್ಲಿ ಮೆಕ್ಡೊನಾಲ್ಡರಿಗಿಂತಲೂ ಇಂಡಿಯಾ ಮಂತ್ರಿಯಾಗಿದ್ದ ವೆಜ್‌ವುಡ್ ಬೆನ್ನರು ನಿಜವಾಗಿಯೂ ಹಿಂದೂಸ್ಥಾನದ ಹಿತಚಿಂತಕರಾಗಿದ್ದರೆಂಬುದರಲ್ಲಿ ಸಂಶಯವಿಲ್ಲ. ಅವರ ಧೈರ್ಯವಾದ, ಹಿಂದೂಸ್ಥಾನಕ್ಕೆ ಸಹಾನುಭೂತಿ ತೋರಿಸುವ ರಾಜನೀತಿಯಿಲ್ಲದಿದ್ದರೆ ಹಿಂದುಸ್ಥಾನದ ಈಗ ಎರಡು ವರ್ಷಗಳ ಚರಿತ್ರೆಯು ಬೇರೆಯಾಗಿರುತ್ತಿತ್ತು. ಹೇಗೂ ಹಿಂದುಸ್ಥಾನಕ್ಕೆ ಸಹಾನುಭೂತಿ ಇದ್ದ ಮಂತ್ರಿ ಮಂಡಲಿ ಹೋಯಿತು. ಅದರ ಬದಲು ಮೂರು ಪಕ್ಷಗಳ ಪ್ರತಿನಿಧಿಗಳಿಂದಲೂ ಕೂಡಿದ ನ್ಯಾಶನಲ್ ಗವರ್ನಮೆಂಟ್ ಎಂಬ ಹೆಸರಿನಿಂದ ಒಂದು ಮಂತ್ರಿ ಮಂಡಲಿಯನ್ನು ಏರ್ಪಡಿಸಿಕೊಂಡಿರುತ್ತಾರೆ.

ಇದರಲ್ಲೂ ಮುಖ್ಯ ಮಂತ್ರಿಯು ಮೆಕ್ಡೊನಾಲ್ಡರೇ. ಹೊಸತಾಗಿ ಏರ್ಪಾಡಾದ ಮಂತ್ರಿ ಮಂಡಲಿಯಲ್ಲಿರುವ ಹತ್ತು ಮಂತ್ರಿಗಳಲ್ಲಿ ನಾಲ್ಕು ಜನರು ಕೂಲಿಕಾರರ ಪಕ್ಷದವರು, ನಾಲ್ಕು ಜನರು ಕನ್‌ಸರ್ವೇಟಿವ್ ಪಕ್ಷದವರು, ಇಬ್ಬರು ಲಿಬರಲ್ ಪಕ್ಷದವರು. ಇಂಡಿಯಾ ಮಂತ್ರಿಯಾಗಿ ಕನ್ಸರ್ವೇಟಿವ್ ಪಾರ್ಟಿಗೆ ಸೇರಿದ ಸರ್ ಸಾಮುವೇಲ್ ಹೋರ್ ಎಂಬವರು ಆರಿಸಲ್ಪಟ್ಟಿರುತ್ತಾರೆ. ಇವರು ಕಳೆದ ದುಂಡು ಮೇಜು ಪರಿಷತ್ತಿನಲ್ಲಿ ಕನ್ಸರ್ವೇಟಿವ್ ಪಾರ್ಟಿಯ ಪ್ರತಿನಿಧಿಯಾಗಿದ್ದರು. ದುಂಡು ಮೇಜು ಪರಿಷತ್ತಿನಲ್ಲಿ ಈ ಮೊದಲೇ ಆದ ತೀರ್ಮಾನಗಳ ಕುರಿತು ಪಾರ್ಲಿಮೆಂಟಿನಲ್ಲಿ ಮಾತನಾಡುವಾಗ ಮಧ್ಯವರ್ತಿ ಸರಕಾರದಲ್ಲಿ ಪ್ರಜಾ ಜವಾಬ್ದಾರಿ ತತ್ವವನ್ನು ಕೊಡುವ ವಿಷಯದಲ್ಲಿ ತನ್ನ ಪಾರ್ಟಿಯವರು ಒಪ್ಪಿಗೆ ಕೊಟ್ಟಿಲ್ಲವೆಂತಲೂ, ದುಂಡು ಮೇಜು ಪರಿಷತ್ತಿನ ಮುಂದೆ ಚರ್ಚೆಗೆ ಬಂದ ಭದ್ರತೆಗಳಿರಲು ಒಪ್ಪಿಕೊಳ್ಳದಿದ್ದರೆ ಸುಧಾರಣೆಗೆ ತನ್ನ ಪಾರ್ಟಿಯ ಒಪ್ಪಿಗೆ ದೊರೆಯಲಾರದೆಂತಲೂ ಹೇಳಿರುವರು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯದ ಅಂಶಗಳನ್ನು ಕೊಡಲು ಸುತರಾಂ ಒಪ್ಪದೆ ಇರುವ ಲಾರ್ಡ್ ರೀಡಿಂಗರೂ ಸಹ ಹೊಸ ಮಂತ್ರಿ ಮಂಡಲಿಯಲ್ಲಿರುತ್ತಾರೆ. ದುಂಡು ಮೇಜು ಪರಿಷತ್ತಿನ ಒಂದು ಮುಖ್ಯ ಉಪ ಕಮಿಟಿಯ ಅಧ್ಯಕ್ಷರಾಗಿದ್ದ ಲಾರ್ಡ್ ಸ್ಯಾಂಕಿಯವರು ಮಂತ್ರಿ ಮಂಡಲಿಯಲ್ಲಿ ಉಳಿದಿರುವುದು ತೃಪ್ತಿಕರ. ಇವರು ಹಿಂದುಸ್ಥಾನಕ್ಕೆ ಸಹಾನುಭೂತಿ ತೋರಿಸಿದ್ದಾರೆ. ಈಗ ಏರ್ಪಾಡಾದ ಮಂತ್ರಿ ಮಂಡಲಿಯು ಹಂಗಾಮಿಯಾಗಿ ಇಂಗ್ಲೆಂಡಿನ ಆರ್ಥಿಕ ಸ್ಥಿತಿಗೆ ಹಾನಿ ಬಾರದಂತೆ ಮಾಡಿಕೊಂಡ ಏರ್ಪಾಡು. ಈ ಮಂತ್ರಿ ಮಂಡಲಿಯು ಹೋದರೆ ಬಳಿಕ ಬೇಗನೆ ಆಗುವ ಹೊಸ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಕ್ಷದವರೇ ಅಧಿಕಾರಕ್ಕೆ ಬರಬಹುದು. ಹಿಂದೂಸ್ಥಾನದ ಕಡೆ ಸಹಾನುಭೂತಿಯು ಇನ್ನೂ ಕಡಿಮೆಯಾಗುವುದು. ಪಾರ್ಲಿಮೆಂಟಿನಲ್ಲಿ ಹಿಂದೂಸ್ಥಾನದ ಸುಧಾರಣೆಯ ಚರ್ಚೆಯಾಗುವಾಗ ಯಾವ ಮಂತ್ರಿ ಮಂಡಲಿಯು ಇರುತ್ತದೋ ನೋಡಬೇಕಷ್ಟೆ. ಈಗ ಕೂಲಿಕಾರರ ಪಕ್ಷದವರು ಕೆಲಸದಿಂದ ಮುಕ್ತರಾದದ್ದು ಹಿಂದೂಸ್ಥಾನಕ್ಕೆ ಹಿತಕರವಲ್ಲ.

ಚಂದಾದಾರರಲ್ಲಿ ವಿನಂತಿ.

'ಕೊಡಗು' ಪತ್ರಿಕೆಯ ಹಾಲಿ ವರ್ಷವು ಈ ತಿಂಗಳ ಅಖೈರಿನಲ್ಲಿ ಅಂತ್ಯವಾಗುತ್ತದೆ. ನೋಟೀಸು ಕಾರ್ಡುಗಳು ಕಳುಹಿಸಲ್ಪಟ್ಟಾಗ್ಯೂ ಹಲವು ಚಂದಾದಾರರು ಇನ್ನೂ ತಮ್ಮ ಚಂದಾ ಹಣವನ್ನು ವಾಪತಿ ಮಾಡದೆ ಇರುವುದು ತುಂಬಾ ವ್ಯಸನಕರ. ಮೊದಲಿನಂತೆ ವಿ. ಪಿ. ಮೂಲಕ ಪತ್ರಿಕೆಯನ್ನು ಕಳುಹಿಸುವೆವೆಂದರೆ—ಪೋಸ್ಟಲ್ ಇಲಾಖೆಯವರು ವಿ. ಪಿ. ಫಾರಂಗಳನ್ನು ಈ ಮೊದಲಿನಂತೆ ಹತ್ತು ದಿವಸಗಳ ವರೆಗೆ ಇಡುವ ಬದಲು ಈಗ ಬರೇ ಮೂರು ದಿವಸಗಳ ತನಕ ಮಾತ್ರ ಇಟ್ಟು ವಾಪಸು ಮಾಡುತ್ತಿರುವದರಿಂದ ಮುಖ್ಯವಾಗಿ ಪೋಸ್ಟಾಫೀಸುಗಳಿಂದ ದೂರವಿರುವ ಗ್ರಾಹಕರಿಗೆ ವಿ. ಪಿ. ಯನ್ನು ಹೊಂದಿಕೊಳ್ಳಲು ಕಷ್ಟವಾಗುತ್ತೆ. ಆದಕಾರಣ ಮಹಾಶಯರೆಲ್ಲರೂ ತಮ್ಮ ಚಂದಾಹಣವನ್ನು ಮನಿಯಾರ್ಡರ್ ಮೂಲಕವಾಗಿ ನಮ್ಮ ಆಫೀಸಿಗಾಗಲೀ, ನಮ್ಮ ಏಜೆಂಟರುಗಳಿಗಾಗಲೀ ಕೂಡಲೆ ವಾಪತಿ ಮಾಡಬೇಕಾಗಿ ಕೋರುತ್ತೇವೆ. ಈ ಚಂದಾ ಬಾಕಿ ಮಾಡಿಕೊಳ್ಳುವದರಿಂದಲೂ ವಿ. ಪಿ. ವಾಪಸು ಮಾಡುವುದರಿಂದಲೂ ನಮಗೆ ತುಂಬಾ ನಷ್ಟ ಉಂಟಾಗುವುದರಿಂದ ಅಂಥವರಿಗೆ ಪತ್ರಿಕೆ ಕಳುಹಿಸುವುದನ್ನು ನಿಲ್ಲಿಸಬೇಕಾಗುವದೆಂದು ತಿಳಿಸಲು ವಿಷಾದಿಸುತ್ತೇವೆ. ಕಳೆದ ಹತ್ತು ವರ್ಷಗಳಿಂದ ದೇಶಸೇವೆ ಮತ್ತು ಸಮಾಜಸೇವೆ ಮಾಡುತ್ತಾ ತನ್ನ ಆಯುಷ್ಯವನ್ನು ನವೆಸುತ್ತಿರುವ ಕೊಡಗು ಪತ್ರಿಕೆಯ ಪ್ರಕಟನ ಕಾರ್ಯಕ್ಕೆ ತೊಂದರೆಯಾಗದಂತೆ ಎಲ್ಲರೂ ಚಂದಾ ಹಣವನ್ನು ಮುಂಗಡವಾಗಿಯೇ ಕಳುಹಿಸಿ ಸಹಾಯ ಮಾಡಬೇಕಾಗಿ ಕೋರುತ್ತೇವೆ.

ಮ್ಯಾನೇಜರು.

ಮಹಾತ್ಮರು ದುಂಡು ಮೇಜು ಪರಿಷತ್ತಿಗೆ ಹೋ

ಮಹಾತ್ಮ ಗಾಂಧಿಯವರಿಗೂ, ವೈಸರಾಯರಿಗೂ ಈ ತಾ. 26ರ ಮೂರು ಗಂಟೆ ಸಮಯ ತೃಪ್ತಿಕರವಾದ ಸಂಭಾಷಣೆಯು ನಡೆಯಿತು. ಅದರ ಫಲಿತಾಂಶವಾಗಿ ಮಹಾತ್ಮರು ತಾ. 29ರಲ್ಲಿ ಲಂಡನಿಗೆ ಹೊರಡುತ್ತಾರೆಂದು ಪ್ರಕಟವಾಗಿದೆ.

ಈ ವಾರದ ನಮ್ಮ ಅಗ್ರ ಲೇಖನದಲ್ಲಿ ವಿವರಿಸುವಂತೆ ಮಹಾತ್ಮರು, ಸರ್ಕಾರದವರು ರಾಜಿ ಕರಾರುಗಳನ್ನು ಮುರಿದ ತಪ್ಪನ್ನು ತೋರಿಸಿ 'ಚಾರ್ಜ್ ಶೀಟ್' ನ್ನು ಪ್ರಕಟಿಸಿದ ಮೇಲೆ ಗಾಂಧಿಜೀಯವರು ಲಂಡನಿಗೆ ಹೋಗುವ ಸಂಭವವೇ ಇಲ್ಲವೆಂದು ತೋರಿತು. ಆದರೂ ವೈಸರಾಯರು ಕಲ್ಕತ್ತದಿಂದ ಥಕ್ಕನೆ ಸಿಮ್ಲಾಕ್ಕೆ ಹಿಂತಿರುಗಿದರು. ಸಪ್ರು, ಮತ್ತು ಜಯಕರರವರ 'ಲೀಡಿಯೋ ವಾರ್ತೆ'ಯೂ ಮಹಾತ್ಮರಿಗೆ ತಲಪಿತು. ವೈಸರಾಯರನ್ನು ಭೇಟಿಯಾಗಲು ಇಚ್ಛಿಸುತ್ತೇನೆಂದು ಮಹಾತ್ಮರು ವೈಸ್ರಾಯರಿಗೆ ತಂತಿ ವಾರ್ತೆ ಕಳುಹಿದರು. ಅದಕ್ಕೆ ವೈಸರಾಯರು ಎಗ್ಸಿಕ್ಯೂಟಿವ್ ಕೌನ್ಸಿಲಿನ ಆಲೋಚನೆ ತೆಗೆದುಕೊಂಡು ಒಪ್ಪಿದರು. ಮಹಾತ್ಮರು ಸಿಮ್ಲಾಕ್ಕೆ ಕಳೆದ ಮಂಗಳವಾರ ತಲಪಿದರು. ಆ ದಿನ ವೈಸರಾಯರಿಗೆ ಅನಾರೋಗ್ಯವಾದ ಕಾರಣ ಅವರ ಭೇಟಿಗೆ ಅನುಕೂಲವಾಗಲಿಲ್ಲ. ಹೋಮ್ ಸೆಕ್ರೆಟರಿ ಮಿ. ಎಮರ್ಸನರೊಂದಿಗೆ ಗಾಂಧಿಜೀಯವರು 2 ಗಂಟೆ ಕಾಲ ಸಂಭಾಷಣೆ ನಡೆಸಿದರು. ಅದೇ ದಿನವೇ ವೈಸರಾಯರು ಎಗ್ಸಿಕ್ಯೂಟಿವ್ ಕೌನ್ಸಿಲಿನ ಮೀಟಿಂಗು ನಡೆಸಿದಲ್ಲಿ ಎಮರ್ಸನರು ಗಾಂಧಿಜೀಯವರ ಸಂಭಾಷಣೆಯ ಸಾರಾಂಶವನ್ನು ವಿವರಿಸಿದರು. ತಾ. 26ರಲ್ಲಿ ಮಹಾತ್ಮರಿಗೂ, ವೈಸರಾಯರಿಗೂ 3 ಗಂಟೆ ಸಮಯ ಸಂಭಾಷಣೆ ನಡೆಯಿತು. ಅದು ತೃಪ್ತಿಕರವಾದುದರಿಂದ ತಾನು 29ನೇ ತಾರೀಖಿನಲ್ಲಿ ಬೊಂಬಾಯಿಯಿಂದ ಇಂಗ್ಲೆಂಡಿಗೆ ಹೊರಡುತ್ತೇನೆಂದು ಮಹಾತ್ಮರು 'ಅಸೋಸಿಯೇಟೆಡ್ ಪ್ರೆಸ್' ನವರಿಗೆ ತಿಳಿಸಿದರು. ಸಂಭಾಷಣೆ ಆದ ಕೂಡಲೇ ವೈಸರಾಯರು ಎಗ್ಸಿಕ್ಯೂಟಿವ್ ಕೌನ್ಸಿಲಿನ ಮೀಟಿಂಗನ್ನು ಮಾಡಿದರು. ಸಂಭಾಷಣೆಯ ಫಲಿತಾಂಶವನ್ನು ಸರ್ಕಾರದವರು ಅದೇ ದಿನ ಸಾಯಂಕಾಲ ಪ್ರಕಟಿಸಬಹುದು. ಗಾಂಧಿಜೀಯವರು ಅದೇ ಮಧ್ಯಾಹ್ನ ಸಿಮ್ಲಾದಿಂದ ಬೊಂಬಾಯಿಗೆ ಹೊರಟಿರುವರು. ಮಹಾತ್ಮರ ಈ ತೀರ್ಮಾನವು ಎಲ್ಲರಿಗೂ ಸಂತೋಷವನ್ನುಂಟು ಮಾಡಿದೆ.

(ಈ ವರ್ತಮಾನವು ನಮ್ಮ ಅಗ್ರ ಲೇಖನ ಪ್ರಿಂಟಾದ ಮೇಲೆ ಸಿಕ್ಕಿದ್ದಾಗಿದೆ.)

ವರ್ತಮಾನ ಸಂಗ್ರಹ.

ಒಳದೇಶ.

ಜೋರಾದ ಮಳೆ ಗಾಳಿಯ ದೆಸೆಯಿಂದ ಕುತ್ತುನಾಡು ಶ್ರೀಮಂಗಲ ಗ್ರಾಮದ ಶಾಲೆಯ ಕಟ್ಟಡವು ಬಿದ್ದು ಹೋಗಿದೆಯೆಂದು ತಿಳಿಯಬರುತ್ತದೆ.

ಕೊಡಗಿನ ವೀರಶೈವರ ಡೆಪ್ಯುಟೇಶನೊಂದು ಈ ತಾ. ...ರಲ್ಲಿ ಕಮಿಷನರ ಭೇಟಿಗೆ ಹೋಗಿತ್ತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ದಕ್ಷಿಣ ಕೊಡಗಿನಲ್ಲಿ ಭತ್ತದ ಧಾರಣೆಯು ಈಗ ಸ್ವಲ್ಪ ಏರಿದೆ. ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಯೊಂದಕ್ಕೆ 55 ರೂ ಕ್ರಯವಿತ್ತೆಂದು ತಿಳಿಯ ಬಂತು.

ವೀರಾಜಪೇಟೆ ಮುನ್ಸಿಪಲ್ ಕೌನ್ಸಿಲಿನ ಹೊಸ ಚುನಾವಣೆಯು ಸೆಪ್ಟೆಂಬರ ತಾ. 19ರಲ್ಲಿ ನಡೆಯುವುದೆಂದೂ, ಉಮೇದುವಾರರು ಈ ತಾ. 29 ರೊಳಗೆ ಅರ್ಜಿಗಳನ್ನು ಕಳುಹಿಸಬೇಕಾದ್ದೆಂದೂ ತಿಳಿಯ ಬರುತ್ತದೆ.

ಕೊಡಗಿನ ಸ್ವಯಂ ಸೇವಕ ಮಂಡಳಿಯವರು ವೀರಾಜಪೇಟೆ ಸಾರಾಯಿ ಗಡಂಗವನ್ನು ಈ ತಾ. 26ರಲ್ಲಿಯೂ, ಪೊನ್ನಂಪೇಟೆ ಗಡಂಗವನ್ನು ತಾ. 27ರಲ್ಲಿಯೂ ಪಿಕೆಟ್ ಮಾಡಲು ಪ್ರಾರಂಭಿಸಿರುವರು.

ಮೈಸೂರು ಸರ್ಕಾರಿ ಸರ್ವಿಸಿನಿಂದ ರಿಟಯರಾಗಿರುವ ರಾ. ಕೋದಂಡ ಮಾಚಯ್ಯನವರ ಮಗ ಮಿ. ಐಯ್ಯಪ್ಪನವರು ಬೆಂಗಳೂರಿನಲ್ಲಿ ಪೋಲೀಸು ಅಸಿಸ್ಟೆಂಟ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿದು ಬರುತ್ತದೆ.

ಈ ತಾ. 25ರಲ್ಲಿ ಮಡಿಕೇರಿಯಲ್ಲಿ ನಡೆದ ಅರಮನೆಯಲ್ಲಿ ಪೋಲೀಸು ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ್ ಹುದ್ದೆಯ ತರಬೇತಿಗೆ ನಾಲ್ಕು ಉಮೇದುವಾರರ ಪೈಕಿ ಮಿ. ಮಲ್ಲೇಂಗಡ ಮುತ್ತಣ್ಣ ಬಿ. ಎ., ಬಿ. ಎಲ್ ರವರು ಚುನಾಯಿಸಲ್ಪಟ್ಟಿರುವರು.

ಮೈಸೂರು ಫಾರೆಸ್ಟ್ ಡೆಪ್ಯುಟಿ ಕನ್‌ಸರ್ವೇಟರ್ ಹುದ್ದೆಯಿಂದ ರಿಟಯರಾಗಿದ್ದ ಮಿ. ಕುಪ್ಪಂಡ ಮುದ್ದಯ್ಯನವರು ದೀರ್ಘಕಾಲ ಕಾಯಿಲಸ್ಥರಾಗಿದ್ದವರು ಕಳೆದ ಸೋಮವಾರ ತಮ್ಮ ವೀರಾಜಪೇಟೆ ಭವನದಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮಡಿಕೇರಿ ದೇಚೂರು ಮತ್ತು ಬ್ರಾಹ್ಮಣಕೇರಿಯ ಹಲವು ಮನೆಗಳಲ್ಲಿ ಇಲಿಗಳು ಸಾಯುತ್ತಿರುವುದಲ್ಲದೆ ಪೇಟೆ ಕಡೆಯೂ ಇಲಿ ಸಾಯುತ್ತಿವೆಯೆಂದು ಸುದ್ದಿ. ವೀರಾಜಪೇಟೆ ಬಳಿ ಮಗ್ಗುಲ ಗ್ರಾಮದ ಒಂದೆರಡು ಮನೆಗಳಲ್ಲಿಯೂ ಪ್ಲೇಗಿನಿಂದ ಇಲಿಗಳು ಸತ್ತಿವೆಯೆಂದು ವರ್ತಮಾನ.

ಈ ತಾ. 25ರಲ್ಲಿ ಮಡಿಕೇರಿ ಕೊಡವರ ಮೀಟಿಂಗೊಂದು ದೇವಸ್ಥಾನದ ಹಾಲ್‌ನಲ್ಲಿ ನಡೆದು ಸೆಪ್ಟೆಂಬರು 3ರಲ್ಲಿ ... ಹಬ್ಬಕ್ಕೆ ಕಳೆದ ಕೆಲವು ವರ್ಷಗಳಲ್ಲಿ ... ನಡೆಸುತ್ತಿದ್ದ ಊಟವನ್ನು ಮಾಡದೆ ಟೀ ಪಾರ್ಟಿಯಿಂದಲೇ ... ತೀರ್ಮಾನಿಸಿರುವರೆಂದು ತಿಳಿದು ಬರುತ್ತದೆ.

"ಲೋಕಪಾವನ" ಪತ್ರಿಕೆಯ ಪ್ರಿಂಟಿಂಗ್ ಆಫೀಸಿಗೆ ಈ ತಾ. 26ರಲ್ಲಿ ಮಿ. ಪಾಂಡಂಡ ನಂಜಪ್ಪನವರು ಬೀಗ ಹಾಕಿದ್ದಾರೆಂತಲೂ, ಇದಕ್ಕಾಗಿ ಸದರಿ ಪತ್ರಿಕೆಯ ಸಂಪಾದಕರಾದ ಮಿ. ಬಲ್ಲಚಂಡ ಬೆಳ್ಯಪ್ಪನವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಫಿರ್ಯಾದು ಕೊಟ್ಟಿರೆಂತಲೂ, ಅದನ್ನು ಪೋಲೀಸಿನವರು ವಿಚಾರಿಸುತ್ತಿದ್ದಾರೆಂತಲೂ ವರ್ತಮಾನ.

ಸರ್ಕಾರಿ ಉದ್ಯೋಗಸ್ಥರಲ್ಲಿ 30 ವರ್ಷ ಸರ್ವಿಸಾದವರೂ, 55 ವರ್ಷ ಪ್ರಾಯ ತುಂಬಿದವರೂ ಉದ್ಯೋಗದಿಂದ ನಿವೃತ್ತರಾಗಬೇಕೆಂತಲೂ, ರಿಟ್ರೆಂಚ್‌ಮೆಂಟ್ ಕಮಿಟಿಯವರು ಶಿಫಾರಸ್ಸು ಮಾಡಿದರೆ 10 ವರ್ಷದೊಳಗೂ, 25 ವರ್ಷದ ಮೇಲೂ ಸರ್ವಿಸಾದವರು ಉದ್ಯೋಗ ಬಿಡಬೇಕಾಗುವದೆಂತಲೂ ಇಂಡಿಯಾ ಸರ್ಕಾರದ ಸರ್ಕಲರಾರು ಹೊರಟಿದೆಯೆಂದು ವರ್ತಮಾನವಿದೆ.

ಈ ವಾರ ಕಳೆದ ವಾರದಷ್ಟು ಮಳೆಯು ಜೋರಾಗಿರಲಿಲ್ಲ. ಆದುದರಿಂದ ಹೊಳೆಗಳ ನೆರೆಯು ಗದ್ದೆಗಳಿಂದ ಇಳಿದಿರುವುದು. ನೆರೆಯಿಂದ 2—3 ವಾರಗಳಿಂದ ಮುಚ್ಚಲ್ಪಟ್ಟಿದ್ದ ನಾಟಿಯೆಲ್ಲವೂ ಕೊಳೆತು ಹೋಗಿ ತುಂಬಾ ನಷ್ಟವುಂಟಾಗಿದೆ. ನೀರಿನ ಅಡಿಯಲ್ಲಿದ್ದ ಗದ್ದೆಗಳು ತುಂಬಾ ಇನಲ್ಲಿ ನೆಡಲಿಕ್ಕೆ ಪೈರು ಇಲ್ಲದೆ ಕೆಲವರಿಗೆ ತೊಂದರೆಯಾಗಿದೆ. ಕಳೆದ ಶನಿವಾರದಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 10.86 ಇಂಚು ಮಳೆಯಾಗಿದೆ.

ನಾಪೋಕ್ಲುನಾಡು ಪಾರುಪತ್ಯಗಾರರಾದ ಮಿ. ಬಲ್ಲಟ್ಟಿಕಾಳಂಡ ಚಂಗಪ್ಪನವರು ಕಾಯಿಲೆಯ ದೆಸೆಯಿಂದ ಈ ತಾ. 20 ರಿಂದ ನಾಲ್ಕು ತಿಂಗಳು ರಜೆ ತೆಗೆದುಕೊಂಡಿರುವುದರಿಂದ ಸ್ಪೆಷಲ್ ರೆವಿನ್ಯೂ ಆಫೀಸಿನ ಮಿ. ಕೆ. ಜಿ. ಸುಬ್ರಾಯರು ನಾಪೋಕ್ಲು ಪಾರುಪತ್ಯಗಾರರಾಗಿಯೂ, ಇವರ ಸ್ಥಳಕ್ಕೆ ವೀರಾಜಪೇಟೆ ತಾಲೋಕು ಆಫೀಸಿನ ಮಿ. ಬಿದ್ದಮ್ಮಂಡ ಕಾರ್ಯಪ್ಪನವರೂ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಮಡಿಕೇರಿ ಮುನಿಸಿಪಾಲಿಟಿಗೆ ಬರುವ ಸುಂಕ ಎತ್ತುವುದರ ಬದಲು ಬೇರೆ ತರಹದ ತೆರಿಗೆ ಹಾಕುವುದನ್ನು ಆಲೋಚಿಸುವ ಬಗ್ಗೆ ಈ ಕೆಳಗಿನ ಮೆಂಬರುಗಳ ಕಮಿಟಿಯೊಂದನ್ನು ಚೀಫ್ ಕಮಿಷನರವರು ನೇಮಿಸಿರುವರು (1) ಕಮಿಷನರವರು (ಅಧ್ಯಕ್ಷರು) (2) ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು. (3) ಲೆಫ್ಟಿನೆಂಟ್ ಕರ್ನಲ್ ಹೆಚ್. ಯಫ್. ಮೂರ್‌ಹೆಡ್ ರವರು, ಐ. ಎಂ. ಎಸ್. (4) ಎ. ಬಿ. ಚಂಗಪ್ಪನವರು, (5) ಸಿ. ಎನ್. ವೆಂಕಪ್ಪಯ್ಯನವರು, (6) ಬಿ. ಶ್ರೀಪತಿರಾಯರು, (7) ಪಿ. ಯಂ. ನಾಣಯ್ಯನವರು, (8) ಡಿಸ್ಟ್ರಿಕ್ಟ್ ಬೋರ್ಡಿನ ವೈಸ್ ಪ್ರೆಸಿಡೆಂಟರಾದ ಎ. ಎ. ಚಂಗಪ್ಪನವರು, (9) ಮಡಿಕೇರಿ ಮುನ್ಸಿಪಾಲಿಟಿಯ ಅಧ್ಯಕ್ಷರು ಮತ್ತು (10) ವೀರಾಜಪೇಟೆ ಮುನ್ಸಿಪಾಲಿಟಿಯ ಅಧ್ಯಕ್ಷರು. ಈ ಕಮಿಟಿಯ ಮೀಟಿಂಗು ಸೆಪ್ಟೆಂಬರು ತಾ. 28ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯುವುದು.

ಹಿಂದೂದೇಶ.

ಕ್ವೆಟ್ಟಾದಲ್ಲಿ ಈ ತಾ. 25 ರಲ್ಲಿ ಬೆಳಿಗ್ಗೆ 17 ಸಾರಿ ಭೂಕಂಪಗಳಾದವಂತೆ. ಹಲವು ಮನೆಗಳು ಮುರಿದು ಬಿದ್ದಿವೆಯೆಂದೂ, ಹಲವರಿಗೆ ಗಾಯಗಳಾಗಿವೆಯೆಂದೂ, ಒಂದು ಸೇತುವೆ ಮುರಿದು ಹೋಗಿ ಟ್ರೈನ್ ನಿಂತು ಹೋಗಿದೆಯೆಂದೂ ವರ್ತಮಾನ.

ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಡುಗಿಯರು ತಲೆಗೂದಲನ್ನು ಇರುವಾಗ್ಯೆ ಹೆಚ್ಚು ಕೆಲಸ ಮಾಡುತ್ತಾರೆಂದೂ, ತಲೆ ಕೂದಲು ಇರುವಾಗ ಅವರು ಮಾಡುವುದು ಕಡಿಮೆಯಾಗಿ ಕೆಲಸದ ಕಡೆ ಹೆಚ್ಚು ಗಮನವಿಡುವುದೇ ಇದಕ್ಕೆ ಕಾರಣವೆಂದೂ ಲಂಡನಿನ ಡಾ. ಸೇಲ್‌ಶರವರು ಪರಿಶೋಧಿಸಿ ಕಂಡು ಹಿಡಿದಿರುವರಂತೆ!

ಚೈನಾದ ಶಂಗಹಾಯಿ ಪಟ್ಟಣದಲ್ಲಿ ಟ್ರಾಮುಗಳ ಕಂಡಕ್ಟರುಗಳಿಗೂ, ಯಜಮಾನರಿಗೂ ಕಲಹವು ಉಂಟಾಗಿ, ಒಂದು ದಿನ ಕಂಡಕ್ಟರುಗಳು ಪ್ರಯಾಣಿಕರನ್ನು ಚಾರ್ಜಿಲ್ಲದೆ ಫ್ರೀಯಾಗಿ ಟ್ರಾಮಿನಲ್ಲಿ ಒಯ್ಯಲು ಪ್ರಾರಂಭಿಸಿದರು. ಮಧ್ಯಾಹ್ನದ ವರೆಗೆ ಒಂದು ಕಾಸೂ ವಸೂಲಾಗದನ್ನು ನೋಡಿ ಯಜಮಾನರುಗಳು ಕಂಡಕ್ಟರುಗಳ ದೂರುಗಳನ್ನು ತೀರಿಸಿ ಕೊಟ್ಟರಂತೆ!

ಚೈನಾದಲ್ಲಿ ಯಂಗ್‌ಟ್ಸಿ ನದಿಯಲ್ಲಿ ದೊಡ್ಡ ನೆರೆ ಬಂದು ಹುಪೆ ಎಂಬಲ್ಲಿ 30 ಸಾವಿರ ಚದರ ಮೈಲು ಪ್ರದೇಶವೂ, ಹುನಾನ್ ಎಂಬಲ್ಲಿ 20 ಸಾವಿರ ಚದರ ಮೈಲಿ ಪ್ರದೇಶವೂ ನೀರಿನಿಂದ ಮುಚ್ಚಲ್ಪಟ್ಟದ್ದಲ್ಲದೆ 2 ಮಿಲ್ಲಿಯ ಜನರು ಮೃತಪಟ್ಟಿರುವರೆಂದೂ, 5 ಮಿಲ್ಲಿಯ ಜನರಿಗೆ ಮನೆ ಮಠಗಳಿಲ್ಲದ್ದಾಗಿದೆಯೆಂದೂ ಕರ್ಣಕಠೋರವಾದ ವರ್ತಮಾನವಿದೆ! ಹ್ಯಾಂಗ್ ಎಂಬ ಪಟ್ಟಣದಲ್ಲಿ ದಿವಸಕ್ಕೆ 1000 ದಂತೆ ಜನರು ಸಾಯುತ್ತಿರುವರಂತೆ! ಅವರ ಶವಗಳನ್ನು ಸತ್ತ ನಾಯಿ, ಬೆಕ್ಕು, ಕುದುರೆಗಳೊಂದಿಗೆ ನದಿಗೆ ಬಿಸಾಡುತ್ತಿರುವರಂತೆ!!

ದೇಶದ ಆರ್ಥಿಕ ಹೀನಸ್ಥಿತಿಯ ದೆಸೆಯಿಂದ ಸರ್ಕಾರದ ಖರ್ಚು ಕಡಿಮೆ ಮಾಡಿ ಬಜೆಟನ್ನು ಸರಿಮಾಡುವುದರಲ್ಲಿ ಬ್ರಿಟನ್ನಿನ ಲೇಬರ್ ಮಂತ್ರಿ ಮಂಡಳಿಯಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿದ್ದರಿಂದ ಪ್ರಧಾನ ಮಂತ್ರಿಯಾದ ಮಿ. ರಾಮ್ಸೆ ಮೆಕ್ಡನಾಲ್ಡರವರು ತನ್ನ ಪದವಿಗೆ ರಾಜೀನಾಮೆ ಕೊಟ್ಟರು. ಆದಕಾರಣ ಹೊಸ ಮಂತ್ರಿ ಮಂಡಳಿಯನ್ನು ನೇಮಿಸಬೇಕಾಯಿತು. ಬಜೆಟನ್ನು ಸರಿಪಡಿಸಲು ಒಂದೇ ಪಾರ್ಟಿಗೆ ಸಾಧ್ಯವಿಲ್ಲದ ಕಾರಣ ಲೇಬರ್, ಕನ್‌ಸರ್ವೇಟಿವ್ ಮತ್ತು ಲಿಬರಲ್ ಪಾರ್ಟಿಗಳೂ ಸೇರಿ ನೇಶನಲ್ ಸರ್ಕಾರವೆಂಬ ಹೆಸರಿನಲ್ಲಿ ಮಿ. ಮೆಕ್ಡನಾಲ್ಡರವರ ಪ್ರಧಾನ ಮಂತ್ರಿತ್ವದಲ್ಲಿಯೇ ಹೊಸ ಮಂತ್ರಿ ಮಂಡಳಿಯು ಏರ್ಪಾಡಾಗಿದೆ. ಮಿ. ಮೆಕ್ಡನಾಲ್ಡ್, ಮಿ. ಬಾಲ್ಡ್‌ವಿನ್, ಮಿ. ಫಿಲಿಪ್ ಸ್ನೋಡನ್, ಸರ್ ಹರ್ಬರ್ಟ್ ಸಾಮುವೆಲ್, ಲಾರ್ಡ್ ಶ್ಯಾಂಕಿ, ಲಾರ್ಡ್ ರೀಡಿಂಗ್, ಸರ್ ಸಾಮುವೆಲ್ ಹೋರ್ (ಇಂಡಿಯಾದ ಸ್ಟೇಟ್ ಸೆಕ್ರೆಟರಿಯವರು) ಮಿ. ಥಾಮಸ್, ಮಿ. ನೆವಿಲ್ ಚೇಂಬರ್ಲಿನ್, ಮತ್ತು ಸರ್ ಫಿಲಿಪ್ ಕನ್‌ಲಿಫ್ ಲಿಸ್ಟರ್‌ರವರು ಹೊಸ 10 ಮಂತ್ರಿಗಳಾಗಿರುವರು. ಇಂಗ್ಲೆಂಡಿನ ಸರ್ಕಾರ ಬದಲಾದುದರಿಂದ ದುಂಡು ಮೇಜು ಪರಿಷತ್ತಿನ ಕಾರ್ಯಕ್ಕೆ ಏನೂ ತೊಂದರೆಯೇನೂ ಆಗುವಂತಿಲ್ಲ.

ಕರ್ನಾಟಕ ಏಕೀಕರಣ.

'ಮಹಾತ್ಮಜಿಯವರು ಜೋಗಿಯನ್ನು (?) ಯಲ್ಲಿ ಕರ್ನಾಟಕ ಏಕೀಕರಣದ ಪ್ರಶ್ನೆಯನ್ನು ಚರ್ಚೆಗೆ ತರುವವರಾಗಿದ್ದಾರೆ. ಚಕ್ರಗೋಷ್ಠಿಯಲ್ಲಿರುವ ಕನ್ನಡಿಗರಿಬ್ಬರು, ನೀವು ಮತ್ತು ಬಿ. ಶಿವರಾಯರು. ಕನ್ನಡಿಗರೆಲ್ಲ ನೀವು ಈ ಸಮಸ್ಯೆಗೆ ಪೂರ್ಣ ಸಹಾನುಭೂತಿಯನ್ನೂ ಬೆಂಬಲವನ್ನೂ ಕೊಡುವದಾದರೆ, ಗಾಂಧಿಜಿಯವರಿಗೆ ತುಂಬಾ ಸಂತೋಷ ಎಂದು' ಕರ್ನಾಟಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀಯುತ ರಂಗರಾವ್ ದಿವಾಕರರು ಮೈಸೂರು ದಿವಾನರಾದ ಸರ್ ಮಿರ್ಜಾರವರಿಗೆ ಬರೆದ ಪತ್ರಕ್ಕೆ ದಿವಾನರ ಅಂತರಂಗ ಕಾರ್ಯದರ್ಶಿ (ಪ್ರೈವೇಟ್ ಸೆಕ್ರೆಟರಿ)ಗಳು ಈ ರೀತಿ ಉತ್ತರ ಕೊಟ್ಟಿರುವರು —

'ಕರ್ನಾಟಕ ಏಕೀಕರಣದ ವಿಚಾರವಾಗಿ ಕನ್ನಡಿಗರಿಗಿರುವ ಉತ್ಸಾಹವೂ ಈ ಉದ್ಯಮಕ್ಕೆ ದೊರೆತಿರುವ ಪ್ರಜಾಬೆಂಬಲವೂ, ಪೂರ್ಣವಾಗಿಯೂ ನನಗೆ ತಿಳಿದಿದೆ. ಕನ್ನಡಿಗರ ಈ ಮನೋವಾಂಛೆ ಸಾಧನೆಗೆ, ನಾನು ಮಾಡಬಹುದಾದ ಸರ್ವ ಸಹಾಯಗಳನ್ನೂ ಮಾಡಲು ಸಿದ್ಧನಾಗಿದ್ದೇನೆ.'

ಹಿಂದೂಸ್ಥಾನೀ ಸೇವಾದಲದ

ಹೊಸ ಘಟನೆಯೂ. ನಿಯಮಗಳೂ.

೧. ವರ್ಕಿಂಗ್ ಕಮಿಟಿಯಿಂದ ನಿಯಮಿಸಲ್ಪಡುವ ಸೇವಾದಲದ ಅಧಿಪತಿ, ಸಂಘದ ಕಾರ್ಯದರ್ಶಿ ಮತ್ತು ಇತರ ಮೂವರು ಸಭಾಸದರನ್ನೊಳಗೊಂಡ ಮಧ್ಯವರ್ತಿ ಮಂಡಲದಿಂದ ಹಿಂದೂಸ್ಥಾನೀ ಸೇವಾದಲದ ಕಾರ್ಯವು ನಡೆಸಲ್ಪಡುವುದು. ಸೇವಾದಲದ ಅಧಿಪತಿಯೇ ಈ ಮಂಡಲದ ಅಧ್ಯಕ್ಷನೂ, ಸಂಘಟಿತ ಕಾರ್ಯದರ್ಶಿಯೇ ಕಾರ್ಯದರ್ಶಿಯೂ ಆಗುವರು.

೨. ಮಧ್ಯವರ್ತಿ ಮಂಡಲದ ಅನುಮತಿಯ ಮೇರೆಗೆ ವರ್ಕಿಂಗ್ ಕಮಿಟಿಯು ಐದು ಮಂದಿಯನ್ನೊಳಗೊಂಡ ಒಂದು ಮಂಡಲವನ್ನು ನಿಯಮಿಸುವದು; ಆ ಮಂಡಲವು ಸ್ವಯಂ ಸೇವಕರಿಗೆ ಮತ್ತು ಶಿಕ್ಷಕರಿಗೆ ಶಿಕ್ಷಣ ಹಾಗೂ ಪ್ರಮಾಣ ಪತ್ರಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡುವದು.

೩. ಪ್ರಮಾಣಪತ್ರ (Certificates) ಗಳಲ್ಲಿ (೧) ಸ್ವಯಂ ಸೇವಕರು, (೨) ಶಿಕ್ಷಕರು, (೩) ಅಧಿಕಾರಿಗಳು, (೪) ಮೇಲಧಿಕಾರಿಗಳು—ಹೀಗೆ ನಾಲ್ಕು ತರಗತಿಗಳಿರತಕ್ಕದ್ದು.

೪. ಪರೀಕ್ಷೆಯ ಮತ್ತು ಪ್ರಮಾಣ ಪತ್ರಗಳ ವ್ಯವಸ್ಥೆಯನ್ನು ಮಧ್ಯವರ್ತಿ ಮಂಡಲವು ಮಾಡುವದು. ಪರೀಕ್ಷೆಯು ಪ್ರಾಂತೀಕ ಕಾ. ಕ ಯ ಕಚೇರಿಯಲ್ಲಿ ಇಲ್ಲವೆ ಪ್ರಾಂತೀಕ ಸ್ವಯಂ ಸೇವಕ ಮಂಡಳಿಗಳ ಕಚೇರಿಯಲ್ಲಿ ನಡೆಯುವದು. ಇವೆರಡೂ ಸಂದರ್ಭಗಳಲ್ಲಿ ವೆಚ್ಚವನ್ನು ಪ್ರಾಂತೀಕ ಕಾ ಕಮಿಟಿಗಳೇ ವಹಿಸತಕ್ಕದ್ದು. ಪರೀಕ್ಷೆಗೆ ಕೂಡುವವರು ಸೇವಾದಲದ ಮುಖ್ಯ ಕಚೇರಿಗೆ ೧ ರೂ ಕಳುಹಿಸಬೇಕು.

೫. ಯಾವುದೇ ಕಾಂಗ್ರೆಸ್ ಸಂಸ್ಥೆಯಲ್ಲಿ ಒಂದು ವರ್ಷದ ವರೆಗೆ ಸ್ವಯಂ ಸೇವಕನಾಗಿ ಕಾರ್ಯ ಮಾಡದಿದ್ದವರೂ, ಮಧ್ಯವರ್ತಿ ಮಂಡಲದ ಪರೀಕ್ಷೆಯಲ್ಲಿ [illegible] ವರೂ ಅಧಿಕಾರಿಗಳಾಗಲಾರರು.

೬. ೧೮ ವರ್ಷಕ್ಕೆ ಮೇಲ್ಪಟ್ಟ [illegible] ಪ್ರತಿಜ್ಞಾ ಪತ್ರಕ್ಕೆ ಸಹಿ [illegible] ಪಡೆದು [illegible] ಕಾಂಗ್ರೆಸ್ ಕಮಿಟಿಯ [illegible] ಮತ್ತು (ಅ) ಕಾಂಗ್ರೆಸ್ ಧ್ವಜವು, (ಆ) [illegible] (ಇ) ಶೋಲ್ಜರ್‌ಗಳನ್ನು [illegible] (ಈ) ಪ್ರಥಮ ಚಿಕಿತ್ಸೆ, (ಉ) ಕಾಂಗ್ರೆಸ್ ಪ್ರತಿ [illegible] (ಊ) [illegible] ಇವೇ ಮೊದಲಾದ ಮತ್ತು [illegible] ಕೇವಲ [illegible] ಸಂಸ್ಥೆಯ [illegible]

೭. ಸ್ವಯಂ ಸೇವಕನ ಪ್ರತಿಜ್ಞಾ ಪತ್ರವು

(ಅ) ಶಾಂತ ಮತ್ತು ನ್ಯಾಯವಾದ ಉಪಾಯಗಳಿಂದ ಹಿಂದುಸ್ಥಾನದ ಪೂರ್ಣ ಸ್ವಾತಂತ್ರ್ಯದ ಪ್ರಾಪ್ತಿಗಾಗಿ ಯತ್ನಿಸುವೆನೆಂದು ಕಾಂಗ್ರೆಸ್ ಸ್ವಯಂ ಸೇವಕನಾದ ನಾನು ಪ್ರತಿಜ್ಞಾಪೂರ್ವಕವಾಗಿ ಹೇಳುತ್ತೇನೆ.

(ಆ) ಪ್ರಾಮಾಣಿಕ ಮತ್ತು ಮನಸ್ಸಿಂದ ನನ್ನ ಮೇಲಧಿಕಾರಿಗಳ ಆಜ್ಞೆಗಳನ್ನು ಪಾಲಿಸುವೆನು.

(ಇ) ಹಿಂದುಸ್ಥಾನದಲ್ಲಿಯ ಎಲ್ಲಾ ಜಾತಿ ಮತ ಸಂಘಗಳಲ್ಲಿ ಪರಸ್ಪರ ಪ್ರೇಮವನ್ನುಂಟು ಮಾಡಲು ನನ್ನ ಶಕ್ತಿ ವಿಧದಿ ಯತ್ನಿಸುವೆನು.

(ಈ) ನನ್ನ ಸೇವೆಗಾಗಿ ಅಥವಾ ಇದರಿಂದುಂಟಾಗುವ ಪರಿಸ್ಥಿತಿಯ ಸಲುವಾಗಿ ನಾನು ಯಾವ ಧನ ಸಹಾಯವನ್ನು ನಿರೀಕ್ಷಿಸುವದಿಲ್ಲ.

(ಉ) ಕಾಂಗ್ರೆಸ್ ಅಧಿಕಾರಿಗಳು ಕೊಡುವ ಶಿಕ್ಷಣವನ್ನು ಹೊಂದುವೆನು.

೮ ತಾನು ಹೊಂದಿಕೊಂಡಿರುವ ಸಂಸ್ಥೆಯ ಶಿಸ್ತನ್ನು ಪಾಲಿಸದ ಕಾಂಗ್ರೆಸಿನ ಧೋರಣ ಮತ್ತು ಕಾರ್ಯ ಕ್ರಮಗಳನ್ನು ನಡೆಯಿಸದ ಸ್ವಯಂಸೇವಕನು ಅಥವಾ ಅಧಿಕಾರಿಯು ತೆಗೆದು ಹಾಕಲ್ಪಡುವನು.

೯. ಕಾರ್ಯದ ಮೇಲಿದ್ದವರ ಪಟ್ಟಿಯಲ್ಲಿರುವ ಸ್ವಯಂ ಸೇವಕನು ಅಥವಾ ಅಧಿಕಾರಿಯು ಕಾಂಗ್ರೆಸಿನಲ್ಲಿ ಯಾವುದೇ ಪಕ್ಷಕ್ಕೆ ಹೊಂದಿರಲಾರನು.

೧೦. ಯಾವುದೇ ಜಾತಿಯ ಸಂಸ್ಥೆಗೆ ಅಥವಾ ಯಾವುದೇ ಬೇರೆ ರಾಜಕೀಯ ಸಂಸ್ಥೆಗೆ ಸ್ವಯಂ ಸೇವಕನು ಹೊಂದಿರಲಾರನು.

೧೧. ಈಗಿದ್ದ ನಿಯಮಗಳಿಗೆ ಬಾಧೆಯಾಗದಂತೆ ಹೊಸ ನಿಯಮಗಳನ್ನು ಮಾಡುವ ಅಧಿಕಾರವು ಮಧ್ಯವರ್ತಿ ಮಂಡಲಕ್ಕಿದೆ. ಆದರೆ ಅವುಗಳನ್ನು ಕೂಡಲೇ ವರ್ಕಿಂಗ್ ಕಮಿಟಿಯ ಮುಂದಿಡಬೇಕು. ಅವುಗಳಲ್ಲಿ ಹೆಚ್ಚು ಕಡಿಮೆ ಮಾಡುವ ಅಧಿಕಾರವು ವರ್ಕಿಂಗ್ ಕಮಿಟಿಗೆ ಇದೆ.

(ಅ) ಇನ್ನು ಮೂರು ಸಭಾಸದರನ್ನು ವರ್ಕಿಂಗ್ ಕಮಿಟಿಯು ಆರಿಸಿ ಕೊಡುವ ವರೆಗೆ ಸೇವಾದಲದ ಅಧಿಪತಿ ಹಾಗೂ ಕಾರ್ಯದರ್ಶಿ ಇವರಿಬ್ಬರೇ ಎಲ್ಲಾ ಕಾರ್ಯಗಳನ್ನು ನಡಿಸುವರು.

೧೨. ತಮ್ಮಲ್ಲಿಯ ಸ್ವಯಂಸೇವಕ ಸಂಸ್ಥೆಗಳ ಮೇಲೆ ಪ್ರಾಂತೀಕ ಕಾ. ಕಮಿಟಿಗಳಿಗೆ ಅಧಿಕಾರವಿದೆ. ಆದರೆ ಎಲ್ಲಾ ವಿಧವಾದ ಅವುಗಳ ಮೇಲ್ವಿಚಾರಣೆಯನ್ನು ಮಾಡುವ ಅಧಿಕಾರವು ಮಧ್ಯವರ್ತಿ ಮಂಡಲಕ್ಕಿದೆ.

೧೩. ೧೮ ವರ್ಷದೊಳಗಿನ ಬಾಲ ಬಾಲಿಕೆಯರಿಗೆ ಶಿಕ್ಷಣ ಕೊಡಲು ಪ್ರಾಂತೀಕ ಕಾ. ಕಮಿಟಿಗಳಿಗೆ ಅಧಿಕಾರವಿದೆ. ೭ರಿಂದ ೧೨ ವರ್ಷದ ವರೆಗಿನವರಿಗೆ ಬಾಲ ಬಾಲಿಕೆಯರೆಂದೂ, ೧೨ರಿಂದ ೧೮ ವರ್ಷದ ವರೆಗಿನವರಿಗೆ ಕುಮಾರ ಕುಮಾರಿಯರೆಂದೂ ಕರೆಯಬೇಕು.

೧೪. ಪಿಕೆಟಿಂಗ್ ಮೊದಲಾದ ಕಾರ್ಯದ ಸಲುವಾಗಿ ಬೇರೆ ತಾತ್ಕಾಲಿಕ ಸ್ವಯಂಸೇವಕ ಮಂಡಳಿಗಳನ್ನು ಸ್ಥಾಪಿಸಿಕೊಳ್ಳಲು ಕಾಂಗ್ರೆಸ್ ಕಮಿಟಿಗಳಿಗೆ ಅಧಿಕಾರವಿದೆ. ಇಂಥಾ ಸ್ವಯಂ ಸೇವಕರು ಮೇಲಿನ ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕಬೇಕು. ಮತ್ತು ಆಯಾ ಕಾರ್ಯಗಳಿಗೆ ಬೇಕಾದಷ್ಟು ಶಿಕ್ಷಣ ಹೊಂದಬೇಕು.

೧೫. ಮೇಲಿನ ಎಲ್ಲಾ ಕಾರ್ಯಗಳ ಮೇಲ್ವಿಚಾರಣೆ ಮಾಡಲು ಮಧ್ಯವರ್ತಿ ಸಂಸ್ಥೆಗೆ ಅಧಿಕಾರವಿದೆ.

ವರ್ಕಿಂಗ್ ಕಮಿಟಿಯ ಗೊತ್ತುವಳಿಯು ಮೇಲಿನ ನಿಯಮಗಳಿಗೆ ಅದಷ್ಟು ಹೊಂದಿಕೊಂಡು [illegible] ಸ್ವಯಂಸೇವಕರ ಪಥಕಗಳನ್ನು ಸ್ಥಾಪಿಸಲು ಪ್ರಾಂತೀಕ ಕಾ. ಕಮಿಟಿಗಳಿಗೆ ಅಧಿಕಾರವಿದೆ [illegible] ವರ್ತಿ [illegible] ಪದದ ಸಂಸ್ಥೆಯ ನಿಯ [illegible] ನನ್ನು [illegible] (ಅಧಿಪತಿ) ಮತ್ತು ಕಾರ್ಯದರ್ಶಿಗಳು ಮಾಡುವವರಿದ್ದಾರೆ.

ಸೇವಾದಲದ ಕಚೇರಿ

ಹುಬ್ಬಳ್ಳಿ, ರಾ ವೆ ಕರಗುದರಿ

[illegible] ಪ್ರಧಾನ ಕಾರ್ಯದರ್ಶಿ

ಮಡಿಕೇರಿ ನಾಡು ಸ್ಟೋರ್ ಮೀಟಿಂಗು.

ತಾರೀಕು 16–8–1931 ರಲ್ಲು ಮಡಿಕೇರಿನಾಡು ಸಹಕಾರ ಸ್ಟೋರಿನ ಜನರಲ್ ಮೀಟಿಂಗನ್ನು ಪ್ರೆಸಿಡೆಂಟರಾದ ರಾ॥ ರಾ॥ ಸಿ ಬಿ ಐಯ್ಯಣ್ಣನವರ ಅಧ್ಯಕ್ಷತೆಯಲ್ಲ ಫೆಡರೇಶನ್ ಆಫೀಸಿನಲ್ಲು ನಡೆಸಿದ್ದರ ಪ್ರೊಸೀಡಿಂಗ್ಸ್ —

ಸ್ಟೋರಿನ ಮೆಂಬರುಗಳ ಪೈಕಿ 21 ಮೆಂಬರುಗಳು ಹಾಜರಿದ್ದರು. ಅಲ್ಲದೆ ಸಹಕಾರ ಸಂಘಗಳ ರಿಜಿಸ್ಟ್ರಾರರು ಸಹ ಹಾಜರಿದ್ದರು.

1. ತಾ 12–7–31 ರಲ್ಲು ನಡೆಸಿದ ಜನರಲ್ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಕೇಳಿ ಸರ್ವ ಸಮ್ಮತದಿಂದ ಅಂಗೀಕರಿಸಲಾಯಿತು

2 ಬೈಲಾ ತಿದ್ದುಪಡಿ ವಿಷಯ ಅರ್ಜಿ ಬಂದು ಈ ಕೆಳಗಿನ ಮೇರೆ ಬೈಲಾ ತಿದ್ದುಪಡಿ ಮಾಡುವಂತೆಯೂ ಈ ತಿದ್ದುಪಡಿಯನ್ನು ರಿಜಿಸ್ಟರ್ ಮಾಡಿಸಿಕೊಡಬೇಕೆಂದು ರಿಜಿಸ್ಟ್ರಾರ್ ದವರನ್ನು ಕೇಳಿಕೊಳ್ಳುವಂತೆಯೂ ತೀರ್ಮಾನಿಸಲಾಯಿತು

(1) ಬೈಲಾ 2 (?)ರ ಬದಲಿಗೆ 'ಸಂಘದ ಮೆಂಬರುಗಳ ಪ್ರಯೋಜನಾರ್ಥವಾಗಿ ಗೃಹದ ವ್ಯವಸಾಯದ ಸಾಹಿತ್ಯಗಳನ್ನು ಒದಗಿಸಿಕೊಡುವುದು ಮತ್ತು ಆಹಾರ ಸಾಮಗ್ರಿಗಳ ವ್ಯಾಪಾರವನ್ನು ರಖಂ ಅಥವಾ ಚಿಲ್ಲರೆಯಾಗಿ ನಡೆಸುವುದು ಮತ್ತು ಸಂಘಗಳ ಐಕ್ಯಗಳಿಗನುಸಾರವಾಗಿ ಈ ಮುಂದೆ ಮಹಾಸಭೆಯವರು ಸೂಚಿಸುವ ಮೇರೆ ಹೊಸ ಏರ್ಪಾಡುಗಳನ್ನು ಜಾರಿಗೆ ತರುವುದು' ಎಂಬುವುದನ್ನು ಸೇರಿಸುವುದು.

(2) ಬೈಲಾ 2 (3)ರ ಬದಲಿಗೆ 'ಪಾಲುಗಳ ಮತ್ತು ಹೊರಗಿನಿಂದ ಪಡೆಯುವ ಸಾಲ ಮತ್ತು ಠೇವಣಾತಿಗಳ ಮೂಲಕ ವ್ಯಾಪಾರದ ವ್ಯವಹಾರಗಳನ್ನು ನಡಿಸಲು ಬಂಡವಾಳಗಳನ್ನು ಪಡಗಿಸುವುದು ಮತ್ತು ಸದರಿ ಬಂಡವಾಳವನ್ನು ಮೆಂಬರರ ಅಭಿವೃದ್ಧಿಗೆ ತಕ್ಕಷ್ಟು ಉಪಯೋಗಿಸುವುದು. ಸಂಘದ ವಹಿವಾಟುಗಳನ್ನು ಸರಿಯಾದ ರೀತಿಯಲ್ಲಿ ನಡೆಸಲು ಕಟ್ಟಡಗಳನ್ನು ಕಟ್ಟಿಸುವುದು, ಕೊಂಡುಕೊಳ್ಳುವುದು, ಯಾ ಬಾಡಿಗೆಗೆ ತೆಗೆದುಕೊಳ್ಳುವುದು ಜಿನಸು ವಗೈರೆ ಸ್ಟೋರಿನಲ್ಲಿ ಮಾರಾಟ ಮಾಡಲ್ಪಡುವ ಸಾಮಾನುಗಳನ್ನು ಸಾಗಿಸಲು ಬೇಕಾಗುವ ಲಾರಿ, ಮತ್ತು ಬಂಡಿಗಳನ್ನು ಕೊಂಡುಕೊಳ್ಳುವುದು' ಎಂದು ಸೇರಿಸುವುದು.

(3) ಬೈಲಾ 12 (1) ಬಿಟ್ಟು ಬಿಡುವುದು.

(4) ಬೈಲಾ 18 (a) ರಲ್ಲಿ "ಒಬ್ಬ ಮೆಂಬರನು ಹತ್ತು ಪಾಲುಗಳಿಗಿಂತ ಹೆಚ್ಚಿನ ಪಾಲುಗಳನ್ನು ಪಡೆಕೊಳ್ಳಕೂಡದು" ಎಂಬುದರ ಬದಲಿಗೆ 'ಒಬ್ಬ ಮೆಂಬರನು 20 ಪಾಲುಗಳಿಗಿಂತ ಹೆಚ್ಚಿನ ಪಾಲುಗಳನ್ನು ಪಡೆಕೊಳ್ಳಕೂಡದು' ಎಂದು ಸೇರಿಸುವುದು.

(5) ಬೈಲಾ 34 (a) ಯನ್ನು ಬಿಟ್ಟು ಬಿಡುವುದು.

(6) ಬೈಲಾ 34 (b) ಯನ್ನು ಬಿಟ್ಟು ಬಿಡುವುದು.

(7) ಬೈಲಾ 35 (a) ಯಲ್ಲಿ 6ನೇ ಪಂಕ್ತಿಯಲ್ಲಿ ತಿಂಗಳು 1 ರ ರೂಪಾಯಿಗೆ 3 ಪೈ ಮೇರೆ ಬಡ್ಡಿಯನ್ನು ವಸೂಲ್ಮಾಡತಕ್ಕದ್ದು ಎಂಬುದರ ಬದಲಿಗೆ 'ತಿಂಗಳು 1 ರ ರೂಪಾಯಿಗೆ 2 ಪೈ ಮೇರೆ ಬಡ್ಡಿ ವಸೂಲ್ಮಾಡತಕ್ಕದ್ದು' ಎಂದು ಸೇರಿಸುವುದು.

(8) ಬೈಲಾ 37 ರ 4ನೇ ಪಂಕ್ತಿಗೆ 'ಬಾಡಿಗೆಗೆ ತೆಗೆದುಕೊಳ್ಳುವುದು' ಎಂಬುದರ ಬದಲಿಗೆ 'ದೀರ್ಘಕಾಲಕ್ಕೆ ಬಾಡಿಗೆಗೆ ತೆಗೆದುಕೊಳ್ಳುವುದು' ಎಂದು ಸೇರಿಸುವುದು

(9) ಬೈಲಾ 48 ಕ್ಕೆ (b) ಯಾಗಿ 'ಆಡಳಿತ ಮಂಡಳಿಯ ರ ಅನುಮತಿ ಮೇರೆ ಪರ್ಚೇಸಿಂಗ್ ಕಮಿಟಿಯವರು ಸಂಘದ ಪರವಾಗಿ ತಾತ್ಕಾಲಿಕ್ಕೆ ಲಾರಿ, ಯಾ ಗಾಡಿಗಳನ್ನು ಬಾಡಿಗೆ ತೆಗೆದುಕೊಳ್ಳಬಹುದು' ಎಂದು ಸೇರಿಸುವುದು.

(10) ಬೈಲಾ 50ರ 5ನೇ ಪಂಕ್ತಿಯಲ್ಲಿ 'ಬೈಲಾ ಪ್ರತಿಯನ್ನು ಮೆಂಬರರು ಕ್ರಯಕೊಟ್ಟು ಪಡಕೊಳ್ಳಬೇಕು' ಎಂಬುದರ ಬದಲಿಗೆ 'ಬೈಲಾ ಪ್ರತಿಯನ್ನು ಮೆಂಬರರು ಕ್ರಯವಿಲ್ಲದೆ ಸಂಘದಿಂದ ಪಡಕೊಳ್ಳಬಹುದು' ಎಂದು ಸೇರಿಸುವುದು.

11. ಬೈಲಾ 49ರ ಕಡೆ ಪಂಕ್ತಿಗೆ 'ಪಾಲು ಮೊಬಲಗಿನ ಮೇಲೆ ಡಿವಿಡೆಂಡ್ ಹಂಚಬೇಕಾದರೆ ಆ ಮೆಂಬರನು ಹಂಚುವ ತಾರೀಕಿಗೆ 6 ತಿಂಗಳಿಗೆ ಮೊದಲಾದರೂ ಮೆಂಬರನಾಗಿ ಸೇರಿಸಲ್ಪಟ್ಟಿರಬೇಕು' ಎಂದು ಸೇರಿಸುವುದು.

(12) ಬೈಲಾ 47 (a) ಯಲ್ಲಿ ಮೊದಲನೇ ಪಂಕ್ತಿಯಲ್ಲಿ 'ಸಾದಿಲ್ವಾರ್' ಎಂಬುದನ್ನು ಬಿಟ್ಟು ಬಿಡುವುದು.

(13) ಬೈಲಾ 47 (a) ಯಲ್ಲಿ 4 ಪಂಕ್ತಿಗೆ 'ಇತರ ಸಾದಿಲ್ವಾರ್ ಖರ್ಚು ಮಾಡುವ ಅಧಿಕಾರವು ಆಡಳಿತ ಮಂಡಳಿಯವರಿಗೆ ಇರತಕ್ಕದ್ದು' ಎಂದು ಸೇರಿಸುವುದು.

(14) ಬೈಲಾ 41 ರ ಬದಲಿಗೆ 41 ನೇ (a) ಯಾಗಿ 'ಆಡಳಿತ ಸಭೆ [illegible] ನೌಕರರನ್ನು ನೇಮಿಸಲಿಕ್ಕೂ . . . . . ಅಧಿಕಾರವಿರುತ್ತದೆ' ಎಂಬುದರ ಬದಲಿಗೆ 'ಆಡಳಿತ ಸಭೆಯವರ ಮಂಜೂರಾತಿಗೆ ಒಳಪಟ್ಟು ಪ್ರೆಸಿಡೆಂಟರು ಮತ್ತು ಸೆಕ್ರೆಟರಿಯವರಿಗೆ ಸಂಘಕ್ಕೆ ಬೇಕಾಗುವ ನೌಕರರನ್ನು ನೇಮಿಸಲಿಕ್ಕೂ ಮ [illegible] ಸಲಿಕ್ಕೂ, [illegible] ವಿಧಿಸಲಿಕ್ಕೂ ಸಸ್ಪೆಂಡ್ ಮಾಡಲಿಕ್ಕೂ ಮತ್ತು ರಜೆಯನ್ನು ಕೊಡಲಿಕ್ಕೂ ಸಹ ಅಧಿಕಾರವಿರತಕ್ಕದ್ದು' ಎಂದು ಸೇರಿಸುವುದು

(15) ಬೈಲಾ 41ನೇ (b) ಯಾಗಿ 'ಸಂಘಕ್ಕೆ ಬೇಕಾಗುವ ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಲಿಕ್ಕೂ, ಆಡಿಟರು ವಿಧಾಯಿಸ್ಸ ಮಾಡಿದ ಜೋನಸನ್ನು ನೌಕರರಿಗೆ ಕೊಡುವುದಕ್ಕೂ, ಮತ್ತು ನೌಕರರನ್ನು ಕೆಲಸದಿಂದ ತೆಗೆದು ಹಾಕುವುದಕ್ಕೂ ಆಡಳಿತ ಸಭೆಯವರಿಗೆ ಅಧಿಕಾರವಿರುತ್ತದೆ. ಸಂಘಕ್ಕೆ ಸಂಬಂಧಪಟ್ಟ ವ್ಯಾಜ್ಯಗಳನ್ನು ಪ್ರೆಸಿಡೆಂಟರು ಯಾ ಸೆಕ್ರೆಟರಿಯವರು ನಡೆಸುವಂತೆ ಆಡಳಿತ ಸಭೆಯವರು ಅಧಿಕಾರ ಕೊಡಬಹುದು' ಎಂದು ಸೇರಿಸುವುದು.

3 ಸಿವಾಯ ಸಂಬಂಧಪಟ್ಟ ಸಾಮಾನುಗಳಲ್ಲದೆ ಬಾಕಿ ಎಲ್ಲಾ ಸಾಮಾನುಗಳ ವ್ಯಾಪಾರವನ್ನು ರಖಂ ಅಥವಾ ಚಿಲ್ಲರೆಯಾಗಿ ಮಾಡುವ ಅಧಿಕಾರವನ್ನು ಆಡಳಿತ ಮಂಡಳಿಯವರಿಗೆ ಬಿಡಲಾಗಿದೆ

4 ಸೆಂಟ್ರಲ್ ಬ್ಯಾಂಕಿನಲ್ಲಿ ಈಗ ತಾತ್ಕಾಲಿಕ್ಕೆ 15 ಪಾಲುಗಳನ್ನು ಪಡಕೊಂಡು ಅಲ್ಲಿಂದ ರೂ. 2,000 ಸಾಲವಾಗಿ ತೆಗೆದುಕೊಳ್ಳುವಂತೆಯೂ, ಈ ಬಾಪ್ತು ಸಾಲವನ್ನು ಸಾಲ ಪಡೆದುಕೊಂಡ ಆಗಾಗಾಯಿತು 3 ತಿಂಗಳ ನಂತರ ತಿಂಗಳು 1ರ ರೂ 200 ಅಸಲು ಪೂರ್ತಿ ಬಡ್ಡಿ ಈ ಮೇರೆ 10 ತಿಂಗಳ ಕಂತಿನಲ್ಲಿ ಮರುಪಾವತಿ ಮಾಡುವಂತೆಯೂ ತೀರ್ಮಾನಿಸಲಾಯಿತು

5 ಸೇಲ್ಸ್‌ಮೇನ್ ಮತ್ತು ಎಟೆಂಡರ್ ಕೆಲಸಕ್ಕೆ ಬಂದ ಅರ್ಜಿಗಳನ್ನು ವಿಮರ್ಶಿಸಿ ಮಾದೆಟ್ಟಿರ ಮುತ್ತಣ್ಣನವರನ್ನು ಮಾಹೆಯಾನ 15–0–0 ರೂಪಾಯಿ ಸಂಬಳದ ಮೇರೆ ಎಟೆಂಡರಾಗಿಯೂ, ಎ ಪಿ. ವೀರಪ್ಪನವರನ್ನು ಮಾಹೆಯಾನ 20 0 ರೂಪಾಯಿ ಸಂಬಳದ ಮೇರೆ ಸೇಲ್ಸ್‌ಮೇನ್ ಆಗಿಯೂ ನೇಮಕ ಮಾಡಲಾಯಿತು.

6 ಅಧ್ಯಕ್ಷರಿಗೆ ವಂದಿಸಿ ಸಭೆಯನ್ನು ಬರಖಾಸ್ತು ಮಾಡಲಾಯಿತು

ಸಿ ಬಿ ಐ ಯ್ಯಣ್ಣ.
(ಅಧ್ಯಕ್ಷರು)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗಿನ ಹೀನಸ್ಥಿತಿಗೆ ಔಷಧಿ.

ಅಯ್ಯಾ,

'ಕಾರ್ಯಸ್ಥರ' "ಕೊಡಗಿನ ಕೃಷಿಕರ ಕ್ಷೀಣಗತಿ," ಮ. ರಾ. ಕೆ ಯು. ಪೂವಯ್ಯನವರ 'ಕೊಡಗಿನ ಆರ್ಥಿಕ ಪರಿಸ್ಥಿತಿ. ಇವು ಬ್ರಿಟಿಷ್ ರಾಜ್ಯಭಾರ ಕ್ರಮದ ಪರಿಸ್ಥಿತಿಯ ಫಲಿತಾಂಶ. ಈ ಎರಡು ಲೇಖನಗಳನ್ನು ಒಂದುಗೂಡಿಸಿದರೂ ಪ [illegible] ಯಲ್ಲಿ ಬಹಳ ಭಿನ್ನವಾದ ಅಂಶಗಳು ಇರಲಾರವು ಆದ ಮೇಲೆ ಈ ಎರಡು ಲೇಖನಗಳನ್ನು ಒಂದಾಗಿ ಗಣಿಸಿ ಪ್ರತ್ಯಾಕ್ಷಿಸುವುದೇ ಈ ಲೇಖನದ ಮುಖ್ಯೋದ್ದೇಶ. ಇವುಗಳಲ್ಲಿ ಅಡಕವಾಗಿರುವ ಅಂಶಗಳನ್ನು ಟೀಕಿಸುವುದಲ್ಲ.

ಬ್ರಿಟಿಷ್ ರಾಜ್ಯಭಾರ ಕ್ರಮವು ದಿವಸ ಒಂದಂಪಿಲ್ಲ ಪ್ರಜೆಗಳಿಗೆ ಸಮಾಧಾನ, ಸಂತೃಪ್ತಿಗಳನ್ನೊದಗಿಸದೆ ಇರುವುದರಿಂದಲೇ ಇಡೀ ಹಿಂದೂಸ್ಥಾನದಲ್ಲಿ ಆಂದೋಲನವುಂಟಾಗಿರುವುದು. ಈ ಆಂದೋಲನವು ಚಿಕ್ಕ ವಿಷಯಗಳಿಗಾಗಿಯೂ ಚಿಕ್ಕ ವಿಷಯಗಳಿಂದ ಉದ್ಭವಿಸಿದುದೂ ಅಲ್ಲ. ಆದ ಮೇಲೆ ವಿಷಯಗಳು ಘನವಾದವುಗಳೆಂದೇ ಗಣಿಸಬೇಕು

ಮಹಾತ್ಮಗಾಂಧಿಯವರು ವೈಸರಾಯರಿಗೆ

ತಾ. 14ರಲ್ಲಿ ಬರೆದ ಪತ್ರದ ಸಾರಾಂಶ.

ನಾನು ತಾ. 13ರ ಟೆಲಿಗ್ರಾಫಿನಲ್ಲಿ ಹೇಳಿರುವಂತೆ ವಿದ್ಯಮಾನಗಳ ಫಲಿತಾಂಶವನ್ನು ನೋಡಿದರೆ ಸರ್ಕಾರದ ಪ್ರತಿನಿಧಿಗಳು ಬಹು ಮುಖ್ಯರಾದವರು ಎಂತ ತಿಳಿಯುವ ತುಂಬಾ ಮತ್ತು ಕುತೂಹಲಯುಕ್ತವಾದ ಯೋಜನೆ ನಿಮ್ಮ ತೀರ್ಮಾನವು ಆ ರೀತಿ ಅನಿಸಿರುವುದರಿಂದ ಇಲ್ಲಿ ನನ್ನ ಜವಾಬ್ದಾರಿಯನ್ನು ನಾನು ಬಿಟ್ಟು ದುಂಡು ಮೇಜು ಪರಿಷತ್ತಿಗೆ ಹೋಗಕೂಡದೆಂತ ನಾನು ತೀರ್ಮಾನಿಸಿದೆ.

ನ್ಯಾಯ ತೀರ್ಮಾನದ ಸಭೆಯೊಂದನ್ನು ನೇಮಿಸಲೇ ಬೇಕೆಂದು ನಾನು ಹಟ ಹಿಡಿದೆನೆಂಬ ಮತ್ತು ನಾನು ಸರಿಯಾದ ಅಧಿಕಾರವಿರುವ ಬೇರೆ ಸರ್ಕಾರವನ್ನು ಸ್ಥಾಪಿಸಲು ಪ್ರಯತ್ನಿಸಿದೆ ಎಂಬ ಕಾರಣಗಳಿಂದ ತಾವು ಆ ರೀತಿ ತೈಸಲ್ ಮಾಡಿದಿರೆಂತ ನನಗೆ ತಿಳಿದಿದೆ. ನ್ಯಾಯ ತೀರ್ಮಾನದ ಸಭೆಯನ್ನು ನೇಮಿಸಿಕೊಡಬೇಕೆಂತ ಹಕ್ಕಿನ ಮೇಲೆ ಕೇಳಿದ್ದೇನೆಂದು ನಿಜ. ನಮ್ಮ ಸಂಭಾಷಣೆಯನ್ನು ನೀವು ನೆನಪಿಸಿಕೊಂಡರೆ ಅದು ಬೇಕೆಂತ ನಾನು ಹಟ ಹಿಡಿಯಲಿಲ್ಲವೆಂತ ನಿಮಗೆ ಜ್ಞಾಪಕ ಬರಬಹುದು. ನನಗೆ ಸಿಕ್ಕಬೇಕಾದ ನ್ಯಾಯ ಸಿಕ್ಕುವುದಿಲ್ಲ ವಾದರೆ ನಾನು ನಿಮಗೆ ಹೇಳಿದ್ದೇನೆ. ನ್ಯಾಯ ತೀರ್ಮಾನದ ಸಭೆಯನ್ನು ಮಾಡಿ ಕೊಡಲೇ ಬೇಕೆಂದಿದಕ್ಕೂ, ಇದಕ್ಕೂ ವ್ಯತ್ಯಾಸ ವಿದೆಯೆಂತ ನೀವು ಒಪ್ಪದಿರಲಾರಿರಿ. [illegible] ಬೇರೆ ಸರ್ಕಾರವನ್ನು ಸ್ಥಾಪಿಸುವ ವಿಷಯದಲ್ಲಿ [illegible] 'ನೀವು ಜಿಲ್ಲಾ ಅಧಿಕಾರಿಗಳಿಗೆ [illegible] 'ನಾವು ಜಿಲ್ಲಾ ಅಧಿಕಾರಿಗಳ [illegible] ಬೇರೆ ಕೆಲಸಗಳನ್ನು [illegible] ಗ್ರಾಮದ ಮುಖ್ಯಸ್ಥರಂತೆ [illegible] ಮತ್ತು ಅನುಮತಿ ಮೇರೆ ಕೆಲಸ ಮಾಡಬೇಕೆಂತ [illegible] ಜವಾಬು ಕೊಟ್ಟು ಸರಿಸಮಾನ ಅಧಿಕಾರವಿರುವ ಬೇರೆ ಸರ್ಕಾರವನ್ನು ಸ್ಥಾಪಿಸುವ ಯೋಜನೆ ಇಲ್ಲವೆಂತ ನಿಮಗೆ ಮಾಡಿ ನಿಮ್ಮ ಸಂಶಯವನ್ನು ನಿವಾರಿಸಿರುತ್ತೇನೆ. ಈ ತಪ್ಪು ಅಭಿಪ್ರಾಯಗಳು ನಿಮ್ಮಲ್ಲಿ ಇದ್ದು [illegible] ಸನವಾದದ್ದಾದರೆ ನಾನು ವ್ಯಸನ ಪಡುತ್ತೇನೆ. [illegible] ಯವನ್ನು ಬರೆಯುವ ಉದ್ದೇಶವೇನೆಂದರೆ—ಕಾಂಗ್ರೆಸು ಮೇಜು ಪರಿಷತ್ತಿಗೆ ಹೋಗುವುದಿಲ್ಲವೆಂತ ತೀರ್ಮಾನ ಮೇಲೆಯೂ ಹಿಂಗಾಮಿ ರಾಜಿಯು ಅಸ್ಥಿರ ಆಗು [illegible] ಭಾವಿಸುತ್ತೀರೋ ಅಥವಾ ಇನ್ನೂ ಅದರಂತೆ ನಡೆಸು [illegible] ಬೇಕೆಂತ ಭಾವಿಸುತ್ತೀರೋ ಎಂಬವನ್ನು ತಿಳಿಯಲಿಕ್ಕಾಗಿ ಈ ಪತ್ರವನ್ನು ಬರೆದುಕೊಂಡಿರುತ್ತೇನೆ. ಈ ದಿನ ವರ್ಕಿಂಗ್ ಕಮಿಟಿಯು ಈ ಕೆಳಗಿನ ತೀರ್ಮಾನ ಮಾಡಿದೆ:

"ದುಂಡು ಮೇಜು ಪರಿಷತ್ತಿನಲ್ಲಿ ಕಾಂಗ್ರೆಸ್ ಭಾಗ ತೆಗೆದುಕೊಳ್ಳಕೂಡದೆಂತ ವರ್ಕಿಂಗ್ ಕಮಿಟಿಯು [illegible] ಈ ತೀರ್ಮಾನದಿಂದ ಡಿಲ್ಲಿ ತೀರ್ಮಾನವು ಅಸ್ಥಿರ [illegible] ಭಾವಿಸಬಾರದು. ಆದ್ದರಿಂದ ಈ ಕಮಿಟಿಯು ಎಲ್ಲಾ ಕಾಂಗ್ರೆಸ್ ಸಂಸ್ಥೆಗಳೂ, ಕಾಂಗ್ರೆಸ್ ಸದಸ್ಯರೂ ಸಹ, ಬೇರೆ ತೀರ್ಮಾನಕ್ಕೆ [illegible] ವರೆಗೆ ಕಾಂಗ್ರೆಸ್ಸಿಗೆ ಸಂಬಂಧಪಟ್ಟ ಮಟ್ಟಿಗೆ ಡಿಲ್ಲಿ ತೀರ್ಮಾನದಂತೆಯೇ ನಡೆಯಬೇಕೆಂತ ಕೇಳಿಕೊಳ್ಳುತ್ತದೆ."

ಇದರಿಂದ ಈ ವಿಕಟ್ಟಿನ ಸಮಯದಲ್ಲಿ ಈ ಕಮಿಟಿಯು [illegible] ದಕ್ಕೆ ತೊಂದರೆ ಕೊಡಲು ಇಷ್ಟ ಪಡುವುದಿಲ್ಲವೆಂತ ನೀವು ತಿಳಿದೀರಿ. ಡಿಲ್ಲಿ ತೀರ್ಮಾನವನ್ನು ಗೌರವಯುಕ್ತ ಕಾಂಗ್ರೆಸು ನಡೆಸಲು ತಯಾರಿದೆ. ಆದರೆ ಈ ಪತ್ರ [illegible] ಸಾಧ್ಯವಾಗಬೇಕಾದರೆ ಪ್ರಾಂತಿಕ ಸರ್ಕಾರಗಳೂ ರಾಜಿ ತೀರ್ಮಾನದಂತೆಯೇ ನಡೆದುಕೊಳ್ಳಬೇಕೆಂತ [illegible] ಪತ್ರವ್ಯವಹಾರದ ಮೂಲಕವೂ, ಸಂಭಾಷಣೆ ಮೂಲಕ ತಿಳಿಸಿರುತ್ತೇನೆ. ಈ ಅನ್ಯೋನ್ಯತೆಯು ಬರಬರುತ್ತಾ ಕಡಿಮೆಯಾಗುತ್ತಿದೆ. ಕಾಂಗ್ರೆಸ್ ಕೆಲಸಗಾರರನ್ನೂ ಕಾಂಗ್ರೆಸ್ಸಿನ ಕೆಲಸಗಳನ್ನೂ ಮುರಿಯುವ ಪ್ರಯತ್ನವೇ ಸರಕಾರದ್ದಿದೆಯೆಂತ ವರ್ಕಿಂಗ್ ಕಮಿಟಿ ಆಫೀಸಿಗೆ ದೂರುಗಳು ಬರುತ್ತಿವೆ. ಆದ್ದರಿಂದ ಡಿಲ್ಲಿ ತೀರ್ಮಾನದಂತೆ ಇನ್ನು ಮುಂದೆ ನಡೆಯಬೇಕಾದರೆ ಈಗಾಗಲೇ ಕಳುಹಿಸಿದ ಕಾಂಗ್ರೆಸಿನ ದೂರುಗಳಿಗೆ ತಕ್ಕ ಪರಿಹಾರ ದೊರೆಯಬೇಕು. ಪ್ರಕಾರ [illegible] ಜಾಸ್ತಿಯಾಗಿ ಬರುತ್ತಲಿರುವುದರಿಂದ ಮತ್ತು ತೀವ್ರವಾದ್ದರಿಂದ ದೊರಕದಿದ್ದರೆ ಆತ್ಮ ರಕ್ಷಣೆಯ [illegible] ಅನುಮತಿ ಬೇಕಾಗ [illegible] ಯ ಪಡಿಸುತ್ತಾರಾದ್ದರಿಂದ ಈ ವಿಷಯದಲ್ಲೂ ಉತ್ತರ ಕೊಡಬೇಕೆಂತ ಕೇಳಿಕೊಳ್ಳುತ್ತೇನೆ.

ರಾಯರು 19–8–'31ರಲ್ಲಿ ಕೊಟ್ಟ ಜವಾಬು.

ನಿಮ್ಮ ತಾ. 14–8–31ರ [illegible] ಮೊದಲನೇ ಪೇರಾದಲ್ಲಿ ಬರೆದ ಸಂಗತಿಯೂ ನಿಮಗೆ ಈ ಕೊಟ್ಟ ಜವಾಬುಗಳು, ನಿಮಗೂ ನನಗೂ ನಡೆದ ಮತ್ತು ಗೂ ಬೊಂಬಾಯಿ ಗವರ್ನರಿಗೂ ನಡೆದ ಪತ್ರವ್ಯವಹಾರವೂ ಮೇಲೆಯೇ ಬರೆದದ್ದಾಗಿದೆಯೆಂತ ಭರವಸೆ ಕೊಡು [illegible] ನಿಮ್ಮ ಪತ್ರದಲ್ಲಿ ಬರೆದಿರುವ ಬೇರೆ ವಿಷಯಗಳನ್ನು ಸರಕಾರದ ಅಭಿಪ್ರಾಯವೇನೆಂಬವನ್ನು ತಿಳಿಸಿಕೊಟ್ಟು [illegible] ಮನಸ್ತಾಪಕ್ಕೆ ಎಡೆಯಿಲ್ಲದಂತೆ ಮಾಡಬೇಕೆಂತ ಪ್ರಯತ್ನಿಸುತ್ತೇನೆ.

ಸರಕಾರವು ರಾಜಿ ಕರತ್ತುಗಳಿಗೆ ವಿರೋಧವಾಗಿ ನಡೆದಿರುವುದಲ್ಲದೆ ಕಾಂಗ್ರೆಸಿನ ಮೇಲೆ ಸರಕಾರವು ದಬ್ಬಾಳಿಕೆ ನಡೆಸುತ್ತಿದೆಯೆಂಬ ಅಭಿಪ್ರಾಯದ ಮೇಲೆ ನಿಮ್ಮ ಪತ್ರವನ್ನು ಬರೆದಿದ್ದೀರಿ. ಈ ಆಪಾದನೆಯನ್ನು ಸರಕಾರವು ಒಪ್ಪಿಕೊಳ್ಳುವುದಿಲ್ಲ. ಈಗ 5 ತಿಂಗಳುಗಳಿಂದಲೂ ಮುಖ್ಯವಾಗಿ ಮಿ. ಎಮರ್ಸನರು ನಿಮ್ಮ ಸಂಗಡ ನಡಿಸಿದ ಸಂಭಾಷಣೆಯಲ್ಲಿ ಕಾಂಗ್ರೆಸಿನ ಕೆಲಸಗಳು ರಾಜಿ ತೀರ್ಮಾನಕ್ಕೆ ವಿರೋಧವಾಗಿರುವುದು ಮಾತ್ರವಲ್ಲ ಶಾಂತತಾ ಭಂಗಕ್ಕೆ ಸಹ ಎಡೆ ಕೊಡುವಂತೆ ಇವೆಯೆಂತ ಸರಕಾರವು ವಾದಿಸುತ್ತಿದೆಯೆಂಬದು ನಿಮಗೆ ತಿಳಿಯದ್ದಲ್ಲ. ವಾಯುವ್ಯ ಪ್ರಾಂತದಲ್ಲಿ ಮತ್ತು ಸಂಯುಕ್ತ ಪ್ರಾಂತ್ಯದಲ್ಲಿ ನಡೆಯುವ ಚಳವಳಿಗಳನ್ನು ಮುಖ್ಯವಾಗಿ ಹೇಳಬೇಕಾಗಿದೆ. ಹಾಗೆ ನಡೆದ [illegible] ಪ್ರಾಂತಿಕ [illegible] ಸರಕಾರದ [illegible] ಸ್ಪೈಯಲ್ [illegible] ಪ್ರಯತ್ನಿಸಿಲ್ಲ [illegible] ಕಾಂಗ್ರೆಸಿನವೇ [illegible] ನಡೆದುಕೊಳ್ಳು [illegible] ಪ್ರಾಂತೀಕ ಸರಕಾರಗಳ [illegible] ಅಥವಾ ಕಾಂಗ್ರೆ [illegible] ಪ್ರಾಂತೀಕ ಸರಕಾರಗಳ [illegible] ಕ್ಷಿತಿಯಾಗಲೀ ಹೇಳುವುದು. ನಿಜವಾದ ವಿದ್ಯಮಾನವನ್ನು ತಿಳಿದು ಹೇಳುವುದಲ್ಲ. ಡಿಲ್ಲಿ ರಾಜಿ ಕರತ್ತುಗಳಿಗೆ ಒಳಪಡದ ಎಷ್ಟೋ ಸಂಗತಿಗಳು ಚರ್ಚೆಗೆ ಬಂದು ಅನ್ಯೋನ್ಯ ಸ್ನೇಹದಿಂದ ಇರಲು ಸಾಧ್ಯವಾಗುವಂಥ [illegible] ಸರಕಾರವು [illegible] ಪ್ರಯತ್ನಿಸಿದೆಯೆಂಬುದು ನನಗೆ ತಿಳಿದಿದೆ. ಅನ್ಯೋನ್ಯ ರಾಜಿಯಿಂದ ಇರಲು ಸಾಧ್ಯ [illegible] ಸರಕಾರವು ತುಂಬಾ ಪ್ರಯತ್ನಿಸಿದೆ. ನಮ್ಮ [illegible] ನಡೆದ ಪತ್ರವ್ಯವಹಾರದ ವಿಷಯಗಳಲ್ಲಿವೂ ಈ ಕರಡವನೇ ಆಗಿವೆ.

ಕಾಂಗ್ರೆಸು ದುಂಡು ಮೇಜು ಪರಿಷತ್ತಿಗೆ ಹೋಗದೆ ಇರುವುದು ರಾಜಿ ತೀರ್ಮಾನದ ಒಂದು ಮುಖ್ಯ ಉದ್ದೇಶ [illegible] ಕಾಂಗ್ರೆಸು ತಿರಸ್ಕರಿಸಿದಂತಾಯಿತೆಂತ ನೀವು ಒಪ್ಪೀರಿ.

ಡಿಲ್ಲಿ ಒಪ್ಪಂದದ ಕರತ್ತುಗಳಲ್ಲಿ ಸರಕಾರದ ಮೇಲೆ ಎಷ್ಟು ಜವಾಬ್ದಾರಿಯಿದೆಯೆಂತ ನೋಡಬೇಕಾಗಿದೆ. ರಾಜಿ ತೀರ್ಮಾನದ ಕರತ್ತುಗಳಲ್ಲಿ 10ರಿಂದ 19ರ ವರೆಗಿನ ಕರತ್ತುಗಳ ಸಂಬಂಧವಾಗಿ ಈ ಮೊದಲೇ [illegible] ಕೊಡಬೇಕಾದ ಅವಕಾಶ ಬಿಟ್ಟಿದೆ. ಅಂಥಾ ಪರಿಹಾರ ಕೊಡಬೇಕೆಂತ ಕೋರಿ ಬಂದರೆ ಸ್ಥಳೀಯ ಸರಕಾರಗಳ ಆಲೋಚನೆಯಂತೆ [illegible] ರ ಕೊಡಬಹುದು. 20ನೇ ಕರತ್ತಿನಲ್ಲಿರುವ ಉಪ್ಪಿನ ಸಂಬಂಧದ ವಿಷಯವನ್ನು [illegible] ಪ್ರಾಂತಕ್ಕೆ ಅವಶ್ಯವಿರುವ [illegible] ಉಪಯೋಗಿಸುವ [illegible] ಸ್ವಾತಂತ್ರ್ಯ ಇಂತಿ [illegible] ಪ್ರಾಂತೀಕ ಸರಕಾರಗಳಿಗೂ [illegible] ಇದೆ. ಇನ್ನು ಮುಂದೆ ಸಹ ಅವಶ್ಯ ಕಂಡಾಗ [illegible] ಉಪಯೋಗಿಸಿ [illegible] ಮಟ್ಟಿಗೆ [illegible] ಉಪಯೋಗಿಸ [illegible] ಕಾಂಗ್ರೆಸಿನ ಕೆಲಸಗಳ [illegible] ಮಟ್ಟಿಗೆ ಉಪಯೋಗಿಸ [illegible] ಕಾಂಗ್ರೆಸಿನ ಚಳವಳಿಯನ್ನೇ [illegible] ಈ ಸಂದರ್ಭದಲ್ಲಿ [illegible] ಇರುವ ಸ್ವಾತಂತ್ರ್ಯವನ್ನು ಕಳೆಕೊಳ್ಳಲು ಸರಕಾರ ತಯಾರಿಲ್ಲ.

ನೀವು ತಾ. 14 [illegible] ಪ್ರಕಟಿಸಿರುವುದರಿಂದ ಇದನ್ನು ನಾನು ಸಹ ಪ್ರಕಟಿಸುತ್ತೇನೆ.

ಈ ಪತ್ರದ ಮೇಲೆ ಮಿ. ಗಾಂಧಿಯವರ ಅಭಿಪ್ರಾಯ.

ವೈಸರಾಯರ ಜವಾಬು ಕೆಟ್ಟದೆಂದಾಗಲೀ, ನಿರಾಶಾಜನಕವಾಗಿದೆಯೆಂತಾಗಲೀ ನಾನು ಭಾವಿಸುವುದಿಲ್ಲ. ಡಿಲ್ಲಿ ಒಪ್ಪಂದವನ್ನು ಸರ್ಕಾರವು ಮುಕ್ತಾಯಗೊಳಿಸಲು ಅಭಿಪ್ರಾಯಪಟ್ಟಿರುವುದಿಲ್ಲವೆಂತ ತಿಳಿದು ನನಗೆ ಸಂತೋಷವಾಯಿತು. ಕಾಂಗ್ರೆಸು ರಾಜಿ [illegible] ಗೊಳಿಸುವುದಿಲ್ಲವೆಂತ ಈ ಮೊದಲೇ ತೀರ್ಮಾನಿಸಿದೆ. [illegible] ಕಾಂಗ್ರೆಸ್ ಸದಸ್ಯ [illegible] ರಾಜಿ [illegible] ನಡೆಸಿಕೊಳ್ಳ [illegible]

[illegible] ಅಭಿಪ್ರಾಯದ [illegible] ಕಾಂಗ್ರೆಸ್ [illegible] ಕಾಂಗ್ರೆಸಿನ ವರ್ಕಿಂಗ್ ಕಮಿಟಿಯು [illegible] ನಾನಿರಲಿಲ್ಲ [illegible] ವಿರೋಧವಾಗಿ ಹೋಗಿ [illegible] ದೆಂತ ನಿಶ್ಚಯಿಸಿದೆಯೆಂತ ಹೇಳಬೇಕು.

ವಾಯುವ್ಯ ಪ್ರಾಂತ್ಯ ಮತ್ತು ಸಂಯುಕ್ತ ಪ್ರಾಂತ್ಯದ ವಿಷಯದಲ್ಲಿ ಸರಕಾರದ ನಂಬಿಕೆ ಏನಿದೆಯೆಂತ ನನಗೆ ಗೊತ್ತಿದೆ. ಆ ನಂಬಿಕೆಯು ಸಂಪೂರ್ಣವಲ್ಲವೆಂತ ನಾನು ಯಾವಾಗಲೂ ವಾದಿಸಿದ್ದೇನೆ. ಆದರೆ ಎರಡು ಸರಕಾರಗಳಿಗೆ ಅತ್ಯಂತ ಎಚ್ಚರಾಗಬೇಕೆ ಆಗಿವೆಯಷ್ಟೆ. ನಿಜವಾದ ವಿಷಯಗಳನ್ನು ತಿಳಿಯಲು ನಾನು ಸಾಧ್ಯ ಪ್ರಯತ್ನಿಸಿದ್ದೇನೆಂದರೂ ಕೆಲವು ಚಳುವಳಿಗಳಲ್ಲಿ ವಿನಹ ಕಾಂಗ್ರೆಸಿನವರು ಧವಾಗಿ ನಡೆದಿಲ್ಲವೆಂತ ನನಗೆ ಖಾತ್ರಿಯು [illegible] ನನ್ನು ಕೇಳಿದಲ್ಲೆಲ್ಲಾ ಒಪ್ಪಿಕೊಂಡು, ಅದಕ್ಕೆ ವ್ಯ ಕೊಂಡಿರುತ್ತೇನೆ. ಪ್ರಾಂತೀಕ ಸರಕಾರಗಳ ಮೇಲೆ ಇರುವ ಆರೋಪಣೆಗಳನ್ನು ನಿಷ್ಪಕ್ಷ ನ್ಯಾಯತೀರ್ಪಿನವರುಗಳ ಮುಂದೆ ಸಾಬೀತು ಮಾಡುತ್ತೇನೆಂತ ವರ್ಕಿಂಗ್ ಕಮಿಟಿಯು ಪರವಾಗಿ ಒಪ್ಪಿಕೊಂಡಿರುತ್ತೇನೆ. ಇದಕ್ಕಿಂತ ಹೆಚ್ಚೇನೂ ಹೇಳಲಾರೆ. ದುಂಡು ಮೇಜು ಪರಿಷತ್ತಿಗೆ ಹೋಗದಿರುವುದು ರಾಜೀ ಒಪ್ಪಂದದ ಒಂದು ಮುಖ್ಯ ಉದ್ದೇಶಕ್ಕೆ ವಿರೋಧ ಮಾಡಿದಂತಾಯಿತೆಂತ ಒಪ್ಪುತ್ತೇನೆ. ಇದಕ್ಕೆ ಸರಕಾರದಷ್ಟು ವ್ಯಸನ ನನಗೂ ಇದೆ. ಆದರೆ ವರ್ಕಿಂಗ್ ಕಮಿಟಿಗೆ ಬೇರೆ ದಾರಿ ಇರಲಿಲ್ಲ. ಪರಿಷತ್ತಿಗೆ ಹೋಗಬೇಕಾದರೆ ರಾಜಿ ತೀರ್ಮಾನದಂತೆ ಸರಕಾರವು ನಡೆಯಬೇಕೆಂಬ ಕರತ್ತು ಇ[illegible]. ಪ್ರಾಂತೀಕ ಸರಕಾರಗಳು ರಾಜಿ ತೀರ್ಮಾನದಂತೆ ನಡೆದುಕೊಳ್ಳಲಿಲ್ಲವೆಂತ ಕಷ್ಟಾಗಿಯೋ, ಸರಿಯಾಗಿಯೋ ತೀರ್ಮಾನಿಸಿದೆ. ಅಂತಾ ನಂಬಿಕೆ ಇಟ್ಟುಕೊಂಡು ನಿಷ್ಪಕ್ಷ ನ್ಯಾಯತೀರ್ಪಿನ ವಿಚಾರಣೆ ಅಥವಾ ಬೇರೆ ವಿಧದಲ್ಲಿ ಕಾಂಗ್ರೆಸಿಗೆ ಸಮಾಧಾನ ದೊರೆಕ ವಿನಹ ಪರಿಷತ್ತಿಗೆ ಹೋಗಲು ಸಾಧ್ಯವಿಲ್ಲ.

ಮತ ಭೇದವಿರುವಾಗ ಪಂಚಾಯಿತನೊಬ್ಬನಿರಬೇಕು ನ್ಯಾಯಸ್ಥಾನದ ವಿಚಾರಣೆ ಸ್ವಾಭಾವಿಕವಾಗಿಯೇ ಆಗಬೇಕು. ಯಾವ ತರದ ನ್ಯಾಯಸ್ಥಾನವಾಗಬೇಕೆಂತ ಚರ್ಚೆಯಿಂದ ತೀರ್ಮಾನಿಸಿಕೊಳ್ಳಬಹುದು. ಪಕ್ಷಪಾತವಿಲ್ಲದವ ನೆಂತಾದರೆ ಯಾವ ತರದ ವಿಚಾರಣಾದರೂ ನನಗೆ ತೃಪ್ತಿಯೇ. ಅಂಥಾ ನ್ಯಾಯಸ್ಥಾನದ ನೇಮಕದಿಂದ ಸರಕಾರದ ಗೌರವಕ್ಕಾಗಲೀ ಅಧಿಕಾರಕ್ಕಾಗಲೀ ಕೊರತೆಯಿಲ್ಲ. ಅಂಥಾ ವಿಚಾರಣೆಗಳು ಎಲ್ಲಾ ಸುಸಂಘಟಿತ ಸರಕಾರಗಳ ಕರ್ತವ್ಯವೆಂತ ನನ್ನ ಅಭಿಪ್ರಾಯ.

ನಿಜವಾದ ತಕರಾರು.

(ಮಿ॥ ಕೆ. ಗಾಂಧಿಯವರಿಂದ)

ವರ್ಕಿಂಗ್ ಕಮಿಟಿಯವರು ನನ್ನನ್ನು ಲಂಡನಿಗೆ ಕಳುಹಿಸಬಾರದೆಂತ ಮಾಡಿದ ತೀರ್ಮಾನಕ್ಕೆ ಕಾರಣವಾದ ಸರ್ಕಾರದ ತಕ್ಕೂ, ಕಾಂಗ್ರೆಸಿನವರ [illegible] ಅತಿ ಅಲ್ಪವಾಗಿ ಕಂಡು ಬಂದರೂ ನಿಜವಾಗಿ [illegible] ವಾದ ಭೇದವಾಗಿದೆ. ಕಾಂಗ್ರೆಸಿಗೂ, ಸರ್ಕಾರಕ್ಕೂ ನಡೆದ ಪತ್ರವ್ಯವಹಾರವನ್ನು ಓದಿ ನೋಡಿದವರಿಗೆ ಇದು ಸ್ಪಷ್ಟವಾಗದೆ ಇರಲಾರದು. ರಾಜಿ ಕರತನ್ನು ನಡೆಸಲು ಪ್ರಾರಂಭ ದಿಂದಲೇ ಈ ಸವಾಲನ್ನು ಮಿ. ಎಮರ್ಸನರು ಎತ್ತಿದರು. ಜನಗಳ ಪ್ರತಿನಿಧಿಯಾಗಿರುವ ಸರ್ಕಾರಕ್ಕೂ ಕಾಂಗ್ರೆಸು ಮಧ್ಯಸ್ಥಿಕೆ ನಡೆಸಲು ಆಗದು ಎಂತ ವಾದಿಸಿದರು. ಇದನ್ನು ನಾನು ಒಪ್ಪಲಿಲ್ಲ. ಈ ವಿಚಾರದ ಸಂಬಂಧದ ಮಾತು ಕಡೆಗೂ ತೀರ್ಮಾನವಾಗಲಿಲ್ಲ. ಸರ್ಕಾರಕ್ಕೆ ತೊಂದರೆ ಕೊಡುವ ಅಥವಾ ಅದರ ಗೌರವವನ್ನು ತಗ್ಗಿಸುವ ಆಶೆ ನನಗಿರಲಿಲ್ಲ. ನಡವಳಿಕೆಯಲ್ಲಿ ಕಾಂಗ್ರೆಸಿನ ಮಧ್ಯಸ್ಥಿಕೆಯನ್ನು ಅಂಗೀಕರಿಸುವವರೆಗೆ ನನಗೆ ಒಪ್ಪಿಗೆಯಾಗಿತ್ತು. ಮಿ. ಗ್ಯಾರಿಟ್ಟರು ಈ ಸ್ಥಿತಿಯನ್ನು ಎಷ್ಟೊಂದು ಮನಸಿಲ್ಲದೆ ಒಪ್ಪಿಕೊಂಡರೆಂತ ವಾಚಕರಿಗೆ ತಿಳಿದೀತು. ಕಾಂಗ್ರೆಸು ರೈತರ ಪ್ರತಿನಿಧಿ ಎಂಬ ವಾದಕ್ಕಾಗಿ ಕಾಂಗ್ರೆಸನ್ನು ಅವರು ಮನ್ನಿಸಲೇ ಇಲ್ಲ. ಅವರಿಗೆ ಅವರ [illegible] ವಹಿಸಲು ಸ್ವಾತಂತ್ರ್ಯವಿದ್ದದ್ದರೆ ಬಾರ್ಡೋಲಿ ಮತ್ತು ಜೇಲಾರಾದ್ ತಾಲೋಕುಗಳ ಈ ಪ್ರಕರಣದ ಕೆಲವು ವ್ಯಕ್ತಿ ಒಬ್ಬ 1000 ರೂ. ವಿನಹ ವಿಶ್ವಲ ವಿಷಯಗಳನ್ನು ಕಾಂಗ್ರೆಸ್ ನವರು ವಸೂಲು ಮಾಡುವದನ್ನು ಅಂಗೀಕರಿಸುವ ಬದಲು ಜುಲುಮಿನಿಂದಲೇ ವಸೂಲು ಮಾಡುತ್ತಿದ್ದರು. ಆಗಲೇ ಜುಲುಂ ಆಪಾದನೆ ನಿಸಂಶಯವಾಗುತ್ತದೆಯೆಂತ ನೋಟೀಸುಗಳು ಹುಟ್ಟಿದ್ದವು. ಕಾಂಗ್ರೆಸಿನ ಪರವಾಗಿ ನಾನು ಬಲವಾದ ಆಕ್ಷೇಪಣೆ ಮಾಡದಿದ್ದದ್ದರೆ ಆ ನೋಟೀಸುಗಳನ್ನು ರದ್ದು ಮಾಡುತ್ತಿರಲಿಲ್ಲ. ಪ್ರಾಂತೀಕ ಸರ್ಕಾರಗಳು ರಾಜಿ ಕರತಿನಂತೆ ನಡೆಯಲಿಲ್ಲವೆಂಬ ಕಾರಣದಿಂದ ಕಾಂಗ್ರೆಸು ಎಂದೋ ರಾಜಿಯು ಅಸ್ಥಿರವಾಯಿತೆಂತ ಹೇಳಬಹುದಿತ್ತು. ತಾತ್ಕಾಲಿಕ ರಾಜಿಯನ್ನು ಮುಕ್ತಾಯಗೊಳಿಸಿ, ಇರಲು ಕಾಂಗ್ರೆಸು ತಾನು ಸಮಾಧಾನವನ್ನು ಕೋರಿದಿತೆ. 'ಚಾರ್ಜ್ ಶೀಟ್'ನಿಂದ ಪ್ರಾಂತೀಕ ಸರ್ಕಾರಗಳು ರಾಜಿ ಕರತಿನಂತೆ ಯಾವ ಯಾವ ಸಂದರ್ಭಗಳಲ್ಲಿ ನಡೆಯಲಿಲ್ಲವೆಂಬುದು ಸೂಚನೆ ದೊರಕಬಹುದು. ಚಾರ್ಜುಶೀಟಿನಲ್ಲಿ ಪ್ರಾಂತೀಕ ಸರ್ಕಾರಗಳು ರಾಜಿ ಕರತಿಗೆ ವಿರೋಧವಾಗಿ ವರ್ತಿಸಿದ ಎಲ್ಲಾ ವರ್ತನೆ (ಉ) ಸೇರಿದೆ ಎಂತ ವಾಚಕರು ತಿಳಿಯಕೂಡದು. ಉದಾಹರಣೆಗಾಗಿ ಹೇಳುವದಾದರೆ ಜನಸಾಮಾನ್ಯರಾದ ನೂರಾರು ಕೈದಿಗಳು ಇನ್ನೂ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಕಾಂಗ್ರೆಸಿನ ಅಭಿಪ್ರಾಯದಲ್ಲಿ ಇವರಿಗೆ ಆಗ ಬಿಡುಗಡೆಯಾಗಬೇಕಿತ್ತು. ಈ ವಿಷಯವು ಇನ್ನೂ ಪ್ರಾಂತೀಕ ಸರ್ಕಾರಗಳ ತನಿಖೆಯಲ್ಲಿ ಇವೆಯೆಂದರೆ ವಾಚಕರಿಗೆ ಆಶ್ಚರ್ಯವಾಗಬಹುದು. ಆದ್ದರಿಂದ ಸರ್ಕಾರಕ್ಕೆ ಕಳುಹಿಸಿದ 'ಚಾರ್ಜ್ ಶೀಟ್'ನಲ್ಲಿ ಇದು ಸೇರಿಲ್ಲ. ಪ್ರಾಂತೀಕ ಸರ್ಕಾರಗಳು ಈಗಾಗಲೇ ಕಾಂಗ್ರೆಸಿನ ವಾದಕ್ಕೆ ವಿರೋಧವಾಗಿ ಫೈಸಲ್ ಮಾಡಿದ ಸಂಗತಿಗಳು ಮಾತ್ರ ಚಾರ್ಜುಶೀಟಿನಲ್ಲಿವೆ. 'ಚಾರ್ಜುಶೀಟಿ'ಗೆ ಸೇರಿದ ಕೆಲವು ವಿಷಯಗಳಲ್ಲಿ ಇಂಡಿಯಾ

ಸರ್ಕಾರವು ಈಚೆಗೆ ಪರಿಹಾರ ಕೊಟ್ಟಿದೆ, ಇನ್ನೂ ಕೆಲವಲ್ಲಿ ಕೊಡಬಹುದೆಂತ ನಾನು ಒಪ್ಪಬೇಕಾಗಿದೆ ಆದರೆ ಹೆಚ್ಚಿನ ಸಂಖ್ಯೆ ಪ್ರಕಾರಗಳಲ್ಲಿ ಪರಿಹಾರ ದೊರಕುವ ಸಂಭವವಿಲ್ಲವೆಂತ ನನಗೆ ಗೊತ್ತಿದೆ ಕಾಂಗ್ರೆಸಿಗೆ ತೃಪ್ತಿಯಾಗದಿರುವ ಸಂದರ್ಭಗಳಲ್ಲಿ ಬಹಿರಂಗ ತನಿಖೆಯಾಗಬಾರದೆಂದು ಕರಾರಿನಲ್ಲಿರಲಿಲ್ಲ. ರಾಜಿ ತೀರ್ಮಾನವು ಕಾನೂನಿಗೆ ಸರಿಯಾಗಿದ್ದಿದ್ದರೆ ಸರ್ಕಾರದ ಮೇಲೆ ಕೋರ್ಟುಗಳಲ್ಲಿ ವ್ಯಾಜ್ಯ ಮಾಡಬಹುದಿತ್ತು. ಕಾನೂನಿಗೆ ಸರಿಯಾಗಿಲ್ಲವೆಂಬ ಕಾರಣದಿಂದ ಕಾಂಗ್ರೆಸಿನ ಆರೋಪಗಳನ್ನು ರುಜುವಾತು ಪಡಿಸಲಿಕ್ಕೂ, ರಾಜಿ ಕರಾರುಗಳಿಗೆ ಅರ್ಥಮಾಡಲಿಕ್ಕೂ ನ್ಯಾಯ ತೀರ್ಮಾನ ಮಾಡುವ ಬೇರೆ ಒಂದು ನ್ಯಾಯಸ್ಥಾನವನ್ನು ಏರ್ಪಡಿಸಿ ಕೊಡುವ ಭಾರ ಸರ್ಕಾರದ ಮೇಲೆ ಹೊತ್ತಾಯಿತು ರಾಜಿ ತೀರ್ಮಾನದ ಈ ಸ್ವಾಭಾವಿಕ ಹಕ್ಕನ್ನು ಸರ್ಕಾರವು ಒಪ್ಪಿಕೊಳ್ಳದ್ದರಿಂದ ಹಿಂದುಸ್ಥಾನದಲ್ಲಿ ಅಧಿಕಾರವು ಜನರ ಸ್ವಾಧೀನಕ್ಕೆ ದಾಟುತ್ತಿದೆ ಎಂಬದನ್ನೂ, ಕಾಂಗ್ರೆಸು ಜನರ ಪ್ರತಿನಿಧಿಯಾಗಿದೆಯೆಂಬದನ್ನೂ, ಕಾಂಗ್ರೆಸು ಸಮಾನನಾಗಿಯೇ [illegible] ಕೊಡುವ ಸಮಕಕ್ಷವನ್ನು ಅಂಗೀಕರಿಸಬೇಕೆಂಬುದನ್ನೂ [illegible] ಅಧಿಕಾರಿಗಳು ಅಂಗೀಕರಿಸಲು [illegible] ಸ್ಪಷ್ಟವಾಯಿತು. ಅಧಿಕಾರ [illegible] ರವೆಂದರೆ ಸರ್ಕಾರದ ಅಧಿಕಾರವ [illegible] ಹುಕುಮುಗಳನ್ನು ಅಂಗೀಕರಿಸಿ [illegible] ಯಿಂದ ಮತಸ್ಸ್ವಾತಂತ್ರ್ಯ [illegible] ಸಂಪಾದಿಸಿಕೊಳ್ಳುವುದು ಅಲ್ಲವೆಂತಲೂ [illegible] ತೀಯ ಸರ್ಕಾರಗಳು ಕಾಂಗ್ರೆಸ್ಸನ್ನು [illegible] ನೋಡುವುದೂ ಅಲ್ಲದೆ ಕೆಲವು ಅಡಿಗಳ [illegible] ವೆಂತಲೇ ಭಾವಿಸುತ್ತಾರೆ ಸರ್ಕಾರದ ಪತ್ರಿಕೆಯಾದ [illegible] ರಾಜ ಪತ್ರಿಕ' ಎಂಬದರಲ್ಲಿ ಕಾಂಗ್ರೆಸಿನವರ [illegible] ಬಂದಂತೆ ಬೈದಿರುವುದೂ ಅಲ್ಲದೆ ಕಾಂಗ್ರೆಸಿನವರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿದೆ. ಕಾಂಗ್ರೆಸು ರಾಜಿ ತೀರ್ಮಾನಕ್ಕೆ ವಿರೋಧವಾಗಿ ನಡೆದಿದೆಯೆಂತ ಆರೋಪ ಮಾಡುವುದು ನ್ಯಾಯವಲ್ಲ. ಅಂಥಾ ಸಂದರ್ಭಗಳು ನನಗೆ ತಿಳಿದಾಗಲೆಲ್ಲಾ ನಾನು ಪರಿಹಾರ ಮಾಡಿಕೊಂಡಿದ್ದೇನೆ ಸರ್ಕಾರದ ಮೇಲಿನ ಆರೋಪಗಳನ್ನು ನಿಷ್ಪಕ್ಷ ನ್ಯಾಯಸ್ಥಾನವು ವಿಚಾರ ಮಾಡಲು ಏನೂ ಆಕ್ಷೇಪಣೆ ಇಲ್ಲ. ಕಾಂಗ್ರೆಸಿನವರು ರಾಜಿಗೆ ವಿರೋಧವಾಗಿ ವರ್ತಿಸಿದರೆಂತ ಪ್ರಾಂತೀಕ ಸರ್ಕಾರಗಳಿಗೆ ತೋರಿದಾಗಲೆಲ್ಲಾ ಹಾಗೆ ಮಾಡಿದವರ ಮೇಲೆ ಕೇಸುಗಳನ್ನು ಮಾಡಿದ್ದಾರೆ. ನನ್ನ ಎದ್ರು ಆಕ್ಷೇಪವೇನೆಂದರೆ—ಕಾಂಗ್ರೆಸಿನವರ ಮೇಲೆ ಮಾಡಿರುವ ಇ. ಪಿ. ಕೋಡು 124 ಎ ಸೆಕ್ಷನ್ ಮೇರೆ ಮಾಡಿರುವ ಅನೇಕ ಕೇಸುಗಳು ಬರೇ ತೊಂದರೆ ಕೊಡಲಿಕ್ಕಾಗಿ ಮಾಡಲ್ಪಟ್ಟವು ಎಂತ ಈ ಸೆಕ್ಷನಿನಲ್ಲಿ ಸರ್ಕಾರದ ಮೇಲೆ ಅಪ್ರೀತಿಯನ್ನು ತೋರಿಸುವುದೇ ತಪ್ಪೆಂದಿರು ಪ್ರೀತಿ ಇಲ್ಲದಿರುವುದೇ ಅಪ್ರೀತಿ ಹಾಗಾದರೆ ಎಲ್ಲಾ ಕಾಂಗ್ರೆಸ್ ಸದಸ್ಯರೂ ಈ ಸೆಕ್ಷನ್ ಮೇರೆ ತಪ್ಪಿತಸ್ಥರಾಗಲೇ ಬೇಕು ರಾಜಿಯಾದ ಮಾತ್ರಕ್ಕೆ ಈ ತಪ್ಪೇನೂ ಇಲ್ಲವಾಗುವುದಿಲ್ಲ ರಾಜಿ ತೀರ್ಮಾನದ ಮೇರೆ ಕಾಂಗ್ರೆಸಿನ ಧ್ಯೇಯವನ್ನು ಬದಲಾಯಿಸಬೇಕೆಂತ ಇಲ್ಲ. ಈಗ ಇರುವ ಸರ್ಕಾರವನ್ನು ಹಾಳು ಮಾಡಿ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸುವುದೇ ಕಾಂಗ್ರೆಸಿನ ಧ್ಯೇಯ ಕಾಂಗ್ರೆಸು ಸಂಧಿಗೆಗೆ ಅರ್ಹವಾಗಿಲ್ಲದಿದ್ದರೆ ಅದರ ಧ್ಯೇಯವು ಸರ್ಕಾರಕ್ಕೆ ಒಪ್ಪಿಗೆಯಾಗದಿದ್ದರೆ ಅಥವಾ ಅರುಚಿಯಾಗಿದ್ದರೆ ರಾಜಿ ಮಾಡಿಕೊಳ್ಳಬಾರದಿತ್ತು. ಕಾಂಗ್ರೆಸಿನ ಯಾವುದೇ ಕೆಲಸದಿಂದ ಅದರ ನಂಬಿಕೆಯನ್ನು ಕೆಡಿ' ಕೊಂಡಿದ್ದಿದ್ದರೆ ರಾಜಿಯನ್ನು ಮೊದಲೇ ತಿರಸ್ಕರಿಸಬೇಕಿತ್ತು ಇವೆರಡರಲ್ಲಿ ಯಾವುದಾದರೂ ಒಂದು ಪ್ರಾಮಾಣಿಕವಾಗುತಿತ್ತು. ರಾಜಿ ತೀರ್ಮಾನವನ್ನು ಬರೆದ ಬರವಣಿಗೆಯ ಶಾಯಿ ಒಣಗುವ ಮುಂಚೆಯೇ ಕಾಂಗ್ರೆಸಿನ [illegible] ಕೆಲಸ ಮಾಡಲು ಪ್ರಾರಂಭಿಸುವುದು ನನಗೆ ಅರ್ಥವಾಗುವುದಿಲ್ಲ. ಪ್ರಾಂತೀಕ ಸರ್ಕಾರಗಳು ರಾಜಿ ತೀರ್ಮಾನದಂತೆ ನಡೆಯದಿದ್ದರೂ ಬಾರ್ದೋಲಿ ರೈತರ ವಿಷಯವಾಗಿಯಾದರೂ ಪರಿಹಾರ ದೊರಕಿದ್ದರೆ ಪರಿಸ್ಥಿತಿಗೆ ಹೋಗುತ್ತಿದೆ ಜುಲುಮಿಯಿಂದ ವಸೂಲ್ ಮಾಡಿದ ಕಂದಾಯ ವಾಪಸು ಕೊಡಬೇಕೆಂತ ಅಥವಾ ರೈತರಿಗೆ ಶಕ್ತಿ ಇಲ್ಲದಿದ್ದರೂ ಅವರಿಂದ ಜುಲುಮಿಯಿಂದ ವಸೂಲು ಮಾಡಿದ್ದೆಂತ ರುಜುವಾತು ಮಾಡಲು ಒಂದು ನ್ಯಾಯಸ್ಥಾನವನ್ನಾದರೂ ಏರ್ಪಡಿಸಿ ಕೊಡಬೇಕೆಂತ ನನ್ನ ಕೋರಿಕೆಯಾಗಿತ್ತು ವರ್ಕಿಂಗ್ ಕಮಿಟಿಯು ಇಷ್ಟರಲ್ಲೇ ತೃಪ್ತಿಯಾಗುತ್ತಿಂಲ್ಲ ಬೇರೆ ರಾಜಿ ಕರಾರಿಗೆ ವಿರೋಧ ವರ್ತನೆಗಳ ಸಂಬಂಧವಾಗಿಯೂ ಪರಿಹಾರ ದೊರಕಬೇಕೆಂತ ಕೇಳುತ್ತಿತ್ತು ಆದ್ದರಿಂದ [illegible] ಕ್ಕಲಿಕ್ಕಾಗಿ ಬಾರ್ದೋಲಿಯ ಸಂಬಂಧವಾಗಿನಾ ರಾಜಿಯನ್ನು ಅಂತ್ಯ ಮಾಡುವ ಯೋಚನೆ [illegible] ತ್ತದೆ.

ಪ್ರಾಂತೀಕ ಸರ್ಕಾರಗಳ [illegible] ಯಿಂದ ಪ್ರಾಂತೀಕ ಸರ್ಕಾರಗಳನ್ನು ನಡಸುತ ಬರುವ [illegible] ನು ಲಂಡನಿಗೆ [illegible] ತ್ತದೆ ಇಲ್ಲವಾಗಿದ್ದರೆ ನಾನು ಲಂಡನಿಗೆ [illegible] ಯವಾಗುವಂತೆ [illegible] ರ್ಕಾರ ಯಿಂದಲೂ ವರ್ತಿಸಿ ಕಾಂಗ್ರೆಸಿನ [illegible] ಒಪ್ಪಿಗೆಯಾಗದಿರುವಲ್ಲಿ ಪಂಚಾಯಿತಿ ತೀರ್ಮಾನಕ್ಕೆ ಒಪ್ಪಿಸಬಹುದು.

ಲಿಂಗಾಯಿತರ ಡೆಪ್ಯುಟೇಶನು.

ಕೊಡಗು ಜಿಲ್ಲೆಯ ಲಿಂಗಾಯಿತರು ಪುತ್ತೂರು ವಕೀಲರಾದ ಮ. ರಾ. ಮಲ್ಲಪ್ಪನವರ ಬಿ. ಎ. ಬಿ. ಎಲ್. ರವರೊಡನೆ ಕೊಡಗು ಕಮಿಶನ್ ಸಾಹೇಬರವರಲ್ಲಿಗೆ ಈ ತಾ 26 ರಲ್ಲಿ ಡೆಪ್ಯುಟೇಶನ್ ಹೋಗಿ ಹೇಳಿಕೊಂಡ ವಿಷಯಗಳು —

ಕೊಡಗು ರಾಜರ ಕಾಲದಿಂದಲೂ ನಮ್ಮ ಮತವು ಪ್ರಸಿದ್ಧಿ ಪಡೆದಿದೆ ಕೊಡಗಿನ ಎಲ್ಲಾ ರಾಜರುಗಳು ನಮ್ಮವರಾಗಿದ್ದರು ಆಗಿನ ಕಾಲದ ರಾಜ್ಯಾಡಳಿತದಲ್ಲಿ ಸಹಾಯಕರಾಗಿದ್ದ ರಾಜ್ಯಕಾರ್ಯ ಪ್ರವೀಣರ ಪೈಕಿ ನಮ್ಮವರೂ ಅನೇಕರಿದ್ದರು. ಕೊಡಗಿನಲ್ಲಿ ಬ್ರಿಟಿಷರು ರಾಜ್ಯಸ್ಥಾಪನೆ ಮಾಡಲಿಕ್ಕೂ ರಾಜ್ಯಾಡಳಿತೆಯನ್ನು ಶಾಂತತೆಯಿಂದ ನಡೆಸಲಿಕ್ಕೂ ಲಿಂಗಾಯಿತರು ಸಹಾಯಕರಾಗಿದ್ದರು

ಕೊಡಗಿನ ಇತಿಹಾಸದಲ್ಲಿ ಬಹಳ ಪ್ರಸಿದ್ಧಿಯನ್ನೂ, ಗೌರವವನ್ನೂ ಪಡೆದಿದ್ದ ನಮ್ಮವರು ಕ್ರಮೇಣ ವಿದ್ಯೆಯಲ್ಲಿಯೂ ಮತ್ತು ರಾಜಕೀಯ ಉದ್ಯೋಗದಲ್ಲಿಯೂ ಬಹಳ ಹಿಂದುಳಿದು [illegible] ಇದಕ್ಕೆ ಕಾರಣವೇನೆಂದರೆ ಸರ್ಕಾರದವರು ಇತರ ಕೋಮಿನವರಿಗೆ ವಿದ್ಯಾಭಿವೃದ್ಧಿಗೆ ಕೊಟ್ಟಷ್ಟು ಉತ್ತೇಜನವನ್ನು ಕೊಡದಿರುವುದೇ ಪ್ರಧಾನವಾಗಿದೆ ನಮ್ಮ ಹುಡುಗರಿಗೆ ಅನುಕೂಲವಾಗುವ [illegible] ಪಡಿಸಿಕೊಡ [illegible]

ನಮ್ಮ ಲಿಂಗಾಯಿತರ [illegible] ಜನಸಂಖ್ಯೆಯಲ್ಲಿ ಸುಮಾರು 10,000 ವರೆಗಿರುವರು ಇವರಲ್ಲಿ ಹೆಚ್ಚಿನವರು ಒಕ್ಕಲುತನದವರು ಹೆಚ್ಚಾಗಿ ಕಸಬಾರವರಂತೆ ಸೋಮವಾರಪೇಟೆ ಶನಿವಾರಸಂತೆ, ಫ್ರೇಜರ್‌ಪೇಟೆ, ಮತ್ತು ಮಡಿಕೇರಿ ತಾಲೂಕುಗಳಲ್ಲಿ ವಾಸವಾಗಿರುವ [illegible] ನಾವು ಒರೇ [illegible] ದಲ್ಲಿ ವರ್ಷಂಪ್ರತಿ 10,000 ರೂಪಾಯಿ ವರೆಗೆ [illegible] ಕ್ಕೆ ಕೊಡುತ್ತಿರುವೆವು ಜನಸಂಖ್ಯೆಯ ಮೇಲೆ ಎಣಿಸುವುದಾದರೆ ಮತ್ಯಾವ ಮತದವರು ಇಷ್ಟೊಂದು ದೊಡ್ಡ [illegible] ತ್ತವನ್ನು ಕೊಡಗಿನ ಸರ್ಕಾರಕ್ಕೆ ಕೊಡುವುದಿಲ್ಲ

ನಮ್ಮ ದುರಾದೃಷ್ಟಕ್ಕೆ ಸರ್ಕಾರದ ಉದ್ಯೋಗದಲ್ಲಿ ಒಬ್ಬನಾದರೂ ನಮ್ಮವನಿಲ್ಲ. ಈಗ ತಾನೇ ಒಬ್ಬ ಲಾ ಗ್ರಾಜ್ಯುವೇಟರ್‌ರವರು ಮದ್ರಾಸ್ ಹೈಕೋರ್ಟಿನಲ್ಲಿ ಅಡ್ವೋಕೇಟ್ ತರ್ಬೇತಿಯನ್ನು ಹೊಂದುತ್ತಿರುವರು ಇವರನ್ನು ನಿನ್ನೆ ತಾನೇ ನಡೆದ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರನ ಚುನಾವಣೆಗೆ ಅರ್ಜಿ ಹಾಕಬೇಕಾಗಿ ಅನೇಕ ರೀತಿಯಲ್ಲಿ ಕೇಳಿಕೊಂಡ ಮೇಲೆ ಮ. ರಾ. ಮಲ್ಲಪ್ಪನವರು ಅರ್ಜಿ ಹಾಕಿದರು. ಅನಂತರ ನಮ್ಮ ಹವಾಲನ್ನು ಚೀಫ್ ಕಮಿಶನರ್ ಸಾಹೇಬರ ಮುಂದಿಟ್ಟು ನಮ್ಮವರಲ್ಲಿ ವಿದ್ಯಾವಂತರಾದ ಇವರಿಗೆ ಈ ಕೆಲಸವನ್ನು ಕೊಡಿಸಬೇಕೆಂಬ ಉದ್ದೇಶದಿಂದ ಡೆಪ್ಯುಟೇಶನ್ ಹೋಗಲು ಅವಕಾಶ ಕೊಡಬೇಕೆಂದು ಕೇಳಿದ್ದಕ್ಕೆ ಚೀಫ್ ಕಮಿಶನರ್ ಸಾಹೇಬರು ನಾವು ಮೊದಲು ಕಮಿಷನರವರನ್ನು ಕಾಣಬೇಕಾಗಿ ಅಪ್ಪಣೆ ಕೊಟ್ಟರು ಆದರೆ ಕಮಿಶನರ್ ಸಾಹೇಬರವರು "ಊರೆಲ್ಲ ಸೂರೆಯಾದ ಮೇಲೆ ಕೋಟೆ ಬಾಗಿಲು ಹಾಕಿ" ಎಂಬ ಗಾದೆಗನುಗುಣವಾಗಿ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರವರ ಚುನಾವಣೆಯಾದ ಮಾರನೆ ದಿನ ಬನ್ನಿ ಎಂದು ತಿಳಿಸಿ ಬಿಟ್ಟರು ಘನ ಸರ್ಕಾರದವರು ನಮ್ಮವರಿಗೆ ಪ್ರೋತ್ಸಾಹ ಕೊಡಬಹುದಾಗಿದ್ದ ಈ ಸುಸಂದರ್ಭವನ್ನು ಕಳೆದುಕೊಂಡದ್ದಕ್ಕೆ ನಮಗೆ ತುಂಬಾ ವ್ಯಸನವಾಗಿದೆ. ಆದರೂ ನಮಗೆ ಬೇಸರವಿಲ್ಲ ಇನ್ನು ಮುಂದಾದರೂ ಸರ್ಕಾರದವರು ಹಿಂದುಳಿದ ಸಣ್ಣ ಕೋಮಿನವರ ಹಕ್ಕು ಬಾಧ್ಯತೆಗಳನ್ನು ಸಂರಕ್ಷಿಸಿ ಸರ್ಕಾರಿ ಉದ್ಯೋಗಗಳಲ್ಲಿ ನ್ಯಾಯವಾದ ಭಾಗವನ್ನು ಕಾದಿಟ್ಟು ಕೊಡಬೇಕಾಗಿಯೂ ಮತ್ತು ವಿದ್ಯಾ ಪ್ರೋತ್ಸಾಹಕ್ಕೆ ತಕ್ಕ ವಿದ್ಯಾರ್ಥಿ ನಿಲಯವನ್ನು ಮಡಿಕೇರಿಯಲ್ಲಿ ಸ್ಥಾಪಿಸಿಕೊಡಬೇಕಾಗಿಯೂ ಮತ್ತು ಪ್ರೌಢ ವಿದ್ಯಾಭ್ಯಾಸಕ್ಕೆ ವೇತನಗಳನ್ನು ಕೊಡಿಸಿಕೊಡಬೇಕಾಗಿಯೂ ಕೇಳಿಕೊಳ್ಳುತ್ತೇವೆ

ಶೀಘ್ರದಲ್ಲಿಯೇ ಖಾಲಿಬೀಳತಕ್ಕ ಕೊಡಗು ಅಸಿಸ್ಟೆಂಟು ಕಮಿಷನರವರ ಕೆಲಸಕ್ಕೆ ನಮ್ಮವರಾದ ಕೆ. ಮಲ್ಲಪ್ಪ ಬಿ. ಎ. ಬಿ. ಎಲ್‌ರವರನ್ನು ತರ್ಬೇತಿಗೆ ತೆಗೆದುಕೊಂಡು ಖಾಲಿ ಬಿದ್ದೊಡನೆಯೇ ಆ ಸ್ಥಳಕ್ಕೆ ನೇಮಿಸಿ ವರ್ಷಂಪ್ರತಿ ರೂ 50,000 ವರೆಗೆ ಕಂದಾಯ ಕೊಡುವ ನಮ್ಮ ಹಕ್ಕು ಬಾಧ್ಯತೆಗಳನ್ನು ಸಂರಕ್ಷಿಸಿ ಹಿಂದುಳಿದ ನಮ್ಮನ್ನು ಪ್ರೋತ್ಸಾಹಿಸಬೇಕೆಂದು ಸರ್ಕಾರದವರನ್ನು ಅತ್ಯಂತ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇವೆ

ಕೊಡಗಿನ ಸ್ವಯಂಸೇವಕ ಮಂಡಳಿಯ ಕಾರ್ಯಗಳು.

ಮಳೆಗಾಲದ ದೆಸೆಯಿಂದ ತಮ್ಮ ಕಾರ್ಯಕ್ರಮವನ್ನು [illegible] ಯಿಂದ ನಿಲ್ಲಿಸಿದ್ದ ಕೊಡಗಿನ ಸ್ವಯಂಸೇವಕ ಮಂಡಳಿಯವರ [illegible] ದಿನ ಕಾರ್ಯಕ್ರಮವನ್ನು ಆಲೋಚಿಸುವ ಬಗ್ಗೆ [illegible] ಗೋಣಿಕೊಪ್ಪಲಲ್ಲಿ ಮೀಟಿಂಗು ಸೇರಿದ್ದರು ಕೊಡಗಿನಲ್ಲಿ ನಡೆದ ಕಳೆದ ಸತ್ಯಾಗ್ರಹ ಚಳವಳದ ವರದಿಯನ್ನೂ, ಲೆಕ್ಕಾಚಾರಗಳನ್ನೂ [illegible] ಸಂ [illegible] ರುಗಳಾದ [illegible] ಕರುಂಬಯ್ಯನವರು [illegible] ದಯ್ಯನವರು, ಪಸಂಡ ಕಾರ್ಯಪ್ಪನವರು, [illegible] ಚಿಣ್ಣಪ್ಪನವರು ಮತ್ತು ಪಿ. ಪಿ. ಬೆಳ್ಳಿಯಪ್ಪನವರುಗಳಿಂದ ಕೂಡಿದ ಕಮಿಟಿಯೊಂದು ನೇಮಿಸಲಾಯಿತು. ಈ ಕಮಿಟಿಯವರು ತಮ್ಮ ಕೆಲಸವನ್ನು ಎರಡು ವಾರಗಳಲ್ಲಿ ಮುಗಿಸಬೇಕೆಂತಲೂ, ಈ ವರದಿಯ ಮಂಜೂರಾತಿ ಬಗ್ಗೆ ಸೆಪ್ಟೆಂಬರ್ ತಾ 7ನೇ ಸೋಮವಾರ ಗೋಣಿಕೊಪ್ಪಲಲ್ಲಿ ಸ್ವಯಂ ಸೇವಕ ಮಂಡಳಿಯ ಮೀಟಿಂಗೊಂದನ್ನು ನಡಸಬೇಕೆಂತಲೂ ತೀರ್ಮಾನಿಸಲಾಯಿತು

[illegible] ಹಬ್ಬವು ಸಮೀಪಿಸುತ್ತಿರುವುದರಿಂದ ಈ ತಾರೀಕು 26ರಿಂದ ವೀರಾಜಪೇಟೆ ಗಡಂಗವನ್ನೂ, ತಾ [illegible] ರಿಂದ ಗೋಣಿಕೊಪ್ಪಲು ಗಡಂಗವನ್ನೂ ಶಾಂತ ರೀತಿಯಿಂದ ಪಿಕೆಟ್ ಮಾಡುವಂತೆ ನಿಶ್ಚೈಸಲಾಯಿತು.

ಮೇಲಿನ ತೀರ್ಮಾನದಂತೆ ಈ ತಾ 26ನೇ ಬುಧವಾರ ಬೆಳಗ್ಗೆ 10½ ಗಂಟೆಗೆ ಸ್ವಯಂ ಸೇವಕರು ರಾಷ್ಟ್ರೀಯ ಧ್ವಜದೊಡನೆ, ಗೀತೆಗಳನ್ನು ಹಾಡುತ್ತಾ ವೀರಾಜಪೇಟೆ ಮಾರ್ಕೆಟಿನಿಂದ ಮೆರವಣಿಗೆ ಹೊರಟು ಮುಖ್ಯ ಬೀದಿಗಾಗಿ ಬಂದು ತೆಲುಗರ ಬೀದಿಯಿಂದ ಹಳೇ ಗಡಂಗದ ರಸ್ತೆಗಾಗಿ ದಾಟಿ, [illegible] ಕ್ಕಪೇಟೆಯಲ್ಲಿರುವ ಹೊಸ ಗಡಂಗಕ್ಕೆ ಹೋದರು ಅಲ್ಲಿ [illegible] ಪಿದ ಮೇಲೆ ಮೂರು ಸ್ವಯಂ ಸೇವಕರು ಮೂರು ಕಡೆ [illegible] ಪಿಕೆಟ್ ಮಾಡಲು ನಿಂತರು. [illegible] ಪಿಕೆಟ್ ಮಾಡಲು 8 ಸ್ವಯಂ ಸೇವಕರು [illegible]

ಮಧ್ಯಾಹ್ನದ ಮೇಲೆ 1½ ಗಂಟೆಗೆ [illegible] ಎದುರುಗಡೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಸುಮಾರು 300 ಜನರು ಹಾಜರಿದ್ದರು ಮ. ನೆಲ್ಲಮಕ್ಕಡ ದೇವಯ್ಯನವರು ಅಧ್ಯಕ್ಷರಾಗಿದ್ದರು ಮ. ಗಳಾದ [illegible] ಬೆಳ್ಳಿಯಪ್ಪನವರು, ಕೆ. ಸಿ. ಕರುಂಬಯ್ಯನವರು, [illegible] ಕಾರ್ಯಪ್ಪನವರು ಮತ್ತು ಅಬ್ದುಲ್ ಗಫೂರ್ ಖಾನ್‌ರವರು ಈ ಪ್ರಾರಂಭಿಸಿರುವ ಪಿಕೆಟಿಂಗಿನ ಉದ್ದೇಶವನ್ನು [illegible] ವಿವರಿಸಿ ಅದಕ್ಕೆ ಎಲ್ಲರೂ ಎಲ್ಲಾ ವಿಧಗಳಲ್ಲಿಯೂ ಸಹಾಯ ಕೊಡಬೇಕೆಂದು ಅರಿಕೆ ಮಾಡಿಕೊಂಡದ್ದಲ್ಲದೆ, ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯನ್ನೂ ಕುರಿತು ಭಾಷಣ ಮಾಡಿದರು

ಹೀಗೆಯೇ ತಾ. 27ನೇ ಗುರುವಾರ ಗೋಣಿಕೊಪ್ಪಲಲ್ಲಿಯೂ ಗಡಂಗ ಪಿಕೆಟಿಂಗು ಪ್ರಾರಂಭವಾಗಿದೆ

ಹಿಂದೂಸ್ಥಾನೀ ಸೇವಾದಲ.

ರಾಷ್ಟ್ರಧ್ವಜ ದಿನವು.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಪ್ಪಣೆಯು.

ಇದೇ ತಾ ೩೦ನೇ ದಿನ ಸಾವೆಲ್ಲರೂ ಹಿಂದುಸ್ಥಾನದ ಹೊಸ ರಾಷ್ಟ್ರಧ್ವಜ ದಿನವನ್ನು ಮುಂಜಾನೆ ಸರಿಯಾಗಿ ೭ ಗಂಟೆಗೆ ಏರಿಸಿ ಅದಕ್ಕೆ ವಂದಿಸುವದಲ್ಲದೆ ಆ ಇಡೀ ದಿವಸವನ್ನು ಧ್ವಜ ಚಿಂತನೆಯಲ್ಲಿ ಕಳೆಯಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಪ್ಪಣೆಯಾಗಿದೆ

ಹಿಂದೂಸ್ಥಾನೀ ಸೇವಾದಲದಿಂದ ಗೊತ್ತು ಮಾಡಲ್ಪಟ್ಟ ಧ್ವಜ ವಂದನೆಯ ಕಾಲವು (ಮುಂಜಾನೆ ೮ ಗಂಟೆ) ಹೆಚ್ಚು ಅನುಕೂಲವಾಗಿ ಮುಂಜಾನೆ ೯ ಗಂಟೆಯೆಂದು ನಿಶ್ಚೈಸಲ್ಪಟ್ಟಿದೆ ಆದರೆ ದಿವಸವು ಮಾತ್ರ, ಪ್ರತಿ ತಿಂಗಳ ಕೊನೆಯ ರವಿವಾರವೆಂದೇ ಇರುವದು

ಅಖಿಲ ಭಾರತ ಚರಖಾ ಸಂಘದ ಶಾಖೆಗಳಿಗೆ ಮತ್ತು ಖಾದಿ ಅಂಗಡಿಗಳಿಗೆ ವಿನಂತಿ ಮಾಡಿಕೊಂಡು ಅವುಗಳಲ್ಲಿ ಯಾರಿಗೂ ಭಾರವಾಗದಂಥ ಬೆಲೆಗೆ ದೊರೆಯುವಂತೆ ಎಲ್ಲ ಅಳತೆಯ ಹೊಸ ರಾಷ್ಟ್ರೀಯ ಧ್ವಜಗಳು ಇಡಲ್ಪಡುವಂತೆ ವ್ಯವಸ್ಥೆಯನ್ನು ಮಾಡಿದ್ದೇವೆ ಮಾದರಿಯ ಹೊಸ ರಾಷ್ಟ್ರೀಯ ಧ್ವಜಗಳು ಎಲ್ಲಾ ಪ್ರಾಂತ್ಯಗಳಿಗೂ ಈಗಾಗಲೇ ಕಳುಹಿಸಲ್ಪಟ್ಟಿವೆ

ರಾಷ್ಟ್ರೀಯ ಧ್ವಜ ವಂದನೆಯ ವಿಷಯದಲ್ಲಿ ಗೊತ್ತುಮಾಡಿದ ಪದ್ಧತಿಯನ್ನು ಯಾರೂ ಮರೆಯಬಾರದು. ಸೇವಾದಲದ ಮುಂಬೈ ಮತ್ತು ಹುಬ್ಬಳ್ಳಿ ಕಚೇರಿಗಳಲ್ಲಿ ಎರಡು ಆಣೆಗೆ ದೊರೆಯುವ ರಾಷ್ಟ್ರಧ್ವಜ ಎಂಬ ಪುಸ್ತಕವನ್ನು ಓದಿದರೆ ಈ ಪದ್ಧತಿಯ ಪರಿಚಯ ಚೆನ್ನಾಗಿ ಆಗುವದು ಧ್ವಜ ವಂದನೆಯ ವ್ಯವಸ್ಥಾಪಕರೆಲ್ಲರೂ ಅದರಂತೆ ನಡೆಯುವರೆಂದು ನಂಬುತ್ತೇವೆ ದೇಶದಲ್ಲಿಯ ಎಲ್ಲ ಕಾಂಗ್ರೆಸ್ ಸಂಸ್ಥೆಗಳಿಗೆ ಧ್ವಜವಂದನೆಯ ಸವಿಸ್ತಾರವಾದ ಸಂಗತಿಗಳು ತಿಳಿಸುವುದರಲ್ಲಿ ಬರುವದು

ಧ್ವಜ ವಂದನೆಯ ಕಾರ್ಯವನ್ನು ಮಾಡುವದಕ್ಕೆ ಎಲ್ಲ ಕಾಂಗ್ರೆಸ್ ಸಂಸ್ಥೆಗಳು ಓರ್ವ ಅಧಿಕಾರಿಯನ್ನು ನಿಯಮಿಸಬೇಕೆಂದು ವಿನಂತಿ ಇದೆ.

[illegible] ವತಿಯಿಂದ ಅಥವಾ ಕಾಂಗ್ರೆಸ್ಸಿನ ವತಿಯಿಂದ ಧ್ವಜವಂದನೆ ಕಾರ್ಯಕ್ಕಾಗಿ ನಿಯಮಿಸಲ್ಪಟ್ಟ ಅಧಿಕಾರಿಯು ಆ ದಿವಸ ತಮ್ಮಲ್ಲಿ ನಡೆದ ಕಾರ್ಯದ ಸಂಕ್ಷಿಪ್ತ ವರದಿಯನ್ನು ಹುಬ್ಬಳ್ಳಿಯ ಸೇವಾದಲದ ಕಚೇರಿಗೆ ಕಳುಹಿಸಬೇಕು.

ಮುಂಬಯಿ, ನಾ. ಸು. ಹರ್ಡೀಕರ,

೧೪—೮—೩೧ ಸಂಪಾದಕ ಕಾರ್ಯದರ್ಶಿ

ಬ್ರಿಟಿಷ್ ರಾಜ್ಯಭಾರದೊಳಗೆ ಅಧೀನವಾಗಿರುವ ಪ್ರಜೆಗಳ ನಾಶವು ದಿನೇ ದಿನೇ ಬಡವರಾಗುತ್ತಿರುವುದು ಎಲ್ಲರಿಗೆ ವೇದ್ಯವಾದ ವಿಷಯ. ಅದರ ಕಾರಣ, ರೈತನಿಗೆ ಬಲವಿಲ್ಲ, ಹಣವಿಲ್ಲ, ವಿದ್ಯೆಯು ಮೊದಲೇ ಇಲ್ಲ. ಗಳಿಸಿದ ಹಣವೆಲ್ಲ ಕಂದಾಯಕ್ಕಾಯಿತು. ಉಳಿಸಿದ ಹಣದಲ್ಲಿ ಅಂಬಲಿ ಉಂಡಾನು, ಕಂಬಳಿಗಿಲ್ಲ. ಹೀಗಿರುವಲ್ಲಿ, ನಾವು 'ರಸ್ತೆ ರಿಪೇರಿ ಮಾಡಲಿಲ್ಲ, ಅದನ್ನು ಮಾಡಿಸಿ, ಶಾಲೆ ಇಲ್ಲ, ಶಾಲೆ ತೆರೆದು, ಕಂದಾಯ ಕಡಿಮೆ ಮಾಡಿ, ಎಲ್ಲರಿಗೂ ವಿದ್ಯೆ ಕೊಡಿ' ಎಂದು ಕೇಳಿದರೆ ಇಂಡಿಯಾ ದೇಶವನ್ನು ಆಳುತ್ತಿರುವ ಪರದೇಶೀ ಅಧಿಕಾರಿಗಳು ಗಮನಿಸುವರೇ ? ಎಂದೂ ಇಲ್ಲ.

"If this right of India is respected and they are raised out of their poverty and thus become a little richer, England will be lowered from her wealth and become a little poorer" ಅಂದರೆ ಇಂಡಿಯಾ ದೇಶಸ್ಥರ ಹಕ್ಕನ್ನು ಗಣಿಸಿ, ಅವರನ್ನು ಬಡತನದಿಂದ ನಿವೃತ್ತರನ್ನಾಗಿ ಮಾಡಿದಲ್ಲಿ, ಅವರು ಐಶ್ವರ್ಯವಂತರಾದರೆ ಇಂಗ್ಲೆಂಡು ದೇಶದ ಐಶ್ವರ್ಯವು ಕೇವಲ ಕುಗ್ಗಿ ಸ್ವಲ್ಪ ಬಡತನವುಂಟಾಗುವುದು" ಎಂದೊಬ್ಬರು ಹೇಳಿರುವರು.

ಈ ಫಲವನ್ನು ಅನುಭವಿಸಬೇಕೆಂದಿರುವುದು ಬ್ರಿಟನಿಗೆ ಗೊತ್ತಿರುವಾಗ, ಅವರು ನಮ್ಮನ್ನು ಈ ಹೀನ ಸ್ಥಿತಿಯಿಂದ ಮೇಲೆರಿಸುವರೇ ?

ಕಾಂಗ್ರೆಸ್ ಹುಟ್ಟಿದಾರಭ್ಯ ಭಾರತೀಯರು ಸ್ವರಾಜ್ಯಕ್ಕೆ ಹೋರಾಡುತ್ತಲಿದ್ದಾರೆ. ಸುಮಾರು 45 ವರ್ಷಗಳಿಂದ ಬ್ರಿಟಿಷ್ ಜನಾಂಗವು ನಮಗೆ ಏನನ್ನು ಬಿಟ್ಟು ಕೊಟ್ಟಿದೆ? ಜವಾಬ್ದಾರಿ ಸರಕಾರಕ್ಕಾಗಿ ನಾವು ಹೋರಾಡುತ್ತೇವೋ ಅದೊಂದನ್ನು ವಿನಹ ಬ್ರಿಟಿಷ್ ಸರಕಾರವು ಇತರ ಅಂಶಗಳೆಲ್ಲವನ್ನೂ ಭಾರತೀಯರಿಗೆ ಬಿಟ್ಟುಕೊಡುತ್ತದೆಂದೇ ಹೇಳಿದರೂ ನಾವು ಕೇಳುವ ಸೌಕರ್ಯಗಳೆಲ್ಲವೂ ದೊರಕುವುದಕ್ಕೆ ಬಹು ದೀರ್ಘ ಸಮಯವು ಆಗುತ್ತೆ.

ಇದೆಲ್ಲವನ್ನು ತಿಳಿದೇ ಮಹಾತ್ಮಾಜೀಯವರು ಆವಷ್ಟು ಶೀಘ್ರದಲ್ಲಿಯೇ ಸ್ವರಾಜ್ಯವನ್ನು ಪಡೆಯಬೇಕೆಂದು ಸತ್ಯಾಗ್ರಹವನ್ನು ಹೂಡಿರುವರು. ಆದರೆ ಜಾಗ್ರತೆಯಲ್ಲಿಯೇ ಬ್ರಿಟಿಷ್ ಸರಕಾರವು ಸಂಧಿಯನ್ನು ಮಾಡಿಕೊಂಡಿತು. ಈಚೆಗೆ ಈ ಸಂಧಿಯು ಸ್ಥಿರವಾಗಿ ನಿಂತು ದೇಶದ ಶಾಂತಿಯು ನೆಲೆಗೊಳ್ಳುವುದೇ ಎಂಬ ಸಂದಿಗ್ಧವಾದ ಸಂದರ್ಭವು ತಲೆದೋರಿದೆ.

ಇಂಥಾ ಬಿಕ್ಕಟ್ಟಿನ ಸಮಯದಲ್ಲಿ, ದೇಶದ ಪ್ರಜೆಗಳಾದ ನಾವು, ರಸ್ತೆಗಳ ರಿಪೇರಿ, ಆಸ್ಪತ್ರೆಗಳ ಸೌಕರ್ಯ, ಆರ್ಥಿಕ ಹೀನಸ್ಥಿತಿ, ಕ್ಷೀಣಗತಿ ಇವುಗಳಿಂದ ಜನರನ್ನುದ್ಧಾರಮಾಡುವುದು ಇವೇ ಮೊದಲಾದ ಸಾಮಾನ್ಯ ವಿಷಯಾಂಶಗಳಿಗೆ ಗಮನ ಕೊಡದೆ, ರಾಜ್ಯಭಾರ ಕ್ರಮವು ಪ್ರಜೆಗಳಿಗೆ ಸುಖದಾಯಕವಾಗಿ ಪರಿಣಮಿಸುವಂಥಾಗಿದ್ದು, ಸರ್ವ ಪಂಗಡದ ಸುಖವನ್ನು ಹಾರೈಸುವ ಸ್ವರಾಜ್ಯ ಸರಕಾರವನ್ನು ಹೊಂದಲು ಹೋರಾಡಬೇಕು.

ಇದು ಇಂದಿನ ಕರ್ತವ್ಯ. 'ಜನಾಂಗದ ಜನ್ಮಹಕ್ಕನ್ನು ಕೊಡಿ, ಇಲ್ಲವಾದರೆ ರಾಜ್ಯವನ್ನಾಳುವುದು ಸಾಧ್ಯವಿಲ್ಲ. ಇದು ನಮ್ಮ ರಾಜ್ಯ, ರಾಜ್ಯವನ್ನಾಳುವುದು ನಮ್ಮ ಹಕ್ಕು' ಎಂದು ಘರ್ಜಿಸುವ ಸಮಯವು ಒದಗಿ ಬಂದ ಮೇಲೆ, ಇಂಥಾ ಘನವಾದ ಪ್ರಮೇಯದಲ್ಲಿ "ಆರ್ಥಿಕ ಪರಿಸ್ಥಿತಿ" "ದೇಶದ ಕ್ಷೀಣಗತಿ" ಇವೇ ಮೊದಲಾದ ವಿಷಯಾಂಶಗಳು ಕಳೆದು ಹೋಗುವುವು. ಆದುದರಿಂದಲೇ ಉಜ್ವಲ ಕ್ರಿಯಾ ಪ್ರದರ್ಶನ, ಸಕಲ ಪಂಗಡಗಳ ಏಕಮತ್ಯ ಇವುಗಳಿಗೆ ಪ್ರಾಮುಖ್ಯಸ್ಥಾನವನ್ನು ಕೊಡಬೇಕೆಂದು ಉಚ್ಚತರಗತಿಯ ರಾಷ್ಟ್ರೀಯ ಮುಖಂಡರು ಸಾರುತ್ತಲಿರುವರು. ಕೊಡಗು ದೇಶೀಯರೆಲ್ಲರೂ ಇನ್ನಾದರೂ ಎಚ್ಚರವಾಗಿ ಈ ವಿಷಯವು ನಿಜವಾಗಿಯೂ ಏನೆಂಬುದನ್ನು ತಿಳಿದು ಸಿದ್ಧರಾಗಿರಬೇಕು.

"ಸಿದ್ಧ"



ಮಲೇರಿಯ

ಜ್ವರದಿಂದ ನೀವು ನರಳುತ್ತಿದ್ದೀರೋ? ಹಾಗಾದರೆ

ಎ ಸ ನೊ ಫೀ ಲ್

ಎಂಬ ಔಷಧಿಯನ್ನು ಒಡನೆ ತೆಗೆದುಕೊಳ್ಳಿ.

ಈ ಕಾಲದಲ್ಲಿ ಜಗತ್ಪ್ರಸಿದ್ಧವಾದ ಮತ್ತು ಸಂಶಯವಿಲ್ಲದ ಮಲೇರಿಯ ಔಷಧಿ ಇದೊಂದೇ. ಇದರ ಸತ್ವವು ಆಶ್ಚರ್ಯಕರವಾದದ್ದು. ಇದರ ಗುಣವು ಮಾಯಾ ಆದದ್ದು. ಇಮಿಟೇಶನ್‌ಗಳ ವಿಷಯ ಎಚ್ಚರಿಕೆ. 'Special Formula for India' ಎಂದು ಅರಸಿನ ಬಣ್ಣದ ಗುರುತಿನ ಚೀಟಿ ಅಂಟಿಸಿರುವ ನಮ್ಮ ನಿಜವಾದ ಕುಪ್ಪಿಗಳನ್ನು ಕೊಂಡುಕೊಳ್ಳಲು ಜಾಗರೂಕರಾಗಿರಿ.

Sole Agents —
GORIO LTD
P. O. Box 157
Fort, Bombay

26—0

Gents Lever Wrist Watch Rs 4-12-0.

ಜೆಂಟ್ಸ್ ಲೀವರ್ ರಿಸ್ಟ್ ವಾಚ್.



ಈ ಹೊಸ ನಮೂನೆ ಗಡಿಯಾರಗಳು ಜನರ ಒಲಿಷ್ಟವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟಿದೆ. ನೋಡಲಿಕ್ಕೆ ಭಂಗಾರದ ಗಡಿಯಾರದ ಹಾಗೆ ಕಾಣುವುದು. ಚಿಕ್ಕ ಸೈಜು, ಕೈಯಲ್ಲಿ ಕಟ್ಟಿಕೊಳ್ಳಲು ಬಹು ಅಂದವಾಗಿರುತ್ತೆ. ಇಂಗ್ಲಿಷ್ ನಮೂನೆ ಗಡಿಯಾರ ಗ್ಯಾರಂಟಿ 3 ವರ್ಷಗಳು ಕೊಡಲ್ಪಡುತ್ತೆ. ಬ್ರೇಸ್ಲೆಟ್ ಸಹವಾಗಿ ಗಡಿಯಾರ 1ಕ್ಕೆ ರೂ. 4—12—0.

ಕಮಲಾ ಟ್ರೇಡಿಂಗ್ ಕಂಪೆನಿ,
17 ನಮ್ಮಾಳ್ವಾರ್ ಬೀದಿ,
ಜಿ. ಟಿ. ಮದರಾಸು.

4—2

British Photo Camera Rs 2-8-0

ಫೋಟೋ ಕ್ಯಾಮರಾ.



ಈ ಫೋಟೋ ಕ್ಯಾಮರಾಗಳು ವಿಲಾಯತಿಯಲ್ಲಿ ತಯಾರಾದವು, ಈ ಕ್ಯಾಮರಗಳಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ಎಷ್ಟು ಮಂದಿಗಳಿಗಾದರೂ ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನಗಳನ್ನು ಕಳುಹಿಸುವೆವು. ಕ್ರಯ ಕ್ಯಾಮರಾ 1ಕ್ಕೆ ರೂ. 2—8—0

ಕಮಲಾ ಟ್ರೇಡಿಂಗ್ ಕಂಪೆನಿ
17 ನಮ್ಮಾಳ್ವಾರ್ ಬೀದಿ,
ಜಿ. ಟಿ. ಮದರಾಸ್

4—2

ಶೃಂಗಾರದ ಪುಸ್ತಕ! ಶೃಂಗಾರದ ಪುಸ್ತಕ!!

ಪುರುಷ ಸ್ತ್ರೀಯರ ಮರ್ಮಗಳನ್ನು ಫೋಟೋಗಳ ಸಹಿತ ತಿಳಿಸುವ

ಮದನಕಲಾ ಶಾಸ್ತ್ರ.

ಎಂಬ ಮರ್ಮ ಶಾಸ್ತ್ರ ಕ್ರಯ ರೂ. ೧—೦—೦.

ಕನ್ನಡ ಭಾಷೆಯಲ್ಲಿ ಅಂದವಾದ ಗ್ಲೇಜ್ ಕಾಗದದಲ್ಲಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ದೇಶದ ವೇಶ್ಯಾ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಲೆಯಾಳ, ಜಪಾನ್, ಫ್ರಾನ್ಸ್ ದೇಶದ ವೇಶ್ಯಾ ಸ್ತ್ರೀಯರ ಮಲಗುವ ಮನೆ ಫೋಟೋಗಳು, ಕನ್ಯೆಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು, ಜರ್ಮನಿ ದೇಶದಲ್ಲಿ ಸ್ತ್ರೀಯರು ದಿಗಂಬರವಾಗಿರುವ ವಿನೋದಗಳು, ರತಿ—ಮನ್ಮಥರು ಆನಂದವಾಗಿರುವುದಕ್ಕೆ ಮೋಹದ ಮರ್ಮಗಳು, ಈ ಫೋಟೋಗಳ ಸಹಿತ ಕೂಡಿದ ಈ ಶೃಂಗಾರವಾದ ಪುಸ್ತಕವನ್ನು ಓದಲು ಬಹು ಆನಂದವಾಗಿರುವದು. ಫೋಟೋಗಳು ಸಹಿತ ಪುಸ್ತಕ ೧ಕ್ಕೆ ೧ ರೂಪಾಯಿ.

ಕಮಲಾ ಟ್ರೇಡಿಂಗ್ ಕಂಪೆನಿ,
17 ನಮ್ಮಾಳ್ವಾರ್ ಬೀದಿ,
ಜಿ. ಟಿ. ಮದರಾಸು.

4—2

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತು ಆದ ಫೌಂಟೆನ್‌ಪೆನ್‌ಗಳು.

ವಲ್ಡ್ಸ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ.	3 0 0
„ „ ಬಿಗ್ ಬ್ಯಾರೆಲ್ ಸೆಲ್ಫ್ 1ಕ್ಕೆ		3 3 0
„ „ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ		3 8 0
„ „ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮಾರ್ಬಲ್ ಕಲರ್ ಫೌಂಟನ್‌ಪೆನ್ 1ಕ್ಕೆ		3 14 0
„ „ ಮಾರ್ಬಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ		4 2 0
„ ಸೆಲ್ಫ್ ಫಿಲ್ಲಿಂಗ್ ಮಾಡೆಲ್ ಅಥವಾ ಬ್ರೌನ್ ಕಲರ್ ಫೌಂಟನ್‌ಪೆನ್ 1ಕ್ಕೆ		5 8 0
ಬಿಗ್ ಸ್ವಾನ್ ಫೌಂಟನ್‌ಪೆನ್ 1ಕ್ಕೆ		10 8 0
ವಾಟರ್‌ಮನ್ ಪೆನ್ 1ಕ್ಕೆ		14 6 0, & 20 10 0
ಪೆಲಿಕನ್ ಫೌಂಟನ್‌ಪೆನ್ 1ಕ್ಕೆ		3 8 0, & 3 12
ಸ್ವಾನ್ ಫೌಂಟನ್ ಪೆನ್ 1ಕ್ಕೆ		6 4 0 & 6 1[illegible] 0
[illegible] ಫೌಂಟನ್ ಪೆನ್ 1ಕ್ಕೆ		8 [illegible] 0, & [illegible] 10 0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	6 0
ಜರ್ಮನ್ [illegible] ಟೈಂಪೀಸ್ 1ಕ್ಕೆ	2 [illegible]
ಬಿಗಲಿಯಾ [illegible] ಟೈಂಪೀಸ್ [illegible]	15 0
ಬಿಗಲಿಯಾ ಸಣ್ಣ ಸೈಜಿನ ಅಲಾರಂ ಟೈಂಪೀಸ್ 1ಕ್ಕೆ	7 2 0
ಬಿಗಲಿಯಾ ಅಲಾರಂ [illegible] ಟೈಂಪೀಸ್ [illegible] ಸೈಜಿನದು 1ಕ್ಕೆ	8 10 0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9 6 0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಚಿತ್ರದ ಟೈಂಪೀಸ್ 1ಕ್ಕೆ	1[illegible] 4 0
ಖಾತ್ರಿಯುಳ್ಳ ಬಂದೋಬಸ್ತು ಆದ ಪಾಕೆಟ್ ವಾಚ್ 1ಕ್ಕೆ	[illegible] 10 0
ಡಿಸ್ಕೋ ನಮೂನೆಯಲ್ಲಿ [illegible] ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	1[illegible] 4 0
ನಿಕ್ಕಲ್ ಕೇಸ್ ಸಿಲಿಂಡರ್ ಮೂಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12 8 0

ಚಿಕ್ಕ ನಮೂನೆ
ಸಿಲ್ವರ್ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕವಾಗಿ.

ಮ್ಯಾನೇಜರ್ ರವಾನಿಸುವ ವಿಳಾಸ:— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, [illegible] ಮೈಸೂರು.

52—7

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜನರಿಂದ ಠೇವಣಾತಿ	—	2,50 301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹುಟ್ಟಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ [illegible] ದರದಲ್ಲಿ ಬಡ್ಡಿ ದೊರೆಯುತ್ತೆ [illegible] ಗಳಿಗೆ ಶೇಕಡ [illegible]

[illegible] ಕೊಅ ಪರೇಟಿವ್ [illegible] ಜಮೂಯಿಸಿ ಮಾಡುತ್ತಾರೆ

ಪ್ರೆಸಿಡೆಂಟರು	[illegible]
[illegible]ಡಂಡ ಅಪ್ಪಯ್ಯನವರು	[illegible]
[illegible]	[illegible]

ಸೆಕ್ರೆಟರಿ

[illegible] ವೆಂಕಪ್ಪಯ್ಯನವರು [illegible]

ತಾರೀಕು 1—7—1931

ಸಣ್ಣ ಹುಡುಗರ ಸಲುವಾಗಿ

ದ್ರಾಕ್ಷಾರಿ

ಬಾಲಾಮೃತ

ವನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52—34 ಗಿರ್ಗಾಂವ್, ಮುಂಬೈ.

ನೋಟೀಸು

ಈ ಕಳಗೆ [illegible] ಹಣವನ್ನು ವಸೂಲಾತ್ತಲು [illegible] ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಒವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ [illegible] ಅವರಿಗೆ ಅನುಕೂಲವಿರುವ ಸ್ಥಳದಲ್ಲಿ [illegible] ವಾಪತಿ ವಹಿಸಿ ರಶೀತಿ ಪಡೆಯಬೇಕಾಗಿ ಕೋರಿದೆ

ಏಜೆಂಟರುಗಳು

ಉತ್ತರ ಕೊಡಗಿಗೆ ಮೆ ಪಾಲೇಂಗಡ ಕಾರ್ಯಪ್ಪನವರು,

ಮೆ [illegible]

ದಕ್ಷಿಣ ಕೊಡಗಿಗೆ—ಮೆ ಸೋಮೆಯಂಡ ಅಚ್ಚಯ್ಯನವರು

ಸುಂಟಿಕೊಪ್ಪ—ಮೆ [illegible] ಅಣ್ಣಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ [illegible] ಸೋಮಯ್ಯನವರು, (ವಾದಿಭಂಡಾರ)

ನಾಪೋಕ್ಲು—ಎಮ್ [illegible] ವೆಂಕಪ್ಪಯ್ಯನವರು

ಶ್ರೀಮಂಗಲನಾಡು—ಮೆ [illegible]

[illegible]ಕೊಪ್ಪಲು—ಮೆ [illegible]

ಅಮ್ಮತ್ತಿ—ಸಿದ್ದಾಪುರ—ಮೆ [illegible]

[illegible]—ಮೆ [illegible]

ಮೆ [illegible]

[illegible]

ಮೆ [illegible]

[illegible]

ಮ್ಯಾನೇಜರ್,

[illegible] ಲಿಮಿಟೆಡ

ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ **ವರ್ಷದ ಫಲಿತಾಂಶಗಳು.**

ಹೊಸ ವಿಮೆಗಳು—511 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—[illegible] ಲಕ್ಷ ರೂ	ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ
ವಿಮೆದಾರರಿಗೆ ಕೊಟ್ಟದ್ದು—3231 [illegible] 81 ಲಕ್ಷ ರೂ	ಪಾಲಿಸಿದಾರರಿಗೆ [illegible]—8013 [illegible] 32 ಲಕ್ಷ

ಬಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ [illegible] 1 73 [illegible] 38 ಕೋಟಿ [illegible] ವೇಲಿನ ಕೆಲಸಗಳಲ್ಲವೂ ಪ್ರೀಮಿಯಮ್ ಉತ್ಪತ್ತಿಯ ಶೇಕಡ 22 ಕ್ಕಿಂತ [illegible] ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, [illegible] ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು

[illegible] ದೊಡ್ಡ [illegible] ಇಂಡಿಯನ್ ಕಂಪೆನಿಯೊಂದು [illegible]

ಓರಿಯಂಟಲ್ ಕಂಪೆನಿಯೇ [illegible]

[illegible] ಬ್ರಾಂಚ್ [illegible] ಓರಿಯಂಟಲ್ ಬಿಲ್ಡಿಂಗ್ಸ್ [illegible] ಬೆಂಗಳೂರು

[illegible]

ಆಗ್ರ	ಕಲ್ಕತ್ತಾ	[illegible]	[illegible]	[illegible]
ಅಹ್ಮದಾಬಾದು	[illegible]	[illegible]	[illegible]	[illegible]
ಅಜ್ಮೀರ್	[illegible]	[illegible]	[illegible]	[illegible]
ಅಲ್ಲಾಹಾಬಾದು	[illegible]	ಮದ್ರಾಸು	ಪೂನಾ	ತಿರುವನಂತಪುರ
ಬೊಂಬಾಯಿ	[illegible]	ಮಂಡಲೆ	[illegible]	ತಿರುವಾಂಕೂರ
ಭೋಪಾಲ್	[illegible]	ಮಂಗಳೂರು	[illegible]	[illegible]

[illegible]

ಕಂಪೌಂಡು ಸಿರಪ್ಪು [illegible]

[illegible] ರೋಗಗಳ [illegible] ಕ್ರಯ ಬಾಟ್ಲಿಗೆ ರೂ. 3—8—0.

ಕಂಪೌಂಡು ಸಿರಪ್ಪು [illegible] —[illegible] ರಕ್ತ [illegible] ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ [illegible] ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3—8—0.

ಕಂಪೌಂಡು ಸಿರಪ್ಪು [illegible] :—[illegible] ಗರ್ಭಪಾತದಿಂದಲೂ [illegible] ಕೈಕಾಲು [illegible] ಗುಣಪಡಿಸಿ ದೇಹವನ್ನು ಪುಷ್ಟಿಗೊಳಿಸುವದು ಕ್ರಯ ಬಾಟ್ಲಿಗೆ ರೂ. 3—8—0.

ಕಂಪೌಂಡು ಸಿರಪ್ಪು [illegible]—[illegible] ಗುಪ್ತರೋಗವನ್ನು [illegible] ಮೂತ್ರ [illegible] ರೋಗವನ್ನು ಈ ಬಲವಾದ [illegible] ಗುಣ ಪಡಿಸಿ ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ 3—8—0

ಶುದ್ಧ [illegible] ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

[illegible] ನ್ಯಾಯವಾದ ಬೆಲೆಗೆ [illegible]

ಆರೋಗ್ಯಭಾಗ್ಯದ ರೀತಿ ಸೂತ್ರ ಎಂಬ ಚಿಕ್ಕ ಪುಸ್ತಕಕ್ಕೆ ಬರೆಯಿರಿ. ಧನ್ವಂತರಿ

52—43 **Malariana Co,** Hampankatta No 11 Mangalore

ವಿಳಾಸ —ಮಲೇರಿಯಾನ ಕಂಪೆನಿ, ಹಂಪನಕಟ್ಟೆ, [illegible], 11, ಮಂಗಳೂರು. [illegible]

ಮಾರಾಟಕ್ಕೆ ಸಿದ್ಧವಾಗಿವೆ.

[illegible]

ಯೊಬ್ಬ ಮೆಂಬರನ್ನಾಯೂ ಇರಬೇಕಾದ [illegible] ಪರಸ್ಪರ ಸಹಾಯತ [illegible] ಭಂಡಾರಗಳ [illegible] ನಡಿಸಲು ಅತ್ಯವಶ್ಯವಾಗಿರುವ [illegible] ರಿಜಿಸ್ಟರ್ ಪುಸ್ತಕಗಳೂ [illegible] ಕ್ರಯದಲ್ಲಿ [illegible]

ಮ್ಯಾನೇಜರ್,

"ಕೊಡಗು" ಆಫೀಸು

[illegible]

Printed & published by P [illegible] [illegible]llappa at "Kodagu" Press Mer[illegible] for "Kodagu" Ltd

If not delivered please return to "KODAGU" OFFICE MERCARA

ಕೊಡಗು.

ಸರ್ವೇಷ ಶತದಯುರ್ತ ... ವಿದ್ಯಾ ... ಪ್ರಯುಕ್ತ ... ವಿಶ್ವಸುರ್ವೇಷ ದೇಶಾನಾಂ ಸುಸ್ಥಿರಾ ರಾಜ್ಯ ...

...ಕ ಚಂದಾ ರೂ. ೪—೦. ಸಂಪಾದಕ—ಪಂದ್ಯಂಡ ಐ. ಬೆಳ್ಳಪ್ಪ.

ಪ್ರತಿ ... ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪು ೧೧ ‖ ... ತಾರೀಖು ೪ ನೇ ಶುಕ್ರವಾರ. ‖ ಸಂಚಿಕೆ ೧೪

Subramaniajer Jeweller

Telephone — 3145

...MOND MERCHANT GOLD & SILVER SMITH

Deals in ...
SPORTS CUPS in ...ces
MEDALS in up to patterns
CASKETS ...

... Kuppumuthu St,
... TRIPLICANE ...
Post ..., Triplicane ...,
MADRAS.

Deals in all ...
... JEWELS set with ... etc.
GOLD ARTICLES of ... terns
SILVER WARE in late t style

52-42



ಕೋವಿಗಳು, ಕತ್ತಿ ... ಗಳು, ... ಮತ್ತು ... ಎಲ್ಲಾ ...

COOL ... DY ...
...rgest Impo... and ... tio...
Cheap pr... in In...
210 A Reh... Street, BOMBAY.

44–23

ಕಟುಕಷಾಯ ... 7—8—0 ... 14



ಕೊಡಗುನಾರಿ:— ...

ಮನೋಲ್ಲಾಸಿನಿ ...

ಪಂಡನೀತ — ...

... 2—10—0 ...

9. ಮಂಗಳೂರು.

52–17

ಬಾಲಾರ್ಕಮಧು.

ನಿಮ್ಮ ಮಕ್ಕಳ ... ದಯುರವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ ... ಮಕ್ಕಳು ...



... ಆಗಿದ್ದರೂ ಇದರಿಂದ ಬಹು ಬೇಗ ... ದಿನ ದಿನಕ್ಕೆ ಆರೋಗ್ಯವೂ ... ಚಿಕ್ಕ ಮಕ್ಕಳು ಇದರಿಂದ ... ಬೆಲೆ 1 ಕ್ಕೆ 12 ಆಣೆ ... 9 ಆಣೆ.

... ಗಮನಿಸುವದಿಲ್ಲ.

ಯಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ,
(ಮೈಸೂರು ಸೀಮೆ)

52–34

ಕೊಡಗು.

ಸನ್ ೧೯೩೧ನೇ ಇಸವಿ

ಸೆಪ್ಟಂಬರ್ ತಾ. ೪ನೇ ಶುಕ್ರವಾರ.

ಮಹಾತ್ಮರಿಗೆ ಜಯವಾಗಲಿ.

ಮಹಾತ್ಮ ಗಾಂಧಿಯವರು ಕಳೆದ ತಾ 29 ರಲ್ಲಿ ಬೊಂಬಾಯಿಯಿಂದ ಲಂಡನಿಗೆ ಹೊರಟು ಹೋದರು ಎಂಬ ವರ್ತಮಾನವು ಹಿಂದೀಯರಿಗೆಲ್ಲರಿಗೂ ಮತ್ತು ಬ್ರಿಟಿಷರಿಗೂ ಮಾತ್ರವಲ್ಲ, ಪ್ರಪಂಚದ ಹಲವು ಜನರಿಗೂ ಸಂತೋಷವನ್ನುಂಟು ಮಾಡಿದೆಯೆಂಬುದರಲ್ಲಿ ಸಂದೇಹವೇನೂ ಇಲ್ಲ. ಮಹಾತ್ಮರು ಕಳೆದ ಶನಿವಾರ ಮಧ್ಯಾಹ್ನ 1½ ಗಂಟೆಗೆ ರಜಪೂತಾನ ವೆಂಬ ಹಡಗನ್ನು ಹತ್ತಿದಾಗ ಭೂಮಂಡಲದ ಹಲವು ಕಡೆಗಳಿಂದ ಅವರಿಗೆ ಸಿಕ್ಕಿದ ಅಭಿನಂದನಾ ತಂತಿ ವಾರ್ತೆಗಳೇ ಇದಕ್ಕೆ ಸಾಕ್ಷಿಯಾಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಳೆದ ತಾ. 13ರಲ್ಲಿ ಮಹಾತ್ಮರು ದುಂಡು ಮೇಜು ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳಬಾರದೆಂದು ಮಾಡಿದ ತೀರ್ಮಾನವು ಅಹಿಂಸಾ ಯುದ್ಧಾತುರರಾಗಿರುವ ಯುವಕರಲ್ಲಿಯೂ, ಕೂಲಿ ಕೆಳ್ಳದವರಲ್ಲಿಯೂ ತುಂಬಾ ಉತ್ಸಾಹವನ್ನು ಹುಟ್ಟಿಸಿತು. ಬಹು ಬೇಗನೆ ಕಾನೂನು ಭಂಗ ಚಳವಳಿಯು ಪ್ರಾರಂಭವಾಗುವದೆಂದು ಅವರು ಅದಕ್ಕೆ ಸಿದ್ಧರಾಗ ತೊಡಗಿದ್ದರು. ಅಂಥವರಿಗೆ ಮಹಾತ್ಮರ ಈ ಕಡೇ ತೀರ್ಮಾನವು ಸ್ವಲ್ಪ ಆಶಾಭಂಗವನ್ನುಂಟು ಮಾಡಿದರೂ, ಆರ್ಥಿಕ ಹೀನಸ್ಥಿತಿಯಲ್ಲಿ ಸಿಕ್ಕಿ ಬಿದ್ದು ಕಷ್ಟ ಪಡುತ್ತಿರುವ ವ್ಯವಸಾಯಗಾರರಿಗೂ, ವರ್ತಕರಿಗೂ ಮತ್ತು ಸರ್ಕಾರದವರಿಗೂ ಒಂದು ದೊಡ್ಡ ಸಂಕಷ್ಟ ಪರಿಹಾರ ಮಾಡಿದಂತಾಗಿರುವುದು. ಈ ಕಷ್ಟ ಪರಿಹಾರವು ತಾತ್ಕಾಲಿಕವೋ ಅಥವಾ ಖಾಯಂ ಆಗುವುದೋ ಎಂಬುದು ದುಂಡು ಮೇಜು ಪರಿಷತ್ತಿನ ತೀರ್ಮಾನದಲ್ಲಿದೆ.

ಹೆಚ್ಚು ಕಡಿಮೆ ಎಲ್ಲಾ ಪಾರ್ಟಿ ಪಂಗಡಗಳಿಗೂ ತೃಪ್ತಿಯನ್ನುಂಟು ಮಾಡಿರುವ ಈ ತೀರ್ಮಾನಕ್ಕೆ ಬರಲು ಸರ್ವ ಪ್ರಯತ್ನ ಮಾಡಿದ ಜನರ ಕಡೆಯ ಮಹಾತ್ಮ ಗಾಂಧಿಯವರಿಗೂ, ಸರ್ಕಾರದ ಕಡೆಯ ವೈಸರಾಯರಾದ ಲಾರ್ಡ್ ವೆಲ್ಲಿಂಗ್ಡನ್‌ರವರಿಗೂ ಅಭಿನಂದನಗಳಿವೆ. ಆದರೆ ಈ ರಾಜಿ ತೀರ್ಮಾನಕ್ಕೆ ಬರುವಂತೆ ಮಾಡಲು ತುಂಬಾ ಶ್ರಮ ತೆಗೆದುಕೊಂಡ ಸರ್ ಪ್ರಭಾ ಶಂಕರ ಪಟ್ಟಣಿ, ಸರ್ ಕಾವಸ್ಜಿ ಜಹಂಗೀರ್ ತೇಜ್ಬಹದ್ದೂರ್ ಸಪ್ರೂ ಮೊದಲಾದವರ ಪ್ರಯತ್ನಗಳನ್ನು ಮರೆಯಲಾಗದು. ಈ ಮಹನೀಯರು ಪ್ರಯತ್ನಿಸದೆ ಹೋಗಿದ್ದರೆ ತೀರ್ಮಾನಕ್ಕೆ ಬಾರದಂತೆ ಆಗದಿದ್ದರೂ, ತಡವಾಗುತ್ತಿದ್ದಿತೆಂದು ಹೇಳಬಹುದು.

ದುಂಡು ಮೇಜು ಪರಿಷತ್ತನ್ನು ಕಾಂಗ್ರೆಸಿನವರು ಬಹಿಷ್ಕರಿಸಬೇಕೆಂದು ವರ್ಕಿಂಗ್ ಕಮಿಟಿಯವರು ಮಾಡಿದ್ದ ತೀರ್ಮಾನದ ನಂತರ ರಾಜಕೀಯ ವಾತಾವರಣವು ಹೇಗೆ ಒದಗಾಯಿತೆಂದೂ, ಈ ಸಂಬಂಧ ಮಹಾತ್ಮರಿಗೂ, ವೈಸರಾಯರಿಗೂ ನಡೆದ ತಂತೀ ವಾರ್ತೆಗಳ ವಿಷಯವೂ ಕಳೆದ ವಾರ ಬರೆದಿದ್ದೆವು. ಮಹಾತ್ಮರು ವೈಸರಾಯರನ್ನು ಭೇಟಿ ಮಾಡುವ ಮೊದಲು ಹೋಮ್ ಸೆಕ್ರೆಟರಿಯಾದ ಮಿ. ಎಮರ್ಸನ್‌ರವರೊಂದಿಗೆ ಸಂಭಾಷಣೆ ನಡೆಸಿದ್ದರಿಂದ, ಎಮರ್ಸನ್‌ರವರು ಕೂಡಲೆ ನಡೆದ ಎಗ್ಸಿಕ್ಯೂಟಿವ್ ಕೌನ್ಸಿಲಿನ ಮೀಟಿಂಗಿನಲ್ಲಿ ಮಹಾತ್ಮರ ಅಭಿಪ್ರಾಯಗಳನ್ನೆಲ್ಲಾ ಮುಂದಿಟ್ಟರು. ಅಲ್ಲಿ ನಡೆದ ಚರ್ಚೆಯಿಂದ ಮರು ದಿನ ಗಾಂಧಿಯವರೊಡನೆ ಮಾತಾಡಲು ವೈಸರಾಯರು ತಯಾರಾಗಿದ್ದರು. ಇವರಿಬ್ಬರಿಗೆ ಆಗೊಸ್ಟು ತಾ 26ರಲ್ಲಿ ಮೂರು ಗಂಟೆ ಕಾಲ ತೃಪ್ತಿಕರವಾದ ಸಂಭಾಷಣೆಯು ನಡೆಯಿತು. ಆದರೂ ಕೂಡ ಸರ್ಕಾರಕ್ಕೂ, ಗಾಂಧಿಜಿಯವರಿಗೂ ಆಗಲಿಕ್ಕಿದ್ದ ಒಪ್ಪಂದದ ಒಂದು ಶರತ್ತಿನಲ್ಲಿ ಭಿನ್ನಾಭಿಪ್ರಾಯ ಹುಟ್ಟಿ ಪ್ರಯತ್ನವೆಲ್ಲವೂ ನಿಂತುಹೋಗುವ ಸಂಭವ ಕಾಣುತ್ತಿತ್ತು. ಒಪ್ಪಿ ಕೊಂಡರೆ ಒಂದು ಕಡೆಯವರೂ ಮತ್ತೊಂದು ಹೆಜ್ಜೆ ಮುಂದೆ ಬಂದು ಕೈ ಹಿಡಿದರು. ಮಹಾತ್ಮರು ಡಿಲ್ಲಿ ಒಪ್ಪಂದದ ವಿಷಯ ವಿವಾದಗಳನ್ನು ತೀರ್ಮಾನಿಸಲು ನಿಷ್ಪಕ್ಷವಾದ ಕಮಿಟಿಯೇ ಆಗಬೇಕೆಂದು ಹಟಹಿಡಿಯಲಿಲ್ಲ. ಸರ್ಕಾರದವರು ಅಂಥ ವಿವಾದಗಳನ್ನು ವಿಚಾರಿಸಲು ಒಪ್ಪುವುದು ತಮ್ಮ ಗೌರವಕ್ಕೆ ಕುಂದಕವಾಗುವದೆಂದು ಯೋಚಿಸಲಿಲ್ಲ. ಅಂಥಾ ಎಲ್ಲಾ ವಿವಾದಗಳನ್ನು ವಿಚಾರಿಸಲು ಸರ್ಕಾರದವರು ಒಪ್ಪಿಕೊಳ್ಳದೆ ಹೋದರೂ ಗುಜರಾತಿನ ಬಾರ್ಡೋಲಿ ತಾಲೋಕಿನಲ್ಲಿ ರೈತರಿಂದ ಬಲಾತ್ಕಾರದಿಂದ ಕಂದಾಯ ವಸೂಲಿ ಮಾಡಿದ್ದರ ವಿಷಯ ವಿಚಾರಿಸಲು ಒಬ್ಬ ಉದ್ಯೋಗಸ್ಥನನ್ನು ನೇಮಿಸಲು ಸಮ್ಮತಿಸಿದರು. ಹೀಗೆ ವಿಚಾರ ನಡಿಸಲು ನಾಸಿಕದ ಕಲೆಕ್ಟರಾದ ಮಿ. ಗೋರ್ಡನ್ ಐ. ಸಿ. ಎಸ್. ರವರು ನೇಮಿಸಲ್ಪಟ್ಟಿರುವರು. ಇನ್ನೊಂದು ವಿಷಯದ ವಿಚಾರಕ್ಕಾದರೂ ಸರ್ಕಾರದವರು ಒಪ್ಪಿಕೊಂಡದ್ದರಿಂದ ಕಾಂಗ್ರೆಸ್ಸಿಗೂ ಸರ್ಕಾರಕ್ಕೂ ವಿವಾದಗಳು ಹುಟ್ಟಿದಲ್ಲಿ ಅದನ್ನು ಬೇರೊಬ್ಬರು ವಿಚಾರಿಸುವದು ಆಗತ್ಯವೆಂಬ ಮಹಾತ್ಮರ ತತ್ವಕ್ಕೆ ಸಮ್ಮತಿಸಿದಂತಾಯಿತು.

ಸರ್ಕಾರದವರ ಮೇಲೆ ಕಾಂಗ್ರೆಸಿನವರು ಹೊರಿಸಿರುವ ಬೇರೆ ತಪ್ಪುಗಳನ್ನು ವಿಚಾರಿಸಲು ಸರ್ಕಾರದವರು ಒಪ್ಪುವುದಿಲ್ಲವೆಂಬ ಶರತ್ತನ್ನು ಕುರಿತು ಮಹಾತ್ಮರು ಮಿ. ಎಮರ್ಸನ ರವರಿಗೆ ಕಾಂಗ್ರೆಸ್ಸಿನ ಪರವಾಗಿ ಬರೆದಿರುವ ಪತ್ರದಲ್ಲಿ ಕಾಂಗ್ರೆಸ್ಸಿಗೂ, ಸರ್ಕಾರಕ್ಕೂ ವಿವಾದಗಳು ಹುಟ್ಟಿದಲ್ಲಿ ಅವನ್ನು ತೀರ್ಮಾನಿಸಿಕೊಳ್ಳಲು ಕಾಂಗ್ರೆಸ್ಸಿನವರು ಸರಕಾರಿ ಅಧಿಕಾರಿಗಳೊಂದಿಗೆ ಶಾಂತ ರೀತಿಯಿಂದ ಪ್ರಯತ್ನಿಸುವರು. ಇದು ಸಾಧ್ಯವಾಗದೆ ಹೋದರೆ, ಕಾನೂನು ಭಂಗ ಚಳವಳಿಯು ತಾತ್ಕಾಲ ನಿಲ್ಲಿಸಲ್ಪಟ್ಟಿದ್ದರೂ ಕೂಡ ಆತ್ಮ ರಕ್ಷಣೆಗಾಗಿ 'ಸೀದಾ ಕಾರ್ಯ' ವನ್ನು ಅಂದರೆ ಕಾನೂನು ಭಂಗದ ಕಾರ್ಯವನ್ನು ಕೈಕೊಳ್ಳಲು ಕಾಂಗ್ರೆಸು ಸ್ವಾತಂತ್ರ್ಯವುಳ್ಳದ್ದಾಗಿದೆಯೆಂದು ಸದರಿ ಪತ್ರದಲ್ಲಿ ವಿಶದ ಪಡಿಸಿರುವರು. ಸೀದಾ ಕಾರ್ಯ ವನ್ನು ಕೈಕೊಳ್ಳುವ ಸಂದರ್ಭವು ಉಂಟಾಗಲಿಕ್ಕಿಲ್ಲವಾಗಿ ಆಶಿಸುತ್ತೇನೆಂದು ವೈಸರಾಯರು ಅದಕ್ಕೆ ಜವಾಬು ಕೊಟ್ಟರು. ಆದುದರಿಂದ ಮಹಾತ್ಮರು ಕಾಂಗ್ರೆಸ್ಸಿನ ಘನತೆಯನ್ನು ಕಡಿಮೆ ಮಾಡಿರುವರೆಂದು ಎಂದೂ ಹೇಳಲಾಗುವುದಿಲ್ಲ. ಅದ ಕಾರಣ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಕೂಡಲೇ ಸಿಮ್ಲಾದಲ್ಲಿ ಮೀಟಿಂಗು ನಡಿಸಿ ಮಹಾತ್ಮರು ದುಂಡು ಮೇಜು ಪರಿಷತ್ತಿಗೆ ಹೋಗಬೇಕೆಂದು ತೀರ್ಮಾನಿಸಿದರು.

ಮಹಾತ್ಮರು ಲಂಡನಿಗೆ ಹೋಗಿದ್ದೇನೋ ಮುಖ್ಯವಾದ ವಿಷಯವಾದರೂ, ಅದಕ್ಕಿಂತ ಹೆಚ್ಚಿನ ವಿಶೇಷದ ಸಂಗತಿಯು ಮುಂದೆ ಆಗಲಿಕ್ಕಿದೆ. ಅದೇ ಹಿಂದೀಯರ ಜನ್ಮ ಹಕ್ಕಾದ ಸ್ವರಾಜ್ಯ ಸರ್ಕಾರ ಪಡೆಯುವದಾಗಿದೆ. ಇದು ದುಂಡುಮೇಜು ಪರಿಷತ್ತಿನಲ್ಲಿ ಬ್ರಿಟಿಷ್ ಪ್ರತಿನಿಧಿಗಳು ತೋರಿಸುವ ರಾಜನೀತಿ ಪಾಂಡಿತ್ಯದಲ್ಲಿದೆ. ಮಹಾತ್ಮರು ಎಂದಿಗೂ ಕಾಂಗ್ರೆಸ್ಸಿನ ಕೋರಿಕೆಯನ್ನು ಬಿಟ್ಟು ಕೊಡಲಿಕ್ಕಿಲ್ಲವೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ರಾಜ್ಯ ಕಾರ್ಯ ಕುಶಲತೆಯಲ್ಲಿ ಪ್ರವೀಣರಾಗಿರುವ ಬ್ರಿಟಿಷರ ಮಧ್ಯದಲ್ಲಿ ಗಾಂಧಿಜಿಯವರ ಶಕ್ತಿಯು ಹೆಚ್ಚುವಂತೆ ಕಾಂಗ್ರೆಸ್ಸಿನ ಸಂಘಟನಾ ಕಾರ್ಯಕ್ರಮವನ್ನು ನಡಸಲು ಪ್ರಯತ್ನಿಸಬೇಕಾದದ್ದು ದೇಶೀಯರೆಲ್ಲರ ಕರ್ತವ್ಯವಾಗಿದೆ. ಕಾಂಗ್ರೆಸ್ ಮಹಾ ಸಭೆಯ ಒಬ್ಬನೇ ಪ್ರತಿನಿಧಿಯಾಗಿ ಹಿಂದೂಸ್ಥಾನದ ಮೂವತ್ತೈದು ಕೋಟಿ ದೀನ ಜನರ ಗುಲಾಮಗಿರಿಯನ್ನು ಹೋಗಲಾಡಿಸಿ, ಸ್ವಾತಂತ್ರ್ಯವನ್ನು ಪಡೆಯಲು ಲಂಡನಿಗೆ ಹೋಗಿರುವ ಮಹಾತ್ಮರಿಗೆ ಜಯವಾಗಲಿ ಎಂದೇ ನಮ್ಮ ಪ್ರಾರ್ಥನೆಯಾಗಿದೆ.

ಗಾಂಧಿಜೀಯವರು ಹಿಂದೂಸ್ಥಾನದ ಪಕ್ಷವನ್ನು ಬಿಟ್ಟುಕೊಟ್ಟಾರೋ?

(ರೆವರೆಂಡ್ ಹೆಯಿನ್ಸ್ ಹೋಮ್ಸ್ ಎಂಬವರು ಬರೆದ ಲೇಖನದಿಂದ)

ದುಂಡುಮೇಜು ಪರಿಷತ್ತಿನಲ್ಲಿ ಮಹಾತ್ಮ ಗಾಂಧಿಯವರು ಏನು ಮಾಡಲಿಕ್ಕಿದ್ದಾರೋ? ಆ ಮೂಲಕ ಅನೇಕ ಶತಮಾನಗಳಿಂದ ಹಿಂದೀಯರು ಕಷ್ಟಪಟ್ಟು ಜೀವಕೊಟ್ಟ ಉದ್ದೇಶವನ್ನು ಬಿಟ್ಟುಕೊಟ್ಟಾರೋ ಎಂಬ ಶಂಕೆ ಅನೇಕರಿಗೆ ಇದೆ. ಇಂಥಾ ಸಂಶಯಗಳನ್ನು ಇಟ್ಟುಕೊಂಡವರು ಮಹಾತ್ಮರ ಬುದ್ಧಿಯನ್ನು ತಿಳಿದುಕೊಂಡೇ ಇಲ್ಲ. ಆದರೂ ಸಂಶಯ ಬಂದಿರ ಬಹುದು.

ಗಾಂಧಿಜೀಯವರು ತನ್ನ ಅಸಾಧಾರಣ ಧೈರ್ಯದ ರಾಜಕಾರ್ಯ ಪಟುತ್ವವನ್ನು ತೋರಿಸಿ, ತನ್ನ ಹುಟ್ಟು ಒಡವೆನಾದರೂ ಹಿಂದೂಸ್ಥಾನವು ಹಿಂದಕ್ಕೆ ಹೆಜ್ಜೆ ತೆಗೆಯದ ಸ್ಥಿತಿಗೆ ತಂದಿಟ್ಟಿದ್ದಾರೆ. ಅಮೇರಿಕದ ಸ್ವಾತಂತ್ರ್ಯ ಕ್ರಾಂತಿಯ ಯುದ್ಧಕ್ಕೆ ಮುಂಚೆ ಸ್ವಾತಂತ್ರ್ಯಕ್ಕಾಗಿ ಅಮೇರಿಕವು ಕಟ್ಟು ಬಿದ್ದಿತೋ ಹಾಗೆಯೇ ಇಂಡಿಯವು ಕಟ್ಟುಬಿದ್ದಿದೆ. ಲಾಹೋರಿನಲ್ಲಿ ಪೂರ್ಣ ಸ್ವಾತಂತ್ರ್ಯವೇ ಧ್ಯೇಯವೆಂತ ನಿಶ್ಚಯಿಸಿ ಬಾವುಟವನ್ನು ಹಾರಿಸಿದ ಹಿಂದೂಸ್ಥಾನವು ಅಪೇಕ್ಷೆ ಪಟ್ಟರೂ ಹಿಂತೆಗೆಯಲು ಸಾಧ್ಯವಿಲ್ಲ. ಇಷ್ಟೆಲ್ಲಾ ಆದ ನಂತರ, ಕಷ್ಟಪಟ್ಟ ನಂತರ ಸಂಪಾದಿಸಲು ಹೊರಟ ಸ್ವಾತಂತ್ರ್ಯಕ್ಕೆ ಕಡಿಮೆಯಾದದ್ದನ್ನು ಅಂಗೀಕರಿಸಿದರೆ ಹಿಂದೂಸ್ಥಾನವು ಪ್ರಪಂಚದ ಮುಂದೆ ಅವಮಾನ ಹೊಂದಬೇಕಾಗುತ್ತದೆ. ಇಂಗ್ಲೀಷರ ತುಚ್ಛೀಕಾರಕ್ಕೆ ಗುರಿಯಾಗುತ್ತದೆ. ಇದಕ್ಕಿಂತಲೂ ಹೆಚ್ಚೇನೆಂದರೆ ತನ್ನ ಜನರ ನಿಂದೆಗೆ ಗುರಿಯಾದೀತು. ದೇಶಕ್ಕಾಗಿ ಜೀವ ಕೊಟ್ಟವರು ತಮ್ಮ ಸಮಾಧಿಯಿಂದ ಕೂಗಿಯಾರು. ಸಹಸ್ರಾರು ಬಂಧಿಖಾನೆಗಳಲ್ಲಿ ಸುರಿಸಿದ ಕಣ್ಣೀರಿಗೂ, ಊರೆಲ್ಲಾ ಸುರಿದ ರಕ್ತಕ್ಕೂ ಬೆಲೆಗೆ ಬಂದು ಹೋಯಿತೆನ್ನುವರು. ಇಂಡಿಯಾವು ಸಹಿತ ಉಳಿಯಬೇಕಾದರೆ ತನ್ನ ಆತ್ಮದೊಂದಿಗೆ ತನ್ನ ಭವಿಷ್ಯಕ್ಕೆ ಅನುಗುಣವಾಗಿ ಬದುಕಬೇಕು. ಜೀವವಿರುವ ಮನುಷ್ಯರಿಗಿಂತಲೂ ಹೆಚ್ಚಾಗಿ ಮಹಾತ್ಮರು ಇದನ್ನು ಬಲ್ಲರು.

ಇದು ಹಿಂದೂಸ್ಥಾನಕ್ಕೆ ಮಾತ್ರವಲ್ಲ, ಒಟ್ಟು ಪ್ರಪಂಚಕ್ಕೆಲ್ಲಾ ಸಂಬಂಧಪಡುವ ವಿಷಯವಾಗಿದೆ. ಕೆಲವು ಸಂಗತಿಗಳಲ್ಲಿ ರಾಜಿಯಿಲ್ಲ. ಒಂದು ಜನಾಂಗದ ಸ್ವಾತಂತ್ರ್ಯ ಇಂಥಾ ಒಂದು ವಿಷಯವಾಗಿದೆ. ಒಂದು ಜನಾಂಗವು ಸ್ವತಂತ್ರ್ಯವಾಗಿರಬೇಕು, ಅಥವಾ ಇರಬಾರದು. ಇದು ಜನಾಂಗದ ಆತ್ಮವು ಇನ್ನೊಂದು ವಿಷಯ. ಅದು ಸ್ವತಂತ್ರವಾಗಿರಬೇಕು, ಅಥವಾ ಇರಬಾರದು. ತನ್ನ ಜೊತೆಯಲ್ಲಿರುವ ಕೋಟ್ಯಂತರ ಗಂಡಸರು, ಹೆಂಗಸರು ಮಹಾತ್ಮ ಗಾಂಧಿಯವರ ಶಿಷ್ಯರಾಗಿದ್ದಾರೆ. ಇವರ ರಾಷ್ಟ್ರವೆಗಿಂತಲೂ ಬೇರೆಯಾದ ಸತ್ಯ, ಅಹಿಂಸೆ ಆತ್ಮಶಕ್ತಿ ಮುಂತಾದವುಗಳನ್ನು ಸಾಧಿಸುವುದರಲ್ಲಿ ಇವರು ಚರಿತ್ರೆಯಲ್ಲಿ ಒಂದು ಸ್ಥಾನವನ್ನೇ ಪಡೆದಿದ್ದಾರೆ. ಹಿಂದೂಸ್ಥಾನದ ಸ್ವಾತಂತ್ರ್ಯ ಮಾತ್ರವಲ್ಲ, ಪ್ರಪಂಚದ ಈ ಎಲ್ಲಾ ಗುಣಗಳನ್ನು ಕಾಪಾಡುವ ಭಾರ ಇವರ ಮೇಲೆ ಬಿದ್ದಿದೆ. ಲಂಡನಿನಲ್ಲಿ ಇವರು ಚರ್ಚಿಸುವಾಗ ತನ್ನ ಜನಾಂಗದ ಕೋಟಿ ಗಟ್ಟಲೆ ಜನರ ಸ್ವಾತಂತ್ರ್ಯ ಪ್ರತಿನಿಧಿಯಾಗಿ ಮಾತ್ರವಲ್ಲ, ಒಟ್ಟು ಪ್ರಪಂಚದ ಆಗ್ನೇಯ ದೇಶದ ಜನರು ಹಿಂಸೆ ಮುದ್ಧ ಮೊದಲಾದವುಗಳಿಂದ ಬಿಡುಗಡೆ ಹೊಂದಲು ಅಪೇಕ್ಷಿಸುವ ಪ್ರತಿನಿಧಿಯಾಗಿ ಹೋಗುತ್ತಾರೆ. ಗಾಂಧೀಜೀಯವರು ಪ್ರಪಂಚಕ್ಕೆ ಹೊಸ ಜೀವನವನ್ನು ಕಲಿಸಿದ್ದಾರೆ. ಆ ಜೀವನ ಜಯಪ್ರದವಾಗುವಂತೆ ಮಾಡಿ ಅದರ ಬೆಲೆಯನ್ನು ಸ್ಥಾಪಿಸಿಯಾರೋ? ಈ ಪ್ರಶ್ನೆಗೆ ಇವರು ಲಂಡನಿನಲ್ಲಿ ಜವಾಬು ಕೊಡಬೇಕಾಗಿದೆ. ಅವರ ಜವಾಬು ಕೊಡಲು ಅಶಕ್ತರಾದರೆ ಪ್ರಪಂಚವೇ ಎದೆ ಒಡೆದೀತು.

ಬ್ರಿಟನಿನಲ್ಲಿ ಗಾಂಧಿಯವರು ಕೈಕೊಂಡಿರುವ ಕಾರ್ಯವನ್ನು ಇತಿಹಾಸದಲ್ಲಿ ಈ ವರೆಗೆ ಯಾರೂ ಕೈಕೊಂಡಿಲ್ಲ. ಇತಿಹಾಸದಲ್ಲೆಲ್ಲಾ ಇಂಥಾ ಪಂಥವನ್ನು ಗೆಲ್ಲಲು ಇವರಂಥ ಯೋಗ್ಯ ಮತ್ತು ಅರ್ಹ ಪುರುಷರು ಇಲ್ಲ. ಇವರ ಈ ಸಂಧಸಾಧನೆಯಿಂದ ಮನುಷ್ಯ ಜನಾಂಗವನ್ನು ಇವರು ಇಂಡಿಯಾದ ಮಾತ್ರವಲ್ಲ, ಒಟ್ಟು ಪ್ರಪಂಚಕ್ಕೇನೇ ಮಹಾತ್ಮರಾಗಿದ್ದಾರೆ. ಇವರಿಗೆ ಇದು ನಾವು ಇವರು ಕೈಕೊಂಡ ಕಾರ್ಯದಲ್ಲಿ ಜಯವಾಗಿರಲು ಸಹಾಯಕರಾಗಿ, ಇವರಿಗೆ ದೇವರು ಜಯವನ್ನು ಕೊಡಲಿ ಎಂತ ಪ್ರಾರ್ಥಿಸುತ್ತೇವೆ.

ಮಹಾತ್ಮ ಗಾಂಧಿಯವರ ಸಂದೇಶ.

ಮಹಾತ್ಮ ಗಾಂಧಿಯವರು [illegible] ಇಂಡಿಯಾ ಬಿಟ್ಟು ಕಳೆದ 29ನೇ ತಾರೀಖಿನ ದಿನ ಇಂ[illegible]ವನ್ನು ಕುರಿತು ಹೊರಟರು. [illegible] ಹೋಗುವುದರ ವಿಷಯ ಹೇಳಿದ್ದೆಗಳೆಲ್ಲವೂ ಸಫಲವಾ[illegible], ಇಂಡಿಯಾ ದೇಶವೇ ಯಶಸ್ವಿಯ [illegible] ಮನಸ್ಸೆಲ್ಲವೂ ಒಡಳ [illegible]. ಮಹಾತ್ಮಾ[illegible]ಯವರು ತೆರಳಿದ ನಂತರ ಜನರು [illegible] ರಾಜಕೀಯ ಪಟುಗಳು ಸಂಘಗಳು ಸಮಾಧಾನ [illegible] ಕೂಡಿರುವರು.

ಮಹಾತ್ಮಾಜೀಯವರು ಹೊಸ ಮೊದಲು.

ಮಹಾತ್ಮಾಜಿಯವರು ಸಗ ಪ್ರಯಾಣವನ್ನು [illegible] ವ ಹೊದಲು ಬೊಂಬಾಯಿಯಲ್ಲಿ ಒಂದು '[illegible]' ಎಂಬ ರೈಲ್ವೆ ನಿಲ್ದಾಣದಲ್ಲಿ [illegible] ಬೆಳಿಗ್ಗೆ [illegible] 8 ಗಂಟೆಗೆ ರೈಲು ಬಂದಿತು. ಮಹಾತ್ಮಾಜಿಯವರು [illegible] ತಿಳಿದು, [illegible] ನಿಲ್ದಾಣದಲ್ಲಿ [illegible] "ಮಹಾತ್ಮಾ ಗಾಂಧಿಕೀ ಜೈ" [illegible] ಮಹಾತ್ಮಾ ಗಾಂಧಿಯವರು [illegible] ಅದನ್ನು ಮುಚ್ಚಿ, ಗಾಂಧಿಯವರು [illegible] ನೋಡಲಾಗಲಿಲ್ಲ. [illegible] ಮೇಲೆ [illegible] ದರ್ಶನವನ್ನು [illegible] ಮಾಡಿದರು. [illegible] ಗಾಂಧಿಜಿಯವರು [illegible] ಸಂಭಾಷಣೆ ಬೆಳೆಸ[illegible]. ಮತ್ತು ಮುತ್ತ ಜನರೆಲ್ಲರೂ [illegible] ಹೀಗೆ ಅಲ್ಲಿಂದ ರೈಲು ಗಾಡಿ ಹೊರಡಲು [illegible] ಜನರೆಲ್ಲರ [illegible] ನಂತರ ರೈಲು ಗಾಡಿಯು "ದಾದರ್" [illegible] ಅಲ್ಲಿಗೆ [illegible] ಸ್ಥಳದಲ್ಲಿ ರೈಲು ನಿಂತು, [illegible] ಗೃಹವಾದ '[illegible]' [illegible]

ಪ್ರವಾಸದ ವಿವರಗಳು.

'ಮಹಾತ್ಮರವರಲ್ಲಿ ಮಹಾತ್ಮರ [illegible] ಎಂಬ ಹಡಗಿನಲ್ಲಿ ಮಹಾತ್ಮಾಜಿಯವರಿಗೆ ಉಪಯುಕ್ತವಾಗುವ ಎಲ್ಲಾ ಸಾಮಾನುಗಳನ್ನು [illegible] ಮಹಾತ್ಮಾಜಿಯವರಿಗೆ [illegible] 2—3 [illegible] ಮಹಾತ್ಮರ ಸಾಮಾನು [illegible] ಉಪಯೋಗಿಸ[illegible] ಪೆಟ್ಟಿಗೆ, [illegible] ಒಂದೇ [illegible] ಮಹಾತ್ಮಾಜಿ [illegible] ಮತ್ತು [illegible] ತೆಗೆದುಕೊಂಡು ಬಂದಿದೆ [illegible]

ಮಹಾತ್ಮರು ಹಡಗಿನಲ್ಲಿ [illegible] ಆಡಿನ ಹಾಲು, [illegible] ಹಣ್ಣುಗಳನ್ನು [illegible] ಪ್ರಯಾಣಕ್ಕಾಗಿ 8 [illegible] ಆಡುಗಳನ್ನು [illegible] ಆಹಾರವನ್ನು [illegible] ಅವರಿಗೆ ಇದೇ ವಿಧದ [illegible] ಏರ್ಪಾಡು ಮಾಡಲಾಗಿದೆ.

ಮಹಾತ್ಮಾಜೀಯವರು [illegible] ಹಡಗಿನಲ್ಲಿ [illegible] ಜೊತೆಯಲ್ಲಿಯೇ [illegible] ಸಂದರ್ಭ [illegible] ಮಹಾತ್ಮಾಜಿಯವರು [illegible] ಗಾಂಧಿಯವರು [illegible] ಈ ವಿಷಯದಲ್ಲಿ [illegible] ಹಿಂದಿನ ತರಗತಿಯ [illegible] ಮಹಾತ್ಮ [illegible] ನೇ ಕ್ಲಾಸಿನಲ್ಲಿ ಪ್ರಯಾಣ ಮಾಡುವ[illegible]. ಮಹಾತ್ಮಾಜೀಯವರು [illegible]

ಅಲ್ಲಿಗೆ ಮಹಾತ್ಮಾಜಿಯವರು ಗೊತ್ತಾದ ಸಮಯಕ್ಕಿಂತ ಅರ್ಧ ಗಂಟೆ ಮುಂಚಿತವಾಗಿ ಹೋದರೂ ಮೈದಾನದಲ್ಲಿ ಜನರು ಕಿಕ್ಕಿರಿದು ಹೋಗಿದ್ದರು. [illegible] ಗಂಟೆಯ ವರೆಗೆ [illegible] ಮಹಾತ್ಮಾಜೀಯವರ ಸಂದೇಶವನ್ನು ಕೇಳಲು [illegible] ನೆರೆದುಕೊಂಡೇ ನಿಂತಿದ್ದರು. ಮಹಾತ್ಮಾಜಿಯವರು [illegible] ಗೃಹಸ್ಥರ ಮನೆಯ ಮಹಡಿಯ ಮೇಲೆ ನಿಂತು, [illegible] ಕುರಿತು [illegible] ಸಂದೇಶವನ್ನಿತ್ತರು.

ಮಹಾತ್ಮಾಜಿಯವರ ಸಂದೇಶ

ಮಹಾತ್ಮಾಜಿಯವರು 'ರಾಜಪುತಾನ' ಎಂಬ ಹಡಗಿನಲ್ಲಿ ಪ್ರಯಾಣ ಬೆಳೆಸಿದರು. ಹಡಗು ಹೊರಡುವ ಮುಂಚಿತವಾಗಿ ಪತ್ರಿಕೆಗಳ ಪ್ರತಿನಿಧಿಗಳು ಅವರನ್ನು ಭೇಟಿಯಾದಲ್ಲಿ ಗಾಂಧಿಜಿಯವರು—

ಒಂದು ದೊಡ್ಡ ಸಂದಿಗ್ಧದಲ್ಲಿ [illegible] 'ಲಂಡನ್'[illegible] [illegible] ಸಂದಿಗ್ಧ [illegible] ದೇವರನ್ನು [illegible] ಭಾವನೆ.

ಕಾಂಗ್ರೆಸ್ಸಿನ ಅಧಿಕಾರವನ್ನು [illegible] ಇಂಡಿಯಾ ದೇಶದ ಒಡೆತನ [illegible] ಕಾಂಗ್ರೆಸ್ಸಿನ ಉದ್ದೇಶ. ಆದ ಮೇಲೆ [illegible] ಪ್ರತಿನಿಧಿಯಾಗಿ [illegible] ಬಯಸುವುದು [illegible] ಕಾಂಗ್ರೆಸ್ [illegible] ರೀತಿಯಲ್ಲಿ [illegible]

[illegible] ಕಾಂಗ್ರೆಸ್ ಸಂಸ್ಥೆಯು ಅಹಿಂಸೆ ಮತ್ತು [illegible] ಪ್ರತಿನಿಧಿಯಾಗಿರುವುದರಿಂದ [illegible] ರಾಷ್ಟ್ರ [illegible] ದೀನ ಪ್ರತಿನಿಧಿ [illegible] ಹಿತವನ್ನೇ [illegible] ಸಂದೇಶವನ್ನು ಕೊಟ್ಟರು.

ಹಿಂದುಸ್ಥಾನೀ ಸೇವಾದಲ.

ಹುಬ್ಬಳ್ಳಿ (ಕರ್ನಾಟಕ)

[illegible]

ಗಣೇ [illegible] ಹೊಸ ರಾಷ್ಟ್ರೀಯ ಧ್ವಜ [illegible] ಪಟ್ಟಿಯ [illegible] ರಾಷ್ಟ್ರ ಧ್ವಜ [illegible] ಇರುವ [illegible] ಆದರೆ [illegible] ಬಣ್ಣವನ್ನು [illegible]

ಈ ರಾಷ್ಟ್ರ ಧ್ವಜ ಸ್ತಂಭದ ದಿಕ್ಕಿಗೆ [illegible] (Spindle) ಇರುವುದರ [illegible] ಧ್ವಜ ಸ್ತಂಭದ ದಿಕ್ಕಿಗೆ [illegible]

ನಾನು ಈ ಸಂಬಂಧದಿಂದ ವರ್ತಮಾನಪತ್ರಗಳಲ್ಲಿ [illegible] ಕಾಂಗ್ರೆಸ್ ಕಮಿಟಿಗಳಿಗೂ [illegible] ರಾಷ್ಟ್ರ ಧ್ವಜಗಳನ್ನು [illegible]

[illegible] ರಾಷ್ಟ್ರ ಧ್ವಜಕ್ಕೆ [illegible] ರಾಷ್ಟ್ರ [illegible] ಧ್ವಜಗಳನ್ನು ನಾವು ಸಿದ್ಧಪಡಿಸುತ್ತಿದ್ದೇವೆ.

ಹುಬ್ಬಳ್ಳಿ, [illegible] — ನಾ. ಸು. ಹರ್ಡೀಕರ, ಸಂಘಟಿತ ಕಾರ್ಯದರ್ಶಿ.

ದೀರ್ಘಾಯುಷ್ಯ.

ಮನುಷ್ಯನ ಆಯುಷ್ಯ ಮರ್ಯಾದೆಯು ಅಧಿಕಾಧಿಕವಾಗಿ [illegible] ಮತ್ತು 'ಜೀವೇಮ ಶರದಃ ಶತಮ್' ಎಂದೀ [illegible] ಮನುಷ್ಯರ [illegible] ಸಾರ್ಥಕಗೊಂಡದ್ದು [illegible] ಸಾರ್ಥಕಗೊಳಿಸಬಹುದೆಂದು [illegible] ಆಶೆಯಿಲ್ಲ. [illegible] ಕೆಲವರು [illegible] ಅತ್ಯಂತ ಪ್ರಿಯವೆನಿಸದಿರದು. [illegible] ಶಾಸ್ತ್ರದಲ್ಲಿ ಒಟ್ಟಿನಲ್ಲಿ ಆಯುಷ್ಯದ ಪ್ರಮಾಣವು ಬೆಳೆಸುತ್ತಿದ್ದು, ವೃದ್ಧಾವಸ್ಥೆಯಲ್ಲಿ ಕೂಡ ಜೀವನ ಶಕ್ತಿಯು ವಿಶೇಷ ಕುಗ್ಗುತ್ತಿಲ್ಲವೆಂದು ಶಾಸ್ತ್ರಜ್ಞರು ನಿರ್ಧರಿಸಿರುವರು. ನ್ಯೂಯಾರ್ಕಿನಲ್ಲಿ 'ಲಯಿಫ್ ಎಕ್ಸ್‌ಟೆನ್ಶನ್ ಇನ್ಸ್‌ಟಿಟ್ಯೂಟ್' (ಆಯುಷ್ಯವರ್ಧನ ಸಂಘ) ಎಂಬ ಹೆಸರಿನ ಒಂದು ಸಂಸ್ಥೆಯು [illegible] ಮನುಷ್ಯರಿಗೆ ದೀರ್ಘಾಯುಷ್ಯವು ಹೇಗೆ ಲಭಿಸುವುದು ಎಂಬ ವಿಚಾರದಲ್ಲಿ ಶಾಸ್ತ್ರೀಯ ದೃಷ್ಟಿಯಿಂದ ಕೆಲಸ ಮಾಡುತ್ತಿರುವುದು. ಈ ಸಂಸ್ಥೆಯು ಇದುವರೆಗೆ ಅನೇಕ ಸಂಗತಿಗಳನ್ನು ಸಂಗ್ರಹಿಸಿರುವುದು. [illegible] ದೇಶಗಳಲ್ಲಿ ಕೆಲವು ವನಸ್ಪತಿಗಳು ಸಿಕ್ಕುವವು. ಅವುಗಳ ಸೇವನೆಯಿಂದ ಮನುಷ್ಯನು ಅನೇಕ [illegible] ವೃದ್ಧಾವಸ್ಥೆಯಲ್ಲಿ ಕೂಡ [illegible] ಬಲಿಷ್ಠವಾದ [illegible] ಅನೇಕ ವರ್ಷ[illegible] ಆಹಾರಗಳಲ್ಲಿ ಆ ವನಸ್ಪತಿಗಳನ್ನು [illegible] ಈ ವನಸ್ಪತಿಗಳ ಸೇವನೆಯಿಂದ ದೀರ್ಘಾಯುಷ್ಯವು ಲಭಿಸುತ್ತಿರಬೇಕು. ವಾರ್ಧಕ್ಯದ ಭೀತಿಯಿಂದ ಅನೇಕರು ದೀರ್ಘಾಯುಷ್ಯವನ್ನು ತಿರಸ್ಕರಿಸುವುದು [illegible] ವಾರ್ಧಕ್ಯದಿಂದಲೂ ಕೆಲವು [illegible] ಉತ್ತಮವಾದ ಆರೋಗ್ಯವಿದ್ದರೆ ವೃದ್ಧಾವಸ್ಥೆಯು [illegible] ಇಂಥಾ [illegible] ಆಧಿಭೌತಿಕ ಶಾಸ್ತ್ರಗಳ ಸಹಾಯದಿಂದ [illegible] ಅಸಾಧ್ಯವಾಗಿದೆ. [illegible] ಶಾಸ್ತ್ರಗಳು ಜಗತ್ತಿಗೆ ವಿಶೇಷ ಉಪಕಾರವನ್ನೆಸಗಿರುವುದು [illegible] ದೀರ್ಘಾಯುಷ್ಯವನ್ನು ಹೊಂದಲು [illegible] ಪ್ರಯೋಜನವಾಗುವದೆಂಬುದು [illegible] ಸರಳ ಜೀವನ, ಉಚ್ಚ ವಿಚಾರ, [illegible] ದೀರ್ಘಾಯುಷ್ಯವನ್ನು ಹೊಂದುವರು.

'ಜಯಕರ್ನಾಟಕ'

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ತಾ 29 ರಲ್ಲಿ ನಡೆಯಿತು. 9 ಡೈರೆಕ್ಟರುಗಳು ಹಾಜರಿದ್ದರು [illegible] ಆಪರೇಟಿವ್ ಸಂಘಗಳ [illegible] ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ ಜುಲೈ ತಿಂಗಳ ಜಮ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ ಮಾಡಲಾಯಿತು.

3 1929—30 ಮತ್ತು 1930—31ನೇ ಸಂವತ್ಸರಗಳ [illegible] ಸಾಲಗಳ ಬಾಕಿ ಪಟ್ಟಿ ಓದಲಾ[illegible] 1929—1930 ನೇ ಸಂವತ್ಸರದಲ್ಲಿ [illegible]

[illegible]

4 ಈ [illegible] ಸೊಸೈಟಿಗಳಿಗೆ ಸಾಲಗಳ [illegible] (1) [illegible] 1000 (.) [illegible] ಜಾಗರಿಗೆ 5000 ರೂಪಾಯಿಗಳಲ್ಲಿ [illegible] ಜೋಯಿಸಪ್ಪ ವೈದ್ಯಾಲಯ [illegible]

5 [illegible] ಸೊಸೈಟಿಗೆ [illegible]

6 [illegible] ಗಮನಿಸಿ [illegible] ಬಾಕಿ [illegible] ತಿರಸ್ಕರಿಸಲಾಯಿತು. [illegible]

ತಾ 29—8—31

ರಾಷ್ಟ್ರೀಯ ಪಕ್ಷ.

ಬೊಂಬಾಯಿ ಕ್ರೈಸ್ತರ ಉತ್ಸಾಹ.

ಇಂಗ್ಲೆಂಡಿಗೆ ತೆರಳುವ ಮುಂಚಿತವಾಗಿ ಮಹಾತ್ಮಾಜಿಯವರು ಬೊಂಬಾಯಿ ಪಟ್ಟಣದಲ್ಲಿ ಇದ್ದ 4 ಗಂಟೆಗಳ ಸಮಯವನ್ನು ಬಹಳ ಕಾರ್ಯಾಸಕ್ತರಾಗಿ ಕಳೆದರು. ಅನೇಕ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ಮುಖಂಡರೊಡನೆ ಅವರ ಸಂಕಷ್ಟಗಳ ಸಕಲಾಂಶಗಳನ್ನು ಚೆನ್ನಾಗಿ ಚರ್ಚಿಸಿ, ಅವರೆಲ್ಲರಿಗೂ ಸಮಾಧಾನವನ್ನು ಹೇಳಿದರು ಅಷ್ಟೇ ಅಲ್ಲದೆ ಬೊಂಬಾಯಿಯ ಕ್ರೈಸ್ತ ಮಹಾಸಭೆಯ ಪರವಾಗಿ ಅರ್ಪಿಸಿದ ಒಂದು ಬಿನ್ನವತ್ತಳೆಯನ್ನು ಕೂಡ ಸ್ವೀಕರಿಸಿ, ಅವರಿಗೆ ಸರಿಯಾದ ಉತ್ತರವನ್ನು ಹಿಂದಳಿಂದ ಕೊಡುತ್ತೇನೆಂದು ಮಾತು ಕೊಟ್ಟರು.

ಕ್ರೈಸ್ತರ ಬಿನ್ನವತ್ತಳೆ.

ಈ ಬಿನ್ನವತ್ತಳೆಯು ಅನೇಕ ಪ್ರಾಮುಖ್ಯ ಕ್ರೈಸ್ತ ಮುಖಂಡರಿಂದ ರುಜು ಹೊಂದಿ ಅರ್ಪಿಸಲ್ಪಟ್ಟದ್ದಾಗಿದ್ದಿತು. ಆ ಬಿನ್ನವತ್ತಳೆಯಲ್ಲಿ ಕ್ರೈಸ್ತ ಮಹಾಜನರು ಮಹಾತ್ಮಾಜೀಯವರನ್ನು ಕುರಿತು, 'ನಮ್ಮ ಪ್ರೇಮ ಪಾತ್ರರಾದ ಮಹಾತ್ಮಾಜೀಯವರೇ, ತಾವು ಚಕ್ರಗೋಷ್ಠಿಯಲ್ಲಿ ಪ್ರಾಮುಖ್ಯ ಭಾಗವನ್ನು ವಹಿಸಲು ತೆರಳುವ ಈ ಸುಸಮಯದಲ್ಲಿ ನಮಗೆ ನಿಮ್ಮ ಮೇಲಿರುವ ಗೌರವ ಪ್ರೇಮಾತಿಶಯಗಳನ್ನು ಪ್ರದರ್ಶಿಸುವ ಹಕ್ಕು ಮತ್ತು ಪ್ರಕೃತದಲ್ಲಿ ತಮ್ಮ ಮನಸನ್ನು ಸೆಳೆಯುತ್ತಿರುವ ಕೆಲವು ರಾಜಕೀಯ ವಿಷಯಾಂಶಗಳ ಮೇಲೆ ನಮ್ಮ ಮನೋಗತವನ್ನು ಬಹಿರಂಗಪಡಿಸುವುದಕ್ಕೂ ಸಂದರ್ಭ ಕೊಡಬೇಕೆಂದು ಬೇಡಿಕೊಳ್ಳುತ್ತೇವೆ

ರಾಷ್ಟ್ರೀಯ ಮಹಾ ಜನರು ತಮ್ಮ ದೇಶವನ್ನು ತಾವು ಆಳುವ ಸರ್ವ ಹಕ್ಕನ್ನು ಪಡೆಯಬೇಕೆಂದು ಕೇಳುತ್ತಿರುವ ಕೋರಿಕೆಗೆ ನಮ್ಮ ಮನಃಪೂರ್ವಕವಾದ ಒಪ್ಪಿಗೆ ಇದೆ. ನಿಜವಾದ ಜವಾಬ್ದಾರಿಯನ್ನು ಒಂದಿಷ್ಟು ಕಾಲವಿಳಂಬ ಮಾಡದೆಯೂ ಕೊಡುವುದೆಂದು ಅವಶ್ಯವೆಂದು ಇಲ್ಲದೆಯೂ ಅದಷ್ಟು ಶೀಘ್ರದಲ್ಲಿಯೇ ಇಂಗ್ಲೆಂಡು ದೇಶೀಯರ ಕೈಯಿಂದ ಇಂಡಿಯಾ ದೇಶೀಯರಿಗೆ ವರ್ಗಾಯಿಸಿ ಕೊಡಬೇಕೆಂದು ನಾವು ಬಹು ಕುತೂಹಲವುಳ್ಳವರಾಗಿದ್ದೇವೆ. ನಮ್ಮ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳ ಸರಿಯಾದ ತಿದ್ದುಪಡಿಯನ್ನೂ, ಸಮಸ್ಯೆಗಳ ಪರಿಹಾರವನ್ನೂ ತಾವೇ ಮಾಡಿಕೊಳ್ಳುವ ಸ್ವಾತಂತ್ರ್ಯ ಅಧಿಕಾರವನ್ನು ಪಡೆಯಬೇಕೆಂಬುವುದೇ ನಮ್ಮ ಉದ್ದೇಶ. ಸರ್ವಸ್ವಾತಂತ್ರ್ಯವೂ ನಮಗೆ ಇರಬೇಕೆಂಬುವುದೇ ನಮ್ಮ ಆಶಯ. ಆದರೆ, ಬ್ರಿಟಿಷರೂ, ಹಿಂದೀಯರೂ ಸರಿಸಮಾನತ್ವದಲ್ಲಿ ಮಿಳಿತವಾಗಿರಲು ಯಾವ ಆಕ್ಷೇಪಣೆಯೂ ಇಲ್ಲ. ಅದರ ಅಜನ್ಮಸಿದ್ಧವಾದ ಹಕ್ಕುಗಳೆಲ್ಲವೂ ನಮ್ಮಲ್ಲಿಯೇ ನೇರಿರಬೇಕು. ಪ್ರಕೃತದ ಸರ್ಕಾರದ ಧ್ಯೇಯವು ಅಸಾಮಾನ್ಯವಾದುದು. ಈ ರೀತಿಯ ಸರ್ಕಾರದ ಧ್ಯೇಯವು ಇಂಡಿಯಾ ಮತ್ತು ಬ್ರಿಟಿಷ್ ಜನಾಂಗದವರನ್ನು ಸದಾ ಹೋರಾಡುತ್ತಿರುವಂತೆ ಮಾಡುವುದು. ಇಸ್ಕೂಲಿನ ತಡೆ ನಮ್ಮ ಆದಿ ಕಾಲಾಂತರದ ಉದ್ಧಾರದ ಕೆಲಸಗಳಿಂದ ನಮ್ಮ ಮನಸನ್ನು ಸೆಳೆದು ಅನರ್ಥವಾದ ಆಂದೋಲನ ಮತ್ತು ಕ್ರಾಂತಿಗಳ ಕಡೆಗೆ ಮನಸನ್ನು ಆಕರ್ಷಿಸುವುದು' ಎಂದು ಮೊದಲಾಗಿ ಅರಿಕೆ ಮಾಡಿಕೊಂಡರು.

ಆ ಬಿನ್ನವತ್ತಳೆಯಲ್ಲಿ "ಕ್ರೈಸ್ತರು ದೇಶೀಯರ ಸಾಯುಕ್ತ ಇಂಡಿಯಾ ಮತ್ತು ಸಂರಕ್ಷಣೆಗಳ ಕೋರಿಕೆಯನ್ನು ಅನುಮೋದಿಸುತ್ತಾರೆ. ಅವರ ಸಂರಕ್ಷಣೆಗಳೆಲ್ಲವೂ ಇಂಡಿಯಾ ದೇಶದ ಪರವಾಗಿಯೇ ಪೂರ್ತಿ ಇಲ್ಲವೆಂದು ತೋರಬರುತ್ತವೆ. ಈ ವಿಷಯ ಇನ್ನೂ ಸ್ಥಿರವಾದ ಒಂದು ಮಾರ್ಗಕ್ಕೆ ಹೊರ ಬಿದ್ದಿಲ್ಲ. 'ಸೆಕೆಂಡ್ ಚೇಂಬರ್'ನಲ್ಲಿ ಸರಕಾರದ ಸಾಮರ್ಥ್ಯವು ದೊರೆಕಲ್ಲಿ ರಾಜ್ಯಭಾರಕ್ರಮವು ಫೆಡರಲ್ ಹುಗೇರ್, ಸೇಫ್‌ಗಾರ್ಡ್ಸು ತಕ್ಕ ಸಂರಕ್ಷಣೆಯು ದೊರೆಕುವನ್ನು ಮಾಯಿಯ ಸಮಯಕ್ಕೆ ಇಂಡಿಯಾದಲ್ಲಿ ರಾಷ್ಟ್ರದಲ್ಲದು ಹೇಗಿದ್ದರೂ ಸ್ಥಿರವೂ ಸರಕಾರದ ಮುಖ್ಯ ಮಾಡಲಿಲ್ಲ ಆಗಿವೆ ಮತ್ತು ಬಗ ದೇಶೀಯ ಸಂಸ್ಥಾನಗಳು ಮುದಿಕೊಂಡ ರಾಜ್ಯಭಾರದ ಅಧಿಕಾರವನ್ನು ನಡೆಸಲು ಸಂಸ್ಥಾನ ಸರಕಾರದ ವಶವೂ ಮಂಡಲಿಯಲ್ಲಿಯೇ ಉಂಡು ಸಿಗಿರಲು ಅರ್ಹವಾದುದ. ಪ್ರತ್ಯೇಕ ಚೋದ್ಯ ತೃಪ್ತಿಪಡಿಸಬೇಕೆಂದು ಮತ್ತು ಹಿತದಾಯಕವನ್ನು ಮಾಡಬೇಕೆಂದು ನಮ್ಮ ದರ್ಶನದ ಸಂಕಲ್ಪ, ಸಂಮಿಶ್ರಿತ ಚುನಾವಣೆಯು ಧ್ಯೇಯವಾಯಿತೆಂದೂ, ಕೊಂಬುವುದು ನಮ್ಮ ಆತುರವಾದ ಕೋರಿಕೆ. ದೇಶದ ಗೂ ನಡೆದ ತಂತ್ರಿ ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರದಿಪ್ಪವು ಮಹಾತ್ಮರಿಗೆ ಮನಗಿರುವುದಾದರೂ, ಸ್ಥಳ ಸಂಕೋಚದಿಂದಲೂ ಹೋಮುಗಳೆಲ್ಲವನ್ನೂ ಸಧ್ಯಕ್ಕೆ ಒತ್ತಡವಾ ಇಡದೇ ಕೊಂದಿಗೆ ಸಂಭಾಷಣೆ ಬ್ರಿಟಿಷ್ ಪಾರ್ಲಿಮೆಂಟಿನೊಡನೆ ನಡೆದ ಎಗ್ರಿಮೆಂಟುಗಳಲ್ಲಿಯೂ ಕ್ರೈಸ್ತರಾದ ನಾವೆಲ್ಲರೂ ಆಗಿದ್ದೇವೆ. ತಮ್ಮ ಮನೋಗತವೇ ಹಿಂದೂಸ್ಥಾನದ ಅಭಿಪ್ರಾಯ ಹಾಗು ಭಾವನೆಯೇ ನಮ್ಮ ಚಿಂತನೆ. ಇಂತಹ ಚರ್ಚೆಯಿಂದ ಮುಂಬರುವ ಎಂಬೂ ನಮ್ಮ ಹೃದಯದ ಮೈತ್ರಿಯಾಯಿತೆಂದು ವಿಚಿತ್ರ ರೀತಿಯಲ್ಲಿ ನೀವು ನಮ್ಮ ಗೆಲುವು ತಾ. 26ನೇ. ಅಂದರೆ ಸಭಾ ನಮ್ಮ ಪ್ರೀತಿಗೆ ಸೀ ಸಂಭಾಷಣೆಯನ್ನು ಎವು ಕಡಲ ಪ್ರಯಾಣವನ್ನು ಸಂತೋಷದಿಂದ ಗಾಂಧಿಜೀಯವರು ಮಾಡಿ ಎಂದು ಬಯಸುತ್ತೇವೆ. ಇಷ್ಟೇ ಅಲ್ಲದೆ ನಿಷ್ಠೆ ಭಿನ್ನಾಭಿಪ್ರಾಯಗಳನ್ನು ಇಂಗ್ಲೆಂಡ್ ದೇಶದ ಜನರ ಮನಸನ್ನು ಸ್ಪರ್ಶಿಸಿದ ಜನ್ಮ ಹಕ್ಕಿನ ಆರೋಗ್ಯವನ್ನು ನಮ್ಮ ಯುವಜನ್ಮ ಅರಿಸಿ, ಇನ್ನು ಮುಂದೆ ಸಂಭವಿಸುವ ಎಲ್ಲಾ ತರದ ಚಳವಳಿ ಮತ್ತು ಜಗಳಗಳ ದುಷ್ಪರಿಣಾಮವನ್ನು ಪರಿಹರಿಸಲು ಕಾರಣಭೂತರಾಗುವರೆಂಬುವುದೇ ನಮ್ಮ ಮನಃಪೂರ್ವಕವಾದ ಕೋರಿಕೆ" ಎಂದು ಮೊದಲಾಗಿ ಬಿನ್ನವಿಸಿಕೊಂಡರು

ತುರ್ಕಿಸ್ಥಾನದಲ್ಲಿ ಸ್ತ್ರೀಯರ ಸ್ಥಿತಿ.

(ಶ್ರೀಮತಿ ನೀಲಮ್ಮ ದೇಶಾಯಿಯವರ 'ಹೊಂದರ್ನರಿತ್ತು ಸಲ್ಲುರುವ ಲೇಖನದಿಂದ)

ಈಗ ಟರ್ಕಿಯಲ್ಲಿ ಸ್ತ್ರೀಯರು ಎಷ್ಟು ಪ್ರಗತಿಯನ್ನು ಹೊಂದಿದ್ದಾರೆಂಬುದನ್ನು ಸರಿಯಾಗಿ ತಿಳಿಯಲು ಸುಲ್ತಾನ್ ಅಬ್ದುಲ್ ಹಮೀದರ ಕಾಲದಲ್ಲಿ ಸ್ತ್ರೀಯರ ಸ್ಥಿತಿ ಹೇಗಿತ್ತು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ.

ಇಂಗ್ಲೆಂಡಿನಲ್ಲಿ ಸ್ತ್ರೀಯರು ಯಾವ ಕಷ್ಟ ಕೆಲಸವನ್ನಾದರೂ ತಾವು ಮಾಡಲು ಶಕ್ತರು ಎಂತ ತಿಳಿದು ಗಂಡಸರಂತೆ ಸಂಸಮಾನ ಹಕ್ಕಿಗೆ ಹೋರಾಡಲು ಸುರುಮಾಡಿದಾಗ, ಕಳೆದ ಘೋರ ಯುದ್ಧದ ಸಮಯದಲ್ಲೂ ಸಹ ಟರ್ಕಿಯಲ್ಲಿ ಹೆಂಗಸರು ಪರದೆಯ ಹಿಂದೆ ಮುಚ್ಚಲ್ಪಟ್ಟಿದ್ದರು. ಆ ವರೆಗೆ ಯೂರೋಪಿನ ರೋಗಿಯೆನಿಸಿಕೊಂಡಿದ್ದ ಟರ್ಕಿಯು ಆ ಸಮಯದಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಎಚ್ಚತ್ತಿತ್ತು, ಆದರೂ ಹೆಂಗಸರ ಉದ್ಧಾರಕ್ಕಾಗಿ ಯಾವ ಕಾರ್ಯ ಕ್ರಮವನ್ನೂ ಸೃಷ್ಟಿಸಿರಲಿಲ್ಲ. ಹೆಂಗಸರಿಗೆ ರಾಜಕೀಯ ಕ್ಷೇತ್ರದಲ್ಲಾಗಲೀ, ಸಮಾಜದಲ್ಲಾಗಲೀ ಸ್ಥಳವೇ ಇದ್ದಿಲ್ಲ. ಅವರು ಮನೆಯಿಂದ ಒಬ್ಬಂಟಿಗರಾಗಿ ಹೊರಗೆ ಬರಲು ಸಾಧ್ಯವಿರಲಿಲ್ಲ. ಹೊರಗೆ ಬರುವಾಗ ಗುಂಪು ಗುಂಪಾಗಿ ಕಲೀ ಒಟ್ಟಿ ಗಂಟುಗಳಿಂದ ನಾದಿ ಯೊಡೊಂದಿಗೆ, ತಮ್ಮೊಳಗೂ ಸಹ ಮಾತನಾಡದೆ ಬರುತ್ತಿದ್ದರು. ಮೂಕ ಪಿಶಾಚಿಗಳಂತೆ ತೋರುತ್ತಿದ್ದರು. ಗಂಡಸರು ಗಂಡಸರೊಂದಿಗೆ ಆದ ಇಷ್ಟ ಯೂರೋಪಿಯನ್ ಲೇಡಿಯರ ಸಂಗಡ ತಿರುಗಾಡುತ್ತಿದ್ದ ಗಂಡಸರ ಕಾಲದ ಟರ್ಕಿ ಹೆಂಗಸರು ತ... ಮನೆಯಲ್ಲಿ ಇನ್ನೂ ಹೊಲಸು. ಮನೆಯಲ್ಲಿ ಯಾತಕ್ಕೂ ಬೇಡದ ಭಾಗದಲ್ಲಿ ಮರೆಯಲ್ಲೇ ಇರಬೇಕು. ಗಂಡಸರಿಗೂ, ಹೆಂಗಸರಿಗೂ ಮಧ್ಯೆ ದೊಡ್ಡ ಪರದೆ ಇರಲೇಬೇಕ. ಹೆಂಗಸರನ್ನು ಹಾಳು ಮಾಡಿದ ಒಳ ಪ್ರಪಂಚದ ನೋಟವನ್ನು ಕೊಡದ ಪರದೆ ಇದ್ದೇ ಇರಬೇಕು. ಈ ಮುಖಕ್ಕೆ ಮುಚ್ಚುವ ಪರದೆಯು ಪಶ್ಚಿಮದ ಕ್ರಿಶ್ಚನ್ ಮಹಾಸಭೆ ಮಾಡಲ್ಪಟ್ಟ ದೇಶವನ್ನು ಸಂಪೂರ್ಣವಾಗಿ ಮರೆ ಮಾಡುತ್ತಿತ್ತು. ಇದೂ ಅಲ್ಲದೆ ಪರದೆಯಿಂದ ಅನಾನುಕೂಲಗಳಿವೆ ಶಕ್ತಿಯನ್ನುಂಟುಮಾಡುವ ಅಧಿಕ್ಷೇಪಕ್ಕೆ ಕಾರಣ ಮಾಡ ಪ್ರಪಂಚದ ಪ್ರಕೃತಿ ಬೆಳಕಿಗೆ ಮುಖ ತೆರೆದರೆ ಕಣ್ಣಿಗೆ ನೋವಾಗುವ ಸಂಭವವುವುದರಿಂದ ಕಣ್ಣಿನ ನೋಟವೇ ಮಂಕಾಗುತ್ತದೆ. ಆದರೂ ಪರದೆಯನ್ನು ಹೇಗೂ ಬಿಡಕೂಡದು. ಅಬ್ದುಲ್ ಹಮೀದರೂ ಹಳೇ ಪದ್ಧತಿಗಳನ್ನು ಕಾಪಾಡುವುದರಲ್ಲಿ ಮಹಾ ಭಕ್ತಿ ಇದ್ದವರು. ಅವರಿಗಿಂತ ಹಿಂದಿನ ಸುಲ್ತಾನರ ಕಾಲದಲ್ಲಿ ಹೆಂಗಸರಿಗೆ ದೊರೆತಿದ್ದ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನು ಸಹ ಇವರು ಮುರಿದಿಟ್ಟರು. ಎಷ್ಟು ಹೆಂಡತಿಯನ್ನಾದರೂ ಮದುವೆ ಮಾಡಿಕೊಳ್ಳಬಹುದು. ಬರೇ ಒಂದು ಮಾತು ಹೇಳಿ ಹೆಂಡತಿಯನ್ನು ಬಿಡುವ ಹಕ್ಕು ಗಂಡಸರಿಗೆ ಇದೆ. ಹೆಂಗಸಾದರೋ ಮನೆಯ ಗುಲಾಮಗಿತ್ತಿಯಂತೆ, ಮನೆಯ ಚರಬೊಂದಿಗೆಯಂತೆ ಇರಬೇಕು. ಒಳ್ಳೇ ಗಂಡನನ್ನು ದೊರಕಿಸಿಕೊಳ್ಳುವುದು ಪೂರ್ವ ಪುಣ್ಯವೇ ಆಗಿತ್ತು. ಅವರಿಗೆ ಗಂಡನನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲ. ಪ್ರಾಯ, ತಿಳುವಳಿಗೆ ಅಭಿಪ್ರಾಯ ಮುಂತಾದ್ದನ್ನ ವಿಚಾರಿಸದೆ ಯಾರಿಗಾದರೂ ಮದುವೆ ಮಾಡುತ್ತಿದ್ದರು. ಹೀಗಿರುವಾಗ ಆರ್ಥಿಕ ಸ್ವಾತಂತ್ರ್ಯವನ್ನು ಕನಸಿನಲ್ಲೂ ಸಹ ಕಾಣರು.

ಸ್ತ್ರೀ ವಿದ್ಯಾಭ್ಯಾಸ ಅತಿ ಸ್ವಲ್ಪವಿತ್ತು. ಹುಡುಗಿಯರಿಗೆ ಶಾಲೆಗಳಲ್ಲಿ ವಿದ್ಯೆ ಕೊಡಕೂಡದು. ಅವರಿಗೆ ಮನೆಯಲ್ಲೇ ಗುಪ್ತವಾಗಿಯೇ ಅಲ್ಪ ಸ್ವಲ್ಪ ವಿದ್ಯಾಭ್ಯಾಸ ಕೊಡುತ್ತಿದ್ದರು. ಐಶ್ವರ್ಯವಂತರು ಮಾತ್ರ ಯೂರೋಪಿಯನ್ ದಾದಿಗಳನ್ನು ಇಟ್ಟು ಪಾಠ ಹೇಳಿಸುತ್ತಿದ್ದರು. ಅದರಿಂದ ಒಂದು ವಿಧದ ವಿರೋಧವಾದ ಸಂಸ್ಕೃತಿಗಳ ಮಿಶ್ರವಾಗುತ್ತಿತ್ತು. ಕೆಲವರಿಗೆ ಫ್ರೆಂಚ್ ಓದಲು ಬರುತ್ತಿತ್ತು. ಆ ಭಾಷೆಯ ಮೂಲಕ ಬೇರೆ ದೇಶಗಳ ಹೆಂಗಸರಿಗೆ ಇರುವ ಸ್ವಾತಂತ್ರ್ಯವನ್ನು ತಿಳಿದುಕೊಂಡದ್ದರಿಂದ ಇವರ ಮನಸ್ಸಿನಲ್ಲಿ ತಮ್ಮ ಸ್ಥಿತಿಯ ಕುರಿತು ಅತೃಪ್ತಿ ಹೆಚ್ಚುತ್ತಲೇ ಬಂತು. ಹೊಸ ಯುಗವೇ ಉದಯವಾದಂತೆ ಇವರಿಗೆ ಭಾಸವಾಯಿತು. ಈ ರೀತಿ ತಿಳುವಳಿಕೆ ಬಂದ ಯುವತಿಯರಿಗೆ ತಮ್ಮ ಸ್ಥಿತಿಯನ್ನು ನೋಡಿ ಅಸಹ್ಯವೆನಿಸಿತು. ಪರದೆಯೊಳಗಿನ ಬಾಳು, ಬಹು ಪತ್ನಿಯರನ್ನು ಮದುವೆ ಮಾಡಿಕೊಳ್ಳುವುದರಿಂದ ಮನೆಯಲ್ಲಿ ಕಿತ್ತು, ಚಾಡಿ, ಭಿನ್ನ ಮುಂತಾದ್ದರಿಂದ ಸುಖವಿಲ್ಲದಿರುವಿಕೆ ಇವೇ ಮುಂತಾದ ಕಷ್ಟಗಳು ಅವರ ಹೃದಯವನ್ನು ದಹಿಸಲು ಪ್ರಾರಂಭಿಸಿತು. ಒಟ್ಟಿನ ಮೇಲೆ ಹೃದಯವಾದರೆ ತಮ್ಮ ದುರವಸ್ಥೆಯನ್ನು ಕೊನೆಗಾಣಿಸಬೇಕೆಂಬ ಕುತೂಹಲವು ಹೆಚ್ಚುತ್ತಲೇ ಬಂತು.

ಟರ್ಕಿಯಲ್ಲಿ ಸಂಭವಿಸಿದ ಕ್ರಾಂತಿಯಿಂದ ಹೆಂಗಸರ ಸ್ವಾತಂತ್ರ್ಯ ಸ್ಥಾಪನೆಯ ವಿಷಯವೂ ಪ್ರಾಮುಖ್ಯತೆಗೆ ಬಂತು. ತಮ್ಮ ಸ್ತ್ರೀಯರನ್ನು ಗುಲಾಮಗಿರಿಯಲ್ಲಿಟ್ಟುಕೊಂಡರೆ ದೇಶದ ಅಭ್ಯುದಯವು ಸಾಧ್ಯವಿಲ್ಲವೆಂತ ಯುವಕ ಮುಂದಾಳುಗಳು ತಿಳಿದು ಸ್ತ್ರೀಯರಿಗೆ ವಿದ್ಯೆ ಕೊಡಬೇಕಾದ ಅವಶ್ಯಕತೆಯನ್ನು ಅರಿತುಕೊಂಡರು. ಶಾಲೆಗಳು ಸ್ಥಾಪಿಸಲ್ಪಟ್ಟವು. ಒಳ್ಳೇ ಒಳ್ಳೇ ಉಪಾಧ್ಯಾಯಿನಿಯರು ಸ್ತ್ರೀಯರ ಸ್ವಾತಂತ್ರ್ಯದ ಬೆಳವಣಿಗೆಗೆ ಬಹಳವಾಗಿ ಸಹಾಯ ಮಾಡಿದರು. ಆದರೂ ಟರ್ಕಿ ಯುವಕರಿಗೆ ತೃಪ್ತಿಯಾಗಲಿಲ್ಲ.

ಒದಗಿಸಿಕೊಟ್ಟ ಅನುಕೂಲಗಳನ್ನು ಉಪಯೋಗಿಸಿಕೊಳ್ಳಲು ಸ್ತ್ರೀಯರು ಸಾಕಷ್ಟು ಮುಂದೆ ಬರಲಿಲ್ಲ. ಪಾಶ್ಚಿಮಾತ್ಯ ದೇಶಗಳ ಹೆಂಗಸರ ಸ್ವೇಚ್ಛಾಚಾರದ ಸ್ವಭಾವಕ್ಕೆ ಹೆಂಗಸರ ಬಹುಮತವು ವಿರೋಧವಿತ್ತು. ಮತ್ತು ಹಳೇ ಪದ್ಧತಿಯನ್ನು ಕಾಪಾಡಬೇಕೆಂಬ ಅಭಿಪ್ರಾಯಕ್ಕೆ ವಿರೋಧವಾಗಿ ನಡೆಯಬೇಕಾಗಿತ್ತು. ಕ್ರಾಂತಿಯ ಹೆಂಗಸರಿಗೆ ಸ್ವತಂತ್ರವಾಗಿ ತಿರುಗಾಡುವ ಹಕ್ಕು ಇತ್ತು. ಬೇರೆ ರಾಜ್ಯಗಳಲ್ಲಿ ಇರುವ ರಾಯಭಾರಿಗಳು ತಮ್ಮ ಹೆಂಡತಿಯರನ್ನು ಕರೆದುಕೊಂಡು ಹೋಗಲು ತೊಡಗಿದರು. ಇನ್ನು ಕೆಲವು ಸ್ತ್ರೀಯರು ತಾವಾಗಿಯೇ ಪಶ್ಚಿಮ ರಾಜ್ಯಗಳ ಸ್ಥಿತಿಯನ್ನು ತಿಳಿದುಕೊಳ್ಳಲಿಕ್ಕಾಗಿ ಹೋದರು. ಹೀಗೆ ಹೊರಟೇ ಹೋಯಿತು ಸ್ವಾತಂತ್ರ್ಯ ದೇವಸವು ದೊರೆಯಿತು. ಆದರೆ ಉಲೇಮ ಎಂಬ ಮತಬೋಧಕರು ಖುರಾನಿನ ಆಧಾರ ಕೊಟ್ಟು ಪರದೆಯನ್ನು ಬಿಡಬಾರದೆಂತ ಬೋಧಿಸಿದರು. ಖುರಾನಿನ ನಿಜವಾದ ಬೋಧನೆಯನ್ನು ತಪ್ಪಾಗಿ ತಿಳಿಸಿದರು. ಆದ್ದರಿಂದ ಪ್ರಗತಿಯು ನಿಧಾನವಾಗಿಯೇ ಆಯಿತು.

ಆಗ ಯುದ್ಧ ಬಂತು. ರಾಷ್ಟ್ರಕ್ಕೆ ಬಂದೊದಗಿದ ಕಷ್ಟ ಕಾಲದಲ್ಲಿ ಟರ್ಕಿ ಹೆಂಗಸರ ಶಕ್ತಿ ಸಾಮರ್ಥ್ಯವನ್ನು ತೋರಿಸುವ ಅನುಕೂಲ ದೊರಕಿತು. ಕಷ್ಟದಲ್ಲಿರುವವರಿಗೆ ಸಹಾಯ ಕೊಡುವ ಕೆಲಸದಲ್ಲಿ ಬಹು ಮುಖ್ಯ ಭಾಗ ವಹಿಸಿದರು. ಸಮುದಾಯದ ಆರೋಗ್ಯ ವಿದ್ಯಾಭ್ಯಾಸ, ಶಿಶುಸಂರಕ್ಷಣೆಯ ಕೆಲಸಗಳನ್ನು ಹೆಂಗಸರು ವಹಿಸಿಕೊಳ್ಳಬೇಕಾಯಿತು. ಈ ಜವಾಬ್ದಾರಿಯನ್ನು ಚನ್ನಾಗಿಯೇ ವಹಿಸಿದರು. ಹೆಂಗಸರ ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡುವವರು ಇಂಥಾ ಪ್ರಯತ್ನಗಳಿಗೆ ಉತ್ತೇಜನ ಕೊಟ್ಟರು. ಮಿಟಿಂಗುಗಳನ್ನು ಮಾಡಿ ಹೆಂಗಸರಿಗೆ ಸ್ವಾತಂತ್ರ್ಯ ಕೊಡಬೇಕೆಂತ ಗಂಡಸರು ಭಾಷಣ ಕೊಟ್ಟರು. ಇಂಥಾ ಕೆಲಸಗಳು ಕ್ರಮೇಣ ಫಲ ಕಾರಿಯಾದವು. ಉದ್ಯೋಗದ ಕೆಲಸಗಳಲ್ಲಿ ಹೆಂಗಸರು ಹೆಚ್ಚು ಭಾಗ ತೆಗೆದುಕೊಳ್ಳಲು ಪ್ರಾರಂಭಿಸಿದರು. ಆದರೂ ಸಂಶಯದ ಕಾರಣವಿಲ್ಲದೆ ಹೆಂಗಸರ ಎಲ್ಲಾ ಬೇಡಿಗಳೂ ಮುರಿಯುವಂತಿರಲಿಲ್ಲ. ಮುಸ್ತಫಾ ಕೆಮಾಲ್ ಪಾಷಾರವರು ಧೈರ್ಯದಿಂದ ಸಹಾಯ ಮಾಡಿ ಹೆಂಗಸರಿಗೆ ರಾಜಕೀಯದಲ್ಲಿ, ಸಮಾಜದಲ್ಲಿ ಹೊಸ ಪದವಿ ದೊರಕುವಂತೆ ಮಾಡಿದರು. ಸ್ತ್ರೀಯರಿಗೆ ಆರ್ಥಿಕ ಸ್ವಾತಂತ್ರ್ಯ ಸಹ ದೊರಕಿತು. ಗಂಡಸರ ಸಮಾನರಾದರು.

ಮದುವೆ ಸಂಬಂಧದ ಕಾನೂನಿನಲ್ಲಿ ಸಹ ಬದಲಾವಣೆಯಾಯಿತು. ಹೆಂಗಸರೇ ತಮ್ಮ ಗಂಡಂದಿರನ್ನು ಆರಿಸಿಕೊಳ್ಳುವ ಹಕ್ಕು ದೊರಕಿತು. ಹೆಂಡತಿಯನ್ನು ಬಿಡುವ ಹಕ್ಕು ಕೋರ್ಟುಗಳಿಗೆ ಕೊಟ್ಟು ಗಂಡನು ಮನಸೋ ಇಚ್ಛೆ ಬಿಡಲು ಸಾಧ್ಯವಿಲ್ಲದಂತೆ ಮಾಡಲಾಯಿತು.

ಈ ರೀತಿ ಹೆಂಗಸರಿಗೆ ದೊರೆತ ಸ್ವಾತಂತ್ರ್ಯವನ್ನು ಸದುಪಯೋಗಪಡಿಸಲು ಟರ್ಕಿಯ ಸ್ತ್ರೀಯರು ಪ್ರಯತ್ನಿಸುತ್ತಿದ್ದಾರೆ.

COORG FOREST DEPARTMENT, SOUTH DIVISION

Timber Sale Notice.

Mercara, the [illegible] September 1931

It is hereby notified that about 8500 c. ft. of Teak, 8000 c. ft. Bt., [illegible]00 c. ft. Honne, 100 c. ft. Matti and 100 c. ft. Nandi timber lying in the Coorg Timber Depot at Hunsur will be sold by public auction in convenient lots at Hunsur on 24–9–1931 commencing at 10 A. M. All the timber is open for inspection.

For further particulars please apply to the

DIVISIONAL FOREST OFFICER,
1—1 SOUTH COORG, MERCARA



Suppliment to issue. ಈ ಜಾಹಿರಾತನ್ನು ಸಂಪೂರ್ಣವಾಗಿ ಓದಿ ತಮ್ಮ ಇಷ್ಟ ಮಿತ್ರರಲ್ಲಿ ಪ್ರಚಾರಪಡಿಸಿರಿ.

ಸಂವತ್ಸರ ಪ್ರಸ್ತದ ಫಲ, ಮತ್ತು ಸರ್ವಜನೋಪಕರ ವಿಷಯಗಳಿಂದ್ಯುಕ್ತವಾಗಿ ಬಹು ಶೋಧನೆಯಿಂದ ಬರೆಯಲ್ಪಟ್ಟು ಅನೇಕಾನೇಕ ಸರ್ಟಿಫಿಕೇಟುಗಳನ್ನು ಪಡೆದ

ಹರ ಸುಪ್ರಸಿದ್ಧ ತೆಗ್ಗಿನಮಠದ ಆಂಗೀರಸ ಸಂ|| ಸಿದ್ಧಾಂತ ಫಲ ಪಂಚಾಂಗ.

ಹರಪುರದೊಳ್ ಶೋಭಿಪ | ವರತೆಗ್ಗಿನಮಠದ ಜನವೀರಾಖ್ಯ ವಿಬುಧರ್ || ವಿರಚಿಸಿದ ಪಂಚಾಂಗಂ | ಧರೆಯೋಳ್ [illegible] ಮೆರೆಯುತಿಹುದು ಬಹುನಕ್ಷತ್ರದಿಂ ||

ದಪ್ಪವಾದ ಕಾಗದ ಸ್ವರದ ಮುದ್ರಣ ! ಈ ಪಂಚಾಂಗವನ್ನು ತರಿಸಿ ಓದಿನೋಡಿ ಚನ್ನಾಗಿಲ್ಲದಿದ್ದರೆ ವಾಪ್ಸುಮಾಡಿರಿ ಕ್ರಯ ಪ್ರತಿ ಒಕ್ಕೆ ರೂ. ೦—೨—೦

ಈ ಪಂಚಾಂಗದಲ್ಲಿ ವಾರ, ನಕ್ಷತ್ರ, ಯೋಗ, ಕರಣ, ಗ್ರಹಚಾರಾದಿ ಘಟಿಕಾದಿಗಳು, ಅಮೃತ ಸಿದ್ಧ್ಯಾದಿ ಯೋಗಗಳು, ಹಿಂದುಸ್ಥಾನಿ ತೇದಿಗಳು, ಸರ್ವಮತದವರ ವ್ರತಗಳು, ಜಯಂತಿಗಳು, ಹಬ್ಬಗಳು, ಉತ್ಸವಗಳ ವಿಶಿ ನಿರ್ಣಯ, ರಾಜಾದಿ ನವನಾಯಕರ ಫಲ, ಉಪನಾಯಕರ ವಿಚಾರ, ಪ್ರತಿದೇಶದಲ್ಲಿ ಉಂಟಾಗ, ಬೆಳೆ, ರೋಗ, ನಿರೋಗ, ಸುಭಿಕ್ಷ, ದುರ್ಭಿಕ್ಷ ವಿಚಾರ, ಗುರು, ಶನಿಗಳ ರಾಶಿ ಸಂಚಾರ ಫಲ, ನಷ್ಟ, ಜಗಲ್ಲಗ್ನ ಕುಂಡಲಿಗಳ ವಿಚಾರ, ವರ್ಷ ಧಾನ್ಯಾದಿಗಳ ನಿರ್ಣಯ, [illegible]

[illegible] ಪಂಚಾಂಗವನ್ನಾಗಲಿ, ಜೋತಿಷ್ಯವನ್ನಾಗಲಿ ಬಯಸುವಂತೆ ಪ್ರತಿಯೊಬ್ಬರಿಗೂ ತಿಳಿಯುವ ಹಾಗೆ ಪಡೆದು ಉಪಯೋಗಿಸಲು ಬರೆಯಲ್ಪಟ್ಟಿದೆ. ಈ ಪಂಚಾಂಗಗಳ [illegible] ಕಾರ್ಯಕಾಲಿಕ ಉಪಯೋಗಿಸಲು [illegible] ಪಂಚಾಂಗಗಳನ್ನು ತರಿಸಿಕೊಂಡು ಸಹಾಯ ಮಾಡಬೇಕೆಂದು ಪ್ರಾರ್ಥನೆ.

ಪಂಚಾಂಗದ ಬಹುಮಾನಗಳು.

[illegible]

ಪಂಚಾಂಗ ದೊರೆಯುವ ಪತ್ತೆ.—

ಮೇನೇಜರ್, ಭಾರತ ಜ್ಯೋತಿಷ್ಯ ವಿದ್ಯಾಲಯ,
ಹರಪನಹಳ್ಳಿ, (ಜಿಲ್ಲಾ [illegible])

ಶಕೆ ೧೮೫೧ರಲ್ಲು ನಾಸಿಕದಲ್ಲಿ ಜರುಗಿದ ೧೯ನೇ ನಿಖಿಲ ಭಾರತೀಯ ವೈದ್ಯಸಮ್ಮೇಲನದವರಿಂದ ಪ್ರಶಸ್ತಪತ್ರಿಕೆಯನ್ನು ಪಡೆದ

ಬಹು ಜನರಿಂದಲೂ, **ಪತ್ರಿಕಾಕರ್ತರಿಂದಲೂ** ಶ್ಲಾಘಿಸಲ್ಪಟ್ಟ ಈ ಗ್ರಂಥವನ್ನು ತರಿಸಿ ಓದಿನೋಡಿ ಚನ್ನಾಗಿಲ್ಲದಿದ್ದರೆ ವಾಪ್ಸುಮಾಡಿರಿ

ಕುಟುಂಬ ಸಂಜೀವಿನಿ ! ಸುಸಮಯ ಬಿಡಬೇಡಿ. — ಷೋಡಶ (೧೬) ಶಾಸ್ತ್ರಗಳ ಮರ್ಮಗಳನ್ನು ಚಿಕ್ಕಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಬರೆದ ಲೋಕೋಪಕಾರಕಲ್ಪತರು !! — ಕ್ರಯ ಪ್ರತಿ ಒಕ್ಕೆ ರೂ [illegible] ಟ. ಖ. ಪ್ರತ್ಯೇಕ

ರಹಸ್ಯಬೋಧಾಮೃತವೆಂಬ ವಿದ್ಯಾಗುರು ಭಾಗ ೧.

(ದ್ವಿತೀಯ ಮುದ್ರಣ)

ಈ ಗ್ರಂಥದ [illegible]

[illegible]

ಈ ಗ್ರಂಥದ ವಿಷಯವಾಗಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟ ಪಡುದುವಿಯ ಪತ್ರಿಕಾಕರ್ತರು ಮತ್ತು ಇತರ ಸಭ್ಯರು

[illegible]

ಗ್ರಂಥ ದೊರೆಯುವ ಪತ್ತೆ:—

ಮೇನೇಜರ್, ಭಾರತ ಜ್ಯೋತಿಷ್ಯ ವಿದ್ಯಾಲಯ,
ಹರಪನಹಳ್ಳಿ, (ಜಿಲ್ಲಾ [illegible]

[illegible] ಬಗಾಗ್ಯೆ ಮಳೆಯು ಕರೆಯುತ್ತಿದ್ದರೂ ಮಡಿಕೇರಿಯಲ್ಲಿ ಮೋಡ ಕವಿದುಕೊಂಡು ಇದ್ದು ಮಳೆ ಹಿಡಿಯುತ್ತಾ ಇದೆ ಚಳಿಯು ಕಡಿಮೆಯಾಗಿಲ್ಲ. ಮಡಿಕೇರಿಯಲ್ಲಿ ಕಳೆದ ಶನಿವಾರದಿಂದ ಇದುವರೆಗೆ 6 01 ಇಂಚು. ಆಗಸ್ಟು 30 ರಲ್ಲಿ 61 39 ಇಂಚು. **ಜೂನ್ ೨೫ ಆಗಸ್ಟು ಮಧ್ಯದ** ವರೆಗೆ 11.41 **ಇಂಚು** ಮಳೆ ಬಿದ್ದ

ಈ ತಾ. 7 ರಿಂದ [illegible] ಗಳಿಗೆ **ಮೇಜಿಸ್ಟ್ರೇಟ್** ಅಧಿಕಾರವು ವಹಿಸಲ್ಪಟ್ಟಿದೆಯೆಂದೂ, **ಸೋಮವಾರಪೇಟೆಯ ಮು** [illegible] ನಡಿಸ **ಅರ್ಧ ಭಾಗದ ಕ್ರಿಮಿನಲ್ ಕೇಸುಗಳನ್ನು** ಮಡಿಕೇರಿ **ಸಬ್ ಮೇಜಿಸ್ಟ್ರೇಟರೂ,** [illegible] **ಉಳಿದ ಅರ್ಧ ಭಾಗದ ಕ್ರಿಮಿನಲ್ ಕೇಸುಗಳನ್ನು ವೀರರಾಜಪೇಟೆ ಸಬ್ ಮೇಜಿಸ್ಟ್ರೇಟರೂ ವಿಚಾರಿಸಬೇಕೆಂದು** ಹುಕುಂ ಆಗಿದೆಯೆಂದು **ತಿಳಿಯ** ಬರುತ್ತದೆ.

ಎಂ. ಎಸ್. ಕೃಷ್ಣರಾವ್‌ರವರ ಉದ್ಯೋಗದ ಅವಧಿಯು ಇನ್ನೊಂದು ವರ್ಷ ಹೆಚ್ಚಿಸಲ್ಪಟ್ಟಿರುವದೆಂದು ವರ್ತಮಾನ.

ಬೊಂಬಾಯಿಯಲ್ಲಿ ಮಾಧವ್ಜಿ ಧರಮಸಿ ಗಿರಣಿಯ ಸುಮಾರು 3000 ಕೆಲಸಗಾರರು, ಸಂಬಳ ಕಡಿಮೆ ಮಾಡಿದರೆಂಬ ಕಾರಣದಿಂದ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು. ಕಾಂಗ್ರೆಸ್ ಲೇಬರ್ ಕಮಿಟಿಯವರು ಕೆಲಸಗಾರರಿಗೂ, ಯಜಮಾನರಿಗೂ ರಾಜಿ ಪ್ರಯತ್ನ ಮಾಡುತ್ತಿದ್ದಾರೆ.

ಕೆಲವು ದಿವಸಗಳ ಹಿಂದೆ ಮೈಸೂರು ಸೀಮೆಯ [illegible] ಕಾಡಿನಲ್ಲಿ ಮೈಸೂರಿನ ಸಾಹೇಬರೊಬ್ಬರಿಂದ ಬಂದಿದ್ದ ಒಂದು ಭಾರೀ ಆನೆಯು ಹಿಡಿಯಲ್ಪಟ್ಟಿದೆಯೆಂದೂ, ಇದರ ಎತ್ತರ 9½ ಅಡಿ ಇದ್ದು, ಈ ವರೆಗೆ ಇಂಡಿಯಾದಲ್ಲಿ ಹಿಡಿಯಲ್ಪಟ್ಟಿರುವ ಆನೆಗಳಿಗಿಂತ ಎತ್ತರವಾಗಿಯೂ, ಬಹು ಉದ್ದವೂ, ಸುಂದರವೂ ಆಗಿರುವ ದಂತಗಳುಳ್ಳದ್ದಾಗಿಯೂ ಇದೆಯೆಂದು ತಿಳಿಯ ಬರುತ್ತದೆ. ಇದನ್ನು ಹಿಡಿಯುವವನ

ವಿಜ್ಞಾಪನೆ.

ಪಂಡಿತ ಜವಾಹಿರ್ ಲಾಲರೂ, ವಲ್ಲಭಾಯಿ ಪಟೇಲರೂ ಎಲ್ಲಾ ಕಾಂಗ್ರೆಸ್ ಮಂಡಳಿಗಳಿಗೆ ಗಾಂಧಿ—ಇರ್ವಿನ್ ಒಪ್ಪಂದಕ್ಕೆ ಭಂಗ ತರದಂತೆ ನಡೆಯಬೇಕೆಂದೂ [illegible] ಗ ತರುವ ಸಂಭವ ಒಂದರೆ ಕಾಂಗ್ರೆಸ್ ಪ್ರೆಸಿಡೆಂಟರ ತಿಳಿಯಪಡಿಸದೆ ಯಾವ ಕಾರ್ಯವನ್ನೂ ಮಾಡಕೂಡದೆಂದೂ ವಿಜ್ಞಾಪನೆಯನ್ನು ಕಳುಹಿಸಿದ್ದಾರೆ.

ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ಮೀಟಿಂಗು ಈ ತಾ. 8 ರಲ್ಲಿ ಅಹ್ಮದಾಬಾದಿನಲ್ಲಿ ಪ್ರಾರಂಭವಾಗಿದೆ. ಮೀಟಿಂಗಿಗೆ ಆ ಕಮಿಟಿಯ ಮೆಂಬರುಗಳಲ್ಲದೆ ಬೇರೆ ಯಾರನ್ನೂ ಬಿಡಲಿಲ್ಲ. ನಾಲ್ಕು ಗಂಟೆಗಳ ವರೆಗೆ ಚರ್ಚೆ ನಡೆದು, ದೇಶದ ರಾಜಕೀಯ ಪರಿಸ್ಥಿತಿಯು ಸ್ಥಿಮಿತವಾಗಿಲ್ಲದೆ ಇರುವುದರಿಂದ ಬರುವ ಕಾಂಗ್ರೆಸ್ ಮಹಾಸಭೆಯ ಅಧ್ಯಕ್ಷರ ಚುನಾವಣೆಯ ತಾರೀಕನ್ನು 31ನೇ ಡಿಸೆಂಬರು ವರೆಗೆ ಮುಂದರಿಸಿಡಲಾಯಿತು.

'ಎಸೋಸಿಯೇಟೆಡ್ ಪ್ರೆಸ್ಸ್' ಸಂಘವನ್ನು ಸ್ಥಾಪಿಸಿದ ಮ. ಕೆ. ಸಿ. ರಾಯಿಯವರು ಈ ತಾ. 7 ರಲ್ಲಿ ಅಸೆಂಬ್ಲಿಯ ಮೀಟಿಂಗಿನಲ್ಲಿ ಮೂರ್ಛಿತರಾಗಿ ಬಿದ್ದು, ಸಾಯಂಕಾಲ ಆಸ್ಪತ್ರೆಯಲ್ಲಿ ಶಿವಾಧೀನರಾದರು. ಅವರು ಹೆಸರುವಾಸಿಯಾದ ಪತ್ರಾಧಿಪರಾಗಿದ್ದರು ಮತ್ತು ಹಲವು ವರ್ಷಗಳಿಂದ ಅಸೆಂಬ್ಲಿಯ ಮೆಂಬರಾಗಿದ್ದರು. ಅವರ ಮರಣದಿಂದ ಪತ್ರಿಕಾ ಲೋಕಕ್ಕೆ ದೊಡ್ಡ ನಷ್ಟವಾಗಿದೆಯೆಂದು ಹಲವು ಪ್ರಮುಖರು ಸಹಾನುಭೂತಿಯನ್ನು ಸೂಚಿಸುತ್ತಿದ್ದಾರೆ.

ಬೊಂಬಾಯಿಯ ಪ್ರಸಿದ್ಧ ಮುಂದಾಳಾದ ಶ್ರೀ [illegible] [illegible] ಅಧಿಕಾರಿಗಳ [illegible] ತಿಜ್ಞತೆಯನ್ನು ವ್ಯಕ್ತಪಡಿಸುವುದಕ್ಕಾಗಿ [illegible] [illegible] ಕೊಳ್ಳದೆ, ಬಂಚರೋ[illegible] ಮೊದಗೆಡುವುದಕ್ಕಾಗಿ ಒಂದು ಸಂಘವನ್ನು ಸ್ಥಾಪಿಸಲು ಕೊಟ್ಟುಬಿಟ್ಟರು.

ಚಿತ್ತಗಾಂಗಿನಲ್ಲಿ (ಬಂಗಾಳ ಪ್ರಾಂತ್ಯ) ಕಳೆದ ತಾ. 30 ರಲ್ಲಿ ಖಾನ್ ಬಹದೂರ್ ಅಶಾನುಲ್ಲಾ ಎಂಬ ಪೋಲೀಸ್ ಇನ್ಸ್‌ಪೆಕ್ಟರವರು ಒಂದು ಫುಟ್‌ಬಾಲ್ ಪಂಥವಾಟವನ್ನು ನೋಡ ಹೋದಾಗ, 16 ವಯಸ್ಸಿನ ತರುಣನೊಬ್ಬನು ಅವರನ್ನು ಜನಸಮೂಹದಲ್ಲೇ ಎದುರಿಸಿ, ಪಿಸ್ತೋಲಿನಿಂದ ಗುಂಡು ಹೊಡೆದು ಕೆಡವಿದನು, ಇನ್ಸ್‌ಪೆಕ್ಟರು ಆಸ್ಪತ್ರೆಗೊಯ್ಯಲ್ಪಡುವಷ್ಟರಲ್ಲಿ ಪ್ರಾಣತ್ಯಾಗ ಮಾಡಿದರು. ಯುವಕನನ್ನು ಮತ್ತೋರ್ವ ಸಬ್ ಇನ್ಸ್‌ಪೆಕ್ಟರನು ಅಲ್ಲೇ ಕೈಸೆರೆ ಹಿಡಿದನು. ಪಂಥದಾಟವು ಅಲ್ಲೆ ಮುಗಿಯಿತು. ಇನ್ಸ್‌ಪೆಕ್ಟರನು ಮುಸಲ್ಮಾನನಾದ ಕಾರಣ ಮುಸಲ್ಮಾನರು ಕೆಲವು ಊರಲ್ಲಿ ಹಿಂದೂಗಳ ಅಂಗಡಿಗಳನ್ನು ಲೂಟಿ ಮಾಡಿದರು. ಪೋಲೀಸರು ಬಂದ ಮೇಲೆ ಸುಮ್ಮಗಾದರು. ಊರಲ್ಲೆಲ್ಲಾ ಹಾಹಾಕಾರ! ಬ್ಯಾಂಕುಗಳೂ, ಅಂಗಡಿಗಳೂ ನಾಲ್ಕು ದಿನಗಳ ತನಕ ಮುಚ್ಚಿದ್ದವು. ಸ್ತ್ರೀಯರೂ, ಮಕ್ಕಳೂ ಒಂದು ವಾರ ಮನೆಯಿಂದ ಹೊರಗಡಲು ಅಂಜುವಂತಾಯಿತು. ಹಿಂದೂ—ಮುಸಲ್ಮಾನ ಗಲಭೆಯಲ್ಲಿ ಲಕ್ಷ ಗಟ್ಟಲೆ ಬೆಲೆಯ ನಷ್ಟ ನಷ್ಟವಾಗಿದೆ.

ವಿದೇಶ.

ಮಹಾತ್ಮ ಗಾಂಧಿಯವರ ದಾರಿಯಲ್ಲಿ ಸ್ವಾನ್ಸಿನ ಬಂದರು ಪಟ್ಟಣವಾದ ಮಾರ್ಸೇಲ್ಸಿನಲ್ಲಿ ಹಿಂದೀ ವಿದ್ಯಾರ್ಥಿಗಳು ಮಹಾತ್ಮರಿಗೆ [illegible] ಸ್ವಾಗತವನ್ನೀಡಿ ಅಭಿನಂದನಾ ಪತ್ರ [illegible] ಸಮರ್ಪಿಸಿದರು.

[illegible] ದುಂಡು ಮೇಜು ಪರಿಷತ್ತಿಗೆ [illegible] ಪ್ರತಿನಿಧಿಗಳಲ್ಲಿ ಸಾಧು [illegible] ಮ. ವಿಠ್ಠಲಭಾಯಿ ಪಟೇಲರವರು, [illegible] ಮ. ಮೋಹನ್ [illegible]ರವರು ಇದ್ದವರಾಗಿರುವರು.

ದುಂಡು ಮೇಜು ಪರಿಷತ್ತಿನ ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಮೀಟಿಂಗು ಈ ತಾ 7 ರಲ್ಲಿ ಸೇರಿ ಸ್ವಲ್ಪ ಹೊತ್ತಿನ ಮೇಲೆ ಈ ತಾ. 14 ಕ್ಕೆ ಮುಂದರಿಸಿಡಲಾಗಿದೆ. ಆ ದಿನವು ಸೋಮವಾರವಾದುದರಿಂದ ಮಹಾತ್ಮ ಗಾಂಧಿಯವರಿಗೆ ಮೌನ ವ್ರತದ ದಿನವದು. ಅವರಿಗೆ ಮೀಟಿಂಗಿಗೆ ಹೋಗಲು ಕಷ್ಟವಾಗಬಹುದು.

ಇಟಲಿಯ ಕಾಲಿಕ್ರಿಯ [illegible] ಗ್ರಾಮದಲ್ಲಿ 1908 ರಲ್ಲಿ ಆದ ಭೂಕಂಪದ ಅನಾಹುತದ ಮೇಲೆ ಮನೆಗಳೆಲ್ಲವೂ ಮರಗಳಿಂದಲೇ ಕಟ್ಟಲ್ಪಟ್ಟಿದ್ದುವು. ಕಳೆದ ತಾ 27 ರಲ್ಲಿ ಮಧ್ಯ ರಾತ್ರಿ ಅಲ್ಲಿ ಆಕಸ್ಮಿಕ ಬೆಂಕಿಯುಂಟಾಗಿ ಅಲ್ಲಿರುವ ಇನ್ನೂ[illegible] [illegible] ಮನೆಗಳು ಬೆಂದು ನೆಲಸಮವಾದವು. ಪ್ರಾಣಕ್ಕೆ ಅಪಾಯವಾಗಲಿಲ್ಲ. 1000 ಮಿಲಿಯ ಲಿಯರ್ (ನಾಣ್ಯ) ಗಳ ನಷ್ಟವುಂಟಾಗಿದೆಯಂತೆ.

ಇಂಗ್ಲೆಂಡಿನಲ್ಲಿ ಈಗ ಸ್ಥಾಪಿತವಾಗಿರುವ ನ್ಯಾಷನಲ್ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ತಾ 8 ರಲ್ಲಿ ಪಾರ್ಲಿಮೆಂಟ್ ಸಭೆಯ ಪ್ರಥಮ ಮೀಟಿಂಗು ನಡೆಯಿತು. ಮ. ಹೆಂಡರ್‌ಸನರ ಮುಂದಾಳುತನದಲ್ಲಿ ಲೇಬರ್ ಪಕ್ಷವು ಈಗಿನ ಸರ್ಕಾರಕ್ಕೆ ವಿರೋಧ ಪಕ್ಷವಾಗಿ ಎಂದರೆ ಸರ್ಕಾರದ [illegible] ಪಾರ್ಲಿಮೆಂಟಿನಲ್ಲಿ ಬಲ ಮತ [illegible]

ಇಂಗ್ಲೆಂಡಿನ [illegible] ಹಳ್ಳಿಯಲ್ಲಿ [illegible] ಸೆಪ್ಟೆಂಬರ್ 7 ರಲ್ಲಿ ಮಧ್ಯಾಹ್ನಕ್ಕೆ (ಹಗಲು) [illegible] ಲ್ಲಿದ್ದ ಮನುಷ್ಯನ ತೋಟದಲ್ಲಿ ಅಕಸ್ಮಾತ್ತಾಗಿ ತಲೆಯ ಮೇಲೆ ಏನೋ ಬಿದ್ದಂತಾಯಿತು. ನವಗಳು ಬಿದ್ದವು! ಕಪ್ಪೆಗಳು ಬಿದ್ದವು! [illegible] ಎಲ್ಲರೂ ಇದನ್ನು ದೈವ ಮಾಯೆ ಎಂದರು. ಇದರ [illegible] ಗಳು ಏನು ಹೇಳಿದರೋ ಕಾಣೆವು.

ಸರ್ಕಾರಿ ಅಧಿಕ ಖರ್ಚು ಕಡಿಮೆ ಮಾಡಲು [illegible] ಜನ ಕೊಡಲಿಕ್ಕಾಗಿ ಚಕ್ರವರ್ತಿಯವರಾದ ಜಾರ್ಜ್ ಪ್ರಭುಗಳು ತಮ್ಮ ಖರ್ಚಿಗಾಗಿ ಸರ್ಕಾರದವರು ವರ್ಷಂಪ್ರತಿ ಕೊಡುವ 470000 ಪೌಂಡುಗಳಲ್ಲಿ 50000 ಪೌಂಡುಗಳನ್ನು ಕಡಿಮೆ ಮಾಡಬಹುದೆಂದು [illegible] ಒಪ್ಪಿಗೆಯನ್ನಿತ್ತಿರುವರು. ಇದಿಷ್ಟಲ್ಲದೆ ಚಕ್ರವರ್ತಿಯವರಿಗೆ ಲ್ಯಾಂಕೆಸ್ಟರ್ ಡಚ್ಚಿಯಿಂದ 60,000 ಪೌಂ ಸಿಕ್ಕುತ್ತದೆ. ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಕಾರ್ನ್‌ವಾಲ್ ಡಚ್ಚಿಯಿಂದ ಸಿಕ್ಕುವ 70000 ಪೌಂಡು ಸ್ವಂತ ಉತ್ಪತ್ತಿಯಿಂದ ವರ್ಷಕ್ಕೆ 10,000 ಪೌಂಡನ್ನು ಸಿಬ್ಬಂದಿ [illegible]ಕೆಗಾಗಿ ಕೊಡುತ್ತಾರೆಂದು ಹೇಳುವರು. ಪ್ರಧಾನ ಮಂತ್ರಿಯಾದ ಮೆಕ್ಡನಾಲ್ಡರವರು ತನ್ನ ವಾರ್ಷಿಕ ಸಂಬಳದಲ್ಲಿ 1000 ಪೌಂಡು ಕಡಿಮೆ ಮಾಡಿಕೊಳ್ಳುತ್ತೇನೆಂದು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

[illegible] ದವ[illegible] [illegible] ಅಮೇರಿಕದ [illegible] ಒಂದು ಹೊಂತನ್ನು [illegible] [illegible] ಪ್ರಕಾಶ ರವವಾಗಿ [illegible] ಇದರಿಂದ [illegible] ವೃಕ್ಷ, ಪ್ರಾ[illegible] [illegible] ತೆಗೆದು [illegible] ಮಾಡಿದರೆ ಸಾ[illegible] [illegible] ಈ ಬೆಳಕಿನಿಂದ [illegible] ರೋಗಗಳಲ್ಲವೂ [illegible] ಯೂರೋಪಿನಲ್ಲಿ [illegible] ಆಸ್ಪತ್ರೆಗಳಲ್ಲಿ ಈ ಬೆಳಕನ್ನು [illegible] ಈ ಬೆಳ[illegible] [illegible]ಚಿಕಿತ್ಸೆ ಆವಿಷ್ಕಾರವಾಯಿತು [illegible] ಈ ಬೆಳಕನ್ನು ಗುಣಪಡಿಸಲು ಶಕ್ತಿ ಹಿಡಿದಿರುವುದು.

ವಿಜ್ಞಾಪನೆ.

"ಲೋಕಪಾವನ"ದ [illegible] ನಾವು ಕಳೆದ ವಾರ ಪ್ರಕಟಿಸಿದ ವಿಜ್ಞಾಪನೆಯನ್ನು, ಮೇಂದಪ್ಪನ ತನ್ನ ಕೋರ್ಟಿನಲ್ಲಿ ನಡೆಯುತ್ತಿರುವವರೆಗ ಪ್ರಕಟಿಸಬಾರದಿತ್ತೆಂತಲೂ, ಅದನ್ನು ವಾಪಾಸು ತೆಗೆದುಕೊಳ್ಳಬೇಕೆಂತಲೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ತಿಳಿಸಿದ್ದರಿಂದ, ಸದರಿ ವಿಜ್ಞಾಪನೆಯನ್ನು ನಾನು ಈ ಮೂಲಕ ವಾಪಸು ತೆಗೆದುಕೊಂಡಿರುತ್ತೇನೆ.

ಮಡಿಕೇರಿ, ಸಿ. ಎ. ನಂಜಪ್ಪ,

ತಾ 17—9—31.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಸುಂಟಿಕೊಪ್ಪ ಸ್ಕೂಲ್ ಪೋಳುದು.

ಅಯ್ಯಾ,

ಇಲ್ಲಿಯ ಸ್ಕೂಲ್ ಪೋಳುದು ಹಬ್ಬವು ಈ ತಿಂಗಳ 3ರಲ್ಲು ಸಾಯಂಕಾಲ 5 ಗಂಟೆಗೆ ಬಹು ಸಮಾರಂಭದಿಂದ ಮೆ. ಕಲಿಯಂಡ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಸುಮಾರು 100 ಜನ ಮಹನೀಯರಿಂದ ಆಚರಿಸಲ್ಪಟ್ಟಿತು. ಮಹಮ್ಮಾಲ್ ಮೇರಿ [illegible] ಪಂಥದಾಟಗಳಿಗೆ ಮಳೆಯು ಅಡಚಣೆಯನ್ನು ಉಂಟುಮಾಡಿದ್ದರಿಂದ, ತೆಂಗಿನ ಕಾಯಿಗೆ ಗುರಿ ಹೊಡೆಯುವುದೊಂದು ಮಾತ್ರವಿತ್ತು. ಅದರಲ್ಲಿ ಮೆ ಗಳಾದ ಕುಟ್ಟಂಡ ಕೆ. ಕಾರ್ಯಪ್ಪನವರು 1 ನೇ ಇನಾಮನ್ನೂ, ಚೆಟ್ರಂಡ ಗಣಪತಿಯವರು 2ನೇ ಇನಾಮನ್ನೂ, ನಂಬಡುಮಾಡ ಪೊನ್ನಪ್ಪನವರು 3ನೇಯದನ್ನೂ ಪಡೆದರು. ಇದಾದ ಕೂಡಲೇ ವಾದ್ಯ ಘೋಷದೊಡನೆ ಸ್ಕೂಲು ಹಾಲ್‌ನಲ್ಲಿ ಸಭೆಯು ನಡೆಯಿತು. ಅಲ್ಲಿ ಅನೇಕ ಮಹನೀಯರು ಸ್ಫೂರ್ತಿಯುಕ್ತ ಭಾಷಣ ಮಾಡಿದರು. ಆಗ ಅಧ್ಯಕ್ಷರ [illegible] ಆಯಿತು. ಅನಂತರ 8 ಗಂಟೆಗೆ ನೆರೆದವರಿಗೆ ಊಟದ ಉಪಚಾರವು ತೃಪ್ತಿಯಿಂದ ನಡೆಯಿತು. [illegible] ವು ಪೂರ್ಣ ಯಶಸ್ವಿಗೊಳಿಸಲ್ಪಟ್ಟಿತು.

ಅನಂತರ ಅಧ್ಯಕ್ಷರಿಗೂ ಮತ್ತು ಸೆಕ್ರೆಟರಿ ಜಿ. ಮೆ. ಮೆ. ಬಿ. ಮುದ್ದಯ್ಯನವರಿಗೂ ವಂದಿಸಿ ಸಭೆಯು ಬರಕಾಸ್ತಾಯಿತು.

'ಹಾಜರಿದ್ದವ'

ಹೋಟೇಲ್ ಊಟದ ವಿಷಯವೇ

ಇದನ್ನು ಚೆನ್ನಾಗಿ ಗಮನಿಸಿರಿ!

ಅಯ್ಯಾ,

ಪ್ರತಿ ಒಂದು ಸಾಮಾನಿನ ಬೆಲೆಯೂ ಕಡಿಮೆ ಆಗಿರುವದೇನೊ ನಿಜವೇ. ಇದು ಈಗ ಇರುವ (ಅಂದರೆ [illegible] ವರ್ಷದಕ್ಕಿಂತ) ಕ್ರಯವನ್ನು [illegible] ಒಂದಕ್ಕೆ [illegible] ಹೆಚ್ಚು [illegible] ಕಾಡಿಗೆಯೋ [illegible] ಹೆಚ್ಚು. ಹೀಗಿದ್ದರೂ [illegible] ಊಟದ ದರ ರೂ. 8, 10 ಇರುವದು ಹೆಚ್ಚೆಂದು ಅಭಿಪ್ರಾಯ ಪಡುವ [illegible] ನಾವೇನೆಂದು ಹೇಳಲಿ. [illegible] ಈ ದರವು ಪ್ರತಿ ಊರಿನಲ್ಲಿಯೂ ಇರುವ ರೇಟ್ ಅಲ್ಲದೆ ಇಲ್ಲಿ ಮಾತ್ರ ಇರುವದಲ್ಲ. ನಿಮ್ಮ ಸಂಬಳ ಕಮ್ಮಿ ಆದಾಗ ಮಾತ್ರ ಹೋಟೇಲಿಗೆ ಕೊಡುವ ಹಣ ಹೆಚ್ಚು ಎಂಬ ಅಭಿಪ್ರಾಯ ನಿಮಗೆ ತೋರುವದು. ನಿಮಗೆ ಹೆಚ್ಚು ಸಂಬಳದ ಸಮಯದಲ್ಲಿ ನಮ್ಮ ಹೋಟೇಲುಗಳಿಗೆ ನೀವು ಹೆಚ್ಚು ಹಣ ಕೊಟ್ಟದ್ದೂ ಇಲ್ಲ, ಮಾತ್ರವಲ್ಲ, ನಿಮ್ಮ ಹೆಚ್ಚಿನ ಸಂಬಳದ ಸಮಯದಲ್ಲಿ ನಿಮಗೆ ನಿಮ್ಮ ಖರ್ಚಿಗೆ ಬೇಕಾದಷ್ಟು ಸಿಕ್ಕಿ ಉಳಿಕೆಯೂ, (ಕೆಲವರಿಗೆ) ವಿಶೇಷವಾಗಿಯೂ ಸಿಕ್ಕುತ್ತಿರುವಾಗ ಊಟದ ಹೋಟೇಲಿನ ವಿಚಾರವೇ ಗೊತ್ತಿಲ್ಲ. ಈಗ ಮಾತ್ರ ಸಂಬಳ ಕಮ್ಮಿಯ ಸಮಯದಲ್ಲಿ ನಿಮಗೆ ಅನಾವಶ್ಯಕ ಖರ್ಚಿಗೆ (ವಿಷಯ ಸೇವನೆಗೆ) ಹಣ ಸಿಕ್ಕುವದಿಲ್ಲವಾದುದರಿಂದ ಹೋಟೇಲಿನ ಊಟದ ರೇಟ್ ಹೆಚ್ಚು ಎಂದು ನೀವು ಊಹಿಸುವದು ತೀರಾ ತಪ್ಪು ಎಂದು ನಂಬುವ,

'ಹೋಟೇಲ್ ಯಜಮಾನ'

ಕೊಡಗಿನಲ್ಲಿರುವ ಕೊಡಗೇತರರಿಗೆ ಒಂದು ಬಹಿರಂಗ ಪತ್ರ

ಪ್ರಿಯ ಬಾಂಧವರೇ,

ಮೊನ್ನೆ ನಡೆದ ಪೋಲೀಸು ಸೆಲೆಕ್ಷನ್‌ನಲ್ಲಿ ಕೊಡಗೇತರರನ್ನು ಸೆಲೆಕ್ಷನ್ ಮಾಡದಿರುವುದು ನನಗೆ ತುಂಬಾ ಸಂತೋಷ. ಇನ್ನಾದರೂ ನೀವೆಲ್ಲರೂ ನಿಮ್ಮ ಸುಪ್ತಾವಸ್ಥೆಯನ್ನು ಬಿಟ್ಟು ಎಚ್ಚತ್ತು, ಒಂದು ಕೊಡಗೇತರರ ಸಂಘವನ್ನು ಸ್ಥಾಪಿಸುವಿರೇಗಿ ನನಗೆ ಖಂಡಿತವಾಗಿ ಹೇಳಬಹುದು. ಇಲ್ಲದಿದ್ದರೆ ನೀವೆಲ್ಲರೂ ಅನಾಮಧೇಯರಾಗಿ, ಇನ್ನೆಷ್ಟು ಕಾಲ ಹೀಗೆ ಜೀವಿಸುವ ಸಂದರ್ಭವಿರುವುದೋ ನಾನು ಹೇಳಲಾರೆ.

ಮೊನ್ನೆ [illegible] ಕಳೆದ ಸೋಮವಾರದಲ್ಲಿ ನಾನು [illegible] ಹಾಕುವ ಮೊದಲು ಡಿ. ಮೆ. ಸಾಹೇಬರನ್ನು ಕಾಣುವ ಸಂದರ್ಭದಲ್ಲಿ, ಸ್ವಲ್ಪ ತಿಂಗಳಗಳಿಗಾಗಿ ನಿಮ್ಮ ನ್ಯಾಯದಲ್ಲಿ ಏನೂ ಅನ್ಯಾಯವಾಗಲಾರದು ಎಂದು ನನ್ನ ಮನಸ್ಸು ಉಚಿತವಾಗಿ ಹೇಳಿರುವದು [illegible] ಇದೇ ಡಿ. ಮೆ. ಸಾಹೇಬರನ್ನು, ಪೂರ್ವದಲ್ಲಿ [illegible] ಸಬ್ ಇನ್‌ಸ್ಪೆಕ್ಟರ ಕೆಲಸಕ್ಕೆ [illegible] ಇಲ್ಲವೇ? ಮೆ. ಮಲ್ಲಪ್ಪನವರ, [illegible] ನನ್ನ ಅರ್ಜಿಯಲ್ಲಿ ನಮ್ಮ ನ್ಯಾಯವೆಂಬ [illegible]. ಬರುತ್ತಿರುವ ನಮ್ಮ ಅರ್ಜಿಗಳಲ್ಲಿ ತೋರಿಸಿದಂತೆ ನಮ್ಮ ಅರ್ಹತೆಯನ್ನು ನೋಡಿಯೋ ಕಮಿಶನರ್ ಸಾಹೇಬರು ನಮ್ಮನ್ನು ಬರಮಾಡಬಹುದು. ಆರ್ಯ ಬಾಂಧವರೇ, ಈ ಸಂದರ್ಭದಲ್ಲಿ ನಾವೇನು ತಿಳಕೊಳ್ಳಬೇಕು. [illegible] ಗಳನ್ನೂ, ಮಕ್ಕಳ ಆಟಕ್ಕೂ ನಮ್ಮನ್ನು ನಮ್ಮ ಸ್ಥಳಗಳಿಂದ ಬರಮಾಡಿಸಿದ್ದರೆ ಹೆಚ್ಚಾಗಲಾರದು.

ಕಮಿಶನರು ಮತ್ತು ಡಿ. ಮೆ. ಸಾಹೇಬರು ಮಾಡಿದ್ದಲ್ಲಿ ನನಗೆ ತುಂಬಾ ಆನಂದ. ದಯವಿಟ್ಟು ಇನ್ನಾದರೂ ನೀವು ಎಚ್ಚತ್ತು ಕೊಡಗೇತರರ ಸಂಘವನ್ನು ನ್ಯಾಯ ರೂಪದಲ್ಲಿ ಶಾಸನಸಭೆಗೆ ಸೇರಿಯಾಗಿ ನಿರ್ಮಿಸಿ ನಿಮ್ಮ ಯುವಕರ ಯೋಗ್ಯತೆಗಳನ್ನು ಸಂರಕ್ಷಿಸುವ ಕೆಲಸವು ನಿಮ್ಮ ಪಾಲಿಗೆ ಬಿದ್ದಿರುವದೆಂದು ನಾನು ಬಹಿರಂಗವಾಗಿ ಹೇಳುವೆನು.

ಮಹೀಬಲಯ್ಯ.

ಮಡಿಕೇರಿ ಮುನ್ಸಿಪಾಲಿಟಿ ರೂಲ್ಸ್.

ಅಯ್ಯಾ,

ಮುನ್ಸಿಪಾಲಿಟಿ ಮೆಂಬರುಗಳಲ್ಲಿ ನನ್ನದೊಂದು ವಿನಂತಿ. ಜಾರಿ ಇರುವ ರೂಲ್ಸ್‌ಗಳನ್ನು ಬದಲು ಯಾ ತಿದ್ದುಪಡಿ ಮಾಡಲು ಒಂದು ಸಬ್ ಕಮಿಟಿ ಏರ್ಪಾಡು ಮಾಡಿರುವುದಾಗಿಯೂ, ಆ ಕಮಿಟಿಯವರು ಒಡನೇ ರೂಲುಗಳನ್ನು ನೋಡಿ ತಮ್ಮ ರಿಪೋರ್ಟನ್ನು ಕಮಿಟಿ ಮುಂದೆ ಇಡುತ್ತಾರೆಂಬುದಾಗಿಯೂ ವರ್ತಮಾನ. ಹಾಗಾದರೆ ಅಂಥಾ ಮೆಂಬರುಗಳ ತಮ್ಮ ರಿಪೋರ್ಟನ್ನು ಪತ್ರಿಕೆಯಲ್ಲಿ [illegible] ತಿದ್ದುಪಡಿಗಳ ಬಗ್ಗೆ ಪ್ರಕಟಿಸಿದರೆ ಅವುಗಳಲ್ಲಿರುವ ನ್ಯೂನಾತಿರಿಕ್ತಗಳನ್ನು ಓಟರುಗಳು ಚರ್ಚಿಸಿ, ಅವರವರ ಅಭಿಪ್ರಾಯವನ್ನು ಕೊಡಲು ಅನುಕೂಲವಿರುತ್ತೆ. ಸರ್ಕಾರದವರು ಸಹ ಹೀಗೆ ಮಾಡುತ್ತಾರೆ. ಆದ್ದರಿಂದ ಕಮಿಟಿ ಪ್ರೆಸಿಡೆಂಟರು ಈ ರೀತಿ ಮಾಡುವರೆಂದು ನಂಬುತ್ತೇನೆ.

ಅಲ್ಲದೆ, ಈಗ [illegible] ರೂಲುಗಳನ್ನು [illegible] ಯೋಜನೆಗಾಗಿ ಮಾಡುವ [illegible] ಕೆಲವು ಪತ್ರ [illegible] ಅನುಕೂಲದ ರೀತಿ ಮಾಡುವಂತೆ ಕೆಲವು ಮೆಂಬರುಗಳ ಅಭಿಪ್ರಾಯವೆಂದು ವರ್ತಮಾನ. ಇದು ನಿಜವಾಗಿರಲಿಕ್ಕಿಲ್ಲವೆಂದೇ ನನ್ನ ಭಾವನೆ. ಏಕೆಂದರೆ, ಇಂದೂ ದೇಶವೇ ಒಕ್ಕಲಿಗರ ಮತ್ತು ಕೂಲಿಕಾರರ ಅನುಕೂಲಕ್ಕಿರುವ ರಾಜ್ಯವಾಗಬೇಕೆಂದು ಕಾಂಗ್ರೆಸ್ ಮಹನೀಯರು ಹೋರಾಡುತ್ತಿರುವ ಮತ್ತು ಅಂಥಾ ರಾಜ್ಯವು ಸಮೀಪಿಸುತ್ತಿರುವ ಈ ಕಾಲದಲ್ಲಿ, ಯಾರಾದರೂ, ಬಡವರು ಮತ್ತು ಕಷ್ಟ [illegible] ಕಮಿಟಿ ಮೆಂಬರುಗಳಾಗಿ [illegible]. ಈಗಿರುವ [illegible] ಹೇಳುವರೇ? ಒಂದು ವೇಳೆ ಅಂಥಾ ಅಭಿಪ್ರಾಯಸ್ಥರು ಇದ್ದರೆ ಅವರು ಈಗಿನ ಕಾಲಕ್ಕೆ [illegible], ಮುಂದಾಲೋಚನೆ ಇಲ್ಲದವರೆಂದೇ ಹೇಳಬೇಕಾಗಿದೆ. ಇಂಥಾ ಅಭಿಪ್ರಾಯವು [illegible] ಕೂಡ ಕೆಲವು ಕೋಮುವಾರು ಸಭೆಯ ಮುನ್ಸಿಪಲ್ಲಿದ್ದುದೂ, ಅವರು ಮೆಂಬರುಗಳಾಗಲು [illegible] ಸೂರು, ಇನಾಮ್ದಾರರು ಮತ್ತು ಐದು ನೂರು ರೂಪಾಯಿ ಕಂದಾಯ ತೆರುವವನೇ ಆಗಬೇಕೆಂದು ಮಾಡಿದ್ದೂ ಈಗಲೂ ಹಾಸ್ಯಾಸ್ಪದವಾಗಿ ತೋರುತ್ತೆ. ಒಂದು ಕಾಸೇ ಆಗಲಿ, ಕಂದಾಯ ಕೊಡುವ ಪ್ರತಿ ಒಬ್ಬನಿಗೂ ಮುನಿಸಿಪಾಲಿಟಿಯಲ್ಲಿ ಓಟು ಕೊಡುವ ಮತ್ತು ಮೆಂಬರಾಗಿ ನಿಲ್ಲುವ ಹಕ್ಕು ಇರಲೇ ಬೇಕಾಗಿದೆ. ತಾನು ಕೊಡುವ ತೀರ್ವೆಯು ಯಾವ ರೀತಿಯಲ್ಲಿ ವಿನಿಯೋಗವಾಗುತ್ತಿದೆಯೆಂಬುದನ್ನು ಕೇಳಲು ಪ್ರತಿ ಒಬ್ಬ ಮನುಷ್ಯನಿಗೂ ಹಕ್ಕಿದೆ.

ಕಮಿಟಿ ಮೆಂಬರುಗಳು ಈ ಕೆಳಗಿನ ಸೂಚನೆಯನ್ನು ದಯಮಾಡಿ ಗಣನೆಗೆ ತರಬೇಕೆಂದು ಕೋರುತ್ತೇನೆ.

(1) ಪ್ರತಿ ಒಬ್ಬ 21 ವರ್ಷ ಪ್ರಾಯಕ್ಕೆ ಬಂದ ಸ್ತ್ರೀಪುರುಷರಿಗೆ ಓಟು ಕೊಡುವ ಹಕ್ಕಿರಬೇಕು.

(2) ಗ್ರಾಜ್ಯುಯೇಟರುಗಳಿಗೆ ಓಟಿರಬೇಕು.

(3) ಕಂದಾಯದ ಮಿತಿಯು ವರ್ಷಕ್ಕೆ 1—0—0 ರೂಪಾಯಿಯೂ, ವರ್ಷಕ್ಕೆ 25 ರೂಪಾಯಿಯ ಬಾಡಿಗೆ ಕೊಡುವ ಮನೆಯಲ್ಲಿ ವಾಸಿಸುವವನಿಗೂ, ಓಟು ಕೊಡುವ ಮತ್ತು ಉಮೇದ್ವಾರನಾಗಿ ನಿಲ್ಲುವ ಹಕ್ಕಿರಬೇಕು. ಈ ವಿಷಯದಲ್ಲಿ ಕೊಡಗು ನ್ಯಾಯವಿಧಾಯಕ ಸಭೆಯ ರೂಲ್ಸನ್ನು ಅನುಸರಿಸಬೇಕು.

(4) ಯಾವನೊಬ್ಬ ಕಮಿಟಿ ಮೆಂಬರನೇ ಆಗಲೀ, ಪ್ರೆಸಿಡೆಂಟರನ್ನು ಮುನಿಸಿಪಾಲಿಟಿ ಆಫೀಸ [illegible] ಮೂರು ದಿನಕ್ಕೆ ಮುಂದಾಗಿ ಪ್ರಶ್ನೆ ಬರೆದು ಕಳುಹಿಸಿದಲ್ಲಿ, ಅಂಥಾದ್ದಕ್ಕೆ ಮೀಟಿಂಗಿನಲ್ಲಿ ಸಮರ್ಪಕವಾದ ಉತ್ತರವನ್ನು ಕೊಡಬೇಕು.

(5) ಕಮಿಟಿ ಮೆಂಬರುಗಳಿಗೆ ಆಫೀಸು ಸಮಯದಲ್ಲಿ ಎಲ್ಲಾ ರಿಕಾರ್ಡುಗಳನ್ನು ಪ್ರೆಸಿಡೆಂಟರ ಅನುಮತಿ ವಿನಹ ನೋಡಲು ಅವಕಾಶವಿರಬೇಕು.

(6) ಒಂದು ಸಲ ಇತ್ಯರ್ಥವಾದ ವಿಷಯವು ಪುನಃ ಆರು ತಿಂಗಳೊಳಗೆ ಚರ್ಚೆಗೆ ಬಂದಲ್ಲಿ, ಮೆಜಾರಿಟಿ ಮೆಂಬರುಗಳ ಮೀಟಿಂಗಿನಲ್ಲಿ ಅದನ್ನು ಪುನಃ ಚರ್ಚಿಸಬಹುದೆಂದು [illegible], ಅಂಥಾದ್ದನ್ನು ಚರ್ಚಿಸಿ ತೀರ್ಮಾನ ಮಾಡಬಹುದು.

(7) ಮುನಿಸಿಪಾಲಿಟಿಯು ಯಾವ ಕಾಬೆದಾರರನ್ನಾದರೂ, ಮೀಟಿಂಗಿನ ಮಂಜೂರಾತಿ ಇಲ್ಲದೆ ಡಿಸ್‌ಮಿಸ್ ಮಾಡಕೂಡದು.

ಈ ವಿಷಯಗಳನ್ನು ಗಣನೆಗೆ ತಂದುಕೊಂಡು ಕಮಿಟಿ ಮೆಂಬರುಗಳು, ಒಬ್ಬ ಕಂದಾಯ ತೆರುವ ಓಟರುಗಳ ಸೇವಕರಂತೆ ವರ್ತಿಸಿ, ಓಟರುಗಳ ಹಕ್ಕುಗಳನ್ನು ಕಾಪಾಡಿಕೊಳ್ಳಬೇಕಾಗಿ ಕೆಲಸ ಮಾಡಬೇಕೆಂದು ಕೋರುವ.

ಓಟರ್.

ಪೊನ್ನಂಪೇಟೆಯ ಪತ್ರ.

ಅಯ್ಯಾ,

ಈ ಊರಿನ ಪ್ರಖ್ಯಾತಿಯು ಈಗ ಸ್ವಲ್ಪ ಮೆಲ್ಲಗೆ. ಈ ರೀತಿ ಮುಖ್ಯ ಉತ್ಪತ್ತಿಯಾದ ಭತ್ತಕ್ಕೆ ಬೆಲೆಯಿಲ್ಲ. ಸದ್ಯ ಇರುವ ಬೆಲೆಯಲ್ಲಿ ನಗದ್ ಕ್ರಯಕ್ಕೆ ಪಡೆಯುವ ವ್ಯಾಪಾರಿಗಳೇ ಕಮ್ಮಿ.

ಸಹಕಾರ ಸ್ಟೋರ್ಸ್—ಈ ಸ್ಟೋರ್ಸಿನಿಂದ ಅನೇಕ ರೈತರಿಗೆ ತುಂಬಾ ಸಹಾಯವಾಗುತ್ತಿತ್ತು. ಆದರೆ ಈ ವರ್ಷ ಭತ್ತಕ್ಕೆ ಕ್ರಯ ಕಮ್ಮಿಯಾದ ಕಾರಣ ಅನೇಕರು ಸ್ಟೋರ್ಸ್‌ನಲ್ಲಿ ಭತ್ತ ದಿವಾಜಿಟ್ಟು ಇದರಿಂದ ಹಿಂತೆಗೆದರು. ಇಟ್ಟಂತ ಕೆಲವರಿಗೆ ದೊಡ್ಡ ನಷ್ಟವೇನಾಗಲಿಲ್ಲ. ಆದರೆ ಈ ವರ್ಷದ ಒಂದು ರೂಪಾಯಿ ಬಹಳ ಅಗಲ! ಆದರೂ ಇನ್ನೂ ಸ್ಟೋರ್ಸಿನಿಂದ ಭತ್ತ [illegible] ಕೊಳ್ಳಲಿಕ್ಕೆ ತಕ್ಕ ವ್ಯಾಪಾರಿಗಳೇ ಇಲ್ಲದ್ದರಿಂದ ಇನ್ನೂ ಹೆಚ್ಚಾದ ಭತ್ತ ಹಾಗೆ ದಿವಾಜಿಟ್ಟಿದೆ.

ಪೋಸ್ಟ್ ಆಫೀಸ್—ಈ ಆಫೀಸಿಗೆ ತಂತಿ ಬಂದು ಈಗಾಗಲೆ ಎರಡು ವರ್ಷವಾಯಿತು. ಆದರೇನು, ಊರಿನ [illegible] ಇಲ್ಲದ ಒಂದು ಮೂಲೆಯಲ್ಲಿ ಇಟ್ಟಿದ್ದಾರೆ. ಇದಕ್ಕಾಗಿ ಎಷ್ಟೋ ಪುಕಾರು ನಡೆಯಿತು. ಆದರೇನು, ಆ ಡಿಪಾರ್ಟ್‌ಮೆಂಟಿನವರು ಜನರ ಕಷ್ಟ ನೋಡುವವರೇ? ನಮ್ಮ ಸರಕಾರದವರಾದರೂ ಆ ಸ್ಥಳದ ವಿಷಯ ಆಲೋಚಿಸಲಿಕ್ಕಿಲ್ಲವೇ?

[illegible] ವಾಚನಾಲಯ—[illegible] ಸಾಯಂಕಾಲ ಬಂದ ಭಕ್ತರಿಗೆ ಸ್ವಲ್ಪ ಸಮ್ಮೋದನೆ. ಸಣ್ಣ ವಾಚನಾಲಯವನ್ನು ತೆರೆದಿದ್ದಾರೆ. ನಾಲ್ಕೈದು ಪತ್ರಿಕೆಗಳು, ಮಾಸಪತ್ರಿಕೆಗಳು ಇವೆ.

ಪ್ರೈಮರಿ ಎಲಿಮೆಂಟರಿ ಶಾಲೆ—ಇದೇ ದೊಡ್ಡ ವಿಚಾರ. ಸ್ಥಳಸಂಕೋಚವೆಂಬ ಕೂಗು ಬಹಳ ವರ್ಷಗಳಿಂದ ಇದೆ. ಕಿವಿಗೊಡುವವರೇ ಇಲ್ಲ. ಇದಕ್ಕಾಗಿ ಪಬ್ಲಿಕ್‌ನವರು ಪೀಸ್ ಕ್ಲಬಿನ ಒಂದು ಕಟ್ಟಡವನ್ನು ಬಿಟ್ಟುಕೊಟ್ಟರು. [illegible] ವಿದ್ಯಾವಂತರಾದವರು ಯಾರೂ ನೋಡಿರಲಿಕ್ಕಿಲ್ಲ. [illegible] ಮೇಲಧಿಕಾರಿಗಳು ಇದರ ಒಳಗೆ ನುಗ್ಗಲು ಹೆದರಿ [illegible] ಹೊರಗಿನಿಂದ ನೋಡಿ ಹಿಂತಿರುಗುವರೋ ಏನೋ. ಕಾರಣ, ಕ್ಲಾಸ್ ರೂಮಿನ ನೆಲದಲ್ಲಿ ದನಗಳ ಕೊಟ್ಟಿಗೆಯಂಥಾ ಒಂದೊಂದು ಗುಂಡಿ, ಗೋಡೆಯಲ್ಲಿ ರಸ್ತೆಯ ದೂಳು [illegible]. ಬೆಳ್ಳಗಿದ್ದ ಗೋಡೆ ಈಗ ಕೆಂಪಾಗಿದೆ. ಈ ಕಟ್ಟಡದಲ್ಲಿ ಕಲಿಯುವ ಸಣ್ಣ ಮಕ್ಕಳ ಆರೋಗ್ಯ ಹೇಗಿದ್ದೀತು, ತಿಳಿಯಿರಿ. ಸರಕಾರದವರು ಇಷ್ಟು ದೊಡ್ಡ ನಾಡಿಗಾಗಿ ಈ ವರೆಗೆ ಹಳೇ ಶಾಲೆಯ ಕಟ್ಟಡಕ್ಕೆ ಎರಡು ರೂಮುಗಳನ್ನು ಜೋಡಿಸಿದಲ್ಲದೆ, ಇವರೇನು ನಮ್ಮ ಮಕ್ಕಳಿಗಾಗಿ ಖರ್ಚು ಮಾಡಿದ್ದಾರೆ? ಶಾಲೆ ಒಬ್ಬ ಮಹನೀಯರು ಕಟ್ಟಿಸಿದ್ದು, ಕ್ಲಬಿನ ಕಟ್ಟಡ ಪಬ್ಲಿಕ್‌ನವರದು, ಹಾಲಿ ಬೋರ್ಡಿಂಗ್ ಕಟ್ಟಡ ಪಬ್ಲಿಕ್‌ನವರದು. ಇನ್ನಾದರೂ ಸರಕಾರದವರು ನಮ್ಮ ನಾಡಿನ ಕಷ್ಟವನ್ನು ಮನಮುಟ್ಟಿ ತಿಳಿದು, ಈಗ ಎರಡು ವರ್ಷಗಳ ಹಿಂದೆ ಸ್ಥಾಪಿಸಿದ ಪೊನ್ನಂಪೇಟೆ ಶಾಲಾ ಸಂಘದವರು ಮಕ್ಕಳ ಕಷ್ಟವನ್ನು ಪರಿಹರಿಸುವ ಬಗ್ಗೆ ಒಂದು ಹೊಸ ದೊಡ್ಡ ಕಟ್ಟಡವನ್ನು ಕಟ್ಟಿಸಿ ಕ್ರಮೇಣ ಹೈಸ್ಕೂಲ್ ಮಾಡಬೇಕೆಂಬ ಏರ್ಪಾಡಿಗೆ ಸರಕಾರದವರೂ, ದೇಶದ ಮಹಾ ಮಹನೀಯರೂ ಧನಸಹಾಯ ಮಾಡಲಿಕ್ಕೆ ಮುಂದೆ ಬರುವರೆಂದು ನಂಬುತ್ತೇನೆ.

ಬೋರ್ಡಿಂಗ್ ಮತ್ತು ಇದಕ್ಕೆ ಸಮ್ಮಂಧಪಟ್ಟ ಭೂಮಿ—ಅಯ್ಯಾ, ಬೋರ್ಡಿಂಗ್ ಅಂದರೆ ವಾಸದ ಮನೆಯೆಂದರ್ಥ. ಈ ಕಟ್ಟಡವು ಪಬ್ಲಿಕ್‌ನವರು ಭಕ್ತಿಯಿಂದ ಕಟ್ಟಿಸಿದ್ದು, ಮಕ್ಕಳ ವಾಸಕ್ಕೆ ಎಷ್ಟು ಅನುಕೂಲವಿರಬಹುದು? ಮಲಗುವ ಕೋಣೆಯಲ್ಲೇ ಓದುವುದು, ಎಲ್ಲರೂ ತಿರುಗಾಡುವ ವೆರಾಂಡದಲ್ಲಿ ಊಟಮಾಡುವುದು, ಸ್ನಾನಕ್ಕೆ ಬಚ್ಚಲು ಮನೆಯಿಲ್ಲ. ಈ ಅನನುಕೂಲದ ಬೋರ್ಡಿಂಗ್ ಮನೆಗೆ ಲಗತ್ತಾದ ಒಂದು ಭೂಮಿ. ಈ ಭೂಮಿ ಒಬ್ಬ ಮಹನೀಯರು ಉದಾರ ಮನಸ್ಸಿನಿಂದ ಉಚಿತವಾಗಿ ಕೊಟ್ಟದ್ದು. ಈಗ ಇದನ್ನು ಸರಿಯಾಗಿ ನಡೆಸಿಕೊಂಡು ಹೋಗುವುದೆಂದರೆ [illegible] ಪ್ರಾಣಕ್ಕೆ ಬಂದಿದೆ. ಶಾಲೆಯಲ್ಲೇ ಮಕ್ಕಳಿಗೆ ಪಾಠ ಹೇಳಲು ತಕ್ಕಷ್ಟು ಉಪಾಧ್ಯಾಯರಿಲ್ಲ. ಆದರೂ ಮಕ್ಕಳು ಈ ವರ್ಷ ಅಲ್ಲದಿದ್ದರೆ ಬರುವ ವರ್ಷವಾದರೂ ಓದಲಿ ಎಂದು ಈಗ ಈ ಭೂಮಿ ಮತ್ತು ಬೋರ್ಡಿಂಗಿನ ಮೇಲುಸ್ತುವಾರಿಗೆ ಇದ್ದ [illegible] ಡಿಪಾರ್ಟ್‌ಮೆಂಟಿಗೆ ವಹಿಸಿಕೊಟ್ಟಿದ್ದಾರೆ. ಕಲಿಸಲಿಕ್ಕೆ ಸ್ಥಳವಿಲ್ಲದ, ಶಾಲೆಯಲ್ಲೂ ಪಾಠ ಹೇಳುವಷ್ಟು ಉಪಾಧ್ಯಾಯರಿಲ್ಲದ ಮೇಲೆ ಅದು ಶಾಲೆಯೋ ಹೇಗೆ? [illegible]. ಇನ್ನಾದರೂ ಸರಕಾರದವರು ಈ ವಿಷಯ ಹೇಗೆ ವಿಲೆವಾರಿ ಮಾಡುವರೆಂದು ನೋಡುತ್ತೇವೆ.

ಆಸ್ಪತ್ರೆ—ರೋಗಿಗಳೇ ಇಲ್ಲ. [illegible] ಭೂಮಿಗಳೇನೋ ಹದಿನೈದು ದಿನಕ್ಕೊಂದಾವರ್ತಿ ಹರಾಜು ಆಗುತ್ತಲಿವೆ. ಉದ್ಯೋಗಸ್ಥರಿಗೆಲ್ಲಾ ರಿಟ್ರಂಚ್‌ಮೆಂಟ್ ಕೊಡಲಿ ಯಾವ ತಲೆ ಮೇಲೆ ಬಿದ್ದೀತೋ ಎಂದು ಹೆದರಿ ನೋಡುತ್ತಲಿದ್ದಾರೆ.

ಬೆಂಚ್‌ಕೋರ್ಟು—ಇದರಲ್ಲಿ ಡಿಸ್ಟ್ರಿಕ್ಟ್ ಜಡ್ಜರು [illegible] ಹಣ್ಣು. ಆದರೆ ಪೋಲೀಸಿನವರು ರಸ್ತೆಯಲ್ಲಿ ದನ, ಆಡು, ಕುರಿಗಳನು ದೊಡ್ಡಿಗೆ ಹಾಕಿ [illegible] ವುದು ದುಡ್ಡಿಲ್ಲದ [illegible] ದಲ್ಲಿ ರೈತರು ಬರುತ್ತಾನೆ [illegible] ಮೋಜಿಸ್ಟ್ರೇಟರು ಎನು ಏನು ಇದರಲ್ಲಿ ಹಣ [illegible] ಹಣ್ಣಿನ ಟಾಕ್ಸ್, ಅದೇನು, ಯಜಮಾನಗಳೂ ಗ್ರೈಜುಯೇಟರೇ, [illegible], ಪ್ರತೋಳ ಕತ್ತವನ್ನು ನ್ಯಾಯದಿಂದ ತೀರ್ಮಾನಿಸ [illegible] ಅದಲಿಕ್ಕೆ ಆಗಿನ ಯೌವನಕ್ಕಲ್ಲವೇ ಉತ್ತಮ. ಇದ [illegible] ಮಾಡುವರ ಟಾಕ್ಸ್ ತೀರಲಿಕ್ಕೆ ಆಯಿತು. ಆಗ ಕರಾವ [illegible] ಮೋಜಿಸ್ಟ್ರೇಟರುಗಳು ಹಾಜರಾಗುತ್ತಾರೆ. ಅದಕ್ಕನು [illegible] ವಾಗಿ ಇವರಿಗೆ ಕೋರ್ಟು ಸಹ ಎರಡನೆದೆ ಸಾಕಾದು [illegible] ಅಧಿಕಾರಿಗಳ ತುಕ್ಕಂ! ಇದರಲ್ಲಿ ನ್ಯಾಯ ಕೊಡುವ [illegible] ಹೇಗೆ? ನೀವೇ ಆಲೋಚಿಸಿ. ಇವುಗಳ ಸ್ವಲ್ಪ ಕಾಲ [illegible] ಸುಧಾರಿಸಿಕೊಳ್ಳುವ.

ಪೀಸ್‌ಕ್ಲಬ್—[illegible] ಕ್ಲಬ್ ಇರುವುದು ಇಂಡಿಯನ್ ಆಫೀಸರ [illegible] ರೈತರಿಗೆ ಬೇಕಾದ ಪತ್ರಿಕೆ [illegible] ಪತ್ರಿಕೆಗಳು ದಿನವೂ [illegible] ಗಳು ಬರುತ್ತಲಿವೆ. [illegible] ನಡದ [illegible] ಸ್ವಾಗತವಿದೆ. ಆದರೆ ವಿದ್ಯಾವಂತರು ಒಡನೆ [illegible]

ಬಾಲಕಿ ಪಾಠಶಾಲೆ—ಈ [illegible] ನೋಡರ್ [illegible] ಶಿಷ್ಟ [illegible] ರದ್ದಲ್ಲಿ? [illegible] ಸಾಕ ಮಾಡುತ್ತಾರೆ. [illegible] ಬಾಲಕಿಯರು [illegible] ಇನ್ನು [illegible] ಕೊರಲಿಕ್ಕೆ ಬಾಗವಿಲ್ಲ. ಸಂಪಾದಕರು [illegible] ವಟ್ಟಿಗೆ ನಮ್ಮ ನೈಜ ಉಪಯೋಗಕ್ಕಾಗಿ ದುಡ್ಡು [illegible] ಮಾಡಿದ್ದೇ ಇಲ್ಲ. ಕಾರಣ ತಿಳಿಯಲಿಲ್ಲ. ಎಲ್ಲಾ [illegible] ರೈತರಿಂದ ಆಗಲಿಕ್ಕಿಲ್ಲ. ಅಸ್ವಭಾವ ಹಾಕಿ ಮನೆ ಮಾ [illegible] ದ್ದಾರೆ. [illegible] ಬಡಪಾಲ ಮಾಡಬಾರದೇ? [illegible] ನಮ್ಮ ಮಕ್ಕಳು ವಿದ್ಯಾವಂತರಾಗ ಬೇಡವೇ? [illegible] ನ ಉದ್ಯೋಗದಲ್ಲಿ ಈ ಕಾಲೋನಿನವರು ಎಷ್ಟಿದ್ದಾ [illegible] ಬೇರೆ ಕಾಲೋನಿನವರು ಎಷ್ಟಿದ್ದಾರೆ ಎಂದು ಲೆಕ್ಕ ನೋಡಿ [illegible] ಗಿರುವ ಕಾಲದಲ್ಲಿ ನಮಗೆ ಕಡಿಮೆ ಪಕ್ಷ ಹೈಸ್ಕೂಲ್ ಎ [illegible] ಭ್ಯಾಸಕ್ಕಾದರೂ ಅನುಕೂಲ ಪಡಿಸಿಕೊಡದಿದ್ದರೆ ನಾವು [illegible] ಹಿಂದೆ ಬೀಳುತ್ತೇವೆ. ನಾಡಿನವರೇ, ಇನ್ನಾದರೂ [illegible] ಸರಕಾರದವರಲ್ಲಿ ಮೊರೆಯಿಡಿ.

"ನಾಡಿನವ"

— — —

ಪೋಲೀಸು ಇಲಾಖೆ.

ಮಾನ್ಯ ಸಂಪಾದಕರೇ,

ತಮ್ಮ ಪತ್ರಿಕೆಯಲ್ಲಿ ಆಗಾಗ್ಗೆ ಪ್ರಕಟವಾಗುತ್ತಿದ್ದ ಹಲ ಬಾತ್ಮಿಗಳಿಂದಲೂ, ತಮ್ಮ ಅಗ್ರಲೇಖನದಿಂದಲೂ ಹಾಲಿ ಬದ್ಧಿಕ್ಕೆ ಪೋಲೀಸ್ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರವರ ಹುದ್ದೆಗೆ ಇದು ವರೆಗೆ ಸರಕಾರದ ಸಾಕಾರದಲ್ಲಿ ಭಾಗ ನಡೆಸಿದ ಕೊಡವ ನವರನ್ನೇ ಆರಿಸಿ, ಈ ಮಾಲಕ ಹಿಂದುಳಿದವರನ್ನು ಮುಂದಕ್ಕೆ ತರಬೇಕೆಂಬ ಅಂಶವು [illegible] ಗಿ ಈಗ [illegible] ಟೆಂಬರಾಗಿ [illegible] ತಮ್ಮಂತೆ [illegible] ಕೊಡಗಿನ [illegible] ಮೆಂಟ್ ಕಮಿಟಿ [illegible] ಆಗಿ ಬಂದಿದ್ದಾಗ ಕೊಡಗು ದೇಶದ ಪೋಲೀಸ್ ಇಲಾಖೆಯಲ್ಲಿ, ಒಟ್ಟಿನಲ್ಲಿ ದೇಶದ ಕ್ಷೇಮಕ್ಕೆ, ಒಂದೇ ಕೋಮಿನವರಿಂದಾದದೆಂದು ಹೇಳಿದ್ದರು.

ಹೀಗಿರಲು ಹಾಲಿ ಚುನಾವಣೆಯ ಕಾಲದಲ್ಲಿ [illegible] ನ್ ಸಾಹೇಬರೂ, ಅವರಿಗೆ ಸಹಾಯಕರಾಗಿದ್ದ ಇತರ ಇಬ್ಬರು ಉದ್ಯೋಗಸ್ಥರೂ ಮೇಲಿನ ಅಂಶಗಳಿಗೆ ಬೆಲೆ ಕೊಡುವದೆಂದು ಜನತೆಯು ಅಭಿಪ್ರಾಯವಾಗಿತ್ತು. ಆದರೆ ಈಗ ಚುನಾವಣೆಯು ಮೇಲಿನ ಅಭಿಪ್ರಾಯಗಳನ್ನು ಒದಗಿಸುತ್ತ, ಮೊದಲೇ ಈ ಇಲಾಖೆಯಲ್ಲಿ ಕೆಲಸದಲ್ಲಿದ್ದ [illegible] ಉಮೇದ್ವಾರರಿಂದಲೇ ಆಗಿನ ವಿಚಾರನೆ [illegible] ತ್ತಾಗುತ್ತಿಲ್ಲ. ಈ ಚುನಾವಣೆಯಲ್ಲಿ ಪಕ್ಷಪಾತ ಹೆಚ್ಚು ಗಮನ [illegible]

[illegible]

[illegible] ಎರಡು ಮೂರು ವರ್ಷ ಕ್ರಿಮಿನಲ್ ಕೆಸ್ [illegible] ಇನ್ಸ್‌ಪೆಕ್ಟರನಿಗಂತ ಇದ್ದೆಂದು ಹೇಳಲು ಬರುವದಿಲ್ಲ. ಹಾಗೂ ಈ ಚುನಾವಣೆಯು ತನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಾನೆಂಬುದಕ್ಕೆ ಖಾತರಿಯಾದರೂ ಏನು? ಪೋಲೀಸ್ ಇಲಾಖೆಗೆ ಸೂತ್ರಧಾರನಂತಿರುವ ಈತನು ಘಟ್ಟಿಗನಾದರೇನೋ ಸರಿ; ಅಲ್ಲವಾದರೆ ಆ ಇಲಾಖೆಯ ಕೆಲಸಗಳು ಸುಸೂತ್ರವಾಗಿ ನಡೆಯದೆ, ಜನತೆಯ ಕ್ಷೇಮವು ಮಕ್ಕಳು ಮರಳಿಗೆ ಕಟ್ಟಿ ಆಡುವ ಗುಬ್ಬಿ ಗೂಡಿನಂತೆ ಅಸ್ಥಿರವಾಗುವುದು. ಇದಕ್ಕೆ ಜವಾಬುದಾರರಾರು?

ವಯಸ್ಸಿನ ಮಿತಿಯನ್ನು ನೋಡಿ ಮದ್ರಾಸ್ ಪದ್ಧತಿಯನ್ನು ಜಾರಿಗೆ ತಂದಿದ್ದಾರೆಯೇ? [illegible] ಡ. ಯಾಕೆಂದರೆ ಅಲ್ಲಿಯ ಚುನಾವಣೆ ರೀತಿ ಬೇರೆ. ಈ ಡೈರೆಕ್ಟ್ ರಿಕ್ರುಟ್‌ಮೆಂಟ್ ಮಾಸ್ ಮೆಸ್. ಎಲ್. ಸಿ. ಅಥವಾ ಅದಕ್ಕಿಂತ ಸ್ವಲ್ಪ ಮೇಲ್ಪಟ್ಟಾಗಿ ಪಾಸಾದ ಅಭ್ಯರ್ಥಿ ಇನ್ಸ್‌ಪೆಕ್ಟರುಗಳಿಗೆ ಕೆಲವು ಕಾಲದ ವರೆಗೆ ಪ್ರಾಸಿಕ್ಯೂಟಿಂಗ್ ತರಬೇತು [illegible]. ಅವರಲ್ಲಿ ಹೆಚ್ಚು ಘಟ್ಟಿಗರೆನಿಸಿಕೊಂಡವರನ್ನು ಚುನಾಯಿಸಿ, ಹುದ್ದೆಯನ್ನು ಖಾಯಂ ಮಾಡುತ್ತಾರೆ. ದೊಡ್ಡ ದೇಶವಾದ ಮದ್ರಾಸಿಗೆ ಇದು ಸರಿ. ಒಂದೆರಡು ಇನ್ಸ್‌ಪೆಕ್ಟರುಗಳಿಂದ ಕೂಡಿದ ಈ ಚಿಕ್ಕ ದೇಶಕ್ಕೆ ಈ ಪದ್ಧತಿಯನ್ನು ಜಾರಿಗೆ ತರಲು ಅಸಾಧ್ಯ. ಡೈರೆಕ್ಟ್ ರಿಕ್ರುಟ್‌ಮೆಂಟ್ ಬೇಡವೇ? ಈ ವಿಚಾರಗಳೆಲ್ಲಾ ಹಿಂದಿನ ಕಮಿಷನ್ [illegible] ಸಾಹೇಬರ ಅನುಭವಕ್ಕೂ, ದೀರ್ಘಾಲೋಚನೆಗೂ [illegible] ಈ ಹುದ್ದೆಗೆ ಅನುಭವವುಳ್ಳ [illegible]. [illegible] ಮಿತಿಯನ್ನು 30ಕ್ಕೆ ಏರಿಸಿದ್ದರೆಂದು ತಿಳಿಯುತ್ತೇನೆ.

● ಎಲ್ಲಾ [illegible] ಗಳನ್ನು ಪಡೆದಿರುವಂಥ ಇಬ್ಬರು ಹಿಂದುಳಿದ ಪಂಗಡ ಉಮೇದ್ವಾರರಿದ್ದರು. ಒಬ್ಬರು ಮದ್ರಾಸು ಹೈಕೋರ್ಟಿನಲ್ಲಿ ಅನುಭವ ಹೊಂದುತ್ತಿದ್ದಾರೆ. ಮತ್ತೊಬ್ಬರು [illegible] ಎರಡು ಮೂರು ವರ್ಷಗಳಿಂದ ವಕೀಲ ವೃತ್ತಿಯನ್ನು ನಡೆಸಿಕೊಂಡು ಕ್ರಿಮಿನಲ್ ಲಾದಲ್ಲಿ [illegible] ಗಳೆನಿಸಿಕೊಂಡಿದ್ದಾರೆ. ಅಲ್ಲದೆ ಅವರು ಫಸ್ಟ್ ಕ್ಲಾಸ್ [illegible] ಅಟಗಾರರೆನಿಸಿಕೊಂಡಿದ್ದಾರೆ.

[illegible] ನಡೆಯುವ ವಿಧದಲ್ಲಿ [illegible] ಪೋಲೀಸ್ ಇಲಾಖೆಯ ಕಲಸ [illegible] ಬಾಕಿ ಇಲ್ಲ. [illegible] ಅವರ [illegible] ಈ ಮೂಲಕ ಅವರನ್ನು [illegible] ದವರ ಮತ್ತು [illegible] ಗಮನ ಕೊಟ್ಟಿಂತಿಲ್ಲ! [illegible] ಅದೇ ಇಲಾಖೆ ಎಂಬುದು [illegible] ಶಾಂತಿ ವ್ಯಾಪ್ತಿಗೆ ಅನುಕೂಲವಲ್ಲ.

ಈಗಿನ ಚುನಾವಣೆಯಲ್ಲಿ ಯಾರಿಗೂ ತಿಳಿಯದ ಹಾಗೆ, ಅಡಗಿರುವ ಮೂಲ ತತ್ವವೇನೆಂಬುದನ್ನು ಹೊಸ ಕಮಿಷನರ್ ಸಾಹೇಬರು ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ.

● ಮೊದಲೇ ವಯಸ್ಸಿಗೆ ಪ್ರಾಧಾನ್ಯ ಕೊಡುತ್ತೇವೆಂದು ಹೇಳಿ ವಯಸ್ಸು ಮೀರಿದ ಉಮೇದ್ವಾರರುಗಳಿಗೆ ತಿಳಿಸಿದ್ದರೆ, ಅವರ ಅನೇಕ ಕಷ್ಟ ನಷ್ಟಗಳನ್ನು ತಪ್ಪಿಸಬಹುದಿತ್ತು. ಈಗ ಅವುಗಳಿಗೆ ಗತಿಯೇನು?

ಕಡೆಯದಾಗಿ ಇನ್ನು ಮುಂದಾದರೂ ಸರಕಾರವು ಎಲ್ಲರಿಗೂ ತಿಳಿಯುವ ಕೆಲವು ಮೂಲ ತತ್ವಗಳನ್ನು ಮುಂದಿಟ್ಟುಕೊಂಡು [illegible] ಸಮರ್ಪಕವಾಗಿ ನಡೆಸುವುದರ ಮೂಲಕ ಸಾಧ್ಯವಾದಷ್ಟು ಮಟ್ಟಿಗೆ ಹಿಂದುಳಿದ ಪಂಗಡಗಳನ್ನು ಮುಂದೆ ತರಲೆತ್ನಿಸಿ, ಈಗ ಅದರಲ್ಲಿ ಉಂಟಾಗಿರುವ ಅಶಾಂತಿಯ ಮೋಡಗಳನ್ನು ಹೋಗಲಾಡಿಸುವುದೆಂದು ನಂಬಿದ್ದೇನೆ.

'ನ್ಯಾಯವಾದಿ.'

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[illegible] ಗ್ಯಾರಂಟಿ ಬಂಗಾರದ ನಿಬ್ಬು ಬಳಿದ ಜಾತ್ರಿಯಾ ಬಂದೋಬಸ್ತಾ ಆದ ಫೌಂಟನ್‌ಪೆನ್‌ಗಳು.

ರಿಲ್ವ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ. 3	0	0
„ „ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
„ „ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮಾಡಲ್ [illegible] ಫೌಂಟನ್ ಪೆನ್ 1ಕ್ಕೆ	3	11	[illegible]
„ „ ಮಾಡಲ್ [illegible] ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4	[illegible]	0
„ „ ಸೆಲ್ಫ್ ಫಿಲ್ಲಿಂಗ್ ಮಾಡಲ್ [illegible] ಫೌಂಟನ್ ಪೆನ್ 1ಕ್ಕೆ		8	
ಬಿಗ್ [illegible] ಫೌಂಟನ್‌ಪೆನ್	[illegible]	[illegible]	
ಪಾರ್ಕರ್ [illegible] 1ಕ್ಕೆ	14 6 0, ರೂ 20	10	0
[illegible] ಫೌಂಟನ್‌ಪೆನ್ 1ಕ್ಕೆ	[illegible]	[illegible]	
[illegible] ಫೌಂಟನ್ ಪೆನ್ 1ಕ್ಕೆ	6	[illegible]	
[illegible] ಫೌಂಟನ್ ಪೆನ್ 1ಕ್ಕೆ	8	[illegible]	

ಸ್ಟೌಗಳು.

ಸ್ವೀಡ್ ಇರುವ ಸಣ್ಣ ಸ್ಟೌ 1ಕ್ಕೆ	3	6	0
ಜರ್ಮನ್ [illegible] ಸ್ಟೌ 1ಕ್ಕೆ	2	2	[illegible]
[illegible] ಸ್ಟೌ 1ಕ್ಕೆ [illegible]	6	[illegible]	0
[illegible]	[illegible]	[illegible]	0
[illegible]	[illegible]	[illegible]	[illegible]
[illegible] ಸ್ಟೌ		6	[illegible]
[illegible]		13	4
[illegible]			
ಮಿಶಿನ್ [illegible]			



[illegible] ನಮೂನೆ ಅಂದವಾದ [illegible] 1ಕ್ಕೆ 3-6-0 ಮಾತ್ರ [illegible]

[illegible]

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜನೂಬಂದ ಠೇವಣಾತಿ	—	2,50 301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತ... ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆ...

ವರ್ಷಕ್ಕೊಂದಾವರ್ತಿ ಲೆಕ್ಕ ... ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು
ಕೋದಂಡ ಅಪ್ಪಯ್ಯನವರು
ರಾವ್ ಬಹದ್ದೂರ್

ಸಿ. ಯಸ್. ವೆಂಕಪ್ಪ
ತಾರೀಖು 1—7—1931

ಸಣ್ಣ ಹುಡುಗರ ...

ಡೋಂಗರೆ
ಇವರ
ಬಾಲಾಮೃತ.
ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
52—36 ಗಿರಿಗಾಂವ, ಮುಂಬಯಿ.

ನೋಟೀಸು

ಈ ಕಳಗಿನ ... ಚಂದಾ ಹಣವನ್ನು ವಸೂಲು ... ಅವರನ್ನು ಏಜೆಂಟರುಗಳಾಗಿ ನೇಮಿಸಿ ... ಪತ್ರಿಕೆಗಳು ಕೊಡಲಾಗಿವೆ ... ಏಜೆಂಟರವರ ... ಕೊಡಬಹುದಾಗಿದೆ ... ಅನುಕೂಲವಿರುವ ... ಮಾಡಿ ಕೊಡತಕ್ಕದ್ದು ...

ಏಜೆಂಟರು

ಉತ್ತರ ಕೊಡಗಿಗೆ ಮ ... ಮ ... ವರು,

ಸಹಕಾರಿ ಭದ್ರತೆ ಇರುವ
ಒರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.
(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ್ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,461 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ — ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ — ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ... 1 73 322 ಜನರಿಗೆ 38ಕೋಟಿ ರೂ ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22 4ರಕ್ಕಿಂತ ವಿವರದ ಕಡಿಮೆ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದು ಈ ದೊಡ್ಡ ಇಂಡಿಯನ್ ಕಂಪನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ ಇವರ ಕಡಿಮೆ ಬೀಗ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದ ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಬೆಂಬಲವನ್ನು

ಒರಿಯಂಟಲ್ ಕಂಪೆನಿಯು ಪಡೆಯುತ್ತಿದೆ

... ಮುಂದಿನ ... ಕಂಪನಿ ...

...	...	...	...	
...	...	...	ನಾಗಪುರ	...
...	...	...	...	...
...	...	ಮದ್ರಾಸು	ಪೂನಾ	ತಿರುಚಿನಾಪಳ್ಳಿ
...	...	...	ರಾಯಪುರ	ತಿರುವೆಂದ್ರಮ್
...	...	ಮಂಗಳೂರು	ರಾಂಚಿ	ವಿಶಾಖಪಟ್ಟಣ

ಕೊಡಗಿನ ಗುರುಗುರು ... ಗುಣವಾಗದ ... ಶ್ರೀಯ ಬಾಟ್ಲಿಗೆ 1 ½ ಡಜನ್ 8-4-0. 1 ಡಜನ್ 10-8-0.

ಕಂಪನಿಯ ... ರೋಗಗಳಿಗೆ ... ಕ್ರಯ ಬಾಟ್ಲಿಗೆ ರೂ. ...—8—0

... ಕ್ರಯ ಬಾಟ್ಲಿಗೆ ರೂ 3—8—0.

... ಕ್ರಯ ಬಾಟ್ಲಿಗೆ ರೂ ...—8—0.

ಕಂಪನಿಯ ... ಆರೋಗ್ಯ ಕೊಡುವುದು ಕ್ರಯ ಬಾಟ್ಲಿಗೆ ರೂ ...—8—0.

ಶುದ್ಧ ಚಿಕ್ಕುಮದ್ದುಗಳೂ ಹೋಮ್ಯೊಪಥಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳು ತಮ್ಮ ರೋಗದ ... ನಮ್ಮ ಆರೋಗ್ಯ ... ಪರೀಕ್ಷಿಸಿ ಕೊಡುವ ... ನ್ಯಾಯವಾದ ದರದಿಗೆ ದೊರಲ್ಪಡುತ್ತವೆ

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ ಧರ್ಮಾರ್ಥ.

52—45 **Malariana Co.,** — ಏಜಂಟ —ಮಲೇರಿಯಾನ ಕಂಪೆನಿ,
Hampankatta No 14 Mangalore — ಹಂಪನಕಟ್ಟೆ, ..., 14, ಮಂಗಳೂರು ಪೋಸ್ಟು

ದಕ್ಷಿಣ ಕೊಡಗಿಗೆ—ಮ. ಸೋಮೆಯಂಡ ಅಚ್ಚಯ್ಯನವರು,
ಮುರನಾಡು—ಮ. ಕೇಕಿರ ಅಚ್ಚಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮ ಮಂಡೇಪಂಡ ಸೋಮಯ್ಯನವರು, (ಜಾಬಿಭಂಡಾರು.)
ನಾಪೋಕ್ಲು—ಎಮ್. ಆರ್ ವೆಂಕಪ್ಪಯ್ಯನವರು
ಶ್ರೀಮಂಗಲನಾಡು—ಮ. ಅಜ್ಜಮಾಡ ಮಾದಪ್ಪನವರು
ಗೋಣಿಕೊಪ್ಪಲು—ಮ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮ. ಬಸಂತ ಮಾದಪ್ಪನವರು,
ಶ್ರೀ... —ಮ. ಪಿ. ಜಿ ... ನವರು,
ಮ ... ದೇವಯ್ಯನವರು ಮತ್ತು ... ಪಿ ... ನವರು,
... & ... —ಮ ಜಿ ... ನವರು.
... —ಮ ... ನವರು,
... ಈ ... ರೂ ...

ಮೇನೇಜರ್,
ಕೊಡಗು ಲಿಮಿಟೆಡ್,
ಮಡಿಕೇರಿ

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ... ಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ... ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅವಶ್ಯಕವಾಗಿರುವ, ರೂಲ್ಸಿಗೆ ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳು ಬರಿಹಾಕು ಫಾರಮುಗಳೂ, ಜಮ್ಮಾ ಮುಚಲಿಕಾ ಫಾರಮುಗಳೂ, ಕುಲಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟಾಕ ರಿಜಿಸ್ಟರ್ ಬರಾವು ಫಾರಮುಗಳೂ, ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ ಜನ್ಮ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ... ನಮ್ಮಲ್ಲಿ ... ಕ್ರಯದಲ್ಲಿ ದೊರೆಯುತ್ತವೆ ... ಕೂಡಲೇ ಬರೆದು ... ತರಿಸಿಕೊಳ್ಳಬಹುದು

ಮೇನೇಜರ್,
ಕೊಡಗು ಪ್ರೆಸ್
ಮಡಿಕೇರಿ.

Printed & published by P I Bellappa at "Kodagu" Press Mercara for "Kodagu" Ltd

If not delivered please return to "KODAGU" OFFICE MERCARA

ಕೊಡಗು.

ಸರ್ವೇಷ ಭೂತದಯೆಯಿಂ … ಪ್ರಯತ್ನ … ದೇಶ … ಸ್ಸಿಂ ರಾಜ್ಯ …

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂಡ್ಯಂಡ ಐ. ಬೆಳ್ಳಿ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೧೧ | ಮಡಿಕೇರಿ, ಸನ್ ೧೯೩೧ನೇ ಇಸವಿ ಸೆಪ್ಟಂಬರ್ ತಾರೀಕು … ಶುಕ್ರವಾರ. | … ೧೩

V. Subramaniam Jeweller,

DIAMOND MER. HANT GOLD & SILVER SMITH.

Deals in all:-

SPORTS CUPS in all prices
MEADALS in up-to-date patterns
CASKETS in elegant styles

Nos. 2 & 3, Kuppamuthu st,
TIRUVATESWARANPET,
Post Box 323, Triplicane P. O.,
MADRAS.

Deals in all:-

GEM SET JEWELS, set with Diamonds Rubies etc,
GOLD ARTICLES of all patterns
SILVER WARE in … style.



… ಬದಲ ಉಚಿತ
… ವಾಗಿ
… ಸಲ್ಪಡುವದು

ಕೋವಿಗಳು, ಕತ್ತಿಗಳು, ಬಾಣಗಳ, … ಮೊದಲಾದವುಗಳು ಬಹು ಕಡಿಮೆ ದರದಲ್ಲಿ …

GOOLAMHUSAIN … HUDY …tio
argest Impo… …
Cheapest priced …
210 Abdul Rehman Street BOMBAY

34—1

ಬಾಲಾರ್ಕಮಧು

… ಮಕ್ಕಳ … ಮಕ್ಕಳು …

… ಬಹು … ಆರೋಗ್ಯ … ಚಿಕ್ಕ ಮಕ್ಕಳು …
… 1 ಕ್ಕೆ 12 … 9 …
… ಎಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗ.

52—30

ಕಟಿಶೂಲಾಯ ಮಾತ್ರೆಗಳು:— … 3—4 … 1 … 14 …

… ಮೂತ್ರಕೋಶದ … ಮೂತ್ರ … ನಿರಾಶರಾಗಿ … 1—0, 6—12—0 …

ರಕ್ತ ಶೋಧಕ ಕಷಾಯ … 1 … 3—8—0 … 2—10—0 …

52—19

9

ಕೊಡಗು.

ಸನ್ ೧೯೩೧ನೇ ಇಸವಿ

ಸೆಪ್ಟೆಂಬರ್ ತಾ. ೧೮ನೇ ಶುಕ್ರವಾರ.

ಮುದ್ರಣಾಲಯಗಳ ಮೇಲೆ ದಬ್ಬಾಳಿಕೆ.

ಉತ್ತರ ಹಿಂದೂಸ್ಥಾನದ ಕೆಲವು ಕಡೆಗಳಲ್ಲಿ ನಡೆದ ರಾಜಕೀಯ ಕೊಲೆಗಳನ್ನು ನೆವವಾಗಿ ಮಾಡಿಕೊಂಡು ಇಂಡಿಯಾ ಸರಕಾರವು ವೃತ್ತಾಂತ ಪತ್ರಿಕೆಗಳ ಮತ್ತು ಮುದ್ರಣಾಲಯಗಳ ಸ್ವಾತಂತ್ರ್ಯವನ್ನು ಕಡಿಮೆ ಮಾಡಲು ಒಂದು ಮಸೂದೆ ಕಾನೂನನ್ನು ಎಸೆಂಬ್ಲಿಯ ಮುಂದೆ ಚರ್ಚೆಗೆ ತಂದಿದೆ. ಈ ಕಾನೂನು ಮಂಜೂರಾದರೆ ಮೇಜಿಸ್ಟ್ರೇಟರು ಹೊಸ ಮುದ್ರಣಾಲಯವನ್ನಿಡುವವರಿಂದ ಠೇವಣಿಯಾಗಿ 500 ರೂ.ಯಿಂದ 2000 ರೂ. ವರೆಗೂ, ಈ ಮೊದಲೇ ಸ್ಥಾಪಿಸಿರುವ ಮುದ್ರಣಾಲಯಗಳ ಮಾಲೀಕರಿಂದ ಅವಶ್ಯ ಕಂಡಲ್ಲಿ 500 ರೂ.ಯಿಂದ 5000 ರೂ. ವರೆಗೂ ನಗದು ಹಣದ ಜಾಮೀನು ಕೇಳಬಹುದು. ಈ ಕಾನೂನಿಗೆ ವಿರೋಧವಾದ ಬರವಣಿಗೆ ಬರೆದರೆಂತ ಮೇಜಿಸ್ಟ್ರೇಟರಿಗೆ ತೋರಿದರೆ ಹಾಗೆ ಕಟ್ಟಿದ ಜಾಮೀನು ಹಣವನ್ನು ಸರಕಾರಕ್ಕೇ ಒಪ್ಪಿಸಿ ತೆಗೆದುಕೊಂಡು ಪುನಃ 1000 ರೂ.ಯಿಂದ 10,000 ರೂ. ವರೆಗೆ ಜಾಮೀನು ಹಣ ಕೇಳಬಹುದು. ಅನಂತರವೂ ತಪ್ಪು ನಡೆಯಿತೆಂತ ಕಂಡುಬಂದರೆ ಜಾಮೀನು ಹಣವನ್ನು ಸರಕಾರಕ್ಕೆ ಒಪ್ಪಿಸಿ ತೆಗೆದುಕೊಳ್ಳಬಹುದಲ್ಲದೆ ಮುದ್ರಣಾಲಯಗಳನ್ನು [illegible] ಹುಕುಂ ಮಾಡಬಹುದು. ಈ ಕಾನೂನಿಗೆ ವಿರೋಧವಾದ ಬರವಣಿಗೆಗಳೆಂಥಾದ್ದೆಂದರೆ—

"ಸನ್ನೆಗಳಿಂದಾಗಲೀ, ಚಿತ್ರದಿಂದಾಗಲೀ, ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಅಲಂಕಾರಿಕ ಭಾಷೆಯಿಂದಾಗಲೀ, ಸರಳ ಭಾಷೆಯಿಂದಾಗಲೀ ಕೊಲೆಯನ್ನಾಗಲೀ, ಇತರ ಯಾವುದೇ ಹಿಂಸೆಯನ್ನಾಗಲೀ ಪ್ರೋತ್ಸಾಹಿಸಿದರೆ ಅಥವಾ ಅಂಥಾ ಅಪರಾಧವನ್ನಾಗಲೀ, ಅಪರಾಧ ಮಾಡಿದವರನ್ನಾಗಲೀ ಸ್ತುತಿಸಿದರೆ, ಪ್ರಶಂಸೆ ಮಾಡಿದರೆ ಅಥವಾ ಒಪ್ಪಿಗೆಯನ್ನು ವ್ಯಕ್ತಪಡಿಸಿದರೆ ಈ ಕಾಯಿದೆಯ ಮೇರೆ ತಪ್ಪು ಮಾಡಿದಂತಾಗುತ್ತದೆ" ಈ ಕಾನೂನಿನ ಮೇರೆ ಮುದ್ರಣಾಲಯಗಳ ಮಾಲೀಕರನ್ನು ಮಾತ್ರವಲ್ಲ ಪತ್ರಿಕಾ ಪ್ರಕಾಶಕರನ್ನೂ ಸಹ ಜಾಮೀನು ಹಣ ಕೇಳಬಹುದು. ಇದನ್ನು ನೋಡಿದರೆ ಅಧಿಕಾರಿಗಳಿಗೆ ಬೇಡವೆನಿಸಿದ ಯಾವುದೇ ಪತ್ರಿಕೆಯನ್ನು ಮುದ್ರಿಸುವ ಮುದ್ರಣಾಲಯವನ್ನು ಸುಲಭವಾಗಿ ನಿಲ್ಲಿಸಲು ಈ ಕಾನೂನನ್ನು ಉಪಯೋಗಿಸಿಕೊಳ್ಳುವುದೆಂತ ವಾಚಕರಿಗೆ ತಿಳಿಯದೆ ಇರದು. ಹಿಂದೂಸ್ಥಾನದ ರಾಷ್ಟ್ರೀಯ ಪಕ್ಷದ ಎಲ್ಲಾ ಪತ್ರಿಕೆಗಳೂ ಅಹಿಂಸಾತತ್ವವನ್ನು ಅಂಗೀಕರಿಸುವ ಧ್ಯೇಯವನ್ನೇ ಇಟ್ಟುಕೊಂಡಿರುವ ಈ ಕಾಲದಲ್ಲಿ ಹಿಂಸಾಮಾರ್ಗವನ್ನು ಬಾಹಿರವಾಗಿಯೂ ಶ್ಲಾಘಿಸುವುದಿಲ್ಲ. ಅದಕ್ಕೆ ಉತ್ತೇಜನ ಕೊಡುವುದೂ ಇಲ್ಲ. ಆದರೆ ಮೇಲಿನ ಕಾನೂನಿನ ಮೇರೆ ಅಂಥಾ ಕೊಲೆಪಾತಕಗಳನ್ನು ಮಾಡಿದ ವ್ಯಕ್ತಿಗಳ ಧೈರ್ಯ, ದೇಶಭಕ್ತಿ ಮುಂತಾದವನ್ನು ಕಾಂಗ್ರೆಸಿನಲ್ಲಿ, ಬೇರೆ ಸಭೆಗಳಲ್ಲಿ ಮತ್ತು ನಮ್ಮ ದೇಶದ ಕಳೆದ ಜತಿನ್‌ದಾಸರ ಸುಭದ ಮಹಾಸಭೆಯಲ್ಲಿ ಮಾಡಿದಂತೆ ಶ್ಲಾಘಿಸಲೂ ಸಹ ಕೂಡದು. ಅಲ್ಲದೆ ಇಂಥಾ ಮುದ್ರಣಾಲಯಗಳನ್ನು ನಿರ್ಬಂಧಿಸುವ ಕಾನೂನು ಮೊದಲು ಜಾರಿಯಲ್ಲಿದ್ದಾಗ ಅಧಿಕಾರಿಗಳು ಅದನ್ನು ಉಪಯೋಗಿಸಿದ ಮತ್ತು ರಾಜದ್ರೋಹವನ್ನು ನಿರೋಧಿಸುವ ಪೀನಲ್ ಕೋಡಿನ ಸೆಕ್ಷನುಗಳನ್ನು ಅವರು ಜಾರಿಗೆ ತಂದ ಅನುಭವದಿಂದ ಇಂಥಾ ಕಾನೂನನ್ನು ಅವರು ದುರುಪಯೋಗ ಪಡಿಸುತ್ತಾರೆಂಬುದರಲ್ಲಿ ಸಂಶಯ ಇದೆಯೇ?

ಇಂಥಾ ಕಾನೂನಿನ ಒಂದು ಮಸೂದೆಯನ್ನೇ ಜನವರಿ ಅಧಿವೇಶನದಲ್ಲಿ ಎಸೆಂಬ್ಲಿಯ ಮುಂದೆ ಸರಕಾರದವರು ತಂದಿದ್ದರು. ಆದರೆ ಆಗ ದೇಶದಲ್ಲಿ ತಾತ್ಕಾಲಿಕ ರಾಜಿಯಾಗಿ ಶಾಂತಿ ಸ್ಥಾಪನೆಗೆ ಸಹಾಯ ಮಾಡಬೇಕೆಂಬ ಕಾರಣದಿಂದ ಅದನ್ನು ವಾಪಸು ತೆಗೆದುಕೊಂಡರು. ಅದೇ ತಾತ್ಕಾಲಿಕ ಶಾಂತಿಯ ಒಡಂಬಡಿಕೆಯು ಜಾರಿಯಲ್ಲಿರುವ ಈಗಲೂ ಇಂಥಾ ಕಾನೂನನ್ನು ಜಾರಿಗೆ ತರಬಾರದು. ಹಾಗೆ ಜಾರಿಗೆ ತರಲು ಯತ್ನಿಸುವುದು ಸರಕಾರವು ರಾಜಿಯ ಒಪ್ಪಂದಕ್ಕೆ ವಿರೋಧವಾಗಿ ನಡೆದುಕೊಂಡಂತೆಯೇ ಆಯಿತು. ಹಿಂದೂಸ್ಥಾನದ ಮಧ್ಯವರ್ತಿ ಮತ್ತು ಪ್ರಾಂತೀಯ ಸರಕಾರಗಳು ರಾಜಿಯ ಶರತ್ತುಗಳನ್ನು ನಡೆಸಿಕೊಳ್ಳುವಂತೆ ನೋಡಿಕೊಳ್ಳಲಾಗುತ್ತದೆಯೆಂದು ಮಹಾತ್ಮರಿಗೆ ಇಂಡಿಯಾ ಸರಕಾರವು ಭರವಸೆ ಕೊಟ್ಟು, ಅವರ ಬೆನ್ನು ಹಿಂದೂಸ್ಥಾನದ ಕಡೆಗೆ ತಿರುಗಿದ ಕೂಡಲೇ ಇಂಥಾ ದಬ್ಬಾಳಿಕೆಯ ಕಾನೂನನ್ನು ಮಾಡುವ ವಿಚಾರ ಮಾಡಿದ್ದು ಬಹಳ ವಿಷಾದಕರ. ಈ ವರ್ತನೆಯು ರಾಜಿ ಶರತ್ತಿನ ಮಾತುಗಳಿಗೆ ವಿರೋಧವಾಗಲಾರದೆ ಹೋದರೂ ರಾಜಿ ಶರ್ತಿನ ಉದ್ದೇಶಕ್ಕೆ ವಿರೋಧ ಮಾಡಿದಂತಾಗುತ್ತದೆ. ದೇಶದ ಕಾನೂನು ಭಂಗದ ಚಳವಳಿಯೂ, ಸರಕಾರದ ದಬ್ಬಾಳಿಕೆಯೂ ನಿಂತು ಎಲ್ಲಾ ಆಲೋಚನಾಪರರೂ ಶಾಂತ ಚಿತ್ತದಿಂದ ಹಿಂದೂಸ್ಥಾನದ ಮುಂದಿನ ರಾಜಕೀಯ ಸ್ವಾತಂತ್ರ್ಯವನ್ನು ಕುರಿತು ಯೋಚಿಸಲು ಸಹಾಯವಾಗಬೇಕೆಂಬುದೇ ತಾತ್ಕಾಲಿಕ ರಾಜಿಯ ಉದ್ದೇಶ. ಆದರೆ ಇಂಥಾ ದಬ್ಬಾಳಿಕೆಯ ಕಾನೂನನ್ನು ಚರ್ಚೆಗೆ ತಂದರೆ ದೇಶದ ರಾಜಕೀಯ ಕೆಲಸಗಾರರಿಗಾಗಲೀ, ವೃತ್ತಾಂತ ಪತ್ರಿಕೆಗಳಿಗಾಗಲೀ ಶಾಂತ ಚಿತ್ತದಲ್ಲಿ ಇರಲು ಸಾಧ್ಯವಿಲ್ಲ. ಈಗಾಗಲೇ ಪತ್ರಿಕೆಗಳ ಲೇಖನಗಳಿಂದಲೂ, ಸಭೆಗಳಲ್ಲಿ ಮಂಜೂರಾಗುವ ಠರಾವುಗಳಿಂದಲೂ ಈ ದಬ್ಬಾಳಿಕೆಯ ಪ್ರಯತ್ನದಿಂದ ದೇಶದ ಮನಸು ಕಳವಳಗೊಂಡಿದೆಯೆಂತ ಸ್ಪಷ್ಟವಾಗುತ್ತದೆ.

ಈಗ ಸ್ವಲ್ಪ ಕಾಲದಿಂದ ನಡೆದ ಕೊಲೆಪಾತಕಗಳನ್ನು ಈ ದಬ್ಬಾಳಿಕೆಗೆ ಕಾರಣವಾಗಿ ಕೊಟ್ಟರೂ, ಎಸೆಂಬ್ಲಿಯಲ್ಲಿ ನಡೆದ ಚರ್ಚೆಯಿಂದ ಈ ಕೊಲೆಪಾತಕಗಳಿಗೆ ಪತ್ರಿಕಾ ಲೇಖನಗಳು ಕಾರಣವೆಂತ ತೋರಿಸಲು ಸರಕಾರಿ ಮೆಂಬರಿಗೆ ಸಾಧ್ಯವಾಗಲಿಲ್ಲ. ಅಲ್ಪ ಸ್ವಲ್ಪ ಪತ್ರಿಕೆಗಳು ಕೊಲೆ ಪಾತಕಕ್ಕೆ ಉತ್ತೇಜನ ಕೊಟ್ಟಿದ್ದಾವೆಂತ ಸರಕಾರದ ಮೆಂಬರು ಹೇಳಿದರೂ ಅಂಥಾ ಪತ್ರಿಕೆಗಳು ತುಂಬಾ ವಾಚಕರಿಲ್ಲದೆ, ದೇಶದ ಮೇಲೆ ಏನೂ ಶಕ್ತಿ ಇಲ್ಲದವಾಗಿವೆಯೆಂತ ತೋರಿಸಲ್ಪಟ್ಟಿದೆ. ಜನರ ಬೆಂಬಲವಿರುವ ಯಾವುದೇ ಪತ್ರಿಕೆಯಾಗಲೀ ಕೊಲೆಪಾತಕಕ್ಕೆ ಪ್ರೋತ್ಸಾಹ ಕೊಟ್ಟದ್ದನ್ನು ತೋರಿಸಲು ಸರಕಾರದವರಿಗೆ ಸಾಧ್ಯವಾಗಲಿಲ್ಲ. ಈ ಅಲ್ಪ ಸ್ವಲ್ಪ ಪತ್ರಿಕೆಗಳ ಮೇಲೆ ಸಹ ಈ ಮೊದಲೇ ಜಾರಿಗೆ ಬಂದಿರುವ ಕಾನೂನನ್ನು ಉಪಯೋಗಿಸಿರುವುದಿಲ್ಲ. ಈಗ ಜಾರಿಯಲ್ಲಿರುವ ಕಾನೂನುಗಳನ್ನು ಉಪಯೋಗಿಸಿ ಇಂಥಾ ಪತ್ರಿಕೆಗಳನ್ನು ಶಿಕ್ಷಿಸಬೇಕೇ ಹೊರತು ದೇಶದ ಎಲ್ಲಾ ಪತ್ರಿಕೆಗಳಿಗೂ, ಮುದ್ರಣಾಲಯಗಳಿಗೂ ಕೇಡ ಮಾಡಲು ಸಾಧ್ಯವಿರುವ ಇಂಥಾ ಕಾನೂನನ್ನು ಜಾರಿಗೆ ತರಲು ಪ್ರಯತ್ನಿಸುವುದು ಎಂದೂ ನ್ಯಾಯವಲ್ಲ.

ಹೊಸ ಛಾಪಖಾನೆಗಳನ್ನು ಸ್ಥಾಪಿಸುವಾಗ ಹಣದ ಜಾಮೀನು ಕೇಳಬೇಕೆಂತ ಈ ಹೊಸ ಕಾನೂನಿನಲ್ಲಿದೆ. ಹಾಗಾದರೆ ಕೊಲೆಪಾತಕಕ್ಕೆ ಉತ್ತೇಜನ ಕೊಡುವುದನ್ನು ನಿಲ್ಲಿಸಲಿಕ್ಕಾಗಿಯೇ ಈ ಕಾನೂನನ್ನು ಮಾಡುವುದೆಂಬುದರಲ್ಲಿ ನಿಜವಿಲ್ಲವೆಂತ ಸ್ಪಷ್ಟವಾಗುತ್ತದೆ. ಹೊಸದಾಗಿ ಸ್ಥಾಪಿಸುವ ಛಾಪಖಾನೆಯಲ್ಲಿ ಕೊಲೆಪಾತಕಕ್ಕೆ ಉತ್ತೇಜನ ಕೊಡುತ್ತಾರೆಂತ ಮೇಜಿಸ್ಟ್ರೇಟರು ಊಹಿಸಲು ಹೇಗೆ ಸಾಧ್ಯವಿದೆ? ಆದ್ದರಿಂದ ಈ ಕಾನೂನನ್ನು ಪತ್ರಿಕೆಗಳಿಗೆ ಇರುವ ಸ್ವಾತಂತ್ರ್ಯವನ್ನು ನಾಶಪಡಿಸಲೇ ಹೊರಡಿಸುವರೆಂತ ಪ್ರತ್ಯಕ್ಷವಾಗುತ್ತದೆ.

ಇಂಥಾ ಕಾನೂನುಗಳನ್ನು ಅಧಿಕಾರಿಗಳು ಎಷ್ಟರ ಮಟ್ಟಿಗೆ ದುರುಪಯೋಗಪಡಿಸುತ್ತಾರೆಂಬುದು ನಮ್ಮ ವಾಚಕರಿಗೆ ತಿಳಿದ ಸಂಗತಿಯಾಗಿದೆ. ನಮ್ಮ ಈ ಪತ್ರಿಕೆಯಲ್ಲಿ ಕಾನೂನು ಭಂಗಕ್ಕೆ ಉತ್ತೇಜನ ಕೊಡುವ ಲೇಖನಗಳನ್ನೇನೂ ಬರೆಯದೆ ಇದ್ದರೂ, ಈ ಪತ್ರಿಕೆಯನ್ನು ಛಾಪಿಸುವ ಮುದ್ರಣಾಲಯದಿಂದ 1000 ರೂ. ನಗದು ಹಣದ ಜಾಮೀನು ಕೇಳಿ, ಇದನ್ನು ಪ್ರಕಟಿಸಲು ಸಾಧ್ಯವಿಲ್ಲದಂತೆ ಮಾಡಿದ್ದೂ ಅಲ್ಲದೆ, ಆ ಕಾನೂನು ಬಲವಾದ ಮೇಲೆಯೂ ಸಹ ಪೋಸ್ಟಾಫೀಸು ಕಾನೂನನ್ನು ದುರುಪಯೋಗ ಪಡಿಸಿ, ಟಪ್ಪಾಲು ಹಾಸಲಿನಲ್ಲಿ ಪತ್ರಿಕೆಗಳಿಗಿರುವ ರಿಯಾಯಿತಿಯು ದೊರೆಯಲು ಸಾಧ್ಯವಿಲ್ಲದಂತೆ ಈ ದೇಶದ ಚೀಫ್ ಕಮಿಶನರವರು ಮಾಡಿದ್ದನ್ನು ವಾಚಕರು ಮರೆತಿರಲಾರರು. ಈ ರೀತಿ ಅಧಿಕಾರವನ್ನು ದುರುಪಯೋಗಪಡಿಸುವುದೇ ಹಲವು [illegible] ಸ್ವಭಾವವಾಗಿ ಹೋಗಿರುವಾಗ ಈಗ ಚರ್ಚೆಗೆ ತಂದಿರುವ ಕಾನೂನಿನಿಂದ ರಾಷ್ಟ್ರೀಯ ಪಕ್ಷದ ಪತ್ರಿಕೆಗಳಿಗೆ ತುಂಬಾ ಹಾನಿಯಾಗುತ್ತದೆಯೆಂಬುದರಲ್ಲಿ ಏನೂ ಸಂಶಯವಿಲ್ಲ.

ಈ ಕಾನೂನಿನ ಮಸೂದೆಯನ್ನು ಚರ್ಚೆಗೆ ತರಲು ಹಿಂದೂಸ್ಥಾನದಲ್ಲಿ ಪ್ರಕಟವಾಗುತ್ತಿರುವ ಆಂಗ್ಲೇಯ ಮಾಲೀಕರುಗಳ ಪತ್ರಿಕೆಗಳೇ ಮುಖ್ಯ ಕಾರಣವೆಂತ ಎಸೆಂಬ್ಲಿ ಚರ್ಚೆಯಿಂದ ತಿಳಿಯಬರುತ್ತದೆ. ಸರಕಾರಿ ಮೆಂಬರು ಈ ಕಾನೂನಿಗೆ ಈಗಾಗಲೇ ದೇಶದ ಪತ್ರಿಕೆಗಳ ಬೆಂಬಲ ದೊರೆತಿದೆಯೆಂತ ಹೇಳಿದರು. ಈ ಮಾತನ್ನು ಇಂಗ್ಲಿಷ್ ಜನರ ಪತ್ರಿಕೆಗಳಿಗೆ ಹೇಳಬಹುದೇ ಹೊರತು ದೇಶೀಯ ಪತ್ರಿಕೆಗಳಿಗೆ ಅನ್ವಯಿಸುವುದಿಲ್ಲ. ದೇಶೀಯ ಪತ್ರಿಕೆಗಳೆಲ್ಲವೂ ಒಮ್ಮತದಿಂದ ಈ ಮಸೂದೆ ಕಾನೂನನ್ನು ಖಂಡಿಸಿವೆ.

ಎಸೆಂಬ್ಲಿಯಲ್ಲಿ ಈ ಮಸೂದೆ ಕಾನೂನಿಗೆ ಒತ್ತಾಸೆ ಕೊಟ್ಟವರಲ್ಲಿ ಕಲ್ಕತ್ತಾದ 'ಸ್ಟೇಟ್ಸ್‌ಮನ್' ಎಂಬ ಪತ್ರಿಕೆಯ ಇಂಗ್ಲಿಷ್ ಸಂಪಾದಕರೊಬ್ಬರು. ಇವರು ತನ್ನ ನಿಷ್ಪಕ್ಷಪಾತವನ್ನು ಹೇಳಿಕೊಂಡರೂ, ರಾಷ್ಟ್ರೀಯ ಪಕ್ಷಕ್ಕೆ ಸೇರಿದ ದೇಶೀಯರೊಬ್ಬರು—'ಮಹಾತ್ಮ ಗಾಂಧಿಯವರು ಇಂಗ್ಲೆಂಡಿಗೆ ದುಂಡು ಮೇಜು ಪರಿಷತ್ತಿಗಾಗಿ ಹೋಗಲು ಸಾಧ್ಯವಾಗದಂತೆ ಮಾಡಲು ಪ್ರಯತ್ನಿಸಬೇಕೆಂತ ತಂತಿ ವರ್ತಮಾನಗಳನ್ನು ಇಂಗ್ಲೆಂಡಿನ ರಾಜಕೀಯ ಸಂಘಗಳ ಮುಂದಾಳುಗಳಿಗೆ ಕೊಟ್ಟವರಿವರೆಂತ ವಾದಿಸಿದರು. ಈ ಆರೋಪವನ್ನು ಅಲ್ಲಗಳೆಯಲು ಈ ಇಂಗ್ಲಿಷ್ ಸದಸ್ಯರಿಗೆ ಸಾಧ್ಯವಾಗಲಿಲ್ಲ. ಇದರಿಂದ ಈ ಕಾನೂನಿಗೆ ಉತ್ತೇಜನ ಕೊಡುವವರು ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರೆಯಬಾರದೆಂತ ಅಪೇಕ್ಷಿಸುವ ಇಂಗ್ಲಿಷ್ ಸಾಮ್ರಾಜ್ಯವಾದಿಗಳ ಬೆಂಬಲವಾಗಿರುವವರು ಎಂತ ಪ್ರತ್ಯಕ್ಷವಾಗುತ್ತದೆ. ಅಲ್ಲದೆ ಎಸೆಂಬ್ಲಿಯ ಚರ್ಚೆಯಲ್ಲಿ ಕೇಳಿವಾರು ಹತ್ಯೆಗಳಿಗೆ ಪ್ರಾಮುಖ್ಯತೆ ಕೊಡುವ ಮತ್ತು ರಾಷ್ಟ್ರೀಯತ್ವಕ್ಕೆ ವಿರೋಧವಿರುವವರು ಮಾತ್ರ ಇದಕ್ಕೆ ಪಕ್ಷದವರಾಗಿದ್ದಾರೆಂದು ಕಂಡು ಬರುತ್ತದೆ.

ರಾಜಕೀಯ ಕೊಲೆಗಳನ್ನು ನಿಲ್ಲಿಸಲು ಈ ತರದ ದಬ್ಬಾಳಿಕೆಯ ಯಂತ್ರಗಳನ್ನು ತಯಾರಿಸಿಕೊಳ್ಳುವುದರಿಂದ ಸಾಧ್ಯವಿಲ್ಲ. ಈ ತರದ ಹಿಂಸಾ ರೀತಿಯ ವರ್ತನೆಗೆ ದೇಶಕ್ಕೆ ಸ್ವಾತಂತ್ರ್ಯವಿಲ್ಲವೆಂಬ ದುಃಖವೇ ಕಾರಣ. ಅಹಿಂಸಾ ಮಾರ್ಗವನ್ನೇ ಕೈಕೊಂಡ ಕಾಂಗ್ರೆಸಿನವರಿಗೂ, ಈ ಹಿಂಸಾ ಮಾರ್ಗವನ್ನು ಕೈಕೊಂಡ ದಾರಿ ತಪ್ಪಿದ ಯುವಕರಿಗೂ ಗುರಿ ಒಂದೇ, ಅದು ನಮ್ಮ ಮಾತೃ ಭೂಮಿಗೆ ಸ್ವಾತಂತ್ರ್ಯವನ್ನು ಸಂಪಾದಿಸುವುದಾಗಿದೆ. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಸಂಪಾದಿಸಬೇಕೆಂಬ ಕುತೂಹಲವು ದೇಶದಲ್ಲಿ ತುಂಬಿದಷ್ಟು ಕಾಲ ಮತ್ತು ಅಹಿಂಸಾ ರೀತಿಗೆ ಜಯವಾಗದೆ ಇದ್ದಷ್ಟು ಕಾಲ ಹಿಂಸಾ ಮಾರ್ಗಾವಲಂಬಿಗಳೂ ಅಲ್ಲಲ್ಲಿ ಕಾಣಬರಬಹುದು. ಅಂಥಾ ಹಿಂಸಾವಾದಿಗಳನ್ನು ಶಿಕ್ಷಿಸಬಾರದೆಂತ ಯಾರೂ ವಾದಿಸುವುದಿಲ್ಲ. ವೃತ್ತ ಪತ್ರಿಕೆಗಳ ಸ್ವಾತಂತ್ರ್ಯವನ್ನು ಮುರಿದರೆ ಹಿಂಸೆಯ ಕೃತ್ಯಗಳನ್ನು ನಿಲ್ಲಿಸಬಹುದೆಂಬ ಸರಕಾರದ ವಾದ ಮಾತ್ರ ಸರಿಯಾದುದಲ್ಲ. ಹಿಂದೂಸ್ಥಾನಕ್ಕೆ ಆದಷ್ಟು ಬೇಗನೆ ಸ್ವಾತಂತ್ರ್ಯ ದೊರಕಲು ಸಹಾಯ ಮಾಡುವುದೊಂದೇ ರಾಜಕೀಯ ಕೊಲೆ ಮುಂತಾದ ಅನಾಹುತವನ್ನು ನಿಲ್ಲಿಸಲು ದಾರಿ ಎಂಬುವುದರಲ್ಲಿ ಸಂಶಯವಿಲ್ಲ.

ಓರಿಯಂಟಲ್ ಕಂಪೆನಿಯ

ಪರ್‌ಫೆಕ್ಟ್ ಪ್ರೊಟೆಕ್ಷನ್ (ಸಂಪೂರ್ಣ ರಕ್ಷಣ ವಿಮೆ ಪತ್ರವು) ಪಾಲಿಸಿ.

ಇಂಡಿಯಾ ದೇಶದ ಒಂದು ದೊಡ್ಡ ಕಂಪೆನಿಯಾದ ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಸಂಘದವರು ನೂತನವಾಗಿ ಜಾರಿಗೆ ತಂದಿರುವ ಸಂಪೂರ್ಣ ರಕ್ಷಣ ವಿಮೇ ಪತ್ರದ ವಿಷಯವಾಗಿ ಇದೇ ಪತ್ರಿಕೆಯ ಪ್ರತಿ ಕಡೆಯಲ್ಲಿ ಪ್ರಚುರಪಡಿಸಿರುತ್ತೇವೆ. ಈ ನೂತನ ಪಾಲಿಸಿಯು ಮುಖ್ಯವಾಗಿ ಈಗ ತಾನೇ ವಿವಾಹಿತನಾಗಿ ಸಂಸಾರವನ್ನು ಪ್ರಾರಂಭಿಸುತ್ತಲಿರುವ ಯೌವನಸ್ಥನಿಗೆ ಬೇಕಾದುದು. ಮತ್ತು ಯಾವ ಪಾಲಿಸಿದಾರನು ಪಾಲಿಸೀ ಖರಾರು ಹುಟ್ಟಿ 20 ವರ್ಷಗಳ ಒಳಗಾಗಿ ಗತಿಸಿದ ಪಕ್ಷದಲ್ಲಿ ವಿಮೇ ಹಣದ ಮೇಲೆ ವರ್ಷ ಒಂದಕ್ಕೆ ಶೇಕಡ 10ರಂತೆ ಖರಾರು ಹುಟ್ಟಿದ ತಾರೀಖಿನಿಂದ 20 ವರ್ಷಗಳು ಪೂರೈಸುವ ವರೆಗೂ ಕೊಡಲ್ಪಡುವುದು ಮತ್ತು 20 ವರ್ಷಗಳ ವಾಯಿದೆ ಕಳೆದ ನಂತರ ಪೂರ್ತಿಯಾಗಿ ವಿಮೆ ಹಣವು ಕೂಡ ಕೊಡಲ್ಪಡುವುದು. ಈ ರೀತಿಯಾಗಿ ಗತಿಸಿದ ಪಾಲಿಸಿದಾರನ ಪತ್ನಿಗೂ ಮತ್ತು ಕುಟುಂಬಕ್ಕೂ ಸಾಕಾದಷ್ಟು ವರಮಾನವನ್ನು ಜ್ಯೇಷ್ಠ ಪುತ್ರನು ವಯಸ್ಕನಾಗುವ ವರೆಗೂ ಭರವಸೆ ಮಾಡುವುದಲ್ಲದೆ ವಿಧವೆಗೆ ಆ ಕಾಲದಲ್ಲಿ ಇರುವ ಎಲ್ಲಾ ತೊಂದರೆ ಮತ್ತು ಪಾಲಿಸಿ ಹಣವನ್ನು ಸುರಕ್ಷಿತವಾದ ಮತ್ತು ಆದಾಯಕರವಾದ ರೀತಿಯಲ್ಲಿ ಗಳಿಸತಕ್ಕ ಕಾರ್ಯದಲ್ಲಿರುವ ಅಪಾಯದಿಂದಲೂ ನಿವಾರಿಸುತ್ತದೆ. ಮತ್ತೂ ಅಲ್ಲದೆ ಪಾಲಿಸಿದಾರನು ಪಾಲಿಸಿ ಪ್ರಾರಂಭವಾದ 20 ವರ್ಷಗಳ ನಂತರ ಒಂದು ವೇಳೆ ಗತಿಸಿದ ಸಂದರ್ಭದಲ್ಲಿ ವಿಮೆ ಮಾಡಿರತಕ್ಕ ಮೊಬಲಗು ಪೂರ್ತಿಯಾಗಿ ಕೊಡಲ್ಪಡುವುದು. ಇದರಿಂದ ಆ ಕಾಲಕ್ಕೆ ಕುಟುಂಬ ರಕ್ಷಣೆ ಮತ್ತು ವಿದ್ಯಾಭ್ಯಾಸಕ್ಕಾಗಿ ಉಂಟಾಗುವ ಖರ್ಚು ವಿಶೇಷವಾಗಿರುವುದಿಲ್ಲ ಮತ್ತು ಉತ್ತರೋತ್ತರ ಒದಗಬಹುದಾದ ಖರ್ಚಿಗೆ ಸಾಕಾದಷ್ಟು ದ್ರವ್ಯವನ್ನು ಆದಾಯ ತಂದಲ್ಲಿ ಗಳಿಸಿಡುವ ವಿಮೆ ಹಣದಿಂದ ಹೊಂದಬಹುದು. ಸದರಿ ಪಾಲಿಸಿಯ ಮೇಲೆ ಕೊಡತಕ್ಕ ಪ್ರೀಮಿಯಂ ಮೊಬಲಗು ಪಾಲಿಸಿದಾರನ 70ನೇ ವರ್ಷ ವಯಸ್ಸಿಗೆ ಅಥವಾ ಮುಂದಾಗಿ ಮರಣ ಸಂಭವಿಸಿದಲ್ಲಿ ನಿಲ್ಲುತ್ತದೆ.

ಸಂಘದವರು ನೂತನವಾಗಿ ಏರ್ಪಡಿಸಿರುವ ಈ ನಮೂನೆ ಪಾಲಿಸಿಯು ಹೆಂಡತಿಗೂ ಮತ್ತು ಕುಟುಂಬಕ್ಕೂ ಒಳ್ಳೇ ರಕ್ಷಣೆಯನ್ನು ಕೊಡತಕ್ಕದ್ದಾಗಿರುತ್ತೆ. ಗಂಡನೂ ಮತ್ತು ತಂದೆಯೂ ಸಂಸಾರವನ್ನು ಹೂಡಿದ 20 ವರ್ಷಗಳ ಕಾಲದಲ್ಲಿ ಪ್ರತಿ ಒಂದು ಸಂಸಾರವೂ ಎಷ್ಟರ ಮಟ್ಟಿಗೆ ಅಪಾಯಕ್ಕೆ ಒಳಗಾಗುವವೆಂಬ ಅಂಶವನ್ನೂ ಮತ್ತು ಈ ಹೊಸ ಪರ್‌ಫೆಕ್ಟ್ ಪ್ರೊಟೆಕ್ಷನ್ ಸ್ಕೀಮು ಎಷ್ಟರ ಮಟ್ಟಿಗೆ ಅಂಥಾ ಕಾಲದಲ್ಲಿ ಸಹಕಾರ್ಯಗಳನ್ನು ಒದಗಿಸಿಕೊಡುತ್ತದೆ ಎಂಬ ವಿಷಯವನ್ನೂ ಗಣನೆಗೆ ತರಬೇಕಾಗಿರುತ್ತೆ. ಈ ತರಹದ ಪಾಲಿಸಿಯು ಪಾಲಿಸೀದಾರನು ಅಕಾಲ ಮೃತ್ಯುವಿಗೆ ಗುರಿಯಾದ ಸಂದರ್ಭದಲ್ಲಿ ಸಂಸಾರ ರಕ್ಷಣೆಗೂ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೂ ಸಾಕಾದಷ್ಟು ದ್ರವ್ಯವನ್ನು ಒದಗಿಸಿಕೊಡುವುದಲ್ಲದೆ, ವಿಮೇ ಮಾಡಿದ ಹಣವು ಮನಸ್ಸೇ ಖರ್ಚಾಗದಂತೆ ರಕ್ಷಿಸಲ್ಪಡುವುದಕ್ಕೆ ಅನುಕೂಲವಾಗುವಂತೆ ಏರ್ಪಡಿಸಿದ್ದಾಗಿರುತ್ತೆ.

ಆದರೆ 3000 ರೂಪಾಯಿಗಿಂತ ಕಡಿಮೆಯ ಪಾಲಿಸಿ ಇಲ್ಲದೆ ಇರುವುದರಿಂದ ಕೆಳ ತರಗತಿಯ ಜನರಿಗೆ ಈ ಹೊಸ ತರಹದಲ್ಲಿ ವಿಮೆ ಮಾಡಲು ಅನುಕೂಲವಾಗುವುದಿಲ್ಲ. ತಮ್ಮ ಜೀವನವನ್ನು ನಡಿಸಲು ತಿಂಗಳು ವಾರು ಸಂಬಳವನ್ನೇ ನಂಬಿರುವ ಮಧ್ಯತರಗತಿಯವರಿಗೆ ಇದೊಂದು ಉಪಯುಕ್ತವಾದ ವಿಮೆಯ ದಾರಿಯಾಗಿದೆ. ಜನರು ಇದರ ಪ್ರಯೋಜನವನ್ನು ಹೊಂದಿಕೊಳ್ಳಲು ಹಿಂಜರಿಯಲಿಕ್ಕಿಲ್ಲವಾಗಿ ನಂಬುತ್ತೇವೆ.

ಸರ್ಕಾರದ ಭರವಸೆಯುಳ್ಳ
ಓರಿಯಂಟಲ್ ಲೈಫ್ ಅಷ್ಯೂರೆನ್ಸ್ ಕಂಪೆನಿಯ
ಪರ್‌ಫೆಕ್ಟ್ ಪ್ರೊಟೆಕ್ಷನ್ ಪಾಲಿಸಿಯು.
(ಸಂಪೂರ್ಣ ರಕ್ಷಣಾ ವಿಮೆ ಪತ್ರವು.)

ಹೆಂಡತಿಗೂ ಮತ್ತು ಸಂಸಾರಕ್ಕೂ ಸಂಪಾದಿಸಬಹುದಾದ ಸಂಪೂರ್ಣ ರಕ್ಷಣೆಯನ್ನು ಸಾಧ್ಯವಾಗುವ ತೆರದಲ್ಲಿ ಒದಗಿಸುತ್ತದೆ.

ಗಂಡನೂ ಮತ್ತು ತಂದೆಯೂ ಆದವನ ಅಕಾಲ ಮರಣದಿಂದ ತನ್ನ ಕುಟುಂಬಕ್ಕೆ ಉಂಟಾಗಬಹುದಾದ ತೊಂದರೆಯನ್ನು ಆಲೋಚಿಸಿದರೆ ಅಂಥಾ ಸಂದರ್ಭದಲ್ಲಿನ ಕಷ್ಟಗಳನ್ನು ಈ ಒಂದು 10,000 ರೂಪಾಯಿಯ ಪರ್‌ಫೆಕ್ಟ್ ಪ್ರೊಟೆಕ್ಷನ್ ಪಾಲಿಸಿಯು (ಸಂಪೂರ್ಣ ರಕ್ಷಣಾ ವಿಮೆ ಪತ್ರದ) ಈ ಕೆಳಗೆ ವಿವರಿಸಿರುವ ಫಲದಿಂದ ನಿವಾರಣೆ ಮಾಡಬಹುದೆನ್ನುವ ಸಂಗತಿಯು ಮನಸ್ಸಿಗೆ ವೇದ್ಯವಾಗುತ್ತದೆ.

ಪಾಲಿಸಿಯು ಪ್ರಾರಂಭದಿಂದ 20 ವರ್ಷದೊಳಗೆ ಮರಣವು ಸಂಭವಿಸಿದರೆ,

(1) ವಿಮೆ ಮೊಬಲಗಿನ ಶೇಕಡ 10ರಂತೆ ಆಗುವ 1000 ರೂಪಾಯಿಗಳನ್ನು ಪ್ರತಿ ವರ್ಷವೂ ಪಾಲಿಸಿ ಪ್ರಾರಂಭದಿಂದ 20 ವರ್ಷಗಳು ಪೂರೈಸುವವರೆಗೂ ತಿಂಗಳು ತಿಂಗಳಲ್ಲಿ ಸಮಸಮಾನ ರೂಪವಾಗಿ ಕೊಡಲ್ಪಡುವುದು ಮತ್ತೂ,

(2) 10,000 ರೂಪಾಯಿಗಳನ್ನು ಪಾಲಿಸಿ ಕಳೆದನಂತರ ನಗದಾಗಿ ಕೊಡಲ್ಪಡುವುದು.

ಪಾಲಿಸಿಯು ಪ್ರಾರಂಭದಿಂದ 20 ವರ್ಷಗಳನಂತರ ಮರಣವು ಸಂಭವಿಸಿದರೆ,

10,000 ರೂಪಾಯಿಗಳು ನಗದಾಗಿ ತಕ್ಷಣವೇ ಕೊಡಲ್ಪಡುವುದು.

ಈ ಪರ್‌ಫೆಕ್ಟ್ ಪ್ರೊಟೆಕ್ಷನ್ (ಸಂಪೂರ್ಣ ರಕ್ಷಣಾ ವಿಮೆ ಪತ್ರವು) ಪಾಲಿಸಿಯು

ಸಾಮಾನ್ಯವಾಗಿ ವಿಧವೆಗೆ ಹೆಚ್ಚು ಹಣವನ್ನು ಒಂದಾಗಿ ಉಪಯೋಗಿಸಲು ಅನುಭವವಿಲ್ಲದಿರುವ ವಿಷಯವನ್ನು ಗಮನಿಸಿ, ತಾನೆಯು ಅವರ ರಕ್ಷಣಾರ್ಥವಾಗಿ ಗಳಿಸುವುದರ ಸಂಪೂರ್ಣ ಫಲಗಳನ್ನು ಅವಳೂ ಮತ್ತು ಮಕ್ಕಳೂ ಸಹ ನಿಶ್ಚಯವಾಗಿ ಹೊಂದಲು ಅನುಕೂಲಿಸುವಂತೆ ಏರ್ಪಡಿಸಲ್ಪಟ್ಟಿರುವುದು.

ವಿದ್ಯಾಭ್ಯಾಸ—ಕುಟುಂಬ ರಕ್ಷಣೆ—ಮಕ್ಕಳನ್ನು ಕಾರ್ಯದಲ್ಲಿ ಪ್ರಾರಂಭಿಸಲು ನಗದು ಹಣ—ಇವುಗಳೆಲ್ಲವೂ ಈ ವಿಮೆ ಪತ್ರದಿಂದ ಉಂಟಾಗುವವು.

ಪಾಲಿಸಿಗಳು ಲಾಭ ಸಹಿತವಾಗಿಯಾಗಲೀ ಅಥವಾ ಲಾಭ ರಹಿತವಾಗಿಯಾಗಲೀ ಕೊಡಲ್ಪಡುವುವು.

ವಿಶೇಷ ಸಂಗತಿಗಳನ್ನು ತಿಳಿಸುವ ಸೂಚನಾ ಪತ್ರಕ್ಕೆ (ಲೀಫ್‌ಲೆಟ್) ಬರೆಯಿರಿ.

ದಿ ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ, ಅಥವಾ ಕಂಪೆನಿಯ ಇತರ ಯಾವುದಾದರೂ ಬ್ರಾಂಚು ಆಫೀಸುಗಳಿಗೆ.

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೆರೇಡ್, ಬೆಂಗಳೂರು.

ಯಂ. ವಿ. ಮುದ್ದುಕೃಷ್ಣನಾಯಿಡು,
ಆಕ್ಟಿಂಗ್ ಬ್ರಾಂಚ್ ಸೆಕ್ರಟರಿ.

ರಾಷ್ಟ್ರ ಕಾರ್ಯ.

(ಕೆ. ಯಸ್. ಆರ್. ರವರಿಂದ)

"ದೇಶಾಭಿಮಾನವೇ ಮತವಾಗಲೆಂದು
ದೇಶ ಸೇವೆಯೇ ನಿರತ ವ್ರತವಾಗಲೆಂದು ||
ದೇಶದುದ್ಧಾರವೇ ಗುರಿಯಾಗಲೆಂದು,
ದೇಶದಾ ಬಾಲಕರು ಹರಸಿದರು ಬಾರು ||"

ಪ್ರಸ್ತುತದಲ್ಲಿ ದೇಶದ ದುರವಸ್ಥೆಯು, ನಿಸ್ತೇಜತೆಯು ಎಲ್ಲರಿಗೂ ತಿಳಿದ ವಿಷಯವಾಗಿರುವುದು. ಇದಕ್ಕೆ ಕಾರಣವು ಪರಕೀಯರ ಆಳಿಕೆಯಾದರೂ ವಿಶೇಷವಾಗಿ ದೇಶದ ಜನರ ಅಂತಃ ಕಲಹವೆಂದೇ ಹೇಳಬಹುದು. ಅಂತಃ ಕಲಹ, ದ್ವೇಷ, ವಿಶ್ವಾಸಘಾತುಕತನದಿಂದ ಸಂಪೂರ್ಣ ರಸಾತಳಕ್ಕೆ ಇಳಿದಿರುವ ಭಾರತ ಮಾತೆಯು ಗತ ವೈಭವವನ್ನು ಸ್ಮರಿಸಿಕೊಂಡರೆ ಎಂಥವನ ಬಾಯಿಯಿಂದಾದರೂ 'ಹಾ!' ಎಂಬ ಉದ್ಗಾರವು ಹೊರಡದೆ ಇರದು. ಒಂದು ಕಾಲದಲ್ಲಿ ಜಗತ್ತಿನಲ್ಲಿ ಪ್ರಾಶಸ್ತ್ಯವನ್ನು ಪಡೆದಿದ್ದ ಹಿಂದೂದೇಶದ ಸ್ಥಿತಿಯನ್ನು ನೋಡಿ ಆಗಿನ ಕಾಲದ ಮಹನೀಯರು ಪ್ರಾಯಶಃ ಈಗ ಭೂಮಿಯಿಂದ ಮೇಲೆದ್ದು ಬಂದರೆ "ನಿಜವಾಗಿಯೂ ನಾನು ಸ್ವಪ್ನಾವಸ್ಥೆಯಲ್ಲಿರುವೆನು" ಎಂದು ಭಾವಿಸುವರು. ಆದರೆ ಕಾಲ ಚಕ್ರವು ತಿರುಗುತ್ತಲೇ ಇರುವುದರಿಂದ ಇದರಲ್ಲಿ ಏನೂ ವಿಲಕ್ಷಣವು ತೋರದು. ಇದ್ದರಿಂದ ದೇಶದ ಉದ್ಧಾರವನ್ನು ನಾವು ಆಪೇಕ್ಷಿಸಬೇಕಲ್ಲವೇ? ಪ್ರತಿಯೊಬ್ಬನ ಪ್ರಥಮ ಕರ್ತವ್ಯವು ಇದಕ್ಕಾಗಿ ಎಲ್ಲರೂ ಒಟ್ಟುಗೂಡಬೇಕು. ದೇಶೋದ್ಧಾರವೆಂದರೇನು, ದೇಶೋದ್ಧಾರವೆಂದರೆ ದೇಶದೊಳಗಿನ ಜನರ ಉದ್ಧಾರವು. ಜನರು ಉದ್ಧೃತರಾದರೆ ಆ ದೇಶದ ಉದ್ಧಾರವಾದಂತೆಯೇ ಸರಿ. ಒಂದು ದೇಶದ ಜನರು ಉದ್ಧೃತರಾಗದೆ, ಒಂದೇ ಜಾತಿಯಲ್ಲವೇ ಒಂದೇ ಪಂಗಡವು ಉದ್ಧೃತವಾದರೆ ಅದು ದೇಶೋದ್ಧಾರವೆನಿಸುವುದಿಲ್ಲ. ಅದರಂತೆಯೇ ಪರಕೀಯರನ್ನು ಓಡಿಸಿ ಯಾವನೊಬ್ಬ ದೇಶೀಯನು ಸಿಂಹಾಸನಾರೂಢನಾದರೆ ಅದೂ ದೇಶೋದ್ಧಾರವೆನಿಸಲಾರದು. ಜನರ ಒಗ್ಗಟ್ಟೆಯೇ ದೇಶೋದ್ಧಾರಕ್ಕೆ ಮೂಲವಾಗಿರುವುದು. ಎಲ್ಲರೂ ವಂಚಕತನ, ಸಂಕುಚಿತ ಮನಸ್ಸು, ವಿಶ್ವಾಸಘಾತುಕತನ ಇತ್ಯಾದಿ ಆತ್ಮಘಾತುಕ ಕೃತ್ಯಗಳನ್ನು ತ್ಯಜಿಸಿ ಸ್ವಾರ್ಥತ್ಯಾಗಪೂರ್ವಕವಾಗಿ ಪರಹಿತ ದಕ್ಷರಾಗಿದ್ದರೆ ದೇಶದ, ಜನರು, ಜಗತ್ತಿನ ಕಲ್ಯಾಣವಾಗುವುದು. ಕೇವಲ ಸ್ವಾರ್ಥಪರತೆಯಿಂದ ಪರಸ್ಪರ ದ್ವೇಷಾಸೂಯಾಪರರಾಗಿ "ಬಾಲಕ್ಕೆ ಬೆಂಕಿ ಹಿಡಿದಾಗ ಬಾವಿ ತೋಡಲು ಹೋದರೆಂ"ಬ ಗಾದೆಯಂತೆ ಒಬ್ಬರ ಕುತ್ತಿಗೆಯನ್ನೊಬ್ಬರು ಹಿಡುಕಲಿಕ್ಕೆ ಹೋದರೆ ಇರುವಾಗ ಇಂಥವರ ಉದ್ಧಾರವನ್ನು ಶ್ರೀ ಭಗವಂತನಿಗೂ ಮಾಡಲು ಅಸಾಧ್ಯವೆಂದರೆ ಅತಿಶಯೋಕ್ತಿಯಾಗಲಾರದು. ಇದೇ ಪ್ರಸ್ತುತದಲ್ಲಿ ಭಾರತೀಯರ ನಿಸ್ತೇಜತೆಗೆ ಕಾರಣಭೂತವಾಗಿರುವುದು. ಪ್ರಾಚೀನ ಸತ್ಯವನ್ನು ಹೇಳಬೇಕೆಂದು ತಿಳಿದುಕೊಂಡಿದ್ದಲ್ಲದೆ, ಅಂತಃ ಕಲಹಗಳಿಂದ ಕೂಡಿ ಜೀವಕಳೆ, ದ್ರವ್ಯ ಹಾನಿಗೂ ಅಂದೆ ಸ್ವದೇಶದ್ರೋಹಕ್ಕೆ ಪಾತ್ರರಾಗಿದ್ದೇವೆ. ಇಂಥಾ ಸ್ವದೇಶಘಾತುಕರ ಆಚರಣೆಯಿಂದ ನಿಜವಾದ ದೇಶೋದ್ಧಾರಕರ ಸ್ವದೇಶೋದ್ಧಾರದ ಪ್ರಯತ್ನವೂ ವ್ಯರ್ಥವಾಗುವುದರಲ್ಲಿ ಆಶ್ಚರ್ಯವಿಲ್ಲವು. ಅಷ್ಟು ಮಾತ್ರವೇ ಅಲ್ಲ. ಅದರೊಡನೆ ಸ್ವಾತಂತ್ರ್ಯವೂ ಮಣ್ಣುಗೂಡುವುದು.

ಕಳೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರ ಕಾರ್ಯಕ್ಕಾಗಿ ಟೊಂಕ ಕಟ್ಟಿದ ಅನೇಕ ಭಾರತ ವೀರ ಪುತ್ರರು, ಶ್ರೀಕೃಷ್ಣ ಜನ್ಮಸ್ಥಾನಕ್ಕೆ ಹೋದದ್ದು ಎಲ್ಲರಿಗೂ ತಿಳಿದಿರುವುದು. ಅವರು ಎಷ್ಟೋ ಕಷ್ಟಗಳು ಬಂದರೂ ಅದಕ್ಕೆ ಸೊಪ್ಪು ಹಾಕಲಿಲ್ಲ. ಅವರಲ್ಲಿ ಸ್ವದೇಶಾಭಿಮಾನವು ಮೂರ್ತಿಭವಿಸಿತ್ತಲ್ಲವೇ? ಅಂಥ ಉಜ್ವಲವಾದ ದೇಶಾಭಿಮಾನವೂ ಸತ್ಯಶಾಲಿತ್ವವೂ ಇತರ ಭಾರತೀಯರ ಯಾಳು ಹೇಡಿತನವನ್ನು ಹೋಗಲಾಡಿಸಿ ಸ್ವದೇಶೋದ್ಧಾರಕ್ಕಾಗಿ ಅವರೆಲ್ಲರನ್ನೂ ಜಾಗೃತಿಗೊಳಿಸಿರುವುವು. ಅದ್ದರಿಂದಲೇ ರಾಷ್ಟ್ರ ಕಾರ್ಯಕ್ಕಾಗಿ ಗಂಡಸರು, ಸ್ತ್ರೀಯರು, ಹುಡುಗರು, ಮುದುಕರು, ಹೆಚ್ಚೇಕೆ ರೋಗಿಗಳೂ ಕೂಡ ಹೊರಡುವರು. ದರಂಗಕರಾದ ಮಂತ್ರ ಪಾಠಕ ವೇಶ್ಯಾವಲರು ಅನಾರೋಗ್ಯ ಸ್ಥಿತಿಯಲ್ಲಿದ್ದರೂ ತಮ್ಮ ಭಾಗದ ದೇಶ ಸೇವೆಯಿಂದ ಕೃತಾರ್ಥರಾದರು. ನಿಸ್ವಾರ್ಥ ತ್ಯಾಗವೇ ದೇಶೋದ್ಧಾರಕ್ಕೆ ಮೂಲವು. ಸ್ವದೇಶಾಭಿಮಾನದಿಂದ ತುಂಬಿ ತುಳುಕಿ ಸ್ತ್ರೀಯರೂ ಕೂಡ ಬಾಯಿಗೆ ಬಂದು ವಿಷಯ ಹೊತ್ತ ಗಂಡಸರನ್ನು ನಾಚಿಸುವ ತರ ಸಾಹಸ ಕೃತ್ಯಗಳನ್ನು ಮಾಡಿದ್ದು ನಾವು ಕೇಳಿದ್ದೇವೆ. ಸ್ವಭಾವತಃ ಅಬಲೆಯರಾಗಿ, ಸುಕುಮಾರಿಯರಾದ ನಾರೀಜನರು ದಾಸ್ಯ ಸ್ತ್ರೀಯರು ಕಷ್ಟಗಳಿಗೆ, ವೇದನೆಗಳಿಗೆ ನೊಂದು ಹಾಕಿ, ಧೈರ್ಯದಿಂದಲೂ, ನಿರ್ಭೀತಿಯಿಂದಲೂ ಸೆರೆಮನೆಗಷ್ಟೇ ಅಲ್ಲ, ಯಮನ ಮನೆಗೂ ಹೋಗಲಿಕ್ಕೂ ಸಿದ್ಧರಾಗಿ ನಿಂತಿರುವುದು ಮೇಲೆ ಪರಕೀಯರ ಅನ್ಯಾಯದ ಪರಮಾವಧಿಯು ಎಷ್ಟರ ಮಟ್ಟಿಗೆ ಇದೆಯೆಂಬ ಅರಿವು ಯಾವ ಮೂರ್ಖನಿಗೆ ಹೊಳೆಯದಿರಲಿಕ್ಕಿಲ್ಲ? ಯಾವ ದೇಶ ದ್ರೋಹಿಯು ಪಶ್ಚಾತ್ತಾಪ ಪಡಲಿಕ್ಕಿಲ್ಲ? ಯಾವ ದೇಶ ಭಕ್ತನ ಮೈಯ್ಯು ತನ್ನ ಪಡುಕೆಯ ದರ್ಪಣದ ಸ್ವಾಭಿಮಾನಕ್ಕೆ ರೋಮಾಂಚನವಾಗಲಿಕ್ಕಿಲ್ಲ? ಅದರ ಭಾರತೀಯರಾದ ನಮ್ಮಲ್ಲಿ ವಿಲಕ್ಷಣ ಜಾಗ್ರತೆಯನ್ನುಂಟುಮಾಡಿದರಲ್ಲಿ ಆಶ್ಚರ್ಯವೇನೂ ಇಲ್ಲ. ಅಬಲೆಯರಾದ "ಒಲೆಯ ಮುಂದಿನ ಹೆಂಗಳೆರು" ಸ್ವತಃ ಬಂದು ಸಬಲೆಯರಾದದ್ದು ನಾವೆಲ್ಲರೂ ನೋಡಿದ್ದೇವೆ. ಇಂಥಾ ಸಾಧ್ವಿಯರು ದೇಶೋದ್ಧಾರಕ್ಕಾಗಿ ನೆರವು ಬೀರಿದರು ಎಂತ ಗಣನೆ. ಭಾರತೀಯರ ಸ್ವಾತಂತ್ರ್ಯ ಸೂರ್ಯನು ಉದಯಿಸುವನೆಂದು ತಿಳಿಯಬೇಕಲ್ಲವೇ?

ಈ ಉತ್ಕೃಷ್ಟವಾದ ದೇಶ ಸೇವೆಯು ಬರೀ ಬಾಯಿಬಡಕತನದಿಂದ, ಬಾಹ್ಯಾಡಂಬರತನದಿಂದ ನೆರವೇರಲಾರದು. ಒಂದು ತಪಸ್ಸಿನ ವ್ರತದಂತೆ ಸಾಧಿಸಬೇಕು. ತಪಸ್ಸೆಂದರೆ ಪೂರ್ವ ಕಾಲದ ಋಷಿಗಳು ಮಾಡುತ್ತಿದ್ದ ತಪಸ್ಸೆಂಬ ಅರ್ಥವಲ್ಲ. ಆ ಮೋಕ್ಷ ಸಾಧನೆಗೆ ಅನೇಕ ಸಂವತ್ಸರಗಳು ಮಾಡಲ್ಪಡುತ್ತಿತ್ತು. ತಪಸ್ಸಿನಿಂದ ಇಷ್ಟಾರ್ಥ ಸಿದ್ಧಿಯಾಗುವಂತೆ ನವೀನ ತಪಸ್ಸಿನಿಂದ ದೇಶವುದ್ಧಾರವಾಗುವುದು. ಅದೇನೂ ಹೆಚ್ಚಿನ ಕಷ್ಟವಲ್ಲ. ಈ ತಪಸ್ಸಿನ ವ್ರತಾಚರಣೆಯು ಸಾಧನೆಯಿಂದಲೇ ಶ್ರೀ ವಿದ್ಯಾರಣ್ಯರು ಹಿಂದೂ ಸ್ಥಾನದ ತಪಸ್ಸಿನ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ್ದು ಕನ್ನಡಿಗರಿಗೆ ಗೊತ್ತಿದೆ. ಶ್ರೀ ವಿದ್ಯಾರಣ್ಯರು ತಮ್ಮ ತಪಃ ಶಕ್ತಿಯಿಂದ ಸುವರ್ಣ ವೃಷ್ಟಿಯನ್ನು ಸುರಿಸಿದರಂತೆ. ಮಹಾತ್ಮ ಗಾಂಧಿಯವರು ಹೇಳಿರುವ ಪ್ರತವಾದರೂ ಇದೇ ರೀತಿಯಲ್ಲಿರುವುದು. ಮುಖ್ಯವಾಗಿ ದೇಶವುದ್ಧಾರಕ್ಕೆ ಆಟಂಕವಾಗಿರುವ ಅಸ್ಪೃಶ್ಯತೆ, ಅಂತಃ ಕಲಹ ಕೆಲಸಕ್ಕೆ ಬಾರದ ಸ್ವಾರ್ಥಪರತೆಯೂ! ಇವೇ ಮೊದಲಾದವುಗಳನ್ನು ತ್ಯಜಿಸಬೇಕು. ದೇಶ ಕಾರ್ಯವು ಮುಂದೆ ಬರದು ನಿಂತಿರಲು ಜಾತಿ ಮತಾದಿಗಳ ಭೇದವನ್ನು ಕಲ್ಪಿಸಬಾರದು. ಅಸ್ಪೃಶ್ಯತೆ ನಿವಾರಣೆ, ಒಗ್ಗಟ್ಟು, ಅಹಿಂಸೆ ಇವೇ ಮೊದಲಾದ ರಾಷ್ಟ್ರದ ಉದ್ಧಾರದ ಸಂಕಲ್ಪಗಳನ್ನು ಜನರಲ್ಲಿ ಹರಡಲು ಮಾಡಬೇಕು.

ರಾಷ್ಟ್ರೋದ್ಧಾರದ ವಿಚಾರದಲ್ಲಿ ಅಸ್ಪೃಶ್ಯತೆಯು ಅಡ್ಡಬಂದಂತೆ ನೋಡುವುದು ಎಲ್ಲ ದೇಶಭಕ್ತರ ಕರ್ತವ್ಯವು. ಇಂಥ ವಿಷಮ ಸ್ಥಿತಿಯಲ್ಲಿ ರಾಷ್ಟ್ರೋದ್ಧಾರವನ್ನು ಮಾಡುವುದು ಬಿಟ್ಟು ಜಾತಿ, ಕುಲ, ಗೋತ್ರಾದಿ ಸ್ಪೃಶ್ಯಾಸ್ಪೃಶ್ಯತೆ ಇತ್ಯಾದಿಗಳ ನೆಪದಿಂದ, ಅಂತಃ ಕಲಹದಿಂದ ನೀಚ ಸ್ವಾರ್ಥಪರತೆಗಳನ್ನು ಬೆಳೆಸಿ ದೇಶದ್ರೋಹವನ್ನು ಕಟ್ಟಿಕೊಳ್ಳಬಾರದು. ದೇಶೋದ್ಧಾರಕ ಕೆಲಸದಲ್ಲಿ ತಮ್ಮ ತಮ್ಮ ಧರ್ಮ ನೀತಿಗಳನ್ನು ಮುಂದೆ ತರಬಾರದು. ಅಸ್ಪೃಶ್ಯತೆಯ ಮುಖ್ಯ ಕಾರಣವು ಮತಿ ಮೈಲಿಗೆಗಳ ಭಾವನೆಯೆಂದು ತಿಳಿಯಬೇಕು. ಬ್ರಾಹ್ಮಣನಲ್ಲಿಯೇ ಸ್ನಾನಮಾಡಿದವರನ್ನು ಸ್ನಾನಮಾಡದ ಬ್ರಾಹ್ಮಣನು ಮುಟ್ಟುವುದಿಲ್ಲ. ಅದಲ್ಲದೆ ಸ್ತ್ರೀಯನ್ನು ಚಾಂಡಾಲನಂತೆ ಕಾಣದಲ್ಲಿರುವರು. ಅದರ ಮೇಲೆ ಬ್ರಾಹ್ಮಣರು ತಮ್ಮ ತಮ್ಮ ಪಕ್ಷ ಸಹೋದರಿಯರಲ್ಲಿಯೇ ಇಂಥ ಅಸ್ಪೃಶ್ಯತೆಯ ಭಾವನೆಯನ್ನು ಕಲ್ಪಿಸುವರೆ ಅಸ್ಪೃ

ಶ್ಯತೆಯನ್ನು ಒಳಗಿಟ್ಟುಕೊಂಡಂತಾಯಿತಲ್ಲವೇ? ತನಗೆ ಸೇರದಿರುವ ವಸ್ತುವಿನಿಂದ ದೂರವಾಗಿರುವುದು, ಇಲ್ಲವೇ ಸ್ಪರ್ಶಮಾಡದೆ ಇರುವುದು ಮನುಷ್ಯನ ಸ್ವಭಾವವು. ಈ ಅಸ್ಪೃಶ್ಯತೆಯ ವಿಚಾರವು ವ್ಯಕ್ತಿದೋಷವನ್ನು ಹೊಂದಿರುವುದಿಲ್ಲ. ಕೇವಲ ಪವಿತ್ರಾಚರಣೆಯನ್ನವಲಂಬಿಸಿದೆ. ಪ್ರತಿಯೊಬ್ಬ ಮನುಷ್ಯನ ಕೃತಿಯಿಂದ "ಆರ್ಯ," "ಅನಾರ್ಯ" ಎಂಬ ಭೇದವನ್ನು ಕಲ್ಪಿಸಬಹುದು. ಇದಲ್ಲದೆ ಆತ್ಮಘಾತುಕತನದಿಂದ ಶ್ರೇಷ್ಠರಾದವರು ಕೂಡ ಅಸ್ಪೃಶ್ಯರಿಗೂ ಅಸ್ಪೃಶ್ಯರಾಗಿರುವರು. ಹಾಗಾದರೆ ಅಸ್ಪೃಶ್ಯರು ಯಾರು? ಸತ್ತ ದನದ ಮಾಂಸವನ್ನು ತಿನ್ನುವವರೇ? ಮಾಡಲು ಅಯೋಗ್ಯವಾದ ಕೆಲಸಗಳಿಂದ ಜೀವನ ವೃತ್ತಿಯನ್ನು ಮಾಡುವವರೆ? ಅಶುಚಿಯಾಗಿರುವವರೇ? ರಾಷ್ಟ್ರೋದ್ಧಾರಕ ಕೆಲಸದಲ್ಲಿ ಆ ಮನೋವಿಕಾರವನ್ನು ಬರವೆ ಮಾಡಬಾರದು. ಅಸ್ಪೃಶ್ಯತೆಯು ಜಾತಿಯಲ್ಲಿರದೆ ಆ ವ್ಯಕ್ತಿಯ ಮನೋವೃತ್ತಿಯಲ್ಲಿರುವದೆಂದು ತಿಳಿಯಬೇಕು. ಹೀಗೆ ಮಾಡುವದರಿಂದ ಅಸ್ಪೃಶ್ಯತೆಯು ಇಂದಲ್ಲ ಒಂದು ದಿನ ತಾನಾಗಿಯೇ ಶಿಥಿಲವಾಗುವದರಲ್ಲಿ ಸಂಶಯವಿಲ್ಲ. ರಾಷ್ಟ್ರದ ಸ್ವಾತಂತ್ರ್ಯವು ನಷ್ಟವಾಗುತ್ತಿರುವಾಗ ರಾಷ್ಟ್ರದೊಳಗಿನ ಜನರು ತಮ್ಮ ತಮ್ಮ ಆಚಾರ, ನೀತಿ, ಪದ್ಧತಿಗಳನ್ನು ಪರಿತ್ಯಾಗ ಮಾಡಿ ರಾಷ್ಟ್ರೋದ್ಧಾರದ ಕಾರ್ಯವನ್ನು ಮಾಡಲು ಬದ್ಧಕಂಕಣರಾಗಿರಬೇಕು. ಅಸ್ಪೃಶ್ಯತೆಯಿಂದ ದೇಶದ ಸ್ವಾತಂತ್ರ್ಯವು ನಷ್ಟವಾಗಿ ಕೊನೆಗೆ ಅಧಃಪತನದ ಹಾದಿಯನ್ನು ಹಿಡಿಯಬೇಕಾಗುವುದು. ಪ್ರತಿಯೊಬ್ಬರೂ ಸ್ಪೃಶ್ಯಾಸ್ಪೃಶ್ಯ ಭೇದವನ್ನು ಎಣಿಸದೆ ಭುಜಕ್ಕೆ ಭುಜವಾನಿಸಿ ಸ್ವಾತಂತ್ರ್ಯವನ್ನು ಹೊಂದಲು ಸಿದ್ಧರಾಗತಕ್ಕದ್ದು ಮುಖ್ಯ ವಿಷಯ. ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿಯೂ, 'ತಾನು ದೇಶಭಕ್ತನು, ದೇಶಸೇವೆಯೇ ಈಶಸೇವೆಯು, ಅಂಥ ಪುಣ್ಯಕರವಾದ ದೇಶಸೇವೆಯನ್ನು ಮಾಡಲು ಕೈಗೊಂಡವನು, ಇದಲ್ಲದೆ ತಾವೆಲ್ಲರೂ ದೇಶಬಾಂಧವರು" ಎಂಬ ಈ ಅಭಿಮಾನವನ್ನು ಇಟ್ಟುಕೊಂಡಿರಬೇಕಲ್ಲದೆ. "ತಾವು ಉಚ್ಚ ಕುಲದವರು, ತಾವು ಹೀನ ಕುಲದವರು, ತಾವು ಐಶ್ವರ್ಯವಂತರು, ತಾವು ಬಡವರು" ಎಂಬ ವ್ಯತ್ಯಾಸವನ್ನೂ, ಸ್ತ್ರೀಪುರುಷ ಭೇದವನ್ನೂ ಎಣಿಸದೆ, ಪ್ರತಿ ವ್ಯಕ್ತಿಯ ಹೃದಯದಲ್ಲಿ ದೇಶೋದ್ಧಾರದ ಕಾರ್ಯವನ್ನು ಧರಿಸಿ ಒಗ್ಗಟ್ಟಿಗೆ ಭೇದ ತರುವ ಕ್ಷುದ್ರ ಭೇದಭಾವವನ್ನು ಅಳಿಯುವಂತೆ ಮಾಡಬೇಕು. ಹೀಗೆ ಒಗ್ಗಟ್ಟಿನಿಂದ ದೇಶೋದ್ಧಾರಕ್ಕಾಗಿ ಮುಂದುವರಿಯುವ ನಾವು ಬ್ರಾಹ್ಮಣರು, ಬ್ರಾಹ್ಮಣೇತರರು, ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು ಎಂಬ ಪರಸ್ಪರ ಭೇದವನ್ನು ನಟಿಸಿ ಉಂಡತನದಿಂದ ಜಗಳಾಡುವದಾದರೆ ದೇಶೋದ್ಧಾರದ ಕಾರ್ಯವು ಎಲ್ಲಿಯೋ ಉಳಿದು ಹೋಗುವದಲ್ಲವೇ?

ಒಗ್ಗಟ್ಟನ್ನು ಕಾಯ್ದುಕೊಳ್ಳುವುದು ಎರಡನೆ ವಿಷಯ. ಕೆಲವು ಕಡೆ ಹಿಂದೂ ಮುಸಲ್ಮಾನರು ತಮ್ಮ ತಮ್ಮ ಧರ್ಮದ ಅಭಿಮಾನದಿಂದ ಅಂಥ [illegible] ಅನಾಹುತಗಳನ್ನು ನಡೆಸಿದ್ದು ನಾವು ನೋಡುತ್ತೇವೆ. ಮೊನ್ನೆ ಕಾಶಿ ಕಾನ್‌ಪುರದಲ್ಲಿ ನಡೆದ ಭಯಂಕರ ಕೃತ್ಯಗಳನ್ನು ನೆನೆದರೆ ಯಾರ ಹೃದಯವೂ ಕಂಪಿಸದಿರಲಿಕ್ಕಿಲ್ಲ. ಧರ್ಮದ ಹೆಸರಿನಿಂದ ರಕ್ತದ ಕಾಲುವೆಗಳು ಹರಿದುವು. ಇದಕ್ಕೆ ಧರ್ಮ ದುರಭಿಮಾನವುಳ್ಳವರು ತಮ್ಮ ಧರ್ಮವೇ ಶ್ರೇಷ್ಠವೆಂದು ಭಾವಿಸಿ ಇತರ ಧರ್ಮದವರನ್ನು ಕೆಣಕುವುದೇ ಕಾರಣ. ಸ್ವಧರ್ಮದ ನಿಜವಾದ ಸ್ವರೂಪವೇ ತಿಳಿಯದಿರುವಾಗ ಪರಧರ್ಮದ ಸ್ವರೂಪವು ತಿಳಿಯುವ ಬಗೆ ಹೇಗೆ? ಇಂಥವರನ್ನು ಒಂದು ಖಾನೆಯಲ್ಲಿ ಶಿಕ್ಷಿಸುವದಕ್ಕಿಂತ ಮೋಘಾಬೆರಾಬವರು ಹೇಳಿದಂತೆ ಹುಚ್ಚರ ಆಸ್ಪತ್ರೆಗೆ ಕಳುಹಿಸಿದರೆ ಉಚಿತ ವಾದೀತು. ಏಕೆಂದರೆ ಅವರು ಹುಚ್ಚುತನದಿಂದ ಒಬ್ಬರ ರಕ್ತವನ್ನು ಇನ್ನೊಬ್ಬರು ಹೀರುತ್ತಿರುವರಲ್ಲದೆ ನಿಜವಾದ ಧರ್ಮದ ಕಾರಣದಿಂದಲ್ಲ. ಈ ಮನೋರೋಗಿಗಳು ಆಸ್ಪತ್ರೆಯಲ್ಲಿ (Mental Hospital) ಯಲ್ಲದೆ ಬೇರೆ ಕಡೆ ಶಮನವಾಗಲಾರದು.

ಸ್ವಾರ್ಥತ್ಯಾಗವೇ ದೇಶೋದ್ಧಾರದ ಮೂಲವೆಂದು ಹೇಳಬಹುದು. ಕೇವಲ ನೀಚ ಸ್ವಾರ್ಥತೆಗೆ ಒಳಬಿದ್ದು ಆತ್ಮಘಾತುಕತನದಿಂದ ಕೆಲಸಮಾಡುವ ಜನರಿಂದ ಸ್ವದೇಶೋದ್ಧಾರವಾಗದು. 'ತಪ್ಪ ಹೋಳಿಗೆಯ ತುಪ್ಪದಲ್ಲಿ, ಕೇಗೆ ಒದ್ದೀತೆ ಎಂಬ ವಿಚಾರವೇ ಅವರ ಮನಸ್ಸಿನಲ್ಲಿರುವುದು. ಭರತ ಖಂಡವೆಂಬ ಆಕಾಶ ಮಂಡಲದಲ್ಲಿ ಸಣ್ಣ ದೊಡ್ಡ ದೇಶೋದ್ಧಾರಕರೆಂಬ ನಕ್ಷತ್ರಗಳು ಎಷ್ಟೋ ಇರುತ್ತಿವೆಯಲ್ಲವೇ? ಅವರು ಸ್ವಾರ್ಥಪರರಾಗಿದ್ದರೆ ಅವರಿಂದ ಪ್ರಕಾಶವು ಎಲ್ಲಿಂದ ಬರಬೇಕು? ಮಹಾತ್ಮರಂಥ ಉಜ್ವಲ ದೇಶಭಕ್ತನೆಂಬ ಸೂರ್ಯನ ತೇಜಸ್ಸಿನಿಂದ ಆ ಎಲ್ಲ ತೇಜಗಳು ಸೇರಿ ಭಾರತ ದೇಶವಾದ ಆ ಭೂಮಂಡಲವು ಪ್ರಕಾಶಿತವಾಗಿ ದೇಶಸೇವೆಗೆ ತೊಡಗುವ ಪ್ರತಿಯೊಬ್ಬ ವ್ಯಕ್ತಿಗೂ ಮಾರ್ಗದರ್ಶಕವಾಗಿರುವುದು. ದೇಶಸೇವೆಯಿಂದ ಕೃತಕೃತ್ಯರಾಗಲು ಇಚ್ಛಿಸುವವನು ಈ ಸುಸಂಧಿಯನ್ನು ವ್ಯರ್ಥ ಕಳೆದುಕೊಳ್ಳುತ್ತಿರುವದು ಯೋಗ್ಯವಲ್ಲ. ನ್ಯಾಯವಾಗಿ ತಮ್ಮಲ್ಲಿರುವ ಕ್ಷುದ್ರ ಅಂತಃಕಲಹ, ಸ್ವಾರ್ಥ, ಅಸ್ಪೃಶ್ಯತೆ ಭಾವ ಇತ್ಯಾದಿಗಳನ್ನು ದೂರಮಾಡಿ ಒಗ್ಗಟ್ಟನ್ನು ಕಾಯ್ದುಕೊಂಡು ದೇಶಸೇವೆಗೆ ಟೊಂಕ ಕಟ್ಟಬೇಕಾದದ್ದು ಎಲ್ಲರ ಕರ್ತವ್ಯವು.

ಗಾಂಧೀಜೀಯವರ ಪ್ರಯಾಣ.

'ರಜಪೂತಾನ' ಹಡಗವು 'ರೆಡ್ ಸೀ'ದ್ರ'ವನ್ನು ದಾಟಿ ಹೋಗುತ್ತಿದ್ದ ಸಮಯದಲ್ಲಿ ಈ ತಾ 7ರಲ್ಲಿ ಹಡಗಿನಲ್ಲಿ ಕ್ರೈಸ್ತರು ಪ್ರಾರ್ಥನೆ ಮಾಡುತ್ತಿದ್ದಾಗ್ಯೆ ಮಹಾತ್ಮ ಗಾಂಧಿಯವರು ತಮ್ಮ ಪಾದುಕೆಯ ಬರೇ ಕಾಲಿಂದ ಮುಂದಿಟ್ಟುಕೊಂಡು ಸದರಿ ಪ್ರಾರ್ಥನೆಯಲ್ಲಿ ಸೇರಿದರು. ಅದು ಪ್ರಾರ್ಥನೆ ಮಾಡುತ್ತಿದ್ದವರಿಗೆ ಆಶ್ಚರ್ಯವನ್ನುಂಟುಮಾಡಿತು.

ಈ ದಿನ ಮಹಾತ್ಮರಿಗೆ ಈಜಿಪ್ಟಿನವರು ಮತ್ತು ಹಿಂದೀಯರು ಸುವೆಜ್‌ನಲ್ಲಿ ಯೋಗ್ಯ ರೀತಿಯಲ್ಲಿ ಸ್ವಾಗತವನ್ನಿತ್ತರು. ಹಡಗು ತಡವಾಗಿ ತಲುಪಿದ್ದರಿಂದ ಮಹಾತ್ಮರಿಗೆ ಅಲ್ಲಿ ಇಳಿದು ನೋಟಗಳನ್ನು ನೋಡಲು ಅನುಕೂಲವಾಗಲಿಲ್ಲ.

ಮಹಾತ್ಮರಿಗೆ ಇನ್ನೂ ಪ್ರಪಂಚದ ಹಲವು ಕಡೆಗಳಿಂದ ಅನೇಕ ಅಭಿವಂದನೆಯ ವಾರ್ತೆಗಳು ಬರುತ್ತಿವೆ. ಇವುಗಳಲ್ಲಿ ಈಜಿಪ್ಟಿನ ಪ್ರಸಿದ್ಧಿಗೊಂಡ ರಾಷ್ಟ್ರೀಯ ಮುಂದಾಳಾಗಿದ್ದ ಲೇಟ್ 'ಜಗುಲುಲ್' ಪಾಷಾರವರ ಪತ್ನಿಯವರದೊಂದು ಆಗಿದೆ. ಈಜಿಪ್ಟಿನ ವಾಫ್ಡ್ ಪಾರ್ಟಿಯ ಅಧ್ಯಕ್ಷರಾದ ನಾಹಾಸ್ ಪಾಷಾರವರು—'ನಿಮ್ಮ ಪ್ರಯತ್ನದಲ್ಲಿ ನಿಮ್ಮ ನಿಶ್ಚಯದಷ್ಟೇ ದೊಡ್ಡ ಜಯವು ಉಂಟಾಗಲೆಂದು ದೇವರಿಗೆ ಪ್ರಾರ್ಥಿಸುತ್ತೇನೆ. ಕಲೂ, ವಾಪಸು ಬರುವಾಗ್ಯೆ ಮಹಾತ್ಮರು ಈಜಿಪ್ಟನ್ನು ಸಂದರ್ಶಿಸಬೇಕಂತಲೂ ಗಾಂಧೀಜಿಯವರಿಗೆ ತಂತಿ ವಾರ್ತೆ ಕಳುಹಿಸಿದರು. ಮಹಾತ್ಮರು ಸುವೆಜ್‌ನಲ್ಲಿ, 'ಮನುಷ್ಯನು ಶಾಂತಿಯ ದೂತನಾಗಿದ್ದನು. ಆದರ ಹಿಂಬಾಲಕರು ನೀವು ಒಗ್ಗಟ್ಟಿಗೇನೇ ಪ್ರಯತ್ನಿಸಬೇಕು. ಹಿಂದೂಸ್ಥಾನದ ಒಗ್ಗಟ್ಟು ಮತ್ತು ಸ್ವಾತಂತ್ರ್ಯದ ಮೇಲೆ ಭೂಲೋಕದ ಶಾಂತಿಯು ನಿಂತಿರುವ ಕಾರಣ, ಇಂಡಿಯಾವು ಪರದಾಸ್ಯದಲ್ಲಿರುವ ವರೆಗೆ ಜನಾಂಗಗಳೊಳಗೆ ನಿಜವಾದ ಶಾಂತಿ ಇರಲಾರದು' ಎಂದು ಹೇಳಿ ಹಿಂದೂ ಮುಸಲ್ಮಾನರ ಐಕ್ಯತೆಗೆ ಸಹಾಯ ಮಾಡಬೇಕೆಂದು ಈಜಿಪ್ಟಿನವರಿಗೆ ಅಪ್ಪೀಲು ಮಾಡಿದರು.

ದುಂಡು ಮೇಜು ಪರಿಷತ್ತು ಜಯಪ್ರದವಾದರೆ ಗಾಂಧಿಜಿಯವರು ಅಮೇರಿಕಾಕ್ಕೆ ಹೋಗಬಹುದೆಂದು ಊಹಿಸಲಾಗಿದೆ. ಇಂಗ್ಲೆಂಡಿನಲ್ಲಿ ತನಗೆ ಸಾರ್ವಜನಿಕ ಕೂಟಗಳಿಗೆ ಹೋಗಲು ಸಮಯವಿರಲಿಕ್ಕಿಲ್ಲವೆಂತಲೂ, ಹಿಂದೂಸ್ಥಾನದ ಈಗಿನ ಪರಿಸ್ಥಿತಿಯಲ್ಲಿ ಅಭಿರುಚಿ ಇರುವ ಪ್ರತಿಯೊಬ್ಬ ಗಂಡಸು, ಹೆಂಗಸರೊಂದಿಗೆ ಮಾತಾಡಲು ತಯಾರಾಗಿರುವೆನೆಂದು ಮಹಾತ್ಮರು ಹೇಳಿರುವರು. ಮಹಾತ್ಮರು ಹಡಗಿನಲ್ಲಿ ಒಂದನೇ ದುಂಡು ಮೇಜು ಪರಿಷತ್ತಿನ ಪ್ರೊಸೀಡಿಂಗ್ಸನ್ನು ಓದುತ್ತಿದ್ದರಲ್ಲದೆ, ಸಾಯಂಕಾಲಗಳಲ್ಲಿ ಹಿಂದೀ ವಿದ್ಯಾರ್ಥಿಗಳಿಗೆ ಮತ ವಿಷಯ ಭಾಷಣಗಳನ್ನು ಕೊಡುತ್ತಿದ್ದರು. ಮಹಾತ್ಮ ಗಾಂಧಿಯವರ ಮತ್ತು ಬೇರೆ ಪ್ರತಿನಿಧಿಗಳ ದೇಹ ಸಂರಕ್ಷಣೆ ಬಗ್ಗೆ ಲಂಡನಿನಲ್ಲಿ ಸ್ಕಾಟ್‌ಲ್ಯಾಂಡ್ ಯಾರ್ಡ್ ಪೋಲೀಸಿನವರು ವಿಶೇಷ ಬಂದೋಬಸ್ತು ಏರ್ಪಾಡು ಮಾಡಿರುವರು.

'ಮಹಾತ್ಮರಿಗೆ ಲಂಡನಿನಲ್ಲಿ ಸ್ವಾಗತವನ್ನೀಯಲು ಪಾರ್ಲಿಮೆಂಟ್ ಮೆಂಬರುಗಳೇ ಮೊದಲಾದವರು ಸೇರಿ ಒಂದು ಕಮಿಟಿ ಏರ್ಪಾಡಾಗಿದೆ. ಸದರಿ ಕಮಿಟಿಯವರು ಚರ್ಚುಗಳು, ಸಾರ್ವಜನಿಕ, ರಾಜಕೀಯ ಮತ್ತು ಕೈಗಾರಿಕೆ ಸಂಸ್ಥೆಗಳ 1400 ಮಂದಿಗಳನ್ನು ಸ್ವಾಗತ ಕಾರ್ಯಕ್ಕೆ ಆಹ್ವಾನಿಸಿರುವರು. ಇವರ ಪೈಕಿ ಹೆ. ಚರ್ಚ್ ಹಿಲ್‌ರವರೂ ಇರುವರು' ಎಂದು ತಾ 9ರ ವರ್ತಮಾನ.

ಗಾಂಧೀಜೀಯವರು ಫ್ರಾನ್ಸಿನಲ್ಲಿ.

ತಾ 12ರಲ್ಲಿ 'ರಜಪೂತಾನ' ಹಡಗವು ಫ್ರಾನ್ಸಿನ ಮಾರ್ಸೇಲ್ಸ್ ಬಂದರಿಗೆ ತಲಪಿತು. ಹವವು ಬಹು ಶೀತವಾಗಿದ್ದರೂ ಬರೇ ಕಂಬಳಿ ಪಂಚೆಯನ್ನುಟ್ಟುಕೊಂಡು, ತಾನೇ ಮಾಡಿದ ಶಾಲನ್ನು ಹೊದ್ದುಕೊಂಡಿದ್ದ ಮಹಾತ್ಮರು 'ಡೆಕ್'ನಲ್ಲಿ ನಿಂತುಕೊಂಡಿರುವುದನ್ನು ಕಂಡ ಕೂಡಲೇ ಅಲ್ಲಿ ಕಾದುಕೊಂಡಿದ್ದ ಸಾವಿರಾರು ಜನ [illegible] ಘೋಷವನ್ನು ಮಾಡಿದರು. ಮಹಾತ್ಮರು ಎರಡೂ [illegible] ಜೋಡಿಸಿ ನಮಸ್ಕರಿಸಿದರು. ಗಾಂಧೀಜಿಯವರು [illegible]ದ ಇಳಿಯಲುದ್ಯುಕ್ತರಾದೊಡನೆ ಪತ್ರಿಕಾ ಪ್ರತಿನಿಧಿಗಳೂ ಫೋಟೋ ತೆಗೆಯುವವರೂ ಅವರನ್ನು ಮುತ್ತಿಕ್ಕಿ[illegible] ಪೋಲೀಸರ ಸಹಾಯದಿಂದ ಮಹಾತ್ಮರಿಗೆ ಉಸಿರಾಡ[illegible] ಸಮಯ ದೊರೆಯುವಂತಾಯಿತು. ಮಹಾತ್ಮರ ಪ್ರ[illegible]ರ್ಶನವು ಇಲ್ಲಿಯವರಿಗೆ ಅವರ ಮೇಲಿದ್ದ ಅಭಿಪ್ರಾ[illegible] ಸಂಪೂರ್ಣ ಹೆಚ್ಚಿಸಿದೆ. ಅವರ 'ಸೋಂಕಿನ [illegible]ಳು ನಗೆಯು ಎಲ್ಲರ ಹೃದಯಗಳನ್ನೂ ತನ್ನ ವಶ[illegible] ಕೊಂಡಿತು.

ಮಹಾತ್ಮರು ಹಡಗಿನಲ್ಲಿ ಹೆಚ್ಚು ಸಿನ್ನ ಮಾ[illegible] ಕೂಡ ಅವರ 93 ಪೌಂಡು ತೂಕವು ಒಂದೇ 2 ಔನ್[illegible] ಮಾತ್ರ ಹೆಚ್ಚಾಗಿದೆ. '11 ವರ್ಷಗಳ ನಂತರ ಇಂ[illegible] ಹೋಗಲು ತನಗೆ ಅವಕಾಶವುಂಟಾಗಿದೆ'ಯೆಂತ ಗಾ[illegible]ಯವರು ಸೂಚಿಸಿದರು. ದುಂಡು ಮೇಜು ಪ[illegible] ಮೀಟಿಂಗುಗಳಲ್ಲಿ ಆಗುವುದಕ್ಕಿಂತ ಹೆಚ್ಚಿನ ಕೆಲಸವು ಮುಂದಾಳುಗಳ ಖಾಸಗಿ ಸಂಭಾಷಣೆಗಳಿಂದಾಗುವುದೆಂದು [illegible]ತ್ಮರ ನಂಬಿಗೆಯಂತೆ. ದುಂಡು ಮೇಜು ಪರಿಷತ್ತು [illegible] ಎರಡು ವಾರಗಳಲ್ಲಿ ಪ್ರಾಮುಖ್ಯ ತತ್ವಗಳಲ್ಲಿ ನಿ[illegible] ಹೋದರೆ ನವಂಬರು 15ರ ವರೆಗೆ ನಡೆಯಬಹುದೆಂದು ಮ[illegible]ಹಾತ್ಮರು ಹೇಳಿದರು.

ಮಾರ್ಸೇಲ್ಸಿನಲ್ಲಿ 'ರಾಯಿಟರ' ಪ್ರತಿನಿಧಿಯೊಂದಿಗೆ [illegible]ಧೀಜೀಯವರು ಹೀಗೆಂದರು —"ಬ್ರಿಟಿಷ ಸರ್ಕಾರಕ್ಕೆ ಈ[illegible]ಷ್ಟ ದೇಶದ ಅತೀ ಕಷ್ಟತರವಾದ ಸಮಸ್ಯೆಯನ್ನು ಬಿಡಿಸ[illegible]ಗಿರುವುದರಿಂದ ಹಿಂದೀಯರ ಕೋರಿಕೆಯನ್ನು ತಿರಸ್ಕ[illegible] ಬಹಿರಾನು ಭಾಗದ ಮತ್ತು ಬಹಿಷ್ಕಾರದ ಚಳವಳನ್ನು [illegible]ಹ ಹೊರಡಿಸುವ ಜವಾಬ್ದಾರಿಯನ್ನು ಅದು ತೆಗೆದು[illegible]ಕ್ಕಿಲ್ಲ. ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾದ [illegible] ಪ್ರಯತ್ನಗಳನ್ನು ಮಾಡುವ ವರೆಗೂ ಹೋರಾಟವನ್ನು [illegible]ಹ ಪ್ರಾರಂಭಿಸುವ ಜವಾಬ್ದಾರಿಯನ್ನು ತಾನು ತೆಗೆದುಕೊಳ್ಳುವುದಿಲ್ಲ."

ಚಕ್ರವರ್ತಿಯವರ ಅರಮನೆಗೆ ಹೋಗುವಿರೋ ಎಂ[illegible] ಕೇಳಿದಕ್ಕೆ ಮಹಾತ್ಮರು 'ನಾನು ಇಂಗ್ಲಿಷ್ ಸರ್ಕಾರದ [illegible] ನೋಡಬೇಕಿದ್ದದ್ದು' ಎಂದು ಉತ್ತರ ಕೊಟ್ಟರು. [illegible]ಹಾತ್ಮರು ಮಾರ್ಸೇಲ್ಸಿನಲ್ಲಿ ಹಿಂದೀ ವಿದ್ಯಾರ್ಥಿಗಳ ಸ್ವಾಗ[illegible]ವನ್ನು ಸ್ವೀಕರಿಸಿ ರೈಲಿಗೆ ಹೊರಟು ಹೋದರು.

ಹಡಗಿನಲ್ಲಿ ಮಹಾತ್ಮರಿಗೂ, ಶೌಕತ್ ಅಲಿಯವರಿ[illegible] ಸಂಭಾಷಣೆಗಳು ನಡೆದು ಕೋಮುವಾರು ಸಮಸ್ಯೆಯ [illegible] ಪರಿಹಾರವು ಸುಲಭವಾಗುತ್ತಿದೆ. ಡಾಕ್ಟರ್ ಅನ್ಸಾರಿಯವ[illegible]ನ್ನು ದುಂಡು ಮೇಜು ಪರಿಷತ್ತಿಗೆ ಒಬ್ಬ ಪ್ರತಿನಿಧಿಯಾಗಿ [illegible]ಸಲು ಶೌಕತ್ ಅಲಿಯವರು ಉತ್ತೇಜನ ಕೊಡುತ್ತೇನೆಂದು ಹೇಳಿರುವರಂತೆ.

ಮಹಾತ್ಮರು ಇಂಗ್ಲೆಂಡಿಗೆ ತಲಪಿದರು.

ಮಹಾತ್ಮ ಗಾಂಧಿಯವರು ಈ ತಾ. 12ನೇ ಶನಿವಾ[illegible] ಮಧ್ಯಾಹ್ನ 2 ಗಂಟೆಗೆ 'ಫೋಕ್‌ಸ್ಟೋನ್' ಎಂಬಲ್ಲಿಗೆ ತ[illegible]ಪಿದರು. ಮಳೆಯು ಜೋರಾಗಿ ಹೊಡೆಯುತ್ತಿದ್ದರೂ ದೊ[illegible]ಡ್ಡ ಜನಸ್ತೋಮವು ಸೇರಿತ್ತು. ಜನರ ದುಮುಕನ್ನು ತಡೆ[illegible]ಲು ಪೋಲೀಸರ ಸಹಾಯ ಬೇಕಾಯಿತು. ಅಲ್ಲಿ ಕೆಲ[illegible] ಮುಂದಾಳುಗಳಿಂದ ಎದುರುಗೊಳ್ಳಲ್ಪಟ್ಟು ಮಹಾತ್ಮರು ವಿ[illegible]

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ

ಬೋನಸ್ ವರ್ಷ!

ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು —
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರ್ಯಾಂಚ್ ಆಫೀಸು—
152—3 ಕಮರ್ಷಲ್ ಸ್ಟ್ರೀಟ್,
ಬೆಂಗಳೂರು.

52—3

52—9



...ನಿಂದ ಹೊರಟು ಲಂಡನಿಗೆ 4 ಗಂಟೆಗೆ ತಲುಪಿದರು. ವಾತಾವರಣ ಮಾತ್ರ ಚೆನ್ನಾಗಿರಲಿಲ್ಲವಲ್ಲದೆ ನಿಲ್ದಾಣದಲ್ಲಿ [illegible] ಗಳಾಗಲಿಲ್ಲ. ವಿದ್ಯಾರ್ಥಿಗಳು ಕೆಲವರು ಏನೋ ತಂಟೆ ಎಬ್ಬಿಸುವರೆಂಬ ಸುದ್ದಿ ಇತ್ತು. ಆದರೆ ಗಾಂಧೀಜಿಯವರಿಗೆ ಸ್ವಾಗತವೀಯಲು ಏರ್ಪಡಿಸಿದ್ದ 'ಫ್ರೆಂಡ್ಸ್ ಹೌಸ್' ಎಂಬ ಕಟ್ಟಡದ ಬಾಗಿಲುಗಳನ್ನು ಪೋಲೀಸಿನವರು ಬಲವಾಗಿ ಕಾದಿದ್ದು ಜನರನ್ನು ಪರೀಕ್ಷಿಸಿ ಒಳಗೆ ಬಿಡಲಾಯಿತು. ಎಲ್ಲಾ ಪಾರ್ಟಿ, ಪಂಗಡ, ಸಂಸ್ಥೆಗಳ ಒಂದು ಸಾವಿರ ಪ್ರತಿನಿಧಿಗಳು ಬಂದಿದ್ದರು. ಪ್ರಧಾನ ಮಂತ್ರಿಯವರು, ಕನ್ಸರ್ವೇಟಿವ್ ಪಾರ್ಟಿಯ ಮುಂದಾಳಾದ ಮಿ. ಬಾಲ್ಡ್ವಿನ್‌ರವರು ಮತ್ತು ಲೇಬರ್ ಪಾರ್ಟಿಯ ಮುಂದಾಳಾದ ಮಿ. ಹೆಂಡರ್ಸನ್‌ರವರು ಅಲ್ಲಿಗೆ ಬರಲು ತಮ್ಮ ಅನಾನುಕೂಲಕ್ಕೆ ವ್ಯಸನ ಸೂಚಿಸಿ ಬರೆದಿದ್ದರು. 'ಫ್ರೆಂಡ್ಸ್ ಹೌಸ್'ನಲ್ಲಿದ್ದವರಲ್ಲಿ ಅರ್ಧ ಇಂಗ್ಲಿಷ್ ಜನರೂ, ಬಾಕಿ ಅರ್ಧ ಹಿಂದೀಯರೂ ಆಗಿದ್ದರು. ಅನೇಕ ಹಿಂದೀಯರು ಗಾಂಧಿ ಟೋಪಿಯನ್ನು ಧರಿಸಿದ್ದರು. ಕಿಕ್ಕಿರಿದು ತುಂಬಿದ್ದ ಸಭೆಯು ಮಹಾತ್ಮರು, ಸರೋಜಿನಿದೇವಿ, ಪಂಡಿತ ಮಾಳವೀಯ ಮೊದಲಾದವರೊಡನೆ ಹಾಲಿಗೆ ಬಂದ ತಕ್ಷಣ ಎದ್ದು ನಿಂತು ಜಯಘೋಷ ಮಾಡಿದರು. ಮಹಾತ್ಮರು ಮತ್ತು ಪಂಡಿತ ಮಾಳವೀಯರಿಗೆ ಖಾದಿಯ ಹಾರವನ್ನು ಹಾಕಿದಾಗ ಪುನಃ ಜಯ ಘೋಷಗಳಾದವು. ಮಹಾತ್ಮರು ಕೈಜೋಡಿಸಿ ನಸುನಗಾಡಿದರು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮಿ. ಲಾರೆನ್ಸ್ ಹೌಸ್‌ಮನ್‌ರವರು— ಮಹಾತ್ಮರಿಗೆ ಇಂಗ್ಲಿಷ್ ಸ್ನೇಹಿತರ ಪರವಾಗಿ ಸುಸ್ವಾಗತವಿತ್ತರು; ಈ ದೇಶದಲ್ಲಿ ಹಿಂದೂ ದೇಶದ ಹಿತವನ್ನು ಬಯಸುವ ಪಂಗಡವು ಬೆಳೆಯುತ್ತಾ ಇದೆಯೆಂದೂ, ಅದು, ದುಂಡು ಮೇಜು ಪರಿಷತ್ತು ಅಪಜಯವಾದರೂ ಕೂಡ, ಕಡಿಮೆಯಾಗ[illegible]ಲ್ಲವೆಂದೂ ಭರವಸೆಯನ್ನಿತ್ತರು.

ಮಹಾತ್ಮರು ಕೂತುಕೊಂಡೇ ಭಾಷಣ ಮಾಡಿದರು. ಮಾತಿಗೆ ಪ್ರಾರಂಭಿಸಿದಾಗ ಜಯಕಾರವಾಯಿತು. ಅವರ ಭಾಷಣದ ಸಾರಾಂಶವೇನೆಂದರೆ—'ತನ್ನ ಪ್ರತಿನಿಧಿತ್ವವನ್ನು ಒಪ್ಪಿಕೊಳ್ಳದವರ ಪರವಾಗಿ ತಾನು ಬಾರದಿದ್ದರೂ, ಹೊಟ್ಟೆಗಿಲ್ಲದೆ ಕಷ್ಟಪಡುತ್ತಿರುವ ಮೂಕ ಮಿಲ್ಲಿಯದವರ ಪ್ರತಿನಿಧಿಯು ತಾನು. ತಾನು ತನ್ನ ಸ್ನೇಹಿತರೊಂದಿಗೆ ದೊಡ್ಡ ಇಂಗ್ಲಿಷ್ ಜನಾಂಗದ ಅತಿಥಿಗಳಾಗಿ ಶಾಂತಿಯನ್ನು ಪಡೆಯಲು ಬಂದದ್ದಾಗಿದೆ. ಇಂಗ್ಲಿಷರ ಆತಿಥ್ಯವನ್ನು ತಾವೆಂದಿಗೂ ದುರುಪಯೋಗಪಡಿಸಲಾರೆವು. ತಾನು ಕಾಂಗ್ರೆಸ್ ಸಂಸ್ಥೆಯಿಂದ ಅಧಿಕಾರ ಹೊಂದಿದ ಏಜೆಂಟನಾಗಿ ಬಂದಿರುವುದರಿಂದ ಕಾಂಗ್ರೆಸ್ಸಿನ ಹೋರಾಟದ ಗತಿಯನ್ನು ದಾಟಿ ಹೋಗಲಾರೆನು. ಕಾಂಗ್ರೆಸ್ಸು ಪೂರ್ವ ಜನಾಂಗವೂ ಗರ್ವಪಡುವಂಥ ಉದ್ದೇಶಕ್ಕೆ ನಿಂತಿದೆ ಮತ್ತು ಅದಕ್ಕೆ ಮಿತ್ರವಿಲ್ಲದ ಸ್ಪಷ್ಟ ಸ್ವಾತಂತ್ರ್ಯವು ಬೇಕಾಗಿದೆ. (ಜಯ ಘೋಷ) ಈ ಉದ್ದೇಶವನ್ನು ಸಾಧಿಸಲು ಕಾಂಗ್ರೆಸ್ಸು ಅಹಿಂಸಾ ಮತ್ತು ಸತ್ಯವನ್ನು ಸಾಧನಗಳಾಗಿ ಆರಿಸಿಕೊಂಡಿದೆ, ಮತ್ತು ಅದರ ಪ್ರತಿನಿಧಿಗಳು ಈ ತತ್ವಗಳಿಗೆ ವಿರೋಧವಾಗಿ ವರ್ತಿಸಿದರೆ ಇಡೀ ಪ್ರಪಂಚದ ಶಾಪಕ್ಕೆ ಗುರಿಯಾಗುವರು. ತನ್ನ ದೇಶದ ಕೆಲವು ಜನರು ಈ ತತ್ವವನ್ನು ಅಂಗೀಕರಿಸಿರುವುದಿಲ್ಲ. ಕಾಂಗ್ರೆಸಿನವರ ಮತ್ತು ಅಂಥವರ ಗುರಿಯು ಒಂದೇ ಆದರೂ ಅವರ ವರ್ತನೆಯು ಕಾಂಗ್ರೆಸಿಗೆ ತುಂಬಾ ಅಡಚಣೆಯನ್ನುಂಟುಮಾಡುವುದರಿಂದ ಅದಕ್ಕೆ ತಾನು ವಿಷಾದಿಸುತ್ತೇನೆ. ಅಂದರೂ ಎಷ್ಟು ತಪ್ಪು ದಾರಿಯ[illegible] ಭಾರತ ಭೂಮಿಯು ನಷ್ಟ ಹೊಂದಿದ ಸ್ವಾತಂತ್ರ್ಯವೇ ಅವರ ಉದ್ದೇಶ. ಆದರೂ ಕೂಡ ಹಿಂಸಾ ತತ್ವವಾದಿಗಳ [illegible] ಲ್ಲ ತಮ್ಮ ದೇಶಕ್ಕೆ [illegible] ಕೇಡು [illegible] ರುವರು.'

ಮಹಾತ್ಮರು ತನ್ನ ಬರುವಿಕೆಯ ಉದ್ದೇಶವನ್ನು ವಿವರಿಸಿ, ಆ ಘಟನೆಯ ಇಂಗ್ಲೀಷ್ ಜನರಾದ ಲಾರ್ಡ್ ಇರ್ವಿನ್‌ರವರನ್ನು ಪ್ರಶಂಸಿಸಿ ಹೀಗೆಂದರು—'ಬ್ರಿಟನು ಈಗ ತನ್ನ ದೇಶದ ಸಮಸ್ಯೆಗಳಲ್ಲಿ ಮಗ್ನರಾಗಿದ್ದಾರೆ. ಆದರೆ ಈ ಪರಿಷತ್ತಿನ ಸಮಯದಲ್ಲಿ ಇಂಡಿಯಾಕ್ಕೂ, ಇಂಗ್ಲೆಂಡಿಗೂ ಇರುವ ತಕರಾರು ನೆರವಾಗಲ್ಪಡದೆ ಹೋದರೆ ಬ್ರಿಟನ್ನಿನ ಬಿಕ್ಕಟ್ಟು ನಿವಾರಣೆಯಾಗಿಯೂ ನಿವಾರಿಸಲ್ಪಡಲಾರದೆಂಬುದನ್ನು ಮರೆತು ಬಿಡಬಾರದೆಂದು ಬ್ರಿಟಿಷರನ್ನು ಬೇಡಿಕೊಳ್ಳುತ್ತೇನೆ.' (ಜಯ ಘೋಷ)

ಫೆಡರಲ್ ಸ್ಟ್ರಕ್ಚರ್ ಕಮಿಟಿ ಮೀಟಿಂಗು.

ತಾ. 13 ರ ಸಾಯಂಕಾಲ ಮಹಾತ್ಮರು 7 ಗಂಟೆ ರಾತ್ರಿ 'ರೇಡಿಯೋ' ಮೂಲಕ ಅಮೇರಿಕಕ್ಕೆ ಭಾಷಣ ಮಾಡಿದರು. ತಾ. 14 ರಲ್ಲಿ ನಡೆದ ಫೆಡರಲ್ ಸ್ಟ್ರಕ್ಚರ್ ಕಮಿಟಿ ಮೀಟಿಂಗಿನಲ್ಲಿ ಮಹಾತ್ಮರು ಹಾಜರಿದ್ದರೂ, ಅವರ ಮೌನ ದಿನವಾದುದರಿಂದ ಮಾತೇನೂ ಆಡಲಿಲ್ಲ. ತಾರೀಖು 15 ರಲ್ಲಿ ಗಾಂಧಿಜಿಯವರು ಸದರಿ ಕಮಿಟಿ ಮೀಟಿಂಗಿನಲ್ಲಿ 45 ಮಿನಿಟುಗಳ ವರೆಗೆ ಭಾಷಣ ಮಾಡಿದರು. ಕಾಂಗ್ರೆಸಿನ ಚರಿತ್ರೆಯನ್ನು, ಅದರ ಪ್ರಾಮುಖ್ಯತೆಯನ್ನೂ ವಿವರಿಸಿ, ಅವರ ಸ್ವರಾಜ್ಯದ ಗುರಿಯಾದ ಸ್ವಾತಂತ್ರ್ಯದ ಕೋರಿಕೆಯನ್ನು ಸಭೆಯ ಮುಂದಿಟ್ಟರು. ಈ ಘನವಾದ ಭಾಷಣವು ಅಲ್ಲಿದ್ದವರ ಮನಸ್ಸಿಗೆ ಚೆನ್ನಾಗಿ ನಾಟಿಸಿಯಿತು. ಈ ಮಧ್ಯೆ ಗಾಂಧಿಜಿಯವರು ಪ್ರಧಾನ ಮಂತ್ರಿ, ಇಂಡಿಯಾ ಸೆಕ್ರೆಟರಿ ಮೊದಲಾದ ಮುಂದಾಳುಗಳ ಸಂಗಡ ಸಂಭಾಷಣೆ ನಡೆಸಿದರು.

ವರ್ತಮಾನ ಸಂಗ್ರಹ.

ಒಳದೇಶ.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 26 ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿಕ್ಕಿದೆ.

ಪೊನ್ನಂಪೇಟೆಯ ಸಮೀಪ ಬೀಚ್‌ಲ್ಯಾಂಡ್ ತೋಟದಲ್ಲಿ ಸಾಂಕ್ರಾಮಿಕ ರೋಗವು ಮೂರು ಜನರಿಗೆ ತಗಲಿ, ಇಬ್ಬರು ಸತ್ತಿರುವರೆಂದು ತಿಳಿದು ಬರುತ್ತದೆ.

ಕಮಿಶನರವರು ಈ ತಾ 13 ರಲ್ಲಿ ಊಟಕಮಂಡಿಗೆ ಹೋಗಿರುವರು. ಬರುವ ಆದಿತ್ಯವಾರ ವಾಪಸು ಬರುವರೆಂದು ವರ್ತಮಾನವಿದೆ.

ಸ್ವಯಂ ಸೇವಕ ಮಂಡಳಿಯ ಜನರಲ್ ಮೀಟಿಂಗೊಂದು ಈ ತಾ 20ನೇ ಸೋಮವಾರ ಬೆಳಗ್ಗೆ 11 ಗಂಟೆಗೆ ಗೋಣಿಕೊಪ್ಪಲು ಟೌನ್ ಹಾಲ್‌ನಲ್ಲಿ ನಡೆಯುವುದು.

ಮಡಿಕೇರಿ ಬಿರುನಾಣಿ ಪೂರ್ವ ಭಾಗವನ್ನು ಪುನಃ ಕಟ್ಟುವುದಕ್ಕಾಗಿ ಇಚ್ಛಿಸುವವರು ಅಕ್ಟೋಬರ್ ತಾ 1 ರೊಳಗೆ ಎಗ್ಸಿಕ್ಯುಟಿವ್ ಇಂಜಿನಿಯರವರಿಗೆ ಟೆಂಡರ್ ಗಳನ್ನು ಕಳುಹಿಸತಕ್ಕದೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಅರುವತ್ತೊಕ್ಲು ಗ್ರಾಮದ ಮಿ ಮಾಚೆ ಅಣ್ಣಯ್ಯನವರು ಕಳೆದ ತಾ 31 ರಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಕೆಲವು ವರ್ಷಗಳ ವರೆಗೆ ಜಮ್ಮಾ ಸಹಕಾರಿ ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೆಂಬರಾಗಿದ್ದರು.

ಈ ಮೊದಲು ಕೇಳಿಗನ ಚೀಫ್ ಕಮಿಷನರಾಗಿದ್ದ ಮಿ. ಸ್ಟುವರ್ಟ್ ಪಿಯರ್ಸ್‌ರವರ ಮರಣಕ್ಕೆ ಸಂತಾಪವನ್ನು ಸೂಚಿಸಲು ಮಡಿಕೇರಿಯ ಕೆಲವರು ಈ ತಾ 12 ರಲ್ಲಿ ದೇವಸ್ಥಾನದ ಹಾಲ್‌ನಲ್ಲಿ ಒಂದು ಮೀಟಿಂಗನ್ನು ನಡೆಸಿದರೆಂದು ವರ್ತಮಾನ.

ಈ ವಾರ ದೇಶದ ಇತರ ಪ್ರದೇಶಗಳಂತೆ ಮಡಿಕೇರಿಯಲ್ಲಿಯೂ ಮಳೆಯು ಮೊದಲಿಗಿಂತ ಕಡಿಮೆಯಾದರೂ, ತಕ್ಕಮಟ್ಟಿಗೆ ಆಗಿದೆ. ಆದರಿಂದ ಭತ್ತದ ಬೆಳೆಗೆ ಅನುಕೂಲವಾಗಿದೆ. ಈ ತಾ 5 ರಿಂದ ಇದುವರೆಗೆ ಅಂದರೆ ಒಂದು ವಾರದಲ್ಲಿ ಮಡಿಕೇರಿಯಲ್ಲಿ 6 10 ಇಂಚು ಮಳೆಯಾಗಿದೆ. ಹಗಲೆಲ್ಲಾ ಬಿಸಿಲು ಕಾಯುತ್ತಲೂ ಇರುತ್ತದೆ.

ಬರುವ ಅಕ್ಟೋಬರು ತಾ 1 ರಿಂದ ಅನಾರೋಗ್ಯ ನಿಮಿತ್ತ ರಜೆಯಲ್ಲಿರುವ ಪ್ರೊಫೆಸರಾದ ಮಿ. ಕೋದಂಡ ನಾಣಯ್ಯನವರು ಮಡಿಕೇರಿಯಿಂದ ಪೊನ್ನಂಪೇಟೆಗೂ, ಮಿ ಗುಡ್ಡಂಡ ಕಾರ್ಯಪ್ಪನವರು ಪೊನ್ನಂಪೇಟೆಯಿಂದ ವೀರಾಜಪೇಟೆಗೂ ಮತ್ತು ಮಿ. ಮೋರಿಯಂಡ [illegible] ವೀರಾಜಪೇಟೆಯಿಂದ ಮಡಿಕೇರಿಗೂ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಯುಬರುತ್ತದೆ.

ಕೊಡಗಿನ ಮಾಜಿ ಚೀಫ್ ಕಮಿಷನರಾದ ಸರ್ ಸ್ಟುವರ್ಟ್ ಪಿಯರ್ಸ್‌ರವರು ನಾಮಮಲೈ ಪ್ರಾಂತ್ಯದ ಸಾತ್ಯಗಾಲಿನಲ್ಲಿ ವಾಡಿಕೆಯಂತೆ ತನ್ನ ಪತ್ನಿಯೊಂದಿಗೆ ತಾ. 4 ರ ಸಾಯಂಕಾಲ ಗಾಳಿ ಸವಾರಿ ಹೋಗುವಾಗ್ಯೆ ಬೆಟ್ಟದ ಬದಿಯಿಂದ ಜಾರಿ 500 ಅಡಿ ಕೆಳಗೆ ಬಿದ್ದು ಮೃತರಾದರೆಂದೂ, 6 ಗಂಟೆಗೆ ಬಿದ್ದ ಇವರ ಹೆಣವು ರಾತ್ರಿ 10 ಗಂಟೆಗೆ ಸಿಕ್ಕಿತೆಂತಲೂ ಇತ್ತೀಚೆಗೆ ತಿಳಿಯಬಂತು.

ಬೆಂಗಳೂರು ಕೊಡಗು ಸಂಘದವರು ಈ ವರ್ಷದ ಕೈಲ್‌ಪೋಳ್ದ್ ಹಬ್ಬವನ್ನು ಸಂಘದ ಅಧ್ಯಕ್ಷರ 'ಸ್ನೋ-ಕೋಟೆ' ಭವನದಲ್ಲಿ ಈ ತಾ 6 ರಲ್ಲಿ ಸಾಯಂಕಾಲ 7½ ಗಂಟೆಗೆ ಸಭೆ ಸೇರಿ ವಿಜೃಂಭಣೆಯಿಂದ ನಡೆಸಿದರು. ಕೊಡಗಿನ ಪದ್ಧತಿಯಂತೆ ಆಯುಧ ಪೂಜೆಯನ್ನು ಮಾಡಿ, ನಂತರ ಊಟ ಉಪಚಾರವಾಯಿತು. ಸಂಘದ ಮೆಂಬರುಗಳಲ್ಲದೆ ಬೇರೆ ಕೆಲವು ಕೊಡಗಿನ ಬಂಧುಗಳೂ ಅತಿಥಿಗಳಾಗಿ ಬಂದಿದ್ದರು. ನಂಗೀತ ವಾದ್ಯ ನೃತ್ಯ ಸಭೆಯು ಮುಕ್ತಾಯಗೊಂಡಿತೆಂದು ಸೆಕ್ರೆಟರಿ [illegible] ತಿಳಿಸುತ್ತಾರೆ.

ಕಾಯಿಲೆಯಿಂದ ಸ್ವಲ್ಪ ದಿವಸಗಳ ಹಿಂದೆ ವೈದ್ಯಶಾಲೆ ಆಸ್ಪತ್ರೆಗೆ ಹೋದ ಮಿ. ನಾಕೇರಿ ಮಂಡ ಚಿಣ್ಣಪ್ಪನವರು ಈ ತಾ 12 ನೇ ಶನಿವಾರ ಸಾಯಂಕಾಲ ಆಸ್ಪತ್ರೆಯಲ್ಲಿಯೇ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ. ಇವರ ಶವವು ಅದೇ ದಿನ ಅವರ ಮನೆ ಇರುವ ಕರಡ ಗ್ರಾಮಕ್ಕೆ ತರಲ್ಪಟ್ಟು ಅಲ್ಲಿ ದಫನ ಮಾಡಲ್ಪಟ್ಟಿತು. ಇವರು ಮಡಿಕೇರಿಯಲ್ಲಿ ಪೋಲೀಸ್ ಪ್ರಾಸಿಕ್ಯುಟಿಂಗ್ ಇನ್‌ಸ್ಪೆಕ್ಟರಾಗಿ ನೇಮಿಸಲ್ಪಟ್ಟು ಸ್ವಲ್ಪ ದಿವಸ ಮಾತ್ರ ಸದರಿ ಕೆಲಸವನ್ನು ನಡೆಸಿದ್ದರು. ಕೊಡಗಿನ "ಪಟ್ಟೋಲೆ ಪಳಮೆ," ಯನ್ನು, ಭಗವದ್ಗೀತೆಯನ್ನು ಕೊಡಗು ಭಾಷೆಯ ಪದ ರೂಪದಲ್ಲಿ ಬರೆದಿರುವ ಇವರ ಹೆಸರನ್ನು ಕೊಡವ ಮಹನೀಯರು ಸುಲಭದಲ್ಲಿ ಮರೆಯಲಾಗುವುದಿಲ್ಲ.

ಹಿಂದೂ ದೇಶ.

ಬಂಗಾಳದಲ್ಲಿ ಕಾಂಗ್ರೆಸ್ಸಿನ ಪ್ರಮುಖ್ಯ ಮುಂದಾಳಾದ ಶ್ರೀಯುತ ಸೆನ್‌ಗುಪ್ತರು ಕಲ್ಕತ್ತಾ ಕಾರ್ಪೊರೇಶನಿನ ಮೇಯರಾಗಿ ಚುನಾಯಿಸಲ್ಪಟ್ಟಿರುವರು.

ಸ್ತ್ರೀಯರ ಸೇವಾದಳವನ್ನು ಏರ್ಪಡಿಸಲು ಸೇವಾದಳದ ಮಧ್ಯವರ್ತಿ ಬೋರ್ಡಿನವರು ಶ್ರೀಮತಿ ಕಮಲಾ ದೇವಿಯವರನ್ನು ಆರ್ಗನೈಜರಾಗಿ ನೇಮಿಸಿರುವರು.

ಮದ್ರಾಸಿನ ರಿಟ್ರೆಂಚ್‌ಮೆಂಟ್ ಕಮಿಟಿಯವರು ಸುಮಾರು ಅರ್ಧಕೋಟಿ ರೂ. ಖರ್ಚು ಕಡಿಮೆ ಮಾಡಬಹುದೆಂದು ಅಂದಾಜು ಮಾಡಿರುವರು. ಈಗಾಗಲೇ 15 ಲಕ್ಷ ರೂ. ಕಡಿಮೆ ಮಾಡಿದ್ದರಿಂದ ಮಿಕ್ಕಿದ್ದನ್ನು ಸರ್ಕಾರದವರು ಒಪ್ಪಿರುವರು.

ಪಾಟ್ನಾದಲ್ಲಿ ಬರುವ ನವಂಬರು ತಿಂಗಳಲ್ಲಿ ನಡೆಯಲಿಕ್ಕಿರುವ ಅಖಿಲ ಭಾರತ ಮುಸ್ಲಿಂ ಕಾನ್ಫರೆನ್ಸಿನ ಮಹಾ ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದ ಹಜರತ್ ಮೋಹಾನಿಯವರು ತಮ್ಮಗಳ ಬೇರೆ ಹುಟ್ಟಿದ ಕಾರಣ ಸದರಿ ಕಾನ್ಫರೆನ್ಸಿನ ಅಧ್ಯಕ್ಷತೆಗೆ ರಾಜಿನಾಮೆ ಕೊಟ್ಟಿರುವರು.

ಜಿಂದ್ ಸಂಸ್ಥಾನದ ಸರ್ಕಾರದವರು ಅಲ್ಲಿಯ ಸಂಗ್ರೂರದ ಸಿಖ್ ಗುರುದ್ವಾರದಲ್ಲಿ ಅಖಂಡ ಪಾಠವನ್ನು ಮಾಡಕೂಡದೆಂದು ಹುಕುಂ ಮಾಡಿದ್ದರಿಂದ ಸಿಖ್ಖರು ಸತ್ಯಾಗ್ರಹವನ್ನು ಮಾಡಿದರು. ಸುಮಾರು 500 ಜನರು ಸೆರೆ ಹಿಡಿಯಲ್ಪಟ್ಟಿರುವರು. ಸಿಖ್ಖರು ಒಂದು 'ಯುದ್ಧ ಕೌನ್ಸಿಲ್'ನ್ನು ಸ್ಥಾಪಿಸಿಕೊಂಡು ಸತ್ಯಾಗ್ರಹವನ್ನು ಮುಂದುವರಿಸುತ್ತಿರುವರು.

ಎಸೆಂಬ್ಲಿಯಲ್ಲಿ ಚರ್ಚಿಸಲ್ಪಡುತ್ತಿರುವ ನೂತನ 'ಪ್ರೆಸ್ ಬಿಲ್ಲ'ನ್ನು ಕುರಿತು ಮಹಾತ್ಮ ಗಾಂಧಿಯವರು ಹೀಗೆಂದಿರುವರು—'ಈ ಬಿಲ್ಲು ಪ್ರತೀಕಾರ ಮಾಡತಕ್ಕಂಥದ್ದಾಗಿದೆ. ದುಂಡು ಮೇಜು ಪರಿಷತ್ತಿನ ಚರ್ಚೆಯಿಂದ ಹಿಂದೀಯರಿಗೆ ಅಧಿಕಾರ ದೊರೆಯುವುದೆಂದು ನಂಬುವಂಥವರಿಗೆ ಈ ಶಾಸನದ ರಚನೆಯು ಆಶಾಭಂಗವನ್ನುಂಟುಮಾಡದೆ ಇರದು. ಆದುದರಿಂದ ಸರ್ಕಾರದವರು ಇನ್ನಾದರೂ ಅದನ್ನು ವಾಪಸು ತೆಗೆದುಕೊಂಡಾರೆಂದೂ ಮತ್ತು ಹೇಗಾದರೂ ಎಸೆಂಬ್ಲಿಯ ಮೆಂಬರುಗಳು ಅದನ್ನು ತಿರಸ್ಕರಿಸುವರೆಂದೂ ನಂಬುತ್ತೇನೆ.'

ಬರ್ಮಾದಲ್ಲಿನ ಹಿಂದೂಸ್ಥಾನದವರಿಗೆ ಬರ್ಮಾದ ದುಂಡು ಮೇಜು ಪರಿಷತ್ತಿನಲ್ಲಿ ಸರಿಯಾದ ಪ್ರಾತಿನಿಧ್ಯ ಕೊಡುವ ವರೆಗೂ ಮತ್ತು ರಾಜಕೀಯ ರಚನೆಯಲ್ಲಿ ಜನರ ಕೋರಿಕೆಗಳನ್ನು ನೆರವೇರಿಸುವ ವರೆಗೂ ಬರ್ಮಾ ದುಂಡು ಮೇಜು ಪರಿಷತ್ತನ್ನು ಬಹಿಷ್ಕರಿಸಬೇಕೆಂದೂ, ಲೆಜಿಸ್ಲೇಟಿವ್ ಕೌನ್ಸಿಲಿಗೆ ಮೆಂಬರುಗಳು ರಾಜಿನಾಮೆ ಕೊಡಬೇಕೆಂದೂ ಮತ್ತು ಬ್ರಿಟಿಷ್ ಸಾಮಾನುಗಳನ್ನು ಬಹಿಷ್ಕರಿಸಬೇಕೆಂದೂ ಅಲ್ಲಿಯ 'ಜನರ ಪಾರ್ಟಿ' ಯ ಜನರಲ್ ಮೀಟಿಂಗಿನಲ್ಲಿ ತೀರ್ಮಾನಿಸಬೇಕೆಂದು ಆ ಪಾರ್ಟಿಯ ಎಗ್ಸಿಕ್ಯುಟಿವ್ ಕಮಿಟಿಯವರು ನಿರ್ಧಾರವನ್ನು ಮಾಡಿರುವರು.

ಬರುವ ಅಕ್ಟೋಬರು 2 ರಲ್ಲಿ ಮಹಾತ್ಮ ಗಾಂಧಿಯವರ 63ನೇ ಜನ್ಮ ದಿನವು ಭರತಖಂಡದಲ್ಲೆಲ್ಲಾ ಆಚರಿಸಲ್ಪಡುವುದು. ಸದರಿ ತಾ 2ರಿಂದ 8ರ ವರೆಗೆ 'ಗಾಂಧೀ ವಾರ'ವಾಗಿ ಆಚರಿಸಬೇಕೆಂದೂ, ಆಗ್ಗೆ ಕಾಂಗ್ರೆಸ್ಸಿನವರೂ, ಮಹಾತ್ಮರ ಮೇಲೆ ವಿಶ್ವಾಸವಿರುವವರೆಲ್ಲರೂ ಗಾಂಧೀಜಿಯವರಿಗೆ ಬಹು ಪ್ರಿಯವಾದ ಖಾದಿ ಟೋಪಿಯನ್ನು ಧರಿಸುವ ವ್ರತ ಕೈಕೊಂಡು ಸೇವಾ ಕೆಲಸ ಮಾಡಬೇಕೆಂತಲೂ, ಅಖಿಲ ಭಾರತ ನೂಲುವವರ ಸಂಘದಲ್ಲಿ ಉಳಿದು ಹೋಗಿರುವ 15 ಲಕ್ಷ ರೂ. ಯ ಖಾದಿಯನ್ನು ವಿಕ್ರಯಿಸಲು ಎಲ್ಲರೂ ಸಹಾಯ ಮಾಡಬೇಕೆಂದೂ ಕಾಂಗ್ರೆಸ್ಸಿನ ಅಧ್ಯಕ್ಷರಾದ ಸರ್ದಾರ್ ಪಟೇಲರವರು ಅಪೀಲ್ ಮಾಡಿಕೊಂಡಿರುವರು.

[illegible]

ದಕ್ಷಿಣ ಅಮೇರಿಕದ ಹಾಂಡುರಾಸ್ ಎಂಬಲ್ಲಿ ಪೆಟ್ಟು ಬಿರುಗಾಳಿ ಎದ್ದು ಒಂದು ಸಾವಿರ ಜನರು ಮೃತಪಟ್ಟರು. ನೆಲಸಮವಾಗಿರುವ ಬೆಲೈಜ್ ಎಂಬ ಪಟ್ಟಣವನ್ನೇ ಬಿಟ್ಟು ಬೇರೆ ಕಡೆ ಪಟ್ಟಣವನ್ನು ಕಟ್ಟುತ್ತಿರುವರಂತೆ.

ಈಗಿರುವ ಇಂಗ್ಲೆಂಡಿನ ಪಾರ್ಲಿಮೆಂಟ್ ಸಭೆಯನ್ನು ಮುಕ್ತಾಯಗೊಳಿಸಿ ಅದರ ಜನರಲ್ ಚುನಾವಣೆಯನ್ನು ಬರುವ ತಿಂಗಳಲ್ಲಿ ನಡೆಸುವಂತೆ ಕನ್ಸರ್ವೇಟಿವ್ ಪಾರ್ಟಿಯವರು ಆಲೋಚಿಸುತ್ತಿರುವರೆಂದು ಸುದ್ದಿ.

ದಕ್ಷಿಣ ಆಫ್ರಿಕದಲ್ಲಿಯ ಪ್ರಾಂತೀಯ ಕೌನ್ಸಿಲುಗಳನ್ನು ರದ್ದು ಮಾಡುವಂತೆ ಅಲ್ಲಿಯ ಮಧ್ಯವರ್ತಿ ಸರ್ಕಾರವು ತೀರ್ಮಾನಿಸಿದೆ. ಕೌನ್ಸಿಲುಗಳು ತಮ್ಮ ಪ್ರಾಂತೀಯ ಬಜೆಟುಗಳನ್ನು ಸರಿಪಡಿಸಿಕೊಳ್ಳಲಾರದೆ ಹೋದದ್ದೇ ಇದಕ್ಕೆ ಮುಖ್ಯ ಕಾರಣವಂತೆ.

ವೀರಾಜಪೇಟೆ—ನಾಪೋಕ್ಲು—ಅಮ್ಮತ್ತಿ ನಾಡುಗಳ ಜಮ್ಮಾ ಓಟರುಗಳಲ್ಲಿ ವಿನಂತಿ.

ಮಹನೀಯರೇ,

ಈಗ ತಾನೇ ಮಿ. ಕೋದಂಡ ಉತ್ತಯ್ಯನವರ ರಾಜಿನಾಮೆಯಿಂದ ಖಾಲಿಯಾದ ಕೌನ್ಸಿಲ್ ಸ್ಥಳಕ್ಕೆ ನಿಲ್ಲಲು ನಾನು ಅಭ್ಯರ್ಥಿಯಾಗಿರುತ್ತೇನೆ. ದೇಶದ ಏಳಿಗೆಗಾಗಿ ತಾವು ನಡೆಸಿಕೊಂಡಿದ್ದ ಎಲ್ಲಾ ಕೆಲಸಗಳಲ್ಲಿಯೂ ತಮ್ಮ ಉತ್ಸಾಹದಿಂದ ನಿಷ್ಠೆಯಿಂದ ಕೆಲಸ ಮಾಡಿದ್ದು ತಮಗೆಲ್ಲಗೆ ತಿಳಿಯದ್ದಲ್ಲ. ಇನ್ನು ಮುಂದಕ್ಕೂ ತಮ್ಮೆಲ್ಲರ ಪ್ರೋತ್ಸಾಹದಿಂದ ಕೈಲಾದಷ್ಟು ದೇಶ ಸೇವೆ ಮಾಡಬೇಕೆಂದಿದ್ದೇನೆ. ಇದನ್ನು ಸಾಧಿಸಲು ಅನುಕೂಲವಾಗುವಂತೆ ತಾವೆಲ್ಲರೂ ನನ್ನ ಮೇಲೆ ವಿಶ್ವಾಸವಿಟ್ಟು, ಈ ಅಕ್ಟೋಬರ್ ತಾರೀಖು 22ನೇ ಗುರುವಾರ ಓಟು ಕೊಡುವ ಅವಧಿಯ ಸ್ಥಳಗಳಿಗೆ ದಯಮಾಡಿಸಿ ನನ್ನ ಪರವಾಗಿ ಓಟು ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ವೀರಾಜಪೇಟೆ, ತಮಗಳ ಸೇವಕ,

ತಾ 11—9—1931. ಕೋಟೆರ ಪಿ. ಅಪ್ಪಯ್ಯ.

4—1

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಸುಂಟಿಕೊಪ್ಪದ ಅನಾರೋಗ್ಯದ ಸ್ಥಿತಿ

ಅಯ್ಯಾ ಎಡಿಟರವರೇ,

ಸುಂಟಿಕೊಪ್ಪವು ಕೇವಲ ಅನಾರೋಗ್ಯದ ಸ್ಥಳವೆಂಬುದು ನೀವು ಬಲ್ಲಿರಷ್ಟೆ. ಇಲ್ಲಿಯ ನಿವಾಸಿಗಳು ಈ ಮೊದಲಿನ ಗಿ ಬೋ. ಪ್ರೆಸಿಡೆಂಟರಿಗೆ ಇಲ್ಲಿಯ ನೀರಿನ ಮತ್ತು ಬೀದಿನ ತೊಂದರೆಗಳನ್ನು ಚೆನ್ನಾಗಿ ವಿವರಿಸಿ ಅರ್ಜಿ ಮಾಡಿಕೊಂಡಿತ್ತೆವು. ತಿಂಗಳು ಐದಾರಾದರೂ ಏನೂ ವರ್ತಮಾನವಿಲ್ಲ. ಇಲ್ಲಿಂದ ಓಟು ಪಡೆದ ಡಿ. ಬೋರ್ಡ್ ಮೆಂಬರರಿಗೆ ಇದು ತಿಳಿಯಲಿಲ್ಲವೋ? ಬೋರ್ಡಿನ ಪ್ರೆಸಿಡೆಂಟರ ಕೆಳಗೆ ವೈಸ್ ಪ್ರೆಸಿಡೆಂಟರು ಇರುವುದು ಸಾಲ್ಲದಾಯಿತೋ? ಇಂಥಾ ಅತ್ಯವಶ್ಯಕದ ಕೆಲಸವೇ ಇಷ್ಟು ತಡವಾದರೆ ಇನ್ನೆಷ್ಟು ಕೆಲಸ ಹ್ಯಾಗಿದೆಯೋ ದೇವರೇ ಬಲ್ಲ. ದೇಶ ಸೇವೆ ಮಾಡುತ್ತೇವೆಂದು ಓಟು ಪಡೆಯುವುದು, ಪಡೆದ ನಂತರ ಸ್ವ ಸೇವೆಯೇ ಎಂಬುದಾಗಿ ತೋರುತ್ತೆ. ದೇಶದ ಏಳಿಗೆಗೆ ಅಷ್ಟು ಕಷ್ಟಪಡುವುದರ ಬದಲು ರಾಜಿನಾಮೆಯೇ ಲೇಸಲ್ಲವೇ! ಇವರು ಓಟು ಪಡೆಯುವುದು ತಮ್ಮ ಲೆಟರ್ ಹೆಡ್ಡಿನಲ್ಲಿ [illegible] ವಿಜಿಟಿಂಗ್ ಕಾರ್ಡಿನಲ್ಲಿಯೂ ಯಂ. ಎಲ್. [illegible] ಬಿ ಯ ಮತ್ತು ಮುನ್ಸಿಪಾಲಿಟಿ ಮೆಂಬರನ್ನು ಮುದ್ರಿಸುವುದರ ಹೊರತು ಬೇರೆ ತಪ್ಪೇನಲ್ಲವೇ. ಇಂಥಾದಿದ್ದರೆ ಅದನ್ನು ಬಿಟ್ಟು ದೇಶ ಸೇವೆಯನ್ನು ಚೆನ್ನಾಗಿ ಮಾಡಿ ಕೀರ್ತಿಯನ್ನು ಪಡೆಯಲಿಕ್ಕೆ ಮನಸು ಕೊಡಲಿ ಎಂದು ಪ್ರಾರ್ಥಿಸುವವನಾಗುತ್ತೇನೆ.

'ಪಟ್ಟಣಿಗ'

'ಸ್ವರ್ಗೀಯ ಸಾವೆಯನ್ನೇರಿದ ಶ್ರೀ. ಚೆಣ್ಣಪ್ಪನವರು'

ವೈಕುಂಠಕ್ಕೆ ಕಾಯಿಲೆಸ್ಥರಾಗಿ ಮೊನ್ನೆ ತಾನೇ ಸಾಗಿಸಲ್ಪಟ್ಟ ಶ್ರೀ. ನಡಿಕೇರಿಯಂಡ ಚೆಣ್ಣಪ್ಪನವರು ಇದೇ ತಾರೀಖು 12 ರಲ್ಲು ಅಲ್ಲಿಯ ಆಸ್ಪತ್ರೆಯಲ್ಲಿ ಇಹ ಸುಖದಿಂದ ಪಾರಾದರೆಂಬ ದುಃಖವಾರ್ತೆಯು ನಮ್ಮ ದೇಶಕ್ಕೇನೇ ಒಂದು ಧಕ್ಕೆಯಾಗಿದೆ. 1904 ರಲ್ಲಿ ಮಿಲಿಟರಿ ಒರಕಕ್ಕೆ ಸೇರಲ್ಪಟ್ಟು ಇವರು ಸುಭೇದಾರರ ಪದವಿಯಿಂದ ನಿವೃತ್ತರಾದಲ್ಲಿಂದೀಚೆಗೆ ಇವರ ಪರಿಚಯವು ನನಗಾಗಿರುವುದು. ಮಿಲಿಟರಿ ಒರಕದಿಂದ ಮೊಕಲ್ಪಟ್ಟ ಕೂಡಲೆ ಪೋಲೀಸ್ ಇಲಾಖೆಯನ್ನು ಸೇರಿದರು. ಅಲ್ಲಿ ಇವರು ಉಚ್ಚ ಪದವಿ ಸಿಗುವ ಕಾಲ ತನಕ ನಿರತರಾಗಿದ್ದರು. ಆದರೆ ಇವರಲ್ಲಿದ್ದ ಸ್ವಕೀಯ ಜನರ ಮೇಲಣ ವತ್ಸಲತೆಯು ಇವರ ಅಭಿಲಾಷೆಯನ್ನು ನೆರವೇರಿಸಲಿಲ್ಲ. ಸದರಿ ಶಾಖೆಯು ತಾಳಿದಂತಹ ಕೇವಲ ನಿರ್ಧಯ ಗುಣಶೀಲರಿಗೆ ಹೆಚ್ಚು ಅನ್ವಯಿಸುವದಾಗಿದೆ. ಸದರಿ ಇಲಾಖೆಯಲ್ಲೇ ಕೆಲಂಕದಿಂದುಳಿದ ಇವರ ನಡತೆ ಶಕ್ತಿಗೆ ನಾವು ಎಷ್ಟು ಯೋಚಿಸಿದರೂ ಸಾಲದು. ಇವರು ಸರಕಾರ ಕಾಬೆದಾರಿಕೆಯಲ್ಲಿದ್ದರೂ ಇವರ ಹೃದಯವು ಸ್ವಕೀಯ ಜನರೇಳ್ಗೆಯಲ್ಲಿಯೇ ವರ್ತಿಸುತ್ತಿತ್ತು. ಇವರು ಪ್ರಕಟಿಸಿದ "ಪಟ್ಟೋಲೆ ಪಳಮೆ" ಎಂಬ ಗ್ರಂಥವೇ ಇವರ ನಿರಾಳ ಹೃದಯವನ್ನು ಸೂಚಿಸುವದಾಗಿದೆ. ಈ ಗ್ರಂಥವನ್ನೋದಿದವರಿಗೆಲ್ಲಾ ಇವರ ಧ್ಯೇಯವು ವ್ಯಕ್ತವಾಗದಿರಲಿಕ್ಕಿಲ್ಲ. ಇವರು ಸಹಕಾರ ತತ್ವದಲ್ಲಿ ಬಹು ಅಭಿಮಾನವುಳ್ಳವರಾಗಿದ್ದರು. ಇವರ ಮನೋಗತವು ಬಹು ವಿಗಿಲಾದದ್ದು. ಇವರು ವಿದ್ಯಾತತ್ಪರರು ಸಹಭಾಗ್ಯವುಳ್ಳವರಾಗಿದ್ದರು. ಇವರಲ್ಲು ಸರಕಾರಿ ನೌಕರಿಯ ಧಾಂಧಿಕತ್ವವೂ, ಕಪಟತ್ವವೂ, ಕೀಳಿನ ಜನರ ತಿರಸ್ಕಾರವೂ, ಪಾಮರ ಜನರ ಹೀಯತ್ವವೂ ಮೊದಲಾದ ಕಠೋರಗುಣಗಳು ನಿಲುಕುತ್ತಿರಲಿಲ್ಲ. ಇಹ ಲೋಕದಲ್ಲಿ ಮನುಷ್ಯ ಬಸ್ಸದ ನಾಸ್ತಿಕತ್ವದ, ಮತ್ತು ಅಸ್ಥಿತ್ವದ ತಿರುಳು ಇವರ ಹೃದಯದಲ್ಲಿ ವ್ಯಕ್ತವಾಗುತ್ತಿಂಬದು. ಇವರು ಸ್ವಭಾಷೆಯಲ್ಲಿ ತರ್ಜುಮೆ ಮಾಡಿದ 'ಭಗವದ್ಗೀತೆ' ಎಂಬ ಪುಸ್ತಕದಿಂದಲೇ ವೇದ್ಯವಾಗುವದು. ಇವರಲ್ಲಿದ್ದ ಸಹೋದರತ್ವವೂ, ಸಹನತೆಯೂ, ನಿಸ್ಪೃಹತೆಯೂ, ಉದಾರತ್ವವೂ, ಸರಕಾರಿ ಕಾಬೆದಾರಿಕೆಯಲ್ಲು ನಿಲುಕಿಸುವದು ಬಹು ವಿರಳ. ಇವರ ಸ್ವಸ್ವಭಾವವು ನಮ್ಮ ಜನರೊಳು ಒಂದು ನಿದರ್ಶನವಾಗಿರಲಿ. ಈ ಚೆಣ್ಣಪ್ಪನವರ ದೇಹಾವಸಾನವು ಅವರ ಕುಟುಂಬಕ್ಕೆ ಬಹು ದೊಡ್ಡ ಸಂತಾಪವನ್ನುಂಟುಮಾಡಿದೆ ಅಲ್ಲ, ನಮ್ಮ ಇಡೀ ದೇಶಕ್ಕೂ ಮತ್ತು ವಿದ್ಯಾತತ್ಪರರಿಗೂ ಬಹು ವ್ಯಸನ ಸಮ್ಮಂಧವಾಗಿದೆ. ಅವರ ಇವರ ದೇಹವು ನಮ್ಮ ಮಧ್ಯೆ ಅವಸಾನ ಹೊಂದಿದರೂ ಇವರ ಆತ್ಮವು ನಮ್ಮೊಂದಿಗೆ ಮಿಳಿತದಿಂದಿರುವದೆಂಬದಾಗಿಯೇ ಭಾವಿಸೋಣ. ಇವರ ಆತ್ಮಕ್ಕೆ ಶಾಂತಿ ಇರಲಿ.

ಪಿ. ಯಂ. ಮುತ್ತಣ್ಣ

ಬೆಂಗಳೂರು ಕೊಡವರ ಸಂಘ

ಅಯ್ಯಾ,

ಕಳೆದ ತಾ. 6ನೇ ಭಾನುವಾರ ಬೆಂಗಳೂರಿನ ಕೊಡವ ಸಂಘದವರು ತಮ್ಮ 20ನೇ ವಾರ್ಷಿಕೋತ್ಸವವನ್ನು ಕೈಲ್ ಪೊಳ್ದು ಹಬ್ಬವನ್ನೂ ಲಾಲ್‌ಬಾಗಿನಲ್ಲಿ ನಡೆಯಿಸಿದರು. ಹೆಚ್ಚು ಕಡಿಮೆ ಬೆಂಗಳೂರಿನ ಕೊಡವ ಜನರೆಲ್ಲರೂ ಸೇರಿದ್ದಲ್ಲದೆ ಹೊರಗಿನ ಅನೇಕ ಕೊಡವ ಮಹನೀಯರೂ ದಯಮಾಡಿಸಿದ್ದುದರಿಂದ ಸುಮಾರು 125 ಜನರ ವರೆಗೆ ನೆರೆದಿದ್ದರು.

ಬೆಳಿಗ್ಗೆ 9 ಗಂಟೆಗೆ ಎಲ್ಲರೂ ಸೇರಿ ಆಯುಧ ಪೂಜೆಯನ್ನು ಆಚಾರ ಪೂರ್ವಕ ನೆರವೇರಿಸಿ ಉಪಹಾರಗಳನ್ನು ಸ್ವೀಕರಿಸಿಕೊಂಡು ಪಂಥದಾಟಗಳಿಗೆ ಮೊದಲು ಮಾಡಿದರು. ಸ್ತ್ರೀಯರೂ ಅವರಿಗೆ ಪ್ರತ್ಯೇಕ ಏರ್ಪಡಿಸಲ್ಪಟ್ಟ ಆಟ ಓಟಗಳಲ್ಲಿ ಭಾಗ ತೆಗೆದುಕೊಂಡು ಉತ್ಸಾಹಕ್ಕೆ ಕಳೆಯನ್ನೇರಿಸಿದರು. ಮಧ್ಯಾಹ್ನ ಭೋಜನವನ್ನು ಮುಗಿಸಿಕೊಂಡು ಪುನಃ ಸಾಯಂಕಾಲ 4 ಗಂಟೆಯ ವರೆಗೆ ಆಟ ಓಟಗಳಲ್ಲಿ ಕಾಲವನ್ನು ಕಳೆದರು.

4½ ಗಂಟೆಗೆ ಸಂಘದ ಅಧ್ಯಕ್ಷರಾದ ಮಿ. ಕೋದಂಡ ಪಾಪಯ್ಯನವರು ಎಲ್ಲರನ್ನೂ ಸಭೆ ಸೇರಿಸಿದರು. [illegible] ವಾರ್ಷಿಕ ವರದಿಯನ್ನು ಓದಿ [illegible] ಇಲ್ಲಿ ಒಂದು [illegible] ಕೊಡವಾಭಿವೃದ್ಧಿಗಾಗಿ ದಯಮಾಡಿ [illegible] ಕೊಡಗಿನ ಶ್ರೀಮಂತರು ಇದರ ಕಡೆಗೆ ಗಮನ [illegible] ಪ್ರಾರ್ಥಿಸಿದರು.

ಆ ಬಳಿಕ ಅಧ್ಯಕ್ಷರು ಪಂಥದಾಟಗಳಲ್ಲಿ ಗದ್ದವರಿಗೆ ಇನಾಮುಗಳನ್ನು ಹಂಚಿದರು. ಲೆಪ್ಟನೆಂಟ್ ಕೊಡಂದೆರ ಸುಬ್ಬಯ್ಯನವರು ಈ ವರ್ಷದ ಚಾಂಪಿಯನ್‌ಶಿಪ್ ಮೆಡಲನ್ನು ಗೆದ್ದರು. [illegible] ನಮ್ಮ ಸಂಘದ [illegible] ಈ ವಾರ್ಷಿಕೋತ್ಸವಕ್ಕೆ ದಯಮಾಡಿಸಿದ [illegible] ತಮ್ಮ [illegible] ಮಹಿಳಾ ಮಣಿಗಳ [illegible] ಜವಯ್ಯನವರನ್ನ ವಂದಿಸಿ, ಆಟ ಓಟ [illegible] ಅಭಿನಂದಿಸಿದರು. ಬೆಂಗಳೂರಿನಲ್ಲಿ ಕೊಡಗು [illegible] ವಿದ್ಯಾರ್ಥಿಗಳಿಗೆ ಒಂದು ಹಾಸ್ಟೆಲಿನ ಆವಶ್ಯಕತೆಯನ್ನೂ ಮತ್ತು ಇದಕ್ಕಾಗಿ ಸೆಕ್ರೆಟರಿಯವರು [illegible] ವಿಜ್ಞಾಪನೆಯನ್ನೂ ಮತ್ತಷ್ಟು ಒತ್ತಿ ಹೇಳಿ ಚಕ್ರವರ್ತಿ ಸಾರ್ವ [illegible] ಗೂ, ಶ್ರೀಮಾನ್ ವೈಸರಾಯರು [illegible] ಜಯಘೋಷವನ್ನು ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು.

ನೆರೆದಿದ್ದವರೆಲ್ಲರೂ ಟೀ ಪಾನ್ಸು ಸ್ವೀಕರಿಸಿ ತಮ್ಮ ತಮ್ಮ ಮನೆಗಳಿಗೆ ದಯಮಾಡಿಸಿದರು.

ಐ. ಕೆ. ಪೊನ್ನಪ್ಪ.
(ಸೆಕ್ರೆಟರಿ)

ಮುನ್ಸಿಪಾಲಿಟಿ ರೂಲ್ಸುಗಳು

ಅಯ್ಯಾ ಕೊಡಗು ಸಂಪಾದಕರೇ,

ಮುನ್ಸಿಪಾಲಿಟಿ ರೂಲ್ಸ್ ವಿಚಾರದಲ್ಲಿ [illegible] ಓಟರರು 11—9—31ನೇ ತಾರೀಖಿನ ಕೊಡಗ [illegible] ಪ್ರಕಟನೆ ಮಾಡಿದ್ದನ್ನು ಓದಿದೆನು. ಆದರೆ ಇದರ ಮೇಲೆ ಈ ಕೆಳಗಿನ ರೂಲ್ಸುಗಳನ್ನು ಒಪ್ಪಿ ಮೆಂಬರರು ಸಬ್ ಕಮಿಟಿಯ ಮೂಲಕ ಜನರಲ್ ಕಮಿಟಿಗೆ ಕಳುಹಿಸಬೇಕಾಗಿ ತಿಳಿಯುತ್ತೇನೆ.

(1) 21 ವರ್ಷ ಪ್ರಾಯವಿರುವ ಈ ಕೆಳಗಿನ ಕಂದಾಯ ಕೊಡುವ ಪ್ರತಿಯೊಬ್ಬ ಸ್ತ್ರೀಯರಿಗೆ ಮೆಂಬರರಾಗುವ ಮತ್ತು ಓಟು ಕೊಡುವ ಹಕ್ಕಿರಬೇಕು.

(2) ಮೆಂಬರುತನಕ್ಕೆ ಈಗಿರುವ 12 ರೂ. ಕಂದಾಯ ಯೂ 50 ರೂ. ಬಾಡಿಗೆ ಮತ್ತು ಓಟು ಕೊಡಲಿಕ್ಕೆ 3 ಯೂ 6 ರೂ. ಕಂದಾಯ—ಇವುಗಳಲ್ಲಿ ಮೆಂಬರುತನದ ಕಂದಾಯವನ್ನು 4 ರೂ. ಗೆ ಇಳಿಸಬೇಕು, ಓಟು ಕಂದಾಯವನ್ನು 1 ಯೂ 2 ರೂ. ಗೆ ಇಳಿಸಬೇಕು. ಮತ್ತು ಮೇಲಿನ ದರದಲ್ಲಿ ಬಾಡಿಗೆ ಒರುವ ಮತ್ತು ಕೊಡುವ ಎಲ್ಲರಿಗೂ ಓಟುಕೊಡುವ ಮತ್ತು ಮೆಂಬರುತನದ ಹಕ್ಕು ಇರಬೇಕು. ಮತ್ತು 1 ವರ್ಷದಲ್ಲಿ ಕನಿಷ್ಠ 8 ತಿಂಗಳಾದರೂ ಟೌನಿನಲ್ಲಿ ವಾಸವಿರಬೇಕು.

(3) ಯಾವನೊಬ್ಬ ಕಮಿಟಿ ಮೆಂಬರನೇ ಆಗಲೀ ಪ್ರೆಸಿಡೆಂಟರನ್ನು ಸಾರ್ವಜನಿಕ ವಿಷಯದಲ್ಲಾಗಲೀ ಯ. ಮುನ್ಸಿಪಾಲಿಟಿ ಆಡಳಿತ ವಿಷಯದಲ್ಲಾಗಲೀ ಪ್ರಶ್ನೆ ಮತ್ತು ಉಪಪ್ರಶ್ನೆ ಕೇಳುವ ಹಕ್ಕಿರಬೇಕು. [illegible] ಪ್ರೆಸಿಡೆಂಟರು ಸಮರ್ಪಕವಾದ ಜವಾಬನ್ನು [illegible] ಕೊಡಬೇಕು.

(4) ಯಾವನೊಬ್ಬ ಮೆಂಬರನೇ ಆಗಲೀ ಮುನ್ಸಿಪಾಲಿಟಿಯ [illegible] ಪ್ರೆಸಿಡೆಂಟರಿಗೆ [illegible] [illegible] ಪ್ರೆಸಿಡೆಂಟರು ನ್ಯಾಯವಾದ [illegible] ಕಾಟ್ಟೂ ರಿಕಾರ್ಡು ನೋಡಲು ಪರವಾನಿಗೆ ಕೊಡಬೇಕು.

(5) ಒಂದು ಸಲ ತಿರಸ್ಕೃತವಾದ ವಿಷಯವು 4 ತಿಂಗಳೊಳಗೆ ಪುನಃ ಚರ್ಚೆಗೆ ಬರಬಹುದು. ಇದಕ್ಕೆ ಮೆಂಬರುಗಳ ಒಪ್ಪಿಗೆ ಇದ್ದಲ್ಲಿ ಆಯಾ ವಿಷಯವನ್ನು ಪುನಃ ಚರ್ಚಿಸಿ ಪಾಸು ಮಾಡಬಹುದು.

(6) ಮುಂದಿನ ಮೀಟಿಂಗಿಗೆ ಕಳೆದ [illegible] ಮೀಟಿಂಗ್ಸ್ ಪ್ರತಿಯೊಂದನ್ನು ಪ್ರತಿಯೊಬ್ಬ ಮೆಂಬರುಗಳ [illegible] ಸೆಕ್ರೆಟರಿ ಮಾಡಬೇಕು.

(7) ಪ್ರೆಸಿಡೆಂಟರನ್ನು ವೈಸ್ ಪ್ರೆಸಿಡೆಂಟರನ್ನು ಕಮಿಟಿ ಮೆಂಬರುಗಳೇ [illegible] ವರಲ್ಲಿ ಯಾರ ಮೇಲ [illegible] ನಂಬಿಕೆ ಇಲ್ಲವೋ ಅಗ 'ನೊ ಕಾನ್‌ಫಿಡೆನ್ಸ್' (ಅವಿಶ್ವಾಸದ) ಠರಾವನ್ನು ತರುವ ಹಕ್ಕು ಇರಬೇಕು. ಹಾಗೆ ಠರಾವನ್ನು ಪೂರ್ಣ ಕಮಿಟಿಯ ಮೆಜಾರಿಟಿ ಮೆಂಬರುಗಳು ಪಾಸು ಮಾಡಿದರೆ, ಅಂಥವರು ಅವರ ಸ್ಥಳವನ್ನು ಖಾಲಿ ಮಾಡಬೇಕು. ಅನಂತರ ಅವರ ಸ್ಥಳಕ್ಕೆ ಅವರಿಗೆ ನಂಬಿಕೆ ಇರುವ ಮೆಂಬರುಗಳಲ್ಲೊಬ್ಬರನ್ನು ಚುನಾವಣೆ ಮಾಡುವ ಹಕ್ಕು ಕಮಿಟಿಗೆ ಇರಬೇಕು. "ನೊ ಕಾನ್‌ಫಿಡೆನ್ಸ್"ನ ಮೋಷನ್ ವ್ಯಕ್ತರಾದಾಗ ಮೇಲಿನ ಅಧಿಕಾರಿಗಳು ಕಮಿಟಿಯಲ್ಲಿ ಮೆಂಬರುಗಳಾಗಿರುವಲ್ಲಿ ಆಕ್ಷೇಪಣೆ ಇಲ್ಲ.

(8) ಯಾವನೊಬ್ಬ ಮೆಂಬರನೇ ಆಗಲಿ ಮೂರು ಕನ್ಸೆಕ್ಯುಟಿವ್ (ಒಂದರ ಮೇಲೊಂದು ತಪ್ಪದೆ ಬರುವ) ಮೀಟಿಂಗುಗಳಿಗೆ ಹಾಜರಾಗದಿದ್ದಲ್ಲಿ ಅಂಥವರ ಎಕ್ಸ್‌ಪ್ಲನೇಶನ್ ಕೇಳುವ ಹಕ್ಕು, ಹಾಗೆ ಅಂಥವರು ಸರಿಯಾದ ಕಾರಣವನ್ನು ಮೆಜಾರಿಟಿ ಮೆಂಬರುಗಳು ಒಪ್ಪಿಕೊಳ್ಳುವ ರೀತಿ ಕೊಟ್ಟಿದ್ದರೆ ಪುನಃ ಅವರನ್ನು ಮೆಂಬರಾಗಿ ಅವರೇ ಚುನಾವಣೆ ಮಾಡಿಕೊಳ್ಳುವ ಹಕ್ಕು ಕಮಿಟಿಗಿರಬೇಕು. ಹಾಗೆ ಮೆಜಾರಿಟಿಯವರಿಗೆ [illegible] ಕಾರಣಗಳು ನ್ಯಾಯವಾಗಿ ಕಂಡು ಬಾರದಿದ್ದಲ್ಲಿ ಅಂಥವರ ಮೆಂಬರುತನವು ನಶಿಸಿ ಹೋಗುತ್ತದೆ.

(9) ವರ್ಷಕ್ಕೆ 200 ರೂ. ಒಳಗೆ ಉತ್ಪತ್ತಿ ಇರುವವರ ಮೊಹತರ್ಪ ಕಂದಾಯವನ್ನು ಮಾಫಿ ಮಾಡಬೇಕು. ಈಗಿರುವ 10,000 ರೂಪಾಯಿಯ ದರವನ್ನು 30,000 ಸಾವಿರಕ್ಕೆ [illegible] ಮತ್ತು ಹತ್ತು [illegible] ದ ನಂತರ [illegible] 2 ರ ದರ ಹಾಕಬೇಕು.

(10) ಮುನ್ಸಿಪಾಲಿಟಿಯ ಸ್ಕೂಲುಗಳ ರಿಪೋರ್ಟನ್ನು ಅಧಿಕಾರಿಗಳು ಕಮಿಟಿಗೆ ತಪ್ಪದೆ ಕಳುಹಿಸಬೇಕು. [illegible] ಸ್ಕೂಲುಗಳ ಯಾವ ಮಾಸ್ತರನ್ನೇ ಆಗಲೀ ಡಿಸ್‌ಮಿಸ್ ಮಾಡುವ ಮೊದಲು ಕಮಿಟಿಗೆ ತಿಳಿಸಿ [illegible] ಅಂಥವರ [illegible]

(11) ಜನರ ಆರೋಗ್ಯದ ವಿಚಾರವಾಗಿ ಹೊಟೆಲ್‌ಗಳು [illegible] ಕೆಲವು ಸಂಗತಿಗಳು — ಹೊಟೆಲಿನ ಒಳ ಮತ್ತು ಹೊರ ಭಾಗವು ಶುಚಿಯಾಗಿಯೂ ಆರೋಗ್ಯಕರವಾಗಿಯೂ ಇರಬೇಕು. ಕಡಿಮೆ ಪಕ್ಷ [illegible] ತಿಂಗಳಿಗೊಂದಾವರ್ತಿಯಾದರೂ ಸುಣ್ಣ ಬಳಿಯಬೇಕು. [illegible] ತ್ರೆಗಳಲ್ಲಿ ಕಲಾಯಿ ಯಾವಾಗಲೂ ಇರಬೇಕು. ತಿಂಡಿ ಪದಾರ್ಥಗಳನ್ನು ಧೂಳು, ನೊಣಗಳು ಸೇರದ ರೀತಿ ಗಾಜಿನ ಪೆಟ್ಟಿಗೆಯೊಳಗೆ ಇಟ್ಟು ಮಾರಬೇಕು. ಅಂಟು ರೋಗಗಳನ್ನು ನೌಕರರಿಗೆ ಮಾಡಗಬಾರದು. ಎಟೆಂಡರ್ಸ್ (ಚಾಕರರು) ಯಾವಾಗಲೂ ಶುಚಿಯಾಗಿರಬೇಕಲ್ಲದೆ ಸಮವಸ್ತ್ರದ ಉಡುಪನ್ನು ಹಾಕಬೇಕು. ದರಗಳು ಅಧಿಕವಾಗಿರಬಾರದು. [illegible] ಇನ್ಸ್‌ಪೆಕ್ಷನ್ ಬುಕ್ ಮಡಗಿಕೊಳ್ಳಬೇಕು ವಗೈರೆಗಳು.

(12) ಮುನ್ಸಿಪಲ್ ಟೌನಿನೊಳಗೆ ಮೋಟಾರುಗಳ ಸ್ಪೀಡ್ ಗಂಟೆಗೆ 10 ಮೈಲಿನ ಮೇಲಿರಕೂಡದು. ಸ್ವಂತ ಮತ್ತು ಬಾಡಿಗೆ ಮೋಟಾರು ಎಂದು ಗುರ್ತು ವ್ಯತ್ಯಾಸ ತಿಳಿಯಲಿಕ್ಕೆ ಅವರಾಯದ ಕಪ್ಪು ಮತ್ತು ಬಿಳುಪು ಬಣ್ಣದ ಬೋರ್ಡುಗಳನ್ನು ಹಾಕಬೇಕು.

(13) ಮುನ್ಸಿಪಾಲಿಟಿಯವರು ರಸ್ತೆಯಲ್ಲಿದ್ದ ಹುಲ್ಲು, ಕಡು, ಹುತ್ತ ನಾಯಿ ಮುಂತಾದವುಗಳನ್ನು ಹೇಗೆ ಗುಂಡಿ ಹಾಕಿ ಕೊಲ್ಲುತ್ತಾರೋ ಹಾಗೆಯೇ ಮುನ್ಸಿಪಾಲಿಟಿ ಒಳವಾಸಿಸುವ ಯಾವ ಮನೆ ಮಾಲೀಕನೇ ಆದರೂ ತನ್ನ ಹಿತ್ತಲು ನಷ್ಟ ಪಡಿಸುವ ಈ ಮೃಗಗಳನ್ನು ಕೋವಿ ಲೈಸನ್ಸ್ ಇರುವ ತಾನೇ ಆಗಲಿ ಅಥವಾ ಲೈಸನ್ಸ್ ಇರುವವರ ಹಾಯಿಂದಾಗಲೀ ತನ್ನ ಜಾಗದಲ್ಲೇ ಗುಂಡು ಹೊಡೆದು ಕೊಲ್ಲುವ ಮಾಫಿ ಪಾಸನ್ನು ಅರ್ಜಿದಾರನಿಗೆ ಮುನ್ಸಿಪಾಲಿಟಿಯವರು ಕೊಡಬೇಕು.

(14) ಮುನ್ಸಿಪಾಲಿಟಿಯ ಜಮಾ, ಖರ್ಚು, ಸ್ಟಾಕ್ ಸಾಮಾನು ವಗೈರೆ ಮತ್ತು ಪ್ರತಿ ತಿಂಗಳಲ್ಲಿಯೂ ಮಾಡುವ ಕೆಲಸವನ್ನು ಸಹ ಆಡಿಟಾಯಿ ಪರಿಕ್ಷೆ ಮಾಡು ಇಸುವ ಸಬ್ ಕಮಿಟಿಯು ಅವಶ್ಯ ಇರಬೇಕು.

(15) ಮುನ್ಸಿಪಾಲಿಟಿಯ ಆದಾಯ ವೃದ್ಧಿಗಾಗಿ ಯಾ ಕಟ್ಟಡ ಜೆಸಿಬಿ ರಸ್ತೆ ವಗೈರೆ ಕಾಮಗಾರಿಗಳನ್ನು ಮಾಡಿಸಬೇಕಾದರೆ ಮೊದಲು ಟೆಂಡರುಗಳನ್ನು ಕರೆಯಬೇಕು. ಹಾಗೆ [illegible] ಈಗಿರುವ ಮೇಲ ಕಂಟ್ರಾಕ್ಟ್ ಕೆಡಿಸಬೇಕು. . . . .

ಈ ಮೇಲಿನ ರೂಲ್ಸುಗಳೆಲ್ಲಾ ಜನರ ಪ್ರಯೋಜನದ [illegible] ಮುನ್ಸಿಪಾಲಿಟಿಯ ಆಡಳಿತವನ್ನು ಸ [illegible] ವೃದ್ಧಿಯಾಗಿ ನಡೆಸು [illegible] ರೂಲ್ಸಿನ ಸಬ್ ಕಮಿಟಿಯವರು ತಾ 12—9—31ನೇ ದಿನ [illegible] ಬಹಳವಾಗಿ ಚರ್ಚಿಸಿ ಈ ಮೇಲಿನ [illegible] ಭೇದವಿಲ್ಲದೆ [illegible] ಬಾಕಿ ರೂಲ್ಸುಗಳನ್ನು ತಾ 17—9—31 ರ ಮೀಟಿಂಗಿಗೆ ಅಡ್ಜರ್ನ್ ಮಾಡಿರುತ್ತಾರಾಗಿಯೂ ವರ್ತಮಾನ ಬಾಕಿಯವುಗಳನ್ನು ಸಹ ಇನ್ನೇ ಮೇರೆ ಚರ್ಚೆ [illegible] ಜನರಲ್ ಕಮಿಟಿ ಮುಂದೆ [illegible] ಸ್ತ್ರೀಯ ಓಟು [illegible] ಪ್ರಕಟನದ ರೀತಿ ಗಂಡಸರು ಮತ್ತು ಐಶ್ವರ್ಯವಂತ ಎಂಬ ಭಿನ್ನಭೇದಗಳು ಮೆಂಬರುತನ ಮತ್ತು ಓಟಿನ ವಿಚಾರಗಳಲ್ಲಿ ಇಲ್ಲವೆಂಬದು ಸಬ್ ಕಮಿಟಿಯವರ ನಿರ್ಧಾರದಿಂದ ಸ್ಪಷ್ಟವಾಗುತ್ತೆ. [illegible]

ಕಮಿಟಿಯವರು ಸಹ ಸಬ್ ಕಮಿಟಿಯವರು ನಿರ್ಧರಿಸಿದ ರೂಲ್ಸುಗಳನ್ನು ಜಾರಿಗೆ ತಂದು ಪಟ್ಟಣದ ಕ್ಷೇಮವನ್ನು ನಿಜವಾಗಿಯೂ ಮರೆಯದೆ ಕಾಪಾಡುವರಾಗಿ ನಂಬುತ್ತೇನೆ. ವೀರರಾಜಪೇಟೆ ಮುನ್ಸಿಪಾಲಿಟಿಯು ಈ ಸಹ ಹಿಂದುಳಿಯದೆ ಸವನಾಗರಿಕತನ ಹೊಂದಿದ ಬೇ

ಳ ಮುನ್ಸಿಪಾಲಿಟಿಗಳಲ್ಲೆಲ್ಲಾ ಇದಕ್ಕೆ ಇಂಥಾ ನ ನ ಹೊಸ ಹೊಸ ರೂಲುಗಳನ್ನು ಅನುಸರಿಸಬೇಕಾಗಿ ಅ ಸುತ್ತೇನೆ. ಮಹನೀಯ ಓದುಗರ ಅಭಿಪ್ರಾಯವನ್ನ ಮಡಿಕೇರಿ ಮುನ್ಸಿಪಲ್ ಕಮಿಟಿಯವರು ಒಟ್ಟಾಗಿ ಜಾರಿ ಮಾಡಿದ ಮತ್ತು ಮಾಡದ ರೂಲುಗಳನ್ನೆಲ್ಲಾ ಂದವರು ಪ್ರಕಟಣೆ ಮಾಡುವ ರೀತಿ ದೇಶದ ಪತ್ರಿಕೆಗ ಎಲ್ಲಾ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸುತ್ತಾರಾಗಿ ನಂದಿರುತ್ತೇನೆ.

'ಪಟ್ಟಣಾಗ'

ಪರ್ಷಿಯಾದಲ್ಲಿ ಕೊಡಗರು.

'ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು' ಎಂಬಂತೆ ಗು ದೇಶವು ಚಿಕ್ಕದಾದರೂ ಅದರ ನಿವಾಸಿಗಳು ಪ್ರಪಂ ಹಲವು ಕಡೆಗಳಿಗೆ ಹೋಗಿ ಅದರ ಹೆಸರು ಪ್ರಾಸಿದ್ಧಿಸುನ್ನ ತ್ತಿರುವದು ಕೊಡಗಿನವರಿಗೆ ಸಂತೋಷವನ್ನುಂಟುಮಾಡ ಇರದು.

ಈಗ ಬಸ್ರಾದಲ್ಲಿ ಉದ್ಯೋಗದಲ್ಲಿರುವ ಮಿ. ಪಾಂಡಂ ಕಾರ್ಯಪ್ಪನವರು ಈ ಪೇಪರ್. ಪರ್ಷಿಯಾದ ಅಬದಾನ್ ಲ್ಲಿ 4 ವರ್ಷಗಳ ವರೆಗೆ ಸ್ಯಾನಿಟರಿ ಇನ್‌ಸ್ಪೆಕ್ಟರಾಗಿದ್ದ ಅಗ್ಯೆ ಅವರ ಅಟೋಟಗಳ ಗಟ್ಟಿಗತನವೂ, ಸರಳ ಸ್ವಭಾವವೂ ಇವರನ್ನು ಜನಪ್ರಿಯರಾಗಿ ಮಾಡಿತು. ಇವ ಂಧದಾಟಗಳಲ್ಲಿ ಹಲವು ಬಹುಮಾನ ಬಟ್ಟಲುಗಳನ್ನು ಗ ಅವರು ಈ ಸ್ಥಳವನ್ನು ಬಿಟ್ಟು ಹೋದಾಗ್ಯೆ ಒಂ ಬಟ್ಟಲನ್ನು ಅಬದಾನಿನ ಯುನೈಟೆಡ್ ಬ್ಯಾಡ್‌ಮಿಂಟನ್ ಗೆ ಕೊಟ್ಟು ಹೋಗಿದ್ದರು. ಸದರಿ ಕ್ಲಬ್ಬಿನ ಈ ವರ್ಷ ಟೂರ್ನಮೆಂಟಿನಲ್ಲಿ ಗೆದ್ದವರಿಗೆ ಬಟ್ಟಲನ್ನು ಹಂಚುವ ಸಮಾ ವು ಮೊನ್ನೆ ತಾನೇ ನಡೆಯಿತು. ಆದಕ್ಕೆ ಮಿ. ಕಾರ್ಯ ಪರು ಮತ್ತು ಅವರ ಪತ್ನಿ ಮುತ್ತಮ್ಮನವರು ಬಸ್ರಾದಿಂದ ಹ್ವಾನಿಸಲ್ಪಟ್ಟಿದ್ದರು. ಕ್ಲಬ್ಬಿನ ಸೆಕ್ರೆಟರಿಯವರ ಕೋರಿಕೆ ರೆ ಶ್ರೀಮತಿ ಮುತ್ತಮ್ಮನವರು ಟೂರ್ನಮೆಂಟಿನಲ್ಲಿ ಗೆದ್ದವ ಬಟ್ಟಲನ್ನೂ, ಮೆಡಲಗಳನ್ನೂ ಕೊಟ್ಟಾಗ, ಗೆದ್ದವರನ್ನು ಂದಿಸಿಯೂ, ಕ್ಲಬ್ಬಿನವರು ತನಗೆ ಈ ಬಹುಮಾನ ಕೊ ಕ್ಕೆ ಅವರನ್ನು ವಂದಿಸಿಯೂ ಮತ್ತು ಕ್ಲಬ್ಬಿನ ಅಭಿವೃದ್ಧಿ ಚೆನ್ನಾಗಿ ಆಗಲೆಂದೂ ಮನತಾಗಿ ಸ್ವಾತಂತ್ರ್ಯವಾದ ಭಾ ಮಾಡಿದರು. ಚಿಕ್ಕ ವಯಸ್ಸಿನ ಯುವತಿಯೊಬ್ಬಳು ಅ ಲ್ಲಿ ಇಲ್ಲಿಯವರೆಗೆ ವಿಶೇಷ ಶಬ್ದ (ಕೊಡವರ) ಉಡು ಧರಿಸಿಕೊಂಡು ಅಟೇಟಿಗಾರರಿಗೆ ಉತ್ತೇಜನಕೊಡು ಧೈರ್ಯದ ಭಾಷಣವನ್ನು ಮಾಡಿದ್ದು ಅಲ್ಲಿ ನೆರೆದಿದ್ದ ವು ಜನಾಂಗಗಳ ಮಹಿಳೆಯರಿಗೂ, ಮಹನೀಯರಿಗೂ ಆ ರ್ಯವನ್ನೂ, ಸಂತೋಷವನ್ನೂ ಉಂಟುಮಾಡಿತು. ಸಂ ಮಿ. ಕಾರ್ಯಪ್ಪನವರು ಕ್ಲಬ್ಬಿನವರನ್ನು ವಂದಿಸಿ ಕೆಲವು ಮಾತುಗಳನ್ನಾಡಿದ ಮೇಲೆ, ಗುಂಪು ಫೋಟೋ ತೆಗೆಯಲ್ಪಟ್ಟು ಸಭೆಯು ಬರಖಾಸ್ತಾಯಿತು.

"ಹಾಜರಿದ್ದವ"

ಡಿ. ಪಿ. ಡಬ್ಲ್ಯು. ಇಲಾಖೆಯಿಂದ ರೈತರಿಗೆ ನಷ್ಟ.

ಆಯ್ಯಾ,

ಈ ವರ್ಷದ ಮಳೆಯ ದೆಸೆಯಿಂದ ನಷ್ಟ ಮತ್ತು ಉಪ ಗ್ರಾಮಗಳಲ್ಲು ಹೊಳೆ ಕರೆ ಭೂಮಿಗಳಿಗೆ ದೊಡ್ಡ ನೆರೆಯು ದೆಸೆ ಯಿಂದ ನಟ್ಟಿ ಗದ್ದೆಗಳು ಪೂರ್ತಿ ಕರಗಿ ಹಾಳಾದದಲ್ಲದೆ ಮ ರಳು ಗದ್ದೆಗಳಲ್ಲು ನಿಂತು ತುಂಬಾ ನಷ್ಟದಲ್ಲು ರೈತರಾದ ನಾ ವುಗಳು ಕೊರಗುತ್ತಿದ್ದೇವೆ. ಕೆಲವು ಸಂದರ್ಭದಲ್ಲು ಹೊಳೆ ಕರೆ ರಸ್ತೆ ಬಾಜು ಭೂಮಿಗಳ ಒತ್ತು ಹೊಳೆ ನೀರು ಗದ್ದೆಗೆ ನುಗ್ಗುವ ಸಂದರ್ಭ ಇದ್ದಲ್ಲಿ ಮಣ್ಣು, ಮರಳು, ಮರಕಾಡು ವಗೈರೆ ಗದ್ದೆಗೆ ಬೀಳದ ರೀತಿ ಕಲ್ಲಿನಿಂದ ಸರ್ಕಾರದವರು ಕಟ್ಟಿ ಏಳಿಸಿದಂತ ಕೆಲವು ಕಟ್ಟೆಗಳನ್ನು ಡಿ. ಪಿ. ಡಬ್ಲ್ಯು. ಕೆಲಸದವರು ಕಿತ್ತು ಹಾಕಿದ ಕಾರಣ ಕೆಲವು ಕಡೆಗಳಲ್ಲಿ ಮೇಲೆ ಹೇಳಿದ ರೀತಿ ಮರಳು ವಗೈರೆ ನಿಂತು ತುಂಬಾ ನಷ್ಟ ರೈತರಿಗೆ ಉಂಟಾ ಗಿರುತ್ತೆ. ಉದಾಹರಣೆಗಾಗಿ ಹೊದ್ದೂರು ಗ್ರಾಮದ ಮೂ ರ್ನಾಡು—ನಾಪೋಕ್ಲು ರಸ್ತೆ 4ನೇ ಮೈಲು 2ನೇ ಫರ್ಲಾಂಗಿ ನಲ್ಲಿ ಇದ್ದಂತ ಒಂದು ಕಟ್ಟೆಯನ್ನು ಡಿ ಪಿ ಡಬ್ಲ್ಯು. ಕೆಲಸ ದವರು ಕಿತ್ತು ಹಾಕಿ ಸದರಿ ಕಲ್ಲನ್ನು ರಸ್ತೆಗೆ ಉಪಯೋಗಿ ದರಿಂದ ಸದರಿ ಗ್ರಾಮದ ಚೌರಿರ ಕಾಲುಬ್ಬಯ್ಯನವರ ಗದ್ದೆ ಗೆ ಮರಳು ಬಿದ್ದು ಸುಮಾರು 400 ರೂ ಗಳ ಕೆಲಸ ಪುನಹ ಮಾಡಿಸುವಷ್ಟು ನಷ್ಟಕ್ಕೆ ಒಳಪಟ್ಟಿರುವುದು ಕಂಡು ಬರುತ್ತೆ. ಆದ್ದರಿಂದ ಸರ್ಕಾರದವರು ಇನ್ನಾದರೂ ಅಂಥಾ ಕಟ್ಟೆಗಳನ್ನು ಸರಿಪಡಿಸಿ ರೈತರು ಒಳಪಡುವ ನಷ್ಟ ಕಷ್ಟಗಳಿಗೆ ಗುರಿಯಾಗದ ರೀತಿ ಡಿ. ಪಿ. ಡಬ್ಲ್ಯು. ಯವರಿಗೆ ಸೂಚನೆ ಕೊಡಬೇಕಾಗಿ ನ ಮ್ಮಗಳ ಪ್ರಾರ್ಥನೆ.

ಹೊದ್ದೂರು ಸಂಘದ ಅಧ್ಯಕ್ಷ.

Gents Lever Wrist Watch Rs 4—12—0.

ಜೆಂಟ್ಸ್ ಲೀವರ್ ರಿಸ್ಟ್ ವಾಚ್.



ಈ ಹೊಸ ನಮೂನೆ ಗಡಿಯಾರಗ ಳು ಬಹಳ ಬಲಿಷ್ಠವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟಿವೆ ನೋಡಲಿಕ್ಕೆ ಭಂಗಾರದ ಗಡಿಯಾರ ದ ಹಾಗೆ ಕಾಣುವುದು. ಚಿಕ್ಕ ಸೈಜು, ಕೈಯಲ್ಲಿ ಕಟ್ಟಿಕೊ ಳ್ಳಲು ಬಹು ಅಂದವಾಗಿರುತ್ತೆ. ಇಂಗ್ಲಿಷ್ ನಮೂನೆ ಗಡಿ ಯಾರ ಗ್ಯಾರಂಟಿ 3 ವರ್ಷಗಳು ಕೊಡಲ್ಪಡುತ್ತೆ. ಬ್ರೇಸಲೆ ಟ್ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 4—12—0.

ಕಮಲಾ ಟ್ರೇಡಿಂಗ್ ಕಂಪೆನಿ,
17 ನಮ್ಮಾಳ್ವಾರ್ ಬೀದಿ,
4—1 ಜಿ. ಟಿ. ಮದರಾಸು.

British Photo Camera Rs. 2—8—0.

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಾಗಳು ವಿಲಾ ಯತಿಯಲ್ಲಿ ತಯಾರಾದವು. ಈ ಕ್ಯಾಮರ ಗಳಲ್ಲಿ ಇತರರ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆ ಯಬಹುದು. ಈ ಕ್ಯಾಮರಾ ಒಂದು ಇ ದ್ದರೆ ದೇಶಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಫೋಸ್ಟ್ ಕಾರ್ಡಿನ ಸೈಜಿನಲ್ಲಿ ಫೋಟೋ ಗಳನ್ನು ಎಷ್ಟು ಮಂದಿಗಳಿಗಾದರೂ ತೆಗೆಯಬಹುದು. ಫೋ ಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾ ಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನಗ ಳನ್ನು ಕಳುಹಿಸುವೆವು. ಕ್ರಯ ಕ್ಯಾಮರಾ 1ಕ್ಕೆ ರೂ. 2—8—0.

ಕಮಲಾ ಟ್ರೇಡಿಂಗ್ ಕಂಪೆನಿ,
17 ನಮ್ಮಾಳ್ವಾರ್ ಬೀದಿ,
4—1 ಜಿ. ಟಿ. ಮದರಾಸ್.

ಶೃಂಗಾರದ ಪುಸ್ತಕ! ಶೃಂಗಾರದ ಪುಸ್ತಕ!!

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಫೋಟೋಗಳ ಸಹಿತ ತಿಳಿಸುವ

ಮದನಕಲಾ ಶಾಸ್ತ್ರ

ಎಂಬ ಮರ್ಮ ಶಾಸ್ತ್ರ. ಕ್ರಯ ರೂ. ೧—೦—೦.

ಕನ್ನಡ ಭಾಷೆಯಲ್ಲಿ ಅಂದವಾದ ಗ್ಲೇಜ್ ಕಾಗದದಲ್ಲಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪು ರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ದೇ ಶದ ವೇಶ್ಯೆ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಲೆಯಾಳ, ಜಪಾನ್, ಫ್ರಾನ್ಸ್ ದೇಶದ ವೇಶ್ಯೆ ಸ್ತ್ರೀಯರ ಮಲಗುವ ಮನೆ ಫೋಟೋಗಳು, ಕನ್ಯೆ ಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳು, ಜರ್ಮನಿ ದೇಶದಲ್ಲಿ ಸ್ತ್ರೀ ಯರು ದಿಗಂಬರವಾಗಿರುವ ವಿನೋದಗಳು, ರತಿ—ಮನ್ಮಥರು ಆನಂದವಾಗಿರುವುದಕ್ಕೆ ಮೋಹನ ಮರ್ಮಗಳು, ಈ ಫೋಟೋ ಗಳ ಸಹಿತ ಕೂಡಿದ ಈ ಶೃಂಗಾರವಾದ ಪುಸ್ತಕವನ್ನು ಓದಲು ಬಹು ಆನಂದವಾಗಿರುವದು. ಫೋಟೋಗಳು ಸಹಿತ ಪುಸ್ತಕ ೧ಕ್ಕೆ ೧ ರೂಪಾಯಿ.

ಕಮಲಾ ಟ್ರೇಡಿಂಗ್ ಕಂಪೆನಿ,
17 ನಮ್ಮಾಳ್ವಾರ್ ಬೀದಿ,
4—1 ಜಿ. ಟಿ. ಮದರಾಸು.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಗ್ಯಾರಂಟಿ ಭಂಗಾರದ ನಿಬ್ಬು ಹಾಕಿದ ಖಾತ್ರಿಯು ಬಂದೋಬಸ್ತು ಆದ ಫೌಂಟನ್ ಪೆನ್‌ಗಳು.

ವಂಡರ್ ಫೌಂಟನ್ ಪೆನ್ 1ಕ್ಕೆ	ರೂ. 3	0	0	
" ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0	
" ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0	
" ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟನ್ ಪೆನ್ 1ಕ್ಕೆ	3	14	0	
" ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್ ಪೆನ್ 1ಕ್ಕೆ	4	2	0	
" ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರವುನ್ ಕಲರ್ ಫೌಂಟನ್ ಪೆನ್ 1ಕ್ಕೆ	5	8	0	
ಸ್ವಾನ್ ಫೌಂಟನ್ ಪೆನ್ 1ಕ್ಕೆ	10	8	0	
ಪೆನ್ 1ಕ್ಕೆ	14 6 0, & 20	10	0	
ಫೌಂಟನ್ ಪೆನ್ 1ಕ್ಕೆ	3 8 0, & 3	12		
ಫೌಂಟನ್ ಪೆನ್ 1ಕ್ಕೆ	6 4 0, & 6	12	0	
ಮನ್ ಫೌಂಟನ್ ಪೆನ್ 1ಕ್ಕೆ	8 2 0, & 8	10	0	

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್	1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್	1ಕ್ಕೆ	2	2	0
ಲಿಗಲಿಯೂ ಅಲಾರಂ ಟೈಂಪೀಸ್	1ಕ್ಕೆ	6 4 0, & 6	15	0
ಲಿಗಲಿಯೂ ಸಣ್ಣ ಸೈಜಿನ ಅಲಾರಂ ಟೈಂಪೀಸ್	1ಕ್ಕೆ	7	2	0
ಲಿಗಲಿಯೂ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು	1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್	1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇದಕ್ಕೆ ಖಾತ್ರಿಯಾದ ಟೈಂಪೀಸ್	1ಕ್ಕೆ	13	4	0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್	1ಕ್ಕೆ	5	10	0
ಜಿಜೋ ನಮೂನೆಯಲ್ಲಿ ಎಚ್ಚ ಹಾರ್ಡ್ಸ ಕಂಪೆನಿಯ ಪಾಕೆಟ್ ವಾಚ್	1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮುವ್ಮೆಂಟ್ ಸಾಧಾರಣ ತರಪ ರಿಸ್ಟ್ ವಾಚ್	1ಕ್ಕೆ	5 4 0, 7 8 0, 10 0 0 & 12	8	0



ಇಲ್ಲಿ ನಮೂದಿಸಿದ ಹೊಸ ನಮೂನೆ ಅಂದವಾದ ಟೇಬಲ್ ಕ್ಲಾಕ್ 1ಕ್ಕೆ 3—8—0 ಪ್ಯಾಕಿಂಗ್ ಪೋಸ್ಟೇಜು ಅ ಲಾಯಿದಾ

ಪೂರ್ತಿ ಕೆಟಲಾಗ್ ಕಳುಹಿಸಲಾಗುವುದು:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—9

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ
ಶೇರ್ ಬಂಡವಾಳ	—	51,000
ವಸೂಲಾದ ಶೇರ್ ಮೊಬಲಗು	—	26,800
ಒಟ್ಟು ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆಲ್ಲ ಸಾಲ ಕೊಡುತ್ತಿದ್ದಾರೆ.

ಒಂದು ವರ್ಷ ವಾಯಿದೆ ಅವಧಿ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ತಕರ್ನ್ಯಂದಾವರ್ತೀ ಕೊಳ ಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಅನುಮೋದಿಸಿದೆ ಮಾಡುತ್ತಾರೆ.

ಪ್ರೆಸಿಡೆಂಟರು,	ವೈಸ್ ಪ್ರೆಸಿಡೆಂಟ್
ಚೆರಿಯಪಂಡ ಅಪ್ಪಯ್ಯನವರು	[illegible]
ರಾವ್ ಬಹದ್ದೂರ್	[illegible]

ಸೆಕ್ರೆಟರಿ

ಸಿ. ಯಸ್. ವೆಂಕಟಪ್ಪಯ್ಯನವರು [illegible]

ತಾರೀಖು 1-7-1931

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ವನ್ನು ಕೊಡುವುದರಿಂದ ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52-37 ಗಿರಗಾಂವ್, ಮುಂಬಯಿ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯಮಾಡಿ ಗಿರಾಕಿದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು,

ಉತ್ತರ ಕೊಡಗಿಗೆ ಮೆ. ಪಾಲೇಂಗಡ ಕಾರ್ಯಪ್ಪನವರು,
ಮೆ. [illegible] ಚಂಗಪ್ಪಯ್ಯನವರು.

ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಪ್ಪಯ್ಯನವರು,
ಮಡಿಕೇರಿ—ಮೆ. [illegible] ಅಪ್ಪಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. [illegible] (ಬಾಡಿಬಂದಾರ)

[illegible]—ಎಮ್. ಆರ್. ವೆಂಕಪ್ಪಯ್ಯನವರು.

[illegible]—ಕೆ. [illegible]

[illegible]

[illegible]—ಮೆ. ಬಿಸಂಡ ಸೋಮಪ್ಪನವರು,

[illegible]

" ಮೆ. [illegible]

ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,

ಸುಂಟಿಕೊಪ್ಪ & ತಿತಿಮತ್ತಿ—ಮೆ. ಪಿ. [illegible]ಯ್ಯನವರು,

ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಪ್ಪಯ್ಯನವರು,

ಸೂಚನೆ—[illegible] ರಶೀತಿ [illegible] ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
ಕೊಡಗು ಲಿಮಿಟೆಡ್,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವ್ಯವಹಾರ—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪನ್ನ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ.
ಬಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಜೀವಿತ ವಿಮೆ [illegible] 1,78,322 ಜನರಿಗೆ 38 ಕೋಟಿ ರೂ.
[illegible] ಶೇಕಡ 22.4 [illegible]
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಚಾರ್ಜು ಮತ್ತು ಉತ್ತಮವಾದ ಸವಲತ್ತುಗಳಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂದು ಅದರ ಹಿಂದಿನ ದಾಖಲೆಗಳಿಂದಲೂ ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಬೇಕು—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ [illegible] ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	[illegible]	[illegible]ಪೂರು	ಪೇಶಾವರ್	ರಂಗೂನ್
ಅಹ್ಮದಾಬಾದು	[illegible]	[illegible]	[illegible]	[illegible]
ಅಜ್ಮೀರ್	ಢಾಕ್ಕಾ	ಲಾಹೋರ್	ಪಾಟ್ನಾ	[illegible]
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಪೂರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ

ಮಲೇರಿಯಾ

ಕೊಡಗಿನ ಗುಡುಗುಡು ಎಂಬ ಚಳಿಜ್ವರಕ್ಕೂ, [illegible] ಜ್ವರಕ್ಕೂ, ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಯಾವುದೆಂದು ತಿಳಿವಿ? ಇಗೋ ಬಾಲ ಮದ್ದು ಮಲೇರಿಯಾನ ಸಂಪೂರ್ಣ ಜ್ವರವನ್ನು ಗುಣಪಡಿಸಿ ಗಡ್ಡೆಯನ್ನು ಖಾತ್ರಿಯಾಗಿ ಬಿಡುತ್ತದೆಂದು ಸ್ಥಿರ ನಂಬು. ಕ್ರಯ. ಬಾಟ್ಲಿಗೆ 1-8. ½ ಡಜನ್ 8-8-0. 1 ಡಜನ್ 16-8-0.

ಕಂಪೌಂಡು ಸಿರಪು ಬ್ಲಟ.

ಗುರುಗಾಯ ಉಬ್ಬಸ ಸೇವಸದ ರೋಗದಿಂದ ಕಠಿಣ ಕೆಮ್ಮು, [illegible] ಎಳದಾಟ ಎದೆ ಮತ್ತು ಪಾರ್ಶ್ವಸೋವು [illegible] ಯುವುದಕ್ಕೆ ಅತೀ ಸಂಕಷ್ಟದಿಂದ ನರಳುವ ರೋಗಿಯು [illegible] ಕಂಪೌಂಡು ಸಿರಪು ಬ್ಲಟ ಎಂಬದನ್ನು [illegible] ಕ್ರಯ ಬಾಟ್ಲಿಗ ರೂ. 1-8-0.

ಕಂಪೌಂಡು ಸಿರಪು ಬಸಲೀಸ:—[illegible] ರೋಗಕ್ಕೆ ಈ ಸಿರಪನ್ನು ಆರಂಭದ ಸ್ಥಿತಿಯಲ್ಲಿಯೇ ಸೇವಿಸಿದರೆ [illegible] ಉಂಟಾಗುವ ಹುಣ್ಣು ವ್ರಣಗಳು, ಕೆಮ್ಮು ಎದೆನೋವು ರಕ್ತ [illegible] ಜ್ವರ ಇತ್ಯಾದಿ ರೋಗಗಳನ್ನು ಗುಣಪಡಿಸಿ ಮುಂದರಿಯದಂತೆ ಶಾಶ್ವತ ಆರೋಗ್ಯ ಕೊಡುವುದು. ಕ್ರಯ ಬಾಟ್ಲಿಗೆ ರೂ 1-8-0.

ಕಂಪೌಂಡು ಸಿರಪು ಸರ್ಸಪರಿಲಾ:—[illegible] ಮೂತ್ರದ್ವಾರದಿಂದಲೂ ಗರ್ಭದ್ವಾರದಿಂದಲೂ ಹರಿಯುವ ಬಿಳಿ [illegible] ರೋಗದಿಂದ [illegible] ಆಯಾಸ ಮುಂತಾದವುಗಳನ್ನು ಗುಣಪಡಿಸಿ ದೇಹವನ್ನು ಪುಷ್ಟಿಕರಿಸಿ ಬಲವನ್ನು [illegible] ಕ್ರಯ ಬಾಟ್ಲಿಗೆ ರೂ. 3-8-0.

ಕಂಪೌಂಡು ಸಿರಪು ವೆಸಿ[illegible]:—[illegible] ಗುಪ್ತರೋಗವನ್ನು [illegible] ಮೂತ್ರ [illegible] ದ್ವಾರದೊಳಗೆ ಹುಣ್ಣು ವ್ರಣಗಳು [illegible] ರೋಗವನ್ನು ಈ ಬಲವಾದ [illegible] ಗುಣ ಪಡಿಸಿ ಆರೋಗ್ಯ ಕೊಡುವುದು. ಕ್ರಯ ಬಾಟ್ಲಿಗೆ ರೂ. 3-8-0.

ಶುದ್ಧ ಟಿಂಕ್ಚರುಗಳೂ ಹೋಮ್ಯೋಪತಿ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ.

[illegible] ರೋಗದ ಲಕ್ಷಣಗಳನ್ನು ನಮ್ಮ ಆರೋಗ್ಯ [illegible] ಬರೆಯುತ್ತಲೂ ಪರೀಕ್ಷಿಸಿ ಕೊಡುವ [illegible] ನ್ಯಾಯವಾದ [illegible]

ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ದೊಡ್ಡ ಪುಸ್ತಕಕ್ಕೆ ಬರೆಯಿರಿ. ಧನರ್ಹಿತ.

52-46 **Malariana Co.,**
Hampankatta No 14 Mangalore

ವಿಳಾಸ—ಮಲೇರಿಯಾನ ಕಂಪೆನಿ,
ಹಂಪನಕಟ್ಟೆ, [illegible], 14, ಮಂಗಳೂರು [illegible]

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ [illegible] ಬೊಬ್ಬ ಮೊಬಲಗಿನಲ್ಲಿಯೂ ಇರಬೇಕಾದ ಅಮಿತ [illegible] [illegible] ಸಂಘದ ಮತ್ತು ದವಸ [illegible] ದವ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ [illegible] ಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳ [illegible] ಕ್ರಮ ಪ್ರಕಾರ ನಡೆಸಲು ಅತ್ಯವಶ್ಯವಾಗಿರುವ, ಈಗಲ್ಲಿಗೆ [illegible] [illegible] ಫಾರಮುಗಳು, ತಮ್ಮ ಮುಂಚಿನಂತೆ [illegible] ಗಳು, [illegible] ಪಾಠಮಾಲೆಗಳೂ, [illegible] ಫಾರಮುಗಳು, [illegible] ಶೀಟ್ [illegible] ರವ ಗಳೂ, ಓನರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ [illegible] [illegible] ಕ್ರಯದಲ್ಲಿ ದೊರೆಯುತ್ತವೆ. ಮುದ್ದು [illegible] ಆಗಿದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

Printed & published by P. I Belliappa at "Kodagu" Press Mercara for "Kodagu" Ltd

ಕೊಡಗು.

ಸನ್ ೧೯೩೧ನೇ ಇಸವಿ

ಸೆಪ್ಟೆಂಬರ್ ತಾ. ೨೫ನೇ ಶುಕ್ರವಾರ.

ಬ್ಯಾಂಕ್‌ಗಳ ವಿಚಾರದ ಕಮಿಟಿ ವರದಿ.

ಪ್ರಾಂತೀಕ ಸರಕಾರಗಳು ಪ್ರತ್ಯೇಕವಾಗಿ ಬ್ಯಾಂಕಿಂಗ್ ವಿಷಯ ತನಿಖೆಮಾಡಿ ವರದಿ ಬರೆಯಲು ಕಮಿಟಿಗಳನ್ನು ನೇಮಿಸಿದಂತೆಯೇ ಮಧ್ಯವರ್ತಿ ಸರಕಾರವು ಒಂದು ಕಮಿಟಿಯನ್ನು ನೇಮಿಸಿತು. ಇದರ ವರದಿಯು ಕಳೆದ ವಾರ ಪ್ರಕಟವಾಗಿದೆ. ಇದರಲ್ಲಿ 21 ಸದಸ್ಯರುಗಳಿದ್ದರು. ಇವರಲ್ಲಿ ನಾಲ್ಕು ಜನರು ಮಾತ್ರ ಯೂರೋಪಿಯನರು. ಈ ವರದಿಯಲ್ಲಿ ಹಿಂದೂಸ್ಥಾನದ ಹಿತಕ್ಕೆ ಬೇಕಾದ ವಿಧವಿಧದ ಶಿಫಾರಸುಗಳಿವೆ. ಅವುಗಳಲ್ಲಿ ಕೃಷಿಕರಿಗೆ ಸಂಬಂಧಪಡುವ ಕೆಲವನ್ನು ಮಾತ್ರ ಇಲ್ಲಿ ವಿಮರ್ಶಿಸುತ್ತೇವೆ. ಈ ವರದಿಯಲ್ಲಿರುವ ಶಿಫಾರಸುಗಳನ್ನು ಪ್ರಾಂತೀಕ ಮತ್ತು ಮಧ್ಯವರ್ತಿ ಆಡಳಿತಗಳು ಪ್ರಜಾಪ್ರತಿನಿಧಿಗಳಾದ ಮಂತ್ರಿಗಳ ವಶಕ್ಕೆ ಬರುತ್ತವೆ ಎಂಬ ನಂಬಿಕೆಯನ್ನಿಟ್ಟುಕೊಂಡೇ ಬರೆದಿರುವುದಾಗಿ ವರದಿಯಲ್ಲಿ ನಮೂದಿಸಿದೆ. ಅಂದರೆ ಈ ವರದಿಯ ಶಿಫಾರಸುಗಳನ್ನು ಪ್ರಜಾಪಕ್ಷಪಾತಿ ಸರಕಾರ ಮಾತ್ರ ಜಾರಿಗೆ ತಂದೀತೆಂತಲೂ ಮತ್ತು ಅವುಗಳನ್ನು ಪ್ರಜೆಗಳ ಮೇಲೆ ಸಹಾನುಭೂತಿಯಿಂದ ಜಾರಿಗೆ ತಂದರೆ ಮಾತ್ರ ಪ್ರಯೋಜನವಾದೀತೆಂತಲೂ ಕಮಿಟಿಯವರು ನಂಬಿರುವಂತೆ ತೋರುತ್ತದೆ.

"ಕೃಷೀಕರನ್ನು ಸಾಲದಿಂದ ಬಿಡುಗಡೆ ಮಾಡಲು, ಸಾಲ ಕೊಟ್ಟವರನ್ನು ರಾಜಿ ಮಾಡಿ ಒಪ್ಪಿಸಿ, ಸಾಲವನ್ನು ಪೂರ್ತಿಯಾಗಿ ಅಥವಾ ಸ್ವಲ್ಪ ಭಾಗವಾದರೂ ವಿತರಿಸುವ ಸಂಸ್ಥೆಗಳನ್ನು ಏರ್ಪಡಿಸುವ ಯೋಚನೆ ಮಾಡಬೇಕು ಮತ್ತು ಸಾಲಗಾರರ ಬಲೆಯಿಂದ ತಪ್ಪಿಸಿಕೊಳ್ಳಲು ಸುಲಭವಾಗಿ ಸಾಧ್ಯವಾಗುವಂತೆ ಹೊಸ ಇನ್ಸಾಲ್ವೆನ್ಸಿ ಕಾನೂನು ಮಾಡಬೇಕು. ಜಾಮೀನಿಲ್ಲದೆ ಸಾಲವನ್ನು ವಿತರಿಸಿಕೊಳ್ಳುವ ಕಾನೂನು ಮಾಡಬೇಕು. ಋಣ ಪತ್ರಗಳನ್ನು ರದ್ದು ಮಾಡುವ ಹಕ್ಕು ಕೋರ್ಟುಗಳಿಗಿರುವ ಕಾನೂನನ್ನು ಹೆಚ್ಚಾಗಿ ಉಪಯೋಗಿಸಬೇಕು. ತಪ್ಪಿದರೆ ಹೆಚ್ಚಿನ ಬಡ್ಡಿ ಹಾಕುವದನ್ನು ಕಾನೂನಿನ ವಿರೋಧವೆಂತ ಮಾಡಬೇಕು.' ಇವೇ ಅಲ್ಲ, ಇದೇ ತರದ ಇತರ ಶಿಫಾರಸುಗಳೂ ಇವೆ. ರೈತರು ಕೆಲವು ವರ್ಷಗಳಿಂದಲೇ ತೆಗೆದುಕೊಳ್ಳುತ್ತಾ ಬಂದ ಸಾಲ ಉಳಿಯದಿದ್ದನ್ನು ತೀರಿಸಲು ಉಪಾಯವೇ ಇಲ್ಲವೆಂತ ತೋರಿದಾಗ ಮತ್ತು ಋಣ ಬಡ್ಡಿ, ಬಡ್ಡಿಗೆ ಬಡ್ಡಿ ಸೇರಿಸಿ ಸಾಲವು ಉಳಿದು ಹೋಗಿರುವ ಸಂದರ್ಭಗಳು ಬಂದಾಗ ರೈತರಿಗೆ ಸಹಾಯ ಸಿಕ್ಕಲೇ ಬೇಕು. ತಮ್ಮ ಹಿರಿಯರು ಮಾಡಿದ ಸಾಲ ಅಥವಾ ತಾವು ಮಾಡಿದ ಸಾಲಕ್ಕೆ ಬಡ್ಡಿಗೆ ಬಡ್ಡಿ ತೆತ್ತು ಸೋತಿರುವಾಗ ಉತ್ಸಾಹದಿಂದ ಕೃಷಿ ಕೆಲಸ ಮಾಡಲೂ ರೈತರಿಗೆ ಮನಸು ಬರುವುದಿಲ್ಲ, ಬೇಕಾದ ಹಣದ ಸಹಾಯವಿಲ್ಲದೆ ಸಾಧ್ಯವೂ ಇಲ್ಲ. ಹೀಗೆ ವ್ಯವಸಾಯ ಮಾಡದಿದ್ದರೆ ಸಾಲದಿಂದ ಬಿಡುಗಡೆ ಮಾಡಿಕೊಳ್ಳುವ ಸಂಭವವೂ ಇಲ್ಲವೆಂಬ ಧರ್ಮಸಂಕಟಕ್ಕೆ ಈಡಾದವರಿಗೆ ಸಾಲಗಾರರಿಂದ ಬಿಡುಗಡೆಯಾಗಿ ಜೀವನವನ್ನು ಹೊಸದಾಗಿ ಪ್ರಾರಂಭಿಸಿದರೆ ಎಷ್ಟೋ ಪ್ರಯೋಜನವಾದೀತು. ಆದರೆ ಇಂಥಾ ಕಾನೂನುಗಳನ್ನು ಮಾಡಿದರೆ ಮೋಸ ಮಾಡಲು ಮನಸಿರುವ ರೈತರಿಗೂ ಸಹಾಯವಾದೀತು. ಸಗಟಾಗಿ ತೆಗೆದುಕೊಂಡ ಹಣವನ್ನು ಕಡಿಮೆ ದರದ ಬಡ್ಡಿ ಸೇರಿಸಿ ಕೊಡದೆ, ಇಲ್ಲ ಸಲ್ಲದ ವಾದ ಮಾಡುವವರಿಗೂ ಅವಕಾಶ ದೊರೆತು, ರೈತರಿಗೆ ಹಣ ಸಾಲ ದೊರೆಯಲು ಅನುಕೂಲವಿಲ್ಲದೆ ಹೋಗುವ ಸಂಭವವೂ ಉಂಟಾಗಬಹುದು. ಆದುದರಿಂದ ಈ ಶಿಫಾರಸುಗಳ ಮೇರೆ ಮುಂದೆ ಕಾನೂನು ಮಾಡುವಾಗ ತಕ್ಕ ಬಂದೋಬಸ್ತುಗಳನ್ನು ಇಟ್ಟುಕೊಳ್ಳಬೇಕಾಗುವದು.

ಸಾಲ ಕೊಡುವುದೇ ಕಸಬಾಗಿ ಇಟ್ಟುಕೊಂಡ ಸಾಹುಕಾರರ ಲೆಕ್ಕಗಳು ಬ್ಯಾಂಕ್ ಲೆಕ್ಕಗಳಂತೆ ಇರುವಂತೆಯೂ, ಅಂಥಾ ಲೆಕ್ಕಗಳನ್ನು ಸರ್ಕಾರ ಅಡಿಟರುಗಳು ಆಡಿಟ್ ಮಾಡುವಂತೆಯೂ ಮಾಡಬೇಕೆಂತ ಒಂದು ಸಲಹೆ ಇದೆ. ಇದು ಬಹಳ ಅವಶ್ಯವಿರುವ ವಿಷಯವಾಗಿದೆ. ಹಣದ ಲೇವಾದೇವಿ ಮಾಡುವವರ ಲೆಕ್ಕವು ಬಹಳ ಚೆನ್ನಾಗಿರಬೇಕು. ಸಾಲ ಪಡೆಕೊಂಡವನಿಗೆ ಮೋಸವಾಗಲು ಅವಕಾಶವಿಲ್ಲದಂತೆ ಇರಬೇಕು. ಇಂಪೀರಿಯಲ್ ಬ್ಯಾಂಕ್ ಮುಂತಾದ ಬ್ಯಾಂಕ್‌ಗಳು ಇಂಥಾ ಸಾಹುಕಾರರುಗಳಿಗೆ ಸುಲಭವಾಗಿ ಸಾಲ ಕೊಡುವ ಏರ್ಪಾಡಾಗಬೇಕೆಂತಲೂ ಇನ್ನೊಂದು ಶಿಫಾರಸು ಇದೆ.

"ಸಹಕಾರಿ ಸಂಘಗಳು ಮೆಂಬರುಗಳ ಉಳಿತಾಯವನ್ನು ಡಿಪಾಜಿಟ್ಟಾಗಿ ತೆಗೆದುಕೊಳ್ಳುವ ಸಂಸ್ಥೆಗಳಾಗಬೇಕು." ಈ ತನಕ ಈ ಮೊದಲೇ ಸಂಘಗಳ ಬೈಲಾದಲ್ಲಿದ್ದರೂ ಜಾರಿಗೆ ಬಂದಿರುವುದಿಲ್ಲ. ಉಳಿತಾಯ ಮಾಡಿಕೊಳ್ಳುವವರು ಈ ಗ್ರಾಮ ಸಂಘಗಳಿಗೇನೇ ಠೇವಣಾತಿಯಾಗಿ ಕೊಟ್ಟು ಉಳಿತಾಯ ಮಾಡಿಕೊಳ್ಳಲು ಇತರರಿಗೆ ಸ್ಫೂರ್ತಿ ಹುಟ್ಟುವಂತೆ ಮಾಡುವುದು ಒಳ್ಳೇದು. "ಸಂಘಗಳ ರಿಜರ್ವ್ ಫಂಡ್ ಬ್ಯಾಂಕಿನಲ್ಲಿರುವಷ್ಟು ಮಟ್ಟಿಗೆ ಬ್ಯಾಂಕು ಸಂಘಗಳಿಗೆ ಕಡಿಮೆ ದರದಲ್ಲಿ ಸಾಲ ಕೊಡುವ ಏರ್ಪಾಡು ಮಾಡುವ ಯೋಚನೆ ಮಾಡಬೇಕು." ಈ ವಿಷಯವನ್ನು ಸಹಕಾರಿಗಳು ಗಮನಕ್ಕೆ ತೆಗೆದುಕೊಳ್ಳಬಹುದು.

"ಸಹಕಾರಿ ಸಂಘಗಳು ಚಿಕ್ಕ ವಾಯಿದೆಯ ಸಾಲವನ್ನು ಮಾತ್ರ ಕೊಡಬೇಕು. ಹೆಚ್ಚಿನ ವಾಯಿದೆಯ ಸಾಲಗಳನ್ನು ಲ್ಯಾಂಡ್ ಮಾರ್ಗೇಜ್ ಬ್ಯಾಂಕ್‌ಗಳೇ ಕೊಡಬೇಕು." ಈ ಶಿಫಾರಸ್ಸಿಗೆ ಯಾವ ಕಾರಣಗಳನ್ನು ಕೊಟ್ಟಿದ್ದಾರೆಂತ ಮೂಲ ವರದಿಯನ್ನೇ ನೋಡಿ ತಿಳಿದುಕೊಳ್ಳಬೇಕಷ್ಟೆ. ನಮ್ಮ ದೇಶದಲ್ಲಿ ಸಂಘಗಳು ಮೆಂಬರುಗಳಿಗೆ ಕೊಡುವ ಸಾಲಗಳಿಗೂ, ಬ್ಯಾಂಕು ಸಂಘಗಳಿಗೆ ಕೊಡುವ ಸಾಲಗಳಿಗೂ ಹೆಚ್ಚಿಗೆ ವಾಯಿದೆ ಕೊಡಬೇಕೆಂಬ ಕೋರಿಕೆಯು ಬಹಳ ದಿನಗಳಿಂದಲೇ ಇರುವದರಿಂದ ಇದು ಚೆನ್ನಾಗಿ ಯೋಚಿಸತಕ್ಕ ವಿಷಯವಾಗಿದೆ. 'ಸಹಕಾರಿ ಚಳವಳಿಯು ಜನಪ್ರಿಯವಾಗಲಿಕ್ಕೂ ಮತ್ತು ಮೆಂಬರುಗಳಿಗೆ ತಮ್ಮ ಜವಾಬ್ದಾರಿ ಚೆನ್ನಾಗಿ ತಿಳಿಯಲು ಸಾಧ್ಯವಾಗಲಿಕ್ಕೂ, ಸರಕಾರಿ ಉದ್ಯೋಗಸ್ಥರು ಸಂಘವನ್ನು ಒಂದೋಬಸ್ತಿನಲ್ಲಿಟ್ಟುಕೊಳ್ಳುವ ಪದ್ಧತಿಯನ್ನು ಕಡಿಮೆ ಮಾಡಬೇಕು.' ಇದನ್ನು ಸಾಧಿಸಲಿಕ್ಕೆ ಕಾರ್ಯದಕ್ಷತೆ ಇರುವ ಯೋಗ್ಯ ಮಹನೀಯರು ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡಲು ಸಿಕ್ಕುವುದಿಲ್ಲ. ಆದ್ದರಿಂದ ಮೇಲ್ವಿಚಾರ ಕಡಿಮೆ ಮಾಡತಕ್ಕದ್ದಂತ ಅಧಿಕಾರಿಗಳು ಹೇಳಬಹುದು. ಕೆಲವು ಸಂಘಗಳಲ್ಲಿ ಇದು ನಿಜವಾದರೂ, ಕೆಲಸ ಮಾಡಲು ಬರುವ ಸಹಕಾರಿಗಳ ಮೇಲೆ ಉದ್ಯೋಗಸ್ಥರು ಅಧಿಕಾರ ಚಲಾವಣೆ ಮಾಡಿ, ಬೆದರಿಸಿದರೆ ಉದ್ಯೋಗ ಶೀಲರಾದವರು ಸಹಕಾರಿ ಚಳವಳಿಯ ಹತ್ತಿರ ಬರದಂತೆ ಮಾಡಿದಂತಾಗುತ್ತದೆಯೆಂಬದನ್ನು ಉದ್ಯೋಗಸ್ಥರು ಮರೆಯಬಾರದು.

"ಅಂಥಾ ಕಠಿಣ ಕಷ್ಟಕ್ಕೆ ಗುರಿಯಾದವರಿಗೆ ಮಾತ್ರ ವಾಯಿದೆ ಕೊಡಬಹುದಾದರೂ ಸಾಲ ವಸೂಲ್ ಮಾಡುವುದರಲ್ಲಿ ರಿಯಾಯಿತಿ ತೋರಿಸಬಾರದು" ಈ ಶಿಫಾರಸ್ಸನ್ನು ಸಾಲಗಾರ ಮೆಂಬರುಗಳು ಮನಸಿಗೆ ಚೆನ್ನಾಗಿ ತೆಗೆದುಕೊಳ್ಳಬೇಕು. "ಸಹಕಾರಿ ಸಂಘಗಳ ಸೆಕ್ರೆಟರಿಗಳಿಗೂ ಮತ್ತು ಇತರ ಕೆಲಸಗಾರರಿಗೂ ತರಬೇತು ಕೊಡುವ ಏರ್ಪಾಡು ಮಾಡಬೇಕು" ಎಂಬ ವಗೈರೆ ಸಾಧಾರಣದ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಬೇಕಾದ ಸಲಹೆಗಳಿವೆ.

'ಸಹಕಾರಿ ಚಳವಳಿಕ್ಕೆ ಕಷ್ಟ ಬಂದಾಗ ಸರ್ಕಾರವು ಚಳವಳಿಯು ಕೆಡದಂತೆ ಧನ ಸಹಾಯ ಮಾಡಬೇಕು. ಸಹಕಾರಿ ಬ್ಯಾಂಕುಗಳಿಗೆ ಇತರ ಬ್ಯಾಂಕುಗಳಿಂದ ಸಾಲ ದೊರಕುವ ಏರ್ಪಾಡು ಮಾಡಿಕೊಡಬೇಕು.' ಈ ಶಿಫಾರಸ್ಸುಗಳು ಜಾರಿಗೆ ಬಂದರೆ ಸಹಕಾರಿ ಚಳವಳಿಯ ಪಾಯವು ಬಹಳ ಭದ್ರವಾಗುವುದು.

ಲ್ಯಾಂಡ್ ಮಾರ್ಗೇಜ್ ಬ್ಯಾಂಕುಗಳನ್ನು ಕುರಿತು ಹಲವು ಶಿಫಾರಸ್ಸುಗಳಿವೆ. "ಭೂಮಿ ಪರಾಧೀನ ಮಾಡಬಾರದೆಂಬ ಕಾನೂನನ್ನು ಈ ಬ್ಯಾಂಕುಗಳ ಕೆಲಸಕ್ಕೆ ಅನುಕೂಲವಾಗುವಂತೆ ವಿನಾಯಿಸಿ ಕೊಡಬೇಕು." ನಮ್ಮ ದೇಶದಲ್ಲಿ ಈಗಾಗಲೇ ಈ ವಿನಾಯಿತಿಯು ಸಹಕಾರಿ ಸಂಘಗಳಿಗೆ ದೊರೆತಿದೆ. ಈ ರಿಯಾಯಿತಿಯು ಲ್ಯಾಂಡ್ ಮಾರ್ಗೇಜ್ ಬ್ಯಾಂಕುಗಳಿಗೂ ಸಿಕ್ಕಿದ ವಿನಹ ಇಂಥಾ ಬ್ಯಾಂಕುಗಳಿಂದ ಜನರಿಗೆ ಸಹಾಯ ದೊರಕುವುದು ಸಂಶಯವೇ ಸರಿ.

ವರದಿಯಲ್ಲಿ ಬರಲಿರುವ ಸಾಲಗಳ ಮೂಲಕ ರೈತರಿಗೆ ಹೆಚ್ಚು ಸಹಾಯ ದೊರಕುವ ಶಿಫಾರಸ್ಸುಗಳು ಇವೆ.

'ಮದ್ರಾಸಿನಲ್ಲಿ ಜಾರಿಯಲ್ಲಿರುವ ನಿಧಿಗಳ ಮತ್ತು ಚೀಟಿ ಫಂಡುಗಳ ಕುರಿತು ಕಾನೂನು ಮಾಡಬೇಕು.' ನಮ್ಮ ದೇಶದಲ್ಲಿ ನಿಧಿಗಳು ಇಲ್ಲದಿದ್ದರೂ ಅನೇಕ ಚೀಟಿ ಫಂಡುಗಳು ನಡೆಯುತ್ತಲಿವೆ. ಇವುಗಳಿಂದ ಅನೇಕರ ಹಣಕ್ಕೆ ಅಪಾಯ ಬರುವ ಸಂಭವಗಳಿವೆ. ಆದ್ದರಿಂದ ಇವುಗಳ ವಿಷಯದಲ್ಲಿ ನಮ್ಮ ದೇಶದಲ್ಲೂ ಸಹ ಕಾನೂನು ಮಾಡಿಕೊಳ್ಳುವ ಅವಶ್ಯಕತೆ ಇದೆ.

"ಕೃಷಿ ಉತ್ಪತ್ತಿಯನ್ನು ಮಾರಾಟ ಮಾಡಲು ಸಹಾಯ ಕೊಡಬೇಕು; ಮಾರಾಟದ ಸಹಕಾರಿ ಸಂಘಗಳಿಗೆ ವಸ್ತುಗಳನ್ನು ಶೇಖರಿಸಿ ಇಟ್ಟುಕೊಳ್ಳಲು ಮಂದಿರಗಳನ್ನು ಕಟ್ಟಿಕೊಳ್ಳಲು ಸರ್ಕಾರವು ಕಡಿಮೆ ಬಡ್ಡಿಯಲ್ಲಿ ಸುಲಭ ಕಂತಿನ ಸಾಲ ಕೊಡಬೇಕು. ಬೆಳೆದ ಮಾಲುಗಳು ಸರಿಯಾದ ಬೆಲೆಯಲ್ಲಿ ಮಾರಾಟವಾಗುವಂತೆ ಸಹಾಯ ಮಾಡಲು ಮಾರ್ಕೆಟಿಂಗ್ ಬೋರ್ಡ್ ಎಂಬ ಸಂಸ್ಥೆಗಳನ್ನು ಸ್ಥಾಪಿಸಬೇಕು. ಕೃಷಿಕರ ಕಷ್ಟ ಸುಖಗಳನ್ನು ಚರ್ಚಿಸಿಕೊಳ್ಳಲು 'ಚೇಂಬರ್ಸ್ ಆಫ್ ಎಗ್ರಿಕಲ್ಚರ್' ಎಂಬ ಸಂಸ್ಥೆಗಳನ್ನು ಏರ್ಪಡಿಸಬೇಕು" ಎಂಬ ವಗೈರೆ ಶಿಫಾರಸ್ಸುಗಳಿವೆ.

ಈ ವರದಿಯಲ್ಲಿ ರೈತರ ಕಷ್ಟ ಪರಿಹಾರಕ್ಕೆ ಸಹಾಯವಾಗುವ ಬಹು ಮುಖ್ಯ ಶಿಫಾರಸ್ಸುಗಳಿರುವುದರಿಂದ ಇದನ್ನು ದೇಶೀ ಭಾಷೆಗಳಿಗೆ ತರ್ಜುಮೆ ಮಾಡಿ, ರೈತರು ತಾವೇ ಓದಿಕೊಂಡು ತಮ್ಮ ಸಲಹೆಗಳನ್ನು ಕೊಡಲು ಸಾಧ್ಯವಾಗುವಂತೆ ಆಯಾಯ ಪ್ರಾಂತೀಕ ಸರ್ಕಾರಗಳು ಮಾಡುವುದು ಅತ್ಯವಶ್ಯವಾಗಿದೆ.

ಫೆಡರಲ್ ಸ್ಟ್ರಕ್ಚರ್ ಕಮಿಟಿಯಲ್ಲಿ ಮಹಾತ್ಮರ ಭಾಷಣ.

ಈ ತಾ. 14ರಲ್ಲಿ ಲಂಡನಿನ ಸೆಂಟ್ ಜೇಮ್ಸ್ ಅರಮನೆಯಲ್ಲಿ ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಸಭೆಯು ಲಾರ್ಡ್ ಸ್ಯಾಂಕೀಯವರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ನಡೆಯುತ್ತಿರುವುದು. ಮಹಾತ್ಮರು ಸೆಂಟ್‌ಜೇಮ್ಸ್ ಅರಮನೆಗೆ ಬರುವುದಕ್ಕೆ ಮೊದಲು ಇಂಡಿಯಾ ಕಾರ್ಯಾಲಯವನ್ನು ಪ್ರವೇಶಿಸಿ ಸ್ಟೇಟ್ ಸೆಕ್ರೆಟರಿಯವರಾದ ಸರ್ ಸಾಮ್ಯುಯೆಲ್ ಹೋರ್‌ರವರೊಡನೆ ಮಾತನಾಡಿ ಅನಂತರ ಸಭೆಗೆ ಬಂದರು. ಸಭಾಧ್ಯಕ್ಷರು ಮಹಾತ್ಮರನ್ನು ಸ್ವಾಗತಿಸಿ, ತಮ್ಮ ಆಸನದ ಪಕ್ಕದಾಸನದಲ್ಲಿ ಕುಳ್ಳಿರಿಸಿಕೊಂಡರು. ಆ ದಿವಸ ಮೌನ ವ್ರತ ದಿನವಾದ್ದರಿಂದ ಮಹಾತ್ಮರು ಮಾತನಾಡಲಿಲ್ಲ. ಮಾರಣೆ ದಿನಕ್ಕೆ ಮಾಡಬೇಕಾದ ವಿಷಯಗಳು ಗೊತ್ತುಮಾಡಲ್ಪಟ್ಟವು. ಮಾರಣೆಯ ದಿವಸವೂ ಅಧ್ಯಕ್ಷರು ಮಹಾತ್ಮರನ್ನು ತಮ್ಮ ಪಕ್ಕದಾಸನದಲ್ಲಿ ಕುಳ್ಳಿರಿಸಿಕೊಂಡರು. ಮಹಾತ್ಮರು ತಮ್ಮ ಆಸನದಲ್ಲಿ ಕುಳಿತುಕೊಂಡೇ 45 ನಿಮಿಷಗಳ ವರೆಗೆ ಪ್ರಥಮ ಮಾತನಾಡಿದರು. ಸಭಿಕರು ಮುಖ್ಯವಾಗಿ ಆಂಗ್ಲ ಪ್ರತಿನಿಧಿಗಳು ಬಹಳ ಆತುರದಿಂದಲೂ, ಆನಂದದಿಂದಲೂ ಭಾಷಣವನ್ನು ಕೇಳುತ್ತಿದ್ದರು.

'ನಾನು ಸಹಕರಿಸುವುದಕ್ಕಾಗಿಯೇ ಮುಖ್ಯವಾಗಿ ಲಂಡನಿಗೆ ಬಂದಿರುವೆನು. ಎಲ್ಲರೂ ಒಪ್ಪುವ ವಿಷಯಗಳನ್ನು ನಿರ್ಣಯಿಸುವಲ್ಲಿ ನಾನು ನನ್ನ ಶಕ್ತಿಯನ್ನೆಲ್ಲಾ ಉಪಯೋಗಿಸುವೆನು. ಫೆಡರಲ್ ಸ್ಟ್ರಕ್ಚರ್ ಕಮಿಟಿಯನ್ನೂ, ರೌಂಡ್ ಟೇಬಲ್ ಸಭೆಯನ್ನೂ ಜರಗಿಸಲು ಬಾಧ್ಯರಾಗಿರುವ ತಮ್ಮೆಲ್ಲರ ಅಭಿಪ್ರಾಯವನ್ನು ನನಗೆ ಸೂಚನೆಯಾಗಿ ತಿಳಿಸಿದರೆ ಸಾಕು, ನಾನು ಕೂಡಲೇ ಸಭೆಯನ್ನು ಬಿಟ್ಟು ಹೊರಡುವೆನು. ಕಾಂಗ್ರೆಸ್ಸಿನವರಿಗೂ, ಪ್ರಭುತ್ವದವರಿಗೂ ಬಹಳ ಮುಖ್ಯ ವಿಷಯಗಳಲ್ಲಿ ಭಿನ್ನಾಭಿಪ್ರಾಯವಿರುವುದಾಗಿ ನಾನು ತಿಳಿದಿರುವೆನು. ಭಾರತ ದೇಶದಿಂದ ಈ ಸಭೆಗೆ ಬಂದಿರುವ ಇತರ ಪಕ್ಷಗಳ ಪ್ರತಿನಿಧಿಗಳಿಗೂ, ನನಗೂ ಭಿನ್ನಾಭಿಪ್ರಾಯಗಳು ಒದಗಬಹುದೆಂದು ಸಹ ತಿಳಿದಿರುವೆನು. ನಾನು ಕಾಂಗ್ರೆಸ್ಸಿನಿಂದ ನಿಯಮಿಸಲ್ಪಟ್ಟ ಅಲ್ಪನಾದ ಒಬ್ಬ ಪ್ರತಿನಿಧಿಯು. ಕಾಂಗ್ರೆಸ್ ಸಭೆ ಎಂದರೇನು ಮತ್ತು ಅದರ ಅಭಿಪ್ರಾಯಗಳೇನು ಎಂಬುವುದನ್ನು ನಿಮಗೆ ತಿಳಿಸುವುದು ಅತ್ಯವಶ್ಯವಾಗಿದೆ' ಎಂದು ಹೇಳಿ ಕಾಂಗ್ರೆಸ್ ಚರಿತ್ರೆಯನ್ನು ಸಭೆಯಲ್ಲಿ ವಿವರಿಸಿದರು.

ಭಾರತ ದೇಶದಲ್ಲಿರುವ ಎಲ್ಲ ಪಕ್ಷಗಳಿಗೂ ಎಲ್ಲ ಜಾತಿಯವರಿಗೂ ಕಾಂಗ್ರೆಸು ಪ್ರತಿನಿಧಿಯಾಗಿರುತ್ತದೆ. ಮೊದಲು ಬ್ರಿಟಿಷ್ ದೇಶೀಯರಾದ ಎ. ಓ. ಹ್ಯೂಂರವರಿಗೆ ಭಾರತ ಕಾಂಗ್ರೆಸು ಸಭೆಯನ್ನು ಸ್ಥಾಪಿಸಬೇಕೆಂಬ ಯೋಚನೆಯು ಹುಟ್ಟಿತು. ಅವರ ಸಲಹೆಯ ಪ್ರಕಾರವಾಗಿಯೇ ಈ ಸಭೆ ಏರ್ಪಡಿಸಲ್ಪಟ್ಟಿತು. ಬಳಿಕ ಪ್ರಸಿದ್ಧರಾದ ಇಬ್ಬರು ಪಾರ್ಸಿ ಪ್ರಮುಖರು (ಸರ್ ಫಿರೋಜಷಾ ಮೆಹತಾ ಮತ್ತು ದಾದಾಭಾಯಿ ನೌರೋಜಿಯವರು) ಅದನ್ನು ಪೋಷಿಸಿ ವೃದ್ಧಿಗೊಳಿಸಿದರು.

ಮಹಾನರ್ಥಕರವಾದ ಅಸ್ಪೃಶ್ಯತಾ ನಿರ್ಮೂಲನ ಮಾಡಬೇಕೆಂದು ಕಾಂಗ್ರೆಸಿನವರು ಮೊದಲಿನಿಂದಲೂ ಪ್ರಯತ್ನಿಸುತ್ತಿದ್ದರಲ್ಲದೆ ಈಗಲೂ ಪ್ರಯತ್ನಿಸುತ್ತಲೇ ಇರುವರು. ಕಾಂಗ್ರೆಸಿನವರು ದೇಶೀಯ ಸಂಸ್ಥಾನಗಳ ಪರಿಪಾಲನೆಯಲ್ಲೂ, ಸಂಸ್ಥಾನಾಧೀಶರ ವಿಷಯದಲ್ಲೂ ಎಷ್ಟು ಮಾತ್ರವೂ ಕೈ ಹಾಕಿಲ್ಲವು. ಕಾಂಗ್ರೆಸಿಗೆ ಆಗಾಗ್ಗೆ ಅಪಜಯವು ಉಂಟಾಗುತ್ತಿದ್ದರೂ ಕಡೆಯಲ್ಲಿ ಜಯವೇ ಪ್ರಾಪ್ತವಾಗುತ್ತಿರುವುದು.

ಕಾಂಗ್ರೆಸಿನವರು ಸ್ಪಿನ್ನರ್ಸ್ ಅಂದರೆ ನೂಲುವವರ ಸಂಘದ ಮೂಲಕ 2000 ಗ್ರಾಮಗಳಲ್ಲಿ 50,000 ಸ್ತ್ರೀಯರಿಗೆ ಕೆಲಸವನ್ನು ಬಗಿಸಿಕೊಟ್ಟರೆಂಬ ವಿಷಯವು ಈ ಸಭೆಯಲ್ಲಿರುವ ಭಾರತ ಪ್ರತಿನಿಧಿಗಳಿಗೂ ಕೂಡ ಆಶ್ಚರ್ಯವನ್ನುಂಟುಮಾಡತಕ್ಕದಾಗಿದೆ. ಈ 50000 ಜನರಲ್ಲಿ ಬಹಳ ಮಂದಿ ಅಸ್ಪೃಶ್ಯರೂ, ಇನ್ನೂ ಹೆಚ್ಚು ಮಂದಿ ಮಹಮ್ಮದೀಯರೂ ಇರುತ್ತಾರೆ.

ಕರಾಚಿಯಲ್ಲಿ ಮಹಾ ಸಭೆಯವರು ಮಾಡಿದ ತೀರ್ಮಾನವನ್ನು ತಿದ್ದಬೇಕೆಂದು ಸಕಾರಣವಾಗಿ ನೀವು ನನಗೆ ಹೇಳಿದಲ್ಲಿ ನಾನು ಅದನ್ನು ಸಮ್ಮತಿಸಲು ಸಿದ್ಧನಾಗಿರುವೆನಾದರೂ ಅದನ್ನು ತಿದ್ದುವುದಕ್ಕೆ ಮೊದಲು ಕಾಂಗ್ರೆಸಿನವರೊಪ್ಪಬೇಕು.

ಡಿಲ್ಲಿಯಲ್ಲಿ ಹೊಸ ಪ್ರಭುತ್ವದವರಿಗೂ, ಕಾಂಗ್ರೆಸಿನವರಿಗೂ ನಡೆದ ಒಡಂಬಡಿಕೆಯ ಕರತುಗಳು ಬಹಳ ಪವಿತ್ರವಾಗಿರುತ್ತವೆ. ಆ ಒಡಂಬಡಿಕೆಯಲ್ಲಿ ಫೆಡರೇಶನ್ ಸಿದ್ಧಾಂತವನ್ನು ಅನುಮೋದಿಸಿರುವರು. ಇಂಡಿಯಾಕ್ಕೆ ಏನೂ ಕೊರತೆಯದ ರಚನೆಯಿಂದ ಕಾಂಗ್ರೆಸಿಗಾಗಲೀ, ನನಗಾಗಲೀ ಎಂದೂ ತೃಪ್ತಿಯಾಗಲಾರದು.

ನಾನು ಬ್ರಿಟಿಷ್ ಪ್ರಜೆಯೆಂದು ಹೇಳಿಕೊಳ್ಳುವಲ್ಲಿ ಗರ್ವಪಡುತ್ತಿದ್ದ ಕಾಲವು ಗತಿಸಿ ಹೋಯಿತು. ಅನೇಕ ವರ್ಷಗಳಿಂದಲೂ ನಾನು ಬ್ರಿಟಿಷ್ ಪ್ರಜೆಯೆಂದು ಹೇಳಿಕೊಳ್ಳುವದನ್ನು ಬಿಟ್ಟಿರುವೆನು. ನಾನು ಬ್ರಿಟಿಷ್ ಪ್ರಜೆಯೆಂಬುದರ ಬದಲು 'ದಂಗೆಕಾರ'ನೆಂದು ಕರೆಸಿಕೊಳ್ಳಲು ಇಚ್ಛಿಸುತ್ತೇನೆ.

ಆದಾಗ್ಯೂ ನಾನು ಕಮನ್‌ವೆಲ್ತ್ ಪ್ರಜೆಯೆಂದು ಕರೆಯಿಸಿಕೊಳ್ಳಲಿಚ್ಛಿಸುವೆನೇ ಹೊರತು ಬ್ರಿಟಿಷ್ ಸಾಮ್ರಾಜ್ಯ

(4ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮರ ಜನ್ಮ ದಿನವನ್ನು ಹೇಗೆ ಪಾಲಿಸಬೇಕು?

ಸರದಾರ ವಲ್ಲಭಭಾಯಿಯವರ ಸಂದೇಶ.

೧೦೦೦ ರೂಪಾಯಿ ಬೆಲೆ ಬಾಳುವ ಖಾದಿ ಕೊಳ್ಳುವ

೧೫೦೦ ಜನರು ಬೇಕು.

ಅ. ಭಾ. ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರು ೧೪ನೇ ತಾರೀಕಿನ ದಿವಸ ಕೆಳಗಿನಂತೆ ಒಂದು ವಿನಂತಿ ಪತ್ರಿಕೆಯನ್ನು ಹೊರಡಿಸಿದ್ದಾರೆ—

ಇದೇ ಅಕ್ಟೋಬರ್ ೨ನೇ ತಾರೀಕಿನ ದಿವಸ ದೇಶವೆಲ್ಲ ಮಹಾತ್ಮರ ೭೨ನೇ ಜನ್ಮ ದಿನವನ್ನಾಚರಿಸುವದು. ಈ ದಿನಾಚರಣೆಯು ಮಹತ್ವದಿರುವದು. ಕಳೆದ ಸಾರಿ ಮಹಾತ್ಮರು ಸೆರೆಮನೆಯಲ್ಲಿದ್ದಾಗ ಅವರ ಜನ್ಮ ದಿನವನ್ನಾಚರಿಸಲ್ಪಟ್ಟಿತು. ಈ ಸಾರಿ ಅವರು ನಮ್ಮಿಂದ ಎಷ್ಟೋ ದೂರದಲ್ಲಿದ್ದಾರೆ. ಈ ದಿನವನ್ನು ನಾವು ಅವರ ಯೋಗ್ಯತೆಗೆ ತಕ್ಕಂತೆ ಆಚರಿಸಬೇಕು. ಮಹಾತ್ಮರಿಗೆ ಅತ್ಯಂತ ಪ್ರಿಯವಾಗಿರುವ ಸಾವಿರಾರು ಬಡ ಜನರ ಕಲ್ಯಾಣ ಸಾಧನೆಯ ಕಾರ್ಯವನ್ನೇ ಮಾಡುವುದಕ್ಕಿಂತ ಹೆಚ್ಚು ಉತ್ತಮ ರೀತಿಯಲ್ಲಿ ನಾವೀ ದಿನವನ್ನಾಚರಿಸಲಾರೆವು. ಹೊಟ್ಟೆಗಿಲ್ಲದೆ ಬಳಲುತ್ತಿರುವ ಲಕ್ಷಾವಧಿ ಜನರ ಕಲ್ಯಾಣವಾಗುವಂಥ ಕಾರ್ಯಕ್ರಮವಿರದಿದ್ದರೆ ಈ ದಿವಸವನ್ನಾಚರಿಸಿ ಪ್ರಯೋಜನವಿಲ್ಲ. ಏಕೆಂದರೆ—ಬಡ ಜನರ ಕಲ್ಯಾಣವೇ ಸ್ವರಾಜ್ಯವು. ಕಳೆದ ವರ್ಷ ಖಾದಿಯ ಬೇಡಿಕೆಯು ಅತಿಶಯವಾಗಿದ್ದರಿಂದ ನಾವು ಈ ಸಾವಿರಾರು ಜನರನ್ನು ಖಾದಿಯನ್ನು ತಯಾರಿಸಲು ನೇಮಿಸಿದೆವು. ಆದರೆ ಈ ವರ್ಷ ದಾರಿದ್ರ್ಯವು ಮೂರ್ತಿಮಂತವಾಗಿ ನೆರೆಗೊಂಡದ್ದರಿಂದ ಅವರೆಲ್ಲರೂ ಹೊಟ್ಟೆಗಿಲ್ಲದೆ ಬಳಲುವ ಪ್ರಸಂಗ ಬಂದಿದೆ. ಸಿದ್ಧವಾದ ಖಾದಿಯು ಮಾರಾಟವಾಗದೆ ಉಳಿದಿದೆ. ಮಹಾತ್ಮರು ಈಗ ಇಲ್ಲಿದ್ದರೆ ಈ ಖಾದಿಯ ವಿಕ್ರಯಕ್ಕಾಗಿ ಶಕ್ತಿ ಮೀರಿ ಯತ್ನಿಸುತ್ತಿದ್ದರೆಂಬುದು ನಿರ್ವಿವಾದವಾದ ಮಾತಾಗಿದೆ. ಅವರು ದೇಶಕಾರ್ಯ ಸಾಧಿಸಲು ಹೋಗಿರುವದರಿಂದ ಅವರ ಕಾರ್ಯ ನಿರ್ವಹಿಸುವ ಭಾರವೆಲ್ಲ ನಮ್ಮ ಮೇಲೆ ಬಿದ್ದಿದೆ.

ಖಾದಿಯನ್ನು ವಿಕ್ರಯಿಸಿರಿ.

ವಾಡಿಕೆಯ ಪದ್ಧತಿಯಂತೆ ಅಕ್ಟೋಬರ ೨ನೆಯ ತಾರೀಕು ಅವರ ಜನ್ಮ ದಿನ, ವಿಕ್ರಮ ಶಕದಂತೆ ೮ನೇ ತಾರೀಕು ಅವರ ಜನ್ಮ ದಿನವು. ಕಾರಣ ೨ನೇ ತಾರೀಕಿನಿಂದ ೮ನೇ ತಾರೀಕಿನ ವರೆಗೆ ಅಖಿಲ ಹಿಂದುಸ್ಥಾನದಲ್ಲಿ 'ಗಾಂಧಿ ಸಪ್ತಾಹ'ವೆಂದು ಆಚರಿಸಲ್ಪಡಬೇಕು. ಈ ಏಳು ದಿನಗಳಲ್ಲಿ ಪ್ರತಿಯೊಂದು ಶಹರದಲ್ಲಿ, ಪ್ರತಿಯೊಂದು ಹಳ್ಳಿಯಲ್ಲಿ ಖಾದಿ ಭಂಡಾರದಲ್ಲಿರುವ ಖಾದಿಯನ್ನು ವಿಕ್ರಯಿಸುವ ಏರ್ಪಾಡಾಗಬೇಕು. ಇಂಥಾ ವಾರದಲ್ಲಿ ಇತರ ಕಾರ್ಯಕ್ರಮಗಳೇನಿದ್ದರೂ ಎಲ್ಲ ಕಾಂಗ್ರೆಸ್ ಕಮಿಟಿಗಳಿಗೂ, ಕಾಂಗ್ರೆಸ್ಸಿನವರಿಗೂ ಈ ವಾರದಲ್ಲಿ ಖಾದಿಯ ಮಾರಾಟವನ್ನೇ ಮುಖ್ಯ ಕಾರ್ಯಕ್ರಮವನ್ನಾಗಿಟ್ಟುಕೊಳ್ಳಬೇಕೆಂದೂ, ಖಾದಿಯ ವಿಕ್ರಯಕ್ಕಾಗಿ ಶಕ್ತಿ ಮೀರಿ ಯತ್ನಿಸಬೇಕೆಂದೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತನು ಈ ವಾರದಲ್ಲಿ ಖಾದಿಯನ್ನು ವಿಕ್ರಯಿಸಿ ತನ್ಮೂಲಕ ಖಾದಿಯ ಸಂದೇಶವನ್ನು ಮನೆ ಮನೆಗೂ ಮುಟ್ಟಿಸಬೇಕೆಂದು ನನ್ನ ಇಚ್ಛೆ.

೧೫೦೦ ಜನರು ಬೇಕು.

ಅ. ಭಾ. ಚರಖಾ ಸಂಘದ ಅಧ್ಯಕ್ಷರಾದ ಶ್ರೀ. ಜಮನಾಲಾಲರಿಂದ ೧೫ ಲಕ್ಷ ರೂ. ಖಾದಿಯ ರೂಪದಲ್ಲಿ [illegible] ನೂ, ಅಷ್ಟೇ ಹಣವು, ಹತ್ತಿ ಮೊದಲಾದ ಖಾದಿಯ ಉತ್ಪಾದಕ ವಸ್ತುಗಳಲ್ಲಿರುವದೆಂದೂ ನನಗೆ ತಿಳಿದು ಬಂದಿದೆ. ಈ ರೋಖ ಹಣದ ಅಭಾವದಿಂದ ಅ. ಭಾ. ಚ. ಸಂಘಕ್ಕೆ ತನ್ನ ಕಾರ್ಯ ಮಾಡಲು ಬಹು ತೊಂದರೆಯಾಗಿದೆ. ಕಾರಣ ಸಿದ್ಧವಿದ್ದ ಖಾದಿಯೆಲ್ಲ ಮಾರಾಟವಾಗುವಂಥ ಯುಕ್ತಿಯೊಂದನ್ನು ನಾವು ಯೋಚಿಸಬೇಕಾಗಿದೆ. ಅವಶ್ಯವಾದ ಹಿಂದುಸ್ಥಾನದಲ್ಲಿ ೧೦೦೦ ರೂ. ಬೆಲೆ ಬಾಳುವ ಖಾದಿಯನ್ನು ಕೊಳ್ಳುವ ಅಥವಾ ಮಾರುವ ೧೫೦೦ ಜನರು ದೊರೆತಲ್ಲಿ ಈ ಕಾರ್ಯವಾಗುವದು. ಸದ್ಯದ ಪ್ರಸಂಗವನ್ನು, ಈ ಕಾರ್ಯದ ಸದುದ್ದೇಶವನ್ನು ನಿರೀಕ್ಷಿಸಿದಲ್ಲಿ ಇದೇನೂ ಕಠಿಣವಾದ ಕಾರ್ಯಕ್ರಮವೆಂದು ನನಗನಿಸುವದಿಲ್ಲ. ಖಾದಿಯು ರಾಜಕೀಯ ದ್ಯೋತಕವೆಂದು ಯಾರೂ ತಿಳಿಯಕೂಡದು. ಅದು ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವ ಸಾಧನವಾಗಿದೆ. ಸೈನಿಕರಿಗೆ ತಮ್ಮ ವಿರಾಮ ವೇಳೆಯಲ್ಲಿ ನೂಲುವದೊಂದೇ ಸಾಧ್ಯಕಾರ್ಯವಾಗಿದೆ. ಕಾರಣ ರಾಜಕೀಯ ವಿಚಾರಗಳಲ್ಲಿ ಕಾಂಗ್ರೆಸ್ಸಿಗಿಂತ ಭಿನ್ನ ಮತವುಳ್ಳವರೂ—ಅವರು ಜಮೀನ್ದಾರರಿರಲಿ, ರಾಜರಿರಲಿ, ಸರ್ಕಾರಿ ನೌಕರರಿರಲಿ—ಖಾದಿಯ ಮಾರಾಟದಲ್ಲಿ ತಮ್ಮ ಕಾರ್ಯವನ್ನು ಮಾಡುವರೆಂದು ನಾನು ನಂಬುತ್ತೇನೆ. ನಾನು ಹೇಳಿದಂತೆ ೧೦೦೦ ರೂ. ಬೆಲೆ ಬಾಳುವ ಖಾದಿ ಕೊಳ್ಳುವ ೧೫೦೦ ಜನರನ್ನು ಕೂಡಿಸಲು ಎಲ್ಲರೂ ಅದರಲ್ಲೂ ವಿಶೇಷತಃ ಕಾಂಗ್ರೆಸ್ಸಿನವರು ನನಗೆ ಸಹಾಯ ಮಾಡಲು ನಾನವರನ್ನು ಬೇಡಿಕೊಳ್ಳುತ್ತೇನೆ. ಅ. ಭಾ. ಚ. ಸಂಘದವರು ಖಾದಿಯನ್ನು ಬೇಡಿಕೆಯಿದ್ದ ಸ್ಥಳಗಳಿಗೆ ಮುಟ್ಟಿಸಲು ಒಪ್ಪಿಕೊಂಡಿದ್ದಾರೆ. ಇಂದಿನಿಂದಲೇ ಈ ಕಾರ್ಯವು ಪ್ರಾರಂಭವಾಗಬೇಕು. ಎಲ್ಲ ಆರ್ಡರುಗಳನ್ನು ಅಹಮದಾಬಾದದಲ್ಲಿರುವ ಅ. ಭಾ. ಚ. ಸಂಘಕ್ಕೆ ಕಳುಹಿಸಬೇಕು. ಎಲ್ಲ ಹಣವನ್ನು ಮುಂಗಡವಾಗಿ ಕಳುಹಿಸಬೇಕು. ಕೇವಲ ಕಲವೇ ದಿನಗಳಲ್ಲಿ ಅಸಂಖ್ಯ ಬೇಡಿಕೆಗಳು ಬರಬಹುದೆಂದು ನಾನು ಆಶಿಸುತ್ತೇನೆ. ನಮ್ಮ ಮುಂದಾಳು (ಮಹಾತ್ಮರು) ಅಲ್ಲಿ, ದೂರದ ಇಂಗ್ಲೆಂಡದಲ್ಲಿ ದೇಶ ಹಿತಕ್ಕಾಗಿ ದುಡಿಯುತ್ತಿರುವಾಗ ನಾವಿಲ್ಲಿ ಇಷ್ಟು ಇಂಥ ಕಾರ್ಯವನ್ನಾದರೂ ಮಾಡುವ.

ಹಿಂದೀ ಭಾಷೆ.

ಮದ್ರಾಸ ಹಿಂದೀ ವಿದ್ಯಾಲಯದಲ್ಲಿ ಹಿಂದೀ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಸರ್ಟಿಫಿಕೇಟ್ ಕೊಡುವ ಸಮಾರಂಭದಲ್ಲಿ, ಗುಜರಾತ್ ವಿದ್ಯಾಪೀಠದ ವೈಸ್ ಚಾನ್ಸೆಲರ್ ಆದ ಕಾಕಾ ಕಾಲೇಲ್ಕರರು ಮಾಡಿದ ಭಾಷಣದ ಸಾರಾಂಶ—

'ಕಳೆದ 20 ವರ್ಷಗಳಿಂದಲೂ ನಾನು ಇಂಗ್ಲಿಷ ಭಾಷೆಯನ್ನು ಉಪಯೋಗಿಸಿದ್ದು ಬಹಳ ಅಪರೂಪ. ದಕ್ಷಿಣ ದೇಶಕ್ಕೆ ಬಂದಾಗ ಮಾತ್ರ ಇಂಗ್ಲಿಷ ಭಾಷೆಯನ್ನಾಡಬೇಕಾಗುತ್ತದೆ. ದಕ್ಷಿಣ ಪ್ರಾಂತ್ಯದ ಸ್ನೇಹಿತರು ಇಂಗ್ಲಿಷಿನಲ್ಲಿ ಮಾತನಾಡಬೇಕೆನ್ನುವಾಗ ತುಂಬಾ ನೋವಾಗುತ್ತದೆ. ನನ್ನ ದೇಶೀಯರಾದ ನಿಮ್ಮ ಮುಂದೆ, ನಮ್ಮದೂ ನಿಮ್ಮದೂ ಅಲ್ಲದ ನಮ್ಮನ್ನು ಬಂಧಿಯಲ್ಲಿಯೂ, ಅಜ್ಞ ವಿಚಾರದಲ್ಲಿಯೂ ಗುಲಾಮಗಿರಿಗೆ ಇಳಿಸಿದ ಪರಭಾಷೆಯಲ್ಲಿ ಭಾಷಣ ಮಾಡುವುದೆಂದರೆ ಬಹಳ ಅವಮರ್ಯಾದೆಯೆನಿಸುತ್ತದೆ. ಇಂಗ್ಲಿಷಿನಲ್ಲಿ ಮಾತನಾಡಬೇಕೆಂಬುದರ ಅರ್ಥವೇನೆಂದರೆ—ನಾವು ಒಂದೇ ಜನಾಂಗವಾಗಿದ್ದು, ಒಂದೇ ಜಾತಿಗೆ ಸೇರಿದವರಾದರೂ ಅನ್ಯೋನ್ಯ ತಿಳಿಯುವಂತೆ ಮಾತನಾಡಲು ಒಂದು ರಾಷ್ಟ್ರಭಾಷೆಯಿಲ್ಲವೆಂತಾಯಿತು. ಒಂದೇ ಸಂಸ್ಕೃತಿಗೆ ಒಳಪಟ್ಟ ಜನಾಂಗಕ್ಕೆ ಒಂದೇ ಭಾಷೆಯೂ ಅವಶ್ಯ. ರಾಜಕೀಯ ಸ್ವಾತಂತ್ರ್ಯದ ಅತಿಮೂಲ ಸಂಸ್ಕೃತಿಯ ಜೀವನಾಂಗವೂ ಆಗಬೇಕೆನ್ನುವವರಿಗೆ ಒಂದೇ ಭಾಷೆಯ ಮೂಲಕ ತಮ್ಮ ಭಾವನೆಗಳನ್ನು ಅನ್ಯೋನ್ಯ ತಿಳಿಸಿಕೊಡುವ ಅನುಕೂಲವಿರಬೇಕು.

ಹಿಂದೀಭಾಷೆಯ ಪ್ರಚಾರದ ಕೆಲಸಗಾರರಾದ ನಾವು ಪ್ರಾಂತೀಯ ಭಾಷೆಯ ಸಂಸ್ಕೃತಿಯನ್ನು ಹಾಳುಮಾಡಲು ಹೊರಟವರಲ್ಲ. ದಕ್ಷಿಣ ಹಿಂದೂಸ್ಥಾನದಲ್ಲಿ ಅಭಿವೃದ್ಧಿಗೆ ಬಂದ ಸಂಸ್ಕೃತಿಯನ್ನು ನೋಡಿ ನಾವು ಹೆಮ್ಮೆ ಪಡುವವರಾಗಿದ್ದೇವೆ. ತಮಿಳು, ತೆಲುಗು, ಕನ್ನಡ, ಮಲಯಾಳೀ ಭಾಷೆಯವು ನಮ್ಮ ಅಮೂಲ್ಯ ಪಿತ್ರಾರ್ಜಿತ ಧನವಾಗಿರುವುವು. ಕೆಲವು ಉತ್ಸಾಹಿಗಳು ಹಿಂದೂಸ್ಥಾನಕ್ಕೆಲ್ಲಾ ಒಂದೇ ಭಾಷೆಯಾಗಬೇಕೆಂತ ವಾದಿಸುವುದು ವಿಷಾದಕರ. ವಿವಿಧ ಭಾಷೆಗಳೂ, ಸಂಸ್ಕೃತಿಗಳೂ ಕೆಡಲ್ಲ. ಅವುಗಳಂತೆ ಹಿಂದೀ ಸಂಸ್ಕೃತಿಯೂ ತುಂಬಾ ಅಭಿವೃದ್ಧಿಯಾಗಿದೆ. ಆದರೆ ಎಲ್ಲಾ ಪ್ರಾಂತ್ಯಗಳಿಗೂ ಇದನ್ನು ಕಲಿತು ದೇಶಕ್ಕೆಲ್ಲಾ ಶಕ್ತಿ ಕೊಡುವಂಥ ಗಾಢ ಮೈತ್ರಿ ಸಂಪಾದಿಸಬೇಕೆಂತ ನಮ್ಮ ಆಶೆ. ಹಿಂದಿಗೂ (ಉರ್ದು) ಹಿಂದುಸ್ಥಾನಿಗೂ ಏನೂ ತಕರಾರಿಲ್ಲ. ಇವುಗಳೊಳಗೆ ಹೋರಾಟವಿದೆಯೆನ್ನುವವರು ರಾಷ್ಟ್ರೀಯತ್ವದ ಶತ್ರುಗಳೇ ಸರಿ. ಇವೆರಡು ಭಾಷೆಗಳ ತೋರಿಕೆಯಲ್ಲಿ ಭೇದವಿದ್ದರೂ ಅವುಗಳ ತಿರುಳಿನಲ್ಲಿ ಒಂದೇ.

ಇಂಗ್ಲಿಷ ಎಂದೂ ಹಿಂದೂಸ್ಥಾನದ ರಾಷ್ಟ್ರಭಾಷೆಯಾಗಲಾರದೆಂಬುದನ್ನು ಖಂಡಿತವಾಗಿಯೂ ಸಾಧಿಸಬಲ್ಲೆನು. ವಾಣಿಜ್ಯ, ವ್ಯಾಪಾರ ಮತ್ತು ವೈಜ್ಞಾನಿಕ ವಿಷಯಗಳಲ್ಲಿ ಹಿಂದೀಯರಿಗೆ ಇಂಗ್ಲಿಷ ಭಾಷೆಯು ಒದಗಿಸಿಕೊಟ್ಟಿರುವುದನ್ನು ನಾನು ಒಪ್ಪುತ್ತೇನೆ. ಆದರೆ ಈ ಪ್ರಯೋಜನಕ್ಕಾಗಿ ನಮಗೆ ಆದ ನಷ್ಟವು ತುಂಬಾ ದೊಡ್ಡದು. ಇಂಗ್ಲಿಷ ಭಾಷೆಯಿಂದ ಹಿಂದೀಭಾಷೆಗಳಿಗೆ ಪ್ರಯೋಜನವಾಗಿದೆಯೆಂತಲೂ ಒಪ್ಪುವೆ. ಆದರೆ ಹಿಂದೀಯರೆಲ್ಲರಿಗೂ ಒಂದೇಯಾದ ಭಾಷೆ ಇಂಗ್ಲಿಷ್ ಆಗಲಾರದು. ದೈವೀಕವಾದ ಸಂಸ್ಕೃತ ಭಾಷೆಯೂ, ಮೊಗಲಾಯರ ಕಾಲದಲ್ಲಿ ಚಕ್ರಾಧಿಪತ್ಯದ ಭಾಷೆಯಾಗಿದ್ದ ಪರ್ಶಿಯನ್ ಭಾಷೆಯೂ ಹಿಂದೂಸ್ಥಾನಕ್ಕೆಲ್ಲಾ ಒಂದೇ ಭಾಷೆಯಾಗದಿರುವಾಗ, ಇಂಗ್ಲಿಷ್ ಆಗುವದು ಉಂಟೇ? ನೂರೆಂಟು ವರ್ಷ ಮತ್ತು ಉಚ್ಚ ಶಿಕ್ಷಣವನ್ನು ಇಂಗ್ಲಿಷಿನಲ್ಲಿ ಕೊಡಲು ಮಾಡಿದ ಬ್ರಿಟಿಷ ಸರಕಾರದ ತೀಕ್ಷ್ಣ ಪ್ರಯತ್ನದಿಂದ ವಿದ್ಯಾ ಪ್ರಚಾರವು ಹಿಂದೆ ಬಿತ್ತಷ್ಟೆ, ಆದರೂ ಇಂಗ್ಲಿಷ ರಾಷ್ಟ್ರಭಾಷೆಯಾಗಲಿಲ್ಲ.

ಇಂಗ್ಲಿಷ ಭಾಷೆಯನ್ನಾಗಲೀ, ಗಂಭೀರವಾದ ಇಂಗ್ಲಿಷ್ ವಾಙ್ಮಯವನ್ನಾಗಲೀ ಅಭ್ಯಾಸ ಮಾಡಬಾರದೆಂತ ನಾನು ಹೇಳುವುದಿಲ್ಲ. ಆದರೆ ಆ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡುವುದು ನಿಲ್ಲಬೇಕೆಂತಲೂ, ಆ ಭಾಷೆಯನ್ನು ಆಡುವುದನ್ನು ನಿಲ್ಲಿಸಬೇಕೆಂತಲೂ ನಾನು ಹೇಳುವುದಾಗಿದೆ. ಇಂಗ್ಲಿಷ್ ವಿದ್ಯಾಭ್ಯಾಸದಿಂದ ಆದ ಕೇಡೇನೆಂದರೆ—ಅದರಿಂದ ಇಬ್ಬರು ವಿಭಿನ್ನ ಭಾವನೆಯುಳ್ಳ ಜನಾಂಗಗಳು ಹುಟ್ಟಿವೆ. ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿದವರೂ ಅಥವ ಅರ್ಧ ಅಭ್ಯಾಸ ಮಾಡಿದವರೂ ಜನಸಮುದಾಯದಿಂದ ಅಲಕ್ಕಾಗಿ ಇರಲು ಪ್ರಯತ್ನಿಸುತ್ತಾರೆ. ಇಂಗ್ಲಿಷ ಭಾಷೆಯಲ್ಲಿರುವ ಅತ್ಯುತ್ತಮವಾದದ್ದನ್ನು ತಮ್ಮ ಮಾತೃಭಾಷೆಗೆ ಸೇರಿಸಿಕೊಳ್ಳುವ ಪ್ರಯತ್ನವನ್ನು ಬಿಟ್ಟು, ಹಿಂದೀಯರೆಲ್ಲರನ್ನು ಇಂಗ್ಲಿಷ ಭಾಷೆಯ ಗುಲಾಮಗಿರಿಗೆ ವರ್ಷೇ ವರ್ಷೇ ಎಳೆಯುತ್ತಿದ್ದಾರೆ. ಈಗ ಹತ್ತು ವರ್ಷಗಳಿಂದ ಆದ ಜಾಗೃತಿಯು ಹಿಂದೆ ಇಂಗ್ಲಿಷ ಭಾಷೆಯಲ್ಲೇ ಚಳವಳ ನಡೆಯುತ್ತಿದ್ದಾಗ ಆದೀತೆಂದು ಸ್ವಪ್ನದಲ್ಲಿ ಸಹ ಯೋಚಿಸಲು ಸಾಧ್ಯವಿರಲಿಲ್ಲ. ಇಂಗ್ಲಿಷ ಓದಿದವರಿಗೆ ಕಳೆದ 50 ವರ್ಷಗಳ ಅವಕಾಶ ದೊರೆತಿತ್ತು. ಅವರು ರಾಷ್ಟ್ರದ ಕೆಲ್ಲ ಸ್ವಲ್ಪ ದುಡಿಮೆಗೆ ಮಾಡಿದರು. ಆದರೆ ಅವರು ಹೊಸಾಗಿ ರಾಷ್ಟ್ರಸೇವೆಗೆ ಹೊಸ ಕೊಡುಗೆ [illegible] ಅನುಕೂಲಗಳನ್ನೇ ಹುಡುಕಿದರು. ಅದರಿಂದ ಅವರಿಗೂ ಬಡ ಜನರಿಗೂ ಸಂಬಂಧ ಕಲ್ಪಿಸಿಕೊಡಲು ಸಾಧ್ಯವಾಗಲಿಲ್ಲ. ಹಿಂದೂಸ್ಥಾನದಲ್ಲಿ ಕೆಲವು ಅಪಾರ ಶಕ್ತಿ ಇರುವ ವ್ಯಕ್ತಿಗಳು [illegible] ಇಂಗ್ಲಿಷ್ ಭಾಷೆಗೆ ಗೌರವ ಕೊಡಲಾಗುವುದಿಲ್ಲ. ಈ ಪುರಾತನ ಸಂಸ್ಕೃತಿ ಹೊಂದಿದ ಜನಾಂಗದಲ್ಲಿ ಇಷ್ಟೇ ಮಹಾಪುರುಷರು ಜನ್ಮವೆತ್ತಿದರೆಂಬುದೇ ಈ ಸಂಶಯಾತೀತ ಇಂಗ್ಲಿಷ್ ವಿದ್ಯೆಯ ದೋಷವಾಗಿದೆ. ಇಂಗ್ಲಿಷ ಭಾಷೆಯು ಜನಸಮುದಾಯಕ್ಕೆ ಪ್ರಯೋಜನ ಮಾಡಿರುವುದಿಲ್ಲ. [illegible] ಜನಸಮುದಾಯದ ಮಧ್ಯದಲ್ಲಿ [illegible] ಮಾತೃಭಾಷೆಯಲ್ಲೇ ಕೆಲಸ ಮಾಡದಿದ್ದರೆ ಅವರಿಗೆ ರಾಷ್ಟ್ರೀಯ ಜಾಗೃತಿಯುಂಟಾಗುತ್ತಿರಲಿಲ್ಲ.

